THE BOOK WAS
DRENCHED

UNIVERSAL
LIBRARY

OU_202154

UNIVERSAL
LIBRARY

॥ ಓಂ ॥

ಶ್ರದ್ಧಾಂಜಲಿ

ಸಮಿತಿಯ ಸಂಸ್ಥಾಪಕ ಮತ್ತು ಸಂಯೋಜಕರಾದ,
ಬೆಂಗಳೂರು ನಿವಾಸೀ
ಶ್ರೀಮಾನ್ ಸ್ವರ್ಗೀಯ ಹರನಾಮದಾಸ್‌ಕಪೂರ್‌ರವರ
ಪುಣ್ಯಸ್ಮೃತಿಯಲ್ಲಿ

ಆರ್ಯೋಽಸೌ ಧನಿಕೇಷು ಕೀರ್ತಿತಮೋ ದಾನೀ ಹ್ಯುದಾರಾಶಯಃ
ಸಂಬದ್ಧಃ ಸ ಕುಲೇನ ಪೂರ್ಣಯಶಸಂ ಪಂಚಾಪದೇಶಂ ಸುಧೀಃ ।
ತದ್ದೇಶೇ ಪ್ರಸೃತಾರ್ಯಧರ್ಮಮಖಿಲಂ ತಸ್ಯಪ್ರಕಾಶಂ ತಥಾ
ಧೀರಃ ಸೈತದನುಸ್ಮರನ್ ಪ್ರಸರಣಂ ಕುರ್ವನ್ ಮುದಾ ಸಂಬಭೌ॥೧॥

ನಾಸೀತ್ತಸ್ಯ ಕದಾಪಿ ಮಾನಸತಲೇ ಶುಭ್ರೇ ಸದಾ ಮಂಗಲೇ
ಸೋಽಹಂ ಹ್ಯುತ್ತರಭಾರತೀಯ ಇತಿ ವಾಯಂ ದಾಕ್ಷಿಣಾತ್ಯಃ ಪುಮಾ।
ಇತ್ಯೇವಂ ಪರಿಹೃತ್ಯ ಸರ್ವಮಪಿ ವೈ ಭೇದಂ ಸದಾ ದೂರತೋ
ಪ್ರೀತ್ಯಾಽಸೌ ನಿಹಿತಾರ್ಯಧರ್ಮಸುಹಿತೋ ಭೇಜೇ ಸದಾ ಧೀಮತಃ ॥೨॥

ವಿತ್ತಂ ದದೌ ಸತತಮಾರ್ಯಪ್ರಚಾರಕೇಷು
ಚಿತ್ತಂ ದದೌ ಋಷಿವರಸ್ಯ ವಿಚಾರಣೇಷು ।
ಕಾಯಂ ತಥಾರ್ಯಸದಸಾಂ ಚ ಸುರಕ್ಷಣೇಷು
ಹ್ಯೇವಂ ದಿದೇಶ ಸುಪಥಂ ಸಕಲಾರ್ಯಸದ್ಭ್ಯಃ ॥೩॥

ಏಷಾ ಪ್ರಕಾಶನಹಿತಂ ಧುರಿದಕ್ಷಿಣಾಯಾಂ
ಸಾಹಿತ್ಯಜಾತನಿಖಿಲಸ್ಯ ತು ದೇಶವಾಣ್ಯಾಂ
ಸಂಸ್ಥಾಪಿತಾಸಮಿತಿರತ್ರ ಹಿ ಸಜ್ಜನಾನಾಂ
ತೇ ನೈವ ದೇಹಲಿಸಭಾನುಮತಾನುಸಾರಂ ॥೪॥

ಸಿಂಚಯಿತ್ವೈವ ಪ್ರಥಮಂ ಕುಡ್ಮಲಂ ಸಮಿತೇಃ ಪರಂ ।
ಅದೃಷ್ಟೇವೈವ ವಿಕಾಸಂ ಸಃ ಸ್ವಯಮೌ ವಿಹಸನ್ ಮುದಾ ॥೫॥

ಸ ಸತ್ಯಾರ್ಥಪ್ರಕಾಶಂ ಯತ್ಪ್ರಕಾಶಯಿತುಮಾಸ್ಥಿತಃ
ಆತ್ಮಾತಸ್ಯ ಪರಂಜ್ಯೋತಿಃ ಪ್ರಾಪ್ನುಯಾತ್ಸತ್ಪ್ರಕಾಶತಃ ॥೬॥

ಕೃತಜ್ಞತಾಮನುಸ್ಮರನ್

ಸತ್ಯಪಾಲಶರ್ಮಾ, ಸ್ನಾತಕಃ

ದಕ್ಷಿಣಭಾರತ ಆರ್ಯಸಮಾಜ ಆರ್ಗನೈಜರ್

॥ ಓಂ ॥

ಪ್ರಕಾಶಕರ ಎರಡು ಮಾತು

ವೇದಕಾನನವಿಹಾರೀ ಆದಿತ್ಯಬ್ರಹ್ಮಚಾರೀ ಶ್ರೀ ಸ್ವಾಮಿ ದಯಾನಂದಸರಸ್ವತಿಗಳವರ ಅಮರಕೃತಿಯಾದ "ಸತ್ಯಾರ್ಥಪ್ರಕಾಶ"ದ ಕನ್ನಡ ಭಾಷಾಂತರದ ದ್ವಿತೀಯ ಸಂಸ್ಕರಣವನ್ನು ಕನ್ನಡಿಗರ ಕೈಯ್ಯಲ್ಲಿಡುವ ಈ ಆನಂದದಾಯಕವಾದ ಸಂದರ್ಭದಲ್ಲಿ ಕೆಲವು ಉಪಯುಕ್ತವಾದ ಅಂಶಗಳನ್ನು ಅವರ ಅವಗಾಹನೆಗೆ ತರುವುದು ಆವಶ್ಯಕವೆಂದು ತೋರುತ್ತದೆ.

"ಸತ್ಯಾರ್ಥಪ್ರಕಾಶ"ದ ಮೂಲ ಲೇಖಕರಾದ ಶ್ರೀಮದ್ದಯಾನಂದಸರಸ್ವತೀಸ್ವಾಮಿಗಳು ವೈದಿಕತತ್ವದರ್ಶೀ ಋಷಿಮಹರ್ಷಿಗಳ ಪರಂಪರೆಗೆ ಸೇರಿದವರು; ಕಪಿಲ-ಕಣಾದರಂತೆ, ವ್ಯಾಸ-ಜೈಮಿನಿಗಳಂತೆ, ಗೌತಮ-ಪತಂಜಲಿಗಳಂತೆ ಧರ್ಮಸಾಕ್ಷಾತ್ಕಾರಮಾಡಿಕೊಂಡವರು. ಪರಿಶುದ್ಧವಾದ ವೈದಿಕಧರ್ಮದ ಕ್ರಿಯಾತ್ಮಕ ಪ್ರಸಾದದಿಂದಲೇ ಮಾನವಜಾತಿಯ ಜೀವನದಲ್ಲಿ, ಆಧ್ಯಾತ್ಮಿಕಗುಣವಿಕಾಸವುಂಟಾಗಿ, ಜೀವನದ ಸರ್ವತೋಮುಖವಾದ ಉತ್ಥಾನಪ್ರಾಪ್ತವಾಗಿ, ವಿಶ್ವದಲ್ಲಿ ಅಖಂಡವಾದ ಶಾಂತಿಸ್ಥಾಪನೆಯಾಗಬಲ್ಲದೆಂಬ ತಥ್ಯವನ್ನು ಅವರು ಚನ್ನಾಗಿ ಗುರುತಿಸಿದ್ದರು. ಮಾನವಜಾತಿಯ ಸರ್ವತೋಮುಖವಾದ ಸಮರಸ ಪ್ರಗತಿಸಾಧನೆಗಾಗಿ, ಸೃಷ್ಟಿಯ ಪ್ರಾರಂಭದಲ್ಲಿ ಜಗದೀಶ್ವರನಿಂದ ಕರುಣಿಸಲ್ಪಟ್ಟ ವೇದಗಳಲ್ಲಿ ಪ್ರತಿಪಾದಿತವಾದ ಧರ್ಮವು ಕೇವಲ ಇಹದ ಅಥವಾ ಕೇವಲ ಪರದ ಸಾಧನೆಗೆ ನೆರವಾಗುವ ಸೀಮಿತ ಪ್ರಭಾವದ ಸಾಧನವಾಗಿರದೆ, ಇಹಪರಗಳ ಸಮನ್ವಯವನ್ನು ರೂಪಗೊಳಿಸಿ, ಮಾನವ ಜೀವನದ ಪ್ರತಿ ಒಂದು ಅಂಗದಲ್ಲಿಯೂ ವ್ಯಾಪಿಸಿ, ವಿಕಾಸಾಭಿಮುಖವಾಗಿ ಮುನ್ನಡೆವ ಪ್ರೇರಣೆಯನ್ನೀವ ವಿಶುದ್ಧ ಆಧ್ಯಾತ್ಮಿಕತ್ವವುಳ್ಳದ್ದು; ಅದರಲ್ಲಿ ಜಾತಿಭೇದಕ್ಕೆ, ಜನಾಂಗ ಭೇದಕ್ಕೆ ಕಾಲಭೇದಕ್ಕೆ, ದೇಶಭೇದಕ್ಕೆ ಅಥವಾ ವಂಶಭೇದಕ್ಕೆ ಎಳ್ಳಿ

ನಷ್ಟೂ, ಎಡೆ ಇಲ್ಲ; ಅದು ವಸ್ತುತಃ ಅಖಂಡವಾದ, ಅಭಾಜ್ಯವಾದ ಸಾರ್ವಭೌಮಸಂಪತ್ತು; ಜಗತ್ತಿಗೆಲ್ಲಾ ಒಬ್ಬ ಸೂರ್ಯನಿರುವಂತೆ, ಒಬ್ಬ ಚಂದ್ರನಿರುವಂತೆ, ಜಗತ್ತಿಗಿರುವುದು ಒಂದೇ ಧರ್ಮಶಾಸ್ತ್ರ-ವೇದಚತುಷ್ಟಯ; ಭಿನ್ನಭಿನ್ನಕಾಲಗಳಲ್ಲಿ, ಭಿನ್ನಭಿನ್ನ ದೇಶಗಳಲ್ಲಿ ಭಿನ್ನಭಿನ್ನ ಜನಾಂಗಗಳಲ್ಲಿ, ಭಿನ್ನಭಿನ್ನ ಪರಿಸ್ಥಿತಿಗಳಲ್ಲಿ, ಮಾನವ ಜಾತಿಯ ಹಿತಕಾಂಕ್ಷೆಯಿಂದಲೇ ಮಹಾಪುರುಷರಿಂದ ಪ್ರಚಲಿತವಾದ ನೂರಾರು ಸಂಪ್ರದಾಯಗಳಲ್ಲಿ ಧರ್ಮದ ಯಾವುದೋ ಒಂದು ಅಂಗವನ್ನು ಎತ್ತಿ ಹಿಡಿದಿರಬಹುದಾದರೂ, ಸಂಪ್ರದಾಯಗಳ ಸಂಕುಚಿತ ಪರಿಧಿಯಲ್ಲಿ ಸಮಗ್ರ ಧರ್ಮದ ಸಮಾವೇಶವಾಗಲು ಸಾಧ್ಯವಿಲ್ಲವಾದುದರಿಂದ, ಸಂಪ್ರದಾಯಗಳು, ಒಂದಾದ ಮಾನವ ಜಾತಿಯನ್ನು ಹರಿದುಹಂಚುವ ಸಂಭವವೇ ಹೆಚ್ಚಿಂಬುದು ಅವರಿಗೆ ಚನ್ನಾಗಿ ಮನದಟ್ಟಾಗಿದ್ದಿತು. ಆದುದರಿಂದ ಅವರು ಪರಿಶುದ್ಧ ವೈದಿಕಧರ್ಮವನ್ನು ಯಥಾವತ್ತಾಗಿ ಮಾನವಮಾತ್ರರಿಗೆ ಬೋಧಿಸುವುದನ್ನೇ ತಮ್ಮ ಜೀವನದ ಗುರಿಯಾಗಿ ಮಾಡಿಕೊಂಡರು.

ಸ್ವತಃ ಯೋಗವಿದ್ಯಾಧುರೀಣರೂ, ವೇದಾದಿ ಸತ್ಯಶಾಸ್ತ್ರ ಪಾರಂಗತರೂ, ಸೂಕ್ಷ್ಮತತ್ವದರ್ಶಿಗಳೂ, ಆದ ಮಹರ್ಷಿ ದಯಾನಂದರು, ಮಾನವ ಜಾತಿಯ ಅಧಃಪತನದ ಮೂಲಕಾರಣ ಮಾನವನ ದಾಸ್ಯಮನೋಭಾವವೇ-ಎಂಬುದನ್ನು ಸಹಜವಾಗಿಯೇ ಗುರುತಿಸಿದರು. ಮತಾಧೀಶರ ಹಾಗೂ ಮಠಾಧೀಶರ ವಜ್ರಮುಷ್ಟಿಯ ಬಿಗಿಯಾದ ಹಿಡಿತದಿಂದ ಮಾನವನ ಮಸ್ತಿಷ್ಕವನ್ನು ಬಿಡಿಸಿ, ಅದಕ್ಕೆ ಸ್ವತಂತ್ರವಾಗಿ ಯೋಚಿಸಲು ಬೇಕಾದ ಆರೋಗ್ಯಕರವಾದ ವಾತಾವರಣವನ್ನು ಕಲ್ಪಿಸಿ ಕೊಡದಿದ್ದರೆ, ಏಕೇಶ್ವರೋಪಾಸನೆ, ವಿಶ್ವಮಾನವ ಭ್ರಾತೃತ್ವ, ಅಖಂಡ ಶಾಂತಿ, ಯಾವುದೂ ಸಿದ್ಧಿಸಲಾರದೆಂಬುದನ್ನು ಅವರು ಕಂಡುಕೊಂಡರು. "ಬುದ್ಧಿಪೂರ್ವಾವಾಕ್ಯಕೃತಿರ್ವೇದೇ" ಎಂದು ದಿಟ್ಟತನದಿಂದ ಯಾವ ವೇದಗಳ ಬಗ್ಗೆ, ಸಾಕ್ಷಾತ್ಕೃತ ಧರ್ಮಾ, ಪ್ರಖರಮೇಧಾವೀಋಷಿಮಹರ್ಷಿಗಳು ಉದ್ಘೋಷಿಸಿದರೋ, ಆ ವೇದಗಳಿಗೆ ಶರಣಾಗತವಾದಂದೇ ಮಾನವಜಾತಿಯು ಬುದ್ಧಿ ಮತ್ತು ಹೃದಯ—ತರ್ಕ ಮತ್ತು ಶ್ರದ್ಧೆ—ಈ ಎರಡರ, ಸಂತುಲನ

ವನ್ನು ಸಾಧಿಸಿಕೊಂಡು, ಮಾನವ ಬುದ್ಧಿಕಲ್ಪಿತವಾದ ನೂರಾರು ದೇವಿದೇವತೆಗಳ ಉಪಾಸನೆಯ ವ್ಯರ್ಥಕ್ರಮದಿಂದ ದೂರವಾಗಿ, ಒಬ್ಬನೇಒಬ್ಬನೂ, ಅನಾದಿ-ಅನಂತನೂ, ನಿರಾಕಾರ-ನಿರ್ವಿಕಾರನೂ, ಸರ್ವವ್ಯಾಪಕ-ಸರ್ವಜ್ಞನೂ, ಸಚ್ಚಿದಾನಂದಸ್ವರೂಪನೂ, ಜಗತ್ಕರ್ತೃ ಪಾತೃಪ್ರಹರ್ತೃವೂ ಆದ ಪರಮಾತ್ಮನನ್ನು ಅರಿಯಬಲ್ಲದು; ಕೃತ್ರಿಮವೂ, ಪರಸ್ಪರ ಈರ್ಷ್ಯಾದ್ವೇಷ, ವಿದ್ರೋಹಗಳನ್ನು ಎಚ್ಚರಿಸುವಂತಹುದೂ, ಹುಟ್ಟಿನಿಂದ ನಿರ್ಣಯಿಸಲ್ಪಡುವಂತಹುದೂ, ಆದ ಮಾನವ ತ್ವಾಪಹಾರೀ ಜಾತಿಭೇದದ ನರಕದಿಂದ ಹೊರಬಂದು, ಪರಮ ವೈಜ್ಞಾನಿಕವೂ, ಆತ್ಮೋತ್ಕರ್ಷಸಾಧಕವೂ, ಸಮಾಜ ಹಾಗೂ ರಾಷ್ಟ್ರಕ್ಕೆ ಅದ್ಭುತ ಬಲವನ್ನಿಯುವಂತಹುದೂ ಆದ, ಗುಣಕರ್ಮ ಸ್ವಭಾವಾನುಕೂಲವಾದ ವರ್ಣವ್ಯವಸ್ಥೆಯನ್ನು ಅಂಗೀಕರಿಸಬಲ್ಲದು; ಜಡಾರಾಧನೆಯ ವ್ಯರ್ಥಕ್ರಿಯಾಲಾಪಗಳಿಂದ ಮುಕ್ತವಾಗಿ, ಯಜ್ಞ-ಸಂಧ್ಯಾ ಚೇತನೋಪಾಸನೆಗಳ ಕಡೆ ಧೈರ್ಯದಿಂದ ಹೆಜ್ಜೆಯಿಡಬಲ್ಲದು ಎಂದವರು ನಿರ್ಧರಿಸಿಕೊಂಡರು.

ಮಹರ್ಷಿ ದಯಾನಂದರು, ಸನ್ ೧೮೨೪ ನೇ ಇಸವಿಯಲ್ಲಿ ಸೌರಾಷ್ಟ್ರಪ್ರಾಂತ್ಯದ ಮೋರವೀರಾಜ್ಯದ ಟಂಕಾರಾ ಗ್ರಾಮದಲ್ಲಿ, ಸಾಮವೇದೀಯ ಔದೀಚ್ಯಬ್ರಾಹ್ಮಣರ ವಂಶದಲ್ಲಿ ಹುಟ್ಟಿದವರು. ೧೪ ವರ್ಷದವರಾಗಿದ್ದಾಗ, ಶಿವರಾತ್ರಿಯ ಜಾಗರಣದ ಸಮಯದಲ್ಲಿ, ಶಿವಲಿಂಗದ ಮೇಲೆ ಇಲಿಗಳು ಸಂಚರಿಸುತ್ತಿದ್ದುದನ್ನು ಕಂಡು, ಮೂರ್ತಿಪೂಜಾ ವಿಮುಖರಾದರು. ಅವರು ೧೬ ವರ್ಷದವರಾಗಿದ್ದಾಗ ಅವರ ತಂಗಿಯೂ, ೧೯ ವರ್ಷದವರಾಗಿದ್ದಾಗ ಅವರ ಚಿಕ್ಕಪ್ಪನೂ, ಮೃತರಾದರು. ಈ ಎರಡು ಮರಣಗಳ ದೃಶ್ಯದಿಂದ ಅವರ ಹೃದಯದಲ್ಲಿ ಸಾಂಸಾರಿಕ ಸುಖಗಳ ಬಗ್ಗೆ ವೈರಾಗ್ಯ ಹುಟ್ಟಿತು. ಸಾವನ್ನು ಗೆಲ್ಲಬೇಕೆಂಬ ಸಂಕಲ್ಪ ತಳೆದು ಯೋಗಾಭ್ಯಾಸದತ್ತ ಒಲಿದರು. ಭೋಗವಿಲಾಸಗಳ ಕಡೆಯಿಂದ ದಿನ ದಿನಕ್ಕೂ ಹೆಚ್ಚು ವಿರಕ್ತನಾಗುತ್ತಿದ್ದ ವಂಶಧರನಾದ ಪುತ್ರನನ್ನು ಮಮತಾ ಮೋಹಗಳ ಹಗ್ಗದಿಂದ ಜಗಜ್ಜೀವನ ಸ್ತಂಭಕ್ಕೆ ಕಟ್ಟಿಹಾಕಬೇಕೆಂಬ ಬಗೆಯಿಂದ, ತಂದೆತಾಯಿಗಳು ಅವರ ವಿವಾಹಕ್ಕಾಗಿ ಪ್ರಯತ್ನಮಾಡತೊಡಗಿದರು. ಆದರೆ,

ತಮ್ಮ ೨೧ ನೆಯ ವರ್ಷದ ಹುರುಪಿನ ಪ್ರಾಯದಲ್ಲಿ ಒಂದು ರಾತ್ರಿ ಅವರು ನಿರ್ಮಮರಾಗಿ ತಂದೆತಾಯಿಗಳ ಹಾಗೂ ಸೋದರ ಸೋದರಿಯರ ಅನುರಾಗ ರಜ್ಜುವನ್ನು ಕಿತ್ತುಹಾಕಿ, ಗೃಹತ್ಯಾಗಮಾಡಿ, ಹೊರಟೇ ಹೋದರು. ಆಂದಿನಿಂದ ತಮಗೆ ೩೬ ವರ್ಷಗಳಾಗುವವರೆಗೆ, ಅಂದರೆ, ಸುಮಾರು ೧೫ ವರ್ಷಗಳ ಕಾಲ ನಿರಂತರವಾಗಿ ಯೋಗೀಶ್ವರರನ್ನರಸುತ್ತಾ ಅರಾವಳೀ ಪರ್ವತಗಳ, ವಿಂಧ್ಯಾಚಲದ ಹಾಗೂ ಉತ್ತುಂಗ ಹಿಮವತ್ಪರ್ವತಶ್ರೇಣಿಯ ಗುಹೆಗುಹೆಗಳಿಗೂ, ಗಂಗಾ–ಯಮುನಾ, ನರ್ಮದಾ, ನದಿಗಳ ತಟದ ವನ–ವನಗಳಲ್ಲಿಯೂ, ತಿರುಗಾಡಿದರು. ಅನಂತರ, ತಮ್ಮ ೩೬ ನೆಯ ವರ್ಷದಲ್ಲಿ, ಮಥುರಾ ನಿವಾಸಿಗಳಾದ ಪ್ರಜ್ಞಾಚಕ್ಷು ವ್ಯಾಕರಣಭಾಸ್ಕರ ಶ್ರೀಮತ್ಸ್ವಾಮಿ ವಿರಜಾನಂದ ದಂಡೀಶ್ವರರ ಶಿಷ್ಯರಾಗಿ, ಎರಡೂವರೆ ವರ್ಷಕಾಲ ವ್ಯಾಕರಣಶಾಸ್ತ್ರವನ್ನೂ ವೈದಿಕ ಸಾಹಿತ್ಯವನ್ನೂ ಅಧ್ಯಯನಮಾಡಿದರು. ವಿದ್ಯಾಭಾಸ ಮುಗಿದ ನಂತರ, ದಯಾನಂದರು, ಆಚಾರ್ಯ ಪ್ರವರ ವಿರಜಾನಂದ ದಂಡಿಗಳಿಗೆ ಚರಣವಂದನೆಮಾಡಿ, ಗುರುದಕ್ಷಿಣೆಯೆಂದು ಒಂದು ಹಿಡಿ ಲವಂಗವನ್ನರ್ಪಿಸಿದಾಗ ಗುರುವರ್ಯರು ಗದ್ಗದ ಕಂಠರಾಗಿ, “ವತ್ಸ! ನನಗೀದಕ್ಷಿಣೆ ಬೇಡ; ಆರ್ಯಾವರ್ತದಲ್ಲಿ ವೇದಗಳ ಹಾಗೂ ಋಷಿಮುನಿಕೃತ ಶಾಸ್ತ್ರಗ್ರಂಥಗಳ ಅಧ್ಯಯನಾಧ್ಯಾಪನ ಕ್ರಮವು ಲುಪ್ತವಾಗಿ, ಹುಲುಮಾನವಕೃತಿಗಳಾದ, ಈಶ್ವರ ಮತ್ತು ಮಹಾಪುರುಷರ ನಿಂದೆಗಳಿಂದಲೂ, ಪಕ್ಷಪಾತದಿಂದಲೂ ಕೂಡಿದ ಪೌರಾಣಿಕಗ್ರಂಥಗಳ ಪ್ರಚಾರವಾಗಿ, ಮತಮತಾಂತರಗಳ ಹಾವಳಿ ಹೆಚ್ಚಿ, ಆರ್ಯಾವರ್ತವು ಅಧಃಪತನಕ್ಕೆ ಗುರಿಯಾಗಿದೆ. ಆರ್ಯ ಜನಾಂಗವು ಮರಣಾಸನ್ನವಾಗಿದೆ. ಆದುದರಿಂದ, ನೀನು ನಿನ್ನ ಸಮಸ್ತ ಶಕ್ತಿಯನ್ನೂ ಉಪಯೋಗಿಸಿ, ಆರ್ಷಗ್ರಂಥಗಳ ಪಠನಪಾಠನ ಕ್ಕಾಗಿಯೇ ಪ್ರಯತ್ನಪಡು. ವೈದಿಕಧರ್ಮ ಪುನಃಪ್ರತಿಷ್ಠೆಮಾಡುವೆನೆಂದು ಮಾತುಕೊಡು” ಎಂದು ಮಡಿದರು. ಗುರುಭಕ್ತರಾದ ದಯಾನಂದರು “ತಥಾಸ್ತು” ಎಂದರು.

ಆದರೆ, ಈ “ತಥಾಸ್ತು”ವನ್ನು ಕ್ರಿಯಾತ್ಮಕ ಜೀವನಕ್ಕೆಳಿಸುವುದು, ಪೌರಾಣಿಕ, ಜೈನ, ಕ್ರೈಸ್ತ ಮತ್ತು ಮುಸಲ್ಮಾನ ಮತಗಳ ಸುಂಟರ

ಗಾಳಿಯಲ್ಲಿ ಸಿಕ್ಕಿದ ಅಂದಿನ ಭಾರತದಲ್ಲಿ ಅಷ್ಟು ಸುಲಭವಾಗಿರಲಿಲ್ಲ. ಕಲ್ಪಿತ ದೇವಿ ದೇವತೆಯರ ವಿಗ್ರಹಗಳ ಪೂಜೆಯಲ್ಲಿಯೂ, ಜಾತಿ ಪದ್ಧತಿಯ ಪರಿರಕ್ಷಣೆಯಲ್ಲಿಯೂ, ಶ್ರಾದ್ಧ-ತೀರ್ಥಯಾತ್ರೆ ಮೊದಲಾದ ಅವೈದಿಕ ಕರ್ಮಕಾಂಡಗಳಲ್ಲಿಯೂ, ನಿರತರಾಗಿದ್ದ ಪೌರಾಣಿಕರೂ, ವೇದವಿರೋಧಿಗಳೂ, ಅನೀಶ್ವರವಾದಿಗಳೂ, ಅಪೂರ್ಣಮಾನವರನ್ನೇ ದೇವರ ಆಸನದಲ್ಲಿ ಕೂಡಿಸಿ ಪೂಜಿಸುವವರೂ ಆದ ಜೈನ, ಬೌದ್ಧರೂ, ಸಮಗ್ರ ಭಾರತವನ್ನೂ ಯೇಸುಕ್ರಿಸ್ತನ ಅಡಿದಾವರೆಗೆ ಕೆಡಹುವ ಕನಸನ್ನು ಕಾಣುತ್ತಿದ್ದ ಕ್ರೈಸ್ತರೂ, ಅದೇತಾನೇ ಆಸ್ತವಾಗಿದ್ದ ಮೊಗಲ ಸಾಮ್ರಾಜ್ಯಸೂರ್ಯನನ್ನು ಮರೆಯಲಾರದೆ, ಮತ್ತೆ ತಮ್ಮ ಶಾಸನವನ್ನೇ ಸ್ಥಾಪಿಸಬೇಕೆಂದು ಹವಣಿಸುತ್ತಿದ್ದ ಮುಸಲ್ಮಾನರೂ, ದಯಾನಂದರ ಆವಿರ್ಭಾವದಿಂದ ಉದ್ರಿಕ್ತರಾಗಿದ್ದರು ಗುರುವರ್ಯರಿಗಿತ್ತ ವಚನವನ್ನು ಪಾಲಿಸಲು ಪ್ರಾಣಪಣದಿಂದ ಬದ್ಧಪರಿಕರರಾಗಿ ನಿಂತ ದಯಾನಂದರಮೇಲೆ ಅದೆಷ್ಟೋಬಾರಿ ಲಾಠೀಪ್ರಹಾರವಾಯಿತು; ಅವರಿದ್ದ ಕುಟೀರಕ್ಕೆ ಬೆಂಕಿ ಹಚ್ಚಿಲಾಯಿತು; ಅವರನ್ನು ಕೊಲ್ಲಲು ಜಟ್ಟಿಗಳನ್ನು ನೇಮಿಸಲಾಯಿತು; ಮೂರು ನಾಲ್ಕುಸಾರಿ ವಿಷಪ್ರಾಶನವೂ ಮಾಡಿಸಲಾಯಿತು. ಒಂದು ಸಾರಿ ಗಂಗೆಗೆ ಅವರನ್ನು ಒಗೆಯಲು ಪ್ರಯತ್ನಿಸಿದುದೂ ಆಯಿತು. ನಿಂದಾವಾಕ್ಯಗಳಂತೂ ಸುರಿಮಳೆಯಂತೆಯೇ ಸುರಿದೂ ಹೋಯಿತು. ಆದರೂ ಅಜಾತಶತ್ರುಗಳಾದ ಮಹರ್ಷಿ ದಯಾನಂದರು ಯಾರನ್ನೂ ದ್ವೇಷಿಸಲಿಲ್ಲ; ಯಾರನ್ನೂ ನಿಂದಿಸಲಿಲ್ಲ; ಯಾರನ್ನೂ ದಂಡಿಸಲಿಲ್ಲ; ಅವರ ಮೊಗದಮೇಲಿನ ಮುಂದಹಾಸ ಎಂದೂ ಮಾಸಲಿಲ್ಲ. ಎಲ್ಲರ ಹಿತವನ್ನೂ ಹೃದಯದಲ್ಲಿ ಹೊತ್ತ ಆ ಯೋಗಿರಾಜರು, ಎಲ್ಲರಿಗೂ ಶ್ರೇಯಸ್ಸನ್ನು ಕೋರುತ್ತಾ, ಎಲ್ಲರನ್ನೂ ಕೈಯ್ಯೆತ್ತಿ ಹರಸುತ್ತಾ, ವಿಷವಿತ್ತವರನ್ನೂ, ದಂಡಪ್ರಹಾರಮಾಡಿದವರನ್ನೂ, ನಿಂದಿಸಿದವರನ್ನೂ ವಂದಿಸುತ್ತಾ, ವೇದ ಧರ್ಮಧ್ವಜವನ್ನು ಉನ್ನತವಾಗಿ ಎತ್ತಿ ಹಿಡಿದು, ಸುಮಾರು ಹದಿನೈದು ವರ್ಷಗಳ ಕಾಲ ಸಮಗ್ರ ಉತ್ತರ ಭಾರತದಲ್ಲಿ ನೂತನ ಚೈತನ್ಯವನ್ನು ತುಂಬುತ್ತಾ ತಿರುಗಾಡಿದರು. ಸುಪ್ರಸಿದ್ಧ ಫ್ರೆಂಚ್ ಸಾಹಿತಿ ರೋಮೇನ್ ರೋಲೆಂಡರು ಹೇಳಿರುವಂತೆ " ತನ್ನ ಪೌರುಷಮಯ ಜೀವನದ ಸಿಂಹ

ರಕ್ತವನ್ನು, ಮೃತಪ್ರಾಯ ಆರ್ಯಜಾತಿಯ ಧಮನಿಯಲ್ಲಿ ತುಂಬಿ, ಅದು ಮತ್ತೊಂದುಸಲ ಆತ್ಮಾಭಿಮಾನಪೂರ್ವವಾಗಿ ಜಗತ್ತಿನೆದುರಿಗೆ ತಲೆಯೆತ್ತಿ ನಿಲ್ಲುವಂತೆ ಮಾಡಿದರು.'' ಕೊನೆಗೆ ಇದೇ ವೇದೋದ್ಧಾರ ಮಹಾಯಜ್ಞದ ಪವಿತ್ರ ವೇದಿಯಲ್ಲಿ ೧೮೮೩ ನೇ ಇಸ್ವಿ, ಅಕ್ಟೋಬರ್ ೩೦ ನೆಯ ತಾರೀಖು ಸಂಜೆ ೫-೩೦ ಘಂಟೆಯ ಹೊತ್ತಿನಲ್ಲಿ ಅಜಮೀರ ನಗರದಲ್ಲಿ '' ಓ ನನ್ನ ಈಶ್ವರ! ಇದೇ ನಿನ್ನ ಇಚ್ಛೆ! ನಿನ್ನ ಇಚ್ಛೆ ಪೂರ್ಣವಾಗಲಿ! '' ಎಂದು ಉದ್ಗಾರತೆಗೆದು ಆತ್ಮಾರ್ಪಣಮಾಡಿ ಅನಂತನಿದ್ರೆಯಲ್ಲೊರಗಿದರು. ಜಗದ್ವ್ಯಾಪಾರ ಸಂವರಣಮಾಡಿ, ಜಗದೀಶ್ವರನತ್ತ ತೆರಳುವ ಮೊದಲೂ ಸಹ, ಹಾಲಿನಲ್ಲಿ ವಿಷವಿತ್ತ ಜಗನ್ನಾಥನಿಗೆ ಜೀವನದಾನಮಾಡಿ. ಅವನ ಮಾರ್ಗವ್ಯಯಕ್ಕಾಗಿ ದ್ರವ್ಯ ಸಹಾಯವನ್ನಿತ್ತು ದಯಾನಂದರೆಂಬ ಹೆಸರನ್ನು ಸಾರ್ಥಕಗೊಡಿಸಿ ಕೊಂಡು ಹೊರಟುಹೋದರು.

ಈ ಸಂಕ್ಷಿಪ್ತ ಜೀವನಚರಿತ್ರೆಯಿಂದ, 'ಸತ್ಯಾರ್ಥಪ್ರಕಾಶ'ದ ಮೂಲಲೇಖಕರ ಉದಾತ್ತವಾದ ಆಶಯವನ್ನು ಪಾಠಕರು ತಕ್ಕ ಮಟ್ಟಿಗೆ ಅರ್ಥಮಾಡಿಕೊಳ್ಳಬಲ್ಲರು. ಮಹರ್ಷಿ ದಯಾನಂದರು ವೈದಿಕಧರ್ಮಪ್ರಚಾರಕ್ಕಾಗಿ ಉತ್ತರಭಾರತದ ಪ್ರಾಯಶಃ ಪ್ರತಿಯೊಂದು ನಗರದಲ್ಲಿಯೂ '' ಆರ್ಯಸಮಾಜ ''ವನ್ನು ಸ್ಥಾಪಿಸಿದರು; ಮತ್ತು ತಮ್ಮ ಅಲ್ಪಜೀವಿತ ಕಾಲದಲ್ಲಿ ವಾಣಿ ಮತ್ತು ಲೇಖನಿ ಎರಡನ್ನೂ ಧಾರಾಳವಾಗಿ ಉಪಯೋಗಿಸಿದರು. ಊರು ಊರಿನಲ್ಲಿಯೂ, ಗ್ರಾಮ ಗ್ರಾಮಗಳಲ್ಲಿಯೂ, ಅವರ ವೀರಘರ್ಜನೆಯಾಯಿತು; ವೇದಘೋಷದಿಂದ ಸುಪ್ತ ಆರ್ಯಜಾತಿ ಎಚ್ಚೆತ್ತು ನಿಂತಿತು. ಅಲ್ಲದೆ, ಅವರು ಸಂಪೂರ್ಣ ಯಜುರ್ವೇದಕ್ಕೂ, ಋಗ್ವೇದದ ಕೆಲವು ಭಾಗಗಳಿಗೂ, ಸಂಸ್ಕೃತ ಮತ್ತು ಹಿಂದೀ ಭಾಷೆಗಳಲ್ಲಿ ಪ್ರಾಚೀನ ಆರ್ಷಶೈಲಿಯನ್ನನುಸರಿಸಿ, ಪ್ರಮಾಣಪರಿಪುಷ್ಪವೂ ಯುಕ್ತಿಯುಕ್ತವೂ ಆದ ಭಾಷ್ಯಗಳನ್ನು ಬರೆದರು. ಋಗ್ವೇದಾದಿಭಾಷ್ಯ ಭೂಮಿಕಾ, ಸಂಸ್ಕಾರವಿಧಿ, ಪಂಚಮಹಾಯಜ್ಞವಿಧಿ, ವೇದಾಂತ ಧ್ವಾಂತನಿವಾರಣ, ಭ್ರಮೋಚ್ಛೇದನ, ಭ್ರಾಂತಿವಾರಣ, ಆದ್ಯೈತಮತ ಖಂಡನ, ಸ್ವಾಮಿನಾರಾಯಣಮತಖಂಡನ, ಮೊದಲಾದ ಗ್ರಂಥ

ಗಳನ್ನು ರಚಿಸಿದರು. ಮತ್ತು ಇಂದು ಜಗತ್ತಿನಲ್ಲಿ ಪ್ರಚಲಿತವಾಗಿರುವ, ಹಾಗೂ ಭಾರತವರ್ಷದಲ್ಲಿ ರೂಢಿಯಾಗಿರುವ ಪ್ರಾಯಶಃ ಎಲ್ಲಾ ಸಂಪ್ರದಾಯಗಳ ತುಲನಾತ್ಮಕ ಅಧ್ಯಯನ ಮತ್ತು ವಿಶ್ಲೇಷಣಕ್ಕೆ ನೆರವಾಗಿ, ಎಲ್ಲರೂ ಸತ್ಯಾಸತ್ಯಗಳನ್ನರಿತು, ಸತ್ಯವನ್ನು ಗ್ರಹಿಸುವುದಕ್ಕೂ ಅಸತ್ಯವನ್ನು ತ್ಯಜಿಸುವುದಕ್ಕೂ ಅನುಕೂಲವಾಗಲೆಂಬ ಉದ್ದೇಶ್ಯದಿಂದ, ಇಂದು ಕನ್ನಡಜನತೆಯ ಕೈಯ್ಯಲ್ಲಿರುವ ಅಮರ ಗ್ರಂಥವಾದ ಸತ್ಯಾರ್ಥಪ್ರಕಾಶವನ್ನೂ ಸಹ ಅವರೇ ರಚಿಸಿದ್ದಾರೆ.

ಶುಷ್ಕವೇದಾಂತ, ಅಕರ್ಮಣ್ಯವಾದ, ಪ್ರಾರಬ್ಧವಾದ, ಜಡೋಪಾಸನೆ, ನರೋಪಾಸನೆ, ಸಾಂಪ್ರದಾಯಿಕತೆ ಮೊದಲಾದ ಪ್ರಗತಿ ಪ್ರತಿಬಂಧಕವಾದ ಅಡಚಣೆಗಳನ್ನು ದೂರತಳ್ಳಿ, ಕೇವಲ ವಿಚಾರ ಲೋಕದಲ್ಲಿ ವಿಹರಿಸುತ್ತಿದ್ದ ಧರ್ಮವನ್ನು ಜನಜೀವನಕ್ಕಿಳಿಸಿ, ಜನಾಂಗದ ವಿಚಾರಧಾರೆಯ ದಿಕ್ಕನ್ನೇ ಬದಲಾಯಿಸಿದ ಪ್ರಚಂಡ ಕ್ರಾಂತಿಕಾರಿಗಳಾದ ಮಹರ್ಷಿ ದಯಾನಂದರು, ಜನರಲ್ಲಿ ವಿಚಾರಕ್ರಾಂತಿಯನ್ನುಂಟುಮಾಡಲು ಬರೆದ, ಈ ‘‘ಸತ್ಯಾರ್ಥಪ್ರಕಾಶ’’ವನ್ನು ಓದ ಲಾರಂಭಿಸುವ ಪಾಠಕರೂ ಸಹ, ಜೀವನ ಕ್ರಾಂತಿಗೆ ಸ್ವಾಗತ ನೀಡುವ ವಿಶಾಲ ಮಾನವ ದೃಷ್ಟಿಕೋಣದಿಂದಲೇ, ಈ ಗ್ರಂಥವನ್ನು ಕೈಗೆ ತೆಗೆದುಕೊಳ್ಳುವುದು ಅವಶ್ಯಕ. ಸದಸತ್ಪ್ರವೃತ್ತಿಗಳ ಹೋರಾಟವು ಜಗತ್ತಿನಷ್ಟೇ ಹಳೆಯದೆಂಬುದಕ್ಕೆ ಮಾನವನ ಇತಿಹಾಸ ಸಾಕ್ಷಿಯಾಗಿರುತ್ತದೆ. ಅಸತ್ಪ್ರವೃತ್ತಿಯನ್ನು ತುಳಿಯದೆ, ಸತ್ಪ್ರವೃತ್ತಿಯನ್ನು ರೂಢಿಸಲು ಮೂರು ಕಾಲಕ್ಕೂ ಸಾಧ್ಯವಿಲ್ಲ, ಆದುದರಿಂದ, ಅಸತ್ಪ್ರವೃತ್ತಿಯ ಖಂಡನೆಮಾಡದೆ, ಸತ್ಪ್ರವೃತ್ತಿಯ ಮಂಡನಮಾಡಲು ಎಂದಿಗೂ ಆಗಲಾರದು. ಇಂದಿನವರಿಗೆ ಯಾವ ಯಾವ ಮತಾಚಾರ್ಯನೂ, ತನ್ನ ಪೂರ್ವಜರ ಮತವನ್ನು ಖಂಡಿಸದೆ, ನೂತನ ಮತವನ್ನು ಸ್ಥಾಪಿಸಲಿಲ್ಲ. ತಾರ್ಕಿಕ ಶಿರೋಮಣಿಗಳಾದ ಶ್ರೀಮಚ್ಛಂಕರ ಶ್ರೀಮದ್ರಾಮಾನುಜ, ಶ್ರೀ ಮನ್ಮಧ್ವರಂತಹ ದಾರ್ಶನಿಕರಂತಿರಲಿ, ಅಹಿಂಸಾಮೂರ್ತಿಯೆನಿಸಿದ ಬುದ್ಧದೇವನೂ, ತ್ಯಾಗಶಿರೋಮಣಿಯೆನಿಸಿದ ತೀರ್ಥಂಕರ ಮಹಾವೀರನೂ, ಶಾಂತಿಮೂರ್ತಿಯೆನಿಸಿದ ಏಸುಕ್ರಿಸ್ತನೂ, ಸಹ ತಮ್ಮ ಕಾಲದಲ್ಲಿ ಪ್ರಚಲಿತವಾಗಿದ್ದ ಸಂಪ್ರದಾಯ

ಗಳನ್ನು ಖಂಡಿಸದೆ ಬಿಟ್ಟಿಲ್ಲ. ವಸ್ತುತಃ ಸುಧಾರಕರ ಅವಶ್ಯಕತೆ ಯುಂಟಾಗುವುದೇ ಖಂಡನದ ಆವಶ್ಯಕತೆ ಬಿದ್ದಾಗ. ಆದುದರಿಂದ, ಸ್ವಾಮೀ ದಯಾನಂದರು ಸಹ ತಮ್ಮ ಕಾಲದಲ್ಲಿ ಪ್ರಚಲಿತವಾಗಿದ್ದ ವೇದವಿರುದ್ಧವಾದ ಮತಾಂತರಗಳನ್ನು ಸತ್ಯಾರ್ಥಪ್ರಕಾಶದಲ್ಲಿ ಉಗ್ರವಾಗಿ ಖಂಡಿಸಿದ್ದಾರೆ ಎಂಬುದು ನಿಜ. ಆದರೆ, ಈ ಸ್ಥಳದಲ್ಲಿ ಪಾಠಕರು ಅಗತ್ಯವಾಗಿ ನೆನಪಿನಲ್ಲಿಡಬೇಕಾದ ಅಂಶವೊಂದಿದೆ. **ಮಹರ್ಷಿ ದಯಾನಂದರು ಖಂಡಿಸಿರುವುದು ಮಾನವನ ಆತ್ಮಕ್ಕೆ ಘಾತಕವಾದ, ಅಂಧ ವಿಶ್ವಾಸಜನಿತವಾದ, ಮತಮತಾಂತರಗಳ ಅಸತ್ಪ್ರವೃತ್ತಿಗಳನ್ನೇ ಹೊರತು ಯಾರ ಧರ್ಮವನ್ನೂ ಅಲ್ಲ.** ಅವರೇ ಸ್ವತಃ ತಮ್ಮ ಲೇಖನದಲ್ಲಿ—"ನಾನು ಯಾರ ಮತ ಗಳನ್ನೂ ಮೊದಲೇ ಕೆಟ್ಟ ದೃಷ್ಟಿಯಿಂದ ನೋಡದೆ, ನಿಷ್ಪಕ್ಷಪಾತ ಮನೋಭಾವದಿಂದ ವಿಮರ್ಶೆಮಾಡಿ, ಸತ್ಯವನ್ನು ಗ್ರಹಿಸಿ, ಅಸತ್ಯ ವನ್ನು ಬಿಟ್ಟುಬಿಡುವಂತೆ ಎಲ್ಲರೂ ಮಾಡುವುದುಚಿತವಾಗಿದೆ. ಎಲ್ಲಾ ಮತಗಳಲ್ಲಿಯೂ, ಇಂದೂ ಸಹ ಬಹುಮಂದಿ ವಿದ್ವಾಂಸರಿದ್ದಾರೆ. ಅವರೆಲ್ಲಾ ಪಕ್ಷಪಾತವನ್ನು ತ್ಯಜಿಸಿ, ವಿಚಾರದೃಷ್ಟಿಯಿಂದವಲೋಕಿಸಿ, ಸರ್ವಮತಗಳಿಗೂ ಅವಿರೋಧವಾದ ಸರ್ವತಂತ್ರ ಸಿದ್ಧಾಂತಗಳನ್ನು ಗ್ರಹಿಸಿ, ಮತೀಯ ಪಕ್ಷಪಾತದಿಂದ ಉದ್ಭವಿಸುವ ಏಕತಂತ್ರಸಿದ್ಧಾಂತ ಗಳನ್ನು ವರ್ಜಿಸಿದರೆ, ಮಾನವಜಾತಿಯಲ್ಲಿ ಐಕಮತ್ಯಹುಟ್ಟಿ, ಇಂದೂ ಸಹ ವಿಶ್ವಕಲ್ಯಾಣವಾಗಬಹುದು" ಎಂದು ಉದ್ಗಾರ ತೆಗೆದಿದ್ದಾರೆ. ಸರ್ವಸಂಪ್ರದಾಯಗಳಲ್ಲಿಯೂ, ಸಿಕ್ಕುವ ಸತ್ಯವನ್ನು ಸಂತೋಷದಿಂದ ಸ್ವೀಕರಿಸಿ, ಅಸತ್ಯಕ್ಕೆ ಮಾತ್ರ, ಕೇವಲ ಮಾನವ ಹಿತದೃಷ್ಟಿಯಿಂದ. ಖಂಡನದ ಕೊಡಲಿಯನ್ನೆತ್ತಿ ಪ್ರಹಾರ ಮಾಡಿದ್ದಾರೆ ಈ ವೀರ ಸಂನ್ಯಾಸೀ ಖಂಡನಕುಠಾರವನ್ನೆತ್ತಿ ಪ್ರಹರಿಸುವಾಗ, "ಸ್ವದೇಶ-ವಿದೇಶ, ಸ್ವಮತ-ಪರಮತ, ಸ್ವಜಾತಿ-ಅನ್ಯಜಾತಿ, ಎಂಬ ಯಾವ ಪಕ್ಷಪಾತಕ್ಕೂ ತಮ್ಮಿದೆಯಲ್ಲಿ ಎಡೆಕೊಟ್ಟಿಲ್ಲ. ವಿದೇಶ ಮೂಲಕವಾದ ಕ್ರೈಸ್ತ-ಮುಸಲ್ಮಾನ ಮತಗಳ ಅಸತ್ಪ್ರವೃತ್ತಿಗಳನ್ನು ಖಂಡಿಸಿದರೆ ಅದಕ್ಕಿಂತ ಮೊದಲು, ಸ್ವದೇಶ ಮೂಲಕವಾದ ಪೌರಾಣಿಕ-ಜೈನ-ಬೌದ್ಧ ಮತಗಳ ಮೇಲೇನೂ ದಯೆತೋರಿಲ್ಲ. ಅವುಗಳನ್ನೂ ಕಟುಗ

ವಾಗಿ ಖಂಡಿಸಿದ್ದಾರೆ. ವಸ್ತುತಃ ಆ ಯೋಗೀಶ್ವರರ ಹೃದಯದಲ್ಲಿ ಯಾವ ಭೇದಭಾವನೆಗೂ, ದುರಾಗ್ರಹಕ್ಕೂ, ಆವಕಾಶವಿರಲಿಲ್ಲ. ಆವರು ತಮ್ಮ ಭೂಮಿಕೆಯಲ್ಲಿ ಸ್ವತಃ " ಕೇವಲ ಸತ್ಯವಾದ ತತ್ವವನ್ನು ಪ್ರತಿಪಾದಿಸಿ, ಅಸತ್ಯವನ್ನು ಖಂಡಿಸಿ, ಮಾನವರಿಗೆ ಪರಮಾನಂದದ ಪ್ರಶಸ್ತಪಥವನ್ನು ಪ್ರದರ್ಶಿಸುವುದೇ ಈ ಪುಸ್ತಕಪ್ರಣಯನದಲ್ಲಿ ನನ್ನ ಉದ್ದೇಶ್ಯವೇ ಹೊರತು ಯಾರ ಹೃದಯಕ್ಕಾದರೂ, ನೋವನ್ನುಂಟುಮಾಡಬೇಕೆಂಬುದಾಗಲೀ, ಯಾರಿಗಾದರೂ ಹಾನಿಯನ್ನುಂಟು ಮಾಡಬೇಕೆಂಬುದಾಗಲೀ, ನನ್ನ ಉದ್ದೇಶ್ಯವಲ್ಲ." ಎಂದು ಘೋಷಿಸಿದ್ದಾರೆ. ಆದುದರಿಂದ ಶಸ್ತ್ರಪ್ರಯೋಗಮಾಡುವಾಗ ರೋಗಿಯ ಹಿತಕಾಮನೆಯೊಂದೇ ಚಿಕಿತ್ಸಕರ ಹೃದಯದಲ್ಲಿರುವಂತೆ, ಖಂಡನಾಸ್ತ್ರ ಪ್ರಯೋಗಮಾಡುವಾಗ ಮಾನವ ಹಿತವೊಂದೇ ಮಹರ್ಷಿ ದಯಾನಂದರ ಹೃದಯದಲ್ಲಿತ್ತು, ಎಂಬುದು ಸ್ಪಷ್ಟವಾಗುತ್ತದೆ.

" ಸತ್ಯಾರ್ಥಪ್ರಕಾಶ " ರಚನಾಕ್ರಮದಲ್ಲಿಯೂ ಒಂದು ಆದ್ಭುತ ರಹಸ್ಯವಿದೆ. ಪೂರ್ವಾರ್ಧದಲ್ಲಿನ ಹತ್ತುಸಮುಲ್ಲಾಸಗಳಲ್ಲಿ ಮುಖ್ಯತಃ ವೇದಧರ್ಮಮಂಡನವೇ ಇದೆ; ಪ್ರಾಸಂಗಿಕವಾಗಿ ಅಲ್ಲಲ್ಲಿ ಅಷ್ಟಷ್ಟು, ಅದು ಉಗ್ರಚಿಕಿತ್ಸೆಗೆ ಮುನ್ನ ಚಿಕಿತ್ಸಕನು ರೋಗಿಯ ಅಂಗತಃ ಶೋಧನಕ್ಕಾಗಿ ಕೊಡುವ ವಿರೇಚನದಂತೆ ಮಾತ್ರ. ವಾಸ್ತವಿಕವಾದ ಖಂಡನ ಪ್ರಾರಂಭವಾಗುವುದು ಉತ್ತರಾರ್ಧದಿಂದಲೇ, ಇದರ ಉದ್ದೇಶ್ಯವಾದರೂ ಅಸತ್ಯದ ಕರಾಳಸ್ವರೂಪವನ್ನು ಬಹಿರಂಗ ಪಡಿಸಿ, ಮಾನವನ ಹೃದಯದಿಂದ ಅದನ್ನು ಹೊರಹೊರಡಿಸಿ, ಮುತ್ತದರ ವ್ಯೋಹಕ್ಕೆ ಸಿಲುಕದಂತೆ ಮಾಡುವುದೇ ಹೊರತು ಬೇರೇನೂ ಅಲ್ಲ. ಶಸ್ತ್ರಚಿಕಿತ್ಸೆಯಾದನಂತರ, ಗಾಯಕ್ಕೆ ಶಾಂತಿದಾಯಕವಾದ ಔಷಧಗಳನ್ನೆ ಹಚ್ಚುವ ಚಿಕಿತ್ಸಕನಂತೆಯೇ ಮಹರ್ಷಿ ದಯಾನಂದರೂ ಸಹ ಖಂಡನಪ್ರಯೋಗಾನಂತರ, ಆತ್ಮಕ್ಕೆ ಅನುಪಮ ಆನಂದವನ್ನೀವ ಭವರೋಗದುಃಖನಿವಾರಕವಾದ ಸ್ವಮಂತವ್ಯಾಮಂತವ್ಯಪ್ರಕರಣದ ಶೀತಳವಾದ ಲೇಪನವನ್ನು ಮಾಡಿದ್ದಾರೆ.

ಇಂತಹ ಅದ್ಭುತವಾದ ಅಮರ ಕೃತಿಯನ್ನು ಓದಲಾರಂಭಿಸುವ ಪಾಠಕಮಹಾಶಯರೂ ಸಹ, ಅಲ್ಲಲ್ಲಿ ಕಠೋರವೆಂಬಂತೆ ಕಂಡು

ಬರುವ ಶಬ್ದಗಳ ಕಡೆಗೆ ಗಮನಕೊಡದೆ, ಸಂಪ್ರದಾಯಾತೀತವಾದ ಪೂರ್ಣ ನಿಷ್ಪಕ್ಷವಾದ, ಜಿಜ್ಞಾಸುಮನೋಭಾವದಿಂದಲೇ ಈ ಗ್ರಂಥವನ್ನು ಅಧ್ಯಯನ ಮಾಡಿದಲ್ಲಿ, ಅವರಿಗೆ, ಗ್ರಂಥಕರ್ತರ ಉದಾತ್ತವಾದ ಅಭಿಪ್ರಾಯವು ಗೊತ್ತಾಗುತ್ತದೆ; ನರಕೃತವಾದ ಎಲ್ಲಾ ಸಂಪ್ರದಾಯಗಳನ್ನೂ ದಾಟಿನಿಂತ, ಮಾನವನ ವೈಯ್ಯಕ್ತಿಕ, ಪಾರಿವಾರಿಕ, ಸಾಮಾಜಿಕ, ರಾಷ್ಟ್ರೀಯ, ರಾಜನೈತಿಕ, ಆರ್ಥಿಕ, ನೈತಿಕ ಮತ್ತು ಅಧ್ಯಾತ್ಮಿಕ ಜೀವನದ ಅಂತಸ್ತಳವನ್ನು ಒಳಹೊಕ್ಕು ಹುರಿದುಂಬಿಸಿ, ಬೆಳೆಯಿಸುವ, ಅಭ್ಯುದಯ-ನಿಶ್ರೇಯಸ, ಈ ಎರಡಕ್ಕೂ ಸಾಧಕವಾದ ವೈದಿಕ ಮಾರ್ಗವನ್ನು ತೋರಿಸುವ ಸಮಗ್ರ ಧರ್ಮದ ದರ್ಶನವಾಗುತ್ತದೆ. ಗ್ರಂಥಕರ್ತರ ಪರಿಶ್ರಮವೂ ಸಾರ್ಥಕವಾಗಿ, ಪಾಠಕರಿಗೂ ಪೂರ್ಣ ಲಾಭವುಂಟಾಗುತ್ತದೆ. ಆದುದರಿಂದ, ಪ್ರಿಯ ಪಾಠಕರು ಸಮಸ್ತ ಸಾಂಪ್ರದಾಯಿಕ ಸಂಸ್ಕಾರಗಳನ್ನು ಬದಿಗೊತ್ತಿ, ತತ್ವಾನ್ವೇಷಣಮಾಡುವ ದಾರ್ಶನಿಕರಂತೆ ತನ್ಮ ಹೃದಯಕಪಾಟಗಳನ್ನು ಸತ್ಯವನ್ನು ಸ್ವಾಗತಿಸುವಸಲುವಾಗಿ ತೆರೆದಿಟ್ಟು, ವಿಶಾಲ ಮನೋಭಾವದಿಂದಲೇ ಓದಲಾರಂಭಿಸಬೇಕೆಂದು, ಅತಿ ವಿನಯದಿಂದ ಸೂಚಿಸಬಯಸುತ್ತೇವೆ.

ಮಹರ್ಷಿ ದಯಾನಂದರೇ, ಸ್ವತಃ ತಮ್ಮ ಭೂಮಿಕೆಯಲ್ಲಿ, "ಸತ್ಯಾರ್ಥಪ್ರಕಾಶ"ದಲ್ಲಿ ವರ್ಣಿಸಿರುವ ವಿಷಯಗಳನ್ನೆಲ್ಲಾ ಕ್ರೋಢೀಕರಿಸಿ ಹೇಳಿರುವದರಿಂದ, ನಾವು ಆ ಬಗ್ಗೆ ಪ್ರಸ್ತಾಪಿಸಲು ಈ ವಕ್ತವ್ಯದ ಕಳೇಬರವನ್ನು ಹೆಚ್ಚಿಸಬೇಕಾಗಿಲ್ಲ. ಆದರೆ, ಈ ಸಂಶೋಧಿತ ಭಾಷಾಂತರದ ಬಗ್ಗೆ ಜನತೆಗೊಂದು ಮಾತನ್ನು ಹೇಳಬೇಕಾಗಿದೆ. ಸ್ವತಂತ್ರಗ್ರಂಥರಚನೆಯಲ್ಲಿ ಲೇಖಕರಿಗಿರುವ ಸ್ವಾತಂತ್ರ್ಯವು ಭಾಷಾಂತರಕಾರರಿಗಿರುವುದಿಲ್ಲವೆಂಬುದು ಸಾಹಿತಿಗಳೆಲ್ಲರಿಗೂ ವಿದಿತವೇ ಆಗಿರುತ್ತದೆ. ಮೂಲಲೇಖಕರ ಭಾವಪೋಷಣೆಯೇ ಭಾಷ್ಯಾಂತರದಲ್ಲಿ ಪ್ರಧಾನ; ಬಾಷೆಗೌಣ. ಆದುದರಿಂದ ನಾವು ಈ ಭಾಷಾಂತರದಲ್ಲಿ, ಮೂಲಕ್ಕೆ ಸಾಧ್ಯವಾದಷ್ಟು ಹತ್ತಿರ ಏರಲು ಪ್ರಯತ್ನಿಸಿದ್ದೇವೆ. ಕನ್ನಡ ಭಾಷೆಯ ಸೊಬಗೂ, ಕೆಡದಂತೆ ಯಥಾಶಕ್ತಿ ಯತ್ನಿಸಿದ್ದರೂ, ದಾರ್ಶನಿಕ ಹಾಗೂ ಧಾರ್ಮಿಕ ಪರಿಭಾಷಾ ಶಬ್ದಗಳನ್ನೂ, ಕೂಡಿದಮಟ್ಟಿಗೂ

ಮೂಲದಿಂದಲೇ ತೆಗೆದುಕೊಂಡ್ದೀವೆ. ಮತ್ತು ಮೈಸೂರು, ಮಂಗಳೂರು, ಧಾರವಾಡ ಈ ಮೂರು ಪ್ರಾಂತ್ಯಗಳ ಕನ್ನಡಶೈಲಿಯ ಸಮನ್ವಯದ ಕಡೆಗೂ ಸಾಧ್ಯವಾದಷ್ಟು ಗಮನಕೊಟ್ಟಿದ್ದೀವೆ. ಇಷ್ಟಾದರೂ, ಇದರ ಶೈಲಿ, 'ಸತ್ಯಾರ್ಥಪ್ರಕಾಶ'ದ ಶೈಲಿಯಾಗಿಯೇ ಉಳಿದಿದೆ. ಪಾಠಕರು ಅದೇ ದೃಷ್ಟಿಯಿಂದ ಇದನ್ನು ಕಾಣುವರೆಂದು ನಂಬಿದ್ದೀವೆ.

ಇನ್ನು, ಈ ಮಹಾಗ್ರಂಥದ ಪ್ರಕಾಶನಕ್ಕೆ ನೆರವಾದ ಮಹನೀಯರೆಲ್ಲರನ್ನೂ ಕೃತಜ್ಞತೆಯಿಂದ ಸ್ಮರಿಸಬೇಕಾದುದು ನಮ್ಮ ಪವಿತ್ರ ಕರ್ತವ್ಯವಾಗಿರುತ್ತದೆ. ಸರ್ವಪ್ರಥಮ, ಈ ಪ್ರಕಾಶಸಮಿತಿಗೆ ರೂಪವಿತ್ತು, ಜೀವವಿತ್ತು, ಈ ಗ್ರಂಥವು ಹಗಲುಬೆಳಕನ್ನು ಕಾಣುವಂತೆ ಪಥವನ್ನೇರ್ಪಡಿಸಿದ ಬೆಂಗಳೂರಿನ ಸುಪ್ರಸಿದ್ಧ ಆರ್ಯರಾದ ಶ್ರೀ ಹರನಾಮದಾಸಕಪೂರರು, ಈ ಯಜ್ಞಕಾರ್ಯಸಂಪೂರ್ಣವಾದುದನ್ನು ನೋಡಲು ಇಂದು ಈ ಜಗತ್ತಿನಲ್ಲಿಲ್ಲ, ಎಂಬುದು ಮಹಾದುಃಖಾಸ್ಪದವಾದ ಸಂಗತಿ.

ಈ ಸತ್ಯಾರ್ಥಪ್ರಕಾಶದ ಕನ್ನಡ ಅನುವಾದವನ್ನು ಪ್ರಮಾಣಿಸಿ, ಅದರ ಮುದ್ರಣಕ್ಕಾಗಿ ಧನಸಹಾಯಮಾಡಿ, ಪ್ರೋತ್ಸಹಿಸಿದ ಸಾರ್ವದೇಶಿಕ ಆರ್ಯಪ್ರತಿನಿಧಿಸಭೆ, ದೆಹಲಿಯವರಿಗೂ; ಸತ್ಯಾರ್ಥಪ್ರಕಾಶವನ್ನು ಕನ್ನಡಕ್ಕೆ ಅನುವಾದಿಸಿದ ಶ್ರೀ ಪಂಡಿತ ಭಾಸ್ಕರಪಂತ ಸುಬ್ಬ ನರಸಿಂಹಶಾಸ್ತ್ರಿಗಳು ಮತ್ತು ಶ್ರೀ ಪಂಡಿತ ಮಂಜುನಾಥಜಿಶಾಸ್ತ್ರೀ, ಸಿದ್ಧಾಂತಭೂಷಣ; ಸಂಶೋಧಕರಾಗಿ ರಾತ್ರಿ ಹಗಲು ಕಷ್ಟಪಟ್ಟ ಶ್ರೀ ಪಂಡಿತ ಸುಧಾಕರಜೀ, ವಿಶಾರದ, ಇವರುಗಳಿಗೂ; ಬೆಂಗಳೂರು, ಮೈಸೂರು, ಹುಬ್ಬಳ್ಳಿ, ಬೊಂಬಾಯಿ, ಗುಲ್ಬರ್ಗ ಇತ್ಯಾದಿ ನಗರಗಳಲ್ಲಿ ಧನಸಹಾಯವನ್ನಿತ್ತ ಆರ್ಯಸಜ್ಜನರಿಗೂ; ಹಲವಾರು ಅಚ್ಚಿನ ಪ್ರತಿಲಿಪಿಗಳನ್ನು ಸಿದ್ಧಪಡಿಸಿ,ಅಚ್ಚಿನ ಪ್ರತಿಗಳನ್ನು ಸಂಶೋಧಿಸಿ ಸಹಾಯಮಾಡಿದ, ಮೈಸೂರು ಆರ್ಯಸಮಾಜದ ಪುರೋಹಿತರಾದ ಶ್ರೀ ಪಂ|| ವಿಶ್ವಮಿತ್ರ H.M.D. ಸಿದ್ಧಾಂತವಿಶಾರದರವರಿಗೂ; ಈ ಗ್ರಂಥವನ್ನು ಸುಂದರವಾಗಿ ಅಚ್ಚುಹಾಕಿ ಕೊಟ್ಟ ಮೈಸೂರಿನ

ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನವರಿಗೂ ಈ ಸಮಿತಿಯು ತನ್ನ ಕೃತಜ್ಞತಾಪೂರ್ಣವಾದ ಧನ್ಯವಾದಗಳನ್ನು ಸಮರ್ಪಿಸುತ್ತದೆ.

ಎಷ್ಟೇ ಎಚ್ಚರಿಕೆಯಿಂದಿದ್ದರೂ, ನಾನಾಕಾರಣಗಳಿಂದ ಹಲ ಬಗೆಯ ದೋಷಗಳು, ಇಂತಹ ಮಹಾಕಾರ್ಯದಲ್ಲಿ ಸಂಭವಿಸುವುದು ಸಹಜ; ನಮ್ಮ ಕಣ್ಣಿಗೆ ಗೋಚರಿಸದೆ, ಪಾಠಕ ಮಹಾಶಯರಿಗೆ ಕಂಡುಬರಬಹುದಾದ ದೋಷಗಳನ್ನು ತೋರಿಸಿಕೊಟ್ಟರೆ, ವಿವೇಚನೆ ಮಾಡಿ, ತೃತೀಯ ಸಂಸ್ಕರಣದಲ್ಲಿ ಆ ದೋಷಗಳು ಇಲ್ಲದಂತೆ ಮಾಡಲು ಯತ್ನಿಸುವೆವು. ಆದುದರಿಂದ ಪಾಠಕಮಹಾಶಯರು ತಮ್ಮ ಸಲಹೆಗಳನ್ನು ದಯೆಮಾಡಿ ಸಮಿತಿಗೆ ಕಳುಹಿಸಿಕೊಡಬೇಕೆಂದು ಪ್ರಾರ್ಥನೆ.

ಇತಿ

ಸಮಿತಿಯ ಪರವಾಗಿ,

ಗಾರ್ಲನಾರಾಯಣಶ್ರೇಷ್ಠೀ, ಅಧ್ಯಕ್ಷ
ರಾಮುಶರಣಅಹೂಜಾ, ಮಂತ್ರಿ
ಸತ್ಯಪಾಲಶರ್ಮಾ ಸ್ನಾತಕ,
ದಕ್ಷಿಣಭಾರತ ಆರ್ಯಸಮಾಜ ಆರ್ಗನೈಜರ್,
ಸಾ. ಆ. ಪ್ರ. ಸ. ದೆಹಲಿ.

ವಿಜಯದಶಮೀ
ಸಂ. ೨೦೧೨
ಮೈಸೂರು

॥ ಓಂ ॥

ಅಥ ಸತ್ಯಾರ್ಥಪ್ರಕಾಶಸ್ಯ ಸೂಚೀಪತ್ರಂ

ವಿಷಯಾಃ		ಪೃಷ್ಠಃ
ಭೂಮಿಕಾ	....	೧-೧೦

ಪ್ರಥಮಸಮುಲ್ಲಾಸಃ

ಈಶ್ವರನಾಮವ್ಯಾಖ್ಯಾ	....	೧೩-೪೬
ಮಂಗಲಾಚರಣಸಮೀಕ್ಷಾ	....	೪೭-೫೦

ದ್ವಿತೀಯಸಮುಲ್ಲಾಸಃ

ಬಾಲಶಿಕ್ಷಾವಿಷಯಃ	....	೫೧-೫೫
ಭೂತಪ್ರೇತಾದಿನಿಷೇಧಃ	....	೫೬-೫೭
ಜನ್ಮಪತ್ರಸೂರ್ಯಾದಿಗ್ರಹ ಸಮಾಕ್ಷಾ	....	೫೮-೬೬

ತೃತೀಯಸಮುಲ್ಲಾಸಃ

ಅಧ್ಯಯನಾಧ್ಯಾಪನ ವಿಷಯಃ	....	೬೭-೧೩೬
ಗುರುಮಂತ್ರವ್ಯಾಖ್ಯಾ	....	೬೭-೭೨
ಪ್ರಾಣಾಯಾಮಶಿಕ್ಷಾ	....	೭೨-೭೪
ಸಂಧ್ಯಾಗ್ನಿಹೋತ್ರೋಪದೇಶಃ	....	೭೪-೭೭
ಯಜ್ಞಪಾತ್ರವಿಷಯಃ	....	೭೭
ಹೋಮಫಲನಿರ್ಣಯಃ	....	೭೭-೭೯
ಉಪನಯನಸಮೀಕ್ಷಾ	....	೮೦-೮೧
ಬ್ರಹ್ಮಚರ್ಯೋಪದೇಶಃ	....	೮೧-೯೪
ಬ್ರಹ್ಮಚರ್ಯಕೃತ್ಯವರ್ಣನಂ	....	೯೫-೯೮
ಪಂಚಧಾ ಪರೀಕ್ಷ್ಯಾಧ್ಯಾಪನಂ	....	೯೮-೧೧೮
ಪಠನಪಾಠನವಿಶೇಷವಿಧಿಃ	....	೧೧೮-೧೩೬

ವಿಷಯಾಃ		ಪೃಷ್ಠಃ
ಗ್ರಂಥಪ್ರಾಮಾಣ್ಯಾಪ್ರಾಮಾಣ್ಯವಿಷಯಃ	....	೧೨೭-೧೩೦
ಸ್ತ್ರೀಶೂದ್ರಾಧ್ಯಯನವಿಧಿಃ	....	೧೩೧-೧೩೬
ಚತುರ್ಥಸಮುಲ್ಲಾಸಃ		
ಸಮಾವರ್ತನವಿಷಯಃ	....	೧೩೭
ದೂರದೇಶೇ ವಿವಾಹಕರಣಂ	....	೧೩೮-೧೩೯
ವಿವಾಹೇ ಸ್ತ್ರೀಪುರುಷಪರೀಕ್ಷಾ	....	೧೪೦-೧೪೧
ಅಲ್ಪವಯಸಿವಿವಾಹನಿಷೇಧಃ	....	೧೪೨-೧೪೯
ಗುಣಕರ್ಮಾನುಸಾರೇಣವರ್ಣವ್ಯವಸ್ಥಾ	....	೧೫೦-೧೬೧
ವಿವಾಹಲಕ್ಷಣಾನಿ	....	೧೬೧-೧೬೭
ಸ್ತ್ರೀಪುರುಷವ್ಯವಹಾರಃ	....	೧೬೭-೧೭೨
ಪಂಚಮಹಾಯಜ್ಞಾಃ	....	೧೭೨-೧೪೦
ಪಾಖಂಡಿತಿರಸ್ಕಾರಃ	....	೧೪೦-೧೪೨
ಪ್ರಾತರುತ್ಥಾನಾದಿಧರ್ಮಕೃತ್ಯಂ	....	೧೪೨-೧೪೫
ಪಾಖಂಡಿಲಕ್ಷಣಾನಿ	...	೧೪೫-೧೪೬
ಗೃಹಸ್ಥಧರ್ಮಾಃ	....	೧೪೬-೧೯೦
ಪಂಡಿತಲಕ್ಷಣಾನಿ	....	೧೯೦-೧೯೨
ಮೂರ್ಖಲಕ್ಷಣಾನಿ	....	೧೯೨-೧೯೩
ವಿದ್ಯಾರ್ಥಿಕೃತ್ಯವರ್ಣನಂ	....	೧೯೩-೧೯೬
ಪುನರ್ವಿವಾಹನಿಯೋಗ ವಿಷಯಃ	....	೧೯೬-೨೧೪
ಗೃಹಾಶ್ರಮಶ್ರೈಷ್ಠ್ಯಂ	....	೨೧೪-೨೧೫
ಪಂಚಮಸಮುಲ್ಲಾಸಃ		
ವಾನಪ್ರಸ್ಥವಿಧಿಃ	....	೨೧೭-೨೧೮
ಸಂನ್ಯಾಸಾಶ್ರಮವಿಧಿಃ	....	೨೧೯-೨೩೮
ಷಷ್ಠಸಮುಲ್ಲಾಸಃ		
ರಾಜಧರ್ಮವಿಷಯಃ	....	೨೩೯-೨೯೮
ಸಭಾತ್ರಯಕಥನಂ	....	೨೩೯-೨೪೦

ವಿಷಯಾಃ		ಪೃಷ್ಠಃ
ರಾಜಲಕ್ಷಣಾನಿ	....	೨೪೦–೨೪೮
ದಂಡವ್ಯಾಖ್ಯಾ	....	೨೪೮-೨೫೧
ರಾಜಕರ್ತವ್ಯಂ	....	೨೪೯–೨೫೧
ಅಷ್ಟಾವಶವ್ಯಸನವಿಶೇಷಃ	....	೨೫೦-೨೫೧
ಮಂತ್ರದೂತಾದಿರಾಜಪುರುಷಲಕ್ಷಣಾನಿ	....	೨೫೨-೨೫೪
ಮಂತ್ರ್ಯಾದಿಷುಕಾರ್ಯನಿಯೋಗಃ	....	೨೫೪-೨೫೬
ದುರ್ಗನಿರ್ಮಾಣವ್ಯಾಖ್ಯಾ	....	೨೫೫-೨೫೬
ಯುದ್ಧಕರಣಪ್ರಕಾರಃ	....	೨೫೬-೨೬೦
ರಾಜಪ್ರಜಾರಕ್ಷಣಾದಿವಿಧಿಃ	....	೨೬೦-೨೬೩
ಗ್ರಾಮಾಧಿಪತ್ಯಾದಿ ವರ್ಣನಂ	....	೨೬೩-೨೬೬
ಕರಗ್ರಹಣಪ್ರಕಾರಃ	....	೨೬೭-೨೬೮
ಮಂತ್ರಕರಣಪ್ರಕಾರಃ	....	೨೬೮-೨೬೯
ಆಸನಾದಿಷಾಡ್ಗುಣ್ಯವ್ಯಾಖ್ಯಾ	....	೨೬೯-೨೭೨
ರಾಜಾಮಿತ್ರೋದಾಸೀನಶತ್ರುಷು ವರ್ತನಂ ಶತ್ರು ಭಿರ್ಯುದ್ಧಕರಣಪ್ರಕಾರಶ್ಚ	....	೨೭೨-೨೮೦
ವ್ಯಾಪಾರಾದಿಷುರಾಜಭಾಗಕಥನಂ•	....	೨೮೦-೨೮೧
ಅಷ್ಟಾದಶವಿವಾದಮಾರ್ಗೇಷುಧರ್ಮೇಣನ್ಯಾಯಕರಣಂ		೨೭೧-೨೮೪
ಸಾಂಪ್ರತಿಕರ್ತವ್ಯೋಪದೇಶಃ	....	೨೮೫-೨೮೮
ಸಾಕ್ಷ್ಯನೃತೇದಂಡವಿಧಿಃ	....	೨೮೮-೨೯೦
ಚೌರ್ಯಾದಿಷುದಂಡಾದಿವ್ಯಾಖ್ಯಾ	....	೨೯೦-೨೯೮

ಸಪ್ತಮಃಸಮುಲ್ಲಾಸಃ

ಈಶ್ವರವಿಷಯಃ	....	೨೯೯-೩೫೫
ಈಶ್ವರವಿಷಯೇಪ್ರಶ್ನೋತ್ತರಾಣಿ	....	೨೯೯-೩೦೮
ಈಶ್ವರಸ್ತುತಿಪ್ರಾರ್ಥನೋಪಾಸನಾಃ	....	೩೦೮-೩೧೯
ಈಶ್ವರಜ್ಞಾನಪ್ರಕಾರಃ	....	೩೧೯-೩೨೧
ಈಶ್ವರಸ್ಯಾಸ್ತಿತ್ವಮ್	....	೩೨೧-೩೨೩
ಈಶ್ವರಾವತಾರನಿಷೇಧಃ	....	೩೨೩-೩೨೬

ವಿಷಯಾಃ		ಪೃಷ್ಠಃ
ಜೀವಸ್ಯ ಸ್ವಾತಂತ್ರ್ಯಂ	....	೩೨೬-೩೨೮
ಜೀವೇಶ್ವರಯೋರ್ಭಿನ್ನತ್ವವರ್ಣನಂ	....	೩೨೮-೩೪೪
ಈಶ್ವರಸ್ಯ ಸಗುಣನಿರ್ಗುಣಕಥನಂ	....	೩೪೪-೩೪೫
ವೇದವಿಷಯೆ ವಿಚಾರಃ	....	೩೪೭-೩೫೫

ಅಷ್ಟಮಸಮುಲ್ಲಾಸಃ

ಸೃಷ್ಟ್ಯುತ್ಪತ್ತ್ಯಾದಿವಿಷಯಃ	....	೩೫೬-೪೦೨
ಈಶ್ವರಭಿನ್ನಾಯಾಃ ಪ್ರಕೃತೇರುಪಾದಾನಕಾರಣತ್ವಂ		೩೫೬-೩೬೭
ಸೃಷ್ಟೌ ನಾಸ್ತಿಕಮತನಿರಾಕರಣಂ	....	೩೬೭-೩೮೭
ಮನುಷ್ಯಾಣಾಮಾದಿಸೃಷ್ಟೇಃ ಸ್ಥಾನಾದಿನಿರ್ಣಯಃ		೩೮೮
ಆರ್ಯಮ್ಲೇಚ್ಛಾದಿವ್ಯಾಖ್ಯಾ	....	೩೮೮-೩೯೪
ಈಶ್ವರಸ್ಯ ಜಗದಾಧಾರತ್ವಂ	....	೩೯೪-೪೦೨

ನವಮಸಮುಲ್ಲಾಸಃ

ವಿದ್ಯಾವಿದ್ಯಾವಿಷಯಃ	....	೪೦೩-೪೧೧
ಬಂಧಮೋಕ್ಷವಿಷಯಃ	....	೪೧೧-೪೪೬

ದಶಮಸಮುಲ್ಲಾಸಃ

ಆಚಾರಾನಾಚಾರವಿಷಯಃ	....	೪೪೭-೪೬೨
ಭಕ್ಷ್ಯಾಭಕ್ಷ್ಯವಿಷಯಃ	....	೪೬೨-೪೭೩

ಇತಿ ಪೂರ್ವಾರ್ಧಃ

ಅಥೋತ್ತರಾರ್ಧಃ

ಏಕಾದಶಸಮುಲ್ಲಾಸಃ

ವಿಷಯಾಃ		ಪೃಷ್ಠಃ
ಅನುಭೂಮಿಕಾ	....	೪೭೬-೪೭೭
ಆರ್ಯಾವರ್ತದೇಶೀಯಮತಮತಾಂತರಖಂಡನ ಮಂಡನವಿಷಯಃ	....	೪೭೮-೭೧೪
ಮಂತ್ರಾದಿಸಿದ್ಧಿನಿರಾಕರಣಂ	....	೪೭೮-೪೯೧
ವಾಮಮಾರ್ಗನಿರಾಕರಣಂ	....	೪೯೨-೫೦೧
ಅದ್ವೈತವಾದಸಮೀಕ್ಷಾ	....	೫೦೨-೫೨೨
ಭಸ್ಮರುದ್ರಾಕ್ಷತಿಲಕಾದಿಸಮೀಕ್ಷಾ	....	೫೨೩-೫೩೦
ವೈಷ್ಣವಮತಸಮೀಕ್ಷಾ	....	೫೩೦-೫೩೭
ಮೂರ್ತಿಪೂಜಾಸಮೀಕ್ಷಾ	....	೫೩೮-೫೫೪
ಪಂಚಾಯತನಪೂಜಾಸಮೀಕ್ಷಾ	....	೫೫೪-೫೫೯
ಗಯಾಶ್ರಾದ್ಧಸಮೀಕ್ಷಾ	....	೫೫೯-೫೬೦
ಜಗನ್ನಾಥ ತೀರ್ಥಸಮೀಕ್ಷಾ	....	೫೬೦-೫೬೪
ರಾಮೇಶ್ವರಸಮೀಕ್ಷಾ	....	೫೬೪
ಕಾಲಿಯಾಂಕಂತ ಸೋಮನಾಥಾದಿಸಮೀಕ್ಷಾ	....	೫೬೫-೫೬೮
ವ್ಯಾಘ್ರಿಕಾಜ್ವಾಲಾಮುಖೀಸಮೀಕ್ಷಾ	....	೫೬೮-೫೭೦
ಹರಿದ್ವಾರಬದ್ರೀನಾರಾಯಣಾದಿ ಸಮೀಕ್ಷಾ	....	೫೭೦-೫೭೫
ಗಂಗಾಸ್ನಾನಸಮೀಕ್ಷಾ	....	೫೭೫-೫೭೬
ನಾಮಸ್ಮರಣತೀರ್ಥಶಬ್ದಯೋರ್ವ್ಯುತ್ಪತ್ತಿ	....	೫೭೬-೫೭೮
ಗುರುಮಾಹಾತ್ಮ್ಯಸಮೀಕ್ಷಾ	....	೫೭೮-೫೮೦
ಅಷ್ಟಾದಶಪುರಾಣಸಮೀಕ್ಷಾ	....	೫೮೦-೫೮೪
ಶಿವಪುರಾಣ ಸಮೀಕ್ಷಾ	....	೫೮೪-೫೮೬
ಭಾಗವತ ಸಮೀಕ್ಷಾ	....	೫೮೬-೫೯೮
ಸೂರ್ಯಾದಿಗ್ರಹಪೂಜಾಸಮೀಕ್ಷಾ	....	೫೯೮-೬೦೩
ಔರ್ಧ್ವದೈಹಿಕದಾನಾದಿಸಮೀಕ್ಷಾ	....	೬೦೪-೬೧೪
ಏಕಾದಶ್ಯಾದಿವ್ರತದಾನಾದಿಸಮೀಕ್ಷಾ	....	೬೧೪-೬೨೦

ವಿಷಯಾಃ		ಪೃಷ್ಠಃ
ಮಾರಣಮೋಹನೋಚ್ಚಾಟನವಾಮಮಾರ್ಗಸಮಿಾಕ್ಷಾ		೬೨೨-೬೨೫
ಶೈವಮತಸಮಿಾಕ್ಷಾ	....	೬೨೫-೬೨೬
ಶಾಕ್ತವೈಷ್ಣವಮತಸಮಿಾಕ್ಷಾ	....	೬೨೬-೬೩೬
ಕಬೀರಪಂಥಸಮಿಾಕ್ಷಾ	....	೬೩೬-೬೩೮
ನಾನಕಪಂಥಸಮಿಾಕ್ಷಾ	....	೬೩೮-೬೪೨
ದಾದೂ ರಾಮಸ್ನೇಹ್ಯಾದಿಪಂಥಸಮಿಾಕ್ಷಾ	....	೬೪೨-೬೪೯
ಗೋಕುಲಿಗೋಸ್ವಾಮಿಮತಸಮಿಾಕ್ಷಾ	....	೬೪೯-೬೬೩
ಸ್ವಾಮಿ ನಾರಾಯಣಮತಸಮಿಾಕ್ಷಾ	....	೬೬೩-೬೭೨
ಮಾಧ್ವಲಿಂಗಾಂಕಿತಬ್ರಾಹ್ಮಪ್ರಾರ್ಥನಾ ಸಮಾಜಾದಿಸಮಿಾಕ್ಷಾ	....	೬೭೨-೬೮೪
ಆರ್ಯಸಮಾಜವಿಷಯಃ	....	೬೮೪-೬೮೫
ತಂತ್ರಾದಿವಿಷಯಕಪ್ರಶ್ನೋತ್ತರಾಣಿ	....	೬೮೫-೬೯೬
ಬ್ರಹ್ಮಚಾರಿ ಸಂನ್ಯಾಸಿಸಮಿಕ್ಷಾ	....	೬೯೭-೭೦೬
ಆರ್ಯಾವರ್ತೀಯರಾಜವಂಶಾವಲೀ	....	೭೦೬-೭೧೪

ದ್ವಾದಶ ಸಮುಲ್ಲಾಸಃ

ಅನುಭೂಮಿಕಾ	....	೭೧೫-೭೧೭
ನಾಸ್ತಿಕಮತಸಮಿಾಕ್ಷಾ	....	೭೧೮-೭೨೦
ಚಾರ್ವಾಕಮತಸಮಿಾಕ್ಷಾ	....	೭೨೦-೭೨೭
ಚಾರ್ವಾಕಾದಿ ನಾಸ್ತಿಕಭೇದಃ	....	೭೨೭
ಬೌದ್ಧಸೌಗತಮತಸಮಿಾಕ್ಷಾ	....	೭೨೮-೭೪೦
ಸಪ್ತಭಂಗೀಸ್ಯಾದ್ವಾದೀ	....	೭೪೦-೭೪೩
ಜೈನಬೌದ್ಧಯೋರೈಕ್ಯಂ	....	೭೪೩-೭೪೮
ಆಸ್ತಿಕನಾಸ್ತಿಕ ಸಂವಾದಃ	....	೭೪೮-೭೫೫
ಜಗತೋಽನಾದಿತ್ವಸಮಿಾಕ್ಷಾ	....	೭೫೫-೭೬೦
ಜೈನಮತೇ ಭೂಮಿಪರಿಮಾಣಂ	....	೭೬೦-೭೬೨
ಜೀವಾದನ್ಯಸ್ಯ ಜಡತ್ವಂಪುದ್ಗಲಾನಾಂಪಾಪೇ ಪ್ರಯೋಜನಕತ್ವಂಚ	....	೭೬೩-೭೬೮

ವಿಷಯಾಃ		ಪೃಷ್ಠಃ
ಜೈನಧರ್ಮಪ್ರಶಂಸಾದಿಸಮಾಕ್ಷಾ	....	೬೬೮-೬೯೮
ಜೈನಮತ ಮುಕ್ತಿಸಮಾಕ್ಷಾ	....	೬೯೮-೮೦೨
ಜೈನ ಸಾಧುಲಕ್ಷಣಸಮಾಕ್ಷಾ	....	೮೦೨-೮೧೪
ಜೈನತೀರ್ಥಂಕರವ್ಯಾಖ್ಯಾ	....	೮೧೪-೮೧೮
ಜೈನಮತೇ ಜಂಬೂದ್ವೀಪಾದಿ ವಿಷಯಃ	....	೮೧೮-೮೨೮

ತ್ರಯೋದಶ ಸಮುಲ್ಲಾಸಃ

ಅನುಭೂಮಿಕಾ	....	೮೨೯-೮೩೦
ಕೈಶ್ಚೀನಮತಸಮಾಕ್ಷಾ	....	೮೩೧-೮೬೮
ಲಯವ್ಯವಸ್ಥಾ ಪುಸ್ತಕಂ	....	೮೬೮-೮೭೨
ಗಣನಪುಸ್ತಕಂ	....	೮೭೨-೮೭೩
ಸಮೂಯಲಾಖ್ಯಸ್ಯದ್ವಿತೀಯಂಪುಸ್ತಕಂ	....	೮೭೩-೮೭೪
ರಾಜ್ಞಾಂಪುಸ್ತಕಂ	....	೮೭೪-೮೭೫
ಕಾಲವೃತ್ತಸ್ಯಪ್ರಥಮಂಪುಸ್ತಕಂ	....	೮೭೫
ಅಯೂಬಾಖ್ಯಸ್ಯಪುಸ್ತಕಂ	....	೮೭೫-೮೭೬
ಉಪದೇಶಸ್ಯಪುಸ್ತಕಂ	....	೮೭೭
ಮತ್ತೀರಚಿತಂಇಂಜೀಲಾಖ್ಯಂ	....	೯೭೭,೯೦೩
ಮಾರ್ಕರಚಿತಂ ಇಂಜೀಲಾಖ್ಯಂ	....	೯೦೩-೯೦೪
ಲ್ಯೂಕರಚಿತಂಇಜೀಲಾಖ್ಯಂ	....	೯೦೪
ಯೋಹನರಚಿತಸುಸಮಾಚಾರಃ	....	೯೦೫-೯೦೭
ಯೋಹಾನಪ್ರಕಾಶಿಕವಾಕ್ಯಂ	....	೯೦೭-೯೨೭

ಚತುರ್ದಶಸಮುಲ್ಲಾಸಃ

ಅನುಭೂಮಿಕಾ	....	೯೨೪-೯೨೯
ಯವನಮತಕುರಾನಾಖ್ಯಸಮಾಕ್ಷಾ	....	೯೩೦-೧೦೩೯
ಸ್ವಮಂತಸ್ಯಾಮಂತವ್ಯಪ್ರಕಾಶಃ	....	೧೦೪೦-೧೦೫೨

ಇತ್ಯುತ್ತರಾರ್ಧಃ

॥ ಓಂ ॥

॥ ಸಚ್ಚಿದಾನಂದೇಶ್ವರಾಯನಮೋನಮಃ ॥

ಭೂಮಿಕಾ

ನಾನು ಈ ಸತ್ಯಾರ್ಥಪ್ರಕಾಶವೆಂಬ ಗ್ರಂಥವನ್ನು ರಚಿಸಿದಾಗ ಮತ್ತು ಅದಕ್ಕೆ ಮೊದಲು ಸಂಸ್ಕೃತಭಾಷೆಯಲ್ಲಿ ಮಾತನಾಡುತ್ತಿದ್ದು ದರಿಂದಲೂ, ಅಧ್ಯಯನ ಮತ್ತು ಅಧ್ಯಾಪನದಲ್ಲಿ ಕೂಡ ಸಂಸ್ಕೃತವನ್ನೇ ಬಳಸುತ್ತಿದ್ದುದರಿಂದಲೂ ಮತ್ತು ಜನ್ಮಭೂಮಿಯ ಭಾಷೆಯು ಗುಜರಾತಿಯಾದುದರಿಂದಲೂ, ನನಗೆ ಈ ಹಿಂದೀ ಭಾಷೆಯ ವಿಶೇಷ ಪರಿಜ್ಞಾನವಿರಲಿಲ್ಲ. ಆದುದರಿಂದ ಭಾಷೆಯು ಅಶುದ್ಧವಾಗಿತ್ತು. ಈಗ ಹಿಂದೀಭಾಷೆಯಲ್ಲಿ ಮಾತನಾಡುವ ಮತ್ತು ಬರೆಯುವ ಅಭ್ಯಾಸವಾಗಿರುವುದರಿಂದ ಭಾಷೆ ಮತ್ತು ವ್ಯಾಕರಣಕ್ಕನುಸಾರ ಈ ಗ್ರಂಥವನ್ನು ಎರಡನೆಯಸಾರಿ ಮುದ್ರಿಸಿದ್ದೇನೆ. ಎಲ್ಲೆಲ್ಲಿ ಭಾಷೆ, ವ್ಯಾಕರಣ ಮತ್ತು ರಚನೆಯ ಭೇದವು ಆಗಿದೆ. ಅದು ಉಚಿತವಾಗಿಯೇ ಆಗಿದ್ದಿತು. ಏಕೆಂದರೆ, ಹಾಗೆ ಪರಿವರ್ತಿಸದೆ ಭಾಷಾರೀತಿಯು ಉತ್ತಮವಾಗಿಕೊಳ್ಳುವುದು ಕಠಿನವಾಗಿತ್ತು. ಆದರೂ ಅರ್ಥದಲ್ಲಿ ನ್ಯೂನತ್ವವನ್ನು ಮಾಡಿಲ್ಲ. ವಿಶೇಷವೇನೋ ಬರೆಯಲ್ಪಟ್ಟಿದೆ. ಮೊದಲನೆಯ ಆವೃತ್ತಿಯಲ್ಲಿದ್ದ ಕೆಲವು ಅಚ್ಚಿನ ತಪ್ಪುಗಳು ಸಹ ಸುಧಾರಿಸಲ್ಪಟ್ಟಿವೆ.

ಈ ಗ್ರಂಥವು ಹದಿನಾಲ್ಕು ಸಮುಲ್ಲಾಸ ಅಂದರೆ ಹದಿನಾಲ್ಕು ವಿಭಾಗಗಳಲ್ಲಿ ರಚಿಸಲ್ಪಟ್ಟಿದೆ. ಇವುಗಳಲ್ಲಿ ಹತ್ತು ಸಮುಲ್ಲಾಸಗಳು ಪೂರ್ವಾರ್ಧದಲ್ಲಿ, ಮತ್ತು ನಾಲ್ಕು ಸಮುಲ್ಲಾಸಗಳು ಉತ್ತರಾರ್ಧದಲ್ಲಿರುತ್ತವೆ. ಕಡೆಯ ಎರಡು ಸಮುಲ್ಲಾಸಗಳು ಮತ್ತು ಸ್ವಸಿದ್ಧಾಂತಗಳು ಮೊದಲನೆಯ ಆವೃತ್ತಿಯಲ್ಲಿ ಕಾರಣಾಂತರದಿಂದ ಮುದ್ರಿಸಲಾಗಿರಲಿಲ್ಲ. ಈಗ ಅವುಗಳನ್ನು ಕೂಡ ಮುದ್ರಿಸಿದ್ದೇನೆ.

(೧) ಮೊದಲನೆಯ ಸಮುಲ್ಲಾಸದಲ್ಲಿ ಈಶ್ವರನ ಓಂಕಾರಾದಿ ನಾಮಗಳ ವ್ಯಾಖ್ಯಾನ.

(೨) ಎರಡನೆಯ ಸಮುಲ್ಲಾಸದಲ್ಲಿ ಸಂತತಿಯ ಶಿಕ್ಷಣಪದ್ಧತಿ.

(೩) ಮೂರನೆಯ ಸಮುಲ್ಲಾಸದಲ್ಲಿ ಬ್ರಹ್ಮಚರ್ಯ, ಪಠನ ಪಾಠನದ ವ್ಯವಸ್ಥೆ, ಸತ್ಯಾಸತ್ಯಗ್ರಂಥಗಳ ಹೆಸರು ಮತ್ತು ಓದುವ ಓದಿಸುವ ರೀತಿ.

(೪) ನಾಲ್ಕನೇ ಸಮುಲ್ಲಾಸದಲ್ಲಿ ವಿವಾಹ ಮತ್ತು ಗೃಹಾಶ್ರಮದ ವ್ಯವಹಾರ.

(೫) ಐದನೆಯ ಸಮುಲ್ಲಾಸದಲ್ಲಿ ವಾನಪ್ರಸ್ಥ ಮತ್ತು ಸನ್ಯಾಸಾಶ್ರಮದ ವಿಧಿ.

(೬) ಆರನೆಯ ಸಮುಲ್ಲಾಸದಲ್ಲಿ ರಾಜಧರ್ಮ.

(೭) ಏಳನೆಯ ಸಮುಲ್ಲಾಸದಲ್ಲಿ ವೇದೇಶ್ವರ ವಿಷಯ.

(೮) ಎಂಟನೆ ಸಮುಲ್ಲಾಸದಲ್ಲಿ ಜಗತ್ತಿನ ಉತ್ಪತ್ತಿ, ಸ್ಥಿತಿ ಮತ್ತು ಪ್ರಳಯ.

(೯) ಒಂಭತ್ತನೆಯ ಸಮುಲ್ಲಾಸದಲ್ಲಿ ವಿದ್ಯೆ, ಅವಿದ್ಯೆ, ಬಂಧ ಮತ್ತು ಮೋಕ್ಷದ ವ್ಯಾಖ್ಯಾನ.

(೧೦) ಹತ್ತನೆಯ ಸಮುಲ್ಲಾಸದಲ್ಲಿ ಆಚಾರ, ಅನಾಚಾರ, ಭಕ್ಷ್ಯಾಭಕ್ಷ್ಯಗಳ ವಿಷಯ.

(೧೧) ಹನ್ನೊಂದನೆಯ ಸಮುಲ್ಲಾಸದಲ್ಲಿ ಆರ್ಯಾವರ್ತದ ಮತ ಮತಾಂತರಗಳ ಖಂಡನಮಂಡನವಿಷಯ.

(೧೨) ಹನ್ನೆರಡನೆಯ ಸಮುಲ್ಲಾಸದಲ್ಲಿ ಚಾರ್ವಾಕ, ಬೌದ್ಧ ಮತ್ತು ಜೈನಮತದ ವಿಷಯ.

(೧೩) ಹದಿಮೂರನೆಯ ಸಮುಲ್ಲಾಸದಲ್ಲಿ ಕ್ರೈಸ್ತಮತದ ವಿಷಯ.

(೧೪) ಹದಿನಾಲ್ಕನೆಯ ಸಮುಲ್ಲಾಸದಲ್ಲಿ ಮುಸಲ್ಮಾನ್‌ಮತದ ವಿಷಯ ಮತ್ತು ಹದಿನಾಲ್ಕನೆಯ ಸಮುಲ್ಲಾಸದ ಅನಂತರ ಆರ್ಯಾರ

ಸನಾತನ ವೇದವಿಹಿತಮತದ ವಿಶೇಷವಾದ ವಿವರಣೆಯನ್ನು ಕೊಟ್ಟಿ ಪ್ಪೇನೆ. ಇದನ್ನು ನಾನೂ ಸಹ ಯಥಾವತ್ತಾಗಿ ಒಪ್ಪುತ್ತೇನೆ.

ಸತ್ಯಾರ್ಥವನ್ನು ಪ್ರಕಾಶಪಡಿಸುವುದು ಈ ಗ್ರಂಥರಚನೆಯಲ್ಲಿ ನನ್ನ ಮುಖ್ಯ ಉದ್ದೇಶ್ಯ. ಸತ್ಯವನ್ನು ಸತ್ಯವೆಂದೂ, ಅಸತ್ಯವನ್ನು ಅಸತ್ಯವೆಂದೂ ಪ್ರತಿಪಾದಿಸುವುದನ್ನು ಸತ್ಯಾರ್ಥಪ್ರಕಾಶವೆಂದು ನಾನು ತಿಳಿದಿದ್ದೇನೆ. ಸತ್ಯವನ್ನು ಅಸತ್ಯವೆಂದೂ, ಅಸತ್ಯವನ್ನು ಸತ್ಯವೆಂದು ಪ್ರಕಾಶಪಡಿಸುವುದು ಸತ್ಯವೆನ್ನಿಸಿಕೊಳ್ಳುವುದಿಲ್ಲ. ಯಾವ ಪದಾರ್ಥವು ಹೇಗಿರುತ್ತದೋ ಅದನ್ನು ಹಾಗೆಯೇ ಹೇಳುವುದು, ಬರೆಯುವುದು ಮತ್ತು ತಿಳಿಗೊಳಿಸುವುದು ಸತ್ಯವೆನ್ನಿಸಿಕೊಳ್ಳುತ್ತದೆ. ಪಕ್ಷಪಾತಿಯಾದ ಮನುಷ್ಯನು, ತನ್ನ ಅಸತ್ಯವನ್ನು ಸಹ ಸತ್ಯವೆಂದೂ ಮತ್ತು ಬೇರೆ ವಿರೋಧಿಮತದವರ ಸತ್ಯವನ್ನು ಕೂಡ ಅಸತ್ಯವೆಂದು ಸಿದ್ಧಮಾಡುವದರಲ್ಲಿ ಪ್ರವೃತ್ತನಾಗುತ್ತಾನೆ. ಆದುದರಿಂದ ಅವನಿಗೆ ಸತ್ಯಮತವು ಮೊರೆಯುವದಿಲ್ಲ. ಆದುದರಿಂದ ಉಪದೇಶರೂಪದಿಂದಾಗಲಿ, ಲೇಖನರೂಪದಿಂದಾಗಲಿ, ಸತ್ಯಾಸತ್ಯಗಳ ಸ್ವರೂಪವನ್ನು ಎಲ್ಲಾ ಜನರ ಮುಂದೆ ಸಮರ್ಪಿಸುವುದು ಆಪ್ತವಿದ್ವಾಂಸರ ಮುಖ್ಯಕರ್ತವ್ಯವಾಗಿರುತ್ತದೆ. ಆ ಮೇಲೆ ತಮ್ಮ ಹಿತಾಹಿತಗಳನ್ನು ತಿಳಿದುಕೊಂಡು ಸತ್ಯಾರ್ಥವನ್ನು ಗ್ರಹಿಸಿ ಮಿಥ್ಯಾರ್ಥವನ್ನು ತ್ಯಜಿಸಿ ಜನರು ಆನಂದದಿಂದಿರಬೇಕು. ಮನುಷ್ಯನ ಆತ್ಮವು ಸತ್ಯಾಸತ್ಯಗಳನ್ನು ತಿಳಿದುಕೊಳ್ಳಬಲ್ಲುದಾದರೂ ತನ್ನ ಸ್ವಾರ್ಥಸಿದ್ಧಿ, ಹಠ, ದುರಾಗ್ರಹ ಮತ್ತು ಅವಿದ್ಯೆ ಮೊದಲಾದ ದೋಷಗಳಿಂದ ಸತ್ಯವನ್ನು ಬಿಟ್ಟು ಅಸತ್ಯದ ಕಡೆಗೆ ವಾಲುತ್ತದೆ. ಆದರೆ, ಈ ಗ್ರಂಥದಲ್ಲಿಂತಹ ಸಂಗತಿಗಳನ್ನಿತ್ತಿಲ್ಲ. ಮತ್ತು ಯಾರ ಮನಸ್ಸನ್ನಾದರೂ ನೋಯಿಸುವುದು ಅಥವಾ ಯಾರಿಗಾದರೂ ಹಾನಿಯನ್ನುಂಟುಮಾಡುವುದು ಈ ಗ್ರಂಥದ ತಾತ್ಪರ್ಯವಲ್ಲ. ಆದರೆ, ಮನುಷ್ಯಜಾತಿಯ ಉನ್ನತಿ ಮತ್ತು ಉಪಕಾರವಾಗುವಂತೆ ಜನರು ಸತ್ಯಾಸತ್ಯಗಳನ್ನರಿತು ಸತ್ಯಗ್ರಹಣವನ್ನೂ, ಅಸತ್ಯದ ತ್ಯಾಗವನ್ನೂ, ಮಾಡಬೇಕೆಂಬುದೇ ಇದರ ಉದ್ದೇಶ್ಯವಾಗಿರುತ್ತದೆ. ಏಕೆಂದರೆ, ಸತ್ಯೋಪದೇಶವನ್ನುಳಿದು, ಬೇರಾವುದೂ ಮನುಷ್ಯಜಾತಿಯ ಉನ್ನತಿ-ಕಾರಣವಾಗಿರುವದಿಲ್ಲ.

ಈ ಗ್ರಂಥದಲ್ಲಿ ಎಲ್ಲಿಯಾದರೂ ಮರೆಪಿನಿಂದ ಮತ್ತು ಸಂಶೋ
ಧನ ಹಾಗೂ ಮುದ್ರಣದಲ್ಲಿ ವಿನಾದರೂ ಲೋಪದೊಷಗಳು ಉಳಿದು
ಹೋಗಿದ್ದರೆ, ಅವನ್ನು ತೋರಿಸಿಕೊಟ್ಟ ಪಕ್ಷದಲ್ಲಿ ಅವುಗಳನ್ನು ಸತ್ಯ
ಕ್ಕನುಸಾರ ಸರಿಪಡಿಸಲಾಗುವುದು. ಆದರೆ ಪಕ್ಷಪಾತದಿಂದ, ಕೇವಲ
ಶಂಕೆ ಅಥವಾ ತುಂಡನಮುಂಡನಗಳನ್ನು ಮಾಡುವದಾದರೆ, ಅದಕ್ಕೆ
ಗಮನಕೊಡಲಾಗುವುದಿಲ್ಲ. ಮನುಷ್ಯಮಾತ್ರದ ಬುತ್ಪೆಪಿಯಾಗಿ, ಯಾವ
ನಾದರೂ ಏನಾದರೂ ಸೂಚಿಸಿದರೆ, ಅತನ ಮಾತು ಸತ್ಯವೆಂದು
ನಿರ್ಣಯಿಸಲ್ಪಟ್ಟ ಮೇಲೆ, ಅವನ ತಪ್ಪಿಪ್ರಾಯವು ಸಂಗ್ರಹಿಸಲ್ಪಡು
ವದು. ಇಂದೂ ಸಹ, ಪ್ರತಿ ಒಂದು ಮತದಲ್ಲಿಯೂ ಇರುವ ಬಹು
ಮಂದಿ ವಿದ್ವಾಂಸರು ಪಕ್ಷಪಾತವನ್ನು ಬಿಟ್ಟು ಸರ್ವತಂತ್ರ ಸಿದ್ಧಾಂತ
ಗಳನ್ನು ಅಂದರೆ, ಎಲ್ಲ ಮತಗಳಲ್ಲಿಯೂ ಇರುವ ಸರ್ವಾನುಕೂಲವಾದ
ಸತ್ಯವನ್ನು ಗ್ರಹಿಸಿ ಪರಸ್ಪರ ವಿರುದ್ಧವಾದ ಮಾತುಗಳನ್ನು ತ್ಯಜಿಸಿ.
ಪರಸ್ಪರ ಪ್ರೀತಿಯಿಂದ ವರ್ತಿಸಿ, ಜೇರೆಯವರನ್ನೂ ಹಾಗೇ ರೀತಿ ಪ್ರವೃತ್ತ
ಗೊಳಿಸಿದರು, ಜಗತ್ತಿಗೆ ಪೂರ್ಣ ಹಿತವಾಗಬಹುದು. ಏಕೆಂದರೆ,
ವಿದ್ವಾಂಸರ ವಿರೋಧದಿಂದ ಅಶಿಕ್ಷಿತರ ನಡುವೆ ವಿರೋಧವು ಬೆಳೆದು
ವಿಧವಿಧ ದುಃಖಗಳು ಬಲಿದು ಸುಖಕ್ಕೆ ಹಾನಿಯುಂಟಾಗುತ್ತದೆ.
ವಿದ್ಯಾರ್ಥಿಗಳಿಗೆ ಪ್ರಯೋಜನವಾದ ಈ ಹಾನಿಯು ಎಲ್ಲಾ ಮಾನವರನ್ನೂ
ದುಃಖಸಾಗರದಲ್ಲಿ ಮುಳುಗಿಸಿರುತ್ತದೆ. ಯಾರಾದರೂ ಸಾರ್ವಜನಿಕ
ಹಿತವನ್ನು ಗುರಿಯಾಗಿಟ್ಟುಕೊಂಡು ಪ್ರಯತ್ನಮಾಡಿದರೆ, ವಿದ್ವಾಂಸ
ರು ಅವನನ್ನು ವಿರೋಧಿಸತೊಡಗಿ, ನಾನಾಬಗೆಯ ವಿಘ್ನಗಳ
ನ್ನೊಡ್ಡುತ್ತಾರೆ. ಆದರೆ "ಸತ್ಯಮೇವಜಯತೇ ನಾನೃತಂ ಸತ್ಯೇನ
ಪಂಥಾ ವಿತತೋ ದೇವಯಾನಃ" ಅಂದರೆ, ಸರ್ವದಾ ಸತ್ಯದ
ಜಯವೂ, ಅಸತ್ಯದ ಪರಾಜಯವೂ ಆಗುತ್ತದೆ, ಹಾಗೂ ಸತ್ಯದಿಂದಲೇ
ವಿದ್ವಾಂಸರ ಮಾರ್ಗವು ಪಶಾಲವಾಗುತ್ತದೆ ಎಂಬೇ ದೃಢನಿಶ್ಚಯದ
ಅವಲಂಬನದಿಂದ ಆಪ್ತಜನರು ಪರೋಪಕಾರದಲ್ಲಿಂದೂ ಉದಾಸೀನ
ರಾಗುವದಿಲ್ಲ. "ಯತ್ತದಗ್ರೇ ವಿಷಮಿವ ಪರಿಣಾಮೇಽಮೃತೋಪಮಂ"
ಎಂದು ಗೀತಾವಚನ. ವಿದ್ಯಾಪ್ರಾಪ್ತಿಯ ಮತ್ತು ಧರ್ಮಪ್ರಾಪ್ತಿಯ
ಕರ್ಮಗಳು ಮೊದಲು ವಿಷತುಲ್ಯವಾಗಿದ್ದು ತದನಂತರ ಅಮೃತಸಮಾನ

ವಾಗುತ್ತವೆ ಎಂಬುದು ಇದರ ಅಭಿಪ್ರಾಯ. ಇದನ್ನೆಲ್ಲಾ ಮನಸ್ಸಿನಲ್ಲಿಟ್ಟುಕೊಂಡು ನಾನು ಈ ಗ್ರಂಥವನ್ನು ರಚಿಸಿದ್ದೇನೆ. ಶ್ರೋತೃಗಳು, ಪಾಠಕರೂ ಸಹ, ಮೊದಲು ಪ್ರೇಮದಿಂದ ಅವಲೋಕಿಸಿ ಈ ಗ್ರಂಥದ ನಿಜವಾದ ತಾತ್ಪರ್ಯವನ್ನು ತಿಳಿದು ತಮ್ಮ ಇಚ್ಛೆಯಂತೆ ನಡೆಯಲಿ ಎಲ್ಲಾ ಮತಗಳಲ್ಲಿಯೂ ಇರುವ ಸತ್ಯವಾದ ವಿಷಯಗಳು ಅವಿರೋಧವಾಗಿರುವದರಿಂದ ಅವುಗಳ ಸ್ವೀಕಾರ ಮತ್ತು ಮತಮತಾಂತರಗಳಲ್ಲಿರುವ ಮಿಥ್ಯಾಸಂಗತಿಗಳ ಖಂಡನೆ ಇದೇ ಉದ್ದೇಶ್ಯವಾಗಿದೆ. ಹಾಗೂ ಮತ ಮತಾಂತರಗಳ ಗುಪ್ತವಾದ, ಹಾಗೂ ಬಯಲಾದ ಕೆಟ್ಟ ಸಂಗತಿಗಳನ್ನು ಪ್ರಕಾಶಪಡಿಸಿ, ವಿದ್ವಾಂಸರ ಮತ್ತು ಅವಿದ್ವಾಂಸರ ಎಲ್ಲಾ ಜನಸಾಧಾರಣರ ಮುಂದಿಡುವದರಿಂದ ಎಲ್ಲರೂ, ಪರಸ್ಪರ ವಿಚಾರ ಮಾಡಿ ಪರಸ್ಪರ ಪ್ರೀತಿಯುಕ್ತರಾಗಿ, ಒಂದೇ ಸತ್ಯ ಮತವನ್ನಂಗೀಕರಿಸಲು ಅನುಕೂಲವಾಗುವದು. ನಾನು ಆರ್ಯಾವರ್ತದೇಶದಲ್ಲಿ ಹುಟ್ಟಿ, ಇಲ್ಲಿಯೇ ವಾಸಿಸುತ್ತಿದ್ದರೂ ಸಹ, ಈ ದೇಶದ ಮತ ಮತಾಂತರಗಳ ಮಿಥ್ಯಮಾತುಗಳಿಗೆ ಪಕ್ಷಪಾತ ತೋರದೇ ಯಥಾತಥ್ಯವಾಗಿ ಬೆಳಕಿಗೆ ತರುವಂತೆಯೇ, ಅನ್ಯದೇಶೀಯರ ವಾಗೂ ಮತೀಯರ ವಿಷಯವನ್ನಿಲ್ಲಿಯೂ ವರ್ತಿಸುತ್ತೇನೆ. ಮತ್ತು ಸಾಮಾನ್ಯೋನ್ನತಿಯ ವಿಷಯದಲ್ಲಿ ಸ್ವದೇಶೀಯರ ಸಂಗಡ ವರ್ತಿಸುವಂತೆಯೇ ಪರದೇಶೀಯರೊಂದಿಗೂ ವರ್ತಿಸುತ್ತೇನೆ. ಎಲ್ಲಾ ಸತ್ಪುರುಷರೂ, ಹೀಗೆ ವರ್ತಿಸುವುದೇ ಉಚಿತ. ನಾನೂ ಕೂಡ ಯಾವದಾದರೊಂದು ಮತದ ಪಕ್ಷಪಾತಿಯಾಗಿದ್ದಿದ್ದರೆ, ಈ ಕಾಲದಲ್ಲಿ ಸ್ವಮತದ ಸ್ತುತಿ. ಮಂಡನ ಮತ್ತು ಸ್ವಪ್ರಚಾರವನ್ನೂ, ಅನ್ಯಮತಗಳ ನಿಂದೆ, ಅವಕ್ಕೆ ಹಾನಿ, ಮತ್ತು ವಿಘ್ನವನ್ನೂ ಮಾಡುವದರಲ್ಲಿ ತೊಡಗಿರುವ ಜನರಂತೆಯೇ ನಾನೂ ಆಗಿರುತ್ತಿದ್ದೆನು. ಆದರೆ, ಹಾಗೆ ಮಾಡುವುದು ಮನುಷ್ಯತ್ವಕ್ಕೆ ಬಾಹಿರವಾದುದು. ಏಕೆಂದರೆ, ಪಶುವು ಬಲಯುತವಾಗಿ, ನಿರ್ಬಲರಿಗೆ ದುಃಖವನ್ನು ಕೊಟ್ಟು, ಕೊಂದೂ ಸಹ ಹಾಕುವಂತೆ. ಮಾನವದೇಹವನ್ನು ಹೊಂದಿಯೂ ಸಹ, ಅಂತಹ ಕರ್ಮವನ್ನೇ ಮಾಡುವುದಾದರೆ, ಅವರು ಮನುಷ್ಯಸ್ವಭಾವಯುಕ್ತರಲ್ಲ. ಪಶುಸಮಾನರು. ಮತ್ತು ಬಲವಾಲಿಯಾಗಿ ನಿರ್ಬಲರನ್ನು ರಕ್ಷಿಸುವವನೇ, ಮನುಷ್ಯನೆನಿಸುತ್ತಾನೆ,

ಸ್ವಾರ್ಥಕ್ಕೆ ವಶನಾಗಿ, ಪರಹಾನಿಯನ್ನು ಮಾತ್ರ ಮಾಡುತ್ತಿರುವವನು ಪಶುಗಳ ಹಿರಿಯ ಸಹೋದರನೇ ಸರಿ.

ಇನ್ನು ಆರ್ಯಾವರ್ತೀಯರ ವಿಷಯದಲ್ಲಿ ವಿಶೇಷವಾಗಿ ಹನ್ನೊಂದನೇ ಸಮುಲ್ಲಾಸದವರಿಗೆ ಬರೆದಿದ್ದೇನೆ. ಈ ಸಮುಲ್ಲಾಸಗಳಲ್ಲಿ ಪ್ರಕಾಶಿಸಲ್ಪಟ್ಟಿರುವ ಸತ್ಯಮತವು ವೇದೋಕ್ತವಾಗಿರುವದರಿಂದ ನನಗೆ ಸರ್ವಥಾ ಗ್ರಾಹ್ಯವಾಗಿರುತ್ತದೆ. ನಮ್ಮ ನವೀನವಾದ ಪುರಾಣ, ತಂತ್ರ ಮೊದಲಾದ ಗ್ರಂಥಗಳ ಯಾವ ಮಾತುಗಳನ್ನು ಖಂಡಿಸಿದ್ದೇನೋ ಅವು ತ್ಯಜಿಸಲರ್ಹವಾದುವು. ಹನ್ನೆರಡನೆಯ ಸಮುಲ್ಲಾಸದಲ್ಲಿ ತೋರಿಸಿದ ಚಾರ್ವಾಕಮತವು ಇಂದು ಕ್ಷೀಣ ಹಾಗೂ ಅಸ್ತವಾದಂತಿದ್ದರೂ, ಈ ಮತವು ನಾಸ್ತಿಕವಾದ ಮೊದಲಾದುವುಗಳಲ್ಲಿ ಬೌದ್ಧ ಜೈನ ಮತಗಳೊಂದಿಗೆ ಬಹಳ ಸಂಬಂಧ ಹೊಂದಿರುತ್ತದೆ. ಈ ಚಾರ್ವಾಕ ಮತವು ಎಲ್ಲ ಮತಗಳಿಗಿಂತ ಮೊಡ್ಡ ನಾಸ್ತಿಕಮತವು. ಅದರ ಪ್ರಸಾರವನ್ನು ಅವಶ್ಯವಾಗಿ ತಪ್ಪಿಸಬೇಕು. ಏಕೆಂದರೆ ಮಿಥ್ಯಾಸಂಗತಿಗಳನ್ನು ತಡೆಯದಿದ್ದರೆ, ಜಗತ್ತಿಗೆ ಬಹಳ ಹಾನಿಯುಂಟಾಗುವುದು. ಚಾರ್ವಾಕನ ಮತವೂ ಬೌದ್ಧ ಮತ್ತು ಜೈನ ಮತಗಳೂ ಹನ್ನೆರಡನೆಯ ಸಮುಲ್ಲಾಸದಲ್ಲಿ ಸಂಕ್ಷೇಪವಾಗಿ ಬರೆಯಲ್ಪಟ್ಟಿವೆ. ಮತ್ತು ಬೌದ್ಧರಿಗೂ ಹಾಗೂ ಜೈನರಿಗೂ ಚಾರ್ವಾಕ ಮತದೊಂದಿಗೆ ಹೊಂದಿಕೆಯಿದೆ; ಸ್ವಲ್ಪ ವಿತ್ಯಾಸವೂ ಕೂಡ ಇದೆ. ಮತ್ತು ಜೈನಮತವೂ ಸಹ ಬಹಳ ಅಂಶಗಳಲ್ಲಿ ಚಾರ್ವಾಕ ಬೌದ್ಧ ಮತಗಳೊಂದಿಗೆ ಹೋಲಿಕೆ ಪಡೆದಿರುತ್ತದೆ: ಹಾಗೂ ಹಲಕೆಲವು ವಿಷಯಗಳಲ್ಲಿ ಭೇದವು ಇರುತ್ತದೆ. ಆದುದರಿಂದ ಜೈನರದು ಬೇರೆ ಒಂದು ಶಾಖೆಯೆಂದು ಗಣಿಸಲ್ಪಡುತ್ತದೆ. ಈ ಭೇದವನ್ನು ಹನ್ನೆಡನೆಯ ಸಮುಲ್ಲಾಸದಲ್ಲಿ ಬರೆದಿದ್ದೇವೆ; ಅಲ್ಲಿಯೇ ಯೋಗ್ಯವಾದರೀತಿಯಲ್ಲಿ ತಿಳಿಸುಕೊಳ್ಳಬೇಕು. ಇದರ ರಹಸ್ಯವನ್ನು ಹನ್ನೆರಡನೆಯ ಸಮುಲ್ಲಾಸದಲ್ಲಿ ಬರೆದಿದ್ದೇವೆ; ಬೌದ್ಧ ಜೈನಮತಗಳ ವಿಷಯವನ್ನೂ ಬರೆದಿದ್ದೇವೆ. ಇವುಗಳಲ್ಲಿ ಬೌದ್ಧರ ದ್ವೀಪವಂಶಾದಿ ಪ್ರಾಚೀನ ಗ್ರಂಥಗಳಿಂದೆತ್ತಿ, ಸರ್ವದರ್ಶನಸಂಗ್ರಹದಲ್ಲಿ ತೋರಿಸಲ್ಪಟ್ಟ ಬೌದ್ಧಮತಸಂಗ್ರಹದಿಂದ ಉದ್ಧರಿಸಿ ಇಲ್ಲಿ ಬರೆದಿದ್ದೇವೆ—ಅವುಗಳಲ್ಲಿ (೧) ಆವಶ್ಯಕಸೂತ್ರ, (೨) ವಿಶೇಷ ಆವಶ್ಯಕಸೂತ್ರ, (೩) ದಶವೈಕಾ

ಲಿಕಸೂತ್ರ, (೪) ಪಾಕ್ಷಿಕಸೂತ್ರ ಇವು ನಾಲ್ಕು ಮೂಲಸೂತ್ರಗಳು; (೧) ಆಚಾರಾಂಗಸೂತ್ರ, (೨) ಸುಗಡಾಂಗಸೂತ್ರ, (೩) ಥಾಣಾಂಗ ಸೂತ್ರ, (೪) ಸಮವಾಯಾಂಗಸೂತ್ರ, (೫) ಭಗವತೀಸೂತ್ರ, (೬) ಚಾಣ್ಣತಾಧರ್ಮಕಥಾಸೂತ್ರ, (೭) ಉಪಾಸಕದಶಾಸೂತ್ರ, (೮) ಅಂತ ಗಡ ದಶಾ ಸೂತ್ರ, (೯) ಅನುತ್ತರೋವವಾಯೀಸೂತ್ರ, (೧೦) ವಿಪಾಕ ಸೂತ್ರ, (೧೧) ಪ್ರಶ್ನವ್ಯಾಕರಣಸೂತ್ರ–ಇವು ಹನ್ನೊಂದೂ ಅಂಗಗಳು; (೧) ಉಪವಾಯೀಸೂತ್ರ, (೨) ರಾಯಪಸೇನೀಸೂತ್ರ, (೩) ಜೀವಾಭಿ ಗಮಸೂತ್ರ, (೪) ಪನ್ನವಣಾಸೂತ್ರ, (೫) ಜಂಬುದ್ವೀಪಪನ್ನತಿಸೂತ್ರ (೬) ಚಂದಪನ್ನತೀಸೂತ್ರ, (೭) ಸೂರಪನ್ನತೀಸೂತ್ರ, (೮) ನಿರಿಯಾ ಬಲೀ ಸೂತ್ರ, (೯) ಕಪ್ಪಿಯಾಸೂತ್ರ, (೧೦) ಕಪವಡೀಸಯಾಸೂತ್ರ, (೧೧) ಪುಪ್ಪಿಯಾಸೂತ್ರ, (೧೨) ಪುಣ್ಯಚೂಲಿಯಾಸೂತ್ರ–ಇವು ಹನ್ನೆರಡು ಉಪಾಂಗಗಳು; (೧) ಉತ್ತರಾಧ್ಯಯನಸೂತ್ರ, (೨) ನಿಶೀಯ ಸೂತ್ರ, (೩) ಕಲ್ಪಸೂತ್ರ, (೪) ವ್ಯವಹಾರಸೂತ್ರ, (೫) ಜೀತಕಲ್ಪ ಸೂತ್ರ, ಇವು ಐದು ಕಲ್ಪಸೂತ್ರಗಳು; (೧) ಮಹಾನಿಶೀಥಬೃಹದ್ವಾ ಚನಾಸೂತ್ರ, (೨) ಮಹಾನಿಶೀಥಲಘುವಾಚನಾಸೂತ್ರ, (೩) ಮಧ್ಯಮ ವಾಚನಾಸೂತ್ರ, (೪) ಪಿಂಡನಿರುಕ್ತಿಸೂತ್ರ, (೫) ಓಘನಿರುಕ್ತಿಸೂತ್ರ, (೬) ಪರ್ಯೂಷಣಾಸೂತ್ರ, ಇವು ಆರು ಛೇದಗಳು: ಚತುಸ್ಸರಣ ಸೂತ್ರ, (೨) ಪಚ್ಚಖಾಣಸೂತ್ರ, (೩) ತಡುಲವೈಯಾಲಿಕಸೂತ್ರ, (೪) ಭಕ್ತಿಪರಿಜ್ಞಾನಸೂತ್ರ, (೫) ಮಹಾಪ್ರತ್ಯಾಖ್ಯಾನಸೂತ್ರ, (೬) ಚಂದಾವಿಜಯಸೂತ್ರ, (೭) ಗಣೀವಿಜಯಸೂತ್ರ, (೮) ಮರಣ ಸಮಾಧಿಸೂತ್ರ, (೯) ದೇವೇಂದ್ರಸ್ತವನಸೂತ್ರ, (೧೦) ಸಂಸಾರ ಸೂತ್ರ–ಇವು ಹತ್ತು ಪಯನ್ನಾಸೂತ್ರಗಳು. ಇವಲ್ಲದೆ ನಂದೀಸೂತ್ರ, ಯೋಗೋದ್ಧಾರಸೂತ್ರಗಳನ್ನು ಸಪ ಪ್ರಾಮಾಣಿಕವೆಂದು ತಿಳಿಯು ತ್ತಾರೆ. (೧) ಪೂರ್ವೋಕ್ತಗ್ರಂಥಗಳೆಲ್ಲವರ ಟೀಕೆ, (೨) ನಿರುಕ್ತಿ, (೩) ಚರಣೀ. (೪) ಭಾಷ್ಯ, (೫) ಮೂಲ ಸಹಿತ ಈ ಚತುರವಯವಗಳು–ಇವು ಪಂಚಾಂಗಗಳೆನಿಸುತ್ತವೆ. ಇವುಗಳಲ್ಲಿ ಢುಂಢಿಯಾ ಪಂಥದವರು ಅವಯವಗಳನ್ನೊಪ್ಪುವುದಿಲ್ಲ. ಇವುಗಳಲ್ಲದೆ ಇತರ ಗ್ರಂಥಗಳೂ ಇವೆ. ಜೈನರು ಅವನ್ನು ಒಪ್ಪುತ್ತಾರೆ. ಇವರ ಮತದ ಬಗ್ಗೆ ವಿಶೇಷ ವಿಚಾರ

ಗಳನ್ನು ಹನ್ನೆರಡನೆಯ ಸಮುಲ್ಲಾಸದಲ್ಲಿ ನೋಡಿರಿ. ಜೈನರ ಗ್ರಂಥಗಳಲ್ಲಿ, ಲಕ್ಷಾಂತರ ಪುನರುಕ್ತದೋಷಗಳಿವೆ. ಮತ್ತು ಅನ್ಯಮತೀಯರ ಕೈಯಲ್ಲಿ ತಮ್ಮ ಗ್ರಂಥವಿದ್ದರೆ ಅಥವಾ ಅನ್ಯರಿಂದ ಮುದ್ರಿತವಾಗಿದ್ದರೆ ಅದನ್ನು ಅಪ್ರಮಾಣವೆಂದು ಹೇಳುವುದೂ ಸಹ ಇದರಲ್ಲಿ ಹಲವರ ಸ್ವಭಾವವಾಗಿರುತ್ತದೆ. ಅವರ ಈ ಮಾತು ಸುಳ್ಳು-ಏಕೆಂದರೆ, ಕೆಲವರು ಒಪ್ಪಿ, ಕೆಲವರು ಒಪ್ಪದಿರುವದರಿಂದ ಆ ಪುಸ್ತಕವು ಜೈನಮತದಿಂದ ಹೊರಗಾಗಲಾರದು. ಯಾವದನ್ನು ಯಾರೂ ಒಪ್ಪರೋ, ಯಾವದನ್ನು ಎಂದೂ ಯಾವ ಜೈನನೂ ಒಪ್ಪಿಲ್ಲವೋ ಅದನ್ನು ಅಗ್ರಾಹ್ಯವೆನ್ನಬಹುದು. ಇನ್ನೆರೆ, ಅವುಗಳಲ್ಲಿ ಯಾವ ಜೈನನೂ ಒಪ್ಪದ ಪುಸ್ತಕವಾವದೂ ಇಲ್ಲ. ಆದುದರಿಂದ ಯಾವನು ಯಾವ ಪುಸ್ತಕವನ್ನು ಒಪ್ಪುತ್ತಾನೋ ಆ ಪುಸ್ತಕದಲ್ಲಿನ ವಿಷಯದ ಖಂಡನ ಮಂಡನಗಳು ಅವನಿಗೇ ಸಂಬಂಧಪಟ್ಟವೆಂದು ತಿಳಿಯಲ್ಪಡುತ್ತವೆ. ಆ ಪುಸ್ತಕವನ್ನು ಒಪ್ಪುತ್ತಿದ್ದರೂ, ತಿಳಿಯುತ್ತಿದ್ದರೂ, ಸಭಾಸಂವಾದಗಳಲ್ಲಿ ಬದಲಾಯಿಸಿಬಿಡುವವರೂ ಇವರಲ್ಲಿ ಎಷ್ಟೋ ಜನರಿದ್ದಾರೆ. ಈ ಕಾರಣದಿಂದಲೇ ಜೈನರು ತಮ್ಮ ಗ್ರಂಥಗಳನ್ನು ಬಚ್ಚಿಡುತ್ತಾರೆ. ಯಾವ ಜೈನನಿಂದಲೂ ಉತ್ತರವೀಯಲಾಗದಂತಹ ಅಸಂಭವ ವಿಷಯಗಳು ಆ ಗ್ರಂಥಗಳಲ್ಲಿ ತುಂಬಿರುವದರಿಂದ ಜೈನರು ಅನ್ಯಮತೀಯನಾವನಿಗೂ ತಮ್ಮ ಗ್ರಂಥಗಳನ್ನು ಕೊಡುವದಿಲ್ಲ, ಹೇಳುವದಿಲ್ಲ, ಓದಿಸುವದೂ ಇಲ್ಲ, ಅಸತ್ಯ ಪರಿತ್ಯಾಗವೇ ಇದಕ್ಕೆ ಉತ್ತರ.

ಹದಿಮೂರನೆಯ ಸಮುಲ್ಲಾಸದಲ್ಲಿ ಕ್ರೈಸ್ತಮತವನ್ನು ವರ್ಣಿಸಿದ್ದೇವೆ. ಇವರು ಬೈಬಲನ್ನು ತಮ್ಮ ಧರ್ಮಪುಸ್ತಕವೆಂದು ಒಪ್ಪುತ್ತಾರೆ. ಇವರ ವಿಶೇಷ ಸಮಾಚಾರಗಳನ್ನು ಹದಿಮೂರನೇಯ ಸಮುಲ್ಲಾಸದಲ್ಲೇ ನೋಡಿರಿ ಮತ್ತು ಹದಿನಾಲ್ಕನೆಯ ಸಮುಲ್ಲಾಸದಲ್ಲಿ ಮುಸಲ್ಮಾನರ ಮತದ ಬಗ್ಗೆ ಬರೆದಿದ್ದೇವೆ. ಇವರು ಕುರಾನನ್ನು ತಮ್ಮ ಮತದ ಮೂಲ ಪುಸ್ತಕವೆಂದು ಒಪ್ಪುತ್ತಾರೆ. ಇವರ ವಿಶೇಷ ವ್ಯವಹಾರಗಳನ್ನು ಹದಿನಾಲ್ಕನೆಯ ಸಮುಲ್ಲಾಸದಲ್ಲಿ ನೋಡಿರಿ. ಮತ್ತು ಅದಾದ ಮೇಲೆ ವೈದಿಕಮತದ ವಿಷಯದಲ್ಲಿ ಬರೆದಿದ್ದೇನೆ. ಯಾವನಾದರೂ ಗ್ರಂಥಕರ್ತನ ಅಭಿಪ್ರಾಯಕ್ಕೆ ವಿರುದ್ಧವಾದ ಮನೋ

ಭಾವದಿಂದ ನೋಡಿದರೆ, ಅವನಿಗೇನೂ ಗೊತ್ತಾಗುವುದಿಲ್ಲ. ಏಕೆಂದರೆ, ವಾಕ್ಯಾರ್ಥಜ್ಞಾನಕ್ಕೆ ಆಕಾಂಕ್ಷೆ, ಯೋಗ್ಯತೆ, ಆಸತ್ತಿ ಮತ್ತು ತಾತ್ಪರ್ಯ ಎಂಬವು ನಾಲ್ಕು ಕಾರಣಗಳಿರುತ್ತವೆ. ಈ ನಾಲ್ಕು ಮಾತುಗಳ ಮೇಲೂ ಗಮನಕೊಟ್ಟು ಮಾನವನು ಯಾವಾಗ ಗ್ರಂಥವನ್ನು ನೋಡುತ್ತಾನೋ ಆಗಲೇ ಅವನಿಗೆ ಗ್ರಂಥದ ಅಭಿಪ್ರಾಯವು ಯೋಗ್ಯವಾದ ರೀತಿಯಲ್ಲಿ ಗೊತ್ತಾಗುತ್ತದೆ. ಯಾವದಾದರೂ ಒಂದು ವಿಷಯವಲ್ಲಿ ವಕ್ತೃವಿನ ಮತ್ತು ವಾಕ್ಯದಲ್ಲಿನ ಪದಗಳ ಪರಸ್ಪರ 'ಆಕಾಂಕ್ಷೆ' ನಿಹಿತವಾಗಿರುತ್ತದೆ. ನೀರಿನಿಂದ ಸಿಂಚನವು ಸಂಭವನವಾಗಿರುವಂತೆ, ಯಾವವರಿಂದ ಏನು ಸಿದ್ಧಿಸಬಲ್ಲದೊ ಅದು 'ಯೋಗ್ಯತೆ'ಯನ್ನಿಸುತ್ತದೆ. ಯಾವ ಪದದೊಂದಿಗೆ ಯಾವುದರ ಸಂಬಂಧವಿರುತ್ತದೋ, ಆ ಪದವನ್ನು, ಅದರ ಹತ್ತಿರವೇ ಉಚ್ಚರಿಸುವುದು ಮತ್ತು ಬರೆಯುವುದು 'ಆಸತ್ತಿ'ಯೆನ್ನಿಸುತ್ತದೆ. ಯಾವದರ ಉದ್ದೇಶ್ಯದಿಂದ ವಕ್ತೃವು ಶಬ್ದವನ್ನು ಉಚ್ಚರಿಸಿದ್ದಾನೋ ಅಥವಾ ಬರೆದಿದ್ದಾನೋ ಆ ವಚನವನ್ನು ಅಥವಾ ಲೇಖನವನ್ನು ಆ ಉದ್ದೇಶ್ಯದೊಂದಿಗೆ ಸಂಯೋಜಿಸಿಕೊಳ್ಳುವುದೇ 'ತಾತ್ಪರ್ಯ.' ವಕ್ತೃವಿನ ಅಭಿಪ್ರಾಯಕ್ಕೆ ವಿರುದ್ಧವಾಗಿ ಕಲ್ಪನೆಗಳನ್ನು ಮಾಡಿಕೊಳ್ಳುವ ಅನೇಕ ಮಂದಿ ಹಠವಾದಿಗಳೂ, ಮುರಾಗ್ರಹಿಗಳೂ—ವಿಶೇಷವಾಗಿ ಮತವಾದಿಗಳು—ಇರುತ್ತಾರೆ. ಏಕೆಂದರೆ, ಮತದ ಆಗ್ರಹದಿಂದ ಅವರ ಬುದ್ಧಿಯು ತಮಸ್ಕಾರದಲ್ಲಿ ಸಿಕ್ಕಿಕೊಂಡು ನಷ್ಟವಾಗಿಹೋಗಿರುತ್ತದೆ. ಆದರೆ, ನಾನು ಯಾವರೀತಿ, ಪುರಾಣ, ಜೈನರ ಗ್ರಂಥಗಳು, ಬೈಬಲ್ ಮತ್ತು ಕುರಾನನ್ನು ಮೊದಲೇ ಕೆಟ್ಟ ನೋಟದಿಂದ ನೋಡದೆ, ಅವುಗಳಿಂದ ಗುಣಗ್ರಹಿಸಿ, ದೋಷಗಳನ್ನು ತ್ಯಜಿಸಿ ಮಾನವಜಾತಿಯ ಏಳಿಗೆಗೆ ಯತ್ನಿಸುತ್ತೇನೋ ಹಾಗೆಯೇ ಸರ್ವರೂ ಮಾಡಬೇಕಾದುದು ಯೋಗ್ಯ. ಮಾನವರು ಸತ್ಯಾಸತ್ಯ ಮತಗಳನ್ನು ನಿರ್ಣಯಿಸುವುದಕ್ಕೂ, ಸತ್ಯವನ್ನು ಗ್ರಹಿಸಲೂ ಅಸತ್ಯವನ್ನು ತ್ಯಜಿಸಲೂ, ಬೇರೆಯವರಿಂದ ಅದೇರೀತಿ ಮಾಡಿಸಲೂ ಸಮರ್ಥರಾಗುವಂತೆ ಈ ಎಲ್ಲಾ ಮತಗಳ ಸ್ವಲ್ಪಸ್ವಲ್ಪ ದೋಷಗಳನ್ನು ಮಾತ್ರ ಬೆಳಕಿಗೆ ತಂದಿದ್ದೇವೆ. ಏತಕ್ಕಂದರೆ, ಒಂದಾದ ಮಾನವಜಾತಿಯಲ್ಲಿ, ಜನರನ್ನು ತಪ್ಪುಹಾದಿಗೆಳೆದು, ವಿರೋಧಬುದ್ಧಿ ಹುಟ್ಟಿಸಿ, ಒಬ್ಬರ

ನ್ನೊಬ್ಬರ ಶತ್ರುಗಳನ್ನಾಗಿ ಮಾಡಿ, ಹೋರಾಡಿಸಿ ಸಾಯಿಸುವುದು ವಿದ್ವಾಂಸರ ಸ್ವಭಾವಕ್ಕೆ ಬಾಹಿರವಾದುದು. ಅವಿದ್ವಾಂಸರು ಈ ಗ್ರಂಥವನ್ನು ನೋಡಿ ಅನ್ಯಥಾ ಭಾವಿಸಿಕೊಳ್ಳುವರಾದರೂ. ಬುದ್ಧಿವಂತರಾದವರು ಯಥಾಯೋಗ್ಯವಾಗಿ ಇದರ ಅಭಿಪ್ರಾಯವನ್ನು ತಿಳಿದುಕೊಳ್ಳುವರು. ಆದುದರಿಂದ ನಾನು ನನ್ನ ಪರಿಶ್ರಮವನ್ನು ಸಫಲವೆಂದರಿಯುತ್ತೇನೆ. ಮತ್ತು ನನ್ನ ಅಭಿಪ್ರಾಯವನ್ನು ಸರ್ವಸಜ್ಜನರ ಮುಂದೆ ಇಡುತ್ತೇನೆ. ಇದನ್ನು ನೋಡಿ, ಅನ್ಯರಿಗೆ ತೋರಿಸಿ, ನನ್ನ ಶ್ರಮವನ್ನು ಸಫಲಗೊಳಿಸಲಿ. ಮತ್ತು ಇದೇ ರೀತಿ ಪಕ್ಷಪಾತಮಾಡದೆ ಸತ್ಯಾರ್ಥವನ್ನು ಪ್ರಕಾಶಪಡಿಸುವುದು ನನ್ನ ಮತ್ತು ಮಹಾನುಭಾವರೆಲ್ಲರ ಮುಖ್ಯ ಕರ್ತವ್ಯವಾಗಿರುತ್ತದೆ. ಸರ್ವಾತ್ಮನೂ ಸರ್ವಾಂತರ್ಯಾಮಿಯೂ, ಸಚ್ಚಿದಾನಂದನೂ, ಆದ ಪರಮಾತ್ಮನು ತನ್ನ ಕೃಪೆಯಿಂದ ಈ ಆಶಯವನ್ನು ವಿಸ್ತೃತವಾಗಿಯೂ, ಚಿರಸ್ಥಾಯಿಯಾಗಿಯೂ ಮಾಡಲಿ.

ಅಲಮತಿ ವಿಸ್ತರೇಣ ಬುದ್ಧಿಮದ್ವರಶಿರೋಮಣಿಷು.

ಇತಿ ಭೂಮಿಕಾ

ಸ್ಥಾನ, ಮಹಾರಾಜೀಯವರ
ಉದಯಪುರ,
ಫಾಲ್ಗುಣ ಶುಕ್ಲಪಕ್ಷ, ಸಂ॥ ೧೯೩೯.

(ಸ್ವಾಮೀ)ದಯಾನಂದಸರಸ್ವತೀ.



॥ ಸಚ್ಚಿದಾನಂದೇಶ್ವರಾಯ ನಮೋನಮಃ ॥

ಸತ್ಯಾರ್ಥಪ್ರಕಾಶ

ಪ್ರಥಮ ಸಮುಲ್ಲಾಸ

ಓಂ ಶಂ ನೋ ಮಿತ್ರಶ್ಶಂ ವರುಣಃ ಶಂ ನೋ ಭವತ್ವರ್ಯಮಾ । ಶಂ ನ ಇಂದ್ರೋ ಬೃಹಸ್ಪತಿಶ್ಶಂ ನೋ ವಿಷ್ಣುರುರುಕ್ರಮಃ । ನಮೋ ಬ್ರಹ್ಮಣೇ ನಮಸ್ತೇ ವಾಯೋ ತ್ವಮೇವ ಪ್ರತ್ಯಕ್ಷಂ ಬ್ರಹ್ಮಾಸಿ । ತ್ವಾಮೇವ ಪ್ರತ್ಯಕ್ಷಂ ಬ್ರಹ್ಮ ವದಿಷ್ಯಾಮಿ । ಋತಂ ವದಿಷ್ಯಾಮಿ ಸತ್ಯಂ ವದಿಷ್ಯಾಮಿ ತನ್ಮಾಮವತು ತದ್ವಕ್ತಾರಮವತು । ಅವತು ಮಾಮವತು ವಕ್ತಾರಮ್ । ಓಂ ಶಾಂತಿಶ್ಶಾಂತಿ ಶ್ಶಾಂತಿಃ ॥

ಅರ್ಥ :- (ಓಂ) ಈ ಓಂಕಾರವು ಪರಮಾತ್ಮನ ಸರ್ವೋತ್ತಮ ನಾಮವಾಗಿದೆ. ಯಾಕೆಂದರೆ ಇದರಲ್ಲಿ ಅ, ಉ, ಮ್ ಈ ಮೂರು ಅಕ್ಷರಗಳೂ ಸೇರಿ 'ಓಂ' ಎಂಬ ಸಮುದಾಯವಾಗಿದೆ. ಈ ಒಂದು ನಾಮದಿಂದಲೇ ಪರಮಾತ್ಮನ ಅನೇಕ ನಾಮಗಳು ಹೊರಡುತ್ತವೆ. ಹೇಗೆಂದರೆ :—ಅಕಾರವು ವಿರಾಟ್, ಅಗ್ನಿ, ವಿಶ್ವಾದಿಗಳಿಗೂ, ಉಕಾರವು ಹಿರಣ್ಯಗರ್ಭ, ವಾಯು, ತೈಜಸಾದಿಗಳಿಗೂ, ಮಕಾರವು ಈಶ್ವರ, ಆದಿತ್ಯ, ಪ್ರಾಜ್ಞಾದಿ ನಾಮಗಳಿಗೂ ವಾಚಕಗಳಾಗಿವೆ. ಪ್ರಕರಣಾನುಸಾರವಾಗಿ ಈ ಎಲ್ಲಾ ನಾಮಗಳೂ ಒಬ್ಬನೇ ಪರಮಾತ್ಮನಿಗೆ ಅನ್ವಯಿಸುವವೆಂದು ವೇದಾದಿ ಸತ್ಯ ಶಾಸ್ತ್ರಗಳಲ್ಲಿ ಸ್ಪಷ್ಟವಾಗಿ ಹೇಳಿದೆ.

ಪ್ರಶ್ನೆ:—ವಿರಾಟ್ ಮೊದಲಾದ ನಾಮಗಳು ಪರಮಾತ್ಮನಿಗಿಂತಲೂ ಬೇರೆಯಾದ ಅರ್ಥಗಳನ್ನು ಏತಕ್ಕೆ ಕೊಡಲಾರವು? ಬ್ರಹ್ಮಾಂಡಕ್ಕೂ, ಪೃಥಿವ್ಯಾದಿ ಭೂತಗಳಿಗೂ, ಇಂದ್ರಾದಿ ದೇವತೆಗಳಿಗೂ ಮತ್ತು ವೈದ್ಯಶಾಸ್ತ್ರದಲ್ಲಿ ಶುಂಠಿ ಮೊಲ್ಲಲಾದ ಔಷಧಿಗಳಿಗೂ ಈ ಹೆಸರುಗಳಿವೆಯೋ ಇಲ್ಲವೋ?

ಉತ್ತರ:—ಇವೆ. ಆದರೆ ಪರಮಾತ್ಮನಿಗೂ ಕೂಡ ಈ ಹೆಸರುಗಳು ಅನ್ವಯಿಸುತ್ತವೆ.

ಪ್ರಶ್ನೆ:—ಈ ಹೆಸರುಗಳಿಂದ ಕೇವಲ ದೇವತೆಗಳನ್ನು ಗ್ರಹಿಸುವರೋ ಇಲ್ಲವೋ?

ಉತ್ತರ: ನೀವು ಹಾಗೆ ಗ್ರಹಿಸುವುದಕ್ಕೆ ಪ್ರಮಾಣವೇನು?

ಪ್ರಶ್ನೆ: ದೇವತೆಗಳೆಲ್ಲರೂ ಪ್ರಸಿದ್ಧರೂ ಉತ್ತಮರೂ ಆಗಿರುವುದರಿಂದ ನಾನು ಅವರನ್ನೇ ಗ್ರಹಿಸುತ್ತೇನೆ.

ಉತ್ತರ:—ಪರಮೇಶ್ವರನು ಅಪ್ರಸಿದ್ಧನೂ, ಅತಿಸಿಗಿಂತಲೂ ಬೇರೊಬ್ಬ ಉತ್ತಮನೂ ಇರುವನೇ? ಹೀಗಿರುವಾಗ ಈ ಎಲ್ಲಾ ನಾಮಗಳೂ ಪರಮಾತ್ಮನಿಗೆ ಸಹ ಅನ್ವಯಿಸುವವೆಂದು ಏತಕ್ಕೆ ಒಪ್ಪುವುದಿಲ್ಲ? ದೇವರು ಅಪ್ರಸಿದ್ಧನೂ ಅಲ್ಲ; ಮತ್ತು ಅತನಿಗೆ ಸಮನಾದವನೂ ಯಾರೂ ಇಲ್ಲ. ಹೀಗಿರುವಾಗ ಅತನಿಗಿಂತ ಉತ್ತಮನಾದವನು ಹೇಗೆತಾನೇ ಇರಬಲ್ಲನು? ಆದುದರಿಂದ ನೀವು ಹೇಳುವುದು ನಿಜವಲ್ಲ; ಏಕೆಂದರೆ ಹೀಗೆ ಹೇಳುವುವರಲ್ಲಿ ಅನೇಕ ದೋಷಗಳು ಸಂಭವಿಸುತ್ತವೆ. ಹೇಗೆಂದರೆ:—**'ಉಪಸ್ಥಿತಂ ಪರಿತ್ಯಜ್ಯ ಅನುಪಸ್ಥಿತಂ ಯಾಚತ ಇತಿ ಬಾಧಿತನ್ಯಾಯಃ'** ಒಬ್ಬನು ಮತ್ತೊಬ್ಬನ ಮುಂದೆ ಭೋಜನ ಪದಾರ್ಥಗಳನ್ನು ತಂದಿಟ್ಟು 'ತಾವು ಭೋಜನ ಮಾಡಿರಿ' ಎಂದು ಹೇಳಿದಾಗ, ಅವನು ಅದನ್ನು ತಿನ್ನದೆ, ದೊರೆಯದ ಊಟಕ್ಕೋಸ್ಕರ ಅಲ್ಲಲ್ಲಿ ಅಲೆದರೆ ನಾವು ಅವನನ್ನು ಬುದ್ಧಿವಂತನೆಂದು ತಿಳಿಯಬಾರದು. 'ಉಪಸ್ಥಿತ' ಅಂದರೆ ಸಮೀಪದಲ್ಲಿ ತಾನಾಗಿ ಪ್ರಾಪ್ತವಾದ ಪದಾರ್ಥಗಳನ್ನು ಬಿಟ್ಟು 'ಅನುಪಸ್ಥಿತ' ಅಂದರೆ ದೊರೆಯದ ಊಟಕ್ಕೋಸ್ಕರ

ಆಲೆಯುವುದು ಹೇಗೆ ಬುದ್ಧಿವಂತಿಕೆಯಲ್ಲವೋ ಹಾಗೆಯೇ ನಿಮ್ಮ ಹೇಳಿಕೆಯಲ್ಲೂ ಬುದ್ಧಿವಂತಿಕೆಯಿಲ್ಲ. ತಾವು 'ವಿರಾಟ್' ಮೊದಲಾದ ನಾಮಗಳಿಂದ ಪ್ರಸಿದ್ಧನೂ, ಪ್ರಮಾಣಸಿದ್ಧನೂ ಆದ ಪರಮಾತ್ಮನನ್ನೂ ಬ್ರಹ್ಮಾಂಡವೇ ಮೊದಲಾದ ಉಪಸ್ಥಿತ ಪದಾರ್ಥಗಳನ್ನೂ ಬಿಟ್ಟು ಅಸಂಭವವೂ, ಅನುಪಸ್ಥಿತವೂ ಆದ ದೇವಾದಿಗಳನ್ನು ಗ್ರಹಿಸಲು ವೃಥಾ ಶ್ರಮಪಡುತ್ತಿರುವಿರಿ. ಇದರಲ್ಲಿ ಯಾವ ಪ್ರಮಾಣವೂ ಯುಕ್ತಿಯೂ ಇಲ್ಲ. ಎಲ್ಲಿ ಯಾವ ಪ್ರಕರಣವೋ ಅಲ್ಲಿ ಅದನ್ನೇ ಗ್ರಹಿಸಬೇಕು – ಎಂದು ನೀವು ಹೇಳುವುದಾದರೆ. ಹೇಗೆಂದರೆ- ಒಬ್ಬ ಯಜಮಾನನು ತನ್ನ ಸೇವಕನಿಗೆ 'ಹೇ ಭೃತ್ಯ! ತ್ವಂ ಸೈಂಧವಮಾನಯ' ಅಂದರೆ 'ಎಲೈ ಸೇವಕನೇ! ನೀನು ಸೈಂಧವವನ್ನು ತೆಗೆದುಕೊಂಡು ಬಾ' ಎಂದು ಹೇಳಿದರೆ, ಆ ಸೇವಕನಿಗೆ ಸಮಯ -ಅಂದರೆ ಪ್ರಕರಣವನ್ನು ವಿಚಾರಿಸುವುದು ಆವಶ್ಯಕವಾಗಿದೆ. ಏಕೆಂದರೆ -ಸೈಂಧವವೆಂಬ ಪದವು ಕುದುರೆ ಮತ್ತು ಉಪ್ಪು- ಈ ಎರಡು ಪದಾರ್ಥಗಳಿಗೂ ಬೋಧಕವಾಗಿದೆ. ಸೇವಕನು ತನ್ನ ಯಜಮಾನನಿಗೆ ಪ್ರಯಾಣ ಸಮಯವಾಗಿದ್ದರೆ ಕುದುರೆಯನ್ನೂ, ಊಟದ ಸಮಯವಾಗಿದ್ದರೆ ಉಪ್ಪನ್ನೂ ತರುವುದು ಯೋಗ್ಯವಾಗಿದೆ. ಹಾಗೆ ಮಾಡದೆ ಪ್ರಯಾಣ ಸಮಯದಲ್ಲಿ ಉಪ್ಪನ್ನೂ, ಊಟದ ಸಮಯದಲ್ಲಿ ಕುದುರೆಯನ್ನೂ ತಂದರೆ ಯಜಮಾನನು ಸೇವಕನ ವಿಷಯದಲ್ಲಿ ಕೋಪಗೊಂಡು 'ನೀನು ಬುದ್ಧಿಯಿಲ್ಲದ ಮನುಷ್ಯ. ಪ್ರಯಾಣ ಸಮಯದಲ್ಲಿ ಉಪ್ಪನ್ನೂ, ಊಟದ ಸಮಯದಲ್ಲಿ ಕುದುರೆಯನ್ನೂ ತಂದರೆ ಏನು ಪ್ರಯೋಜನ? ನೀನು ಪ್ರಕರಣಜ್ಞನಲ್ಲ. ಹಾಗಿದ್ದಿದ್ದರೆ ಯಾವ ಸಮಯದಲ್ಲಿ ಯಾವುದನ್ನು ತರಬೇಕೋ ಅದನ್ನೇ ತರುತ್ತಿದ್ದೆ. ಪ್ರಕರಣವನ್ನು ವಿಚಾರಿಸುವುದು ನಿನಗೆ ಆವಶ್ಯಕವಾಗಿತ್ತು. ನೀನು ಹಾಗೆ ಮಾಡಲಿಲ್ಲ. ಆದುದರಿಂದ ನೀನು ಶುದ್ಧ ಮೂರ್ಖನು. ನನ್ನ ಬಳಿಯಿಂದ ಹೊರಟು ಹೋಗು; ಎಂದು ಹೇಳುವನಲ್ಲವೆ? ಈ ಉದಾಹರಣೆಯಿಂದ ಎಲ್ಲಿ ಯಾವುದನ್ನು ಗ್ರಹಿಸುವುದು ಉತ್ತಮವೋ ಅಲ್ಲಿ ಅದನ್ನೇ ಗ್ರಹಿಸಬೇಕೆಂದು ಸಿದ್ಧವಾಗುತ್ತದೆ. ಹಾಗೆಯೇ ನಾವು-ನೀವು ಎಲ್ಲರೂ ಮಾಡುವುದು ಉಚಿತ.

ಅಥ ಮಂತ್ರಾರ್ಥಃ

ಓಂ ಖಂ ಬ್ರಹ್ಮ ॥ ಯಜುರ್ವೇದ ಅಧ್ಯಾಯ ೪೦, ಮಂತ್ರ ೧೭ ॥ ನೋಡಿರಿ, ವೇದಗಳಲ್ಲಿ ಇಂತಹ ಪ್ರಕರಣಗಳಲ್ಲಿ ಓಂ **ಖಂ** ಮೊದಲಾದುವು ಪರಮಾತ್ಮನ ಹೆಸರುಗಳು.

ಓಂ ಮಿತ್ಯೇತದಕ್ಷರಮುದ್ಗೀಥಮುಪಾಸೀತ । ಛಾಂದೋಗ್ಯೋಪನಿಷತ್ ಮಂತ್ರ ೧. **ಓಮಿತ್ಯೇತದಕ್ಷರಮಿದಗ್ಂ ಸರ್ವಂ. ತಸ್ಯೋಪವ್ಯಾಖ್ಯಾನಂ ।** ಮಾಂಡೂಕ್ಯ ಮಂ. ೧. **ಸರ್ವೇ ವೇದಾ ಯತ್ಪದಮಾಮನಂತಿತಪಾಗ್ಂಸಿ ಸರ್ವಾಣಿ ಚ ಯದ್ವದಂತಿ । ಯದಿಚ್ಛಂತೋ ಬ್ರಹ್ಮಚರ್ಯಂ ಚರಂತಿ ತತ್ತೇಪದಂ ಸಂಗ್ರಹೇಣ ಬ್ರವೀಮ್ಯೋಮಿತ್ಯೇತತ್ ॥** ಕಠೋಪನಿಷತ್ ವಲ್ಲೀ ೨, ಮಂತ್ರ ೧೫.

ಪ್ರಶಾಸಿತಾರಂ ಸರ್ವೇಷಾಮಣೀಯಾಂಸಮಣೋರಪಿ ।
ರುಕ್ಮಾಭಂ ಸ್ವಪ್ನಧೀಗಮ್ಯಂ ವಿದ್ಯಾತ್ತಂ ಪುರುಷಂ ಪರಮ್ ॥
ಏತಮೇಕೇ ವದಂತ್ಯಗ್ನಿಂ ಮನುಮನ್ಯೇ ಪ್ರಜಾಪತಿಂ ।
ಇಂದ್ರಮೇಕೇ ಪರೇಪ್ರಾಣಮಪರೇಬ್ರಹ್ಮ ಶಾಶ್ವತಮ್ ॥

(ಮನುಸ್ಮೃತಿ ಅ.೧೨, ಶ್ಲೋ. ೧೨೨-೧೨೩)

ಸ ಬ್ರಹ್ಮಾ ಸ ವಿಷ್ಣುಸ್ಸರುದ್ರಸ್ಸಶಿವಸ್ಸೋಽಕ್ಷರಃ ಸ ಪರಮಃ ಸ್ವರಾಟ್ । ಸ ಇಂದ್ರಸ್ಸಕಾಕಾಲಾಗ್ನಿಸ್ಸಚಂದ್ರಮಾಃ । ಕೈವಲ್ಯೋಪನಿಷತ್. **ಇಂದ್ರಂ ಮಿತ್ರಂ ವರುಣಮಗ್ನಿಮಾಹುರಥೋ ದಿವ್ಯಸ್ಸಸುಪರ್ಣೋ ಗರುತ್ಮಾನ್ । ಏಕಂ ಸದ್ವಿಪ್ರಾ ಬಹುಧಾ ವದಂತ್ಯಗ್ನಿಂ ಯಮಂ ಮಾತರಿಶ್ವಾನಮಾಹುಃ ॥** ಋಗ್ವೇದ ಮಂಡಲ ೧, ಸೂಕ್ತ ೧೬೪, ಮಂ. ೪೬. **ಭೂರಸಿ ಭೂಮಿರಸ್ಯದಿತಿರಸಿ ವಿಶ್ವಸ್ಯ ಭುವನಸ್ಯಧರ್ತ್ರೀ।ಪೃಥಿವೀಂ ಯಚ್ಛ ಪೃಥಿವೀಂ**

ದೃಗ್ಂಹ ಪೃಥಿವೀಂ ಮಾಹಿಂಗ್ಂಸೀಃ ॥ ಯಜುರ್ವೇದ ಅಧ್ಯಾಯ ೧೩, ಮಂತ್ರ ೧೪.

ಇಂದ್ರೋ ಮಹ್ನಾ ರೋದಸೀ ಪಪ್ರಥಚ್ಛವ ಇಂದಸ್ಯೂರ್ಯ ಮುರೋಚಯತ್ । ಇಂದ್ರೋ ಹ ವಿಶ್ವಾ ಭುವನಾನಿ ಯೋಮಿರ ಇಂದ್ರೇಶಾನಾಸ ಇಂದವಃ ॥ ಸಾಮವೇದ ಪ್ರಪಾ. ೩, ತ್ರಿಕ ೮, ಮಂ. ೨.

ಪ್ರಾಣಾಯ ನಮೋ ಯಸ್ಯ ಸರ್ವಮಿದಂವಶೇ । ಯೋ ಭೂತಸ್ಸರ್ವಸ್ಯೇಶ್ವರೋ ಯಸ್ಮಿಂತ್ಸರ್ವಂ ಪ್ರತಿಷ್ಠಿತವತ್ ॥ ಅಥರ್ವ ವೇದಕಾಂಡ ೧೧, ಅ. ೭, ಸೂ. ೪, ಮಂ. ೧.

ಅರ್ಥ—ಈ ಪ್ರಮಾಣಗಳನ್ನು ಬರೆಯುವ ಉದ್ದೇಶ್ಯವೇನೆಂದರೆ, ಇಂತಹ ಪ್ರಮಾಣಗಳಲ್ಲಿ ಓಂಕಾರಾದಿ ಹೆಸರುಗಳಿಂದ ಪರಮಾತ್ಮನು ಗ್ರಾಹ್ಯನು ಎಂದು ಬರೆದಿದ್ದೇವೆ. ಲೋಕದಲ್ಲಿ ದರಿದ್ರನೇ ಮೊದಲಾದವರಿಗೆ ಧನಪತಿ ಮೊದಲಾದ ಹೆಸರುಗಳಿದ್ದಂತೆ ಪರಮಾತ್ಮನ ಯಾವ ಹೆಸರೂ ನಿರರ್ಥಕವಾಗಿಲ್ಲ. ಈ ನಾಮಗಳು ಕೆಲವೆಡೆ ಗೌಣಿಕ, ಕೆಲವೆಡೆ ಕಾರ್ಮಿಕ ಹಾಗೂ ಕೆಲವೆಡೆ ಸ್ವಾಭಾವಿಕ ಅರ್ಥಗಳನ್ನು ನಿರ್ದೇಶಿಸುತ್ತವೆಂಬುದು ಇದರಿಂದ ಸಿದ್ಧವಾಗುತ್ತದೆ. ಓಂ ಮೊದಲಾದ ನಾಮಗಳು ಹೇಗೆ ಸಾರ್ಥಕವಾಗಿರುವವೆಂದರೆ—

(ಓಂ, ಖಂ) 'ಅವತೀತ್ಯೋಮ್, ಆಕಾಶಮಿವ ವ್ಯಾಪಕತ್ವಾತ್ ಖಂ, ಸರ್ವೇಭ್ಯೋ ಬೃಹತ್ವಾದ್ಬ್ರಹ್ಮ'—ಎಲ್ಲವನ್ನು ಕಾಪಾಡುವವನಾದ್ದರಿಂದ 'ಓಂ' ಎಂದೂ, ಆಕಾಶದಂತೆ ವ್ಯಾಪಕನಾಗಿರುವುದರಿಂದ 'ಖಂ' ಎಂದೂ, ಎಲ್ಲಕ್ಕಿಂತ ದೊಡ್ಡವನಾಗಿರುವುದರಿಂದ 'ಬ್ರಹ್ಮ'ವೆಂದೂ ಪರಮಾತ್ಮನ ನಾಮಗಳು.

(ಓಮಿತ್ಯೇತತ್....) ಓಂ ಎಂಬುವುದು ಯಾವನ ನಾಮವಾಗಿರುವುದೋ, ಯಾವನು ಎಂದೂ ನಾಶವಾಗುವವನನಲ್ಲವೋ ಅಂಥವನನ್ನು ಉಪಾಸಿಸುವುದು ಯೋಗ್ಯವೇ ಹೊರತು ಬೇರೆಯವನನ್ನಲ್ಲ.

(ಓಮಿತ್ಯೇತತ್....) ವೇದಾದಿ ಶಾಸ್ತ್ರಗಳಲ್ಲಿ ಪರಮಾತ್ಮನ ಪ್ರಧಾನ ಮತ್ತು ನಿಜ ನಾಮವು 'ಓಂ' ಎಂದೇ ಹೇಳಲ್ಪಟ್ಟಿದೆ. ಉಳಿದವುಗಳೆಲ್ಲವೂ ಗೌಣ ನಾಮಗಳು.

(ಸರ್ವೇ ವೇದಾಃ...) ಸಮಸ್ತ ವೇದಗಳೂ, ಸಮಸ್ತ ಧರ್ಮಾನುಷ್ಠಾನರೂಪವಾದ ತಪಸ್ಸೂ, ಯಾವನನ್ನು ಸಾರುತ್ತಿರುವವೋ, ಮತ್ತು ಮಾನ್ಯಮಾಡುತ್ತಿರುವವೋ, ಯಾವನನ್ನು ಹೊಂದುವುದಕ್ಕಾಗಿ ಬ್ರಹ್ಮಚರ್ಯ ವ್ರತವನ್ನು ಆಚರಿಸುತ್ತಿರುವರೋ, ಆತನ ನಾಮವು 'ಓಂ' ಆಗಿದೆ.

(ಪ್ರಶಾಸಿ....) ಯಾವನು ಎಲ್ಲರಿಗೂ ಶಿಕ್ಷಣವೀಯುವನೋ, ಯಾವನು ಸೂಕ್ಷ್ಮಕ್ಕಿಂತಲೂ ಸೂಕ್ಷ್ಮನೋ, ಯಾವನು ಸ್ವಪ್ರಕಾಶ ಸ್ವರೂಪನೋ, ಯಾವನು ಸಮಾಧಿಸ್ಥ ಬುದ್ಧಿಯಿಂದ ತಿಳಿಯಲು ಅರ್ಹನೋ, ಅಂಥವನನ್ನೇ ಪರಮಪುರುಷನೆಂದು ತಿಳಿಯಬೇಕು. ಮತ್ತು -

ಸ್ವಪ್ರಕಾಶನಾಗಿರುವುದರಿಂದ 'ಅಗ್ನಿ', ವಿಜ್ಞಾನ ಸ್ವರೂಪನಾಗಿರುವುದರಿಂದ 'ಮನು': ಸರ್ವ ರಕ್ಷಕನಾಗಿರುವುದರಿಂದ 'ಪ್ರಜಾಪತಿ': ಪರಮೈಶ್ವರ್ಯವಂತನಾಗಿರುವುದರಿಂದ, 'ಇಂದ್ರ': ಜೀವನದ ಮೂಲನಾಗಿರುವುದರಿಂದ 'ಪ್ರಾಣ': ನಿರಂತರ ವ್ಯಾಪಕನಾಗಿರುವುದರಿಂದ 'ಬ್ರಹ್ಮ': ಎಂದು ಪರಮೇಶ್ವರನ ಹೆಸರುಗಳಾಗಿವೆ.

. **(ಸ ಬ್ರಹ್ಮಾ....)** ಪರಮಾತ್ಮನನ್ನು, ಜಗತ್ಕರ್ತನಾಗಿರುವುದರಿಂದ 'ಬ್ರಹ್ಮ'; ಸರ್ವವ್ಯಾಪಕನಾಗಿರುವುದರಿಂದ 'ವಿಷ್ಣು'; ದುಷ್ಟರಿಗೆ ದಂಡವಿತ್ತು ಅಳಿಸುವುದರಿಂದ 'ರುದ್ರ'; ಮಂಗಳಮಯನೂ, ಕಲ್ಯಾಣಕಾರಿಯೂ ಆಗಿರುವುದರಿಂದ 'ಶಿವ': **'ಯಸ್ಸರ್ವಮಶ್ನುತೇ ನ ಕ್ಷರತಿ ನ ವಿನಶ್ಯತಿ ತದಕ್ಷರಂ'; 'ಯಃ ಸ್ವಯಂ ರಾಜತೇ ಸ ಸ್ವರಾಟ್'; 'ಯೋಽಗ್ನಿರಿವ ಕಾಲಃ ಕಲಯಿತಾ ಪ್ರಲಯಕರ್ತಾ ಸ ಕಾಲಾಗ್ನಿರೀಶ್ವರಃ'**; ಸರ್ವತ್ರ ವ್ಯಾಪಿಸಿ ನಾಶರಹಿತ

ನಾಗಿರುವುದರಿಂದ ಅಕ್ಷರ, ಸ್ವಯಂ ಪ್ರಕಾಶಸ್ವರೂಪನಾಗಿರುವುದರಿಂದ 'ಸ್ವರಾಟ್', ಪ್ರಳಯದಲ್ಲಿ ಎಲ್ಲರಿಗೂ ಕಾಲನಾಗಿ ಕಾಲಕ್ಕೂ ಕಾಲನಾಗಿರುವುದರಿಂದ ಕಾಲಾಗ್ನಿ–ಎಂದು ಹೇಳುತ್ತಾರೆ.

(**ಇಂದ್ರಂ ಮಿತ್ರಂ....**) ಅದ್ವಿತೀಯವಾದ ಸತ್ಯ ಬ್ರಹ್ಮವಸ್ತುವು ಯಾವದಿದೆಯೋ ಅದಕ್ಕೇ ಇಂದ್ರಾದಿ ಎಲ್ಲಾ ನಾಮಗಳೂ ಇವೆ. **'ದ್ಯುಷು ಶುದ್ಧ ಪದಾರ್ಥೇಷು ಭವೋ ದಿವ್ಯಃ'; 'ಶೋಭನಾನಿ ಪರ್ಣಾನಿ ಪಾಲನಾನಿ ಪೂರ್ಣಾನಿ ಕರ್ಮಾಣಿ ವಾ ಯಸ್ಯ ಸಃ'; ಯೋ ಗುರ್ವಾತ್ಮಾ ಸ ಗರುತ್ಮಾನ್'; 'ಯೋ ಮಾತರಿಶ್ವಾ ವಾಯುರಿವ ಬಲವಾನ್ ಸ ಮಾತರಿಶ್ವಾ'**; ಪ್ರಕೃತ್ಯಾದಿ ದಿವ್ಯ ಪದಾರ್ಥಗಳಲ್ಲಿ ವ್ಯಾಪಿಸಿರುವುದರಿಂದ ದಿವ್ಯನೆಂದೂ, ಉತ್ತಮ ರಕ್ಷಕನೂ ಪೂರ್ಣ ಕ್ರಿಯಾವಂತನೂ ಆಗಿರುವುದರಿಂದ ಸುಪರ್ಣನೆಂದೂ ಮಹದಾತ್ಮಸ್ವರೂಪನಾಗಿರುವುದರಿಂದ ಗರುತ್ಮಾನ್ ಎಂತಲೂ, ವಾಯು ವಿನಂತೆ ಅನಂತ ಬಲಶಾಲಿಯಾಗಿರುವುದರಿಂದ ಮಾತರಿಶ್ವಾ–ಎಂದೂ ಪರಮಾತ್ಮನಿಗೆ ದಿವ್ಯ, ಸುಪರ್ಣ, ಗರುತ್ಮಾನ್, ಮಾತರಿಶ್ವಾ–ಈ ಹೆಸರುಗಳಿವೆ. ಉಳಿದ ಹೆಸರುಗಳ ಅರ್ಥವನ್ನು ಮುಂದೆ ಬರೆಯುತ್ತೇವೆ.

(**ಭೂಮಿರಸಿ....**) **ಭವಂತಿ ಭೂತಾನಿ ಯಸ್ಯಾಂ ಸಾ ಭೂಮಿಃ**' ಆತನಲ್ಲಿಯೇ ಸಮಸ್ತ ಪ್ರಾಣಿಗಳೂ ಉತ್ಪನ್ನವಾಗುವುದರಿಂದ ಪರಮಾತ್ಮನಿಗೆ ಭೂಮಿಯೆಂದು ಹೆಸರು. ಉಳಿದ ಹೆಸರುಗಳ ಅರ್ಥವನ್ನು ಮುಂದೆ ಬರೆಯುತ್ತೇವೆ.

(**ಇಂದ್ರೋಮಹ್ನಾ....**) ಈ ಮಂತ್ರದಲ್ಲಿ ಇಂದ್ರ ಶಬ್ದವು ಪರಮಾತ್ಮನಿಗೇ ಹೆಸರಾಗಿದೆ. ಅದಕ್ಕಾಗಿ ಈ ಪ್ರಮಾಣವನ್ನು ಬರೆದಿದ್ದೇವೆ.

(**ಪ್ರಾಣಾಯ....**) ಶರೀರ ಮತ್ತು ಇಂದ್ರಿಯಗಳು ಪ್ರಾಣದ ಅಧೀನವಾಗಿರುವಂತೆ ಸರ್ವ ಜಗತ್ತೂ ಪರಮಾತ್ಮನ ಅಧೀನವಾಗಿದೆ.

ಈ ಮೊದಲಾದ ಪ್ರಮಾಣಗಳ ನಿಜವಾದ ಅರ್ಥವನ್ನು ತಿಳಿದು ಕೊಂಡರೆ ಈ ನಾಮಗಳಿಂದ ಪರಮಾತ್ಮನನ್ನೇ ಗ್ರಹಿಸಬೇಕಾಗುತ್ತದೆ.

ವ್ಯಾಕರಣ, ನಿರುಕ್ತ ಬ್ರಾಹ್ಮಣ, ಸೂತ್ರ ಮೊದಲಾದ ಋಷಿಮುನಿಗಳ ವ್ಯಾಖ್ಯಾನಗಳಲ್ಲಿ ಈ ಶಬ್ದಗಳನ್ನು ಪರಮಾತ್ಮನಿಗೆ ಅನ್ವಯಿಸಿರುವುದು ಕಂಡು ಬರುತ್ತದೆ. ಇದೇ ಅರ್ಥವನ್ನೇ ಎಲ್ಲರೂ ಗ್ರಹಿಸುವುದು ಯೋಗ್ಯವಾಗಿದೆ. ಆದರೆ 'ಓಂ' ಎಂಬುವದಾದರೋ ಕೇವಲ ಪರ ಮಾತ್ಮನಿಗೇ ಹೆಸರಾಗಿದೆ ಮತ್ತು ಅಗ್ನಿ ಮೊದಲಾದ ಶಬ್ದಗಳು ಪ್ರಕರಣ ಮತ್ತು ವಿಶೇಷಣಗಳ ನಿಯಮಾನುಸಾರ ಪರಮಾತ್ಮನಿಗೆ ಅನ್ವಯಿಸು ತ್ತವೆ. ಇದರಿಂದ ಸಿದ್ಧವಾಗುವದೇನೆಂದರೆ, ಎಲ್ಲೆಲ್ಲಿ ಸ್ತುತಿ, ಪ್ರಾರ್ಥನೆ, ಉಪಾಸನೆ, ಸರ್ವಜ್ಞ, ವ್ಯಾಪಕ, ಶುದ್ಧ, ಸನಾತನ, ಸೃಷ್ಟಿಕರ್ತಾ ಮೊದಲಾದ ವಿಶೇಷಣಗಳಿವೆಯೋ ಅಲ್ಲಲ್ಲೆ ಈ ಹೆಸರುಗಳಿಂದ ಪರಮಾ ತ್ಮನ ಗ್ರಹಣವಾಗುತ್ತದೆ. ಮತ್ತು ಎಲ್ಲೆಲ್ಲಿ ಕೆಳಕಂಡಂತೆ,

ತತೋ ವಿರಾಡಜಾಯತ ವಿರಾಜೋ ಅಧಿ ಪೂರುಷಃ । ಶ್ರೋತ್ರಾದ್ವಾಯುಶ್ಚ ಪ್ರಾಣಶ್ಚ ಮುಖಾದಗ್ನಿರಜಾಯತ । ತೇನದೇವಾ ಅಯಜಂತ । ಪಶ್ಚಾದ್ಭೂಮಿಮಥೋ ಪುರಃ ॥ ಯಜು. ಅ. ೩೧ ॥

ತಸ್ಮಾದ್ವಾ ಏತಸ್ಮಾದಾತ್ಮನ ಆಕಾಶಸ್ಸಂಭೂತಃ । ಆಕಾ ಶಾದ್ವಾಯುಃ । ವಾಯೋರಗ್ನಿಃ । ಅಗ್ನೇರಾಪಃ । ಅದ್ಭ್ಯಃ ಪೃಥಿವೀ । ಪೃಥಿವ್ಯಾ ಓಷಧಯಃ । ಓಷಧಿಭ್ಯೋಽನ್ನಮ್ । ಅನ್ನಾದ್ರೇತಃ । ರೇತಸಃ ಪುರುಷಃ । ಸ ವಾ ಏಷ ಪುರುಷೋಽನ್ನರಸಮಯಃ ॥ ತೈತ್ತರೀಯೋಪನಿಷತ್, ಬ್ರಹ್ಮಾನಂದವಲ್ಲೀ।ಅ.೧।

ಇಂಥ ಪ್ರಕರಣಗಳಲ್ಲಿ ವಿರಾಟ್, ಪುರುಷ, ಆಕಾಶ, ವಾಯು, ಅಗ್ನಿ, ಜಲ, ಭೂಮಿ ಮೊದಲಾದ ಶಬ್ದಗಳು ಲೌಕಿಕ ಪದಾರ್ಥಗಳನ್ನು ಬೋಧಿಸುತ್ತವೆ. ಏಕೆಂದರೆ ಎಲ್ಲಿ ಉತ್ಪತ್ತಿ, ಸ್ಥಿತಿ, ಪ್ರಳಯ, ಅಲ್ಪಜ್ಞ, ಜಡ, ದೃಶ್ಯ ಮೊದಲಾದ ವಿಶೇಷಣಗಳೂ ಬರೆದಿರುವವೋ, ಅಲ್ಲಿ ಪರಮಾತ್ಮನ ಗ್ರಹಣವಾಗುವುದಿಲ್ಲ. ಆತನು ಉತ್ಪತ್ತಿ ಮೊದಲಾದ ವ್ಯವಹಾರಗಳಿಂದ ದೂರವಾಗಿದ್ದಾನೆ. ಮೇಲಿನ ಮಂತ್ರಗಳಲ್ಲಿ ಉತ್ಪತ್ತಿ ಮೊದಲಾದ ವ್ಯವಹಾರಗಳು ಕಂಡುಬರುವುದರಿಂದ ವಿರಾಟ್ ಮೊದ

ಲಾದ ಪದಗಳಿಂದ ಪರಮಾತ್ಮನ ಗ್ರಹಣವಾಗದೆ, ಲೌಕಿಕಪದಾರ್ಥಗಳ ಗ್ರಹಣವಾಗುತ್ತದೆ. ಆದರೆ ಎಲ್ಲಿ ಸರ್ವಜ್ಞಾದಿ ವಿಶೇಷಣಗಳಿರುವವೋ ಅಲ್ಲಿ ಪರಮಾತ್ಮನ ಗ್ರಹಣವೂ, ಮತ್ತು ಎಲ್ಲಿ ಇಚ್ಛೆ, ದ್ವೇಷ, ಪ್ರಯತ್ನ, ಸುಖ, ದುಃಖ, ಅಲ್ಪಜ್ಞ ಮೊದಲಾದ ವಿಶೇಷಣಗಳಿರುವವೋ ಅಲ್ಲಿ ಜೀವಾತ್ಮನ ಗ್ರಹಣವೂ ಆಗುತ್ತವೆ. ಹೀಗಿಯೇ ಎಲ್ಲಾ ಕಡೆಗಳಲ್ಲಿಯೂ ತಿಳಿಯಬೇಕು. ಪರಮೇಶ್ವರನಿಗೆ ಉತ್ಪತ್ತಿಯಾಗಲಿ, ಮರಣವಾಗಲಿ ಇಲ್ಲ. ಈ ಕಾರಣದಿಂದ ಜನ್ಮಾದಿ ವಿಶೇಷಣಗಳಿಂದ ಕೂಡಿದ ವಿರಾಟ್ ಮೊದಲಾದ ನಾಮಗಳಿಂದ ಜಡವಸ್ತುಗಳನ್ನೂ ಮತ್ತು ಜೀವಾತ್ಮ ಪದಾರ್ಥಗಳನ್ನೂ ಗ್ರಹಿಸಬೇಕಲ್ಲದೆ ಪರಮಾತ್ಮನನ್ನು ಗ್ರಹಿಸುವುದು ಉಚಿತವಲ್ಲ.

ಇನ್ನು ವಿರಾಟ್ ಮೊದಲಾದ ನಾಮಗಳು ಪರಮಾತ್ಮನಲ್ಲಿ ಹೇಗೆ ಅನ್ವಯಿಸುತ್ತವೆಂಬುದನ್ನು ಕೆಳಗೆ ಬರೆದಿರುವ ಪ್ರಮಾಣಗಳಿಂದ ತಿಳಿಯಿರಿ.—

'ವಿ' ಎಂಬ ಉಪಸರ್ಗದಿಂದ ಕೂಡಿದ 'ರಾಜೃ ದೀಪ್ತೌ' ಎಂಬ ಧಾತುವಿಗೆ 'ಕ್ವಿಪ್' ಪ್ರತ್ಯಯವನ್ನು ಸೇರಿಸಿದರೆ 'ವಿರಾಟ್' ಎಂಬ ಶಬ್ದವು ಸಿದ್ಧವಾಗುತ್ತದೆ. **'ಯೋ ವಿವಿಧಂ ನಾನಾ ಚರಾಚರಂ ಜಗದ್ರಾಜಯತಿ ಪ್ರಕಾಶಯತಿ ಸ ವಿರಾಟ್'** ವಿವಿಧ ಅಂದರೆ ಬಹು ಪ್ರಕಾರವಾದ ಜಗತ್ತನ್ನು ಪ್ರಕಾಶಪಡಿಸುವುದರಿಂದ 'ವಿರಾಟ್' ಎಂಬ ಹೆಸರಿನಿಂದ ಪರಮಾತ್ಮನು ಗ್ರಹಿಸಲ್ಪಡುತ್ತಾನೆ.

(**ಅಞ್ಚು ಗತಿ ಪೂಜನಯೋಃ**) (ಅಗ, ಅಗಿ, ಇಣ, ಗತ್ಯರ್ಥಕ) ಧಾತುಗಳಿಂದ ಅಗ್ನಿಶಬ್ದವು ಸಿದ್ಧವಾಗುತ್ತದೆ. **"ಗತೇಸ್ತ್ರಯೋಽರ್ಥಾಃ, ಜ್ಞಾನಂ, ಗಮನಂ, ಪ್ರಾಪ್ತಿಶ್ಚೇತಿ; ಪೂಜನಂ ನಾಮ ಸತ್ಕಾರಃ"; "ಯೋಽಞ್ಚತಿ ಅಚ್ಯತೇಽಗತ್ಯಂಗತ್ಯರ್ಥತಿವಾ ಸೋಽಯಮಗ್ನಿಃ"** ಪರಮಾತ್ಮನು ಜ್ಞಾನಸ್ವರೂಪನೂ, ಸರ್ವಜ್ಞನೂ, ತಿಳಿದುಕೊಳ್ಳಲೂ, ಹೊಂದಲೂ ಮತ್ತು ಪೂಜಿಸಲೂ ಅರ್ಹನೂ ಆಗಿರುವುದರಿಂದ ಅವನಿಗೆ ಅಗ್ನಿಯೆಂದು ಹೆಸರು.

'**विश प्रवेशने**' ಎಂಬ ಧಾತುವಿನಿಂದ 'ವಿಶ್ವ' ಶಬ್ದವು ಸಿದ್ಧವಾಗುತ್ತದೆ. "**विशन्ति प्रविशन्ति सर्वाण्याकाशादीनि भूतानि यस्मिन् योऽवयवोऽकाशादिषु सर्वेषु भूतेषु प्रविष्टः स विश्व ईश्वरः,**" ಆತನಲ್ಲಿ ಆಕಾಶಾದಿ ಸಮಸ್ತ ಭೂತಗಳೂ ಪ್ರವೇಶಿಸಿರುವುದರಿಂದ ಅಥವಾ ಆತನು ಸಮಸ್ತ ಭೂತಗಳಲ್ಲಿಯೂ ವ್ಯಾಪ್ತನಾಗಿ ಪ್ರವೇಶಿಸಿರುವುದರಿಂದ ಪರಮಾತ್ಮನಿಗೆ 'ವಿಶ್ವ' ಎಂದು ಹೆಸರು. ಈ ಮೊದಲಾದ ಹೆಸರುಗಳು ಅಕಾರಮಾತ್ರದಿಂದಾಗುತ್ತವೆ.

"**ज्योतिर्वै हिरण्यं तेजोवै हिरण्यमित्यैतरेयेशतपथे च ब्राह्मणे,**" "**योऽहिरण्यानां सूर्यादीनां तेजसां गर्भ उत्पत्ति निमित्तमधिकरणं स हिरण्यगर्भः**" ಆತನಲ್ಲಿ ಸೂರ್ಯಾದಿ ತೇಜೋವಂತ ಲೋಕಗಳು ಉತ್ಪನ್ನವಾಗಿ ಆತನ ಆಧಾರದಿಂದಲೇ ನಿಂತಿರುವುದರಿಂದ ಅಥವಾ ಸೂರ್ಯನೇ ಮೊದಲಾದ ತೇಜೋವಂತ ಪದಾರ್ಥಗಳಿಗೆ ಗರ್ಭ ಅಂದರೆ ಉತ್ಪತ್ತಿ ನಿವಾಸಸ್ಥಾನನಾಗಿರುವುದರಿಂದ ಪರಮಾತ್ಮನಿಗೆ 'ಹಿರಣ್ಯಗರ್ಭ' ಎಂದು ಹೆಸರು. ಈ ವಿಷಯದಲ್ಲಿ ಯಜುರ್ವೇದದ ಮಂತ್ರವು ಪ್ರಮಾಣವಾಗಿದೆ.

हिरण्यगर्भस्समवर्तताग्रे भूतस्य जातः पतिरेक आसीत् । सदाधार पृथिवीं द्यामुतेमां कस्मै देवाय हविषा विधेम॥ಯಜು. ಅ೧೩. ಮಂತ್ರ೪॥ ಇತ್ಯಾದಿ ಸ್ಥಳಗಳಲ್ಲಿ 'ಹಿರಣ್ಯಗರ್ಭ' ಶಬ್ದದಿಂದ ಪರಮಾತ್ಮನ ಗ್ರಹಣವೇ ಆಗುತ್ತದೆ.

'**वा-गतिगंधनयोः**' ಎಂಬ ಧಾತುವಿನಿಂದ **वायु** ಶಬ್ದವು ಸಿದ್ಧವಾಗುತ್ತದೆ. "**गंधनं हिंसनं**" "**यो वाति चराचरं जगद्धरति बलिनां बलिष्ठः सवायुः**'।

ಪರಮಾತ್ಮನು ಜಗತ್ತಿನ ಧಾರಕನೂ, ಪಾಲಕನೂ, ಸಂಹಾರಕನೂ, ಬಲಿಷ್ಟರಿಗಿಂತ ಬಲಿಷ್ಟನೂ ಆಗಿರುವುದರಿಂದ ಆತನಿಗೆ ವಾಯು ಎಂದು ಹೆಸರು.

(**'ತಿಜ ನಿಶಾನೇ'**) ಎಂಬ ಧಾತುವಿನಿಂದ **'ತೇಜಃ'** ಎಂಬ ಶಬ್ದವು ಸಿದ್ಧವಾಗುತ್ತದೆ. ಅದಕ್ಕೆ ತದ್ಧಿತಪ್ರತ್ಯಯವನ್ನು ಸೇರಿಸಿದರೆ **'ತೈಜಸ'** ಶಬ್ದವಾಗುತ್ತದೆ. ಪರಮೇಶ್ವರನು ಸ್ವಯಂಪ್ರಕಾಶಸ್ವರೂಪನಾಗಿ ಸೂರ್ಯಾದಿ ತೇಜೋವಂತ ಲೋಕಗಳನ್ನು ಪ್ರಕಾಶಪಡಿಸುವುದರಿಂದ ಆತನಿಗೆ 'ತೈಜಸ' ಎಂದು ಹೆಸರು. ಈ ಮೊದಲಾದ ಹೆಸರುಗಳ ಅರ್ಥಗಳು ಉಕಾರ ಮಾತ್ರದಿಂದ ಗ್ರಹಿಸಲ್ಪಡುತ್ತವೆ.—(**ಈಶ ಐಶ್ವರ್ಯೇ**) ಎಂಬ ಧಾತುವಿನಿಂದ ಈಶ್ವರ ಶಬ್ದವು ಸಿದ್ಧವಾಗುತ್ತದೆ. **"ಯ ಈಷ್ಟೇ ಸರ್ವೈಶ್ವರ್ಯವಾನ್ ವರ್ತತೇ ಸ ಈಶ್ವರಃ"**; ಪರಮಾತ್ಮನಲ್ಲಿ ಸತ್ಯವಿಜ್ಞಾನಲಜ್ಞಾನವೂ, ಅನಂತೈಶ್ವರ್ಯವೂ ಇರುವುದರಿಂದ ಆತನಿಗೆ 'ಈಶ್ವರ' ಎಂದು ಹೆಸರು.

(**ದೋ ಅವಖಂಡನೇ**) ಎಂಬ ಧಾತುವಿನಿಂದ **'ಅದಿತಿ'** ಶಬ್ದವೂ, ಅದಕ್ಕೆ ತದ್ಧಿತಪ್ರತ್ಯಯವೂ ಸೇರಿ **'ಆದಿತ್ಯ'** ಶಬ್ದವೂ ಸಿದ್ಧವಾಗುತ್ತದೆ. **"ನ ವಿದ್ಯತೇ ವಿನಾಶೋ ಯಸ್ಯಸೋಽಯಮದಿತಿಃ+ಅದಿತಿರೇವ ಆದಿತ್ಯಃ"** ಎಂದೂ ನಾಶವೊಂದುವವನಲ್ಲವನಾಗಿರುವುದರಿಂದ ಪರಮಾತ್ಮನಿಗೆ ಆದಿತ್ಯನೆಂದು ಹೆಸರು.

'ಪ್ರ' ಪೂರ್ವಕವಾದ **'ಜ್ಞಾ ಅವಬೋಧನೇ'** ಎಂಬ ಧಾತುವಿನಿಂದ **'ಪ್ರಜ್ಞ'** ಎಂಬ ಶಬ್ದವೂ, ಅದಕ್ಕೆ ತದ್ಧಿತಪ್ರತ್ಯಯವನ್ನು ಸೇರಿಸಿದರೆ **'ಪ್ರಾಜ್ಞ'** ಶಬ್ದವೂ ಆಗುತ್ತದೆ. **"ಯಃ ಪ್ರಕೃಷ್ಟತಯಾ ಚರಾಚರಸ್ಯ ಜಗತೋ ವ್ಯವಹಾರಂ ಜಾನಾತಿ ಸ ಪ್ರಜ್ಞಃ+ಪ್ರಜ್ಞ ಏವ ಪ್ರಾಜ್ಞಃ"** ಪರಮಾತ್ಮನು ನಿರ್ಭ್ರಾಂತನೂ, ಜ್ಞಾನಯುಕ್ತನೂ, ಸರ್ವಜಗತ್ತಿನ ವ್ಯವಹಾರಗಳನ್ನು ಯಥಾವತ್ತಾಗಿ ತಿಳಿಯುವವನೂ ಆಗಿರುವುದರಿಂದ ಆತನಿಗೆ ಪ್ರಾಜ್ಞನೆಂದು

ಹೆಸರು. ಇವೇ ಮೊದಲಾದ ಹೆಸರಿನ ಅರ್ಥಗಳು ಮಕಾರದಿಂದ ಗ್ರಹಿಸಲ್ಪಡುತ್ತವೆ.

ಓಂಕಾರದ ಪ್ರತಿಯೊಂದು ಅಕ್ಷರಕ್ಕೂ ಮೂರು ಮೂರು ಅರ್ಥಗಳು ವಿವರಿಸಲ್ಪಟ್ಟಿರುವಂತೆ ಅನ್ಯನಾಮಾರ್ಥಗಳನ್ನು ಕೂಡ ಓಂಕಾರದಿಂದ ತಿಳಿಯಲಾಗುತ್ತದೆ, (**ಶನ್ನೋ ಮಿತ್ರಶ್ಶಂ ವರುಣಃ..**) ಎಂಬ ಮಂತ್ರದಲ್ಲಿ ಮಿತ್ರಾದಿ ನಾಮಗಳು ಪರಮಾತ್ಮನವೇ ಆಗಿವೆ. ಏಕೆಂದರೆ–ಸ್ತುತಿ, ಪ್ರಾರ್ಥನೆ ಮತ್ತು ಉಪಾಸನೆಗಳು ಶ್ರೇಷ್ಠನನ್ನು ಕುರಿತೇ ಮಾಡಬೇಕಾಗುತ್ತದೆ. ಗುಣಕರ್ಮಸ್ವಭಾವಗಳಲ್ಲಿ ಮತ್ತು ಸತ್ಯ ವ್ಯವಹಾರದಲ್ಲಿ ಎಲ್ಲರಿಗಿಂತ ಉತ್ತಮನಾದವನಿಗೆ ಶ್ರೇಷ್ಠನೆಂದು ಹೆಸರು. ಇಂತಹ ಶ್ರೇಷ್ಠರಲ್ಲಿಯೂ ಶ್ರೇಷ್ಠನಾದವನಿಗೆ ಪರಮಾತ್ಮನೆಂದು ಹೆಸರು. ಆತನಿಗೆ ಸಮನಾದವನು ಹಿಂದೆ ಯಾರೂ ಇರಲಿಲ್ಲ, ಇಗಲೂ ಇಲ್ಲ, ಮತ್ತು ಮುಂದೆ ಆಗುವ ಸಂಭವವೂ ಇಲ್ಲ. ಹೀಗೆ ಪರಮಾತ್ಮನಿಗೆ ಸಮಾನನಾದವನೇ ಇಲ್ಲದಿರುವಾಗ ಇನ್ನು ಆತನಿಗಿಂತ ಹೆಚ್ಚಿನವನು ಹೇಗೆ ತಾನೆ ಇರಬಲ್ಲನು? ಸತ್ಯ, ನ್ಯಾಯ, ದಯೆ, ಸರ್ವಸಾಮರ್ಥ್ಯ, ಸರ್ವಜ್ಞತ್ವ ಮೊದಲಾದ ಅನಂತ ಗುಣಗಳು ಪರಮಾತ್ಮನಲ್ಲಿರುವಂತೆ, ಜಡವಸ್ತುಗಳಲ್ಲಾಗಲೀ, ಜೀವರಲ್ಲಾಗಲೀ ಇಲ್ಲ. ಯಾವ ಪದಾರ್ಥವು ಸತ್ಯವೋ ಅದರ ಗುಣ ಕರ್ಮ ಸ್ವಭಾವಗಳೂ ಸತ್ಯವೇ ಆಗಿರುತ್ತವೆ. ಆದುದರಿಂದ ಮಾನವರು ಪರಮೇಶ್ವರನ ಸ್ತುತಿ, ಪ್ರಾರ್ಥನೆ, ಉಪಾಸನೆಗಳನ್ನೇ ಮಾಡುವುದು ಯೋಗ್ಯವು. ಪರಮಾತ್ಮನಿಗಿಂತ ಜೇಷ್ಠವಾದದ್ದನ್ನು ಎಂದಿಗೂ ಉಪಾಸಿಸಕೂಡದು. ಏಕೆಂದರೆ, ಬ್ರಹ್ಮ, ವಿಷ್ಣು ಮತ್ತು ಮಹದೇವರೆಂಬ ಪೂರ್ವದ ಮಹಾಶಯರಾದ ಪಿತ್ರಾಂಸರೂ, ದೈತ್ಯದಾನವಾದಿ ನೀಚ ಮನುಷ್ಯರೂ, ಮತ್ತು ಜೇಷ್ಠ ಸಾಧಾರಣ ಮಾನವರೂ ಆ ಪರಮಾತ್ಮನಲ್ಲಿಯೇ ವಿಶ್ವಾಸವಿಟ್ಟು ಆತನ ಸ್ತುತಿ, ಪ್ರಾರ್ಥನೆ, ಉಪಾಸನೆಗಳನ್ನು ಮಾಡಿದರು. ಪರಮಾತ್ಮನಿಗಿಂತ ಜೇಷ್ಠವಾದವರನ್ನು ಉಪಾಸಿಸಲಿಲ್ಲ. ನಾವೂ ಕೂಡ ಹಾಗೆಯೇ ಆಚರಿಸುವುದು ಯೋಗ್ಯವು. ಈ ವಿಷಯವಾಗಿ ವಿಶೇಷ ವಿಚಾರವು ಮುಕ್ತಿ ಮತ್ತು ಉಪಾಸನೆಯ ಪ್ರಸಂಗದಲ್ಲಿ ಮಾಡಲ್ಪಡುವುದು.

ಪ್ರಶ್ನೆ :– ಮಿತ್ರ ಮೊದಲಾದ ಶಬ್ದಗಳಿಗೆ ಸ್ನೇಹಿತ ಮತ್ತು ಇಂದ್ರಾದಿ ದೇವತೆಗಳೆಂದು ಪ್ರಸಿದ್ಧವಾಗಿ ವ್ಯವಹರಿಸಲ್ಪಡುತ್ತಿರುವುದು ಕಂಡುಬರುವುದರಿಂದ ಅವರನ್ನೇ ಗ್ರಹಿಸಬೇಕು.

ಉತ್ತರ :—ಇಲ್ಲಿ ಅವರನ್ನು ಗ್ರಹಿಸುವುದು ಉಚಿತವಲ್ಲ. ಏಕೆಂದರೆ—ಒಬ್ಬನಿಗೆ ಮಿತ್ರನಾದ ಮನುಷ್ಯನು ಮತ್ತೊಬ್ಬನಿಗೆ ಶತ್ರುವಾಗಿಯೂ, ಇನ್ನೊಬ್ಬನಿಗೆ ಉದಾಸೀನನಾಗಿಯೂ ಇರುವುದನ್ನು ನಾವು ನೋಡುತ್ತಿದ್ದೇವೆ. ಆದ್ದರಿಂದ ಮಿತ್ರಾದಿ ನಾಮಗಳಿಂದ ಮುಖ್ಯಾರ್ಥದಲ್ಲಿ ಸ್ನೇಹಿತ ಮೊದಲಾದ ಅರ್ಥವನ್ನು ಗ್ರಹಿಸಬಾರದು. ಆದರೆ ಪರಮಾತ್ಮನು ಯಾರೊಬ್ಬರಿಗೆ ಶತ್ರುವಾಗಿಯೂ, ಉದಾಸೀನನಾಗಿಯೂ ಇರದೆ ಜಗತ್ತಿಗೆಲ್ಲಾ ಮಿತ್ರನಾಗಿರುವಂತೆ ಆತನಿಗಿಂತ ಬೇರೆಯಾದ ಜೀವರಾರೂ ಹೀಗಿರಲಾರರು. ಈ ಕಾರಣದಿಂದ ಇಲ್ಲಿ ಪರಮಾತ್ಮನನ್ನೇ ಗ್ರಹಿಸಬೇಕು. ಗೌಣಾರ್ಥದಲ್ಲಿ ಮಿತ್ರ ಮೊದಲಾದ ಶಬ್ದಗಳಿಂದ ಸ್ನೇಹಿತ ಮೊದಲಾದ ಮಾನವರನ್ನು ಗ್ರಹಿಸಬೇಕು.

(ಞಿಮಿದಾ ಸ್ನೇಹನೇ)ಎಂಬ ಧಾತುವಿಗೆ ಔಣಾದಿಕ ' ಕ್ರ ' ಪ್ರತ್ಯಯವು ಸೇರಿ ಮಿತ್ರಶಬ್ದವು ಸಿದ್ಧವಾಗುತ್ತದೆ. **" ಮೇದ್ಯತಿ ಸ್ನಿಹ್ಯತಿ ಸ್ನಿಹ್ಯತೇವಾ ಸ ಮಿತ್ರಃ "** ಪರಮಾತ್ಮನು ಎಲ್ಲರನ್ನೂ ಪ್ರೀತಿಸುವವನೂ, ಮತ್ತು ಎಲ್ಲರ ಪ್ರೀತಿಗೂ ಅರ್ಹನೂ ಆಗಿರುವುದರಿಂದ ಆತನಿಗೆ ' ಮಿತ್ರ ' ನೆಂದು ಹೆಸರು.

(ವೃಞ್ ವರಣೇ, ವರ ಈಪ್ಸಾಯಾಂ) ಎಂಬ ಧಾತುಗಳಿಗೆ ' ಉಣಾದಿ ಉನನ್ ' ಪ್ರತ್ಯಯಸೇರಿ ವರುಣ ಶಬ್ದವು ಸಿದ್ಧವಾಗುತ್ತದೆ. **" ಯಃ ಸರ್ವಾನ್ ಶಿಷ್ಟಾನ್ ಮುಮುಕ್ಷೂನ್ ಧರ್ಮಾತ್ಮನೋ ವೃಣೋತ್ಯಥವಾ ಯಃ ಶಿಷ್ಟೈರ್ಮುಮುಕ್ಷುಭಿರ್ಧರ್ಮಾತ್ಮಭಿರ್ವ್ರಿಯತೇ ವರ್ಯತೇವಾ ಸ ವರುಣಃ ಪರಮೇಶ್ವರ "** ; ಪರಮೇಶ್ವರನು, ಆತ್ಮಯೋಗಿ, ವಿದ್ವಾಂಸರು ಮತ್ತು ಮೋಕ್ಷೇಚ್ಛುಗಳು,–ಮುಕ್ತರು ಮತ್ತು ಧರ್ಮಾತ್ಮರು ಇವರನ್ನು

ಸ್ವೀಕರಿಸುವುದರಿಂದ ಅಥವಾ ಶಿಷ್ಟರಿಂದಲೂ, ಮೋಕ್ಷಾಪೇಕ್ಷೆಗಳಿಂದಲೂ, ಮುಕ್ತರಿಂದಲೂ, ಧರ್ಮಾತ್ಮರಿಂದಲೂ ಸೇವಿಸಲ್ಪಡತಕ್ಕವರಾದುದರಿಂದ ಆತನಿಗೆ 'ವರುಣ' ಎಂದು ಹೆಸರು. ಅಥವಾ (**ವರುಣೋನಾಮ ವರಃ ಶ್ರೇಷ್ಠಃ**) ಎಲ್ಲರಿಗಿಂತಲೂ ಶ್ರೇಷ್ಠನಾಗಿರುವುದರಿಂದ ಆತನಿಗೆ ವರುಣನೆಂದು ಹೆಸರು.

(**ಋ-ಗತಿಪ್ರಾಪಣಯೋಃ**) ಎಂಬ ಧಾತುವಿಗೆ '**ಯತ್**' ಪ್ರತ್ಯಯವು ಸೇರಿ **ಅರ್ಯ** ಶಬ್ದವು ಸಿದ್ಧವಾಗುತ್ತದೆ. **ಅರ್ಯ** ಶಬ್ದಪೂರ್ವಕವಾದ '**ಮಾಙ್‌ಮಾನೇ**' ಎಂಬ ಧಾತುವಿಗೆ '**ಕನಿನ್**' ಎಂಬ ಪ್ರತ್ಯಯವು ಸೇರಿ '**ಅರ್ಯಮಾ**' ಶಬ್ದವು ಸಿದ್ಧವಾಗುತ್ತದೆ. "**ಯಃ ಅರ್ಯಾನ್ ಸ್ವಾಮಿನೋ ನ್ಯಾಯಾಧೀಶಾನ್ ಮಿಮಾತೇವಮಾನ್ಯಾನ್ ಕರೋತಿ ಸೋಽರ್ಯಮಾ**"; ಪರಮಾತ್ಮನು ಸತ್ಯವಾದ ನ್ಯಾಯವುಳ್ಳವರನ್ನು ಸನ್ಮಾನಿಸುವವನೂ, ಪಾಪಪುಣ್ಯಮಾಡುವವರಿಗೆ, ಪಾಪಪುಣ್ಯಫಲಗಳ, ಯಥಾವತ್ತಾಗಿ ಸತ್ಯಸತ್ಯ ನಿಯಮಕರ್ತನಾಗಿರುವದರಿಂದ ಆತನಿಗೆ '**ಅರ್ಯಮಾ**' ಎಂದು ಹೆಸರು.

(**ಇದಿ ಪರಮೈಶ್ವರ್ಯೇ**) ಎಂಬ ಧಾತುವಿಗೆ '**ರನ್**' ಪ್ರತ್ಯಯವು ಸೇರಿ 'ಇಂದ್ರ' ಶಬ್ದವಾಗುತ್ತದೆ. '**ಯ ಇಂದತಿ ಪರಮೈಶ್ವರ್ಯವಾನ್ ಭವತಿ ಸ ಇಂದ್ರಃ ಪರಮೇಶ್ವರಃ**'; ಅಖಿಲೈಶ್ವರ್ಯವಂತನಾಗಿರುವುದರಿಂದ ಪರಮಾತ್ಮನಿಗೆ 'ಇಂದ್ರ'ನೆಂದು ಹೆಸರು.

'**ಬೃಹತ್**' ಶಬ್ದಪೂರ್ವಕವಾದ '**ಪಾ ರಕ್ಷಣೇ**' ಎಂಬ ಧಾತುವಿಗೆ '**ಡತಿ**' ಪ್ರತ್ಯಯವೂ, ಬೃಹತ್ ಎಂಬುದರ ತಕಾರ ಲೋಪವೂ, ಸುಡಾಗಮವೂ ಬಂದು '**ಬೃಹಸ್ಪತಿ**' ಎಂದಾಗುತ್ತದೆ. "**ಯೋ ಬೃಹತಾಮಾಕಾಶಾದೀನಾಂ ಪತಿಃ ಸ್ವಾಮಿಪಾಲಯಿತಾ ಸ ಬೃಹಸ್ಪತಿಃ**"; ಪರಮಾತ್ಮನು ದೊಡ್ಡವರಿಗಿಂತ ದೊಡ್ಡ

ವನೂ ಮತ್ತು ದೊಡ್ಡದಾಗಿರುವ ಆಕಾಶಾದಿ ಬ್ರಹ್ಮಾಂಡಗಳಿಗೆ ಸ್ವಾಮಿಯಾಗಿಯೂ ಇರುವುದರಿಂದ ಆತನಿಗೆ ' ಬೃಹಸ್ಪತಿ ' ಎಂದು ಹೆಸರು.

(ವಿಷ್ಲೃ ವ್ಯಾಪ್ತೌ) ಎಂಬ ಧಾತುವಿನಿಗೆ **' ನು '** ಪ್ರತ್ಯಯವನ್ನು ಸೇರಿಸಿದರೆ **' ವಿಷ್ಣು '** ಎಂದಾಗುತ್ತದೆ. **" ವೇವೇಷ್ಟಿ ವ್ಯಾಪ್ನೋತಿ ಚರಾಚರಂ ಜಗತ್ ಸ ವಿಷ್ಣುಃ "** ಚರಾಚರ ಜಗತ್ತಿನಲ್ಲಿ ವ್ಯಾಪಕನಾಗಿರುವುದರಿಂದ ಪರಮಾತ್ಮನಿಗೆ ' ವಿಷ್ಣು ' ಎಂದು ಹೆಸರು.

"ಉರುರ್ಮಹಾನ್ ಕ್ರಮಃ ಪರಾಕ್ರಮೋಯಸ್ಯ ಸ ಉರುಕ್ರಮಃ "; ಅನಂತಪರಾಕ್ರಮಶಾಲಿಯಾಗಿರುವುದರಿಂದ ಪರಮಾತ್ಮನಿಗೆ ' ಉರುಕ್ರಮ ' ಎಂದು ಹೆಸರು.

(ಉರುಕ್ರಮಃ) ಮಹಾ ಪರಾಕ್ರಮಯುಕ್ತನಾದ (ಮಿತ್ರಃ) ಸರ್ವರಿಗೂ ಸ್ನೇಹಿತನೂ ಅವಿರೋಧಿಯೂ ಆದ, (ಶಂ) ಸುಖಕರನಾದ (ವರುಣಃ) ಸರ್ವೋತ್ತಮನಾದ (ಶಂ) ಸುಖಸ್ವರೂಪನಾದ (ಅರ್ಯಮಾ) ನ್ಯಾಯಾಧೀಶನಾದ (ಶಂ) ಸುಖಕಾರಕನಾದ (ಇಂದ್ರಃ) ಸಕಲೈಶ್ವರ್ಯವಂತನಾದ (ಶಂ) ಸಕಲೈಶ್ವರ್ಯದಾಯಕನಾದ (ಬೃಹಸ್ಪತಿಃ) ಸರ್ವಾಧಿಷ್ಠಾತನಾದ (ಶಂ) ವಿದ್ಯಾಪ್ರದನಾದ (ವಿಷ್ಣುಃ) ಸರ್ವವ್ಯಾಪಕನಾದ ಪರಮಾತ್ಮನು (ನಃ) ನಮಗೆ ಮಂಗಳಕರನಾಗಿ (ಭವತು) ಆಗಲಿ.

(ವಾಯೋ ತೇ ಬ್ರಹ್ಮಣೇ ನಮೋಸ್ತು) **' ಬೃಹ ಬೃಹಿ-ವೃದ್ಧೌ '** ಎಂಬ ಧಾತುವಿನಿಂದ ' ಬ್ರಹ್ಮ ' ಶಬ್ದವು ಸಿದ್ಧವಾಗುತ್ತದೆ. ಎಲ್ಲರಿಗಿಂತ ಉನ್ನತನಾಗಿ ವಿರಾಜಿಸುವವನೂ, ಎಲ್ಲಕ್ಕಿಂತ ದೊಡ್ಡವನೂ, ಅನಂತ ಬಲಯುಕ್ತನೂ ಆದ ಪರಮಾತ್ಮನನ್ನು ನಾವು ನಮಸ್ಕರಿಸುತ್ತೇವೆ. ಹೇ ಪರಮೇಶ್ವರ **(ತ್ವಮೇವ ಪ್ರತ್ಯಕ್ಷಂಬ್ರಹ್ಮಾಸಿ)** ನೀನೇ ಸರ್ವಾಂತರ್ಯಾಮಿರೂಪದಿಂದ ಪ್ರತ್ಯಕ್ಷಬ್ರಹ್ಮನು, **(ತ್ವಾಮೇವ ಪ್ರತ್ಯಕ್ಷಂ ಬ್ರಹ್ಮ ವದಿಷ್ಯಾಮಿ)** ನಿನ್ನನ್ನೇ ಪ್ರತ್ಯಕ್ಷ ಬ್ರಹ್ಮನೆಂದು ಹೇಳುತ್ತೇನೆ. ಏಕೆಂದರೆ–ನೀನು ಸರ್ವತ್ರ ವ್ಯಾಪಕನಾಗಿ ಎಲ್ಲರಿಗೂ

ನಿತ್ಯವೂ ಪ್ರಾಪ್ತನಾಗಿದ್ದೀಯೆ. (**ಋತಂ ವದಿಷ್ಯಾಮಿ**) ವೇದಗಳಲ್ಲಿರುವ ನಿನ್ನ **ಯಥಾರ್ಥವಾದ** ಆಜ್ಞೆಗಳನ್ನು ಎಲ್ಲರಿಗೂ ಉಪದೇಶಿಸಿ ನಾನೂ ಆಚರಿಸುತ್ತೇನೆ. (**ಸತ್ಯಂ ವದಿಷ್ಯಾಮಿ**) ಸತ್ಯವನ್ನೇ ಹೇಳುವೆನು. ಸತ್ಯವನ್ನೇ ಒಪ್ಪುವೆನು. ಸತ್ಯವನ್ನೇ ಆಚರಿಸುವೆನು. (**ತನ್ಮಾಮವತು**) ಆದುದರಿಂದ ನೀನು ನನ್ನನ್ನು ಕಾಪಾಡು. (**ತದ್ವಕ್ತಾರಮವತು**) ಆದುದರಿಂದ ಆಪ್ತ ಸತ್ಯವಕ್ತೃವಾದ, ನಿನ್ನ ಆಜ್ಞೆಗಳಲ್ಲಿ ನನ್ನ ಬುದ್ಧಿಯು ಸ್ಥಿರವಾಗಿ ಎಂದೂ ವಿರುದ್ಧವಾಗದಂತೆ, ನನ್ನನ್ನು ರಕ್ಷಿಸು. ಏಕೆಂದರೆ ನಿನ್ನ ಆಜ್ಞೆಯೇ ಧರ್ಮ. ಅದಕ್ಕೆ ವಿರುದ್ಧವಾದುದೇ ಅಧರ್ಮ. (**ಅವತು ಮಾಮವತು ವಕ್ತಾರಂ**) ಈ ದ್ವಿತೀಯ ಪಾಠವು ಅಧಿಕಾರ್ಥಕ್ಕಾಗಿ ಇದೆ. ಹೇಗೆಂದರೆ-- **ಕಶ್ಚಿತ್ ಕಂಚಿತ್ ಪ್ರತಿವದತಿ ತ್ವಂ ಗ್ರಾಮಂ ಗಚ್ಛಗಚ್ಛ**- ಈ ವಾಕ್ಯದಲ್ಲಿ ಎರಡುಬಾರಿ ಕ್ರಿಯೋಚ್ಚಾರಣವಾಗಿರುವುದರಿಂದ " ನೀನು ಬೇಗನೆ ಗ್ರಾಮಕ್ಕೆ ಹೋಗು " ಎಂದು ಅರ್ಥವಾಗುವಂತೆ ಇಲ್ಲಿಯೂ ಕೂಡ " ನೀನು ನನ್ನನ್ನು ಆವಶ್ಯಕವಾಗಿ ಕಾಪಾಡಬೇಕು " ಅಂದರೆ " ಧರ್ಮದಿಂದ ಸುನಿಶ್ಚಿತನಾಗಿ ಸದಾ ಅಧರ್ಮವನ್ನು ತಿರಸ್ಕರಿಸುವಂತೆ **ಅನುಗ್ರಹಿಸು**. ನಾನು ಇದನ್ನು ನಿನ್ನ ಮಹೋಪಕಾರವೆಂದು **ತಿಳಿಯುತ್ತೇನೆ** " ಎಂದಾಗುತ್ತದೆ. (ಓಂ ಶಾಂತಿಶ್ಶಾಂತಿಶ್ಶಾಂತಿಃ) ಇವರಲ್ಲಿ ಮೂರು ಬಾರಿ ' ಶಾಂತಿ 'ಪಾಠ ಮಾಡಿರುವುದರ ಪ್ರಯೋಜನ **ವೇನೆಂದರೆ**-ತ್ರಿವಿಧತಾಪವು ಅಂದರೆ **ಈ** ಪ್ರಪಂಚದಲ್ಲಿ ಮೂರು ವಿಧದ ದುಃಖಗಳಿವೆ. (೧) ಆಧ್ಯಾತ್ಮಿಕ :--ಶರೀರದಲ್ಲಿ ಅವಿದ್ಯೆ, ರಾಗ, ದ್ವೇಷ, ಮೂರ್ಖತನ, ಜ್ವರ, ನೋವು ಮೊದಲಾದುವುಗಳು ಹುಟ್ಟುವುದಕ್ಕೆ ' ಆಧ್ಯಾತ್ಮಿಕ 'ವೆಂದು ಹೆಸರು. (೨) ಆಧಿಭೌತಿಕ :--ಶತ್ರು, ವ್ಯಾಘ್ರ, ಸರ್ಪ ಮೊದಲಾದವುಗಳಿಂದ ಉಂಟಾಗುವ ದುಃಖಕ್ಕೆ ' ಆಧಿಭೌತಿಕ 'ವೆಂದು ಹೆಸರು. (೩) ಆಧಿದೈವಿಕ :--ಅತಿವೃಷ್ಟಿ, ಅತಿಶೀತ, ಅತ್ಯುಷ್ಣ, ಮನಸ್ಸು ಮತ್ತು ಇಂದ್ರಿಯಗಳ ಅಶಾಂತಿ ಮೊದಲಾದವುಗಳಿಂದ ಉಂಟಾಗುವ ದುಃಖಕ್ಕೆ ' ಆಧಿದೈವಿಕ 'ವೆಂದು

ಹೆಸರು. ಈ ಮೂರು ದುಃಖಗಳಿಂದ ನಮ್ಮನ್ನು ದೂರಮಾಡಿ ಯಾವಾಗಲೂ ಮಂಗಳಕರವಾದ ಕರ್ಮಗಳಲ್ಲಿ ಪ್ರವೃತ್ತರಾಗಿರುವಂತೆ ಮಾಡು. ಏಕೆಂದರೆ-ನೀನೇ ಅನಂತಕಲ್ಯಾಣಸ್ವರೂಪನೂ ಪ್ರಪಂಚದ ಕಲ್ಯಾಣ ಕರ್ತನೂ, ಧಾರ್ಮಿಕರು ಮತ್ತು ಮೋಕ್ಷಾಭಿಲಾಷಿಗಳಿಗೆ ಕಲ್ಯಾಣ ಪ್ರದನೂ ಆಗಿರುವುದರಿಂದ ಸಮಸ್ತ ಜೀವರೂ ಅಧರ್ಮವನ್ನು ಬಿಟ್ಟು ಧರ್ಮವನ್ನು ಆಚರಿಸಿ, ದುಃಖರಹಿತರಾಗಿ ಪರಮಾನಂದವನ್ನು ಪಡೆಯುವಂತೆ ನೀನು ಸ್ವತಃ ನಿನ್ನ ಕರುಣೆಯಿಂದ ಸರ್ವ ಜೀವರ ಹೃದಯವಲ್ಲಿಯೂ ಪ್ರಕಾಶಿಸುತ್ತಿರು.

'ಸೂರ್ಯ ಆತ್ಮಾ ಜಗತಸ್ತಸ್ಥುಷಶ್ಚ' (ಯಜು) ಜಗತ್ತೆಂದರೆ ಪ್ರಾಣಿಗಳು, ಚೇತನ, ಮತ್ತು ಜಂಗಮ ಅಂದರೆ ಚಲಿಸುವಂತಹುವು; 'ತಸ್ಥುಷಃ' ಅಂದರೆ ಅಪ್ರಾಣಿ. ಸ್ಥಾವರ, ಜಡ, ಅಂದರೆ ಪೃಥಿವೀ ಮೊದಲಾದುವು; ಈ ಎಲ್ಲಕ್ಕೂ ಆತ್ಮನಾಗಿ ಸ್ವಪ್ರಕಾಶ ಸ್ವರೂಪನೂ, ಸರ್ವವನ್ನು ಪ್ರಕಾಶಪಡಿಸುವವನೂ ಆಗಿರುವುದರಿಂದ ಪರಮಾತ್ಮನಿಗೆ 'ಸೂರ್ಯ'ನೆಂದು ಹೆಸರು.

'ಅತ ಸಾತತ್ಯಗಮನೇ' ಎಂಬ ಧಾತುವಿನಿಂದ **'ಆತ್ಮ'** ಶಬ್ದವು ಸಿದ್ಧವಾಗುತ್ತದೆ. **(ಯಃ ಅತತಿ ವ್ಯಾಪ್ನೋತಿ ಸ ಆತ್ಮಾ)** ಸಮಸ್ತ ಜೀವಾದಿ ಜಗತ್ತಿನಲ್ಲಿ ನಿರಂತರ ವ್ಯಾಪಕನಾಗಿರುವುದರಿಂದ ಪರಮಾತ್ಮನಿಗೆ ಆತ್ಮನೆಂದು ಹೆಸರು.

ಪರಮಾತ್ಮ—(ಪರಶ್ಚಾಸೌ ಆತ್ಮಾಚ ಯ ಆತ್ಮಭ್ಯೋ ಜೀವೇಭ್ಯಃ ಸೂಕ್ಷ್ಮೇಭ್ಯಃ ಪರೋಽತಿ ಸೂಕ್ಷ್ಮತಃ ಸ ಪರಮಾತ್ಮಾ) ಸಮಸ್ತ ಜೀವಾದಿಗಳಿಗಿಂತ ಉತ್ಕೃಷ್ಟನೂ, ಜೀವ, ಪ್ರಕೃತಿ ಮತ್ತು ಆಕಾಶಕ್ಕಿಂತ ಸೂಕ್ಷ್ಮನೂ, ಸರ್ವಜೀವರ ಅಂತರ್ಯಾಮಿಯಾದ ಆತ್ಮನೂ ಆಗಿರುವುದರಿಂದ ಈಶ್ವರನಿಗೆ 'ಪರಮಾತ್ಮಾ' ಎಂದು ಹೆಸರು.

ಸಾಮರ್ಥ್ಯಶಾಲಿಗೆ ಈಶ್ವರನೆಂದು ಹೆಸರು. **(ಯ ಈಶ್ವರೇಷು ಸಮರ್ಥೇಷು ಪರಮಃ ಶ್ರೇಷ್ಠಃ ಸಃ ಪರಮೇಶ್ವರಃ)** ಸಮರ್ಥ

ರಲ್ಲಿಯೂ ಅನುಪಮಸಮರ್ಥನಾಗಿರುವುದರಿಂದ ಪರಮಾತ್ಮನಿಗೆ 'ಪರಮೇಶ್ವರ'ನೆಂದು ಹೆಸರು.

ಸವಿತಾ—'**ಷುಞ್ ಅಭಿಷವನೇ, ಷೂಙ್ ಪ್ರಾಣಿಗರ್ಭವಿಮೋಚನೇ**' ಈ ಧಾತುಗಳಿಂದ 'ಸವಿತಾ' ಎಂಬ ಶಬ್ದವು ಸಿದ್ಧವಾಗುತ್ತದೆ. (**ಅಭಿಷವಃ ಪ್ರಾಣಿಗರ್ಭವಿಮೋಚನಂ ಚೋತ್ಪಾದನಂ, ಯಶ್ಚರಾಚರಂ ಜಗತ್ ಸುನೋತಿ ಸೂತೇ ವಾ ಉತ್ಪಾದಯತಿ ಸ ಸವಿತಾ ಪರಮೇಶ್ವರಃ**) ಸರ್ವಜಗತ್ತಿನ ಉತ್ಪಾದಕನಾಗಿರುವುದರಿಂದ ಪರಮಾತ್ಮನಿಗೆ 'ಸವಿತಾ' ಎಂದು ಹೆಸರು.

ದೇವಃ—'**ದಿವುಕ್ರೀಡಾವಿಜಿಗೀಷಾವ್ಯವಹಾರದ್ಯುತಿಸ್ತುತಿಮೋದಮದಸ್ವಪ್ನಕಾಂತಿಗತಿಷು**' ಎಂಬ ಧಾತುವಿನಿಂದ '**ದೇವ**' ಶಬ್ದವು ಸಿದ್ಧವಾಗುತ್ತವೆ. '**ಕ್ರೀಡಾ**' ರುದ್ಧವಾದ ಜಗತ್ತನ್ನು ಆಟ ಮಾಡಿಸುವವನೂ, (**ವಿಜಿಗೀಷಾ**) ಧಾರ್ಮಿಕರಿಗೆ ಜಯವನ್ನುಂಟು ಮಾಡುವ ಇಚ್ಛೆಯುಳ್ಳವನೂ, (**ವ್ಯವಹಾರ**) ಎಲ್ಲ ಪ್ರಯತ್ನಗಳಿಗೆ ಸಾಧನೋಪಸಾಧನಗಳನ್ನು ಕಲ್ಪಿಸುವವನೂ, (**ದ್ಯುತಿ**) ಸ್ವಯಂ ಪ್ರಕಾಶಸ್ವರೂಪನೂ, ಸರ್ವಪ್ರಕಾಶಕನೂ (**ಸ್ತುತಿ**) ಎಲ್ಲರ ಸ್ತೋತ್ರಕ್ಕೂ ಪಾತ್ರನೂ (**ಮೋದ**) ತಾನು ಆನಂದಸ್ವರೂಪನಾಗಿ ಇತರರಿಗೂ ಆನಂದಪ್ರದನೂ, (**ಮದ**) ಮದೋನ್ಮತ್ತರನ್ನು ದಂಡಿಸುವವನೂ (**ಸ್ವಪ್ನ**) ಎಲ್ಲರ ಶಯನಾರ್ಥವಾಗಿ ರಾತ್ರಿಯನ್ನು ಮತ್ತು ಪ್ರಳಯವನ್ನು ಏರ್ಪಡಿಸಿರುವವನೂ (**ಕಾಂತಿ**) ಎಲ್ಲರ ಕಾಮನೆಗೆ ಪಾತ್ರನೂ (**ಗತಿ**) ಜ್ಞಾನಸ್ವರೂಪನೂ ಆಗಿರುವುದರಿಂದ ಪರಮಾತ್ಮನಿಗೆ '**ದೇವ**' ಎಂದು ಹೆಸರು.

ಅಥವಾ (**ಯೋ ದೀವ್ಯತಿ ಕ್ರೀಡತಿ ಸದೇವಃ**) ತನ್ನ ಸ್ವರೂಪದಲ್ಲಿ ತಾನೇ ಆನಂದದಿಂದ ಕ್ರೀಡಿಸುವವನೂ, ಮತ್ತೊಬ್ಬರ ಸಹಾಯವಿಲ್ಲದೆಯೇ ಸರ್ವ ಜಗತ್ತನ್ನೂ ಆಟದಂತೆ ಸಹಜಸ್ವಭಾವದಿಂದಲೇ

ಏರ್ಪಿಸುವವನೂ, ಅಥವಾ ಎಲ್ಲಾ ಕ್ರೀಡೆಗಳ ಆಧಾರಸ್ವರೂಪನೂ, **(ವಿಜಿಗೀಷತೇ ಸ ದೇವಃ)** ಎಲ್ಲವನ್ನೂ ಜಯಿಸಿ ತಾನು ಮಾತ್ರ ಅಜೇಯನಾಗಿರುವವನೂ, **(ವ್ಯವಹಾರಯತಿ ಸ ದೇವಃ)** ನ್ಯಾಯಾನ್ಯಾಯ ವ್ಯವಹಾರಗಳನ್ನು ತಿಳಿದವನು ಮತ್ತು ಜೋಧಿಸುವವನೂ **(ಯಶ್ಚರಾಚರಂ ಜಗದ್ದ್ಯೋತಯತಿ)** ಸರ್ವ ಪ್ರಕಾಶಕನೂ, **(ಯಃ ಸ್ತೂಯತೇ ಸ ದೇವಃ)** ಯಾವ ನಿಂದೆಗೂ ಪಾತ್ರನಾಗದೆ ಎಲ್ಲ ಮಾನವರ ಸ್ತೋತ್ರಗಳಿಗೆ ಪಾತ್ರನೂ, **(ಯೋ ನೋದಯತಿ ಸ ದೇವಃ)** ದುಃಖ ಲೇಶವೂ ಇಲ್ಲದೆ ಯಾವಾಗಲೂ ಆನಂದ ಸ್ವರೂಪನಾಗಿರುತ್ತ ಇತರರಿಗೆ ಆನಂದದಾಯಕನೂ, **(ಯೋ ನಾದ್ಯತಿ ಸ ದೇವಃ)** ತಾನು ಯಾವಾಗಲೂ ಶೋಕರಹಿತನಾಗಿಯೂ, ಹರ್ಷಿತನಾಗಿಯೂ ಇದ್ದು ಇತರರನ್ನೂ ಕೂಡ ಹರ್ಷಿತರನ್ನಾಗಿ ಮಾಡಿ ಸುಖದಿಂದ ಪಾರುಮಾಡುವವನೂ, **(ಯಃ ಸ್ವಾಪಯತಿ ಸ ದೇವಃ)** ಪ್ರಳಯ ಸಮಯದ ಅವ್ಯಕ್ತಾವಸ್ಥೆಯಲ್ಲಿ ಎಲ್ಲಾ ಜೀವರನ್ನು ನಿದ್ರಿಸುವಂತೆ ಮಾಡುವವನೂ. **(ಯಃ ಕಾಮಯತೇ ಕಾಮ್ಯತೇನಾ ಸ ದೇವಃ)** ಎಲ್ಲ ಸತ್ಕಾಮನೆಗಳುಳ್ಳವನೂ ಮತ್ತು ಎಲ್ಲ ಶಿಷ್ಟರಿಂದ ಪ್ರಾಪ್ತಿಗಾಗಿ ಇಚ್ಛಿಸಲ್ಪಡುವವನೂ **(ಯೋ ಗಚ್ಛತಿ ಗಮ್ಯತೇನಾ ಸ ದೇವಃ)** ಸರ್ವತ್ರ ವ್ಯಾಪಕನಾಗಿ ಎಲ್ಲರಿಂದಲೂ ತಿಳಿಯಲು ಯೋಗ್ಯನಾಗಿರುವುದರಿಂದ ಪರಮಾತ್ಮನಿಗೆ 'ದೇವ'ನೆಂದು ಹೆಸರು.

'ಕುವಿ ಆಚ್ಛಾದನೇ' ಎಂಬ ಧಾತುವಿನಿಂದ 'ಕುವೇರ' ಪದವು ಸಿದ್ಧವಾಗುತ್ತದೆ. **(ಯಃ ಸರ್ವಂ ಕುವತಿ ಸ್ವವ್ಯಾಪ್ತ್ಯಾ ಆಚ್ಛಾದಯತಿ ಸಃ ಕುವೇರೋ ಜಗದೀಶ್ವರಃ)** ತನ್ನ ವ್ಯಾಪಕತೆಯ ಮೂಲಕ ಎಲ್ಲವನ್ನೂ ಆಚ್ಛಾದಿಸುವುದರಿಂದ ಪರಮಾತ್ಮನಿಗೆ 'ಕುವೇರ'ನೆಂದು ಹೆಸರು.

'ಪೃಥ ವಿಸ್ತಾರೇ' ಎಂಬ ಧಾತುವಿನಿಂದ 'ಪೃಥಿವೀ'

ಶಬ್ದವು ಸಿದ್ಧವಾಗುತ್ತದೆ. (**ಯಃ ಪೃಥತೇ ಸರ್ವಜಗದ್ವಿಸ್ತೃಣಾತಿ ಸ ಪೃಥಿವೀ**) ಸರ್ವ ಜಗತ್ತನ್ನೂ ವಿಸ್ತಾರಪಡಿಸುವವನಾದ್ದರಿಂದ ಪರಮಾತ್ಮನಿಗೆ 'ಪೃಥಿವೀ' ಎಂದು ಹೆಸರು.

'**ಜಲಘಾತನೇ**' ಎಂಬ ಧಾತುವಿನಿಂದ ಜಲಶಬ್ದವು ಸಿದ್ಧವಾಗುತ್ತದೆ. (**ಜಲತಿ ಘಾತಯತಿ ದುಷ್ಟಾನ್, ಸಂಘಾತಯತಿ—ಅವ್ಯಕ್ತಪರಮಾಣ್ವಾದೀನ್ ತಜ್ಜಲಂ**) ದುಷ್ಟರನ್ನು ದಂಡಿಸುವವನೂ ಅವ್ಯಕ್ತ ಹಾಗೂ ಪರಮಾಣುಗಳ ಅನ್ಯೋನ್ಯ ಸಂಯೋಗ-ವಿಯೋಗಗಳನ್ನು ಏರ್ಪಡಿಸುವವನೂ ಆಗಿರುವುದರಿಂದ ಪರಮಾತ್ಮನಿಗೆ 'ಜಲ'ವೆಂದು ಹೆಸರು.

(**ಕಾಶೃ-ದೀಪ್ತೌ**) ಎಂಬ ಧಾತುವಿನಿಂದ 'ಆಕಾಶ' ಶಬ್ದವು ಸಿದ್ಧವಾಗುತ್ತದೆ. (**ಯಃ ಸರ್ವತಃ ಸರ್ವಂ ಜಗತ್ ಪ್ರಕಾಶಯತಿ ಸ ಆಕಾಶಃ**) ಎಲ್ಲೆಡೆಯಿಂದಲೂ ಜಗತ್ತಿನ ಪ್ರಕಾಶಕನಾಗಿರುವುದರಿಂದ ಪರಮಾತ್ಮನಿಗೆ 'ಆಕಾಶ'ವೆಂದು ಹೆಸರು.

(**ಅದ-ಭಕ್ಷಣೇ**) ಎಂಬ ಧಾತುವಿನಿಂದ 'ಅನ್ನ' ಶಬ್ದವು ಸಿದ್ಧವಾಗುತ್ತದೆ. **ಅದ್ಯತೇಽತ್ತಿ ಚ ಭೂತಾನಿ ತಸ್ಮಾದನ್ನಂ ತದುಚ್ಯತೇ ॥ ಅಹಮನ್ನಮಹಮನ್ನಮಹಮನ್ನಮ್ । ಅಹಮನ್ನಾದೋಽಹಮನ್ನಾದಃ ॥** ತೈತ್ತಿ. ಉಪನಿಷತ್ (ಅನು. ೨-೧೦; **ಅತ್ತಾ ಚರಾಚರಗ್ರಹಣಾತ್**॥ವ್ಯಾಸಕೃತಶಾರೀರಕಸೂತ್ರ—ವೇದಾಂತದರ್ಶನ ಅ. ೧, ಪಾದ ೨, ಸೂ. ೯) ಎಲ್ಲವನ್ನೂ ತನ್ನೊಳಗೆ ಅಡಗಿಸಿಕೊಂಡಿರುವವನೂ ಅಥವಾ ಎಲ್ಲರಿಂದಲೂ ಗ್ರಹಿಸಲ್ಪಡತಕ್ಕವನೂ, ಎಲ್ಲ ಜಗತ್ತನ್ನು ಗ್ರಹಣಮಾಡುವವನೂ ಆಗಿರುವುದರಿಂದ ಪರಮಾತ್ಮನಿಗೆ ಅನ್ನ, ಅನ್ನಾದ, ಅತ್ತಾ ಎಂದು ಹೆಸರುಗಳು ಮತ್ತು ಮೂರು ಸಾರಿ ಹೇಳಿರುವುದು ಆದರಾರ್ಥಕ್ಕಾಗಿ. **ಅತ್ತಿಯ ಹಣ್ಣಿನಲ್ಲಿ ಅನೇಕ ಕ್ರಿಮಿಗಳು ಹುಟ್ಟಿ, ಅಲ್ಲಿಯೇ ಬೆಳೆದು, ಅಲ್ಲಿಯೇ ಸಾಯುವಂತೆ ಪರಮಾತ್ಮನಲ್ಲಿ ಎಲ್ಲ ಜಗತ್ತಿನ ಸ್ಥಿತಿಯೂ ಇರುತ್ತದೆ.**

(**ವಸ ನಿವಾಸೇ**) ಎಂಬ ಧಾತುವಿನಿಂದ ವಸು ಶಬ್ದವು ಸಿದ್ಧವಾಗಿದೆ. (**ವಸಂತಿ ಭೂತಾನಿ ಯಸ್ಮಿನ್ನಥವಾ ಯಃ ಸರ್ವೇಷು ಭೂತೇಷು ವಸತಿ ಸ ವಸುರೀಶ್ವರಃ**) ಆಕಾಶಾದಿ ಸಮಸ್ತಭೂತಗಳೂ ಪರಮಾತ್ಮನಲ್ಲಿ ವಾಸಿಸುತ್ತಿರುವುದರಿಂದ ಮತ್ತು ಪರಮಾತ್ಮನು ಸಮಸ್ತ ಭೂತಗಳಲ್ಲಿಯೂ ವಾಸಿಸುತ್ತಿರುವದರಿಂದ ಆತನಿಗೆ 'ವಸು' ಎಂದು ಹೆಸರು.

ರುದ್ರ- (**ರುದಿರ್ ಅಶ್ರುವಿಸರ್ಜನೇ**)ಎಂಬ ಧಾತುವಿನಿಂದ 'ಣಿಚ್' ಪ್ರತ್ಯಯ ಸೇರಿ 'ರುದ್ರ' ಶಬ್ದವು ಸಿದ್ಧವಾಗುತ್ತದೆ. (**ಯೋ ರೋದಯತಿ ಅನ್ಯಾಯಕಾರಿಣೋ ಜನಾನ್ ಸ ರುದ್ರಃ**) ಮುಷ್ಟಕರ್ಮಿಗಳನ್ನು ಅಳಿಸುವುದರಿಂದ ಪರಮಾತ್ಮನಿಗೆ 'ರುದ್ರ'ನೆಂದು ಹೆಸರು.

ಯನ್ಮನಸಾ ಧ್ಯಾಯತಿ ತದ್ವಾಚಾ ವದತಿ ಯದ್ವಾಚಾ ವದತಿ ತತ್ಕರ್ಮಣಾ ಕರೋತಿ ಯತ್ಕರ್ಮಣಾ ಕರೋತಿ ತದಭಿ ಸಂಪದ್ಯತೇ ॥--ಇದು ಯಜುರ್ವೇದ ಬ್ರಾಹ್ಮಣದ ವಚನವು.

ಅರ್ಥ:— ಜೀವನು ಯಾವುದನ್ನು ಮನಸ್ಸಿನಿಂದ ಧ್ಯಾನಿಸುವನೋ ಅದನ್ನು ವಾಯಿಯಿಂದ ಹೇಳುವನು. ಯಾವುದನ್ನು ವಾಯಿಯಿಂದ ಹೇಳುವನೋ ಅದನ್ನು ಕಾರ್ಯದಲ್ಲಿ ತರುವನು. ಯಾವುದನ್ನು ಕಾರ್ಯದಲ್ಲಿ ಮಾಡುವನೋ ಅವನ್ನೇ ಪಡೆಯುವನು. ಇದರಿಂದ ಜೀವನು ಎಂತಹ ಕರ್ಮ ಮಾಡುತ್ತಾನೋ ಅಂತಹ ಫಲವನ್ನೇ ಹೊಂದುವನೆಂದು ಸಿದ್ಧವಾಗುತ್ತದೆ. ದುಷ್ಟ ಕರ್ಮಗಳನ್ನು ಮಾಡಿದ ಜೀವರು ಪರಮಾತ್ಮನ ನ್ಯಾಯರೂಪವಾದ ವ್ಯವಸ್ಥೆಯಿಂದ ದುಃಖವೆಂಬ ಫಲವನ್ನು ಅನುಭವಿಸುವಾಗ ಗೋಳಿಡುವರು. ಇದೇರೀತಿ ಪರಮೇಶ್ವರನ ಪಾಪಿಗಳನ್ನು ಅಳಿಸುತ್ತಾನೆ. ಆದ್ದರಿಂದ ಆತನಿಗೆ 'ರುದ್ರ' ಎಂದು ಹೆಸರು.

ಆಪೋ ನಾರಾ ಇತಿ ಪ್ರೋಕ್ತಾ ಆಪೋ ವೈ ನರಸೂನವಃ।
ತಾ ಯದಸ್ಯಾಯನಂ ಪೂರ್ವಂ ತೇನ ನಾರಾಯಣಃ ಸ್ಮೃತಃ॥
(ಮನು-ಅ ೧. ಶ್ಲೋ-೧೦)

ಜಲ ಮತ್ತು ಜೀವರಿಗೆ 'ನಾರಾ' ಎಂದು ಹೆಸರು. ಇವು ಪರಮಾತ್ಮನಿಗೆ ನಿವಾಸಸ್ಥಾನವಾಗಿರುವುದರಿಂದ ಅಂದರೆ-ಪರಮಾತ್ಮನು ಎಲ್ಲಾ ಜೀವರಲ್ಲಿಯೂ ವ್ಯಾಪಿಸಿರುವುದರಿಂದ ಆತನಿಗೆ 'ನಾರಾಯಣ' ಎಂದು ಹೆಸರು.

'**ಚದಿ ಆಹ್ಲಾದೇ**' ಎಂಬ ಧಾತುವಿನಿಂದ ಚಂದ್ರ ಶಬ್ದವು ಸಿದ್ಧವಾಗುತ್ತದೆ. (**ಯಶ್ಚಂದತಿ ಚಂದಯತಿ ವಾ ಸ ಚಂದ್ರಃ**) ತಾನು ಆನಂದಸ್ವರೂಪನಾಗಿ ಎಲ್ಲರಿಗೂ ಆನಂದವನ್ನುಂಟುಮಾಡುವುದರಿಂದ ಪರಮಾತ್ಮನಿಗೆ 'ಚಂದ್ರ' ಎಂದು ಹೆಸರು.

ಮುಗಿ ಎಂಬ ಗತ್ಯರ್ಥಕಧಾತುವಿನಿಂದ '**ಮಂಗೇಲರಚ್**' ಎಂಬ ಸೂತ್ರದಿಂದ 'ಮಂಗಲ' ಶಬ್ದವು ಸಿದ್ಧವಾಗುತ್ತದೆ. (**ಯೋ ಮುಜ್ಗತಿ ಮುಜ್ಗಯತಿ ವಾ ಸ ಮುಂಗಲಃ**) ತಾನು ಕಲ್ಯಾಣಸ್ವರೂಪನಾಗಿ ಎಲ್ಲ ಜೀವರಿಗೂ ಕಲ್ಯಾಣದ ಕಾರಣವಾಗಿರುವುದರಿಂದ ಪರಮೇಶ್ವರನಿಗೆ 'ಮಂಗಲ' ಎಂದು ನಾಮವು.

'**ಬುಧ ಅವಗಮನೇ**' ಎಂಬ ಧಾತುವಿನಿಂದ 'ಬುಧ' ಶಬ್ದವು ಸಿದ್ಧವಾಗುತ್ತದೆ. (**ಯೋ ಬುಧ್ಯತೇ ಬೋಧಯತಿ ವಾ ಸ ಬುಧಃ**) ತಾನು ಬೋಧಸ್ವರೂಪನಾಗಿ ಎಲ್ಲಾ ಜೀವರಿಗೂ ಬೋಧ ಕಾರಣನಾಗಿರುವುದರಿಂದ ಪರಮಾತ್ಮನಿಗೆ 'ಬುಧ' ಎಂದು ಹೆಸರು.

ಬೃಹಸ್ಪತಿ-ಈ ಶಬ್ದಾರ್ಥವನ್ನು ಹಿಂದೆ ಬರೆದಿದ್ದೇವೆ.

'**ಈಶುಚಿರ್ ಪೂತೀಭಾವೇ**' ಎಂಬ ಧಾತುವಿನಿಂದ 'ಶುಕ್ರ' ಶಬ್ದವು ಸಿದ್ಧವಾಗುತ್ತದೆ. (**ಯಃ ಶುಚ್ಯತಿ ಶೋಚಯತಿ ವಾ ಸ ಶುಕ್ರಃ**) ಪರಮಾತ್ಮನು ಪರಮ ಪವಿತ್ರನಾಗಿದ್ದಾನೆ. ಆತನ ಸಂಗದಿಂದ ಜೀವನೂ ಪವಿತ್ರನಾಗುತ್ತಾನೆ. ಆದುದರಿಂದ ಪರಮಾತ್ಮನಿಗೆ 'ಶುಕ್ರ'ನೆಂದು ಹೆಸರು.

'**ಚರ ಗತಿಭಕ್ಷಣಯೋಃ**' ಎಂಬ ಧಾತುವಿಗೆ 'ಶನೈಸ್' ಎಂಬ ಅವ್ಯಯವು ಉಪಪದವಾಗಿರುವುದರಿಂದ 'ಶನೈಶ್ಚರ' ಎಂಬ

ಶಬ್ದವು ಸಿದ್ಧವಾಗುತ್ತದೆ. **(ಯಃ ಶನೈಶ್ಚರತಿ ಸಃ ಶನೈಶ್ಚರಃ)** ಎಲ್ಲದರಲ್ಲಿಯೂ ಸ್ವಭಾವಸಿದ್ಧವಾದ ಧೈರ್ಯವುಳ್ಳವನಾಗಿರುವುದರಿಂದ ಪರಮಾತ್ಮನಿಗೆ 'ಶನೈಶ್ಚರ' ನೆಂದು ಹೆಸರು.

'ರಹತ್ಯಾಗೇ' ಎಂಬ ಧಾತುವಿನಿಂದ 'ರಾಹು' ಶಬ್ದವು ನಿಷ್ಪನ್ನವಾಗುತ್ತದೆ. **(ಯೋ ರಹತಿ ಪರಿತ್ಯಜತಿ ದುಷ್ಟಾನ್ ರಂಹಯತಿ ತ್ಯಾಜಯತಿ ವಾ ಸ ರಾಹುರೀಶ್ವರಃ)** ಏಕಾಂತ ಸ್ವರೂಪ ಅಂದರೆ ತನ್ನ ಸ್ವರೂಪನಲ್ಲಿ ಇತರ ಪದಾರ್ಥಗಳ ಸಂಯೋಗ ವಿಲ್ಲದವನೂ, ದುಷ್ಟರನ್ನು ಪರಿತ್ಯಜಿಸುವವನೂ ಮತ್ತು ಜೀರೆಯವ ರಿಂದ ಬಿಡಿಸುವವನೂ ಆಗಿರುವುದಿಂದ ಪರಮಾತ್ಮನಿಗೆ 'ರಾಹು' ವೆಂದು ಹೆಸರು.

'ಕೆತ ನಿವಾಸೇ ರೋಗಾಪನಯನೇ ಚ' ಎಂಬ ಧಾತುವಿ ನಿಂದ 'ಕೇತು' ಶಬ್ದವು ಸಿದ್ಧವಾಗುತ್ತದೆ. **(ಯಃ ಕೇತಯತಿ ಚಿಕಿತ್ಸತಿ ವಾ ಸಕೇತುರೀಶ್ವರಃ)** ಸರ್ವಜಗತ್ತಿನ ನಿವಾಸಸ್ಥಾನನೂ, ಸರ್ವರೋಗರಹಿತನೂ, ಮೋಕ್ಷಕಾಮರನ್ನು ಮುಕ್ತಿಸಮಯದಲ್ಲಿ ಸರ್ವ ರೋಗಗಳಿಂದ ಬಿಡಿಸುವವನೂ ಆಗಿರುವುದರಿಂದ ಪರಮಾತ್ಮನಿಗೆ 'ಕೇತು' ವೆಂದು ಹೆಸರು.

'ಯಜ ದೇವಪೂಜಾಸಂಗತಿ ಕರಣದಾನೇಷು' ಎಂಬ ಧಾತುವಿನಿಂದ 'ಯಜ್ಞ' ಶಬ್ದವು ಸಿದ್ಧವಾಗುತ್ತದೆ. **'ಯಜ್ಞೋ ವೈ ವಿಷ್ಣುಃ'** ಎಂದು ಬ್ರಾಹ್ಮಣ ಗ್ರಂಥದ ವಚನ. **(ಯೋ ಯಜತಿ ವಿದ್ವದ್ಭಿರಿಜ್ಯತೇ ವಾ ಸ ಯಜ್ಞಃ)** ಜಗತ್ತಿನ ಸರ್ವ ಪದಾರ್ಥಗಳನ್ನು ಸಂಯೋಗಪಡಿಸುವವನೂ, ಸಮಸ್ತ ವಿದ್ವಾಂಸರಿಗೂ-ಅಂದರೆ ಬ್ರಹ್ಮನೇ ಮೊದಲಾದ ಸಮಸ್ತ ಋಷಿಮುನಿಗಳಿಗೂ ಪೂಜ್ಯನಾಗಿದ್ದವನೂ, ಈಗ ಪೂಜ್ಯನಾಗಿರುವವನೂ, ಮುಂದೆ ಪೂಜ್ಯನಾಗಬಲ್ಲವನೂ, ಆಗಿರುವುದ ರಿಂದ ಪರಮಾತ್ಮನಿಗೆ 'ಯಜ್ಞ' ನೆಂದು ಹೆಸರು. ಏಕೆಂದರೆ ಇವನು ಸರ್ವತ್ರ ವ್ಯಾಪಕನು.

'ಹು ದಾನಾऽದನಯೋಃ ಆದಾನೇ ಚೇತ್ಯೇಕೇ' ಎಂಬ ಧಾತುವಿನಿಂದ 'ಹೋತಾ' ಶಬ್ದವು ನಿಷ್ಪನ್ನವಾಗುತ್ತದೆ. **(ಯೋ ಜುಹೋತಿ ಸ ಹೋತಾ)** ಜೀವರಿಗೆ ಕೊಡುವುದಕ್ಕೆ ಯೋಗ್ಯವಾದ ಪದಾರ್ಥಗಳನ್ನು ಕೊಡುವವನೂ, ತೆಗೆದುಕೊಳ್ಳುವುದಕ್ಕೆ ಯೋಗ್ಯವಾದವುಗಳನ್ನು ತೆಗೆದುಕೊಳ್ಳುವನೂ ಆಗಿರುವುದರಿಂದ ಪರಮಾತ್ಮನಿಗೆ 'ಹೋತಾ' ಎಂದು ಹೆಸರು.

'ಬಂಧ ಬಂಧನೇ' ಎಂಬ ಧಾತುವಿನಿಂದ **'ಬಂಧು'** ಶಬ್ದವು ಸಿದ್ಧವಾಗುತ್ತದೆ. **(ಯಃ ಸ್ವಸ್ಮಿನ್ ಚರಾಚರಂ ಜಗದ್ಬಧ್ನಾತಿ ಬಂಧುವದ್ಧರ್ಮಾತ್ಮನಾಂ ಸುಖಾಯ ಸಹಾಯೋ ವಾ ವರ್ತತೇ ಸ ಬಂಧುಃ)** ಪರಮಾತ್ಮನು ಸಮಸ್ತ ಲೋಕ ಲೋಕಾಂತರಗಳನ್ನು ನಿಯಮದಿಂದ ಬಂಧಿಸಿ ತನ್ನಲ್ಲಿಯೇ ಇಟ್ಟುಕೊಂಡಿರುವನನೂ, ಸಹೋದರನಂತೆ ಸಹಾಯಕನೂ, ಇದರಿಂದ ಸಮಸ್ತ ಲೋಕಗಳೂ ತಮ್ಮ ತಮ್ಮ ಪರಿಧಿ ಅಥವಾ ನಿಯಮವನ್ನು ಉಲ್ಲಂಘಿಸಲಾರದಾಗಿರುವುದರಿಂದಲೂ, ಅಣ್ಣನು ತಮ್ಮನಿಗೆ ಸಹಾಯಕನಾಗಿರುವಂತೆ ಪರಮಾತ್ಮನೂ ಸಪ್ತ ಪೃಥಿವೀ–ಮೊದಲಾದ ಲೋಕಗಳ ಧಾರಣ ಮತ್ತು ರಕ್ಷಣಮಾಡಿ, ಸುಖವಿಯುವುದರಿಂದಲೂ ಅವನಿಗೆ ಬಂಧುವೆಂದು ಹೆಸರು.

'ಪಾ ರಕ್ಷಣೇ' ಎಂಬ ಧಾತುವಿನಿಂದ 'ಪಿತಾ' ಶಬ್ದವು ಸಿದ್ಧವಾಗುತ್ತದೆ. **(ಯಃ ಪಾತಿ ಸರ್ವಾನ್ ಸ ಪಿತಾ)** ಪರಮೇಶ್ವರನು ಎಲ್ಲರಿಗೂ ರಕ್ಷಕನಾಗಿದ್ದಾನೆ. ತಂದೆಯು ತನ್ನ ಮಕ್ಕಳಮೇಲೆ ಯಾವಾಗಲೂ ಕರುಣೆಯಿಟ್ಟು ಅವರ ಉನ್ನತಿಯನ್ನು ಕೋರುವಂತೆ ಪರಮಾತ್ಮನು ಸಮಸ್ತ ಜೀವರ ಉನ್ನತಿಯನ್ನು ಕೋರುತ್ತಾನೆ; ಆದುದರಿಂದ, ಆತನಿಗೆ 'ಪಿತಾ' ಎಂದು ಹೆಸರು.

(ಯಃ ಪಿತೄಣಾಂ ಪಿತಾ ಸ ಪಿತಾಮಹಃ) ಪರಮಾತ್ಮನು ತಂದೆಗಳ ತಂದೆಯಾಗಿರುವುದರಿಂದ ಆತನಿಗೆ **'ಪಿತಾಮಹ'** ಎಂದು ಹೆಸರು.

(ಯಃ ಪಿತಾಮಹಾನಾಂ ಪಿತಾ ಸ ಪ್ರಪಿತಾಮಃ) ತಂದೆಗಳ ತಂದೆಗಳಿಗೂ ತಂದೆಯಾಗಿರುವುದರಿಂದ ಈಶ್ವರನಿಗೆ 'ಪ್ರಪಿತಾಮಹ'ನೆಂದು ಹೆಸರು.

(ಮಿನೋತೇ ಮಾನಯತಿ ಸರ್ವಾನ್ ಜೀವಾನ್ ಸ ಮಾತಾ) ಪ್ರೇಮಮಯಿಯಾದ ತಾಯಿಯು ತನ್ನ ಸಂತಾನದ ಸುಖವನ್ನೂ, ಉನ್ನತಿಯನ್ನೂ ಕೋರುವಂತೆ ಪರಮಾತ್ಮನು ಯಾವಾಗಲೂ ಜೀವರ ಏಳಿಗೆಯನ್ನು ಕೋರುವವನಾದ್ದರಿಂದ ಆತನಿಗೆ 'ಮಾತಾ' ಎಂದು ಹೆಸರು.

'ಆಙ್' ಉಪಸರ್ಗಪೂರ್ವಕವಾದ 'ಚರ ಗತಿ ಭಕ್ಷಣಯೋಃ' ಎಂಬ ಧಾತುವಿನಿಂದ 'ಆಚಾರ್ಯ' ಶಬ್ದವು ಸಿದ್ಧವಾಗುತ್ತದೆ. **(ಯಃ ಸತ್ಯಮಾಚಾರಂ ಗ್ರಾಹಯತಿ ಸರ್ವಾನ್ ವಿದ್ಯಾ ಬೋಧಯತಿ ಸ ಆಚಾರ್ಯ ಈಶ್ವರಃ)** ಸತ್ಯವಾದ ಆಚಾರವನ್ನು ಪ್ರಚಾರ ಪಡಿಸುವವನೂ, ಸರ್ವ ವಿದ್ಯೆಗಳ ಪ್ರಾಪ್ತಿಗೆ ಕಾರಣನಾಗಿ, ಸರ್ವವಿದ್ಯೆಗಳನ್ನು ಅನುಗ್ರಹಿಸುವವನೂ ಆಗಿರುವುದರಿಂದ ಪರಮಾತ್ಮನಿಗೆ 'ಆಚಾರ್ಯ'ನೆಂದು ಹೆಸರು.

'**ಗೃ ಶಬ್ದೇ**' ಎಂಬ ಧಾತುವಿನಿಂದ ಗುರು ಶಬ್ದವು ಸಿದ್ಧವಾಗುತ್ತದೆ. **(ಯೋ ಧರ್ಮ್ಯಾನ್ ಗೃಣಾತಿ ಉಪದಿಶತಿ ಸ ಗುರುಃ)**.

ಸ ಪೂರ್ವೇಷಾಮಪಿ ಗುರುಃ ಕಾಲೇನಾನವಚ್ಛೇದಾತ್ ॥

(ಯೋಗಸೂತ್ರ ಸಮಾಧಿಪಾದ ಸೂತ್ರ ೨೬)

ಇದು ಯೋಗಸೂತ್ರವು, ಸತ್ಯಧರ್ಮವನ್ನು ಬೋಧಿಸುವವನೂ ಹಾಗೂ ಸಕಲ ವಿದ್ಯಾಯುಕ್ತವಾದ ವೇದಗಳನ್ನು ಉಪದೇಶಿಸುವವನೂ, ಸೃಷ್ಟಿಯ ಆದಿಯಲ್ಲಿ ಅಗ್ನಿ, ವಾಯು, ಆದಿತ್ಯ, ಅಂಗಿರಾ, ಬ್ರಹ್ಮನೇ ಮೊದಲಾದ ಗುರುಗಳಿಗೂ ಗುರುವಾದವನೂ, ಎಂದೂ ನಾಶಹೊಂದದವನೂ ಆಗಿರುವುದರಿಂದ ಪರಮೇಶ್ವರನಿಗೆ 'ಗುರು'ಎಂದು ಹೆಸರು.

'**ಅಜ ಗತಿಕ್ಷೇಪಣಯೋಃ ; ಜನೀ ಪ್ರಾದುರ್ಭಾವೇ**' ಎಂಬ ಧಾತುಗಳಿಂದ 'ಅಜ' ಶಬ್ದವು ಸಿದ್ಧವಾಗುತ್ತದೆ. (**ಯೋಽಜತಿ ಸೃಷ್ಟಿಂ ಪ್ರತಿ ಪ್ರಕೃತ್ಯಾದೀನ್ ಪದಾರ್ಥಾನ್ ಪ್ರಕ್ಷಿಪತಿ ಜಾನಾತಿ ವಾ ಕದಾಚಿನ್ನ ಜಾಯತೇ ಸೋಽಜಃ**) ಸಮಸ್ತ ಪ್ರಕೃತಿಯ ಅವಯವಗಳಾದ ಆಕಾಶಾದಿ ಭೂತ ಪರಮಾಣುಗಳನ್ನು ಯಥಾಯೋಗ್ಯವಾಗಿ ಸೇರಿಸುವವನೂ, ಶರೀರಸಂಬಂಧದಿಂದ ಜೀವರನ್ನು ಜನ್ಮಿಸುವಂತೆಮಾಡಿ ತಾನು ಯಾವಾಗಲೂ ಜನ್ಮರಹಿತನೂ ಆಗಿರುವುದರಿಂದ ಪರಮಾತ್ಮನಿಗೆ 'ಅಜ'ನೆಂದು ಹೆಸರು.

'**ಬೃಹ ಬೃಹಿವೃದ್ಭ್ಯೋ**'ಎಂಬ ಧಾತುಗಳಿಂದ '**ಬ್ರಹ್ಮ**' ಶಬ್ದವು ಸಿದ್ಧವಾಗುತ್ತದೆ. (**ಯೋಽಖಿಲಂ ಜಗನ್ನಿರ್ಮಾಣೇನ ಬೃಹತಿ ವರ್ಧಯತಿ ಸ ಬ್ರಹ್ಮ**) ಸಮಗ್ರ ಜಗತ್ತನ್ನು ಸೃಷ್ಟಿಸಿ ಅಭಿವೃದ್ಧಿಗೊಳಿಸುತ್ತಿರುವುದರಿಂದ ಪರಮೇಶ್ವರನಿಗೆ 'ಬ್ರಹ್ಮ' ಎಂದು ಹೆಸರು.

ಸತ್ಯಂ ಜ್ಞಾನಮನಂತಂ ಬ್ರಹ್ಮ' ತೈತ್ತಿರೀಯೋಪನಿಷದ್ವಚನವಿದು. (**ಸಂತೀತಿ ಸಂತಸ್ತೇಷು ಸತ್ಸು ಸಾಧು ತತ್ ಸತ್ಯಂ**) ಯಾವ ಪದಾರ್ಥಗಳು ಇರುವವೋ ಅವಕ್ಕೆ ಸತ್ ಎನ್ನುತ್ತಾರೆ. ಅವುಗಳಲ್ಲಿಯೂ ಉತ್ತಮವಾಗಿರುವುದರಿಂದ ಪರಮಾತ್ಮನಿಗೆ ಸತ್ಯವೆಂದು ಹೆಸರು.

ಜ್ಞಾನಂ– (**ಯಜ್ಜ್ಞಾನಾತಿ ಚರಾಚರಂ ಜಗತ್ತಜ್ಜ್ಞಾನಂ**) ಎಲ್ಲಾ ಜಗತ್ತನ್ನು ತಿಳಿಯುವವನಾದ್ದರಿಂದ ಪರಮಾತ್ಮನಿಗೆ '**ಜ್ಞಾನ**' ಎಂದು ಹೆಸರು.

ಅನಂತಮ್ :-(**ನ ವಿದ್ಯತೇಽಂತೋಽವಧಿರ್ಮರ್ಯಾದಾ ಯಸ್ಯ ತದನಂತಂ**) ಪರಮಾತ್ಮನಿಗೆ ಅಂತ, ಅವಧಿ, ಮರ್ಯಾದೆ ಎಂದರೆ, ಇಷ್ಟು ಉದ್ದ, ಇಷ್ಟು ಅಗಲ, ಇಷ್ಟು ಚಿಕ್ಕದು, ಇಷ್ಟು ದೊಡ್ಡದು, ಮೊದಲಾದ ಪರಿಮಾಣವಿಲ್ಲದಿರುವುದರಿಂದ ಅವನಿಗೆ 'ಅನಂತ'ನೆಂದು ಹೆಸರು.

ಬ್ರಹ್ಮ:—(ಸರ್ವೇಭ್ಯೋ ಬೃಹತ್ತ್ವಾದ್ಬ್ರಹ್ಮ) ಪರಮಾತ್ಮನು ಎಲ್ಲರಿಗಿಂತಲೂ, ಎಲ್ಲಕ್ಕಿಂತಲೂ ದೊಡ್ಡವನಾಗಿರುವುದರಿಂದ, ಅವನಿಗೆ 'ಬ್ರಹ್ಮ' ನೆಂದು ಹೆಸರು.

'ಆಙ್' ಉಪಸರ್ಗಪೂರ್ವಕವಾದ 'ಡುದಾಞ್ ದಾನೇ' ಎಂಬ ಧಾತುವಿನಿಂದ 'ಆದಿ' ಶಬ್ದವೂ ಮತ್ತು 'ನಞ್' ಪೂರ್ವಕವಾಗಿ 'ಅನಾದಿ' ಶಬ್ದವೂ ಸಿದ್ಧವಾಗುತ್ತವೆ. (**ಯಸ್ಮಾತ್ ಪೂರ್ವಂ ನಾಸ್ತಿ ಪರಂಚಾಸ್ತಿ ಸ ಆದಿರಿತ್ಯುಚ್ಯತೇ**) [ಮಹಾಭಾಷ್ಯ ೧-೧-೨೧] (**ನವಿದ್ಯತೇ ಆದಿಃ ಕಾರಣಂ ಯಸ್ಯ ಸೋಽನಾದಿರೀಶ್ವರಃ**) ಯಾವುದರ ಮೊದಲು ಏನೂ ಇಲ್ಲವೊ, ಮತ್ತು ನಂತರ ಉಂಟೋ ಅದಕ್ಕೆ ಆದಿ ಎನ್ನುತ್ತಾರೆ. ತನಗೆ ಆದಿ ಕಾರಣವು ಯಾವುದೂ ಇಲ್ಲದಿರುವುದರಿಂದ ಪರಮಾತ್ಮನಿಗೆ ಅನಾದಿ ಎಂದು ಹೆಸರು.

'ಟುನದಿ ಸಮೃದ್ಧೌ' ಎಂಬ ಧಾತುವಿನಿಗೆ 'ಆಙ್' ಉಪಸರ್ಗ ಪೂರ್ವಕವಾಗಿ 'ಆನಂದ' ಶಬ್ದವು ಸಿದ್ಧವಾಗುತ್ತದೆ. (**ಆನಂದಂತಿ ಸರ್ವೇ ಮುಕ್ತಾ ಯಸ್ಮಿನ್ ಯದ್ವಾ ಯಃ ಸರ್ವಾನ್ ಜೀವಾನಾನಂದಯತಿ ಸ ಆನಂದಃ**) ಸ್ವಯಂ ಆನಂದಸ್ವರೂಪನಾಗಿರುವುದರಿಂದಲೂ ಮುಕ್ತರಾದ ಜೀವರು ಅತನಲ್ಲಿ ಆನಂದಿಸುವುದರಿಂದಲೂ ಮತ್ತು ಧರ್ಮಾತ್ಮರನ್ನು ಆನಂದಯುಕ್ತರನ್ನಾಗಿ ಮಾಡುವುದರಿಂದಲೂ ಪರಮಾತ್ಮನಿಗೆ 'ಆನಂದ' ಎಂದು ಹೆಸರು.

'ಅಸ ಭುವಿ' ಎಂಬ ಧಾತುವಿನಿಂದ **'ಸತ್'** ಶಬ್ದವು ಸಿದ್ಧವಾಗುತ್ತದೆ. (**ಯದಸ್ತಿ ತ್ರಿಷು ಕಾಲೇಷು ನ ಬಾಧ್ಯತೇ ತತ್ಸದ್ಬ್ರಹ್ಮ**) ಯಾವಾಗಲೂ ಇರುವವನು ಅಂದರೆ ಭೂತ ಭವಿಷ್ಯತ್ ವರ್ತಮಾನ ಕಾಲಗಳಿಂದ ಅಬಾಧಿತನಾಗಿರುವುದರಿಂದ ಪರಮಾತ್ಮನಿಗೆ **'ಸತ್'** ಎಂದು ಹೆಸರು.

'ಚಿತೀ ಸಂಜ್ಞಾನೇ' ಎಂಬ ಧಾತುವಿನಿಂದ **'ಚಿತ್'** ಶಬ್ದವು ಸಿದ್ಧವಾಗುತ್ತದೆ. (**ಯಃ ಚೇತತಿ ಚೇತಯತಿ ಸಂಜ್ಞಾಪಯತಿ**

ಸರ್ವಾನ್ ಸಜ್ಜನಾನ್ ಯೋಗಿನಸ್ತಚ್ಚಿತ್ ಪರಂ ಬ್ರಹ್ಮ) ತಾನು ಚೈತನ್ಯಸ್ವರೂಪನಾಗಿ ಎಲ್ಲಾ ಜೀವಿಗಳಿಗೆ ಚೈತನ್ಯಪ್ರದನೂ, ಸತ್ಯಾಸತ್ಯಗಳನ್ನು ತಿಳಿಯಪಡಿಸುವನೂ ಆಗಿರುವುದರಿಂದ ಪರಮಾತ್ಮನಿಗೆ 'ಚಿತ್' ಎಂದು ಹೆಸರು. ಈ ಮೂರು ಶಬ್ದಗಳ ವಿಶೇಷಣದಿಂದ ಪರಮಾತ್ಮನನ್ನು 'ಸಚ್ಚಿದಾನಂದಸ್ವರೂಪ' ನೆಂದು ಹೇಳುತ್ತಾರೆ.

(**ಯೋ ನಿತ್ಯಧ್ರುವೋಽಚಲೋಽವಿನಾಶೀ ಸ ನಿತ್ಯಃ**) ನಿಶ್ಚಲನೂ, ನಾಶರಹಿತನೂ ಆಗಿರುವುದರಿಂದ ಪರಮಾತ್ಮನಿಗೆ 'ನಿತ್ಯ' ನೆಂದು ಹೆಸರು.

'**ಶುಂಧ ಶುದ್ಧೌ**' ಎಂಬ ಧಾತುವಿನಿಂದ 'ಶುದ್ಧ' ಶಬ್ದವು ಸಿದ್ಧವಾಗುತ್ತದೆ. (**ಯಃ ಶುಂಧತಿ ಸರ್ವಾನ್ ಶೋಧಯತಿ ವಾ ಸ ಶುದ್ಧ ಈಶ್ವರಃ**) ಸ್ವಯಂ ಶುದ್ಧನಾಗಿ ಎಲ್ಲ ಅಶುದ್ಧಿಗಳಿಂದ ದೂರನಾಗಿ ಎಲ್ಲರನ್ನೂ ಶುದ್ಧಗೊಳಿಸುವವನಾದ್ದರಿಂದ ಪರಮಾತ್ಮನಿಗೆ 'ಶುದ್ಧ' ನೆಂದು ಹೆಸರು.

'**ಬುಧ ಅವಗಮನೇ**' ಎಂಬ ಧಾತುವಿನಿಂದ 'ಕ್ತ' ಪ್ರತ್ಯಯವು ಸೇರಿ 'ಬುದ್ಧ' ಎಂಬ ಶಬ್ದವು ಸಿದ್ಧವಾಗುತ್ತದೆ. (**ಯೋ ಬುದ್ಧವಾನ್ ಸದೈವ ಜ್ಞಾತಾಽಸ್ತಿ ಸ ಬುದ್ಧೋ ಜಗದೀಶ್ವರಃ**) ಯಾವಾಗಲೂ ಎಲ್ಲವನ್ನೂ ತಿಳಿಯುವವನಾದ್ದರಿಂದ ಪರಮಾತ್ಮನಿಗೆ 'ಬುದ್ಧ' ನೆಂದು ಹೆಸರು.

'**ಮುಚ್ಲೃ ಮೋಚನೇ**' ಎಂಬ ಧಾತುವಿನಿಂದ 'ಮುಕ್ತ' ಶಬ್ದವು ಸಿದ್ಧವಾಗುತ್ತದೆ. (**ಯೋ ಮುಂಚತಿ ಮೋಚಯತಿ ವಾ ಮುಮುಕ್ಷೂನ್ ಸ ಮುಕ್ತೋ ಜಗದೀಶ್ವರಃ**) ಯಾವಾಗಲೂ ಅಶುದ್ಧರಹಿತನೂ, ಮೋಕ್ಷಾಭಿಲಾಷಿಗಳ ಕ್ಲೇಶಗಳನ್ನು ದೂರಮಾಡುವವನೂ ಆಗಿರುವುದರಿಂದ ಪರಮಾತ್ಮನಿಗೆ 'ಮುಕ್ತ"ನೆಂದು ಹೆಸರು.

'**ಅತ ಏವ ನಿತ್ಯಶುದ್ಧಬುದ್ಧಮುಕ್ತಸ್ವಭಾವೋ ಜಗದೀಶ್ವರಃ**' ಆದ್ದರಿಂದಲೇ ಪರಮಾತ್ಮನು ನಿತ್ಯಶುದ್ಧಮುಕ್ತಸ್ವಭಾವದವನು.

'**ನಿರ್ ಆಙ್**' ಎಂಬ ಉಪಸರ್ಗ ಪೂರ್ವಕವಾದ '**ಡುಕೃಞ್ ಕರಣೇ**' ಎಂಬ ಧಾತುವಿನಿಂದ 'ನಿರಾಕಾರ' ಶಬ್ದವು ನಿಷ್ಪನ್ನವಾಗುತ್ತದೆ. (**ನಿರ್ಗತ ಆಕಾರಾತ್ ಸ ನಿರಾಕಾರಃ**) ಪರಮಾತ್ಮನಿಗೆ ಯಾವ ಆಕಾರವೂ ಇಲ್ಲದೆ, ಆತನು ಎಂದೂ ದೇಹವನ್ನು ಧರಿಸುವವನಲ್ಲವಾದ್ದರಿಂದ ಆತನಿಗೆ 'ನಿರಾಕಾರ' ಎಂದು ಹೆಸರು.

(**ಅಞ್ಜೂವ್ಯಕ್ತಿಮ್ಲಕ್ಷಣಕಾಂತಿಗತಿಷು**) ಈ ಧಾತುವಿನಿಂದ 'ಅಂಜನ' ಶಬ್ದವೂ, 'ನಿರ್' ಉಪಸರ್ಗದ ಯೋಗದಿಂದ 'ನಿರಂಜನ' ಶಬ್ದವೂ ಸಿದ್ಧವಾಗುತ್ತವೆ. (**ಅಂಜನಂ ವ್ಯಕ್ತಿರ್ಮ್ಲಕ್ಷಣಂ ಕುಕಾಮ ಇಂದ್ರಿಯೈಃ ಪ್ರಾಪ್ತಿಶ್ಚೇತ್ಯಸ್ಮಾದ್ಯೋ ನಿರ್ಗತಃ ಪೃಥಗ್ಭೂತಃ ಸ ನಿರಂಜನಃ**) ಆಕಾರವಿಲ್ಲದವನೂ, ದುಷ್ಟಾಚಾರರಹಿತನೂ, ದುಷ್ಟಕಾಮನಾರಹಿತನೂ ಮತ್ತು ಕಣ್ಣು ಮೊದಲಾದ ಇಂದ್ರಿಯಗಳ ವಿಷಯಗಳ ಪಥದಿಂದ ದೂರನೂ ಆಗಿರುವುದರಿಂದ ಪರಮಾತ್ಮನ ಹೆಸರು 'ನಿರಂಜನ.'

'**ಗಣಸಂಖ್ಯಾನೇ**' ಎಂಬ ಧಾತುವಿನಿಂದ 'ಗಣ' ಶಬ್ದವು ಸಿದ್ಧವಾಗುತ್ತದೆ. ಇದಕ್ಕೆ ಈಶ ಮತ್ತು ಪತಿ ಶಬ್ದಗಳನ್ನು ಸೇರಿಸಿದರೆ '**ಗಣೇಶ**' ಮತ್ತು '**ಗಣಪತಿ**' ಶಬ್ದಗಳಾಗುತ್ತವೆ. (**ಯೇ ಪ್ರಕೃತ್ಯಾದಯೋ ಜಡಾ ಜೀವಾಶ್ಚ ಗಣ್ಯಂತೇ ಸಂಖ್ಯಾಯಂತೇ ತೇಷಾಮೀಶಃ ಸ್ವಾಮೀ ಪತಿಃ ಪಾಲಕೋ ವಾ**) ಪ್ರಕೃತ್ಯಾದಿ ಜಡ ಹಾಗೂ ಎಲ್ಲಾ ಜೀವ ಆದಿ ಪ್ರಖ್ಯಾತ ಪದಾರ್ಥಗಳಿಗೆ ಸ್ವಾಮಿ ಅಥವಾ ಪರಿಪಾಲಕನಾಗಿರುವುದರಿಂದ ಪರಮಾತ್ಮನಿಗೆ 'ಗಣೇಶ' ಅಥವಾ 'ಗಣಪತಿ' ಎಂದು ಹೆಸರು.

(**ಯೋ ವಿಶ್ವಮಿಾಷ್ಟೇ ಸ ವಿಶ್ವೇಶ್ವರಃ**) ಪ್ರಪಂಚದ ಅಧಿಷ್ಠಾತನಾಗಿರುವುದರಿಂದ ಪರಮಾತ್ಮನಿಗೆ 'ವಿಶ್ವೇಶ್ವರ' ಎಂದು ಹೆಸರು.

(**ಯಃ ಕೂಟೇಽನೇಕವಿಧವ್ಯವಹಾರೇ ಸ್ವಸ್ವರೂಪೇಣೈವ ತಿಷ್ಠತಿ ಸ ಕೂಟಸ್ಥಃ ಪರಮೇಶ್ವರಃ**) ಸಮಸ್ತ ವ್ಯವಹಾರಗಳಲ್ಲಿ ವ್ಯಾಪ್ತನಾಗಿ ಸಮಸ್ತ ವ್ಯವಹಾರಗಳಿಗೆ ಆಧಾರನಾಗಿದ್ದರೂ, ಯಾವ ವ್ಯವಹಾರವಲ್ಲಿಯೂ ತನ್ನ ಸ್ವರೂಪವನ್ನು ಮಾರ್ಪಡಿಸದವನಾದ್ದರಿಂದ ಪರಮಾತ್ಮನಿಗೆ 'ಕೂಟಸ್ಥ' ಎಂದು ಹೆಸರು.

ದೇವಶಬ್ದದ ಅರ್ಥಗಳೆಲ್ಲಾ ದೇವೀ ಶಬ್ದಕ್ಕೂ ಅನ್ವಯಿಸುವುದು. ಪರಮೇಶ್ವರನ ಹೆಸರುಗಳು ಮೂರು ಲಿಂಗಗಳಲ್ಲಿಯೂ ಇವೆ. ಹೇಗೆಂದರೆ.-"**ಬ್ರಹ್ಮ ಚಿತಿರೀಶ್ವರೆಶ್ಟೇತಿ**" 'ಈಶ್ವರ' ಎಂಬುದರ ವಿಶೇಷಣವಾದಾಗ 'ದೇವ', 'ಚಿತಿ' ಎಂಬುದರ ವಿಶೇಷಣವಾದಾಗ 'ದೇವೀ', ಆದುದರಿಂದ ಈಶ್ವರನ ಹೆಸರು 'ದೇವೀ'.

'**ಶಕ್ಲೃಶಕ್ತೌ**' ಎಂಬ ಧಾತುವಿನಿಂದ 'ಶಕ್ತಿ' ಶಬ್ದವು ಸಿದ್ಧವಾಗುತ್ತದೆ. (**ಯಃ ಸರ್ವಂ ಜಗತ್ ಕರ್ತುಂ ಶಕ್ನೋತಿ ಸ ಶಕ್ತಿಃ**) ಸಮಸ್ತ ಜಗತ್ತಿನ ರಚನೆಯಲ್ಲಿ ಸಮರ್ಥನಾಗಿರುವುದರಿಂದ ಪರಮಾತ್ಮನಿಗೆ 'ಶಕ್ತಿ' ಎಂದು ಹೆಸರು.

'**ಶ್ರಿಞ್ ಸೇವಾಯಾಂ**' ಎಂಬ ಧಾತುವಿನಿಂದ 'ಶ್ರೀ' ಶಬ್ದವು ಸಿದ್ಧವಾಗುತ್ತದೆ. (**ಯಃ ಶ್ರೀಯತೇ ಸೇವ್ಯತೇ ಸರ್ವೇಣ ಜಗತಾ ವಿದ್ವದ್ಭಿರ್ಯೋಗಿಭಿಶ್ಚ ಸಃ ಶ್ರೀರೀಶ್ವರಃ**) ಸಮಸ್ತ ಜಗತ್ತಿನಿಂದಲೂ, ವಿದ್ವಾಂಸರಿಂದಲೂ, ಯೋಗಿಗಳಿಂದಲೂ ಸೇವಿಸಲ್ಪಡುವನಾದ್ದರಿಂದ ಪರಮಾತ್ಮನಿಗೆ 'ಶ್ರೀ' ಎಂದು ಹೆಸರು.

'**ಲಕ್ಷದರ್ಶನಾಂಕನಯೋ**' ಎಂಬ ಧಾತುವಿನಿಂದ ಲಕ್ಷ್ಮೀ ಶಬ್ದವು ಸಿದ್ಧವಾಗುತ್ತದೆ. (**ಯೋ ಲಕ್ಷಯತಿ ಪಶ್ಯತ್ಯಂಕತೇ ಚಿಹ್ನಯತಿ ಚರಾಚರಂ ಜಗದಥವಾ ವೇದ್ಯೈರಾಪ್ತೈರ್ಯೋಗಿಭಿಶ್ಚ ಯೋ**

ಲಕ್ಷ್ಯತೇ ಸ ಲಕ್ಷ್ಮೀಃ ಸರ್ವ ಪ್ರಿಯೇಶ್ವರಃ) ಚರಾಚರವಾದ ಸಮಸ್ತ ಜಗತ್ತನ್ನು ನೋಡುವವನೂ ಮತ್ತು ಚಿಹ್ನಿತ ಅರ್ಥಾತ್ ದೃಶ್ಯವಾಗಿ ಮಾಡುವನೂ, ಹೇಗೆಂದರೆ, ಶರೀರದಲ್ಲಿ ಕಣ್ಣು, ಮೂಗು; ಮತ್ತು ಮರಗಳಲ್ಲಿ ಎಲೆ, ಹೂವು, ಕಾಯಿ, ಬೇರು, ಪೃಥಿವಿ; ನೀರಿಗೆ ಕಪ್ಪು, ಕೆಂಪು ಮತ್ತು ಬಿಳುಪು; ಮಣ್ಣು, ಕಲ್ಲು, ಚಂದ್ರ, ಸೂರ್ಯ ಮೊದಲಾದ ಚಿಹ್ನೆಗಳನ್ನು ಸರ್ಜಿಸುವವನೂ ಮತ್ತು ಎಲ್ಲವನ್ನೂ ನೋಡುವವನೂ, ವೇದಾದಿಶಾಸ್ತ್ರಗಳಿಗೂ, ಧಾರ್ಮಿಕರಿಗೂ, ಯೋಗಿಗಳಿಗೂ ಎಲ್ಲಾ ಸೊಬಗಿನ ಸೊಬಗೂ, ಅಂದರೆ ನೋಡಲರ್ಹನಾಗಿರುವವನೂ ಆದುದರಿಂದ ಪರಮಾತ್ಮನಿಗೆ 'ಲಕ್ಷ್ಮೀ' ಎಂದು ಹೆಸರು.

'**ಸೃ ಗತೌ**' ಎಂಬ ಧಾತುವಿನಿಂದ 'ಸರಸ್' ಎಂಬ ಶಬ್ದವು ಸಿದ್ಧವಾಗುತ್ತದೆ. ಇದಕ್ಕೆ 'ಮತುಪ್' ಮತ್ತು 'ಙೀಪ್' ಪ್ರತ್ಯಯಗಳನ್ನು ಸೇರಿಸಿದರೆ 'ಸರಸ್ವತಿ' ಶಬ್ದವು ಸಿದ್ಧವಾಗುತ್ತದೆ. (**ಸರೋ ವಿವಿಧಂ ಜ್ಞಾನಂ ವಿದ್ಯತೇ ಯಸ್ಯಾಂ ಚೇತೌ ಸಾ ಸರಸ್ವತೀ**) ಪರಮಾತ್ಮನಿಗೆ ವಿವಿಧ ಜ್ಞಾನವು ಅಂದರೆ ಶಬ್ದಾರ್ಥ ಸಂಬಂಧ ಪ್ರಯೋಗದ ಯಥಾರ್ಥ ಜ್ಞಾನವಿರುವುದರಿಂದ ಆತನಿಗೆ 'ಸರಸ್ವತೀ' ಎಂದು ಹೆಸರು.

(**ಸರ್ವಾಃ ಶಕ್ತಯೋ ವಿದ್ಯಂತೇ ಯಸ್ಮಿನ್ ಸ ಸರ್ವಶಕ್ತಿ ಮಾನೀಶ್ವರಃ**) ತನ್ನ ಕಾರ್ಯದಲ್ಲಿ ಅನ್ಯರ ಸಹಾಯ ಅಪೇಕ್ಷಿಸದೆ ಸ್ವಸಾಮರ್ಥ್ಯದಿಂದಲೇ ತನ್ನ ಕಾರ್ಯವನ್ನೆಲ್ಲಾ ಪೂರ್ಣವಾಗಿ ನೆರವೇರಿಸುತ್ತಿರುವವನಾದ್ದರಿಂದ ಪರಮಾತ್ಮನಿಗೆ 'ಸರ್ವಶಕ್ತಿಮಾನ್' ಎಂದು ಹೆಸರು.

'**ಣೀಞ್ ಪ್ರಾಪಣೇ**' ಎಂಬ ಧಾತುವಿನಿಂದ 'ನ್ಯಾಯ' ಶಬ್ದವು ಸಿದ್ಧವಾಗುತ್ತದೆ. '**ಪ್ರಮಾಣೈರರ್ಥಪರೀಕ್ಷಣಂ ನ್ಯಾಯಃ**' ಇದು ನ್ಯಾಯಸೂತ್ರದ ಮೇಲೆ ವಾತ್ಸ್ಯಾಯನಮುನಿಗಳು ಬರೆದ ಭಾಷ್ಯದ ವಚನವು. '**ಪಕ್ಷಪಾತರಾಹಿತ್ಯಾಚರಣಂ ನ್ಯಾಯಃ**' ಪ್ರತ್ಯಕ್ಷಾದಿ ಪ್ರಮಾಣಗಳಿಂದ ಸತ್ಯವೆಂದು ದೃಢವಾದುದಕ್ಕೂ, ಪಕ್ಷ

ಪಾತವಿಲ್ಲದ ಆಚರಣೆಗೂ 'ನ್ಯಾಯ'ವೆಂದು ಹೆಸರು. (**ನ್ಯಾಯಂ ಕರ್ತುಂ ಶೀಲಂ ಯಸ್ಯ ಸ ನ್ಯಾಯಕಾರೀಶ್ವರಃ**) ಆತನಿಗೆ ಪಕ್ಷಪಾತ ರಹಿತವಾದ ಧರ್ಮವನ್ನು ಆಚರಿಸುವುದೇ ಸ್ವಭಾವವಾಗಿರುವುದರಿಂದ ಪರಮಾತ್ಮನಿಗೆ 'ನ್ಯಾಯಕಾರೀ' ಎಂದು ಹೆಸರು.

'ದಯ ದಾನಗತಿರಕ್ಷಣಹಿಂಸಾದಾನೇಷು' ಎಂಬ ಧಾತುವಿನಿಂದ 'ದಯಾ' ಶಬ್ದವು ಸಿದ್ಧವಾಗುತ್ತದೆ. **'ದಯತೇ ದದಾತಿ ಜಾನಾತಿ ಗಚ್ಛತಿ ರಕ್ಷತಿ, ಹಿನಸ್ತಿ ಯಯಾ ಸಾ ದಯಾ, ಬಹ್ವೀ ದಯಾ ವಿದ್ಯತೇ ಯಸ್ಯ ಸ ದಯಾಲುಃ ಪರಮೇಶ್ವರಃ**) ಅಭಯವನ್ನು ಕೊಡುವವನೂ, ಸತ್ಯಾಸತ್ಯ ರೂಪವಾದ ಸರ್ವ ವಿದ್ಯೆಗಳನ್ನೂ ತಿಳಿದವನೂ, ಸಜ್ಜನರನ್ನು ಕಾಪಾಡುವವನೂ, ದುಷ್ಟರನ್ನು ಯೋಗ್ಯರೀತಿಯಿಂದ ದಂಡಿಸುವವನೂ ಆಗಿರುವುದರಿಂದ ಪರಮೇಶ್ವರನಿಗೆ 'ದಯಾಳು'ವೆಂದು ಹೆಸರು.

'ದ್ವಯೋರ್ಭಾವೋ ದ್ವಾಭ್ಯಾಮಿತಂ ಸಾ ದ್ವಿತಾ ದ್ವೀತಂ ವಾ, ಸೈವ ತದೇವ ವಾ ದ್ವೈತಂ, ನ ವಿದ್ಯತೆ ದ್ವೈತಂ ದ್ವಿತೀಯೇಶ್ವರಭಾವೋ ಯಸ್ಮಿಂಸ್ತದದ್ವೈತಂ' ಅಂದರೆ **'ಸಜಾತೀಯ ವಿಜಾತೀಯಸ್ವಗತಭೇದಶೂನ್ಯಂಬ್ರಹ್ಮ'** ಎರಡರ ಇರುವಿಕೆ ಅಥವಾ ಎರಡರಿಂದ ಕೂಡಿರುವುದು ದ್ವಿತಾ ಆಥವಾ ದ್ವೀತ ಅಥವಾ ದ್ವೈತ. ಇವರಿಂದ ರಹಿತನಾದವನು. ಮನುಷ್ಯನು ಬೇರೆ ಮನುಷ್ಯನಿಗೆ ಸಜಾತೀಯನಾಗಿರುವಂತೆ, ಮನುಷ್ಯನಿಂದ ಬೇರೆ ಜಾತೀಯವಾದ ವೃಕ್ಷಪಾಷಾಣಾದಿಗಳು ಮನುಷ್ಯನಿಗೆ ವಿಜಾತೀಯವಾಗಿರುವಂತೆ, ಶರೀರದಲ್ಲಿ ನೇತ್ರ, ನಾಸಿಕ, ಕರ್ಣ ಮೊದಲಾದುವುಗಳಲ್ಲಿ ಸ್ವಗತಭೇದ ಹಿರುವಂತೆ, ಎರಡನೆಯ ಸಜಾತೀಯ ಈಶ್ವರ, ವಿಜಾತೀಯ ಈಶ್ವರ ಅಥವಾ ತನ್ನ ಆತ್ಮನಲ್ಲೇ ಬೇರೆ ತತ್ವ, ಇವುಗಳಿಂದ ರಹಿತನಾದ ಒಬ್ಬ ಪರಮಾತ್ಮನಿದ್ದಾನೆ. ಈ ಮುನರಿಂದ ಪರಮಾತ್ಮನ ಹೆಸರು 'ಅದ್ವೈತ'ವು.

(ಗಣ್ಯಂತೇ ಯೇ ತೇ ಗುಣಾ ವಾ ಯೈರ್ಗಣಯಂತಿ ತೇ ಗುಣಾಃ ; ಯೋ ಗುಣೇಭ್ಯೋ ನಿರ್ಗತಃ ಸ ನಿರ್ಗುಣ ಈಶ್ವರಃ) ಜಡಪದಾರ್ಥಗಳಲ್ಲಿರುವ ಸತ್ವ, ರಜಸ್ಸು, ತಮಸ್ಸು, ರೂಪ, ರಸ, ಗಂಧ, ಸ್ಪರ್ಶವೇ ಮೊದಲಾದ ಗುಣಗಳಿಂದಲೂ, ಜೀವನಲ್ಲಿರುವ ಅವಿದ್ಯೆ, ಅಲ್ಪಜ್ಞತೆ, ರಾಗ, ದ್ವೇಷ ಮತ್ತು ಅವಿದ್ಯಾದಿ ಕ್ಲೇಶಗಳು ಮೊದಲಾದ ಗುಣಗಳಿಂದಲೂ ದೂರವಾಗಿರುವವನು. ಇದಕ್ಕೆ ಪರಮಾತ್ಮನಿಗೆ ' ನಿರ್ಗುಣ 'ನೆಂದು ಹೆಸರು. ಇದಕ್ಕೆ **' ಅಶಬ್ದಮ ಸ್ಪರ್ಶಮರೂಪಮವ್ಯಯಂ'** ಮೊದಲಾದ ಉಪನಿಷತ್ವಾಕ್ಯಗಳೇ. ಶಬ್ದ, ಸ್ಪರ್ಶರೂಪಾದಿ ಗುಣರಹಿತನಾಗಿದ್ದಾನೆ. ಆದುದರಿಂದ ಪರಮಾತ್ಮನಿಗೆ ' ನಿರ್ಗುಣ 'ನೆಂದು ಹೆಸರು.

(ಯೋ ಗುಣೈಸ್ಸಹ ವರ್ತತೇ ಸ ಸಗುಣಃ) ಸರ್ವಜ್ಞತೆ, ಸರ್ವಸುಖ, ಪವಿತ್ರತೆ, ಅನಂತಬಲ ಮೊದಲಾದ ಗುಣಗಳೊಡನೆ ಯುಕ್ತನಾಗಿರುವುದರಿಂದ ಪರಮಾತ್ಮನಿಗೆ ' ಸಗುಣ 'ನೆಂದು ಹೆಸರು. ಪೃಥಿವಿಯು ಗಂಧಾದಿ ಗುಣಗಳಿಂದ ಸಗುಣವೆಂತಲೂ, ಇಚ್ಛಾದಿ ಗುಣಗಳಿಲ್ಲದಿರುವುದರಿಂದ ನಿರ್ಗುಣವೆಂದೂ ವ್ಯವಹರಿಸಲ್ಪಡುವಂತೆ ಪರಮಾತ್ಮನಲ್ಲಿ ಜಗತ್ತು ಮತ್ತು ಜೀವರ ಗುಣಗಳಿಲ್ಲದಿರುವುದರಿಂದ ನಿರ್ಗುಣನೆಂತಲೂ, ಸರ್ವಜ್ಞತ್ವಾದಿ ಗುಣಗಳಿರುವುದರಿಂದ ಸಗುಣನೆಂತಲೂ ಭಾವಿಸಲ್ಪಡುತ್ತಾನೆ. ಅಂದರೆ ಸಗುಣತ್ವ ನಿರ್ಗುಣತ್ವಗಳಿಂದ ದೂರವಾದ ಪದಾರ್ಥವಾವುದೂ ಇಲ್ಲ. ಚೇತನವ ಗುಣಗಳಿಂದ ದೂರವಿರುವುದರಿಂದ **ಜಡಪದಾರ್ಥವು** ನಿರ್ಗುಣವೂ, ಮತ್ತು ತನ್ನ ಗುಣಗಳಿಂದ ಕೂಡಿರುವುದರಿಂದ ಸಗುಣವೂ ; ಜಡಪ ಗುಣಗಳಿಂದ ದೂರನಾದುದರಿಂದ ಜೀವನು ನಿರ್ಗುಣನೂ, ಮತ್ತು ಇಚ್ಛಾದಿ ತನ್ನ ಗುಣಗಳಿಂದ ಕೂಡಿರುವುದರಿಂದ ಸಗುಣನೂ ಆಗಿರುವಂತೆ, ಪರಮಾತ್ಮನ ವಿಷಯದಲ್ಲಿಯೂ ತಿಳಿಯಬೇಕು.

(ಅಂತರ್ಯಂತುಂ ನಿಯಂತುಂ ಶೀಲಂ ಯಸ್ಯ ಸ ಅಂತರ್ಯಾಮೀ) ಸಮಸ್ತ ಪ್ರಾಣಿ ಮತ್ತು ಅಪ್ರಾಣಿ ಜಗತ್ತಿನಲ್ಲೂ ವ್ಯಾಪಕ

ಪ್ರಶ್ನೆ:—ವಿರಾಟ್ ಮೊದಲಾದ ನಾಮಗಳು ಪರಮಾತ್ಮನಿಗಿಂತಲೂ ಬೇರೆಯಾದ ಅರ್ಥಗಳನ್ನು ಏತಕ್ಕೆ ಕೊಡಲಾರವು? ಬ್ರಹ್ಮಾಂಡಕ್ಕೂ, ಪೃಥಿವ್ಯಾದಿ ಭೂತಗಳಿಗೂ, ಇಂದ್ರಾದಿ ದೇವತೆಗಳಿಗೂ ಮತ್ತು ವೈದ್ಯಶಾಸ್ತ್ರದಲ್ಲಿ ಶುಂಠಿ ಮೊಲ್ಲಲಾದ ಔಷಧಿಗಳಿಗೂ ಈ ಹೆಸರುಗಳಿವೆಯೋ ಇಲ್ಲವೋ?

ಉತ್ತರ:—ಇವೆ. ಆದರೆ ಪರಮಾತ್ಮನಿಗೂ ಕೂಡ ಈ ಹೆಸರುಗಳು ಅನ್ವಯಿಸುತ್ತವೆ.

ಪ್ರಶ್ನೆ:—ಈ ಹೆಸರುಗಳಿಂದ ಕೇವಲ ದೇವತೆಗಳನ್ನು ಗ್ರಹಿಸುವರೋ ಇಲ್ಲವೋ?

ಉತ್ತರ: ನೀವು ಹಾಗೆ ಗ್ರಹಿಸುವುದಕ್ಕೆ ಪ್ರಮಾಣವೇನು?

ಪ್ರಶ್ನೆ:—ದೇವತೆಗಳೆಲ್ಲರೂ ಪ್ರಸಿದ್ಧರೂ ಉತ್ತಮರೂ ಆಗಿರುವುದರಿಂದ ನಾನು ಅವರನ್ನೇ ಗ್ರಹಿಸುತ್ತೇನೆ.

ಉತ್ತರ:—ಪರಮೇಶ್ವರನು ಅಪ್ರಸಿದ್ಧನೂ, ಅತನಿಗಿಂತಲೂ ಬೇರೊಬ್ಬ ಉತ್ತಮನೂ ಇರುವನೇ? ಹೀಗಿರುವಾಗ ಈ ಎಲ್ಲಾ ನಾಮಗಳೂ ಪರಮಾತ್ಮನಿಗೆ ಸಹ ಅನ್ವಯಿಸುವವೆಂದು ಏತಕ್ಕೆ ಒಪ್ಪುವುದಿಲ್ಲ? ದೇವರು ಅಪ್ರಸಿದ್ಧನೂ ಅಲ್ಲ; ಮತ್ತು ಅತನಿಗೆ ಸಮನಾದವನೂ ಯಾರೂ ಇಲ್ಲ. ಹೀಗಿರುವಾಗ ಅತನಿಗಿಂತ ಉತ್ತಮನಾದವನು ಹೇಗೆತಾನೇ ಇರಬಲ್ಲನು? ಆದುದರಿಂದ ನೀವು ಹೇಳುವುದು ನಿಜವಲ್ಲ; ಏಕೆಂದರೆ ಹೀಗೆ ಹೇಳುವುದರಲ್ಲಿ ಅನೇಕ ದೋಷಗಳು ಸಂಭವಿಸುತ್ತವೆ. ಹೇಗೆಂದರೆ:—**'ಉಪಸ್ಥಿತಂ ಪರಿತ್ಯಜ್ಯ ಅನುಪಸ್ಥಿತಂ ಯಾಚತ ಇತಿ ಬಾಧಿತನ್ಯಾಯಃ'** ಒಬ್ಬನು ಮತ್ತೊಬ್ಬನ ಮುಂದೆ ಭೋಜನ ಪದಾರ್ಥಗಳನ್ನು ತಂದಿಟ್ಟು 'ತಾವು ಭೋಜನ ಮಾಡಿರಿ' ಎಂದು ಹೇಳಿದಾಗ, ಅವನು ಅದನ್ನು ತಿನ್ನದೆ, ದೊರೆಯದ ಊಟಕ್ಕೋಸ್ಕರ ಅಲ್ಲಲ್ಲಿ ಅಲೆದರೆ ನಾವು ಅವನನ್ನು ಬುದ್ಧಿವಂತನೆಂದು ತಿಳಿಯಬಾರದು. 'ಉಪಸ್ಥಿತ' ಅಂದರೆ ಸಮೀಪದಲ್ಲಿ ತಾನಾಗಿ ಪ್ರಾಪ್ತವಾದ ಪದಾರ್ಥಗಳನ್ನು ಬಿಟ್ಟು 'ಅನುಪಸ್ಥಿತ' ಅಂದರೆ ದೊರೆಯದ ಊಟಕ್ಕೋಸ್ಕರ

'ವಿಶ್ವ'ಶಬ್ದ ಪೂರ್ವಕವಾದ '**ಡುಭೃಞ್ ಧಾರಣ ಪೋಷಣ ಯೋಃ**' ಎಂಬ ಧಾತುವಿನಿಂದ 'ವಿಶ್ವಂಭರ' ಶಬ್ದವು ಸಿದ್ಧವಾಗುತ್ತದೆ. (**ಯೋ ವಿಶ್ವಂ ಬಿಭರ್ತಿ ಧರತಿ ಪುಷ್ಣಾತಿ ವಾ ವಿಶ್ವಂಭರೋ ಜಗದೀಶ್ವರಃ**) ಜಗತ್ತನ್ನು ಧರಿಸಿ, ಪೋಷಿಸುತ್ತಿರುವವನಾದ್ದರಿಂದ ಪರಮಾತ್ಮನಿಗೆ 'ವಿಶ್ವಂಭರ'ನೆಂದು ಹೆಸರು.

'**ಕಲಸಂಖ್ಯಾನೇ**' ಎಂಬ ಧಾತುವಿನಿಂದ 'ಕಾಲ' ಶಬ್ದವು ಸಿದ್ಧವಾಗುತ್ತದೆ. (**ಕಲಯತಿ ಸಂಖ್ಯಾತಿ ಸರ್ವಾನ್ ಪದಾರ್ಥಾನ್ ಸ ಕಾಲಃ**) ಜಗತ್ತಿನ ಸರ್ವ ಪದಾರ್ಥಗಳನ್ನೂ ಜೀವರನ್ನೂ ಎಣಿಸುವವನಾದ್ದರಿಂದ ಪರಮಾತ್ಮನಿಗೆ 'ಕಾಲ'ನೆಂದು ಹೆಸರು.

'**ಶಿಷ್ಯವಿಶೇಷಣೇ**' ಎಂಬ ಧಾತುವಿನಿಂದ 'ಶೇಷ' ಶಬ್ದವು ಸಿದ್ಧವಾಗುತ್ತದೆ. (**ಯಃ ಸಿಷ್ಯತೇ ಸ ಶೇಷಃ**) ಉತ್ಪತ್ತಿ ಪ್ರಳಯಗಳಿಂದ ಉಳಿಯುವವನು, ಅಂದರೆ ಶೇಷವಾಗಿರುವುದರಿಂದ ಪರಮಾತ್ಮನಿಗೆ 'ಶೇಷ'ನೆಂದು ಹೆಸರು.

'**ಅಪ್ಲೃವ್ಯಾಪ್ತೌ**' ಎಂಬ ಧಾತುವಿನಿಂದ 'ಆಪ್ತ' ಶಬ್ದವು ಸಿದ್ಧವಾಗುತ್ತದೆ. (**ಯಃ ಸರ್ವಾನ್ ಧರ್ಮಾತ್ಮನ ಆಪ್ನೋತಿ ವಾ ಸರ್ವೈರ್ಧರ್ಮಾತ್ಮಭಿರಾಪ್ಯತೇ ಛಲಾದಿರಹಿತಃ ಸ ಆಪ್ತಃ**) ಪರಮಾತ್ಮನು ಸತ್ಯೋಪದೇಶಕನೂ, ಸಕಲ ವಿದ್ಯಾಯುತನೂ, ಎಲ್ಲಾ ಧರ್ಮಾತ್ಮರಿಗೆ ದೊರೆಯುವವನೂ ಮತ್ತು ಧರ್ಮಾತ್ಮರಿಂದ ಹೊಂದಲ್ಪಡಲರ್ಹನೂ, ಛಲ ಕಪಟಾದಿಗಳಿಂದ ಜೇರೆಯಾದವನೂ ಆಗಿರುವುದರಿಂದ ಪರಮಾತ್ಮನಿಗೆ 'ಆಪ್ತ'ನೆಂದು ಹೆಸರು.

'ಶಂ' ಪೂರ್ವಕವಾದ '**ಡುಕೃಞ್ ಕರಣೇ**' ಎಂಬ ಧಾತುವಿನಿಂದ 'ಶಂಕರ' ಶಬ್ದವು ಸಿದ್ಧವಾಗುತ್ತದೆ. (**ಯಃ ಶಂ ಕಲ್ಯಾಣಂ ಸುಖಂ ಕರೋತಿ ಸ ಶಂಕರಃ**) ಕಲ್ಯಾಣ ಅಂದರೆ ಸುಖಕರನಾಗಿರುವುದರಿಂದ ಪರಮಾತ್ಮನಿಗೆ 'ಶಂಕರ'ನೆಂದು ಹೆಸರು.

'ಮಹತ್' ಶಬ್ದಪೂರ್ವಕವಾದ **'ದೇವ'** ಶಬ್ದದಿಂದ **'ಮಹಾದೇವ'** ಶಬ್ದವು ಸಿದ್ಧವಾಗುತ್ತದೆ. **(ಯೋ ಮಹತಾಂ ದೇವಃ ಸ ಮಹಾದೇವಃ)** ಪರಮೇಶ್ವರನು ಎಲ್ಲಾ ವಿದ್ವಾಂಸರಿಗೂ ವಿದ್ವಾಂಸನೂ, ಸೂರ್ಯಾದಿ ಪದಾರ್ಥಗಳ ಪ್ರಕಾಶಕನೂ, ಆಗಿರುವುದರಿಂದ ಆತನಿಗೆ ಮಹಾದೇವನೆಂದು ಹೆಸರು.

'ಪ್ರೀಞ್ ತರ್ಪಣೇ ಕಾಂತೌ ಚ' ಎಂಬ ಧಾತುವಿನಿಂದ 'ಪ್ರಿಯ' ಶಬ್ದವು ಸಿದ್ಧವಾಗುತ್ತದೆ. **(ಯಃ ಪೃಣಾತಿ ಪ್ರೀಯತೇ ವಾ ಸ ಪ್ರಿಯಃ)** ಪರಮೇಶ್ವರನು ಧರ್ಮಾತ್ಮರಿಗೂ, ಶಿಷ್ಟರಿಗೂ, ಮುಮುಕ್ಷುಗಳಿಗೂ ಸಂತೋಷಪ್ರದನೂ, ಎಲ್ಲರ ಕಾಮನೆಗೆ ಪಾತ್ರನೂ ಆಗಿರುವುದರಿಂದ ಆತನಿಗೆ 'ಪ್ರಿಯ'ನೆಂದು ಹೆಸರು.

'ಸ್ವಯಂ' ಶಬ್ದಪೂರ್ವಕವಾದ **'ಭೂ ಸತ್ತಾಯಾಂ'** ಎಂಬ ಧಾತುವಿನಿಂದ 'ಸ್ವಯಂಭೂ' ಶಬ್ದವು ಸಿದ್ಧವಾಗುತ್ತದೆ. **(ಯಃ ಸ್ವಯಂ ಭವತಿ ಸಃ ಸ್ವಯಂ ಭೂರೀಶ್ವರಃ)** ಪರಮಾತ್ಮನು ಯಾರಿಂದಲೂ ಉತ್ಪನ್ನನಾಗದೆ ತನ್ನಷ್ಟಕ್ಕೆ ತಾನೇ ಇರುವವನಾದ್ದರಿಂದ ಆತನಿಗೆ 'ಸ್ವಯಂಭೂ' ಎಂದು ಹೆಸರು.

'ಕುಶಬ್ದೇ' ಎಂಬ ಧಾತುವಿನಿಂದ 'ಕವಿ' ಶಬ್ದವು ಸಿದ್ಧವಾಗುತ್ತದೆ. **(ಯಃ ಕೌತಿ ಶಬ್ದಯತಿ ಸರ್ವಾಃ ವಿದ್ಯಾಃ ಸ ಕವೀರೀಶ್ವರಃ)** ವೇದಗಳ ಮೂಲಕ ಸರ್ವ ವಿದ್ಯೆಗಳನ್ನು ಉಪದೇಶಿಸುವವನೂ ಮತ್ತು ತಿಳಿದವನೂ ಆಗಿರುವುದರಿಂದ ಪರಮೇಶ್ವರನಿಗೆ 'ಕವಿ' ಎಂದು ಹೆಸರು.

'ಶಿವು ಕಲ್ಯಾಣೇ' ಎಂಬ ಧಾತುವಿನಿಂದ 'ಶಿವ' ಶಬ್ದವು ಸಿದ್ಧವಾಗುತ್ತದೆ. **'ಬಹುಲಮೇತನ್ನಿದರ್ಶನಂ'** ಎಂಬ ವಾಕ್ಯದಿಂದ 'ಶಿವು' ಧಾತುವು ತಿಳಿದುಕೊಳ್ಳಲ್ಪಡುತ್ತದೆ. ಕಲ್ಯಾಣಸ್ವರೂಪನೂ, ಕಲ್ಯಾಣಕರ್ತನೂ ಆಗಿರುವುದರಿಂದ ಪರಮಾತ್ಮನಿಗೆ 'ಶಿವ' ನೆಂದು ಹೆಸರು.

ಪರಮಾತ್ಮನ ಈ ಒಂದುನೂರು ನಾಮಗಳು ಬರೆಯಲ್ಪಟ್ಟವೆ. ಆದರೆ ಇವೇ ಅಲ್ಲದೆ ಪರಮಾತ್ಮನಿಗೆ ಅಸಂಖ್ಯನಾಮಗಳಿವೆ. ಏಕೆಂದರೆ, ಪರಮಾತ್ಮನ ಗುಣಕರ್ಮಸ್ವಭಾವಗಳು ಅನಂತವಾಗಿರುವುದರಿಂದ ಅತನ ನಾಮಗಳು ಅನಂತವಾಗಿಯೇ ಇರುತ್ತವೆ. ಅವುಗಳಲ್ಲಿ ಪ್ರತ್ಯೇಕ ಗುಣಕರ್ಮಸ್ವಭಾವಕ್ಕೂ ಒಂದೊಂದು ಹೆಸರಿದೆ. ಆದ್ದರಿಂದ ಈಗ ನಾನು ಬರೆದಿರುವ ಕೆಲವು ನಾಮಗಳು ಸಮುದ್ರದ ಮುಂದೆ ಒಂದು ನೀರಿನ ಹನಿಯಂತಿವೆ. ಏಕೆಂದರೆ--ವೇದಾದಿ ಶಾಸ್ತ್ರಗಳಲ್ಲಿ ಪರಮೇಶ್ವರನ ಅಸಂಖ್ಯ ಗುಣಕರ್ಮ ಸ್ವಭಾವಗಳು ನಿವರಿಸಲ್ಪಟ್ಟಿವೆ. ಅವು ಓದುವುದರಿಂದಲೂ, ಕಲಿಸುವುದರಿಂದಲೂ ತಿಳಿದುಬರುತ್ತವೆ. ಮತ್ತು ಬೇರೆ ಪದಾರ್ಥಗಳ ಪೂರ್ಣ ಜ್ಞಾನವೂ ವೇದಾದಿಶಾಸ್ತ್ರಗಳನ್ನು ಓದುವವರಿಗೇ ಆಗುವುದು.

ಪಶ್ನೆ—' ಬೇರೆ ಗ್ರಂಥಕಾರರು ಗ್ರಂಥದ ಆದಿ, ಮಧ್ಯ ಮತ್ತು ಅಂತಗಳಲ್ಲಿ ಮಂಗಳವನ್ನು ಮಾಡಿರುವಂತೆ ತಾವು ಏನನ್ನೂ ಮಾಡಲಿಲ್ಲ ಮತ್ತು ಬರೆಯಲೂ ಇಲ್ಲ.

ಉತ್ತರ--ಹಾಗೆ ಮಾಡುವುದು ಯೋಗ್ಯವಲ್ಲ. ಏಕೆಂದರೆ--ಆದಿ, ಮಧ್ಯ ಮತ್ತು ಅಂತಗಳಲ್ಲಿ ಮಾತ್ರ ಮಂಗಳ ಮಾಡುವುದರಿಂದ ಅವರ ಗ್ರಂಥಗಳಲ್ಲಿ ಆದಿಮಧ್ಯಾಂತಗಳನ್ನುಳಿದು ಬೇರೆ ಲೇಖನವೆಲ್ಲವೂ ಅಮಂಗಳವೆಂದೇ ಆಗಿರುವುದು. ಆದ್ದರಿಂದ ಮಂಗಳಚರಣವೆಂದರೆ—

ಮಂಗಲಾ ಚರಣಂ ಶಿಷ್ಟಾಚಾರಾತ್ ಫಲದರ್ಶನಾಚ್ಛ್ರುತಿ ತಶ್ಚೇತಿ । (ಸಾಂಖ್ಯಸೂತ್ರ—ಅ. ೫, ಸೂ. ೧.)

ನ್ಯಾಯವೂ, ಪಕ್ಷಪಾತರಹಿತವೂ, ಸತ್ಯವೂ, ಶ್ರುತಿಸಮ್ಮತವೂ ಆದ ಈಶ್ವರಾಜ್ಞೆಯನ್ನು ಯಥಾವತ್ತಾಗಿ ಸದಾ ಆಚರಿಸುವುದೇ ಮಂಗಲಾಚರಣ ಎಂದಿದರ ತಾತ್ಪರ್ಯ. ಗ್ರಂಥದಲ್ಲಿ ಮೊದಲಿಂದ ಕಡೆಯವರೆಗೂ ಸತ್ಯಾಚರಣೆಯನ್ನು ನೆರವೇರಿಸುವುದೇ ಮಂಗಳಾಚರಣ. ಹಾಗೆ ಮಾಡದೆ ಒಂದು ಕಡೆ ಮಂಗಳವನ್ನೂ ಮತ್ತೊಂದು ಕಡೆ ಅಮಂಗಳವನ್ನೂ ಬರೆಯುವುದು ಮಂಗಳಾಚರಣವೆನಿಸಿಕೊಳ್ಳಲಾರದು. ಈ ವಿಷಯದಲ್ಲಿ ಮಹಾತ್ಮರಾದ ಮಹರ್ಷಿಗಳ ಲೇಖನವನ್ನು ನೋಡಿರಿ,

ಯಾನ್ಯನವದ್ಯಾನಿ ಕರ್ಮಾಣಿ ತಾನಿ ಸೇವಿತವ್ಯಾನಿ ನೋ ಇತರಾಣಿ।(ಇದು ತೈತ್ತಿರೀಯ ಉಪನಿಷತ್ತಿನ[ಪ್ರಪಾ. ೭, ಅನು. ೧೧] ವಚನವು.

"ಎಲೈ ಮಕ್ಕಳಿರಾ! 'ಅನವದ್ಯಾನಿ' ಅಂದರೆ, ಅನಿಂದನೀಯ. ಅಂದರೆ, ಧರ್ಮಯುಕ್ತವಾದ ಕರ್ಮಗಳೇ ನಿಮಗೆ ಮಾಡಲರ್ಹವಾದುವು. ಅಧರ್ಮಯುಕ್ತವಾದ ಕರ್ಮಗಳನ್ನು ಮಾಡಬೇಡಿರಿ." ಈ ಕಾರಣದಿಂದ ಇತ್ತೀಚಿನ ಗ್ರಂಥಗಳಲ್ಲಿ ಕಂಡುಬರುವ 'ಶ್ರೀ ಗಣೇಶಾಯ ನಮಃ', 'ಸೀತಾರಾಮಾಭ್ಯಾಂ ನಮಃ', 'ರಾಧಾ ಕೃಷ್ಣಾಭ್ಯಾಂ ನಮಃ', 'ಶ್ರೀ ಗುರುಚರಣಾರವಿಂದಾಭ್ಯಾಂ ನಮಃ', 'ಹನುಮತೇ ನಮಃ', 'ದುರ್ಗಾಯೈ ನಮಃ', 'ಪಟುಕಾಯ ನಮಃ', 'ಭೈರವಾಯ ನಮಃ' 'ಶಿವಾಯ ನಮಃ', 'ಸರಸ್ವತ್ಯೈ ನಮಃ', 'ನಾರಾಯಣಾಯ ನಮಃ'—ಮೊದಲಾದ ವಾಕ್ಯಗಳು ವೇದಶಾಸ್ತ್ರವಿರೋಧಿಗಳಾಗಿರುವುದರಿಂದ ಅವುಗಳನ್ನು ಬುದ್ಧಿವಂತರು ಮಿಥ್ಯೆಯೆಂದು ತಿಳಿಯುತ್ತಾರೆ. ಏಕೆಂದರೆ, ವೇದಗಳಲ್ಲಿಯೂ, ಮಹರ್ಷಿಗಳ ಗ್ರಂಥಗಳಲ್ಲಿಯೂ ಈ ವಿಧವಾದ ಮಂಗಳಾಚರಣವು ಕಂಡುಬರುವುದಿಲ್ಲ. ಮತ್ತು ಆರ್ಷ ಗ್ರಂಥಗಳಲ್ಲಿ 'ಓಂ', 'ಅಥ' ಎಂಬ ಶಬ್ದಗಳೇ ಕಂಡುಬರುತ್ತವೆ. ನೋಡಿರಿ :-

'ಅಥ ಶಬ್ದಾನುಶಾಸನಂ' ಅಥೇತ್ಯಯಂ ಶಬ್ದೋಽಧಿಕಾರಾರ್ಥಃ ಪ್ರಯುಜ್ಯತೇ॥

—ವ್ಯಾಕರಣ ಮಹಾಭಾಷ್ಯ.

'ಅಥಾತೋ ಧರ್ಮಜಿಜ್ಞಾಸಾ' ಅಥೇತ್ಯಾನಂತರ್ಯೇ ವೇದಾಧ್ಯಯನಾನಂತರಂ'

—ಪೂರ್ವಮೀಮಾಂಸಾ.

'ಅಥಾತೋ ಧರ್ಮಂ ವ್ಯಾಖ್ಯಾಸ್ಯಾಮಃ' ಅಥೇತಿ ಧರ್ಮಕಥನಾನಂತರಂ ಧರ್ಮಲಕ್ಷಣಂ ವಿಶೇಷೇಣ ವ್ಯಾಖ್ಯಾಸ್ಯಾಮಃ॥

—ವೈಶೇಷಿಕದರ್ಶನ.

ಅಥ ಯೋಗಾನುಶಾಸನಂ । ಅಥೇತ್ಯಯಂ ಅಧಿಕಾರಾರ್ಥಃ ॥

—ಯೋಗಶಾಸ್ತ್ರ.

' ಅಥ ತ್ರಿವಿಧದುಃಖಾತ್ಯನ್ತನಿವೃತ್ತಿರತ್ಯಂತಪುರುಷಾರ್ಥಃ ॥

' ಸಾಂಸಾರಿಕವಿಷಯಭೋಗಾದನನ್ತರಂ ತ್ರಿವಿಧದುಃಖಾತ್ಯಂತನಿವೃತ್ಯರ್ಥಃ ಪ್ರಯತ್ನಃ ಕರ್ತವ್ಯಃ '

—ಸಾಂಖ್ಯಶಾಸ್ತ್ರ.

' ಅಥಾತೋ ಬ್ರಹ್ಮಜಿಜ್ಞಾಸಾ ' ಚತುಷ್ಟಯಸಾಧನಸಂಪತ್ತ್ಯನಂತರಂ ಬ್ರಹ್ಮಜಿಜ್ಞಾಸ್ಯಂ ।

' ಓಮಿತ್ಯೇತದಕ್ಷರಮುದ್ಗೀಥ ಮುಪಾಸೀತ '

—ಛಾಂದೋಗ್ಯ.

' ಓಮಿತ್ಯೇತದಕ್ಷರ ಮಿದಗ್ಂಸರ್ವಂ ತಸ್ಯೋಪವ್ಯಾಖ್ಯಾನಂ ' ॥

—ಮಾಂಡೂಕ್ಯ.

ಹೀಗೆಯೇ ಋಷಿ ಮುನಿಗಳ ಉಳಿದ ಗ್ರಂಥಗಳಲ್ಲಿಯೂ ಕೂಡ ' ಓಂ ' ' ಅಥ ' ಶಬ್ದಗಳು ಬರೆಯಲ್ಪಟ್ಟಿವೆ. ಹಾಗೆಯೇ ನಾಲ್ಕು ವೇದಗಳ ಆರಂಭದಲ್ಲಿಯೂ (**ಅಗ್ನಿ, ಇಟ್, ಅಗ್ನಿ, ಯೇತ್ರಿಷಪತ್ತಾಃ ಪರಿಯಂತಿ....**) ಈ ಶಬ್ದಗಳು ಬರೆಯಲ್ಪಟ್ಟಿದೆ. **' ಶ್ರೀ ಗಣೇಶಾಯ ನಮಃ '** ಮೊದಲಾದ ಶಬ್ದಗಳು ಎಲ್ಲಿಯೂ ಇಲ್ಲ. ವೈದಿಕರು ವೇದದ ಆರಂಭದಲ್ಲಿ ' ಹರಿಃ ' ' ಓಂ ' ಈ ಶಬ್ದಗಳನ್ನು ಬರೆಯುವುದು ಮತ್ತು ಹೇಳುವುದು ರೂಢಿಯಲ್ಲಿರುತ್ತದೆ. ಈ ಪದ್ಧತಿಯು ತಾಂತ್ರಿಕರ ಮತ್ತು ಪೌರಾಣಿಕರ ಅಸತ್ಯ ಕಲ್ಪನೆಯಿಂದ ಕಲಿತುಕೊಂಡದ್ದು. ವೇದಾದಿ ಶಾಸ್ತ್ರಗಳ ಆರಂಭದಲ್ಲಿ ' ಹರಿ ' ಶಬ್ದವು ಎಲ್ಲಿಯೂ ಕಂಡುಬರುವುದಿಲ್ಲ. ಆದುದರಿಂದ, ಗ್ರಂಥಾದಿಯಲ್ಲಿ ' ಓಂ ' ಅಥವಾ ' ಅಥ ' ಎಂದೇ

ಬರೆಯಬೇಕು. ಪರಮಾತ್ಮನ ವಿಷಯವಾಗಿ ಇಷ್ಟು ಮಾತ್ರ ಬರೆದಿದ್ದೇವೆ. ಇದರ ನಂತರ ಶಿಕ್ಷಣದ ವಿಷಯವಾಗಿ ಬರೆಯುತ್ತೇವೆ.

ಇತಿ ಶ್ರೀಮದ್ದಯಾನಂದಸರಸ್ವತೀಸ್ವಾಮಿಕೃತೇ
ಸತ್ಯಾರ್ಥಪ್ರಕಾಶೇ ಸುಭಾಷಾವಿಭೂಷಿತ
ಈಶ್ವರನಾಮವಿಷಯೇ
ಪ್ರಥಮಸಮುಲ್ಲಾಸಃ ಸಂಪೂರ್ಣಃ

॥ ಓಂ ॥

ಅಥ ದ್ವಿತೀಯ ಸಮುಲ್ಲಾಸಾರಂಭಃ

ಅಥ ಶಿಕ್ಷಾಂ ಪ್ರವಕ್ಷ್ಯಾಮಃ

(ಈ ಸಮುಲ್ಲಾಸದಲ್ಲಿ ಮಕ್ಕಳ ಶಿಕ್ಷಣದ ವಿಷಯವನ್ನು ಬರೆಯುತ್ತೇವೆ.)

"ಮಾತೃಮಾನ್ ಪಿತೃಮಾನ್ ಆಚಾರ್ಯವಾನ್ ಪುರುಷೋ ವೇದ" ಇದು ಶತಪಥ ಬ್ರಾಹ್ಮಣದ ವಚನ. "ಮೊದಲು ತಾಯಿ, ಎರಡನೆಯವ ತಂದೆ, ಮೂರನೆಯವ ಆಚಾರ್ಯ—ಈ ಮೂರು ಮಂದಿಯೂ ಉತ್ತಮ ಶಿಕ್ಷಕರಾಗಿದ್ದರೆ, ಮಾನವನು ಜ್ಞಾನವಂತನಾಗುವನು. ಧರ್ಮಾತ್ಮರೂ, ವಿದ್ವಾಂಸರೂ ಆದ ತಾಯಿತಂದೆಗಳನ್ನು ಪಡೆದಿರುವ ಕುಲವು ಧನ್ಯ. ಅಂತಹ ಕುಲದಲ್ಲಿ ಜನ್ಮವೆತ್ತಿದ ಸಂತಾನವು ಬಹಳ ಭಾಗ್ಯವಾಲಿ. ತಾಯಿಯಿಂದ ಮಕ್ಕಳಿಗೆ ದೊರೆಯುವಷ್ಟು ಉಪದೇಶ ಮತ್ತು ಉಪಕಾರ ಬೇರಾರಿಂದಲೂ ಲಭಿಸದು. ತಾಯಿಯಿಂದ ಮಕ್ಕಳಿಗೆ ದೊರೆಯುವಷ್ಟು ಪ್ರೇಮ ವಾಗಲಿ, ಅವರ ಹಿತವನ್ನು ಸಾಧಿಸಬೇಕೆಂಬ ಬಯಕೆಯಾಗಲಿ ಬೇರೆಯವರಿಗಿರುವುದಿಲ್ಲ. ಆದ್ದರಿಂದ (ಮಾತೃಮಾನ್) ಅಂದರೆ, **ಪ್ರಶಸ್ತಾ ಧಾರ್ಮಿಕೀ ಮಾತಾ ವಿದ್ಯತೇ ಯಸ್ಯ ಸ ಮಾತೃಮಾನ್**—ಗರ್ಭಾಧಾನದಿಂದ ಹಿಡಿದು ಪೂರ್ಣ ವಿದ್ಯೆಯನ್ನು ಗ್ರಹಿಸುವವರೆಗೆ ಮಕ್ಕಳಿಗೆ ಸುಶೀಲತೆಯನ್ನು ಕಲಿಸುವ ತಾಯಿ ಧನ್ಯೆ.

ಗರ್ಭಾಧಾನಕ್ಕೆ ಮೊದಲೂ, ಗರ್ಭಾಧಾನ ಸಮಯದಲ್ಲೂ, ಗರ್ಭಾಧಾನವಾದಮೇಲೂ ಮಾತಾಪಿತೃಗಳು ಮಾದಕಪದಾರ್ಥಗಳನ್ನಾಗಲಿ, ದುರ್ಗಂಧಿತ ಪದಾರ್ಥಗಳನ್ನಾಗಲಿ, ಕಠಿಣ ಮತ್ತು ಬುದ್ಧಿಯನ್ನು ಹಾಳುಮಾಡುವ ಪದಾರ್ಥಗಳನ್ನಾಗಲಿ ಸೇವಿಸಬಾರದು. ಶಾಂತಿ, ಆರೋಗ್ಯ, ಬಲ, ಬುದ್ಧಿ, ಪರಾಕ್ರಮ ಮತ್ತು ಶೀಲ—ಈ ಗುಣಗಳಿಂದ ಸಭ್ಯರಾಗಿರಲು ಅನುಕೂಲವಾದ ತುಪ್ಪ, ಹಾಲು, ಮೃದುಮಧುರ ಭೋಜನ ಮೊದಲಾದ ಶ್ರೇಷ್ಠವಾದ ಪದಾರ್ಥಗಳನ್ನು

ಸೇವಿಸಬೇಕು. ಇವರಿಂದ ದಂಪತಿಗಳ ರಜವೀರ್ಯಗಳು ನಿರ್ದೋಷವಾಗಿ ಅವುಗಳಲ್ಲಿ ಅತ್ಯಂತ ಉತ್ತಮ ಗುಣಗಳುಂಟಾಗುವುವು. ರಜೋದರ್ಶನವಾದ ಐದನೆಯ ದಿನದಿಂದ ಹದಿನಾರನೆಯ ದಿನದವರೆಗೆ ಋತುದಾನದ ಸಮಯವಾಗಿರುತ್ತದೆ. ಆ ದಿನಗಳಲ್ಲಿ ಪ್ರಾರಂಭದ ನಾಲ್ಕುದಿನಗಳನ್ನೂ, ಹನ್ನೊಂದನೆಯ ಮತ್ತು ಹದಿಮೂರನೆಯ ದಿನಗಳನ್ನೂ ಬಿಟ್ಟು, ಹತ್ತು ರಾತ್ರಿಗಳಲ್ಲಿ ಗರ್ಭಾಧಾನವನ್ನು ನಡೆಸುವುದು ಉತ್ತಮ. ರಜೋದರ್ಶನವಾದ ಹದಿನಾರು ದಿನಗಳು ಕಳೆದ ಬಳಿಕ ದಂಪತಿಗಳು ಸಮಾಗಮವನ್ನು ನಡೆಸಬಾರದು. ಮತ್ತೆ ಮೇಲೆ ಹೇಳಿದ ಋತುದಾನ ಸಮಯವು ಬರುವವರೆಗೂ ಮತ್ತು ಗರ್ಭವು ನಿಂತಮೇಲೆ ಒಂದು ವರ್ಷದವರೆಗೂ ದಂಪತಿಗಳು ಕೂಡಬಾರದು. ಇಬ್ಬರ ದೇಹಾರೋಗ್ಯವೂ ಸರಿಯಾಗಿದ್ದು, ಯಾವ ದುಃಖವೂ ಇಲ್ಲದೆ ಪರಸ್ಪರ ಪ್ರಸನ್ನರಾಗಿರುವ ಸಮಯದಲ್ಲಿ ದಂಪತಿಗಳು ಕೂಡಬೇಕು. ಚರಕ ಮತ್ತು ಸುಶ್ರುತವೆಂಬ ವೈದ್ಯಗ್ರಂಥಗಳಲ್ಲಿ ವಿಧಾನಮಾಡಿರುವಂತೆ ಊಟ, ಉಡಿಗೆ-ತೊಡಿಗೆಗಳ ನಿಯಮಗಳನ್ನು ಅನುಸರಿಸಬೇಕು. ಮನುಧರ್ಮಶಾಸ್ತ್ರಕಾರರು ಹೇಳಿರುವಂತೆ ದಂಪತಿಗಳು ಪರಸ್ಪರ ಪ್ರಸನ್ನರಾಗಿರಬೇಕು. ಗರ್ಭವು ನಿಂತಬಳಿಕ ಗರ್ಭಿಣಿಯು ಊಟ, ಉಡಿಗೆ-ತೊಡಿಗೆಗಳ ವಿಷಯದಲ್ಲಿ ಬಹಳ ಎಚ್ಚರಿಕೆಯಿಂದಿರಬೇಕು. ಬಳಿಕ ಒಂದು ವರ್ಷದವರೆಗೆ ಪುರುಷನೊಡನೆ ಸಮಾಗಮವನ್ನು ನಡೆಸಬಾರದು. ಗರ್ಭವು ನಿಂತು ಮಗುವು ಹುಟ್ಟುವವರೆಗೆ ಗರ್ಭಿಣಿಯು ಬುದ್ಧಿ, ಬಲ, ಸೌಂದರ್ಯ, ಆರೋಗ್ಯ, ಶೌರ್ಯ, ಶಾಂತಿ ಮೊದಲಾದ ಗುಣಗಳನ್ನು ವೃದ್ಧಿಪಡಿಸುವ ಪದಾರ್ಥಗಳನ್ನೇ ಸೇವಿಸಬೇಕು.

ಮಗುವು ಹುಟ್ಟುತ್ತಲೇ ಸುಗಂಧಮಿಶ್ರವಾದ ನಿರ್ಮಲ ಜಲದಿಂದ ಸ್ನಾನಮಾಡಿಸಿ, ನಾಡೀಛೇದನಮಾಡಿ ಸುಗಂಧ ಮಿಶ್ರವಾದ ತುಪ್ಪ ಮೊದಲಾದ ಪದಾರ್ಥಗಳಿಂದ ಹೋಮ* ಮಾಡಬೇಕು. ಬಾಣಂತಿಯ ಸ್ನಾನ ಭೋಜನಗಳಿಗೆ ಕೂಡ ಸರಿಯಾದ ವ್ಯವಸ್ಥೆಯನ್ನು

* ಮಗುವಿನ ಜನನಕಾಲದಲ್ಲಿ ಮಾಡಬೇಕಾದ "ಜಾತಕರ್ಮ"ವೆಂಬ ವೈದಿಕ ಸಂಸ್ಕಾರದ ವಿಧಾನವನ್ನು "ಸಂಸ್ಕಾರವಿಧಿ" ಎಂಬ ಗ್ರಂಥದಲ್ಲಿ ನೋಡಿ.

ಮಾಡಬೇಕು. ಇದರಿಂದ ಬಾಣಂತಿ ಮತ್ತು ಮಗುವಿನ ಶರೀರಗಳು ಕ್ರಮವಾಗಿ ಆರೋಗ್ಯವನ್ನು ಪಡೆದು ಪುಷ್ಟವಾಗಲು ಅನುಕೂಲವಾಗುವುದು. ಮಗುವಿಗೆ ಹಾಲು ಕೊಡುವ ತಾಯಾಗಲಿ, ದಾದಿಯಾಗಲಿ ಎದೆ ಹಾಲಿನಲ್ಲಿ ಉತ್ತಮ ಗುಣವನ್ನುಂಟುಮಾಡುವ ಪದಾರ್ಥಗಳನ್ನು ಸೇವಿಸಬೇಕು. ಹುಟ್ಟಿದಂದಿನಿಂದ ಆರು ದಿನಗಳವರೆಗೆ ಮಗುವಿಗೆ ತಾಯಿಯ ಹಾಲನ್ನು ಕುಡಿಸಬೇಕು. ಬಳಿಕ ದಾದಿಯಿಂದ ಹಾಲನ್ನು ಕೊಡಿಸಲಾರದ ಬಡವರು ಆಕಳ ಹಾಲನ್ನಾಗಲಿ, ಆಡಿನ ಹಾಲನ್ನಾಗಲಿ ಕುಡಿಸಬಹುದು. ಆದರೆ, ಆ ಹಾಲಿನಲ್ಲಿ ಬುದ್ಧಿ, ಪರಾಕ್ರಮ ಮತ್ತು ಆರೋಗ್ಯಕ್ಕೆ ಪೋಷಕವಾದ ಓಷಧಿಗಳನ್ನು ಶುದ್ಧವಾದ ನೀರನಲ್ಲಿ ನೆನೆಹಾಕಿ, ಕುದಿಸಿ, ಶೋಧಿಸಿಕೊಂಡು, ಆ ಸಾರವನ್ನು ಸಮಭಾಗವಾಗಿ ಸೇರಿಸಿ, ಮಗುವಿಗೆ ಕುಡಿಸಬೇಕು. ಹೆತ್ತಬಳಿಕ ಮಗುವಿನೊಡನೆ ಬಾಣಂತಿಯನ್ನು ಚೊಕ್ಕವಾದ ಗಾಳಿಯು ಸಂಚರಿಸುತ್ತಿರುವ ಸ್ಥಳದಲ್ಲಿರಿಸಬೇಕು. ಮತ್ತು ಅಲ್ಲಿ ಸುಗಂಧದಿಂದ ಕೂಡಿದ ದರ್ಶನೀಯ ಪದಾರ್ಥಗಳನ್ನಿಡಬೇಕು. ವಾಯುವು ಶುದ್ಧವಾಗಿರುವ ಕಡೆಯಲ್ಲಿ ಬಾಣಂತಿಯು ಸಂಚರಿಸುವಂತೆ ಏರ್ಪಡಿಸಬೇಕು. ದಾದಿಯ ಹಾಲಾಗಲಿ, ಹಸುವಿನ ಹಾಲಾಗಲಿ, ಆಡಿನ ಹಾಲಾಗಲಿ ದೊರೆಯದಿರುವಾಗ ಉಚಿತ ತೋರಿದಂತೆ ಮಾಡಬೇಕು. ಗರ್ಭಿಣಿಯ ದೇಹಾಂಶದಿಂದ ಮಗುವಿನ ದೇಹನಿರ್ಮಾಣವಾಗುವುದರಿಂದ ಪ್ರಸವ ಸಮಯದಲ್ಲಿ ಆಕೆಯು ನಿರ್ಬಲಳಾಗುತ್ತಾಳೆ. ಆದ್ದರಿಂದ ಬಾಣಂತಿಯ ಎದೆಹಾಲನ್ನು ಮಗುವಿಗೆ ಕುಡಿಸಬಾರದು. ಎದೆಹಾಲನ್ನು ತಡೆಯಲು ಸ್ತನಛಿದ್ರಗಳ ಮೇಲೆ ಹಾಲನ್ನು ಸ್ರವಿಸಗೊಡದ ಔಷಧಿಯನ್ನು ಲೇಪಿಸಬೇಕು. ಹೀಗೆ ಮಾಡುವುದರಿಂದ ಎರಡನೆಯ ತಿಂಗಳಲ್ಲಿಯೇ ಬಾಣಂತಿಯು ಮತ್ತೆ ಯುವತಿಯಾಗುತ್ತಾಳೆ. ಅದುವರೆಗೆ ಗಂಡನು ಬ್ರಹ್ಮಚರ್ಯದಿಂದ ವೀರ್ಯವನ್ನು ನಿಗ್ರಹಿಸಿಟ್ಟಿರಬೇಕು. ಈ ನಿಯಮಗಳನ್ನು ಪಾಲಿಸುವ ದಂಪತಿಗಳಿಗೆ ಉತ್ತಮಸಂತಾನ, ದೀರ್ಘಾಯುಷ್ಯ ಮತ್ತು ಬಲಪರಾಕ್ರಮಗಳು ವೃದ್ಧಿಯಾಗುತ್ತಿರುತ್ತವೆ. ಇಂತಹ ದಂಪತಿಗಳ ಮಕ್ಕಳೆಲ್ಲರೂ ಉತ್ತಮರೂ, ಬಲಿಷ್ಠರೂ, ಶೂರರೂ, ದೀರ್ಘಜೀವಿಗಳೂ, ಧರ್ಮಾತ್ಮರೂ

ಆಗಿ ಬಾಳುತ್ತಾರೆ. ಬಾಣಂತಿಯು ಯೋನಿಸಂಕೋಚನ ಮತ್ತು ಶೋಧನವನ್ನೂ, ಪುರುಷನು ವೀರ್ಯಸ್ತಂಭನವನ್ನೂ ಮಾಡಿಕೊಳ್ಳಬೇಕು. ದಂಪತಿಗಳು ಈ ರೀತಿ ನಡೆಯುವುದರಿಂದ ಹುಟ್ಟುವ ಸಂತಾನವೆಲ್ಲವೂ ಉತ್ತಮವಾಗಿರುತ್ತವೆ.

ಮಕ್ಕಳು ಯಾವ ಅಂಗದಿಂದಲೂ ಅಸಭ್ಯಚೇಷ್ಟೆಗಳನ್ನು ಮಾಡದೆ, ಸಭ್ಯರಾಗಿ ಬಾಳುವಂತೆ ತಾಯಿಯು ಯಾವಾಗಲೂ ಉತ್ತಮ ಶಿಕ್ಷಣವನ್ನು ಕೊಡುತ್ತಿರಬೇಕು. ಮಕ್ಕಳು ಮಾತನಾಡತೊಡಗುತ್ತಲೇ ಅವರ ನಾಲಿಗೆಯು ಕೋಮಲವಾಗಿ, ಸ್ಪಷ್ಟವಾಗಿ ಉಚ್ಚರಿಸುವ ಉಪಾಯವನ್ನು ಮಾಡಬೇಕು. ಅಕ್ಷರಗಳು ಹುಟ್ಟುವ ಸ್ಥಾನಗಳನ್ನೂ, ಅವುಗಳ ಉಚ್ಚಾರಣೆಯ ಪ್ರಯತ್ನಗಳನ್ನು ಕಲಿಸುತ್ತಿರಬೇಕು. ಹೇಗೆಂದರೆ—'ಪ' ಎಂಬ ಅಕ್ಷರದ ಉತ್ಪತ್ತಿಸ್ಥಾನವು ತುಟಿಗಳೂ, ಉಚ್ಚಾರಣೆಯಲ್ಲಿ ಸ್ಪಷ್ಟಪ್ರಯತ್ನವೂ ಇರುವುದರಿಂದ, ಎರಡು ತುಟಿಗಳನ್ನೂ ಸೇರಿಸಿ, ಇದನ್ನು ಉಚ್ಚರಿಸಬೇಕಾಗುತ್ತದೆ. ಹ್ರಸ್ವ, ದೀರ್ಘ, ಪ್ಲುತಸ್ವರಗಳನ್ನು ಸರಿಯಾಗಿ ಉಚ್ಚರಿಸುವಂತೆ ಕಲಿಸಬೇಕು. ಅಕ್ಷರ, ಮಾತ್ರೆ, ವಾಕ್ಯ, ಸಂಹಿತೆ, ಅವಸಾನ—ಇವು ಬೇರೆ ಬೇರೆಯಾಗಿ ಕೇಳಿಸುವಂತೆ ಮಧುರವಾಗಿಯೂ, ಗಂಭೀರವಾಗಿಯೂ, ಸುಂದರವಾಗಿಯೂ ಉಚ್ಚರಿಸುವ ರೀತಿಯನ್ನು ಅಭ್ಯಾಸ ಮಾಡಿಸಬೇಕು.

ಮಕ್ಕಳು ಮಾತನಾಡತೊಡಗಿ, ಇತರರ ಮಾತನ್ನು ಅರ್ಥ ಮಾಡಿಕೊಳ್ಳುವ ಶಕ್ತಿಯು ಬರತೊಡಗುತ್ತಲೇ, ತಾಯಿಯು ಅವರಿಗೆ ಮುದ್ದಾಗಿ ಮಾತನಾಡುವುದನ್ನೂ, ಹಿರಿಯರು, ಕಿರಿಯರು, ಮಾನ್ಯರು, ತಂದೆ, ತಾಯಿ, ರಾಜ, ವಿದ್ವಾಂಸರು—ಮೊದಲಾದವರೊಡನೆ ಮಾತನಾಡಬೇಕಾದ ಕ್ರಮವನ್ನೂ, ಅವರೊಡನೆ ನಡೆದುಕೊಳ್ಳುವ ರೀತಿಯನ್ನೂ, ಅವರ ಒಳ ಹೇಗೆ ಕುಳಿತುಕೊಳ್ಳಬೇಕೆಂಬುದನ್ನೂ ಕಲಿಸಬೇಕು. ಇದರಿಂದ ಅವರು ಯಾರೊಡನೆಯೂ ಅನುಚಿತ ನಡವಳಿಕೆಗಳನ್ನು ನಡೆಸದೆ, ಎಲ್ಲಾ ಕಡೆಗಳಲ್ಲಿಯೂ ಗೌರವದಿಂದಿರಲು ಅನುಕೂಲವಾಗುವುದು. ಮಕ್ಕಳು ಜಿತೇಂದ್ರಿಯರೂ, ವಿದ್ಯಾಪ್ರೇಮಿಗಳೂ, ಸತ್ಪುರುಷರ ಸಂಗದಲ್ಲಿ ಅಭಿರುಚಿಯುಳ್ಳವರೂ ಆಗುವಂತೆ ಪ್ರಯತ್ನಿ

ಸುತ್ತಿರಬೇಕು. ವ್ಯರ್ಥವಾದ ಆಟ, ಅಳು, ಹಾಸ್ಯ, ಜಗಳ, ಹರ್ಷ, ಶೋಕ, ಯಾವುದರಲ್ಲಿಯೂ ಅತಿಯಾಸೆ, ಹೊಟ್ಟಿಕಿಚ್ಚು, ದ್ವೇಷ ಮೊದಲಾದುವುಗಳು ಅವರಲ್ಲಿ ಬಾರದಂತೆ ನೋಡಿಕೊಳ್ಳುತ್ತಿರಬೇಕು. ಉಪಸ್ಥೇಂದ್ರಿಯವನ್ನು ಮುಟ್ಟುವುದರಿಂದಲೂ, ಮರ್ದನದಿಂದಲೂ ವೀರ್ಯಹಾನಿ, ನಪುಂಸಕತ್ವ ಮತ್ತು ಕೈಯಲ್ಲಿ ದುರ್ಗಂಧವುಂಟಾಗುವುದರಿಂದ ಅದನ್ನು ಮುಟ್ಟದಂತೆ ನೋಡಿಕೊಳ್ಳುತ್ತಿರಬೇಕು. ಮಕ್ಕಳಲ್ಲಿ ಸತ್ಯಭಾಷಣ, ಶೌರ್ಯ, ಧೈರ್ಯ, ಮುಖದಲ್ಲಿ ಪ್ರಸನ್ನತೆ ಮೊದಲಾದ ಗುಣಗಳುಂಟಾಗುವಂತೆ ತಾಯಿ ಪ್ರಯತ್ನಿಸುತ್ತಿರಬೇಕು.

ತಾಯಿತಂದೆಗಳು ಬಾಲಕ-ಬಾಲಿಕೆಯರಿಗೆ ಐದುವರ್ಷಗಳು ತುಂಬುತ್ತಲೇ ದೇವನಾಗರೀ ಅಕ್ಷರಗಳನ್ನೂ, ಅನ್ಯದೇಶೀಯ ಭಾಷೆಯ ಅಕ್ಷರಗಳನ್ನು ಕಲಿಸಬೇಕು. ಬಳಿಕ ಉತ್ತಮಶಿಕ್ಷಣ, ವಿದ್ಯೆ, ಧರ್ಮ, ದೇವರು, ತಾಯಿ, ತಂದೆ, ಆಚಾರ್ಯ, ವಿದ್ವಾಂಸ, ಅತಿಥಿ, ರಾಜ, ಪ್ರಜೆ, ಕುಟುಂಬ, ಒಡಹುಟ್ಟಿದವರು, ಆಳು-ಕಾಳುಗಳು ಮೊದಲಾದವರೊಡನೆ ಹೇಗೆ ನಡೆದುಕೊಳ್ಳಬೇಕೆಂಬುವನ್ನು ಬೋಧಿಸುವ ಮಂತ್ರ, ಶ್ಲೋಕ, ಸೂತ್ರ, ಗದ್ಯ ಪದ್ಯಗಳನ್ನೂ ಅರ್ಥಸಹಿತ ಕಂಠಪಾಠ ಮಾಡಿಸಬೇಕು. ಯಾವನೊಬ್ಬ ಧೂರ್ತನ ಮೋಸಕ್ಕೂ ಗುರಿಯಾಗದಿರುವಂತೆಯೂ, ವಿದ್ಯೆ ಮತ್ತು ಧರ್ಮಕ್ಕೆ ವಿರುದ್ಧವಾದ ಮಾಯಾಜಾಲದಲ್ಲಿ ಬೀಳದಿರುವಂತೆಯೂ, ಭೂತ, ಪ್ರೇತ ಮೊದಲಾದ ಸುಳ್ಳು ವಿಷಯಗಳನ್ನು ನಂಬದಿರುವಂತೆಯೂ ಮಕ್ಕಳಿಗೆ ಉಪದೇಶಿಸುತ್ತಿರಬೇಕು.

ಗುರೋಃ ಪ್ರೇತಸ್ಯ ಶಿಷ್ಯಸ್ತು ಪಿತೃಮೇಧಂ ಸಮಾಚರನ್ ।
ಪ್ರೇತಹಾರ್ಯೈಃ ಸಮಂ ತತ್ರ ದಶರಾತ್ರೇಣ ಶುದ್ಧ್ಯತಿ ॥

ಮನುಸ್ಮೃತಿ ೫-೬೫.

ಗುರುವು ಸತ್ತಬಳಿಕ ಪ್ರೇತವೆಂಬ ಮೃತಶರೀರವನ್ನು ಸುಡುವ ಶಿಷ್ಯನು ಪ್ರೇತಹಾರ ಅದಂರೆ ಶವವನ್ನು ಹೊರುವವರೊಡನೆ ಹತ್ತನೆಯ ದಿನ ಶುದ್ಧನಾಗುತ್ತಾನೆ. ಮತ್ತು ಮೃತನ ಶರೀರವು ಭಸ್ಮವಾಗಿ ಹೋಗುತ್ತಲೇ "ಇಂತಹವನೊಬ್ಬನಿದ್ದನು" ಎಂದು ಜನರು

ಹೇಳುವುದರಿಂದ ಸತ್ತವನಿಗೆ "ಭೂತ ಅಂದರೆ ಹಿಂದಿದ್ದವನು" ಎಂಬ ಹೆಸರು ಬರುತ್ತದೆ. ಹಿಂದೆ ಹುಟ್ಟಿದ್ದು ಇಂದಿಲ್ಲದಿರುವವರೆಲ್ಲರೂ ಭೂತಕಾಲದಲ್ಲಿ ಇದ್ದವರಾದುದರಿಂದ ಅವರೆಲ್ಲರಿಗೂ ಭೂತಗಳೆಂದು ಹೆಸರು. ಇದು ಬ್ರಹ್ಮನಿಂದ ಹಿಡಿದು ಇಂದಿನವರೆಗಿನ ಎಲ್ಲಾ ವಿದ್ವಾಂಸರ ಸಿದ್ಧಾಂತವಾಗಿದೆ. ಆದರೆ ಯಾರಿಗೆ ಶಂಕೆ, ದುಷ್ಟರಸಂಗ ಮತ್ತು ದೂಷಿತಸಂಸ್ಕಾರಗಳುಂಟಾಗುತ್ತವೆಯೋ ಅವನಿಗೆ ಭಯ-ಶಂಕೆ ರೂಪಗಳಾದ ಭೂತ, ಪ್ರೇತ ಶಾಕಿನಿ ಡಾಕಿನಿ ಮೊದಲಾದ ಅನೇಕ ಭ್ರಾಂತಿಜಾಲಗಳು ದುಃಖದಾಯಕಗಳಾಗುತ್ತವೆ. ನೋಡಿರಿ! ಪ್ರಾಣಿಯು ಸಾಯುತ್ತಲೇ ಅದರಲ್ಲಿದ್ದ ಜೀವನು ಪುಣ್ಯಪಾಪಗಳಿಗೆ ಅಧೀನನಾಗಿ ಜಗದೀಶ್ವರನ ನ್ಯಾಯವ್ಯವಸ್ಥೆಯಂತೆ ಸುಖದುಃಖಗಳೆಂಬ ಫಲಗಳನ್ನು ಅನುಭವಿಸಲು ಬೇರೆ ಜನ್ಮವನ್ನು ಪಡೆಯುತ್ತಾನೆ. ನಾಶರಹಿತ ಪರಮೇಶ್ವರನ ಈ ವ್ಯವಸ್ಥೆಯನ್ನು ಯಾರಾದರೂ ಹಾಳುಮಾಡಬಲ್ಲರೆ? ಅರಿಯದ ಜನರು, ವೈದ್ಯಶಾಸ್ತ್ರವನ್ನೂ, ಪದಾರ್ಥವಿದ್ಯೆಯನ್ನೂ ಓದದೆ, ಕೇಳದೆ, ವಿಚಾರಮಾಡದೆ ಸನ್ನಿಪಾತಜ್ವರ ಮೊದಲಾದ ಶಾರೀರಿಕ ರೋಗಗಳಿಗೂ, ಹುಚ್ಚು ಮೊದಲಾದ ಮಾನಸಿಕ ರೋಗಗಳಿಗೂ ಭೂತ-ಪ್ರೇತ ಮೊದಲಾದ ಹೆಸರುಗಳನ್ನಿಡುತ್ತಾರೆ. ರೋಗಗಳಿಗೆ ಔಷಧಿ ಸೇವನೆ ಪಥ್ಯ ಮೊದಲಾದ ಉಚಿತ ನಡೆವಳಿಕೆಯನ್ನು ನಡೆಸದೆ ವಂಚಕರು, ಪಾಷಂಡಿಗಳು ವಜ್ರಮೂರ್ಖರು ಅನಾಚಾರಿಗಳು, ಸ್ವಾರ್ಥಸಾಧಕರು, ಭಂಗಿಗಳು, ಚಮಾರರು, ಶೂದ್ರರು, ಮ್ಲೇಚ್ಛರು-ಮೊದಲಾದವರನ್ನು ನಂಬಿ, ಅವರ ವಿಧವಿಧವಾದ ಠಕ್ಕು, ಮೋಸ, ಕಪಟಗಳಿಗೆ ಗುರಿಯಾಗಿ, ಅವರ ಎಂಜಲನ್ನು ತಿನ್ನುತ್ತಾ, ಸುಳ್ಳುದಾರಗಳು ಮತ್ತು ಸುಳ್ಳು ತಾಯಿತಗಳನ್ನು ಬೇರೆಯವರಿಗೂ ಕಟ್ಟಿಸಿ, ತಾವೂ ಕಟ್ಟಿಸಿಕೊಳ್ಳುತ್ತಾ, ಸುಳ್ಳುಮಂತ್ರಗಳನ್ನು ಹಾಕಿಸಿಕೊಳ್ಳುತ್ತಾ ಅಲೆಯುತ್ತಾರೆ. ಈ ಬುದ್ಧಿಹೀನರು ಈ ರೀತಿ ತಮ್ಮ ಹಣವನ್ನು ಹಾಳುಮಾಡಿ, ಮಕ್ಕಳನ್ನು ದುರ್ದೆಶೆಗೆ ಗುರಿಮಾಡಿ, ರೋಗಗಳನ್ನು ಬೆಳೆಸಿ, ಜನರಿಗೆ ನೋವನ್ನುಂಟುಮಾಡುತ್ತಾ ತಿರುಗುತ್ತಾರೆ. ಬುದ್ಧಿಯಿಲ್ಲದ ಧನಿಕರೂ ದುರ್ಬುದ್ಧಿಗಳೂ, ಪಾಪಿಗಳೂ, ಸ್ವಾರ್ಥಿಗಳೂ ಆದ ಆ ಠಕ್ಕು ಮಂತ್ರವಾದಿಗಳ ಬಳಿಗೆ ಹೋಗಿ, "ಸ್ವಾಮಿ, ಈ

ಹುಡುಗನಿಗೆ, ಹುಡುಗಿಗೆ, ಹೆಂಗಸಿಗೆ ಅಥವಾ ಗಂಡನಿಗೆ ಏನಾಗಿದೆಯೋ ಗೊತ್ತಿಲ್ಲ ಎಂದು ಕೇಳುತ್ತಾರೆ. ಆಗ ಆ ಮೋಸಗಾರರು " ಈ ರೋಗಿಯ ದೇಹದಲ್ಲಿ ದೊಡ್ಡ ಭೂತ, ಪ್ರೇತ, ಭೈರವ, ಮಾರಿ ಮೊದಲಾದುವುಗಳು ಅನೇಕವಾಗಿವೆ. ಇವರ ನಿವಾರಣೆಗೆ ಉಪಾಯ ಮಾಡುವವರೆಗೆ ಇವು ಬಿಡುವುದಿಲ್ಲ; ರೋಗಿಯ ಪ್ರಾಣಗಳನ್ನೂ ಕೂಡ ತೆಗೆದುಕೊಳ್ಳುವುವು. ನೀವು ಮೃದುವಾದ ತುಪ್ಪಟದ ಬಟ್ಟೆಯನ್ನಾಗಲಿ, ದಕ್ಷಿಣೆಯನ್ನಾಗಲಿ ಕೊಟ್ಟರೆ ನಾವು ಮಂತ್ರ, ಜಪ ಪುರಶ್ಚರಣದಿಂದ ಇವುಗಳನ್ನು ಓಡಿಸಿಬಿಡುತ್ತೇವೆ" ಎಂದು ಹೇಳುತ್ತಾರೆ. ಆ ಅರಿಯದ ಗೃಹಸ್ಥರು ಮತ್ತು ಅವರ ನೆಂಟರಿಷ್ಟರು—" ಸ್ವಾಮೀ, ನಮ್ಮ ಸರ್ವಸ್ವವಾದರೂ ಹೋಗಲಿ; ಈ ರೋಗಿಯನ್ನು ಮಾತ್ರ ಗುಣಪಡಿಸಿ " ಎಂದು ಅಂಗಲಾಚುವರು. ಆಗ ಆ ಧೂರ್ತರು ತಪ್ಪು ಸ್ವಾರ್ಥವು ಸಿದ್ಧಿಸಿತೆಂದು " ಒಳ್ಳೆಯದು, ತಾ, ಇಷ್ಟು ಪದಾರ್ಥಗಳನ್ನು; ಇಷ್ಟು ದಕ್ಷಿಣೆಯನ್ನು; ದೇವತೆಗೆ ಸಮರ್ಪಿಸು; ಗೃಹದಾನವನ್ನು ಮಾಡಿಸು " ಎನ್ನುತ್ತಾರೆ. ಬಳಿಕ ಶಕ್ತು ಮಂತ್ರವಾದಿಗಳು ರೋಗಿಯ ಎದುರು ತಾಳ, ಮೃದಂಗ, ಡೋಲು, ಜಾಗಟೆಗಳನ್ನು ಬಾರಿಸುತ್ತಾ ಹಾಡ ತೊಡಗುವರು. ಅವರಲ್ಲೊಬ್ಬ ಮೋಸಗಾರನು ಹುಚ್ಚನಂತೆ ಕುಣಿದು, ಕುಪ್ಪಳಿಸುತ್ತಾ, " ನಾನು ಇವನ ಪ್ರಾಣಗಳನ್ನೇ ತೆಗೆದುಕೊಳ್ಳುತ್ತೇನೆ " ಎನ್ನುವನು. ಬುದ್ಧಿಯಿಲ್ಲದ ಗೃಹಸ್ಥರು ಆ ಧೂರ್ತನಮಾಲಿ, ಚಮಾರ ಮೊದಲಾದ ನೀಚರ ಕಾಲುಗಳ ಮೇಲೆ ಬಿದ್ದು, " ನೀವು ಏನು ಬೇಕಾದರೂ ತೆಗೆದುಕೊಂಡು ಇವನನ್ನು ಬದುಕಿಸಿ " ಎಂದು ಬೇಡುವರು. ಆಗ ಹುಚ್ಚನಂತೆ ಕುಣಿದು ಕುಪ್ಪಳಿಸುತ್ತಿದ್ದ ಆ ಧೂರ್ತನು " ನಾನು ಆಂಜನೇಯ, ಮಿಠಾಯಿ, ಎಣ್ಣೆ, ಸಿಂಧೂರ, ಒಂದೂಕಾಲು ಮಣ ರೊಟ್ಟಿ, ಕೆಂಪು ಲಂಗೋಟಿ—ಇವುಗಳನ್ನು ತಂದಿಡಿ " ಎನ್ನುವನು; ಅಥವಾ " ನಾನು ಮಾರಿ ಅಥವಾ ಮುನೀಶ್ವರ. ಐದು ಸೀಸೆಗಳು ಹೆಂಡ, ಇಪ್ಪತ್ತು ಕೋಳಿಗಳು, ಐದು ಹೋತಗಳು, ಮಿಠಾಯಿ, ಬಟ್ಟೆಗಳು— ಇವುಗಳನ್ನು ತಂದಿಡಿ " ಎನ್ನುತ್ತಾನೆ. ಆ ಬುದ್ಧಿಹೀನರು " ಏನುಬೇಕಾದರೂ ತೆಗೆದುಕೊಳ್ಳಿ" ಎನ್ನುತ್ತಾರೆ. ಆಗ ಉನ್ಮತ್ತನಂತೆ ನಟಿಸುತ್ತಿರುವ ಆ ಧೂರ್ತನು ಬಹಳವಾಗಿ ಕುಣಿದು,

ಕುಪ್ಪಳಿಸುತ್ತಾನೆ. ಆದರೆ ಯಾವನಾದರೂ ಬುದ್ಧಿವಂತನು ಅವರಿಗೆ ಐದು ಪಾದರಕ್ಷೆಗಳ, ದೊಣ್ಣೆ ಅಥವಾ ಕಪಾಳಸೇವೆಯನ್ನು ಸಲ್ಲಿಸಿದರೆ, ಅವನ ಆಂಜನೇಯ, ದೇವಿ ಮತ್ತು ಭೈರವರು ಬೇಗ ಪ್ರಸನ್ನರಾಗಿ ಓಡುತ್ತಾರೆ. ಏಕೆಂದರೆ ಇದು ಆ ಅರಿಯದ ಜನರಿಂದ ಹಣ ಮೊದ ಲಾದುವನ್ನು ಸುಲಿಯುವುದಕ್ಕಾಗಿ ಆ ಧೂರ್ತರು ಏರ್ಪಡಿಸಿಕೊಂಡಿರುವ ತಕ್ಕುಗಳು.

ಇಷ್ಟೇ ಅಲ್ಲದೆ ಆ ಅಜ್ಞಾನಿಗಳು ಗ್ರಹಗ್ರಸ್ತರೂ, ಗ್ರಹರೂಪರೂ ಆದ ಜ್ಯೋತಿರ್ವಿದಾಭಾಸರ ಬಳಿ ಹೋಗಿ, "ಸ್ವಾಮಿ ಇವನಿಗೆ ಏನಾ ಗಿದೆ?" ಎಂದು ಕೇಳುತ್ತಾರೆ. ಆಗವರು ಹೇಳುತ್ತಾರೆ:— "ಇವನಿಗೆ ಸೂರ್ಯ ಮೊದಲಾದ ಗ್ರಹಗಳು ಕ್ರೂರವಾಗಿಹೆ. ಇದಕ್ಕಾಗಿ ನೀವು ಗ್ರಹಗಳ ಶಾಂತಿಪಾಠ, ನವಗ್ರಹಪೂಜೆ ಮತ್ತು ದಾನವನ್ನು ಮಾಡಿಸಿ ದರೆ ಇವನಿಗೆ ಸುಖವಾಗುವುದು. ಇಲ್ಲದಿದ್ದರೆ ಇವನು ಬಹಳ ಪೀಡೆ ಯಿಂದ ನರಳಿ ಸತ್ತುಹೋದರೂ ಆಶ್ಚರ್ಯವಿಲ್ಲ."

ಉತ್ತರ:—ಏನು ಜ್ಯೋತಿರ್ವೇತ್ತರೇ! ಈ ಭೂಮಿಯಿಂತೆಯೇ ಸೂರ್ಯ ಮೊದಲಾದ ಲೋಕಗಳು ಜಡಪದಾರ್ಥಗಳು. ಇವು ತಾಪ, ಪ್ರಕಾಶ ಮೊದಲಾದುವನ್ನು ಬಿಟ್ಟು ಮತ್ತೇನನ್ನೂ ಮಾಡಲಾರವು. ಇವು ಕೋಪಗೊಂಡು ದುಃಖವನ್ನೂ, ಸಮಾಧಾನ ಹೊಂದಿ ಸುಖ ವನ್ನೂ ಕೊಡುವುದಕ್ಕೆ ಇವೇನು ಚೇತನ ಪದಾರ್ಥಗಳೆ?

ಪ್ರಶ್ನೆ:—ಲೋಕದಲ್ಲಿ ರಾಜರೂ, ಪ್ರಜೆಗಳೂ ಸುಖದುಃಖ ಗಳನ್ನು ಅನುಭವಿಸುತ್ತಿರುವುದು ಗ್ರಹಗತಿಗಳ ಫಲವಲ್ಲವೊ?

ಉತ್ತರ:—ಅಲ್ಲ. ಇವೆಲ್ಲಾ ಪುಣ್ಯಪಾಪಗಳ ಫಲ.

ಪ್ರಶ್ನೆ:—ಹಾಗಾದರೆ ಜ್ಯೋತಿಶ್ಶಾಸ್ತ್ರವು ಸುಳ್ಳೊ?

ಉತ್ತರ:—ಅಲ್ಲ. ಅದರಲ್ಲಿರುವ ಅಂಕಗಣಿತ, ಬೀಜಗಣಿತ, ರೇಖಾಗಣಿತ ಈ ವಿದ್ಯೆಗಳೆಲ್ಲವೂ ಸತ್ಯ. ಗ್ರಹಫಲಗಳ ಲೀಲೆಗಳೆಲ್ಲಾ ಸುಳ್ಳು.

ಪ್ರಶ್ನೆ:—ಈ ಜಾತಕವು ನಿಷ್ಫಲವೊ?

ಉತ್ತರ:—ಹೌದು. ಇದು ಜನ್ಮಪತ್ರವಲ್ಲ; ಆದರೆ ಇದಕ್ಕೆ ಶೋಕಪತ್ರವೆಂದು ಹೆಸರಿಡಬೇಕು. ಏಕೆಂದರೆ, ಮಗುವು ಹುಟ್ಟಿದಾಗ ಎಲ್ಲರಿಗೂ ಆನಂದವಾಗುತ್ತದೆ. ಆದರೆ ಆ ಆನಂದವು ಮಗುವಿನ ಜನ್ಮ ಪತ್ರವು ಸಿದ್ಧವಾಗಿ ಗ್ರಹಫಲಗಳನ್ನು ಕೇಳುವವರೆಗೆ ಮಾತ್ರ. ಜೋಯಿಸರು ತಾಯಿತಂದೆಗಳಿಗೆ ಮಗುವಿನ ಜಾತಕವನ್ನು ಬರೆಸ ಬೇಕೆಂದು ಹೇಳಿದಾಗ ಆವರು " ಜೋಯಿಸರೆ! ತಾವು ಜಾತಕವನ್ನು ಚೆನ್ನಾಗಿ ಬರೆಯಿರಿ" ಎನ್ನುತ್ತಾರೆ. ಮಗುವಿನ ತಾಯಿತಂದೆಗಳು ಹಣಗಾರರಾಗಿದ್ದರೆ ಕೆಂಪು ಮತ್ತು ಹಳದೀಬಣ್ಣದ ಅನೇಕ ರೇಖೆ ಗಳಿಂದ ಚಿತ್ರವಿಚಿತ್ರವಾಗಿಯೂ, ಬಡವರಾಗಿದ್ದರೆ ಸಾಧಾರಣವಾಗಿಯೂ ಜಾತಕವನ್ನು ಬರೆದು, ಓದಿ ಹೇಳಲು ಬರುತ್ತಾರೆ. ಮಗುವಿನ ತಾಯಿತಂದೆಗಳು ಜೋಯಿಸರ ಎದುರಿಗೆ ಕುಳಿತು " ಮಗುವಿನ ಜಾತಕ ಚೆನ್ನಾಗಿದೆಯಷ್ಟೆ? ಎಂದು ಕೇಳುತ್ತಾರೆ. ಜೋಯಿಸರು, " ಏನಿದೆಯೋ ಅದನ್ನು ಓದಿ ಹೇಳುತ್ತೇನೆ. ಮಗುವಿನ ಜನನಕಾಲದ ಗ್ರಹಗಳೂ, ಮಿತ್ರಗ್ರಹಗಳೂ ಬಹಳ ಚೆನ್ನಾಗಿವೆ. ಇದರ ಫಲವಾಗಿ ಇವನು ಶ್ರೀಮಂತನೂ ಗೌರವಶಾಲಿಯೂ ಆಗುತ್ತಾನೆ. ಯಾವ ಸಭೆಯಲ್ಲಿ ಹೋಗಿ ಕುಳಿತರೂ ಇವನ ತೇಜಸ್ಸು ಎಲ್ಲರನ್ನೂ ಆಕರ್ಷಿಸು ತ್ತದೆ. ಇವನು ಆರೋಗ್ಯವಂತನೂ ರಾಜಮಾನ್ಯನೂ ಆಗುತ್ತಾನೆ." ಎಂದು ಹೇಳುತ್ತಾರೆ. ಜೋಯಿಸರ ಈ ವಿಧವಾದ ಮಾತುಗಳನ್ನು ಕೇಳಿ ಮಗುವಿನ ತಾಯಿ, ತಂದೆ ಮೊದಲಾದವರು. " ಭಲೆ! ಭಲೆ! ಜೋಯಿಸರೆ! ತಾವು ಬಹಳ ಒಳ್ಳೆಯವರು" ಎಂದು ಹೊಗಳುತ್ತಾರೆ. ಆವರ ಈ ಮಾತುಗಳಿಂದ ತಮ್ಮ ಕಾರ್ಯಸಿದ್ಧಿಯಾಗಲಾರದೆಂದು ತಿಳಿದುಕೊಂಡು ಜೋಯಿಸರು " ಈ ಗ್ರಹಗಳೇನೋ ಚೆನ್ನಾಗಿವೆ. ಆದರೆ, ಈ ಕೆಲವು ಕ್ರೂರಗ್ರಹಗಳ ಯೋಗದಿಂದ ಮಗುವಿಗೆ ಎಂಟನೆಯ ವರ್ಷದಲ್ಲಿ ಮೃತ್ಯುಯೋಗವಿದೆ" ಎಂದು ಹೇಳುತ್ತಾರೆ. ಇದನ್ನು ಕೇಳಿ ಮಗುವಿನ ತಾಯಿ, ತಂದೆ ಮೊದಲಾದವರು ಪುತ್ರೋ ತ್ಸವದ ಆನಂದವನ್ನು ಮರೆತು, ದುಃಖಸಾಗರದಲ್ಲಿ ಮುಳುಗಿ " ಸ್ವಾಮಿ! ಈಗ ನಾವೇನು ಮಾಡಬೇಕು?" ಎಂದು ಅಂಗಲಾಚು ತ್ತಾರೆ. ಜೋಯಿಸರು " ಉಪಾಯಮಾಡಿ" ಎನ್ನುತ್ತಾರೆ. ಗೃಹಸ್ಥರು

"ಏನು ಉಪಾಯ ಮಾಡಬೇಕು?" ಎಂದು ಕೇಳಿದಾಗ ಜೋಯಿಸರು "ಇಂತಿಂತಹ ದಾನಗಳನ್ನು ಮಾಡಬೇಕು. ಗ್ರಹದ ಮಂತ್ರಜಪ ಮಾಡಿಸಬೇಕು. ಮತ್ತು ನಿತ್ಯವೂ ಬ್ರಾಹ್ಮಣರಿಗೆ ಅನ್ನಸಂತರ್ಪಣೆಯನ್ನು ನಡೆಸಬೇಕು. ಹೀಗೆ ಮಾಡಿದರೆ ಗ್ರಹಪೀಡೆಯು ದೂರವಾದರೂ ಆಗಬಹುದು." ಎಂದು ಹೇಳುತ್ತಾರೆ. ಇಲ್ಲಿ ಅನುಮಾನವು ಇದಕ್ಕೋಸ್ಕರ— ಒಂದು ವೇಳೆ ಮಗುವು ಸತ್ತುಹೋದರೆ, "ನಾವೇನು ಮಾಡೋಣ. ಭಗವಂತನನ್ನು ವಿಾರಿದವರು ಯಾರೂ ಇಲ್ಲ. ನಾವಾದರೊ ಬಹಳ ಪ್ರಯತ್ನಗಳನ್ನು ಮಾಡಿದೆವು. ನೀವೂ ಮಾಡಿಸಿದಿರಿ. ಮಗುವಿನ ಕರ್ಮಫಲವೇ ಹಾಗಿತ್ತು" ಎಂದು ಹೇಳುವುದಕ್ಕೂ, ಮಗುವು ಬದುಕಿಕೊಂಡರೆ, "ನಮ್ಮ ಮಂತ್ರಗಳ ನಮ್ಮ ದೇವತೆಗಳ ಮತ್ತು ಬ್ರಾಹ್ಮಣರ ಶಕ್ತಿಯು ಹೇಗಿದೆಯೆಂಬುದನ್ನು ನೋಡಿದಿರೊ? ನಾವು ನಿಮ್ಮ ಹುಡುಗನನ್ನು ಬದುಕಿಸಿಕೊಟ್ಟೆವು" ಎಂದು ಹೇಳುವುದಕ್ಕೂ ಆಗಿದೆ. ಇಲ್ಲಿ ಆಗಬೇಕಾದದ್ದೇನೆಂದರೆ—ಇವರ ಜಪಪಾಠದಿಂದ ಏನೂ ಆಗದಿದ್ದರೆ ಎರಡು-ಮೂರರಷ್ಟು ಹಣ ಕಿತ್ತುಕೊಳ್ಳಬೇಕು. ಉಳಿದುಕೊಂಡರೂ ಕಿತ್ತುಕೊಳ್ಳಬೇಕು. ಏಕೆಂದರೆ— "ಅವರ ಕರ್ಮ ಮತ್ತು ಭಗವಂತನ ನಿಯಮಗಳನ್ನು ಅತಿಕ್ರಮಿಸಿ ನಡೆಯಲು ಯಾರಿಗೂ ಸಾಧ್ಯವಿಲ್ಲ" ಎಂದು ಜೋಯಿಸರು ಹೇಳುವಂತೆ, ಗೃಹಸ್ಥನೂ ಕೂಡ ಮಗುವು ಬದುಕಿಕೊಂಡರೆ "ಇವನು ತನ್ನ ಕರ್ಮ ಮತ್ತು ಭಗವಂತನ ನಿಯಮದಿಂದ ಬದುಕಿಕೊಂಡನೇ ಹೊರತು ನಿಮ್ಮ ಪ್ರಯತ್ನದಿಂದಲ್ಲ" ಎಂದು ಹೇಳಬೇಕು. ಮೂರನೆಯವರು ಗುರು ಮೊದಲಾದವರು. ಇವರು ಕೂಡ ಪುಣ್ಯದ ಹೆಸರಿನಲ್ಲಿ ಗೃಹಸ್ಥರಿಂದ ದಾನಮಾಡಿಸಿ ತಾವೇ ತೆಗೆದುಕೊಳ್ಳುತ್ತಾರೆ. ಇವರಿಗೆ ಕೂಡ ಜೋಯಿಸರಿಗೆ ಕೊಟ್ಟ ಉತ್ತರವನ್ನೇ ಕೊಡಬೇಕು.

ಇನ್ನುಳಿದಿರುವದು ಮಾರಿ, ಮಂತ್ರ, ತಂತ್ರ, ಯಂತ್ರ— ಇವೂ ಕೂಡ ಧೂರ್ತರು ನಡೆಸುತ್ತಿರುವ ಬೂಟಾಟಿಕೆಗಳು. ಕೆಲವರು "ನಾವು ಮಂತ್ರವನ್ನು ಜಪಿಸಿ, ದಾರವನ್ನಾಗಲಿ, ಯಂತ್ರವನ್ನಾಗಲಿ ಕಟ್ಟಿದರೆ ಆ ಯಂತ್ರಮಂತ್ರಗಳ ಪ್ರಭಾವದಿಂದ ನಮ್ಮ ದೇವತೆಗಳೂ, ವೀರರೂ ಅವನಿಗೆ ಯಾವ ತೊಂದರೆಗಳೂ

ಬಾರದಂತೆ ಕಾಪಾಡುತ್ತಾರೆ'' ಎಂದು ಹೇಳುತ್ತಾರೆ. ಇವರಿಗೆ ''ನೀವು ಸಾವಿನಿಂದಲೂ, ಪರಮೇಶ್ವರನ ನಿಯಮದಿಂದಲೂ, ಕರ್ಮ ಫಲದಿಂದಲೂ ಪಾರು ಮಾಡಿಸಬಲ್ಲಿರೊ? ನೀವು ಹೀಗೆ ಮಾಡಿದ ಮೇಲೂ ಸಹ ಎಷ್ಟೋ ಮಕ್ಕಳು ಸತ್ತುಹೋದರಲ್ಲವೆ? ನಿಮ್ಮ ಮನೆಯಲ್ಲೂ ಸಾಯುವರಲ್ಲ? ನೀವು ಸಾವಿನಿಂದ ಪಾರಾಗಬಲ್ಲಿರಾ?'' ಎಂದು ಉತ್ತರ ಕೊಡಬೇಕು. ಆಗ ಆ ಧೂರ್ತರು ಏನನ್ನೂ ಹೇಳಲಾರದೆ, ಇಲ್ಲಿ ತಮ್ಮ ಬೇಳೆ ಬೇಯಲಾರದೆಂದು ತಿಳಿದುಕೊಳ್ಳುವರು. ಇದರಿಂದ ಈ ಎಲ್ಲಾ ಸುಳ್ಳು ನಡೆವಳಿಕೆಗಳನ್ನೂ ಬಿಟ್ಟು ಧಾರ್ಮಿಕರು, ಲೋಕೋಪಕಾರಿಗಳು, ನಿಷ್ಕಪಟಭಾವದಿಂದ ವಿದ್ಯೆಯನ್ನು ಪ್ರಚಾರ ಪಡಿಸುತ್ತಿರುವ ಉತ್ತಮ ವಿದ್ವಾಂಸರು—ಇವರಿಗೆ ಪ್ರತ್ಯುಪಕಾರ ಮಾಡುವುದನ್ನೂ, ಅವರು ಜಗತ್ತಿಗೆ ಉಪಕಾರಮಾಡುವಂತೆ ಅವರೊಡನೆ ಸಹಕರಿಸುವುದನ್ನೂ ಎಂದಿಗೂ ಬಿಡಬಾರದು. ರಸಾಯನ, ಮಾರಣ, ಮೋಹನ, ಉಚ್ಚಾಟನ, ವಶೀಕರಣ ಮೊದಲಾದ ಲೀಲೆಗಳನ್ನು ನಡೆಸುವವರನ್ನು ಮಹಾನೀಚರೆಂದು ತಿಳಿಯಬೇಕು. ಯಾರ ಮೋಸದ ಬಲೆಯಲ್ಲಿಯೂ ಸಿಕ್ಕಿಬಿದ್ದು ತೊಂದರೆಗೀಡಾಗದಂತೆ ತಂದೆ ತಾಯಿಗಳು ಬಾಲ್ಯದಲ್ಲಿಯೇ ಮಕ್ಕಳಿಗೆ ಈ ಸುಳ್ಳುವಿಷಯಗಳ ಜ್ಞಾನವನ್ನು ಮಾಡಿಕೊಡಬೇಕು. ವೀರ್ಯರಕ್ಷಣೆಯಿಂದ ಆನಂದವೂ, ವೀರ್ಯನಾಶದಿಂದ ದುಃಖವೂ ಉಂಟಾಗುವುದೆಂಬ ವಿಷಯವನ್ನೂ ತಿಳಿಸಬೇಕು. ಹೇಗೆಂದರೆ ''ನೋಡಿ ಯಾವನ ದೇಹದಲ್ಲಿ ವೀರ್ಯವು ಸುರಕ್ಷಿತವಾಗಿರುವುದೋ ಅವನ ಆರೋಗ್ಯ, ಬುದ್ಧಿ ಮತ್ತು ಬಲ ಪರಾಕ್ರಮಗಳು ಬೆಳೆದು ಸುಖವುಂಟಾಗುತ್ತದೆ. ಇದರ ರಕ್ಷಣೆಗೆ ಇದೇ ರೀತಿಯು—ಏನೆಂದರೆ—ಕಾಮುಕ ಕಥೆಗಳು, ಕಾಮುಕರ ಸಹವಾಸ, ವಿಷಯಗಳ ಧ್ಯಾನ, ನಾರಿಯ ದರ್ಶನ, ಏಕಾಂತಸೇವನ, ಸಂಭಾಷಣ ಮತ್ತು ಸ್ಪರ್ಶ ಮೊದಲಾದುವುಗಳಿಂದ ಬ್ರಹ್ಮಚಾರಿಗಳು ದೂರವಾಗಿದ್ದು, ಉತ್ತಮಶಿಕ್ಷಣವನ್ನೂ, ಪೂರ್ಣ ವಿದ್ಯೆಯನ್ನೂ ಗಳಿಸಬೇಕು. ದೇಹದಲ್ಲಿ ವೀರ್ಯವನ್ನು ಕಾಪಾಡಿಕೊಳ್ಳದಿರುವ ಪುರುಷನು ನಪುಂಸಕನೂ ಮಹಾ ಕುಲಕ್ಷಣವುಳ್ಳವನೂ ಆಗುತ್ತಾನೆ. ಪ್ರಮೇಹ ರೋಗಿಯು ದುರ್ಬಲನೂ ನಿಸ್ತೇಜನೂ, ಬುದ್ಧಿಹೀನನೂ ಆಗಿ

ಉತ್ಸಾಹ, ಸಾಹಸ, ಧೈರ್ಯ, ಬಲ, ಪರಾಕ್ರಮ ಮೊದಲಾದ ಗುಣಗಳನ್ನು ಕಳೆದುಕೊಂಡು ಹಾಳಾಗಿ ಹೋಗುತ್ತಾನೆ. ನೀವು ಉತ್ತಮ ಶಿಕ್ಷಣ, ವಿದ್ಯಾಧ್ಯಯನ ಮತ್ತು ವೀರ್ಯರಕ್ಷಣೆಯನ್ನು ಮಾಡಿಕೊಳ್ಳುವವರಲ್ಲಿ ಈ ಸಮಯವನ್ನು ಕಳೆದುಕೊಂಡರೆ, ಮತ್ತೆ ನಿಮಗೆ ಈ ಜನ್ಮದಲ್ಲಿ ಇಂತಹ ಅಮೂಲ್ಯ ಸಮಯವು ದೊರೆಯಲಾರದು. ಗೃಹಕೃತ್ಯವನ್ನು ನೋಡಿಕೊಳ್ಳುವವರಾದ ನಾವು ಜೀವದಿಂದಿರುವವರೆಗೆ ನೀವು ವಿದ್ಯಾಧ್ಯಯನ ಮತ್ತು ದೇಹಬಲವನ್ನು ವೃದ್ಧಿಪಡಿಸಿಕೊಳ್ಳುತ್ತಿರಬೇಕು'' ಇದೇ ರೀತಿ ತಾಯಿ ತಂದೆಗಳು ಮಕ್ಕಳಿಗೆ ಅನ್ಯಾನ್ಯ ಶಿಕ್ಷಣವನ್ನೂ ಮಾಡಬೇಕು ಆದುದರಿಂದಲೇ '' ಮಾತೃಮಾನ್, ಪಿತೃಮಾನ್ '' ಎಂಬ ಪದಗಳ ಗ್ರಹಣವು ಮೇಲಿನ ವಾಕ್ಯದಲ್ಲಿ ಮಾಡಲ್ಪಟ್ಟಿದೆ. ಅಂದರೆ, ಮಕ್ಕಳಿಗೆ ಹುಟ್ಟಿದಂದಿನಿಂದ ಐದು ವರ್ಷಗಳವರೆಗೆ ತಾಯಿಯೂ, ಆರನೆಯ ವರ್ಷದಿಂದ ಎಂಟನೆಯ ವರ್ಷದವರೆಗೆ ತಂದೆಯೂ ಶಿಕ್ಷಣವನ್ನು ಕೊಡಬೇಕು. ಒಂಬತ್ತನೆಯ ವರ್ಷದ ಆರಂಭದಲ್ಲಿ ದ್ವಿಜರು ತಮ್ಮ ಮಕ್ಕಳಿಗೆ ಉಪನಯನವನ್ನು ಮಾಡಿ, ಪೂರ್ಣ ವಿದ್ವಾಂಸರಿಂದ ಶಿಕ್ಷಣ ಮತ್ತು ವಿದ್ಯಾದಾನ ನಡೆಯುತ್ತಿರುವ ಆಚಾರ್ಯಕುಲಗಳಿಗೆ ಬಾಲಕರನ್ನೂ, ಪೂರ್ಣವಿದುಷಿಯರಾದ ಸ್ತ್ರೀಯರಿಂದ ವಿದ್ಯಾದಾನ ನಡೆಯುತ್ತಿರುವ ಆಚಾರ್ಯಕುಲಗಳಿಗೆ ಬಾಲಿಕೆಯರನ್ನೂ ವಿದ್ಯಾಭ್ಯಾಸಕ್ಕಾಗಿ ಕಳುಹಿಸಬೆಕು. ಮತ್ತು ಶೂದ್ರಾದಿ ವರ್ಣದವರು ಉಪನಯನವಿಲ್ಲದೆಯೆ ವಿದ್ಯಾಭ್ಯಾಸಕ್ಕೋಸ್ಕರ ಗುರುಕುಲಗಳಿಗೆ ಕಳುಹಿಸಲ್ಪಡಬೇಕು. ವಿದ್ಯೆಯನ್ನು ಕಲಿಸುವುದರಲ್ಲಿ ಮಕ್ಕಳನ್ನು ಎಂದೂ ಲಾಲಿಸದೆ ದಂಡಿಸುವ ತಾಯಿ ತಂದೆಗಳ ಮಕ್ಕಳೇ, ವಿದ್ವಾಂಸರೂ, ಸಭ್ಯರೂ, ಸುಶಿಕ್ಷಿತರೂ ಆಗಿ ಬಾಳುತ್ತಾರೆ—ಇದಕ್ಕೆ ವ್ಯಾಕರಣಮಹಾಭಾಷ್ಯದ ಪ್ರಮಾಣ—

ಸಾಮ್ನೈವ ಪಾಣಿಭಿಘ್ನಂತಿ ಗುರವೋ ನ ವಿಷೋಕ್ಷಿತೈಃ ।
ಲಾಲನಾಶ್ರಯಿಣೋ ದೋಷಾಸ್ತಾಡನಾಶ್ರಯಿಣೋ ಗುಣಾಃ ॥

ಮಹಾಭಾಷ್ಯ ಅ. ೮-೧-೮

'' ಮಕ್ಕಳನ್ನೂ, ಶಿಷ್ಯರನ್ನೂ ದಂಡಿಸುವ ತಾಯಿ, ತಂದೆ

ಮತ್ತು ಅಚಾರ್ಯರು ಮಕ್ಕಳಿಗೂ, ಶಿಷ್ಯರಿಗೂ ತಮ್ಮ ಕೈಯಿಂದ ಅಮೃತವನ್ನು ಪಾನಮಾಡಿಸುತ್ತಾರೆ, ಮಕ್ಕಳನ್ನೂ, ಶಿಷ್ಯರನ್ನೂ ಅತಿಯಾಗಿ ಮುದ್ದಿಸುವವರು ತಮ್ಮ ಕೈಯಾರೆ ವಿಷವನ್ನು ಕುಡಿಸಿ ಹಾಳುಮಾಡುತ್ತಾರೆ. ಯಾಕೆಂದರೆ ಅತಿಯಾಗಿ ಮುದ್ದಿಸುವುದರಿಂದ ಮಕ್ಕಳು ಮತ್ತು ಶಿಷ್ಯರು ದೋಷಿಗಳಾಗಿಯೂ, ದಂಡನೆಯಿಂದ ಗುಣವಂತರಾಗಿಯೂ ಆಗುತ್ತಾರೆ.'' ಮಕ್ಕಳು ಮತ್ತು ಶಿಷ್ಯರೂ ಯಾವಾಗ್ಯೂ ಲಾಲನೆಯಿಂದ ಅಪ್ರಸನ್ನರಾಗಿ ದಂಡನೆಯಿಂದ ಪ್ರಸನ್ನರಾಗಬೇಕು. ಆದರೆ ತಾಯಿತಂದೆಗಳೂ, ಆಚಾರ್ಯರೂ ಈರ್ಷ್ಯಾ ದ್ವೇಷಗಳಿಂದ ಬಾಲಕರನ್ನು ದಂಡಿಸಬಾರದು. ಹೊರಗೆ ಬೆದರಿಕೆಯನ್ನೂ, ಒಳಗೆ ದಯಾದೃಷ್ಟಿಯನ್ನೂ ಇಟ್ಟಿರಬೇಕು. ಇತರ ವಿಷಯಗಳಲ್ಲಿ ಶಿಕ್ಷಣವನ್ನು ಕೊಡುವಂತೆ ಕಳುವು, ವ್ಯಭಿಚಾರ, ಸೋಮಾರಿತನ, ಆಜಾಗರೂಕತೆ, ಮಾದಕದ್ರವ್ಯಗಳ ಸೇವನೆ, ಸುಳ್ಳು, ಹಿಂಸೆ, ಕ್ರೌರ್ಯ, ಹೊಟ್ಟೆಗಿಚ್ಚು, ದ್ವೇಷ, ಮೋಹ ಮೊದಲಾದ ದೋಷಗಳನ್ನು ಬಿಟ್ಟು ಸತ್ಯದಿಂದ ನಡೆಯುತ್ತಿರುವಂತೆ ಬೋಧಿಸಬೇಕು. ಯಾಕೆಂದರೆ, ಯಾವನಾದರೂ ಮನುಷ್ಯನು ಯಾವನಾದರೊಬ್ಬನ ಎದುರಿಗೆ ಒಂದು ಸಲ ಕಳುವು, ವ್ಯಭಿಚಾರ, ಸುಳ್ಳು ಮೊದಲಾದ ಕೆಲಸಗಳನ್ನು ನಡೆಸಿದರೆ, ಅವನೆದಿರಿಗೆ ಆ ಮನುಷ್ಯನಿಗೆ ಸಾಯುವವರಗೆ ಗೌರವ ವುಂಟಾಗುವುದಿಲ್ಲ. ಕೊಟ್ಟ ಮಾತನ್ನು ತಪ್ಪುವವನಿಗೆ ಉಂಟಾಗುವಷ್ಟು ಕೇಡು ಬೇರೆ ಯಾರಿಗೂ ಆಗುವುದಿಲ್ಲ. ಆದ್ದರಿಂದ ಯಾರೊಡನೆ ಯಾವ ಪ್ರತಿಜ್ಞೆಯನ್ನು ಮಾಡಿದರೆ, ಅವರೊಡನೆ ಅದನ್ನು ಪೂರ್ಣಗೊಳಿಸಬೇಕು. ಯಾರಿಗಾದರೂ ''ನಾನು ಇಂತಹ ಸಮಯದಲ್ಲಿ ತಮ್ಮನ್ನು ಕಾಣುತ್ತೇನೆ, ತಾವು ಇಂತಹ ಸಮಯದಲ್ಲಿ ನನ್ನನ್ನು ಕಾಣಿರಿ. ಅಥವಾ ನಾನು ಈ ಪದಾರ್ಥವನ್ನು ಇಷ್ಟು ಹೊತ್ತಿಗೆ ಕೊಡುತ್ತೇನೆ'' ಎಂದು ಹೇಳಿದರೆ, ಹಾಗೆಯೇ ನಡೆಯಬೇಕು. ಹಾಗೆ ನಡೆಯದಿದ್ದರೆ ಅವನನ್ನು ಯಾರೂ ನಂಬುವುದಿಲ್ಲ. ಆದ್ದರಿಂದ ಎಲ್ಲರೂ ಯಾವಾಗಲೂ ಸತ್ಯಭಾಷಿಗಳೂ, ಸತ್ಯಪ್ರತಿಜ್ಞರೂ ಆಗಿರಬೇಕು. ಯಾರಿಗೂ ಅಹಂಕಾರವಿರಬಾರದು. ಛಲ, ಕಪಟ ಅಥವಾ ಕೃತಘ್ನತೆಗಳಿಂದ ತನ್ನ ಹೃದಯವೇ ದುಃಖಿಸುವಾಗ ಇತರರ ವಿಷಯ

ವಾಗಿ ಹೇಳಬೇಕಾದ್ದೇನಿದೆ! ಒಳಗೊಂದು ಹೊರಗೊಂದು ಇಟ್ಟುಕೊಂಡು, ಇತರರನ್ನು ಮೋಸಪಡಿಸಿ ಅವರಿಗುಂಟಾಗುವ ಹಾನಿಯ ಕಡೆಗೆ ಗಮನಕೊಡದೆ, ಸ್ವಾರ್ಥವನ್ನು ಸಾಧಿಸಿಕೊಳ್ಳುವುದಕ್ಕೆ ಛಲ–ಕಪಟಗಳೆಂದು ಹೆಸರು. ಇತರರು ಮಾಡಿದ ಉಪಕಾರವನ್ನು ಮಾನ್ಯ ಮಾಡದಿರುವುದೇ ಕೃತಘ್ನತೆ. ಕೋಪ ಮೊದಲಾದ ದೋಷಗಳನ್ನೂ, ಕಠೋರ ವಚನಗಳನ್ನೂ ಬಿಟ್ಟು ಶಾಂತವೂ ಮಧುರವೂ ಆದ ಮಾತುಗಳನ್ನೇ ಆಡಬೇಕು. ಅಧಿಕ ಹರಟಬಾರದು. ಆವಶ್ಯಕತೆಗಿಂತ ಹೆಚ್ಚಾಗಲಿ ಕಡಿಮೆಯಾಗಲಿ ಮಾತನಾಡಬಾರದು. ಹಿರಿಯರನ್ನು ಗೌರವಿಸಬೇಕು. ಅವರು ಬಂದರೆ ಎದ್ದು, ಮೊದಲು 'ನಮಸ್ತೇ' ಮಾಡಿ ಎತ್ತರವಾದ ಆಸನದಲ್ಲಿ ಕೂಡಿಸಬೇಕು. ಅವರೆದುರಿಗೆ ಉತ್ತಮಾಸನದಲ್ಲಿ ಕೂಡಬಾರದು. ಸಭೆಯಲ್ಲಿ ಯಾರೂ ಬಂದು ಎಬ್ಬಿಸದಂತೆ ತನ್ನ ಯೋಗ್ಯತೆಗನುಸಾರವಾದ ಸ್ಥಳದಲ್ಲಿ ಕೂಡಬೇಕು. ಯಾರನ್ನೂ ವಿರೋಧಿಸಬಾರದು. ಸಂಪನ್ನನಾಗಿದ್ದು ಗುಣಗಳನ್ನು ಗ್ರಹಿಸಿ, ದೋಷಗಳನ್ನು ಬಿಡಬೇಕು. ದುಷ್ಟರನ್ನು ಬಿಟ್ಟು ಸಜ್ಜನರ ಸಂಗವನ್ನು ಮಾಡಬೇಕು. ಶರೀರದಿಂದಲೂ, ಮನಸ್ಸಿನಿಂದಲೂ, ಧನ ಮೊದಲಾದ ಉತ್ತಮೋತ್ತಮ ಪದಾರ್ಥಗಳಿಂದಲೂ ತಾಯಿ ತಂದೆ ಮತ್ತು ಆಚಾರ್ಯರ ಸೇವೆಯನ್ನು ಪ್ರೇಮಪೂರ್ವಕವಾಗಿ ಮಾಡಬೇಕು.

ಯಾನ್ಯಸ್ಮಾಕಗ್ಂ ಸುಚರಿತಾನಿ ತಾನಿ ತ್ವಯೋಪಾಸ್ಯಾನಿ। ನೋ ಇತರಾಣಿ ॥

ತೈತ್ತರೀಯ, ಪ್ರಪಾಠಕ ೭, ಅನುವಾಕ ೧೧.

ಇದರ ಅಭಿಪ್ರಾಯವೇನೆಂದರೆ—ತಾಯಿ, ತಂದೆ ಮತ್ತು ಆಚಾರ್ಯರು ತಮ್ಮ ಮಕ್ಕಳಿಗೂ, ಶಿಷ್ಯರಿಗೂ ಯಾವಾಗಲೂ ಸತ್ಯೋಪದೇಶವನ್ನೇ ಮಾಡಬೇಕು. 'ನಮ್ಮ ಧರ್ಮಯುಕ್ತ ಕರ್ಮಗಳನ್ನು ಗ್ರಹಣಮಾಡಿ, ದುಷ್ಕಾರ್ಯಗಳನ್ನು ತ್ಯಾಗಮಾಡಿ, ಸತ್ಯವೆಂದು ತಿಳಿದಿರುವುದನ್ನು ಪ್ರಕಾಶಪಡಿಸಿ ಪ್ರಚಾರಮಾಡಿ. ಪಾಷಂಡಿಗಳನ್ನೂ, ದುರಾಚಾರಿಗಳನ್ನೂ ನಂಬಬೇಡಿ. ತಾಯಿ, ತಂದೆ ಮತ್ತು ಆಚಾರ್ಯರು ಆಜ್ಞಾಪಿಸಿದ ಉತ್ತಮ ಕಾರ್ಯಗಳನ್ನು ಅವರ ಇಷ್ಟಾನುಸಾರ ನೆರ

ವೇರಿಸಿ." ಎಂದು ಕೂಡಾ ಬೋಧಿಸಬೇಕು. ಬಳಿಕ ಧರ್ಮ, ವಿದ್ಯೆ ಮತ್ತು ಸದಾಚಾರದ ವಿಷಯವಾಗಿ ತಾಯಿ ತಂದೆಗಳು ಕಂಠಪಾಠ ಮಾಡಿಸಿರುವ ಶ್ಲೋಕಗಳು, ನಿಘಂಟು, ನಿರುಕ್ತ, ಅಷ್ಟಾಧ್ಯಾಯೀ ಅಥವಾ ಇತರ ಸೂತ್ರಗಳು ಅಥವಾ ವೇದಮಂತ್ರಗಳು—ಇವುಗಳಿಗೆ ಆಚಾರ್ಯರು ಪುನಃ ಅರ್ಥವನ್ನು ತಿಳಿಸಬೇಕು. ಪ್ರಥಮ ಸಮುಲ್ಲಾಸದಲ್ಲಿ ಪರಮೇಶ್ವರನ ವ್ಯಾಖ್ಯಾನಮಾಡಿರುವಂತೆಯೇ ಆರಿತುಕೊಂಡು ಆತನ ಉಪಾಸನೆಯನ್ನು ಮಾಡಬೇಕು. ಯಾವಪ್ರಕಾರ ಆರೋಗ್ಯ, ವಿದ್ಯೆ, ಬಲ—ಇವುಗಳು ಪ್ರಾಪ್ತವಾಗುವುವೋ ತದೇಪ್ರಕಾರ ಊಟ, ಉಡಿಗೆ ಮತ್ತು ನಡೆ ವ್ಯವಹಾರಗಳನ್ನು ಮಾಡಬೇಕು ಮತ್ತು ಮಾಡಿಸಬೇಕು. ಹಸಿವಿಗಿಂತ ಸ್ವಲ್ಪ ಕಡಿಮೆಯಾಗಿ ಊಟಮಾಡಬೇಕು. ಮದ್ಯ ಮಾಂಸ ಮೊದಲಾದವುಗಳ ಸೇವನೆಯಿಂದ ದೂರವಾಗಿರಬೇಕು. ಅಜ್ಞಾತವಾದ ಗಂಭೀರ ನೀರಿನಲ್ಲಿಳಿಯಬಾರದು. ಏಕೆಂದರೆ, ಜಲ-ಜಂತುಗಳಿಂದಾಗಲಿ, ಇತರ ಪದಾರ್ಥಗಳಿಂದಾಗಲಿ ತೊಂದರೆಯಾಗಬಹುದು. ಈಜು ಬರದಿದ್ದರೆ ಮುಳುಗಿಹೋಗುವ ಸಂಭವವೂ ಉಂಟು. **'ನಾವಿಜ್ಞಾತೇ ಜಲಾಶಯೇ'** ತಿಳಿಯದ ಜಲಾಶಯದಲ್ಲಿ ಪ್ರವೇಶಿಸಿ ಸ್ನಾನ ಮೊದಲಾದುವನ್ನು ಮಾಡಬಾರದೆಂದು ಮನುಧರ್ಮ ಶಾಸ್ತ್ರಕಾರರು ಹೇಳಿದ್ದಾರೆ.

ದೃಷ್ಟಿಪೂತಂ ನ್ಯಸೇತ್ಪಾದಂ ವಸ್ತ್ರಪೂತಂ ಜಲಂ ಪಿಬೇತ್ ।
ಸತ್ಯಪೂತಾಂ ವದೇದ್ವಾಚಂ ಮನಃಪೂತಂ ಸಮಾಚರೇತ್ ॥

ಮನುಸ್ಮೃತಿ ೬-೪೬

ಅರ್ಥ :—ಕೆಳಗೆ ದೃಷ್ಟಿಯಿಟ್ಟು, ಹಳ್ಳತಿಟ್ಟುಗಳನ್ನು ನೋಡಿಕೊಂಡು ನಡೆಯಬೇಕು. ಬಟ್ಟೆಯಿಂದ ಶೋಧಿಸಿದ ನೀರನ್ನು ಕುಡಿಯಬೇಕು. ಸತ್ಯದಿಂದ ಪವಿತ್ರವಾದ ಮಾತುಗಳನ್ನು ನುಡಿಯಬೇಕು. ಮನಸ್ಸಿನಿಂದ ವಿಚಾರಮಾಡಿ ಆಚರಿಸಬೇಕು.

ಮಾತಾ ಶತ್ರುಃ ಪಿತಾ ವೈರೀ ಯೇನ ಬಾಲೋ ನ ಪಾಠಿತಃ ।
ನ ಶೋಭತೇ ಸಭಾಮಧ್ಯೇ ಹಂಸಮಧ್ಯೇ ಬಕೋ ಯಥಾ ॥

[ಚಾಣಕ್ಯನೀತಿ ೨-೧೧]

" ವಿದ್ಯೆಯನ್ನು ಕಲಿಸದ ತಾಯಿತಂದೆಗಳು ಮಕ್ಕಳ ಪೂರ್ಣ ಶತ್ರುಗಳು. ವಿದ್ಯೆಯಿಲ್ಲದವರು ವಿದ್ವಾಂಸರ ಸಭೆಯಲ್ಲಿ, ಹಂಸಪಕ್ಷಿಗಳ ಗುಂಪಿನಲ್ಲಿ ಬಕ ಪಕ್ಷಿಗಳಂತೆ ಶೋಭಿಸದೆ, ತಿರಸ್ಕಾರಕ್ಕೆ ಪಾತ್ರರಾಗುತ್ತಾರೆ." ತನುನುನಧೆನಗಳಿಂದ ಮಕ್ಕಳು ವಿದ್ಯಾವಂತರೂ, ಧರ್ಮಾತ್ಮರೂ, ಸಭ್ಯರೂ, ಸುಶಿಕ್ಷಿತರೂ ಆಗುವಂತೆ ಮಾಡುವುದೇ ತಾಯಿತಂದೆಗಳ ಕರ್ತವ್ಯವೂ, ಪರಮಧರ್ಮವೂ, ಕೀರ್ತಿದಾಯಕವೂ ಆಗಿರುತ್ತದೆ.

ಬಾಲಶಿಕ್ಷಣವನ್ನು ಕುರಿತು ಈ ಸ್ವಲ್ಪ ಮಾತ್ರ ಬರೆದಿವ್ದೇವೆ. ಇದರಿಂದಲೇ ಬುದ್ಧಿವಂತರು ಬಹಳವಾಗಿ ಗ್ರಹಿಸಬಲ್ಲರು.

ಇತಿ ಶ್ರೀಮದ್ದಯಾನಂದ ಸರಸ್ವತೀಸ್ವಾಮಿಕೃತೇ
ಸತ್ಯಾರ್ಥಪ್ರಕಾಶೇ ಸುಭಾಷಾವಿಭೂಷಿತೇ
ಬಾಲಶಿಕ್ಷಾವಿಷಯೇ
ದ್ವಿತೀಯಃ ಸಮುಲ್ಲಾಸಃ ಸಂಪೂರ್ಣಃ ॥೨॥

॥ ಓಂ ॥

ಅಥ ತೃತೀಯ ಸಮುಲ್ಲಾಸಾರಂಭಃ

ಅಥಾಧ್ಯಯನಾಧ್ಯಾಪನವಿಧಿಂ ವ್ಯಾಖ್ಯಾಸ್ಯಾಮಃ ॥

ಈಗ ಮೂರನೆಯ ಸಮುಲ್ಲಾಸದಲ್ಲಿ ಓದುವ ಮತ್ತು ಓದಿಸುವ ರೀತಿಯನ್ನು ಬರೆಯುತ್ತೇವೆ.

ಮಕ್ಕಳನ್ನು ಉತ್ತಮ ವಿದ್ಯೆ, ಶಿಕ್ಷಣ ಮತ್ತು ಗುಣ ಕರ್ಮ ಸ್ವಭಾವಗಳೆಂಬ ಆಭರಣಗಳಿಂದ ಅಲಂಕರಿಸುವುದು, ತಾಯಿ, ತಂದೆ ಆಚಾರ್ಯ ಮತ್ತು ಬಂಧು-ಬಾಂಧವರ ಮುಖ್ಯ ಕರ್ತವ್ಯವಾಗಿರುತ್ತದೆ. ಚಿನ್ನ, ಬೆಳ್ಳಿ, ಮಾಣಿಕ್ಯ, ಮುತ್ತು, ಹವಳ ಮೊದಲಾದ ರತ್ನಗಳ ಆಭರಣಗಳನ್ನು ಧರಿಸುವುದರಿಂದ ಮಾನವನ ಆತ್ಮವು ಎಂದೂ ಸುಶೋಭಿತವಾಗಲಾರದು. ಏಕೆಂದರೆ, ಈ ಒಡವೆಗಳನ್ನು ಧರಿಸುವುದರಿಂದ ಕೇವಲ ದೇಹಾಭಿಮಾನವೂ ವಿಷಯಾಸಕ್ತಿಯೂ, ಕಳ್ಳ ಮೊದಲಾದವರ ಭಯವೂ ಉಂಟಾಗುವುದಲ್ಲದೆ, ಪ್ರಾಣಾಪಾಯವೂ ಕೂಡ ಸಂಭವಿಸಬಹುದು. ಈ ಅಭರಣಗಳ ದೆಸೆಯಿಂದ ಬಾಲಕರು ಮೊದಲಾದವರು ದುಷ್ಟರ ಕೈಯಿಂದ ಸಾವಿಗೆ ಗುರಿಯಾಗುತ್ತಿರುವುದನ್ನು ಲೋಕದಲ್ಲಿ ನೋಡುತ್ತಿದ್ದೇವೆ.

ವಿದ್ಯಾವಿಲಾಸಮನಸೋ ಧೃತಶೀಲಶಿಕ್ಷಾಃ ಸತ್ಯವ್ರತಾ ರಹಿತಮಾನನಮುಲಾಪಹಾರಾಃ । ಸಂಸಾರದುಃಖದಲನೇನ ಸುಭೂಷಿತಾ ಯೇ ಧನ್ಯಾ ನರಾ ವಿಹಿತಕರ್ಮಪರೋಪಕಾರಾಃ ॥

ವಿದ್ಯಾಸಕ್ತರೂ, ಶೀಲಸ್ವಭಾವಗಳಿಂದ ಕೂಡಿದವರೂ, ಸತ್ಯ ಭಾಷಣ ಮೊದಲಾದ ನಿಯಮಗಳನ್ನು ಪರಿಪಾಲಿಸುವವರೂ, ಅಹಂಕಾರ ಮತ್ತು ಆಪವಿತ್ರತೆಯಿಂದ ದೂರವಾಗಿರುವವರೂ, ಇತರರ ಮಾಲಿನ್ಯವನ್ನು ಹೋಗಲಾಡಿಸುವವರೂ, ಸತ್ಯೋಪದೇಶ ಮತ್ತು ವಿದ್ಯಾದಾನದಿಂದ ಸಾಂಸಾರಿಕ ಜನರ ದುಃಖಗಳನ್ನು ದೂರಮಾಡಿ

ಯಶಸ್ವಿಗಳಾಗಿರುವವರೂ, ವೇದವಿಹಿತ ಕಾರ್ಯಗಳಿಂದ ಪರೋಪಕಾರದಲ್ಲಿ ತೊಡಗಿರುವವರೂ ಆದ ಸ್ತ್ರೀಪುರುಷರು ಧನ್ಯರು. ಆದ್ದರಿಂದ ಎಂಟು ವರ್ಷಗಳು ತುಂಬುತ್ತಲೇ ತಾಯಿತಂದೆಗಳು ತಮ್ಮ ಬಾಲಕರನ್ನು ಬಾಲಕರ ಪಾಠಶಾಲೆಗೂ ಬಾಲಿಕೆಯರನ್ನು ಕನ್ಯಾ ಪಾಠಶಾಲೆಗೂ ಕಳುಹಿಸಿಕೊಡಬೇಕು. ದುರಾಚಾರಿಗಳಾದ ಅಧ್ಯಾಪಕರಿಂದಾಗಲಿ, ದುರಾಚಾರಿಣಿಯರಾದ ಅಧ್ಯಾಪಿಕೆಯರಿಂದಾಗಲಿ ಮಕ್ಕಳಿಗೆ ಶಿಕ್ಷಣವನ್ನು ಕೊಡಿಸಬಾರದು. ಆದರೆ ಪೂರ್ಣ ವಿದ್ವಾಂಸರೂ, ಧರ್ಮಾತ್ಮರೂ ಆದ ಅಧ್ಯಾಪಕ-ಅಧ್ಯಾಪಿಕೆಯರೇ ಬಾಲ-ಬಾಲಿಕೆಯರಿಗೆ ಓದಿಸಲು ಮತ್ತು ಶಿಕ್ಷಣವನ್ನು ಕೊಡಲು ಅರ್ಹರು.

ದ್ವಿಜರು ತಮ್ಮ ಮನೆಯಲ್ಲಿ ತಮ್ಮ ಬಾಲಕರಿಗೆ ಯಜ್ಞೋಪವೀತಸಂಸ್ಕಾರವನ್ನು ಮತ್ತು ಬಾಲಿಕೆಯರಿಗೂ ಕೂಡ ಯಥಾಯೋಗ್ಯ ಸಂಸ್ಕಾರವನ್ನು ಮಾಡಿಸಿ ಹಿಂದೆ ಹೇಳಿದಂತೆ ಆಚಾರ್ಯಕುಲ ಅಂದರೆ, ಅವರವರ ಪಾಠಶಾಲೆಗಳಿಗೆ ಕಳುಹಿಸಬೇಕು. ವಿದ್ಯೆಯನ್ನು ಓದುವ ಸ್ಥಾನವು ಏಕಾಂತ ಪ್ರದೇಶದಲ್ಲಿರಬೇಕು ಮತ್ತು, ಆ ಬಾಲಕರ ಮತ್ತು ಬಾಲಿಕೆಯರ ಪಾಠಶಾಲೆಗಳು ಪರಸ್ಪರ ಎರಡು ಹರದಾರಿಗಳ ದೂರ ಇರಬೇಕು. ಅಧ್ಯಾಪಕರು ಮತ್ತು ಭೃತ್ಯರು ಬಾಲಕರ ಪಾಠಶಾಲೆಗಳಲ್ಲಿ ಪುರುಷರೂ, ಕನ್ಯಾಪಾಠಶಾಲೆಗಳಲ್ಲಿ ಸ್ತ್ರೀಯರೂ ಇರಬೇಕು. ಕನ್ಯಾಪಾಠಶಾಲೆಯಲ್ಲಿ ಐದು ವರ್ಷದ ಹುಡುಗನನ್ನೂ, ಬಾಲಕರ ಪಾಠಶಾಲೆಯಲ್ಲಿ ಐದು ವರ್ಷದ ಹುಡುಗಿಯಿನ್ನೂ ಕೂಡ ಸೇರಿಸಬಾರದು. ಅಂದರೆ ಎಲ್ಲಿಯವರಿಗೆ ಅವರು ಬ್ರಹ್ಮಚಾರಿಗಳಾಗಿಯೂ, ಬ್ರಹ್ಮಚಾರಿಣಿಗಳಾಗಿಯೂ ಇರುತ್ತಾರೋ ಅಲ್ಲಿಯವರಿಗೆ ಸ್ತ್ರೀ ಅಥವಾ ಪುರುಷರ ದರ್ಶನ, ಸ್ಪರ್ಶ, ಏಕಾಂತವಾಸ, ಸಂಭಾಷಣೆ, ವಿಷಯ ಕಥೆ, ಪರಸ್ಪರ ಆಟ, ವಿಷಯಚಿಂತನೆ ಮತ್ತು ಸಮಾಗಮ—ಈ ಎಂಟು ವಿಧವಾದ ಮೈಥುನಗಳಿಂದ ದೂರವಾಗಿರಬೇಕು. ಉತ್ತಮ ವಿದ್ಯೆ, ಶೀಲ, ಶಿಕ್ಷಣ, ಸ್ವಭಾವ, ದೇಹಬಲ, ಮತ್ತು ಆತ್ಮಬಲವನ್ನು ಪಡೆದು, ಆನಂದವನ್ನು ನಿತ್ಯವೂ ಅಭಿವೃದ್ಧಿಪಡಿಸಿಕೊಳ್ಳುವಂತೆ ಅಧ್ಯಾಪಕರು ವಿದ್ಯಾರ್ಥಿ-ವಿದ್ಯಾರ್ಥಿನಿಯರನ್ನು ಮೇಲೆ ಹೇಳಿದ ಎಂಟುವಿಧ ಮೈಥುನಗಳಿಂದ ದೂರವಾಗಿಟ್ಟಿರಬೇಕು. ಪಾಠಶಾಲೆಗಳು ಹಳ್ಳಿ ಅಥವಾ

ಪಟ್ಟಣಕ್ಕೆ ನಾಲ್ಕು ಹರದಾರಿಗಳಷ್ಟು ದೂರದಲ್ಲಿರಬೇಕು. ವಿದ್ಯಾಲಯಗಳಲ್ಲಿ ರಾಜಮನೆತನದ ಬಾಲಕ-ಬಾಲಿಕೆಯರಾಗಲಿ, ದರಿದ್ರರ ಬಾಲ ಬಾಲಿಕೆಯರಾಗಲಿ ಎಲ್ಲರಿಗೂ ಸಮಾನವಾದ ಉಡಿಗೆ, ಊಟ ಮತ್ತು ಆಸನಗಳನ್ನು ಏರ್ಪಡಿಸಿಕೊಡಬೇಕು. ಎಲ್ಲರೂ ತಪಸ್ವಿಗಳಾಗಿರಬೇಕು. ತಾಯಿತಂದೆಗಳು ತಮ್ಮ ಹುಡುಗರೊಡನೆಯೂ, ಹುಡುಗರು ತಂದೆತಾಯಿಗಳೊಡನೆಯೂ ಸೇರಲವಕಾಶವಿರಬಾರದು. ಪರಸ್ಪರ ಯಾವ ವಿಧವಾದ ಪತ್ರವ್ಯವಹಾರವನ್ನೂ ನಡೆಸಬಾರದು. ಮಕ್ಕಳು ಸಂಸಾರದ ಚಿಂತೆಯಿಂದ ದೂರವಾಗಿದ್ದು ವಿದ್ಯಾಭಿವೃದ್ಧಿಯಲ್ಲಿಯೇ ಆಸಕ್ತರಾಗಿರುವಂತೆ ತಾಯಿತಂದೆಗಳು ನಡೆದುಕೊಳ್ಳಬೇಕು. ವಿದ್ಯಾರ್ಥಿಗಳು ಹೊರಗೆ ಸಂಚಾರ ಹೊರಬಾಗ ಯಾವ ವಿಧವಾದ ಅಸಭ್ಯ ಚೇಷ್ಟೆಗಳನ್ನಾಗಲಿ, ಆಲಸ್ಯಪ್ರಮಾದಗಳನ್ನಾಗಲಿ ಮಾಡದಂತೆ ಅಧ್ಯಾಪಕರು ಅವರ ಸಂಗಡವಿರಬೇಕು.

ಕನ್ಯಾನಾಂ ಸಂಪ್ರದಾನಂ ಚ ಕುಮಾರಾಣಾಂ ಚ ರಕ್ಷಣಂ ।

[ಮನುಸ್ಮೃತಿ ೩-೧೫೨]

"ಐದು ಅಥವಾ ಎಂಟು ವರ್ಷಗಳಿಗೆ ಮೇಲ್ಪಟ್ಟು ಹುಡುಗ-ಹುಡುಗಿಯರನ್ನು ಯಾರೂ ಮನೆಯಲ್ಲಿ ಇಟ್ಟುಕೊಂಡಿರದೆ ಪಾಠಶಾಲೆಗಳಿಗೆ ಕಳುಹಿಸಬೇಕು. ಈ ರೀತಿ ನಡೆಯದವರು ದಂಡನೆಗೆ ಗುರಿಯಾಗುವಂತೆ ರಾಜಶಾಸನವೂ, ಸಮಾಜಸಿಯಮವೂ ಇರಬೇಕು" ಎಂದು ಮನುಧರ್ಮಶಾಸ್ತ್ರಕಾರರ ಆಶಯ. ಬಾಲಕ-ಬಾಲಿಕೆಯರಿಗೆ ಯಜ್ಞೋಪವೀತಸಂಸ್ಕಾರವು ಮೊದಲು ಮನೆಯಲ್ಲಿಯೂ, ಎರಡನೆಯ ಸಲ ಪಾಠಶಾಲೆಯಲ್ಲಿಯೂ, ಆಚಾರ್ಯಕುಲದಲ್ಲಿಯೂ ನಡೆಯಬೇಕು. ಅವರಿಗೆ ತಾಯಿಯಾಗಲಿ, ತಂದೆಯಾಗಲಿ ಅಥವಾ ಆಚಾರ್ಯರಾಗಲಿ ಗಾಯತ್ರಿಮಂತ್ರವನ್ನು ಅರ್ಥಸಹಿತವಾಗಿ ಉಪದೇಶಿಸಬೇಕು. ಆ ಮಂತ್ರವಿದು—

ಓಂ ಭೂರ್ಭುವಃ ಸ್ವಃ । ತತ್ಸವಿತುರ್ವರೇಣ್ಯಂ ಭರ್ಗೋ ದೇವಸ್ಯ ಧೀಮಹಿ । ಧಿಯೋ ಯೋ ನಃ ಪ್ರಚೋದಯಾತ್ ॥

(ಯಜುರ್ವೇದ ೩೬-೩)

ಈ ಮಂತ್ರದ ಆರಂಭದಲ್ಲಿರುವ (ಓಂ) ಕಾರದ ಅರ್ಥವನ್ನು ಮೊದಲನೆಯ ಸಮುಲ್ಲಾಸದಲ್ಲಿ ಬರೆದಿದ್ದೇವೆ. ಅಲ್ಲಿಂದಲೇ ತಿಳಿದುಕೊಳ್ಳಿರಿ. ಇನ್ನು ಮೂರು ಮಹಾವ್ಯಾಹೃತಿಗಳ ಅರ್ಥವನ್ನು ಸಂಕ್ಷೇಪವಾಗಿ ಬರೆಯುತ್ತೇವೆ.

" ಭೂರಿತಿ ವೈ ಪ್ರಾಣಃ " ಯಃ ಪ್ರಾಣಯತಿ ಚರಾಚರಂ ಜಗತ್ಸ ಭೂಃ ಸ್ವಯಂಭೂರೀಶ್ವರಃ "

ಪರಮೇಶ್ವರನು ಸರ್ವಜಗತ್ತಿನ ಜೀವನಾಧಾರನೂ, ಪ್ರಾಣಕ್ಕಿಂತಲೂ ಪ್ರಿಯನೂ, ಸ್ವಯಂಭುವೂ ಆಗಿರುವುದರಿಂದ ಆ ಪ್ರಾಣದ ವಾಚಕವಾದ ' ಭೂ ' ಎಂಬುದು ಆತನ ಹೆಸರು. **" ಭುವರಿತ್ಯಪಾನಃ " ' ಯಃ ಸರ್ವಂ ದುಃಖಮುಪಾನಯತಿ ಸೋಽಪಾನಃ '** ದುಃಖರಹಿತನಾಗಿರುವುದರಿಂದಲೂ, ಆತನ ಸಂಗದಿಂದ ಜೀವರು ಸರ್ವ ದುಃಖಗಳಿಂದ ಬಿಡುಗಡೆ ಹೊಂದುವುದರಿಂದಲೂ ಭಗವಂತನಿಗೆ **' ಭುವಃ '** ಎಂದು ಹೆಸರು. **' ಸ್ವರಿತಿ ವ್ಯಾನಃ '-' ಯೋ ವಿವಿಧಂ ಜಗದ್ವ್ಯಾನಯತಿ ವ್ಯಾಪ್ನೋತಿ ಸ ವ್ಯಾನಃ '**—ವಿಧವಿಧವಾದ ಜಗತ್ತಿನಲ್ಲಿ ವ್ಯಾಪಕನಾಗಿ ಎಲ್ಲವನ್ನೂ ಧರಿಸುವುದರಿಂದ ಪರಮೇಶ್ವರನಿಗೆ **' ಸ್ವಃ '** ಎಂದು ಹೆಸರು. ಈ ಮೂರು ವಚನಗಳೂ ತೈತ್ತಿರೀಯ ಆರಣ್ಯಕ (ಪ್ರಪಾ. ೭-ಅನು-೫) ದವು.

(ಸವಿತುಃ) " ಯಃ ಸುನೋತ್ಯುತ್ಪಾದಯತಿ ಸರ್ವಂ ಜಗತ್ ಸ ಸವಿತಾ ತಸ್ಯ "—ಸರ್ವ ಜಗದುತ್ಪಾದಕನೂ, ಸರ್ವೈಶ್ವರ್ಯದ ದಾತೃವೂ ಆದ,

(ದೇವಸ್ಯ) " ಯೋ ದೀವ್ಯತಿ ದೀವ್ಯತೇ ವಾ ಸ ದೇವಃ " ಸರ್ವಸುಖಪ್ರದನೂ, ಸರ್ವರಿಂದಲೂ ಪ್ರಾಪ್ತಿಗಾಗಿ ಬಯಸಲ್ಪಡುವವನೂ ಆದ ಆ ಪರಮಾತ್ಮನ ಯಾವ **(ವರೇಣ್ಯಂ) " ವರ್ತುಮರ್ಹಂ "** ಸ್ವೀಕರಿಸಲರ್ಹವಾದ, ಅತಿಶ್ರೇಷ್ಠವಾದ **(ಭರ್ಗಃ) " ಶುದ್ಧಸ್ವರೂಪಂ "**—ಶುದ್ಧಸ್ವರೂಪ ಮತ್ತು ಪವಿತ್ರಗೊಳಿಸುವ **ಯಾವ ಚೇತನ ಬ್ರಹ್ಮಸ್ವರೂಪವುಂಟೋ (ತತ್)** ಅದನ್ನು, (ಧೀಮಹಿ)

" ಧರೇಮಹಿ "—ಧರಿಸೋಣ. ಏತಕ್ಕೋಸ್ಕರವೆಂದರೆ (ಯಃ) " ಜಗದೀಶ್ವರಃ " ಆ ಸವಿತೃದೇವನಾದ ಪರಮಾತ್ಮನು, (ನಃ) " ಅಸ್ಮಾಕಂ " ನಮ್ಮ, (ಧಿಯಃ) " ಬುದ್ಧೀಃ " ಬುದ್ಧಿಗಳನ್ನು, (ಪ್ರಚೋದಯಾತ್) " ಪ್ರೇರಯೇತ್ " ಪ್ರೇರಿಸಲಿ ಅಂದರೆ ದುಷ್ಕರ್ಮಗಳಿಂದ ಬಿಡಿಸಿ, ಸತ್ಕರ್ಮಗಳಲ್ಲಿ ಪವೃತ್ತಗೊಳಿಸಲಿ.

" ಹೇ ಪರಮೇಶ್ವರ ! ಹೇ ಸಚ್ಚಿದಾನಂದಾನಂತಸ್ವರೂಪ ! ಹೇ ನಿತ್ಯಶುದ್ಧಬುದ್ಧಮುಕ್ತಸ್ವಭಾವ ! ಹೇ ಅಜ, ನಿರಂಜನ ನಿರ್ವಿಕಾರ ! ಹೇ ಸರ್ವಾಂತರ್ಯಾಮಿನ್ ! ಹೇ ಸರ್ವಾಧಾರ ಜಗತ್ಪತೇ ! ಸಕಲಜಗದುತ್ಪಾದಕ ! ಹೇ ಅನಾದೇ ! ವಿಶ್ವಂಭರ ! ಸರ್ವವ್ಯಾಪಿನ್ ! ಹೇ ಕರುಣಾಮೃತವಾರಿಧೇ ! ಸವಿತುರ್ದೇವಸ್ಯ ತವ ಯದೋಂ ಭೂರ್ಭುವಃ ಸ್ವರ್ವರೇಣ್ಯಂ ಭರ್ಗೋಽಸ್ತಿ ತದ್ವಯಂ ಧೀಮಹಿ ದಧೀಮಹಿ ಧರೇಮಹಿ ಧ್ಯಾಯೇಮ ವಾ। ಕಸ್ಮೈ ಪ್ರಯೋಜನಾಯೇತ್ಯತ್ರಾಹ । ಹೇ ಭಗವನ್ ! ಯಃ ಸವಿತಾ ದೇವಃ ಪರಮೇಶ್ವರೋ ಭವಾನಸ್ಮಾಕಂ ಧಿಯಃ ಪ್ರಚೋದಯಾತ್ । ಸ ಏವಾಽಸ್ಮಾಕಂ ಪೂಜ್ಯ ಉಪಾಸನೀಯ ಇಷ್ಟ ದೇವೋ ಭವತು । ನಾತೋಽನ್ಯಂ ಭವತ್ತುಲ್ಯಂ ಭವತೋಽಧಿಕಂ ಚ ಕಂಚಿತ್ಕದಾಚಿನ್ಮನ್ಯಾಮಹೇ॥ "

"ಮಾನವರೆ ! ಪರಮೇಶ್ವರನು ಸಮರ್ಥರಲ್ಲೆಲ್ಲಾ ಸಮರ್ಥನು. ಸಚ್ಚಿದಾನಂದಾನಂತಸ್ವರೂಪನು, ನಿತ್ಯ ಶುದ್ಧನು, ನಿತ್ಯ ಬುದ್ಧನು, ನಿತ್ಯಮುಕ್ತಸ್ವಭಾವನು, ದಯಾಸಾಗರನು, ಸರಿಯಾಗಿ ನ್ಯಾಯಮಾಡುವವನು, ಹುಟ್ಟು-ಸಾವು ಮೊದಲಾದ ಕ್ಲೇಶಗಳಿಲ್ಲದವನು, ನಿರಾಕಾರನು, ಎಲ್ಲರ ಅಣು ಅಣುವನ್ನೂ ಅರಿತವನು, ಎಲ್ಲವನ್ನೂ ಧರಿಸಿರುವವನಾದ ತಂದೆಯು, ಉತ್ಪಾದಕನು, ಅನ್ನ ಮೊದಲಾದವುಗಳಿಂದ ವಿಶ್ವ ಜಗತ್ತನ್ನು ಪೋಷಿಸುತ್ತಿರುವವನು, ಸಕಲೈಶ್ವರ್ಯಗಳಿಂದ ಕೂಡಿದವನು, ಜಗತ್ತನ್ನು ನಿರ್ಮಿಸುವವನು, ಶುದ್ಧಸ್ವರೂಪನು, ಪ್ರಾಪ್ತಿಗಾಗಿ ಇಚ್ಛಿಸಲರ್ಹನಾದವನು, ಆತನ ಜೀತನಸ್ವರೂಪವನ್ನೇ ನಾವು ಧರಿಸೋಣ. ಏತಕ್ಕೆಂದರೆ, ನಮ್ಮೆಲ್ಲರ ಆತ್ಮಗಳಲ್ಲಿಯೂ, ಬುದ್ಧಿ

ಗಳಲ್ಲಿಯೂ ಅಂತರ್ಯಾಮಿಯಾಗಿರುವ ಪರಮೇಶ್ವರನು ನಮ್ಮನ್ನು ದುಷ್ಟಾಚಾರಗಳಿಂದ ಕೂಡಿದ ಅಧರ್ಮಯುಕ್ತವಾದ ಮಾರ್ಗದಿಂದ ದೂರಮಾಡಿ, ಶ್ರೇಷ್ಠಾಚಾರ-ಸತ್ಯಮಾರ್ಗದಲ್ಲಿ ನಡೆಸಲಿ. ಆತನನ್ನು ಬಿಟ್ಟು ಬೇರೆ ಯಾವ ವಸ್ತುವಿನಮೇಲೂ ನಮ್ಮ ಧ್ಯಾನವನ್ನು ನಾವು ಮಾಡದಿರೋಣ. ಏಕೆಂದರೆ, ಆ ಪರಮೇಶ್ವರನಿಗೆ ಸಮಾನನಾದವ ರಾಗಲಿ, ಆತನನ್ನು ಮೀರಿಸಿದವರಾಗಲಿ ಯಾರೂ ಇಲ್ಲ. ಆತನೇ ನಮ್ಮ ತಂದೆ, ರಾಜ ನ್ಯಾಯಾಧೀಶ ಮತ್ತು ಸರ್ವಸುಖಗಳನ್ನೂ ಕೊಡುವವನು.

ಈ ರೀತಿ ಗಾಯತ್ರೀಮಂತ್ರವನ್ನು ಉಪದೇಶಿಸಿ ಸಂಧ್ಯೋಪಾಸನೆಯ ಸ್ನಾನ, ಆಚಮನ, ಪ್ರಾಣಾಯಾಮ ಮೊದಲಾದ ಕ್ರಿಯೆಗಳನ್ನು ಕಲಿಸಬೇಕು. ಶರೀರದ ಬಾಹ್ಯ ಅವಯವಗಳ ಶುದ್ಧಿ ಮತ್ತು ಆರೋಗ್ಯ ಮೊದಲಾದುವುಗಳುಂಟಾಗುವುದೇ ಮೊದಲು ಸ್ನಾನದ ಉದ್ದೇಶ್ಯ. ಇದಕ್ಕೆ ಪ್ರಮಾಣ :-

ಅದ್ಭಿರ್ಗಾತ್ರಾಣಿ ಶುಧ್ಯಂತಿ ಮನಃ ಸತ್ಯೇನ ಶುಧ್ಯತಿ ।
ವಿದ್ಯಾತಪೋಭ್ಯಾಂ ಭೂತಾತ್ಮಾ ಬುದ್ಧಿರ್ಜ್ಞಾನೇನ ಶುಧ್ಯತಿ ॥

(ಮನು ೫-೧೦೯)

ಅಂದರೆ--ನೀರಿನಿಂದ ದೇಹದ ಹೊರಗಣ ಅವಯವಗಳೂ, ಸತ್ಯಾಚರಣೆಯಿಂದ ಮನಸ್ಸೂ, ವಿದ್ಯೆ ಮತ್ತು ತಪಸ್ಸಿನಿಂದ ಅಂದರೆ ಎಲ್ಲಾ ವಿಧವಾದ ಕಷ್ಟಗಳನ್ನೂ ಸಹಿಸಿ ಧರ್ಮವನ್ನೇ ಆಚರಿಸುವುದರಿಂದ ಜೀವಾತ್ಮನೂ, ಜ್ಞಾನದಿಂದ ಅಂದರೆ ಪೃಥ್ವಿಯಿಂದ ಪರಮಾತ್ಮನವರೆಗಿರುವ ಪದಾರ್ಥಗಳ ವಿವೇಕದಿಂದ ಬುದ್ಧಿಯೂ ವೃಧಿಸಿಶ್ಚಯವಾಗಿ, ಪವಿತ್ರವಾಗಿ ಆಗುತ್ತವೆ. ಆದುದರಿಂದ ಊಟಕ್ಕೆ ಮೊದಲು ಅಗತ್ಯವಾಗಿ ಸ್ನಾನವನ್ನು ಮಾಡಬೇಕು. ಎರಡನೆಯದು ಪ್ರಾಣಾಯಾಮ. ಇದಕ್ಕೆ ಪ್ರಮಾಣ :--

ಯೋಗಾಂಗಾನುಷ್ಠಾನಾದಶುದ್ಧಿಕ್ಷಯೇ ಜ್ಞಾನದೀಪ್ತಿರಾ
ವಿವೇಕಖ್ಯಾತೇಃ ।

(ಯೋಗದರ್ಶನ, ಸಾಧನಪಾದ, ಸೂತ್ರ ೨೮)

ಇದು ಯೋಗಶಾಸ್ತ್ರದ ಸೂತ್ರ. ಮನುಷ್ಯನು ಪ್ರಾಣಾಯಾಮವನ್ನು ಮಾಡುವುದರಿಂದ ಪ್ರತಿಕ್ಷಣದಲ್ಲಿಯೂ ಉತ್ತರೋತ್ತರ ಅಶುದ್ಧಿಯು ನಷ್ಟವಾಗುತ್ತಾ ಜ್ಞಾನ ಪ್ರಕಾಶವಾಗುತ್ತಾ ಹೋಗುತ್ತದೆ ಮೋಕ್ಷವನ್ನು ಪಡೆಯುವವರೆಗೆ ಇವನ ಚಿತ್ತಜ್ಞಾನವು ಒಂದೇ ರೀತಿ ವೃದ್ಧಿಯಾಗುತ್ತಿರುತ್ತದೆ.

ದಹ್ಯಂತೇ ಧ್ಮಾಯಮಾನಾನಾಂ ಧಾತೂನಾಂ ಹಿ ಯಥಾ ಮಲಾಃ । ತಥೇಂದ್ರಿಯಾಣಾಂ ದಹ್ಯಂತೇ ದೋಷಾಃ ಪ್ರಾಣಸ್ಯ ನಿಗ್ರಹಾತ್ ॥

(ಮನು ೬-೭೧)

ಇದು ಮನುಸ್ಮೃತಿಯ ಶ್ಲೋಕ. ಬೆಂಕಿಯಲ್ಲಿ ಸುಟ್ಟಕ್ಕೆ ಹಾಕುವುದರಿಂದ ಚಿನ್ನ ಮೊದಲಾದ ಧಾತುಗಳ ಕಶ್ಮಲವು ಹೊರಟು ಹೋಗಿ, ಅವು ಶುದ್ಧವಾಗುವಂತೆ ಪ್ರಾಣಾಯಾಮವನ್ನು ಮಾಡುವುದರಿಂದ ಮನಸ್ಸು ಮೊದಲಾದ ಇಂದ್ರಿಯಗಳ ದೋಷಗಳು ಕ್ಷೀಣವಾಗಿ ನಿರ್ಮಲವಾಗುತ್ತವೆ. ಪ್ರಾಣಾಯಾಮದ ವಿಧಿ :-

ಪ್ರಚ್ಛರ್ದನವಿಧಾರಣಾಭ್ಯಾಂ ವಾ ಪ್ರಾಣಸ್ಯ ॥

(ಯೋಗದರ್ಶನ, ಸಮಾಧಿಪಾದ, ಸೂತ್ರ ೩೪)

ವಾಂತಿಯಾಗುವಾಗ ಅನ್ನವೂ, ನೀರೂ ಬಹಳ ವೇಗವಾಗಿ ಹೊರಬೀಳುವಂತೆ, ಪ್ರಾಣವಾಯುವನ್ನು ಬಲದಿಂದ ಹೊರಗೆಡವಿ ಸಾಧ್ಯವಾದಷ್ಟು ಕಾಲ ಹೊರಗಡೆಯೇ ತಡೆದು ನಿಲ್ಲಿಸಬೇಕು. ಪ್ರಾಣವಾಯುವನ್ನು ಹೊರಕ್ಕೆ ಬಿಡಬೇಕೆನ್ನಿಸಿದಾಗ ಮೂಲೇಂದ್ರಿಯವನ್ನು ಮೇಲಕ್ಕೆ ಎಳೆದಿಟ್ಟುಕೊಂಡಿರಬೇಕು. ಹೀಗೆ ಹೀಗೆ ಪ್ರಾಣವಾಯುವು ಹೊರಗೆ ನಿಂತಿರುತ್ತದೆ. ಇದೇ ರೀತಿ ಪ್ರಾಣವಾಯುವು ಹೊರಗೆ ಹೆಚ್ಚುಕಾಲ ನಿಲ್ಲಬಲ್ಲದು. ಕಸಿವಿಸಿಯಾದಾಗ ಮೆಲ್ಲಮೆಲ್ಲನೆ ಪ್ರಾಣವಾಯುವನ್ನು ಒಳಕ್ಕೆಳೆದುಕೊಂಡು ಮತ್ತೆ ಮೊದಲಿನಂತೆಯೇ ಹೊರಗೆಡವಬೇಕು. ಈ ರೀತಿ ತನ್ನ ಇಚ್ಛೆ ಮತ್ತು ಶಕ್ತಿಗನುಸಾರವಾಗಿ ಪ್ರಾಣಾಯಾಮವನ್ನು ಮಾಡಬೇಕು. ಮತ್ತು ಮನಸ್ಸಿನಲ್ಲಿ ಓಂಕಾರ

ವನ್ನು ಜೆಪಿಸುತ್ತಿರಬೇಕು. ಈ ರೀತಿ ಮಾಡುವದರಿಂದ ಆತ್ಮಕ್ಕೂ ಮನಸ್ಸಿಗೂ ಪವಿತ್ರತೆ ಮತ್ತು ಸ್ಥೈರ್ಯ ಲಭಿಸುತ್ತದೆ. ೧. "ಬಾಹ್ಯ ವಿಷಯ"—ಅಂದರೆ ಬಹಳ ಹೊತ್ತು ಹೊರಗಡೆಯೇ ತಡೆದು ನಿಲ್ಲಿಸುವುದು. ೨. "ಆಭ್ಯಂತರ"—ಅಂದರೆ ಸಾಧ್ಯವಾದಷ್ಟು ಕಾಲ ಪ್ರಾಣ ವಾಯುವನ್ನು ಒಳಗೆ ತಡೆದು ನಿಲ್ಲಿಸುವುದು. ೩. "ಸ್ತಂಭವೃತ್ತಿ"—ಅಂದರೆ ಒಂದೇ ಏಟಿಗೆ ಪ್ರಾಣವನ್ನು ಆದಿದ್ದಕಡೆಯಲ್ಲಿಯೇ ಶಕ್ಯ ವಿದ್ದಷ್ಟು ತಡೆಯುವುದು. ೪. "ಬಾಹ್ಯಾಭ್ಯಂತರಾಕ್ಷೇಪೀ"–ಅಂದರೆ ಪ್ರಾಣವು ಒಳಗಿಂದ ಹೊರಗಡೆ ಹೊರಡಲಾರಂಭಿಸಿದಾಗ ಅದಕ್ಕೆ ವಿರುದ್ಧವಾಗಿ ಅದನ್ನು ಹೊರಗೆ ಹೊರಡದಂತೆ ತಡೆಯಲು, ಹೊರಗಿನ ವಾಯುವನ್ನು ಒಳಗೆ ಸೆಳೆದುಕೊಳ್ಳಬೇಕು. ಮತ್ತು ಪ್ರಾಣವಾಯುವು ಹೊರಗಡೆಯಿಂದ ಒಳಗೆ ಬರತೊಡಗಿದಾಗ ಅದನ್ನು ಒಳಗೆ ಪ್ರವೇಶಿಸದಂತೆ ತಡೆಯಲು, ಒಳಗಿಂದ ಪ್ರಾಣವನ್ನು ಹೊರಗೆ ತಳ್ಳಿ ಅಲ್ಲಿಯೇ ತಡೆದು ನಿಲ್ಲಿಸಬೇಕು. ಈ ವಿಧವಾದ ಪರಸ್ಪರ ವಿರುದ್ಧ ಕ್ರಿಯೆಗಳನ್ನು ಆಚರಿಸುವುದರಿಂದ ಎರಡರ ಗತಿಗಳೂ ನಿಂತು, ಪ್ರಾಣವು ತನ್ನ ವಶವಾಗುವುದರಿಂದ ಮನಸ್ಸು ಮತ್ತು ಇಂದ್ರಿಯಗಳು ಕೂಡ ಸ್ವಾಧೀನವಾಗಿ ಬಲ ಪುರುಷಾರ್ಥಗಳು ಬೆಳೆದು, ಬುದ್ಧಿಯು ತೀಪ್ರವೂ, ಸೂಕ್ಷ್ಮವೂ ಆಗಿ, ಬಹಳ ಕಠಿನವಾದ ಸೂಕ್ಷ್ಮವಿಷಯಗಳನ್ನು ಕೂಡ ಬೇಗ ಗ್ರಹಿಸುತ್ತದೆ. ಇದರಿಂದ ಮನುಷ್ಯನು ದೇಹದಲ್ಲಿ ವೀರ್ಯವೃದ್ಧಿಯನ್ನು ಹೊಂದಿ, ಸ್ಥಿರವಾದ ಬಲಪರಾಕ್ರಮಗಳನ್ನೂ, ಜಿತೇಂದ್ರಿಯತ್ವವನ್ನೂ ಪಡೆದು ಸ್ವಲ್ಪ ಸಮಯದಲ್ಲಿಯೇ ಸಕಲ-ಶಾಸ್ತ್ರಗಳನ್ನೂ ತಿಳಿದು ಜ್ಞಾಪಕದಲ್ಲಿಟ್ಟು ಕೊಳ್ಳುವನು. ಸ್ತ್ರೀಯರೂ ಕೂಡ ಇದೇ ರೀತಿಯೋಗಾಭ್ಯಾಸವನ್ನು ಮಾಡಬೇಕು. ಊಟ, ಉಡಿಗೆ, ಕೂಡುವುದು, ಏಳುವುದು, ಮಾತನಾಡುವುದು ಮತ್ತು ಹಿರಿಯರೊಡನೆ ಕಿರಿಯರೊಡನೆ ಉಚಿತವರಿತು ವ್ಯವಹರಿಸುವುದು–ಇವನ್ನು ಉಪದೇಶಿಸಬೇಕು. ಸಂಧ್ಯೋಪಾಸನೆಯನ್ನು ಬ್ರಹ್ಮಯಜ್ಞವೆಂದು ಕೂಡ ಕರೆಯುತ್ತಾರೆ. ಗಂಟಲಿಂದ ಹೃದಯದವರೆಗೆ ನೆನೆಯುವಷ್ಟು ಮಾತ್ರ ನೀರನ್ನು ಅಂಗೈಯಲ್ಲಿ ಹಾಕಿಕೊಂಡು ಅಂಗೈಯ ನಡುವೆ ಮತ್ತು ಬುಡದಲ್ಲಿ ತುಟಿಗಳನ್ನಿಟ್ಟು 'ಆಚಮನ' ಮಾಡಬೇಕು- ನೀರು ಅದಕ್ಕಿಂತ ಹೆಚ್ಚಾಗಲಿ,

ಕಡಿಮೆಯಾಗಲಿ ಇರಬಾರದು. ಅದರಿಂದ ಗಂಟಲಲ್ಲಿರುವ ಕಫವೂ, ಪಿತ್ತವೂ ಸ್ವಲ್ಪವಾಗುತ್ತವೆ. ಬಳಿಕ 'ಮಾರ್ಜನ' ಅಂದರೆ ನಡುಬೆರಳು ಮತ್ತು ಅನಾಮಿಕೆ ಇವೆರಡು ಬೆರಳುಗಳ ತುದಿಯಿಂದ ಕಣ್ಣು ಮೊದಲಾದ ಅವಯವಗಳ ಮೇಲೆ ನೀರನ್ನು ಪ್ರೋಕ್ಷಿಸಿಕೊಳ್ಳಬೇಕು. ಇದರಿಂದ ಆಲಸ್ಯವು ದೂರವಾಗುವುದು. ಆಲಸ್ಯವಾಗಲಿ, ನೀರಾಗಲಿ ಇರದಿರುವಾಗ ಮಾರ್ಜನವನ್ನು ಮಾಡ ಬೇಕಾಗಿಲ್ಲ. ಬಳಿಕ ಮಂತ್ರಸಹಿತವಾದ ಪ್ರಾಣಾಯಾಮವನ್ನು ಮಾಡಿ, ಮನಸಾ ಪರಿಕ್ರಮ, ಉಪಸ್ಥಾನ, ಆಮೇಲೆ ಈಶ್ವರನ ಸ್ತುತಿ, ಪ್ರಾರ್ಥನೆ ಮತ್ತು ಉಪಾಸನಾಕ್ರಮವನ್ನು ಕಲಿಸಬೇಕು. ಆಮೇಲೆ 'ಅಘಮರ್ಷಣ' ಅಂದರೆ, ಪಾಪಮಾಡುವ ಇಚ್ಛೆಯನ್ನೂ ಕೂಡ ಎಂದೂ ಮಾಡಬಾರದು. ಈ ಸಂಧ್ಯೋಪಾಸನೆಯನ್ನು ಏಕಾಂತ ಪ್ರದೇಶದಲ್ಲಿ ಏಕಾಗ್ರಚಿತ್ತನಾಗಿ ಮಾಡಬೇಕು.

ಅಪಾಂ ಸಮೀಪೇ ನಿಯತೋ ನೈತ್ಯಿಕಂ ವಿಧಿಮಾಸ್ಥಿತಃ।
ಸಾವಿತ್ರೀಮಪ್ಯಧೀಯೀತ ಗತ್ವಾಽರಣ್ಯಂ ಸಮಾಹಿತಃ॥

(ಮನು ೨-೧೦೪)

ಇದು ಮನುಸ್ಮೃತಿಯ ವಚನ. ಅರಣ್ಯಕ್ಕೆ ಅಂದರೆ-ಏಕಾಂತ ಪ್ರದೇಶಕ್ಕೆ ಹೋಗಿ, ಸಾವಧಾನನಾಗಿ, ನೀರಿನ ದಂಡೆಯಲ್ಲಿ ಕುಳಿತು, ನಿತ್ಯಕರ್ಮವನ್ನು ಮಾಡುತ್ತಾ, ಸಾವಿತ್ರೀ ಅಂದರೆ ಗಾಯತ್ರೀ ಮಂತ್ರವನ್ನು ಅರ್ಥಜ್ಞಾನಸಹಿತವಾಗಿ ಉಚ್ಚರಿಸಿ, ಅದರಂತೆ ನಡೆಯು ತ್ತಿರಬೇಕು. ಆದರೆ, ಗಾಯತ್ರೀ ಮಂತ್ರವನ್ನು ಮನಸ್ಸಿನಲ್ಲಿ ಜಪಿಸು ವುದು ಉತ್ತಮ. ಎರಡನೆಯದು ದೇವಯಜ್ಞ. ಅದು ಅಗ್ನಿಹೋತ್ರ ಮತ್ತು ವಿದ್ವಾಂಸರ ಸಂಗ. ಸೇವೆ-ಮೊದಲಾದುದರಿಂದ ಆಗುತ್ತದೆ. ಸಂಧ್ಯಾಗ್ನಿಹೋತ್ರಗಳನ್ನು ಸಾಯಂಕಾಲ ಮತ್ತು ಪ್ರಾತಃಕಾಲ ಎರಡೇ ಸಾರಿ ಮಾಡಬೇಕು. ಇವೆರಡೇ ಹಗಲು ರಾತ್ರಿಯ ಸಂಧಿಕಾಲಗಳು. ಬೇರಾವುದೂ ಅಲ್ಲ. ಕಡೆಯಪಕ್ಷ ಒಂದು ಘಂಟೆಯ ಹೊತ್ತಾದರೂ ಧ್ಯಾನ ಮಾಡಲೇಬೇಕು. ಯೋಗಿಗಳು ಸಮಾಧಿಸ್ಥರಾಗಿ ಪರಮಾತ್ಮ ನನ್ನು ಧ್ಯಾನಿಸುವಂತೆಯೇ ಸಂಧ್ಯೋಪಾಸನೆಯನ್ನು ಮಾಡುತ್ತಿರ ಬೇಕು. ನಿತ್ಯವೂ ಪ್ರಾತಃಕಾಲ ಸೂರ್ಯನು ಹುಟ್ಟುವ ಬಳಿಕ ಮತ್ತು

ಸಾಂಯಕಾಲ ಸೂರ್ಯನು ಮುಳುಗುವುದಕ್ಕೆ ಮೊದಲು ಅಗ್ನಿಹೋತ್ರ ಮಾಡಬೇಕಾದ ಸಮಯ. ಅಗ್ನಿಹೋತ್ರಕ್ಕಾಗಿ ಯಾವುದಾದರೂ ಲೋಹದಿಂದಾಗಲಿ, ಮಣ್ಣಿನಿಂದಾಗಲಿ ಚಚ್ಚೌಕವಾಗಿರುವ ಹೋಮ ಕುಂಡವನ್ನು ಮಾಡಿಸಿಟ್ಟುಕೊಳ್ಳಬೇಕು. ಅದರ ಮೇಲಿನಭಾಗವು ಹನ್ನೆರಡು ಅಥವಾ ಹದಿನಾರು ಅಂಗುಲಗಳಷ್ಟು ಅಗಲವಾಗಿಯೂ, ಅಷ್ಟೇ ಆಳವಾಗಿಯೂ ಇರಬೇಕು. ತಳಭಾಗವು ಮೂರು ಅಥವಾ ನಾಲ್ಕು ಅಂಗುಲಗಳಷ್ಟು ಅಂದರೆ–ಮೇಲಿನ ನಾಲ್ಕನೆಯ ಒಂದು ಭಾಗದಷ್ಟು ಅಗಲವಾಗಿರಬೇಕು. ಅದರಲ್ಲಿ ತ್ರೇಗಂಧ, ಮುತ್ತುಗ ಅಥವಾ ಮಾವು ಮೊದಲಾದ ತ್ರೇಷ್ಠವಾದ ಸಮಿತ್ತುಗಳನ್ನು ವೇದಿಕೆಗೆ ಸಮವಾಗಿರುವಂತೆ ಚಿಕ್ಕವಾಗಿಯೂ, ದೊಪ್ಪವಾಗಿಯೂ ಕತ್ತರಿಸಿಟ್ಟುಕೊಂಡು, ಅವುಗಳನ್ನು ವೇದಿಯಲ್ಲಿಟ್ಟು, ನಡುವೆ ಅಗ್ನಿಯನ್ನು ಹೊತ್ತಿಸಿ, ಪುನಃ ಅದರ ಮೇಲೆ ಹಿಂದೆ ಹೇಳಿದ ಸಮಿತ್ತುಗಳನ್ನಿಡಬೇಕು. ಪ್ರೋಕ್ಷಣೀಪಾತ್ರೆ (ಒಂದು ವಿಧವಾದ ಸೌಟು), ಪ್ರಣೀತಾಪಾತ್ರೆ, ಆಜ್ಯಸ್ಥಾಲಿ (ತುಪ್ಪದ ಬಟ್ಟಲು), ಚಮಸೆ (ಮಿಳ್ಳೆ ಅಥವಾ ಚಿಕ್ಕ ಸೌಟು), ಈ ನಾಲ್ಕುವಿಧವಾದ ಪಾತ್ರೆಗಳನ್ನು ಚಿನ್ನ, ಬೆಳ್ಳಿ ಅಥವಾ ಮರದಿಂದ ಮಾಡಿಸಿಟ್ಟುಕೊಂಡಿರಬೇಕು. ಪ್ರಣೀತಪಾತ್ರೆಯಲ್ಲಿ ಮತ್ತು ಪ್ರೋಕ್ಷಣೀ ಪಾತ್ರೆಯಲ್ಲಿ ನೀರು ಮತ್ತು ಘೃತಪಾತ್ರದಲ್ಲಿ ತುಪ್ಪವನಿಟ್ಟು ಅದನ್ನು ಕಾಯಿಸಿಕೊಳ್ಳಬೇಕು. ಪ್ರಣೀತಾಪಾತ್ರೆ ನೀರಿಟ್ಟುಕೊಳ್ಳುವುದಕ್ಕಾಗಿ ಮತ್ತು ಪ್ರೋಕ್ಷಣೆಯು ಕೈತೊಳೆಯಲು ನೀರನ್ನು ತೆಗೆದುಕೊಳ್ಳುವ ಸೌಖ್ಯಕ್ಕಾಗಿ ಇದೆ. ಬಳಿಕ ಆ ತುಪ್ಪವನ್ನು ಚೆನ್ನಾಗಿ ನೋಡಿ ಕೆಳಗೆ ಬರೆದಿರುವ ಮಂತ್ರಗಳಿಂದ ಆಹುತಿಗಳನ್ನು ಕೊಡಬೇಕು.

ಓಂ ಭೂರಗ್ನಯೇ ಪ್ರಾಣಾಯ ಸ್ವಾಹಾ । ಭುವ ರ್ವಾಯವೇಽಪಾನಾಯ ಸ್ವಾಹಾ । ಸ್ವರಾದಿತ್ಯಾಯ ವ್ಯಾನಾಯ ಸ್ವಾಹಾ । ಭೂರ್ಭುವಃ ಸ್ವರಗ್ನಿವಾಯ್ವಾದಿ ತ್ಯೇಭ್ಯಃ ಪ್ರಾಣಾಪಾನವ್ಯಾನೇಭ್ಯಃ ಸ್ವಾಹಾ ॥

ಈ ಮೊದಲಾದ ಅಗ್ನಿಹೋತ್ರದ ಪ್ರತಿಯೊಂದು ಮಂತ್ರವನ್ನೂ

ಉಚ್ಚರಿಸಿ ಒಂದೊಂದು ಆಹುತಿಯನ್ನು ಕೊಡಬೇಕು. ಹೆಚ್ಚು ಆಹುತಿಗಳನ್ನು ಕೊಡಬೇಕಾದರೆ,

ವಿಶ್ವಾನಿದೇವ ಸವಿತರ್ದುರಿತಾನಿ ಪರಾಸುವ ।
ಯದ್ಭದ್ರಂ ತನ್ನ ಆಸುವ ॥

(ಯಜು, ೞ ೩೦, ಮಂ ೩)

ಈ ಮಂತ್ರದಿಂದಲೂ ಮತ್ತು ಪೂರ್ವೋಕ್ತ ಗಾಯತ್ರೀಮಂತ್ರದಿಂದಲೂ ಆಹುತಿ ಕೊಡಬೇಕು. "ಓಂ, ಭೂಃ ಪ್ರಾಣಃ" ಮೊದಲಾದ ಹೆಸರುಗಳೆಲ್ಲಾ ಪರಮೇಶ್ವರನವು. ಇವುಗಳ ಅರ್ಥವನ್ನು ಹೇಳಿಯೇ ಇದ್ದೇವೆ. "ಸ್ವಾಹಾ" ಶಬ್ದದ ಅರ್ಥವೇನೆಂದರೆ—ಆತ್ಮವಲ್ಲಿರುವ ಜ್ಞಾನವಂತೆಯೇ ನಾಲಿಗೆಯಿಂದ ನುಡಿಯಬೇಕು. ಇದಕ್ಕೆ ವಿರುದ್ಧವಾಗಿ ನುಡಿಯಬಾರದು. ಪರಮಾತ್ಮನು ಎಲ್ಲಾ ಪ್ರಾಣಿಗಳ ಸುಖಕ್ಕಾಗಿ ಈ ಎಲ್ಲಾ ಜಗತ್ತಿನ ಪದಾರ್ಥಗಳನ್ನು ಸೃಷ್ಟಿಸಿರುವಂತೆ, ಮನುಷ್ಯರೂ ಕೂಡ ಪರೋಪಕಾರವನ್ನು ಮಾಡಬೇಕು.

ಪ್ರಶ್ನೆ:—ಹೋಮ ಮಾಡುವುದರಿಂದ ಏನು ಉಪಕಾರವಾಗುತ್ತದೆ?

ಉತ್ತರ:- ದುರ್ಗಂಧದಿಂದ ಕೂಡಿದ ಜಲವಾಯುಗಳಿಂದ ರೋಗವೂ, ರೋಗದಿಂದ ಪ್ರಾಣಿಗಳಿಗೆ ದುಃಖವೂ ಉಂಟಾಗುವುದು ಮತ್ತು ಸುಗಂಧದಿಂದ ಕೂಡಿದ ಜಲ-ವಾಯುಗಳಿಂದ ಆರೋಗ್ಯವೂ, ಆರೋಗ್ಯದಿಂದ ಸುಖವೂ ಉಂಟಾಗುವುದೆಂಬ ವಿಷಯವು ಎಲ್ಲರಿಗೂ ಗೊತ್ತಿದೆ.

ಪ್ರಶ್ನೆ:— ಚಂದನ ಮೊದಲಾದವುಗಳನ್ನು ತರಿದು ಜನರಿಗೆ ಲೇಪಿಸಿಕೊಳ್ಳುವುದಕ್ಕೂ, ತುಪ್ಪ ಮೊದಲಾದ ಪದಾರ್ಥಗಳನ್ನು ತಿನ್ನುವುದಕ್ಕೂ ಕೊಟ್ಟರೆ ಬಹಳ ಉಪಕಾರವಾಗುವುದು. ಇವನ್ನು ವ್ಯರ್ಥವಾಗಿ ಬೆಂಕಿಯಲ್ಲಿ ಹಾಕಿ, ನಾಶಮಾಡುವುದು ಬುದ್ಧಿವಂತರ ಕೆಲಸವಲ್ಲ.

ಉತ್ತರ:—ಪದಾರ್ಥವಿದ್ಯೆಯನ್ನು ತಿಳಿದಿದ್ದರೆ, ನೀವೆಂದಿಗೂ ಹೀಗೆ ಹೇಳುತ್ತಿರಲಿಲ್ಲ. ಏಕೆಂದರೆ, ಯಾವ ಪದಾರ್ಥವೂ ನಾಶವಾಗು

ವುದಿಲ್ಲ. ಹೋಮವು ನಡೆಯುವಾಗ ಆ ಪ್ರದೇಶದಿಂದ ದೂರದಲ್ಲಿರುವ ಮನುಷ್ಯನ ಮೂಗಿಗೆ ಹವಿಸ್ಸಿನ ಸುಗಂಧದ ಅರಿವಾಗುತ್ತದೆ. ದುರ್ಗಂಧವೂ ಕೂಡ ಹೀಗೆಯೇ ಮಾನವನ ಅನುಭವಕ್ಕೆ ಬರುತ್ತದೆ. ಇಷ್ಟರಿಂದಲೇ ನೀವು ಅಗ್ನಿಯಲ್ಲಿ ಬಿದ್ದ ಸುಗಂಧಪದಾರ್ಥವು ಸೂಕ್ಷ್ಮ ರೂಪದಿಂದ ಆಕಾಶದಲ್ಲಿ ಹರಡಿ, ವಾಯುವಿನೊಡನೆ ಕಲೆತು, ದೂರ ಪ್ರದೇಶದವರೆಗೆ ಹೋಗಿ ದುರ್ಗಂಧವನ್ನು ಹೋಗಲಾಡಿಸುವುದೆಂಬುದನ್ನು ತಿಳಿಯಬಹುದು.

ಪ್ರಶ್ನೆ :—ಕೇಸರಿ, ಕಸ್ತೂರಿ, ಸುಗಂಧ ಪುಷ್ಪಗಳು, ಪನ್ನೀರು ಮೊದಲಾದ ಪದಾರ್ಥಗಳನ್ನು ಮನೆಯಲ್ಲಿಡುವುದರಿಂದ ವಾಯುವು ಸುಗಂಧಯುಕ್ತವಾಗಿ ಮನೆಯವರಿಗೆ ಸುಖವನ್ನುಂಟುಮಾಡುವುವು.

ಉತ್ತರ :—ನೀವು ಹೇಳಿದ ಸುಗಂಧದಲ್ಲಿ ಮನೆಯಲ್ಲಿರುವ ಕೆಟ್ಟ ಗಾಳಿಯನ್ನು ಹೊರಹೊರಡಿಸಿ, ಚೊಕ್ಕಟವಾದ ಗಾಳಿಯನ್ನು ಒಳಗೆ ಪ್ರವೇಶಪಡಿಸಬಲ್ಲ ಸಾಮರ್ಥ್ಯವಿರುವುದಿಲ್ಲ. ಏಕೆಂದರೆ ಆ ಸುಗಂಧದಲ್ಲಿ ಭೇದಕಶಕ್ತಿಯಿಲ್ಲ. ಆ ವಾಯುವನ್ನೂ, ದುರ್ಗಂಧ ಪದಾರ್ಥಗಳನ್ನೂ ಛಿನ್ನ-ಭಿನ್ನವಾಗಿಯೂ, ಹಗುರವಾಗಿಯೂ ಮಾಡಿ, ಹೊರಹೊರಡಿಸಿ, ಚೊಕ್ಕಟವಾದ ಗಾಳಿಯನ್ನು ಒಳಗೆ ಪ್ರವೇಶ ಪಡಿಸುವ ಸಾಮರ್ಥ್ಯವು ಅಗ್ನಿಯಲ್ಲಿ ಮಾತ್ರವೇ ಇರುತ್ತದೆ.

ಪ್ರಶ್ನೆ :—ಹಾಗಾದರೆ ಮಂತ್ರಗಳನ್ನು ಉಚ್ಚರಿಸುತ್ತಾ ಹೋಮ ಮಾಡುವುದರ ಪ್ರಯೋಜನವೇನು?

ಉತ್ತರ :—ಮಂತ್ರಗಳಲ್ಲಿ ಹೋಮ ಮಾಡುವುದರ ಪ್ರಯೋಜನವು ವಿಸ್ತಾರವಾಗಿ ವರ್ಣಿಸಲ್ಪಟ್ಟಿರುವುದರಿಂದ ಜನರು ಅದನ್ನರಿತುಕೊಳ್ಳುತ್ತಾರೆ. ಮತ್ತು ಮಂತ್ರಗಳನ್ನು ಮೇಲೆ ಮೇಲೆ ಉಚ್ಚರಿಸುವುದರಿಂದ ಅವು ಕಂಠಸ್ಥವಾಗಿ ವೇದಪುಸ್ತಕಗಳ ಪಠನ-ಪಾಠನವೂ, ರಕ್ಷಣೆಯೂ ಆಗುತ್ತದೆ.

ಪ್ರಶ್ನೆ :— ಹೋಮವನ್ನು ಮಾಡದಿದ್ದರೆ ಪಾಪಬರುವುದೋ?

ಉತ್ತರ :—ಹೌದು. ಯಾವ ಮನುಷ್ಯನ ಶರೀರದಿಂದ ಎಷ್ಟು ದುರ್ಗಂಧವು ಉತ್ಪನ್ನವಾಗಿ, ಜಲ-ವಾಯುಗಳನ್ನು ಕೆಡಿಸಿ, ರೋಗೋ

ತ್ಪತ್ತಿಗೆ ಕಾರಣವಾಗಿ ಪ್ರಾಣಿಗಳಿಗೆ ದುಃಖವನ್ನುಂಟುಮಾಡುವುದೋ, ಅಷ್ಟೇ ಪಾಪವು ಆ ಮನುಷ್ಯನಿಗೆ ಬರುತ್ತದೆ. ಆದ್ದರಿಂದ ಆ ಪಾಪ ನಿವಾರಣೆಗಾಗಿ ಅಷ್ಟಾಗಲಿ ಅಥವಾ ಅದಕ್ಕಿಂತ ಹೆಚ್ಚಾಗಲಿ ಸುಗಂಧವನ್ನು ಜಲವಾಯುಗಳಲ್ಲಿ ವ್ಯಾಪಿಸುವಂತೆ ಮಾಡಬೇಕು. ಯಾವನೋ ಒಬ್ಬನಿಗೆ ತಿನ್ನಿಸುವುದರಿಂದ ಅವನೊಬ್ಬನಿಗೆ ಮಾತ್ರ ಸುಖವಾಗುತ್ತದೆ. ಒಬ್ಬ ಮನುಷ್ಯನು ತಿನ್ನುವಷ್ಟು ತುಪ್ಪವನ್ನೂ, ಸುಗಂಧ ಪದಾರ್ಥಗಳನ್ನೂ ಹೋಮ ಮಾಡುವುದರಿಂದ ಲಕ್ಷಗಟ್ಟಲೆ ಮಾನವರಿಗೆ ಉಪಕಾರವಾಗುತ್ತದೆ. ಆದರೆ, ತುಪ್ಪ ಮೊದಲಾದ ಉತ್ತಮ ಪದಾರ್ಥಗಳನ್ನು ಸೇವಿಸದಿದ್ದರೆ ಮಾನವನ ಆತ್ಮಬಲವೂ, ದೇಹಬಲವೂ ಉನ್ನತಿ ಹೊಂದಲಾರವು. ಆದುದರಿಂದ ಉತ್ತಮ ಪದಾರ್ಥಗಳನ್ನು ಜನರಿಗೆ ಊಟಮಾಡಿಸುವುದು ಕೂಡ ಆವಶ್ಯಕ. ಆದರೆ, ಅದಕ್ಕಿಂತ ಹೋಮವನ್ನು ಹೆಚ್ಚಾಗಿ ಮಾಡುವುದು ಒಳ್ಳೆಯದು. ಈ ಕಾರಣಗಳಿಂದ ಹೋಮಮಾಡುವುದು ಅತ್ಯಾವಶ್ಯಕ.

ಪ್ರಶ್ನೆ :—ಪ್ರತಿಯೊಬ್ಬ ಮನುಷ್ಯನೂ ಎಷ್ಟು ಆಹುತಿಗಳನ್ನು ಕೊಡಬೇಕು? ಒಂದೊಂದು ಆಹುತಿಯ ಪರಿಮಾಣವೆಷ್ಟಿರಬೇಕು?

ಉತ್ತರ :—ಪ್ರತಿಯೊಬ್ಬ ಮನುಷ್ಯನೂ ಹದಿನಾರು–ಹದಿನಾರು ಆಹುತಿಗಳನ್ನು ಕೊಡಬೇಕು. ಮತ್ತು ತುಪ್ಪ ಮೊದಲಾದ ಪ್ರತಿಯೊಂದು ಆಹುತಿಯ ಪರಿಮಾಣವು ಕಡೆಯಪಕ್ಷ ಆರಾರು ಮಾಶೆಗಳಷ್ಟಾದರೂ* ಇರಬೇಕು. ಇದಕ್ಕಿಂತ ಹೆಚ್ಚಾಗಿದ್ದರೆ ಬಹಳ ಉತ್ತಮ. ಆದ್ದರಿಂದಲೇ ಆರ್ಯಶಿರೋಮಣಿಗಳಾದ ಋಷಿಗಳು, ರಾಜರು ಚಕ್ರವರ್ತಿಗಳು—ಎಲ್ಲರೂ ಬಹಳವಾಗಿ ಹೋಮಗಳನ್ನು ತಾವೂ ಮಾಡಿ, ಇತರರಿಂದಲೂ ಮಾಡಿಸುತ್ತಿದ್ದರು. ಎಲ್ಲಿಯವರೆಗೆ ಹೋಮಗಳನ್ನಾಚರಿಸುವ ಪದ್ಧತಿಯಿತ್ತೋ, ಅಲ್ಲಿಯವರೆಗೆ ಆರ್ಯಾವರ್ತ ದೇಶವು ರೋಗರಹಿತವಾಗಿ ಸುಖಮಯವಾಗಿತ್ತು. ಈಗಲೂ ಇದರ ಪ್ರಚಾರವು ನಡೆದರೆ, ಹಾಗೆಯೇ ಆಗುವುದು. ಈ ಎರಡು ಯಜ್ಞಗಳು ಅಂದರೆ—ಬ್ರಹ್ಮಯಜ್ಞ, ಓದುವುದು, ಓದಿಸುವುದು, ಸಂಧ್ಯೋಪಾಸನೆ,

---

* ಒಂದು ತೊಲಕ್ಕೆ ೧೨ ಮಾಶೆಗಳು. ಆರು ಮಾಶೆಯೆಂದರೆ ಅರ್ಧ ತೊಲ.

ಈಶ್ವರನ ಸ್ತುತಿ, ಪ್ರಾರ್ಥನೋಪಾಸನೆಗಳನ್ನು ಮಾಡುವುದು. ಎರಡನೆಯದು 'ದೇವಯಜ್ಞ' ಅಂದರೆ ಅಗ್ನಿಹೋತ್ರದಿಂದಾರಂಭಿಸಿ, ಅಶ್ವಮೇಧದವರೆಗೆ—ಯಜ್ಞ ಮತ್ತು ವಿದ್ವಾಂಸರ ಸೇವೆ ಮತ್ತು ಸಂಗ ಮಾಡುವುದು. ಆದರೆ ಬ್ರಹ್ಮಚರ್ಯದಲ್ಲಿರುವಾಗ ಬ್ರಹ್ಮಯಜ್ಞ ಮತ್ತು ಅಗ್ನಿಹೋತ್ರ ಇವೆರಡನ್ನು ಮಾತ್ರ ಮಾಡಬೇಕು.

ಬ್ರಾಹ್ಮಣಸ್ತ್ರಯಾಣಾಂ ವರ್ಣಾನಾಮುಪನಯನಂ ಕರ್ತುಮರ್ಹತಿ । ರಾಜನ್ಯೋ ದ್ವಯಸ್ಯ । ವೈಶ್ಯೋ ವೈಶ್ಯಸ್ಯೈವೇತಿ । ಶೂದ್ರಮಪಿ ಕುಲಗುಣಸಂಪನ್ನಂ ಮಂತ್ರವರ್ಜಮನುಪನೀತಮಧ್ಯಾಪಯೇದಿತ್ಯೇಕೇ ॥

ಇದು ಸುಶ್ರುತನ ಸೂತ್ರಸ್ಥಾನದ ಎರಡನೆಯ ಅಧ್ಯಾಯದ ವಚನವು. ಬ್ರಾಹ್ಮಣನು ಮೂರು ವರ್ಣಗಳವರಿಗೆ—ಬ್ರಾಹ್ಮಣ, ಕ್ಷತ್ರಿಯ, ವೈಶ್ಯರಿಗೂ; ಕ್ಷತ್ರಿಯನು, ಕ್ಷತ್ರಿಯ ಮತ್ತು ವೈಶ್ಯರಿಗೂ ಹಾಗೂ ವೈಶ್ಯನು ವೈಶ್ಯನಿಗೂ ಉಪನಯನ ಸಂಸ್ಕಾರವನ್ನು ನಡೆಸಿ, ವಿದ್ಯೆಯನ್ನು ಕಲಿಸಬಹುದು. ಶೂದ್ರನು ಸತ್ಕುಲಪ್ರಸೂತನೂ, ಶುಭ-ಲಕ್ಷಣಗಳಿಂದ ಕೂಡಿದವನೂ ಆಗಿದ್ದರೆ, ಅವನಿಗೆ ಮಂತ್ರಸಂಹಿತೆಯನ್ನು ಬಿಟ್ಟು, ಉಳಿದ ಎಲ್ಲಾ ಶಾಸ್ತ್ರಗಳನ್ನು ಕಲಿಸಬೇಕು. ಶೂದ್ರನು ವಿದ್ಯೆಯನ್ನು ಕಲಿಯಬೇಕು. ಆದರೆ ಅವನಿಗೆ ಉಪನಯನವನ್ನು ಮಾಡಬಾರದೆಂದು ಅನೇಕ ಮಂದಿ ಆಚಾರ್ಯರು ಅಭಿಪ್ರಾಯಪಟ್ಟಿದ್ದಾರೆ. ಐದನೆಯ ಅಥವಾ ಎಂಟನೆಯ ವರ್ಷದಲ್ಲಿ ಉಪನಯನ ಸಂಸ್ಕಾರವು ನಡೆದ ಬಳಿಕ ಬಾಲಕರು ಬಾಲಕರ ಪಾಠಶಾಲೆಗೂ, ಬಾಲಿಕೆಯರು ಕನ್ಯಾಪಾಠಶಾಲೆಗೂ ಹೋಗಿ ಕೆಳಗೆ ಬರೆದಿರುವ ನಿಯಮಗಳನ್ನನುಸರಿಸಿ ಅಧ್ಯಯನವನ್ನಾರಂಭಿಸಬೇಕು.

ಷಟ್ತ್ರಿಂಶದಾಬ್ದಿಕಂ ಚರ್ಯಂ ಗುರೌ ತ್ರೈವೇದಿಕಂ ವ್ರತಂ।
ತದರ್ಧಿಕಂ ಪಾದಿಕಂ ವಾ ಗ್ರಹಣಾಂತಿಕಮೇವ ವಾ ॥

ಅರ್ಥ :—ಎಂಟನೆಯ ವರ್ಷದನಂತರ ಮೂವತ್ತಾರನೆಯ ವರ್ಷದವರೆಗೆ, ಅಂದರೆ-ಒಂದೊಂದು ವೇದವನ್ನೂ ಸಾಂಗೋಪಾಂಗ

ವಾಗಿ ಅಧ್ಯಯನಮಾಡಲು ಹನ್ನೆರಡು ವರ್ಷಗಳಂತೆ ಮೂರು ವೇದ ಗಳಿಗೆ ಮೂವತ್ತಾರು ವರ್ಷಗಳು ಹಿಡಿಯುತ್ತವೆ. ಮತ್ತು ಎಂಟು ಸೇರಿದರೆ ನಲ್ವತ್ತು ನಾಲ್ಕನೆಯ ವರ್ಷ, ಅಥವಾ ಹದಿನೆಂಟು ವರ್ಷಗಳ ಬ್ರಹ್ಮಚರ್ಯ, ಮತ್ತು ಮೊದಲ ಎಂಟು ವರ್ಷ ಸೇರಿ ಇಪ್ಪತ್ತಾರನೆಯ ವರ್ಷ, ಅಥವಾ ಒಂಬತ್ತು ವರ್ಷ, ಅಥವಾ ಪೂರ್ಣ ಶಿಕ್ಷಣ ಗ್ರಹಿಸುವವರೆಗೆ ಬ್ರಹ್ಮಚರ್ಯ ಪಾಲಿಸಬೇಕು.

ಪುರುಷೋ ವಾವ ಯಜ್ಞಸ್ತಸ್ಯ ಯಾನಿ ಚತುರ್ವಿಗ್ಂಶತಿ ವರ್ಷಾಣಿ। ತತ್ಪ್ರಾತಃ ಸವನಂ, ಚತುರ್ವಿಗ್ಂಶತ್ಯಕ್ಷರಾ ಗಾಯತ್ರೀ ಗಾಯತ್ರಂ ಪ್ರಾತಃ ಸವನಂ, ತದಸ್ಯ ವಸವೋಽನ್ವಾಯತ್ತಾಃ, ಪ್ರಾಣಾ ವಸವ ಏತೇ ಹೀದಗ್ಂ ಸರ್ವಂ ವಾಸಯಂತಿ ॥೧॥

ತಂಚೇದೇತಸ್ಮಿನ್ ವಯಸಿ ಕಿಂಚಿದುಪತಪೇತ್ಸ ಬ್ರೂಯಾ ತ್ಪ್ರಾಣಾವಸವ ಇದಂ ಮೇ ಪ್ರಾತಃ ಸವನಂ ಮಾಧ್ಯಂ ದಿನಗ್ಂ ಸವನಮನುಸಂತನುತೇತಿ, ಮಾಹಂ ಪ್ರಾಣಾನಾಂ ವಸೂನಾಂ ಮಧ್ಯೇ ಯಜ್ಞೋ ವಿಲೋಪ್ಸೀಯೇತ್ಯು ದೈವ ತತ ಏತ್ಯಗದೋ ಹ ಭವತಿ ॥೨॥

ಅಥ ಯಾನಿ ಚತುಶ್ಚತ್ವಾರಿಂಶದ್ವರ್ಷಾಣಿ ತನ್ಮಾಧ್ಯಂ ದಿನಗ್ಂ ಸವನಂ ಚತುಶ್ಚತ್ವಾರಿಂಶದಕ್ಷರಾ ತ್ರಿಷ್ಟುಪ್ ತ್ರೈಷ್ಟುಭಂ ಮಾಧ್ಯಂದಿನಗ್ಂ ಸವನಂ ತದಸ್ಯ ರುದ್ರಾ ಅನ್ವಾಯತ್ತಾಃ ಪ್ರಾಣಾ ವಾವ ರುದ್ರಾ ಏತೇ ಹೀದಗ್ಂ ಸರ್ವಗ್ಂ ರೋದಯಂತಿ ॥೩॥

ತಂ ಚೇದೇತಸ್ಮಿನ್ ವಯಸಿ ಕಿಂಚಿದುಪತಪೇತ್ಸ ಬ್ರೂ-ಯಾತ್ ಪ್ರಾಣಾ ರುದ್ರಾ ಇದಂ ಮೇ ಮಾಧ್ಯಂದಿನಗ್ಂ ಸವನಂ ತೃತೀಯಸವನಮನುಸಂತನುತೇತಿ ಮಾಹಂ ಪ್ರಾಣಾನಾಗ್ಂ ರುದ್ರಾಣಾಂ ಮಧ್ಯೇ ಯಜ್ಞೋ ವಿಲೋ-ಪ್ಸೀಯೇತ್ಯುದ್ಧೈವ ತತ ಏತ್ಯಗದೋ ಹ ಭವತಿ ॥೪॥

अथ यान्यष्टाचत्वारिंशद्वर्षाणि तत्तृतीयं सवनमष्टाचत्वारिंशदक्षरा जगतीः जागतं तृतीयसवनं तदस्यादित्यान्वायत्ताः प्राणा वावादित्या एतेः हीदगं सर्वमाददतेः ॥५॥

तं चेदेतस्मिन् वयसि किंचिदुपतपेत्स ब्रूयात् प्राणा आदित्या इदं मे तृतीयसवनं मायुरनुसंतनुतेति मामहं प्राणानावादित्यानां मध्ये यज्ञो विलोपिस्येयेत्युद्धैव तत एत्यगदो हैव भवति ॥६॥

ಇದು छान्दोग्योपनिषत् [ಪ್ರಪಾ. ೩, ಖಂ. ೧೬] ವಚನ. ಬ್ರಹ್ಮಚರ್ಯವು ಮೂರು ಪ್ರಕಾರವಾಗಿದೆ. ಕನಿಷ್ಠ, ಮಧ್ಯಮ ಮತ್ತು ಉತ್ತಮ. ಅವುಗಳಲ್ಲಿ ಕನಿಷ್ಠವಾದುದು—ಯಾವ ಪುರುಷನು ಅನ್ನರಸಮಯದೇಹ ಮತ್ತು ಪುರಿ ಅಂದರೆ, ದೇಹದಲ್ಲಿ ಶಯನ ಮಾಡುವ ಜೀವಾತ್ಮನು ಯಜ್ಞ ಅಂದರೆ ಅತ್ಯಂತ ಶುಭಗುಣಯುಕ್ತನೂ ಮತ್ತು ಸತ್ಯಾರಯೋಗ್ಯನೋ ಅವನು ಇಪ್ಪತ್ತುನಾಲ್ಕು ವರ್ಷದವರೆಗೆ ಜಿತೇಂದ್ರಿಯ ಅಂದರೆ ಬ್ರಹ್ಮಚಾರಿಯಾಗಿದ್ದುಕೊಂಡು ವೇದಾದಿ ವಿದ್ಯೆ ಮತ್ತು ಸುಶಿಕ್ಷಣವನ್ನು ಪಡೆಯಬೇಕಾದುದು, ಮತ್ತು ವಿವಾಹಿತನಾದರೂ ಲಂಪಟನಾಗದಿರುವುದುಆವಶ್ಯಕ. ಹೀಗಿದ್ದಲ್ಲಿ ಅವನ ಶರೀರದಲ್ಲಿ ಪ್ರಾಣಗಳು ಬಲಯುಕ್ತವಾಗಿ ಎಲ್ಲಾ ಶುಭಗುಣಗಳನ್ನೂ ವಾಸಮಾಡಿಸುವಂಥಾವುಗಳಾಗುತ್ತವೆ. ವಿದ್ಯಾಭ್ಯಾಸದಲ್ಲಿ ಅವನನ್ನು ಸಂತಪ್ತನನ್ನಾಗಿ ಮಾಡುವ ಈ ಪ್ರಥಮ ವಯಸ್ಸಿನಲ್ಲಿ “ನಾನು ಈ ಪ್ರಥಮ ಅವಸ್ಥೆಯಲ್ಲಿ ಸರಿಯಾಗಿ ಬ್ರಹ್ಮಚಾರಿಯಾಗಿದ್ದಲ್ಲಿ, ನನ್ನ ಶರೀರ ಮತ್ತು ಆತ್ಮವು ನೀರೋಗವೂ ಬಲಯುತವೂ ಆಗಿ, ನನ್ನ ಪ್ರಾಣಗಳು ಶುಭಗುಣಗಳನ್ನು ವಾಸಮಾಡಿಸುವಂಥಾವುಗಳಾಗುವುವು. ಹೇ ಮನುಷ್ಯರೆ! ನಾನು ಬ್ರಹ್ಮಚರ್ಯವನ್ನು ಲೋಪಗೊಳಿಸದಂತೆ ನೀವು ಸುಖವನ್ನು ವಿಸ್ತರಿಸಿ. ಇಪ್ಪತ್ತುನಾಲ್ಕು ವರ್ಷಗಳನಂತರ ಗೃಹಸ್ಥಾಶ್ರಮವನ್ನು ಕೈಗೊಳ್ಳುವೆನಾದರೆ ರೋಗರಹಿತನಾಗುವೆನು. ಮತ್ತು ನನ್ನ ಆಯಸ್ಸೂ

ಸಹ ೭೦-೮೦ ವರ್ಷಗಳ ವರೆಗಾಗುವುದೆಂದು ಪ್ರಸಿದ್ಧವಾಗಿದೆ'' ಎಂದು ಬ್ರಹ್ಮಚಾರಿಯು ನಿಶ್ಚಯಮಾಡಿಕೊಳ್ಳಬೇಕು. ಮತ್ತು ಆಚಾರ್ಯನು ಅದೇ ರೀತಿ ಉಪದೇಶಿಸಬೇಕು. ಮಧ್ಯೆಮ ಬ್ರಹ್ಮಚರ್ಯವಿದು :— ಯಾವ ಮಾನವನು ನಲವತ್ತುನಾಲ್ಕು ವರ್ಷಗಳವರೆಗೆ ಬ್ರಹ್ಮಚಾರಿಯಾಗಿದ್ದು ವೇದಾಭ್ಯಾಸಮಾಡುತ್ತಾನೋ ಅವನ ಪ್ರಾಣಗಳು, ಇಂದ್ರಿಯಗಳು, ಅಂತಃಕರಣ ಮತ್ತು ಆತ್ಮವು ಬಲಯುಕ್ತವಾಗಿ ಎಲ್ಲ ದುಷ್ಟರನ್ನೂ ಅಳಿಸುವಂತಹವೂ, ಶ್ರೇಷ್ಠರನ್ನು ಪಾಲಿಸುವಂತಹವೂ ಆಗುತ್ತವೆ. '' ತಾವು ಹೇಳುವಂತೆ, ನಾನು ಈ ಪ್ರಥಮ ವಯಸ್ಸಿನಲ್ಲೇ ಸ್ವಲ್ಪ ತಪವನ್ನಾಚರಿಸಿದರೆ, ನನ್ನ ರುದ್ರರೂಪಪ್ರಾಣಗಳಿಂದ ಕೂಡಿದ ಮಧ್ಯೆಮ ಬ್ರಹ್ಮಚರ್ಯವು ಸಿದ್ಧಿಸುವುದು. ಬ್ರಹ್ಮಚಾರಿಗಳೇ! ನೀವು ಈ ಬ್ರಹ್ಮಚರ್ಯವನ್ನು ಲೋಪಮಾಡದೆ ಯಜ್ಞಸ್ವರೂಪನಾಗುವಂತೆ, ಅದೇ ಆಚಾರ್ಯಕುಲದಿಂದ ಬರುವವನೂ, ರೋಗರಹಿತನೂ ಆಗುವಂತೆ ಮತ್ತು ಈ ಬ್ರಹ್ಮಚಾರಿಯು ಉತ್ತಮ ಕಾರ್ಯಮಾಡುವಂತೆ, ನೀವುಗಳೂ ಮಾಡಿರಿ" ಎಂದು ಬ್ರಹ್ಮಚಾರಿಯು ನಿಶ್ಚಯಿಸಿಕೊಳ್ಳಬೇಕು. ನಲವತ್ತೆಂಟು ವರ್ಷ ಪರ್ಯಂತದ ಉತ್ತಮ ಬ್ರಹ್ಮಚರ್ಯವು ಮೂರನೆಯೆ ಪ್ರಕಾರದ್ದಾಗಿರುತ್ತದೆ. ನಲವತ್ತೆಂಟು ಅಕ್ಷರದ ಜಗತೀ ಚ್ಛಂದದಂತೆ, ನಲ್ವತ್ತೆಂಟು ವರ್ಷಗಳವರೆಗೆ ಯಥಾವತ್ತಾಗಿ ಬ್ರಹ್ಮಚರ್ಯ ಪಾಲಿಸುವವನ ಪ್ರಾಣಗಳು ಅವನಿಗನುಕೂಲವಾಗಿ ಸಕಲ ವಿದ್ಯೆಗಳನ್ನೂ ಗ್ರಹಿಸುತ್ತವೆ. ಹೇಗೆ ಮಾತಾಪಿತೃಗಳೂ, ಆಚಾರ್ಯರೂ ತಮ್ಮ ಮಕ್ಕಳನ್ನು ಪ್ರಥಮ ವಯಸ್ಸಿನಲ್ಲಿ ವಿದ್ಯೆ ಮತ್ತು ಗುಣಗ್ರಹಣಕ್ಕಾಗಿ ತಪಸ್ಸಿಗಳನ್ನಾಗಿ ಮಾಡುವರೋ, ಮತ್ತು ಅದನ್ನೇ ಉಪದೇಶಿಸುವರೋ ಹಾಗೆಯೇ ನೀವೂ ಮಾಡಿರಿ. ಮತ್ತು ಆ ಮಕ್ಕಳು ತಾನೇ ಸ್ವತಃ ಅಖಂಡ ಬ್ರಹ್ಮಚರ್ಯಸೇವನದಿಂದ ತೃತೀಯಪ್ರಕಾರದ ಉತ್ತಮ ಬ್ರಹ್ಮಚರ್ಯವನ್ನು ಪಾಲಿಸಿ, ಪೂರ್ಣ ಅಂದರೆ ನಾನೂರು ವರ್ಷಗಳವರೆಗೆ ಆಯುಸ್ಸನ್ನು ಹೆಚ್ಚಿಸಿಕೊಳ್ಳುವಂತೆ ನೀವೂ ಹೆಚ್ಚಿಸಿಕೊಳ್ಳಿರಿ. ಏಕೆಂದರೆ, ಯಾರು ಈ ಬ್ರಹ್ಮಚರ್ಯವನ್ನು ಹೊಂದಿ ಲೋಪಮಾಡುವುದಿಲ್ಲವೋ, ಅವರು ಎಲ್ಲ ಪ್ರಕಾರದ ರೋಗಗಳಿಂದಲೂ ರಹಿತರಾಗಿ ಧರ್ಮಾರ್ಥಕಾಮಮೋಕ್ಷಗಳನ್ನು ಗಳಿಸಿಕೊಳ್ಳುತ್ತಾರೆ.

ಚತಸ್ರೋಽವಸ್ಥಾಃ ಶರೀರಸ್ಯ ವೃದ್ಧಿರ್ಯೌವನಂ ಸಂಪೂರ್ಣತಾ ಕಂಚಿತ್ಪರಿಹಾಣಿಶ್ಚೇತಿ । ಆಷೋಡಶಾದ್ವೃದ್ಧಿಃ । ಆಪಂಚವಿಂಶತೇರ್ಯೌವನಂ । ಆಚತ್ವಾರಿಂಶತಃ ಸಂಪೂರ್ಣತಾ । ತತಃ ಕಂಚಿತ್ಪರಿಹಾಣಿಶ್ಚೇತಿ ॥

ಪಂಚವಿಂಶೇ ತತೋ ವರ್ಷೇ ಪುಮಾನ್ನಾರೀ ತು ಷೋಡಶೇ । ಸಮತ್ವಾಗತವೀರ್ಯೌ ತೌ ಜಾನೀಯಾತ್ಕುಶಲೋ ಭಿಷಕ್ ॥

ಇದು ಸುಶ್ರುತದ ಸೂತ್ರಸ್ಥಾನದ ಮೂವತ್ತೈದನೆಯ ಅಧ್ಯಾಯದ ವಚನ. ಈ ದೇಹಕ್ಕೆ ನಾಲ್ಕು ಅವಸ್ಥೆಗಳಿರುತ್ತವೆ. ೧. (ವೃದ್ಧಿ) ಅಂದರೆ ಹದಿನಾರನೆಯ ವರ್ಷದಿಂದ ಇಪ್ಪತ್ತೈದನೆಯ ವರ್ಷದವರೆಗೆ ದೇಹದ ಸಮಸ್ತ ಧಾತುಗಳು ಬೆಳೆಯುತ್ತವೆ. ೨. (ಯೌವನ) ಅಂದರೆ ಇಪ್ಪತ್ತೈದು ವರ್ಷಗಳು ತುಂಬಿ ಇಪ್ಪತ್ತಾರನೆಯ ವರ್ಷದಿಂದ ಯೌವನವು ಆರಂಭವಾಗುತ್ತದೆ. ೩. (ಸಂಪೂರ್ಣತೆ) ಅಂದರೆ ಇಪ್ಪತ್ತೈದನೆಯ ವರ್ಷದಿಂದ ನಲವತ್ತನೆಯ ವರ್ಷದವರೆಗೆ ಸಕಲಧಾತುಗಳು ಪುಷ್ಟವಾಗುತ್ತವೆ. ೪. (ಕಂಚಿತ್ಪರಿಹಾಣಿ) ಅಂದರೆ ಈ ಅವಸ್ಥೆಯಲ್ಲಿ ದೇಹದ ಎಲ್ಲಾ ಅಂಗಾಂಗಗಳ ಸಕಲಧಾತುಗಳೂ ಪುಷ್ಟವಾಗಿ ಪೂರ್ಣತೆಯನ್ನು ಪಡೆದಿರುವುದರಿಂದ ಆ ಮೇಲೆ ವೃದ್ಧಿಯಾಗುವ ಧಾತುವು ದೇಹದಲ್ಲಿ ಸಿಲ್ಲದೆ ಸ್ವಪ್ನ, ಬೆವರು ಮೊದಲಾದುವುಗಳ ಮೂಲಕ ಹೊರಗೆ ಹೊರಟುಹೋಗುತ್ತದೆ. ಈ ನಲವತ್ತನೆಯ ವರ್ಷವೇ ವಿವಾಹಕ್ಕೆ ಉತ್ತಮ ಸಮಯವಾಗಿರುತ್ತದೆ. ಆದರೆ, ನಲವತ್ತೆಂಟನೆಯ ವರ್ಷದಲ್ಲಿ ವಿವಾಹವಾಗುವುದು ಉತ್ತಮೋತ್ತಮ.

ಪ್ರಶ್ನೆ :—ಬ್ರಹ್ಮಚರ್ಯದ ಈ ಸಮಯವು ಸ್ತ್ರೀಪುರುಷರಿಬ್ಬರಿಗೂ ಸಮಾನವೊ?

ಉತ್ತರ :—ಅಲ್ಲ. ಪುರುಷನು ಇಪ್ಪತ್ತೈದು ವರ್ಷಗಳ ವರೆಗೆ ಬ್ರಹ್ಮಚಾರಿಯಾಗಿದ್ದರೆ, ಕನ್ಯೆಯು ಹದಿನಾರು ವರ್ಷಗಳ ವರೆಗೆ ಬ್ರಹ್ಮಚಾರಿಣಿಯಾಗಿರಬೇಕು. ಪುರುಷನು ಮೂವತ್ತು ವರ್ಷಗಳ ವರೆಗೆ ಬ್ರಹ್ಮಚಾರಿಯಾಗಿದ್ದರೆ, ಸ್ತ್ರೀಯು ಹದಿನೇಳು ವರ್ಷಗಳ ವರೆಗೂ, ಪುರುಷನು ಮೂವತ್ತಾರು ವರ್ಷಗಳ ವರೆಗೆ ಬ್ರಹ್ಮಚಾರಿಯಾಗಿದ್ದರೆ,

ಸ್ತ್ರೀಯು ಹದಿನೆಂಟು ವರ್ಷಗಳ ವರೆಗೂ, ಪುರುಷನು ನಲವತ್ತು ವರ್ಷಗಳ ವರೆಗೆ ಬ್ರಹ್ಮಚಾರಿಯಾಗಿದ್ದರೆ ಸ್ತ್ರೀಯು ಇಪ್ಪತ್ತು ವರ್ಷಗಳ ವರೆಗೂ, ಪುರುಷನು ನಲವತ್ತುನಾಲ್ಕು ವರ್ಷಗಳ ವರೆಗೆ ಬ್ರಹ್ಮಚಾರಿಯಾಗಿದ್ದರೆ, ಸ್ತ್ರೀಯು ಇಪ್ಪತ್ತೆರಡು ವರ್ಷಗಳ ವರೆಗೂ, ಪುರುಷನು ನಲವತ್ತೆಂಟು ವರ್ಷಗಳ ವರೆಗೆ ಬ್ರಹ್ಮಚಾರಿಯಾಗಿದ್ದರೆ, ಸ್ತ್ರೀಯು ಇಪ್ಪತ್ತುನಾಲ್ಕು ವರ್ಷಗಳ ವರೆಗೂ ಬ್ರಹ್ಮಚರ್ಯವನ್ನು ಪಾಲಿಸಬೇಕು. ಅಂದರೆ, ನಲವತ್ತೆಂಟನೆಯ ವರ್ಷವು ತುಂಬಿದ ಬಳಿಕ ಪುರುಷನೂ, ಇಪ್ಪತ್ತುನಾಲ್ಕು ವರ್ಷಗಳು ತುಂಬಿದ ಬಳಿಕ ಸ್ತ್ರೀಯೂ ಬ್ರಹ್ಮಚರ್ಯದಿಂದಿರಬಾರದು. ಆದರೆ, ಈ ನಿಯಮವು ಮದುವೆಯಾಗುವ ಸ್ತ್ರೀ-ಪುರುಷರಿಗೆ ಮಾತ್ರ ಅನ್ವಯಿಸುತ್ತದೆ. ಮದುವೆ ಆಗಬೇಕೆಂಬ ಇಚ್ಛೆಯೇ ಇಲ್ಲದ ಸ್ತ್ರೀ-ಪುರುಷರು ಸಾಯುವ ವರೆಗೆ ಬೇಕಾದರೂ ಬ್ರಹ್ಮಚಾರಿಗಳಾಗಿರಬಹುದು. ಆದರೆ, ಇದು ಪೂರ್ಣ ವಿದ್ಯಾವಂತರೂ, ಜಿತೇಂದ್ರಿಯರೂ, ನಿರ್ದೋಷಿಗಳೂ, ಯೋಗಿಗಳೂ ಆದ ಸ್ತ್ರೀ-ಪುರುಷರಿಗೆ ಮಾತ್ರ ಸಾಧ್ಯ. ಕಾಮದ ವೇಗವನ್ನು ಅಡಗಿಸಿ ಇಂದ್ರಿಯಗಳನ್ನು ತನ್ನ ವಶದಲ್ಲಿಟ್ಟುಕೊಳ್ಳುವುದು ಬಹಳ ಕಠಿಣವಾದ ಕಾರ್ಯ.

ಋತಂ ಚ ಸ್ವಾಧ್ಯಾಯಪ್ರವಚನೇ ಚ । ಸತ್ಯಂ ಚ ಸ್ವಾಧ್ಯಾಯಪ್ರವಚನೇ ಚ । ತಪಶ್ಚ ಸ್ವಾಧ್ಯಾಯಪ್ರವಚನೇ ಚ । ದಮಶ್ಚ ಸ್ವಾಧ್ಯಾಯಪ್ರವಚನೇ ಚ । ಶಮಶ್ಚ ಸ್ವಾಧ್ಯಾಯಪ್ರವಚನೇ ಚ । ಅಗ್ನಯಶ್ಚ ಸ್ವಾಧ್ಯಾಯಪ್ರವಚನೇ ಚ ।ಅಗ್ನಿಹೋತ್ರಂ ಚ ಸ್ವಾಧ್ಯಾಯಪ್ರವಚನೇ ಚ । ಅತಿಥಯಶ್ಚ ಸ್ವಾಧ್ಯಾಯಪ್ರವಚನೇ ಚ । ಮಾನುಷಂ ಚ ಸ್ವಾಧ್ಯಾಯಪ್ರವಚನೇ ಚ । ಪ್ರಜಾ ಚ ಸ್ವಾಧ್ಯಾಯಪ್ರವಚನೇ ಚ । ಪ್ರಜನಶ್ಚಸ್ವಾಧ್ಯಾಯಪ್ರವಚನೇ ಚ । ಪ್ರಜಾತಿಶ್ಚ ಸ್ವಾಧ್ಯಾಯಪ್ರವಚನೇ ಚ ॥

ಇದು ತೈತ್ತಿರೀಯೋಪನಿಷತ್ತಿನ ಪ್ರಪಾ ೭, ಅ. ೯ ರ ವಚನವಾಗಿರುತ್ತದೆ. ಇದು ಓದುವ ಮತ್ತು ಓದಿಸುವವರ ನಿಯಮಗಳು.

(ಋತಂ...)ಯಥಾರ್ಥಾಚರಣೆಯಿಂದ ಅಧ್ಯಯನ ಮಾಡಬೇಕು, ಮತ್ತು ಮಾಡಿಸಬೇಕು. (ಸತ್ಯಂ....) ಸತ್ಯಾಚರಣೆಯಿಂದ ಸತ್ಯ ವಿದ್ಯೆಗಳನ್ನು ಅಧ್ಯಯನ ಮಾಡಬೇಕು, ಮತ್ತು ಮಾಡಿಸಬೇಕು. (ತಪಶ್ಚ....) ತಪಸ್ವಿಗಳಾಗಿದ್ದು ಧರ್ಮಗಳನ್ನು ಅನುಷ್ಠಾನ ಮಾಡುತ್ತಾ, ವೇದ ಮೊದಲಾದ ಶಾಸ್ತ್ರಗಳನ್ನು ಅಧ್ಯಯನ ಮಾಡಬೇಕು, ಮತ್ತು ಮಾಡಿಸಬೇಕು. (ದಮಶ್ಚ....) ಬಾಹ್ಯ ಇಂದ್ರಿಯಗಳನ್ನು ಕೆಟ್ಟಾಚರಣೆಗಳಿಂದ ತಡೆದು, ಅಧ್ಯಯನ ಮಾಡಬೇಕು, ಮತ್ತು ಮಾಡಿಸುತ್ತಿರಬೇಕು. (ಶಮಶ್ಚ....) ಮನಸ್ಸಿನ ವೃತ್ತಿಯನ್ನು ಎಲ್ಲಾ ವಿಧವಾದ ದೋಷಗಳಿಂದ ದೂರಮಾಡಿ, ಅಧ್ಯಯನ ಮಾಡುತ್ತಿರಬೇಕು, ಮತ್ತು ಮಾಡಿಸುತ್ತಿರಬೇಕು. (ಅಗ್ನಯಶ್ಚ....) ಆಹವನೀಯ ಮೊದಲಾದ ಅಗ್ನಿಗಳನ್ನೂ ವಿದ್ಯುತ್ತು ಮೊದಲಾದುವುಗಳನ್ನೂ ತಿಳಿದು ಅಧ್ಯಯನ ಮಾಡಬೇಕು, ಮತ್ತು ಮಾಡಿಸುತ್ತಿರಬೇಕು. (ಅಗ್ನಿಹೋತ್ರಂ....) ಅಗ್ನಿಹೋತ್ರವನ್ನು ಅನುಷ್ಠಾನ ಮಾಡುತ್ತಾ ಅಧ್ಯಯನ ಮಾಡುತ್ತಿರಬೇಕು, ಮತ್ತು ಮಾಡಿಸುತ್ತಿರಬೇಕು. (ಅತಿಥಯಶ್ಚ....) ಅತಿಥಿಗಳ ಸೇವೆಯನ್ನು ಮಾಡುತ್ತಾ ಅಧ್ಯಯನ ಮಾಡಬೇಕು, ಮತ್ತು ಮಾಡಿಸಬೇಕು. (ಮಾನುಷಂ ಚ....) ಮನುಷ್ಯ ಸಂಬಂಧವಾದ ವ್ಯವಹಾರಗಳನ್ನು ಉಚಿತ ರೀತಿಯಿಂದ ನಡೆಸುತ್ತಾ ಅಧ್ಯಯನ ಮಾಡುತ್ತಿರಬೇಕು, ಮತ್ತು ಮಾಡಿಸುತ್ತಿರಬೇಕು. (ಪ್ರಜಾಚ....) ಸಂತಾನ ಮತ್ತು ರಾಜ್ಯವನ್ನು ಪರಿಪಾಲಿಸುತ್ತಾ ಅಧ್ಯಯನ ಮಾಡುತ್ತಿರಬೇಕು, ಮತ್ತು ಮಾಡಿಸುತ್ತಿರಬೇಕು. (ಪ್ರಜನಶ್ಚ....) ವೀರ್ಯವನ್ನು ಕಾಪಾಡಿಕೊಂಡು ವೃದ್ಧಿಪಡಿಸಿಕೊಳ್ಳುತ್ತಾ ಅಧ್ಯಯನ ಮಾಡುತ್ತಿರಬೇಕು, ಮತ್ತು ಮಾಡಿಸುತ್ತಿರಬೇಕು. (ಪ್ರಜಾತಿಶ್ಚ....) ತಮ್ಮ ಮಕ್ಕಳನ್ನೂ, ಶಿಷ್ಯರನ್ನೂ ಪಾಲಿಸುತ್ತಾ ಅಧ್ಯಯನ ಮಾಡುತ್ತಿರಬೇಕು, ಮತ್ತು ಮಾಡಿಸುತ್ತಿರಬೇಕು.

ಯಮಾನ್ ಸೇನೇತ ಸತತಂ ನ ನಿಯಮಾನ್ ಕೇವಲಾನ್ ಬುಧಃ। ಯಮಾನ್ ಪತತ್ಯಕುರ್ವಾಣೋ ನಿಯಮಾನ್ ಕೇವಲಾನ್ ಭಜನ್ ॥

(ಮನು ೪—೨೦೪)

ಯಮಗಳು ಐದು ಪ್ರಕಾರವಾಗಿರುತ್ತವೆ—

ತತ್ರಾಹಿಂಸಾಸತ್ಯಾಸ್ತೇಯಬ್ರಹ್ಮಚರ್ಯಾಪರಿಗ್ರಹಾಯಮಾಃ।

(ಯೋಗದರ್ಶನ, ಸಾಧನಪಾದ, ಸೂತ್ರ ೩೦)

ಅಂದರೆ, (ಅಹಿಂಸಾ)-ವೈರತ್ಯಾಗ, (ಸತ್ಯ)-ಸತ್ಯವನ್ನು ಸ್ವೀಕಾರ ಮಾಡುವುದು, ಸತ್ಯವನ್ನು ನುಡಿಯುವುದು ಮತ್ತು ಸತ್ಯವನ್ನೇ ಆಚರಿಸುವುದು. (ಅಸ್ತೇಯ)-ಮನ, ವಚನ, ಕರ್ಮಗಳಿಂದ ಕಳ್ಳತನವನ್ನು ತ್ಯಾಗಮಾಡುವುದು. (ಬ್ರಹ್ಮಚರ್ಯ)-ಉಪಸ್ಥೇಂದ್ರಿಯದ ಸಂಯಮ. (ಅಪರಿಗ್ರಹ)-ಅತಿಯಾದ ಲೋಲುಪತೆ* ಮತ್ತು ತನ್ನದೆಂಬ ಅಹಂಕಾರದಿಂದ ದೂರವಾಗಿರುವುದು—ಈ ಐದು ವಿಧವಾದ ಯಮುಗಳನ್ನು ಯಾವಾಗಲೂ ಆಚರಿಸುತ್ತಿರಬೇಕು. ಕೇವಲ ನಿಯಮಗಳ ಸೇವನೆ, ಅಂದರೆ—

ಶೌಚಸಂತೋಷತಪಃ ಸ್ವಾಧ್ಯಾಯೇಶ್ವರಪ್ರಣಿಧಾನಾನಿ ನಿಯಮಾಃ ॥

[ಯೋಗದರ್ಶನ ಸಾಧನಪಾದ ಸೂತ್ರ ೩೨]

(ಶೌಚ) ಸ್ನಾನ ಮೊದಲಾದುವುಗಳಿಂದ ಪವಿತ್ರತೆ. (ಸಂತೋಷ) ಪೂರ್ಣ ಪ್ರಸನ್ನನಾಗಿ ಸೋಮಾರಿಯಾಗಿ ಕೂಡುವುದು ಸಂತೋಷವಲ್ಲ; ಶಕ್ಯವಿದ್ದಷ್ಟು ಪುರುಷಾರ್ಥಗಳನ್ನು ಸಾಧಿಸುತ್ತ, ಲಾಭ ಬಂದಾಗ ಹಿಗ್ಗದೆ, ಹಾನಿಯಾದಾಗ ತಗ್ಗದೆ ಬಾಳುವುದು. (ತಪ) ಕಷ್ಟಗಳನ್ನು ಸಹಿಸಿಯಾದರೂ ಧರ್ಮಯುಕ್ತವಾದ ಕಾರ್ಯಗಳನ್ನು ಆಚರಿಸುವುದು, (ಸ್ವಾಧ್ಯಾಯ)—ಓದುವುದು ಮತ್ತು ಓದಿಸುವುದು, (ಈಶ್ವರಪ್ರಣಿಧಾನ)—ಭಕ್ತಿವಿಶೇಷದಿಂದ ಪರಮಾತ್ಮನಿಗೆ ಆತ್ಮಸಮರ್ಪಣಮಾಡುವುದು—ಈ ಐದು ನಿಯಮಗಳೆನಿಸಿಕೊಳ್ಳುತ್ತವೆ.

ಯಮಗಳನ್ನು ಬಿಟ್ಟು, ಕೇವಲ ಈ ನಿಯಮಗಳನ್ನು ಆಚರಿಸಬಾರದು. ಆದರೆ ಇವೆರಡನ್ನೂ ಆಚರಿಸುತ್ತಿರಬೇಕು. ಯಮಗಳನ್ನು ಬಿಟ್ಟು. ಕೇವಲ ನಿಯಮಗಳನ್ನು ಆಚರಿಸುವವನು ಉನ್ನತಿಯನ್ನು

* ಆತಿಯಾಸೆ

ಪಡೆಯದೆ ಅಧೋಗತಿಯನ್ನು ಹೊಂದುತ್ತಾನೆ—ಅಂದರೆ ಸಂಸಾರದಲ್ಲಿ ಬಿದ್ದಿರುತ್ತಾನೆ.

ಕಾಮಾತ್ಮತಾ ನ ಪ್ರಶಸ್ತಾ ನ ಚೈವೇಹಾಸ್ತ್ಯಕಾಮತಾ ।
ಕಾಮ್ಯೋ ಹಿ ವೇದಾಧಿಗಮಃ ಕರ್ಮಯೋಗಶ್ಚ ವೈದಿಕಃ ॥

[ಮನು. ೨-೨೧]

ಅರ್ಥ :—ಅತ್ಯಂತ ಕಾಮಾತುರತೆಯಾಗಲಿ ಮತ್ತು ಅತ್ಯಂತ ನಿಷ್ಕಾಮ ಭಾವನೆಯಾಗಲಿ ಯಾರಿಗೂ ಶ್ರೇಷ್ಠವಲ್ಲ. ಏಕೆಂದರೆ, ಕಾಮನೆಯೇ ಇಲ್ಲದಿದ್ದರೆ ವೇದಗಳನ್ನು ತಿಳಿಯುವುದು ಮತ್ತು ವೇದಗಳಲ್ಲಿ ವಿಧಾನಮಾಡಿರುವ ಉತ್ತಮಕಾರ್ಯಗಳನ್ನು ಆಚರಿಸುವುದು ಯಾರಿಂದಲೂ ಸಾಧ್ಯವಾಗಲಾರದು. ಆದುದರಿಂದ :—

ಸ್ವಾಧ್ಯಾಯೇನ ವ್ರತೈರ್ಹೋಮೈಸ್ತ್ರೈವಿದ್ಯೇನೇಜ್ಯಯಾ ಸುತೈಃ ।
ಮಹಾಯಜ್ಞೈಶ್ಚ ಯಜ್ಞೈಶ್ಚ ಬ್ರಾಹ್ಮೀಯಂ ಕ್ರಿಯತೇ ತನುಃ ॥

[ಮನು. ೨-೮]

ಅರ್ಥ :—(ಸ್ವಾಧ್ಯಾಯೇನ) ಸಮಸ್ತ ವಿದ್ಯೆಗಳನ್ನೂ ಅಧ್ಯಯನ ಮಾಡಿ ಇತರರಿಗೆ ಅಧ್ಯಯನ ಮಾಡಿಸುವುದರಿಂದಲೂ, (ವ್ರತೈಃ) ಬ್ರಹ್ಮಚರ್ಯ, ಸತ್ಯಭಾಷಣ ಮೊದಲಾದ ನಿಯಮಗಳ ಪರಿಪಾಲನೆಯಿಂದಲೂ, (ಹೋಮೈಃ) ಅಗ್ನಿಹೋತ್ರ ಮೊದಲಾದ ಹೋಮಗಳು, ಸತ್ಯಗ್ರಹಣ, ಅಸತ್ಯಪರಿತ್ಯಾಗ ಮತ್ತು ಸತ್ಯವಿದ್ಯೆಗಳ ದಾನದಿಂದಲೂ, (ತ್ರೈವಿದ್ಯೇನ) ವೇದದಲ್ಲಿರುವ ಕರ್ಮವಿದ್ಯೆ, ಉಪಾಸನಾ ವಿದ್ಯೆ ಮತ್ತು ಜ್ಞಾನವಿದ್ಯೆಯನ್ನು ಗ್ರಹಿಸುವುದರಿಂದಲೂ, (ಇಜ್ಯಯಾ) ಪಕ್ಷೇಷ್ಟಿ ಮೊದಲಾದುವುಗಳನ್ನು ಆಚರಿಸುವುದರಿಂದಲೂ, (ಸುತೈಃ) ಸಂತಾನವನ್ನು ಉತ್ಪನ್ನಮಾಡುವುದರಿಂದಲೂ, (ಮಹಾಯಜ್ಞೈಃ) ಬ್ರಹ್ಮಯಜ್ಞ, ದೇವಯಜ್ಞ, ಪಿತೃಯಜ್ಞ, ವೈಶ್ವದೇವಯಜ್ಞ ಮತ್ತು ಅತಿಥಿಸೇವೆಯೆಂಬ ಅತಿಥಿಯಜ್ಞ—ಈ ಐದು ಮಹಾಯಜ್ಞಗಳಿಂದಲೂ, (ಯಜ್ಞೈಃ) ಅಗ್ನಿಷ್ಟೋಮ ಮೊದಲಾದ ಮತ್ತು ಶಿಲ್ಪವಿದ್ಯೆ, ವಿಜ್ಞಾನ

ಮೊದಲಾದ ಯಜ್ಞಗಳನ್ನು ಆಚರಿಸುವುದರಿಂದಲೂ, (ಇಯಂ ತನುಃ) ಈ ಶರೀರವು, (ಬ್ರಾಹ್ಮ್ಯೀಕ್ರಿಯತೇ) ಬ್ರಾಹ್ಮೀ ಅಂದರೆ, ವೇದ ಮತ್ತು ಪರಮೇಶ್ವನ ಭಕ್ತಿಗೆ ಆಧಾರರೂಪವಾದ ಬ್ರಾಹ್ಮಣಶರೀರವಾಗಿ ಮಾಡಲ್ಪಡುತ್ತದೆ. ಇಷ್ಟು ಸಾಧನಗಳಿಲ್ಲದೆ ಬ್ರಾಹ್ಮಣಶರೀರವಾಗ ಲಾರದು.

ಇಂದ್ರಿಯಾಣಾಂ ವಿಚರತಾಂ ವಿಷಯೇಷ್ವಪಹಾರಿಷು ।
ಸಂಯಮೇ ಯತ್ನಮಾತಿಷ್ಠೇದ್ವಿದ್ವಾನ್ ಯಂತೇವವಾಜಿನಾಂ॥

(ಮನು ೨-೮೮)

ಅರ್ಥ :—ಜಾಣನಾದ ಸಾರಥಿಯು ಕುದುರೆಗಳನ್ನು ನಿಯಮದ ಲ್ಲಿಟ್ಟುಕೊಳ್ಳುವಂತೆ, ಮನಸ್ಸನ್ನು ಮತ್ತು ಆತ್ಮವನ್ನು ದುಷ್ಕಾರ್ಯಗಳ ಕಡೆಗೆ ಸೆಳೆದೊಯ್ಯುವ, ವಿಷಯಗಳಲ್ಲಿ ಸಂಚರಿಸುತ್ತಿರುವ ಇಂದ್ರಿಯ ಗಳನ್ನು ನಿಗ್ರಹಿಸಲು ಎಲ್ಲಾ ರೀತಿಗಳಿಂದಲೂ ಪ್ರಯತ್ನಿಸಬೇಕು. ಯಾಕೆಂದರೆ,

ಇಂದ್ರಿಯಾಣಾಂ ಪ್ರಸಂಗೇನ ದೋಷಮೃಚ್ಛತ್ಯ ಸಂಶಯಂ ।
ಸನ್ನಿಯಮ್ಯ ತು ತಾನ್ಯೇವ ತತಃ ಸಿದ್ಧಿಂ ನಿಯಚ್ಛತಿ ॥

(ಮನು ೨-೯೩)

ಅರ್ಥ :—ಜೀವಾತ್ಮನು ಇಂದ್ರಿಯಗಳಿಗೆ ವಶನಾಗಿ ನಿಜವಾಗಿ ದೊಡ್ಡ ದೊಡ್ಡ ದೋಷಗಳಿಗೆ ಗುರಿಯಾಗುತ್ತಾನೆ. ಇಂದ್ರಿಯಗಳನ್ನು ವಶಪಡಿಸಿಕೊಂಡಾಗಲೇ ಅವನು ಸಿದ್ಧಿಯನ್ನು ಪಡೆಯುವನು.

ವೇದಾಸ್ತ್ಯಾಗಶ್ಚ ಯಜ್ಞಾಶ್ಚ ನಿಯಮಾಶ್ಚ ತಪಾಂಸಿ ಚ ।
ನ ವಿಪ್ರದುಷ್ಟಭಾವಸ್ಯ ಸಿದ್ಧಿಂ ಗಚ್ಛಂತಿ ಕರ್ಹಿಚಿತ್ ॥

(ಮನು ೨-೯೭)

ಅರ್ಥ :—ದುಷ್ಟಾಚಾರಿ ಮತ್ತು ಅಜಿತೇಂದ್ರಿಯನಾದ ಪುರುಷ ನಿಗೆ ವೇದ, ತ್ಯಾಗ, ಯಜ್ಞ, ನಿಯಮ, ತಪಸ್ಸು ಮತ್ತು ಬೇರೆ ಸತ್ಕಾರ್ಯಗಳು ಎಂದೂ ಸಿದ್ಧಿಸುವುದಿಲ್ಲ.

ವೇದೋಪಕರಣೇ ಚೈವ ಸ್ವಾಧ್ಯಾಯೇ ಚೈವ ನೈತ್ಯಿಕೇ।
ನಾನುರೋಧೋಸ್ತ್ಯನಧ್ಯಾಯೇ ಹೋಮಮಂತ್ರೇಷು
ಚೈವ ಹಿ ॥೧॥

ನೈತ್ಯಿಕೇ ನಾಸ್ತ್ಯನಧ್ಯಾಯೋ ಬ್ರಹ್ಮಸತ್ರಂ ಹಿ ತತ್ಸ್ಮೃತಂ।
ಬ್ರಹ್ಮಾಹುತಿಹುತಂ ಪುಣ್ಯಮನಧ್ಯಾಯ ವಷಟ್ಕೃತಂ ॥೨॥

ವೇದಗಳನ್ನು ಅಧ್ಯಯನ ಮಾಡುವುದಕ್ಕೂ, ಅಧ್ಯಯನ ಮಾಡಿಸುವುದಕ್ಕೂ, ಸಂಧ್ಯೋಪಾಸನೆ ಮೊದಲಾದ ಪಂಚಯಜ್ಞಗಳನ್ನು ಆಚರಿಸುವುದಕ್ಕೂ, ಹೋಮ ಮಂತ್ರಗಳಿಗೂ ಅನಧ್ಯಯನದ ಅನುರೋಧೆ, (ಆಗ್ರಹ)ವಿರುವುದಿಲ್ಲ. ॥೧॥

ನಿತ್ಯಕರ್ಮಗಳಿಗೆ ಅನಧ್ಯಯನವಿಲ್ಲ. ಹೇಗೆ ಶ್ವಾಸೋಚ್ಛ್ವಾಸಗಳು ಯಾವಾಗಲೂ ತೆಗೆದುಕೊಳ್ಳಲ್ಪಡುತ್ತಾ ಇರುವುವೋ, ನಿಲ್ಲಿಸಲ್ಪಡಲಾರವೋ, ಹಾಗೆ ನಿತ್ಯಕರ್ಮಗಳನ್ನು ಒಂದು ದಿನವೂ ಬಿಡದೆ, ಪ್ರತಿದಿನವೂ ಆಚರಿಸುತ್ತಿರಬೇಕು. ಏಕೆಂದರೆ, ಅನಧ್ಯಯನದಲ್ಲಿ ಮಾಡಿದ ಅಗ್ನಿಹೋತ್ರ ಮೊದಲಾದ ಸತ್ಕರ್ಮಗಳು ಪುಣ್ಯರೂಪವಾಗಿ ಪರಿಣಮಿಸುತ್ತವೆ. ಸುಳ್ಳನ್ನು ನುಡಿಯುವುದರಲ್ಲಿ ಯಾವಾಗಲೂ ಪಾಪವೂ, ಸತ್ಯವನ್ನು ನುಡಿಯುವುದರಲ್ಲಿ ಯಾವಾಗಲೂ ಪುಣ್ಯವೂ ಉಂಟಾಗುವಂತೆಯೇ ಕೆಟ್ಟಕೆಲಸ ಮಾಡುವುದರಲ್ಲಿ ಸದಾ ಅನಧ್ಯಾಯವೂ ಮತ್ತು ಒಳ್ಳೆಯ ಕೆಲಸ ಮಾಡುವುದರಲ್ಲಿ ಸದಾ ಸ್ವಾಧ್ಯಾಯವೂ ಆಗುತ್ತದೆ. ॥೨॥

ಅಭಿವಾದನಶೀಲಸ್ಯ ನಿತ್ಯಂ ವೃದ್ಧೋಪಸೇವಿನಃ।
ಚತ್ವಾರಿ ತಸ್ಯ ವರ್ಧಂತ ಆಯುರ್ವಿದ್ಯಾಯಶೋಬಲಂ ॥

(ಮನು ೨-೧೨೧)

ಯಾವಾಗಲೂ ವಿನೀತನೂ, ಸುಶೀಲನೂ, ವಿದ್ವಾಂಸನೂ, ವೃದ್ಧರ ಸೇವೆಯನ್ನು ಮಾಡುತ್ತಿರುವವನನು ಆದವನ ಆಯುಷ್ಯ, ವಿದ್ಯೆ, ಕೀರ್ತಿ ಮತ್ತು ಬಲ—ಈ ನಾಲ್ಕು ಯಾವಾಗಲೂ ವೃದ್ಧಿ

ಹೊಂದುತ್ತಿರುತ್ತವೆ. ಯಾರು ಹೀಗೆ ಮಾಡುವುದಿಲ್ಲವೋ ಅವರ ಆಯುಷ್ಯ ಆದಿ ಈ ನಾಲ್ಕು ವೃದ್ಧಿ ಹೊಂದುವುದಿಲ್ಲ.

ಅಹಿಂಸಯೈವ ಭೂತಾನಾಂ ಕಾರ್ಯಂ ಶ್ರೇಯೋನು ಶಾಸನಂ । ವಾಕ್ಚೈವ ಮಧುರಾ ಶ್ಲಕ್ಷ್ಣಾ ಪ್ರಯೋಜ್ಯಾ ಧರ್ಮಮಿಚ್ಛತಾ ॥೧॥ ಯಸ್ಯ ವಾಙ್ಮನಸೇ ಶುದ್ಧೇ ಸಮ್ಯಗ್ಗುಪ್ತೇ ಚ ಸರ್ವದಾ । ಸ ವೈ ಸರ್ವಮವಾಪ್ನೋತಿ ವೇದಾಂತೋಪಗತಂ ಫಲಂ ॥೨॥

(ಮನು ೨, ೧೫೯–೧೬೦)

ವಿದ್ವಾಂಸರು ಮತ್ತು ವಿದ್ಯಾರ್ಥಿಗಳು ವೈರಭಾವವನ್ನು ಬಿಟ್ಟು, ಎಲ್ಲರಿಗೂ ಕಲ್ಯಾಣಮಾರ್ಗವನ್ನು ಉಪದೇಶಿಸುತ್ತಿರುವುದೂ ಮತ್ತು ಉಪದೇಶಕನು ಯಾವಾಗಲೂ ಮಧುರವಾದ ಮತ್ತು ಸುಶೀಲತೆಯಿಂದ ಕೂಡಿರುವ ಮಾತುಗಳನ್ನು ನುಡಿಯುವುದೂ ಯೋಗ್ಯವು. ಧರ್ಮದ ಉನ್ನತಿಯನ್ನು ಇಚ್ಛಿಸುವವನು ಯಾವಾಗಲೂ ಸತ್ಯದಿಂದ ನಡೆಯುತ್ತಿದ್ದು ಸತ್ಯವನ್ನೇ ಉಪದೇಶಿಸಬೇಕು. ॥೧॥

ಯಾವ ಮನುಷ್ಯನ ವಾಣಿ -ಮತ್ತು ಮನಸ್ಸು ಯಾವಾಗಲೂ ಶುದ್ಧವಾಗಿಯೂ, ಸುರಕ್ಷಿತವಾಗಿಯೂ ಇರುತ್ತವೋ, ಆತನೇ ವೇದಾಂತ ಅಂದರೆ–ಎಲ್ಲಾ ವೇದಗಳ ಸಿದ್ಧಾಂತರೂಪ ಫಲವನ್ನು ಪಡೆಯುತ್ತಾನೆ. ॥೨॥

ಸಮ್ಮಾನಾದ್ಬ್ರಾಹ್ಮಣೋ ನಿತ್ಯಮುದ್ವಿಜೇತ ವಿಷಾದಿವ ।
ಅಮೃತಸ್ಯೇವ ಚಾಕಾಂಕ್ಷೇದವಮಾನಸ್ಯ ಸರ್ವದಾ ॥

[ಮನು, ಅ ೨, ಶ್ಲೋ ೧೬೨]

ಯಾವನು ಮಾನಗೌರವಗಳನ್ನು ವಿಷಕ್ಕೆ ಸಮಾನವೆಂದು ತಿಳಿದು ಯಾವಾಗಲೂ ಹೆದರುವನೋ ಮತ್ತು ಅಪಮಾನವನ್ನು ಅಮೃತಕ್ಕೆ ಸಮಾನವೆಂದು ಅಪೇಕ್ಷಿಸುತ್ತಿರುವನೋ ಆ ಬ್ರಾಹ್ಮಣನೇ ಸಮಗ್ರ ವೇದವನ್ನು ಮತ್ತು ಪರಮಾತ್ಮನನ್ನು ತಿಳಿಯುತ್ತಾನೆ.

ಅನೇನ ಕ್ರಮಯೋಗೇನ ಸಂಸ್ಕೃತಾತ್ಮಾ ದ್ವಿಜಃ ಶನೈಃ ।
ಗುರೌ ವಸನ್ ಸಂಚಿನುಯಾದ್ಬ್ರಹ್ಮಾದಿಗವಿತಂ ತಪಃ ॥

(ಮನು, ೨-೧೬೪)

ಉಪನೀತರಾದ ದ್ವಿಜಬ್ರಹ್ಮಚಾರಿಗಳಾದ ಕುಮಾರರು ಮತ್ತು ಬ್ರಹ್ಮಚಾರಿಣಿಯರಾದ ಕನ್ಯೆಯರು ಇದೇ ರೀತಿಯಿಂದ ಕ್ರಮಕ್ರಮವಾಗಿ ವೇದಾರ್ಥಜ್ಞಾನವೆಂಬ ಉತ್ತಮ ತಪಸ್ಸನ್ನು ಹೆಚ್ಚಿಸಿಕೊಳ್ಳುತ್ತಿರಬೇಕು.

ಯೋಽನಧೀತ್ಯ ದ್ವಿಜೋ ವೇದಮನ್ಯತ್ರ ಕುರುತೇ ಶ್ರಮಂ ।
ಸ ಜೀವನ್ನೇವ ಶೂದ್ರತ್ವಮಾಶು ಗಚ್ಛತಿ ಸಾನ್ವಯಃ ॥

(ಮನು, ೨-೧೬೮)

ವೇದಗಳನ್ನು ಅಧ್ಯಯನಮಾಡದೆ ಇತರ ವಿಷಯಗಳಲ್ಲಿ ಶ್ರಮಿಸುವ ದ್ವಿಜನು ಪುತ್ರ ಪೌತ್ರ ಸಹಿತ ಬಲು ಬೇಗ ಶೂದ್ರತ್ವವನ್ನು ಹೊಂದುತ್ತಾನೆ.

ವರ್ಜಯೇನ್ಮಧುಮಾಂಸಂ ಚ ಗಂಧಂ ಮಾಲ್ಯಂ ರಸಾನ್ ಸ್ತ್ರಿಯಃ ।
ಶುಕ್ತಾನಿ ಯಾನಿ ಸರ್ವಾಣಿ ಪ್ರಾಣಿನಾಂ ಚೈವ ಹಿಂಸನಂ ॥೧॥
ಅಭ್ಯಂಗಮಂಜನಂ ಚಾಕ್ಷ್ಣೋರುಪಾನಚ್ಛತ್ರಧಾರಣಂ ।
ಕಾಮಂ ಕ್ರೋಧಂ ಚ ಲೋಭಂ ಚ ನರ್ತನಂ ಗೀತವಾದನಂ ॥೨॥
ದ್ಯೂತಂ ಚ ಜನವಾದಂ ಚ ಪರಿವಾದಂ ಕಥಾನೃತಂ ।
ಸ್ತ್ರೀಣಾಂ ಚ ಪ್ರೇಕ್ಷಣಾಲಂಭನಮುಪಘಾತಂ ಪರಸ್ಯ ಚ ॥೩॥
ಏಕಃ ಶಯೀತ ಸರ್ವತ್ರ ನ ರೇತಃ ಸ್ಕಂದಯೇತ್ ಕ್ವಚಿತ್ ।
ಕಾಮಾದ್ಧಿ ಸ್ಕಂದಯನ್ರೇತೋ ಹಿನಸ್ತಿ ವ್ರತಮಾತ್ಮನಃ ॥೪॥

(ಮನು ೨ ; ೧೭೭-೧೮೦)

ಬ್ರಹ್ಮಚಾರಿಗಳು ಮತ್ತು ಬ್ರಹ್ಮಚಾರಿಣಿಯರು ಮದ್ಯ, ಮಾಂಸ, ಗಂಧ, ಹೂಮಾಲೆ, ರಸ, ಸ್ತ್ರೀ-ಪುರುಷರ ಸಂಗ, ಎಲ್ಲಾ ವಿಧವಾದ ಹುಳಿಪದಾರ್ಥಗಳು, ಪ್ರಾಣಿಹಿಂಸೆ, ಅಂಗಮರ್ದನ, ಅಕಾರಣವಾಗಿ ಉಪಸ್ಥೇಂದ್ರಿಯದ ಸ್ಪರ್ಶ, ಅಂಜನ, ಮೆಟ್ಟುಗಳನ್ನು ಹಾಕಿಕೊಳ್ಳುವುದು, ಛತ್ರಧಾರಣ, ಕಾಮ, ಕ್ರೋಧ, ಲೋಭ, ಮೋಹ, ಭಯ, ಶೋಕ, ಹೊಟ್ಟೆಕಿಚ್ಚು, ದ್ವೇಷ, ನರ್ತನ, ಗಾನ, ವಾದ್ಯ, ಜೂಜು, ಸಿಕ್ಕಿದವರ ಮಾತುಕತೆಗಳು, ನಿಂದೆ, ಸುಳ್ಳು ನುಡಿಯುವುದು, ಸ್ತ್ರೀಯರ ದರ್ಶನ ಮತ್ತು ಆಶ್ರಯ, ಪರಹಾನಿ ಮೊದಲಾದ ದುಷ್ಕಾರ್ಯಗಳನ್ನು ಯಾವಾಗಲೂ ಬಿಟ್ಟುಬಿಡಬೇಕು. ಎಲ್ಲೆಲ್ಲಿಯೂ ಒಂಟಿಯಾಗಿ ಮಲಗಬೇಕು. ಎಂದೂ ವೀರ್ಯಸ್ಖಲನವನ್ನು ಮಾಡಿಕೊಳ್ಳಬಾರದು. ಯಾರಾದರೂ ಕಾಮದಿಂದ ವೀರ್ಯಸ್ಖಲನವನ್ನು ಮಾಡಿಕೊಂಡರೆ, ಅವರ ಬ್ರಹ್ಮಚರ್ಯವ್ರತವು ನಾಶವಾಯಿತೆಂದು ತಿಳಿಯಬೇಕು.

ವೇದಮನೂಚ್ಯಾಚಾರ್ಯೋಽಂತೇ ವಾಸಿನಮನುಶಾಸ್ತಿ। ಸತ್ಯಂ ವದ। ಧರ್ಮಂ ಚರ। ಸ್ವಾಧ್ಯಾಯಾನ್ಮಾ ಪ್ರಮದಃ। ಆಚಾರ್ಯಾಯ ಪ್ರಿಯಂ ಧನಮಾಹೃತ್ಯ ಪ್ರಜಾತಂತುಂ ಮಾ ವ್ಯವಚ್ಛೇತ್ಸೀಃ । ಸತ್ಯಾನ್ನ ಪ್ರಮದಿತವ್ಯಂ। ಧರ್ಮಾನ್ನ ಪ್ರಮದಿತವ್ಯಂ। ಕುಶಲಾನ್ನ ಪ್ರಮದಿತವ್ಯಂ। ಭೂತ್ಯೈ ನ ಪ್ರಮದಿತವ್ಯಂ। ಸ್ವಾಧ್ಯಾಯಪ್ರವಚನಾಭ್ಯಾಂ ನ ಪ್ರಮದಿತವ್ಯಂ । ದೇವ ಪಿತೃಕಾರ್ಯಾಭ್ಯಾಂ ನ ಪ್ರಮದಿತವ್ಯಂ। ಮಾತೃ ದೇವೋ ಭವ। ಪಿತೃ ದೇವೋ ಭವ। ಆಚಾರ್ಯ ದೇವೋ ಭವ । ಅತಿಥಿ ದೇವೋ ಭವ । ಯಾನ್ಯನವದ್ಯಾನಿ ಕರ್ಮಾಣಿ ತಾನಿ ಸೇವಿತವ್ಯಾನಿ ನೋ ಇತರಾಣಿ । ಯಾನ್ಯಸ್ಮಾಕಗ್ಂ ಸುಚರಿತಾನಿ । ತಾನಿ ತ್ವಯೋಪಾಸ್ಯಾನಿ ನೋ ಇತರಾಣಿ। ಯೇ ಕೇ ಚಾಸ್ಮಚ್ಛ್ರೇಯಾಗ್ಂಸೋ ಬ್ರಾಹ್ಮಣಾಸ್ತೇಷಾಂ ತ್ವಯಾಸನೇನ ಪ್ರಶ್ವಸಿತವ್ಯಂ । ಶ್ರದ್ಧಯಾ

ದೇಯಂ । ಅಶ್ರದ್ಧಯಾ ದೇಯಂ । ಶ್ರಿಯಾ ದೇಯಂ । ಹ್ರಿಯಾ ದೇಯಂ । ಭಿಯಾ ದೇಯಂ । ಸಂವಿದಾ ದೇಯಂ । ಅಥ ಯದಿ ತೇ ಕರ್ಮ ವಿಚಿಕಿತ್ಸಾ ವಾ ವೃತ್ತ ವಿಚಿಕಿತ್ಸಾ ವಾ ಸ್ಯಾತ್ । ಯೇ ತತ್ರ ಬ್ರಾಹ್ಮಣಾಃ ಸಮ್ಮ ರ್ಶಿನೋ ಯುಕ್ತಾ ಅಯುಕ್ತಾಃ ಅಲೂಕ್ಷಾ ಧರ್ಮ ಕಾಮಾಃ ಸ್ಯುರ್ಯಥಾ ತೇ ತತ್ರ ವರ್ತೇರನ್ । ತಥಾ ತತ್ರ ವರ್ತೇಥಾಃ । ಏಷ ಆದೇಶ ಏಷ ಉಪದೇಶ ಏಷಾ ವೇದೋಪನಿಷತ್ । ಏತದನುಶಾಸನಂ । ಏವಮುಪಾ ಸಿತವ್ಯಂ । ಏವಮು ಚೈತದುಪಾಸ್ಯಂ ॥

[ತೈತ್ತಿರೀಯ, ಪ್ರಪಾ ೭, ಅನು. ೧೧, ಕಂ. ೧, ೨, ೩, ೪]

ಆಚಾರ್ಯರು ತಮ್ಮ ಅಂತೇವಾಸಿ ಅಂದರೆ, ಶಿಷ್ಯ-ಶಿಷ್ಯೆಯರಿಗೆ ಈ ರೀತಿ ಉಪದೇಶಿಸಬೇಕು :—' ಯಾವಾಗಲೂ ಸತ್ಯವನ್ನು ನುಡಿ. ಧರ್ಮವನ್ನು ಆಚರಿಸು. ಪ್ರಮಾದರಹಿತನಾಗಿ ಓದು ಮತ್ತು ಓದಿಸು. ಪೂರ್ಣ ಬ್ರಹ್ಮಚರ್ಯದಿಂದ ಸಕಲ ವಿದ್ಯೆಗಳನ್ನು ಕಲಿತು, ಆಚಾರ್ಯರಿಗೆ ಪ್ರಿಯವಾದ ಧನವನ್ನು ಸಮರ್ಪಿಸಿ ಮದುವೆಯಾಗಿ ಸಂತಾನವನ್ನು ಉತ್ಪನ್ನಮಾಡು. ಪ್ರಮಾದದಿಂದ ಸತ್ಯವನ್ನೆಂದೂ ಬಿಡಬೇಡ. ಪ್ರಮಾದ ದಿಂದ ಧರ್ಮವನ್ನು ಬಿಡಬೇಡ. ಪ್ರಮಾದದಿಂದ ಆರೋಗ್ಯ ಮತ್ತು ಚಾತುರ್ಯವನ್ನು ಬಿಡಬೇಡ. ಪ್ರಮಾದದಿಂದ ಉತ್ತಮ ಐಶ್ವರ್ಯವನ್ನು ವೃದ್ಧಿಪಡಿಸುವುದನ್ನು ಬಿಡಬೇಡ. ಪ್ರಮಾದದಿಂದ ಎಂದೂ ಅಧ್ಯಯನ-ಅಧ್ಯಾಪನಗಳನ್ನು ಬಿಡಬೇಡ. ದೇವ ಅಂದರೆ—ವಿದ್ವಾಂಸರ ಮತ್ತು ತಾಯಿ, ತಂದೆ ಮೊದಲಾದವರ ಸೇವೆಯಲ್ಲಿ ಅಜಾಗರೂಕತೆಯಿಂದಿರ ಬೇಡ. ವಿದ್ವಾಂಸರನ್ನು ಸತ್ಕರಿಸುವಂತೆಯೇ ತಾಯಿ ತಂದೆ, ಆಚಾರ್ಯ ಮತ್ತು ಅತಿಥಿಗಳ ಸೇವೆಯನ್ನು ಯಾವಾಗಲೂ ಮಾಡುತ್ತಿರು. ಸತ್ಯ ಭಾಷಣ ಮೊದಲಾದ ಅನಿಂದಿತ ಧರ್ಮಯುಕ್ತ ಕಾರ್ಯಗಳನ್ನು ಮಾಡುತ್ತಿರು. ಇವುಗಳಿಗೆ ವಿರುದ್ಧವಾದ ಅಸತ್ಯಭಾಷಣ ಮೊದಲಾ ದುವುಗಳನ್ನು ಎಂದೂ ಮಾಡಬೇಡ. ನಮ್ಮ ಸುಚರಿತ್ರ ಅಂದರೆ—ಧರ್ಮಯುಕ್ತವಾದ ಕಾರ್ಯಗಳನ್ನು ಗ್ರಹಣಮಾಡು. ನಮ್ಮ ಪಾಪಾ

ಚರಣೆಗಳನ್ನು ಎಂದೂ ಗ್ರಹಿಸಬೇಡ. ನಮ್ಮಲ್ಲಿರುವ ಉತ್ತಮ ವಿದ್ವಾಂಸರೂ, ಧರ್ಮಾತ್ಮರೂ ಆದ ಬ್ರಾಹ್ಮಣರ ಬಳಿ ಕೂತು, ಅವರನ್ನೇ ನಂಬು. ಶ್ರದ್ಧೆಯಿಂದ ದಾನಮಾಡಬೇಕು. ಅಶ್ರದ್ಧೆಯಿಂದ ದಾನಮಾಡಬೇಕು. ಶೋಭೆಯಿಂದ ದಾನಮಾಡಬೇಕು. ಲಜ್ಜೆಯಿಂದ ದಾನಮಾಡಬೇಕು. ಭಯದಿಂದ ದಾನಮಾಡಬೇಕು. ಪ್ರತಿಜ್ಞೆಯಿಂದಲೂ ದಾನಮಾಡಬೇಕು. ಎಂದಾದರೂ ನಿನಗೆ ಕರ್ತವ್ಯ, ಶೀಲ ಮತ್ತು ಉಪಾಸನೆಯ ತಿಳುವಳಿಕೆಯ ವಿಷಯದಲ್ಲಿ ಯಾವ ವಿಧವಾದ ಸಂದೇಹವಾದರೂ ಉಂಟಾದರೆ, ವಿಚಾರಶೀಲರೂ, ನಿಷ್ಪಕ್ಷಪಾತಿಗಳೂ, ಯೋಗಿಗಳೂ, ಅಯೋಗಿಗಳೂ, ದಯಾಳುಗಳೂ, ಧರ್ಮಕಾಮರೂ ಆದ ಧರ್ಮಾತ್ಮರು ನಡೆಯುವ ಧರ್ಮಮಾರ್ಗದಲ್ಲಿ ನೀನೂ ನಡೆಯುತ್ತಿರು. ಇದೇ ಆದೇಶ, ಆಜ್ಞೆ, ಇದೇ ಉಪದೇಶ. ಇದೇ ವೇದಗಳ ಉಪನಿಷತ್ತು. ಇದೇ ಶಿಕ್ಷಣ ಹೀಗೆಯೇ ನಡೆದು, ತನ್ನ ನಡೆನಳಿಕೆಗಳನ್ನು ಸುಧಾರಿಸಿಕೊಳ್ಳಬೇಕು.

ಅಕಾಮಸ್ಯ ಕ್ರಿಯಾ ಕಾಚಿದ್ದೃಶ್ಯತೇ ನೇಹ ಕರ್ಹಿಚಿತ್।
ಯದ್ಯದ್ಧಿ ಕುರುತೇ ಕಿಂಚಿತ್ ತತ್ತತ್ಕಾಮಸ್ಯ ಚೇಷ್ಟಿತಂ ॥

(ಮನು ೨-೪)

ನಿಷ್ಕಾಮಪುರುಷನಲ್ಲಿ ಕಣ್ಣುಗಳ ಸಂಕೋಚ ವಿಕಾಸಗಳು ಕೂಡ ಅಸಂಭವವೆಂದು ಜನರು ನಿಶ್ಚಯಿಸಿಕೊಳ್ಳಬೇಕು. ಇದರಿಂದ, ಯಾರು ಯಾರು ಏನುಮಾಡುತ್ತಾರೆಯೋ ಆಯಾ ಪ್ರಯತ್ನಗಳೆಲ್ಲವೂ ಕಾಮನೆಯಿಲ್ಲದೆ ನಡೆಯಲಾರದೆಂದು ಸಿದ್ಧವಾಗುತ್ತದೆ.

ಆಚಾರಃ ಪರಮೋಧರ್ಮಃ ಶ್ರುತ್ಯುಕ್ತಃ ಸ್ಮಾರ್ತ ಏವ ಚ।
ತಸ್ಮಾದಸ್ಮಿನ್ ಸದಾ ಯುಕ್ತೋ ನಿತ್ಯಂ ಸ್ಯಾದಾತ್ಮವಾನ್ ದ್ವಿಜಃ ॥೧॥
ಆಚಾರಾದ್ವಿಚ್ಯುತೋ ವಿಪ್ರೋ ನ ವೇದಫಲಮಶ್ನುತೇ।
ಆಚಾರೇಣ ತು ಸಂಯುಕ್ತಃ ಸಂಪೂರ್ಣಫಲಭಾಗ್ಭವೇತ್ ॥೨॥

(ಮನು-೧, ೧೦೮-೧೦೯)

ವೇದ ಮತ್ತು ವೇದಗಳಿಗೆ ಅನುಕೂಲವಾದ ಸ್ಮೃತಿಗಳಲ್ಲಿ ಪ್ರತಿಪಾದಿಸಲ್ಪಟ್ಟ ಧರ್ಮಗಳನ್ನು ಆಚರಿಸುವುದೇ, ಮಾತನಾಡುವುದು, ಕೇಳುವುದು, ಹೇಳುವುದು, ಓದುವುದು ಮತ್ತು ಓದಿಸುವುದು– ಇವುಗಳ ಫಲ. ಆದ್ದರಿಂದ ಯಾವಾಗಲೂ ಧರ್ಮಾಚರಣೆಯಲ್ಲಿ ಯುಕ್ತರಾಗಿರಬೇಕು. ॥೧॥

ಏಕೆಂದರೆ, ಧರ್ಮಾಚರಣೆಯಿಂದ ರಹಿತನಾದವನು ವೇದ ಪ್ರತಿಪಾದಿತವಾದ ಧರ್ಮಜನ್ಯಸುಖರೂಪಫಲವನ್ನು ಪಡೆಯಲಾರನು. ವಿದ್ಯೆಯನ್ನೋದಿ ಧರ್ಮವನ್ನಾಚರಿಸುವವನೇ ಸಂಪೂರ್ಣ ಸುಖವನ್ನು ಪಡೆಯುತ್ತಾನೆ. ॥೨॥

ಯೋಽವಮನ್ಯೇತ ತೇ ಮೂಲೇ ಹೇತುಶಾಸ್ತ್ರಾಶ್ರಯಾದ್ದ್ವಿಜಃ।
ಸ ಸಾಧುಭಿರ್ಬಹಿಷ್ಕಾರ್ಯೋ ನಾಸ್ತಿಕೋ ವೇದನಿಂದಕಃ ॥

(ಮನು ೨-೧೦)

ವೇದಗಳನ್ನೂ, ವೇದಗಳಿಗೆ ಅನುಕೂಲವಾಗಿ ಆಪ್ತಪುರುಷರಿಂದ ರಚಿಸಲ್ಪಟ್ಟಿರುವ ಶಾಸ್ತ್ರಗಳನ್ನೂ ಅಪಮಾನಪಡಿಸುವ ಆ ವೇದನಿಂದಕನಾದ ನಾಸ್ತಿಕನನ್ನು ಸಮಾಜದಿಂದಲೂ, ಪಂಕ್ತಿಯಿಂದಲೂ, ದೇಶದಿಂದಲೂ ಬಹಿಷ್ಕರಿಸಬೇಕು. ಏಕೆಂದರೆ—

ವೇದಃ ಸ್ಮೃತಿಃ ಸದಾಚಾರಃ ಸ್ವಸ್ಯ ಚ ಪ್ರಿಯಮಾತ್ಮನಃ।
ಏತಚ್ಚತುರ್ವಿಧಂ ಪ್ರಾಹುಃ ಸಾಕ್ಷಾದ್ಧರ್ಮಸ್ಯ ಲಕ್ಷಣಂ ॥

[ಮನು-೨. ೧೨]

ವೇದಗಳು, ವೇದಗಳನ್ನನುಸರಿಸಿ ಆಪ್ತಪುರುಷರಿಂದ ರಚಿಸಲ್ಪಟ್ಟಿರುವ ಮನುಸ್ಮೃತಿ ಮೊದಲಾದ ಶಾಸ್ತ್ರಗಳು, ಸತ್ಪುರುಷರ ಸನಾತನವಾದ ಆಚಾರಗಳು ಅಂದರೆ ವೇದಗಳ ಮೂಲಕ ಈಶ್ವರಪ್ರತಿಪಾದಿತವಾದ ಕರ್ಮಗಳು ಮತ್ತು ತನ್ನ ಆತ್ಮನಿಗೆ ಪ್ರಿಯವಾದುದು ಅಂದರೆ, ಆತ್ಮವು ಯಾವದನ್ನು ಇಚ್ಛಿಸುತ್ತದೆಯೋ, ಉದಾಹರಣೆಗಾಗಿ ಸತ್ಯಭಾಷಣ, ಈ ನಾಲ್ಕು ಲಕ್ಷಣಗಳು. ಅಂದರೆ, ಇವುಗಳಿಂದಲೇ

ಧರ್ಮಾಧರ್ಮದ ನಿಶ್ಚಯವುಂಟಾಗುತ್ತದೆ. ಪಕ್ಷಪಾತವಿಲ್ಲದ ನ್ಯಾಯಾಚರಣ, ಸತ್ಯಗ್ರಹಣ ಮತ್ತು ಅಸತ್ಯಪರಿತ್ಯಾಗ--ಈ ಆಚಾರಗಳೇ ಧರ್ಮ. ಇದಕ್ಕೆ ವಿರುದ್ಧವಾದ, ಪಕ್ಷಪಾತಸಹಿತವಾದ ಅನ್ಯಾಯಾಚರಣ, ಸತ್ಯಪರಿತ್ಯಾಗ ಮತ್ತು ಅಸತ್ಯಗ್ರಹಣ—ಈ ಕಾರ್ಯಗಳನ್ನೇ ಅಧರ್ಮವೆಂದು ಕರೆಯುತ್ತಾರೆ.

ಅರ್ಥಕಾಮೇಷ್ವಸಕ್ತಾನಾಂ ಧರ್ಮಜ್ಞಾನಂ ವಿಧೀಯತೇ ।
ಧರ್ಮಂ ಜಿಜ್ಞಾಸಮಾನಾನಾಂ ಪ್ರಮಾಣಂ ಪರಮಂ ಶ್ರುತಿಃ ॥

[ಮನು. ೨, ೧೩]

ಯಾವ ಮಾನವರು(ಅರ್ಥ) ಚಿನ್ನ ಮೊದಲಾದ ರತ್ನಗಳಲ್ಲಿಯೂ, (ಕಾಮ) ಸ್ತ್ರೀಸಂಗ ಮೊದಲಾದುವುಗಳಲ್ಲಿಯೂ ಸಿಕ್ಕಿ ಬೀಳರೊ, ಅವರಿಗೇ ಧರ್ಮಜ್ಞಾನವಾಗುವುದು. ಧರ್ಮಜ್ಞಾನಾಪೇಕ್ಷಿಗಳು ವೇದಗಳ ಮೂಲಕ ಧರ್ಮವನ್ನು ನಿರ್ಧರಿಸಬೇಕು. ಏಕೆಂದರೆ—ವೇದಗಳನ್ನು ಬಿಟ್ಟು, ಧರ್ಮಾಧರ್ಮಗಳ ನಿರ್ಣಯವು ಸರಿಯಾಗಿ ಆಗುವುದಿಲ್ಲ.

ಈ ರೀತಿ ಆಚಾರ್ಯರು ಶಿಷ್ಯರಿಗೆ ಉಪದೇಶಿಸಬೇಕು. ಮತ್ತು ಹೆಚ್ಚಾಗಿ ರಾಜರಿಗೂ, ಇತರ ಕ್ಷತ್ರಿಯರಿಗೂ, ವೈಶ್ಯರಿಗೂ, ಉತ್ತಮ ಶೂದ್ರರಿಗೂ ಅವಶ್ಯವಾಗಿ ವಿದ್ಯಾಭ್ಯಾಸ ಮಾಡಿಸಬೇಕು. ಕೇವಲ ಬ್ರಾಹ್ಮಣರಾಗಿರುವವರೇ ವಿದ್ಯಾಭ್ಯಾಸಮಾಡುತ್ತಿದ್ದು ಕ್ಷತ್ರಿಯ ವೈಶ್ಯ ಶೂದ್ರರು ಮಾಡದಿದ್ದರೆ, ವಿದ್ಯೆ, ಧರ್ಮ, ರಾಜ್ಯ ಮತ್ತು ಧನ ಮೊದಲಾದುವೆಂದಿಗೂ ವೃದ್ಧಿ ಹೊಂದಲಾರವು. ಬ್ರಾಹ್ಮಣರೇನೋ ಅಧ್ಯಯನಾಧ್ಯಾಪನಗಳಿಂದ ಕ್ಷತ್ರಿಯ ವೈಶ್ಯರಿಂದ ಜೀವಿಕೆಯನ್ನು ಗಳಿಸಬಲ್ಲರು. ಆದರೆ ಬ್ರಾಹ್ಮಣರು ಹೊಟ್ಟೆಪಾಡಿಗೆ ಅಧೀನರಾಗಿ, ಕ್ಷತ್ರಿಯಾದಿಗಳು ಆಜ್ಞಾದಾತೃಗಳೂ, ಯಥಾವತ್ತಾಗಿ ಪರೀಕ್ಷಿಸುವವರೂ, ದಂಡವಿಧಾಯಕರೂ ಆಗದಿರುವುದರಿಂದ, ಬ್ರಾಹ್ಮಣಾದಿ ಸಕಲ ವರ್ಣಗಳವರೂ ಪಾಷಂಡತನದಲ್ಲಿಯೇ ಸಿಕ್ಕಿಬೀಳುವರು. ಕ್ಷತ್ರಿಯಾದಿಗಳು ವಿದ್ಯಾವಂತರಾದಾಗ, ಬ್ರಾಹ್ಮಣರೂ ಸಹ ಅಧಿಕ ವಿದ್ಯೆ ಕಲಿತು, ಧರ್ಮಮಾರ್ಗದಲ್ಲಿ ನಡೆಯುವರು. ಮತ್ತು ವಿದ್ಯಾವಂತರಾದ ಅವರ ಮುಂದೆ

ಪಾಷಂಡತನವನ್ನು ನಡೆಯಿಸಲಾರರು. ಕ್ಷತ್ರಿಯಾದಿಗಳು ಅವಿದ್ಯಾವಂತರಾಗಿದ್ದರೆ, ತಾವೂ ಮನಬಂದಂತೆ ನಡೆದು, ಇತರರನ್ನೂ ಮನಬಂದಂತೆ ನಡೆಸುವರು. ಆದುದರಿಂದ, ಆತ್ಮಕಲ್ಯಾಣಾಕಾಂಕ್ಷಿಗಳಾದ ಬ್ರಾಹ್ಮಣರು ಬಹಳ ಪ್ರಯತ್ನಪಟ್ಟು, ಕ್ಷತ್ರಿಯಾದಿಗಳಿಗೆ ವೇದ ಮೊದಲಾದ ಸತ್ಯಶಾಸ್ತ್ರಗಳನ್ನು ಅಭ್ಯಾಸಮಾಡಿಸಬೇಕು. ಏಕೆಂದರೆ, ಕ್ಷತ್ರಿಯಾದಿಗಳೇ ವಿದ್ಯೆ, ಧರ್ಮ, ರಾಜ್ಯ ಮತ್ತು ಸಂಪತ್ತನ್ನು ವೃದ್ಧಿಪಡಿಸುವವರು. ಅವರೆಂದೂ ಭಿಕ್ಷಾವೃತ್ತಿಯನ್ನಾಶ್ರಯಿಸುವುದಿಲ್ಲ. ಆದಕಾರಣ, ವಿದ್ಯಾವ್ಯವಹಾರಗಳಲ್ಲಿ ಪಕ್ಷಪಾತಿಗಳೂ ಆಗಲಾರರು. ಎಲ್ಲಾ ವರ್ಣಗಳವರಲ್ಲಿಯೂ ವಿದ್ಯಾಸುಶಿಕ್ಷಣಗಳು ನೆಲೆಸಿದಾಗ, ಯಾವನೂ ಪಾಷಂಡರೂಪ, ಅಧರ್ಮಯುಕ್ತ ಮಿಥ್ಯಾವ್ಯವಹಾರಗಳನ್ನು ನಡೆಸಲಾರನು. ಇದರಿಂದ ಕ್ಷತ್ರಿಯಾದಿಗಳನ್ನು ನಿಯಮದಲ್ಲಿಟ್ಟು ನಡೆಸುವವರು ಬ್ರಾಹ್ಮಣರು ಮತ್ತು ಸಂನ್ಯಾಸಿಗಳು; ಬ್ರಾಹ್ಮಣರನ್ನೂ, ಸಂನ್ಯಾಸಿಗಳನ್ನೂ ಒಳ್ಳೆಯ ನಿಯಮದಲ್ಲಿಟ್ಟು ನಡೆಸುವವರು ಕ್ಷತ್ರಿಯಾದಿಗಳು—ಎಂಬುದು ಸಿದ್ಧವಾಗುತ್ತದೆ. ಈ ಕಾರಣಗಳಿಂದ ಸರ್ವವರ್ಣಗಳ ನರನಾರಿಯರಲ್ಲಿಯೂ ವಿದ್ಯಾಧರ್ಮಗಳ ಪ್ರಚಾರವು ಅವಶ್ಯವಾಗಿ ನಡೆಯಬೇಕು.

ಅಧ್ಯಯನ-ಅಧ್ಯಾಪನ ಮಾಡಬೇಕಾದ ವಿಷಯಗಳೆಲ್ಲಾ ಚೆನ್ನಾಗಿ ಪರೀಕ್ಷಿಸಲ್ಪಟ್ಟು ಗ್ರಹಿಸಲ್ಪಡುವುದು ಯೋಗ್ಯವಾಗಿದೆ. ಪರೀಕ್ಷೆ ಐದುವಿಧವಾಗಿರುತ್ತದೆ.

೧. ಪರಮೇಶ್ವರನ ಗುಣಕರ್ಮಸ್ವಭಾವಗಳಿಗೂ, ವೇದಗಳಿಗೂ ಅನುಕೂಲವಾದುದೆಲ್ಲಾ ಸತ್ಯ; ಅದಕ್ಕೆ ವಿರುದ್ಧವಾದುದು ಅಸತ್ಯ.

೨. ಸೃಷ್ಟಿಕ್ರಮಕ್ಕೆ ಅನುಕೂಲವಾದುದು ಸತ್ಯ; ಅದಕ್ಕೆ ವಿರುದ್ಧವಾದುದೆಲ್ಲಾ ಅಸತ್ಯ. ಹೇಗೆಂದರೆ—ಯಾರಾದರೂ "ತಂದೆ ತಾಯಿಗಳ ಸಂಯೋಗವಿಲ್ಲದೆ ಮಗನು ಹುಟ್ಟಿದನು" ಎಂದು ಹೇಳಿದರೆ, ಇದು ಸೃಷ್ಟಿನಿಯಮಕ್ಕೆ ಸರ್ವಥಾ ವಿರುದ್ಧವಾದುದರಿಂದ ಅಸತ್ಯ.

೩. ಆಪ್ತರ ಅಂದರೆ—ಧರ್ಮಾತ್ಮರೂ, ವಿದ್ವಾಂಸರೂ, ಸತ್ಯ

ವಾದಿಗಳೂ, ನಿಷ್ಕಪಟಿಗಳೂ, ಆದವರ ಉಪದೇಶಗಳಿಗೆ ಅನುಕೂಲವಾದುದೆಲ್ಲಾ ಗ್ರಾಹ್ಯ ; ವಿರುದ್ಧವಾದುದು ಅಗ್ರಾಹ್ಯ.

೪. ತನ್ನ ಆತ್ಮನ ಪವಿತ್ರತೆಗೂ, ವಿದ್ಯೆಗೂ ಅನುಕೂಲವಾದುದು. ಹೇಗೆಂದರೆ–ತನಗೆ ಸುಖವು ಪ್ರಿಯ, ದುಃಖವು ಅಪ್ರಿಯ, ಹಾಗೆಯೇ–"ನಾನು ಯಾರಿಗಾದರೂ ಸುಖವಿತ್ತರೆ ಆತನು ಪ್ರಸನ್ನನೂ, ದುಃಖವಿತ್ತರೆ ಅಪ್ರಸನ್ನನೂ ಆಗುವನು" ಎಂದು ಎಲ್ಲರ ವಿಷಯದಲ್ಲಿಯೂ ತಿಳಿಯುವುದು.

೫. ಎಂಟು ಬಗೆಯ ಪ್ರಮಾಣಗಳು–ಪ್ರತ್ಯಕ್ಷ, ಅನುಮಾನ, ಉಪಮಾನ, ಶಬ್ದ, ಐತಿಹ್ಯ, ಅರ್ಥಾಪತ್ತಿ, ಸಂಭವ ಮತ್ತು ಅಭಾವ. ಪ್ರತ್ಯಕ್ಷ ಮೊದಲಾದುವುಗಳ ಲಕ್ಷಣಾದಿಗಳನ್ನು ಕುರಿತು ಈ ಕೆಳಗೆ ಬರೆದಿರುವ ಸೂತ್ರಗಳೆಲ್ಲಾ ನ್ಯಾಯದರ್ಶನದ ಪ್ರಥಮ ಮತ್ತು ದ್ವಿತೀಯ ಅಧ್ಯಾಯಗಳಲ್ಲಿವೆ. ಎಂದು ತಿಳಿಯಬೇಕು.

ಇಂದ್ರಿಯಾರ್ಥಸನ್ನಿಕರ್ಷೋತ್ಪನ್ನಂ ಜ್ಞಾನಮವ್ಯಪದೇಶ್ಯಮವ್ಯಭಿಚಾರಿ ವ್ಯವಸಾಯಾತ್ಮಕಂ ಪ್ರತ್ಯಕ್ಷಂ॥

(ನ್ಯಾಯ ೧. ೧-೪)

ಶ್ರೋತ್ರ, ತ್ವಚೆ, ಚಕ್ಷು, ಜಿಹ್ವೆ, ಘ್ರಾಣ ಇವುಗಳಿಗೆ, ಶಬ್ದ, ಸ್ಪರ್ಶ, ರೂಪ, ರಸ ಮತ್ತು ಗಂಧದೊಡನೆ ಅವ್ಯವಹಿತ ಅಂದರೆ ಆವರಣರಹಿತವಾದ ಸಂಬಂಧವುಂಟಾಗಿ, ಇಂದ್ರಿಯಗಳೊಡನೆ ಮನಸ್ಸಿನ ಮತ್ತು ಮನಸ್ಸಿನೊಡನೆ ಆತ್ಮದ ಸಂಯೋಗವಾಗುವುದರಿಂದ ಹುಟ್ಟುವ ಜ್ಞಾನವನ್ನು ಪ್ರತ್ಯಕ್ಷವೆಂದು ಹೇಳುತ್ತಾರೆ. ಆದರೆ ಅದು ವ್ಯಪದೇಶ್ಯ, ಅಂದರೆ ಸಂಜ್ಞಾಸಂಜ್ಞಿಗಳ ಸಂಬಂಧದಿಂದುಂಟಾದ ಜ್ಞಾನವಾಗಿರಬಾರದು. ಉದಾಹರಣೆಗೆ–ಒಬ್ಬನು ಮತ್ತೊಬ್ಬನಿಗೆ "ನೀರು ತೆಗೆದುಕೊಂಡುಬಾ" ಎಂದನು. ಆತನು ನೀರನ್ನು ಆತನ ಮುಂದೆ ತಂದಿಟ್ಟು, "ಇಗೋ ನೀರು" ಎಂದನು. ಆದರೆ ಅಲ್ಲಿ ನೀರನ್ನು ಕೇಳಿದವನಾಗಲಿ, ತಂದವನಾಗಲಿ "ನೀರು" ಎಂಬ ಎರಡಕ್ಷರಗಳ ಸಂಜ್ಞೆಯನ್ನು ನೋಡುವುದಿಲ್ಲ. ನೀರೆಂದು ಕರೆಯಲ್ಪಡುವ ವಸ್ತುವೇ ಪ್ರತ್ಯಕ್ಷವಾಗುತ್ತದೆ. ಶಬ್ದದಿಂದ ಉತ್ಪನ್ನವಾಗುವ

ಜ್ಞಾನವು ಶಬ್ದಪ್ರಮಾಣದ ವಿಷಯ. (ಅವ್ಯಭಿಚಾರಿ) ಹೇಗೆಂದರೆ-ಯಾವನೋ ಒಬ್ಬನು ರಾತ್ರಿಯ ಹೊತ್ತು ಕಂಬವನ್ನು ನೋಡಿ ಮನುಷ್ಯನೆಂದು ನಿಶ್ಚಯಿಸಿಕೊಂಡನು. ಆದರೆ, ಹಗಲಿನಲ್ಲಿ ನೋಡಿದಾಗ, ರಾತ್ರಿಯಲ್ಲಾಗಿದ್ದ ಮನುಷ್ಯನೆಂಬ ಜ್ಞಾನವು ನಷ್ಟವಾಗಿ, ಕಂಬವೆಂಬ ಜ್ಞಾನವಾಯಿತು. ಇಂತಹ ನಾಶಹೊಂದುವ ಜ್ಞಾನಕ್ಕೆ ವ್ಯಭಿಚಾರಿಯೆಂದು ಹೆಸರು. ಇದು ಪ್ರತ್ಯಕ್ಷವೆನ್ನಿಸಿಕೊಳ್ಳುವುದಿಲ್ಲ. (ವ್ಯವಸಾಯಾತ್ಮಕ) ಹೇಗೆಂದರೆ-ಒಬ್ಬನು ದೂರದಿಂದ ನದಿಯ ಮರಳನ್ನು ನೋಡಿ ಮತ್ತೊಬ್ಬನ ಸಂಗಡ "ಅಲ್ಲಿ ಬಟ್ಟೆಗಳನ್ನು ಹರಡಿದ್ದಾರೋ, ನೀರೋ ಅಥವಾ ಇನ್ನೇನಾದರೂ ವಸ್ತುವೋ?" ಅಥವಾ "ಅಲ್ಲಿ ನಿಂತಿರುವವನು ದೇವದತ್ತನೋ? ಯಜ್ಞದತ್ತನೋ?" ಎಂದನು. ಎಲ್ಲಿಯವರೆಗೆ ಒಂದು ನಿಶ್ಚಯವಾಗುವುದಿಲ್ಲವೋ, ಅಲ್ಲಿಯವರೆಗೆ ಅದು ಪ್ರತ್ಯಕ್ಷವೆನ್ನಿಸುವುದಿಲ್ಲ. ಆದುದರಿಂದ, ಅವ್ಯಪದೇಶ್ಯವೂ, ಅವ್ಯಭಿಚಾರಿಯೂ, ನಿಶ್ಚಿಯಾತ್ಮಕವೂ ಆದ ಜ್ಞಾನವನ್ನು ಪ್ರತ್ಯಕ್ಷವೆನ್ನುತ್ತಾರೆ.

ಎರಡನೆಯದು ಅನುಮಾನ :—

ಅಥ ತತ್ಪೂರ್ವಕಂ ತ್ರಿವಿಧಮನುಮಾನಂ ಪೂರ್ವವಚ್ಛೇಷವತ್ಸಾಮಾನ್ಯತೋ ದೃಷ್ಟಂಚ ॥

[ನ್ಯಾಯ-೧. ೧. ೫.]

ಪ್ರತ್ಯಕ್ಷಪೂರ್ವಕವಾಗಿ, ಅಂದರೆ-ಯಾವುದಾದರೊಂದು ಪದಾರ್ಥವು ಸಂಪೂರ್ಣವಾಗಿಯಾಗಲೀ, ಅಥವಾ ಅದರ ಏಕದೇಶವಾಗಲೀ ಹಿಂದೆ ಎಲ್ಲಿಯೋ, ಯಾವಾಗಲೋ ಪ್ರತ್ಯಕ್ಷವಾಗಿದ್ದು, ಪುನಃ ಆ ಪದಾರ್ಥದ ಸಹಚಾರಿಯಾದ ಏಕದೇಶವು ದೂರದಿಂದ ಪ್ರತ್ಯಕ್ಷವಾಗುವುದರಿಂದ, ಅದೃಷ್ಟವಾದ ಅವಯವಿಯ ಜ್ಞಾನವಾಗುವುದಕ್ಕೆ ಅನುಮಾನವೆಂದು ಹೇಳುತ್ತಾರೆ. ಹೇಗೆಂದರೆ-ಮಗನನ್ನು ನೋಡಿ ತಂದೆಯ, ಪರ್ವತಾದಿಗಳಲ್ಲಿ ಹೊಗೆಯನ್ನು ನೋಡಿ ಅಗ್ನಿಯ, ಸುಖದುಃಖಗಳನ್ನು ನೋಡಿ ಪೂರ್ವಜನ್ಮದ ಜ್ಞಾನವಾಗುತ್ತದೆ. ಅನುಮಾನವು ಮೂರು ವಿಧ :—೧. '**ಪೂರ್ವವತ್**'-ಹೇಗೆಂದರೆ, ಮೋಡಗಳನ್ನು ನೋಡಿ

ಮಳೆಯಾಗುವುದೆಂದೂ, ವಿವಾಹವನ್ನು ನೋಡಿ ಸಂತಾನವಾಗುವು ದೆಂದೂ, ಓದುತ್ತಿರುವ ವಿದ್ಯಾರ್ಥಿಗಳನ್ನು ನೋಡಿ ವಿದ್ಯೆ ಲಭಿಸುವು ದೆಂದೂ ನಿಶ್ಚಯವಾಗುತ್ತದೆ. ಈರೀತಿ ಎಲ್ಲೆಲ್ಲಿ ಕಾರಣವನ್ನು ನೋಡು ವುದರಿಂದ ಕಾರ್ಯಜ್ಞಾನವಾಗುವುದೋ ಅದು. 'ಪೂರ್ವವತ್', ೨. 'ಶೇಷವತ್' ಅಂದರೆ, ಎಲ್ಲಿ ಕಾರ್ಯವನ್ನು ನೋಡುವುದರಿಂದ ಕಾರಣ ಜ್ಞಾನವಾಗುವುದೋ, ಹೇಗೆಂದರೆ–ನದಿಯಲ್ಲಿ ಹೆಚ್ಚುತ್ತಿರುವ ಪ್ರವಾಹ ವನ್ನು ನೋಡಿ ಮೇಲೆ ಮಳೆಯಾಗಿರಬೇಕೆಂಬ, ಮಗನನ್ನು ನೋಡಿ ತಂದೆಯ, ಸೃಷ್ಟಿಯನ್ನು ನೋಡಿ ಅನಾದಿಕಾರಣವ, ಮತ್ತು ಕರ್ತನಾವ ಈಶ್ವರನ, ಪಾಪಪುಣ್ಯಗಳ ಆಚರಣೆಯನ್ನು ನೋಡಿ ಸುಖದುಃಖಗಳ ಜ್ಞಾನವುಂಟಾಗುತ್ತದೆ.* ಅದನ್ನೇ ಶೇಷವದನುಮಾನವೆನ್ನುತ್ತಾರೆ. ೩. ಸಾಮಾನ್ಯತೋದೃಷ್ಟ–ಯಾವವೋ ಎರಡಕ್ಕೆ ಪರಸ್ಪರ ಕಾರ್ಯ ಕಾರಣಸಂಬಂಧವಿಲ್ಲದೆ, ಅವೆರಡಕ್ಕೂ ಇರುವ ಯಾವುದೋ ಒಂದು ಪರಸ್ಪರ ಸಾಧನ್ಯರ್ದಿಂದಾದಜ್ಞಾನ. ಹೇಗೆಂದರೆ—ಯಾವನೂ ನಡೆ ಯದೆ ಮತ್ತೊಂದು ಸ್ಥಳಕ್ಕೆ ಹೋಗಲಾರನು. ಹೀಗೆಯೇ ಇತರರೂ ಕೂಡ ಗಮನಕ್ರಿಯೆಯಿಲ್ಲದೆ ಮತ್ತೊಂದೆಡೆಗೆ ಹೋಗಲಾರರು. ಅನುಮಾನ ಶಬ್ದದ ಅರ್ಥವೇನೆಂದರೆ—**" ಅನು ಅರ್ಥಾತ್ ಪ್ರತ್ಯಕ್ಷಸ್ಯ ಪಶ್ಚಾನ್ಮೀಯತೇ ಜ್ಞಾಯತೇ ಯೇನ ತದನುಮಾನಂ "** ಅಂದರೆ -ಪ್ರತ್ಯಕ್ಷವಾದನಂತರ ಹುಟ್ಟುವ ಜ್ಞಾನ. ಹೇಗೆಂದರೆ, ಹೊಗೆ ಯನ್ನು ಪ್ರತ್ಯಕ್ಷವಾಗಿ ನೋಡದಿದ್ದರೆ—ಕಾಣದ ಬೆಂಕಿಯ ಜ್ಞಾನ ವೆಂದಿಗೂ ಆಗಲಾರದು.

ಮೂರನೆಯದು ಉಪಮಾನ :—

ಪ್ರಸಿದ್ಧಸಾಧರ್ಮ್ಯಾತ್ಸಾಧ್ಯಸಾಧನಮುಪಮಾನಂ।

[ನ್ಯಾಯ. ೧, ೧, ೬]

ಸಾಧ್ಯ ಅಂದರೆ ಸಿದ್ಧಪಡಿಸಲರ್ಹವಾದ ಜ್ಞಾನವನ್ನು, ಪ್ರಸಿದ್ಧ (ಪ್ರತ್ಯಕ್ಷ)ವಾದ ಸಾಧರ್ಮ್ಯದಿಂದ ಸಿದ್ಧಪಡಿಸುವ ಸಾಧನಕ್ಕೆ ಉಪ ಮಾನವೆನ್ನುತ್ತಾರೆ. **" ಉಪಮೀಯತೇ ಯೇನ ತದುಪಮಾನಂ "**

* ಮತ್ತು ಪಾಪಪುಣ್ಯಗಳ ಆಚರಣೆಯ ಜ್ಞಾನವು ಸುಖದುಃಖಗಳನ್ನು ನೋಡಿ ಉಂಟಾಗುತ್ತದೆ

ಹೇಗೆಂದರೆ—ಒಬ್ಬನು ತನ್ನ ಆಳಿಗೆ "ವಿಷ್ಣುಮಿತ್ರನನ್ನು ಕರೆದುಕೊಂಡು ಬಾ" ಎಂದು ಹೇಳಿದನು. ಆಳು "ನಾನವನನ್ನು ಎಂದೂ ನೋಡಿಲ್ಲ" ಎಂದನು. ಯಜಮಾನನು "ಈ ದೇವದತ್ತನಂತೆಯೇ ವಿಷ್ಣುಮಿತ್ರನೂ ಇದ್ದಾನೆ" ಎಂದನು. ಆಳು ಆಲ್ಲಿ ಹೋಗಿ, ದೇವದತ್ತನಂತಿರುವ ವಿಷ್ಣುಮಿತ್ರನನ್ನು ನೋಡಿ, "ಈತನೇ ವಿಷ್ಣುಮಿತ್ರನು" ಎಂದು ನಿಶ್ಚಯಿಸಿ ಕರೆತಂದನು. ಹಾಗೆಯೇ, "ಗವಯವು ಹಸುವಿನಂತಿರುತ್ತದೆ" ಎಂದಾಗ, ಕಾಡಿಗೆ ಹೋಗಿ ಹಸುವಿನಂತಿರುವ ಪ್ರಾಣಿಯನ್ನು ನೋಡಿ, "ಇದೇ ಗವಯ" ಎಂದು ನಿಶ್ಚಯಿಸಲಾಗುವುದು.

ನಾಲ್ಕನೆಯದು ಶಬ್ದ ಪ್ರಮಾಣ :—

ಆಪ್ತೋಪದೇಶಃ ಶಬ್ದಃ ।

[ನ್ಯಾಯ. ೧, ೧, ೭]

ಪೂರ್ಣ ವಿದ್ಯಾಂಸನೂ, ಧರ್ಮಾತ್ಮನೂ, ಪರೋಪಕಾರಪ್ರಿಯನೂ, ಸತ್ಯವಾದಿಯೂ, ಪುರುಷಾರ್ಥಿಯೂ, ಜಿತೇಂದ್ರಿಯನೂ ಆದ ಪುರುಷನು ತನ್ನ ಆತ್ಮದಲ್ಲಿ ಯಾವರೀತಿ ತಿಳಿಯುವನೋ ಮತ್ತು ಯಾವುದರಿಂದ ತಾನು ಸುಖವನ್ನು ಪಡೆದನೋ, ಅದನ್ನು ತಿಳಿಸಬೇಕೆಂಬ ಇಚ್ಛೆಯಿಂದ ಪ್ರೇರಿತನಾಗಿ ವಿಶ್ವಮಾನವಕಲ್ಯಾಣಕ್ಕಾಗಿ ಉಪದೇಶಿಸುವವನಾದ ಮಾನವನು, ಅಂದರೆ ಪೃಥಿವಿಯಿಂದಾರಂಭಿಸಿ ಪರಮಾತ್ಮನ ವರೆಗಿನ ಸಮಸ್ತ ಪದಾರ್ಥಗಳ ಜ್ಞಾನವನ್ನೂ ಪಡೆದು ಉಪದೇಶಿಸುವವನು ಆಪ್ತನು. ಇಂತಹ ಆಪ್ತಪುರುಷನ ಉಪದೇಶಗಳು ಮತ್ತು ಪೂರ್ಣ ಆಪ್ತನಾದ ಪರಮೇಶ್ವರನ ಉಪದೇಶರೂಪವಾದ ವೇದಗಳು—ಇವುಗಳನ್ನೇ ಶಬ್ದ ಪ್ರಮಾಣವೆಂದು ತಿಳಿಯಬೇಕು.

ಐದನೆಯದು ಐತಿಹ್ಯ:—

ನ ಚತುಷ್ಟ್ವನ್ಮೈತಿಹ್ಯಾರ್ಥಾಪತ್ತಿಸಂಭವಾಭಾವಪ್ರಾಮಾಣ್ಯಾತ್

[ನ್ಯಾಯ. ೨, ೨, ೧]

"ಇತಿ ಹ" ಅಂದರೆ—"ಈ ರೀತಿಯಿದ್ದನು; ಹೀಗೆ ಮಾಡಿದನು" ಎನ್ನುವುದು-ಅಂದರೆ ಯಾವನೊಬ್ಬನ ಜೀವನಚರಿತ್ರೆಗೆ ಐತಿಹ್ಯವೆಂದು ಹೆಸರು.

ಆರನೆಯದು ಅರ್ಥಾಪತ್ತಿ:--

" ಅರ್ಥಾದಾಪದ್ಯತೇ ಸಾಽರ್ಥಾಪತ್ತಿಃ " ಕೇನಚಿದುಚ್ಯತೆ " ಸತ್ಸು ಘನೇಷು ವೃಷ್ಟಿಃ, ಸತಿ ಕಾರಣೇ ಕಾರ್ಯಂಭವತಿ " ಇತಿ- ಕಿಮುತ್ರ ಪ್ರಸಜ್ಯತೇ? ಅಸತ್ಸು ಘನೇಷು ವೃಷ್ಟಿರ ಸತಿ ಕಾರಣೇ ಚ ಕಾರ್ಯಂ ನ ಭವತಿ."

ಅಂದರೆ ಒಬ್ಬನು--" ಮೋಡಗಳಿದ್ದರೆ ಮಳೆಯೂ, ಕಾರಣವಿದ್ದರೆ ಕಾರ್ಯವೂ ಆಗುತ್ತದೆ " ಎಂದು ಹೇಳುತ್ತಾನೆ. ಇದರಿಂದ ಮೋಡಗಳಿಲ್ಲದೆ ಮಳೆಯೂ, ಕಾರಣವಿಲ್ಲದೆ ಕಾರ್ಯವೂ ಆಗಲಾರದೆಂದು, ಹೇಳದಿದ್ದರೂ ಸಹ ವ್ಯಕ್ತವಾಗುತ್ತದೆ.

ಏಳನೆಯದು ಸಂಭವಪ್ರಮಾಣ :--

" ಸಂಭವತಿ ಯಸ್ಮಿನ್ಸ ಸಂಭವಃ "

ಯಾರಾದರೂ-" ತಂದೆ ತಾಯಿಗಳಿಲ್ಲದೆ ಮಗು ಹುಟ್ಟಿತು. ಯಾರೋ ಒಬ್ಬರು ಸತ್ತವರನ್ನು ಬದುಕಿಸಿದರು. ಬೆಟ್ಟಗಳನ್ನೆತ್ತಿದರು. ಸಮುದ್ರದಲ್ಲಿ ಕಲ್ಲುಗಳನ್ನು ತೇಲಿಸಿದರು. ಚಂದ್ರಮಂಡಲವನ್ನು ಚೂರುಮಾಡಿದರು. ಪರಮೇಶ್ವರನು ಅವತಾರಮಾಡಿದನು. ಮನುಷ್ಯರ ಕೊಂಬುಗಳನ್ನು ಕಂಡೆವು. ಬಂಜೆಯ ಮಗನಿಗೂ, ಮಗಳಿಗೂ ಮದುವೆ ಮಾಡಿದೆವು."-ಎಂದು ಮೊದಲಾಗಿ ಹೇಳಿದರೆ, ಇವೆಲ್ಲಾ ಅಸಂಭವ. ಏಕೆಂದರೆ-ಇವೆಲ್ಲಾ ಸೃಷ್ಟಿಕ್ರಮಕ್ಕೆ ವಿರುದ್ಧವಾದುವು. ಸೃಷ್ಟಿಕ್ರಮಕ್ಕೆ ಅನುಕೂಲವಾದುದೇ ಸಂಭವ.

ಎಂಟನೆಯದು ಅಭಾವಪ್ರಮಾಣ :—

" ನ ಭವತಿ ಯಸ್ಮಿನ್ನೋಽಭಾವಃ "

ಹೇಗೆಂದರೆ—ಒಬ್ಬನು " ಅನೆಯನ್ನು ಹೊಡೆದುಕೊಂಡು ಬಾ." ಎಂದನು. ಅವನು ಅಲ್ಲಿ ಆನೆಯ ಅಭಾವವನ್ನು ಕಂಡು, ಆನೆ ಎಲ್ಲಿದ್ದಿತೋ, ಅಲ್ಲಿಂದ ಹೊಡೆದುಕೊಂಡು ಬಂದನು.

ಈ ಎಂಟು ಪ್ರಮಾಣಗಳಲ್ಲಿ, ಶಬ್ದಪ್ರಮಾಣದಲ್ಲಿ ಐತಿಹ್ಯ

ವನ್ನೂ ಅನುಮಾನ ಪ್ರಮಾಣದಲ್ಲಿ ಅರ್ಥಾಪತ್ತಿ-ಸಂಭವ-ಅಭಾವಗಳನ್ನೂ ಸೇರಿಸಿ ಎಣಿಸಿದರೆ, ನಾಲ್ಕು ಪ್ರಮಾಣಗಳು ಉಳಿಯುತ್ತವೆ. ಮಾನವನು ಈ ಐದು ವಿಧವಾದ ಪರೀಕ್ಷೆಗಳಿಂದ ಸತ್ಯಾಸತ್ಯಗಳನ್ನು ನಿರ್ಣಯಿಸಬಲ್ಲನು. ಬೇರೆ ಯಾವ ರೀತಿಯಿಂದಲೂ ಸಾಧ್ಯವಿಲ್ಲ.

ಧರ್ಮವಿಶೇಷ ಪ್ರಸೂತಾದ್ ದ್ರವ್ಯಗುಣಕರ್ಮಸಾಮಾನ್ಯ ವಿಶೇಷ ಸಮವಾಯಾನಾಂ ಪದಾರ್ಥಾನಾಂ ಸಾಧರ್ಮ್ಯ ವೈಧರ್ಮ್ಯಾಭ್ಯಾಂ ತತ್ತ್ವಜ್ಞಾನಾನ್ನಿಶ್ರೇಯಸಂ ॥

[ವೈಶೇಷಿಕ ೧, ೧, ೪]

ಮಾನವನು ಯಥಾಯೋಗ್ಯವಾಗಿ ಧರ್ಮಾನುಷ್ಠಾನಮಾಡಿ, ಪವಿತ್ರನಾಗಿ, " ಪೃಥಿವಿಯು ಜಡ, ಜಲವೂ ಜಡ–ಇವೆರಡರಲ್ಲಿ ಸಾಧರ್ಮ್ಯವಿದೆ. ಅಂದರೆ ಸಮಾನಧರ್ಮವಿದೆ. ಪೃಥಿವಿಯು ಕಠೋರ ಮತ್ತು ಜಲವು ಕೋಮಲ–ಆದ್ದರಿಂದ ಇವೆರಡರಲ್ಲಿ ವೈಧರ್ಮ್ಯವಿದೆ–ವಿರುದ್ಧಧರ್ಮವಿದೆ." ಎಂಬ ರೀತಿಯಲ್ಲಿಯೇ ದ್ರವ್ಯ, ಗುಣ, ಕರ್ಮ, ಸಾಮಾನ್ಯ, ವಿಶೇಷ, ಸಮವಾಯ–ಈ ಆರು ಪದಾರ್ಥಗಳ ತತ್ತ್ವಜ್ಞಾನದಿಂದ–ಅಂದರೆ ಸ್ವರೂಪಜ್ಞಾನದಿಂದ 'ನಿಃಶ್ರೇಯಸ' ಅಂದರೆ ಮೋಕ್ಷವನ್ನು ಪಡೆಯುತ್ತಾನೆ.

ಪೃಥ್ವ್ಯಾಪಸ್ತೇಜೋ ವಾಯುರಾಕಾಶಂ ಕಾಲೋ ದಿಗಾತ್ಮಾ ಮನ ಇತಿ ದ್ರವ್ಯಾಣಿ ॥

[ವೈಶೇಷಿಕ-೧. ೧. ೫]

ಪೃಥ್ವಿ, ಜಲ, ತೇಜಸ್ಸು, ವಾಯು, ಆಕಾಶ, ಕಾಲ, ದಿಕ್ಕು, ಆತ್ಮ, ಮನಸ್ಸು–ಈ ಒಂಬತ್ತು ದ್ರವ್ಯಗಳು.

ಕ್ರಿಯಾಗುಣವತ್ಸಮವಾಯಿಕಾರಣಮಿತಿ ದ್ರವ್ಯಲಕ್ಷಣಂ॥

[ವೈಶೇಷಿಕ-೧. ೧. ೧೫]

" ಕ್ರಿಯಾಶ್ಚ ಗುಣಾಶ್ಚವಿದ್ಯಂತೇ ಯಸ್ಮಿನ್ ತತ್ಕ್ರಿಯಾಗುಣವತ್ " ಯಾವುದರಲ್ಲಿ ಕ್ರಿಯೆ ಮತ್ತು ಗುಣಗಳಾಗಲೀ ಅಥವಾ ಕೇವಲ ಗುಣಗಳಾಗಲೀ ಇರುವವೋ, ಅವನ್ನು ದ್ರವ್ಯವೆಂದು ಹೇಳು

ತ್ತಾರೆ. ಪೃಥ್ವಿ, ಜಲ, ತೇಜಸ್ಸು, ವಾಯು, ಮನಸ್ಸು, ಆತ್ಮ—ಇವು ಆರು ಕ್ರಿಯಾಗುಣಗಳನ್ನುಳ್ಳ ದ್ರವ್ಯಗಳು. ಆಕಾಶ, ಕಾಲ, ದಿಕ್ಕು ಇವು ಕ್ರಿಯಾರಹಿತವಾದ ಗುಣವುಳ್ಳ ದ್ರವ್ಯಗಳು. [ಸಮುವಾಯಿ]

"ಸಮುವೇತುಂ ಶೀಲಂ ಯಸ್ಯ ತತ್ಸಮುವಾಯಿ, ಪ್ರಾಗ್‌ವೃತ್ತಿತ್ವಂ ಕಾರಣಂ, ಸಮುವಾಯಿ ಚ ತತ್ಕಾರಣಂ ಚ ಸಮುವಾಯಿ ಕಾರಣಂ। ಲಕ್ಷ್ಯತೇ ಯೇನ ತಲ್ಲಕ್ಷಣಂ॥" ಸೇರುವ ಸ್ವಭಾವದಿಂದ ಕೂಡಿದ, ಕಾರ್ಯಕ್ಕಿಂತ ಮೊದಲು ಕಾರಣರೂಪದಿಂದಿರುವ ಪದಾರ್ಥಕ್ಕೆ ದ್ರವ್ಯವೆಂದು ಹೇಳುತ್ತಾರೆ. ಯಾವುದರಿಂದ ಲಕ್ಷ್ಯವು ತಿಳಿಯಲ್ಪಡುತ್ತದೋ, ಅದು ಲಕ್ಷಣ. ಹೇಗೆಂದರೆ, ಕಣ್ಣಿನಿಂದ ರೂಪದ ಜ್ಞಾನವಾಗುತ್ತದೆ.

ರೂಪರಸಗಂಧಸ್ಪರ್ಶವತೀ ಪೃಥಿವೀ।

[ವೈಶೇಷಿಕ ೨, ೧, ೧]

ರೂಪ, ರಸ, ಗಂಧ, ಸ್ಪರ್ಶ—ಈ ನಾಲ್ಕು ಗುಣಗಳುಳ್ಳದ್ದು ಪೃಥಿವೀ ಇದರಲ್ಲಿ ರೂಪ ರಸ ಸ್ಪರ್ಶಗಳು ಕ್ರಮವಾಗಿ ಅಗ್ನಿ, ಜಲ ಮತ್ತು ವಾಯುವಿನ ಸಂಯೋಗದಿಂದ ಬಂದಿದೆ.

ವ್ಯವಸ್ಥಿತಃ ಪೃಥಿವ್ಯಾಂ ಗಂಧಃ।

[ವೈಶೇಷಿಕ ೨, ೨, ೨]

ಪೃಥಿವಿಯಲ್ಲಿ ಗಂಧಗುಣವು ಸ್ವಾಭಾವಿಕವಾಗಿರುತ್ತದೆ. ಹಾಗೆಯೇ ಜಲದಲ್ಲಿ ರಸ, ಅಗ್ನಿಯಲ್ಲಿ ರೂಪ, ವಾಯುವಿನಲ್ಲಿ ಸ್ಪರ್ಶ ಮತ್ತು ಆಕಾಶದಲ್ಲಿ ಶಬ್ದವು ಸ್ವಾಭಾವಿಕವಾಗಿರುತ್ತದೆ.

ರೂಪರಸಸ್ಪರ್ಶವತ್ಯ ಆಪೋದ್ರವ್ಯಾಃ ಸ್ನಿಗ್ಧಾಃ।

[ವೈಶೇಷಿಕ ೨, ೧, ೨]

ರೂಪರಸಸ್ಪರ್ಶಗಳನ್ನುಳ್ಳದ್ದೂ, ದ್ರವೀಭೂತವಾದುದೂ, ಕೋಮಲವಾದುದೂ ಜಲವೆನ್ನಿಸಿಕೊಳ್ಳುತ್ತದೆ. ಆದರೆ ಇವುಗಳಲ್ಲಿ ರಸವು ಜಲದ ಸ್ವಾಭಾವಿಕಗುಣವಾಗಿದ್ದು, ರೂಪಸ್ಪರ್ಶಗಳು ಅಗ್ನಿ ಮತ್ತು ವಾಯುವಿನ ಸಂಯೋಗದಿಂದ ಬಂದಿರುತ್ತವೆ.

ಅಪ್ಸು ಶೀತತಾ [ವೈಶೇಷಿಕ ೨, ೨, ೫]

ಜಲದಲ್ಲಿ ಶೀತಲತ್ವಗುಣವೂ ಸಹ ಸ್ವಾಭಾವಿಕವಾದುದು.

ತೇಜೋರೂಪಸ್ಪರ್ಶವತ್ । [ವೈಶೇಷಿಕ ೨, ೧, ೩]

ರೂಪಸ್ಪರ್ಶಗಳುಳ್ಳದ್ದು ತೇಜಸ್ಸು ಅಂದರೆ, ಇದರಲ್ಲಿ ರೂಪ ಗುಣವು ಸ್ವಾಭಾವಿಕವಾಗಿದ್ದು, ಸ್ಪರ್ಶವು ವಾಯುಸಂಯೋಗದಿಂದಿರುತ್ತದೆ.

ಸ್ಪರ್ಶವಾನ್ ವಾಯುಃ । [ವೈಶೇಷಿಕ ೨, ೧, ೪]

ಸ್ಪರ್ಶಗುಣವುಳ್ಳದ್ದು ವಾಯು. ಆದರೆ ಇದರಲ್ಲಿಯೂ ಕೂಡ ಉಷ್ಣತೆಯು ಅಗ್ನಿಸಂಯೋಗದಿಂದಲೂ ಶೈತ್ಯವು ಜಲಸಂಯೋಗದಿಂದಲೂ ಇರುತ್ತದೆ.

ತ ಆಕಾಶೇ ನ ವಿದ್ಯಂತೇ । [ವೈಶೇಷಿಕ ೨, ೧, ೫]

ರೂಪ, ರಸ, ಗಂಧ ಮತ್ತು ಸ್ಪರ್ಶ ಆಕಾಶದಲ್ಲಿಲ್ಲ. ಆದರೆ ಶಬ್ದವೇ ಆಕಾಶದ ಗುಣ.

ನಿಷ್ಕ್ರಮಣಂ ಪ್ರವೇಶನಮಿತ್ಯಾಕಾಶಸ್ಯ ಲಿಂಗಂ ।

[ವೈಶೇಷಿಕ ೨, ೧, ೨೦]

ಯಾವುದರಲ್ಲಿ ಹೊರಬರುವುದು ಮತ್ತು ಒಳಹೊಗುವುದು—ಇವು ನಡೆಯುವುವೋ, ಅದು ಆಕಾಶ. ಪ್ರವೇಶನಿಷ್ಕ್ರಮಣಗಳು ಅದರ ಲಿಂಗ.

ಕಾರ್ಯಾಂತರ ಪ್ರಾದುರ್ಭಾವಾಚ್ಚ ಶಬ್ದಃ ಸ್ಪರ್ಶವತಾಮ ಗುಣಃ ॥

[ವೈಶೇಷಿಕ-೨. ೧. ೨೫]

ಇತರ ಪೃಥ್ವಿ ಮೊದಲಾದುವುಗಳ ಕಾರ್ಯಗಳಲ್ಲಿ ಪ್ರಕಟವಾಗದಿರುವುದರಿಂದ ಶಬ್ದವು ಸ್ಪರ್ಶಗುಣವುಳ್ಳ ಪೃಥಿವೀ-ಮೊದಲಾದುವುಗಳ ಗುಣವಲ್ಲ. ಅದು ಕೇವಲ ಆಕಾಶದ ಗುಣ.

ಅಪರಸ್ಮಿನ್ನ ಪರಂ ಯುಗಪಚ್ಚಿರಂ ಕ್ಷಿಪ್ರಮಿತಿ ಕಾಲಲಿಂಗಾನಿ॥

[ವೈಶೇಷಿಕ-೨. ೨. ೬]

ಯಾವುದರಲ್ಲಿ ಪರ, ಅಪರ, (ಯುಗಪತ್) ಒಟ್ಟಿಗೆ, (ಚಿರಂ) ವಿಳಂಬ, (ಕ್ಷಿಪ್ರಂ) ಬೇಗ-ಮೊದಲಾದ ಪ್ರಯೋಗಗಳು ನಡೆಯುವುವೋ, ಅದನ್ನು ಕಾಲವೆಂದು ಹೇಳುತ್ತಾರೆ.

ನಿತ್ಯೇಷ್ವಭಾವಾದನಿತ್ಯೇಷು ಭಾವಾತ್ಕಾರಣೇ ಕಾಲಾಖ್ಯೇತಿ ॥

[ವೈಶೇಷಿಕ ೨. ೨. ೯]

ನಿತ್ಯಪದಾರ್ಥಗಳಲ್ಲಿಲ್ಲದೆ, ಅನಿತ್ಯ ಪದಾರ್ಥಗಳಲ್ಲಿರುವುದರಿಂದ ಕಾರಣದಲ್ಲಿಯೇ ಕಾಲಸಂಜ್ಞೆಯಿರುತ್ತದೆ.

ಇತ ಇದಮಿತಿ ಯತಸ್ತದ್ದಿಶ್ಯಂ ಲಿಂಗಂ ॥

[ವೈಶೇಷಿಕ-೨. ೨. ೧೦]

ಇಲ್ಲಿಂದ ಇದು ಪೂರ್ವ, ದಕ್ಷಿಣ, ಪಶ್ಚಿಮ, ಉತ್ತರ, ಮೇಲೆ, ಕೆಳಗೆ--ಈ ವ್ಯವಹಾರಗಳು ಯಾವುದರಲ್ಲಿ ನಡೆಯುವವೋ, ಅದನ್ನು ದಿಕ್ಕು ಎನ್ನುತ್ತಾರೆ.

ಆದಿತ್ಯಸಂಯೋಗಾದ್ಭೂತಪೂರ್ವಾದ್ಭವಿಷ್ಯತೋ ಭೂತಾಚ್ಚ ಪ್ರಾಚೀ ॥

[ವೈಶೇಷಿಕ-೨. ೨. ೧೪]

ಮೊಟ್ಟ ಮೊದಲು ಯಾವಕಡೆ ಸೂರ್ಯನ ಸಂಯೋಗವಾಯಿತೋ, ಈಗ ಆಗಿರುವುದೋ, ಮುಂದೆ ಆಗುವುದೋ, ಅದನ್ನು ಪೂರ್ವವೆಂದು ಹೇಳುತ್ತಾರೆ. ಎಲ್ಲಿ ಸೂರ್ಯನು ಅಸ್ತನಾಗುವನೋ ಅದನ್ನು ಪಶ್ಚಿಮವೆನ್ನುತ್ತಾರೆ. ಪೂರ್ವಾಭಿಮುಖವಾಗಿ ನಿಂತ ಮನುಷ್ಯನ ಬಲಗಡೆಯು ದಕ್ಷಿಣವೆಂದೂ, ಎಡಗಡೆಯು ಉತ್ತರವೆಂದೂ ಹೇಳಿಸಿಕೊಳ್ಳುತ್ತದೆ.

ಏತೇನ ದಿಗಂತರಾಲಾನಿ ವ್ಯಾಖ್ಯಾತಾನಿ.

[ವೈಶೇಷಿಕ-೨. ೨. ೧೬]

ಇವರಿಂದ ಪೂರ್ವ-ದಕ್ಷಿಣಗಳ ನಡುವಣ ದಿಕ್ಕನ್ನು ಆಗ್ನೇಯ ವೆಂದೂ, ದಕ್ಷಿಣ-ಪಶ್ಚಿಮಗಳ ನಡುವಣ ದಿಕ್ಕನ್ನು ನೈಋತ್ಯವೆಂದೂ, ಪಶ್ಚಿಮೋತ್ತರಗಳ ನಡುವಣ ದಿಕ್ಕನ್ನು ವಾಯವ್ಯವೆಂದೂ, ಉತ್ತರ-ಪೂರ್ವಗಳ ನಡುವಣ ದಿಕ್ಕನ್ನು ಈಶಾನ್ಯವೆಂದೂ ಕರೆಯುತ್ತಾರೆ.

ಇಚ್ಛಾದ್ವೇಷ ಪ್ರಯತ್ನ ಸುಖದುಃಖಜ್ಞಾನಾನ್ಯಾತ್ಮನೋ ಲಿಂಗಮಿತಿ ॥

[ನ್ಯಾಯ-೧ ೧೦]

ಯಾವುದರಲ್ಲಿ (ಇಚ್ಛಾ) ರಾಗ, (ದ್ವೇಷ) ವೈರ, (ಪ್ರಯತ್ನ) ಪುರುಷಾರ್ಥ, ಸುಖ, ದುಃಖ, (ಜ್ಞಾನ) ಅರಿವು–ಈ ಗುಣಗಳಿರುವುವೊ, ಅದನ್ನು ಜೀವಾತ್ಮನೆಂದು ಹೇಳುತ್ತಾರೆ. ವೈಶೇಷಿಕದಲ್ಲಿ ಇಷ್ಟು ವಿಶೇಷವಿದೆ :–

ಪ್ರಾಣಾಪಾನನಿಮೇಷೋನ್ಮೇಷ ಜೀವನಮನೋಗತೀಂದ್ರಿಯಾಂತರ್ವಿಕಾರಾಃ ಸುಖದುಃಖೇಚ್ಛಾದ್ವೇಷಪ್ರಯತ್ನಾಶ್ಚಾತ್ಮನೋಲಿಂಗಾನಿ ॥

(ವೈಶೇಷಿಕ ೩. ೨. ೪.)

(ಪ್ರಾಣ) ಒಳಗಿನಿಂದ ಹೊರಕ್ಕೆ ಉಸಿರುಬಿಡುವಿಕೆ, (ಅಪಾನ) ಹೊರಗಿನಿಂದ ಒಳಕ್ಕೆ ಉಸಿರನ್ನು ತೆಗೆದುಕೊಳ್ಳುವಿಕೆ, (ನಿಮೇಷ) ಕಣ್ಣುಮುಚ್ಚುವಿಕೆ, (ಉನ್ಮೇಷ) ಕಣ್ಣು ತೆರೆಯುವಿಕೆ, (ಜೀವನ) ಪ್ರಾಣಧಾರಣ, (ಮನಃ) ಮನನ, ವಿಚಾರ ಅಂದರೆ ಜ್ಞಾನ, (ಗತಿ) ಇಚ್ಛೆಬಂದಕಡೆ ಹೋಗುವುದು, (ಇಂದ್ರಿಯ) ಇಂದ್ರಿಯಗಳನ್ನು ನಿಷಯಗಳಲ್ಲಿ ಪ್ರವೃತ್ತಗೊಳಿಸಿ, ಅವುಗಳಿಂದ ಅನುಭವಗ್ರಹಣಮಾಡುವುದು. (ಅಂತರ್ವಿಕಾರ) ಹಸಿವು, ಬಾಯಾರಿಕೆ, ಜ್ವರ, ನೋವು ಮೊದಲಾದ ವಿಕಾರಗಳು, ಸುಖ, ದುಃಖ, ಇಚ್ಛೆ, ದ್ವೇಷ, ಪ್ರಯತ್ನ–ಇವು ಆತ್ಮನ ಲಿಂಗ, ಅಂದರೆ ಗುಣಕರ್ಮಗಳು.

ಯುಗಪಜ್ಜ್ಞಾನಾನುತ್ಪತ್ತಿರ್ಮನಸೋ ಲಿಂಗಂ ॥

(ನ್ಯಾಯ ೧. ೧. ೧೬)

ಯಾವುದರಿಂದ ಏಕಕಾಲದಲ್ಲಿ ಎರಡು ವಸ್ತುಗಳ ಗ್ರಹಣ, ಅಥವಾ, ಜ್ಞಾನವಾಗಲಾರದೋ, ಅದನ್ನು ಮನಸ್ಸೆಂದು ಹೇಳುತ್ತಾರೆ. ಇದುವರೆಗೆ ದ್ರವ್ಯಗಳ ಸ್ವರೂಪ ಮತ್ತು ಲಕ್ಷಣಗಳನ್ನು ಹೇಳಿದೆವು. ಇನ್ನು ಗುಣಗಳನ್ನು ಕುರಿತು ಹೇಳುತ್ತೇವೆ:--

ರೂಪರಸಗಂಧಸ್ಪರ್ಶಾಃ ಸಂಖ್ಯಾಪರಿಮಾಣಾನಿ ಪೃಥಕ್ತ್ವಂ ಸಂಯೋಗವಿಭಾಗೌ ಪರತ್ವಾಪರತ್ವೇ ಬುದ್ಧಯಃ ಸುಖದುಃಖೇ ಇಚ್ಛಾದ್ವೇಷೌ ಪ್ರಯತ್ನಾಶ್ಚ ಗುಣಾಃ ॥

(ವೈಶೇಷಿಕ ೧. ೧. ೬

ರೂಪ, ರಸ, ಗಂಧ, ಸ್ಪರ್ಶ, ಸಂಖ್ಯೆ, ಪರಿಮಾಣ, ಪೃಥಕ್ತ್ವ, ಸಂಯೋಗ, ವಿಭಾಗ, ಪರತ್ವ, ಅಪರತ್ವ, ಬುದ್ಧಿ, ಸುಖ, ದುಃಖ, ಇಚ್ಛೆ, ದ್ವೇಷ, ಪ್ರಯತ್ನ, ಗುರುತ್ವ, ದ್ರವತ್ವ, ಸ್ನೇಹ, ಸಂಸ್ಕಾರ, ಧರ್ಮ, ಅಧರ್ಮ, ಶಬ್ದ—ಇವು ಇಪ್ಪತ್ತುನಾಲ್ಕು ಗುಣಗಳೆನ್ನಿಸಿಕೊಳ್ಳುತ್ತವೆ.

ದ್ರವ್ಯಾಶ್ರಯ್ಯಗುಣವಾನ್ ಸಂಯೋಗವಿಭಾಗೇಷ್ವನಪೇಕ್ಷ ಕಾರಣಮನಪೇಕ್ಷ ಇತಿ ಗುಣಲಕ್ಷಣಂ ॥

(ವೈಶೇಷಿಕ ೧. ೨. ೧೬)

ದ್ರವ್ಯವನ್ನಾಶ್ರಯಿಸಿಕೊಂಡು, ಬೇರೆ ಗುಣಗಳನ್ನು ಧರಿಸದೆ, ಸಂಯೋಗವಿಭಾಗಗಳಲ್ಲಿ ಕಾರಣವಾಗದೆ ಮತ್ತು (ಅನಪೇಕ್ಷ) ಅಂದರೆ ಪರಸ್ಪರ ಅಪೇಕ್ಷೆಯಿಲ್ಲದೆ ಇರುವಂತಹುದಕ್ಕೆ ಗುಣವೆಂದು ಹೇಳುತ್ತಾರೆ.

ಶ್ರೋತ್ರೋಪಲಬ್ಧಿರ್ಬುದ್ಧಿನಿರ್ಗ್ರಾಹ್ಯಃ ಪ್ರಯೋಗೇಣಾಭಿಜ್ವಲಿತ ಆಕಾಶದೇಶಃ ಶಬ್ದಃ ॥

ಯಾವುದು ಕಿವಿಯಿಂದ ಕೇಳಲ್ಪಡುವುದೋ, ಬುದ್ಧಿಯಿಂದ ಗ್ರಹಿಸಲ್ಪಡುವುದೋ ಮತ್ತು ಪ್ರಯೋಗದಿಂದ ಪ್ರಕಟವಾಗುವುದೋ, ಹಾಗೂ ಯಾವುದು ಆಕಾಶದಲ್ಲಿರುವುದೋ, ಅದಕ್ಕೆ ಶಬ್ದವೆಂದು ಹೆಸರು.

ಕಣ್ಣುಗಳಿಂದ ಗ್ರಹಿಸಲ್ಪಡುವುದು ರೂಪ, ನಾಲಿಗೆಯಿಂದ ಗ್ರಹಿಸಲ್ಪಡುವುದು ಸಿಹಿ ಮೊದಲಾದ ಅನೇಕ ಬಗೆಯ ರಸ, ಮೂಗಿನಿಂದ ಗ್ರಹಿಸಲ್ಪಡುವುದು ಗಂಧ, ತ್ವಚೆಯಿಂದ ಗ್ರಹಿಸಲ್ಪಡುವುದು ಸ್ಪರ್ಶ, ಯಾವುದರಿಂದ ಒಂದು, ಎರಡು ಮೊದಲಾದ ಎಣಿಕೆಯುಂಟಾಗುವುದೋ ಅದು ಸಂಖ್ಯೆ ಯಾವುದರಿಂದ ತೂಕ ಅಂದರೆ ಹಗುರ ಮತ್ತು ಭಾರ ಇವು ತಿಳಿಯಬರುವುದೋ, ಅದು ಪರಿಮಾಣ, ಪರಸ್ಪರ ಬೇರೆಯಾಗಿರುವುದು ಪೃಥಕ್ತ್ವ, ಪರಸ್ಪರ ಸೇರುವುದು ಸಂಯೋಗ, ಸೇರಿರುವ ಪದಾರ್ಥಗಳು ಅನೇಕ ಭಾಗಗಳಾಗುವುದು ವಿಭಾಗ, ಇದು ಅದಕ್ಕಿಂತ ಆಚೆಗೆ ಎಂಬುದು ಪರ, ಇದು ಅದಕ್ಕಿಂತ ಈಚೆಗೆ ಎಂಬುದು ಅಪರ, ಯಾವುದರಿಂದ ಒಳ್ಳೆಯದು, ಕೆಟ್ಟದು ಎಂಬ ಅರಿವಾಗುವುದೋ ಅದು ಬುದ್ಧಿ, ಆನಂದವೆಂಬುದು ಸುಖ, ಕ್ಲೇಶದ ಹೆಸರು ದುಃಖ, ಇಚ್ಛೆ-ಎಂದರೆ ರಾಗ, ದ್ವೇಷ-ಎಂದರೆ ವಿರೋಧ, ಪ್ರಯತ್ನ-ಎಂದರೆ ಅನೇಕ ವಿಧ ಬಲಪುರುಷಾರ್ಥಗಳು, ಗುರುತ್ವ-ಎಂದರೆ ಭಾರವಾಗಿರುವಿಕೆ, ದ್ರವತ್ವ-ಎಂದರೆ ಕರಗುವಿಕೆ, ಸ್ನೇಹ-ಎಂದರೆ ಪ್ರೀತಿ ಮತ್ತು ಅಂಟು, ಸಂಸ್ಕಾರ-ಎಂದರೆ ಇತರ ವಸ್ತುಗಳ ಸಂಬಂಧದಿಂದ ಉಂಟಾಗುವ ವಾಸನೆ, ಧರ್ಮ-ಎಂದರೆ ನ್ಯಾಯಾಚರಣೆ, ಕಠಿಣತ್ವ ಮೊದಲಾದುವು, ಅಧರ್ಮ-ಎಂದರೆ ಅನ್ಯಾಯಾಚರಣೆ, ಕಠಿಣತೆಗೆ ವಿರುದ್ಧವಾದ ಕೋಮಲತೆ, ಈ ಇಪ್ಪತ್ತುನಾಲ್ಕು ಗುಣಗಳು.

ಉತ್ಕ್ಷೇಪಣಮವಕ್ಷೇಪಣಮಾಕುಂಚನಂ ಪ್ರಸಾರಣಂ ಗಮನಮಿತಿ ಕರ್ಮಾಣಿ।

[ವೈಶೇಷಿಕ ೧, ೧, ೭]

ಉತ್ಕ್ಷೇಪಣ-ಮೇಲೇರುವುದು, ಅವಕ್ಷೇಪಣ-ಕೆಳಗಿಳಿಯುವುದು, ಆಕುಂಚನ-ಸಂಕೋಚಪಡಿಸುವುದು, ಪ್ರಸಾರಣ-ಹರಡುವುದು, ಗಮನ-ಹೋಗುವುದು, ಬರುವುದು, ತಿರುಗುವುದು ಮೊದಲಾದ ಚಲನೆಗಳು ಇದನ್ನು ಕರ್ಮವೆಂದು ಹೇಳುತ್ತಾರೆ. ಇನ್ನು ಕರ್ಮದ ಲಕ್ಷಣ.

ಏಕದ್ರವ್ಯಮಗುಣಂ ಸಂಯೋಗವಿಭಾಗೇಷ್ವನಪೇಕ್ಷ-ಕಾರಣಮಿತಿ ಕರ್ಮಲಕ್ಷಣಂ।

[ವೈಶೇಷಿಕ ೧, ೧, ೧೭]

"ಏಕಂದ್ರವ್ಯವಮಾಶ್ರಯ ಆಧಾರೋಯಸ್ಯ ತದೇಕ ದ್ರವ್ಯಂ । ನ ವಿದ್ಯತೇಗುಣೋಯಸ್ಯ ಯಸ್ಮಿನ್ವಾ ತದ ಗುಣಂ । ಸಂಯೋಗೇಷು ವಿಭಾಗೇಷು ಚಾಪೇಕ್ಷಾರಹಿತಂ ಕಾರಣಂ ತತ್ಕರ್ಮಲಕ್ಷಣಂ" ಅಥವಾ ಯತ್ಕ್ರಿಯತೇ ತತ್ಕರ್ಮ । ಲಕ್ಷ್ಯತೇ ಯೇನ ತಲ್ಲಕ್ಷಣಂ । ಕರ್ಮಣೋ ಲಕ್ಷಣಂ ಕರ್ಮಲಕ್ಷಣಂ ।

ಯಾವುದು ದ್ರವ್ಯವನ್ನಾಶ್ರಯಿಸಿ, ಗುಣಗಳಿಂದ ರಹಿತವಾಗಿ, ಸಂಯೋಗವಿಭಾಗಗಳಲ್ಲಿ ಅಪೇಕ್ಷಾರಹಿತಕಾರಣವಾಗಿರುವುದೋ, ಅದನ್ನು ಕರ್ಮವೆಂದು ಹೇಳುತ್ತಾರೆ.

ದ್ರವ್ಯಗುಣಕರ್ಮಣಾಂ ದ್ರವ್ಯಂ ಕಾರಣಂ ಸಾಮಾನ್ಯಂ ।

[ವೈಶೇಷಿಕ ೧, ೧, ೧೮]

ಕಾರಣದ್ರವ್ಯವು ಕಾರ್ಯದ್ರವ್ಯ, ಗುಣ ಮತ್ತು ಕರ್ಮಗಳಿಗೆ ಸಾಮಾನ್ಯದ್ರವ್ಯವಾಗಿರುತ್ತದೆ.

ದ್ರವ್ಯಾಣಾಂ ದ್ರವ್ಯಂ ಕಾರ್ಯಂ ಸಾಮಾನ್ಯಂ ।

[ವೈಶೇಷಿಕ ೧, ೧, ೨೭]

ದ್ರವ್ಯಗಳ ಕಾರ್ಯದ್ರವ್ಯವು ಕಾರ್ಯತ್ವದಿಂದ ಎಲ್ಲಾ ಕಾರ್ಯಗಳಲ್ಲಿಯೂ ಸಾಮಾನ್ಯ.

ಪ್ರವೃತ್ವಂ ಗುಣತ್ವಂ ಕರ್ಮತ್ವಂ ಚ ಸಾಮಾನ್ಯಾನಿ ವಿಶೇಷಾಶ್ಚ ।

[ವೈಶೇಷಿಕ ೧, ೨, ೮]

ದ್ರವ್ಯಗಳಲ್ಲಿ ದ್ರವ್ಯತ್ವ, ಗುಣಗಳಲ್ಲಿ ಗುಣತ್ವ, ಕರ್ಮಗಳಲ್ಲಿ ಕರ್ಮತ್ವ ಇವು ಸಾಮಾನ್ಯ ಮತ್ತು ವಿಶೇಷಗಳೆಂದು ಕರೆಯಲ್ಪಡುತ್ತದೆ. ಏಕೆಂದರೆ, ದ್ರವ್ಯಗಳಲ್ಲಿ ದ್ರವ್ಯತ್ವ ಸಾಮಾನ್ಯ; ಆದರೆ ಗುಣತ್ವ-ಕರ್ಮತ್ವಗಳಿಂದ ದ್ರವ್ಯತ್ವವು ವಿಶೇಷವಾದುದು. ಹೀಗೆಯೇ ಸರ್ವವಿಷಯಗಳಲ್ಲಿಯೂ ತಿಳಿಯಬೇಕು.

ಸಾಮಾನ್ಯಂ ವಿಶೇಷ ಇತಿ ಬುದ್ಧ್ಯಪೇಕ್ಷಂ ।

[ವೈಶೇಷಿಕ ೧, ೨, ೩]

ಸಾಮಾನ್ಯ ಮತ್ತು ವಿಶೇಷ—ಇವು ಬುದ್ಧಿಯ ಆಧಾರದಿಂದ ಸಿದ್ಧವಾಗುತ್ತದೆ. ಮನುಷ್ಯವ್ಯಕ್ತಿಗಳಲ್ಲಿ ಮನುಷ್ಯತ್ವ ಸಾಮಾನ್ಯ ಮತ್ತು ಪಶುತ್ವ ಮೊದಲಾದುವುಗಳ ದೃಷ್ಟಿಯಿಂದ ವಿಶೇಷ. ಹಾಗೆಯೇ ಸ್ತ್ರೀತ್ವ-ಪುರುಷತ್ವಗಳಲ್ಲಿ ಬ್ರಾಹ್ಮಣತ್ವ, ಕ್ಷತ್ರಿಯತ್ವ, ವೈಶ್ಯತ್ವ ಮತ್ತು ಶೂದ್ರತ್ವವು ಕೂಡ ವಿಶೇಷಗಳು. ಬ್ರಾಹ್ಮಣರಲ್ಲಿ ಬ್ರಾಹ್ಮಣತ್ವವು ಸಾಮಾನ್ಯ ಮತ್ತು ಕ್ಷತ್ರಿಯತ್ವಾದಿಗಳಿಂದ ವಿಶೇಷ. ಹೀಗೆಯೇ ಎಲ್ಲೆಡೆಯೂ ತಿಳಿಯಬೇಕು.

ಇಹೇದಮಿತಿ ಯತಃ ಕಾರ್ಯಕಾರಣಯೋಃ ಸ ಸಮವಾಯಃ ॥

[ವೈಶೇಷಿಕ–೭. ೨. ೨೪]

ಕಾರಣ—ಎಂದರೆ ಅವಯವಗಳಲ್ಲಿ ಅವಯವಿ, ಕಾರ್ಯಗಳಲ್ಲಿ ಕ್ರಿಯೆ ಮತ್ತು ಸಕ್ರಿಯ ದ್ರವ್ಯಗಳು, ಗುಣ-ಗುಣಿಗಳು, ಜಾತಿ-ವ್ಯಕ್ತಿಗಳು ಕಾರ್ಯ-ಕಾರಣಗಳು, ಅವಯವಾವಯವಿಗಳು—ಇವುಗಳ ಸಂಬಂಧವು ನಿತ್ಯವಾಗಿರುವುದರಿಂದ ಸಮವಾಯವೆನಿಸಿಕೊಳ್ಳುತ್ತದೆ. ದ್ರವ್ಯಗಳಿಗೆ ಪರಸ್ಪರ ಉಂಟಾಗುವ ಮತ್ತೊಂದು ವಿಧವಾದ ಸಂಬಂಧವು ಸಂಯೋಗ ಅಂದರೆ ಅನಿತ್ಯ ಸಂಬಂಧವು.

ದ್ರವ್ಯಗುಣಯೋಃ ಸಜಾತೀಯಾರಂಭಕತ್ವಂ ಸಾಧರ್ಮ್ಯಂ ॥

[ವೈಶೇಷಿಕ-೧. ೧. ೯]

ದ್ರವ್ಯ ಮತ್ತು ಗುಣಗಳ ಸಜಾತೀಯವಾದ ಕಾರ್ಯಾರಂಭಕ್ಕೆ ಸಾಧರ್ಮ್ಯವೆನ್ನುತ್ತಾರೆ. ಉದಾಹರಣೆಗೆ—ಪೃಥಿವಿಯಲ್ಲಿ ಜಡತ್ವಧರ್ಮವೂ ಘಟ ಮೊದಲಾದ ಕಾರ್ಯಗಳನ್ನು ಉತ್ಪನ್ನಮಾಡುವ ಸ್ವಸದೃಶ ಧರ್ಮವೂ ಇರುವಂತೆ, ಜಲದಲ್ಲಿಯೂ ಜಡತ್ವಧರ್ಮವೂ, ಹಿಮ ಮೊದಲಾದ ಸ್ವಸದೃಶಕಾರ್ಯಾರಂಭವೂ ಇರುವುದರಿಂದ, ಪೃಥಿವಿಯೊಡನೆ ನೀರಿಗೂ, ನೀರಿನೊಡನೆ ಪೃಥಿವಿಗೂ ಸಾಧರ್ಮ್ಯವಿರುತ್ತದೆ.

" ದ್ರವ್ಯಗುಣಯೋರ್ವಿಜಾತೀಯಾರಂಭಕತ್ವಂ ವೈಧರ್ಮ್ಯಂ ". ಅಂದರೆ, ಇದರಿಂದ, ದ್ರವ್ಯಗುಣಗಳ ವಿರುದ್ಧ ಧರ್ಮ ಮತ್ತು ವಿರುದ್ಧ ಕಾರ್ಯಾರಂಭವನ್ನು ವೈಧರ್ಮ್ಯವೆನ್ನುತ್ತಾರೆಂಬುದು ತಿಳಿಯುತ್ತದೆ. ಉದಾಹರಣೆಗೆ—ಪೃಥಿವಿಯಲ್ಲಿ ಜಲಕ್ಕೆ ವಿರುದ್ಧವಾದ ಕಠಿಣತ್ವ, ಶುಷ್ಕತ್ವ ಮತ್ತು ಗಂಧವತ್ತ್ವಧರ್ಮವೂ, ನೀರಿನಲ್ಲಿ ಪೃಥಿವಿಗೆ ವಿರುದ್ಧವಾದ ದ್ರವತ್ವ, ಕೋಮಲತ್ವ ಮತ್ತು ರಸವತ್ತ್ವಧರ್ಮವೂ ಇದೆ.

ಕಾರಣಭಾವಾತ್ಕಾರ್ಯಭಾವಃ ॥

[ವೈಶೇಷಿಕ-೪. ೧. ೩]

ಕಾರಣದ ಇರುವಿಕೆಯಿಂದಲೇ ಕಾರ್ಯದ ಇರುವಿಕೆಯಾಗುತ್ತದೆ.

ನ ತು ಕಾರ್ಯಾಭಾವಾತ್ಕಾರಣಾಭಾವಃ ॥

[ವೈಶೇಷಿಕ-೧. ೨. ೨]

ಕಾರ್ಯದ ಅಭಾವದಿಂದ ಕಾರಣದ ಅಭಾವವಾಗುವುದಿಲ್ಲ.

ಕಾರಣಾಭಾವಾತ್ಕಾರ್ಯಾಭಾವಃ ॥

[ವೈಶೇಷಿಕ-೧. ೨. ೧]

ಕಾರಣವಿಲ್ಲದಿದ್ದರೆ, ಕಾರ್ಯವೆಂದೂ ಆಗಲಾರದು.

ಕಾರಣಗುಣಪೂರ್ವಕಃ ಕಾರ್ಯಗುಣೋ ದೃಷ್ಟಃ ॥

[ವೈಶೇಷಿಕ-೨. ೧. ೨೪]

ಕಾರಣದಲ್ಲಿರುವಂತಹ ಗುಣಗಳೇ ಕಾರ್ಯದಲ್ಲಿಯೂ ಇರುತ್ತವೆ.

ಪರಿಮಾಣವು ಎರಡು ವಿಧ—

ಅಣು ಮಹದಿತಿ ತಸ್ಮಿನ್ವಿಶೇಷಭಾವಾದ್ವಿಶೇಷಾಭಾವಾಚ್ಚ ॥

[ವೈಶೇಷಿಕ-೭. ೧. ೧೧]

(ಅಣು) ಸೂಕ್ಷ್ಮ, (ಮಹತ್) ದೊಡ್ಡದು—ಎಂಬುದು ಪರಿಮಾಣ. ಹೇಗೆಂದರೆ—ತ್ರಸರೇಣುವು ಲಿಕ್ಷೆಗಿಂತ ಚಿಕ್ಕದಾಗಿಯೂ, ದ್ವ್ಯಣುಕಕ್ಕಿಂತ ದೊಡ್ಡದಾಗಿಯೂ ಇರುತ್ತದೆ. ಮತ್ತು ಬೆಟ್ಟವು ಭೂಮಿಗಿಂತ ಚಿಕ್ಕದು; ಮರಕ್ಕಿಂತ ದೊಡ್ಡದು.

ಸದಿತಿ ಯತೋ ದ್ರವ್ಯಗುಣಕರ್ಮಸು ಸಾ ಸತ್ತಾ ।

[ವೈಶೇಷಿಕ ೧. ೨. ೭]

ದ್ರವ್ಯಗುಣಕರ್ಮಗಳಲ್ಲಿ ಅನ್ವಯಿಸಲ್ಪಡುವ 'ಸತ್' ಶಬ್ದವು, ಅಂದರೆ—"ಸದ್ದ್ರವ್ಯಂ, ಸದ್ಗುಣಃ, ಸತ್ಕರ್ಮ" ಈ ವರ್ತಮಾನಕಾಲ ಸೂಚಕ ಶಬ್ದವು ಎಲ್ಲಕ್ಕೂ ಅನ್ವಯಿಸುತ್ತದೆ.

ಭಾವೋನುವೃತ್ತೇರೇವ ಹೇತುತ್ವಾತ್ಸಾಮಾನ್ಯಮೇವ ।

[ವೈಶೇಷಿಕ ೧. ೨. ೪]

ಎಲ್ಲವುಗಳೊಡನೆ ಅನುವರ್ತಿಸಿರುವುದರಿಂದ ಸತ್ತಾರೂಪವಾದ ಭಾವಕ್ಕೆ ಮಹಾಸಾಮಾನ್ಯವೆಂದು ಹೆಸರು. ಈ ಕ್ರಮವು ಭಾವರೂಪ ದ್ರವ್ಯಗಳಲ್ಲಿರುತ್ತವೆ. ಅಭಾವವು ಐದು ಬಗೆಯಾದುದು :—

ಕ್ರಿಯಾಗುಣವ್ಯಪದೇಶಾಭಾವಾತ್ ಪ್ರಾಗಸತ್ ।

[ವೈಶೇಷಿಕ ೯ ೧, ೧]

ಕ್ರಿಯೆ ಮತ್ತು ಗುಣದ ವಿಶೇಷನಿಮಿತ್ತದ ಅಭಾವದಿಂದ ಪ್ರಾಕ್ ಅಂದರೆ—ಮೊದಲು (ಅಸತ್) ಅಂದರೆ ಇಲ್ಲದಿರುವಿಕೆಯು ಮೊದಲನೆಯ ಅಭಾವ. ಉದಾಹರಣೆಗೆ—ಗಡಿಗೆ, ಬಟ್ಟೆ ಮೊದಲಾದುವು ಉತ್ಪತ್ತಿಗೆ ಮೊದಲಿರಲಿಲ್ಲ. ಇದಕ್ಕೆ ಪ್ರಾಗಭಾವವೆಂದು ಹೆಸರು.

ಸದಸತ್ । [ವೈಶೇಷಿಕ ೯, ೧, ೨]

ಹಿಂದಿದ್ದು ಈಗಿಲ್ಲದಿರುವುದು ಎರಡನೆಯ ಅಭಾವ. ಉದಾಹರಣೆ—ಹಿಂದಿದ್ದ ಗಡಿಗೆ ಈಗ ಒಡೆದುಹೋಗಿದೆ. ಇದಕ್ಕೆ ಪ್ರಧ್ವಂಸಾಭಾವವೆಂದು ಹೆಸರು.

ಸಚ್ಚಾಸತ್ । [ವೈಶೇಷಿಕ ೯, ೧, ೪]

ಇರುವುದು ಮತ್ತು ಇಲ್ಲದಿರುವುದು ಮೂರನೆಯ ಅಭಾವ. ಉದಾಹರಣೆ—"ಅಗೌರಶ್ವೋಽನಶ್ವೋಗೌಃ"—ಕುದುರೆ ಹಸುವಲ್ಲ; ಹಸು ಕುದುರೆಯಲ್ಲ. ಅಂದರೆ ಕುದುರೆಯಲ್ಲಿ ಗೋವಿನ ಅಭಾವವೂ, ಗೋವಿನಲ್ಲಿ ಕುದುರೆಯ ಅಭಾವವೂ ಇವೆ. ಮತ್ತು ಹಸುವಿನಲ್ಲಿ

ಹಸುವಿನ ಹಾಗೂ ಕುದುರೆಯಲ್ಲಿ ಕುದುರೆಯ ಭಾವವಿದೆ. ಇದಕ್ಕೆ ಪರಸ್ಪರಾನ್ಯೋನ್ಯಾಭಾವವೆಂದು ಹೆಸರು.

ಯಚ್ಚಾನ್ಯದಸದತಸ್ತದಸತ್ ।

[ವೈಶೇಷಿಕ ೯, ೧, ೫]

ಮೇಲೆ ಹೇಳಿದ ಮೂರು ಅಭಾವಗಳಿಗಿಂತ ಬೇರೆಯಾದುದಕ್ಕೆ ಅತ್ಯಂತಾಭಾವವೆಂದು ಹೆಸರು. ಉದಾಹರಣೆ-(ನರಶೃಂಗ) ಮನುಷ್ಯನ ಕೊಂಬು, (ಖಪುಷ್ಪ) ಗಗನಕುಸುಮ, (ವಂಧ್ಯಾಪುತ್ರ) ಬಂಜೆಯ ಮಗ, ಇತ್ಯಾದಿ. ಐದನೆಯದು :—

ನಾಸ್ತಿಘಟೋ ಗೇಹ ಇತಿ ತತೋ ಘಟಸ್ಯ ಗೇಹಸಂಸರ್ಗ ಪ್ರತಿಷೇಧಃ ।

[ವೈಶೇಷಿಕ ೯, ೧, ೧೦]

" ಮನೆಯಲ್ಲಿ ಗಡಿಗೆಯಿಲ್ಲ " ಎಂದರೆ " ಬೇರೆಲ್ಲೋ ಗಡಿಗೆಯಿದೆ. ಆದರೆ ಮನೆಯೊಡನೆ ಗಡಿಗೆಯ ಸಂಬಂಧವಿಲ್ಲ " ಎಂದರ್ಥವಾಗುತ್ತದೆ. ಇದು ಐದನೆಯ ಅಭಾವ. ಇವು ಐದು ಅಭಾವಗಳೆನಿಸುತ್ತವೆ.

ಇಂದ್ರಿಯದೋಷಾತ್ಸಂಸ್ಕಾರದೋಷಾಚ್ಚಾವಿದ್ಯಾ ।

[ವೈಶೇಷಿಕ ೯, ೨, ೧೦]

ಇಂದ್ರಿಯದೋಷ ಮತ್ತು ಸಂಸ್ಕಾರದೋಷದಿಂದ ಅವಿದ್ಯೆಯು ಉತ್ಪನ್ನವಾಗುತ್ತದೆ.

ತದ್ದುಷ್ಟಜ್ಞಾನಂ॥ [ವೈಶೇಷಿಕ ೯. ೨. ೧೧]

ದುಷ್ಟಜ್ಞಾನ ಅಂದರೆ ವಿಪರೀತಜ್ಞಾನಕ್ಕೆ ಅವಿದ್ಯೆಯೆನ್ನುತ್ತಾರೆ.

ಅದುಷ್ಟಂ ವಿದ್ಯಾ ॥ [ವೈಶೇಷಿಕ ೯. ೨. ೧೨]

ಅದುಷ್ಟವಾದ ಅಂದರೆ ಯಥಾರ್ಥವಾದ ಜ್ಞಾನವನ್ನು ವಿದ್ಯೆಯೆಂದು ಕರೆಯುತ್ತಾರೆ.

ಪೃಥಿವ್ಯಾದಿರೂಪರಸಗಂಧಸ್ಪರ್ಶಾ ದ್ರವ್ಯಾನಿತ್ಯತ್ವಾದನಿತ್ಯಾಶ್ಚ । ಏತೇನ ನಿತ್ಯೇಷು ನಿತ್ಯತ್ವಮುಕ್ತಂ ॥

[ವೈಶೇಷಿಕ ೭, ೧, ೨-೩]

ಕಾರ್ಯರೂಪವಾದ ಪೃಥಿವೀ ಮೊದಲಾದ ಪದಾರ್ಥಗಳೆಲ್ಲಾ ಅನಿತ್ಯವಾಗಿಯವದರಿಂದ ಅವುಗಳಲ್ಲಿರುವ ರೂಪ, ರಸ, ಗಂಧ, ಸ್ಪರ್ಶ ಈ ಗುಣಗಳು ಅನಿತ್ಯವಾಗಿರುತ್ತವೆ. ಕಾರಣರೂಪವಾದ ಪೃಥಿವೀ ಮೊದಲಾದ ನಿತ್ಯಪದಾರ್ಥಗಳಲ್ಲಿರುವ ಗಂಧಾದಿಗುಣಗಳು ನಿತ್ಯವಾಗಿರುತ್ತವೆ.

ಸದಕಾರಣವನ್ನಿತ್ಯಂ । [ವೈಶೇಷಿಕ ೪, ೧, ೧]

ಯಾವುದು ಇರುವುದೋ ಮತ್ತು ಯಾವುದಕ್ಕೆ ಯಾವ ಕಾರಣವೂ ಇಲ್ಲವೋ, ಅದು ನಿತ್ಯ. ಅಂದರೆ (ಸತ್ಕಾರಣವದನಿತ್ಯಂ) ಕಾರಣದಿಂದ ಕೂಡಿರುವ ಕಾರ್ಯರೂಪವಾದ ಗುಣಗಳು ಅನಿತ್ಯವೆನ್ನಿಸಿಕೊಳ್ಳುತ್ತವೆ.

ಅಸ್ಯೇದಂ ಕಾರ್ಯಂ ಕಾರಣಂ ಸಂಯೋಗಿ ವಿರೋಧಿ ಸಮವಾಯಿ ಚೇತಿ ಲೈಂಗಿಕಂ ।

[ವೈಶೇಷಿಕ ೯, ೨, ೧]

ಇದಕ್ಕೆ ಇದು ಕಾರ್ಯ, ಅಥವಾ ಇದು ಇದರ ಕಾರಣ, ಈ ಮೊದಲಾದ, ಸಮವಾಯಿ, ಸಂಯೋಗಿ, ಏಕಾರ್ಥಸಮವಾಯಿ ಮತ್ತು ವಿರೋಧಿ ಎಂದು ನಾಲ್ಕು ವಿಧವಾಗಿ ಲೈಂಗಿಕಜ್ಞಾನವು ಅಂದರೆ—ಲಿಂಗಲಿಂಗಿಗಳ ಸಂಬಂಧದ ಜ್ಞಾನವು ಉಂಟಾಗುತ್ತದೆ. ಉದಾಹರಣೆ : ಸಮವಾಯಿ-ಆಹಾರವು ಪರಿಮಾಣವುಳ್ಳದು. ಸಂಯೋಗಿ-ಶರೀರವು ತ್ವಗಿಂದ್ರಿಯದಿಂದ ಕೂಡಿದೆ. ಈ ಮೊದಲಾದುವುಗಳಲ್ಲಿ ಸಂಯೋಗವು ನಿತ್ಯ. ಒಂದೇ ಅರ್ಥದಲ್ಲಿ ಎರಡಿರುವುದು ಏಕಾರ್ಥಸಮವಾಯಿ ಹೇಗೆಂದರೆ—ಕಾರ್ಯರೂಪಸ್ಪರ್ಶವು ಕಾರ್ಯದ ಲಿಂಗ ಅಂದರೆ ತಿಳಿಸುವಂತಹುದಾಗಿದೆ. ವಿರೋಧಿ-ಸುರಿದ ಮಳೆಯು ಸುರಿಯಬಹುದಾದ ಮಳೆಗೆ ವಿರೋಧಿಲಿಂಗವಾಗಿರುತ್ತದೆ. ವ್ಯಾಪ್ತಿ:—

ನಿಯತಧರ್ಮಸಾಹಿತ್ಯಮುಭಯೋರೇಕತರಸ್ಯ ವಾ ವ್ಯಾಪ್ತಿಃ ॥೧॥

[ಸಾಂಖ್ಯದರ್ಶನ ೫, ೨೯]

ನಿಜಶಕ್ತ್ಯುದ್ಭವಮಿತ್ಯಾಚಾರ್ಯಾಃ ॥೨॥
ಆಧೇಯ ಶಕ್ತಿಯೋಗ ಇತಿ ಪಂಚಶಿಖಃ ॥೩॥

[ಸಾಂಖ್ಯ ಪ್ರ. ೩೧-೩೨]

ಸಾಧ್ಯಸಾಧನಗಳ—ಅಂದರೆ, ಯಾವುದನ್ನು ಸಿದ್ಧಪಡಿಸ ಬೇಕಾಗಿದೆಯೋ ಅದರ, ಯಾವುದರಿಂದ ಸಿದ್ಧಪಡಿಸಬೇಕಾ ಗಿದೆಯೋ ಅದರ, ಅಥವಾ ಕೇವಲ ಸಾಧನವೊಂದರ ಸಹಚಾರವನ್ನೇ ವ್ಯಾಪ್ತಿಯೆನ್ನುತ್ತಾರೆ. ಉದಾಹರಣೆ–ಹೊಗೆ ಮತ್ತು ಬೆಂಕಿಯ ಸಹಚಾರ. ॥೧॥ ಹಾಗೂ ವ್ಯಾಪ್ಯವಾದ ಹೊಗೆಯ ತನ್ನದೇ ಆದ ಶಕ್ತಿಯಿಂದಲೂ ಅದು ಹುಟ್ಟುತ್ತದೆ. ಅಂದರೆ–ದೇಶಾಂತರದಲ್ಲಿ ದೂರಕ್ಕೆ ಹೊಗೆ ಹೋಗುವಾಗ, ಬೆಂಕಿಯ ಯೋಗವಿಲ್ಲದಿದ್ದರೂ ಹೊಗೆ ಸ್ವಯಂ ಇರುತ್ತದೆ. ಇದಕ್ಕೇ ವ್ಯಾಪ್ತಿಯೆಂದು ಹೆಸರು. ಅಂದರೆ–ಬೆಂಕಿಯ ಭೇದನ ಭೇದನ ಸಾಮರ್ಥ್ಯದಿಂದ ಜಲಾದಿ ವಸ್ತುಗಳು ಹೊಗೆಯ ರೂಪದಲ್ಲಿ ಪ್ರಕಟವಾಗುತ್ತವೆ. ॥೨॥ ಮಹತ್ ಮೊದಲಾದ ತತ್ವಗಳಲ್ಲಿ ಪ್ರಕೃತಿ-ಮೊದಲಾದುವುಗಳ ವ್ಯಾಪಕತ್ವ, ಮತ್ತು ಬುದ್ಧಿ ಮೊದಲಾದುವುಗಳಲ್ಲಿರುವ ವ್ಯಾಪ್ಯತ್ವಧರ್ಮ–ಇವೆರ ಡಕ್ಕೂ ಇರುವ ಸಂಬಂಧಕ್ಕೆ ವ್ಯಾಪ್ತಿಯೆಂದು ಹೆಸರು. ಉದಾಹರಣೆ–ಶಕ್ತಿಯು ಆಧೇಯ ಮತ್ತು ಶಕ್ತಿವಂತನು ಆಧಾರ. ಇವೆರಡಕ್ಕೂ ವ್ಯಾಪ್ತಿಸಂಬಂಧವಿದೆ. ॥೩॥

ಈ ಮೊದಲಾದ ಶಾಸ್ತ್ರಪ್ರಮಾಣಾದಿಗಳಿಂದ ಪರೀಕ್ಷಿಸಿ, ಪಠನ ಪಾಠನಗಳನ್ನು ನಡೆಯಿಸಬೇಕು. ಬೇರೆ ರೀತಿಯಿಂದ ವಿದ್ಯಾರ್ಥಿಗಳಿಗೆ ಸತ್ಯಜ್ಞಾನವೆಂದೂ ಆಗಲಾರದು. ಓದಿಸಬೇಕಾದ ಗ್ರಂಥಗಳನ್ನು ಮೇಲೆ ಹೇಳಿದ ರೀತಿಯಿಂದ ಪರೀಕ್ಷಿಸಿ, ಸತ್ಯವೆಂದು ಸಿದ್ಧವಾದುವು ಗಳನ್ನೇ ಓದಿಸಬೇಕು. ಈ ಪರೀಕ್ಷೆಗಳಿಗೆ ವಿರುದ್ಧವೆಂದು ಕಂಡುಬಂದ ಗ್ರಂಥಗಳನ್ನು ಓದಲೂಬಾರದು, ಓದಿಸಲೂಬಾರದು. ಏಕೆಂದರೆ :—

ಲಕ್ಷಣಪ್ರಮಾಣಾಭ್ಯಾಂ ವಸ್ತುಸಿದ್ಧಿಃ।

ಲಕ್ಷಣವೆಂದರೆ—" ಗಂಧವತೀ ಪೃಥಿವೀ—ಗಂಧವುಳ್ಳದು ಪೃಥಿವಿ "—ಈ ವಿಧವಾದ ಲಕ್ಷಣಗಳಿಂದಲೂ, ಪ್ರತ್ಯಕ್ಷಾದಿ ಪ್ರಮಾಣ

ಗಳಿಂದಲೂ ಸತ್ಯಾಸತ್ಯಗಳ ಮತ್ತು ಪದಾರ್ಥಗಳ ನಿಶ್ಚಯವಾಗುತ್ತದೆ. ಇದಿಲ್ಲದೆ ಏನೂ ಆಗಲಾರದು.

ಅಥ ಪಠನ ಪಾಠನವಿಧಿಃ

ಇನ್ನು ಓದಬೇಕಾದ ಮತ್ತು ಓದಿಸಬೇಕಾದ ಪ್ರಕಾರವನ್ನು ಬರೆಯುತ್ತೇವೆ. ಮೊದಲು ಪಾಣಿನೀಮುನಿಕೃತವಾದ ಸೂತ್ರರೂಪವಾಗಿರುವ 'ಶಿಕ್ಷಾ' ರೀತಿಯನ್ನು, 'ಪ' ಎಂಬುದರ ಸ್ಥಾನವು ಓಷ್ಠ, ಮತ್ತು ಸ್ಪೃಷ್ಟಪ್ರಯತ್ನ, ಮತ್ತು ಸ್ಪಾಣ, ಹಾಗೂ ಜಿಹ್ವೆಯ ಕ್ರಿಯೆಗೆ ಕರಣ ಎನ್ನುತ್ತಾರೆ, ಎಂಬಹಾಗೆ, ಈ ಅಕ್ಷರಕ್ಕೆ ಈ ಪ್ರಯತ್ನ, ಈ ಸ್ಥಾನ, ಈ ಕರಣ ಎಂಬ ಕ್ರಮವನ್ನೂ, ಅದೇರೀತಿ ಎಲ್ಲಾ ಅಕ್ಷರಗಳ ಉಚ್ಚಾರಣಕ್ರಮವನ್ನೂ ಯಥಾಯೋಗ್ಯವಾಗಿ ಮಾತಾಪಿತೃಗಳೂ, ಆಚಾರ್ಯರೂ ಕಲಿಸಬೇಕು. ಆ ಮೇಲೆ, ವ್ಯಾಕರಣದ ಅಂದರೆ ಅಷ್ಟಾಧ್ಯಾಯಿಯ ಸೂತ್ರಗಳ ಪಾಠವನ್ನು "ವೃದ್ಧಿರಾದೈಚ್" ಎಂಬ ರೀತಿಯಲ್ಲಿ ಮಾಡಿಸಬೇಕು; ಆ ಮೇಲೆ, "ವೃದ್ಧಿಃ+ಆತ್+ಐಚ್ ಅಥವಾ ಆದೈಚ್" ಎಂಬ ಪದಚ್ಛೇದವನ್ನೂ, ಅನಂತರ "ಆಚ್ಚ ಐಚ್ಚ ಆದೈಚ್" ಎಂಬ ಸಮಾಸವನ್ನೂ ಮತ್ತು "ಆದೈಚಾಂ ವೃದ್ಧಿ ಸಂಜ್ಞಾಕ್ರಿಯತೇ" ಅಂದರೆ, ಆ, ಐ, ಔ ಗಳಿಗೆ ವೃದ್ಧಿಸಂಜ್ಞೆ ಮಾಡಲ್ಪಡುತ್ತದೆ, ಎಂಬ ಅರ್ಥವನ್ನು ತಿಳಿಸಬೇಕು. "ತಃ ಪರೋ ಯಸ್ಮಾತ್ಸತಪರಸ್ತಾದಪಿ ಪರಸ್ತಪರಃ"—ಅಂದರೆ, ಯಾವುದರ ಮುಂದೆ ತಕಾರವಿರುವುದೋ ಮತ್ತು ಯಾವುದು ತಕಾರದ ಮುಂದೆ ಇರುವುದೋ ಅವೆರಡನ್ನೂ ತಪರವೆನ್ನುತ್ತಾರೆ. ಇದರಿಂದ ಅಕಾರದ ಮುಂದೆ 'ತ' ಮತ್ತು ತಕಾರದ ಮುಂದೆ 'ಐಚ್' ಇರುವುದರಿಂದ ಎರಡು ತಪರವೆಂಬುದು ಸಿದ್ಧವಾಗುತ್ತದೆ. ಹ್ರಸ್ವ ಮತ್ತು ವ್ಯಂಜನಕ್ಕೆ ವೃದ್ಧಿಸಂಜ್ಞೆಯಿಲ್ಲವೆಂಬುದನ್ನು ತೋರಿಸುವುದೇ 'ತಪರ'ದ ಪ್ರಯೋಜನ. ಉದಾಹರಣೆ :—(ಭಾಗಃ) ಎಂಬ ಶಬ್ದ. ಇದರಲ್ಲಿ 'ಭಜ್' ಧಾತುವಿಗೆ 'ಘಞ್' ಪ್ರತ್ಯಯ ಸೇರಿ, 'ಘ್ ಞ್' ಇವಕ್ಕೆ ಇತ್ಸಂಜ್ಞೆಯುಂಟಾಗಿ ಲೋಪವಾಗಿಹೋಯಿತು. ಆ ಮೇಲೆ 'ಭಜ್ ಅ' ಇಲ್ಲಿ ಜಕಾರಕ್ಕೆ ಮೊದಲೂ, ಭಕಾರಕ್ಕೆ ಅನಂತರವೂ ಇರುವ 'ಅಕಾರ'ಕ್ಕೆ ವೃದ್ಧಿ

ಸಂಜ್ಞಕ 'ಆಕಾರ'ವು ಬಂದಿತು. ತರುವಾಯ 'ಭಾಜ್' ರೂಪ ಗೊಂಡು, ಜಕಾರಕ್ಕೆ ಗಕಾರ ಉಂಟಾಗಿ, ಅಕಾರದೊಂದಿಗೆ ಸೇರಿ, 'ಭಾಗಃ' ಎಂಬ ಪ್ರಯೋಗವುಂಟಾಯಿತು. "ಅಧ್ಯಾಯಃ" ಎಂಬ ಶಬ್ದದಲ್ಲಿ, ಅಧಿಪೂರ್ವಕವಾದ 'ಇಙ್' ಧಾತುವಿನ ಹ್ರಸ್ವ 'ಇಕಾರ'ದ ಸ್ಥಾನದಲ್ಲಿ 'ಘಞ್' ಪ್ರತ್ಯಯದ ಮುಂದೆ 'ಐ'ವೃದ್ಧಿ ಬಂದು, ಅದಕ್ಕೆ 'ಆಯ್' ಎಂದಾಗಿ, ಎಲ್ಲಾ ಸೇರಿ 'ಅಧ್ಯಾಯಃ' ಎಂಬ ರೂಪ ಗೊಂಡಿತು. "ನಾಯಕಃ" ಎಂಬಲ್ಲಿ, 'ನೀಞ್' ಧಾತುವಿನ ದೀರ್ಘ ಈಕಾರದ ಸ್ಥಾನದಲ್ಲಿ, "ಣ್ವುಲ್" ಪ್ರತ್ಯಯದ ಮುಂದೆ 'ಐ' ವೃದ್ಧಿಯಾಗಿ, 'ಆಯ್' ಎಂದಾಗಿ. "ನಾಯಕಃ" ಸಿದ್ಧವಾಯಿತು. ಮತ್ತು "ಸ್ತಾವಕಃ" ಎಂಬಲ್ಲಿ, 'ಸ್ತು' ಧಾತುವಿಗೆ 'ಣ್ವುಲ್' ಪ್ರತ್ಯಯವಾಗಿ, ಹ್ರಸ್ವ ಉಕಾರದ ಸ್ಥಾನದಲ್ಲಿ 'ಔ' ವೃದ್ಧಿಯಾಗಿ, "ಅವ್" ಆದೇಶವಾಗಿ ಅಕಾರದಲ್ಲಿ ಸೇರಿದುದರಿಂದ "ಸ್ತಾವಕಃ" ಎಂದಾಯಿತು. "ಕೃಞ್" ಧಾತುವಿನ ಮುಂದೆ "ಣ್ವುಲ್" ಪ್ರತ್ಯಯವಾಗಿ, 'ಲ್'ಗೆ ಇತ್ಸಂಜ್ಞೆಯುಂಟಾಗಿ ಲೋಪವಾಗಿ, 'ವು' ಸ್ಥಾನದಲ್ಲಿ 'ಅಕ' ಆದೇಶವಾಗಿ, ಋಕಾರದವ ಸ್ಥಾನದಲ್ಲಿ 'ಆರ್' ವೃದ್ಧಿಯಾಗಿ "ಕಾರಕಃ" ಸಿದ್ಧವಾಯಿತು. ಹಿಂದುಮುಂದಿನ ಪ್ರಯೋಗಗಳಲ್ಲಿ ವ್ಯವಹೃತವಾಗುವ ಸೂತ್ರಗಳ ಕಾರ್ಯಗಳನ್ನೆಲ್ಲಾ ತಿಳಿಸುತ್ತಾ ಹೋಗಬೇಕು ಮತ್ತು ಸ್ಲೇಟು ಅಥವಾ ಕರಿಯ ಹಲಗೆಯ ಮೇಲೆ ಬರೆದು ತೋರಿಸುತ್ತಾ, "ಭಜ್+ಘಞ್+ಸು ಎಂಬ ಅಪಕ್ವರೂಪವನ್ನು ನಿರೂಪಿಸಿ, ಆ ಮೇಲೆ ಮೊದಲು ಘಕಾರದ ಮತ್ತು ಆ ಮೇಲೆ ಞಕಾರದ ಲೋಪವಾಗಿ, "ಭಜ್+ಅ+ಸು" ಎಂದುಳಿಯಿತು. ಮತ್ತೆ ಅಕಾರಕ್ಕೆ ಆಕಾರ ವೃದ್ಧಿಯಾಗಿ, ಜಕಾರಕ್ಕೆ ಗಕಾರವಾದುದರಿಂದ "ಭಾಗ್+ಅ+ಸು" ಎಂದಾಗಿ, ಪುನಃ ಅಕಾರವು ಗಕಾರದಲ್ಲಿ ಸೇರಿದುದರಿಂದ "ಭಾಗ+ಸು" ಎಂದಾಯಿತು. ಆಮೇಲೆ ಉಕಾರಕ್ಕೆ ಇತ್ಸಂಜ್ಞೆಯಾಗಿ, 'ಸ್' ಸ್ಥಾನದಲ್ಲಿ 'ರು'ಕಾರ ಬಂದು ಮತ್ತೆ ಉಕಾರಕ್ಕೆ ಇತ್ಸಂಜ್ಞೆಯಾಗಿ ಲೋಪವಾದುದರಿಂದ "ಭಾಗರ್" ಎಂದಾಯಿತು. ಕೊನೆಗೆ ರೇಫಕ್ಕೆ ಬದಲು ವಿಸರ್ಗವುಂಟಾಗಿ "ಭಾಗಃ" ಎಂಬರೂಪ ಸಿದ್ಧವಾಯಿತು—ಎಂಬುದಾಗಿ ವಿವರಿಸಬೇಕು. ಯಾವ

ಯಾವ ಸೂತ್ರಗಳಿಂದ ಯಾವ ಯಾವ ಕಾರ್ಯಗಳಾಗುತ್ತವೋ, ಅದನ್ನೆಲ್ಲಾ ಓದಿ, ಓದಿಸಿ, ಬರೆಯಿಸಿ, ಪ್ರಯೋಗಮಾಡಿಸುತ್ತಾ ಹೋಗಬೇಕು. ಈ ರೀತಿ ಅಧ್ಯಯನಾಧ್ಯಾಪನ ಮಾಡುವುದರಿಂದ ಬೇಗ ದೃಢವಾದ ಜ್ಞಾನವುಂಟಾಗುತ್ತದೆ. ಒಂದುಸಾರಿ ಇದೇ ರೀತಿ ಅಷ್ಟಾಧ್ಯಾಯಿಯನ್ನೋದಿಸಿ, ಧಾತುಪಾಠವನ್ನು ಅರ್ಥಸಹಿತವಾಗಿಯೂ, ಹಾಗೂ ದಶಲಕಾರಗಳ ರೂಪವನ್ನೂ, ಪ್ರಕ್ರಿಯಾಸಹಿತವಾಗಿ ಸೂತ್ರಗಳ ಉತ್ಸರ್ಗವನ್ನೂ ಕಲಿಸಬೇಕು. ಹೇಗೆಂದರೆ-- "ಕರ್ಮಣ್ಯಣ್" ಎಂಬ ಸಾಮಾನ್ಯಸೂತ್ರ ಹೇಳುವಂತೆ ಕರ್ಮ ಉಪಪದವಿದ್ದಲ್ಲಿ ಧಾತುಮಾತ್ರಕ್ಕೆ "ಕುಂಭಕಾರಃ" ಎಂಬಲ್ಲಾಗುವಂತೆ "ಅಣ್" ಪ್ರತ್ಯಯವಾಗುತ್ತದೆ; ಅನಂತರ, "ಆತೋಽನುಪಸರ್ಗೇ ಕಃ" ಎಂಬ ಅಪವಾದಸೂತ್ರ ಹೇಳುವಂತೆ, ಉಪಸರ್ಗರಹಿತವಾದ ಉಪಪದವಿದ್ದಲ್ಲಿ, ಅಕಾರಾಂತಧಾತುವಿಗೆ 'ಕ' ಪ್ರತ್ಯಯವಾಗುತ್ತದೆ, ಅಂದರೆ, ಯಾವುದು ಒಮ್ಮುವ್ಯಾಪಕವೊ; ಹೇಗೆಂದರೆ ಕರ್ಮೋಪಪದವಿದ್ದರೆ ಸರ್ವಧಾತುಗಳಿಗೂ 'ಅಣ್' ಪ್ರಾಪ್ತವಾಗುತ್ತದೆ. ಎನ್ನುವಂತೆ ಅದು ಸಾಮಾನ್ಯವಾದುದು. ಅದಕ್ಕಿಂತ ವಿಶೇಷವಾದುದು ಅಲ್ಪವಿಷಯ. ಅದೇ ಪೂರ್ವಸೂತ್ರದ ವಿಷಯದಿಂದ ಅಕಾರಾಂತ ಧಾತುವನ್ನು 'ಕ' ಪ್ರತ್ಯಯವು ಗ್ರಹಿಸಿತು ಎಂಬಂತೆ. ಉತ್ಸರ್ಗದ ವಿಷಯದಲ್ಲಿ ಅಪವಾದಸೂತ್ರವು ಪ್ರವೃತ್ತವಾಗುವಂತೆ, ಅಪವಾದ ಸೂತ್ರದ ವಿಷಯದಲ್ಲಿ ಉತ್ಸರ್ಗಸೂತ್ರದ ಪ್ರವೃತ್ತಿಯಿರುವುದಿಲ್ಲ. ಚಕ್ರವರ್ತಿರಾಜನ ರಾಜ್ಯದಲ್ಲಿ ಸಾಮಂತರೂ, ಜಾಗೀರುದಾರರೂ ಪ್ರವೃತ್ತರಾಗುವಂತೆ, ಸಾಮಂತರಾಜ ಮೊದಲಾದವರ ರಾಜ್ಯದಲ್ಲಿ ಚಕ್ರವರ್ತಿಯು ಪ್ರವೃತ್ತನಾಗುವುದಿಲ್ಲ. ಇದೇ ರೀತಿ ಪಾಣಿನಿಮಹರ್ಷಿಗಳು ಸಹಸ್ರಶ್ಲೋಕಗಳಲ್ಲಿ ಸಮಸ್ತ ಶಬ್ದಾರ್ಥಸಂಬಂಧವಿದ್ಯೆಯನ್ನೂ ಪ್ರತಿಪಾದಿಸಿದ್ದಾರೆ. ಧಾತುಪಾಠದ ಅನಂತರ ಉಣಾದಿಗಣವನ್ನು ಓದಿಸುವಾಗ, ಸರ್ವಸುಬಂತಗಳ ವಿಷಯವನ್ನೂ ಜೊತ್ತಾಗಿ ಕಲಿಸಿ, ಮತ್ತೆ ಎರಡನೆಯಸಾರಿ ಶಂಕಾಸಮಾಧಾನ, ವಾರ್ತಿಕ, ಕಾರಿಕೆ ಮತ್ತು ಪರಿಭಾಷೆಯ ಘಟನಾಪೂರ್ವಕವಾಗಿ ಅಷ್ಟಾಧ್ಯಾಯಿಯನ್ನು ದ್ವಿತೀಯಾವೃತ್ತಿಮಾಡಿಸಬೇಕು. ಆ ಮೇಲೆ ಮಹಾಭಾಷ್ಯ

ವನ್ನೋದಿಸಬೇಕು. ಬುದ್ಧಿವಂತರೂ, ಪರಿಶ್ರಮಿಗಳೂ, ಸಿಷ್ಟಪಟಿಗಳೂ, ವಿದ್ಯಾವರ್ಧನಾಭಿಲಾಷಿಗಳೂ ಆದವರು ಅಧ್ಯಯನಾಧ್ಯಾಪನಗಳಲ್ಲಿ ತೊಡಗಿದರೆ, ಒಂದೂವರೆ ವರ್ಷದಲ್ಲಿ ಅಷ್ಟಾಧ್ಯಾಯಿಯನ್ನೂ, ಒಂದೂವರೆ ವರ್ಷದಲ್ಲಿ ಮಹಾಭಾಷ್ಯವನ್ನೂ ಓದಿ, ಮೂರುವರ್ಷಗಳಲ್ಲಿ ಪೂರ್ಣ ವೈಯಾಕರಣರಾಗಿ, ವ್ಯಾಕರಣದಿಂದ ವೈದಿಕ ಮತ್ತು ಲೌಕಿಕಶಬ್ದಗಳ ಜ್ಞಾನವಪಡೆದು, ಆ ಮೇಲೆ ಅನ್ಯಶಾಸ್ತ್ರಗಳನ್ನು ಶೀಘ್ರವಾಗಿ ಸಹಜವಾಗಿಯೇ ಓದಲೂ, ಓದಿಸಲೂ ಬಲ್ಲರು. ವ್ಯಾಕರಣದಲ್ಲಿ ಮಾಡಬೇಕಾಗುವಷ್ಟು ಮಹತ್ಪ್ರಯತ್ನವನ್ನು ಅನ್ಯಶಾಸ್ತ್ರಗಳಲ್ಲಿ ಮಾಡಬೇಕಾಗುವುದಿಲ್ಲ. ಮತ್ತು ಇದನ್ನು ಓದುವುದರಿಂದ ಮೂರು ವರ್ಷಗಳಲ್ಲಾಗುವಷ್ಟು ಜ್ಞಾನವು, ದುರ್ಗ್ರಂಥಗಳನ್ನು ಅಂದರೆ ನಾರಸ್ವತ, ಚಂದ್ರಿಕೆ, ಕೌಮುದಿ, ಮನೋರಮಾದಿಗಳನ್ನು ಓದುವುದರಿಂದ ಐದತ್ತು ವರ್ಷಗಳಲ್ಲಿಯೂ ಆಗುವುದಿಲ್ಲ. ಏಕೆಂದರೆ, ಮಹಾಶಯರಾದ ಮಹರ್ಷಿಗಳು ಸಹಜವಾಗಿಯೇ ತಮ್ಮ ಗ್ರಂಥಗಳಲ್ಲಿ ಪ್ರಕಟಪಡಿಸಿರುವ ಮಹಾವಿಷಯಗಳು, ಈ ಕ್ಷುದ್ರಾಶಯರಾದ ಮನುಷ್ಯರಿಂದ ಕಲ್ಪಿತವಾದ ಗ್ರಂಥಗಳಲ್ಲಿ ಇರುವುದಾದರೂ ಹೇಗೆ? ಮಹರ್ಷಿಗಳ ಆಶಯವು ಸಾಧ್ಯವಾದಷ್ಟೂ ಸುಗುಮವೂ, ಅಲ್ಪಸಮಯದಲ್ಲೇ ಗ್ರಹಿಸಲಾಗುವಂತಹುದೂ ಆಗಿರಬೇಕೆಂಬುದೇ ಆಗಿರುತ್ತದೆ. ಮತ್ತು ಸಾಧ್ಯವಾದಷ್ಟೂ ಕಠಿಣವಾದ ರಚನೆಮಾಡಬೇಕು, ಬೆಟ್ಟವನ್ನಗೆದು ಕವಡೆಪಡೆದಂತೆ ಮಹಾಪ್ರಯಾಸದಿಂದ ಓದಿ ಅಲ್ಪಲಾಭಗಳಿಸಬೇಕು, ಎಂಬುದೇ ಕ್ಷುದ್ರಾಶ್ರಯರ ಅಭಿಲಾಷೆಯಾಗಿರುತ್ತದೆ. ಮತ್ತು ಆರ್ಷಗ್ರಂಥಗಳ ಅಧ್ಯಯನಮಾಡುವುದೆಂದರೆ, ಒಂದುಬಾರಿ ಮುಳುಗಿ ಅಮೂಲ್ಯವಾದ ಮುತ್ತುಗಳನ್ನು ತಂದಂತೆ. ವ್ಯಾಕರಣವನ್ನೋದಿದ ಬಳಿಕ, ಯಾಸ್ಕಮುನಿಕೃತವಾದ ನಿಘಂಟು-ನಿರುಕ್ತಗಳನ್ನು ಅರು ಅಥವಾ ಎಂಟು ತಿಂಗಳುಗಳಲ್ಲಿ ಅರ್ಥಸಹಿತ ಓದಬೇಕು, ಓದಿಸಬೇಕು. ಅನ್ಯನಾಸ್ತಿಕಕೃತವಾದ ಅಮರಕೋಶಾದಿಗಳಲ್ಲಿ ಅನೇಕ ವರ್ಷಗಳನ್ನು ವ್ಯರ್ಥವಾಗಿ ಹಾಳುಮಾಡಬಾರದು.

ಅದಾದ ಬಳಿಕ ಪಿಂಗಳಾಚಾರ್ಯಕೃತವಾದ ಛಂದೋಗ್ರಂಥದಿಂದ ವೈದಿಕ-ಲೌಕಿಕ ಛಂದಸ್ಸುಗಳ ಪರಿಜ್ಞಾನವನ್ನೂ, ನವೀನ

ರಚನೆ ಮತ್ತು ಶ್ಲೋಕರಚಿಸುವ ಕ್ರಮವನ್ನೂ ಯಥಾವತ್ತಾಗಿ ಕಲಿಯಬೇಕು. ಈ ಗ್ರಂಥ, ಶ್ಲೋಕರಚನೆ ಮತ್ತು ಪ್ರಸ್ತಾರವನ್ನು ನಾಲ್ಕು ತಿಂಗಳಲ್ಲಿ ಕಲಿಯಲೂ, ಓದಲೂ, ಓದಿಸಲೂಬಹುದು. ವೃತ್ತರತ್ನಾಕರ-ಮೊದಲಾದ ಅಲ್ಪಬುದ್ಧಿಗಳಿಂದ ರಚಿತವಾದ ಗ್ರಂಥಗಳಲ್ಲಿ ಅನೇಕ ವರ್ಷಗಳನ್ನು ಕಳೆಯಬಾರದು. ಅನಂತರ ಮನುಸ್ಮೃತಿ, ವಾಲ್ಮೀಕೀಯ ರಾಮಾಯಣ, ಮಹಾಭಾರತದ ಉದ್ಯೋಗಪರ್ವದಲ್ಲಿರುವ ವಿದುರನೀತಿ ಮೊದಲಾದ, ದುರ್ವ್ಯಸನಗಳು ದೂರವಾಗಿ, ಉತ್ತಮತ್ವವೂ, ಸಭ್ಯತೆಯೂ, ಪ್ರಾಪ್ತವಾಗುವಂತಹ ಉತ್ತಮವಾದ ಪ್ರಕರಣಗಳನ್ನು ಕಾವ್ಯರೀತಿಯಿಂದ, ಅಂದರೆ—ಪದಚ್ಛೇದ, ಪದಾರ್ಥೋಕ್ತಿ, ಅನ್ವಯ, ವಿಶೇಷ್ಯ-ವಿಶೇಷಣಗಳು ಮತ್ತು ಭಾವಾರ್ಥಗಳ ಜ್ಞಾನಸಹಿತ ಅಧ್ಯಾಪಕರು ಕಲಿಸಬೇಕು ಮತ್ತು ವಿದ್ಯಾರ್ಥಿಗಳು ತಿಳಿದುಕೊಳ್ಳುತ್ತಾ ಹೋಗಬೇಕು. ವರ್ಷದೊಳಗೆ ಇವುಗಳನ್ನು ಓದಿ ಮುಗಿಸಬೇಕು. ಅದಾದತರುವಾಯ, ಪೂರ್ವ ಮೀಮಾಂಸಾ, ವೈಶೇಷಿಕ, ನ್ಯಾಯ, ಯೋಗ, ಸಾಂಖ್ಯ ಮತ್ತು ವೇದಾಂತ ಈ ಋಷಿಕೃತ ಷಡ್ದರ್ಶನಗಳನ್ನು, ಸಾಧ್ಯವಾದ ಮಟ್ಟಿಗೂ ಋಷಿಕೃತ ವ್ಯಾಖ್ಯಾನಗಳೊಂದಿಗೆ ಅಥವಾ ಉತ್ತಮ ವಿದ್ವಾಂಸರ ಸರಳವ್ಯಾಖ್ಯಾನಗಳೊಂದಿಗೆ ಓದಬೇಕು ಮತ್ತು ಓದಿಸಬೇಕು. ಆದರೆ-ವೇದಾಂತಸೂತ್ರಗಳನ್ನೋದುವ ಮುನ್ನ ಈಶ, ಕೇನ, ಕಠ, ಪ್ರಶ್ನ, ಮುಂಡಕ, ಮಾಂಡೂಕ್ಯ, ಐತರೇಯ, ತೈತ್ತಿರೀಯ, ಛಾಂದೋಗ್ಯ ಮತ್ತು ಬೃಹದಾರಣ್ಯಕ—ಈ ಹತ್ತು ಉಪನಿಷತ್ತುಗಳನ್ನೋದಬೇಕು. ಆರು ಶಾಸ್ತ್ರಗಳ ಸೂತ್ರಗಳನ್ನು ಭಾಷ್ಯವೃತ್ತಿಸಮೇತ ಎರಡು ವರ್ಷಗಳೊಳಗೆ ಓದಿಸಬೇಕು ಮತ್ತು ಓದಬೇಕು. ಇದಾದ ಮೇಲೆ ಆರುವರ್ಷಗಳಲ್ಲಿ, ನಾಲ್ಕು ಬ್ರಾಹ್ಮಣಗಳು ಅಂದರೆ—ಐತರೇಯ, ಶತಪಥ, ಸಾಮ ಮತ್ತು ಗೋಪಥ ಬ್ರಾಹ್ಮಣಗಳೊಂದಿಗೆ, ನಾಲ್ಕು ವೇದಗಳನ್ನೂ ಸ್ವರ, ಶಬ್ದ, ಅರ್ಥ, ಸಂಬಂಧ ಮತ್ತು ಕ್ರಿಯೆಯೊಂದಿಗೆ ಓದುವುದು ಯೋಗ್ಯವಾಗಿರುತ್ತದೆ. ಇದಕ್ಕೆ ಪ್ರಮಾಣ :—

ಸ್ಥಾಣುರಯಂ ಭಾರಹಾರಃ ಕಿಲಾಭೂದಧೀತ್ಯವೇದಂ ನ ವಿಜಾನಾತಿ ಯೋಽರ್ಥಂ । ಯೋಽರ್ಥಜ್ಞ ಇತ್ಸಕಲಂ ಭದ್ರ

ಮುಶ್ನತೇ ನಾಕಮೇತಿ ಜ್ಞಾನವಿಧೂತಪಾಪ್ಮಾ ॥

[ನಿರುಕ್ತ ೧. ೧೪]

ಇದು ನಿರುಕ್ತದಲ್ಲಿರುವ ಮಂತ್ರ. ಯಾವನು ವೇದವನ್ನು ಸ್ವರ ಮತ್ತು ಪಾಠದೊಂದಿಗೆ ಮಾತ್ರ ಓದಿ, ಅರ್ಥವನ್ನು ತಿಳಿಯುವದಿಲ್ಲವೋ, ಅವನು ಕೊಂಬೆ, ಎಲೆಗಳು, ಹಣ್ಣು ಮತ್ತು ಹೂವುಗಳನ್ನು ಹೊರುವ ವೃಕ್ಷದಂತೆ ಮತ್ತು ಧಾನ್ಯಾದಿಗಳ ಭಾರವನ್ನು ಹೊರುವ ಜೇರೆ ಪಶುವಿನಂತೆ, ಭಾರವಾಹಕನು ಮಾತ್ರ ಆಗಿರುತ್ತಾನೆ. ಮತ್ತು ಯಾವನು ವೇದವನ್ನು ಓದುತ್ತಾನೋ ಮತ್ತು ಅವುಗಳ ಯಥಾರ್ಥವಾದ ಅರ್ಥವನ್ನೂ ತಿಳಿಯುತ್ತಾನೋ, ಅವನೇ ಸಂಪೂರ್ಣಾನಂದವನ್ನು ಗಳಿಸಿ, ಜ್ಞಾನದಿಂದ ಪಾಪವನ್ನು ಬಿಟ್ಟು, ಪವಿತ್ರಧರ್ಮಾಚರಣದ ಪ್ರತಾಪದಿಂದ. ಮರಣಾನಂತರ ಸರ್ವಾನಂದವನ್ನು ಹೊಂದುತ್ತಾನೆ.

ಉತತ್ವಃ ಪಶ್ಯನ್ನ ದದರ್ಶ ವಾಚಮುತ ತ್ವ ಶೃಣ್ವನ್ನ ಶೃಣೋತ್ಯೇನಾಂ । ಉತೋ ತ್ವಸ್ಮೈ ವಿಸಸ್ರೇ ಜಾಯೇವ ಪತ್ಯ ಉಶತೀ ಸುವಾಸಾಃ ॥

[ಋಗ್ವೇದ ೧೦, ೭೧, ೪.]

ಯಾರು ಅವಿದ್ವಾಂಸರಾಗಿರುತ್ತಾರೋ, ಅವರು ಕೇಳುತ್ತಿದ್ದರೂ ಕೇಳರು, ನೋಡುತ್ತಿದ್ದರೂ ನೋಡರು, ಮಾತನಾಡುತ್ತಿದ್ದರೂ ಮಾತನಾಡರು; ಅಂದರೆ-ಅವಿದ್ವಾಂಸರು ಈ ದಿವ್ಯವಾಣಿಯ ರಹಸ್ಯವನ್ನರಿಯಲಾರರು. ಆದರೆ, ಸುಂದರ ವಸ್ತ್ರಾಭರಣಭೂಷಿತೆಯಾದ, ಪತಿಕಾಮಿನಿಯಾದ ಸ್ತ್ರೀಯು ತನ್ನ ಪತಿಯ ಎದುರಿಗೆ ತನ್ನ ಶರೀರ ಮತ್ತು ಸ್ವರೂಪವನ್ನು ಪ್ರಕಟಪಡಿಸುವಂತೆ, ಶಬ್ದಾರ್ಥಸಂಬಂಧಗಳನ್ನರಿತ ವಿದ್ವಾಂಸನಿಗಾಗಿ, ವಿದ್ಯೆಯು ತನ್ನ ಸ್ವರೂಪವನ್ನು ಪ್ರಕಟಿಸುತ್ತದೆ; ಅವಿದ್ವಾಂಸರಿಗಾಗಿ ಅಲ್ಲ.

ಋಚೋ ಅಕ್ಷರೇ ಪರಮೇ ವ್ಯೋಮನ್ ಯಸ್ಮಿನ್ ದೇವಾ ಅಧಿ ವಿಶ್ವೇನಿಷೇದುಃ । ಯಸ್ತನ್ನ ವೇದ ಕಿಮೃಚಾ ಕರಿಷ್ಯತಿ ಯ ಇತ್ತದ್ವಿದುಸ್ತ ಇಮೇ ಸಮಾಸತೇ ॥

[ಋಗ್ವೇದ ೧, ೧೬೯, ೩೯]

ಯಾವ ವ್ಯಾಪಕನೂ, ಅವಿನಾಶಿಯೂ, ಸರ್ವೋತ್ಕೃಷ್ಟನೂ ಆದ ಪರಮಾತ್ಮನಲ್ಲಿ ಸಮಸ್ತ ವಿದ್ವಾಂಸರೂ, ಸೂರ್ಯಾದಿ ಸಮಸ್ತ ಲೋಕಗಳೂ ಸ್ಥಿತವಾಗಿವೆಯೋ, ಯಾವನಲ್ಲಿಯೇ ಸಮಗ್ರವೇದಗಳ ಮುಖ್ಯ ತಾತ್ಪರ್ಯವಿದೆಯೋ, ಆ ಬ್ರಹ್ಮನನ್ನು ಅರಿಯದವನು—ಋಗ್ವೇದಾದಿಗಳಿಂದ ಏನಾದರೂ ಸುಖವನ್ನು ಹೊಂದಬಲ್ಲನೇ? ಇಲ್ಲ. ಇಲ್ಲ. ಆದರೆ ಯಾರು ವೇದಗಳನ್ನೋದಿ, ಧರ್ಮಾತ್ಮರಾದ ಯೋಗಿಗಳಾಗಿ, ಆ ಬ್ರಹ್ಮನನ್ನು ತಿಳಿಯುತ್ತಾರೋ, ಅವರೆಲ್ಲರೂ ಪರಮಾತ್ಮನಲ್ಲಿ ಸ್ಥಿತರಾಗಿ, ಮುಕ್ತಿಯೆಂಬ ಪರಮಾನಂದವನ್ನು ಪಡೆಯುತ್ತಾರೆ. ಆದುದರಿಂದ, ಓದಬೇಕಾದುದು-ಓದಿಸಬೇಕಾದುದು-ಎಲ್ಲವೂ ಅರ್ಥ ಸಹಿತವಾಗಿಯೇ ಆಗಬೇಕು. ಈರೀತಿ ಸರ್ವವೇದಗಳನ್ನೂ ಓದಿ, ಆಯುರ್ವೇದವನ್ನು, ಅಂದರೆ-ಚರಕ-ಸುಶ್ರುತಾದಿ ಋಷಿಮುನಿಗಳಿಂದ ರಚಿತವಾದ ವೈದ್ಯಶಾಸ್ತ್ರವನ್ನು ಅರ್ಥ, ಕ್ರಿಯೆ, ಶಸ್ತ್ರ, ಛೇದನ, ಭೇದನ, ಲೇಪ, ಚಿಕಿತ್ಸೆ, ನಿದಾನ, ಔಷಧ, ಪಥ್ಯ, ಶರೀರ, ದೇಶ, ಕಾಲ ಮತ್ತು ವಸ್ತುವಿನ ಗುಣಜ್ಞಾನಸಹಿತವಾಗಿ ನಾಲ್ಕು ವರ್ಷಗಳಲ್ಲಿ ಓದಬೇಕು, ಓದಿಸಬೇಕು. ಆಮೇಲೆ ಧನುರ್ವೇದ-ಅಂದರೆ, ರಾಜ್ಯ ಸಂಬಂಧವಾದ ಕರಣೀಯ ಕಾರ್ಯವನ್ನು ಕಲಿಯಬೇಕು; ಇದು ರಾಜಪುರುಷಸಂಬಂಧಿಯಾದುದು, ಪ್ರಜಾಸಂಬಂಧಿಯಾದುದು-ಹೀಗೆ ಎರಡುವಿಧ. ರಾಜಕಾರ್ಯದಲ್ಲಿ, ಸಭೆ, ಸೇನಾಧ್ಯಕ್ಷ, ಶಸ್ತ್ರಾಸ್ತ್ರವಿದ್ಯೆ, ಇಂದು 'ಕವಾಯತ್ತು' ಎಂದು ಕರೆಯಲ್ಪಡುವ, ಯುದ್ಧಕಾಲದಲ್ಲಿ ಶತ್ರುಗಳಿಗೆ ವಿರುದ್ಧವಾಗಿ ಮಾಡಬೇಕಾದ ಕಾರ್ಯವಾದ ವ್ಯೂಹಗಳ ಅಭ್ಯಾಸ-ಇದನ್ನು ಯಥಾವತ್ತಾಗಿ ಕಲಿಯಬೇಕು. ಮತ್ತು ಪ್ರಜೆಗಳ ಪಾಲನೆ ಹಾಗೂ ವೃದ್ಧಿಮಾಡುವ ಕ್ರಮವನ್ನು ಕಲಿತು, ನ್ಯಾಯ ಪೂರ್ವಕವಾಗಿ ಪ್ರಜೆಗಳನ್ನೆಲ್ಲಾ ಸಂತೋಷವಾಗಿಡಬೇಕು, ದುಷ್ಟರಿಗೆ ಯೋಗ್ಯವಾದ ದಂಡವಿಧಿಸುವ ಹಾಗೂ ಶ್ರೇಷ್ಠರನ್ನು ಪಾಲಿಸುವ ವಿಧಾನವನ್ನೂ ಸಹ ಎಲ್ಲವಿಧದಿಂದಲೂ ಕಲಿಯಬೇಕು. ಈ ರಾಜ ವಿದ್ಯೆಯನ್ನು ಎರಡೆರಡು ವರ್ಷದಲ್ಲಿ ಕಲಿತು, ಗಾನವಿದ್ಯೆಯೆಂದು ಕರೆಯಲ್ಪಡುವ ಗಾಂಧರ್ವವೇದದಲ್ಲಿ ಸ್ವರ, ರಾಗ, ರಾಗಿಣೀ, ಸಮಯ, ತಾಳ, ಗ್ರಾಮ, ದಾನ, ವಾದಿತ್ರ, ನೃತ್ಯ, ಗೀತ-ಮೊದಲಾದುವನ್ನು

ಯಥಾವತ್ತಾಗಿ ಕಲಿಯಬೇಕು. ಆದರೆ, ಮುಖ್ಯವಾಗಿ ವಾದಿತ್ರವಾದನ ಪೂರ್ವಕವಾಗಿ ಸಾಮವೇದ ಗಾನವನ್ನು ಕಲಿಯಬೇಕು. ಮತ್ತು ನಾರದಸಂಹಿತಾ–ಮೊದಲಾದ ಆರ್ಷಗ್ರಂಥಗಳನ್ನೋದಬೇಕು. ಆದರೆ ವೇಷಧಾರಿಗಳ, ವೇಶ್ಯೆಯರ ಮತ್ತು ವಿಷಯಾಸಕ್ತಿಕಾರಕವಾದ ವೈರಾಗಿಗಳ ಕತ್ತೆಯಕೂಗಿನಂತಹ ವ್ಯರ್ಥವಾದ ರಾಗಾಲಾಪನೆಯನ್ನು ಎಂದಿಗೂ ಮಾಡಬಾರದು. ಶಿಲ್ಪವಿದ್ಯೆಯೆನ್ನಿಸಿಕೊಳ್ಳುವ ಆರ್ಥವೇದವನ್ನು, ಪದಾರ್ಥ, ಗುಣ. ವಿಜ್ಞಾನ, ಕ್ರಿಯಾಕುಶಲತೆ, ಅನೇಕವಿಧವಾದ ವಸ್ತುಗಳ ನಿರ್ಮಾಣ–ಇವುಗಳನ್ನು, ಪೃಥಿವಿಯಿಂದಾರಂಭಿಸಿ ಆಕಾಶದವರೆಗಿನ ವಿದ್ಯೆಯನ್ನು ಯಥಾವತ್ತಾಗಿ ಕಲಿತು, ಆರ್ಥ-ಅಂದರೆ ಐಶ್ವರ್ಯವನ್ನು ಹೆಚ್ಚಿಸುವ ವಿದ್ಯೆಯನ್ನು ಕಲಿತು, ಎರಡುವರ್ಷಗಳಲ್ಲಿ, ಬೀಜಗಣಿತ, ಅಂಕ, ಭೂಗೋಳ, ಖಗೋಳ ಮತ್ತು ಭೂಗರ್ಭ ವಿದ್ಯೆಯನ್ನುಳ್ಳ ಜ್ಯೋತಿಷಶಾಸ್ತ್ರ–ಸೂರ್ಯಸಿದ್ಧಾಂತಾದಿಗಳನ್ನು ಯಥಾಕ್ರಮವಾಗಿ ಕಲಿಯಬೇಕು. ಆದಾದ ಮೇಲೆ, ಎಲ್ಲಾ ಬಗೆಯ ಕೈಗಾರಿಕೆ, ಯಂತ್ರಕಲೆ-ಮೊದಲಾದುವನ್ನು ಕಲಿಯಬೇಕು. ಆದರೆ—ಗ್ರಹ, ನಕ್ಷತ್ರ, ಜಾತಕ, ರಾಶಿ, ಮುಹೂರ್ತ–ಮೊದಲಾದುವುಗಳ ಫಲವಿಧಾಯಕವಾದ ಗ್ರಂಥಗಳನ್ನು ಸುಳ್ಳೆಂದರಿತು, ಅದನ್ನೊಂದೂ ಓದಲೂಬಾರದು, ಓದಿಸಲೂಬಾರದು. ಇಪ್ಪತ್ತು-ಇಪ್ಪತ್ತೊಂದು ವರ್ಷಗಳಲ್ಲಿ ಸಮಸ್ತ ವಿದ್ಯೆಯೂ, ಉತ್ತಮಶಿಕ್ಷಣವೂ ಲಭಿಸಿ, ಮಾನವರು ಕೃತಕೃತ್ಯರಾಗಿ ಸದಾ ಆನಂದದಲ್ಲಿರುವಂತಹ ಪ್ರಯತ್ನವನ್ನು ಓದುವವರೂ, ಓದಿಸುವವರೂ ಮಾಡಬೇಕು. ಈ ಕ್ರಮದಲ್ಲಿ ಇಪ್ಪತ್ತು-ಇಪ್ಪತ್ತೊಂದು ವರ್ಷಗಳಲ್ಲಿ ಬರುವಷ್ಟು ವಿದ್ಯೆಯು, ಬೇರೆ ರೀತಿಗಳಿಂದ ನೂರುವರ್ಷಗಳಲ್ಲಿಯೂ ಬರಲಾರದು.

ಋಷಿಗಳು ಮಹಾವಿದ್ವಾಂಸರೂ, ಸರ್ವಶಾಸ್ತ್ರಾಭಿಜ್ಞರೂ, ಧರ್ಮಾತ್ಮರೂ ಆಗಿದ್ದುದರಿಂದ ಅವರ ಗ್ರಂಥಗಳನ್ನೋದಬೇಕು. ಮತ್ತು ಯಾರ ಆತ್ಮಗಳು ಪಕ್ಷಪಾತರಹಿತವಾಗಿವೆಯೋ, ಆ ಅನೃಷಿಗಳು ಅಂದರೆ ಅಲ್ಪಶಾಸ್ತ್ರಗಳನ್ನು ಓದಿದವರು ರಚಿಸಿದ ಗ್ರಂಥಗಳೂ ಅವರಂತೆಯೇ ಇರುತ್ತವೆ.

ಪೂರ್ವಮೀಮಾಂಸೆಯ ಮೇಲೆ ವ್ಯಾಸಮುನಿಗಳು ಮಾಡಿರುವ

ವ್ಯಾಖ್ಯಾನ, ವೈಶೇಷಿಕದ ಮೇಲೆ ಗೌತಮಮುನಿಗಳು ಮಾಡಿರುವ ವ್ಯಾಖ್ಯಾನ, ನ್ಯಾಯಸೂತ್ರಗಳ ಮೇಲೆ ವಾತ್ಸ್ಯಾಯನಮುನಿಗಳು ಮಾಡಿರುವ ಭಾಷ್ಯ, ಪತಂಜಲಿಮುನಿಗಳು ರಚಿಸಿದ ಸೂತ್ರಗಳ ಮೇಲೆ ವ್ಯಾಸಮುನಿಗಳು ಮಾಡಿರುವ ಭಾಷ್ಯ, ಕಪಿಲಮುನಿಗಳು ರಚಿಸಿದ ಸಾಂಖ್ಯಸೂತ್ರದ ಮೇಲೆ ಭಾಗುರಿಮುನಿಗಳು ರಚಿಸಿರುವ ಭಾಷ್ಯ, ವ್ಯಾಸಮುನಿಗಳು ಬರೆದ ವೇದಾಂತಸೂತ್ರದ ಮೇಲೆ ವಾತ್ಸ್ಯಾಯನ ಮುನಿಗಳು ಬರೆದ ಭಾಷ್ಯ ಅಥವಾ ಬೌಧಾಯನ ಮುನಿಗಳು ರಚಿಸಿದ ಭಾಷ್ಯ — ಇವುಗಳನ್ನು ವೃತ್ತಿಸಹಿತವಾಗಿ ಓದಬೇಕು, ಓದಿಸಬೇಕು. ಈ ಮೊದಲಾದ ಸೂತ್ರಗಳನ್ನು ಕಲ್ಪಾಂಗದಲ್ಲಿಯೂ ಪರಿಗಣಿಸಬೇಕು. ಋಕ್, ಯಜು, ಸಾಮ ಮತ್ತು ಅಥರ್ವ—ಈ ನಾಲ್ಕು ವೇದಗಳೂ ಈಶ್ವರಕೃತವಾಗಿರುವಂತೆ, ಐತರೇಯ, ಶತಪಥ, ಸಾಮ ಮತ್ತು ಗೋಪಥ—ಈ ನಾಲ್ಕು ಬ್ರಾಹ್ಮಣಗಳೂ, ಶಿಕ್ಷಾ, ಕಲ್ಪ, ವ್ಯಾಕರಣ, ನಿರುಕ್ತ, ಛಂದ ಮತ್ತು ಜ್ಯೋತಿಷ—ಈ ಆರು ವೇದಾಂಗಗಳೂ ಮೀಮಾಂಸಾದಿ ಆರು ಶಾಸ್ತ್ರಗಳೂ, ವೇದಾಂಗಗಳೂ, ಆಯುರ್ವೇದ, ಧನುರ್ವೇದ, ಗಾಂಧರ್ವವೇದ ಮತ್ತು ಅರ್ಥವೇದ—ಈ ನಾಲ್ಕು ಉಪವೇದಗಳೂ, ಈ ಮೊದಲಾದುವೆಲ್ಲಾ ಋಷಿ-ಮುನಿಗಳು ಬರೆದ ಗ್ರಂಥಗಳು. ಇವುಗಳಲ್ಲಿಯೂ ವೇದವಿರುದ್ಧವೆಂದು ಕಂಡುಬಂದುದೆಲ್ಲಾ ಬಿಡಲ್ಪಡಬೇಕು. ಏಕೆಂದರೆ—ವೇದವು ಈಶ್ವರಕೃತವಾದುದರಿಂದ ಭ್ರಾಂತಿರಹಿತವಾದ ಸ್ವತಃ ಪ್ರಮಾಣವು; ಅಂದರೆ—ವೇದವೇ ವೇದಕ್ಕೆ ಪ್ರಮಾಣ; ಬ್ರಾಹ್ಮಣಾದಿ ಸರ್ವಗ್ರಂಥಗಳೂ ಪರತಃಪ್ರಮಾಣಗಳು; ಅಂದರೆ—ಇವುಗಳ ಪ್ರಾಮಾಣ್ಯ ವೇದಾಧೀನವಾದುದು. ವೇದದ ವಿಶೇಷ ವ್ಯಾಖ್ಯಾನವನ್ನು ಋಗ್ವೇದಾದಿ ಭಾಷ್ಯ ಭೂಮಿಕೆಯಲ್ಲಿ ನೋಡಿಕೊಳ್ಳಿರಿ. ಮತ್ತು ಈ ಗ್ರಂಥದಲ್ಲಿಯೂ ಮುಂದೆ ಬರೆಯುತ್ತೇವೆ.

ಈಗ ಪರಿತ್ಯಜಿಸಲರ್ಹವಾದ ಗ್ರಂಥಗಳ ಗಣನೆಯನ್ನು ಸಂಕ್ಷೇಪವಾಗಿ ಮಾಡಲಾಗುತ್ತದೆ. ಅಂದರೆ—ಕೆಳಗೆ ಬರೆದಿರುವ ಗ್ರಂಥಗಳನ್ನೆಲ್ಲಾ ಜಾಲ ಗ್ರಂಥಗಳೆಂದು ತಿಳಿಯಬೇಕು. ವ್ಯಾಕರಣದಲ್ಲಿ ಕಾತಂತ್ರ, ಸಾರಸ್ವತ, ಚಂದ್ರಿಕೆ, ಮುಗ್ಧಬೋಧ, ಕೌಮುದೀ, ಶೇಖರ, ಮನೋರಮಾ ಮೊದಲಾದುವು; ಕೋಶಗಳಲ್ಲಿ ಅಮರಕೋಶ--

ಮೊದಲಾದುವು; ಛಂದೋಗ್ರಂಥಗಳಲ್ಲಿ ವೃತ್ತರತ್ನಾಕರ ಮೊದಲಾದುವು; ಶಿಕ್ಷೆಯಲ್ಲಿ–"ಅಥ ಶಿಕ್ಷಾಂ ಪ್ರವಕ್ಷ್ಯಾಮಿ ಪಾಣಿನೀಯಂ ಮತಂ ಯಥಾ।"–ಮೊದಲಾದುವು; ಜ್ಯೋತಿಷದಲ್ಲಿ ಶೀಘ್ರಬೋಧ, ಮುಹೂರ್ತಚಿಂತಾಮಣಿ-ಮೊದಲಾದುವು; ಕಾವ್ಯದಲ್ಲಿ ನಾಯಿಕಾ ಭೇದ, ಕುವಲಯಾನಂದ, ರಘುವಂಶ, ಮಾಘ, ಕಿರಾತಾರ್ಜುನೀಯ-ಮೊದಲಾದುವು; ಮೀಮಾಂಸೆಯಲ್ಲಿ ಧರ್ಮಸಿಂಧು, ಪ್ರತಾರ್ಕ ಮೊದಲಾದುವು: ವೈಶೇಷಿಕದಲ್ಲಿ ತರ್ಕಸಂಗ್ರಹ ಮೊದಲಾದುವು; ನ್ಯಾಯದಲ್ಲಿ ಜಾಗದೀಶೀ-ಮೊದಲಾದುವು; ಯೋಗದಲ್ಲಿ ಹಠ ಪ್ರದೀಪಿಕೆ-ಮೊದಲಾದುವು; ಸಾಂಖ್ಯದಲ್ಲಿ ಸಾಂಖ್ಯತತ್ವಕೌಮುದೀ-ಮೊದಲಾದುವು; ವೇದಾಂತದಲ್ಲಿ ಯೋಗಸಾಹಿತ್ಯ, ಪಂಚದಶೀ-ಮೊದಲಾದುವು; ವೈದ್ಯಕದಲ್ಲಿ ಶಾರ್ಙ್ಗಧರ-ಮೊದಲಾದುವು; ಸ್ಮೃತಿಗಳಲ್ಲಿ ಮನುಸ್ಮೃತಿಯ ಪ್ರಕ್ಷಿಪ್ತ ಶ್ಲೋಕಗಳು ಮತ್ತು ಉಳಿದ ಎಲ್ಲಾ ಸ್ಮೃತಿಗಳು; ಎಲ್ಲಾ ತಂತ್ರಗ್ರಂಥಗಳು; ಎಲ್ಲಾ ಪುರಾಣಗಳು; ಎಲ್ಲಾ ಉಪಪುರಾಣಗಳು; ತುಲಸೀದಾಸರು ಬರೆದ ಹಿಂದೀ ರಾಮಾಯಣ; ರುಕ್ಮಿಣೀಮಂಗಳ ಮೊದಲಾದುವು; ಎಲ್ಲಾ ಭಾಷಾಗ್ರಂಥಗಳು---ಇವೆಲ್ಲಾ ಕಪೋಲಕಲ್ಪಿತವಾದ ಮಿಥ್ಯಾಗ್ರಂಥಗಳು.

ಪ್ರಶ್ನೆ—ಈ ಗ್ರಂಥಗಳಲ್ಲಿ ಸತ್ಯವು ಸ್ವಲ್ಪವೂ ಇಲ್ಲವೇ? ಉತ್ತರ:-ಸ್ವಲ್ಪ ಸತ್ಯವೇನೋ ಇದೆ; ಆದರೆ ಇದರೊಂದಿಗೆ ಬಹಳ ಅಸತ್ಯವೂ ಇದೆ. ಆದುದರಿಂದ "ವಿಷಸಂಪೃಕ್ತಾನ್ನವತ್ತ್ಯಾಜ್ಯಾಃ"-ಈ ಗ್ರಂಥಗಳು, ಅತ್ಯುತ್ತಮವಾದ ಆಹಾರವೂ ಸಹ ವಿಷಯುಕ್ತವಾದಲ್ಲಿ ವರ್ಜಿಸಲು ಯೋಗ್ಯವಾಗುವಂತೆ, ತ್ಯಾಜವಾಗಿದೆ. ಪ್ರಶ್ನೆ:—ತಾವು ಪುರಾಣ, ಇತಿಹಾಸಗಳನ್ನು ಅಂಗೀಕರಿಸುವುದಿಲ್ಲವೇ? ಉತ್ತರ:—ಹೌದು, ಒಪ್ಪುತ್ತೇವೆ. ಆದರೆ ಸತ್ಯವಾದುದನ್ನು ಒಪ್ಪುತ್ತೇವೆ; ಸುಳ್ಳಾದುದನ್ನಲ್ಲ. ಪ್ರಶ್ನೆ:-ಸತ್ಯವಾವುದು, ಸುಳ್ಳಾವುದು? ಉತ್ತರ:—

ಬ್ರಾಹ್ಮಣಾನೀತಿಹಾಸಾನ್ಪುರಾಣಾನಿ ಕಲ್ಪಾನ್ ಗಾಥಾ ನಾರಾಶಂಸೀರಿತಿ ॥

ಇದು ಗೃಹ್ಯಸೂತ್ರಾದಿಯ ವಚನ. ನಾವು ಮೊದಲು ಬರೆದಿರುವ ಶತಪಥ–ಮೊದಲಾದ ಬ್ರಹ್ಮಣಗಳಿಗೇ ಇತಿಹಾಸ, ಪುರಾಣ,

ಕಲ್ಪ, ಗಾಥಾ, ನಾರಾಶಂಸೀ-ಎಂದು ಐದು ಹೆಸರುಗಳಿವೆ; ಭಾಗವತ ಮೊದಲಾದುವುಗಳಿಗೆ ಪುರಾಣವೆಂಬ ಹೆಸರಿಲ್ಲ. ಪ್ರಶ್ನೆ:–ತ್ಯಾಜ್ಯಗ್ರಂಥ ಗಳಲ್ಲಿರುವ ಸತ್ಯವನ್ನೇಕೆ ಗ್ರಹಿಸುವುದಿಲ್ಲ? ಉತ್ತರ:–ಅವುಗಳಲ್ಲಿರುವ ಸತ್ಯವೆಲ್ಲಾ ವೇದಾದಿ ಸತ್ಯಶಾಸ್ತ್ರಗಳದು; ಸುಳ್ಳು ಅವುಗಳ ಮನೆಯದು. ವೇದಾದಿ ಸತ್ಯಶಾಸ್ತ್ರಗಳನ್ನು ಸ್ವೀಕರಿಸಿದರೆ, ಎಲ್ಲಾ ಸತ್ಯದ ಗ್ರಹಣವೂ ಆಗಿಯೇ ಆಗುತ್ತದೆ. ಯಾರಾದರೂ ಈ ಮಿಥ್ಯಾಗ್ರಂಥ ಗಳಿಂದ ಸತ್ಯವನ್ನು ಗ್ರಹಿಸಲಪೇಕ್ಷಿಸಿದರೆ, ಸುಳ್ಳೂ ಸಹ ಅವನ ಕುತ್ತಿಗೆಗೆ ಸುತ್ತಿಹಾಕಿಕೊಳ್ಳುವುದು. ಆದುದರಿಂದ–"ಅಸತ್ಯಮಿಶ್ರಿತಂ ಸತ್ಯಂ ದೂರತಸ್ತ್ಯಾಜ್ಯಮಿತಿ."- ಅಸತ್ಯಯುಕ್ತವಾದ ಗ್ರಂಥದಲ್ಲಿರುವ ಸತ್ಯವನ್ನೂ ಸಹ ವಿಷಯುಕ್ತ ಆಹಾರದಂತೆಯೇ ತ್ಯಜಿಸಿಬಿಡಬೇಕು. ಪ್ರಶ್ನೆ:–ನಿಮ್ಮ ಮತವಾವುದು? ಉತ್ತರ:–ವೇದ, ಅಂದರೆ-ವೇದದಲ್ಲಿ ಯಾವುದನ್ನು ಮಾಡಬೇಕೆಂದೂ, ಬಿಡಬೇಕೆಂದೂ ಶಿಕ್ಷಣ ಮೊದಲಾಗಿ ವೆಯೋ, ಅವುಗಳನ್ನು ಮಾಡುವುದನ್ನೂ, ಬಿಡುವುದನ್ನೂ ನಾವು ಒಪ್ಪುತ್ತೇವೆ. ವೇದವು ನಮಗೆ ಮಾನ್ಯವಾಗಿರುವುದರಿಂದ, ನಮ್ಮ ಮತವು ವೇದವು. ಹೀಗೆಯೇ ಒಪ್ಪಿ ಸರ್ವಮಾನವನೂ, ವಿಶೇಷತಃ ಆರ್ಯರೂ ಐಕಮತ್ಯದಿಂದ ಇರಬೇಕು. ಪ್ರಶ್ನೆ:–ಹೇಗೆ ಸತ್ಯಾಸತ್ಯಗಳ ಹಾಗೂ ಬೇರೆ ಗ್ರಂಥಗಳ ಪರಸ್ಪರ ವಿರೋಧವಿದೆಯೋ, ಹಾಗೆ ಬೇರೆ ಶಾಸ್ತ್ರಗಳಲ್ಲಿಯೂ ಇವೆ. ಉದಾಹರಣೆಗೆ–ಸೃಷ್ಟಿಯ ವಿಷಯದಲ್ಲಿ ಆರು ಶಾಸ್ತ್ರಗಳಲ್ಲಿ ಪರಸ್ಪರ ವಿರೋಧವಿದೆ. ಮೀಮಾಂಸೆಯು ಕರ್ಮ ದಿಂದಲೂ, ವೈಶೇಷಿಕವು ಕಾಲದಿಂದಲೂ, ನ್ಯಾಯವು ಪರಮಾಣುಪಿ ನಿಂದಲೂ, ಯೋಗವು ಪುರುಷಾರ್ಥದಿಂದಲೂ, ಸಾಂಖ್ಯವು ಪ್ರಕೃತಿ ಯಿಂದಲೂ ಮತ್ತು ವೇದಾಂತವು ಬ್ರಹ್ಮನಿಂದಲೂ ಸೃಷ್ಟಿಯ ಉತ್ಪತ್ತಿ ಯಾಯಿತೆಂದು ಅಂಗೀಕರಿಸುತ್ತದೆ. ಇದು ವಿರೋಧವಲ್ಲವೇ? ಉತ್ತರ:-ಮೊದಲನೆಯದಾಗಿ, ಸಾಂಖ್ಯ ಮತ್ತು ವೇದಾಂತವನ್ನು ಬಿಟ್ಟು, ಉಳಿದ ನಾಲ್ಕು ಶಾಸ್ತ್ರಗಳಲ್ಲಿ ಸೃಷ್ಟಿಯ ಉತ್ಪತ್ತಿಯನ್ನು ಸ್ಪುಟವಾಗಿ ಬರೆದಿಲ್ಲ. ಮತ್ತು ಇವುಗಳಲ್ಲಿ ವಿರೋಧವಿಲ್ಲ. ನಿಮಗೆ ವಿರೋಧಾವಿರೋಧಗಳ ಜ್ಞಾನವಿಲ್ಲ. ವಿರೋಧವು ಯಾವ ಸ್ಥಳದಲ್ಲಾಗುತ್ತದೆ-ಎಂದು ನಾನು ನಿಮ್ಮನ್ನು ಕೇಳುತ್ತೇನೆ. ಒಂದು ವಿಷಯದಲ್ಲೋ ಅಥವಾ ಭಿನ್ನಭಿನ್ನ

ವಿಷಯಗಳಲ್ಲೋ? ' ಪ್ರಶ್ನೆ:–ಒಂದು ವಿಷಯದಲ್ಲಿ ಅನೇಕರ ಪರಸ್ಪರ ವಿರುದ್ಧ ಕಥನವನ್ನು ವಿರೋಧವೆನ್ನುತ್ತಾರೆ. ಇಲ್ಲಿಯೂ ಕೂಡ ಸೃಷ್ಟಿ ಒಂದೇ ವಿಷಯ. ಉತ್ತರ:– ವಿದ್ಯೆ ಒಂದೋ, ಎರಡೋ? ಒಂದೇ ತಾನೇ? ಒಂದೇ ಆಗಿರುವಲ್ಲಿ, ವ್ಯಾಕರಣ, ವೈದ್ಯಕ, ಜ್ಯೋತಿಷ ಮೊದಲಾದ ಬೇರೆ ಬೇರೆ ವಿಷಯಗಳೇಕಿವೆ? ಒಂದೇ ವಿದ್ಯೆಯಲ್ಲಿ, ವಿದ್ಯೆಯ ಅನೇಕ ಅಂಗಗಳ ಪ್ರತಿಪಾದನವು ಒಂದರಿಂದೊಂದು ಭಿನ್ನವಾಗಿ ಮಾಡಲ್ಪಡುವಂತೆಯೇ, ಶಾಸ್ತ್ರಗಳಲ್ಲಿ ಸೃಷ್ಟಿ ವಿದ್ಯೆಯ ಬೇರೆ ಬೇರೆ ಆರು ಅವಯವಗಳ ಪ್ರತಿಪಾದನ ಮಾಡಿರುವುದರಿಂದ, ಇವುಗಳಲ್ಲೀನೂ ವಿರೋಧವಿಲ್ಲ. ಮಡಿಕೆಯನ್ನು ಮಾಡುವುದರಲ್ಲಿ, ಕರ್ಮ, ಸಮಯ, ಮಣ್ಣು, ಯೋಚನೆ, ಸಂಯೋಗ, ವಿಯೋಗ ಮೊದಲಾದುವುಗಳ ಪುರುಷಾರ್ಥ, ಪ್ರಕೃತಿಯ ಗುಣಗಳು, ಕುಂಬಾರ– ಇವೆಲ್ಲಾ ಕಾರಣಗಳಾಗಿರುವಂತೆ, ಸೃಷ್ಟಿಗೆ ಕರ್ಮವು ಕಾರಣವೆಂಬುದನ್ನು ಮೀಮಾಂಸೆಯಲ್ಲಿಯೂ, ಸಮಯದ ವ್ಯಾಖ್ಯಾನವನ್ನು ವೈಶೇಷಿಕದಲ್ಲಿಯೂ, ಉಪಾದಾನಕಾರಣದ ವ್ಯಾಖ್ಯಾನವನ್ನು ನ್ಯಾಯದಲ್ಲಿಯೂ, ಪುರುಷಾರ್ಥದ ವ್ಯಾಖ್ಯಾನವನ್ನು ಯೋಗದಲ್ಲಿಯೂ, ಅನುಕ್ರಮವಾಗಿ ತತ್ವಗಳ ಪರಿಗಣನೆಯ ವ್ಯಾಖ್ಯಾನವನ್ನು ಸಾಂಖ್ಯದಲ್ಲಿಯೂ, ನಿಮಿತ್ತಕಾರಣವಾದ ಪರಮಾತ್ಮನ ವ್ಯಾಖ್ಯಾನವನ್ನು ವೇದಾಂತಶಾಸ್ತ್ರದಲ್ಲಿಯೂ ಮಾಡಿರುತ್ತದೆ. ಇದರಲ್ಲಿ ಸ್ವಲ್ಪವೂ ವಿರೋಧವಿಲ್ಲ. ವೈದ್ಯಕಶಾಸ್ತ್ರದಲ್ಲಿ ನಿದಾನ, ಚಿಕಿತ್ಸೆ. ಔಷಧಿ, ದಾನ ಮತ್ತು ಪಥ್ಯದ ಪ್ರಕರಣಗಳು ಬೇರೆ ಬೇರೆಯಿದ್ದರೂ ಸಹ, ಎಲ್ಲವುಗಳ ಸಿದ್ಧಾಂತವೂ ರೋಗನಿವೃತ್ತಿಯೇ ಆಗಿರುವಂತೆಯೇ, ಸೃಷ್ಟಿಗಿರುವ ಆರು ಕಾರಣಗಳಲ್ಲಿ ಒಂದೊಂದರ ವ್ಯಾಖ್ಯಾನವನ್ನು ಒಬ್ಬೊಬ್ಬ ಶಾಸ್ತ್ರಕಾರನು ಮಾಡಿದ್ದಾನೆ. ಆದುದರಿಂದ ಇವುಗಳಲ್ಲಿ ವಿರೋಧವೇನೂ ಇಲ್ಲ. ಇದರ ವಿಶೇಷ ವಿಸ್ತಾರವನ್ನು ಸೃಷ್ಟಿಪ್ರಕರಣದಲ್ಲಿ ಮಾಡುವೆವು.

ಕುಸಂಗ, ಅಂದರೆ ದುಷ್ಟರಾದ ವಿಷಯಾಸಕ್ತರ ಸಹವಾಸ, ಮಾದಕದ್ರವ್ಯಾದಿಗಳ ಸೇವನೆ, ವೇಶ್ಯಾಗಮನ–ಇಂತಹ ದುರ್ವ್ಯಸನಗಳು, ಬಾಲ್ಯವಿವಾಹ ಅಂದರೆ ಇಪ್ಪತ್ತೈದು ವರ್ಷ ತುಂಬದ ಪುರುಷನ ಮತ್ತು ಹದಿನಾರು ವರ್ಷ ತುಂಬದ ಸ್ತ್ರೀಯ- ವಿವಾಹವಾಗುವುದು,

ಪೂರ್ಣಬ್ರಹ್ಮಚರ್ಯ ಪಾಲಿಸದಿರುವುದು, ರಾಜ, ತಾಯಿ, ತಂದೆ ಮತ್ತು ವಿದ್ವಾಂಸರಿಗೆ ವೇದಾದಿಶಾಸ್ತ್ರಗಳ ಪ್ರಚಾರದಲ್ಲಿ ಪ್ರೀತಿಯಿಲ್ಲದಿರುವುದು, ಅತಿಭೋಜನ, ಅತಿಜಾಗರಣ, ಅಧ್ಯಯನ—ಅಧ್ಯಾಪನಗಳಲ್ಲಿಯೂ, ಪರೀಕ್ಷೆ ಕೊಡುವುದು ಅಥವಾ ತೆಗೆದುಕೊಳ್ಳುವುದರಲ್ಲಿಯೂ ಆಲಸ್ಯ ಅಥವಾ ವಂಚನೆಮಾಡುವುದು, ವಿದ್ಯಾಲಾಭವನ್ನು ಎಲ್ಲಕ್ಕಿಂತ ಹೆಚ್ಚಿನ ದೆಂದು ತಿಳಿಯದಿರುವುದು, ಬ್ರಹ್ಮಚರ್ಯದಿಂದ ಬಲ, ಬುದ್ಧಿ, ಪರಾಕ್ರಮ, ಆರೋಗ್ಯ, ರಾಜ್ಯ ಮತ್ತು ಧನ ವರ್ಧಿಸುವುವೆಂದು ಒಪ್ಪದಿರುವುದು, ಈಶ್ವರನ ಧ್ಯಾನವನ್ನು ಬಿಟ್ಟು, ಬೇರೆ ಪಾಷಾಣಾದಿ ಜಡ ಮೂರ್ತಿಗಳ ದರ್ಶನ-ಪೂಜನದಲ್ಲಿ ವೃಥಾ ಕಾಲಕಳೆಯುವುದು, ತಂದೆ, ತಾಯಿ, ಆಚಾರ್ಯ, ಅತಿಥಿ ಮತ್ತು ವಿದ್ವಾಂಸರನ್ನು ನಿಜವಾದ ಮೂರ್ತಿಗಳೆಂದು ತಿಳಿದು ಸೇವಾಸತ್ಸಂಗಗಳನ್ನು ಮಾಡದಿರುವುದು, ವರ್ಣಾಶ್ರಮಧರ್ಮವನ್ನು ಬಿಟ್ಟು, ಊರ್ಧ್ವಪುಂಡ್ರ, ತಿಲಕ, ಕಂಠೀ, ಮಾಲಾಧಾರಣೆ, ಏಕಾದಶೀ, ತ್ರಯೋದಶೀ-ಮೊದಲಾದ ವ್ರತಾಚರಣೆ, ಕಾಶೀ-ಮೊದಲಾದ ತೀರ್ಥಗಳು, ರಾಮ, ಕೃಷ್ಣ, ನಾರಾಯಣ, ಶಿವ, ಭಗವತೀ, ಗಣೇಶ-ಮೊದಲಾದವರ ನಾಮಸ್ಮರಣದಿಂದ ಪಾಪ ದೂರವಾಗುವುದೆಂಬ ನಂಬಿಕೆ, ಪಾಷಂಡಿಗಳ ಉಪದೇಶದಿಂದ ವಿದ್ಯಾಭ್ಯಾಸದಲ್ಲಿ ಅಶ್ರದ್ಧೆ ಹುಟ್ಟುವುದು, ವಿದ್ಯೆ, ಧರ್ಮ, ಯೋಗ, ಪರಮೇಶ್ವರೋಪಾಸನೆಗಳಿಲ್ಲದೆ, ಪುರಾಣಗಳೆಂಬ ಮಿಥ್ಯಾನಾಮಗಳನ್ನುಳ್ಳ ಭಾಗವತ ಮೊದಲಾದುವುಗಳ ಕಥೆಯಿಂದ ಮುಕ್ತಿ ಸಿಕ್ಕುತ್ತದೆಂದು ತಿಳಿಯುವುದು, ಲೋಭದಿಂದ ಧನ-ಮೊದಲಾದುವುಗಳಲ್ಲಿ ಪ್ರವೃತ್ತರಾಗಿ ವಿದ್ಯೆಯಲ್ಲಿ ಪ್ರೀತಿಯಿಡದಿರುವುದು, ಅಲ್ಲಿ-ಇಲ್ಲಿ ವ್ಯರ್ಥವಾಗಿ ಅಲೆದಾಡುವುದು-ಈ ಮೊದಲಾದ, ವಿದ್ಯೆಯ ಅಧ್ಯಯನ-ಅಧ್ಯಾಪನಗಳ ಹಾದಿಯಲ್ಲಿನ ವಿಘ್ನಗಳನ್ನು ಬಿಟ್ಟುಬಿಡಬೇಕು. ಇಂತಹ ಮಿಥ್ಯಾವ್ಯವಹಾರಗಳಲ್ಲಿ ಸಿಕ್ಕಿಕೊಂಡು, ಜನರು ಬ್ರಹ್ಮಚರ್ಯ ಮತ್ತು ವಿದ್ಯೆಯ ಲಾಭದಿಂದ ವಂಚಿತರಾಗಿ, ರೋಗಿಗಳೂ, ಮೂರ್ಖರೂ ಆಗಿರುತ್ತಾರೆ.

ಬೇರೆಯವರನ್ನು ವಿದ್ಯೆ ಮತ್ತು ಸತ್ಸಂಗದಿಂದ ದೂರವಿಟ್ಟು, ತಮ್ಮ ಬಲೆಗೆ ಸಿಕ್ಕಿಸಿಕೊಂಡು, ಅವರ ತನು-ಮನ-ಧನಗಳನ್ನು ಹಾಳು ಮಾಡುವ, ಮತ್ತು ಕ್ಷತ್ರಿಯ ಮೊದಲಾದ ವರ್ಣದವರೂ ಓದಿ ವಿದ್ಯಾ

ವಂತರಾಗಿ ಹೋದರೆ, ತಮ್ಮ ಬಲೆಯಿಂದ ಬಿಡಿಸಿಕೊಂಡು, ತಮ್ಮ ಕುಹಕವನ್ನರಿತು ತಮಗೆ ಅಪಮಾನಮಾಡುವರೆಂದು ತಿಳಿದು, ಅವರನ್ನು ಅಜ್ಞಾನದಲ್ಲೇ ಇಡಬಯಸುವ, ಇಂದಿನ ಸಾಂಪ್ರದಾಯಿಕರು ಮತ್ತು ಸ್ವಾರ್ಥಿಗಳಾದ ಬ್ರಾಹ್ಮಣರು—ಈ ಮೊದಲಾದ ವಿಘ್ನಗಳನ್ನೂ ಸಹ ರಾಜನೂ, ಪ್ರಜೆಗಳೂ ದೂರಮಾಡಿ, ತಮ್ಮ ಪುತ್ರಪುತ್ರಿಯರನ್ನು ವಿದ್ಯಾವಂತರನ್ನಾಗಿ ಮಾಡಲು ತನು-ಮನ-ಧನಗಳಿಂದ ಪ್ರಯತ್ನ ಮಾಡುತ್ತಿರಬೇಕು. ಪ್ರಶ್ನೆ:—ಸ್ತ್ರೀಯರೂ, ಶೂದ್ರರೂ ಕೂಡ ವೇದ ಓದಬೇಕೇ? ಇವರೆಲ್ಲಾ ಓದಿಬಿಟ್ಟರೆ, ಮತ್ತೆ ನಾವೇನುಮಾಡಬೇಕು? ಮತ್ತು ಇವರು ಓದಬೇಕೆಂಬುದಕ್ಕೆ, ಈ ನಿಷೇಧವಿರುವಂತೆ, ಯಾವ ಪ್ರಮಾಣವೂ ಇಲ್ಲ:—

ಸ್ತ್ರೀಶೂದ್ರೌ ನಾಧೀಯಾತಾಮಿತಿ ಶ್ರುತೇಃ।

ಸ್ತ್ರೀ-ಶೂದ್ರರು ಓದಬಾರದು-ಎಂಬುದಿದು ಶ್ರುತಿ. ಉತ್ತರ:—ಎಲ್ಲಾ ಸ್ತ್ರೀ-ಪುರುಷರಿಗೆ ಅಂದರೆ ಮನುಷ್ಯಮಾತ್ರರಿಗೆ ಓದುವ ಅಧಿಕಾರವಿದೆ. ನೀವು ಭಾವಿಯಲ್ಲಿ ಹಾರಿಕೊಳ್ಳಿರಿ. ಮತ್ತು ಈ ಶ್ರುತಿ ನಿಮ್ಮ ಕಪೋಲಕಲ್ಪನೆಯಿಂದಾದುದು; ಯಾವ ಪ್ರಾಮಾಣಿಕ ಗ್ರಂಥದ ವಾಕ್ಯವೂ ಅಲ್ಲ. ಮತ್ತು ಮಾನವರೆಲ್ಲರಿಗೂ ವೇದಾದಿ ಶಾಸ್ತ್ರಗಳ ಅಧ್ಯಯನ ಮತ್ತು ಶ್ರವಣದ ಅಧಿಕಾರವಿದೆಯೆಂಬುದಕ್ಕೆ ಯಜುರ್ವೇದದ ಇಪತ್ತಾರನೆಯ ಅಧ್ಯಾಯದ ಎರಡನೆಯ ಮಂತ್ರ ಪ್ರಮಾಣವಾಗಿದೆ :

ಯಥೇಮಾಂವಾಚಂ ಕಲ್ಯಾಣೀ ಮಾವದಾನಿ ಜನೇಭ್ಯಃ।
ಬ್ರಹ್ಮರಾಜನ್ಯಾಭ್ಯಾಗ್ಂ ಶೂದ್ರಾಯಚಾರ್ಯಾಯ ಚ
ಸ್ವಾಯ ಚಾರಣಾಯ॥

(ಯಥಾ) ಹೇಗೆ ನಾನು (ಜನೇಭ್ಯಃ) ಸರ್ವಮಾನವರಿಗಾಗಿ, (ಇಮಾಂ) ಈ, (ಕಲ್ಯಾಣೀಂ) ಕಲ್ಯಾಣ-ಎಂದರೆ ಸಾಂಸಾರಿಕ ಮತ್ತು ಮೋಕ್ಷದ ಸುಖವನ್ನೀಯುವ (ವಾಚಂ) ಋಗ್ವೇದ ಮೊದಲಾದ ನಾಲ್ಕು ವೇದಗಳ ವಾಣಿಯನ್ನು (ಆವದಾನಿ)ಉಪದೇಶಿಸುತ್ತೇನೋ, ಹಾಗೆಯೇ ನೀವೂ ಮಾಡಿರಿ-ಎಂದು ಪರಮಾತ್ಮನು ಹೇಳುತ್ತಾನೆ. ಈ ಸ್ಥಳದಲ್ಲಿ

ಯಾರಾದರೂ-"ಜನ ಶಬ್ದದಿಂದ ದ್ವಿಜರೆಂಬ ಅರ್ಥವನ್ನೇ ಗ್ರಹಿಸಬೇಕು, ಏಕೆಂದರೆ-ಸ್ಮೃತಿ ಮೊದಲಾದ ಗ್ರಂಥಗಳಲ್ಲಿ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಇವರಿಗೆ ಮಾತ್ರ ವೇದಾಧ್ಯಯನದ ಅಧಿಕಾರವಿದೆ-ಎಂದು ಬರೆದಿದೆ; ಸ್ತ್ರೀಯರು ಮತ್ತು ಶೂದ್ರರು ಮೊದಲಾದ ವರ್ಣಗಳವರಿಗಿದೆ-ಎಂದು ಬರೆದಿಲ್ಲ"-ಎಂದು ಹೇಳುವುದಾದರೆ, ಉತ್ತರ:—"ಬ್ರಹ್ಮರಾಜನ್ಯಾಭ್ಯಾಂ"-ಮೊದಲಾದುವನ್ನು ನೋಡಿರಿ. "ನಾವು ಬ್ರಾಹ್ಮಣ, ಕ್ಷತ್ರಿಯ, (ಆರ್ಯಾಯ) ವೈಶ್ಯ, (ಶೂದ್ರಾಯ) ಶೂದ್ರ ಮತ್ತು (ಸ್ವಾಯ) ತನ್ನ ಭೃತ್ಯರು ಅಥವಾ ಸ್ತ್ರೀಯರು-ಮೊದಲಾದವರು, (ಅರಣಾಯ) ಅತಿಶೂದ್ರರು-ಮೊದಲಾದವರಿಗಾಗಿಯೂ ಸಹ ವೇದಗಳನ್ನು ಪ್ರಕಾಶಪಡಿಸಿದ್ದೇವೆ"—ಎಂದು ಪರಮಾತ್ಮನು ಸ್ವತಃ ಹೇಳುತ್ತಾನೆ. ಅಂದರೆ, ಮಾನವರೆಲ್ಲರೂ ವೇದಗಳನ್ನು ಓದಿ-ಓದಿಸಿ, ಕೇಳಿ-ಹೇಳಿ, ವಿಜ್ಞಾನವನ್ನು ಬೆಳೆಸಿಕೊಂಡು, ಒಳ್ಳೆಯ ವಿಷಯಗಳನ್ನು ಗ್ರಹಿಸಿ ಮತ್ತು ಕೆಟ್ಟ ವಿಷಯಗಳನ್ನು ತ್ಯಜಿಸಿ, ದುಃಖದಿಂದ ಮುಕ್ತರಾಗಿ, ಆನಂದವನ್ನು ಹೊಂದಬೇಕು. ಈಗ ನಿಮ್ಮ ಮಾತನ್ನು ಒಪ್ಪಬೇಕೋ, ಪರಮಾತ್ಮನ ಮಾತನ್ನೋ-ನೀವೇ ಹೇಳಿರಿ. ಅವಶ್ಯವಾಗಿ ಪರಮಾತ್ಮನ ಮಾತೇ ಮಾನನೀಯ. ಇಷ್ಟರಮೇಲೂ ಯಾವನಾದರೂ ಇದನ್ನೊಪ್ಪದಿದ್ದರೆ, ಅವರು ನಾಸ್ತಿಕರೆನ್ನಿಸಿಕೊಳ್ಳುವರು. ಏಕೆಂದರೆ- "ನಾಸ್ತಿಕೋ ವೇದನಿಂದಕಃ"—ವೇದಗಳ ನಿಂದಕರು ಮತ್ತು ಒಪ್ಪದವನು ನಾಸ್ತಿಕನೆನ್ನಿಸುತ್ತಾನೆ, ಪರಮೇಶ್ವರನು ಶೂದ್ರರಿಗೆ ಒಳ್ಳೆಯದನ್ನು ಮಾಡಬಯಸುವುದಿಲ್ಲವೇನು? ಶೂದ್ರರು ವೇದಗಳನ್ನು ಓದುವುದರ ಮತ್ತು ಕೇಳುವುದರ ನಿಷೇಧವನ್ನೂ, ದ್ವಿಜರಿಗೆ ವಿಧಾನವನ್ನೂ ಮಾಡುವುದಕ್ಕೆ ಈಶ್ವರನೇನು ಪಕ್ಷಪಾತಿಯೆ? ಶೂದ್ರನು ಓದಬಾರದು, ಕೇಳಬಾರದು-ಎಂಬುದು ಪರಮೇಶ್ವರನ ಅಭಿಪ್ರಾಯವಾಗಿದ್ದರೆ, ಅವರುಗಳ ಶರೀರದಲ್ಲಿ ವಾಣಿ ಮತ್ತು ಶ್ರೋತ್ರ-ಈ ಇಂದ್ರಿಯಗಳನ್ನೇಕೆ ರಚಿಸುತ್ತಿದ್ದನು? ಪರಮಾತ್ಮನು ಪೃಥಿವೀ, ಜಲ, ಅಗ್ನಿ, ವಾಯು, ಚಂದ್ರ, ಸೂರ್ಯ ಮತ್ತು ಆಹಾರ ಮೊದಲಾದ ಪದಾರ್ಥಗಳನ್ನು ಎಲ್ಲರ ಸಲುವಾಗಿ ಉತ್ಪನ್ನಮಾಡಿರುವಂತೆಯೇ, ವೇದಗಳನ್ನೂ ಸಹ ಎಲ್ಲರ ಸಲುವಾಗಿ

ಪ್ರಕಾಶಪಡಿಸಿದ್ದಾನೆ. ಮತ್ತು ಎಲ್ಲಾದರೂ ನಿಷೇಧಮಾಡಿದರೆ, ಯಾವನಿಗೆ ಓದುವುದರಿಂದಲೂ, ಓದಿಸುವುದರಿಂದಲೂ ಏನೂ ಬರುವುದಿಲ್ಲವೋ, ಅವನು ಬುದ್ಧಿಹೀನ ಮತ್ತು ಮೂರ್ಖನಾದುದರಿಂದ ಶೂದ್ರನೆನಿಸುತ್ತಾನೆ. ಅವನ ಅಧ್ಯಯನ-ಅಧ್ಯಾಪನ ವ್ಯರ್ಥ-ಎಂದು ಅದರ ಅಭಿಪ್ರಾಯ. ಮತ್ತು ನೀವು ಸ್ತ್ರೀಯರ ಅಧ್ಯಯನದ ನಿಷೇಧಮಾಡುವುದು ನಿಮ್ಮ ಮೂರ್ಖತೆ, ಸ್ವಾರ್ಥತೆ ಮತ್ತು ಬುದ್ಧಿಹೀನತೆಯ ಪ್ರಭಾವ. ನೋಡಿರಿ, ವೇದಗಳಲ್ಲಿ ಕನ್ಯೆಯರು ಓದಬೇಕೆಂಬುದಕ್ಕೆ ಪ್ರಮಾಣ :—

ಬ್ರಹ್ಮಚರ್ಯೇಣ ಕನ್ಯಾ ಯುವಾನಂ ವಿಂದತೇ ಪತಿಂ ॥

[ಅಥರ್ವ-೧೧, ೨೪, ೩, ೧೮]

ಯಾವರೀತಿ ಹುಡುಗರು ಬ್ರಹ್ಮಚರ್ಯ ಸೇವನದಿಂದ ಪೂರ್ಣ ವಿದ್ಯೆ ಮತ್ತು ಉತ್ತಮಶಿಕ್ಷಣವನ್ನು ಪಡೆದು, ಯುವತಿಯರೂ, ವಿದುಷಿಯರೂ, ತಮಗನುಕೂಲರೂ, ಪ್ರಿಯರೂ, ಅನುರೂಪರೂ ಆದ ಸ್ತ್ರೀಯರೊಂದಿಗೆ ವಿವಾಹಮಾಡಿಕೊಳ್ಳುತ್ತಾರೋ (ಕನ್ಯಾ) ಕುಮಾರಿಯು, (ಬ್ರಹ್ಮಚರ್ಯೇಣ) ಬ್ರಹ್ಮಚರ್ಯಸೇವನದಿಂದ ವೇದಾದಿಗಳನ್ನೋದಿ, ಪೂರ್ಣವಿದ್ಯೆ ಮತ್ತು ಉತ್ತಮ ಶಿಕ್ಷಣ ಪಡೆದ ಯುವತಿಯಾಗಿ, ಯುವಾವಸ್ಥೆಯಲ್ಲಿ ತನಗೆ ಅನುರೂಪನೂ, ಪ್ರಿಯನೂ, ವಿದ್ವಾಂಸನೂ, (ಯುವಾನಂ) ಪೂರ್ಣಯುವಾವಸ್ಥಾಯುಕ್ತನೂ ಆದ ಪುರುಷನನ್ನು, (ವಿಂದತೇ) ಹೊಂದಬೇಕು, ಆದುದರಿಂದ ಸ್ತ್ರೀಯರೂ ಸಹ ಬ್ರಹ್ಮಚರ್ಯಪಾಲನ ಮತ್ತು ವಿದ್ಯಾಗ್ರಹಣವನ್ನು ಅವಶ್ಯವಾಗಿ ಮಾಡಬೇಕು. ಪ್ರಶ್ನೆ:—ಸ್ತ್ರೀಯರೂ ಸಹ ವೇದಗಳನ್ನೋದಬೇಕೇ? ಉತ್ತರ:—ಅವಶ್ಯವಾಗಿ; ಶ್ರೌತಸೂತ್ರಾದಿಗಳಲ್ಲಿ ನೋಡಿರಿ:—

ಇಮಂ ಮಂತ್ರಂ ಪತ್ನೀ ಪಠೇತ್ ।

ಅಂದರೆ ಸ್ತ್ರೀಯು ಯಜ್ಞದಲ್ಲಿ ಈ ಮಂತ್ರವನ್ನು ಪಠಿಸಬೇಕು. ಸ್ತ್ರೀಯು ವೇದಾದಿಶಾಸ್ತ್ರಗಳನ್ನು ಓದಿದವಳಾಗದಿದ್ದರೆ, ಸ್ವರಸಹಿತ ಉಚ್ಚಾರಣೆಯನ್ನೂ, ಸಂಸ್ಕೃತಸಂಭಾಷಣವನ್ನೂ ಹೇಗೆ ಮಾಡ

ಬಲ್ಲಳು? ಭಾರತವರ್ಷದ ಸ್ತ್ರೀಯರಲ್ಲಿ ಭೂಷಣಪ್ರಾಯರಾದ ಗಾರ್ಗಿ ಮೊದಲಾದವರು ವೇದಶಾಸ್ತ್ರಗಳನ್ನೋದಿ ಪೂರ್ಣ ವಿದುಷಿಯರಾಗಿದ್ದರೆಂದು ಶತಪಥಬ್ರಾಹ್ಮಣದಲ್ಲಿ ಸ್ಪಷ್ಟವಾಗಿ ಬರೆದಿದೆ. ಪುರುಷರು ವಿದ್ವಾಂಸರೂ, ಸ್ತ್ರೀಯು ಅವಿದುಷಿಯೂ ಮತ್ತು ಪುರುಷರು ಅವಿದ್ವಾಂಸರೂ, ಸ್ತ್ರೀಯು ವಿದುಷಿಯೂ ಆಗಿದ್ದಲ್ಲಿ ಮನೆಯಲ್ಲಿ ದಿನದಿನವೂ ದೇವಾಸುರಸಂಗ್ರಾಮವೇ ನಡೆದಿರುವುದು, ಮತ್ತೆ ಸುಖವೆಲ್ಲಿ? ಮತ್ತು ಸ್ತ್ರೀಯರು ಓದದಿದ್ದರೆ, ಕನ್ಯಾಪಾಠಶಾಲೆಗಳಲ್ಲಿ ಅಧ್ಯಾಪಿಕೆಯರಾದರೂ ಹೇಗಾಗಬಲ್ಲರು? ಮತ್ತು ನ್ಯಾಯಾಧೀಶತ್ವಾದಿ ರಾಜಕಾರ್ಯಗಳೂ, ಮತ್ತು ಪತಿಯನ್ನು ಸ್ತ್ರೀಯೂ, ಸ್ತ್ರೀಯನ್ನು ಪತಿಯೂ, ಪ್ರಸನ್ನತೆಯಿಂದಿಡುವುದು ಇತ್ಯಾದಿ ಗೃಹಸ್ಥಾಶ್ರಮಕಾರ್ಯಗಳೂ ವಿದ್ಯೆಯಿಲ್ಲದೆ ಯಾವಾಗಲೂ ಚನ್ನಾಗಿ ನಡೆಯಲಾರವು.

ನೋಡಿರಿ! ಆರ್ಯಾವರ್ತದ ರಾಜಪುರುಷರ ಸ್ತ್ರೀಯರು ಧನುರ್ವೇದ ಅಂದರೆ ಯುದ್ಧವಿದ್ಯೆಯನ್ನೂ ಸಹ ಚೆನ್ನಾಗಿ ತಿಳಿದಿರುತ್ತಿದ್ದರು. ಏಕೆಂದರೆ, ಹಾಗೆ ತಿಳಿದಿರದಿದ್ದಲ್ಲಿ ಕೈಕಯೀ ಮೊದಲಾದವರು ದಶರಥ ಮೊಲಾದವರೊಂದಿಗೆ ಯುದ್ಧಕ್ಕೆ ಹೇಗೆ ಹೋಗಲು ಸಮರ್ಥರಾಗುತ್ತಿದ್ದರು? ಮತ್ತು ಹೇಗೆ ಯುದ್ಧಮಾಡಬಲ್ಲವರಾಗುತ್ತಿದ್ದರು? ಆದುದರಿಂದ, ಬ್ರಾಹ್ಮಣಿ ಮತ್ತು ಕ್ಷತ್ರಿಯಸ್ತ್ರೀಯರು ಸರ್ವವಿದ್ಯೆಗಳನ್ನೂ, ವೈಶ್ಯಸ್ತ್ರೀಯು ವ್ಯವಹಾರ ವಿದ್ಯೆಯನ್ನೂ, ಶೂದ್ರಸ್ತ್ರೀಯು ಅಡಿಗೆ ಮೊದಲಾದ ಸೇವಾವಿದ್ಯೆಯನ್ನೂ ಅವಶ್ಯವಾಗಿ ಓದಬೇಕು. ಪುರುಷರು ಕಡೆಯಪಕ್ಷ ವ್ಯಾಕರಣ, ಧರ್ಮ ಮತ್ತು ವ್ಯವಹಾರ ವಿದ್ಯೆಯನ್ನು ಅವಶ್ಯವಾಗಿ ಓದಲೇಬೇಕಾಗಿರುವಂತೆ, ಸ್ತ್ರೀಯರೂ ಸಹ ವ್ಯಾಕರಣ, ಧರ್ಮ, ವೈದ್ಯಕ, ಗಣಿತ, ಶಿಲ್ಪವಿದ್ಯೆ ಇವನ್ನಂತೂ ಅವಶ್ಯವಾಗಿ ಕಲಿಯಲೇಬೇಕು. ಏಕೆಂದರೆ, ಇವುಗಳನ್ನು ಕಲಿಯದೆ ಸತ್ಯಾಸತ್ಯ ನಿರ್ಣಯ, ಪತಿ ಮೊದಲಾದವರೊಂದಿಗೆ ಅನುಕೂಲ ವ್ಯವಹಾರ, ಯೋಗ್ಯವಾದ ಸಂತಾನೋತ್ಪಾದನೆ, ಆ ಸಂತಾನದ ಪಾಲನೆ, ವರ್ಧನೆ, ಉತ್ತಮ ಶಿಕ್ಷಣ, ಗೃಹಕೃತ್ಯಗಳನ್ನೆಲ್ಲಾ ಹೇಗೆ ಮಾಡಬೇಕೋ ಹಾಗೆ ಮಾಡುವುದು. ಮಾಡಿಸುವುದು, ವೈದ್ಯಕ ವಿದ್ಯೆಯಿಂದ ಮನೆಯಲ್ಲಿ ಎಂದಿಗೂ ರೋಗ ಉಂಟಾಗದೆ, ಎಲ್ಲರೂ ಆನಂದದಿಂದಿರುವಂತೆ,

ಔಷಧೋಪಮವಾದ ಅನ್ನಪಾನಾದಿಗಳನ್ನು ಮಾಡುವುದು ಮತ್ತು ಮಾಡಿಸುವುದು, ಎಂದಿಗೂ ಸಾಧ್ಯವಾಗುವುದಿಲ್ಲ. ಶಿಲ್ಪ ವಿದ್ಯೆಯನ್ನರಿಯದೆ ಮನೆಯನ್ನು ಕಟ್ಟಿಸುವುದು, ವಸ್ತ್ರಭೂಷಣಾದಿಗಳನ್ನು ನಿರ್ಮಿಸುವುದು-ನಿರ್ಮಾಣ ಮಾಡಿಸುವುದು, ಗಣಿತವಿಲ್ಲದೆ ಎಲ್ಲರ ಲೆಕ್ಕವನ್ನೂ ತಿಳಿಯುವುದು-ತಿಳಿಯಿಸೇಳುವುದು, ವೇದಾದಿಶಾಸ್ತ್ರಗಳ ವಿದ್ಯೆಯಿಲ್ಲದೆ ಈಶ್ವರ ಮತ್ತು ಧರ್ಮವನ್ನು ತಿಳಿದು ಅಧರ್ಮದಿಂದ ದೂರವಿರುವುದು, ಇವೆಲ್ಲಾ ಎಂದಿಗೂ ಸಾಧ್ಯವಾಗುವುದಿಲ್ಲ. ಆದುದರಿಂದ. ಸಂತತಿಯು, ತಾಯಿ, ತಂದೆ. ಪತಿ, ಅತ್ತೆ, ಮಾವ, ರಾಜ, ಪ್ರಜೆ. ನೆರೆಹೊರೆ, ಇಷ್ಟಮಿತ್ರರು ಮತ್ತು ಮಕ್ಕಳು ಮೊದಲಾದವರೊಂದಿಗೆ, ಯುಕ್ತರೀತಿಯಲ್ಲಿ ಧರ್ಮದಿಂದ ವರ್ತಿಸುವಂತೆ, ಬ್ರಹ್ಮಚರ್ಯ, ಉತ್ತಮ ಶಿಕ್ಷಣ ಮತ್ತು ವಿದ್ಯೆಯ ಮೂಲಕ ತಮ್ಮ ಮಕ್ಕಳ ಶರೀರ ಮತ್ತು ಆತ್ಮದ ಪೂರ್ಣಬಲವನ್ನು ಬೆಳೆಯಿಸುವವರೇ ಧನ್ಯವಾದಾರ್ಹರು ಮತ್ತು ಕೃತಕೃತ್ಯರು. ಇದೇ ಅಕ್ಷಯವಾದ ಕೋಶವು. ಇದನ್ನು ವ್ಯಯಮಾಡಿದಷ್ಟು ಇದು ಹೆಚ್ಚುತ್ತಲೇ ಹೋಗುತ್ತದೆ. ಬೇರೆ ಕೋಶಗಳೆಲ್ಲಾ ವ್ಯಯಮಾಡುವುದರಿಂದ ಕುಗ್ಗಿಹೋಗುತ್ತದೆ ಮತ್ತು ದಾಯಭಾಗಿಗಳೂ ತಮ್ಮ ಪಾಲನ್ನು ತೆಗೆದುಕೊಂಡುಬಿಡುತ್ತಾರೆ. ಆದರೆ ವಿದ್ಯಾಕೋಶಕ್ಕೆ ಯಾವ ಕಳ್ಳನೂ, ದಾಯಭಾಗಿಯೂ ಕೈಹಾಕಲಾರನು. ಈ ಕೋಶವನ್ನು ರಕ್ಷಿಸುವವನು ಮತ್ತು ವರ್ಧಿಸುವವನು ಮುಖ್ಯತಃ ರಾಜನು ಮತ್ತು ಪ್ರಜೆಗಳೂ ಕೂಡ.

ಕನ್ಯಾನಾಂ ಸಂಪ್ರದಾನಂ ಚ ಕುಮಾರಾಣಾಂ ಚ ರಕ್ಷಣಂ ॥

[ಮನು. ೭. ೧೫೨]

ಎಲ್ಲಾ ಕನ್ಯೆಯರನ್ನೂ, ಬಾಲಕರನ್ನೂ ಮೇಲೆ ಹೇಳಿದ ಸಮಯದಿಂದ ಮೇಲೆ ಹೇಳದ ಸಮಯದವರೆಗೆ ಬ್ರಹ್ಮಚರ್ಯಾಶ್ರಮದಲ್ಲಿಟ್ಟು ವಿದ್ವಾಂಸರನ್ನಾಗಿ ಮಾಡುವುದು ರಾಜನಿಗೆ ಯೋಗ್ಯವಾದುದು. ಈ ಆಜ್ಞೆಯನ್ನು ಯಾವನಾದರೂ ಒಪ್ಪದಿದ್ದರೆ, ಅವನ ತಾಯಿತಂದೆಗಳಿಗೆ ಶಿಕ್ಷೆವಿಧಿಸಬೇಕು. ಅಂದರೆ, ಎಂಟುವರ್ಷಗಳ ಬಳಿಕ ಬಾಲಕ-ಬಾಲಿಕೆಯರು ಯಾರ ಮನೆಯಲ್ಲಿಯೂ ಇರಲಾಗದಂತೆ

ಮತ್ತು ಆಚಾರ್ಯಕುಲದಲ್ಲಿಯೇ ಇರುವಂತೆ ರಾಜಾಜ್ಞೆಯಿರಬೇಕು. ಸಮಾವರ್ತನದ ಸಮಯ ಬರುವವರೆಗೂ ವಿವಾಹವಾಗಲವಕಾಶವಿರ ಬಾರದು.

ಸರ್ವೇಷಾಮೇವ ದಾನಾನಾಂ ಬ್ರಹ್ಮದಾನಂ ವಿಶಿಷ್ಯತೇ।
ವಾರ್ಯನ್ನಗೋಮಹೀವಾಸಸ್ತಿಲಕಾಂಚನ ಸರ್ಪಿಷಾಂ ॥

[ಮನು. ೪. ೨೩೩]

ಜಗತ್ತಿನಲ್ಲಿ ನೀರು, ಅನ್ನ, ಗೋವು, ಭೂಮಿ, ವಸ್ತ್ರ, ಎಳ್ಳು, ಚಿನ್ನ, ತುಪ್ಪ ಮೊದಲಾದ ಎಷ್ಟು ದಾನಗಳಿವೆಯೋ, ಆ ದಾನಗಳ ಲ್ಲೆಲ್ಲಾ ವೇದವಿದ್ಯಾದಾನವು ಅತಿಶ್ರೇಷ್ಠವಾದುದು. ಆದುದರಿಂದ, ತನು-ಮನ-ಧನಗಳಿಂದ ಸಾಧ್ಯವಾದಷ್ಟು ಪ್ರಯತ್ನವನ್ನು ವಿದ್ಯಾಭಿ ವೃದ್ಧಿಗಾಗಿ ಮಾಡುತ್ತಿರಬೇಕು. ಯಾವ ದೇಶದಲ್ಲಿ ಯಥಾಯೋಗ್ಯ ವಾದ ಬ್ರಹ್ಮಚರ್ಯವಿದ್ಯೆ ಮತ್ತು ವೇದೋಕ್ತಧರ್ಮದ ಪ್ರಚಾರವಾಗು ತ್ತದೋ, ಆ ದೇಶವೇ ಸೌಭಾಗ್ಯಶಾಲಿಯಾಗುತ್ತದೆ. ಹೀಗೆ ಸಂಕ್ಷೇಪ ವಾಗಿ ಬ್ರಹ್ಮಚರ್ಯಾಶ್ರಮದ ಶಿಕ್ಷಣವನ್ನು ಬರೆದಿದ್ದೇವೆ. ಇದರನಂತರ ನಾಲ್ಕನೆಯ ಸಮುಲ್ಲಾಸದಲ್ಲಿ ಸಮಾವರ್ತನ ಮತ್ತು ಗೃಹಾಶ್ರಮದ ಶಿಕ್ಷಣವು ಬರೆಯಲ್ಪಡುವುದು.

ಇತಿ ಶ್ರೀಮದ್ದಯಾನಂದಸರಸ್ವತೀಸ್ವಾಮಿಕೃತೇ
ಸತ್ಯಾರ್ಥಪ್ರಕಾಶೇ ಸುಭಾಷಾ ವಿಭೂಷಿತೇ
ಶಿಕ್ಷಾವಿಷಯೇ ತೃತೀಯಃ ಸಮುಲ್ಲಾಸಃ
ಸಂಪೂರ್ಣಃ

॥ ಓಂ ॥

ಅಥ ಚತುರ್ಥ ಸಮುಲ್ಲಾಸಾರಂಭಃ

ಅಥ ಸಮಾವರ್ತನವಿವಾಹಗೃಹಾಶ್ರಮವಿಧಿಂ ವಕ್ಷ್ಯಾಮಃ

ವೇದಾನಧೀತ್ಯ ವೇದೌ ವಾ ವೇದಂ ವಾಪಿ ಯಥಾಕ್ರಮಂ ।
ಅವಿಪ್ಲುತಬ್ರಹ್ಮಚರ್ಯೋ ಗೃಹಸ್ಥಾಶ್ರಮಮಾವಸೇತ್ ॥

[ಮನು. ೩-೨]

ಯಥಾವತ್ತಾಗಿ ಬ್ರಹ್ಮಚರ್ಯವ್ರತದಿಂದ, ಆಚಾರ್ಯಾನುಕೂಲವಾಗಿ ವರ್ತಿಸಿ, ಧರ್ಮದಿಂದ ನಾಲ್ಕು, ಮೂರು, ಎರಡು, ಅಥವಾ ಒಂದು ವೇದವನ್ನಾದರೂ ಅಧ್ಯಯನಮಾಡಿ, ಅಖಂಡಬ್ರಹ್ಮಚರ್ಯವನ್ನುಳ್ಳ ಪುರುಷನು ಅಥವಾ ಸ್ತ್ರೀಯು ಗೃಹಸ್ಥಾಶ್ರಮದಲ್ಲಿ ಪ್ರವೇಶ ಮಾಡಬೇಕು.

ತಂ ಪ್ರತೀತಂ ಸ್ವಧರ್ಮೇಣ ಬ್ರಹ್ಮದಾಯಹರಂ ಪಿತುಃ ।
ಸ್ರಗ್ವಿಣಂ ತಲ್ಪ ಆಸೀನಮರ್ಹಯೇತ್ಪ್ರಥಮಂ ಗವಾ ॥

[ಮನು. ೩-೩]

ಯಾವನು ಸ್ವಧರ್ಮದಿಂದ, ಅಂದರೆ ಆಚಾರ್ಯಶಿಷ್ಯಸಂಬಂಧವಾದ ಧರ್ಮದಿಂದ ಯುಕ್ತನಾಗಿ, ಪಿತೃವಿನಿಂದ, ಅಂದರೆ ತಂದೆ ಅಥವಾ ಗುರುವಿನಿಂದ "ಬ್ರಹ್ಮದಾಯ" ಅಂದರೆ ವಿದ್ಯಾರೂಪಭಾಗವನ್ನು ಗ್ರಹಿಸಿ, ಮಾಲಾಧಾರಿಯಾಗಿರುತ್ತಾನೋ, ಆ ಶಿಷ್ಯನು, ತನ್ನ ಆಸನದ ಮೇಲೆ ಕುಳಿತ ಆಚಾರ್ಯನನ್ನು ಮೊದಲು ಗೋದಾನದಿಂದ ಸತ್ಕರಿಸಬೇಕು; ಅಂತಹ ಲಕ್ಷಣಯುಕ್ತ ವಿದ್ಯಾರ್ಥಿಯನ್ನೂ ಸಹ ಕನ್ಯೆಯ ತಂದೆಯು ಗೋದಾನದಿಂದ ಸತ್ಕರಿಸಬೇಕು.

ಗುರುಣಾನುಮತಃ ಸ್ನಾತ್ವಾ ಸಮಾವೃತ್ತೋ ಯಥಾವಿಧಿ ।
ಉದ್ವಹೇತ ದ್ವಿಜೋ ಭಾರ್ಯಾಂ ಸವರ್ಣಾಂ ಲಕ್ಷಣಾನ್ವಿತಾಂ ॥

[ಮನು. ೩-೪]

ಗುರುವಿನ ಆಜ್ಞೆಯಿಂದ ಸ್ನಾನಮಾಡಿ, ಕ್ರಮಾನುಸಾರ ಗುರುಕುಲದಿಂದ ಬಂದು, ಬ್ರಾಹ್ಮಣ, ಕ್ಷತ್ರಿಯ, ವೈಶ್ಯರು, ತಮ್ಮ ವರ್ಣಾನುಕೂಲವಾಗಿ ಸುಂದರಲಕ್ಷಣಯುಕ್ತರಾದ ಕನ್ಯೆಯರನ್ನು ಮದುವೆಯಾಗಬೇಕು.

ಅಸಪಿಂಡಾ ಚ ಯಾ ಮಾತುರಸಗೋತ್ರಾ ಚ ಯಾ ಪಿತುಃ ।
ಸಾ ಪ್ರಶಸ್ತಾ ದ್ವಿಜಾತೀನಾಂ ದಾರಕರ್ಮಣಿ ಮೈಥುನೇ ॥

[ಮನು. ೩-೫]

ಯಾವ ಕನ್ಯೆಯು ಮಾತೃಕುಲದ ಆರು ತಲೆಮಾರಿನೊಳಗಿಲ್ಲವೋ ಮತ್ತು ಯಾವಳು ತಂದೆಯ ಗೋತ್ರದವಳಲ್ಲವೋ, ಅವಳೊಂದಿಗೆ ವಿವಾಹಮಾಡಿಕೊಳ್ಳುವುದುಚಿತವು. ಏಕೆಂದರೆ,

ಪರೋಕ್ಷಪ್ರಿಯಾ ಇವ ಹಿ ದೇವಾಃ ಪ್ರತ್ಯಕ್ಷದ್ವಿಷಃ

[ಶತಪಥ]

ಪರೋಕ್ಷ ಪದಾರ್ಥಗಳಲ್ಲಿ ಹುಟ್ಟುವಷ್ಟು ಪ್ರೀತಿಯು ಪ್ರತ್ಯಕ್ಷ ಪದಾರ್ಥಗಳಲ್ಲಿ ಹುಟ್ಟಲಾರದು. ಸಕ್ಕರೆಯ ಗುಣವನ್ನು ಮಾತ್ರ ಕೇಳಿ, ಅದನ್ನು ತಿನ್ನದಿರುವವನ ಮನಸ್ಸು ಅದರಲ್ಲಿಯೇ ಲೀನವಾಗುವಂತೆ, ಪರೋಕ್ಷ ವಸ್ತುವಿನ ಪ್ರಶಂಸೆಯನ್ನು ಕೇಳಿ, ಅದನ್ನು ಹೊಂದಬೇಕೆಂಬ ಬಯಕೆ ಮನುಷ್ಯಮಾತ್ರರಿಗೆ ಸಹಜವಾಗಿ ಹುಟ್ಟುತ್ತದೆ. ಹಾಗೆಯೇ, ವಿವಾಹವಿಷಯದಲ್ಲಿಯೂ ಸಹ ತಂದೆತಾಯಿಗಳ ವಂಶಕ್ಕೆ ಸೇರದ ಕನ್ಯೆಯನ್ನು ಮದುವೆಯಾಗುವುದು ಯೋಗ್ಯವಾಗಿರುತ್ತದೆ. ದೂರದ ಮತ್ತು ಸಮಾಪದ ಸಂಬಂಧದವರಲ್ಲಿ ಮದುವೆಯಾಗುವುದರ ಗುಣಾವಗುಣಗಳಿವು:-(೧) ಕನ್ಯಾವರರಿಬ್ಬರೂ ಬಾಲ್ಯದಲ್ಲಿ ಆಟವಾಡಿಯೂ, ಜಗಳವಾಡಿಯೂ, ಪರಸ್ಪರ ಗುಣದೋಷಗಳನ್ನೂ ಮತ್ತು ಸ್ವಭಾವಗಳನ್ನೂ, ಬಾಲ್ಯಾವಸ್ಥೆಯ ಏಪರೀತಾಚರಣೆಗಳನ್ನೂ ಸಹ ಅರಿತವರಾಗಿಯೂ ಇದ್ದು, ಎಳೆತನದಲ್ಲಿ ಒಬ್ಬರನ್ನೊಬ್ಬರು ನಗ್ನಾವಸ್ಥೆಯಲ್ಲಿಯೂ ಸಹ ನೋಡಿರುವುದರಿಂದ, ಹತ್ತಿರದವರಾದ ಇಂತಹವರ ಪರಸ್ಪರ ವಿವಾಹದಿಂದ ಪ್ರೇಮವೆಂದಿಗೂ ಹುಟ್ಟಲಾರದು. (೨) ನೀರಿನಲ್ಲಿ

ನೀರು ಬೆರತರೆ, ಯಾವ ವಿಲಕ್ಷಣ ಗುಣವೂ ಉಂಟಾಗದಿರುವಂತೆ, ಒಂದೇ ಗೋತ್ರವಾದ ಪಿತೃಕುಲ ಅಥವಾ ಮಾತೃಕುಲದಲ್ಲಿ ವಿವಾಹ ಸಂಬಂಧವನ್ನು ಬೆಳಸುವುದರಲ್ಲಿ ಧಾತುಗಳು ಯಾವ ಬದಲಾವಣೆ ಗಳನ್ನೂ ಹೊಂದದೆ ಇರುವದರಿಂದ, ಯಾವ ಉನ್ನತಿಯೂ ಆಗಲಾ ರದು. (೩) ಹಾಲಿನಲ್ಲಿ ಸಕ್ಕರೆ ಅಥವಾ ಶುಂಠಿ ಮೊದಲಾದ ಓಷಧಿ ಗಳನ್ನು ಬೆರಸುವುದರಿಂದ ಉತ್ತಮ ಗುಣವುಂಟಾಗುವಂತೆ, ತಾಯಿ ತಂದೆಗಳ ಗೋತ್ರದಿಂದ ಬೇರೆಯಾದ ಗೋತ್ರದವರಲ್ಲಿ ಸ್ತ್ರೀಪುರುಷರ ವಿವಾಹವಾಗುವುದು ಉತ್ತಮ. (೪) ಒಂದು ದೇಶದ ರೋಗಿಗಳು ಬೇರೆ ದೇಶಕ್ಕೆ ಹೋಗಿ ಅನ್ನಪಾನವಾಯುಗಳ ಪರಿವರ್ತನೆಮಾಡು ವುದರಿಂದ ಆರೋಗ್ಯಲಭಿಸುವ ಸಂಭವವಿರುತ್ತದೆ. ಆದುದರಿಂದ ದೂರ ದೇಶಸ್ಥರಲ್ಲಿ ಮದುವೆಯಾಗುವುದು ಉತ್ತಮವಾಗಿರುತ್ತದೆ. (೫) ಸಮೀಪ ಸಂಬಂಧದವರಲ್ಲಿ ವಿವಾಹವಾಗುವುದರಿಂದ, ವಿಶೇಷ ದುಃಖ ಗಳೂ ವಿರೋಧವೂ ಆಗುವ ಸಂಭವವಿರುತ್ತದೆ. ದೂರವ ಸಂಬಂಧ ದಲ್ಲಿ ಇಂತಹ ಯಾವ ತೊಂದರೆಯೂ ಇರುವುದಿಲ್ಲ. ಹಾಗೂ, ದೂರ ಸಂಬಂಧದಿಂದ ಪ್ರೇಮಸೂತ್ರವು ದೂರ ದೂರದವರೆಗೆ ವರ್ಧಿಸುತ್ತದೆ; ಹತ್ತಿರವ ಮದುವೆಯಿಂದಲ್ಲ. (೬) ದೂರದೇಶದ ವರ್ತಮಾನಗಳು ಮತ್ತು ಪದಾರ್ಥಗಳೂ ಸಹ ದೂರಸಂಬಂಧದಿಂದ ಸಹಜವಾಗಿ ಲಭಿಸು ತ್ತವೆ: ಹತ್ತಿರವಿವಾಹದಿಂದಲ್ಲ. ಆದುದರಿಂದ,

ದುಹಿತಾ ದುರ್ಹಿತಾ ದೂರೇಹಿತಾ ಭವತೀತಿ।

[ನಿರುಕ್ತ. ೩-೪]

ಕನ್ಯೆಯ ಮದುವೆ ದೂರದೇಶದಲ್ಲಾಗುವುದೇ ಹಿತಕರವಾದು ದರಿಂದ, ಅವಳಿಗೆ 'ದುಹಿತಾ' ಎಂದು ಹೆಸರು. (೭) ಸಮೀಪಸಂಬಂಧ ವನ್ನು ಬೆಳಸುವುದರಿಂದ, ಕನ್ಯೆಯ ತೌರುಮನೆಯಲ್ಲಿ ಬಡತನವು ಬೇರೂರುವ ಸಂಭವವಿರುತ್ತದೆ. ಏಕೆಂದರೆ, ಹುಡುಗಿಯು ಸಮೀಪ ದಲ್ಲೇ ಇರುವದರಿಂದ, ಆಗಾಗ ತಂದೆಯ ಮನೆಗೆ ಬರುತ್ತಲೇ ಇರು ತ್ತಾಳೆ; ಪ್ರತಿಸಲವೂ ಏನನ್ನಾದರೂ ಕೊಡಲೇಬೇಕಾಗುತ್ತದೆ. (೮) ಸಮೀಪ ಸಂಬಂಧದಲ್ಲಿ ಮದುವೆಯಾಗುವದರಿಂದ ಹೆಂಡತಿಗೆ ತೌರು ಮನೆಯ ದುರಭಿಮಾನ ಬೆಳೆಯುತ್ತದೆ. ಗಂಡನಿಂದ ಸ್ವಲ್ಪ ಮಾತು

ಬಂದರೂ ಸಾಕು. ಪಿತೃಗೃಹದತ್ತ ಮುಖ ಮಾಡುತ್ತಾಳೆ. ಪರಸ್ಪರರ ನಿಂದೆಯೂ, ವಿರೋಧವೂ ಬೆಳೆಯುತ್ತದೆ. ಏಕೆಂದರೆ, ಪ್ರಾಯಶಃ ಸ್ತ್ರೀಯರ ಸ್ವಭಾವವು ತೀಕ್ಷ್ಣವೂ ಮೃದುವೂ ಆಗಿರುತ್ತದೆ. ಇತ್ಯಾದಿ ಕಾರಣಗಳಿಂದ ತಂದೆಯ ಗೋತ್ರದಲ್ಲಿಯೂ, ತಾಯಿಯ ಆರುತಲೆ ಮಾರಿನೊಳಗೂ, ಸಮೀಪದೇಶದಲ್ಲಿಯೂ, ವಿವಾಹವನ್ನು ಮಾಡುವು ದೊಳ್ಳೆಯದಲ್ಲ.

ಮಹಾಂತ್ಯಪಿ ಸಮೃದ್ಧಾನಿ ಗೋಽಜಾವಿಧನಧಾನ್ಯತಃ ।
ಸ್ತ್ರೀಸಂಬಂಧೇ ದಶೈತಾನಿ ಕುಲಾನಿ ಪರಿವರ್ಜಯೇತ್ ॥

[ಮನು. ೩-೬]

ಧೆನ, ಧಾನ್ಯ, ಹಸು, ಮೇಕೆ, ಆನೆ, ಕುದುರೆ, ರಾಜ್ಯ, ಮೊದ ಲಾದ ಸಂಪತ್ತಿನಿಂದ ಎಷ್ಟೇ ಸಮೃದ್ಧರಾಗಿದ್ದರೂ, ವಿವಾಹಸಂಬಂಧೆ ದಲ್ಲಿ ಮುಂದೆ ಹೇಳುವ ಹತ್ತುಕುಲಗಳನ್ನು ಸರ್ವಥಾ ಬಟ್ಟುಬಿಡ ಬೇಕು.

ಹೀನಕ್ರಿಯಂ ನಿಷ್ಪುರುಷಂ ನಿಶ್ಛಂದೋ ರೋಮಶಾರ್ಶಸಂ ।
ಕ್ಷಯ್ಯಾಮಯ್ಯಾವ್ಯಪಸ್ಮಾರಿಶ್ವಿತ್ರಿಕುಷ್ಠಿಕುಲಾನಿ ಚ ॥

[ಮನು. ೩-೭]

ಯಾವ ಕುಲವು ಸತ್ಕರ್ಮರಹಿತವಾಗಿಯೂ, ಸತ್ಪುರುಷರಹಿತ ವಾಗಿಯೂ, ವೇದಾಧ್ಯಯನದಿಂದ ವಿಮುಖವಾಗಿಯೂ, ಶರೀರದ ಮೇಲೆ ದಟ್ಟವಾದ ಕೂದಲುಳ್ಳವರಿಂದ ಕೂಡಿದುದಾಗಿಯೂ, ಮೂಲ ವ್ಯಾಧಿ, ಕ್ಷಯ, ಉಬ್ಬಸ, ಕೆಮ್ಮು, ಆಮಾಶಯ ಮೂರ್ಛೆ, ಬಿಳಿಯ ತೊನ್ನು, ಮತ್ತು ಸುರಿಯುವ ತೊನ್ನು—ಈ ವ್ಯಾಧಿಗಳಿಂದ ಯುಕ್ತ ವಾದುದಾಗಿಯೂ ಇರುವುದೋ ಅಂತಹ ಕುಲದ ಕನ್ಯಾವರರೊಡನೆ ವಿವಾಹವಾಗಬಾರದು.

ನೋದ್ವಹೇತ್ಕಪಿಲಾಂ ಕನ್ಯಾಂ ನಾಧಿಕಾಂಗೀಂ ನ ರೋಗಿಣೀಂ।
ಶ್ಮಶ್ರುಲೋಮಿಕಾಂ ನಾತಿಲೋಮಾಂ ನ ವಾಚಾಟಾಂನ್ನ ಪಿಂಗಲಾಂ॥

[ಮನು ೩-೯]

ಕಪಿಲವರ್ಣದವಳನ್ನೂ ಗಾತ್ರದಲ್ಲಿ ಅಥವಾ ಎತ್ತರದಲ್ಲಿ ಪುರುಷನಿಗಿಂತ ಮಿಗಿಲಾದವಳನ್ನೂ, ರೋಗಿಣಿಯನ್ನೂ, ಕೂದಲಿಲ್ಲದವಳನ್ನೂ, ಮೈಮೇಲೆಲ್ಲಾ ಬಹಳ ಕೂದಲಿರುವವಳನ್ನೂ, ಅತಿ ಭಾಷಿಣಿಯನ್ನೂ, ಹೊಂಬಣ್ಣದ ಕಣ್ಣಿನವಳನ್ನೂ,

ನರ್ಕ್ಷವೃಕ್ಷನದೀನಾಮ್ನೀಂ ನಾಂತ್ಯಪರ್ವತನಾಮಿಕಾಂ।
ನಪಕ್ಷ್ಯಹಿಪ್ರೇಷ್ಯನಾಮ್ನೀಂ ನ ಚ ಭೀಷಣನಾಮಿಕಾಂ॥

[ಮನು ೩-೯]

ಅಶ್ವಿನೀ, ಭರಣೀ, ರೋಹಿಣೀ, ರೇವತಿ, ಚಿತ್ತಾ ಮೊದಲಾದ ಹೆಸರಿನವಳನ್ನೂ; ಗುಲಾಬೀ, ಚಂಪಾ, ತುಲಸೀ ಮೊದಲಾದ ಮರ ಗಿಡಗಳ ಹೆಸರಿನವಳನ್ನೂ; ಯಮುನಾ, ಗಂಗಾ ಮೊದಲಾದ ನದಿಗಳ ಹೆಸರಿನವಳನ್ನೂ; ಚಾಂಡಾಲೀ ಮೊದಲಾದ ನೀಚಹೆಸರಿನವಳನ್ನೂ; ವಿಂಧ್ಯಾ, ಪಾರ್ವತೀ ಮೊದಲಾದ ಪರ್ವತಗಳ ಹೆಸರಿನವಳನ್ನೂ; ಕೋಕಿಲಾ, ಹಂಸಾ ಮೊದಲಾದ ಪಕ್ಷಿಗಳ ಹೆಸರಿನವಳನ್ನೂ; ನಾಗಿನೀ ಮೊದಲಾದ ಹಾವುಗಳ ಹೆಸರಿನವಳನ್ನೂ; ಮಾಥೋದಾಸೀ, ಮೀರಾದಾಸೀ ಮೊದಲಾದ ದಾಸ್ಯಸೂಚಕವಾದ ಹೆಸರುಳ್ಳವಳನ್ನೂ; ಭೀಮಾ, ಚಂಡಿಕಾ, ಕಾಳೀ ಮೊದಲಾದ ಭಯಂಕರ ಹೆಸರಿನವಳನ್ನೂ; ಮದುವೆಯಾಗಬಾರದು. ಏಕೆಂದರೆ, ಈ ಹೆಸರುಗಳು ಕುತ್ಸಿತವೂ ಮತ್ತು ಬೇರೆ ವಸ್ತುಗಳವು ಸಹಾ ಆಗಿರುತ್ತವೆ.

ಅವ್ಯಂಗಾಂಗೀಂ ಸೌಮ್ಯನಾಮ್ನೀಂ ಹಂಸವಾರಣಗಾಮಿನೀಂ।
ತನುಲೋಮಕೇಶದಶನಾಂ ಮೃದ್ವಂಗೀಮುದ್ವಹೇತ್ ಸ್ತ್ರಿಯಂ॥

ನೆಟ್ಟಗಿರುವ ಮೈಕಟ್ಟುಳ್ಳವಳೂ, ಸುಂದರೀ, ಯಶೋದಾ, ಸುಖದಾ ಮೊದಲಾದ ಉತ್ತಮವಾದ ಹೆಸರುಳ್ಳವಳೂ, ಹಂಸದಂತೆ ಅಥವಾ ಆನೆಯಂತೆ ಗಂಭೀರವಾದ ನಡೆಯುಳ್ಳವಳೂ, ಸೊಗಸಾಗಿಯೂ, ಕೋಮಲವಾಗಿಯೂ, ಬೆಳೆದ ಕೂದಲುಳ್ಳವಳೂ, ಸಣ್ಣವೂ, ಸಮವೂ ಆದ ಹಲ್ಲುಗಳುಳ್ಳವಳೂ, ಕೋಮಲಾಂಗಿಯೂ, ಆದ ಕನ್ಯೆಯನ್ನು ಮದುವೆಯಾಗಬೇಕು.

ಪ್ರಶ್ನೆ :—ಮದುವೆಗೆ ಯಾವ ಕಾಲ ಮತ್ತು ರೀತಿಗಳೊಳ್ಳೆಯವು?

ಉತ್ತರ :—ಸ್ತ್ರೀಯರಿಗೆ ಹದಿನಾರನೆಯ ವರ್ಷದಿಂದ ಇಪ್ಪತ್ತು ನಾಲ್ಕನೆಯ ವರ್ಷದವರೆಗೂ, ಪುರುಷರಿಗೆ ಇಪ್ಪತ್ತೈದನೆಯ ವರ್ಷದಿಂದ ನಲವತ್ತೆಂಟನೆಯ ವರ್ಷದವರೆಗೂ, ವಿವಾಹಕ್ಕೆ ಉತ್ತಮ ಸಮಯವಾಗಿರುತ್ತದೆ.

ಇದರಲ್ಲಿ ಹದಿನಾರು ವರ್ಷದ ಕನ್ಯೆ ಮತ್ತು ಇಪ್ಪತ್ತೈದು ವರ್ಷದ ವರನ ವಿವಾಹವು ನಿಕೃಷ್ಟವೂ, ಹದಿನೆಂಟು-ಇಪ್ಪತ್ತು ವರ್ಷಗಳ ಸ್ತ್ರೀ ಹಾಗೂ ಮೂವತ್ತು ಮೂವತ್ತೈದು ಅಥವಾ ನಲವತ್ತು ವರ್ಷಗಳ ವಯಸ್ಸಿನ ಪುರುಷನ ವಿವಾಹವು ಮಧ್ಯಮವೂ, ಇಪ್ಪತ್ತು ನಾಲ್ಕು ವರ್ಷದ ಸ್ತ್ರೀ ಹಾಗೂ ನಲವತ್ತೆಂಟು ವರ್ಷದ ಪುರುಷನ ವಿವಾಹವು ಉತ್ತಮವೂ ಆಗಿರುತ್ತದೆ. ಈ ವಿಧೆವಾದ ವಿವಾಹ ಪದ್ಧತಿಯೂ, ಉತ್ತಮಬ್ರಹ್ಮಚರ್ಯವೂ, ಯೋಗ್ಯವಾದ ವಿದ್ಯಾಭ್ಯಾಸವೂ, ಯಾವ ದೇಶದಲ್ಲಿ ಪ್ರಚಲಿತವಾಗಿರುವುವೋ, ಆ ದೇಶವು ಸುಖಸಮೃದ್ಧಿಗಳಿಂದ ಕೂಡಿರುತ್ತದೆ. ಯಾವ ದೇಶದಲ್ಲಿ ಸ್ತ್ರೀಪುರುಷರು ಬ್ರಹ್ಮಚರ್ಯದಿಂದ ವಿದ್ಯೆಯನ್ನು ಕಲಿಯದೆ, ಅಯೋಗ್ಯರಾಗಿ ಬಾಲ್ಯದಲ್ಲಿಯೇ ಮದುವೆಯಾಗುವರೋ, ಆ ದೇಶವು ದುಃಖದಲ್ಲಿ ಮುಳುಗಿ ಹೋಗುತ್ತದೆ. ಏಕೆಂದರೆ, ಬ್ರಹ್ಮಚರ್ಯದಿಂದ ವಿದ್ಯಾರ್ಜನೆಮಾಡಿ ವಿವಾಹವಾಗುವಂತೆ ವ್ಯವಸ್ಥೆಮಾಡುವದರಿಂದಲೇ ಸರ್ವಸುಧಾರಣೆಯೂ ಅದಿಲ್ಲದಿರುವುದರಿಂದ ಕೇಡೂ ಉಂಟಾಗುತ್ತದೆ.

ಪ್ರಶ್ನೆ :—

ಅಷ್ಟವರ್ಷಾ ಭವೇದ್ಗೌರೀ ನವವರ್ಷಾ ಚ ರೋಹಿಣೀ ।
ದಶವರ್ಷಾಭವೇತ್ಕನ್ಯಾ ತತ ಊರ್ಧ್ವಂ ರಜಸ್ವಲಾ ॥೧॥
ಮಾತಾ ಚೈವ ಪಿತಾ ತಸ್ಯಾ ಜ್ಯೇಷ್ಠೋಭ್ರಾತಾ ತಥೈವ ಚ।
ತ್ರಯಸ್ತೇ ನರಕಂ ಯಾಂತಿ ದೃಷ್ಟ್ವಾ ಕನ್ಯಾಂ ರಜಸ್ವಲಾಂ ॥೨॥

ಈ ಶ್ಲೋಕಗಳು ಪಾರಾಶರೀ ಮತ್ತು ಶೀಘ್ರಬೋಧದಲ್ಲಿ ಬರೆಯಲ್ಪಟ್ಟವೆ. ಅರ್ಥವೇನೆಂದರೆ :—ಹುಡುಗಿಗೆ ಎಂಟನೆಯ ವರ್ಷದಲ್ಲಿ ಗೌರಿಯೆಂದೂ, ಒಂಭತ್ತನೆಯ ವರ್ಷದಲ್ಲಿ ರೋಹಿಣಿಯೆಂದೂ, ಹತ್ತ

ನೆಯ ವರ್ಷದಲ್ಲಿ ಕನ್ಯೆಯೆಂದೂ, ಅದರ ಮೇಲೆ ರಜಸ್ವಲೆಯೆಂದೂ ಸಂಜ್ಞೆ॥೧॥ ಹತ್ತನೆ ವರ್ಷದವರೆಗೆ ವಿವಾಹಮಾಡದೆ ಇರುವ ರಜಸ್ವಲೆ ಕನ್ಯೆಯನ್ನು ತಾಯಿ, ತಂದೆ, ಮತ್ತು ಅಣ್ಣ ಈ ಮೂವರೂ ನೋಡಿದರೆ ನರಕದಲ್ಲಿ ಬೀಳುತ್ತಾರೆ.

ಉತ್ತರ;—ಬ್ರಹ್ಮೋವಾಚ

ಏಕಕ್ಷಣಾ ಭವೇದ್ಗೌರೀ ದ್ವಿಕ್ಷಣೇಯಂತು ರೋಹಿಣೀ।
ತ್ರಿಕ್ಷಣಾ ಸಾ ಭವೇತ್ಕನ್ಯಾ ಹ್ಯತ ಊರ್ಧ್ವಂ ರಜಸ್ವಲಾ ॥
ಮಾತಾ ಪಿತಾ ತಥಾ ಭ್ರಾತಾ ಮಾತುಲೋ ಭಗಿನೀಸ್ವಕಾ।
ಸರ್ವೇತೇ ನರಕಂ ಯಾಂತಿ ದೃಷ್ಟ್ವಾ ಕನ್ಯಾಂ ರಜಸ್ವಲಾಂ ॥

ಇದು ಸದ್ಯೋನಿರ್ಮಿತ ಬ್ರಹ್ಮಪುರಾಣದ ವಚನ. ಅರ್ಥವೇನೆಂದರೆ—ಪರಮಾಣುವು ಒಂದು ಸಲ ಚಲಿಸುವಷ್ಟು ಕಾಲಕ್ಕೆ ಕ್ಷಣವೆಂದು ಹೆಸರು. ಹೆಣ್ಣುಮಗುವಿಗೆ ಹುಟ್ಟಿದ ಒಂದು ಕ್ಷಣದಲ್ಲಿ ಗೌರಿಯೆಂದೂ, ಎರಡನೆಯ ಕ್ಷಣದಲ್ಲಿ ರೋಹಿಣಿಯೆಂದೂ, ಮೂರನೆಯ ಕ್ಷಣದಲ್ಲಿ ಕನ್ಯೆಯೆಂದೂ, ನಾಲ್ಕನೆಯ ಕ್ಷಣದಲ್ಲಿ ರಜಸ್ವಲೆಯೆಂದೂ, ಸಂಜ್ಞೆಗಳಿರುತ್ತವೆ. ॥೧॥ ಹುಟ್ಟಿದ ಮೇಲೆ ನಾಲ್ಕುಕ್ಷಣ ಕಳೆದರೂ ಸಹ ಮದುವೆಯಾಗದ ಹೆಣ್ಣನ್ನು ನೋಡಿದ ಮಾತ್ರದಿಂದ ತಾಯಿ ತಂದೆಗಳೂ, ಅಣ್ಣತಮ್ಮಂದಿರೂ, ಸೋದರಮಾವನೂ, ಅಕ್ಕತಂಗಿಯರೂ ಎಲ್ಲರೂ ನರಕದಲ್ಲಿ ಬೀಳುತ್ತಾರೆ.

ಪ್ರಶ್ನೆ :—ಇಲ್ಲ. ಈ ಶ್ಲೋಕಗಳು ಪ್ರಮಾಣಗಳಲ್ಲ.

ಉತ್ತರ :—ಏಕೆ ಪ್ರಮಾಣಗಳಲ್ಲ? ಸಾಕ್ಷಾತ್ ಬ್ರಹ್ಮದೇವರ ಶ್ಲೋಕಗಳೇ ಪ್ರಮಾಣಗಳಲ್ಲದ ಮೇಲೆ, ನಿಮ್ಮ ಶ್ಲೋಕಗಳೂ ಪ್ರಮಾಣವಾಗಲಾರವು.

ಪ್ರಶ್ನೆ :—ಚನ್ನಾಗಿದೆ. ನೀವು ಪರಾಶರ ಮತ್ತು ಕಾಶೀನಾಥರನ್ನೂ ಪ್ರಮಾಣವೆಂದು ಅಂಗೀಕರಿಸುವದಿಲ್ಲವೆ?

ಉತ್ತರ :—ನೀವು ಬ್ರಹ್ಮದೇವರ ವಚನವನ್ನೂ ಪ್ರಮಾಣವೆಂದು ಒಪ್ಪುವದಿಲ್ಲವೆ? ಬ್ರಹ್ಮದೇವರು ಪರಾಶರರಿಗಿಂತ ಎಷ್ಟೋ

ದೊಡ್ಡವರಲ್ಲವೆ? ನೀವು ಬ್ರಹ್ಮದೇವರ ಶ್ಲೋಕಗಳನ್ನು ನಂಬದಿದ್ದರೆ, ನಾವೂ ಕೂಡ ಪರಾಶರ, ಕಾಶೀನಾಥರ ಶ್ಲೋಕಗಳನ್ನು ನಂಬುವದಿಲ್ಲ.

ಪ್ರಶ್ನೆ :—ನಿಮ್ಮ ಶ್ಲೋಕಗಳು ಅಸಂಭವವಾಗಿರುವುದರಿಂದ ಅವು ಪ್ರಮಾಣವಾಗಲಾರವು. ಏಕೆಂದರೆ, ಮಗುವಿನ ಜನನ ಸಮಯ ವಲ್ಲಯೇ ಸಾವಿರಾರು ಕ್ಷಣಗಳು ಕಳೆದುಹೋಗುವದರಿಂದ, ಮದುವೆ ಹೇಗಾಗಬಲ್ಲದು? ಮತ್ತು ಆ ಸಮಯದಲ್ಲಿ ವಿವಾಹಮಾಡುವದರಿಂದ ಪ್ರಯೋಜನವೂ ಸಹ ಕಂಡುಬರುವುದಿಲ್ಲ.

ಉತ್ತರ :—ನಮ್ಮೀ ಶ್ಲೋಕಗಳು ಅಸಂಭವವಾದರೆ, ನಿಮ್ಮ ಶ್ಲೋಕಗಳೂ ಅಸಂಭವವೇ. ಏಕೆಂದರೆ, ಎಂಟನೆಯ, ಒಂಭತ್ತನೆಯ, ಅಥವಾ ಹತ್ತನೆಯ ವರ್ಷದಲ್ಲ ಹುಡುಗಿಗೆ ಮದುವೆಮಾಡುವುದೂ ಕೂಡ ನಿಷ್ಫಲವೇ. ಏಕೆಂದರೆ, ಸ್ತ್ರೀಯು ಹದಿನಾರು ವರ್ಷ ಕಳೆದ ಬಳಿಕ, ಇಪ್ಪತ್ತುನಾಲ್ಕು ವರ್ಷಗಳೊಳಗಾಗಿ ಪೂರ್ಣಬ್ರಹ್ಮಚಾರಿಯೊಡನೆ ಮದುವೆಯಾದರೆ, ಪುರುಷನ ವೀರ್ಯವು ಪರಿಪಕ್ವವಾಗಿದ್ದು ಶರೀರವು ಬಲಿಷ್ಠವಾಗಿರುವದರಿಂದಲೂ, ನಾರಿಯ ಗರ್ಭಾಶಯವೂ, ದೇಹವೂ, ಶಕ್ತಿಯುಕ್ತವಾಗಿರುವುದರಿಂದಲೂ, ಉತ್ತಮಸಂತಾನವು ಪ್ರಾಪ್ತವಾಗುತ್ತದೆ.*

---

* ಮುನಿವರ ಧನ್ವಂತರಿಯು ಸುಶ್ರುತಸಂಹಿತೆಯಲ್ಲಿ. ಯೋಗ್ಯವಯಸ್ಸಿನವರಲ್ಲದ ಸ್ತ್ರೀಪುರುಷರ ಗರ್ಭಾಧಾನಕ್ರಿಯೆಯನ್ನು ನಿಷೇಧಿಸಿದ್ದಾರೆ.

ಊನಷೋಡಶವರ್ಷಾಯಾಮಪ್ರಾಪ್ತಃ ಪಂಚವಿಂಶತಿಂ।
ಯದ್ಯಾಧತ್ತೇಪುಮಾನ್ ಗರ್ಭಂ ಕುಕ್ಷಿಸ್ಥಃ ಸ ವಿಪದ್ಯತೇ ॥೧॥
ಜಾತೋ ವಾ ನಚಿರಂ ಜೀವೇಜ್ಜೀವೇದ್ವಾದುರ್ಬಲೇಂದ್ರಿಯಃ
ತಸ್ಮಾದತ್ಯಂತಬಾಲಾಯಾಂ ಗರ್ಭಾಧಾನಂ ನಕಾರಯೇತ್॥೨॥

[ಶುಶ್ರುತ ಶಾರೀರಸ್ಥಾನ-ಅ ೧೦, ಶ್ಲೋ ೩೬-೩೮]

ಅರ್ಥ :—ಹದಿನಾರು ವರ್ಷಗಳಿಗಿಂತ ಕಡಮೆ ವಯಸ್ಸಿನ, ಬಾಲಿಕೆಯಲ್ಲಿ ಇಪ್ಪತ್ತೈದು ವರ್ಷಕ್ಕಿಂತ ಕಡಮೆ ವಯಸ್ಸಿನ ಪುರುಷನು ಗರ್ಭಾಧಾನಮಾಡಿದರೆ ಕುಕ್ಷಿಸ್ಥವಾದ ಆ ಗರ್ಭವು ವಿಪತ್ತನ್ನು ಹೊಂದುತ್ತವೆ. ಅಂದರೆ ಪೂರ್ಣಕಾಲದವರಿಗೆ ಗರ್ಭಾಶಯದಲ್ಲಿದ್ದು ಉತ್ಪನ್ನವಾಗುವದಿಲ್ಲ ॥೧॥

ಎಂಟುವರ್ಷದ ಕನ್ಯೆಯಲ್ಲಿ ಸಂತಾನೋತ್ಪತ್ತಿಯಾಗುವುದು ಅಸಂಭವವಾಗಿರುವಂತೆಯೇ, ಹುಡುಗಿಗೆ, ರೋಹಿಣಿ, ಗೌರಿ ಮೊದಲಾದ ಹೆಸರುಗಳನ್ನಿಡುವುದೂ ಸಹ ಅನುಚಿತವಾಗಿರುತ್ತದೆ. ಏಕೆಂದರೆ, ಹುಡುಗಿಯು ಬೆಳ್ಳಗಿರದೆ ಕಪ್ಪಾಗಿದ್ದಲ್ಲಿ ಗೌರಿ ಎಂಬ ಹೆಸರು ವ್ಯರ್ಥ; ಇದಲ್ಲದೆ ಗೌರಿಯು ಮಹಾದೇವನ ಹೆಂಡತಿ, ರೋಹಿಣಿಯು ವಸುದೇವನ ಹೆಂಡತಿ.

ಪೌರಾಣಿಕರಾದ ನೀವು ಇವರಿಬ್ಬರನ್ನೂ ಮಾತೃಸಮಾನರೆಂದು ಅಂಗೀಕರಿಸುತ್ತೀರಿ. ಹೀಗಿರುವಾಗ ನಿಮಗೆ ಎಲ್ಲಾ ಕನ್ಯೆಯರ ವಿಷಯದಲ್ಲಿಯೂ, ರೋಹಿಣಿ, ಗೌರಿ, ಮೊದಲಾದವರ ಭಾವನೆಯೇ ಇರುವುದಾದರೆ, ಅಂತಹವರೊಡನೆ ಮದುವೆಯಾಗುವುದಾದರೂ ಹೇಗೆ ಸಂಭವಮತ್ತು ಧರ್ಮಯುಕ್ತವಾಗಬಲ್ಲದು? ಆದುದರಿಂದ ನೀವು ಮತ್ತು ನಾವು ಹೇಳಿದ ಶ್ಲೋಕಗಳೆರಡೂ ಸುಳ್ಳೇ ಆಗಿರುತ್ತವೆ. ಏಕೆಂದರೆ, 'ಬ್ರಹ್ಮೋವಾಚ' ಎಂದು ನಾವು ಬ್ರಹ್ಮನ ಹೆಸರಿನಲ್ಲಿ ಶ್ಲೋಕಗಳನ್ನು ರಚಿಸಿದಂತೆಯೇ, ನಿಮ್ಮ ಶ್ಲೋಕಗಳನ್ನು ಪರಾಶರರ ಹೆಸರಿನಲ್ಲಿಯಾರೋ ರಚಿಸಿದ್ದಾರೆ. ಆದುದರಿಂದ, ಇದನ್ನೆಲ್ಲಾ ಬಿಟ್ಟು, ವೇದಪ್ರಮಾಣದಿಂದಲೇ ಎಲ್ಲಾ ಕಾರ್ಯಗಳನ್ನೂ ನಿರವೇರಿಸಿರಿ. ನೋಡಿರಿ ಮನುಸ್ಮೃತಿಯಲ್ಲಿ ಹೀಗೆ ಹೇಳಿದೆ:—

ಅಥವಾ ಉತ್ಪನ್ನವಾದರೂ ಚಿರಕಾಲದವರೆಗೂ ಬದುಕುವುದಿಲ್ಲ. ಬದುಕಿದರೂ ದುರ್ಬಲೇಂದ್ರಿಯವುಳ್ಳದ್ದಾಗಿರುತ್ತದೆ. ಈ ಕಾರಣದಿಂದ ಅತಿ ಬಾಲ್ಯಾವಸ್ಥೆಯ ಸ್ತ್ರೀಯಲ್ಲಿ ಗರ್ಭಸ್ಥಾಪನೆ ಮಾಡಬಾರದು ॥೨॥

ಇಂತಿಂತಹ ಶಾಸ್ತ್ರೋಕ್ತ ನಿಯಮಗಳನ್ನೂ, ಮತ್ತು ಸೃಷ್ಟಿಕ್ರಮವನ್ನೂ ನೋಡುವುದರಿಂದಲೂ, ಮತ್ತು ಬುದ್ಧಿಯಿಂದ ವಿಚಾರಮಾಡುವದರಿಂದಲೂ, ಹದಿನಾರು ವರ್ಷಗಳಿಗಿಂತಲೂ ಕಡಮೆ ವಯಸ್ಸಿನ ಸ್ತ್ರೀಯಲ್ಲಿ ಇಪ್ಪತ್ತೈದು ವರ್ಷಗಳಿಗಿಂತಲೂ ಕಡಮೆ ವಯಸ್ಸಿನ ಪುರುಷನು ಗರ್ಭಾಧಾನ ಮಾಡಬಾರದೆಂದು ಸಿದ್ಧವಾಗುತ್ತದೆ. ಈ ನಿಯಮವನ್ನು ಅತಿಕ್ರಮಿಸುವವರು ದುಃಖಕ್ಕೆ ಈಡಾಗುತ್ತಾರೆ.

[ಸ್ವಾಮಿ ದಯಾನಂದ]

ತ್ರೀಣಿವರ್ಷಾಣ್ಯುದೀಕ್ಷೇತ ಕುಮಾರ್ಯೃತುಮತೀ ಸತೀ।
ಊರ್ಧ್ವಂ ತು ಕಾಲಾದೇತಸ್ಮಾದ್ವಿಂದೇತ ಸದೃಶಂ ಪತಿಂ ॥

[ಮನು ೯-೯೦]

ಕನ್ಯೆಯು ಋತುಮತಿಯಾದ ಬಳಿಕ ಮೂರು ವರ್ಷಗಳವರೆಗೆ ವರನನ್ನು ಹುಡುಕುತ್ತಾ, ಅನುರೂಪನಾದ ವರನೊಡನೆ ಮದುವೆ ಮಾಡಿಕೊಳ್ಳಬೇಕು. ಪ್ರತಿ ತಿಂಗಳೂ ರಜೋದರ್ಶನವಾಗುತ್ತಿದ್ದರೆ, ಮೂರು ವರ್ಷಗಳವರೆಗೆ, ಅಂದರೆ ಮೂವತ್ತಾರುಬಾರಿ ರಜಸ್ವಲೆಯಾದ ಬಳಿಕ ವಿವಾಹ ಮಾಡಿಕೊಳ್ಳುವುದು ಉಚಿತವಾಗಿದೆ. ಅದಕ್ಕೆ ಮೊದಲು ಮದುವೆಯಾಗಬಾರದು.

ಕಾಮಮಾಮರಣಾತ್ತಿಷ್ಠೇದ್ಗೃಹೇ ಕನ್ಯರ್ತುಮತ್ಯಪಿ।
ನ ಚೈವೇನಾಂ ಪ್ರಯಚ್ಛೇತ್ತು ಗುಣಹೀನಾಯ ಕರ್ಹಿಚಿತ್ ॥

[ಮನು ೯-೮೯]

ಹುಡುಗ ಹುಡುಗಿಯರು ಸಾಯುವವರೆಗೂ ಬೇಕಾದರೆ ವಿವಾಹವಾಗದೆಯೇ ಇರಬಹುದು. ಆದರೆ ಪರಸ್ಪರ ವಿರುದ್ಧವಾದ ಗುಣಕರ್ಮ ಸ್ವಭಾವವುಳ್ಳ ವಧೂವರರು ಮಾತ್ರ ಎಂದಿಗೂ ವಿವಾಹವಾಗಬಾರದು. ಇದರಿಂದ, ಪೂರ್ವೋಕ್ತಕಾಲಕ್ಕೆ ಮುಂಚೆ ಮತ್ತು ಅಸಮಾನರಾದವರು ವಿವಾಹವಾಗುವುದು ಯೋಗ್ಯವಲ್ಲವೆಂಬುವದು ಗೊತ್ತಾಗುತ್ತದೆ.

ಪ್ರಶ್ನೆ:—ವಿವಾಹವು ತಂದೆ ತಾಯಿಗಳ ಅಧೀನದಲ್ಲಿರಬೇಕೋ, ಅಥವಾ ಕನ್ಯಾವರರ ಅಧೀನದಲ್ಲಿಯೋ?

ಉತ್ತರ:—ಕನ್ಯಾವರರ ಅಧೀನದಲ್ಲಿಯೇ ವಿವಾಹವಿರಬೇಕಾಮದು ಉತ್ತಮ. ಕನ್ಯಾವರರ ಪ್ರಸನ್ನತೆಯಿಲ್ಲದೆ, ಯಾವ ತಂದೆ ತಾಯಿಗಳೂ, ತಮ್ಮ ಮಕ್ಕಳಿಗೆ ವಿವಾಹಮಾಡಬಾರದು, ಏಕೆಂದರೆ, ವಧೂವರರು ಪರಸ್ಪರ ಮೆಚ್ಚಿ ಮದುವೆಯಾಗುವುದರಿಂದ ವಿರೋಧವು ಬಹಳ ಕಡಮೆಯಾಗಿ, ಉತ್ತಮ ಸಂತಾನವು ಲಭಿಸುತ್ತದೆ. ಅಪ್ರಸನ್ನತೆಯ ವಿವಾಹದಿಂದ ಸದಾ ಕ್ಲೇಶವೇ ಉಂಟಾಗುವುದು. ವಿವಾಹದ ಮುಖ್ಯ ಪ್ರಯೋಜನವು ಕನ್ಯಾವರರಿಗೆ ಸೇರಿದುದೇ ಹೊರತು ತಂದೆ ತಾಯಿಗಳಿಗಲ್ಲ. ಏಕೆಂದರೆ, ಪರಸ್ಪರ ಪ್ರಸನ್ನತೆಯಿದ್ದರೆ ಅವರಿಗೇ

ಸುಖವೂ, ವಿರೋಧದಿಂದ ಅವರಿಗೇ ದುಃಖವೂ ಲಭಿಸುತ್ತದೆ. ಮತ್ತು —

ಸಂತುಷ್ಟೋ ಭಾರ್ಯಯಾ ಭರ್ತಾ ಭರ್ತ್ರಾ ಭಾರ್ಯಾ ತಥೈವಚ ।
ಯಸ್ಮಿನ್ನೇವ ಕುಲೇ ನಿತ್ಯಂ ಕಲ್ಯಾಣಂ ತತ್ರ ವೈ ಧ್ರುವಂ ॥

[ಮನು ೩-೬೦]

ಸ್ತ್ರೀಯಿಂದ ಪುರುಷನೂ, ಪುರುಷನಿಂದ ಸ್ತ್ರೀಯೂ, ಪ್ರಸನ್ನರಾಗಿರುವ ಕುಲದಲ್ಲಿಯೇ ಆನಂದವೂ, ಐಶ್ವರ್ಯವೂ, ಕೀರ್ತಿಯೂ ನೆಲೆಸುತ್ತವೆ. ಸ್ತ್ರೀಪುರುಷರು ಯಾವಾಗಲೂ ಜಗಳವಾಡುತ್ತಿರುವ ಕುಲದಲ್ಲಿ ದುಃಖವೂ, ದಾರಿದ್ರ್ಯವೂ, ಅಪಯಶಸ್ಸೂ ನೆಲೆಗೊಳ್ಳುತ್ತವೆ. ಆದುದರಿಂದ ನಮ್ಮ ಆರ್ಯಾವರ್ತದಲ್ಲಿ ಪರಂಪರೆಯಾಗಿ ನಡೆದುಬಂದ ಸ್ವಯಂವರ ವಿವಾಹ ಪದ್ಧತಿಯೇ ಸರ್ವೋತ್ತಮವಾಗಿರುತ್ತದೆ. ಮದುವೆಯಾಗಬೇಕೆಂದಿರುವ ಕನ್ಯಾವರರಲ್ಲಿ ವಿದ್ಯೆ, ವಿನಯ, ಶೀಲ, ರೂಪ, ವಯಸ್ಸು, ಬಲ, ಕುಲ, ದೇಹಪ್ರಮಾಣ — ಮೊದಲಾದುವು ಯೋಗ್ಯರೀತಿಯಲ್ಲಿರಬೇಕು. ಇವೆಲ್ಲಾ ಸರಿಹೊಂದದ ವಿವಾಹದಿಂದ ಸ್ವಲ್ಪವೂ ಸುಖ ಸಿಕ್ಕದು. ಬಾಲ್ಯಾವಸ್ಥೆಯಲ್ಲಿ ಮದುವೆಮಾಡುವದರಿಂದಲೂ ಸುಖವಾಗಲಾರದು.

ಯುವಾ ಸುವಾಸಾಃ ಪರಿವೀತ ಆಗಾತ್ಸ ಉ ಶ್ರೇಯಾನ್ ಭವತಿ ಜಾಯಮಾನಃ ।
ತಂ ಧೀರಾಸಃ ಕವಯ ಉನ್ನಯಂತಿ ಸ್ವಾಧ್ಯೋ ೀತಿಮನಸಾ ದೇವಯಂತಃ ॥

[ಋಗ್-ಮ. ೩ : ಸೂ ೮, ಮಂ ೪]

ಆಧೇನವೋ ಧುನಯಂತಾಮಶಿಶ್ವೀಃ ಶಬರ್ದುಘಾಃ ಶಶಯಾ ಅಪ್ರದುಗ್ಧಾಃ ।
ನವ್ಯಾ ನವ್ಯಾ ಯುವತಯೋ ಭವಂತೀರ್ಮಹದ್ದೇವಾನಾ ಮಸುರತ್ವಮೇಕಂ ॥

[ಋಗ್ ೩-೫೫-೧೬]

ಪೂರ್ವೀರಹಂ ಶರದಃ ಶಶ್ರಮಾಣಾ ದೋಷಾವಸ್ತೋರುಷ
ಸೋಜರಯಂತೀಃ ।
ಮಿನಾತಿಶ್ರಿಯಂ ಜರಿಮಾ ತನೂನಾಮಪ್ಯು ಪತ್ನೀರ್ವೃ-
ಷಣೋಜಗಮ್ಯುಃ ॥

[ಋಗ್ ೧-೧೯೭-೧]

ಯಾವ ಪುರುಷನು (ಪರಿವೀತಃ) ಪರಿಪೂರ್ಣ ಬ್ರಹ್ಮಚರ್ಯದಿಂದ ಉತ್ತಮ ಶಿಕ್ಷಣವನ್ನೂ ಪೂರ್ಣವಿದ್ಯೆಯನ್ನೂ ಪಡೆದು (ಸುವಾಸಾಃ) ಸುಂದರ ವಸ್ತ್ರವನ್ನು ಧರಿಸಿ, ಬ್ರಹ್ಮಚರ್ಯಯುಕ್ತನಾಗಿ, (ಯುವಾ) ಪೂರ್ಣಯೌವನವಂತನಾಗಿ, ವಿದ್ಯಾಗ್ರಹಣಮಾಡಿ (ಆಗಾತ್) ಗೃಹಸ್ಥಾಶ್ರಮವನ್ನು ಪ್ರವೇಶಿಸುವನೋ (ಸಉ) ಅವನೇ, ವಿದ್ಯೆಯೆಂಬ ದ್ವಿತೀಯ ಜನ್ಮದಲ್ಲಿ (ಜಾಯಮಾನಃ) ಪ್ರಸಿದ್ಧನಾಗಿ, (ಶ್ರೇಯಾನ್) ಅತಿಶಯ ಶೋಭಾವಂತನೂ, ಮಂಗಳಕರನೂ, (ಭವತಿ) ಆಗುತ್ತಾನೆ. (ಸ್ವಾಧ್ಯಃ) ಉತ್ತಮ ಸ್ಥಾನಾಸಕ್ತನಾಗಿ (ಮನಸಾ) ವಿಜ್ಞಾನದಿಂದ, (ದೇವಯಂತಃ) ವಿದ್ಯಾವೃದ್ಧಿಯ ಬಯಕೆಯುಳ್ಳ (ಧೀರಾಸಃ) ಧೈರ್ಯಶಾಲಿಗಳಾದ, (ಕವಯಃ) ವಿದ್ವಾಂಸರು (ತಂ) ಆ ಮನುಷ್ಯನನ್ನು, (ಉನ್ನಯಂತಿ) ಉನ್ನತಶೀಲನನ್ನಾಗಿ ಮಾಡಿ ಆದರಿಸುತ್ತಾರೆ. ಮತ್ತು ಬ್ರಹ್ಮಚರ್ಯ ವ್ರತದಿಂದ ಉತ್ತಮ ಶಿಕ್ಷಣವನ್ನೂ, ವಿದ್ಯೆಯನ್ನೂ ಪಡೆಯದೆ ಅಥವಾ ಬಾಲ್ಯಾವಸ್ಥೆಯಲ್ಲಿಯೇ ಮದುವೆಯಾಗುವ ಸ್ತ್ರೀಪುರುಷರು ನಷ್ಟಭ್ರಷ್ಟರಾಗಿ ವಿದ್ವಾಂಸರ ಮಧ್ಯೆ ಮಾನಪ್ರತಿಷ್ಠೆಗಳನ್ನು ಹೊಂದಲಾರರು. ॥೧॥

(ಅಪ್ರದುಗ್ಧಾಃ) ಯಾರಿಂದಲೂ ಹಾಲು ಕರೆಯಿಸಿಕೊಳ್ಳದ (ಧೇನವಃ) ಗೋವುಗಳಂತೆ, (ಅಶಿಶ್ವೀಃ) ಬಾಲ್ಯಾವಸ್ಥೆಯಿಂದ ರಹಿತರಾಗಿ, (ಶಬದ್ರ್ಯಾಃ) ಸರ್ವವಿಧ ಉತ್ತಮ ವ್ಯವಹಾರಸಂಪನ್ನರೂ, (ಶಶಯಾ) ಕುಮಾರಾವಸ್ಥೆಯನ್ನು ದಾಟುವವರೂ, (ನವ್ಯಾನವ್ಯಾಃ) ನೂತನ ನೂತನ ಶಿಕ್ಷಣ ಮತ್ತು ಸ್ಥಿತಿವಂತರೂ, (ಭವಂತೀಃ) ಆಗುತ್ತಿರುವ, (ಯುವತಯಃ) ಪೂರ್ಣಯುವಾವಸ್ಥೆಯಲ್ಲಿರುವ ಸ್ತ್ರೀಯರು, (ದೇವಾನಾಂ) ಬ್ರಹ್ಮಚರ್ಯದ ಉತ್ತಮ ನಿಯಮಗಳಿಂದ ಪೂರ್ಣ

ವಿದ್ವಾಂಸರಾಗಿರುವ ಪುರುಷರ, (ಏಕಂ) ಅದ್ವಿತೀಯವಾದ, (ಮಹತ್) ದೊಡ್ಡದಾದ, (ಅಸುರತ್ವಂ) ಪ್ರಜ್ಞೆ ಹಾಗೂ ಶಾಸ್ತ್ರಶಿಕ್ಷಣದಿಂದ ಯುಕ್ತರಾಗಿ, ಪ್ರಜ್ಞೆಯಲ್ಲಿಯೇ ರಮಣಭಾವವನ್ನು ಗ್ರಹಿಸಿ, ತರುಣ ಪತಿಗಳನ್ನು ಹೊಂದಿ, (ಆಧುನಯಂತಾಂ) ಗರ್ಭಧಾರಣೆಮಾಡಲಿ, ಸ್ತ್ರೀಯು ಪ್ರಮಾದದಿಂದಲೂ ಸಹ ಬಾಲ್ಯಾವಸ್ಥೆಯಲ್ಲಿ ಪುರುಷನನ್ನು ಮನಸ್ಸಿನಲ್ಲೂ ಸ್ಮರಿಸಬಾರದು. ಏಕೆಂದರೆ, ಈ ಕರ್ಮವೇ ಇಹಪರ ಸುಖಸಾಧನವು. ಬಾಲ್ಯವಿವಾಹದಿಂದ ಪುರುಷರಿಗಾಗುವ ನಾಶಕ್ಕಿಂತ ಹೆಚ್ಚಾಗಿ ಸ್ತ್ರೀಯರಿಗೆ ನಾಶವುಂಟಾಗುತ್ತದೆ. ॥೭॥

(ನು) ಶೀಘ್ರವಾಗಿ, (ಶಶ್ರಮಾಣಾಃ) ಅತ್ಯಂತ ಪರಿಶ್ರಮಿಗಳಾದ, (ವೃಷಣಃ) ವೀರ್ಯಸೇಚನಸಮರ್ಥರಾದ, ಪೂರ್ಣಯೌವನವಂತರಾದ ಪುರುಷರು, (ಪತ್ನೀಃ) ಪೂರ್ಣಯುವತಿಯರೂ, ಹೃದಯಕ್ಕೆ ಪ್ರಿಯರೂ ಆದ ನಾರಿಯರನ್ನು, (ಜಿಗಮ್ಯುಃ) ಹೊಂದಿ, ಪೂರ್ಣ ನೂರುವರ್ಷಗಳ, ಅಥವಾ ಅದಕ್ಕಿಂತ ಅಧಿಕವಾದ ಆಯುಷ್ಯವನ್ನೂ ಸಹ ಆನಂದದಿಂದ ಅನುಭವಿಸುವಂತೆ, ಹಾಗೂ ಪುತ್ರಪೌತ್ರಾದಿಗಳಿಂದ ಯುಕ್ತರಾಗಿರುವಂತೆ ಸ್ತ್ರೀಪುರುಷರು ಸದಾವರ್ತಿಸುತ್ತಿರಬೇಕು. (ದೋಷಾ, ವಸ್ತ್ರೋಃ) ರಾತ್ರಿದಿನಗಳು, (ಪೂರ್ವೀಃ) ಕಳೆದುಹೋದ, (ಶರದಃ) ಶರದೃತುಗಳನ್ನೂ, (ಜರಯಂತೀಃ) ವಾರ್ಧಕ್ಯವನ್ನು ತರುವ, (ಉಷಸಃ) ಉಷಃಕಾಲಗಳನ್ನೂ, ಮತ್ತು (ಜರಿಮಾ) ಅತಿಶಯ ವೃದ್ಧಾಪ್ಯವು, (ತನೂನಾಂ) ದೇಹಗಳ, (ಶ್ರಿಯಃ) ಬಲ ಮತ್ತು ಸೌಂದರ್ಯವನ್ನೂ, (ಮಿನಾತಿ) ನಾಶಪಡಿಸುವಂತೆ, (ಅಹಂ) ನಾನು-ಸ್ತ್ರೀಯು ಅಥವಾ ಪುರುಷನು, (ಉ) ಚನ್ನಾಗಿ, (ಅಪಿ) ನಿಶ್ಚಯಿಸಿ, ಬ್ರಹ್ಮಚರ್ಯದಿಂದ ವಿದ್ಯಾಶಿಕ್ಷಣಗಳನ್ನೂ, ಶರೀರಾತ್ಮಬಲಗಳನ್ನೂ, ಯುವಾವಸ್ಥೆಯನ್ನೂ, ಹೊಂದಿಯೇ ವಿವಾಹಮಾಡಿಕೊಳ್ಳುವೆನು, ಎಂದು ನಿಶ್ಚಯಮಾಡಿಕೊಳ್ಳಬೇಕು. ಇದಕ್ಕೆ ವಿರುದ್ಧವಾಗಿ ವರ್ತಿಸುವುದು ವೇದವಿರುದ್ಧವಾದುದರಿಂದ ಸುಖದಾಯಕವಾದ ವಿವಾಹವಾಗಲಾರದು. ॥೩॥

ಎಂದಿನವರೆಗೆ ಆರ್ಯಾವರ್ತದಲ್ಲಿ, ಋಷಿಮುನಿಗಳೂ, ರಾಜ ಮಹಾರಾಜರೂ, ಆರ್ಯಜನಾಂಗದವರೂ, ಬ್ರಹ್ಮಚರ್ಯವ್ರತದಿಂದ ವಿದ್ಯೆಕಲಿತು, ಆ ಮೇಲೆ ಸ್ವಯಂವರಪದ್ಧತಿಯಿಂದ ವಿವಾಹವಾಗು

ತ್ತಿದ್ದರೋ, ಅಂದಿನಪರೆಗೆ ಈ ದೇಶವು ಸದಾ ಪ್ರಗತಿಶೀಲವಾಗಿತ್ತು. ಬ್ರಹ್ಮಚರ್ಯವ್ರತದಿಂದ ವಿದ್ಯೆಕಲಿಯದೆ, ತಂದೆತಾಯಿಗಳ ಅಧೀನದಲ್ಲಿ ಬಾಲ್ಯವಯಸ್ಸಿನಲ್ಲಿಯೇ ಸ್ತ್ರೀಪುರುಷರ ವಿವಾಹವಾಗುವ ಪದ್ಧತಿಯು ಆರಂಭವಾದಾಗಿನಿಂದ ಆರ್ಯಾವರ್ತದ ಅಧಃಪತನವು ಕ್ರಮಶಃ ನಡೆದುಬರುತ್ತಿದೆ. ಆದುದರಿಂದ, ಸಜ್ಜನರಾದವರು ಈ ದುಷ್ಟಕಾರ್ಯವನ್ನು ವರ್ಜಿಸಿ, ಪೂರ್ವೋಕ್ತರೀತಿಯಲ್ಲಿ ಸ್ವಯಂವರವಿವಾಹವನ್ನು ಬಳಕೆಗೆ ತರಬೇಕು. ಆದರೆ, ಆ ವಿವಾಹವು ವರ್ಣಾನುಕ್ರಮದಿಂದ ನಡೆಯಬೇಕು. ಮತ್ತು ವರ್ಣವ್ಯವಸ್ಥೆಯೂ ಗುಣ, ಕರ್ಮಸ್ವಭಾವಾನುಸಾರ ಆಗಬೇಕು.

ಪ್ರಶ್ನೆ:—ಬ್ರಾಹ್ಮಣರಾದ ತಂದೆತಾಯಿಗಳ ಮಕ್ಕಳು ಮಾತ್ರ ಬ್ರಾಹ್ಮಣರಾಗುತ್ತಾರೋ, ಮತ್ತು ಅನ್ಯವರ್ಣಸ್ಥರಾದ ತಂದೆತಾಯಿಗಳ ಮಕ್ಕಳು ಎಂದಾದರೂ ಬ್ರಾಹ್ಮಣರಾಗಬಲ್ಲರೋ?

ಉತ್ತರ:—ಹೌದು; ಬಹುಮಂದಿ ಆಗಿದ್ದಾರೆ, ಆಗುತ್ತಾರೆ, ಮುಂದೆಯೂ ಆಗುವರು. ಉದಾಹರಣೆಗೆ—ಛಾಂದೋಗ್ಯೋಪನಿಷತ್ತಿನಲ್ಲಿ ವರ್ಣಿತನಾದ ಜಾಬಾಲಋಷಿಯು ಅಜ್ಞಾತಕುಲದಿಂದಲೂ, ಮಹಾಭಾರತದಲ್ಲಿ ಹೇಳಲ್ಪಟ್ಟಿರುವ ವಿಶ್ವಾಮಿತ್ರರು ಕ್ಷತ್ರಿಯವರ್ಣದಿಂದಲೂ, ಮಾತಂಗಋಷಿಗಳು ಚಂಡಾಲಕುಲದಿಂದಲೂ, ಬ್ರಾಹ್ಮಣರಾಗಿಹೋದರು. ಇಂದೂ ಸಹ ಉತ್ತಮ ವಿದ್ಯಾಸ್ವಭಾವಯುಕ್ತನಾದವನು ಬ್ರಾಹ್ಮಣವರ್ಣಕ್ಕೆ ಯೋಗ್ಯನೂ, ಮೂರ್ಖನಾದವನು ಶೂದ್ರವರ್ಣಕ್ಕೆ ಯೋಗ್ಯನೂ ಆಗಿರುತ್ತಾನೆ. ಮುಂದಕ್ಕೆ ಹಾಗೆಯೇ ಆಗುವುದು.

ಪ್ರಶ್ನೆ:—ಅಲ್ಲ. ರಜೋವೀರ್ಯಸಂಯೋಗದಿಂದ ಉತ್ಪನ್ನವಾದ ಶರೀರವು ಪರಿವರ್ತಿತವಾಗಿ ಬೇರೆ ವರ್ಣಕ್ಕೆ ಯೋಗ್ಯ ಹೇಗಾದೀತು?

ಉತ್ತರ:—ರಜೋವೀರ್ಯಯೋಗದಿಂದ ಬ್ರಾಹ್ಮಣ ಶರೀರವಾಗುವುದಿಲ್ಲ. ಆದರೆ—

ಸ್ವಾಧ್ಯಾಯೇನ ಜಪೈರ್ಹೋಮೈಸ್ತ್ರೈವಿದ್ಯೇನೇಜ್ಯಯಾ ಸುತೈಃ।
ಮಹಾಯಜ್ಞೈಶ್ಚ ಯಜ್ಞೈಶ್ಚ ಬ್ರಾಹ್ಮೀಯಂ ಕ್ರಿಯತೇ ತನುಃ॥

[ಮನು ೨-೨೮]

ಇದರ ಅರ್ಥವನ್ನು ಮೊದಲು ಬರೆದಿದ್ದೇವೆ. ಇಲ್ಲಿಯೂ ಈಗ ಸಂಕ್ಷೇಪವಾಗಿ ಹೇಳುತ್ತೇವೆ. (ಸ್ವಾಧ್ಯಾಯೇನ) ಅಧ್ಯಯನಾಧ್ಯಾಪನಗಳಿಂದಲೂ, (ಜಪೈಃ) ಚಿಂತನಮಾಡುವುದು ಮತ್ತು ಮಾಡಿಸುವುದರಿಂದಲೂ, ನಾನಾವಿಧ ಹೋಮಾನುಷ್ಠಾನಗಳಿಂದಲೂ, ಸಮಗ್ರ ವೇದಗಳ ಶಬ್ದಾರ್ಥಸಂಬಂಧ ಸ್ವರೋಚ್ಚಾರಣ ಸಹಿತವಾದ ಅಧ್ಯಯನಾಧ್ಯಾಪನದಿಂದಲೂ, (ಇಜ್ಯಯಾ) ಪೂರ್ಣಿಮಾ ಹೋಮ ಮೊದಲಾದುವುಗಳನ್ನು ಮಾಡುವುದರಿಂದಲೂ, (ಸುತೈಃ) ಪೂರ್ವೋಕ್ತ ವಿಧಿಪೂರ್ವಕವಾಗಿ ಸಂತಾನೋತ್ಪತ್ತಿಯಿಂದಲೂ, (ಮಹಾಯಜ್ಞೈಶ್ಚ) ಪೂರ್ವೋಕ್ತ ಬ್ರಹ್ಮಯಜ್ಞ, ದೇವಯಜ್ಞ, ಪಿತೃಯಜ್ಞ, ವೈಶ್ವದೇವಯಜ್ಞ ಅತಿಥಿಯಜ್ಞಗಳಿಂದಲೂ, (ಯಜ್ಞೈಶ್ಚ) ಅಗ್ನಿಷ್ಟೋಮಾದಿ ಯಜ್ಞಗಳಿಂದಲೂ, ಪಿತ್ರಾಂಸರ ಸತ್ಸಂಗ ಮತ್ತು ಸತ್ಕಾರ, ಸತ್ಯಭಾಷಣ, ಪರೋಪಕಾರ ಮೊದಲಾದ ಸತ್ಯಕರ್ಮಗಳಿಂದಲೂ, ಹಾಗೂ ಸಂಪೂರ್ಣ ಪಿಲ್ಲಿಪಿದ್ದೆ ಮೊದಲಾದುವನ್ನು ಕಲಿತು, ದುರಾಚಾರ ತ್ಯಾಗಮಾಡಿ, ಶ್ರೇಷ್ಠಾಚಾರವನ್ನು ಪಾಲಿಸುವದರಿಂದಲೂ, (ಇಯಂ) ಈ (ತನುಃ) ಶರೀರವು (ಬ್ರಾಹ್ಮೀ) ಬ್ರಾಹ್ಮಣನದಾಗಿ (ಕ್ರಿಯತೇ) ಮಾಡಲ್ಪಡುತ್ತದೆ. ಈ ಶ್ಲೋಕವನ್ನು ನೀವು ಅಂಗೀಕರಿಸುವುದಿಲ್ಲವೋ? (ಪ್ರಶ್ನೆ) ಒಪ್ಪುತ್ತೇವೆ. (ಉತ್ತರ) ಮತ್ತೇಕೆ ರಜೋವೀರ್ಯಯೋಗದಿಂದ ವರ್ಣವ್ಯವಸ್ಥೆಯನ್ನು ಒಪ್ಪುತ್ತೀರಿ?

ಪ್ರಶ್ನೆ :—ನಾನೊಬ್ಬನೇ ಅಲ್ಲ; ಆದರೆ ಬಹುಜನರು ಪರಂಪರೆಯಿಂದ ಹೀಗೆಯೇ ಒಪ್ಪುತ್ತ ಬಂದಿದ್ದಾರೆ. ನೀವು ಪರಂಪರೆಯನ್ನು ಖಂಡಿಸುವಿರಾ?

ಉತ್ತರ :—ಇಲ್ಲ. ಪರಂತು ನಿಮ್ಮ ತಪ್ಪು ತಿಳಿವಳಿಕೆಯನ್ನು ಒಪ್ಪವೆ ಖಂಡನೆಯನ್ನೂ ಮಾಡುತ್ತೇವೆ.

ಪ್ರಶ್ನೆ:—ನಮ್ಮದು ತಪ್ಪು ತಿಳಿವಳಿಕೆ, ನಿಮ್ಮದು ಸರಿಯಾದುದು ಎಂಬುದಕ್ಕೆ ಪ್ರಮಾಣವೇನು?

ಉತ್ತರ:—ನೀವು ಐದಾರು ತಲೆಮಾರುಗಳ ವ್ಯವಹಾರವನ್ನು ಸನಾತನವ್ಯವಹಾರವೆಂದು ತಿಳಿಯುತ್ತೀರಿ. ನಾವು ವೇದ ಮತ್ತು ಸೃಷ್ಟಿಯ ಆರಂಭದಿಂದ ಇಂದಿನವರೆಗಿನ ಪರಂಪರೆಯನ್ನು ಒಪ್ಪುತ್ತೇವೆ; ನೋಡಿರಿ ಯಾವನ ತಂದೆ ಶ್ರೇಷ್ಠನೋ ಅವನು ದುಷ್ಟನಾಗಿರುವುದನ್ನೂ, ಯಾವನ ಮಗನು ಶ್ರೇಷ್ಠನೋ, ಆ ತಂದೆಯು ದುಷ್ಟನಾಗಿರುವುದನ್ನೂ, ಒಂದೊಂದೆಡೆ ಇಬ್ಬರೂ ಶ್ರೇಷ್ಠರೂ ಅಥವಾ ಇಬ್ಬರೂ ದುಷ್ಟರಾಗಿರುವುದನ್ನೂ ನೋಡಲಾಗುತ್ತದೆ. ಆದುದರಿಂದ ನೀವು ಭ್ರಮೆಯಲ್ಲಿ ಬಿದ್ದಿದ್ದೀರಿ. ಮನುಮಹಾರಾಜರು ಏನು ಹೇಳಿದ್ದಾರೋ ನೋಡಿರಿ.

ಯೇನಾಸ್ಯ ಪಿತರೋ ಯಾತಾ ಯೇನ ಯಾತಾಃ ಪಿತಾಮಹಾಃ।
ತೇನ ಯಾಯಾತ್ಸತಾಂ ಮಾರ್ಗಂ ತೇನ ಗಚ್ಛನ್ನರಿಷ್ಯತೇ ॥

[ಮನು. ೪-೧೭೮]

ತಂದೆಯರೂ, ತಾತಂದಿರೂ ಹಿಡಿದ ಮಾರ್ಗವನ್ನೇ ಮಕ್ಕಳೂ ಹಿಡಿಯಬೇಕು, ಆದರೆ, (ಸತಾಂ) ಸತ್ಪುರುಷರಾದ ತಂದೆತಾತಂದಿರ ಮಾರ್ಗವನ್ನು ಅನುಸರಿಸಬೇಕೇ ಹೊರತು ದುಷ್ಟರಾದ ತಂದೆತಾತಂದಿರ ಮಾರ್ಗವನ್ನು ಎಂದಿಗೂ ಅನುಸರಿಸಬಾರದು. ಏಕೆಂದರೆ, ಉತ್ತಮ ಧರ್ಮಾತ್ಮರ ಮಾರ್ಗವನ್ನವಲಂಬಿಸುವದರಿಂದ ಎಂದಿಗೂ ದುಃಖವುಂಟಾಗುವದಿಲ್ಲ. ಈ ಮಾತನ್ನು ನೀವು ಒಪ್ಪುತ್ತೀರೋ ಇಲ್ಲವೊ?

ಪ್ರಶ್ನೆ:—ಒಪ್ಪುತ್ತೇವೆ.

ಉತ್ತರ:—ಮತ್ತು ಪರಮಾತ್ಮನು ಪ್ರಕಾಶ ಪಡಿಸಿದ ವೇದಗಳ ವಚನಗಳೇ ಸನಾತನವಾದುವು; ಇದಕ್ಕೆ ವಿರುದ್ಧವಾದ ಮಾತುಗಳು ಎಂದಿಗೂ ಸನಾತನವಾಗಲಾರವು, ಎಂದು ಎಲ್ಲರೂ ಒಪ್ಪಬೇಕೋ ಇಲ್ಲವೋ?

ಪ್ರಶ್ನೆ:—ಅವಶ್ಯವಾಗಿ ಒಪ್ಪಬೇಕು.

ಉತ್ತರ:—ಹಾಗೆ ಯಾರಾದರೂ ಒಪ್ಪದಿದ್ದಲ್ಲಿ, ಅವನನ್ನು "ಯಾವನಾದರೂ ಒಬ್ಬನ ತಂದೆ ದರಿದ್ರನಾಗಿದ್ದು, ಮಗನು ಧನಾಢ್ಯನಾಗಿದ್ದಲ್ಲಿ ತಂದೆಯ ದಾರಿದ್ರ್ಯದಮೇಲಿನ ಅಭಿಮಾನದಿಂದ ತನ್ನ ಐಶ್ವರ್ಯವನ್ನು ಬಿಸಾಟುಬಿಡಬೇಕೆ? ಯಾವನ ತಂದೆಯು ಕುರುಡನೋ ಅವನೂ ಸಹ ತನ್ನ ಕಣ್ಣುಗಳನ್ನು ಕಿತ್ತುಹಾಕಿಕೊಂಡುಬಿಡಬೇಕೆ! ಯಾವನ ತಂದೆಯು ದುಷ್ಕರ್ಮಿಯೋ, ಅವನೂ ಸಹ ದುಷ್ಕರ್ಮವನ್ನೇ ಮಾಡಬೇಕೆ!" ಎಂದು ಹೇಳಿರಿ. ಇಲ್ಲ ಇಲ್ಲ. ಆದರೆ ಜನರ ಉತ್ತಮಕರ್ಮಗಳನ್ನು ಮಾತ್ರ ಗ್ರಹಿಸಿ, ದುಷ್ಕರ್ಮಗಳನ್ನು ಬಿಟ್ಟು ಬಿಡುವದು ಪ್ರತಿ ಒಬ್ಬಸಿಗೂ ಅತ್ಯಾವಶ್ಯಕವಾಗಿರುತ್ತದೆ. ಯಾವನಾವರೂ ರಜೋವೀರ್ಯಯೋಗದಿಂದ ವರ್ಣವ್ಯವಸ್ಥೆಯನ್ನಂಗೀಕರಿಸಿವಲ್ಲಿ, ಮತ್ತು ಗುಣಕರ್ಮಗಳಯೋಗದಿಂದ ಒಪ್ಪದಿದ್ದಲ್ಲಿ, ಅವನನ್ನು "ಯಾವನಾವರೂ ತನ್ನ ವರ್ಣವನ್ನು ಬಿಟ್ಟು ನೀಚನಾಗಲಿ, ಅಂತ್ಯಜನಾಗಲಿ, ಕ್ರೈಸ್ತನಾಗಲಿ, ಮುಸಲ್ಮಾನನಾಗಲಿ, ಆಗಿ ಹೋಗಿದ್ದರೆ ಅವನನ್ನು ಬ್ರಾಹ್ಮಣನೆಂದೇಕೆ ಒಪ್ಪುವದಿಲ್ಲ?" ಎಂದು ಕೇಳಬೇಕು. ಆಗ-ಅವನು ಬ್ರಾಹ್ಮಣಕರ್ಮಗಳನ್ನು ಬಿಟ್ಟುಬಿಟ್ಟನು. ಆದುದರಿಂದ ಅವನು ಬ್ರಾಹ್ಮಣನಲ್ಲ. ಎಂದೇ ಹೇಳುವನು. ಇದರಿಂದ, ಉತ್ತಮ ಕರ್ಮವನ್ನು ಮಾಡುವ ಬ್ರಾಹ್ಮಣ ಮೊದಲಾದವರೇ ಬ್ರಾಹ್ಮಣ ಮೊದಮೊದಲಾದವರು; ನೀಚಕುಲದವನಾದರೂ ಸಹ ಉತ್ತಮವರ್ಣದ ಗುಣಕರ್ಮಸ್ವಭಾವಯುಕ್ತನಾದವನನ್ನು ಉತ್ತಮ ವರ್ಣದಲ್ಲಿಯೂ, ಮತ್ತು ಉತ್ತಮವರ್ಣಸ್ಥನಾದರೂ, ನೀಚಕರ್ಮಮಾಡುವವನನ್ನು ನೀಚವರ್ಣದಲ್ಲಿಯೂ, ಅವಶ್ಯವಾಗಿ ಎಣಿಸಬೇಕು—ಎಂದೂ ಸಹ ಸಿದ್ಧವಾಗುತ್ತದೆ.

ಪ್ರಶ್ನೆ—

ಬ್ರಾಹ್ಮಣೋಽಸ್ಯ ಮುಖಮಾಸೀದ್ಬಾಹೂರಾಜನ್ಯಃ ಕೃತಃ।
ಊರೂತದಸ್ಯ ಯದ್ವೈಶ್ಯಃ ಪದ್ಭ್ಯಾಂ ಶೂದ್ರೋ ಅಜಾಯತ॥

[ಯಜುರ್ವೇದ ೩೧-೧೧]

ಇವರ ಅರ್ಥವೇನೆಂದರೆ- ಈಶ್ವರನ ಮುಖದಿಂದ ಬ್ರಾಹ್ಮಣನೂ, ಭುಜಗಳಿಂದ ಕ್ಷತ್ರಿಯನೂ, ತೊಡೆಗಳಿಂದ ವೈಶ್ಯನೂ, ಪಾದಗಳಿಂದ ಶೂದ್ರನೂ ಹುಟ್ಟಿದನು. ಹೇಗೆ ಮುಖವು ಭುಜವಾಗಿಯಾಗಲಿ, ಅಥವಾ ಭುಜ ಮೊದಲಾದುವು ಮುಖವಾಗಿಯಾಗಲಿ, ಎಂದಿಗೂ ಆಗಲಾರವೋ, ಹಾಗೆಯೇ, ಬ್ರಾಹ್ಮಣರು ಕ್ಷತ್ರಿಯಾದಿಗಳಾಗಿಯೂ, ಕ್ಷತ್ರಿಯಾದಿಗಳು ಬ್ರಾಹ್ಮಣರಾಗಿಯೂ, ಆಗಲಾರರು.

ಉತ್ತರ :—ಈ ಮಂತ್ರಕ್ಕೆ ನೀವು ಮಾಡಿರುವ ಅರ್ಥವು ಸರಿಯಲ್ಲ. ಏಕೆಂದರೆ, ಇಲ್ಲಿ ಪುರುಷ ಶಬ್ದದಿಂದ ನಿರಾಕಾರನೂ, ಸರ್ವವ್ಯಾಪಕನೂ, ಆದ ಪರಮಾತ್ಮನ ಅನುವೃತ್ತಿಯಿರುತ್ತದೆ. ನಿರಾಕಾರನಾದುದರಿಂದ, ಅವನಿಗೆ ಮುಖ ಮೊದಲಾದ ಅವಯವಗಳಿರುವ ಸಂಭವವೇ ಇಲ್ಲ. ಮುಖಾದಿ ಅವಯವಗಳಿದ್ದವನು ಪುರುಷ ಅಂದರೆ ವ್ಯಾಪಕನಾಗಲಾರನು. ವ್ಯಾಪಕನಲ್ಲದವನು ಸರ್ವಶಕ್ತನೂ, ಜಗದುತ್ಪಾದಕನೂ, ಧಾರಕನೂ, ಪ್ರಳಯಕಾರಿಯೂ, ಜೀವಗಳ ಪುಣ್ಯಪಾಪಗಳಿಗೆ ಜ್ಞಾನಪೂರ್ವಕವಾಗಿ ಫಲವ್ಯವಸ್ಥೆ ಮಾಡುವವನೂ, ಸರ್ವಜ್ಞ ಅಜನ್ಮ, ಮೃತ್ಯುರಹಿತ ಮೊದಲಾದ ಏಷಣಗಳಿಂದ ಕೂಡಿದವನೂ ಆಗಿರಲಾರನು. ಆದುದರಿಂದ ಇವರ ಅರ್ಥವೇನೆಂದರೆ—

(ಅಸ್ಯ) ಪೂರ್ಣನೂ, ವ್ಯಾಪಕನೂ ಆದ ಪರಮಾತ್ಮನ ಸೃಷ್ಟಿಯಲ್ಲಿ ಮುಖದಂತೆ ಎಲ್ಲರಲ್ಲಿಯೂ ಮುಖ್ಯನಾದವನಿಗೆ, ಸರ್ವಶ್ರೇಷ್ಠನಾದವನಿಗೆ ಬ್ರಾಹ್ಮಣನೆಂದು ಹೆಸರು. "ಬಾಹುರ್ವೈ ವೀರ್ಯಂ" ಎಂಬ ಶತಪಥಬ್ರಾಹ್ಮಣದ ಪ್ರಮಾಣದಿಂದ ಬಲವೀರ್ಯಗಳಿಗೆ ಬಾಹುವೆಂದು ಸಂಜ್ಞೆ. ಅತಿಶಯವಾದ ಬಲವೀರ್ಯಗಳನ್ನುಳ್ಳವನಿಗೆ ಕ್ಷತ್ರಿಯನೆಂದು ಹೆಸರು. ಸೊಂಟದಿಂದ ಕೆಳಗೆ ಮೊಳಕಾಲಿನ ವರೆಗಿರುವ ಭಾಗಕ್ಕೆ "ಊರು" ಎಂದು ಸಂಜ್ಞೆ. "ಊರೂ" ಅಂದರೆ, ತೊಡೆಗಳ ಬಲದಿಂದ ಸಮಸ್ತ ದೇಶಗಳಲ್ಲಿಯೂ ಸಂಚರಿಸುತ್ತಾ, ಒಂದು ದೇಶದ ವಸ್ತುಗಳನ್ನು ಮತ್ತೊಂದು ದೇಶಕ್ಕೆ ಒಯ್ಯುವವನಿಗೆ ವೈಶ್ಯನೆಂದು ಹೆಸರು. (ಪದ್ಭ್ಯಾಂ) ಪಾದಗಳಂತೆ ಅಂದರೆ, ನಿಮ್ನಾಂಗದಂತೆ, ಕೆಳಮಟ್ಟದಲ್ಲಿದ್ದು ಮೂರ್ಖತ್ವ ಮೊದಲಾದ ಗುಣಗಳಿಂದ ಕೂಡಿದ

ವನಿಗೆ ಶೂದ್ರನೆಂದು ಹೆಸರು. ಶತಪಥಬ್ರಾಹ್ಮಣ ಮೊದಲಾದುವುಗಳಲ್ಲಿಯೂ, ಈ ಮಂತ್ರಕ್ಕೆ ಹೀಗೆಯೇ ಅರ್ಥಮಾಡಲ್ಪಟ್ಟಿದೆ. ಹೇಗೆಂದರೆ—

ಯಸ್ಮಾದೇತೇ ಮುಖ್ಯಾಸ್ತಸ್ಮಾನ್ಮುಖತೋ ಹ್ಯಸೃಜ್ಯಂತ....

ಇತ್ಯಾದಿ. ಇವರು ಮುಖ್ಯರಾದುದರಿಂದ ಮುಖದಿಂದ ಹುಟ್ಟಿದವರೆನ್ನಿಸಿಕೊಳ್ಳುತ್ತಾರೆ. ಅಂದರೆ—ಮುಖವು ಎಲ್ಲಾ ಅಂಗಗಳಲ್ಲಿಯೂ ಶ್ರೇಷ್ಠವಾಗಿರುವಂತೆ, ಪೂರ್ಣ ವಿದ್ಯೆ ಮತ್ತು ಉತ್ತಮ ಗುಣಕರ್ಮಸ್ವಭಾವಗಳಿಂದ ಕೂಡಿರುವದರಿಂದ, ಮನುಷ್ಯಜಾತಿಯಲ್ಲಿ ಉತ್ತಮನಾದವನು ಬ್ರಾಹ್ಮಣನೆನಿಸಿಕೊಳ್ಳುತ್ತಾನೆ. ಏಕೆಂದರೆ—ನಿರಾಕಾರನಾದ ಪರಮಾತ್ಮನಲ್ಲಿ ಮುಖ ಮೊದಲಾದ ಅವಯವಗಳೇ ಇಲ್ಲದಿರುವಾಗ, ಮುಖದಿಂದ ಹುಟ್ಟಿದವರೆಂಬ ಮಾತು, ಬಂಜೆಯ ಮಗನ ಮದುವೆಯಂತೆ ಅಸಂಭವವಾಗಿರುತ್ತದೆ. ಮತ್ತು ಮುಖಾದಿ ಅವಯವಗಳಿಂದಲೇ, ಬ್ರಾಹ್ಮಣ ಮೊದಲಾದ ನಾಲ್ಕು ವರ್ಣದವರು ಹುಟ್ಟುವರೆ, ಅವರ ಆಕಾರವೂ ಕೂಡ ಉಪಾದಾನಕಾರಣವಾದ ಮುಖ ಮೊದಲಾದ ಅವಯವಗಳಂತೆಯೇ ಇರಬೇಕಾಗುತ್ತಿತ್ತು. ಅರ್ಥಾತ್, ಮುಖದ ಆಕೃತಿಯು ಗುಂಡಾಗಿರುವಂತೆ, ಅದರಿಂದ ಉತ್ಪನ್ನರಾದ ಬ್ರಾಹ್ಮಣರ ಆಕೃತಿಯೂ ಸಹ ದುಂಡುದುಂಡಾಗಿರಬೇಕಾಗುತ್ತಿತ್ತು. ಹಾಗೆಯೇ ಕ್ಷತ್ರಿಯರ ಶರೀರವು ಭುಜಗಳಂತೆಯೂ, ವೈಶ್ಯರ ಶರೀರವು ತೊಡೆಗಳಂತೆಯೂ, ಶೂದ್ರರ ಶರೀರವು ಪಾದಗಳಂತೆಯೂ, ಇರಬೇಕಾಗುತ್ತಿತ್ತು. ಆದರೆ ಹಾಗಿರುವದಿಲ್ಲ. ಮುಖಾದಿ ಅವಯವಗಳಿಂದ ಉತ್ಪನ್ನರಾದವರಿಗೆ ಬ್ರಾಹ್ಮಣಾದಿ ಸಂಜ್ಞೆಗಳಿದ್ದರೂ ಸಹ, ಅದು ನಿಮಗೆ ಅನ್ವಯಿಸಲಾರದು. ಏಕೆಂದರೆ, ನೀವೂ ಸಹ ಎಲ್ಲರಂತೆ ಸ್ತ್ರೀಯರ ಗರ್ಭಾಶಯದಿಂದಲೇ ಹುಟ್ಟಿದ್ದೀರಿ. ಮುಖ್ಯಾದ್ಯವಯವಗಳಿಂದ ಹುಟ್ಟಿದೆಯೇ ನೀವು ಬ್ರಾಹ್ಮಣಾದಿ ವರ್ಣಗಳ ಅಭಿಮಾನವನ್ನು ತೋರುತ್ತಿದ್ದೀರಿ. ಆದುದರಿಂದ ನಿಮ್ಮ ಅರ್ಥವು ವ್ಯರ್ಥ. ಈ ಮಂತ್ರಕ್ಕೆ ನಾವು ಮಾಡಿದ ಅರ್ಥವೇ ಸತ್ಯವಾದುದು. ಹೀಗೆಯೇ ಬೇರೆ ಕಡೆಯೂ ಹೇಳಿದೆ.

ಶೂದ್ರೋ ಬ್ರಾಹ್ಮಣತಾಮೇತಿ ಬ್ರಾಹ್ಮಣಶ್ಚೈತಿ ಶೂದ್ರತಾಂ।
ಕ್ಷತ್ರಿಯಾಜ್ಜಾತಮೇವಂ ತು ವಿದ್ಯಾದ್ವೈಶ್ಯಾತ್ತಥೈವ ಚ ॥

[ಮನು. ೧೦-೬೫]

ಶೂದ್ರಕುಲದಲ್ಲಿ ಹುಟ್ಟಿದವರೂ ಕೂಡ ಬ್ರಾಹ್ಮಣ ಕ್ಷತ್ರಿಯ ವೈಶ್ಯರಂತೆ ಗುಣಕರ್ಮಸ್ವಭಾವವುಳ್ಳವರಾಗಿದ್ದರೆ, ಬ್ರಾಹ್ಮಣ ಕ್ಷತ್ರಿಯ ವೈಶ್ಯರಾಗುತ್ತಾರೆ. ಇದೇರೀತಿ ಬ್ರಾಹ್ಮಣ ಕ್ಷತ್ರಿಯ ವೈಶ್ಯಕುಲಗಳಲ್ಲಿ ಜನಿಸಿದವರಾದರೂ ಸಹ, ಶೂದ್ರನಿಗೆ ಸಮವಾದ, ಹೀನವಾದ ಗುಣ ಕರ್ಮಸ್ವಭಾವಗಳುಳ್ಳವರಾಗಿದ್ದರೆ, ಶೂದ್ರರಾಗುತ್ತಾರೆ. ಹಾಗೆಯೇ ಕ್ಷತ್ರಿಯ ಅಥವಾ ವೈಶ್ಯ ಕುಲಗಳಲ್ಲಿ ಹುಟ್ಟಿದ್ದರೂ ಸಹ, ಬ್ರಾಹ್ಮಣ, ಬ್ರಾಹ್ಮಣೀ ಅಥವಾ ಶೂದ್ರರ ಸಮಾನರಾಗಿದ್ದರೆ, ಬ್ರಾಹ್ಮಣರು ಅಥವಾ ಶೂದ್ರರೂ ಆಗುತ್ತಾರೆ. ಆದರೆ ನಾಲ್ಕು ವರ್ಣಗಳಲ್ಲಿಯೂ, ಆಯಾ ವರ್ಣಗಳಿಗೆಯೋಗ್ಯವಾದ ಗುಣಕರ್ಮಸ್ವಭಾವವುಳ್ಳವರನ್ನು ಆಯಾ ವರ್ಣಗಳಲ್ಲಿಯೇ ಪರಿಗಣಿಸಬೇಕು.

ಧರ್ಮಚರ್ಯಯಾ ಜಘನ್ಯೋವರ್ಣಃ ಪೂರ್ವಂಪೂರ್ವಂ
ವರ್ಣಮಾಪದ್ಯತೇ ಜಾತಿಪರಿವೃತ್ತೌ ॥೧॥

ಅಧರ್ಮಚರ್ಯಯಾ ಪೂರ್ವೋವರ್ಣೋ ಜಘನ್ಯಂ ಜಘನ್ಯಂ
ವರ್ಣಮಾಪದ್ಯತೇ ಜಾತಿಪರಿವೃತ್ತೌ ॥೨॥

ಇವು ಆಪಸ್ತಂಬಸೂತ್ರಗಳು. ಧರ್ಮಾಚರಣದಿಂದ ನಿಕೃಷ್ಟ ವರ್ಣವು ತನಗಿಂತ ಉತ್ತಮ ಉತ್ತಮವಾದ ವರ್ಣಗಳನ್ನು ಹೊಂದುತ್ತದೆ. ಯಾವನು ಯಾವ ವರ್ಣಕ್ಕೆ ಯೋಗ್ಯನೋ, ಅವನನ್ನು ಅದೇ ವರ್ಣದಲ್ಲಿಯೇ ಗಣಿಸಬೇಕು. ॥೧॥ ಹಾಗೆಯೇ ಅಧರ್ಮಾಚರಣದಿಂದ ಪೂರ್ವ ಪೂರ್ವ ಅಂದರೆ ಉತ್ತಮ ಉತ್ತಮ ವರ್ಣದ ಮಾನವನು ತನಗಿಂತ ಕೆಳಗಿನ ವರ್ಣವನ್ನು ಹೊಂದುತ್ತಾನೆ. ಮತ್ತು ಅವನನ್ನು ಅದೇ ವರ್ಣದಲ್ಲಿಯೇ ಎಣಿಸಬೇಕು. ॥೨॥

ವರ್ಣವ್ಯವಸ್ಥೆಯು ಪುರುಷರಿಗಿದ್ದಂತೆಯೇ ಸ್ತ್ರೀಯರಿಗೂ ಇರುತ್ತದೆಂದು ತಿಳಿಯಬೇಕು. ಹೀಗಾಗುವುದರಿಂದ ಎಲ್ಲಾ ವರ್ಣಗಳೂ

ತಮ್ಮ ತಮ್ಮ ಗುಣಕರ್ಮಸ್ವಭಾವಯುಕ್ತವಾಗಿ, ಶುದ್ಧತೆಯಿಂದಿರುತ್ತದೆಂದು ಸಿದ್ಧವಾಯಿತು. ಅಂದರೆ. ಬ್ರಾಹ್ಮಣಕುಲದಲ್ಲಿ ಯಾರೂ ಕ್ಷತ್ರಿಯ ವೈಶ್ಯ ಶೂದ್ರರಂತೆ ಇರಲಾರರು. ಕ್ಷತ್ರಿಯ ವೈಶ್ಯ ಶೂದ್ರ ವರ್ಣಗಳೂ ಕೂಡ ಶುದ್ಧವಾಗಿರುವುವು. ಅಂದರೆ—ವರ್ಣಸಂಕರತ್ವವುಂಟಾಗುವದಿಲ್ಲ. ಇದರಿಂದ ಯಾವ ವರ್ಣಕ್ಕೂ ನಿಂದೆ ಅಥವಾ ಅಯೋಗ್ಯತೆಯೂ ಉಂಟಾಗುವುದಿಲ್ಲ.

ಪ್ರಶ್ನೆ:—ಯಾವನಿಗಾದರೂ ಒಬ್ಬನೇ ಮಗ ಅಥವಾ ಮಗಳಿದ್ದು ಅವನು ಅಥವಾ ಅವಳು ಬೇರೆ ವರ್ಣದಲ್ಲಿ ಸೇರಿಹೋದರೆ, ತಂದೆ ತಾಯಿಗಳ ಸೇವೆಯನ್ನಾರುಮಾಡುವರು? ಮತ್ತು ಇದರಿಂದ ವಂಶ ವಿಚ್ಛೇದವೂ ಆಗಿಹೋಗುವುದು. ಇವಕ್ಕೇನುವ್ಯವಸ್ಥೆಯಾಗಬೇಕು?

ಉತ್ತರ:—ಯಾರ ಸೇವೆಗೂ ಭಂಗವಾಗದು. ವಂಶವಿಚ್ಛೇದವೂ ಆಗದು. ಏಕೆಂದರೆ, ಅವರಿಗೆ ತಮ್ಮ ಮಕ್ಕಳಿಗೆ ಬದಲಾಗಿ ಸ್ವವರ್ಣಕ್ಕೆ ಯೋಗ್ಯವಾದ ಬೇರೆ ಸಂತಾನವು ವಿದ್ಯಾಸಭೆ ಹಾಗೂ ರಾಜ್ಯಸಭೆಯ ವ್ಯವಸ್ಥೆಯಿಂದ ದೊರೆಯುವುದು. ಆದುದರಿಂದ ಯಾವ ಅವ್ಯವಸ್ಥೆಯೂ ಆಗುವುದಿಲ್ಲ. ಈ ಗುಣಕರ್ಮಮೂಲಕವಾದ ವರ್ಣವ್ಯವಸ್ಥೆಯು, ಕನ್ಯೆಯರಿಗೆ ಹದಿನಾರನೆಯ ವರ್ಷದ, ಹಾಗೂ ಪುರುಷರಿಗೆ ಇಪ್ಪತ್ತೈದನೆಯ ವರ್ಷದ ಪರೀಕ್ಷೆಯಲ್ಲಿ ನಿಶ್ಚಿತವಾಗಬೇಕು. ಮತ್ತು ಇದೇ ಕ್ರಮದಿಂದ, ಅಂದರೆ ಬ್ರಾಹ್ಮಣನಿಗೆ ಬ್ರಾಹ್ಮಣಿಯೊಂದಿಗೂ, ಕ್ಷತ್ರಿಯನಿಗೆ ಕ್ಷತ್ರಿಯಾಣಿಯೊಂದಿಗೂ, ವೈಶ್ಯನಿಗೆ ವೈಶ್ಯೆಯೊಂದಿಗೂ, ಶೂದ್ರನಿಗೆ ಶೂದ್ರೆಯೊಂದಿಗೂ ವಿವಾಹವಾಗಬೇಕು. ಆಗಲೇ ತಮ್ಮ ತಮ್ಮ ವರ್ಣಗಳಿಗೆ ತಕ್ಕ ಕರ್ಮವೂ, ಪರಸ್ಪರ ಪ್ರೀತಿಯೂ ಯುಕ್ತ ರೀತಿಯಲ್ಲಿರುವುವು.

ಇನ್ನು, ಈ ವರ್ಣಗಳ ಕರ್ತವ್ಯ ಕರ್ಮಗಳೂ, ಗುಣಗಳೂ ಇವು:—

ಅಧ್ಯಾಪನಮಧ್ಯಯನಂ ಯಜನಂ ಯಾಜನಂ ತಥಾ ।
ದಾನಂ ಪ್ರತಿಗ್ರಹಶ್ಚೈವ ಬ್ರಾಹ್ಮಣಾನಾಮಕಲ್ಪಯತ್ ॥

[ಮನು. ೧-೮೮]

ಶಮೋದಮಸ್ತಪಃ ಶೌಚಂ ಕ್ಷಾಂತಿರಾರ್ಜವ ಮೇವ ಚ।
ಜ್ಞಾನಂ ವಿಜ್ಞಾನಮಾಸ್ತಿಕ್ಯಂ ಬ್ರಹ್ಮಕರ್ಮಸ್ವಭಾವಜಮ್॥

[ಗೀತಾ. ೧೮-೪೨]

ಓದುವುದು, ಓದಿಸುವುದು, ಯಜ್ಞಾದಿಕರ್ಮಗಳನ್ನು ಮಾಡುವುದು ಮತ್ತು ಮಾಡಿಸುವುದು, ದಾನಕೊಡುವುದು ಮತ್ತು ತೆಗೆದುಕೊಳ್ಳುವುದು---ಈ ಆರು ಕರ್ಮಗಳೂ ಬ್ರಾಹ್ಮಣನಿಗೆ ಸಹಿತವಾಗಿವೆ. ಆದರೆ, ' ಪ್ರತಿಗ್ರಹಃ ಪ್ರತ್ಯವರಃ ' (ಮನು) ದಾನತೆಗೆದಕೊಳ್ಳುವುದು ನೀಚಕರ್ಮವಾಗಿರುತ್ತದೆ. ॥೧॥ (ಶಮಃ) ಮನದಿಂದ ದುಷ್ಕಾರ್ಯದ ಇಚ್ಛೆಯನ್ನೂ ಸಹ ಮಾಡದಿರುವುದು ಮತ್ತು ಅದನ್ನು ಅಧರ್ಮದಲ್ಲಿ ಪ್ರವೃತ್ತವಾಗಲು ಬಿಡದಿರುವುದು, (ದಮಃ) ಕಿವಿ, ಕಣ್ಣು ಮೊದಲಾದ ಇಂದ್ರಿಯಗಳನ್ನು ಅನ್ಯಾಯಾಚರಣೆಯಿಂದ ದೂರವಿಟ್ಟು, ಧರ್ಮಮಾರ್ಗದಲ್ಲಿ ನಡೆಸುವುದು, (ತಪಃ) ಸದಾ ಬ್ರಹ್ಮಚಾರಿಯಾಗಿಯೂ, ಜಿತೇಂದ್ರಿಯನಾಗಿಯೂ, ಇದ್ದು ಧರ್ಮವನ್ನು ಆಚರಿಸುವುದು, (ಶೌಚಂ)

ಅದ್ಭಿರ್ಗಾತ್ರಾಣಿ ಶುಧ್ಯಂತಿ ಮನಃ ಸತ್ಯೇನ ಶುಧ್ಯತಿ।
ವಿದ್ಯಾತಪೋಭ್ಯಾಂ ಭೂತಾತ್ಮಾ ಬುದ್ಧಿರ್ಜ್ಞಾನೇನ ಶುಧ್ಯತಿ॥

[ಮನು. ೫-೧೦೯]

ನೀರಿನಿಂದ ಹೊರಗಣ ಅಂಗಗಳೂ, ಸತ್ಯಾಚರಣೆಯಿಂದ ಮನಸ್ಸೂ, ವಿದ್ಯಾ ಧರ್ಮಾನುಷ್ಠಾನಗಳಿಂದ ಜೀವಾತ್ಮನೂ, ಜ್ಞಾನದಿಂದ ಬುದ್ಧಿಯೂ, ಪರಿಶುದ್ಧವಾಗುತ್ತದೆ. ಒಳಗಿನ ರಾಗದ್ವೇಷಾದಿ ದೋಷಗಳನ್ನೂ, ಹೊರಗಿನ ಕೊಳೆಯನ್ನೂ ದೂರಮಾಡಿ ಶುದ್ಧವಾಗಿರುವುದು, ಅಂದರೆ---ಸತ್ಯಾಸತ್ಯಗಳನ್ನು ವಿವೇಚಿಸುವುದರ ಮೂಲಕ ಸತ್ಯವನ್ನು ಗ್ರಹಿಸಿ, ಅಸತ್ಯವನ್ನು ಬಿಡುವುದರಿಂದ ನಿಶ್ಚಯವಾಗಿ ಪವಿತ್ರನಾಗುತ್ತಾನೆ. (ಕ್ಷಾಂತಿಃ) ಅಂದರೆ, ನಿಂದಾಸ್ತುತಿ, ಸುಖದುಃಖ, ಶೀತೋಷ್ಣ, ಹಸಿವು ಬಾಯಾರಿಕೆ, ಹಾನಿಲಾಭ, ಮಾನಾಪಮಾನ, ಮೊದಲಾದುವುಗಳಲ್ಲಿ ಹರ್ಷಶೋಕಗಳಿಗಾಸ್ಪದಕೊಡದೆ, ಧರ್ಮದಲ್ಲಿಯೇ ದೃಢನಿಶ್ಚಯನಾಗಿರುವುದು ; (ಆರ್ಜವಂ) ಕೋಮಲತ್ವ,

ಅಭಿಮಾನರಾಹಿತ್ಯ, ಸರಳತನ, ಸರಳಸ್ವಭಾವಯುಕ್ತನಾಗಿರುವುದು, ಕುಟಿಲತ್ವಾದಿ ದೋಷಗಳನ್ನು ಬಿಟ್ಟುಬಿಡುವುದು ; (ಜ್ಞಾನಂ) ಸಮಸ್ತ ವೇದಶಾಸ್ತ್ರಗಳನ್ನು ಸಾಂಗೋಪಾಂಗವಾಗಿ ಓದಿ, ಓದಿಸುವ ಸಾಮರ್ಥ್ಯ, ವಿವೇಕ, ಸತ್ಯದ ನಿರ್ಣಯ ಅಂದರೆ ವಸ್ತುವನ್ನು ಅದು ಹೇಗಿದೆಯೋ ಹಾಗೆಯೇ ತಿಳಿಯುವುದು, ಅಂದರೆ, ಜಡವನ್ನು ಜಡವೆಂದೂ ಚೇತನವನ್ನು ಚೇತನವೆಂದೂ ತಿಳಿಯುವುದು ಮತ್ತು ಒಪ್ಪುವುದು; (ವಿಜ್ಞಾನಂ) ಪೃಥ್ವಿಯಿಂದ ಹಿಡಿದು ಪರಮಾತ್ಮನವರೆಗಿನ ಸರ್ವಪದಾರ್ಥಗಳನ್ನೂ ವಿಶೇಷ ರೀತಿಯಲ್ಲಿ ತಿಳಿದು, ಅವುಗಳಿಂದ ಯೋಗ್ಯವಾದ ಉಪಯೋಗವನ್ನು ಪಡೆಯುವುದು ; (ಆಸ್ತಿಕ್ಯಂ) ವೇದಗಳು, ಈಶ್ವರ, ಮತ್ತು ಮುಕ್ತಿ, ಪೂರ್ವಾಪರಜನ್ಮಗಳು, ಧರ್ಮ, ವಿದ್ಯೆ, ಸತ್ಸಂಗ, ತಾಯಿ, ತಂದೆ, ಆಚಾರ್ಯ, ಅತಿಥಿಗಳ ಸೇವೆಯನ್ನು ಎಂದಿಗೂ ಬಿಡದಿರುವುದು ಮತ್ತು ನಿಂದಿಸದಿರುವುದು. ಈ ಹದಿನೈದು ಗುಣಗಳೂ ಬ್ರಾಹ್ಮಣ ವರ್ಣಸ್ಥರಾದ ಮಾನವರಲ್ಲಿ ಅವಶ್ಯವಾಗಿರಬೇಕು.

ಪ್ರಜಾನಾಂ ರಕ್ಷಣಂ ದಾನಮಿಜ್ಯಾಧ್ಯಯನಮೇವಚ ।
ವಿಷಯೇಷ್ವಪ್ರಸಕ್ತಿಶ್ಚ ಕ್ಷತ್ರಿಯಸ್ಯ ಸಮಾಸತಃ ॥೧॥

[ಮನು ೧-೮೯]

ಶೌರ್ಯಂ ತೇಜೋ ಧೃತಿರ್ದಾಕ್ಷ್ಯಂ ಯುದ್ಧೇಚಾಪ್ಯ-
ಪಲಾಯನಂ ।
ದಾನಮೀಶ್ವರಭಾವಶ್ಚ ಕ್ಷಾತ್ರಂ ಕರ್ಮಸ್ವಭಾವಜಮ್ ॥೨॥

[ಗೀತಾ ೧೮-೪೩]

ನ್ಯಾಯದಿಂದ ಪ್ರಜೆಗಳನ್ನು ಕಾಪಾಡುವುದು, ಅಂದರೆ ಪಕ್ಷಪಾತವನ್ನು ಬಿಟ್ಟು, ಶ್ರೇಷ್ಠರನ್ನು ಸತ್ಕರಿಸುತ್ತಾ, ದುಷ್ಟರನ್ನು ತಿರಸ್ಕರಿಸುತ್ತಾ, ಎಲ್ಲಾ ರೀತಿಯಿಂದಲೂ, ಎಲ್ಲರನ್ನೂ ಪಾಲಿಸುವುದು. (ದಾನಂ) ವಿದ್ಯಾ ಧರ್ಮಗಳ ಪ್ರಚಾರ ಮತ್ತು ಸತ್ಪುರುಷರ ಸೇವೆಗಾಗಿ ಧನಾದಿ ವಸ್ತುಗಳನ್ನು ವೆಚ್ಚಮಾಡುವುದು. (ಇಜ್ಯಾ) ಅಗ್ನಿಹೋತ್ರಾದಿ ಯಜ್ಞಗಳನ್ನು ಮಾಡುವುದು, ಮತ್ತು ಮಾಡಿಸುವುದು. (ಅಧ್ಯಯನಂ)

ವೇದಾದಿಶಾಸ್ತ್ರಗಳನ್ನು ಓದುವುದು ಮತ್ತು ಓದಿಸಲು ವ್ಯವಸ್ಥೆ ಮಾಡುವುದು; (ವಿಷಯೇಷ್ವಪ್ರಸಕ್ತಿಃ) ವಿಷಯಗಳಲ್ಲಿ ಸಿಕ್ಕಿಕೊಳ್ಳದೆ, ಜಿತೇಂದ್ರಿಯನಾಗಿ ಶರೀರವನ್ನೂ, ಆತ್ಮವನ್ನೂ ಬಲಯುತವಾಗಿಟ್ಟು ಕೊಂಡಿರುವುದು. ॥೧॥ (ಶೌರ್ಯಂ) ನೂರಾರು, ಸಾವಿರಾರು ಮಂದಿ ಗಳೊಡನೆ ಓಂಟಿಯಾಗಿಯೇ ಯುದ್ಧಮಾಡಬೇಕಾದ ಪ್ರಸಂಗದಲ್ಲಿಯೂ ಭಯಪಡದಿರುವುದು; (ತೇಜಃ) ದೈನ್ಯವನ್ನು ಬಿಟ್ಟು ಸದಾ ತೇಜಸ್ವಿಯೂ, ಪ್ರಗಲ್ಭನೂ ಆಗಿರುವುದು; (ಧೃತಿಃ) ಧೈರ್ಯಶಾಲಿಯಾಗಿರುವುದು; (ದಾಕ್ಷ್ಯಂ) ರಾಜಪ್ರಜಾಸಂಬಂಧವಾದ ವ್ಯವಹಾರಗಳಲ್ಲಿಯೂ, ಸಮಸ್ತ ಶಾಸ್ತ್ರಗಳಲ್ಲಿಯೂ, ಅತಿ ಚತುರನಾಗಿರುವುದು; (ಯುದ್ಧೇ ಚಾಪ್ಯಪಲಾಯನಂ) ಯುದ್ಧದಲ್ಲಿಯೂ ದೃಢನೂ, ನಿರ್ಭಯನೂ ಆಗಿದ್ದು, ರಣರಂಗದಿಂದ ಎಂದಿಗೂ ಹಿಂದಿರುಗದೆಯೂ, ಓಡಿಹೋಗದೆಯೂ ಇರುವುದು, ಅಂದರೆ ತನ್ನನ್ನು ರಕ್ಷಿಸಿಕೊಂಡು, ನಿಶ್ಚಯವಾಗಿ ಜಯಲಾಭವಾಗುವಂತೆ ಯುದ್ಧಮಾಡುವುದು; (ದಾನಂ) ದಾನಶೀಲನಾಗಿರುವುದು, ವಿವೇಚನೆಮಾಡಿ ಕೊಡುವುದು, ಪ್ರತಿಜ್ಞೆಯನ್ನು ಪೂರ್ಣಗೊಳಿಸುವುದು, ಆದನ್ನೆಂದೂ ಮುರಿಯದಿರುವುದು; (ಈಶ್ವರಭಾವಶ್ಚ) ಪಕ್ಷಪಾತರಹಿತನಾಗಿ ಎಲ್ಲರಲ್ಲಿಯೂ ವರ್ತಿಸುವುದು:—ಈ ಹನ್ನೊಂದೂ ಕ್ಷತ್ರಿಯವರ್ಣದ ಕರ್ಮಗಳು ಮತ್ತು ಗುಣಗಳು. ವೈಶ್ಯ:-

ಪಶೂನಾಂ ರಕ್ಷಣಂ ದಾನಮಿಜ್ಯಾಧ್ಯಯನಮೇವ ಚ।
ವಣಿಕ್ಪಥಂ ಕುಸೀದಂ ಚ ವೈಶ್ಯಸ್ಯ ಕೃಷಿಮೇವ ಚ ॥

[ಮನು. ೧-೦೦]

(ಪಶೂನಾಂ ರಕ್ಷಣಂ) ಹಸು ಮೊದಲಾದ ಪಶುಗಳನ್ನು ಕಾಪಾಡಿಕೊಳ್ಳುವುದು, (ದಾನಂ) ವಿದ್ಯಾಧರ್ಮಗಳ ಅಭಿವೃದ್ಧಿಗಾಗಿ ಹಣ ಮೊದಲಾದುವುಗಳನ್ನು ವೆಚ್ಚಮಾಡುವುದು; (ಇಜ್ಯಾ) ಅಗ್ನಿಹೋತ್ರಾದಿಯಜ್ಞಗಳನ್ನು ಮಾಡುವುದು: (ಅಧ್ಯಯನ) ವೇದಾದಿ ಶಾಸ್ತ್ರಗಳನ್ನು ಓದುವುದು; (ವಣಿಕ್ಪಥಂ) ಎಲ್ಲಾ ವಿಧವಾದ ವ್ಯಾಪಾರವನ್ನು ನಡೆಸುವುದು; (ಕುಸೀದಂ) ನೂರಕ್ಕೆ ನಾಲ್ಕು, ಆರು, ಎಂಟು, ಹನ್ನೆರಡು, ಹದಿನಾರು ಅಥವಾ ಇಪ್ಪತ್ತು ಆಣೆಗಳಿಗಿಂತ ಹೆಚ್ಚಾಗಿ

ಬಡ್ಡಿ ತೆಗೆದುಕೊಳ್ಳದೆ ಸಾಲ ಕೊಡುವುದು, ಮೂಲದ್ರವ್ಯದ ಎರಡರಷ್ಟು, ಅಂದರೆ, ಒಂದುರೂಪಾಯಿ ಕೊಟ್ಟು, ನೂರು ವರ್ಷಗಳ ಮೇಲೆಯೂ ಸಹ ಎರಡು ರೂಪಾಯಿಗಿಂತ ಹೆಚ್ಚು ತೆಗೆದುಕೊಳ್ಳಬಾರದು ಹಾಗೆ ಕೊಡಲೂ ಬಾರದು; (ಕೃಷಿ) ವ್ಯವಸಾಯಮಾಡುವುದು ಇವು ವೈಶ್ಯನ ಗುಣಕರ್ಮಗಳು.

ಶೂದ್ರ :—

ಏಕಮೇವ ತು ಶೂದ್ರಸ್ಯ ಪ್ರಭುಃ ಕರ್ಮ ಸಮಾದಿಶತ್ ।
ಏತೇಷಾಮೇವ ವರ್ಣಾನಾಂ ಶುಶ್ರೂಷಾಮನಸೂಯಯಾ ॥

[ಮನು. ೧-೯೧]

ನಿಂದೆ, ಈರ್ಷ್ಯೆ, ಅಹಂಕಾರ ಮೊದಲಾದ ದೋಷಗಳನ್ನು ಬಿಟ್ಟು, ಬ್ರಾಹ್ಮಣ, ಕ್ಷತ್ರಿಯ, ವೈಶ್ಯರ ಸೇವೆ ಮಾಡುತ್ತಾ ಅದರಿಂದ ಜೀವನ ನಡೆಸಿಕೊಳ್ಳುವುದೇ ಶೂದ್ರನ ಏಕಮಾತ್ರ ಗುಣಕರ್ಮವಾಗಿದೆ.

ಇದುವರೆಗೆ ವರ್ಣಗಳ ಗುಣಕರ್ಮಗಳನ್ನು ಸಂಕ್ಷೇಪವಾಗಿ ಬರೆದಿದ್ದೇವೆ. ಯಾರಯಾರಲ್ಲಿ ಯಾವ ಯಾವ ವರ್ಣಗುಣಕರ್ಮಗಳಿರುವವೋ, ಅವರವರಿಗೆ, ಆಯಾ ವರ್ಣದ ಅಧಿಕಾರವೀಯಬೇಕು, ಇಂತಹ ವ್ಯವಸ್ಥೆಯಿಂದ ಮಾನವರೆಲ್ಲರೂ ಉನ್ನತಿಪರರಾಗುತ್ತಾರೆ. ಏಕೆಂದರೆ—ತಮ್ಮ ಮಕ್ಕಳು ಮೂರ್ಖತನ ಮೊದಲಾದ ದೋಷಗಳುಳ್ಳವರಾಗಿದ್ದರೆ, ಶೂದ್ರರಾಗಿ ಹೋಗುವರೆಂಬ ಭಯವು ಉತ್ತಮ ವರ್ಣದವರನ್ನು ಬಾಧಿಸುವುದು: ಮಕ್ಕಳಿಗೆ ತಾವು ಉತ್ತಮ ಶೀಲವಂತರಾಗದಿದ್ದರೆ ಶೂದ್ರರಾಗಿ ಹೋದೇವೆಂಬ ಭಯವುಂಟಾಗುವುದು. ಇದಲ್ಲದೆ ನೀಚವರ್ಗದವರೂ ಸಹ ಉತ್ತಮ ವರ್ಣದವರಾಗಲು ಉತ್ಸಾಹವು ಹುಟ್ಟುವುದು. ವಿದ್ಯಾಧರ್ಮಗಳ ಪ್ರಚಾರಮಾಡುವ ಅಧಿಕಾರವನ್ನು ಬ್ರಾಹ್ಮಣರಿಗೆ ಕೊಡಬೇಕು. ಏಕೆಂದರೆ, ಅವರು ಪೂರ್ಣ ವಿದ್ಯಾವಂತರೂ, ಧಾರ್ಮಿಕರೂ ಆಗಿರುವದರಿಂದ, ಆ ಕಾರ್ಯವನ್ನು ಯೋಗ್ಯರೀತಿಯಲ್ಲಿ ನೆರವೇರಿಸಬಲ್ಲರು. ಕ್ಷತ್ರಿಯರಿಗೆ ರಾಜ್ಯಾಧಿಕಾರವನ್ನು ಕೊಡುವುದರಿಂದ, ರಾಜ್ಯಕ್ಕೆ ಹಾನಿ ವಿಘ್ನಗಳಿಂದಿಗೂ ಉಂಟಾಗದಿರುವುವು. ಪಶುಪಾಲನಾದಿಗಳ ಅಧಿಕಾರವನ್ನು ವೈಶ್ಯರಿಗೇ

ಕೊಡಬೇಕಾದುದು ಯೋಗ್ಯ, ಏಕೆಂದರೆ, ಅವರು ಈ ಕಾರ್ಯಗಳನ್ನು ಚನ್ನಾಗಿ ಮಾಡಬಲ್ಲರು, ಸೇವಾಧಿಕಾರವನ್ನು ಶೂದ್ರನಿಗೆ ಕೊಡಬೇಕು. ಏಕೆಂದರೆ—ಅವನು ವಿದ್ಯಾಹೀನನೂ, ಬುದ್ಧಿಶಕ್ತಿಯಲ್ಲಿ ದುರ್ಬಲನೂ ಆಗಿರುವುದರಿಂದ ಬುದ್ಧಿಸಂಬಂಧವಾದ ಕಾರ್ಯಗಳನ್ನು ಮಾಡಲಾರನು; ಆದರೆ, ಶರೀರ ಸಂಬಂಧವಾದ ಕಾರ್ಯಗಳನ್ನೆಲ್ಲಾ ಮಾಡಬಲ್ಲನು. ಈ ರೀತಿ ವರ್ಣಗಳು ತಮ್ಮ ತಮ್ಮ ಅಧಿಕಾರಗಳಲ್ಲಿ ಪ್ರವರ್ತಿಸುವಂತೆ ಮಾಡುವದು ರಾಜನೇ ಮೊದಲಾದವರ ಕರ್ತವ್ಯವಾಗಿರುತ್ತದೆ.

ವಿವಾಹ ಲಕ್ಷಣಗಳು

ಬ್ರಾಹ್ಮೋ ದೈವಸ್ತಥೈವಾರ್ಷಃ ಪ್ರಾಜಾಪತ್ಯಸ್ತಥಾಽಽಸುರಃ।
ಗಾಂಧರ್ವೋ ರಾಕ್ಷಸಶ್ಚೈವ ಪೈಶಾಚಶ್ಚಾಷ್ಟಮೋಽಧಮಃ॥

[ಮನು. ೩-೨೧]

ವಿವಾಹವು (೧) ಬ್ರಾಹ್ಮ, (೨) ದೈವ, (೩) ಆರ್ಷ, (೪) ಪ್ರಾಜಾಪತ್ಯ, (೫) ಆಸುರ, (೬) ಗಾಂಧರ್ವ, (೭) ರಾಕ್ಷಸ, (೮) ಪೈಶಾಚ—ಎಂದು ಎಂಟು ವಿಧವಾಗಿರುತ್ತವೆ. ಇವುಗಳಲ್ಲಿ ವಿವಾಹ ವ್ಯವಸ್ಥೆ ಹೀಗಿರುತ್ತದೆ—ವರನೂ ಕನ್ಯೆಯೂ ಯಥಾವತ್ತಾಗಿ ಬ್ರಹ್ಮಚರ್ಯವನ್ನು ಪಾಲಿಸಿ, ಪೂರ್ಣ ವಿದ್ವಾಂಸರೂ, ಧಾರ್ಮಿಕರೂ, ಸುಶೀಲರೂ ಆಗಿದ್ದು, ಪರಸ್ಪರ ಪ್ರಸನ್ನತೆಯಿಂದ ಅವರಿಬ್ಬರೂ ವಿವಾಹವಾಗುವುದಕ್ಕೆ 'ಬ್ರಾಹ್ಮ' ವಿವಾಹ ಎಂದು ಸಂಜ್ಞೆ. ವಿಶಾಲಯಜ್ಞ ಕಾರ್ಯದಲ್ಲಿ ಋತ್ವಿಜನಾಗಿ ಕುಳಿತಿರುವವನನ್ನು ಅಳಿಯನನ್ನಾಗಿ ಮಾಡಿಕೊಂಡು ಅವನಿಗೆ ಅಲಂಕಾರಯುಕ್ತಳಾದ ಕನ್ಯೆಯನ್ನು ಕೊಡುವುದು "ದೈವ" ವಿವಾಹ; ವರನಿಂದ ಎನನ್ನಾದರೂ ತೆಗೆದುಕೊಂಡು ವಿವಾಹಮಾಡಿಕೊಡುವುದು "ಆರ್ಷ"; ಧರ್ಮವೃದ್ಧಿಗಾಗಿ ಇಬ್ಬರ ಮದುವೆ ಮಾಡುವುದು "ಪ್ರಾಜಾಪತ್ಯ"; ವರನಿಗೂ ಕನ್ಯೆಗೂ ಏನನ್ನಾದರೂ ಕೊಟ್ಟು ವಿವಾಹವಾಗುವುದು "ಆಸುರ"; ನಿಯಮವಿಲ್ಲದೆ, ಸಮಯವಲ್ಲದಿರುವಾಗ, ಯಾವದೋ ಕಾರಣದಿಂದ, ಪರಸ್ಪರ ಇಚ್ಛೆಯಿಂದ, ಕನ್ಯಾವರರ ಪರಸ್ಪರ ಸಂಯೋಗವಾಗುವುದು "ಗಾಂಧರ್ವ"

ಹೋರಾಡಿ ಬಲಾತ್ಕಾರದಿಂದ ಅಂದರೆ, ಅಪಹರಿಸಿ, ಅಥವಾ ಕಪಟದಿಂದ ಕನ್ಯೆಯನ್ನು ಸ್ವೀಕರಿಸುವುದು "ರಾಕ್ಷಸ"; ಮಲಗಿರುವ ಅಥವಾ ಮದ್ಯಪಾನಾದಿಗಳಿಂದ ಮತ್ತಳಾಗಿರುವ ಕನ್ಯೆಯೊಡನೆ ಬಲಾತ್ಕಾರದಿಂದ ಕೂಡುವುದು "ಪೈಶಾಚ". ಈ ವಿವಾಹಗಳಲ್ಲಿ "ಬ್ರಾಹ್ಮ" ವಿವಾಹವು ಸರ್ವೋತ್ಕೃಷ್ಟ; "ದೈವ" ಮತ್ತು "ಪ್ರಾಜಾಪತ್ಯ" ಇವು ಮಧ್ಯಮ; 'ಆರ್ಷ, ಆಸುರ' ಮತ್ತು 'ಗಾಂಧರ್ವ' ಇವು ನಿಕೃಷ್ಟ; "ರಾಕ್ಷಸ" ವಿವಾಹವು ಅಧಮ ಮತ್ತು "ಪೈಶಾಚ"ವು ಮಹಾಭ್ರಷ್ಟವಾದುದು. ಆದುದರಿಂದ ವಿವಾಹಕ್ಕೆ ಮೊದಲು ಕನ್ಯಾವರರು ಏಕಾಂತದಲ್ಲಿ ಸೇರಬಾರದು, ಎಂಬ ನಿಶ್ಚಯವನ್ನೇ ಇಟ್ಟುಕೊಂಡಿರಬೇಕು. ಏಕೆಂದರೆ--ಯುವಾವಸ್ಥೆಯಲ್ಲಿ ಸ್ತ್ರೀಪುರುಷರ ಏಕಾಂತವಾಸವು ದೋಷಕರವಾಗಿರುತ್ತದೆ. ಆದರೆ, ಕನ್ಯೆಯ, ಅಥವಾ ವರನ ವಿವಾಹಸಮಯವು ಸಮೀಪಿಸಿದಾಗ, ಅಂದರೆ ಬ್ರಹ್ಮಚರ್ಯಾಶ್ರಮ ಮತ್ತು ವಿದ್ಯಾಭ್ಯಾಸ ಪೂರ್ಣವಾಗುವುದಕ್ಕೆ ಒಂದು ವರ್ಷ ಅಥವಾ ಆರುತಿಂಗಳುಗಳು ಉಳಿದಿರುವಾಗಲೇ, ಕನ್ಯೆಯರ ಮತ್ತು ಕುಮಾರರ ಭಾವಚಿತ್ರ ಅಥವಾ ಪ್ರತಿಕೃತಿಗಳನ್ನಿಳಿಸಿ, ಕುಮಾರರ ಪ್ರತಿಕೃತಿಗಳನ್ನು ಕನ್ಯೆಯರ ಅಧ್ಯಾಪಿಕೆಯರ ಬಳಿಗೂ, ಕನ್ಯೆಯರ ಪ್ರತಿಕೃತಿಗಳನ್ನು ಕುಮಾರರ ಅಧ್ಯಾಪಕರ ಬಳಿಗೂ, ಕಳುಹಿಸಬೇಕು. ಯಾರ ಯಾರ ರೂಪಗಳು ಹೊಂದಿಕೊಳ್ಳುವುವೋ, ಅವರವರ ಚರಿತ್ರೆ ಅಂದರೆ ಹುಟ್ಟಿದಾಗಿನಿಂದ ಅಂದಿನವರೆಗಿನ ಅವರ ಜೀವನ ವೃತ್ತಾಂತವನ್ನು ಬರೆದಿರುವ ಪುಸ್ತಕಗಳನ್ನು ತರಿಸಿ, ಅಧ್ಯಾಪಕರು ನೋಡಬೇಕು. ಇಬ್ಬರ ಗುಣಕರ್ಮಸ್ವಭಾವಗಳೂ ಸಮವೆಂದು ಕಂಡುಬಂದಾಗ, ಯಾರ ಯಾರ ವಿವಾಹವು ಯಾರ ಯಾರ ಸಂಗಡ ಆಗುವುದುಚಿತವೆಂದು ತಿಳಿಯುವುದೋ, ಆಯಾ ವರರ ಹಾಗೂ ಕನ್ಯೆಯರ ಭಾವಚಿತ್ರಗಳನ್ನೂ, ಇತಿಹಾಸಗಳನ್ನೂ ಕನ್ಯೆಯರ ಹಾಗೂ ವರರ ಕೈಗಳಲ್ಲಿ ಕೊಟ್ಟು, 'ಈ ಬಗ್ಗೆ ನಿಮ್ಮ ಅಭಿಪ್ರಾಯವೇನಿರುವುದೋ ನಮಗೆ ತಿಳಿಸಿ' ಎಂದು ಹೇಳಬೇಕು. ಪರಸ್ಪರ ವಿವಾಹಮಾಡಿಕೊಳ್ಳಬೇಕೆಂದು ಅವರಿಬ್ಬರೂ ನಿಶ್ಚಯಿಸಿದಾಗ, ಒಂದೇ ಕಾಲದಲ್ಲಿ ಇಬ್ಬರ ಸಮಾವರ್ತನ ಸಂಸ್ಕಾರವೂ ಆಗಬೇಕು. ಅವರಿಬ್ಬರೂ ಅಧ್ಯಾಪಕನ ಸಮ್ಮುಖದಲ್ಲೇ

ವಿವಾಹವಾಗಬೇಕೆಂದು ಬಯಸಿದರೆ, ಅಲ್ಲಿ, ಇಲ್ಲವಾದರೆ, ಕನ್ಯೆಯು ತಾಯಿತಂದೆಗಳ ಗೃಹದಲ್ಲಿ ಮದುವೆಯಾಗುವುದು ಉಚಿತವಾಗಿರುತ್ತದೆ. ಅವರಿಬ್ಬರೂ ಒಬ್ಬರೊಬ್ಬರು ಸಂಧಿಸಿದಾಗ, ಅಧ್ಯಾಪಕರ ಅಥವಾ ಕನ್ಯೆಯ ತಾಯಿತಂದೆ ಮೊದಲಾದ ಸಜ್ಜನರ ಎದುರಿಗೆ, ಅವರಿಬ್ಬರಿಗೂ ಸಂಭಾಷಣೆ ಮತ್ತು ಶಾಸ್ತ್ರಾರ್ಥ ಮಾಡಿಸಬೇಕು. ಮತ್ತು ರಹಸ್ಯವಾದ ವ್ಯವಹಾರವನ್ನೇನಾದರೂ ಕೇಳಬೇಕಾಗಿದ್ದಲ್ಲಿ ಕಾಗದದಲ್ಲಿ ಬರೆದು, ಸಭೆಯಲ್ಲಿಯೇ ಒಬ್ಬರಿಗೊಬ್ಬರು ಕೊಟ್ಟು ಲಿಖಿತವಾಗಿ ಉತ್ತರ ಪಡೆದುಕೊಳ್ಳಬೇಕು. ಅವರಿಬ್ಬರಿಗೂ ಮದುವೆಮಾಡಿಕೊಳ್ಳುವುದರಲ್ಲಿ ದೃಢವಾದ ಪ್ರೇಮವುಟ್ಟಿದಾಗ, ಮೊದಲು ಬ್ರಹ್ಮಚರ್ಯ ಮತ್ತು ವಿದ್ಯಾಧ್ಯಯನವೆಂಬ ತಪಸ್ಸಿನಿಂದ ಹಾಗೂ ಕಷ್ಟದಿಂದ ದುರ್ಬಲರಾಗಿರುವ ಅವರ ಶರೀರವು, ಚಂದ್ರಕಲೆಯಂತೆ ವರ್ಧಿಸಿ, ಸ್ವಲ್ಪದಿನಗಳಲ್ಲಿಯೇ, ಪರಿಪುಷ್ಟವಾಗುವಂತೆ, ಅವರಿಗೆ ಉತ್ತಮವಾದ ಭೋಜನ ಪಾನಗಳ ವ್ಯವಸ್ಥೆಮಾಡಿಕೊಡಬೇಕು. ಆಮೇಲೆ, ಕನ್ಯೆಯು ರಜಸ್ವಲೆಯಾಗಿ ಶುದ್ಧಳಾಗಿಹೋದ ದಿವಸ, ವೇದಿಕೆಯನ್ನೂ ಮಂಟಪವನ್ನೂ ರಚಿಸಿ, ಅನೇಕ ಬಗೆಯ ಸುಗಂಧಾದಿದ್ರವ್ಯಗಳನ್ನೂ, ತುಪ್ಪವನ್ನೂ ಹೋಮಮಾಡಿ, ಬಹುಮಂದಿ ವಿದ್ವಾಂಸರಾದ ಪುರುಷರನ್ನೂ ಸ್ತ್ರೀಯರನ್ನೂ ಯೋಗ್ಯರೀತಿಯಲ್ಲಿ ಸತ್ಕರಿಸಬೇಕು. ಅನಂತರ ಯಾವದಿನ ಋತುದಾನವು ಯೋಗ್ಯವೆಂದು ತೋರುವುದೋ, ಆದೇದಿನ "ಸಂಸ್ಕಾರವಿಧಿ" ಎಂಬ ಪುಸ್ತಕದಲ್ಲಿ ನಿರೂಪಿತವಾದ ವಿಧಿಗಳನ್ನೆಲ್ಲಾ ಮಾಡಿ, ಮಧ್ಯರಾತ್ರಿ ಅಥವಾ ಹತ್ತು ಘಂಟೆಗೆ, ಅತಿಪ್ರಸನ್ನತೆಯಿಂದ ಎಲ್ಲರ ಸಮುಖದಲ್ಲಿ ಪಾಣಿಗ್ರಹಣಪೂರ್ವಕವಾಗಿ ವಿವಾಹವಿಧಿಯನ್ನು ಪೂರೈಸಿ, ಏಕಾಂತ ಸೇವನೆಯನ್ನು ಮಾಡಬೇಕು. ವಿಧಿಗನುಸಾರವಾಗಿ ಪುರುಷನು ವೀರ್ಯಸ್ಥಾಪನೆಯನ್ನೂ, ಸ್ತ್ರೀಯು ವೀರ್ಯಾಕರ್ಷಣವನ್ನೂ ಮಾಡಬೇಕು. ಸಾಧ್ಯವಾದಮಟ್ಟಿಗೂ ಬ್ರಹ್ಮಚರ್ಯದ ವೀರ್ಯವನ್ನು ವ್ಯರ್ಥವಾಗಿಹೋಗಗೊಡಬಾರದು. ಏಕೆಂದರೆ, ಆ ವೀರ್ಯ ಅಥವಾ ರಜಸ್ಸಿನಿಂದ ಅಪೂರ್ವವಾದ ಉತ್ತಮ ಸಂತಾನದ ಶರೀರರಚನೆಯಾಗುತ್ತದೆ. ವೀರ್ಯವು ಗರ್ಭಾಶಯದಲ್ಲಿ ಬೀಳುವ ಸಮಯದಲ್ಲಿ, ಸ್ತ್ರೀಪುರುಷರಿಬ್ಬರೂ ಸ್ಥಿರವಾಗಿ, ಮೂಗಿಗೆ ಮರು ಮೂಗನ್ನೂ,

ಕಣ್ಣಿಗೆ ಮುರುಕಣ್ಣನೂ ಇಟ್ಟುಕೊಂಡು, ಅಂದರೆ, ನೇರವಾಗಿ ಶರೀರವನ್ನಿಟ್ಟುಕೊಂಡು, ಅತ್ಯಂತ ಪ್ರಸನ್ನಚಿತ್ತರಾಗಿರಬೇಕು. ಅಲ್ಲಾಡಬಾರದು. ಪುರುಷನು ತನ್ನ ಶರೀರವನ್ನು ಸಡಿಲಬಿಡಬೇಕು ಮತ್ತು ಸ್ತ್ರೀಯು ವೀರ್ಯಪ್ರಾಪ್ತಿಯ ಸಮಯದಲ್ಲಿ ಅಪಾನವಾಯುವನ್ನು ಮೇಲಕ್ಕೆಳಯಬೇಕು. ಯೋನಿಯನ್ನು ಮೇಲಕ್ಕೆ ಸಂಕೋಚಪಡಿಸಿ, ವೀರ್ಯವನ್ನು ಮೇಲಕ್ಕೆಳದುಕೊಂಡು, ಗರ್ಭಾಶಯದಲ್ಲಿ ನಿಲ್ಲಿಸಿಕೊಳ್ಳಬೇಕು.* ಆ ಮೇಲೆ ಇಬ್ಬರೂ ಶುದ್ಧ ಜಲದಿಂದ ಸ್ನಾನಮಾಡಬೇಕು. ವಿದುಷಿಯಾದ ಸ್ತ್ರೀಗೆ ಗರ್ಭಸ್ಥಿತಿಯ ಪರಿಜ್ಞಾನವು ಆಗಲೇ ಉಂಟಾಗುತ್ತದೆ. ಆದರೆ, ತಿಂಗಳು ಕಳೆದಮೇಲೆ ಮುಟ್ಟಾಗದಿದ್ದರೆ ಎಲ್ಲವೂ ಗೊತ್ತಾಗುತ್ತದೆ. ಶುಂಠಿ, ಕೇಸರಿ, ಅಶ್ವಗಂಧ, ಜೀಳಿಯ ಏಲಕ್ಕಿ, ಮತ್ತು ಕಲ್ಲುಸಕ್ಕರೆ ಹಾಕಿ, ಬಿಸಿಮಾಡಿಟ್ಟು, ತಣ್ಣಗಾದ ಹಾಲನ್ನು, ಇಬ್ಬರೂ ರುಚಿತೋರಿದಂತೆ ಕುಡಿದು, ಬೇರೆ ಬೇರೆ, ತಮ್ಮ ಹಾಸಿಗೆಗಳಲ್ಲಿ ಮಲಗಬೇಕು. ಗರ್ಭಾಧಾನ ಕ್ರಿಯೆಮಾಡುವಾಗಲೆಲ್ಲಾ ಇದೇ ವಿಧಿಯನ್ನಾಚರಿಸುವುದುಚಿತ. ತಿಂಗಳನಂತರ ರಜಸ್ವಲೆಯಾಗದೆ, ಗರ್ಭಸ್ಥಿತಿಯು ನಿಶ್ಚಯವಾದ ಬಳಿಕ, ಒಂದು ವರ್ಷದವರೆಗೆ, ಸ್ತ್ರೀ ಪುರುಷರ ಸಮಾಗಮವೆಂದಿಗೂ ಆಗಬಾರದು. ಏಕೆಂದರೆ, ಹೀಗೆ ಸಂಯಮ ಮಾಡುವುದರಿಂದ, ಸಂತಾನವು ಉತ್ತಮವಾಗುವುದಲ್ಲದೆ, ಎರಡನೆಯ ಸಂತಾನವೂ ಸಹ ಹಾಗೆಯೇ ಆಗುತ್ತದೆ. ಹಾಗೆ ಮಾಡದಿರುವದರಿಂದ ವೀರ್ಯವು ವ್ಯರ್ಥವಾಗಿ ಹೋಗುತ್ತದೆ. ಇಬ್ಬರ ಆಯುಸ್ಸೂ ಕ್ಷೀಣವಾಗುತ್ತದೆ ಮತ್ತು ಅನೇಕಬಗೆಯ ರೋಗಗಳು ಹುಟ್ಟುತ್ತವೆ. ಆದರೆ ಹೊರಗಿನಿಂದ, ಮಧುರಭಾಷಣ ಮೊದಲಾದ ಪ್ರೇಮಯುಕ್ತ ವ್ಯವಹಾರಗಳನ್ನು ಆವಶ್ಯವಾಗಿ ಮಾಡುತ್ತಿರಬೇಕು. ಪುರುಷನು ವೀರ್ಯವನ್ನು ನಿಗ್ರಹಿಸಿಟ್ಟಿರಬೇಕು. ಮತ್ತು ಸ್ತ್ರೀಯು ಗರ್ಭವನ್ನು ರಕ್ಷಿಸಿಕೊಳ್ಳಬೇಕು. ಮತ್ತು ಪುರುಷವೀರ್ಯವು ಸ್ಖಲನದಲ್ಲಿಯೂ ಸಹ ನಷ್ಟವಾಗದಂತೆಯೂ, ಗರ್ಭದಲ್ಲಿನ ಶಿಶುವಿನ ಶರೀರವು ಅತ್ಯುತ್ತಮ ರೂಪಲಾವಣ್ಯ ಪುಷ್ಟಿಬಲಪರಾಕ್ರಮಯುಕ್ತವಾಗಿ,

* ಈ ಮಾತು ರಹಸ್ಯವಾದುದು. ಆದುದರಿಂದ ಇಷ್ಟರಿಂದಲೇ ಎಲ್ಲಾ ವಿಷಯಗಳನ್ನೂ ತಿಳಿದುಕೊಳ್ಳಬೇಕು. ವಿಶೇಷ ಬರೆಯುವುದುಚಿತವಲ್ಲ.

ಹತ್ತನೆಯ ತಿಂಗಳಲ್ಲಿ ಹೆರಿಗೆಯಾಗುವಂತೆಯೂ, ಭೋಜನ ಮತ್ತು ಉಡಿಗೆತೊಡಿಗೆಗಳನ್ನು ಸರಿಪಡಿಸಿಕೊಳ್ಳಬೇಕು. ಗರ್ಭವನ್ನು ನಾಲ್ಕನೆಯ ತಿಂಗಳಿಂದ ವಿಶೇಷವಾಗಿಯೂ, ಎಂಟನೆಯ ತಿಂಗಳಿಂದ ಮುಂದಕ್ಕೆ ಅತಿ ವಿಶೇಷರೀತಿಯಿಂದಲೂ, ರಕ್ಷಿಸಿಕೊಳ್ಳಬೇಕು. ಗರ್ಭಿಣಿಯಾದ ಸ್ತ್ರೀಯು, ರೇಚಕವೂ, ರೂಕ್ಷವೂ, ಮದ ಕಾರಿಯೂ, ಬುದ್ಧಿಬಲನಾಶಕವೂ ಆದ ಪದಾರ್ಥಗಳ ಭೋಜನ ಮೊದಲಾದುವನ್ನು ಎಂದೂ ಸೇವಿಸಬಾರದು; ಆದರೆ ತುಪ್ಪ, ಹಾಲು, ಉತ್ತಮವಾದ ಅಕ್ಕಿ, ಗೋಧಿ, ಹೆಸರು, ಉದ್ದು ಮೊದಲಾದ ಅನ್ನ ಪಾನಗಳನ್ನು ತೆಗೆದುಕೊಳ್ಳಬೇಕು. ಮತ್ತು ಬುದ್ಧಿವಂತಿಕೆಯಿಂದ ಉತ್ತಮವಾದ ಸ್ಥಳ ಮತ್ತು ಕಾಲಗಳನ್ನು ಉಪಯೋಗಿಸಿಕೊಳ್ಳಬೇಕು. ಗರ್ಭಸ್ಥಿತಿಯ ನಾಲ್ಕನೆಯ ತಿಂಗಳಲ್ಲಿ, ಪುಂಸವನ, ಮತ್ತು ಎಂಟನೆಯ ತಿಂಗಳಲ್ಲಿ, ಸೀಮಂತೋನ್ನಯನ ಈ ಎರಡು ಸಂಸ್ಕಾರಗಳನ್ನೂ ವಿಧಿಗನುಸಾರವಾಗಿ ಮಾಡಬೇಕು. ಪ್ರಸವವಾದಾಗ, ತಾಯಿಯ ಮತ್ತು ಮಗುವಿನ ಶರೀರರಕ್ಷಣೆಯನ್ನು ಬಹು ಎಚ್ಚರಿಕೆಯಿಂದ ಮಾಡಬೇಕು. ಆಂದರೆ, ಶುಂಠಿಪಾಕ, ಅಥವಾ ಸೌಭಾಗ್ಯಶುಂಠಿಪಾಕವನ್ನು ಮೊದಲೇ ಮಾಡಿಟ್ಟುಕೊಂಡಿರಬೇಕು. ಉಗುರುಬೆಚ್ಚಗಿರುವ, ಸುಗಂಧಿಯುಕ್ತವಾದ ನೀರಿನಿಂದ ಬಾಣಂತಿಯು ಆಗ ಸ್ನಾನಮಾಡ ಬೇಕು; ಬಾಲಕನಿಗೂ ಮಾಡಿಸಬೇಕು. ಆಮೇಲೆ ನಾಡಿಛೇದನ ಆಂದರೆ, ಶಿಶುವಿನ ಹೊಕ್ಕಳಿನ ಮೂಲದಲ್ಲಿ ಒಂದು ಮೃದುವಾದ ದಾರವನ್ನು ಕಟ್ಟಿ, ನಾಲ್ಕಂಗುಲ ಬಿಟ್ಟು ಮೇಲಿನಿಂದ ಕತ್ತರಿಸಬೇಕು. ಶರೀರದಿಂದ ಒಂದು ಹನಿ ರಕ್ತವೂ ಹೋಗಲವಕಾಶವಿಲ್ಲದಂತೆ ಆದನ್ನು ಕಟ್ಟಬೇಕು. ಆ ಮೇಲೆ ಆ ಸ್ಥಳವನ್ನು ಶುದ್ಧಗೊಳಿಸಿ, ಅದರ ಬಾಗಿಲಿನ ಒಳಭಾಗವಲ್ಲಿ ಸುಗಂಧಾದಿಯುಕ್ತವಾದ ತುಪ್ಪ ಮೊದಲಾದುವುಗಳ ಹೋಮಮಾಡಬೇಕು. ಆ ಮೇಲೆ ತಂದೆಯು ಮಗುವಿನ ಕಿವಿಯಲ್ಲಿ "ವೇದೋಽಸಿ" ಆಂದರೆ ನಿನ್ನ ಹೆಸರು "ವೇದ" ಎಂದು ಹೇಳಿ, ತುಪ್ಪ ಮತ್ತು ಜೇನುತುಪ್ಪವನ್ನು ತೆಗೆದುಕೊಂಡು, ಚಿನ್ನದ ಶಲಾಕೆಯಿಂದ ನಾಲಿಗೆಯ ಮೇಲೆ "ಓಂ" ಎಂದು ಬರೆದು, ಅದೇ ಶಲಾಕೆಯಿಂದ ಜೇನುತುಪ್ಪವನ್ನೂ, ತುಪ್ಪವನ್ನೂ ನೆಕ್ಕಿಸಬೇಕು; ಆ ಮೇಲೆ

ಆವನ್ನು ಅದರ ತಾಯಿಯ ಹತ್ತಿರ ಕೊಡಬೇಕು. ಶಿಶುವು ಹಾಲು ಕುಡಿಯಬಯಸಿದರೆ, ಅದರ ತಾಯಿ ಕುಡಿಸಬೇಕು. ತಾಯಿಯ ಎದೆಯಲ್ಲಿ ಹಾಲಿಲ್ಲವಾದರೆ, ಯಾವಳಾದರೂ ಸ್ತ್ರೀಯನ್ನು ಪರೀಕ್ಷಿಸಿ, ಅದರ ಹಾಲನ್ನು ಕುಡಿಸಬೇಕು. ಆ ಮೇಲೆ ಶುದ್ಧವಾಯುವನ್ನುಳ್ಳ ಬೇರೆ ಕೊಠಡಿಯಲ್ಲಿ ಸುಗಂಧಿತವಾದ ತುಪ್ಪದಿಂದ ಬೆಳಿಗ್ಗೆ ಮತ್ತು ಸಾಯಂಕಾಲ ಹೋಮಮಾಡಬೇಕು ಮತ್ತು ಅಲ್ಲಿಯೇ ಬಾಣಂತಿಯನ್ನೂ, ಶಿಶುವನ್ನೂ ಇರಿಸಬೇಕು. ಆರು ದಿನಗಳವರಿಗೆ ಮಗುವು ತಾಯಿಯ ಹಾಲನ್ನು ಕುಡಿಯಬೇಕು. ಮತ್ತು ಸ್ತ್ರೀಯೂ ಸಹ ತನ್ನ ಶರೀರದ ಪುಷ್ಟಿಗಾಗಿ, ಅನೇಕಬಗೆಯ ಉತ್ತಮವಾದ ಭೋಜನ ಮಾಡಬೇಕು ಮತ್ತು ಯೋನಿಸಂಕೋಚ ಮೊದಲಾದುವನ್ನೂ ಮಾಡಬೇಕು. ಆರನೆಯ ದಿನ ಸ್ತ್ರೀಯು ಹೊರಹೊರಡಬೇಕು ಮತ್ತು ಮಗುವಿಗೆ ಹಾಲನ್ನು ಕುಡಿಸಲು ಯಾವಳಾದರೂ ದಾದಿಯನ್ನಿಡಬೇಕು. ಅವಳಿಗೆ ಉತ್ತಮವಾದ ಅನ್ನಪಾನಗಳನ್ನು ಕೊಡಬೇಕು. ಆವಳು ಮಗುವಿಗೆ ಹಾಲನ್ನು ಕುಡಿಸಬೇಕು ಮತ್ತು ಪಾಲಿಸಬೇಕು. ಆದರೆ ತಾಯಿಯು ಮಗುವಿನ ಕಡೆ ಪೂರ್ಣ ಗಮನವನ್ನಿಡಬೇಕು. ಅದರ ಪಾಲನೆಯಲ್ಲಿ ಯಾವ ರೀತಿಯ ಅನುಚಿತ ವ್ಯವಹಾರವೂ ಆಗಬಾರದು. ಸ್ತ್ರೀಯ ಹಾಲನ್ನು ತಡೆಗಟ್ಟಲು, ಅದು ಸುರಿದುಹೋಗದಂತೆ ಸ್ತನದ ಅಗ್ರಭಾಗಕ್ಕೆ ಲೇಪನಮಾಡಿಕೊಳ್ಳಬೇಕು. ಇದೇರೀತಿ ಅನ್ನಪಾನಗಳ ವ್ಯವಹಾರವನ್ನೂ ಯೋಗ್ಯರೀತಿಯಲ್ಲಿಟ್ಟುಕೊಳ್ಳಬೇಕು. ಅನಂತರ ನಾಮಕರಣ ಮೊದಲಾದ ಸಂಸ್ಕಾರಗಳನ್ನೂ ಸಂಸ್ಕಾರವಿಧಿಯಲ್ಲಿನ ರೀತಿಯಲ್ಲಿ ಕಾಲಕಾಲಕ್ಕೆ ಮಾಡುತ್ತಾ ಹೋಗಬೇಕು. ಸ್ತ್ರೀಯು ಪುನಃ ರಜಸ್ವಲೆಯಾಗಿ, ಶುದ್ಧಳಾದ ಮೇಲೆ, ಅದೇ ರೀತಿ ಋತುದಾನ ಮಾಡಬೇಕು.

ಋತುಕಾಲಾಭಿಗಾಮೀ ಸ್ಯಾತ್ಸ್ವದಾರನಿರತಃ ಸದಾ।
ಬ್ರಹಚಾರ್ಯೇವ ಭವತಿ ಯತ್ರತತ್ರಾಶ್ರಮೇವಸನ್॥

[ಮನು ೩-೫೦]

ಯಾವನು ತನ್ನ ಪತ್ನಿಯಿಂದಲೇ ಸಂತುಷ್ಟನಾಗಿ, ಋತು

ಕಾಲದಲ್ಲಿ ಸ್ತ್ರೀಸಂಗ ಮಾಡುವವನೂ ಆಗಿರುತ್ತಾನೋ, ಆ ಗೃಹಸ್ಥನೂ ಸಹ ಬ್ರಹ್ಮಚಾರಿಗೆ ಸಮಾನನು.

ಸಂತುಷ್ಟೋ ಭಾರ್ಯಯಾ ಭರ್ತಾ ಭರ್ತ್ರಾ ಭಾರ್ಯಾ ತಥೈವ ಚ।
ಯಸ್ಮಿನ್ನೇವ ಕುಲೇ ನಿತ್ಯಂ ಕಲ್ಯಾಣಂ ತತ್ರ ವೈ ಧ್ರುವಂ ॥೧॥

ಯದಿ ಹಿ ಸ್ತ್ರೀ ನ ರೋಚೇತ ಪುಮಾಂಸಂ ನ ಪ್ರಮೋದಯೇತ್।
ಅಪ್ರಮೋದಾತ್ಪುನಃ ಪುಂಸಃ ಪ್ರಜನಂ ನ ಪ್ರವರ್ತತೇ ॥೨॥

ಸ್ತ್ರಿಯಾಂ ತು ರೋಚಮಾನಾಯಾಂ ಸರ್ವಂ ತದ್ರೋಚತೇ ಕುಲಂ।
ತಸ್ಯಾಂತ್ವರೋಚಮಾನಾಯಾಂ ಸರ್ವಮೇವ ನರೋಚತೇ॥೩॥

ಯಾವ ಕುಲದಲ್ಲಿ ಪತ್ನಿಯಿಂದ ಪತಿಯೂ, ಪತಿಯಿಂದ ಪತ್ನಿಯೂ, ಚೆನ್ನಾಗಿ ಸಂತುಷ್ಟರಾಗಿರುತ್ತಾರೋ, ಆ ಕುಲದಲ್ಲಿಯೇ ಸಕಲ ಸೌಭಾಗ್ಯಗಳೂ, ಐಶ್ವರ್ಯಗಳೂ, ನಿವಾಸಮಾಡುತ್ತವೆ. ಎಲ್ಲಿ ಕಲಹವಾಗುತ್ತದೋ ಅಲ್ಲಿ ದುರ್ಭಾಗ್ಯ, ಮತ್ತು ದಾರಿದ್ರ್ಯ ನೆಲಸುತ್ತವೆ. ॥೧॥ ಸ್ತ್ರೀಯು ಪತಿಗೆ ಪ್ರೀತಿ ತೋರಿಸಿ, ಅವನನ್ನು ಸಂತೋಷಪಡಿಸದಿದ್ದರೆ, ಪತಿಯು, ಪ್ರಸನ್ನನಾಗಿರುವದರಿಂದ ಕಾಮವೇ ಉತ್ಪನ್ನವಾಗುವದಿಲ್ಲ. ॥೨॥ ಸ್ತ್ರೀಯ ಪ್ರಸನ್ನತೆಯಿಂದ ಸಮಸ್ತ ಕುಲವೂ ಪ್ರಸನ್ನವಾಗಿರುತ್ತದೆ: ಅವಳ ಅಪ್ರಸನ್ನತೆಯಲ್ಲಿ ಎಲ್ಲವೂ ಅಪ್ರಸನ್ನವಾಗಿ, ಅಂದರೆ ದುಃಖದಾಯಕವಾಗಿ ಹೋಗುತ್ತದೆ. ॥೩॥

ಪಿತೃಭಿರ್ಭ್ರಾತೃಭಿಶ್ಚೈತಾಃ ಪತಿಭಿರ್ದೇವರೈಸ್ತಥಾ।
ಪೂಜ್ಯಾ ಭೂಷಯಿತವ್ಯಾಶ್ಚ ಬಹುಕಲ್ಯಾಣಮೀಪ್ಸುಭಿಃ ॥೧॥

ಯತ್ರ ನಾರ್ಯಸ್ತು ಪೂಜ್ಯಂತೇ ರಮಂತೇ ತತ್ರ ದೇವತಾಃ।
ಯತ್ರೈತಾಸ್ತು ನ ಪೂಜ್ಯಂತೇ ಸರ್ವಾಸ್ತತ್ರಾಫಲಾಃ ಕ್ರಿಯಾಃ॥

ಶೋಚಂತಿ ಜಾಮಯೋ ಯತ್ರ ವಿನಶ್ಯತ್ಯಾಶು ತತ್ಕುಲಮ್।
ನ ಶೋಚಂತಿ ತು ಯತ್ರೈತಾ ವರ್ಧತೇ ತದ್ಧಿ ಸರ್ವದಾ ॥೩॥

ತಸ್ಮಾದೇತಾ ಸದಾ ಪೂಜ್ಯಾ ಭೂಷಣಾಚ್ಛಾದನಾಶನೈಃ।
ಭೂತಿಕಾಮೈರ್ನರೈರ್ನಿತ್ಯಂ ಸತ್ಕಾರೇಷೂತ್ಸವೇಷುಚ ॥೪॥

[ಮನು. ೩, ೫೫, ೫೯, ೬೯]

ಬಹು ಕಲ್ಯಾಣವನ್ನು ಬಯಸುವವರಾದ ತಂದೆ, ಸಹೋದರ, ಗಂಡ ಮತ್ತು ಮೈದುನ ಇವರು ಈ ಸ್ತ್ರೀಯರನ್ನು ಸತ್ಕಾರಪೂರ್ವಕವಾಗಿ, ಒಡವೆ ಮೊದಲಾದುವುಗಳಿಂದ ಸಂತೋಷವಾಗಿಟ್ಟುಕೊಂಡಿರಬೇಕು. ॥೧॥ ಯಾವ ಗೃಹದಲ್ಲಿ ಸ್ತ್ರೀಯರ ಸತ್ಕಾರವಾಗುತ್ತದೆಯೋ ಅದರಲ್ಲಿ ಪುರುಷರು ದಿವ್ಯಾಯುಕ್ತರಾಗಿ, 'ದೇವ' ಶಬ್ದದಿಂದ ಕರೆಯಲ್ಪಡುವವರಾಗಿ, ಆನಂದದಿಂದ ನಿವಸಿಸುತ್ತಾರೆ; ಮತ್ತು ಯಾವ ಮನೆಯಲ್ಲಿ ಸತ್ಕಾರವಾಗುವುದಿಲ್ಲವೋ, ಅಲ್ಲಿ ಎಲ್ಲಾ ಕ್ರಿಯೆಗಳೂ ನಿಷ್ಫಲವಾಗಿಹೋಗುತ್ತವೆ. ॥೨॥ ಯಾವ ಮನೆಯಲ್ಲಿ ಅಥವಾ ಕುಲದಲ್ಲಿ ಸ್ತ್ರೀಯರು ಶೋಕಾತುರರಾಗಿ, ಮುಖಹೊಂದುತ್ತಿರುವರೋ, ಆ ಕುಲವು ಬೇಗ ನಷ್ಟಭ್ರಷ್ಟವಾಗಿಹೋಗುತ್ತದೆ; ಮತ್ತು ಯಾವ ಮನೆಯಲ್ಲಿ ಅಥವಾ ಕುಲದಲ್ಲಿ ಸ್ತ್ರೀಯರು ಆನಂದಯುಕ್ತರಾಗಿ, ಉತ್ಸಾಹ ಸಂತೋಷಭರಿತರಾಗಿರುತ್ತಾರೋ ಆ ಕುಲವು ಸರ್ವದಾ ವರ್ಧಿಸುತ್ತಿರುತ್ತದೆ ॥೩॥ ಆದುದರಿಂದ, ಸತ್ಕಾರ ಮತ್ತು ಉತ್ಸವದ ಸಂದರ್ಭಗಳಲ್ಲಿ ಸ್ತ್ರೀಯರನ್ನು ಒಡವೆ, ವಸ್ತ್ರ ಮತ್ತು ಭೋಜನ ಮೊದಲಾದವುಗಳಿಂದ ಪ್ರತಿದಿನವೂ ಆದರಿಸುವುದು ಐಶ್ವರ್ಯವನ್ನಪೇಕ್ಷಿಸುವ ಪುರುಷರಿಗೆ ಯೋಗ್ಯವಾಗಿರುತ್ತದೆ. ॥೪॥

"ಪೂಜೆ" ಎಂದರೆ "ಸತ್ಕಾರ" ಎಂಬುದನ್ನು ಯಾವಾಗಲೂ ಗಮನದಲ್ಲಿಟ್ಟುರಬೇಕು. ಮತ್ತು ಹಗಲೂ ರಾತ್ರಿ, ಮೊದಲುಸಾರಿ ಸಂಧಿಸುವಾಗ ಅಥವಾ ಬೇರೆಯಾಗುವಾಗ, ಪ್ರೀತಿಯಿಂದ ಒಬ್ಬರಿಗೊಬ್ಬರು "ನಮಸ್ತೇ" ಮಾಡಬೇಕು.

ಸದಾ ಪ್ರಹೃಷ್ಟಯಾ ಭಾವ್ಯಂ ಗೃಹಕಾರ್ಯೇಷು ದಕ್ಷಯಾ।
ಸುಸಂಸ್ಕೃತೋಪಸ್ಕರಯಾ ವ್ಯಯೇ ಚಾಮುಕ್ತಹಸ್ತಯಾ ॥

[ಮನು. ೫-೧೫೦]

ಅತಿ ಸಂತೋಷದಿಂದ, ಗೃಹಕೃತ್ಯಗಳಲ್ಲಿ ಚತುರೆಯೂ, ಎಲ್ಲಾ ಪದಾರ್ಥಗಳನ್ನು ಹದಗೊಳಿಸುವವಳೂ ಆಗಿ, ಮನೆಯನ್ನು ಚೊಕ್ಕಟವಾಗಿಟ್ಟುಕೊಳ್ಳುವುದು ಸ್ತ್ರೀಗೆ ಉಚಿತವು. ಮತ್ತು ವೆಚ್ಚಮಾಡುವುದರಲ್ಲಿ ಅತ್ಯಂತ ಉದಾರಳಾಗಿರಬಾರದು, ಅಂದರೆ ಯುಕ್ತವಾದ ರೀತಿಯಲ್ಲಿ ವ್ಯಯಮಾಡಬೇಕು. ಮತ್ತು ಸರ್ವ ವಸ್ತುಗಳನ್ನೂ ಶುದ್ಧಗೊಳಿಸಿ, ಔಷಧಿರೂಪವಾಗಿ ಪರಿಣಮಿಸಿ ಶರೀರದಲ್ಲಿಯೂ, ಆತ್ಮದಲ್ಲಿಯೂ ರೋಗವು ಪ್ರವೇಶಿಸಲೆಡೆಕೊಡದಂತಹ ಅಡಿಗೆಯನ್ನು ಮಾಡಬೇಕು. ಆಯವ್ಯಯಗಳಿಲ್ಲದರ ಲೆಕ್ಕವನ್ನೂ ಕ್ರಮವಾಗಿಟ್ಟು, ಪತಿ ಮೊದಲಾದವರಿಗೆ ತಿಳಿಸುತ್ತಿರಬೇಕು. ಮನೆಯ ಆಳುಕಾಳುಗಳಿಂದ ಸರಿಯಾಗಿ ಕೆಲಸಮಾಡಿಸಬೇಕು : ಮನೆಯ ಯಾವ ಕೆಲಸವೂ ಕೆಟ್ಟುಹೋಗದಂತೆ ನೋಡಿಕೊಳ್ಳಬೇಕು.

ಸ್ತ್ರೀಯೋ ರತ್ನಾನ್ಯಥೋವಿದ್ಯಾ ಸತ್ಯಂ ಶೌಚಂ ಸುಭಾಷಿತಂ ।
ವಿವಿಧಾನಿಚ ಶಿಲ್ಪಾನಿ ಸಮಾದೇಯಾನಿ ಸರ್ವತಃ ॥

[ಮನು ೨-೨೪೦]

ಉತ್ತಮ ಸ್ತ್ರೀಯರನ್ನೂ, ನಾನಾಬಗೆಯ ರತ್ನಗಳನ್ನೂ, ವಿದ್ಯೆಯನ್ನೂ, ಸತ್ಯವನ್ನೂ ಪವಿತ್ರತೆಯನ್ನೂ, ಶ್ರೇಷ್ಠ ಭಾಷಣಗಳನ್ನೂ, ಮತ್ತು ನಾನಾಪ್ರಕಾರದ ಶಿಲ್ಪವಿದ್ಯೆ ಅಂದರೆ ಕೈಗಾರಿಕೆಯನ್ನೂ ಎಲ್ಲಾ ದೇಶಗಳಿಂದಲೂ ಮತ್ತು ಮನುಷ್ಯರಿಂದಲೂ ಗ್ರಹಿಸಬೇಕು.

ಸತ್ಯಂ ಬ್ರೂಯಾತ್ ಪ್ರಿಯಂ ಬ್ರೂಯಾತ್ ನ ಬ್ರೂಯಾ
ತ್ಸತ್ಯಮಪ್ರಿಯಂ ।
ಪ್ರಿಯಂ ಚ ನಾನೃತಂ ಬ್ರೂಯಾದೇಷ ಧರ್ಮಃ ಸನಾತನಃ ॥
ಭದ್ರಂ ಭದ್ರಮಿತಿ ಬ್ರೂಯಾದ್ಭದ್ರಮಿತ್ಯೇವ ವಾ ವದೇತ್ ।
ಶುಷ್ಕವೈರಂ ವಿವಾದಂ ಚ ನಕುರ್ಯಾತ್ಕೇನಚಿತ್ಸಹ ॥

[ಮನು ೪-೧೩೮-೧೩೯]

ಜೇರೆಯವರಿಗೆ ಹಿತವಾಡುವ ಪ್ರಿಯವಾದ ಸತ್ಯವನ್ನು ಸದಾ ಹೇಳಬೇಕು. ಅಪ್ರಿಯವಾದ ಸತ್ಯವನ್ನಾಡಬಾರದು. ಅಂದರೆ,

ಒಕ್ಕಣ್ಣನನ್ನು ಒಕ್ಕಣ್ಣನೆಂದು ಕೂಗಬಾರದು. ಅಸತ್ಯವನ್ನು, ಅಂದರೆ ಸುಳ್ಳನ್ನು, ಬೇರೆಯವರನ್ನು ಸಂತೋಷಪಡಿಸುವ ಸಲುವಾಗಿ ಹೇಳಬಾರದು. ॥೧॥ ಯಾವಾಗಲೂ ಭದ್ರವನ್ನು ಅಂದರೆ ಸರ್ವಹಿತ ಸಾಧಕವಾದ ವಚನವನ್ನು ಆಡಬೇಕು. ದುಷ್ಕೃವೈರವನ್ನು ಮಾಡಬಾರದು. ಅಂದರೆ ಯಾರೊಂದಿಗೂ ಅಪರಾಧವಿಲ್ಲದೆ ವಿರೋಧವನ್ನಾಗಲಿ, ವಿವಾದವನ್ನಾಗಲಿ ಮಾಡಬಾರದು. ಯಾವ ಯಾವದು ಅನ್ಯರಿಗೆ ಹಿತಕರವಾಗಿರುವುದೋ ಅದನ್ನು ಬೇರೆಯವರು ಕೆಟ್ಟದಾಗಿ ಎಣಿಸಿದರೂ ಸಹ ಹೇಳದೇಬಿಡಬಾರದು. ॥೨॥

ಪುರುಷಾ ಬಹವೋ ರಾಜ್ಞ ಸತತಂ ಪ್ರಿಯವಾದಿನಃ ।
ಅಪ್ರಿಯಸ್ಯ ತು ಪಥ್ಯಸ್ಯ ವಕ್ತಾ ಶ್ರೋತಾ ಚ ದುರ್ಲಭಃ ॥

[ಉದ್ಯೋಗಪರ್ವ–ವಿದುರನೀತಿ]

ಹೇ ಧೃತರಾಷ್ಟ್ರ! ಈ ಪ್ರಪಂಚದಲ್ಲಿ ಇತರರನ್ನು ಸಂತೋಷಪಡಿಸುವುದಕ್ಕಾಗಿ ಪ್ರಿಯವನ್ನಾಡುವ ಹೊಗಳುಭಟರು ಬೇಕಾವಷ್ಟು ಜನರಿದ್ದಾರೆ. ಆದರೆ ಕೇಳುವವರಿಗೆ ಅಪ್ರಿಯವೆಂದು ತಿಳಿದಿದ್ದರೂ ಸಹ ಹಿತಕರವಾದ ಮಾತುಗಳನ್ನು ಹೇಳುವವರೂ ಕೇಳುವವರೂ ದುರ್ಲಭರು. ಯಾಕೆಂದರೆ, ಇತರರ ದೋಷಗಳನ್ನು ಅವರೆದಿರಿನಲ್ಲಿ ಹೇಳುವುದೂ, ತಮ್ಮ ದೋಷಗಳನ್ನು ಅವರಿಂದ ತಿಳಿದುಕೊಳ್ಳುವುದೂ, ಪರೋಕ್ಷದಲ್ಲಿ ಇತರರ ಗುಣಗಳನ್ನು ಯಾವಾಗಲೂ ಹೇಳುವುದೂ ಸತ್ಪುರುಷರಿಗೆ ಯೋಗ್ಯವಾದುದು. ದುಷ್ಟರು ಇತರರ ಎದುರಿಗೆ ಅವರ ಗುಣಗಳನ್ನು ಮಾತ್ರ ಹೇಳಿ, ಹಿಂದುಗಡೆ ಅವರ ದೋಷಗಳನ್ನು ಹೇಳುವರು. ಮನುಷ್ಯನು ತನ್ನ ದೋಷಗಳನ್ನು ಇತರರ ಮುಂದೆ ಹೇಳಲು ಹಿಂದೆಗೆಯುವವರೆಗೂ ಅವನು ಗುಣವಂತನಾಗಲಾರನು. ಎಂದೂ ಯಾರನ್ನೂ ನಿಂದಿಸಬಾರದು. ಹೇಗೆಂದರೆ,

"**ಗುಣೇಷುದೋಷಾರೋಪಣಮಸೂಯಾ**" ಅರ್ಥಾತ್ "ದೋಷೇಷುಗುಣಾರೋಪಣಮಪ್ಯಸೂಯಾ" "ಗುಣೇಷುಗುಣಾರೋಪಣಂ ದೋಷೇಷು ದೋಷಾರೋಪಣಂ ಚ ಸ್ತುತಿಃ" ಅಂದರೆ, ಗುಣಗಳಲ್ಲಿ ದೋಷಗಳನ್ನೂ, ದೋಷಗಳಲ್ಲಿ ಗುಣಗಳನ್ನೂ ಆರೋಪಿ

ಸುವುದಕ್ಕೆ 'ನಿಂದೆ'ಯೆಂದು ಹೆಸರು. ಗುಣಗಳನ್ನು ಗುಣಗಳೆಂದೂ, ದೋಷಗಳನ್ನು ದೋಷಗಳೆಂದೂ, ಹೇಳುವುದಕ್ಕೆ ಸ್ತುತಿಯೆಂದು ಹೆಸರು. ಅಂದರೆ, ಸುಳ್ಳಾಡುವುದಕ್ಕೆ ನಿಂದೆಯೆಂದೂ, ಸತ್ಯಹೇಳುವುದಕ್ಕೆ ಸ್ತುತಿಯೆಂದೂ ಹೆಸರು.

ಬುದ್ಧಿವೃದ್ಧಿಕರಾಣ್ಯಾಶು ಧನ್ಯಾನಿ ಚ ಹಿತಾನಿ ಚ ।
ನಿತ್ಯಂ ಶಾಸ್ತ್ರಾಣ್ಯವೇಕ್ಷೇತ ನಿಗಮಾಂಶ್ಚೈವ ವೈದಿಕಾನ್ ॥೧॥
ಯಥಾ ಯಥಾ ಹಿ ಪುರುಷಃ ಶಾಸ್ತ್ರಂ ಸಮಧಿಗಚ್ಛತಿ ।
ತಥಾ ತಥಾ ವಿಜಾನಾತಿ ವಿಜ್ಞಾನಂ ಚಾಸ್ಯ ರೋಚತೇ ॥೨॥

[ಮನು. ೪, ೧೯-೨೦]

ಬುದ್ಧಿಯನ್ನೂ, ಧನವನ್ನೂ, ಹಿತವನ್ನೂ ಶೀಘ್ರವಾಗಿ ವೃದ್ಧಿಪಡಿಸುವ ಶಾಸ್ತ್ರಗಳನ್ನೂ, ವೇದಗಳನ್ನೂ ನಿತ್ಯವೂ ಕೇಳುತ್ತಲೂ, ಹೇಳುತ್ತಲೂ ಇರಬೇಕು. ಬ್ರಹ್ಮಚರ್ಯಾಶ್ರಮದಲ್ಲಿ ಓದಿದುವುಗಳನ್ನು ಸ್ತ್ರೀಪುರುಷರು ನಿತ್ಯವೂ ಮನನಮಾಡುತ್ತಲೂ, ಕಲಿಸುತ್ತಲೂ ಇರಬೇಕು. ॥೧॥ ಏಕೆಂದರೆ, ಮಾನವನು ಶಾಸ್ತ್ರೀಯತತ್ವಗಳನ್ನು ಚಿಂತಿಸುತ್ತಾಹೋದಷ್ಟೂ ಆತನ ವಿಜ್ಞಾನವು ವರ್ಧಿಸಿ, ಅದರಲ್ಲಿ ಅಭಿರುಚಿ ಹೆಚ್ಚುತ್ತಾ ಹೋಗುತ್ತದೆ. ॥೨॥

ಋಷಿಯಜ್ಞಂ ದೇವಯಜ್ಞಂ ಭೂತಯಜ್ಞಂ ಚ ಸರ್ವದಾ ।
ನೃಯಜ್ಞಂ ಪಿತೃಯಜ್ಞಂ ಚ ಯಥಾಶಕ್ತಿ ನ ಹಾಪಯೇತ್॥೧॥

[ಮನು. ೪-೨೧]

ಅಧ್ಯಾಪನಂ ಬ್ರಹ್ಮಯಜ್ಞಃ ಪಿತೃಯಜ್ಞಶ್ಚ ತರ್ಪಣಂ ।
ಹೋಮೋ ದೈವೋ ಬಲಿರ್ಭೌತೋ ನೃಯಜ್ಞೋಽತಿಥಿ-
ಪೂಜನಂ ॥೨॥
ಸ್ವಾಧ್ಯಾಯೇನಾರ್ಚಯೇತರ್ಷೀನ್ ಹೋಮೈರ್ದೇವಾನ್
ಯಥಾವಿಧಿ ।
ಪಿತೄನ್ ಶ್ರಾದ್ಧೈಶ್ಚ ನೃನನ್ನೈರ್ಭೂತಾನಿ ಬಲಿಕರ್ಮಣಾ ॥೩॥

ಬ್ರಹ್ಮಚರ್ಯಪ್ರಕರಣದಲ್ಲಿ ನಾವು ಎರಡು ಯಜ್ಞಗಳ ಬಗ್ಗೆ ವಿವೇಚನೆಮಾಡಿದ್ದೇವೆ. ಒಂದನೆಯದು ಬ್ರಹ್ಮಯಜ್ಞ, ಅಂದರೆ, ವೇದಾದಿ ಸತ್ಯಶಾಸ್ತ್ರಗಳ ಅಧ್ಯಯನ ಮತ್ತು ಅಧ್ಯಾಪನ, ಸಂಧ್ಯೋಪಾಸನೆ ಮತ್ತು ಯೋಗಾಭ್ಯಾಸ. ಎರಡನೆಯದು ದೇವಯಜ್ಞ, ವಿದ್ವಾಂಸರ ಸಂಗ, ಸೇವೆ, ಪವಿತ್ರತೆ, ದಿವ್ಯಗುಣಧಾರಣೆ, ದಾತೃತ್ವ, ವಿದ್ಯಾಭಿವರ್ಧನ. ಈ ಎರಡು ಯಜ್ಞಗಳನ್ನೂ ನಿತ್ಯವೂ ಸಾಯಂಕಾಲ ಪ್ರಾತಃಕಾಲದಲ್ಲಿ ಮಾಡಬೇಕು.

ಸಾಯಂ ಸಾಯಂ ಗೃಹಪತಿರ್ನೋ ಅಗ್ನಿಃ ಪ್ರಾತಃ ಪ್ರಾತಃ
ಸೌಮನಸಸ್ಯ ದಾತಾ ॥೧॥
ಪ್ರಾತಃ ಪ್ರಾತಃ ಗೃಹಪತಿರ್ನೋ ಅಗ್ನಿಃ ಸಾಯಂ ಸಾಯಂ
ಸೌಮನಸಸ್ಯ ದಾತಾ ॥೨॥
ತಸ್ಮಾದಹೋರಾತ್ರಸ್ಯ ಸಂಯೋಗೇ ಬ್ರಾಹ್ಮಣಃ ಸಂಧ್ಯಾ-
ಮುಪಾಸೀತ ।
ಉದ್ಯಂತಮಸ್ತ್ಯಂತಮಾದಿತ್ಯಮಭಿಧ್ಯಾಯನ್ ॥೩॥
ನತಿಷ್ಠತಿ ತು ಯಃ ಪೂರ್ವಾಂ ನೋಪಾಸ್ತೇ ಯಸ್ತು ಪಶ್ಚಿಮಾಂ।
ಸ ಶೂದ್ರವದ್ಬಹಿಷ್ಕಾರ್ಯಃ ಸರ್ವಸ್ಮಾದ್ದ್ವಿಜಕರ್ಮಣಃ ॥೪॥
[ಮನು-೨-೧೦೩]

ಸಾಯಂಕಾಲದಲ್ಲಿ ಹೋಮಮಾಡಲ್ಪಟ್ಟ ದ್ರವ್ಯವು ಪ್ರಾತಃಕಾಲದವರೆಗೆ ವಾಯುವನ್ನು ಶುದ್ಧಗೊಳಿಸಿ ಸುಖಕಾರಿಯಾಗುತ್ತದೆ.॥೧॥ ಪ್ರಾತಃಕಾಲದಲ್ಲಿ ಹೋಮಮಾಡಲ್ಪಟ್ಟ ದ್ರವ್ಯವು ಸಾಯಂಕಾಲದವರೆಗೆ ವಾಯುವನ್ನು ಶುದ್ಧಗೊಳಿಸಿ, ಬಲ, ಬುದ್ಧಿ, ಹಾಗೂ ಆರೋಗ್ಯವನ್ನು ವರ್ಧಿಸುತ್ತದೆ, ॥೨॥ ಆದುದರಿಂದ, ಹಗಲಿರುಳುಗಳ ಸಂಧಿಕಾಲದಲ್ಲಿ, ಅಂದರೆ, ಸೂರ್ಯೋದಯ ಮತ್ತು ಸೂರ್ಯಾಸ್ತಮಯಗಳಲ್ಲಿ ಭಗವದ್ಧ್ಯಾನವನ್ನೂ, ಅಗ್ನಿಹೋತ್ರವನ್ನೂ ಅವಶ್ಯವಾಗಿ ಮಾಡಬೇಕು. ॥೩॥ ಬೆಳಿಗ್ಗೆ, ಸಂಜೆ ಈ ಎರಡುಕಾರ್ಯಗಳನ್ನೂ ಮಾಡದವರನ್ನು ಸಜ್ಜನರು ಸಮಸ್ತ ದ್ವಿಜಕರ್ಮಗಳಿಂದಲೂ ಬಹಿಷ್ಕರಿಸಬೇಕು. ಅಂದರೆ ಅವನನ್ನು ಶೂದ್ರನಂತೆ ತಿಳಿಯಬೇಕು. ॥೪॥

ಪ್ರಶ್ನೆ:—ಮೂರು ಕಾಲಗಳಲ್ಲಿ ಸಂಧ್ಯೋಪಾಸನೆಯನ್ನೇಕೆ ಮಾಡಬಾರದು ?

ಉತ್ತರ;—ಸಂಧಿಯು ಮೂರುಕಾಲಗಳಲ್ಲಿರುವದಿಲ್ಲ. ಪ್ರಕಾಶ ಮತ್ತು ಅಂಧಕಾರಗಳ ಸಂಧಿಯು ಸಾಯಂಕಾಲ ಮತ್ತು ಪ್ರಾತಃಕಾಲ ಗಳಲ್ಲಿ ಮಾತ್ರ ಆಗುತ್ತದೆ. ಇದನ್ನು ಆಲೋಚಿಸದೆ, ಮಧ್ಯಾಹ್ನ ಸಮಯದಲ್ಲಿ ಮೂರನೆಯ ಸಂಧ್ಯೆಯನ್ನು ಮಾಡಬೇಕೆಂದು ವಾದಿಸು ವರು. ಮಧ್ಯರಾತ್ರಿಯಲ್ಲಿಯೂ ಸಂಧ್ಯೋಪಾಸನೆಯನ್ನೇಕೆ ಮಾಡ ಬಾರದು ? ಮಧ್ಯರಾತ್ರಿಯಲ್ಲಿ ಸಂಧ್ಯೋಪಾಸನೆಯನ್ನು ಮಾಡು ವವನು, ಝಾಮು ಝಾಮುಗಳಿಗೂ, ಘಳಿಗೆ ಘಳಿಗೆಗಳಿಗೂ, ವಿಘಳಿಗೆ ವಿಘಳಿಗೆಗಳಿಗೂ, ಕ್ಷಣ ಕ್ಷಣಕ್ಕೂ ಸಂಧಿಯಾಗುವುದರಿಂದ ಆಗಲೂ ಸಹ ಸಂಧ್ಯೋಪಾಸನೆಯನ್ನು ಮಾಡಬೇಕಾಗುತ್ತದೆ. ಆದರೆ, ಇದು ಅಸಂಭವ. ಯಾವ ಶಾಸ್ತ್ರದಲ್ಲಿಯೂ, ಮಧ್ಯಾಹ್ನಕಾಲದಲ್ಲಿ ಸಂಧ್ಯಾ ವಂದನೆಯನ್ನು ಆಚರಿಸುವುದಕ್ಕೆ ಪ್ರಮಾಣವಿಲ್ಲ. ಆದುದರಿಂದ, ಬೆಳಗ್ಗೆ ಸಂಜೆ ಮಾತ್ರ ಸಂಧ್ಯೋಪಾಸನೆಯನ್ನೂ, ಅಗ್ನಿಹೋತ್ರವನ್ನೂ ಆಚರಿಸುವುದು ಸಮುಚಿತವು; ಮೂರನೆಯ ಕಾಲದಲ್ಲಲ್ಲ. ಭೂತ ಭವಿಷ್ಯದ್ವರ್ತಮಾನಭೇದದಿಂದ ಮೂರುಕಾಲಗಳಿರುವವೇ ಹೊರತು, ಸಂಧ್ಯೋಪಾಸನೆಯ ಭೇದದಿಂದಲ್ಲ.

ಮೂರನೆಯದು ಪಿತೃಯಜ್ಞ, ವಿದ್ವಾಂಸರು, ಋಷಿಗಳು, ಪಿತೃಗಳು, ಅಂದರೆ–ತಂದೆತಾಯಿ, ವೃದ್ಧರು, ಜ್ಞಾನಿಗಳು, ಪರಮ ಯೋಗಿಗಳು ಮೊದಲಾದವರ ಸೇವೆ. ಇದರಲ್ಲಿ ಶ್ರಾದ್ಧ, ತರ್ಪಣ ಎಂದು ಎರಡು ಭೇದಗಳಿವೆ. ಶ್ರತ್ ಅಂದರೆ ಸತ್ಯ. **" ಶ್ರತ್ ಸತ್ಯಂ ದಧಾತಿ ಯಯಾ ಕ್ರಿಯಯಾ ಸಾ ಶ್ರದ್ಧಾ, ಶ್ರದ್ಧಯಾ ಯತ್ಕ್ರಿಯತೇ ತತ್ ಶ್ರಾದ್ಧಂ "** ಯಾವ ಕ್ರಿಯೆಯಿಂದ ಸತ್ಯಧಾರಣ ವಾಗುವದೋ ಅದು ಶ್ರದ್ಧೆ; ಆ ಶ್ರದ್ಧೆಯಿಂದ ಮಾಡುವ ಕರ್ಮಕ್ಕೆ ಶ್ರಾದ್ಧವೆಂದು ಹೆಸರು. **" ತೃಪ್ಯಂತಿ, ತರ್ಪಯಂತಿ ಯೇನಪಿತೄನ್ ತತ್ತರ್ಪಣಂ "** ಜೀವಿತರಾಗಿರುವ ಮಾತಾಪಿತೃಗಳನ್ನು ಸಂತೋಷ

ಪಡಿಸುವ ಕ್ರಿಯೆಗೆ ತರ್ಪಣವೆಂದು ಹೆಸರು. ಈ ತರ್ಪಣವು ಜೀವಂತ ರಾಗಿರುವವರಿಗೆ ವಿಹಿತವಾಗಿದೆಯೇ ಹೊರತು ಸತ್ತವರಿಗೋಸ್ಕರವಲ್ಲ.

ಓಂ ಬ್ರಹ್ಮಾದಯೋ ದೇವಾಸ್ತೃಪ್ಯಂತಾಂ । ಬ್ರಹ್ಮಾದಿ ದೇವಪತ್ನ್ಯಸ್ತೃಪ್ಯಂತಾಂ ಬ್ರಹ್ಮಾದಿದೇವಸುತಾಸ್ತೃಪ್ಯಂತಾಂ । ಬ್ರಹ್ಮಾದಿದೇವಗಣಾಸ್ತೃಪ್ಯಂತಾಂ ।

ಇತಿ ದೇವತರ್ಪಣಂ

" ವಿದ್ವಾಗ್ಂ ಸೋ ಹಿ ದೇವಾಃ " ಇದು ಶತಪಥಬ್ರಾಹ್ಮಣ ವಚನ. ವಿದ್ವಾಂಸರನ್ನೇ ' ದೇವರು ' ಎನ್ನುತ್ತಾರೆ. ನಾಲ್ಕು ವೇದ ಗಳನ್ನೂ ಸಾಂಗೋಪಾಂಗವಾಗಿ ಅಧ್ಯಯನಮಾಡಿರುವವರಿಗೆ ' ಬ್ರಹ್ಮ ' ಎಂದು ಹೆಸರು. ಆತನಿಗಿಂತ ಸ್ವಲ್ಪ ಕಡಿಮೆ ಶ್ರೇಣಿಯ ವಿದ್ವಾಂಸರಿಗೆ ' ದೇವರುಗಳು ' ಎಂದು ಹೆಸರು. ಅವರಿಗೆ ಸದೃಶರಾದ, ವಿದುಷಿಯ ರಾದ ಅವರ ಸ್ತ್ರೀಯರಿಗೆ, ' ಬ್ರಾಹ್ಮಣಿಯರು, ದೇವಿಯರು ಎಂದು ಹೆಸರು ಮತ್ತು ಅವರಿಗೆ ಸದೃಶರಾದ ಪುತ್ರರು, ಶಿಷ್ಯರು, ಹಾಗೂ ಅವರಿಗನುರೂಪರಾದ ' ಗಣ ' ಅಂದರೆ. ಸೇವಕರ, ಸೇವೆಮಾಡುವುದಕ್ಕೆ ತ್ರಾದ್ಧ ಮತ್ತು ತರ್ಪಣ ಎಂದು ಹೆಸರು

ಅಥರ್ಷಿತರ್ಪಣಂ

ಓಂ ಮರೀಚಾದಯಃ ಋಷಯಸ್ತೃಪ್ಯಂತಾಂ । ಮರೀಚಾದ್ಯೃಷಿಪತ್ನ್ಯಸ್ತೃಪ್ಯಂತಾಂ । ಮರೀಚಾದ್ಯೃಷಿಸುತಾಸ್ತೃಪ್ಯಂತಾಂ । ಮರೀಚಾದ್ಯೃಷಿಗಣಾಸ್ತೃಪ್ಯಂತಾಂ ॥

ಇತಿ ಋಷಿತರ್ಪಣಂ

ಬ್ರಹ್ಮನ ಪೌತ್ರನಾದ ಮರೀಚಿಯಂತೆ ಪೂರ್ಣವಿದ್ವಾಂಸರಾದ ಅಧ್ಯಾಪಕರನ್ನೂ, ಅವರಂತೆಯೇ ವಿದ್ಯಾವತಿಯರಾದ, ಕನ್ಯೆಯರಿಗೆ ವಿದ್ಯಾದಾನ ಮಾಡುತ್ತಿರುವ ಅವರ ಪತ್ನಿಯರನ್ನೂ, ಅವರಿಗೆ ಸಮಾನ ರಾದ ಅವರ ಪುತ್ರರನ್ನೂ, ಶಿಷ್ಯರನ್ನೂ, ಹಾಗೂ ಅವರಿಗನುರೂಪವ ಸೇವಕರನ್ನೂ ಸೇವಿಸುವುದಕ್ಕೆ ಮತ್ತು ಸತ್ಕರಿಸುವುದಕ್ಕೆ ಋಷಿ ತರ್ಪಣವೆಂದು ಹೆಸರು.

ಅಥ ಪಿತೃತರ್ಪಣಂ

ಓಂ ಸೋಮಸದಃ ಪಿತರಸ್ತೃಪ್ಯಂತಾಂ ॥೧॥ ಅಗ್ನಿಷ್ವಾ-ತ್ತಾಃಪಿತರಸ್ತೃಪ್ಯಂತಾಂ ॥೨॥ ಬರ್ಹಿಷದಃ ಪಿತರಃ ಸ್ತೃಪ್ಯಂತಾಂ ॥೩॥ ಸೋಮಪಾಃ ಪಿತರಸ್ತೃಪ್ಯಂತಾಂ ॥೪॥ ಹವಿರ್ಭುಜಃ ಪಿತರಸ್ತೃಪ್ಯಂತಾಂ ॥೫॥ ಆಜ್ಯಪಾಃ ಪಿತರ-ಸ್ತೃಪ್ಯಂತಾಂ ॥೬॥ [ಸುಕಾಲಿನಃ ಪಿತರಸ್ತೃಪ್ಯಂ ತಾಂ] ॥೭॥ ಯಮಾದಿ ಭ್ಯೋನಮಃ ಯಮಾದೀಂಸ್ತರ್ಪ ಯಾಮಿ ॥೮॥ ಪಿತ್ರೇ ಸ್ವಧಾ ನಮಃ ಪಿತರಂ ತರ್ಪ ಯಾಮಿ ॥೯॥ ಪಿತಾಮಹಾಯ ಸ್ವಧಾನಮಃ ಪಿತಾಮಹಂ ತರ್ಪಯಾಮಿ ॥೧೦॥ [ಪ್ರಪಿತಾಮಹಾಯಸ್ವಧಾ ನಮಃ ಪ್ರಪಿತಾಮಹಂ ತರ್ಪಯಾಮಿ] ॥೧೧॥ ಮಾತ್ರೇಸ್ವಧಾ ನಮೋಮಾತರಂ ತರ್ಪಯಾಮಿ ॥೧೨॥ ಪಿತಾಮ-ಹ್ಯೈಸ್ವಧಾನಮಃ ಪಿತಾ ಮಹೀಂ ತರ್ಪಯಾಮಿ ॥೧೩॥ [ಪ್ರಪಿತಾಮಹ್ಯೈಸ್ವಧಾನಮಃ ಪ್ರಪಿತಾಮಹೀಂ ತರ್ಪ-ಯಾಮಿ]॥೧೪॥ಸ್ವಪತ್ನ್ಯೈ ಸ್ವಧಾನಮಃ ಸ್ವಪತ್ನೀಂ ತರ್ಪ-ಯಾಮಿ ॥೧೫॥ ಸಂಬಂಧಿಭ್ಯಃ ಸ್ವಧಾನಮಃ ಸಂಬಂಧಿನ-ಸ್ತರ್ಪಯಾಮಿ ॥೧೬॥ ಸಗೋತ್ರೇಭ್ಯಃ ಸ್ವಧಾ ನಮಃ ಸಗೋತ್ರಾಂಸ್ತರ್ಪಯಾಮಿ ॥೧೭॥

ಇತಿ ಪಿತೃತರ್ಪಣಮ್

“ಯೇ ಸೋಮೇ ಜಗದೀಶ್ವರೇ ಪದಾರ್ಥವಿದ್ಯಾಯಾಂ ಚ ಸೀದಂತಿ ತೇ ಸೋಮಸದಃ” ಪರಮಾತ್ಮಸಂಬಂಧವಾದ ವಿದ್ಯೆಯಲ್ಲಿಯೂ, ಪದಾರ್ಥವಿದ್ಯೆಯಲ್ಲಿಯೂ ನಿಪುಣರಾದವರಿಗೆ “ಸೋಮಸದ”ರೆಂದು ಹೆಸರು. ॥೧॥ **“ಯೈರಗ್ನೇರ್ವಿದ್ಯುತೋ ವಿದ್ಯಾ ಗೃಹೀತಾ ತೇ ಅಗ್ನಿಷ್ವಾತ್ತಾಃ”** ಅಗ್ನಿ ಅಂದರೆ, ವಿದ್ಯುತ್ ಮೊದಲಾದ ಪದಾರ್ಥಗಳನ್ನು ಯಥಾರ್ಥವಾಗಿ ತಿಳಿದಿರುವವರಿಗೆ

" ಅಗ್ನಿಷ್ವಾತ್ತ "ರೆಂದು ಹೆಸರು. ॥೨॥ **" ಯೇ ಬರ್ಹಿಷಿ ಉತ್ತಮೇ ವ್ಯವಹಾರೇ ಸೀದಂತಿ ತೇ ಬರ್ಹಿಷದಃ "** ಉತ್ತಮವಾದ ವಿದ್ಯಾಭಿವೃದ್ಧಿಯ ವ್ಯವಹಾರದಲ್ಲಿ ಸ್ಥಿತರಾಗಿರುವವರಿಗೆ " ಬರ್ಹಿಷದ "ರೆಂದು ಹೆಸರು. ॥೩॥ **" ಯೇ ಸೋಮಮೈಶ್ವರ್ಯಮೋಷಧಿರಸಂ ವಾ ಪಾಂತಿ ಪಿಬಂತಿವಾ ತೇ ಸೋಮಪಾಃ "** ಐಶ್ವರ್ಯವನ್ನು ಕಾಪಾಡುವವರೂ, ಮಹೌಷಧಿಗಳ ರಸಪಾನ ಮಾಡಿ ರೋಗರಹಿತರಾಗಿರುವವರೂ, ಇತರರ ಸಂಪತ್ತನ್ನು ರಕ್ಷಿಸುವವರೂ, ಔಷಧಿಗಳನ್ನಿತ್ತು ಇತರರ ರೋಗ ನಿವಾರಣೆಮಾಡುವವರೂ ಆದವರಿಗೆ " ಸೋಮಪ "ರೆಂದು ಹೆಸರು. ॥೪॥ **" ಯೇ ಹವಿರ್ಹೋತುಮುತ್ತುಮರ್ಹಂ ಭುಂಜತೇ ಭೋಜಯಂತಿವಾ ತೇ ಹವಿರ್ಭುಜಃ "** ಮಾದಕ ಹಾಗೂ ಹಿಂಸಾಜನ್ಯ ದ್ರವ್ಯಗಳನ್ನು ವರ್ಜಿಸಿ, ಆರ್ಹವಾದುದನ್ನು ಊಟಮಾಡುವವರಿಗೆ " ಹವಿರ್ಭುಜ "ರೆಂದು ಹೆಸರು. ॥೫॥ **" ಯೇ ಆಜ್ಯಂ ಜ್ಞಾತುಂ ಪ್ರಾಪ್ತುಂವಾ ಯೋಗ್ಯಂ ರಕ್ಷಂತಿ ವಾ ಪಿಬಂತಿ ತೇ ಆಜ್ಯಪಾಃ "** ತಿಳಿಯಲೂ, ಗ್ರಹಿಸಲೂ, ಆರ್ಹವಾದ ವಸ್ತುಗಳನ್ನು ರಕ್ಷಿಸುವವರೂ, ಹಾಲು ತುಪ್ಪ ಮೊದಲಾದ ವಸ್ತುಗಳನ್ನು ಸೇವಿಸುವವರೂ, ಆದವರಿಗೆ " ಆಜ್ಯಪಾಃ " ಎಂದು ಹೆಸರು. ॥೬॥ **" ಶೋಭನಃ ಕಾಲೋ ವಿದ್ಯತೇ ಯೇಷಾಂ ತೇ ಸುಕಾಲಿನಃ "** ಧರ್ಮಾಚರಣೆಗೆ ಯೋಗ್ಯವಾದ ಸುಖಮಯವಾದ ಸಮಯವುಳ್ಳವರಿಗೆ " ಸುಕಾಲಿನ್ "ಗಳೆಂದು ಹೆಸರು.॥೭॥ **" ಯೇ ದುಷ್ಟಾ ಯಚ್ಛಂತಿ ನಿಗೃಹ್ಣಂತಿ ತೇ ಯಮಾ ನ್ಯಾಯಾಧೀಶಾಃ "** ದುಷ್ಟರನ್ನು ದಂಡಿಸಿ ಶ್ರೇಷ್ಠರನ್ನು ರಕ್ಷಿಸುವ ನ್ಯಾಯಾಧೀಶರಿಗೆ " ಯಮ "ರೆಂದು ಹೆಸರು. ॥೮॥ **" ಯಃ ಪಾತಿ ಸ ಪಿತಃ "** ಅನ್ನದಿಂದಲೂ ಸತ್ಕಾರದಿಂದಲೂ, ಸಂತತಿಯನ್ನು ಕಾಪಾಡುವವನಿಗೂ ತಂದೆಗೂ, " ಪಿತೃ " ಎಂದು ಹೆಸರು. ॥೯॥ **" ಪಿತುಃ ಪಿತಾ ಪಿತಾಮಹಃ, ಪಿತಾಮಹಸ್ಯ ಪಿತಾ ಪ್ರಪಿತಾಮಹಃ "** ತಂದೆಯ

ತಂದೆಗೆ "ಪಿತಾಮಹ"ನೆಂದೂ, ಪಿತಾಮಹನ ತಂದೆಗೆ "ಪ್ರಪಿತಾಮಹ"ನೆಂದೂ ಹೆಸರು. ||೧೦-೧೧|| **"ಯಾ ಮಾನಯತಿ ಸಾ ಮಾತಾ"** ಅನ್ನದಿಂದಲೂ ಸತ್ಕಾರದಿಂದಲೂ ಸಂತತಿಯನ್ನು ಕಾಪಾಡುವವಳಿಗೆ "ಮಾತೃ" ಎಂದು ಹೆಸರು. ||೧೨|| **"ಯಾ ಪಿತುರ್ಮಾತಾ ಸಾ ಪಿತಾಮಹೀ, ಪಿತಾಮಹಸ್ಯ ಮಾತಾ ಪ್ರಪಿತಾಮಹೀ"** ತಂದೆಯ ತಾಯಿಗೆ "ಪಿತಾಮಹಿ"ಯೆಂದೂ, ತಾತನ ತಾಯಿಗೆ "ಪ್ರಪಿತಾಮಹಿ"ಯೆಂದೂ ಹೆಸರು. ||೧೩-೧೪|| ತನ್ನ ಹೆಂಡತಿ, ಮತ್ತು ನಂಟರು, ಅಕ್ಕ, ತನ್ನ ಗೋತ್ರದವರು, ಅನ್ಯಭದ್ರಪುರುಷರು, ಅಥವಾ ವೃದ್ಧರು,--ಈ ಮೊದಲಾದವರನ್ನು ಅತ್ಯಂತ ಶ್ರದ್ಧೆಯಿಂದಲೂ, ಉತ್ತಮ ಅನ್ನವಸ್ತ್ರಗಳಿಂದಲೂ, ಸುಂದರವಾದ ವಾಹನಗಳಿಂದಲೂ, ತೃಪ್ತಿಪಡಿಸುವುದಕ್ಕೆ, ಅಂದರೆ ಯಾವ ಯಾವ ಕಾರ್ಯಗಳಿಂದ ಅವರ ಆತ್ಮವು ತೃಪ್ತವೂ, ಶರೀರವು ಸ್ವಸ್ಥವೂ ಆಗುವುದೋ ಆ ಕಾರ್ಯಗಳಿಂದ ಪ್ರೀತಿಪೂರ್ವಕವಾಗಿ ಅವರಿಗೆ ಸೇವೆ ಮಾಡುವದಕ್ಕೆ ಶ್ರಾದ್ಧ ಮತ್ತು ತರ್ಪಣವೆಂದು ಹೆಸರು.

ನಾಲ್ಕನೆಯದು---ವೈಶ್ವದೇವ- ಅಂದರೆ ಭೋಜನಪದಾರ್ಥವು ಸಿದ್ಧವಾಗುತ್ತಲೇ, ಹುಳಿ, ಉಪ್ಪು, ಮತ್ತು ಖಾರ---ಇವು ಸೇರಿರುವ ಪದಾರ್ಥಗಳನ್ನು ಬಿಟ್ಟು, ಸಕ್ಕರೆ, ತುಪ್ಪ, ಇವುಗಳೊಡನೆ ಬೆರೆತ ಅನ್ನವನ್ನೂ, ಒಲೆಯಿಂದ ಸ್ವಲ್ಪ ಬೆಂಕಿಯನ್ನೂ ಪ್ರತ್ಯೇಕವಾಗಿ ತೆಗೆದಿಟ್ಟು ಅದರಲ್ಲಿ ಕೆಳಗೆ ಕಂಡ ಮಂತ್ರಗಳಿಂದ ಆಹುತಿಯನ್ನಿಡಬೇಕು. ಮತ್ತು ಭಾಗವಿಡಬೇಕು.

ವೈಶ್ವದೇವಸ್ಯ ಸಿದ್ಧಸ್ಯ ಗೃಹೇಽಗ್ನೌ ವಿಧಿಪೂರ್ವಕಂ ।
ಆಭ್ಯಃ ಕುರ್ಯಾದ್ದೇವತಾಭ್ಯೋ ಬ್ರಾಹ್ಮಣೋ ಹೋಮ
ಮನ್ವಹಂ ॥

[ಮನು-೩-೮೪]

ಪಾಕಶಾಲೆಯಲ್ಲಿ ಸಿದ್ಧವಾದ ಭೋಜನಪದಾರ್ಥಗಳಲ್ಲಿ ಉತ್ತಮವಾದ ಗುಣವುಂಟಾಗುವುದಕ್ಕೋಸ್ಕರ ಪಾಕಾಗ್ನಿಯಲ್ಲಿ ಕೆಳಗೆ ಬರೆದ ಮಂತ್ರಗಳಿಂದ ವಿಧಿಪೂರ್ವಕವಾಗಿ ನಿತ್ಯ ಹೋಮ ಮಾಡಬೇಕು.

ಓಂ ಅಗ್ನಯೇ ಸ್ವಾಹಾ । ಸೋಮಾಯಸ್ವಾಹಾ । ಅಗ್ನೀಷೋಮಾಭ್ಯಾಂ ಸ್ವಾಹಾ । ವಿಶ್ವೇಭ್ಯೋ ದೇವಭ್ಯಃ ಸ್ವಾಹಾ । ಧನ್ವಂತರಯೇ ಸ್ವಾಹಾ । ಕುಹ್ವೈ ಸ್ವಾಹಾ । ಪ್ರಜಾಪತಯೇ ಸ್ವಾಹಾ । ಸಹ ದ್ಯಾವಾಪೃಥಿವೀಭ್ಯಾಂ ಸ್ವಾಹಾ । ಸ್ವಿಷ್ಟಕೃತೇ ಸ್ವಾಹಾ ।

ಉರಿಯುತ್ತಿರುವ ಅಗ್ನಿಯಲ್ಲಿ ಈ ಪ್ರತಿ ಒಂದು ಮಂತ್ರದಿಂದಲೂ, ಒಂದೊಂದು ಆಹುತಿಯನ್ನು ಕೊಡಬೇಕು. ಆ ಮೇಲೆ ನೆಲದಮೇಲಾಗಲಿ, ತಟ್ಟಿಯಲ್ಲಾಗಲಿ, ಒಂದು ಎಲೆಯನ್ನು ಹಾಕಿ ಪೂರ್ವದಿಕ್ಕಿನಿಂದ ಕ್ರಮವಾಗಿ ಈ ಕೆಳಗೆ ಬರೆದಿರುವ ಮಂತ್ರಗಳಿಂದ ಭಾಗಗಳನ್ನಿಡಬೇಕು.

ಓಂ ಸಾನುಗಾಯೇಂದ್ರಾಯ ನಮಃ । ಸಾನುಗಾಯು-ಯಮಾಯ ನಮಃ । ಸಾನುಗಾಯ ವರುಣಾಯ ನಮಃ। ಸಾನುಗಾಯ ಸೋಮಾಯ ನಮಃ । ಮರುದ್ಭ್ಯೋ ನಮಃ। ಅದ್ಭ್ಯೋ ನಮಃ। ವನಸ್ಪತಿಭ್ಯೋ ನಮಃ। ಶ್ರಿಯೈ ನಮಃ। ಭದ್ರಕಾಲ್ಯೈ ನಮಃ । ಬ್ರಹ್ಮಪತಯೇ ನಮಃ । ವಾಸ್ತುಪತಯೇ ನಮಃ । ವಿಶ್ವೇಭ್ಯೋ ದೇವೇಭ್ಯೋ ನಮಃ । ದಿವಾಚರೇಭ್ಯೋ ಭೂತೇಭ್ಯೋ ನಮಃ । ನಕ್ತಂಚಾರಿಭ್ಯೋ ಭೂತೇಭ್ಯೋ ನಮಃ । ಸರ್ವಾತ್ಮ ಭೂತಯೇ ನಮಃ ॥

ಈ ಭಾಗಗಳನ್ನು ಯಾವನಾದರೂ ಅತಿಥಿಯಿದ್ದಲ್ಲಿ ಅವನಿಗೆ ಕೊಡಬೇಕು. ಅಥವಾ ಅಗ್ನಿಯಲ್ಲಿ ಹಾಕಬೇಕು. ಆಮೇಲೆ ಲವಣಾನ್ನ ಅಂದರೆ, ಸಾರು, ಅನ್ನ, ಪಲ್ಯ, ರೊಟ್ಟಿ ಮೊದಲಾದುವುಗಳನ್ನು ತೆಗೆದುಕೊಂಡು ಭೂಮಿಯ ಮೇಲೆ ಆರು ಭಾಗಗಳನ್ನಿಡಬೇಕು. ಇದಕ್ಕೆ ಪ್ರಮಾಣ—

ಶುನಾಂ ಚ ಪತಿತಾನಾಂ ಚ ಶ್ವಪಚಾಂ ಪಾಪರೋಗಿಣಾಂ ।
ವಾಯಸಾನಾಂ ಕೃಮೀಣಾಂ ಚ ಶನಕೈರ್ನಿರ್ವಪೇದ್ಭುವಿ ॥

[ಮನು ೩-೯೨]

ಈ ರೀತಿಯಾಗಿ "ಶ್ವಭ್ಯೋನಮಃ", "ಪತಿತೇಭ್ಯೋ ನಮಃ", "ಶ್ವಪಚೇಭ್ಯೋನಮಃ", "ಪಾಪರೋಗಿಭ್ಯೋನಮಃ", "ವಾಯಸೇಭ್ಯೋನಮಃ", "ಕ್ರಿಮಿಭ್ಯೋನಮಃ" ಎಂದು ಭೂಮಿಯ ಮೇಲೆ ಭಾಗವಿಟ್ಟು, ಅದನ್ನು ದುಃಖಿತರಾಗಲಿ, ಹಸಿದವರಿಗಾಗಲಿ, ನಾಯಿ, ಕಾಗೆ ಮೊದಲಾದ ಪ್ರಾಣಿಗಳಿಗಾಗಲಿ, ಕೊಡಬೇಕು. ಈ ವಾಕ್ಯಗಳಲ್ಲಿನ "ನಮಃ" ಎಂಬುದಕ್ಕೆ "ಅನ್ನ"ವೆಂದು ಅರ್ಥ ಎಂದು ತಿಳಿಯಬೇಕು. ಅಂದರೆ—ನಾಯಿ, ಪಾಪಿ, ಚಂಡಾಲ, ಪಾಪರೋಗಿ, ಕಾಗೆ, ಮತ್ತು ಕ್ರಿಮಿ ಅಂದರೆ ಇರುವೆ ಮೊದಲಾದುವಕ್ಕೆ ಅನ್ನವನ್ನು ಕೊಡಬೇಕು. ಇದು ಮನು ಮೊದಲಾದ ಸ್ಮೃತಿಗಳಲ್ಲಿ ಹೇಳಲ್ಪಟ್ಟಿದೆ. ಪಾಕಶಾಲೆಯ ವಾಯುವು ಶುದ್ಧವಾಗುವುದಲ್ಲದೆ, ನೋಡದೆ, ತಿಳಿಯದೆ ಮಾಡಿದ ಜೀವಹತ್ಯೆಗೆ ಬದಲಾಗಿ ಉಪಕಾರವಾಗುತ್ತದೆ. ಇದೇ ಹೋಮದ ಪ್ರಯೋಜನ.

ಐದನೆಯದು **ಅತಿಥಿಸೇವೆ**. ತಿಥಿ ನಿಶ್ಚಯವಿಲ್ಲದವನಿಗೆ 'ಅತಿಥಿ' ಎಂದು ಹೆಸರು. ಅಂದರೆ, ಅಕಸ್ಮಾತ್ತಾಗಿ, ಧಾರ್ಮಿಕನೂ, ಸತ್ಯೋಪದೇಶಕನೂ, ಲೋಕೋಪಕಾರಕ್ಕಾಗಿ ಸಂಚರಿಸುತ್ತಿರುವ ಪೂರ್ಣ ವಿದ್ವಾಂಸನೂ, ಪರಮ ಯೋಗಿಯೂ, ಸಂನ್ಯಾಸಿಯೂ, ಮನೆಗೆ ಬಂದರೆ, ಗೃಹಸ್ಥರು, ಅವರನ್ನು ಮೊದಲು ಪಾದ್ಯ, ಅರ್ಘ್ಯ ಮತ್ತು ಆಚಮನೀಯಗಳ ನೀರನ್ನು ಕೊಟ್ಟು ಸತ್ಕರಿಸಿ ಆಸನದ ಮೇಲೆ ಕೂಡಿಸಬೇಕು. ಆಮೇಲೆ ಅನ್ನಪಾನಾದಿ ಉತ್ತಮ ವಸ್ತುಗಳಿಂದ ಸೇವೆ ಶುಶ್ರೂಷೆ ಮಾಡಿ, ಸಂತೋಷಪಡಿಸಿ, ಅವರಿಂದ ಧರ್ಮಾರ್ಥಕಾಮ ಮೋಕ್ಷಗಳನ್ನು ಪ್ರಾಪ್ತಗೊಳಿಸುವ ಜ್ಞಾನ ವಿಜ್ಞಾನಯುಕ್ತವಾದ ಉಪದೇಶಗಳನ್ನು ಕೇಳಬೇಕು. ಮತ್ತು ತಮ್ಮ ತಮ್ಮ ನಡವಳಿಕೆಯನ್ನು ಅವಕ್ಕನುಕೂಲವಾಗಿಟ್ಟುಕೊಳ್ಳಬೇಕು. ಸಮಯಾನುಸಾರವಾಗಿ ಗೃಹಸ್ಥರೂ, ರಾಜಾದಿಗಳೂ ಸಹ ಅತಿಥಿಗಳಂತೆ ಸತ್ಕಾರಯೋಗ್ಯರಾಗಿರುತ್ತಾರೆ. ಆದರೆ,

ಪಾಷಂಡಿನೋ ವಿಕರ್ಮಸ್ಥಾನ್ ಬೈಡಾಲವೃತ್ತಿಕಾನ್ ಶಠಾನ್।
ಹೈತುಕಾ ಬಕವೃತ್ತೀಂಶ್ಚ ವಾಙ್ಮಾತ್ರೇಣಾಪಿ ನಾರ್ಚಯೇತ್॥
[ಮನು. ೪-೩೦]

(ಪಾಷಂಡಿ) ವೇದನಿಂದಕನು, ಮತ್ತು ವೇದವಿರುದ್ಧವಾದ ಆಚರಣೆಯುಳ್ಳವನು; (ವಿಕರ್ಮಸ್ಥ) ವೇದವಿರುದ್ಧವಾದ ಕರ್ಮಗಳಾದ ಮಿಥ್ಯಾಭಾಷಣಾದಿಗಳಿಂದ ಕೂಡಿರುವವನು; (ಬೈಡಾಲವೃತ್ತಿಕ) ಬೆಕ್ಕು ನಿಶ್ಶಬ್ದವಾಗಿ ಹೊಂಚುಹಾಕಿ, ತಟ್ಟನೆ ಹಾರಿ ಇಲಿ ಮೊದಲಾದುವುಗಳನ್ನು ಹಿಡಿದು ಹೊಟ್ಟೆ ತುಂಬಿಕೊಳ್ಳುವಂತೆ, ಸಮಯ ಕಾದಿದ್ದು ಪರರ ಸ್ವತ್ತನ್ನು ಅಪಹರಿಸುವವನು; (ಶಠ) ಮೂರ್ಖ, ಮುರಾಗ್ರಹಿ, ದುರಭಿಮಾನಿ, 'ಸ್ವತಃ ತಿಳಿಯ, ಬೇರರಿಂದ ಕಲಿಯ' ಎಂಬಂತಿರುವವನು; (ಹೈತುಕ) ಕುತರ್ಕಿಗಳು, ವ್ಯರ್ಥವಾಗಿ ಒದರುವವರು, ಈಗಿನ ಕಾಲದ ವೇದಾಂತಿಗಳಂತೆ, 'ನಾನೇ ಬ್ರಹ್ಮ, ಜಗತ್ತು ಸುಳ್ಳು, ವೇದಾದಿ ಸತ್ಯಶಾಸ್ತ್ರಗಳೂ, ಈಶ್ವರನೂ ಸಹ ಕಲ್ಪಿತ ವಸ್ತುಗಳು' ಎಂದು ಹರಟುವವರು; (ಬಕವೃತ್ತಿ) ಕೊಕ್ಕರೆಯು ಒಂದು ಕಾಲನ್ನೆತ್ತಿಕೊಂಡು, ಧ್ಯಾನಾಸಕ್ತವಾಗಿರುವಂತೆ ನಟಿಸಿ, ಮೀನುಗಳನ್ನು ಕೊಂದು, ತನ್ನ ಸ್ವಾರ್ಥ ಸಾಧಿಸುವಂತೆ, ತಮ್ಮ ಸ್ವಾರ್ಥವನ್ನು ಸಾಧಿಸಿಕೊಳ್ಳುವ ಈಗಿನ ಖಾಕಿ, ಬೈರಾಗಿ ಮೊದಲಾದವರು, ಹಠಿಗಳೂ, ಮುರಾಗ್ರಹಿಗಳೂ, ವೇದವಿರೋಧಿಗಳೂ ಆಗಿದ್ದಾರೆ. ಇಂತಹವರನ್ನು ಮಾತಿನಿಂದಲೂ ಸಹ ಸತ್ಕರಿಸಬಾರದು. ಏಕೆಂದರೆ ಈ ಜನರಿಗೆ ಸತ್ಕಾರ ಮಾಡುವುದರಿಂದ ಅವರು ವೃದ್ಧಿಹೊಂದಿ ಪ್ರಪಂಚವನ್ನು ಅಧರ್ಮಯುಕ್ತವಾಗಿ ಮಾಡುತ್ತಾರೆ. ಸಾಲದೆಂದು ತಮ್ಮ ಸೇವಕರನ್ನೂ ಸಹ ಅವಿದ್ಯಾರೂಪವಾದ ಮಹಾನಾಗರದಲ್ಲಿ ಮುಳಿಗಿಸಿಬಿಡುತ್ತಾರೆ.

ಈ ಪಂಚಮಹಾಯಜ್ಞಗಳ ಫಲವೇನೆಂದರೆ--ಬ್ರಹ್ಮಯಜ್ಞದಿಂದ ವಿದ್ಯೆ, ಶಿಕ್ಷಣ, ಧರ್ಮ, ಸಭ್ಯತೆ. ಮುಂತಾದ ಶುಭಗುಣಗಳು ಹೆಚ್ಚುತ್ತವೆ. ಅಗ್ನಿಹೋತ್ರದಿಂದ ವಾಯು ಮತ್ತು ವೃಷ್ಟಿಜಲವು ಶುದ್ಧವಾಗಿ, ಮಳೆಯಿಂದ ಪ್ರಪಂಚಕ್ಕೆ ಸುಖ ಲಭಿಸುತ್ತದೆ. ಅಂದರೆ-ಶುದ್ಧವಾಯುವಿನ ಶ್ವಾಸಸ್ಪರ್ಶಗಳಿಂದಲೂ, ಅದರಿಂದ ಶುದ್ಧವಾದ ಅನ್ನಪಾನಾದಿಗಳಿಂದಲೂ, ಆರೋಗ್ಯ, ಬುದ್ಧಿಬಲ, ಮತ್ತು ಪರಾಕ್ರಮವು ಹೆಚ್ಚಿ ಧರ್ಮಾರ್ಥಕಾಮಮೋಕ್ಷಗಳ ಅನುಷ್ಠಾನವು ಪೂರ್ಣವಾಗುತ್ತದೆ. ಆದುದರಿಂದಲೇ ಇದನ್ನು ದೇವಯಜ್ಞವೆನ್ನುತ್ತಾರೆ. ಪಿತೃ

ಯಜ್ಞದಿಂದ ಯಾವಾಗ ತಾಯಿ, ತಂದೆ, ಮತ್ತು ಜ್ಞಾನೀಮಹಾತ್ಮರ ಸೇವೆಯನ್ನು ಮನುಷ್ಯನು ಮಾಡುತ್ತಾನೋ ಆವಾಗ ಆವನ ಜ್ಞಾನವು ವೃದ್ಧಿಯಾಗುವುದು. ಆದರಿಂದ ಸತ್ಯಾಸತ್ಯವನ್ನು ನಿರ್ಣಯಿಸಿ, ಸತ್ಯದ ಗ್ರಹಣವನ್ನೂ ಅಸತ್ಯದ ತ್ಯಾಗವನ್ನೂ, ಮಾಡಿ ಸುಖಿಯಾಗುವನು. ಇದೂ ಅಲ್ಲದೆ ಕೃತಜ್ಞತೆ, ಅಂದರೆ—ತಾಯಿ, ತಂದೆ, ಮತ್ತು ಆಚಾರ್ಯರು, ತಮ್ಮ ಮಕ್ಕಳಿಗೂ, ಶಿಷ್ಯರಿಗೂ, ಮಾಡಿದ ಸೇವೆಗೆ ಬದಲಾಗಿ ಅವರ ಸೇವೆಯನ್ನು ಮಾಡಬೇಕಾದುದು ಮನುಷ್ಯನಿಗೆ ಉಚಿತವಾಗಿರುತ್ತದೆ. ಬಲಿ ವೈಶ್ವದೇವಗಳ ಪ್ರಯೋಜನವನ್ನು ಹಿಂದೆಯೇ ತಿಳಿಸಿದ್ದೇವೆ. ಜಗತ್ತಿನಲ್ಲಿ ಉತ್ತಮರಾದ ಅತಿಥಿಗಳಿಲ್ಲದಿದ್ದರೆ ಉನ್ನತಿಯೂ ಆಗುವುದಿಲ್ಲ. ಅವರು ಸಮಸ್ತ ದೇಶಗಳಲ್ಲಿಯೂ ಸಂಚರಿಸಿ ಸತ್ಯವನ್ನು ಉಪದೇಶಿಸುವುದರಿಂದ ಪಾಷಂಡವು ಬೆಳೆಯಲಾರದು. ಮತ್ತು ಎಲ್ಲೆಡೆಯೂ ಗೃಹಸ್ಥರೂ ಸಹ ಸಹಜವಾಗಿ ಸತ್ಯವನ್ನು ಗ್ರಹಿಸುತ್ತಾರೆ. ಮತ್ತು ಮಾನವಸಮಾಜದಲ್ಲಿ ಒಂದೇ ಧರ್ಮವು ಸ್ಥಿರವಾಗಿ ನಿಲ್ಲುತ್ತದೆ. ಅತಿಥಿಗಳಿಲ್ಲದಿದ್ದರೆ ಸಂದೇಹನಿವೃತ್ತಿಯಾಗಲಾರದು, ಸಂದೇಹನಿವೃತ್ತಿಯಾಗದೆ ದೃಢನಿಶ್ಚಯವುಂಟಾಗಲಾರದು. ನಿಶ್ಚಯವಿಲ್ಲದಿದ್ದರೆ ಸುಖವೆಲ್ಲಿಯದು?

ಬ್ರಾಹ್ಮೇ ಮೂಹೂರ್ತೇ ಬುದ್ಧ್ಯೇತ ಧರ್ಮಾರ್ಥೌ ಚಾನುಚಿಂತಯೇತ್ ।
ಕಾಯಕ್ಲೇಶಾಂಶ್ಚ ತನ್ಮೂಲಾನ್ ವೇದತತ್ವಾರ್ಥಮೇವ ಚ ॥

[ಮನು-೪-೯೨]

ರಾತ್ರಿಯ ನಾಲ್ಕನೇ ಝಾವದಲ್ಲಿ ಎದ್ದು ಆವಶ್ಯಕ ಕಾರ್ಯಗಳನ್ನಾಚರಿಸಿ, ಧರ್ಮಾರ್ಥಗಳ ವಿಷಯವಾಗಿಯೂ, ಶಾರೀರಿಕರೋಗಗಳ ಕಾರಣಗಳ ವಿಷಯವಾಗಿಯೂ ಆಲೋಚಿಸಬೇಕು. ಎಂದಿಗೂ ಅಧರ್ಮವನ್ನಾಚರಿಸಬಾರದು. ಏಕೆಂದರೆ,

ನಾಧರ್ಮಶ್ಚರಿತೋ ಲೋಕೇ ಸದ್ಯಃ ಫಲತಿ ಗೌರಿವ ।
ಶನೈರಾವರ್ತಮಾನಸ್ತು ಕರ್ತುರ್ಮೂಲಾನಿ ಕೃಂತತಿ ॥

[ಮನು-೪-೧೭೨]

ಆಚರಿಸಿದ ಅಧರ್ಮವು ಎಂದಿಗೂ ನಿಷ್ಫಲವಾಗದು. ಆದರೆ— ಅಧರ್ಮ ಮಾಡಿದೊಡನೆಯೇ ಅದರ ಫಲವೂ ಉಂಟಾಗುವುದಿಲ್ಲ. ಆದುದರಿಂದ ಅಜ್ಞಾನಿಗಳು ಅಧರ್ಮಕ್ಕೆ ಅಂಜುವದಿಲ್ಲ. ಆದರೂ ಕೂಡ ಅಧರ್ಮಾಚರಣೆಯು ನಿಧಾನ ನಿಧಾನವಾಗಿ ನಿಮ್ಮ ಸುಖಗಳ ಬೇರನ್ನು ಕತ್ತರಿಸುತ್ತಾ ಹೋಗುತ್ತದೆಂಬುದನ್ನು ನಿಜವೆಂದು ತಿಳಿಯಿರಿ.

ಅಧರ್ಮೇಣೈಧತೇ ತಾವತ್ತತೋ ಭದ್ರಾಣಿ ಪಶ್ಯತಿ ।
ತತಃ ಸಪತ್ನಾನ್ ಜಯತಿ ಸಮೂಲಸ್ತು ವಿನಶ್ಯತಿ ।

[ಮನು-೪-೧೭೪]

ಅಧರ್ಮಾತ್ಮನಾದ ಮಾನವನು, ನೀರು ಕೆರೆಯ ಕಟ್ಟೆಯನ್ನೊಡೆದು ನಾಲ್ಕೆಡೆಯೂ ಹರಡುವಂತೆ ಧರ್ಮದ ಎಲ್ಲೆಯನ್ನು ದಾಟಿ, ಮಿಥ್ಯಾಭಾಷಣ, ಕಪಟ, ಪಾಷಂಡ, ಅಂದರೆ ರಕ್ಷಕವಾದ ವೇದಗಳ ಖಂಡನೆ ಮತ್ತು ವಿಶ್ವಾಸಘಾತ ಮೊದಲಾದ ಕ್ರಿಯೆಗಳಿಂದ ಪರರ ವಸ್ತುಗಳನ್ನು ತೆಗೆದುಕೊಂಡು ಮೊದಲೇನೋ ಉನ್ನತಿ ಹೊಂದುತ್ತಾನೆ. ಆಮೇಲೆ ಧನಾದಿ ದ್ರವ್ಯ ಅನ್ನಪಾನ, ವಸ್ತ್ರ ಆಭೂಷಣ, ವಾಹನ, ಸ್ಥಾನ, ಮಾನ, ಪ್ರತಿಷ್ಠೆಯನ್ನು ಪಡೆಯುತ್ತಾನೆ. ಅನ್ಯಾಯದಿಂದ ಶತ್ರುಗಳನ್ನೂ ಗೆಲ್ಲುತ್ತಾನೆ. ಕೊನೆಗೆ ನಾಶಹೊಂದುತ್ತಾನೆ. ಯಾವರೀತಿ ಬೇರು ಕತ್ತರಿಸಲ್ಪಟ್ಟ ವೃಕ್ಷವು ನಷ್ಟವಾಗುತ್ತದೋ ಹಾಗೆಯೇ ಅಧರ್ಮಿಯೂ ನಷ್ಟವಾಗಿ ಹೋಗುತ್ತಾನೆ.

ಸತ್ಯಧರ್ಮಾರ್ಯವೃತ್ತೇಷು ಶೌಚೇ ಚೈವಾರಮೇತ್ಸದಾ ।
ಶಿಷ್ಯಾಂಶ್ಚ ಶಿಷ್ಯಾದ್ಧರ್ಮೇಣ ವಾಗ್ಬಾಹೂದರಸಂಯತಃ ॥

[ಮನು ೪-೧೭೫]

ವಿದ್ವಾಂಸನು ವೇದೋಕ್ತ ಸತ್ಯಧರ್ಮವನ್ನು ಅಂದರೆ, ಪಕ್ಷಪಾತರಹಿತನಾಗಿ ಸತ್ಯಗ್ರಹಣ ಅಸತ್ಯಪರಿತ್ಯಾಗ ಮಾಡಿ ನ್ಯಾಯರೂಪವಾದ ವೇದೋಕ್ತಧರ್ಮಗಳನ್ನು ಆಚರಿಸುತ್ತಾ, ಆರ್ಯ ಅಂದರೆ ಧರ್ಮನಿಷ್ಠನಂತೆ ಶಿಷ್ಯರಿಗೆ ಶಿಕ್ಷಣವೀಯಬೇಕು.

ಋತ್ವಿಕ್ಪುರೋಹಿತಾಚಾರ್ಯೈರ್ಮಾತುಲಾತಿಥಿಸಂಶ್ರಿತೈಃ ।
ಬಾಲವೃದ್ಧಾತುರೈರ್ವೈದ್ಯೈರ್ಜ್ಞಾತಿಸಂಬಂಧಿಬಾಂಧವೈಃ ॥೧॥
ಮಾತಾಪಿತೃಭ್ಯಾಂ ಯಾಮೀಭಿರ್ಭ್ರಾತ್ರಾ ಪುತ್ರೇಣಭಾರ್ಯಯಾ ।
ದುಹಿತ್ರಾ ದಾಸವರ್ಗೇಣ ವಿವಾದಂ ನ ಸಮಾಚರೇತ್ ॥೨॥

[ಮನು ೪-೧೭೯-೧೮೦]

(ಋತ್ವಿಕ್) ಯಜ್ಞವನ್ನು ಮಾಡುವವನು (ಪುರೋಹಿತ) ಸದಾ ಶ್ರೇಷ್ಠಾಚಾರವನ್ನು ಕಲಿಸುವವನು (ಆಚಾರ್ಯ) ವಿದ್ಯೆಯನ್ನು ಓದಿಸುವವನು (ಮಾತುಲ) ಸೋದರಮಾವ (ಅತಿಥಿ) ಅಂದರೆ—ಯಾರಿಗೆ ಹೋಗಿ ಬರುವ ನಿಶ್ಚಯವಾದ ತಿಥಿಯಿಲ್ಲವೋ ಅವರು (ಸಂಶ್ರಿತ) ತನ್ನ ಆಶ್ರಿತರು (ಬಾಲ) ಬಾಲಕ (ವೃದ್ಧ) ವೃದ್ಧರು (ಆತುರ) ರೋಗಿ, (ವೈದ್ಯ) ಆಯುರ್ವೇದವನ್ನು ತಿಳಿದವನು (ಜ್ಞಾತಿ) ತನ್ನ ಗೋತ್ರವನು ಅಥವಾ ತನ್ನ ವರ್ಣದವನು (ಸಂಬಂಧಿ)ಮಾವ ಆದಿ(ಬಾಂಧವ) ಮಿತ್ರ, (ಮಾತಾ) ತಾಯಿ, (ಪಿತಾ) ತಂದೆ, (ಯಾಮಿಾ) ಒಡಹುಟ್ಟಿದವಳು (ಭ್ರಾತಾ) ಒಡಹುಟ್ಟಿದವನು (ಪುತ್ರ) ಮಗ (ಭಾರ್ಯಾ) ಹೆಂಡತಿ (ದುಹಿತಾ) ಮಗಳು ಮತ್ತು (ದಾಸವರ್ಗ) ಪರಿಚಾರಕರು ಇವರೊಡನೆ ಎಂದಿಗೂ ವಿವಾದ ಅಂದರೆ ವಿರೋಧ ಕಲಹಗಳನ್ನು ಮಾಡಬಾರದು.

ಅತಪಾಸ್ತ್ವನಧೀಯಾನಃ ಪ್ರತಿಗ್ರಹರುಚಿರ್ದ್ವಿಜಃ ।
ಅಂಭಸ್ಯಶ್ಮಪ್ಲವೇನೈವ ಸಹ ತೇನೈವ ಮಜ್ಜತಿ ॥

[ಮನು ೪-೧೯೩]

(ಅತಪಾ) ಬ್ರಹ್ಮಚರ್ಯ, ಸತ್ಯಭಾಷಣ ಮೊದಲಾದ ತಪಸ್ಸಿಲ್ಲದವನು, (ಅನಧೀಯಾನಃ) ಓದದಿರುವವನು ಮತ್ತು (ಪ್ರತಿಗ್ರಹರುಚಿಃ) ಬೇರೆಯವರಿಂದ ಅತ್ಯಂತ ದಾನಪಡೆಯುವವನು, ಈ ಮೂವರೂ ಕಲ್ಲಿನ ದೋಣಿಯಿಂದ ಸಮುದ್ರವನ್ನು ದಾಟುವವರಂತೆ ತಮ್ಮ ದುಷ್ಟಕರ್ಮಗಳೊಂದಿಗೆ ದುಃಖಸಾಗರದಲ್ಲಿ ಮುಳುಗಿಹೋಗುತ್ತಾರೆ, ತಾವು ಮುಳುಗುವದಲ್ಲದೆ, ದಾತೃಗಳನ್ನೂ ಜೊತೆಯಲ್ಲೇ ಮುಳಿಗಿಸಿಬಿಡುತ್ತಾರೆ.

ತ್ರಿಷ್ವಪ್ಯೇತೇಷು ದತ್ತಂ ಹಿ ವಿಧಿನಾಪ್ಯರ್ಜಿತಂ ಧನಂ ।
ಧಾತುರ್ಭವತ್ಯನರ್ಥಾಯ ಪರತ್ರಾದಾತುರೇವಚ ॥

[ಮನು. ೪-೧೯೩]

ಧರ್ಮದಿಂದ ಸಂಪಾದಿಸಿದ ಧನವನ್ನು ಮೇಲೆ ಹೇಳಿದ ಮೂರು ಮಂದಿಗೆ ದಾನಮಾಡುವವನು ಈ ಜನ್ಮದಲ್ಲಿಯೂ, ದಾನ ತೆಗೆದು ಕೊಂಡವರು ಮುಂದಣ ಜನ್ಮದಲ್ಲಿಯೂ, ನಾಶಹೊಂದುತ್ತಾರೆ. ಅವರು ಹೀಗಿದ್ದಲ್ಲಿ ಏನಾಗುವದೆಂದರೆ—

ಯಥಾ ಪ್ಲವೇನೌಪಲೇನ ನಿಮಜ್ಜತ್ಯುದಕೇ ತರನ್ ।
ತಥಾ ನಿಮಜ್ಜತೋಽಧಸ್ತಾದಜ್ಞೌ ದಾತೃಪ್ರತೀಚ್ಛಕೌ ॥

ಕಲ್ಲುದೋಣಿಯಲ್ಲಿ ಕುಳಿತು ನೀರನ್ನು ದಾಟುವವನು ಮುಳುಗಿ ಹೋಗುವಂತೆ, ದಾನವಿತ್ತ ಅಜ್ಞಾನಿಯೂ, ದಾನಪಡೆದ ಅಜ್ಞಾನಿಯೂ, ಅಧೋಗತಿಗೀಡಾಗುತ್ತಾರೆ. ಅಂದರೆ ದುಃಖವನ್ನು ಹೊಂದುತ್ತಾರೆ.

ಪಾಷಂಡಿಗಳ ಲಕ್ಷಣಗಳು

ಧರ್ಮಧ್ವಜೀ ಸದಾ ಲುಬ್ಧಶ್ಛಾದ್ಮಿಕೋ ಲೋಕದಂಭಕಃ ।
ಬೈಡಾಲವೃತಿಕೋ ಜ್ಞೇಯೋ ಹಿಂಸ್ರಃ ಸರ್ವಾಭಿಸಂಧಕಃ॥೧॥

ಅಧೋದೃಷ್ಟಿರ್ನೈಷ್ಕೃತಿಕಃ ಸ್ವಾರ್ಥಸಾಧನತತ್ಪರಃ ।
ಶಠೋಮಿಥ್ಯಾವಿನೀತಶ್ಚ ಬಕವ್ರತಚರೋ ದ್ವಿಜಃ ॥೨॥

(ಧರ್ಮಧ್ವಜೀ) ತಾನು ಧರ್ಮವನ್ನು ಎಳ್ಳಷ್ಟಾದರೂ ಆಚರಿಸದೆ ಧರ್ಮದ ಹೆಸರಿನಿಂದ ಜನರನ್ನು ವಂಚಿಸುವವನು, (ಸದಾಲುಬ್ಧಃ) ಸರ್ವದಾ ಲೋಭದಿಂದ ಕೂಡಿದವನು, (ಛಾದ್ಮಿಕಃ) ಕಪಟಿ, (ಲೋಕ ದಂಭಕಃ) ಸಂಸಾರದ ಮನುಷ್ಯರೆದಿರಿಗೆ ತನ್ನ ದೊಡ್ಡಸ್ತಿಕೆಯ ಜಂಭವನ್ನು ಕೊಚ್ಚಿಕ್ಕೊಳ್ಳುವವನು, (ಹಿಂಸ್ರಃ) ಪ್ರಾಣಿಹಿಂಸಕನು, ಬೇರೆಯವರನ್ನು ದ್ವೇಷಿಸುವವನು, (ಸರ್ವಾಭಿಸಂಧಕಃ) ಒಳ್ಳೆಯವರು ಮತ್ತು ಕೆಟ್ಟವರೆನ್ನದೆ ಎಲ್ಲರೊಡನೆಯೂ ಸ್ನೇಹ ಮಾಡುವವನು,

ಇಂತಹವನನ್ನು (ಬೈಡಾಲವೃತ್ತಿಕ) ಅಂದರೆ, ಬೆಂಕ್ಕಿನಂತೆ ಧೂರ್ತನು ಮತ್ತು ನೀಚನು ಎಂದು ತಿಳಿಯಬೇಕು. ॥೧॥ (ಅಧೋದೃಷ್ಟಿಃ) ಕೀರ್ತಿಗೋಸ್ಕರ ಕೆಳಗೆ ದೃಷ್ಟಿಯಿಡುವವನು.(ನೈಷ್ಕೃತಿಕಃ) ಈರ್ಷ್ಯಕ, ಕಾಸಿನಷ್ಟು ತನಗೆ ಅಪರಾಧವನ್ನು ಮಾಡಿದ್ದರೂ ಅದಕ್ಕೆ ಬದಲು ಪ್ರಾಣವನ್ನೇ ತೆಗೆದುಕೊಳ್ಳಲು ತತ್ಪರನೂ, (ಸ್ವಾರ್ಥಸಾಧನ....) ಬೇಕಾದಹಾಗೆ ಕಪಟದಿಂದಾಗಲಿ, ಅಧರ್ಮದಿಂದಾಗಲಿ, ವಿಶ್ವಾಸ ಘಾತದಿಂದಾಗಲಿ ತನ್ನ ಪ್ರಯೋಜನವನ್ನು ಸಾಧಿಸಿಕೊಳ್ಳುವುದರಲ್ಲಿ ಚತುರನು (ಶಠಃ) ಬೇಕಾದರೆ ತನ್ನ ಮಾತು ಸುಳ್ಳಾದರೂ ಆಗಲಿ ತನ್ನ ಹಠವನ್ನು ಮಾತ್ರ ಬಿಡದವನು. (ಮಿಥ್ಯಾವಿನೀತಃ) ಮೇಲೆ ಮೇಲೆ ಸಂತೋಷವನ್ನೂ, ಸಾಧುತನವನ್ನೂ ತೋರಿಸಿಕೊಳ್ಳುವವನು, ಇಂತಹವನನ್ನು (ಬಕವ್ರತ) ಅಂದರೆ ಬಕದಂತೆ ನೀಚನೆಂದು ತಿಳಿಯ ಬೇಕು. ಈ ಲಕ್ಷಣಗಳುಳ್ಳವರು ಪಾಷಂಡಿಗಳು. ಅವರನ್ನೆಂದೂ ನಂಬಬಾರದು ಅಥವಾ ಅವರ ಸೇವೆಯನ್ನು ಮಾಡಬಾರದು.

ಧರ್ಮಂ ಶನೈಃ ಸಂಚಿನುಯಾದ್ವಲ್ಮೀಕಮಿವ ಪುತ್ತಿಕಾಃ ।
ಪರಲೋಕಸಹಾಯಾರ್ಥಂ ಸರ್ವಭೂತಾನ್ಯಪೀಡಯನ್ ॥೧॥
ನಾಮುತ್ರ ಹಿ ಸಹಾಯಾರ್ಥಂ ಪಿತಾಮಾತಾ ಚ ತಿಷ್ಠತಃ ।
ನ ಪುತ್ರದಾರಂ ನ ಜ್ಞಾತಿರ್ಧರ್ಮಸ್ತಿಷ್ಠತಿ ಕೇವಲಃ ॥೨॥
ಏಕಃ ಪ್ರಜಾಯತೇ ಜಂತುರೇಕ ಏವ ಪ್ರಲೀಯತೇ ।
ಏಕೋನುಭುಂಕ್ತೇ ಸುಕೃತಮೇಕ ಏವ ಚ ದುಷ್ಕೃತಂ ॥೩॥
[ಮನು, ೪, ೨೩೮-೨೪೦]

ಏಕಃ ಪಾಪಾನಿ ಕುರುತೇ ಫಲಂ ಭುಂಕ್ತೇ ಮಹಾಜನಃ ।
ಭೋಕ್ತಾರೋ ವಿಪ್ರಮುಚ್ಯಂತೇ ಕರ್ತಾ ದೋಷೇಣ ಲಿಪ್ಯತೇ॥
[ಮಹಾಭಾರತ ಉದ್ಯೋಗ. ಪ್ರಜಾಗರ. ಅ. ೩೨]

ಮೃತಂ ಶರೀರಮುತ್ಸೃಜ್ಯ ಕಾಷ್ಠಲೋಷ್ಠಸಮಂ ಕ್ಷಿತೌ ।
ವಿಮುಖಾ ಬಾಂಧವಾ ಯಾಂತಿ ಧರ್ಮಸ್ತಮನುಗಚ್ಛತಿ ॥೫॥
[ಮನು. ೫-೨೪೧]

ಗೆದ್ದಲುಹುಳುಗಳು ಹುತ್ತವನ್ನು ಕಟ್ಟುವಂತೆ, ಸ್ತ್ರೀಪುರುಷರು ಯಾವ ಪ್ರಾಣಿಯನ್ನೂ ಹಿಂಸಿಸದೆ, ಪರಲೋಕದ ಸುಖವನ್ನು ಹೊಂದುವದಕ್ಕಾಗಿ ಮೆಲ್ಲಮೆಲ್ಲನೆ ಧರ್ಮವನ್ನು ಸಂಚಯಿಸಿಕೊಳ್ಳಬೇಕು. ॥೧॥ ಏಕೆಂದರೆ, ಪರಲೋಕದಲ್ಲಿ ತಾಯಿ, ತಂದೆ, ಮಗ, ಹೆಂಡತಿ, ಬಂಧು ಮೊದಲಾದವರು ಯಾರೂ ಸಹಾಯಮಾಡಲಾರರು. ಆದರೆ, ಧರ್ಮವೊಂದುಮಾತ್ರ ಸಹಾಯಕವಾಗುತ್ತದೆ. ॥೨॥ ನೋಡಿರಿ, ಒಂಟಿಯಾಗಿಯೇ ಜೀವನು ಜನ್ಮಮರಣವನ್ನು ಹೊಂದುವನು. ಒಂಟಿಯಾಗಿಯೇ ಧರ್ಮದ ಫಲವಾದ ಸುಖವನ್ನೂ ಅಧರ್ಮದ ದುಃಖರೂಪವಾದ ಫಲವನ್ನೂ ಭೋಗಿಸುತ್ತಾನೆ. ॥೩॥ ಕುಟುಂಬದಲ್ಲಿ ಒಬ್ಬ ಮನುಷ್ಯನು ಪಾಪಮಾಡಿ ಪದಾರ್ಥಗಳನ್ನು ತರುತ್ತಾನೆ, ಮತ್ತು ಮಹಾಜನ ಅಂದರೆ, ಕುಟುಂಬದವರೆಲ್ಲರೂ ಅವನ್ನು ಭೋಗಿಸುತ್ತಾರೆ; ಭೋಗಿಸುವವರು ದೋಷಭಾಗಿಗಳಾಗುವುದಿಲ್ಲ. ಆದರೆ, ಅಧರ್ಮವನ್ನು ಮಾಡುವವನೇ ದೋಷದ ಭಾಗಿಯಾಗುತ್ತಾನೆ, ಎಂಬುದನ್ನು ತಿಳಿಯಿರಿ.॥೪॥ ಯಾವನಾದರೂ ಒಬ್ಬನ ಸಂಬಂಧಿಯು ಸತ್ತುಹೋದಾಗ, ಅವನನ್ನು ಮಣ್ಣಿನ ಹೆಂಟೆಯಂತೆ ನೆಲದ ಮೇಲೆಯೇ ಬಿಟ್ಟು, ಬಂಧುವರ್ಗದವರು ಬೆನ್ನು ತಿರಿಗಿಸಿ, ಹಿಂದಕ್ಕೆ ಹೊರಟುಬರುತ್ತಾರೆ. ಅವನ ಜೊತೆಗೆ ಹೋಗುವವರಾರೂ ಇಲ್ಲ. ಆದರೆ ಧರ್ಮವೊಂದೇ ಅವನ ಸಂಗಡ ಹೋಗುತ್ತದೆ ॥೫॥

ತಸ್ಮಾದ್ಧರ್ಮಂ ಸಹಾಯಾರ್ಥಂ ನಿತ್ಯಂ ಸಂಚಿನುಯಾಚ್ಛನೈಃ ।
ಧರ್ಮೇಣ ಹಿ ಸಹಾಯೇನ ತಮುಸ್ತರತಿ ದುಸ್ತರಮ್ ॥೧॥
ಧರ್ಮಪ್ರಧಾನಂ ಪುರುಷಂ ತಪಸಾಹತಕಿಲ್ಬಿಷಂ ।
ಪರಲೋಕಂ ನಯತ್ಯಾಶು ಭಾಸ್ವಂತಂ ಖಶರೀರಿಣಂ ॥೨॥

[ಮನು ೪ ೨೪೨.೨೪೩]

ಆದುದರಿಂದ ಪರಲೋಕ ಅಂದರೆ ಮುಂದಿನ ಜನ್ಮದ ಸುಖಕ್ಕಾಗಿ ಮತ್ತು ಜನ್ಮದ ಸಹಾಯಕ್ಕಾಗಿ, ನಿತ್ಯವೂ ಧರ್ಮವನ್ನು ಮೆಲ್ಲಮೆಲ್ಲನೆ ಸಂಚಯಿಸುತ್ತಾ ಹೋಗಬೇಕು. ಏಕೆಂದರೆ, ಜೀವನು ಧರ್ಮದ ಸಹಾಯದಿಂದಲೇ ದೊಡ್ಡ ದೊಡ್ಡ ದುಸ್ತರವಾದ ದುಃಖ ಸಮುದ್ರ

ಗಳನ್ನು ದಾಟಬಲ್ಲನು ॥೧॥ ಆದರೆ, ಯಾವ ಪುರುಷನು ಧರ್ಮವನ್ನೇ ಪ್ರಧಾನವೆಂದು ತಿಳಿಯುತ್ತಾನೊ, ಯಾವನ ಧರ್ಮಾನುಷ್ಠಾನದಿಂದ, ಮಾಡುವಂತಹ ಪಾಪವು ದೂರವಾಯಿತೋ. ಅವನಿಗೆ ಪ್ರಕಾಶಸ್ವರೂಪವಾದ, ಆಕಾಶಶರೀರದಂತಿರುವ ಪರಲೋಕವನ್ನು ಅಂದರೆ ಪರಮ ದರ್ಶನೀಯ ಪರಮಾತ್ಮನನ್ನು, ಧರ್ಮವೇ ಶೀಘ್ರವಾಗಿ ಪ್ರಾಪ್ತ ಗೊಳಿಸುತ್ತದೆ. ॥೨॥ ಆದ್ದರಿಂದ,

ದೃಢಕಾರೀ ಮೃದುರ್ದಾಂತಃ ಕ್ರೂರಾಚಾರೈರಸಂವಸನ್ ।
ಅಹಿಂಸ್ರೋ ದಮದಾನಾಭ್ಯಾಂ ಜಯೇತ್ಸ್ವರ್ಗಂ ತಥಾವ್ರತಃ॥೧
ವಾಚ್ಯರ್ಥಾ ನಿಯತಾಃ ಸರ್ವೇ ವಾಙ್ಮೂಲಾ ವಾಗ್ವಿನಿಸೃತಾಃ।
ತಾಂತು ಯಃ ಸ್ತೇನಯೇದ್ವಾಚಂ ಸ ಸರ್ವಸ್ತೇಯಕೃನ್ನರಃ॥೨॥
ಆಚಾರಾಲ್ಲಭತೇ ಹ್ಯಾಯುರಾಚಾರ್ಯಾದೀಪ್ಸಿತಾಃ ಪ್ರಜಾಃ ।
ಆಚಾರಾದ್ಧನಮಕ್ಷಯ್ಯಮಾಚಾರೋ ಹಂತ್ಯಲಕ್ಷಣಮ್ ॥೩॥

[ಮನು. ೪। ೨೪೬, ೨೫೬, ೨೫೯]

ಸದಾ ದೃಢಕಾರಿಯೂ, ಕೋಮಲಸ್ವಭಾವನೂ, ಜಿತೇಂದ್ರಿಯನೂ, ಹಿಂಸಕರೂ ಕ್ರೂರರೂ ದುರಾಚಾರಿಗಳೂ ಆದ ಪುರುಷರಿಂದ ದೂರವಾಗಿರುವವನೂ, ಆದ ಧರ್ಮಾತ್ಮನು, ಮನಸ್ಸನ್ನು ಜಯಿಸುವುದರಿಂದಲೂ, ಪ್ರಪಂಚದಲ್ಲಿ ವಿದ್ಯಾಪ್ರಚಾರಮಾಡುವದರಿಂದಲೂ ಸುಖಹೊಂದುವನು. ॥೧॥ ಸಮಸ್ತ ಅರ್ಥಗಳೂ ಅಂದರೆ ವ್ಯವಹಾರಗಳೂ, ನಿಶ್ಚಿತವಾಗುವ ಮಾತೇ ಅವುಗಳ ಮೂಲವು, ಮತ್ತು ಮಾತೇ ಅವುಗಳ ಸಾಧಕವು; ಇಂತಹ ಮಾತನ್ನು ಕದಿಯುವವನು ಅಂದರೆ ಸುಳ್ಳುಗಾರನು ಎಲ್ಲಾ ಪಾಪಗಳನ್ನೂ ಮಾಡುವವನಾಗಿರುತ್ತಾನೆ ಎಂಬುದನ್ನು ಧ್ಯಾನದಲ್ಲಿಡಬೇಕು. ಆದುದರಿಂದ ಮಿಥ್ಯಾಭಾಷಣ ಮೊದಲಾದ ಅಧರ್ಮವನ್ನು ಬಿಟ್ಟು ಧರ್ಮಾಚಾರ ಅಂದರೆ, ಬ್ರಹ್ಮಚರ್ಯ, ಮತ್ತು ಇಂದ್ರಿಯನಿಗ್ರಹದಿಂದ ಪೂರ್ಣ ಆಯುಷ್ಯ, ಉತ್ತಮ ಸಂತತಿ, ಮತ್ತು ಅಕ್ಷಯಧನವನ್ನು ಯಾವನು ಗಳಿಸುತ್ತಾನೋ, ಮತ್ತು ಧರ್ಮಾಚಾರವನ್ನೇ ಪಾಲಿಸಿ, ದುರ್ಲಕ್ಷಣಗಳನ್ನು ನಾಶಪಡಿಸುತ್ತಾನೋ ಅಂತಹವನ ಆಚರಣವನ್ನೇ ಅನುಸರಿಸಬೇಕು. ॥೩॥ ಏಕೆಂದರೆ, —

ದುರಾಚಾರೋಹಿ ಪುರುಷೋ ಲೋಕೇ ಭವತಿ ನಿಂದಿತಃ ।
ದುಃಖಭಾಗೀಚ ಸತತಂ ವ್ಯಾಧಿತೋಽಲ್ಪಾಯುರೇವಚ ॥

[ಮನು ೪-೧೫೭]

ದುರಾಚಾರಿಯಾದ ಪುರುಷನು ಸತ್ಪುರುಷರ ನಡುವೆ ನಿಂದೆಗೆ ಗುರಿಯಾಗುವನಲ್ಲದೆ, ದುಃಖಿಯೂ, ರೋಗಿಯೂ ಆಗಿ, ಅಲ್ಪಾಯುವೂ ಸಹ ಆಗುತ್ತಾನೆ. ಆದುದರಿಂದ ಈರೀತಿ ಯತ್ನಮಾಡಬೇಕು :—

ಯದ್ಯತ್ಪರವಶಂ ಕರ್ಮ ತತ್ತದ್ಯತ್ನೇನ ವರ್ಜಯೇತ್ ।
ಯದ್ಯದಾತ್ಮವಶಂ ತು ಸ್ಯಾತ್ತತ್ತತ್ಸೇವೇತ ಯತ್ನತಃ ॥೧॥
ಸರ್ವಂ ಪರವಶಂ ದುಃಖಂ ಸರ್ವಮಾತ್ಮವಶಂ ಸುಖಂ ।
ಏತದ್ವಿದ್ಯಾತ್ಸಮಾಸೇನ ಲಕ್ಷಣಂ ಸುಖದುಃಖಯೋಃ ॥೨॥

[ಮನು ೪-೧೬೯-೧೬೦]

ಮನುಷ್ಯನು ಪರಾಧೀನವಾದ ಕರ್ಮಗಳನ್ನು ಪ್ರಯತ್ನ ಪೂರ್ವಕವಾಗಿ ಬಿಟ್ಟು, ಸ್ವಾಧೀನವಾದ ಕರ್ಮಗಳನ್ನೇ ಯಾವಾಗಲೂ ಯತ್ನ ಪೂರ್ವಕವಾಗಿ ಸೇವಿಸಬೇಕು. ॥೧॥ ಏಕೆಂದರೆ, ಪರಾಧೀನವಾದುದೆಲ್ಲಾ ದುಃಖ, ಸ್ವಾಧೀನವಾದುದೆಲ್ಲಾ ಸುಖ; ಇದೇ ಸುಖದುಃಖಗಳ ಸಂಕ್ಷಿಪ್ತವಾದ ಲಕ್ಷಣವೆಂದು ತಿಳಿಯಬೇಕು. ॥೨॥ ಆದರೆ, ಪರಸ್ಪರ ಅಧೀನತೆಯಿಂದ ಮಾಡಬೇಕಾದ ಕಾರ್ಯಗಳನ್ನು ಅಧೀನರಾಗಿದ್ದೇ ಮಾಡಬೇಕಾಗುತ್ತದೆ. ಹೇಗೆಂದರೆ, ಸ್ತ್ರೀ ಪುರುಷರ ವ್ಯವಹಾರ ಪರಸ್ಪರ ಅಧೀನತೆಯಿಂದಲೇ ನಡೆಯಬೇಕು. ಅಂದರೆ ಸ್ತ್ರೀಯು ಪುರುಷನ, ಮತ್ತು ಪುರುಷನು ಸ್ತ್ರೀಯ, ಪರಸ್ಪರ ಪ್ರಿಯಾಚರಣಮಾಡಬೇಕು. ಪರಸ್ಪರ ಅನುಕೂಲರಾಗಿರಬೇಕು. ಸ್ತ್ರೀಪುರುಷರು ವ್ಯಭಿಚಾರವನ್ನಾಗಲಿ, ಪರಸ್ಪರ ದ್ವೇಷವನ್ನಾಗಲಿ ಎಂದಿಗೂ ಮಾಡಬಾರದು. ಸ್ತ್ರೀಯು ಪುರುಷನ ಆಜ್ಞೆಯಂತೆ ಮನೆಗೆಲಸಗಳನ್ನು, ಉತ್ತಮರೀತಿಯಿಂದ ನಿರ್ವಹಿಸುತ್ತಿರಬೇಕು. ಪುರುಷನು ಕೂಡ ಹೊರಗಣ ಕೆಲಸಗಳನ್ನು ಚನ್ನಾಗಿ ಮಾಡಬೇಕು. ಸ್ತ್ರೀಪುರುಷರು ದುರ್ವ್ಯಸನಗಳಿಗೆ ಸಿಕ್ಕಿ ತೊಳಲದಂತೆ, ಒಬ್ಬರನ್ನೊಬ್ಬರು ತಡೆಯುತ್ತಿರಬೇಕು. ವಿವಾಹವಾದೊಡನೆಯೇ ಸ್ತ್ರೀಗೆ ಪುರುಷನೂ, ಪುರುಷ

ನಿಗೆ ಸ್ತ್ರೀಯೂ ಮಾರಿಹೋದರೆಂದು ತಿಳಿಯಬೇಕು. ಅಂದರೆ ಸ್ತ್ರೀ ಪುರುಷರ ಬಳಿ ಹಾವಭಾವ, ನೆತ್ತಿಯಿಂದ ಹಿಡಿದು ಕಾಲ್ಬೆಟ್ಟಿನವರೆಗೆ ಏನೇನಿದೆಯೋ ಆ ವೀರ್ಯಾದಿ ಸಕಲವಸ್ತುಗಳೂ ಒಬ್ಬರಿಗೊಬ್ಬರಿಗೆ ಅಧೀನವಾಗಿಹೋಗುತ್ತವೆ. ಸ್ತ್ರೀಯು ಅಥವಾ ಪುರುಷನೂ ಪ್ರಸನ್ನತೆಯಿಲ್ಲದೆ ಯಾವ ವ್ಯವಹಾರವನ್ನೂ ಮಾಡಬಾರದು. ಇವುಗಳಲ್ಲಿ ಬಹಳ ಅಪ್ರಿಯಕರವಾದ ಕರ್ಮಗಳು, ವ್ಯಭಿಚಾರ, ವೇಶ್ಯಾಗಮನ, ಪರ ಪುರುಷಗಮನ ಮೊದಲಾದುವು; ಇವುಗಳನ್ನು ವರ್ಜಿಸಿ, ತನ್ನ ಪತಿಯೊಂದಿಗೆ ಪತ್ನಿಯೂ, ಪತ್ನಿಯೊಂದಿಗೆ ಪತಿಯೂ ಸದಾ ಪ್ರಸನ್ನರಾಗಿರಬೇಕು. ಬ್ರಾಹ್ಮಣ ವರ್ಣಸ್ಥರಾಗಿದ್ದರೆ, ಪುರುಷನು ಗಂಡು ಮಕ್ಕಳಿಗೂ, ಸುಶಿಕ್ಷಿತೆಯಾದ ಸ್ತ್ರೀಯು ಹೆಣ್ಣುಮಕ್ಕಳಿಗೂ, ಓದು ಬರಹಗಳನ್ನು ಕಲಿಸಬೇಕು. ನಾನಾವಿಧವಾದ ಉಪದೇಶಗಳಿಂದಲೂ, ಭಾಷಣಗಳಿಂದಲೂ, ಅವರನ್ನು ವಿದ್ಯಾವಂತರನ್ನಾಗಿ ಮಾಡಬೇಕು. ನಾರಿಗೆ ಪತಿಯು ದೇವರು ಅಂದರೆ ಪೂಜ್ಯನು, ಪುರುಷನಿಗೆ ಪತ್ನಿಯೇ ಸತ್ಕಾರಾರ್ಹಳಾದ ದೇವಿಯು. ಗುರುಕುಲದಲ್ಲಿರುವವರೆಗೆ ಬಾಲಕ ಬಾಲಿಕೆಯರು ಉಪಾಧ್ಯಾಯರನ್ನು ತಂದೆ ತಾಯಿಗಳೆಂದು ಭಾವಿಸಬೇಕು. ಅಧ್ಯಾಪಕರೂ ಕೂಡ ಶಿಷ್ಯರನ್ನು ತಮ್ಮ ಮಕ್ಕಳೆಂದು ತಿಳಿಯಬೇಕು.

ಓದಿಸುವ ಅಧ್ಯಾಪಕ ಅಧ್ಯಾಪಿಕೆಯರು ಹೇಗಿರಬೇಕೆಂದರೆ—

ಆತ್ಮಜ್ಞಾನಂ ಸಮಾರಂಭಸ್ತಿತಿಕ್ಷಾ ಧರ್ಮನಿತ್ಯತಾ।
ಯಮರ್ಥಾನಾಪಕರ್ಷಂತಿ ಸವೈ ಪಂಡಿತ ಉಚ್ಯತೇ ॥೧॥

ನಿಷೇವತೇ ಪ್ರಶಸ್ತಾನಿ ನಿಂದಿತಾನಿ ನ ಸೇವತೇ।
ಅನಾಸ್ತಿಕಃ ಶ್ರದ್ಧಾನ ಏತತ್ಪಂಡಿತಲಕ್ಷಣಂ ॥೨॥

ಕ್ಷಿಪ್ರಂ ವಿಜಾನಾತಿ ಚಿರಂ ಶೃಣೋತಿ ವಿಜ್ಞಾಯಚಾರ್ಥಂ
ಭಜತೇ ನ ಕಾಮಾತ್।
ನಾ ಸಂಪೃಷ್ಟೋಽಪ್ಯುಪಯುಂಕ್ತೇ ಪರಾರ್ಥೇ ತತ್ಪ್ರಜ್ಞಾನಂ
ಪ್ರಥಮಂ ಪಂಡಿತಸ್ಯ ॥೩॥

ನಾಪ್ರಾಪ್ಯಮಭಿವಾಂಛಂತಿ ನಷ್ಟಂ ನೇಚ್ಛಂತಿ ಶೋಚಿತುಂ।
ಆಪತ್ಸುಚನಮುಹ್ಯಂತಿ ನರಾಃ ಪಂಡಿತಬುದ್ಧಯಃ ॥೪॥

ಪ್ರವೃತ್ತವಾಕ್ಚಿತ್ರಕಥ ಊಹವಾನ್ಪ್ರತಿ ಭಾನವಾನ್।
ಆಶುಗ್ರಂಥಸ್ಯ ವಕ್ತಾಚ ಯಃ ಸ ಪಂಡಿತ ಉಚ್ಯತೇ ॥೫॥

ಶ್ರುತಂ ಪ್ರಜ್ಞಾನುಗಂ ಯಸ್ಯ ಪ್ರಜ್ಞಾ ಚೈವ ಶ್ರುತಾನುಗಾ।
ಅಸಂಭಿನ್ನಾರ್ಯಮರ್ಯಾದಃ ಪಂಡಿತಾಖ್ಯಾಂ ಲಭೇತ ಸಃ॥೬॥

ಇವೆಲ್ಲಾ ಮಹಾಭಾರತದ ಉದ್ಯೋಗಪರ್ವದಲ್ಲಿನ ವಿದುರ ಪ್ರಜಾಗಾರದ ೩೨ನೆಯ ಅಧ್ಯಾಯದ ಶ್ಲೋಕಗಳು. ಅರ್ಥ:— ಯಾವನು ಆತ್ಮಜ್ಞನಿಯೋ, ಸಮ್ಯಗಾರಂಭನೋ ಅಂದರೆ ಯಾವನು ಅಕರ್ಮಣ್ಯನೂ, ಸೋಮಾರಿಯೂ ಅಲ್ಲವೋ, ಯಾವನು ಸುಖದುಃಖ, ಹಾನಿ ಲಾಭ, ಮಾನಾಪಮಾನ, ನಿಂದಾಸ್ತುತಿಗಳಲ್ಲಿ ಹರ್ಷಶೋಕಗಳನ್ನು ಯಾವಾಗಲೂ ಹೊಂದನೋ, ಯಾವನು ಧರ್ಮದಲ್ಲಿಯೇ ದೃಢವಾಗಿರುವನೋ, ಉತ್ತಮೋತ್ತಮವಾದಪದಾರ್ಥಗಳು ಅಂದರೆ, ವಿಷಯ ಸಂಬಂಧವಾದವಸ್ತುಗಳು ಯಾವನ ಮನಸ್ಸನ್ನು ಆಕರ್ಷಿಸಲಾರವೋ, ಅವನೇಪಂಡಿತನೆನಿಸಿಸುತ್ತಾನೆ.॥೧॥ಸದಾ ಧರ್ಮಯುಕ್ತ ಕಾರ್ಯಗಳನ್ನು ಆಚರಿಸುವುದು, ಅಧರ್ಮಯುಕ್ತ ಕಾರ್ಯಗಳನ್ನು ಮಾಡದಿರುವುದು, ಪರಮಾತ್ಮ, ವೇದಗಳು, ಹಾಗೂ ಸತ್ಯಾಚಾರವನ್ನು ನಿಂದಿಸದಿರುವುದು, ಈಶ್ವರ ಮೊದಲಾದುವುಗಳಲ್ಲಿ ಶ್ರದ್ಧೆಯಿರುವುದು, ಇವು ಪಂಡಿತನ ಕರ್ತವ್ಯಗಳಾಗಿವೆ. ॥೨॥ ಕಠಿನವಾದ ವಿಷಯಗಳನ್ನೂ ಸಹಬೇಗ ಗ್ರಹಿಸುವುದು, ಬಹುಕಾಲದವರೆಗೆ ಶಾಸ್ತ್ರಗಳನ್ನು ಓದಿ, ಕೇಳಿ, ಮನನಮಾಡುವುದು ತಿಳಿದುದನ್ನು ಪರೋಪಕಾರದಲ್ಲಿ ವಿನಿಯೋಗಿಸುವುದು, ಸ್ವಪ್ರಯೋಜನಕ್ಕಾಗಿ ಯಾವ ಕಾರ್ಯಗಳನ್ನೂ ಆಚರಿಸದಿರುವುದು, ಇತರರು ಕೇಳದೇ ಮತ್ತು ಯೋಗ್ಯ ಸಮಯವನ್ನು ತಿಳಿಯದೇ ಇತರರ ವಿಷಯದಲ್ಲಿ ಸಮ್ಮತಿಕೊಡದಿರುವುದು, ಇದು ಪಂಡಿತನ ಪ್ರಥಮ ಲಕ್ಷಣವಾಗಿರುತ್ತದೆ. ॥೩॥ ಹೊಂದಲಯೋಗ್ಯವಾದಂಥಾ ವಸ್ತುವನ್ನು ಯಾವಾಗ್ಯೂ ಅಪೇಕ್ಷಿಸದೆ, ಕಳೆದುಹೋದ ವಸ್ತುವಿಗಾಗಿ ಶೋಕಿಸದೆ, ಮತ್ತು ಆಪತ್ಕಾಲದಲ್ಲಿ ಮೋಹವನ್ನು

ಹೊಂದದೆ, ಅಂದರೆ ವ್ಯಾಕುಲನಾಗದೆ, ಇರುವವನೇ ಬುದ್ಧಿಮಾನ್ ಪಂಡಿತನು. ॥೪॥ ಯಾವನ ವಾಣಿಯು ಸಕಲ ವಿದ್ಯೆಗಳಲ್ಲಿಯೂ, ಪ್ರಶ್ನೋತ್ತರಗಳಲ್ಲಿಯೂ, ಅತಿ ನಿಪುಣವಾಗಿರುತ್ತದೆಯೋ, ಯಾವನು ಅದ್ಭುತವಾಗಿ ಶಾಸ್ತ್ರಪ್ರಕರಣಗಳನ್ನು ಹೇಳಬಲ್ಲನೋ, ಯಾವನು ಯಥಾಯೋಗ್ಯತಾರ್ಕಿಕನೂ, ಸ್ಮರಣಶಕ್ತಿಸಂಪನ್ನನೂ, ಗ್ರಂಥಗಳ ನಿಜವಾದ ಅರ್ಥವನ್ನು ಸರಾಗವಾಗಿ ಹೇಳಬಲ್ಲವನೂ ಆಗಿರುತ್ತಾನೋ, ಅವನೇ ಪಂಡಿತನೆನಿಸುತ್ತಾನೆ. ॥೫॥ ಯಾವನ ಪ್ರಜ್ಞೆಯು ಕೇಳಿದ ಸತ್ಯಾರ್ಥಕ್ಕೆ ಅನುಕೂಲವಾಗಿರುವುದೋ, ಯಾವನ ಶ್ರವಣವು ಬುದ್ಧಿಗೆ ಅನುಸಾರವಾಗಿರುವುದೋ, ಮತ್ತು ಯಾವನು ಆರ್ಯರ ಅಂದರೆ ಶ್ರೇಷ್ಠ ಧಾರ್ಮಿಕ ಪುರುಷರ ಎಲ್ಲೆಯನ್ನು ಎಂದಿಗೂ ಮೀರುವದಿಲ್ಲವೋ, ಅವನೇ ಪಂಡಿತನೆಂಬ ಹೆಸರನ್ನು ಪಡೆಯುತ್ತಾನೆ. ॥೬॥ ಮೇಲೆ ಹೇಳಿದ ಲಕ್ಷಣಗಳಿಂದ ಕೂಡಿದ ಸ್ತ್ರೀಪುರುಷರು ಯಾವ ದೇಶದಲ್ಲಿ ಅಧ್ಯಾಪಕರಾಗಿರುತ್ತಾರೋ ಆ ದೇಶದಲ್ಲಿ ವಿದ್ಯೆ, ಧರ್ಮ, ಉತ್ತಮಾಚಾರ, ಇವು ವೃದ್ಧಿಹೊಂದಿ ಆನಂದವು ದಿನ ದಿನವೂ ವರ್ಧಿಸುತ್ತಾ ಹೋಗುತ್ತದೆ.

ಓದುವುದರಲ್ಲಿ ಅಯೋಗ್ಯ ಮತ್ತು ಮೂರ್ಖನ ಲಕ್ಷಣ—

ಅಶ್ರುತಶ್ಚ ಸಮುನ್ನದ್ಧೋ ದರಿದ್ರಶ್ಚ ಮಹಾಮನಾಃ ।
ಅರ್ಥಾಂಶ್ಚಾಕಮಣಾ ಹ್ಯೇಪುನರ್ಮೂಢ ಇತ್ಯುಚ್ಯತೇಬುಧೈಃ ॥
ಅನಾಹೂತಃ ಪ್ರವಿಶತಿ ಹ್ಯಪೃಷ್ಟೋ ಬಹುಭಾಷತೇ ।
ಅವಿಶ್ವಸ್ತೇ ವಿಶ್ವಸಿತಿ ಮೂಢಚೇತಾ ನರಾಧಮಃ ॥೭॥

[ಮಹಾಭಾರತ ಉದ್ಯೋಗಪರ್ವ ಅ. ೩೨]

ಅರ್ಥ :—ಯಾವನು ಯಾವಶಾಸ್ತ್ರವನ್ನೂ ಓದಿಲ್ಲವೋ, ಕೇಳಲ್ಲವೋ, ಯಾವನು ಬಹಳ ಅಹಂಕಾರಿಯೋ, ಯಾವನು ದರಿದ್ರನಾಗಿದ್ದರೂ ದೊಡ್ಡ ದೊಡ್ಡ ಕೋರಿಕೆಗಳನ್ನಿಟ್ಟುಕೊಂಡಿರುತ್ತಾನೋ, ಯಾವನು ಯಾವ ಉದ್ಯೋಗವನ್ನೂ ಮಾಡದೆ, ವಸ್ತುಗಳನ್ನು ಪಡೆಯಬಯಸುತ್ತಾನೋ, ಅವನನ್ನು ವಿದ್ವಾಂಸರು ಮೂಢನೆಂದು ಹೇಳು.

ತ್ತಾರೆ. ॥೧॥ ಯಾವನು ಕರೆಯಿಲ್ಲದೆಯೇ ಸಭೆ ಅಥವಾ ಇತರರ ಮನೆಯನ್ನು ಪ್ರವೇಶಿಸುತ್ತಾನೆಯೋ ಮತ್ತು ಉಚ್ಚಾಸನದಲ್ಲಿ ಕುಳಿತು ಕೊಳ್ಳ ಬಯಸುತ್ತಾನೋ, ಯಾವನು ಯಾರೂ ಕೇಳದಿದ್ದರೂ ಸಹ ಸಭೆಯಲ್ಲಿ ವಿಪುಲವಾಗಿ ಹರಟುತ್ತಾನೋ, ಮತ್ತು ಯಾವನು ವಿಶ್ವಾಸಾರ್ಹವಲ್ಲದ ವಸ್ತುವನ್ನು ಅಥವಾ ಮನುಷ್ಯನನ್ನು ನಂಬುತ್ತಾನೋ, ಅವನೇ ಮೂಢನು ಮತ್ತು ಎಲ್ಲಾ ಮನುಷ್ಯರಲ್ಲಿಯೂ ನೀಚನು ಎನ್ನಿಸಿಕೊಳ್ಳುತ್ತಾನೆ. ॥೨॥ ಯಾವ ದೇಶದಲ್ಲಿ ಇಂತಹ ಪುರುಷರು ಅಧ್ಯಾಪಕರಾಗಿಯೂ, ಉಪದೇಶಕರಾಗಿಯೂ, ಗುರುಗಳಾಗಿಯೂ, ಮತ್ತು ಮಾನ್ಯರಾಗಿಯೂ, ಇರುತ್ತಾರೋ, ಅಲ್ಲಿ ಅವಿದ್ಯೆಯೂ, ಅಧರ್ಮವೂ, ಅಸಭ್ಯತೆಯೂ, ಕಲಹಗಳೂ, ವಿರೋಧ ಹಾಗೂ ಒಡಕೂ ಹೆಚ್ಚಿ, ದುಃಖವು ಬಲಿಯುತ್ತದೆ.

ವಿದ್ಯಾರ್ಥಿಗಳ ಲಕ್ಷಣ

ಆಲಸ್ಯಂ ಮದಮೋಹೌ ಚ ಚಾಪಲ್ಯಂ ಗೋಷ್ಠಿರೇವ ಚ।
ಸ್ತಬ್ಧತಾ ಚಾಭಿಮಾನಿತ್ವಂ ತಥಾತ್ಯಾಗಿತ್ವಮೇವ ಚ ॥
ಏತೇ ವೈ ಸಪ್ತದೋಷಾಃ ಸ್ಯುಃ ಸದಾ ವಿದ್ಯಾರ್ಥಿನಾಂ ಮತಾಃ॥
ಸುಖಾರ್ಥಿನಃ ಕುತೋ ವಿದ್ಯಾ ಕುತೋ ವಿದ್ಯಾರ್ಥಿನಃ ಸುಖಂ।
ಸುಖಾರ್ಥೀವಾ ತ್ಯಜೇದ್ವಿದ್ಯಾಂ ವಿದ್ಯಾರ್ಥೀ ವಾ
ತ್ಯಜೇತ್ಸುಖಂ ॥

[ಮಹಾಭಾರತ ಉದ್ಯೋಗಪರ್ವ ಅ. ೩೯]

ಅರ್ಥ :—ಸೋಮಾರಿತನ, ಮದ, ಮೋಹ, ಯಾವದಾದರೂ ವಸ್ತುವಿನಲ್ಲಿ ಸಿಕ್ಕಿಹಾಕಿಕೊಳ್ಳುವುದು, ಚಾಪಲ್ಯ, ಇಲ್ಲಿ ಅಲ್ಲಿನ ವ್ಯರ್ಥ ಕಥೆಗಳನ್ನು ಹೇಳುವುದು ಮತ್ತು ಕೇಳುವುದು, ಓದುತ್ತಾ ಓದಿಸುತ್ತಾ ನಿಲ್ಲಿಸಿಬಿಡುವುದು; ಅಹಂಕಾರಿಯಾಗಿ ಮತ್ತು ತ್ಯಾಗಹೀನನಾಗಿರುವುದು; ಈ ಏಳು ದೋಷಗಳೂ ವಿದ್ಯಾರ್ಥಿಗಳಲ್ಲಿರುತ್ತವೆ. ॥೧॥ ಇಂತಹವರಿಗೆ ವಿದ್ಯೆಯು ಎಂದಿಗೂ ಬರುವದಿಲ್ಲ, ಸುಖಾಪೇಕ್ಷೆಗೆ ವಿದ್ಯೆ ಎಲ್ಲಿಂದ ಬಂದೀತು? ವಿದ್ಯೆಯನ್ನು ಓದುವವನಿಗೆ ಸುಖವೆಲ್ಲಿಯದು? ಆದುದರಿಂದ, ವಿಷಯಸುಖವನ್ನು ಬಯಸುವವನು ವಿದ್ಯೆಯನ್ನೂ,

ವಿದ್ಯೆಯನ್ನಪೇಕ್ಷಿಸುವವನು ವಿಷಯಸುಖವನ್ನೂ ಬಿಟ್ಟುಬಿಡಬೇಕು. ॥೨॥ ಹೀಗೆ ಮಾಡಿದಲ್ಲದೆ, ವಿದ್ಯೆ ಎಂದಿಗೂ ಲಭಿಸದು; ಮತ್ತು ಕೆಳಗೆ ಬರೆದಿರುವಂತಹ ಲಕ್ಷಣಯುಕ್ತರಿಗೆ ವಿದ್ಯೆ ಲಭಿಸುತ್ತದೆ.

ಸತ್ಯೇರತಾನಾಂ ಸತತಂ ದಾಂತಾನಾಮೂರ್ಧ್ವರೇತಸಾಂ ।
ಬ್ರಹ್ಮಚರ್ಯಂ ದಹೇದ್ರಾಜನ್ ಸರ್ವಪಾಪಾನ್ಯುಪಾಸಿತಂ ॥

[ಮಹಾಭಾರತ. ಉದ್ಯೋಗಪರ್ವ]

ಯಾರು ಸದಾಚಾರದಲ್ಲಿಯೇ ಪ್ರವೃತ್ತರಾಗಿ, ಜಿತೇಂದ್ರಿಯರಾಗಿರುವರೋ, ಮತ್ತು ಯಾರ ವೀರ್ಯವು ಎಂದೂ ಅಧಃಸ್ಖಲಿತವಾಗಿಲ್ಲವೋ, ಅವರ ಬ್ರಹ್ಮಚರ್ಯವೇ ಸತ್ಯವಾದುದು; ಅಂತಹವರೇ ವಿದ್ವಾಂಸರಾಗುತ್ತಾರೆ. ಆದುದರಿಂದ, ಅಧ್ಯಾಪಕರೂ, ವಿದ್ಯಾರ್ಥಿಗಳೂ, ಶುಭಲಕ್ಷಣಸಂಪನ್ನರಾಗಿರಬೇಕು. ವಿದ್ಯಾರ್ಥಿಗಳು ಸತ್ಯವಾದಿಗಳಾಗಿಯೂ, ಸತ್ಯವನ್ನೇ ಗೌರವಿಸುವವರಾಗಿಯೂ, ಸತ್ಯವನ್ನೇ ಆಚರಿಸುವವರಾಗಿಯೂ, ಸಭ್ಯತೆ, ಇಂದ್ರಿಯನಿಗ್ರಹ, ಒಳ್ಳೆಯ ನಡತೆ ಮುಂತಾದ ಉತ್ತಮಗುಣಗಳಿಂದ ಕೂಡಿದವರಾಗಿಯೂ, ಶರೀರ ಮತ್ತು ಆತ್ಮವು ಬಲಿಷ್ಠವಾಗಿ, ವೇದಾದಿ ಶಾಸ್ತ್ರಗಳಲ್ಲಿ ವಿದ್ವಾಂಸರಾಗಿಯೂ ಆಗುವಂತೆ, ಅಧ್ಯಾಪಕರು ಪ್ರಯತ್ನಿಸಬೇಕು. ಅವರ ದುಶ್ಚೇಷ್ಟೆಗಳನ್ನು ಬಿಡಿಸಿ, ವಿದ್ಯೆಕಲಿಸುವುದರಲ್ಲಿ ತೊಡಗಿರಬೇಕು. ವಿದ್ಯಾರ್ಥಿಗಳೂ ಕೂಡ, ಜಿತೇಂದ್ರಿಯರೂ, ಶಾಂತರೂ, ಉಪಾಧ್ಯಾಯರಲ್ಲಿ ಪ್ರೇಮವುಳ್ಳವರೂ, ವಿಚಾರಶೀಲರೂ, ಎಂತಹ ಶ್ರಮವನ್ನಾದರೂ ಸಹಿಸುವವರೂ ಆಗಿ, ಪೂರ್ಣವಿದ್ಯೆಯನ್ನೂ, ಪೂರ್ಣವಾದ ಆಯುಷ್ಯವನ್ನೂ, ಪೂರ್ಣ ಧರ್ಮವನ್ನೂ, ಪುರುಷಾರ್ಥವನ್ನೂ ಸಾಧಿಸಲಾಗುವಂತೆ ಪ್ರಯತ್ನಿಸಬೇಕು, ಇದೇ ಬ್ರಾಹ್ಮಣ ವರ್ಣದವರ ಕರ್ತವ್ಯವಾಗಿರುತ್ತದೆ. ಕ್ಷತ್ರಿಯರ ಕರ್ತವ್ಯವನ್ನು ರಾಜಧರ್ಮಪ್ರಕರಣದಲ್ಲಿ ಬರೆಯುತ್ತೇವೆ.

ವೈಶ್ಯರ ಕರ್ಮಗಳು :—ಬ್ರಹ್ಮಚರ್ಯವ್ರತದಿಂದ ವೇದಾದಿವಿದ್ಯೆಗಳನ್ನು ಕಲಿತು, ಮದುವೆಯಾಗಿ, ದೇಶಭಾಷೆಗಳನ್ನೂ, ನಾನಾಬಗೆಯ ವ್ಯಾಪಾರಗಳ ರೀತಿನೀತಿಗಳನ್ನೂ ಬೆಲೆಗಳನ್ನೂ ತಿಳಿಯುವುದು,

ಕ್ರಯ, ವಿಕ್ರಯ, ದ್ವೀಪಾಂತರಗಳಿಗೆ ಹೋಗಿಬರುವುದು, ಲಾಭಕ್ಕಾಗಿ ಕಾರ್ಯಾರಂಭಮಾಡುವುದು, ವ್ಯಾಪಾರಮಾಡುವುದು, ಮಾಡಿಸುವುದು, ಐಶ್ವರ್ಯವರ್ಧನ ಪಶುಪಾಲನೆ, ವ್ಯವಸಾಯ ಅಭಿವೃದ್ಧಿ, ಚಾತುರ್ಯ ದಿಂದ ವಿದ್ಯಾಧರ್ಮಗಳ ಉನ್ನತಿಗಾಗಿ ಧನವ್ಯಯಮಾಡುವುದು, ಸತ್ಯ ವಾದಿಗಳೂ, ನಿಷ್ಕಪಟರೂ ಆಗಿ, ಸಕಲ ವ್ಯಾಪಾರಗಳನ್ನೂ ಸತ್ಯದಿಂದ ನಡೆಯಿಸುವುದು, ಯಾವ ಹಾನಿಯೂ ಆಗದಂತೆ, ಎಲ್ಲಾ ವಸ್ತುಗ ಳನ್ನೂ ಕಾಪಾಡುವುದು.

ಶೂದ್ರರು ಸರ್ವವಿಧ ಸೇವೆಯಲ್ಲಿಯೂ, ಚತುರರೂ, ಪಾಕ ವಿದ್ಯಾಕುಶಲರೂ ಆಗಿ, ಅತಿ ಪ್ರೇಮದಿಂದ ದ್ವಿಜರ ಸೇವೆಮಾಡುತ್ತಾ ಅವರಿಂದಲೇ ಜೀವಿಕೆಯನ್ನು ಸಂಪಾದಿಸಿಕೊಳ್ಳಬೇಕು. ಶೂದ್ರರಿಗೆ ಅನ್ನ, ಪಾನ, ಉಡಿಗೆತೊಡಿಗೆಗಳು, ಮನೆ, ಪುದುವೆ ಮೊದಲಾದುವು ಗಳಿಗೆ ತಗಲುವ ಎಲ್ಲಾ ವೆಚ್ಚವನ್ನೂ ದ್ವಿಜರೇ ವಹಿಸಬೇಕು. ಅಥವಾ ಪ್ರತಿತಿಂಗಳೂ ಸಂಬಳವನ್ನು ಕೊಡಬೇಕು. ನಾಲ್ಕು ವರ್ಣದವರೂ, ಪರಸ್ಪರ ಪ್ರೀತಿಯುಳ್ಳವರಾಗಿಯೂ, ಉಪಕಾರಿಗಳಾಗಿಯೂ, ಸಖ್ಯ ರಾಗಿಯೂ ಇದ್ದು, ಸುಖದುಃಖ, ಹಾನಿಲಾಭ, ಮೊದಲಾದ ವಿಷಯ ಗಳಲ್ಲಿ ಐಕಮತ್ಯದಿಂದ ವರ್ತಿಸಿ, ರಾಜ್ಯದ ಹಾಗೂ ಪ್ರಜೆಗಳ ಉನ್ನತಿ ಗಾಗಿ, ತಮ್ಮ ತನುಮನಧನಗಳನ್ನು, ವ್ಯಯಮಾಡುತ್ತಿರಬೇಕು.

ಪಾನಂ ದುರ್ಜನಸಂಸರ್ಗಃ ಪತ್ಯಾ ಚ ವಿರಹೋಽಟನಮ್ ।
ಸ್ವಪ್ನೋಽನ್ಯಗೇಹವಾಸಶ್ಚ ನಾರೀಸಂದೂಷಣಾನಿ ಷಟ್ ॥

[ಮನು ೯-೧೩]

ಮದ್ಯ, ಗಾಂಜಾ, ಮೊದಲಾದ ಮಾದಕದ್ರವ್ಯ ಸೇವನೆ, ದುಷ್ಟ ಪುರುಷರ ಸಂಗ, ಗಂಡನಿಂದ ದೂರವಾಗಿರುವುದು, ಅಲ್ಲಿ-ಇಲ್ಲಿ ವ್ಯರ್ಥ ವಾಗಿ ಪಾಷಂಡಿಗಳೇ ಮೊದಲಾದವರ ದರ್ಶನದ ನೆಪದಿಂದ ಒಂಟಿ ಯಾಗಿ ಅಲೆದಾಡುವುದು, ಬೇರೆಯವರ ಮನೆಯಲ್ಲಿ ಪುಲಗುವುದು ಅಥವಾ ವಾಸಿಸುವುದು–ಈ ಆರು ದೋಷಗಳು ಸ್ತ್ರೀಯರನ್ನು ಕೆಡಿಸು ತ್ತವೆ. ಮತ್ತು ಇವು ಪುರುಷರನ್ನೂ ಸಹ ಹಾಳುಮಾಡುತ್ತವೆ. ಸ್ತ್ರೀ ಪುರುಷರ ವಿಯೋಗವು ಎರಡುಪ್ರಕಾರವಾಗಿರುತ್ತದೆ. ಮೊದಲನೆ

ಯದು–ಯಾವುದಾದರೊಂದು ಕಾರ್ಯಕ್ಕಾಗಿ ದೇಶಾಂತರಕ್ಕೆ ಹೋಗುವುದು, ಎರಡನೆಯದು–ಸಾಪು. ಇವುಗಳಲ್ಲಿ ದೂರದೇಶಕ್ಕೆ ಹೋಗುವಾಗ ಸ್ತ್ರೀಯನ್ನು ಜೊತೆಯಲ್ಲಿಯೇ ಕರೆದುಕೊಂಡು ಹೋಗುವುದು ಮೊದಲನೆಯದಕ್ಕೆ ಉತ್ತಮವಾದ ಉಪಾಯವಾಗಿರುತ್ತದೆ. ಬಹು ಕಾಲದವರೆಗೆ ಗಂಡಹೆಂಡಿರು ಒಬ್ಬರನ್ನೊಬ್ಬರು ಬಿಟ್ಟಿರುವುದು ಯೋಗ್ಯವಲ್ಲ.

ಪ್ರಶ್ನೆ:—ಸ್ತ್ರೀಪುರುಷರು ಅನೇಕ ವಿವಾಹಗಳನ್ನು ಮಾಡಿಕೊಳ್ಳುವುದು ಯೋಗ್ಯವೋ ಅಲ್ಲವೋ? ಉತ್ತರ:—ಯುಗಪತ್ ಅಂದರೆ ಒಂದೇ ಸಮಯದಲ್ಲಿ ಕೂಡದು. ಪ್ರಶ್ನೆ:—ಹಾಗಾದರೆ, ಬೇರೆ ಬೇರೆ ಸಮಯಗಳಲ್ಲಿ ಸ್ತ್ರೀಪುರುಷರು ಅನೇಕ ವಿವಾಹಗಳನ್ನು ಮಾಡಿಕೊಳ್ಳಬಹುದೋ? ಉತ್ತರ:—ಹೌದು, ಹೇಗೆಂದರೆ—

ಸಾ ಚೇದಕ್ಷತಯೋನಿಃ ಸ್ಯಾದ್ಗತಪ್ರತ್ಯಾಗತಾಪಿವಾ ।
ಪೌನರ್ಭವೇನ ಭರ್ತ್ರಾ ಸಾ ಪುನಃ ಸಂಸ್ಕಾರಮರ್ಹತಿ ॥

[ಮನು ೯-೧೭೬]

ಸ್ತ್ರೀ ಅಥವಾ ಪುರುಷನ ಪಾಣಿಗ್ರಹಣ ಸಂಸ್ಕಾರಮಾತ್ರ ನೆರವೇರಿ, ಸಂಯೋಗವಾಗದಿದ್ದರೆ, ಅಂದರೆ, ಅಕ್ಷತಯೋನಿ ಸ್ತ್ರೀ ಮತ್ತು ಅಕ್ಷತವೀರ್ಯ ಪುರುಷನಾಗಿದ್ದರೆ, ಅನ್ಯಸ್ತ್ರೀ ಅಥವಾ ಪುರುಷರ ಸಂಗಡ, ಅವರ ಪುನರ್ವಿವಾಹವಾಗಬೇಕು. ಆದರೆ, ಬ್ರಾಹ್ಮಣ, ಕ್ಷತ್ರಿಯ, ಮತ್ತು ವೈಶ್ಯವರ್ಣದವರಲ್ಲಿ ಕ್ಷತಯೋನಿಯಾದ ಸ್ತ್ರೀಗೂ, ಕ್ಷತವೀರ್ಯನಾದ ಪುರುಷನಿಗೂ, ಪುನರ್ವಿವಾಹವಾಗಬಾರದು.

ಪ್ರಶ್ನೆ:—ಪುನರ್ವಿವಾಹದಲ್ಲಿ ದೋಷವೇನು?

ಉತ್ತರ:—(೧) ಸ್ತ್ರೀಪುರುಷರಲ್ಲಿ ಪ್ರೇಮವು ಕಡಿಮೆಯಾಗುವುದು. ಏಕೆಂದರೆ, ಅಪೇಕ್ಷೆಸಿದಾಗಲೆಲ್ಲಾ ಪುರುಷನು ಸ್ತ್ರೀಯನ್ನೂ, ಸ್ತ್ರೀಯು ಪುರುಷನನ್ನೂ ಬಿಟ್ಟು ಬೇರೆಯವರೊಡನೆ ಸಂಬಂಧಮಾಡಿಕೊಳ್ಳುತ್ತಾರೆ. (೨) ಸ್ತ್ರೀಯು ಅಥವಾ ಪುರುಷನು, ಪತಿಯು ಅಥವಾ ಪತ್ನಿಯು ಸತ್ತ ಬಳಿಕ ಪುನರ್ವಿವಾಹ ಮಾಡಿಕೊಳ್ಳಬೇಕೆಂದು ಇಷ್ಟ ಪಟ್ಟರೆ, ಮೊದಲನೆಯ ಹೆಂಡತಿ ಅಥವಾ ಗಂಡನ ಆಸ್ತಿಯನ್ನೆಲ್ಲಾ

ತೆಗೆದುಕೊಂಡು ಹೋಗುವುದು ಮತ್ತು ಅವರ ಸಂಬಂಧಿಕರೊಡನೆ ಕಲಹ (೩) ಅನೇಕ ದೊಡ್ಡ ದೊಡ್ಡ ಮನೆತನಗಳು ನಾಶವಾಗಿ, ಹೇಳ ಹೆಸರಿಲ್ಲದೆ ಹೋಗುತ್ತವೆ. ಮತ್ತು ಅವರ ಪದಾರ್ಥಗಳು ಛಿನ್ನಛಿನ್ನ ವಾಗಿ ಹೋಗುತ್ತವೆ. (೪) ಪಾತಿವ್ರತ್ಯದ ಮತ್ತು ಸ್ತ್ರೀ ವ್ರತದ ಧರ್ಮ ಗಳು ನಾಶವಾಗಿಹೋಗುತ್ತವೆ. ಈ ಮೊದಲಾದ ದೋಷಗಳುಂಟಾಗು ವದರಿಂದ, ದ್ವಿಜರಲ್ಲಿ ಪುನರ್ವಿವಾಹವಾಗಲಿ, ಅನೇಕ ವಿವಾಹಗಳಾಗಲಿ ಎಂದಿಗೂ ಆಗಬಾರದು.

ಪ್ರಶ್ನೆ :—ವಂಶಚ್ಛೇದನವಾದರೂ ಅವರ ಕುಲ ನಷ್ಟವೇ ಆಗು ತ್ತದೆ. ಮತ್ತು ಸ್ತ್ರೀ ಪುರುಷರು ವ್ಯಭಿಚಾರ ಮೊದಲಾದ ಕಾರ್ಯ ಗಳನ್ನು ಮಾಡಿ, ಗರ್ಭಪಾತಾದಿ ಮಹಾದುಷ್ಕಾರ್ಯಗಳಲ್ಲಿ ಪ್ರವೃತ್ತ ರಾಗುವರು. ಆದುದರಿಂದ ಪುನರ್ವಿವಾಹವಾಗುವುದು ಒಳ್ಳೆಯದು.

ಉತ್ತರ : ಇಲ್ಲ. ಸ್ತ್ರೀ ಪುರುಷರು ಬ್ರಹ್ಮಚರ್ಯದಲ್ಲಿರಲಪೇ ಕ್ಷಿಸಿದರೆ, ಯಾವ ಉಪದ್ರವಗಳೂ ಸಂಭವಿಸುವುದಿಲ್ಲ. ಕುಲದ ಪರಂಪರೆ ಉಳಿಸಿಕೊಳ್ಳಲು ತನ್ನ ಸ್ವಜಾತಿಯ ಯಾವನಾದರೊಬ್ಬ ಬಾಲಕನನ್ನು ದತ್ತು ತೆಗೆದುಕೊಂಡರೆ, ಅವನಿಂದ ವಂಶವೃದ್ಧಿಯಾಗುವುದು. ವ್ಯಭಿ ಚಾರವೂ ಉಂಟಾಗಲಾರದು. ಬ್ರಹ್ಮಚರ್ಯವ್ರತದಿಂದ ಇರಲಾರ ದವರು ನಿಯೋಗದಿಂದ ಸಂತಾನೋತ್ಪತ್ತಿಯನ್ನು ಮಾಡಿಕೊಳ್ಳ ಬಹುದು.

ಪ್ರಶ್ನೆ :—ಪುನರ್ವಿವಾಹಕ್ಕೂ, ನಿಯೋಗಕ್ಕೂ ಭೇದವೇನು?

ಉತ್ತರ :- (೧) ವಿವಾಹದಲ್ಲಿ ಕನ್ಯೆಯು ತಂದೆಯ ಮನೆಯಿಂದ ಗಂಡನ ಮನೆಗೆ ಹೊರಟುಹೋಗುವಳು. ಮತ್ತು ಕನ್ಯೆಗೂ, ತಂದೆಗೂ ವಿಶೇಷಸಂಬಂಧವಿರುವದಿಲ್ಲ. ನಿಯೋಗದಲ್ಲಿ ವಿಧವಾ ಸ್ತ್ರೀಯು ತನ್ನ ಪತಿಯ ಮನೆಯಲ್ಲೇ ಇರುತ್ತಾಳೆ. (೨) ವಿವಾಹದಲ್ಲಿ ವಿವಾಹಿತಳಾದ ಸ್ತ್ರೀಯ ಮಕ್ಕಳು ತಮ್ಮ ತಂದೆಯ ಆಸ್ತಿಗೆ ಭಾಗಿಗಳಾಗುತ್ತಾರೆ; ನಿಯೋಗದಲ್ಲಿ ವಿಧವೆಯ ಮಕ್ಕಳು ವೀರ್ಯ ದಾತನಮಕ್ಕಳೆನ್ನಿಸಿಕೊಳ್ಳುವದಿಲ್ಲ; ಅವನ ಗೋತ್ರದವರೂ ಆಗುವು ದಿಲ್ಲ. ಮತ್ತು ಈ ಮಕ್ಕಳ ಮೇಲೆ ಅತನ ಅಧಿಕಾರವೂ ಇರುವದಿಲ್ಲ. ಆದರೆ, ಅವರು ಮೃತಪತಿಯ ಮಕ್ಕಳಾಗುತ್ತಾರೆ. ಅವನ ಗೋತ್ರವೇ

ಇರುತ್ತದೆ. ಮತ್ತು ಅವನ ಪದಾರ್ಥಗಳಿಗೇ ದಾಯಭಾಗಿಗಳಾಗಿ, ಅದೇ ಮನೆಯಲ್ಲಿರುತ್ತಾರೆ. (೩) ವಿವಾಹಿತರಾದ ಸ್ತ್ರೀ ಪುರುಷರು ಪರಸ್ಪರ ಸೇವೆ ಮತ್ತು ಪಾಲನೆಮಾಡುವುದು ಅವಶ್ಯವು. ಆದರೆ ನಿಯುಕ್ತರಾದ ಸ್ತ್ರೀಪುರುಷರಿಗೆ ಸಂಬಂಧವೇನೂ ಇರುವದಿಲ್ಲ. (೪) ವಿವಾಹದಲ್ಲಿ ಸ್ತ್ರೀಪುರುಷರ ಸಂಬಂಧವು ಮರಣಪರ್ಯಂತ ಇರುತ್ತದೆ; ನಿಯೋಗದಲ್ಲಿ ಸ್ತ್ರೀಪುರುಷರ ಸಂಬಂಧವು ಕಾರ್ಯವಾದ ಬಳಿಕ ಬಿಟ್ಟುಹೋಗುತ್ತದೆ (೫) ವಿವಾಹಿತ ಸ್ತ್ರೀಪುರುಷರು ತಮ್ಮ ಗೃಹಕೃತ್ಯಗಳನ್ನು ನೆರೆವೇರಿಸಿಕೊಳ್ಳಲು ಇಬ್ಬರೂ ಸೇರಿ ಯತ್ನಿಸುತ್ತಾರೆ; ನಿಯುಕ್ತ ಸ್ತ್ರೀ ಪುರುಷರು ತಮ್ಮ ತಮ್ಮ ಮನೆಯ ಕೆಲಸಗಳನ್ನು ಮಾಡಿಕೊಳ್ಳುತ್ತಾರೆ.

ಪ್ರಶ್ನೆ:—ವಿವಾಹ ಮತ್ತು ನಿಯೋಗದ ನಿಯಮಗಳು ಸಮಾನವೋ, ಬೇರೆ ಬೇರೆಯವೊ?

ಉತ್ತರ:—ಸ್ವಲ್ಪ ಭೇದವಿದೆ. ಮೇಲೆ ಹೇಳಿದ ಭೇದವೇ ಅಲ್ಲದೆ, ವಿವಾಹಿತರಾದ ಸ್ತ್ರೀಪುರುಷರು ಬಬ್ಬ ಪತಿ ಮತ್ತು ಒಬ್ಬಳೇ ಸ್ತ್ರೀ ಸೇರಿ ಹತ್ತು ಮಕ್ಕಳನ್ನು ಉತ್ಪನ್ನಮಾಡಬಹುದು. ಆದರೆ, ನಿಯುಕ್ತರಾದ ಸ್ತ್ರೀಪುರುಷರು ಎರಡು ಅಥವಾ ನಾಲ್ಕಕ್ಕಿಂತ ಹೆಚ್ಚು ಮಕ್ಕಳನ್ನು ಉತ್ಪನ್ನಮಾಡಬಾರದು, ಅಂದರೆ, ಕುಮಾರ ಕುಮಾರಿಯರಿಗೆ ವಿವಾಹವಾಗುವಂತೆಯೇ, ವಿಧವಾಸ್ತ್ರೀ, ವಿಧುರನಾದ ಪುರುಷ, ಇವರ ನಿಯೋಗವಾಗುತ್ತದೆ, ಕುಮಾರ ಕುಮಾರಿಯರಿಗಲ್ಲ, ವಿವಾಹಿತ ಸ್ತ್ರೀಪುರುಷರು ಒಟ್ಟಿಗಿರುತ್ತಾರೆ; ನಿಯುಕ್ತರಾದ ಸ್ತ್ರೀಪುರುಷರು ಋತುದಾನದ ಸಮಯವನ್ನು ಬಿಟ್ಟು, ಬೇರಾವಾಗಲೂ ಸೇರಬಾರದು. ವಿಧವಾಸ್ತ್ರೀಯು, ತನಗೋಸ್ಕರ ಒಬ್ಬನೊಡನೆ ನಿಯೋಗಮಾಡಿಕೊಂಡರೂ, ಎರಡನೆಯ ಗರ್ಭವು ನಿಂತೊಡನೆಯೇ ಅವರಿಬ್ಬರ ಸಂಬಂಧವು ಬಿಟ್ಟುಹೋಗುತ್ತದೆ. ಆದರೆ, ನಿಯುಕ್ತಳಾದ ಸ್ತ್ರೀಯು ತನಗೆ ಹುಟ್ಟಿದ ಮಕ್ಕಳನ್ನು ಎರಡು ಮೂರು ವರ್ಷಗಳವರೆಗೆ ಕಾಪಾಡಿ, ಆ ಮೇಲೆ ನಿಯುಕ್ತ ಪುರುಷನಿಗೆ ಒಪ್ಪಿಸಬೇಕು. ಈ ರೀತಿಯಾಗಿ ಒಬ್ಬ ವಿಧವೆಯು ತನಗಾಗಿ ಎರಡು ಮಕ್ಕಳನ್ನೂ, ಅನ್ಯ ನಾಲ್ಕುಮಂದಿ ನಿಯುಕ್ತಪುರುಷರಿಗಾಗಿ ಎರಡೆರಡು ಮಕ್ಕಳನ್ನೂ, ವಿಧು

ರನು, ತನಗಾಗಿ ಎರಡು ಮಕ್ಕಳನ್ನೂ, ಅನ್ಯ ನಾಲ್ಕುಮಂದಿ ವಿಧವೆಯರಿಗೋಸ್ಕರ ಎರಡೆರಡು ಮಕ್ಕಳನ್ನೂ, ಉತ್ಪನ್ನಮಾಡಬಹುದು. ಹೀಗೆ ಸೇರಿ, ಹತ್ತು ಸಂತಾನಗಳ ಉತ್ಪತ್ತಿಯ ಆಜ್ಞೆಯು ವೇದದಲ್ಲಿದೆ.

ಇಮಾಂ ತ್ವಮಿಂದ್ರ ಮೀಢ್ವಃ ಸುಪುತ್ರಾಂ ಸುಭಗಾಂ ಕೃಣು ।
ದಶಾಸ್ಯಾಂ ಪುತ್ರಾನಾಧೇಹಿ ಪತಿಮೇಕಾದಶಂ ಕೃಧಿ ॥

[ಋಗ್ ೧೦-೮೫-೪೫]

"ಹೇ (ಮೀಢ್ವಃ ಇಂದ್ರ) ವೀರ್ಯಸೇಚನ ಸಮರ್ಥನೂ, ಐಶ್ವರ್ಯಸಂಪನ್ನನೂ ಆದ ಪುರುಷನೇ, ನೀನು ಈ ವಿವಾಹಿತ ಸ್ತ್ರೀಯನ್ನಾಗಲಿ, ಅಥವಾ ವಿಧವಾ ಸ್ತ್ರೀಯರನ್ನಾಗಲಿ, ಉತ್ತಮಸಂತತಿಯಿಂದಲೂ, ಸೌಭಾಗ್ಯದಿಂದಲೂ ಯುಕ್ತರಾಗುವಂತೆ ಮಾಡು. ವಿವಾಹಿತ ಸ್ತ್ರೀಯಲ್ಲಿ ಹತ್ತು ಮಕ್ಕಳನ್ನು ಉತ್ಪನ್ನಮಾಡು, ಹನ್ನೊಂದನೆಯವಳೇ ಸ್ತ್ರೀಯೆಂದು ತಿಳಿ: ಎಲೌ ಸ್ತ್ರೀಯೆ! ವಿವಾಹಿತ ಪತಿಯಿಂದಾಗಲಿ, ನಿಯುಕ್ತ ಪುರುಷನಿಂದಾಗಲಿ, ದಶ ಸಂತಾನವನ್ನು ಉತ್ಪನ್ನಮಾಡು, ಗಂಡನನ್ನು ಹನ್ನೊಂದನೆಯವನೆಂದು ತಿಳಿ." ವೇದದ ಈ ಆಜ್ಞೆಯಿಂದ ಬ್ರಾಹ್ಮಣ, ಕ್ಷತ್ರಿಯ, ವೈಶ್ಯವರ್ಣದ ಸ್ತ್ರೀಪುರುಷರು ಹತ್ತು ಮಕ್ಕಳಿಗಿಂತ ಹೆಚ್ಚಾಗಿ ಉತ್ಪನ್ನಮಾಡಬಾರದೆಂದು ಸಿದ್ಧವಾಗುತ್ತದೆ. ಏಕೆಂದರೆ, ಹೆಚ್ಚು ಸಂತಾನವನ್ನುತ್ಪನ್ನಮಾಡುವುದರಿಂದ, ಅವು ದುರ್ಬಲವಾಗಿಯೂ, ಬುದ್ಧಿಹೀನವಾಗಿಯೂ, ಅಲ್ಪಾಯುಗಳಾಗಿಯೂ ಆಗುತ್ತವೆ. ಮತ್ತು ಸ್ತ್ರೀಪುರುಷರೂ ಸಹ ದುರ್ಬಲರೂ, ಅಲ್ಪಾಯುಗಳೂ, ರೋಗಿಷ್ಠರೂ ಆಗಿ ವೃದ್ಧಾಪ್ಯದಲ್ಲಿ ಬಹು ದುಃಖಕ್ಕೀಡಾಗುತ್ತಾರೆ.

ಪ್ರಶ್ನೆ:—ಈ ನಿಯೋಗ ಪದ್ಧತಿಯು ವ್ಯಭಿಚಾರದಂತಿದೆ.

ಉತ್ತರ:— ವಿವಾಹಿತರಾಗದ ಸ್ತ್ರೀಪುರುಷರ ಸಮಾಗಮವು ವ್ಯಭಿಚಾರವೆನ್ನಿಸಿಕೊಳ್ಳುವಂತೆಯೇ ನಿಯೋಗಪದ್ಧತಿಯನ್ನವಲಂಬಿಸದವರಾದ ಸ್ತ್ರೀಪುರುಷರ ಸಮಾಗಮವೂ ವ್ಯಭಿಚಾರವೆನ್ನಿಸಿಕೊಳ್ಳುತ್ತದೆ. ಆದರೆ—ನಿಯಮಪೂರ್ವಕವಾದ ವಿವಾಹವು, ಹೇಗೆ ವ್ಯಭಿಚಾರವಾಗಲಾರದೋ, ಹಾಗೆಯೇ, ನಿಯಮಪೂರ್ವಕವಾದ ನಿಯೋಗವೂ,

ವ್ಯಭಿಚಾರವೆನ್ನಿಸಿಕೊಳ್ಳಲಾರದು. ಹೇಗೆ ಒಬ್ಬರ ಕನ್ಯೆಯ, ಮತ್ತೊಬ್ಬರ ಕುಮಾರನ ಸಂಗಡ, ಶಾಸ್ತ್ರೋಕ್ತ ನಿಧಿಪೂರ್ವಕವಾದ ವಿವಾಹವು ಆದ ಮೇಲೆ, ಸಮಾಗಮದಲ್ಲಿ, ವ್ಯಭಿಚಾರವೂ, ಪಾಪವೂ, ಲಜ್ಜೆಯೂ ಇರುವದಿಲ್ಲವೋ, ಹಾಗೆಯೇ ವೇದಶಾಸ್ತ್ರೋಕ್ತವಾದ ನಿಯೋಗದಲ್ಲಿ ವ್ಯಭಿಚಾರವನ್ನೂ, ಪಾಪವನ್ನೂ, ಲಜ್ಜೆಯನ್ನೂ ಎಣಿಸಬಾರದು.

ಪ್ರಶ್ನೆ:—ಸರಿಯೇನೋ ಹೌದು ಆದರೆ, ಇದು ವೇಶ್ಯೆಯರ ಕರ್ಮದಂತೆ ಕಾಣುತ್ತದೆ.

ಉತ್ತರ:—ಇಲ್ಲ. ವೇಶ್ಯೆಯರ ಸಮಾಗಮದಲ್ಲಿ, ಯಾವನಾದ ರೊಬ್ಬ ನಿಶ್ಚಿತ ಪುರುಷನಾಗಲಿ ಅಥವಾ ಯಾವದೊಂದು ನಿಯಮವಾಗಲಿ ಇರುವದಿಲ್ಲ. ಆದರೆ ನಿಯೋಗದಲ್ಲಿ ವಿವಾಹದಂತೆಯೇ ನಿಯಮಗಳಿವೆ. ಹೇಗೆ ವಿವಾಹಪೂರ್ವಕವಾಗಿ ಬೇರೆಯವರಿಗೆ ಕನ್ಯಾದಾನ ಮಾಡುವದರಲ್ಲಿಯೂ, ಬೇರೆಯವರೊಂದಿಗೆ ಸಮಾಗಮ ಮಾಡುವದರಲ್ಲಿಯೂ, ಲಜ್ಜೆಯಾಗುವದಿಲ್ಲವೋ ಹಾಗೆಯೇ ನಿಯೋಗದಲ್ಲಿಯೂ ಆಗಬಾರದು. ವ್ಯಭಿಚಾರಿಯಾದ ಪುರುಷ ಅಥವಾ ಸ್ತ್ರೀಯರು ಮದುವೆಯಾದ ಮಾತ್ರದಿಂದಲೇ ತಮ್ಮ ಕೆಟ್ಟಕೆಲಸಗಳನ್ನು ಬಿಡುವರೆ?

ಪ್ರಶ್ನೆ:—ನಮಗೆ ನಿಯೋಗದ ವಿಷಯದಲ್ಲಿ ಪಾಪವು ತೋರುತ್ತದೆ.

ಉತ್ತರ:—ನಿಯೋಗದ ವಿಷಯದಲ್ಲಿ ಪಾಪವನ್ನು ಭಾವಿಸುವಿರಾದರೆ, ವಿವಾಹದಲ್ಲಿ ಪಾಪವನ್ನೇಕೆಣಿಸುವುದಿಲ್ಲ? ನಿಜವಾಗಿಯೂ ಪಾಪವು ನಿಯೋಗಪದ್ಧತಿಯನ್ನು ತಡೆಯುವವರಲ್ಲಿವೆ, ಏಕೆಂದರೆ, ವೈರಾಗ್ಯವಂತರೂ, ಪೂರ್ಣ ವಿದ್ವಾಂಸರೂ, ಯೋಗಿಗಳೂ ಆಗಿರುವವರ ಹೊರತು, ಸಾಮಾನ್ಯ ಸ್ತ್ರೀ ಪುರುಷರು ಪರಮಾತ್ಮನ ಸೃಷ್ಟಿಕ್ರಮಕ್ಕೆ ಅನುಕೂಲವಾಗಿರುವ, ಸ್ವಾಭಾವಿಕ ವ್ಯವಹಾರವನ್ನು ಎಂದೂ ತಡೆಯಲಾರರು. ನೀವು ಗರ್ಭಪಾತ, ಭ್ರೂಣಹತ್ಯೆ, ವಿಧವೆಯರ ಮತ್ತು ವಿಧುರರ ಮಹಾಸಂತಾಪ ಇವುಗಳನ್ನು ಪಾಪವೆಂದೆಣಿಸುವದಿಲ್ಲವೇಕೆ? ಏಕೆಂದರೆ, ಯೌವನದಲ್ಲಿರುವವರಿಗೆ, ಮನದಲ್ಲಿ ಸಂತಾನೋತ್ಪತ್ತಿ ಮತ್ತು ವಿಷಯಾಭಿಲಾಷೆಯುಳ್ಳವರಿಗೆ, ಯಾವದಾದರೂ ರಾಜ್ಯವ್ಯವಸ್ಥೆ ಅಥವಾ ಜಾತಿವ್ಯವಸ್ಥೆಯ ಮೂಲಕ ಅಡ್ಡಿಯುಂಟಾಗು

ವದರಿಂದ, ಕೆಟ್ಟರೀತಿಯಲ್ಲಿ ಗುಪ್ತಗುಪ್ತ ಕುಕರ್ಮಗಳು ನಡೆಯುತ್ತಿರುತ್ತವೆ, ಈ ವ್ಯಭಿಚಾರ ಮತ್ತು ದುಷ್ಕರ್ಮಗಳನ್ನು ತಡೆಗಟ್ಟಲು, ಶ್ರೇಷ್ಠವಾದ ಉಪಾಯವೇನೆಂದರೆ :—ಜಿತೇಂದ್ರಿಯರಾದ ಸ್ತ್ರೀಪುರುಷರಿಗೆ, ವಿವಾಹವಾಗಲಿ, ನಿಯೋಗವಾಗಲಿ ಬೇಕಾಗಿಲ್ಲ. ಆದರೆ ಹೀಗಿಲ್ಲದವರಿಗೆ ವಿವಾಹವೂ ಮತ್ತು ಆಪತ್ಕಾಲದಲ್ಲಿ ನಿಯೋಗವೂ, ಅವಶ್ಯವಾಗಿ ಆಗಲೇ ಬೇಕು. ಇದರಿಂದ ವ್ಯಭಿಚಾರವು ಕಡಮೆಯಾಗಿ, ಪ್ರೇಮದಿಂದ ಉತ್ತಮ ಸಂತತಿ ಹುಟ್ಟಿ, ಮಾನವ ವೃದ್ಧಿಯಾಗುವುದು ಸಂಭವವಾಗಿರುತ್ತದೆ. ಮತ್ತು ಗರ್ಭಹತ್ಯೆಪೂರ್ಣತಃ ನಿಂತುಹೋಗುತ್ತದೆ. ನೀಚಪುರುಷರೊಂದಿಗೆ ಉತ್ತಮಸ್ತ್ರೀಯರೂ, ವೇಶ್ಯಾದಿ ನೀಚ ಸ್ತ್ರೀಯರೊಂದಿಗೆ ಉತ್ತಮಪುರುಷರೂ, ವ್ಯಭಿಚಾರರೂಪ ಕುಕರ್ಮ ಮಾಡುವುದು, ಉತ್ತಮಕುಲದಲ್ಲಿ ಕಳಂಕ, ವಂಶಹಾನಿ, ಸ್ತ್ರೀಪುರುಷರಿಗೆ ಸಂತಾಪ, ಮತ್ತು ಗರ್ಭಹತ್ಯೆ ಮೊದಲಾದ ದುಷ್ಕೃತ್ಯಗಳು ವಿವಾಹ ಮತ್ತು ನಿಯೋಗದಿಂದ ನಿಂತುಹೋಗುತ್ತವೆ. ಆದುದರಿಂದ ನಿಯೋಗವಾಗಬೇಕು.

ಪ್ರಶ್ನೆ :— ನಿಯೋಗದಲ್ಲಿ ಯಾವ ನಿಯಮಗಳಿರಬೇಕು ?

ಉತ್ತರ :—ವಿವಾಹದಂತೆಯೇ ನಿಯೋಗವೂ ಕೂಡ ಪ್ರಕಟ ರೂಪವಾಗಿ ನಡೆಯಬೇಕು. ವಿವಾಹದಲ್ಲಿ ಯೋಗ್ಯಪುರುಷರ ಅನುಮತಿಯೂ, ಕನ್ಯಾವರರ ಪ್ರಸನ್ನತೆಯೂ ಇರುವಂತೆ, ನಿಯೋಗದಲ್ಲಿಯೂ ಇರಬೇಕು. ಸ್ತ್ರೀಪುರುಷರು ನಿಯೋಗಮಾಡಿಕೊಳ್ಳಬೇಕಾದಾಗ, ತಮ್ಮ ಮನೆತನಕ್ಕೆ ಸೇರಿದ ಸ್ತ್ರೀಪುರುಷರ ಸಮಕ್ಷಮದಲ್ಲಿ “ನಾವಿಬ್ಬರೂ ಸಂತಾನೋತ್ಪತ್ತಿಗಾಗಿ ನಿಯೋಗಮಾಡಿಕೊಳ್ಳುತ್ತೇವೆ. ನಿಯೋಗದ ನಿಯಮವು ಮುಗಿದಮೇಲೆ ನಾವು ಸಮಾಗಮ ಮಾಡುವುದಿಲ್ಲ. ಇದಕ್ಕೆ ವಿರುದ್ಧವಾಗಿ ನಡೆದರೆ, ನಾವು ಪಾಪಾತ್ಮರೂ, ಸಮಾಜದಿಂದ ಬಹಿಷ್ಕಾರ ರಾಜ್ಯದಿಂದ ದಂಡನೀಯರೂ ಆಗುತ್ತೇವೆ. ತಿಂಗಳಿಗೆ ಒಂದು ಸಲ ನಿಯಮಪೂರ್ವಕವಾಗಿ ಸಮಾಗಮಮಾಡುತ್ತೇವೆ. ಗರ್ಭವು ನಿಂತ ಬಳಿಕ ಒಂದು ವರ್ಷದವರೆಗೆ ಬೇರೆ ಬೇರೆಯಾಗಿರುತ್ತೇವೆ” ಎಂದು ಪ್ರತಿಜ್ಞೆಮಾಡಬೇಕು.

ಪ್ರಶ್ನೆ:—ನಿಯೋಗವು ತಮ್ಮ ವರ್ಣದಲ್ಲಿಯೇ ಆಗಬೇಕೋ ಅಥವಾ ಬೇರೆ ವರ್ಣದವರ ಜೊತೆಯಲ್ಲಿಯೂ ಆಗಬಹುದೋ?

ಉತ್ತರ:—ತಮ್ಮ ವರ್ಣದಲ್ಲಾಗಲಿ, ತಮಗಿಂತ ಉತ್ತಮ ವರ್ಣದವರಾದ ಪುರುಷನೊಡನಾಗಲಿ ಆಗಬೇಕು; ಅಂದರೆ, ವೈಶ್ಯ ಸ್ತ್ರೀಯು, ವೈಶ್ಯನೊಡನೆ, ಕ್ಷತ್ರಿಯನೊಡನೆ ಅಥವಾ ಬ್ರಾಹ್ಮಣನೊಡನೆಯೂ; ಕ್ಷತ್ರಿಯಸ್ತ್ರೀಯು ಕ್ಷತ್ರಿಯನೊಡನೆ, ಅಥವಾ ಬ್ರಾಹ್ಮಣನೊಡನೆಯೂ; ಬ್ರಾಹ್ಮಣಿಯು ಕೇವಲ ಬ್ರಾಹ್ಮಣನೊಡನೆಯೂ: ನಿಯೋಗಮಾಡಿಕೊಳ್ಳಬಹುದು. ಇದರ ತಾತ್ಪರ್ಯವೇನೆಂದರೆ, ವೀರ್ಯವು ಉತ್ತಮ ಅಥವಾ ಸಮವರ್ಣಸ್ಥನದಾಗಿರಬೇಕು; ತನಗಿಂತ ನೀಚ ವರ್ಣಸ್ಥನದಾಗಿರಬಾರದು. ಧರ್ಮದಿಂದ, ಅಂದರೆ, ವೇದೋಕ್ತ ರೀತಿಯಾಗಿ, ವಿವಾಹದಿಂದ ಅಥವಾ ನಿಯೋಗದಿಂದ ಸಂತಾನೋತ್ಪತ್ತಿ ಮಾಡುವುದೇ ಸ್ತ್ರೀಪುರುಷರ ಸೃಷ್ಟಿಯ ಪ್ರಯೋಜನವಾಗಿರುತ್ತದೆ.

ಪ್ರಶ್ನೆ:—ಪುರುಷನಿಗೆ ನಿಯೋಗಮಾಡಿಕೊಳ್ಳಬೇಕಾದ ಆವಶ್ಯಕತೆಯಾದರೂ ಏನು? ಬೇಕಾಗಿದ್ದಲ್ಲಿ ಅವನು ದ್ವಿತೀಯ ವಿವಾಹ ಮಾಡಿಕೊಳ್ಳುತ್ತಾನೆ.

ಉತ್ತರ:—ದ್ವಿಜರಲ್ಲಿ ಸ್ತ್ರೀಪುರುಷರು ಒಂದುಬಾರಿ ಮಾತ್ರ ವಿವಾಹಮಾಡಿಕೊಳ್ಳಬೇಕು, ಎಂದು ವೇದಾದಿಶಾಸ್ತ್ರಗಳಲ್ಲಿ ವಿಹಿತವಾಗಿದೆ. ಎರಡನೆಯ ಬಾರಿಯಲ್ಲ, ಎಂದು ನಾವು ಹೇಳಿಯೇ ಇದ್ದೇವೆ. ಕುಮಾರ ಕುಮಾರಿಯರ ಮದುವೆಯಾಗುವುದರಲ್ಲಿಯೇ ನ್ಯಾಯ, ಮತ್ತು ವಿಧವೆಯರೊಂದಿಗೆ ಕುಮಾರನ ಅಥವಾ ಕುಮಾರಿಯೊಂದಿಗೆ ವಿಧುರನ ವಿವಾಹವಾಗುವುದರಲ್ಲಿ ಅನ್ಯಾಯ ಅಂದರೆ ಅಧರ್ಮವಿರುತ್ತದೆ. ಪುರುಷನು ವಿಧವೆಯೊಡನೆ ವಿವಾಹವಾಗಲು ಹೇಗೆ ಒಪ್ಪಲಾರನೋ, ಹಾಗೆಯೇ ವಿವಾಹಿತನಾದ ಮತ್ತು ಸ್ತ್ರೀಸಮಾಗಮ ಮಾಡಿದ ಪುರುಷನೊಂದಿಗೆ ವಿವಾಹವಾಗಲು ಕುಮಾರಿಯೂ ಇಚ್ಛಿಸುವುದಿಲ್ಲ. ವಿಧುರನೊಡನೆ ಕುಮಾರೀಕನ್ಯೆಯೂ, ವಿಧವೆಯೊಡನೆ ಕುಮಾರನೂ, ಮದುವೆಯಾಗದಿರುವ ಸ್ಥಿತಿಯಿಂದಲೇ ಸ್ತ್ರೀಪುರುಷರಿಗೆ ನಿಯೋಗಮಾಡಿಕೊಳ್ಳುವುದರ ಆವಶ್ಯಕತೆಯುಂಟಾಗುತ್ತದೆ. ಅನುರೂಪರಾದವರಿಗೆ ಸಂಬಂಧವುಂಟಾಗುವುದೇ ಧರ್ಮ.

ಪ್ರಶ್ನೆ:— ವಿವಾಹಕ್ಕೆ ವೇದಾದಿಶಾಸ್ತ್ರಗಳಲ್ಲಿ ಪ್ರಮಾಣವಿರುವಂತೆ, ನಿಯೋಗಕ್ಕೂ ಪ್ರಮಾಣವಿರುವುದೋ ಇಲ್ಲವೋ?

ಉತ್ತರ:—ಈ ವಿಷಯಕ್ಕೆ ಬೇಕಾದಷ್ಟು ಪ್ರಮಾಣಗಳಿವೆ ನೋಡಿರಿ ಮತ್ತು ಕೇಳಿರಿ.

ಕುಹಸ್ವಿದ್ದೋಷಾ ಕುಹ ವಸ್ತೋರಶ್ವಿನಾ ಕುಹಾಭಿಪಿತ್ವಂ
ಕರತಃ ಕುಹೋಷತುಃ ।
ಕೋ ವಾಂ ಶಯುತ್ರಾ ವಿಧವೇವ ದೇವರಂ ಮರ್ಯಂ
ನ ಯೋಷಾ ಕೃಣುತೇ ಸಧಸ್ಥ ಆ ॥
ಉದೀರ್ಷ್ವ ನಾರ್ಯಭಿಜೀವಲೋಕಂ ಗತಾಸುಮೇತಮುಪ
ಶೇಷ ಏಹಿ ।
ಹಸ್ತಗ್ರಾಭಸ್ಯ ದಿಧಿಷೋಸ್ತವೇದಂ ಪತ್ಯುರ್ಜನಿತ್ವಮಭಿ
ಸಂಬಭೂಥ ॥

[ಋಗ್-ಮಂ-೧೦, ಸೂ-೧೮, ಮಂ-೪]

ಹೇ (ಅಶ್ವಿನಾ) ಸ್ತ್ರೀಪುರುಷರೆ! ಹೇಗೆ (ದೇವರಂ ವಿಧವೇವ) ವಿಧವೆಯು ದೇವರನನ್ನೂ (ಯೋಷಾ ಮರ್ಯಂ ನ) ವಿವಾಹಿತಳಾದ ಸ್ತ್ರೀಯು ತನ್ನ ಪತಿಯನ್ನೂ (ಸಧಸ್ಥೇ) ಸಮಾನಸ್ಥಾನಶಯ್ಯೆಯಲ್ಲಿ ಕೂಡಿ ಸಂತಾನವನ್ನು (ಆಕೃಣುತೇ) ಎಲ್ಲಾ ರೀತಿಯಿಂದಲೂ ಉತ್ಪನ್ನ ಮಾಡುವಂತೆ, ನೀವಿಬ್ಬರು ಸ್ತ್ರೀಪುರುಷರೂ, (ಕುಹಸ್ವಿದ್ದೋಷಾ) ರಾತ್ರಿಯನ್ನೆಲ್ಲಿ ಕಳೆದಿರಿ? (ಕುಹವಸ್ತೋಃ) ಹಗಲೆಲ್ಲಾ ಎಲ್ಲಿ ವಾಸಿಸಿದಿರಿ? (ಕುಹಾಭಿಪಿತ್ವಂ ಕರತಃ) ಎಲ್ಲಿ ಯೋಗ್ಯವಸ್ತುಗಳನ್ನು ಪಡೆದಿರಿ? ಮತ್ತು (ಕುಹೋಷತುಃ) ಎಲಿ ತಂಗಿದ್ದಿರಿ? (ಕೋವಾಂಶಯುತ್ರಾ) ನೀವಿಬ್ಬರೂ ಮಲಗುವುದೆಲ್ಲಿ? ಮತ್ತು ನೀವು ಯಾರು ಅಥವಾ ಯಾವ ದೇಶದಲ್ಲಿರತಕ್ಕವರು? ಇವರಿಂದ ದೇಶವಿದೇಶಗಳಲ್ಲಿ ಸ್ತ್ರೀಪುರುಷರು ಒಟ್ಟಿಗೇ ಇರಬೇಕೆಂದೂ, ಮತ್ತು ವಿವಾಹಿತಪತಿಯಂತೆ ನಿಯುಕ್ತಪತಿಯನ್ನು ಗ್ರಹಣಮಾಡಿ ವಿಧವೆಯೂ ಸಂತಾನೋತ್ಪತ್ತಿ ಮಾಡಬಹುದೆಂದು ಸಿದ್ಧವಾಗುತ್ತದೆ.

ಪ್ರಶ್ನೆ:—ಯಾವನಾದರೂ ಪುರುಷನಿಗೆ ತಮ್ಮನೇ ಇಲ್ಲದಿದ್ದರೆ, ವಿಧವೆಯು ಯಾರಸಂಗಡ ನಿಯೋಗಮಾಡಬೇಕು ?

ಉತ್ತರ:—ವಿಧವೆಯು ದೇವರನೊಂದಿಗೆ ನಿಯೋಗಮಾಡಿ ಕೊಳ್ಳಬೇಕು. ಆದರೆ ದೇವರ ಶಬ್ದಕ್ಕೆ ನೀವು ತಿಳಿದಿರುವ ಅರ್ಥ ಸರಿಯಲ್ಲ. ನಿರುಕ್ತದಲ್ಲಿ ನೋಡಿರಿ.

ದೇವರಃ ಕಸ್ಮಾದ್ದ್ವಿತೀಯೋವರ ಉಚ್ಯತೇ ॥

[ನಿರುಕ್ತ ಅ. ೩. ಖಂ. ೧೫]

ವಿಧವೆಯ ದ್ವಿತೀಯಪತಿಗೆ ದೇವರನೆಂದು ಹೆಸರು. ಗಂಡನ ಅಣ್ಣನಾಗಲಿ, ತಮ್ಮನಾಗಲಿ, ಸಮಾನವರ್ಣದವನಾಗಲಿ, ತನಗಿಂತ ಉತ್ತಮವರ್ಣದವನಾಗಲಿ ವಿಧವೆಯು ಯಾವನೊಂದಿಗೆ ನಿಯೋಗ ಮಾಡಿಕೊಳ್ಳುತ್ತಾಳೋ ಅವನಿಗೆ ದೇವರನೆಂದು ಹೆಸರು. ಹೇ (ನಾರಿ) ವಿಧವಾಸ್ತ್ರೀಯೇ ! (ಏತಂಗತಾಸುಂ) ಈ ಮೃತಪತಿಯ ಆಶೆಯನ್ನು ಬಿಟ್ಟು (ಶೇಷೇ) ಉಳಿದಿರುವ ಪುರುಷರಲ್ಲಿ (ಅಭಿಜೀವಲೋಕಂ) ಜೀವಿತನಾದ ಮತ್ತೊಬ್ಬ ಪತಿಯನ್ನು (ಉಪೈಹಿ)ಹೊಂದು. ಮತ್ತು(ಉದೀಷ್ವರ್) ಈ ಮಾತಿನ ವಿಚಾರವನ್ನು ಮತ್ತು ನಿಶ್ಚಯವನ್ನೂ ಮಾಡಿಕೋ—ಏನೆಂದರೆ, (ಹಸ್ತಗ್ರಾಭಸ್ಯದಿಧಿಷೋಃ) ವಿಧವೆಯಾದ ನಿನ್ನ ಕೈಹಿಡಿಯುವ ನಿಯುಕ್ತಪತಿಯು ತನಗಾಗಿ ನಿಯೋಗಮಾಡಿಕೊಳ್ಳುವದಾದರೆ, (ಇದಂ) ಈ (ಜನಿತ್ವಂ) ಹುಟ್ಟಿದ ಬಾಲಕನು ಆ ನಿಯುಕ್ತ (ಪತ್ಯುಃ) ಪತಿಯ ಮಗನಾಗುತ್ತಾನೆ. ನೀನು ನಿನಗಾಗಿ ನಿಯೋಗಮಾಡಿಕೊಳ್ಳುವದಾದರೆ, ಹುಟ್ಟಿದ ಸಂತಾನವು (ತವ) ನಿನ್ನದೇ ಆಗುತ್ತದೆ. ಹೀಗೆ ನಿಶ್ಚಯಯುಕ್ತವಾಗಿ (ಅಭಿಸಂಭಭೂಥ) ಆಗಬೇಕು. ಮತ್ತು ನಿಯುಕ್ತ ಪುರುಷನೂ ಈ ನಿಯಮವನ್ನೇ ಪಾಲಿಸಬೇಕು. ॥೧॥

ಅದೇವೃಷ್ಣ್ಯಪತಿಘ್ನೀ ಹೈಧಿ ಶಿವಾಪಶುಭ್ಯಃ ಸುಯವಾಃ ಸುವರ್ಚಾಃ ।
ಪ್ರಜಾವತೀ ವೀರಸೂರ್ದೇವೃಕಾಮಾ ಸ್ಯೋನೇಮಮಗ್ನಿಂ ಗಾರ್ಹಪತ್ಯಂ ಸಪರ್ಯ ॥

[ಅಥರ್ವ. ಕಾಂ. ೧೪, ಅನು. ೨, ಮಂ. ೧೪]

ಹೇ (ಅಪತಿಘ್ನ್ಯದೇವೃಘ್ನಿ) ಪತಿಗೂ, ದೇವರನಿಗೂ ದುಃಖ ಕೊಡದ ನಾರಿಯೇ! ನೀನು (ಇಹ) ಈ ಗೃಹಾಶ್ರಮದಲ್ಲಿ (ಪಶುಭ್ಯಃ) ಪಶುಗಳಿಗೆ (ಶಿವಾ) ಕಲ್ಯಾಣಕಾರಿಯೂ, (ಸುಯಮಾಃ) ಧರ್ಮನಿಯಮುಗಳನ್ನು ಉತ್ತಮರೀತಿಯಿಂದ ಆಚರಿಸುವವಳೂ, (ಸುವರ್ಚಾಃ) ಸುಂದರಿಯೂ, ಸರ್ವಶಾಸ್ತ್ರವಿಶಾರದೆಯೂ, (ಪ್ರಜಾವತೀ) ಉತ್ತಮ ಪುತ್ರ ಪೌತ್ರಾದಿಸಹಿತಳಾಗಿಯೂ, (ವೀರಸೂಃ) ವೀರಪುತ್ರರ ಜನ್ಮದಾತ್ರಿಯೂ (ದೇವೃಕಾಮಾ) ದೇವರನನ್ನು ಕಾಮಿಸುವವಳೂ, (ಸ್ಯೋನಾ) ಸುಖಪ್ರದೆಯೂ ಆಗಿ, ಗಂಡನನ್ನು ಅಥವಾ ದೇವರನನ್ನು, (ಏಧಿ) ಹೊಂದಿ (ಇಮಂ) ಈ (ಗಾರ್ಹಪತ್ಯಂ) ಗೃಹಸ್ಥಾಶ್ರಮಸಂಬಂಧವಾದ, (ಅಗ್ನಿಂ) ಅಗ್ನಿಹೋತ್ರವನ್ನು, (ಸಪರ್ಯ) ಆಚರಿಸು. ॥೨॥

ತಾಮನೇನ ವಿಧಾನೇನ ನಿಜೋ ವಿಂದೇತ ದೇವರಃ ॥

[ಮನು. ೯, ೬೯]

ಅಕ್ಷತಯೋನಿಯಾದ ಸ್ತ್ರೀಯು ವಿಧವೆಯಾಗಿಹೋದರೆ, ಗಂಡನ ತಮ್ಮನ ಕೂಡ ವಿವಾಹನಾಗಬಹುದು.

ಪ್ರಶ್ನೆ:—ಒಬ್ಬ ಸ್ತ್ರೀಯು ಅಥವಾ ಒಬ್ಬ ಪುರುಷನು ಎಷ್ಟು ಸಾರಿ ನಿಯೋಗಮಾಡಿಕೊಳ್ಳಬಹುದು? ಮತ್ತು ವಿವಾಹಿತಪತಿಗೂ, ನಿಯುಕ್ತಪತಿಗೂ ಯಾವ ಯಾವ ಹೆಸರುಗಳು ಇರುತ್ತವೆ.

ಉತ್ತರ :—

ಸೋಮಃ ಪ್ರಥಮೋವಿವಿದೇ ಗಂಧರ್ವೋ ವಿವಿದ ಉತ್ತರಃ।
ತೃತೀಯೋ ಅಗ್ನಿಷ್ಟೇ ಪತಿಸ್ತುರೀಯಸ್ತೇ ಮನುಷ್ಯಜಾಃ ॥

[ಋಗ್. ಪ್ರಂ. ೧೦, ಸೂ. ೧೮೫, ಮಂ. ೪೦]

ಎಲೌ ನಾರಿ! ಯಾವ (ತೇ) ನಿನ್ನ, (ಪ್ರಥಮಃ) ಮೊದಲನೇ ಸಾರಿ ನಿವಾಹಿತನಾದ, (ಪತಿಃ) ಪತಿಯು ನಿನ್ನನ್ನು, (ವಿವಿದೇ) ಹೊಂದುತ್ತಾನೋ, ಅವನಿಗೆ, (ಸೋಮಃ) ಸುಕುಮಾರತೆ ಮೊದಲಾದ ಗುಣಯುಕ್ತನಾಗಿರುವುದರಿಂದ, ಸೋಮನೆಂದೂ, (ವಿವಿದೇ) ಎರಡನೇಸಾರಿ ನಿಯೋಗದಿಂದ ನಿನ್ನನ್ನು ಹೊಂದುವವನಿಗೆ, (ಗಂಧರ್ವಃ) ಒಬ್ಬಳೊಡನೆ

ಸಂಭೋಗವನ್ನು ಮಾಡುವದರಿಂದ ಗಂಧರ್ವನೆಂದೂ, (ತೃತೀಯ ಉತ್ತರಃ) ಎರಡರನಂತರ ಮೂರನೇ ಸಾರಿ ಪತಿಯಾಗುವವನಿಗೆ, (ಅಗ್ನಿಃ) ಅತ್ಯುಷ್ಣತಾಯುಕ್ತನಾದುದರಿಂದ ಅಗ್ನಿಯೆಂದೂ, ಮತ್ತು (ತೇ) ನಿನ್ನ (ತುರೀಯಃ) ನಾಲ್ಕನೆಯ ಸಾರಿಯಿಂದ ಹನ್ನೊಂದನೆ ಸಲದವರಿಗೆ ನಿಯೋಗದಿಂದ ಪತಿಯಾಗುವವರಿಗೆ (ಮನುಷ್ಯಜಾಃ) ಮನುಷ್ಯರೆಂದೂ ಹೆಸರು. '' ಇಮಾಂತ್ವಮಿಂದ್ರ '' ಎಂಬ ಮಂತ್ರದ ದೆಸೆಯಿಂದ, ಒಬ್ಬ ಸ್ತ್ರೀಯು ಹೇಗೆ ಹನ್ನೊಂದನೆಯ ಪುರುಷನವರೆಗೆ ನಿಯೋಗ ಮಾಡಬಹುದೋ ಹಾಗೆಯೇ ಪುರುಷನೂ ಕೂಡ ಹನ್ನೊಂದನೆಯ ಹೆಂಗಸಿನವರೆಗೆ ನಿಯೋಗ ಮಾಡಬಹುದು.

ಪ್ರಶ್ನೆ :—ಏಕಾದಶ ಶಬ್ದದಿಂದ ಹತ್ತುಮಕ್ಕಳು ಮತ್ತು ಹನ್ನೊಂದನೆಯವನು ಪತಿ ಎಂದೇಕೆ ಎಣಿಸಬಾರದು?

ಉತ್ತರ :—ನೀವು ಹಾಗೆ ಅರ್ಥಮಾಡಿದರೆ, '' ವಿಧವೇವ ದೇವರಂ ''; '' ದೇವರಃ ಕಸ್ಮಾದ್ದ್ವಿತೀಯೋವರ ಉಚ್ಯತೇ ''; '' ಅದೇವೃಷ್ಣೀ ''; ಮತ್ತು '' ಗಂಧರ್ವೋ ಽವಿದಉತ್ತರಃ '' ಮೊದಲಾದ ವೇದಪ್ರಮಾಣಗಳಿಗೆ ವಿರುದ್ಧಾರ್ಥವಾಗುತ್ತದೆ. ಏಕೆಂದರೆ ನಿಮ್ಮ ಅರ್ಥದಂತೆ ಒಬ್ಬ ಸ್ತ್ರೀಗೆ ದ್ವಿತೀಯ ಪತಿಯೂ ಸಹ ಪ್ರಾಪ್ತವಾಗಲಾರನು.

ದೇವರಾದ್ವಾ ಸಪಿಂಡಾದ್ವಾ ಸ್ತ್ರೀಯಾಸಮ್ಯಙ್ನಿಯುಕ್ತಯಾ ।
ಪ್ರಜೇಪ್ಸಿತಾಧಿಗಂತವ್ಯಾ ಸಂತಾನಸ್ಯಪರಿಕ್ಷಯೇ ॥೧॥
ಜ್ಯೇಷ್ಠೋ ಯವೀಯಸೋ ಭಾರ್ಯಾಂ ಯವೀಯಾನ್ ವಾಗ್ರಜಸ್ತ್ರಿಯಂ ।
ಪತಿತೌ ಭವತೋ ಗತ್ವಾ ನಿಯುಕ್ತಾವಪ್ಯನಾಪದಿ ॥೨॥
ಔರಸಃ ಕ್ಷೇತ್ರಜ ಶ್ಚೈವ ॥೩॥

[ಮನು. ೯, ೫೯-೬೯, ೧೫೯]

ಇತ್ಯಾದಿಗಳನ್ನು ಮನುಮಹಾರಾಜರು ಬರೆದಿದ್ದಾರೆ. ಸಪಿಂಡ ಅಂದರೆ ಗಂಡನ ಆರು ಪೀಳಿಗೆಗಳಿಗೆ ಸಂಬಂಧಿಸಿದವನೊಡನಾಗಲಿ,

ಗಂಡನ ಅಣ್ಣನೊಡನಾಗಲಿ, ಗಂಡನ ತಮ್ಮನೊಡನಾಗಲಿ, ಸ್ವಜಾತೀಯವನೊಡನಾಗಲಿ, ಅಥವಾ ತನಗಿಂತ ಉತ್ತಮ ಜಾತೀಯವನೊಡನಾಗಲಿ ವಿಧವೆಯ ನಿಯೋಗವಾಗಬೇಕು. ಆದರೆ, ಸಂತಾನಾಪೇಕ್ಷಿಗಳಾದ ವಿಧವಾವಿಧುರರ ನಿಯೋಗವು ಮಾತ್ರಾ ಆಗಲರ್ಹವಾದುದು. ಮತ್ತು ಸಂತತಿಯು ಸರ್ವಥಾಕ್ಷಯವಾಗುವಂತಿದ್ದರೆ, ಆಗಲೂ ನಿಯೋಗವಾಗಬೇಕು. ಆಪತ್ಕಾಲವಲ್ಲದಾಗ ಅಂದರೆ, ಸಂತಾನವಾಗಬೇಕೆಂಬ ಇಚ್ಛೆಯಿಲ್ಲದಿದ್ದಾಗಲೂ, ಅಣ್ಣನ ಹೆಂಡತಿಯೊಡನೆ ತಮ್ಮನ, ಮತ್ತು ತಮ್ಮನ ಹೆಂಡತಿಯೊಡನೆ ಅಣ್ಣನ ನಿಯೋಗವಾಗಿ ಮಕ್ಕಳು ಹುಟ್ಟಿದ ಮೇಲೂ, ಪುನಃ ಆನಿಯುಕ್ತರು ಪರಸ್ಪರ ಸಮಾಗಮ ಮಾಡಿದಲ್ಲಿ ಅವರು ಪತಿತರಾಗುತ್ತಾರೆ. ಅಂದರೆ, ಒಂದು ನಿಯೋಗದಲ್ಲಿ ದ್ವಿತೀಯ ಪುತ್ರನ ಗರ್ಭಸ್ಥಿತಿಯವರೆಗೆ ನಿಯೋಗದ ಅವಧಿಯಿರುತ್ತದೆ. ಅದರ ನಂತರ ಸಮಾಗಮಮಾಡಬಾರದು. ಸ್ತ್ರೀಪುರುಷರಿಬ್ಬರಿಗಾಗಿಯೂ, ನಿಯೋಗವಾಗಿದ್ದಲ್ಲಿ ನಾಲ್ಕನೆಯ ಗರ್ಭದವರೆಗೂ ನಿಯೋಗದ ಅವಧಿಯಿರುತ್ತದೆ. ಅಂದರೆ, ಹಿಂದೆ ಹೇಳಿದಂತೆ, ಸ್ತ್ರೀಪುರುಷರು ಹತ್ತು ಸಂತಾನಗಳನ್ನು ಉತ್ಪನ್ನಮಾಡಬಹುದು. ಆಮೇಲಿನ ಸಮಾಗಮವು ವಿಷಯಾಸಕ್ತಿಯೆನಿಸುತ್ತದೆ. ಅವರು ಇದರಿಂದ ಪತಿತರೆಂದೆಣಿಸಲ್ಪಡುತ್ತಾರೆ. ಮತ್ತು ವಿವಾಹಿತ ಸ್ತ್ರೀಪುರುಷರೂ ಹತ್ತನೆಯ ಗರ್ಭದ ಮೇಲೂ ಸಮಾಗಮ ಮಾಡಿದರೆ, ಕಾಮಿಗಳೂ ನಿಂದಿತರೂ ಆಗುತ್ತಾರೆ. ಅಂದರೆ ವಿವಾಹವು ಅಥವಾ ನಿಯೋಗವು ಸಂತತಿಗಳಿಗಾಗಿಯೇ ಮಾಡಿಕೊಳ್ಳಲ್ಪಡುತ್ತವೆಯೇ ಹೊರತು ಪಶುಗಳಂತೆ ಕಾಮುಕ್ರೀಡೆಗೋಸುಗವಲ್ಲ.

ಪ್ರಶ್ನೆ :—ನಿಯೋಗವನ್ನು ಗಂಡನು ಸತ್ತಬಳಿಕವೇ ಮಾಡಿಕೊಳ್ಳಬೇಕೋ ಅಥವಾ ಬದುಕಿರುವಾಗ ಮಾಡಿಕೊಳ್ಳಬಹುದೋ ?

ಉತ್ತರ :—ಪತಿಯು ಜೀವಿತನಾಗಿರುವಾಗಲೂ ಮಾಡಿಕೊಳ್ಳಬಹುದು.

ಅನ್ಯಮಿಚ್ಛಸ್ವ ಸುಭಗೇ ಪತಿಂ ಮತ್ ।

[ಋಗ್. ಮಂ. ೧೦, ಸೂ. ೧೦, ಮ. ೧೦]

ಸಂತಾನೋತ್ಪಾದನದಲ್ಲಿ ಅಸಮರ್ಥನಾದ ಗಂಡನು ತನ್ನ ಹೆಂಡತಿಗೆ (ಸುಭಗೇ) ಸೌಭಾಗ್ಯವನ್ನು ಇಚ್ಛಿಸುವ ನಾರಿಯೇ, ನೀನು (ಮತ್) ನನ್ನಿಂದ, (ಅನ್ಯಂ) ಬೇರೆಯಾದ, (ಪತಿಂ) ಗಂಡನನ್ನು, (ಇಚ್ಛಸ್ವ) ಇಚ್ಛಿಸು, ಏಕೆಂದರೆ, ನನ್ನಿಂದ ಸಂತಾನೋತ್ಪತ್ತಿಯಾಗ ಲಾರದು, ಎಂದು ಆಜ್ಞೆಕೊಡಬೇಕು. ಆಗ ಸ್ತ್ರೀಯು ಮತ್ತೊಬ್ಬ ನೊಡನೆ ನಿಯೋಗವನ್ನು ಮಾಡಿಕೊಂಡು ಸಂತಾನವನ್ನು ಪಡೆಯ ಬಹುದು. ಆದರೆ, ಮಹಾಶಯನಾದ ವಿವಾಹಿತ ಪತಿಯ ಸೇವೆಯಲ್ಲಿ ಯಾವಾಗಲೂ ತತ್ಪರಳಾಗಿರಬೇಕು. ಹಾಗೆಯೇ ಸ್ತ್ರೀಯೂ, ರೋಗಾದಿ ದೋಷಗಳಿಂದ ಪೀಡಿತೆಯಾಗಿ, ಸಂತಾನೋತ್ಪತ್ತಿಯಲ್ಲಿ ಅಸಮರ್ಥೆ ಯಾದಾಗ ಪತಿಗೆ '' ಸ್ವಾಮಿ, ನನ್ನಿಂದ ಮಕ್ಕಳಾಗುವ ಆಶೆಬಿಟ್ಟು, ನೀವು ಯಾವಳಾದರೊಬ್ಬ ವಿಧವೆಯೊಡನೆ ನಿಯೋಗಮಾಡಿಕೊಂಡು ಸಂತಾನವನ್ನುತ್ಪನ್ನಮಾಡಿರಿ, ಎಂದು ಅನುಜ್ಞೆಕೊಡಬೇಕು. ಹೀಗೆಯೇ ಪಾಂಡುರಾಜನ ಪತ್ನಿಯರಾದ ಕುಂತಿ, ಮಾದ್ರಿ ಮೊದಲಾದವರು ಮಾಡಿದರು; ಮತ್ತು ವ್ಯಾಸರು, ಚಿತ್ರಾಂಗದ ಮತ್ತು ವಿಚಿತ್ರವೀರ್ಯರು ಮೃತರಾದ ಮೇಲೆ, ತನ್ನ ತಮ್ಮಂದಿರಾದ ಅವರ ಪತ್ನಿಯರೊಂದಿಗೆ ನಿಯೋಗಮಾಡಿಕೊಂಡು, ಅಂಬಿಕೆಯಲ್ಲಿ ಧೃತರಾಷ್ಟ್ರನನ್ನೂ, ಅಂಬಾ ಲಿಕೆಯಲ್ಲಿ ಪಾಂಡುವನ್ನೂ, ದಾಸಿಯಲ್ಲಿ ವಿದುರನನ್ನೂ ಉತ್ಪನ್ನಮಾಡಿ ದರು. ಈ ಮೊದಲಾದ ಇತಿಹಾಸಗಳೂ ಈ ವಿಷಯಕ್ಕೆ ಪ್ರಮಾಣ ಗಳಾಗಿವೆ.

ಪ್ರೋಷಿತೋ ಧರ್ಮಕಾರ್ಯಾರ್ಥಂ ಪ್ರತೀಕ್ಷ್ಯೋಽಷ್ಟೌ ನರಃ ಸಮಾಃ ।
ವಿದ್ಯಾರ್ಥಂ ಷಡ್ಯಶೋಽರ್ಥಂ ವಾ ಕಾಮಾರ್ಥಂ ತ್ರೀಂಸ್ತು ವತ್ಸರಾನ್ ॥
ವಂಧ್ಯಾಷ್ಟಮೇಽಧಿವೇದ್ಯಾಬ್ದೇ ದಶಮೇತು ಮೃತಪ್ರಜಾ ।
ಏಕಾದಶೇ ಸ್ತ್ರೀಜನನೀ ಸದ್ಯಸ್ತ್ವಪ್ರಿಯವಾದಿನೀ ॥

ವಿವಾಹಿತ ಸ್ತ್ರೀಯು, ತನ್ನ ವಿವಾಹದ ಪತಿಯು ಧರ್ಮಕಾರ್ಯಾರ್ಥವಾಗಿ ಪರದೇಶಕ್ಕೆ ಹೋಗಿದ್ದರೆ, ಎಂಟು ವರ್ಷಗಳ ವರೆಗೂ,

ವಿದ್ಯಾಭ್ಯಾಸಕ್ಕಾಗಲಿ, ಕೀರ್ತಿಸಂಪಾದನೆಗಾಗಲಿ ಹೋಗಿದ್ದರೆ, ಆರು ವರುಷಗಳ ವರೆಗೂ, ಮತ್ತು ಐಶ್ವರ್ಯಸಂಪಾದನೆಗಾಗಿ ಹೋಗಿದ್ದರೆ, ಮೂರು ವರುಷಗಳ ವರೆಗೂ ಕಾದಿದ್ದು, ಅನಂತರ ನಿಯೋಗಮಾಡಿಕೊಂಡು ಸಂತಾನೋತ್ಪತ್ತಿಮಾಡಿಕೊಳ್ಳಬೇಕು. ಆದರೆ ಪತಿಯು ಹಿಂತಿರುಗಿ ಬರುತ್ತಲೇ ನಿಯುಕ್ತ ಪುರುಷನನ್ನು ಬಿಟ್ಟುಬಿಡಬೇಕು.॥೧೫॥ ಪುರುಷನೂ ಕೂಡ, ಪತ್ನಿಯು ಬಂಜೆಯಾಗಿದ್ದಲ್ಲಿ ಎಂಟು ವರ್ಷಗಳ ವರೆಗೂ; [ಮದುವೆಯಾದಂದಿನಿಂದ ಎಂಟು ವರ್ಷಗಳೊಳಗೆ ಪತ್ನಿಯು ಗರ್ಭಿಣಿಯೇ ಆಗದಿದ್ದಲ್ಲಿ] ಹುಟ್ಟಿದ ಮಕ್ಕಳೆಲ್ಲಾ ಸತ್ತುಹೋಗುತ್ತಿದ್ದರೆ, ಹತ್ತು ವರ್ಷಗಳವರೆಗೂ; ಆದಾಗಲೆಲ್ಲಾ ಕೇವಲ ಹೆಣ್ಣು ಮಕ್ಕಳೇ ಆಗುತ್ತಿದ್ದಲ್ಲಿ, ಪುತ್ರನಾಗದೇ ಇದ್ದಲ್ಲಿ, ಹನ್ನೊಂದು ವರ್ಷಗಳವರಿಗೂ ನಿರೀಕ್ಷಿಸಿ, ಅಪ್ರಿಯಮಾತನಾಡುವವಳಾಗಿದ್ದಲ್ಲಿ ಕೂಡಲೇ ಅವಳನ್ನು ಬಿಟ್ಟು, ಬೇರೆ ಸ್ತ್ರೀಯೊಂದಿಗೆ ನಿಯೋಗಮಾಡಿಕೊಂಡು ಸಂತಾನೋತ್ಪತ್ತಿ ಮಾಡಬೇಕು. ಇದೇರೀತಿ ಯಾವಾಗಲೂ ದುಃಖ ಕೊಡುವ ಪತಿಯನ್ನು ಬಿಟ್ಟು ಪತ್ನಿಯು, ಮತ್ತೊಬ್ಬ ಪುರುಷನೊಡನೆ ನಿಯೋಗಮಾಡಿಕೊಂಡು ಸಂತಾನವನ್ನು ಉತ್ಪನ್ನಮಾಡಿಕೊಂಡು, ಆ ಸಂತಾನವನ್ನು ಆದೇ ವಿವಾಹಿತಪತಿಯ ಆಸ್ತಿಗೆ ಭಾಗಿಯನ್ನಾಗಿ ಮಾಡಬೇಕು. ಈ ಮೊದಲಾದ ಪ್ರಮಾಣ ಮತ್ತು ಯುಕ್ತಿಗಳ ದೆಸೆಯಿಂದ, ಸ್ವಯಂವರ ವಿವಾಹ ಮತ್ತು ನಿಯೋಗದಿಂದ ತಮ್ಮ ತಮ್ಮ ಕುಲದ ಉನ್ನತಿಯನ್ನು ಮಾಡಬೇಕು. "ಔರಸ" ಎಂದರೆ, ವಿವಾಹಿತ ಪತಿಯಿಂದ ಹುಟ್ಟಿದ ಮಗನು, ತಂದೆಯ ಆಸ್ತಿಗೆ ಒಡೆಯನಾಗುವಂತೆ "ಕ್ಷೇತ್ರಜ" ಎಂದರೆ, ನಿಯೋಗದಿಂದ ಹುಟ್ಟಿದ ಪುತ್ರರೂ ಕೂಡ ಸತ್ತುಹೋದ ತಂದೆಯ ಆಸ್ತಿಗೆ ಅಧಿಕಾರಿಯಾಗುತ್ತಾರೆ. ಸ್ತ್ರೀಪುರುಷರು ಸದಾ ಮನಸ್ಸಿನಲ್ಲಿಟ್ಟುಕೊಳ್ಳಬೇಕಾದ ವಿಷಯವೇನೆಂದರೆ— ಅವರು ವೀರ್ಯವನ್ನೂ, ರಜಸ್ಸನ್ನೂ ಅಮೂಲ್ಯಪದಾರ್ಥಗಳೆಂದು ತಿಳಿಯಬೇಕು. ಇಂತಹ ಅಮೂಲ್ಯ ವಸ್ತುಗಳನ್ನು ಪುರುಷರು, ಪರ ಸ್ತ್ರೀಯರಲ್ಲಾಗಲಿ, ವೇಶ್ಯೆಯರಲ್ಲಾಗಲಿ, ಸ್ತ್ರೀಯರು ದುಷ್ಟಪುರುಷರಲ್ಲಾಗಲಿ, ಹಾಳುಮಾಡಿಕೊಳ್ಳುವವರಾದರೆ, ಅವರು ಮಹಾ ಮೂರ್ಖರು. ಏಕೆಂದರೆ—ಬೇಸಾಯಗಾರನೂ ಮತ್ತು ತೋಟಗಾರನೂ

ಮೂರ್ಖನಾದರೂ ಕೂಡ, ತನ್ನ ಭೂಮಿ ಮತ್ತು ತೋಟದಲ್ಲಿ ಹೊರತು ಅನ್ಯತ್ರ ಬೀಜವನ್ನು ಬಿತ್ತುವದಿಲ್ಲ. ಏನೂ ತಿಳಿಯದ ಬೇಸಾಯಗಾರನೇ ಸಾಮಾನ್ಯವಾದ ಬೀಜಗಳ ವಿಷಯದಲ್ಲಿ ಹೀಗೆ ವರ್ತಿಸುವಾಗ, ಸರ್ವೋತ್ತಮವಾದ ಮಾನವಶರೀರವೆಂಬ ವೃಕ್ಷದ ಬೀಜವನ್ನು, ದುಷ್ಟಕ್ಷೇತ್ರಗಳಲ್ಲಿ ಹಾಳುಮಾಡಿಕೊಳ್ಳುವವನು ಮಹಾ ಮೂರ್ಖನೆನಿಸಿಕೊಳ್ಳುವನು. ಏಕೆಂದರೆ, ಅದರ ಫಲ ಅವನಿಗೆ ಲಭಿಸುವದಿಲ್ಲ. ಮತ್ತು "ಆತ್ಮಾ ವೈ ಜಾಯತೇ ಪುತ್ರಃ" ಎಂಬುದು ಬ್ರಾಹ್ಮಣ ಗ್ರಂಥದ ವಚನ.

ಅಂಗಾದಂಗಾತ್ಸಂಭವಸಿ ಹೃದಯಾದಧಿಜಾಯತೇ ।
ಆತ್ಮಾ ವೈ ಪುತ್ರನಾಮಾಸಿ ಸಜೀವ ಶರದಃ ಶತಂ ॥

[ನಿರುಕ್ತ ೩-೪]

"ಪುತ್ರನೇ! ನೀನು ಅಂಗಾಂಗಗಳಿಂದ ಉತ್ಪನ್ನವಾದ ವೀರ್ಯದಿಂದಲೂ, ಹೃದಯದಿಂದಲೂ ಹುಟ್ಟಿದ್ದೀಯೆ. ಆದುದರಿಂದ ನೀನು ನನ್ನ ಆತ್ಮವು. ನನಗಿಂತ ಮೊದಲು ನೀನು ಸಾಯದಿರು. ಆದರೆ, ನೂರು ವರ್ಷಗಳವರೆಗೆ ಜೀವಿಸಿರು" ಯಾವುದರಿಂದ ಇಂತಿಂತಹ ಮಹಾತ್ಮರ ಮತ್ತು ಮಹಾಶಯರ ಶರೀರಗಳು ಉತ್ಪನ್ನವಾಗುತ್ತವೋ, ಅದನ್ನು ವೇಶ್ಯೆ ಮೊದಲಾದ ದುಷ್ಟಕ್ಷೇತ್ರಗಳಲ್ಲಿ ಹಾಕುವುದು ಅಥವಾ ದುಷ್ಟಬೀಜವನ್ನು ಉತ್ತಮ ಕ್ಷೇತ್ರದಲ್ಲಿ ಹಾಕುವುದು ಮಹಾ ಪಾಪಕಾರ್ಯ.

ಪ್ರಶ್ನೆ :—ಮದುವೆ ಏಕೆ ಮಾಡಿಕೊಳ್ಳಬೇಕು? ಏಕೆಂದರೆ– ಇದರಿಂದ ಸ್ತ್ರೀಪುರುಷರು ಬಂಧನದಲ್ಲಿ ಸಿಕ್ಕಿ ಬಹಳ ಸಂಕೋಚ ಪಡಬೇಕಾಗುತ್ತದೆ ಮತ್ತು ದುಃಖವನ್ನನುಭವಿಸಬೇಕಾಗುತ್ತದೆ. ಆದುದರಿಂದ ಯಾರಿಗೆ ಯಾರಲ್ಲಿ ಪ್ರೀತಿಯಿರುವುದೋ, ಅವರವರು ಒಟ್ಟಿಗೆ ಕೂಡಿದ್ದು, ಪ್ರೇಮವು ಕಡಮೆಯಾಗುತ್ತಲೇ, ಒಬ್ಬರನ್ನೊಬ್ಬರು ಬಿಟ್ಟುಬಿಡುವುದು ಒಳ್ಳೆಯದಲ್ಲವೆ?

ಉತ್ತರ :—ಇದು ಪಶುಪಕ್ಷಿಗಳ ವ್ಯವಹಾರವೇ ಹೊರತು ಮಾನವರ ವ್ಯವಹಾರವಲ್ಲ. ಏಕೆಂದರೆ, ಮಾನವಸಮಾಜದಲ್ಲಿ ವಿವಾಹದ

ನಿಯಮವೇ ಇಲ್ಲದಿದ್ದಲ್ಲಿ ಗೃಹಸ್ಥಾಶ್ರಮದ ಉತ್ತಮ ವ್ಯವಹಾರಗಳೆಲ್ಲಾ ನಷ್ಟಭ್ರಷ್ಟವಾಗಿಹೋಗುತ್ತದೆ. ಯಾರೂ ಯಾರಿಗೂ ಸೇವೆ ಸಲ್ಲಿಸರು. ಮತ್ತು ವ್ಯಭಿಚಾರವು ಹೆಚ್ಚಿ, ಎಲ್ಲರೂ ರೋಗಿಗಳೂ, ದುರ್ಬಲರೂ, ಅಲ್ಪಾಯುಗಳೂ ಆಗಿ ಬೇಗನೇ ಸತ್ತುಹೋಗುವರು. ಯಾರೂ ಯಾರಿಗೂ ಹೆದರರು, ಮತ್ತು ಲಜ್ಜೆ ಹೊಂದರು. ವೃದ್ಧಾಪ್ಯದಲ್ಲಿ ಯಾರೂ ಯಾರನ್ನೂ ಉಪಚರಿಸುವುದಿಲ್ಲ. ಮಹಾವ್ಯಭಿಚಾರದಿಂದ ಎಲ್ಲರೂ ರೋಗಿಗಳೂ, ನಿರ್ಬಲರೂ, ಅಲ್ಪಾಯುಗಳೂ ಆಗಿ, ಕುಲಕ್ಕೆ ಕುಲಗಳೇ ಅಳಿಸಿಹೋಗುವುವು. ಯಾವನೂ ಯಾವನ ಆಸ್ತಿಗೂ ಅಧಿಕಾರಿ ಅಥವಾ ದಾಯಭಾಗಿಯಾಗಲಾರನು. ಯಾರಿಗೂ ಯಾವ ವಸ್ತುವಿನ ಮೇಲೂ ದೀರ್ಘಕಾಲದವರೆಗೆ ಸ್ವತ್ವವೂ ಉಳಿಯದು. ಈ ಮೊದಲಾದ ದೋಷಗಳ ನಿವಾರಣೆಗಾಗಿ ವಿವಾಹವಾಗುವುದೇ ಸರ್ವಥಾ ಯೋಗ್ಯವಾದುದು.

ಪ್ರಶ್ನೆ:—ಒಂದೇ ವಿವಾಹವಾಗಿ, ಒಬ್ಬನಿಗೆ ಒಬ್ಬಳು ಪತ್ನಿ ಮತ್ತು ಒಬ್ಬಳಿಗೆ ಒಬ್ಬ ಪತಿಯಿದ್ದು, ಪತ್ನಿಯು ಗರ್ಭಿಣಿಯೋ ಆಗಿದ್ದಲ್ಲಿ, ಅಥವಾ ಪತಿಯು ದೀರ್ಘರೋಗಿಯಾಗಿದ್ದಲ್ಲಿ, ಇಬ್ಬರಿಗೂ ಯೌವನವಿದ್ದು, ಆತ್ಮನಿಗ್ರಹಸಾಧ್ಯವಿಲ್ಲದಿದ್ದರೆ, ಏನು ಮಾಡಬೇಕು?

ಉತ್ತರ:—ಇದರ ಉತ್ತರವನ್ನು ನಿಯೋಗವಿಷಯದಲ್ಲಿ ಕೊಟ್ಟಿದ್ದೇವೆ. ಗರ್ಭವತಿಯೊಂದಿಗೆ ಒಂದು ವರ್ಷ ಸಮಾಗಮ ಮಾಡದಿರುವ ಕಾಲದಲ್ಲಿ ಪುರುಷನಿಗೆ, ಅಥವಾ ದೀರ್ಘರೋಗಿಯಾದ ಪುರುಷನ ಪತ್ನಿಗೆ ಆತ್ಮನಿಗ್ರಹ ಸಾಧ್ಯವಾಗದಿದ್ದರೆ, ನಿಯೋಗಮಾಡಿಕೊಂಡು, ಪುತ್ರೋತ್ಪಾದನೆ ಮಾಡಬೇಕು. ಆದರೆ ವೇಶ್ಯಾಗಮನ ಅಥವಾ ವ್ಯಭಿಚಾರ ಮಾಡಬಾರದು.

ದೊರೆಯದಿರುವ ವಸ್ತುವನ್ನು ಸಾಧ್ಯವಾದಷ್ಟು ಗಳಿಸಬೇಕು. ಗಳಿಸಿದುದನ್ನು ರಕ್ಷಿಸಬೇಕು. ರಕ್ಷಿಸಿದುದನ್ನು ಬೆಳಸಬೇಕು. ಬೆಳೆಸಿದ ಧನವನ್ನು ದೇಶೋಪಕಾರಕ್ಕಾಗಿ ಬಳಸಬೇಕು. ಸರ್ವಪ್ರಕಾರದ ಅಂದರೆ ಹಿಂದೆ ಹೇಳಿದ ರೀತಿಯಲ್ಲಿ ತಮ್ಮ ತಮ್ಮ ವರ್ಣಾಶ್ರಮಗಳ ವ್ಯವಹಾರಗಳನ್ನು ಅತ್ಯುತ್ಸಾಹದಿಂದ ಪ್ರಯತ್ನಮಾಡಿ ಪರಿಪಾಲಿಸಿ, ತನುಮನಧನಗಳಿಂದ ಪರಮಾರ್ಥವನ್ನು ಸಾಧಿಸಬೇಕು. ತಮ್ಮ

ತಾಯಿ, ತಂದೆ ಅತ್ತೆಮಾವಂದಿರನ್ನು ಬಹಳವಾಗಿ ಉಪಚರಿಸಬೇಕು. ಸ್ನೇಹಿತರಲ್ಲಿಯೂ, ನೆರೆಹೊರೆಯವರಲ್ಲಿಯೂ, ರಾಜರಲ್ಲಿಯೂ, ವಿದ್ವಾಂಸರಲ್ಲಿಯೂ, ವೈದ್ಯರಲ್ಲಿಯೂ, ಸತ್ಪುರುಷರಲ್ಲಿಯೂ, ಪ್ರೀತಿಯಿಡಬೇಕು; ಮತ್ತು ದುಷ್ಟರೂ, ಅಧರ್ಮಾತ್ಮರೂ ಯಾರಿರುತ್ತಾರೆಯೋ ಅವರೊಡನೆ ಉಪೇಕ್ಷಾಭಾವವಿಡಬೇಕು ಅಂದರೆ, ದ್ವೇಷ ಮಾಡದೆ, ಅವರನ್ನು ಸುಧಾರಿಸಲು ಯತ್ನಿಸಬೇಕು. ಕೈಲಾದಮಟ್ಟಿಗೂ ಪ್ರೇಮದಿಂದ ತಮ್ಮ ಮಕ್ಕಳಿಗೆ ವಿದ್ಯಾಸುಶಿಕ್ಷಣಗಳನ್ನಿಸಿಯುವುದಕ್ಕಾಗಿ, ಧನ ಮೊದಲಾದುವನ್ನು ವೆಚ್ಚಮಾಡಿ, ಅವರನ್ನು ಪೂರ್ಣ ವಿದ್ವಾಂಸರನ್ನಾಗಿಯೂ, ಮಾಡಬೇಕು. ಮತ್ತು ಧರ್ಮಯುಕ್ತ ವ್ಯವಹಾರವನ್ನೇ ನಡೆಸುತ್ತಾ ಪರಮಾನಂದಪ್ರದವಾದ ಮೋಕ್ಷವನ್ನು ಸಾಧಿಸಲು ಪ್ರಯತ್ನಿಸಬೇಕು. ಕೆಳಗೆ ಬರೆದಿರುವಂತಹ ಶ್ಲೋಕಗಳನ್ನು ಎಂದಿಗೂ ಸ್ವೀಕರಿಸಬಾರದು.

ಪತಿತೋಽಪಿ ದ್ವಿಜಃ ಶ್ರೇಷ್ಠೋ ನ ಚ ಶೂದ್ರೋ ಜಿತೇಂದ್ರಿಯಃ
ನಿರ್ದುಗ್ಧಾ ಚಾಪಿ ಗೌಃ ಪೂಜ್ಯಾ ನ ಚ ದುಗ್ಧವತೀ ಖರೀ ॥೧॥
ಅಶ್ವಾಲಂಭಂ ಗವಾಲಂಭಂ ಸಂನ್ಯಾಸಂ ಪಲಪೈತೃಕಂ ।
ದೇವರಾಚ್ಚ ಸುತೋತ್ಪತ್ತಿಂ ಕಲೌ ಪಂಚ ವಿವರ್ಜಯೇತ್ ॥೨॥
ನಷ್ಟೇ ಮೃತೇ ಪ್ರವ್ರಜಿತೇ ಕ್ಲೀಬೇ ಚ ಪತಿತೇ ಪತೌ ।
ಪಂಚಸ್ವಾಪತ್ಸು ನಾರೀಣಾಂ ಪತಿರನ್ಯೋ ವಿಧೀಯತೇ ॥೩॥

ಇವು ಕಪೋಲಕಲ್ಪಿತ ಪಾರಾಶರೀಯ ಶ್ಲೋಕಗಳು. ಪಾಪ ಕೃತ್ಯಗಳನ್ನು ಮಾಡುವ ದ್ವಿಜರನ್ನು ಶ್ರೇಷ್ಠನೆಂದೂ, ಶ್ರೇಷ್ಠಕಾರ್ಯಗಳನ್ನು ಮಾಡುವ ಶೂದ್ರನನ್ನು ನೀಚನೆಂದೂ ತಿಳಿಯುವುದಕ್ಕಿಂತ ಹೆಚ್ಚಿನ ಪಕ್ಷಪಾತವೂ, ಅನ್ಯಾಯವೂ, ಅಧರ್ಮವೂ ಬೇರಾವುದಿದೆ? ಹಾಲೀಯುವ ಅಥವಾ ಈಯದಿರುವ ಹಸು ಗೋವಳಿಗರಿಗೆ ಪಾಲನೀಯವಾಗಿರುವಂತೆ, ಕತ್ತೆಯು ಕುಂಬಾರ ಮೊದಲಾದವರಿಗೆ ಪಾಲನೀಯವಾಗಿರುವದಿಲ್ಲವೆ? ಮತ್ತು ಈ ದೃಷ್ಟಾಂತವೂ ವಿಷಮವಾದುದು. ಏಕೆಂದರೆ, ದ್ವಿಜಶೂದ್ರರು ಮನುಷ್ಯಜಾತಿಗೇ ಸೇರಿದವರು. ಹಸು ಕತ್ತೆಗಳು ಬೇರೆ ಬೇರೆ ಜಾತಿಯವು. ಯಾವುದಾದರೂ ಒಂದು ರೀತಿ

ಯಿಂದ, ಪಶುಜಾತಿತ್ವದ ದೃಷ್ಟಿಯಿಂದ ದೃಷ್ಟಾಂತದ ಒಂದಂಶವು ದಾಷ್ಟಾರ್ಂತದಲ್ಲಿ ಹೊಂದಿಕೊಂಡರೂ ಸಹ, ಇದರ ಆಶಯವು ಅಯುಕ್ತವಾಗಿರುವದರಿಂದ ಈ ಶ್ಲೋಕಗಳು ವಿದ್ವಾಂಸರಿಗೆಂದೂ ಮಾನ್ಯವಾಗಲಾರವು. ಅಶ್ವಾಲಂಭ ಅಂದರೆ ಕುದುರೆಯನ್ನು ಕೊಂದೂ, (ಗವಾಲಂಭಂ) ಆಕಳನ್ನು ಕೊಂದೂ ಹೋಮಮಾಡಬೇಕೆಂಬುದೇ ವೇದವಿಹಿತವಲ್ಲದಿರುವಾಗ, ಕಲಿಯುಗದಲ್ಲಿ ಮಾತ್ರ ನಿಷೇಧಿಸಿರುವುದು ವೇದವಿರುದ್ಧವಲ್ಲವೆ? ಕಲಿಯುಗದಲ್ಲಿ ಮಾತ್ರ ಈ ನೀಚಕರ್ಮವು ನಿಷಿದ್ಧವೆಂದು ಒಪ್ಪುವದಾದರೆ, ತ್ರೇತಾ ಮೊದಲಾದ ಯುಗಗಳಲ್ಲಿ ' ವಿಧಿವಿಹಿತ 'ವೆಂದಾಗುತ್ತದೆ. ಈ ದುಷ್ಟಕರ್ಮಗಳು ಶ್ರೇಷ್ಠಯುಗದಲ್ಲಿದ್ದುವೆಂಬುದು ತೀರ ಅಸಂಭವ. ವೇದಾದಿಶಾಸ್ತ್ರಗಳಲ್ಲಿ ಸಂನ್ಯಾಸಾಶ್ರಮದ ವಿಧಾನವಿರುವದರಿಂದ ಅದನ್ನು ನಿಷೇಧಿಸುವುದು ನಿರಾಧಾರವಾದುದು. ಮಾಂಸನಿಷೇಧವು ಸರ್ವಕಾಲಕ್ಕೂ ಇದ್ದೇ ಇದೆ. ದೇವರಿಂದ ಸಂತಾನವನ್ನು ಉತ್ಪನ್ನಮಾಡಬಹುದೆಂದು ವೇದಗಳಲ್ಲಿಯೇ ಹೇಳಿರುವಾಗ ಈ ಶ್ಲೋಕಕರ್ತನು ಸುಮ್ಮನೇತಕ್ಕೆ ಒದರುತ್ತಾನೆ?॥೬॥

"ನಷ್ಟೇ" ಅರ್ಥಾತ್, ಗಂಡನು ದೇಶಾಂತರಕ್ಕೆ ಹೋಗಿದ್ದಾಗ, ಹೆಂಡತಿಯು ಮನೆಯಲ್ಲಿ ನಿಯೋಗಮಾಡಿಕೊಂಡು, ಅದೇ ಕಾಲದಲ್ಲಿ ವಿವಾಹಿತ ಪತಿಯು ಬಂದುಬಿಟ್ಟರೆ, ಅವಳು ಯಾರ ಹೆಂಡತಿ? ಮದುವೆಯಾದ ಗಂಡನಿಗೇ ಹೆಂಡತಿಯಾಗಿರಬೇಕೆಂದು ಹೇಳುವಿರಾದರೆ, ನಮಗದು ಸಮ್ಮತವೇ ಆಗಿರುತ್ತದೆ. ಆದರೆ ಈ ವಿಧವಾದ ವ್ಯವಸ್ಥೆಯು ಪಾರಾಶರೀಯಲ್ಲಂತೂ ಬರೆದಿಲ್ಲ. ಸ್ತ್ರೀಯರಿಗೆ ಐದೇ ಆಪತ್ಕಾಲಗಳಿವೆಯೇ? ಗಂಡನು ಸದಾ ರೋಗಿಯಾಗಿರುವುದು, ಯಾವಾಗಲೂ ಜಗಳವಾಡುತ್ತಿರುವುದು, ಈ ಮೊದಲಾದ ಕಷ್ಟಸಮಯಗಳು ಐದಕ್ಕಿಂತಲೂ ಹೆಚ್ಚಾಗಿದೆ. ಆದ್ದರಿಂದ ಇಂತಹ ಶ್ಲೋಕಗಳನ್ನು ಎಂದಿಗೂ ಒಪ್ಪಬಾರದು.

ಪ್ರಶ್ನೆ:—ನೀವು ಪರಾಶರರ ವಚನವನ್ನೂ ಕೂಡ ಒಪ್ಪುವುದಿಲ್ಲವೆ?

ಉತ್ತರ:—ಯಾರ ವಚನವೇ ಆಗಿರಲಿ, ವೇದವಿರುದ್ಧವಾಗಿದ್ದರೆ, ನಾವು ಒಪ್ಪುವದಿಲ್ಲ. ಮತ್ತು ಇದು ಪರಾಶರ ವಚನವೂ ಅಲ್ಲ.

ಏಕೆಂದರೆ, "ಸರ್ವಮಾನ್ಯ ಹೆಸರುಗಳಿದ್ದರೆ, ಈ ಗ್ರಂಥಗಳನ್ನು ಜಗತ್ತೆಲ್ಲಾ ಒಪ್ಪಿಕೊಳ್ಳುವುದು, ನಮ್ಮ ಜೀವನವೂ ಪುಷ್ಕಳವಾಗಿ ನಡೆಯುವುದು" ಎಂದು ಭಾವಿಸಿ, "ಬ್ರಹ್ಮೋವಾಚ, ವಸಿಷ್ಠ ಉವಾಚ, ರಾಮ ಉವಾಚ, ಶಿವ ಉವಾಚ, ವಿಷ್ಣುರುವಾಚ, ದೇವ್ಯುವಾಚ" ಎಂದು ಮೊದಲಾಗಿ, ಶ್ರೇಷ್ಠರ ಹೆಸರುಗಳನ್ನು ಬರೆದು ಗ್ರಂಥಗಳನ್ನು ರಚಿಸಿರುತ್ತಾರೆ. ಇದೇ ಕಾರಣ ಅರ್ಥವಿಲ್ಲದ ಕಟ್ಟುಕಥೆಗಳಿಂದ ಕೂಡಿದ ಗ್ರಂಥಗಳನ್ನೂ ರಚಿಸಿರುತ್ತಾರೆ. ಹಲಕೆಲವು ಪ್ರಕ್ಷಿಪ್ತ ಶ್ಲೋಕಗಳನ್ನುಳಿದು, ಮನುಸ್ಮೃತಿಯೊಂದೇ ವೇದಾನುಕೂಲವಾಗಿದೆ. ಬೇರೆಯ ಸ್ಮೃತಿಗಳು ಹಾಗಿಲ್ಲ. ಹೀಗೆಯೇ ಉಳಿದ ಕೃತ್ರಿಮ ಗ್ರಂಥಗಳ ವ್ಯವಸ್ಥೆಯನ್ನೂ ತಿಳಿದುಕೊಳ್ಳಬೇಕು.

ಪ್ರಶ್ನೆ:—ಗೃಹಸ್ಥಾಶ್ರಮವು ಎಲ್ಲಕ್ಕಿಂತಲೂ ಶ್ರೇಷ್ಠವೋ, ಅಥವಾ ಕನಿಷ್ಠವೋ?

ಉತ್ತರ:—ತಮ್ಮ ತಮ್ಮ ಕರ್ತವ್ಯಕರ್ಮಗಳಲ್ಲಿ ಎಲ್ಲಾ ಆಶ್ರಮಗಳೂ ಶ್ರೇಷ್ಠವೇ ಆಗಿರುತ್ತವೆ. ಆದರೆ,

ಯಥಾ ನದೀನದಾಃ ಸರ್ವೇ ಸಾಗರೇ ಯಾಂತಿ ಸಂಸ್ಥಿತಿಂ।
ತಥೈವಾಶ್ರಮಿಣಃ ಸರ್ವೇ ಗೃಹಸ್ಥೇ ಯಾಂತಿ ಸಂಸ್ಥಿತಿಂ ॥೧॥
ಯಥಾ ವಾಯುಂ ಸಮಾಶ್ರಿತ್ಯ ವರ್ತಂತೇ ಸರ್ವಜಂತವಃ।
ತಥಾ ಗೃಹಸ್ಥಮಾಶ್ರಿತ್ಯ ವರ್ತಂತೇ ಸರ್ವ ಆಶ್ರಮಾಃ ॥೨॥
ಯಸ್ಮಾತ್ತ್ರಯೋಽಪ್ಯಾಶ್ರಮಿಣೋ ದಾನೇನಾನ್ನೇನ ಚಾನ್ವಹಂ।
ಗೃಹಸ್ಥೇನೈವ ಧಾರ್ಯಂತೇ ತಸ್ಮಾಜ್ಜ್ಯೇಷ್ಠಾಶ್ರಮೋ ಗೃಹೀ ॥೩॥
ಸ ಸಂಧಾರ್ಯಃ ಪ್ರಯತ್ನೇನ ಸ್ವರ್ಗಮಕ್ಷಯಮಿಚ್ಛತಾ।
ಸುಖಂ ಚೇಹೇಚ್ಛತಾ ನಿತ್ಯಂ ಯೋಽಧಾರ್ಯೋ ದುರ್ಬ-
ಲೇಂದ್ರಿಯೈಃ ॥೪॥

[ಮನು. ೩, ೭೭, ೭೮]

ನದಿಗಳೂ, ದೊಡ್ಡ ದೊಡ್ಡ ನದಗಳೂ, ಸಮುದ್ರವನ್ನು ಸೇರುವವರಿಗೂ ಹರಿಯುತ್ತಲೇ ಹೋಗುವಂತೆಯೇ ಎಲ್ಲಾ ಆಶ್ರಮದವರೂ,

ಗೃಹಸ್ಥಾಶ್ರಮದಿಂದಲೇ ನಿಂತಿರುತ್ತಾರೆ. ಇದಿಲ್ಲದಿದ್ದರೆ, ಯಾವ ದೊಂದು ಆಶ್ರಮದ ಯಾವದೊಂದು ವ್ಯವಹಾರವೂ ಸಿದ್ಧಿಸುವುದಿಲ್ಲ. ॥೧॥ ಬ್ರಹ್ಮಚರ್ಯ, ವಾನಪ್ರಸ್ಥ, ಸಂನ್ಯಾಸವೆಂಬ ಆಶ್ರಮಗಳನ್ನು ಪ್ರತಿದಿನವೂ, ದಾನದಿಂದಲೂ, ಅನ್ನದಿಂದಲೂ, ಧರಿಸುವುದರಿಂದ ಗೃಹಸ್ಥಾಶ್ರಮವು ಜ್ಯೇಷ್ಠವಾದುದು. ಅದು ಸರ್ವ ವ್ಯವಹಾರಧಾರಕ ವೆನ್ನಿಸಿಕೊಳ್ಳುತ್ತದೆ. ॥೨॥ ಆದುದರಿಂದ ಮೋಕ್ಷವನ್ನೂ, ಐಹಿಕಸುಖ ವನ್ನೂ ಇಚ್ಛಿಸುವವನು ಗೃಹಸ್ಥಾಶ್ರಮವನ್ನು ಪ್ರಯತ್ನದಿಂದ ಧರಿಸ ಬೇಕು. ದುರ್ಬಲೇಂದ್ರಿಯರೂ, ಭೀರುಗಳೂ ನಿರ್ಬಲರೂ ಆದ ಮಾನವರಿಂದ ಧರಿಸಲಾಗದ ಗೃಹಾಶ್ರಮವನ್ನು ಚನ್ನಾಗಿ ನಿರ್ವಹಿಸ ಬೇಕು. ಗೃಹಸ್ಥಾಶ್ರಮವೇ ಜಗತ್ತಿನಲ್ಲಿರುವ ಸರ್ವ ವ್ಯವಹಾರಗಳ ಆಧಾರವು. ಗೃಹಾಶ್ರಮವಿಲ್ಲದೆ, ಸಂತಾನೋತ್ಪತ್ತಿಯೇ ಆಗಲಾರದುದ ರಿಂದ, ಬ್ರಹ್ಮಚರ್ಯ ವಾನಪ್ರಸ್ಥ ಸಂನ್ಯಾಸಾಶ್ರಮಗಳು ಎಲ್ಲಿಂದ ಸಂಭವಿಸುವುವು? ಗೃಹಾಶ್ರಮವನ್ನು ನಿಂದಿಸುವವನೇ ನಿಂದನೀಯನು; ಪ್ರಶಂಸಿಸುವವನೇ ಪ್ರಶಂಸನೀಯನು. ಗೃಹಾಶ್ರಮದಲ್ಲಿಯೂ ಸಹ ಸ್ತ್ರೀ ಪುರುಷರಿಬ್ಬರೂ, ಪರಸ್ಪರ ಸುಪ್ರಸನ್ನರೂ, ವಿದ್ವಾಂಸರೂ, ಪುರುಷಾರ್ಥಿಗಳೂ, ಸಕಲ ವ್ಯವಹಾರಜ್ಞರೂ, ಆದಾಗಲೇ ಸುಖವು ಲಭಿಸುವುದು. ಬ್ರಹ್ಮಚರ್ಯವೂ, ಮೇಲೆ ವರ್ಣಿಸಿದ ಸ್ವಯಂವರ ವಿವಾಹವೂ, ಗೃಹಾಶ್ರಮಸುಖದ ಮುಖ್ಯ ಕಾರಣವಾಗಿರುತ್ತದೆ.

ಸಂಕ್ಷೇಪವಾಗಿ ಸಮಾವರ್ತನ, ವಿವಾಹ, ಗೃಹಾಶ್ರಮನಿರೂಪಣದ ವಿಷಯದಲ್ಲಿ ಬರೆದಿದ್ದೇವೆ. ಇನ್ನು ಮುಂದೆ ವಾನಪ್ರಸ್ಥ, ಸಂನ್ಯಾಸ ವಿಷಯವಾಗಿ ಬರೆಯಲ್ಪಡುವುದು.

ಇತಿ ಶ್ರೀಮದ್ದಯಾನಂದಸರಸ್ವತೀಸ್ವಾಮಿಕೃತೇ
ಸತ್ಯಾರ್ಥಪ್ರಕಾಶೇ ಸುಭಾಷಾವಿಭೂಷಿತೇ ಸಮಾವರ್ತನ
ವಿವಾಹಗೃಹಾಶ್ರಮವಿಷಯೇ
ಚತುರ್ಥಃ ಸಮುಲ್ಲಾಸಃ ಸಂಪೂರ್ಣಃ

॥ ಓಂ ॥

ಅಥ ಪಂಚಮ ಸಮುಲ್ಲಾಸಾರಂಭಃ

ಅಥ ವಾನಪ್ರಸ್ಥಸಂನ್ಯಾಸವಿಧಿಂ ವಕ್ಷ್ಯಾಮಃ

ಬ್ರಹ್ಮಚರ್ಯಾಶ್ರಮಂ ಸಮಾಪ್ಯ ಗೃಹೀ ಭವೇತ್ ।
ಗೃಹೀ ಭೂತ್ವಾ ವನೀ ಭವೇತ್ ವನೀ ಭೂತ್ವಾ ಪ್ರವ್ರಜೇತ್ ॥
(ಶತಪಥ ಬ್ರಾಹ್ಮಣ ಕಾಂ. ೧೪)

ಬ್ರಹ್ಮಚರ್ಯಾಶ್ರಮವನ್ನು ಸಮಾಪ್ತಿಗೊಳಿಸಿ, ಗೃಹಸ್ಥನಾಗಿ ಆಮೇಲೆ ವಾನಪ್ರಸ್ಥವನ್ನೂ ಸಂನ್ಯಾಸವನ್ನೂ ತೆಗೆದುಕೊಳ್ಳಬೇಕಾದುದು ಮನುಷ್ಯರಿಗೆ ಉಚಿತವಾದುದು. ಅಂದರೆ, ಇದೇ ಕ್ರಮಪೂರ್ವಕವಾದ ಆಶ್ರಮವಿಧಾನವು.

ಏವಂ ಗೃಹಾಶ್ರಮೇ ಸ್ಥಿತ್ವಾ ವಿಧಿವತ್ಸ್ನಾತಕೋ ದ್ವಿಜಃ ।
ವನೇ ವಸೇತ್ತು ನಿಯತೋ ಯಥಾವದ್ವಿಜಿತೇಂದ್ರಿಯಃ ॥೧॥
ಗೃಹಸ್ಥಸ್ತು ಯದಾ ಪಶ್ಯೇದ್ವಲೀಪಲಿತಮಾತ್ಮನಃ ।
ಅಪತ್ಯಸ್ಯೈವ ಚಾಪತ್ಯಂ ತದಾರಣ್ಯಂ ಸಮಾಶ್ರಯೇತ್ ॥೨॥
ಸಂತ್ಯಜ್ಯ ಗ್ರಾಮ್ಯಮಾಹಾರಂ ಸರ್ವಂ ಚೈವ ಪರಿಚ್ಛದಂ ।
ಪುತ್ರೇಷು ಭಾರ್ಯಾಂ ನಿಕ್ಷಿಪ್ಯ ವನಂ ಗಚ್ಛೇತ್ಸಹೈವ ವಾ ॥೩॥
ಅಗ್ನಿಹೋತ್ರಂ ಸಮಾದಾಯ ಗೃಹ್ಯಂ ಚಾಗ್ನಿಪರಿಚ್ಛದಂ ।
ಗ್ರಾಮಾದರಣ್ಯಂ ನಿಸ್ಸೃತ್ಯ ನಿವಸೇನ್ನಿಯತೇಂದ್ರಿಯಃ ॥೪॥
ಮುನ್ಯನ್ನೈರ್ವಿವಿಧೈರ್ಮೇಧ್ಯೈಃ ಶಾಕಮೂಲ ಫಲೇನ ವಾ ।
ಏತಾನೇವ ಮಹಾಯಜ್ಞಾನ್ನಿರ್ವಪೇದ್ವಿಧಿಪೂರ್ವಕಂ ॥೫॥
[ಮನು ೬-೧-೫]

ಈ ರೀತಿ ದ್ವಿಜರು ಅಂದರೆ, ಬ್ರಾಹ್ಮಣ, ಕ್ಷತ್ರಿಯ, ವೈಶ್ಯರು ಸ್ನಾತಕರಾಗಿ ಅಂದರೆ ಬ್ರಹ್ಮಚರ್ಯವ್ರತದಿಂದ ಗೃಹಾಶ್ರಮವನ್ನು ಸ್ವೀಕರಿ

ಸುವವರಾಗಿ, ಗೃಹಸ್ಥಾಶ್ರಮದಲ್ಲಿ ನೆಲೆಸಿ, ಅಮೇಲೆ ನಿಶ್ಚಿತಾತ್ಮರಾಗಿ ಯಥಾವತ್ತಾಗಿ ಇಂದ್ರಿಯಗಳನ್ನು ಜಯಿಸಿ, ಅರಣ್ಯದಲ್ಲಿ ವಾಸಮಾಡ ಬೇಕು. (೧) ಆದರೆ, ಗೃಹಸ್ಥನಾದವನು ತನ್ನ ದೇಹದಲ್ಲಿ ನೆರೆತ ಕೂದಲನ್ನೂ, ಸುಕ್ಕಾದ ಚರ್ಮವನ್ನೂ, ಮಕ್ಕಳಿಗೆ ಮಕ್ಕಳಾದುದನ್ನೂ ಕಂಡೊಡನೆಯೇ ವನಕ್ಕೆ ಹೋಗಿ ನೆಲೆಸಬೇಕು. (೨) ಗ್ರಾಮದ ವಸ್ತ್ರಾಹಾರಾದಿ ಸಮಸ್ತ ಉತ್ತಮೋತ್ತಮ ಪದಾರ್ಥಗಳನ್ನು ಬಿಟ್ಟು, ಪೆಂಡತಿಯನ್ನು ಮಕ್ಕಳ ಸಮೀಪದಲ್ಲಿಯೇ ಇರಿಸಿ, ಅಥವಾ ಆಕೆಯನ್ನೂ ಸಂಗಡ ಕರೆದುಕೊಂಡು ಅರಣ್ಯದಲ್ಲಿ ವಾಸಿಸಬೇಕು. (೩) ಅಗ್ನಿಹೋತ್ರದ ಎಲ್ಲಾ ಸಲಕರಣೆಗಳನ್ನೂ ತೆಗೆದುಕೊಂಡು ಗ್ರಾಮದಿಂದ ಹೊರಟು, ಜಿತೇಂದ್ರಿಯನಾಗಿ ವನದಲ್ಲಿ ವಾಸಮಾಡಬೇಕು. (೪) ನಾನಾವಿಧವಾದ ಸಾಮೆ ಮೊದಲಾದ ಧಾನ್ಯ, ಉತ್ತಮವಾದ ಶಾಕ, ಮೂಲ, ಫಲ, ಪುಷ್ಪ, ಕಂದ ಮೊದಲಾದುವುಗಳಿಂದ ಹಿಂದೆ ಹೇಳಿದ ಪಂಚಮಹಾಯಜ್ಞಗಳನ್ನು ಆಚರಿಸಬೇಕು. ಮತ್ತು ಅವುಗಳಿಂದಲೇ ಅತಿಥಿ ಸೇವೆಯನ್ನು ಮಾಡಬೇಕು. ತನ್ನ ನಿರ್ವಾಹವನ್ನು ಮಾಡಿಕೊಳ್ಳಬೇಕು. (೫).

ಸ್ವಾಧ್ಯಾಯೇ ನಿತ್ಯಯುಕ್ತಸ್ಸ್ಯಾತ್ ದಾಂತೋ ಮೈತ್ರಸ್ಸಮಾಹಿತಃ।
ದಾತಾ ನಿತ್ಯಮನಾದಾತಾ ಸರ್ವಭೂತಾನುಕಂಪಕಃ ॥೧॥
ಆಪ್ರಯತ್ನಃ ಸುಖಾರ್ಥೇಷು ಬ್ರಹ್ಮಚಾರೀ ಧರಾಶಯಃ।
ಶರಣೇಷ್ವಮಮುಶ್ಚೈವ ವೃಕ್ಷಮೂಲನಿಕೇತನಃ ॥೨॥

[ಮನು. ಘ-೮, ೨೬]

ಸ್ವಾಧ್ಯಾಯದಲ್ಲಿ ಅಂದರೆ ಅಧ್ಯಯನ-ಅಧ್ಯಾಪನದಲ್ಲಿ ನಿತ್ಯವೂ ನಿರತನೂ, ಜಿತಾತ್ಮನೂ, ಸರ್ವರ ಮಿತ್ರನೂ, ಇಂದ್ರಿಯದಮನ ಶೀಲನೂ, ವಿದ್ಯಾದಿ ದಾನಗಳನ್ನು ಮಾಡುವವನೂ, ಸರ್ವರ ಮೇಲೆ ದಯಾವಂತನೂ ಆಗಿ, ಯಾರಿಂದಲೂ ಏನನ್ನೂ ತೆಗೆದುಕೊಳ್ಳದಂತೆ ಸದಾ ವರ್ತಿಸಬೇಕು (೧) ದೇಹಸುಖಕ್ಕಾಗಿ ಹೆಚ್ಚಿನ ಪ್ರಯತ್ನವನ್ನು ನಡೆಸಬಾರದು. ಆದರೆ, ಬ್ರಹ್ಮಚಾರಿಯಾಗಿರಬೇಕು. ಹೆಂಡತಿಯು

ಸಮೀಪದಲ್ಲಿದ್ದರೂ ಆಕೆಯೊಡನೆ ಯಾವ ಕಾಮಚೇಷ್ಟೆಗಳನ್ನೂ ಮಾಡಬಾರದು. ನೆಲದಮೇಲೆಯೇ ಮಲಗಬೇಕು. ತನ್ನ ಆಶ್ರಿತರಲ್ಲಿ ಮತ್ತು ತನ್ನ ಪದಾರ್ಥಗಳಲ್ಲಿ ಮಮತೆಯನ್ನಿಡಬಾರದು. ಮರದ ಕೆಳಗೆ ವಾಸಮಾಡಬೇಕು. (೨)

ತಪಃಶ್ರದ್ಧೇ ಯೇ ಹ್ಯುಪವಸಂತ್ಯರಣ್ಯೇ ಶಾಂತಾ ವಿದ್ವಾಂಸೋ
ಭೈಕ್ಷ್ಯಚರ್ಯಾಂ ಚರಂತಃ ।
ಸೂರ್ಯದ್ವಾರೇಣ ತೇ ವಿರಜಾಃ ಪ್ರಯಾಂತಿ ಯತ್ರಾಮೃತಃ
ಸ ಪುರುಷೋ ಹ್ಯವ್ಯಯಾತ್ಮಾ ॥

[ಮುಂಡಕ. ಖಂ. ೩, ಮಂ. ೧೧]

ಯಾವ ಶಾಂತರಾದ ವಿದ್ವಾಂಸರು ವನದಲ್ಲಿ ತಪಸ್ಸು, ಧರ್ಮಾನುಷ್ಠಾನ ಮತ್ತು ಸತ್ಯದಲ್ಲಿ ಶ್ರದ್ಧೆಗಳನ್ನು ಆಚರಿಸುತ್ತಾ, ಭಿಕ್ಷಾಚರಣೆ ಮಾಡುತ್ತಾ ವಾಸಿಸುತ್ತಾರೋ ಅವರು, ನಾಶರಹಿತನೂ, ಪೂರ್ಣ ಪುರುಷನೂ, ಹಾನಿ-ಲಾಭರಹಿತನೂ ಆದ ಪರಮಾತ್ಮನಿರುವಕಡೆ, ನಿರ್ಮಲರಾಗಿ ಪ್ರಾಣದ್ವಾರದಿಂದ ಅವನನ್ನು ಹೊಂದಿ ಆನಂದಿತರಾಗಿ ಹೋಗುತ್ತಾರೆ.

ಅಭ್ಯಾದಧಾಮಿ ಸಮಿಧಮಗ್ನೇ ವ್ರತಪತೇ ತ್ವಯಿ ।
ವ್ರತಂಚ ಶ್ರದ್ಧಾಂಚೋಪೈಮಿ ತಾಂಧೇ ತ್ವಾ ದೀಕ್ಷಿತೋ ಅಹಂ॥

[ಯಜು. ಅ. ೨೦, ಮಂ. ೨೪]

"ನಾನು ಅಗ್ನಿಯಲ್ಲಿ ಹೋಮಮಾಡಿ, ದೀಕ್ಷಿತನಾಗಿ ವ್ರತ-ಸತ್ಯಾಚರಣ-ಶ್ರದ್ಧೆಯನ್ನು ಸಾಧಿಸುವೆ" ಎಂದು ಬಯಸಿ, ವಾನಪ್ರಸ್ಥನಾಗುವುದು ಆ ಆಶ್ರಮಾಪೇಕ್ಷೆಗೆ ಉಚಿತವಾದುದು. ವಾನಪ್ರಸ್ಥಾಶ್ರಮಿಯು ವಿವಿಧ ತಪಶ್ಚರ್ಯೆ, ಸತ್ಸಂಗ, ಯೋಗಾಭ್ಯಾಸ, ಸುವಿಚಾರಗಳಿಂದ ಜ್ಞಾನವನ್ನೂ, ಪವಿತ್ರತೆಯನ್ನು ಸಂಪಾದಿಸಬೇಕು. ಆಮೇಲೆ ಸಂನ್ಯಾಸಾಶ್ರಮವನ್ನು ಸ್ವೀಕರಿಸಬೇಕೆಂಬ ಅಪೇಕ್ಷೆಯುಂಟಾದಾಗ ಹೆಂಡತಿಯನ್ನು ಮಗನ ಹತ್ತಿರ ಕಳುಹಿಸಬೇಕು. ಆ ಮೇಲೆ ಸಂನ್ಯಾಸವನ್ನು ಗ್ರಹಿಸಬೇಕು. ಇದು ಸಂಕ್ಷೇಪವಾಗಿ ವಾನಪ್ರಸ್ಥವಿಧಿಯಾಗಿರುತ್ತದೆ.

ಅಥ ಸಂನ್ಯಾಸವಿಧಿಃ

ವನೇಷು ಚ ವಿಹೃತ್ಯೈವಂ ತೃತೀಯಂ ಭಾಗಮಾಯುಷಃ ।
ಚತುರ್ಥಮಾಯುಷೋ ಭಾಗಂ ತ್ಯಕ್ತ್ವಾ ಸಂಗಾನ್ ಪರಿವ್ರಜೇತ್॥

[ಮನು. ೬-೩೩]

ಈ ರೀತಿಯಾಗಿ ಆಯುಷ್ಯದ ಮೂರನೇ ಭಾಗವನ್ನು ಅಂದರೆ ಐವತ್ತನೆಯ ವರ್ಷದಿಂದ ಎಪ್ಪತ್ತೈದನೆಯ ವರ್ಷದವರೆಗೆ ವಾನ ಪ್ರಸ್ಥಾಶ್ರಮಿಯಾಗಿದ್ದು ಆಯುಷ್ಯದ ನಾಲ್ಕನೆಯ ಭಾಗದಲ್ಲಿ ಸಂಗ ಗಳನ್ನು ತ್ಯಜಿಸಿ, ಪರಿವ್ರಾಜಕ ಅಂದರೆ ಸಂನ್ಯಾಸಿಯಾಗಬೇಕು.

ಪ್ರಶ್ನೆ:—ಗೃಹಸ್ಥ-ವಾನಪ್ರಸ್ಥಾಶ್ರಮಗಳನ್ನು ಪಾಲಿಸದೆ, ಸಂನ್ಯಾಸವನ್ನು ಸ್ವೀಕರಿಸುವವನಿಗೆ ಪಾಪವುಂಟಾಗುವುದೋ ಇಲ್ಲವೋ ?

ಉತ್ತರ:—ಪಾಪವುಂಟಾಗುವುದೂ ಉಂಟು ; ಆಗದಿರುವುದೂ ಉಂಟು.

ಪ್ರಶ್ನೆ:—ಈ ಎರಡು ಪ್ರಕಾರದ ಮಾತನ್ನೇಕೆ ಹೇಳುತ್ತೀರಿ ?

ಉತ್ತರ :—ಎರಡು ಪ್ರಕಾರದ್ದಲ್ಲ. ಯಾಕೆಂದರೆ ಬಾಲ್ಯಾವಸ್ಥೆಯಲ್ಲಿ ವಿರಕ್ತನಾಗಿ ಆ ಮೇಲೆ ವಿಷಯಾಸಕ್ತನಾಗುವವನು ಮಹಾ ಪಾಪಿ. ಆದಕ್ಕೆ ಸಿಕ್ಕದವನು ಮಹಾ ಪುಣ್ಯಾತ್ಮನಾದ ಸತ್ಪುರುಷನು.

ಯದಹರೇವ ವಿರಜೇತ್ತದಹರೇವ ಪ್ರವ್ರಜೇದ್ವನಾದ್ವಾ
ಗೃಹಾದ್ವಾ ಬ್ರಹ್ಮಚರ್ಯಾದೇವ ಪ್ರವ್ರಜೇತ್ ॥

ಇದು ಬ್ರಾಹ್ಮಣಗ್ರಂಥದ ವಚನ. ಯಾವ ದಿನ ವೈರಾಗ್ಯವುಂಟಾಗುವುದೋ ಅಂದೇ ಮನೆಯಿಂದಾಗಲಿ, ಅರಣ್ಯದಿಂದಾಗಲಿ ಸಂನ್ಯಾಸವನ್ನು ಸ್ವೀಕರಿಸಬೇಕು. ಮೊದಲು ಸಂನ್ಯಾಸದ ಪಕ್ಷಕ್ರಮವನ್ನು ಹೇಳಿದೆವು. ಮತ್ತು ಇದರಲ್ಲಿ ವಿಕಲ್ಪವನ್ನು ಹೇಳಿದೆವು. ಅಂದರೆ ವಾನಪ್ರಸ್ಥ ಸ್ವೀಕರಿಸಬೇಕಾಗಿಲ್ಲ, ಗೃಹಸ್ಥಾಶ್ರಮದಿಂದಲೇ ಸಂನ್ಯಾಸ ಗ್ರಹಿಸಬೇಕು. ಮೂರನೆಯ ಪಕ್ಷವಾವುದೆಂದರೆ ಪೂರ್ಣ ವಿದ್ವಾಂಸನೂ, ಜಿತೇಂದ್ರಿಯನೂ, ವಿಷಯಭೋಗ ಕಾಮರಹಿತನೂ,

ಪರೋಪಕಾರಾಭಿಲಾಷಿಯೂ ಆದ ಪುರುಷನು ಬ್ರಹ್ಮಚರ್ಯಾಶ್ರಮದಿಂದಲೇ ಸಂನ್ಯಾಸವನ್ನು ಸ್ವೀಕರಿಸಬಹುದು. ವೇದದಲ್ಲಿಯೂ ಸಹ 'ಯತಯೋ ಬ್ರಾಹ್ಮಣಸ್ಯ ವಿಜಾನತಃ' ಮೊದಲಾದ ಪದಗಳಿಂದ ಸಂನ್ಯಾಸವು ವಿಹಿತವಾಗಿದೆ. ಆದರೆ—

ನಾವಿರತೋ ದುಶ್ಚರಿತಾನ್ನಾಶಾಂತೋ ನಾಸಮಾಹಿತಃ।
ನಾ ಶಾಂತಮಾನಸೋ ವಾಪಿ ಪ್ರಜ್ಞಾನೇನೈನಮಾಪ್ನುಯಾತ್॥

[ಕಠ-ವಲ್ಲೀ. ೨, ಮಂ. ೨೪]

ಯಾವನು ದುರಾಚಾರದಿಂದ ದೂರನಾಗಿಲ್ಲವೋ, ಯಾವನಿಗೆ ಶಾಂತಿಯಿಲ್ಲವೋ, ಯಾವನ ಆತ್ಮವು ಯೋಗಿಯಲ್ಲವೋ ಮತ್ತು ಯಾವನ ಮನಸ್ಸು ಶಾಂತವಾಗಿಲ್ಲವೋ ಅವನು ಸಂನ್ಯಾಸವನ್ನು ತೆಗೆದುಕೊಂಡರೂ ಪ್ರಜ್ಞಾನದಿಂದ ಪರಮಾತ್ಮನನ್ನು ಹೊಂದಲಾರನು. ಆದುದರಿಂದ

ಯಚ್ಛೇದ್ವಾಙ್ಮನಸೀ ಪ್ರಾಜ್ಞಸ್ತದ್ಯಚ್ಛೇದ್ಜ್ಞಾನ ಆತ್ಮನಿ।
ಜ್ಞಾನಮಾತ್ಮನಿ ಮಹತಿ ನಿಯಚ್ಛೇತ್ತದ್ಯಚ್ಛೇಚ್ಛಾಂತ ಆತ್ಮನಿ॥

[ಕಠ-ವಲ್ಲೀ ೩-೧೩]

ಮೇಧಾವಿಯಾದ ಸಂನ್ಯಾಸಿಯು ವಾಣಿ ಮತ್ತು ಮನಸ್ಸನ್ನು ಅಧರ್ಮದಿಂದ ದೂರಮಾಡಿ, ಅವುಗಳನ್ನು ಜ್ಞಾನದಲ್ಲಿಯೂ, ಆತ್ಮನಲ್ಲಿಯೂ ಸೇರಿಸಬೇಕು. ಮತ್ತು ಆ ಜ್ಞಾನಮಯ ಆತ್ಮನನ್ನು ಪರಮಾತ್ಮನಲ್ಲಿ ಸೇರಿಸಬೇಕು. ಆ ವಿಜ್ಞಾನವನ್ನು ಶಾಂತನಾದ ತನ್ನ ಆತ್ಮನಲ್ಲಿ ಸ್ಥಿರಪಡಿಸಬೇಕು.

ಪರೀಕ್ಷ್ಯ ಲೋಕಾನ್ ಕರ್ಮಚಿತಾನ್ ಬ್ರಾಹ್ಮಣೋ ನಿರ್ವೇದ-
ಮಾಯಾನ್ನಾಸ್ತ್ಯಕೃತಃ ಕೃತೇನ।
ತದ್ವಿಜ್ಞಾನಾರ್ಥಂ ಸ ಗುರುಮೇವಾಭಿಗಚ್ಛೇತ್ ಸಮಿತ್ಪಾಣಿಃ
ಶ್ರೋತ್ರಿಯಂ ಬ್ರಹ್ಮನಿಷ್ಠಂ॥

[ಮುಂಡಕಃ ಖಂ. ೨. ಮಂತ್ರ ೧೨]

ಲೌಕಿಕ ಭೋಗಗಳೆಲ್ಲವೂ ಕರ್ಮಸಂಚಿತಗಳೆಂದು ತಿಳಿದು, ಬ್ರಾಹ್ಮಣನು ಅಂದರೆ ಸಂನ್ಯಾಸಿಯು ವೈರಾಗ್ಯವನ್ನು ಹೊದಂಬೇಕು. ಏಕೆಂದರೆ-ಅಕೃತನಾದ ಅಂದರೆ ಅಸೃಷ್ಟನಾದ ಪರಮಾತ್ಮನು, ಕೃತ ಅಂದರೆ ಕೇವಲ ಕರ್ಮಗಳಿಂದ ಲಭಿಸಲಾರನು. ಆದುದರಿಂದ ಸಮರ್ಪಿಸಲು ಏನನ್ನಾದರೂ ಕೈಯಲ್ಲಿ ಹಿಡಿದುಕೊಂಡು ವೇದವೇತ್ತನೂ, ಪರಮೇಶ್ವರನನ್ನು ಬಲ್ಲವನೂ ಆದ ಗುರುವಿನ ಬಳಿಗೆ, ವಿಜ್ಞಾನ ಸಂಪಾದನಕ್ಕಾಗಿ ಹೋಗಬೇಕು. ತನ್ನ ಎಲ್ಲ ಸಂದೇಹಗಳನ್ನೂ ನಿವಾರಿಸಿಕೊಳ್ಳಬೇಕು. ಆದರೆ ಸದಾ ಈ ಕೆಳಕಂಡವರ ಸಂಗವನ್ನು ತ್ಯಜಿಸಬೇಕು :—

ಅವಿದ್ಯಾಯಾಮಂತರೇ ವರ್ತಮಾನಾಃ ಸ್ವಯಂ ಧೀರಾಃ
ಪಂಡಿತಂಮನ್ಯಮಾನಾಃ ।
ಜಂಘನ್ಯಮಾನಾಃ ಪರಿಯಂತಿ ಮೂಢಾ ಅಂಧೇನೈವ
ನೀಯಮಾನಾ ಯಥಾಂಧಾಃ ॥೧॥
ಅವಿದ್ಯಾಯಾಂ ಬಹುಧಾವರ್ತಮಾನಾಃ ವಯಂ ಕೃತಾರ್ಥಾ
ಇತ್ಯಭಿಮನ್ಯಂತಿ ಬಾಲಾಃ ।
ಯತ್ಕರ್ಮಿಣೋ ನಪ್ರವೇದಯಂತಿ ರಾಗಾತ್ತೇನಾತುರಾಃ
ಕ್ಷೀಣಲೋಕಾಶ್ಚ್ಯವಂತೇ ॥೨॥
[ಮುಂಡಕ. ಖಂ. ೨-೮. ೯]

ಅವಿದ್ಯೆಯಲ್ಲಿ ಬಿದ್ದು ಆಡುತ್ತಾ, ತಮ್ಮನ್ನು ತಾವೇ ಧೀರರೆಂದೂ, ಪಂಡಿತರೆಂದೂ ತಿಳಿದುಕೊಂಡಿರುವ ನೀಚಗತಿಗೆ ಹೋಗುವ ಮೂಢರು. ಕುರುಡನನ್ನು ಹಿಂಬಾಲಿಸಿದ ಕುರುಡರು ದುರ್ಗತಿ ಹೊಂದುವಂತೆ ದುಃಖಭಾಗಿಗಳಾಗುತ್ತಾರೆ ॥೧॥ ಯಾರು ಬಹುಧಾ ಅವಿದ್ಯೆಯಲ್ಲಿ ರಮಿಸುವವರಾಗಿ, ಬಾಲಬುದ್ಧಿಗಳಾಗಿ, ಕೇವಲ ಕರ್ಮಕಾಂಡಿಗಳಾದ ಜನರು ರಾಗದಿಂದ ಮೋಹಿತರಾಗಿ ಯಾವುದನ್ನು ತಿಳಿಯಲೂ, ತಿಳಿಸಲೂ ಅಸಮರ್ಥರಾಗಿರುತ್ತಾರೋ, ಆ ವಿಷಯದಲ್ಲಿ ತಾವು ಕೃತಾರ್ಥರೆಂದು ತಿಳಿಯುತ್ತಾರೋ, ಅವರು ಆತುರರಾಗಿ ಜನನ-ಮರಣವೆಂಬ ದುಃಖವಲ್ಲಿ ಸಿಕ್ಕಿಕೊಂಡಿರುತ್ತಾರೆ ॥೨॥ ಆದುದರಿಂದ-

ವೇದಾಂತವಿಜ್ಞಾನಸುನಿಶ್ಚಿತಾರ್ಥಾಃ ಸಂನ್ಯಾಸಯೋಗಾದ್ಯತಯಃ ಶುದ್ಧಸತ್ತ್ವಾಃ ।
ತೇ ಬ್ರಹ್ಮಲೋಕೇಷು ಪರಾಂತಕಾಲೇ ಪರಾಮೃತಾಃ ಪರಿಮುಚ್ಯಂತಿ ಸರ್ವೇ ॥

ಮುಂಡಕ. ಖಂ. ೨. ಮಂ. ೬]

ವೇದಾಂತ ಅಂದರೆ ಪರಮಾತ್ಮಬೋಧಕವಾದ ವೇದಮಂತ್ರಗಳ ಅರ್ಥಜ್ಞಾನವನ್ನು ಪಡೆದು, ಆಚಾರದಲ್ಲಿ ಚೆನ್ನಾಗಿ ನಿಷ್ಠರಾಗಿ ಸಂನ್ಯಾಸಯೋಗದಿಂದ ಶುದ್ಧಾಂತಃಕರಣರಾದ ಸಂನ್ಯಾಸಿಗಳು ಪರಮಾತ್ಮನಲ್ಲಿ ಮುಕ್ತಿಸುಖವನ್ನು ಹೊಂದಿ, ಅನುಭವಿಸಿ, ಆಮೇಲೆ ಮುಕ್ತಿಯಲ್ಲಿ ಸುಖದ ಅವಧಿಯು ಮುಗಿಯುತ್ತಲೇ, ಅಲ್ಲಿಂದ ಹೊರಟು ಸಂಸಾರಕ್ಕೆ ಬರುವರು. ಮೋಕ್ಷವಿಲ್ಲದೆ ದುಃಖವು ನಾಶವಾಗಲಾರದು. ಏಕೆಂದರೆ—

ನ ವೈ ಸಶರೀರಸ್ಯ ಸತಃ ಪ್ರಿಯಾಪ್ರಿಯಯೋರಪಹತಿರಸ್ತ್ಯ ।
ಶರೀರಂ ವಾವ ಸಂತಂ ನ ಪ್ರಿಯಾಪ್ರಿಯೇ ಸ್ಪೃಶತಃ ॥

[ಛಾಂದೋಗ್ಯ ಪ್ರಪಾಠಕ ೮. ಖಂ. ೧೨]

ದೇಹಧಾರಿಯಾದವನು ಸುಖದುಃಖಗಳ ಪ್ರಾಪ್ತಿಯಿಂದ ಎಂದೂ ದೂರವಿರಲಾರನು. ಮತ್ತು ಶರೀರರಹಿತನಾದ ಜೀವಾತ್ಮನು ಮೋಕ್ಷದಲ್ಲಿ ಸರ್ವವ್ಯಾಪಕನಾದ ಪರಮಾತ್ಮನೊಡನೆ ಶುದ್ಧನಾಗಿರುವುದರಿಂದ ಯಾವ ಸಾಂಸಾರಿಕಸುಖದುಃಖಗಳೂ ಉಂಟಾಗಲಾರವು. ಆದುದರಿಂದ

ಪುತ್ರೈಷಣಾಯಾಶ್ಚ ವಿತ್ತೈಷಣಾಯಾಶ್ಚ ಲೋಕೈಷಣಾ ।
ಯಾಶ್ಚ ವ್ಯುತ್ಥಾಯಾಥ ಭಿಕ್ಷಾಚರ್ಯಂ ಚರಂತಿ ॥

[ಶತಪಥ । ಕಾಂ. ೧೪. ಪ್ರ. ೫. ಬ್ರಾ. ೨. ಕಂ. ೧]

ಸಂನ್ಯಾಸಿಗಳು ಲೋಕದಲ್ಲಿ ಪ್ರತಿಷ್ಠೆ ಅಥವಾ ಲಾಭ, ದ್ರವ್ಯ ಭೋಗ ಅಥವಾ ಮಾನ್ಯ, ಪುತ್ರ ಮತ್ತು ಮಿತ್ರಾದಿಗಳ ಮೋಹದಿಂದ

ದೂರವಾಗಿದ್ದು, ಭಿಕ್ಷಾಟನೆಮಾಡುತ್ತ ಹಗಲಿರಳೂ ಮೋಕ್ಷಸಾಧನೆಯಲ್ಲಿ ತತ್ಪರರಾಗಿರುತ್ತಾರೆ.

ಪ್ರಾಜಾಪತ್ಯಾ ನಿರೂಪ್ಯೇಷ್ಟಿಂ ತಸ್ಯಾಂ ಸರ್ವವೇದಸಂ
ಹುತ್ವಾ ಬ್ರಾಹ್ಮಣಃ ಪ್ರವ್ರಜೇತ್. ॥ [ಯಜುರ್ವೇದ ಬ್ರಾಹ್ಮಣ]

ಪ್ರಾಜಾಪತ್ಯಾಂ ನಿರೂಪ್ಯೇಷ್ಟಿಂ ಸರ್ವವೇದಸದಕ್ಷಿಣಾಂ ।
ಆತ್ಮನ್ಯಗ್ನೀನ್ ಸಮಾರೋಪ್ಯ ಬ್ರಾಹ್ಮಣಃ ಪ್ರವ್ರಜೇತ್
ಗೃಹಾತ್ ॥೨॥
ಯೋ ದತ್ತ್ವಾ ಸರ್ವಭೂತೇಭ್ಯಃ ಪ್ರವ್ರಜತ್ಯಭಯಂ ಗೃಹಾತ್ ।
ತಸ್ಯ ತೇಜೋಮಯಾ ಲೋಕಾ ಭವಂತಿ ಬ್ರಹ್ಮವಾದಿನಃ ॥೩॥
[ಮನು. ೬, ೩೮-೩೯]

ಪ್ರಜಾಪತಿ ಅಂದರೆ ಪರಮೇಶ್ವರನ ಪ್ರಾಪ್ತಿಗಾಗಿ ಇಷ್ಟಿ ಅಂದರೆ ಯಜ್ಞಮಾಡಿ, ಆದರಲ್ಲಿ ಶಿಖಾ, ಯಜ್ಞೋಪವೀತಾದಿ ಚಿಹ್ನೆಗಳನ್ನು ಪರಿತ್ಯಜಿಸಿ, ಆಹವನೀಯಾದಿ ಪಂಚಾಗ್ನಿಗಳನ್ನು ಪ್ರಾಣ, ಅಪಾನ, ವ್ಯಾನ, ಉದಾನ ಮತ್ತು ಸಮಾನಗಳೆಂಬ ಪಂಚಪ್ರಾಣಗಳಲ್ಲಿ ಆರೋಪಿಸಿ, ಬ್ರಾಹ್ಮಣ ಅಂದರೆ ಬ್ರಹ್ಮವೇತ್ತನು ಮನೆಯಿಂದ ಹೊರಟು ಸಂನ್ಯಾಸಿಯಾಗಬೇಕು. ॥೨॥ ಎಲ್ಲ ಭೂತಗಳು ಅಂದರೆ ಪ್ರಾಣಿಮಾತ್ರಕ್ಕೆ ಅಭಯಪ್ರದಾನಮಾಡಿ, ಮನೆಯಿಂದ ಹೊರಟು ಸಂನ್ಯಾಸಿಯಾಗುವ ಬ್ರಹ್ಮವಾದಿ ಅಂದರೆ ಪರಮೇಶ್ವರ ಪ್ರಕಾಶಿತವಾದ ವೇದೋಕ್ತ ವಿದ್ಯಾವಿಧಧರ್ಮಗಳನ್ನು ಪದೇಶಿಸುವ ಸಂನ್ಯಾಸಿಗೆ ಪ್ರಕಾಶಮಯವಾದ ಅಂದರೆ ಮುಕ್ತಿಯ ಆನಂದಸ್ವರೂಪವಾದ ಲೋಕವು ಲಭಿಸುತ್ತದೆ. ॥೩॥

ಪ್ರಶ್ನೆ:—ಸಂನ್ಯಾಸಿಯ ಧರ್ಮವೇನು?

ಉತ್ತರ:—ಪಕ್ಷಪಾತವಿಲ್ಲದ ನ್ಯಾಯಾಚರಣೆ, ಸತ್ಯಗ್ರಹಣ, ಅಸತ್ಯಪರಿತ್ಯಾಗ, ವೇದೋಕ್ತವಾದ ಈಶ್ವರಾಜ್ಞೆಗಳ ಪರಿಪಾಲನೆ, ಪರೋಪಕಾರ, ಸತ್ಯಭಾಷಣ ಮೊದಲಾದ ಲಕ್ಷಣಗಳುಳ್ಳ ಧರ್ಮವೇನೋ ಎಲ್ಲಾ ಆಶ್ರಮಸ್ಥರಿಗೂ ಅಂದರೆ ಮನುಷ್ಯಮಾತ್ರದವರಿಗೆ

ಸಮಾನವಾಗಿರುತ್ತದೆ. ಆದರೆ, ಸಂನ್ಯಾಸಿಗಳ ವಿಶೇಷ ಧರ್ಮ ಯಾವು ದೆಂದರೆ—

ದೃಷ್ಟಿಪೂತಂ ನ್ಯಸೇತ್ಪಾದಂ ವಸ್ತ್ರಪೂತಂ ಜಲಂ ಪಿಬೇತ್ ।
ಸತ್ಯಪೂತಾಂ ವದೇದ್ವಾಚಂ ಮನಃಪೂತಂ ಸಮಾಚರೇತ್ ॥೧॥

ಕ್ರುಧ್ಯಂತಂ ನಪ್ರತಿಕ್ರುಧ್ಯೇದಾಕ್ರುಷ್ಟಃ ಕುಶಲಂ ವದೇತ್।
ಸಪ್ತದ್ವಾರಾವಕೀರ್ಣಾಂಚ ನ ವಾಚಮನೃತಾಂ ವದೇತ್ ॥೨॥

ಅಧ್ಯಾತ್ಮರತಿರಾಸೀನೋ ನಿರಪೇಕ್ಷೋ ನಿರಾಮಿಷಃ ।
ಆತ್ಮನೈವ ಸಹಾಯೇನ ಸುಖಾರ್ಥೀ ವಿಚರೇದಿಹ ॥೩॥

ಕ್ಲೃಪ್ತಕೇಶನಖಶ್ಮಶ್ರುಃ ಪಾತ್ರೀ ದಂಡೀ ಕುಸುಂಭವಾನ್ ।
ವಿಚರೇನ್ನಿಯತೋ ನಿತ್ಯಂ ಸರ್ವಭೂತಾನ್ಯಪೀಡಯನ್ ॥೪॥

ಇಂದ್ರಿಯಾಣಾಂ ನಿರೋಧೇನ ರಾಗದ್ವೇಷಕ್ಷಯೇಣಚ ।
ಅಹಿಂಸಯಾಚ ಭೂತಾನಾಮಮೃತ ತ್ವಾಯ ಕಲ್ಪತೇ ॥೫॥

ದೂಷಿತೋಽಪಿ ಚರೇದ್ಧರ್ಮಂ ಯತ್ರ ತತ್ರಾಶ್ರಮೇ ರತಃ ।
ಸಮಸ್ಸರ್ವೇಷು ಭೂತೇಷು ನ ಲಿಂಗಂ ಧರ್ಮಕಾರಣಂ ॥೬॥

ಫಲಂ ಕತಕವೃಕ್ಷಸ್ಯ ಯದ್ಯಪ್ಯಂಬುಪ್ರಸಾದಕಂ ।
ನ ನಾಮಗ್ರಹಣಾದೇವ ತಸ್ಯ ವಾರಿ ಪ್ರಸೀದತಿ ॥೭॥

ಪ್ರಾಣಾಯಾಮಾ ಬ್ರಾಹ್ಮಣಸ್ಯ ತ್ರಯೋಪಿ ವಿಧಿವತ್ಕೃತಾಃ ।
ವ್ಯಾಹೃತಿಪ್ರಣವೈರ್ಯುಕ್ತಾ ವಿಜ್ಞೇಯಂ ಪರಮಂ ತಪಃ ॥೮॥

ದಹ್ಯಂತೇ ಧ್ಮಾಯಮಾನಾನಾಂ ಧಾತೂನಾಂ ಹಿ ಯಥಾಮಲಾಃ
ತಥೇಂದ್ರಿಯಾಣಾಂ ದಹ್ಯಂತೇ ದೋಷಾಃ ಪ್ರಾಣಸ್ಯ ನಿಗ್ರಹಾತ್ ॥೯॥

ಪ್ರಾಣಾಯಾಮೈರ್ದಹೇದ್ದೋಷಾನ್ ಧಾರಣಾಭಿಶ್ಚ ಕಿಲ್ಬಿಷಂ ।
ಪ್ರತ್ಯಾಹಾರೇಣ ಸಂಸರ್ಗಾನ್ ಧ್ಯಾನೇನಾನೀಶ್ವರಾ ಗುಣಾ॥

ಉಚ್ಚಾವಚೇಷು ಭೂತೇಷು ದುರ್ಜ್ಞೇಯಾಮಕೃತಾತ್ಮಭಿಃ ।
ಧ್ಯಾನಯೋಗೇನ ಸಂಪಶ್ಯೇದ್ಗತಿಮಸ್ಯಾಂತರಾತ್ಮನಃ ॥೧೧॥

ಅಹಿಂಸಯೇಂದ್ರಿಯಾ ಸಂಗೈರ್ವ್ಯದಿಕೈಶ್ಚೈವ ಕರ್ಮಭಿಃ ।
ತಪಸಶ್ಚರಣೈಶ್ಚೋಗ್ರೈಃ ಸಾಧಯಂತೀಹ ತತ್ಪದಂ ॥೧೨॥

ಯದಾ ಭಾವೇನ ಭವತಿ ಸರ್ವಭಾವೇಷು ನಿಸ್ಪೃಹಃ ।
ತದಾ ಸುಖಮವಾಪ್ನೋತಿ ಪ್ರೇತ್ಯ ಚೇಹ ಚ ಶಾಶ್ವತಂ ॥೧೩॥

ಚತುರ್ಭಿರಪಿ ಚೈವೈತೈರ್ನಿತ್ಯ ಮಾಶ್ರಮಭಿ ರ್ದ್ವಿಜೈಃ ।
ದಶಲಕ್ಷಣಕೋ ಧರ್ಮ ಸ್ಸೇವಿತವ್ಯಃ ಪ್ರಯತ್ನತಃ ॥೧೪॥

ಧೃತಿಃ ಕ್ಷಮಾ ದಮೋಸ್ತೇಯಂ ಶೌಚಮಿಂದ್ರಿಯ ನಿಗ್ರಹಃ ।
ಧೀರ್ವಿದ್ಯಾ ಸತ್ಯಮಕ್ರೋಧೋ ದಶಕಂ ಧರ್ಮಲಕ್ಷಣಂ॥೧೫॥

ಅನೇನ ವಿಧಿನಾ ಸರ್ವಾಂಸ್ತ್ಯಕ್ತ್ವಾ ಸಂಗಾನ್ ಶನೈಃ ಶನೈಃ ।
ಸರ್ವದ್ವಂದ್ವವಿನಿರ್ಮುಕ್ತೋ ಬ್ರಹ್ಮಣ್ಯೇವಾವತಿಷ್ಠತೇ ॥೧೬॥

[ಮನು. ೬। ೪೬, ೪೮, ೪೯, ೫೨, ೬೦, ೬೬, ೬೭. ೭೦-೭೩, ೭೫, ೮೦, ೮೧, ೯೦, ೯೧, ೯೨]

ಸಂನ್ಯಾಸಿಯು ಹಾದಿಯಲ್ಲಿ ನಡೆಯುವಾಗ ಅಲ್ಲಿ ಇಲ್ಲಿ ನೋಡುತ್ತಿರದೆ ಯಾವಾಗಲೂ ನೆಲದಮೇಲೆಯೇ ದೃಷ್ಟಿಯಿಟ್ಟು ನಡೆಯಬೇಕು, ಸದಾ ವಸ್ತ್ರದಿಂದ ಶೋಧಿಸಿದ ನೀರನ್ನು ಕುಡಿಯಬೇಕು. ನಿರಂತರವೂ ಸತ್ಯವನ್ನೇ ಹೇಳಬೇಕು. ಯಾವಾಗಲೂ ಮನಸ್ಸಿನಲ್ಲಿಯೇ ವಿಚಾರಮಾಡಿ, ಸತ್ಯವನ್ನು ಗ್ರಹಿಸಿ ಅಸತ್ಯವನ್ನು ವರ್ಜಿಸಬೇಕು.॥೧॥ಉಪದೇಶಿಸುವಾಗ ಅಥವಾ ಸಂವಾದ ಮೊದಲಾದುವುಗಳಲ್ಲಿ ಯಾರಾದರೂ ಸಂನ್ಯಾಸಿಯ ಮೇಲೆ ಕೋಪಿಸಿಕೊಂಡರೆ ಅಥವಾ ನಿಂದಿಸಿದರೆ, ಸಂನ್ಯಾಸಿಯು ತಾನು ಕೋಪಿಸಿಕೊಳ್ಳದೆ, ಸದಾ ಅವನ ಹಿತಕ್ಕಾಗಿ ಉಪದೇಶವನ್ನು ಮಾಡುತ್ತಿರಬೇಕು. ಮುಖದ ಒಂದು ಛಿದ್ರ, ಮೂಗಿನವೆರಡು, ಎರಡು ಕಣ್ಣಿನವು ಮತ್ತು ಎರಡು ಕಿವಿಗಳ ಛಿದ್ರಗಳಲ್ಲಿ ಹರಡಿದ ವಾಣಿಯನ್ನು ಯಾವ ಕಾರಣದಿಂದಲೂ ಅನೃತರೂಪವಾಗಿ ಬಳಸಬಾರದು. ॥೨॥ ಸಂನ್ಯಾಸಿಯು ತನ್ನ ಆತ್ಮನಲ್ಲಿಯೂ,

ಪರಮಾತ್ಮನಲ್ಲಿಯೂ ಸ್ಥಿರಬುದ್ಧಿಯುಳ್ಳವನಾಗಿಯೂ, ನಿಸ್ಪೃಹನಾಗಿಯೂ, ಮದ್ಯ-ಮಾಂಸಾದಿ ದುಷ್ಟಪದಾರ್ಥಗಳನ್ನು ತ್ಯಜಿಸಿ, ಆತ್ಮಸಹಾಯದಿಂದಲೇ ಸುಖಾರ್ಥಿಯಾಗಿ ಈ ಲೋಕದಲ್ಲಿ ಧರ್ಮ ಮತ್ತು ವಿದ್ಯೆಯ ಏಳಿಗೆಗಾಗಿ ಉಪದೇಶಮಾಡಲು ಸಂಚರಿಸುತ್ತಿರಬೇಕು. ॥೩॥ ಕೂದಲು, ಉಗುರು, ಗಡ್ಡ ಮತ್ತು ಮೀಸೆಗಳನ್ನು ಮುಂಡನಮಾಡಿಸಿ, ಪರಿಶುದ್ಧವಾದ ಪಾತ್ರೆಯನ್ನೂ, ದಂಡವನ್ನೂ ಧರಿಸಿ, ಕಾವಿಯನ್ನುಟ್ಟು, ನಿಶ್ಚಿತಾತ್ಮನಾಗಿ, ಯಾವ ಪ್ರಾಣಿಗೂ ಹಿಂಸೆಕೊಡದೆ, ಎಲ್ಲೆಡೆಯೂ ಸಂಚರಿಸಬೇಕು. ॥೪॥ ಇಂದ್ರಿಯಗಳನ್ನು ಅಧರ್ಮಾಚರಣೆಯ ಕಡೆಗೆ ಬಿಡದೆ, ರಾಗ-ದ್ವೇಷರಹಿತನಾಗಿ, ಸರ್ವಪ್ರಾಣಿಗಳಲ್ಲೂ ನಿರ್ವೈರನಾಗಿ ವರ್ತಿಸಿ, ಮೋಕ್ಷಕ್ಕೆ ಬೇಕಾದ ಸಾಮರ್ಥ್ಯವನ್ನು ಬೆಳಸಬೇಕು. ॥೫॥ ಪ್ರಪಂಚದಲ್ಲಿ ಯಾರಾದರೂ ದೂಷಿಸಲಿ, ಅಥವಾ ಹೊಗಳಲಿ, ಯಾವುದೇ ಆಶ್ರಮದಲ್ಲಿ ವರ್ತಿಸಿಸುವವನಾದರೂ, ಅಂದರೆ ಸಂನ್ಯಾಸಿಯು ಎಲ್ಲ ಪ್ರಾಣಿಗಳಲ್ಲೂ ಪಕ್ಷಪಾತರಹಿತನಾಗಿ, ಸ್ವತಃ ಧರ್ಮಾತ್ಮನಾಗಿದ್ದು, ಅನ್ಯರನ್ನು ಧರ್ಮಾತ್ಮರನ್ನಾಗಿ ಮಾಡಲು ಯತ್ನಿಸುತ್ತಿರಬೇಕು. ದಂಡ, ಕಮಂಡಲು, ಕಾವಿಬಟ್ಟೆ ಮೊದಲಾದ ಚಿಹ್ನೆಗಳ ಧಾರಣೆ ಧರ್ಮದ ಕಾರಣವಲ್ಲ; ಆದರೆ ಸತ್ಯೋಪದೇಶ ಮತ್ತು ವಿದ್ಯಾದಾನದಿಂದ ಮನುಷ್ಯ ಮೊದಲಾದ ಸರ್ವ ಪ್ರಾಣಿಗಳ ಉನ್ನತಿಯನ್ನು ಸಾಧಿಸುವುದೇ ಸಂನ್ಯಾಸಿಯ ಮುಖ್ಯ ಕರ್ಮವೆಂದು ತನ್ನ ಮನಸ್ಸಿನಲ್ಲಿ ನಿಶ್ಚಯಹೊಂದಿರಬೇಕು. ॥೬॥ ಏಕೆಂದರೆ—ಚೆಲ್ಲಿದ ಬೀಜವನ್ನು ಪುಡಿಮಾಡಿ ಅಶುದ್ಧವಾಗಿರುವ ನೀರಿನಲ್ಲಿ ಹಾಕಿದರೆ, ಆ ನೀರು ಶುದ್ಧವಾಗುತ್ತದೆ. ಹಾಗೆ ಮಾಡದೆ, ಅದರ ಹೆಸರನ್ನು ಬಾಯಿಂದ ಉಚ್ಚರಿಸಿದ ಅಥವಾ ಕೇಳಿದಮಾತ್ರಕ್ಕೇ ನೀರು ಪರಿಶುದ್ಧವಾಗುವುದಿಲ್ಲ. ॥೭॥ ಆದುದರಿಂದ ಬ್ರಾಹ್ಮಣ ಅಂದರೆ ಬ್ರಹ್ಮವೇತ್ತನಾದ ಸಂನ್ಯಾಸಿಯು ಓಂಕಾರಪೂರ್ವಕವಾದ ಸಪ್ತವ್ಯಾಹೃತಿಗಳಿಂದ ವಿಧಿವತ್ತಾಗಿ ಶಕ್ಯವಿದ್ದಷ್ಟು ಸಲ ಪ್ರಾಣಾಯಾಮವನ್ನು ಮಾಡಬೇಕು, ಆದರೆ ಮೂರಕ್ಕಿಂತ ಕಡಿಮೆ ಪ್ರಾಣಾಯಾಮವನ್ನು ಎಂದಿಗೂ ಮಾಡಬಾರದು, ಇದೇ ಸಂನ್ಯಾಸಿಯ ಪರಮ ತಪಸ್ಸು. ॥೮॥ ಏಕೆಂದರೆ—ಬೆಂಕಿಯಲ್ಲಿ ಕರಗಿಸಿ ಪುಟಹಾಕುವುದರಿಂದ, ಲೋಹಗಳಲ್ಲಿರುವ ಕೊಳೆಯೆಲ್ಲಾ

ಹೋಗಿ ಪರಿಶುದ್ಧವಾಗುವಂತೆ, ಪ್ರಾಣಗಳ ನಿಗ್ರಹದಿಂದ ಮನಸ್ಸು ಮೊದಲಾದ ಇಂದ್ರಿಯಗಳ ದೋಷವು ಭಸ್ಮೀಭೂತವಾಗಿಹೋಗುತ್ತವೆ. ||೯|| ಆದ್ದರಿಂದ ಸಂನ್ಯಾಸಿಗಳು ನಿತ್ಯವೂ ಪ್ರಾಣಾಯಾಮದಿಂದ ಜೀವಾತ್ಮ, ಅಂತಃಕರಣ ಮತ್ತು ಇಂದ್ರಿಯಗಳ ದೋಷಗಳನ್ನೂ, ಧಾರಣೆಯಿಂದ ಪಾಪವನ್ನೂ, ಪ್ರತ್ಯಾಹಾರದಿಂದ ಸಂಗದೋಷವನ್ನೂ, ಧ್ಯಾನದಿಂದ ಅನೀಶ್ವರಗುಣ—ಅಂದರೆ, ಹರ್ಷ, ಶೋಕ, ಅವಿದ್ಯೆ ಮೊದಲಾದ ಜೀವನ ದೋಷಗಳನ್ನು ಭಸ್ಮೀಭೂತಮಾಡಬೇಕು.||೧೦|| ಅಯೋಗಿಗಳಿಂದಲೂ, ಅವಿದ್ವಾಂಸರಿಂದಲೂ, ಕಷ್ಟದಿಂದ ತಿಳಿಯಲರ್ಹವಾದ ಚಿಕ್ಕ ಹಾಗೂ ದೊಡ್ಡ ವಸ್ತುಗಳಲ್ಲಿನ ಪರಮಾತ್ಮನ ವ್ಯಾಪ್ತಿಯನ್ನೂ, ತನ್ನ ಆತ್ಮನ ಹಾಗೂ ಅಂತರ್ಯಾಮಿ ಪರಮಾತ್ಮನ ಗತಿಯನ್ನೂ ಈ ಧ್ಯಾನಯೋಗದಿಂದಲೇ ನೋಡಬೇಕು. ||೧೧|| ಸಂನ್ಯಾಸಿಗಳು ಪ್ರಾಣಿಮಾತ್ರಕ್ಕೆ ನಿರ್ವೈರರಾಗಿ, ಇಂದ್ರಿಯ ನಿಷಯಗಳ ತ್ಯಾಗ ಹಾಗೂ ವೇದೋಕ್ತ ಕರ್ಮ ಮತ್ತು ಅತ್ಯುಗ್ರತಪಶ್ಚರಣದಿಂದ ಈ ಲೋಕದಲ್ಲಿ ಮೋಕ್ಷವನ್ನು ಹೊಂದಲೂ, ಹೊಂದಿಸಲೂ ಬಲ್ಲರು. ಬೇರೆಯವರಿಂದ ಸಾಧ್ಯವಿಲ್ಲ. ||೧೨|| ಎಲ್ಲಾ ಭಾವ ಅಂದರೆ ವಸ್ತುಗಳಲ್ಲಿಯೂ ನಿಸ್ಪೃಹನಾಗಿ, ಎಲ್ಲಾ ಅಂತರಂಗ ವ್ಯವಹಾರಗಳಲ್ಲಿಯೂ ಭಾವದಿಂದ ಪವಿತ್ರನಾದಾಗಲೇ ಸಂನ್ಯಾಸಿಯು ಈ ದೇಹದಲ್ಲಿ ಮತ್ತು ಮರಣಾಂತರ ನಿರಂತರ ಸುಖವನ್ನು ಹೊಂದುತ್ತಾನೆ. ||೧೩|| ಆದ್ದರಿಂದ ಬ್ರಹ್ಮಚಾರಿ, ಗೃಹಸ್ಥ, ವಾನಪ್ರಸ್ಥ ಮತ್ತು ಸಂನ್ಯಾಸಿಗಳು ಎಲ್ಲರೂ ಈ ಕೆಳಗೆ ಬರೆದಿರುವ ಹತ್ತು ಲಕ್ಷಣಗಳುಳ್ಳ ಧರ್ಮವನ್ನು ಪ್ರಯತ್ನಗಳಿಂದ ಆಚರಿಸಬೇಕು. ||೧೪||

(೧) ಧೃತಿ – ಯಾವಾಗಲೂ ಧೈರ್ಯದಿಂದಿರುವುದು. (೨) ಕ್ಷಮಾ—ನಿಂದಾಸ್ತುತಿ, ಮಾನಾಪಮಾನ, ಹಾನಿ-ಲಾಭ ಮೊದಲಾದ ಸುಖ-ದುಃಖಗಳಲ್ಲಿಯೂ ಸಹನಶೀಲನಾಗಿರುವುದು, (೩) ದಮ-ಮನವನ್ನು ಸದಾ ಧರ್ಮದಲ್ಲಿ ಪ್ರವರ್ತಿಸಿ, ಅಧರ್ಮದಿಂದ ದೂರವಿರುವುದು ಅಂದರೆ ಅಧರ್ಮದ ಇಚ್ಛೆಯೂ ಹುಟ್ಟಬಾರದು, (೪) ಅಸ್ತೇಯ-ಕದಿಯದಿರುವುದು ಅಂದರೆ ಆಜ್ಞೆಯಿಲ್ಲದೆಯಾಗಲಿ, ಕಪಟದಿಂದಾಗಲಿ, ವಿಶ್ವಾಸಘಾತದಿಂದಾಗಲಿ, ಯಾವುದಾದರೂ ವ್ಯವಹಾರದಿಂದಾಗಲಿ

ವೇದವಿರುದ್ಧವಾದ ಉಪದೇಶಗಳಿಂದಾಗಲಿ, ಪರಪದಾರ್ಥಗಳನ್ನು ಗ್ರಹಿಸುವುದು ಕಳ್ಳತನ, ಅದನ್ನು ವರ್ಜಿಸುವುದು ಸಿರಿತನ (೫) ಶೌಚ—ರಾಗ-ದ್ವೇಷ ಪಕ್ಷಪಾತಗಳನ್ನು ಬಿಟ್ಟು ಒಳಗಿನ ಪವಿತ್ರತೆಯನ್ನೂ, ನೀರು, ಮಣ್ಣು, ಮಾರ್ಜನಾದಿಗಳಿಂದ ಹೊರಗಿನ ಪವಿತ್ರತೆಯನ್ನೂ ಕಾಪಾಡಿಕೊಳ್ಳುವುದು (೬) ಇಂದ್ರಿಯನಿಗ್ರಹ-ಅಧರ್ಮಾಚರಣದಿಂದ ದೂರವಿಟ್ಟು ಇಂದ್ರಿಯಗಳನ್ನು ಧರ್ಮದಲ್ಲಿಯೇ ಸದಾ ನಡೆಸುವುದು. (೭) ಧೀ-ಬುದ್ಧಿಯನ್ನು ಹಾಳುಮಾಡುವ ಮಾದಕದ್ರವ್ಯಗಳ ಸೇವನೆಯನ್ನೂ ದುಷ್ಟರ ಸಂಗವನ್ನೂ, ಆಲಸ್ಯವನ್ನೂ, ಪ್ರಮಾದಾದಿಗಳನ್ನೂ ಬಿಟ್ಟು, ಉತ್ತಮ ಪದಾರ್ಥಗಳ ಸೇವನೆಯಿಂದಲೂ, ಸತ್ಪುರುಷರ ಸೇವನೆಯಿಂದಲೂ, ಯೋಗಾಭ್ಯಾಸದಿಂದಲೂ ಬುದ್ಧಿಯನ್ನು ಹೆಚ್ಚಿಸಿಕೊಳ್ಳುವುದು. (೮) ವಿದ್ಯಾ—ಪೃಥಿವಿಯಿಂದ ಪರಮಾತ್ಮನವರೆಗಿನ ಯಥಾರ್ಥವಾದ ಜ್ಞಾನ ಮತ್ತು ಅವುಗಳಿಂದ ಯೋಗ್ಯಪ್ರಯೋಜನವನ್ನು ಹೊಂದುವುದು. ಮತ್ತು ಸತ್ಯ ಅಂದರೆ ಆತ್ಮದಲ್ಲಿದ್ದಂತೆ ಮನಸ್ಸಿನಲ್ಲಿ, ಮನಸ್ಸಿನಲ್ಲಿದ್ದಂತೆ ಬಾಯಿಂದ ಹೇಳುವುದು, ಬಾಯಿಯಲ್ಲಿರುವಂತೆ ಕಾರ್ಯದಲ್ಲಿ ನಡೆಯುವುದು ವಿದ್ಯೆ, ಇದಕ್ಕೆ ವಿಪರೀತವಾದುದು ಅವಿದ್ಯೆ. (೯) ಸತ್ಯ-ಯಾವ ಪದಾರ್ಥವು ಹೇಗಿದೆಯೋ ಅದನ್ನು ಹಾಗೆಯೇ ತಿಳಿಯುವುದು, ಹಾಗೆಯೇ ಹೇಳುವುದು ಮತ್ತು ಹಾಗೆಯೇ ಮಾಡುವುದು. (೧೦) ಅಕ್ರೋಧ—ಕ್ರೋಧಾದಿ ದೋಷಗಳನ್ನು ಬಿಟ್ಟು ಶಾಂತಿ ಮೊದಲಾದ ಗುಣಗಳನ್ನು ಗ್ರಹಿಸುವುದು ಧರ್ಮದ ಲಕ್ಷಣವು. ಈ ದಶಲಕ್ಷಣಯುಕ್ತವಾದ ಪಕ್ಷಪಾತರಹಿತ ನ್ಯಾಯಾಚರಣ ಧರ್ಮದ ಸೇವೆಯನ್ನು ನಾಲ್ಕು ಆಶ್ರಮಗಳವರೂ ಮಾಡಬೇಕು. ಈ ವೇದೋಕ್ತ ಧರ್ಮದಲ್ಲಿ ಸ್ವತಃ ನಡೆಯುವುದು ಮತ್ತು ಅನ್ಯರನ್ನು ತಿಳಿವಳಿಕೆ ಹೇಳಿ ನಡೆಸುವುದು ಸಂನ್ಯಾಸಿಗಳ ವಿಶೇಷ ಧರ್ಮ. (೧೫) ಇದೇ ರೀತಿ ಮೆಲ್ಲಮೆಲ್ಲನೆ ಎಲ್ಲಾ ಸಂಗದೋಷಗಳನ್ನೂ ಬಿಟ್ಟು ಹರ್ಷ-ಶೋಕಾದಿ ಎಲ್ಲಾ ದ್ವಂದ್ವಗಳಿಂದಲೂ ಮುಕ್ತನಾಗಿ, ಸಂನ್ಯಾಸಿಯು ಬ್ರಹ್ಮನಲ್ಲಿಯೇ ಸ್ಥಿತನಾಗುತ್ತಾನೆ. ಎಲ್ಲಾ ಗೃಹಸ್ಥಾದಿ ಆಶ್ರಮಗಳನ್ನೂ ಎಲ್ಲ ವ್ಯವಹಾರಗಳ ಸತ್ಯವಾದ ನಿಶ್ಚಯವನ್ನೂ ಮಾಡಿಸಿ, ಅಧರ್ಮ ವ್ಯವಹಾರಗಳಿಂದ ಬಿಡಿಸಿ, ಎಲ್ಲಾ ಸಂಶಯ

ಗಳನ್ನೂ ಛೇದಿಸಿ, ಸತ್ಯ ಧರ್ಮಯುಕ್ತ ವ್ಯವಹಾರಗಳಲ್ಲಿ ಪ್ರವೃತ್ತಗೊಳಿಸುವುದೇ ಸಂನ್ಯಾಸಿಗಳ ಮುಖ್ಯ ಕರ್ಮ.

ಪ್ರಶ್ನೆ :- ಸಂನ್ಯಾಸ ಗ್ರಹಣವು ಕೇವಲ ಬ್ರಾಹ್ಮಣನ ಧರ್ಮವೋ, ಅಥವಾ ಕ್ಷತ್ರಿಯಾದಿಗಳಿಗೂ ಧರ್ಮವೋ ?

ಉತ್ತರ :—ಬ್ರಾಹ್ಮಣನಿಗೆ ಮಾತ್ರ ಅಧಿಕಾರವಿದೆ. ಏಕೆಂದರೆ, ಎಲ್ಲಾ ವರ್ಣಗಳಲ್ಲಿಯೂ ಪೂರ್ಣ ವಿದ್ವಾಂಸನೂ, ಧರ್ಮಿಷ್ಠನೂ, ಪರೋಪಕಾರಪ್ರಿಯನೂ ಆದ ಪುರುಷನಿಗೇ ಬ್ರಾಹ್ಮಣನೆಂದು ಹೆಸರು. ಪೂರ್ಣವಿದ್ಯೆ, ಧರ್ಮ ಮತ್ತು ಪರಮಾತ್ಮನಲ್ಲಿ ನಿಷ್ಠೆ ಮತ್ತು ವೈರಾಗ್ಯವಿಲ್ಲದೆ, ಸಂನ್ಯಾಸಗ್ರಹಣದಿಂದ ಪ್ರಪಂಚಕ್ಕೆ ಹೆಚ್ಚಿನ ಉಪಕಾರವುಂಟಾಗಲಾರದು. ಆದ್ದರಿಂದ ಬ್ರಾಹ್ಮಣನೊಬ್ಬನಿಗೇ ಸಂನ್ಯಾಸಕ್ಕೆ ಅಧಿಕಾರವಿದೆ-ಬೇರೆಯವರಿಗಿಲ್ಲ-ಎಂದು ಲೋಕಪ್ರಸಿದ್ಧವಾಗಿದೆ. ಮನುವಿನ ಈ ಪ್ರಮಾಣವೂ ಇದೆ :—

ಏಷ ವೋಽಭಿಹಿತೋ ಧರ್ಮೋ ಬ್ರಾಹ್ಮಣಸ್ಯ ಚತುರ್ವಿಧಃ ।
ಪುಣ್ಯೋಽಕ್ಷಯಫಲಃ ಪ್ರೇತ್ಯ ರಾಜಧರ್ಮಾನ್ನಿಬೋಧತ ॥

[ಮನು ೬-೯೭]

ಮನುಮಹಾರಾಜರು ಹೇಳುತ್ತಾರೆ :- "ಋಷಿಗಳೇ, ಬ್ರಹ್ಮಚರ್ಯ, ಗೃಹಸ್ಥ, ವಾನಪ್ರಸ್ಥ, ಸಂನ್ಯಾಸಗಳೆಂಬ ನಾಲ್ಕು ಆಶ್ರಮಗಳನ್ನು ಪಾಲಿಸುವುದು ಬ್ರಾಹ್ಮಣನ ಧರ್ಮ. ಇಲ್ಲಿರುವಾಗ ಪುಣ್ಯಸ್ವರೂಪವಾದ ಮತ್ತು ಶರೀರತ್ಯಾಗಾನಂತರ ಮುಕ್ತಿಸ್ವರೂಪವಾದ ಅಕ್ಷಯಾನಂದವನ್ನು ಕೊಡುವಂತಹುದು ಸಂನ್ಯಾಸಧರ್ಮವು. ಇದಾದನಂತರ ರಾಜಧರ್ಮವನ್ನು ಕೇಳಿರಿ" ಇದರಿಂದ ಸಂನ್ಯಾಸ ಗ್ರಹಣದ ಅಧಿಕಾರವು ಮುಖ್ಯತಃ ಬ್ರಾಹ್ಮಣನಿಗಿದೆ. ಕ್ಷತ್ರಿಯಾದಿಗಳಿಗೆ ಬ್ರಹ್ಮಚರ್ಯಾಶ್ರಮಾಧಿಕಾರವಿದೆ.

ಪ್ರಶ್ನೆ :—ಸಂನ್ಯಾಸಗ್ರಹಣದ ಆವಶ್ಯಕತೆಯೇನು ?

ಉತ್ತರ :—ಶರೀರದಲ್ಲಿ ಶಿರದ ಆವಶ್ಯಕತೆಯಿರುವಂತೆಯೇ ಆಶ್ರಮಗಳಲ್ಲಿ ಸಂನ್ಯಾಸಾಶ್ರಮದ ಆವಶ್ಯಕತೆಯಿರುತ್ತದೆ. ಏಕೆಂದರೆ—

ಇದಿಲ್ಲದಿದ್ದರೆ, ವಿದ್ಯಾಧರ್ಮಗಳು ಎಂದಿಗೂ ವರ್ಧಿಸಲಾರವು. ಮತ್ತು ಅನ್ಯ ಆಶ್ರಮಗಳಿಗೆ ವಿದ್ಯಾಗ್ರಹಣ, ಗೃಹಕೃತ್ಯ, ತಪಶ್ಚರ್ಯಾದಿಗಳ ಸಂಬಂಧವಿರುವುದರಿಂದ ಅವಕಾಶ ಬಹಳ ಕಡಿಮೆ ಸಿಕ್ಕುತ್ತದೆ. ಪಕ್ಷಪಾತ ಬಿಟ್ಟು ವರ್ತಿಸುವುದು ಬೇರೆ ಆಶ್ರಮಗಳಿಗೆ ದುಷ್ಕರವು. ಸಂನ್ಯಾಸಿಯು ಎಲ್ಲಿಡೆಯಿಂದಲೂ ಮುಕ್ತನಾಗಿ, ಜಗದುಪಕಾರ ಮಾಡುವಂತೆ ಬೇರೆ ಆಶ್ರಮಸ್ಥನು ಮಾಡಲಾರನು. ಏಕೆಂದರೆ, ಸಂನ್ಯಾಸಿಗೆ ಸತ್ಯವಿದ್ಯೆಯಿಂದ ಪದಾರ್ಥವಿಜ್ಞಾನದ ಉನ್ನತಿಗೆ ಸಿಕ್ಕುವಷ್ಟು ಅವಕಾಶವು ಬೇರೆ ಆಶ್ರಮಸ್ಥನಿಗೆ ಸಿಕ್ಕಲಾರದು. ಆದರೆ, ಬ್ರಹ್ಮಚರ್ಯದಿಂದಲೇ ಸಂನ್ಯಾಸಿಯಾದವನು ಜಗತ್ತಿಗೆ ಸತ್ಯಶಿಕ್ಷಣವಿತ್ತು ಅಭಿವೃದ್ಧಿಯನ್ನು ಉಂಟುಮಾಡಿಸುವಷ್ಟು ಗೃಹಸ್ಥ ಅಥವಾ ವಾನಪ್ರಸ್ಥದಿಂದ ಸಂನ್ಯಾಸಿಯಾದವನು ಉಂಟುಮಾಡಿಸಲಾರನು.

ಪ್ರಶ್ನೆ :—ಸಂನ್ಯಾಸ ಗ್ರಹಣಮಾಡುವುದು ಈಶ್ವರನ ಅಭಿಪ್ರಾಯಕ್ಕೆ ವಿರುದ್ಧವಾಗಿದೆ. ಏಕೆಂದರೆ, ಮನುಷ್ಯರನ್ನು ಹೆಚ್ಚಿಸುವುದೇ ಈಶ್ವರನ ಅಭಿಪ್ರಾಯ. ಗೃಹಸ್ಥಾಶ್ರಮವನ್ನೇ ಸ್ವೀಕರಿಸದಿದ್ದರೆ ಸಂತಾನೋತ್ಪತ್ತಿಯಾಗುವುದಿಲ್ಲ. ಸಂನ್ಯಾಸಾಶ್ರಮವೇ ಮುಖ್ಯವಾಗಿ, ಎಲ್ಲರೂ ಅದನ್ನೇ ಸ್ವೀಕರಿಸಿದರೆ, ಮನುಷ್ಯರ ಮೂಲಚ್ಛೇದನವಾಗಿ ಹೋಗುವದು.

ಉತ್ತರ :—ಒಳ್ಳೆಯದು. ವಿವಾಹವಾಗಿದ್ದರೂ ಎಷ್ಟೋ ಜನರಿಗೆ ಸಂತತಿಯೇ ಉಂಟಾಗುವುದಿಲ್ಲ. ಅಥವಾ ಆದರೂ ಬೇಗ ಸತ್ತುಹೋಗುತ್ತವೆ. ಹಾಗಾದರೆ ಅವರೂ ಸಹ ಪರಮಾತ್ಮನ ಇಷ್ಟಕ್ಕೆ ವಿರೋಧವಾಗಿ ನಡೆದಹಾಗಾಯಿತು. ' ಯತ್ನೇ ಕೃತೇ ಯದಿ ನ ಸಿದ್ಯತಿ ಕೋಽತ್ರದೋಷಃ '— ಎಂಬುದು ಯಾವನೋ ಕವಿಯ ವಚನ. ಆರ್ಷ :—ಪ್ರಯತ್ನಪಟ್ಟರೂ ಕಾರ್ಯಸಿದ್ಧಿಯಾಗದಿದ್ದರೆ ಯಾವ ದೋಷ "—ಅಂದರೆ ಯಾವ ದೋಷವೂ ಇಲ್ಲ ಎಂದು ನೀವು ಹೇಳುವುದಾದರೆ " ಗೃಹಸ್ಥಾಶ್ರಮದಿಂದ ಸಂತತಿಯು ಹೆಚ್ಚಿ, ಅವರು ತಮ್ಮತಮ್ಮಲ್ಲಿಯೇ ವಿರುದ್ಧಾಚರಣೆ ಮಾಡಿ, ಹೋರಾಡಿ ಸತ್ತರೆ—ಎಷ್ಟು ದೊಡ್ಡ ನಷ್ಟವುಂಟಾಗುತ್ತದೆ ? " ಎಂದು ನಾವು ಕೇಳುತ್ತೇವೆ. ತಿಳಿವಳಿಕೆಯ ವಿರೋಧದಿಂದ ಬಹಳ ಜಗಳವಾಗುತ್ತದೆ. ಸಂನ್ಯಾಸಿಯು

ಒಂದು ವೇದೋಕ್ತ ಧರ್ಮೋಪದೇಶದಿಂದ ಪರಸ್ಪರ ಪ್ರೀತಿ ಹುಟ್ಟಿಸಿದರೆ, ಲಕ್ಷಾಂತರ ಮನುಷ್ಯರನ್ನು ಉಳಿಸಿಕೊಳ್ಳುತ್ತಾನೆ. ಸಹಸ್ರಾರು ಗೃಹಸ್ಥರಂತೆ ಮಾನವರ ಸಂಖ್ಯೆಯನ್ನು ಹೆಚ್ಚಿಸಿದಂತಾಗುವುದು. ಎಲ್ಲ ಮಾನವರೂ ಸಂನ್ಯಾಸಗ್ರಹಣ ಮಾಡಲೂ ಸಹ ಸಮರ್ಥರಾಗರು. ಏಕೆಂದರೆ–ವಿಷಯಾಸಕ್ತಿಯಿಂದ ಎಲ್ಲರೂ ಎಂದಿಗೂ ಪಾರಾಗಲಾರರು. ಸಂನ್ಯಾಸಿಯ ಉಪದೇಶದಿಂದ ಧರ್ಮಿಷ್ಠರಾದವರೆಲ್ಲರೂ ಸಂನ್ಯಾಸಿಯ ಮಕ್ಕಳಂತೆ–ಎಂದು ತಿಳಿಯಬೇಕು.

ಪ್ರ :—ಸಂನ್ಯಾಸಿಗಳು "ನಾವು ಮಾಡಬೇಕಾದುದು ಏನೂ ಇರುವುದಿಲ್ಲ. ಜನಗಳಿಂದ ಅನ್ನ-ವಸ್ತ್ರಗಳನ್ನು ಪಡೆದುಕೊಂಡು ಯಾವಾಗಲೂ ಆನಂದದಿಂದಿದ್ದರಾಯಿತು. ಅಪಿದ್ಯಾರೂಪವಾದ ಈ ಪ್ರಪಂಚದ ಗೊಂದಲದಲ್ಲಿ ಸಿಕ್ಕಿಕೊಂಡು ಏತಕ್ಕೆ ತಲೆಹಿಚ್ಚಿಕೊಳ್ಳುವುದು? ಯಾವಾಗಲೂ ನಾನೇ ಬ್ರಹ್ಮನೆಂದು ತಿಳಿದು ಸಂತುಷ್ಟರಾಗಿದ್ದರೆ ಸಾಕು: ಅಥವಾ ಯಾರಾದರೂ ಬಂದು ಕೇಳಿದರೆ, ಆವರಿಗೂ ಕೂಡ 'ನೀನು ಬ್ರಹ್ಮನಾಗಿದ್ದೀಯೆ. ಯಾವ ಪಾಪ-ಪುಣ್ಯಗಳೂ ನಿನಗೆ ಅಂಟುವುದಿಲ್ಲ. ಏಕೆಂದರೆ–ಶೀತೋಷ್ಣಗಳು ಶರೀರದ ಧರ್ಮವಾಗಿಯೂ, ಸುಖ–ದುಃಖಗಳು ಮನಸ್ಸಿನ ಧರ್ಮವಾಗಿಯೂ ಇರುತ್ತದೆ. ಜಗತ್ತು ಮಿಥ್ಯೆ ಮತ್ತು ಜಗತ್ತಿನ ವ್ಯವಹಾರಗಳೂ ಕೂಡ ಕಲ್ಪಿತವಾದುವು. ಆಂದರೆ ಸುಳ್ಳು–ಆದ್ದರಿಂದ ಇವರಲ್ಲಿ ಸಿಕ್ಕಿ ಬೀಳುವುದು ಬುದ್ಧಿವಂತರ ಕಾರ್ಯವಲ್ಲ. ಆಗುವ ಪಾಪ-ಪುಣ್ಯಗಳೆಲ್ಲವೂ ದೇಹೇಂದ್ರಿಯಗಳ ಧರ್ಮವೇ ಹೊರತು, ಆತ್ಮನದಲ್ಲ" ಎಂದು ಉಪದೇಶಿಸುತ್ತಾರೆ. ನೀವು ಮಾತ್ರ ವಿಲಕ್ಷಣವಾದ ಸಂನ್ಯಾಸಧರ್ಮವನ್ನು ಹೇಳಿದ್ದೀರಿ. ಈಗ ನಾವು ಯಾವುದನ್ನು ಸತ್ಯ, ಯಾವುದನ್ನು ಅಸತ್ಯ–ಎಂದು ತಿಳಿಯೋಣ.

ಉ :—ಏನು! ಸಂನ್ಯಾಸಿಗಳಿಗೆ ಒಳ್ಳೆಯ ಕೆಲಸಗಳು ಸಹ ಕರ್ತವ್ಯವಲ್ಲವೆ? ನೋಡಿರಿ! 'ವೈದಿಕೈಶ್ಚಿವ ಕರ್ಮಭಿಃ'–ಧರ್ಮಯುಕ್ತ ಸತ್ಯ ಕರ್ಮಗಳಾದ ವೈದಿಕ ಕರ್ಮಗಳನ್ನು ಮಾಡಬೇಕು'–ಎಂದು ಮನು ಮಹಾರಾಜರು ಹೇಳಿದ್ದಾರೆ. ಊಟ, ಉಡಿಗೆ, ತೊಡಿಗೆ ಮೊದಲಾದುವುಗಳನ್ನು ಅವರು ಬಿಡಬಲ್ಲರೆ? ಈ ಕಾರ್ಯಗಳನ್ನು

ಬಿಡಲಾಗದಿರುವಾಗ, ಸತ್ಕರ್ಮಗಳನ್ನು ಬಿಟ್ಟು ಬಿಟ್ಟರೆ, ಅವರು ಪತಿತರೂ, ಪಾಪಭಾಗಿಗಳೂ ಆಗುವುದಿಲ್ಲವೆ? ಗೃಹಸ್ಥರಿಂದ ಅನ್ನ ವಸ್ತ್ರಗಳನ್ನು ತೆಗೆದುಕೊಂಡು, ಅವರಿಗೆ ಯಾವ ವಿಧವಾದ ಪ್ರತ್ಯುಪ ಕಾರವನ್ನು ಮಾಡದಿದ್ದರೆ, ಅವರು ಮಹಾಪಾಪಿಗಳಾಗುವುದಿಲ್ಲವೆ! ಕಣ್ಣುಗಳಿಂದ ನೋಡುವುದಕ್ಕೂ, ಕಿವಿಗಳಿಂದ ಕೇಳುವುದಕ್ಕೂ ಆಗ ದಿದ್ದರೆ, ಆ ಕಣ್ಣು, ಕಿವಿಗಳು ಹೇಗೆ ವ್ಯರ್ಥವೋ, ಹಾಗೆಯೇ ಸತ್ಯೋಪದೇಶವನ್ನೂ, ವೇದಾದಿ ಸತ್ಯಶಾಸ್ತ್ರಗಳ ವಿಚಾರವನ್ನೂ, ಪ್ರಚಾರವನ್ನೂ ಮಾಡದಿರುವ ಸಂನ್ಯಾಸಿಗಳು ಭೂಮಿಗೆ ಹೊರೆಯಾ ಗಿರುತ್ತಾರೆ. ಮತ್ತು 'ಅಜ್ಞಾನರೂಪವಾದ ಪ್ರಪಂಚದ ಸಂಗಡ ತಲೆ ಚಚ್ಚಿಕೊಳ್ಳುವುದೇಕೆ?—ಎಂದು ಮೊದಲಾಗಿ ಬರೆಯುವವರೂ, ಹೇಳು ವವರೂ ಸ್ವತಃ ಮಿಥ್ಯಾರೂಪರೂ, ಪಾಪವರ್ಧಕರಾದ ಪಾಪಿಗಳೂ ಆಗಿದ್ದಾರೆ. ಏಕೆಂದರೆ, ದೇಹಾದಿಗಳಿಂದ ಮಾಡಲ್ಪಡುವ ಕರ್ಮಗ ಳೆಲ್ಲವೂ ಆತ್ಮನದೇ ಆಗಿರುತ್ತವೆ. ಅವುಗಳ ಫಲಭೋಗಿಯೂ ಆತ್ಮನೇ ಆಗಿರುತ್ತಾನೆ. ಜೀವನನ್ನು ಬ್ರಹ್ಮನೆಂದು ಹೇಳುವವರು ಅವಿದ್ಯಾ ನಿದ್ರೆಯಲ್ಲಿ ಮಲಗಿರುತ್ತಾರೆ ಏಕೆಂದರೆ–ಜೀವನು ಅಲ್ಪನೂ, ಅಲ್ಪ ಜ್ಞನೂ ಆಗಿದ್ದು ಪರಮಾತ್ಮನು ಸರ್ವವ್ಯಾಪಕನೂ, ಸರ್ವಜ್ಞನೂ, ನಿತ್ಯ ಶುದ್ಧ ಬುದ್ಧ ಮುಕ್ತಸ್ವಭಾವನೂ ಆಗಿರುತ್ತಾನೆ. ಜೀವನು ಒಂದು ಬಾರಿ ಬದ್ಧನಾಗಿಯೂ, ಒಂದು ಬಾರಿ ಮುಕ್ತನಾಗಿಯೂ ಇರುತ್ತಾನೆ. ಪರಮಾತ್ಮನು ಸರ್ವವ್ಯಾಪಕನೂ, ಸರ್ವಜ್ಞನೂ ಆಗಿರು ವುದರಿಂದ ಭ್ರಮ ಅಥವಾ ಅವಿದ್ಯೆ ಎಂದಿಗೂ ಉಂಟಾಗಲಾರದು. ಜೀವಾತ್ಮನಿಗೆ ಒಂದುಸಲ ವಿದ್ಯೆಯೂ, ಒಂದುಸಲ ಅವಿದ್ಯೆಯೂ ಉಂಟಾಗುತ್ತದೆ. ಪರಮಾತ್ಮನು ಹುಟ್ಟು ಸಾವುಗಳೆಂಬ ದುಃಖಗಳನ್ನು ಎಂದೂ ಹೊಂದನು; ಜೀವನು ಹೊಂದುತ್ತಾನೆ. ಆದುದರಿಂದ ಅವರ ಈ ಉಪದೇಶವು ಸುಳ್ಳು.

ಪ್ರ:—ಸಂನ್ಯಾಸಿಗಳು ಸರ್ವಕರ್ಮವಿನಾಶಿಗಳು. ಮತ್ತು ಯಾವಾಗಲೂ ಅಗ್ನಿ ಮತ್ತು ಧಾತುಗಳನ್ನು ಮುಟ್ಟುವುದಿಲ್ಲ. ಈ ಮಾತು ಸರಿಯೋ, ಅಲ್ಲವೋ?

ಉ:—ಅಲ್ಲ. 'ಸಮ್ಯಙ್ನಿತ್ಯಮಾಸ್ತೇ ಯಸ್ಮಿನ್ ಯದ್ವಾ

ಸಮ್ಯಙ್ನ್ಯಸ್ಯಂತಿ ದುಃಖಾನಿ ಕರ್ಮಾಣಿ ಯೇನ ಸ ಸಂನ್ಯಾಸಃ, ಸ ಪ್ರಶಸ್ತೋ ವಿದ್ಯತೇ ಯಸ್ಯ ಸ ಸನ್ಯಾಸೀ '—ಯಾವನಲ್ಲಿ ಬ್ರಹ್ಮ, ಮತ್ತು ದುಷ್ಕರ್ಮಗಳನ್ನು ಬಿಡುವ ಉತ್ತಮ ಸ್ವಭಾವವೂ, ಇರುವುದೋ ಅವನು ಸಂನ್ಯಾಸಿ ಎನ್ನಿಸಿಕೊಳ್ಳುತ್ತಾನೆ. ಇದರಿಂದ ಸತ್ಕರ್ಮಗಳನ್ನು ಮಾಡುವವನೂ, ದುಷ್ಕರ್ಮಗಳನ್ನು ನಾಶಮಾಡುವವನೂ ಸಂನ್ಯಾಸಿಯೆಂದು ಸಿದ್ಧವಾಗುತ್ತದೆ.

ಪ್ರ:— ಅಧ್ಯಾಪನವನ್ನೂ, ಉಪದೇಶವನ್ನೂ ಗೃಹಸ್ಥರು ಮಾಡುತ್ತಾರೆ. ಇನ್ನು ಸಂನ್ಯಾಸಿಗಳಿಂದ ಉಪಯೋಗವೇನು?

ಉ:— ಸತ್ಯೋಪದೇಶವನ್ನು ಎಲ್ಲಾ ಆಶ್ರಮಿಗಳೂ ಮಾಡಬೇಕು ಮತ್ತು ಕೇಳಬೇಕು. ಆದರೆ, ಸಂನ್ಯಾಸಿಗೆ ಸಿಕ್ಕುವಷ್ಟು ಅವಕಾಶ ಮತ್ತು ನಿಷ್ಪಕ್ಷಪಾತತೆ ಗೃಹಸ್ಥರಿಗೆ ದೊರೆಯಲಾರದು. ಪುರುಷನು ಪುರುಷರಿಗೂ, ಸ್ತ್ರೀಯು ಸ್ತ್ರೀಯರಿಗೂ ಸತ್ಯವನ್ನು ಉಪದೇಶಿಸುವುದೂ, ಓದಿಸುವುದೂ ಬ್ರಾಹ್ಮಣರ ಕರ್ತವ್ಯವಾಗಿದೆ. ದೇಶಸಂಚಾರ ಮಾಡುವುದಕ್ಕೆ ಸಂನ್ಯಾಸಿಗೆ ಸಿಕ್ಕುವಷ್ಟು ಅವಕಾಶವು ಗೃಹಸ್ಥರಾದ ಬ್ರಾಹ್ಮಣಾದಿಗಳಿಗೆ ಎಂದಿಗೂ ದೊರಕಲಾರದು. ಮತ್ತು ಬ್ರಾಹ್ಮಣರು ವೀದನಿರುದ್ಧವಾಗಿ ಆಚರಿಸತೊಡಗಿದರೆ, ಸಂನ್ಯಾಸಿಯೇ ಅವರ ನಿಯಂತೃವಾಗಿರುತ್ತಾನೆ. ಆದ್ದರಿಂದ ಸಂನ್ಯಾಸವಿರಬೇಕಾದುದು ಉಚಿತ.

ಪ್ರ:—**" ಏಕರಾತ್ರಿಂ ವಸೇದ್ಗ್ರಾಮೇ "** ಮೊದಲಾದ ವಚನಗಳಿಂದ ಸಂನ್ಯಾಸಿಯು ಒಂದು ಕಡೆ ಒಂದು ರಾತ್ರಿ ಮಟ್ಟಿಗೆ ಇರಬೇಕು. ಒಂದು ದಿನಕ್ಕಿಂತಲೂ ಹೆಚ್ಚಾಗಿ ಇರಬಾರದಲ್ಲವೆ?

ಉ:—ಕೆಲವು ಅಂಶಗಳಲ್ಲಿ ಈ ಮಾತು ಉತ್ತಮವಾಗಿದೆ. ಏಕೆಂದರೆ, ಸಂನ್ಯಾಸಿಯು ಒಂದೇ ಕಡೆ ಇರುವುದರಿಂದ ಜಗತ್ತಿಗೆ ಹೆಚ್ಚಿನ ಉಪಕಾರವಾಗಲಾರದು. ಮತ್ತು ಆತನಿಗೆ ಸ್ಥಳಾಭಿಮಾನವುಂಟಾಗಿ, ರಾಗ-ದ್ವೇಶಗಳು ಹೆಚ್ಚಲವಕಾಶವಾಗುವುದು. ಆದರೆ, ತಾನು ಒಂದೇ ಕಡೆ ಇರುವುದರಿಂದ ವಿಶೇಷ ಉಪಕಾರವಾಗುವಂತಿದ್ದರೆ ಇರಬಹುದು. ಪ್ರಾಚೀನಕಾಲದಲ್ಲಿ ಜನಕಮಹಾರಾಜನ ಬಳಿ

ಪಂಚಶಿಖಾದಿ ಸಂನ್ಯಾಸಿಗಳು ನಾಲ್ಕು ತಿಂಗಳವರೆಗೂ, ಇತರ ಸಂನ್ಯಾಸಿಗಳು ಎಷ್ಟೋ ವರ್ಷಗಳವರೆಗೂ ಇದ್ದರು. ಸಂನ್ಯಾಸಗಳು ಒಂದೇ ಕಡೆ ಇರಬಾರದೆಂಬ ಪ್ರೊಳ್ಳು ಮಾತನ್ನು ಈಗಿನ ಕಾಲದ ಪಾಷಂಡಿ ಸಂಪ್ರದಾಯಿಗಳು ಕಲ್ಪಿಸಿದ್ದಾರೆ. ಏಕೆಂದರೆ-ಸಂನ್ಯಾಸಿಗಳು ಬಹಳ ದಿನಗಳವರೆಗೆ ಒಂದೇ ಸ್ಥಳದಲ್ಲಿದ್ದರೆ, ತಮ್ಮ ಪಾಷಂಡತನವು ಖಂಡಿಸಲ್ಪಟ್ಟು ಹೆಚ್ಚು ವರ್ಧಿಸಲಾರದೆಂಬುದೇ ಕಾರಣ.

ಪ್ರಶ್ನೆ :—

ಯತೀನಾಂ ಕಾಂಚನಂದದ್ಯಾತ್ ತಾಂಬೂಲಂ ಬ್ರಹ್ಮ

ಚಾರಿಣಾಂ।

ಚೋರಾಣಾಮುಭಯಂ ದದ್ಯಾತ್ ಸ ನರೋ ನರಕಂ ವ್ರಜೇತ್॥

ಸಂನ್ಯಾಸಿಗಳಿಗೆ ಸುವರ್ಣವನ್ನು ದಾನಮಾಡಿದರೆ, ದಾತನು ನರಕದಲ್ಲಿ ಬೀಳುತ್ತಾನೆಂದು ಈ ಮಾತುಗಳ ಅಭಿಪ್ರಾಯವಿರುತ್ತದೆ.

ಉತ್ತರ :—ಈ ಮಾತೂ ಕೂಡ ವರ್ಣಾಶ್ರಮವಿರೋಧಿಗಳೂ, ಸಂಪ್ರದಾಯವಾದಿಗಳೂ ಸ್ವಾರ್ಥಪರರೂ ಆದ ಪೌರಾಣಿಕರಿಂದ ಕಲ್ಪಿತವಾದುದು. ಏಕೆಂದರೆ—ಸಂನ್ಯಾಸಿಗಳಿಗೆ ಧನವು ದೊರೆತರೆ, ಅವರು ನಮ್ಮನ್ನು ಬಹಳವಾಗಿ ಖಂಡಿಸಬಲ್ಲರು. ಮತ್ತು ಅವರು ನಮ್ಮ ಅಧೀನದಲ್ಲಿಯೂ ಇರುವುದಿಲ್ಲ. ನಮ್ಮ ಅಧೀನವಾಗಿದ್ದರೆ, ಭಯಪಟ್ಟು ನಡೆದುಕೊಳ್ಳುವರು. ಮೂರ್ಖರಿಗೂ, ಸ್ವಾರ್ಥಿಗಳಿಗೂ ಕೂಡ ದಾನ ಕೊಡುವುದು ಒಳ್ಳೆಯದೆಂದು ತಿಳಿದಿರುವಾಗ ವಿದ್ವಾಂಸರೂ, ಪರೋಪಕಾರಿಗಳೂ ಆದ ಸಂನ್ಯಾಸಿಗಳಿಗೆ ದಾನಕೊಡುವುದರಿಂದ ಸ್ವಲ್ಪವೂ ದೋಷವುಂಟಾಗಲಾರದು.

ವಿವಿಧಾನಿಚ ರತ್ನಾನಿ ವಿವಿಕ್ತೇಷೂಪಪಾದಯೇತ್॥

[ಮನು ೧೧-೬]

"ನಾನಾ ಪ್ರಕಾರವಾದ ರತ್ನ, ಚಿನ್ನ ಮೊದಲಾದ ಧನವನ್ನು ವಿವಿಕ್ತರಿಗೆ ಅಂದರೆ ಸಂನ್ಯಾಸಿಗಳಿಗೆ ಕೊಡಬೇಕು. ಮತ್ತು, ಈ ಶ್ಲೋಕವೂ ಸಹ ಅರ್ಥಹೀನವಾದುದು. ಏಕೆಂದರೆ, ಸಂನ್ಯಾಸಿಗೆ

ಸುವರ್ಣವನ್ನು ಕೊಡುವುದರಿಂದ ಯಜಮಾನನು ನರಕಕ್ಕೆ ಹೋಗುವುದಾದರೆ, ಬೆಳ್ಳಿ, ಮುತ್ತುಗಳು, ವಜ್ರಗಳು—ಮೊದಲಾದುವುಗಳನ್ನು ಕೊಡುವುದರಿಂದ ಸ್ವರ್ಗಕ್ಕೆ ಹೋಗುವನೋ ?

ಪ್ರಶ್ನೆ :—ಈ ಪಂಡಿತರು ಹೇಳುತ್ತಾ ಹೇಳುತ್ತಾ ಪಾಠವನ್ನೇ ಮರೆತರು. "ಯತಿಹಸ್ತೇ ಧನಂ ದದ್ಯಾತ್" ಎಂದಿದೆ. ಅಂದರೆ ಸಂನ್ಯಾಸಿಗಳ ಕೈಗೆ ಧನವೀಯುವವನು ನರಕಕ್ಕೆ ಹೋಗುತ್ತಾನೆ—ಎಂದು.

ಉತ್ತರ :—ಈ ವಚನವನ್ನು ಕೂಡ ಯಾರೋ ಅವಿದ್ವಾಂಸರು ಕಪೋಲ ಕಲ್ಪನೆಯಿಂದ ರಚಿಸಿದ್ದಾರೆ. ಏಕೆಂದರೆ—ಸಂನ್ಯಾಸಿಯ ಕೈಯಲ್ಲಿ ಧನವನ್ನು ಇಡುವುದರಿಂದ ಯಜಮಾನನು ನರಕಕ್ಕೆ ಹೋಗುವುದಾದರೆ, ಕಾಲಿನ ಮೇಲೆ ಇಡುವುದರಿಂದ ಅಥವಾ ಗಂಟು ಕಟ್ಟಿ ಕೊಡುವುದರಿಂದ ಸ್ವರ್ಗಕ್ಕೆ ಹೋಗುವನು. ಆದ್ದರಿಂದ ಇಂತಹ ಕಲ್ಪನೆಯು ಮಾನ್ಯಮಾಡಲು ಯೋಗ್ಯವಾದುದಲ್ಲ. ಆದರೆ ಇದೇನೋ ನಿಜ : ಸಂನ್ಯಾಸಿಯಾದವನು ತನ್ನ ಯೋಗಕ್ಷೇಮಗಳಿಗಿಂತ ಹೆಚ್ಚಾಗಿ ಧನವನ್ನು ಇಟ್ಟುಕೊಂಡರೆ, ಕಳ್ಳರ ಬಾಧೆಗೆ ಸಿಕ್ಕಬಹುದು. ಮೋಹಿ ತನೂ ಆಗಬಹುದು. ಆದರೆ, ವಿದ್ವಾಂಸನಾದವನು ಅಯುಕ್ತವಾದ ವ್ಯವಹಾರವನ್ನೆಂದಿಗೂ ಮಾಡುವುದಿಲ್ಲ. ಮೋಹದಲ್ಲಿಯೂ ಸಿಕ್ಕಿ ಕೊಳ್ಳುವುದಿಲ್ಲ. ಏಕೆಂದರೆ-ಅವನು ಮೊದಲು ಗೃಹಸ್ಥಾಶ್ರಮದಲ್ಲಿ ಅಥವಾ ಬ್ರಹ್ಮಚರ್ಯದಲ್ಲಿ ಎಲ್ಲವನ್ನೂ ಅನುಭವಿಸಿರುತ್ತಾನೆ ಅಥವಾ ನೋಡಿರುತ್ತಾನೆ. ಬ್ರಹ್ಮಚರ್ಯದಿಂದಲೇ ಸಂನ್ಯಾಸಿಯಾದವನು ಪೂರ್ಣ ವೈರಾಗ್ಯಶಾಲಿಯಾದುದರಿಂದ ಎಂದಿಗೂ ಸಿಕ್ಕಿಕೊಳ್ಳಲಾರನು.

ಪ್ರ:—ಶ್ರಾದ್ಧದಲ್ಲಿ ಸಂನ್ಯಾಸಿಗಳು ಬಂದರೆ ಅಥವಾ ಊಟ ಮಾಡಿದರೆ, ಅವನ ಪಿತೃಗಳು ಓಡಿಹೋಗುತ್ತಾರೆಂದೂ ನರಕದಲ್ಲಿ ಬೀಳುತ್ತಾರೆಂದೂ ಜನಗಳು ಹೇಳುತ್ತಾರಲ್ಲ ?

ಉ :—ಮೊದಲು, ಸತ್ತ ಪಿತೃಗಳು ಬರುವುದು ಮತ್ತು ಮಾಡಿದ ಶ್ರಾದ್ಧವು ಅವರಿಗೆ ಸೇರುವುದು, ಇವೇ ಅಸಂಭವ; ಮತ್ತು ವೇದಗಳಿಗೂ, ಯುಕ್ತಿಗೂ ವಿರುದ್ಧವಾಗಿರುವುದರಿಂದ ಸರ್ವಥಾ ಸುಳ್ಳು;

ಬರುವುದೇ ಇಲ್ಲದಿರುವಾಗ ಓಡಿಹೋಗುವವರು ಯಾರು? ಪರಮಾತ್ಮನ ವ್ಯವಸ್ಥೆಯಂತೆ ತಮ್ಮ ತಮ್ಮ ಪಾಪ-ಪುಣ್ಯಗಳಿಗೆ ಅನುಸಾರವಾಗಿ ಜೀವರು ಸತ್ತ ಬಳಿಕ ಜನ್ಮವನ್ನು ಹೊಂದುವಾಗ ಅವನ ಆಗಮನ ಹೇಗೆ ಸಾಧ್ಯ? ಆದುದರಿಂದ ಈ ಮಾತು ಸಹ ಉದರಾರ್ಥೀ ಪೌರಾಣಿಕರ ಮತ್ತು ವೈರಾಗಿಗಳ ಮಿಥ್ಯಾಕಲ್ಪನೆ. ಸತ್ತವರಿಗೆ ಮಾಡುವ ಈ ಶ್ರಾದ್ಧವು ವೇದಾದಿ ಸತ್ಯಶಾಸ್ತ್ರಗಳಿಗೆ ವಿರುದ್ಧವಾದ್ದರಿಂದ ಸಂನ್ಯಾಸಿಯು ಎಲ್ಲಿ ಹೋಗುತ್ತಾನೋ ಅಲ್ಲಿಂದ ಪಾಷಂಡತನವು ದೂರ ಓಡಿಹೋಗುವುದೆಂಬುದೇನೋ ಸರಿ.

ಪ್ರ:—ಬ್ರಹ್ಮಚರ್ಯದಿಂದಲೇ ಸಂನ್ಯಾಸಿಯಾದವನ ನಿರ್ವಾಹವು ಕಷ್ಟದಿಂದಾಗುವುದು. ಮತ್ತು ಕಾಮವನ್ನು ತಡೆಯುವುದೂ ಸಹ ಬಹು ಕಷ್ಟ. ಆದ್ದರಿಂದ ಗೃಹಸ್ಥ. ವಾನಪ್ರಸ್ಥಾಶ್ರಮಗಳನ್ನು ಕಳೆದ ಬಳಿಕ ವೃದ್ಧನಾದಮೇಲೆ ಸಂನ್ಯಾಸ ತೆಗೆದುಕೊಳ್ಳುವುದು ಹೆಚ್ಚು ಉತ್ತಮ.

ಉ:—ನಿರ್ವಹಿಸಲಾರದವನೂ, ಇಂದ್ರಿಯಗಳ ವೇಗವನ್ನು ತಡೆಯಲಾರದವನೂ ಬ್ರಹ್ಮಚರ್ಯದಿಂದಲೇ ಸಂನ್ಯಾಸವನ್ನು ತೆಗೆದುಕೊಳ್ಳಬಾರದು. ಏಂದರೆ, ತಡೆಯಬಲ್ಲವನು ಏತಕ್ಕೆ ತೆಗೆದುಕೊಳ್ಳಬಾರದು? ವಿಷಯದಲ್ಲಿರುವ ದೋಷವನ್ನೂ ವೀರ್ಯರಕ್ಷಣೆಯ ಗುಣವನ್ನೂ ತಿಳಿದಿರುವವನು ಎಂದಿಗೂ ವಿಷಯಾಸಕ್ತನಾಗಲಾರನು. ಅಂತಹವನ ವೀರ್ಯವು ವಿಚಾರಾಗ್ನಿಗೆ ಸೌದೆಯಂತೆ ಇರುತ್ತದೆ. ಅಂದರೆ, ಅವನ ಶಕ್ತಿಯೆಲ್ಲವೂ ವಿಚಾರದಲ್ಲಿಯೇ ವೆಚ್ಚವಾಗುತ್ತದೆ. ವೈದ್ಯನ ಮತ್ತು ಔಷಧಗಳ ಆವಶ್ಯಕತೆಯು ರೋಗಿಗಳಿಗಿರುವಷ್ಟು ಆರೋಗ್ಯಶಾಲಿಗೆ ಇರುವುದಿಲ್ಲ. ಹಾಗೆಯೇ ವಿದ್ಯಾಧರ್ಮವೃದ್ಧಿ ಮತ್ತು ಸರ್ವ ಜಗತ್ತಿನ ಉಪಕಾರವನ್ನೇ ಧ್ಯೇಯವಾಗಿ ಉಳ್ಳ ಪುರುಷರು ಮತ್ತು ಸ್ತ್ರೀಯರು ವಿವಾಹಮಾಡಿಕೊಳ್ಳದಿರಬೇಕು. ಪ್ರಾಚೀನ ಕಾಲದಲ್ಲಿ ಸಹ ಪಂಚಶಿಖ ಮೊದಲಾದ ಪುರುಷರೂ, ಗಾರ್ಗಿ ಮೊದಲಾದ ಸ್ತ್ರೀಯರೂ ಮದುವೆ ಮಾಡಿಕೊಳ್ಳದೆಯೇ ಇದ್ದರು. ಆದ್ದರಿಂದ ಸಂನ್ಯಾಸಿಯಾಗುವುದು ಅಧಿಕಾರಿಗಳಾದವರಿಗೆ ಮಾತ್ರ ಉಚಿತ. ಅನಧಿಕಾರಿಯು ಸಂನ್ಯಾಸವನ್ನು ತೆಗೆದುಕೊಂಡರೆ, ತಾನೂ ಮುಳುಗುವು

ದಲ್ಲದೆ, ಇತರರನ್ನೂ ಮುಳುಗಿಸುತ್ತಾನೆ. ಚಕ್ರವರ್ತಿಯಾದ ರಾಜನು 'ಸಮ್ರಾಟ್' ಆಗಿದ್ದಂತೆ, ಸಂನ್ಯಾಸಿಯು 'ಪರಿವ್ರಾಟ್' ಆಗುತ್ತಾನೆ. ಆದರೆ, ರಾಜನು ತನ್ನ ದೇಶದಲ್ಲಿ ಅಥವಾ ಸ್ವಸಂಬಂಧಿಗಳಲ್ಲಿ ಮಾತ್ರ ಸತ್ಕಾರಪಡೆಯುತ್ತಾನೆ; ಮತ್ತು ಸಂನ್ಯಾಸಿಯು ಎಲ್ಲಿಡೆಯಲ್ಲಿಯೂ ಪೂಜಿತನಾಗುತ್ತಾನೆ.

ವಿದ್ವತ್ವಂಚ ನೃಪತ್ವಂಚ ನೈವತುಲ್ಯಂ ಕದಾಚನ।
ಸ್ವದೇಶೇ ಪೂಜ್ಯತೇ ರಾಜಾ ವಿದ್ವಾನ್ ಸರ್ವತ್ರಪೂಜ್ಯತೇ ॥

ಇದು ಚಾಣಕ್ಯ ನೀತಿಶಾಸ್ತ್ರದ ಶ್ಲೋಕ. ವಿದ್ವಾಂಸನ ಮತ್ತು ರಾಜನ ಸಮಾನತೆ ಎಂದಿಗೂ ಸಂಭವವಲ್ಲ. ಏಕೆಂದರೆ-ರಾಜನು ತನ್ನ ದೇಶದಲ್ಲಿ ಮಾತ್ರ ಗೌರವ-ಪ್ರತಿಷ್ಟಗಳನ್ನು ಹೊಂದುತ್ತಾನೆ. ಆದ್ದರಿಂದ ವಿದ್ಯೆಯನ್ನು ಕಲಿಯುವುದಕ್ಕೂ, ಉತ್ತಮ ಶಿಕ್ಷಣವನ್ನು ಪಡೆಯುವುದಕ್ಕೂ, ಬಲಶಾಲಿಯಾಗುವುದಕ್ಕೂ ಬ್ರಹ್ಮಚರ್ಯ; ಎಲ್ಲಾ ವಿಧವಾದ ಉತ್ತಮ ವ್ಯವಹಾರಗಳನ್ನು ಸಾಧಿಸುವುದಕ್ಕೆ ಗೃಹಸ್ಥ; ವಿಚಾರಶಕ್ತಿಯನ್ನೂ, ಧ್ಯಾನವನ್ನೂ ಮತ್ತು ವಿಜ್ಞಾನವನ್ನೂ ವೃದ್ಧಿಪಡಿಸಿಕೊಳ್ಳುವುದಕ್ಕೂ, ತಪಸ್ಸನ್ನು ಆಚರಿಸುವುದಕ್ಕೂ ವಾನಪ್ರಸ್ಥ; ವೇದಾದಿ ಸತ್ಯಶಾಸ್ತ್ರಗಳ ಪ್ರಚಾರ, ಧರ್ಮವ್ಯವಹಾರ ಗ್ರಹಣ, ದುರ್ವ್ಯವಹಾರ ತ್ಯಾಗ, ಸತ್ಯೋಪದೇಶ ಮತ್ತು ಎಲ್ಲರ ಸಂದೇಹಗಳನ್ನೂ ಪರಿಹರಿಸುವುದು ಮೊದಲಾದುದಕ್ಕಾಗಿ ಸಂನ್ಯಾಸಾಶ್ರಮವಿದೆ. ಆದರೆ, ಈ ಸಂನ್ಯಾಸದ ಮುಖ್ಯ ಧರ್ಮವಾದ ಸತ್ಯೋಪದೇಶಾದಿಗಳನ್ನು ಮಾಡದವರು ಪತಿತರು ಮತ್ತು ನರಕಗಾಮಿಗಳು. ಆದ್ದರಿಂದ ಸಂನ್ಯಾಸಿಗಳು ಸತ್ಯೋಪದೇಶ, ಶಂಕಾ ಸಮಾಧಾನ, ವೇದಾದಿ ಸತ್ಯಶಾಸ್ತ್ರಗಳ ಅಧ್ಯಾಪನ ಮತ್ತು ವೇದೋಕ್ತ ಧರ್ಮದ ವೃದ್ಧಿಯನ್ನು ಯತ್ನಪೂರ್ವಕವಾಗಿ ಮಾಡಿ, ಸಮಗ್ರ ಜಗತ್ತಿನ ಉನ್ನತಿಯನ್ನು ಸಾಧಿಸಬೇಕಾದುದು ಉಚಿತವಾದುದು.

ಪ್ರಶ್ನೆ :—ಸಂನ್ಯಾಸಿಗಿಂತಲೂ ಬೇರೆಯವರಾದ ಸಾಧು, ಬೈರಾಗಿ, ಗೋಸಾಯಿ, ಖಾಖಿ-ಮೊದಲಾದವರು ಸಂನ್ಯಾಸಾಶ್ರಮದಲ್ಲಿ ಗಣಿಸಲ್ಪಡುವರೋ, ಇಲ್ಲವೋ ?

ಉತ್ತರ :—ಇಲ್ಲ! ಏಕೆಂದರೆ, ಅವರಲ್ಲಿ ಸಂನ್ಯಾಸದ ಯಾವ ಲಕ್ಷಣವೂ ಇಲ್ಲ. ಅವರು ವೇದವಿರುದ್ಧವಾದ ಮಾರ್ಗದಲ್ಲಿ ಪ್ರವೃತ್ತರಾಗಿ, ವೇದಕ್ಕಿಂತ ಹೆಚ್ಚಾಗಿ ತಮ್ಮ ಸಂಪ್ರದಾಯದ ಆಚಾರ್ಯರ ಮಾತುಗಳನ್ನು ಒಪ್ಪುತ್ತಾರೆ. ಮಿಥ್ಯಾಪ್ರಪಂಚದಲ್ಲಿ ಬಿದ್ದು ಸ್ವಾರ್ಥವನ್ನು ಸಾಧಿಸಿಕೊಳ್ಳುವುದಕ್ಕಾಗಿ ಇತರರನ್ನು ತಮ್ಮ ಮತದಲ್ಲೇ ಸಿಕ್ಕಿಸಿಕೊಳ್ಳುತ್ತಾರೆ. ಸುಧಾರ ಮಾಡುವುದಿರಲಿ; ಅದಕ್ಕೆ ಬದಲು ಜಗತ್ತನ್ನು ತಪ್ಪುಹಾದಿಗೆಳೆದು ಅಧೋಗತಿಗೀಡುಮಾಡುತ್ತಾರೆ. ಮತ್ತು ತಮ್ಮ ಸ್ವಾರ್ಥವನ್ನು ಸಾಧಿಸಿಕೊಳ್ಳುತ್ತಾರೆ. ಆದ್ದರಿಂದ ಇಂತಹವರನ್ನು ಸಂನ್ಯಾಸಾಶ್ರಮದಲ್ಲಿ ಎಣಿಸಲಾಗದು. ಆದರೆ ಇವರು ಅಪ್ಪಟ ಸ್ವಾರ್ಥಾಶ್ರಮಿಗಳೇನೋ ಪೂರ್ಣವಾಗಿ ಹೌದು. ಇದರಲ್ಲಿ ಯಾವ ಸಂದೇಹವೂ ಇಲ್ಲ. ತಾವೂ ಮತ್ತು ಸಮಗ್ರ ಜಗತ್ತೂ ಈ ಲೋಕದಲ್ಲಿ ಅಂದರೆ ವರ್ತಮಾನ ಜನ್ಮದಲ್ಲಿ ಪರಲೋಕದಲ್ಲಿ ಅಂದರೆ ಮುಂದಿನ ಜನ್ಮದಲ್ಲಿ, ಸ್ವರ್ಗ ಅಂದರೆ ಸುಖಭೋಗವನ್ನು ಪಡೆಯುವ ಹಾಗೆ ಯಾರು ಸ್ವತಃ ಧರ್ಮದಲ್ಲಿ ವರ್ತಿಸಿ, ಸಮಗ್ರ ಜಗತ್ತನ್ನು ನಡೆಸುತ್ತಾರೋ, ಆ ಧರ್ಮಾತ್ಮರಾದ ಪುರುಷರೇ ಸಂನ್ಯಾಸಿಗಳು ಮತ್ತು ಮಹಾತ್ಮರು.

ಹೀಗೆ ಸಂಕ್ಷೇಪವಾಗಿ ಸಂನ್ಯಾಸಾಶ್ರಮದ ಶಿಕ್ಷಣದ ಬಗ್ಗೆ ಬರೆದಿದ್ದೇವೆ. ಇನ್ನು ಇದರ ಮುಂದೆ ರಾಜ-ಪ್ರಜಾ ಧರ್ಮದ ವಿಷಯ ಬರೆಯಲ್ಪಡುವುದು.

ಇತಿ ಶ್ರೀಮದ್ದಯಾನಂದಸರಸ್ವತೀಸ್ವಾಮಿಕೃತೇ
ಸತ್ಯಾರ್ಥಪ್ರಕಾಶೇ ಸುಭಾಷಾವಿಭೂಷಿತೇ
ವಾನಪ್ರಸ್ಥಸಂನ್ಯಾಸಾಶ್ರಮವಿಷಯೇ
ಪಂಚಮಸಮುಲ್ಲಾಸಃ ಸಂಪೂರ್ಣಃ

॥ ಓಂ ॥

ಅಥ ಷಷ್ಠಸಮುಲ್ಲಾಸಾರಂಭಃ

ಅಥ ರಾಜಧರ್ಮಾನ್ ವ್ಯಾಖ್ಯಾಸ್ಯಾಮಃ

ರಾಜಧರ್ಮಾನ್ ಪ್ರವಕ್ಷ್ಯಾಮಿ ಯಥಾವೃತ್ತೋ ಭವೇನ್ನೃಪಃ
ಸಂಭವಶ್ಚ ಯಥಾ ತಸ್ಯ ಸಿದ್ಧಿಶ್ಚ ಪರಮಾ ಯಥಾ ॥೧॥

ಬ್ರಾಹ್ಮಂ ಪ್ರಾಪ್ತೇನ ಸಂಸ್ಕಾರಂ ಕ್ಷತ್ರಿಯೇಣ ಯಥಾವಿಧಿ ।
ಸರ್ವಸ್ಯಾಸ್ಯ ಯಥಾ ನ್ಯಾಯಂ ಕರ್ತವ್ಯಂ ಪರಿರಕ್ಷಣಂ ॥೨॥

ಮನುಮಹಾರಾಜರು ಋಷಿಗಳಿಗೆ ಹೇಳುತ್ತಾರೆ:—" ನಾಲ್ಕು ವರ್ಣಗಳ ಮತ್ತು ಆಶ್ರಮಗಳ ವ್ಯವಹಾರಗಳನ್ನು ಹೇಳಿದಮೇಲೆ, ಇನ್ನು ರಾಜಧರ್ಮವನ್ನು ಅಂದರೆ, ರಾಜನು ಎಂತಹವನಾಗಿರಬೇಕು? ಅವನೆಂತು ರಾಜನಾಗಬಲ್ಲನು? ಮತ್ತು ಅವನಿಗೆ ಪರಮಸಿದ್ಧಿಯು ಹೇಗೆ ಲಭಿಸುತ್ತದೆ—ಈ ವಿಷಯವನ್ನು ವಿಸ್ತಾರವಾಗಿ ಹೇಳುತ್ತೇವೆ॥೧॥ ಯಾವರೀತಿ ಬ್ರಾಹ್ಮಣನು ಪೂರ್ಣ ವಿದ್ವಾಂಸನಾಗಿರುತ್ತಾನೋ, ಹಾಗೆಯೇ ವಿದ್ವಾಂಸನೂ, ಸುಶಿಕ್ಷಿತನೂ ಆಗಿ ಕ್ಷತ್ರಿಯನು ಈ ಸಮಸ್ತ ರಾಜ್ಯದ ರಕ್ಷಣೆಯನ್ನೂ ನ್ಯಾಯದಿಂದ ಯಥಾವತ್ತಾಗಿ ಮಾಡಬೇಕು. ಅದರ ಕ್ರಮವಿದು.

ತ್ರೀಣಿರಾಜಾನಾ ವಿದಥೇ ಪುರೂಣಿ ಪರಿವಿಶ್ವಾನಿ ಭೂಷಥಃ ಸದಾಂಸಿ ॥

[ಋಗ್, ಮಂ ೩, ಸೂ ೩೮, ಮಂ ೬]

ಪರಮಾತ್ಮನು ಉಪದೇಶಿಸುವುದೇನೆಂದರೆ, (ರಾಜಾನಾ) ರಾಜನೂ, ಪ್ರಜೆಗಳೂ ಸೇರಿ, (ವಿದಥೇ) ಸುಖಪ್ರಾಪ್ತಿ ಮತ್ತು ವಿಜ್ಞಾನವರ್ಧಕವಾದ ರಾಜ ಪ್ರಜಾ ಸಂಬಂಧವೆಂಬ ವ್ಯವಹಾರಗಳಲ್ಲಿ (ತ್ರೀಣಿ ಸದಾಂಸಿ) ವಿದ್ಯಾರ್ಯಸಭೆ, ಧರ್ಮಾರ್ಯಸಭೆ, ಮತ್ತು ರಾಜಾರ್ಯ

ಸಭೆಯೆಂಬ ಮೂರು ಸಭೆಗಳನ್ನೇರ್ಪಡಿಸಿ, (ಪುರೂಣಿ) ಬಹುವಿಧವಾದ (ವಿಶ್ವಾನಿ) ಸಮಸ್ತ ಪ್ರಜಾಸಂಬಂಧವಾದ ಮನುಷ್ಯ ಮೊದಲಾದ ಜೀವಧಾರಿಗಳನ್ನು (ಪರಿಭೂಷಥಃ) ವಿದ್ಯೆ, ಸ್ವಾತಂತ್ರ್ಯ, ಧರ್ಮ, ಉತ್ತಮ ಶಿಕ್ಷಣ, ಐಶ್ವರ್ಯ ಮೊದಲಾದುವುಗಳಿಂದ ಸರ್ವವಿಧದಿಂದಲೂ, ಅಲಂಕರಿಸಬೇಕು.

ತಂ ಸಭಾ ಚ ಸಮಿತಿಶ್ಚ ಸೇನಾಚ ॥೧॥

[ಅಥರ್ವ-ಕಾಂ ೧೫, ಅನು ೨, ವ ೯, ಮಂ ೨]

ಸಭ್ಯ ಸಭಾಂ ಮೇ ಪಾಹಿ ಯೇಚ ಸಭ್ಯಾಃ ಸಭಾಸದಃ ॥೨॥

[ಅಥರ್ವ-ಕಾ ೧೯, ಅನು ೬, ವ ೫೫, ಮಂ ೬]

(ತಂ) ಆ ರಾಜಧರ್ಮವನ್ನು (ಸಭಾಚ) ಮೂರುಸಭೆಗಳೂ, (ಸಮಿತಿಶ್ಚ) ಯುದ್ಧ ಮೊದಲಾದುವುಗಳ ವ್ಯವಸ್ಥೆಯೂ, (ಸೇನಾಚ) ಸೈನ್ಯವೂ ಸೇರಿ ಪಾಲಿಸಬೇಕು ॥೧॥ ಸಭಾಸದರ ಮತ್ತು ರಾಜನ ಕರ್ತವ್ಯವೇನೆಂದರೆ-ರಾಜನು ಸಭಾಸದರಲ್ಲಿ ಪ್ರತಿಯೊಬ್ಬನಿಗೂ"(ಸಭ್ಯ) ಸಭಾಯೋಗ್ಯವಾದ ಮುಖ್ಯ ಸಭಾಸದನೇ! ನೀನು (ಮೇ) ನನ್ನ (ಸಭಾಂ) ಸಭೆಯ ಧರ್ಮಯುಕ್ತವ್ಯವಸ್ಥೆಯನ್ನು (ಪಾಹಿ) ಪಾಲಿಸು" ಎಂದು ಆದೇಶಿಸಬೇಕು. ಮತ್ತು (ಯೇಚ) ಯಾರು (ಸಭ್ಯಾಃ) ಸಭಾಯೋಗ್ಯರಾದ (ಸಭಾಸದಃ) ಸಭಾಸದರಿದ್ದಾರೋ, ಅವರೂ ಸಹ ಸಭಾವ್ಯವಸ್ಥೆಯನ್ನು ಪಾಲಿಸಬೇಕು. ॥೨॥ ಇದರ ಅಭಿಪ್ರಾಯವೇನೆಂದರೆ-ರಾಜ್ಯದ ಸ್ವತಂತ್ರಾಧಿಕಾರವನ್ನು ಒಬ್ಬನಿಗೇ ಕೊಡಕೂಡದು; ಆದರೆ ರಾಜ, ಅಂದರೆ ಸಭಾಪತಿಯ ಅಧೀನದಲ್ಲಿ ಸಭೆಯೂ; ಸಭೆಯ ಅಧೀನದಲ್ಲಿ ರಾಜನೂ; ಪ್ರಜೆಗಳ ಅಧೀನದಲ್ಲಿ ರಾಜನೂ ಹಾಗೂ ಸಭೆಯೂ; ಮತ್ತು ರಾಜ ಮತ್ತು ಪ್ರಜೆಗಳ ಅಧೀನದಲ್ಲಿ ಪ್ರಜೆಗಳೂ ಇರಬೇಕು. ಹಾಗೆ ಮಾಡದಿದ್ದರೆ,

ರಾಷ್ಟ್ರಮೇವ ವಿಶ್ಯಾಹಂತಿ ತಸ್ಮಾದ್ರಾಷ್ಟ್ರೇ ವಿಶಂಘಾತುಕಃ ।
ವಿಶಮೇವ ರಾಷ್ಟ್ರ್ಯಾಯಾದ್ಯಾಂ ಕರೋತಿ ತಸ್ಮಾದ್ರಾಷ್ಟ್ರೇ
ವಿಶಮತ್ತಿ ನ ಪುಷ್ಟಂ ಪಶುಂ ಮನ್ಯತ ಇತಿ ॥

[ಶತಪಥ-ಕಾಂ ೧೩, ಪ್ರ ೨, ಬ್ರಾ ೩, ಕಂ ೭-೮]

ರಾಜವರ್ಗವು ಪ್ರಜೆಗಳಿಂದ ಸ್ವತಂತ್ರವಾಗಿಯೂ, ಸ್ವಾಧೀನವಾಗಿಯೂ ಇದ್ದರೆ, (ರಾಷ್ಟ್ರಮೇವ ವಿಶ್ಯಾಹಂತಿ) ರಾಜ್ಯದಲ್ಲಿ ಪ್ರವೇಶಿಸಿ ಪ್ರಜೆಗಳನ್ನು ನಾಶಮಾಡಿಬಿಡುತ್ತದೆ. ಒಬ್ಬನೇ ಪುರುಷನು ಶಾಸಕನಾಗಿದ್ದರೆ, ಆತನು ಸ್ವತಂತ್ರನೂ. ಉನ್ಮತ್ತನೂ ಆಗಿ (ರಾಷ್ಟ್ರೇವಿಶಂ ಘಾತುಕಃ) ಪ್ರಜೆಗಳನ್ನು ನಾಶಮಾಡುತ್ತಾನೆ. ಅಂತಹ ರಾಜನು (ವಿಶಮೇವರಾಷ್ಟ್ರಯಾದ್ಯಾಂಕರೋತಿ) ಪ್ರಜೆಗಳನ್ನೇ ತಿಂದುಬಿಡುತ್ತಾನೆ-ಅತ್ಯಂತ ಪೀಡಿಸುತ್ತಾನೆ. ಆದ್ದರಿಂದ ಒಬ್ಬನನ್ನೇ ರಾಜ್ಯದಲ್ಲಿ ಸ್ವಾಧೀನಶಾಸಕನನ್ನಾಗಿ ಮಾಡಬಾರದು. ಸಿಂಹ ಆಥವಾ ಮಾಂಸಾಹಾರಿಗಳಾದ ಪ್ರಾಣಿಗಳು ಪುಷ್ಟವಾದ ಪಶುಗಳನ್ನು ಕೊಂದು ತಿನ್ನುವಂತೆ (ರಾಷ್ಟ್ರೇವಿಶಮತ್ತಿ) ಸ್ವತಂತ್ರರಾಜನು ಪ್ರಜೆಗಳನ್ನು ನಾಶಮಾಡುತ್ತಾನೆ. ಯಾರನ್ನೂ ತನಗಿಂತಲೂ ಮುಂದುವರಿಯಲು ಬಿಡುವುದಿಲ್ಲ. ಶ್ರೀಮಂತರನ್ನು ಸುಲಿಗೆಮಾಡಿ ಅನ್ಯಾಯವಾದ ದಂಡವನ್ನು ತೆರಿಸಿ, ತನ್ನ ಸ್ವಾರ್ಥವನ್ನು ಸಾಧಿಸಿಕೊಳ್ಳುವನು-ಆದುದರಿಂದ,

ಇಂದ್ರೋಜಯಾತಿ ನ ಪರಾ ಜಯಾತಾ ಅಧಿರಾಜೋ
ರಾಜಸು ರಾಜಯಾತೈ।
ಚರ್ಕೃತ್ಯ ಈಡ್ಯೋ ವಂದ್ಯಶ್ಚೋಪಸದ್ಯೋ ನಮಸ್ಯೋ
ಭವೇಹ ॥

[ಅಥರ್ವ-ಕಾಂ ೬, ಅನು ೧೦, ವ ೯೮, ಮಂ ೧]

ಮಾನವರೆ! ಯಾವನು (ಇಹ) ಈ ಮನುಷ್ಯಸಮುದಾಯದಲ್ಲಿ (ಇಂದ್ರಃ) ಪರಮೈಶ್ವರ್ಯದ ಉತ್ಪಾದಕನೂ, (ಜಯಾತಿ) ಶತ್ರುಗಳನ್ನು ಜಯಿಸುವವನೂ, (ನ ಪರಾಜಯಾತೈ) ಶತ್ರುಗಳಿಗೆ ಸೋಲದವನೂ, (ರಾಜಸು) ರಾಜರಲ್ಲಿಯೂ, (ಅಧಿರಾಜಃ) ಸಭಾಧ್ಯಕ್ಷನಾಗಲು ಅತ್ಯಂತ ಅರ್ಹನೂ, (ಈಡ್ಯಃ) ಶ್ಲಾಘನೀಯಗುಣಕರ್ಮಸ್ವಭಾವಯುಕ್ತನೂ, (ವಂದ್ಯಃ) ಸತ್ಕಾರಯೋಗ್ಯನೂ, (ಚ ಉಪಸದ್ಯಃ) ಹತ್ತಿರ ಹೋಗಲೂ ಮತ್ತು ಶರಣು ಪಡೆಯಲೂ ಯೋಗ್ಯನಾದವನೂ, (ನಮಸ್ಯಃ) ಎಲ್ಲರಿಗೂ ಮಾನನೀಯನೂ, (ಭವ) ಆಗಿರುವನೋ, ಅಂತಹವನನ್ನೇ ಸಭಾಪತಿ ಅಂದರೆ ರಾಜನನ್ನಾಗಿ ನಿಯಮಿಸಿಕೊಳ್ಳಿರಿ.

ಇಮಮಿಂದೇವಾ ಅಸಪತ್ನಗ್ಂ ಸುವಧ್ವಂ ಮಹತೇ ಕ್ಷತ್ರಾಯ ಮಹತೇ ಜ್ಯೈಷ್ಠ್ಯಾಯ।
ಮಹತೇ ಜಾನರಾಜ್ಯಾಯೇಂದ್ರಸ್ಯೇಂದ್ರಿಯಾಯ॥

[ಯಜು-ಅ ೯, ಮಂ ೪೦]

ಹೇ (ದೇವಾಃ) ವಿದ್ವಜ್ಜನರೇ! ರಾಜನೇ! ಮತ್ತು ಪ್ರಜೆಗಳೇ! ನೀವು (ಇಮಂ) ಈ ಪುರುಷನನ್ನು, (ಮಹತೇಕ್ಷತ್ರಾಯ) ಮಹಾನ್ ಚಕ್ರವರ್ತಿ ರಾಜ್ಯವನ್ನು ಪಡೆಯುವುದಕ್ಕೂ (ಮಹತೇಜ್ಯೈಷ್ಠ್ಯಾಯ) ಸರ್ವಶ್ರೇಷ್ಠತ್ವ, (ಮಹತೇ ಜಾನರಾಜ್ಯಾಯ) ದೊಡ್ಡ ದೊಡ್ಡ ವಿದ್ವಾಂಸರುಗಳಿಂದ ಕೂಡಿದ ರಾಜ್ಯದ ಪರಿಪಾಲನೆ, (ಇಂದ್ರಸ್ಯೇಂದ್ರಿಯಾಯ) ಪರಮೈಶ್ವರ್ಯಯುಕ್ತರಾಜ್ಯ ಮತ್ತು ಧನಪಾಲನೆಗಾಗಿಯೂ, (ಅಸಪತ್ನಗ್ಂ ಸುವಧ್ವಂ) ಸಮ್ಮತಿಸಿ, ಸರ್ವತ್ರ ಪಕ್ಷಪಾತರಹಿತನೂ, ಪೂರ್ಣ ವಿದ್ಯಾವಂತನೂ, ವಿನಯಶಾಲಿಯೂ, ಸರ್ವಮಿತ್ರನೂ ಆದ ಸಭಾಪತಿ ರಾಜನನ್ನು ಸರ್ವಾಧೀಶನೆಂದು ಅಂಗೀಕರಿಸಿ, ಸಮಸ್ತ ಭೂಮಂಡಲವನ್ನೂ ಶತ್ರುರಹಿತವಾಗಿ ಮಾಡಿರಿ. ಮತ್ತು—

ಸ್ಥಿರಾ ವಃ ಸಂತ್ವಾಯುಧಾ ಪರಾಣುದೇ ವೀಳೂ ಉತ ಪ್ರತಿಷ್ಕಭೇ।
ಯುಷ್ಮಾಕಮಸ್ತು ತವಿಷೀಪನೀಯಸೀ ಮಾಮಿತ್ಯಸ್ಯ ಮಾಯಿನಃ॥

[ಋಗ್. ಮಂ ೧. ಸೂ. ೩೯. ಮ. ೨]

ಪರಮೇಶ್ವರನು ಉಪದೇಶಿಸುವದೇನೆಂದರೆ—ರಾಜಪುರುಷರೇ! ನೀವು ಯಾವಾಗಲೂ ವಿಜಯವನ್ನು ಹೊಂದುವಂತೆ, (ವಃ) ನಿಮ್ಮ (ಆಯುಧಾ) ಆಗ್ನೇಯ ಮೊದಲಾದ ಅಸ್ತ್ರಗಳೂ, ಶತಿಘ್ನಿ–ಅಂದರೆ ತೋಪುಗಳೂ, ಭುಶುಂಡೀ–ಅಂದರೆ ಬಂದೂಕಗಳೂ, ಬಿಲ್ಲುಬಾಣಗಳೂ ಕತ್ತಿಗಳೂ, ಶತ್ರುಗಳನ್ನು (ಪರಾಣುದೇ) ಸೋಲಿಸುವುದಕ್ಕೂ (ಉತಪ್ರತಿಷ್ಕಭೇ) ಮತ್ತು ತಡೆಯುವುದಕ್ಕೂ, (ವಿಳೂ) ಪ್ರಶಂಸಿತವಾಗಿಯೂ, (ಸ್ಥಿರಾ) ದೃಢವಾಗಿಯೂ, (ಸಂತು) ಇರಲಿ. (ಯುಷ್ಮಾಕಂ)

ಮತ್ತು ನಿಮ್ಮ (ತವಿಷೀ) ಸೇನೆಯು (ಪನೀಯಸೀ) ಪ್ರಶಂಸಾರ್ಹವಾಗಿ, (ಅಸ್ತು) ಇರಲಿ. ಆದರೆ, (ಮಾಮತ್ಯರ್ಯಸ್ಯಮಾಯಿನಃ) ಯಾವನು ನಿಂದಿತವಾದ ಅನ್ಯಾಯಯುಕ್ತಕಾರ್ಯಮಾಡುತ್ತಾನೋ, ಅವನಿಗೆ ಪೂರ್ವೋಕ್ತ ವಸ್ತುಗಳು ಲಭಿಸದಿರಲಿ. ಅಂದರೆ, ಮಾನವನು ಧಾರ್ಮಿಕನಾಗಿರುವವರೆಗೂ, ರಾಜ್ಯವು ವೃದ್ಧಿಹೊಂದುತ್ತಾ ಹೋಗುತ್ತದೆ. ದುರಾಚಾರಿಗಳಾಗುತ್ತಲೇ, ರಾಜ್ಯವು ನಷ್ಟಭ್ರಷ್ಟವಾಗಿ ಹೋಗುತ್ತದೆ. ದೊಡ್ಡ ವಿದ್ವಾಂಸರನ್ನು ವಿದ್ಯಾಸಭೆಯ ಅಧಿಕಾರಿಗಳನ್ನಾಗಿಯೂ, ಧಾರ್ಮಿಕ ವಿದ್ವಾಂಸರನ್ನು ಧರ್ಮಸಭೆಯ ಅಧಿಕಾರಿಗಳನ್ನಾಗಿಯೂ, ಪ್ರಶಂಸಾರ್ಹವಾದ ಧಾರ್ಮಿಕ ಪುರುಷರನ್ನು ರಾಜಸಭೆಯ ಸಭಾಸದರನ್ನಾಗಿಯೂ, ಇವರೆಲ್ಲರಲ್ಲಿಯೂ ಉತ್ತಮವಾದ ಗುಣಕರ್ಮಸ್ವಭಾವಗಳನ್ನುಳ್ಳ ಮಹಾಪುರುಷರನ್ನು ರಾಜಸಭೆಯ ಅಧ್ಯಕ್ಷರನ್ನಾಗಿಯೂ, ಏರ್ಪಡಿಸಿಕೊಂಡು, ದೇಶವನ್ನು ಎಲ್ಲಾ ರೀತಿಯಿಂದಲೂ ಉನ್ನತಿಗೆ ತರಬೇಕು. ಈ ಮೂರು ಸಭೆಗಳ ಸಮ್ಮತಿಯಿಂದ ರಾಜನೀತಿಯ ಉತ್ತಮ ನಿಯಮಗಳ ವಿಧಾನವಾಗಬೇಕು. ಮತ್ತು ಎಲ್ಲರೂ ಆ ನಿಯಮಗಳಿಗೆ ಅಧೀನರಾಗಿ ನಡೆಯಬೇಕು. ಸರ್ವಹಿತಸಾಧಕವಾದ ಕಾರ್ಯಗಳ ಬಗ್ಗೆ ನಿಮರ್ಶೆ ಮಾಡಬೇಕು. ಸರ್ವಹಿತಸಾಧನೆಯಲ್ಲಿ ಪರತಂತ್ರರಾಗಿಯೂ, ಧರ್ಮಯುಕ್ತವಾದ ತಮ್ಮ ತಮ್ಮ ಕಾರ್ಯಗಳಲ್ಲಿ ಸ್ವತಂತ್ರರಾಗಿಯೂ ಇರಬೇಕು. ಇನ್ನು ಆ ಸಭಾಪತಿಯ ಗುಣಗಳು ಹೇಗಿರಬೇಕೆಂದರೆ—

ಇಂದ್ರಾನಿಲಯಮಾರ್ಕಾಣಾಮಗ್ನೇಶ್ಚ ವರುಣಸ್ಯ ಚ।
ಚಂದ್ರವಿತ್ತೇಶಯೋಶ್ಚೈವ ಮಾತ್ರಾ ನಿರ್ಹೃತ್ಯ ಶಾಶ್ವತೀಃ ॥೧॥
ತಪತ್ಯಾದಿತ್ಯವಚ್ಚೈವ ಚಕ್ಷೂಂಷಿ ಚ ಮನಾಂಸಿ ಚ।
ನ ಚೈನಂ ಭುವಿ ಶಕ್ನೋತಿ ಕಶ್ಚಿದಪ್ಯಭಿವೀಕ್ಷಿತುಂ ॥೨॥
ಸೋಽಗ್ನಿರ್ಭವತಿ ವಾಯುಶ್ಚ ಸೋಽರ್ಕಃ ಸೋಮಃ ಸ ಧರ್ಮರಾಟ್।
ಸ ಕುಬೇರಃ ಸ ವರುಣಃ ಸ ಮಹೇಂದ್ರಃ ಪ್ರಭಾವತಃ ॥೩॥

[ಮನು ೭; ೪, ೬, ೭]

ಸಭಾಧ್ಯಕ್ಷನಾದ ರಾಜನು ಇಂದ್ರ ಅಂದರೆ ಮಿಂಚಿನಂತೆ ವೇಗವಂತನೂ, ಐಶ್ವರ್ಯೋತ್ಪಾದಕನೂ, ವಾಯುವಿನಂತೆ ಸರ್ವರಿಗೂ ಪ್ರಾಣಪ್ರಿಯನೂ, ಹೃದ್ಗತಭಾವಜ್ಞನೂ, ಯಮ ಅಂದರೆ, ಪಕ್ಷಪಾತರಹಿತನ್ಯಾಯಾಧೀಶನಂತೆ ವರ್ತಿಸುವವನೂ, ಸೂರ್ಯನಂತೆ ನ್ಯಾಯ-ವಿದ್ಯಾ-ಧರ್ಮ ಪ್ರಕಾಶಕನೂ, ಅಂಧಕಾರವನ್ನು ಅಂದರೆ, ಅವಿದ್ಯಾ ಅನ್ಯಾಯಗಳನ್ನು ವಿರೋಧಿಸುವವನೂ, ಅಗ್ನಿಯಂತೆ ದುಷ್ಟರನ್ನು ಭಸ್ಮಮಾಡುವವನೂ, ವರುಣ ಅಂದರೆ, ಬಂಧಕನಂತೆ ದುಷ್ಟರನ್ನು ಆನೇಕರೀತಿಯಿಂದ ಬಂಧಿಸುವವನೂ, ಚಂದ್ರನಂತೆ ಸತ್ಪುರುಷರನ್ನು ಆನಂದಪಡಿಸುವವನೂ, ಧನಾಧ್ಯಕ್ಷನಂತೆ ಬೊಕ್ಕಸವನ್ನು ಐಶ್ವರ್ಯದಿಂದ ತುಂಬಿಸುವವನೂ, ಆಗಿರಬೇಕು ॥೧॥ ಯಾವನು ಸೂರ್ಯನಂತೆ ಪ್ರಕಾಶಶಾಲಿಯಾಗಿ ತನ್ನ ತೇಜಸ್ಸಿನಿಂದ ಜನರೆಲ್ಲರ ಬಾಹ್ಯಚಕ್ಷು ಮತ್ತು ಅಂತರ್ಮನಗಳನ್ನು ದೀಪ್ತಿಗೊಳಿಸುತ್ತಾನೋ, ಯಾವನನ್ನು ಜಗತ್ತಿನಲ್ಲಾರೂ ಕುಟಿಲದೃಷ್ಟಿಯಿಂದ ನೋಡಲಾರರೋ ॥೨॥ ಯಾವನು ತನ್ನ ಪ್ರಭಾವದಿಂದ ಅಗ್ನಿಯೂ, ವಾಯುವೂ, ಸೂರ್ಯನೂ, ಚಂದ್ರನೂ, ಧರ್ಮಪ್ರಕಾಶನೂ, ಐಶ್ವರ್ಯವರ್ಧಕನೂ, ದುಷ್ಟಬಂಧಕನೂ, ಮಹದೈಶ್ವರ್ಯಯುಕ್ತನೂ, ಆಗಿರುವನೋ, ಅವನೇ ಸಭಾಧ್ಯಕ್ಷನಾಗಲರ್ಹನು. ನಿಜವಾದ ರಾಜನು ಯಾವನೆಂದರೆ,

ಸ ರಾಜಾ ಪುರುಷೋ ದಂಡಃ ಸ ನೇತಾ ಶಾಸಿತಾ ಚ ಸಃ ।
ಚತುರ್ಣಾಮಾಶ್ರಮಾಣಾಂ ಚ ಧರ್ಮಸ್ಯ ಪ್ರತಿಭೂಃ ಸ್ಮೃತಃ॥
ದಂಡಃ ಶಾಸ್ತಿ ಪ್ರಜಾಃ ಸರ್ವಾ ದಂಡ ಏವಾಭಿರಕ್ಷತಿ ।
ದಂಡಃ ಸುಪ್ತೇಷು ಜಾಗರ್ತಿ ದಂಡಂ ಧರ್ಮಂ ವಿದುರ್ಬುಧಾಃ॥
ಸಮೀಕ್ಷ್ಯ ಸ ಧೃತಃ ಸಮ್ಯಕ್ ಸರ್ವಾ ರಂಜಯತಿ ಪ್ರಜಾಃ ।
ಅಸಮೀಕ್ಷ್ಯ ಪ್ರಣೀತಸ್ತು ವಿನಾಶಯತಿ ಸರ್ವತಃ ॥೩॥
ದುಷ್ಯೇಯುಃ ಸರ್ವವರ್ಣಾಶ್ಚ ಭಿದ್ಯೇರನ್ ಸರ್ವಸೇತವಃ।
ಸರ್ವಲೋಕಪ್ರಕೋಪಶ್ಚ ಭವೇದ್ದಂಡಸ್ಯ ವಿಭ್ರಮಾತ್ ॥೪॥
ಯತ್ರಶ್ಯಾಮೋ ಲೋಹಿತಾಕ್ಷೋ ದಂಡಶ್ಚರತಿ ಪಾಪಹಾ ।
ಪ್ರಜಾಸ್ತತ್ರ ನಮುಹ್ಯಂತಿ ನೇತಾ ಚೇತ್ತಾಸ್ಫು ಪಶ್ಯತಿ ॥೫॥

ತಸ್ಯಾಹುಃ ಸಂಪ್ರಣೇತಾರಂ ರಾಜಾನಂ ಸತ್ಯವಾದಿನಂ ।
ಸಮೀಕ್ಷ್ಯ ಕಾರಿಣಂ ಪ್ರಾಜ್ಞಂ ಧರ್ಮಕಾಮಾರ್ಥಕೋವಿದಂ ॥
ತಂ ರಾಜಾ ಪ್ರಣಯನ್ ಸಮ್ಯಕ್ ತ್ರಿವರ್ಗೇಣಾಭಿವರ್ಧತೇ ।
ಕಾಮಾತ್ಮಾ ವಿಷಮಃ ಕ್ಷುದ್ರೋ ದಂಡೇನೈವ ನಿಹನ್ಯತೇ ॥೭॥
ದಂಡೋ ಹಿ ಸುಮಹತ್ತೇಜೋ ದುರ್ಧರಶ್ಚಾಕೃತಾತ್ಮಭಿಃ ।
ಧರ್ಮಾದ್ವಿಚಲಿತಂ ಹಂತಿ ನೃಪಮೇವ ಸಬಾಂಧವಮ್ ॥೮॥
ಸೋಽಸಹಾಯೇನ ಮೂಢೇನ ಲುಬ್ಧೇನಾಕೃತಬುದ್ಧಿನಾ ।
ನ ಶಕ್ಯೋ ನ್ಯಾಯತೋ ನೇತುಂ ಸಕ್ತೇನ ವಿಷಯೇಷು ಚ ॥೯॥
ಶುಚಿನಾ ಸತ್ಯಸಂಧೇನ ಯಥಾಶಾಸ್ತ್ರಾನುಸಾರಿಣಾ ।
ಪ್ರಣೇತುಂ ಶಕ್ಯತೇ ದಂಡಃ ಸುಸಹಾಯೇನ ಧೀಮತಾ ॥೧೦॥

[ಮನು ೭, ೧೭-೧೯, ೨೪-೨೮, ೩೦-೩೧]

* ದಂಡವೇ ನಿಜವಾದ ಪುರುಷ, ರಾಜಾ; ಅದೇ ಧರ್ಮವನ್ನು ಪ್ರಚಾರಪಡಿಸುತ್ತದೆ. ಅದೇ ಜನಗಳನ್ನು ಆಳುತ್ತದೆ. ಅದೇ ಚತುರ್ವರ್ಣಾಶ್ರಮಧರ್ಮಗಳಿಗೆ ಹೊಣೆಯಾಗಿರುತ್ತದೆ. ॥೧॥ ಅದೇ ಪ್ರಜೆಗಳನ್ನು ಆಳಿ ಕಾಪಾಡುತ್ತದೆ. ನಿದ್ರಿಸುತ್ತಿರುವ ಪ್ರಜಾಜನರಲ್ಲಿ ಅದೇ ಎಚ್ಚರದಿಂದಿರುತ್ತದೆ. ಆದುದರಿಂದಲೇ ವಿದ್ವಾಂಸರು ದಂಡವನ್ನು ಧರ್ಮವೆನ್ನುತ್ತಾರೆ, ॥೨॥ ವಿವೇಕಸಹಿತವಾಗಿ ಪರಿಸಲ್ಪಟ್ಟರೆ ದಂಡವು ಪ್ರಜೆಗಳೆಲ್ಲರನ್ನೂ ಆನಂದಗೊಳಿಸುತ್ತದೆ. ಮತ್ತು ಅವಿವೇಕದಿಂದ ಪರಿಸಲ್ಪಟ್ಟರೆ, ಅದು ಎಲ್ಲಾ ಕಡೆಯಿಂದಲೂ ರಾಜನನ್ನೇ ನಾಶಗೊಳಿಸುತ್ತದೆ. ॥೩॥ ದಂಡವೇ ಇಲ್ಲದಿದ್ದರೆ, ವರ್ಣಗಳೆಲ್ಲಾ ದೂಷಿತವಾಗಿ, ಸಾಮಾಜಿಕ ಕಟ್ಟಳೆಗಳೆಲ್ಲಾ ಛಿನ್ನಭಿನ್ನವಾಗಿ ಹೋಗುತ್ತದೆ. ಕೃಷ್ಣವರ್ಣದ, ಕೆಂಗಣ್ಣಿನ, ಭಯಂಕರವಾದ ಪುರುಷನಂತೆ ದಂಡವು ಪಾಪಹಾರಿಯಾಗಿ ಚಲಿಸುವಲ್ಲಿ ಪ್ರಜೆಗಳು ಮೋಹಗೊಳ್ಳದೆ ಆನಂದದಿಂದಿರುತ್ತಾರೆ. ಆದರೆ, ದಂಡವನ್ನು ನಡೆಸುವವನು ನಿಷ್ಪಕ್ಷಪಾತನೂ,

* ದಂಡಶಬ್ದವು "ಶಿಕ್ಷೆಯಿಂದ ಕೂಡಿದ ಕಾನೂನು" ಎಂಬ ಅರ್ಥದಲ್ಲಿ (Law) ಉಪಯೋಗಿಸಲ್ಪಟ್ಟಿದೆ.

ವಿದ್ವಾಂಸನೂ ಆಗಿದ್ದಲ್ಲಿ ಮಾತ್ರ ಆದು ಸಂಭವ ॥೫॥ ಸತ್ಯವಾದಿಯೂ, ವಿಚಾರಪರನೂ, ಬುದ್ಧಿವಂತನೂ ಧರ್ಮಾರ್ಥಕಾಮಸಾಧಕನೂ ಆದ ರಾಜನೇ ಈ ಭಯಂಕರವಾದ ದಂಡವನ್ನು ಪ್ರಯೋಗಿಸುವುದಕ್ಕೆ ಅರ್ಹನೆಂದು ವಿದ್ವಾಂಸರು ಹೇಳುತ್ತಾರೆ ॥೬॥ ರಾಜನು ಉತ್ತಮರೀತಿಯಿಂದ ದಂಡವನ್ನು ನಡೆಸಿದರೆ, ಅವನು ಧರ್ಮಾರ್ಥಕಾಮಗಳ ಸ್ಥಿತಿಯನ್ನು ವೃದ್ಧಿಪಡಿಸುತ್ತಾನೆ. ಆದರೆ, ವಿಷಯಲಂಪಟನೂ, ಕುಟಿಲನೂ, ಆಸೂಯಾಪರನೂ, ಕ್ಷುದ್ರನೂ, ನೀಚಬುದ್ಧಿಯುಳ್ಳವನೂ, ನ್ಯಾಯಾಧೀಶ ರಾಜನಾಗಿದ್ದರೆ, ಅದೇ ದಂಡವು ಅವನನ್ನು ನಾಶಮಾಡಿಬಿಡುತ್ತದೆ. ॥೭॥ ದಂಡವು ಬಹಳ ತೇಜಸ್ವಿಯಾದಕಾರಣ, ಅವಿದ್ವಾಂಸನೂ, ಅಧಾರ್ಮಿಕನೂ, ಆದ ರಾಜನು ಅದನ್ನು ಧರಿಸಲಾರನು. ದಂಡವೇ ಅಂತಹ ಧರ್ಮರಹಿತನಾದ ರಾಜನನ್ನು ಕುಟುಂಬಸಹಿತ ನಾಶ ಮಾಡಿಬಿಡುತ್ತದೆ. ॥೮॥ ಯಾವನು ಆಪ್ತಪುರುಷರ ಸಹಾಯ, ವಿದ್ಯೆ, ಮತ್ತು ಸುಶಿಕ್ಷಣಗಳಿಂದ ರಹಿತನೂ, ವಿಷಯಾಸಕ್ತನೂ, ಮೂಢನೂ ಆಗಿರುತ್ತಾನೋ, ಅವನು ನ್ಯಾಯದಿಂದ ದಂಡವನ್ನು ಪ್ರಯೋಗಿಸಲು, ಸಮರ್ಥನಾಗಲಾರನು. ॥೯॥ ಮತ್ತು ಯಾವನು ಪವಿತ್ರಾತ್ಮನೂ, ಸತ್ಯಾಚಾರವಂತನೂ, ಸತ್ಪುರುಷಸಂಗಿಯೂ, ಯಥಾವತ್ತಾಗಿ ನೀತಿಶಾಸ್ತ್ರದಂತೆ ನಡೆಯುವವನೂ, ಶ್ರೇಷ್ಠಪುರುಷರ ಸಹವಾಸವುಳ್ಳವನೂ ಆದ ಬುದ್ಧಿಶಾಲಿಯೋ, ಅವನೇ ನ್ಯಾಯವಾದ ದಂಡವನ್ನು ಪ್ರಯೋಗಿಸಲು ಸಮರ್ಥನಾಗಿರುತ್ತಾನೆ. ॥೧೧॥ ಆದುದರಿಂದ,

ಸೈನಾಪತ್ಯಂ ಚ ರಾಜ್ಯಂ ಚ ದಂಡನೇತೃತ್ವ ಮೇವ ಚ ।
ಸರ್ವಲೋಕಾಧಿಪತ್ಯಂ ಚ ವೇದಶಾಸ್ತ್ರವಿದರ್ಹತಿ ॥೧೦॥

ದಶಾವರಾ ವಾ ಪರಿಷದ್ಯಂ ಧರ್ಮಂ ಪರಿಕಲ್ಪಯೇತ್ ।
ತ್ರ್ಯವರಾ ವಾಪಿ ವೃತ್ತಸ್ಥಾ ತಂ ಧರ್ಮಂ ನ ವಿಚಾಲಯೇತ್ ॥

ತ್ರ್ಯವಿದ್ಯೋ ಹೈತುಕಸ್ತರ್ಕೀ ನೈರುಕ್ತೋ ಧರ್ಮಪಾಠಕಃ ।
ತ್ರಯಶ್ಚಾಶ್ರಮಿಣಃ ಪೂರ್ವೇ ಪರಿಷತ್ಸ್ಯಾದ್ದಶಾವರಾ ॥೩॥

ಋಗ್ವೇದವಿದ್ಯಜುರ್ವಿಚ್ಚ ಸಾಮವೇದವಿದೇವ ಚ ।
ತ್ರ್ಯವರಾಪರಿಷಜ್ಞೇಯಾ ಧರ್ಮಸಂಶಯನಿರ್ಣಯೇ ॥೪॥

ಏಕೋಪಿ ವೇದವಿದ್ಧರ್ಮಂ ಯಂ ವ್ಯವಸ್ಯೇದ್ದ್ವಿಜೋತ್ತಮಃ ।
ಸ ವಿಜ್ಞೇಯಃ ಪರೋಧರ್ಮೋ ನಾಜ್ಞಾನಾಮುದಿತೋಽ-
ಯುತೈಃ ॥೫॥

ಅವ್ರತಾನಾಮವಮಂತ್ರಾಣಾಂ ಜಾತಿಮಾತ್ರೋಪಜೀವಿನಾಂ ।
ಸಹಸ್ರಶಃ ಸಮೇತಾನಾಂ ಪರಿಷತ್ವಂ ನ ವಿದ್ಯತೇ ॥೬॥
ಯಂ ವದಂತಿ ತಮೋಭೂತಾ ಮೂರ್ಖಾ ಧರ್ಮಮತದ್ವಿದಃ ।
ತತ್ಪಾಪಂ ಶತಧಾಭೂತ್ವಾ ತದ್ಪಕ್ತ್ರಾನನುಗಚ್ಛತಿ ॥೭॥

[ಮನು ೧೨, ೧೦೦-೧೧೦-೧೧೫]

ಸಮಸ್ತ ಸೈನ್ಯ ಹಾಗೂ ಸೇನಾಪತಿಗಳ ಮೇಲಿನ ಅಧಿಕಾರ, ರಾಜ್ಯಾಧಿಕಾರ, ನ್ಯಾಯವ್ಯವಸ್ಥೆಯ ಸರ್ವಕಾರ್ಯಾಧಿಪತ್ಯ ಮತ್ತು ಸರ್ವರ ಮೇಲಿನ ಸಾರ್ವಭೌಮಾಧಿಕಾರ—ಈ ನಾಲ್ಕು ಪದವಿಗಳಿಗೂ, ವೇದಶಾಸ್ತ್ರಪಾರಂಗತರೂ, ಪೂರ್ಣವಿದ್ವಾಂಸರೂ, ಧರ್ಮಾತ್ಮರೂ, ಜಿತೇಂದ್ರಿಯರೂ, ಆದ ಸುಶೀಲಪುರುಷರನ್ನೇ ನೇಮಿಸಬೇಕು. ಅಂದರೆ-ಪ್ರಧಾನ ಸೇನಾಪತಿ, ಪ್ರಧಾನ ರಾಜ್ಯಾಧಿಕಾರಿ, ಪ್ರಧಾನ ನ್ಯಾಯಾಧೀಶ, ಮತ್ತು ಪ್ರಧಾನರಾಜ—ಈ ನಾಲ್ಕುಮಂದಿ ಎಲ್ಲಾ ವಿದ್ಯೆಗಳಲ್ಲಿಯೂ ಪಾರಂಗತರಾಗಿರಬೇಕು. ॥೧॥ ಕಮ್ಮಿಯೆಂದರೆ ಕಮ್ಮಿ ಹತ್ತು ಮಂದಿ ವಿದ್ವಾಂಸರ ಅಥವಾ ಬಹಳ ಕಡಿಮೆಯೆಂದರೆ ಮೂರುಮಂದಿ ವಿದ್ವಾಂಸರ ಸಭೆಯು ಯಾವ ವ್ಯವಸ್ಥೆಯನ್ನು ಮಾಡುವುದೋ ಆ ಧರ್ಮ ಅಂದರೆ ವ್ಯವಸ್ಥೆಯನ್ನು ಯಾರೂ ಉಲ್ಲಂಘಿಸಬಾರದು. ॥೨॥ ಈ ಸಭೆಯಲ್ಲಿ ನಾಲ್ಕು ವೇದಗಳು, ನ್ಯಾಯಶಾಸ್ತ್ರ, ನಿರುಕ್ತ, ಧರ್ಮಶಾಸ್ತ್ರ ಮೊದಲಾದುವನ್ನರಿತ ವಿದ್ವಾಂಸರೇ ಸಭಾಸದರಾಗಬೇಕು. ಆದರೆ—ಆ ಸಭಾಸದರು ಬ್ರಹ್ಮಚಾರಿಗಳೂ, ಗೃಹಸ್ಥರೂ, ವಾನಪ್ರಸ್ಥರೂ ಆಗಿದ್ದಲ್ಲಿ ಅವರುಗಳಿಂದ ಕೂಡಿದ ಆ ಸಭೆಯು ಕನಿಷ್ಟ ಪಕ್ಷ ಹತ್ತು ಮಂದಿ ವಿದ್ವಾಂಸರಿಗಿಂತ ಕಡಿಮೆಯಿಲ್ಲದುದಾಗಿರಬೇಕು. ॥೩॥ ಯಾವ ಸಭೆಯಲ್ಲಿ ಋಗ್ವೇದ, ಯಜುರ್ವೇದ ಮತ್ತು ಸಾಮವೇದವನ್ನರಿತ ಮೂರುಮಂದಿ ಸಭಾಸದರಿದ್ದು ವ್ಯವಸ್ಥೆಮಾಡುತ್ತಾರೋ ಆ ಸಭೆಯು ಮಾಡಿದ ವ್ಯವಸ್ಥೆಯನ್ನೂ ಸಹ ಯಾವ ಪ್ರಜೆಯೂ

ಉಲ್ಲಂಘಿಸಬಾರದು. ॥೪॥ ಸರ್ವವೇದಪಾರಂಗತನಾದ, ದ್ವಿಜರಲ್ಲಿ ಶ್ರೇಷ್ಠನಾದ, ಒಬ್ಬನೇ ಒಬ್ಬ ಸಂನ್ಯಾಸಿಯು ಮಾಡಿದ ವ್ಯವಸ್ಥೆಯನ್ನು ಸರ್ವ ಶ್ರೇಷ್ಠವೆಂದರಿಯಬೇಕು. ಏಕೆಂದರೆ. ಸಾವಿರಾರು, ಲಕ್ಷಾಂತರ, ಕೋಟ್ಯಂತರಮಂದಿ ಅಜ್ಞಾನಿಗಳು ಮಾಡಿದ ವ್ಯವಸ್ಥೆಯೇ ಆದರೂ ಅದೆಂದಿಗೂ ಅಂಗೀಕಾರಾರ್ಹವಾದುದಾಗಲಾರದು. ॥೫॥ ಬ್ರಹ್ಮಚರ್ಯ, ಸತ್ಯಭಾಷಣ, ಮೊದಲಾದ ವ್ರತಗಳಿಂದಲೂ, ವೇದವಿದ್ಯೆ ಅಥವಾ ವಿಚಾರದಿಂದಲೂ ರಹಿತರಾದ, ಹುಟ್ಟಿನಿಂದಲೇ ದೊಡ್ಡವರೆಂದು ಕೊಂಡು ಶೂದ್ರರಂತೆ ವರ್ತಿಸುವ ಜನರು ಸಾವಿರಾರುಮಂದಿ ಗುಂಪು ಸೇರಿದರೂ, ಅದು ಸಭೆಯೆನಿಸಲಾರದು ॥ ೬ ॥ ಅಜ್ಞಾನಿಗಳೂ ಮೂರ್ಖರೂ, ವೇದಗಳನ್ನರಿಯದವರೂ, ಆದ ಪುರುಷರು ಯಾವ ವನ್ನು ಧರ್ಮವೆಂದು ಹೇಳುತ್ತಾರೋ, ಅದನ್ನೆಂದಿಗೂ ಸ್ವೀಕರಿಸ ಬಾರದು. ಏಕೆಂದರೆ, ಮೂರ್ಖರಿಂದ ಹೇಳಲ್ಪಟ್ಟ ಧರ್ಮವನ್ನಾಚರಿ ಸುವವನನ್ನು, ನೂರಾರು ಪ್ರಕಾರವಾದ ಪಾಪಗಳು ಹಿಂಬಾಲಿಸುತ್ತವೆ. ॥೭॥ ಆದುದರಿಂದ, ವಿದ್ವತ್ಸಭೆ, ಧರ್ಮಸಭೆ, ಮತ್ತು ರಾಜಸಭೆ-- ಈ ಮೂರರಲ್ಲಿಯೂ, ಮೂರ್ಖರನ್ನೆಂದಿಗೂ ಕೂಡಿಸಾಕಿಕೊಳ್ಳ ಬಾರದು. ಆದರೆ, ಸದಾ ಧಾರ್ಮಿಕರೂ, ವಿದ್ವಾಂಸರೂ, ಆದ ಪುರುಷರನ್ನೇ ನೇಮಿಸಬೇಕು. ಮತ್ತು ಎಲ್ಲರೂ ಈರೀತಿಯಲ್ಲಿ :--

ತ್ರೈವಿದ್ಯೇಭ್ಯಸ್ತ್ರಯೀಂ ವಿದ್ಯಾಂ ದಂಡನೀತಿಂ ಚ ಶಾಶ್ವತೀಮ್।
ಆನ್ವೀಕ್ಷಿಕೀಂ ಚಾತ್ಮವಿದ್ಯಾಂ ವಾರ್ತಾರಂಭಾಂಶ್ಚ

ಲೋಕತಃ ॥೮॥

ಇಂದ್ರಿಯಾಣಾಂ ತಿಯೀ ಯೋಗಂ ಸಮಾತಿಷ್ಠೇದ್ದಿವಾನಿಶಂ।
ಜಿತೇಂದ್ರಿಯೋ ಹಿ ಶಕ್ನೋತಿ ವಶೇ ಸ್ಥಾಪಯಿತುಂ

ಪ್ರಜಾಃ ॥೨॥

ದಶಕಾಮಸಮುತ್ಥಾನಿ ತಥಾಷ್ಟೌ ಕ್ರೋಧಜಾನಿ ಚ।
ವ್ಯಸನಾನಿ ದುರಂತಾನಿ ಪ್ರಯತ್ನೇನ ವಿವರ್ಜಯೇತ್ ॥೩॥

ಕಾಮಜೇಷು ಪ್ರಸಕ್ತೋ ಹಿ ವ್ಯಸನೇಷು ಮಹೀಪತಿಃ।
ವಿಯುಜ್ಯತೇಽರ್ಥಧರ್ಮಾಭ್ಯಾಂ ಕ್ರೋಧಜೇಷ್ವಾತ್ಮನೈವ ತು ॥

ಮೃಗಯಾಕ್ಷೋ ದಿವಾಸ್ವಪ್ನಃ ಪರೀವಾದಃ ಸ್ತ್ರಿಯೋ ಮದಃ ।
ತೌರ್ಯತ್ರಿಕಂ ವೃಥಾಟ್ಯಾ ಚ ಕಾಮಜೋ ದಶಕೋ ಗಣಃ ॥೫॥
ಪೈಶುನ್ಯಂ ಸಾಹಸಂ ದ್ರೋಹ ಈರ್ಷ್ಯಾಸೂಯಾರ್ಥದೂಷಣಂ
ವಾಗ್ದಂಡಜಂ ಚ ಪಾರುಷ್ಯಂ ಕ್ರೋಧಜೋಽಪಿ ಗಣೋಷ್ಟಕಃ॥
ದ್ವಯೋರಪ್ಯೇತಯೋರ್ಮೂಲಂ ಯಂ ಸರ್ವೇ ಕವಯೋ-
ವಿದುಃ ।
ತಂ ಯತ್ನೇನ ಜಯೇಲ್ಲೋಭಂ ತಜ್ಜಾವೇತಾವುಭೌ ಗಣೌ॥೬॥
ಪಾನಮಕ್ಷಾಃ ಸ್ತ್ರಿಯಶ್ಚೈವ ಮೃಗಯಾ ಚ ಯಥಾಕ್ರಮಮ್।
ಏತತ್ಕಷ್ಟತಮಂ ವಿದ್ಯಾಚ್ಚತುಷ್ಕಂ ಕಾಮಜೇ ಗಣೇ ॥೮॥
ದಂಡಸ್ಯ ಪಾತನಂ ಚೈವ ವಾಕ್ಪಾರುಷ್ಯಾರ್ಥದೂಷಣೇ ।
ಕ್ರೋಧಜೇಽಪಿ ಗಣೇವಿದ್ಯಾತ್ಕಷ್ಟಮೇತತ್ತ್ರಿಕಂ ಸದಾ ॥೯॥
ಸಪ್ತಕಸ್ಯಾಸ್ಯವರ್ಗಸ್ಯ ಸರ್ವತ್ರೈವಾನುಷಂಗಿಣಃ ।
ಪೂರ್ವಂ ಪೂರ್ವಂ ಗುರುತರಂ ವಿದ್ಯಾದ್ವ್ಯಸನಮಾತ್ಮವಾನ್ ॥
ವ್ಯಸನಸ್ಯ ಚ ಮೃತ್ಯೋಶ್ಚ ವ್ಯಸನಂ ಕಷ್ಟಮುಚ್ಯತೇ ।
ವ್ಯಸನ್ಯಧೋಽಧೋ ವ್ರಜತಿ ಸ್ವರ್ಯಾತ್ಯನ್ಯಸನೀ ಮೃತಃ॥೧೧॥

[ಮನು ೭। ೪೫-೫೬]

ಯಾವಾಗ ಜನರು, ಚತುರ್ವೇದಗಳ ಕರ್ಮೋಪಾಸನಾಜ್ಞಾನ ವಿದ್ಯೆಯನ್ನರಿತವರಿಂದ ಆ ಮೂರು ವಿದ್ಯೆಗಳನ್ನೂ, ಸನಾತನ ದಂಡ ನೀತಿಯನ್ನೂ, ನ್ಯಾಯ ವಿದ್ಯೆಯನ್ನೂ ಆತ್ಮವಿದ್ಯೆ, ಅಂದರೆ, ಪರಮಾತ್ಮನ ಗುಣಕರ್ಮಸ್ವಭಾವಗಳ ರೂಪವನ್ನು ಯಥಾವತ್ತಾಗಿ ತಿಳಿಯುವ ಬ್ರಹ್ಮವಿದ್ಯೆಯನ್ನೂ, ಜನಗಳಿಂದ ವಾರ್ತಾವ್ಯವಹಾರವನ್ನೂ ಕಲಿತು, ಸಭಾಸದರು ಅಥವಾ ಸಭಾಪತಿಯಾಗಲು ಅರ್ಹತೆಯನ್ನು ಪಡೆಯುತ್ತಾರೋ ಆಗಲೇ ಅವರು ರಾಜ ಅಥವಾ ರಾಜಸಭಾಸದಸ್ಯ ರಾಗಬಲ್ಲರು. ॥೧॥ ಎಲ್ಲಾ ಸಭಾಸದರೂ ಮತ್ತು ಸಭಾಧ್ಯಕ್ಷರೂ ಇಂದ್ರಿಯಗಳನ್ನು ಜಯಿಸಿ, ಅಂದರೆ, ತಮ್ಮವಶದಲ್ಲಿಟ್ಟುಕೊಂಡು, ಸದಾ ಧರ್ಮರತರಾಗಿದ್ದು, ಅಧರ್ಮದಿಂದ ದೂರವಿರಬೇಕು. ಹಾಗೂ

ಇತರರನ್ನು ಅಧರ್ಮದಿಂದ ದೂರವಿರಿಸಬೇಕು. ಆದುದರಿಂದ ಹಗಲಿರುಳೂ ನಿಯಮಿತ ಸಮಯದಲ್ಲಿ ಯೋಗಾಭ್ಯಾಸವನ್ನೂ ಸಹ ಮಾಡುತ್ತಿರಬೇಕು. ಯಾವನು ಜಿತೇಂದ್ರಿಯನಾಗನೋ–ಅಂದರೆ ತನ್ನ ಇಂದ್ರಿಯಗಳು, ಮನಸ್ಸು ಮತ್ತು ಶರೀರವೆಂಬ ಪ್ರಜೆಗಳನ್ನು ಜಯಿಸನೋ, ಅವನು ಹೊರಗಿನ ಪ್ರಜೆಗಳನ್ನು ಎಂದಿಗೂ ವಶಪಡಿಸಿಕೊಳ್ಳಲಾರನು. ॥೨॥ ಯಾವವುಗಳಲ್ಲಿ ಸಿಕ್ಕಿಕೊಂಡ ಮಾನವನು ಅತಿ ಕಷ್ಟದಿಂದ ಪಾರಾಗಬಲ್ಲನೋ ಅಂತಹ ಕಾಮದಿಂದ ಹುಟ್ಟುವ ಹತ್ತು ಮತ್ತು ಕ್ರೋಧದಿಂದ ಹುಟ್ಟುವ ಎಂಟು ದುರ್ವ್ಯಸನಗಳನ್ನು ದೃಢೋತ್ಸಾಹಿಯಾಗಿ, ಯತ್ನಪೂರ್ವಕವಾಗಿ ಬಿಟ್ಟುಬಿಡಬೇಕು. ॥೩॥ ಕಾಮದಿಂದ ಹುಟ್ಟುವ ಹತ್ತು ದುಷ್ಟ ವ್ಯಸನಗಳಲ್ಲಿ ಸಿಕ್ಕಿಕೊಂಡ ರಾಜನು, ರಾಜ್ಯ, ಧನ ಮೊದಲಾದುವುಗಳಿಂದಲೂ, ಧರ್ಮದಿಂದಲೂ, ರಹಿತನಾಗುತ್ತಾನೆ. ಮತ್ತು ಕ್ರೋಧದಿಂದ ಹುಟ್ಟುವ ಎಂಟು ಕೆಟ್ಟ ವ್ಯಸನಗಳಲ್ಲಿ ಸಿಕ್ಕಿಕೊಂಡ ಪುರುಷನು ದೇಹವನ್ನೂ ಸಹ ಕಳೆದುಕೊಳ್ಳುತ್ತಾನೆ. ॥೪॥ ಬೇಟೆಯಾಡುವುದು; ಅಕ್ಷ ಅಂದರೆ, ಪಗಡೆಯಾಡುವುದು; ಜೂಜಾಡುವುದು; ಹಗಲಲ್ಲಿ ನಿದ್ರಿಸುವುದು; ಕಾಮಕಥೆ ಅಥವಾ ಪರಸಿಂದೆ ಮಾಡುವುದು; ಅತಿ ಸ್ತ್ರೀಸಂಗ; ಮಾದಕ ದ್ರವ್ಯ ಅಂದರೆ, ಮದ್ಯ, ಅಫೀಮು, ಭಂಗಿ, ಗಾಂಜಾ, ಚರಸು ಮೊದಲಾದ ಮತ್ತೇರಿಸುವ ವಸ್ತುಗಳ ಸೇವನೆ; ಗಾನ, ವಾದನ, ನರ್ತಿಸುವುದು ಮತ್ತು ನರ್ತನ ಮಾಡಿಸುವುದು; ಅವನ್ನು ಕೇಳುವುದು ಮತ್ತು ನೋಡುವುದು; ವ್ಯರ್ಥವಾದ ಅಲೆದಾಟ–ಇವು ಹತ್ತೂ ಕಾಮಜನಿತವಾದ ವ್ಯಸನಗಳು. ॥೫॥ ಚಾಡಿಕೋರತನ; ಬಲಾತ್ಕಾರದಿಂದ ನಾರಿಯರನ್ನು ಕೆಡಿಸುವುದು; ದ್ರೋಹ; ಹೊಟ್ಟೇಕಿಚ್ಚು, ಅಂದರೆ ಅನ್ಯರ ಏಳಿಗೆ ಕಂಡು ಕರುಬುವುದು; ಅಸೂಯೆ, ಅಂದರೆ ಗುಣದಲ್ಲಿ ದೋಷವನ್ನೂ, ದೋಷದಲ್ಲಿ ಗುಣವನ್ನೂ ಆರೋಪಿಸುವುದು; ಅರ್ಥದೂಷಣ, ಅಂದರೆ ಅಧರ್ಮಯುಕ್ತವಾದ ನೀಚಕಾರ್ಯಗಳಲ್ಲಿ ದ್ರವ್ಯವನ್ನು ವೆಚ್ಚಮಾಡುವುದು; ಕಠಿಣವಾಗಿ ಮಾತನಾಡುವುದು; ಹಾಗೂ ನಿರಪರಾಧಿಗಳಿಗೆ ಕಠಿಣವಾದ ಮಾತನ್ನು ಹೇಳುವುದು ಮತ್ತು ಶಿಕ್ಷೆಯನ್ನು ವಿಧಿಸುವುದು–ಈ ಎಂಟು ವ್ಯಸನಗಳೂ ಕ್ರೋಧದಿಂದ

ಹುಟ್ಟುತ್ತವೆ.॥೬॥ ಯಾವುದನ್ನು ವಿದ್ವಾಂಸರೆಲ್ಲರೂ ಕಾಮದಿಂದ ಮತ್ತು ಕ್ರೋಧದಿಂದ ಹುಟ್ಟಿದ ವ್ಯಸನಗಳ ಮೂಲವೆಂದರಿಯುತ್ತಾರೋ, ಯಾವುದರಿಂದ ಈ ಎಲ್ಲಾ ದುರ್ಗುಣಗಳೂ ಮನುಷ್ಯನಿಗೆ ಹತ್ತಿಕೊಳ್ಳುತ್ತವೆಯೋ, ಆ ಲೋಭವನ್ನು ಯತ್ನಪೂರ್ವಕವಾಗಿ ಬಿಟ್ಟುಬಿಡಬೇಕು. ॥೭॥ ಕಾಮೋದ್ಭವವಾದ ಹತ್ತು ವ್ಯಸನಗಳಲ್ಲಿಯೂ, ಮಾದಕ ದ್ರವ್ಯ ಸೇವನೆ, ಪಗಡೆ ಮೊದಲಾದವುಗಳಿಂದ ಜೂಜಾಡುವುದು, ಸ್ತ್ರೀಸಂಗಾತಿರೇಕ ಮತ್ತು ಬೇಟೆಯಾಡುವುದು-ಈ ನಾಲ್ಕು ಅತಿ ನೀಚವಾದುವು ॥೮॥ ಕ್ರೋಧೋದ್ಭವವಾದ ಎಂಟು ವ್ಯಸನಗಳಲ್ಲಿ-ನಿರಪರಾಧಿಗಳನ್ನು ಶಿಕ್ಷಿಸುವಿಕೆ, ಕಠಿಣವಾಗಿ ಮಾತನಾಡುವಿಕೆ, ಮತ್ತು ಅನ್ಯಾಯದಲ್ಲಿ ಧನವನ್ನು ವೆಚ್ಚಮಾಡುವಿಕೆ-ಈ ಮೂರೂ ಅತಿ ದುಃಖದಾಯಕವಾದುವು. ॥೯॥ ಕಾಮೋದ್ಭವ ಹಾಗೂ ಕ್ರೋಧೋದ್ಭವವಾದ ದೋಷಗಳಲ್ಲಿ ಎಣಿಸಿದ ಈ ಏಳು ವ್ಯಸನಗಳಲ್ಲಿ, ಹಿಂದಿನದು ಮುಂದಕ್ಕಿಂತ, ಅಂದರೆ-ವ್ಯರ್ಥವ್ಯಯಕ್ಕಿಂತ ಕಠೋರವಚನವೂ, ಕಠೋರವಚನಕ್ಕಿಂತ ಅನ್ಯಾಯವಾಗಿ ದಂಡಿಸುವುದೂ, ಅದಕ್ಕಿಂತ ಬೇಟೆಯಾಡುವುದೂ, ಅದಕ್ಕಿಂತ ಅತ್ಯಂತ ಸ್ತ್ರೀಸಂಗವೂ, ಅದಕ್ಕಿಂತ ಜೂಜಾಟವೂ, ಮತ್ತು ಅದಕ್ಕಿಂತ ಮಾದಕದ್ರವ್ಯ ಸೇವನೆಯೂ, ಬಹಳ ದುಷ್ಟ ವ್ಯಸನವು. ॥೧೦॥ ದುರ್ವ್ಯಸನಗಳಲ್ಲಿ ಸಿಕ್ಕಿಕೊಳ್ಳುವುದಕ್ಕಿಂತ ಸಾಯುವುದು ಲೇಸು; ಯಾಕೆಂದರೆ, ದುರ್ವ್ಯಸನಿಯಾದ ಮನುಷ್ಯನು ಜೀವಿಸಿದಷ್ಟು ಕಾಲವೂ ಹೆಚ್ಚು ಹೆಚ್ಚು ಕುಕೃತ್ಯಗಳನ್ನೇ ಆಚರಿಸುತ್ತಾ, ನೀಚ ನೀಚಗತಿ ಅಂದರೆ, ಹೆಚ್ಚು ಹೆಚ್ಚು ದುಃಖವನ್ನೇ ಅನುಭವಿಸಬೇಕಾಗುತ್ತದೆ. ಯಾವ ವ್ಯಸನಗಳಿಗೂ ಸಿಕ್ಕದಿರುವವನು ಸತ್ತರೂ ಸಹ ಸುಖವನ್ನೇ ಅನುಭವಿಸುವನು. ಆದುದರಿಂದ ಮುಖ್ಯವಾಗಿ ರಾಜನೂ, ಮತ್ತು ಎಲ್ಲಾ ಮಾನವರೂ, ಬೇಟೆ, ಮದ್ಯಪಾನ, ಮೊದಲಾದ ದುಷ್ಟಕಾರ್ಯಗಳಲ್ಲಿ ಸಿಕ್ಕಿಕೊಳ್ಳದಿರಬೇಕು. ಹಾಗೂ, ದುಷ್ಟ ವ್ಯಸನಗಳಿಂದ ದೂರವಾಗಿದ್ದು, ಧರ್ಮಯುಕ್ತ ಗುಣಕರ್ಮ ಸ್ವಭಾವಗಳಲ್ಲಿ ಪ್ರವೃತ್ತರಾಗಿ ಸತ್ಕರ್ಮಗಳನ್ನಾಚರಿಸಬೇಕು. ರಾಜ ಸಭಾ ಸದರೂ, ಮಂತ್ರಿಗಳೂ ಹೇಗಿರಬೇಕು?

ಮೌಲಾನ್ ಶಾಸ್ತ್ರವಿದಃ ಶೂರಾನ್ ಲಬ್ಧಲಕ್ಷಾನ್ ಕುಲೋದ್ಗತಾನ್ ।
ಸಚಿವಾನ್ ಸಪ್ತ ಚಾಷ್ಟೌ ವಾ ಪ್ರಕುರ್ವೀತ ಪರೀಕ್ಷಿತಾನ್ ॥೧॥
ಅಪಿ ಯತ್ಸುಕರಂ ಕರ್ಮ ತದಪ್ಯೇಕೇನ ದುಷ್ಕರಂ ।
ವಿಶೇಷತೋಽಸಹಾಯೇನ ಕಿಮು ರಾಜ್ಯಂ ಮಹೋದಯಂ॥೨॥
ತೈಃ ಸಾರ್ದ್ಧಂ ಚಿಂತಯೇನ್ನಿತ್ಯಂ ಸಾಮಾನ್ಯಂ ಸಂಧಿವಿಗ್ರಹಮ್।
ಸ್ಥಾನಂ ಸಮುದಯಂ ಗುಪ್ತಂ ಲಬ್ಧಪ್ರಶಮನಾನಿ ಚ ॥೩॥
ತೇಷಾಂ ಸ್ವಮುಭಿಸ್ರಾಯಮುಪಲಭ್ಯ ಪೃಥಕ್ ಪೃಥಕ್ ।
ಸಮಸ್ತಾನಾಂ ಚ ಕಾರ್ಯೇಷು ವಿದಧ್ಯಾದ್ಧಿತಮಾತ್ಮನಃ ॥೪॥
ಅನ್ಯಾನಪಿ ಪ್ರಕುರ್ವೀತ ಶುಚೀನ್ ಪ್ರಜ್ಞಾನವಸ್ಥಿತಾನ್ ।
ಸಮ್ಯಗರ್ಥಸಮಾಹರ್ತೃನಮಾತ್ಯಾನ್ ಸುಪರೀಕ್ಷಿತಾನ್ ॥೫॥
ನಿವರ್ತೇತಾಸ್ಯ ಯಾವದ್ಭಿರಿತಿಕರ್ತವ್ಯತಾ ನೃಭಿಃ ।
ತಾವತೋಽತಂದ್ರಿತಾನ್ ದಕ್ಷಾನ್ ಪ್ರಕುರ್ವೀತ ವಿಚಕ್ಷಣಾನ್॥
ತೇಷಾಮರ್ಥೇ ನಿಯುಂಜೀತ ಶೂರಾನ್ ದಕ್ಷಾನ್ ಕುಲೋದ್ಗತಾನ್ ।
ಶುಚೀನಾಕರಕರ್ಮಾಂತೇ ಭೀರೂನಂತರ್ನಿವೇಶನೇ ॥೭॥
ದೂತಂ ಚೈವ ಪ್ರಕುರ್ವೀತ ಸರ್ವಶಾಸ್ತ್ರವಿಶಾರದಮ್ ।
ಇಂಗಿತಾಕಾರಚೇಷ್ಟಜ್ಞಂ ಶುಚಿಂ ದಕ್ಷಂ ಕುಲೋದ್ಗತಂ ॥೮॥
ಅನುರಕ್ತಃ ಶುಚಿರ್ದಕ್ಷಃ ಸ್ಮೃತಿಮಾನ್ ದೇಶಕಾಲವಿತ್ ।
ವಪುಷ್ಮಾನ್ ವೀತಭೀರ್ವಾಗ್ಮೀ ದೂತೋ ರಾಜ್ಞಃ ಪ್ರಶಸ್ಯತೇ ॥

[ಮನು ೭, ೫೪-೫೭, ೬೦-೬೪]

ಸ್ವರಾಜ್ಯ ಅಂದರೆ ಸ್ವದೇಶದಲ್ಲಿ ಹುಟ್ಟಿದವರೂ, ವೇದಾದಿ ಶಾಸ್ತ್ರಜ್ಞರೂ, ಶೂರರೂ, ಧೀರರೂ, ನಿಷ್ಫಲವಾಗದ ಲಕ್ಷ್ಯವುಳ್ಳವರೂ, ಕುಲೀನರೂ, ಸುಪರೀಕ್ಷಿತರೂ, ಆದ ಏಳು ಅಥವಾ ಎಂಟು ಮಂದಿ ಉತ್ತಮ ಧಾರ್ಮಿಕ ಚತುರರನ್ನು ಮಂತ್ರಿಗಳನ್ನಾಗಿ ನೇಮಿಸಬೇಕು.

॥೧॥ ಏಕೆಂದರೆ, ವಿಶೇಷ ಸಹಾಯವಿಲ್ಲದಿದ್ದರೆ ಸುಲಭವಾದ ಕಾರ್ಯವಾದರೂ ಒಬ್ಬನಿಂದಲೇ ಸಾಧಿಸಲು ಕಷ್ಟವಾಗುತ್ತದೆ. ಹೀಗಿರುವಲ್ಲಿ ರಾಜ್ಯಶಾಸನದಂತಹ ಮಹತ್ಕಾರ್ಯವನ್ನು ಒಬ್ಬನೇ ಹೇಗೆ ತಾನೆ ನಿರ್ವಹಿಸಬಲ್ಲನು? ಆದುದರಿಂದ ಒಬ್ಬನನ್ನೇ ರಾಜನನ್ನಾಗಿ ಮಾಡುವುದು ಅಥವಾ ಒಬ್ಬನ ಬುದ್ಧಿಯಮೇಲೆಯೇ ರಾಜಕಾರ್ಯಗಳನ್ನು ಹೊರಿಸುವುದು ಬಹಳ ಅನುಚಿತ ॥೨॥ ಆದಕಾರಣ ರಾಜನು ಪ್ರತಿದಿನವೂ ರಾಜಕಾರ್ಯಪ್ರವೀಣರಾದ ಕುಶಲಮಂತ್ರಿಗಳೊಡನೆ ಸಾಮಾನ್ಯವಾಗಿ-(ಸಂಧಿ) ಯಾರೊಡನೆ ಸ್ನೇಹ ಬೆಳಸಬೇಕು? (ವಿಗ್ರಹ) ಯಾರೊಡನೆ ವಿರೋಧಮಾಡಬೇಕು? (ಸ್ಥಾನ) ಸ್ಥಿತಿ ಮತ್ತು ಸಮಯ ನೋಡಿ ಸುಮ್ಮನಿರುವುದು, ತನ್ನ ರಾಜ್ಯವನ್ನು ರಕ್ಷಿಸಿಕೊಂಡು ಕುಳಿತಿರುವುದು, (ಸಮುದಯ) ಏಳಿಗೆಯ ಕಾಲದಲ್ಲಿ ಮುಷ್ಟಶತ್ರುವಿನಮೇಲೆ ದಂಡೆತ್ತಿ ಹೋಗುವುದು, (ಗುಪ್ತಿ) ಮೂಲಸೈನ್ಯವನ್ನೂ. ಬೊಕ್ಕಸವನ್ನೂ ಹೇಗೆ ರಕ್ಷಿಸಬೇಕು? (ಲಬ್ಧಪ್ರಶಮನ) ಗೆದ್ದ ದೇಶಗಳಲ್ಲಿ ಉಪದ್ರವವಾಗದಂತೆ ಶಾಂತಿಯನ್ನು ಹೇಗೆ ಸ್ಥಾಪಿಸುವುದು? ಈ ಆರು ಅಂಶಗಳನ್ನು ಚೆನ್ನಾಗಿ ಆಲೋಚಿಸಬೇಕು. ॥೩॥ ರಾಜಕಾರ್ಯಗಳ ವಿಷಯದಲ್ಲಿ ಪ್ರತಿ ಒಬ್ಬ ಸಭಾಸದನ ಅಭಿಪ್ರಾಯವನ್ನು ಬೇರೆ ಬೇರೆಯಾಗಿ ತೆಗೆದುಕೊಂಡು, ಕಾರ್ಯಗಳಲ್ಲಿ ತನ್ನ ಮತ್ತು ಪರರ ಹಿತ ಸಾಧಿಸುವ ಕಾರ್ಯವನ್ನು, ಬಹುಮತದಿಂದ ಮಾಡಲಾರಂಭಿಸಬೇಕು. ॥೪॥ ಪವಿತ್ರಾತ್ಮರೂ, ವ್ಯಥಬುದ್ಧಿಯುಳ್ಳವರೂ, ಬುದ್ಧಿವಂತರೂ, ಪದಾರ್ಥ ಸಂಗ್ರಹದಲ್ಲಿ ಅತಿ ಚತುರರೂ, ಸುಪರೀಕ್ಷಿತರೂ, ಆದ ಅನ್ಯರನ್ನೂ ಮಂತ್ರಿಗಳನ್ನಾಗಿ ನೇಮಿಸಿಕೊಳ್ಳಬೇಕು. ॥೫॥ ರಾಜಕಾರ್ಯಗಳು ನಿರ್ಬಾಧಕವಾಗಿ ನಡೆಯಲು ಬೇಕಾದಷ್ಟು ಮಂದಿ, ಆಲಸ್ಯರಹಿತರೂ, ಬಲಿಷ್ಟರೂ ಮತ್ತು ಮಹಾಚತುರರೂ ಆದ ಪ್ರಧಾನಪುರುಷರನ್ನು ಅಧಿಕಾರಿಗಳನ್ನಾಗಿ ನೇಮಿಸಬೇಕು. ॥೬॥ ಇವರ ಅಧೀನದಲ್ಲಿ, ಶೂರವೀರರೂ, ಬಲಿಷ್ಠರೂ, ಉತ್ತಮವಂಶದವರೂ, ಪವಿತ್ರರೂ ಆದ ಭೃತ್ಯರನ್ನು ದೊಡ್ಡ ದೊಡ್ಡ ಪದಗಳಲ್ಲಿಯೂ, ಆಂಜುಬುರುಕರಾದವರನ್ನು ಒಳಗಿನ ಕೆಲಸಗಳಲ್ಲಿಯೂ ನೇಮಿಸಬೇಕು. ॥೭॥ ಪ್ರಶಂಸಿತ ಕುಲದಲ್ಲಿ ಹುಟ್ಟಿದವನೂ, ಚತುರನೂ,

ಪವಿತ್ರನೂ, ಹಾವಭಾವಗಳಿಂದ ಅಂತರ್ಹೃದಯವನ್ನೂ ಮುಂದಾಗ ಬಹುದಾದ ಘಟನೆಗಳನ್ನರಿಯುವವನೂ, ಸರ್ವಶಾಸ್ತ್ರವಿಶಾರದನೂ, ಆದವನನ್ನು ದೂತನಾಗಿಟ್ಟುಕೊಳ್ಳಬೇಕು. ॥೮॥ ರಾಜಕಾರ್ಯದಲ್ಲಿ ಬಹಳ ಪ್ರೀತ್ಯುತ್ಸಾಹಗಳನ್ನುಳ್ಳವನೂ, ಪವಿತ್ರಾತ್ಮನೂ, ನಿಷ್ಕಪಟನೂ ಚತುರನೂ, ಬಹುಕಾಲದ ವಿಷಯಗಳನ್ನು ಸಹ ಮರೆಯದವನನೂ, ದೇಶಕಾಲಗಳನ್ನರಿತು ವರ್ತಿಸುವವನೂ, ಸುಂದರನೂ, ಒಳ್ಳೆಯ ವಾಗ್ಮಿಯೂ ಆದ ಪುರುಷನೇ ರಾಜನಿಗೆ ದೂತನಾಗಲು ಪ್ರಶಸ್ತನು. ॥೯॥ ಯಾರ್ಯಾರಿಗೆ ಯಾವ ಯಾವ ಕಾರ್ಯಗಳನ್ನು ವಹಿಸಬೇಕೆಂದರೆ:—

ಅಮಾತ್ಯೇ ದಂಡ ಆಯತ್ತೋ ದಂಡ ವೈನಯಿಕೀ ಕ್ರಿಯಾ ।
ನೃಪತೌ ಕೋಶರಾಷ್ಟ್ರೇ ಚ ದೂತೇ ಸಂಧಿವಿಪರ್ಯಯೌ॥೧೦॥

ದೂತ ಏವ ಹಿಸಂಧತ್ತೇ ಭಿನತ್ತೇವ ಚ ಸಂಹತಾನ್ ।
ದೂತಸ್ತತ್ಕುರುತೇ ಕರ್ಮ ಭಿದ್ಯಂತೇ ಯೇನ ವಾ ನ ವಾ ॥೨॥

ಬುದ್ಧ್ಯಾ ಚ ಸರ್ವತತ್ಪ್ರೇಕ್ಷೀ ಪರರಾಜ ಚಿಕೀರ್ಷಿತಂ ।
ತಥಾ ಪ್ರಯತ್ನಮಾತಿಷ್ಠೇದ್ಯಥಾತ್ಮಾನಂ ನ ಪೀಡಯೇತ್ ॥೩॥

ಧನುರ್ದುರ್ಗಂ ಮಹೀದುರ್ಗಮಬ್ದುರ್ಗಂ ವಾಕ್ಷ ಏವ ಚ ।
ನೃದುರ್ಗಂ ಗಿರಿದುರ್ಗಂ ವಾ ಸಮಾಶ್ರಿತ್ಯ ವಸೇತ್ಪುರಂ ॥೪॥

ಏಕಃ ಶತಂ ಯೋಧಯತಿ ಪ್ರಾಕಾರಸ್ಥೋ ಧನುರ್ಧರಃ ।
ಶತಂ ದಶಸಹಸ್ರಾಣಿ ತಸ್ಮಾದ್ದುರ್ಗಂ ವಿಧೀಯತೇ ॥೫॥

ತತ್ರಾಯುಧಸಂಪನ್ನಂ ಧನಧಾನ್ಯೇನ ವಾಹನೈಃ ।
ಬ್ರಾಹ್ಮಣೈಃ ಶಿಲ್ಪಿಭಿರ್ಯಂತ್ರೈರ್ಯವಸೇನೋದಕೇನ ಚ॥೬॥

ತಸ್ಯ ಮಧ್ಯೇ ಸುಪರ್ಯಾಪ್ತಂ ಕಾರಯೇದ್ಗೃಹಮಾತ್ಮನಃ ।
ಗುಪ್ತಂ ಸರ್ವರ್ತುಕಂ ಶುಭ್ರಂ ಜಲವೃಕ್ಷಸಮನ್ವಿತಂ ॥೭॥

ತದಧ್ಯಾಸ್ಯೋದ್ವಹೇದ್ಭಾರ್ಯಾಂ ಸವರ್ಣಾಂ ಲಕ್ಷಣಾನ್ವಿತಾಮ್ ॥೮॥

ಪುರೋಹಿತಂ ಪ್ರಕುರ್ವೀತ ವೃಣುಯಾದೇವ ಚರ್ತ್ವಿಜಂ ।
ತೇಽಸ್ಯ ಗೃಹಾಣಿ ಕರ್ಮಾಣಿ ಕುರ್ಯುರ್ವೈ ತಾನಿ ಕಾನಿ ಚ॥೯॥

[ಮನು ೭। ೬೫। ೬೬। ೬೮। ೭೦। ೭೪-೭೮]

ಅಮಾತ್ಯನಿಗೆ ದಂಡನಾಧಿಕಾರವನ್ನೀಯಬೇಕು; ದಂಡದಲ್ಲಿ ವಿನಯಕ್ರಿಯೆಯಿರಬೇಕು. ಅಂದರೆ, ಯಾರಿಗೂ ಅನ್ಯಾಯವಾದ ಶಿಕ್ಷೆ ಸಿಕ್ಕಬಾರದು. ರಾಜ್ಯದ ಕೋಶವೂ, ರಾಜ್ಯಕಾರ್ಯವೂ, ರಾಜನವಶದಲ್ಲಿರಬೇಕು. ಆಡಳಿತದ ಸಮಸ್ತ ಕಾರ್ಯಗಳೂ, ಸಭೆಯ ಅಧೀನವಾಗಿರಬೇಕು. ಮತ್ತು ಯಾರೊಂದಿಗಾದರೂ ವಿರೋಧ ಅಥವಾ ಸ್ನೇಹವನ್ನು ಬೆಳಸುವ ಅಧಿಕಾರ ದೂತನಿಗೆ ಒಪ್ಪಿಸಲ್ಪಡ ಬೇಕು. ॥೧॥ ಒಡಕಿನಲ್ಲಿ ಸಂಧಿಯನ್ನೂ, ಒಟ್ಟುಗೂಡಿದ ದುಷ್ಟರಲ್ಲಿ ಒಡಕನ್ನೂ, ಕುದುರಿಸುವವನೇ ದೂತನು. ಆದುದರಿಂದ ದೂತನು ಶತ್ರುಗಳಲ್ಲಿ ಪರಸ್ಪರ ವೈಷಮ್ಯವನ್ನು ಹುಟ್ಟಿಸಬೇಕು. ॥೨॥ ರಾಜನೂ, ಸಭಾಸದರೂ, ದೂತ ಮೊದಲಾದವರೂ, ಬೇರೆ ವಿರೋಧಿ ರಾಜರ ಅಭಿಪ್ರಾಯವನ್ನು ಯಥಾರ್ಥವಾಗಿ ತಿಳಿದುಕೊಂಡು, ತಮ್ಮ ರಾಜ್ಯಕ್ಕೆ ಯಾವ ತೊಂದರೆಯೂ ಬಾರದಂತೆ ಪ್ರಯತ್ನಗಳನ್ನು ಮಾಡುತ್ತಿರ ಬೇಕು. ॥೩॥ ಈ ಕಾರಣದಿಂದ ವನ-ಧನ-ಧಾನ್ಯಯುಕ್ತವಾದ ಪ್ರದೇಶದಲ್ಲಿ 'ಧನುರ್ದುರ್ಗ' ಧನುರ್ಧಾರಿಗಳಿಂದ ಗಹನವಾದ; 'ಮಹೀದುರ್ಗ' ಮಣ್ಣಿನಿಂದ ಕಟ್ಟಲ್ಪಟ್ಟ; 'ಅಬ್ದುರ್ಗ' ನೀರಿನಿಂದ ಆವೃತವಾದ; 'ವಾರ್ಕ್ಷ' ನಾಲ್ಕೆಡೆಯಿಂದಲೂ, ವೃಕ್ಷಗಳಿಂದ ನಿಬಿಡ ವಾದ; 'ನೃದುರ್ಗ' ಎಲ್ಲೆಡೆಯಿಂದಲೂ ಸೈನ್ಯದಿಂದ ರಕ್ಷಿತವಾದ; 'ಗಿರಿದುರ್ಗ' ಚತುರ್ದಿಕ್ಕುಗಳಿಂದಲೂ, ಪರ್ವತಗಳಿಂದ ಸುತ್ತಲ್ಪಟ್ಟ; ಸ್ಥಾನದಲ್ಲಿ ಕೋಟೆ ಕಟ್ಟಿ, ಅದರ ನಡುವೆ ನಗರವನ್ನು ನಿರ್ಮಿಸ ಬೇಕು. ॥೪॥ ನಗರದ ನಾಲ್ಕು ಕಡೆಗಳಲ್ಲಿಯೂ ಪ್ರಾಕಾರ ಕಟ್ಟಬೇಕು. ಏಕೆಂದರೆ, ಅದರಲ್ಲಿ ಆಶ್ರಯ ಪಡೆದ ಒಬ್ಬ ವೀರ ಧನುರ್ಧಾರೀ ಶಸ್ತ್ರಯುಕ್ತ ಪುರುಷನು ನೂರು ಮಂದಿಗಳೊಡನೆಯೂ, ನೂರು ಮಂದಿಗಳು, ಹತ್ತು ಸಾವಿರ ಮಂದಿಗಳೊಡನೆಯೂ, ಹೋರಾಡಬಲ್ಲರು. ಆದುದರಿಂದ ದುರ್ಗವು ಅತ್ಯಾವಶ್ಯಕವಾಗಿರುತ್ತದೆ. ॥೫॥ ಆ ದುರ್ಗವು

ಶಸ್ತ್ರಾಸ್ತ್ರಗಳಿಂದಲೂ, ಧನಧಾನ್ಯಗಳಿಂದಲೂ ವಾಹನಗಳಿಂದಲೂ; ಅಧ್ಯಾಪನ ಮತ್ತು ಉಪದೇಶ ಮಾಡುವ ಬ್ರಾಹ್ಮಣರಿಂದಲೂ; ಶಿಲ್ಪಿಗಳಿಂದಲೂ; ವಿವಿಧ ಯಂತ್ರಗಳಿಂದಲೂ; ನಾನಾ ಪ್ರಕಾರ ಕಲೆಗಳಿಂದಲೂ; ಕುದುರೆ, ಎತ್ತು ಮೊದಲಾದ ಪಶುಗಳಿಗೆ ಬೇಕಾದ ಮೇವು, ಹುಲ್ಲುಗಳಿಂದಲೂ; ನೀರಿನಿಂದಲೂ ಪರಿಪೂರ್ಣವಾಗಿರ ಬೇಕು. ॥೬॥ ಅದರ ಮಧ್ಯೆ ಜಲ ವೃಕ್ಷ, ಪುಷ್ಪಾದಿಗಳಿಂದ ಎಲ್ಲಾ ರೀತಿಯಿಂದಲೂ ರಕ್ಷಿತವಾದ, ಎಲ್ಲಾ ಋತುಗಳಲ್ಲಿಯೂ ಸುಖಕರ ವಾಗಿರುವ, ಶ್ವೇತವರ್ಣದ ಸುಂದರ ಭವನವನ್ನು ರಾಜನು ರಾಜ ಕಾರ್ಯಗಳಿಗಾಗಿ ನಿರ್ಮಿಸಿಕೊಳ್ಳಬೇಕು. ॥೭॥ ಬ್ರಹ್ಮಚರ್ಯವನ್ನು ಪಾಲಿಸಿ, ವಿದ್ಯಾಸುಶಿಕ್ಷಣಗಳನ್ನು ಪಡೆದು, ಇದುವರಿಗೆ ಹೇಳಿದಷ್ಟು ರಾಜಕಾರ್ಯ ವ್ಯವಸ್ಥೆಯನ್ನು ಮಾಡಬೇಕು. ಅನಂತರ ಸೌಂದರ್ಯ ಪತಿಯೂ, ಗುಣವತಿಯೂ, ತನ್ನ ಹೃದಯಕ್ಕೆ ಅತಿ ಪ್ರಿಯಳೂ, ಉತ್ತಮ ಕುಲಜೆಯೂ, ಸುಂದರ ಲಕ್ಷಣಯುಕ್ತಳೂ, ವಿದ್ಯಾ-ಗುಣ-ಕರ್ಮ-ಸ್ವಭಾವಗಳಲ್ಲಿ ತನಗೆ ಸದೃಶಳೂ ಆದ, ತನ್ನ ಕ್ಷತ್ರಿಯವರ್ಣದ ಒಬ್ಬಳೇ ಕನ್ಯೆಯನ್ನು ಮದುವೆಮಾಡಿಕೊಳ್ಳಬೇಕು; ಉಳಿದ ಸ್ತ್ರೀಯರನ್ನು ಅಗಮ್ಯರೆಂದು ತಿಳಿದು ಕಣ್ಣೆತ್ತಿ ಸಹ ನೋಡಬಾರದು. ॥೮॥ ಪುರೋಹಿತ ಮತ್ತು ಋತ್ವಿಜರನ್ನು, ಅಗ್ನಿಹೋತ್ರ, ಪಕ್ಷೇಷ್ಟಿ ಮೊದಲಾದ ಎಲ್ಲಾ ರಾಜಗೃಹದ ಕಾರ್ಯಗಳನ್ನು ನಡೆಸುವುದಕ್ಕಾಗಿ ಸ್ವೀಕರಿಸಬೇಕು. ಮತ್ತು ತಾನು ಸರ್ವದಾ ರಾಜಕಾರ್ಯದಲ್ಲಿ ತತ್ಪರನಾಗಿರಬೇಕು. ಅಂದರೆ, ಹಗಲಿರುಳೂ ರಾಜಕಾರ್ಯದಲ್ಲಿ ಪ್ರವೃತ್ತನಾಗಿದ್ದು ಯಾವ ರಾಜಕಾರ್ಯವೂ ಕೆಡದಂತೆ ನೋಡಿಕೊಳ್ಳುವುದೇ ರಾಜನಿಗೆ ಸಂಧ್ಯೋಪಸನಾದಿ ಕರ್ಮವಾಗಿರುತ್ತದೆ. ॥೯॥

ಸಾಂವತ್ಸರಿಕಮಾಪ್ತೈರ್ವೃಷ್ಟ್ಯಾದಾಹಾರಯೇದ್ಬಲಿಮ್ ।
ಸ್ಯಾಚ್ಚಾವ್ನ್ಯಾಯಪರೋ ಲೋಕೇ ವರ್ತೇತ ಪಿತೃವನ್ನೃಷು ॥
ಅಧ್ಯಕ್ಷಾನ್ ವಿವಿಧಾನ್ ಕುರ್ಯಾತ್ತತ್ರ ತತ್ರ ವಿಪಶ್ಚಿತಃ ।
ತೇಽಸ್ಯ ಸರ್ವಾಣ್ಯವೇಕ್ಷೇರನ್ನೃಣಾಂ ಕಾರ್ಯಾಣಿ ಕುರ್ವತಾಂ ॥೨॥

ಆವೃತ್ತಾನಾಂ ಗುರುಕುಲಾದ್ವಿಪ್ರಾಣಾಂ ಪೂಜಕೋ ಭವೇತ್
ನೃಪಾಣಾಮಕ್ಷಯೋಹ್ಯೇಷ ನಿಧಿರ್ಬ್ರಾಹ್ಮೋ ವಿಧೀಯತೇ ॥
ಸಮೋತ್ತಮಾಧಮೈ ರಾಜಾ ತ್ವಾಹೂತಃ ಪಾಲಯನ್ ಪ್ರಜಾಃ।
ನ ನಿವರ್ತೇತ ಸಂಗ್ರಾಮಾತ್ತ್ರಯಂ ಧರ್ಮಮನುಸ್ಮರನ್॥೪॥
ಆಹವೇಷು ಮಿಥೋಽನ್ಯೋನ್ಯಂ ಜಿಘಾಂಸಂತೋ ಮಹೀಕ್ಷಿತಃ
ಯುಧ್ಯಮಾನಾಃ ಪರಂ ಶಕ್ತ್ಯಾ ಸ್ವರ್ಗಂ ಯಾಂತ್ಯಪರಾಙ್-
ಮುಖಾಃ ॥೫॥
ನ ಚ ಹನ್ಯಾತ್ಸ್ಥಲಾರೂಢಂ ನ ಕ್ಲೀಂಬಂ ನ ಕೃತಾಂಜಲಿಮ್ ।
ನ ಮುಕ್ತಕೇಶಂ ನಾಸೀನಂ ನ ತವಾಸ್ಮೀತಿ ವಾದಿನಮ್ ॥೬॥
ನ ಸುಪ್ತಂ ನ ವಿಸನ್ನಾಹಂ ನ ನಗ್ನಂ ನ ನಿರಾಯುಧಂ ।
ನಾಯುಧ್ಯಮಾನಂ ಪಶ್ಯಂತಂ ನ ಪರೇಣಸಮಾಗತಂ ॥೭॥
ನಾಯುಧವ್ಯಸನಂ ಪ್ರಾಪ್ತಂ ನಾರ್ತಂ ನಾತಿಪರಿಕ್ಷತಮ್ ।
ನ ಭೀತಂ ನ ಪರಾವೃತ್ತಂ ಸತಾಂ ಧರ್ಮಮನುಸ್ಮರನ್ ॥೮॥
ಯಸ್ತು ಭೀತಃ ಪರಾವೃತ್ತಃ ಸಂಗ್ರಾಮೇ ಹನ್ಯತೇ ಪರೈಃ ।
ಭರ್ತುರ್ಯದ್ದುಷ್ಕೃತಂ ಕಿಂಚಿತ್ತತ್ಸರ್ವಂ ಪ್ರತಿಪದ್ಯತೇ ॥೯॥
ಯಚ್ಚಾಸ್ಯ ಸುಕೃತಂ ಕಿಂಚಿದಮುತ್ರಾರ್ಥಮುಪಾರ್ಜಿತಮ್ ।
ಭರ್ತಾ ತತ್ಸರ್ವಮಾದತ್ತೇ ಪರಾವೃತ್ತಹತಸ್ಯ ತು ॥೧೦॥
ರಥಾಶ್ವಂ ಹಸ್ತಿನಂ ಛತ್ರಂ ಧನಂ ಧಾನ್ಯಂ ಪಶೂನ್ಸ್ತ್ರಿಯಃ ।
ಸರ್ವದ್ರವ್ಯಾಣಿ ಕುಪ್ಯಂ ಚ ಯೋ ಯಜ್ಞಯತಿ ತಸ್ಯ ತತ್ ॥
ರಾಜ್ಞಶ್ಚ ದದ್ಯುರುದ್ಧಾರಮಿತ್ಯೇಷಾ ವೈದಿಕೀ ಶ್ರುತಿಃ ।
ರಾಜ್ಞಾ ಚ ಸರ್ವಯೋಧೇಭ್ಯೋ ದಾತವ್ಯಮನುಪೃಥಗ್ವಿಧಮ್ ॥
[ಮನು ೭ । ೮೯-೯೨ । ೯೭ । ೯೯ । ೯೯-೯೭]

ರಾಜ್ಯದಿಂದ, ಆಪ್ತರಮೂಲಕ ವಾರ್ಷಿಕ ತೆರಿಗೆಯನ್ನು ಎತ್ತಿ ಸೇರಿಸಿಕೊಳ್ಳಬೇಕು. ಹಾಗೂ ಸಭಾಪತಿಯಾದ ರಾಜ ಮೊದಲಾದ ಪ್ರಧಾನಪುರುಷರು, ಸಭೆಗೂ, ವೇದಗಳಿಗೂ ಅನುಕೂಲವಾಗಿದ್ದು, ಪ್ರಜೆಗಳನ್ನು ಮಕ್ಕಳಂತೆ ನೋಡಿಕೊಳ್ಳಬೇಕು॥೧॥ ರಾಜಕಾರ್ಯದಲ್ಲಿ

ವಿವಿಧ ಪ್ರಕಾರದ ಅಧ್ಯಕ್ಷರುಗಳನ್ನು ನೇಮಿಸಬೇಕು. ಯಾವ ಯಾವ ಕಾರ್ಯಗಳಲ್ಲಿ ಎಷ್ಟೆಷ್ಟು ಜನ ರಾಜಪುರುಷರು ನಿಯಮಿಸಲ್ಪಟ್ಟರು ತ್ತಾರೋ, ಅವರುಗಳು ನಿಯಮಾನುಸಾರ ವರ್ತಿಸಿ, ಯಥಾವತ್ತಾಗಿ ಕೆಲಸಮಾಡುತ್ತಾರೋ, ಇಲ್ಲವೋ ಎಂಬುದನ್ನು ನೋಡಿ ಯಥಾವತ್ತಾಗಿ ಮಾಡಿದಲ್ಲಿ, ಅವರನ್ನು ಸತ್ಕರಿಸುವುದು, ವಿರುದ್ಧವಾಗಿ ಮಾಡಿದಲ್ಲಿ ಅವರಿಗೆ ಸಮುಚಿತವಾದ ಶಿಕ್ಷೆ ವಿಧಿಸುವುದು–ಇವೇ ಆ ಅಧ್ಯಕ್ಷರುಗಳ ಕರ್ತವ್ಯ ॥೨॥ ಯಥಾವತ್ತಾಗಿ ಬ್ರಹ್ಮಚರ್ಯವನ್ನು ಪಾಲಿಸಿ ವೇದಾದಿ ಶಾಸ್ತ್ರಗಳನ್ನೋದಿ ಗುರುಕುಲಗಳಿಂದ ಬಂದ ವಿದ್ವಾಂಸರಿಗೂ ಮತ್ತು ಅವರಿಗೆ ಶಿಕ್ಷಣವಿತ್ತು ಅವರನ್ನು ವೇದವೇತ್ತರನ್ನಾಗಿ ಮಾಡಿದ ಆಚಾರ್ಯರಿಗೂ ಸರ್ವದಾ ವೇದವೆಂಬ ಅಕ್ಷಯ ಭಂಡಾರವನ್ನು ಪ್ರಚುರಪಡಿಸುವುದಕ್ಕಾಗಿ, ರಾಜನೂ, ಸಭೆಯೂ, ಸತ್ಕಾರ ಸಲ್ಲಿಸಬೇಕು * ॥೩॥ ಇದರಿಂದ ದೇಶದಲ್ಲಿ ವಿದ್ಯಾಭ್ಯಾಸ ಹೆಚ್ಚಿ ರಾಜ್ಯವೂ ಅತ್ಯಂತ ಉನ್ನತಿ ಹೊಂದುವುದು. ಪ್ರಜಾಪಾಲನದಲ್ಲಿ ತತ್ಪರನಾದ ರಾಜನನ್ನು, ಅವನಿಗಿಂತ ಅಲ್ಪ, ಸಮಾನ ಅಥವಾ ಉತ್ತಮನಾದವನಾದರೂ, ಯಾವಾಗಲಾದರೂ ಯುದ್ಧಕ್ಕೆ ಆಹ್ವಾನಿಸಿದರೆ, ಕ್ಷಾತ್ರ ಧರ್ಮವನ್ನು ಸ್ಮರಿಸಿ, ಹೋರಾಟಕ್ಕೆ ಹೋಗಲು ಹಿಂಜರಿಯಬಾರದು. ಆದರೆ, ಅತಿ ಚಾತುರ್ಯದಿಂದ ತನಗೇ ಜಯವಾಗುವಂತೆ ಯುದ್ಧ ಮಾಡಬೇಕು. ॥೪॥ ಯುದ್ಧಸಮಯದಲ್ಲಿ ಒಬ್ಬರನ್ನೊಬ್ಬರು ಕೊಲ್ಲ ಬೇಕೆಂಬ ಅಪೇಕ್ಷೆಯಿಂದ ತಮ್ಮ ಸಾಮರ್ಥ್ಯಾನುಸಾರ ನಿರ್ಭಯವಾಗಿ ಬೆನ್ನು ತೋರಿಸದೆ ಹೋರಾಡುವ ರಾಜರೇ ಸುಖವನ್ನನುಭವಿಸುವರು. ಆದುದರಿಂದ ಎಂದಿಗೂ ವಿಮುಖವಾಗಬಾರದು. ಆದರೆ, ಒಂದೊಂದು ವೇಳೆ ಶತ್ರುಗಳನ್ನು ಜಯಿಸಲು, ಅವರ ಎದುರಿನಿಂದ ಮರೆಯಾಗುವುದೂ ಉಚಿತವೇ. ಏಕೆಂದರೆ, ಹೇಗಾದರೂ ಹಗೆಯನ್ನು ಗೆಲ್ಲ ಬೇಕೆಂಬುವದೇ ಯುದ್ಧದ ಮುಖ್ಯ ಉದ್ದೇಶ್ಯವಾಗಿರುತ್ತದೆ. ಸಿಂಹವು ರೇಗಿ ಎದಿರುಬಿದ್ದು ಶಸ್ತ್ರದ ಬೆಂಕಿಯಲ್ಲಿ ಬೇಗ ಬೆಂದುಹೋಗುವಂತೆ, ರಾಜನು ಮೂರ್ಖತನದಿಂದ ಪ್ರಬಲಶತ್ರುವಿನ ಮುಂದೆ ಬಂದು ನಷ್ಟ ಭ್ರಷ್ಟನಾಗಿಹೋಗಬಾರದು. ॥೫॥ ಸಂಗ್ರಾಮಸಮಯದಲ್ಲಿ, ಅಲ್ಲಲ್ಲಿ

* ಈ ವಾಕ್ಯವು ವಸ್ತುತಃ ತೃತೀಯ ಶ್ಲೋಕದ ಒಂದು ಅಂಶ ಮಾತ್ರ.

ಸಂತವನನ್ನೂ, ನಪುಂಸಕನನ್ನೂ, ಕೈಜೋಡಿಸಿದವನನ್ನೂ, ತಲೆ ಗೂದಲನ್ನು ಕೆದರಿಕೊಂಡಿರುವವನನ್ನೂ, ಕುಳಿತಿರುವವನನ್ನೂ, 'ನಾನು ನಿನ್ನವನಾದೆ' ಎಂಬುವವನನ್ನೂ ॥೬॥ ನಿದ್ರಿತನನ್ನೂ, ಮೂರ್ಛಿತನನ್ನೂ, ನಗ್ನನನ್ನೂ, ನಿರಾಯುಧನನ್ನೂ, ಸಂಗ್ರಾಮ ಪ್ರೇಕ್ಷಕನನ್ನೂ, ಶತ್ರುಗಳ ಸಂಗಡ ಸುಮ್ಮನೆ ಬಂದವನನ್ನೂ ॥೭॥ ಆಯುಧಪ್ರಹಾರದಿಂದ ನೋಯುತ್ತಿರುವವನನ್ನೂ, ದುಃಖಿಯನ್ನೂ, ಬಹಳ ಗಾಯಗೊಂಡವನನ್ನೂ, ಭಯಪಟ್ಟವನನ್ನೂ, ಯುದ್ಧದಿಂದ ಪಲಾಯನಮಾಡುತ್ತಿರುವವನನ್ನೂ ಸತ್ಪುರುಷರ ಧರ್ಮವನ್ನು ಸ್ಮರಿಸಿ ಎಂದೂ ಕೊಲ್ಲಬಾರದು. ಆದರೆ ಅಂತಹವರನ್ನು ಹಿಡಿದು, ಚನ್ನಾಗಿರುವವರನ್ನು ಕಾರಾಗೃಹದಲ್ಲಿಟ್ಟು, ಅನ್ನವಸ್ತ್ರಗಳಿಗೆ ಯೋಗ್ಯವಾದ ವ್ಯವಸ್ಥೆ ಮಾಡಬೇಕು. ಗಾಯಗೊಂಡವರಿಗೆ ಯುಕ್ತವಾದ ರೀತಿಯಲ್ಲಿ ಔಷಧಾದಿಗಳನ್ನು ಕೊಡಿಸಬೇಕು. ಅವರನ್ನು ರೇಗಿಸಬಾರದು. ನೋಯಿಸಬಾರದು. ಅವರಿಂದ ಯೋಗ್ಯವಾದ ಕೆಲಸಗಳನ್ನೇ ಮಾಡಿಸಿಕೊಳ್ಳಬೇಕು. ವಿಶೇಷವಾಗಿ, ಸ್ತ್ರೀಯರು, ಮಕ್ಕಳು, ವೃದ್ಧರು, ರೋಗಿಗಳು ಮತ್ತು ದುಃಖಿಗಳು ಇವರುಗಳಮೇಲೆ ಎಂದಿಗೂ ಶಸ್ತ್ರಪ್ರಯೋಗಿಸಬಾರದು—ಎಂಬ ಕಡೆ ಗಮನವಿರಬೇಕು. ಅವರ ಮಕ್ಕಳನ್ನು ತಮ್ಮ ಮಕ್ಕಳಂತೆಯೇ ನೋಡಿಕೊಳ್ಳಬೇಕು. ಸೆರೆಸಿಕ್ಕಿದ ಸ್ತ್ರೀಯರನ್ನು ತಮ್ಮ ಸೋದರಿಯರಂತೆ ಅಥವಾ ಸ್ವಂತ ಹೆಣ್ಣುಮಕ್ಕಳಂತೆ ತಿಳಿಯಬೇಕು. ಅವರನ್ನು ವಿಷಯಾಸಕ್ತಿಯ ದೃಷ್ಟಿಯಿಂದ ಎಂದೂ ನೋಡಬಾರದು. ರಾಜ್ಯದಲ್ಲಿ ಶಾಂತಿ ನೆಲೆಸಿದ ಬಳಿಕ, ಯಾರಿಂದ ಪುನಃ ಪುನಃ ಯುದ್ಧವಾಗುವ ಆ ಶಂಕೆಯಿರುವದಿಲ್ಲವೋ, ಅಂತಹವರನ್ನು ಸತ್ಕರಿಸಿ ಅವರವರ ಮನೆ ಅಥವಾ ದೇಶಗಳಿಗೆ ಕಳುಹಿಸಬೇಕು; ಆದರೆ, ಯಾರಿಂದ ಮುಂದೆ ಅನೇಕ ತೊಂದರೆಗಳಾಗುವ ಸಂಭವವಿರುವದೋ, ಅಂತಹವರನ್ನು ಸದಾ ಕಾರಾಗಾರದಲ್ಲಿಟ್ಟಿರಬೇಕು. ॥೮॥ ಪಲಾಯನಮಾಡಿದ ಅಂದರೆ, ಹೆದರಿ ರಣರಂಗದಿಂದ ಓಡಿಹೋದ ಭೃತ್ಯನು, ಶತ್ರುಗಳ ನಡುವೆ ಕೊಲ್ಲಲ್ಪಟ್ಟರೆ, ಅವನು ತನ್ನ ಒಡೆಯನ ಅಪರಾಧಗಳಿಗೆ ದಂಡನೀಯವಾಗುವನು. ॥೯॥ ಇಹಪರಸುಖದಾಯಕನಾದ ಅವನ ಪ್ರತಿಷ್ಠೆ ರಾಜನಿಗೆ ಲಭಿಸುತ್ತದೆ. ಪಲಾಯನಮಾಡಿ

ದವನು ರಣದಲ್ಲಿ ಸತ್ತರೂ ಸಹ, ಯಾವ ಸುಖವನ್ನೂ ಹೊಂದಲಾರನು. ಅವನ ಪುಣ್ಯಫಲವೆಲ್ಲಾ ನಷ್ಟವಾಗಿಹೋಗುತ್ತವೆ. ಅವನ ಪ್ರತಿಷ್ಠೆಯು ಧರ್ಮದಿಂದ ಯುದ್ಧಮಾಡುವವನಿಗೆ ಪ್ರಾಪ್ತವಾಗುತ್ತದೆ. ॥೧೦॥ ಯುದ್ಧದಲ್ಲಿ ಪ್ರಾಪ್ತವಾದ ರಥ, ಕುದುರೆ, ಆನೆ, ಛತ್ರ, ಧನ, ಧಾನ್ಯ, ಪಶುಗಳು, ಸ್ತ್ರೀಯರು ಮತ್ತು ಇತರ ಸಮಸ್ತ ದ್ರವ್ಯಗಳು. ತುಪ್ಪ ಎಣ್ಣೆ ಮೊದಲಾದುವುಗಳ ಕೊಪ್ಪರಿಗೆಗಳು—ಇವನ್ನು ಗೆದ್ದಂತಹ ಭೃತ್ಯ ಅಥವಾ ಅಧ್ಯಕ್ಷನೇ ತೆಗೆದುಕೊಳ್ಳಬೇಕು. ಈ ವ್ಯವಸ್ಥೆಯನ್ನೆಂದಿಗೂ ಕೆಡಿಸಬಾರದು. ॥೧೧॥ ಆದರೆ, ಸೇವೆಯಲ್ಲಿರುವ ಜನರು ತಾವು ಗೆದ್ದ ಪದಾರ್ಥಗಳ ಹದಿನಾರನೆಯ ಒಂದು ಭಾಗವನ್ನು ರಾಜನಿಗೆ ಒಪ್ಪಿಸಬೇಕು. ರಾಜನೂ ಕೂಡ ಸೈನಿಕರೆಲ್ಲರೂ ಸಾಮೂಹಿಕವಾಗಿ ಜಯಿಸಿದ ದ್ರವ್ಯದಲ್ಲಿ ಹದಿನಾರನೆಯ ಒಂದಂಶವನ್ನು ಎಲ್ಲರಿಗೂ ಹಂಚಿಕೊಡಬೇಕು. ಯುದ್ಧದಲ್ಲಿ ಯಾರಾದರೂ ಮೃತರಾಗಿದ್ದರೆ, ಅವರ ಭಾಗಗಳನ್ನು ಅವರ ಪತ್ನಿಯರಿಗಾಗಲಿ, ಮಕ್ಕಳಿಗಾಗಲಿ ಕೊಡಬೇಕು. ತನ್ನ ರಾಜ್ಯದ ಉನ್ನತಿ, ಗೌರವ, ವಿಜಯ ಹಾಗೂ ಆನಂದವನ್ನು ಕೋರುವ ಯಾವ ಕ್ಷತ್ರಿಯನೂ ಈ ನಿಯಮಗಳನ್ನು ಭಂಗಿಸಬಾರದು.

ಅಲಬ್ಧಂ ಚೈವ ಲಿಪ್ಸೇತ ಲಬ್ಧಂ ರಕ್ಷೇತ್ಪ್ರಯತ್ನತಃ ।
ರಕ್ಷಿತಂ ವರ್ಧಯೇಚ್ಚೈವ ವೃದ್ಧಂ ಪಾತ್ರೇಷು ನಿಕ್ಷಿಪೇತ್ ॥೧॥
ಅಲಬ್ಧಮಿಚ್ಛೇದ್ದಂಡೇನ ಲಬ್ಧಂ ರಕ್ಷೇದವೇಕ್ಷಯಾ ।
ರಕ್ಷಿತಂ ವರ್ಧಯೇದ್ವೃದ್ಧ್ಯಾ ವೃದ್ಧಂ ದಾನೇನ ನಿಕ್ಷಿಪೇತ್॥೨॥
ಅಮಾಯಯೈವ ವರ್ತೇತ ನ ಕಥಂಚನ ಮಾಯಯಾ ॥೩॥
ಬುದ್ಧ್ಯೇತಾರಿ ಪ್ರಯುಕ್ತಾಂ ಚ ಮಾಯಾನ್ನಿತ್ಯಂ ಸ್ವಸಂವೃತಃ॥
ನಾಸ್ಯಛಿದ್ರಂ ಪರೋ ವಿದ್ಯಾಚ್ಛಿದ್ರಂ ವಿದ್ಯಾತ್ಪರಸ್ಯತು ।
ಗೂಹೇತ್ಕೂರ್ಮ ಇವಾಂಗಾನಿ ರಕ್ಷೇದ್ವಿವರಮಾತ್ಮನಃ ॥೪॥
ಬಕವಚ್ಚಿಂತಯೇದರ್ಥಾನ್ ಸಿಂಹವಚ್ಚ ಪರಾಕ್ರಮೇತ್ ।
ವೃಕವಚ್ಚಾವಲುಂಪೇತ ಶಶವಚ್ಚ ವಿನಿಷ್ಪತೇತ್ ॥೫॥

ಏವಂ ವಿಜಯಮಾನಸ್ಯ ಯೋಽಸ್ಯ ಸ್ಯುಃ ಪರಿಪಂಥಿನಃ ।
ತಾನಾನಯೇದ್ವಶಂ ಸರ್ವಾನ್ ಸಭಾದಿಭಿರುಪಕ್ರಮೈಃ ॥೬॥
ಯತೋದ್ಧರತಿನಿರ್ದಾತಾ ಕಕ್ಷಂ ಧಾನ್ಯಂ ಚ ರಕ್ಷತಿ ।
ತಥಾ ರಕ್ಷೇನ್ನೃಪೋರಾಷ್ಟ್ರಂ ಹನ್ಯಾಚ್ಚ ಪರಿಪಂಥಿನಃ ॥೭॥
ಮೋಹಾದ್ರಾಜಾ ಸ್ವರಾಷ್ಟ್ರಂ ಯಃ ಕರ್ಷಯತ್ಯನವೇಕ್ಷಯಾ ।
ಸೋಽಚಿರಾದ್ಭ್ರಶ್ಯತೇ ರಾಜ್ಯಾಜ್ಜೀವಿತಾಚ್ಚ ಸ ಬಾಂಧವಃ ॥೮॥
ಶರೀರಕರ್ಷಣಾತ್ಪ್ರಾಣಾಃ ಕ್ಷೀಯಂತೇ ಪ್ರಾಣಿನಾಂ ಯಥಾ ।
ತಥಾರಾಜ್ಞಾಮಪಿ ಪ್ರಾಣಾಃ ಕ್ಷೀಯಂತೇ ರಾಷ್ಟ್ರಕರ್ಷಣಾತ್॥
ರಾಷ್ಟ್ರಸ್ಯಸಂಗ್ರಹೇ ನಿತ್ಯಂ ವಿಧಾನಮಿದಮಾಚರೇತ್ ।
ಸುಸಂಗೃಹೀತರಾಷ್ಟ್ರೋ ಹಿ ಪಾರ್ಥಿವಃ ಸುಖಮೇಧತೇ ॥
ದ್ವಯೋಸ್ತ್ರಯಾಣಾಂ ಪಂಚಾನಾಂ ಮಧ್ಯೇ ಗುಲ್ಮಮಧಿಷ್ಠಿ-
ತಮ್ ।
ತಥಾ ಗ್ರಾಮಶತಾನಾಂ ಚ ಕುರ್ಯಾದ್ರಾಷ್ಟ್ರಸ್ಯ ಸಂಗ್ರಹಮ್।
ಗ್ರಾಮಸ್ಯಾಧಿಪತಿಂ ಕುರ್ಯಾದ್ದಶಗ್ರಾಮಪತಿಂ ತಥಾ ।
ವಿಂಶತೀಶಂ ಶತೇಶಂಚ ಸಹಸ್ರಪತಿಮೇವ ಚ ॥೧೨॥
ಗ್ರಾಮೇ ದೋಷಾನ್ಸಮುತ್ಪನ್ನಾನ್ಗ್ರಾಮಿಕಃ ಶನಕೈಃ
ಸ್ವಯಂ ।
ಶಂಸೇದ್ಗ್ರಾಮದಶೇಶಾಯ ದಶೇಶೋ ವಿಂಶತೀಶಿನಮ್ ॥೧೩
ವಿಂಶತೀಶಸ್ತು ತತ್ಸರ್ವಂ ಶತೇಶಾಯ ನಿವೇದಯೇತ್ ।
ಶಂಸೇದ್ಗ್ರಾಮಶತೇಶಸ್ತು ಸಹಸ್ರಪತಯೇ ಸ್ವಯಂ ॥೧೪॥
ತೇಷಾಂ ಗ್ರಾಮ್ಯಾಣಿ ಕಾರ್ಯಾಣಿ ಪೃಥಕ್ಕಾರ್ಯಾಣಿ ಚೈವ ಹಿ ।
ರಾಜ್ಞೋಽನ್ಯಃ ಸಚಿವಃ ಸ್ನಿಗ್ಧಸ್ತಾನಿ ಪಶ್ಯೇದತಂದ್ರಿತಃ ॥೧೫॥
ನಗರೇ ನಗರೇ ಚೈಕಂ ಕುರ್ಯಾತ್ಸರ್ವಾರ್ಥಚಿಂತಕಂ ।
ಉಚ್ಚೈಃ ಸ್ಥಾನಂ ಘೋರರೂಪಂ ನಕ್ಷತ್ರಾಣಾಮಿವಗ್ರಹಂ ॥
ಸ ತಾನನುಪರಿಕ್ರಾಮೇತ್ಸರ್ವಾನೇವ ಸದಾ ಸ್ವಯಮ್ ।
ತೇಷಾಂ ವೃತ್ತಂ ಪರಿಣಯೇತ್ಸಮ್ಯಗ್ರಾಷ್ಟ್ರೇಷು ತಚ್ಚರೈಃ॥೧೭॥

ರಾಜ್ಞೋಹಿ ರಕ್ಷಾಧಿಕೃತಾಃ ಪರಸ್ವಾದಾಯಿನಃ ಶಠಾಃ।
ಭೃತ್ಯಾ ಭವಂತಿ ಪ್ರಾಯೇಣ ತೇಭ್ಯೋ ರಕ್ಷೇದಿಮಾಃ ಪ್ರಜಾಃ॥
ಯೇ ಕಾರ್ಯಿಕೇಭ್ಯೋಽರ್ಥಮೇವ ಗಹ್ಣೀಯುಃ ಪಾಪ-
ಚೇತಸಃ।
ತೇಷಾಂ ಸರ್ವಸ್ವಮಾದಾಯ ರಾಜಾ ಕುರ್ಯಾತ್ಪ್ರವಾಸನಂ॥

[ಮನು. ೭॥ ೮೯। ೧೦೧। ೧೦೪-೧೦೭। ೧೨೦-೧೨೪],

ರಾಜನೂ, ರಾಜಸಭೆಯೂ, ತಮ್ಮಲ್ಲಿಲ್ಲದ ವಸ್ತುಗಳನ್ನು ಗಳಿಸಲು ಬಯಸಬೇಕು. ಸಂಪಾದಿಸಿದುದನ್ನು ಯತ್ನದಿಂದ ರಕ್ಷಿಸಬೇಕು. ರಕ್ಷಿಸಿದುದನ್ನು ವರ್ಧಿಸಬೇಕು. ಆ ಧನದಿಂದ ವೇದವಿದ್ಯೆ, ಧರ್ಮಪ್ರಚಾರ, ವಿದ್ಯಾರ್ಥಿಗಳು, ವೇದಮಾರ್ಗೋಪದೇಶಕರು, ಅಸಮರ್ಥರಾದ ಅನಾಥರು—ಮೊದಲಾದವರನ್ನು ಪೋಷಿಸಬೇಕು॥೧॥ ಈ ನಾಲ್ಕುವಿಧ ಪುರುಷಾರ್ಥಗಳ ಪ್ರಯೋಜನವನ್ನರಿಯಬೇಕು. ಸೋಮಾರಿತನವನ್ನು ಬಿಟ್ಟು, ಇದನ್ನು ನಿತ್ಯವೂ ಚನ್ನಾಗಿ ಅನುಸರಿಸಬೇಕು. ದಂಡದಿಂದ ಅಪ್ರಾಪ್ತ ಧನವನ್ನು ಹೊಂದಲಿಚ್ಛಿಸಬೇಕು. ಸಂಪಾದಿಸಿದ ಧನವನ್ನು ದಿನವೂ ನೋಡಿಕೊಳ್ಳುತ್ತಾ ರಕ್ಷಿಸಬೇಕು. ರಕ್ಷಿಸಲ್ಪಟ್ಟುದನ್ನು ವರ್ಧಿಸಬೇಕು. ಅಂದರೆ ಬಡ್ಡಿ ಮೊದಲಾದುದರಿಂದ ಹೆಚ್ಚಿಸಬೇಕು. ಹಾಗೂ ವರ್ಧಿಸಲ್ಪಟ್ಟಿದ್ದ ಧನವನ್ನು ಪೂರ್ವೋಕ್ತರೀತಿಯಲ್ಲಿ ನಿತ್ಯವೂ ವೆಚ್ಚಮಾಡಬೇಕು. ॥೨॥ ಎಂದಿಗೂ ಯಾರೊಂದಿಗೂ ಕಪಟದಿಂದ ವರ್ತಿಸಬಾರದು. ಆದರೆ ಸದಾ ನಿಷ್ಕಪಟನಾಗಿ ವರ್ತಿಸಬೇಕು. ನಿತ್ಯವೂ ತನ್ನನ್ನು ರಕ್ಷಿಸಿಕೊಂಡು, ಶತ್ರುವಿನ ಕಪಟವನ್ನರಿತು, ಅದಕ್ಕೆ ಪ್ರತೀಕಾರಮಾಡುತ್ತಿರಬೇಕು. ॥೩॥ ರಾಜನು ತನ್ನ ಒಡಕನ್ನು ಯಾವ ಶತ್ರುವೂ ತಿಳಿಯದಂತೆ ಜಾಗರೂಕನಾಗಿರುತ್ತಾ, ತಾನು ಮಾತ್ರ ಶತ್ರುಗಳ ಛಿದ್ರವನ್ನು ಕಂಡುಹಿಡಿಯುತ್ತಿರಬೇಕು. ಆಮೆಯು ತನ್ನ ಅಂಗಗಳನ್ನು ಗುಪ್ತವಾಗಿಟ್ಟುಕೊಳ್ಳುವಂತೆ, ಶತ್ರುಗಳ ಪ್ರವೇಶಕ್ಕೆಡೆಯೀವ ತನ್ನ ಛಿದ್ರಗಳನ್ನು ಗುಪ್ತವಾಗಿಟ್ಟಿರಬೇಕು. ॥೪॥ ಕೊಕ್ಕರೆ ಧ್ಯಾನಸ್ಥನಂತೆ ನಟಿಸಿ. ಮೀನು ಹಿಡಿಯಲು ಕಾಯುವಂತೆ, ಯಾವಾಗಲೂ ದ್ರವ್ಯ ಸಂಪಾದನೆಯಲ್ಲಿ ತತ್ಪರನಾಗಿರಬೇಕು.

ದ್ರವ್ಯಾದಿಪದಾರ್ಥಗಳನ್ನೂ, ಶಕ್ತಿಯನ್ನೂ, ವರ್ಧಿಸಿಕೊಂಡು ಶತ್ರು ವಿಜಯಕ್ಕಾಗಿ ಸಿಂಹದಂತೆ ಪರಾಕ್ರಮ ತೋರಿಸಬೇಕು. ಚಿರತೆಯಂತೆ ಹೊಂಚುಹಾಕಿ ಶತ್ರುಗಳನ್ನು ಹಿಡಿಯಬೇಕು. ತನಗಿಂತ ಬಲಶಾಲಿಯಾದ ಶತ್ರುವು ಒಳಗೆ ಬಂದಾಗ ಮೊಲದಂತೆ ಓಡಿಹೋಗಬೇಕು ಮತ್ತು ಛಲದಿಂದ ಆ ಶತ್ರುವನ್ನು ಹಿಂದಿನಿಂದ ಹಿಡಿಯಬೇಕು. ॥೫॥ ಹೀಗೆ ಜಯ ಸಾಧಿಸುವ ಸಭಾಪತಿಯ ರಾಜ್ಯದಲ್ಲಿ, ಪರಿಪಂಥಿಗಳು ಅಂದರೆ ಕೊಳ್ಳೆ ಹೊಡೆಯುವವರೂ, ದರೋಡೆಕೋರರೂ ಇದ್ದರೆ, ಅವರನ್ನು (ಸಾಮದಿಂದ) ಒಡಗೂಡಿಸಿಕೊಂಡು (ದಾನ) ಅವರಿಗೇನಾದರೂ ಕೊಟ್ಟು, (ಭೇದ) ಅವರಲ್ಲೇ ಒಡಕುಹುಟ್ಟಿಸಿ, ಅವರನ್ನು ಸ್ವಾಧೀನ ಪಡಿಸಿಕೊಳ್ಳಬೇಕು. ಈ ಮೂರು ಉಪಾಯಗಳಿಗೂ ಬಾಗದವರನ್ನು ಅತಿ ಕಠಿಣವಾದ ಶಿಕ್ಷೆಯಿಂದ ವಶಪಡಿಸಿಕೊಳ್ಳಬೇಕು. ॥೬॥ ಧಾನ್ಯವನ್ನು ಬೇರೆ ಮಾಡುವವನು, ಹೊಟ್ಟನ್ನು ಬೇರ್ಪಡಿಸಿ ಧಾನ್ಯವನ್ನು ರಕ್ಷಿಸುವಂತೆ, ರಾಜನು ದರೋಡೆಗಾರರನ್ನು ಶಿಕ್ಷಿಸಿ, ರಾಜ್ಯವನ್ನು ರಕ್ಷಿಸಬೇಕು. ॥೭॥ ಮೋಹ ಮತ್ತು ಅವಿಚಾರದಿಂದ ರಾಜ್ಯವನ್ನು ದುರ್ಬಲಗೊಳಿಸುವ ರಾಜನು ರಾಜ್ಯದೊಂದಿಗೆ ಬಹುಬೇಗ ನಾಶವಾಗಿ ಹೋಗುತ್ತಾನೆ. ॥೮॥ ದೇಹವನ್ನು ಕೃಶಪಡಿಸುವುದರಿಂದ, ಪ್ರಾಣಿಗಳ ಪ್ರಾಣವು ಕ್ಷೀಣವಾಗುವಂತೆ, ಪ್ರಜೆಗಳನ್ನೇ ದುರ್ಬಲಗೊಳಿಸುವ ರಾಜನ ಪ್ರಾಣ ಅಂದರೆ, ಬಲ ಮೊದಲಾದವು ಬಂಧುಸಮೇತ ನಾಶವಾಗಿ ಹೋಗುತ್ತದೆ. ॥೯॥ ಆದುದರಿಂದ ರಾಜನೂ ರಾಜಸಭೆಯೂ, ರಾಜಕಾರ್ಯಗಳು ಎಂದೂ ಕೆಡದಂತೆ ಎಚ್ಚರಿಕೆಯಿಂದ ನೋಡಿಕೊಳ್ಳುತ್ತಿರಬೇಕು. ರಾಜ್ಯಪಾಲನದಲ್ಲಿ ಎಲ್ಲಾ ರೀತಿಯಿಂದಲೂ ತತ್ಪರನಾಗಿರುವ ರಾಜನ ಸುಖವು ಸದಾ ವೃದ್ಧಿಹೊಂದುತ್ತದೆ. ॥೧೦॥ ಆದುದರಿಂದ ಎರಡು, ಮೂರು, ಐದು ಮತ್ತು ನೂರು ಗ್ರಾಮಗಳ ಮಧ್ಯದಲ್ಲಿ ಒಂದು ಶಾಸನ ಕೇಂದ್ರವನ್ನು ಏರ್ಪಡಿಸಿ, ಅದರಲ್ಲಿ ಯೋಗ್ಯರಾದ ಭೃತ್ಯರನ್ನು-ಅಂದರೆ ಅಧಿಕಾರಿಗಳನ್ನು ನೇಮಿಸಿ, ರಾಜಕಾರ್ಯಗಳನ್ನೆಲ್ಲಾ ಪೂರೈಸಬೇಕು. ॥೧೧॥ ಒಂದೊಂದು ಗ್ರಾಮದಲ್ಲಿಯೂ, ಒಬ್ಬೊಬ್ಬ ಪ್ರಧಾನಪುರುಷನನ್ನು ನೇಮಿಸಬೇಕು. ಅಂತಹ ಹತ್ತು ಗ್ರಾಮಗಳ ಮೇಲೆ ಎರಡನೆಯ,

ಇಪ್ಪತ್ತು ಗ್ರಾಮಗಳ ಮೇಲೆ ಮೂರನೆಯ, ನೂರು ಗ್ರಾಮಗಳ ಮೇಲೆ ನಾಲ್ಕನೆಯ ಮತ್ತು ಸಾವಿರ ಗ್ರಾಮಗಳ ಮೇಲೆ ಐದನೆಯ ಅಧಿಕಾರಿಯನ್ನು ನೇಮಿಸಬೇಕು. ಅಂದರೆ, ಈಗಿರುವಂತೆ ಒಂದು ಗ್ರಾಮಕ್ಕೆ ಒಬ್ಬ ಪಟೇಲ, ಹತ್ತು ಗ್ರಾಮಗಳಿಗೆ ಒಬ್ಬ ತಾಣೆದಾರ, ಇಬ್ಬರು ತಾಣೇದಾರರ ಮೇಲೆ ಒಬ್ಬ ದೊಡ್ಡ ತಾಣೆದಾರ, ಅಂತಹ ಐವರ ಮೇಲೊಬ್ಬ ಅಮಲ್ದಾರನನ್ನೂ ಹತ್ತುಮಂದಿ ಅಮಲ್ದಾರರ ಮೇಲೊಬ್ಬ ಜಿಲ್ಲಾಧೀಶನನ್ನೂ ನೇಮಿಸುವ ರಾಜನೀತಿ ಪ್ರಕಾರವು ನಮ್ಮ ಮನು ಆದಿ ಧರ್ಮಶಾಸ್ತ್ರಗಳಿಂದಲೇ ಗ್ರಹಿಸಲ್ಪಟ್ಟಿದೆ. ॥೧೬॥ ಪ್ರತಿಯೊಂದು ಗ್ರಾಮದ ಪ್ರಧಾನಾಧಿಕಾರಿಯೂ ತನ್ನ ಗ್ರಾಮದಲ್ಲಿ ಸಂಭವಿಸುವ ದೋಷಗಳನ್ನು ಗುಪ್ತವಾಗಿ ದಶಗ್ರಾಮಾಧಿಪತಿಗೆ ತಿಳಿಸಬೇಕು. ದಶಗ್ರಾಮಾಧಿಪತಿಯು, ತನ್ನ ಕೈಕೆಳಗಿರುವ ಹತ್ತು ಗ್ರಾಮಗಳ ಸುದ್ದಿಯನ್ನು ವಿಂಶತಿಗ್ರಾಮಾಧಿಪತಿಗೆ ನಿತ್ಯವೂ ತಿಳಿಸುತ್ತಿರಬೇಕು. ॥೧೩॥ ವಿಂಶತಿಗ್ರಾಮಾಧಿಪತಿಯು ತನ್ನ ಅಧಿಕಾರದಲ್ಲಿರುವ ಇಪ್ಪತ್ತು ಗ್ರಾಮಗಳ ವರ್ತಮಾನವನ್ನು ಶತಗ್ರಾಮಾಧಿಪತಿಗೆ ವಿಜ್ಞಾಪಿಸಿಕೊಳ್ಳುತ್ತಿರಬೇಕು. ಹಾಗೆಯೇ ನೂರು ನೂರು ಗ್ರಾಮಗಳ ಅಧಿಪತಿಗಳು ಸಹಸ್ರ ಗ್ರಾಮಾಧಿಪತಿಗೆ ತಮ್ಮ ನೂರು ನೂರು ಗ್ರಾಮಗಳ ವರ್ತಮಾನವನ್ನು ಪ್ರದಿದಿನವೂ ತಿಳಿಸುತ್ತಿರಬೇಕು. ಮತ್ತು ಇಪ್ಪತ್ತಿಪ್ಪತ್ತು ಗ್ರಾಮಗಳ ಐವರು ಅಧಿಪತಿಗಳು, ನೂರು-ನೂರು ಗ್ರಾಮಗಳ ಅಧ್ಯಕ್ಷನಿಗೂ, ಸಹಸ್ರ-ಸಹಸ್ರ ಗ್ರಾಮಗಳ, ಆ ಹತ್ತು ಮಂದಿ ಅಧಿಪತಿಗಳು ದಶಸಹಸ್ರ ಗ್ರಾಮಾಧಿಪತಿಗೂ, ಲಕ್ಷ ಗ್ರಾಮಗಳ ರಾಜಸಭೆಗೂ, ದಿನದಿನದ ವರ್ತಮಾನಗಳನ್ನು ತಿಳಿಸುತ್ತಿರಬೇಕು. ಮತ್ತು ಈ ಎಲ್ಲಾ ರಾಜಸಭೆಗಳೂ ಮಹಾರಾಜಸಭೆಗೆ ಎಂದರೆ, ಸಾರ್ವಭೌಮಚಕ್ರವರ್ತಿಮಹಾರಾಜಸಭೆಗೆ ಸಮಸ್ತ ಭೂಮಂಡಲದ ವರ್ತಮಾನವನ್ನು ತಿಳಿಸುತ್ತಿರಬೇಕು. ॥೧೪॥ ಪ್ರತಿ ಸಹಸ್ರ ಗ್ರಾಮಗಳಿಗೆ ಇಬ್ಬರು ಸಭಾಪತಿಗಳಿರಬೇಕು. ಅವರಲ್ಲಿ ಒಬ್ಬನು ರಾಜಸಭೆಯಲ್ಲಿರಬೇಕು; ಮತೊಬ್ಬ ಅಧ್ಯಕ್ಷನು ಆಲಸ್ಯವನ್ನು ಬಿಟ್ಟು, ನ್ಯಾಯಾಧೀಶನೇ ಮೊದಲಾದ ರಾಜಪುರುಷರ ಕಾರ್ಯಗಳನ್ನು ಪರಿಶೀಲಿಸುತ್ತಾ ಸದಾ ಸಂಚಾರ ಮಾಡುತ್ತಿರಬೇಕು. ॥೧೫॥ ದೊಡ್ಡ

ದೊಡ್ಡ ಪಟ್ಟಣಗಳಲ್ಲಿ ಸುಂದರವೂ, ಉಚ್ಚವೂ, ವಿಶಾಲವೂ ಆದ, ಚಂದ್ರನಂತಿರುವ ಸಭಾಮಂದಿರಗಳನ್ನು ನಿರ್ಮಿಸಬೇಕು. ಅವುಗಳಲ್ಲಿ ವಿದ್ಯಾವೃದ್ಧರು ಅಂದರೆ, ಸರ್ವ ಪರೀಕ್ಷೆಗಳಲ್ಲಿಯೂ, ಉತ್ತೀರ್ಣರಾದ ಉತ್ತಮ ಪಂಡಿತರು, ಆಗಾಗ ಸೇರಿ ಸಮಾಲೋಚನೆ ಮಾಡಿ, ರಾಜನ ಮತ್ತು ಪ್ರಜೆಗಳ ಉನ್ನತಿಗೆ ಅನುಕೂಲವಾದ ನಿಯಮಗಳನ್ನೂ, ವಿದ್ಯೆಯನ್ನೂ ಪ್ರಕಾಶಪಡಿಸುತ್ತಿರಬೇಕು. ॥೧೬॥ ದೇಶದ ಆಡಳಿತವನ್ನು ನಿರೀಕ್ಷಿಸುತ್ತಾ ನಿರಂತರವಾಗಿ ಸಂಚರಿಸುತ್ತಿರುವ ಅಧಿಕಾರಿಯ ವಶದಲ್ಲಿ ಗೂಢಚಾರರೆಲ್ಲರನ್ನೂ ಇಟ್ಟಿರಬೇಕು. ಅದರ ಮೂಲಕ ಆ ಅಧಿಕಾರಿಯು, ಅಧಿಕಾರಿಗಳ ಮತ್ತು ಸಣ್ಣ ಸಣ್ಣ ರಾಜರ ಗುಣದೋಷಗಳನ್ನು ಗುಟ್ಟಾಗಿ ತಿಳಿದುಕೊಂಡು, ಅಪರಾಧಿಗಳನ್ನು ದಂಡಿಸುತ್ತಾ, ಶ್ರೇಷ್ಠರನ್ನು ಗೌರವಿಸುತ್ತಾ ಓಡಾಡುತ್ತಿರಬೇಕು. ॥೧೭॥ ರಾಜನಿಂದ ಪ್ರಜಾರಕ್ಷಣೆಯ ಅಧಿಕಾರವನ್ನು ಪಡೆಯುವವರು ಧಾರ್ಮಿಕರೂ, ವಿದ್ವಾಂಸರೂ, ಕುಲೀನರೂ ಆಗಿರಬೇಕು. ಅವರ ಅಧೀನದಲ್ಲಿ ಶಠರನ್ನೂ, ಪರದ್ರವ್ಯಾಪಹಾರಮಾಡುವ ಕಳ್ಳರನ್ನೂ, ಡಕಾಯಿತರನ್ನೂ ನಿಯಮಿಸಿ, ಅವರಿಂದ ದುಷ್ಕರ್ಮ ಬಿಡಿಸಲಿಕ್ಕಾಗಿ ರಾಜನ ಸೇವಕರನ್ನಾಗಿ ಮಾಡಿ, ರಕ್ಷಕರಾದ ವಿದ್ವಾಂಸರನ್ನಿಟ್ಟು, ಅವರಿಂದಲೂ ಪ್ರಜೆಗಳ ರಕ್ಷಣೆ ಮಾಡಿಸಬೇಕು. ॥೧೮॥ ಯಾವನಾದರೂ ರಾಜಪುರುಷನು ವಾದಿ ಪ್ರತಿವಾದಿಗಳಲ್ಲಿ ಯಾರಿಂದಲಾದರೂ ಲಂಚ ತೆಗೆದುಕೊಂಡು, ನ್ಯಾಯ ನಿರ್ಣಯದಲ್ಲಿ ಪಕ್ಷಪಾತಮಾಡಿದುದು ನಿಶ್ಚಯವಾದರೆ, ಆ ಅಧಿಕಾರಿಯ ಸರ್ವಸ್ವವನ್ನೂ ಕಿತ್ತುಕೊಂಡು, ಯಥಾವತ್ತಾಗಿ ದಂಡ ವಿಧಿಸಿ, ಹಿಂದಕ್ಕೆ ಬರಲೆಡೆಯಿಲ್ಲದಂತಹ ದೇಶದಲ್ಲಿಟ್ಟು ಬಿಡಬೇಕು. ಏಕೆಂದರೆ, ಅಂತಹ ಅಧಿಕಾರಿಗೆ ಕಠಿಣಶಿಕ್ಷೆ ಕೊಡದಿದ್ದರೆ, ಇತರ ಅಧಿಕಾರಿಗಳೂ ಸಹ ಇಂತಹ ದುಷ್ಕಾರ್ಯಗಳನ್ನು ಮಾಡತೊಡಗುವರು. ಆದರೆ, ದಂಡಿಸಿದಲ್ಲಿ ಸರಿಯಾಗಿರುವರು. ಆದರೆ ಆ ರಾಜಪುರುಷರ ಯೋಗಕ್ಷೇಮ ಸುಸೂತ್ರವಾಗಿ ಸಿದ್ಧಿಸುವಷ್ಟು, ಮತ್ತು ಅವರು ಸಾಕಾವಷ್ಟು ಧನಾಢ್ಯರೂ ಆಗುವಷ್ಟು ಧನವು, ಮಾಸಿಕ, ವಾರ್ಷಿಕ, ಅಥವಾ ಒಂದೇಸಲ ಕೊಡಲ್ಪಡಬೇಕು: ಅಥವಾ ಭೂಮಿಯು ಕೊಡಲ್ಪಡಬೇಕು. ವೃದ್ಧರಿಗೆ ಅರ್ಧ ವೇತನ

ಸಿಕ್ಕಬೇಕು. ಈ ವೇತನವು ಆವರು ಜೀವಂತರಾಗಿರುವವರೆಗೆ ಮಾತ್ರ ಕೊಡಲ್ಪಡಬೇಕು; ಅನಂತರವಲ್ಲ. ಅವರ ಮಕ್ಕಳಿಗೆ ಅವರವರ ಯೋಗ್ಯತೆಗೆ ತಕ್ಕಂತೆ ಸತ್ಕಾರವನ್ನಾಗಲಿ, ಉದ್ಯೋಗವನ್ನಾಗಲಿ ಕೊಡಬೇಕು. ಮತ್ತು ಅಕಾಲ ಮೃತ್ಯುಗೀಡಾದ ಯೋಗ್ಯರಾದ ಅಧಿಕಾರಗಳ ಮಕ್ಕಳು ಸಮರ್ಥರಾಗುವವರೆಗೂ ಅವನ ಸ್ತ್ರೀಯರಿಗೆ ನಿರ್ವಾಹಕ್ಕಾಗಿ ಹಣವನ್ನು ಕೊಡಬೇಕು. ಆದರೆ ಆ ಸ್ತ್ರೀಯರೂ, ಬಾಲಕರೂ ದುರಾಚಾರಿಗಳಾಗಿ ಹೋದರೆ, ಆವರಿಗೆ ಯಾವ ವೇತನವನ್ನೂ ಕೊಡಬಾರದು. ಈ ನಿಯಮಗಳನ್ನು ರಾಜನು ಯಥಾವಿಧಿ ಪಾಲಿಸಬೇಕು.

ಯಥಾಫಲೇನ ಯುಜ್ಯೇತ ರಾಜಾ ಕರ್ತಾ ಚ ಕರ್ಮಣಾಮ್।
ತಥಾವೇಕ್ಷ್ಯ ನೃಪೋ ರಾಷ್ಟ್ರಂ ಕಲ್ಪಯೇತ್ಸತತಂ ಕರಾನ್॥೧॥
ಯಥಾಲ್ಪಾಲ್ಪಮದಂತ್ಯಾದ್ಯಂ ವಾರ್ಯೋಕೋವತ್ಸಷಟ್ಪದಾಃ।
ತಥಾಲ್ಪಾಽಲ್ಪೋ ಗ್ರಹೀತವ್ಯಾ ರಾಷ್ಟ್ರಾದ್ರಾಜ್ಞಾಬ್ದಿಕಾಃ ಕರಾಃ ॥೨॥

ನೋಚ್ಛಿಂದ್ಯಾದಾತ್ಮನೋ ಮೂಲಂ ಪರೇಷಾಂ ಚಾತಿತೃಷ್ಣಯಾ।
ಉಚ್ಛಿಂದನ್ ಹ್ಯಾತ್ಮನೋ ಮೂಲಮಾತ್ಮಾನಂ ತಾಂಶ್ಚ ಪೀಡಯೇತ್ ॥೩॥

ತೀಕ್ಷ್ಣಶ್ಚೈವ ಮೃದುಶ್ಚ ಸ್ಯಾತ್ಕಾರ್ಯಂ ವೀಕ್ಷ್ಯಮಹೀಪತಿಃ।
ತೀಕ್ಷ್ಣಶ್ಚೈವ ಮೃದುಶ್ಚೈವ ರಾಜಾ ಭವತಿ ಸಮ್ಮತಃ ॥೪॥

ಏವಂ ಸರ್ವಂ ವಿಧಾಯೇದಮಿತಿ ಕರ್ತವ್ಯಮಾತ್ಮನಃ।
ಯುಕ್ತಶ್ಚೈವಾಪ್ರಮತ್ತಶ್ಚ ಪರಿರಕ್ಷೇದಿಮಾಃ ಪ್ರಜಾಃ ॥೫॥

ವಿಕ್ರೋಶನ್ತ್ಯೋ ಯಸ್ಯ ರಾಷ್ಟ್ರಾದ್ಧ್ರಿಯಂತೇ ದಸ್ಯುಭಿಃ ಪ್ರಜಾಃ।
ಸಂಪಶ್ಯತಃ ಸಭೃತ್ಯಸ್ಯ ಮೃತಃ ಸ ನ ತು ಜೀವತಿ ॥೬॥

ಕ್ಷತ್ರಿಯಸ್ಯ ಪರೊ ಧರ್ಮಃ ಪ್ರಜಾನಾಮೇವ ಪಾಲನಮ್ ।
ನಿರ್ದಿಷ್ಟಫಲಭೋಕ್ತಾ ಹಿ ರಾಜಾಧರ್ಮೇಣ ಯುಜ್ಯತೇ ॥೭॥

[ಮನು ೭॥ ೧೨೮ । ೧೨೯ । ೧೩೯ । ೧೪೦ । ೧೪೨ । ೧೪೪]

ರಾಜನೂ ಕಾರ್ಯಕರ್ತನಾದ ಪುರುಷನೂ, ಪ್ರಜೆಯೂ. ಸುಖವೆಂಬ ಫಲವನ್ನು ಪಡೆಯುವಂತೆ, ಚನ್ನಾಗಿ ಆಲೋಚಿಸಿ, ರಾಜನೂ, ರಾಜಸಭೆಯೂ, ರಾಜ್ಯದಲ್ಲಿ ರಾಜತೆರಿಗೆಯನ್ನು ವಿಧಿಸಬೇಕು ॥೧॥ ಜಿಗಣೆಯೂ, ಕರುವೂ, ದುಂಬಿಯೂ, ಕೊಂಚ ಕೊಂಚ ಭೋಗ್ಯ ಪದಾರ್ಥಗಳನ್ನು ಗ್ರಹಿಸುವಂತೆ, ರಾಜನು ಪ್ರಜೆಗಳಿಂದ ಸ್ವಲ್ಪ ಸ್ವಲ್ಪ ವಾರ್ಷಿಕ ಕರವನ್ನು ತೆಗೆದುಕೊಳ್ಳಬೇಕು ॥೨॥ ಅತ್ಯಾಶೆಯಿಂದ ತನ್ನ ಮತ್ತು ಪರರ ಸುಖದ ಮೂಲವನ್ನು ಎಂದೂ ಕತ್ತರಿಸಿಹಾಕಬಾರದು. ವ್ಯವಹಾರದ ಮತ್ತು ಸುಖದ ಮೂಲವನ್ನೇ ಹಾಳುಮಾಡುವವನು, ತನಗೂ, ಇತರರಿಗೂ ನೋವನ್ನೇ ಕೊಡುತ್ತಾನೆ ॥೩॥ ಕಾರ್ಯವನ್ನು ನೋಡಿ ಯಾವ ಮಹೀಪತಿಯು ತೀಕ್ಷ್ಣನೂ, ಕೋಮಲನೂ ಸಹ ಆಗುತ್ತಾನೋ, ಆ ರಾಜನು ದುಷ್ಕರ ವಿಷಯದಲ್ಲಿ ತೀಕ್ಷ್ಣನೂ, ಶ್ರೇಷ್ಠರ ಬಗ್ಗೆ ಕೋಮಲನೂ ಆಗಬಲ್ಲವನಾದುದರಿಂದ ಬಹಳ ಮಾನಿನೀಯನಾಗಿರುತ್ತಾನೆ ॥೪॥ ಈರೀತಿ ಎಲ್ಲಾ ರಾಜ್ಯವ್ಯವಸ್ಥೆಯನ್ನೂ ಮಾಡಿ, ಸದಾ ಅದರಲ್ಲಿ ತತ್ಪರನೂ, ಪ್ರಮಾದರಹಿತನೂ ಆಗಿ, ನಿರಂತರವೂ ತನ್ನ ಪ್ರಜೆಗಳನ್ನೇ ಪಾಲಿಸುತ್ತಿರಬೇಕು ॥೫॥ ಭೃತ್ಯಸಮೇತನಾಗಿ ನೋಡುತ್ತಿರುವ ಯಾವ ರಾಜನ ಕಣ್ಣು ಮುಂದೆಯೇ, ದರೋಡೆಕೋರರು ವಿಲಾಪಮಾಡುತ್ತಿರುವ ಪ್ರಜೆಗಳ ಧನವನ್ನೂ ಪ್ರಾಣವನ್ನೂ ಅಪಹರಿಸಿಕೊಂಡು ರಾಜ್ಯದಿಂದ ಹೋಗುತ್ತಿರುವರೋ, ಅವನು ಭೃತ್ಯ, ಅಮಾತ್ಯ, ಸಹಿತ ಮೃತನಾಗಿದ್ದಾನೆ; ಜೀವಂತನಾಗಿಲ್ಲ; ಮತ್ತು ಮಹಾದು;ಖಕ್ಕೆ ಈಡಾಗುವನು—ಎಂದು ತಿಳಿಯಬೇಕು ॥೬॥ ಆದುದರಿಂದ ಪ್ರಜಾಪಾಲನಮಾಡುವುದೇ ರಾಜರ ಪರಮಧರ್ಮ. ಮತ್ತು ಮನುಸ್ಮೃತಿಯ ಏಳನೆಯ ಅಧ್ಯಾಯದಲ್ಲಿ ಹೇಳಿರುವಂತೆ, ತೆರಿಗೆ ವಿಧಿಸುವ ಮತ್ತು ಸಭೆಯ ನಿರ್ಣಯದಂತೆ ಕರಸ್ವೀಕಾರಮಾಡುವ ರಾಜನು ಧರ್ಮಯುಕ್ತನಾಗಿ ಸುಖಹೊಂದು

ತ್ತಾನೆ. ಅದಕ್ಕೆ ವ್ಯತಿರಿಕ್ತವಾಗಿ ನಡೆಯುವವನು ದುಃಖವನ್ನು ಪಡೆಯುತ್ತಾನೆ. ॥೭॥

ಉತ್ಥಾಯ ಪಶ್ಚಿಮೇ ಯಾಮೇ ಕೃತಶೌಚಃ ಸಮಾಹಿತಃ।
ಹುತಾಗ್ನಿರ್ಬ್ರಾಹ್ಮಣಾಂಶ್ಚಾರ್ಚ್ಯ ಪ್ರವಿಶೇತ್ಸ ಶುಭಾಂ
ಸಭಾಮ್ ॥೮॥
ತತ್ರ ಸ್ಥಿತಾಃ ಪ್ರಜಾಃ ಸರ್ವಾಃ ಪ್ರತಿನಂದ್ಯ ವಿಸರ್ಜಯೇತ್।
ವಿಸೃಜ್ಯ ಚ ಪ್ರಜಾಃ ಸರ್ವಾಃ ಮಂತ್ರಯೇತ್ಸಹ ಮಂತ್ರಿಭಿಃ ॥
ಗಿರಿಪೃಷ್ಠಂ ಸಮಾರುಹ್ಯ ಪ್ರಾಸಾದಂ ವಾ ರಹೋಗತಃ।
ಅರಣ್ಯೇ ನಿಃಶಲಾಕೇ ವಾ ಮಂತ್ರಯೇದವಿಭಾವಿತಃ ॥೯॥
ಯಸ್ಯ ಮಂತ್ರಂ ನ ಜಾನಂತಿ ಸಮಾಗಮ್ಯ ಪೃಥಗ್ಜನಾಃ।
ಸ ಕೃತ್ಸ್ನಾಂ ಪೃಥಿವೀಂ ಭುಂಕ್ತೇ ಕೋಶಹೀನೋಽಪಿ
ಪಾರ್ಥಿವಃ ॥೪॥

ರಾತ್ರಿಯಲ್ಲಿ ಒಂದು ಯಾಮ ಉಳಿದಿರುವಾಗಲೇ ಎದ್ದು, ಶೌಚಾದಿ ಕರ್ಮಗಳನ್ನು ತೀರಿಸಿಕೊಂಡು, ಸಾವಧಾನಚಿತ್ತದಿಂದ ಪರಮಾತ್ಮನ ಧ್ಯಾನವನ್ನೂ, ಅಗ್ನಿಹೋತ್ರವನ್ನೂ, ಧಾರ್ಮಿಕ ಸತ್ಪುರುಷರ ಸತ್ಕಾರವನ್ನೂ ಮಾಡಿ, ಅಲ್ಪಾಹಾರ ಮಾಡಿ, ಒಳಗೆ ಸಭೆಯನ್ನು ಪ್ರವೇಶಿಸಬೇಕು. ॥೧॥ ಆ ಸಭೆಯಲ್ಲಿ ತನ್ನ ಆಗಮನವನ್ನು ಕಾದು ನಿಂತಿರುವ ಪ್ರಜೆಗಳನ್ನು ಗೌರವಿಸಿ ಕಳುಹಿಸಿಕೊಡಬೇಕು. ಆಮೇಲೆ ಮುಖ್ಯಮಂತ್ರಿಯೊಡನೆ ರಾಜ್ಯವ್ಯವಸ್ಥಾವಿಷಯವನ್ನು ಚರ್ಚಿಸಬೇಕು. ॥೨॥ ಬಳಿಕ ಮಂತ್ರಿಯೊಡನೆ ಹೊರಟು, ಪರ್ವತ ಶಿಖರದಲ್ಲಾಗಲಿ, ಏಕಾಂತಗೃಹದಲ್ಲಾಗಲಿ, ಒಂದು ಕಡ್ಡಿಯೂ ಇಲ್ಲದ ನಿರ್ಜನವನದಲ್ಲಾಗಲಿ ಕುಳಿತು, ವಿರೋಧಭಾವವನ್ನು ವರ್ಜಿಸಿ ಮಂತ್ರಿಯೊಡನೆ ಆಲೋಚಿಸಬೇಕು. ॥೩॥ ಯಾವ ರಾಜನ ಗೂಢ ಆಲೋಚನೆಗಳನ್ನು, ಅನ್ಯ ಜನರು ತಿಳಿಯಲಾರರೋ, ಅಂದರೆ ಯಾವನ ಆಲೋಚನೆಯು ಗಂಭೀರವೂ, ಪವಿತ್ರವೂ, ಪರೋಪಕಾರಾರ್ಥವಾಗಿ ಗುಪ್ತವೂ ಆಗಿರುವುದೋ ಆ ರಾಜನು ಧನಹೀನ

ನಾಗಿವ್ವರೂ ಸಮಗ್ರ ಭೂಮಂಡಲವನ್ನು ಆಳಲು ಸಮರ್ಥನಾಗುತ್ತಾನೆ. ಆದುದರಿಂದ ರಾಜನು ಸಭಾಸದರ ಅನುಮತಿ ಸಿಕ್ಕದವರೆಗೆ ತನ್ನ ಇಚ್ಛೆಯಿಂದ ಏನನ್ನೂ ಮಾಡಬಾರದು. ॥೬॥

ಆಸನಂ ಚೈವ ಯಾನಂ ಚ ಸಂಧಿಂ ವಿಗ್ರಹಮೇವ ಚ ।
ಕಾರ್ಯಂ ವೀಕ್ಷ್ಯ ಪ್ರಯುಂಜೀತ ದ್ವೈಧಂ ಸಂಶ್ರಯ ಮೇವ ಚ ॥೧॥

ಸಂಧಿಂ ತು ದ್ವಿವಿಧಂ ವಿದ್ಯಾದ್ರಾಜಾ ವಿಗ್ರಹಮೇವ ಚ ।
ಉಭೇ ಯಾನಾಸನೇ ಚೈವ ದ್ವಿವಿಧಃ ಸಂಶ್ರಯಃ ಸ್ಮೃತಃ ॥೨॥
ಸಮಾನಯಾನಕರ್ಮಾ ಚ ವಿಪರೀತಸ್ತಥೈವ ಚ ।
ತಥಾ ತ್ವಾಯತಿಸಂಯುಕ್ತಃ ಸಂಧಿರ್ಜ್ಞೇಯೋ ದ್ವಿಲಕ್ಷಣಃ॥೩॥
ಸ್ವಯಂ ಕೃತಶ್ಚ ಕಾರ್ಯಾರ್ಥಮಕಾಲೇ ಕಾಲ ಏವ ವಾ ।
ಮಿತ್ರಸ್ಯ ಚೈವಾಪಕೃತೇ ದ್ವಿವಿಧೋ ವಿಗ್ರಹಃ ಸ್ಮೃತಃ ॥೪॥
ಏಕಾಕಿನಶ್ಚಾತ್ಮಯಿಕೇ ಕಾರ್ಯೇ ಪ್ರಾಪ್ತೇ ಯದೃಚ್ಛಯಾ ।
ಸಂಹತಸ್ಯ ಚ ಮಿತ್ರೇಣ ದ್ವಿವಿಧಂ ಯಾನಮುಚ್ಯತೇ ॥೫॥
ಕ್ಷೀಣಸ್ಯ ಚೈವ ಕ್ರಮಶೋ ದೈವಾತ್ಪೂರ್ವಕೃತೇನ ವಾ ।
ಮಿತ್ರಸ್ಯ ಚಾನುರೋಧೇನ ದ್ವಿವಿಧಂ ಸ್ಮೃತಮಾಸನಂ ॥೬॥
ಬಲಸ್ಯ ಸ್ವಾಮಿನಶ್ಚೈವ ಸ್ಥಿತಿಃ ಕಾರ್ಯಸಿದ್ಧಯೇ ।
ದ್ವಿವಿಧಂ ಕೀರ್ತ್ಯತೇ ದ್ವೈಧಂ ಷಾಡ್ಗುಣ್ಯಗುಣವೇದಿಭಿಃ ॥೭॥
ಅರ್ಥಸಂಪಾದನಾರ್ಥಂ ಚ ಪೀಡ್ಯಮಾನಃ ಸ ಶತ್ರುಭಿಃ ।
ಸಾಧುಷು ವ್ಯಪದೇಶಾರ್ಥಂ ದ್ವಿವಿಧಃ ಸಂಶ್ರಯಃ ಸ್ಮೃತಃ ॥೮॥
ಯದಾವಗಚ್ಛೇದಾಯತ್ಯಾಮಾಧಿಕ್ಯಂ ಧ್ರುವಮಾತ್ಮನಃ ।
ತದಾತ್ವೇ ಚಾಲ್ಪಿಕಾಂ ಪೀಡಾಂ ತದಾ ಸಂಧಿಂ ಸಮಾಶ್ರಯೇತ್॥
ಯದಾ ಪ್ರಹೃಷ್ಟಾ ಮನ್ಯೇತ ಸರ್ವಾಸ್ತು ಪ್ರಕೃತೀರ್ಭೃಶಮ್ ।
ಆತ್ಮುಚ್ಛ್ರಿತಂ ತಥಾತ್ಮಾನಂ ತದಾ ಕುರ್ವೀತ ವಿಗ್ರಹಂ ॥೧೦॥
ಯದಾ ಮನ್ಯೇತ ಭಾವೇನ ಹೃಷ್ಟಂ ಪುಷ್ಟಂ ಬಲಂ ಸ್ವಕಂ ।
ಪರಸ್ಯ ವಿಪರೀತಂ ಚ ತದಾ ಯಾಯಾದ್ರಿಪುಂ ಪ್ರತಿ ॥೧೧॥

ಯದಾ ತು ಸ್ಯಾತ್ಪರಿಕ್ಷೀಣೋ ವಾಹನೇನ ಬಲೇನ ಚ ।
ತದಾಸೀತ ಪ್ರಯತ್ನೇನ ತನಕೈಃ ಸಾಂತ್ವಯನ್ನರೀನ್ ॥೧೨॥
ಮನ್ಯೇತಾರಿಂ ಯದಾ ರಾಜಾ ಸರ್ವಥಾ ಬಲವತ್ತರಂ ।
ತದಾ ದ್ವಿಧಾ ಬಲಂ ಕೃತ್ವಾ ಸಾಧಯೇತ್ಕಾರ್ಯಮಾತ್ಮನಃ॥೧೩॥
ಯದಾ ಪರಬಲಾನಾಂ ತು ಗಮನೀಯತಮೋಭವೇತ್ ।
ತದಾ ತು ಸಂಶ್ರಯೇ ತ್ಕ್ಷಿಪ್ರಂ ಧಾರ್ಮಿಕಂ ಬಲಿನಂ ನೃಪಂ॥೧೪॥
ನಿಗ್ರಹಂ ಪ್ರಕೃತೀನಾಂ ಚ ಕುರ್ಯಾದ್ಯೋಽರಿಬಲಸ್ಯ ಚ ।
ಉಪಸೇವೇತ ತಂ ನಿತ್ಯಂ ಸರ್ವಯತ್ನೈರ್ಗುರುಂ ಯಥಾ॥೧೫॥
ಯದಿ ತತ್ರಾಪಿ ಸಂಪಶ್ಯೇದ್ದೋಷಂ ಸಂಶ್ರಯಕಾರಿತಂ ।
ಸುಯುದ್ಧಮೇವ ತತ್ರಾಪಿ ನಿರ್ವಿಶಂಕಃ ಸಮಾಚರೇತ್ ॥೧೬॥

[ಮನು ೭ ॥ ೧೬೧-೧೭೬]

(ಆಸನ) ಸ್ಥಿರವಾಗಿರುವಿಕೆ, (ಯಾನ) ಶತ್ರುವಿನೊಡನೆ ಹೋರಾಡಲು ಹೊರಡುವಿಕೆ, (ಸಂಧಿ) ಅವರೊಡನೆ ಸ್ನೇಹಮಾಡಿಕೊಳ್ಳುವಿಕೆ, (ದ್ವೈಧ) ಸೇನೆಯನ್ನು ಎರಡುರೀತಿ ವಿಂಗಡಿಸಿ ಜಯಹೊಂದುವಿಕೆ, (ಸಂಶ್ರಯ) ತಾನು ದುರ್ಬಲನಾದಲ್ಲಿ ಬೇರೊಬ್ಬ ಬಲಿಷ್ಠ ರಾಜನನ್ನು ಆಶ್ರಯಿಸುವಿಕೆ, ಈ ಆರುವಿಧವಾದ ಕಾರ್ಯಗಳನ್ನು ಸಮಯಕ್ಕೆ ತಕ್ಕಂತೆ ಉಪಯೋಗಿಸಿಕೊಳ್ಳಬೇಕು. ಈ ವಿಷಯವನ್ನು ರಾಜನೂ, ರಾಜಪುರುಷರೂ, ಸದಾ ಗಮನದಲ್ಲಿಟ್ಟುಕೊಂಡಿರಬೇಕು. ॥೧॥ ಹಿಂದೆ ಹೇಳಿದ ಸಂಧಿ, ವಿಗ್ರಹ, ಯಾನ, ಆಸನ, ದ್ವೈಧೀಭಾವ ಮತ್ತು ಸಂಶ್ರಯ ಇವುಗಳಲ್ಲಿ ಪ್ರತಿ ಒಂದೂ ಎರಡು ವಿಧವಾಗಿರುತ್ತದೆ. ರಾಜನು ಈ ಎರಡು ವಿಧಗಳನ್ನು ಚನ್ನಾಗಿ ತಿಳಿದುಕೊಂಡಿರಬೇಕು॥೨॥ (ಸಂಧಿ) ಶತ್ರುವಿನೊಡನೆ ಸ್ನೇಹದಿಂದ ಅಥವಾ ಅವನಿಗೆ ವಿರುದ್ಧವಾಗಿ ವರ್ತಿಸಿದರೂ, ಆಗ ಮತ್ತು ಮುಂದಕ್ಕೆ ಮಾಡಬೇಕಾದ ಕರ್ತವ್ಯಗಳನ್ನು ತಪ್ಪದೆ ಮಾಡುತ್ತಿರುವುದು, ಎರಡು ಬಗೆಯ ಸಂಧಿಯೆನಿಸುತ್ತದೆ. ॥೩॥ (ವಿಗ್ರಹ) ಕಾರ್ಯಸ್ಥಿತಿಗಾಗಿ ಉಚಿತವಾದ ಅಥವಾ ಅನುಚಿತವಾವ ಕಾಲದಲ್ಲಿ ತಾನು ಮಾಡಿದ ವಿರೋಧ, ಮತ್ತು ತನ್ನ ಸ್ನೇಹಿತನಿಗೆ ಅಪರಾಧಮಾಡಿದ ಶತ್ರುವಿನೊಂದಿಗೆ ಮಾಡುವ ವಿರೋಧ-

ಹೀಗೆ ಎರಡು ಬಗೆ ವಿಗ್ರಹವನ್ನು ಮಾಡಬೇಕು. ॥೪॥ (ಯಾನ) ಅಕಸ್ಮಾತ್ತಾಗಿ ಏನಾದರೂ ಕೆಲಸಬಿದ್ದಲ್ಲಿ ತಾನೊಬ್ಬನೇ ಶತ್ರುವಿನ ಎದುರಾಗಿ ಹೋಗುವುದು ಅಥವಾ ಮಿತ್ರನೊಂದಿರೆ ಸೇರಿ ಹೋಗುವುದು---ಇದು ಎರಡು ಬಗೆಯ ಗಮನವೆನ್ನಿಸುತ್ತದೆ. ॥೫॥ ಯಾವುದಾದರೂ ಕಾರಣದಿಂದ ತಾನೇ ಪರಾಕ್ರಮದಲ್ಲಿ ಕ್ಷೀಣನಾದರೆ, ಅಂದರೆ–ನಿರ್ಬಲನಾದರೆ, ಅಥವಾ ಮಿತ್ರನು ತಡೆದರೆ ತನ್ನ ಸ್ಥಾನದಲ್ಲಿ ಕುಳಿತಿರುವುದು, ಎರಡು ವಿಧವಾದ ಆಸನವೆನ್ನಿಸುತ್ತದೆ. ॥೬॥ (ದ್ವೈಧ) ಕಾರ್ಯಸಿದ್ಧಿಗಾಗಿ ಸೇನಾಧಿಪತಿಗಳನ್ನೂ ಸೈನ್ಯವನ್ನೂ ಎರಡು ಭಾಗಗಳಾಗಿ ವಿಂಗಡಿಸಿ ಜಯ ಹೊಂದುವುದು. ಇದು ಎರಡು ವಿಧವಾದ ದ್ವೈಧವೆನ್ನಿಸುತ್ತದೆ. ॥೭॥ (ಸಂಶ್ರಯ) ಸ್ವಪ್ರಯೋಜನಸಾಧನೆಗಾಗಿ, ಶತ್ರುಗಳಿಂದ ಯಾವ ಬಾಧೆಯೂ ಉಂಟಾಗದಂತೆ ಯಾವನಾದರೊಬ್ಬ ಬಲಶಾಲಿಯಾದ ರಾಜನನ್ನು ಅಥವಾ ಮಹಾತ್ಮನನ್ನು ಶರಣುಹೊಗುವುದು ಎರಡು ಬಗೆಯ ಆಶ್ರಯವೆನ್ನಿಸುತ್ತದೆ. ॥೮॥ ಕೂಡಲೆ ಯದ್ಧ ಹೂಡಿದರೆ, ತನಗೆ ಹಾನಿಯುಂಟಾಗುವುದು, ಕೆಲದಿನಗಳನಂತರ ಯುದ್ಧ ಹೂಡಿದರೆ ತನಗೆ ಅವಶ್ಯವಾಗಿ ಜಯ ವೃದ್ಧಿಗಳು ಲಭಿಸುವುವು–ಎಂದು ತಿಳಿದುಬಂದಾಗ, ಶತ್ರುವಿನೊಡನೆ ಸ್ನೇಹಮಾಡಿಕೊಂಡು ಉಚಿತ ಸಮಯದವರೆಗೆ ಕಾದಿರಬೇಕು. ॥೯॥ ತನ್ನ ಪ್ರಜೆಗಳೂ, ಸೈನ್ಯವೂ ಅತ್ಯಂತ ಪ್ರಸನ್ನವಾಗಿಯೂ, ಉನ್ನತಶೀಲವಾಗಿಯೂ, ಶ್ರೇಷ್ಠವಾಗಿಯೂ ಇರುವಾಗ ಮತ್ತು ತಾನೂ ಹಾಗೆಯೇ ಇರುವಾಗ ಶತ್ರುವಿನೊಡನೆ ಯುದ್ಧಮಾಡಲು ಹೊರಡಬೇಕು. ॥೧೦॥ ತನ್ನ ಸೈನ್ಯವು ಪುಷ್ಟವಾಗಿ ಸಂತೋಷದಿಂದಿರುವುದೂ, ಶತ್ರುಸೈನ್ಯವು ದುರ್ಬಲವಾಗಿರುವುದೂ, ಕಂಡುಬಂದಾಗ ಶತ್ರುವಿನೊಡನೆ ಯುದ್ಧಮಾಡುವುದಕ್ಕೆ ಹೊರಡಬೇಕು. ॥೧೧॥ ತನ್ನ ಸೈನ್ಯವು ಬಲ ಮತ್ತು ವಾಹನಗಳಿಲ್ಲದೆ ಕ್ಷೀಣದೆಶೆಗೆ ಬಂದಾಗ ಸಿಧಾನವಾಗಿ ಶತ್ರುವನ್ನು ಶಾಂತಗೊಳಿಸುತ್ತಾ ತನ್ನ ಸ್ಥಾನದಲ್ಲಿಯೇ ಇರಬೇಕು. ॥೧೨॥ ಶತ್ರುವು ಬಲಿಷ್ಠನಾಗಿರುವನೆಂದು ತಿಳಿದುಬಂದಾಗ, ಸೈನ್ಯವನ್ನು ಇಬ್ಭಾಗವಾಗಿ ವಿಂಗಡಿಸಿ, ತನ್ನ ಕಾರ್ಯಗಳನ್ನು ಸಾಧಿಸಬೇಕು. ॥೧೩॥ ಶತ್ರುಗಳು ತ್ವರೆಯಿಂದ ದಂಡೆತ್ತಿ

ಬರುವರೆಂದು ತಿಳಿದುಬಂದ ಕೂಡಲೆ ಯಾವದಾದರೂ ಧಾರ್ಮಿಕನಾದ ಬಲಶಾಲೀ ರಾಜನೊಬ್ಬನನ್ನು ಆಶ್ರಯಿಸಬೇಕು. ॥೧೪॥ ಯಾವನು ಪ್ರಜೆ, ತನ್ನ ಸೈನ್ಯ, ಮತ್ತು ಶತ್ರುಸೈನ್ಯವನ್ನು ನಿಗ್ರಹಿಸುತ್ತಾನೋ, ಅಂದರೆ ತನ್ನ ವಶದಲ್ಲಿಟ್ಟುಕೊಳ್ಳುತ್ತಾನೋ, ಅವನನ್ನು ಗುರುವಿಗೆ ಸೇವೆ ಸಲ್ಲಿಸುವಂತೆ ಸರ್ವಪ್ರಯತ್ನದಿಂದಲೂ, ಸೇವೆ ಸಲ್ಲಿಸಿ ಸತ್ಕರಿಸ ಬೇಕು. ॥೧೫॥ ಯಾವನನ್ನು ಆಶ್ರಯಿಸುತ್ತಾನೋ ಆ ಪುರುಷನ ಕಾರ್ಯಗಳಲ್ಲಿ ದೋಷ ಕಂಡುಬಂದರೆ, ಅಲ್ಲಿಯೂ ಚೆನ್ನಾಗಿ ನಿಶ್ಶಂಕ ನಾಗಿ ಯುದ್ಧವನ್ನೇ ಮಾಡಬೇಕು. ॥೧೬॥ ಧಾರ್ಮಿಕನಾದ ರಾಜ ನೊಂದಿಗೆ, ಎಂದಿಗೂ ವಿರೋಧ ಕಟ್ಟಿಕೊಳ್ಳದೆ, ಸದಾ ಅವನೊಂದಿಗೆ ಹೊಂದಿಕೊಂಡಿರಬೇಕು. ದುಷ್ಟನು ಪ್ರಬಲನೇ ಆಗಿದ್ದರೂ, ಅವನನ್ನು ಜಯಿಸುವುದಕ್ಕಾಗಿಯೇ ಮೇಲೆ ಹೇಳಿದ ಉಪಾಯಗಳನ್ನು ಪ್ರಯೋಗಿಸುವುದು ಉಚಿತವಾಗಿರುತ್ತದೆ.

ಸರ್ವೋಽಪಾಯೈಸ್ತಥಾ ಕುರ್ಯಾನ್ನೀತಿಜ್ಞಃ ಪೃಥಿವೀಪತಿಃ।
ಯಥಾಸ್ಯಾಭ್ಯಧಿಕಾ ನಸ್ಯುರ್ಮಿತ್ರೋದಾಸೀನಶತ್ರವಃ ॥೧॥
ಆಯತಿಂ ಸರ್ವಕಾರ್ಯಾಣಾಂ ತದಾತ್ವಂ ಚ ವಿಚಾರಯೇತ್।
ಅತೀತಾನಾಂ ಚ ಸರ್ವೇಷಾಂ ಗುಣದೋಷೌ ಚ ತತ್ತ್ವತಃ ॥೨॥
ಆಯತ್ಯಾಂಗುಣದೋಷಜ್ಞಸ್ತದಾತ್ವೇ ಕ್ಷಿಪ್ರನಿಶ್ಚಯಃ।
ಅತೀತೇ ಕಾರ್ಯಶೇಷಜ್ಞಃ ಶತ್ರುಭಿರ್ನಾಭಿಭೂಯತೇ ॥೩॥
ಯಥೈನಂ ನಾಭಿಸಂದಧ್ಯುರ್ಮಿತ್ರೋದಾಸೀನ ಶತ್ರವಃ।
ತಥಾ ಸರ್ವಂ ಸಂವಿಧಧ್ಯಾದೇಷ ಸಾಮಾಸಿಕೋನಯಃ ॥೪॥

ನೀತಿಜ್ಞನಾದ ಪೃಥಿವೀಪತಿರಾಜನು, ತನ್ನ ಮಿತ್ರರೂ ಉದಾಸೀನರೂ, ಶತ್ರುಗಳೂ, ಪ್ರಬಲರಾಗದಂತೆ ಎಲ್ಲಾ ಉಪಾಯಗಳನ್ನೂ ಮಾಡುತ್ತಿರಬೇಕು. ॥೧॥ ತತ್ಕಾಲದಲ್ಲಿ ಮಾಡುತ್ತಿರುವ ಕಾರ್ಯಗಳನ್ನೂ ಮುಂದೆ ಮಾಡಬೇಕಾದುದನ್ನೂ, ಹಿಂದೆ ಮಾಡಿದ ಕಾರ್ಯಗಳನ್ನೂ, ಅವುಗಳ ಗುಣದೋಷಗಳನ್ನೂ ಯಥಾರ್ಥವಾಗಿ ವಿಮರ್ಶಿಸುತ್ತಿರ ಬೇಕು. ॥೨॥ ಆಮೇಲೆ ದೋಷಗಳ ನಿವಾರಣೆ ಮತ್ತು ಗುಣಗಳ ಸ್ಥೈರ್ಯಕ್ಕಾಗಿ ಪ್ರಯತ್ನಿಸಬೇಕು. ಯಾವ ರಾಜನು ಭವಿಷ್ಯತ್ತು

ಆಂದರೆ ಮುಂದೆ ಮಾಡುವ ಕಾರ್ಯಗಳ ವಿಷಯದಲ್ಲಿ ಗುಣದೋಷ ಗಳನ್ನು ತಿಳಿದವನೂ, ವರ್ತಮಾನದಲ್ಲಿ ಸ್ಪಷ್ಟನಿಶ್ಚಯ ಮಾಡುವವನೂ, ಮಾಡಿದ ಕಾರ್ಯಗಳಲ್ಲಿ ಉಳಿದ ಕರ್ತವ್ಯವನ್ನರಿತವನೂ, ಆಗಿರು ತ್ತಾನೋ ಅವನೆಂದಿಗೂ ಶತ್ರುಗಳಿಂದ ಪರಾಜಿತನಾಗನು. ॥೩॥ ರಾಜ ಪುರುಷರೂ, ಮುಖ್ಯತಃ ಸಭಾಪತಿರಾಜನೂ, ತಮ್ಮ ಮಿತ್ರರು, ಉದಾಸೀನರು, ಮತ್ತು ಶತ್ರುಗಳು ವಶದಲ್ಲಿದ್ದು, ತಮಗೆ ಪ್ರತಿಕೂಲ ವಾಗಿ ವರ್ತಿಸದಂತೆ ನೋಡಿಕೊಳ್ಳುವ ಸಲುವಾಗಿ, ತಾವು ಪ್ರಮಾದ ವಶರಾಗದಿರುವುದಕ್ಕೆ ಸರ್ವವಿಧದಿಂದಲೂ ಪ್ರಯತ್ನಿಸಬೇಕು. ಇದು ಸಂಕ್ಷೇಪವಾಗಿ ' ನಯ ' ಎಂದರೆ ರಾಜನೀತಿಯೆನಿಸುತ್ತದೆ.

ಕೃತ್ವಾ ವಿಧಾನಂ ಮೂಲೇ ತು ಯಾತ್ರಿಕಂ ಚ ಯಥಾವಿಧಿ ।
ಉಪಗೃಹ್ಯಾಸ್ಪದಂ ಚೈವ ಚಾರಾನ್ ಸಮ್ಯಗ್ವಿಧಾಯ ಚ ॥೧॥
ಸಂಶೋಧ್ಯ ತ್ರಿವಿಧಂ ಮಾರ್ಗಂ ಷಡ್ವಿಧಂ ಚ ಬಲಂ ಸ್ವಕಂ ।
ಸಾಂಪರಾಯಿಕಕಲ್ಪೇನ ಯಾಯಾದರಿಪುರಂ ಶನೈಃ ॥೨॥
ಶತ್ರುಸೇವಿನಿ ಮಿತ್ರೇ ಚ ಗೂಢೇ ಯುಕ್ತತರೋ ಭವೇತ್ ।
ಗತಪ್ರತ್ಯಾಗತೇ ಚೈವ ಸ ಹಿ ಕಷ್ಟತರೋ ರಿಪುಃ ॥೩॥
ದಂಡವ್ಯೂಹೇನ ತನ್ಮಾರ್ಗಂ ಯಾಯಾತ್ತು ಶಕಟೇನ ವಾ ।
ವರಾಹಮಕರಾಭ್ಯಾಂ ವಾ ಸೂಚ್ಯಾ ವಾ ಗರುಡೇನ ವಾ ॥೪॥
ಯತಶ್ಚ ಭಯಮಾಶಂಕ್ಕೇತ್ತತೋ ವಿಸ್ತಾರಯೇದ್ಬಲಂ ।
ಪದ್ಮೇನ ಚೈವ ವ್ಯೂಹೇನ ನಿವಿಶೇತ ಸದಾ ಸ್ವಯಂ ॥೫॥
ಸೇನಾಪತಿಬಲಾಧ್ಯಕ್ಷೌ ಸರ್ವದಿಕ್ಷು ನಿವೇಶಯೇತ್ ।
ಯತಶ್ಚ ಭಯಮಾಶಂಕೇತ್ ಪ್ರಾಚೀಂ ತಾಂ ಕಲ್ಪಯೇದ್ದಿಶಂ॥
ಗುಲ್ಮಾಂಶ್ಚ ಸ್ಥಾಪಯೇದಾಪ್ತಾನ್ ಕೃತಸಂಜ್ಞಾನ್ ಸಮಂತತಃ॥
ಸ್ಥಾನೇ ಯುದ್ಧೇ ಚ ಕುಶಲಾನಭೀರೂನವಿಕಾರಿಣಃ ॥೬॥
ಸಂಹತಾನ್ ಯೋಧಯೇದಲ್ಪಾನ್ ಕಾಮಂ ವಿಸ್ತಾರಯೇದ್ಬಹೂನ್ ।
ಸೂಚ್ಯಾ ವಜ್ರೇಣ ಚೈವೈತಾನ್ ವ್ಯೂಹೇನ ವ್ಯೂಹ್ಯ ಯೋಧಯೇತ್ ॥೭॥

ಸ್ಯಂದನಾಶ್ವೈಃ ಸಮೇ ಯುದ್ಧ್ಯೇದನೂಪೇ ನೌದ್ವಿಪೈಸ್ತಥಾ ।
ವೃಕ್ಷಗುಲ್ಮಾವೃತೇ ಜಾಹ್ಯೈರಸಿ ಚರ್ಮಾಯುಧೈಃ ಸ್ಥಲೇ ॥೯॥
ಪ್ರಹರ್ಷಯೇದ್ಬಲಂ ವ್ಯೂಹ್ಯ ತಾಂಶ್ಚ ಸಮ್ಯಕ್ಪರೀಕ್ಷಯೇತ್ ।
ಜೇಷ್ಯಾಶ್ಚೈವ ವಿಜಾನೀಯಾದರೀನ್ ಯೋಧಯತಾವುಪಿ ॥
ಉಪರುಧ್ಯಾರಿಮಾಸೀತ ರಾಷ್ಟ್ರಂ ಚಾಸ್ಯೋಪಪೀಡಯೇತ್।
ದೂಷಯೇಚ್ಚಾಸ್ಯ ಸತತಂ ಯವಸಾನ್ನೋದಕೇಂಧನಮ್॥೧೦
ಭಿಂಧ್ಯಾಚ್ಚೈವ ತಡಾಗಾನಿ ಪ್ರಕಾರಪರಿಖಾಸ್ತಥಾ ।
ಸಮವಸ್ಕಂಧಯೇಚ್ಚೈನಂ ರಾತ್ರೌ ವಿತ್ರಾಸಯೇತ್ತಥಾ ॥೧೨॥
ಪ್ರಮಾಣಾನಿ ಚ ಕುರ್ವೀತ ತೇಷಾಂ ಧರ್ಮ್ಯಾನ್ ಯಥೋ-
ದಿತಾನ್ ।
ರತ್ನೈಶ್ಚ ಪೂಜಯೇದೇನಂ ಪ್ರಧಾನಪುರುಷೈಃ ಸಹ ॥೧೩॥
ಆದಾನಮಪ್ರಿಯಕರಂ ದಾನಂ ಚ ಪ್ರಿಯಕಾರಕಂ ।
ಅಭೀಪ್ಸಿತಾನಾಮರ್ಥಾನಾಂ ಕಾಲೇಯುಕ್ತಂ ಪ್ರಶಸ್ಯತೇ॥೧೪॥

[ಮನು ೭ ॥ ೧೪೪-೧೯೨ । ೧೯೪-೧೯೬ । ೨೦೩–೨೦೪]

ರಾಜನು ಶತ್ರುವಿನೊಡನೆ ಯುದ್ಧಕ್ಕೆ ಹೊರಡುವಾಗ, ತನ್ನ ರಾಜ್ಯರಕ್ಷಣೆಗೆ ಯೋಗ್ಯ ವ್ಯವಸ್ಥೆಯನ್ನು ಮಾಡಿ, ಪ್ರಯಾಣಕ್ಕೆ ಸಾಕಾಗುವಷ್ಟು ಸಾಮಗ್ರಿಗಳನ್ನು ಶೇಖರಿಸಿಕೊಂಡು, ಸೈನ್ಯ, ಯಾನ, ವಾಹನ, ಶಸ್ತ್ರಾಸ್ತ್ರ–ಮೊದಲಾದುವನ್ನು ಪೂರ್ಣವಾಗಿ ತೆಗೆದುಕೊಂಡು, ದೂತರನ್ನು ಅಂದರೆ, ಎಲ್ಲೆಡೆಯ ಸಂಗತಿಗಳನ್ನು ಕೊಡುವ ಪುರುಷರನ್ನು ರಹಸ್ಯವಾಗಿಟ್ಟು, ಶತ್ರುವಿನ ಕಡೆಗೆ ಸಂಗ್ರಾಮಕ್ಕೆ ಹೊರಡಬೇಕು. ॥೧॥ ಹೊರಡುವ ಮೊದಲು ಸ್ಥಳ ಮಾರ್ಗ (ನೆಲ); ಜಲಮಾರ್ಗ (ಸಮುದ್ರ, ನದಿ ಮೊದಲಾದುವು), ಮತ್ತು ಆಕಾಶ ಮಾರ್ಗ–ಈ ತ್ರಿವಿಧ ಮಾರ್ಗಗಳನ್ನು ಸರಿಪಡಿಸಿಕೊಂಡು, ಭೂಮಾರ್ಗದಲ್ಲಿ ರಥ, ಕುದುರೆ, ಮತ್ತು ಆನೆಗಳಿಂದಲೂ, ನೀರಿನಲ್ಲಿ ನಾವೆಗಳಿಂದಲೂ, ಆಕಾಶದಲ್ಲಿ ವಿಮಾನಾದಿಗಳಿಂದಲೂ ಪ್ರಯಾಣ ಮಾಡಬೇಕು. ಕಾಲಾಳುಗಳೂ, ರಥ, ಕುದುರೆ, ಆನೆ, ಅಸ್ತ್ರ

ಶಸ್ತ್ರಗಳು, ಭೋಜನಪದಾರ್ಥಗಳು, ಮೊದಲಾದ ಸರ್ವ ವಸ್ತುಗಳನ್ನೂ, ಬಲಯುತ ಹಾಗೂ ಪೂರ್ಣ ಮಾಡಿಕೊಂಡು, ನಿಮಿತ್ತವನ್ನೂ ಪ್ರಸಿದ್ಧ ಗೊಳಿಸಿ, ಮೆಲ್ಲಮೆಲ್ಲನೆ ಶತ್ರುವಿನ ನಗರದ ಹತ್ತಿರ ಹೋಗಬೇಕು. ॥೨॥ ಒಳಗೆ ಶತ್ರುವಿನೊಂದಿಗೆ ಸೇರಿ, ಹೊರಗೆ ಮಾತ್ರ ಮಿತ್ರನಂತೆ ತೋರಿಸಿಕೊಂಡು, ಇಲ್ಲಿನ ರಹಸ್ಯಗಳನ್ನೆಲ್ಲಾ ಗುಟ್ಟಾಗಿ ಶತ್ರುವಿಗೆ ತಿಳಿಸುವ ಪುರುಷನು ಹೋಗುವಾಗಲೂ ಬರುವಾಗಲೂ, ಮಾತನಾಡುವಾಗಲೂ, ಅವನೊಂದಿಗೆ ಬಹಳ ಜಾಗರೂಕನಾಗಿರಬೇಕು. ಏಕೆಂದರೆ, ಅಂತರಂಗದಲ್ಲಿ ಶತ್ರುವಾಗಿದ್ದು, ಬಹಿರಂಗದಲ್ಲಿ ಮಿತ್ರನಂತೆ ನಟಿಸುವವನನ್ನು ಮಹಾ ಶತ್ರುವೆಂದೇ ತಿಳಿಯಬೇಕು.॥೩॥ ಸಮಸ್ತ ರಾಜಪುರುಷರಿಗೂ ಯುದ್ಧ ಮಾಡುವ ವಿದ್ಯೆಯನ್ನು ಕಲಿಸಬೇಕು; ತಾನೂ ಕಲಿಯಬೇಕು. ಮತ್ತು ಬೇರೆ ಬೇರೆ ಪ್ರಜಾಜನರಿಗೂ ಕಲಿಸಬೇಕು. ಮೊದಲು ಶಿಕ್ಷಣ ಪಡೆದ ಯೋಧರೇ ಚನ್ನಾಗಿ ಹೋರಾಡಬಲ್ಲರು. ಸೈನಿಕ ವಿದ್ಯೆಯನ್ನು ಕಲಿಸುವಾಗ, (ದಂಡವ್ಯೂಹ) ದಂಡದಂತೆಯೂ, (ಶಕಟವ್ಯೂಹ) ಬಂಡಿಯಂತೆಯೂ, (ವರಾಹವ್ಯೂಹ) ಪಂದಿಗಳು ಒಂದರ ಹಿಂದೊಂದು ಹೋಗುತ್ತಿದ್ದು, ಸಮಯಬಂದಾಗ ಥಟ್ಟನೆ ಎಲ್ಲವೂ ಗುಂಪುಕೂಡುವಂತೆ ವರ್ತಿಸಿಸುವ ರೀತಿಯಿಂದಲೂ, (ಮಕರವ್ಯೂಹ) ಮೊಸಳೆಯಂತೆ ನೀರಿನಲ್ಲಿ ಚಲಿಸುವ ವಿಧಾನವನ್ನನುಸರಿಸುವಂತೆಯೂ, (ಸೂಚೀವ್ಯೂಹ) ಸೂಜಿಯ ಮುಂಭಾಗ ತೆಳ್ಳಗಿದ್ದು ಹಿಂಭಾಗ ಕ್ರಮೇಣ ದಪ್ಪವಾಗಿ, ಸೂತ್ರವು ಇನ್ನೂ ದಪ್ಪವಾಗಿರುವಂತೆ, ಮುಂದೆ ಸೂಕ್ಷ್ಮವಾಗಿಯೂ, ಹಿಂದೆ ಸ್ಥೂಲವಾಗಿಯೂ, ನಿಲ್ಲುವಂತೆಯೂ ಸೈನ್ಯವನ್ನು ತರಪೇತು ಮಾಡುವ ಕ್ರಮವನ್ನೂ ಸಹ ಕಲಿಸಬೇಕು. (ನಿಲಕಂಠ) ನವಿಲು ಮೇಲೆ ಮತ್ತು ಕೆಳಗೆ-ಎರಡು ಭಾಗಗಳಿಂದಲೂ ಹೊಡೆದಪ್ಪಳಿಸುವಂತೆ, ಪ್ರಹಾರ ಮಾಡುವ ಹಾಗೆ ಸೈನ್ಯವನ್ನು ರಚಿಸಿ ಹೋರಾಡಿಸಬೇಕು. ॥೪॥ ಭಯದ ಆಶಂಕೆಯಿರುವ ಕಡೆಗೇ ಹೆಚ್ಚು ಸೈನ್ಯವನ್ನು ಹರಡಬೇಕು. ಚತುರ್ದಿಕ್ಕುಗಳಲ್ಲಿಯೂ ಸಮಸ್ತ ಸೇನಾಪತಿಗಳನ್ನು ಸ್ಥಾಪಿಸಿ, (ಪದ್ಮವ್ಯೂಹ) ಅಂದರೆ ತಾವರೆಯಂತೆ ಸುತ್ತಲೂ ಸೈನ್ಯ ನಿಲ್ಲಿಸಿ, ತಾನು ನಡುವೆ ಇರಬೇಕು. ॥೫॥ ಸೇನಾಪತಿಗಳನ್ನು ಮತ್ತು

ಬಲಾಧ್ಯಕ್ಷರನ್ನು-ಅಂದರೆ ನಿರ್ದೇಶಮಾಡುವ ಮತ್ತು ಸೇನೆಯೊಂದಿಗೆ ಹೋರಾಡುವ ವೀರರನ್ನು ಎಂಟು ದಿಕ್ಕುಗಳಲ್ಲಿಯೂ ಕಾವಲಿಟ್ಟಿರಬೇಕು. ಸಮಗ್ರ ಸೇನೆಯ ಮುಖವೂ ಸಂಗ್ರಾಮ ರಂಗದ ಕಡೆಗೇ ಇರಬೇಕು. ಆದರೆ-ಇತರ ಕಡೆಗಳಲ್ಲಿಯೂ, ದೃಢವಾದ ವ್ಯವಸ್ಥೆಗಳನ್ನು ಮಾಡಿರಬೇಕು. ಇಲ್ಲದಿದ್ದರೆ, ಹಿಂಬದಿಯಿಂದಾಗಲಿ, ಮಗ್ಗಲಿನಿಂದಾಗಲಿ, ಶತ್ರುಗಳು ಮೇಲೆ ಬೀಳುವ ಸಂಭವವಿರುತ್ತದೆ. ॥೬॥ ಗುಲ್ಮ ಅಂದರೆ ದೃಢಸ್ತಂಭದಂತಿರುವವರೂ, ಯುದ್ಧವಿದ್ಯೆಯಲ್ಲಿ ಸುಶಿಕ್ಷಿತರೂ, ಧಾರ್ಮಿಕರೂ, ಸ್ತಂಭನದಲ್ಲಿಯೂ, ಹೋರಾಡುವುದರಲ್ಲಿಯೂ ಚತುರರೂ, ಭಯರಹಿತರೂ, ಮನದಲ್ಲಿ ಯಾವ ಬಗೆಯ ವಿಕಾರವೂ ಇಲ್ಲದವರೂ ಆದವರನ್ನು ಸೈನ್ಯರಕ್ಷಣೆಗಾಗಿ ನಾಲ್ಕು ಭಾಗಗಳಲ್ಲಿಯೂ ಇಟ್ಟಿರಬೇಕು. ॥೭॥ ಬಹುಮಂದಿ ಗೆದುರಾಗಿ ಸ್ವಲ್ಪ ಜನರನ್ನು ಕೂಡಿ, ಯುದ್ಧಮಾಡಬೇಕಾದ ಪ್ರಸಂಗದಲ್ಲಿ, ಎಲ್ಲರೂ ಗುಂಪುಕೂಡಿ ಯುದ್ಧಮಾಡಬೇಕು. ಮತ್ತು ಕಾರ್ಯಬಿದ್ದರೆ, ಅವರನ್ನೇ ಬೇಗ ಚದುರಿಸಿಬಿಡಬೇಕು. ನಗರದಲ್ಲಾಗಲಿ, ದುರ್ಗದಲ್ಲಾಗಲಿ, ಶತ್ರುಸೈನ್ಯದ ಮಧ್ಯದಲ್ಲಾಗಲಿ ನುಗ್ಗಿ ಹೋರಾಡಬೇಕಾಗಿಬಂದಾಗ, ಸೂಚೀವ್ಯೂಹ ಅಥವಾ ವಜ್ರವ್ಯೂಹವನ್ನು ರಚಿಸಿಕೊಳ್ಳಬೇಕು. ಅಂದರೆ, ಇಬ್ಬದಿಯಿಂದಲೂ ಹರಿತವಾದ ಕತ್ತಿಯು ಇಬ್ಬದಿಯಿಂದಲೂ ಕತ್ತರಿಸುವಂತೆ, ಯುದ್ಧಮಾಡುತ್ತಾ ಮಾಡುತ್ತಾ ಮುನ್ನುಗ್ಗಿ ಹೋಗಬೇಕು. ಹಾಗೆಯೇ ಅನೇಕವಿಧದ ವ್ಯೂಹ ಅಂದರೆ ಸೇನಾವ್ಯವಸ್ಥೆಮಾಡಿ ಹೋರಾಡಿಸಬೇಕು. (ಶತಘ್ನೀ) ತೋಪುಗಳನ್ನಾಗಲಿ, (ಭುಶುಂಡಿ) ಬಂದೂಕಗಳನ್ನಾಗಲಿ ಪ್ರಯೋಗಿಸತೊಡಗಿದರೆ, (ಸರ್ಪವ್ಯೂಹ)ದಿಂದ ನೆಲದಲ್ಲೇ ಮಲಗುತ್ತಾ ಮುಂದುವರಿಯಬೇಕು. ಶತ್ರುಗಳ ತೋಪುಗಳ ಬಳಿ ಸೇರಿದೊಡನೆಯೇ ಅವರನ್ನು ಕೊಂದು ಅಥವಾ ಹಿಡಿದು, ತೋಪುಗಳನ್ನು ಶತ್ರುಗಳ ಕಡೆಗೆ ತಿರುಗಿಸಿ, ಆದೇ ತೋಪು ಅಥವಾ ಬಂದೂಕ ಮೊದಲಾದುವುಗಳಿಂದ ಅವರನ್ನು ಸಂಹರಿಸಬೇಕು. ಅಥವಾ ವೃದ್ಧ ಪುರುಷರನ್ನು ಕುದುರೆಗಳ ಮೇಲೆ ಕೂಡಿಸಿ, ಫಿರಂಗಿಗಳಿಗಿದಿರಾಗಿ ಓಡಿಸಿ, ಶತ್ರುಗಳನ್ನು ಕೊಲ್ಲಬೇಕು; ಉತ್ತಮರಾದ ಸವಾರರನ್ನು

ನಡುನಡುವೆ ಸೇರಿಸಬೇಕು. ಅವರೆಲ್ಲರೂ ಒಂದೇ ಬಾರಿ ಶತ್ರುಗಳ ಮೇಲೆ ಬಿದ್ದು, ಅವರ ಸೈನ್ಯವನ್ನು ಛಿನ್ನಭಿನ್ನವಾಗಿ ಮಾಡಬೇಕು; ಅಥವಾ ಹಿಂದಕ್ಕಟ್ಟಬೇಕು. ॥೮॥ ಸಮಭೂಮಿಯಲ್ಲಿ ಯುದ್ಧಮಾಡ ಬೇಕಾದರೆ ರಥ-ಕುದುರೆ, ಕಾಲಾಳುಗಳಿಂದಲೂ, ಸಮುದ್ರದಲ್ಲಿ ನಾವೆ ಗಳಿಂದಲೂ, ಅಲ್ಪಜಲಮಯಪ್ರದೇಶದಲ್ಲಿ ಆನೆಗಳ ಮೇಲಿನಿಂದಲೂ, ಮರದ ಮೇಲೆ ಮತ್ತು ಪೊದೆಗಳಲ್ಲಿ ಬಾಣಗಳಿಂದಲೂ, ಮರಳುನೆಲ ದಲ್ಲಿ ಕತ್ತಿ ಗುರಾಣಿಗಳಿಂದಲೂ, ಯುದ್ಧಮಾಡಬೇಕು. ॥೯॥ ಯುದ್ಧ ಸಮಯದಲ್ಲಿ ಸೈನಿಕರಿಗೆ ಉತ್ಸಾಹ ಸಂತೋಷಗಳನ್ನುಂಟುಮಾಡ ಬೇಕು. ಯುದ್ಧವು ನಿಂತಬಳಿಕ, ಶೌರ್ಯ ಮತ್ತು ರಣೋತ್ಸಾಹ ಮಾಡುವಂತಹ ಭಾಷಣಗಳಿಂದಲೂ, ಅನ್ನಪಾನಾದಿಗಳಿಂದಲೂ, ಅಸ್ತ್ರಶಸ್ತ್ರಗಳಿಂದಲೂ. ಸಹಾಯದಿಂದಲೂ, ಔಷಧಾದಿಗಳಿಂದಲೂ, ಸೈನಿಕರನ್ನು ಸಂತೋಷಗೊಳಿಸಬೇಕು. ವ್ಯೂಹವನ್ನು ರಚಿಸಿಕೊಳ್ಳದೆ ಎಂದೂ ಯುದ್ಧಮಾಡಲೂಬಾರದು, ಮಾಡಿಸಲೂ ಬಾರದು. ಹೋರಾಡುತ್ತಿರುವ ತನ್ನ ಸೈನಿಕರು ಸರಿಯಾಗಿ ಯುದ್ಧಮಾಡುತ್ತಿರು ವರೋ ಅಥವಾ ಕಪಟರೀತಿಯಿಂದ ವರ್ತಿಸುತ್ತಿರುವರೋ ಎಂಬುದನ್ನು ನೋಡಿಕೊಳ್ಳುತ್ತಿರಬೇಕು. ॥೧೦॥ ಯಾವಾಗಲಾದರೂ ಯುಕ್ತವೆಂದು ತೋರಿದರೆ, ನಾಲ್ಕೆಡೆಯಿಂದಲೂ, ಶತ್ರುಸೈನ್ಯವನ್ನು ಮುತ್ತಿ ತಡೆಗಟ್ಟ ಬೇಕು. ಮತ್ತು ಶತ್ರುರಾಜ್ಯವನ್ನು ಓಡಿಸಿ, ತಿನಿಸು, ಅನ್ನ, ಜಲ, ಹಾಗೂ ಕಟ್ಟಿಗೆಗಳನ್ನು ನಾಶಪಡಿಸಬೇಕು. ॥೧೧॥ ಶತ್ರುವಿನ ಕೆರೆ ಗಳನ್ನೂ ನಗರದ ಕೋಟೆ ಮತ್ತು ಕಂದಕಗಳನ್ನೂ ಒಡೆದುಹಾಕ ಬೇಕು. ರಾತ್ರಿಸಮಯದಲ್ಲಿ ಅವರನ್ನು ಹೆದರಿಸಿ, ಗೆಲ್ಲುವ ಉಪಾಯ ವನ್ನು ಮಾಡಬೇಕು. ॥೧೨॥ ಗೆದ್ದು ಅವರಂಥ ಪ್ರಮಾಣಪತ್ರವನ್ನು ಬರೆಯಿಸಿಕೊಳ್ಳಬೇಕು. ಉಚಿತ ತೋರಿದಾಗ ಆತನ ವಂಶಸ್ಥನಾದ ಮತ್ತೊಬ್ಬ ಧಾರ್ಮಿಕ ಪುರುಷನಿಗೆ ಆ ರಾಜ್ಯದ ಪಟ್ಟ ಕಟ್ಟಬೇಕು ಮತ್ತು 'ನಮ್ಮ ಆಜ್ಞಾನುಕೂಲವಾಗಿ' ಅಂದರೆ ಧರ್ಮಯುಕ್ತವಾದ ರಾಜನೀತಿಗನುಸಾರವಾಗಿ ನ್ಯಾಯವಾಗಿ ಪ್ರಜೆಗಳನ್ನು ಪಾಲಿಸಿಕೊಂಡು ಬರುವುದಾಗಿ ಆತನಿಂದ ಪ್ರತಿಜ್ಞಾಪತ್ರವನ್ನು ಬರೆಯಿಸಿಕೊಳ್ಳಬೇಕು. ಗೆದ್ದ ರಾಜ್ಯದಲ್ಲಿ ಮತ್ತೆ ಯಾವ ಉಪದ್ರವವೂ ಉಂಟಾಗದಂತೆ ಉಪ

ದೇಶವಿತ್ತು, ತನ್ನ ಕಡೆಯ ಅಧಿಕಾರಿಯೊಬ್ಬನನ್ನು ನೇಮಿಸಬೇಕು. ಸೋತುಹೋದ ರಾಜನನ್ನು ಪ್ರಧಾನಪುರುಷರೊಂದಿಗೆ ರತ್ನಾದಿ ಉತ್ತಮ ವಸ್ತುಗಳಿಂದ ಸತ್ಕರಿಸಬೇಕು. ಆತನ ಯೋಗಕ್ಷೇಮಗಳಿಗೆ ಭಂಗತರುವ ಪ್ರಯತ್ನಗಳನ್ನು ನಡೆಸಕೂಡದು. ಸೆರೆಯಲ್ಲಿಟ್ಟಿದ್ದರೂ ಕೂಡ, ಅವನು ಸೋಲಿನ ದುಃಖವಿಲ್ಲದವನಾಗಿ ಆನಂದದಿಂದಿರುವಂತೆ ಯೋಗ್ಯರೀತಿಯಿಂದ ಸತ್ಕಾರಮಾಡಬೇಕು. ॥ ೧೩ ॥ ಏಕೆಂದರೆ, ಪ್ರಪಂಚದಲ್ಲಿ ಪರರ ಪದಾರ್ಥಗಳನ್ನು ತೆಗೆದುಕೊಳ್ಳುವುದು ಅಪ್ರಿಯಕರವೂ, ಕೊಡುವುದು ಪ್ರಿಯಕರವೂ ಆಗಿರುತ್ತದೆ. ವಿಶೇಷತಃ ಯುಕ್ತ ಸಮಯಗಳಲ್ಲಿ ಉಚಿತವಾದ ಕಾರ್ಯಮಾಡುವುದು ಮತ್ತು ಸೋತಿರುವವನಿಗೆ ಉತ್ತಮ ವಸ್ತುಗಳನ್ನು ಕೊಡುವುದು ಬಹಳ ಉತ್ತಮವಾಗಿರುತ್ತದೆ. ಅವನನ್ನು ಎಂದಿಗೂ ಕುಚೇಷ್ಟಮಾಡಬಾರದು; ಹಾಸ್ಯಮಾಡಿ ನಗಬಾರದು; ಅವನ ಮುಂದೆ 'ನೋಡು, ನಿನ್ನನ್ನು ನಾವು ಗೆದ್ದುಬಿಟ್ಟೆವು' ಎಂದೂ ಸಹ ಹೇಳಬಾರದು. ಆದರೆ 'ನೀವು ನಮ್ಮ ಸೋದರರು' ಎಂಬೆವೇ ಮೊದಲಾದ ಮಾತುಗಳಿಂದ ಯಾವಾಗಲೂ ಆದರಿಸುತ್ತಿರಬೇಕು.

ಹಿರಣ್ಯಭೂಮಿಸಂಪ್ರಾಪ್ತ್ಯಾ ಪಾರ್ಥಿವೋ ನ ತಥೈಧತೇ ।
ಯಥಾ ಮಿತ್ರಂ ಧ್ರುವಂ ಲಬ್ಧ್ವಾ ಕೃಶಮಪ್ಯಾಯತಿಕ್ಷಮಮ್ ॥
ಧರ್ಮಜ್ಞಂ ಚ ಕೃತಜ್ಞಂ ಚ ತುಷ್ಟಪ್ರಕೃತಿಮೇವ ಚ ।
ಅನುರಕ್ತಂ ಸ್ಥಿರಾರಂಭಂ ಲಘುಮಿತ್ರಂ ಪ್ರಶಸ್ಯತೇ ॥೨॥
ಪ್ರಾಜ್ಞಂ ಕುಲೀನಂ ಶೂರಂ ಚ ದಕ್ಷಂ ದಾತಾರಮೇವ ಚ ।
ಕೃತಜ್ಞಂ ಧೃತಿಮಂತಂ ಚ ಕಷ್ಟಮಾಹುರರಿಂ ಬುಧಾಃ ॥೩॥
ಆರ್ಯತಾ ಪುರುಷಜ್ಞಾನಂ ಶೌರ್ಯಂ ಕರುಣವೇದಿತಾ ।
ಸ್ಥೂಲಲಕ್ಷ್ಯಂ ಚ ಸತತಮುದಾಸೀನಗುಣೋದಯಃ ॥೪॥

[ಮನು ೭। ೨೦೮-೨೧೧]

ಮಿತ್ರನ ಲಕ್ಷಣವೇನೆಂದರೆ–ರಾಜನು, ನಿಶ್ಚಲ ಪ್ರೀತಿಯುಕ್ತನೂ, ಭವಿಷ್ಯವಿಚಾರಪರನೂ, ಕಾರ್ಯಸಾಧನಾಚತುರನೂ, ಆದ ಸಮರ್ಥ,

ಅಥವಾ ದುರ್ಬಲನಾದ ಮಿತ್ರನನ್ನೂ ಪಡೆದು ವರ್ಧಿಸುವಂತೆ, ಚಿನ್ನ ಮತ್ತು ಭೂಮಿಯ ಪ್ರಾಪ್ತಿಯಿಂದಲೂ ವರ್ಧಿಸುವುದಿಲ್ಲ. ॥೧॥ ಧರ್ಮಜ್ಞನೂ. ಕೃತಜ್ಞನೂ, ಅಂದರೆ, ಮಾಡಿದ ಉಪಕಾರವನ್ನು ಸದಾ ಸ್ಮರಿಸುವವನೂ, ಪ್ರಸನ್ನಸ್ವಭಾವನೂ, ಅನುರಾಗಿಯೂ, ಹಿಡಿದ ಕಾರ್ಯವನ್ನು ಬಿಡದವನೂ, ಆದ ಒಬ್ಬ ಸಣ್ಣ ಮಿತ್ರನನ್ನು ಪಡೆದರೂ ಸಹ ರಾಜನು ಯಶಸ್ವಿಯಾಗುತ್ತಾನೆ. ॥೨॥ ಬುದ್ಧಿವಂತನೂ, ಸತ್ಕುಲ ಪ್ರಸೂತನೂ, ಶೂರ ವೀರನೂ, ಚತುರನೂ, ದಾನಶೀಲನೂ, ಮಾಡಿದುದನ್ನರಿತವನೂ, ಧೈರ್ಯಶಾಲಿಯೂ, ಆದ ಪುರುಷನೊಡನೆ ದ್ವೇಷ ಕಟ್ಟಿಕೊಳ್ಳಬಾರದು ಎಂಬುದನ್ನು ಸದಾ ಗಮನದಲ್ಲಿಡಬೇಕು. ಏಕೆಂದರೆ ಇಂತಹವನೊಡನೆ ಶತ್ರುತ್ವವನ್ನು ಕಟ್ಟಿಕೊಳ್ಳುವ ರಾಜನು ಮಹಾ ಕಷ್ಟಕ್ಕೆ ಗುರಿಯಾಗುತ್ತಾನೆ. ॥೩॥ ಉದಾಸೀನನ ಲಕ್ಷಣವಿದು– ಪ್ರಶಂಸಿತಗುಣಯುಕ್ತನಾಗಿರುವಿಕೆ. ಒಳ್ಳೆಯ ಮತ್ತು ಕೆಟ್ಟ ಜನರ ಜ್ಞಾನ. ಶೂರ ವೀರತೆ. ಕರುಣೆ. ನ್ಪೌಲಲಕ್ಷ್ಯ--ಅಂದರೆ ಮೇಲು ಮೇಲಿನ ವಿಷಯಗಳನ್ನು ತಿಳಿಸುವಿಕೆ–ಈ ಗುಣಗಳನ್ನುಳ್ಳ ಪುರುಷನಿಗೆ ಉದಾಸೀನನೆಂದು ಹೆಸರು. ॥೪॥

ಏವಂ ಸರ್ವಮಿದಂ ರಾಜಾ ಸಹ ಸಂಮತ್ಯ ಮಂತ್ರಿಭಿಃ ।
ವ್ಯಾಯಾಮ್ಯಾಪ್ಯುತ್ಥ ಮಧ್ಯಾಹ್ನೇ ಭೋಕ್ತುಮಂತಃಪುರಂ
ವಿಶೇತ್ ॥

[ಮನು ೭-೨೧೬]

ರಾಜನು ದಿನವೂ ಪೂರ್ವೋಕ್ತರೀತಿ ಪ್ರಾತಃಕಾಲದಲ್ಲೆದ್ದು, ಶೌಚಾದಿಗಳನ್ನೂ, ಸಂಧ್ಯಾವಂದನೆಯನ್ನೂ, ಅಗ್ನಿಹೋತ್ರವನ್ನೂ ಮಾಡಿ ಅಥವಾ ಮಾಡಿಸಿ, ಸರ್ವ ಮಂತ್ರಿಗಳೊಡನೆಯೂ ಆಲೋಚಿಸಿ, ಸಭೆಗೆ ಹೋಗಿ, ಸಮಸ್ತ ಭೃತ್ಯರೊಂದಿಗೂ, ಸೇನಾಧ್ಯಕ್ಷರೊಂದಿಗೂ ಬೆರೆತು ಅವರನ್ನು ಸಂತೋಷಪಡಿಸಿ, ನಾನಾಬಗೆಯ ವ್ಯೂಹಶಿಕ್ಷಣ (ಕವಾಯತ್ತು) ಮಾಡಿ ಮತ್ತು ಮಾಡಿಸಿ, ಅಶ್ವಶಾಲೆ, ಗಜಶಾಲೆ, ಗೋಶಾಲೆ, ಶಸ್ತ್ರಾಗಾರ, ವೈದ್ಯಶಾಲೆ--ಎಲ್ಲದರಮೇಲೆಯೂ ದಿನವೂ ದೃಷ್ಟಿಯಿಟ್ಟು, ಅವುಗಳಲ್ಲಿರುವ ಕುಂದನ್ನು ದೂರಪಡಿಸಿ, ಬೊಕ್ಕಸ

ವನ್ನು ನೋಡಿಕೊಂಡು, ಅನಂತರ ವ್ಯಾಯಾಮ ಶಾಲೆಯನ್ನು ಪ್ರವೇಶಿಸಿ, ವ್ಯಾಯಾಮ ಮಾಡಿ, ಮಧ್ಯಾಹ್ನದಲ್ಲಿ ಭೋಜನಕ್ಕಾಗಿ ಅಂತಃಪುರವನ್ನು ಅಂದರೆ ರಾಣಿ ಮೊದಲಾದವರ ನಿವಾಸಸ್ಥಾನವನ್ನು ಪ್ರವೇಶಿಸಬೇಕು. ಸುಪರೀಕ್ಷಿತವೂ, ಬುದ್ಧಿಪರಾಕ್ರಮವರ್ಧಕವೂ, ರೋಗನಾಶಕವೂ ಆದ ಅನೇಕ ಬಗೆಯ ಅನ್ನ, ವ್ಯಂಜನ, ಪಾನ ಮೊದಲಾದುವನ್ನೂ ಸುಗಂಧಿತವಾದ ಮಿಷ್ಟಾದಿ ಅನೇಕ ರಸಯುಕ್ತವಾದ ಉತ್ತಮ ಭೋಜನವನ್ನೂ ಸೇವಿಸಬೇಕು. ಇದೇ ರೀತಿಯಲ್ಲಿ ಸಮಸ್ತ ರಾಜಕಾರ್ಯಗಳನ್ನೂ ಉನ್ನತಿಗೊಳಿಸಬೇಕು.

ಪ್ರಜೆಗಳಿಂದ ತೆರಿಗೆ ತೆಗೆದುಕೊಳ್ಳಬೇಕಾದ ರೀತಿ :—

ಪಂಚಾಶದ್ಭಾಗ ಆದೇಯೋ ರಾಜ್ಞಾ ಪಶುಹಿರಣ್ಯಯೋಃ ।
ಧಾನ್ಯಾನಾಮಷ್ಟಮೋಭಾಗಃ ಷಷ್ಠೋ ದ್ವಾದಶ ಏವ ವಾ ॥

[ಮನು. ೭-೧೩೦]

ವರ್ತಕರಿಂದಲೂ, ಶಿಲ್ಪಿಗಳಿಂದಲೂ, ಚಿನ್ನ ಬೆಳ್ಳಿ ಮೊದಲಾದುವುಗಳಲ್ಲಿ ಅದರ ಲಾಭದ ಐವತ್ತನೆಯ ಒಂದು ಭಾಗವನ್ನೂ, ಅಕ್ಕಿ ಮೊದಲಾದ ಆಹಾರವಸ್ತುಗಳ ಆರನೆಯ ಒಂದು, ಎಂಟನೆಯ ಒಂದು, ಅಥವಾ ಹನ್ನೆರಡನೆಯ ಒಂದು ಭಾಗವನ್ನೂ ತೆಗೆದುಕೊಳ್ಳಬೇಕು. ಧನವನ್ನೇ ತೆಗೆದುಕೊಳ್ಳುವ ಪಕ್ಷದಲ್ಲಿಯೂ ಸಹ, ಬೇಸಾಯಗಾರರು ಅನ್ನ-ಪಾನ-ಐಶ್ವರ್ಯಗಳಿಂದ ರಹಿತರಾಗಿ ಬಡತನದಿಂದ ದುಃಖಿಸುವಂತೆ ತೆರಿಗೆಯನ್ನು ತೆಗೆದುಕೊಳ್ಳಬಾರದು. ಏಕೆಂದರೆ, ಪ್ರಜೆಗಳು ಧನಿಕರೂ, ಆರೋಗ್ಯಶಾಲಿಗಳೂ, ಅನ್ನಸಸ್ತ್ರಾದಿಪರಿಪೂರ್ಣರೂ ಆಗಿದ್ದರೆ, ರಾಜನು ಅತ್ಯಂತ ಅಭಿವೃದ್ಧಿ ಹೊಂದುವನು. ರಾಜನು ಪ್ರಜೆಗಳಿಗೆ ತನ್ನ ಮಕ್ಕಳೆಂಬಂತೆ ಸುಖವೀಯಬೇಕು. ಪ್ರಜೆಗಳೂ ಸಹ ರಾಜನನ್ನೂ, ರಾಜಪುರುಷರನ್ನೂ, ತಮ್ಮ ತಂದೆಯಂತೆಯೇ ತಿಳಿಯಬೇಕು. ಪರಿಶ್ರಮಜೀವಿಗಳಾದ ಬೇಸಾಯಗಾರರು ರಾಜರಿಗೂ ಸಹ ರಾಜರಾಗಿರುತ್ತಾರೆಂಬ ಮಾತು ಸತ್ಯವು. ಆದರೆ ರಾಜನು ಅವರ ರಕ್ಷಕನು. ರಾಜನೇ ಇಲ್ಲದಿದ್ದರೆ ಪ್ರಜೆಗಳೆಂದಾರಿಗೆ ಹೇಳಬೇಕು?

ಇಬ್ಬರೂ ಒಂದಾಗಿ ತಮ್ಮ ತಮ್ಮ ಕಾರ್ಯಗಳಲ್ಲಿ ಸ್ವತಂತ್ರರಾಗಿಯೂ, ಸಮ್ಮಿಳಿತವಾದ, ಪ್ರೀತಿಯುಕ್ತವಾದ ಕಾರ್ಯಗಳಲ್ಲಿ ಪರತಂತ್ರರಾಗಿಯೂ, ಇರಬೇಕು. ರಾಜನೂ, ರಾಜಪುರುಷರೂ, ಪ್ರಜಾಸಮ್ಮತಿಗೆ ವಿರುದ್ಧವಾಗಿ ನಡೆಯಬಾರದು. ಮತ್ತು ರಾಜಪುರುಷರೂ, ಪ್ರಜೆಗಳೂ ರಾಜಾಜ್ಞೆಗೆ ವಿರುದ್ಧವಾಗಿ ನಡೆಯಬಾರದು. ಇದು ರಾಜನ ರಾಜಕೀಯ ಸ್ವಕರ್ತವ್ಯವಾಗಿರುತ್ತದೆ. ಇದನ್ನು " ಪೊಲಿಟಿಕಲ್ ಸೈನ್ಸ್" ಎನ್ನುತ್ತಾರೆ. ಇದನ್ನು ಸಂಕ್ಷೇಪವಾಗಿ ಹೇಳಿದ್ದೇವೆ. ಈ ವಿಷಯವಾಗಿ ಹೆಚ್ಚಾಗಿ ತಿಳಿಯಲಪೇಕ್ಷಿಸುವವರು, ನಾಲ್ಕು ವೇದಗಳು, ಮನುಸ್ಮೃತಿ, ಶುಕ್ರ ನೀತಿ, ಮಹಾಭಾರತ ಮೊದಲಾದುವನ್ನು ನೋಡಿ ನಿಶ್ಚಯಿಸಬೇಕು. ಪ್ರಜೆಗಳಲ್ಲಿ ಉಂಟಾಗುವ ವಿವಾದಗಳನ್ನು ಮನುಸ್ಮೃತಿಯ ಎಂಟನೆಯ ಮತ್ತು ಒಂಭತ್ತನೆಯ ಅಧ್ಯಾಯಗಳಲ್ಲಿ ಹೇಳಿರುವಂತೆ ಬಗೆಹರಿಸಬೇಕು. ಆ ವಿಷಯವನ್ನೂ ಸಹ ಇಲ್ಲಿ ಸಂಕ್ಷೇಪವಾಗಿ ಬರೆಯುತ್ತೇವೆ.

ಪ್ರತ್ಯಹಂ ದೇಶದೃಷ್ಟೈಶ್ಚ ಶಾಸ್ತ್ರದೃಷ್ಟೈಶ್ಚ ಹೇತುಭಿಃ।
ಅಷ್ಟಾದಶಸು ಮಾರ್ಗೇಷು ನಿಬದ್ಧಾನಿ ಪೃಥಕ್ ಪೃಥಕ್ ॥೧॥
ತೇಷಾಮಾದ್ಯಮೃಣಾದಾನಂ ನಿಕ್ಷೇಪೋಽಸ್ವಾಮಿವಿಕ್ರಯಃ।
ಸಂಭೂಯ ಚ ಸಮುತ್ಥಾನಂ ದತ್ತಸ್ಯಾನಪಕರ್ಮ ಚ ॥೨॥
ವೇತನಸ್ಯೈವ ಚಾದಾನಂ ಸಂವಿದಶ್ಚ ವ್ಯತಿಕ್ರಮಃ।
ಕ್ರಯವಿಕ್ರಯಾನುಶಯೋ ವಿವಾದಃ ಸ್ವಾಮಿಪಾಲಯೋಃ ॥೩॥
ಸೀಮಾವಿವಾದಧರ್ಮಶ್ಚ ಪಾರುಷ್ಯೇ ದಂಡವಾಚಿಕೇ।
ಸ್ತೇಯಂ ಚ ಸಾಹಸಂ ಚೈವ ಸ್ತ್ರೀಸಂಗ್ರಹಣಮೇವ ಚ ॥೪॥
ಸ್ತ್ರೀಪುಂಧರ್ಮೋ ವಿಭಾಗಶ್ಚ ದ್ಯೂತಮಾಹ್ವಯ ಏವ ಚ।
ಪದಾನ್ಯಷ್ಟಾದಶೈತಾನಿ ವ್ಯವಹಾರಸ್ಥಿತಾವಿಹ ॥೫॥
ಏಷುಸ್ಥಾನೇಷು ಭೂಯಿಷ್ಠಂ ವಿವಾದಂ ಚರತಾಂ ನೃಣಾಂ।
ಧರ್ಮಂ ಶಾಶ್ವತಮಾಶ್ರಿತ್ಯ ಕುರ್ಯಾತ್ಕಾರ್ಯವಿನಿರ್ಣಯಮ್ ॥
ಧರ್ಮೋ ವಿದ್ಧಸ್ತ್ವಧರ್ಮೇಣ ಸಭಾಂ ಯತ್ರೋಪತಿಷ್ಠತೇ।
ಶಲ್ಯಂ ಚಾಸ್ಯ ನ ಕೃಂತಂತಿ ವಿದ್ಧಾಸ್ತತ್ರ ಸಭಾಸದಃ ॥೭॥

ಸಭಾಂ ವಾ ನ ಪ್ರವೇಷ್ಟವ್ಯಂ ವಕ್ತವ್ಯಂ ವಾ ಸಮಂಜಸಮ್ ।
ಅಬ್ರುವನ್ವಿಬ್ರುವನ್ವಾಪಿ ನರೋ ಭವತಿ ಕಿಲ್ಬಿಷೀ ॥೮॥

ಯತ್ರಧರ್ಮೋಽಹ್ಯಧರ್ಮೇಣ ಸತ್ಯಂ ಯತ್ರಾನೃತೇನ ಚ ।
ಹನ್ಯತೇ ಪ್ರೇಕ್ಷಮಾಣಾನಾಂ ಹತಾಸ್ತತ್ರ ಸಭಾಸದಃ ॥೯॥

ಧರ್ಮ ಏವ ಹತೋ ಹಂತಿ ಧರ್ಮೋ ರಕ್ಷತಿ ರಕ್ಷಿತಃ ।
ತಸ್ಮಾದ್ಧರ್ಮೋ ನಹಂತವ್ಯೋ ಮಾ ನೋ ಧರ್ಮೋ
ಹತೋಽವಧೀತ್ ॥೧೦॥

ವೃಷೋ ಹಿ ಭಗವಾನ್ ಧರ್ಮಸ್ತಸ್ಯ ಯಃ ಕುರುತೇಽಲ್ಯಂ ।
ವೃಷಲಂ ತಂ ವಿದುರ್ದೇವಾಸ್ತಸ್ಮಾದ್ಧರ್ಮಂ ನ ಲೋಪ-
ಯೇತ್ ॥೧೧॥

ಏಕ ಏವ ಸುಹೃದ್ಧರ್ಮೋ ನಿಧನೇಽಪ್ಯನುಯಾತಿ ಯಃ ।
ಶರೀರೇಣ ಸಮಂ ನಾಶಂ ಸರ್ವಮನ್ಯದ್ಧಿ ಗಚ್ಛತಿ ॥೧೨॥

ಪಾದೋ ಧರ್ಮಸ್ಯ ಕರ್ತಾರಂ ಪಾದಃ ಸಾಕ್ಷಿಣಮೃಚ್ಛತಿ ।
ಪಾದಃ ಸಭಾಸದಃ ಸರ್ವಾನ್ ಪಾದೋ ರಾಜಾನಮೃಚ್ಛತಿ॥೧೩
ರಾಜಾ ಭವತ್ಯನೇನಾಸ್ತು ಮುಚ್ಯಂತೇ ಚ ಸಭಾಸದಃ ।
ಏನೋ ಗಚ್ಛತಿ ಕರ್ತಾರಂ ನಿಂದಾರ್ಹೋ ಯತ್ರ ನಿಂದ್ಯತೇ ॥

[ಮನು ೮ ॥ ೩-೮ । ೧೩-೧೯]

ಸಭೆಯು, ರಾಜನು, ಮತ್ತು ರಾಜಪುರುಷರು–ಎಲ್ಲರೂ ದೇಶ ಸಂಚಾರ ಮತ್ತು ಶಾಸ್ತ್ರವ್ಯವಹಾರಹೇತುಗಳಿಂದ, ಈ ಕೆಳಗೆ ಬರೆದಿರುವ ಹದಿನೆಂಟು ವಿವಾದಾಸ್ಪದ ಮಾರ್ಗಗಳಲ್ಲಿ, ವಿವಾದಯುಕ್ತವಾದ ಕಾರ್ಯಗಳನ್ನು ಪ್ರತಿದಿನವೂ ನಿರ್ಣಯಿಸಬೇಕು. ಶಾಸ್ತ್ರಗಳಲ್ಲಿ ಹೇಳಲ್ಪಡದ ಯಾವುದಾದರೂ, ನಿಯಮಗಳು ಆವಶ್ಯಕವಾಗಿದ್ದಲ್ಲಿ, ರಾಜನೂ, ಪ್ರಜೆಗಳೂ ಸಹ ಏಳಿಗೆ ಪಡೆಯುವಂತಹ ಉತ್ತಮವಾದ ರೀತಿಯಲ್ಲಿ ಅವುಗಳನ್ನು ರಚಿಸಿಕೊಳ್ಳಬೇಕು ॥೧॥ ವಿವಾದಾಸ್ಪದ ಹದಿನೆಂಟುಮಾರ್ಗಗಳಿವು :—೧-(ಋಣದಾನ) ಸಾಲ ತೆಗೆದುಕೊಳ್ಳು,

ವುದು. ಕೊಡುವುದು ಇವುಗಳಿಂದ ಹುಟ್ಟಿದ ವಿವಾದ ; ೨ (ನಿಕ್ಷೇಪ) ಒತ್ತೆ ಯಿಟ್ಟ ವಸ್ತುವನ್ನು ಕೇಳಿದಾಗ ಕೊಡದಿರುವುದು ; ೩ (ಅಸ್ವಾಮಿ ವಿಕ್ರಯ) ಮತ್ತೊಬ್ಬರಸ್ವತ್ತನ್ನು ತನ್ನದೆಂದು ಹೇಳಿ ಮಾರುವುದು : ೪ (ಸಂಭೂಯ ಚ ಸಮುತ್ಥಾನಂ) ಮೈತ್ರಿಯನ್ನು ತೋರಿಸಿಕ್ಕೊಂಡು ಯಾವನೊಬ್ಬನ ಮೇಲೆ ಅತ್ಯಾಚಾರ ನಡೆಸುವುದು ; ೫ (ದತ್ತಸ್ಯಾನಪ ಕರ್ಮ ಚ) ಕೊಟ್ಟ ಪದಾರ್ಥವನ್ನು ಕೊಡದಿರುವುದು, ಕಮ್ಮಿಕೊಡು ವುದು ॥೨॥ ; ೬ (ವೇತನಸ್ಯೈವ ಚಾದಾನಂ) ಸಂಬಳದಿಂದ ತೆಗೆದು ಕೊಳ್ಳುವುದು ಕಮ್ಮಿ ಕೊಡುವುದು ಅಥವಾ ಕೊಡದೇನೇ ಇರುವುದು ; ೭ (ಸಂವಿದಶ್ಚ ವ್ಯತಿಕ್ರಮಃ) ಪ್ರತಿಜ್ಞೆಗೆ ವಿರುದ್ಧ ನಡೆಯುವುದು ; ೮ ಕ್ರಯವಿಕ್ರಯಾನುಶಯ)ಕ್ರಯವಿಕ್ರಯಗಳಲ್ಲಿ ಕಲಹವುಂಟಾಗುವುದು ; ೯ (ವಿವಾದಾಃ ಸ್ವಾಮಿಪಾಲಯೋಃ) ದನಗಳ ಒಡೆಯನಿಗೂ ಕಾವಲಿ ಗನಿಗೂ ಕಲಹವುಂಟಾಗುವುದು ॥೩॥ ೧೦ ಎಲ್ಲಿಯ ಬಗ್ಗೆ ಹುಟ್ಟುವ ವಿವಾದ ; ೧೧ ಮತ್ತೊಬ್ಬನಿಗೆ ಕಠೋರ ದಂಡವೀಯುವುದು ; ೧೨ ಕಠೋರ ವಚನವಾಡುವುದು ; ೧೩ ಕಳವು ದರೋಡೆ ; ೧೪ ಬಲಾ ತ್ಕಾರವಾಗಿ ಯಾವದಾದರೂ ಕಾರ್ಯಮಾಡುವುದು ; ೧೫ ಸ್ತ್ರೀಪುರು ಷರ ವ್ಯಭಿಚಾರ ; ॥೪॥ ೧೬ ಸ್ತ್ರೀಪುರುಷರ ಧರ್ಮೋಲ್ಲಂಘನೆ ; ೧೭ ದಾಯಭಾಗದಲ್ಲಿ ಕಲಹ ; ಮತ್ತು ೧೮ ಜೂಜು ಅಂದರೆ ಜಡ ಅಥವಾ ಚೇತನ ಪದಾರ್ಥಗಳನ್ನು ಪಣವೊಡ್ಡಿ ಜೂಜಾಡುವುದು—ಈ ಹದಿ ನೆಂಟು ವಿಷಯಗಳು ಪರಸ್ಪರ ವಿರುದ್ಧವಾದ ವ್ಯವಹಾರಗಳಿಗೆ ಸ್ಥಾನ ಗಳಾಗಿವೆ ॥೫॥ ಈ ವ್ಯವಹಾರಗಳಲ್ಲಿ ಅತಿ ವಿವಾದವಾಡುವ ಜನರಿಗೆ, ಸನಾತನ ಧರ್ಮದ ಆಶ್ರಯದಿಂದ ನ್ಯಾಯವನ್ನು ಸಲ್ಲಿಸಬೇಕು ; ಯಾರೊಂದಿಗೂ ಪಕ್ಷಪಾತಮಾಡಬಾರದು ॥೬॥ ಯಾವ ಸಭೆಯಲ್ಲಿ ಧರ್ಮವು ಅಧರ್ಮದಿಂದ ಆಹತವಾಗಿರುವುದೋ ಮತ್ತು ಯಾರು ಧರ್ಮದ ಆ ಶಲ್ಯ ಅಂದರೆ ಕಳಂಕವನ್ನು, ಬಾಣವನ್ನು ಕೇಳುವಂತೆ ತೆಗೆದುಹಾಕಿ, ಅಧರ್ಮವನ್ನು ಛೇದಿಸುವದಿಲ್ಲವೋ, ಅಂದರೆ ಧಾರ್ಮಿಕ ನಿಗೆ ಗೌರವವೂ, ಅಧಾರ್ಮಿಕನಿಗೆ ದಂಡವೂ ಲಭಿಸುವದಿಲ್ಲವೋ, ಆ ಸಭೆಯಲ್ಲಿನ ಸಮಸ್ತ ಸಭಾಸದರೂ ಆಹತರೆಂದೇ ತಿಳಿಯಲ್ಪಡುತ್ತಾರೆ. ॥೭॥ ಧರ್ಮಿಷ್ಠನಾದವನು ಎಂದಿಗೂ ಸಭಾ ಪ್ರವೇಶಮಾಡಬಾರದು ;

ಪ್ರವೇಶಿಸಿದ ಮೇಲೆ ಸತ್ಯವನ್ನೇ ಹೇಳಬೇಕು. ಸಭೆಯಲ್ಲಿ ಅನ್ಯಾಯ ನಡೆಯುತ್ತಿದ್ದರೂ ಸಹ ಸುಮ್ಮನೆ ನೋಡುತ್ತಾ ಕುಳಿತಿರುವವನೂ, ಅಥವಾ ಸತ್ಯನ್ಯಾಯಗಳಿಗೆ ವಿರುದ್ಧವಾಗಿ ಮಾತವಾಡುವವನೂ ಮಹಾ ಪಾಪಿ ॥೪॥ ಯಾವ ಸಭೆಯಲ್ಲಿ ಸಭಾಸದರ ಕಣ್ಣೆದುರಿಗೇ ಅಧರ್ಮದಿಂದ ಧರ್ಮವೂ, ಅಸತ್ಯದಿಂದ ಸತ್ಯವೂ, ಬಾಧಿತವಾಗುವುದೋ ಆ ಸಭೆಯಲ್ಲಿರುವ ಜನರೆಲ್ಲರೂ ಮೃತಪ್ರಾಯರೆಂದು ತಿಳಿಯಬೇಕು. ಅವರಲ್ಲಿ ಜೀವಂತನಾದವನು ಇಲ್ಲದಂತೆಯೇ ಸರಿ ॥೯॥ ನಷ್ಟವಾದ ಧರ್ಮವು ನಾಶಕನನ್ನು ನಾಶಮಾಡಿಬಿಡುತ್ತದೆ. ಮತ್ತು ರಕ್ಷಿತವಾದ ಧರ್ಮವು ರಕ್ಷಕನನ್ನು ರಕ್ಷಿಸುತ್ತದೆ. ಆದುದರಿಂದ ನಷ್ಟವಾದ ಧರ್ಮವು ನಮ್ಮನ್ನು ಕೊಲ್ಲದಿರುವಂತೆ, ನಾವು ಧರ್ಮವನ್ನು ಕೊಲ್ಲಬಾರದು ॥೧೦॥ ಐಶ್ವರ್ಯದಾಯಕವೂ, ಸುಖಪ್ರದವೂ ಆದುದರಿಂದ ಧರ್ಮಕ್ಕೆ 'ವೃಷ' ವೆಂದು ಹೆಸರು; ಈ ಧರ್ಮವನ್ನು ನಾಶಮಾಡುವವನನ್ನು ವಿದ್ವಾಂಸರು 'ವೃಷಲ' ಅಂದರೆ ಶೂದ್ರ ಮತ್ತು ನೀಚನೆಂದು ತಿಳಿಯುತ್ತಾರೆ. ಆದ್ದರಿಂದ ಯಾವ ಮನುಷ್ಯನೂ ಧರ್ಮಕ್ಕೆ ಲೋಪತರುವುದುಚಿತವಲ್ಲ. ॥೧೧॥ ಈ ಜಗತ್ತಿನಲ್ಲಿ ಮರಣಾನಂತರವೂ ಸಂಗಡ ಬರುವ ಏಕಮಾತ್ರ ಮಿತ್ರನು ಧರ್ಮವೊಂದೇ; ಬೇರೆ ಎಲ್ಲಾ ಪದಾರ್ಥಗಳೂ ಅಥವಾ ಸೆಂಗಡಿಗರೂ, ದೇಹನಾಶದೊಂದಿಗೇ ನಷ್ಟವಾಗಿ ಹೋಗುತ್ತಾರೆ. ಅಂದರೆ, ಎಲ್ಲರ ಜೊತೆಯೂ ಬಿಟ್ಟುಹೋಗುತ್ತದೆ; ಆದರೆ ಧರ್ಮದ ಸಂಗವೆಂದೂ ಬಿಟ್ಟುಹೋಗದು ॥೧೨॥ ರಾಜಸಭೆಯಲ್ಲಿ ಪಕ್ಷಪಾತದಿಂದ ಅಧರ್ಮ ನಡೆದರೆ, ಅದು ನಾಲ್ಕುಭಾಗಗಳಾಗಿ ವಿಭಕ್ತವಾಗುತ್ತದೆ. ಅವುಗಳಲ್ಲಿ ಒಂದನೆಯದು ಮಾಡಿದವನಿಗೂ, ಎರಡನೆಯದು ಸಾಕ್ಷಿಗೂ, ಮೂರನೆಯದು ಸಭಾಸದರಿಗೂ, ನಾಲ್ಕನೆಯದು ಅಧರ್ಮಿಯಾದ ಸಭಾಧ್ಯಕ್ಷನಿಗೂ ಪ್ರಾಪ್ತವಾಗುತ್ತದೆ॥೧೩॥ ಯಾವ ಸಭೆಯಲ್ಲಿ ನಿಂದಾರ್ಹನಿಗೆ ನಿಂದೆಯೂ, ಪ್ರಶಂಸಾರ್ಹನಿಗೆ ಪ್ರಶಂಸೆಯೂ ದಂಡನಾರ್ಹನಿಗೆ ದಂಡನೆಯೂ, ಗೌರವಾರ್ಹನಿಗೆ ಗೌರವವೂ ಲಭಿಸುವುದೋ, ಅಲ್ಲಿನ ರಾಜನೂ, ಸಮಸ್ತ ಸಭಾಸದರೂ, ಪಾಪರಹಿತರಾಗಿ ಪವಿತ್ರರಾಗುತ್ತಾರೆ. ಪಾಪಮಾಡಿದವನೇ ಪಾಪಭಾಗಿಯಾಗುತ್ತಾನೆ. ಇನ್ನು ಸಾಕ್ಷಿಗಳು ಹೇಗೆ ನಿಯತವಾಗಿರಬೇಕೆಂಬ ವಿಷಯ;—

ಆಪ್ತಾಃ ಸರ್ವೇಷು ವರ್ಣೇಷು ಕಾರ್ಯಾಃ ಕಾರ್ಯೇಷು
ಸಾಕ್ಷಿಣಃ ।
ಸರ್ವಧರ್ಮವಿದೋಽಲುಬ್ಧಾ ವಿಪರೀತಾಂಸ್ತು ವರ್ಜಯೇತ್ ॥
ಸ್ತ್ರೀಣಾಂ ಸಾಕ್ಷ್ಯಂ ಸ್ತ್ರಿಯಃ ಕುರ್ಯುರ್ದ್ವಿಜಾನಾಂ ಸದೃಶಾ
ದ್ವಿಜಾಃ ।
ಶೂದ್ರಾಶ್ಚ ಸಂತಃ ಶೂದ್ರಾಣಾಮಂತ್ಯಾನಾಮಂತ್ಯಯೋ-
ನಯಃ ॥೨॥
ಸಾಹಸೇಷು ಚ ಸರ್ವೇಷು ಸ್ತೇಯಸಂಗ್ರಹಣೇಷು ಚ ।
ವಾಗ್ದಂಡಯೋಶ್ಚ ಪಾರುಷ್ಯೇ ನ ಪರೀಕ್ಷೇತ ಸಾಕ್ಷಿಣಃ ॥೩॥
ಬಹುತ್ವಂ ಪರಿಗೃಹ್ಣೀಯಾತ್ಸಾಕ್ಷಿದ್ವೈಧೇ ನರಾಧಿಪಃ ।
ಸಮೇಷು ತು ಗುಣೋತ್ಕೃಷ್ಟಾನ್ಗುಣದ್ವೈಧೇ ದ್ವಿಜೋ-
ತ್ತಮಾನ್ ॥೪॥
ಸಮಕ್ಷದರ್ಶನಾತ್ಸಾಕ್ಷ್ಯಂ ಶ್ರವಣಾಚ್ಚೈವ ಸಿದ್ಧ್ಯತಿ ।
ತತ್ರ ಸತ್ಯಂ ಬ್ರುವನ್ಸಾಕ್ಷೀ ಧರ್ಮಾರ್ಥಾಭ್ಯಾಂ ನ ಹೀಯತೇ ॥
ಸಾಕ್ಷೀ ದೃಷ್ಟಶ್ರುತಾದನ್ಯದ್ವಿಬ್ರುವನ್ಸಾರ್ಯಸಂಸದಿ ।
ಅವಾಙ್ನರಕಮಭ್ಯೇತಿ ಪ್ರೇತ್ಯ ಸ್ವರ್ಗಾಚ್ಚ ಹೀಯತೇ ॥೬॥
ಸ್ವಭಾವೇನೈವ ಯದ್ಬ್ರೂಯುಸ್ತದ್ಗ್ರಾಹ್ಯಂ ವ್ಯವಹಾರಿಕಮ್
ಅತೋ ಯದನ್ಯದ್ವಿಬ್ರೂಯುರ್ಧರ್ಮಾರ್ಥಂ ತದಪಾರ್ಥಕಮ್॥
ಸಭಾಂತಃ ಸಾಕ್ಷಿಣಃ ಪ್ರಾಪ್ತಾನರ್ಥಿಪ್ರತ್ಯರ್ಥಿಸನ್ನಿಧೌ ।
ಪ್ರಾಡ್ವಿವಾಕೋಽನುಯುಂಜೀತ ವಿಧಿನಾನೇನ ಸಾಂತ್ವಯನ್ ॥
ಯದ್ದ್ವಯೋರನಯೋರ್ವೇತ್ಥ ಕಾರ್ಯೇಽಸ್ಮಿನ್ ಚೇಷ್ಟಿತಂ
ಮಿಥಃ ।
ತದ್ಬ್ರೂತ ಸರ್ವಂ ಸತ್ಯೇನ ಯುಷ್ಮಾಕಂ ಹ್ಯತ್ರ ಸಾಕ್ಷಿತಾ ॥೯॥
ಸತ್ಯಂ ಸಾಕ್ಷ್ಯೇ ಬ್ರುವನ್ ಸಾಕ್ಷೀ ಲೋಕಾನಾಪ್ನೋತಿ
ಪುಷ್ಕಲಾನ್ ।
ಇಹ ಚಾನುತ್ತಮಾಂ ಕೀರ್ತಿಂ ವಾಗೇಷಾ ಬ್ರಹ್ಮಪೂಜಿತಾ॥೧೦॥

ಸತ್ಯೇನ ಪೂಯತೇ ಸಾಕ್ಷೀ ಧರ್ಮಃ ಸತ್ಯೇನ ವರ್ಧತೇ ।
ತಸ್ಮಾತ್ಸತ್ಯಂ ಹಿ ವಕ್ತವ್ಯಂ ಸರ್ವವರ್ಣೇಷು ಸಾಕ್ಷಿಭಿಃ ॥೧೧॥
ಆತ್ಮೈವ ಹ್ಯಾತ್ಮನಃ ಸಾಕ್ಷೀ ಗತಿರಾತ್ಮಾ ತಥಾತ್ಮನಃ ।
ನಾವಮಂಸ್ಥಾಃ ಸ್ವಮಾತ್ಮಾನಂ ನೃಣಾಂ ಸಾಕ್ಷಿಣಮುತ್ತಮಂ ॥
ಯಸ್ಯವಿದ್ವಾನ್ ಹಿ ವದತಃ ಕ್ಷೇತ್ರಜ್ಞೋ ನಾಭಿಶಂಕತೇ ।
ತಸ್ಮಾನ್ನ ದೇವಾಃ ಶ್ರೇಯಾಂಸಂ ಲೋಕೇಽನ್ಯಂ ಪುರುಷಂ
ವಿದುಃ ॥೧೩॥
ಏಕೋಹಮಸ್ಮೀತ್ಯಾತ್ಮಾನಂ ಯತ್ತ್ವಂ ಕಲ್ಯಾಣ ಮನ್ಯಸೇ ।
ನಿತ್ಯಂ ಸ್ಥಿತಸ್ತೇ ಹೃದ್ಯೇಷ ಪುಣ್ಯಪಾಪೇಕ್ಷಿತಾ ಮುನಿಃ ॥೧೪॥

.[ಮನು೮॥೬೩। ೬೮। ೭೨-೭೫। ೭೮-೮೧। ೮೩। ೮೪। ೯೬। ೯೧]

ಸರ್ವ ವರ್ಣಗಳಲ್ಲಿಯೂ ಧಾರ್ಮಿಕರೂ, ವಿದ್ವಾಂಸರೂ, ನಿಷ್ಕಪಟರೂ, ಸರ್ವಧರ್ಮವೇತ್ತರೂ, ಲೋಭರಹಿತರೂ, ಸತ್ಯವಾದಿಗಳೂ ಆದವರನ್ನೇ ನ್ಯಾಯವ್ಯವಸ್ಥೆಯಲ್ಲಿ ಸಾಕ್ಷಿಗಳನ್ನಾಗಿ ತೆಗೆದುಕೊಳ್ಳಬೇಕು. ಇದಕ್ಕೆ ವಿರುದ್ಧವಾಗಿರುವವರನ್ನು ಎಂದಿಗೂ ತೆಗೆದುಕೊಳ್ಳಬಾರದು. ॥೧॥ ಸ್ತ್ರೀಯರಿಗೆ ಸ್ತ್ರೀಯರನ್ನೂ ದ್ವಿಜರಿಗೆ ದ್ವಿಜರನ್ನೂ, ಶೂದ್ರರಿಗೆ ಶೂದ್ರರನ್ನೂ ಮತ್ತು ಅಂತ್ಯಜರಿಗೆ ಅಂತ್ಯಜರನ್ನೂ ಸಾಕ್ಷಿಗಳನ್ನಾಗಿ ತೆಗೆದುಕೊಳ್ಳಬೇಕು. ॥೨॥ ಬಲಾತ್ಕಾರ ಕರ್ಮಗಳಾದ ಕಳವು, ವ್ಯಭಿಚಾರ, ಕಠೋರವಚನ, ದಂಡನಿಪಾತ, ಇಂತಹ ಅಪರಾಧಗಳಲ್ಲಿ ಸಾಕ್ಷಿಗಳನ್ನು ಪರೀಕ್ಷಿಸಬಾರದು; ಮತ್ತು ಸಾಕ್ಷಿಗಳು ಆವಶ್ಯಕವೆಂದೂ ಸಹ ಅರಿಯಬಾರದು. ಏಕೆಂದರೆ, ಈ ಅಪರಾಧಗಳು ಗುಟ್ಟಾಗಿಯೇ ನಡೆಯುತ್ತವೆ. ॥೩॥ ಎರಡು ಪಕ್ಷಗಳಿಗೂ ಸಾಕ್ಷಿಗಳಿದ್ದರೆ, ಬಹುಮತಕ್ಕನುಸಾರವಾಗಿಯೂ, ಎರಡಕ್ಕೂ ಸಮ ಸಮನಾದ ಸಾಕ್ಷಿಗಳಿರುವುದಾದರೆ, ಉತ್ತಮಪುರುಷರ ಸಾಕ್ಷ್ಯಕ್ಕನುಸಾರವಾಗಿಯೂ, ಎರಡು ಪಕ್ಷಗಳ ಸಾಕ್ಷಿಗಳೂ ಉತ್ತಮರೇ ಆಗಿದ್ದಲ್ಲಿ, ದ್ವಿಜೋತ್ತಮರ ಅಂದರೆ, ಋಷಿ-ಮಹರ್ಷಿ-ಯತಿಗಳ ಸಾಕ್ಷ್ಯಕ್ಕೆ ಅನುಸಾರವಾಗಿಯೂ, ನ್ಯಾಯವನ್ನು ತೀರ್ಮಾನಿಸಬೇಕು. ॥೪॥ ಸಾಕ್ಷ್ಯವು ಎರಡು ವಿಧ-ಮೊದಲನೆಯದು ಕಣ್ಣಿನಿಂದ ನೋಡಿದವ

ನದು. ಎರಡನೆಯದು ಕಿವಿಯಿಂದ ಕೇಳಿದವನದು. ಸಭೆಯಲ್ಲಿ ಪ್ರಶ್ನಿಸಿದಾಗ ಸತ್ಯವನ್ನಾಡುವ ಸಾಕ್ಷಿಗಳು, ಧರ್ಮಹೀನರೂ, ದಂಡಾರ್ಹರೂ ಆಗರು. ಸುಳ್ಳಾಡುವವನು ಯುಕ್ತರೀತಿಯಲ್ಲಿ ದಂಡನೆಗರ್ಹನಾಗುತ್ತಾನೆ. ॥೫॥ ರಾಜನ ಸಭೆಯಲ್ಲಾಗಲಿ, ಮಹಾ ಜನ ಸಭೆಯಲ್ಲಾಗಲಿ, ನೋಡಿದುದಕ್ಕೂ ಕೇಳಿದುದಕ್ಕೂ ವಿರುದ್ಧ ವಾಗಿ ನುಡಿದವನು " ಅವಾಙ್‌ನರಕ " ಅಂದರೆ, ಜಿಹ್ವಾಚ್ಛೇದನದಿಂದ ದುಃಖರೂಪ ನರಕವನ್ನು ಈಗಲೇ ಹೊಂದುವನು ಮತ್ತು ಮರಣಾ ನಂತರವೂ ದುಃಖಭಾಗಿಯಾಗುವನು. ॥೬॥ ಸಾಕ್ಷ್ಯವು ಸ್ವಭಾವತಃ ವ್ಯವಹಾರಕ್ಕೆ ಸಂಬಂಧಿಸಿದಂತೆ ಹೇಳುವ ಮಾತನ್ನೇ ಅಂಗೀಕರಿಸ ಬೇಕು. ಮತ್ತು ಅದರಿಂದ ಬೇರೆಯಾಗಿ ಕಲಿಸಲ್ಪಟ್ಟ ಯಾವ ಮಾತುಗಳನ್ನಾಡುತ್ತಾನೋ ಅದನ್ನೆಲ್ಲಾ ನ್ಯಾಯಾಧೀಶನು ವ್ಯರ್ಥ ವೆಂದು ಪರಿಗಣಿಸಬೇಕು. ॥೭॥ ವಾದಿ ಪ್ರತಿವಾದಿಗಳೆದುರಿಗೆ ಸಾಕ್ಷಿಗಳು ನ್ಯಾಯಸ್ಥಾನವನ್ನು ಪ್ರವೇಶಿಸಿದಾಗ ನ್ಯಾಯಾಧೀಶನೂ, ವಕೀಲರೂ, ಶಾಂತರೀತಿಯಿಂದ ಅವರಿಗೆ ಹೀಗೆ ಹೇಳಬೇಕು. ॥೮॥ ಸಾಕ್ಷಿಗಳೇ, ಈ ಕಾರ್ಯದಲ್ಲಿ, ಈ ಇಬ್ಬರ ಪರಸ್ಪರ ವ್ಯವಹಾರಗಳಲ್ಲಿ ನಿಮಗೆ ತಿಳಿದಿರುವ ವಿಷಯಗಳನ್ನು ಸತ್ಯವಾಗಿ ಹೇಳಿರಿ. ಏಕೆಂದರೆ, ಈ ಕಾರ್ಯದಲ್ಲಿ ನೀವು ಸಾಕ್ಷಿಗಳಾಗಿದ್ದೀರಿ. ॥೯॥ ಸತ್ಯವನ್ನು ಹೇಳಿದ ಸಾಕ್ಷಿಗೆ ಜನ್ಮಾಂತರದಲ್ಲಿ ಉತ್ತಮಜನ್ಮ ಹಾಗೂ ಉತ್ತಮ ಲೋಕಾಂತರಗಳಲ್ಲಿ ಜನ್ಮ ಸಿಕ್ಕಿ ಸುಖ ಲಭಿಸುತ್ತದೆ; ಈ ಜನ್ಮ ಮತ್ತು ಪರಜನ್ಮದಲ್ಲಿ ಉತ್ತಮ ಕೀರ್ತಿಯನ್ನು ಪಡೆಯುತ್ತಾನೆ. ಏಕೆಂದರೆ ವೇದಗಳಲ್ಲಿ ಸತ್ಕಾರಕ್ಕೂ, ತಿರಸ್ಕಾರಕ್ಕು ವಾಣಿಯೇ ಕಾರಣವೆಂದು ಹೇಳಿರುತ್ತದೆ. ಸತ್ಯವಾದಿಯು ಗೌರವಾರ್ಹನೂ, ಅಸತ್ಯವಾದಿಯು ತಿರಸ್ಕಾರಾರ್ಹನೂ, ಆಗುತ್ತಾರೆ. ॥೧೦॥ ಸತ್ಯವ ನ್ನಾಡುವದರಿಂದ ಸಾಕ್ಷಿಯು ಪವಿತ್ರನಾಗುತ್ತಾನೆ. ಸತ್ಯದಿಂದಲೇ ಧರ್ಮವು ವೃದ್ಧಿಹೊಂದುತ್ತದೆ. ಆದುದರಿಂದ ಎಲ್ಲಾ ವರ್ಣಗಳಲ್ಲಿಯೂ ಸಾಕ್ಷಿಗಳಿಗೆ ಸತ್ಯವೇ ಉಚಿತವಾಗಿರುತ್ತದೆ. ॥೧೧॥ ಆತ್ಮನಿಗೆ ಆತ್ಮನೇ ಸಾಕ್ಷಿ; ಆತ್ಮನಿಗೆ ಆತ್ಮನೇ ಗತಿ; ಆದುದರಿಂದ ಪುರುಷನೇ! ಮಾನವ ರೆಲ್ಲರಿಗೂ ಉತ್ತಮ ಸಾಕ್ಷಿಯಾದ ನಿನ್ನ ಆತ್ಮನನ್ನು ಅಪಮಾನ

ಗೊಳಿಸಬೇಡ. ಅಂದರೆ, ನಿನ್ನ ಆತ್ಮದಲ್ಲಿಯೂ, ಮನಸ್ಸಿನಲ್ಲಿಯೂ, ವಾಣಿಯಲ್ಲಿಯೂ, ಇರುವುದೇ ಸತ್ಯ; ಇದಕ್ಕೆ ವಿರುದ್ಧವಾದುದೇ ಅಸತ್ಯ. ॥೧೨॥ ಮಾತನಾಡುತ್ತಿರುವ ಯಾವ ಪುರುಷನ ವಿದ್ಯಾಂಸನಾದ ಕ್ಷೇತ್ರಜ್ಞನು, ಅಂದರೆ ಶರೀರಜ್ಞನಾದ ಅಂತರಾತ್ಮನು ಒಳಗೆ ಸಂಶಯಕ್ಕೀಡಾಗನೋ, ಅವನಿಗಿಂತ ಬೇರೆಯಾದ ಯಾವನನ್ನೂ ಪಂಡಿತರು ಉತ್ತಮ ಪುರುಷನೆಂದರಿಯುವುದಿಲ್ಲ. ॥೧೩॥ ಕಲ್ಯಾಣ ಕಾಮನಾದ ಪುರುಷನೆ! ಆತ್ಮದಲ್ಲಿ ತಾನೊಬ್ಬನೇ ಇರುವುದಾಗಿ ಭಾವಿಸಿ, ಸುಳ್ಳು ಹೇಳುವುದು ಸರಿಯಲ್ಲ, ಆದರೆ–ಯಾವ ಪುಣ್ಯ ಪಾಪಗಳ ದ್ರಷ್ಟನಾದ ಮುನಿಯು, ನಿನ್ನ ಆತ್ಮನಿಂದ ಭಿನ್ನವಾದ ಯಾವ ಪರಮಾತ್ಮನು, ಅಂತರ್ಯಾಮಿರೂಪದಿಂದ ನಿನ್ನ ಹೃದಯದಲ್ಲಿ ಸ್ಥಿರನಾಗಿದ್ದಾನೋ, ಆ ಪರಮೇಶ್ವರನಿಗಂಜಿ ಸದಾ ಸತ್ಯವನ್ನು ಹೇಳು.''

ಲೋಭಾನ್ಮೋಹಾದ್ಭಯಾನ್ಮೈತ್ರಾತ್ಕಾಮಾತ್ಕ್ರೋಧಾ-
ತ್ತಥೈವ ಚ।
ಅಜ್ಞಾನಾದ್ಬಾಲಭಾವಾಚ್ಚ ಸಾಕ್ಷ್ಯಂ ವಿತಥಮುಚ್ಯತೇ ॥೧॥
ಏಷಾಮನ್ಯತಮೇ ಸ್ಥಾನೇ ಯಃ ಸಾಕ್ಷ್ಯಮನೃತಂ ವದೇತ್।
ತಸ್ಯದಂಡವಿಶೇಷಾಂಸ್ತು ಪ್ರವಕ್ಷ್ಯಾಮ್ಯನುಪೂರ್ವಶಃ ॥೨॥
ಲೋಭಾತ್ಸಹಸ್ರದಂಡ್ಯಸ್ತು ಮೋಹಾತ್ಪೂರ್ವಂತು ಸಾಹಸಮ್।
ಭಯಾದ್ದ್ವೌ ಮಧ್ಯಮೌ ದಂಡ್ಯೌ ಮೈತ್ರಾತ್ಪೂರ್ವಂ ಚತು-
ರ್ಗುಣಮ್ ॥೩॥

ಕಾಮಾದ್ದಶಗುಣಂ ಪೂರ್ವಂ ಕ್ರೋಧಾತ್ತು ತ್ರಿಗುಣಂ ಪರಂ।
ಅಜ್ಞಾನಾದ್ವೇ ಶತೇ ಪೂರ್ಣೇ ಬಾಲಿಶ್ಯಾಚ್ಛತಮೇವತು ॥೪॥

ಉಪಸ್ಥಮುದರಂ ಜಿಹ್ವಾ ಹಸ್ತೌಪಾದೌ ಚ ಪಂಚಮಂ।
ಚಕ್ಷುರ್ನಾಸಾ ಚ ಕರ್ಣೌ ಚ ಧನಂ ದೇಹಸ್ತಥೈವ ಚ ॥೫॥
ಅನುಬಂಧಂ ಪರಿಜ್ಞಾಯ ದೇಶಕಾಲೌ ಚ ತತ್ತ್ವತಃ।
ಸಾರಾಪರಾಧೌ ಚಾಲೋಕ್ಯ ದಂಡಂ ದಂಡ್ಯೇಷು ಪಾತಯೇತ್॥

ಅಧರ್ಮದಂಡನಂ ಲೋಕೇ ಯಶೋಘ್ನಂ ಕೀರ್ತಿನಾಶನಂ ।
ಅಸ್ವರ್ಗ್ಯಂ ಚ ಪರತ್ರಾಪಿ ತಸ್ಮಾತ್ತತ್ಪರಿವರ್ಜಯೇತ್ ॥೭॥
ಅದಂಡ್ಯಾನ್ದಂಡಯನ್ರಾಜಾ ದಂಡ್ಯಾಂಶ್ಚೈವಾಪ್ಯದಂಡಯನ್ ।
ಅಯಶೋಮಹದಾಪ್ನೋತಿ ನರಕಂ ಚೈವ ಗಚ್ಛತಿ ॥೮॥
ವಾಗ್ದಂಡಂ ಪ್ರಥಮಂ ಕುರ್ಯಾದ್ಧಿಗ್ದಂಡಂ ತದನಂತರಮ್ ।
ತೃತೀಯಂ ಧನದಂಡಂತು ವಧದಂಡಮತಃ ಪರಂ ॥೯॥

[ಮನು ೮ ॥ ೧೧೮-೧೨೧ । ೧೨೫-೧೨೯]

ಲೋಭ, ಮೋಹ, ಭಯ, ಮಿತ್ರತ್ವ, ಕಾಮ, ಕ್ರೋಧ, ಅಜ್ಞಾನ, ಮತ್ತು ಬಾಲಭಾವದಿಂದ ಕೊಟ್ಟ ಸಾಕ್ಷ್ಯಗಳನ್ನೆಲ್ಲಾ ಸುಳ್ಳೆಂದು ತಿಳಿಯಬೇಕು ॥೧॥ ಇವುಗಳಲ್ಲಿ ಯಾವ ಸ್ಥಾನದಿಂದಾದರೂ ಸಾಕ್ಷಿಯು ಸುಳ್ಳು ಹೇಳಿದರೆ ಅವನಿಗೆ ಮುಂದೆ ಹೇಳಿರುವ ಅನೇಕ ವಿಧದ ದಂಡಗಳನ್ನು ವಿಧಿಸಬೇಕು ॥೨॥ ಲೋಭದಿಂದ ಸುಳ್ಳಾಡಿದ ಸಾಕ್ಷಿಗೆ ೧೫ ರೂ, ಹತ್ತಾಣೆಗಳನ್ನೂ ಮೋಹದಿಂದ ಸುಳ್ಳಾಡಿದವನಿಗೆ ೨ ರೂಪಾಯಿ ಎರಡಾಣೆಗಳನ್ನೂ, ಭಯದಿಂದ ಸುಳ್ಳು ಸಾಕ್ಷ್ಯವಿತ್ತವನಿಗೆ ೬ ರೂಪಾಯಿ ನಾಲ್ಕಾಣೆಗಳನ್ನೂ, ಮೈತ್ರಿಯಿಂದ ಸುಳ್ಳು ಸಾಕ್ಷ್ಯ ಕೊಟ್ಟವನಿಗೆ ೧೨ ರೂ. ಎಂಟಾಣೆಗಳನ್ನೂ, ದಂಡವಿಧಿಸಬೇಕು ॥೩॥ ಕಾಮದಿಂದ ಸುಳ್ಳು ಸಾಕ್ಷ್ಯ ಹೇಳಿದರೆ, ೨೫ ರೂಪಾಯಿಗಳನ್ನೂ, ಕ್ರೋಧದಿಂದ ಸುಳ್ಳು ಸಾಕ್ಷ್ಯ ಹೇಳಿದರೆ ೪೬ ರೂ. ೧೪ ಆಣೆಗಳನ್ನೂ, ಅಜ್ಞಾನದಿಂದ ಸುಳ್ಳು ಸಾಕ್ಷ್ಯ ಹೇಳಿದರೆ, ೬ ರೂಪಾಯಿಗಳನ್ನೂ, ಬಾಲಭಾವದಿಂದ ಸುಳ್ಳು ಹೇಳಿದರೆ, ೧ ರೂ. ೯ ಆಣೆಗಳನ್ನೂ ದಂಡವಾಗಿ ತೆಗೆದುಕೊಳ್ಳಬೇಕು. ॥೪॥ ಉಪಸ್ಥೇಂದ್ರಿಯ, ಉದರ, ನಾಲಿಗೆ, ಕೈ, ಕಾಲು, ಕಣ್ಣು, ಮೂಗು, ಕಿವಿ, ಧನ ಮತ್ತು ದೇಹ ಈ ಹತ್ತು ಸ್ಥಾನಗಳಲ್ಲಿ ದಂಡ ವಿಧಿಸಲ್ಪಡುತ್ತದೆ. ॥೫॥ ಆದರೆ, ಯಾವ ಯಾವ ದಂಡಗಳನ್ನು ಬರೆದಿದ್ದೇವೆಯೋ ಮತ್ತು ಬರೆಯುವೆವೋ, ಅವುಗಳಲ್ಲಿ, ನ್ಯೂನಾಧಿಕ್ಯವನ್ನುಂಟುಮಾಡಲು ನ್ಯಾಯಾಧೀಶನಿಗೆ ಅಧಿಕಾರವಿರುತ್ತದೆ. ಉದಾಹರಣೆಗೆ—ಲೋಭದಿಂದ ಸಾಕ್ಷ್ಯವಿತ್ತವನಿಗೆ ೧೫ ರೂ.

೧೦ ಆಣೆಗಳ ಧನ ದಂಡಹಾಕಬೇಕೆಂದು ಬರದಿದ್ದೇವೆ. ಆದರೆ ಸಾಕ್ಷಿಯು ದರಿದ್ರನಾಗಿದ್ದರೆ, ಆದಕ್ಕಿಂತಲೂ ಕಡಿಮೆಯಾಗಿಯೂ, ಧನಿಕನಾಗಿದ್ದರೆ, ಅದರ ದ್ವಿಗುಣ ತ್ರಿಗುಣ ಅಥವಾ ಚತುರ್ಗುಣದ ವರೆಗೂ, ದಂಡವನ್ನು ವಿಧಿಸಬಹುದು. ಅಂದರೆ, ದೇಶ, ಕಾಲ ಮತ್ತು ಅಪರಾಧಗಳಿಗೆ ತಕ್ಕಂತೆ ದಂಡ ವಿಧಿಸಬೇಕು. ॥೬॥ ಏತಕ್ಕೆಂದರೆ— ಅಧರ್ಮದಿಂದ ದಂಡ ವಿಧಿಸುವಿಕೆಯು ಮೊದಲಿನ ಗೌರವ, ಈಗಿನ, ಮುಂದಿನ ಮತ್ತು ಪರಜನ್ಮದಲ್ಲಿ ಬರುವ ಕೀರ್ತಿಯನ್ನು ಕೆಡಿಸುವಂತಹುದಾಗಿರುತ್ತದೆ. ಹಾಗೂ ಪರಜನ್ಮದಲ್ಲಿ ದುಃಖದಾಯಕವೂ ಆಗಿರುತ್ತದೆ. ಆದುದರಿಂದ ಯಾವ ರಾಜನು ದಂಡಾರ್ಹನಿಗೆ ದಂಡವೀಯುವದಿಲ್ಲವೋ, ನಿರಪರಾಧಿಗೆ ದಂಡವೀಯುತ್ತಾನೋ, ಅಂದರೆ, ದಂಡಿಸಲರ್ಹನಾದವನನ್ನು ಬಿಟ್ಟುಬಿಡುತ್ತಾನೋ ಮತ್ತು ದಂಡಿಸಲರ್ಹನಲ್ಲದವನಿಗೆ ದಂಡವೀಯುತ್ತಾನೋ, ಅವನು ಬದುಕಿರುವಾಗ ಮಹಾ ನಿಂದೆಗೂ, ಸತ್ತಮೇಲೆ ಮಹಾದುಃಖಕ್ಕೂ ಗುರಿಯಾಗುತ್ತಾನೆ. ಆದುದರಿಂದ ಅಪರಾಧಿಗೇ ಸದಾ ದಂಡವೀಯಬೇಕು. ಮತ್ತು ನಿರ್ದೋಷಿಗೆ ಎಂದೂ ಶಿಕ್ಷೆ ಕೊಡಬಾರದು. ॥೯॥ ಮೊದಲು ವಾಗ್ದಂಡ (ನಿಂದೆ) ವನ್ನೂ ಆ ಮೇಲೆ ದಿಗ್ದಂಡ ಅಂದರೆ, ಇಂತಹ ಕುಕೃತ್ಯವನ್ನೇಕೆ ಮಾಡಿದೆ? ನಿನಗೆ ಧಿಕ್ಕಾರವಿರಲಿ ಎನ್ನುವುದು, ಬಳಿಕ ಧನದಂಡವನ್ನೂ ಕೊನೆಗೆ ವಧೆ ಅಂದರೆ ಬೆತ್ತದ ಏಟು ಅಥವಾ ಮರಣದಂಡನೆಯನ್ನೂ ವಿಧಿಸಬೇಕು. ॥೯॥

ಯೇನ ಯೇನ ಯಥಾಂಗೇನ ಸ್ತೇನೋ ನೃಷು ವಿಚೇಷ್ಟತೇ।
ತತ್ತದೇವ ಹರೇದಸ್ಯ ಪ್ರತ್ಯಾದೇಶಾಯ ಪಾರ್ಥಿವಃ ॥೦॥
ಪಿತಾಚಾರ್ಯಃ ಸುಹೃನ್ಮಾತಾ ಭಾರ್ಯಾ ಪುತ್ರಃ ಪುರೋಹಿತಃ।
ನಾದಂಡ್ಯೋ ನಾಮ ರಾಜ್ಞೋಽಸ್ತಿ ಯಃ ಸ್ವಧರ್ಮೇ ನ ತಿಷ್ಠತಿ ॥
ಕಾರ್ಷಾಪಣಂ ಭವೇದ್ದಂಡ್ಯೋ ಯತ್ರಾನ್ಯಃ ಪ್ರಾಕೃತೋ ಜನಃ।
ತತ್ರ ರಾಜಾ ಭವೇದ್ದಂಡ್ಯಃ ಸಹಸ್ರಮಿತಿ ಧಾರಣಾ ॥೩॥
ಅಷ್ಟಾಪಾದ್ಯಂತು ಶೂದ್ರಸ್ಯ ಸ್ತೇಯೇ ಭವತಿ ಕಿಲ್ಬಿಷಂ।
ಷೋಡಶೈವ ತು ವೈಶ್ಯಸ್ಯ ದ್ವಾತ್ರಿಂಶತ್ಕ್ಷತ್ರಿಯಸ್ಯ ಚ ॥೪॥

ಬ್ರಾಹ್ಮಣಸ್ಯ ಚತುಃ ಷಷ್ಟಿಃ ಪೂರ್ಣಂ ವಾಪಿ ಶತಂ ಭವೇತ್ ।
ದ್ವಿಗುಣಾ ವಾ ಚತುಃಷಷ್ಟಿಸ್ತದ್ದೋಷಗುಣವಿದ್ಧಿ ಸಃ ॥೫॥
ಐಂದ್ರಂ ಸ್ಥಾನಮಭಿಪ್ರೇಪ್ಸುರ್ಯಶಶ್ಚಾಕ್ಷಯಮವ್ಯಯಂ ।
ನೋಪೇಕ್ಷೇತ ಕ್ಷಣಮಪಿ ರಾಜಾ ಸಾಹಸಿಕಂ ನರಂ ॥೬॥
ವಾಗ್ದುಷ್ಟಾತ್ತಸ್ಕರಾಚ್ಚೈವ ದಂಡೇನೈವ ಚ ಹಿಂಸತಃ ।
ಸಾಹಸಸ್ಯ ನರಃ ಕರ್ತಾ ವಿಜ್ಞೇಯಃ ಸಾಹಸಕೃತ್ತಮಃ॥ ೭॥
ಸಾಹಸೇ ವರ್ತಮಾನಂ ತು ಯೋ ಮರ್ಷಯತಿ ಪಾರ್ಥಿವಃ ।
ಸ ವಿನಾಶಂ ವ್ರಜತ್ಯಾಶು ವಿದ್ವೇಷಂ ಚಾಧಿಗಚ್ಛತಿ ॥೮॥
ನ ಮಿತ್ರಕಾರಣಾದ್ರಾಜಾ ವಿಪುಲಾದ್ವಾ ಧನಾಗಮಾತ್ ।
ಸಮುತ್ಸೃಜೇತ್ಸಾಹಸಿಕಾನ್ ಸರ್ವಭೂತಭಯಾವಹಾನ್ ॥೯॥
ಗುರುಂ ವಾ ಬಾಲವೃದ್ಧೌ ವಾ ಬ್ರಾಹ್ಮಣಂ ವಾ ಬಹುಶ್ರುತಂ ।
ಆತತಾಯಿನಮಾಯಾಂತಂ ಹನ್ಯಾದೇವಾವಿಚಾರಯನ್ ॥೧೦॥
ನಾತತಾಯಿವಧೇ ದೋಷೋ ಹಂತುರ್ಭವತಿ ಕಶ್ಚನ ।
ಪ್ರಕಾಶಂ ವಾಽಪ್ರಕಾಶಂ ವಾ ಮನ್ಯುಸ್ತನ್ಮನ್ಯುಮೃಚ್ಛತಿ ॥೧೧॥
ಯಸ್ಯ ಸ್ತೇನಃ ಪುರೇನಾಸ್ತಿ ನಾನ್ಯಸ್ತ್ರೀಗೋ ನ ದುಷ್ಟವಾಕ್ ।
ನ ಸಾಹಸಿಕದಂಡಘ್ನೌ ಸ ರಾಜಾ ಶಕ್ರಲೋಕಭಾಕ್ ॥೧೨॥

[ಮನು-೮॥ ೩೩೪-೩೩೮। ೩೪೪-೩೪೭। ೩೫೦-೩೫೧। ೩೮೬].

ಕಳ್ಳನು ಯಾವ ರೀತಿಯಾಗಿ, ಯಾವ ಯಾವ ಅಂಗಗಳಿಂದ ಮಾನವರಲ್ಲಿ ವಿರುದ್ಧ ಕ್ರಿಯೆಗಳನ್ನು ಮಾಡುವರೋ, ಅವನ ಆಯಾ ಅಂಗಗಳನ್ನು, ಸರ್ವ ಮಾನವರಿಗೂ ನೀತಿಕಲಿಸುವ ಸಲುವಾಗಿ ರಾಜನು ಛೇದಿಸಬೇಕು. ॥೧॥ ತಂದೆಯಾಗಿರಲಿ, ಆಚಾರ್ಯನಾಗಿರಲಿ, ಸ್ನೇಹಿತನಾಗಿರಲಿ, ಪತ್ನಿಯಾಗಿರಲಿ, ಪುತ್ರನಾಗಿರಲಿ, ಅಥವಾ ಪುರೋಹಿತನಾಗಿರಲಿ, ಅವನು ಸ್ವಧರ್ಮದಲ್ಲಿರದಿದ್ದರೆ, ರಾಜನಿಗೆ ಅದಂಡ್ಯನಲ್ಲ. ಅಂದರೆ, ನ್ಯಾಯಾಸನದಲ್ಲಿ ಕುಳಿತು ನ್ಯಾಯವಿಚಾರಣೆ ಮಾಡುವಾಗ, ಯಾರ ಪಕ್ಷಪಾತವನ್ನೂ ಮಾಡಬಾರದು. ಆದರೆ,

ಯಥೋಚಿತವಾಗಿ ದಂಡ ವಿಧಿಸಬೇಕು. ॥೨॥ ಯಾವ ಅಪರಾಧಕ್ಕಾಗಿ ಸಾಧಾರಣ ಮನುಷ್ಯನಿಗೆ ಒಂದು ಕಾಲಾಣೆ ದಂಡ ವಿಧಿಸಬೇಕೋ, ಅದೇ ಅಪರಾಧಕ್ಕಾಗಿ ರಾಜನಿಗೆ ೧೦೦೦ ಕಾಲಾಣೆಗಳ ದಂಡವನ್ನು ವಿಧಿಸಬೇಕು; ಮಂತ್ರಿಗೆ ೮೦೦ ರಷ್ಟು; ಆತನಿಗಿಂತ ಕೆಳಗಿನವನಿಗೆ ೬೦೦ ರಷ್ಟು; ಅವನಿಗಿಂತ ಕೆಳಗಿನವನಿಗೆ ೪೦೦ ರಷ್ಟು; ಅಂದರೆ ಪದವಿ ಉನ್ನತವಾದಷ್ಟೂ, ಹೆಚ್ಚು ದಂಡವನ್ನೂ, ಅತ್ಯಂತ ಚಿಕ್ಕ ಭೃತ್ಯ ಅಂದರೆ ಜವಾನನಿಗೆ ಎಂಟರಷ್ಟಕ್ಕೆ ಮೇಲ್ಪಟ್ಟು ದಂಡ ವಿಧಿಸಬೇಕು. ಏಕೆಂದರೆ-ಪ್ರಜೆಗಳಿಗಿಂತ ರಾಜಪುರುಷರಿಗೆ ಹೆಚ್ಚು ಶಿಕ್ಷೆ ಕೊಡದಿದ್ದರೆ, ರಾಜಪುರುಷರು ಪ್ರಜೆಗಳನ್ನು ನಾಶಮಾಡಿಬಿಡುವರು. ಆದುದರಿಂದ ಸಿಂಹವು ಅಧಿಕ, ಮತ್ತು ಕುರಿಯು ಅಲ್ಪ ಬಲಪ್ರಯೋಗದಿಂದ ವಶೀಭೂತವಾಗುವಂತೆ, ರಾಜನಿಂದಾರಂಭಿಸಿ ಅತ್ಯಂತ ಚಿಕ್ಕ ಭೃತ್ಯನವರಿಗೆ ಎಲ್ಲಾ ರಾಜಪುರುಷರಿಗೂ, ಅಪರಾಧದ ಸಂದರ್ಭದಲ್ಲಿ ಪ್ರಜೆಗಳಿಗಿಂತ ಹೆಚ್ಚು ಶಿಕ್ಷೆ ವಿಧಿಸಿದಲ್ಲಿಯೇ ಅವರು ವಶಕ್ಕೆ ಬರುವರಾಮುದರಿಂದ, ಅಧಿಕ ದಂಡ ವಿಧಿಸಬೇಕು. ॥೩॥ ಮತ್ತು ವಿವೇಕಿಯಾಗಿದ್ದು ಸಹ ಕಳುವುಮಾಡಿದ ಶೂದ್ರನಿಗೆ, ಕದ್ದುದರ ಎಂಟರಷ್ಟೂ ವೈಶ್ಯನಿಗೆ ಹದಿನಾರರಷ್ಟೂ, ಕ್ಷತ್ರಿಯನಿಗೆ ಇಪ್ಪತ್ತ್ರರಷ್ಟೂ ॥೪॥ ಬ್ರಾಹ್ಮಣನಿಗೆ ೆರವತ್ತನಾಲ್ಕರಷ್ಟೂ, ನೂರರಷ್ಟೂ, ಅಥವಾ ನೂರಿಪ್ಪತ್ತೈಂಟರಷ್ಟೂ ದಂಡವನ್ನು ವಿಧಿಸಬೇಕು. ಅಂದರೆ, ಜ್ಞಾನ ಪ್ರತಿಷ್ಠೆಗಳು ಹೆಚ್ಚಿದಂತೆಲ್ಲಾ, ಅಪರಾಧದಲ್ಲಿ ದಂಡವೂ ಹೆಚ್ಚಾಗಬೇಕು. ॥೫॥ ಧರ್ಮ ಮತ್ತು ಐಶ್ವರ್ಯಗಳನ್ನಪೇಕ್ಷಿಸುವ ರಾಜನು, ಜನಗಳ ಮೇಲೆ ಬಲಾತ್ಕಾರಮಾಡುವ ದಂಗೆಕೋರರನ್ನು ಶಿಕ್ಷಿಸುವುದರಲ್ಲಿ ಕ್ಷಣಕಾಲವೂ ವಿಳಂಬಮಾಡಬಾರದು. ॥೬॥ ಸಾಹಸಿಕ ಪುರುಷಲಕ್ಷಣವಿದು :—ದುಷ್ಟವಚನಗಳನ್ನಾಡುವವನು, ಕಳ್ಳನು, ಹಾಗೂ ನಿರಪರಾಧಿಗಳಿಗೆ ಶಿಕ್ಷೆ ಕೊಡುವವನು, ಇವರೆಲ್ಲರಿಗಿಂತಲೂ, ಸಾಹಸ ಬಲಾತ್ಕಾರಗಳನ್ನು ನಡೆಸುವವನು ಮಹಾಪಾಪಿಯು ಮತ್ತು ದುಷ್ಟನು. ॥೭॥ ಯಾವ ರಾಜನು ಬಲಾತ್ಕಾರದಲ್ಲಿ ನಿರತನಾದ ಪುರುಷನನ್ನು ದಂಡಿಸದೆ, ಸಹಿಸುತ್ತಾ ಹೋಗುವನೋ, ಅವನು ಶೀಘ್ರವೇ ನಾಶಹೊಂದುತ್ತಾನೆ. ಮತ್ತು ರಾಜ್ಯದಲ್ಲಿ ದ್ವೇಷ

ಉದ್ಭವಿಸುತ್ತದೆ. ॥೪॥ ರಾಜನು ಮೈತ್ರಿಯಿಂದಾಗಲಿ, ಧನಪ್ರಾಪ್ತಿಯ ಕಾರಣದಿಂದಾಗಲಿ, ಪ್ರಾಣಿಮಾತ್ರಕ್ಕೆ ದುಃಖವೀಯುವ ಅತ್ಯಾಚಾರಿಯನ್ನು ದಂಡಿಸದೆ ಬಿಡಬಾರದು. ॥೯॥ ಧರ್ಮಭ್ರಷ್ಟನಾಗಿ, ಅಧರ್ಮಾಚರಣೆ ಮಾಡುತ್ತಾ ನಿರಪರಾಧಿಗಳನ್ನು ಸಾಯಿಸುವವರು, ಗುರುಗಳಾಗಿರಲಿ, ಪುತ್ರಾದಿ ಬಾಲಕರಾಗಿರಲಿ, ತಂದೆ ಮೊದಲಾದ ವೃದ್ಧರಾಗಿರಲಿ, ಬ್ರಾಹ್ಮಣರಾಗಿರಲಿ, ಬಹುಶಾಸ್ತ್ರಗಳ ಶ್ರೋತೃವಾಗಿರಲಿ, ಅಂತಹವರನ್ನು ಹಿಂದುಮುಂದೆ ನೋಡದೆ ಸಂಹರಿಸಬೇಕು; ಅಂದರೆ ಅವಮೇಲೆಯೋಚಿಸಬೇಕು. ॥೧೦॥ ಅವ್ಯಕ್ತವಾಗಿಯೇ ಆಗಲಿ, ವ್ಯಕ್ತವಾಗಿಯೇ ಆಗಲಿ ದುಷ್ಟರನ್ನು ಸಾಯಿಸುವವನಿಗೆ ಯಾವ ಪಾಪವೂ ಉಂಟಾಗುವದಿಲ್ಲ. ಏಕೆಂದರೆ, ಕ್ರೋಧಿಯನ್ನು ಕ್ರೋಧದಿಂದ ಸಾಯಿಸುವುದು, ಕ್ರೋಧದೊಂದಿಗೆ ಕ್ರೋಧದ ಹೋರಾಟ ಮಾತ್ರ. ॥೧೧॥ ಯಾವ ರಾಜನ ರಾಜ್ಯದಲ್ಲಿ, ಕಳ್ಳರೂ, ಪರಸ್ತ್ರೀಗಾಮಿಗಳೂ, ದುಷ್ಟವಚೋಭಾಷಿಗಳೂ, ಅತ್ಯಾಚಾರಿಗಳಾದ ದರೋಡೆಕೋರರೂ, ರಾಜಾಜ್ಞೆಯನ್ನುಲ್ಲಂಘಿಸುವವರೂ, ಇರುವದಿಲ್ಲವೋ ಅಂತಹ ರಾಜನು ಅತೀವ ಶ್ರೇಷ್ಠನು. ॥೧೨॥

ಭರ್ತಾರಂ ಲಂಘಯೇದ್ಯಾ ಸ್ತ್ರೀ ಸ್ವಜ್ಞಾತಿಗುಣದರ್ಪಿತಾ ।
ತಾಂ ಶ್ವಭಿಃ ಖಾದಯೇದ್ರಾಜಾ ಸಂಸ್ಥಾನೇ ಬಹುಸಂಸ್ಥಿತೇ॥೧೦॥
ಪುಮಾಂಸಂ ದಾಹಯೇತ್ಪಾಪಂ ಶಯನೇ ತಪ್ತ ಆಯಸೇ ।
ಅಭ್ಯಾದಧ್ಯುಶ್ಚ ಕಾಷ್ಠಾನಿ ತತ್ರ ದಹ್ಯೇತ ಪಾಪಕೃತ್ ॥೨॥
ದೀರ್ಘಾಧ್ವನಿ ಯಥಾದೇಶಂ ಯಥಾಕಾಲಂಕರೋ ಭವೇತ್।
ನದೀತೀರೇಷು ತದ್ವಿದ್ಯಾತ್ಸಮುದ್ರೇ ನಾಸ್ತಿಲಕ್ಷಣಂ ॥೩॥
ಅಹನ್ಯಹನ್ಯವೇಕ್ಷೇತ ಕರ್ಮಾಂತಾನ್ಬಾಹನಾನಿ ಚ ।
ಆಯವ್ಯಯೌ ಚ ನಿಯತಾವಾಕರಾನ್ ಕೋಷಮೇವ ಚ ॥೪॥
ಏವಂ ಸರ್ವಾನಿಮಾನ್ ರಾಜಾ ವ್ಯವಹಾರಾನ್ ಸಮಾಪಯನ್।
ವ್ಯಪೋಹ್ಯ ಕಿಲ್ಬಿಷಂ ಸರ್ವಂ ಪ್ರಾಪ್ನೋತಿ ಪರಮಾಂ ಗತಿಂ॥೫॥
[ಮನು. ೮॥ ೩೭೧-೩೭೨। ೪೦೬। ೪೧೯। ೪೨೦]

ಯಾವ ಸ್ತ್ರೀಯು ತನ್ನ ಜ್ಞಾತಿಗುಣಗಳ ಹೆಮ್ಮೆಯಿಂದ ಪತಿಯನ್ನು ಬಿಟ್ಟು ವ್ಯಭಿಚಾರ ಮಾಡುವಳೋ, ಅವಳನ್ನು ರಾಜನು, ಜೀವಸಹಿತವಾಗಿ, ಬಹುಮಂದಿ ಸ್ತ್ರೀಪುರುಷರೆದುರಿಗೆ ನಾಯಿಗಳಿಂದ ಕಚ್ಚಿಸಿ ಸಾಯಿಸಬೇಕು. ॥೧॥ ಅದೇ ರೀತಿಯಾಗಿ, ತನ್ನ ಪತ್ನಿಯನ್ನು ಬಿಟ್ಟು ಪರಸ್ತ್ರೀಗಮನವನ್ನಾಗಲಿ, ವೇಶ್ಯಾಗಮನವನ್ನಾಗಲಿ, ಮಾಡುವ ಪಾಪಿಯನ್ನು, ಕಬ್ಬಿಣದ ಮಂಚವನ್ನು ಬೆಂಕಿಯಿಂದ ಕೆಂಪಗೆ ಕಾಯಿಸಿ, ಅದರ ಮೇಲೆ ಮಲಗಿಸಿ, ಬಹುಜನ ಪುರುಷರ ಮುಂದೆ ಜೀವಂತನಾಗಿರುವಾಗಲೇ ಸುಟ್ಟು ಬೂದಿಮಾಡಿಸಬೇಕು.

ಪ್ರಶ್ನೆ :—ರಾಜನಾಗಲಿ, ರಾಣಿಯಾಗಲಿ, ನ್ಯಾಯಾಧೀಶನಾಗಲಿ, ಅವನ ಪತ್ನಿಯಾಗಲಿ, ವ್ಯಭಿಚಾರ ಮೊದಲಾದ ದುಷ್ಕರ್ಮಗಳನ್ನಾಚರಿಸಿದರೆ, ದಂಡಿಸುವವರಾರು? ಉತ್ತರ :—ಸಭೆಯವರೇ ದಂಡಿಸಬೇಕು. ಮತ್ತು ಅವರಿಗೆ ಸಾಮಾನ್ಯ ಪ್ರಜೆಗಳಿಗೆ ಕೊಡುವುದಕ್ಕಿಂತ ಹೆಚ್ಚು ಶಿಕ್ಷೆ ಕೊಡಬೇಕು. ಪ್ರಶ್ನೆ :—ರಾಜ ಮೊದಲಾದವರು ಅವರಿಂದ ಶಿಕ್ಷೆಯನ್ನು ಏತಕ್ಕಾದರೂ ತೆಗೆದುಕೊಂಡಾರು? ಉತ್ತರ :—ರಾಜನೂ ಸಹ ಒಬ್ಬ ಪುಣ್ಯಾತ್ಮನೂ, ಭಾಗ್ಯಶಾಲಿಯೂ ಆದ ಮಾನವನೇ ಆಗಿರುತ್ತಾನೆ. ಆವನಿಗೆ ದಂಡವನ್ನು ವಿಧಿಸದಿದ್ದರೆ ಅಥವಾ ಆವನೇ ದಂಡವನ್ನು ಅಂಗೀಕರಿಸದಿದ್ದರೆ, ಇತರರು ಹೇಗೆ ತಾನೆ ಶಿಕ್ಷೆಯನ್ನು ಒಪ್ಪಿಕೊಂಡಾರು? ಸಮಸ್ತ ಪ್ರಜೆಗಳೂ, ಪ್ರಧಾನ ರಾಜ್ಯಾಧಿಕಾರಿಗಳೂ, ಸಭೆಯೂ, ಧಾರ್ಮಿಕತ್ವದಿಂದ ದಂಡ ವಿಧಿಸಲಪೇಕ್ಷಿಸಿದರೆ, ರಾಜನೊಬ್ಬನೇ ಏನು ತಾನೆ ಮಾಡಬಲ್ಲನು? ಇಂತಹ ವ್ಯವಸ್ಥೆಯಿಲ್ಲದಿದ್ದರೆ, ರಾಜನೂ, ಪ್ರಧಾನರೂ, ಮತ್ತು ಸಮಸ್ತ ಬಲಿಷ್ಠರೂ, ಅನ್ಯಾಯದಲ್ಲಿ ಮುಳುಗಿ, ನ್ಯಾಯಧರ್ಮವನ್ನು ಮುಳುಗಿಸಿ, ಪ್ರಜೆಗಳನ್ನು ನಾಶಮಾಡಿ, ತಾವೂ ಹಾಳಾಗುವರು. 'ನ್ಯಾಯಯುಕ್ತವಾದ ದಂಡನೆಗೇ ರಾಜನೆಂದೂ, ಧರ್ಮವೆಂದೂ, ಹೆಸರು' ಎಂಬ ಶ್ಲೋಕವನ್ನು ಸ್ಮರಿಸಿರಿ. ಅದಕ್ಕೆ ಲೋಪತರುವವನಿಗಿಂತ ನೀಚಪುರುಷನು ಬೇರಾವನಿದ್ದಾನು? ಪ್ರಶ್ನೆ :—ಇಂತಹ ಕಠಿಣಶಿಕ್ಷೆ ವಿಧಿಸುವುದುಚಿತವಲ್ಲ. ಏಕೆಂದರೆ, ಮಾನವನು ಯಾವ ಅಂಗದ ನಿರ್ಮಾತೃವೂ ಅಲ್ಲ; ಜೀವದಾತೃವೂ ಅಲ್ಲ. ಆದಕಾರಣ

ಇಂತಹ ಶಿಕ್ಷೆ ವಿಧಿಸಬಾರದು. ಉತ್ತರ :—ಇದನ್ನು ಕಠಿಣಶಿಕ್ಷೆಯೆಂದು ತಿಳಿಯುವವರು ರಾಜನೀತಿಯನ್ನರಿಯರು. ಏಕೆಂದರೆ, ಹೀಗೆ ಒಬ್ಬನಿಗೆ ಶಿಕ್ಷೆಯಾಗುವದರಿಂದ, ಜನರೆಲ್ಲರೂ, ಕೆಟ್ಟಕೆಲಸ ಮಾಡುವದರಿಂದ ದೂರ ಉಳಿಯುವರು. ಮತ್ತು ದುಷ್ಕಾರ್ಯಗಳನ್ನು ಬಿಟ್ಟು ಧರ್ಮ ಮಾರ್ಗದಲ್ಲಿ ಸ್ಥಿರವಾಗುವರು. ನಿಜವಾಗಿ ಕೇಳಿದರೆ, ಎಲ್ಲರಿಗೂ ಹಂಚಿದಲ್ಲಿ ಈ ಶಿಕ್ಷೆ ಒಬ್ಬೊಬ್ಬರ ಭಾಗಕ್ಕೆ ಸಾಸಿವೆಕಾಳಿನಷ್ಟೂ ಬರುವದಿಲ್ಲ. ದಂಡನೆಯು ಹಗುರವಾಗಿದ್ದಲ್ಲಿ, ದುಷ್ಕೃತ್ಯಗಳು ಹೆಚ್ಚು ಹೆಚ್ಚಾಗ ಲಾರಂಭಿಸುವುವು. ನೀವು ತಿಳದುಕೊಂಡಿರುವ ಸುಲಭಶಿಕ್ಷೆ ಕೋಟಿ ಪಾಲು ಹೆಚ್ಚುವುದರಿಂದ ಕೋಟ್ಯಂತರಪಾಲು ಕಠಿಣವೇ ಆಗುವುದು. ಏಕೆಂದರೆ, ಅನೇಕರು ದುಷ್ಕಾರ್ಯಮಾಡಿದಲ್ಲಿ ಒಬ್ಬೊಬ್ಬರಿಗೂ ಸ್ವಲ್ಪ ಸ್ವಲ್ಪ ಶಿಕ್ಷೆ ಕೊಡಲೇಬೇಕಾಗುವುದು. ಆಂದರೆ, ಒಬ್ಬನಿಗೆ ಒಂದು ಮಣ ಶಿಕ್ಷೆಯನ್ನೂ, ಇನ್ನೊಬ್ಬನಿಗೆ ಒಂದು ಪಾವು ಶಿಕ್ಷೆಯನ್ನೂ ಕೊಟ್ಟರೆ, ಇವೆರಡೂ ಸೇರಿ ಒಂದು ಮಣ, ಒಂದು ಪಾವು, ಶಿಕ್ಷೆಯಾಗುತ್ತದೆ. ಒಬ್ಬೊಬ್ಬರ ಭಾಗಕ್ಕೆ ೨೦ ಸೇರು, ಅರ್ಧಪಾವು ಶಿಕ್ಷೆ ಬಿದ್ದಿತು. ದುಷ್ಟರು ಇಂತಹ ಸುಲಭ ದಂಡನೆಯನ್ನು ಹೇಗೆತಾನೆ ಲಕ್ಷಿಸಿಯಾರು? ಒಬ್ಬನಿಗೆ ಒಂದು ಮಣ ಶಿಕ್ಷೆಯನ್ನೂ ಒಂದುಸಾವಿರ ಮಂದಿಗೆ, ತಲೆಗೆ ಒಂದೊಂದು ಪಾವು ಶಿಕ್ಷೆಯನ್ನೂ ವಿಧಿಸಿದರೆ, ಮನುಷ್ಯಜಾತಿಯಮೇಲೆ, ಆರು ಮಣ ಒಂದುಪಾವು ಶಿಕ್ಷೆಯಾಗುವದರಿಂದ. ಅದೇ ಹೆಚ್ಚು; ಮತ್ತು ಆ ಒಂದು ಮಣ ಶಿಕ್ಷೆಯೇ ಕಡಿಮೆ ಮತ್ತು ಸುಗಮವಾಗಿರುತ್ತದೆ.

ದೀರ್ಘಮಾರ್ಗದಲ್ಲಿ, ಸಮುದ್ರದ ಖಾರಿಗಳು, ಅಥವಾ ನದೀ ನದಗಳಲ್ಲಿ ಎಷ್ಟು ವಿಸ್ತೀರ್ಣವಾದ ದೇಶವಿರುವುದೋ, ಅಷ್ಟಕ್ಕೆ ತಕ್ಕ ಕಂದಾಯವನ್ನು ನಿರ್ಧರಿಸಬೇಕು. ಮಹಾಸಮುದ್ರದ ಕಂದಾಯವು ಇಂತಿಷ್ಟೇ—ಎಂದು ನಿರ್ದರಿಸಲಾಗುವುದಿಲ್ಲ, ಆದರೆ, ಅನುಕೂಲಕ್ಕೆ ತಕ್ಕಂತೆ, ರಾಜನಿಗೂ, ದೊಡ್ಡ ದೊಡ್ಡ ನೌಕೆಗಳನ್ನು ಸಮುದ್ರದಲ್ಲಿ ನಡೆಸುವವರಿಗೂ, ಲಾಭವುಂಟಾಗುವಂತೆ, ವ್ಯವಸ್ಥೆಮಾಡಬೇಕು. ಮೊದಲು ಹಡಗುಗಳು ಓಡಾಡುತ್ತಿರಲಿಲ್ಲವೆನ್ನುವರು, ಅಸತ್ಯಭಾಷಿಗಳೆಂಬುದನ್ನು ಇಲ್ಲಿ ಗಮನಿಸಬೇಕು. ದೇಶದೇಶಾಂತರಗಳಿಗೂ, ದ್ವೀಪ

ದ್ವೀಪಾಂತರಗಳಿಗೂ, ಹಡಗುಗಳ ಮೂಲಕ ಹೋಗುವ ತನ್ನ ಪ್ರಜಾ ಜನರಿಗೆ ಸರ್ವರಕ್ಷಣೆಯನ್ನೂ ಇತ್ತು, ಅವರಿಗೆ ಸ್ವಲ್ಪವೂ ದುಃಖ ವುಂಟಾಗದಂತೆ, ರಾಜನು ನೋಡಿಕೊಳ್ಳಬೇಕು. ॥೩॥ ರಾಜನು ಪ್ರತಿ ದಿನವೂ, ಕೆಲಸಗಳ ಸಮಾಪ್ತಿಯನ್ನೂ, ಆನೆ, ಕುದುರೆ ಮುಂತಾದ ವಾಹನಗಳನ್ನೂ, ನಿಯತಲಾಭ ಮತ್ತು ಖರ್ಚನ್ನೂ, "ಆಕರ" ರತ್ನಾದಿಗಳ ಗಣಿಗಳನ್ನೂ ದುತ್ತು ಕೋಷ(ಖಜಾನೆ)ಯನ್ನೂ ನೋಡು ತ್ತಿರಬೇಕು. ॥೪॥ ಈ ರೀತಿ ಸಮಸ್ತ ವ್ಯವಹಾರಗಳನ್ನೂ ಯಥಾ ವತ್ತಾಗಿ ಪೂರ್ಣಗೊಳಿಸುತ್ತಾ ಮತ್ತು ಪೂರ್ಣಮಾಡಿಸುತ್ತಾ ರಾಜನು ಎಲ್ಲಾ ಪಾಪಗಳನ್ನೂ ಬಿಡಿಸಿ ಮೋಕ್ಷವನ್ನು ಹೊಂದುವನು. ॥೫॥

ಪ್ರಶ್ನೆ :—ಸಂಸ್ಕೃತವಿದ್ಯೆಯಲ್ಲಿ, ರಾಜನೀತಿಯು ಪೂರ್ಣವಾಗಿ ದೆಯೋ, ಅರ್ಧಂಬರ್ಧವೊ ? ಉತ್ತರ :- ಪೂರ್ಣವಾಗಿದೆ. ಭೂಮಂ ಡಲದಲ್ಲಿ ಪ್ರಚಲಿತವಾಗಿರುವ ಮತ್ತು ಆಗಲಿರುವ ರಾಜನೀತಿಯೆಲ್ಲವೂ, ಸಂಸ್ಕೃತ ವಿದ್ಯೆಯಿಂದಲೇ ನಿಷ್ಪನ್ನವಾಗಿದೆ. ಯಾವುದನ್ನು ಪ್ರತ್ಯಕ್ಷ ವಾಗಿ ಬರೆದಿಲ್ಲವೋ ಅವುಗಳ ವಿಷಯದಲ್ಲಿ :—

ಪ್ರತ್ಯಹಂ ಲೋಕದೃಷ್ಟೈಶ್ಚ ಶಾಸ್ತ್ರದೃಷ್ಟೈಶ್ಚ ಹೇತುಭಿಃ ॥

[ಮನು ೮॥ ೩॥]

ರಾಜನಿಗೂ ಪ್ರಜೆಗಳಿಗೂ, ಸುಖಕರ ಹಾಗೂ ಧರ್ಮಯುಕ್ತ ವೆಂದು ತಿಳಿಯಲ್ಪಡುವ ನಿಯಮಗಳನ್ನು ಪೂರ್ಣ ವಿದ್ವಾಂಸರಿರುವ ರಾಜಸಭೆಯು, ರೂಪಿಸಬೇಕು. ಆದರೆ, ಈ ವಿಷಯದ ಕಡೆ ಸರ್ವದಾ ಗಮನವೀಯಬೇಕು. ಸಾಧ್ಯವಾದಮಟ್ಟಿಗೂ ಬಾಲ್ಯಾವಸ್ಥೆಯಲ್ಲಿ ವಿವಾಹವಾಗುವ ಅವಕಾಶವಿರಬಾರದು. ಯೌವನಾವಸ್ಥೆಯಲ್ಲಿಯೂ ಸಹ, ಪ್ರಸನ್ನತೆಯಿಲ್ಲದಲ್ಲಿ ವಿವಾಹಮಾಡಬಾರದು, ಮಾಡಿಸಬಾರದು, ಮಾಡಲವಕಾಶವೀಯಬಾರದು. ಯಥಾವತ್ತಾಗಿ ಬ್ರಹ್ಮಚರ್ಯ ಪಾಲನೆ ಮಾಡಬೇಕು; ಮಾಡಿಸಬೇಕು. ಶರೀರದಲ್ಲಿಯೂ ಆತ್ಮದಲ್ಲಿಯೂ ಪೂರ್ಣ ಬಲವುಂಟಾಗಲನುಕೂಲಿಸುವಂತೆ, ವ್ಯಭಿಚಾರ ಹಾಗೂ ಬಹು ವಿವಾಹಗಳನ್ನು ನಿರೋಧಿಸಬೇಕು. ಕೇವಲ ಆತ್ಮಬಲ ಅಂದರೆ, ವಿದ್ಯಾಜ್ಞಾನಗಳನ್ನು ಮಾತ್ರ ಹೆಚ್ಚಿಸಿಕೊಳ್ಳುತ್ತಾ ಹೋಗಿ, ಶರೀರ

ಬಲವನ್ನು ಹೆಚ್ಚಿಸಿಕೊಳ್ಳದಿದ್ದರೆ, ಒಬ್ಬನೇ ಬಲಿಷ್ಠನು ನೂರಾರು ನುಂದಿ ಜ್ಞಾನಿಗಳನ್ನೂ, ವಿದ್ವಾಂಸರನ್ನೂ ಗೆದ್ದು ಬಿಡಬಲ್ಲನು. ಮತ್ತು ಕೇವಲ ಶರೀರಬಲವನ್ನೇ ಬೆಳೆಯಿಸಿಕೊಂಡು, ಆತ್ಮಬಲವನ್ನು ಬೆಳೆಯಿಸದಿದ್ದರೂ ಸಹ, ವಿದ್ಯೆಯ ಅಭಾವದ ಕಾರಣ, ರಾಜ್ಯದ ಉತ್ತಮವ್ಯವಸ್ಥೆಯಿಂದಿಗೂ ಆಗಲಾರದು. ವ್ಯವಸ್ಥೆಯಿಲ್ಲದಿದ್ದರೆ, ಎಲ್ಲರೂ ತಮ್ಮ ತಮ್ಮಲ್ಲೇ ಛಿದ್ರಛಿದ್ರವಾಗಿ, ವಿರೋಧ, ಯುದ್ಧ, ಕಲಹಮಾಡಿ, ನಷ್ಟಭ್ರಷ್ಟರಾಗಿ ಹೋಗುತ್ತಾರೆ. ಆದುದರಿಂದ, ಶರೀರಬಲ ಮತ್ತು ಆತ್ಮಬಲ, ಎರಡನ್ನೂ ಸರ್ವದಾ ವರ್ಧಿಸಿಕೊಳ್ಳುತ್ತಿರಬೇಕು. ವ್ಯಭಿಚಾರ ಮತ್ತು ವಿಷಯಾಸಕ್ತಿಯಂತೆ ಬಲವನ್ನೂ, ಬುದ್ಧಿಯನ್ನೂ ಹಾಳುಮಾಡುವ ವ್ಯವಹಾರ ಮತ್ತೊಂದಿಲ್ಲ. ಮುಖ್ಯತಃ ಕ್ಷತ್ರಿಯರು, ಧೃಷ್ಟಾಂಗರೂ, ಬಲಯುಕ್ತರೂ, ಆಗಿರಬೇಕು. ಏಕೆಂದರೆ, ಅವರೇ ವಿಷಯಾಸಕ್ತರಾದರೆ, ರಾಜಧರ್ಮವೇ ನಷ್ಟವಾಗಿ ಹೋಗುತ್ತದೆ. ಮತ್ತು 'ಯಥಾ ರಾಜಾ ತಥಾ ಪ್ರಜಾ' ಅಂದರೆ ರಾಜನಂತೆ ಪ್ರಜೆಗಳು ಎಂಬುವದನ್ನೂ ಗಮನಿಸಬೇಕು. ಆದುದರಿಂದ ರಾಜನೂ, ರಾಜಪುರುಷರೂ, ಎಂದಿಗೂ ದುಷ್ಟಾಚಾರ ನಡಿಸದೆ, ಸರ್ವದಿವಸಗಳಲ್ಲಿಯೂ, ಧರ್ಮನ್ಯಾಯಗಳಿಂದ ವರ್ತಿಸಿ, ಎಲ್ಲರ ಸುಧಾರಣೆಗೂ ಆದರ್ಶವಾಗಿರಬೇಕಾದುದು ಅತಿ ಉಚಿತ.

ಈರೀತಿಯಾಗಿ ರಾಜಧರ್ಮದ ವರ್ಣನೆಯನ್ನು ಸಂಕ್ಷೇಪವಾಗಿ ಮಾಡಿದ್ದೇವೆ. ವಿಶೇಷವಾಗಿ ವೇದಗಳಲ್ಲಿಯೂ, ಮನುಸ್ಮೃತಿಯ ಏಳು, ಎಂಟು, ಹಾಗೂ ಒಂಭತ್ತನೆಯ ಅಧ್ಯಾಯಗಳಲ್ಲಿಯೂ, ಶುಕ್ರನೀತಿ, ವಿದುರನೀತಿ, ಹಾಗೂ ಮಹಾಭಾರತದಲ್ಲಿ, ಶಾಂತಿಪರ್ವದ ರಾಜಧರ್ಮ ಮತ್ತು ಆಪದ್ಧರ್ಮ ಪ್ರಕರಣ ಮೊದಲಾದುವುಗಳನ್ನು ನೋಡಿ, ಪೂರ್ವರಾಜನೀತಿಯನ್ನರಿತು, ಮಾಂಡಲಿಕರೂ, ಅಥವಾ ಸಾರ್ವಭೌಮ ಚಕ್ರವರ್ತಿಗಳೂ ರಾಜ್ಯವಾಳಬೇಕು. ಮತ್ತು "ವಯಂ ಪ್ರಜಾಪತೇಃ ಪ್ರಜಾ ಅಭೂಮ" [ಯಜು ೧೮। ೨೬] ಅಂದರೆ, "ನಾವು ಪ್ರಜಾಪತಿಯ ಅಂದರೆ ಪರಮಾತ್ಮನ ಪ್ರಜೆಗಳು ಮತ್ತು ಪರಮಾತ್ಮನು ನಮ್ಮ ರಾಜನು, ನಾವು ಅವನ ಕಿಂಕರರು—ಭೃತ್ಯರಂತೆ ಇದ್ದೇವೆ. ಅವನು ಕೃಪೆಮಾಡಿ, ತನ್ನ ಸೃಷ್ಟಿಯಲ್ಲಿ ನಮ್ಮನ್ನು

ರಾಜ್ಯಾಧಿಕಾರಿಗಳನ್ನಾಗಿಮಾಡಲಿ; ನಮ್ಮ ಕೈಯಿಂದ ತನ್ನ ಸತ್ಯ ನ್ಯಾಯವನ್ನು ಪ್ರವೃತ್ತಗೊಳಸಲಿ" ಎಂದು ಕೋರಬೇಕು. ಇನ್ನು ಮುಂದೆ ಪರಮಾತ್ಮನ ಮತ್ತು ವೇದಗಳ ವಿಷಯವಾಗಿ ಬರೆಯಲ್ಪಡುವುದು.

ಇತಿ ಶ್ರೀಮದ್ದಯಾನಂದಸರಸ್ವತೀಸ್ವಾಮಿಕೃತೇ
ಸತ್ಯಾರ್ಥಪ್ರಕಾಶೇ ಸುಭಾಷಾವಿಭೂಷಿತೇ ರಾಜಧರ್ಮವಿಷಯೇ
ಷಷ್ಠಃ ಸಮುಲ್ಲಾಸಃ ಸಂಪೂರ್ಣಃ

॥ ಓಂ ॥

ಅಥ ಸಪ್ತಮಸಮುಲ್ಲಾಸಾರಂಭಃ

ಅಥೇಶ್ವರವೇದವಿಷಯಂ ವ್ಯಾಖ್ಯಾಸ್ಯಾಮಃ

ಋಚೋ ಅಕ್ಷರೇ ಪರಮೇ ವ್ಯೋಮನ್ಯಸ್ಮಿನ್ ದೇವಾ ಅಧಿ
ವಿಶ್ವೇನಿಷೇದುಃ ।
ಯಸ್ತನ್ನ ವೇದ ಕಿಮೃಚಾಕರಿಷ್ಯತಿ ಯ ಇತ್ತದ್ವಿದುಸ್ತ ಇಮೇ
ಸಮಾಸತೇ ॥

[ಋ. ಮಂ. ೧, ಸೂ. ೧೬೪, ೩೯]

ಈಶಾವಾಸ್ಯಮಿದಗ್ಂ ಸರ್ವಂ ಯತ್ಕಿಂಚ ಜಗತ್ಯಾಂ ಜಗತ್ ।
ತೇನ ತ್ಯಕ್ತೇನ ಭುಂಜೀಥಾ ಮಾಗೃಧಃ ಕಸ್ಯಸ್ವಿದ್ಧನಂ ॥೨॥

[ಯಜು. ಅಂ. ೪೦, ಮಂ. ೧]

ಅಹಂ ಭುವಂ ವಸುನಃ ಪೂರ್ವ್ಯಸ್ಪತಿರಹಂ ಧನಾನಿ ಸಂಜ-
ಯಾಮಿ ಶಶ್ವತಃ ।
ಮಾಂ ಹವಂತೇ ಪಿತರಂ ನ ಜಂತವೋಽಹಂ ದಾಶುಷೇ
ವಿಭಜಾಮಿ ಭೋಜನಮ್ ॥೩॥

ಅಹಮಿಂದ್ರೋ ನ ಪರಾಜಿಗ್ಯ ಇದ್ಧನಂ ನ ಮೃತ್ಯುನೇಽವತಸ್ಥೇ
ಕದಾಚನ ।
ಸೋಮಮಿನ್ಮಾ ಸುನ್ವಂತೋ ಯಾಚತಾ ವಸು ನ ಮೇ
ಪೂರವಃ ಸಖ್ಯೇ ರಿಷಾಥನ ॥೪॥

[ಋ. ಮಂ. ೧೦, ಸೂ, ೪೮, ಮಂ. ೧೫]

(ಋಚೋ ಅಕ್ಷರೇ.....) ಈ ಮಂತ್ರದ ಅರ್ಥವನ್ನು ಬ್ರಹ್ಮಚರ್ಯಾಶ್ರಮದ ಶಿಕ್ಷಣದಲ್ಲಿ ಬರೆದಿರುತ್ತೇವೆ. ಯಾವನು ದಿವ್ಯವಾದ ಗುಣ, ಕರ್ಮಸ್ವಭಾವಗಳಿಂದ ಯುಕ್ತನಾಗಿರುವನೋ, ಯಾವನಲ್ಲಿ ಪೃಥಿವಿ,

ಸೂರ್ಯಾದಿ ಲೋಕಗಳು ನೆಲೆಸಿರುವುವೋ, ಯಾವನು ಆಕಾಶದಂತೆ ವ್ಯಾಪಕನೋ, ಯಾವನು ಸಮಸ್ತ ದೇವತೆಗಳಿಗೂ ದೇವರಾದ ಪರಮೇಶ್ವರನೋ, ಆತನನ್ನು ಅರಿಯದ, ಮಾನಿಸದ ಮತ್ತು ಧ್ಯಾನಿಸದ ನಾಸ್ತಿಕ ಮಂದಮತಿಗಳು ಯಾವಾಗಲೂ ದುಃಖಸಮುದ್ರದಲ್ಲಿಯೇ ಮುಳುಗಿರುತ್ತಾರೆ. ಆದ್ದರಿಂದ ಸದಾ ಆ ಪರಮಾತ್ಮನನ್ನು ತಿಳಿದವರೇ ಸುಖಶಾಲಿಗಳಾಗುತ್ತಾರೆ.

ಪ್ರ:—ವೇದದಲ್ಲಿ ಅನೇಕ ದೇವರುಗಳ ಉಲ್ಲೇಖವಿರುವುದೆಂಬ ಮಾತನ್ನು ನೀವು ಒಪ್ಪುತ್ತೀರೋ ಇಲ್ಲವೊ ?

ಉತ್ತರ :—ಒಪ್ಪುವುದಿಲ್ಲ, ಏಕೆಂದರೆ, ನಾಲ್ಕು ವೇದಗಳಲ್ಲಿ ಎಲ್ಲಿಯೂ ಅನೇಕ ದೇವರನ್ನು ಸಿದ್ಧಪಡಿಸುವ ಮಾತು ಬರೆದಿಲ್ಲ. ಆದರೆ, ಈಶ್ವರನೊಬ್ಬನೆಂದೇ ಹೇಳಿದೆ.

ಪ್ರಶ್ನೆ:—ವೇದಗಳಲ್ಲಿ ಅನೇಕ ದೇವತೆಗಳು ಉಲ್ಲೇಖಿಸಲ್ಪಟ್ಟಿರುವುದರ ಅಭಿಪ್ರಾಯವೇನು ?

ಉತ್ತರ :—ದಿವ್ಯಗುಣಗಳಿಂದ ಕೂಡಿರುವ ವಸ್ತುವಿಗೆ ದೇವತೆಯೆಂದು ಹೆಸರು. ಉದಾಹರಣೆಗೆ— ಪೃಥಿವೀ. ಆದರೆ, ಇದನ್ನು ಈಶ್ವರನೆಂದಾಗಲಿ ಉಪಾಸನೀಯನೆಂದಾಗಲೀ, ಎಲ್ಲಿಯೂ ಅಂಗೀಕರಿಸಿಲ್ಲ. ಮೇಲಿನ ಮಂತ್ರದಲ್ಲಿಯೇ ನೋಡಿರಿ. "ಯಾವನಲ್ಲಿ ದೇವತೆಗಳೂ ನೆಲೆಸಿದ್ದಾರೋ, ಅವನು ತಿಳಿದುಕೊಳ್ಳುವುದಕ್ಕೂ, ಉಪಾಸನೆಗೂ ಯೋಗ್ಯನಾದ ಈಶ್ವರನು" ಎಂದು ಸ್ಪಷ್ಟವಾಗಿ ಬರೆದಿರುತ್ತದೆ. ದೇವತಾಶಬ್ದದಿಂದ ಈಶ್ವರನನ್ನು ಗ್ರಹಿಸುವವರು ತಪ್ಪುಮಾಡುತ್ತಾರೆ. ಪರಮಾತ್ಮನು ಎಲ್ಲಾ ದೇವತೆಗಳಿಗೂ ದೇವರಾಗಿರುವುದರಿಂದ ಆತನನ್ನು ಮಹಾದೇವನೆಂದೇ ಕರೆಯುತ್ತಾರೆ. ಆತನೇ ಈ ಸಮಸ್ತ ಜಗತ್ತಿನ ಸೃಷ್ಟಿ, ಸ್ಥಿತಿ, ಲಯಗಳನ್ನು ಮಾಡುವವನೂ, ನ್ಯಾಯಾಧೀಶನೂ, ಅಧಿಷ್ಠಾತೃವೂ ಆಗಿದ್ದಾನೆ. 'ತ್ರಯಸ್ತ್ರಿಂಶತ್ತ್ರಿಶತಾ' ಈ ಮೊದಲಾದ ಪ್ರಮಾಣಗಳು ವೇದಗಳಲ್ಲಿ ಕಂಡುಬರುತ್ತವೆ. ಶತಪಥ ಬ್ರಾಹ್ಮಣದಲ್ಲಿ ಇದರ ವ್ಯಾಖ್ಯೆಯು ಮಾಡಲ್ಪಟ್ಟಿದೆ.

ಮೂವತ್ತುಮೂರು ದೇವತೆಗಳೆಂದರೆ—ಪೃಥಿವಿ, ಜಲ, ಅಗ್ನಿ, ವಾಯು, ಆಕಾಶ, ಚಂದ್ರ, ಸೂರ್ಯ, ನಕ್ಷತ್ರಗಳು—ಸಮಸ್ತ

ಸೃಷ್ಟಿಗೂ ನಿವಾಸಸ್ಥಾನವಾಗಿರುವುದರಿಂದ, ಇವಕ್ಕೆ ಅಷ್ಟವಸುಗಳೆಂದು ಹೆಸರು. ಪ್ರಾಣ, ಅಪಾನ, ವ್ಯಾನ, ಉದಾನ, ಸಮಾನ ನಾಗ, ಕೂರ್ಮ, ಕೃಕಲ, ದೇವದತ್ತ, ಧನಂಜಯ ಮತ್ತು ಜೀವಾತ್ಮ—ಇವು ಶರೀರವನ್ನು ಬಿಡುವಾಗ ರೋದನ ಮಾಡಿಸುವುದರಿಂದ ಇವುಗಳಿಗೆ ಏಕಾದಶ ರುದ್ರರೆಂದು ಹೆಸರು. ಸಂವತ್ಸರದ ಹನ್ನೆರಡು ತಿಂಗಳುಗಳು ಪ್ರಾಣಿಗಳ ಆಯುಷ್ಯವನ್ನು ತೆಗೆದುಕೊಂಡುಹೋಗುವುದರಿಂದ, ಇವುಗಳಿಗೆ ದ್ವಾದಶಾದಿತ್ಯರೆಂದು ಹೆಸರು. ಪರಮೈಶ್ವರ್ಯಕ್ಕೆ ಕಾರಣವಾಗಿರುವುದರಿಂದ ವಿದ್ಯುತ್ತಿಗೆ ಇಂದ್ರನೆಂದ ಹೆಸರು. ಯಜ್ಞದಿಂದ ವಾಯು, ವೃಷ್ಟಿ, ಜಲ ಮತ್ತು ಔಷಧಿಗಳು ಶುದ್ಧವಾಗಿ, ವಿದ್ವಾಂಸರ ಸತ್ಕಾರವೂ, ನಾನಾ ಪ್ರಕಾರವಾದ ಶಿಲ್ಪವಿದ್ಯೆಗಳಿಂದ ಪ್ರಜೆಗಳ ಪಾಲನೆಯೂ ಆಗುವುದರಿಂದ ಆದಕ್ಕೆ ' ಪ್ರಜಾಪತಿ ' ಎಂದು ಹೆಸರು. ಈ ಮೂವತ್ತಮೂರು, ಹಿಂದೆ ಹೇಳಿದ ದಿವ್ಯಗುಣಗಳಿರುವುದರಿಂದ ದೇವತೆಗಳೆನ್ನಿಸುತ್ತವೆ. ಇವೆಲ್ಲಕ್ಕೂ ಸ್ವಾಮಿಯಾಗಿ ಎಲ್ಲಕ್ಕಿಂತಲೂ ದೊಡ್ಡವನಾಗಿರುವುದರಿಂದ ಪರಮಾತ್ಮನು ಉಪಾಸನಾಯೋಗ್ಯನಾದ ಮೂವತ್ತುನಾಲ್ಕನೆಯ ದೇವನು ಎಂದು ಶತಪಥ ಬ್ರಾಹ್ಮಣದ ಹದಿನಾಲ್ಕನೆಯ ಕಾಂಡದಲ್ಲಿ ಸ್ಪಷ್ಟವಾಗಿ ಬರೆದಿದೆ. ಬೇರೆಕಡೆಗಳಲ್ಲಿ ಕೂಡ ಇದೇರೀತಿಯಾಗಿ ಬರೆದಿರುತ್ತದೆ. ಈ ಶಾಸ್ತ್ರಗಳನ್ನು ಈ ಜನರು ಪರಿಶೀಲಿಸಿದ್ದರೆ ವೇದಗಳಲ್ಲಿ ಅನೇಕ ದೇವರುಗಳ ಉಲ್ಲೇಖವಿರುವುದೆಂಬ ಭ್ರಾಂತಿಜಾಲದಲ್ಲಿ ಬಿದ್ದು, ಏಕೆ ಭ್ರಾಂತಿಯನ್ನುಂಟುಮಾಡುತ್ತಿದ್ದರು? ॥೧॥

ಎಲೈ ಮನುಷ್ಯನೆ, ಈ ಸಂಸಾರದಲ್ಲಿರುವ ಜಗತ್ತಿನಲ್ಲೆಲ್ಲಾ ವ್ಯಾಪ್ತನಾಗಿ ನಿಯಾಮಕನಾಗಿರುವವನಿಗೆ ಈಶ್ವರನೆಂದು ಹೆಸರು. ಈತನಿಗೆ ಅಂಜಿ ಅನ್ಯಾಯವಾಗಿ ಪರರ ಧನವನ್ನು ಆಶಿಸದಿರು. ಆ ಅನ್ಯಾಯವನ್ನು ಬಿಟ್ಟು, ನ್ಯಾಯಾಚರಣವೆಂಬ ಧರ್ಮದ ಮೂಲಕ ನಿನ್ನ ಆತ್ಮನಿಂದ ಆನಂದವನ್ನು ಅನುಭವಿಸು. ॥೨॥

ಪರಮಾತ್ಮನು ಎಲ್ಲರಿಗೂ ಉಪದೇಶಿಸುವುದೇನೆಂದರೆ—" ಎಲೈ ಮನುಷರೇ! ಈಶ್ವರನಾದ ನಾನು ಅನಾದಿಕಾಲದಿಂದಲೂ ಇರುತ್ತ, ಈ ಸಮಸ್ತ ಜಗತ್ತಿಗೇ ಪತಿಯಾಗಿದ್ದೇನೆ. ನಾನು ಈ ಜಗತ್ತಿಗೆ ಸನಾ

ತನಕಾರಣನಾಗಿರುತ್ತೇನೆ. ಮತ್ತು ಐಶ್ವರ್ಯವನ್ನು ಜಯಿಸುವವನೂ ಮತ್ತು ಕೊಡುವವನೂ ಆಗಿರುತ್ತೇನೆ. ಮಕ್ಕಳು ತಂದೆಯನ್ನು ಕರೆಯುವಂತೆ, ಎಲ್ಲಾ ಜೀವರೂ ನನ್ನನ್ನು ಕರೆಯಬೇಕು. ಎಲ್ಲರಿಗೂ ಸುಖವನ್ನುಂಟುಮಾಡುವ ಜಗತ್ತಿಗೋಸ್ಕರ, ಪಾಲನೆಯ ಸಲುವಾಗಿ, ನಾನಾ ಪ್ರಕಾರದ ಭೋಜನ ಸಾಮಗ್ರಿಗಳನ್ನು ವಿಭಾಗಿಸಿರುತ್ತೇನೆ.” ॥೩॥

“ನಾನು ಪರಮೈಶ್ವರ್ಯಶಾಲಿಯೂ, ಸೂರ್ಯನಂತೆ ಜಗತ್ತನ್ನು ಪ್ರಕಾಶಪಡಿಸುವವನೂ ಆಗಿದ್ದೇನೆ. ನನಗೆ ಯಾವಾಗಲೂ ಪರಾಜಯವಾಗಲಿ, ಮರಣವಾಗಲಿ ಪ್ರಾಪ್ತವಾಗುವುದಿಲ್ಲ. ನಾನು ಜಗತ್ತೆಂಬ ಧನವನ್ನು ನಿರ್ಮಿಸಿದವನು. ನನ್ನನ್ನೇ ಜಗತ್ತಿನ ಉತ್ಪಾದಕನೆಂದು ತಿಳಿಯಿರಿ. ಎಲೈ ಜೀವಾತ್ಮರೇ! ಐಶ್ವರ್ಯಪ್ರಾಪ್ತಿಗಾಗಿ ಪ್ರಯತ್ನಪಡುತ್ತ, ನೀವು ವಿಜ್ಞಾನಾದಿ ಧನವನ್ನು ನನ್ನಿಂದ ಪ್ರಾರ್ಥಿಸಿಕೊಳ್ಳಿರಿ. ನೀವು ಯಾವಾಗಲೂ ನನ್ನ ಮೈತ್ರಿಯಿಂದ ದೂರವಾಗಬೇಡಿರಿ. ಹೇ ಮನುಷ್ಯರೇ, ನಾನು ಸತ್ಯಭಾಷಣವೆಂಬ ಸ್ತೋತ್ರವನ್ನು ದೂಡುವವರಿಗೆ ಸನಾತನ ಜ್ಞಾನ ಮೊದಲಾದ ಧನವನ್ನು ಕೊಡುವವನು. ನಾನು ಬ್ರಹ್ಮ–ಎಂದರೆ ವೇದಗಳನ್ನು ಪ್ರಕಾಶಪಡಿಸುವವನು. ನನ್ನನ್ನು ಆ ವೇದವು ಯಥಾವತ್ತಾಗಿ ಪ್ರತಿಪಾದಿಸುತ್ತದೆ. ಅದರ ಮೂಲಕ ನಾನು ಎಲ್ಲರ ಜ್ಞಾನವನ್ನು ವೃದ್ಧಿಗೊಳಿಸುತ್ತೇನೆ. ನಾನು ಸತ್ಪುರುಷನ ಪ್ರೇರಕನೂ, ಯಜ್ಞಮಾಡುವವನಿಗೆ ಫಲವನ್ನು ಕೊಡುವವನೂ ಮತ್ತು ವಿಶ್ವದಲ್ಲಿ ಏನೇನಿದೆಯೋ ಆ ಕಾರ್ಯವನ್ನೆಲ್ಲಾ ಮಾಡುವವನೂ ಮತ್ತು ಧಾರಕನೂ ಆಗಿದ್ದೇನೆ, ಆದ್ದರಿಂದ ನೀವು ನನ್ನನ್ನು ಬಿಟ್ಟು ಬೇರೆ ಯಾರನ್ನೂ ನನಗೆ ಬದಲು ಪೂಜಿಸಬೇಡಿ, ಅಂಗೀಕರಿಸಬೇಡಿ ಮತ್ತು ತಿಳಿಯಬೇಡಿ.” ॥೪॥

ಹಿರಣ್ಯ ಗರ್ಭಃ ಸಮವರ್ತತಾಗ್ರೇ ಭೂತಸ್ಯ ಜಾತಃ ಪತಿರೇಕ ಆಸೀತ್ ।
ಸ ದಾಧಾರ ಪೃಥಿವೀಂ ದ್ಯಾಮುತೇಮಾಂ ಕಸ್ಮೈ ದೇವಾಯ ಹವಿಷಾವಿಧೇಮ ॥

[ಯಜು. ಅ. ೧೩–೪]

ಇದು ಯಜುರ್ವೇದದ ಮಂತ್ರ—ಎಲೈ ಮನುಷ್ಯರೇ! ಯಾವನು ಸೃಷ್ಟಿಗೆ ಮೊದಲು ಸೂರ್ಯಾದಿ ಸಮಸ್ತ ತೇಜೋವಂತ ಲೋಕಗಳ ಉತ್ಪತ್ತಿಸ್ಥಾನವೂ, ಆಧಾರನೂ ಆಗಿದ್ದನೋ ಮತ್ತು ಯಾವನು ಹಿಂದೆ ಉತ್ಪನ್ನವಾಗಿದ್ದ, ಈಗ ಉತ್ಪನ್ನವಾಗಿರುವ ಮತ್ತು ಮುಂದೆ ಹುಟ್ಟಬಹುದಾದ ಎಲ್ಲಾ ವಸ್ತುಗಳಿಗೆ ಸ್ವಾಮಿಯಾಗಿದ್ದನೋ, ಆಗಿದ್ದಾನೋ ಮತ್ತು ಆಗಿರುವನೋ ಅವನು ಪೃಥ್ವಿಯಿಂದಾರಂಭಿಸಿ, ಸೂರ್ಯಲೋಕ ಪರ್ಯಂತ ಸೃಷ್ಟಿಯನ್ನು ರಚಿಸಿ ಧಾರಣಮಾಡುತ್ತಿದ್ದಾನೆ. ಅಂತಹ ಸುಖಸ್ವರೂಪನಾದ ಪರಮಾತ್ಮನ ಭಕ್ತಿಯನ್ನು ನಾವು ಹೇಗೆ ಮಾಡುತ್ತೇವೋ, ಹಾಗೆಯೇ ನೀವೂ ಮಾಡಿರಿ.

ಪ್ರ :—ನೀವು ದೇವರು ದೇವರು ಎಂದು ಹೇಳುತ್ತೀರಿ. ಆದರೆ, ಅವನಿರುವನೆಂದು ಹೇಗೆ ಸಿದ್ಧಾಂತ ಮಾಡುತ್ತೀರಿ?

ಉ :—ಪ್ರತ್ಯಕ್ಷ ಮೊದಲಾದಿ ಎಲ್ಲಾ ಪ್ರಮಾಣಗಳಿಂದ.

ಪ್ರ :—ದೇವರಿಗೆ ಪ್ರತ್ಯಕ್ಷಾದಿ ಪ್ರಮಾಣಗಳು ಸಂಬಂಧಿಸುವುದಿಲ್ಲ.

ಉ :—

ಇಂದ್ರಿಯಾರ್ಥಸನ್ನಿಕರ್ಷೋತ್ಪನ್ನಂ ಜ್ಞಾನಮವ್ಯಪದೇಶ್ಯಮವ್ಯಭಿಚಾರಿ ವ್ಯವಸಾಯಾತ್ಮಕಂ ಪ್ರತ್ಯಕ್ಷಮ್ ।

[ಗೋತಮಮಹರ್ಷಿಕೃತ ನ್ಯಾಯದರ್ಶನ ಅ. ೧. ಸೂ. ೪]

ಕಿವಿ, ಚರ್ಮ, ಕಣ್ಣು, ನಾಲಿಗೆ, ಮೂಗು ಮತ್ತು ಮನಸ್ಸು ಈ ಇಂದ್ರಿಯಗಳಿಗೆ ಶಬ್ದ, ಸ್ಪರ್ಶ, ರೂಪ, ರಸ, ಗಂಧ, ಸುಖ, ದುಃಖ ಮತ್ತು ಸತ್ಯಾಸತ್ಯಗಳ ವಿಷಯಗಳ ಸಂಬಂಧದಿಂದ ಉಂಟಾಗುವ ಜ್ಞಾನಕ್ಕೆ ಪ್ರತ್ಯಕ್ಷವೆಂದು ಹೆಸರು; ಆದರೆ, ಅದು ಭ್ರಮರಹಿತವಾಗಿರಬೇಕು. ನಾವು ವಿಚಾರಮಾಡಿ ನೋಡಿದರೆ, ಮನಸ್ಸು ಮತ್ತು ಇಂದ್ರಿಯಗಳಿಂದ ಗುಣಗಳು ಪ್ರತ್ಯಕ್ಷವಾಗುತ್ತವೆ; ಗುಣಿಯಲ್ಲ. ಹೇಗೆ ಚರ್ಮ ಮೊದಲಾದ ನಾಲ್ಕು ಇಂದ್ರಿಯಗಳಿಂದ ಸ್ಪರ್ಶ, ರೂಪ, ರಸಗಂಧಗಳ ಜ್ಞಾನವಾಗುವುದರಿಂದ, ಗುಣಗಳುಳ್ಳ ಪೃಥಿವಿಯು ಆತ್ಮನಿಂದ ಕೂಡಿದ ಮನಸ್ಸಿಗೆ ಪ್ರತ್ಯಕ್ಷವಾಗುತ್ತದೋ, ಹಾಗೆಯೇ ಈ

ಪ್ರತ್ಯಕ್ಷ ಸೃಷ್ಟಿಯಲ್ಲಿ ರಚನಾವಿಶೇಷ ಮೊದಲಾದ ಜ್ಞಾನಾದಿಗುಣಗಳು ಪ್ರತ್ಯಕ್ಷವಾಗುವುದರಿಂದ ಪರಮಾತ್ಮನೂ ಕೂಡ ಪ್ರತ್ಯಕ್ಷನಾಗಿದ್ದಾನೆ. ಆತ್ಮನು ಮನಸ್ಸನ್ನೂ, ಮನಸ್ಸು ಇಂದ್ರಿಯಗಳನ್ನೂ, ಯಾವುದಾದರೊಂದು ವಿಷಯದೊಡನೆ ಸಂಬಂಧಪಡಿಸಿ, ಕಳ್ಳತನ ಮೊದಲಾದ ಕೆಟ್ಟ ಕೆಲಸಗಳನ್ನಾಗಲಿ, ಪರೋಪಕಾರ ಮೊದಲಾದ ಒಳ್ಳೆಯ ಕೆಲಸಗಳನ್ನಾಗಲಿ ಮಾಡತೊಡಗಿದಾಗ, ಜೀವನ ಇಚ್ಛೆ, ಜ್ಞಾನ ಮೊದಲಾದುವು ಆ ಅಪೇಕ್ಷಿತ ವಿಷಯದ ಕಡೆಗೇ ವಾಲುತ್ತವೆ. ಅದೇ ಕ್ಷಣದಲ್ಲೆ ಆತ್ಮನಿಗೆ ದುಷ್ಕಾರ್ಯಗಳನ್ನು ಆಚರಿಸುವುದರಲ್ಲಿ ಭಯವೂ, ಶಂಕೆಯೂ. ನಾಚಿಕೆಯೂ ಸತ್ಕಾರ್ಯಗಳನ್ನು ಆಚರಿಸುವುದರಲ್ಲಿ ನಿರ್ಭಯತೆಯೂ, ನಿಶ್ಶಂಕತೆಯೂ, ಆನಂದೋತ್ಸಾಹಗಳೂ ಉಂಟಾಗುತ್ತವೆ. ಇವು ಜೀವಾತ್ಮನ ಕಡೆಯಿಂದಲ್ಲ; ಆದರೆ, ಪರಮಾತ್ಮನ ಕಡೆಯಿಂದುಂಟಾಗುವುವು. ಜೀವಾತ್ಮನು ಶುದ್ಧನಾಗಿ ಪರಮಾತ್ಮನ ಚಿಂತನೆಮಾಡುವುದರಲ್ಲಿ ತತ್ಪರನಾದಾಗ ಅವನಿಗೆ ಆಗಲೇ ಇಬ್ಬರೂ ಪ್ರತ್ಯಕ್ಷವಾಗುತ್ತಾರೆ. ಹೀಗೆ ಪರಮೇಶ್ವರನ ಪ್ರತ್ಯಕ್ಷವೇ ಆಗುವಾಗ ಅನುಮಾನ ಮೊದಲಾದ ಪ್ರಮಾಣಗಳಿಂದ ಪರಮೇಶ್ವರನ ಜ್ಞಾನವಾಗುವುದರಲ್ಲಿ ಸಂದೇಹವೇನು? ಏಕೆಂದರೆ, ಕಾರ್ಯವನ್ನು ನೋಡಿ, ಕಾರಣವನ್ನು ಊಹಿಸಲಾಗುತ್ತದೆ.

ಪ್ರ :—ದೇವರು ವ್ಯಾಪಕನಾಗಿರುವನೋ? ಅಥವಾ ಯಾವುದಾದರೊಂದು ಸ್ಥಳದಲ್ಲಿರುವನೋ?

ಉ :—ಆತನು ವ್ಯಾಪಕನು. ಏಕೆಂದರೆ—ಯಾವುದಾದರೊಂದು ಕಡೆಯಲ್ಲಿ ಮಾತ್ರ ಇರುವವನು ಸರ್ವಾಂತರ್ಯಾಮಿಯೂ, ಸರ್ವಜ್ಞನೂ, ಸರ್ವನಿಯಾಮಕನೂ, ಸರ್ವಕರ್ತನೂ, ಸರ್ವಧರ್ತನೂ, ಪ್ರಳಯಕಾರಿಯೂ ಆಗಲಾರನು. ತಾನಿಲ್ಲದಿರುವ ಪ್ರದೇಶದಲ್ಲಿ ಕರ್ತನ ಕ್ರಿಯೆ ಅಸಂಭವ.

ಪ್ರಶ್ನೆ :—ದೇವರು ದಯಾಳುವೂ, ನ್ಯಾಯಕಾರಿಯೂ ಆಗಿರುವನೋ? ಇಲ್ಲವೋ?

ಉತ್ತರ :—ಹೌದು.

ಪ್ರಶ್ನೆ :—ಈ ಎರಡು ಗುಣಗಳೂ ಪರಸ್ಪರ ವಿರುದ್ಧವಾಗಿರುತ್ತವೆ. ನ್ಯಾಯವನ್ನು ಮಾಡಿದರೆ ದಯೆಯೂ, ದಯೆಯನ್ನು ತೋರಿಸಿದರೆ ನ್ಯಾಯವೂ ತಪ್ಪಿಹೋಗುತ್ತದೆ. ಏಕೆಂದರೆ, ಕರ್ಮಗಳಿಗೆ ಅನುಸಾರವಾಗಿ ಹೆಚ್ಚುಕಡಿಮೆಗಳಿಲ್ಲದೆ ಸುಖದುಃಖಗಳನ್ನು ಕೊಡುವುದೇ ನ್ಯಾಯ. ಅಪರಾಧಿಯನ್ನು ಶಿಕ್ಷಿಸದೆ ಬಿಟ್ಟುಬಿಡುವುದೇ ದಯೆ.

ಉತ್ತರ :—ನ್ಯಾಯ ಮತ್ತು ದಯೆ, ಇವುಗಳ ಹೆಸರುಗಳು ಮಾತ್ರ ಬೇರೆಬೇರೆಯಾಗಿರುತ್ತವೆ. ನ್ಯಾಯದಿಂದಾಗುವ ಪ್ರಯೋಜನವೇ ದಯೆಯಿಂದಲೂ ಆಗುತ್ತದೆ. ಮನುಷ್ಯನು ಅಪರಾಧ ಮಾಡುವುದನ್ನು ಬಿಟ್ಟು, ದುಃಖಪಡೆಯದಿರಲೆಂಬುದೇ ದಂಡವಿಧಿಸುವುದರ ಗುರಿ. ಪರರ ದುಃಖವನ್ನು ದೂರಮಾಡುವುದೇ ದಯೆ. ದಯಾ-ನ್ಯಾಯಗಳಿಗೆ ನೀವು ಮಾಡಿದ ಅರ್ಥವು ಸರಿಯಾದದ್ದಲ್ಲ. ಏಕೆಂದರೆ, ಯಾವನು ಎಂತಹ ಮತ್ತು ಎಷ್ಟು ಕೆಟ್ಟಕೆಲಸ ಮಾಡಿದ್ದಾನೋ ಅವನಿಗೆ ಅಂತಹ ಮತ್ತು ಅಷ್ಟು ಶಿಕ್ಷೆ ಕೊಡುವುದೇ ನ್ಯಾಯ. ಅಪರಾಧಿಯನ್ನು ಶಿಕ್ಷಿಸದಿದ್ದರೆ, ದಯೆಯು ನಾಶವಾಗಿ ಹೋಗುವುದು. ಏಕೆಂದರೆ, ಅಪರಾಧಿದರೋಡೆಕಾರನನ್ನು ಶಿಕ್ಷಿಸದೆ ಬಿಟ್ಟುಬಿಡುವುದರಿಂದ ಸಾವಿರಾರು ಮಂದಿ ಧರ್ಮಾತ್ಮರಿಗೆ ದುಃಖ ಕೊಟ್ಟಂತಾಗುತ್ತದೆ. ಒಬ್ಬನನ್ನು ಬಿಡುವುದರಲ್ಲಿ ಸಾವಿರಾರು ಮಂದಿಗೆ ದುಃಖವುಂಟಾಗುವುದಾದರೆ ಅದು ದಯೆ ಹೇಗಾದೀತು? ಆ ದರೋಡೆಕಾರನನ್ನು ಕಾರಾಗೃಹದಲ್ಲಿಟ್ಟು, ಮುಂದೆ ಆವನು ಯಾವ ಪಾಪಕಾರ್ಯವನ್ನೂ ಮಾಡದಿರುವಂತೆ ಏರ್ಪಡಿಸುವುದರಿಂದ, ದರೋಡೆಕಾರನ ಮೇಲೂ, ಆ ದರೋಡೆಕಾರನನ್ನು ಸಾಯಿಸುವುದರಿಂದ ಸಾವಿರಾರು ಜನರ ಮೇಲೂ ದಯೆಯನ್ನು ತೋರಿಸಿದಂತಾಗುತ್ತದೆ.

ಪ್ರಶ್ನೆ:—ಹಾಗಾದರೆ 'ನ್ಯಾಯ' ಮತ್ತು 'ದಯೆ' ಎಂಬ ಎರಡು ಶಬ್ದಗಳು ಹೇಗಾದವು? ಏಕೆಂದರೆ, ಈ ಎರಡೂ ಶಬ್ದಗಳ ಅರ್ಥವು ಒಂದೇ ಆಗಿದ್ದರೆ, ಎರಡು ಶಬ್ದಗಳು ಇರುವುದು ವ್ಯರ್ಥ. ಆದ್ದರಿಂದ ಒಂದು ಶಬ್ದವಿದ್ದರೆ ಚೆನ್ನಾಗಿತ್ತು. ದಯೆ ಮತ್ತು ನ್ಯಾಯದ ಪ್ರಯೋಜನವು ಒಂದೇ ಅಲ್ಲವೆಂಬುವುದು ಇದರಿಂದ ವಿದಿತವಾಗುತ್ತದೆ.

ಉತ್ತರ :—ಒಂದೇ ಅರ್ಥದ ಅನೇಕ ಸಂಜ್ಞೆಗಳೂ, ಒಂದೇ ಸಂಜ್ಞೆಗೆ ಅನೇಕ ಅರ್ಥಗಳೂ ಇರುವುದಿಲ್ಲವೋ ?

ಪ್ರಶ್ನೆ :—ಇರುತ್ತವೆ.

ಉತ್ತರ :—ಹಾಗಾದರೆ ನಿಮಗೆ ಈ ಸಂಶಯವು ಹೇಗೆ ಬಂದಿತು ?

ಪ್ರಶ್ನೆ :—ಲೋಕದಲ್ಲಿ ಕೇಳುತ್ತಿರುವುದರಿಂದ.

ಉತ್ತರ :—ಲೋಕದಲ್ಲಿ ಸತ್ಯಾಸತ್ಯಗಳಿರಡೂ ಕೇಳಿಬರುತ್ತವೆ. ಆದರೆ, ಅವುಗಳನ್ನು ವಿಮರ್ಶಿಸಿ, ನಿಶ್ಚಯಿಸಿಕೊಳ್ಳುವುದು ನಮ್ಮ ಕರ್ತವ್ಯವಾಗಿರುತ್ತದೆ. ನೋಡಿ ; ಪರಮಾತ್ಮನ ಪೂರ್ಣ ದಯೆಯಿದು. ಆತನು ಸಮಸ್ತ ಜೀವರ ಪ್ರಯೋಜನಸಿದ್ಧಿಗಾಗಿ ಜಗತ್ತಿನಲ್ಲಿ ಎಲ್ಲಾ ಪದಾರ್ಥಗಳನ್ನೂ ಸೃಷ್ಟಿಸಿ, ದಾನಮಾಡಿದ್ದಾನೆ. ಇದಕ್ಕಿಂತಲೂ ದೊಡ್ಡ ದಯೆಯು ಮತ್ತಾವುದಿದೆ ? ನ್ಯಾಯದ ಫಲವನ್ನು ನಾವು ಪ್ರತ್ಯಕ್ಷವಾಗಿಯೇ ನೋಡುತ್ತಿದ್ದೇವೆ. ಸುಖ-ದುಃಖದ ವ್ಯವಸ್ಥೆಯು ಆಧಿಕ್ಯ-ನ್ಯೂನತೆಗಳಿಂದ ಫಲವನ್ನು ಪ್ರಕಾಶಮಾಡುತ್ತದೆ. ಅವುಗಳಲ್ಲಿ ಭೇದವಿಷ್ಟೆ; ಎಲ್ಲರಿಗೂ ಸುಖವಾಗುವಂತೆ ಮತ್ತು ದುಃಖನಿವಾರಣೆಯಾಗುವಂತೆ ಮನಸ್ಸಿನಲ್ಲಿ ಇಚ್ಛೆ ಮತ್ತು ಕ್ರಿಯೆ ಮಾಡುವುದೇ ದಯೆ. ಮತ್ತು ಬಾಹ್ಯಕ್ರಿಯೆ ಅಂದರೆ, ಬಂಧನ, ಛೇದನ ಮೊದಲಾದ ಯಥಾವತ್ತಾದ ಶಿಕ್ಷೆ ವಿಧಿಸುವುದೇ ನ್ಯಾಯ ಎನ್ನಿಸುತ್ತದೆ. ಎಲ್ಲರನ್ನೂ ಪಾಪಗಳಿಂದಲೂ, ದುಃಖದಿಂದಲೂ, ದೂರಮಾಡಬೇಕೆಂಬುದು ಇವೆರಡರ ಒಂದೇ ಪ್ರಯೋಜನವಿರುತ್ತದೆ.

ಪ್ರಶ್ನೆ :—ದೇವರು ಸಾಕಾರನೋ, ನಿರಾಕಾರನೋ ?

ಉತ್ತರ :—ನಿರಾಕಾರನು. ಏಕೆಂದರೆ, ಸಾಕಾರನಾಗಿರುವವನು ವ್ಯಾಪಕನಾಗಲಾರನು. ವ್ಯಾಪಕನಾಗದಿದ್ದರೆ, ಸರ್ವಜ್ಞಾದಿ ಗುಣಗಳೂ ಕೂಡ ಆತನಲ್ಲಿ ಸಂಘಟಿಸಲಾರವು. ಏಕೆಂದರೆ, ಪರಿಮಿತವಸ್ತುವಿನಲ್ಲಿ ಗುಣ, ಕರ್ಮ, ಸ್ವಭಾವಗಳೂ ಕೂಡ ಪರಿಮಿತವಾಗಿಯೇ ಇರುತ್ತವೆ; ಮತ್ತು ಸಾಕಾರನಾಗಿರುವವನು ಶೀತ, ಉಷ್ಣ, ಹಸಿವು, ಬಾಯಾರಿಕೆ, ರೋಗ, ದೋಷ, ಛೇದನ, ಭೇದನ ಮೊದಲಾದುವುಗಳಿಂದ ಪಾರಾಗಲಾರನು. ಇದರಿಂದ ಈಶ್ವರನು ನಿರಾಕಾರನೆಂದೇ ನಿಶ್ಚಿತವಾಗುತ್ತದೆ.

ಹಾಗಿಲ್ಲದೆ, ಆಕಾರವುಳ್ಳವನಾಗಿದ್ದರೆ ಅವನ ಮೂಗು, ಕಿವಿ, ಕಣ್ಣು ಮೊದಲಾದ ಅವಯವಗಳನ್ನು ಮಾಡಿದವನು ಬೇರೊಬ್ಬನಿರಬೇಕಾಗುತ್ತದೆ. ಏಕೆಂದರೆ, ಸಂಯೋಗದಿಂದ ಉತ್ಪನ್ನವಾಗುವುದನ್ನು ಪರಸ್ಪರ ಸೇರಿಸುವ ನಿರಾಕಾರಚೇತನವೊಂದು ಇದ್ದೇ ಇರಬೇಕು. ಪರಮಾತ್ಮನು ಸ್ವೇಚ್ಛೆಯಿಂದ ತನ್ನ ಶರೀರವನ್ನು ತಾನೇ ನಿರ್ಮಿಸಿಕೊಂಡನೆಂದು ಯಾರಾದರೂ ಹೇಳಿದರೆ, ಶರೀರವನ್ನು ರಚಿಸಿಕೊಳ್ಳುವುದಕ್ಕಿಂತ ಮೊದಲು, ಆತನು ನಿರಾಕಾರನಾಗಿಯೇ ಇದ್ದನೆಂದು ಸಿದ್ಧವಾಗುತ್ತದೆ. ಆದ್ದರಿಂದ ಪರಮಾತ್ಮನು ಎಂದೂ ಶರೀರವನ್ನು ಧರಿಸನು. ಆದರೆ, ತಾನು ಯಾವಾಗಲೂ ನಿರಾಕಾರನಾಗಿರುವುದರಿಂದ ಸಮಸ್ತಜಗತ್ತನ್ನೂ ಸೂಕ್ಷ್ಮಕಾರಣಗಳಿಂದ ಸ್ಥೂಲಾಕಾರವಾಗಿ ಮಾಡುತ್ತಾನೆ.

ಪ್ರಶ್ನೆ:—ದೇವರು ಸರ್ವಶಕ್ತನಾಗಿರುವನೋ ಇಲ್ಲವೋ?

ಉತ್ತರ:—ಹೌದು. ಆದರೆ, 'ಸರ್ವಶಕ್ತಿವಂತ' ಎಂಬ ಪದಕ್ಕೆ ನೀವು ತಿಳಿದುಕೊಂಡಿರುವ ಅರ್ಥದಂತೆ ಅಲ್ಲ. ಪರಮಾತ್ಮನು ತನ್ನ ಕಾರ್ಯಗಳನ್ನು ಅಂದರೆ, ಸೃಷ್ಟಿಪಾಲನೆ-ಪ್ರಳಯ ಮೊದಲಾದುವನ್ನೂ, ಜೀವರ ಪಾಪ-ಪುಣ್ಯಗಳಿಗೆ ಯೋಗ್ಯವಾದ ವ್ಯವಸ್ಥೆಯನ್ನೂ ಮಾಡುವುದರಲ್ಲಿ ಕಿಂಚಿತ್ತಾದರೂ ಬೇರೆಯವರ ಸಹಾಯವನ್ನು ತೆಗೆದುಕೊಳ್ಳುವುದಿಲ್ಲ. ತನ್ನ ಅನಂತ ಸಾಮರ್ಥ್ಯದಿಂದಲೇ ಸಮಸ್ತ ಕಾರ್ಯಗಳನ್ನೂ ಪೂರ್ಣಮಾಡಿಕೊಳ್ಳುತ್ತಾನೆ. 'ಸರ್ವಶಕ್ತಿವಂತ' ಎಂಬ ಪದಕ್ಕೆ ಇದೇ ಅರ್ಥ.

ಪ್ರಶ್ನೆ:—ದೇವರು ತನಗೆ ಬೇಕಾದುದನ್ನು ಮಾಡಬಲ್ಲನೆಂದು ನಾವು ಭಾವಿಸುತ್ತೇವೆ. ಏಕೆಂದರೆ—ದೇವರಿಗಿಂತ ಮೇಲೆ ಬೇರೆ ಯಾರೂ ಇಲ್ಲ.

ಉತ್ತರ:—ಪರಮಾತ್ಮನು ಇಷ್ಟಪಡುವುದೇನು? ಆತನು ಎಲ್ಲವನ್ನೂ ಅಪೇಕ್ಷಿಸಿ, ಎಲ್ಲವನ್ನೂ ಮಾಡಬಲ್ಲನೆಂಬುದಾದರೆ ದೇವರು ತನ್ನನ್ನು ತಾನೇ ಸಾಯಿಸಿಕೊಂಡು, ಅನೇಕ ದೇವರುಗಳನ್ನು ನಿರ್ಮಿಸಿ ತಾನು ಮೂಢನಾಗಿ, ಕಳ್ಳತನ, ವ್ಯಭಿಚಾರ ಮೊದಲಾದ ಪಾಪಗಳನ್ನು ಮಾಡಿ, ದುಃಖಿಯೂ ಆಗಬಲ್ಲನೇ? ಎಂದು ನಾವು ನಿಮ್ಮನ್ನು

ಕೇಳುತ್ತೇವೆ. ಇಂತಹ ಕೆಲಸಗಳು ಪರಮಾತ್ಮನ ಗುಣ, ಕರ್ಮ ಸ್ವಭಾವಗಳಿಗೆ ವಿರುದ್ಧವಾಗಿರುವುದರಿಂದ, 'ದೇವರು ಬೇಕಾದುದನ್ನೆಲ್ಲಾ ಮಾಡಬಲ್ಲನು'—ಎಂದು ನೀವು ಹೇಳಿದುದು ಎಂದಿಗೂ ಹೊಂದಲಾರದು. ಆದ್ದರಿಂದ 'ಸರ್ವಶಕ್ತಿಮಾನ್' ಎಂಬ ಶಬ್ದಕ್ಕೆ ನಾವು ಮಾಡಿದ ಅರ್ಥವೇ ಸರಿಯಾದುದು.

ಪ್ರಶ್ನೆ :—ದೇವರು ಸಾದಿಯೋ? ಅನಾದಿಯೋ?

ಉತ್ತರ :—ಅನಾದಿ. ಅಂದರೆ ಯಾವನ ಆದಿ—ಯಾವುದಾದರೂ ಕಾರಣ ಅಥವಾ ಸಮಯವಿರುವುದಿಲ್ಲವೋ, ಅವನನ್ನು ಅನಾದಿ ಎನ್ನುತ್ತಾರೆ.—ಈ ಮೊದಲಾದ ಅರ್ಥಗಳನ್ನು ಪ್ರಥಮ ಸಮುಲ್ಲಾಸದಲ್ಲಿ ಬರೆದಿದ್ದೇವೆ. ನೋಡಿಕೊಳ್ಳಿರಿ.

ಪ್ರಶ್ನೆ :—ದೇವರು ಇಷ್ಟಪಡುವುದೇನು?

ಉತ್ತರ :—ಎಲ್ಲರ ಶ್ರೇಯಸ್ಸನ್ನೂ, ಎಲ್ಲರಿಗೂ ಸುಖವನ್ನೂ ಅಪೇಕ್ಷಿಸುತ್ತಾನೆ. ಆದರೆ, ತಾನು ಸ್ವತಂತ್ರನಿ ಪಾಪಮಾಡದಿರುವ ಯಾರನ್ನಾಗಲೀ ಪರಾಧೀನಪಡಿಸುವುದಿಲ್ಲ.

ಪ್ರಶ್ನೆ :—ಪರಮಾತ್ಮನ ಸ್ತುತಿ, ಪ್ರಾರ್ಥನೆ ಮತ್ತು ಉಪಾಸನೆಗಳನ್ನು ಮಾಡಬೇಕೋ ಬೇಡವೋ?

ಉತ್ತರ :—ಅಗತ್ಯವಾಗಿ ಮಾಡಬೇಕು.

ಪ್ರಶ್ನೆ :—ಸ್ತುತಿ ಮೊದಲಾದುವನ್ನು ಮಾಡುವುದರಿಂದ ಈಶ್ವರನು ತನ್ನ ನಿಯಮಗಳನ್ನು ಬಿಟ್ಟು, ಸ್ತುತಿ-ಪ್ರಾರ್ಥನೆಗಳನ್ನು ಮಾಡಿದವರ ಪಾಪಗಳನ್ನು ಹೋಗಲಾಡಿಸುವನೋ?

ಉತ್ತರ :—ಇಲ್ಲ,

ಪ್ರಶ್ನೆ :—ಹಾಗಾದರೆ ಸ್ತುತಿ ಪ್ರಾರ್ಥನೆಮಾಡಬೇಕಾದರೂ ಏಕೆ?

ಉತ್ತರ :—ಅವನ್ನು ಮಾಡುವದಕ್ಕೆ ಬೇರೆ ಫಲವಿರುತ್ತದೆ.

ಪ್ರಶ್ನೆ :—ಏನು?

ಉತ್ತರ :—ಸ್ತೋತ್ರ ಮಾಡುವುದರಿಂದ ಪರಮಾತ್ಮನಲ್ಲಿ ಪ್ರೀತಿಯೂ, ಆತನ ಗುಣಕರ್ಮಸ್ವಭಾವಗಳಿಂದ ತನ್ನ ಗುಣ-ಕರ್ಮ-ಸ್ವಭಾ

ವಗಳ ಸುಧಾರಣೆಯೂ ಆಗುತ್ತದೆ. ಪ್ರಾರ್ಥನೆಯಿಂದ ನಿರಭಿಮಾನವೂ ಉತ್ಸಾಹವೂ ಸಹಾಯ ಪ್ರಾಪ್ತಿಯೂ ಉಂಟಾಗುತ್ತದೆ. ಉಪಾಸನೆಯಿಂದ ಪರಬ್ರಹ್ಮನೊಂದಿಗೆ ಸೇರುವುದು ಹಾಗೂ ಸಾಕ್ಷಾತ್ಕಾರವಾಗುತ್ತದೆ.

ಪ್ರಶ್ನೆ:—ಈ ವಿಷಯವನ್ನು ಸ್ಪಷ್ಟವಾಗಿ ತಿಳಿಯಪಡಿಸಿರಿ?

ಉತ್ತರ:—ಹೇಗೆಂದರೆ,

ಸಪರ್ಯಗಾಚ್ಛು ಕ್ರಮುಕಾಯಮವ್ರಣ ಮಸ್ನಾವಿರಂ
ಶುದ್ಧಮಪಾಪವಿದ್ಧಂ।
ಕವಿರ್ಮನೀಷೀ ಪರಿಭೂಃ ಸ್ವಯಂಭೂರ್ಯಾಥಾತಥ್ಯತೋಽ-
ರ್ಥಾನ್ ವ್ಯದಧಾಚ್ಛಾಶ್ವತೀಭ್ಯಃ ಸಮಾಭ್ಯಃ॥

[ಯಜು, ಅ. ೪೦, ಮಂ. ೮]

(ಪರಮಾತ್ಮನ ಸ್ತುತಿ) 'ಪರಮಾತ್ಮನು ಸರ್ವ ವ್ಯಾಪಕನೂ, ನೀಹ್ಯಕಾರಿಯೂ, ಅನಂತ ಬಲಶಾಲಿಯೂ, ಶುದ್ಧನೂ, ಸರ್ವಜ್ಞನೂ ಸರ್ವಾಂತರ್ಯಾಮಿಯೂ, ಎಲ್ಲರಿಗಿಂತ ಮೇಲೆ ವಿರಾಜಿಸುವವನೂ, ಸನಾತನನೂ, ಸ್ವಯಂಸಿದ್ಧನೂ ಆಗಿದ್ದಾನೆ. ಆತನೇ ಜೀವರೆಂಬ ತನ್ನ ಸನಾತನ ಅನಾದಿ ಪ್ರಜೆಗಳಿಗೆ ತನ್ನ ಸನಾತನ ವಿದ್ಯೆಯಿಂದ ವೇದಗಳ ಮೂಲಕ ಸತ್ಯವಾದ ಅರ್ಥವನ್ನು ಬೋಧಿಸುತ್ತಾನೆ.'' ಇದು ಪರಮೇಶ್ವರನ ಸಗುಣಸ್ತುತಿ. ಯಾವ ಯಾವ ಗುಣಗಳಿಂದ ಸಹಿತವಾದ ಪರಮೇಶ್ವರನನ್ನು ಸ್ತುತಿಸುತ್ತೇವೋ ಅದಕ್ಕೆ ಸಗುಣ ಸ್ತುತಿಯೆಂದು ಹೆಸರು. (ಅಕಾಯ) ಅಂದರೆ ಅವನೆಂದಿಗೂ ಶರೀರ ಧಾರಣೆ ಮಾಡುವುದಿಲ್ಲ. ಅಥವಾ ಜನ್ಮವೆತ್ತುವುದಿಲ್ಲ. ಆತನಲ್ಲಿ ಛಿದ್ರಗಳಿಲ್ಲ; ನಾಡಿ ಮೊದಲಾದ ಬಂಧನಗಳಲ್ಲಿ ಸಿಕ್ಕಿಕೊಳ್ಳುವುದಿಲ್ಲ. ಆತನು ಎಂದೂ ಪಾಪಾಚರಣೆ ಮಾಡುವುದಿಲ್ಲ. ಆತನಲ್ಲಿ ಕ್ಲೇಶ, ದುಃಖ, ಅಜ್ಞಾನ ಮೊದಲಾದ ದೋಷಗಳು ಲೇಶಮಾತ್ರವಾದರೂ ಇರುವುದಿಲ್ಲ' ಹೀಗೆ ರಾಗದ್ವೇಷಾದಿಗುಣಗಳಿಂದ ದೂರವಾಗಿರುವನೆಂದು ತಿಳಿದು, ಪರಮೇಶ್ವರನನ್ನು ಸ್ತೋತ್ರಮಾಡುವುದಕ್ಕೆ ನಿರ್ಗುಣ ಸ್ತುತಿಯೆಂದು ಹೆಸರು. ಇದರ ಫಲವೇನೆಂದರೆ—ಆತನ ಗುಣ,

ಕರ್ಮ, ಸ್ವಭಾವಗಳಂತೆ ನಮ್ಮ ಗುಣ ಕರ್ಮ ಸ್ವಭಾವಗಳನ್ನು ಸರಿ ಪಡಿಸಿಕೊಳ್ಳಬೇಕು. ಆತನು ನ್ಯಾಯಕಾರಿಯಾಗಿರುವಂತೆ ನಾವೂ ನ್ಯಾಯವಂತರಾಗಬೇಕು. ಹೀಗೆ ಮಾಡದೆ ಹೊಗಳುಭಟ್ಟರಂತೆ ಪರಮಾತ್ಮನ ಗುಣಗಳನ್ನು ಮಾತ್ರ ಸ್ತೋತ್ರ ಮಾಡುತ್ತ, ತನ್ನ ಚರಿತ್ರವನ್ನು ಸುಧಾರಿಸಿಕೊಳ್ಳದವನ ಸ್ತೋತ್ರವು ವ್ಯರ್ಥ.

ಪ್ರಾರ್ಥನೆ :—

ಯಾಂ ಮೇಧಾಂ ದೇವಗಣಾಃ ಪಿತರಶ್ಚೋಪಾಸತೇ ।
ತಯಾ ಮಾಮದ್ಯ ಮೇಧಯಾಽಗ್ನೇ ಮೇಧಾವಿನಂ ಕುರು
ಸ್ವಾಹಾ ॥೧॥

[ಯಜು. ೩೨-೧೪]

ತೇಜೋಽಸಿ ತೇಜೋ ಮಯಿ ಧೇಹಿ । ವೀರ್ಯಮಸಿ ವೀರ್ಯಂ
ಮಯಿ ಧೇಹಿ ।
ಬಲಮಸಿ ಬಲಂ ಮಯಿ ಧೇಹಿ । ಓಜೋಽಸ್ಯೋಜೋ ಮಯಿ
ಧೇಹಿ ।
ಮನ್ಯುರಸಿ ಮನ್ಯುಂ ಮಯಿ ಧೇಹಿ । ಸಹೋಽಸಿ ಸಹೋ
ಮಯಿ ಧೇಹಿ ॥೨॥

[ಯಜು. ೧೯-೯]

ಯಜ್ಜಾಗ್ರತೋ ದೂರಮುದೈತಿ ದೈವಂ ತದು ಸುಪ್ತಸ್ಯ ತಥೈ-
ವೈತಿ ।
ದೂರಂಗಮಂ ಜ್ಯೋತಿಷಾಂ ಜ್ಯೋತಿರೇಕಂ ತನ್ಮೇ ಮನಃ
ಶಿವಸಂಕಲ್ಪಮಸ್ತು ॥೩॥

ಯೇನ ಕರ್ಮಾಣ್ಯಪಸೋ ಮನೀಷಿಣೋ ಯಜ್ಞೇ ಕೃಣ್ವಂತಿ
ವಿದಥೇಷು ಧೀರಾಃ ।
ಯದಪೂರ್ವಂ ಯಕ್ಷಮಂತಃ ಪ್ರಜಾನಾಂ ತನ್ಮೇ ಮನಃ ಶಿವ-
ಸಂಕಲ್ಪಮಸ್ತು ॥೪॥

ಯತ್ಪ್ರಜ್ಞಾನಮುತ ಚೇತೋ ಧೃತಿಶ್ಚ ಯಜ್ಜ್ಯೋತಿರಂತರ-
ಮೃತಂ ಪ್ರಜಾಸು ।
ಯಸ್ಮಾನ್ನ ಋತೇ ಕಿಂಚನ ಕರ್ಮ ಕ್ರಿಯತೇ ತನ್ಮೇ ಮನಃ
ಶಿವಸಂಕಲ್ಪಮಸ್ತು ॥೫॥
ಯೇನೇದಂ ಭೂತಂ ಭುವನಂ ಭವಿಷ್ಯತ್ಪರಿಗೃಹೀತಮಮೃತೇನ
ಸರ್ವಮ್ ।
ಯೇನ ಯಜ್ಞಸ್ತಾಯತೇ ಸಪ್ತಹೋತಾ ತನ್ಮೇ ಮನಃ
ಶಿವಸಂಕಲ್ಪಮಸ್ತು ॥೬॥
ಸುಷಾರಥಿರಶ್ವಾನಿವ ಯನ್ಮನುಷ್ಯಾನ್ನೇನೀಯತೇಽಭೀಶುಭಿ-
ರ್ವಾಜಿನ ಇವ ।
ಹೃತ್ಪ್ರತಿಷ್ಠಂ ಯದಜಿರಂ ಜವಿಷ್ಠಂ ತನ್ಮೇ ಮನಃ
ಶಿವಸಂಕಲ್ಪಮಸ್ತು ॥೭॥

[ಯಜು. ಅ. ೩೪, ಮಂ. ೧-೬]

ಹೇ ಅಗ್ನೇ, ಪ್ರಕಾಶಸ್ವರೂಪನಾದ ಹೇ, ಪರಮೇಶ್ವರ! ನಿನ್ನ ಕೃಪೆಯಿಂದ ವಿದ್ವಾಂಸರೂ, ಜ್ಞಾನಿಗಳೂ, ಯೋಗಿಗಳೂ ಯಾವ ಬುದ್ಧಿಯನ್ನು ಉಪಾಸಿಸುತ್ತಿರುವರೋ, ಅದೇ ಬುದ್ಧಿಯನ್ನು ನಮಗೆ ಅನುಗ್ರಹಿಸಿ, ನಮ್ಮನ್ನು ಇದೇ ವರ್ತಮಾನಸಮಯದಲ್ಲಿ ಬುದ್ಧಿವಂತರನ್ನಾಗಿ ಮಾಡು. ॥೧॥ ನೀನು ಪ್ರಕಾಶಸ್ವರೂಪನು, ದಯಮಾಡಿ ನನ್ನಲ್ಲಿಯೂ ಪ್ರಕಾಶವನ್ನಿಡು; ನೀನು ಅನಂತಪರಾಕ್ರಮಶಾಲಿ, ಆದುದರಿಂದ ನನಗೂ ಕೃಪಾಕಟಾಕ್ಷದಿಂದ ಪೂರ್ಣಪರಾಕ್ರಮವನ್ನು ಅನುಗ್ರಹಿಸು; ನೀನು ಅನಂತಬಲಯುಕ್ತನು, ಆದುದರಿಂದ ನನ್ನನ್ನೂ ಬಲಿಷ್ಠನನ್ನಾಗಿ ಮಾಡು; ನೀನು ಅನಂತಸಾಮರ್ಥ್ಯಯುಕ್ತನು, ಆದುದರಿಂದ ನನಗೂ ಪೂರ್ಣಸಾಮರ್ಥ್ಯವನ್ನು ದಯಪಾಲಿಸು; ನೀನು ಮಹಾಕಾರ್ಯಗಳ ಹಾಗೂ ದುಷ್ಕರ ವಿಷಯದಲ್ಲಿ ಕ್ರೋಧಕಾರಿಯು, ದಯೆಯಿಂದ ನನ್ನನ್ನೂ ಹಾಗೆಯೇ ಮಾಡು; ನೀನು ನಿಂದಾಸ್ತುತಿಗಳನ್ನೂ, ಅಪರಾಧಿಗಳನ್ನೂ ಸಹಿಸುವವನು, ದಯೆಯಿಂದ ನನ್ನನ್ನೂ ಅಂತಹವನನ್ನಾಗಿಯೇ ಮಾಡು. ॥೨॥ ಹೇ ದಯಾ

ನಿಧೇ! ನಿನ್ನ ಕೃಪೆಯಿಂದ ನನ್ನ ಮನಸ್ಸು ಜಾಗ್ರತಾವಸ್ಥೆಯಲ್ಲಿ, ದೂರದೂರವಾಗಿ ಹೋಗುತ್ತಾ, ದಿವ್ಯಗುಣಯುಕ್ತವಾಗಿರುತ್ತದೆ. ನಿದ್ರಿಸುತ್ತಿರುವ ನನ್ನ ಅದೇ ಮನಸ್ಸು ಸುಷುಪ್ತಿಹೊಂದುತ್ತದೆ. ಮತ್ತು ಸ್ವಪ್ನದಲ್ಲಿ ದೂರದೂರವಾಗಿ ಹೋಗುವಂತೆ ವ್ಯವಹರಿಸುತ್ತದೆ. ಪ್ರಕಾಶಗಳಿಗೆಲ್ಲಾ ಪ್ರಕಾಶವಾಗಿರುವ ಆ ನನ್ನ ಒಂದು ಮನಸ್ಸು (ಶಿವ ಸಂಕಲ್ಪ....) ತನಗೂ, ಇತರರಿಗೂ ಕಲ್ಯಾಣಸಂಕಲ್ಪವನ್ನು ಮಾಡಲಿ, ಯಾರಿಗೂ ಹಾನಿಯನ್ನು ಮಾಡುವ ಇಚ್ಛೆಯಿಂದ ಎಂದಿಗೂ ಕೂಡಿರದಿರಲಿ. ॥೩॥ ಹೇ ಸರ್ವಾಂತರ್ಯಾಮಿ ! ಕರ್ಮಮಾಡುವ ಧರ್ಮಯುಕ್ತ ವಿದ್ವಾಂಸರು ಯಜ್ಞದಲ್ಲಿ ಮತ್ತು ಯುದ್ಧ ಮೊದಲಾದುವುಗಳಲ್ಲಿ ಕಾರ್ಯವನ್ನು ಯಾವುದರ ಸಹಾಯದಿಂದ ಮಾಡುತ್ತಾರೋ, ಯಾವುದು ಅನಂತಸಾಮರ್ಥ್ಯದಿಂದ ಕೂಡಿ, ಪೂಜನೀಯವಾಗಿ ಪ್ರಜೆಗಳೊಳಗೆ ವಾಸಿಸುವುದೋ, ಅಂತಹ ನನ್ನ ಮನಸ್ಸು ಧರ್ಮವನ್ನು ಆಚರಿಸಬೇಕೆಂಬ ಆಪೇಕ್ಷೆ ಹೊಂದಿ ಅಧರ್ಮವನ್ನು ಸರ್ವಥಾ ಬಿಟ್ಟುಬಿಡಲಿ. ॥೪॥ ಯಾವುದು ಉತ್ಕೃಷ್ಟಜ್ಞಾನವೋ, ಮತ್ತು ಬೇರೆಯವರನ್ನು ಚೇತನಗೊಳಿಸುವ ನಿಶ್ಚಯಾತ್ಮಕವೃತ್ತಿಯುಳ್ಳದ್ದೋ, ಮತ್ತು ಯಾವುದು ಪ್ರಜೆಗಳಲ್ಲಿ ಪ್ರಕಾಶಯುಕ್ತವಾಗಿಯೂ, ನಾಶರಹಿತವಾಗಿಯೂ ಇರುವುದೋ, ಯಾವುದರ ಸಹಾಯವಿಲ್ಲದೆ ಯಾವನೂ ಯಾವ ಕಾರ್ಯವನ್ನೂ ಮಾಡಲಾರನೋ, ಅಂತಹ ನನ್ನ ಮನಸ್ಸು ಶುದ್ಧಗುಣಗಳನ್ನು ಅಪೇಕ್ಷಿಸಿ ದುಷ್ಟಗುಣಗಳಿಂದ ದೂರವಿರಲಿ. ॥೫॥ ಹೇ, ಜಗದೀಶ್ವರ! ಯಾವುದರಿಂದ ಸಮಸ್ತಯೋಗಿಗಳು ಈ ಎಲ್ಲಾ ಭೂತಭವಿಷ್ಯದ್ವರ್ತಮಾನವ್ಯವಹಾರಗಳನ್ನು ತಿಳಿಯುತ್ತಾರೋ, ಯಾವುದು ನಾಶರಹಿತವಾಗಿದ್ದು ಜೀವಾತ್ಮನನ್ನು ಪರಮಾತ್ಮನೊಡನೆ ಸೇರಿಸಿ, ಎಲ್ಲ ರೀತಿಯಿಂದಲೂ ತ್ರಿಕಾಲಜ್ಞನನ್ನಾಗಿ ಮಾಡುವುದೋ, ಯಾವುದರಲ್ಲಿ ಜ್ಞಾನಕ್ರಿಯೆಗಳಿವೆಯೋ ಮತ್ತು ಯಾವದು ಐದು ಜ್ಞಾನೇಂದ್ರಿಯಗಳಿಂದಲೂ, ಬುದ್ಧಿಯಿಂದಲೂ, ಜೀವಾತ್ಮನಿಂದಲೂ ಕೂಡಿರುವುದೋ, ಆ ಯೋಗರೂಪವಾದ ಯಜ್ಞವನ್ನು ಯಾವುದರಿಂದ ಅಭಿವೃದ್ಧಿಗೊಳಿಸುವರೋ, ಆ ನನ್ನ ಮನಸ್ಸು ಯೋಗವಿಜ್ಞಾನಯುಕ್ತವಾಗಿ, ಅವಿದ್ಯಾದಿಕ್ಲೇಶಗಳಿಂದ ದೂರವಾಗಿರಲಿ. ॥೬॥ ಹೇ,

ಪರಮವಿದ್ವಾಂಸನಾದ ಪರಮೇಶ್ವರ! ನಿನ್ನ ಕೃಪೆಯಿಂದ ರಥದ ಮಧ್ಯೆ ಗುಂಬದಲ್ಲಿ ಅರೇ ಕಾಲುಗಳಿರುವಂತೆ ಯಾವುದರಲ್ಲಿ ಋಗ್ವೇದ, ಯಜುರ್ವೇದ, ಸಾಮವೇದ ಮತ್ತು ಅಥರ್ವವೇದವೂ ಸಹ ಪ್ರತಿಷ್ಠಿತವಾಗಿವೆಯೋ, ಯಾವುದರಲ್ಲಿ ಸರ್ವಜ್ಞನೂ ಸರ್ವವ್ಯಾಪಕನೂ, ಪ್ರಜೆಗಳ ಸರ್ವಸಾಕ್ಷಿಯೂ ಆದ ಚಿತ್ತಜ್ಞೇತನ ಜ್ಞಾನವಾಗುವುದೋ, ಆ ನನ್ನ ಮನಸ್ಸು ಅವಿದ್ಯೆಯನ್ನು ಹೋಗಲಾಡಿಸಿಕೊಂಡು, ಯಾವಾಗಲೂ ವಿದ್ಯಾಪ್ರಿಯವಾಗಿರಲಿ. ॥೭॥ ಹೇ, ಸರ್ವನಿಯಾಮಕ! ಯಾವ ನನ್ನ ಮನವು ಹಗ್ಗದಿಂದ ಕುದುರೆಗಳನ್ನು ನಡೆಸುವಂತೆ ಅಥವಾ ಕುದುರೆಗಳ ನಿಯಂತೃವಾದ ಸಾರಥಿಯಂತೆ ಮನುಷ್ಯರನ್ನು ಬಹುವಾಗಿ ಅತ್ತಿಂದಿತ್ತ ನಡೆಸುತ್ತಿರುವುದೋ, ಯಾವುದು ಹೃದಯದಲ್ಲಿ ಪ್ರತಿಷ್ಠಿತವೂ, ಗತಿಯುತವೂ ಮತ್ತು ಅತ್ಯಂತ ವೇಗಯುಕ್ತವೂ ಆಗಿದೆಯೋ ಅಂತಹ ನನ್ನ ಮನಸ್ಸು, ಎಲ್ಲಾ ಇಂದ್ರಿಯಗಳನ್ನೂ ಅಧರ್ಮಾಚರಣದಿಂದ ತಡೆದು, ಧರ್ಮಮಾರ್ಗದಲ್ಲಿ ನಡೆಸುವಂತೆ ನನ್ನನ್ನು ಅನುಗ್ರಹಿಸು.॥೮॥

ಅಗ್ನೇ ನಯ ಸುಪಥಾ ರಾಯೇ ಅಸ್ಮಾನ್ ವಿಶ್ವಾನಿದೇವ
ವಯುನಾನಿ ವಿದ್ವಾನ್ ।
ಯುಯೋಧ್ಯಸ್ಮಜ್ಜುಹುರಾಣಮೇನೋ ಭೂಯಿಷ್ಠಾಂ ತೇ
ನಮಉಕ್ತಿಂವಿಧೇಮ ॥

[ಯಜು. ಅ. ೪೦, ಮಂ. ೧೬]

ಮಾನೋ ಮಹಾಂತಮುತ ಮಾ ನೋ ಅರ್ಭಕಂ ಮಾನ
ಉಕ್ಷಂತಮುತ ಮಾನ ಉಕ್ಷಿತಂ ।
ಮಾನೋ ವಧೀಃ ಪಿತರಂ ಮೋತ ಮಾತರಂ ಮಾನಃ ಪ್ರಿಯಾ-
ಸ್ತನ್ವೋ ರುದ್ರ ರೀರಿಷಃ ॥

[ಯಜು. ಅ. ೧೬, ಮಂ. ೧೫]

ಸುಖಪ್ರದನೂ, ಸ್ವಪ್ರಕಾಶಸ್ವರೂಪನೂ ಸರ್ವಜ್ಞನೂ ಆದ ಹೇ ಪರಮಾತ್ಮ! ನೀನು ನಮಗೆ ಶ್ರೇಷ್ಠಮಾರ್ಗದಿಂದ ಸಂಪೂರ್ಣ ಜ್ಞಾನವನ್ನು ಅನುಗ್ರಹಿಸು. ಮತ್ತು ನಮ್ಮಲ್ಲಿರುವ ಕುಟಿಲ

ಪಾಪಾಚರಣರೂಪ ಮಾರ್ಗದಿಂದ ನಮ್ಮನ್ನು ದೂರಮಾಡು. ಇದಕ್ಕಾಗಿಯೇ ನಾವು ನಿನ್ನನ್ನು ನಮ್ರತೆಯಿಂದ ಬಹಳ ಸ್ತುತಿಸುತ್ತೇವೆ. ॥೧॥ ಹೇ, ರುದ್ರ! (ದುಷ್ಟರನ್ನು, ಪಾಪದ ದುಃಖ ಸ್ವರೂಪವಾದ ಫಲವನ್ನಿತ್ತು ಅಳಿಸುವ ಪರಮೇಶ್ವರನೇ!) ನೀನು ನಮ್ಮ ಚಿಕ್ಕವರನ್ನೂ ದೊಡ್ಡವರನ್ನೂ, ಗರ್ಭವನ್ನೂ, ತಂದೆತಾಯಿಗಳನ್ನೂ ಮತ್ತು ಪ್ರಿಯ ಬಂಧುಗಳನ್ನೂ ಹಾಗೂ ಶರೀರಗಳನ್ನೂ ಕೊಲ್ಲುವುದಕ್ಕೆ ನಮ್ಮನ್ನು ಪ್ರೇರಿಸಬೇಡ. ನಿನ್ನ ಶಿಕ್ಷೆಗೆ ಗುರಿಯಾಗದಂತಹ ಮಾರ್ಗದಲ್ಲಿ ನಮ್ಮನ್ನು ನಡೆಸು.

ಅಸತೋ ಮಾ ಸದ್ಗಮಯ। ತಮಸೋಮಾ ಜ್ಯೋತಿರ್ಗಮಯ। ಮೃತ್ಯೋರ್ಮಾಽಮೃತಂ ಗಮಯೇತಿ ॥

[ಶತಪಥ ಬ್ರಾಹ್ಮಣ, ೧೪, ೩, ೧, ೩೦]

ಹೇ, ಪರಮಗುರು ಪರಮಾತ್ಮ! ನೀನು ನಮ್ಮನ್ನು ಅಸನ್ಮಾರ್ಗದಿಂದ ಬಿಡಿಸಿ, ಸನ್ಮಾರ್ಗದಲ್ಲೆ ನಡೆಸು. ಅವಿದ್ಯಾಂಧಕಾರವನ್ನು ಬಿಡಿಸಿ, ನಮಗೆ ವಿದ್ಯೆಯೆಂಬ ಸೂರ್ಯನನ್ನು ಅನುಗ್ರಹಿಸು. ಮತ್ತು ಮೃತ್ಯುರೋಗದಿಂದ ಪಾರುಮಾಡಿ, ನಮಗೆ ಮೋಕ್ಷದ ಆನಂದಾಮೃತವನ್ನು ಪಾನಮಾಡಿಸು. ಅಂದರೆ ಯಾವ ಯಾವ ದೋಷ ಅಥವಾ ದುರ್ಗುಣಗಳಿಂದ ಪರಮಾತ್ಮನನ್ನೂ ಮತ್ತು ತನ್ನನ್ನೂ ದೂರನೆಂದೆಣಿಸಿ ಸ್ತೋತ್ರ ಮಾಡುತ್ತಾನೋ, ಅದು ವಿಧಿ-ನಿಷೇಧರೂಪವಾಗಿರುವುದರಿಂದ ಸಗುಣ-ನಿರ್ಗುಣ ಪ್ರಾರ್ಥನೆಯಾಗುತ್ತದೆ. ಯಾವ ಮನುಷ್ಯನು ಯಾವುದರ ಪ್ರಾಪ್ತಿಗಾಗಿ ಪ್ರಾರ್ಥಿಸುವನೋ ಅವನು ಹಾಗೆಯೇ ವರ್ತಿಸಬೇಕು. ಹೇಗೆಂದರೆ— ಸರ್ವೋತ್ತಮವಾದ ಬುದ್ಧಿಯು ಪ್ರಾಪ್ತವಾಗಬೇಕೆಂದು ಪರಮಾತ್ಮನನ್ನು ಪ್ರಾರ್ಥಿಸುವವನು, ಅದಕ್ಕಾಗಿ ಶಕ್ಯವಿದ್ದಷ್ಟು ಪ್ರಯತ್ನಗಳನ್ನು ನಡೆಸಬೇಕು. ಅಂದರೆ— ತನ್ನ ಪುರುಷಾರ್ಥದ ಬಳಿಕ, ಪರಮಾತ್ಮನನ್ನು ಪ್ರಾರ್ಥಿಸುವುದು ಯೋಗ್ಯವಾದುದು. 'ಹೇ, ಪರಮೇಶ್ವರ! ನೀನು ನನ್ನ ಶತ್ರುಗಳನ್ನು ನಾಶಮಾಡಿ ನನ್ನನ್ನು ಎಲ್ಲರಿಗಿಂತ ದೊಡ್ಡವನನ್ನಾಗಿ ಮಾಡು. ನನಗೆ ಮಾತ್ರ ಗೌರವ ಪ್ರತಿಷ್ಠೆಗಳು ದೊರಕುವಂತೆ ಅನುಗ್ರಹಿಸು. ಎಲ್ಲರೂ ನನ್ನ ಅಧೀನ

ದಲ್ಲಿರುವಂತೆ ಮಾಡು.' ಈ ರೀತಿಯಾದ ಪ್ರಾರ್ಥನೆಗಳನ್ನು ಮಾಡ ಬಾರದು. ಇಂತಹ ನೀಚವಾದ ಪ್ರಾರ್ಥನೆಗಳನ್ನು ಪರಮಾತ್ಮನು ಅಂಗೀಕರಿಸನು. ಏಕೆಂದರೆ—ಇಬ್ಬರು ಶತ್ರುಗಳು ಏಕಕಾಲದಲ್ಲಿ ತಮ್ಮ ಶತ್ರುವು ನಾಶವಾಗಬೇಕೆಂದು ಪರಮಾತ್ಮನನ್ನು ಪ್ರಾರ್ಥಿಸಿದರೆ, ಆತನು ಆ ಇಬ್ಬರನ್ನೂ ನಾಶಪಡಿಸಬೇಕೆ? ಯಾರಾದರೂ, ಯಾವನ ಪ್ರೇಮವು ಹೆಚ್ಚಾಗಿರುವುದೋ, ಅಂತಹವನ ಪ್ರಾರ್ಥನೆ ಸಫಲವಾಗುವುದೆಂದು ಹೇಳುವುದಾದರೆ, ನಾವು ಯಾವನ ಪ್ರೇಮ ಕಡಿಮೆಯಾಗಿರುವುದೋ, ಆತನ ಶತ್ರುವಿನ ನಾಶವೂ ಸ್ವಲ್ಪವಾದರೂ ಆಗಬೇಕೆಂದು ಹೇಳ ಬಹುದು. ಹೀಗೆ ಮೂರ್ಖತೆಯ ಪ್ರಾರ್ಥನೆ ಮಾಡುತ್ತಾ ಮಾಡುತ್ತಾ, 'ಹೇ, ಪರಮೇಶ್ವರ! ನೀನು ರೊಟ್ಟಿಯನ್ನು ಮಾಡಿ ನಮಗೆ ತಿನ್ನಿಸು; ನಮ್ಮ ಮನೆಯನ್ನು ಗುಡಿಸು; ನಮ್ಮ ಬಟ್ಟೆಗಳನ್ನು ಒಗೆದುಕೊಡು; ಬೇಸಾಯ ಮಾಡಿಕೊಡು,' ಎಂದೂ ಸಹ ಯಾವನಾದರೂ ಪ್ರಾರ್ಥನೆ ಮಾಡಬಲ್ಲ. ಈ ರೀತಿಯಾಗಿ ಪರಮಾತ್ಮನ ಮೇಲೆ ವಿಶ್ವಾಸವನ್ನಿಟ್ಟು ಸೋಮಾರಿಗಳಾಗಿ ಕೂಡುವವರು ಮಹಾ ಮೂರ್ಖರು. ಏಕೆಂದರೆ—ಪುರುಷಪ್ರಯತ್ನ ಮಾಡಬೇಕೆಂಬ ಪರಮಾತ್ಮನ ಆಜ್ಞೆಯನ್ನು ಉಲ್ಲಂಘಿಸಿದವನು ಎಂದಿಗೂ ಸುಖವನ್ನು ಹೊಂದಲಾರನು. ಹೇಗೆಂದರೆ:—

ಕುರ್ವನ್ನೇವೇಹ ಕರ್ಮಾಣಿ ಜಿಜೀವಿಷೇಚ್ಛತಗ್ಂ ಸಮಾಃ ॥

[ಯಜು ೪೦, ೨]

ಪರಮೇಶ್ವರನು ಆಜ್ಞಾಪಿಸುತ್ತಾನೆ:—

ಮನುಷ್ಯನು ನೂರು ವರ್ಷಗಳವರೆಗೆ ಅಂದರೆ, ಬದುಕಿರುವ ವರೆಗೂ ಕಾರ್ಯಗಳನ್ನು ಮಾಡುತ್ತ ಜೀವಿಸಬೇಕೆಂದು ಅಪೇಕ್ಷಿಸ ಬೇಕು. ಎಂದಿಗೂ ಮೈಗಳ್ಳನಾಗಬಾರದು. ನೋಡಿರಿ. ಸೃಷ್ಟಿಯಲ್ಲಿ ಪ್ರಾಣಿಗಳು ಮತ್ತು ಅಪ್ರಾಣಿಗಳು ಎಲ್ಲವೂ ತಮ್ಮ ತಮ್ಮ ಕಾರ್ಯ ಮತ್ತು ಯತ್ನವನ್ನು ನೆರವೇರಿಸುತ್ತಲೇ ಇರುತ್ತವೆ. ಇರುವೆ ಮೊದಲಾದುವು ಯಾವಾಗಲೂ ಕೆಲಸ ಮಾಡುತ್ತಲೇ ಇರುತ್ತವೆ. ಪೃಥಿವಿ ಮೊದಲಾದ ಗೋಳಗಳು ಯಾವಾಗಲೂ ತಿರುಗುತ್ತಿರುತ್ತವೆ. ಮರ ಮೊದಲಾದುವುಗಳು ಬೆಳೆಯುತ್ತಲೂ, ನಾಶವಾಗುತ್ತಲೂ

ಇರುತ್ತವೆ. ಈ ದೃಷ್ಟಾಂತವನ್ನು ಮನುಷ್ಯರೆಲ್ಲರೂ ಗ್ರಹಿಸುವುದು ಯೋಗ್ಯವಾಗಿರುತ್ತದೆ. ಪುರುಷಪ್ರಯತ್ನವನ್ನು ಮಾಡುವವನಿಗೆ ಇತರರು ಸಹಾಯಮಾಡುವಂತೆ, ಧರ್ಮದಿಂದ ಪುರುಷಾರ್ಥಗಳನ್ನು ಮಾಡುವವನಿಗೆ ಪರಮಾತ್ಮನೂ ಸಹಾಯಮಾಡುತ್ತಾನೆ. ಜನರು ಉದ್ಯೋಗಶೀಲರಾದವರನ್ನೇ ಸೇವಕರನ್ನಾಗಿ ತೆಗೆದುಕೊಳ್ಳುತ್ತಾರೆ; ಬೇರೆ ಸೋಮಾರಿಗಳನ್ನು ತೆಗೆದುಕೊಳ್ಳುವುದಿಲ್ಲ. ನೋಡಬೇಕೆಂಬ ಅಪೇಕ್ಷೆಯುಳ್ಳವನಿಗೂ, ಕಣ್ಣಿರುವವನಿಗೂ ಯಾವುದನ್ನಾದರೂ ತೋರಿಸುತ್ತೇವೆಯೇ ಹೊರತು, ಕುರುಡನಿಗೆ ತೋರಿಸುವುದಿಲ್ಲ. ಅದೇ ರೀತಿ ಪರಮಾತ್ಮನು ಲೋಕೋಪಕಾರಕವಾದ ಪ್ರಾರ್ಥನೆಯಲ್ಲಿ ಮಾತ್ರ ಸಹಾಯಕನಾಗುತ್ತಾನೆ. ಹಾನಿಕಾರಕ ಕಾರ್ಯದಲ್ಲಲ್ಲ. ಬೆಲ್ಲವು ಸಿಹಿಯಾಗಿರುವುದೆಂದು ಬಾಯಲ್ಲಿ ಮಾತ್ರ ಹೇಳುತ್ತಿರುವವನಿಗೆ ಬೆಲ್ಲವಾಗಲಿ, ಅದರ ರುಚಿಯಾಗಲಿ ದೊರೆಯಲಾರದು. ಯಾವನು ಪ್ರಯತ್ನ ಮಾಡುವನೋ ಅವನಿಗೆ ಜಾಗ್ರತೆಯಾಗಿಯೋ ಅಥವಾ ಸಾವಕಾಶವಾಗಿಯೋ ಬೆಲ್ಲವು ದೊರೆತೇ ದೊರೆಯುವುದು. ಈಗ ಮೂರನೆಯದಾದ ಉಪಾಸನೆ :—

ಸಮಾಧಿನಿರ್ಧೂತಮಲಸ್ಯ ಚೇತಸೋ ನಿವೇಶಿತಸ್ಯಾತ್ಮನಿ
ಯತ್ಸುಖಂ ಭವೇತ್ ।
ನ ಶಕ್ಯತೇ ವರ್ಣಯಿತುಂ ಗಿರಾ ತದಾ ಸ್ವಯಂ ತದಂತಃ
ಕರಣೇನ ಗೃಹ್ಯತೇ ॥

ಇದು ಉಪನಿಷದ್ವಚನ. ಸಮಾಧಿಯೋಗದಿಂದ ಯಾವನ ಅವಿದ್ಯಾದಿ ಮಲಗಳು ನಷ್ಟವಾಗಿಹೋಗಿರುವುವೋ, ಯಾವನು ಆತ್ಮಸ್ಥನಾಗಿ ತನ್ನ ಮನಸ್ಸನ್ನು ಪರಮಾತ್ಮನಲ್ಲಿ ಸೇರಿಸಿರುವನೋ, ಅಂತಹವನಿಗೆ ಪರಮಾತ್ಮನ ಯೋಗದಿಂದ ಉಂಟಾಗುವ ಸುಖವನ್ನು ಮಾತಿನಿಂದ ವಿವರಿಸಲು ಸಾಧ್ಯವಲ್ಲ. ಏಕೆಂದರೆ—ಜೀವಾತ್ಮನು ತನ್ನ ಅಂತಃಕರಣದಿಂದ ಆ ಆನಂದವನ್ನು ಗ್ರಹಿಸುತ್ತಾನೆ. 'ಉಪಾಸನೆ' ಎಂಬ ಪದಕ್ಕೆ 'ಸಮೀಪದಲ್ಲಿರುವಿಕೆ' ಎಂದರ್ಥವಾಗುತ್ತದೆ. ಅಷ್ಟಾಂಗಯೋಗದಿಂದ ಪರಮಾತ್ಮನ ಸಮೀಪಸ್ಥನಾಗುವುದಕ್ಕೂ, ಆ

ಪರಮಾತ್ಮನನ್ನು ಸರ್ವವ್ಯಾಪಿ ಮತ್ತು ಸರ್ವಾಂತರ್ಯಾಮಿ ರೂಪಗಳಿಂದ ಪ್ರತ್ಯಕ್ಷಪಡಿಸಿಕೊಳ್ಳುವುದಕ್ಕೂ ಮಾಡಬೇಕಾದ ಕರ್ತವ್ಯಗಳೆಲ್ಲವನ್ನೂ ಮಾಡಬೇಕು. ಅಂದರೆ :—

ತತ್ರಾಹಿಂಸಾಸತ್ಯಾಸ್ತೇಯಬ್ರಹ್ಮಚರ್ಯಾಪರಿಗ್ರಹಾ ಯಮಾಃ।

[ಸಾಧನಪಾದೇ. ಸೂ. ೩೦]

ಈ ಮೊದಲಾದ ಸೂತ್ರಗಳು ಪಾತಂಜಲ ಯೋಗಶಾಸ್ತ್ರದವು. ಯಾವನು ಉಪಾಸನೆಯನ್ನು ಆರಂಭಿಸಲು ಬಯಸುತ್ತಾನೋ, ಆತನಿಗೆ ಇದೇ ಆರಂಭವು: ಆವನು ಯಾರಲ್ಲಿಯೂ ವೈರವನ್ನಿಡಬಾರದು. ಯಾವಾಗಲೂ ಎಲ್ಲರಲ್ಲೂ ಪ್ರೀತಿಯಿಡಬೇಕು. ಸತ್ಯವನ್ನೇ ಹೇಳ ಬೇಕು. ಅಸತ್ಯವನ್ನು ಎಂದಿಗೂ ಹೇಳಬಾರದು. ಕಳ್ಳತನ ಮಾಡ ಬಾರದು. ಸತ್ಯದಿಂದ ನಡೆಯಬೇಕು. ಜಿತೇಂದ್ರಿಯನಾಗಿರಬೇಕು; ವಿಷಯಲಂಪಟನಾಗಬಾರದು. ಎಂದಿಗೂ ಅಭಿಮಾನಿಯಾಗಬಾರದು. ಈ ಐದು ವಿಧವಾದ ಯಮಗಳು ಸೇರಿ ಉಪಾಸನಾಯೋಗದ ಮೊದಲನೆಯ ಅಂಗವಾಗಿರುತ್ತವೆ.

ಶೌಚಸಂತೋಷತಪಃಸ್ವಾಧ್ಯಾಯೇಶ್ವರಪ್ರಣಿಧಾನಾನಿ ನಿಯಮಾಃ ॥

[ಯೋಗಸೂತ್ರ ಸಾಧನಪಾದೇ ಸೂ ೩೨]

ರಾಗದ್ವೇಷಗಳನ್ನು ಬಿಟ್ಟು ಒಳಗೂ, ನೀರು ಮೊದಲಾದುವು ಗಳಿಂದ ಹೊರಗೂ ಪವಿತ್ರನಾಗಿರಬೇಕು. ಧರ್ಮದಿಂದ ಪುರುಷಾರ್ಥ ಗಳನ್ನು ಮಾಡುತ್ತಾ ಲಾಭ ಬಂದಾಗ ಹಿಗ್ಗಬಾರದು, ಹಾನಿ ಬಂದಾಗ ತಗ್ಗಬಾರದು. ಯಾವಾಗಲೂ ಪ್ರಸನ್ನನಾಗಿ ಮೈಗಳ್ಳತನವನ್ನು ಬಿಟ್ಟು ಉದ್ಯೋಗ ಮಾಡುತ್ತಿರಬೇಕು. ಸದಾ ಸುಖ-ದುಃಖಗಳನ್ನು ಸಹಿಸಿ ಧರ್ಮವನ್ನೇ ಆಚರಿಸಬೇಕು. ಎಂದಿಗೂ ಅಧರ್ಮವನ್ನು ಆಚರಿಸ ಕೂಡದು. ಸರ್ವದಾ ಸತ್ಯಶಾಸ್ತ್ರಗಳನ್ನು ಓದಬೇಕು ಮತ್ತು ಓದಿಸ ಬೇಕು. ಸತ್ಪುರುಷರ ಸಂಗವನ್ನು ಮಾಡಬೇಕು. ಪರಮಾತ್ಮನ 'ಓಂ' ಎಂಬ ಈ ಒಂದು ನಾಮದ ಅರ್ಥವನ್ನು ವಿಚಾರ ಮಾಡುತ್ತ,

ನಿತ್ಯವೂ ಜಪಮಾಡಬೇಕು. ತನ್ನ ಆತ್ಮನನ್ನು ಪರಮೇಶ್ವರನ ಅಪ್ಪಣೆಗೆ ಅನುಸಾರವಾಗಿ ಸಮರ್ಪಿಸಬೇಕು. ಈ ಐದು ವಿಧವಾದ ನಿಯಮಗಳು ಸೇರಿ ಉಪಾಸನಾಯೋಗದ ಎರಡನೆಯ ಅಂಗವಾಗಿರುತ್ತವೆ. ಇದರ ಮುಂದಿನ ಆರು ಅಂಗಗಳನ್ನು ಯೋಗಶಾಸ್ತ್ರದಲ್ಲಾಗಲಿ, ಋಗ್ವೇದಾದಿ ಭಾಷ್ಯಭೂಮಿಕೆಯಲ್ಲಾಗಲಿ ನೋಡಿಕೊಳ್ಳಬೇಕು. ಉಪಾಸನೆಯನ್ನು ಮಾಡಲಿಚ್ಛಿಸಿದಾಗ ಪರಿಶುದ್ಧವಾದ ಏಕಾಂತ ಪ್ರದೇಶದಲ್ಲಿ ಆಸನವನ್ನು ಹಾಕಿಕೊಂಡು ಮೊದಲು ಪ್ರಾಣಾಯಾಮವನ್ನು ಮಾಡಬೇಕು. ಬಳಿಕ ಬಾಹ್ಯವಿಷಯಗಳಿಂದ ಇಂದ್ರಿಯಗಳನ್ನು ತಡೆದು, ಮನಸ್ಸನ್ನು ನಾಭಿಪ್ರದೇಶದಲ್ಲಾಗಲಿ, ಹೃದಯದಲ್ಲಾಗಲಿ, ಕಂಠದಲ್ಲಾಗಲಿ, ಕಣ್ಣಿನಲ್ಲಾಗಲಿ, ಶಿಖೆ ಯಲ್ಲಾಗಲಿ, ಬೆನ್ನು ಮೂಳೆಯಲ್ಲಾಗಲಿ ಸ್ಥಿರಪಡಿಸಿ ತನ್ನ ಆತ್ಮ ಹಾಗೂ ಪರಮಾತ್ಮನ ವಿವೇಚನೆಯನ್ನು ಮಾಡುತ್ತ ಪರಮಾತ್ಮನಲ್ಲಿ ಮಗ್ನನಾಗಿ ಸಂಯಮಿಯಾಗಬೇಕು. ಈ ಸಾಧನಗಳನ್ನು ಮಾಡುವವನ ಆತ್ಮವೂ, ಅಂತಃಕರಣವೂ ಪವಿತ್ರವಾಗಿ ಸತ್ಯದಿಂದ ಪರಿಪೂರ್ಣವಾಗುತ್ತದೆ. ಮತ್ತು ದಿನದಿನಕ್ಕೆ ಜ್ಞಾನ-ವಿಜ್ಞಾನಗಳನ್ನು ಬೆಳೆಸಿಕೊಂಡು ಮೋಕ್ಷವನ್ನು ಕೂಡ ಪಡೆಯುತ್ತಾನೆ. ಎಂಟು ಯಾಮಗಳಲ್ಲಿ ಒಂದು ಗಳಿಗೆಯಷ್ಟು ಹೊತ್ತಾದರೂ ಈ ರೀತಿಯಾಗಿ ಧ್ಯಾನಮಾಡುವವನು ಸದಾ ಉನ್ನತಿ ಹೊಂದುತ್ತ ಹೋಗುತ್ತಾನೆ. ಸರ್ವಜ್ಞ ಮೊದಲಾದ ಗುಣಗಳಿಂದ ಪರಮಾತ್ಮನನ್ನು ಸ್ತೋತ್ರಮಾಡುವುದಕ್ಕೆ ಸಗುಣೋಪಾಸನೆಯೆಂದು ಹೆಸರು. ದ್ವೇಷ, ರೂಪ, ರಸ, ಗಂಧ, ಸ್ಪರ್ಶ—ಮೊದಲಾದ ಗುಣಗಳಿಂದ ದೂರವಾಗಿರುವನೆಂದೆಣಿಸಿ, ಅತಿ ಸೂಕ್ಷ್ಮನಾದ ಆತ್ಮನ ಒಳಗೂ, ಹೊರಗೂ ವ್ಯಾಪಿಸಿರುವ ಪರಮಾತ್ಮನಲ್ಲಿ ದೃಢಸ್ಥಿತನಾಗಿರುವುದಕ್ಕೆ ನಿರ್ಗುಣೋಪಾಸನೆಯೆಂದು ಹೆಸರು. ಇದರ ಫಲವೇನೆಂದರೆ—ಛಳಿಯಿಂದ ನಡುಗುತ್ತಿರುವ ಮನುಷ್ಯನು ಬೆಂಕಿಯ ಸಮೀಪಕ್ಕೆ ಹೋಗುವುದರಿಂದ, ಛಳಿಯು ಬಿಟ್ಟುಹೋಗುವಂತೆ ಪರಮೇಶ್ವರನ ಸಮೀಪಕ್ಕೆ ಹೋಗುವುದರಿಂದ ಜೀವಾತ್ಮನು ಸಮಸ್ತ ದೋಷಗಳಿಂದಲೂ, ದುಃಖಗಳಿಂದಲೂ ಪಾರಾಗಿ, ಪರಮಾತ್ಮನ ಗುಣ-ಕರ್ಮ-ಸ್ವಭಾವಗಳಂತೆ, ಜೀವಾತ್ಮನ ಗುಣ-ಕರ್ಮ-ಸ್ವಭಾವ

ಗಳೂ ಪವಿತ್ರವಾಗುತ್ತವೆ. ಆದ್ದರಿಂದ ಪರಮಾತ್ಮನ ಸ್ತುತಿ, ಪ್ರಾರ್ಥನೆ ಮತ್ತು ಉಪಾಸನೆಗಳನ್ನು ಅಗತ್ಯವಾಗಿ ಮಾಡಬೇಕು. ಇದರಿಂದ ಇಷ್ಟು ಫಲ ಮಾತ್ರವೇ ಅಲ್ಲದೆ, ಬೆಟ್ಟದಷ್ಟು ದುಃಖ ಬಂದರೂ ಹೆದರದಂತಹ ಆತ್ಮಬಲವು ವರ್ಧಿಸುವುದು. ಎಲ್ಲವನ್ನೂ ಸಹಿಸಬಲ್ಲನಾಗುವನು. ಇದೇನು ಅಲ್ಪ ವಿಷಯವೆ? ಮತ್ತು ಪರಮಾತ್ಮನ ಸ್ತುತಿ ಪ್ರಾರ್ಥನೆ ಮತ್ತು ಉಪಾಸನೆಗಳನ್ನು ಮಾಡದವನು ಮಹಾ ಮೂರ್ಖನೂ, ಕೃತಘ್ನನೂ ಆಗುತ್ತಾನೆ. ಏಕೆಂದರೆ—ಯಾವ ಪರಮಾತ್ಮನು ಜೀವರ ಸುಖಕ್ಕಾಗಿ ಜಗತ್ತಿನ ಸರ್ವ ಪದಾರ್ಥಗಳನ್ನೂ ಅನುಗ್ರಹಿಸಿರುವನೋ ಅವನ ಗುಣಗಳನ್ನು ಮರೆಯುವುದು ಮತ್ತು ಪರಮಾತ್ಮನನ್ನೇ ಒಪ್ಪದಿರುವುದು ಕೃತಘ್ನತೆಯೂ, ಮೂರ್ಖತೆಯೂ ಆಗಿರುತ್ತದೆ.

ಪ್ರಶ್ನೆ:– ದೇವರಿಗೆ ಕಣ್ಣು, ಕಿವಿ ಮೊದಲಾದ ಯಾವ ಇಂದ್ರಿಯಗಳೂ ಇಲ್ಲದಿರುವಾಗ, ಅತನು ಇಂದ್ರಿಯಗಳ ಕೆಲಸಗಳನ್ನು ಹೇಗೆ ಮಾಡಬಲ್ಲನು?

ಉತ್ತರ:—

ಅಪಾಣಿಪಾದೋ ಜವನೋ ಗ್ರಹೀತಾ ಪಶ್ಯತ್ಯಚಕ್ಷುಃ
ಸ ಶೃಣೋತ್ಯಕರ್ಣಃ ।
ಸ ವೇತ್ತಿ ವೇದ್ಯಂ ನ ಚ ತಸ್ಯಾಸ್ತಿ ವೇತ್ತಾ ತಮಾಹುರಗ್ರ್ಯಂ
ಪುರುಷಂ ಪುರಾಣಮ್ ॥

[ಶ್ವೇತಾಶ್ವತರ ಉಪನಿಷತ್ ಅ. ೩. ಮಂ. ೧೯]

ಇದು ಉಪನಿಷದ್ವಚನ. ಪರಮಾತ್ಮನಿಗೆ ಕೈಗಳಿಲ್ಲ; ಆದರೂ ತನ್ನ ಶಕ್ತಿರೂಪವಾದ ಕೈಯಿಂದ ಎಲ್ಲದರ ರಚನೆ ಮತ್ತು ಗ್ರಹಣ ಮಾಡುವವನಾಗಿದ್ದಾನೆ. ಕಾಲುಗಳಿಲ್ಲ; ಆದರೂ ವ್ಯಾಪಕನಾಗಿರುವುದರಿಂದ ಎಲ್ಲಕ್ಕಿಂತಲೂ ಹೆಚ್ಚಿನ ವೇಗವುಳ್ಳವನಾಗಿರುವನು. ಕಣ್ಣುಗಳ ಗೋಳಕವಿಲ್ಲ; ಆದರೂ ಎಲ್ಲವನ್ನೂ ಯಥಾವತ್ತಾಗಿ ನೋಡುತ್ತಾನೆ. ಕಿವಿಗಳಿಲ್ಲ; ಆದರೂ ಎಲ್ಲರ ಮಾತುಗಳನ್ನು ಕೇಳುತ್ತಾನೆ. ಅಂತಃಕರಣವಿಲ್ಲ; ಆದರೂ ಜಗತ್ತಿಲ್ಲವನು ತಿಳಿದುಕೊಳ್ಳುತ್ತಾನೆ. ಮತ್ತು

ಆತನನ್ನು ಅವಧಿಸಹಿತವಾಗಿ ತಿಳಿಯುವವನು ಯಾವನೂ ಇಲ್ಲ. ಆತನನ್ನೇ ಸನಾತನನೆಂದೂ, ಸರ್ವಶ್ರೇಷ್ಠನೆಂದೂ, ಎಲ್ಲದರಲ್ಲಿಯೂ ಪರಿಪೂರ್ಣನಾಗಿರುವುದರಿಂದ ಪುರುಷನೆಂದೂ ಕರೆಯುವರು. ಆತನು ಇಂದ್ರಿಯಗಳಿಂದಲೂ, ಅಂತಃಕರಣದಿಂದಲೂ ಮಾಡಬಹುದಾದ ಎಲ್ಲಾ ಕಾರ್ಯಗಳನ್ನೂ ತನ್ನ ಸಾಮರ್ಥ್ಯದಿಂದಲೇ ಮಾಡುತ್ತಿರುವನು.

ಪ್ರಶ್ನೆ :—ಅನೇಕರು ಅವನನ್ನು 'ನಿಷ್ಕ್ರಿಯ' ನೆಂದೂ, ನಿರ್ಗುಣನೆಂದೂ ಹೇಳುತ್ತಾರಲ್ಲ ?

ಉತ್ತರ :—

ನ ತಸ್ಯ ಕಾರ್ಯಂ ಕರಣಂ ಚ ವಿದ್ಯತೇ ನ ತತ್ಸಮಶ್ಚಾ-
ಭ್ಯಧಿಕಶ್ಚದೃಶ್ಯತೇ ।
ಪರಾಸ್ಯ ಶಕ್ತಿರ್ವಿವಿಧೈವ ಶ್ರೂಯತೇ ಸ್ವಾಭಾವಿಕೀ ಜ್ಞಾನ
ಬಲಕ್ರಿಯಾ ಚ ॥

[ಶ್ವೇತಾಶ್ವತರ ಉಪನಿಷತ್, ಅ. ೬. ಮಂ. ೮]

ಇದು ಉಪನಿಷದ್ವಚನ. *ಪರಮಾತ್ಮನ ತದ್ರೂಪ ಕಾರ್ಯವಾವುದೂ ಇಲ್ಲ. ಮತ್ತು ಅವನಿಗೆ ಕರಣ ಅಂದರೆ ಅನಿವಾರ್ಯಸಾಧನ ಬೇರಾವುದೂ ಬೇಕಾಗಿಲ್ಲ. ಯಾವನೂ ಅವನಿಗೆ ಸಮನಿಲ್ಲ. ಹೆಚ್ಚಿನವನೂ ಇಲ್ಲ. ಅನಂತಜ್ಞಾನ, ಅನಂತಬಲ ಮತ್ತು ಅನಂತಕ್ರಿಯೆಗಳನ್ನುಳ್ಳ ಸರ್ವೋತ್ತಮ ಶಕ್ತಿಯು ಆತನಲ್ಲಿ ಸ್ವಾಭಾವಿಕವಾಗಿ ಅಂದರೆ ಸಹಜವಾಗಿ ಇದೆ ಎಂದು ಕೇಳಲ್ಪಡುತ್ತದೆ.

ಪರಮಾತ್ಮನು ನಿಷ್ಕ್ರಿಯನಾಗಿದ್ದಲ್ಲಿ ಜಗತ್ತಿನ ಉತ್ಪತ್ತಿ-ಸ್ಥಿತಿ-ಪ್ರಳಯಗಳನ್ನು ಮಾಡಲಾಗುತ್ತಿರಲಿಲ್ಲ. ಅವನು ವಿಭುವಾಗಿದ್ದರೂ ಚೇತನನಾಗಿರುವುದರಿಂದ ಅವನಲ್ಲಿ ಕ್ರಿಯೆಯೂ ಇದೆ.

ಪ್ರಶ್ನೆ :—ಅವನು ಕ್ರಿಯೆಮಾಡುತ್ತಿರಬಹುದಾದರೆ, ಅದು ಅಂತವುಳ್ಳದ್ದೋ ಅಥವಾ ಅನಂತವೋ ?

---

* ಜಗತ್ತು ಪ್ರಕೃತಿಯ ತದ್ರೂಪಕಾರ್ಯವಾಗಿರುವಂತೆ, ಪರಮಾತ್ಮನ ತದ್ರೂಪ ಕಾರ್ಯವಿಲ್ಲ. ಅಂದರೆ, ಪರಮಾತ್ಮನು ಯಾವುದರ ಉಪಾದಾನ ಕಾರಣವೂ ಅಲ್ಲ.

ಉತ್ತರ :—ಎಷ್ಟು ದೇಶಕಾಲಗಳಲ್ಲಿ ಕ್ರಿಯೆಮಾಡುವುದನ್ನು ಉಚಿತವೆಂದು ತಿಳಿಯುತ್ತಾನೋ ಅಷ್ಟೇ ದೇಶಕಾಲದಲ್ಲಿ ಕ್ರಿಯೆಮಾಡುತ್ತಾನೆ; ಹೆಚ್ಚೂ ಮಾಡುವುದಿಲ್ಲ; ಕಡಿಮೆಯೂ ಇಲ್ಲ. ಏಕೆಂದರೆ, ಅವನು ವಿದ್ವಾಂಸನು.

ಪ್ರಶ್ನೆ:—ಪರಮೇಶ್ವರನು ತನ್ನ ಅಂತವನ್ನು ತಿಳಿಯುತ್ತಾನೋ ಇಲ್ಲವೋ?

ಉತ್ತರ :—ಪರಮಾತ್ಮನು ಪೂರ್ಣ ಜ್ಞಾನಿಯಾಗಿದ್ದಾನೆ. ಯಾವುದರಿಂದ ಇದ್ದುದನ್ನು ಇದ್ದಂತೆಯೇ ತಿಳಿಯಲಾಗುವುದೋ, ಅದನ್ನೇ ಜ್ಞಾನವೆಂದು ಹೇಳುತ್ತಾರೆ. ಅಂದರೆ, ಯಾವ ವಸ್ತುವು ಹೇಗಿದೆಯೋ ಅದನ್ನು ಹಾಗೆಯೇ ತಿಳಿಯುವುದಕ್ಕೆ ಜ್ಞಾನವೆಂದು ಹೆಸರು. ಪರಮಾತ್ಮನು ಅನಂತನಾಗಿರುವುದರಿಂದ ತನ್ನನ್ನು ಅನಂತನೆಂದೇ ತಿಳಿಯುವುದು ಜ್ಞಾನ. ಅದಕ್ಕೆ ವಿರುದ್ಧವಾಗಿ ತಿಳಿಯುವುದು ಅಜ್ಞಾನ. ಅಂದರೆ ಅನಂತನನ್ನು ಸಾಂತನೆಂದೂ, ಸಾಂತನನ್ನು ಅನಂತನೆಂದೂ ತಿಳಿದುಕೊಳ್ಳುವುದಕ್ಕೆ ಭ್ರಾಂತಿಯೆಂದು ಹೆಸರು. "ಯಥಾರ್ಥದರ್ಶನಂ ಜ್ಞಾನಮಿತಿ"—ಯಾವುದರ ಗುಣ-ಕರ್ಮ-ಸ್ವಭಾವವು ಹೇಗಿರುವುದೋ, ಆ ಪದಾರ್ಥವನ್ನು ಹಾಗೆಯೇ ತಿಳಿದು ಸ್ವೀಕರಿಸುವುದೇ ಜ್ಞಾನ ಮತ್ತು ವಿಜ್ಞಾನವೆನ್ನಿಸುತ್ತದೆ. ಇದಕ್ಕೆ ವಿರುದ್ಧವಾದುದು ಅಜ್ಞಾನವು. ಆದುದರಿಂದ,

ಕ್ಲೇಶಕರ್ಮವಿಪಾಕಾಶಯೈರಪರಾಮೃಷ್ಟಃ ಪುರುಷ ವಿಶೇಷ ಈಶ್ವರಃ।

[ಯೋಗಸೂ. ಸಮಾಧಿಪಾದೇ ಸೂ. ೨೪]

ಯಾವನು ಅವಿದ್ಯೆ ಮೊದಲಾದ ಕ್ಲೇಶಗಳಿಂದಲೂ, 'ಕುಶಲ' 'ಅಕುಶಲ' 'ಇಷ್ಟ' 'ಅನಿಷ್ಟ' ಮತ್ತು ಮಿಶ್ರಫಲಗಳನ್ನು ಕೊಡುವ ಕರ್ಮಗಳ ವಾಸನೆಯಿಂದಲೂ ದೂರನಾಗಿರುವನೋ ಅವನು ಎಲ್ಲ ಜೀವರಿಗಿಂತ ವಿಶೇಷವಾದ ಈಶ್ವರನೆನ್ನಿಸುತ್ತಾನೆ.

ಪ್ರಶ್ನೆ :—

ಈಶ್ವರಾಸಿದ್ಧೇಃ ॥೧॥ ಸಾಂ. ಅ. ೧. ಸೂ. ೧೨.

ಪ್ರಮಾಣಾಭಾವಾನ್ನ ತತ್ಸಿದ್ಧಿಃ ॥೨॥ ಸಾಂ. ಅ. ೫. ಸೂ, ೧೦-

ಸಂಬಂಧಾಭಾವಾನ್ನಾನುಮಾನಮ್ ॥೩॥ ಸಾಂಖ್ಯ. ಸೂ. ಅ.೫. ಸೂ. ೧೧.

ಪ್ರತ್ಯಕ್ಷದಿಂದ ಪ್ರತಿಪಾದಿಸಲ್ಪಡಬಹುದಾದ ಈಶ್ವರನು ಸಿದ್ಧನಾಗುವುದಿಲ್ಲ. ॥೧॥ ಅವನ ಸಿದ್ಧಿಯಲ್ಲಿ ಪ್ರತ್ಯಕ್ಷಪ್ರಮಾಣವೇ ಇಲ್ಲದಿದ್ದಮೇಲೆ ಅನುಮಾನಾದಿ ಪ್ರಮಾಣಗಳು ಹೊಂದಲಾರವು ॥೨॥ ಮತ್ತು ವ್ಯಾಪ್ತಿಸಂಬಂಧವಿಲ್ಲದಿರುವುದರಿಂದ ಅನುಮಾನವೂ ಹೊಂದಲಾರದು. ಮತ್ತು ಪ್ರತ್ಯಕ್ಷಾನುಮಾನಗಳು ಇಲ್ಲದಿರುವುದರಿಂದ ಶಬ್ದ ಪ್ರಮಾಣಾದಿಗಳು ಕೂಡ ಹೊಂದಲಾರವು. ಆದುದರಿಂದ ದೇವರು ಇರುವನೆಂದು ಸಿದ್ಧಪಡಿಸುವುದಕ್ಕಾಗುವುದಿಲ್ಲ.

ಉತ್ತರ:—ಇಲ್ಲಿ, ಈಶ್ವರಸಿದ್ಧಿಯಲ್ಲಿ ಪ್ರತ್ಯಕ್ಷಪ್ರಮಾಣವಿಲ್ಲ. ಪರಮಾತ್ಮನು ಜಗತ್ತಿಗೆ ಉಪಾದಾನಕಾರಣನೂ ಅಲ್ಲ. ಮತ್ತು ಜೀವಾತ್ಮನಿಗೂ ವಿಲಕ್ಷಣನಾದುದರಿಂದ ಅಂದರೆ ಸರ್ವತ್ರ ಪರಿಪೂರ್ಣನಾಗಿರುವುದರಿಂದ ಆತನಿಗೆ ಪುರುಷನೆಂದು ಹೆಸರು. ಶರೀರದಲ್ಲಿ ವಾಸಿಸುತ್ತಿರುವುದರಿಂದ ಜೀವಾತ್ಮನಿಗೂ ಕೂಡ ಪುರುಷನೆಂದು ಸಂಜ್ಞೆ. ಏಕೆಂದರೆ–ಇದೇ ಪ್ರಕರಣದಲ್ಲಿ ಹೇಳಿದ್ದಾರೆ:—

ಪ್ರಧಾನಶಕ್ತಿ ಯೋಗಾಚ್ಚೇತ್ಸಂಗಾಪತ್ತಿಃ ॥೧॥
ಸತ್ತಾ ಮಾತ್ರಾಚ್ಚೇತ್ಸರ್ವೈಶ್ವರ್ಯಂ ॥೨॥
ಶ್ರುತಿರಪಿ ಪ್ರಧಾನಕಾರ್ಯತ್ವಸ್ಯ ॥೩॥

[ಸಾಂಖ್ಯ. ಸೂ. ಅ. ೫, ಸೂತ. ೮, ೯, ೧೨[

'ಪುರುಷನಿಗೆ ಪ್ರಧಾನಶಕ್ತಿಯ ಯೋಗವಾಗುವುದಾದರೆ, ಪುರುಷನಲ್ಲಿ ಸಂಗಾಪತ್ತಿ ಉಂಟಾಗುವುದು. ಅಂದರೆ, ಹೇಗೆ ಪ್ರಕೃತಿಯು ಸೂಕ್ಷ್ಮಾವಸ್ಥೆಯಿಂದ ಸಂಯುಕ್ತವಾಗಿ ಕಾರ್ಯರೂಪವಾಗಿದೆಯೋ ಹಾಗೆಯೇ ಪರಮಾತ್ಮನೂ ಕೂಡ ಸೂಕ್ಷ್ಮರೂಪದಿಂದ ಸ್ಥೂಲವಾಗಿ ಹೋಗಬೇಕಾಗುವುದು. ಆದ್ದರಿಂದ ಪರಮಾತ್ಮನು ಜಗತ್ತಿಗೆ ಉಪಾದಾನಕಾರಣನಾಗಿಲ್ಲ; ಆದರೆ, ನಿಮಿತ್ತಕಾರಣನಾಗಿರುತ್ತಾನೆ. ಜೀವನಿಂದ ಈ ಜಗತ್ತು ಉತ್ಪನ್ನವಾಗಿದ್ದರೆ, ಪರಮಾತ್ಮನು ಸರ್ವೈಶ್ವರ್ಯಯುಕ್ತನಾಗಿರುವಂತೆ ಜಗತ್ತು ಕೂಡ ಸರ್ವೈಶ್ವರ್ಯಯುಕ್ತವಾಗಿ

ಇರಬೇಕಾಗುತ್ತಿತ್ತು; ಹಾಗಿಲ್ಲ. ಇದರಿಂದ ಪರಮಾತ್ಮನು ಜಗತ್ತಿಗೆ ಉಪಾದಾನಕಾರಣನಾಗಿರುವುದಿಲ್ಲ; ಆದರೆ ನಿಮಿತ್ತಕಾರಣನಾಗಿರುತ್ತಾನೆ. ಏಕೆಂದರೆ ಉಪನಿಷತ್ತುಗಳೂ ಸಹ ಪ್ರಧಾನವನ್ನೇ ಜಗತ್ತಿನ ಉಪಾದಾನಕಾರಣವೆಂದು ಹೇಳುತ್ತವೆ. ಉದಾ :—

ಅಜಾಮೇಕಾಂ ಲೋಹಿತಶುಕ್ಲಕೃಷ್ಣಾಂ ಬಹ್ವೀಃ ಪ್ರಜಾಃ
ಸೃಜಮಾನಾಂ ಸ್ವರೂಪಾಃ ॥

[ಶ್ವೇತಾಶ್ವತರೋಪನಿಷತ್ ಅ. ೪. ಮಂ. ೫]

ಜನ್ಮರಹಿತವೂ, ಸತ್ವರಜಸ್ತಮೋಗುಣಗಳುಳ್ಳದೂ ಆದ ಪ್ರಕೃತಿಯೇ ಸ್ವರೂಪಾಕಾರದಿಂದ ಬಹು ಪ್ರಜಾರೂಪವಾಗಿ ಪರಿಣಮಿಸುತ್ತದೆ. ಅರ್ಥಾತ್ ಪ್ರಕೃತಿಯು ಪರಿಣಾಮಶೀಲವಾಗಿರುವುದರಿಂದ ಬೇರೆ ಅವಸ್ಥೆಗಳನ್ನು ಹೊಂದುತ್ತದೆ. ಮತ್ತು ಪುರುಷನು ಅಪರಿಣಾಮಶೀಲನಾದ್ದರಿಂದ ಅವಸ್ಥಾಂತರನಾಗಿ ಬೇರೆ ರೂಪವನ್ನೆಂದಿಗೂ ಹೊಂದುವುದಿಲ್ಲ. ಯಾವಾಗಲೂ ಕೂಟಸ್ಥನೂ, ನಿರ್ವಿಕಾರನೂ ಆಗಿರುತ್ತಾನೆ. ಆದ್ದರಿಂದ ಕಪಿಲಾಚಾರ್ಯರನ್ನು ಅನೀಶ್ವರವಾದಿಯೆಂದು ಹೇಳುವವನೇ ಅನೀಶ್ವರವಾದಿಯೇ ಹೊರತು ಕಪಿಲಾಚಾರ್ಯರು ಅನೀಶ್ವರವಾದಿಗಳಲ್ಲ. ಮತ್ತು ಮೀಮಾಂಸಾದರ್ಶನದ "ಧರ್ಮ-ಧರ್ಮಿ" ಪ್ರಯೋಗದಿಂದ ಈಶ್ವರನು ಸಿದ್ಧನಾಗುತ್ತಾನೆ. 'ಆತ್ಮ' ಶಬ್ದ ಕಂಡುಬರುವದರಿಂದ ವೈಶೇಷಿಕ-ನ್ಯಾಯಗಳೂ ಕೂಡ ಅನೀಶ್ವರವಾದಿಗಳಲ್ಲ. ಏಕೆಂದರೆ, ಸರ್ವಜ್ಞತ್ವಾದಿ ಧರ್ಮಯುಕ್ತನಾದವನನ್ನು ಮತ್ತು "ಅತತಿ ಸರ್ವತ್ರವ್ಯಾಪ್ನೋತೀತ್ಯಾತ್ಮಾ" ಯಾವನು ಸರ್ವತ್ರವ್ಯಾಪಕನೂ, ಸರ್ವಜ್ಞತ್ವಾದಿ ಧರ್ಮಯುಕ್ತನೂ ಸರ್ವಜೀವರ ಆತ್ಮನೂ ಆಗಿದ್ದಾನೋ, ಆತನನ್ನು ಮೀಮಾಂಸಾ-ವೈಶೇಷಿಕ ನ್ಯಾಯಗಳು ಈಶ್ವರನೆಂದೊಪ್ಪುತ್ತವೆ.

ಪ್ರಶ್ನೆ :—ದೇವರು ಅವತಾರವೆತ್ತುತ್ತಾನೋ ಇಲ್ಲವೋ ?

ಉತ್ತರ :—ಇಲ್ಲ. ಏಕೆಂದರೆ, 'ಅಜ ಏಕಪಾತ್ (೩೪-೫೩) ಸಪರ್ಯಗಾಚ್ಛುಕ್ರಮಕಾಯಂ' (೪೦-೮) ಇವು ಯಜುರ್ವೇದ

ವಚನಗಳು—ಈ ಮೊದಲಾದ ವಚನಗಳಿಂದ ಪರಮಾತ್ಮನು ಎಂದೂ ಜನ್ಮವೆತ್ತುವುದಿಲ್ಲವೆಂದು ಸಿದ್ಧವಾಗುತ್ತದೆ.

ಪ್ರಶ್ನೆ :—

ಯದಾ ಯದಾ ಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ ।
ಅಭ್ಯುತ್ಥಾನಮಧರ್ಮಸ್ಯ ತದಾತ್ಮಾನಂ ಸೃಜಾಮ್ಯಹಮ್ ॥

[ಭ.ಗೀ. ಅ. ೪, ಶ್ಲೋ. ೭]

ಯಾವ ಯಾವ ಸಮಯಗಳಲ್ಲಿ ಧರ್ಮವು ಲೋಪವಾಗುವುದೋ ಆಯಾ ಸಮಯಗಳಲ್ಲಿ ನಾನು ಶರೀರವನ್ನು ಧರಿಸುತ್ತೇನೆ. ಎಂದು ಶ್ರೀಕೃಷ್ಣನು ಹೇಳುತ್ತಾನೆ.

ಉತ್ತರ :—ಇದು ವೇದವಿರುದ್ಧವಾಗಿರುವುದರಿಂದ ಪ್ರಮಾಣವಲ್ಲ; ಮತ್ತು ಶ್ರೀಕೃಷ್ಣನು ಧರ್ಮಾತ್ಮನಾಗಿದ್ದು ಧರ್ಮವನ್ನು ಕಾಪಾಡಬೇಕೆಂದು ಅಪೇಕ್ಷಿಸುತ್ತಿದ್ದನು. ಆದ್ದರಿಂದಲೇ ಯುಗಯುಗಗಳಲ್ಲಿಯೂ "ತಾನು ಜನ್ಮವೆತ್ತಿ ಶ್ರೇಷ್ಠರನ್ನು ಕಾಪಾಡಿ, ದುಷ್ಟರನ್ನು ನಾಶಪಡಿಸಬೇಕೆಂಬ" ಅಪೇಕ್ಷೆಪಡುತ್ತಿದ್ದಲ್ಲಿ ಯಾವ ದೋಷವೂ ಇಲ್ಲ. ಏಕೆಂದರೆ, "ಪರೋಪಕಾರಾಯ ಸತಾಂ ವಿಭೂತಯಃ" ಸತ್ಪುರುಷರ ತನು ಮನ ಧನಗಳೆಲ್ಲವೂ ಪರೋಪಕಾರಕ್ಕಾಗಿಯೇ ಇರುತ್ತವೆ. ಆದರೆ, ಇಷ್ಟುಮಾತ್ರದಿಂದ ಶ್ರೀಕೃಷ್ಣನು ದೇವರಾಗಲಾರನು.

ಪ್ರಶ್ನೆ:—ಹಾಗಾದರೆ, ಲೋಕದಲ್ಲಿ ಇಪ್ಪತ್ತುನಾಲ್ಕು ದೇವರ ಅವತಾರಗಳು ಏಕಾಗುತ್ತವೆ? ಮತ್ತು ಅವನ್ನು ಅವತಾರಗಳೆಂದು ಏಕೆ ಭಾವಿಸುತ್ತಾರೆ?

ಉತ್ತರ :—ವೇದಾರ್ಥವನ್ನು ತಿಳಿಯದಿರುವುದರಿಂದಲೂ ಸಂಪ್ರದಾಯಿಗಳು ದಾರಿತಪ್ಪಿಸುವುದರಿಂದಲೂ ಸ್ವತಃ ಅವಿದ್ವಾಂಸರಾಗಿರುವುದರಿಂದಲೂ ಇಂತಹ ಭ್ರಮ-ಜಾಲದಲ್ಲಿ ಸಿಕ್ಕಿಕೊಂಡು ಅಪ್ರಮಾಣಿಕ ಮಾತುಗಳನ್ನು ಹೇಳುತ್ತಲೂ ಇದ್ದಾರೆ.

ಪ್ರಶ್ನೆ:—ಈಶ್ವರನು ಶರೀರವನ್ನು ಧರಿಸದಿದ್ದರೆ, ಕಂಸ. ರಾವಣ ಮೊದಲಾದ ದುಷ್ಟರು ಹೇಗೆ ನಾಶವಾಗುತ್ತಿದ್ದರು?

ಉತ್ತರ :—ಮೊದಲನೆಯದಾಗಿ, ಹುಟ್ಟದವನು ಅವಶ್ಯವಾಗಿ ಸಾಯುತ್ತಾನೆ. ಯಾವ ಪರಮಾತ್ಮನು ಯಾವುದೊಂದು ಶರೀರವನ್ನೂ ಧರಿಸದೆ, ಈ ಸಮಸ್ತ ಜಗತ್ತಿನ ಸೃಷ್ಟಿ ಸ್ಥಿತಿ ಪ್ರಳಯಗಳನ್ನು ನಡೆಸುತ್ತಿರುವನೋ ಅವನ ಮುಂದೆ ಕಂಸ, ರಾವಣಾದಿಗಳು ಒಂದು ಹುಳುವಿಗೆ ಸಹ ಸಮನಾಗಲಾರರು. ಆತನು ಸರ್ವವ್ಯಾಪಕನಾಗಿರುವುದರಿಂದ ಕಂಸ, ರಾವಣಾದಿಗಳ ಶರೀರಗಳಲ್ಲಿಯೂ ಸಹ ಪರಿಪೂರ್ಣನಾಗಿದ್ದಾನೆ. ಇಷ್ಟಬಂದಾಗ ಮರ್ಮಚ್ಛೇದನಮಾಡಿ ನಾಶಪಡಿಸಬಲ್ಲನು. ಇಂತಹ ಅನಂತ ಗುಣ, ಕರ್ಮಸ್ವಭಾವವುಳ್ಳ ಪರಮಾತ್ಮನು ಒಂದು ಕ್ಷುದ್ರಜೀವಿಯನ್ನು ಕೊಲ್ಲುವುದಕ್ಕೋಸ್ಕರ ಹುಟ್ಟು, ಸಾವುಗಳಲ್ಲಿ ಬೀಳುವನೆಂದು ಹೇಳುವವನಿಗೆ ' ಮೂರ್ಖತ್ವ'ವೆಂಬುದಕ್ಕಿಂತ ಬೇರೆ ' ಉಪಾಧಿ ' ಸಿಕ್ಕಬಲ್ಲುದೆ ? ಮತ್ತು ಯಾರಾದರೂ ಭಕ್ತಜನರನ್ನುದ್ಧರಿಸಲು ಜನ್ಮವೆತ್ತುತ್ತಾನೆಂದು ಹೇಳಿದರೆ ಅದೂ ಸತ್ಯವಲ್ಲ. ಏಕೆಂದರೆ, ತನ್ನ ಆಜ್ಞಾನುಸಾರ ನಡೆಯುವ ಭಕ್ತರನ್ನು ಉದ್ಧರಿಸುವ ಸಾಮರ್ಥ್ಯವು ಪರಮಾತ್ಮನಲ್ಲಿ ಇದ್ದೇ ಇರುತ್ತದೆ. ಪರಮಾತ್ಮನು ಪೃಥಿವೀ, ಸೂರ್ಯ, ಚಂದ್ರಾದಿ ಜಗತ್ತನ್ನು ಸೃಷ್ಟಿಸಿ, ಧರಿಸಿ, ಪಾಲಿಸುವ ಕರ್ಮಕ್ಕಿಂತ ಕಂಸ, ರಾವಣಾದಿಗಳನ್ನು ನಾಶಗೊಳಿಸುವುದೂ, ಗೋವರ್ಧನ ಪರ್ವತವನ್ನೆತ್ತುವುದೂ ದೊಡ್ಡ ಕೆಲಸಗಳೋ ? ಈ ಸೃಷ್ಟಿಯಲ್ಲಿ ಕಂಡುಬರುವ ಪರಮಾತ್ಮನ ಕಾರ್ಯಗಳನ್ನು ಕುರಿತು ಯೋಚಿಸುವುದಾದರೆ, ' ನ ಭೂತೋ ನ ಭವಿಷ್ಯತಿ ' ' ಆತನಿಗೆ ಸಮವಾದವನು ಇದುವರೆಗೆ ಯಾರೂ ಹುಟ್ಟಲ್ಲ ; ಮುಂದೆ ಹುಟ್ಟುವ ಸಂಭವವೂ ಇಲ್ಲ ; ಮತ್ತು, ಯುಕ್ತಿಯಿಂದಲೂ ಕೂಡ ಈಶ್ವರನ ಅವತಾರವು ಸಿದ್ಧವಾಗುವುದಿಲ್ಲ. ಅನಂತವಾದ ಆಕಾಶವು ಗರ್ಭದಲ್ಲಿ ಪ್ರವೇಶಿಸಿತೆಂದಾಗಲಿ, ಒಂದು ಮುಷ್ಟಿಯಲ್ಲಿ ಹಿಡಿಯಲ್ಪಟ್ಟಿತೆಂದಾಗಲಿ ಹೇಳುವುದು ಎಂದಿಗೂ ಸತ್ಯವಾಗಲಾರದು. ಏಕೆಂದರೆ—ಆಕಾಶವು ಅನಂತವಾಗಿದ್ದು ಎಲ್ಲಾ ವಸ್ತುಗಳಲ್ಲಿಯೂ ವ್ಯಾಪಕವಾಗಿರುತ್ತದೆ. ಆದ್ದರಿಂದ ಅದು ಒಳಕ್ಕೂ ಹೋಗಲಾರದು ; ಹೊರಕ್ಕೂ ಬರಲಾರದು. ಹಾಗೆಯೇ ಪರಮಾತ್ಮನೂ ಕೂಡ ಅನಂತನೂ, ಸರ್ವವ್ಯಾಪಕನೂ ಆಗಿರುವುದರಿಂದ ಆತನು ಬರುವುದಾಗಲಿ. ಹೋಗುವು

ಬಾಗಲಿ ಎಂದಿಗೂ ಸಿದ್ಧವಾಗಲಾರದು. ತಾನಿಲ್ಲದಿರುವ ಕಡೆಗೆ ಹೋಗುವುದೂ ಬರುವುದೂ ಸಂಭವಿಸುತ್ತದೆ. ಪರಮಾತ್ಮನು ಎಲ್ಲಿಂದಲೋ ಬಂದನೆಂದು ಹೇಳಲು ಅವನು ಗರ್ಭದಲ್ಲಿರಲಿಲ್ಲವೋ? ಮತ್ತು ಒಳಗಿನಿಂದ ಹೊರಹೊರಟನೆಂದು ಹೇಳುವುದಕ್ಕೆ ಮೊದಲು ಹೊರಗಿರಲಿಲ್ಲವೊ? ಪರಮಾತ್ಮನ ವಿಷಯದಲ್ಲಿ ವಿದ್ಯಾವಿಹೀನರ ಹೊರತು ಬೇರೆ ಯಾರು ತಾನೆ ಹೀಗೆ ಹೇಳುವರು? ಹಾಗೂ ಭಾವಿಸುವರು? ಆದುದರಿಂದ ಪರಮಾತ್ಮನ ನಿರ್ಗಮನ, ಆಗಮನ ಮತ್ತು ಜನ್ಮಮರಣಗಳು ಎಂದೂ ಸಿದ್ಧವಾಗಲಾರವು. ಇದರಿಂದ 'ಏಸು' ಮೊದಲಾದವರೂ ದೇವರ ಅವತಾರಗಳಲ್ಲವೆಂದು ತಿಳಿಯಬೇಕು, ಏಕೆಂದರೆ—ಅವರಲ್ಲಿ ರಾಗ, ದ್ವೇಷ, ಹಸಿವು, ಬಾಯಾರಿಕೆ, ಭಯ, ಶೋಕ, ದುಃಖ, ಸುಖ, ಜನ್ಮ ಮರಣ ಮೊದಲಾದ ಗುಣಗಳಿದ್ದುದರಿಂದ ಅವರು ಮನುಷ್ಯರಾಗಿದ್ದರು.

ಪ್ರ:—ದೇವರು ತನ್ನ ಭಕ್ತರ ಪಾಪಗಳನ್ನು ಕ್ಷಮಿಸುತ್ತಾನೋ ಇಲ್ಲವೊ?

ಉ:—ಇಲ್ಲ. ಏಕೆಂದರೆ, ಪಾಪವನ್ನು ಕ್ಷಮಿಸಿದರೆ, ಆತನ ನ್ಯಾಯವು ನಷ್ಟವಾಗಿಹೋಗುವುದಲ್ಲದೆ ಮನುಷ್ಯರೆಲ್ಲರೂ ಕೂಡ ಮಹಾ ಪಾಪಿಗಳಾಗಿ ಹೋಗುತ್ತಾರೆ. ಏಕೆಂದರೆ, ಕ್ಷಮಿಸುತ್ತಾನೆಂಬ ಸುದ್ದಿಯನ್ನು ಕೇಳಿದ ಕೂಡಲೆ ಅವರಿಗೆ ಪಾಪಾಚರಣೆಯಲ್ಲಿ ನಿರ್ಭಯತ್ವವೂ ಉತ್ಸಾಹವೂ ಉಂಟಾಗುತ್ತವೆ. ಹೇಗೆಂದರೆ, ರಾಜನು ಅಪರಾಧಿಗಳನ್ನು ಕ್ಷಮಿಸುತ್ತ ಬಂದರೆ, ಅವರು ಉತ್ಸಾಹದಿಂದ ಹೆಚ್ಚು ಹೆಚ್ಚಾಗಿ ದೊಡ್ಡ ದೊಡ್ಡ ಪಾಪಗಳನ್ನು ಮಾಡುತ್ತಾರೆ. ಏಕೆಂದರೆ, ರಾಜನು ತಮ್ಮ ಅಪರಾಧವನ್ನು ಕ್ಷಮಿಸಿಬಿಡುವನು ಮತ್ತು ಅವರಿಗೆ, ಕೈಮುಗಿಯುವುದೇ ಮೊದಲಾದ ಪ್ರಯತ್ನಗಳಿಂದ ಅಪರಾಧವನ್ನು ಮನ್ನಿಸಿಕೊಳ್ಳಬಹುದೆಂಬ ಭರವಸೆ ಹುಟ್ಟುವುದು. ಇದರಿಂದ ಅಪರಾಧವನ್ನು ಮಾಡದವರು ಕೂಡ ಅಪರಾಧಕ್ಕಂಜದೆ ಪಾಪಮಾಡುವುದರಲ್ಲಿ ತೊಡಗುತ್ತಾರೆ. ಆದುದರಿಂದ ಎಲ್ಲಾ ಕರ್ಮಗಳಿಗೂ ತಕ್ಕ ಫಲವನ್ನು ಕೊಡುವುದೇ ಪರಮಾತ್ಮನ ಕಾರ್ಯವಾಗಿರುತ್ತದೆ; ಕ್ಷಮಿಸುವುದಲ್ಲ.

ಪ್ರಶ್ನೆ:—ಜೀವನು ಸ್ವತಂತ್ರನೋ, ಪರತಂತ್ರನೋ?

ಉತ್ತರ :—ತನ್ನ ಕರ್ತವ್ಯ ಕರ್ಮಗಳಲ್ಲಿ ಸ್ವತಂತ್ರನೂ, ಈಶ್ವರನ ವ್ಯವಸ್ಥೆಯಲ್ಲಿ ಪರತಂತ್ರನೂ ಆಗಿದ್ದಾನೆ. 'ಸ್ವತಂತ್ರಃ ಕರ್ತಾ' ಇದು ಪಾಣಿನೀಯ ವ್ಯಾಕರಣದ ಸೂತ್ರವಿರುತ್ತದೆ. ಕರ್ಮ ಮಾಡುವುದರಲ್ಲಿ ಸ್ವತಂತ್ರನಾಗಿರುವವನೇ ಕರ್ತ.

ಪ್ರಶ್ನೆ : — ಸ್ವತಂತ್ರನೆಂದು ಯಾವನನ್ನು ಕರೆಯುತ್ತಾರೆ ?

ಉತ್ತರ :—ಯಾವನ ಅಧೀನದಲ್ಲಿ ಶರೀರವೂ, ಪ್ರಾಣವೂ, ಇಂದ್ರಿಯಗಳೂ, ಅಂತಃಕರಣಾದಿಗಳೂ ಇರುವುವೋ ಅವನನ್ನು. ಅವನು ಸ್ವತಂತ್ರನಲ್ಲದಿದ್ದರೆ, ಪಾಪ-ಪುಣ್ಯಗಳ ಫಲಗಳನ್ನು ಎಂದೂ ಹೊಂದುವುದಿಲ್ಲ. ಹೇಗೆಂದರೆ, ಸೇವಕನು ಸ್ವಾಮಿಯ ಅಪ್ಪಣೆಯಂತೆ ಮತ್ತು ಸೈನಿಕರು ಸೇನಾಧ್ಯಕ್ಷನ ಅಪ್ಪಣೆಯಂತೆ ಅಥವಾ ಪ್ರೇರಣೆಯಂತೆ ಯುದ್ಧದಲ್ಲಿ ಅನೇಕರನ್ನು ಕೊಂದರೂ, ಅವರು ಅಪರಾಧಿಗಳಾಗಲಾರರು. ಹಾಗೆಯೇ ಪರಮಾತ್ಮನ ಪ್ರೇರಣೆಯಿಂದಲೋ ಅಥವಾ ಅಧೀನತೆಯಿಂದಲೋ ಕೆಲಸವಾಗುವುದಾದರೆ ಜೀವನಿಗೆ ಪಾಪ-ಪುಣ್ಯಗಳು ಸೋಕಲಾರವು. ಆ ಫಲದ ಭಾಗಿಯು ಪ್ರೇರಕನಾದ ಪರಮೇಶ್ವರನೇ ಆಗಬೇಕಾಗುವುದು. ನರಕ, ಸ್ವರ್ಗ ಅಂದರೆ ದುಃಖ ಹಾಗೂ ಸುಖದ ಸ್ಪಾಪ್ತಿಯೂ ಪರಮಾತ್ಮನಿಗೇ ಆಗಬೇಕಾದೀತು. ಯಾವನಾದರೂ ಆಯುಧದಿಂದ ಮತ್ತೊಬ್ಬನನ್ನು ಕೊಂದರೆ, ಆ ಕೊಂದವನನ್ನು ಹಿಡಿದು ದಂಡಿಸುತ್ತಾರಲ್ಲದೆ, ಆಯುಧವನ್ನಲ್ಲ. ಹಾಗೆಯೇ ಪರಾಧೀನ ಜೀವನು ಪಾಪಪುಣ್ಯಗಳ ಫಲಕ್ಕೆ ಭಾಗಿಯಾಗಲಾರನು. ಆದ್ದರಿಂದ ತನ್ನ ಶಕ್ತಿಗೆ ಅನುಕೂಲವಾಗಿ ಕರ್ಮಮಾಡುವುದರಲ್ಲಿ ಜೀವನು ಸ್ವತಂತ್ರನಾಗಿದ್ದಾನೆ. ಆದರೆ, ಪಾಪಮಾಡಿದ ಬಳಿಕ ಪರಮಾತ್ಮನ ವ್ಯವಸ್ಥೆಯಲ್ಲಿ ಪರಾಧೀನನಾಗಿ ಪಾಪದ ಫಲವನ್ನನುಭವಿಸುತ್ತಿನೆ. ಆದುದರಿಂದ ಕರ್ಮಮಾಡುವುದರಲ್ಲಿ ಜೀವನು ಸ್ವತಂತ್ರನೂ, ಪಾಪದ ದುಃಖರೂಪ ಫಲವನ್ನನುಭವಿಸುವುದರಲ್ಲಿ ಪರತಂತ್ರನೂ ಆಗಿರುತ್ತಾನೆ.

ಪ್ರಶ್ನೆ :—ಪರಮಾತ್ಮನು ಜೀವಾತ್ಮನನ್ನು ಸೃಷ್ಟಿಸದೆಯೂ, ಆತನಿಗೆ ಯಾವ ಸಾಮರ್ಥ್ಯವನ್ನೂ ಕೊಡದೆಯೂ ಇದ್ದರೆ ಜೀವಾತ್ಮನು ಏನನ್ನೂ ಮಾಡಲಾರನು. ಆದ್ದರಿಂದ ಪರಮಾತ್ಮನ ಪ್ರೇರಣೆಯಿಂದಲೇ ಜೀವಾತ್ಮನು ಕರ್ಮಗಳನ್ನು ಮಾಡುತ್ತಾನೆ.

ಉತ್ತರ :—ಜೀವನು ಎಂದಿಗೂ ಹುಟ್ಟಲಿಲ್ಲ. ಅವನು ಜಗತ್ತಿನ ನಿಮಿತ್ತಕಾರಣವಾದ ಪರಮಾತ್ಮನಂತೆಯೂ ಉಪಾದಾನ ಕಾರಣವಾದ ಪ್ರಕೃತಿಯಂತೆಯೂ ಅನಾದಿಯಾಗಿದ್ದಾನೆ. ಜೀವನಿಗೆ ಶರೀರವನ್ನೂ, ಇಂದ್ರಿಯ ಗೋಳಕಗಳನ್ನೂ ಪರಮಾತ್ಮನೇ ರಚಿಸಿದ್ದಾನೆ. ಆದರೆ, ಅವೆಲ್ಲವೂ ಜೀವನ ಅಧೀನವಾಗಿಯೇ ಇರುತ್ತವೆ. ಮನಸ್ಸು, ಕರ್ಮ, ವಾಕ್ಯುಗಳಿಂದ ಪಾಪ-ಪುಣ್ಯಗಳನ್ನು ಮಾಡುವವನು ಭೋಕ್ತೃವು; ಈಶ್ವರನಲ್ಲ. ಯಾವನೋ ಒಬ್ಬ ಕೆಲಸಗಾರನು ಬೆಟ್ಟದಿಂದ ಕಬ್ಬಿಣವನ್ನು ತೆಗೆದನು. ಅದನ್ನು ಯಾವನೋ ವ್ಯಾಪಾರಿಯು ಕೊಂಡನು. ಅವನ ಅಂಗಡಿಯಿಂದ ಯಾವನೋ ಕರ್ಮಾರನು ಆ ಕಬ್ಬಿಣನನ್ನು ತೆಗೆದುಕೊಂಡುಹೋಗಿ ಕತ್ತಿ ಮಾಡಿದನು. ಯಾವನೋ ಸಿಪಾಯಿಯು ಕತ್ತಿಯನ್ನು ಅವನಿಂದ ತೆಗೆದುಕೊಂಡು, ಅದರಿಂದ ಯಾವನನ್ನೋ, ಕೊಂದುಹಾಕಿದನು. ಆಗ ರಾಜನು ಕಬ್ಬಿಣವನ್ನು ತೆಗೆದವನನ್ನಾಗಲೀ ಅದನ್ನು ಕೊಂಡುಕೊಂಡ ವ್ಯಾಪಾರಿಯನ್ನಾಗಲಿ, ಅದರಿಂದ ಕತ್ತಿಯನ್ನು ತಯಾರಿಸಿದವನನ್ನಾಗಲಿ, ಆ ಕತ್ತಿಯನ್ನಾಗಲಿ ಹಿಡಿದು ದಂಡಿಸುವುದಿಲ್ಲ. ಆದರೆ, ಆ ಕತ್ತಿಯಿಂದ ಸಾಯಿಸಿದವನೇ ದಂಡನೆಗೆ ಗುರಿಯಾಗುತ್ತಾನೆ. ಅಜೇ ರೀತಿಯಾಗಿ ಶರೀರಾದಿಗಳನ್ನು ಉತ್ಪತ್ತಿ ಮಾಡಿದ ಪರಮೇಶ್ವರನು ಅವನ ಕರ್ಮಗಳನ್ನು ಅನುಭವಿಸುವವನಲ್ಲ; ಆದರೆ ಜೀವನಿಗೆ ಕರ್ಮಫಲವನ್ನು ಕೊಡುವವನಾಗಿದ್ದಾನೆ. ಪರಮಾತ್ಮನು ಕರ್ಮ ಮಾಡುವವನಾಗಿದ್ದರೆ, ಯಾವ ಜೀವನೂ ಪಾಪವನ್ನು ಮಾಡುತ್ತಿರಲಿಲ್ಲ. ಏಕೆಂದರೆ—ಪರಮಾತ್ಮನು ಪವಿತ್ರನೂ ಧಾರ್ಮಿಕನೂ ಆಗಿರುವುದರಿಂದ, ಯಾವ ಜೀವನನ್ನೂ ಪಾಪಮಾಡುವುದಕ್ಕೆ ಪ್ರೇರಿಸುವುದಿಲ್ಲ. ಆದ್ದರಿಂದ ಜೀವನು ತನ್ನ ಕೆಲಸಗಳನ್ನು ಮಾಡುವುದರಲ್ಲಿ ಸ್ವತಂತ್ರನಾಗಿದ್ದಾನೆ. ಜೀವನು ತನ್ನ ಕಾರ್ಯಗಳನ್ನು ಮಾಡುವುದರಲ್ಲಿ ಹೇಗೆ ಸ್ವತಂತ್ರನೋ ಹಾಗೆಯೇ ಪರಮಾತ್ಮನು ಕೂಡ ತನ್ನ ಕೆಲಸಗಳನ್ನು ಮಾಡುವುದರಲ್ಲಿ ಸ್ವತಂತ್ರನಾಗಿದ್ದಾನೆ.

ಪ್ರಶ್ನೆ :—ಜೀವ-ಪರಮಾತ್ಮರ ಸ್ವರೂಪ, ಗುಣ, ಕರ್ಮ, ಸ್ವಭಾವಗಳು ಹೇಗಿವೆ?

ಉತ್ತರ :—ಇಬ್ಬರೂ ಚೇತನಸ್ವರೂಪರು. ಈ ಇಬ್ಬರ

ಸ್ವಭಾವವೂ ಪವಿತ್ರತೆ, ನಾಶವಾಗದಿರುವಿಕೆ, ಧಾರ್ಮಿಕತೆ ಮೊದಲಾದುವು. ಆದರೆ ಜಗತ್ತಿನ ಸೃಷ್ಟಿ, ಸ್ಥಿತಿ, ಪ್ರಳಯಗಳನ್ನು ನಡೆಸುವುದು, ಎಲ್ಲವನ್ನೂ ನಿಯಮದಲ್ಲಿಡುವುದು, ಜೀವರಿಗೆ ಪುಣ್ಯ-ಪಾಪಗಳ ಫಲವನ್ನು ಕೂಡುವುದು—ಮೊದಲಾದುವುಗಳು ಪರಮಾತ್ಮನ ಧಾರ್ಮಿಕ ಕರ್ತವ್ಯಗಳಾಗಿರುತ್ತವೆ. ಸಂತಾನೋತ್ಪತ್ತಿ, ಅವುಗಳ ಪಾಲನೆ, ಶಿಲ್ಪವಿದ್ಯೆ ಮೊದಲಾದ ಒಳ್ಳೆಯ ಮತ್ತು ಕೆಟ್ಟ ಕಾರ್ಯಗಳು ಜೀವನದಾಗಿರುತ್ತವೆ. ಪರಮಾತ್ಮನಲ್ಲಿ ನಿತ್ಯಜ್ಞಾನ, ಆನಂದ, ಅನಂತ ಬಲ ಮೊದಲಾದ ಗುಣಗಳಿರುತ್ತವೆ. ಜೀವನಲ್ಲಿ

ಇಚ್ಛಾದ್ವೇಷ ಪ್ರಯತ್ನ ಸುಖದುಃಖ ಜ್ಞಾನಾನ್ಯಾತ್ಮನೋ ಲಿಂಗಮಿತಿ ॥

[ನ್ಯಾಯಸೂತ್ರ ಅ. ೧. ಸೂ. ೧೦]

ಪ್ರಾಣಾಪಾನ ನಿಮೇಷೋನ್ಮೇಷ ಮನೋಗತೀಂದ್ರಿಯಾಂತರ-ವಿಕಾರಾಃ ।

ಸುಖದುಃಖ ಇಚ್ಛಾದ್ವೇಷೌ ಪ್ರಯತ್ನಾಶ್ಚಾತ್ಮನೋ ಲಿಂಗಾನಿ॥

[ವೈಶೇಷಿಕ ಸೂ. ಅ ೩-೨, ಸೂ ೪]

(ಇಚ್ಛಾ) ಪದಾರ್ಥಗಳನ್ನು ಹೊಂದಬೇಕೆಂಬ ಅಭಿಲಾಷೆ, (ದ್ವೇಷ) ವಿಷಯದಲ್ಲಿ ಅಪೇಕ್ಷೆಯಿಲ್ಲದಿರುವುದು. ಹಗೆತನ; (ಪ್ರಯತ್ನ) ಪುರುಷಾರ್ಥ, ಬಲ; (ಸುಖ) ಆನಂದ, (ದುಃಖ) ವಿಲಾಪ, ಅಪ್ರಸನ್ನತೆ (ಜ್ಞಾನ) ವಿವೇಕ-ಅರಿವು ಇವು ಎರಡು ದರ್ಶನಗಳಲ್ಲಿಯೂ ಹೇಳಿರುವ ಸಮಾನಗುಣಗಳು. ಆದರೆ ವೈಶೇಷಿಕದಂತೆ (ಪ್ರಾಣ) ಪ್ರಾಣವಾಯುವನ್ನು ಹೊರಹೊರಡಿಸುವುದು, (ಅಪಾನ) ಪ್ರಾಣವನ್ನು ಹೊರಗಿನಿಂದ ಒಳಕ್ಕೆ ತೆಗೆದುಕೊಳ್ಳುವುದು, ಕಣ್ಣು ಮುಚ್ಚುವುದು. (ಉನ್ಮೇಷ) ಕಣ್ಣು ತೆರೆಯುವುದು, (ಮನ) ನಿಶ್ಚಯ, ಸ್ಮರಣೆ, ಅಹಂಕಾರ, (ಗತಿ) ಚಲನೆ, (ಇಂದ್ರಿಯ) ಎಲ್ಲಾ ಇಂದ್ರಿಯಗಳನ್ನು ನಡೆಸುವುದು, (ಅಂತರವಿಕಾರ) ಬೇರೆ ಬೇರೆ ಹಸಿವು ಮೊದಲಾದವುಗಳಿಂದ ಯುಕ್ತವಾಗಿರುವುದು, ಜೀವಾತ್ಮನ ಗುಣಗಳು, ಪರಮಾತ್ಮನ ಗುಣ

ಗಳಿಂದ ಬೇರೆಯಾದುವು. ಇವುಗಳಿಂದಲೇ ಜೀವನಿರುವನೆಂದು ಅರಿಯಬೇಕು. ಏಕೆಂದರೆ ಅವನು ಸ್ಥೂಲನಲ್ಲ. ದೇಹದಲ್ಲಿ ಜೀವನಿರುವವರೆಗೆ ಮಾತ್ರ ಈ ಗುಣಗಳೂ ಬೆಳಗುತ್ತಿರುತ್ತವೆ. ಜೀವನು ಶರೀರವನ್ನು ಬಿಟ್ಟು ಹೊರಟುಹೋದಾಗ ಈ ಗುಣಗಳು ಶರೀರದಲ್ಲಿರುವುದಿಲ್ಲ. ಒಂದು ವಸ್ತುವು ಇರುವಾಗ, ಕೆಲವು ಗುಣಗಳು ಕಂಡು ಬಂದು, ಆ ವಸ್ತುವು ಹೋದಮೇಲೆ ಆ ಗುಣಗಳು ಕಂಡು ಬರದಿದ್ದರೆ ಅವು ಆ ವಸ್ತುವಿನ ಗುಣಗಳೇ ಸರಿ. ದೀಪ ಸೂರ್ಯ ಮೊದಲಾದುವುಗಳಿಲ್ಲದಿದ್ದರೆ, ಪ್ರಕಾಶಾದಿಗಳು ಹೇಗೆ ಇರುವುದಿಲ್ಲವೋ, ಅವುಗಳು ಇರುವುದರಿಂದ ಇರುವುವೋ, ಹಾಗೆಯೇ ಜೀವ-ಪರಮಾತ್ಮರ ಜ್ಞಾನವೂ ಕೂಡ ಅವರವರ ಗುಣಗಳಿಂದಲೇ ಆಗುತ್ತದೆ.

ಪ್ರಶ್ನೆ :—ಪರಮೇಶ್ವರನು ತ್ರಿಕಾಲದರ್ಶಿಯಾಗಿರುವುದರಿಂದ ಮುಂದಾಗುವುದನ್ನು ಸಹ ಬಲ್ಲನು. ಆತನು ನಿಶ್ಚಯಿಸಿದಂತೆಯೇ ಜೀವನು ನಡೆಯುವುದರಿಂದ, ಜೀವನು ಎಂದಿಗೂ ಸ್ವತಂತ್ರನಾಗಲಾರನು. ಮತ್ತು ದೇವರು ಜೀವನಿಗೆ ಶಿಕ್ಷೆಯನ್ನೂ ಕೂಡಲಾರನು. ಏಕೆಂದರೆ–ಅವನು ತನ್ನ ಜ್ಞಾನದಿಂದ ನಿಶ್ಚಯಿಸಿದಂತೆಯೇ ಜೀವನು ಮಾಡುತ್ತಾನೆ.

ಉತ್ತರ :—ಪರಮಾತ್ಮನು ತ್ರಿಕಾಲದರ್ಶಿಯೆಂಬುವುದು ಮೂರ್ಖತನ. ಏಕೆಂದರೆ, ಹಿಂದಿದ್ದರೂ ಈಗಿಲ್ಲದಿರುವುದು ಭೂತಕಾಲ. ಈಗಿಲ್ಲದೆ ಮುಂದೆ ಬರುವುದು ಭವಿಷ್ಯತ್ಕಾಲ. ಪರಮಾತ್ಮನಿಗೆ ಯಾವುದಾದರೊಂದು ಜ್ಞಾನವು ಹುಟ್ಟಿ, ಕಡೆಗೆ ಅದು ನಷ್ಟವಾಗುವುದೆ? ಮತ್ತು ಈಗಿಲ್ಲದ ಯಾವುದಾದರೊಂದು ಜ್ಞಾನವು ಮುಂದೆ ಉಂಟಾಗುವುದೇ? ಆದುದರಿಂದ ಪರಮೇಶ್ವರನ ಜ್ಞಾನವು ಯಾವಾಗಲೂ ಏಕರಸವಾಗಿಯೂ, ಅಖಂಡವಾಗಿಯೂ ಇರುತ್ತದೆ. ಭೂತ-ಭವಿಷ್ಯತ್‌ಗಳು ಜೀವರಿಗೋಸ್ಕರವಿರುತ್ತವೆ. ಆದರೆ, ಜೀವರ ಕರ್ಮಗಳ ಸಂಬಂಧದಿಂದ ಪರಮಾತ್ಮನು ತ್ರಿಕಾಲಜ್ಞನೆಂದು ಹೇಳಬಹುದು. ಸ್ವತಃ ಅಲ್ಲ. ಹೇಗೆ ಸ್ವತಂತ್ರತೆಯಿಂದ ಜೀವನು ಮಾಡುತ್ತಾನೆಯೋ, ಹಾಗೆಯೇ ಈಶ್ವರನು ಸರ್ವಜ್ಞತೆಯಿಂದ ತಿಳಿದುಕೊಳ್ಳುತ್ತಾನೆ. ಮತ್ತು ಹೇಗೆ ಈಶ್ವರನು ತಿಳಿದುಕೊಂಡಿರುತ್ತಾನೆಯೋ, ಹಾಗೆಯೇ

ಜೀವನು ಮಾಡುತ್ತಾನೆ. ಅರ್ಥಾತ್, ಭೂತ-ಭವಿಷ್ಯತ್-ವರ್ತಮಾನದ ಜ್ಞಾನದಲ್ಲಿಯೂ, ಫಲಕೊಡುವುದರಲ್ಲೂ ಪರಮಾತ್ಮನು ಸ್ವತಂತ್ರನು. ಜೀವನು ಕೆಂಚಿದ್ವರ್ತಮಾನದ ಜ್ಞಾನದಲ್ಲಿಯೂ, ಕರ್ಮಮಾಡುವುದರಲ್ಲೂ ಸ್ವತಂತ್ರನು. ಈಶ್ವರನ ಜ್ಞಾನವು ಅನಾದಿಯಾಗಿರುವುದರಿಂದ, ಕರ್ಮಗಳ ಜ್ಞಾನದಂತೆಯೇ, ದಂಡವನ್ನು ಕೊಡುವ ಜ್ಞಾನವೂ ಕೂಡ ಅನಾದಿಯಾಗಿಯೇ ಇರುತ್ತದೆ. ಆತನ ಈ ಎರಡು ಜ್ಞಾನಗಳೂ ಸತ್ಯವೇ ಆಗಿರುತ್ತವೆ. ಕರ್ಮಜ್ಞಾನವು ಸತ್ಯವಾಗಿಯೂ, ದಂಡ ಜ್ಞಾನವು ಅಸತ್ಯವಾಗಿಯೂ ಇರುವುದು ಸಂಭವವೇ? ಆದುದರಿಂದ ಇದರಲ್ಲೇನೂ ದೋಷಬರುವದಿಲ್ಲ.

ಪ್ರಶ್ನೆ :—ಜೀವನು ಶರೀರದಲ್ಲಿ ಬೇರೆಯಾಗಿದ್ದು ವ್ಯಾಪಕನಾಗಿರುವನೊ? ಅಥವಾ ಪರಿಚ್ಛಿನ್ನನೋ?

ಉತ್ತರ :— ಪರಿಚ್ಛಿನ್ನನಾಗಿದ್ದಾನೆ. ವ್ಯಾಪಕನಾಗಿದ್ದರೆ, ಜಾಗ್ರತ್, ಸ್ವಪ್ನ, ಸುಷುಪ್ತಿ, ಮರಣ, ಜನ್ಮ, ಸಂಯೋಗ, ವಿಯೋಗ, ಬರುವುದು, ಹೋಗುವುದು ಇವೆಂದೂ ಸಿದ್ಧಿಸಲಾರವು. ಆದ್ದರಿಂದ ಜೀವನ ಸ್ವರೂಪವು ಅಲ್ಪಜ್ಞ ಮತ್ತು ಅಲ್ಪ ಅಂದರೆ ಸೂಕ್ಷ್ಮವಾಗಿರುತ್ತದೆ. ಪರಮಾತ್ಮನು ಸ್ವರೂಪತಃ ಅತಿ ಸೂಕ್ಷ್ಮಕ್ಕಿಂತಲೂ ಸೂಕ್ಷ್ಮನೂ, ಅನಂತನೂ, ಸರ್ವಜ್ಞನೂ ಮತ್ತು ಸರ್ವವ್ಯಾಪಕನೂ ಆಗಿದ್ದಾನೆ. ಆದುದರಿಂದಲೇ ಜೀವೇಶ್ವರರೊಳಗೆ ವ್ಯಾಪ್ಯ-ವ್ಯಾಪಕ ಸಂಬಂಧವಿದೆ.

ಪ್ರಶ್ನೆ :—ಒಂದು ಪ್ರದೇಶದಲ್ಲಿ ಒಂದು ವಸ್ತುವಿದ್ದರೆ, ಆದೇ ಪ್ರದೇಶದಲ್ಲಿ ಮತ್ತೊಂದು ಪದಾರ್ಥವಿರುವುದು ಸಂಭವವಲ್ಲ. ಆದ್ದರಿಂದ ಜೀವಪರಮಾತ್ಮರಲ್ಲಿ ಸಂಯೋಗ-ಸಂಬಂಧವಿರಬಹುದು; ವ್ಯಾಪ್ಯ-ವ್ಯಾಪಕ ಸಂಬಂಧವಿರಲಾರದು.

ಉತ್ತರ :—ಈ ನಿಯಮವು ಸಮಾನಾಕೃತಿಯುಳ್ಳ ವಸ್ತುಗಳಿಗೆ ಮಾತ್ರ ಅನ್ವಯಿಸುತ್ತದೆ. ಬೇರೆ ಬೇರೆ ಆಕೃತಿಯುಳ್ಳ ವಸ್ತುಗಳಿಗೆ ಸಂಬಂಧಿಸುವುದಿಲ್ಲ. ಹೇಗೆಂದರೆ-ಕಬ್ಬಿಣವು ಸ್ಥೂಲವಾಗಿದ್ದು, ಅಗ್ನಿಯು ವ್ಯಾಪಕವಾಗಿ, ಎರಡೂ ಒಂದೇ ಸ್ಥಳದಲ್ಲಿರುತ್ತವೆ. ಹಾಗೆಯೇ ಜೀವನು ಪರಮಾತ್ಮನಿಗಿಂತ ಸ್ಥೂಲನಾಗಿಯೂ ಪರಮಾತ್ಮನು ಜೀವನಿಗಿಂತ

ಸೂಕ್ಷ್ಮನಾಗಿಯೂ ಇರುವುದರಿಂದ ಪರಮಾತ್ಮನು ವ್ಯಾಪಕನು ಮತ್ತು ಜೀವನು ವ್ಯಾಪ್ಯನು. ಈ ವ್ಯಾಪ್ಯ-ವ್ಯಾಪಕ ಸಂಬಂಧವಿರುವಂತೆಯೇ ಸೇವ್ಯ-ಸೇವಕ, ಆಧಾರಾಧೇಯ ಸ್ವಾಮಿ-ಭೃತ್ಯ, ರಾಜಾ-ಪ್ರಜೆ, ಪಿತಾ ಪುತ್ರ ಮೊದಲಾದ ಸಂಬಂಧಗಳೂ ಕೂಡ ಪರಮಾತ್ಮ-ಜೀವಾತ್ಮರಿಗೆ ಇರುತ್ತವೆ.

ಪ್ರಶ್ನೆ :—ಇಬ್ಬರೂ ಪರಸ್ಪರ ಬೇರೆಯಾಗಿರುವುದಾದರೆ :—

ಪ್ರಜ್ಞಾನಂ ಬ್ರಹ್ಮ ॥೧॥ ಅಹಂ ಬ್ರಹ್ಮಾಸ್ಮಿ ॥೨॥
ತತ್ತ್ವಮಸಿ ॥೩॥ ಅಯಮಾತ್ಮಾ ಬ್ರಹ್ಮ ॥೪॥

—ವೇದಗಳ ಈ ಮಹಾವಾಕ್ಯಗಳಿಗೆ ಅರ್ಥವೇನು?

ಉತ್ತರ :—ಇವು ವೇದವಾಕ್ಯಗಳೇ ಅಲ್ಲ; ಬ್ರಾಹ್ಮಣ ಗ್ರಂಥಗಳ ವಚನಗಳು. ಮತ್ತು ಇವುಗಳ ಹೆಸರು ಮಹಾವಾಕ್ಯಗಳೆಂದು ಯಾವ ಸತ್ಯ-ಶಾಸ್ತ್ರದಲ್ಲಿಯೂ ಬರೆದಿಲ್ಲ. ಅರ್ಥವೇನೆಂದರೆ :-"ಅಹಂ= ನಾನು, ಬ್ರಹ್ಮ=ಬ್ರಹ್ಮಸ್ಥನಾಗಿ, ಅಸ್ಮಿ=ಇದ್ದೇನೆ." ಇಲ್ಲಿ "ತಾತ್ಸ್ಥ್ಯೋಪಾಧಿ" ಎಂಬ ಲಕ್ಷಣವಿರುತ್ತದೆ. ಹೇಗೆಂದರೆ, "ಮಂಚಾಃ ಕ್ರೋಶಂತಿ= ಮಂಚಗಳು ಅರಚುತ್ತವೆ"-ಈ ವಾಕ್ಯದಲ್ಲಿ ಜಡಪದಾರ್ಥವಾದ ಮಂಚದಲ್ಲಿ ಅರಚುವ ಸಾಮರ್ಥ್ಯವಿಲ್ಲ. ಆದ್ದರಿಂದ "ಮಂಚದಮೇಲಿರುವ ಮನುಷ್ಯನು ಕಿರುಚುತ್ತಾನೆ" ಎಂದು ಅರ್ಥಮಾಡುವಂತೆ, ಇಲ್ಲಿಯೂ ತಿಳಿಯಬೇಕು. ಎಲ್ಲಾ ಪದಾರ್ಥಗಳೂ ಬ್ರಹ್ಮಸ್ಥವಾಗಿಯೇ ಇರುವಾಗ "ಜೀವವು ಬ್ರಹ್ಮಸ್ಥವಾಗಿರುತ್ತದೆ" ಎಂದು ಪ್ರತ್ಯೇಕವಾಗಿ ಹೇಳಬೇಕಾದ ಅಗತ್ಯವೇನೆಂದು ಯಾರಾದರೂ ಕೇಳಬಹುದು. ಎಲ್ಲಾ ಪದಾರ್ಥಗಳೂ ಬ್ರಹ್ಮಸ್ಥವಾಗಿಯೇ ಇರುವವೆಂಬುದು ನಿಜ. ಆದರೆ, ಜೀವನಂತೆ ಸಾಧರ್ಮ್ಯಯುಕ್ತವಾಗಿಯೂ, ಪರಮಾತ್ಮನ ಸಮೀಪಸ್ಥನಾಗಿಯೂ ಇರುವ ಪದಾರ್ಥವು ಬೇರೊಂದಿಲ್ಲ. ಜೀವನಿಗೆ ಪರಮಾತ್ಮನ ವಿಷಯಕವಾದ ಜ್ಞಾನವುಂಟಾಗಿ, ಮುಕ್ತಿಯಲ್ಲಿ ಆತನೊಡನೆ ಸಾಕ್ಷಾತ್ಸಂಬಂಧವೂ ಕೂಡ ಉಂಟಾಗುತ್ತದೆ. ಆದ್ದರಿಂದ ಜೀವನಿಗೆ ಬ್ರಹ್ಮನೊಡನೆ "ತಾತ್ಸ್ಥ್ಯೋಪಾಧಿ" ಮತ್ತು "ತತ್ಸಹಚರಿತೋಪಾಧಿ" ಎಂಬ ವಿಶೇಷ ಸಂಬಂಧವಿರುತ್ತದೆ. ಅಂದರೆ, ಜೀವನು ಬ್ರಹ್ಮನಿಗೆ

ಸಹಕಾರಿ ಆಗಿದ್ದಾನೆ. ಅದರಿಂದ ಜೀವನೂ, ಬ್ರಹ್ಮನೂ ಒಂದೇ ಅಲ್ಲ. ಹೇಗೆಂದರೆ—ಒಬ್ಬನು ಮತ್ತೊಬ್ಬನಿಗೆ "ನಾವಿಬ್ಬರೂ ಒಂದೇ" ಅಂದರೆ, ನಮ್ಮಿಬ್ಬರಿಗೂ ಪರಸ್ಪರ ವಿರೋಧವಿರುವುದಿಲ್ಲ" ಎಂದು ಹೇಳುವಂತೆ, ಯಾವ ಜೀವನು ಸಮಾಧಿಸ್ಥನಾಗಿ, ಪ್ರೇಮಬದ್ಧನಾಗಿ, ಮಗ್ನನಾಗುತ್ತಾನೋ, ಅವನು "ನಾನೂ ಬ್ರಹ್ಮನೂ ಒಂದು, ಅಂದರೆ ಅವಿರೋಧಿಗಳೂ, ಸಾಮಾನಸ್ಥಾನೀಯರೂ ಆಗಿದ್ದೇವೆ" ಎಂದು ಹೇಳಿಕೊಳ್ಳಬಲ್ಲನು. ಪರಮಾತ್ಮನ ಗುಣಕರ್ಮಸ್ವಭಾವಗಳಿಗೆ ಅನುಕೂಲವಾಗಿ ತನ್ನ ಗುಣ-ಕರ್ಮ-ಸ್ವಭಾವಗಳನ್ನು ಸರಿಪಡಿಸಿಕೊಂಡಿರುವ ಜೀವನು ಮಾತ್ರ ಸಾಧಮ್ಯ್ರದಿಂದ ಪರಮಾತ್ಮನೊಡನೆ ಐಕ್ಯವನ್ನು ಹೇಳಿಕೊಳ್ಳಬಲ್ಲನು.

ಪ್ರಶ್ನೆ:—ಒಳ್ಳೆಯದು. ಹಾಗಾದರೆ (ತತ್) ಬ್ರಹ್ಮನು, (ತ್ವಂ) ಜೀವನಾದ ನೀನು, (ಅಸಿ) ಆಗಿದ್ದೀಯೆ, ಎಂಬುದಕ್ಕೆ ಹೇಗೆ ಅರ್ಥ ಮಾಡುತ್ತೀರಿ? "ಎಲ್ಲೆ, ಜೀವನೇ, ತ್ವಂ=ನೀನು, ತತ್=ಆ ಬ್ರಹ್ಮವಾಗಿ, ಅಸಿ=ಇದ್ದೀಯೆ"—ಎಂದು ಆ ವಾಕ್ಯದ ಅರ್ಥವಿರುತ್ತದೆ.

ಉತ್ತರ:—ನೀವು 'ತತ್' ಶಬ್ದದಿಂದ ಯಾವುದನ್ನು ಗ್ರಹಿಸುತ್ತೀರಿ? 'ಬ್ರಹ್ಮ'; 'ಬ್ರಹ್ಮ'ಪದದ ಅನುವೃತ್ತಿಯೆಲ್ಲಿಂದ ತಂದಿರಿ?

ಪ್ರಶ್ನೆ:—**"ಸದೇವ ಸೋಮ್ಯೇದಮಗ್ರ ಆಸೀದೇಕಮೇವಾದ್ವಿತೀಯಂ ಬ್ರಹ್ಮ"** ಎಂಬ ಹಿಂದಣ ವಾಕ್ಯದಿಂದ.

ಉತ್ತರ:—ನೀವು ಛಾಂದೋಗ್ಯೋಪನಿಷತ್ತಿನ ದರ್ಶನವನ್ನು ಕೂಡ ಮಾಡಿಲ್ಲ. ಅಲ್ಲಿ ಬ್ರಹ್ಮಶಬ್ದದ ಪಾಠವೇ ಇಲ್ಲ. ಹಾಗೆ ನೋಡಿದ್ದರೆ. ಹೀಗೇಕೆ ಸುಳ್ಳು ಹೇಳುತ್ತಿದ್ದಿರಿ? ಛಾಂದೋಗ್ಯದಲ್ಲಿ **"ಸದೇವ ಸೌಮ್ಯೇದಮಗ್ರ ಆಸೀದೇಕಮೇವಾದ್ವಿತೀಯಂ॥** ಛಾಂ। ಪ್ರ ೬। ಖಂ. ೨। ಮಂ ೧। ಎಂದು ಪಾಠವಿರುತ್ತದೆ. ಅಲ್ಲಿ ಬ್ರಹ್ಮಶಬ್ದವಿರುವುದಿಲ್ಲ.

ಪ್ರಶ್ನೆ:—ಹಾಗಾದರೆ 'ತತ್' ಎಂಬ ಶಬ್ದದಿಂದ ತಾವೇನು ಗ್ರಹಿಸುತ್ತೀರಿ?

ಉತ್ತರ :—

ಸ ಯ ಏಷೋಣಿಮಾ ॥ ಐತದಾತ್ಮ್ಯಮಿದಗ್ಂ ಸರ್ವಂ ।
ತತ್ಸತ್ಯಗ್ಂ ಸ ಆತ್ಮಾ ತತ್ತ್ವಮಸಿ ಶ್ವೇತಕೇತೋ ಇತಿ ॥

[ಪ್ರ-೬ ಖಂ-೮ ಮಂ. ೬-೭]

ಆ ಪರಮಾತ್ಮನು ತಿಳಿದುಕೊಳ್ಳುವುದಕ್ಕೆ ಯೋಗ್ಯನು. ಆತನು ಅತ್ಯಂತ ಸೂಕ್ಷ್ಮನು. ಈ ಸಮಗ್ರ ಜಗತ್ತಿಗೂ, ಜೀವರಿಗೂ ಆತನೇ ಆತ್ಮನು. ಆತನೇ ಸತ್ಯಸ್ವರೂಪನು. ತನ್ನ ಆತ್ಮವು ತಾನೇ ಆಗಿರುವವನು. ಮಗು, ಶ್ವೇತಕೇತು! "ತದಾತ್ಮಕಸ್ತದಂತರ್ಯಾಮ್ಯಾತ್ಮವಸಿ" ಆ ಅಂತರ್ಯಾಮಿಯಾದ ಪರಮಾತ್ಮನೊಡನೆ ಯುಕ್ತನಾಗಿದ್ದೀಯೆ" ಇದೇ ಅರ್ಥವು ಉಪನಿಷತ್ತುಗಳಿಗೆ ಅನುಕೂಲವಾಗಿರುತ್ತದೆ. ಬೃಹದಾರಣ್ಯಕದಲ್ಲಿ ಯಾಜ್ಞವಲ್ಕ್ಯ ಮಹರ್ಷಿಯು ತನ್ನ ಹೆಂಡತಿಯಾದ ಮೈತ್ರೇಯಿಗೆ ಉಪದೇಶಿಸಿರುವುದೇನೆಂದರೆ !—

ಯ ಆತ್ಮನಿ ತಿಷ್ಠನ್ನಾತ್ಮನೋಽನ್ತರೋ ಯಮಾತ್ಮಾ ನ
ವೇದ ಯಸ್ಯಾಽಽತ್ಮಾ ಶರೀರಮ್ ।
ಯ ಆತ್ಮನೋಽಂತರೋ ಯಮಯತಿ ಸತ ಆತ್ಮಾಽಂತರ್ಯಾ
ಮ್ಯಮೃತಃ ॥

ಇದು ಬೃಹದಾರಣ್ಯಕದ ವಚನ–ಮಹರ್ಷಿ ಯಾಜ್ಞವಲ್ಕ್ಯರು ತಮ್ಮ ಪತ್ನಿ ಮೈತ್ರೇಯಿಗೆ ಹೇಳುತ್ತಾರೆ. ಹೇ ಮೈತ್ರೇಯಿ! ಯಾವ ಪರಮೇಶ್ವರನು ಜೀವಾತ್ಮನಲ್ಲಿದ್ದರೂ ಜೀವಾತ್ಮನಿಗಿಂತ ಬೇರೆಯಾಗಿರುವನೋ, ಮೂಢನಾದ ಜೀವಾತ್ಮನು ಯಾವನನ್ನು ತನ್ನಲ್ಲಿ ವ್ಯಾಪಕನಾಗಿರುವನೆಂದು ತಿಳಿಯಲಾರನೋ, ಯಾವನಿಗೆ ಜೀವಾತ್ಮವು ಶರೀರದಂತಿರುವುದೋ, ಅಂದರೆ–ಶರೀರದಲ್ಲಿ ಜೀವನಿರುವಂತೆ, ಜೀವಾತ್ಮನಲ್ಲಿ ಯಾವನು ವ್ಯಾಪಕನಾಗಿರುವನೋ, ಯಾವನು ಜೀವರಿಂದ ಭಿನ್ನವಾಗಿದ್ದು, ಜೀವರ ಪಾಪ–ಪುಣ್ಯಗಳಿಗೆ ಸಾಕ್ಷಿಯಾಗಿರುತ್ತಾ, ಅವುಗಳ ಫಲವನ್ನು ಜೀವರಿಗೆ ಕೊಟ್ಟು ನಿಯಮದಲ್ಲಿಡುತ್ತಾನೋ ಆ ಅವಿನಾಶೀಸ್ವರೂಪನೇ ನಿನಗೂ ಅಂತರ್ಯಾಮಿ

ಆತ್ಮ ಅಂದರೆ ನಿನ್ನಲ್ಲಿ ವ್ಯಾಪಕನಾಗಿದ್ದಾನೆ. ಅವನನ್ನು ನೀನು ತಿಳಿ. ಈ ಮೊದಲಾದ ವಚನಗಳಿಗೆ ಯಾವನಾದರೂ ಬೇರೊಂದರ್ಥವನ್ನು ಮಾಡಬಲ್ಲನೆ? "ಅಯಮಾತ್ಮಾ ಬ್ರಹ್ಮ"—ಅಂದರೆ ಸಮಾಧಿಸ್ಥನಾದ ಯೋಗಿಗೆ ಪರಮಾತ್ಮನು ಪ್ರತ್ಯಕ್ಷನಾದಾಗ, "ನನ್ನಲ್ಲಿ ವ್ಯಾಪಕನಾಗಿರುವ ಈ ಬ್ರಹ್ಮನೇ ಸರ್ವತ್ರ ವ್ಯಾಪಕನಾಗಿದ್ದಾನೆ" ಎಂದು ಹೇಳುತ್ತಾನೆ. ಆದ್ದರಿಂದ ಜೀವ-ಪರಮಾತ್ಮರು ಒಂದೇ ಎಂದು ಹೇಳುತ್ತಿರುವ ಈಗಿನ ವೇದಾಂತಿಗಳು ವೇದಾಂತಶಾಸ್ತ್ರವನ್ನು ತಿಳಿದವರಲ್ಲ.

ಪ್ರಶ್ನೆ:—

ಅನೇನಾಽಽತ್ಮನಾ ಜೀವೇನಾನು ಪ್ರವಿಶ್ಯ ನಾಮರೂಪೇ ವ್ಯಾಕರವಾಣಿ ॥

[ಛಾಂ. ಪ್ರ. ೬. ಖಂ ೩. ಮಂ ೨]

ತತ್ಸೃಷ್ಟ್ವಾ ತದೇವಾನುಪ್ರಾವಿಶತ್ ॥

[ತೈತ್ತರೀಯೋಪನಿಷತ್ ಬ್ರಹ್ಮಾನಂದವಲ್ಲಿ ಅನು ೬]

ಪರಮಾತ್ಮನು ಹೇಳುವುದೇನೆಂದರೆ:—ನಾನು ಜಗತ್ತನ್ನೂ, ಶರೀರಗಳನ್ನೂ ರಚಿಸಿ, ಜಗತ್ತಿನಲ್ಲಿ ವ್ಯಾಪಕನಾಗಿ ಮತ್ತು ಜೀವರೂಪದಿಂದ ಶರೀರದಲ್ಲಿ ಪ್ರವೇಶಿಸಿ, ನಾಮ-ರೂಪಗಳನ್ನು ವಿಸ್ತರಿಸುತ್ತೇನೆ. 'ಪರಮಾತ್ಮನು ಜಗತ್ತನ್ನೂ, ಶರೀರಗಳನ್ನು ರಚಿಸಿ, ಆತನೇ ಅವುಗಳಲ್ಲಿ ಪ್ರವೇಶಿಸಿದ್ದಾನೆ' ಈ ಮೊದಲಾದ ಶ್ರುತಿಗಳಿಗೆ ಬೇರೆ ಅರ್ಥವನ್ನು ಹೇಗೆ ಮಾಡಬಲ್ಲಿರಿ?

ಉತ್ತರ:—ನಿಮಗೆ ಪದ, ಪದಾರ್ಥ ಮತ್ತು ವಾಕ್ಯಾರ್ಥಗಳ ಜ್ಞಾನವಿದ್ದಿದ್ದರೆ, ಇಂತಹ ಅನರ್ಥವನ್ನು ಎಂದೂ ಮಾಡುತ್ತಿದ್ದಿಲ್ಲ. ಏಕೆಂದರೆ, ಮೊದಲನೆಯದು ಪ್ರವೇಶವೆಂದೂ, ಎರಡನೆಯದು ಅನು ಅಂದರೆ ಅನಂತರ ಪ್ರವೇಶವೆಂದೂ ತಿಳಿದುಕೊಳ್ಳಿರಿ. ಪರಮಾತ್ಮನು ಶರೀರಗಳಲ್ಲಿ ಪ್ರವಿಷ್ಟರಾದ ಜೀವರಲ್ಲಿ ಅನುಪ್ರವಿಷ್ಟನಂತಾಗಿ ವೇದಗಳ ಮೂಲಕ ಎಲ್ಲಾ ನಾಮರೂಪಾದಿಗಳ ವಿದ್ಯೆಯನ್ನು ಪ್ರಕಟಪಡಿಸುತ್ತಾನೆ. ಮತ್ತು ಶರೀರದಲ್ಲಿ ಜೀವನನ್ನು ಪ್ರವೇಶಪಡಿಸಿ ತಾನು

ಅವನಲ್ಲಿ ಅನುಪ್ರವಿಷ್ಟನಾಗುತ್ತಿದ್ದಾನೆ. ನಿಮಗೆ ಅನುಶಬ್ದಾರ್ಥದ ಜ್ಞಾನವಿದ್ದಿದ್ದರೆ, ಇಂತಹ ವಿಪರೀತಾರ್ಥವನ್ನು ಎಂದೂ ಮಾಡುತ್ತಿರಲಿಲ್ಲ.

ಪ್ರಶ್ನೆ:—

ಸೋಽಯಂ ದೇವದತ್ತೋ ಯ ಉಷ್ಣಕಾಲೇ ಕಾಶ್ಯಾಂ
ದೃಷ್ಟಃ ಸ ಇದಾನೀಂ ಪ್ರಾವೃಟ್‌ಸಮಯೇ ಮಥುರಾಯಾಂ
ದೃಶ್ಯತೇ।

ಬೇಸಿಗೆಯ ಸಮಯದಲ್ಲಿ ನಾನು ಕಾಶಿಯಲ್ಲಿ ನೋಡಿದ್ದ ದೇವದತ್ತನನ್ನೇ, ಈಗ ಮಳೆಗಾಲದಲ್ಲಿ ಮಥುರೆಯಲ್ಲಿ ನೋಡುತ್ತಿದ್ದೇನೆ—ಈ ವಾಕ್ಯದಲ್ಲಿ ಕಾಶೀದೇಶವನ್ನೂ, ಉಷ್ಣಕಾಲವನ್ನೂ ಬಿಟ್ಟುಬಿಟ್ಟು, ಶರೀರ ಮಾತ್ರದಲ್ಲಿ ಲಕ್ಷ್ಯವಿಟ್ಟರೆ ನಮಗೆ ದೇವದತ್ತನೇ ಲಕ್ಷಿತನಾಗುತ್ತಾನೆ. ಇದೇ ರೀತಿಯಾಗಿ ಭಾಗತ್ಯಾಗಲಕ್ಷಣದಿಂದ ಪರಮಾತ್ಮನ ಪರೋಕ್ಷ ದೇಶ, ಕಾಲ, ಮಾಯೆ ಉಪಾಧಿಯನ್ನೂ, ಜೀವಾತ್ಮನ ಈ ದೇಶ, ಕಾಲ, ಅವಿದ್ಯೆ ಮತ್ತು ಅಲ್ಪಜ್ಞತೆಯೆಂಬ ಉಪಾಧಿಯನ್ನೂ ಬಿಟ್ಟುಬಿಟ್ಟು, ಚೇತನಮಾತ್ರದಲ್ಲಿ ಲಕ್ಷ್ಯವಿಟ್ಟರೆ ಇವೆರಡರಲ್ಲಿಯೂ ಒಂದೇ ಬ್ರಹ್ಮವಸ್ತುವು ಲಕ್ಷಿತವಾಗುತ್ತದೆ. ಎರಡು ಪದಾರ್ಥಗಳಲ್ಲಿ ಕೆಲವು ಗುಣಗಳನ್ನು ತೆಗೆದುಕೊಂಡು, ಕೆಲವನ್ನು ಬಿಟ್ಟುಬಿಡುವುದಕ್ಕೆ ಭಾಗತ್ಯಾಗಲಕ್ಷಣವೆಂದು ಹೆಸರು. ಈ ಲಕ್ಷಣದಿಂದ ಪರಮಾತ್ಮನ ಸರ್ವಜ್ಞತ್ವಾದಿ ವಾಚ್ಯಾರ್ಥವನ್ನು, ಜೀವನ ಅಲ್ಪಜ್ಞತ್ವಾದಿ ವಾಚ್ಯಾರ್ಥವನ್ನು ಬಿಟ್ಟುಕೊಟ್ಟು, ಚೇತನಮಾತ್ರವಾದ ಲಕ್ಷ್ಯಾರ್ಥವನ್ನು ಗ್ರಹಿಸುವುದರಿಂದ ಅದ್ವೈತವು ಸಿದ್ಧವಾಗುತ್ತದೆ. ಇದಕ್ಕೆ ನೀವೇನು ಹೇಳಬಲ್ಲಿರಿ ?

ಉ :—ಮೊದಲನೆಯದಾಗಿ ನೀವು ಜೀವೇಶ್ವರರನ್ನು ನಿತ್ಯರೆಂದು ಒಪ್ಪುತ್ತೀರೋ ಅಥವಾ ಅನಿತ್ಯರೆಂದೋ ?

ಪ್ರ :—ಇವರಿಬ್ಬರೂ ಉಪಾಧಿಜನ್ಯರೂ, ಕಲ್ಪಿತರೂ ಆಗಿರುವುದರಿಂದ ಅನಿತ್ಯರೆಂದು ತಿಳಿಯುತ್ತೇವೆ.

ಉ :—ಆ ಉಪಾಧಿಯಾದರೂ ನಿತ್ಯವೋ, ಅನಿತ್ಯವೋ ?

ಪ್ರ :—ನಮ್ಮ ಮತದಲ್ಲಿ—

ಜೀವೇಶೌ ಚ ವಿಶುದ್ಧಾಚಿದ್ವಿಭೇದಸ್ತು ತಯೋರ್ದ್ವಯೋಃ ।
ಅವಿದ್ಯಾ ತಚ್ಚಿತೋರ್ಯೋಗಃ ಷಡಸ್ಮಾಕಮನಾದಯಃ ॥೧॥
ಕಾರ್ಯೋಪಾಧಿರಯಂ ಜೀವಃ ಕಾರಣೋಪಾಧಿರೀಶ್ವರಃ ।
ಕಾರ್ಯಕಾರಣತಾಂ ಹಿತ್ವಾ ಪೂರ್ಣಬೋಧೋವಶಿಷ್ಯತೇ ॥೨॥

ಇವು 'ಸಂಕ್ಷೇಪ ಶಾರೀರಿಕ' ಮತ್ತು 'ಶಾರೀರಿಕ ಭಾಷ್ಯ'ದ ಕಾರಿಕೆಗಳಿರುತ್ತವೆ. ವೇದಾಂತಿಗಳಾದ ನಾವು ೧ ಜೀವ, ೨ ಈಶ್ವರ, ೩ ಬ್ರಹ್ಮ, ೪ ಜೀವೇಶ್ವರರಲ್ಲಿರುವ ವಿಶೇಷ ಭೇದ, ೫ ಅವಿದ್ಯೆ–ಅಜ್ಞಾನ, ೬ ಅವಿದ್ಯಾ ಚೈತನ್ಯಗಳ ಪರಸ್ಪರ ಯೋಗ ಈ ಆರು ಪದಾರ್ಥಗಳನ್ನು ಅನಾದಿಯೆಂದು ಒಪ್ಪುತ್ತೇವೆ. ಆದರೆ, ಬ್ರಹ್ಮ ನೊಬ್ಬನೇ ಅನಾದಿ ಮತ್ತು ಅನಂತನಾಗಿರುತ್ತಾನೆ. ಉಳಿದ ಐದು ಪ್ರಾಗಭಾಗದಂತೆ ಅನಾದಿ ಸಾಂತವಾಗಿರುತ್ತವೆ. ಅಜ್ಞಾನವಿರುವ ವರೆಗೆ ಮಾತ್ರ ಇವೈದೂ ಇರುತ್ತವೆ. ಇವುಗಳ ಆದಿಯು ತಿಳಿಯದಿರು ವುದರಿಂದ ಇವು ಅನಾದಿಗಳು. ಜ್ಞಾನವುಂಟಾದ ಬಳಿಕ ಇವು ನಷ್ಟ ವಾಗಿ ಹೋಗುವುದರಿಂದ ಸಾಂತಗಳು ಅಂದರೆ ನಷ್ಟವಾಗಿ ಹೋಗು ವಂತಹುದು.

ಉತ್ತರ :—ನಿಮ್ಮ ಈ ಎರಡು ಶ್ಲೋಕಗಳೂ ಅಶುದ್ಧವಾಗಿರು ತ್ತವೆ. ಏಕೆಂದರೆ, ನಿಮ್ಮ ಮತದಲ್ಲಿ ಅವಿದ್ಯೆಯ ಯೋಗವಿಲ್ಲದೆ ಜೀವನೂ, ಮಾಯೆಯ ಯೋಗವಿಲ್ಲದೆ ಈಶ್ವರನೂ ಸಿದ್ಧವಾಗಲಾರರು. ಆದ್ದರಿಂದ 'ತಚ್ಚಿತೋರ್ಯೋಗಃ' ಎಂಬ ನೀವೆಣಿಸಿದ ಆರನೆಯ ಪದಾರ್ಥವು ಉಳಿಯುವುದಿಲ್ಲ. ಏಕೆಂದರೆ—ಅದು ಅವಿದ್ಯೆ, ಮಾಯೆ, ಜೀವ ಈಶ್ವರ ರಲ್ಲಿ ಚರಿತಾರ್ಥವಾಯಿತು. ಮತ್ತು ಬ್ರಹ್ಮ, ಮಾಯೆ ಮತ್ತು ಅವಿದ್ಯೆ ಗಳ ಯೋಗವಿಲ್ಲದೆ ಈಶ್ವರನಾಗುವುದೇ ಅಸಂಭವವಿರುವಾಗ, ಅವಿದ್ಯೆ ಮತ್ತು ಬ್ರಹ್ಮನಿಂದ ಈಶ್ವರನನ್ನು ಪ್ರತ್ಯೇಕವಾಗಿ ಎಣಿಸುವುದು ವ್ಯರ್ಥ. ಆದ್ದರಿಂದ ನಿಮ್ಮ ಮತದಲ್ಲಿ ಬ್ರಹ್ಮ ಮತ್ತು ಅವಿದ್ಯೆ ಇವೆರಡು ಪದಾ ರ್ಥಗಳು ಸಿದ್ಧವಾಗುವವೇ ಹೊರತು, ಆರಲ್ಲ, ಮತ್ತು ಮೊದಲು ನೀವು ಅನಂತ, ನಿತ್ಯ, ಶುದ್ಧ, ಬುದ್ಧ, ಮುಕ್ತ ಸ್ವಭಾವದವನೂ ಸರ್ವ

ವ್ಯಾಪಕನೂ ಆದ ಪರಮಾತ್ಮನಲ್ಲಿ ಅಜ್ಞಾನವನ್ನು ಸಿದ್ಧಪಡಿಸಿದ ಮೇಲೆಯೇ ಕಾರ್ಯೋಪಾಧಿಯಿಂದ ಜೀವನನ್ನು, ಕಾರಣೋಪಾಧಿಯಿಂದ ಈಶ್ವರನನ್ನು ಸಿದ್ಧಪಡಿಸುವುದು ಸಂಭವ. ಅವನ ಒಂದು ಭಾಗದಲ್ಲಿ ಸ್ವಾಶ್ರಯವೂ, ಸ್ವವಿಷಯವೂ ಆದ ಅಜ್ಞಾನವನ್ನು ಸರ್ವತ್ರ ಮತ್ತು ಅನಾದಿ ಎಂದು ತಿಳಿಯುವಿರಾದರೆ, ಬ್ರಹ್ಮವೆಲ್ಲವೂ ಶುದ್ಧವಾಗಿರಲಾರದು. ಮತ್ತು ಬಂದು ಭಾಗದಲ್ಲಿ ಅಜ್ಞಾನವಿರುವುದಾದರೆ, ಅದು ಪರಿಚ್ಛಿನ್ನವಾಗಿರುವುದರಿಂದ ಅತ್ತಿತ್ತ ಸಂಚರಿಸುತ್ತಲೇ ಇರುತ್ತದೆ. ಈ ಅಜ್ಞಾನವು ಎಲ್ಲೆಲ್ಲಿ ಹೋಗುವುದೋ, ಅಲ್ಲಲ್ಲಿನ ಬ್ರಹ್ಮವು ಅಜ್ಞಾನವುಳ್ಳದ್ದಾಗಿಯೂ, ಯಾವ ಯಾವ ಪ್ರದೇಶವನ್ನು ಬಿಡುತ್ತಾ ಹೋಗುತ್ತದೋ, ಆಯಾ ಪ್ರದೇಶದ ಬ್ರಹ್ಮವು ಜ್ಞಾನವುಳ್ಳದ್ದಾಗಿಯೂ ಆಗುತ್ತಿರುವುದು. ಇದರಿಂದ ಯಾವ ಭಾಗದ ಬ್ರಹ್ಮನನ್ನೂ ಅನಾದಿ ಶುದ್ಧ ಜ್ಞಾನಯುಕ್ತವೆಂದು ಹೇಳಲಾರಿರಿ. ಅಜ್ಞಾನದ ಎಲ್ಲೆಯಲ್ಲಿರುವ ಬ್ರಹ್ಮವು ಅಜ್ಞಾನವನ್ನು ತಿಳಿಯುವುದು. ಒಳಗಿನ ಮತ್ತು ಹೊರಗಿನ ಬ್ರಹ್ಮವು ಖಂಡಖಂಡವಾಗಿ ಹೋಗುವುದು. ತುಂಡಾಗಿ ಹೋಗಲಿ, ಬ್ರಹ್ಮನಿಗೇನು ಹಾನಿ—ಎನ್ನುವಿರಾದರೆ ಅದು ಅಖಂಡವಾಗಲಾರದು. ಮತ್ತು ಅಖಂಡವಾಗಿದ್ದರೆ ಅಜ್ಞಾನಿಯಲ್ಲ. ಮತ್ತು ಜ್ಞಾನಾಭಾವ ಅಥವಾ ವಿಪರೀತ ಜ್ಞಾನವೂ ಕೂಡ ಗುಣವಾಗಿರುವುದರಿಂದ ಯಾವುದಾದರೂ ದ್ರವ್ಯದೊಂದಿಗೆ ನಿತ್ಯಸಂಬಂಧ ಹೊಂದಿರುವುದು. ಹೀಗಿದ್ದಲ್ಲಿ, ಸಮವಾಯ ಸಂಬಂಧವಿರುವುದರಿಂದ ಎಂದಿಗೂ ಅನಿತ್ಯವಾಗಲಾರದು. ಶರೀರದ ಒಂದು ಭಾಗದಲ್ಲಿ ಘಾಯವಾದರೆ, ಸರ್ವತ್ರ ನೋವು ಹರಡುವಂತೆ, ಒಂದು ಭಾಗದಲ್ಲಿ ಅಜ್ಞಾನ, ಸುಖ, ದುಃಖ, ಕ್ಲೇಶಗಳ ಉಂಟಾಗುವಿಕೆಯಿಂದ ಬ್ರಹ್ಮವೆಲ್ಲವೂ ದುಃಖಾದಿಗಳನ್ನನುಭವಿಸುವುದು. 'ಕಾರ್ಯೋಪಾಧಿ' ಅಂದರೆ ಅಂತಃಕರಣದ ಉಪಾಧಿಯ ಸಂಯೋಗದಿಂದ ಬ್ರಹ್ಮನನ್ನು ಜೀವನೆಂದು ಭಾವಿಸುವಿರಾದರೆ, ನಾವು ಕೇಳುತ್ತೇವೆ—ಬ್ರಹ್ಮನು ವ್ಯಾಪಕನೋ, ಪರಿಚ್ಛಿನ್ನನೋ? ವ್ಯಾಪಕನು ಮತ್ತು ಉಪಾಧಿಯು ಪರಿಚ್ಛಿನ್ನ ಅಂದರೆ ಏಕದೇಶಿ ಮತ್ತು ಬೇರೆ ಬೇರೆ ಇದೆ—ಎನ್ನುವಿರಾದರೆ ಅಂತಃಕರಣವು ಸಂಚರಿಸುತ್ತಿರುತ್ತದೋ ಇಲ್ಲವೋ?

ಉ :—ಸಂಚರಿಸುತ್ತಿರುತ್ತದೆ.

ಪ್ರ :—ಅಂತಃಕರಣದೊಡನೆ ಬ್ರಹ್ಮನೂ ಕೂಡ ಸಂಚರಿಸುತ್ತಿರುತ್ತಾನೋ ಅಥವಾ ಸ್ಥಿರವಾಗಿರುತ್ತಾನೋ?

ಉ :—ಸ್ಥಿರವಾಗಿರುತ್ತಾನೆ.

ಪ್ರ :—ಹಾಗಾದರೆ, ಅಂತಃಕರಣವು ಯಾವ ಭಾಗವನ್ನು ಬಿಟ್ಟು ತೊಲಗುವುದೋ, ಆ ಭಾಗದ ಬ್ರಹ್ಮವು ಅಜ್ಞಾನರಹಿತವಾಗಿಯೂ, ಅಂತಃಕರಣವು ಯಾವ ಭಾಗಕ್ಕೆ ಹೋಗುವುದೋ ಆ ಭಾಗದ ಶುದ್ಧ ಬ್ರಹ್ಮವು ಅಜ್ಞಾನಿಯಾಗಿಯೂ ಆಗಬೇಕಾಗುತ್ತದೆ. ಇದರಿಂದ ಬ್ರಹ್ಮನು ಒಂದುಕ್ಷಣ ಅಜ್ಞಾನಿಯಾಗಿಯೂ, ಒಂದುಕ್ಷಣ ಜ್ಞಾನಿಯಾಗಿಯೂ ಇರಬೇಕಾಗುತ್ತದೆ. ಹಾಗಾಗುವುದಾದರೆ ಮೋಕ್ಷಬಂಧಗಳೂ ಕೂಡ ಕ್ಷಣಿಕವಾಗಿ ಹೋಗುತ್ತವೆ. ಒಬ್ಬನು ನೋಡಿದ ವಸ್ತುವನ್ನು ಮತ್ತೊಬ್ಬನು ಹೇಗೆ ಸ್ಮರಿಸಲಾರನೋ, ಹಾಗೆಯೇ ನಿನ್ನೆ ಕಂಡು–ಕೇಳಿದ ವಿಷಯಗಳ ಜ್ಞಾನವು ಇರಲಾರದು- ಏಕೆಂದರೆ—ನೋಡಿದ ಕೇಳಿದ ದೇಶ–ಕಾಲಗಳೇ ಬೇರೆ. ಸ್ಮರಿಸುವ ದೇಶಕಾಲಗಳೇ ಬೇರೆ. ಬ್ರಹ್ಮನು ಒಬ್ಬನೇ ಆಗಿರುವನು ಎಂಬುವಿರಾದರೆ, ಆತನು ಏಕೆ ಸರ್ವಜ್ಞನಾಗಿರಲಾರನು? ಅಂತಃಕರಣವು ಭಿನ್ನಭಿನ್ನವಾಗಿರುವುದರಿಂದ ಬ್ರಹ್ಮನೂ ಭಿನ್ನಭಿನ್ನನಾಗಬಹುದೆಂದು ಹೇಳುವಿರಾದರೆ ಅದು ಜಡವು; ಅದರಲ್ಲಿ ಜ್ಞಾನವುಂಟಾಗುವ ಸಂಭವವಿಲ್ಲ. ' ಕೇವಲ ಬ್ರಹ್ಮನಿಗಾಗಲಿ, ಕೇವಲ ಅಂತಃಕರಣಕ್ಕಾಗಲಿ ಜ್ಞಾನವುಂಟಾಗದು. ಆದರೆ, ಅಂತಃಕರಣದಲ್ಲಿರುವ ಚಿದಾಭಾಸಕ್ಕೆ ಜ್ಞಾನವುಂಟಾಗುತ್ತದೆಂದು ಹೇಳುವಿರಾದರೆ ಆಗಲೂ ಚೇತನನಿಗೇ ಅಂತಃಕರಣದ ಮೂಲಕ ಜ್ಞಾನವುಂಟಾಯಿತು. ಹಾಗಿದ್ದಲ್ಲಿ, ಆತನು ನೇತ್ರಗಳ ಮೂಲಕ ಅಲ್ಪಜ್ಞನೂ ಏಕಾಗಬೇಕು? ಆದ್ದರಿಂದ ಕಾರಣೋಪಾಧಿ ಮತ್ತು ಕಾರ್ಯೋಪಾಧಿಗಳ ಸಂಯೋಗದಿಂದ ಬ್ರಹ್ಮನನ್ನು ಜೀವ ಮತ್ತು ಈಶ್ವರನನ್ನಾಗಿ ಮಾಡಲಾರಿರಿ. ಮತ್ತು ' ಈಶ್ವರ ' ಎಂಬ ಹೆಸರು ಬ್ರಹ್ಮನದೇ ಆಗಿರುತ್ತದೆ. ಬ್ರಹ್ಮನಿಂದ ಬೇರೆಯಾಗಿದ್ದು, ಅನಾದಿಯೂ, ಉತ್ಪತ್ತಿರಹಿತನೂ ಅಮೃತಸ್ವರೂಪನೂ ಆದ ಜೀವಾತ್ಮನಿಗೆ ಜೀವನೆಂದು ಹೆಸರು. ಚಿದಾಭಾಸನಿಗೆ ಜೀವನೆಂದು ಹೇಳುವುದಾದರೆ ಅದು ಕ್ಷಣಿಕ

ವಾಗಿರುವುದರಿಂದ ನಷ್ಟವಾಗಿ ಹೋಗುತ್ತದೆ. ಹಾಗಾದರೆ ಮೋಕ್ಷ ಸುಖವನ್ನು ಅನುಭವಿಸುವವರು ಯಾರು? ಆದ್ದರಿಂದ ಬ್ರಹ್ಮನು ಜೀವನಾಗಿಯಾಗಲಿ, ಜೀವನು ಬ್ರಹ್ಮನಾಗಿಯಾಗಲಿ ಹಿಂದೆ ಆಗಿರಲಿಲ್ಲ; ಈಗ ಆಗಿಲ್ಲ; ಮತ್ತು ಮುಂದಾದರೂ ಆಗುವ ಸಂಭವವಿಲ್ಲ.

ಪ್ರಶ್ನೆ:—ಹಾಗಾದರೆ. **'ಸದೇವ ಸೋಮ್ಯೇದಮಗ್ರ ಆಸೀದೇಕಮೇವಾದ್ವಿತೀಯಂ'**

[ಛಾಂದೋಗ್ಯೋಪನಿಷತ್]

ಅದ್ವೈತ ಸಿದ್ಧಿಯು ಹೇಗಾಗಬಲ್ಲದು? ನಮ್ಮ ಮತದಲ್ಲಿ ಬ್ರಹ್ಮನಿಗಿಂತಲೂ ಬೇರೆಯಾದ ಸಜಾತೀಯ, ವಿಜಾತೀಯ ಸ್ವಗತ ಅವಯವಭೇದವಿಲ್ಲದಿರುವುದರಿಂದ, ಬ್ರಹ್ಮನೊಬ್ಬನೇ ಸಿದ್ಧವಾಗುತ್ತಾನೆ. ಜೀವನು ಬೇರೆಯಾಗಿದ್ದರೆ, ಅದ್ವೈತಸಿದ್ಧಿಯು ಹೇಗಾಗುತ್ತದೆ?

ಉತ್ತರ:—ಈ ಭ್ರಾಂತಿಯಲ್ಲಿ ಸಿಕ್ಕಿ ಏಕೆ ಭಯಪಡುತ್ತೀರಿ? ಆದರ ಫಲವೇನೆಂದರಿಯಲು ವಿಶೇಷ್ಯ-ವಿಶೇಷಣ ವಿದ್ಯೆಗಳ ಫಲದ ಜ್ಞಾನವನ್ನು ಗಳಿಸಿರಿ. **"ವ್ಯಾವರ್ತಕಂ ವಿಶೇಷಣಂ ಭವತೀತಿ"** ಅಂದರೆ ವಿಶೇಷಣವು ಭೇದಕಾರಕವಾಗಿರುತ್ತದೆ—ಎನ್ನುವಿರಾದರೆ, **"ಪ್ರವರ್ತಕಂ ಪ್ರಕಾಶಕಮಪಿ ವಿಶೇಷಣಂ ಭವತೀತಿ"**—ವಿಶೇಷಣವು ಪ್ರವರ್ತಕ ಮತ್ತು ಪ್ರಕಾಶಕವೂ ಆಗಿರುತ್ತದೆ. ಎಂಬುದನ್ನೂ ಒಪ್ಪಿಕೊಳ್ಳಿರಿ. ಅದ್ವೈತವೆಂಬ ವಿಶೇಷಣವು 'ಬ್ರಹ್ಮ'ನದೆಂದು ತಿಳಿಯಿರಿ. ಅದ್ವೈತ ವಸ್ತುವನ್ನು, ಅಂದರೆ—ಬ್ರಹ್ಮನನ್ನು ಅನೇಕವಾದ ಜೀವರು ಮತ್ತು ತತ್ವಗಳಿಂದ ಬೇರೆ ಮಾಡುವುದು ಅದರಲ್ಲಿನ ವ್ಯಾವರ್ತಕ ಧರ್ಮ. ಮತ್ತು ಬ್ರಹ್ಮನ ಏಕತ್ವದ ಪ್ರವೃತ್ತಿಮಾಡುವುದು ವಿಶೇಷಣದ ಪ್ರಕಾಶಧರ್ಮ. ಹೇಗೆಂದರೆ—**"ಅಸ್ಮಿನ್ನಗರೇಽದ್ವಿತೀಯೋ ಧನಾಢ್ಯೋ ದೇವದತ್ತಃ। ಅಸ್ಯಾಂ ಸೇನಾಯಾಂ ಅದ್ವಿತೀಯಃ ಶೂರವೀರೋ ವಿಕ್ರಮಸಿಂಹಃ"**—ಒಬ್ಬನು ಮತ್ತೊಬ್ಬನಿಗೆ 'ಈ ಪಟ್ಟಣದಲ್ಲಿ ದೇವದತ್ತನು ಅದ್ವಿತೀಯನಾದ ಶ್ರೀಮಂತನು. ಈ ಸೈನ್ಯದಲ್ಲಿ ವಿಕ್ರಮಸಿಂಹನು ಅದ್ವಿತೀಯ

ಶೂರ' ಎಂದು ಹೇಳಿದರೆ, ಈ ವಾಕ್ಯಗಳಿಗೆ "ಈ ಪಟ್ಟಣದಲ್ಲಿ ದೇವದತ್ತನಂತಹ ಮತ್ತೊಬ್ಬ ಶ್ರೀಮಂತನಾಗಲಿ, ಈ ಸೈನ್ಯದಲ್ಲಿ ವಿಕ್ರಮಸಿಂಹನಂತಹ ಮತ್ತೊಬ್ಬ ಶೂರನಾಗಲಿ ಇಲ್ಲ. ಅವರಿಗಿಂತ ಕಡಿಮೆಯವರೇನೋ ಇದ್ದಾರೆ ಎಂದು ಅರ್ಥವಾಗುತ್ತದೆ. ಪೃಥಿವೀ ಆದಿ ಜಡಪದಾರ್ಥಗಳೂ, ಪಶು ಮೊದಲಾದ ಪ್ರಾಣಿಗಳೂ, ವೃಕ್ಷ ಮೊದಲಾದುವೂ ಇವೆ. ಅವುಗಳ ನಿಷೇಧವಾಗಲಾರದು. ಇದರಂತೆಯೇ, ಬ್ರಹ್ಮನಿಗೆ ಸಮವಾದ ಜೀವವಾಗಲಿ, ಪ್ರಕೃತಿಯಾಗಲಿ ಇಲ್ಲ. ಆತನಿಗಿಂತಲೂ ಕಡಿಮೆಯವೇನೋ ಇವೆ. ಇದರಿಂದ ಸಿದ್ಧವಾಗುವುದೇನೆಂದರೆ, ಬ್ರಹ್ಮನು ಯಾವಾಗಲೂ ಒಬ್ಬನೇ ಇರುತ್ತಾನೆ. ಜೀವನೂ, ಪ್ರಕೃತಿಯಲ್ಲಿರುವ ತತ್ವಗಳೂ ಅನೇಕವಾಗಿರುತ್ತವೆ. ಅದ್ವೈತ ಅಥವಾ ಅದ್ವಿತೀಯ ಎಂಬ ವಿಶೇಷಣವು, ಅವುಗಳಿಂದ ಬ್ರಹ್ಮನನ್ನು ಬೇರ್ಪಡಿಸಿ, ಆತನ ಏಕತ್ವವನ್ನು ಸಿದ್ಧಪಡಿಸುತ್ತದೆ. ಈ ವಿಶೇಷಣದಿಂದ ಜೀವ–ಪ್ರಕೃತಿ ಗಳಿಗಾಗಲಿ, ಕಾರ್ಯರೂಪವಾದ ಜಗತ್ತಿಗಾಗಲಿ ಅಭಾವ–ನಿಷೇಧಗಳು ಉಂಟಾಗಲಾರವು. ಇದರಿಂದ ಅದ್ವೈತ ಸಿದ್ಧಿಯಾಗಲಿ, ದ್ವೈತಸಿದ್ಧಿಗೆ ಬಾಧೆಯಾಗಲಿ ಉಂಟಾಗಲಾರದು. ಗಾಬರಿಪಡದೆ ಚೆನ್ನಾಗಿ ವಿಚಾರಮಾಡಿ ತಿಳಿದುಕೊಳ್ಳಿರಿ.

ಪ್ರಶ್ನೆ :—ಬ್ರಹ್ಮನ ಸತ್, ಚಿತ್, ಆನಂದ ಮತ್ತು ಜೀವನ ಅಸ್ತಿ, ಭಾತಿ, ಪ್ರಿಯರೂಪಗಳಿಂದ ಏಕತ್ವ ಸಿದ್ಧಿಸುತ್ತದೆ. ಮತ್ತೇಕೆ ಖಂಡಿಸುತ್ತೀರಿ?

ಉತ್ತರ :—ಸ್ವಲ್ಪ ಸಾಧರ್ಮ್ಯವಿರುವುದರಿಂದ ಏಕತ್ವವು ಸಿದ್ಧವಾಗಲಾರದು. ಹೇಗೆಂದರೆ ಪೃಥಿವಿಯು ಜಡವೂ, ದೃಶ್ಯವೂ ಆಗಿರುವಂತೆ ಅಗ್ನಿ, ಜಲ ಮೊದಲಾದುವುಗಳೂ ಕೂಡ ಜಡವಾಗಿಯೂ, ದೃಶ್ಯವಾಗಿಯೂ ಇವೆ. ಇಷ್ಟು ಮಾತ್ರದಿಂದ ಏಕತ್ವವಾಗದು. ಇವುಗಳಲ್ಲಿ ಭೇದಕಾರಕಗಳಾದ ವೈಧರ್ಮ್ಯಗಳು ಅಂದರೆ ವಿರುದ್ಧ ಧರ್ಮಗಳಿರುತ್ತವೆ. ಪೃಥಿವಿಯಲ್ಲಿ ಗಂಧ, ರೂಕ್ಷತೆ, ಕಾಠಿಣ್ಯ ಮುಂತಾದ ಗುಣಗಳಿವೆ. ಜಲದಲ್ಲಿ, ರಸತ್ವ, ದ್ರವತ್ವ, ಕೋಮಲತ್ವ ಮೊದಲಾದ ಗುಣಗಳಿರುತ್ತವೆ. ಮತ್ತು ಬೆಂಕಿಯಲ್ಲಿ ರೂಪ, ದಾಹಕತ್ವ ಮೊದಲಾದ ಗುಣಗಳಿರುತ್ತವೆ. ಅದುದರಿಂದ ಏಕತ್ವ ಸಿದ್ಧಿಸದು.

ಮನುಷ್ಯ ಮತ್ತು ಹುಳು ಕಣ್ಣಿನಿಂದಲೇ ನೋಡುವುದು; ಬಾಯಿಂದಲೇ ತಿನ್ನುವುದು. ಕಾಲುಗಳಿಂದಲೇ ನಡೆಯುವುದು. ಆದರೂ ಮನುಷ್ಯನ ಆಕೃತಿ, ಎರಡು ಕಾಲುಗಳು, ಹುಳುವಿನ ಆಕೃತಿ ಅನೇಕ ಕಾಲುಗಳು. ಈ ಮೊದಲಾದ ಭೇದದೀದ ಏಕತ್ವವಾಗುವುದಿಲ್ಲ. ಹಾಗೆಯೇ ಅನಂತ ಜ್ಞಾನ, ಆನಂದ, ಬಲ, ಕ್ರಿಯೆ, ನಿರ್ಭ್ರಾಂತತೆ, ಸರ್ವವ್ಯಾಪಕತ್ವ ಮೊದಲಾದ ಗುಣಗಳು ಜೀವನಿಂದ, ಮತ್ತು ಜೀವನ ಅಲ್ಪ ಜ್ಞಾನ, ಅಲ್ಪ ಬಲ, ಅಲ್ಪ ಸ್ವರೂಪ ಭ್ರಾಂತಿ, ಪರಿಚ್ಛಿನತಾದಿ ಗುಣಗಳು ಬ್ರಹ್ಮನಿಂದ ಬೇರೆಯಿರುವುದರಿಂದ ಜೀವ-ಪರಮಾತ್ಮರು ಒಬ್ಬರೇ ಅಲ್ಲ. ಏಕೆಂದರೆ ಇವರುಗಳ ಸ್ವರೂಪವೂ ಸಹ (ಪರಮೇಶ್ವರನು ಅತಿ ಸೂಕ್ಷ್ಮ ಮತ್ತು ಜೀವನು ಅವನಿಗಿಂತ ಸ್ವಲ್ಪ ಸ್ಥೂಲನಾಗಿರುವುದರಿಂದ) ಬೇರೆಯೇ ಆಗಿದೆ.

ಪ್ರಶ್ನೆ :—**" ಅಥೋದರಮಂತರಂ ಕುರುತೇ । ಅಥ ತಸ್ಯ ಭಯಂ ಭವತಿ ದ್ವಿತೀಯಾದ್ವೈ ಭಯಂ ಭವತಿ । "**—ಇದು ಬೃಹದಾರಣ್ಯಕದ ವಚನ. ಜೀವ-ಪರಮಾತ್ಮರಲ್ಲಿ ಸ್ವಲ್ಪವಾದರೂ ಭೇದವೆಣಿಸುವವನಿಗೆ ಭಯವುಂಟಾಗುತ್ತದೆ. ಏಕೆಂದರೆ ಬೇರೆಯವನಿಂದಲೇ ಭಯವುಂಟಾಗುತ್ತದೆ."

ಉತ್ತರ :—ಇದರರ್ಥ ಹಾಗಲ್ಲ. ಆದರೆ—" ಯಾವ ಜೀವನು ಪರಮೇಶ್ವರನನ್ನು ನಿಷೇಧಿಸುವನೋ, ಪರಮೇಶ್ವರನನ್ನು ದೇಶಕಾಲಗಳಲ್ಲಿ ಪರಿಚ್ಛಿನ್ನನೆಂದು ನಂಬುವನೋ ಮತ್ತು ಆತನ ಆಜ್ಞೆಗಾಗಲಿ, ಗುಣ-ಕರ್ಮ-ಸ್ವಭಾವಗಳಿಗಾಗಲಿ ವಿರುದ್ಧವಾಗಿ ನಡೆಯುವನೋ ಅಥವಾ ಮತ್ತೊಬ್ಬರೊಡನೆ ವೈರವನ್ನು ಕಟ್ಟಿಕೊಳ್ಳುವನೋ ಅವನಿಗೆ ಭಯವುಂಟಾಗುತ್ತದೆ. ಏಕೆಂದರೆ, ದ್ವಿತೀಯ ಬುದ್ಧಿ ಅಂದರೆ ಪರಮಾತ್ಮನಿಗೂ ತನಗೂ ಯಾವ ವಿಧವಾದ ಸಂಬಂಧವೂ ಇಲ್ಲವೆಂದು ಭಾವಿಸಿದವನಿಗೂ, ' ನಿನ್ನನ್ನು ನಾನು ಲಕ್ಷ್ಯಮಾಡುವುದಿಲ್ಲ. ನೀನು ನನಗೇನೂ ಮಾಡಲಾರೆ ' ಎಂದು ಇತರರಿಗೆ ಹೇಳುವವನಿಗೂ, ಮತ್ತೊಬ್ಬರಿಗೆ ದುಃಖವೀಯುತ್ತಾ ಹೋಗುವವನಿಗೂ, ಅವರಿಂದ ಭಯವುಂಟಾಗುವುದು ಮತ್ತುಎಲ್ಲ ಬಗೆಯಿಂದಲೂ ಅವಿರೋಧವಿದ್ದಲ್ಲಿ ಅವರೆಲ್ಲರೂ ಒಂದೇ ಎನಿಸುತ್ತಾರೆ. " ದೇವದತ್ತನೂ, ಯಜ್ಞದತ್ತನೂ

ವಿಷ್ಣು ಮಿತ್ರನೂ ಒಂದೇ ಆಗಿರುತ್ತಾರೆ'' ಎಂದರೆ, ಅವಿರುದ್ಧವಾಗಿರುತ್ತಾರೆ ಎಂದು ಜಗತ್ತಿನಲ್ಲಿ ಹೇಳುವುದುಂಟು. ವಿರೋಧವಿಲ್ಲದಿರುವುದರಿಂದ ಸುಖವೂ, ವಿರೋಧದಿಂದ ದುಃಖವೂ ಉಂಟಾಗುತ್ತದೆ.

ಪ್ರಶ್ನೆ:—ಜೀವಬ್ರಹ್ಮರ ಏಕತ್ವಾನೇಕತ್ವಗಳು ಯಾವಾಗಲೂ ಇರುತ್ತವೆಯೋ ಅಥವಾ ಯಾವಾಗಲಾದರೂ ಇವೆರಡೂ ಸೇರಿ ಒಂದಾಗುತ್ತವೆಯೋ ಅಥವಾ ಇಲ್ಲವೋ?

ಉತ್ತರ;—ಈ ಪ್ರಶ್ನೆಗೆ ನಾವು ಹಿಂದೆಯೇ ಸ್ವಲ್ಪ ಉತ್ತರ ಹೇಳಿದ್ದೇವೆ. ಆದರೆ, ಸಾಧರ್ಮ್ಯಾನ್ವಯಭಾವದಿಂದ ಏಕತೆಯುಂಟಾಗುತ್ತದೆ. ಹೇಗೆಂದರೆ, ಮೂರ್ತದ್ರವ್ಯಗಳು ಜಡವಾಗಿರುವುದರಿಂದಲೂ. ಯಾವಾಗಲೂ ಆಕಾಶವನ್ನು ಬಿಟ್ಟಿರಲಾರದುದರಿಂದಲೂ, ಆಕಾಶದೊಂದಿಗೆ ಏಕತ್ವವಿರುತ್ತದೆ. ಆದರೆ, ಆಕಾಶವು ವ್ಯಾಪಕವೂ ಸೂಕ್ಷ್ಮವೂ ರೂಪರಹಿತವೂ ಅನಂತವೂ ಆಗಿದ್ದು ಮೂರ್ತದ್ರವ್ಯಗಳ ಪರಿಚ್ಛಿನ್ನತ್ವ ಮೊದಲಾದ ವೈಧರ್ಮ್ಯಗಳಿಂದ ಭೇದವುಂಟಾಗುತ್ತದೆ. ಪೃಥಿವಿ ಮೊದಲಾದ ದ್ರವ್ಯಗಳು ಯಾವಾಗಲೂ ಆಕಾಶದಿಂದ ಭಿನ್ನವಾಗಿರುವುದಿಲ್ಲ. ಏಕೆಂದರೆ, ಅನ್ವಯ ಅಂದರೆ ಅವಕಾಶದ ಹೊರತು ಮೂರ್ತದ್ರವ್ಯಗಳು ಇರುವುದು ಸಂಭವವಲ್ಲ. ಮತ್ತು ವ್ಯತಿರೇಕ ಅಂದರೆ ಸ್ವರೂಪದಲ್ಲಿ ಭಿನ್ನತೆಯಿರುವುದರಿಂದ ಅನ್ಯತ್ವವಿರುತ್ತದೆ. ಹಾಗೆಯೇ ಬ್ರಹ್ಮನು ವ್ಯಾಪಕವಾಗಿರುವುದರಿಂದ ಜೀವರೂ, ಪೃಥಿವ್ಯಾದಿ ದ್ರವ್ಯಗಳೂ ಅತನಿಂದ ಬೇರೆಯಾಗಿರಲಾರವು. ಸ್ವರೂಪದಿಂದ ಇವೆಲ್ಲವೂ ಒಂದಾಗಿಯೂ ಆಗಲಾರವು. ಉದಾ:—ಮನೆಯನ್ನು ಕಟ್ಟುವುದಕ್ಕೆ ಮೊದಲು ಬೇರೆ ಬೇರೆ ಸ್ಥಳಗಳಲ್ಲಿ ಮಣ್ಣು, ಕಟ್ಟಿಗೆ, ಕಬ್ಬಿಣ ಮೊದಲಾದ ಪದಾರ್ಥಗಳು ಆಕಾಶದಲ್ಲಿಯೇ ಇರುತ್ತವೆ. ಮನೆಯನ್ನು ಕಟ್ಟಿದಮೇಲೂ ಆಕಾಶದಲ್ಲಿಯೇ ಇರುತ್ತವೆ. ಮನೆಯು ಬಿದ್ದುಹೋದಮೇಲೂ ಅಂದರೆ ಆ ಮನೆಯ ಎಲ್ಲಾ ಅವಯವಗಳೂ ಬೇರೆ ಬೇರೆ ಜಾಗಗಳಲ್ಲಿ ಬಿದ್ದರೂ ಆಕಾಶದಲ್ಲಿಯೇ ಇರುತ್ತವೆ. ಅಂದರೆ, ಮೂರುಕಾಲಗಳಲ್ಲಿಯೂ ಆಕಾಶದಿಂದ ಬೇರೆಯಾಗಲಾರವು, ಮತ್ತು ಸ್ವರೂಪದಿಂದ ಬೇರೆಯಾಗಿರುವುದರಿಂದ ಎಂದೂ ಒಂದಾಗಿರಲಿಲ್ಲ: ಇಲ್ಲ ಮತ್ತು ಇರುವುದಿಲ್ಲ. ಹಾಗೆಯೇ ಜೀವನೂ ಪ್ರಪಂಚದ

ಸಮಸ್ತ ಪದಾರ್ಥಗಳೂ ಪರಮಾತ್ಮನಲ್ಲಿಯೇ ವ್ಯಾಪ್ಯವಾಗಿರುವುದರಿಂದ ಪರಮಾತ್ಮನಿಂದ ಮೂರುಕಾಲಗಳಲ್ಲಿಯೂ ಬೇರೆಯಿರಲಾರವು. ಮತ್ತು ಸ್ವರೂಪಗಳು ಭಿನ್ನವಾಗಿರುವುದರಿಂದ ಎಂದಿಗೂ ಒಂದಾಗಲಾರವು. ಈಗಿನ ವೇದಾಂತಿಗಳ ದೃಷ್ಟಿಯು ಒಕ್ಕಣ್ಣಿನವನ ನೋಟದಂತೆ ಅನ್ವಯದ ಕಡೆಗೆ ಮಾತ್ರ ತಿರುಗಿ ವ್ಯತಿರೇಕಭಾವವನ್ನು ಬಿಟ್ಟು ವಿರುದ್ಧವಾಗಿ ಹೋಗಿದೆ. ಸಗುಣತ್ವಗಳೂ, ಸಾಧರ್ಮ್ಯ ವೈಧರ್ಮ್ಯಗಳೂ, ವಿಶೇಷಣದ ಭಾವವೂ ಇಲ್ಲದಿರುವ ದ್ರವ್ಯವೇ ಇಲ್ಲ.

ಪ್ರಶ್ನೆ :—ಪರಮೇಶ್ವರನು ಸಗುಣನೋ ನಿರ್ಗುಣನೋ ?

ಉತ್ತರ :—ಎರಡು ವಿಧವಾಗಿಯೂ ಇರುತ್ತಾನೆ.

ಪ್ರಶ್ನೆ :—ಒಂದೇ ಒರೆಯಲ್ಲಿ ಎರಡು ಕತ್ತಿಗಳಿರಬಲ್ಲವೆ ? ಒಂದೇ ಪದಾರ್ಥದಲ್ಲಿ ಸಗುಣತ್ವ ನಿರ್ಗುಣತ್ವಗಳು ಹೇಗಿರಬಲ್ಲವು ?

ಉತ್ತರ :—ಜಡವಸ್ತುವಿನಲ್ಲಿ ರೂಪಾದಿ ಗುಣಗಳಿರುತ್ತವೆ. ಆದರೆ, ಚೇತನ ಪದಾರ್ಥಗಳಲ್ಲಿರುವ ಜ್ಞಾನಾದಿಗುಣಗಳು ಇರುವುದಿಲ್ಲ. ಹಾಗೆಯೇ ಚೇತನವಸ್ತುಗಳಲ್ಲಿ ಇಚ್ಛೆ ಮೊದಲಾದ ಗುಣಗಳಿರುತ್ತವೆ. ಆದರೆ, ಜಡವಸ್ತುಗಳಲ್ಲಿರುವ ರೂಪಾದಿಗುಣಗಳಿರುವುದಿಲ್ಲ. ಆದ್ದರಿಂದ "ಯದ್ಗುಣೈಃಸ್ಸಹ ವರ್ತಮಾನಂ ತತ್ಸಗುಣಂ" "ಗುಣೇಭ್ಯೋ ಯನ್ನಿರ್ಗತಂ ಪೃಥಗ್ಭೂತಂ ತನ್ನಿರ್ಗುಣಂ"—ಗುಣದಿಂದ ಕೂಡಿರುವುದಕ್ಕೆ ಸಗುಣವೆಂತಲೂ, ಗುಣರಹಿತವಾಗಿರುವುದಕ್ಕೆ ನಿರ್ಗುಣವೆಂತಲೂ ಹೆಸರು. ತಮ್ಮ ತಮ್ಮ ಸ್ವಾಭಾವಿಕಗುಣಗಳಿಂದ ಕೂಡಿ, ವಿರುದ್ಧಗುಣಗಳಿಂದ ರಹಿತವಾಗಿರುವುದರಿಂದ ಎಲ್ಲಾ ಪದಾರ್ಥಗಳೂ ಸಗುಣ ನಿರ್ಗುಣಗಳಾಗುತ್ತವೆ. ಕೇವಲ ನಿರ್ಗುಣತ್ವ ಅಥವಾ ಕೇವಲ ಸಗುಣತ್ವದಿಂದ ಕೂಡಿದ ಯಾವ ಪದಾರ್ಥವೂ ಇಲ್ಲ. ಪ್ರತಿಯೊಂದು ಪದಾರ್ಥದಲ್ಲೂ ಸಗುಣತ್ವ ನಿರ್ಗುಣತ್ವಗಳು ಯಾವಾಗಲೂ ಇದ್ದೇ ಇರುತ್ತವೆ. ಹಾಗೆಯೇ ಪರಮಾತ್ಮನು ಅನಂತಜ್ಞಾನ, ಆನಂತಬಲ ಮೊದಲಾದ ಗುಣಗಳೊಡನೆ ಕೂಡಿಕೊಂಡಿರುವುದರಿಂದ ಸಗುಣನೆಂತಲೂ ಜಡವಸ್ತುಗಳ ರೂಪ ಮೊದಲಾದ ಗುಣಗಳಿಂದಲೂ, ಜೀವನ ದ್ವೇಷ ಮೊದಲಾದ ಗುಣಗಳಿಂದಲೂ ರಹಿತನಾಗಿರುವುದರಿಂದ ನಿರ್ಗುಣವೆಂದೂ ಅನ್ನಿಸಿಕೊಳ್ಳುತ್ತಾನೆ.

ಪ್ರಶ್ನೆ:—ಲೋಕದಲ್ಲಿ ನಿರಾಕಾರವಾದ ವಸ್ತುವಿಗೆ ನಿರ್ಗುಣವೆಂತಲೂ, ಸಾಕಾರ ವಸ್ತುವಿಗೆ ಸಗುಣವೆಂತಲೂ ಹೇಳುತ್ತಾರೆ. ಅಂದರೆ ಪರಮೇಶ್ವರನು ಜನ್ಮವೆತ್ತದಿರುವಾಗ ನಿರ್ಗುಣನೆಂತಲೂ ಅವತಾರವೆತ್ತಿದಾಗ ಸಗುಣನೆಂತಲೂ ಅನ್ನಿಸಿಕೊಳ್ಳುತ್ತಾನೆ.

ಉತ್ತರ :- ಇದು ಕೇವಲ ಅಜ್ಞಾನಿಗಳ ಮತ್ತು ಅವಿದ್ಯಾವಂತರ ಕಲ್ಪನೆ. ವಿದ್ಯೆಯಿಲ್ಲದವರು ಪಶುಗಳಂತೆ ಮನಬಂದಂತೆ ಶಬ್ದಮಾಡುತ್ತಾರೆ. ಸನ್ನಿಪಾತಜ್ವರದಿಂದ ಪೀಡಿತನಾಗಿರುವವನ ಹುಚ್ಚುಕೂಗುಗಳಂತೆ ಅವಿದ್ಯಾವಂತರ ಮಾತುಗಳನ್ನಾಗಲಿ, ಬರವಣಿಗೆಯನ್ನಾಗಲಿ, ನಿರರ್ಥಕವೆಂದು ತಿಳಿಯಬೇಕು.

ಪ್ರಶ್ನೆ:—ದೇವರು ರಾಗಿಯೋ? ವಿರಕ್ತನೋ?

ಉ :—ಎರಡೂ ಅಲ್ಲ. ಏಕೆಂದರೆ—ತನಗಿಂತಲೂ ಬೇರೆಯಾಗಿರುವ ಉತ್ತಮ ಪದಾರ್ಥಗಳಲ್ಲಿ ಆಶೆಯುಂಟಾಗುವುದು. ಪರಮೇಶ್ವರನನ್ನು ಬಿಟ್ಟಿರುವುದಾಗಲಿ, ಆತನಿಗಿಂತ ಉತ್ತಮವಾದುದಾಗಲಿ, ಯಾವ ವಸ್ತುವೂ ಇಲ್ಲ. ಆದ್ದರಿಂದ ಆತನಲ್ಲಿ ರಾಗ ಉಂಟಾಗುವ ಸಂಭವವೇ ಇಲ್ಲ. ಪ್ರಾಪ್ತವಾದುದನ್ನು ಬಿಟ್ಟುಬಿಡುವವನಿಗೆ ವಿರಕ್ತನೆಂದು ಹೆಸರು. ಪರಮಾತ್ಮನು ವ್ಯಾಪಕನಾಗಿ ಯಾವ ಪದಾರ್ಥವನ್ನು ಬಿಡಲಾಗದುದರಿಂದ ಆತನು ವಿರಕ್ತನೂ ಅಲ್ಲ.

ಪ್ರ :—ಈಶ್ವರನಲ್ಲಿ ಇಚ್ಛೆಯು ಇರುವುದೋ ಇಲ್ಲವೋ?

ಉ :—ಅಂತಹ ಇಚ್ಛೆಯಿಲ್ಲ. ಏಕೆಂದರೆ–ದೊರಕದಿರುವುದೂ, ಉತ್ತಮವೂ, ಸುಖದಾಯಕವೂ ಆದ ವಸ್ತುವಿನ ವಿಷಯದಲ್ಲಿ ಮಾತ್ರ ಇಚ್ಛೆಯುಂಟಾಗುತ್ತದೆ. ಪರಮಾತ್ಮನಲ್ಲಿ ಇಚ್ಛೆಯುಂಟಾಗುವುದಕ್ಕೆ ಆತನಿಗೆ ತೊರಕದ ಪದಾರ್ಥವಾಗಲಿ, ಆತನಿಗಿಂತ ಉತ್ತಮವಾದ ಪದಾರ್ಥವಾಗಲಿ ಯಾವುದೂ ಇಲ್ಲ. ಆತನು ಪೂರ್ಣ ಸುಖಿಯಾಗಿರುವುದರಿಂದ ಸುಖದ ಅಭಿಲಾಷೆಯೂ ಇಲ್ಲ. ಆದ್ದರಿಂದ ಪರಮಾತ್ಮನಲ್ಲಿ ಇಚ್ಛೆಯುಂಟಾಗುವ ಸಂಭವವಿಲ್ಲ. ಆದರೆ, ಈಕ್ಷಣವಿರುತ್ತದೆ. ಸಮಸ್ತ ವಿದ್ಯೆಗಳ ದರ್ಶನಕ್ಕೂ, ಸೃಷ್ಟಿರಚನೆಗೂ ಈಕ್ಷಣವೆಂದು ಹೆಸರು. ಈ ಮೊದಲಾದ ಸಂಕ್ಷಿಪ್ತ ವಿಷಯಗಳಿಂದಲೇ ಸಜ್ಜನರು ಬಹಳ ವಿಸ್ತಾರ

ಮಾಡಿಕೊಳ್ಳುವರು. ಈಗ ಈಶ್ವರ ವಿಷಯ ಬರೆದನಂತರ ವೇದದ ವಿಷಯವನ್ನು ಸಂಕ್ಷೇಪವಾಗಿ ಬರೆಯುತ್ತೇವೆ.

ಯಸ್ಮಾದೃಚೋ ಅಪಾತಕ್ಷನ್ ಯಜುರ್ಯಸ್ಮಾದಪಾಕಷನ್ ।
ಸಾಮಾನಿ ಯಸ್ಯ ಲೋಮಾನ್ಯಥರ್ವಾಂಗಿರಸೋ ಮುಖಂ ।
ಸ್ಕಂಭಂತಂ ಬ್ರೂಹಿ ಕತಮಃ ಸ್ವಿದೇವ ಸಃ ॥

[ಅಥರ್ವ. ಕಾಂ. ೧೦। ಪ್ರ. ಪಾ. ೨೩। ಅನು. ೪. ಮಂ. ೨೦]

ಯಾವ ಪರಮಾತ್ಮನಿಂದ ಋಗ್ವೇದ, ಯಜುರ್ವೇದ, ಸಾಮವೇದ, ಅಥರ್ವವೇದಗಳು ಪ್ರಕಾಶಿತವಾದುವೋ, ಅವನು ಯಾವ ದೇವನು? ಇದಕ್ಕೆ ಉತ್ತರ–ಯಾವನು ಈ ಸಮಗ್ರ ಸೃಷ್ಟಿಯನ್ನು ರಚಿಸಿ, ಕಾಪಾಡುತ್ತಿರುವನೋ, ಆತನೇ ಪರಮಾತ್ಮನು.

ಸ್ವಯಂ ಭೂರ್ಯಾಥಾತಥ್ಯತೋಽರ್ಥಾನ್ ವ್ಯದಧಾಚ್ಛಾಶ್ವ-
ತೀಭ್ಯಃ ಸಮಾಭ್ಯಃ ॥

[ಯಜು. ಅ. ೪೦। ಮಂ. ೮]

ಸ್ವಯಂಭುವೂ, ಸರ್ವವ್ಯಾಪಕನೂ, ಶುದ್ಧನೂ, ಸನಾತನನೂ, ನಿರಾಕಾರನೂ ಆದ ಪರಮಾತ್ಮನು, ಸನಾತನ ಜೀವಾತ್ಮರೆಂಬ ಪ್ರಜೆಗಳ ಕಲ್ಯಾಣಕ್ಕಾಗಿ ಯಥಾವತ್ ರೀತಿಯಿಂದ ವೇದದ ಮೂಲಕ ಸಮಸ್ತ ಸತ್ಯ ವಿದ್ಯೆಗಳನ್ನೂ ಉಪದೇಶಮಾಡುತ್ತಾನೆ.

ಪ್ರ :—ಪರಮಾತ್ಮನನ್ನು ನೀವು ನಿರಾಕಾರನೆಂದು ತಿಳಿಯುವಿರೋ, ಸಾಕಾರನೆಂದೋ?

ಉ :—ನಿರಾಕಾರನೆಂದು ತಿಳಿಯುತ್ತೇವೆ.

ಪ್ರ :—ನಿರಾಕಾರನಾಗಿದ್ದರೆ, ವೇದವಿದ್ಯೆಯ ಉಪದೇಶ ಹಾಗೂ ಮುಖವಿಲ್ಲದೆ ವರ್ಣೋಚ್ಚಾರಣೆ ಹೇಗೆ ಆಗಿರಬಹುದು? ಏಕೆಂದರೆ, ಅಕ್ಷರಗಳನ್ನು ಉಚ್ಚರಿಸುವುದಕ್ಕೆ ತಾಲು ಮೊದಲಾದ ಸ್ಥಾನಗಳೂ, ನಾಲಿಗೆಯ ಪ್ರಯತ್ನವೂ ಅವಶ್ಯಕವಾಗಿರುತ್ತದೆ.

ಉ :—ಪರಮಾತ್ಮನು ಸರ್ವಶಕ್ತನೂ, ಸರ್ವವ್ಯಾಪಕನೂ ಆಗಿರುವುದರಿಂದ ಜೀವರಿಗೆ ತನ್ನ ವ್ಯಾಪ್ತಿಯಿಂದ ವೇದವಿದ್ಯೆಯನ್ನು

ಉಪದೇಶ ಮಾಡುವುದರಲ್ಲಿ ಆತನಿಗೆ ಮುಖಾದಿಗಳ ಯಾವ ಆವಶ್ಯಕತೆಯೂ ಇರುವುದಿಲ್ಲ. ಏಕೆಂದರೆ—ಮುಖ ಮತ್ತು ನಾಲಿಗೆಯಿಂದ ತನಗಿಂತಲೂ ಬೇರೆಯವರಿಗೆ ತಿಳಿಯಪಡಿಸುವುದಕ್ಕೋಸ್ಕರ ಅಕ್ಷರಗಳನ್ನು ಉಚ್ಚರಿಸಬೇಕಾಗುತ್ತದೆ. ತನಗೋಸ್ಕರವಲ್ಲ, ಮುಖ ಮತ್ತು ನಾಲಿಗೆಯ ವ್ಯಾಪಾರವಿಲ್ಲದೆಯೇ ಮನಸ್ಸಿನಲ್ಲಿ ಅನೇಕ ವ್ಯವಹಾರಗಳ ವಿಚಾರಗಳೂ, ಶಬ್ದೋಚ್ಚಾರಣೆಯೂ ನಡೆಯುತ್ತಿರುತ್ತವೆ. ಬೆರಳುಗಳಿಂದ ಕಿವಿಗಳನ್ನು ಮುಚ್ಚಿಕೊಂಡು ನೋಡಿರಿ. ಮುಖ, ಜಿಹ್ವೆ, ತಾಲು ಮೊದಲಾದ ಸ್ಥಾನಗಳಿಲ್ಲದೆಯೇ ಎಂತೆಂತಹ ಶಬ್ದಗಳು ಕೇಳಿ ಬರುತ್ತದೆ. ಹಾಗೆಯೇ ಜೀವರಿಗೆ ಅಂತರ್ಯಾಮಿರೂಪದಿಂದ ವೇದಗಳನ್ನು ಉಪದೇಶಿಸಿದನು. ಮತ್ತೊಬ್ಬರಿಗೆ ತಿಳಿಸುವುದಕ್ಕೆ ಮಾತ್ರ ಉಚ್ಚಾರಣೆಯು ಆವಶ್ಯಕವಿರುತ್ತದೆ. ಪರಮಾತ್ಮನು ನಿರಾಕಾರನೂ, ಸರ್ವವ್ಯಾಪಕನೂ ಆಗಿರುವುದರಿಂದ ಜೀವಸ್ವರೂಪದಿಂದ ಜೀವಾತ್ಮನಲ್ಲಿ ಸಮಸ್ತ ವೇದವಿದ್ಯೆಗಳಿನ್ನು ಪ್ರಕಾಶಪಡಿಸುತ್ತಾನೆ. ಆ ಮನುಷ್ಯನು ತನ್ನ ಮುಖದಿಂದ ಉಚ್ಚರಿಸಿ, ಮತ್ತೊಬ್ಬರಿಗೆ ತಿಳಿಯಪಡಿಸುತ್ತಾನೆ. ಆದ್ದರಿಂದ ಈ ದೋಷವು ಪರಮಾತ್ಮನಿಗೆ ಅನ್ವಯಿಸುವುದಿಲ್ಲ.

ಪ್ರ :—ಹಾಗಾದರೆ, ದೇವರು ಯಾವಾಗ ಯಾರ ಆತ್ಮನಲ್ಲಿ ವೇದಗಳನ್ನು ಪ್ರಕಾಶಪಡಿಸಿದನು?

ಉ :—

ಅಗ್ನೇರ್ಋಗ್ವೇದೋ ವಾಯೋರ್ಯಜುರ್ವೇದಃ ಸೂರ್ಯಾತ್ಸಾಮವೇದಃ ॥

[ಶತಪಥ ೧೧। ೪। ೩। ೩]

ಪ್ರಥಮ ಸೃಷ್ಟ್ಯಾದಿಯಲ್ಲಿ ಪರಮಾತ್ಮನು ಅಗ್ನಿ, ವಾಯು, ಆದಿತ್ಯ ಮತ್ತು ಆಂಗೀರಸರೆಂಬ ಋಷಿಗಳ ಆತ್ಮಗಳಲ್ಲಿ ಒಂದೊಂದು ವೇದಗಳನ್ನು ಪ್ರಕಾಶಪಡಿಸಿದನು.

ಪ್ರಶ್ನೆ :—

ಯೋ ವೈ ಬ್ರಹ್ಮಾಣಂ ವಿದಧಾತಿ ಪೂರ್ವಂ।
ಯೋ ವೈ ವೇದಾಂಶ್ಚ ಪ್ರಹಿಣೋತಿ ತಸ್ಮೈ ॥

[ಶ್ವೇತಾಶ್ವ: ಅ ೫। ಮಂ ೧೮]

ಇದು ಉಪನಿಷತ್ತಿನ ವಚನ. ಈ ವಾಕ್ಯದಿಂದ ದೆವರು ಬ್ರಹ್ಮನ ಹೃದಯದಲ್ಲಿ ಮೊಟ್ಟಮೊದಲು ವೇದಗಳನ್ನು ಉಪದೇಶಿಸಿದಂತೆ ತಿಳಿದುಬರುತ್ತದೆ. ಹೀಗಿರುವಾಗ ಅಗ್ನಿ, ವಾಯು ಮೊದಲಾದ ಋಷಿಗಳ ಆತ್ಮಗಳಲ್ಲಿ ವೇದಗಳನ್ನು ಪ್ರಕಾಶಪಡಿಸಿದನೆಂದು ಏಕೆ ಹೇಳಿದಿರಿ?

ಉತ್ತರ:—ಪರಮಾತ್ಮನು ಬ್ರಹ್ಮನ ಆತ್ಮದಲ್ಲಿ ಅಗ್ನಿ, ವಾಯು ಮೊದಲಾದ ಋಷಿಗಳ ಮೂಲಕವೇ ವೇದಗಳನ್ನು ಸ್ಥಾಪಿಸಿದನು. ಮನುವೂ ಕೂಡ ಹೀಗೆಯೇ ಹೇಳಿದ್ದಾನೆ:—

ಅಗ್ನಿವಾಯುರವಿಭ್ಯಸ್ತು ತ್ರಯಂ ಬ್ರಹ್ಮ ಸನಾತನಮ್ ।
ದುದೋಹ ಯಜ್ಞಸಿದ್ಧ್ಯರ್ಥಮೃಗ್ಯಜುಃ ಸಾಮಲಕ್ಷಣಮ್ ॥

[ಮನು. ೧-೨೩]

ಸೃಷ್ಟ್ಯಾದಿಯಲ್ಲಿ ಪರಮಾತ್ಮನು ಮನುಷ್ಯರನ್ನು ಉತ್ಪತ್ತಿ ಮಾಡಿ, ಅಗ್ನಿ ಮೊದಲಾದ ನಾಲ್ಕು ಮಂದಿ ಮಹರ್ಷಿಗಳ ಮೂಲಕ, ಬ್ರಹ್ಮನಿಗೆ ನಾಲ್ಕು ವೇದಗಳನ್ನು ಉಪದೇಶಪಡಿಸಿದನು. ಆ ಬ್ರಹ್ಮನು ಅಗ್ನಿ, ವಾಯು, ಆದಿತ್ಯ ಮತ್ತು ಅಂಗೀರಸನೆಂಬ ನಾಲ್ಕು ಮಂದಿ ಮಹರ್ಷಿಗಳಿಂದ ಋಗ್ಯಜುಸ್ಸಾಮಾಥರ್ವವೇದಗಳನ್ನೂ ಗ್ರಹಿಸಿದನು.

ಪ್ರಶ್ನೆ:—ಅವರು ನಾಲ್ವರಲ್ಲೇ ವೇದವನ್ನು ಪ್ರಕಾಶಪಡಿಸಿದನು; ಇತರರಲ್ಲಲ್ಲ—ಇದರಿಂದ ದೇವರು ಪಕ್ಷಪಾತಿಯಾಗುತ್ತಾನೆ.

ಉತ್ತರ:—ಎಲ್ಲಾ ಜೀವರಿಗಿಂತಲೂ ಈ ನಾಲ್ಕು ಮಂದಿ ಮಹರ್ಷಿಗಳೇ ಬಹಳ ಪವಿತ್ರರಾಗಿದ್ದರು. ಉಳಿದ ಜೀವರು ಇವರಷ್ಟು ಪವಿತ್ರರಾಗಿರಲಿಲ್ಲ. ಈ ಕಾರಣದಿಂದ ಪವಿತ್ರ ವಿದ್ಯೆಯನ್ನು ಅವರಲ್ಲಿಯೇ ಪ್ರಕಾಶಪಡಿಸಿದನು.

ಪ್ರಶ್ನೆ:—ಯಾವ ದೇಶಭಾಷೆಯಲ್ಲಿಯೂ ವೇದಗಳನ್ನು ಪ್ರಕಾಶಪಡಿಸದೆ, ಸಂಸ್ಕೃತ ಭಾಷೆಯಲ್ಲಿಯೇ ಏಕೆ ಮಾಡಿದನು?

ಉತ್ತರ:—ಯಾವುದಾದರೊಂದು ದೇಶಭಾಷೆಯಲ್ಲಿಯೇ ವೇದಗಳನ್ನು ಪ್ರಕಾಶಪಡಿಸಿದ್ದರೆ, ದೇವರು ಪಕ್ಷಪಾತಿಯಾಗುತ್ತಿದ್ದನು ಏಕೆಂದರೆ—ಯಾವ ದೇಶಭಾಷೆಯಲ್ಲಿ ಪ್ರಕಾಶಪಡಿಸುತ್ತಿದ್ದನೋ,

ಆ ದೇಶೀಯಂಗೆ ಮಾತ್ರ ವೇದಗಳನ್ನು ಓದುವುದಕ್ಕೂ ಓದಿಸು ವುದಕ್ಕೂ ಸುಗಮವಾಗಿ, ಇತರರಿಗೆ ಬಹಳ ಕಠಿನವಾಗುತ್ತಿತ್ತು. ಆದ್ದರಿಂದಲೇ ಯಾವ ದೇಶಭಾಷೆಯೂ ಅಲ್ಲದ ಸಂಸ್ಕೃತದಲ್ಲಿ ಮಾತ್ರ ವೇದಗಳನ್ನು ಪ್ರಕಾಶಪಡಿಸಿದುದು; ಮತ್ತು ವೇದಭಾಷೆಯೇ ಪ್ರಪಂಚದ ಎಲ್ಲಾ ಭಾಷೆಗಳಿಗೂ ಕಾರಣವಾಗಿರುತ್ತದೆ. ಅದರ ಲ್ಲೆಯೇ ವೇದಗಳನ್ನು ಪ್ರಕಾಶಪಡಿಸಿದನು. ಪರಮಾತ್ಮನ ಪೃಥಿವೀ ಮೊದಲಾದ ಸೃಷ್ಟಿಯು ಎಲ್ಲಾ ದೇಶೀಯರಿಗೂ ಒಂದೇ ವಿಧವಾಗಿದ್ದು ಸಮಸ್ತ ಶಿಲ್ಪವಿದ್ಯೆಗಳಿಗೂ ಕಾರಣವಾಗಿರುವಂತೆ, ಪರಮಾತ್ಮನ ವಿದ್ಯೆಯ ಭಾಷೆಯೂ ಕೂಡ ಒಂದೇ ವಿಧವಾಗಿರಬೇಕು. ಇದರಿಂದ ಎಲ್ಲಾ ದೇಶೀಯರಿಗೂ ವೇದಗಳನ್ನು ತಿಳಿದುಕೊಳ್ಳುವುದಕ್ಕೆ ಸಮಾನ ವಾದ ಪರಿಶ್ರಮವಾಗುವುದರಿಂದ ಪರಮಾತ್ಮನು ಪಕ್ಷಪಾತಿಯಾಗನು. ಮತ್ತು ಅದು ಸರ್ವಭಾಷಾಮೂಲವೂ ಆಗಿದೆ.

ಪ್ರಶ್ನೆ:—'ವೇದಗಳು ಈಶ್ವರಕೃತ'ವಾಗಿವೆ. ಅನ್ಯಕೃತವಲ್ಲ ಎಂದು ಹೇಳುವುದಕ್ಕೆ ಪ್ರಮಾಣವೇನು?

ಉತ್ತರ:—ಈಶ್ವರನು ಪವಿತ್ರನೂ, ಪೂರ್ಣವಿದ್ಯನೂ, ಶುದ್ಧ ವಾದ ಗುಣ, ಕರ್ಮ, ಸ್ವಭಾವವುಳ್ಳವನೂ, ನ್ಯಾಯಕಾರಿಯೂ, ದಯಾಳುವೂ ಆಗಿರುವಂತೆ ಯಾವ ಗ್ರಂಥವು ಪರಮಾತ್ಮನ ಗುಣ-ಕರ್ಮ-ಸ್ವಭಾವಗಳನ್ನು ಪ್ರತಿಪಾದಿಸುತ್ತದೆಯೋ ಅದೇ ಈಶ್ವರಕೃತ ವಾದುದು; ಉಳಿದವುಗಳಲ್ಲ. ಯಾವುದರಲ್ಲಿ ಸೃಷ್ಟಿಕ್ರಮಕ್ಕೂ, ಪ್ರತ್ಯ ಕ್ಷಾದಿ ಪ್ರಮಾಣಗಳಿಗೂ ಆಪ್ತರ ಮತ್ತು ಪವಿತ್ರಾತ್ಮರ ವ್ಯವಹಾರ ಗಳಿಗೂ ವಿರೋಧವಲ್ಲದ ವಿಷಯಗಳು ಉಕ್ತವಾಗಿರುವುವೋ ಅದು ಈಶ್ವರೋಕ್ತವು. ಪರಮಾತ್ಮನು ನಿರ್ಭ್ರಾಂತ ಜ್ಞಾನಿಯಾಗಿರುವಂತೆ, ಯಾವ ಗ್ರಂಥದಲ್ಲಿ ಭ್ರಾಂತಿರಹಿತವಾದ ಜ್ಞಾನವು ಪ್ರತಿಪಾದಿಸಲ್ಪಟ್ಟ ರುವುದೋ, ಅದು ಈಶ್ವರೋಕ್ತವು. ಪರಮಾತ್ಮನು ಹೇಗಿದ್ದನೋ ಮತ್ತು ಸೃಷ್ಟಿಕ್ರಮವನ್ನು ಹೇಗಿಟ್ಟಿದ್ದಾನೆಯೋ ಹಾಗೆಯೇ ಈಶ್ವರ, ಸೃಷ್ಟಿಕಾರ್ಯ, ಕಾರಣ ಮತ್ತು ಜೀವನ ಪ್ರತಿಪಾದನವು ಯಾವುದರಲ್ಲಿ ರುವುದೋ, ಅದು ಈಶ್ವರೋಕ್ತವಾದ ಪುಸ್ತಕವಾಗಿರುತ್ತದೆ. ಮತ್ತು ಪ್ರತ್ಯಕ್ಷಾದಿ ಪ್ರಮಾಣ ವಿಷಯಗಳಿಗೆ ಅವಿರುದ್ಧವಾಗಿ ಶುದ್ಧಾತ್ಮನ

ಸ್ವಭಾವಕ್ಕೆ ಅನುಕೂಲವಾಗಿಯೇ ವೇದಗಳಿವೆ. ಬೈಬಲ್, ಕುರಾನ್ ಮೊದಲಾದ ಬೇರೆ ಪುಸ್ತಕಗಳಲ್ಲಿ ಹೀಗಿಲ್ಲ. ಇವುಗಳ ಸ್ಪಷ್ಟವಿವರಣೆ—ಬೈಬಲ್, ಕುರಾನ್‌ಗಳ ಪ್ರಕರಣದಲ್ಲಿ ಹದಿಮೂರು ಮತ್ತು ಹದಿನಾಲ್ಕನೆಯ ಸಮುಲ್ಲಾಸಗಳಲ್ಲಿ ಕೊಡಲಾಗುವುದು.

ಪ್ರಶ್ನೆ:—ಈಶ್ವರನು ವೇದಗಳನ್ನು ಪ್ರಕಾಶಪಡಿಸಬೇಕಾದ ಆವಶ್ಯಕತೆಯೇ ಇಲ್ಲ. ಏಕೆಂದರೆ, ಮನುಷ್ಯರು ಕ್ರಮವಾಗಿ ಜ್ಞಾನವನ್ನು ವೃದ್ಧಿಪಡಿಸಿಕೊಂಡು ಬಳಿಕ ಪುಸ್ತಕಗಳನ್ನೂ ರಚಿಸಿಕೊಳ್ಳಬಲ್ಲರು.

ಉತ್ತರ:—ಎಂದಿಗೂ ರಚಿಸಲಾರರು. ಏಕೆಂದರೆ–ಕಾರಣವಿಲ್ಲದೆ ಕಾರ್ಯೋತ್ಪತ್ತಿಯಾಗುವುದು ಅಸಂಭವ. ನೋಡಿರಿ—ಕಾಡುಜನಗಳು ಸೃಷ್ಟಿಯನ್ನು ನೋಡುತ್ತಿದ್ದರೂ ವಿದ್ವಾಂಸರಾಗುವುದಿಲ್ಲ. ಆದರೆ ಅವರಿಗೆ ಯೋಗ್ಯರಾದ ಶಿಕ್ಷಕರು ದೊರೆತರೆ, ವಿದ್ವಾಂಸರಾಗಿಹೋಗುತ್ತಾರೆ. ಬೇರೆಯವರಲ್ಲಿ ಓದದೆ ಯಾವನೊಬ್ಬನೂ ಸ್ವಯಂ ವಿದ್ವಾಂಸನು ಈಗಲೂ ಆಗುವುದಿಲ್ಲ. ಹೀಗೆಯೇ ಪರಮಾತ್ಮನು ಆ ಆದಿಸೃಷ್ಟಿಯ ಋಷಿಗಳಿಗೆ ವೇದವಿದ್ಯೆಯನ್ನು ಕಲಿಸದಿದ್ದರೆ ಮತ್ತು ಆ ಋಷಿಗಳು ಅವುಗಳನ್ನು ಇತರರಿಗೂ ಹೇಳದಿದ್ದರೆ, ಜನರೆಲ್ಲರೂ ಅವಿದ್ವಾಂಸರಾಗಿಯೇ ಇರುತ್ತಿದ್ದರು. ಹೇಗೆಂದರೆ, ಒಬ್ಬ ಹುಡುಗನನ್ನು ಹುಟ್ಟಿದಂದಿನಿಂದ ಒಂದು ಏಕಾಂತಪ್ರದೇಶದಲ್ಲಾಗಲಿ, ಮೂಢರ ಜೊತೆಯಲ್ಲಾಗಲಿ, ಪಶುಗಳ ಜೊತೆಯಲ್ಲಾಗಲಿ ಇಟ್ಟರೆ, ಅವನು ಸಹವಾಸದಂತೆಯೇ ಆಗಿಹೋಗುವನು. ಇದಕ್ಕೆ ನಿದರ್ಶನವಾಗಿ ಕಾಡುಜನರಾದ ಭಿಲ್ಲರು ಮೊದಲಾದವರಿದ್ದಾರೆ. ಆರ್ಯಾವರ್ತದೇಶದಿಂದ ಎಂದಿನವರೆಗೆ ಶಿಕ್ಷಣ ಸಿಕ್ಕಿರಲಿಲ್ಲವೋ ಅಂದಿನವರೆಗೆ ಈಜಿಪ್ಟ್, ಗ್ರೀಸ್, ಯೂರೋಪ್ ಮೊದಲಾದ ದೇಶಗಳ ಜನರಲ್ಲಿ ವಿದ್ಯೆಯ ಗಂಧವೇ ಇದ್ದಿಲ್ಲ. ಯೂರೋಪ್ ದೇಶದಿಂದ ಕೊಲಂಬಸ್ ಮೊದಲಾದ ಪುರುಷರು ಅಮೆರಿಕಾ ದೇಶಕ್ಕೆ ಹೋಗುವವರೆಗೂ ಆ ದೇಶದವರು, ಲಕ್ಷಾಂತರ, ಕೋಟ್ಯಾಂತರ ವರ್ಷಗಳಿಂದ ವಿದ್ಯಾವಿಹೀನರಾಗಿದ್ದರು. ಬಳಿಕ ಒಳ್ಳೆಯ ಶಿಕ್ಷಣವನ್ನು ಹೊಂದಿ ವಿದ್ವಾಂಸರಾಗಿದ್ದಾರೆ. ಹಾಗೆಯೇ ಸೃಷ್ಟ್ಯಾದಿಯಲ್ಲಿ ಪರಮಾತ್ಮನ ಮೂಲಕ ವಿದ್ಯಾ-ಶಿಕ್ಷಣ

ಗಳನ್ನು ಹೊಂದಿ ಜನರು ಉತ್ತರೋತ್ತರಕಾಲದಲ್ಲಿ ವಿದ್ಯಾವಂತರಾಗುತ್ತ ಬಂದರು.

ಸ ಪೂರ್ವೇಷಾಮಪಿ ಗುರುಃ ಕಾಲೇನಾನವಚ್ಛೇದಾತ್ ।

[ಯೋಗಸೂತ್ರ । ಸಮಾಧಿಪಾದೇ ಸೂ. ೨೬]

ಈಗಿನ ಕಾಲದಲ್ಲಿ ನಾವು ಅಧ್ಯಾಪಕರಿಂದ ಶಿಕ್ಷಣವನ್ನು ಪಡೆದ ನಂತರವೇ ವಿದ್ವಾಂಸರಾಗುವಂತೆ, ಸೃಷ್ಟಿಯ ಆರಂಭಸಮಯದಲ್ಲಿ ಉತ್ಪನ್ನರಾದ ಅಗ್ನಿ ಮೊದಲಾದ ಋಷಿಗಳ ಗುರು ಅಂದರೆ ಓದಿಸುವವನು ಆ ಪರಮಾತ್ಮನೇ ಆಗಿದ್ದಾನೆ. ಏಕೆಂದರೆ, ಸುಷುಪ್ತಿಯಲ್ಲಿಯೂ, ಪ್ರಳಯದಲ್ಲಿಯೂ ಜೀವನು ಜ್ಞಾನರಹಿತನಾಗಿ ಹೋಗುವಂತೆ, ಪರಮಾತ್ಮನು ಜ್ಞಾನರಹಿತನಾಗುವುದಿಲ್ಲ. ಆತನ ಜ್ಞಾನವು ನಿತ್ಯವು. ಇದರಿಂದ ನಿಮಿತ್ತವಿಲ್ಲದೆಯೇ ನೈಮಿತ್ತಿಕಪ್ರಯೋಜನವು ಸಿದ್ಧವಾಗಲಾರದೆಂದು ನಿಶ್ಚಯವಾಗಿ ತಿಳಿಯಬೇಕು.

ಪ್ರಶ್ನೆ:—ವೇದಗಳು ಸಂಸ್ಕೃತಭಾಷೆಯಲ್ಲಿ ಪ್ರಕಾಶಿತವಾದುವು; ಆದರೆ, ಸೃಷ್ಟಿಯ ಆರಂಭಸಮಯದಲ್ಲಿ ಅಗ್ನಿ, ವಾಯು ಮೊದಲಾದ ನಾಲ್ಕುಮಂದಿ ಋಷಿಗಳು ಸಂಸ್ಕೃತಭಾಷೆಯನ್ನು ತಿಳಿದಿರಲಿಲ್ಲ. ಹೀಗಿರುವಲ್ಲಿ ವೇದಗಳ ಅರ್ಥವನ್ನು ಅವರು ಹೇಗೆ ತಿಳಿದುಕೊಂಡರು?

ಉತ್ತರ:—ಪರಮಾತ್ಮನು ತಿಳಿಸಿದನು. ಮತ್ತು ಧರ್ಮಾತ್ಮರೂ ಯೋಗಿಗಳೂ ಮಹರ್ಷಿಗಳೂ ಯಾವ ಯಾವ ಸಮಯದಲ್ಲಿ ಯಾವ ಯಾವ ಅರ್ಥವನ್ನು ತಿಳಿದುಕೊಳ್ಳಬೇಕೆಂದು ನಿಶ್ಚಯಿಸಿ, ಧ್ಯಾನಮಗ್ನರಾಗಿ ಪರಮಾತ್ಮಸ್ವರೂಪದಲ್ಲಿ ಸಮಾಧಿಸ್ಥರಾಗುತ್ತಿದ್ದರೋ ಆಗಾಗ ಪರಮಾತ್ಮನು ಅಭೀಷ್ಟಮಂತ್ರಗಳ ಅರ್ಥವನ್ನು ತಿಳಿಸಿದನು. ಹೀಗೆ ಅನೇಕರ ಆತ್ಮಗಳಲ್ಲಿ ವೇದಾರ್ಥವು ಪ್ರಕಾಶವಾದ ಬಳಿಕ, ಆ ಋಷಿ-ಮುನಿಗಳು ವೇದಾರ್ಥವನ್ನು ಮತ್ತು ಋಷಿ-ಮುನಿಗಳ ಇತಿಹಾಸಪೂರ್ವಕವಾದ ಗ್ರಂಥಗಳನ್ನೂ ರಚಿಸಿದರು. ಈ ಗ್ರಂಥಗಳಿಗೆ 'ಬ್ರಾಹ್ಮಣ'ಗಳೆಂದು ಹೆಸರು. ಬ್ರಹ್ಮವೆಂದರೆ ವೇದಗಳು. ಅವುಗಳ ವ್ಯಾಖ್ಯಾನ ಗ್ರಂಥವಾಗಿರುವುದರಿಂದ ಬ್ರಾಹ್ಮಣವೆಂಬ ಹೆಸರು ಬಂದಿತು. ಮತ್ತು

ಋಷಯೋ ಮಂತ್ರದೃಷ್ಟಯಃ ಮಂತ್ರಾನ್ ಸಂಪ್ರಾದುಃ ॥

[ನಿರು. ೧-೨೦]

ಯಾವ ಯಾವ ಮಂತ್ರಾರ್ಥದ ದರ್ಶನವು ಯಾವ ಯಾವ ಋಷಿಗೆ ಉಂಟಾಯಿತೋ ಮತ್ತು ಅದಕ್ಕೆ ಮೊದಲು ಯಾರೂ ಪ್ರಕಾಶಪಡಿಸದಿದ್ದ ಯಾವ ಮಂತ್ರದ ಅರ್ಥವನ್ನು ಯಾವ ಋಷಿಯು ಮೊಟ್ಟಮೊದಲು ಪ್ರಕಾಶಪಡಿಸಿ ಇತರರಿಗೆ ಬೋಧಿಸಿದನೋ, ಆಂದಿನಿಂದ ಆ ಮಂತ್ರದೊಡನೆ ಆ ಋಷಿಯ ಹೆಸರು ಜ್ಞಾಪಕಾರ್ಥವಾಗಿ ಬರೆಯುವ ಪದ್ಧತಿಯು ಬಂದಿರುತ್ತದೆ. ಋಷಿಗಳೇ ಮಂತ್ರಗಳನ್ನು ರಚಿಸಿದವರೆಂದು ಹೇಳುವವರನ್ನು ಮಿಥ್ಯಾವಾದಿಗಳೆಂದು ತಿಳಿಯಬೇಕು. ಅವರು ಮಂತ್ರಗಳ ಅರ್ಥಪ್ರಕಾಶಕರು ಮಾತ್ರ.

ಪ್ರಶ್ನೆ :—ಯಾವ ಗ್ರಂಥಗಳಿಗೆ ವೇದವೆಂದು ಹೆಸರು ?

ಉತ್ತರ :—ಋಕ್, ಯಜಸ್ಸು, ಸಾಮ ಮತ್ತು ಅಥರ್ವ ಮಂತ್ರಸಂಹಿತೆಗಳಿಗೆ ; ಬೇರೆಯವಕ್ಕಲ್ಲ.

ಪ್ರಶ್ನೆ :—'ಮಂತ್ರ ಬ್ರಾಹ್ಮಣಯೋರ್ವೇದನಾಮಧೇಯಂ' ಈ ಮೊದಲಾದ ಕಾತ್ಯಾಯನಾದಿಗಳ ಪ್ರತಿಜ್ಞಾಸೂತ್ರಗಳಿಗೆ ಹೇಗೆ ಅರ್ಥಮಾಡುತ್ತೀರಿ ?

ಉತ್ತರ :—ನೋಡಿರಿ ; ಸಂಹಿತಾಗ್ರಂಥದ ಆರಂಭದಲ್ಲಿಯೂ ಅಧ್ಯಾಯದ ಸಮಾಪ್ತಿಯಲ್ಲಿಯೂ ವೇದವೆಂಬ ಶಬ್ದವು ಅನಾದಿಕಾಲದಿಂದಲೂ ವ್ಯವಹಾರದಲ್ಲಿ ಬಂದಿರುತ್ತದೆ. ಆದರೆ ಬ್ರಾಹ್ಮಣ ಗ್ರಂಥಗಳ ಆದಿಯಲ್ಲಾಗಲಿ, ಅಧ್ಯಾಯದ ಸಮಾಪ್ತಿಯಲ್ಲಾಗಲಿ ಎಲ್ಲಿಯೂ ಬರೆದಿರುವುದಿಲ್ಲ. ನಿರುಕ್ತದಲ್ಲಿಯೂ ಕೂಡ ಹೀಗೆಯೇ ಬರೆದಿರುತ್ತದೆ.

ಇತ್ಯಪಿ ನಿಗನೋ ಭವತಿ । ಇತಿ ಬ್ರಾಹ್ಮಣಂ ॥

[ನಿರು ಅ. ೫. ಖಂ. ೪]

ಛಂದೋ ಬ್ರಾಹ್ಮಣಾನಿ ಚ ತದ್ವಿಷಯಾಣಿ ॥

[ಅಷ್ಟಾ. ಅ. ೪-೨-೬೬]

ಇದು ಪಾಣಿನಿಯಸೂತ್ರ. ಇದರಿಂದಲೂ, ಮಂತ್ರಭಾಗವು ವೇದವೆಂದೂ, ವ್ಯಾಖ್ಯಾನ ಭಾಗವು ಬ್ರಾಹ್ಮಣವೆಂದೂ ಗೊತ್ತಾಗು

ತ್ತದೆ. ಈ ವಿಷಯವಾಗಿ ಹೆಚ್ಚಾಗಿ ತಿಳಿಯಬೇಕೆಂದಿರುವವರು ನಾನು ಬರೆದಿರುವ 'ಋಗ್ವೇದಾದಿ ಭಾಷ್ಯ ಭೂಮಿಕಾ' ಎಂಬ ಗ್ರಂಥವನ್ನು ನೋಡಿರಿ. ಅದರಲ್ಲಿ, ಅನೇಕ ಪ್ರಮಾಣಗಳಿಗೆ ವಿರುದ್ಧವಾಗಿರುವುದರಿಂದ ಅವು ಕಾತ್ಯಾಯನ ಮಹರ್ಷಿಯ ವಚನವಲ್ಲವೆಂದು ಸಿದ್ಧಪಡಿಸಿದ್ದೇನೆ. ಏಕೆಂದರೆ, ಹಾಗೆ ಒಪ್ಪಿದರೆ, ವೇದಗಳು ಎಂದಿಗೂ ಸನಾತನವಾಗಲಾರವು. ಏಕೆಂದರೆ—ಬ್ರಾಹ್ಮಣ ಗ್ರಂಥಗಳಲ್ಲಿ ಅನೇಕ ಮಂದಿ ಋಷಿ, ಮಹರ್ಷಿ, ರಾಜ ಮೊದಲಾದವರ ಇತಿಹಾಸವಿರುತ್ತದೆ. ಯಾವನೊಬ್ಬನ ಇತಿಹಾಸವಾಗಲಿ, ಅವನು ಹುಟ್ಟಿದ ಮೇಲೆಯೇ ಬರೆಯಲ್ಪಡುತ್ತದೆ. ಆ ಗ್ರಂಥವೂ ಕೂಡ ಹುಟ್ಟಿದ ಬಳಿಕವೇ ರಚಿಸಬೇಕಾಗುತ್ತದೆ. ವೇದಗಳಲ್ಲಿ ಯಾವನೊಬ್ಬನ ಚರಿತ್ರೆಯೂ ಇಲ್ಲ; ಆದರೆ, ಯಾವ ಯಾವ ಶಬ್ದದಿಂದ ವಿದ್ಯಾಬೋಧವಾಗುವುದೋ, ಆಯಾ ಶಬ್ದಗಳನ್ನೇ ಪ್ರಯೋಗಿಸಲಾಗಿದೆ. ಯಾವನೇ ಒಬ್ಬನ ಹೆಸರು ಅಥವಾ ವಿಶೇಷ ಕಥಾಪ್ರಸಂಗ ವೇದಗಳಲ್ಲಿಲ್ಲ.

ಪ್ರ :—ವೇದಗಳ ಶಾಖೆಗಳೆಷ್ಟು ?

ಉ :—ಸಾವಿರದ ನೂರಿಪ್ಪತ್ತೇಳು.

ಪ್ರ :—ಶಾಖೆಗಳೆಂದರೇನು ?

ಉ :—ವ್ಯಾಖ್ಯಾನಗಳಿಗೆ ಶಾಖೆಗಳೆಂದು ಹೆಸರು.

ಪ್ರ :—ಜಗತ್ತಿನಲ್ಲಿ ವಿದ್ವಾಂಸರು ವೇದದ ಅವಯವಭೂತ ವಿಭಾಗವನ್ನೇ ವೇದಶಾಖೆಗಳೆಂದು ಹೇಳುತ್ತಾರೆ.

ಉ :—ಸ್ವವಿಚಾರಮಾಡಿದರೆ ಒಳ್ಳೆಯದು. ಈಗ ಎಷ್ಟು ಶಾಖೆಗಳಿರುತ್ತವೆಯೋ ಅವೆಲ್ಲವೂ ಆಶ್ವಲಾಯನ ಮೊದಲಾದ ಋಷಿಗಳ ಹೆಸರಿನಿಂದ ಪ್ರಸಿದ್ಧವಾಗಿವೆ. ಮಂತ್ರಸಂಹಿತೆಯು ಪರಮಾತ್ಮನ ಹೆಸರಿನಿಂದ ಪ್ರಸಿದ್ಧವಾಗಿವೆ. ನಾಲ್ಕು ವೇದಗಳು ಈಶ್ವರಕೃತವೆಂದು ಒಪ್ಪುವಂತೆಯೇ, ಆಶ್ವಲಾಯನಾದಿ ಶಾಖೆಗಳನ್ನು ಆಯಾ ಋಷಿಕೃತಗಳೆಂದು ಒಪ್ಪುತ್ತೇವೆ. ಶಾಖೆಗಳಲ್ಲೆಲ್ಲಾ ಮಂತ್ರವನ್ನು ಪ್ರತೀಕವಾಗಿಟ್ಟುಕೊಂಡು ವ್ಯಾಖ್ಯಾನ ಮಾಡಿದ್ದಾರೆ. ಹೇಗೆಂದರೆ—ತೈತ್ತರೀಯ ಶಾಖೆಯಲ್ಲ 'ಇಷೇತ್ವೋರ್ಜೇತ್ವೇತಿ' ಈ ಮೊದಲಾದ ಮಂತ್ರ

ಗಳನ್ನು ಪ್ರತೀಕವಾಗಿಟ್ಟುಕೊಂಡು ವ್ಯಾಖ್ಯಾನ ಮಾಡಿದ್ದಾರೆ. ವೇದ ಸಂಹಿತೆಯಲ್ಲಿ ಯಾವುದರ ಪ್ರತೀಕವನ್ನೂ ಇಟ್ಟಿಲ್ಲ. ಅದ್ದರಿಂದ ಈಶ್ವರ ಕೃತವಾದ ನಾಲ್ಕು ವೇದಗಳು ಮೂಲವೃಕ್ಷವಾಗಿರುತ್ತವೆ. ಆಶ್ವಲಾಯನಾದಿ ಶಾಖೆಗಳೆಲ್ಲವೂ ಋಷಿ-ಮುನಿಕೃತವು, ಈಶ್ವರಕೃತವಲ್ಲ. ಈ ವಿಷಯವಾಗಿ ವಿಶೇಷ ವ್ಯಾಖ್ಯಾನವನ್ನು ನೋಡಬೇಕೆಂದಿರುವವರು ಋಗ್ವೇದಾದಿ-ಭಾಷ್ಯ ಭೂಮಿಕೆಯಲ್ಲಿ ನೋಡಬಹುದು. ಮಾತಾಪಿತೃಗಳು ತಮ್ಮ ಮಕ್ಕಳ ಮೇಲೆ ಕೃಪಾದೃಷ್ಟಿಯನ್ನಿಟ್ಟು ಅವರ ಉನ್ನತಿಯನ್ನೇ ಕೋರುವಂತೆ, ಪರಮಾತ್ಮನು ಮನುಷ್ಯಮಾತ್ರದವನ ಮೇಲೆ ಕೃಪಾದೃಷ್ಟಿಯನ್ನಿಟ್ಟು, ಅವರು ಅವಿದ್ಯೆಯೆಂಬ ಅಂಧಕಾರದಿಂದಲೂ, ಭ್ರಮಜಾಲದಿಂದಲೂ ದೂರರಾಗಿ ವಿದ್ಯಾವಿಜ್ಞಾನರೂಪವಾದ ಸೂರ್ಯನನ್ನು ಹೊಂದಿ, ಅತ್ಯಾನಂದದಿಂದಿರಲಿ ಮತ್ತು ವಿದ್ಯಾಸುಖಗಳನ್ನು ವೃದ್ಧಿಪಡಿಸುತ್ತಾ ಹೋಗಲಿ ಎಂದು, ವೇದಗಳನ್ನು ಪ್ರಕಾಶಪಡಿಸಿದ್ದಾನೆ.

ಪ್ರ :—ವೇದವು ನಿತ್ಯವೋ? ಅನಿತ್ಯವೋ?

ಉ :—ನಿತ್ಯವಿರುತ್ತದೆ. ಏಕೆಂದರೆ—ಪರಮಾತ್ಮನು ನಿತ್ಯನಾಗಿರುವುದರಿಂದ ಆತನ ಜ್ಞಾನಾದಿ ಗುಣಗಳೂ ಕೂಡ ನಿತ್ಯವಿರುತ್ತವೆ, ನಿತ್ಯವಸ್ತುಗಳ ಗುಣ-ಕರ್ಮ-ಸ್ವಭಾವಗಳು ನಿತ್ಯವಾಗಿಯೂ, ಅನಿತ್ಯವಸ್ತುಗಳ ಗುಣ-ಕರ್ಮ-ಸ್ವಭಾವಗಳು ಅನಿತ್ಯವಾಗಿಯೂ ಇರುತ್ತವೆ.

ಪ್ರ :—ಈ ಪುಸ್ತಕವೂ ಕೂಡ ನಿತ್ಯವೋ?

ಉ : — ಅಲ್ಲ. ಏಕೆಂದರೆ ಪುಸ್ತಕವು ಕಾಗದ ಮತ್ತು ಮಸಿಯಿಂದ ರಚಿತವಾಗಿದೆ. ಅದು ನಿತ್ಯವೆಂತಾಗಬಲ್ಲದು? ಆದರೆ—ಇದರಲ್ಲಿರುವ ಶಬ್ದಾರ್ಥ ಸಂಬಂಧಗಳು ನಿತ್ಯವಾಗಿರುತ್ತವೆ.

ಪ್ರ :—ಈಶ್ವರನು ಆ ಋಷಿಗಳಿಗೆ ಜ್ಞಾನವನ್ನು ಕೊಟ್ಟರಬಹುದು. ಅವರು ಆ ಜ್ಞಾನದಿಂದ ವೇದಗಳನ್ನು ರಚಿಸಿಕೊಂಡಿರಬಹುದು.

ಉ :—ಜ್ಞೇಯವಿಲ್ಲದೆ ಜ್ಞಾನವುಂಟಾಗಲಾರದು. ಗಾಯತ್ರಿ ಮೊದಲಾದ ಛಂದಸ್ಸು ಷಡ್ಜ, ಉದಾತ್ತ, ಅನುದಾತ್ತ ಮೊದಲಾದ

ಸ್ವರಗಳ, ಜ್ಞಾನಪೂರ್ವಕವಾಗಿ ಗಾಯತ್ರ್ಯಾದಿ ಛಂದಸ್ಸುಗಳನ್ನು ನಿರ್ಮಿಸುವ ಮತ್ತು ಈ ರೀತಿ ಸರ್ವಜ್ಞಾನಯುಕ್ತವಾದ ಶಾಸ್ತ್ರವನ್ನು ರಚಿಸುವ, ಸಾಮರ್ಥ್ಯವು ಸರ್ವಜ್ಞನಾದ ಪರಮಾತ್ಮನಿಗಲ್ಲದೆ ಇತರರಿಗೆ ಇಲ್ಲ. ಹೌದು, ವೇದಗಳನ್ನು ಓದಿದ ಬಳಿಕ ಋಷಿ-ಮುನಿಗಳು ವಿದ್ಯೆಗಳನ್ನು ಪ್ರಕಾಶಪಡಿಸುವುದಕ್ಕಾಗಿ ವ್ಯಾಕರಣ, ನಿರುಕ್ತ, ಛಂದಶ್ಶಾಸ್ತ್ರ ಮೊದಲಾದ ಗ್ರಂಥಗಳನ್ನು ಬರೆದಿದ್ದಾರೆ. ಪರಮಾತ್ಮನು ವೇದಗಳನ್ನು ಪ್ರಕಾಶಪಡಿಸದಿದ್ದರೆ, ಯಾರಿಂದಲೂ ಏನೂ ಆಗುತ್ತಿರಲಿಲ್ಲ. ಆದ್ದರಿಂದ ವೇದವು ಪರಮೇಶ್ವರೋಕ್ತವಾದುದು, ಇವುಗಳನ್ನು ಅನುಸರಿಸಿಯೇ ಎಲ್ಲರೂ ನಡೆಯಬೇಕು. ಯಾರಾದರೂ 'ನಿನ್ನ ಮತವೇನೆಂದು' ಕೇಳಿದರೆ, 'ನಮ್ಮ ಮತವು ವೇದಗಳು ಅಂದರೆ ವೇದಗಳಲ್ಲಿರುವ ವಿಷಯಗಳನ್ನೇ ನಾವು ಒಪ್ಪುತ್ತೇವೆ' ಎಂದು ಉತ್ತರ ಕೊಡಬೇಕು.

ಇನ್ನು ಇದರ ಬಳಿಕ ಸೃಷ್ಟಿಯ ವಿಷಯದಲ್ಲಿ ಬರಯುವೆವು. ಈ ರೀತಿ ಈಶ್ವರ ಮತ್ತು ವೇದಗಳ ವಿಷಯವಾಗಿ ಸಂಕ್ಷೇಪವಾಗಿ ಬರೆದಿದ್ದೇವೆ.

ಇತಿ ಶ್ರೀಮದ್ದಯಾನಂದಸರಸ್ವತೀಸ್ವಾಮಿಕೃತೇ
ಸತ್ಯಾರ್ಥಪ್ರಕಾಶೇ ಸುಭಾಷಾವಿಭೂಷಿತ ಈಶ್ವರವೇದವಿಷಯೇ
ಸಪ್ತಮಸಮುಲ್ಲಾಸಃ ಸಂಪೂರ್ಣಃ

॥ ಓಂ ॥

ಅಥ ಅಷ್ಟಮಸಮುಲ್ಲಾಸಾರಂಭಃ

ಅಥ ಸೃಷ್ಟ್ಯುತ್ಪತ್ತ್ಯಾದಿಸ್ಥಿತಿಪ್ರಲಯವಿಷಯಾನ್ ವ್ಯಾಖ್ಯಾಸ್ಯಾಮಃ

ಇಯಂ ವಿಸೃಷ್ಟಿರ್ಯತ ಆ ಬಭೂವ ಯದಿ ವಾ ದಧೇ ಯದಿ ವಾ ನ ।
ಯೋ ಅಸ್ಯಾಧ್ಯಕ್ಷಃ ಪರಮೇವ್ಯೋಮನ್ತ್ಸೋ ಅಂಗವೇದ ಯದಿ ವಾ ನ ವೇದ ॥೧॥

ತಮು ಅಸೀತ್ತಮಸಾ ಗೂಢಮಗ್ರೇಽಪ್ರಕೇತಂ ಸಲಿಲಂ ಸರ್ವಮಾ ಇದಮ್ ।
ತುಚ್ಛ್ಯೇನಾಭ್ವಪಿಹಿತಂ ಯದಾಸೀತ್ತಪಸಸ್ತನ್ಮಹಿನಾ ಜಾಯತೈಕಮ್ ॥೨॥

[ಋ. ಮಂ. ೧೦, ಸೂ. ೧೨೯, ಮಂ. ೭।೩]

ಹಿರಣ್ಯಗರ್ಭಸ್ಸಮವರ್ತತಾಗ್ರೇ ಭೂತಸ್ಯ ಜಾತಃ ಪತಿರೇಕ ಆಸೀತ್ ।
ಸ ದಾಧಾರ ಪೃಥಿವೀಂ ದ್ಯಾಮುತೇಮಾಂ ಕಸ್ಮೈ ದೇವಾಯ ಹವಿಷಾವಿಧೇಮ ॥೩॥

[ಋ. ಮಂ. ೧೦, ಸೂ. ೧೨೧, ಮಂ. ೧]

ಪುರುಷ ಏವೇದಗ್ಂ ಸರ್ವಂ ಯದ್ಭೂತಂ ಯಚ್ಚ ಭಾವ್ಯಮ್ ।
ಉತಾಮೃತತ್ವಸ್ಯೇಶಾನೋ ಯದನ್ನೇನಾತಿ ರೋಹತಿ ॥೪॥

[ಯಜು. ಅ. ೩೧, ಮಂ. ೨]

ಯತೋ ವಾ ಇಮಾನಿ ಭೂತಾನಿ ಜಾಯಂತೇ ಯೇನ ಜಾತಾನಿ ಜೀವಂತಿ ।
ಯತ್ ಪ್ರಯಂತ್ಯಭಿ ಸಂ ವಿಶಂತಿ ತದ್ವಿಜಿಜ್ಞಾಸಸ್ವ ತದ್ಬ್ರಹ್ಮ ॥

[ತೈತ್ತಿರೀಯ, ಭೃಗುವಲ್ಲೀ, ಅನು. ೧]

ಎಲೈ (ಅಂಗ) ಮನುಷ್ಯನೇ ! ಯಾವನಿಂದ ಈ ವಿವಿಧಸೃಷ್ಟಿಯು ಪ್ರಕಾಶಿತವಾಯಿತೋ, ಯಾವನು ಧಾರಣ ಮತ್ತು ಪ್ರಳಯವನ್ನು ನಡೆಸುತ್ತಿರುವನೋ, ಯಾವನು ಈ ಜಗತ್ತಿಗೆ ಸ್ವಾಮಿಯೋ, ಯಾವ ವ್ಯಾಪಕನಲ್ಲಿ ಈ ಸಮಗ್ರಜಗತ್ತು ಉತ್ಪತ್ತಿ, ಸ್ಥಿತಿ, ಪ್ರಳಯಗಳನ್ನು ಹೊಂದುತ್ತಿರುವುದೋ, ಅವನು ಪರಮೇಶ್ವರನು. ಅವನನ್ನು ನೀನು ತಿಳಿದುಕೋ, ಮತ್ತೊಬ್ಬನನ್ನು ಸೃಷ್ಟಿಕರ್ತನೆಂದು ಒಪ್ಪಬೇಡ. ॥೧॥

ಈ ಎಲ್ಲಾ ಜಗತ್ತು ಸೃಷ್ಟಿಗೆ ಪೂರ್ವ ಅಂಧಕಾರದಿಂದ ಆವೃತವಾಗಿ, ರಾತ್ರಿಯಂತೆ, ತಿಳಿದುಕೊಳ್ಳುವುದಕ್ಕೂ ಕೂಡ ಅಯೋಗ್ಯವಾಗಿ, ಆಕಾಶರೂಪವಾಗಿ ಮತ್ತು ತುಚ್ಛವಾಗಿ ಅಂದರೆ ಅನಂತ ಪರಮಾತ್ಮನ ಇದಿರಿನಲ್ಲಿ ಒಂದು ಏಕದೇಶಿಯಾಗಿ ಆಚ್ಛಾದಿತವಾಗಿತ್ತು. ಆಮೇಲೆ ಪರಮಾತ್ಮನು ತನ್ನ ಸಾಮರ್ಥ್ಯದಿಂದ ಕಾರಣರೂಪದಿಂದ ಕಾರ್ಯರೂಪವಾಗಿ ಮಾಡಿದನು. ॥೨॥

ಎಲೈ ಮನುಷ್ಯರೇ ! ಯಾವನು ಸೂರ್ಯನೇ ಮೊದಲಾದ ಸಮಸ್ತ ತೇಜೋವಂತ ಪದಾರ್ಥಗಳಿಗೆ ಆಧಾರನಾಗಿರುವನೋ, ಯಾವನು ಇದುವರೆಗೆ ಆಗಿಹೋದ, ಈಗಿರುವ, ಮುಂದೆ ಆಗಬಹುದಾದ ಜಗತ್ತಿಗೆ ಒಬ್ಬ ಅದ್ವಿತೀಯನಾದ ಸ್ವಾಮಿಯೋ, ಯಾವನು ಈ ಜಗತ್ತಿನ ಉತ್ಪತ್ತಿಗೆ ಪೂರ್ವದಲ್ಲಿ ಸಹ ಇದ್ದನೋ, ಯಾವನು ಪೃಥ್ವಿಯಿಂದ ಹಿಡಿದು ಸೂರ್ಯನವರೆಗೆ ಜಗತ್ತನ್ನು ಉತ್ಪತ್ತಿಮಾಡಿದ್ದಾನೋ ಆ ಪರಮಾತ್ಮದೇವನಲ್ಲಿ ಪ್ರೇಮದಿಂದ ಭಕ್ತಿಯಿಡೋಣ.॥೩॥

ಎಲೈ ಮನುಷ್ಯರೇ, ಯಾವನು ಎಲ್ಲವುಗಳಲ್ಲಿಯೂ ಪೂರ್ಣ ಪುರುಷನಾಗಿರುವನೋ ಯಾವನು ನಾಶರಹಿತಕಾರಣ ಮತ್ತು ಜೀವನ ಪ್ರಭುವಾಗಿರುವನೋ, ಯಾವನು ಪೃಥಿವ್ಯಾದಿ ಜಡಗಳಿಗಿಂತಲೂ, ಜೀವರಿಗಿಂತಲೂ ಬೇರೆಯಾಗಿರುವನೋ ಆ ಪುರುಷನೇ ಈ ಸಮಸ್ತ

ಭೂತ-ಭವಿಷ್ಯತ್ ಮತ್ತು ವರ್ತಮಾನದಲ್ಲಿರುವ ಜಗತ್ತನ್ನು ನಿರ್ಮಿಸುವವನಾಗಿದ್ದಾನೆ. ||೪||

ಯಾವನ ರಚನೆಯಿಂದ ಸಮಸ್ತ ಪೃಥಿವ್ಯಾದಿ ಭೂತಗಳು ಉತ್ಪನ್ನವಾಗುತ್ತವೋ, ಯಾವನಲ್ಲಿ ಜೀವಿಸುತ್ತವೋ ಮತ್ತು ಲಯವಾಗುತ್ತವೋ ಅವನೇ ಬ್ರಹ್ಮನು. ಅವನನ್ನು ತಿಳಿಯಬಯಸಿರಿ. ||೫||

ಜನ್ಮಾದ್ಯಸ್ಯ ಯತಃ ||

[ಶಾರೀರಿಕ ಸೂ. ಅ. ೧. ಪಾ. ೧. ಸೂ. ೨]

ಯಾವನಿಂದ ಈ ಜಗತ್ತಿನ ಜನ್ಮ-ಸ್ಥಿತಿ-ಪ್ರಳಯಗಳು ನಡೆಯುತ್ತಿರುವುವೋ, ಆ ಬ್ರಹ್ಮನೇ ತಿಳಿದುಕೊಳ್ಳುವುದಕ್ಕೆ ಅರ್ಹನು.

ಪ್ರ :—ಪರಮೇಶ್ವರನಿಂದ ಈ ಜಗತ್ತು ಉತ್ಪನ್ನವಾಗಿರುವುದೋ ಅಥವಾ ಬೇರೆಯವರಿಂದಲೋ ?

ಉ :—ನಿಮಿತ್ತಕಾರಣನಾದ ಪರಮಾತ್ಮನಿಂದ ಈ ಜಗತ್ತು ಉತ್ಪನ್ನವಾಗಿದೆ. ಆದರೆ, ಇದರ ಉಪಾದಾನ ಕಾರಣವು ಪ್ರಕೃತಿ.

ಪ್ರ :—ಪರಮಾತ್ಮನು ಪ್ರಕೃತಿಯನ್ನು ನಿರ್ಮಿಸಲಿಲ್ಲವೊ ?

ಉ :—ಇಲ್ಲ ; ಅದು ಅನಾದಿ.

ಪ್ರ :—ಆದಿಯೆಂದು ಯಾವುದಕ್ಕೆ ಹೇಳುತ್ತಾರೆ? ಮತ್ತು ಎಷ್ಟು ಪದಾರ್ಥಗಳು ಅನಾದಿಯಾಗಿವೆ ?

ಉ :—ಈಶ್ವರ, ಜೀವ ಮತ್ತು ಜಗತ್ತಿನ ಕಾರಣ-ಇವು ಮೂರು ಅನಾದಿಗಳು.

ಪ್ರ :—ಇದಕ್ಕೆ ಪ್ರಮಾಣವೇನು ?

ಉ :—

ದ್ವಾ ಸುಪರ್ಣಾ ಸಯುಜಾ ಸಖಾಯಾ ಸಮಾನಂ ವೃಕ್ಷಂ
ಪರಿಷಸ್ವಜಾತೇ ||
ತಯೋರನ್ಯಃ ಪಿಪ್ಪಲಂ ಸ್ವಾದ್ವತ್ತ್ಯನಶ್ನನ್ನ್ಯೋ ಅಭಿ
ಚಾ ಕಶೀತಿ ||

[ಮುಂ. ೧, ಸೂ. ೧೬, ಮಂ. ೨೦||]

ಶಾಶ್ವತೀಭ್ಯಃ ಸಮಾಭ್ಯಃ ||೭|| [ಯಜು, ಅ. ೪೦, ಮಂ. ೮||]

(ದ್ವಾ) ಬ್ರಹ್ಮ ಮತ್ತು ಜೀವ ಇಬ್ಬರೂ (ಸಂಪೂರ್ಣ) ಚೈತನ್ಯ, ಪಾಲನೆ ಮೊದಲಾದ ಗುಣಗಳಿಂದ ಸಮಾನರಾಗಿಯೂ, (ಸಯುಜಾ) ವ್ಯಾಪ್ಯ, ವ್ಯಾಪಕ ಭಾವಗಳಿಂದ ಕೂಡಿದವರಾಗಿಯೂ, (ಸಖಾಯಾ) ಪರಸ್ಪರ ಸ್ನೇಹವುಳ್ಳವರಾಗಿಯೂ, ಸನಾತನರಾಗಿಯೂ, ಅನಾದಿಯಾಗಿಯೂ ಇದ್ದಾರೆ. ಮತ್ತು (ಸಮಾನಂ) ಹಾಗೆಯೇ, (ವೃಕ್ಷಂ) ಅನಾದಿಮೂಲಕಾರಣ ಮತ್ತು ಶಾಖಾರೂಪ ಕಾರ್ಯಯುಕ್ತ ವೃಕ್ಷ, ಅಂದರೆ ಸ್ಥೂಲವಾಗಿದ್ದು, ಪ್ರಳಯದಲ್ಲಿ ಛಿನ್ನಭಿನ್ನವಾಗಿ ಹೋಗುವ ಪದಾರ್ಥವು ಮೂರನೆಯ ಅನಾದಿಯು. ಈ ಮೂರರ ಗುಣ-ಕರ್ಮ-ಸ್ವಭಾವಗಳೂ ಕೂಡ ಅನಾದಿಯಾಗಿರುತ್ತವೆ. ಈ ಜೀವಬ್ರಹ್ಮರಲ್ಲಿ ಒಬ್ಬನಾದ ಜೀವನು ಈ ವೃಕ್ಷರೂಪ ಜಗತ್ತಿನಲ್ಲಿ ಪಾಪ, ಪುಣ್ಯವೆಂಬ ಫಲಗಳನ್ನು, (ಸ್ವಾದ್ವತ್ತಿ) ಚೆನ್ನಾಗಿ ಅನುಭವಿಸುತ್ತಾನೆ, ಮತ್ತು ಎರಡನೆಯವನಾದ ಪರಮಾತ್ಮನು ಕರ್ಮಫಲಗಳನ್ನು, (ಅನಶ್ನನ್) ಭುಂಜಿಸದೆ, ನಾಲ್ಕೆಡೆಯೂ ಅಂದರೆ ಒಳಗೆ, ಹೊರಗೆ ಎಲ್ಲೆಡೆಯೂ ಪ್ರಕಾಶಮಾನನಾಗಿದ್ದಾನೆ. ಜೀವನಿಂದ ಈಶ್ವರನೂ, ಈಶ್ವರನಿಂದ ಜೀವನೂ ಮತ್ತು ಈ ಇಬ್ಬರಿಂದ ಪ್ರಕೃತಿಯೂ ಭಿನ್ನಸ್ವರೂಪವಾದುದು; ಮೂರೂ ಅನಾದಿಗಳು. ॥೧॥

(ಶಾಶ್ವತೀ....) ಪರಮಾತ್ಮನು, ಅನಾದಿಗಳೂ ಸನಾತನರೂ ಆದಜೀವರೆಂಬ ಪ್ರಜೆಗಳಿಗೆ ವೇದದ ಮೂಲಕ ಸಮಸ್ತ ವಿದ್ಯೆಗಳನ್ನು ಬೋಧಿಸಿದನು. ॥೨॥

ಅಜಾಮೇಕಾಂ ಲೋಹಿತಶುಕ್ಲಕೃಷ್ಣಾಂ ಬಹ್ವೀಃ ಪ್ರಜಾಃ
ಸೃಜಮಾನಾಂ ಸ್ವರೂಪಾಃ
ಅಜೋ ಹ್ಯೇಕೋ ಜುಷಮಾಣೋಽನುಶೇತೇ ಜಹಾತ್ಯೇನಾಂ
ಭುಕ್ತಭೋಗಾಮಜೋಽನ್ಯಃ ।

[ಶ್ವೇತಾಶ್ವತರೋಪನಿಷತ್ ಅ। ೪। ಮಂ. ೫]

ಇದು ಉಪನಿಷದ್ವಚನ. ಪ್ರಕೃತಿ, ಜೀವ ಮತ್ತು ಪರಮಾತ್ಮ ಈ ಮೂರೂ ಅಜ ಅಂದರೆ---ಎಂದಿಗೂ ಉತ್ಪನ್ನವಾಗುವುದಿಲ್ಲ ಮತ್ತು ಇವು ಜನ್ಮವೆತ್ತುವುದೂ ಇಲ್ಲ. ಈ ಮೂರೂ ಸಮಸ್ತ ಜಗತ್ತಿನ

ಕಾರಣಗಳು. ಇವಕ್ಕಾವುದೂ ಕಾರಣವಿಲ್ಲ. ಅನಾದಿ ಜೀವನು ಅನಾದಿ ಪ್ರಕೃತಿಯನ್ನು ಭೋಗಿಸುತ್ತ ಸಿಕ್ಕಿಕೊಳ್ಳುತ್ತಾನೆ. ಆದರೆ ಪರಮಾತ್ಮನು ಅದರಲ್ಲಿ ಸಿಕ್ಕಿಕೊಳ್ಳುವುದೂ ಇಲ್ಲ; ಅದನ್ನು ಭೋಗಿಸುವುದೂ ಇಲ್ಲ.

ಈಶ್ವರ ಮತ್ತು ಜೀವನ ಲಕ್ಷಣಗಳನ್ನು ಈಶ್ವರ ವಿಷಯದಲ್ಲಿ ಹೇಳಿದ್ದೇವೆ. ಇಲ್ಲಿ ಪ್ರಕೃತಿಯ ಲಕ್ಷಣಗಳನ್ನು ಬರೆಯುತ್ತೇವೆ.

ಸತ್ವರಜಸ್ತಮಸಾಂ ಸಾಮ್ಯಾವಸ್ಥಾ ಪ್ರಕೃತಿಃ ಪ್ರಕೃತೇರ್ಮಹಾನ್ ಮಹತೋಽಹಂಕಾರೋಽಹಂಕಾರಾತ್ ಪಂಚತನ್ಮಾತ್ರಾಣ್ಯುಭಯಮಿಂದ್ರಿಯಂ ಪಂಚತನ್ಮಾತ್ರೇಭ್ಯಃ ಸ್ಥೂಲಭೂತಾನಿ ಪುರುಷ ಇತಿ ಪಂಚ ವಿಂಶತಿರ್ಗಣಃ ॥

[ಸಾಂಖ್ಯ ಸೂ. ಅ. ೧. ಸೂ ೬೧]

(ಸತ್ವ) ಶುದ್ಧ (ರಜಃ) ಮಧ್ಯ (ತಮಃ) ಜಡತೆ ಈ ಮೂರು ವಸ್ತುಗಳು ಸೇರಿರುವ ಒಂದು ಸಂಘಾತಕ್ಕೆ ಪ್ರಕೃತಿಯೆಂದು ಹೆಸರು. ಅದರಿಂದ ಮಹತ್ತತ್ವ ಅಂದರೆ ಬುದ್ಧಿಯೂ, ಅದರಿಂದ ಅಹಂಕಾರವೂ, ಅದರಿಂದ ಪಂಚತನ್ಮಾತ್ರಗಳೂ, ಸೂಕ್ಷ್ಮಭೂತಗಳೂ, ಹತ್ತು ಇಂದ್ರಿಯಗಳೂ, ಹನ್ನೊಂದನೆಯದಾದ ಮನಸ್ಸೂ, ಪಂಚತನ್ಮಾತ್ರಗಳಿಂದ ಪೃಥಿವ್ಯಾದಿ ಪಂಚಭೂತಗಳೂ, ಈ ಇಪ್ಪತ್ತು ನಾಲ್ಕು ಮತ್ತು ಇಪ್ಪತ್ತೈದನೆಯ ತತ್ವವು ಪುರುಷ ಅಂದರೆ ಜೀವನೂ, ಪರಮಾತ್ಮನೂ ಆಗಿದ್ದಾರೆ. ಇವುಗಳಲ್ಲಿ ಪ್ರಕೃತಿಯು ವಿಕಾರರಹಿತವಾದುದು, ಮತ್ತು ಮಹತ್ತತ್ವ, ಅಹಂಕಾರ, ಮತ್ತು ಸೂಕ್ಷ್ಮ ಪಂಚಭೂತಗಳು ಪ್ರಕೃತಿಯ ಕಾರ್ಯಗಳಾಗಿದ್ದು, ಇಂದ್ರಿಯಗಳಿಗೂ, ಮನಸ್ಸಿಗೂ ಮತ್ತು ಸ್ಥೂಲಭೂತಗಳಿಗೂ ಕಾರಣವಾಗಿವೆ. ಪುರುಷನು ಯಾವುದೊಂದಕ್ಕೂ ಪ್ರಕೃತಿ ಅಂದರೆ ಉಪಾದಾನಕಾರಣನಾಗಿಯೂ, ಯಾವುದೊಂದು ಕಾರಣದ ಕಾರ್ಯವಾಗಿಯೂ ಇಲ್ಲ.

ಪ್ರಶ್ನೆ :—

ಸದೇವ ಸೋಮ್ಯೇದಮಗ್ರ ಆಸೀತ್ ॥೧॥

[ಛಾಂದೋ. ಪ್ರ ೬. ಖಂ. ೨]

ಅಸದ್ವಾ ಇದಮಗ್ರ ಆಸೀತ್ ॥೨॥

[ತೈತ್ತರೀಯ. ಬ್ರಹ್ಮಾನಂದವಲ್ಲಿ ಅನು ೭]

ಆತ್ಮೈ ವೇದಮಗ್ರ ಆಸೀತ್ ॥೩॥

[ಬೃಹ. ಅ. ೧ ಬ್ರಾ. ೪ ಮಂ. ೧]

ಬ್ರಹ್ಮ ವಾ ಇದಮಗ್ರ ಆಸೀತ್ ॥೪॥

[ಶತ. ೧೧. ೧. ೧೧. ೧]

ಇವು ಉಪನಿಷದ್ವಚನಗಳು. "ಎಲೈ ಶ್ವೇತಕೇತು! ಸೃಷ್ಟಿಗೆ ಮೊದಲು ಈ ಜಗತ್ತು ಸತ್ ॥೧॥, ಅಸತ್ ॥೨॥, ಆತ್ಮ ॥೩॥ ಮತ್ತು ಬ್ರಹ್ಮ ॥೪॥ ಇವುಗಳ ಸ್ವರೂಪವಾಗಿತ್ತು. ಬಳಿಕ

ತದೈಕ್ಷತ ಬಹುಃ ಸ್ಯಾಂ ಪ್ರಜಾಯೇಯೇತಿ ॥

[ತೈತ್ತರೀಯ, ಬ್ರಹ್ಮಾನಂದವಲ್ಲಿ ಅನು ೬]

ಆ ಪರಮಾತ್ಮನೇ ತನ್ನ ಇಚ್ಛೆಯಿಂದ ಅನೇಕ ರೂಪಗಳನ್ನು ಹೊಂದಿದನು.

ಸರ್ವಂ ಖಲ್ವಿದಂ ಬ್ರಹ್ಮ ನೇಹ ನಾನಾಸ್ತಿ ಕಿಂಚನ ॥

ಇದೂ ಉಪನಿಷದ್ವಚನ. ಈ ಜಗತ್ತೆಲ್ಲವೂ ನಿಶ್ಚಯವಾಗಿ ಬ್ರಹ್ಮವೇ ಆಗಿರುತ್ತದೆ. ಇದರಲ್ಲಿ ಬೇರೆ ನಾನಾವಿಧವಾದ ಪದಾರ್ಥವಾವುದೂ ಇಲ್ಲ. ಆದರೆ ಎಲ್ಲವೂ ಬ್ರಹ್ಮರೂಪವಾಗಿದೆ.

ಉತ್ತರ :—ಈ ವಚನಗಳಿಗೆ ಏಕೆ ಅನರ್ಥವನ್ನು ಮಾಡುತ್ತೀರಿ? ಏಕೆಂದರೆ—ಅದೇ ಉಪನಿಷತ್ತುಗಳಲ್ಲಿ

[ಏವಮೇವ ಖಲು] ಸೋವ್ಯಾನ್ನೇನ ಶುಂಗೇನಾಪೋ ಮೂಲಮನ್ವಿಚ್ಛಾದ್ಭಿಸ್ಸೋವ್ಯ ಶುಂಗೇನತೇಜೋಮೂಲ ಮನ್ವಿಚ್ಛ ತೇಜಸಾ ಸೋವ್ಯ ಶುಂಗೇನ ಸನ್ಮೂಲಮನ್ವಿಚ್ಛ ಸನ್ಮೂಲಾಃ ಸೋವ್ಯೇಮಾಃ ಸರ್ವಾಃ ಪ್ರಜಾಃ ಸದಾಯತನಾಃ ಸತ್ಪ್ರತಿಷ್ಠಾಃ ॥

[ಛಾಂದೋಗ್ಯ. ಪ್ರ. ೬. ಖಂ. ೮. ಮಂ. ೪]

ಎಲೈ ಶ್ವೇತಕೇತು! ಅನ್ನರೂಪವಾದ ಪೃಥಿವೀಕಾರ್ಯದಿಂದ ಜಲರೂಪವಾದ ಮೂಲಕಾರಣವನ್ನು ತಿಳಿ. ಕಾರ್ಯರೂಪವಾದ ಜಲದಿಂದ ತೇಜೋರೂಪವಾದ ಮೂಲವನ್ನೂ, ತೇಜೋರೂಪ ಕಾರ್ಯದಿಂದ ಸದ್ರೂಪಕಾರಣವಾದ ನಿತ್ಯಪ್ರಕೃತಿಯನ್ನು ತಿಳಿ. ಈ ಸತ್ಯಸ್ವರೂಪ ಪ್ರಕೃತಿಯೇ ಸರ್ವ ಜಗತ್ತಿನ ಮೂಲ ಆಶ್ರಯ ಹಾಗೂ ಸ್ಥಿತಿಯ ಸ್ಥಾನವಾಗಿದೆ. ಈ ಜಗತ್ತೆಲ್ಲವೂ ಸೃಷ್ಟಿಗೆ ಪೂರ್ವದಲ್ಲಿ ಆಸತ್ತಿನಂತೆ ಜೀವಾತ್ಮ, ಬ್ರಹ್ಮ ಮತ್ತು ಪ್ರಕೃತಿಗಳಲ್ಲಿ ಲೀನವಾಗಿ ಅಡಗಿತ್ತು; ಅಭಾವ ಹೊಂದಿರಲಿಲ್ಲ. ಮತ್ತು 'ಸರ್ವಂ ಖಲು' ಈ ವಚನವು 'ಎಲ್ಲಿನದೋ ಇಟ್ಟಿಗೆ; ಎಲ್ಲಿನದೋ ಕಲ್ಲಿನ ಚೂರು; ಬಣಜಾರನು ಸಂಸಾರ ಹೂಡಿದನು'—ಎಂಬಂತಿದೆ. ಏಕೆಂದರೆ :—

ಸರ್ವಂ ಖಲ್ವಿದಂ ಬ್ರಹ್ಮ ತಜ್ಜಲಾನಿತಿ ಶಾಂತ ಉಪಾಸೀತ॥

[ಛಾಂದೋಗ್ಯ. ಪ್ರ ೩। ಖಂ. ೧೪. ಮಂ. ೧]

ನೇಹ ನಾನಾಸ್ತಿ ಕಿಂಚನ॥

[ಕಠೋ. ಅ. ೨, ವಲ್ಲಿ ೪। ಮಂ. ೧೧]

ಶರೀರದ ಅಂಗಗಳು ಶರೀರದೊಡನೆ ಕೂಡಿರುವವರೆಗೆ ಮಾತ್ರ ಉಪಯೋಗವಾಗುತ್ತಿದ್ದು ಮತ್ತು ಬೇರೆಯಾಗುತ್ತಲೇ ಹೇಗೆ ಕೆಲಸಕ್ಕೆ ಬಾರದೆ ಹೋಗುತ್ತವೋ ಹಾಗೆಯೇ ಪ್ರಕರಣದಲ್ಲಿರುವ ವಾಕ್ಯವು ಸಾರ್ಥಕವಾಗಿಯೂ, ಪ್ರಕರಣದಿಂದ ಬೇರೆಮಾಡಿದ ಅಥವಾ ಬೇರೊಂದರ ಜೊತೆಗೆ ಸೇರಿಸಿದ ವಾಕ್ಯವು ನಿರರ್ಥಕವಾಗಿಯೂ ಆಗುತ್ತದೆ. ಕೇಳಿರಿ—ಇದರ ಅರ್ಥವು ಹೀಗಿರುತ್ತದೆ. ಎಲೈ ಜೀವನೇ, ಯಾವ ಬ್ರಹ್ಮನಿಂದ ಈ ಜಗತ್ತಿನ ಉತ್ಪತ್ತಿ, ಸ್ಥಿತಿ ಮತ್ತು ಜೀವನ ನಡೆಯುತ್ತಿರುವುದೋ, ಯಾವನ ರಚನೆಯಿಂದ ಮತ್ತು ಧಾರಣೆಯಿಂದ ಈ ಎಲ್ಲಾ ಜಗತ್ತೂ ಅಸ್ತಿತ್ವದಲ್ಲಿರುವುದೋ ಅಥವಾ ಯಾವನೊಡನೆ ಸಹ ಚರಿತವಾಗಿರುವುದೋ, ಆ ಬ್ರಹ್ಮನನ್ನು ಉಪಾಸಿಸು. ಆತನನ್ನು ಬಿಟ್ಟು ಬೇರೆ ಯಾರನ್ನೂ ಉಪಾಸಿಸಬೇಡ. ಈ ಚೇತನಮಾತ್ರವಾದ ಅಖಂಡ ಏಕರಸ ಬ್ರಹ್ಮರೂಪದಲ್ಲಿ ನಾನಾವಸ್ತುಗಳು ಸೇರಿಲ್ಲ. ಆದರೆ ಅವೆಲ್ಲವೂ ಬೇರೆ ಬೇರೆ ಸ್ವರೂಪದಿಂದ ಪರಮಾತ್ಮನ ಆಧಾರದಲ್ಲಿ ಸ್ಥಿರವಾಗಿವೆ.

ಪ್ರ :—ಜಗತ್ತಿಗೆ ಕಾರಣಗಳೆಷ್ಟು ?

ಉ :—ಮೂರು. ಮೊದಲನೆಯದು ನಿಮಿತ್ತಕಾರಣ. ಎರಡನೆಯದು ಉಪಾದಾನ ಕಾರಣ. ಮೂರನೆಯದು ಸಾಧಾರಣ ಕಾರಣ. ಯಾವುದರ ಮಾಡುವಿಕೆಯಿಂದ ಏನಾದರೂ ಆಗುವುದೋ, ಮಾಡದಿರುವಿಕೆಯಿಂದ ಆಗುವುದಿಲ್ಲವೋ, ಯಾವುದು ತಾನು ಮಾತ್ರ ಏನೂ ಆಗದೆ, ಬೇರೆಯದನ್ನು ರೂಪಾಂತರಗೊಳಿಸುವುದೋ ಅದು ನಿಮಿತ್ತ ಕಾರಣ. ಎರಡನೆಯದು, ಯಾವುದಿಲ್ಲದಿದ್ದರೆ ಏನೂ ಆಗುವುದಿಲ್ಲವೋ, ಯಾವುದು ಅವಸ್ಥಾಂತರವನ್ನು ಹೊಂದಿ, ರೂಪುಗೊಳ್ಳುವುದೋ ಮತ್ತು ಕೆಡುವುದೋ ಅದನ್ನು ಉಪಾದಾನ ಕಾರಣವೆನ್ನುತ್ತಾರೆ. ಮೂರನೆಯದು, ಸಾಧನಮಾತ್ರವಾಗಿದ್ದು ಸಾಧಾರಣ ನಿಮಿತ್ತವಾಗಿರುವುದಕ್ಕೆ ಸಾಧಾರಣಕಾರಣವೆಂದು ಹೆಸರು. ನಿಮಿತ್ತಕಾರಣವು ಎರಡು ಬಗೆಯದು. ಮೊದಲನೆಯದು ಉಪಾದಾನ ಕಾರಣದಿಂದ ಸಮಸ್ತ ಸೃಷ್ಟಿಯ ಉತ್ಪತ್ತಿ, ಸ್ಥಿತಿ, ಪ್ರಳಯಗಳನ್ನು ನಡೆಸುತ್ತ, ಎಲ್ಲವನ್ನೂ ವ್ಯವಸ್ಥೆಯಲ್ಲಿಟ್ಟಿರುವ ಪರಮಾತ್ಮನು ಮುಖ್ಯ ನಿಮಿತ್ತಕಾರಣನಾಗಿದ್ದಾನೆ. ಎರಡನೆಯದಾಗಿ, ಪರಮಾತ್ಮನು ಸೃಷ್ಟಿಸಿರುವ ಪದಾರ್ಥಗಳಿಂದ ನಾನಾವಿಧವಾದ ಕಾರ್ಯಾಂತರಗಳನ್ನು ಮಾಡುವ ಜೀವನು ಸಾಧಾರಣ ನಿಮಿತ್ತಕಾರಣನಾಗಿದ್ದಾನೆ. ಸಮಗ್ರ ಪ್ರಪಂಚದ ರಚನೆಯ ಸಾಮಗ್ರಿ ಎಂದು ಹೇಳಲ್ಪಡುವ ಪ್ರಕೃತಿ–ಪರಮಾಣು ಉಪಾದಾನ ಕಾರಣವಾಗಿದೆ. ಅದು ಜಡವಾಗಿರುವುದರಿಂದ ತನ್ನಷ್ಟಕ್ಕೆ ತಾನೆ ಆಗಲಾರದು ; ಕೆಡಲಾರದು. ಆದರೆ ಮತ್ತೊಬ್ಬರ ಮಾಡುವಿಕೆಯಿಂದ ಆಗುತ್ತದೆ ; ಮತ್ತು ಕೆಡಿಸುವುದರಿಂದ ಕೆಡುತ್ತದೆ. ಕೆಲವು ಕಡೆ ಜಡವಸ್ತುಗಳ ನಿಮಿತ್ತದಿಂದ ಜಡವಸ್ತುಗಳೂ ಕೂಡ ಉತ್ಪತ್ತಿ ವಿನಾಶಗಳನ್ನು ಹೊಂದುತ್ತವೆ. ಉದಾ : ಪರಮಾತ್ಮನು ರಚಿಸಿರುವ ಬೀಜಗಳು ಭೂಮಿಯಲ್ಲಿ ಬಿದ್ದು, ನೀರನ್ನು ಹೊಂದುವುದರಿಂದ ವೃಕ್ಷಾಕಾರವಾಗುತ್ತವೆ. ಮತ್ತು ಬೆಂಕಿಯ ಸುಯೋಗದಿಂದ ನಾಶವನ್ನೂ ಹೊಂದುತ್ತವೆ. ಆದರೆ, ಇವುಗಳ ನಿಯಮಪೂರ್ವಕ ಆಗುವುದೂ ಮತ್ತು ಕೆಡುವುದೂ, ಪರಮೇಶ್ವರ ಮತ್ತು ಜೀವರ ಅಧೀನವಾಗಿದೆ. ಯಾವುದಾದರೊಂದು ವಸ್ತುವು ಮಾಡಲ್ಪಡುವಾಗ ಜ್ಞಾನ, ದರ್ಶನ,

ಬಲ, ಕೈ ಮತ್ತು ನಾನಾಬಗೆಯ ಸಾಧನಗಳೂ, ದಿಕ್ಕು, ಕಾಲ ಮೊದಲಾದುವುಗಳೂ ಸಾಧಾರಣ ಕಾರಣಗಳಾಗಿರುತ್ತವೆ. ಹೇಗೆಂದರೆ, ಗಡಿಗೆಯನ್ನು ಮಾಡುವ ಕುಂಬಾರನು ನಿಮಿತ್ತಕಾರಣನಾಗಿಯೂ, ಮಣ್ಣು ಉಪಾದಾನಕಾರಣವಾಗಿಯೂ, ದಂಡ, ಚಕ್ರ ಮೊದಲಾದುವು. ಸಾಧಾರಣ ಕಾರಣವಾಗಿಯೂ, ದಿಕ್ಕು, ಕಾಲ, ಆಕಾಶ, ಪ್ರಕಾಶ, ಕಣ್ಣು, ಕೈಗಳು, ಜ್ಞಾನ, ಕ್ರಿಯೆ ಮೊದಲಾದುವುಗಳು ಸಾಧಾರಣ ನಿಮಿತ್ತ ಕಾರಣವಾಗಿಯೂ ಇರುತ್ತವೆ. ಈ ಮೂರು ಕಾರಣಗಳಿಲ್ಲದೆ ಯಾವುದೊಂದು ವಸ್ತುವೂ ಆಗಲಾರದು; ಕೆಡಲಾರದು.

ಪ್ರ :—ನವೀನ ವೇದಾಂತಿಗಳು ಕೇವಲ ಪರಮಾತ್ಮನನ್ನೇ ಜಗತ್ತಿನ ಅಭಿನ್ನನಿಮಿತ್ತೋಪಾದಾನ ಕಾರಣವೆಂದು ತಿಳಿಯುತ್ತಾರೆ.

ಯಥೋರ್ಣನಾಭಿಃ ಸೃಜತೇ ಗೃಹ್ಣತೇ ಚ ॥

[ಮುಂಡಕ : ಮುಂ. ೧, ಖಂ. ೧, ಮಂ. ೭]

ಇದು ಉಪನಿಷದ್ವಚನ. ಜೇಡರ ಹುಳುವು ಹೊರಗಿನ ಪದಾರ್ಥಗಳಾವುದನ್ನೂ ತೆಗೆದುಕೊಳ್ಳದೆ, ತನ್ನೊಳಗಿನಿಂದಲೇ ದಾರವನ್ನು ತೆಗೆದು, ಬಲೆಯನ್ನು ನೇಯ್ದು, ತಾನೇ ಅದರಲ್ಲಿ ಆಟವಾಡುವಂತೆ ಪರಮಾತ್ಮನೂ ಕೂಡ ತನ್ನೊಳಗಿನಿಂದಲೇ ಜಗತ್ತನ್ನು ಸೃಷ್ಟಿಸಿ, ತಾನೇ ಜಗದ್ರೂಪದಿಂದ ಅದರಲ್ಲಿ ಕ್ರೀಡಿಸುತ್ತಾನೆ. ಆ ಬ್ರಹ್ಮನು "ನಾನು ಬಹುರೂಪವನ್ನು ಎಂದರೆ ಜಗದ್ರೂಪವಾಗಿ ಪರಿಣಮಿಸಬೇಕು" ಎಂದು ಸಂಕಲ್ಪಿಸುತ್ತಲೇ ಜಗದ್ರೂಪವಾಗಿ ಪರಣಮಿಸಿದನು. ಏಕೆಂದರೆ—

ಆದಾವಂತೇಚ ಯನ್ನಾಸ್ತಿ ವರ್ತಮಾನೇಪಿ ತತ್ತಥಾ ॥

[ಗೌಡಪಾದೀಯ ಕಾರಿಕಾ, ಶ್ಲೋ ೩೧.]

ಇದು ಮಾಂಡೂಕ್ಯೋಪನಿಷತ್ತಿನ ಮೇಲೆ ಕಾರಿಕೆಯಾಗಿರುತ್ತದೆ. ಇದರ ಅಭಿಪ್ರಾಯವೇನೆಂದರೆ "ಯಾವುದು ಆದಿಯಲ್ಲಿಯೂ, ಅಂತ್ಯದಲ್ಲಿಯೂ ಇರದೋ, ಅದು ವರ್ತಮಾನ ಸಮಯದಲ್ಲಿಯೂ ಇರುವುದಿಲ್ಲ. ಆದರೆ ಸೃಷ್ಟಿಗೆ ಮೊದಲು ಜಗತ್ತು ಇರಲಿಲ್ಲ. ಬ್ರಹ್ಮನಿ

ದ್ದನು. ಪ್ರಳಯದ ಕೊನೆಯಲ್ಲಿ ಜಗತ್ತಿರುವುದಿಲ್ಲ ; ಕೇವಲ ಬ್ರಹ್ಮನೇ ಇರುವನು. ಅಂದಮೇಲೆ ವರ್ತಮಾನ ಸಮಯದಲ್ಲಿ ಜಗತ್ತೆಲ್ಲವೂ ಏಕೆ ಬ್ರಹ್ಮವಾಗಿರಬಾರದು ?

ಉ :—ನೀವು ಹೇಳುವಂತೆ ಬ್ರಹ್ಮನು ಜಗತ್ತಿಗೆ ಉಪಾದಾನ ಕಾರಣನಾಗಿದ್ದರೆ ಆತನು ಪರಿಣಾಮಿಯೂ, ಅವಸ್ಥಾಂತರಯುಕ್ತನೂ, ವಿಕಾರಿಯೂ ಆಗಿಹೋಗುವನು. ಅಲ್ಲದೆ ಉಪಾದಾನಕಾರಣದ ಗುಣ, ಕರ್ಮ, ಸ್ವಭಾವಗಳು ಕಾರ್ಯದಲ್ಲಿಯೂ ಬರುತ್ತದೆ.

ಕಾರಣಗುಣಪೂರ್ವಕಃ ಕಾರ್ಯಗುಣೋ ದೃಷ್ಟಃ ॥

[ವೈಶೇಷಿಕ ಅ. ೨, ಆ. ೧, ಸಂ. ೨೪]

ಉಪಾದಾನಕಾರಣದಂತಹ ಗುಣಗಳು ಕಾರ್ಯದಲ್ಲಿರುತ್ತವೆ. ಆಂದಮೇಲೆ ಬ್ರಹ್ಮನು ಸಚ್ಚಿದಾನಂದಸ್ವರೂಪನು ; ಜಗತ್ತು ಕಾರ್ಯ ರೂಪದಿಂದ ಅಸತ್ತು, ಜಡವು ಮತ್ತು ಆನಂದರಹಿತವು. ಬ್ರಹ್ಮನು ಅಜನ್ಮನು ; ಜಗತ್ತು ಉತ್ಪನ್ನವಾಗಿರುವುದು. ಬ್ರಹ್ಮನು ಅದೃಶ್ಯ; ಜಗತ್ತು ದೃಶ್ಯ. ಬ್ರಹ್ಮನು ಅಖಂಡ ; ಜಗತ್ತು ಖಂಡರೂಪ. ಬ್ರಹ್ಮನಿಂದ ಪೃಥಿವ್ಯಾದಿ ಕಾರ್ಯಗಳು ಉಂಟಾಗಿದ್ದರೆ, ಪೃಥಿವ್ಯಾದಿಗಳಲ್ಲಿನ ಕಾರ್ಯದಲ್ಲಿನ ಜಡತ್ವಾದಿ ಗುಣಗಳು ಬ್ರಹ್ಮನಲ್ಲಿಯೂ ಇರಬೇಕು. ಅಂದರೆ ಪೃಥಿವೀ ಮೊದಲಾದುವು ಜಡವಾಗಿರುವಂತೆ ಬ್ರಹ್ಮನೂ ಜಡನಾಗಿರಬೇಕಾದೀತು. ಮತ್ತು ಬ್ರಹ್ಮನು ಚೈತನ್ಯಸ್ವರೂಪನಾಗಿರುವಂತೆ ಪೃಥಿವ್ಯಾದಿ ಕಾರ್ಯಗಳೂ ಕೂಡ ಚೈತನ್ಯವುಳ್ಳವುಗಳಾಗಿ ಇರಬೇಕು. ಮತ್ತು ನೀವು ಕೊಟ್ಟ ಜೇಡರಹುಳುವಿನ ದೃಷ್ಟಾಂತವು ನಿಮ್ಮ ಅಭಿಪ್ರಾಯಕ್ಕೆ ಸಾಧಕವಾಗಿರುವುದಿಲ್ಲ, ಬಾಧಕವಾಗಿರುತ್ತದೆ. ಏಕೆಂದರೆ, ಆ ಜಡರೂಪವಾದ ಶರೀರವು ದಾರಕ್ಕೆ ಉಪಾದಾನಕಾರಣ ಮತ್ತು ಜೀವಾತ್ಮನು ನಿಮಿತ್ತಕಾರಣನಾಗಿದ್ದಾನೆ. ಇದೂ ಕೂಡ ಪರಮಾತ್ಮನ ಅದ್ಭುತರಚನೆಯ ಪ್ರಭಾವವಾಗಿದೆ. ಏಕೆಂದರೆ, ಉಳಿದ ಜಂತುಗಳ ಶರೀರದಿಂದ ಜೀವನು ದಾರವನ್ನು ತೆಗೆಯಲಾರನು. ಹಾಗೆಯೇ ವ್ಯಾಪಕನಾದ ಬ್ರಹ್ಮನು ತನ್ನೊಳಗೆ ವ್ಯಾಪ್ಯವಾಗಿದ್ದ ಪ್ರಕೃತಿ ಮತ್ತು ಪರಮಾಣು ಕಾರಣಗಳಿಂದ ಸ್ಥೂಲ

ಜಗತ್ತನ್ನು ರಚಿಸಿ, ಹೊರಗೆ ಸ್ಥೂಲವಾಗಿ ಮಾಡಿ ತಾನು ಅದರಲ್ಲಿಯೇ ವ್ಯಾಪಿಸಿ, ಸಾಕ್ಷಿಭೂತನೂ ಆನಂದಮಯನೂ ಆಗಿದ್ದಾನೆ. ಮತ್ತು ಪರಮಾತ್ಮನು ಈಕ್ಷಣ ಅಂದರೆ 'ನಾನು ಸರ್ವ ಜಗತ್ತನ್ನೂ ರಚಿಸಿ ಪ್ರಸಿದ್ಧನಾಗುವೆ' ಎಂದು ದರ್ಶನ ವಿಚಾರ ಮತ್ತು ಕಾಮನೆಯನ್ನು ಮಾಡಿದನು. ಅಂದರೆ, ಯಾವಾಗ ಜಗತ್ತು ಉತ್ಪನ್ನವಾಗುತ್ತದೋ, ಆಗಲೇ ಜೀವರ ವಿಚಾರ, ಜ್ಞಾನ, ಧ್ಯಾನ, ಉಪದೇಶ ಮತ್ತು ಶ್ರವಣ ಗಳಲ್ಲಿ ಪರಮೇಶ್ವರನು ಪ್ರಸಿದ್ಧನಾಗಿಯೂ, ಬಹಳ ಸ್ಥೂಲಪದಾರ್ಥ ಗಳೊಡನೆ ಕೂಡಿದವನಾಗಿಯೂ ಆಗುತ್ತಾನೆ. ಪ್ರಳಯವಾದಾಗ ಪರಮೇಶ್ವರ ಮತ್ತು ಮುಕ್ತಜೀವರನ್ನು ಬಿಟ್ಟು, ಅದನ್ನು ಮತ್ತಾರೂ ಅರಿಯರು. ಈ ಕಾರಿಕೆಯು ಭ್ರಮಮೂಲಕವಾದುದು. ಸೃಷ್ಟಿಗೆ ಮೊದಲು ಅಂದರೆ ಪ್ರಳಯದಲ್ಲಿ ಜಗತ್ತು ಪ್ರಸಿದ್ಧವಾಗಿರಲಿಲ್ಲ. ಮತ್ತು ಸೃಷ್ಟಿಗೆ ಅನಂತರ ಅಂದರೆ ಪ್ರಳಯದ ಆರಂಭದಿಂದ ಇನ್ನೊಂದು ಸಾರಿ ಸೃಷ್ಟಿಯಾಗುವವರೆಗೂ ಜಗತ್ತಿನ ಕಾರಣವು ಸೂಕ್ಷ್ಮವಾಗಿ ಅಪ್ರಸಿದ್ಧವಾಗಿರುತ್ತದೆ. ಏಕೆಂದರೆ—

ತಮು ಆಸೀತ್ತಮುಸಾ ಗೂಢಮಗ್ರೇ ॥

[ಋ. ಮಂ. ೧೦, ಸೂ. ೧೨೯, ಮಂ.೩]

ಆಸೀದಿದಂ ತಮೋಭೂತಮಪ್ರಜ್ಞಾತಮಲಕ್ಷಣಮ್ ।
ಅಪ್ರತರ್ಕ್ಯಮವಿಜ್ಞೇಯಂ ಪ್ರಸುಪ್ತಮಿವ ಸರ್ವತಃ ॥

[ಮನು. ೧–೫]

ಈ ಜಗತ್ತೆಲ್ಲವೂ ಸೃಷ್ಟಿಗೆ ಪೂರ್ವದಲ್ಲಿ ಪ್ರಳಯದಲ್ಲಿ ಅಂಧಕಾರ ದಿಂದ ಆವೃತವಾಗಿ ಆಚ್ಛಾದಿತವಾಗಿ ಇದ್ದಿತು. ಮತ್ತು ಪ್ರಳ ಯಾರಂಭದ ನಂತರವೂ ಹಾಗೆಯೇ ಆಗುತ್ತದೆ. ಆ ಸಮಯದಲ್ಲಿ ಯಾರೂ ತಿಳಿದುಕೊಳ್ಳಲೂ, ತರ್ಕಿಸಲೂ ತರುವ, ಮತ್ತು ಪ್ರಸಿದ್ಧ ಚಿಹ್ನೆಗಳಿಂದ ಕೂಡಿದುದಾಗಿ ಇಂದ್ರಿಯಗಳಿಂದ ತಿಳಿದು ಕೊಳ್ಳಲು ಯೋಗ್ಯವಾಗಿರಲಿಲ್ಲ. ಮತ್ತು ಇರುವುದೂ ಇಲ್ಲ. ಆದರೆ ವರ್ತಮಾನ ಸಮಯದಲ್ಲಿ ತಿಳಿಯಲ್ಪಡುತ್ತದೆ. ಮತ್ತು ಪ್ರಸಿದ್ಧ ಲಕ್ಷಣಗಳಿಂದ ಕೂಡಿ ತಿಳಿಯಲರ್ಹವಾಗಿರುತ್ತದೆ. ಮತ್ತು ಯಥಾ

ವತ್ತಾಗಿ ಉಪಲಬ್ಧವಾಗಿದೆ. ಮತ್ತೆ ಆ.ಕಾರಿಕಾಕಾರನು ವರ್ತಮಾನ ದಲ್ಲಯೂ ಜಗತ್ತಿನ ಅಭಾವವನ್ನು ಬರೆದಿರುವುದು ಸರ್ವಥಾ ಅಪ್ರಮಾ ಣವಾದುದು. ಏಕೆಂದರೆ ಪ್ರಮಾತೃವು ಯಾವುದನ್ನು ಪ್ರಮಾಣಗಳಿಂದ ತಿಳಿಯುವನೋ ಮತ್ತು ಹೊಂದುವನೋ ಅದೆಂದಿಗೂ ಅನ್ಯಥಾ ಆಗಲಾರದು.

ಪ್ರ :—ಜಗತ್ತನ್ನು ರಚಿಸುವುದರಿಂದ ಪರಮಾತ್ಮನಿಗೆ ಪ್ರಯೋ ಜನವೇನು ?

ಉ :—ರಚಿಸದಿರುವುದರಲ್ಲಿ ಪ್ರಯೋಜನವೇನು ?

ಪ್ರ :—ರಚಿಸದಿದ್ದರೆ ಆನಂದದಿಂದ ಇರಬಹುದಾಗಿತ್ತು. ಜೀವ ರಿಗೂ ಕೂಡ ಸುಖದುಃಖಗಳು ಪ್ರಾಪ್ತವಾಗುತ್ತಿರಲಿಲ್ಲ.

ಉ :—ಇದು ಸೋಮಾರಿಗಳೂ, ದರಿದ್ರರೂ ಆದವರ ಮಾತೇ ಹೊರತು ಪುರುಷಾರ್ಥಿಗಳ ಮಾತಲ್ಲ. ಮತ್ತು ಜೀವರಿಗೆ ಪ್ರಳಯದಲ್ಲಿ ಯಾವ ಸುಖ ಅಥವಾ ದುಃಖವಿದೆ ? ಸೃಷ್ಟಿಯ ಸುಖ-ದುಃಖಗಳನ್ನು ತೂಕಮಾಡಿ ನೋಡಿದರೆ ಸುಖವು ಎಷ್ಟೋಪಾಲು ಹೆಚ್ಚಾಗಿರುತ್ತದೆ. ಮತ್ತು ಎಷ್ಟೋ ಮಂದಿ ಪವಿತ್ರಾತ್ಮರಾದ ಜೀವರು ಮುಕ್ತಿಯ ಸಾಧನವನ್ನು ಹೊಂದಿ, ಮೋಕ್ಷಾನಂದವನ್ನೂ ಪಡೆಯುತ್ತಾರೆ. ಸುಷುಪ್ತಿಯಲ್ಲಿರುವಂತೆ ಪ್ರಳಯದಲ್ಲಿ ನಿಷ್ಕರ್ಮರಾಗಿ ಬಿದ್ದಿರುತ್ತಾರೆ. ಪ್ರಳಯವಾಗುವುದಕ್ಕೆ ಮೊದಲು ಸೃಷ್ಟಿಯಲ್ಲಿ ಜೀವರು ಮಾಡಿದ ಪಾಪಪುಣ್ಯಕರ್ಮಗಳಿಗೆ ಫಲವನ್ನು ಈಶ್ವರನು ಹೇಗೆ ಕೊಡಲಾಗು ತ್ತಿತ್ತು ? ಮತ್ತು ಜೀವರು ಹೇಗೆ ಅನುಭವಿಸಲಾಗುತ್ತಿತ್ತು ? ಯಾರಾ ದರೂ ನಿಮ್ಮನ್ನು ಕಣ್ಣುಗಳಿರುವುದರಿಂದ ಪ್ರಯೋಜನವೇನೆಂದು ಕೇಳಿದರೆ, ನೋಡುವುದೇ ಪ್ರಯೋಜನವೆಂದು ನೀವು ಹೇಳುವಿರಿ. ಹಾಗೆಯೇ ಜಗತ್ತನ್ನು ರಚಿಸುವ ವಿಜ್ಞಾನ, ಬಲಕ್ರಿಯೆಗಳು ಪರಮಾ ತ್ಮನಲ್ಲಿರುವುದರ ಪ್ರಯೋಜನವೇನು ? ಜಗದುತ್ಪತ್ತಿಯನ್ನು ಬಿಟ್ಟು ಮತ್ತೇನೂ ಹೇಳಲಾರಿರಿ. ಮತ್ತು ಪರಮಾತ್ಮನ ನ್ಯಾಯ, ಧಾರಣ, ದಯೆ ಮುಂತಾದ ಗುಣಗಳು ಕೂಡ ಸೃಷ್ಟಿರಚಿಸಿದಾಗಲೇ ಸಾರ್ಥಕ ವಾಗುತ್ತವೆ. ಆತನ ಅನಂತ ಸಾಮರ್ಥ್ಯವು ಜಗತ್ತಿನ ಉತ್ಪತ್ತಿ, ಸ್ಥಿತಿ,

ಪ್ರಳಯ ಮತ್ತು ವ್ಯವಸ್ಥೆಯನ್ನು ಮಾಡುವುದರಿಂದಲೇ ಸಫಲವಾಗುತ್ತದೆ. ಕಣ್ಣಿಗೆ ನೋಡುವುದೇ ಸ್ವಾಭಾವಿಕಗುಣವಾಗಿರುವಂತೆ ಪರಮಾತ್ಮನಿಗೆ ಜಗತ್ತನ್ನು ರಚಿಸಿ ಜೀವರಿಗೆ ಅಸಂಖ್ಯ ಪದಾರ್ಥಗಳನ್ನು ಕೊಟ್ಟು, ಪರೋಪಕಾರಮಾಡುವುದೇ ಸ್ವಾಭಾವಿಕ ಗುಣವಾಗಿದೆ.

ಪ್ರ :—ಬೀಜವು ಮೊದಲೋ, ಅಥವಾ ವೃಕ್ಷವೋ ?

ಉ :—ಬೀಜ. ಏಕೆಂದರೆ—ಬೀಜ, ಹೇತು, ನಿದಾನ, ನಿಮಿತ್ತ, ಕಾರಣ ಮೊದಲಾದ ಶಬ್ದಗಳು ಸಮಾನಾರ್ಥಕಗಳಾಗಿವೆ. ಕಾರಣಕ್ಕೆ ಬೀಜವೆಂಬ ಹೆಸರಿರುವುದರಿಂದ ಕಾರ್ಯದ ಮೊದಲೇ ಇರುತ್ತದೆ.

ಪ್ರ :—ಪರಮಾತ್ಮನು ಸರ್ವಶಕ್ತನಾಗಿರುವುದರಿಂದ ಆತನು ಕಾರಣ ಮತ್ತು ಜೀವರನ್ನು ಕೂಡ ಸೃಷ್ಟಿಸಬಲ್ಲನು. ಸೃಷ್ಟಿಸಲಾಗದಿದ್ದರೆ, ಆತನು ಸರ್ವಶಕ್ತನೂ ಆಗಲಾರನು.

ಉ :—'ಸರ್ವಶಕ್ತ' ಎಂಬ ಪದದ ಅರ್ಥವನ್ನು ಮೊದಲೇ ಬರೆದಿದ್ದೇವೆ. ಅಸಂಭವವಾದುದನ್ನೂ ಸಹ ಮಾಡಬಲ್ಲವನು ಸರ್ವಶಕ್ತನೆನಿಸುತ್ತಾನೆಯೆ ? ಯಾವುದಾದರೂ ಅಸಂಭವವಾದ ಅಂದರೆ—ಕಾರ್ಯವಿಲ್ಲದೆಯೇ ಕಾರ್ಯವನ್ನು ಮಾಡಬಲ್ಲವನಾದರೆ ಯಾವುದೊಂದು ಕಾರಣವೂ ಇಲ್ಲದೆ, ಮತ್ತೊಬ್ಬ ದೇವರನ್ನು ಸೃಷ್ಟಿಸಬಲ್ಲನೇ? ಸ್ವತಃ ಸಾಯಬಲ್ಲನೆ? ಜಡ, ದುಃಖಿ, ಅನ್ಯಾಯಕಾರಿ, ಅಪವಿತ್ರ ಹಾಗೂ ಕುಕರ್ಮಿ ಮೊದಲಾಗಿ ಆಗಬಲ್ಲನೋ, ಅಥವಾ ಇಲ್ಲವೋ? ಸ್ವಾಭಾವಿಕ ನಿಯಮಗಳೆಂದರೆ— ಬೆಂಕಿಯು ಉಷ್ಣವಾದುದು; ನೀರು ಶೀತಳವಾದುದು. ಪೃಥಿವ್ಯಾದಿಗಳು ಜಡವಾದುವು. ಇವನ್ನು ವಿರುದ್ಧ ಗುಣವುಳ್ಳದ್ದಾಗಿ ದೇವರೂ ಮಾಡಲಾರನು. ಪರಮಾತ್ಮನ ನಿಯಮಗಳು ಸತ್ಯವೂ, ಪೂರ್ಣವೂ ಆಗಿರುವುದರಿಂದ ಮಾರ್ಪಡಿಸಲಾರನು. ಆದ್ದರಿಂದ ಸರ್ವಶಕ್ತನೆಂಬ ಪದಕ್ಕೆ ಪರಮಾತ್ಮನು ಮತ್ತೊಬ್ಬರ ಸಹಾಯವಿಲ್ಲದೆಯೇ ತನ್ನ ಸಮಸ್ತಕಾರ್ಯಗಳನ್ನು ಪೂರ್ಣವಾಗಿ ಮಾಡಬಲ್ಲನೆಂಬುದಿಷ್ಟೇ ಅರ್ಥ.

ಪ್ರ :—ಪರಮಾತ್ಮನು ಸಾಕಾರನೋ ಅಥವಾ ನಿರಾಕಾರನೋ? ನಿರಾಕಾರನಾಗಿದ್ದರೆ ಕೈ ಮೊದಲಾದ ಸಾಧನಗಳಿಲ್ಲದೆ ಜಗತ್ತನ್ನು

ನಿರ್ಮಿಸಲಾರನು. ಸಾಕಾರನಾಗಿದ್ದರೆ ಯಾವ ದೋಷವೂ ಬರುವುದಿಲ್ಲ.

ಉ :—ಈಶ್ವರನು ನಿರಾಕಾರನಾಗಿದ್ದಾನೆ. ಸಾಕಾರ ಅಂದರೆ ಶರೀರ ಸಹಿತನಾಗಿರುವವನು ಈಶ್ವರನಲ್ಲ. ಏಕೆಂದರೆ, ಅವನು ಪರಿಮಿತಶಕ್ತಿಯುತನೂ ದೇಶ, ಕಾಲ, ವಸ್ತುಗಳಿಂದ ಪರಿಚ್ಛಿನ್ನನೂ, ಹಸಿವು, ಬಾಯಾರಿಕೆ, ಛೇದನ, ಭೇದನ, ಶೀತ, ಉಷ್ಣ, ಜ್ವರ, ಪೀಡೆ ಮೊದಲಾದುವುಗಳಿಂದ ಕೂಡಿರುವವನೂ ಆಗಬೇಕಾಗುತ್ತದೆ. ಇದರಲ್ಲಿ ಜೀವನ ಗುಣಗಳು ಹೊಂದಬಲ್ಲವೇ ಹೊರತು, ಪರಮಾತ್ಮನದಲ್ಲ. ಹೇಗೆ ನೀವೂ ನಾವೂ ಆಕಾರವುಳ್ಳವರಾಗಿರುವುದರಿಂದ ಅಂದರೆ ದೇಹಧಾರಿಗಳಾಗಿರುವುದರಿಂದ ತ್ರಸರೇಣು, ತೃಣ, ಪರಮಾಣು ಪ್ರಕೃತಿಯನ್ನು ವಶಪಡಿಸಿಕೊಳ್ಳಲಾರವೋ ಹಾಗೆಯೇ ಸ್ಥೂಲಶರೀರಧಾರಿಯಾದ ಪರಮಾತ್ಮನೂ. ಆ ಸೂಕ್ಷ್ಮ ಪದಾರ್ಥಗಳಿಂದ ಸ್ಥೂಲಜಗತ್ತನ್ನು ರಚಿಸಲಾರನು. ಪರಮಾತ್ಮನು ಭೌತಿಕ ಇಂದ್ರಿಯ ಗೋಳಕಗಳಿಂದಲೂ ಹಸ್ತಪಾದಾದಿ ಅವಯವಗಳಿಂದಲೂ ರಹಿತನಾಗಿದ್ದಾನೆ. ಆದರೆ ಅವನಿಗೆ ಅನಂತವಾದ ಶಕ್ತಿ, ಬಲ, ಪರಾಕ್ರಮಗಳು ಇವೆ. ಅದರಿಂದ ಆತನು ಪ್ರಕೃತಿ ಮತ್ತು ಜೀವರಿಂದ ಎಂದಿಗೂ ಸಾಧ್ಯವಾಗದ ಸಮಸ್ತ ಕಾರ್ಯಗಳನ್ನೂ ಮಾಡುತ್ತಾನೆ. ಆತನು ಪ್ರಕೃತಿಗಿಂತ ಸೂಕ್ಷ್ಮನೂ ಮತ್ತು ಅವುಗಳಲ್ಲಿ ವ್ಯಾಪಕನೂ ಆಗಿರುವುದರಿಂದಲೇ ಅದನ್ನು ಹಿಡಿದು ಜಗದ್ರೂಪವಾಗಿ ಮಾಡುತ್ತಾನೆ.

ಪ್ರಶ್ನೆ :—ಮನುಷ್ಯ ಮೊದಲಾದ ಜೀವರ ತಂದೆತಾಯಿಗಳು ಆಕಾರವುಳ್ಳವರಾಗಿರುವುದರಿಂದ ಅವರ ಸಂತತಿಯೂ ಕೂಡ ಸಾಕಾರವಾಗಿರುತ್ತದೆ. ತಂದೆತಾಯಿಗಳು ನಿರಾಕಾರರಾಗಿದ್ದರೆ ಸಂತತಿಯೂ ಕೂಡ ನಿರಾಕಾರವಾಗಿರುತ್ತಿದ್ದಿತು. ಹಾಗೆಯೇ ಪರಮೇಶ್ವರನು ನಿರಾಕಾರನಾಗಿದ್ದರೆ, ಆತನು ರಚಿಸಿರುವ ಜಗತ್ತೂ ಕೂಡ ನಿರಾಕಾರವಾಗಿಯೇ ಇರಬೇಕು.

ಉತ್ತರ :—ನಿಮ್ಮ ಈ ಪ್ರಶ್ನೆಯು ಎಳೆಮಕ್ಕಳ ಪ್ರಶ್ನೆಯಂತಿದೆ. ಏಕೆಂದರೆ—ಪರಮಾತ್ಮನು ಜಗತ್ತಿಗೆ ಉಪಾದಾನಕಾರಣನಾಗಿರದೆ, ನಿಮಿತ್ತಕಾರಣನಾಗಿರುವನೆಂದು ನಾವು ಈಗತಾನೇ ಹೇಳಿರುತ್ತೇವೆ.

ಮತ್ತು ಸ್ಥೂಲವಾಗಿರುವುದು ಜಗತ್ತಿನ ಉಪಾದಾನಕಾರಣವಾದ ಪ್ರಕೃತಿ ಮತ್ತು ಪರಮಾಣುಗಳು. ಮತ್ತು ಅವು ಸರ್ವಥಾ ನಿರಾಕಾರವಲ್ಲ. ಆದರೆ ಪರಮಾತ್ಮನಿಗಿಂತ ಸ್ಥೂಲವಾದ ಮತ್ತು ಇತರ ಕಾರ್ಯಗಳಿಗಿಂತ ಸೂಕ್ಷ್ಮವಾದ ಆಕಾರವನ್ನು ಹೊಂದಿರುತ್ತವೆ.

ಪ್ರಶ್ನೆ :—ಪರಮೇಶ್ವರನು ಕಾರಣವಿಲ್ಲದೆ ಕಾರ್ಯವನ್ನು ಮಾಡಲಾರನೋ ?

ಉತ್ತರ :—ಇಲ್ಲ. ಏಕೆಂದರೆ, ಯಾವುದರ ಅಭಾವವಿದೆಯೋ ಅಂದರೆ ಯಾವುದು ಇಲ್ಲವೇ ಇಲ್ಲವೋ, ಅದರ ಭಾವ ಅಂದರೆ ಇರುವಿಕೆ ಸರ್ವಥಾ ಅಸಂಭವ. ಯಾವನಾದರೊಬ್ಬನು " ನಾನು ಬಂಜೆಯ ಮಗನ ಮತ್ತು ಮಗಳ ಮದುವೆಯನ್ನು ನೋಡಿದೆನು. ಆ ಮದುವಣಿಗನು ಮನುಷ್ಯನ ಕೊಂಬಿನ ಧನುಷ್ಯವನ್ನು ಕೈಯಲ್ಲಿ ಇಟ್ಟುಕೊಂಡಿದ್ದನು. ಅವರಿಬ್ಬರೂ ಆಕಾಶಪುಷ್ಪಗಳ ಮಾಲೆಯನ್ನು ಧರಿಸಿದ್ದರು. ಅವರು ಬಿಸಿಲ್ಗುದರೆಯಲ್ಲಿ ಸ್ನಾನಮಾಡುತ್ತಿದ್ದರು; ಗಂಧರ್ವ ನಗರದಲ್ಲಿ ವಾಸಿಸುತ್ತಿದ್ದರು. ಅಲ್ಲಿ ಮೇಘಗಳಿಲ್ಲದೆಯೇ ಮಳೆ ಸುರಿಯುತ್ತಿತ್ತು; ಭೂಮಿಯಿಲ್ಲದೆಯೇ ಆಹಾರ ಪದಾರ್ಥಗಳು ಬೆಳೆಯುತ್ತಿದ್ದವು " ಎಂದು ಬುರುಡೆಹೊಡದಂತೆ, ಕಾರಣವಿಲ್ಲದೆ ಕಾರ್ಯವಾಗುವುದು ಕೂಡ ಅಸಂಭವವಾಗಿರುತ್ತದೆ. ಹೇಗೆಂದರೆ ಒಬ್ಬನು, " ಮಮ ಮಾತಾಪಿತರೌ ನಸ್ತೋಽಹಮೇವ ಜಾತಃ । ಮಮ ಮುಖೇ ಜಿಹ್ವಾನಾಸ್ತಿ ವದಾಮಿಚ । " ಅಂದರೆ, ನನ್ನ ತಂದೆತಾಯಿಗಳಾರೂ ಇರಲಿಲ್ಲ. ನಾನು ಹಾಗೆಯೇ ಹುಟ್ಟಿಬಿಟ್ಟೆ. ನನ್ನ ಬಾಯಿಯಲ್ಲಿ ನಾಲಿಗೆಯಿಲ್ಲ; ಆದರೆ ಮಾತನಾಡುತ್ತೇನೆ. ಹುತ್ತದಲ್ಲಿ ಹಾವಿರಲಿಲ್ಲ; ಅದು ಅಲ್ಲಿಂದ ಹೊರಗೆ ಬಂದಿತು. ನಾನೂ ಎಲ್ಲಿಯೂ ಇರಲಿಲ್ಲ; ಇವರೂ ಎಲ್ಲಿಯೂ ಇರಲಿಲ್ಲ. ಅದರೂ ನಾವೆಲ್ಲರೂ ಬಂದೆವು " ಎಂದು ಹೇಳಿದರೆ, ಆ ಅಸಂಭವವಾದ ಮಾತುಗಳೆಲ್ಲಾ ಪ್ರಮತ್ತಗೀತಗಳು, ಅಂದರೆ ಹುಚ್ಚರ ಮಾತುಗಳಂತಿರುತ್ತವೆ.

ಪ್ರ :—ಕಾರಣವಿಲ್ಲದೆ ಕಾರ್ಯವಾಗದಿದ್ದರೆ ಕಾರಣದ ಕಾರಣ ವಾವುದು ?

ಉ :—ಕೇವಲ ಕಾರಣರೂಪವಾಗಿಯೇ ಇರುವಂತಹುದು ಯಾವುದರ ಕಾರ್ಯಗಳೂ ಅಲ್ಲ. ಯಾವುದಾದರೊಂದರ ಕಾರಣ ಮತ್ತು ಬೇರೊಂದರ ಕಾರ್ಯವಾಗಿರುವಂತಹುದು ಇನ್ನೊಂದು ವಸ್ತು. ಹೇಗೆಂದರೆ—ಪೃಥಿವಿಯು ಮನೆ ಮೊದಲಾದ ಕಾರ್ಯಗಳಿಗೆ ಕಾರಣವಾಗಿಯೂ, ನೀರು ಮೊದಲಾದ ಕಾರಣಗಳಿಗೆ ಕಾರ್ಯವಾಗಿಯೂ ಇರುತ್ತದೆ. ಆದರೆ ಆದಿಕಾರಣವಾದ ಪ್ರಕೃತಿಯು ಅನಾದಿಯಾಗಿರುತ್ತದೆ.

ಮೂಲೇ ಮೂಲಾಭಾವಾದ ಮೂಲಂ ಮೂಲಮ್ ॥

[ಸಾಂಖ್ಯ. ಅ. ೧, ಸೂ. ೬೭.

ಮೂಲತ್ವಕ್ಕೆ ಮೂಲವು, ಅಂದರೆ ಕಾರಣಕ್ಕೆ ಕಾರಣವಿರುವುದಿಲ್ಲ. ಆದ್ದರಿಂದ ಕಾರಣವಿಲ್ಲದುದು ಸಮಸ್ತಕಾರ್ಯಗಳಿಗೂ ಕಾರಣವಾಗಿರುತ್ತದೆ. ಏಕೆಂದರೆ—ಯಾವುದಾದರೊಂದು ಕಾರ್ಯವು ಆಗುವ ಕಾಲಕ್ಕೆ ಮೊದಲು ಮೂರು ಕಾರಣಗಳು ಅವಶ್ಯವಾಗಿ ಇರುತ್ತವೆ. ಉದಾ :—ಬಟ್ಟೆಯಾಗುವುದಕ್ಕೆ ಮೊದಲು ನೇಯ್ಗೆಯವ, ಹತ್ತಿಯು ದಾರ ಮತ್ತು ಕೊಳವೆಗಳು ಮೊದಲಾದುವು ಮೊದಲು ಇರುವುದರಿಂದ ವಸ್ತ್ರವಾಗುತ್ತದೆ. ಹಾಗೆಯೇ ಜಗತ್ತು ಉತ್ಪನ್ನವಾಗುವುದಕ್ಕೆ ಮೊದಲು ಪರಮಾತ್ಮ, ಪ್ರಕೃತಿ, ಕಾಲ, ಆಕಾಶ ಮತ್ತು ಜೀವರು ಅನಾದಿಯಾಗಿರುವುದರಿಂದ ಜಗತ್ತು ಉತ್ಪನ್ನವಾಗುತ್ತದೆ. ಇವುಗಳಲ್ಲಿ ಯಾವುದೊಂದು ಇಲ್ಲದಿದ್ದರೂ ಜಗತ್ತೂ ಸಹ ಉತ್ಪನ್ನವಾಗಲಾರದು.

ಅತ್ರನಾಸ್ತಿಕಾ ಆಹುಃ ।
ಶೂನ್ಯಂ ತತ್ತ್ವಂ ಭಾವೋ ವಿನಶ್ಯತಿ ವಸ್ತುಧರ್ಮತ್ವಾ
ದ್ವಿನಾಶಸ್ಯ ॥೧॥

[ಸಾಂಖ್ಯ. ಸೂ. ಅ. ೧ ಸೂ. ೪೪]

ಅಭಾವಾದ್ಭಾವೋತ್ಪತ್ತಿರ್ನಾನುಪಮೃದ್ಯ ಪ್ರಾದುರ್ಭಾವಾತ್ ॥೨॥

ಈಶ್ವರಃ ಕಾರಣಂ ಪುರುಷಕರ್ಮಾಫಲ್ಯದರ್ಶನಾತ್ ॥೩॥
ಅನಿಮಿತ್ತತೊ ಭಾವೋತ್ಪತ್ತಿಃ ಕಂಟಕತೈಕ್ಷ್ಣ್ಯಾದಿ
ದರ್ಶನಾತ್ ॥೪॥
ಸರ್ವಮನಿತ್ಯಮುತ್ಪತ್ತಿವಿನಾಶಧರ್ಮಕತ್ವಾತ್ ॥೫॥
ಸರ್ವಂ ನಿತ್ಯಂ ಪಂಚಭೂತನಿತ್ಯತ್ವಾತ್ ॥೬॥
ಸರ್ವಂ ಪೃಥಕ್ ಭಾವಲಕ್ಷಣಪೃಥಕ್ತ್ವಾತ್ ॥೭॥
ಸರ್ವಮಭಾವೋ ಭಾವೇಷ್ವಿತರೇತರಾಭಾವಸಿದ್ಧೇಃ ॥೮॥

[ನ್ಯಾಯಸೂ. ಅ. ೪, ಆ. ೧]

ಈ ಸ್ಥಳದಲ್ಲಿ ನಾಸ್ತಿಕರು ಹೀಗೆ ಹೇಳುತ್ತಾರೆ—ಶೂನ್ಯವೇ ಒಂದು ಪದಾರ್ಥವಾಗಿರುತ್ತದೆ. ಸೃಷ್ಟಿಗೆ ಮೊದಲು ಶೂನ್ಯವು ಇತ್ತು. ಕೊನೆಯಲ್ಲಿಯೂ ಶೂನ್ಯವೇ ಇರುವುದು. ಏಕೆಂದರೆ ಭಾವದ ಅಂದರೆ ಈಗಿರುವ ಪದಾರ್ಥದ ಅಭಾವವುಂಟಾಗಿ ಶೂನ್ಯವಾಗುವುದು.

ಉ :—ಆಕಾಶ, ಅದೃಶ್ಯ, ಅವಕಾಶ ಮತ್ತು ಬಿಂದು ಇವುಗಳಿಗೆ ಶೂನ್ಯವೆಂದು ಹೇಳುತ್ತಾರೆ. ಶೂನ್ಯವು ಜಡಪದಾರ್ಥವಾಗಿರುತ್ತದೆ. ಈ ಶೂನ್ಯಧಲ್ಲಿ ಪದಾರ್ಥಗಳು ಅದೃಶ್ಯವಾಗಿರುತ್ತವೆ. ಬಿಂದುವಿನಿಂದ ರೇಖೆಯೂ, ರೇಖೆಗಳಿಂದ ವರ್ತುಲಾಕಾರವೂ ಆಗುವಂತೆ, ಪರಮಾತ್ಮನ ರಚನೆಯಿಂದ ಭೂಮಿ, ಪರ್ವತ ಮೊದಲಾದುವುಗಳು ಉತ್ಪನ್ನವಾಗಿವೆ; ಮತ್ತು ಶೂನ್ಯವನ್ನು ತಿಳಿಯುವವನು ಶೂನ್ಯವಾಗಲಾರನು. ॥೧॥

ಎರಡನೆಯ ನಾಸ್ತಿಕ :—ಅಭಾವದಿಂದ ಭಾವವು ಹುಟ್ಟುತ್ತದೆ. ಹೇಗೆಂದರೆ—ಬೀಜ ಒಡೆಯದೆ ಮೊಳಕೆಯಾಗುವುದಿಲ್ಲ. ಅದರೆ ಬೀಜವನ್ನು ಸುಲಿದು ನೋಡಿದರೆ ಅದರಲ್ಲಿ ಮೊಳಕೆಯ ಅಭಾವವಿರುತ್ತದೆ. ಮೊದಲು ಮೊಳಕೆ ಕಾಣದಿದ್ದುದರಿಂದ ಅಭಾವದಿಂದ ಭಾವವು ಹುಟ್ಟಿತು.

ಉ :—ಬೀಜವನ್ನು ಉಪಮರ್ದನಮಾಡುವ ತತ್ತ್ವ ಮೊದಲೇ ಅದರಲ್ಲಿತ್ತು ; ಇರದಿದ್ದಲ್ಲಿ ಉತ್ಪನ್ನವೇ ಆಗುತ್ತಿರಲಿಲ್ಲ.

ಮೂರನೆಯ ನಾಸ್ತಿಕ :—ಕರ್ಮಮಾಡುವುದರಿಂದ ಪುರುಷನಿಗೆ ಅದರ ಫಲ ಪ್ರಾಪ್ತವಾಗುವುದಿಲ್ಲ. ಎಷ್ಟೋ ಕರ್ಮಗಳು ನಿಷ್ಫಲವಾಗು

ವುದು ಕಂಡುಬರುತ್ತದೆ. ಆದ್ದರಿಂದ ಕರ್ಮಫಲಪ್ರಾಪ್ತಿಯು ಪರಮಾತ್ಮನ ಅಧೀನವಾಗಿರಬೇಕೆಂದು ಊಹಿಸಬೇಕಾಗುತ್ತದೆ. ಯಾವ ಕರ್ಮಕ್ಕೆ ಫಲ ಕೊಡಬೇಕೆಂದು ಪರಮಾತ್ಮನು ಅಪೇಕ್ಷಿಸುತ್ತಾನೋ, ಅದಕ್ಕೆ ಕೊಡುತ್ತಾನೆ. ಮತ್ತು ಯಾವ ಕರ್ಮದ ಫಲವನ್ನು ಕೊಡುವುದಕ್ಕೆ ಅಪೇಕ್ಷಿಸುವುದಿಲ್ಲವೋ, ಅದಕ್ಕೆ ಕೊಡುವುದಿಲ್ಲ. ಆದ್ದರಿಂದ ಕರ್ಮಫಲವು ಈಶ್ವರಾಧೀನವಾಗಿರುತ್ತದೆ.

ಉ :—ಕರ್ಮಫಲವು ಈಶ್ವರಾಧೀನವಾಗಿದ್ದರೆ, ಕರ್ಮಮಾಡದೆಯೇ ಆತನೇಕೆ ಫಲವನ್ನು ಕೊಡುವುದಿಲ್ಲ? ಆದ್ದರಿಂದ ಮನುಷ್ಯನು ಎಂತಹ ಕರ್ಮಗಳನ್ನು ಮಾಡುತ್ತಾನೋ ಅಂತಹ ಫಲವನ್ನೇ ಪರಮಾತ್ಮನು ಕೊಡುತ್ತಾನೆ. ಇದರಿಂದ ಈಶ್ವರನು ಸ್ವತಂತ್ರ ಜೀವನಿಗೆ ಕರ್ಮಫಲವನ್ನು ಕೊಡನು; ಆದರೆ ಜೀವನು ಎಂತಹ ಕರ್ಮವನ್ನು ಮಾಡುತ್ತಾನೋ ಅಂತಹ ಫಲವನ್ನೇ ಈಶ್ವರನು ಕೊಡುತ್ತಾನೆಂಬುದು ಸಿದ್ಧವಾಗುತ್ತದೆ.

ನಾಲ್ಕನೆಯ ನಾಸ್ತಿಕ :—ನಿಮಿತ್ತವಿಲ್ಲದೆಯೇ ಪದಾರ್ಥಗಳ ಉತ್ಪತ್ತಿಯಾಗುತ್ತದೆ. ಹೇಗೆಂದರೆ—ಜಾಲಿ ಮೊದಲಾದ ಮರಗಳಲ್ಲಿ ಮುಳ್ಳುಗಳು ತೀಕ್ಷ್ಣ ಅಗ್ರ ಉಳ್ಳವಾಗಿರುತ್ತವೆ. ಇದರಿಂದ ಸೃಷ್ಟಿಯ ಆರಂಭವಾಗುವಾಗಲ್ಲೆಲ್ಲಾ ನಿಮಿತ್ತವಿಲ್ಲದೆಯೇ ಶರೀರಾದಿ ಪದಾರ್ಥಗಳು ಹುಟ್ಟುತ್ತವೆಂದು ಗೊತ್ತಾಗುತ್ತದೆ.

ಉ :—ಯಾವುದರಿಂದ ಪದಾರ್ಥವು ಉತ್ಪನ್ನವಾಗುವುದೋ ಅದೇ ಆ ಪದಾರ್ಥಕ್ಕೆ ನಿಮಿತ್ತವಾಗಿರುತ್ತದೆ. ಮುಳ್ಳಿಲ್ಲದ ಮರಗಳಲ್ಲಿ ಮುಳ್ಳುಗಳು ಏಕೆ ಹುಟ್ಟುವುದಿಲ್ಲ?

ಐದನೆಯ ನಾಸ್ತಿಕ :—ಪ್ರತಿಯೊಂದು ವಸ್ತುವೂ ಹುಟ್ಟಿ ನಾಶವಾಗುವುದರಿಂದ ಎಲ್ಲವೂ ಅನಿತ್ಯವೇ.

ಶ್ಲೋಕಾರ್ಧೇನ ಪ್ರವಕ್ಷ್ಯಾಮಿ ಯದುಕ್ತಂ ಗ್ರಂಥಕೋಟಿಭಿಃ।
ಬ್ರಹ್ಮಸತ್ಯಂ ಜಗನ್ಮಿಥ್ಯಾ ಜೀವೋ ಬ್ರಹ್ಮೈವ ನಾಪರಃ ॥೧॥

ಇದು ಯಾವುದೋ ಒಂದು ಗ್ರಂಥದ ಶ್ಲೋಕವಿರುತ್ತದೆ. ನವೀನ ವೇದಾಂತಿಗಳು ಐದನೆಯ ನಾಸ್ತಿಕರ ಶ್ರೇಣಿಗೆ ಸೇರಿದವರು.

ಏಕೆಂದರೆ ಅವರು "ಬ್ರಹ್ಮನು ಸತ್ಯ, ಜಗತ್ತು ಮಿಥ್ಯೆ, ಜೀವನು ಬ್ರಹ್ಮನಿಗಿಂತ ಬೇರೆಯಲ್ಲ ಎಂಬುದು ಕೋಟ್ಯಾಂತರ ಗ್ರಂಥಗಳ ಸಿದ್ಧಾಂತವಾಗಿದೆ" ಎಂದು ಹೇಳುತ್ತಾರೆ.

ಉ:—ಎಲ್ಲವುಗಳ ನಿತ್ಯತೆಯೂ ನಿತ್ಯವಾಗಿದ್ದರೆ ಎಲ್ಲವೂ ಅನಿತ್ಯವಾಗಲಾರವು.

ಪ್ರ:—ಎಲ್ಲವುಗಳ ನಿತ್ಯತೆಯೂ ಸಹ ಅನಿತ್ಯವೇ ಆಗಿರುತ್ತದೆ. ಹೇಗೆಂದರೆ, ಬೆಂಕಿಯು ಕಟ್ಟಿಗೆಗಳನ್ನು ನಾಶಪಡಿಸಿ, ತಾನೂ ನಾಶವಾಗುತ್ತದೆ.

ಉ:—ವರ್ತಮಾನ ಸಮಯದಲ್ಲಿ ಯಥಾರ್ಥವಾಗಿ ಕಂಡುಬರುವ ವಸ್ತುಗಳಿಗೆ ಅನಿತ್ಯತ್ವವನ್ನೂ ಹೇಳುವುದು, ಮತ್ತು ಪರಮ ಸೂಕ್ಷ್ಮಕಾರಣವನ್ನು ಅನಿತ್ಯವೆಂದೂ ಹೇಳುವುದು ಎಂದಿಗೂ ಆಗಲಾರದು. ವೇದಾಂತಿಗಳು ಬ್ರಹ್ಮನಿಂದ ಜಗತ್ತಿನ ಉತ್ಪತ್ತಿಯನ್ನು ಒಪ್ಪುವುದಾದರೆ ಬ್ರಹ್ಮನು ಸತ್ಯನಾಗಿರುವುದರಿಂದ ಆತನ ಕಾರ್ಯವು ಎಂದಿಗೂ ಅಸತ್ಯವಾಗಲಾರದು. ಸ್ವಪ್ನ, ರಜ್ಜು, ಸರ್ಪ ಮೊದಲಾದುವುಗಳಂತೆ ಕಲ್ಪಿತವೆಂದರೂ ಸಹ ಸರಿಯಾಗಲಾರರು. ಏಕೆಂದರೆ, ಕಲ್ಪನೆಯು ಗುಣವಾಗಿರುತ್ತದೆ. ಗುಣದಿಂದ ದ್ರವ್ಯವೂ, ದ್ರವ್ಯದಿಂದ ಗುಣವೂ ಬೇರೆಯಿರಲಾರದು. ಕಲ್ಪನೆಯನ್ನು ಮಾಡುವವನು ನಿತ್ಯವಾಗಿಯೇ ಇರಬೇಕು. ಇಲ್ಲದಿದ್ದರೆ, ಅವನನ್ನೂ ಅನಿತ್ಯವೆಂದು ಒಪ್ಪಿಕೊಳ್ಳಿರಿ. ಕೇಳದೆಯೂ ನೋಡದೆಯೂ ಸ್ವಪ್ನವುಂಟಾಗಲಾರದು. ಜಾಗ್ರದವಸ್ಥೆಯಲ್ಲಿರುವ ಅಂದರೆ ವರ್ತಮಾನಸಮಯದಲ್ಲಿರುವ ಸತ್ಯ ಪದಾರ್ಥಗಳ ಸಾಕ್ಷಾತ್ಸಂಬಂಧದಿಂದ ಪ್ರತ್ಯಕ್ಷಾದಿ ಜ್ಞಾನವುಂಟಾಗಿ ಸಂಸ್ಕಾರ ಅಂದರೆ ಅವುಗಳ ವಾಸನಾರೂಪವಾದ ಜ್ಞಾನವು ಆತ್ಮನಲ್ಲಿ ನಿಲ್ಲುತ್ತದೆ. ಸ್ವಪ್ನದಲ್ಲಿ ಅವನ್ನೇ ಪ್ರತ್ಯಕ್ಷವಾಗಿ ನೋಡುತ್ತಾನೆ. ಸುಷುಪ್ತಿಯಲ್ಲಿ ಬಾಹ್ಯಪದಾರ್ಥಗಳ ಜ್ಞಾನದ ಅಭಾವವಿದ್ದರೂ, ಬಾಹ್ಯ ಪದಾರ್ಥಗಳು ಇದ್ದೇ ಇರುವಂತೆ ಪ್ರಳಯಸಮಾನದಲ್ಲಿಯೂ ಕೂಡ ಕಾರಣದ್ರವ್ಯವು ಇರುತ್ತದೆ. ಸಂಸ್ಕಾರವಿಲ್ಲದೆಯೇ ಸ್ವಪ್ನವುಂಟಾಗುವಂತಿದ್ದರೆ, ಹುಟ್ಟುಕುರುಡನಿಗೂ ಕೂಡ ಸ್ವಪ್ನದಲ್ಲಿ ರೂಪವು ಕಂಡು

ಬರುತ್ತಿತ್ತು. ಆದ್ದರಿಂದ ಅಲ್ಲಿ ಅವುಗಳ ಜ್ಞಾನಮಾತ್ರವಿರುತ್ತದೆ. ಮತ್ತು ಹೊರಗೆ ಎಲ್ಲಾ ಪದಾರ್ಥಗಳೂ ಇರುತ್ತವೆ.

ಪ್ರ:—ಜಾಗ್ರದವಸ್ಥೆಯಲ್ಲಿ ಕಂಡುಬಂದ ಪದಾರ್ಥಗಳು ಸ್ವಪ್ನದಲ್ಲಿಯೂ, ಮತ್ತು ಅವೆರಡರಲ್ಲಿ ಕಂಡುಬಂದ ಪದಾರ್ಥಗಳು ಸುಷುಪ್ತಿಯಲ್ಲಿಯೂ ಅನಿತ್ಯವಾಗಿ ಹೋಗುತ್ತವೆ. ಹಾಗೆಯೇ ಜಾಗ್ರದವಸ್ಥೆಯಲ್ಲಿ ಕಂಡುಬಂದ ಪದಾರ್ಥಗಳನ್ನೂ ಕೂಡ ಸ್ವಪ್ನದಂತೆಯೇ ಎಣಿಸಬೇಕು.

ಉ:—ಹಾಗೆಂದಿಗೂ ಒಪ್ಪಲಾಗದು. ಏಕೆಂದರೆ—ಸ್ವಪ್ನ ಮತ್ತು ಸುಷುಪ್ತಿಗಳಲ್ಲಿ ಬಾಹ್ಯಪದಾರ್ಥಗಳ ಅಜ್ಞಾನಮಾತ್ರವಿರುತ್ತದೆ; ಅಭಾವವಲ್ಲ. ಯಾವನಿಗಾದರೂ ತನ್ನ ಹಿಂದಿರುವ ಎಷ್ಟೋ ಪದಾರ್ಥಗಳು ಕಂಡುಬರದಿದ್ದರೂ ಅವುಗಳ ಅಭಾವವಿರುವುದಿಲ್ಲದಿರುವಂತೆಯೇ ಸ್ವಪ್ನ-ಸುಷುಪ್ತಿಗಳ ವಿಷಯದಲ್ಲಿಯೂ ತಿಳಿಯಬೇಕು. ಆದ್ದರಿಂದ ಪರಮಾತ್ಮ, ಜೀವ ಮತ್ತು ಪ್ರಕೃತಿಯು ಅನಾದಿಯೂ ನಿತ್ಯವೂ ಆಗಿರುವುದೆಂದು ಹಿಂದೆ ಹೇಳಿದುದೇ ಸತ್ಯವಾಗಿರುತ್ತದೆ.

ಆರನೆಯ ನಾಸ್ತಿಕ—ಪಂಚಭೂತಗಳು ನಿತ್ಯವಾಗಿರುವುದರಿಂದ ಎಲ್ಲಾ ಜಗತ್ತೂ ಕೂಡ ನಿತ್ಯವಾಗಿರುತ್ತವೆ.

ಉತ್ತರ:—ಇದು ನಿಜವಲ್ಲ. ಏಕೆಂದರೆ—ಯಾವ ಪದಾರ್ಥಗಳ ಉತ್ಪತ್ತಿ ವಿನಾಶಗಳ ಕಾರಣವು ಕಂಡುಬರುತ್ತದೋ, ಅವೆಲ್ಲಾ ನಿತ್ಯವಾಗಿರುವುದಾದರೆ ಎಲ್ಲಾ ಸ್ಥೂಲ ಜಗತ್ತು ಮತ್ತು ಘಟ, ಪಟ ಮೊದಲಾದ ವಸ್ತುಗಳು ಉತ್ಪನ್ನ ಹಾಗೂ ನಾಶವಾಗುತ್ತಿರುವುದನ್ನು ನೋಡುತ್ತಲೇ ಇರುತ್ತೇವೆ. ಆದುದರಿಂದ ಕಾರ್ಯವನ್ನು ನಿತ್ಯವೆಂದು ಒಪ್ಪಲಾಗುವುದಿಲ್ಲ.

ಏಳನೆಯ ನಾಸ್ತಿಕ:- ಎಲ್ಲವೂ ಬೇರೆ ಬೇರೆಯಾಗಿರುತ್ತವೆ. ಯಾವುದೂ ಒಂದು ಪದಾರ್ಥವಲ್ಲ. ಯಾವ ಪದಾರ್ಥವನ್ನು ನೋಡಿದರೂ ಅದರಲ್ಲಿ ಮತ್ತೊಂದು ವಸ್ತುವು ಯಾವುದೂ ಕಾಣುವುದಿಲ್ಲ.

ಉತ್ತರ:—ಅವಯವಗಳಲ್ಲಿ ಅವಯವಿ, ವರ್ತಮಾನಕಾಲ, ಆಕಾಶ, ಪರಮಾತ್ಮ ಮತ್ತು ಜಾತಿ ಇವುಗಳು ಬೇರೆ ಬೇರೆ ಪದಾರ್ಥ

ಸಮೂಹಗಳಲ್ಲಿ ಒಂದೊಂದಾಗಿರುತ್ತವೆ. ಯಾವ ಪದಾರ್ಥವೂ ಇವುಗಳಿಂದ ಬೇರೆಯಾಗಿರುವುದಿಲ್ಲ. ಇದರಿಂದ ಎಲ್ಲಾ ಪದಾರ್ಥಗಳೂ ಬೇರೆ ಬೇರೆಯಾಗಿಲ್ಲ; ಆದರೆ, ಸ್ವರೂಪದಿಂದ ಬೇರೆಬೇರೆಯಾಗಿರುತ್ತವೆ. ಮತ್ತು ಬೇರೆಬೇರೆ ಪದಾರ್ಥಗಳಲ್ಲಿ ಒಂದು ಪದಾರ್ಥವೂ ಇರುತ್ತದೆ.

ಎಂಟನೆಯ ನಾಸ್ತಿಕ :—ಎಲ್ಲಾ ಪದಾರ್ಥಗಳಲ್ಲಿಯೂ ಇತರೇತರ ಅಭಾವವು ಸಿದ್ಧವಾಗುವುದರಿಂದ, ಎಲ್ಲವೂ ಅಭಾವವೆಂದು ತಿಳಿಯಬೇಕಾಗುತ್ತದೆ. ಹೇಗೆಂದರೆ -" ಅನಶ್ವೋ ಗೌಃ ಅಗೌರಶ್ವಃ "—' ಹಸುವು ಕುದುರೆಯಲ್ಲ ; ಮತ್ತು ಕುದುರೆಯು ಹಸುವಲ್ಲ.' ಆದ್ದರಿಂದ ಎಲ್ಲವನ್ನೂ ಅಭಾವವೆಂದೇ ತಿಳಿಯಬೇಕು.

ಉ :—ಎಲ್ಲಾ ಪದಾರ್ಥಗಳಲ್ಲಿಯೂ ಇತರೇತರ ಭಾವವಿರಬಹುದು. ಆದರೆ " ಗವಿಗೌರಶ್ವೇಽಶ್ವೇಭಾವರೂಪೋ ವರ್ತತ ಏವ " ಹಸುವಿನಲ್ಲಿ ಹಸುವಿನ ಭಾವವೂ, ಕುದುರೆಯಲ್ಲಿ ಕುದುರೆಯ ಭಾವವೂ ಇದ್ದೇ ಇರುತ್ತದೆ. ಅಭಾವವೆಂದಿಗೂ ಇಲ್ಲ. ಪದಾರ್ಥಗಳಲ್ಲಿ ಭಾವವೇ ಇಲ್ಲದಿದ್ದರೆ, ಇತರೇತರ ಅಭಾವವು ಯಾವುದರಲ್ಲಿ ಹೇಳಲ್ಪಡುವುದು ?

ಒಂಭತ್ತನೆಯ ನಾಸ್ತಿಕ :—ಸ್ವಭಾವದಿಂದಲೇ ಜಗತ್ತು ಉತ್ಪನ್ನವಾಗುತ್ತದೆ. ಹೇಗೆಂದರೆ-ನೀರೂ ಅನ್ನವೂ ಸೇರಿ ಕೊಳೆತರೆ, ಕ್ರಿಮಿಗಳು ಹುಟ್ಟುತ್ತವೆ. ಬೀಜಗಳೂ, ಭೂಮಿಯೂ, ನೀರೂ ಕಲೆತು ಹುಲ್ಲು ಮರಗಳೂ ಮತ್ತು ಪಾಷಾಣಾದಿಗಳೂ ಉತ್ಪನ್ನವಾಗುತ್ತವೆ. ಸಮುದ್ರ ಮತ್ತು ವಾಯುವಿನ ಸಂಯೋಗದಿಂದ ಅಲೆಗಳೂ, ಅಲೆಗಳಿಂದ ನೊರೆಯೂ ಹುಟ್ಟುತ್ತವೆ. ಸುಣ್ಣ, ನಿಂಬೆಹುಳಿ ಮತ್ತು ಅರಿಶಿನ ಈ ಮೂರು ಪದಾರ್ಥಗಳೂ ಕಲೆತು ಕುಂಕುಮವಾಗುತ್ತದೆ. ಇದೇ ರೀತಿಯಾಗಿ ತತ್ವಗಳ ಸ್ವಭಾವ ಗುಣದಿಂದಲೇ ಸರ್ವ ಜಗತ್ತೂ ಉತ್ಪನ್ನವಾಗಿದೆ. ಇವುಗಳನ್ನು ನಿರ್ಮಿಸುವವನಾವನೂ ಇಲ್ಲ.

ಉತ್ತರ :—ಸ್ವಭಾವದಿಂದಲೇ ಜಗತ್ತು ಉತ್ಪನ್ನವಾಗಿದ್ದರೆ, ಎಂದಿಗೂ ನಾಶಹೊಂದುತ್ತಿರಲಿಲ್ಲ. ಸ್ವಭಾವದಿಂದಲೇ ನಾಶವನ್ನು ಒಪ್ಪುವಿರಾದರೆ, ಉತ್ಪತ್ತಿಯಾಗಲಾರದು. ಮತ್ತು ಎರಡು ಸ್ವಭಾವಗಳನ್ನು ಒಂದೇ ಸಾರಿ ದ್ರವ್ಯಗಳಲ್ಲಿವೆ ಎನ್ನುವಿರಾದರೆ, ಉತ್ಪತ್ತಿ

ವಿನಾಶಗಳ ವ್ಯವಸ್ಥೆಯಿಂದಿಗೂ ಆಗಲಾರದು. ನಿಮಿತ್ತದಿಂದಲೇ ಜಗತ್ತಿನ ಉತ್ಪತ್ತಿ-ವಿನಾಶಗಳು ನಡೆಯುತ್ತಿರುವುವೆಂದು ನಂಬಿದರೆ, ಆ ನಿಮಿತ್ತವು ಉತ್ಪತಿ-ವಿನಾಶಗಳನ್ನು ಹೊಂದುತ್ತಿರುವ ದ್ರವ್ಯಗಳಿಂದ, ಬೇರೆಯಾಗಿರಬೇಕೆಂದು ಒಪ್ಪಬೇಕಾಗುತ್ತದೆ. ಸ್ವಭಾವದಿಂದಲೇ ಉತ್ಪತ್ತಿ-ವಿನಾಶಗಳು ಉಂಟಾಗುವಂತಿದ್ದರೆ, ಒಂದೇ ಸಮಯದಲ್ಲಿಯೇ ಉತ್ಪತ್ತಿ-ವಿನಾಶಗಳು ಉಂಟಾಗುವುದು ಅಸಂಭವ. ಸ್ವಭಾವದಿಂದಲೇ ಜಗತ್ತು ಹುಟ್ಟುವಂತಿದ್ದರೆ ಈ ಭೂಗೋಳದ ಸಮೀಪದಲ್ಲಿ ಮತ್ತೊಂದು ಭೂಗೋಳವೂ, ಹೊಸ ಹೊಸ ಸೂರ್ಯ-ಚಂದ್ರರೂ ಏಕೆ ಹುಟ್ಟುವುದಿಲ್ಲ ? ಯಾವ ಯಾವುದರ ಸಂಯೋಗದಿಂದ ಯಾವ ಯಾವುದು ಹುಟ್ಟುತ್ತವೋ ಅವೆಲ್ಲಾ ಈಶ್ವರ ನಿರ್ಮಿತವಾದ ಬೀಜ. ಅನ್ನ, ಜಲ ಮೊದಲಾದುವುಗಳ ಸಂಯೋಗದಿಂದ ಹುಲ್ಲು, ವೃಕ್ಷ, ಕೃಮಿ ಮೊದಲಾದುವು ಹುಟ್ಟುತ್ತವೆ. ಅವಿಲ್ಲದಿದ್ದರೆ ಆಗಲಾರವು. ಅರಿಶಿನ, ಸುಣ್ಣ ಮತ್ತು ನಿಂಬೆಯ ರಸ—ಇವುಗಳು ದೂರದೂರ ಪ್ರದೇಶದಿಂದ ತಾವಾಗಿ ಬಂದು ಸೇರುವುದಿಲ್ಲ. ಯಾವನಾದರೂ ಸೇರಿಸಿದರೆ ಸೇರುತ್ತವೆ. ಮತ್ತು ಅದರಲ್ಲಿಯೂ ಯೋಗ್ಯ ಪ್ರಮಾಣದಿಂದ ಸೇರಿಸಿದರೆ ಮಾತ್ರ ಕುಂಕುಮವಾಗುತ್ತದೆ. ಹೆಚ್ಚಾಗಲಿ, ಕಡಿಮೆಯಾಗಲಿ ಸೇರಿಸುವುದರಿಂದ ಅಥವಾ ಅನ್ಯಥಾ ಮಾಡುವುದರಿಂದ ಕುಂಕುಮವಾಗುವುದಿಲ್ಲ. ಹಾಗೆಯೇ ಪರಮಾತ್ಮನು ಪ್ರಕೃತಿ ಪರಮಾಣುಗಳನ್ನು ಜ್ಞಾನಪೂರ್ವಕವಾಗಿಯೂ, ಯುಕ್ತಿಪೂರ್ವಕವಾಗಿಯೂ ಸೇರಿಸದಿದ್ದರೆ ಜಡಪದಾರ್ಥಗಳೂ ಸ್ವತಃ ಕಾರ್ಯಸಿದ್ಧಿಗಾಗಿ ವಿಶೇಷ ವಸ್ತುಗಳಾಗಿ, ಏನೇನೂ ಪರಿಣಮಿಸಲಾರವು. ಆದ್ದರಿಂದ ಸೃಷ್ಟಿಯು ಸ್ವಭಾವಾದಿಗಳಿಂದಲ್ಲ. ಪರಮಾತ್ಮನ ರಚನೆಯಿಂದಲೇ ಆಗುತ್ತದೆ.

ಪ್ರಶ್ನೆ :—ಈ ಜಗತ್ತಿಗೆ ಯಾವ ಕರ್ತನೂ ಇರಲಿಲ್ಲ. ಈಗಲೂ ಇಲ್ಲ. ಮುಂದೆಯೂ ಇರುವುದಿಲ್ಲ. ಆದರೆ ಅನಾದಿಕಾಲದಿಂದಲೂ ಇದು ಹೀಗೆಯೇ ನಡೆದುಬಂದಿದೆ. ಇದರ ಉತ್ಪತ್ತಿ ಎಂದೂ ಆಗಲಿಲ್ಲ. ಇದರ ವಿನಾಶವೂ ಎಂದಿಗೂ ಆಗುವುದಿಲ್ಲ.

ಉತ್ತರ :—ಕರ್ತನಿಲ್ಲದೆ ಯಾವುದೇ ಕ್ರಿಯೆಯಾಗಲಿ, ಕ್ರಿಯಾ

ಜನ್ಯ ಪದಾರ್ಥವಾಗಲಿ ಉಂಟಾಗಲಾರದು. ಯಾವ ಪೃಥಿವ್ಯಾದಿ ಪದಾರ್ಥಗಳಲ್ಲಿ ಪರಮಾಣು ಸಂಯೋಗ ವಿಶೇಷದಿಂದ ರಚನೆ ಕಂಡು ಬರುವುದೋ, ಅವು ಎಂದಿಗೂ ಅನಾದಿಯಾಗಲಾರದು. ಮತ್ತು ಸಂಯೋಗದಿಂದ ಯಾವುದು ಆಗುವುದೋ ಅದು ಸಂಯೋಗಕ್ಕೆ ಮೊದಲಿರುವುದಿಲ್ಲ; ವಿಯೋಗದ ಅನಂತರವೂ ಇರುವುದಿಲ್ಲ. ಇದನ್ನು ನೀವು ಒಪ್ಪುವುದಿಲ್ಲವಾದರೆ, ಅತ್ಯಂತ ಕಠಿಣವಾದ ಕಲ್ಲು, ವಜ್ರ ಮತ್ತು ಉಕ್ಕನ್ನು ಒಡೆದು, ಚೂರುಮಾಡಿ, ಕರಗಿಸಿ ಮತ್ತು ಬೂದಿಮಾಡಿ ಆವುಗಳಲ್ಲಿ ಬೇರೆಬೇರೆ ಪರಮಾಣುಗಳು ಸೇರಿವೆಯೋ ಇಲ್ಲವೋ ನೋಡಿರಿ. ಸೇರಿರುವುದಾದರೆ, ಕಾಲ ಬಂದಾಗ ಅವಶ್ಯವಾಗಿ ಬೇರೆಬೇರೆಯೂ ಆಗುವುವು.

ಪ್ರ :—ಅನಾದಿಯಾವ ಈಶ್ವರನಾವನೂ ಇಲ್ಲ. ಆದರೆ ಯೋಗಾಭ್ಯಾಸದಿಂದ ಅಣಿಮಾದಿ ಐಶ್ವರ್ಯಗಳನ್ನು ಹೊಂದಿ, ಸರ್ವಜ್ಞತ್ವಾದಿ ಗುಣಗಳನ್ನು ಪಡೆದಿರುವ ಕೇವಲ ಜ್ಞಾನಿಯಾವ ಜೀವನೇ ಪರಮೇಶ್ವರನೆನಿಸಿಕೊಳ್ಳುತ್ತಾನೆ.

ಉ :—ಅನಾದಿಯಾವ ಈಶ್ವರನು ಜಗತ್ಕರ್ತನಾಗಿರದಿದ್ದರೆ ಸಾಧನಗಳಿಂದ ಸಿದ್ಧಿಪಡೆಯುವ ಜೀವರ ಆಧಾರವಾವ, ಜೀವನವಾವ ಜಗತ್ತು, ಶರೀರ ಮತ್ತು ಇಂದ್ರಿಯಗಳ ಗೋಳಕಗಳು ಹೇಗೆ ಆಗುತ್ತಿದ್ದವು? ಇವುಗಳಿಲ್ಲದಿದ್ದರೆ ಜೀವನಿಗೆ ಯಾವ ಸಾಧನೆಯನ್ನು ಮಾಡಲಾಗುತ್ತಿರಲಿಲ್ಲ. ಸಾಧನವೇ ಇಲ್ಲದಿದ್ದರೆ ಜೀವನು 'ಸಿದ್ಧನು' ಎಲ್ಲಿಂದ ಆಗುತ್ತಿದ್ದನು? ಜೀವನು ಎಂತಹ ಸಾಧನೆಯನ್ನಾದರೂ ಮಾಡಿ ಸಿದ್ಧನಾಗಲಿ; ಆದರೂ ಅನಂತ ಸಿದ್ಧಿಯನ್ನುಳ್ಳ ಈಶ್ವರನ ಸ್ವತಃ ಸನಾತನವಾದ ಅನಾದಿ ಸಿದ್ಧಿಗೆ ಸಮಾನವಾಗಿ ಯಾವ ಜೀವನೂ ಆಗಲಾರನು. ಏಕೆಂದರೆ ಪರಮಾವಧಿಯ ವರೆಗೆ ಜೀವನ ಜ್ಞಾನವು ವರ್ಧಿಸಿದರೂ ಕೂಡ ಅವನು ಪರಿಮಿತ ಜ್ಞಾನ ಮತ್ತು ಸಾಮರ್ಥ್ಯವುಳ್ಳವನೇ ಆಗಿರುತ್ತಾನೆ. ಅನಂತ ಜ್ಞಾನ ಮತ್ತು ಸಾಮರ್ಥ್ಯವುಳ್ಳವನೆಂದಿಗೂ ಆಗಲಾರನು. ನೋಡಿರಿ, ಈಶ್ವರಕೃತವಾದ ಸೃಷ್ಟಿಯನ್ನು ಬದಲಾಯಿಸುವಂತಹ ಯಾವ ಯೋಗಿಯೂ ಇದುವರೆಗೆ ಆಗಿಲ್ಲ; ಆಗುವುದೂ ಇಲ್ಲ. ಉದಾ :—ಅನಾದಿಸಿದ್ಧನಾದ ಪರಮಾತ್ಮನು

ಕಣ್ಣುಗಳಿಂದ ನೋಡುವಂತೆಯೂ, ಕಿವಿಗಳಿಂದ ಕೇಳುವಂತೆಯೂ ನಿಯಮಿಸಿರುತ್ತಾನೆ. ಇದನ್ನು ಯಾವ ಯೋಗಿಯೂ ಬದಲಾಯಿಸಲಾರನು. ಆದ್ದರಿಂದ ಜೀವನು ಎಂದಿಗೂ ಪರಮಾತ್ಮನಾಗಲಾರನು.

ಪ್ರ :—ಪರಮಾತ್ಮನು ಕಲ್ಪಕಲ್ಪಾಂತರಗಳಲ್ಲಿ ಬೇರೆ ಬೇರೆ ರೀತಿಯಾಗಿ ಸೃಷ್ಟಿಮಾಡುವನೋ ಅಥವಾ ಒಂದೇ ವಿಧವಾಗಿಯೋ ?

ಉ :—ಈಗಿರುವಂತೆಯೇ ಮೊದಲಿತ್ತು ; ಮುಂದೆಯೂ ಹಾಗೆಯೇ ಇರುವುದು.

ಸೂರ್ಯಾ ಚಂದ್ರಮಸೌ ಧಾತಾ ಯಥಾಪೂರ್ವಮಕಲ್ಪಯತ್।
ದಿವಂ ಚ ಪೃಥಿವೀಂ ಚಾಂತರಿಕ್ಷಮಥೋಸ್ವಃ ॥

[ಋ. ಮಂ. ೧೦. ಸೂ. ೧೯೦ ಮಂ. ೩]

ಪರಮಾತ್ಮನು ಹಿಂದಿನ ಕಲ್ಪಗಳಲ್ಲಿ ಸೂರ್ಯ, ಚಂದ್ರ, ವಿದ್ಯುತ್, ಪೃಥಿವೀ, ಅಂತರಿಕ್ಷ ಮೊದಲಾದುವುಗಳನ್ನು ಸೃಷ್ಟಿಸಿದ್ದಂತೆಯೇ ಈ ಕಲ್ಪದಲ್ಲಿಯೂ ಸೃಷ್ಟಿಸಿದ್ದಾನೆ. ಮುಂದೆಯೂ ಹಾಗೆಯೇ ಸೃಷ್ಟಿಸುವನು. ಆದುದರಿಂದ ಪರಮಾತ್ಮನ ಕಾರ್ಯವು ದೋಷರಹಿತವಾಗಿರುವುದರಿಂದ, ಯಾವಾಗಲೂ ಒಂದೇ ವಿಧವಾಗಿರುತ್ತದೆ. ಯಾವನು ಅಲ್ಪಜ್ಞನೋ ಮತ್ತು ಯಾವನ ಜ್ಞಾನವು ವೃದ್ಧಿಕ್ಷಯಗಳನ್ನು ಹೊಂದುತ್ತದೆಯೋ ಅವನ ಕಾರ್ಯಗಳಲ್ಲೇ ನ್ಯೂನತೆಗಳುಂಟಾಗುತ್ತವೆ. ಪರಮಾತ್ಮನ ಕಾರ್ಯಗಳಲ್ಲಿ ಅಲ್ಲ.

ಪ್ರ :—ಸೃಷ್ಟಿಯ ವಿಷಯದಲ್ಲಿ ವೇದಾದಿಶಾಸ್ತ್ರಗಳಲ್ಲಿ ಪರಸ್ಪರ ಅವಿರೋಧವಿದೆಯೋ ಅಥವಾ ವಿರೋಧವೋ ?

ಉ :—ಅವಿರೋಧವಿದೆ.

ಪ್ರ :—ಹಾಗಿದ್ದಲ್ಲಿ,

ತಸ್ಮಾದ್ವಾ ಏತಸ್ಮಾದಾತ್ಮನ ಆಕಾಶಃ ಸಂಭೂತಃ।
ಆಕಾಶಾದ್ವಾಯುಃ ವಾಯೋರಗ್ನಿಃ ಅಗ್ನೇರಾಪಃ ॥
ಅದ್ಭ್ಯಃ ಪೃಥಿವೀ ಪೃಥಿವ್ಯಾ ಓಷಧಯಃ ಓಷಧಿಭ್ಯೋಽನ್ನಂ ॥

ಅನ್ನಾದ್ರೇತಃ ರೇತಸಃ ಪುರುಷಃ ಸ ವಾ ಏಷ ಪುರುಷೋಽನ್ನ ರಸಮಯಃ ॥

[ತೈತ್ತರೀಯೋಪನಿಷತ್, ಬ್ರಹ್ಮಾನಂದವಲ್ಲೀ ಅನು. ೧]

ಇದು ತೈತ್ತರೀಯೋಪನಿಷತ್ತಿನ ವಚನವು. "ಆ ಪರಮಾತ್ಮನಿಂದಲೂ ಆಕಾಶ-ಅವಕಾಶ ಉಂಟಾಗುತ್ತದೆ. ಅಂದರೆ, ಸರ್ವತ್ರ ವ್ಯಾಪಕವಾಗಿದ್ದ ಕಾರಣರೂಪದ್ರವ್ಯವನ್ನು ಒತ್ತಟ್ಟಿಗೆ ಸೇರಿಸುವುದರಿಂದ ಅವಕಾಶ ಹುಟ್ಟಿದಂತೆ ಆಗುತ್ತದೆ. ನಿಜವಾಗಿಯೂ ಆಕಾಶವು ಹುಟ್ಟುವುದಿಲ್ಲ. ಏಕೆಂದರೆ ಆಕಾಶವೇ ಇಲ್ಲದಿದ್ದರೆ ಪ್ರಕೃತಿಯೂ, ಪರಮಾಣುಗಳೂ ಎಲ್ಲಿರಬಲ್ಲವು? ಆಕಾಶದ ಬಳಿಕ ವಾಯುವೂ, ವಾಯುವಿನ ಬಳಿಕ ಬೆಂಕಿಯೂ, ಬೆಂಕಿಯ ಬಳಿಕ ನೀರೂ, ನೀರಿನ ಬಳಿಕ ಪೃಥಿವಿಯೂ, ಪೃಥಿವಿಯಿಂದ ಓಷಧಿಗಳೂ, ಓಷಧಿಗಳಿಂದ ಆಹಾರವೂ, ಆಹಾರದಿಂದ ವೀರ್ಯವೂ, ವೀರ್ಯದಿಂದ ಪುರುಷ ಅಂದರೆ ಶರೀರವೂ ಹುಟ್ಟುತ್ತದೆ. ಇಲ್ಲಿ ಆಕಾಶಾದಿ ಕ್ರಮದಿಂದಲೂ, ಛಾಂದೋಗ್ಯದಲ್ಲಿ ಅಗ್ನ್ಯಾದಿ ಕ್ರಮದಿಂದಲೂ, ಐತರೇಯದಲ್ಲಿ ಜಲಾದಿಕ್ರಮದಿಂದಲೂ ಸೃಷ್ಟಿಯು ಉತ್ಪನ್ನವಾಯಿತೆಂದು ಹೇಳಿರುತ್ತದೆ. ವೇದಗಳಲ್ಲಿ ಒಂದುಕಡೆ ಪುರುಷನಿಂದಲೂ, ಮತ್ತೊಂದು ಕಡೆ ಹಿರಣ್ಯಗರ್ಭಾದಿಗಳಿಂದಲೂ ಮೀಮಾಂಸಾದರ್ಶನದಲ್ಲಿ ಕರ್ಮದಿಂದಲೂ, ವೈಶೇಷಿಕದರ್ಶನದಲ್ಲಿ ಕಾಲದಿಂದಲೂ, ನ್ಯಾಯದರ್ಶನದಲ್ಲಿ ಪರಮಾಣುಗಳಿಂದಲೂ, ಯೋಗದರ್ಶನದಲ್ಲಿ ಪುರುಷಾರ್ಥದಿಂದಲೂ ಸಾಂಖ್ಯದರ್ಶನದಲ್ಲಿ ಪ್ರಕೃತಿಯಿಂದಲೂ, ವೇದಾಂತದರ್ಶನದಲ್ಲಿ ಬ್ರಹ್ಮನಿಂದಲೂ ಸೃಷ್ಟಿರಚನೆಯು ಹೇಳಲ್ಪಟ್ಟಿದೆ. ಹೀಗೆ ಪರಸ್ಪರ ವಿರುದ್ಧವಾಗಿರುವ ಇವುಗಳಲ್ಲಿ ಯಾವುದು ಸತ್ಯ; ಯಾವುದು ಸುಳ್ಳು?

ಉ:—ಇವೆಲ್ಲವೂ ಸತ್ಯ. ಯಾವುದೂ ಸುಳ್ಳಲ್ಲ. ಇದನ್ನು ವಿಪರೀತವಾಗಿ ತಿಳಿದುಕೊಳ್ಳುವವನು ಮಾತ್ರ ಅಸತ್ಯವಂತನಾಗುತ್ತಾನೆ. ಏಕೆಂದರೆ, ಪರಮಾತ್ಮನು ನಿಮಿತ್ತಕಾರಣನಾಗಿಯೂ, ಪ್ರಕೃತಿಯು ಜಗತ್ತಿನ ಉಪಾದಾನಕಾರಣವಾಗಿಯೂ ಇರುತ್ತದೆ. ಮಹಾಪ್ರಳಯವು ಆದ ಬಳಿಕ ಆಕಾಶಾದಿ ಕ್ರಮದಿಂದ; ಅಂದರೆ, ಆಕಾಶ-ವಾಯುಗಳಿಗೆ ಪ್ರಳಯವುಂಟಾಗದೆ, ಅಗ್ನ್ಯಾದಿಗಳಿಗೆ ಪ್ರಳಯವುಂಟಾ

ದರೆ. ಅಗ್ನ್ಯಾದಿಕ್ರಮದಿಂದಲೂ ಮತ್ತು ವಿದ್ಯುತ್, ಅಗ್ನಿಗಳ ನಾಶವೂ ಆಗದಿದ್ದಾಗ ಜಲಾದಿ ಕ್ರಮದಿಂದಲೂ ಸೃಷ್ಟಿಯಾಗುತ್ತದೆ. ಅಂದರೆ ಯಾವ ಯಾವ ಪ್ರಳಯದಲ್ಲಿ ಎಲ್ಲೆಲ್ಲಿನ ವರೆಗೆ ಪ್ರಳಯವಾಗುತ್ತದೆಯೋ ಅಲ್ಲಲ್ಲಿನಿಂದ ಮುಂದೆ ಸೃಷ್ಟಿಯು ಉತ್ಪನ್ನವಾಗುತ್ತದೆ. ಪುರುಷ, ಹಿರಣ್ಯಗರ್ಭ ಮೊದಲಾದ ಹೆಸರುಗಳು ಪರಮಾತ್ಮನಿಗೇ ಅನ್ವಯಿಸುತ್ತದೆಯೆಂದು ಮೊದಲನೆಯ ಸಮುಲ್ಲಾಸದಲ್ಲಿ ಬರೆದೂ ಇದ್ದೇವೆ. ಒಂದೇ ಕಾರ್ಯದಲ್ಲಿ ಒಂದೇ ವಿಷಯದಲ್ಲಿ ಪರಸ್ಪರ ವಿರುದ್ಧವಾದ ಅಭಿಪ್ರಾಯಗಳಿರುವುದಕ್ಕೆ ವಿರೋಧವೆಂದು ಹೆಸರು. ಆರು ಶಾಸ್ತ್ರಗಳಲ್ಲಿ ಅವಿರೋಧ ಈ ಪ್ರಕಾರವಾಗಿದೆ:—ಯಾವುದರ ಮಾಡುವಿಕೆಯಲ್ಲಿ ಕರ್ಮ-ಚೇಷ್ಟೆ ಮಾಡಲ್ಪಡದೋ ಅಂತಹ ಯಾವ ಕಾರ್ಯವೂ ಜಗತ್ತಿನಲ್ಲಿ ಆಗುವುದಿಲ್ಲ—ಎಂದು ಮಿಮಾಂಸಾಶಾಸ್ತ್ರದಲ್ಲಿ ಹೇಳಿರುತ್ತದೆ. ಕಾಲಹಿಡಿದ ಹೊರತು ಏನೂ ನಡೆಯಲಾರದೆಂದು ವೈಶೇಷಿಕದಲ್ಲಿ ಹೇಳಿರುತ್ತದೆ. ಉಪಾದಾನಕಾರಣವಿಲ್ಲದೆ ಯಾವ ಕಾರ್ಯವೂ ನಡೆಯುವುದಿಲ್ಲವೆಂದು ನ್ಯಾಯಶಾಸ್ತ್ರದಲ್ಲಿ ಹೇಳಿರುತ್ತದೆ. ವಿದ್ಯಾ, ಜ್ಞಾನ ವಿಚಾರಗಳಿಲ್ಲದೆ ನಡೆಯಲಾರದೆಂದು ಯೋಗಶಾಸ್ತ್ರದಲ್ಲಿ ಹೇಳಿರುತ್ತದೆ. ತತ್ವಗಳ ಸೇರಿಕೆಯಿಲ್ಲದೆ ಯಾವುದೂ ನಡೆಯುವುದಿಲ್ಲವೆಂದು ಸಾಂಖ್ಯ ಶಾಸ್ತ್ರದಲ್ಲಿ ಹೇಳಿರುತ್ತದೆ. ಮತ್ತು ಮಾಡುವವನು ಮಾಡದಿದ್ದರೆ ಯಾವ ಪದಾರ್ಥವೂ ಉತ್ಪನ್ನವಾಗಲಾರದೆಂದು ವೇದಾಂತಶಾಸ್ತ್ರದಲ್ಲಿ ಹೇಳಿರುತ್ತದೆ. ಹೀಗೆ ಸೃಷ್ಟಿಯು ಆರು ಕಾರಣಗಳಿಂದಲೂ ಉತ್ಪನ್ನವಾಗುತ್ತದೆ. ಈ ಆರು ಕಾರಣಗಳಲ್ಲಿ ಒಂದೊಂದು ಕಾರಣದ ವ್ಯಾಖ್ಯಾನವು ಒಂದೊಂದು ಶಾಸ್ತ್ರದಲ್ಲಿದೆ. ಆದುದರಿಂದ ಇವುಗಳಲ್ಲಿ ವಿರೋಧ ಸ್ವಲ್ಪವೂ ಇಲ್ಲ. ಆರು ಜನರು ಕಲೆತು ಒಂದು ಚಪ್ಪರವನ್ನು ಗೋಡೆಯಮೇಲಿಡುವಂತೆ, ಸೃಷ್ಟಿಯೆಂಬ ಕಾರ್ಯದ ವ್ಯಾಖ್ಯೆಯನ್ನು ಆರು ಮಂದಿ ಶಾಸ್ತ್ರಕಾರರೂ ಸೇರಿ ಪೂರ್ಣ ಮಾಡಿದ್ದಾರೆ.

ಉದಾಹರಣೆ:—ಐದು ಮಂದಿ ಹುಟ್ಟು ಕುರುಡರಿಗೂ, ಒಬ್ಬ ಮಂದ ದೃಷ್ಟಿಯವನಿಗೂ ಯಾವನೋ ಒಬ್ಬನು ಆನೆಯ ಒಂದೊಂದು ಭಾಗವನ್ನು ತೋರಿಸಿದನು. ಆನೆಯು ಹೇಗಿದೆಯೆಂದು ಅವರನ್ನು

ಕೇಳಿದನು. ಅವರಲ್ಲಿ ಮೊದಲನೆಯವನು 'ಕಂಬದಂತೆ ಇರುತ್ತದೆ' ಎಂದನು. ಎರಡನೆಯವನು 'ಮೊರಗಳಂತೆ ಇವೆ' ಎಂದನು. ಮೂರನೆಯವನು 'ಒನಕೆಯ ಹಾಗೆ ಇದೆ' ಎಂದನು. ನಾಲ್ಕನೆಯವನು 'ಪೊರಕೆಯಂತಿದೆ' ಎಂದನು. ಐದನೆಯವನು, 'ಜಗಲಿಯಂತಿದೆ' ಎಂದನು. ಆರನೆಯವನು 'ನಾಲ್ಕು ಕಂಭಗಳ ಮೇಲೆ ಕಪ್ಪ ಕಪ್ಪಗೆ ಸ್ವಲ್ಪ ಎಮ್ಮೆಯಹಾಗೆ ಆಕಾರವುಳ್ಳದ್ದಾಗಿದೆ' ಎಂದನು. ಈ ರೀತಿ ಇಂದಿನ ಅನಾರ್ಷ ನವೀನ ಗ್ರಂಥಗಳನ್ನು ಓದುವವರೂ ಮತ್ತು ಪ್ರಾಕೃತ ಭಾಷೆಯವರೂ, ಋಷಿ ಪ್ರಣೀತಗಳಾದ ಗ್ರಂಥಗಳನ್ನು ಓದದೆ, ನವೀನವಾದ ಅಲ್ಪಬುದ್ಧಿಯವರು ಬರೆದಿರುವ ಸಂಸ್ಕೃತ-ಪ್ರಾಕೃತಗ್ರಂಥಗಳನ್ನು ಓದಿ, ಪರಸ್ಪರ ನಿಂದೆಯಲ್ಲಿ ತೊಡಗಿ ಸುಳ್ಳು ಜಗಳ ಹರಡಿದ್ದಾರೆ. ಇವರ ಮಾತು ಬುದ್ಧಿವಂತರಿಗೆ ಅಥವಾ ಬೇರೆಯವರಿಗೆ ಮಾನ್ಯವಾದುದಲ್ಲ. ಏಕೆಂದರೆ, ಕುರುಡರನ್ನು ಕುರುಡರು ಹಿಂಬಾಲಿಸಿದರೆ ದುಃಖವನ್ನೇಕೆ ಹೊಂದರು? ಹಾಗೆಯೇ ಈಗಿನ ಕಾಲದ ಅಲ್ಪ ವಿದ್ಯಾವಂತರೂ, ಸ್ವಾರ್ಥಿಗಳೂ, ವಿಷಯಾಸಕ್ತರೂ ಆದ ಪುರುಷರ ಆಟವು ಜಗತ್ತನ್ನು ನಾಶಮಾಡುವಂತಹುದಾಗಿದೆ.

ಪ್ರ:—ಕಾರಣದ ಹೊರತು ಕಾರ್ಯವಾಗದಿದ್ದರೆ, ಕಾರಣಕ್ಕೆ ಕಾರಣವು ಏಕಿರಬಾರದು?

ಉ:—ಅಜ್ಞರಾದ ಸೋದರರೇ! ನೀವು ಬುದ್ಧಿಯನ್ನೇಕೆ ಕೊಂಚ ಉಪಯೋಗಿಸುವುದಿಲ್ಲ? ನೋಡಿರಿ—ಪ್ರಪಂಚದಲ್ಲಿ ಕಾರ್ಯ ಕಾರಣಗಳೆಂಬ ಎರಡೇ ಪದಾರ್ಥಗಳಿರುತ್ತವೆ. ಕಾರಣವಾಗಿರುವುದು ಕಾರ್ಯವಲ್ಲ; ಮತ್ತು ಯಾವ ಸಮಯದಲ್ಲಿ ಅದು ಕಾರ್ಯವಾಗಿರುವುದೋ, ಆಗ ಅದು ಕಾರಣವಲ್ಲ. ಮನುಷ್ಯನು ಈ ಸೃಷ್ಟಿಯನ್ನು ಯಥಾರ್ಥವಾಗಿ ತಿಳಿದುಕೊಳ್ಳುವವರೆಗೂ ಅವನಿಗೆ ಯಥಾವತ್ತಾದ ಜ್ಞಾನ ಲಭಿಸಲಾರದು.

ನಿತ್ಯಾಯಾಃ ಸತ್ವರಜಸ್ತಮಸಾಂ ಸಾಮ್ಯಾವಸ್ಥಾಯಾಃ
ಪ್ರಕೃತೇರುತ್ಪನ್ನಾನಾಂ ಪರಮಸೂಕ್ಷ್ಮಾಣಾಂ ಪೃಥಕ್
ಪೃಥಗ್ಗರ್ತಮಾನಾನಾಂ ತತ್ವಪರಮಾಣೂನಾಂ ಪ್ರಥಮಃ

ಸಂಯೋಗಾರಂಭಃ ಸಂಯೋಗವಿಶೇಷಾದವಸ್ಥಾಂತರಸ್ಯ
ಸ್ಥೂಲಾಕಾರಪ್ರಾಪ್ತಿಃ ಸೃಷ್ಟಿರುಚ್ಯತೇ ॥

ಅನಾದಿಯೂ, ನಿತ್ಯಸ್ವರೂಪವೂ, ಸತ್ವರಜಸ್ತಮೋಗುಣಗಳ ಏಕಾವಸ್ಥಾರೂಪವೂ ಆದ ಪ್ರಕೃತಿಯಿಂದ ಉತ್ಪನ್ನವಾದ ಪರಮ ಸೂಕ್ಷ್ಮವಾದ ತತ್ತ್ವಾವಯವಗಳ ಮೊದಲನೆಯದೇ ಆದ ಸಂಯೋಗದ ಆರಂಭವು ಮತ್ತು ಸಂಯೋಗವಿಶೇಷಗಳಿಂದ ಅವಸ್ಥಾಂತರವನ್ನು, ಅಂದರೆ ಬೇರೆಯ ಅವಸ್ಥೆಯನ್ನು ಹೊಂದಿ ಸೂಕ್ಷ್ಮವಾದುದು ಸ್ಥೂಲ ಸ್ಥೂಲವಾಗುತ್ತಾ ಆಗುತ್ತಾ ಯಾವ ವಿಚಿತ್ರರೂಪವಾಗಿದೆಯೋ, ಅದು, ಸಂಸರ್ಗದಿಂದ ಆದಕಾರಣ ಸೃಷ್ಟಿಯನ್ನಿಸುತ್ತದೆ. ಪ್ರಥಮಸಂಯೋಗದಲ್ಲಿ ಸೇರುವಂತಹುದೂ ಸೇರಿಸುವಂತಹುದೂ ಆಗಿದ್ದು, ಸಂಯೋಗಕ್ಕೆ ಆದಿಯಾಗಿಯೂ ವಿಯೋಗಕ್ಕೆ ಕಡೆಯಾಗಿಯೂ ಇರುವ ಅಂದರೆ ವಿಭಜಿಸಲಾಗದ ವಸ್ತುವಿಗೆ ಕಾರಣವೆಂದೂ, ಮತ್ತು ಸಂಯೋಗವಾದ ಬಳಿಕ ಉಂಟಾಗುವಂತಹುದೂ, ವಿಯೋಗವಾದ ಬಳಿಕ ಹಾಗಿಲ್ಲದೆ ಹೋಗುವುದೂ ಆಗಿರುವುದಕ್ಕೆ ಕಾರ್ಯವೆಂದೂ ಹೆಸರು. ಆ ಕಾರಣಕ್ಕೆ ಕಾರಣವನ್ನು, ಕಾರ್ಯಕ್ಕೆ ಕಾರ್ಯವನ್ನೂ, ಕರ್ತೃವಿಗೆ ಕರ್ತೃವನ್ನೂ ಸಾಧನಕ್ಕೆ ಸಾಧನವನ್ನೂ, ಸಾಧ್ಯಕ್ಕೆ ಸಾಧ್ಯವನ್ನೂ ಹೇಳುವವನು, ನೋಡುತ್ತಿದ್ದರೂ ಕುರುಡನಾಗಿಯೂ, ಕೇಳತ್ತಿದ್ದರೂ ಕಿವುಡನಾಗಿಯೂ, ತಿಳಿದವನಾಗಿದ್ದರೂ ಮೂಢನಾಗಿಯೂ ಇರುತ್ತಾನೆ. ಕಣ್ಣಿಗೆ ಕಣ್ಣೂ, ದೀಪಕ್ಕೆ ದೀಪವೂ, ಸೂರ್ಯನಿಗೆ ಸೂರ್ಯನೂ ಯಾವಾಗಲಾದರೂ ಇರಬಲ್ಲದೆ. ಯಾವುದರಿಂದ ಉತ್ಪನ್ನವಾಗವುದೋ ಅದು ಕಾರಣ. ಯಾವುದು ಉತ್ಪನ್ನವಾಗುವುದೋ ಅದು ಕಾರ್ಯ ಮತ್ತು ಕಾರಣವನ್ನು ಕಾರ್ಯರೂಪವಾಗಿ ಮಾಡುವವನು ಕರ್ತನು ಎನ್ನಿಸುತ್ತಾನೆ.

ನಾಸತೋ ವಿದ್ಯತೇ ಭಾವೋ ನಾಭಾವೋ ವಿದ್ಯತೇ ಸತಃ।
ಉಭಯೋರಪಿ ದೃಷ್ಟೋಂತ ಸ್ತ್ವನಯೋಸ್ತತ್ತ್ವದರ್ಶಿಭಿಃ ॥

[ಭಗವದ್ಗೀತಾ ಅ. ೨. ಶ್ಲೋ. ೧೬]

ಎಂದಿಗೂ ಅಸತ್ತಿನ ಭಾವ ಅಂದರೆ ಇರುವಿಕೆಯೂ, ಮತ್ತು

ಸತ್ತಿನ ಅಂದರೆ, ಇರುವುದರ ಅಭಾವವೂ ಅಂದರೆ ಇಲ್ಲದಿರುವಿಕೆಯೂ ಎಂದಿಗೂ ಸಂಭವವಲ್ಲ. ಈ ಎರಡರ ನಿರ್ಣಯವನ್ನು ತತ್ವದರ್ಶಿಗಳು ತಿಳಿದಿದ್ದಾರೆ. ಪಕ್ಷಪಾತಿಗಳೂ, ಆಗ್ರಹಿಗಳೂ ಮಲಿನಾತ್ಮರೂ ಅವಿದ್ವಾಂಸರೂ ಆದ ಇತರ ಜನರು ಇದನ್ನು ಸಹಜವಾಗಿ ಹೇಗೆ ತಾನೆ ತಿಳಿದುಕೊಳ್ಳಬಲ್ಲರು? ಏಕೆಂದರೆ—ವಿದ್ವಾಂಸನೂ ಸತ್ಸಂಗಿಯೂ ಆಗಿ ಪೂರ್ಣವಿಚಾರ ಮಾಡದ ಮನುಷ್ಯನು ಭ್ರಮಜಾಲದಲ್ಲಿ ಸದಾ ಬಿದ್ದಿರುತ್ತಾನೆ. ಸಮಸ್ತ ವಿದ್ಯೆಗಳ ಸಿದ್ಧಾಂತವನ್ನು ತಿಳಿದವರೂ, ತಿಳಿಯುವುದಕ್ಕೆ ಪ್ರಯತ್ನಿಸುವವರೂ, ದಿಳಿದು ನಿಷ್ಕಪಟರಾಗಿ ಇತರರಿಗೆ ತಿಳಿಸುವವರೂ ಆದ ಪುರುಷರು ಧನ್ಯರೂ ಆದಕಾರಣ ಕಾರಣವಿಲ್ಲದೆಯೇ ಸೃಷ್ಟಿಯಾಯಿತೆಂದು ತಿಳಿಯುವವನು ಏನನ್ನೂ ಅರಿಯನು. ಸೃಷ್ಟಿಸಮಯ ಬಂದಾಗ ಪರಮಾತ್ಮನು ಆ ಅತಿ ಸೂಕ್ಷ್ಮವಾದ ಪದಾರ್ಥಗಳನ್ನು ಒಂದುಗೂಡಿಸುತ್ತಾನೆ. ಅದರ ಮೊದಲನೆಯ ಸ್ಥಿತಿಯಲ್ಲಿ ಅತಿ ಸೂಕ್ಷ್ಮವಾದ ಪ್ರಕೃತಿಯೆಂಬ ಕಾರಣಕ್ಕಿಂತ ಸ್ವಲ್ಪ ಸ್ಥೂಲವಾದುದಕ್ಕೆ ಮಹತ್ತತ್ವವೆಂದು ಹೆಸರು. ಅದಕ್ಕಿಂತಲೂ ಸ್ವಲ್ಪ ಸ್ಥೂಲವಾದುದಕ್ಕೆ ಅಹಂಕಾರವೆಂದು ಹೆಸರು. ಅಹಂಕಾರದಿಂದ ಬೇರೆ ಪಂಚಸೂಕ್ಷ್ಮಭೂತಗಳೂ, ಕಿವಿ, ಚರ್ಮ, ಕಣ್ಣು, ನಾಲಿಗೆ ಮತ್ತು ನಾಸಿಕೆ ಎಂಬ ಐದು ಜ್ಞಾನೇಂದ್ರಿಯಗಳೂ, ವಾಕ್ಕು, ಹಸ್ತ, ಪಾದ, ಉಪಸ್ಥ ಮತ್ತು ಗುದವೆಂಬ ಪಂಚಕರ್ಮೇಂದ್ರಿಯಗಳೂ, ಹನ್ನೊಂದನೆಯದಾದ ಮನಸ್ಸೂ, ಸ್ವಲ್ಪ ಸ್ಥೂಲವಾಗಿ ಉತ್ಪನ್ನವಾಗುತ್ತವೆ. ಮತ್ತು ಆ ಪಂಚತನ್ಮಾತ್ರೆಗಳಿಂದ ಅನೇಕ ಸ್ಥೂಲಾವಸ್ಥೆಗಳನ್ನು ಹೊಂದುತ್ತ, ಕ್ರಮವಾಗಿ ನಮಗೆ ಪ್ರತ್ಯಕ್ಷವಾಗಿ ಕಾಣುವ ಪಂಚಸ್ಥೂಲಭೂತಗಳು ಉತ್ಪನ್ನವಾಗುತ್ತವೆ. ಅವುಗಳಿಂದ ನಾನಾಬಗೆಯ ಔಷಧಿ, ವೃಕ್ಷ ಮೊದಲಾದುವೂ, ಅವುಗಳಿಂದ ಅನ್ನವೂ, ಅನ್ನದಿಂದ ವೀರ್ಯವೂ, ವೀರ್ಯದಿಂದ ಶರೀರವೂ ಉತ್ಪನ್ನವಾಗುತ್ತವೆ. ಆದರೆ, ಆದಿಸೃಷ್ಟಿಯು ಮೈಥುನಜನ್ಯವಾದುದಲ್ಲ. ಏಕೆಂದರೆ—ಪರಮಾತ್ಮನು ಸ್ತ್ರೀಪುರುಷರ ಶರೀರಗಳನ್ನು ರಚಿಸಿ, ಅವುಗಳಲ್ಲಿ ಜೀವರನ್ನು ಪ್ರವೇಶಪಡಿಸಿದ ನಂತರವೇ ಮೈಥುನೀಸೃಷ್ಟಿಯು ಆರಂಭವಾಗುತ್ತದೆ. ನೋಡಿರಿ, ದೇಹದಲ್ಲಿ ಎಂತಹ ಜ್ಞಾನಪೂರ್ವಕವಾದ ರಚನೆಯನ್ನು ಮಾಡಿದ್ದಾನೆ;

ಅದನ್ನು ನೋಡಿ ವಿದ್ವಾಂಸರು ಆಶ್ಚರ್ಯಪಡುತ್ತಾರೆ. ಒಳಭಾಗದಲ್ಲಿ ಮೂಳೆಗಳ ಜೋಡಣೆ, ನರಗಳ ಕಟ್ಟು, ಮಾಂಸದ ಲೇಸ, ಚರ್ಮದ ಹೊದಿಕೆ ಪ್ಲೀಹ, ಯಕೃತ್ ಮತ್ತು ಶ್ವಾಸಕೋಶಗಳ ಮತ್ತು ಶ್ವಾಸೋಚ್ಛ್ವಾಸಯಂತ್ರದ ರಚನೆ, ಜೀವಾತ್ಮನ ಸಂಯೋಜನ, ಶಿರಸ್ಸೆಂಬ ಮೂಲ ರಚನೆ, ಉಗುರು ಮತ್ತು ಕೂದಲುಗಳ ಸ್ಥಾಪನೆ, ಕಣ್ಣುಗಳ ಅತಿ ಸೂಕ್ಷ್ಮವಾದ ನರಗಳ ತಂತುಗಳಂತಹ ಹೆಣಿಕೆ ಮಾರ್ಗಗಳ, ಇಂದ್ರಿಯ ಭಾಗಗಳ ಪ್ರಕಾಶನ, ಜಾಗ್ರತ್ಸ್ವಪ್ನ ಸುಷುಪ್ತಿ ಗಳೆಂಬ ಅವಸ್ಥೆಗಳನ್ನು ಅನುಭವಿಸುವುದಕ್ಕೋಸ್ಕರ ಜೀವನಿಗೆ ಬೇರೆ ಬೇರೆ ಸ್ಥಾನಗಳ ನಿರ್ಮಾಣ, ಸಮಸ್ತ ಧಾತುಗಳ ವಿಭಜನೆ, ಕಲಾ ಕೌಶಲ್ಯ ಸ್ಥಾಪನೆ ಮೊದಲಾದ ಅದ್ಭುತರಚನೆಯನ್ನು ಸರ್ವಶಕ್ತನಾದ ಪರಮಾತ್ಮನಲ್ಲದೆ ಬೇರಾರು ಮಾಡಬಲ್ಲರು? ಇದಲ್ಲದೆ ನಾನಾಪ್ರಕಾರ ವಾದ ರತ್ನಧಾತುಗಳಿಂದ ಅಲಂಕೃತವಾದ ಭೂಮಿ, ವಿವಿಧ ರೀತಿಯಲ್ಲಿ ಆಲ ಮೊದಲಾದ ವೃಕ್ಷಗಳ ಬೀಜಗಳಲ್ಲಿ ಅತಿ ಸೂಕ್ಷ್ಮವಾದ ರಚನೆ, ಅಸಂಖ್ಯವಾದ ಹಸುರು, ಬಿಳುಪು, ಹಳದಿ, ಕಪ್ಪು, ಚಿತ್ರ ಮತ್ತು ಮಧ್ಯಮ ವರ್ಣದಿಂದ ಕೂಡಿದ ಅಸಂಖ್ಯವಾದ ಎಲೆ, ಹೂ, ಕಾಯಿ, ಗೆಡ್ಡೆ-ಗೆಣಸುಗಳ ನಿರ್ಮಾಣ, ಸಿಹಿ, ಉಪ್ಪು, ಒಗರು, ಕಹಿ, ಖಾರ, ಹುಳಿ ಮೊದಲಾದ ರಸಗಳಿಂದಲೂ, ಸುಗಂಧದಿಂದಲೂ ಕೂಡಿದ ಎಲೆ, ಹೂ, ಹಣ್ಣು, ಅನ್ನ, ಕಂದ-ಮೂಲಾದಿಗಳ ರಚನೆ; ಅನೇಕಾ ನೇಕ ಕೋಟ್ಯಾಂತರ ಭೂಗೋಳ, ಸೂರ್ಯ ಚಂದ್ರಾದಿಲೋಕಗಳ ನಿರ್ಮಾಣ, ಧಾರಣ, ತಿರುಗಿಸುವಿಕೆ, ನಿಯಮದಲ್ಲಿಡುವುದು ಮೊದ ಲಾದುವನ್ನು ಪರಮಾತ್ಮನಲ್ಲದೆ ಬೇರಾರೂ ಮಾಡಲಾರರು. ಯಾರಾ ದರೂ ಯಾವುದಾದರೊಂದು ಪದಾರ್ಥವನ್ನು ನೋಡಿದರೆ ಎರಡು ವಿಧವಾದ ಜ್ಞಾನವಾಗುತ್ತದೆ. ಮೊದಲನೆಯದು ಪದಾರ್ಥದ ಸ್ವರೂಪ. ಎರಡನೆಯದು ಅದರ ರಚನೆಯನ್ನು ನೋಡಿ, ಅದನ್ನು ಮಾಡಿದವನ ವಿಷಯವಾಗಿ ಜ್ಞಾನ. ಉದಾಹರಣೆ—ಯಾವನಿಗಾದರೂ ಕಾಡಿನಲ್ಲಿ ಒಂದು ಸುಂದರವಾದ ಆಭರಣವು ಕಂಡುಬಂದರೆ, ಅದು ಚಿನ್ನದಿಂದ ಮಾಡಲ್ಪಟ್ಟಿರುವುದೆಂದೂ, ಯಾರೋ ಬುದ್ಧಿವಂತನಾದ ಕೆಲಸ ಗಾರನು ಅದನ್ನು ರಚಿಸಿದ್ದಾನೆಂದೂ ತಿಳಿದುಕೊಳ್ಳುತ್ತಾನೆ. ಅದೇ

ರೀತಿಯಾಗಿ ಈ ನಾನಾಬಗೆಯ ಸೃಷ್ಟಿಯ ವಿವಿಧ ರಚನೆಯು ಸೃಷ್ಟಿ ಕರ್ತನಾದ ಪರಮಾತ್ಮನನ್ನು ಸಿದ್ಧಪಡಿಸುತ್ತದೆ.

ಪ್ರ:—ಮನುಷ್ಯರ ಸೃಷ್ಟಿ ಮೊದಲಾಯಿತೋ? ಅಥವಾ ಪೃಥಿವ್ಯಾದಿಗಳ ಸೃಷ್ಟಿಯೋ?

ಉ :—ಪೃಥಿವ್ಯಾದಿಗಳದು. ಏಕೆಂದರೆ :—ಪೃಥಿವ್ಯಾದಿಗಳೇ ಇಲ್ಲದಿದ್ದರೆ ಮನುಷ್ಯನ ಸ್ಥಿತಿ ಮತ್ತು ಪಾಲನೆಯೇ ಆಗಲಾರದು.

ಪ್ರ:—ಸೃಷ್ಟಿಯ ಆದಿಯಲ್ಲಿ ಒಬ್ಬ ಮನುಷ್ಯನನ್ನು ಸೃಷ್ಟಿಸಿದನೋ ಅಥವಾ ಅನೇಕರನ್ನೋ?

ಉ :—ಅನೇಕರನ್ನು. ಏಕೆಂದರೆ, ಈಶ್ವರೀಯ ಸೃಷ್ಟಿಯಲ್ಲಿ ಉತ್ಪನ್ನವಾಗುವುದಕ್ಕೆ ಅರ್ಹವಾದ ಕರ್ಮವನ್ನುಳ್ಳ ಜೀವರಿಗೆ ಪರಮಾತ್ಮನು ಸೃಷ್ಟಿಯ ಆದಿಯಲ್ಲಿ ಜನ್ಮವನ್ನು ಕೊಡುತ್ತಾನೆ. ಏಕೆಂದರೆ—'ಮನುಷ್ಯಾ ಋಷಯಶ್ಚಯೇ । ತತೋ ಮನುಷ್ಯಾ ಅಜಾಯಂತ' ಎಂದು ಯಜುರ್ವೇದ ಮತ್ತು ಅದರ ಬ್ರಾಹ್ಮಣದಲ್ಲಿ ಬರೆದಿದೆ. ಈ ಪ್ರಮಾಣದಿಂದ ಆದಿಯಲ್ಲಿ ಅನೇಕ ಅಂದರೆ ನೂರಾರು ಸಾವಿರಾರು ಮಂದಿ ಮನುಷ್ಯರು ಉತ್ಪನ್ನರಾದರೆಂದು ಸಿದ್ಧವಾಗುತ್ತದೆ. ಮತ್ತು ಸೃಷ್ಟಿಯನ್ನು ನೋಡುವುದರಿಂದಲೂ ಕೂಡ ಮನುಷ್ಯರ ತಾಯಿ-ತಂದೆಗಳು ಅನೇಕರಿದ್ದರೆಂದು ತೀರ್ಮಾನವಾಗುತ್ತದೆ.

ಪ್ರ:—ಆದಿಸೃಷ್ಟಿಯಲ್ಲಿ ಮನುಷ್ಯಾದಿಗಳ ಸೃಷ್ಟಿಯು ಬಾಲ್ಯಾವಸ್ಥೆಯಲ್ಲಾಗಿದ್ದಿತೋ, ಯೌವನಾವಸ್ಥೆಯಲ್ಲಾಗಿದ್ದಿತೋ ಅಥವಾ ವೃದ್ಧಾವಸ್ಥೆಯಲ್ಲಿಯೋ? ಇಲ್ಲವೇ, ಮೂರರಲ್ಲಿಯೂ ಆಗಿದ್ದಿತೋ?

ಉ :—ಯೌವನಾವಸ್ಥೆಯಲ್ಲಿ. ಏಕೆಂದರೆ—ಬಾಲಕರನ್ನು ಉತ್ಪನ್ನಮಾಡಿದರೆ, ಅವರ ಪಾಲನೆಗಾಗಿ ಇತರ ಜನರು ಅವಶ್ಯಕವಾಗುತ್ತಿದ್ದರು. ಮುದುಕರನ್ನು ಸೃಷ್ಟಿಮಾಡಿದರೆ ಮೈಥುನೀ ಸೃಷ್ಟಿಯು ಆಗುತ್ತಿರಲಿಲ್ಲ. ಆದ್ದರಿಂದ ಯೌವನಾವಸ್ಥೆಯಲ್ಲಿಯೇ ಸೃಷ್ಟಿಮಾಡಿದ್ದಾನೆ.

ಪ್ರ:—ಸೃಷ್ಟಿಗೆ ಯಾವಾಗಲಾದರೂ ಆರಂಭವು ಉಂಟೋ ಇಲ್ಲವೋ?

ಉ:—ಇಲ್ಲ. ಹಗಲಿಗೆ ಮೊದಲು ರಾತ್ರಿ ಮತ್ತು ರಾತ್ರಿಗೆ ಮೊದಲು ಹಗಲು, ಹಾಗೂ ಹಗಲಿನ ನಂತರ ರಾತ್ರಿ ಮತ್ತು ರಾತ್ರಿಯ ನಂತರ ಹಗಲು, ಕ್ರಮವಾಗಿ ನಡೆದುಬರುತ್ತಿರುವಂತೆಯೇ, ಸೃಷ್ಟಿಗೆ ಮೊದಲು ಪ್ರಳಯ ಮತ್ತು ಪ್ರಳಯಕ್ಕೆ ಮೊದಲು ಸೃಷ್ಟಿ, ಹಾಗೂ ಸೃಷ್ಟಿಯನಂತರ ಪ್ರಳಯ ಮತ್ತು ಪ್ರಳಯದ ಬಳಿಕ ಸೃಷ್ಟಿ ಅನಾದಿ ಕಾಲದಿಂದ ಚಕ್ರದಂತೆ ನಡೆದುಬರುತ್ತಿದೆ. ಇದಕ್ಕೆ ಆದಿ-ಅಂತಗಳಿಲ್ಲ. ಆದರೆ, ದಿನ ಅಥವಾ ರಾತ್ರಿಯ ಆರಂಭ ಮತ್ತು ಕೊನೆ ಕಂಡುಬರುವಂತೆಯೇ, ಸೃಷ್ಟಿ ಮತ್ತು ಪ್ರಳಯದ ಆದಿ-ಅಂತ್ಯಗಳು ಆಗುತ್ತಿರುತ್ತವೆ. ಏಕೆಂದರೆ—ಪರಮಾತ್ಮನೂ ಜೀವನೂ ಜಗತ್ತಿನ ಕಾರಣವೂ ಸ್ವರೂಪದಿಂದ ಅನಾದಿಯಾಗಿರುವಂತೆಯೇ ಜಗತ್ತಿನ ಉತ್ಪತ್ತಿ ಸ್ಥಿತಿ ಲಯಗಳು ಪ್ರವಾಹದಿಂದ ಅನಾದಿಯಾಗಿವೆ. ನದಿಯ ಪ್ರವಾಹವು ಹೇಗೋ ಹಾಗೆಯೇ—ಅಂದರೆ ಒಂದುಬಾರಿ ಒಣಗುತ್ತದೆ, ಒಂದುಬಾರಿ ಕಾಣುವುದಿಲ್ಲ; ಮತ್ತು ವರ್ಷಾಕಾಲದಲ್ಲಿ ಕಾಣುತ್ತದೆ; ಗ್ರೀಷ್ಮದಲ್ಲಿ ಕಾಣುವುದಿಲ್ಲ. ಇಂತಹ ವ್ಯವಹಾರಗಳು ಪ್ರವಾಹರೂಪವೆಂದು ತಿಳಿಯಬೇಕು. ಪರಮಾತ್ಮನ ಗುಣ-ಕರ್ಮ-ಸ್ವಭಾವಗಳು ಅನಾದಿಯಾಗಿರುವಂತೆ ಆತನು ಜಗತ್ತಿನ ಉತ್ಪತ್ತಿ, ಸ್ಥಿತಿ, ಪ್ರಳಯ ಮಾಡುವುದೂ ಕೂಡ ಅನಾದಿಯಾಗಿರುತ್ತದೆ. ಪರಮಾತ್ಮನ ಗುಣ, ಕರ್ಮ, ಸ್ವಭಾವಗಳಿಗೆ ಆದ್ಯಂತಗಳು ಇಲ್ಲದಿರುವಂತೆ ಆತನ ಕರ್ತವ್ಯ ಕರ್ಮಗಳಿಗೂ ಕೂಡ ಆದ್ಯಂತಗಳು ಇರುವುದಿಲ್ಲ.

ಪ್ರ:—ಪರಮಾತ್ಮನು ಕೆಲವು ಜೀವರಿಗೆ ಮನುಷ್ಯ ಜನ್ಮವನ್ನೂ, ಕೆಲವರಿಗೆ ಸಿಂಹ, ಹುಲಿ ಮೊದಲಾದ ಕ್ರೂರ ಜನ್ಮವನ್ನೂ, ಮತ್ತೆ ಕೆಲವರಿಗೆ ಜಿಂಕೆ, ಹಸು ಮೊದಲಾದ ಪಶುಜನ್ಮವನ್ನೂ, ಕೆಲವರಿಗೆ ವೃಕ್ಷ, ಕ್ರಿಮಿ ಕೀಟ-ಪತಂಗಾದಿ ಜನ್ಮಗಳನ್ನು ಕೊಟ್ಟಿರುವುದರಿಂದ ಆತನಲ್ಲಿ ಪಕ್ಷಪಾತ ತೋರುತ್ತದೆ.

ಉತ್ತರ:—ಪೂರ್ವ ಸೃಷ್ಟಿಯಲ್ಲಿ ಆ ಜೀವರು ಮಾಡಿದ ಕರ್ಮಾನುಸಾರವಾಗಿ ವ್ಯವಸ್ಥೆಯನ್ನು ಏರ್ಪಡಿಸುವುದರಿಂದ ಪಕ್ಷಪಾತವಾಗುವುದಿಲ್ಲ. ಕರ್ಮವಿಲ್ಲದೆಯೇ ಜನ್ಮವನ್ನು ಕೊಟ್ಟಿದ್ದರೆ, ಪಕ್ಷಪಾತವಾಗುತ್ತಿತ್ತು.

ಪ್ರಶ್ನೆ :—ಮನುಷ್ಯರ ಆದಿ ಸೃಷ್ಟಿ ಯಾವ ಸ್ಥಾನದಲ್ಲಾಯಿತು?

ಉತ್ತರ :—ಈಗ 'ಟಿಬೆಟ್' ಎಂದು ಪ್ರಸಿದ್ಧವಾಗಿರುವ 'ತ್ರಿವಿಷ್ಟಪ' ಪ್ರದೇಶದಲ್ಲಿ.

ಪ್ರಶ್ನೆ :—ಸೃಷ್ಟಿಯ ಆದಿಯಲ್ಲಿ ಒಂದೇ ಜಾತಿಯಿದ್ದಿತೋ? ಅಥವಾ ಅನೇಕ ಜಾತಿಗಳಿದ್ದವೋ?

ಉತ್ತರ :—ಮನುಷ್ಯ ಜಾತಿಯು ಒಂದೇ ಆಗಿತ್ತು. 'ವಿಜಾನೀ ಹ್ಯಾರ್ಯಾನ್ಯೇಚ ದಸ್ಯವಃ' ಎಂದು ಋಗ್ವೇದದ ವಚನವಿದೆ. ಶ್ರೇಷ್ಠರಿಗೆ, ಆರ್ಯ, ವಿದ್ವಾನ್, ದೇವ ಎಂದೂ, ದುಷ್ಟರಿಗೆ ದಸ್ಯು ಅಂದರೆ ಡಕಾಯಿತ, ಮೂರ್ಖ ಎಂದೂ ಹೆಸರಾದುದರಿಂದ, ಆರ್ಯ ಮತ್ತು ದಸ್ಯು ಎಂದು ಎರಡು ಹೆಸರುಗಳು ಬಂದುವು. 'ಉತ ಶೂದ್ರೇ ಉತಾರ್ಯೇ' ಇದು ಅಥರ್ವವೇದದ ವಚನ. ಆರ್ಯರಲ್ಲಿ ಪೂರ್ವೋಕ್ತ ಪ್ರಕಾರ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರರೆಂಬ ನಾಲ್ಕು ಭೇದಗಳುಂಟಾದುವು. ವಿದ್ವಾಂಸರಾದ ದ್ವಿಜರಿಗೆ ಆರ್ಯರೆಂದೂ, ಮೂರ್ಖರೂ, ತಿಳಿಗೇಡಿಗಳೂ ಆದ ಜನರಿಗೆ ಶೂದ್ರ ಅಥವಾ ಅನಾರ್ಯರೆಂದೂ ಹೆಸರುಗಳುಂಟಾದವು.

ಪ್ರಶ್ನೆ :—ಮತ್ತೆ ಅವರು ಇಲ್ಲಿಗೆ ಹೇಗೆ ಬಂದರು?

ಉತ್ತರ :—ಆರ್ಯರಿಗೂ, ದಸ್ಯುಗಳಿಗೂ ಅಂದರೆ—ವಿದ್ವಾಂಸರು ಅಂದರೆ, 'ದೇವ'ರಿಗೂ, ಅವಿದ್ವಾಂಸರು ಎಂದರೆ ಅಸುರರಿಗೂ ಯಾವಾಗಲೂ ಯುದ್ಧವು ನಡೆಯುತ್ತಿತ್ತು. ಬಹಳ ಉಪದ್ರವವುಂಟಾಗ ಲಾರಂಭಿಸಿದಾಗ ಆರ್ಯರು ಈ ಭೂಖಂಡವನ್ನು ಭೂಮಂಡಲದಲ್ಲಿ ಅತ್ಯುತ್ತಮವಾದುದೆಂದು ತಿಳಿದು, ಇಲ್ಲಿಯೇ ಬಂದು ವಾಸಮಾಡ ತೊಡಗಿದರು. ಆದುದರಿಂದಲೇ ಈ ದೇಶಕ್ಕೆ 'ಆರ್ಯಾವರ್ತ'ವೆಂದು ಹೆಸರಾಯಿತು.

ಪ್ರಶ್ನೆ :—ಆರ್ಯಾವರ್ತದ ಮೇರೆಗಳು ಎಲ್ಲಿಯದರೆಗೆ ಇರುತ್ತವೆ?

ಉತ್ತರ :—

ಆ ಸಮುದ್ರಾತ್ತು ವೈ ಪೂರ್ವಾದಾಸ ಮುದ್ರಾತ್ತು ಪಶ್ಚಿಮಾತ್।
ತಯೋರೇವಾಂತರಂ ಗಿರ್ಯೋರಾರ್ಯಾವರ್ತಂ ವಿದುರ್ಬುಧಾಃ ॥

ಸರಸ್ವತೀ ದೃಷದ್ವತ್ಯೋರ್ದೇವನದ್ಯೋರ್ಯದಂತರಂ ।
ತಂ ದೇವನಿರ್ಮಿತಂ ದೇಶಮಾರ್ಯಾವರ್ತಂ ಪ್ರಚಕ್ಷತೇ ॥೨॥

[ಮನು ೨, ೨೨, ೧೭]

ಉತ್ತರದಲ್ಲಿ ಹಿಮಾಲಯ, ದಕ್ಷಿಣದಲ್ಲಿ ವಿಂಧ್ಯ ಮತ್ತು ಪೂರ್ವ ಪಶ್ಚಿಮಗಳಲ್ಲಿ ಸಮುದ್ರವೂ ಇರುತ್ತವೆ. ॥೧॥ ಮತ್ತು ಸರಸ್ವತಿ ಅಂದರೆ ಉತ್ತರದಲ್ಲಿ ಪರ್ವತದಿಂದ ಹೊರಟು, ದಕ್ಷಿಣದಲ್ಲಿ ಸಮುದ್ರಕ್ಕೆ ಸೇರಿರುವ ಸಿಂಧೂನದಿಯು, ಪಶ್ಚಿಮದಲ್ಲಿರುತ್ತವೆ. ಮತ್ತು ಪೂರ್ವದಲ್ಲಿ ನೇಪಾಳ ಪೂರ್ವಭಾಗದ ಪರ್ವತದಿಂದ ಹೊರಟು, ಬಂಗಾಳ–ಅಸ್ಸಾಂಗಳ ಪೂರ್ವದಲ್ಲಿಯೂ, ಬರ್ಮದ ಪಶ್ಚಿಮದಲ್ಲಿಯೂ ಹರಿದು, ದಕ್ಷಿಣಸಮುದ್ರದಲ್ಲಿ ಸೇರುವ ಬ್ರಹ್ಮಪುತ್ರಾ ಎಂದು ಕರೆಯಲ್ಪಟ್ಟರುವ ದೃಷದ್ವತಿಯು ಇರುತ್ತದೆ. ಹಿಮಾಲಯದ ಮಧ್ಯ ರೇಖೆಯಿಂದ ದಕ್ಷಿಣದಲ್ಲಿಯೂ ಮತ್ತು ಪರ್ವತಗಳ ನಡುವೆಯೂ, ರಾಮೇಶ್ವರದವರೆಗೆ—ವಿಂಧ್ಯಾಚಲದ ನಡುವೆ ಇರುವ ಪ್ರದೇಶಗಳನ್ನೆಲ್ಲಾ 'ದೇವ'ರು ಅಂದರೆ ವಿದ್ವಾಂಸರು ನೆಲೆಗೊಳಿಸಿದುದರಿಂದ ಆರ್ಯಾವರ್ತವೆಂದು ಕರೆಯುತ್ತಾರೆ ಮತ್ತು ಆರ್ಯರು ನಿವಾಸ ಮಾಡುವದರಿಂದ 'ಆರ್ಯಾವರ್ತ'ವೆನ್ನಿಸಿಕೊಂಡಿದೆ.

ಪ್ರಶ್ನೆ :—ಮೊದಲು ಈ ದೇಶಕ್ಕೆ ಏನು ಹೆಸರಿತ್ತು ಮತ್ತು ಇದರಲ್ಲಿ ಯಾರು ವಾಸಿಸುತ್ತಿದ್ದರು ?

ಉತ್ತರ :—ಇದಕ್ಕೆ ಮೊದಲು ಈ ದೇಶಕ್ಕೆ ಯಾವ ಹೆಸರೂ ಇರಲಿಲ್ಲ ; ಮತ್ತು ಆರ್ಯರಿಗಿಂತ ಮೊದಲು ಈ ದೇಶದಲ್ಲಿ ಯಾರೂ ವಾಸಿಸುತ್ತಲೂ ಇರಲಿಲ್ಲಿ. ಏಕೆಂದರೆ, ಆರ್ಯರು ಸೃಷ್ಟಿಯ ಆದಿಯಲ್ಲಿ ಸ್ವಲ್ಪ ಕಾಲಾನಂತರ ಟಿಬೆಟ್ಟಿನಿಂದ ನೇರವಾಗಿ ಈ ದೇಶದಲ್ಲಿಯೇ ಬಂದು ನೆಲೆಸಿದರು.

ಪ್ರಶ್ನೆ :—ಕೆಲವರು 'ಇವರು ಇರಾನಿನಿಂದ ಬಂದರು, ಆದುದರಿಂದಲೆ, ಇವರಿಗೆ ಆರ್ಯರೆಂದು ಹೆಸರಾಯಿತು. ಇವರಿಗೆ ಮೊದಲು ಈ ದೇಶದಲ್ಲಿ ಕಾಡು ಮನುಷ್ಯರು ವಾಸವಾಗಿದ್ದರು. ಅವರನ್ನು ಅಸುರ, ರಾಕ್ಷಸ ಎಂದು ಕರೆಯುತ್ತಿದ್ದರು. ಆರ್ಯರು

ತಮ್ಮನ್ನು ದೇವತೆಗಳೆಂದು ಹೇಳಿಕೊಳ್ಳುತ್ತಿದ್ದರು. ಮತ್ತು ಅವರೊಂದಿಗಾದ ಯುದ್ಧಗಳನ್ನು ಕಥೆಗಳಲ್ಲಿ ದೇವಾಸುರ ಯುದ್ಧಗಳೆಂದು ಕರೆದರು,—ಎಂದು ಹೇಳುತ್ತಾರೆ.

ಉತ್ತರ :—ಇದು ಶುದ್ಧ ಸುಳ್ಳು. ಏಕೆಂದರೆ—

ವಿಜಾನೀಹ್ಯಾರ್ಯಾನ್ಯೇ ಚ ದಸ್ಯವೋ ಬರ್ಹಿಷ್ಮತೇ ರಂಧಯಾ ಶಾಸದವ್ರತಾನ್ ।

[ಋ. ಮಂ. ೧. ಸೂ. ೫೧. ಮಂ. ೮]

ಉತ ಶೂದ್ರೇ ಉತಾರ್ಯೇ

[ಅಥರ್ವ. ಕಾಂ. ೧೯. ವ. ೬೨]

ಧಾರ್ಮಿಕರೂ, ವಿದ್ವಾಂಸರೂ, ಆಪ್ತರೂ ಆದವರಿಗೆ ಆರ್ಯರು ; ಮತ್ತು ಇವರಿಗೆ ವಿಪರೀತವಾಗಿರುವವರಿಗೆ 'ದಸ್ಯು' ಅಂದರೆ ಡಕಾಯಿತರು, ದುಷ್ಟರು, ಅಧಾರ್ಮಿಕರು ಮತ್ತು ಅವಿದ್ವಾಂಸರೆಂದು ಹೆಸರು. ಮತ್ತು ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಈ ದ್ವಿಜರಿಗೆ ಆರ್ಯರು ಮತ್ತು ಶೂದ್ರರಿಗೆ ಅನಾರ್ಯರೆಂದೂ ಹೆಸರುಗಳು ಇರುತ್ತವೆಯೆಂದು ಹಿಂದೆಯೇ ನಾವು ಬರೆದಿದ್ದೇವೆ. ವೇದವು ಹೀಗೆ ಹೇಳುತ್ತಿರುವಲ್ಲಿ ವಿದೇಶೀಯರ ಕಪೋಲಕಲ್ಪಿತಗಳನ್ನು ಬುದ್ಧಿವಂತರು ಎಂದಿಗೂ ಒಪ್ಪಲಾರರು. ಮತ್ತು ದೇವಾಸುರ ಯುದ್ಧದಲ್ಲಿ ಹಿಮಾಲಯ ಪರ್ವತದಲ್ಲಿ ಆರ್ಯರಿಗೂ, ದಸ್ಯುಗಳೂ ಅಂದರೆ ಮ್ಲೇಚ್ಛ-ಅಸುರರಿಗೂ ಆದ ಯುದ್ಧದಲ್ಲಿ ಆರ್ಯಾವರ್ತದ ಅರ್ಜುನ ಮತ್ತು ದಶರಥ ಮಹಾರಾಜ ಮೊದಲಾದವರು ದೇವ ಅಂದರೆ ಆರ್ಯರ ರಕ್ಷಣೆ ಮತ್ತು ಅಸುರರ ಪರಾಜಯಕ್ಕಾಗಿ ಸಹಾಯಕರಾಗಿದ್ದರು. ಇದರಿಂದ ಆರ್ಯಾವರ್ತದ ಸುತ್ತ ನಾಲ್ಕು ಕಡೆಯೂ ಹಿಮಾಲಯದ ಪೂರ್ವ, ಆಗ್ನೇಯ, ದಕ್ಷಿಣ, ನೈರುತ್ಯ, ಪಶ್ಚಿಮ, ವಾಯವ್ಯ, ಉತ್ತರ ಮತ್ತು ಈಶಾನ್ಯ ಕ್ಕಿರುವ ದೇಶಗಳಲ್ಲಿನ ಜನರಿಗೇ ಅಸುರರೆಂದು ಹೆಸರು ಎಂದು ಗೊತ್ತಾಗುತ್ತದೆ. ಏಕೆಂದರೆ, ಹಿಮಾಲಯ ಪ್ರಾಂತ್ಯದ ಆರ್ಯರಮೇಲೆ ದಂಡೆತ್ತಿಬಂದಾಗಲೆಲ್ಲಾ, ಇಲ್ಲಿಯ ರಾಜ-ಮಹಾರಾಜರುಗಳು ಆದೇ ಉತ್ತರ ಮೊದಲಾದ ದೇಶಗಳಲ್ಲಿ ಆರ್ಯರಿಗೆ ಸಹಾಯಕ

ರಾಗುತ್ತಿದ್ದರು. ಮತ್ತು ದಕ್ಷಿಣದಲ್ಲಿ ಶ್ರೀ ರಾಮಚಂದ್ರನೊಂದಿಗೆ ನಡೆದ ಯುದ್ಧಕ್ಕೆ ದೇವಾಸುರ ಸಂಗ್ರಾಮವೆಂಬ ಹೆಸರಿಲ್ಲ. ಆದರೆ ಅದಕ್ಕೆ ರಾಮ-ರಾವಣಯುದ್ಧ ಅಥವಾ ಆರ್ಯ-ರಾಕ್ಷಸಯುದ್ಧವೆಂದು ಹೇಳುತ್ತಾರೆ. ಯಾವ ಸಂಸ್ಕೃತ ಗ್ರಂಥದಲ್ಲಾಗಲಿ, ಇತಿಹಾಸದಲ್ಲಾಗಲಿ ಆರ್ಯರು ಇರಾನಿನಿಂದ ಬಂದರು ಮತ್ತು ಇಲ್ಲಿನ ಕಾಡುಜನರೊಂದಿಗೆ ಹೋರಾಡಿ, ಗೆದ್ದು ಓಡಿಸಿ, ರಾಜರಾದರು, ಎಂದು ಬರೆದಿಲ್ಲ. ಇನ್ನು ವಿದೇಶೀಯ ಬರಹ ಮಾನ್ಯವೆಂತಾದೀತು? ಮತ್ತು—

ಮ್ಲೇಚ್ಛವಾಚಶ್ಚಾರ್ಯವಾಚಃ ಸರ್ವೇತೇ ದಸ್ಯವಃ ಸ್ಮೃತಾಃ।
[ಮನು. ೧೦-೪೫]

ಮ್ಲೇಚ್ಛದೇಶಸ್ತ್ವತಃ ಪರಃ॥ [ಮನು. ೨, ೨೩]

ಆರ್ಯಾವರ್ತಕ್ಕಿಂತಲೂ ಬೇರೆ ಬೇರೆ ದೇಶಗಳು ದಸ್ಯುದೇಶ ಅಥವಾ ಮೇಚ್ಛದೇಶವೆನಿಸುತ್ತದೆ. ಆರ್ಯಾವರ್ತದಿಂದ ಬೇರೆಯಾಗಿ ಪೂರ್ವದಿಂದ ಹಿಡಿದು ಈಶಾನ್ಯ, ಉತ್ತರ, ವಾಯವ್ಯ ಮತ್ತು ಪಶ್ಚಿಮ ದೇಶಗಳ ಜನರಿಗೆ ದಸ್ಯು, ಮ್ಲೇಚ್ಛ ಮತ್ತು ಅಸುರರೆಂದೂ, ನೈರುತ್ಯ, ದಕ್ಷಿಣ ಮತ್ತು ಆಗ್ನೇಯದಿಕ್ಕುಗಳಲ್ಲಿ ಆರ್ಯಾವರ್ತದಿಂದಲೇ ಬೇರೆ ಯಾವ ದೇಶಗಳಲ್ಲಿರುವ ಜನರಿಗೆ ರಾಕ್ಷಸರೆಂದು ಹೆಸರೆಂಬುದೂ ಇದರಿಂದ ಸಿದ್ಧವಾಗುತ್ತದೆ. ನೋಡಿರಿ ನೀಗ್ರೋ ಜನರ ಸ್ವರೂಪವು ರಾಕ್ಷಸರ ವರ್ಣನೆಗನುಸಾರವಾಗಿಯೇ ಕಾಣುತ್ತದೆ. ಮತ್ತು ಆರ್ಯಾವರ್ತಕ್ಕೆ ನೇರವಾಗಿ ಕೆಳಭಾಗದಲ್ಲಿರುವವರಿಗೆ ನಾಗರೆಂದೂ ಮತ್ತು ಆ ದೇಶಕ್ಕೆ ಪಾತಾಳವೆಂದೂ ಹೆಸರು. ಆ ದೇಶವು ಆರ್ಯಾವರ್ತೀಯರ ಪಾದಗಳ ಕೆಳಗಿರುವುದರಿಂದ ಅದಕ್ಕೆ ಪಾತಾಳವೆಂದು ಹೆಸರು ಬಂದಿರುತ್ತದೆ. ಮತ್ತು ಆ ಜನರಲ್ಲಿ ನಾಗವಂಶಿಗಳು ಅಂದರೆ ನಾಗನೆಂಬ ಪುರುಷನ ವಂಶದವರು ರಾಜ್ಯಭಾರ ಮಾಡುತ್ತಿದ್ದುದರಿಂದ ಅಲ್ಲಿನ ಜನರಿಗೆ ನಾಗರೆಂದು ಹೆಸರು, ಮತ್ತು ಅದೇ ವಂಶದ ರಾಜಕುಮಾರಿ ಉಲೂಪಿಯೊಂದಿಗೆ ಅರ್ಜುನನ ಮದುವೆಯಾಗಿತ್ತು. ಅಂದರೆ ಇಕ್ಷ್ವಾಕುವಿನಿಂದ ಹಿಡಿದು ಕೌರವ-ಪಾಂಡವರ ಕಾಲದವರೆಗೆ ಸಮಸ್ತ ಭೂಮಂಡಲದಲ್ಲಿ ಆರ್ಯರ ರಾಜ್ಯವೂ, ಆರ್ಯಾವರ್ತದಿಂದ ಬೇರೆಯಾದ

ದೇಶಗಳಲ್ಲಿಯೂ ಕೂಡ ವೇದಗಳ ಸ್ವಲ್ಪಮಟ್ಟಿನ ಪ್ರಚಾರವೂ ಇತ್ತು. ಇವರಲ್ಲಿ ಆರ್ಯಾವರ್ತದ ಮೊದಲನೆಯ ರಾಜರಾದ ಮತ್ತು ಆರ್ಯಾವರ್ತವನ್ನು ನೆಲೆಗೊಳಿಸಿದ ಬ್ರಹ್ಮನ ಮಗ ವಿರಾಟ, ವಿರಾಟನ ಮಗ ಮನು, ಮನುವಿನ ಮರೀಚಿ ಮೊದಲಾದ ಹತ್ತುಮಂದಿ ಮಕ್ಕಳು, ಅವರ ಮಕ್ಕಳಾದ ಸ್ವಾಯಂಭುವ ಮೊದಲಾದ ಏಳುಮಂದಿ ರಾಜರು ಮತ್ತು ಅವರ ಸಂತತಿಯವರಾದ ಇಕ್ಷ್ವಾಕು ಮೊದಲಾದ ಅರಸರು ಪ್ರಮಾಣವಾಗಿದ್ದಾರೆ. ಈಗ ದುರ್ದೈವದಿಂದ ಮತ್ತು ಆರ್ಯರ ಆಲಸ್ಯ, ಪ್ರಮಾದ ಮತ್ತು ಅನ್ಯೋನ್ಯ ಕಲಹಗಳಿಂದ, ಇತರ ದೇಶಗಳನ್ನು ಆಳುವ ಮಾತು ಹಾಗಿರಲಿ, ಆರ್ಯಾವರ್ತದಲ್ಲಿಯೂ ಆರ್ಯರ ಅಖಂಡವೂ, ಸ್ವತಂತ್ರವೂ, ಸ್ವಾಧೀನವೂ, ನಿರ್ಭಯವೂ ಆದ ರಾಜ್ಯವು ಈಗಿಲ್ಲ. ಇದ್ದುಬದ್ದುದೂ ಸಹ ವಿದೇಶೀಯರ ಪದಾಕ್ರಾಂತವಾಗಿಹೋಗುತ್ತಿದೆ. ಹಲಕೆಲವು ರಾಜರು ಸ್ವತಂತ್ರರಾಗಿದ್ದಾರೆ. ದುರ್ದಿನ ಬಂದಾಗ, ದೇಶವಾಸಿಗಳು ಅನೇಕ ಕಷ್ಟಗಳನ್ನು ಅನುಭವಿಸಬೇಕಾಗುತ್ತದೆ. ಯಾರೆಷ್ಟೇಮಾಡಲಿ, ಸ್ವದೇಶೀ ರಾಜ್ಯವೇ ಎಲ್ಲಕ್ಕಿಂತ ಹೆಚ್ಚು ಉತ್ತಮವಾಗಿರುತ್ತದೆ. ಮತಮತಾಂತರಗಳ ಆಗ್ರಹರಹಿತವೂ, ತನ್ನವರು ಬೇರೆಯವರು ಎಂಬ ಪಕ್ಷಪಾತವಿಲ್ಲದುದೂ, ಪ್ರಜೆಗಳನ್ನು ತಂದೆತಾಯಿಗಳಿಂತೆ ಕೃಪೆ, ದಯೆ ಮತ್ತು ನ್ಯಾಯದಿಂದ ಪಾಲಿಸುವಂತಹುದೂ ಆದ ವಿದೇಶೀಯ ರಾಜ್ಯಭಾರವೂ ಕೂಡ ಸಂಪೂರ್ಣ ಸುಖಪ್ರದವಾಗಲಾರದು. ಆದರೆ ಬೇರೆಬೇರೆ ಭಾಷೆ, ಬೇರೆ ಬೇರೆ ಶಿಕ್ಷಣ ಪದ್ಧತಿ, ಮತ್ತು ಬೇರೆ ಬೇರೆ ವ್ಯವಹಾರಗಳ ವಿರೋಧವು ದೂರವಾಗುವುದು, ಅತಿ ದುಷ್ಕರವಾಗಿರುತ್ತದೆ. ಇದು ದೂರವಾದ ಹೊರತು ಪರಸ್ಪರ ಪೂರ್ಣೋಪಕಾರ ಮತ್ತು ಅಭಿಪ್ರಾಯವು ಸಿದ್ಧಿಸುವುದು ಕಠಿಣವಾಗಿದೆ. ಆದ್ದರಿಂದ ವೇದಾದಿಶಾಸ್ತ್ರಗಳಲ್ಲಿ ಬರೆದಿರುವ ವ್ಯವಸ್ಥೆಯನ್ನೂ, ಇತಿಹಾಸಗಳನ್ನು ಮಾನ್ಯಮಾಡುವುದು ಸತ್ಪುರುಷರೂ ಕರ್ತವ್ಯವಾಗಿರುತ್ತದೆ.

ಪ್ರ :—ಜಗತ್ತಿನ ಉತ್ಪತ್ತಿಯಾಗಿ ಎಷ್ಟು ಕಾಲವಾಯಿತು ?

ಉ :—ಒಂದು ಅರ್ಬುದ, ತೊಂಬತ್ತಾರುಕೋಟಿ, ಅನೇಕ ಸಹಸ್ರ ವರ್ಷಗಳು ಜಗದುತ್ಪತ್ತಿ ಮತ್ತು ವೇದಪ್ರಕಾಶವಾಗಿ ಕಳೆದಿದೆ.

ಇದರ ಸ್ಪಷ್ಟ ವ್ಯಾಖ್ಯಾನವು ನನ್ನ ಕೃತಿಯಾದ ಭೂಮಿಕೆ*ಯಲ್ಲಿ ಬರೆಯಲ್ಪಟ್ಟಿದೆ. ನೋಡಿಕೊಳ್ಳಿರಿ. ಈ ಮೊದಲಾದ ಕ್ರಮವು ಸೃಷ್ಟಿಯ ಮಾಡುವಿಕೆ ಮತ್ತು ಆಗುವಿಕೆಯಲ್ಲಿದೆ. ಯಾವುದನ್ನು ಭಾಗಮಾಡುವುದಕ್ಕೆ ಆಗಲಾರದೋ ಆ ಎಲ್ಲಕ್ಕಿಂತ ಸೂಕ್ಷ್ಮವಾದುದಕ್ಕೆ ಪರಮಾಣುವೆಂದು ಹೆಸರು. ಅರವತ್ತು ಪರಮಾಣುಗಳು ಸೇರಿರುವುದಕ್ಕೆ ಅಣುವೆಂದು ಹೆಸರು. ಸ್ಥೂಲವಾಯುವಿನ ಅಣುವಿನಂತೆ ಎರಡು ಅಣುಗಳು ಸೇರಿ ದ್ವ್ಯಣುಕವಾಗುತ್ತದ. ಮೂರು ದ್ವ್ಯಣುಕಗಳು ಸೇರಿ ಅಗ್ನಿಯೂ, ನಾಲ್ಕು ದ್ವ್ಯಣುಕಗಳು ಸೇರಿ ನೀರೂ, ಐದು ದ್ವ್ಯಣುಕಗಳು ಸೇರಿ ಪೃಥಿವಿಯೂ, ಅಂದರೆ, ಮೂರು ದ್ವ್ಯಣುಗಳ ತ್ರಸರೇಣು ಮತ್ತು ಅದು ದ್ವಿಗುಣವಾಗುವುದರಿಂದ ಪೃಥಿವಿ ಮೊದಲಾದ ದೃಶ್ಯಪದಾರ್ಥಗಳೂ ಆಗುತ್ತವೆ. ಪರಮಾತ್ಮನು ಹೀಗೆಯೇ ಕ್ರಮದಿಂದ ಸೇರಿಸಿ ಭೂಗೋಳ ಮೊದಲಾದುವನ್ನು ನಿರ್ಮಿಸಿರುತ್ತಾನೆ.

ಪ್ರ :—ಇದನ್ನು ಯಾವನು ಧರಿಸಿದ್ದಾನೆ? ಶೇಷನ ಅಂದರೆ ಸಾವಿರ ಹೆಡೆಗಳುಳ್ಳ ಸರ್ಪದ ತಲೆಯ ಮೇಲೆ ಪೃಥಿವಿಯಿದೆ ಎಂದು ಕೆಲವರು ಹೇಳುತ್ತಾರೆ; ಕೆಲವರು ಎತ್ತಿನ ಕೊಂಬುಗಳ ಮೇಲೆ ಇದೆ ಎನ್ನುತ್ತಾರೆ. ಮೂರನೆಯವನು ' ಯಾವುದರ ಮೇಲೂ ನಿಂತಿಲ್ಲ ' ಎನ್ನುತ್ತಾನೆ. ' ವಾಯುವಿನ ಆಧಾರದ ಮೇಲೆ ನಿಂತಿರುತ್ತದೆ ' ಎಂದು ನಾಲ್ಕನೆಯವನು ಹೇಳುತ್ತಾನೆ. ' ಸೂರ್ಯನ ಆಕರ್ಷಣದಿಂದ ಎಳೆಯಲ್ಪಟ್ಟು, ತನ್ನ ಅಕ್ಷದಲ್ಲಿದೆ ' ಎಂದು ಐದನೆಯವನು ಹೇಳುತ್ತಾನೆ. ' ಭೂಮಿಯು ಭಾರವಾಗಿರುವುದರಿಂದ, ಆಕಾಶದಲ್ಲಿ ಕೆಳಕೆಳಗೆ ಹೋಗುತ್ತಿರುವುದು ' ಎಂದು ಆರನೆಯವನು ಹೇಳುತ್ತಾನೆ. ಈ ಮೊದಲಾದುವುಗಳಲ್ಲಿ ಯಾವುದನ್ನು ಸತ್ಯವೆಂದು ಅಂಗೀಕರಿಸೋಣ ?

ಉ :—ಶೇಷ-ಸರ್ಪನ ಮತ್ತು ಎತ್ತಿನ ಕೊಂಬಿನ ಮೇಲೆ ಈ ಭೂಮಿಯು ನಿಂತಿದೆ—ಎಂದು ಹೇಳುವವನನ್ನು ' ಆ ಸರ್ಪದ ಮತ್ತು ಎತ್ತಿನ ತಂದೆ-ತಾಯಿಗಳು ಹುಟ್ಟುವ ಕಾಲದಲ್ಲಿ ಈ ಭೂಮಿಯು ಯಾವುದರ ಮೇಲೆ ನಿಂತಿತ್ತು ? ಸರ್ಪ, ಎತ್ತು ಮೊದಲಾದುವು

---

* ಋಗ್ವೇದಾದಿಭಾಷ್ಯಭೂಮಿಕೆ 'ಯ ವೇದೋತ್ಪತ್ತಿ ವಿಷಯವನ್ನು ನೋಡಿ.

ಯಾವುದರ ಮೇಲಿವೆ?'—ಎಂದು ಕೇಳಬೇಕು. ಎತ್ತಿನವರಾದ ಮುಸಲ್ಮಾನರಂತೂ ಸುಮ್ಮನಾಗಿ ಹೋಗುತ್ತಾರೆ. ಆದರೆ, ಸರ್ಪದವರು 'ಸರ್ಪವು ಕೂರ್ಮದ ಮೇಲೆಯೂ, ಕೂರ್ಮವು ನೀರಿನ ಮೇಲೆಯೂ, ನೀರು ಬೆಂಕಿಯ ಮೇಲೆಯೂ, ಬೆಂಕಿಯು ವಾಯುವಿನ ಮೇಲೆಯೂ, ವಾಯುವು ಆಕಾಶದಲ್ಲಿಯೂ ನಿಂತಿರುತ್ತದೆ' ಎಂದು ಉತ್ತರ ಕೊಡುತ್ತಾರೆ. 'ಇವೆಲ್ಲವೂ ಏತರ ಮೇಲೆ ನಿಂತಿವೆ' ಎಂದು ಅವರನ್ನು ಕೇಳಬೇಕು. 'ಅವಶ್ಯವಾಗಿ ಪರಮಾತ್ಮನ ಮೇಲೆ ಎಂದು ಹೇಳುತ್ತಾರೆ. ಯಾರಾದರೂ ಅವರನ್ನು ಶೇಷ ಮತ್ತು ಎತ್ತು ಯಾರ ಮಕ್ಕಳೆಂದು ಕೇಳಿದರೆ, 'ಶೇಷನು ಕಶ್ಯಪನ ಮಗ, ಎತ್ತು ಹಸುವಿನ ಮಗ, ಕಶ್ಯಪನು ಮರೀಚಿಯ ಮಗ, ಮರೀಚಿಯು ಮನುವಿನ ಮಗ, ಮನುವು ವಿರಾಟನ ಮಗ, ವಿರಾಟನು ಬ್ರಹ್ಮನ ಮಗ ಮತ್ತು ಬ್ರಹ್ಮನು ಆದಿ ಸೃಷ್ಟಿಯವನು' ಎಂದು ಹೇಳುತ್ತಾರೆ. ಆದಿಶೇಷನು ಹುಟ್ಟುವುದಕ್ಕೆ ಮೊದಲು ಐದು ತಲೆಮಾರುಗಳು ಕಳೆದುಹೋಗಿವೆ. ಆಗ ಯಾವನು ಧರಿಸಿದ್ದನು? ಅಂದರೆ, ಕಶ್ಯಪನ ಜನ್ಮ ಸಮಯದಲ್ಲಿ ಪೃಥ್ವಿ ಯಾರ ಮೇಲಿತ್ತು ಎಂದು ಕೇಳಿದರೆ—ನಾನೂ ಮೌನ, ನೀನೂ ಮೌನ; ಮತ್ತೆ ಜಗಳವಾಡತೊಡಗುವರು. ಇದರ ನಿಜವಾದ ಅಭಿಪ್ರಾಯವಿದು:—ಉಳಿದುದಕ್ಕೆ ಶೇಷವೆಂದು ಹೆಸರು. ಯಾವನೋ ಒಬ್ಬ ಕವಿಯು 'ಶೇಷಾಧಾರಾ ಪೃಥಿವೀ'—ಶೇಷನ ಆಧಾರದಿಂದ ಭೂಮಿಯು ನಿಂತಿರುತ್ತದೆ—ಎಂದು ಹೇಳಿದನು. ಎರಡನೆಯವನು ಅವನ ಅಭಿಪ್ರಾಯವನ್ನು ತಿಳಿದುಕೊಳ್ಳಲಾರದೆ ಹಾವಿನ ಸುಳ್ಳು ಕಲ್ಪನೆಯನ್ನು ಮಾಡಿಕೊಂಡನು. ಆದರೆ, ಪರಮಾತ್ಮನು ಉತ್ಪತ್ತಿ-ಪ್ರಳಯಗಳಿಂದ ಉಳಿದು ಅಂದರೆ ಬೇರೆ ಇರುವುದರಿಂದ, ಆತನಿಗೆ ಶೇಷನೆಂದು ಹೆಸರು. ಆತನ ಆಧಾರದಿಂದಲೇ ಈ ಭೂಮಿಯು ನಿಂತಿರುತ್ತದೆ.

ಸತ್ಯೇನೋತ್ತಭಿತಾ ಭೂಮಿಃ ॥ ಋಗ್ವೇದ ೧೦, ೮೫. ೧॥

(ಸತ್ಯ) ಅಂದರೆ ಮೂರು ಕಾಲಗಳಲ್ಲಿಯೂ ಅಬಾಧ್ಯವಾದ, ಎಂದೂ ನಾಶವಾಗದ ಪರಮಾತ್ಮನು ಭೂಮಿ, ಆದಿತ್ಯ ಮತ್ತು ಸಮಸ್ತ ಲೋಕಗಳನ್ನೂ ಧರಿಸಿದ್ದಾನೆ.

ಉಕ್ಷಾ ದಾಧಾರ ಪೃಥಿವೀ ಮುತದ್ಯಾಮ್ ।†

ಇದೂ ಋಗ್ವೇದದ ವಚನ. ಈ ಉಕ್ಷ ಶಬ್ದವನ್ನು ನೋಡಿಯೇ ಯಾವನೋ 'ಎತ್ತು' ಎಂಬ ಅರ್ಥವನ್ನು ಗ್ರಹಿಸಿರಬಹುದು. ಏಕೆಂದರೆ, 'ಉಕ್ಷಾ' ಎಂಬುದು ಎತ್ತಿನ ಹೆಸರೂ ಹೌದು. ಆದರೆ ಇಷ್ಟು ದೊಡ್ಡ ಭೂಗೋಳವನ್ನು ಧರಿಸುವ ಸಾಮರ್ಥ್ಯವು, ಎತ್ತಿನಲ್ಲಿ ಎಲ್ಲಿಂದ ಬರುತ್ತದೆಂಬುದು ಆ ಮೂಢನಿಗೆ ಗೊತ್ತಾಗಲಿಲ್ಲ. ಆದುದರಿಂದ, ಮಳೆಯಿಂದ ಭೂಮಿಯನ್ನು ನೆನೆಸುವುದರಿಂದ ಸೂರ್ಯನಿಗೆ 'ಉಕ್ಷಾ' ಎಂದು ಹೆಸರು; ಆತನು ತನ್ನ ಆಕರ್ಷಣಶಕ್ತಿಯಿಂದ ಈ ಭೂಗೋಳವನ್ನು ಧರಿಸಿದ್ದಾನೆ. ಆದರೆ, ಸೂರ್ಯಾದಿಗಳನ್ನು ಧರಿಸುವವನು ಪರಮೇಶ್ವರನ ಹೊರತು ಮತ್ತಾವನೂ ಇಲ್ಲ.

ಪ್ರಶ್ನೆ :—ಪರಮೇಶ್ವರನು ಇಷ್ಟು ದೊಡ್ಡ ದೊಡ್ಡ ಭೂಗೋಳಗಳನ್ನು ಧರಿಸಲು ಹೇಗೆ ಶಕ್ತನಾಗಿದ್ದಾನು ?

ಉತ್ತರ :—ಹೇಗೆ ಅನಂತವಾದ ಆಕಾಶದ ಮುಂದೆ, ಈ ದೊಡ್ಡ ದೊಡ್ಡ ಭೂಗೋಳಗಳು ಗಣನೆಗೇ ಬಾರವೋ, ಅಂದರೆ—ಸಮುದ್ರದ ಮುಂದೆ ನೀರು ಹನಿಯಂತೆ ಸಹ ಇರುವುದಿಲ್ಲವೋ ಹಾಗೆಯೇ ಅನಂತ ಪರಮಾತ್ಮನ ಮುಂದೆ ಈ ಅಸಂಖ್ಯ ಲೋಕಗಳು ಪರಮಾಣುವಿನಷ್ಟಿದೆ ಎನ್ನಲೂ ಸಹ ಸಾಧ್ಯವಿಲ್ಲ. ಆತನು ಹೊರಗೂ ಒಳಗೂ ಎಲ್ಲೆಲ್ಲಿಯೂ ವ್ಯಾಪಿಸಿದ್ದಾನೆ. ಅಂದರೆ, "ವಿಭೂಃ ಪ್ರಜಾಸು" (೩೨-೮)—ಇದು ಯಜುರ್ವೇದದ ವಚನ. ಆ ಪರಮಾತ್ಮನು ಎಲ್ಲಾ ಪ್ರಜೆಗಳಲ್ಲಿಯೂ ವ್ಯಾಪಕನಾಗಿ, ಎಲ್ಲವನ್ನೂ ಧರಿಸುತ್ತಿದ್ದಾನೆ, ಆತನು, ಕ್ರೈಸ್ತ, ಮುಸಲ್ಮಾನ, ಪೌರಾಣೀಕರ ಕಥನದಂತೆ, 'ವಿಭು'ವಾಗಿಲ್ಲದಿದ್ದಲ್ಲಿ ಈ ಸಂಪೂರ್ಣ ಸೃಷ್ಟಿಯನ್ನು ಎಂದಿಗೂ ಧರಿಸಲಾಗುತ್ತಿರಲಿಲ್ಲ. ಏಕೆಂದರೆ, ಪ್ರಾಪ್ತಿಯಾಗದೆ ಯಾವನೂ ಏನನ್ನೂ ಧರಿಸಲಾರನು.

ಈ ಸಮಸ್ತ-ಲೋಕಗಳು ಪರಸ್ಪರ ಆಕರ್ಷಣ ಶಕ್ತಿಯಿಂದಲೇ

---

† ಋಗ್ವೇದದಲ್ಲಿ 'ಉಕ್ಷಾಸ ದ್ಯಾವಾ ಪೃಥಿವೀ ಬಿಭರ್ತಿ ॥ ೧೦, ೪೧, ೮ ॥' ಎಂಬ ವಚನವಿರುತ್ತದೆ. ಮತ್ತು ಅಥರ್ವವೇದದಲ್ಲಿ 'ಆನಡ್ವಾನ್ ದಾಧಾರ ಪೃಥಿವೀ ಮುತದ್ಯಾಮ್ ॥ ೪-೧೧-೫೪॥' ಎಂಬ ವಚನವಿರುತ್ತದೆ.

ನಿಂತಿರುವುವು. ಇನ್ನು ಪರಮಾತ್ಮನು ಧರಿಸಬೇಕಾದ ಆವಶ್ಯಕತೆ ಯೇನು? ಎಂದು ಯಾರಾದರೂ ಹೇಳಿದರೆ, ಅವರನ್ನು ಕೇಳಬೇಕು :—

ಈ ಸೃಷ್ಟಿಯು ಅನಂತವೋ, ಸಾಂತವೋ? ಅನಂತ ಎನ್ನುವಿ ರಾದರೆ, ಆಕಾರವುಳ್ಳ 'ವಸ್ತುವು' ಎಂದಿಗೂ ಅನಂತವಾಗಲಾರದು. ಸಾಂತವೆಂದು ಹೇಳುವುದಾದರೆ, ಇದರ ಕಡೆಯಭಾಗವು ಅರ್ಥಾತ್ ಯಾವುದರ ಆಚೆಗೆ ಯಾವ ಲೋಕವೂ ಇಲ್ಲವೋ ಆ ಭಾಗವು ಯಾರ ಆಕರ್ಷಣದಿಂದ ನಿಂತಿರುತ್ತದೆ? ಎಲ್ಲಾ ಸಮುದಾಯಕ್ಕೂ ವನವೆಂದು ಹೆಸರಿಟ್ಟಾಗ ಅದಕ್ಕೆ ಸಮಷ್ಟಿ ಎಂದು ಹೆಸರು. ಅದರಲ್ಲಿಯೇ ಒಂದೊಂದು ವೃಕ್ಷವನ್ನೂ ಬೇರೆ ಬೇರೆಯಾಗಿ ಎಣಿಸಿದರೆ ವ್ಯಷ್ಟಿ ಯೆನ್ನಿಸುತ್ತದೆ. ಹಾಗೆಯೇ ಸಮಸ್ತ ಭೂಗೋಳಗಳನ್ನೂ ಸಮಷ್ಟಿ ರೂಪದಿಂದ ಜಗತ್ತೆಂದು ಹೇಳುವುದಾದರೆ ಎಲ್ಲಾ ಜಗತ್ತನ್ನೂ ಧರಿಸುವವನು ಮತ್ತು ಆಕರ್ಷಿಸುವವನು ಪರಮಾತ್ಮನ ಹೊರತು ಬೇರೊಬ್ಬನಿರಲಾರನು. ಆದ್ದರಿಂದ ಯಾವನು ಸರ್ವ ಜಗತ್ತನ್ನು ರಚಿಸಿರುವನೋ, ಆತನೇ ಇದನ್ನು ಧರಿಸಿರುತ್ತಾನೆ.

ಸ ದಾಧಾರ ಪೃಥಿವೀಂ ದ್ಯಾಮುತೇ ಮಾಂ ॥

[ಯಜು ೧೩-೪]

ಇದು ಯಜುರ್ವೇದ ವಚನ. ಯಾವ ಪರಮಾತ್ಮನು ಪ್ರಕಾಶ ರಹಿತವಾದ ಪೃಥಿವ್ಯಾದಿ ಲೋಕಲೋಕಾಂತರಗಳನ್ನೂ, ಪದಾರ್ಥ ಗಳನ್ನೂ ಪ್ರಕಾಶಸಹಿತವಾದ ಸೂರ್ಯಾದಿ ಲೋಕಗಳನ್ನೂ ಮತ್ತು ಪದಾರ್ಥಗಳನ್ನೂ ರಚಿಸುತ್ತಾನೋ ಮತ್ತು ಧರಿಸುತ್ತಾನೋ, ಯಾವನು ಎಲ್ಲದರಲ್ಲಿಯೂ ವ್ಯಾಪಕನಾಗಿರುವನೋ, ಅವನೇ ಎಲ್ಲಾ ಜಗತ್ತಿನ ಕರ್ತನೂ, ಧಾರಕನೂ ಆಗಿದ್ದಾನೆ.

ಪ್ರಶ್ನೆ :—ಪೃಥಿವಿ ಮೊದಲಾದ ಲೋಕಗಳು ತಿರುಗುತ್ತವೋ ಅಥವಾ ಸ್ಥಿರವಾಗಿರುತ್ತವೊ?

ಉತ್ತರ :—ತಿರುಗುತ್ತಿರುತ್ತವೆ.

ಪ್ರಶ್ನೆ :—ಎಷ್ಟೋ ಜನರು ಸೂರ್ಯನು ತಿರುಗುತ್ತಿರುತ್ತಾ ನೆಂದೂ, ಪೃಥಿವಿಯು ತಿರುಗುವುದಿಲ್ಲವೆಂದೂ ಹೇಳುತ್ತಾರೆ. ಬೇರೆ

ಯವರು ಪೃಥಿವಿಯು ತಿರುಗುತ್ತದೆಂದೂ ಸೂರ್ಯನು ತಿರುಗುವುದಿಲ್ಲ ನೆಂದೂ ಹೇಳುತ್ತಾರೆ. ಇವುಗಳಲ್ಲಿ ಯಾವುದು ನಿಜವೆಂದು ಒಪ್ಪಲ್ಪಡ ಬೇಕು ?

ಉತ್ತರ :---ಇವೆರಡೂ ಅರ್ಥ ಸುಳ್ಳು. ಏಕೆಂದರೆ ವೇದದಲ್ಲಿ ಬರೆದಿದೆ—

ಆಯಂ ಗೌಃ ಪೃಶ್ನಿರಕ್ರಮೀದಸದನ್ಮಾತರಂ ಪುರಃ ।
ಪಿತರಂ ಚ ಪ್ರಯನ್ತ್ಸ್ವಃ ॥

[ಯಜು. ಅ. ೩. ಮಂ. ೬]

ಅಂದರೆ ಈ ಭೂಗೋಳವು ಜಲಸಹಿತ ಸೂರ್ಯನ ಸುತ್ತ ತಿರುಗುತ್ತಾ ಹೋಗುತ್ತದೆ. ಆದುದರಿಂದ ಭೂಮಿ ತಿರುಗುತ್ತದೆ.

ಆ ಕೃಷ್ಣೇನ ರಜಸಾ ವರ್ತಮಾನೋ ನಿವೇಶಯನ್ನಮೃತಂ ಮರ್ತ್ಯಂಚ ।
ಹಿರಣ್ಯಯೇನ ಸವಿತಾ ರಥೇನಾ ದೇವೋ ಯಾತಿ ಭುವನಾನಿ ಪಶ್ಯನ್ ॥೨॥

[ಯಜು ಅ. ೩೩ ಮಂ. ೪೩]

ಮಳೆ ಮೊದಲಾದುವನ್ನುಂಟುವವನೂ, ಪ್ರಕಾಶಸ್ವರೂಪನೂ, ತೇಜೋಮಯನೂ, ರಮಣೀಯಸ್ವರೂಪಯುಕ್ತನೂ ಆದ ಸೂರ್ಯನು ಪ್ರಾಣಿ ಮತ್ತು ಅಪ್ರಾಣಿಗಳೆಂಬ ವಿಲ್ಲಾ ಪದಾರ್ಥಗಳಲ್ಲಿಯೂ ಅಮೃತರೂಪವಾದ ಮಳೆಯನ್ನೂ ಅಥವಾ ಕಿರಣಗಳ ಮೂಲಕ ಅಮೃತವನ್ನು ಪ್ರವೇಶಪಡಿಸಿ, ಸಮಸ್ತ ಮೂರ್ತಿಮಂತ ದ್ರವ್ಯಗಳನ್ನು ತೋರಿಸುತ್ತ ಎಲ್ಲಾ ಲೋಕಗಳ ಬಗ್ಗೆ ಆಕರ್ಷಣಗುಣ ಹೊಂದಿದವ ನಾಗಿ ತನ್ನ ಅಕ್ಷದಲ್ಲಿಯೇ ತಿರುಗುತ್ತಿರುತ್ತಾನೆ. ಆದರೆ, ಯಾವ ಲೋಕವ ಸುತ್ತಲೂ ತಿರುಗುವುದಿಲ್ಲ. ಮತ್ತು ಹಾಗೆಯೇ ಒಂದೊಂದು ಬ್ರಹ್ಮಾಂಡದಲ್ಲಿ ಒಬ್ಬೊಬ್ಬ ಸೂರ್ಯನು ಪ್ರಕಾಶಕನೂ, ಮತ್ತುಳಿದ ಲೋಕಲೋಕಾಂತರಗಳು ಪ್ರಕಾಶ್ಯವೂ ಆಗಿರುತ್ತದೆ.

ದಿವಿಸೋನೋ ಅಧಿಶ್ರಿತಃ ।

[ಅಥ. ಕಾಂ. ೧೪, ಅನು. ೧, ಮಂ. ೧]

ಈ ಚಂದ್ರಲೋಕವು ಸೂರ್ಯನಿಂದ ಪ್ರಕಾಶಮಾನವಾಗಿರುವಂತೆಯೇ ಪೃಥಿವ್ಯಾದಿಲೋಕಗಳೂ ಕೂಡ ಸೂರ್ಯನ ಬೆಳಕಿನಿಂದಲೇ ಪ್ರಕಾಶಿತವಾಗಿರುತ್ತವೆ. ಆದರೆ ಹಗಲು-ರಾತ್ರಿಗಳು ಯಾವಾಗಲೂ ಇದ್ದೇ ಇರುತ್ತವೆ. ಏಕೆಂದರೆ, ಪೃಥಿವ್ಯಾದಿಲೋಕಗಳು ತಿರುಗುತ್ತಿರುವುದರಿಂದ ಎಷ್ಟು ಭಾಗವು ಸೂರ್ಯನಿಗೆ ಎದುರಾಗಿ ಬರುವುದೋ ಅಷ್ಟು ಪ್ರದೇಶದಲ್ಲಿ ಹಗಲೂ ಮತ್ತು ಎಷ್ಟು ಹಿಂದಕ್ಕೆ ಅಂದರೆ ಮರೆಗೆ ಹೋಗುತ್ತದೋ ಅಷ್ಟರಲ್ಲಿ ರಾತ್ರಿಯೂ ಆಗುತ್ತದೆ. ಅರ್ಥಾತ್ ಉದಯ, ಅಸ್ತ, ಸಂಧ್ಯ, ಮಧ್ಯಾಹ್ನ, ಮಧ್ಯರಾತ್ರಿ ಮೊದಲಾದ ಕಾಲಾವಯವಗಳೆಲ್ಲವೂ ದೇಶ-ದೇಶಾಂತರಗಳಲ್ಲಿ ಯಾವಾಗಲೂ ಇರುತ್ತವೆ. ಅಂದರೆ, ಆರ್ಯಾವರ್ತದಲ್ಲಿ ಸೂರ್ಯೋದಯವಾದಾಗ ಪಾತಾಳ ಅಂದರೆ ಅಮೆರಿಕಾದಲ್ಲಿ ಅಸ್ತವೂ, ಆರ್ಯಾವರ್ತದಲ್ಲಿ ಸೂರ್ಯಾಸ್ತವಾದಾಗ ಪಾತಾಳದಲ್ಲಿ ಸೂರ್ಯೋದಯವೂ ಆಗುತ್ತದೆ. ಆರ್ಯಾವರ್ತದಲ್ಲಿ ಮಧ್ಯಾಹ್ನ ಅಥವಾ ಮಧ್ಯರಾತ್ರಿಯಾಗಿರುವಾಗ್ಗೆ ಅಮೆರಿಕಾದೇಶದಲ್ಲಿ ಮಧ್ಯರಾತ್ರಿ ಅಥವಾ ಮಧ್ಯಾಹ್ನವೂ ಆಗಿರುತ್ತದೆ. ಸೂರ್ಯನು ತಿರುಗುತ್ತಿದ್ದು, ಭೂಮಿಯು ತಿರುಗುವುದಿಲ್ಲವೆಂದು ಹೇಳುವವರೆಲ್ಲಾ ಅಜ್ಞರುಗಳಾಗಿರುತ್ತಾರೆ. ಹಾಗಿದ್ದರೆ ಎಷ್ಟೋ ಸಾವಿರ ವರ್ಷಗಳ ಹಗಲುಗಳು ಮತ್ತು ರಾತ್ರಿಗಳು ಇರುತ್ತಿದ್ದುವು. ಸೂರ್ಯನು ಭೂಗೋಳಕ್ಕಿಂತ ಎಷ್ಟೋ ಲಕ್ಷಪಾಲು ದೊಡ್ಡವನಾಗಿಯೂ, ಕೋಟ್ಯಾಂತರ ಹರದಾರಿಗಳ ದೂರದಲ್ಲಿಯೂ ಇರುವುದರಿಂದ ಅವನಿಗೆ 'ಬ್ರಧ್ನಃ' ಎಂಬ ಹೆಸರು ಬಂದಿರುತ್ತದೆ. ಸಾಸುವೆಕಾಳಿನ ಮುಂದೆ ಬೆಟ್ಟವು ಒಂದುಬಾರಿ ತಿರುಗುವುದಕ್ಕೆ ಬಹಳಕಾಲವು ಹಿಡಿಯುವುದು. ಆದರೆ ಸಾಸವೆಕಾಳು ತಿರುಗುವುದಕ್ಕೆ ಹೆಚ್ಚಿನ ಸಮಯವು ಬೇಕಾಗಿಲ್ಲ. ಹಾಗೆಯೇ ಪೃಥಿವಿಯು ತಿರುಗುತ್ತಿರುವುದರಿಂದ ಕ್ರಮವಾಗಿ ಹಗಲು-ರಾತ್ರಿಗಳು ನಡೆಯುತ್ತಿರುತ್ತವೆ. ಸೂರ್ಯನು ತಿರುಗುವುದರಿಂದಲ್ಲ. ಏಕೆಂದರೆ—ಸೂರ್ಯನು ತಿರುಗದಿದ್ದರೆ ಒಂದು ರಾಶಿಯಿಂದ ಮತ್ತೊಂದು ರಾಶಿಗೆ ಹೋಗುತ್ತಿರಲಿಲ್ಲ. ಮತ್ತು ಭಾರವಾದ ಪದಾರ್ಥವು ತಿರುಗದ ಹೊರತು ಆಕಾಶದಲ್ಲಿ ಒಂದೆಡೆಯಲ್ಲಿಯೇ ಎಂದಿಗೂ ಇರಲಾರದು.

ಪೃಥಿವಿಯು ತಿರುಗುವುದಿಲ್ಲ. ಅದು ಯಾವಾಗಲೂ ಕೆಳಕೆಳಗೆ

ಹೋಗುತ್ತಿರುತ್ತದೆ. ಇಬ್ಬರು ಸೂರ್ಯರೂ, ಇಬ್ಬರು ಚಂದ್ರರೂ ಕೇವಲ ಜಂಬೂದ್ವೀಪದಲ್ಲೇ ಇರುತ್ತಾರೆ--ಎಂದು ಹೇಳುವ ಜೈನ ರಂತೂ ಭಂಗಿಯ ಮುಂದವಾದ ಮತ್ತಿನಲ್ಲಿದ್ದಾರೆ.

ಏಕೆ? ಭೂಮಿಯು ಕೆಳಕೆಳಗೆ ಹೋಗುತ್ತಿದ್ದರೆ, ನಾಲ್ಕು ದಿಕ್ಕುಗಳಲ್ಲಿಯೂ ವಾಯುಚಕ್ರವು ಏರ್ಪಡದೆ ಭೂಮಿಯು ತುಂಡು ತುಂಡಾಗಿ ಹೋಗುತ್ತಿತ್ತು; ಮತ್ತು ತಗ್ಗಿನ ಪ್ರದೇಶದಲ್ಲಿ ವಾಸವಾಗಿರುವವರಿಗೆ ವಾಯುವಿನ ಸ್ಪರ್ಶವೂ ಕೂಡ ಆಗದೆ, ಕೆಳಭಾಗದಲ್ಲಿರುವವರಿಗೆ ಗಾಳಿಯು ಅಧಿಕವಾಗುತ್ತಿತ್ತು. ಮತ್ತು ವಾಯುವಿನ ಗತಿಯು ಒಂದೇರೀತಿಯಾಗಿರುತ್ತಿತ್ತು. ಇಬ್ಬರು ಸೂರ್ಯರೂ, ಇಬ್ಬರು ಚಂದ್ರರೂ ಇದ್ದಿದ್ದರೆ, ರಾತ್ರಿ ಮತ್ತು ಕೃಷ್ಣಪಕ್ಷದ ಆಗುವಿಕೆಯೇ ಅಳಿಸಿಹೋಗುತ್ತಿತ್ತು. ಆದುದರಿಂದ ಒಂದು ಭೂಗೋಳದ ಸಮೀಪದಲ್ಲಿ ಒಬ್ಬ ಚಂದ್ರನೂ, ಅನೇಕಭೂಗೋಳಗಳ ಮಧ್ಯದಲ್ಲಿ ಒಬ್ಬ ಸೂರ್ಯನೂ ಇರುತ್ತಾನೆ.

ಪ್ರ:—ಸೂರ್ಯ, ಚಂದ್ರ ಮತ್ತು ನಕ್ಷತ್ರಗಳು ಏನು ವಸ್ತುಗಳು? ಇವುಗಳಲ್ಲಿ ಮನುಷ್ಯಾದಿ ಸೃಷ್ಟಿ ಇದೆಯೋ ಇಲ್ಲವೊ?

ಉ:—ಇವೆಲ್ಲವೂ ಭೂಗೋಳ ಲೋಕಗಳು ಮತ್ತು ಇವುಗಳಲ್ಲಿ ಮನುಷ್ಯಾದಿ ಪ್ರಜೆಗಳೂ ವಾಸವಾಗಿರುತ್ತಾರೆ. ಏಕೆಂದರೆ—

ಏತೇಷು ಹೀದಗ್ಂ ಸರ್ವಂ ವಸು ಹಿತಮೇತೇ ಹೀದಗ್ಂ ಸರ್ವಂ ವಾಸಯಂತೇ ತದ್ಯದಿಗ್ಂಸರ್ವಂ ವಾಸಯಂತೇ ತಸ್ಮಾದ್ವಸವ ಇತಿ ॥

[ಶತ. ಕಾಂ. ೧೪। ಪ್ರ. ೬। ಬ್ರಾ. ೪। ಕಂ. ೪]

ಭೂಮಿ, ನೀರು, ಬೆಂಕಿ, ಗಾಳಿ, ಆಕಾಶ, ಚಂದ್ರ, ನಕ್ಷತ್ರ ಮತ್ತು ಸೂರ್ಯ ಈ ಎಂಟು ಪದಾರ್ಥಗಳಿಗೆ, ಇವುಗಳಲ್ಲಿಯೇ ಸಮಸ್ತ ಪದಾರ್ಥಗಳೂ, ಪ್ರಾಣಿಗಳೂ ವಾಸಮಾಡುತ್ತಿರುವುದರಿಂದ ಮತ್ತು ಇವೇ ಎಲ್ಲರನ್ನೂ ನೆಲೆಗೊಳಿಸುವುದರಿಂದ ಇವಕ್ಕೆ ವಸುಗಳೆಂದು ಹೆಸರು. ವಾಸದ ನಿವಾಸಮಾಡುವ ಸ್ಥಾನಗಳಾದುದರಿಂದ ಇವಕ್ಕೆ ವಸುಗಳೆಂದು ಹೆಸರು. ಸೂರ್ಯ ಚಂದ್ರ, ನಕ್ಷತ್ರಗಳೂ ಕೂಡ

ಪೃಥಿವಿಯಂತೆ ವಸುಗಳಾಗಿರುವಾಗ ಅವುಗಳಲ್ಲಿ ಪೃಥಿವಿಯಂತೆ ಪ್ರಾಣಿಗಳು ಇದೇ ರೀತಿ ಇರುವುದೆಂಬುದರಲ್ಲಿ ಸಂದೇಹವೇನು? ಮತ್ತು ಪರಮಾತ್ಮನ ಈ ಸಣ್ಣ ಲೋಕವೇ ಮನುಷ್ಯಾದಿ ಸೃಷ್ಟಿಯಿಂದ ತುಂಬಿರುವಾಗ, ಈ ಲೋಕಗಳೆಲ್ಲವೂ ಶೂನ್ಯವಾಗಿರುತ್ತವೆಯೆ? ಪರಮಾತ್ಮನ ಯಾವುದೊಂದು ಕಾರ್ಯವೂ ನಿಷ್ಪ್ರಯೋಜನವಲ್ಲ. ಎಂದ ಮೇಲೆ ಇಷ್ಟೊಂದು ಅಸಂಖ್ಯ ಲೋಕಗಳಲ್ಲಿ ಮನುಷ್ಯಾದಿ ಸೃಷ್ಟಿಯಿಲ್ಲದಿದ್ದರೆ ಎಂದಾದರೂ ಸಫಲವಾಗುವವೆ? ಆದುದರಿಂದ ಎಲ್ಲೆಡೆಯೂ ಮನುಷ್ಯಾದಿ ಸೃಷ್ಟಿಯಿದೆ.

ಪ್ರ :—ಈ ಲೋಕದಲ್ಲಿ ಮನುಷ್ಯಾದಿ ಪ್ರಾಣಿಗಳ ಆಕೃತಿಯೂ, ಅವಯವಗಳೂ ಇರುವಂತೆಯೇ ಬೇರೆ ಲೋಕಗಳಲ್ಲಿಯೂ ಇರುತ್ತವೋ ಅಥವಾ ಬೇರೆ ವಿಧವಾಗಿರುತ್ತವೊ?

ಉ :—ಸ್ವಲ್ಪ ಆಕೃತಿಭೇದವಿರುವುದು ಸಂಭವ. ಈ ಲೋಕದಲ್ಲಿ ಚೀನಾ, ಆಫ್ರಿಕಾ, ಆರ್ಯಾವರ್ತ. ಯೂರೋಪ್ ದೇಶಗಳಲ್ಲಿ ವಾಸಮಾಡುವವರ ಅವಯವಗಳಲ್ಲಿಯೂ, ಬಣ್ಣದಲ್ಲಿಯೂ, ರೂಪದಲ್ಲಿಯೂ, ಆಕೃತಿಯಲ್ಲಿಯೂ, ಸ್ವಲ್ಪಮಟ್ಟಿಗೆ ವ್ಯತ್ಯಾಸವಿರುವಂತೆ, ಲೋಕಲೋಕಾಂತರಗಳಲ್ಲಿಯೂ ಸ್ವಲ್ಪ ಭೇದಗಳಿರುವುವು. ಆದರೆ, ಈ ಲೋಕದಲ್ಲಿ ಯಾವ ಜಾತಿಯ ಸೃಷ್ಟಿಯು ಯಾವ ರೀತಿಯಾಗಿರುವುದೋ ಹಾಗೆಯೇ ಲೋಕಲೋಕಾಂತರಗಳಲ್ಲಿಯೂ ಅದೇ ಜಾತಿಯ ಸೃಷ್ಟಿಯಿರುವುದು. ಶರೀರದ ಯಾವ ಯಾವ ಭಾಗದಲ್ಲಿ ನೇತ್ರ ಮೊದಲಾದ ಅಂಗಗಳಿವೆಯೋ ಅದೇ ಭಾಗಗಳಲ್ಲಿ, ಲೋಕಾಂತರದಲ್ಲಿರುವ ಅದೇ ಜಾತಿಯ ಪ್ರಾಣಿಗಳ ಅವಯವಗಳೂ ಹಾಗೆಯೇ ಇರುತ್ತವೆ. ಏಕೆಂದರೆ—

ಸೂರ್ಯಾಚಂದ್ರಮಸೌ ಧಾತಾ ಯಥಾಪೂರ್ವಮಕಲ್ಪಯತ್।
ದಿವಂಚ ಪೃಥಿವೀಂ ಚಾಂತರಿಕ್ಷ ಮಥೋಸ್ವಃ ॥

[ಋ. ಮಂ. ೧೦, ಸೂ. ೧೯೦. ಮ. ೧೩]

(ಧಾತಾ) ಪರಮಾತ್ಮನು ಸೂರ್ಯ, ಚಂದ್ರ, ದ್ಯೌ, ಭೂಮಿ ಮತ್ತು ಅಂತರಿಕ್ಷಗಳನ್ನೂ, ಅವುಗಳಲ್ಲಿರುವ ಸುಖ-ವಿಶೇಷ-ಪದಾರ್ಥ

ಗಳನ್ನೂ ಪೂರ್ವಕಲ್ಪದಲ್ಲಿ ರಚಿಸಿದ್ದಂತೆಯೇ ಈ ಕಲ್ಪದಲ್ಲಿಯೂ ಅಂದರೆ ಈ ಸೃಷ್ಟಿಯಲ್ಲಿಯೂ ರಚಿಸಿದ್ದಾನೆ. ಮತ್ತು ಎಲ್ಲಾ ಲೋಕ ಲೋಕಾಂತರಗಳಲ್ಲಿಯೂ ರಚಿಸಲ್ಪಟ್ಟಿವೆ. ಭೇದವು ಸ್ವಲ್ಪವೂ ಇರುವುದಿಲ್ಲ.

ಪ್ರಶ್ನೆ :—ಈ ಲೋಕದಲ್ಲಿ ಪ್ರಕಾಶಿತವಾದ ವೇದಗಳೇ ಲೋಕಾಂತರಗಳಲ್ಲಿಯೂ ಪ್ರಕಾಶಿತವಾಗಿರುವುವೋ ಅಥವಾ ಇಲ್ಲವೋ ?

ಉತ್ತರ :—ಅವೇ ಪ್ರಕಾಶಿತವಾಗಿವೆ. ಒಬ್ಬ ರಾಜನ ರಾಜ್ಯ ವ್ಯವಸ್ಥೆಯ ನೀತಿಯು, ಆತನ ರಾಜ್ಯದಲ್ಲೆಲ್ಲಾ ಒಂದೇ ರೀತಿಯಾಗಿರುವಂತೆ ರಾಜರಾಜೇಶ್ವರನಾದ ಪರಮಾತ್ಮನ ವೇದೋಕ್ತ ನೀತಿಯೂ ಕೂಡ ಆತನ ಸೃಷ್ಟಿರೂಪವಾದ ಸಮಸ್ತ ರಾಜ್ಯದಲ್ಲಿಯೂ ಒಂದೇ ವಿಧವಾಗಿರುತ್ತದೆ.

ಪ್ರಶ್ನೆ :—ಜೀವರೂ, ಪ್ರಕೃತಿಯಲ್ಲಿರುವ ತತ್ವಗಳೂ, ಅನಾದಿಯಾಗಿದ್ದು ಪರಮಾತ್ಮನಿಂದ ನಿರ್ಮಿತವಾಗದಿದ್ದರೆ, ಅವುಗಳ ಮೇಲೆ ಪರಮಾತ್ಮನಿಗೆ ಯಾವ ಅಧಿಕಾರವೂ ಇರಕೂಡದು. ಏಕೆಂದರೆ ಎಲ್ಲವೂ ಸ್ವತಂತ್ರವಾದುವು.

ಉತ್ತರ :—ರಾಜನೂ, ಪ್ರಜೆಗಳೂ ಒಂದೇ ಕಾಲದವರಾಗಿದ್ದರೂ, ಪ್ರಜೆಗಳು ರಾಜನಿಗೆ ಅಧೀನರಾಗಿರುವಂತೆ, ಜೀವರೂ, ಜಡಪದಾರ್ಥಗಳೂ ಪರಮಾತ್ಮನಿಗೆ ಅಧೀನವಾಗಿರುತ್ತವೆ. ಪರಮಾತ್ಮನು ಸಮಸ್ತ ಸೃಷ್ಟಿಯನ್ನು ರಚಿಸಿರುವವನೂ, ಜೀವರಿಗೆ ಕರ್ಮ ಫಲಗಳನ್ನು ಕೊಡುವವನೂ, ಎಲ್ಲರನ್ನೂ ಯಥಾವತ್ತಾಗಿ ರಕ್ಷಿಸುವವನೂ ಅನಂತ ಶಕ್ತಿಯುಕ್ತನೂ ಆಗಿರುವಾಗ, ಅಲ್ಪ ಸಾಮರ್ಥ್ಯವುಳ್ಳವರೂ, ಜಡಪದಾರ್ಥಗಳೂ ಆತನ ಅಧೀನದಲ್ಲಿ ಏತಕ್ಕಿರಲಾರವು ? ಆದುದರಿಂದ ಜೀವನು ಕರ್ಮಮಾಡುವುದರಲ್ಲಿ ಸ್ವತಂತ್ರನಾಗಿದ್ದಾನೆ. ಆದರೆ ಕರ್ಮದ ಫಲವನ್ನನುಭವಿಸುವುದರಲ್ಲಿ, ಪರಮಾತ್ಮನ ವ್ಯವಸ್ಥೆಯಿಂದ ಪರತಂತ್ರನಾಗಿರುತ್ತಾನೆ. ಹಾಗೆಯೇ ಸರ್ವಶಕ್ತನು ಸಮಸ್ತ ವಿಶ್ವದ ಸೃಷ್ಟಿ, ಸಂಹಾರ ಮತ್ತು ಪಾಲನವನ್ನು ಮಾಡುತ್ತಾನೆ.

ಇದರ ಮುಂದಕ್ಕೆ. ವಿದ್ಯೆ, ಅವಿದ್ಯೆ, ಬಂಧ ಮತ್ತು ಮೋಕ್ಷ ಈ ವಿಷಯಗಳ ಮೇಲೆ ಬರೆಯಲ್ಪಡುವುದು. ಹೀಗೆ ಎಂಟನೆಯ ಸಮುಲ್ಲಾಸವು ಪೂರ್ಣವಾಯಿತು.

ಇತಿ ಶ್ರೀಮದ್ದಯಾನಂದಸರಸ್ವತೀಸ್ವಾಮಿಕೃತೇ
ಸತ್ಯಾರ್ಥಪ್ರಕಾಶೇ ಸುಭಾಷಾವಿಭೂಷಿತೇ
ಸೃಷ್ಟ್ಯುತ್ಪತ್ತಿಸ್ಥಿತಿಪ್ರಲಯವಿಷಯೇಽಷ್ಟಮಃ ಸಮುಲ್ಲಾಸಃ
ಸಂಪೂರ್ಣಃ

॥ ಓಂ ॥

ಅಥ ನವಮಸಮುಲ್ಲಾಸಾರಂಭಃ

ಅಥ ವಿದ್ಯಾಽವಿದ್ಯಾ ಬಂಧಮೋಕ್ಷವಿಷಯಾನ್ ವ್ಯಾಖ್ಯಾಸ್ಯಾಮಃ

ವಿದ್ಯಾಂ ಚಾಽವಿದ್ಯಾಂ ಚ ಯಸ್ತದ್ವೇದೋಭಯಗ್ಂ ಸಹ ।
ಅವಿದ್ಯಯಾ ಮೃತ್ಯುಂ ತೀರ್ತ್ವಾ ವಿದ್ಯಯಾಽಮೃತಮಶ್ನುತೇ ॥

[ಯಜು ೪೦-೧೪]

ಯಾವ ಮನುಷ್ಯನು ವಿದ್ಯೆಯೊಂದಿಗೆ ಅವಿದ್ಯೆಯ ಸ್ವರೂಪವನ್ನೂ ಜೊತೆಯಲ್ಲಿಯೇ ತಿಳಿದುಕೊಳ್ಳುತ್ತಾನೋ, ಅವನು ಅವಿದ್ಯಾ ಅಂದರೆ ಕರ್ಮೋಪಾಸನೆಯಿಂದ ಮೃತ್ಯುವನ್ನು ದಾಟಿ, ವಿದ್ಯಾ ಅಂದರೆ ಜ್ಞಾನದಿಂದ ಮೋಕ್ಷವನ್ನು ಪಡೆಯುತ್ತಾನೆ. ಅವಿದ್ಯಾಲಕ್ಷಣ—

ಅನಿತ್ಯಾಶುಚಿದುಃಖಾನಾತ್ಮಸು ನಿತ್ಯಶುಚಿಸುಖಾತ್ಮಖ್ಯಾತಿ ರವಿದ್ಯಾ ॥

[ಪಾತಂ. ದ. ಸಾ. ಪಾ. ಸೂ. ೫]

ಇದು ಯೋಗಸೂತ್ರದ ವಚನವು. ಅನಿತ್ಯ ಸಂಸಾರವೂ, ದೇಹ ಮೊದಲಾದುವುಗಳೂ ನಿತ್ಯ, ಅಂದರೆ—ಕಾಣುವ ಮತ್ತು ಕೇಳಿಬರುವ ಈ ಕಾರ್ಯ ಜಗತ್ತು ಯಾವಾಗಲೂ ಇರುವುದು, ಅನಾದಿಕಾಲದಿಂದಲೂ ಇದೆ, ಮತ್ತು ಯೋಗಬಲದಿಂದ ದೇವತೆಗಳ ಈ ಶರೀರವೇ ಯಾವಾಗಲೂ ಇರುತ್ತದೆ. ಈ ವಿಧವಾದ ವಿಪರೀತ ಬುದ್ಧಿಯು ಅವಿದ್ಯೆಯ ಮೊದಲನೆಯ ಭಾಗವಾಗಿರುತ್ತದೆ. ಅಶುಚಿ—ಅಂದರೆ ಮಲಮಯ ನಾರಿ ಮೊದಲಾದವರನ್ನೂ, ಸುಳ್ಳು, ಕಳವು ಮೊದಲಾದ ಅಪವಿತ್ರ ಕಾರ್ಯಗಳನ್ನೂ ಪವಿತ್ರವೆಂದು ತಿಳಿಯುವುದು ಎರಡನೆಯದು. ಅತ್ಯಂತ ವಿಷಯಾಸಕ್ತಿಯೆಂಬ ದುಃಖದಲ್ಲಿ ಸುಖ

ವೆಂಬ ಬುದ್ಧಿಯನ್ನಿಟ್ಟುಕೊಳ್ಳುವುದು ಮೊದಲಾದುದು ಮೂರನೆಯದಾಗಿರುತ್ತದೆ. ಅನಾತ್ಮನಲ್ಲಿ ಆತ್ಮಬುದ್ಧಿಯನ್ನಿಡುವುದು ಅವಿದ್ಯೆಯು. ನಾಲ್ಕನೆಯ ಭಾಗವಾಗಿರುತ್ತದೆ. ಈ ನಾಲ್ಕು ಬಗೆಯ ವಿಪರೀತ ಜ್ಞಾನಕ್ಕೆ ಅವಿದ್ಯೆಯೆಂದು ಹೆಸರು. ಇದಕ್ಕೆ ವಿಪರೀತವಾದುದು, ಅಂದರೆ, ಅನಿತ್ಯದಲ್ಲಿ ಅನಿತ್ಯವೆಂಬ, ನಿತ್ಯದಲ್ಲಿ ನಿತ್ಯವೆಂಬ, ಅಪವಿತ್ರದಲ್ಲಿ ಅಪವಿತ್ರವೆಂಬ, ಪವಿತ್ರದಲ್ಲಿ ಪವಿತ್ರವೆಂಬ, ದುಃಖದಲ್ಲಿ ದುಃಖವೆಂಬ, ಸುಖದಲ್ಲಿ ಸುಖವೆಂಬ, ಅನಾತ್ಮದಲ್ಲಿ ಅನಾತ್ಮವೆಂಬ ಮತ್ತು ಆತ್ಮದಲ್ಲಿ ಆತ್ಮವೆಂಬ ಜ್ಞಾನದ ಇರುವಿಕೆಯೇ ವಿದ್ಯೆಯು, ಅಂದರೆ,

ವೇತ್ತಿ ಯಥಾವತ್ತತ್ತ್ವಪದಾರ್ಥಸ್ವರೂಪಂ ಯಯಾ ಸಾ ವಿದ್ಯಾ ।
ಯಯಾ ತತ್ತ್ವಸ್ವರೂಪಂ ನ ಜಾನಾತಿ ಭ್ರುವಮಾದನ್ಯಸ್ಮಿನ್ನನ್ಯಂ
ನಿಶ್ಚಿನೋತಿ ಯಯಾ ಸಾಽ ವಿದ್ಯಾ ॥

ಯಾವುದರಿಂದ ಪದಾರ್ಥಗಳ ನಿಜವಾದ ಸ್ವರೂಪವು ತಿಳಿದು ಬರುವುದೋ ಅದಕ್ಕೆ ವಿದ್ಯೆಯೆಂದು ಹೆಸರು. ಯಾವುದರಿಂದ ಪದಾರ್ಥಗಳ ಯಥಾರ್ಥಸ್ವರೂಪವು ತಿಳಿಯದೆ, ಒಂದು ಪದಾರ್ಥದಲ್ಲಿ ಮತ್ತೊಂದು ಪದಾರ್ಥದ ಭ್ರಾಂತಿಯುಂಟಾಗುವುದೋ, ಅದಕ್ಕೆ ಅವಿದ್ಯೆಯೆಂದು ಹೆಸರು. ಅಂದರೆ, ಕರ್ಮೋಪಾಸನೆಗಳು, ಒಳಗಿನ ಮತ್ತು ಹೊರಗಿನ ಕ್ರಿಯಾವಿಶೇಷಗಳಾಗಿದ್ದು, ಜ್ಞಾನವಿಶೇಷವಲ್ಲವಾದುದರಿಂದ ಅವಿದ್ಯೆಯೆನಿಸುತ್ತದೆ. ಆದುದರಿಂದಲೇ ಮಂತ್ರದಲ್ಲಿ ಶುದ್ಧ ಕರ್ಮವೂ, ಈಶ್ವರೋಪಾಸನೆಯೂ ಇಲ್ಲದೆ ಯಾವನೂ ಮೃತ್ಯು ದುಃಖದಿಂದ ಪಾರಾಗಲಾರನೆಂದು ಹೇಳಿರುತ್ತದೆ. ಅಂದರೆ, ಪವಿತ್ರ ಕರ್ಮ, ಪವಿತ್ರೋಪಾಸನೆ ಮತ್ತು ಪವಿತ್ರಜ್ಞಾನದಿಂದಲೇ ಮೋಕ್ಷವೂ, ಅಪವಿತ್ರವಾದ ಸುಳ್ಳು ಮೊದಲಾದ ಕರ್ಮ, ಕಲ್ಲಿನ ವಿಗ್ರಹ ಮೊದಲಾದುವುಗಳ ಉಪಾಸನೆ ಮತ್ತು ಮಿಥ್ಯಾಜ್ಞಾನದಿಂದ ಬಂಧನವೂ ಉಂಟಾಗುತ್ತದೆ. ಯಾವನೂ ಕ್ಷಣವೂ ಕೂಡ ಕರ್ಮೋಪಾಸನಾಜ್ಞಾನಗಳನ್ನು ಬಿಟ್ಟಿರಲಾರನು. ಆದುದರಿಂದ, ಧರ್ಮಯುಕ್ತವಾದ ಸತ್ಯಭಾಷಣ ಮೊದಲಾದ ಕರ್ಮಗಳನ್ನು ಮಾಡುವುದು

ಮಿಥ್ಯಾಭಾಷಣ ಮೊದಲಾದ ಅಧರ್ಮಗಳನ್ನು ಬಿಟ್ಟುಬಿಡುವುದೇ ಮುಕ್ತಿಯ ಸಾಧನ.

ಪ್ರಶ್ನೆ:—ಮೋಕ್ಷವು ಯಾವನಿಗೆ ಲಭಿಸುವುದಿಲ್ಲ ?

ಉತ್ತರ :—ಬದ್ಧನಿಗೆ.

ಪ್ರಶ್ನೆ:—ಬದ್ಧನಾವನು ?

ಉತ್ತರ :—ಅಧರ್ಮದಲ್ಲಿಯೂ, ಅಜ್ಞಾನದಲ್ಲಿಯೂ, ಸಿಕ್ಕಿಕೊಂಡಿರುವ ಜೀವನು.

ಪ್ರಶ್ನೆ:—ಬಂಧಮೋಕ್ಷಗಳು ಸ್ವಭಾವದಿಂದಾಗುತ್ತವೋ ಅಥವಾ ನಿಮಿತ್ತದಿಂದಲೋ ?

ಉತ್ತರ :—ನಿಮಿತ್ತದಿಂದ ; ಏಕೆಂದರೆ, ಸ್ವಭಾವದಿಂದಲೇ ಉಂಟಾಗುತ್ತಿದ್ದರೆ, ಬಂಧ ಮತ್ತು ಮುಕ್ತಿಯ ನಿವೃತ್ತಿಯೇ ಎಂದಿಗೂ ಆಗುತ್ತಿರಲಿಲ್ಲ.

ಪ್ರಶ್ನೆ :—

ನ ನಿರೋಧೋ ನ ಚೋತ್ಪತ್ತಿರ್ನಬದ್ಧೋ ನ ಚ ಸಾಧಕಃ ।
ನ ಮುಮುಕ್ಷುರ್ನ ವೈ ಮುಕ್ತ ಇತ್ಯೇಷಾ ಪರಮಾರ್ಥತಾ ॥

[ಗೌಡಪಾದೀಯಕಾರಿಕಾ ಪ್ರ. ೨, ಕಾ. ೩೨]

ಈ ಶ್ಲೋಕವು ಮಾಂಡೂಕ್ಯೋಪನಿಷತ್ತಿನ ಮೇಲೆ ರಚಿಸಲ್ಪಟ್ಟಿದೆ. ಜೀವನು ಬ್ರಹ್ಮನಾಗಿರುವುದರಿಂದ ವಸ್ತುತಃ ಜೀವನನಿರೋಧವಾಗದು ; ಅಂದರೆ, ಎಂದೂ ಆವರಣದಲ್ಲಿ ಬರಲಿಲ್ಲ ; ಜನ್ಮವೆತ್ತುವುದಿಲ್ಲ ; ಬಂಧವಿಲ್ಲ. ಮತ್ತು ಅವನು ಸಾಧಕ, ಅಂದರೆ, ಸಾಧನೆ ಮಾಡುವವನೂ ಅಲ್ಲ. ಬೆಡುಗಡೆ ಹೊಂದಲು ಬಯಸುವುದೂ ಇಲ್ಲ. ಮತ್ತು ಅವನಿಗೆ ಎಂದೂ ಮುಕ್ತಿಯೂ ಇಲ್ಲ. ಏಕೆಂದರೆ, ಪಾರಮಾರ್ಥಿಕವಾಗಿ ಬಂಧನವೇ ಇಲ್ಲದಿರುವಾಗ ಮುಕ್ತನಾಗುವುದೆಂದರೇನು ?

ಉತ್ತರ :—ನವೀನ ವೇದಾಂತಿಗಳ ಈ ಮಾತು ಸತ್ಯವಲ್ಲ. ಏಕೆಂದರೆ, ಜೀವನಸ್ವರೂಪವು ಅಲ್ಪವಾಗಿರುವುದರಿಂದ ಅವನು, ಆವರ

ಣಕ್ಕೆ ಸಿಕ್ಕುತ್ತಾನೆ. ದೇಹದೊಂದಿಗೆ ಪ್ರಕಟವಾಗಿ ಜನ್ಮವೆತ್ತುತ್ತಾನೆ. ಪಾಪರೂಪವಾದ ಕರ್ಮಗಳ ಫಲಭೋಗವೆಂಬ ಬಂಧನದಲ್ಲಿ ಸಿಕ್ಕಿಕೊಳ್ಳುತ್ತಾನೆ; ಅದನ್ನು ಬಿಡಿಸಿಕೊಳ್ಳಲು ಸಾಧನಮಾಡುತ್ತಾನೆ. ದುಃಖದಿಂದ ಬಿಡುಗಡೆ ಹೊಂದಬಯಸುತ್ತಾನೆ. ಮತ್ತು ದುಃಖದಿಂದ ಮುಕ್ತನಾಗಿ, ಪರಮಾನಂದ ಪರಮೇಶ್ವರನನ್ನು ಹೊಂದಿ ಮೋಕ್ಷವನ್ನು ಅನುಭವಿಸುತ್ತಾನೆ.

ಪ್ರಶ್ನೆ:—ಇವೆಲ್ಲಾ ದೇಹಾಂತಃಕರಣಗಳ ಧರ್ಮಗಳೇ ಹೊರತು ಜೀವನದಲ್ಲ. ಏಕೆಂದರೆ, ಜೀವನಾದರೋ ಪಾಪಪುಣ್ಯರಹಿತನಾದ ಸಾಕ್ಷಿಮಾತ್ರನು. ಶೀತೋಷ್ಣಾದಿಗಳು ಶರೀರಾದಿಗಳ ಧರ್ಮಗಳಾಗಿರುತ್ತವೆ. ಆತ್ಮನು ನಿರ್ಲಿಪ್ತನು.

ಉತ್ತರ:—ದೇಹ ಮತ್ತು ಅಂತಃಕರಣ, ಎರಡೂ ಜಡ, ಅದಕ್ಕೆ ಶೀತೋಷ್ಣಗಳ ಹೊಂದುವಿಕೆ ಮತ್ತು ಅನುಭವವಿಲ್ಲ. ಚೇತನರಾದ ಮಾನವ ಮೊದಲಾದ ಯಾವ ಜೀವಧಾರಿಗಳು ಅವನ್ನು ಸ್ಪರ್ಶಿಸುತ್ತಾರೋ, ಅವರಿಗೇ ಶೀತೋಷ್ಣಗಳ ಜ್ಞಾನ ಮತ್ತು ಅನುಭವವುಂಟಾಗುತ್ತದೆ. ಹಾಗೆಯೇ ಪ್ರಾಣಗಳೂ ಜಡವೇ. ಅದಕ್ಕೆ ಹಸಿವು ಬಾಯಾರಿಕೆಗಳಿಲ್ಲ. ಆದರೆ, ಪ್ರಾಣಸಹಿತನಾದ ಜೀವನಿಗೆ ಹಸಿವು ಬಾಯಾರಿಕೆಗಳಾಗುತ್ತವೆ. ಅದೇ ರೀತಿ ಮನಸ್ಸು ಜಡ. ಅದಕ್ಕೆ ಹರ್ಷವಾಗಲಿ, ಶೋಕವಾಗಲಿ, ಆಗಲಾರದು. ಆದರೆ, ಮನಸ್ಸಿನ ಮೂಲಕ ಜೀವನು ಹರ್ಷಶೋಕ, ಸುಖದುಃಖಗಳನ್ನನುಭವಿಸುತ್ತಾನೆ. ಹೊರಗಿನ ಸಾಧನಗಳಾದ ಕಿವಿ, ಮೊದಲಾದ ಇಂದ್ರಿಯಗಳಿಂದ, ಒಳ್ಳೆಯ ಅಥವಾ ಕೆಟ್ಟಶಬ್ದ ಮೊದಲಾದ ವಿಷಯಗಳನ್ನು ಗ್ರಹಿಸಿ, ಜೀವನು ಯಾವರೀತಿ ಸುಖಿ, ಅಥವಾ ದುಃಖಿಯಾಗುತ್ತಾನೋ, ಅದೇ ರೀತಿ, ಅಂತಃಕರಣದಿಂದ, ಅಂದರೆ—ಮನಸ್ಸು, ಬುದ್ಧಿ, ಚಿತ್ತ, ಅಹಂಕಾರ ಇವುಗಳಿಂದ ಸಂಕಲ್ಪವಿಕಲ್ಪ, ನಿಶ್ಚಯ, ಸ್ಮರಣ, ಮತ್ತು ಅಭಿಮಾನ ಇವುಗಳ ಸ್ಪರ್ಶವಾಗಿ, ದಂಡನೆ ಅಥವಾ ಮಾನ್ಯತೆಗೆ ಭಾಗಿಯೂ ಆಗುತ್ತಾನೆ. ಕತ್ತಿಯಿಂದ ಕೊಲ್ಲುವವನೇ ದಂಡನೀಯನಾಗುತ್ತಾನೆಯೇ ಹೊರತು, ಕತ್ತಿ ದಂಡನೀಯವಾಗುವುದಿಲ್ಲ: ಹಾಗೆಯೇ ದೇಹ, ಇಂದ್ರಿಯ, ಅಂತಃಕರಣ ಮತ್ತು ಪ್ರಾಣಗಳಿಂದ

ಒಳ್ಳೆಯ ಅಥವಾ ಕೆಟ್ಟ ಕರ್ಮಗಳನ್ನು ಮಾಡುವ ಜೀವನು ಸುಖ, ದುಃಖಗಳನ್ನನುಭವಿಸುತ್ತಾನೆ- ಜೀವನು ಕರ್ಮಗಳಿಗೆ ಸಾಕ್ಷಿಯಲ್ಲ. ಆದರೆ ಕರ್ತೃವೂ, ಭೋಕ್ತೃವೂ ಆಗಿದ್ದಾನೆ- ಕರ್ಮಗಳ ಸಾಕ್ಷಿಯಾದರೋ ಒಬ್ಬ ಅದ್ವಿತೀಯನಾದ ಪರಮಾತ್ಮನು. ಕರ್ಮಮಾಡುವ ಜೀವನೇ ಕರ್ಮಗಳಲ್ಲಿ ಲಿಪ್ತನಾಗುತ್ತಾನೆ; ಸಾಕ್ಷಿಯಾದ ಪರಮಾತ್ಮನು ಲಿಪ್ತನಾಗನು.

ಪ್ರಶ್ನೆ:—ಜೀವನು ಬ್ರಹ್ಮನ ಪ್ರತಿಬಿಂಬನಾಗಿದ್ದಾನೆ. ಕನ್ನಡಿಯು ಒಡೆದುಹೋದಮಾತ್ರಕ್ಕೆ ಪ್ರತಿಬಿಂಬಕ್ಕೆ ಯಾವಹಾನಿಯೂ ಉಂಟಾಗದಿರುವಂತೆಯೇ, ಅಂತಃಕರಣದಲ್ಲಿ ಬಿದ್ದ ಬ್ರಹ್ಮನ ಪ್ರತಿಬಿಂಬಿಯಾದ ಜೀವನು, ಅಂತಃಕರಣದ ಉಪಾಧಿಯಿರುವವರೆಗೆ ಮಾತ್ರ ಇರುತ್ತದೆ. ಯಾವಾಗ ಅಂತಃಕರಣವು ನಾಶಹೊಂದುವುದೋ ಆಗಲೇ ಜೀವನು ಮುಕ್ತನು.

ಉತ್ತರ:—ಇದು ಹುಡುಗಾಟಿಕೆಯ ಮಾತಾಗಿದೆ. ಏಕೆಂದರೆ ಸಾಕಾರವಸ್ತುಗಳಲ್ಲಿ ಸಾಕಾರವಸ್ತುಗಳ ಪ್ರತಿಬಿಂಬವು ಬೀಳುತ್ತದೆ. ಮುಖ ಮತ್ತು ಕನ್ನಡಿ ಎರಡೂ ಸಾಕಾರವಾಗಿವೆ. ಬೇರೆಬೇರೆಯೂ ಆಗಿವೆ. ಬೇರೆ ಬೇರೆಯಲ್ಲದಿದ್ದರೂ ಪ್ರತಿಬಿಂಬ ಬೀಳಲಾರದು. ಬ್ರಹ್ಮನು ನಿರಾಕಾರನೂ, ಸರ್ವವ್ಯಾಪಕನೂ ಆಗಿರುವದರಿಂದ ಅವನಿಗೆ ಪ್ರತಿಬಿಂಬವೇ ಉಂಟಾಗಲಾರದು.

ಪ್ರಶ್ನೆ:—ನೋಡಿರಿ, ಆಳವಾದ ತಿಳಿನೀರಿನಲ್ಲಿ, ನಿರಾಕಾರವೂ, ವ್ಯಾಪಕವೂ ಆದ ಆಕಾಶವು ಪ್ರತಿಬಿಂಬಿಸುತ್ತದೆ. ಹಾಗೆಯೇ ಸ್ವಚ್ಛವಾದ ಅಂತಃಕರಣದಲ್ಲಿ ಪರಮಾತ್ಮನ ಆಭಾಸವು ಉಂಟಾಗುತ್ತದೆ. ಆದುದರಿಂದ ಇದಕ್ಕೆ ಚಿದಾಭಾಸವೆಂದು ಹೇಳುತ್ತಾರೆ.

ಉತ್ತರ:—ಇದು ಹುಡುಗಬುದ್ಧಿಯ ಪೊಳ್ಳುಕೂಗು. ಏಕೆಂದರೆ, ಆಕಾಶವು ದೃಶ್ಯವಸ್ತುವೇ ಅಲ್ಲದಿರುವಾಗ ಅದನ್ನು ಯಾರಾದರೂ ಕಣ್ಣಿನಿಂದ ನೋಡುವುದೆಂತು?

ಪ್ರಶ್ನೆ:—ಮೇಲೆ ನೀಲವಾಗಿ, ಮೊಬ್ಬಾಗಿ ಕಾಣುವುದು ಆಕಾಶವೋ ಅಲ್ಲವೋ?

ಉತ್ತರ :—ಅಲ್ಲ.

ಪ್ರಶ್ನೆ :—ಹಾಗಾದರೆ ಅದೇನು ?

ಉತ್ತರ :—ಪೃಥಿವಿ, ಜಲ ಮತ್ತು ಅಗ್ನಿಯ ತ್ರಸರೇಣುಗಳು ಬೇರೆ ಬೇರೆಯಾಗಿ ಕಾಣುತ್ತವೆ. ಅದರಲ್ಲಿ ಕಾಣುವನೀಲತ್ವವು ಸುರಿಯ ದಂತಹ ಒಟ್ಟಾದ ನೀರು. ಪೃಥಿವಿಯಿಂದ ಹಾರಿ, ವಾಯುವಿನಲ್ಲಿ ಹಾರಾಡುತ್ತಿರುವ ಧೂಳು, ಮೊಬ್ಬುಮೊಬ್ಬಾಗಿ ಕಾಣುತ್ತದೆ. ಮತ್ತು ಅದರ ಪ್ರತಿಬಿಂಬವೇ ನೀರಿನಲ್ಲಿ ಅಥವಾ ಕನ್ನಡಿಯಲ್ಲಿ ಕಾಣಿಸುತ್ತ ದೆಯೇ ಹೊರತು, ಆಕಾಶದ ಪ್ರತಿಬಿಂಬವೆಂದಿಗೂ ಅಲ್ಲ.

ಪ್ರಶ್ನೆ :—ಘಟಾಕಾಶ, ಮಠಾಕಾಶ, ಮೇಘಾಕಾಶ, ಮಹದಾ ಕಾಶದ ಭೇದಗಳು ವ್ಯವಹಾರದಲ್ಲಿರುವಂತೆಯೇ, ಬ್ರಹ್ಮಾಂಡ ಮತ್ತು ಅಂತಃಕರಣ ಉಪಾಧಿಭೇದದಿಂದ ಬ್ರಹ್ಮನಿಗೆ, ಈಶ್ವರ ಮತ್ತು ಜೀವ ಎಂಬ ಹೆಸರುಗಳುಂಟಾಗುತ್ತವೆ. ಘಟಾದಿಗಳು ನಷ್ಟವಾದೊಡನೆಯೇ ಮಹದಾಕಾಶವೆಂದೇ ಹೇಳಲ್ಪಡುತ್ತದೆ.

ಉತ್ತರ :—ಇದೂ ಅವಿದ್ವಾಂಸರ ಮಾತೇ. ಏಕೆಂದರೆ, ಆಕಾಶ ವೆಂದಿಗೂ ಛಿನ್ನಭಿನ್ನವಾಗಲಾರದು, ವ್ಯವಹಾರದಲ್ಲಿಯೂ ಕೂಡ ಗಡಿಗೆಯನ್ನು ತೆಗೆದುಕೊಂಡುಬಾ' ಎಂಬ ಪ್ರಯೋಗವು ಕಂಡು ಬರುತ್ತದೆಯೇ ಹೊರತು, 'ಗಡಿಗೆಯೊಳಗಿನ ಆಕಾಶವನ್ನು ತೆಗೆದು ಕೊಂಡು ಬಾ' ಎಂದು ಹೇಳುವುದಿಲ್ಲ. ಆದುದರಿಂದ ಈ ಮಾತೂ ಸರಿಯಲ್ಲ.

ಪ್ರಶ್ನೆ :—ಸಮುದ್ರ ಮಧ್ಯದಲ್ಲಿ ಮೀನುಗಳೂ, ಕ್ರಿಮಿಗಳೂ, ಆಕಾಶದಲ್ಲಿ ಪಕ್ಷಿಗಳು ಮೊದಲಾದುವೂ, ಸಂಚರಿಸುತ್ತಿರುವಂತೆಯೇ, ಚಿದಾಕಾರನಾದ ಬ್ರಹ್ಮನಲ್ಲಿ ಅಂತಕರಣಗಳೆಲ್ಲವೂ ತಿರುಗುತ್ತಿರುತ್ತವೆ. ಅವು, ತಾವು ಜಡವಾಗಿದ್ದರೂ, ಬೆಂಕಿಯಿಂದ ಲೋಹವು ಬಿಸಿಯಾಗು ವಂತೆ, ಸರ್ವವ್ಯಾಪಕನಾದ ಬ್ರಹ್ಮನ ಅಸ್ತಿತ್ವದಿಂದ ಚೈತನ್ಯವುಳ್ಳದಾ ಗುತ್ತದೆ. ಅವು ಸಂಚರಿಸುತ್ತಿದ್ದರೂ, ಆಕಾಶವೂ ಬ್ರಹ್ಮನೂ ನಿಶ್ಚಲ ವಾಗಿರುತ್ತವೆ. ಆ ರೀತಿ ಜೀವನನ್ನು ಬ್ರಹ್ಮನೆಂದು ಒಪ್ಪುವುದರಲ್ಲಿ ಯಾವ ದೋಷವೂ ಬರುವುದಿಲ್ಲ.

ಉತ್ತರ :—ನೀವಿತ್ತ ದೃಷ್ಟಾಂತವೂ ಸತ್ಯವಲ್ಲ. ಏಕೆಂದರೆ, ಸರ್ವವ್ಯಾಪಿಯಾದ ಬ್ರಹ್ಮನು ಅಂತಃಕರಣದಲ್ಲಿ ಪ್ರಕಾಶಿಸಿ ಜೀವನಾಗುವುದಾದರೆ, ಅವನಲ್ಲಿ ಸರ್ವಜ್ಞತ್ವಾದಿ ಗುಣಗಳು ಇರುತ್ತವೋ ಇಲ್ಲವೋ ? ಆವರಣವಿರುವದರಿಂದ ಸರ್ವಜ್ಞತ್ವವಿರುವದಿಲ್ಲವೆಂದು ಹೇಳುವುದಾದರೆ, ಬ್ರಹ್ಮನು ಆವರಿಸಲ್ಪಟ್ಟವನೂ, ಖಂಡಿಸಲ್ಪಟ್ಟವನೂ ಆಗಿದ್ದಾನೋ ಅಥವಾ ಅಖಂಡನೋ? ಅಖಂಡನೆನ್ನುವುದಾದರೆ, ಮಧ್ಯದಲ್ಲಿ ಯಾವನೊಬ್ಬನೂ, ಆವರಣವನೊಡ್ಡಲಾರನು. ಹಾಗೆ ಆವರಣವಿಲ್ಲದಿದ್ದ ಮೇಲೆ ಸರ್ವಜ್ಞತ್ವವೇಕಿಲ್ಲ. ತನ್ನ ಸ್ವರೂಪವಮ್ಮು ಮರೆತು, ಅಂತಃಕರಣದೊಡನೆ ಚಲಿಸುತ್ತಿರುವಂತೆ ತೋರುವನೇ ಹೊರತು, ಸ್ವರೂಪದಿಂದಲ್ಲ, ಎನ್ನುವಿರಾದರೆ, ಸ್ವತಃ ಚಲಿಸದಿದ್ದಲ್ಲಿ, ಅಂತಃಕರಣವು ತಾನು ಮೊದಲಿದ್ದ ಎಷ್ಟೆಷ್ಟು ಪ್ರದೇಶವನ್ನು ಬಿಡುತ್ತದೋ ಮತ್ತು ಮುಂದೆ ಮುಂದೆ ಎಲ್ಲೆಲ್ಲಿ ಜರುಗುತ್ತಾ ಹೋಗುವುದೋ, ಅಲ್ಲಲ್ಲಿನ ಬ್ರಹ್ಮನು ಭ್ರಾಂತನೂ, ಅಜ್ಞಾನಿಯೂ ಆಗಿ ಹೋಗುವನು. ಮತ್ತು ಎಷ್ಟೆಷ್ಟು ಭಾಗ ಬಿಡುಗಡೆ ಹೊಂದುವುದೋ ಅಲ್ಲಲ್ಲಿನ ಬ್ರಹ್ಮನು ಜ್ಞಾನಿಯೂ ಪವಿತ್ರನೂ, ಮುಕ್ತನೂ, ಆಗುತ್ತಾ ಹೋಗುವನು. ಹೀಗೆಯೇ ಬ್ರಹ್ಮಾಂಡಬ್ರಹ್ಮನನ್ನು ಅಂತಃಕರಣಗಳು ಎಲ್ಲೆಲ್ಲಿಯೂ ಕೆಡಿಸುತ್ತಾ ಹೋಗುವುದು. ಮತ್ತು ಬಂಧಮೋಕ್ಷಗಳೂ ಸಹ ಕ್ಷಣಕ್ಷಣಕ್ಕೂ ಆಗುವುವು. ನಿಮ್ಮ ಹೇಳಿಕೆಗನುಸಾರ, ಹಾಗೆ ನಡೆಯುವುದಾದಲ್ಲಿ ಯಾವ ಜೀವನಿಗೂ ತಾನು ಮೊದಲು ಕಂಡು ಹೇಳಿದುದರ ನೆನಪಿರುತ್ತಿರಲಿಲ್ಲ. ಏಕೆಂದರೆ, ಯಾವ ಬ್ರಹ್ಮನು ನೋಡಿದನೋ ಅವನು ಉಳಿದಿಲ್ಲ. ಆದುದರಿಂದ ಬ್ರಹ್ಮಜೀವನೂ ಜೀವಬ್ರಹ್ಮನೂ ಎಂದಿಗೂ ಒಂದಾಗದು. ಯಾವಾಗಲೂ ಬೇರೆ ಬೇರೆಯೇ ಇರುತ್ತವೆ.

ಪ್ರಶ್ನೆ;—ಇವೆಲ್ಲಾ ಅಧ್ಯಾರೋಪಮಾತ್ರವಾಗಿರುತ್ತದೆ. ಅಂದರೆ, ಒಂದು ವಸ್ತುವಿನಲ್ಲಿ ಮತ್ತೊಂದು ವಸ್ತುವನ್ನಾರೋಪಿಸುವುದಕ್ಕೆ, ಅಧ್ಯಾರೋಪವೆಂದು ಹೆಸರು. ಹಾಗೆಯೇ ಬ್ರಹ್ಮತತ್ವದಲ್ಲಿ ಜಗತ್ತನ್ನೂ, ಅದರ ವ್ಯವಹಾರಗಳನ್ನೂ ಅಧ್ಯಾರೋಪಮಾಡುವುದರಿಂದ ಜಿಜ್ಞಾ

ಸುವಿಗೆ ಜ್ಞಾನವುಂಟಾಗುತ್ತದೆ. ವಸ್ತುತಃ ಎಲ್ಲವೂ ಬ್ರಹ್ಮವೇ ಆಗಿರುತ್ತದೆ.

ಉತ್ತರ :—ಅಧ್ಯಾರೋಪಮಾಡುವವನಾವನು ?

ಪ್ರಶ್ನೆ:—ಜೀವನು.

ಉತ್ತರ :—ಯಾವನನ್ನು ಜೀವನೆನ್ನುತ್ತೀರಿ ?

ಪ್ರಶ್ನೆ:—ಅಂತಃಕರಣಾವಚ್ಛಿನವಾದ ಚೇತನನನ್ನು.

ಉತ್ತರ :—ಅಂತಃಕರಣಾವಚ್ಛಿನ್ನವಾದ ಚೇತನವು ಬೇರೆಯೋ ಅಥವಾ ಆದೇ ಬ್ರಹ್ಮನೋ ?

ಪ್ರಶ್ನೆ:—ಆದೇ ಬ್ರಹ್ಮನೆ ?

ಉತ್ತರ :—ಬ್ರಹ್ಮನೇ ತನ್ನಲ್ಲಿ ಜಗತ್ತಿನ ಸುಳ್ಳುಕಲ್ಪನೆಯನ್ನು ಮಾಡಿಕೊಂಡನೊ ?

ಪ್ರಶ್ನೆ:—ಹೌದು. ಇದರಿಂದ ಬ್ರಹ್ಮನಿಗೇನು ಕೊರತೆ ?

ಉತ್ತರ :—ಸುಳ್ಳುಕಲ್ಪನೆಯನ್ನು ಮಾಡುವವನು ಸುಳ್ಳುಗಾರನಾಗುವುದಿಲ್ಲವೋ ?

ಪ್ರಶ್ನೆ:—ಇಲ್ಲ. ಮನಸ್ಸಿನಿಂದ ಕಲ್ಪಿತವಾದುದೂ, ಮಾತಿನಿಂದ ಹೇಳುವುದೂ ಎಲ್ಲಾ ಸುಳ್ಳೇ.

ಉತ್ತರ :—ಹಾಗಾದರೆ ಮನಸ್ಸಿನಿಂದಲೂ, ಮಾತಿನಿಂದಲೂ, ಸುಳ್ಳುಕಲ್ಪನೆಗಳನ್ನು ಮಾಡಿಕೊಂಡು, ಸುಳ್ಳು ಹೇಳುವ ಬ್ರಹ್ಮನು ಕಲ್ಪಿತನೂ, ಸುಳ್ಳುಗಾರನೂ, ಆದನೋ ಇಲ್ಲವೊ ?

ಪ್ರಶ್ನೆ:—ಆಗಿರಲಿ. ನಮಗದು ಬೇಕಾದುದೇ ಆಗಿರುತ್ತದೆ.

ಉತ್ತರ :—ಎಲೈ ಅಸದ್ವೇದಾಂತಿಗಳೆ ! ನೀವು, ಸತ್ಯಸ್ವರೂಪನೂ, ಸತ್ಯಕಾಮನೂ, ಸತ್ಯಸಂಕಲ್ಪನೂ, ಆದ ಪರಮಾತ್ಮನನ್ನು ಸುಳ್ಳುಗಾರನನ್ನಾಗಿ ಮಾಡಿಬಿಟ್ಟಿರಿ. ಇದು ನಿಮ್ಮ ದುರ್ಗತಿಗೆ ಕಾರಣವಲ್ಲವೆ ? ಯಾವ ಉಪನಿಷತ್ತಿನಲ್ಲಿ, ಯಾವ ಸೂತ್ರದಲ್ಲಿ, ಅಥವಾ ಯಾವ ವೇದದಲ್ಲಿ, ಪರಮಾತ್ಮನು ಮಿಥ್ಯಾಸಂಕಲ್ಪನೂ, ಮಿಥ್ಯಾ

ವಾದಿಯೂ ಎಂದು ಹೇಳಿರುತ್ತದೆ? ನಿಮ್ಮ ಮಾತು, 'ಕಳ್ಳನು ಕೊತ್ವಾಲನನ್ನು ದಂಡಿಸಿದ'ನೆಂಬ ಗಾದೆಗನುಕೂಲವಾಗಿದೆ. ಕೊತ್ವಾಲನು ಕಳ್ಳನನ್ನು ದಂಡಿಸಬೇಕಾದುದೇನೋ ಯುಕ್ತ. ಆದರೆ, ಕಳ್ಳನು ಕೊತ್ವಾಲನಿಗೆ ದಂಡವಿಧಿಸುವುದು ವಿಪರೀತಪರಿಸ್ಥಿತಿ. ಹಾಗೆಯೇ ನೀವು ಮಿಥ್ಯಾಸಂಕಲ್ಪರೂ, ಮಿಥ್ಯಾವಾದಿಗಳೂ ಆಗಿ, ಆ ನಿಮ್ಮ ದೋಷವನ್ನೇ ಬ್ರಹ್ಮನಲ್ಲಿ ವೃಥಾ ಆರೋಪಿಸುತ್ತೀರಿ. ಬ್ರಹ್ಮನು ಮಿಥ್ಯಾಜ್ಞಾನಿಯೂ, ಮಿಥ್ಯಾವಾದಿಯೂ, ಮಿಥ್ಯಾಕಾರಿಯೂ ಆಗಿರುವುದಾದರೆ, ಅನಂತಬ್ರಹ್ಮನೇ ಹಾಗಾಗಬೇಕಾಗುತ್ತದೆ; ಏಕೆಂದರೆ, ಆತನು ಏಕರಸನು. ಆವನು ಸತ್ಯಸ್ವರೂಪನೂ, ಸತ್ಯವನ್ನು ಮಾಡಿಸುವವನೂ, ಸತ್ಯವಾದಿಯೂ. ಸತ್ಯವನ್ನು ಆಚರಿಸುವವನೂ ಆಗಿದ್ದಾನೆ. ಈ ದೋಷಗಳೆಲ್ಲಾ ನಿಮ್ಮವೇ ಹೊರತು ಬ್ರಹ್ಮನವಲ್ಲ. ನೀವು ಯಾವುದನ್ನು ವಿದ್ಯೆಯೆಂದು ಹೇಳುತ್ತೀರೋ ಆದು ಅವಿದ್ಯೆಯಾಗಿರುತ್ತದೆ. ಮತ್ತೆ ನಿಮ್ಮ ಅಧ್ಯಾರೋಪವೂ ಸುಳ್ಳೇ. ಏಕೆಂದರೆ, ತಾವು ಬ್ರಹ್ಮನಲ್ಲದಿದ್ದರೂ ತಮ್ಮನ್ನು ಬ್ರಹ್ಮನೆಂದೂ, ಬ್ರಹ್ಮನನ್ನು ಜೀವನೆಂದೂ ನಂಬಿಕೊಂಡಿರುವುದು ಮಿಥ್ಯಾಜ್ಞಾನವಲ್ಲದೆ ಮತ್ತೇನು? ಸರ್ವವ್ಯಾಪಕನಾಗಿರುವವನು ಪರಿಚ್ಛಿನ್ನನಾಗಿ ಅಜ್ಞಾನದಲ್ಲಿಯೂ, ಬಂಧನದಲ್ಲಿಯೂ, ಎಂದಿಗೂ ಬೀಳಲಾರನು. ಏಕೆಂದರೆ, ಅಜ್ಞಾನಿಯೂ, ಪರಿಚ್ಛಿನ್ನನೂ, ಏಕದೇಶಿಯೂ, ಅಲ್ಪಸ್ವರೂಪನೂ, ಅಲ್ಪಜ್ಞನೂ ಆಗಿರುವವನು ಜೀವನೇ ಹೊರತು, ಸರ್ವಜ್ಞನೂ ಸರ್ವವ್ಯಾಪಕನೂ ಆದ ಬ್ರಹ್ಮನಲ್ಲ.

ಇನ್ನು ಮುಂದೆ ಮುಕ್ತಿ ಬಂಧನಗಳನ್ನು ವರ್ಣಿಸುತ್ತೇವೆ

ಪ್ರಶ್ನೆ:—ಯಾವುದನ್ನು ಮೋಕ್ಷವೆನ್ನುತ್ತಾರೆ?

ಉತ್ತರ:—

ಮುಂಚಂತಿ ಪೃಥಗ್ಭವಂತಿ ಜನಾ ಯಸ್ಯಾಂ ಸಾ ಮುಕ್ತಿಃ।

ಯಾವುದರಲ್ಲಿ ಬಿಡುಗಡೆಯಾಗುವುದೋ, ಅದಕ್ಕೆ ಮುಕ್ತಿಯೆಂದು ಹೆಸರು. ಪ್ರಶ್ನೆ:—ಯಾವುದರಿಂದ ಬಿಡುಗಡೆ? ಉತ್ತರ:—ಯಾವುದರಿಂದ ಬಿಡುಗಡೆ ಹೊಂದಲು ಜೀವರೆಲ್ಲರೂ ಇಚ್ಛಿಸುತ್ತಾರೋ,

ಅದರಿಂದ. ಪ್ರಶ್ನೆ :—ಯಾವುದರಿಂದ ಬಿಡುಗಡೆ ಹೊಂದ ಬಯಸುತ್ತಾರೆ? ಉತ್ತರ :—ಯಾವುದರಿಂದ ವೈರಾಗಬಯಸುತ್ತಾರೋ ಅದರಿಂದ. ಪ್ರಶ್ನೆ :—ಯಾವುದರಿಂದ ವೈರಾಗಬಯಸುತ್ತಾರೆ? ಉತ್ತರ :—ದುಃಖದಿಂದ. ಪ್ರಶ್ನೆ :—ಬಿಡುಗಡೆಯಾಗಿ ಏನನ್ನು ಹೊಂದುತ್ತಾರೆ, ಮತ್ತು ಎಲ್ಲಿರುತ್ತಾರೆ? ಉತ್ತರ :—ಸುಖವನ್ನು ಹೊಂದುತ್ತಾರೆ ಮತ್ತು ಬ್ರಹ್ಮನಲ್ಲಿರುತ್ತಾರೆ.

ಪ್ರಶ್ನೆ :—ಮೋಕ್ಷ-ಬಂಧನಗಳು ಯಾವ ಯಾವ ಸಾಧನಗಳಿಂದ ಪ್ರಾಪ್ತವಾಗುತ್ತದೆ?

ಉತ್ತರ :—ಪರಮಾತ್ಮನ ಆಜ್ಞೆಯನ್ನು ಪಾಲಿಸುವುದು; ಅವಿದ್ಯೆ, ಅಧರ್ಮ, ದುಃಸಹವಾಸ, ದುಃಸಂಸ್ಕಾರ, ದುರ್ವ್ಯಸನ ಇವುಗಳಿಂದ ದೂರವಾಗಿರುವುದು; ಸತ್ಯಭಾಷಣ, ಪರೋಪಕಾರ, ವಿದ್ಯೆ, ಪಕ್ಷಪಾತರಹಿತವಾದ ನ್ಯಾಯಧರ್ಮವನ್ನು ವೃದ್ಧಿಪಡಿಸುವುದು; ಹಿಂದೆ ಹೇಳಿದಂತೆ ಪರಮಾತ್ಮನ ಸ್ತುತಿಪ್ರಾರ್ಥನೋಪಾಸನೆಗಳನ್ನು, ಅಂದರೆ, ಯೋಗಾಭ್ಯಾಸವನ್ನು ಮಾಡುವುದು; ವಿದ್ಯಾಭ್ಯಾಸ, ವಿದ್ಯಾದಾನ, ಮತ್ತು ಧರ್ಮದಿಂದ ಪುರುಷಾರ್ಥಮಾಡುತ್ತಾ ಜ್ಞಾನವನ್ನು ವೃದ್ಧಿಪಡಿಸಿಕೊಳ್ಳುವುದು; ಸರ್ವಶ್ರೇಷ್ಠ ಸಾಧನಗಳನ್ನು ಅವಲಂಬಿಸುವುದು; ಮತ್ತು ಮಾಡುವುದನ್ನೆಲ್ಲಾ ಪಕ್ಷಪಾತರಹಿತವಾಗಿ, ನ್ಯಾಯಧರ್ಮಾನುಸಾರವಾಗಿಯೇ ಮಾಡುವುದು; ಈ ಮೊದಲಾದ ಸಾಧನಗಳಿಂದ ಮೋಕ್ಷವೂ, ಮತ್ತು ಈಶ್ವರಾಜ್ಞಾಭಂಗ ಮೊದಲಾದ ಇದಕ್ಕೆ ವಿರುದ್ಧವಾದ ಕಾರ್ಯಗಳಿಂದ ಬಂಧನವೂ ಉಂಟಾಗುತ್ತದೆ.

ಪ್ರಶ್ನೆ :—ಮುಕ್ತಿಯಲ್ಲಿ ಜೀವನು ಲಯ ಹೊಂದುತ್ತಾನೋ ಅಥವಾ ಇರುತ್ತಾನೋ? ಉತ್ತರ :—ಇರುತ್ತಾನೆ. ಪ್ರಶ್ನೆ :—ಎಲ್ಲಿರುತ್ತಾನೆ? ಉತ್ತರ :—ಬ್ರಹ್ಮನಲ್ಲಿ. ಪ್ರಶ್ನೆ :—ಬ್ರಹ್ಮನೆಲ್ಲಿದ್ದಾನೆ? ಮತ್ತು ಆ ಮುಕ್ತಜೀವನು ಒಂದೆಡೆಯಿರುತ್ತಾನೋ ಅಥವಾ ಸ್ವೇಚ್ಛಾಚಾರಿಯಾಗಿ ಎಲ್ಲೆಲ್ಲಿಯೂ ಸಂಚರಿಸುತ್ತಾನೋ? ಉತ್ತರ :—ಸರ್ವತ್ರ ಪೂರ್ಣನಾದ ಬ್ರಹ್ಮನಲ್ಲಿಯೇ ಮುಕ್ತಜೀವನು ಅವ್ಯಾಹತಗತಿಯಿಂದ, ಅಂದರೆ ಯಾವ ತಡೆಯೂ ಇಲ್ಲದೆ, ವಿಜ್ಞಾನಾನಂದಪೂರ್ವಕವಾಗಿ ಸ್ವತಂತ್ರವಾಗಿ ಸಂಚರಿಸುತ್ತಿರುತ್ತಾನೆ. ಪ್ರಶ್ನೆ :—ಮುಕ್ತಜೀವನಿಗೆ

ಸ್ಥೂಲಶರೀರವಿರುತ್ತದೊ ಇಲ್ಲವೊ? ಉತ್ತರ:–ಇರುವದಿಲ್ಲ. ಪ್ರಶ್ನೆ:–ಹಾಗಾದರೆ ಅವನು ಸುಖವನ್ನೂ ಆನಂದವನ್ನೂ ಹೇಗೆ ಅನುಭವಿಸುತ್ತಾನೆ? ಉತ್ತರ:–ಅವನ ಸತ್ಸಂಕಲ್ಪ ಮೊದಲಾದ ಸ್ವಾಭಾವಿಕ ಸಾಮರ್ಥ್ಯವೆಲ್ಲವೂ ಇರುತ್ತವೆ. ಭೌತಿಕಸಂಗವಿರುವದಿಲ್ಲ. ಹೇಗೆಂದರೆ—

ಶೃಣ್ವನ್ ಶ್ರೋತ್ರಂ ಭವತಿ ಸ್ಪರ್ಶಯನ್ತ್ವಗ್ಭವತಿ
ಪಶ್ಯನ್ ಚಕ್ಷುರ್ಭವತಿ ರಸಯನ್ ರಸನಾಭವತಿ
ಜಿಘ್ರನ್ ಘ್ರಾಣಂಭವತಿ ಮನ್ವಾನೋ ಮನೋಭವತಿ
ಚೋದಯನ್ ಬುದ್ಧಿರ್ಭವತಿ ಚೇತಯಂಶ್ಚಿತ್ತಂ ಭವತ್ಯ
ಹಂ ಕುರ್ವಾಣೋಽಹಂಕಾರೋ ಭವತಿ ॥

[ಶತಪಥ. ಕಾ. ೧೪]

ಮೋಕ್ಷದಲ್ಲಿ ಭೌತಿಕ ಶರೀರವಾಗಲಿ, ಇಂದ್ರಿಯಗೋಳಕಗಳಾಗಲಿ, ಜೀವಾತ್ಮನೊಂದಿಗೆ ಇರುವದಿಲ್ಲ. ಆದರೆ, ಅವನ ಸ್ವಾಭಾವಿಕವಾವ ಶುದ್ಧಗುಣಗಳಿರುತ್ತವೆ. ಮುಕ್ತಿಯಲ್ಲಿ ಜೀವಾತ್ಮನು ಕೇಳಲು ಬಯಸಿದಾಗ ಕಿವಿ; ಮುಟ್ಟಲಿಚ್ಛಿಸಿದಾಗ ಚರ್ಮ; ನೋಡುವ ಸಂಕಲ್ಪದಿಂದ ಕಣ್ಣು; ಸವಿನೋಡಲು ನಾಲಿಗೆ; ವಾಸನೆಗೆ ಮೂಗು; ಸಂಕಲ್ಪ ವಿಕಲ್ಪ ಮಾಡುವಾಗ ಮನಸು; ನಿಶ್ಚಯಿಸುವುದಕ್ಕೆ ಬುದ್ಧಿ; ಸ್ಮರಿಸುವುದಕ್ಕೆ ಚಿತ್ತ; ಅಹಂಕಾರಕ್ಕೆ ತನ್ನ ಅಹಂಕಾರರೂಪವಾಗಿಯೂ ಸ್ವಶಕ್ತಿಯಿಂದ ಶಕ್ತಿ—ಆಗುತ್ತಾನೆ. ಮತ್ತು ಸಂಕಲ್ಪ ಮಾತ್ರ ಶರೀರವಾಗುತ್ತದೆ. ಶರೀರದಲ್ಲಿದ್ದು ಇಂದ್ರಿಯಗೋಳಕಗಳಿಂದ ತನ್ನ ಕಾರ್ಯವನ್ನು ನಡೆಯಿಸುವಂತೆ ಜೀವನು ಮುಕ್ತಿಯಲ್ಲಿ ತನ್ನ ಶಕ್ತಿಯಿಂದ ಸಮಸ್ತ ಆನಂದವನ್ನೂ ಅನುಭವಿಸುತ್ತಾನೆ.

ಪ್ರಶ್ನೆ:—ಅವನ ಶಕ್ತಿ ಎಷ್ಟು ವಿಧ ಮತ್ತು ಎಷ್ಟಿದೆ?

ಉತ್ತರ:—ಮುಖ್ಯವಾಗಿ ಒಂದು ವಿಧವಾದ ಶಕ್ತಿಯಿರುತ್ತದೆ. ಆದರೆ, ಬಲ, ಪರಾಕ್ರಮ, ಆಕರ್ಷಣೆ, ಪ್ರೇರಣೆ, ಗತಿ, ಭಾಷಣ, ವಿವೇಚನೆ, ಕ್ರಿಯೆ, ಉತ್ಸಾಹ, ಸ್ಮರಣೆ, ನಿಶ್ಚಯ, ಇಚ್ಛೆ, ಪ್ರೇಮ, ದ್ವೇಷ, ಸಂಯೋಗ, ವಿಭಾಗ, ಸಂಯೋಜಕ, ವಿಭಾಜಕ, ಶ್ರವಣ, ಸ್ಪರ್ಶನ, ದರ್ಶನ, ಸ್ವಾದನ, ಗಂಧಗ್ರಹಣ, ಮತ್ತು ಜ್ಞಾನ ಈ

ಇಪ್ಪತ್ತುನಾಲ್ಕು ಬಗೆಯ ಶಕ್ತಿಗಳಿಂದ ಜೀವನು ಕೂಡಿರುತ್ತಾನೆ. ಇದರಿಂದ ಮುಕ್ತಿಯಲ್ಲಿಯೂ ಆನಂದವನ್ನು ಗಳಿಸಿ ಅನುಭವಿಸುತ್ತಾನೆ. ಮುಕ್ತಿಯಲ್ಲಿ ಜೀವನು ಲಯವಾಗಿ ಹೋಗುವುದಾದರೆ, ಮುಕ್ತಿಸುಖವನ್ನು ಯಾರು ಅನುಭವಿಸುತ್ತಿದ್ದರು? ಮತ್ತು ಜೀವನ ನಾಶವೇ ಮುಕ್ತಿಯೆಂದು ತಿಳಿಯುವವರು ಮಹಾಮೂಢರು. ಏಕೆಂದರೆ, ಜೀವನು ದುಃಖಗಳಿಂದ ಬಿಡುಗಡೆ ಹೊಂದಿ, ಆನಂದಸ್ವರೂಪನೂ, ಸರ್ವವ್ಯಾಪಕನೂ, ಅನಂತನೂ ಆದ ಪರಮಾತ್ಮನಲ್ಲಿ ಆನಂದದಿಂದಿರುವುದೇ ಜೀವನ ಮುಕ್ತಿ. ಶಾರೀರಿಕಸೂತ್ರಗಳಲ್ಲಿ ನೋಡಿರಿ :—

ಅಭಾವಂ ಬಾದರಿರಾಹ ಹ್ಯೇವಮ್ ॥

[ವೇದಾಂತ. ೪-೪-೧೦]

ವ್ಯಾಸರ ತಂದೆ ಬಾದರಿಗಳು ಮುಕ್ತಿಯಲ್ಲಿ ಜೀವನ ಮತ್ತು ಮನದ ಅಸ್ತಿತ್ವವನ್ನು ಅಂಗೀಕರಿಸುತ್ತಾರೆ. ಅಂದರೆ—ಪರಾಶರರು ಜೀವನ ಮತ್ತು ಮನದ ಲಯವನ್ನು ಒಪ್ಪುವುದಿಲ್ಲ. ಹಾಗೆಯೇ,

ಭಾವಂ ಜೈಮಿನಿರ್ವಿಕಲ್ಪಾಮನನಾತ್ ॥

[ವೇದಾಂತ. ೪। ೪। ೧೧]

ಮುಕ್ತಪುರುಷನಿಗೆ ಮನಸ್ಸಿನಂತೆಯೇ ಸೂಕ್ಷ್ಮಶರೀರವೂ, ಇಂದ್ರಿಯಗಳೂ, ಪ್ರಾಣ ಮೊದಲಾದುವು ಕೂಡ ಇರುತ್ತವೆಂದು ಆಚಾರ್ಯ ಜೈಮಿನಿಗಳು ಒಪ್ಪುತ್ತಾರೆ. ಆಭಾವವನ್ನಲ್ಲ.

ದ್ವಾದಶಾಹವದುಭಯವಿಧಂ ಬಾದರಾಯಣೋಽತಃ ॥

[ವೇದಾಂತ. ೪-೪-೧೨]

ವ್ಯಾಸಮಹರ್ಷಿಗಳು ಮುಕ್ತಿಯಲ್ಲಿ ಭಾವಾಭಾವಗಳೆರಡನ್ನೂ ಒಪ್ಪುತ್ತಾರೆ. ಅಂದರೆ, ಮುಕ್ತಿಯಲ್ಲಿ ಶುದ್ಧಸಾಮರ್ಥ್ಯಯುಕ್ತ ಜೀವನಿರುತ್ತಾನೆ; ಅಪವಿತ್ರತೆ, ಪಾಪಾಚರಣೆ, ದುಃಖ, ಅಜ್ಞಾನ ಮೊದಲಾದುವು ಇರುವದಿಲ್ಲ—ಎಂದು ಒಪ್ಪುತ್ತಾರೆ.

ಯದಾ ಪಂಚಾವತಿಷ್ಠಂತೇ ಜ್ಞಾನಾನಿ ಮನಸಾ ಸಹ ।
ಬುದ್ಧಿಶ್ಚ ನ ವಿಚೇಷ್ಟತೇ ತಾಮಾಹುಃ ಪರಮಾಂಗತಿಂ ॥

[ಕಠ. ಅ. ೨. ವ. ೬. ಮ. ೧೦]

ಇದು ಉಪನಿಷದ್ವಚನ. ಯಾವಾಗ ಶುದ್ಧವಾದ ಮನದಿಂದ ಕೂಡಿದ ಐದು ಜ್ಞಾನೇಂದ್ರಿಯಗಳು ಜೀವನೊಡನೆ ಇರುತ್ತವೋ, ಮತ್ತು ಬುದ್ಧಿಯ ನಿಶ್ಚಯವು ಸ್ಥಿರವಾಗಿರುವುದೋ ಅದನ್ನು ಪರಮಗತಿ ಅಥವಾ ಮೋಕ್ಷವೆನ್ನುತ್ತಾರೆ.

ಯ ಆತ್ಮಾ ಅಪಹತಪಾಪ್ಮಾ ವಿಜರೋ ವಿಮೃತ್ಯು ರ್ವಿಶೋಕೋಽವಿಜಿಘತ್ಸೋಽಪಿಪಾಸಃ ಸತ್ಯಕಾಮಃ ಸತ್ಯ ಸಂಕಲ್ಪಃ ಸೋಽನ್ವೇಷ್ಟವ್ಯಃ ಸ ವಿಜಿಜ್ಞಾಸಿತವ್ಯಃ ಸರ್ವಾಂಶ್ಚ ಲೋಕಾನಾಪ್ನೋತಿ ಸರ್ವಾಂಶ್ಚಕಾಮಾನ್ ಯಸ್ತಮಾತ್ಮಾನಮನುವಿದ್ಯ ವಿಜಾನಾತೀತಿ ॥

[ಛಾಂದೋಗ್ಯ. ಪ್ರ. ೮, ಖಂ. ೭, ಮ. ೧]

ಸ ವಾ ಏಷ ಏತೇನ ದೈವೇನ ಚಕ್ಷುಷಾ ಮನಸೈತಾನ್ ಕಾಮಾನ್ ಪಶ್ಯನ್ ರಮತೇ । ಯ ಏತೇ ಬ್ರಹ್ಮಲೋಕೇ ತಂ ವಾ ಏತಂ ದೇವಾ ಆತ್ಮಾನಮುಪಾಸತೇ ತಸ್ಮಾತ್ತೇ ಷಾಗ್ಂ ಸರ್ವೇ ಚ ಲೋಕಾಃ ಆತ್ತಾಃ ಸರ್ವೇ ಚ ಕಾಮಾಃ ಸ ಸರ್ವಾಂಶ್ಚ ಲೋಕಾನಾಪ್ನೋತಿ ಸರ್ವಾಂಶ್ಚ ಕಾಮಾ ನ್ಯಸ್ತಮಾತ್ಮಾನಮನುವಿದ್ಯ ವಿಜಾನಾತೀತಿ ॥

[ಛಾಂದೋಗ್ಯ, ಪ್ರ. ೮-। ಖ. ೨! ಮ. ೫-೬]

ಮಘವನ್ಮರ್ತ್ಯಂ ವಾ ಇದಗ್ಂ ಶರೀರಮಾತ್ತಂ ಮೃತ್ಯುನಾ ತದಸ್ಯಾಮೃತಸ್ಯಾ ಶರೀರಸ್ಯಾತ್ಮನೋಧಿಷ್ಠಾ ನಮಾತ್ತೋ ವೈ ಸಶರೀರಃ ಪ್ರಿಯಾಪ್ರಿಯಾಭ್ಯಾಂ ನ ವೈ ಸಶರೀರಸ್ಯ ಸತಃ ಪ್ರಿಯಾಪ್ರಿಯಯೋರಪಹತಿರಸ್ತ್ಯ ಶರೀರಂ ವಾವ ಸಂತಂ ನ ಪ್ರಿಯಾಪ್ರಿಯೇ ಸ್ಪೃಶತಃ ॥

[ಛಾಂದೋ. ಪ್ರ. ೮। ಖಂ. ೧೨, ಮಂ. ೧]

ಯಾವ ಪರಮಾತ್ಮನು ಅಪಹತಪಾಪ್ಮಾ ಅಂದರೆ, ಸಮಸ್ತ ಪಾಪಗಳಿಂದಲೂ, ಮುಪ್ಪು, ಸಾವು, ಶೋಕ, ಹಸಿವು, ಬಾಯಾರಿಕೆ— ಇವುಗಳಿಂದ ರಹಿತನೂ, ಸತ್ಯಕಾಮನೂ, ಸತ್ಯಸಂಕಲ್ಪನೂ ಆಗಿರುವನೋ, ಅವನನ್ನು ಅನ್ವೇಷಿಸಬೇಕು ಮತ್ತೆ ಅವನನ್ನೇ ತಿಳಿಯಲಿಚ್ಛಿಸಬೇಕು. ಯಾವ ಪರಮಾತ್ಮನ ಸಂಬಂಧದಿಂದ ಮುಕ್ತಜೀವನು ಸಮಸ್ತ ಲೋಕಗಳನ್ನೂ, ಸಮಸ್ತ ಕಾಮನೆಗಳನ್ನೂ, ಹೊಂದುತ್ತಾನೋ ಆ ಪರಮಾತ್ಮನನ್ನರಿತು ಮೋಕ್ಷದ ಸಾಧನಗಳನ್ನೂ ಆತ್ಮಶುದ್ಧಿಯ ವಿಧಾನವನ್ನೂ ಬಲ್ಲವನಾಗಿ, ಮೋಕ್ಷವನ್ನು ಹೊಂದಿದ ಈ ಜೀವನು ಶುದ್ಧವಾದ ದಿವ್ಯನೇತ್ರಗಳಿಂದಲೂ, ಶುದ್ಧವಾದ ಮನಸ್ಸಿನಿಂದಲೂ, ಕಾಮನೆಗಳನ್ನು ನೋಡುತ್ತಾ ಮತ್ತು ಹೊಂದುತ್ತಾ ಆನಂದದಿಂದಿರುತ್ತಾನೆ. ಇವರು ಬ್ರಹ್ಮಲೋಕದಲ್ಲಿ ಅಂದರೆ, ದರ್ಶನೀಯನಾದ ಪರಮಾತ್ಮನಲ್ಲಿ ಸ್ಥಿರರಾಗಿ, ಮೋಕ್ಷಸುಖವನ್ನನುಭವಿಸುತ್ತಾರೆ. ಮತ್ತು ಸರ್ವಾಂತರ್ಯಾಮೀ ಆತ್ಮರೂಪನಾದ ಇದೇ ಪರಮಾತ್ಮನ ಉಪಾಸನೆಯನ್ನೂ ಯಾವ ಮುಕ್ತಿಪಡೆಯುವ ವಿದ್ವಾಂಸರು ಮಾಡುತ್ತಾರೋ ಅವರಿಗೆ ಅದರಿಂದ ಸರ್ವಲೋಕಗಳೂ, ಸರ್ವ ಇಷ್ಟಾರ್ಥಗಳೂ ಲಭಿಸುತ್ತವೆ. ಅಂದರೆ, ಸಂಕಲ್ಪಿಸಿದ ಲೋಕ ಮತ್ತು ಇಷ್ಟಾರ್ಥಗಳೆಲ್ಲಾ ಲಬ್ಧವಾಗುತ್ತವೆ. ಮತ್ತು ಆ ಮುಕ್ತಜೀವರು ಸ್ಥೂಲಶರೀರವನ್ನು ಬಿಟ್ಟು ಸಂಕಲ್ಪಶರೀರದಿಂದ, ಆಕಾಶದಲ್ಲಿ ಪರಮಾತ್ಮನಲ್ಲಿ ಸಂಚರಿಸುತ್ತಾರೆ. ಏಕೆಂದರೆ, ಶರೀರಧಾರಿಗಳು ಸಾಂಸಾರಿಕ ಸುಖದುಃಖಗಳಿಂದ ದೂರವಿರಲಾರರು.

ಪ್ರಜಾಪತಿಯು ಇಂದ್ರನಿಗೆ ಹೇಳಿದ್ದಾನೆ–" ಪರಮಪೂಜ್ಯನೂ, ಧನವಂತನೂ ಆದ ಪುರುಷನೇ! ಈ ಸ್ಥೂಲಶರೀರವು ಮರಣವನ್ನೇ ತನ್ನ ಧರ್ಮವಾಗಿ ಉಳ್ಳಂತಹುದು. ಸಿಂಹದ ಬಾಯಿಯಲ್ಲಿ ಕುರಿಯು ಸಿಕ್ಕಿಕೊಂಡಂತೆ ಈ ಶರೀರವು ಸಾವಿನ ಬಾಯಿಯಲ್ಲಿ ಸಿಕ್ಕಿಕೊಂಡಿರುತ್ತದೆ. ಮತ್ತು ಈ ಶರೀರವು, ಈ ಮರಣರಹಿತನೂ, ಅಶರೀರನೂ, ಆದ ಜೀವಾತ್ಮನ ನಿವಾಸಸ್ಥಾನವಾಗಿರುತ್ತದೆ. ಈ ಕಾರಣದಿಂದಲೇ ಈ ಜೀವನು ಸುಖದುಃಖಗಳಿಂದ ಸದಾ ಗ್ರಸ್ತನಾಗಿರುತ್ತಾನೆ. ಏಕೆಂದರೆ, ಸ್ಥೂಲಶರೀರವುಳ್ಳ ಜೀವಾತ್ಮನ ಸಾಂಸಾರಿಕಸುಖವು ನಿವೃತ್ತವಾಗಿಯೇ

ತೀರುತ್ತದೆ. ಮತ್ತು ಶರೀರರಹಿತನಾಗಿ ಬ್ರಹ್ಮನಲ್ಲಿರುವ ಮುಕ್ತನಾದ ಜೀವಾತ್ಮನಿಗೆ, ಸಾಂಸಾರಿಕ ಸುಖದುಃಖಗಳ ಸ್ಪರ್ಶವೂ ಕೂಡ ಆಗುವುದಿಲ್ಲ. ಆದರೆ ಸದಾ ಆನಂದದಲ್ಲಿರುತ್ತಾನೆ.

ಪ್ರಶ್ನೆ:—ಜೀವರು ಮುಕ್ತಿಯನ್ನು ಪಡೆದು, ಜನನ ಮರಣ ರೂಪವಾದ ದುಃಖದಲ್ಲಿ ಎಂದಿಗಾದರೂ ಪುನಃ ಬೀಳುವರೋ ಇಲ್ಲವೊ ? ಏಕೆಂದರೆ :—

ನ ಚ ಪುನರಾವರ್ತತೇ ನ ಚ ಪುನರಾವರ್ತತ ಇತಿ ॥

[ಛಾಂದೋಗ್ಯ. ಪ್ರ. ೮, ಖಂ. ೧೫]

ಅನಾವೃತ್ತಿಃ ಶಬ್ದಾದನಾವೃತ್ತಿಃ ಶಬ್ದಾತ್ ॥

[ಶಾರೀರಿಕ. ೪।೪।೨೩]

ಯದ್ಗತ್ವಾ ನ ನಿವರ್ತಂತೇ ತದ್ಧಾಮ ಪರಮಂ ಮಮ ॥

[ಭಗವದ್ಗೀತಾ]

ಈ ಮೊದಲಾದ ವಚನಗಳಿಂದ ' ಯಾವುದರಿಂದ ನಿವೃತ್ತನಾಗಿ ಮರಳಿ ಸಂಸಾರಕ್ಕೆ ಬರುವದಿಲ್ಲವೋ ಅದೇ ಮುಕ್ತಿ, ಎಂದು ತಿಳಿದು ಬರುತ್ತದೆ.

ಉತ್ತರ :—ಈ ಮಾತು ಸರಿಯಲ್ಲ. ಏಕೆಂದರೆ, ವೇದದಲ್ಲಿ ಈ ಮಾತಿನ ನಿಷೇಧವಿರುತ್ತದೆ.

ಕಸ್ಯನೂನಂ ಕತಮಸ್ಯಾಮೃತಾನಾಂ ಮನಾಮಹೇ ಚಾರು
ದೇವಸ್ಯ ನಾಮ ।
ಕೋ ನೋ ಮಹ್ಯಾ ಅದಿತಯೇ ಪುನರ್ದಾತ್ಪಿತರಂ ಚ
ದೃಶೇಯಂ ಮಾತರಂ ಚ ॥೧॥
ಅಗ್ನೇರ್ವಯಂ ಪ್ರಥಮಸ್ಯಾಮೃತಾನಾಂ ಮನಾಮಹೇ
ಚಾರು ದೇವಸ್ಯನಾಮ ।
ಸನೋ ಮಹ್ಯಾ ಅದಿತಯೇ ಪುನರ್ದಾತ್ಪಿತರಂ ಚ ದೃಶೇಯಂ
ಮಾತರಂ ಚ ॥

[ಋಗ್ವೇದ ಮಂ. ೧. ಸೂ ೨೪. ಮಂ ೧–೨]

ಇದಾನೀಮಿವ ಸರ್ವತ್ರ ನಾತ್ಯಂತೋಚ್ಛೇದಃ

[ಸಾಂಖ್ಯ. ೧-೧೫೯]

ಪ್ರಶ್ನೆ:—ನಾವು ಯಾವನ ಹೆಸರನ್ನು ಪವಿತ್ರವೆಂದು ತಿಳಿಯಬೇಕು? ನಾಶರಹಿತ ಪದಾರ್ಥಗಳ ನಡುವೆ ಯಾವ ದೇವನು ಸದಾ ಪ್ರಕಾಶಸ್ವರೂಪನಾಗಿದ್ದಾನೆ? ಮತ್ತು ಯಾವನು ನಮಗೆ ಮೋಕ್ಷ ಸುಖಾನುಭವವನ್ನಿತ್ತು ಪುನಃ ಈ ಸಂಸಾರದಲ್ಲಿ ಜನ್ಮವಿತ್ತು ತಾಯಿ ತಂದೆಗಳ ದರ್ಶನಮಾಡಿಸುತ್ತಾನೆ ॥೧॥ ಉತ್ತರ:—ಯಾವನು ನಮಗೆ ಮುಕ್ತಿಯಲ್ಲಿ ಆನಂದಾನುಭವವನ್ನು ಮಾಡಿಸಿ ಭೂಮಿಯಲ್ಲಿ ಪುನಃ ಮಾತಾಪಿತೃಗಳ ಸಂಬಂಧದಿಂದ ಜನ್ಮವಿತ್ತು, ತಾಯಿತಂದೆಗಳ ದರ್ಶನ ಮಾಡಿಸುವನೋ, ಆ ಸ್ವಪ್ರಕಾಶಸ್ವರೂಪನೂ, ಅನಾದಿಯೂ, ಸದಾ ಮುಕ್ತನೂ ಆದ ಪರಮಾತ್ಮನ ನಾಮವನ್ನೇ ನಾವು ಪವಿತ್ರವೆಂದು ತಿಳಿಯಬೇಕು. ಆ ಪರಮಾತ್ಮನೇ ಮುಕ್ತಿಯ ವ್ಯವಸ್ಥೆ ಮಾಡುತ್ತಾನೆ. ಮತ್ತು ಸರ್ವರ ಸ್ವಾಮಿಯಾಗಿದ್ದಾನೆ. ॥೨॥ ಈ ಸಮಯದಲ್ಲಿರುವಂತೆಯೇ ಬದ್ಧಜೀವರೂ, ಮುಕ್ತಜೀವರೂ ಯಾವಾಗಲೂ ಇರುತ್ತಾರೆ. ಬಂಧನ ಮುಕ್ತಿಗಳಿಗೆ ಎಂದೂ ಅತ್ಯಂತ ವಿಚ್ಛೇದವುಂಟಾಗುವುದಿಲ್ಲ. ಅಂದರೆ, ಬಂಧನವೇ ಆಗಲಿ, ಮುಕ್ತಿಯೇ ಆಗಲಿ ಯಾವಾಗಲೂ ಇರುವುದಿಲ್ಲ॥೩॥

ಪ್ರಶ್ನೆ:—

ತದತ್ಯಂತವಿಮೋಕ್ಷೋಽಪವರ್ಗಃ ॥
ದುಃಖಜನ್ಮಪ್ರವೃತ್ತಿದೋಷಮಿಥ್ಯಾಜ್ಞಾನಾನಾಮುತ್ತರೋತ್ತರಾಪಾಯೇ ತದನಂತರಾಪಾಯಾದಪವರ್ಗಃ ॥

[ನ್ಯಾಯ-೧-೨೨-೨]

ದುಃಖದ ಅತ್ಯಂತ ವಿಚ್ಛೇದನವೇ ಮೋಕ್ಷವೆನಿಸುತ್ತದೆ. ॥೧॥ ಏಕೆಂದರೆ, ಮಿಥ್ಯಾಜ್ಞಾನ, ಅವಿದ್ಯಾಲೋಭಾದಿದೋಷಗಳು, ವಿಷಯ ದುರ್ವ್ಯಸನಗಳಲ್ಲಿ ಪ್ರವೃತ್ತಿ, ಜನ್ಮ ಮತ್ತು ದುಃಖ ಇವುಗಳಲ್ಲಿ ಕೊನೆ ಕೊನೆಯದು ಬಿಟ್ಟು ಹೋಗುವದರಿಂದಲೂ, ಮೊದಮೊದಲಿನದು ನಿವೃತ್ತವಾಗುವದರಿಂದಲೂ, ಮೋಕ್ಷವು ಪ್ರಾಪ್ತವಾಗುತ್ತದೆ. ಮತ್ತು ಅದು ಶಾಶ್ವತವಾಗಿರುತ್ತದೆ. ॥೨॥

ಉತ್ತರ :—ಅತ್ಯಂತ ಶಬ್ದವು ಅತ್ಯಂತಾಭಾವಸೂಚಕವೇ ಆಗಿರ ಬೇಕೆಂಬುದೇನೂ ಇಲ್ಲ. **" ಅತ್ಯಂತದುಃಖಮತ್ಯಂತಸುಖಂಚಾಸ್ಯ ವರ್ತತೇ "** " ಈ ಮಾನವನಿಗೆ ಅತ್ಯಂತ ದುಃಖವೂ ಅತ್ಯಂತ ಸುಖವೂ ಇವೆ " ಎಂದಾಗ ' ಇವನಿಗೆ ಹೆಚ್ಚಿನ ದುಃಖವೋ ಸುಖವೋ ಇದೆ ' ಎಂದುಮಾತ್ರ ಅರ್ಥವಾಗುತ್ತದೆ. ಹಾಗೆಯೇ ಇಲ್ಲಿಯೂ, ಅತ್ಯಂತ ಶಬ್ದದ ಅರ್ಥವಿದೆಯೆಂದು ತಿಳಿಯಬೇಕು.

ಪ್ರಶ್ನೆ :—ಜೀವನು ಮೋಕ್ಷದಿಂದಲೂ ಮರಳಿ ಹಿಂದಿರುಗುವು ದಾದರೆ, ಅವನು ಎಷ್ಟುಕಾಲದವರೆಗೆ ಮುಕ್ತಿಯಲ್ಲಿರುತ್ತಾನೆ?

ಉತ್ತರ :—

ತೇ ಬ್ರಹ್ಮಲೋಕೇ ಹ ಪರಾಂತಕಾಲೇ ಪರಾಮೃತಾತ್ಪರಿ ಮುಚ್ಯಂತಿ ಸರ್ವೇ ॥

[ಮುಂಡಕ ೩. ಖ. ೨. ಮ. ೧]

ಇದು ಮುಂಡಕೋಪನಿಷದ್ವಚನ. ಆ ಮುಕ್ತಜೀವರು ಮೋಕ್ಷಗಳಿಸಿ, ಬ್ರಹ್ಮನಲ್ಲಿ ಅದುವರಿಗೆ ಆನಂದವನ್ನನುಭವಿಸಿ, ಪುನಃ ಮಹಾಕಲ್ಪದ ಅನಂತರ, ಮುಕ್ತಿಸುಖವನ್ನು ಬಿಟ್ಟು, ಸಂಸಾರಕ್ಕೆ ಬರುತ್ತಾರೆ. ಅದರ ಪರಿಗಣನೆ ಹೀಗಿದೆ :—೪೩,೨೦,೦೦೦ ವರ್ಷ ಗಳಿಗೆ ಒಂದು ಚತುರ್ಯುಗ; ೨೦೦೦ ಚತುರ್ಯುಗಗಳಿಗೆ ಒಂದು ಅಹೋರಾತ್ರ; ಇಂತಹ ೩೦ ಅಹೋರಾತ್ರಗಳಿಗೆ ಒಂದು ಮಾಸ; ಇಂತಹ ೧೨ ಮಾಸಗಳಿಗೆ ಒಂದು ವರ್ಷ; ಇಂತಹ ೧೦೦ ವರ್ಷಗಳಿಗೆ ಒಂದು ಪರಾಂತಕಾಲ. ಇದನ್ನು ಗಣಿತದ ಕ್ರಮದಿಂದ ಯಥಾವತ್ತಾಗಿ ತಿಳಿಯಿರಿ. ಇಷ್ಟುಕಾಲ ಮುಕ್ತಿಯಲ್ಲಿ ಸುಖಾನುಭವ ಮಾಡುವಂತಹು ದಾಗಿರುತ್ತದೆ.

ಪ್ರಶ್ನೆ :—ಪುನಃ ಜನನಮರಣಕ್ಕೆ ಸಿಗುವುದಿಲ್ಲವೆಂದೇ ಸರ್ವ ಜಗತ್ತಿನ ಮತ್ತು ಗ್ರಂಥಕಾರರ ಅಭಿಪ್ರಾಯವಿರುತ್ತದೆ.

ಉತ್ತರ :—ಇದೆಂದಿಗೂ ಆಗಲಾರದು. ಏಕೆಂದರೆ, ಮೊದ ಲನೆಯದಾಗಿ, ಜೀವಸಾಮರ್ಥ್ಯವೂ, ಶರೀರಾದಿಪದಾರ್ಥಗಳೂ,

ಸಾಧನಗಳೂ ಪರಿಮಿತವಾಗಿರುತ್ತವೆ. ಮತ್ತೆ, ಅದರ ಫಲವು ಅನಂತ ವೆಂತಾಗಬಲ್ಲದು? ಅನಂತಾನಂದವನ್ನನುಭವಿಸುವ ಅನಂತಸಾಮರ್ಥ್ಯವೂ, ಕರ್ಮವೂ, ಸಾಧನಗಳೂ ಜೀವರಲ್ಲಿಲ್ಲವಾದುದರಿಂದ, ಅವರು ಅನಂತಸುಖವನ್ನನುಭವಿಸಲಾರರು. ಯಾವ ಸಾಧನಗಳು ಅನಿತ್ಯವೋ, ಅವುಗಳ ಫಲವು ಎಂದಿಗೂ ನಿತ್ಯವಾಗಲಾರದು. ಮತ್ತು ಯಾವನೊಬ್ಬ ಜೀವನೂ ಮುಕ್ತಿಯಿಂದ ಹಿಂತಿರುಗಿ ಬಾರದಿದ್ದರೆ, ಸಂಸಾರದ ಉಚ್ಛೇದವಾಗಬೇಕಾಗುತ್ತದೆ. ಅಂದರೆ, ಜೀವರೆಲ್ಲರೂ ನಿಶ್ಶೇಷವಾಗಿ ಹೋಗಬೇಕಾಗುತ್ತದೆ.

ಪ್ರಶ್ನೆ:—ಎಷ್ಟುಮಂದಿ ಜೀವರು ಮೋಕ್ಷ ಹೊಂದುತ್ತಾರೋ, ಅಷ್ಟುಮಂದಿ ಹೊಸ ಜೀವರನ್ನು ಸೃಷ್ಟಿಸಿ, ಪರಮಾತ್ಮನು ಪ್ರಪಂಚದಲ್ಲಿ ಬಿಡುತ್ತಾನೆ. ಆದುದರಿಂದ ನಿಶ್ಶೇಷವಾಗುವುದಿಲ್ಲ.

ಉತ್ತರ:—ಹೀಗಾಗುವುದಾದರೆ, ಜೀವರು ಅನಿತ್ಯರಾಗಬೇಕಾಗುವುದು. ಏಕೆಂದರೆ, ಯಾವುದು ಉತ್ಪನ್ನವಾಗುವುದೋ, ಅದು ಅವಶ್ಯವಾಗಿ ನಾಶವೂ ಆಗುತ್ತದೆ. ಮತ್ತು ನಿಮ್ಮ ಮತದಂತೆ, ಜೀವನು ಮುಕ್ತಿಪಡೆದರೂ ನಾಶಹೊಂದುವುದರಿಂದ ಮೋಕ್ಷವೂ ಅನಿತ್ಯವಾಯಿತು. ಇದಲ್ಲದೆ ಮೋಕ್ಷಸ್ಥಾನದಲ್ಲಿ ಬಹಳ ಗುಂಚುಗುಂಪಲಾಗಿ ಹೋಗುವುದು. ಏಕೆಂದರೆ, ಅಲ್ಲಿ ಆಗಮವು ಅಧಿಕವಾಗಿ ವ್ಯಯವಾಗದೇ ಹೋಗುವುದರಿಂದ ವೃದ್ಧಿಗೆ ಎಲ್ಲಿಯೇ ಇರುವುದಿಲ್ಲ. ಮತ್ತು ದುಃಖಾನುಭವವಿಲ್ಲದೆ, ಸುಖವು ಎಷ್ಟುಮಾತ್ರಕ್ಕೂ ಉಂಟಾಗಲಾರದು. ಕಹಿಯಾದ ವಸ್ತುವೇ ಇಲ್ಲದಿದ್ದರೆ, ಸಿಹಿಯಾವುದು? ಸಿಹಿಯೇ ಇಲ್ಲದಿದ್ದರೆ ಕಹಿಯಾವುದು? ಏಕೆಂದರೆ, ಒಂದು ರುಚಿಯು, ಒಂದು ರಸಕ್ಕೆ ವಿರುದ್ಧವಾಗಿರುವುದರಿಂದ ಎರಡರ ಪರೀಕ್ಷೆಯೂ ಆಗುತ್ತದೆ. ಸರ್ವರಸಗಳನ್ನೂ ಉಪಭೋಗಿಸುವವನಿಗೆ ಆಗುವಷ್ಟು ಸುಖವು, ಯಾವಾಗಲೂ ಸಿಹಿಯನ್ನೇ ತಿನ್ನುತ್ತಿರುವವರಿಗೆ ಆಗುವುದಿಲ್ಲ. ಮತ್ತು ಪರಮಾತ್ಮನು ಕೊನೆಯುಳ್ಳ ಕರ್ಮಗಳಿಗೆ ಅನಂತ ಫಲವನ್ನು ಕೊಡುವುದಾದರೆ, ಅವನ ನ್ಯಾಯವು ನಷ್ಟವಾಗಿ ಹೋಗುತ್ತದೆ. ಯಾವನು ಎಷ್ಟು ಭಾರವನ್ನು ಹೊರಬಲ್ಲನೋ, ಅವನಮೇಲೆ ಅಷ್ಟೇ ಭಾರವನ್ನು ಹೊರಿಸುವುದು ಜಾಣರ ಕೆಲಸವಾಗಿರುತ್ತದೆ. ಒಂದು ಮಣ ಹೊರ

ಬಲ್ಲವನ ತಲೆಯಮೇಲೆ ಹತ್ತು ಮಣ ತೂಕ ಹೇರಿದರೆ, ಭಾರ ಹೊರಿಸುವವನು ನಿಂದೆಗೆ ಗುರಿಯಾಗುತ್ತಾನೆ. ಹಾಗೆಯೇ, ಅಲ್ಪಜ್ಞನೂ, ಅಲ್ಪಸಾಮರ್ಥ್ಯವಂತನೂ, ಆದ ಜೀವನಮೇಲೆ, ಅನಂತ ಸುಖದ ಭಾರವನ್ನು ಹೊರಿಸುವುದು ಪರಮಾತ್ಮನಿಗೆ ಸರಿಯಾದುದಲ್ಲ. ಮತ್ತು ಪರಮಾತ್ಮನು ಹೊಸ ಜೀವನನ್ನು ಸೃಷ್ಟಿಸುವುದಾದರೆ, ಯಾವ ಕಾರಣದಿಂದ ಅವರು ಉತ್ಪನ್ನರಾಗುವರೋ ಅದು ಮುಗಿದುಹೋಗುತ್ತದೆ. ಏಕೆಂದರೆ, ಎಷ್ಟೇ ದೊಡ್ಡ ಬೊಕ್ಕಸವಾಗಲಿ, ಆದಾಯವಿಲ್ಲದೆ ವ್ಯಯವೇ ಬೆಳೆಯುತ್ತಿದ್ದರೆ, ಒಂದಿಲ್ಲೊಂದುದಿನ ಅದು ಬರೀದಾಗಿಯೇ ಹೋಗುತ್ತದೆ. ಆದುದರಿಂದ ಮುಕ್ತಿಗೆ ಹೋಗುವುದು, ಅಲ್ಲಿಂದ ಮರಳಿ ಬರುವುದು, ಈ ವ್ಯವಸ್ಥೆಯೇ ಉತ್ತಮವಾಗಿರುತ್ತದೆ. ಪಂಡಿತರಾದ ಜೀವರು ಹಲದಿನಗಳ ಮಟ್ಟಿಗೆ ಸೆರೆಮನೆಯಲ್ಲಿರುವುದಕ್ಕಿಂತ, ಸಾಯುವ ವರೆಗಿನ ಕಾರಾಗೃಹವಾಸವನ್ನು ಅಥವಾ ಮರಣದಂಡನೆಯನ್ನು ಉತ್ತಮವೆಂದು ಯಾರಾದರೂ ತಿಳಿಯುತ್ತಾರೋ? ಅಲ್ಲಿಂದ ಹಿಂದಿರುಗಿ ಬಾರದೆಯೇ ಇರುವುದಾದರೆ, ಆಜನ್ಮ ಕಾರಾಗೃಹವಾಸಕ್ಕೂ, ಮೋಕ್ಷಕ್ಕೂ ಇಷ್ಟೇ ವ್ಯತ್ಯಾಸ:—ಮೋಕ್ಷದಲ್ಲಿ ದುಡಿಯಬೇಕಾದುದಿಲ್ಲ. ಮತ್ತು ಬ್ರಹ್ಮನಲ್ಲಿ ಲಯವಾಗುವುದು ಸಮುದ್ರದಲ್ಲಿ ಮುಳುಗಿ ಸಾಯುವಂತೆ.

ಪ್ರಶ್ನೆ:—ಪರಮಾತ್ಮನು ನಿತ್ಯಮುಕ್ತನೂ ಪೂರ್ಣಸುಖಿಯೂ ಆಗಿರುವಂತೆ, ಜೀವನೂ ಕೂಡ ನಿತ್ಯಮುಕ್ತನೂ ಸುಖಿಯೂ ಆಗುವನೆಂದರೆ, ಯಾವ ದೋಷವೂ ಇಲ್ಲ.

ಉತ್ತರ:—ಪರಮಾತ್ಮನು ಅನಂತ ಸ್ವರೂಪನೂ, ಅನಂತ ಸಾಮರ್ಥ್ಯನೂ, ಅನಂತ ಗುಣಕರ್ಮಸ್ವಭಾವನೂ, ಆಗಿರುವುದರಿಂದ, ಅವನು ಅವಿದ್ಯೆಯಲ್ಲಿಯೂ, ದುಃಖಬಂಧನಗಳಲ್ಲಿಯೂ ಸಿಕ್ಕಿಕೊಳ್ಳಲಾರನು. ಜೀವನು ಮುಕ್ತನಾದರೂ, ಕೂಡ ಶುದ್ಧಸ್ವರೂಪನೂ, ಅಲ್ಪಜ್ಞನೂ, ಪರಿಮಿತಗುಣಕರ್ಮಸ್ವಭಾವನೂ, ಆಗಿರುವುದರಿಂದ ಅವನೆಂದಿಗೂ ಪರಮಾತ್ಮನಿಗೆ ಸದೃಶನಾಗಲಾರನು.

ಪ್ರಶ್ನೆ:—ಹಾಗಾದರೆ ಮೋಕ್ಷವೂ ಕೂಡ ಜನನಮರಣಗಳಂತೆಯೇ ಇರುವುದು. ಆದುದರಿಂದ ಶ್ರಮಪಡುವುದು ವ್ಯರ್ಥ.

ಉತ್ತರ :—ಮೋಕ್ಷವು ಜನನಮರಣಗಳಂತಿಲ್ಲ. ಏಕೆಂದರೆ, ೩೬,೦೦೦ ಸಲ ಉತ್ಪತ್ತಿಪ್ರಳಯಗಳು ನಡೆಯುವುದಕ್ಕೆ ಹಿಡಿಯುವಷ್ಟು ಕಾಲದವರೆಗೆ ಜೀವನು ಆನಂದದಲ್ಲಿರುವುದು, ಮತ್ತು ದುಃಖವಿಲ್ಲದಿರುವುದು ಸಾಧಾರಣವಾದ ಮಾತೆ? ಇಂದು, ತಿಂದು ಕುಡಿದು ಮಾಡಿದರೂ, ಮತ್ತೆ ನಾಳೆ ಹಸಿವಾಗಿಯೇ ಆಗುತ್ತದೆ. ಹೀಗಿದ್ದರೂ, ಅದಕ್ಕೆ ಪರಿಹಾರವನ್ನೇಕೆ ಮಾಡುತ್ತೀರಿ? ಹಸಿವುಬಾಯಾರಿಕೆ, ಕ್ಷುದ್ರಸಂಪತ್ತು, ರಾಜ್ಯ, ಗೌರವ, ಸ್ತ್ರೀ, ಸಂತತಿ ಮೊದಲಾದುವುಗಳಿಗಾಗಿ ದುಡಿಯುವುದು ಆವಶ್ಯಕವಾಗಿದ್ದರೆ, ಮೋಕ್ಷವನ್ನು ಪಡೆಯಲು ಪ್ರಯತ್ನಿಸುವುದೇಕೆ ಅವಶ್ಯಕವಲ್ಲ? ಸಾಯುವುದು ಅನಿವಾರ್ಯವಾಗಿದ್ದರೂ, ಜೀವಿಸಲು ಪ್ರಯತ್ನಿಸುವಂತೆ ಮುಕ್ತಿಯಿಂದ ಮರಳಿ ಸಂಸಾರಕ್ಕೆ ಬರಲೇಬೇಕಾಗಿದ್ದರೂ ಅದಕ್ಕಾಗಿ ಪ್ರಯತ್ನಿಸುವುದೂ, ಅತ್ಯಾವಶ್ಯಕವಾಗಿರುತ್ತದೆ.

ಪ್ರಶ್ನೆ :—ಮುಕ್ತಿಯ ಸಾಧನಗಳಾವವು?

ಉತ್ತರ :—ಕೆಲವು ಸಾಧನಗಳನ್ನಂತೂ ಹಿಂದೆಯೇ ಬರೆದಿದ್ದೇವೆ. ಆದರೆ, ವಿಶೇಷ ಉಪಾಯಗಳೇನೆಂದರೆ :—ಮುಕ್ತಿಯನ್ನು ಬಯಸುವವನು ಜೀವನ್ಮುಕ್ತನಾಗಬೇಕು. ಅಂದರೆ, ದುಃಖವೆಂಬ ಫಲವನ್ನು ಕೊಡುವ ಸುಳ್ಳು ಮೊದಲಾದ ಪಾಪಕರ್ಮಗಳನ್ನು ಬಿಟ್ಟು, ಸುಖವೆಂಬ ಫಲವನ್ನು ಕೊಡುವ ಸತ್ಯಭಾಷಣ ಮೊದಲಾದ ಧರ್ಮಗಳನ್ನು ಅವಶ್ಯವಾಗಿ ಆಚರಿಸಬೇಕು. ದುಃಖದಿಂದ ಪಾರಾಗಿ ಸುಖವನ್ನು ಪಡೆಯಬೇಕೆಂದಿರುವವನು ಅಧರ್ಮವನ್ನು ಬಿಟ್ಟು ಧರ್ಮವನ್ನು ಅವಶ್ಯವಾಗಿ ಆಚರಿಸಬೇಕು. ಏಕೆಂದರೆ, ಪಾಪಾಚರಣವು ದುಃಖಕ್ಕೂ ಧರ್ಮಾಚರಣವು ಸುಖಕ್ಕೂ ಮೂಲಕಾರಣವಾಗಿರುತ್ತದೆ. ಸತ್ಪುರುಷರ ಸಹವಾಸದಿಂದ ವಿವೇಕವನ್ನು, ಅಂದರೆ, ಸತ್ಯಾಸತ್ಯ, ಧರ್ಮಾಧರ್ಮ, ಕರ್ತವ್ಯಾಕರ್ತವ್ಯಗಳ ನಿಶ್ಚಯವನ್ನು ಅವಶ್ಯವಾಗಿ ಮಾಡಿಕೊಳ್ಳಬೇಕು ಮತ್ತು ಅವನ್ನು ಬೇರೆಬೇರೆಯೆಂದು ತಿಳಿಯಬೇಕು. ಮತ್ತು ಶರೀರ ಅಂದರೆ, ಜೀವನ ಪಂಚಕೋಶಗಳ ವಿವೇಚನೆಯನ್ನು ಮಾಡಬೇಕು. (೧) ಅನ್ನಮಯ:—ಚರ್ಮದಿಂದಾರಂಭಿಸಿ ಮೂಳೆಯವರಿಗಿರುವ ಪೃಥ್ವೀಮಯವಾದ ಸಮುದಾಯ. (೨) ಪ್ರಾಣಮಯ :—

ಇದರಲ್ಲಿ ಪ್ರಾಣ ಅಂದರೆ, ಒಳಗಿನಿಂದ ಹೊರಗಡೆ ಹೋಗುವಂತಹುದು; ಅಪಾನ—ಹೊರಗಿನಿಂದ ಒಳಗೆ ಬರುವಂತಹುದು; ಸಮಾನ—ನಾಭಿಯಲ್ಲಿದ್ದು ದೇಹಕ್ಕೆಲ್ಲಾ ರಸವನ್ನು ತಲಪಿಸುವಂತಹುದು, ಉದಾನ—ಕಂಠಪ್ರದೇಶದಿಂದ ಅನ್ನರಸಗಳನ್ನು ಆಕರ್ಷಿಸುವಂತಹುದು ಮತ್ತು ಬಲಪರಾಕ್ರಮಗಳನ್ನುಂಟುಮಾಡುವಂತಹುದು; ವ್ಯಾನ—ಸಮಗ್ರ ಶರೀರದಲ್ಲಿ ವ್ಯಾಪಿಸಿ ಜೀವನ ಚಲನವಲನ ಮೊದಲಾದುವಕ್ಕೆ ನೆರವಾಗುವಂತಹುದು; (೩) ಮನೋಮಯ—ಇದರಲ್ಲಿ ಮನಸ್ಸಿನೊಂದಿಗೆ ಅಹಂಕಾರವೂ, ವಾಕ್ಕು, ಪಾದ, ಪಾಣಿ, ಪಾಯು ಮತ್ತು ಉಪಸ್ಥ ಈ ಐದು ಕರ್ಮೇಂದ್ರಿಯಗಳೂ ಇವೆ. (೪) ವಿಜ್ಞಾನಮಯ—ಇದರಲ್ಲಿ ಬುದ್ಧಿಯೂ, ಚಿತ್ತವೂ, ಶ್ರೋತ್ರ, ತ್ವಚೆ, ನೇತ್ರ, ಜಿಹ್ವೆ ಮತ್ತು ನಾಸಿಕ—ಎಂಬೀ ಜೀವಾತ್ಮನ ಜ್ಞಾನಾದಿ ವ್ಯವಹಾರಗಳ ಸಾಧಕಗಳಾದ ಐದು ಜ್ಞಾನೇಂದ್ರಿಯಗಳೂ ಇವೆ. (೫) ಆನಂದಮಯ—ಇದರಲ್ಲಿ ಪ್ರೀತಿ ಪ್ರಸನ್ನತೆ, ನ್ಯೂನವಾದ ಆನಂದ, ಅಧಿಕವಾದ ಆನಂದ, ಮತ್ತು ಆಧಾರಕಾರಣರೂಪವಾದ ಪ್ರಕೃತಿ—ಇವೆಲ್ಲವೂ ಇರುತ್ತವೆ. ಇವು ಪಂಚಕೋಶಗಳೆನಿಸುತ್ತವೆ. ಇವುಗಳಿಂದಲೇ ಜೀವನು ಸಮಸ್ತ ವಿಧದ ಕರ್ಮಗಳನ್ನೂ, ಉಪಾಸನೆಯನ್ನೂ, ಜ್ಞಾನಾದಿ ವ್ಯವಹಾರಗಳನ್ನೂ ನಡೆಸುತ್ತಾನೆ. ಮೂರು ಅವಸ್ಥೆಗಳಿರುತ್ತವೆ. ಅವು (೧) ಜಾಗ್ರತ್ (೨) ಸ್ವಪ್ನ (೩) ಸುಷುಪ್ತಿ ಎನ್ನಿಸುತ್ತವೆ. ಮೂರು ಶರೀರಗಳಿವೆ. ಕಣ್ಣಿಗೆ ಕಂಡುಬರುವುದು ಸ್ಥೂಲ; ಎರಡನೆಯದು ಪಂಚಪ್ರಾಣಗಳು, ಪಂಚ ಜ್ಞಾನೇಂದ್ರಿಯಗಳು, ಪಂಚ ಸೂಕ್ಷ್ಮಭೂತಗಳು ಮನಸ್ಸು ಮತ್ತು ಬುದ್ಧಿ ಈ ಹದಿನೇಳು ತತ್ವಗಳ ಸಮುದಾಯ; ಇದೇ ಸೂಕ್ಷ್ಮಶರೀರ; ಈ ಸೂಕ್ಷ್ಮಶರೀರವು ಜನ್ಮ ಮರಣಾದಿಗಳಲ್ಲಿಯೂ ಸಹ ಜೀವನೊಂದಿಗೇ ಇರುತ್ತದೆ. ಇದು ಎರಡು ಬಗೆಯಾಗಿರುತ್ತದೆ. ಒಂದು ಸೂಕ್ಷ್ಮಭೂತಗಳ ಅಂಶಗಳಿಂದ ರಚಿತವಾದುದು; ಅದಕ್ಕೆ ಭೌತಿಕವೆಂದು ಹೆಸರು; ಜೀವನ ಸ್ವಾಭಾವಿಕ ಗುಣರೂಪವಾಗಿರುವುದು, ಸ್ವಾಭಾವಿಕ ಸೂಕ್ಷ್ಮಶರೀರ; ಎರಡನೆಯುದಾದ ಅಭೌತಿಕ ಶರೀರವು ಮುಕ್ತಿಯಲ್ಲಿಯೂ ಇರುತ್ತದೆ. ಇದರಿಂದಲೇ ಜೀವನು ಮೋಕ್ಷಸುಖವನ್ನನುಭವಿಸುತ್ತಾನೆ. ಮೂರನೆಯದಾದ

ಕಾರಣಶರೀರದಲ್ಲಿ ಜೀವನು ಸುಷುಪ್ತಿಯನ್ನು ಅಂದರೆ ಗಾಢನಿದ್ರೆಯನ್ನು ಹೊಂದುತ್ತಾನೆ. ಇದು ಪ್ರಕೃತಿರೂಪವಾಗಿರುವುದರಿಂದ ಸರ್ವತ್ರ ವ್ಯಾಪಕವಾಗಿ ಸರ್ವ ಜೀವರಿಗೂ ಸಾಮಾನ್ಯವಾಗಿರುತ್ತದೆ. ನಾಲ್ಕನೆಯದು ಜೀವನು ಸಮಾಧಿಯಿಂದ ಪರಮಾತ್ಮನ ಆನಂದಸ್ವರೂಪದಲ್ಲಿ ಮಗ್ನರಾಗುವ ತುರೀಯಶರೀರ. ಈ ಸಮಾಧಿಸಂಸ್ಕಾರದಿಂದ ಹುಟ್ಟುವ ಶುದ್ಧ ಶರೀರದ ಪರಾಕ್ರಮವು ಮುಕ್ತಿಯಲ್ಲಿಯೂ, ಕೂಡ ಯಥಾವತ್ತಾಗಿ ಜೀವರಿಗೆ ಸಹಾಯಕವಾಗಿರುತ್ತದೆ. ಈ ಎಲ್ಲಾ ಕೋಶಗಳಿಂದಲೂ, ಅವಸ್ಥೆಗಳಿಂದಲೂ, ಜೀವನು ಭಿನ್ನವಾಗಿರುತ್ತಾನೆ. ಏಕೆಂದರೆ' ಅವಸ್ಥೆಗಳಿಂದ ಜೀವನು ಬೇರೆಯಾದವನು—ಎಂಬುದು ಎಲ್ಲರಿಗೂ ಗೊತ್ತೇ ಇದೆ. ಸಾವಾದ ಬಳಿಕ, ಜೀವನು ಶರೀರವನ್ನು ಬಿಟ್ಟುಹೋದನೆಂದು ಎಲ್ಲರೂ ಹೇಳುತ್ತಾರೆ. ಈ ಜೀವನೇ ಎಲ್ಲಕ್ಕೂ ಪ್ರೇರಕನು, ಧಾರಕನು, ಸಾಕ್ಷಿಯು, ಕರ್ತನು ಮತ್ತು ಭೋಕ್ತನು ಎನಿಸುತ್ತಾನೆ. ''ಜೀವನು ಕರ್ತನೂ ಭೊಕ್ತನೂ ಅಲ್ಲ'' ಎಂದು ಹೇಳುವವನನ್ನು ಅಜ್ಞಾನಿ, ಅವಿವೇಕಿ ಎಂದು ತಿಳಿಯಬೇಕು. ಏಕೆಂದರೆ, ಜೀವನಿಲ್ಲದೆ ಈ ಎಲ್ಲಾ ಜಡವಸ್ತುಗಳಿಗೆ ಸುಖದುಃಖಗಳ ಅನುಭವವಾಗಲಿ, ಪಾಪಪುಣ್ಯಕರ್ತೃತ್ವವಾಗಲಿ ಉಂಟಾಗಲಾರದು. ಆದರೆ ಇವುಗಳ ಸಂಬಂದಿಂದ ಜೀವನು ಪಾಪಪುಣ್ಯಗಳ ಕರ್ತನೂ, ದುಃಖಸುಖಗಳ ಭೋಕ್ತನೂ ಆಗುತ್ತಾನೆ. ಇಂದ್ರಿಯಗಳು ಅರ್ಥಗಳಲ್ಲಿಯೂ, ಮನಸ್ಸು ಇಂದ್ರಿಯಗಳಲ್ಲಿಯೂ, ಆತ್ಮನು ಮನಸ್ಸಿನಲ್ಲಿಯೂ, ಸೇರಿ, ಪ್ರಾಣಗಳನ್ನು ಪ್ರೇರಿಸಿ, ಸುಕೃತಗಳಲ್ಲಿ ಪ್ರವರ್ತನೆಗೊಳಿಸುತ್ತಲೇ ಅವನು ಬಹಿರ್ಮುಖನಾಗುತ್ತಾನೆ. ಆಗಲೇ ಒಳಗಿನಿಂದ ಆನಂದೋತ್ಸಾಹಗಳೂ, ನಿರ್ಭಯತ್ವ ಮತ್ತು ದುಷ್ಕಾರ್ಯಗಳಲ್ಲಿ ಭಯ ಸಂಶಯಗಳೂ, ಲಜ್ಜೆಯೂ ಹುಟ್ಟುತ್ತದೆ. ಅಂತರ್ಯಾಮಿಯಾದ ಪರಮಾತ್ಮನ ಶಿಕ್ಷಣವದು. ಈ ಶಿಕ್ಷಣಕ್ಕೆ ಅನುಕೂಲವಾಗಿ ವರ್ತಿಸುವವನೇ ಮುಕ್ತಿಯಿಂದ ಲಭ್ಯವಾಗುವ ಸುಖಗಳನ್ನು ಪಡೆಯುತ್ತಾನೆ. ಇದಕ್ಕೆ ವಿರುದ್ಧವಾಗಿ ನಡೆಯುವವನು ಬಂಧನದಿಂದ ಹುಟ್ಟುವ ದುಃಖವನ್ನನುಭವಿಸುತ್ತಾನೆ.

ಎರಡನೆಯ ಸಾಧನ—ವೈರಾಗ್ಯ; ಅಂದರೆ, ವಿವೇಕದಿಂದ

ತಿಳಿದ ಸತ್ಯಾಸತ್ಯಗಳಿಂದ, ಸತ್ಯಾಚರಣವನ್ನು ಸ್ವೀಕರಿಸಿ, ಅಸತ್ಯಾಚರಣವನ್ನು ತ್ಯಜಿಸುವುದೇ ವೈರಾಗ್ಯ; ಪೃಥಿವಿಯಿಂದಾರಂಭಿಸಿ, ಪರಮಾತ್ಮನವರೆಗಿನ ಪದಾರ್ಥಗಳ ಗುಣಕರ್ಮಸ್ವಭಾವಗಳನ್ನರಿತು, ಈಶ್ವರನ ಆಜ್ಞಾಪಾಲನೆ, ಮತ್ತು ಉಪಾಸನೆಯಲ್ಲಿ ನಿರತನಾಗುವುದು. ಅದಕ್ಕೆ ವಿರುದ್ಧವಾಗಿ ನಡೆಯದಿರುವುದು ಮತ್ತು ಸೃಷ್ಟಿಯಿಂದ ಉಪಕಾರಹೊಂದುವುದು ವೈರಾಗ್ಯವೆನಿಸುತ್ತದೆ.

ಅದಾದನಂತರ, ಮೂರನೆಯಸಾಧನವು, 'ಷಟ್ಕಸಂಪತ್ತಿ' ಅಂದರೆ, ಆರುಬಗೆಯ ಕರ್ಮಗಳನ್ನು ಮಾಡಬೇಕಾಗುತ್ತದೆ. (೧) ಶಮ :—ತನ್ನ ಆತ್ಮವನ್ನೂ, ಅಂತಃಕರಣವನ್ನೂ ಅಧರ್ಮಾಚರಣೆಯಿಂದ ದೂರವಿಟ್ಟು ಯಾವಾಗಲೂ, ಧರ್ಮಾಚರಣೆಯಲ್ಲೇ ಪ್ರವೃತ್ತಗೊಳಿಸುವುದು. (೨) ದಮ :—ಕಿವಿ ಮೊದಲಾದ ಇಂದ್ರಿಯಗಳನ್ನೂ ದೇಹವನ್ನೂ, ವ್ಯಭಿಚಾರವೇ ಮೊದಲಾದ ದುಷ್ಕಾರ್ಯಗಳಿಂದ ದೂರವಿಟ್ಟು ಜಿತೇಂದ್ರಿಯತ್ವವೇ ಮೊದಲಾದ ಶುಭಕರ್ಮಗಳಲ್ಲಿ ಪ್ರವೃತ್ತಗೊಳಿಸುವುದು. (೩) ಉಪರತಿ :—ದುಷ್ಕರ್ಮಿಗಳಾದ ಮಾನವರಿಂದ ಯಾವಾಗಲೂ ದೂರವಿರುವುದು. (೪) ನಿಂದಾಸ್ತುತಿ, ಹಾನಿಲಾಭಗಳು ಎಷ್ಟೇ ಆಗಲಿ, ಹರ್ಷಶೋಕಗಳನ್ನು ಬಿಟ್ಟು ಸದಾ ಮೋಕ್ಷಸಾಧನೆಯಲ್ಲಿ ತತ್ಪರನಾಗಿರುವುದು. (೫) ಶ್ರದ್ಧೆ :—ವೇದಾದಿ ಸತ್ಯಶಾಸ್ತ್ರಗಳಲ್ಲಿ, ಮತ್ತು ಇವುಗಳ ಜ್ಞಾನದಿಂದ ಪೂರ್ಣವಿದ್ವಾಂಸರೂ, ಆಪ್ತರೂ, ಸತ್ಯೋಪದೇಶಕರೂ ಆದ ಮಹಾ ಪುರುಷರ ವಚನದಲ್ಲಿ ನಂಬಿಕೆಯಿಡುವುದು. (೬) ಸಮಾಧಾನ :—ಚಿತ್ತದ ಏಕಾಗ್ರತೆ, ಈ ಆರೂ ಸೇರಿ ತೃತೀಯಸಾಧನ. ನಾಲ್ಕನೆಯದು ಮುಮುಕ್ಷುತ್ವ. ಅಂದರೆ, ಹಸಿವುಬಾಯಾರಿಕೆಗಳಿಂದ ಪೀಡಿತನಾದವನಿಗೆ ಅನ್ನನೀರಿನ ಹೊರತು ಬೇರಾವುದೂ ರುಚಿಸದಿರುವಂತೆ, ಮೋಕ್ಷಸಾಧನಗಳ ಮತ್ತು ಮುಕ್ತಿಯ ಹೊರತು ಬೇರಾವುದರಲ್ಲಿಯೂ ಪ್ರೀತಿಯಿಲ್ಲದಿರುವುದು. ಇವು ನಾಲ್ಕು ಸಾಧನಗಳು; ಮತ್ತು ಸಾಧನಗಳ ನಂತರ ಮಾಡಬೇಕಾದ ಕರ್ಮಗಳು ಅನುಬಂಧಗಳೆನಿಸುತ್ತವೆ. (೧) ಸಾಧನಚತುಷ್ಟಯದಿಂದ ಯುಕ್ತನಾದ ಮಾನವನೇ ಮೋಕ್ಷಕ್ಕೆ ಅಧಿಕಾರಿಯಾಗುತ್ತಾನೆ. (೨) ಸಂಬಂಧ—ಬ್ರಹ್ಮಪ್ರಾಪ್ತಿರೂಪವಾದ ಮುಕ್ತಿಯು ಪ್ರತಿಪಾದ್ಯ; ವೇದಾದಿ

ಸತ್ಯಶಾಸ್ತ್ರಗಳು ಪ್ರತಿಪಾದಕಗಳು ಎಂಬುದನ್ನು ಯಥಾವತ್ತಾಗಿ ತಿಳಿದು ಅನ್ವಯಿಸಿಕೊಳ್ಳುವುದು. (೩) ವಿಷಯೀ—ಸರ್ವಶಾಸ್ತ್ರ ಪ್ರತಿಪಾದನ ವಿಷಯವಾದ ಬ್ರಹ್ಮನನ್ನು ಹೊಂದಬೇಕೆಂಬ ವಿಷಯವನ್ನುಳ್ಳವನು ವಿಷಯೀ ಎನ್ನಿಸುತ್ತಾನೆ. (೪) ಪ್ರಯೋಜನ—ಸಮಸ್ತ ದುಃಖಗಳ ನಿವೃತ್ತಿಯೂ, ಪರಮಾನಂದಪ್ರಾಪ್ತಿಯೂ ಆಗಿ ಮೋಕ್ಷವನ್ನು ಪಡೆಯುವುದು. ಈ ನಾಲ್ಕು ಅನುಬಂಧಗಳೆನಿಸುತ್ತವೆ.

ಬಳಿಕ ಶ್ರವಣಚತುಷ್ಟಯ (೧) ಯಾರಾದರೂ ವಿದ್ವಾಂಸರು ಉಪದೇಶಮಾಡುವಾಗ, ಅದನ್ನು ಶಾಂತವಾಗಿ ಗಮನವಿತ್ತು ಆಲಿಸಬೇಕು. ಮುಖ್ಯವಾಗಿ ಬ್ರಹ್ಮವಿದ್ಯೆಯ ಕಡೆ ಬಹಳ ಲಕ್ಷ್ಯವಿಡಬೇಕು. ಏಕೆಂದರೆ, ಸರ್ವವಿದ್ಯೆಗಳಲ್ಲಿಯೂ, ಇದು ಸೂಕ್ಷ್ಮ. (೨) ಮನನ—ಕೇಳಿದುದನ್ನು ಏಕಾಂತಪ್ರದೇಶದಲ್ಲಿ ಕುಳಿತು ಆಲೋಚಿಸಬೇಕು. ಸಂಶಯಬಂದ ವಿಷಯಗಳನ್ನೆಲ್ಲ ಪುನಃ ಕೇಳುವುದು, ಹೇಳುವಾಗಲೂ ಸಹ. ವಕ್ತೃವೂ ಶ್ರೋತೃವೂ ಉಚಿತವೆಂದು ತಿಳಿದಲ್ಲಿ ಮಾತ್ರ ಪ್ರಶ್ನಿಸುವುದು ಮತ್ತು ಸಮಾಧಾನಮಾಡಿಕೊಳ್ಳುವುದು. (೩) ನಿದಿಧ್ಯಾಸನ—ಶ್ರವಣಮನನಗಳಿಂದ ಸಂಶಯರಹಿತನಾದಾಗ, ಸಮಾಧಿಸ್ಥನಾಗಿ, ಹೇಳಿದ, ಹಾಗೂ ಆಲೋಚಿಸಿದ ಹಾಗೆಯೇ ವಿಷಯವಿವೆಯೋ ಇಲ್ಲವೋ ಎಂದು ನೋಡಿಕೊಳ್ಳುವುದು. ಧ್ಯಾನಯೋಗದಿಂದ ಈಕ್ಷಿಸುವುದು. (೪) ಸಾಕ್ಷಾತ್ಕಾರ—ಪದಾರ್ಥಗಳ ಸ್ವರೂಪಗುಣಸ್ವಭಾವಗಳನ್ನು ಯಥಾವತ್ತಾಗಿ ತಿಳಿಯುವುದು. ಇವೇ ಶ್ರವಣಚತುಷ್ಟಯವೆನಿಸುತ್ತವೆ. ಸದಾ ತಮೋಗುಣವನ್ನು ಅಂದರೆ–ಕ್ರೋಧ, ಮಾಲಿನ್ಯ, ಆಲಸ್ಯ ಪ್ರಮಾದ ಮೊದಲಾದುವನ್ನೂ, ರಜೋಗುಣವನ್ನೂ, ಅಂದರೆ ಈರ್ಷ್ಯೆ, ದ್ವೇಷ, ಕಾಮ, ಅಭಿಮಾನ, ವಿಕ್ಷೇಪ ಮೊದಲಾದ ದೋಷಗಳನ್ನೂ, ಬಿಟ್ಟು, ಸತ್ವ ಅಂದರೆ, ಶಾಂತಸ್ವಭಾವ, ಪವಿತ್ರತೆ, ವಿದ್ಯೆ, ವಿಚಾರ ಮೊದಲಾದ ಗುಣಗಳನ್ನು ಧರಿಸಬೇಕು. (ಮೈತ್ರಿ) ಸುಖವಾಗಿರುವವರಲ್ಲಿ ಸ್ನೇಹ, (ಕರುಣಾ) ದುಃಖಪಡುತ್ತಿರುವವರಲ್ಲಿ ಕನಿಕರ, (ಮುದಿತಾ) ಪುಣ್ಯಾತ್ಮರ ಬಗ್ಗೆ ಸಂತೋಷ, (ಉಪೇಕ್ಷಾ) ದುಷ್ಟರಲ್ಲಿ ಪ್ರೀತಿ ಅಥವಾ ವೈರವಿಡದಿರುವುದು, ಇವನ್ನು ರೂಢಿಸಬೇಕು. ಮುಮುಕ್ಷುವು ನಿತ್ಯವೂ ಕೊನೆಯಪಕ್ಷ ಎರಡು ಘಂಟೆಗಳಾ

ದರೂ ಮನಸ್ಸೇ ಮೊದಲಾದ ಆಂತರಿಕ ಸುಧಾರಗಳ ಸಾಕ್ಷಾತ್ಕಾರ ವಾಗುವಂತೆ ಧ್ಯಾನಮಾಡಬೇಕು. ನೋಡಿರಿ :—ನಾವು ಚೇತನ ಸ್ವರೂಪವಾಗಿದ್ದೇವೆ. ಆದುದರಿಂದಲೇ ಜ್ಞಾನಸ್ವರೂಪರೂ, ಮನಸ್ಸಿನ ಸಾಕ್ಷಿಗಳೂ ಆಗಿದ್ದೇವೆ. ಏಕೆಂದರೆ, ಮನಸ್ಸು ಶಾಂತವಾಗಿ ಅಥವಾ ಚಂಚಲವಾಗಿ, ಆನಂದಿತವಾಗಿ ಅಥವಾ ವಿಷಾದಭರಿತವಾಗಿ ಆಗುವು ದನ್ನು ನಾವು ಯಥಾವತ್ತಾಗಿ ನೋಡುತ್ತೇವೆ. ಅದೇ ರೀತಿ, ಇಂದ್ರಿಯ, ಪ್ರಾಣ ಮೊದಲಾದುವುಗಳನ್ನು ತಿಳಿಯುವವರೂ, ಹಿಂದೆ ಕಂಡದನ್ನು ಸ್ಮರಿಸುವವರೂ, ಏಕಕಾಲದಲ್ಲಿ ಅನೇಕ ಪದಾರ್ಥಗಳನ್ನರಿಯುವವರೂ, ಸಾಧಾರಣ ಆಕರ್ಷಣಕರ್ತರೂ, ಇವೆಲ್ಲಕ್ಕಿಂತಲೂ ಬೇರೆಯಾಗಿದ್ದೇವೆ. ಬೇರೆಯಾಗಿಲ್ಲದಿದ್ದರೆ, ನಾವು ಸ್ವತಂತ್ರರಾದ ಕರ್ತರೂ, ಇವುಗಳ ಪ್ರೇರಕರಾದ ಅಧಿಷ್ಠಾತೃಗಳೂ ಆಗುತ್ತಿದ್ದಿಲ್ಲ.

ಅವಿದ್ಯಾಽಸ್ಮಿತಾರಾಗದ್ವೇಷಾಭಿನಿವೇಶಾಃ ಪಂಚಕ್ಲೇಶಾಃ ।

[ಯೋಗ. ೨. । ೩. ॥]

ಇವುಗಳಲ್ಲಿ ಅವಿದ್ಯೆಯ ರೂಪವನ್ನು ಹಿಂದೆಯೇ ಹೇಳಿದ್ದೇವೆ; ಅಸ್ಮಿತಾ—ಬೇರೆಯೊದ ಬುದ್ಧಿಯನ್ನು ಆತ್ಮನಿಂದ ಬೇರೆಯಲ್ಲವೆಂದು ತಿಳಿಯುವುದು; ರಾಗ—ಸುಖದಲ್ಲಿ ಪ್ರೀತಿ; ದ್ವೇಷ—ದುಃಖದಲ್ಲಿ ಅಪ್ರೀತಿ: ಅಭಿನಿವೇಶ—ತಾವು ಯಾವಾಗಲೂ ಶರೀರದಲ್ಲೇ ಇದ್ದು, ಯಾವತ್ತಿಗೂ ಸಾಯಬಾರದೆಂಬುದು ಪ್ರಾಣಿ ಮಾತ್ರ ಅಪೇಕ್ಷೆ, ಈ ಸಾವಿನ ದುಃಖದಿಂದುಂಟಾಗುವ ತ್ರಾಸವು ಅಭಿನಿವೇಶವೆನಿಸುತ್ತದೆ, ಈ ಪಂಚಕ್ಲೇಶಗಳನ್ನು ಯೋಗಾಭ್ಯಾಸ ಮತ್ತು ವಿಜ್ಞಾನದಿಂದ ಬಿಡಿಸಿಕೊಂಡು, ಬ್ರಹ್ಮನನ್ನು ಹೊಂದಿ ಮುಕ್ತಿಯ ಪರಮಾನಂದ ವನ್ನು ಅನುಭವಿಸಬೇಕು.

ಪ್ರಶ್ನೆ :—ಮೋಕ್ಷವನ್ನು ನೀವು ಒಪ್ಪುವಹಾಗೆ ಬೇರಾರೂ ಒಪ್ಪುವುದಿಲ್ಲ. ನೋಡಿರಿ; ಜೈನರು ಶಿವಪುರಿಗೆ ಹೋಗಿ, ಮೋಕ್ಷ ಶಿಲೆಯಮೇಲೆ ಸುಮ್ಮನೆ ಕುಳಿತಿರುವದನ್ನೂ, ಕ್ರೈಸ್ತರು ನಾಲ್ಕನೆಯ ಆಕಾಶಕ್ಕೆ ಹೋಗಿ, ಅಲ್ಲಿ ಮುದುವೆ, ಸಂಗ್ರಾಮ, ತಾಳಮೇಳ, ವಸ್ತ್ರಗಳು ಮೊದಲಾದುವುಗಳ ಧಾರಣದಿಂದ ಆನಂದಿಸುವುದನ್ನೂ, ಹಾಗೆಯೇ

ಮುಸಲ್ಮಾನರು ಏಳನೆಯ ಆಕಾಶ, ವಾಮಮಾರ್ಗಿಗಳು ಶ್ರೀಪುರ, ಶೈವರು ಕೈಲಾಸ, ವೈಷ್ಣವರು ವೈಕುಂಠ, ಗೋಕುಲೀಯ ಗೋಸಾಯಿಗಳು ಗೋಲೋಕ ಮೊದಲಾದೆಡೆಗೆ ಹೋಗಿ, ಉತ್ತಮವಾದ ಸ್ತ್ರೀಯರು, ಅನ್ನಪಾನ, ವಸ್ತ್ರಾಭರಣಗಳಿಂದ, ಆನಂದಿಸುವುದನ್ನು ಮೋಕ್ಷವೆಂದು ಒಪ್ಪುತ್ತಾರೆ. ಪೌರಾಣಿಕರು ಸಾಲೋಕ್ಯ—ಪರಮಾತ್ಮನ ಲೋಕದಲ್ಲಿ ವಾಸಿಸುವುದು, ' ಸಾನುಜ್ಯ ' ಸೋದರನಂತೆ ಪರಮಾತ್ಮನೊಂದಿಗಿರುವುದು, ' ಸಾರೂಪ್ಯ ' ಉಪಾಸನಾ ಯೋಗ್ಯವಾದ ಪರಮಾತ್ಮನ ಆಕಾರದಂತೆಯೇ ತಾನೂ ಆಗಿಹೋಗುವದು, ' ಸಾಮೀಪ್ಯ ' ಸೇವಕನಂತೆ ಪರಮಾತ್ಮನಬಳಿಯಿರುವುದು. ' ಸಾಯುಜ್ಯ ' ಪರಮಾತ್ಮನಲ್ಲಿ ಸೇರಿಹೋಗುವುದು; ಈ ಐದು ಬಗೆಯ ಮುಕ್ತಿಯನ್ನೊಪ್ಪುತ್ತಾರೆ. ವೇದಾಂತಿಗಳು ಬ್ರಹ್ಮನಲ್ಲಿ ಲಯವಾಗುವುದನ್ನು ಮೋಕ್ಷವೆಂದು ತಿಳಿಯುತ್ತಾರೆ.

ಉತ್ತರ :—ಹನ್ನೆರಡನೆಯ ಸಮುಲ್ಲಾಸದಲ್ಲಿ ಜೈನರ : ಹದಿಮೂರನೆಯ ಸಮುಲ್ಲಾಸದಲ್ಲಿ ಕ್ರೈಸ್ತರ; ಮತ್ತು ಹದಿನಾಲ್ಕನೆಯ ಸಮುಲ್ಲಾಸದಲ್ಲಿ ಮುಸಲ್ಮಾನರ ಮುಕ್ತಿಯೇ ಮೊದಲಾದ ವಿಷಯಗಳನ್ನು ವಿಶೇಷವಾಗಿ ಬರೆಯುತ್ತೇವೆ. ವಾಮಮಾರ್ಗಿಗಳು ಶ್ರೀಪುರಕ್ಕೆ ಹೋಗಿ ಲಕ್ಷ್ಮಿಯಂತಿರುವ ನಾರಿಯರೊಂದಿಗೂ, ಮದ್ಯಮಾಂಸ ಮೊದಲಾದುವುಗಳ ಸೇವನೆಯಿಂದಲೂ, ತಾಳಮೇಳಗಳಿಂದಲೂ, ಭೋಗಪಡುವುದೇ ಮೋಕ್ಷವೆಂದು ಒಪ್ಪುವುದು, ಇಲ್ಲಿಗಿಂತ ವಿಶೇಷವಾದುದೇನೂ ಅಲ್ಲ. ಹಾಗೆಯೇ ಶಿವನಂತೆ ಮತ್ತು ವಿಷ್ಣುವಿನಂತೆ, ಆಕಾರಗಳನ್ನು ಧರಿಸಿದವರು, ಪಾರ್ವತಿ, ಲಕ್ಷ್ಮಿಯಂತಹ ಸ್ತ್ರೀಯರೊಡಗೂಡಿ, ಆನಂದವನ್ನನುಭವಿಸುವುದು, ಮೋಕ್ಷವೆಂದು ಹೇಳುವರು. ಇಲ್ಲಿನ ಧನವಂತರಾದ ರಾಜರ ಸುಖಕ್ಕಿಂತ ಹೆಚ್ಚಾಗಿ, ' ಅಲ್ಲಿ ರೋಗಗಳಿಲ್ಲ ಮತ್ತು ಯೌವನ ಸದಾ ಇರುವುದು ' ಎಂದಿಷ್ಟುಮಾತ್ರ ಹೇಳುತ್ತಾರೆ. ಅವರ ಮಾತು ಸುಳ್ಳು, ಏಕೆಂದರೆ, ಭೋಗವಿದ್ದಲ್ಲಿ ರೋಗ; ರೋಗವಿದಲ್ಲಿ ಮುದಿತನ ಅವಶ್ಯವಾಗಿ ಬರುವುದು. ಇನ್ನು ಪೌರಾಣಿಕರನ್ನು ಕೇಳಬೇಕು—ನೀವು ಹೇಳುವ ನಾಲ್ಕುಬಗೆಯ ಮೋಕ್ಷವು, ಕ್ರಿಮಿ-ಕೀಟ-ಪತಂಗ-ಪಶು ಮೊದಲಾದುವುಕ್ಕೂ ಸಹ ಸ್ವತಃಸಿದ್ಧವಾಗಿ

ದೊರತಿವೆ. ಏಕೆಂದರೆ, ಇರುವ ಈ ಲೋಕಗಳೆಲ್ಲಾ ಪರಮಾತ್ಮನವೇ ಆಗಿವೆ. ಇವುಗಳಲ್ಲೀ ಎಲ್ಲಾ ಜೀವರೂ ಇರುತ್ತಾರೆ. ಆದುದರಿಂದ ಸಾಲೋಕ್ಯಮುಕ್ತಿಯೂ ಅನಾಯಾಸವಾಗಿ ಲಭಿಸಿದೆ. 'ಸಾಮೀಪ್ಯ' ಪರಮಾತ್ಮನು ಸರ್ವವ್ಯಾಪಕನಾಗಿರುವದರಿಂದ, ಎಲ್ಲವೂ, ಆತನ ಹತ್ತಿರಲೇ ಇರುತ್ತವೆ; ಆದುದರಿಂದ ಸಾಮೀಪ್ಯಮುಕ್ತಿಯೂ, ಸ್ವತಃ ಸಿದ್ಧವಾಗಿದೆ. ಇನ್ನು 'ಸಾನುಜ್ಯ'—ಜೀವನು ಪರಮಾತ್ಮನಿಗಿಂತ ಎಲ್ಲಾ ಬಗೆಯಲ್ಲಿಯೂ ಚಿಕ್ಕವನು ಮತ್ತು ಚೇತನನಾದುದ ರಿಂದ ಸ್ವತಃ ತಮ್ಮನಂತಿದ್ದಾನೆ. ಇದರಿಂದ ಸಾನುಜ್ಯಮುಕ್ತಿಯೂ ಯತ್ನವಿಲ್ಲದೇ ಸಿದ್ಧವಾಯಿತು; ಮತ್ತು ಜೀವರೆಲ್ಲರೂ ಸರ್ವವ್ಯಾಪಕ ಪರಮಾತ್ಮನಲ್ಲಿ ವ್ಯಾಪ್ಯರಾಗಿರುವುದರಿಂದ 'ಸಂಯುಕ್ತ'ರಾಗಿದ್ದಾರೆ. ಇದರಿಂದ ಸಾಯುಜ್ಯಮುಕ್ತಿಯೂ ಸ್ವತಃ ಸಿದ್ಧವಾಗಿದೆ. ಮತ್ತು ಅನ್ಯ ಸಾಧಾರಣ ನಾಸ್ತಿಕರು "ಸಾವಿನಿಂದ ತತ್ವಗಳೊಡನೆ ತತ್ವ ಬೆರೆತು ಪರಮಮುಕ್ತಿಯಾಗುತ್ತದೆ" ಎಂದು ಹೇಳುತ್ತಾರೆ. ಅದಂತೂ, ನಾಯಿ, ಕತ್ತೆ ಮೊದಲಾದುವಕ್ಕೂ ಕೂಡಾ ಪ್ರಾಪ್ತವಾಗಿದೆ. ಆದರೆ, ಇವೆಲ್ಲಾ ಮುಕ್ತಿಗಳೇ ಅಲ್ಲ. ಒಂದು ಬಗೆಯ ಬಂಧನಗಳು. ಏಕೆಂದರೆ, ಈ ಜನರು, ಶಿವಪುರ, ಮೋಕ್ಷಶಿಲೆ, ನಾಲ್ಕನೆಯ ಆಕಾಶ, ಏಳನೆಯ ಆಕಾಶ, ಶ್ರೀಪುರ, ಕೈಲಾಸ, ವೈಕುಂಠ, ಮತ್ತು ಗೋಲೋಕ ಇವು ಗಳನ್ನು ಒಂದೇ ಎಡೆಯಿರುವ ನಿರ್ದಿಷ್ಟಸ್ಥಾನಗಳೆಂದು ಅಂಗೀಕರಿಸು ತ್ತಾರೆ. ಅವರು ಆಸ್ಥಾನಗಳಿಂದ ದೂರವಾದರೆ, ಮೋಕ್ಷವೂ ಬಿಟ್ಟು ಹೋಗುತ್ತದೆ. ಆದುದರಿಂದ ದ್ವಾದಶಶಿಲೆಗಳ ನಡುವೆ ದೃಷ್ಟಿ ಬಂಧ ವಾಗುವಂತೆ ಬಂಧನದಲ್ಲಿರುವರು. ಇಚ್ಛೆಬಂದೆಡೆಯೆಲ್ಲಾ ಓಡಾಡು ವುದು. ಎಲ್ಲಿಯೂ, ತಡೆಯಿಲ್ಲದಿರುವುದು—ಇದೇ ಮುಕ್ತಿ. ಇದರಲ್ಲಿ ಭಯ, ಶಂಕೆ ಅಥವಾ ದುಃಖವಿರುವುದಿಲ್ಲ. ಜನನಕ್ಕೆ ಉತ್ಪತ್ತಿ ಯೆಂದೂ, ಮರಣಕ್ಕೆ ಪ್ರಳಯವೆಂದೂ ಹೇಳುತ್ತಾರೆ, ಮತ್ತೆ ಸಮಯ ಬಂದಾಗ ಜನ್ಮತಾಳುತ್ತಾರೆ.

ಪ್ರಶ್ನೆ :—ಜನ್ಮವು ಒಂದೋ, ಅನೇಕವೋ?

ಉತ್ತರ :—ಅನೇಕ.

ಪ್ರಶ್ನೆ :—ಅನೇಕವಾಗಿದ್ದರೆ, ಹಿಂದಣ ಹುಟ್ಟುಸಾವುಗಳ ವಿಷಯಗಳೇಕೆ ನೆನಪಾಗುವುದಿಲ್ಲ ?

ಉತ್ತರ :—ಜೀವನು ತ್ರಿಕಾಲದರ್ಶಿಯಾಗಿರದೆ, ಅಲ್ಪಜ್ಞನಾಗಿರುವುದರಿಂದ ನೆನಪಾಗುವುದಿಲ್ಲ. ಮತ್ತು ಯಾವ ಮನಸ್ಸಿನಿಂದ ಅವನಿಗೆ ಜ್ಞಾನವುಂಟಾಗುವುದೋ, ಅದೂ ಕೂಡ ಒಂದೇ ಸಮಯದಲ್ಲಿ ಎರಡು ವಿಷಯಗಳನ್ನು ಗ್ರಹಿಸಲಾರದು. ಹಿಂದಣ ಜನ್ಮಗಳ ಮಾತು ಹಾಗಿರಲಿ; ಈ ದೇಹದಲ್ಲಿಯೇ ಜೀವನು ಗರ್ಭದಲ್ಲಿದ್ದನು, ಶರೀರ ರಚನೆಯೂ ಆಯಿತು. ಆಮೇಲೆ ಜನಿಸಿದನು; ತನ್ನ ಐದನೆಯ ವರ್ಷದ ಮೊದಲಿನವರಿಗೆ ನಡೆದುದನ್ನು ಏಕೆ ಸ್ಮರಿಸಲಾರನು ? ಜೀವನು ಜಾಗ್ರದವಸ್ಥೆ ಮತ್ತು ಸ್ವಪ್ನಾವಸ್ಥೆಯಲ್ಲಿ ಅನೇಕ ವ್ಯವಹಾರಗಳನ್ನು ಪ್ರತ್ಯಕ್ಷವಾಗಿ ನಡೆಸುತ್ತಿದ್ದರೂ ಕೂಡ, ಸುಷುಪ್ತಿಯಲ್ಲಿ, ಅಂದರೆ, ಗಾಢನಿದ್ರೆಯಲ್ಲಿ, ಜಾಗ್ರತ್ ಮೊದಲಾದ ವ್ಯವಹಾರಗಳನ್ನೇಕೆ ಸ್ಮರಿಸಲಾರನು ? ಮತ್ತು ಯಾರಾದರೂ ನಿಮ್ಮನ್ನು ' ಹನ್ನೆರಡು ವರ್ಷಗಳಿಗೆ ಮೊದಲು, ಹದಿಮೂರನೆಯ ವರ್ಷದ, ಐದನೆಯ ತಿಂಗಳ, ಒಂಭತ್ತನೆಯ ದಿನದ, ಹತ್ತು ಘಂಟೆಯ ಮೊದಲನೆಯ ನಿಮಿಷದಲ್ಲಿ ನೀವು ಏನು ಮಾಡಿದ್ದಿರಿ ? ನಿಮ್ಮ ಮುಖವೂ, ಕೈಗಳೂ, ಕಿವಿಗಳೂ, ಕಣ್ಣುಗಳೂ, ದೇಹವೂ ಯಾವ ದಿಕ್ಕಿನಲ್ಲಿ ಹೇಗಿದ್ದವು ? ನಿಮ್ಮ ಮನಸ್ಸಿನಲ್ಲಿ ಯಾವ ಯೋಚನೆಯಿತ್ತು ? ' ಎಂದು ಕೇಳಿದರೆ ? ಈ ಶರೀರದಲ್ಲೇ ಹೀಗಿರುವಾಗ, ಪೂರ್ವಜನ್ಮದ ವಿಷಯಗಳು ನೆನಪಾಗದೆಂದು ಶಂಕಿಸುವುದು ಹುಡುಗತನದ ಮಾತು ಮತ್ತು ನೆನಪಿಗೆ ಬಾರದಿರುವುದರಿಂದಲೇ ಜೀವನು ಸುಖಿಯಾಗಿದ್ದಾನೆ. ಹಾಗಿಲ್ಲದಿದ್ದರೆ, ಹಿಂದಿನ ಎಲ್ಲಾ ಜನ್ಮಗಳ ದುಃಖವನ್ನು ನೋಡಿ ನೋಡಿ ದುಃಖಿಯಾಗಿ ಸತ್ತುಹೋಗುತ್ತಿದ್ದನು. ಯಾವನಾದರೂ ಹಿಂದಿನ ಮತ್ತು ಮುಂದಿನ ಜನ್ಮಗಳ ವೃತ್ತಾಂತಗಳನ್ನು ತಿಳಿಯಬಯಸಿದರೂ ಕೂಡ ತಿಳಿಯಲಾರನು. ಏಕೆಂದರೆ, ಜೀವನ ಜ್ಞಾನವೂ ಸ್ವರೂಪವೂ, ಅಲ್ಪವಾಗಿರುತ್ತವೆ. ಈ ವಿಷಯವು ಈಶ್ವರನು ತಿಳಿಯಲರ್ಹವಾದುದು, ಜೀವನು ತಿಳಿಯಲರ್ಹವಾದುದಲ್ಲ.

ಪ್ರಶ್ನೆ:—ಜೀವನಿಗೆ ಹಿಂದಿನ ಜ್ಞಾನವೇ ಇಲ್ಲದಿರುವಾಗ, ಅವ

ನನ್ನು ಪರಮಾತ್ಮನು ದಂಡಿಸಿದರೆ, ಜೀವನ ಸುಧಾರಣೆಯಾಗಲಾರದು. ಏಕೆಂದರೆ, ನಾನು ಇಂತಹ ಕಾರ್ಯಗಳನ್ನು ಮಾಡಿದೆನು ಅದರ ಫಲವೇ ಇದು ಎಂಬ ಜ್ಞಾನವುಂಟಾದರೆ ಮಾತ್ರ ಅವನು ಪಾಪಕಾರ್ಯ ಗಳನ್ನು ಬಿಡಬಲ್ಲನು,

ಉತ್ತರ :—ನೀವು ಎಷ್ಟು ವಿಧವಾದ ಜ್ಞಾನವನ್ನಂಗೀಕರಿಸು ತ್ತೀರಿ ?

ಪ್ರಶ್ನೆ :—ಪ್ರತ್ಯಕ್ಷಾದಿ ಪ್ರಮಾಣಗಳಿಂದ ಎಂಟು ಬಗೆಯ ಜ್ಞಾನವನ್ನು.

ಉತ್ತರ :—ಹಾಗಾದರೆ ನೀವು ಜನ್ಮದಿಂದಾರಂಭಿಸಿ ಕಾಲ ಕಾಲದಲ್ಲಿ, ರಾಜ್ಯ, ಧನ, ಬುದ್ಧಿ, ವಿದ್ಯೆ, ದಾರಿದ್ರ್ಯ, ಬುದ್ಧಿಹೀನತೆ, ಮೂರ್ಖತ್ವ, ಮೊದಲಾದ ಸುಖದುಃಖಗಳನ್ನು ಪ್ರಪಂಚದಲ್ಲಿ ನೋಡಿ, ಪೂರ್ವಜನ್ಮದ ಜ್ಞಾನವನ್ನೇಕೆ ಗಳಿಸುವುದಿಲ್ಲ ? ವೈದ್ಯನಲ್ಲದವನೊಬ್ಬ ನಿಗೂ, ವೈದ್ಯನೊಬ್ಬನಿಗೂ ಯಾವುದಾದರೂ ರೋಗ ಬಂದರೆ, ವೈದ್ಯನು ಅದರ ನಿದಾನ ಅಂದರೆ, ಕಾರಣವನ್ನು ತಿಳಿದುಕೊಳ್ಳುತ್ತಾನೆ; ಅವಿದ್ವಾಂಸನು ತಿಳಿಯಲಾರನು. ಮೊದಲನೆಯವನು ವೈದ್ಯಶಾಸ್ತ್ರ ವನ್ನು ಕಲಿತಿದ್ದಾನೆ. ಮತ್ತೊಬ್ಬನು ಕಲಿತಿಲ್ಲ. ಆದರೆ, ಜ್ವರ ಮುಂತಾದ ರೋಗಗಳುಂಟಾದರೆ, ವೈದ್ಯನಲ್ಲದವನೂ ಸಹ, ತನ್ನಿಂದೇನೋ ಕುಪಥ್ಯವು ನಡೆದಿದೆ, ಅದರಿಂದ ನನಗೀರೋಗ ವುಂಟಾಗಿದೆ, ಎಂದಿಷ್ಟು ತಿಳಿಯಬಲ್ಲನು. ಹಾಗೆಯೇ ಜಗತ್ತಿನಲ್ಲಿ ವಿಚಿತ್ರವಾದ ಸುಖದುಃಖಗಳ ನ್ಯೂನಾಧಿಕ್ಯವನ್ನು ನೋಡಿ, ಪೂರ್ವ ಜನ್ಮವನ್ನೇಕೆ ಊಹಿಸುವುದಿಲ್ಲ ? ಮತ್ತು ಪೂರ್ವಜನ್ಮವನ್ನೊಪ್ಪದಿದ್ದರೆ, ಪರಮಾತ್ಮನು ಪಕ್ಷಪಾತಿಯಾಗಿ ಹೋಗುತ್ತಾನೆ. ಏಕೆಂದರೆ, ಪಾಪ ವಿಲ್ಲದಯೇ ದಾರಿದ್ರ್ಯ, ಬುದ್ಧಿಹೀನತೆ ಮಾದಲಾದ ದುಃಖಗಳನ್ನೂ, ಪೂರ್ವಸಂಚಿತ ಪುಣ್ಯವಿಲ್ಲದೆಯೇ ರಾಜ್ಯ-ಧನ ಸಂಪನ್ನತೆಯನ್ನೇ ಕಿತ್ತನು ? ಪೂರ್ವಜನ್ಮದ ಪಾಪಪುಣ್ಯಗಳಿಗನುಸಾರವಾಗಿ ಸುಖದುಃಖ ಗಳನ್ನು ಕೊಡುವುದರಿಂದ ಪರಮಾತ್ಮನು ಯಥಾರ್ಥವಾದ ನ್ಯಾಯ ಕಾರಿಯಾಗುತ್ತಾನೆ.

ಪ್ರಶ್ನೆ:—ಒಂದೇ ಜನ್ಮವಿದ್ದರೂ, ಪರಮಾತ್ಮನು ನ್ಯಾಯಕಾರಿಯಾಗಬಲ್ಲನು. ಹೇಗೆಂದರೆ, ಸರ್ವೇಶ್ವರನಾದ ರಾಜನು ಮಾಡಿದುದೆಲ್ಲಾ ನ್ಯಾಯವೇ. ಉದಾಹರಣೆಗೆ. ತೋಟಗಾರನು, ತನ್ನ ತೋಟದಲ್ಲಿ ಸಣ್ಣ ಗಿಡಗಳನ್ನೂ, ದೊಡ್ಡ ಗಿಡಗಳನ್ನೂ ನೆಡುತ್ತಾನೆ. ಕೆಲವನ್ನು ಕಡಿದುಹಾಕಿ, ಕೆಲವನ್ನು ಕಾಪಾಡಿ ಬೆಳೆಸುತ್ತಾನೆ. ಯಾವದು ಯಾವನ ವಸ್ತುವೋ ಅದನ್ನು ಅವನು ಬೇಕಾದಂತೆ ಇಟ್ಟುಕೊಳ್ಳಬಹುದು. ಈಶ್ವರನಿಗೆ ದಂಡವಿಧಿಸಬಲ್ಲ, ಈಶ್ವರನನ್ನು ಹೆದರಿಸಬಲ್ಲ, ಈಶ್ವರನಿಗಿಂತ ದೊಡ್ಡವನಾದ ಬೇರಾವ ನ್ಯಾಯಕರ್ತನೂ ಇಲ್ಲ.

ಉತ್ತರ:—ಪರಮಾತ್ಮನು ನ್ಯಾಯವನ್ನಪೇಕ್ಷಿಸುವುದರಿಂದ, ನ್ಯಾಯವನ್ನು ಮಾಡುವುದರಿಂದ, ಮತ್ತು ಅನ್ಯಾಯವನ್ನೆಂದಿಗೂ ಮಾಡದಿರುವುದರಿಂದ ಪೂಜನೀಯನೂ, ಜ್ಯೇಷ್ಠನೂ ಆಗಿದ್ದಾನೆ. ನ್ಯಾಯವಿರುದ್ಧವಾಗಿ ನಡೆಯುವವನು ಈಶ್ವರನೇ ಅಲ್ಲ. ತೋಟಗಾರನು ವಿವೇಚನೆಯಿಲ್ಲದೆ ದಾರಿಯಲ್ಲಿ ಅಥವಾ ಆಯುಕ್ತವಾದ ಸ್ಥಾನದಲ್ಲಿ ವೃಕ್ಷಗಳನ್ನು ಬೆಳೆಸುವುದರಿಂದಲೂ, ಕತ್ತರಿಸಬಾರದುದನ್ನು ಕತ್ತರಿಸುವುದರಿಂದಲೂ, ಬೇಡದುದನ್ನು ಬೆಳಸುವುದರಿಂದಲೂ, ಬೇಕಾದುದನ್ನು ಬೆಳಸದಿರುವುದರಿಂದಲೂ, ನಿಂದೆಗೆ ಗುರಿಯಾಗುತ್ತಾನೆ. ಹಾಗೆಯೇ ಕಾರಣವಿಲ್ಲದೆ ಕಾರ್ಯಮಾಡುವುದರಿಂದ ಪರಮಾತ್ಮನಿಗೆ ದೋಷ ತಗಲುತ್ತದೆ. ಪರಮಾತ್ಮನು ನ್ಯಾಯಯುಕ್ತವಾದ ಕಾರ್ಯಮಾಡುವುದು ಅವಶ್ಯಕ. ಏಕೆಂದರೆ, ಅವನು ಸ್ವಭಾವದಿಂದಲೇ ಪವಿತ್ರನೂ, ನ್ಯಾಯಕಾರಿಯೂ ಆಗಿದ್ದಾನೆ. ಹಾಗಿಲ್ಲದೆ, ಉನ್ಮತ್ತನಂತೆ ಕಾರ್ಯಮಾಡಿದರೆ, ಜಗತ್ತಿನ ಒಬ್ಬ ಉತ್ತಮನಾದ ನ್ಯಾಯಾಧೀಶನಿಗಿಂತ ಹೀನನೂ, ಮರ್ಯಾದಾರಹಿತನೂ ಆಗುವನು. ಈ ಜಗತ್ತಿನಲ್ಲಿ ಒಳ್ಳೆಯ ಕೆಲಸಮಾಡದೆ, ಯೋಗ್ಯತೆಯಿಲ್ಲದೆ ಗೌರವವನ್ನೂ, ಕೆಟ್ಟಕೆಲಸಮಾಡದೆ ದಂಡವನ್ನೂ ವಿಧಿಸುವವನು ನಿಂದನೀಯನೂ, ಮನ್ನಣೆಯಿಲ್ಲದವನೂ ಆಗುವದಿಲ್ಲವೆ? ಆದುದರಿಂದ, ಪರಮಾತ್ಮನು ಅನ್ಯಾಯ ಮಾಡುವುದಿಲ್ಲ. ಅದೇ ಕಾರಣದಿಂದ ಯಾರಿಗೂ ಹೆದರುವುದಿಲ್ಲ.

ಪ್ರಶ್ನೆ:—ಪರಮಾತ್ಮನು ಮೊದಲೇ ಯಾರಿಗೆಷ್ಟು ಕೊಡ

ಬೇಕೆಂದು ನಿರ್ಧರಿಸಿಕೊಂಡಿದ್ದಾನೋ ಅಷ್ಟನ್ನೇ ಕೊಡುತ್ತಾನೆ. ಮತ್ತು ಎಷ್ಟು ಕೆಲಸಮಾಡಬೇಕಾಗಿದೆಯೋ ಅಷ್ಟನ್ನೇ ಮಾಡುತ್ತಾನೆ.

ಉತ್ತರ:—ಅವನ ನಿರ್ಣಯವು ಜೀವನ ಕರ್ಮಾನುಸಾರವಾಗಿಯೇ ಇರುತ್ತದೆ. ಅನ್ಯಥಾ ಇಲ್ಲ. ಅನ್ಯಥಾ ಆಗಿದ್ದರೆ, ಅವನೇ ಅಪರಾಧಿಯೂ, ಅನ್ಯಾಯಕಾರಿಯೂ ಆಗಬೇಕಾಗುತ್ತದೆ.

ಪ್ರಶ್ನೆ:—ಸುಖದುಃಖಗಳು ದೊಡ್ಡವರು-ಚಿಕ್ಕವರು ಎಲ್ಲರಿಗೂ ಒಂದೇಸಮನಾಗಿರುತ್ತವೆ. ದೊಡ್ಡವರಿಗೆ ದೊಡ್ಡ ಚಿಂತೆ, ಚಿಕ್ಕವರಿಗೆ ಚಿಕ್ಕ ಚಿಂತೆ. ಉದಾಹರಣೆಗೆ:—ಯಾವನೋ ಒಬ್ಬ ಶ್ರೀಮಂತನ ಲಕ್ಷ ರೂಪಾಯಿಗಳ ವ್ಯವಹಾರ ರಾಜಾಲಯದಲ್ಲಿ ನಡೆಯುತ್ತಿರುತ್ತದೆ- ಇದಕ್ಕಾಗಿ ಅವನು ಬೇಸಿಗೆಯಲ್ಲಿ ಪಲ್ಲಕ್ಕಿಯಲ್ಲಿ ಕುಳಿತು ನ್ಯಾಯಾಲಕ್ಕೆ ಹೊರಡುತ್ತಾನೆ. ಪೇಟೆಯಲ್ಲಿ ಹೋಗುತ್ತಿರುವುದನ್ನು ಕಂಡು, ಬುದ್ಧಿಹೀನರಾದಜನರು, "ನೋಡಿರಿ ಪುಣ್ಯಪಾಪಗಳ ಫಲಗಳನ್ನು! ಒಬ್ಬನು ಸುಖವಾಗಿ ಪಲ್ಲಕ್ಕಿಯಲ್ಲಿ ಕುಳಿತಿದ್ದಾನೆ. ಬೇರೆಯವರು ಪಾದರಕ್ಷೆಗಳನ್ನೂ ಧರಿಸದೆ, ಮೇಲಿನಿಂದಲೂ, ಕೆಳಗಿನಿಂದಲೂ ಬೇಯುತ್ತಾ ಪಲ್ಲಕ್ಕಿಯನ್ನು ಹೊತ್ತುಕೊಂಡು ಹೋಗುತ್ತಿದಾರೆ." ಎಂದು ಮಾತನಾಡಿಕೊಳ್ಳುತ್ತಾರೆ. ಆದರೆ ಬುದ್ಧಿವಂತರು—"ನ್ಯಾಯಾಲಯ ಸಮೀಪಿಸಿದಂತೆಲ್ಲಾ, ಶ್ರೀಮಂತನ ಶೋಕವೂ, ಕಳವಳವೂ ಹೆಚ್ಚುತ್ತಾ ಹೋಗುವುವು, ಬೋಯಿಗಳಿಗೆ ಆನಂದವು ಹೆಚ್ಚುತ್ತಾ ಹೋಗುವುದು" ಎಂದು ಬಲ್ಲರು. ನ್ಯಾಯಾಲಯಕ್ಕೆ ಹೋದಬಳಿಕ 'ಶ್ರೀಮಂತನು" ವಕೀಲನಬಳಿಗೆ ಹೋಗಲೋ, ಅಥವಾ ಶಿರಸ್ತೇದಾರನ ಬಳಿಗೆ ಹೋಗಲೋ? ಇಂದು ಗೆಲ್ಲುವೆನೋ, ಸೋಲುವೆನೋ? ಈ ದಿವಸ ಏನಾಗುವುದೋ ಎಂದು ಪರದಾಡುತ್ತಾನೆ. ಆದರೆ ಬೋಯಿಗಳು ಹೊಗೇಸೊಪ್ಪನ್ನು ಸೇದುತ್ತಾ, ಮಾತುಕತೆಯಾಡುತ್ತಾ, ಪ್ರಸನ್ನರಾಗಿ ಆನಂದದಿಂದ ಮಲಗಿಬಿಡುತ್ತಾರೆ. ಜಯವಾದರೆ, ಶ್ರೀಮಂತನಿಗೆ ಸ್ವಲ್ಪ ಸುಖ; ಸೋಲಾಗಿಹೋದರೆ, ಅವನು ದುಃಖಸಾಗರದಲ್ಲಿ ಮುಳುಗಿ ಹೋಗುತ್ತಾನೆ. ಆ ಬೋಯಿಗಳು ಮಾತ್ರ ಒಂದೇವಿಧವಾಗಿರುತ್ತಾರೆ. ಹಾಗೆಯೇ ರಾಜನು ಸುಂದರವಾದ ಕೋಮಲತಲ್ಪದಲ್ಲಿ ಮಲಗಿದರೂ ಆವನಿಗೆ ನಿದ್ರೆಬರುವುದಿಲ್ಲ. ಕೂಲಿಯವನಿಗೆ ಜಲ್ಲಿ, ಕಲ್ಲು, ಮಣ್ಣು,

ಮತ್ತು ತಗ್ಗು ದಿಣ್ಣೆಯನ್ನುಳ್ಳ ನೆಲದಮೇಲೆ ಮಲಗಿದರೂ, ಸುಖವಾಗಿ ನಿದ್ರೆಬರುತ್ತದೆ. ಎಲ್ಲರ ವಿಷಯದಲ್ಲಿಯೂ ಹೀಗೆಯೇ ತಿಳಿಯಿರಿ.

ಉತ್ತರ:—ಇದು ಅಜ್ಞಾನಿಗಳ ತಿಳಿವಳಿಕೆ. ಏಕೆಂದರೆ, ಯಾವನಾದರೂ ಶ್ರೀಮಂತನಿಗೆ, ನೀನು ಬೋಯಿಯಾಗೆಂದೂ, ಬೋಯಿಗೆ ಶ್ರೀಮಂತನಾಗೆಂದೂ ಹೇಳಿದರೆ, ಶ್ರೀಮಂತನೆಂದಿಗೂ ಬೋಯಿಯಾಗಬಯಸುವುದಿಲ್ಲ; ಆದರೆ, ಬೋಯಿಗಳು ಶ್ರೀಮಂತರಾಗಬಯಸುತ್ತಾರೆ. ಸುಖದುಃಖಗಳು ಎಲ್ಲರಿಗೂ ಒಂದೇ ಸಮನಾಗಿರುವುದಾದರೆ, ತಮ್ಮ ಸ್ಥಿತಿಯನ್ನು ಬಿಟ್ಟು ನೀಚತ್ವ ಅಥವಾ ಉಚ್ಚತ್ವವನ್ನು ಪಡೆಯಲು ಯಾರೂ ಬಯಸುತ್ತಿರಲಿಲ್ಲ. ನೋಡಿರಿ; ಒಬ್ಬ ಜೀವನು ವಿದ್ವಾಂಸನೂ, ಪುಣ್ಯಾತ್ಮನೂ, ಶ್ರೀಮಂತನೂ ಆದ ರಾಜನ ಪತ್ನಿಯ ಗರ್ಭದಲ್ಲಿ ಜನ್ಮತಾಳುತ್ತಾನೆ. ಮತ್ತೊಬ್ಬನು ಮಹಾದರಿದ್ರಿಯಾದ ಹುಲ್ಲು ಕೆತ್ತುವವಳ ಗರ್ಭದಲ್ಲಿ ಜನ್ಮತಾಳುತ್ತಾನೆ. ಒಬ್ಬನಿಗೆ ಜನ್ಮಾರಭ್ಯ ಸರ್ವವಿಧವಾದ ಸುಖಗಳೂ, ಮತ್ತೊಬ್ಬರಿಗೆ ಎಲ್ಲಾ ಬಗೆಯ ದುಃಖಗಳೂ ಲಭಿಸುತ್ತವೆ. ಒಬ್ಬನಿಗೆ ಹುಟ್ಟಿದೊಡನೆಯೇ, ಸುಗಂಧಜಲಸ್ನಾನ, ಯುಕ್ತರೀತಿಯ ನಾಡಿಛೇದನ, ಹಾಲಿನ ಪಾನ, ಮೊದಲಾದುವು ಸರಿಯಾದ ರೀತಿಯಲ್ಲಿ ದೊರೆಯುತ್ತದೆ. ಅವನು ಹಾಲು ಕುಡಿಯಬಯಸದರೆ, ಸಕ್ಕರೆ ಮೊದಲಾದುವುಗಳೊಂದಿಗೆ ಯಥೇಷ್ಟವಾಗಿ ಸಿಕ್ಕುತ್ತದೆ. ಅವನನ್ನು ಸಂತೋಷವಾಗಿಡಲು ಆಳುಕಾಳುಗಳೂ, ಆಟದ ಸಾಮಾನುಗಳೂ, ವಾಹನಗಳೂ ದೊರೆತು, ಉತ್ತಮಸ್ಥಾನದಲ್ಲಿ ಮುದ್ದಿನಿಂದ ಆನಂದ ಲಭಿಸುತ್ತದೆ. ಮತ್ತೊಬ್ಬನು ಕಾಡಿನಲ್ಲಿ ಹುಟ್ಟುತ್ತಾನೆ. ಸ್ನಾನಕ್ಕೆ ನೀರೂ ಸಹ ಸಿಕ್ಕುವುದಿಲ್ಲ. ಹಾಲು ಕುಡಿಯಲವೇಕ್ಷಿಸಿದರೆ, ಹಾಲಿಗೆ ಬದಲು ಗುದ್ದುಗಳೂ, ಕೆನ್ನೆಯ ಮೇಲೆ ಏಟುಗಳೂ, ಬೀಳುತ್ತವೆ. ಅತ್ಯಂತ ಆರ್ತಸ್ವರದಿಂದ ಅಳುತ್ತಾನೆ; ಯಾರೂ ಕೇಳುವುದಿಲ್ಲ. ಈ ಮೊದಲಾದ ರೀತಿಯಲ್ಲಿ ಜೀವರಿಗೆ ಪುಣ್ಯಪಾಪಗಳನ್ನು ಮಾಡದೆಯೇ ಸುಖದುಃಖಗಳುಂಟಾಗುವುದಾದರೆ, ಪರಮಾತ್ಮನಿಗೆ ದೋಷಬರುತ್ತದೆ. ಎರಡನೆಯದಾಗಿ, ಮಾಡದಿರುವ ಕರ್ಮಗಳಿಗಾಗಿ ಸುಖದುಃಖಗಳುಲಭಿಸುವುದಾದರೆ, ಮುಂದೆ ಸ್ವರ್ಗ-ನರಕಗಳೂ ಸಹ ಇರಕೂಡದು. ಏಕೆಂದರೆ, ಪರ

ಮಾತ್ಮನು ಈಗ ಕರ್ಮಗಳಿಲ್ಲದೆ ಸುಖದುಃಖವಿತ್ತಿರುವಂತೆ, ಸತ್ತ ಮೇಲೂ, ಕೂಡ ತನಗೆ ಇಷ್ಟಬಂದವರನ್ನು ಸ್ವರ್ಗಕ್ಕೂ, ಬೇಡವಾದವರನ್ನು ನರಕಕ್ಕೂ ಕಳುಹಿಸುವನು. ಆಗ ಜೀವರೆಲ್ಲರೂ, ಅಧರ್ಮಯುಕ್ತರಾಗಿಹೋಗುವರು. ಧರ್ಮಾಚರಣೆಯನ್ನೇಕೆ ಮಾಡಬೇಕು? ಏಕೆಂದರೆ, ಧರ್ಮದ ಫಲವು ದೊರೆಯುವುದರಲ್ಲಿ ಸಂದೇಹವಿರುತ್ತದೆ. ಪರಮಾತ್ಮನ ಕೈ ನಡೆಯುತ್ತದೆ. ಅವನಿಗೆ ಸಂತೋಷವಿದ್ದಹಾಗೆ ಮಾಡುವನು. ಆ ಮೇಲೆ ಪಾಪಕರ್ಮಗಳಲ್ಲಿ ಭಯವಿಲ್ಲದೆ, ಜಗತ್ತಿನಲ್ಲಿ ಪಾಪವು ಬೆಳೆದು ಧರ್ಮವು ಕ್ಷೀಣವಾಗುವುದು. ಆದುದರಿಂದ ಪೂರ್ವಜನ್ಮದ ಪುಣ್ಯಪಾಪಗಳಿಗನುಸಾರವಾಗಿ ಈಗಿನ ಜನ್ಮ, ಮತ್ತು ಈಗಿನ ಹಾಗೂ ಪೂರ್ವಜನ್ಮದ ಕರ್ಮಾನುಸಾರವಾಗಿ ಮುಂದಿನ ಜನ್ಮಗಳೂ ಬರುತ್ತವೆ.

ಪ್ರಶ್ನೆ:—ಮನುಷ್ಯರ ಮತ್ತು ಮೃಗ ಮೊದಲಾದುವುಗಳ ಶರೀರದಲ್ಲಿ ಜೀವರು ಒಂದೇ ಜಾತಿಯವರಾಗಿ, ಅಥವಾ ಬೇರೆ ಬೇರೆ ವಿಧವಾಗಿದ್ದಾರೋ?

ಉತ್ತರ:—ಜೀವರು ಒಂದೇ ವಿಧವಾಗಿರುತ್ತಾರೆ. ಆದರೆ, ಪಾಪಪುಣ್ಯಗಳ ಸಂಬಂಧದಿಂದ ಮಲಿನರಾಗಿಯೂ ಪವಿತ್ರರಾಗಿಯೂ ಇರುತ್ತಾರೆ.

ಪ್ರಶ್ನೆ:—ಮನುಷ್ಯನ ಜೀವನು ಮೃಗಾದಿಗಳಲ್ಲಿಯೂ, ಮೃಗಾದಿಗಳಲ್ಲಿರುವ ಜೀವರು ಮನುಷ್ಯದೇಹದಲ್ಲಿಯೂ ಮತ್ತು ಪುರುಷನ ಜೀವನು ಸ್ತ್ರೀಯ, ಹಾಗೂ ಸ್ತ್ರೀಯ ಜೀವನು ಪುರುಷನ ದೇಹದಲ್ಲಿಯೂ, ಬರುವುದೂ ಹೋಗುವುದೂ ಉಂಟೋ ಇಲ್ಲವೊ?

ಉತ್ತರ:—ಹೌದು. ಬರುವುದೂ ಹೋಗುವುದೂ ಉಂಟು. ಏಕೆಂದರೆ, ಪಾಪವು ಹೆಚ್ಚಿ, ಪುಣ್ಯವು ಕಡಿಮೆಯಾದಾಗ ಮನುಷ್ಯನ ಜೀವನಿಗೆ ಮೃಗಾದಿಗಳ ನೀಚ ಶರೀರಗಳೂ, ಮತ್ತು ಧರ್ಮವು ಹೆಚ್ಚಿ ಅಧರ್ಮವು ಕಡಿಮೆಯಾದಾಗ, ' ದೇವ ' ಅಂದರೆ ವಿದ್ವಾಂಸರ ಶರೀರಗಳೂ ಲಭಿಸುತ್ತವೆ. ಮತ್ತು ಪುಣ್ಯಪಾಪಗಳೆರಡೂ ಸಮವಾಗಿರುವಾಗ ಸಾಧಾರಣ ಮಾನವಜನ್ಮ ಸಿಕ್ಕುತ್ತದೆ. ಇದರಲ್ಲಿಯೂ ಪುಣ್ಯಪಾಪಗಳಲ್ಲಿ

ಉತ್ತಮ, ಮಧ್ಯಮ, ಕನಿಷ್ಠ ಎಂಬ ಭೇದಗಳಾಗುವುದರಿಂದ, ಮನುಷ್ಯರೇ ಮೊದಲಾದವರಲ್ಲಿಯೂ, ಉತ್ತಮ, ಮಧ್ಯಮ, ನಿಕೃಷ್ಟ ದೇಹವೇ ಮೊದಲಾದ ಸಾಧನಗಳನ್ನುಳ್ಳವರಿರುತ್ತಾರೆ. ಮತ್ತು ಹೆಚ್ಚಿನ ಪಾಪದ ಫಲವನ್ನು ಮೃಗಾದಿಗಳ ಶರೀರದಲ್ಲಿ ಅನುಭವಿಸಿದ ಬಳಿಕ, ಪುನಃ ಪಾಪ ಪುಣ್ಯಗಳು ಸಮನಾಗಿರುವದರಿಂದ ಮಾನವಶರೀರದಲ್ಲಿ ಬರುತ್ತಾರೆ. ಮತ್ತು ಪುಣ್ಯದ ಫಲ ಭೋಗಿಸಿ, ಮಧ್ಯಮ ಮನುಷ್ಯನ ಶರೀರದಲ್ಲಿ ಪ್ರವೇಶಿಸುತ್ತಾನೆ. ಶರೀರತ್ಯಾಗಕ್ಕೆ ಮೃತ್ಯುವೆಂದೂ, ಶರೀರಪ್ರವೇಶಕ್ಕೆ ಜನ್ಮವೆಂದೂ ಹೆಸರು. ಶರೀರತ್ಯಾಗಮಾಡಿದಾಗ ಯಮಾಲಯದಲ್ಲಿ ಅಂದರೆ, ಆಕಾಶದಲ್ಲಿರುವ ವಾಯುವಿನಲ್ಲಿರುತ್ತಾನೆ. ಏಕೆಂದರೆ, ' ಯಮೇನ ವಾಯುನಾ ' ವೇದದಲ್ಲಿ ವಾಯುವಿಗೆ ಯಮನೆಂದು ಹೆಸರು ಎಂದು ಬರೆದಿದೆ. ಗರುಡಪುರಾಣದಲ್ಲಿ ಕಲ್ಪಿತನಾದ ಯಮನಿಗಲ್ಲ. ಈ ವಿಷಯವಾಗಿ ವಿಶೇಷ ಖಂಡನ ಮಂಡನಗಳನ್ನು ಹನ್ನೊಂದನೆಯ ಸಮುಲ್ಲಾಸದಲ್ಲಿ ಬರೆಯುತ್ತೇವೆ. ಬಳಿಕ, ಧರ್ಮರಾಜನು, ಅಂದರೆ, ಪರಮಾತ್ಮನು ಆ ಜೀವನ ಪಾಪಪುಣ್ಯಗಳಿಗೆ ಅನುಸಾರವಾಗಿ ಜನ್ಮಕೊಡುತ್ತಾನೆ. ಪರಮಾತ್ಮನ ಪ್ರೇರಣೆಯಂತೆ ಅವನು ವಾಯು, ಅನ್ನ, ನೀರು ಅಥವಾ ಶರೀರದ ರಂಧ್ರದ ಮೂಲಕ ಬೇರೆಯವರ ಶರೀರದಲ್ಲಿ ಪ್ರವೇಶಿಸಿ, ಕ್ರಮವಾಗಿ ವೀರ್ಯದಲ್ಲಿ ಸೇರಿ, ಗರ್ಭವನ್ನು ಹೊಕ್ಕು, ದೇಹವನ್ನು ಧರಿಸಿ, ಹೊರಗೆ ಬರುತ್ತಾನೆ. ಸ್ತ್ರೀಶರೀರಕ್ಕೆ ಯೋಗ್ಯವಾದ ಕರ್ಮಗಳಿದ್ದರೆ, ಸ್ತ್ರೀಯಾಗಿಯೂ, ಪುರುಷಶರೀರಕ್ಕೆ ಯೋಗ್ಯವಾದ ಕರ್ಮಗಳಿದ್ದರೆ, ಪುರುಷನಾಗಿಯೂ ಹುಟ್ಟುತ್ತಾನೆ. ಆದರೆ, ಗರ್ಭನಿಲ್ಲುವ ಸಮಯದಲ್ಲಿ ಸ್ತ್ರೀಪುರುಷರ ಶರೀರಸಂಬಂಧದ ರಜೋವೀರ್ಯಗಳು ಸಮಪ್ರಮಾಣದಿಂದಿದ್ದರೆ ನಪುಂಸಕನಾಗುತ್ತಾನೆ. ಈ ರೀತಿ ಉತ್ತಮವಾದ ಕರ್ಮ, ಉಪಾಸನೆ, ಹಾಗೂ ಜ್ಞಾನವನ್ನವಲಂಬಿಸಿ ಮೋಕ್ಷವನ್ನು ಪಡೆಯುವವರೆಗೂ, ನಾನಾಪ್ರಕಾರವಾದ ಜನನಮರಣಗಳಲ್ಲಿ ಜೀವನು ಸಿಕ್ಕಿಕೊಂಡಿರುತ್ತಾನೆ. ಏಕೆಂದರೆ, ಉತ್ತಮ ಕರ್ಮ ಮೊದಲಾದುವನ್ನು ಮಾಡುವುದರಿಂದ ಮನುಷ್ಯರಲ್ಲಿ ಉತ್ತಮಜನ್ಮ ಹೊಂದುತ್ತಾನೆ ಮತ್ತು ಮೋಕ್ಷದಲ್ಲಿ

ಮಹಾಕಲ್ಪದ ವರೆಗೆ ಜನನ-ಮರಣದ ದುಃಖವಿಲ್ಲದೆ ಆನಂದದಲ್ಲಿರುತ್ತಾನೆ.

ಪ್ರಶ್ನೆ:—ಮೋಕ್ಷವು ಒಂದೇ ಜನ್ಮದಲ್ಲಿ ಲಭಿಸುತ್ತದೋ, ಅನೇಕ ಜನ್ಮಗಳಲ್ಲಿಯೋ?

ಉತ್ತರ:—ಅನೇಕ ಜನ್ಮಗಳಲ್ಲಿ. ಏಕೆಂದರೆ,

ಭಿದ್ಯತೇ ಹೃದಯಗ್ರಂಥಿಶ್ಛಿದ್ಯಂತೇ ಸರ್ವಸಂಶಯಾಃ।
ಕ್ಷೀಯಂತೇ ಚಾಸ್ಯ ಕರ್ಮಾಣಿ ತಸ್ಮಿನ್ ದೃಷ್ಟೇ ಪರಾವರೇ॥

[ಮುಂಡಕ ೨, ಖಂ. ೨, ಮ. ೮]

ಈ ಜೀವನ ಹೃದಯದಲ್ಲಿರುವ ಅವಿದ್ಯೆ ಅಜ್ಞಾನವೆಂಬ ಗಂಟು ಕತ್ತರಿಸಲ್ಪಟ್ಟು, ಸಂಶಯಗಳೆಲ್ಲಾ ಪರಿಹಾರವಾಗಿ, ದುಷ್ಟಕರ್ಮಗಳೆಲ್ಲವೂ ಕ್ಷೀಣವಾದಾಗಲೇ. ಅವನು ತನ್ನ ಆತ್ಮನ ಒಳಗೂ ಹೊರಗೂ ವ್ಯಾಪ್ತವಾಗಿರುವ ಪರಮಾತ್ಮನಲ್ಲಿ ವಾಸಮಾಡುತ್ತಾನೆ.

ಪ್ರಶ್ನೆ:—ಮೋಕ್ಷದಲ್ಲಿ ಜೀವನು ಪರಮಾತ್ಮನಲ್ಲಿ ಸೇರಿಹೋಗುತ್ತಾನೋ, ಬೇರೆಯಿರುವನೋ?

ಉತ್ತರ:—ಬೇರೆಯಿರುತ್ತಾನೆ. ಸೇರಿಹೋದಪಕ್ಷದಲ್ಲಿ ಮೋಕ್ಷ ಸುಖವನ್ನು ಯಾವನು ಅನುಭವಿಸಬೇಕು? ಮತ್ತು ಮೋಕ್ಷದ ಸಾಧನಗಳೆಲ್ಲವೂ ವ್ಯರ್ಥವಾಗಿ ಹೋಗುತ್ತದೆ. ಅದು ಮೋಕ್ಷವಂತೂ ಅಲ್ಲ. ಜೀವನ ಪ್ರಳಯವೆಂದರಿಯಬೇಕು. ಯಾವಾಗ ಜೀವನು ಪರಮಾತ್ಮನ ಆಜ್ಞೆಗಳನ್ನು ಪರಿಪಾಲಿಸುತ್ತಾ, ಉತ್ತಮ ಕರ್ಮಗಳನ್ನೂ, ಸತ್ಸಂಗವನ್ನೂ, ಯೋಗಾಭ್ಯಾಸವನ್ನೂ ಹಿಂದೆ ಹೇಳಿದ ಸಮಸ್ತಸಾಧನಗಳನ್ನೂ ಮಾಡುತ್ತಾನೋ, ಆಗಲೇ ಮೋಕ್ಷಹೊಂದುತ್ತಾನೆ.

ಸತ್ಯಂ ಜ್ಞಾನ ಮನಂತಂ ಬ್ರಹ್ಮ ಯೋ ವೇದ ನಿಹಿತಂ
ಗುಹಾಯಾಂ ಪರಮೇವ್ಯೋಮನ್।
ಸೋಽಶ್ನುತೇ ಸರ್ವಾನ್ ಕಾಮಾನ್ ಸಹ ಬ್ರಹ್ಮಣಾ
ವಿಪಶ್ಚಿತೇತಿ॥

[ತೈತ್ತರೀಯ, ಆನಂದವಲ್ಲಿ ಅನುವಾಕ ೧]

ಯಾವ ಜೀವಾತ್ಮನು ತನ್ನ ಬುದ್ಧಿಯಲ್ಲಿಯೂ, ತನ್ನಲ್ಲಿಯೂ ಇರುವ ಸತ್ಯಸ್ವರೂಪನೂ, ಜ್ಞಾನಸ್ವರೂಪನೂ, ಅನಂತಾನಂದ ಸ್ವರೂಪನೂ ಆದ ಪರಮಾತ್ಮನನ್ನು ತಿಳಿಯುತ್ತಾನೆಯೋ, ಅವನು ವ್ಯಾಪಕಸ್ವರೂಪನಾದ ಬ್ರಹ್ಮನಲ್ಲಿ ಸ್ಥಿತನಾಗಿ, ವಿಪಶ್ಚಿತ ಅಂದರೆ, ಆ ಅನಂತವಿದ್ಯಾಯುಕ್ತನಾದ ಬ್ರಹ್ಮನೊಡನೆ ಸಕಲ ಇಷ್ಟಾರ್ಥ ಗಳನ್ನೂ ಹೊಂದುತ್ತಾನೆ. ಅಂದರೆ, ಯಾವ ಯಾವ ಆನಂದವನ್ನು ಬಯಸುತ್ತಾನೋ, ಅದನ್ನು ಪಡೆಯುತ್ತಾನೆ. ಇದೇ ಮುಕ್ತಿಯೆನಿಸು ತ್ತದೆ.

ಪ್ರಶ್ನೆ:—ಶರೀರವಿಲ್ಲದೆ ಪ್ರಪಂಚದ ಸುಖವನ್ನನುಭವಿಸುವುದು ಸಾಧ್ಯವಿಲ್ಲ. ಮತ್ತೆ ಮುಕ್ತಿಯಲ್ಲಿ ಶರೀರವಿಲ್ಲದೆ ಆನಂದವನ್ನು ಹೇಗೆ ಅನುಭವಿಸಬಲ್ಲನು?

ಉತ್ತರ:—ಹಿಂದೆ ಇದಕ್ಕೆ ಸಮಾಧಾನ ಹೇಳಿದ್ದೇವೆ. ಅದಕ್ಕಿಂತ ಹೆಚ್ಚಾಗಿ ಮತ್ತಿಷ್ಟು ಆಲಿಸಿರಿ. ಜೀವನು ಶರೀರದ ಆಧಾರದಿಂದ ಪ್ರಾಪಂಚಿಕ ಸುಖವನ್ನನುಭವಿಸುವಂತೆಯೇ, ಪರಮಾತ್ಮನ ಆಧಾರ ದಿಂದ ಮುಕ್ತಿಯ ಆನಂದವನ್ನನುಭವಿಸುತ್ತಾನೆ. ಆ ಮುಕ್ತಜೀವನು, ಅನಂತನೂ, ವ್ಯಾಪಕನೂ ಆದ ಪರಮಾತ್ಮನಲ್ಲಿ ಸ್ವಚ್ಛಂದವಾಗಿ ಸಂಚರಿಸುತ್ತಾನೆ. ಮತ್ತು ಶುದ್ಧ ಜ್ಞಾನದಿಂದ ಸಮಸ್ತ ಸೃಷ್ಟಿಯನ್ನೂ ನಿರೀಕ್ಷಿಸುತ್ತಾ, ಮುಕ್ತರಾದ ಇತರ ಜೀವರೊಂದಿಗೆ ಸೇರಿ ಸೃಷ್ಟಿ ವಿದ್ಯೆಯನ್ನು ಕ್ರಮದಿಂದ ನೋಡುತ್ತಾ ಲೋಕಲೋಕಾಂತರಗಳ ಲ್ಲೆಲ್ಲಾ ಅಂದರೆ, ನಮಗೆ ಕಂಡುಬರುತ್ತಿರುವ ಮತ್ತು ಕಾಣದಿರುವ ಲೋಕಗಳಲ್ಲೆಲ್ಲಾ ಸಂಚರಿಸುತ್ತಾನೆ. ತನ್ನ ಜ್ಞಾನದ ಮುಂದಿರುವ ಸಮಸ್ತ ವಸ್ತುಗಳನ್ನೂ ನೋಡುತ್ತಾನೆ. ಜ್ಞಾನವು ಹೆಚ್ಚಿದಂತೆಲ್ಲಾ ಜೀವನಿಗೆ ಆನಂದವೂ ಅಷ್ಟೇ ಹೆಚ್ಚುತ್ತಾ ಹೋಗುತ್ತದೆ. ಮುಕ್ತಿಯಲ್ಲಿ ಜೀವನು ನಿರ್ಮಲನಾಗಿರುವದರಿಂದ ಪೂರ್ಣ ಜ್ಞಾನಿಯಾಗಿ, ಅವನ ಸಮೀಹದಲ್ಲಿರುವ ಪದಾರ್ಥಗಳ ಯಥಾರ್ಥಜ್ಞಾನವಾಗುತ್ತದೆ. ಈ ವಿಧವಾದ ಸುಖವಿಶೇಷವೇ ಸ್ವರ್ಗ; ವಿಷಯತೃಷ್ಣೆಯಲ್ಲಿ ಸಿಕ್ಕಿಕೊಂಡು ದುಃಖವಿಶೇಷವನ್ನನುಭವಿಸುವುದೇ ನರಕ. **"ಸ್ವಃ ಸುಖಂ ಗಚ್ಛತಿ ಯಸ್ಮಿನ್ ಸ ಸ್ವರ್ಗಃ, ಅತೋ ವಿಪರೀತೋ ದುಃಖಭೋಗೋ**

ನರಕ ಇತಿ'' ಸಾಂಸಾರಿಕ ಸುಖಕ್ಕೆ ಸಾಮಾನ್ಯ ಸ್ವರ್ಗವೆಂದೂ, ಪರಮಾತ್ಮನ ಪ್ರಾಪ್ತಿಯಿಂದುಂಟಾಗುವ ಆನಂದಕ್ಕೆ ವಿಶೇಷ ಸ್ವರ್ಗವೆಂದೂ ಸಂಜ್ಞೆ. ಜೀವರೆಲ್ಲರೂ ಸಹಜವಾಗಿ ಸುಖಪ್ರಾಪ್ತಿಯನ್ನೂ ದುಃಖನಿವಾರಣೆಯನ್ನೂ ಅಪೇಕ್ಷಿಸುತ್ತಾರೆ. ಆದರೆ, ಧರ್ಮವನ್ನು ಆಚರಿಸಿದವರೆಗೆ, ಮತ್ತು ಪಾಪವನ್ನು ಬಿಡದವರೆಗೆ, ಅವರಿಗೆ ಸುಖ ಪ್ರಾಪ್ತಿಯೂ, ದುಃಖವಿಮೋಚನವೂ ಆಗಲಾರದು. ಏಕೆಂದರೆ ಯಾವುದಕ್ಕೆ ಕಾರಣ, ಅಂದರೆ, ಮೂಲವಿರುತ್ತದೋ, ಅದೆಂದೂ ನಾಶಹೊಂದುವುದಿಲ್ಲ. **''ಛಿನ್ನೇ ಮೂಲೇ ವೃಕ್ಷೋ ನಶ್ಯತಿ, ತಥಾ ಪಾಪೇಕ್ಷೀಣೇ ದುಃಖಂನಶ್ಯತಿ''** ಬೇರು ಕತ್ತರಿಸಿಹೋದರೆ, ಮರವು ನಾಶವಾಗುವಂತೆ, ಪಾಪವನ್ನು ಬಿಟ್ಟುಬಿಡುವುದರಿಂದ ದುಃಖವೂ ನಾಶಹೊಂದುತ್ತದೆ. ಮನುಸ್ಮೃತಿಯಲ್ಲಿ ಪಾಪಪುಣ್ಯಗಳ ಬಹುವಿಧವಾದ ಗತಿಗಳನ್ನು ನೋಡಿರಿ :—

ಮಾನಸಂ ಮನಸೈವಾಯಮುಪಭುಂಕ್ತೇ ಶುಭಾಶುಭಮ್ ।
ವಾಚಾ ವಾಚಾ ಕೃತಂ ಕರ್ಮ ಕಾಯೇನೈವ ಚ ಕಾಯಿಕಮ್ ॥೧॥
ಶರೀರಜೈಃ ಕರ್ಮದೋಷೈರ್ಯಾತಿ ಸ್ಥಾವರತಾಂ ನರಃ ।
ವಾಚಿಕೈಃ ಪಕ್ಷಿಮೃಗತಾಂ ಮಾನಸೈರಂತ್ಯಜಾತಿತಾಮ್ ॥೨॥
ಯೋ ಯದ್ಯೈಷಾಂ ಗುಣೋ ದೇಹೇ ಸಾಕಲ್ಯೇನಾತಿರಿಚ್ಯತೇ ।
ಸ ತದಾ ತದ್ಗುಣಪ್ರಾಯಂ ತಂ ಕರೋತಿ ಶರೀರಿಣಮ್ ॥೩॥
ಸತ್ವಂ ಜ್ಞಾನಂ ತಮೋಽಜ್ಞಾನಂ ರಾಗದ್ವೇಷೌ ರಜಃ ಸ್ಮೃತಮ್ ।
ಏತದ್ವ್ಯಾಪ್ತಿ ಮದೇತೇಷಾಂ ಸರ್ವಭೂತಾಶ್ರಿತಂ ವಪುಃ ॥೪॥
ತತ್ರ ಯತ್ಪ್ರೀತಿಸಂಯುಕ್ತಂ ಕಿಂಚಿದಾತ್ಮನಿ ಲಕ್ಷಯೇತ್ ।
ಪ್ರಶಾಂತಮಿವ ಶುದ್ಧಾಭಂ ಸತ್ವಂ ತದುಪಧಾರಯೇತ್ ॥೫॥
ಯತ್ತು ದುಃಖಸಮಾಯುಕ್ತಮಪ್ರೀತಿಕರಮಾತ್ಮನಃ ।
ತದ್ರಜೋಽಪ್ರತಿಪಂ ವಿದ್ಯಾತ್ಸತತಂ ಹಾರಿ ದೇಹಿನಾಮ್ ॥೬॥
ಯತ್ತು ಸ್ಯಾನ್ಮೋಹಸಂಯುಕ್ತಮವ್ಯಕ್ತಂ ವಿಷಯಾತ್ಮಕಮ್ ।
ಅಪ್ರತರ್ಕ್ಯಮವಿಜ್ಞೇಯಂ ತಮಸ್ತದುಪಧಾರಯೇತ್ ॥೭॥

ತ್ರಯಾಣಾಮಪಿ ಚೈತೇಷಾಂ ಗುಣಾನಾಂ ಯಃ ಫಲೋದಯಃ।
ಅಗ್ರ್ಯೋ ಮಧ್ಯೋ ಜಘನ್ಯಶ್ಚ ತಂ ಪ್ರವಕ್ಷ್ಯಾಮ್ಯಶೇಷತಃ॥೪॥
ವೇದಾಭ್ಯಾಸಸ್ತಪೋ ಜ್ಞಾನಂ ಶೌಚಮಿಂದ್ರಿಯನಿಗ್ರಹಃ।
ಧರ್ಮಕ್ರಿಯಾತ್ಮಚಿಂತಾ ಚ ಸಾತ್ವಿಕಂ ಗುಣಲಕ್ಷಣಮ್ ॥೯॥
ಆರಂಭರುಚಿತಾಽಧೈರ್ಯಮಸತ್ಕ್ರಿಯಾಪರಿಗ್ರಹಃ।
ವಿಷಯೋಪಸೇವಾ ಚಾಜಸ್ರಂ ರಾಜಸಂ ಗುಣಲಕ್ಷಣಂ ॥೧೦॥
ಲೋಭಃ ಸ್ವಪ್ನೋ ಧೃತಿಃ ಕ್ರಿಯಾರ್ಯಂ ನಾಸ್ತಿಕ್ಯಂ ಭಿನ್ನವೃತ್ತಿತಾ।
ಯಾಚಿಷ್ಣುತಾ ಪ್ರಮಾದಶ್ಚ ತಾಮಸಂ ಗುಣಲಕ್ಷಣಮ್ ॥೧೧॥
ಯತ್ಕರ್ಮ ಕೃತ್ವಾ ಕುರ್ವಂಶ್ಚ ಕರಿಷ್ಯಂಶ್ಚೈವ ಲಜ್ಜತಿ।
ತಜ್ಜ್ಞೇಯಂ ವಿದುಷಾ ಸರ್ವಂ ತಾಮಸಂ ಗುಣಲಕ್ಷಣಂ ॥೧೨॥
ಯೇನಾಸ್ಮಿನ್ಕರ್ಮಣಾ ಲೋಕೇ ಖ್ಯಾತಿಮಿಚ್ಛತಿ ಪುಷ್ಕಲಾಂ।
ನ ಚ ಶೋಚತ್ಯಸಂಪತ್ತೌ ತದ್ವಿಜ್ಞೇಯಂ ತು ರಾಜಸಂ ॥೧೩॥
ಯತ್ಸರ್ವೇಣೇಚ್ಛತಿ ಜ್ಞಾತುಂ ಯನ್ನ ಲಜ್ಜತಿ ಚಾಚರನ್।
ಯೇನ ತುಷ್ಯತಿ ಚಾತ್ಮಾಸ್ಯ ತತ್ಸತ್ವಗುಣಲಕ್ಷಣಂ ॥೧೪॥
ತಮಸೋಲಕ್ಷಣಂ ಕಾಮೋ ರಜಸಸ್ತ್ವರ್ಥ ಉಚ್ಯತೇ।
ಸತ್ವಸ್ಯ ಲಕ್ಷಣಂ ಧರ್ಮಃ ಶ್ರೇಷ್ಠ್ಯಮೇಷಾಂ ಯಥೋತ್ತರಂ ॥

[ಮನು. ಅ. ೧೨-ಶ್ಲೋ. ೪-೯ ; ೨೫-೩೩ ; ೩೫-೩೮]

ಅಂದರೆ—ಈರೀತಿಯಾಗಿ ಮಾನವನು ತನ್ನ ಉತ್ತಮ, ಮಧ್ಯಮ, ಮತ್ತು ನಿಕೃಷ್ಟ ಸ್ವಭಾವಗಳನ್ನು ತಿಳಿದುಕೊಂಡು, ಉತ್ತಮ ಸ್ವಭಾವವನ್ನು ಗ್ರಹಿಸಿ, ಮಧ್ಯಮವಾದುದನ್ನೂ ನಿಕೃಷ್ಟವಾದುದನ್ನೂ ಬಿಟ್ಟು ಬಿಡಬೇಕು. ಮತ್ತು ಈ ಜೀವನು ಮನದಿಂದ ಮಾಡಿದ ಶುಭಾಶುಭ ಕರ್ಮಗಳನ್ನು ಮನದಿಂದಲೂ, ಮಾತಿನಿಂದ ಮಾಡಿದುದನ್ನು ಮಾತಿನಿಂದಲೂ, ಶರೀರದಿಂದ ಮಾಡಿದುದನ್ನು, ಶರೀರದಿಂದಲೂ ಭುಂಜಿಸಬೇಕಾಗುತ್ತದೆ. ಅಂದರೆ, ಸುಖದುಃಖಗಳನ್ನನುಭವಿಸಬೇಕಾಗುತ್ತದೆ, ಎಂಬುದನ್ನು ಖಚಿತವಾಗಿ ತಿಳಿಯಬೇಕು. ॥೧॥ ಯಾವ ಮಾನವನು

ಶರೀರದಿಂದ ಕಳ್ಳತನ, ಪರಸ್ತ್ರೀಗಮನ, ಸ್ತ್ರೀಪುರುಷರ ಹಿಂಸೆ, ಮೊದಲಾದ ದುಷ್ಕರ್ಮಗಳನ್ನು ಮಾಡುವನೋ, ಅವನಿಗೆ ಮರ-ಗಿಡ ಮೊದಲಾದ ಸ್ಥಾವರ ಜನ್ಮವೂ; ಮಾತಿನಿಂದ ಮಾಡಿದ ಪಾಪಕರ್ಮಗಳಿಗೆ ಪಕ್ಷಿ, ಪಶು ಮೊದಲಾದವುಗಳ ಜನ್ಮವೂ; ಮನಸ್ಸಿನಿಂದ ಮಾಡಿದ ದುಷ್ಕರ್ಮಗಳಿಗೆ ಚಂಡಾಲ ಮೊದಲಾದವನ ಶರೀರವೂ ಪ್ರಾಪ್ತವಾಗುತ್ತದೆ. ॥೨॥ ಈ ಜೀವರ ದೇಹದಲ್ಲಿ ಯಾವ ಗುಣವು ಅಧಿಕವಾಗಿ ಪ್ರವರ್ತಿಸುವುದೋ ಅದು ಆ ಜೀವರನ್ನು ಕೂಡ ತನ್ನ ಹಾಗೆಯೇ ಮಾಡಿಕೊಳ್ಳುತ್ತದೆ. ॥೩॥ ಆತ್ಮನಲ್ಲಿ ಜ್ಞಾನವುಂಟಾದಾಗ ಸತ್ವಗುಣವೆಂದೂ, ಅಜ್ಞಾನವಿರುವಾಗ ತಮೋಗುಣವೆಂದೂ, ರಾಗದ್ವೇಷಗಳಲ್ಲಿ ಆತ್ಮನು ಪ್ರವೃತ್ತನಾದಾಗ ರಜೋಗುಣವೆಂದೂ, ತಿಳಿಯಬೇಕು. ಪ್ರಕೃತಿಯ ಈ ಮೂರು ಗುಣಗಳು ವಿಶ್ವದಲ್ಲಿರುವ ಸಮಸ್ತ ವಸ್ತುಗಳಲ್ಲಿಯೂ, ವ್ಯಾಪಕವಾಗಿರುತ್ತವೆ. ॥೪॥ ಅದರ ವಿವೇಚನೆಯನ್ನು ಈರೀತಿ ಮಾಡಬೇಕು. ಆತ್ಮನು ಪ್ರಸನ್ನನಾಗಿದ್ದು, ಮನಸ್ಸು ಪ್ರಸನ್ನ ಮತ್ತು ಪ್ರಶಾಂತವಾಗಿರುವಂತೆ ಶುದ್ಧ ಪ್ರಕಾಶದಿಂದ ಕೂಡಿರುವಾಗ ಸತ್ವಗುಣವು ಪ್ರಧಾನವಾಗಿಯೂ, ರಜೋಗುಣ ತಮೋಗುಣಗಳು ಅಪ್ರಧಾನವಾಗಿಯೂ, ಇರುವವೆಂದು ತಿಳಿಯಬೇಕು.॥೫॥ ಆತ್ಮ ಮತ್ತು ಮನಸ್ಸು ದುಃಖದಿಂದ ಕೂಡಿ, ಪ್ರಸನ್ನತಾರಹಿತವಾಗಿ, ವಿಷಯಗಳಲ್ಲಿ ಅತ್ತಿತ್ತ ಹರಿದಾಡುವುದರಲ್ಲಿ ನಿರತವಾದಾಗ, ರಜೋಗುಣವು ಪ್ರಧಾನವಾಗಿಯೂ, ಸತ್ವಗುಣ ತಮೋಗುಣಗಳು ಅಪ್ರಧಾನವಾಗಿಯೂ, ಇರುವವೆಂದು ತಿಳಿಯಬೇಕು. ॥೬॥ ಆತ್ಮವೂ, ಮನಸ್ಸೂ, ಮೋಹದಲ್ಲಿ ಅಂದರೆ ಸಾಂಸಾರಿಕ ಪದಾರ್ಥಗಳಲ್ಲಿ ಸಿಕ್ಕಿಕೊಂಡು, ಆತ್ಮದಲ್ಲಿಯೂ, ಮನಸ್ಸಿನಲ್ಲಿಯೂ ವಿವೇಕವಿಲ್ಲದೆ, ವಿಷಯಾಸಕ್ತನೂ, ತರ್ಕವಿಮರ್ಶರಹಿತನೂ, ಆಗಿ ತಿಳಿಯಲನರ್ಹವಾಗಿರುವಾಗ, ತನ್ನಲ್ಲಿ ತಮೋಗುಣವು ಪ್ರಧಾನವಾಗಿಯೂ, ಸತ್ವರಜೋಗುಣಗಳು ಅಪ್ರಧಾನವಾಗಿಯೂ ಇರುವವೆಂದು ಖಚಿತವಾಗಿ ತಿಳಿಯಬೇಕು. ॥೭॥ ಈಗ ಈ ಮೂರು ಗುಣಗಳ ಉತ್ತಮ, ಮಧ್ಯಮ ಮತ್ತು ನಿಕೃಷ್ಟ ಫಲೋದಯವನ್ನು ಪೂರ್ಣಭಾವದೊಂದಿಗೆ ಹೇಳುತ್ತೇವೆ. ॥೮॥ ವೇದಾಧ್ಯಯನ, ಧರ್ಮಾನುಷ್ಠಾನ, ಜ್ಞಾನವೃದ್ಧಿ, ಸದಾ ಪವಿತ್ರನಾಗಿರಬೇಕೆಂಬ ಇಚ್ಛೆ,

ಇಂದ್ರಿಯನಿಗ್ರಹ, ಧರ್ಮಕ್ರಿಯೆ, ಆತ್ಮಚಿಂತನ ಇವೇ ಸತ್ವಗುಣದ ಲಕ್ಷಣಗಳು. ॥೯॥ ರಜೋಗುಣದ ಉದಯವಾಗಿ, ಸತ್ವತಮೋ ಗುಣಗಳು ಅಂತರ್ಭಾವ ಹೊಂದಿದಾಗ, ಆರಂಭದಲ್ಲಿ ಅಭಿರುಚಿ, ಅಧೈರ್ಯ, ಅಸತ್ಕರ್ಮಗಳ ಸ್ವೀಕಾರ, ನಿರಂತರ ವಿಷಯಸೇವನೆಯಲ್ಲಿ ಪ್ರೀತಿ, ಇವು ಉಂಟಾಗುತ್ತವೆ. ಆಗಲೇ ತನ್ನಲ್ಲಿ ರಜೋಗುಣವು ಪ್ರಧಾನವಾಗಿ ವರ್ತಿಸುತ್ತಿದೆ ಎಂದರಿಯಬೇಕು. ॥೧೦॥ ತಮೋಗುಣದ ಉದಯವಾಗಿ, ಉಳಿದೆರಡೂ ಅಂತರ್ಭಾವಹೊಂದಿದಾಗ, ಅತ್ಯಂತ ಆಲಸ್ಯ, ನಿದ್ರೆ, ಧೈರ್ಯಹಾನಿ, ಕ್ರೂರತ್ವ, ನಾಸ್ತಿಕತ್ವ, ಅಂದರೆ, ವೇದಗಳಲ್ಲಿ ಮತ್ತು ಪರಮಾತ್ಮನಲ್ಲಿ ಶ್ರದ್ಧೆಯಿಲ್ಲದಿರುವುದು, ಅಂತಃಕರಣದ ಬೇರೆ ಬೇರೆ ಪ್ರವೃತ್ತಿಗಳು, ಏಕಾಗ್ರತೆಯ ಅಭಾವ ಮತ್ತು ಯಾವುದಾದರೂ ವ್ಯಸನದಲ್ಲಿ ಸಿಕ್ಕಿಕೊಳ್ಳುವುದು, ಇವು ಉದ್ಭವಿಸುತ್ತವೆ. ವಿದ್ವಾಂಸನು ಇವುಗಳನ್ನು ತಮೋಗುಣಗಳ ಲಕ್ಷಣಗಳೆಂದು ತಿಳಿಯುವುದು ಯುಕ್ತ. ॥೧೧॥ ಕಾರ್ಯವನ್ನು ಮಾಡಿದಾಗ, ಮಾಡುವಾಗ, ಮತ್ತು ಮಾಡಲಿಚ್ಛಿಸುವಾಗ ತನ್ನ ಆತ್ಮನಿಗೆ ನಾಚಿಕೆಯೂ, ಸಂಶಯವೂ, ಭಯವೂ, ಉಂಟಾದಲ್ಲಿ ಆಗ ತನ್ನಲ್ಲಿ ತಮೋಗುಣವು ಪ್ರವೃದ್ಧವಾಗಿದೆ ಎಂದು ತಿಳಿಯಬೇಕು.॥೧೨॥ ಯಾವ ಕರ್ಮದಿಂದ ಜೀವಾತ್ಮನು ಈ ಲೋಕದಲ್ಲಿ ಬಹಳ ಖ್ಯಾತಿಯನ್ನು ಪಡೆಯಬಯಸುವನೋ, ಮತ್ತು ದಾರಿದ್ರ್ಯದಲ್ಲಿಯೂ ಕೂಡ, ಸಂಗೀತಗಾರರಿಗೂ, ಹೊಗಳುಭಟ್ಟರಿಗೂ, ದಾನ ಕೊಡುವು ದನ್ನು ಬಿಡುವುದಿಲ್ಲವೋ, ಆಗ ಅವನು ತನ್ನಲ್ಲಿ ರಜೋಗುಣವು ಬಲವಾಗಿದೆ ಎಂದು ತಿಳಿಯಬೇಕು. ॥೧೩॥ ಮಾನವನ ಆತ್ಮವು ಯಾವಾಗ ಎಲ್ಲರಿಂದಲೂ ಜ್ಞಾನ ಪಡೆಯಬಯಸುವುದೋ, ಗುಣ ಗ್ರಹಣಮಾಡತೊಡಗುವುದೋ, ಸತ್ಕಾರ್ಯಗಳಲ್ಲಿ ನಾಚಿಕೆ ಪಡುವು ದಿಲ್ಲವೋ, ಮತ್ತು ಯಾವ ಕರ್ಮದಿಂದ ಆತ್ಮವು ಪ್ರಸನ್ನವಾಗುವುದೋ, ಅಂದರೆ ಧರ್ಮಾಚರಣೆಯಲ್ಲಿಯೇ ಆಸಕ್ತಿಯಿರುವುದೋ, ಆಗ ತನ್ನಲ್ಲಿ ಸತ್ವಗುಣವು ಪ್ರಬಲವಾಗಿರುವುದೆಂದು ತಿಳಿಯಬೇಕು. ॥೧೪॥ ಕಾಮವು ತಮೋಗುಣಲಕ್ಷಣ; ಆದರೆ ತಮೋಗುಣಕ್ಕಿಂತ ರಜೋ ಗುಣವೂ, ರಜೋಗುಣಕ್ಕಿಂತ ಸತ್ವಗುಣವೂ ಶ್ರೇಷ್ಠವಾಗಿರುತ್ತವೆ.

||೧೫|| ಇನ್ನು ಯಾವ ಯಾವ ಗುಣದಿಂದ ಜೀವನು ಯಾವ ಯಾವ ಗತಿಯನ್ನು ಹೊಂದುತ್ತಾನೆಂಬುದನ್ನು ಮುಂದೆ ಬರೆಯುತ್ತೇವೆ.

ದೇವತ್ವಂ ಸಾತ್ವಿಕಾ ಯಾಂತಿ ಮನುಷ್ಯತ್ವಂ ಚ ರಾಜಸಾಃ।
ತಿರ್ಯಕ್ತ್ವಂ ತಾಮಸಾ ನಿತ್ಯಮಿತ್ಯೇಷಾತ್ರಿವಿಧಾಗತಿಃ ॥೧॥
ಸ್ಥಾವರಾಃ ಕ್ರಿಮಿಕೀಟಾಶ್ಚ ಮತ್ಸ್ಯಾಃ ಸರ್ಪಾಶ್ಚ ಕಚ್ಛಪಾಃ।
ಪಶವಶ್ಚಮೃಗಾಶ್ಚೈವ ಜಘನ್ಯಾತಾಮಸೀ ಗತಿಃ ॥೨॥
ಚಾರಣಾಶ್ಚಸುಪರ್ಣಾಶ್ಚ ಪುರುಷಾಶ್ಚೈವ ದಾಂಭಿಕಾಃ।
ರಕ್ಷಾಂಸಿಚ ಪಿಶಾಚಾಶ್ಚ ತಾಮಸೀಷೂತ್ತಮಾಗತಿಃ ॥೩॥
ಮಲ್ಲಾ ಮಲ್ಲಾನಟಾಶ್ಚೈವ ಪುರುಷಾಃ ಶಸ್ತ್ರವೃತ್ತಯಃ।
ದ್ಯೂತಪಾನಪ್ರಸಕ್ತಾಶ್ಚ ಜಘನ್ಯಾ ರಾಜಸೀಗತಿಃ ॥೪॥
ರಾಜಾನಃ ಕ್ಷತ್ರಿಯಾಶ್ಚೈವ ರಾಜ್ಞಾಂ ಚೈವ ಪುರೋಹಿತಾಃ।
ವಾದಯುದ್ಧಪ್ರಧಾನಾಶ್ಚ ಮಧ್ಯಮಾ ರಾಜಸೀಗತಿಃ ॥೫॥
ಗಂಧರ್ವಾ ಗುಹ್ಯಕಾ ಯಕ್ಷಾ ವಿಬುಧಾನುಚರಾಶ್ಚಯೇ।
ತಥೈವಾಪ್ಸರಸಃ ಸರ್ವಾ ರಾಜಸೀಷೂತ್ತಮಾಗತಿಃ ॥೬॥
ತಾಪಸಾ ಯತಯೋ ವಿಪ್ರಾ ಯೇ ಚ ವೈಮಾನಿಕಾಗಣಾಃ।
ನಕ್ಷತ್ರಾಣಿ ಚ ದೈತ್ಯಾಶ್ಚ ಪ್ರಥಮಾ ಸಾತ್ವಿಕೀ ಗತಿಃ ॥೭॥
ಯಜ್ವಾನ ಋಷಯೋ ದೇವಾ ವೇದಾ ಜ್ಯೋತೀಂಷಿ ವತ್ಸರಾಃ
ಪಿತರಶ್ಚೈವ ಸಾಧ್ಯಾಶ್ಚ ದ್ವಿತೀಯಾ ಸಾತ್ವಿಕೀಗತಿಃ ॥೮॥
ಬ್ರಹ್ಮಾ ವಿಶ್ವಸೃಜೋ ಧರ್ಮೋ ಮಹಾನವ್ಯಕ್ತಮೇವ ಚ।
ಉತ್ತಮಾಂ ಸಾತ್ವಿಕೀಮೇತಾಂ ಗತಿಮಾಹುರ್ಮನೀಷಿಣಃ ॥೧೦
ಇಂದ್ರಿಯಾಣಾಂ ಪ್ರಸಂಗೇನ ಧರ್ಮಸ್ಯಾಸೇವನೇನ ಚ।
ಪಾಪಾನ್ಸಂಯಾಂತಿ ಸಂಸಾರಾನವಿದ್ವಾಂಸೋ ನರಾಧಮಾಃ ॥

ಸತ್ವಗುಣವುಳ್ಳವರು ದೇವ ಅಂದರೆ ವಿದ್ವಾಂಸರಾಗಿಯೂ, ರಜೋಗುಣವುಳ್ಳವರು ಮಧ್ಯಮ ಮನುಷ್ಯರಾಗಿಯೂ ಹುಟ್ಟುತ್ತಾರೆ. ಮತ್ತೆ ತಮೋಗುಣವುಳ್ಳವರಿಗೆ ನೀಚಗತಿಯು ಪ್ರಾಪ್ತವಾಗುತ್ತದೆ.||೧||

ಅತ್ಯಂತ ತಮೋಗುಣವುಳ್ಳವರಿಗೆ ಮರ-ಗಿಡ-ಮೊದಲಾದ ಸ್ಥಾವರ ಜನ್ಮವೂ, ಕ್ರಿಮಿ, ಕೀಟ, ಮೀನು, ಹಾವು, ಆಮೆ, ಪಶು, ಮೃಗ ಮೊದಲಾದುವುಗಳ ಜನ್ಮವೂ, ಸಿಕ್ಕುತ್ತದೆ. ॥೨॥ ಮಧ್ಯಮ ತಮೋ ಗುಣವುಳ್ಳವರಿಗೆ, ಆನೆ, ಕುದುರೆ, ಶೂದ್ರ, ಮ್ಲೇಚ್ಛ, ನಿಂದಿತ ಕರ್ಮ ಗಳನ್ನು ಮಾಡುವವನು, ಸಿಂಹ, ಹುಲಿ, ಹಂದಿ ಇವುಗಳ ಜನ್ಮಗಳು ಲಭಿಸುತ್ತವೆ. ॥೩॥ ಉತ್ತಮತಮೋಗುಣವುಳ್ಳವರಿಗೆ ಚಾರಣ (ಪದ್ಯ ಕಟ್ಟಿ ಮಾನವ ಸ್ತುತಿಮಾಡುವವನು) ಸುಂದರವಾದ ಪಕ್ಷಿಗಳು, ದಾಂಭಿಕ ಅಂದರೆ, ತಮ್ಮ ಸುಖಕ್ಕಾಗಿ ಆತ್ಮಸ್ತುತಿಮಾಡಿಕೊಳ್ಳುವವರು, ರಾಕ್ಷಸ, ಹಿಂಸಕ, ಪಿಶಾಚ ಅಂದರೆ ಅನಾಚಾರಿಗಳು, ಮದ್ಯ ಮೊದ ಲಾದುವುಗಳನ್ನು ಸೇವನೆಮಾಡುವವರು ಮತ್ತು ಮಲಿನವಾದವರು ಇವರ ಜನ್ಮವು ಪ್ರಾಪ್ತವಾಗುತ್ತದೆ. ಅದು ತಾಮಸಿಗಳಲ್ಲಿ ಉತ್ತಮ ಫಲ. ॥೪॥ ನೀಚ ರಜೋಗುಣವುಳ್ಳವರಿಗೆ, ಝುಲ್ಲರು ಅಂದರೆ, ಕತ್ತಿ ಮೊದಲಾದುವುಗಳಿಂದ ಹೊಡೆದಾಡುವವರು, ಅಥವಾ ಗುದ್ದಲಿ ಮೊದಲಾದುವುಗಳಿಂದ ಅಗೆಯುವವರು, ಮಲ್ಲರು, ಅಂದರೆ, ಝುಮುಕು ವುದು, ಹತ್ತುವುದು, ಇಳಿಯುವುದು ಹಡಗು ಮೊದಲಾದುವನ್ನು ನಡೆಸುವುದು, ಇಂತಹ ಕೆಲಸಗಳನ್ನು ಮಾಡುವವರು. ನಟರು ಅಂದರೆ, ಬೊಂಬು ಮೊದಲಾದುವುಗಳ ಮೇಲೆ ಜಳಕವಾಡುವ ದೊಂಬರು, ಶಸ್ತ್ರಧಾರಿಗಳಾದ ಭೃತ್ಯರು, ಮದ್ಯಪಾನಾಸಕ್ತರು, ಇಂತಹವರ ಜನ್ಮಗಳು ಬರುತ್ತವೆ. ಇದು ನೀಚರಜೋಗುಣದ ಫಲ. ॥೫॥ ಮಧ್ಯಮ ರಜೋಗುಣವುಳ್ಳವರು ರಾಜರಾಗಿಯೂ, ಕ್ಷತ್ರಿಯರಾಗಿಯೂ, ರಾಜಪುರೋಹಿತರಾಗಿಯೂ, ದಾನವಿವಾದ ಮಾಡುವವರಾಗಿಯೂ, ದೂತರಾಗಿಯೂ, ವಕೀಲರಾಗಿಯೂ, ಯುದ್ಧವಿಭಾಗದ ಅಧ್ಯಕ್ಷ ರಾಗಿಯೂ ಹುಟ್ಟುತ್ತಾರೆ. ॥೬॥ ಉತ್ತಮ ರಜೋಗುಣವುಳ್ಳವರು (ಗಂಧರ್ವರು) ಸಂಗೀತಗಾರರಾಗಿಯೂ, (ಗುಹ್ಯಕರು) ವಾದ್ಯಗಾರ ರಾಗಿಯೂ, (ಯಕ್ಷರು) ಶ್ರೀಮಂತರಾಗಿಯೂ, ವಿದ್ವಾಂಸರ ಸೇವಕ ರಾಗಿಯೂ, ಅಪ್ಸರೆ ಅಂದರೆ, ಉತ್ತಮರೂಪವತಿಯರಾದ ಸ್ತ್ರೀಯ ರಾಗಿಯೂ, ಹುಟ್ಟುತ್ತಾರೆ. ॥೭॥ ಯಾರು ತಪಸ್ವಿಗಳೂ, ಯತಿಗಳೂ, ಸಂನ್ಯಾಸಿಗಳೂ, ವೇದಪಾಠಿಗಳೂ, ವೈಮಾನಿಕರೂ, ಜ್ಯೋತಿಷಿಗಳೂ,

ದೈತ್ಯರು—ಅಂದರೆ ದೇಹಪೋಷಕರೂ, ಆದ ಮಾನವರಾಗಿರುವರೋ ಅವರು ಪ್ರಥಮಸತ್ವಗುಣದ ಫಲವಾಗಿ ಹುಟ್ಟಿದರೆಂದು ತಿಳಿಯಬೇಕು. ॥೮॥ ಮಧ್ಯಮ ಸತ್ವಗುಣಯುಕ್ತರಾಗಿ ಕರ್ಮಮಾಡುವ ಜೀವರು, ಯಜ್ಞಮಾಡುವವರಾಗಿಯೂ, ವೇದಾರ್ಥಜ್ಞರಾಗಿಯೂ, ವಿದ್ವಾಂಸರಾಗಿಯೂ, ವೇದ, ವಿದ್ಯುತ್ ಮತ್ತು ಕಾಲವಿದ್ಯೆಗಳನ್ನು ಬಲ್ಲವರಾಗಿಯೂ, ರಕ್ಷಕರಾಗಿಯೂ, ಜ್ಞಾನಿಗಳಾಗಿಯೂ, ಮತ್ತೆ (ಸಾಧ್ಯ) ಸಾಧಿಸಬೇಕಾದ ಕಾರ್ಯದ ಸಿದ್ಧಿಗಾಗಿ ಸೇವಿಸಲರ್ಹರಾದ ಅಧ್ಯಾಪಕರಾಗಿಯೂ ಹುಟ್ಟುತ್ತಾರೆ. ॥೯॥ ಉತ್ತಮ ಸತ್ವಗುಣವುಳ್ಳವರಾಗಿ ಉತ್ತಮಕರ್ಮಮಾಡುವವರು ಬ್ರಹ್ಮ ಅಂದರೆ, ಸರ್ವವೇದವೇತ್ತರಾಗಿಯೂ, ವಿಶ್ವಸೃಜ್, ಅಂದರೆ ಸಮಸ್ತ ಸೃಷ್ಟಿಕ್ರಮವಿದ್ಯೆಯನ್ನು ತಿಳಿದು, ಆಕಾಶಯಾನ ಮೊದಲಾದ ವಿವಿಧಯಂತ್ರಗಳ ಆವಿಷ್ಕಾರಕರಾಗಿಯೂ, ಧಾರ್ಮಿಕರಾಗಿಯೂ, ಸರ್ವೋತ್ತಮವಾದ ಬುದ್ಧಿಯುಳ್ಳವರಾಗಿಯೂ, ಮತ್ತು ಅವ್ಯಕ್ತಜನ್ಮ ಮತ್ತು ಪ್ರಕೃತಿವಶಿತ್ವ ಸಿದ್ಧಿಯನ್ನು ಹೊಂದುವವರಾಗಿಯೂ ಹುಟ್ಟುತ್ತಾರೆ. ॥೧೦॥ ಇಂದ್ರಿಯಗಳಿಗೆ ವಶರಾಗಿ, ವಿಷಯಾಸಕ್ತರೂ, ಧರ್ಮವನ್ನು ಬಿಟ್ಟು ಅಧರ್ಮವನ್ನು ಆಚರಿಸುವವರೂ ಆದ ಮೂರ್ಖರು ಮಾನವರಲ್ಲಿ ನೀಚಜನ್ಮವನ್ನೂ ಕೆಟ್ಟ ಕೆಟ್ಟ ದುಃಖಮಯವಾದ ಜನ್ಮಗಳನ್ನೂ ಹೊಂದುತ್ತಾರೆ. ॥೧೧॥

ಈರೀತಿಯಾಗಿ ಸತ್ವರಜಸ್ತಮೋಗುಣಗಳ ವೇಗದಿಂದ ಜೀವನು ಯಾವ ಯಾವ ಬಗೆಯ ಕರ್ಮಗಳನ್ನು ಮಾಡುವನೋ, ಅದಕ್ಕೆ ಅದೇರೀತಿಯ ಫಲವನ್ನು ಹೊಂದುತ್ತಾನೆ. ಮುಮುಕ್ಷುಗಳು, ಗುಣಾತೀತರು—ಅಂದರೆ, ಈ ಎಲ್ಲಾ ಗುಣಗಳ ಸ್ವಭಾವಗಳಲ್ಲಿ ಸಿಕ್ಕಿಕೊಳ್ಳದವರಾಗಿ ಮಹಾಯೋಗಿಗಳಾಗಿ, ಮೋಕ್ಷಸಾಧನೆಯನ್ನು ಮಾಡಬೇಕು. ಏಕೆಂದರೆ,

ಯೋಗಶ್ಚಿತ್ತವೃತ್ತಿನಿರೋಧಃ ॥೧॥
ತದಾ ದ್ರಷ್ಟುಃ ಸ್ವರೂಪೇಽವಸ್ಥಾನಂ ॥೩॥

[ಪಾತಂಜಲಯೋಗಸೂತ್ರ, ೧, ೨, ೩.]

ಇವು ಪಾತಂಜಲ ಯೋಗಶಾಸ್ತ್ರದ ಸೂತ್ರಗಳು, ಮಾನವನು ರಾಜಸ ತಾಮಸಕರ್ಮಗಳಿಂದ ಮನಸ್ಸನ್ನು ತಡೆದು, ಶುದ್ಧಸತ್ವಗುಣ ಸಂಪನ್ನವಾದ ಕರ್ಮಗಳಿಂದಲೂ ಕೂಡ ಮನಸ್ಸನ್ನು ತಡೆದು, ಶುದ್ಧಸತ್ವ ಗುಣಸಂಪನ್ನನಾಗಿ, ಆಮೇಲೆ ಅದನ್ನು ನಿರೋಧಿಸಿ, ಏಕಾಗ್ರ ಅಂದರೆ, ಒಬ್ಬ ಪರಮಾತ್ಮನ ಮತ್ತು ಧರ್ಮಯುಕ್ತ ಕರ್ಮದ ಅಗ್ರಭಾಗದಲ್ಲಿ ಚಿತ್ತವನ್ನು ಸ್ಥಿರಗೊಳಿಸುವುದು; ನಿರುದ್ಧ--ಅಂದರೆ ಎಲ್ಲಾ ಕಡೆಯಿಂದಲೂ ಮನೋವೃತ್ತಿಯನ್ನು ತಡೆಯುವುದು. ||೧|| ಯಾವಾಗ ಚಿತ್ತವು ಏಕಾಗ್ರವೂ, ನಿರುದ್ಧವೂ, ಆಗುತ್ತದೆಯೋ ಆಗ ಎಲ್ಲರ ದ್ರಷ್ಟನಾದ ಪರಮಾತ್ಮನ ಸ್ವರೂಪದಲ್ಲಿ ಜೀವಾತ್ಮನ ಸ್ಥಿತಿಯುಂಟಾಗುತ್ತದೆ. ||೨|| ಈ ಮೊದಲಾದ ಸಾಧನಗಳನ್ನು ಮುಕ್ತಿಗಾಗಿ ಅವಲಂಬಿಸ ಬೇಕು. ಮತ್ತೆ,

ಅಥ ತ್ರಿವಿಧದುಃಖಾತ್ಯಂತನಿವೃತ್ತಿರತ್ಯಂತಪುರುಷಾರ್ಥಃ ||

ಇದುಸಾಂಖ್ಯದ [೧-೧] ಸೂತ್ರವು, ಆಧ್ಯಾತ್ಮಿಕ ಅಂದರೆ, ಶರೀರಸಂಬಂಧವಾದ ದುಃಖ; ಆಧಿಭೌತಿಕ-ಅಂದರೆ, ಇತರ ಪ್ರಾಣಿಗಳಿಂದ ಉಂಟಾಗುವ ದುಃಖ; ಆಧಿದೈವಿಕ-ಅಂದರೆ ಅತಿವೃಷ್ಟಿ, ಅನಾವೃಷ್ಟಿ, ಅತಿ ತಾಪ, ಅತಿ ಶೀತ, ಮತ್ತು ಮನಸ್ಸು-ಇಂದ್ರಿಯಗಳ ಚಂಚಲತೆಯಿಂದ ಉಂಟಾಗುವ ದುಃಖ, ಈ ಮೂರು ವಿಧವಾದ ದುಃಖಗಳನ್ನೂ ಕಳೆದುಕೊಂಡು ಮೋಕ್ಷವನ್ನು ಪಡೆಯುವುದು ಅತ್ಯಂತ ಪುರುಷಾರ್ಥವಾಗಿರುತ್ತದೆ.

ಇದಾದನಂತರ ಆಚಾರ, ಅನಾಚಾರ, ಭಕ್ಷ್ಯ-ಅಭಕ್ಷ್ಯ, ಇವುಗಳ ಇಷಯವಾಗಿ ಬರೆಯುವೆವು.

ಇತಿ ಶ್ರೀಮದ್ದಯಾನಂದಸರಸ್ವತೀಸ್ವಾಮಿಕೃತೇ
ಸತ್ಯಾರ್ಥಪ್ರಕಾಶೇ ಸುಭಾಷಾವಿಭೂಷಿತೇ
ವಿದ್ಯಾವಿದ್ಯಾಬಂಧಮೋಕ್ಷವಿಷಯೇ
ನವಮಃ ಸಮುಲ್ಲಾಸಃ ಸಂಪೂರ್ಣಃ

॥ ಓಂ ॥

ಅಥ ದಶಮಸಮುಲ್ಲಾಸಾರಂಭಃ

ಅಥಾಽಽಚಾರಾಽನಾಚಾರಭಕ್ಷ್ಯಾಽಭಕ್ಷ್ಯವಿಷಯಾನ್ ವ್ಯಾಖ್ಯಾಸ್ಯಾಮಃ

ಧರ್ಮಯುಕ್ತವಾದ ಆಚರಣೆ, ಸುಶೀಲತೆ, ಸತ್ಪುರುಷರಸಂಗ, ಸದ್ವಿದ್ಯಾಗ್ರಹಣದಲ್ಲಿ ಆಸಕ್ತಿ, ಈ ಮೊದಲಾದುವುಗಳಿಗೆ ಆಚಾರವೆಂದೂ, ಇದಕ್ಕೆ ವಿರುದ್ಧವಾದುದಕ್ಕೆ ಅನಾಚಾರವೆಂದೂ ಹೆಸರು. ಇನ್ನು ಅದನ್ನು ಬರೆಯುತ್ತೇವೆ.

ವಿದ್ವದ್ಭಿಃ ಸೇವಿತಃ ಸದ್ಭಿರ್ನಿತ್ಯಮದ್ವೇಷರಾಗಿಭಿಃ ।
ಹೃದಯೇನಾಭ್ಯನುಜ್ಞಾತೋ ಯೋ ಧರ್ಮಸ್ತನ್ನಿಬೋಧತ ॥
ಕಾಮಾತ್ಮತಾ ನ ಪ್ರಶಸ್ತಾ ನ ಚೈವೇಹಾಸ್ತ್ಯಕಾಮತಾ ।
ಕಾಮ್ಯೋ ಹಿ ವೇದಾಧಿಗಮಃ ಕರ್ಮಯೋಗಶ್ಚ ವೈದಿಕಃ ॥೨॥
ಸಂಕಲ್ಪಮೂಲಃ ಕಾಮೋ ವೈ ಯಜ್ಞಾಃ ಸಂಕಲ್ಪಸಂಭವಾಃ ।
ವ್ರತಾನಿ ಯಮಧರ್ಮಾಶ್ಚ ಸರ್ವೇ ಸಂಕಲ್ಪಜಾಃ ಸ್ಮೃತಾಃ॥೩॥
ಅಕಾಮಸ್ಯ ಕ್ರಿಯಾಕಾಚಿದ್ದೃಶ್ಯತೇ ನೇಹ ಕರ್ಹಿಚಿತ್ ।
ಯದ್ಯದ್ಧಿ ಕುರುತೇ ಕಿಂಚಿತ್ತತ್ತತ್ಕಾಮಸ್ಯ ಚೇಷ್ಟಿತಂ ॥೪॥
ವೇದೋಽಖಿಲೋ ಧರ್ಮಮೂಲಂ ಸ್ಮೃತಿಶೀಲೇ ಚ ತದ್ವಿದಾಂ
ಆಚಾರಶ್ಚೈವ ಸಾಧೂನಾಮಾತ್ಮನ ಸ್ತುಷ್ಟಿರೇವಚ ॥೫॥
ಸರ್ವಂತು ಸಮವೇಕ್ಷ್ಯೇದಂ ನಿಖಿಲಂ ಜ್ಞಾನಚಕ್ಷುಷಾ ।
ಶ್ರುತಿಪ್ರಾಮಾಣ್ಯತೋ ವಿದ್ವಾನ್ ಸ್ವಧರ್ಮೇ ನಿವಿಶೇತ ವೈ॥೬॥
ಶ್ರುತಿಸ್ಮೃತ್ಯುದಿತಂ ಧರ್ಮಮನುತಿಷ್ಠನ್ ಹಿ ಮಾನವಃ ।
ಇಹಕೀರ್ತಿಮವಾಪ್ನೋತಿ ಪ್ರೇತ್ಯಚಾನುತ್ತಮಂ ಸುಖಂ ॥೭॥

ಯೋಽವಮನ್ಯೇತ ತೇ ಮೂಲೇ ಹೇತುಶಾಸ್ತ್ರಾಶ್ರಯಾದ್ದ್ವಿಜಃ ।
ಸ ಸಾಧುಭಿರ್ಬಹಿಷ್ಕಾರ್ಯೋ ನಾಸ್ತಿಕೋ ವೇದನಿಂದಕಃ ॥೮॥
ವೇದಃ ಸ್ಮೃತಿಃ ಸದಾಚಾರಃ ಸ್ವಸ್ಯ ಚ ಪ್ರಿಯಮಾತ್ಮನಃ ।
ಏತಚ್ಚತುರ್ವಿಧಂ ಪ್ರಾಹುಃ ಸಾಕ್ಷಾದ್ಧರ್ಮಸ್ಯ ಲಕ್ಷಣಮ್ ॥೯॥
ಅರ್ಥಕಾಮೇಷ್ವಸಕ್ತಾನಾಂ ಧರ್ಮಜ್ಞಾನಂ ವಿಧೀಯತೇ ।
ಧರ್ಮಂ ಜಿಜ್ಞಾಸಮಾನಾನಾಂ ಪ್ರಮಾಣಂ ಪರಮಂ ಶ್ರುತಿಃ ॥
ವೈದಿಕೈಃ ಕರ್ಮಭಿಃ ಪುಣ್ಯೈರ್ನಿಷೇಕಾದಿರ್ದ್ವಿಜನ್ಮನಾಂ ।
ಕಾರ್ಯಃ ಶರೀರಸಂಸ್ಕಾರಃ ಪಾವನಃ ಪ್ರೇತ್ಯ ಚೇಹ ಚ ॥೧೧॥
ಕೇಶಾಂತಃ ಷೋಡಶೇ ವರ್ಷೇ ಬ್ರಾಹ್ಮಣಸ್ಯ ವಿಧೀಯತೇ ।
ರಾಜನ್ಯಬಂಧೋರ್ದ್ವಾವಿಂಶೇ ವೈಶ್ಯಸ್ಯ ದ್ವ್ಯಧಿಕೇ ತತಃ ॥೧೨॥

[ಮನು ಅ-೨ ; ಶ್ಲೋಕ ೧-೪ ; ೬, ೮, ೯ ; ೧೧-೧೪ ; ೨೬, ೬೫]

ಮನುಷ್ಯರು ಸದಾ ಈ ವಿಷಯಗಳಲ್ಲಿ ಗಮನವಿಡಬೇಕು. ಏನೆಂದರೆ—ರಾಗದ್ವೇಷರಹಿತರಾದ ವಿದ್ವಾಂಸರು, ಯಾವುದನ್ನು ನಿತ್ಯವೂ ಆಚರಿಸುತ್ತಿರುವರೋ, ಯಾವುದು ಹೃದಯಕ್ಕೆ, ಅಂದರೆ ಆತ್ಮನಿಗೆ ಸತ್ಯ ಕರ್ತವ್ಯವೆಂದು ತಿಳಿದುಬರುವುದೋ, ಅದೇ ಧರ್ಮವು, ಮಾನ್ಯವೂ, ಕರ್ತವ್ಯವೂ ಆಗಿರುತ್ತದೆ. ॥೧॥ ಏಕೆಂದರೆ, ಈ ಜಗತ್ತಿನಲ್ಲಿ ಅತ್ಯಂತ ಕಾಮಾತ್ಮತೆಯಾಗಲಿ, ಅತ್ಯಂತ ನಿಷ್ಕಾಮತೆಯಾಗಲಿ, ಶ್ರೇಷ್ಠವಲ್ಲ. ವೇದಾರ್ಥಜ್ಞಾನ ಮತ್ತು ವೇದೋಕ್ತ ಕರ್ಮ ಇವೆಲ್ಲವೂ, ಕಾಮನೆಯಿಂದಲೇ ಸಿದ್ಧಿಸುತ್ತವೆ. ॥೩॥ ಯಾವನಾದರೂ 'ನಾನು ನಿಸ್ಪೃಹನೂ, ನಿಷ್ಕಾಮನೂ ಆಗಿರುವೆನು ಅಥವಾ ಆಗುವೆನು' ಎಂದು ಹೇಳಿಕೊಳ್ಳುವುದಾದರೆ, ಅದೆಂದಿಗೂ ಸಂಭವವಲ್ಲ. ಏಕೆಂದರೆ, ಎಲ್ಲಾ ಕಾರ್ಯಗಳೂ, ಅಂದರೆ, ಯಜ್ಞ, ಸತ್ಯಭಾಷಣ ಮೊದಲಾದ ವ್ರತಗಳು, ಯಮನಿಯಮರೂಪವಾದ ಧರ್ಮ, ಮೊದಲಾದವು ಸಂಕಲ್ಪದಿಂದಲೇ ಸಿದ್ಧವಾಗುತ್ತದೆ. ॥೩॥ ಏಕೆಂದರೆ, ನಡೆಯಿಸಲ್ಪಡುವ ಕೈಕಾಲು, ಕಣ್ಣು, ಮನಸ್ಸು ಮೊದಲಾದುವೆಲ್ಲಾ ಕಾಮನೆಯಿಂದಲೇ ನಡೆಯುತ್ತವೆ. ಇಚ್ಛೆ ಇಲ್ಲದಿದ್ದರೆ, ಕಣ್ಣನ್ನು

ತೆರೆಯುವುದು, ಮುಚ್ಚುವುದು ಸಹ -ಅಸಂಭವವಾಗುತ್ತವೆ. ॥ ೪ ॥ ಆದುದರಿಂದ, ಪರಿಪೂರ್ಣ ವೇದ, ಮನುಸ್ಮೃತಿ, ಋಷಿಪ್ರಣೀತವಾದ ಶಾಸ್ತ್ರಗಳು, ಸತ್ಪುರುಷರ ಆಚಾರ, ಮತ್ತು ತನ್ನ ಆತ್ಮನು ಪ್ರಸನ್ನನಾಗುವ ಕರ್ಮಗಳು, ಅಂದರೆ-ಭಯ, ಸಂಶಯ, ನಾಚಿಕೆಗಳನ್ನುಂಟು ಮಾಡದಿರುವ ಕರ್ಮಗಳು-ಇವುಗಳನ್ನು ಸೇವನೆಮಾಡುವುದು ಯುಕ್ತವಾಗಿರುತ್ತದೆ. ನೋಡಿರಿ, ಯಾವನಾದರೂ, ಸುಳ್ಳು, ಕಳ್ಳತನ ಮೊದಲಾದ ದುಷ್ಕಾರ್ಯಗಳನ್ನು ಮಾಡಬಯಸಿದಕೂಡಲೆ ಅವನ ಆತ್ಮದಲ್ಲಿ ಭಯವೂ, ಸಂದೇಹವೂ, ನಾಚಿಕೆಯೂ ಅವಶ್ಯವಾಗಿ ಹುಟ್ಟುತ್ತದೆ. ಆದುದರಿಂದ ಆ ಕಾರ್ಯಗಳು ಮಾಡಲರ್ಹವಾದುವಲ್ಲ. ॥ ೫ ॥ ಮನುಷ್ಯನು ಸಂಪೂರ್ಣ ವೇದಗಳಿಗೂ, ಶಾಸ್ತ್ರಗಳಿಗೂ, ಸತ್ಪುರುಷರ ಆಚಾರಗಳಿಗೂ, ತನ್ನ ಆತ್ಮನಿಗೂ ಅವಿರುದ್ಧವಾದುದನ್ನು ಜ್ಞಾನ ನೇತ್ರದಿಂದ ಚನ್ನಾಗಿ ವಿವೇಚಿಸಿ, ವೇದಪ್ರಮಾಣದಿಂದ ಸ್ವಾತ್ಮಾನುಕೂಲವಾದ ಧರ್ಮದಲ್ಲಿ ಪ್ರವೇಶಿಸಬೇಕು. ॥೬॥ ಏಕೆಂದರೆ, ಯಾವನು ವೇದೋಕ್ತ ಧರ್ಮವನ್ನೂ, ವೇದವಿರುದ್ಧವಲ್ಲದ ಸ್ಮೃತಿಪ್ರತಿಪಾದಿತವಾದ ಧರ್ಮಗಳನ್ನೂ ಅನುಷ್ಠಾನಮಾಡುವನೋ, ಅವನು ಈ ಲೋಕದಲ್ಲಿ ಕೀರ್ತಿಯನ್ನೂ, ಮರಣಾನಂತರ ಸರ್ವೋತ್ತಮ ಸುಖವನ್ನೂ ಪಡೆಯುತ್ತಾನೆ. ॥೭॥ ವೇದಗಳಿಗೆ ಶ್ರುತಿಯೆಂದೂ, ಧರ್ಮಶಾಸ್ತ್ರಗಳಿಗೆ ಸ್ಮೃತಿಯೆಂದೂ ಹೆಸರು, ಇವುಗಳಿಂದ-ಸಮಸ್ತ ಕರ್ತವ್ಯಾಕರ್ತವ್ಯಗಳನ್ನೂ ನಿಶ್ಚಯಿಸಿಕೊಳ್ಳಬೇಕು. ಯಾವನಾದರೂ, ವೇದಗಳನ್ನೂ ವೇದಸಮ್ಮತವಾದ ಆಪ್ತಗ್ರಂಥಗಳನ್ನೂ ಅವಮಾನಿಸಿದರೆ, ಅವನನ್ನು ಶ್ರೇಷ್ಠರು ಸಮಾಜದಿಂದ ಬಹಿಷ್ಕರಿಸಬೇಕು. ಏಕೆಂದರೆ-ವೇದಗಳನ್ನು ನಿಂದಿಸುವವನೇ ನಾಸ್ತಿಕನೆನಿಸುತ್ತಾನೆ. ॥೮॥ ಆದುದರಿಂದ ವೇದ, ಸ್ಮೃತಿ, ಸತ್ಪುರುಷರ ಆಚಾರ ಮತ್ತು ತನ್ನ ಆತ್ಮ ಜ್ಞಾನಕ್ಕೆ ವಿರುದ್ಧವಲ್ಲದ ಪ್ರಿಯಾಚರಣೆ-ಈ ನಾಲ್ಕು ಧರ್ಮದ ಲಕ್ಷಣಗಳಾಗಿರುತ್ತವೆ. ಅಂದರೆ, ಇವುಗಳಿಂದಲೇ ಧರ್ಮವು ಲಕ್ಷಿತವಾಗುತ್ತದೆ. ॥೯॥ ಆದರೆ, ಯಾವನು ಧರ್ಮಲೋಭದಲ್ಲಿಯೂ, ಕಾಮ-ಅಂದರೆ ವಿಷಯ ಸೇವನೆಯಲ್ಲಿಯೂ, ಸಿಕ್ಕಿಕೊಳ್ಳುವದಿಲ್ಲವೋ, ಅವನಿಗೆ ಮಾತ್ರ ಧರ್ಮದ ಜ್ಞಾನವುಂಟಾಗುತ್ತದೆ. ಧರ್ಮವನ್ನು ತಿಳಿಯಬಯ

ಸುವವರಿಗೆ ವೇದವೇ ಪರಮ ಪ್ರಮಾಣವಾಗಿರುತ್ತದೆ. ॥೧೦॥ ಅದುದ ರಿಂದಲೇ, ವೇದೋಕ್ತವಾದ ಪುಣ್ಯಮಯ ಕರ್ಮಗಳಿಂದ ಬ್ರಾಹ್ಮಣ, ಕ್ಷತ್ರಿಯ, ವೈಶ್ಯರು ತಮ್ಮ ನುಕ್ಕಳಿಗೆ ಈ ಜನ್ಮದಲ್ಲಿಯೂ, ಪರಜನ್ಮ ದಲ್ಲಿಯೂ ಪಾವನತ್ವವನ್ನುಂಟುಮಾಡುವ ನಿಷೇಕಾದಿ ಸಂಸ್ಕಾರಗಳನ್ನು ನಡೆಸುವುದು ಯೋಗ್ಯವಾಗಿರುತ್ತದೆ. ॥೧೧॥ ಬಾಹ್ಮಣನಿಗೆ ಹದಿನಾರ ನೆಯ ವರ್ಷದಲ್ಲಿಯೂ, ಕ್ಷತ್ರಿಯನಿಗೆ ಇಪ್ಪತ್ತೆರಡನೆಯ ವರ್ಷದಲ್ಲಿಯೂ ವೈಶ್ಯನಿಗೆ ಇಪ್ಪತ್ತು ನಾಲ್ಕನೆಯ ವರ್ಷದಲ್ಲಿಯೂ, ಕೇಶಾಂತಕರ್ಮ ಅಂದರೆ, ಕ್ಷೌರಕರ್ಮವನ್ನು ನಡೆಸಬೇಕು. ಅಂದರೆ, ಈ ವಿಧಿಯು ನಡೆದಬಳಿಕ, ಶಿಖೆಯನ್ನು ಮಾತ್ರ ಉಳಿಸಿಕೊಂಡು, ಗಡ್ಡ ಮೀಸೆ ಗಳನ್ನೂ, ತಲೆಗೂದಲನ್ನೂ ಸದಾ ತೆಗೆಸುತ್ತಿರಬೇಕು. ಅಂದರೆ, ಪುನಃ ಎಂದೂ ಅವನ್ನಿಡಬಾರದು. ಶೀತಪ್ರಧಾನವಾದ ದೇಶವಾದರೆ, ಇಷ್ಟಾನುಸಾರವಾಗಿ ಬೇಕಾದಷ್ಟು ತಲೆಗೂದಲನ್ನಿಟ್ಟುಕೊಳ್ಳಬಹುದು; ಮತ್ತು ಅತ್ಯುಷ್ಣದೇಶವಾಗಿದ್ದರೆ, ಶಿಖಾಸಮೇತ ಎಲ್ಲವನ್ನೂ ಬೋಳಿಸಿ ಬಿಡಬೇಕು. ಏಕೆಂದರೆ, ತಲೆಗೂದಲು ಇರುವುದರಿಂದ ಉಷ್ಣವು ಅಧಿಕ ವಾಗುತ್ತದೆ; ಅದುದರಿಂದ ಬುದ್ಧಿಯು ಕಡಮೆಯಾಗುತ್ತದೆ. ಗಡ್ಡ ಮೀಸೆಗಳನ್ನಿಡುವುದರಿಂದ ತಿಂಡಿತೀರ್ಥಗಳು ಸುಸೂತ್ರವಾಗಿ ನಡೆಯುವ ದಿಲ್ಲ; ಮತ್ತು ಎಂಜಲು ಕೂಡ ಕೂದಲುಗಳಲ್ಲಿ ಉಳಿದುಹೋಗುತ್ತದೆ.

ಇಂದ್ರಿಯಾಣಾಂ ವಿಚರತಾಂ ವಿಷಯೇಷ್ವಪರಿಹಾರಿಷು।
ಸಂಯಮೇ ಯತ್ನಮಾತಿಷ್ಠೇದ್ವಿದ್ವಾನ್ ಯಂತೇವವಾ
ಜಿನಾವ್ ॥೧॥

ಇಂದ್ರಿಯಾಣಾಂ ಪ್ರಸಂಗೇನ ದೋಷಮೃಚ್ಛತ್ಯಸಂಶಯಂ।
ಸನ್ನಿಯಮ್ಯ ತು ತಾನ್ಯೇವ ತತಃ ಸಿದ್ಧಿಂ ನಿಯಚ್ಛತಿ ॥೨॥

ನ ಜಾತು ಕಾಮಃ ಕಾಮಾನಾಮುಪಭೋಗೇನ ಶಾಮ್ಯತಿ।
ಹವಿಷಾ ಕೃಷ್ಣವರ್ತ್ಮೇವ ಭೂಯ ಏವಾಭಿವರ್ಧತೇ ॥೩॥

ವೇದಾಸ್ತ್ಯಾಗಶ್ಚ ಯಜ್ಞಾಶ್ಚ ನಿಯಮಾಶ್ಚ ತಪಾಂಸಿಚ।
ನ ವಿಪ್ರದುಷ್ಟಭಾವಸ್ಯ ಸಿದ್ಧಿಂ ಗಚ್ಛಂತಿ ಕರ್ಹಿಚಿತ್ ॥೪॥

ವಶೀಕೃತ್ವೇಂದ್ರಿಯಗ್ರಾಮಂ ಸಂಯಮ್ಯ ಚ ಮನಸ್ತಥಾ।
ಸರ್ವಾನ್ ಸಂಸಾಧಯೇದರ್ಥಾನಕ್ಷಿಣ್ವನ್ ಯೋಗತಸ್ತನುಮ್

ಶ್ರುತ್ವಾ ಸ್ಪೃಷ್ಟ್ವಾ ಚ ದೃಷ್ಟ್ವಾ ಚ ಭುಕ್ತ್ವಾ ಘ್ರಾತ್ವಾ ಚ
ಯೋನರಃ।
ನಹೃಷ್ಯತಿ ಗ್ಲಾಯತಿ ವಾ ಸ ವಿಜ್ಞೇಯೋ ಜಿತೇಂದ್ರಿಯಃ ॥೬॥

ನಾ ಪೃಷ್ಟಃ ಕಸ್ಯಚಿದ್ಬ್ರೂಯಾನ್ನ ಚಾನ್ಯಾಯೇನಪೃಚ್ಛತಃ।
ಜಾನನ್ನಪಿ ಹಿ ಮೇಧಾವೀ ಜಡವಲ್ಲೋಕ ಆಚರೇತ್ ॥೭॥

ವಿತ್ತಂ ಬಂಧುರ್ವಯಃ ಕರ್ಮ ವಿದ್ಯಾಭವತಿ ಪಂಚಮೀ।
ಏತಾನಿ ಮಾನ್ಯಸ್ಥಾನಾನಿ ಗರೀಯೋ ಯದ್ಯದುತ್ತರಂ ॥೮॥

ಅಜ್ಞೋಭವತಿ ವೈ ಬಾಲಃ ಪಿತಾಭವತಿ ಮಂತ್ರದಃ।
ಅಜ್ಞಂ ಹಿ ಬಾಲಮಿತ್ಯಾಹುಃ ಪಿತೇತ್ಯೇವತು ಮಂತ್ರದಂ ॥೯॥

ನ ಹಾಯನೈರ್ನ ಪಲಿತೈರ್ನ ವಿತ್ತೇನ ನ ಬಂಧುಭಿಃ।
ಋಷಯಶ್ಚಕ್ರಿರೇಧರ್ಮಂ ಯೋಽನೂಚಾನಃ ಸ ನೋ
ಮಹಾನ್ ॥೧೦॥

ವಿಪ್ರಾಣಾಂ ಜ್ಞಾನತೋ ಜ್ಯೇಷ್ಠ್ಯಂ ಕ್ಷತ್ರಿಯಾಣಾಂತು
ವೀರ್ಯತಃ।
ವೈಶ್ಯಾನಾಂ ಧಾನ್ಯಧನತಃ ಶೂದ್ರಾಣಾಮೇವ ಜನ್ಮತಃ ॥೧೧॥

ನ ತೇನ ವೃದ್ಧೋಭವತಿ ಯೇನಾಸ್ಯ ಪಲಿತಂ ಶಿರಃ।
ಯೋ ವೈ ಯುವಾಪ್ಯಧೀಯಾನಸ್ತಂದೇವಾಃ ಸ್ಥವಿರಂ ವಿದುಃ॥

ಯಥಾ ಕಾಷ್ಠಮಯೋಹಸ್ತೀ ಯಥಾ ಚರ್ಮಮಯೋಮೃಗಃ
ಯಶ್ಚ ವಿಪ್ರೋಽನಧೀಯಾನಸ್ತ್ರಯಸ್ತೇ ನಾಮ ಬಿಭ್ರತಿ ॥೧೩॥

ಅಹಿಂಸಯೈವ ಭೂತಾನಾಂ ಕಾರ್ಯಂ ಶ್ರೇಯೋಽನು
ಶಾಸನಂ।
ವಾಕ್ಚೈವಮಧುರಾ ಶ್ಲಕ್ಷ್ಣಾ ಪ್ರಯೋಜ್ಯಾಧರ್ಮಮಿಚ್ಛತಾ ॥

ಮನುಷ್ಯನ ಮುಖ್ಯವಾದ ಆಚಾರವೇನೆಂದರೆ :—ಚಿತ್ತವನ್ನು ಸೆಳೆದು ವಿಷಯಗಳಲ್ಲಿ ಪ್ರವೃತ್ತಗೊಳಿಸುವ ಇಂದ್ರಿಯಗಳನ್ನು ತಡೆಯಲು ಪ್ರಯತ್ನಿಸಬೇಕು. ಸಾರಥಿಯು ಕುದುರೆಗಳನ್ನು ತಡೆದು ಶುದ್ಧವಾದ ಮಾರ್ಗದಲ್ಲಿ ನಡೆಸುವಂತೆ, ಇವುಗಳನ್ನು ತನ್ನ ವಶದಲ್ಲಿಟ್ಟು ಕೊಂಡು, ಅಧರ್ಮಮಾರ್ಗದಿಂದ ದೂರವಿಟ್ಟು, ಧರ್ಮಮಾರ್ಗದಲ್ಲಿಯೇ ಯಾವಾಗಲೂ ನಡೆಯಬೇಕು. ॥೧॥ ಏಕೆಂದರೆ, ಇಂದ್ರಿಯಗಳನ್ನು ವಿಷಯಭೋಗಗಳಲ್ಲಿಯೂ, ಅಧರ್ಮದಲ್ಲಿಯೂ ನಡೆಸುವುದರಿಂದ ಮಾನವನು ನಿಜವಾಗಿಯೂ ದೋಷಿಯಾಗುತ್ತಾನೆ. ಮತ್ತು ಅದನ್ನು ಜಯಿಸಿ, ಧರ್ಮದಲ್ಲಿ ನಡೆಸಿದಾಗಲೇ ಇಷ್ಟಸಿದ್ಧಿಯನ್ನು ಹೊಂದುತ್ತಾನೆ. ॥೨॥ ಬೆಂಕಿಯಲ್ಲಿ ಕಟ್ಟಿಗೆಯನ್ನೂ, ತುಪ್ಪವನ್ನೂ ಹಾಕುವುದರಿಂದ ಅದು ವೃದ್ಧಿಯಾಗುತ್ತಾ ಹೋಗುವಂತೆ ಕಾಮೋಪಭೋಗದಿಂದ ಕಾಮವು ಎಂದಿಗೂ ಶಾಂತವಾಗದೆ, ಹೆಚ್ಚುತ್ತಲೇ ಹೋಗುತ್ತದೆ ಎಂಬುದು ನಿಶ್ಚಯ. ಆದುದರಿಂದ ಮನುಷ್ಯನು ಎಂದೂ ವಿಷಯಾಸಕ್ತನಾಗಬಾರದು. ॥೩॥ ಇಂದ್ರಿಯಗಳನ್ನು ನಿಗ್ರಹಿಸಿದ ಪುರುಷನನ್ನು 'ವಿಪ್ರದುಷ್ಟ'ನೆನ್ನುತ್ತಾರೆ. ಅವನು ಮಾಡಿದ ವೇದ ಜ್ಞಾನ, ತ್ಯಾಗ, ನಿಯಮ, ಧರ್ಮಾಚರಣೆ—ಯಾವುದೂ ಸಿದ್ಧಿಸುವುದಿಲ್ಲ. ಆದರೆ, ಇವೆಲ್ಲವೂ ಜಿತೇಂದ್ರಿಯನಾದ ಧರ್ಮಾತ್ಮನಿಗೆ ಸಿದ್ಧಿಸುತ್ತದೆ. ॥೪॥ ಆದುದರಿಂದ, ಪಂಚ ಕರ್ಮೇಂದ್ರಿಯಗಳನ್ನೂ, ಪಂಚ ಜ್ಞಾನೇಂದ್ರಿಯಗಳನ್ನೂ, ಹನ್ನೊಂದನೆಯದಾದ ಮನಸ್ಸನ್ನೂ ವಶಪಡಿಸಿಕೊಂಡು, ಯುಕ್ತವಾದ ಆಹಾರ ವಿಹಾರಗಳ ಸಂಯೋಗದಿಂದ ಶರೀರವನ್ನು ಕಾಪಾಡಿಕೊಳ್ಳುತ್ತಾ ಪದಾರ್ಥಗಳನ್ನು ಸಾಧಿಸಬೇಕು. ॥೫॥ ಸ್ತುತಿಯನ್ನು ಕೇಳಿ ಸಂತೋಷವನ್ನೂ, ನಿಂದೆಯನ್ನು ಕೇಳಿ ವ್ಯಥೆಯನ್ನೂ, ಉತ್ತಮಸ್ಪರ್ಶಮಾಡಿ ಸಂತೋಷವನ್ನೂ, ದುಷ್ಟಸ್ಪರ್ಶದಿಂದ ದುಃಖವನ್ನೂ, ಸುಂದರ ರೂಪವನ್ನು ಕಂಡು ಪ್ರಸನ್ನತೆಯನ್ನೂ, ಕುರೂಪವನ್ನು ಕಂಡು ಅಪ್ರಸನ್ನತೆಯನ್ನೂ, ಉತ್ತಮ ಭೋಜನ ಮಾಡಿ ಆನಂದವನ್ನೂ, ನಿಕೃಷ್ಟಭೋಜನಮಾಡಿ ದುಃಖವನ್ನೂ, ಸುಗಂಧದಲ್ಲಿ ರುಚಿಯನ್ನೂ, ದುರ್ಗಂಧದಲ್ಲಿ ಅರುಚಿಯನ್ನೂ ಹೊಂದದಿರುವವನನ್ನು ಜಿತೇಂದ್ರಿಯನೆನ್ನುತ್ತಾರೆ. ॥ ೬ ॥ ಪ್ರಶ್ನಿಸದವನಿಗೂ,

ಕಪಟದಿಂದ ಪ್ರಶ್ನಿಸುವ ಅನ್ಯಾಯ ಪ್ರಶ್ನಕರ್ತನಿಗೂ, ಎಂದೂ ಉತ್ತರ ಹೇಳಬಾರದು. ಬುದ್ಧಿವಂತನು ಅಂತಹವರ ಮುಂದೆ ಮೂಕನಂತೆ ಸುಮ್ಮನೆ ಕುಳಿತಿರಬೇಕು. ನಿಷ್ಕಪಟರಿಗೂ, ತಿಳಿಯಬಯಸುವವರಿಗೂ, ಪ್ರಶ್ನಿಸದಿದ್ದರೂ ಸಹ ಉಪದೇಶಿಸಬೇಕು. ॥ ೭ ॥ ಮೊದಲನೆಯದು ಧನ, ಎರಡನೆಯದು ಬಂಧು, ಕುಟುಂಬ ಅಥವಾ ಕುಲ, ದೂರನೆಯದು ವಯಸ್ಸು, ನಾಲ್ಕನೆಯದು ಉತ್ತಮ ಕರ್ಮ ಮತ್ತು ಐದನೆಯದು ಶ್ರೇಷ್ಠ ವಿದ್ಯೆ; ಇವು ಐದೂ ಗೌರವಾಸ್ಪದವಾದ ಸ್ಥಾನಗಳಾಗಿರುತ್ತವೆ. ಆದರೆ, ಧನಕ್ಕಿಂತ ಉತ್ತಮ ಬಂಧುವೂ, ಬಂಧುವಿಗಿಂತ ಹೆಚ್ಚು ವಯಸ್ಸೂ, ವಯಸ್ಸಿಗಿಂತ ಉತ್ತಮ ಕರ್ಮವೂ, ಕರ್ಮಕ್ಕಿಂತ ಪವಿತ್ರ ವಿದ್ಯೆಯೂ, ಉತ್ತರೋತ್ತರವಾಗಿ ಹೆಚ್ಚು ಗೌರವಾಸ್ಪದವಾಗಿರುತ್ತವೆ. ॥೮॥ ಏಕೆಂದರೆ, ನೂರುವರ್ಷದವನೇ ಆಗಿರಲಿ, ವಿದ್ಯಾವಿಜ್ಞಾನ ವಿಹೀನನಾಗಿದ್ದರೆ, ಅವನನ್ನು ಬಾಲಕನೆಂದೂ, ವಿದ್ಯಾವಿಜ್ಞಾನ ದಾತೃವಾದ ಬಾಲಕನನ್ನು ಸಹ ವೃದ್ಧನೆಂದೂ ಅಂಗೀಕರಿಸಬೇಕು. ಏಕೆಂದರೆ, ಸಕಲಶಾಸ್ತ್ರಗಳೂ, ವಿದ್ವಾಂಸರೂ, ಅಜ್ಞಾನಿಯನ್ನು ಬಾಲಕನೆಂದೂ, ಜ್ಞಾನಿಯನ್ನು ತಂದೆಯೆಂದೂ ಹೇಳುತ್ತಾರೆ. ॥ ೯ ॥ ಅಧಿಕವರ್ಷಗಳು ಕಳೆಯುವುದರಿಂದ. ತಲೆಗೂದಲು ನರೆತುಹೋಗುವುದರಿಂದ, ಅಧಿಕಸಂಪತ್ತಿನಿಂದ ಮತ್ತು ದೊಡ್ಡ ಸಂಸಾರವಿರುವುದರಿಂದ, ವೃದ್ಧನಾಗುವುದಿಲ್ಲ. ಆದರೆ, ನಮ್ಮ ನಡುವೆ ವಿದ್ಯಾವಿಜ್ಞಾನಗಳಲ್ಲಿ ಶ್ರೇಷ್ಠತೆ ಪಡೆದಿರುವವನೇ ವೃದ್ಧಪುರುಷನೆನಿಸುತ್ತಾನೆ; ಎಂದು ಎಲ್ಲಾ ಋಷಿಗಳೂ, ಮಹಾತ್ಮರೂ ನಿಶ್ಚಯಿಸಿರುತ್ತಾರೆ. ॥೧೦॥ ಬ್ರಾಹ್ಮಣನು ಜ್ಞಾನದಿಂದಲೂ, ಕ್ಷತ್ರಿಯನು ಬಲಪರಾಕ್ರಮಗಳಿಂದಲೂ, ವೈಶ್ಯನು ಧನಧಾನ್ಯಗಳಿಂದಲೂ, ಶೂದ್ರನು ಜನ್ಮ ಅಂದರೆ, ಅಧಿಕ ವಯಸ್ಸಿನಿಂದಲೂ, ವೃದ್ಧರಾಗುತ್ತಾರೆ ॥೧೧॥ ತಲೆಗೂದಲು ನರೆಯುವುದರಿಂದ ವೃದ್ಧನಾಗನು; ಆದರೆ, ವಿದ್ಯಾವಂತನಾದ ಯುವಕನನ್ನೇ ವಿದ್ವಾಂಸರು ದೊಡ್ಡವನೆಂದು ತಿಳಿಯುತ್ತಾರೆ. ॥೧೨॥ ವಿದ್ಯೆಯನ್ನೋದದವನು ಮರದ ಆನೆಯಂತೆಯೂ, ಚರ್ಮದ ಮೃಗದಂತೆಯೂ ಇರುತ್ತಾನೆ. ಅವಿದ್ವಾಂಸನಾದ ಮನುಷ್ಯನು ನಾಮಮಾತ್ರಕ್ಕೆ ಮನುಷ್ಯನೆನಿಸುತ್ತಾನೆ. ॥೧೩॥ ಆದುದರಿಂದ ವಿದ್ಯೆಯನ್ನು

ಕಲಿತು ವಿದ್ವಾಂಸನೂ, ಧರ್ಮಾತ್ಮನೂ, ಆಗಿ; ನಿರ್ವೈರಭಾವದಿಂದ ಸರ್ವಪ್ರಾಣಿಗಳ ಹಿತದ ಉಪದೇಶಮಾಡುತ್ತಿರಬೇಕು. ಮತ್ತು ಉಪದೇಶದಲ್ಲಿ ಮಧುರವೂ, ಕೋಮಲವೂ ಆದಮಾತುಗಳನ್ನು ಉಪಯೋಗಿಸಬೇಕು. ಸತ್ಯೋಪದೇಶದಿಂದ ಧರ್ಮವನ್ನು ವೃದ್ಧಿಗೊಳಿಸಿ, ಅಧರ್ಮವನ್ನು ನಾಶಗೊಳಿಸುವ ಪುರುಷರು ಧನ್ಯರು. ॥೧೪॥ ಸ್ನಾನ, ವಸ್ತ್ರ, ಅನ್ನ, ಪಾನ, ಸ್ಥಳ—ಎಲ್ಲವನ್ನೂ ನಿತ್ಯವೂ ಜೊಕ್ಕಟವಾಗಿಟ್ಟು ಕೊಂಡಿರಬೇಕು. ಏಕೆಂದರೆ, ಇವು ಶುದ್ಧವಾಗಿದ್ದಲ್ಲಿ, ಚಿತ್ತಶುದ್ಧಿಯೂ, ಆರೋಗ್ಯವೂ ಉಂಟಾಗಿ, ಪುರುಷಾರ್ಥವು ಹೆಚ್ಚುತ್ತದೆ. ಮಲವೂ ದುರ್ಗಂಧವೂ ದೂರವಾಗುವಷ್ಟು ಮಾತ್ರ ಶುದ್ಧತೆಯನ್ನಿಟ್ಟುಕೊಳ್ಳಬೇಕು.

ಆಚಾರಃ ಪ್ರಥಮೋ ಧರ್ಮಃ ಶ್ರುತ್ಯುಕ್ತಃ ಸ್ಮಾರ್ತ ಏವ ಚ ।

[ಮನು. ಅ- ೧, ಶ್ಲೋ. ೧೦೮]

ಸತ್ಯಭಾಷಣ ಮೊದಲಾದ ಕರ್ಮಗಳನ್ನಾಚರಿಸುವುದೇ ಶ್ರುತಿ, ಸ್ಮೃತಿಗಳಲ್ಲಿ ಹೇಳಿರುವ ಆಚಾರವಾಗಿದೆ.

ಮಾ ನೋ ವಧೀಃ ಪಿತರಂ ಮೋತ ಮಾತರಂ ।

[ಯಜು. ೧೬-೧೫]

ಆಚಾರ್ಯೋ ಬ್ರಹ್ಮಚರ್ಯೇಣ ಬ್ರಹ್ಮಚಾರಿಣಮಿಚ್ಛತೇ ॥

[ಅಥರ್ವ. ಕಾ. ೧೧; ವ. ೧೫; ಮಂ. ೧೭]

ಮಾತೃದೇವೋಭವ, ಪಿತೃದೇವೋಭವ, ಆಚಾರ್ಯದೇವೋಭವ ಅತಿಥಿದೇವೋಭವ ॥

[ತೈತ್ತರೀಯ ಆರಣ್ಯಕ ಪ್ರ. ೭, ಅನು. ೧೧]

ತಾಯಿ, ತಂದೆ, ಆಚಾರ್ಯ ಮತ್ತು ಅತಿಥಿ—ಇವರ ಸೇವೆ ಮಾಡುವುದಕ್ಕೆ ದೇವಪೂಜೆಯೆಂದು ಹೆಸರು. ಮತ್ತು ಲೋಕೋಪಕಾರಕವಾದ ಕರ್ಮಗಳನ್ನು ಆಚರಿಸುವುದು, ಮತ್ತು ಹಾನಿಕಾರಕವಾದುದನ್ನು ಬಿಟ್ಟುಬಿಡುವುದೇ ಮಾನವನ ಮುಖ್ಯ ಕರ್ತವ್ಯಕರ್ಮವಾಗಿರುತ್ತದೆ. ಎಂದಿಗೂ, ನಾಸ್ತಿಕ, ವಿಷಯಲಂಪಟ, ವಿಶ್ವಾಸಘಾತಕ,

ಮಿಥ್ಯಾವಾದಿ, ಸ್ವಾರ್ಥಿ, ಕಪಟಿ, ಛಲವಂತ ಮೊದಲಾದ ದುಷ್ಟ ಪುರುಷರೊಂವಿಗೆ ಸಂಗ ಬೆಳಸಬಾರದು. ಸತ್ಯವಾದಿಗಳೂ, ಧರ್ಮಾತ್ಮರೂ, ಪರೋಪಕಾರಪ್ರಿಯರೂ ಆದ, ಆಪ್ತಪುರುಷರ ಸಂಗವನ್ನು ಯಾವಾಗಲೂ ಮಾಡುವುದಕ್ಕೆ ಶ್ರೇಷ್ಠಾಚಾರವೆಂದು ಹೆಸರು.

ಪ್ರಶ್ನೆ:—ಆರ್ಯಾವರ್ತದೇಶದಿಂದ ಬೇರೆಯಾದ ಇತರ ದೇಶಗಳಿಗೆ ಹೋಗುವುದರಿಂದ ಆರ್ಯಾವರ್ತದೇಶಗಳ ಆಚಾರವು ನಷ್ಟವಾಗಿ ಹೋಗುವುದೋ ಇಲ್ಲವೋ?

ಉತ್ತರ:—ಈ ಮಾತು ಸುಳ್ಳು ಏಕೆಂದರೆ—ಒಳಗೂ, ಹೊರಗೂ, ಪವಿತ್ರತೆಯಿಟ್ಟುಕೊಳ್ಳುವುದು, ಸತ್ಯಭಾಷಣ ಮೊದಲಾದ ಆಚರಣೆ ಇವನ್ನು ಎಲ್ಲಿದ್ದು ಮಾಡಿದರೂ ಆಚಾರಭ್ರಷ್ಟನೂ, ಧರ್ಮಭ್ರಷ್ಟನೂ ಆಗುವುದಿಲ್ಲ. ಮತ್ತು ಆರ್ಯಾವರ್ತದೇಶದಲ್ಲಿದ್ದರೂ, ದುರಾಚಾರಗಳನ್ನು ಮಾಡುವವನೇ ಧರ್ಮಭ್ರಷ್ಟ ಮತ್ತು ಆಚಾರ ಭ್ರಷ್ಟನೆನಿಸಿಕೊಳ್ಳುವನು. ನೀವು ಹೇಳುವಂತೆಯೇ ಆಗಿದ್ದರೆ,

ಮೇರೋರ್ಹರೇಶ್ಚ ದ್ವೇ ವರ್ಷೇ ವರ್ಷಂ ಹೈಮವತಂ ತತಃ।
ಕ್ರಮೇಣೈವ ವ್ಯತಿಕ್ರಮ್ಯ ಭಾರತಂ ವರ್ಷಮಾಸದತ್ ॥
ಸ ದೇಶಾನ್ ವಿವಿಧಾನ್ ಪಶ್ಯಂಶ್ಚೀನಹೂಣನಿಷೇವಿತಾನ್ ॥

[ಅ. ೩೨೭]

ಈ ಶ್ಲೋಕಗಳು ಮಹಾಭಾರತದ ಶಾಂತಿಪರ್ವದ ಮೋಕ್ಷಧರ್ಮದ ವ್ಯಾಸ ಶುಕ ಸಂವಾದದಲ್ಲಿದೆ. ಅಂದರೆ, ಒಂದು ಸಾರಿ ವ್ಯಾಸರು ತಮ್ಮ ಮಗನಾದ ಶುಕ ಮತ್ತು ಶಿಷ್ಯರ ಸಹಿತ, ಪಾತಾಳದಲ್ಲಿ ಅಂದರೆ, ಇಂದು 'ಅಮೆರಿಕಾ' ಎಂದು ಕರೆಯುವ ದೇಶದಲ್ಲಿ ವಾಸಿಸುತ್ತಿದ್ದರು. ಶುಕಾಚಾರ್ಯರು ತಂದೆಗೆ "ಆತ್ಮ ವಿದ್ಯೆಯು ಇಷ್ಟೇ ಇದೆಯೋ, ಆಥವಾ ಇನ್ನೂ ಹೆಚ್ಚಿದೆಯೋ?" ಎಂದು ಒಂದು ಪ್ರಶ್ನೆ ಹಾಕಿದರು ವ್ಯಾಸರು ತಿಳಿದೂ ಸಹ ಆ ಪ್ರಶ್ನೆಗೆ ಪ್ರತ್ಯುತ್ತರ ಕೊಡಲಿಲ್ಲ; ಏಕೆಂದರೆ ಆ ವಿಷಯದ ಉಪದೇಶ ಮಾಡಿದ್ದರು. ಬೇರೆಯವರ ಸಾಕ್ಷಿಯ ಸಲುವಾಗಿ ಅವರು—"ಪುತ್ರನೇ! ನೀನು ಮಿಥಿಲಾಪುರಿಗೆ ಹೋಗಿ, ಜನಕರಾಜನಲ್ಲಿ ಇದೇ ಪ್ರಶ್ನೆಮಾಡು.

ಆತನು ಇದಕ್ಕೆ ಸಮುಚಿತವಾದ ಉತ್ತರವನ್ನು ಕೊಡುವನು. '' ಎಂದು ತಮ್ಮ ಪುತ್ರರಾದ ಶುಕರಿಗೆ ಹೇಳಿದರು. ತಂದೆಯ ಮಾತನ್ನು ಕೇಳಿ ಶುಕಾಚಾರ್ಯರು ಪಾತಾಳದಿಂದ ಮಿಥಿಲಾಪುರಿಯ ಕಡೆಗೆ ಹೊರಟರು. ಮೊದಲು, ಮೇರು ಅಂದರೆ ಹಿಮಾಲಯಕ್ಕೆ ಈಶಾನ್ಯ, ಉತ್ತರ ಮತ್ತು ವಾಯವ್ಯ ಮೂಲೆಗಳಲ್ಲಿರುವ ದೇಶಗಳಿಗೆ '' ಹರಿವರ್ಷ ''ವೆಂದು ಹೆಸರಿತ್ತು. ಅಂದರೆ, ಕೋತಿಗೆ ' ಹರಿ ' ಎಂದು ಹೇಳುತ್ತಾರೆ. ಆ ದೇಶದ ಜನರು ಇಂದಿಗೂ ಸಹ ಕೆಂಪು ಮುಖದವರೂ, ವಾನರನಂತೆ ಬೂದುಗಣ್ಣಿನವರೂ ಆಗಿರುತ್ತಾರೆ. ಇಂದು ಯಾವ ದೇಶಗಳಿಗೆ '' ಯೂರೋಪ್ '' ಎಂದು ಹೆಸರಿದೆಯೋ, ಅದನ್ನೇ ಸಂಸ್ಕೃತದಲ್ಲಿ '' ಹರಿವರ್ಷ ''ವೆನ್ನುತ್ತಿದ್ದರು. ಆ ದೇಶಗಳನ್ನು ನೋಡುತ್ತಾ, ' ಹೂಣ, ಯಹೂದೀ ' ಎಂದೂ ಸಹ ಯಾವುವನ್ನು ಕರೆಯುತ್ತಾರೋ, ಆ ದೇಶಗಳನ್ನು ನೋಡಿಕೊಂಡು ಚೀಣಕ್ಕೆ ಬಂದರು. ಚೀಣದಿಂದ ಹಿಮಾಲಯಕ್ಕೂ, ಹಿಮಾಲಯದಿಂದ ಮಿಥಿಲಾಪುರಿಗೂ ಬಂದರು. ಮತ್ತು ಶ್ರೀಕೃಷ್ಣನೂ, ಅರ್ಜುನನೂ '' ಅಗ್ನಿಯಾನ ನೌಕೆ '' ಎಂದು ಕರೆಯಲ್ಪಡುವ '' ಅಶ್ವತರಿ ''ಯಲ್ಲಿ ಕುಳಿತು, ಪಾತಾಳಕ್ಕೆ ಹೋಗಿ, ಮಹಾರಾಜಾ ಯುಧಿಷ್ಠಿರನ ಯಜ್ಞಕ್ಕಾಗಿ ಉದ್ದಾಲಕ ಋಷಿಯನ್ನು ಕರೆತಂದಿದ್ದರು. '' ಕಂದಹಾರ್ '' ಎಂದು ಕರೆಯಲ್ಪಡುವ ಗಾಂಧಾರದ ರಾಜಪುತ್ರಿಯೊಡನೆ ಧೃತರಾಷ್ಟ್ರನ ಮದುವೆಯಾಗಿತ್ತು. ಪಾಂಡುವಿನ ಹೆಂಡತಿ ಮಾದ್ರಿಯು ಈರಾನ್ ರಾಜನ ಮಗಳಾಗಿದ್ದಳು. ಮತ್ತು ' ಅಮೇರಿಕಾ ' ಎಂದು ಕರೆಯಲ್ಪಡುವ ಪಾತಾಳದಲ್ಲಿ, ಅಲ್ಲಿನ ರಾಜನ ಮಗಳಾದ ಉಲೂಪಿಯೊಂದಿಗೆ ಅರ್ಜುನನ ಮದುವೆಯಾಗಿತ್ತು. ದೇಶದೇಶಾಂತರಗಳಿಗೂ, ದ್ವೀಪ ದ್ವೀಪಾಂತರಗಳಿಗೂ ಹೋಗದೇ ಇದ್ದಿದ್ದರೆ, ಇವೆಲ್ಲಾ ಹೇಗಾಗ ಬಲ್ಲವಾಗಿದ್ದುವು? ಮನುಸ್ಮೃತಿಯಲ್ಲಿ, ಸಮುದ್ರದ ಮೇಲೆ ಹೋಗುವ ಹಡಗುಗಳ ಮೇಲೆ ತೆರಿಗೆ ಹಾಕಬೇಕೆಂದು ಬರೆದಿರುವುದೂ ಕೂಡ ಆರ್ಯಾವರ್ತದಿಂದ ದ್ವೀಪಾಂತರಗಳಿಗೆ ಹೋಗುತ್ತಿದ್ದ ಕಾರಣದಿಂದಲೇ ಆಗಿದೆ. ಮತ್ತು ಯುಧಿಷ್ಠಿರ ಮಹಾರಾಜನು ರಾಜಸೂಯ ಯಜ್ಞವನ್ನು ಮಾಡಿದಾಗ, ಅದಕ್ಕೆ ಸಮಸ್ತ ಭೂಮಂಡಲದ ರಾಜರನ್ನೂ

ಕರಿಯುವುದಕ್ಕಾಗಿ ಆಹ್ವಾನ ಕೊಡಲು, ಭೀಮ, ಅರ್ಜುನ, ನಕುಲ ಮತ್ತು ಸಹದೇವರು ನಾಲ್ಕು ದಿಕ್ಕುಗಳಿಗೂ ಹೋಗಿದ್ದರು. ದ್ರೌಪದಿಯನ್ನು ಒಪ್ಪುತ್ತಿದ್ದ ಪಕ್ಷದಲ್ಲಿ ಎಂದಿಗೂ ಹೋಗುತ್ತಿರಲಿಲ್ಲ. ಹೀಗೆ ಮೊದಲು ಆರ್ಯಾವರ್ತ ದೇಶೀಯ ಜನರು ವ್ಯಾಪಾರ, ರಾಜಕಾರ್ಯ ಮತ್ತು ಪರ್ಯಟನಕ್ಕಾಗಿ ಸಮಸ್ತ ಭೂಮಂಡಲದಲ್ಲಿಯೂ ಸಂಚರಿಸುತ್ತಿದ್ದರು. ಮತ್ತು ಇಂದು ಕಂಡುಬರುವ ಮಡಿ, ಮೈಲಿಗೆಯ ಮತ್ತು ಧರ್ಮನಷ್ಟವಾಗುವ ಸಂಶಯವು ಕೇವಲ ಮೂರ್ಖರ ದುಷ್ಪ್ರೇರಣೆ ಮತ್ತು ಅಜ್ಞಾನ-ವೃದ್ಧಿಯಿಂದ ಉಂಟಾಗಿರುತ್ತದೆ. ಯಾವ ಮಾನವರು ದೇಶದೇಶಾಂತರಗಳಿಗೂ, ದ್ವೀಪದ್ವೀಪಾಂತರಗಳಿಗೂ ಹೋಗಿಬರಲು ಶಂಕಿಸುವುದಿಲ್ಲವೋ, ಅವರು ದೇಶದೇಶಾಂತರಗಳ ಅನೇಕ ಬಗೆಯ ಮಾನವರ ಸಂಪರ್ಕದಿಂದಲೂ, ರೀತಿ ನೀತಿಗಳ ಅವಲೋಕನದಿಂದಲೂ, ತಮ್ಮ ರಾಜ್ಯ ಮತ್ತು ವ್ಯವಹಾರಗಳನ್ನು ವರ್ಧಿಸುವುದರಿಂದಲೂ, ನಿರ್ಭಯರೂ, ಶೂರ-ವೀರರೂ ಆಗಲಾರಂಭಿಸುತ್ತಾರೆ ಮತ್ತು ಒಳ್ಳೆಯ ವ್ಯವಹಾರಗಳ ಗ್ರಹಣದಲಿಯೂ, ಕೆಟ್ಟದನ್ನು ಬಿಡುವುದರಲ್ಲಿಯೂ, ತತ್ಪರರಾಗಿ ಮಹದೈಶ್ವರ್ಯವನ್ನು ಗಳಿಸುತ್ತಾರೆ. ಮಹಾಭ್ರಷ್ಟರೂ, ಮ್ಲೇಚ್ಛಕುಲೋತ್ಪನ್ನರೂ ಆದ ಸೂಳೆಯರೇ ಮೊದಲಾದವರ ಸಮಾಗಮದಿಂದ ಆಚಾರಭ್ರಷ್ಟರೂ, ಧರ್ಮಹೀನರೂ ಆಗುವುದಿಲ್ಲ, ಆದರೆ ದೇಶದೇಶಾಂತರಗಳ ಉತ್ತಮಪುರುಷರ ಸಂಪರ್ಕದಲ್ಲಿ ಮೈಲಿಗೆ ಮತ್ತು ದೋಷವನ್ನೆಣಿಸುತ್ತಾರೆ!! ಇದು ಕೇವಲು ಮೂರ್ಖತನದ ಮಾತಲ್ಲದಿದ್ದರೆ ಮತ್ತೇನು? ಹೌದು. ಇಷ್ಟೇನೋ ಕಾರಣವಿದೆ :— ಮಾಂಸಭಕ್ಷಣೆ ಮತ್ತು ಮದ್ಯಪಾನ ಮಾಡುವ ಜನರ ಶರೀರಗಳು ಮತ್ತು ವೀರ್ಯ ಮೊದಲಾದ ಧಾತುಗಳೂ ಸಹ ದುರ್ಗಂಧ ಮೊದಲಾದುವುಗಳಿಂದ ದೂಷಿತವಾಗಿರುತ್ತವೆ. ಆದುದರಿಂದ, ಅವರ ಸಂಪರ್ಕ ಮಾಡುವುದರಿಂದ ಆರ್ಯರಿಗೂ ಸಹ ಈ ದುರ್ಲಕ್ಷಣಗಳು ಅಂಟಿಕೊಳ್ಳಬಹುದು—ಎಂಬುದೇನೋ ಸರಿ. ಆದರೆ ಇವರಿಂದ ವ್ಯವಹಾರವನ್ನೂ, ಗುಣಗಳನ್ನೂ ಗ್ರಹಿಸುವುದರಲ್ಲಿ ಯಾವ ದೋಷವೂ, ಅಥವಾ ಪಾಪವೂ ಇಲ್ಲ. ಇವರ ಮದ್ಯಪಾನಾದಿ ದೋಷಗಳನ್ನು ಬಿಟ್ಟು, ಗುಣಗಳನ್ನು ಗ್ರಹಿಸಿದರೆ ಸ್ವಲ್ಪವೂ ಹಾನಿಯಿಲ್ಲ. ಮೂರ್ಖಜನರು ಇವರ ಸ್ಪರ್ಶ

ಮತ್ತು ದರ್ಶನ ಮಾಡುವುದರಿಂದಲೂ ಸಹ ಪಾಪವನ್ನೆಣಿಸುತ್ತಾರೆ; ಆದುದರಿಂದಲೇ ಅವರೊಂದಿಗೆ ಎಂದೂ ಯುದ್ಧ ಮಾಡಲಾರರು. ಏಕೆಂದರೆ—ಯುದ್ಧದಲ್ಲಿ ಅವರನ್ನು ನೋಡುವುದೂ, ಮುಟ್ಟುವುದೂ ಆವಶ್ಯಕ. ಸಜ್ಜನರಿಗೆ ರಾಗ, ದ್ವೇಷ, ಅನ್ಯಾಯ, ಮಿಥ್ಯಾಭಾಷಣ ಮೊದಲಾದ ದೋಷಗಳನ್ನು ಬಿಟ್ಟು, ನಿರ್ವೈರತ್ವ, ಪ್ರೀತಿ, ಪರೋಪಕಾರ, ಸೌಜನ್ಯ ಮೊದಲಾದುವನ್ನು ಧರಿಸುವುದು ಉತ್ತಮಾಚಾರವಾಗಿರುತ್ತದೆ. ಮತ್ತು "ಧರ್ಮವು ನಮ್ಮ ಆತ್ಮ ಮತ್ತು ಕರ್ತವ್ಯದೊಂದಿಗಿದೆ. ನಾವು ಒಳ್ಳೆಯ ಕೆಲಸಗಳನ್ನು ಮಾಡುವಾಗ, ದೇಶ ದೇಶಾಂತರಕ್ಕೂ, ದ್ವೀಪದ್ವೀಪಾಂತರಕ್ಕೂ ಹೋಗುವುದರಲ್ಲಿ ಏನೇನೂ ದೋಷ ತಗಲಲಾರದು. ದೋಷಗಳಾದರೋ ಪಾಪಕರ್ಮಗಳನ್ನು ಮಾಡುವುದರಲ್ಲಿ ತಗಲುತ್ತವೆ" ಎಂಬುದನ್ನೂ ಕೂಡ ತಿಳಿದುಕೊಳ್ಳಬೇಕು. ಹೌದು, ನಮಗೆ ಯಾರೂ ಅಸತ್ಯನಿರ್ಣಯ ಮಾಡಿಸಲಾಗದಂತೆ, ವೇದೋಕ್ತಧರ್ಮದ ನಿರ್ಣಯವನ್ನೂ, ಪಾಷಂಡಮತದ ಖಂಡನವನ್ನೂ ಮಾಡುವುದನ್ನು ಅಗತ್ಯವಾಗಿ ಕಲಿತುಕೊಳ್ಳಬೇಕು. ದೇಶದೇಶಾಂತರಗಳಲ್ಲಿಯೂ, ದ್ವೀಪದ್ವೀಪಾಂತರಗಳಲ್ಲಿಯೂ, ರಾಜ್ಯ ಮತ್ತು ವ್ಯಾಪಾರ ಮಾಡದೆ, ಎಂದಾದರೂ ಸ್ವದೇಶೋನ್ನತಿಯಾಗಬಲ್ಲುದೇ? ಸ್ವದೇಶೀಯರು ಸ್ವದೇಶದಲ್ಲಿ ಮಾತ್ರ ವ್ಯವಹರಿಸುತ್ತಿದ್ದು, ಪರದೇಶೀಯರು ಸ್ವದೇಶದಲ್ಲಿ ವ್ಯವಹಾರಗಳನ್ನೂ ರಾಜ್ಯಭಾರವನ್ನೂ ಮಾಡಿದರೆ, ದಾರಿದ್ರ್ಯ ಮತ್ತು ದುಃಖವನ್ನು ಬಿಟ್ಟು ಮತ್ತೇನೂ ಆಗಲಾರದು. ಪಾಷಂಡಿಗಳು "ನಾವು ಇವರಿಗೆ ವಿದ್ಯೆ ಕಲಿಸಿದರೆ ಮತ್ತು ದೇಶದೇಶಾಂತರಗಳಿಗೆ ತೆರಳಲು ಆಜ್ಞೆಯಿತ್ತರೆ, ಇವರು ಬುದ್ಧಿವಂತರಾಗಿ ನಮ್ಮ ಪಾಷಂಡಜಾಲದಲ್ಲಿ ಬೀಳದಿರುವುದರಿಂದ, ನಮ್ಮ ಪ್ರತಿಷ್ಠೆಯೂ, ಜೀವನವೂ ನಷ್ಟವಾಗಿಹೋಗುವುವು" ಎಂದು ತಿಳಿಯುತ್ತಾರೆ. ಅದೇ ಕಾರಣದಿಂದ ಜನರು ಬೇರೆ ದೇಶಗಳಿಗೆ ಹೋಗಲಾಗದಂತೆ ಊಟ-ಉಡಿಗೆಗಳಲ್ಲಿ ಗೊಂದಲ ತಂದುಹಾಕುತ್ತಾರೆ. ಹೌದು, ಮದ್ಯಮಾಂಸಗಳನ್ನು ಎಂದೂ ಮರೆತೂ ಸಹ ಗ್ರಹಿಸಬಾರದು, ಎಂಬುದಿಷ್ಟೇನೋ ಆವಶ್ಯಕವೇ. ರಾಜಪುರುಷರು ಯುದ್ಧಕಾಲದಲ್ಲಿಯೂ ಸಹ 'ಚೌಕಟ್ಟ'ನ್ನು ನಿರ್ಮಿಸಿ, ಅಡಿಗೆ ಮಾಡಿ ತಿನ್ನುವುದು

ಅವಶ್ಯವಾಗಿ ಸೋಲಿಗೆ ಕಾರಣವೆಂದು ಎಲ್ಲಾ ಬುದ್ಧಿವಂತರೂ ನಿಶ್ಚಯಿಸಿಲ್ಲವೇ? ಕ್ಷತ್ರಿಯರಿಗೆ, ರಣದಲ್ಲಿ ಒಂದು ಕೈಯಿಂದ ರೊಟ್ಟಿ ತಿನ್ನುತ್ತಾ, ನೀರು ಕುಡಿಯುತ್ತಾ ಹೋಗುವುದೂ, ಕುದುರೆ, ಆನೆ, ರಥಗಳ ಮೇಲೆ ಹತ್ತಿ, ಅಥವಾ ಕಾಲ್ನಡೆಯಿಂದಲೇ ಮತ್ತೊಂದು ಕೈಯಿಂದ ಶತ್ರುಗಳನ್ನು ಸಂಹರಿಸುತ್ತಾ ಹೋಗುವುದು ಆಚಾರವಾಗಿರುತ್ತದೆ ಮತ್ತು ಪರಾಜಿತರಾಗುವುದು ಅನಾಚಾರವಾಗಿರುತ್ತದೆ. ಈ ಮೌಢ್ಯದಿಂದಲೇ ಈ ಜನರು ಚೌಕಟ್ಟುಗಳನ್ನು ನಿರ್ಮಿಸುತ್ತಾ ನಿರ್ಮಿಸುತ್ತಾ, ವಿರೋಧ ಮಾಡುತ್ತಾ—ಮಾಡಿಸುತ್ತಾ ಸ್ವಾತಂತ್ರ್ಯ, ಆನಂದ, ಧನ, ರಾಜ್ಯ, ವಿದ್ಯೆ ಮತ್ತು ಪುರುಷಾರ್ಥ ಎಲ್ಲದರ ಮೇಲೂ ಹಲಗೆ ಎಳೆದು, ಕೈಮೇಲೆ ಕೈಹಾಕಿ ಕುಳಿತಿದ್ದಾರೆ ಮತ್ತು ಏನಾದರೂ ಪದಾರ್ಥ ಸಿಕ್ಕಿದರೆ, ಬೇಯಿಸಿ ತಿನ್ನೋಣ ಎಂದು ಬಯಸುತ್ತಾರೆ! ಹಾಗೆ ಸಿಕ್ಕದಿದ್ದರೆ ಆರ್ಯಾವರ್ತದೇಶದ ಮೇಲೆಲ್ಲಾ ಹಲಗೆ ಎಳೆದು ಸರ್ವಥಾ ನಷ್ಟಭ್ರಷ್ಟವಾಗಿ ಮಾಡಿದ್ದಾರೆಂದು ತಿಳಿಯಿರಿ. ನಿಜ; ಊಟಮಾಡುವ ಸ್ಥಳವನ್ನು ತೊಳೆದು, ಸಾರಿಸಿ, ಗುಡಿಸಿ, ಕಸವನ್ನು ದೂರಮಾಡುವುದಕ್ಕೆ ಆವಶ್ಯವಾಗಿ ಪ್ರಯತ್ನಿಸಬೇಕು; ಮುಸಲ್ಮಾನರಂತೆ ಅಥವಾ ಕ್ರೈಸ್ತರಂತೆ ಪಾಠಶಾಲೆಯನ್ನು ಹೊಲಸುಮಾಡಬಾರದು.

ಪ್ರಶ್ನೆ:—ಸಖರೀ, ನಿಖರೀ ಎಂದರೇನು?

ಉತ್ತರ:—ನೀರು ಮೊದಲಾದುವುಗಳಲ್ಲಿ ಬೇಯಿಸಿದ ಆಹಾರಕ್ಕೆ ಸಖರೀ ಎಂದೂ, ಹಾಲು, ತುಪ್ಪಗಳಲ್ಲಿ ಬೇಯಿಸಿದುದಕ್ಕೆ ನಿಖರೀ ಅಂದರೆ 'ಜೊಕ್ಕ'ವೆಂದೂ ಹೆಸರು. ಇದೂ ಈ ಧೂರ್ತರು ಆರಂಭಿಸಿದ ಪಾಷಂಡವೇ. ಏಕೆಂದರೆ—ಯಾವುದರಲ್ಲಿ ಹಾಲು, ತುಪ್ಪ ಹೆಚ್ಚು ಬೀಳುತ್ತದೋ, ಅದು ತಿನ್ನುವುದಕ್ಕೆ ರುಚಿಯಾಗಿರುತ್ತದೆ ಮತ್ತು ಉದರಕ್ಕೆ ಜಿಡ್ಡಿನ ಪದಾರ್ಥ ಹೆಚ್ಚು ಬೀಳಲಿ, ಎಂದು ಈ ಲೀಲೆ ರಚಿಸಿದ್ದಾರೆ. ಇದಲ್ಲದೆ, ಬೆಂಕಿ ಅಥವಾ ಕಾಲದಿಂದ ಕಳಿತ ಪದಾರ್ಥವು ಪಕ್ವ; ಮತ್ತು ಕಳಿಯದುದು ಅಪಕ್ವ; ಪಕ್ವವಾದುದನ್ನೇ ತಿನ್ನಬೇಕು, ಅಪಕ್ವವಾದುದನ್ನು ತಿನ್ನಬಾರದು ಎಂಬುದೂ ಸಹ

ಸರ್ವತ್ರ ಸರಿಹೋಗುವುದಿಲ್ಲ. ಏಕೆಂದರೆ, ಕಡಲೆ ಮೊದಲಾದುವು ಹಸಿಯದಾಗಿದ್ದರೂ ತಿನ್ನಲ್ಪಡುತ್ತವೆ.

ಪ್ರಶ್ನೆ:—ದ್ವಿಜರು ತಮ್ಮ ಕೈಯಿಂದ ಬೆಂದುದನ್ನು ತಿನ್ನಬೇಕೋ, ಶೂದ್ರನ ಕೈಯಿಂದ ಬೇಯಿಸಲ್ಪಟ್ಟುದನ್ನು ತಿನ್ನಬೇಕೋ?

ಉತ್ತರ:—ಶೂದ್ರನ ಕೈಯಿಂದ ಬೆಂದುದನ್ನು ತಿನ್ನಬೇಕು. ಏಕೆಂದರೆ, ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ವರ್ಣಸ್ಥರಾದ ಸ್ತ್ರೀಪುರುಷರು ವಿದ್ಯೆ ಕಲಿಸುವುದು, ರಾಜ್ಯಪಾಲನೆ ಮತ್ತು ಪಶುಪಾಲನೆ, ವ್ಯವಸಾಯ, ವ್ಯಾಪಾರಗಳಲ್ಲಿ ತತ್ಪರರಾಗಿರಬೇಕು ಮತ್ತು ಶೂದ್ರನ ಪಾತ್ರೆಯ ಮತ್ತು ಅವನ ಮನೆಯಲ್ಲಿ ಬೇಯಿಸಿದ ಆಹಾರವನ್ನು ಆಪತ್ಕಾಲವನ್ನುಳಿದು ತಿನ್ನಬಾರದು. ಪ್ರಮಾಣವನ್ನು ಕೇಳಿರಿ:—

ಆರ್ಯಾಧಿಷ್ಠಿತಾ ವಾ ಶೂದ್ರಾಃ ಸಂಸ್ಕರ್ತಾರಃ ಸ್ಯುಃ।

[ಆಪಸ್ತಂಬ ಧರ್ಮಸೂತ್ರ, ಪ್ರ. ೨, ಪ. ೨, ಖಂ. ೨, ೪]

ಇದು ಆಪಸ್ತಂಬಸೂತ್ರ. ಆರ್ಯರ ಮನೆಯಲ್ಲಿ ಶೂದ್ರರು ಅಂದರೆ ಮೂರ್ಖರಾದ ಸ್ತ್ರೀ-ಪುರುಷರು ಅಡಿಗೆ ಮೊದಲಾದ ಸೇವೆಗಳನ್ನು ಮಾಡಬೇಕು. ಆದರೆ ಅವರು ಶರೀರ, ವಸ್ತ್ರ ಮೊದಲಾದುವುಗಳಿಂದ ಪವಿತ್ರರಾಗಿರಬೇಕು. ಆರ್ಯರ ಮನೆಯಲ್ಲಿ ಅಡಿಗೆ ಮಾಡುವಾಗ, ಬಾಯಿಗೆ ಮರೆಮಾಡಿಕೊಂಡು ಮಾಡಬೇಕು, ಏಕೆಂದರೆ, ಅವರ ಮುಖದಿಂದ ಎಂಜಲೂ, ಹೊರಹೊರಟ ಉಸಿರೂ ಸಹ ಅನ್ನಕ್ಕೆ ತಗಲಬಾರದು. ಎಂಟನೆಯ ದಿನ ಕ್ಷಾರವನ್ನು ಮಾಡಿಸಿಕೊಳ್ಳಬೇಕು. ಉಗುರುಗಳನ್ನು ಕತ್ತರಿಸಬೇಕು. ಸ್ನಾನಮಾಡಿ ಅಡಿಗೆಮಾಡಬೇಕು. ಆರ್ಯರಿಗೆ ಊಟಮಾಡಿಸಿ, ತಾವು ತಿನ್ನಬೇಕು.

ಪ್ರಶ್ನೆ:—ಶೂದ್ರನು ಮುಟ್ಟಿದ ಪಕ್ವಾನ್ನವನ್ನು ತಿನ್ನುವುದರಲ್ಲಿ ದೋಷವಿದೆ. ಎನ್ನುವಾಗ, ಅವನ ಕೈಯಿಂದ ಬೇಯಿಸಿದುದನ್ನು ಹೇಗೆ ತಿನ್ನಲಾದೀತು?

ಉತ್ತರ:—ಇದು ಕಪೋಲಕಲ್ಪಿತವಾದ ಸುಳ್ಳುಮಾತು. ಏಕೆಂದರೆ, ಯಾರು ಬೆಲ್ಲ, ಸಕ್ಕರೆ, ತುಪ್ಪ, ಹಾಲು, ಹಿಟ್ಟು, ಶಾಕ,

ಹಣ್ಣು, ಗೆಡ್ಡೆ ಇದನ್ನು ತಿಂದರೋ, ಅವರು ಜಗತ್ತಿನವರೆಲ್ಲರ ಕೈಯಿಂದಲೂ ಆದುದನ್ನೂ ಮತ್ತು ಎಂಜಲನ್ನೂ ಸಹ ತಿಂದರೆಂದೇ ತಿಳಿಯಿರಿ. ಏಕೆಂದರೆ, ಶೂದ್ರರೂ, ಚರ್ಮಾರರೂ, ಜಲಗಾರರೂ, ಮುಸಲ್ಮಾನರೂ, ಕ್ರೈಸ್ತರೂ ಗದ್ದೆಗಳಿಂದ ಕಬ್ಬನ್ನು ಕತ್ತರಿಸುವಾಗ, ಸಿಪ್ಪೆ ತೆಗೆಯುವಾಗ, ಹಿಂಡಿ ರಸ ತೆಗೆಯುವಾಗ, ಮೂಲಮೂತ್ರ ವಿಸರ್ಜನೆಮಾಡಿ ಅದೇ ತೊಳೆಯದ ಕೈಗಳಿಂದ ಅದನ್ನು ಮುಟ್ಟುತ್ತಾರೆ, ಎತ್ತುತ್ತಾರೆ, ಇಡುತ್ತಾರೆ. ಅರ್ಧ ಕಬ್ಬನ್ನು ಹೀರಿ, ರಸ ಕುಡಿದು, ಅರ್ಧವನ್ನು ಅದರಲ್ಲಿಯೇ ಹಾಕಿಬಿಡುತ್ತಾರೆ. ಮತ್ತು ರಸವನ್ನು ಕಾಯಿಸುವಾಗ, ಆ ರಸವಲ್ಲಿ ರೊಟ್ಟಿಯನ್ನು ಬೇಯಿಸಿ ತಿನ್ನುತ್ತಾರೆ. ಸಕ್ಕರೆ ಮಾಡುವಾಗ, ಯಾವುದರ ತಳದಲ್ಲಿ ಅಮೇಧ್ಯ, ಮೂತ್ರ, ಸಗಣಿ, ಧೂಳು—ಇವು ಅಂಟಿಕೊಂಡಿರುತ್ತವೋ, ಅದೇ ಹಳೆಯ ಎಕ್ಕಡಗಳಿಂದ ಅದನ್ನು ಉಜ್ಜುತ್ತಾರೆ. ಹಾಲಿನಲ್ಲಿ ತಮ್ಮ ಮನೆಯ ಎಂಜಲು ಪಾತ್ರೆಗಳ ನೀರನ್ನು ಹಾಕುತ್ತಾರೆ; ಅವುಗಳಲ್ಲಿಯೇ ತುಪ್ಪ ಮೊದಲಾದುವನ್ನಿಡುತ್ತಾರೆ ಮತ್ತು ಹಿಟ್ಟನ್ನು ಬೀಸುವಾಗಲೂ ಅದೇ ರೀತಿ ಎಂಜಲು ಕೈಗಳಿಂದ ಎತ್ತುತ್ತಾರೆ, ಹಾಗೂ ಬೆವರೂ ಸಹ ಹಿಟ್ಟಿನ ಮೇಲೆ ತೊಟ್ಟಿಡುತ್ತಾ ಹೋಗುತ್ತದೆ. ಈ ಮೊದಲಾದುವಲ್ಲದೆ, ಫಲ, ಮೂಲ, ಕಂದಗಳಲ್ಲಿಯೂ ಇಂತಹ ಲೀಲೆಗಳೇ ನಡೆಯುತ್ತವೆ. ಈ ಪದಾರ್ಥಗಳನ್ನು ತಿಂದಮೇಲೆ, ಎಲ್ಲರ ಕೈಯಿನದನ್ನೂ ತಿಂದಂತೆಯೇ!

ಪ್ರಶ್ನೆ:—ಫಲ, ಮೂಲ, ಕಂದ ಮತ್ತು ರಸ—ಮೊದಲಾದ ಕಾಣದವುಗಳಲ್ಲಿ ದೋಷವನ್ನೊಪ್ಪುವುದಿಲ್ಲವಲ್ಲ! ಉತ್ತರ:—ಭಲೇ ಭಲೇ! ನಿಜ ನಿಜ. ಹೀಗೆ ಉತ್ತರ ಕೊಡದಿದ್ದರೆ, ಧೂಳು-ಬೂದಿ ತಿನ್ನುತ್ತಿದ್ದಿರಾ? ಬೆಲ್ಲ-ಸಕ್ಕರೆ ಸಿಹಿಯಾಗಿರುತ್ತವೆ. ಹಾಲು-ತುಪ್ಪ ಪುಷ್ಟಿಯನ್ನೀಯುತ್ತವೆ. ಇದಕ್ಕಾಗಿಯೇ ಈ ಸ್ವಾರ್ಥಸಿಂಧುವನ್ನು ರಚಿಸಿಲ್ಲವೇನು? ಕಾಣದುದರಲ್ಲಿ ದೋಷವಿಲ್ಲವಾದರೆ, ಜಲಗಾರನು ಅಥವಾ ಮುಸಲ್ಮಾನನು ಬೇರೆ ಸ್ಥಳದಲ್ಲಿ ತನ್ನ ಕೈಯಿಂದ ಬೇಯಿಸಿ ತಂದು ನಿಮಗೆ ತಂದುಕೊಟ್ಟರೆ ತಿನ್ನುವಿರೋ, ಇಲ್ಲವೋ? ಇಲ್ಲ, ಎನ್ನುವಿರಾದರೆ, ಕಾಣದುದರಲ್ಲಿಯೂ ದೋಷವಿದೆ. ಹೌದು, ಮುಸ-

ಲ್ಮಾನರು, ಕ್ರೈಸ್ತರು—ಮೊದಲಾದ ಮದ್ಯಮಾಂಸಾದಿಗಳ ಕೈಯಿನ ದನ್ನು ತಿನ್ನುವುದರಲ್ಲಿ, ಆರ್ಯರಿಗೂ ಕೂಡ ಮದ್ಯ-ಮಾಂಸ ಮೊದಲಾ ದುವನ್ನು ತಿನ್ನುವ ಕುಡಿಯುವ ಅಪರಾಧವು ಬೆನ್ನುಹತ್ತುವುದು. ಆದರೆ ಆರ್ಯರಲ್ಲಿ ಪರಸ್ಪರ ಸಹಭೋಜನವಾಗುವುದರಲ್ಲಿ ಯಾವ ದೋಷವೂ ಕಾಣುವುದಿಲ್ಲ. ಎಂದಿನ ವರೆಗೆ ಒಂದು ಮತವನ್ನೂ, ಸಮಾನ ಹಾನಿ-ಲಾಭಗಳನ್ನೂ, ಸಮಾನ ಸುಖ-ದುಃಖಗಳನ್ನೂ ಪರಸ್ಪರ ಒಪ್ಪುವುದಿ ಲ್ಲವೋ, ಅಂದಿನ ವರೆಗೆ ಉನ್ನತಿಯಾಗುವುದು ಬಯಳ ಕಷ್ಟ. ಆದರೆ ಕೇವಲ ತಿಂಡಿ-ತೀರ್ಥಗಳು ಒಂದಾದ ಮಾತ್ರಕ್ಕೆ ಸುಧಾರಣೆಯಾಗಲಾ ರದು. ಆದರೆ ಎಂದಿನ ವರೆಗೆ ಕೆಟ್ಟ ವಿಷಯಗಳನ್ನು ಬಿಡುವುದಿಲ್ಲವೋ, ಒಳ್ಳೆಯ ವರ್ತನೆಗಳನ್ನು ಮಾಡುವುದಿಲ್ಲವೋ,, ಅಂದಿನ ವರೆಗೆ ಅಭ್ಯುದ್ಧಿಗೆ ಬರಲು ಹಾನಿಯಾಗುತ್ತದೆ. ಆರ್ಯಾವರ್ತದಲ್ಲಿ ವಿದೇಶೀಯರ ರಾಜ್ಯಭಾರವಿರುವ ಕಾರಣ, ಪರಸ್ಪರ ಒಡಕು, ಮತ ಭೇದ, ಬ್ರಹ್ಮಚರ್ಯದ ಸೇವನೆ ಮಾಡದಿರುವುದು, ವಿದ್ಯೆಯನ್ನು ಓದದಿರುವುದು-ಓದಿಸದಿರುವುದು, ಬಾಲ್ಯಾವಸ್ಥೆಯಲ್ಲಿ ಸ್ವಯಂವರವಲ್ಲದ ವಿವಾಹ, ವಿಷಯಾಸಕ್ತಿ. ಮಿಥ್ಯಾಭಾಷಣ ಮೊದಲಾದ ಕುಲಕ್ಷಣ ಗಳೂ, ವೇದವಿದ್ಯೆಯ ಪ್ರಚಾರವಿಲ್ಲದಿರುವುದು—ಮೊದಲಾದ ಕುಕರ್ಮ ಗಳೂ ಇವೆ. ಸಹೋದರ-ಸಹೋದರರು ಹೋರಾಡುವಾಗಲೇ, ಮೂರನೆಯವನಾದ ವಿದೇಶೀಯನು ಬಂದು ಪಂಚಾಯಿತದಾರನಾಗಿ ಕುಳಿತುಕೊಳ್ಳುತ್ತಾನೆ. ನೀವು ಐದುಸಾವಿರ ವರ್ಷಗಳ ಹಿಂದಾದ ಮಹಾಭಾರತದ ಮಾತುಗಳನ್ನೂ ಸಹ ಮರೆತುಹೋದಿರೇನು? ನೋಡಿರಿ! ಮಹಾಭಾರತ ಯುದ್ಧದಲ್ಲಿ ಎಲ್ಲರೂ ವಾಹನಗಳ ಮೇಲೆಯೇ ತಿನ್ನುತ್ತಿದ್ದರು; ಕುಡಿಯುತ್ತಿದ್ದರು. ಪರಸ್ಪರ ಕಲಹ ದಿಂದ ಕೌರವ-ಪಾಂಡವರ ಮತ್ತು ಯಾದವರ ಸರ್ವನಾಶವಾದುದಂತೂ ಆಗಿಯೇ ಹೋಯಿತು; ಆದರೆ-ಈ ವರೆಗೂ ಸಹ ಅದೇ ರೋಗವು ಬೆನ್ನುಹತ್ತಿದೆ. ಈ ಭಯಂಕರ ರಾಕ್ಷಸನು ಎಂದಾದರೂ ದೂರವಾಗು ವನೋ, ಅಥವಾ ಆರ್ಯರನ್ನು ಸರ್ವಸುಖಗಳಿಂದಲೂ ವಂಚಿಸಿ, ದುಃಖಸಾಗರದಲ್ಲಿ ಮುಳುಗಿಸಿ ಸಾಯಿಸುವನೋ ಗೊತ್ತಿಲ್ಲ. ಅದೇ ಗೋತ್ರಘಾತಕನೂ, ಸ್ವದೇಶ ವಿನಾಶಕನೂ, ನೀಚನೂ ಆದ ದುಷ್ಟ

ದುರ್ಯೋಧನನ ದುರ್ಮಾರ್ಗದಲ್ಲಿ ಆರ್ಯರು ಇಂದಿನ ವರೆಗೂ ನಡೆದು ದುಃಖವನ್ನು ಹೆಚ್ಚಿಸಿಕೊಳ್ಳುತ್ತಿದ್ದಾರೆ. ಈ ರಾಜರೋಗವು ಆರ್ಯರಾದ ನಮ್ಮಿಂದ ದೂರವಾಗಿ ಹೋಗುವಂತೆ ಪರಮೇಶ್ವರನು ಅನುಗ್ರಹಿಸಲಿ. ಒಂದನೆಯದಾಗಿ ಧರ್ಮಶಾಸ್ತ್ರೋಕ್ತವಾದುದು, ಎರಡನೆಯದಾಗಿ ವೈದ್ಯಕಶಾಸ್ತ್ರೋಕ್ತವಾದುದು ಎಂದು ಭಕ್ಷ್ಯಾಭಕ್ಷ್ಯವು ಎರಡುವಿಧವಾಗಿರುತ್ತದೆ. ಉದಾಹರಣೆಗೆ ಧರ್ಮಶಾಸ್ತ್ರದಲ್ಲಿ :—

ಅಭಕ್ಷ್ಯಾಣಿ ದ್ವಿಜಾತೀನಾಮುನೋಧ್ಯಪ್ರಭವಾಣಿ ಚ ॥

[ಮನು ೫. ೫]

ದ್ವಿಜರು–ಅಂದರೆ ಬ್ರಾಹ್ಮಣ ಕ್ಷತ್ರಿಯ ವೈಶ್ಯರು ಮತ್ತು ಶೂದ್ರರೂ ಸಹ ಮಲಿನ ಮಲಮೂತ್ರಗಳ ಸಂಸರ್ಗದಿಂದ ಉತ್ಪನ್ನವಾದ ಶಾಕ–ಫಲ–ಮೂಲಾದಿಗಳನ್ನು ತಿನ್ನಬಾರದು.

ವರ್ಜಯೇನ್ಮಧುಮಾಂಸಂ ಚ ॥

[ಮನು. ೭. ೧೭೭]

ಅನೇಕ ಬಗೆಯ ಮದ್ಯ, ಗಾಂಜಾ, ಭಂಗಿ, ಅಫೀಮು ಮೊದಲಾದ—

ಬುದ್ಧಿಂ ಲುಂಪತಿ ಯದ್ದ್ರವ್ಯಂ ಮದಕಾರಿ ತದುಚ್ಯತೇ ॥

[ಶಾರ್ಙ್ಗಧರ ಅ–ಳ. ಶ್ಲೋ–೨೧]

ಬುದ್ಧಿಯನ್ನು ನಾಶಮಾಡುವ ಪದಾರ್ಥಗಳ ಸೇವನೆಯನ್ನೆಂದಿಗೂ ಮಾಡಬಾರದು. ಮತ್ತು ಕೊಳೆತ, ಹಳಸಿದ, ದುರ್ವಾಸನೆಯಿಂದ ದೂಷಿತವಾದ, ಒಳ್ಳೆಯ ರೀತಿಯಲ್ಲಿ ಮಾಡದಿರುವ, ಹಾಗೂ ಯಾರ ಶರೀರವು ಮದ್ಯಮಾಂಸಗಳ ಪರಮಾಣುಗಳಿಂದಲೇ ತುಂಬಿರುತ್ತವೋ, ಆ ಮದ್ಯಮಾಂಸಾಹಾರೀ ಮ್ಲೆಚ್ಛರ ಕೈಯಿನ ಆಹಾರಗಳೆಷ್ಟಿವೆಯೋ, ಅವನ್ನು ತಿನ್ನಬಾರದು. ಮತ್ತು ಯಾವುದರಲ್ಲಿ ಉಪಕಾರಕ ಪ್ರಾಣಿಗಳ ಹಿಂಸೆಯಾಗುವುದೋ, ಅದನ್ನು ತಿನ್ನಬಾರದು.

ಆಂದರೆ, ಒಂದು ಹಸುವಿನ ದೇಹದಿಂದ ಹಾಲು, ತುಪ್ಪ, ಎತ್ತು, ಹಸು ಇವು ಉತ್ಪನ್ನವಾಗುವುದರಿಂದ, ಒಂದು ಪೀಳಿಗೆಯಲ್ಲಿ ನಾಲ್ಕು ಲಕ್ಷದ ಎಪ್ಪತ್ತೈದು ಸಾವಿರದ ಆರುನೂರು ಜನ ಮನುಷ್ಯರಿಗೆ ಸುಖ ಸಿಕ್ಕುತ್ತದೆ. ಅಂತಹ ಪಶುಗಳನ್ನು ಕೊಲ್ಲಬಾರದು; ಕೊಲ್ಲಲೂ ಬಿಡಬಾರದು. ಉದಾಹರಣೆಗೆ ಒಂದು ಹಸುವಿನಿಂದ ದಿನಕ್ಕೆ ೨೦ ಸೇರು, ಮತ್ತೊಂದರಿಂದ ಎರಡುಸೇರು ಹಾಲು ಸಿಕ್ಕಿದರೆ, ಸರಾಸರಿ ೧೧ ಸೇರು ಹಾಲು ಪ್ರತಿಯೊಂದು ಹಸುವಿನಿಂದ ಸಿಕ್ಕುತ್ತದೆ. ಒಂದೊಂದು ಹಸು ಹದಿನೆಂಟು ತಿಂಗಳವರೆಗೂ, ಒಂದೊಂದು ಆರು ತಿಂಗಳವರೆಗೂ ಹಾಲು ಕರೆಯುತ್ತದೆ. ಅದರ ಸರಾಸರಿ ಹನ್ನೆರಡು ತಿಂಗಳಾಯಿತು. ಈಗ ಪ್ರತಿಯೊಂದು ಹಸುವಿನ ಸಮಗ್ರಜೀವನದ ಹಾಲಿನಿಂದ ಇಪ್ಪತ್ತುನಾಲ್ಕು ಸಾವಿರದ ಒಂಬೈನೂರ ಆರವತ್ತು ಜನರು ಒಂದು ಸಾರಿ ತೃಪ್ತರಾಗಬಲ್ಲರು. ಅದಕ್ಕೆ ಆರು ಹೆಣ್ಣು ಕರುಗಳೂ, ಆರು ಗಂಡುಕರುಗಳೂ ಹುಟ್ಟುತ್ತವೆ. ಅವುಗಳಲ್ಲಿ ಎರಡು ಸತ್ತುಹೋದರೂ ಹತ್ತು ಉಳಿದುವು. ಅವುಗಳಲ್ಲಿ ಐದು ಹೆಣ್ಣು ಕರುಗಳ ಸಮಗ್ರ ಜೀವನದ ಹಾಲನ್ನು ಸೇರಿಸಿದರೆ, ಒಂದು ಲಕ್ಷದ, ಇಪ್ಪತ್ತು ನಾಲ್ಕು ಸಾವಿರದ ಎಂಟುನೂರು ಜನರು ತೃಪ್ತರಾಗಬಲ್ಲರು. ಇನ್ನು ಐದು ಎತ್ತುಗಳುಳಿದುವು. ಅವು ತಮ್ಮ ಸಮಗ್ರ ಜೀವನದಲ್ಲಿ ಕನಿಷ್ಟ ಹಕ್ಷ ಐದುಸಾವಿರ ಮಣ ಧಾನ್ಯವನ್ನು ಉತ್ಪನ್ನಮಾಡಬಲ್ಲವು. ಆ ಧಾನ್ಯದಲ್ಲಿ ಪ್ರತಿಯೊಬ್ಬ ಮನುಷ್ಯನೂ ಮೂರುಪಾವು ತಿಂದರೆ, ಎರಡೂವರೆಲಕ್ಷ ಜನರಿಗೆ ತೃಪ್ತಿಯಾಗುತ್ತದೆ. ಹಾಲು ಮತ್ತು ಧಾನ್ಯ ಸೇರಿಸಿ, ಮೂರುಲಕ್ಷದ, ಎಪ್ಪತ್ತುನಾಲ್ಕು ಸಾವಿರದ ಎಂಟುನೂರು ಜನರು ತೃಪ್ತರಾಗುತ್ತಾರೆ. ಎರಡು ಸಂಖ್ಯೆಗಳನ್ನೂ ಸೇರಿಸಿದರೆ, ಒಂದು ಹಸುವಿನ ಒಂದು ಪೀಳಿಗೆಯಲ್ಲಿ ನಾಲ್ಕು ಲಕ್ಷದ, ಎಪ್ಪತ್ತೈದು ಸಾವಿರದ ಆರುನೂರು ಜನರು ಒಂದು ಸಾರಿ ಪಾಲಿಸಲ್ಪಡುತ್ತಾರೆ. ಮತ್ತು ಪೀಳಿಗೆಯಿಂದ ಪೀಳಿಗೆಗೆ ಲೆಕ್ಕ ಮಾಡುತ್ತಾ ಹೋದರೆ, ಅಸಂಖ್ಯಾತರಾದ ಮಾನವರ ಪಾಲನೆಯಾಗುತ್ತದೆ. ಇದಲ್ಲದೆ, ಎತ್ತುಗಳು ಬಂಡಿ, ಸವಾರಿ, ಭಾರಹೊರುವುದು ಮೊದಲಾದ ಕೆಲಸಗಳಿಂದಲೂ ಮಾನವರಿಗೆ ಬಹಳ ಉಪಕಾರಿಗಳಾಗಿರುತ್ತವೆ. ಮತ್ತು

ಹಸುವು ಹಾಲಿನ ವಿಷಯದಲ್ಲಿ ಮಹೋಪಕಾರಕವಾಗಿರುತ್ತದೆ. ಎತ್ತು ಗಳಂತೆಯೇ ಕೋಣಗಳೂ ಉಪಕಾರಕವಾಗಿವೆ. ಆದರೆ, ಹಸುವಿನ ಹಾಲು-ತುಪ್ಪದಿಂದ ಬುದ್ಧಿ ವೃದ್ಧಿಯಾಗಿ ಎಷ್ಟು ಲಾಭಗಳಾಗುತ್ತವೋ, ಅಷ್ಟು ಎಮ್ಮೆಯ ಹಾಲಿನಿಂದ ಆಗುವುದಿಲ್ಲ. ಆದುದರಿಂದ ಆರ್ಯರು ಹಸುವನ್ನು ಮುಖ್ಯೋಪಕಾರಕವೆಂದು ಎಣಿಸಿದ್ದಾರೆ. ಮತ್ತು ಬೇರೆ ಯಾವ ವಿದ್ವಾಂಸನಿದ್ದರೂ, ಅವನೂ ಹೀಗೆಯೇ ತಿಳಿಯುವನು. ಮೇಕೆಯ ಹಾಲಿನಿಂದ ಇಪ್ಪತ್ತೈದುಸಾವಿರದ ಒಂಬೈನೂರ ಇಪ್ಪತ್ತು ಜನರ ಪಾಲನೆಯಾಗುತ್ತದೆ. ಹಾಗೆಯೇ ಆನೆ, ಕುದುರೆಗಳು, ಒಂಟಿ, ಕುರಿ, ಕತ್ತೆಗಳು—ಮೊದಲಾದುವುಗಳಿಂದಲೂ ಬಹಳ ಉಪಕಾರಗಳಾ ಗುತ್ತವೆ.* ಈ ಪಶುಗಳನ್ನು ಕೊಲ್ಲುವವರನ್ನು ಎಲ್ಲಾ ಮಾನವರ ಹತ್ಯೆಯನ್ನೂ ಮಾಡುವವರೆಂದು ತಿಳಿಯಿರಿ. ನೋಡಿರಿ! ಆರ್ಯರ ರಾಜ್ಯವಿದ್ದಾಗ, ಮಹೋಪಕಾರಿಗಳಾದ ಈ ಹಸು ಮೊದಲಾದ ಪಶುಗಳು ಕೊಲ್ಲಲ್ಪಡುತ್ತಿರಲಿಲ್ಲ. ಆದುದರಿಂದಲೇ ಮನುಷ್ಯಾದಿ ಜೀವರು ಆರ್ಯಾವರ್ತದಲ್ಲಿಯೂ, ಭೂಮಂಡಲದ ಅನ್ಯದೇಶಗಳ ಲ್ಲಿಯೂ ಬಹಳ ಆನಂದದಿಂದ ಜೀವಿಸುತ್ತಿದ್ದರು. ಏಕೆಂದರೆ—ಹಾಲು-ತುಪ್ಪಗಳೂ, ಎತ್ತು ಮೊದಲಾದ ಪ್ರಾಣಿಗಳ ಆಧಿಕ್ಯವಿದ್ದುದರಿಂದ ಅನ್ನ-ರಸಗಳೂ ಪುಷ್ಕಳವಾಗಿ ಸಿಕ್ಕುತ್ತಿದ್ದುವು. ಯಾವಾಗಿನಿಂದ ವಿದೇ ಶೀಯರಾದ ಮಾಂಸಾಹಾರಿಗಳು ಈ ದೇಶಕ್ಕೆ ಬಂದು, ಗೋವು—ಮೊದಲಾದ ಪಶುಗಳನ್ನು ಕೊಲ್ಲುವ ಮದ್ಯಪಾಯಿಗಳು ರಾಜ್ಯಾಧಿಕಾರಿ ಗಳಾದರೋ, ಆಗಿನಿಂದ ಆರ್ಯರ ದುಃಖದ ವೃದ್ಧಿಯು ಕ್ರಮಕ್ರಮ ಆಗುತ್ತಾ ಬಂದಿದೆ. ಏಕೆಂದರೆ—

ನಷ್ಟೇಮೂಲೇ ನೈವಫಲಂ ನ ಪುಷ್ಪಂ ॥

[ವೃದ್ಧ ಚಾಣಕ್ಯ ೧೦-೧೩]

ವೃಕ್ಷದ ಬೇರೇ ಕತ್ತರಿಸಲ್ಪಟ್ಟ ಮೇಲೆ, ಹಣ್ಣು-ಹೂವುಗಳು ಎಲ್ಲಿಂದ ಬರುವುವು?

---

* ಇದರ ವಿಶೇಷ ವಿಸ್ತಾರವನ್ನು "ಗೋಕರುಣಾನಿಧಿ" ಯಲ್ಲಿ ಮಾಡಿದೆ.

ಪ್ರಶ್ನೆ :—ಎಲ್ಲರೂ ಅಹಿಂಸಕರಾಗಿ ಹೋದರೆ, ಹಸು ಮೊದಲಾದ ಪಶುಗಳನ್ನು ಕೊಂದು ತಿಂದು ಹಾಕುವಷ್ಟು ಹುಲಿ ಮೊದಲಾದ ಪ್ರಾಣಿಗಳು ಹೆಚ್ಚಿ ಹೋಗುವವು. ನಿಮ್ಮ ಪ್ರಯತ್ನವೇ ವ್ಯರ್ಥವಾಗಿ ಹೋಗುವುದಲ್ಲ!

ಉತ್ತರ :—ಹಾನಿಕಾರಕವಾದ ಪಶುಗಳಿಗೂ, ಮನುಷ್ಯರಿಗೂ ದಂಡ ವಿಧಿಸುವುದು ಮತ್ತು ಪ್ರಾಣಪನ್ನೂ ಸಹ ಹೊರಡಿಸುವುದು ರಾಜಪುರುಷರ ಕಾರ್ಯ.

ಪ್ರಶ್ನೆ :—ಮತ್ತೆ ಅವುಗಳ ಮಾಂಸವನ್ನು ಬಿಸಾಕಿಬಿಡಬೇಕೇನು?

ಉತ್ತರ :—ಬೇಕಾದರೆ ಬಿಸಾಕಿಬಿಡಲಿ, ಬೇಕಾದರೆ ನಾಯಿ ಮೊದಲಾದ ಮಾಂಸಾಹಾರಿಗಳಿಗೆ ತಿನ್ನಿಸಿಬಿಡಲಿ, ಇಲ್ಲವೇ ಸುಟ್ಟು ಬಿಡಲಿ, ಅಥವಾ ಮಾಂಸಾಹಾರಿಯು ತಿಂದರೂ ಸಹ ಜಗತ್ತಿಗೇನೂ ಹಾನಿಯಾಗುವುದಿಲ್ಲ. ಆದರೆ ಆ ಮನುಷ್ಯನ ಸ್ವಭಾವವು ಮಾಂಸಾಹಾರಿಯಾಗಿ ಹಿಂಸಕವಾಗಬಹುದು. ಹಿಂಸೆ ಮತ್ತು ಕಳವು, ನಂಬಿಕೆದ್ರೋಹ, ಛಲ, ಕಪಟ ಮೊದಲಾದುವುಗಳಿಂದ ಗಳಿಸಿ ಭೋಗಿಸುವ ಎಷ್ಟು ಪದಾರ್ಥವಿದೆಯೋ, ಅದು ಅಭಕ್ಷ್ಯ; ಮತ್ತು ಅಹಿಂಸೆ, ಧರ್ಮ ಮೊದಲಾದ ಕರ್ಮಗಳಿಂದ ಗಳಿಸಿದುದನ್ನು ತಿನ್ನುವುದು ಮುಂತಾದುದು ಭಕ್ಷ್ಯ. ಯಾವ ಪದಾರ್ಥಗಳಿಂದ ಆರೋಗ್ಯವೂ, ರೋಗನಾಶವೂ, ಬುದ್ಧಿ-ಬಲ-ಪರಾಕ್ರಮ ಮೊದಲಾದುವುಗಳ ವೃದ್ಧಿಯೂ, ಆಯುಷ್ಯದ ಅಭಿವೃದ್ಧಿಯೂ ಉಂಟಾಗುವುದೋ, ಅಂತಹ ಅಕ್ಕಿ, ಗೋಧಿ ಮೊದಲಾದುವುಗಳ, ಹಾಗೂ ಫಲ, ಮೂಲ, ಕಂದ, ಹಾಲು, ತುಪ್ಪ, ಮಿಷ್ಟ ಮೊದಲಾದುವುಗಳ ಸೇವನೆಯು, ಯೋಗ್ಯವಾದ ರೀತಿಯಲ್ಲಿ ಅಡಿಗೆಮಾಡಿ ಮತ್ತು ಸೇರಿಸಿ, ಯಥೋಚಿತವಾದ ವೇಳೆಯಲ್ಲಿ ಮಿತವಾಗಿ ಆಹಾರವನ್ನು ಭುಂಜಿಸುವುದು ಇದೆಲ್ಲಾ ಭಕ್ಷ್ಯವೆನಿಸುತ್ತದೆ. ಎಷ್ಟು ಪದಾರ್ಥಗಳು ತನ್ನ ಪ್ರಕೃತಿಗೆ ವಿರುದ್ಧವಾಗಿ ವಿಕಾರವನ್ನುಂಟು ಮಾಡುವಂತಹುವಾಗಿರುತ್ತವೋ, ಅವುಗಳನ್ನೆಲ್ಲಾ ಸರ್ವಥಾ ಬಿಟ್ಟು ಬಿಡುವುದು ಮತ್ತು ಯಾವಯಾವದು ಯಾವಯಾವದಕ್ಕೆ ವಿಹಿತವಾಗಿದೆಯೋ, ಆಯಾ ಪದಾರ್ಥಗಳನ್ನು ತೆಗೆದುಕೊಳ್ಳುವುದು ಇದೂ ಸಹ ಭಕ್ಷ್ಯ.

ಪ್ರಶ್ನೆ :—ಒಟ್ಟಿಗೇ ತಿನ್ನುವುದರಲ್ಲಿ ಏನಾದರೂ ದೋಷ ವಿದೆಯೋ, ಇಲ್ಲವೋ ?

ಉತ್ತರ :—ದೋಷವಿದೆ, ಏಕೆಂದರೆ—ಒಬ್ಬರೊಂದಿಗೆ ಮತ್ತೊಬ್ಬರ ಸ್ವಭಾವವು ಹೊಂದಿಕೊಳ್ಳುವುದಿಲ್ಲ. ತೊನ್ನುರೋಗದವರು ಮೊದಲಾದವರೊಂದಿಗೆ ತಿನ್ನುವುದರಿಂದ ಒಳ್ಳೆಯ ಮನುಷ್ಯನ ರಕ್ತವೂ ಸಹ ಕೆಟ್ಟುಹೋಗುವಂತೆ, ಬೇರೆಯವನೊಂದಿಗೆ ತಿನ್ನುವುದರಲ್ಲಿಯೂ ಏನಾದರೂ ಕೆಡುಕೇ ಆಗುತ್ತದೆಯೇ ಹೊರತು ಸುಧಾರಣೆಯಾಗದು. ಆದುದರಿಂದಲೇ :—

ನೋಚ್ಛಿಷ್ಟಂ ಕಸ್ಯಚಿದ್ದದ್ಯಾನ್ನಾದ್ಯಾಚ್ಚೈವ ತಥಾಂತರಾ।
ನ ಚೈವಾತ್ಯಶನಂ ಕುರ್ಯಾನ್ನ ಚೋಚ್ಛಿಷ್ಟಃ ಕ್ವಚಿದ್ವ್ರಜೇತ್॥

[ಮನು-೨. ೫೬]

ಯಾವನಿಗೂ ತನ್ನ ಎಂಜಲು ಪದಾರ್ಥವನ್ನು ಕೊಡಬಾರದು ಮತ್ತು ಯಾವನ ಊಟದ ನಡುವೆಯೂ ತಾನು ತಿನ್ನಬಾರದು. ಹೆಚ್ಚಾಗಿಯೂ ತಿನ್ನಬಾರದು ಮತ್ತು ಊಟಮಾಡಿದ ಮೇಲೆ ಕೈ-ಮುಖಗಳನ್ನು ತೊಳೆಯದೆ ಅತ್ತ-ಇತ್ತ ಎಲ್ಲಿಯೂ ಓಡಾಡಬಾರದು.

ಪ್ರಶ್ನೆ :—' ಗುರೋರುಚ್ಛಿಷ್ಟ-ಭೋಜನಂ ' ಈ ವಾಕ್ಯದ ಅರ್ಥ ವೇನಾದೀತು ?

ಉತ್ತರ :—ಗುರುವು ಭೋಜನಮಾಡಿದ ಮೇಲೆ, ಬೇರೆಯಿರುವ ಶುದ್ಧವಾದ ಆಹಾರವನ್ನು ಭುಂಜಿಸುವುದು, ಅಂದರೆ—ಮೊದಲು ಗುರುವಿಗೆ ಊಟಮಾಡಿಸಿ, ಆಮೇಲೆ ಶಿಷ್ಯನು ಊಟಮಾಡಬೇಕು, ಎಂಬುದು ಇದರ ಅರ್ಥ.

ಪ್ರಶ್ನೆ : —ಉಚ್ಛಿಷ್ಟಮಾತ್ರದ ನಿಷೇಧವಿರುವುದಾದರೆ, ಜೇನು ಹುಳುಗಳ ಎಂಜಲು ಜೇನುತುಪ್ಪ, ಕರುವಿನ ಎಂಜಲು ಹಾಲು ಮತ್ತು ಒಂದು ತುತ್ತು ತಿಂದಮೇಲೆ ತನ್ನ ಊಟವೂ ಎಂಜಲಾಗುತ್ತದೆ. ಮತ್ತೆ ಅವನ್ನೂ ತಿನ್ನಬಾರದು.

ಉತ್ತರ :—ಜೇನುತುಪ್ಪ ಹೆಸರಿಗೆ ಮಾತ್ರ ಎಂಜಲಾಗಿರುತ್ತದೆ, ಆದರೆ ಅದು ಅನೇಕ ಓಷಧಿಗಳ ಸಾರವಾದುದರಿಂದ ಗ್ರಾಹ್ಯವಾಗಿರು

ತ್ತದೆ. ಕರುವು ತನ್ನ ತಾಯಿಯ ಹೊರಗಿನ ಹಾಲನ್ನು ಕುಡಿಯುತ್ತದೆ, ಒಳಗಿನ ಹಾಲನ್ನು ಕುಡಿಯಲಾರದು. ಆದುದರಿಂದ ಎಂಜಲಲ್ಲ. ಆದರೆ, ಕರುವು ಕುಡಿದಮೇಲೆ; ನೀರಿನಿಂದ ಅದರ ತಾಯಿಯ ಕೆಚ್ಚಲನ್ನು ತೊಳೆದು, ಶುದ್ಧವಾದ ಪಾತ್ರೆಯಲ್ಲಿ ಕರೆಯಬೇಕು. ಮತ್ತು ತನ್ನ ಎಂಜಲು ತನಗೆ ವಿಕಾರವುಂಟುಮಾಡುವಂತಹುದಾಗಿರುವುದಿಲ್ಲ. ನೋಡಿರಿ; ಯಾರ ಎಂಜಲನ್ನೂ ಯಾರೂ ತಿನ್ನಬಾರದೆಂಬುದು ಸ್ವಭಾವದಿಂದ ಸಿದ್ಧವಾಗಿದೆ. ತನ್ನ ಬಾಯಿ, ಮೂಗು, ಕಿವಿ, ಕಣ್ಣು, ಉಪಸ್ಥ ಮತ್ತು ಗುಹ್ಯೇಂದ್ರಿಯಗಳ ಮಲಮೂತ್ರಾದಿಗಳ ಸ್ಪರ್ಶದಿಂದ ಬೇಸರಪಟ್ಟುವುದಿಲ್ಲ, ಆದರೆ ಬೇರೆಯಾರಾದರೊಬ್ಬರ ಮಲ-ಮೂತ್ರಗಳ ಸ್ಪರ್ಶದಿಂದ ಬೇಸರಪಟ್ಟುತ್ತದೆ- ಇದರಿಂದ ಈ ವ್ಯವಹಾರವು ಸೃಷ್ಟಿಕ್ರಮಕ್ಕೆ ವಿಪರೀತವಾಗಿಲ್ಲವೆಂಬುದು ಸಿದ್ಧವಾಗುತ್ತದೆ. ಆದುದರಿಂದ ಯಾರ ಉಚ್ಛಿಷ್ಟವನ್ನೂ, ಅಂದರೆ ಎಂಜಲನ್ನೂ ತಿನ್ನದಿರುವುದು ಮಾನವಮಾತ್ರರಿಗೆ ಉಚಿತವಾದುದು.

ಪ್ರಶ್ನೆ :—ಒಳ್ಳೆಯದು, ಸತಿ-ಪತಿಯರೂ ಸಹ ಪರಸ್ಪರರ ಎಂಜಲನ್ನು ತಿನ್ನಬಾರದೇ?

ಉತ್ತರ :—ತಿನ್ನಬಾರದು. ಏಕೆಂದರೆ, ಅವರುಗಳ ಶರೀರಗಳ ಸ್ವಭಾವವೂ ಬೇರೆಬೇರೆಯಾಗಿರುತ್ತವೆ.

ಪ್ರಶ್ನೆ :—ಮನುಷ್ಯಮಾತ್ರರ ಕೈಯಿಂದ ಮಾಡಲ್ಪಟ್ಟ ಅಡಿಗೆಯನ್ನು ತಿನ್ನುವುದರಲ್ಲಿ ದೋಷವೇನಿದೆ, ಹೇಳಿರಿ! ಏಕೆಂದರೆ—ಬ್ರಾಹ್ಮಣನಿಂದ ಹಿಡಿದು ಚಂಡಾಲನ ವರೆಗಿನ ದೇಹಗಳು ಮೂಳೆ, ಮಾಂಸ ಮತ್ತು ಚರ್ಮದವು. ಮತ್ತು ಎಂತಹ ರಕ್ತ ಬ್ರಾಹ್ಮಣನ ಶರೀರದಲ್ಲಿರುತ್ತದೋ, ಅಂತಹುದೇ ಚಂಡಾಲ—ಮೊದಲಾದವರಲ್ಲಿಯೂ ಇರುತ್ತದೆ. ಮತ್ತೆ, ಮಾನವ ಮಾತ್ರರ ಕೈಯಿಂದ ಬೇಯಿಸಲ್ಪಟ್ಟ ಆಹಾರವನ್ನು ತಿನ್ನುವುದರಲ್ಲಿ ದೋಷವೇನು?

ಉತ್ತರ :—ದೋಷವಿದೆ. ಏಕೆಂದರೆ—ಯಾವ ಪದಾರ್ಥಗಳ ಭೋಜನ-ಪಾನಗಳಿಂದ ಬ್ರಾಹ್ಮಣ-ಬ್ರಾಹ್ಮಣಿಯರ ಶರೀರದಲ್ಲಿ ದುರ್ಗಂಧಾದಿ ದೋಷರಹಿತವಾದ ರಜೋವೀರ್ಯಗಳು ಉತ್ಪನ್ನವಾಗು

ತ್ತವೋ, ಆ ರೀತಿ ಚಂಡಾಲ-ಚಂಡಾಲಿಯರ ಶರೀರದಲ್ಲಿ ಉತ್ಪನ್ನವಾಗುವುದಿಲ್ಲ. ಚಂಡಾಲನ ಶರೀರವು ದುರ್ಗಂಧದ ಪರಮಾಣುಗಳಿಂದ ತುಂಬಿರುವಂತೆ ಬ್ರಾಹ್ಮಣಾದಿ ವರ್ಣಗಳವರ ಶರೀರ ತುಂಬಿರುವುದಿಲ್ಲ. ಆದುದರಿಂದ ಬ್ರಾಹ್ಮಣ-ಮೊದಲಾದ ಉತ್ತಮ ವರ್ಣದವರ ಕೈಯಿನ ದನ್ನು ತಿನ್ನಬೇಕು. ಮತ್ತು ಚಂಡಾಲ ಮೊದಲಾದ ನೀಚರಾದ ಜಲಗಾರ, ಚಮ್ಮಾರ ಮೊದಲಾದವರ ಕೈಯಿನದನ್ನು ತಿನ್ನಬಾರದು. ಯಾರಾದರೂ ನಿಮ್ಮನ್ನು—"ತಾಯಿ, ಅತ್ತೆ, ಸಹೋದರಿ, ಮಗಳು, ಸೊಸೆ—ಇವರ ಶರೀರವು ಚರ್ಮದಾವೃತವಾಗಿರುವಂತೆಯೇ ನಿಮ್ಮ ಪತ್ನಿಯದೂ ಆಗಿದೆ. ಅಂದ ಮಾತ್ರಕ್ಕೆ ತಾಯಿ ಮೊದಲಾದವರೊಂದಿಗೆ ಸ್ವಪತ್ನಿಯೊಂದಿಗೆ ವರ್ತಿಸುವಂತೆಯೇ ವರ್ತಿಸುವಿರೇ?" ಎಂದು ಕೇಳಿದರೆ, ನೀವು ಸಂಕೋಚ ಹೊಂದಿ ಸುಮ್ಮನಾಗಬೇಕಾಗುವುದು. ಕೈ ಮತ್ತು ಬಾಯಿನಿಂದ ಉತ್ತಮದಾದ ಆಹಾರವು ತಿನ್ನಲ್ಪಡುವಂತೆಯೇ ದುರ್ಗಂಧಯುಕ್ತವಾದುದೂ ತಿನ್ನಲ್ಪಡಬಹುದು; ಅಂದರೆ—ಮಲಾದಿಗಳನ್ನೂ ತಿನ್ನುವಿರಾ? ಹೀಗೂ ಏನಾದರೂ ಆಗಬಲ್ಲುದೇ?

ಪ್ರಶ್ನೆ :—ಹಸುವಿನ ಸಗಣಿಯಿಂದ ಅಡಿಗೆಮನೆಯನ್ನು ಸಾರಿಸುವಾಗ, ನಿಮ್ಮ ಸಗಣಿಯಿಂದಲೇ ಏಕೆ ಸಾರಿಸಬಾರದು? ಸಗಣಿಯು ಅಡಿಗೆ ಮನೆಗೆ ಹೋಗುವುದರಿಂದ, ಅಡಿಗೆಮನೆ ಅಶುದ್ಧವೇಕಾಗುವುದಿಲ್ಲ?

ಉತ್ತರ :—ಹಸುವಿನ ಸಗಣಿಯಿಂದ, ಮನುಷ್ಯನ ಮಲದಿಂದ ಬರುವಂತಹ ದುರ್ಗಂಧ ಬರುವುದಿಲ್ಲ. ಸಗಣಿಯು ಜಿಗಟಾಗಿರುವುದರಿಂದ ಬೇಗ ಕಿತ್ತುಬರುವುದಿಲ್ಲ; ಬಟ್ಟೆಯೂ ಕೆಡುವುದಿಲ್ಲ; ಕೊಳೆಯಾಗುವುದಿಲ್ಲ. ಮಣ್ಣಿನಿಂದ ಕೊಳೆ ಹತ್ತಿಕೊಳ್ಳುವಂತೆ ಒಣಸಗಣಿಯಿಂದಾಗುವುದಿಲ್ಲ. ಮಣ್ಣು ಮತ್ತು ಸಗಣಿಯಿಂದ ಸಾರಿಸಲ್ಪಟ್ಟ ಸ್ಥಾನವು ನೋಡುವುದಕ್ಕೆ ಬಹು ಸುಂದರವಾಗಿರುತ್ತದೆ. ಮತ್ತು ಅಡಿಗೆ ಮಾಡುವ ಕಡೆ ಊಟ ಮೊದಲಾದುವನ್ನು ಮಾಡುವುದರಿಂದ ತುಪ್ಪ, ಸಕ್ಕರೆ ಮತ್ತು ಎಂಜಲೂ ಸಹ ಬೀಳುತ್ತದೆ. ಇದರಿಂದ, ಆ ಸ್ಥಾನವು ಕೊಳೆಯಾಗುವುದರಿಂದ, ನೊಣ, ಇರುವೆ—ಮೊದಲಾದ ಬಹು ಬಗೆಯ ಜೀವಿಗಳು ಬರುತ್ತವೆ. ಅದನ್ನು ಪ್ರತಿದಿನವೂ ಗುಡಿಸುವುದು, ಸಾರಿಸು

ವುದು—ಮೊದಲಾದುದರಿಂದ ಶುದ್ಧಿಗೊಳಿಸದಿದ್ದರೆ, ಆ ಸ್ಥಳವು ಮಲವಿಸರ್ಜನಸ್ಥಾನದಂತೆಯೇ ಆಗಿಹೋಗುತ್ತದೆ. ಆದುದರಿಂದ ಸಗಣಿ, ಮಣ್ಣು ಮತ್ತು ಮಾರ್ಜನದಿಂದ ಅದನ್ನು ದಿನವೂ ಸರ್ವಥಾ ಶುದ್ಧವಾಗಿಡಬೇಕು. ಮತ್ತು ಗಾರೆ ಅಥವಾ ಸಿಮೆಂಟಿನ ನೆಲದ ಮನೆಯಾಗಿದ್ದರೆ, ನೀರಿನಿಂದ ತೆಳೆದು ಜೊಕ್ಕಟವಾಗಿಡಬೇಕು. ಇದರಿಂದ ಮೇಲೆ ಹೇಳಿದ ದೋಷಗಳ ನಿವಾರಣೆಯಾಗುತ್ತದೆ. ಸಾಬರ ಅಡಿಗೆಯ ಮನೆಯಲ್ಲಿ ಒಂದೆಡೆ ಇದ್ದಿಲು, ಒಂದೆಡೆ ಬೂದಿ, ಒಂದೆಡೆ ಸೌದೆ, ಒಂದೆಡೆ ಒಡೆದ ಮಡಿಕೆ, ಒಂದೆಡೆ ಎಂಜಲು ತಟ್ಟೆ, ಒಂದೆಡೆ ಮೂಳೆ ಮತ್ತು ಪ್ರಾಣಿಯ ಕಾಲು ಬಿದ್ದಿರುತ್ತವೆ. ಮತ್ತು ನೊಣಗಳ ಕತೆಯನ್ನೇನು ಹೇಳುವುದು? ಆ ಜಾಗ ಎಷ್ಟು ಕೆಟ್ಟದಾಗಿ ಕಾಣುತ್ತದೆಂದರೆ ಯಾವನಾದರೂ ಶ್ರೇಷ್ಠನಾದ ಮಾನವನು ಅಲ್ಲಿ ಹೋಗಿ ಕುಳಿತರೆ, ಅವನಿಗೆ ವಾಂತಿ ಬರುವ ಸಂಭವವೂ ಇರುತ್ತದೆ. ಮತ್ತು ಆ ದುರ್ಗಂಧಮಯ ಸ್ಥಾನದಂತೆ ಆ ಜಾಗವೂ ಕಾಣುತ್ತದೆ. ಈ ಜನರನ್ನು "ಸಗಣಿಯಿಂದ ಅಡಿಗೆ ಮನೆಯನ್ನು ಸಾರಿಸುವುದರಲ್ಲಿ ನೀವು ದೋಷ ವೆಣಿಸುವುದಾದರೆ, ಒಲೆಯಲ್ಲಿ ಬೆರಣಿಯನ್ನುರಿಸುವುದು, ಅದರ ಬೆಂಕಿಯಿಂದ ಹೊಗೆಸೊಪ್ಪನ್ನು ಸೇದುವುದು, ಮನೆಯ ಗೋಡೆಗೆ ಲೇಪನ ಮಾಡುವುದು. ಮೊದಲಾದುದರಿಂದ ಸಾಹೇಬರ ಅಡಿಗೆಯ ಮನೆಯೂ ಭ್ರಷ್ಟವಾಗುತ್ತಿರಬಹುದು. ಇದರಲ್ಲೇನು ಸಂದೇಹ?"—ಎಂದು ಯಾರಾದರೂ ಕೇಳಬೇಕು.

ಪ್ರಶ್ನೆ:—ಅಡಿಗೆಯ ಮನೆಯಲ್ಲಿ ಕುಳಿತು ಊಟಮಾಡುವುದು ಒಳ್ಳೆಯದೋ, ಹೊರಗೆ ಕುಳಿತು ಊಟಮಾಡುವುದೋ?

ಉತ್ತರ:—ಎಲ್ಲಿ ಉತ್ತಮವಾದ, ರಮಣೀಯವಾದ, ಸುಂದರವಾದ ಸ್ಥಳ ಕಂಡುಬರುವುದೋ, ಅಲ್ಲಿ ಊಟಮಾಡಬೇಕು. ಆದರೆ, ಆವಶ್ಯಕವಾದ ಯುದ್ಧ ಮೊದಲಾದ ಸಂದರ್ಭಗಳಲ್ಲಿ ಕುದುರೆ ಮೊದಲಾದ ವಾಹನಗಳ ಮೇಲೆ ಕುಳಿತು, ಅಥವಾ ನಿಂತುಕೊಂಡೂ ಸಹ ಭೋಜನ ಪಾನಮಾಡುವುದು ಅತ್ಯಂತ ಉಚಿತವಾದುದು.

ಪ್ರಶ್ನೆ:—ತನ್ನ ಕೈಯ್ಯಿನದನ್ನೇ ತಿನ್ನಬೇಕೇ? ಬೇರೆಯವರ ಕೈಯಿನದನ್ನು ತಿನ್ನಬಾರದೇ?

ಉತ್ತರ :—ಆರ್ಯರಲ್ಲಿ, ಶುದ್ಧರೀತಿಯಿಂದ ಅಡಿಗೆ ಮಾಡಿದಲ್ಲಿ, ಆಚ್ಛುಕಟ್ಟಾಗಿ ಎಲ್ಲ ಆರ್ಯರೊಂದಿಗೂ ತಿನ್ನುವುದರಲ್ಲಿ ಯಾವ ಹಾನಿಯೂ ಇಲ್ಲ. ಏಕೆಂದರೆ. ಬ್ರಾಹ್ಮಣ ಮೊದಲಾದ ಸ್ತ್ರೀಪುರುಷರು ಅಡಿಗೆ ಮಾಡುವುದು, ಚೌಕಟ್ಟನ್ನೇರ್ಪಡಿಸುವುದು, ಪಾತ್ರೆ-ಹಂಡೆಗಳನ್ನು ತಿಕ್ಕುವುದು ಮೊದಲಾದ ಗೊಂದಲಗಳಲ್ಲಿ ಬಿದ್ದಿದ್ದರೆ, ವಿದ್ಯೆ ಮೊದಲಾದ ಶುಭಗುಣಗಳ ವೃದ್ಧಿ ಎಂದಿಗೂ ಆಗಲಾರದು. ನೋಡಿರಿ! ಯುಧಿಷ್ಠಿರ ಮಹಾರಾಜನ ರಾಜಸೂಯಯಜ್ಞಕ್ಕೆ ಭೂಮಂಡಲದ ರಾಜರೂ, ಋಷಿ-ಮಹರ್ಷಿಗಳೂ ಬಂದಿದ್ದರು. ಒಂದೇ ಪಾಕಶಾಲೆಯಲ್ಲಿಂದ ಊಟಮಾಡುತ್ತಿದ್ದರು. ಎಂದಿನಿಂದ ಕ್ರೈಸ್ತ, ಮುಸಲ್ಮಾನ ಮೊದಲಾದವರ ಮತಮತಾಂತರಗಳು ಹೊರಟವೋ, ಪರಸ್ಪರ ವೈರ-ವಿರೋಧಗಳುಂಟಾದುವು. ಅವರೇ ಮದ್ಯಪಾನ, ಗೋಮಾಂಸ ಮೊದಲಾದುವುಗಳ ಸೇವನೆಗಳನ್ನು ಅಂಗೀಕರಿಸಿದರು; ಆ ಕಾಲದಿಂದಲೇ ಭೋಜನಾದಿಗಳಲ್ಲಿ ಗೊಂದಲವುಂಟಾಯಿತು. ನೋಡಿರಿ! ಕಾಬೂಲ್ ಕಂದಹಾರ್, ಈರಾನ್, ಅಮೆರಿಕಾ, ಯೂರೋಪ್ ಮೊದಲಾದ ದೇಶಗಳ ರಾಜರುಗಳ ಪುತ್ರಿಯರಾದ ಗಾಂಧಾರಿ, ಮಾದ್ರಿ, ಉಲೂಪಿ ಮೊದಲಾದವರೊಂದಿಗೆ ಆರ್ಯಾವರ್ತ ದೇಶೀಯ ರಾಜರುಗಳು ವಿವಾಹವೇ ಮೊದಲಾದ ವ್ಯವಹಾರಗಳನ್ನಿಟ್ಟುಕೊಂಡಿದ್ದರು. ಶಕುನಿ ಮೊದಲಾದವರು ಕೌರವ-ಪಾಂಡವರೊಂದಿಗೆ ಭೋಜನ-ಪಾನಗಳನ್ನು ಮಾಡುತ್ತಿದ್ದರು; ವಿರೋಧವೇನೂ ಮಾಡುತ್ತಿರಲಿಲ್ಲ. ಏಕೆಂದರೆ—ಆಗ ಸಮಸ್ತ ಭೂಮಂಡಲದಲ್ಲಿಯೂ ಒಂದು ವೇದೋಕ್ತಮತವಿದ್ದಿತು. ಅದರಲ್ಲಿಯೇ ಎಲ್ಲರಿಗೂ ನಿಷ್ಠೆಯಿತ್ತು; ಮತ್ತು ಸುಖ-ದುಃಖ, ಹಾನಿ-ಲಾಭಗಳಲ್ಲಿ ಒಬ್ಬರನ್ನೊಬ್ಬರು ತಮ್ಮಂತೆಯೇ ಭಾವಿಸುತ್ತಿದ್ದರು. ಆದುದರಿಂದಲೇ ಭೂಮಂಡಲವಲ್ಲಿ ಸುಖವಿದ್ದಿತು. ಈಗಲಾದರೋ ಅನೇಕ ಮತವಾದಿಗಳಿರುವುದರಿಂದ, ಅತಿದುಃಖವೂ, ವಿರೋಧವೂ ಹೆಚ್ಚಿಹೋಗಿದೆ. ಇದನ್ನು ನಿವಾರಿಸುವುದು ಬುದ್ಧಿವಂತರ ಕಾರ್ಯ. ಮಿಥ್ಯಾಮತವು ಶೀಘ್ರವೇ ಪ್ರಳಯ ಹೊಂದುವಂತೆ, ಪರಮಾತ್ಮನು ಎಲ್ಲರ ಮನದಲ್ಲಿಯೂ ಸತ್ಯಮತದ ಅಂಕುರವನ್ನುಂಟುಮಾಡಲಿ!

ಈ ಬಗ್ಗೆ ಎಲ್ಲಾ ವಿದ್ವಾಂಸರೂ ಆಲೋಚನೆಮಾಡಿ, ವಿರೋಧಭಾವವನ್ನು ಬಿಟ್ಟು ಆನಂದವನ್ನು ಹೆಚ್ಚಿಸಲಿ!

ಆಚಾರ-ಅನಾಚಾರ, ಭಕ್ಷ್ಯಾಭಕ್ಷ್ಯಗಳ ವಿಷಯದಲ್ಲಿ ಇಷ್ಟು ಸ್ವಲ್ಪ ಬರೆದಿದ್ದೇವೆ. ಈ ಗ್ರಂಥದ ಪೂರ್ವಾರ್ಧವು ಈ ಹತ್ತನೆಯ ಸಮುಲ್ಲಾಸದೊಂದಿಗೇ ಮುಗಿದುಹೋಯಿತು. ಎಲ್ಲಿಯವರೆಗೆ ಮಾನವರು ಸತ್ಯಾಸತ್ಯವಿಮರ್ಶನದಲ್ಲಿ ತಮ್ಮ ಸಾಮರ್ಥ್ಯವನ್ನು ಸ್ವಲ್ಪವಾದರೂ ಬೆಳೆಸಿಕೊಳ್ಳುವುದಿಲ್ಲವೋ, ಅಲ್ಲಿಯವರೆಗೆ ಸ್ಥೂಲವಾದ ಮತ್ತು ಸೂಕ್ಷ್ಮವಾದ ಖಂಡನಗಳ ಅಭಿಪ್ರಾಯವನ್ನು ತಿಳಿದುಕೊಳ್ಳಲಾರದಾದುದರಿಂದ, ಈ ಸಮುಲ್ಲಾಸಗಳಲ್ಲಿ ವಿಶೇಷವಾಗಿ ಖಂಡನ-ಮಂಡನಗಳನ್ನು ಬರೆಯಲಿಲ್ಲ, ಆದುದರಿಂದ, ಮೊದಲು ಎಲ್ಲರಿಗೂ ಸತ್ಶಿಕ್ಷಣದ ಉಪದೇಶವನ್ನಿತ್ತು ಈಗ ಉತ್ತರಾರ್ಧದಲ್ಲಿ, ಅಂದರೆ, ನಾಲ್ಕು ಸಮುಲ್ಲಾಸಗಳನ್ನುಳ್ಳ ಭಾಗದಲ್ಲಿ, ಮೊದಲನೆಯದಲ್ಲಿ ಆರ್ಯಾವರ್ತೀಯ ಮತ ಮತಾಂತರಗಳ, ಎರಡನೆಯದರಲ್ಲಿ ಜೈನರ, ಮೂರನೆಯದರಲ್ಲಿ ಕ್ರೈಸ್ತರ ಮತ್ತು ನಾಲ್ಕನೆಯದರಲ್ಲಿ ಮುಸಲ್ಮಾನರ ಮತಮತಾಂತರಗಳ ಖಂಡನ-ಮಂಡನಗಳಬಗ್ಗೆ ಬರೆಯುವೆವು. ಮತ್ತು ಆ ಬಳಿಕ ಹದಿನಾಲ್ಕನೆಯ ಸಮುಲ್ಲಾಸದ ಕೊನೆಯಲ್ಲಿ ಸ್ವಮತವೂ ತೋರಿಸಲ್ಪಡುವುದು. ಯಾರಾದರೂ ವಿಶೇಷ ಖಂಡನ-ಮಂಡನಗಳನ್ನು ನೋಡಬಯಸುವರಾದರೆ, ಈ ನಾಲ್ಕು ಸಮುಲ್ಲಾಸಗಳಲ್ಲಿಯೂ ನೋಡಿಕೊಳ್ಳಲಿ. ಆದರೆ ಸಾಮಾನ್ಯರೀತಿಯಿಂದ ಹತ್ತು ಸಮುಲ್ಲಾಸಗಳಲ್ಲಿಯೂ ಕೂಡ ಅಲ್ಲಲ್ಲಿ ಸ್ವಲ್ಪಸ್ವಲ್ಪ ಖಂಡನೆ-ಮಂಡನೆ ಮಾಡಿದ್ದೇವೆ. ಈ ಹದಿನಾಲ್ಕು ಸಮುಲ್ಲಾಸಗಳನ್ನು ಪಕ್ಷಪಾತ ಬಿಟ್ಟು ನ್ಯಾಯದೃಷ್ಟಿಯಿಂದ ಯಾವನು ನೋಡುವನೋ, ಅವನ ಆತ್ಮದಲ್ಲಿ ಸತ್ಯಾರ್ಥದ ಪ್ರಕಾಶವುಂಟಾಗಿ, ಆನಂದ ಲಭಿಸುವುದು. ಮತ್ತು ಯಾವನು ಹಠ, ದುರಾಗ್ರಹ ಮತ್ತು ಈರ್ಷ್ಯೆಯಿಂದ ನೋಡುವನೋ ಮತ್ತು ಆಲಿಸುವನೋ, ಅವನಿಗೆ ಈ ಗ್ರಂಥವ ಅಭಿಪ್ರಾಯವು ಯಥಾರ್ಥವಾಗಿ ಗೊತ್ತಾಗುವುದು ಬಹಳ ಕಠಿಣ. ಆದುದರಿಂದ ಯಾವನು ಇದನ್ನು ಯಥಾವತ್ತಾಗಿ ಆಲೋಚಿಸನೋ, ಅವನು ಇದರ ಅಭಿಪ್ರಾಯವನ್ನು ತಿಳಿಯದೆ ಮೋಸಹೋಗುತ್ತಿರುವನು. ಸತ್ಯಾಸತ್ಯಗಳ ನಿರ್ಣಯವನ್ನು ಮಾಡಿ, ಸತ್ಯವನ್ನು

ಗ್ರಹಿಸಿ, ಅಸತ್ಯವನ್ನು ತ್ಯಜಿಸಿ, ಪರಮ ಆನಂದಿತರಾಗುವ ಗುಣಗ್ರಾಹಕರಾದ ಪುರುಷರೇ ವಿದ್ವಾಂಸರಾಗಿ, ಧರ್ಮ, ಅರ್ಥ, ಕಾಮ, ಮೋಕ್ಷ ಎಂಬ ಫಲಗಳನ್ನು ಹೊಂದಿ ಪ್ರಸನ್ನರಾಗಿರುತ್ತಾರೆ. ವಿದ್ವಾಂಸರ ಕಾರ್ಯವೇ ಇದು.

ಇತಿ ಶ್ರೀಮದ್ದಯಾನಂದಸ್ವಾಮಿಕೃತೇ ಸತ್ಯಾರ್ಥಪ್ರಕಾಶೇ
ಸುಭಾಷಾವಿಭೂಷಿತ ಆಚಾರಾನಾಚಾರ ಭಕ್ಷ್ಯಾಭಕ್ಷ್ಯವಿಷಯೇ
ದಶಮಃ ಸಮುಲ್ಲಾಸಃ ಸಂಪೂರ್ಣಃ

ಉತ್ತರಾರ್ಧ

ಅನುಭೂಮಿಕೆ

ಐದುಸಾವಿರ ವರ್ಷಗಳಿಗೆ ಮೊದಲು ವೇದಮತಕ್ಕಿಂತ ಬೇರೆಯಾದ ಬೇರಾವ ಮತವೂ ಇರಲಿಲ್ಲವೆಂಬುದು ಸಿದ್ಧವಾಗಿದೆ. ಏಕೆಂದರೆ, ವೇದೋಕ್ತವಾದ ಸಮಸ್ತ ವಿಷಯಗಳೂ ವಿದ್ಯೆಗೆ ಅವಿರುದ್ಧವಾಗಿವೆ. ಮಹಾಭಾರತ ಯುದ್ಧವು ವೇದಗಳ ಅಪ್ರವೃತ್ತಿಯ ಕಾರಣವಾಯಿತು. ಇವುಗಳ ಅಪ್ರವೃತ್ತಿಯಿಂದ ಭೂಮಂಡಲದಲ್ಲಿ ಅವಿದ್ಯಾಂಧಕಾರವು ವಿಸ್ತೃತವಾದಕಾರಣ, ಮಾನವರ ಬುದ್ಧಿಯು ಭ್ರಮಯುಕ್ತವಾಗಿ, ಯಾವನ ಮನಸ್ಸಿಗೆ ಹೇಗೆ ತೋರಿತೋ, ಅವನು ಹಾಗೆಯೇ ಮತವನ್ನು ಆರಂಭಿಸಿದನು. ಆ ಮತಗಳಲ್ಲಿ ನಾಲ್ಕು, ಅಂದರೆ, ವೇದ ವಿರುದ್ಧವಾದ ಪೌರಾಣಿಕ, ಜೈನ, ಕ್ರೈಸ್ತ ಮತ್ತು ಮುಸಲ್ಮಾನ— ಇವು ಎಲ್ಲಾ ಮತಗಳ ಮೂಲಗಳಾಗಿವೆ. ಅವು ಕ್ರಮದಿಂದ ಒಂದರ ನಂತರ ಎರಡನೆಯದು, ಮೂರನೆಯದು, ನಾಲ್ಕನೆಯದು ಹೀಗೆ ಹೊರಟಿವೆ. ಈಗ ಈ ನಾಲ್ಕರ ಶಾಖೆಗಳು ಒಂದು ಸಾವಿರಕ್ಕೆ ಕಡಿಮೆಯಿಲ್ಲ. ಈ ಎಲ್ಲಾ ಮತವಾದಿಗಳಿಗೂ ಇವರ ಶಿಷ್ಯರಿಗೂ ಮತ್ತು ಬೇರೆಲ್ಲರಿಗೂ ಪರಸ್ಪರ ಸತ್ಯಾಸತ್ಯಗಳನ್ನು ಆಲೋಚಿಸುವುದರಲ್ಲಿ ಹೆಚ್ಚು ಪರಿಶ್ರಮವಾಗದಿರಲೆಂದು ಈ ಗ್ರಂಥವನ್ನು ರಚಿಸಿದ್ದೇನೆ. ಯಾವ ಯಾವ ಸತ್ಯಮತದ ಮಂಡನವನ್ನೂ, ಅಸತ್ಯ ಮತದ ಖಂಡನವನ್ನೂ ಇದರಲ್ಲಿ ಬರೆದಿದ್ದೇನೋ, ಅದನ್ನು ಎಲ್ಲರೂ ಅರಿಯಬೇಕೆಂಬುದೇ ಪ್ರಯೋಜನವೆಂದು ತಿಳಿಯಲ್ಪಟ್ಟಿದೆ. ಇವುಗಳಲ್ಲಿ ನನ್ನ ಬುದ್ಧಿ ಹೇಗಿದೆಯೋ, ನನ್ನ ವಿದ್ಯೆ ಎಷ್ಟಿದೆಯೋ ಮತ್ತು ಈ ನಾಲ್ಕು ಮತಗಳ ಮೂಲಗ್ರಂಥಗಳನ್ನು ನೋಡುವುದರಿಂದ ಎಷ್ಟು ಜ್ಞಾನ ಉಂಟಾಗಿದೆಯೋ, ಅದನ್ನು ಎಲ್ಲರ ಮುಂದೆಯೂ ಅರಿಕೆಮಾಡಿಕೊಳ್ಳುವುದನ್ನು ನಾನು ಉತ್ತಮವೆಂದು ತಿಳಿದಿದ್ದೇನೆ. ಏಕೆಂದರೆ ಗುಪ್ತವಾದ ವಿಜ್ಞಾನವು ಮರಳಿ ಸಿಕ್ಕುವುದು ಸಹಜವಲ್ಲ. ಪಕ್ಷಪಾತವನ್ನು ಬಿಟ್ಟು ಇದನ್ನು ನೋಡುವುದರಿಂದ ಸತ್ಯಾಸತ್ಯಮತವು ಎಲ್ಲರಿಗೂ ಗೊತ್ತಾಗುವುದು. ಆಮೇಲೆ ತಮ್ಮ್ಮ ತಮ್ಮ್ಮ ತಿಳುವಳಿಕೆಯಂತೆ ಸತ್ಯಮತವನ್ನು ಗ್ರಹಿಸುವುದೂ, ಅಸತ್ಯಮತವನ್ನು ತ್ಯಜಿಸುವುದೂ ಎಲ್ಲರಿಗೂ ಸಹಜವಾಗುವುದು. ಇವುಗಳಲ್ಲಿ, ಪುರಾಣಾದಿ ಗ್ರಂಥಗಳಿಂದ ಶಾಖಾಶಾಖಾಂತರರೂಪವಾಗಿ ಆರ್ಯಾವರ್ತ ದೇಶದಲ್ಲಿ ಹೊರಟಿರುವ

ಮತಗಳ ಗುಣದೋಷಗಳು ಸಂಕ್ಷೇಪವಾಗಿ ಈ ಹನ್ನೊಂದನೆಯ ಸಮುಲ್ಲಾಸದಲ್ಲಿ ತೋರಿಸಲ್ಪಡುತ್ತವೆ. ಈ ನನ್ನ ಕಾರ್ಯದಿಂದ ಉಪಕಾರವೆಣಿಸದಿದ್ದರೆ, ವಿರೋಧವನ್ನೂ ಮಾಡಬೇಡಿರಿ. ಏಕೆಂದರೆ— ನನ್ನ ಉದ್ದೇಶ್ಯವು ಯಾರ ಹಾನಿಯನ್ನೂ ಅಥವಾ ವಿರೋಧವನ್ನೂ ಮಾಡುವುದಲ್ಲ; ಆದರೆ ಸತ್ಯಾಸತ್ಯದ ನಿರ್ಣಯ ಮಾಡುವುದು ಮತ್ತು ಮಾಡಿಸುವುದೇ ಆಗಿದೆ. ಇದೇರೀತಿ ಸರ್ವ ಮಾನವರೂ ನ್ಯಾಯ ದೃಷ್ಟಿಯಿಂದ ವರ್ತಿಸಬೇಕಾದುದು ಅತಿ ಉಚಿತವಾಗಿರುತ್ತದೆ. ಮಾನವ ಜನ್ಮ ಲಭಿಸುವುದು ಸತ್ಯಾಸತ್ಯಗಳ ನಿರ್ಣಯ ಮಾಡುವುದ ಕ್ಕಾಗಿ ಮತ್ತು ಮಾಡಿಸುವುದಕ್ಕಾಗಿ; ವಾದ-ವಿವಾದಗಳನ್ನೂ, ವಿರೋಧ ವನ್ನೂ ಮಾಡುವುದಕ್ಕಾಗಿ–ಮಾಡಿಸುವುದಕ್ಕಾಗಿ ಅಲ್ಲ. ಈ ಮತ ಮತಾಂತರಗಳ ವಿವಾದದಿಂದಲೇ ಜಗತ್ತಿನಲ್ಲಿ ಯಾವ ಯಾವ ಅನಿಷ್ಟ ಫಲಗಳುಂಟಾದವೋ, ಆಗುತ್ತವೋ ಮತ್ತು ಆಗುವುವೋ, ಅವನ್ನು ಪಕ್ಷಪಾತರಹಿತರಾದ ವಿದ್ವಜ್ಜನರು ತಿಳಿಯಬಲ್ಲರು. ಎಂದಿನವರೆಗೆ ಈ ಮಾನವ ಜಾತಿಯಲ್ಲಿ ಪರಸ್ಪರ ಮಿಥ್ಯಾಮತಮತಾಂತರಗಳ ವಿರುದ್ಧ ವಿವಾಹವು ಕೊನೆಯಾಗದೋ, ಅಂದಿನವರೆಗೆ ಅನ್ಯೋನ್ಯವಾದ ಆನಂದ ಲಭಿಸದು. ಮಾನವರಾದ ನಾವೆಲ್ಲರೂ, ವಿಶೇಷತಃ ವಿದ್ವಜ್ಜನರು, ಈರ್ಷ್ಯಾದ್ವೇಷಗಳನ್ನು ಬಿಟ್ಟು, ಸತ್ಯಾಸತ್ಯನಿರ್ಣಯಮಾಡಿ, ಸತ್ಯ ಗ್ರಹಣ ಮತ್ತು ಅಸತ್ಯತ್ಯಾಗ ಮಾಡಲೂ ಮತ್ತು ಮಾಡಿಸಲೂ ಅಪೇಕ್ಷಿಸುವೆವಾದರೆ, ನಮಗೆ ಈ ಮಾತು ಅಸಾಧ್ಯವಲ್ಲ. ಈ ವಿದ್ವಾಂ ಸರುಗಳ ವಿರೋಧವೇ ಸರ್ವರನ್ನೂ ವಿರೋಧಜಾಲದಲ್ಲಿ ಸಿಕ್ಕಿಸಿಟ್ಟಿದೆ ಎಂಬುದು ನಿಶ್ಚಯ. ಇವರೆಲ್ಲರೂ ತಮ್ಮ ಸ್ವಾರ್ಥದಲ್ಲಿ ಸಿಕ್ಕಿಕೊಳ್ಳದೆ, ಸರ್ವರ ಪ್ರಯೋಜನವನ್ನೂ ಸಾಧಿಸಲು ಬಯಸಿದರೆ, ಈಗಲೂ ಏಕಮತರಾಗಬಹುದು. ಈರೀತಿ ಆಗುವ ಉಪಾಯವನ್ನು ಈ ಗ್ರಂಥದ ಕೊನೆಯಲ್ಲಿ ಬರೆಯುವೆವು. ಸರ್ವಶಕ್ತನಾದ ಪರಮಾತ್ಮನು ಒಂದೇ ಮತದಲ್ಲಿ ಪ್ರವೃತ್ತರಾಗುವ ಉತ್ಸಾಹವನ್ನು ಮಾನವರೆಲ್ಲರ ಆತ್ಮ ಗಳಲ್ಲಿಯೂ ಬೆಳಗಲಿ!

ಅಲಮತಿವಿಸ್ತರೇಣ ವಿಪಶ್ಚಿದ್ವರಶಿರೋಮಣಿಷು॥

॥ ಓಂ ॥

ಉತ್ತರಾರ್ಧ

ಅಥೈಕಾದಶಸಮುಲ್ಲಾಸಾರಂಭಃ

ಅಥಾऽऽರ್ಯಾವರ್ತೀಯ ಮತಖಂಡನಮಂಡನೇ ವಿಧಾಸ್ಯಾಮಃ

ಇನ್ನು ಆರ್ಯಾವರ್ತ ದೇಶವಾಸಿಗಳಾದ ಆರ್ಯರ ಮತಗಳ ಖಂಡನಮಂಡನಗಳ ವಿಧಾನವನ್ನು ಮಾಡುವೆವು.

ಈ ಭೂಮಂಡಲದಲ್ಲಿ ಆರ್ಯಾವರ್ತ ದೇಶದಂತಹ ಮತ್ತೊಂದು ದೇಶವಿರುವುದಿಲ್ಲ. ಇದೇ ಸುವರ್ಣಾದಿ ರತ್ನಗಳನ್ನು ಉತ್ಪನ್ನಮಾಡುವುದರಿಂದ ಈ ಭೂಮಿಗೆ 'ಸ್ವರ್ಣಭೂಮಿ' ಎಂಬ ಹೆಸರು ಬಂದಿರುತ್ತದೆ! ಆದುದರಿಂದಲೇ ಸೃಷ್ಟಿಯ ಆದಿಯಲ್ಲಿ ಆರ್ಯರು ಈ ದೇಶದಲ್ಲಿಯೇ ಬಂದು ವಾಸಿಸಿದರು. ಈ ಕಾರಣದಿಂದ ನಾವು ಸೃಷ್ಟಿವಿಷಯದಲ್ಲಿ ಉತ್ತಮ ಪುರುಷರಿಗೆ ಆರ್ಯರೆಂತಲೂ ಅವರಿಗಿಂತ ಬೇರೆಯವರಿಗೆ ದಸ್ಯುಗಳೆಂದೂ ಹೆಸರು ಎಂದು ಹೇಳಿದ್ದೇವೆ. ಭೂಮಂಡಲದಲ್ಲಿರುವ ಎಲ್ಲಾ ದೇಶದವರೂ ಈ ದೇಶವನ್ನೇ ಹೊಗಳುತ್ತಾರೆ. ಮತ್ತು ನಿರೀಕ್ಷಣೆ ಮಾಡುತ್ತಾರೆ. ಸ್ಪರ್ಶಶಿಲೆಯು ಇರುವುದೆಂದು ಕೇಳಲ್ಪಡುತ್ತದೆ; ಅದಂತೂ ಸುಳ್ಳು. ಆದರೆ–ಯಾವುದನ್ನು ಮುಟ್ಟಿದೊಡನೆಯೇ ಕಬ್ಬಿಣ ದಂತಿರುವ ದರಿದ್ರ ವಿದೇಶಿಯರು ಚಿನ್ನ–ಅಂದರೆ ಧನಾಢ್ಯರಾಗಿ ಹೋಗುತ್ತಾರೋ, ಆ ಸ್ಪರ್ಶಮಣಿಯು ಆರ್ಯಾವರ್ತ ದೇಶವೇ ಆಗಿರುತ್ತದೆ.

ಏತದ್ದೇಶ ಪ್ರಸೂತಸ್ಯ ಸಕಾಶಾದಗ್ರ ಜನ್ಮನಃ।
ಸ್ವಂ ಸ್ವಂ ಚರಿತ್ರಂ ಶಿಕ್ಷೇರನ್ ಪೃಥಿವ್ಯಾಂ ಸರ್ವಮಾನವಾಃ॥

[ಮನು. ೨–೨೦]

ಸೃಷ್ಟ್ಯಾರಂಭದಿಂದ ಹಿಡಿದು, ಐದು ಸಾವಿರ ವರ್ಷಗಳ ಹಿಂದಿನ ವರೆಗೆ ಭೂಮಂಡಲದಲ್ಲೆಲ್ಲಾ ಆರ್ಯರ ಸಾರ್ವಭೌಮ ಚಕ್ರವರ್ತಿರಾಜ್ಯ ಅಂದರೆ ಎಲ್ಲರ ಮೇಲೆಯೂ ಏಕಛತ್ರಾಧಿಪತ್ಯ ವಿದ್ದಿತು. ಇತರ ದೇಶಗಳಲ್ಲಿ ಮಾಂಡಲಿಕರು ಅಂದರೆ ಸಣ್ಣ ಸಣ್ಣ ರಾಜರು ಇರುತ್ತಿದ್ದರು. ಏಕೆಂದರೆ—ಕೌರವ-ಪಾಂಡವರ ಸಮಯದ ವರೆಗೆ, ಭೂಮಂಡಲದ ಎಲ್ಲಾ ರಾಜರೂ ಮತ್ತು ಪ್ರಜೆಗಳೂ ಇಲ್ಲಿನ ರಾಜ್ಯ ಮತ್ತು ರಾಜಶಾಸನಕ್ಕೆ ಅಧೀನರಾಗಿದ್ದರು. ಇದಕ್ಕೆ ಸೃಷ್ಟ್ಯಾದಿಯಲ್ಲಿ ರಚಿತವಾದ ಮನುಸ್ಮೃತಿಯೇ ಪ್ರಮಾಣವಾಗಿರುತ್ತದೆ. ಇದೇ ಆರ್ಯಾವರ್ತ ದೇಶದಲ್ಲಿ ಹುಟ್ಟಿದ ಬ್ರಾಹ್ಮಣ ಅಂದರೆ ವಿದ್ವಾಂಸರಿಂದ, ಭೂಮಂಡಲದ ಮಾನವರು ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ, ದಸ್ಯು, ಮ್ಲೇಚ್ಛ ಮೊದಲಾದವರು ತಮತಮಗೆ ಯೋಗ್ಯವಾದ ವಿದ್ಯಾಚಾರಿತ್ರ್ಯಗಳ ಶಿಕ್ಷಣವನ್ನೂ, ವಿದ್ಯಾಭ್ಯಾಸವನ್ನೂ ಕಲೆತುಕೊಳ್ಳ ಬೇಕು. ಮಹಾರಾಜ ಯುಧಿಷ್ಠಿರನ ರಾಜಸೂಯ ಯಜ್ಞ ಮತ್ತು ಮಹಾಭಾರತ ಯುದ್ಧದ ವರೆಗೆ ಎಲ್ಲಾ ರಾಜ್ಯಗಳೂ ಇಲ್ಲಿನ ರಾಜ್ಯಕ್ಕೆ ಅಧೀನವಾಗಿದ್ದವು. ಕೇಳಿರಿ! ಚೈನಾದೇಶದ ಭಗದತ್ತ, ಅಮೆರಿಕಾ (ಪಾತಾಳ) ದೇಶದ ಬಭ್ರುವಾಹನ, ಯೂರೋಪ್ ದೇಶದ ಬಿಡಾಲಾಕ್ಷ ಅಂದರೆ ಬೆಕ್ಕಿನಂತೆ ಕಣ್ಣುಳ್ಳವನು, ಯೂನಾನ್ ಎಂದು ಹೇಳಿದ ಯವನ, ಈರಾನ್ ದೇಶದ ಶಲ್ಯ ಈ ಮೊದಲಾದ ರಾಜರು, ಆಜ್ಞಾನುಸಾರವಾಗಿ ರಾಜಸೂಯ ಯಾಗಕ್ಕೂ, ಮಹಾಭಾರತ ಯುದ್ಧಕ್ಕೂ ಬಂದಿದ್ದರು. ರಘುಕುಲದ ಅರಸರು ರಾಜ್ಯಭಾರಮಾಡುತ್ತಿದ್ದಾಗ ರಾವಣನೂ ಇಲ್ಲಿಗೆ ಅಧೀನನಾಗಿದ್ದನು. ಆದರೆ, ಶ್ರೀ ರಾಮಚಂದ್ರನ ಕಾಲದಲ್ಲಿ ರಾವಣನು ವಿರುದ್ಧನಾಗಲು ಶ್ರೀ ರಾಮಚಂದ್ರನು ಅವನನ್ನು ದಂಡಿಸಿ, ರಾಜ್ಯದಿಂದ ನಾಶಮಾಡಿ, ಅವನ ತಮ್ಮನಾದ ವಿಭೀಷಣನಿಗೆ ರಾಜ್ಯವನ್ನು ಕೊಟ್ಟಿದ್ದನು. ಸ್ವಾಯಂಭವ ರಾಜನಿಂದ ಹಿಡಿದು ಪಾಂಡವರವರೆಗೆ ಆರ್ಯರ ಚಕ್ರವರ್ತಿ ಸಾಮ್ರಾಜ್ಯವು ಇದ್ದಿತು. ಆಮೇಲೆ ಪಾರಸ್ಪರಿಕ ವಿರೋಧದಿಂದ ಕಾದಾಡಿ ಹಾಳಾದರು. ಏಕೆಂದರೆ ಈ ಪರಮಾತ್ಮನ ಸೃಷ್ಟಿಯಲ್ಲಿ ಅಭಿಮಾನಿಗಳೂ, ಅನ್ಯಾಯಕಾರಿಗಳೂ ಅವಿದ್ವಾಂಸರೂ ಆದವರ

ರಾಜ್ಯವು ಬಹುಕಾಲದವರೆಗೆ ನಡೆಯದು. ಮತ್ತು ಆವಶ್ಯಕತೆಗಿಂತಲೂ ಹೆಚ್ಚಿನ ಅಸಂಖ್ಯ ಐಶ್ವರ್ಯವು ಪ್ರಾಪ್ತವಾದಾಗ, ಸೋಮಾರಿತನ, ಪುರುಷಾರ್ಥದ ಅಭಾವ, ಹೊಟ್ಟೆಕಿಚ್ಚು, ದ್ವೇಷ, ವಿಷಯಾಸಕ್ತಿ, ಮತ್ತು ಪ್ರಮಾದ ಹೆಚ್ಚುವುದು ಜಗತ್ತಿನ ಸ್ವಾಭಾವಿಕ ಪ್ರವೃತ್ತಿಯು. ಇದರಿಂದ ದೇಶದಲ್ಲಿ ವಿದ್ಯಾ ಸುಶಿಕ್ಷಣಗಳು ನಷ್ಟವಾಗಿ, ದುರ್ಗುಣಗಳೂ ದುಷ್ಟವ್ಯಸನಗಳೂ ಹೆಚ್ಚುತ್ತವೆ; ಮದ್ಯಪಾನ, ಮಾಂಸಸೇವನ, ಬಾಲ್ಯ ವಿವಾಹ, ಸ್ವೇಚ್ಛಾಪ್ರವೃತ್ತಿ, ಮೊದಲಾದಂತಹ ದೋಷಗಳು ಹೆಚ್ಚುತ್ತವೆ. ಮತ್ತು ಯುದ್ಧವಿಭಾಗದಲ್ಲಿ, ಭೂಮಂಡಲದಲ್ಲಿ ಎದುರಿಸಬಲ್ಲ ಬೇರೊಬ್ಬನು ಇಲ್ಲದಷ್ಟು ಯುದ್ಧ, ವಿದ್ಯಾ, ಕೌಶಲವೂ, ಸೈನ್ಯವೂ ಹೆಚ್ಚಿದಾಗ, ಆ ಜನರಲ್ಲಿ ಪಕ್ಷಪಾತವೂ, ಅಭಿಮಾನವೂ ಪ್ರಬಲಿಸಿ, ಅನ್ಯಾಯವು ಹೆಚ್ಚುತ್ತದೆ. ಈ ದೋಷಗಳು ಹೆಚ್ಚಾದಾಗ, ಪರಸ್ಪರ ವಿರೋಧ ಹುಟ್ಟಿ ಅಥವಾ ಬೇರೆ ಕನಿಷ್ಠ ಕುಲಗಳಿಂದ ಯಾವನಾದರೂ ಅವರಿಗಿಂತ ಪ್ರಬಲಿಸಿ, ಅವರನ್ನು ಸೋಲಿಸಲು ಸಮರ್ಥನಾದ ಪುರುಷನು ಎದ್ದು ನಿಲ್ಲುತ್ತಾನೆ. ನಿದರ್ಶನವಾಗಿ ಮುಸಲ್ಮಾನ ಸಾಮ್ರಾಜ್ಯಕ್ಕೆ ಎದುರುನಿಂತು ಛತ್ರಪತಿ ಶಿವಾಜಿಯೂ, ಶ್ರೀ ಗೋವಿಂದಸಿಂಹನೂ ಅವರ ರಾಜ್ಯವನ್ನು ಛಿನ್ನ-ಛಿನ್ನ ಮಾಡಿದರು.

ಅಥ ಕಮೇತ್ಯೈರ್ವಾ ಪರೇಽನ್ಯೇ ಮಹಾಧನುರ್ಧರಾ ಶ್ಚಕ್ರವರ್ತಿನಃ ಕೇಚಿತ್ ಸುದ್ಯುಮ್ನಭೂರಿದ್ಯುಮ್ನೌ ಇಂದ್ರದ್ಯುಮ್ನಕುವಲಯಾಶ್ವಯೌವನಾಶ್ವಬರ್ಹ್ಯಶ್ವಾಶ್ವಪತಿ ಶಶಬಿಂದುಹರಿಶ್ಚಂದ್ರಾಂಬರೀಷನನಕ್ತುಸರ್ಯಾತಿಯಯಾತ್ಮನರಣ್ಯಾಕ್ಷಸೇನಾದಯಃ । ಅಥ ಮರುತ್ತ ಭರತಪ್ರಭೃತಯೋ ರಾಜಾನಃ ॥

[ಮೈತ್ರ್ಯುಪನಿಷತ್ ಪ್ರ ೧. ಖಂ. ೪]

ಸೃಷ್ಟಿಯಾದಂದಿನಿಂದ ಮಹಾಭಾರತಯುದ್ಧದ ವರೆಗ ಆರ್ಯ ಸಂತತಿಯವರೇ ಚಕ್ರವರ್ತಿ ಸಾರ್ವಭೌಮ ರಾಜರಾಗಿದ್ದರೆಂಬುದು ಈ ಮೊದಲಾದ ಪ್ರಮಾಣಗಳಿಂದ ಸಿದ್ಧವಾಗುತ್ತದೆ. ಈಗ ಇವರ

ಸಂತತಿಯ ಅಭಾಗ್ಯೋದಯದಿಂದ ರಾಜ್ಯಭ್ರಷ್ಟರಾಗಿ ವಿದೇಶೀಯರ ಪದಾಕ್ರಾಂತರಾಗುತ್ತಿದ್ದಾರೆ. ಸುದ್ಯುಮ್ನ, ಭೂರಿದ್ಯುಮ್ನ, ಇಂದ್ರದ್ಯುಮ್ನ, ಕುವಲಯಾಶ್ವ, ಯೌವನಾಶ್ವ, ಬದ್ಧ್ಯಶ್ವ, ಅಶ್ವಪತಿ, ಶಶಬಿಂದು, ಹರಿಶ್ಚಂದ್ರ, ಅಂಬರೀಷ, ನನಕ್ತು. ಸರ್ಯಾತಿ, ಯಯಾತಿ, ಅನರಣ್ಯ, ಅಕ್ಷಸೇನ, ಮರುತ್ತ, ಭರತ ಸಾರ್ವಭೌಮರ, ಸರ್ವಜಗತ್ಪ್ರಸಿದ್ಧ ಚಕ್ರವರ್ತಿ ರಾಜರ ಹೆಸರುಗಳನ್ನು ಬರೆದಿರುವಂತೆ, ಮನುಸ್ಮೃತಿ, ಮಹಾಭಾರತ ಮೊದಲಾದ ಗ್ರಂಥಗಳಲ್ಲಿ ಸ್ವಾಯಂಭವ ಮೊದಲಾದ ಚಕ್ರವರ್ತಿ-ರಾಜರ ಹೆಸರುಗಳನ್ನೂ ಸ್ಪಷ್ಟವಾಗಿ ಬರೆದಿದೆ. ಇವುಗಳನ್ನು ಸುಳ್ಳುಮಾಡುವುದು ಅಜ್ಞಾನಿಗಳ ಮತ್ತು ಪಕ್ಷಪಾತಿಗಳ ಕೆಲಸ.

ಪ್ರಶ್ನೆ:—ಬರೆದಿರುವ ಆಗ್ನೇಯಾಸ್ತ್ರ ಮೊದಲಾದ ವಿದ್ಯೆಗಳು ನಿಜವೋ, ಸುಳ್ಳೊ? ಮತ್ತು ತೋಪುಗಳೂ, ಬಂದೂಕಗಳೂ ಆ ಕಾಲದಲ್ಲಿದ್ದವೋ ಇಲ್ಲವೊ?

ಉತ್ತರ:—ಈ ಮಾತು ನಿಜ. ಈ ಶಸ್ತ್ರಗಳೂ ಇದ್ದವು. ಏಕೆಂದರೆ, ಪದಾರ್ಥ ವಿದ್ಯೆಯಿಂದ ಈ ಎಲ್ಲವೂ ಸಂಭವ.

ಪ್ರಶ್ನೆ:—ಅವು ದೇವತಾಮಂತ್ರಗಳಿಂದ ಸಿದ್ಧಿಸುತ್ತಿದ್ದವೆ?

ಉತ್ತರ:—ಇಲ್ಲ; ಯಾವುದರಿಂದ ಅಸ್ತ್ರ-ಶಸ್ತ್ರಗಳನ್ನು ಸಿದ್ಧಪಡಿಸುತ್ತಿದ್ದರೋ ಅಂತಹ ಈ ಮಾತುಗಳಿಗೆಲ್ಲಾ 'ಮಂತ್ರ'ವೆಂದು ಹೆಸರು. ಅಂದರೆ, ವಿಚಾರದಿಂದ ನಿರ್ಮಿಸಿ, ನಡೆಸುತ್ತಿದ್ದರು. ಮತ್ತು ಯಾವ ಮಂತ್ರ ಅಂದರೆ ಶಬ್ದಮಯವಾದುದಿದೆಯೋ, ಅದರಿಂದ ಯಾವ ದ್ರವ್ಯವೂ ಹುಟ್ಟುವುದಿಲ್ಲ. ಮತ್ತು ಯಾರಾದರೂ ಮಂತ್ರದಿಂದ ಅಗ್ನಿಯು ಹುಟ್ಟುವುದೆಂದು ಹೇಳಿದರೆ, ಅದು ಉಚ್ಚರಿಸುವವನ, ಹೃದಯವನ್ನೂ, ನಾಲಿಗೆಯನ್ನು ಬೂದಿಮಾಡಿಬಿಡುವುದು. ಕೊಲ್ಲ ಹೋಗುವುದು ಶತ್ರುವನ್ನು; ಸತ್ತುಹೋಗುವುದು ತಾನು! ಆದುದರಿಂದ ಮಂತ್ರವೆಂದರೆ, ವಿಚಾರ: ರಾಜಕರ್ಮಗಳನ್ನು ಆಲೋಚಿಸುವವನಿಗೆ 'ರಾಜಮಂತ್ರಿ' ಎಂದು ಹೇಳುವಂತೆ ಮಂತ್ರದಿಂದ ಅಂದರೆ ವಿಚಾರ

ದಿಂದ ಸೃಷ್ಟಿಯ ಸಮಸ್ತ ಪದಾರ್ಥಗಳ ಜ್ಞಾನ ಗಳಿಸಿ, ಬಳಿಕ ಕಾರ್ಯ ದಲ್ಲಿ ತರುವುದರಿಂದ ಅನೇಕವಿಧವಾದ ಪದಾರ್ಥಗಳೂ, ಕ್ರಿಯಾ ಕೌಶಲಗಳೂ ಉಂಟಾಗುತ್ತವೆ. ಹೇಗೆಂದರೆ, ಯಾವನಾದರೊಬ್ಬನು ಲೋಹದಿಂದ ಒಂದು ಬಾಣವನ್ನಾಗಲಿ, ಗುಂಡನ್ನಾಗಲಿ ತಯಾರಿಸಿ, ಅದರಲ್ಲಿ, ಅಗ್ನಿಯನ್ನು ಹೊತ್ತಿಸುವುದರಿಂದ ವಾಯುವಿನಲ್ಲಿ ಹೊಗೆ ಸುತ್ತಿ ಕೊಳ್ಳುವಂತಹ ಸೂರ್ಯಕಿರಣವಾಗಲಿ, ವಾಯುವಾಗಲಿ ಸೋಕುತ್ತಲೇ ಬೆಂಕಿ ಧಗ್ಗನೆ ಹೊತ್ತಿಕೊಳ್ಳುವಂತಹ ಪದಾರ್ಥಗಳನ್ನು ತುಂಬಿದ್ದರೆ ಅದಕ್ಕೆ 'ಆಗ್ನೇಯಾಸ್ತ್ರ' ವೆಂದು ಹೆಸರು. ಮತ್ತೊಬ್ಬನು ಇದನ್ನು ನಿವಾರಿಸಬೇಕೆಂದು ಅಪೇಕ್ಷಿಸಿದರೆ ಅದರ ಮೇಲೆ ವಾರುಣಾಸ್ತ್ರವನ್ನು ಪ್ರಯೋಗಿಸಬೇಕು. ಅಂದರೆ—ಶತ್ರುವು ಶತ್ರುವಿನ ಸೇನೆಯ ಮೇಲೆ ಆಗ್ನೇಯಾಸ್ತ್ರವನ್ನು ಪ್ರಯೋಗಿಸಿ ನಾಶಮಾಡಬಯಸಿದಂತೆ, ತನ್ನ ಸೇನೆಯ ರಕ್ಷಣೆಗಾಗಿ ಸೇನಾಪತಿಯು ವಾರುಣಾಸ್ತ್ರದಿಂದ ಆಗ್ನೇಯಾಸ್ತ್ರ ವನ್ನು ನಿವಾರಿಸಬೇಕು. ಅದು, ಯಾವುದರ ಹೊಗೆಯು ವಾಯುಸ್ಪರ್ಶ ವಾದೊಡನೆಯೇ ಮೋಡವಾಗಿ ಮಳೆಕರೆಯುವುದೋ ಮತ್ತು ಅಗ್ನಿಯ ನ್ನಾರಿಸಿಬಿಡುವುದೋ, ಅಂತಹ ಪದಾರ್ಥಗಳ ಯೋಗದಿಂದ ಆಗುತ್ತದೆ. ಯಾವುದು ಶತ್ರುವಿನ ಮೇಲೆ ಪ್ರಯೋಗಿಸುವುದರಿಂದ ಅವನ ಅಂಗ ಗಳನ್ನು ಬಿಗಿಯಾಗಿ ಕಟ್ಟಿಬಿಡುತ್ತದೋ, ಆ ನಾಗಪಾಶವೂ ಹೀಗೆಯೇ ಆಗುತ್ತದೆ. ಹಾಗೆಯೇ, ಯಾವುದರಲ್ಲಿ ಮಾದಕ ಪದಾರ್ಥವನ್ನು ಸೇರಿಸುವುದರಿಂದ ಅದರ ಹೊಗೆಯು ಸೋಕುತ್ತಲೇ ಶತ್ರುಗಳು ನಿದ್ರಿತರು ಅಂದರೆ ಮೂರ್ಛಿತರಾಗುತ್ತಾರೋ ಆ ಮೋಹನಾಸ್ತ್ರವೂ ಆಗುತ್ತದೆ. ಇದೇ ರೀತಿಯಾಗಿ ಎಲ್ಲಾ ಶಸ್ತ್ರಾಸ್ತ್ರಗಳೂ ನಿರ್ಮಿತವಾಗು ತ್ತಿದ್ದವು. ಒಂದು ತಂತಿ ಅಥವಾ ಒಂದು ಸೀಸೆಯಲ್ಲಿ ಅಥವಾ ಬೇರಾವುದಾದರೂ ವಸ್ತುವಿನಲ್ಲಿ ವಿದ್ಯುತ್ತನ್ನು ಉತ್ಪತ್ತಿಮಾಡಿ ಶತ್ರುಗಳನ್ನು ನಾಶಮಾಡುತ್ತಿದ್ದರು. ಇದಕ್ಕೆ ಸಹ 'ಆಗ್ನೇಯಾಸ್ತ್ರ' ಅಥವಾ 'ಪಾಶುಪತಾಸ್ತ್ರ' ಎಂದು ಹೇಳುತ್ತಾರೆ ತೋಪು ಮತ್ತು ಬಂದೂಕ ಇವೆರಡು ಹೆಸರುಗಳು ಅನ್ಯದೇಶ ಭಾಷೆಯವು. ಸಂಸ್ಕೃತ ಅಥವಾ ಆರ್ಯಾವರ್ತೀಯ ಭಾಷೆಯವಲ್ಲ. ವಿದೇಶೀಯರು 'ತೋಪು' ಎಂದು ಕರೆಯುವುದನ್ನು ಸಂಸ್ಕೃತ ಮತ್ತು ಭಾಷೆಯಲ್ಲಿ 'ಶತಘ್ನೀ'

ಎಂದೂ, 'ಬಂದೂಕ' ಎಂದು ಕರೆಯುವುದನ್ನು ಸಂಸ್ಕೃತ ಮತ್ತು ಆರ್ಯಭಾಷೆಯಲ್ಲಿ 'ಭುಶುಂಡಿ' ಎಂದೂ ಕರೆಯುತ್ತಾರೆ. ಸಂಸ್ಕೃತ ವಿದ್ಯೆಯನ್ನು ಓದದವರು ಭ್ರಾಂತಿಯಿಂದ ಏನೇನೋ ಬರೆಯುತ್ತಾರೆ. ಮತ್ತು ಏನೇನೋ ಓದರುತ್ತಾರೆ. ಬುದ್ಧಿವಂತರು ಅದನ್ನು ಪ್ರಮಾಣವಾಗಿ ಎಣಿಸುವುದಿಲ್ಲ.

ಮತ್ತು ಭೂಮಂಡಲದಲ್ಲಿ ಹರಡಿರುವ ಎಲ್ಲಾ ವಿದ್ಯೆಯೂ ಆರ್ಯಾವರ್ತದೇಶದಿಂದ ಮಿಶ್ರದೇಶದವರಿಗೂ, ಅವರಿಂದ ಗ್ರೀಕರಿಗೂ, ಅವರಿಂದ ರೋಮಕರಿಗೂ, ಅವರಿಂದ ಯೂರೋಪ್ ದೇಶಕ್ಕೂ, ಅವರಿಂದ ಅಮೇರಿಕಾ ಮೊದಲಾದ ದೇಶಗಳಿಗೂ ಹರಡಿದೆ. ಇಂದಿನವರೆಗೆ ಆರ್ಯಾವರ್ತ ದೇಶದಲ್ಲಿ ಇರುವಷ್ಟು ಸಂಸ್ಕೃತವಿದ್ಯೆಯ ಪ್ರಚಾರವು ಉಳಿದ ಯಾವ ದೇಶಗಳಲ್ಲಿಯೂ ಇರುವುದಿಲ್ಲ. ''ಜರ್ಮನಿ ದೇಶದಲ್ಲಿ ಸಂಸ್ಕೃತ ವಿದ್ಯೆಯ ಪ್ರಚಾರ ಬಹಳವಾಗಿದೆ. ಮೋಕ್ಷಮೂಲರು (Max Muller) ಓದಿರುವಷ್ಟು ಸಂಸ್ಕೃತವನ್ನು ಬೇರಾರೂ ಓದಿಲ್ಲ'' ಎಂದು ಜನರಾಡುವುದು ಹೇಳಿಕೆ ಮಾತ್ರವೇ. ಏಕೆಂದರೆ—'ನಿರಸ್ತಪಾದಪೇ ದೇಶೇ ಎರಂಡೋಪಿ ದ್ರುಮಾಯತೇ' ಅಂದರೆ ಮರಗಳೇ ಇಲ್ಲದ ದೇಶದಲ್ಲಿ ಹರಳುಗಿಡವನ್ನೇ ಮಹಾವೃಕ್ಷವೆಂದು ತಿಳಿಯುತ್ತಾರೆ. ಹಾಗೆಯೇ ಯೂರೋಪು ದೇಶದಲ್ಲಿ ಸಂಸ್ಕೃತ ವಿದ್ಯೆಯು ಪ್ರಚಾರದಲ್ಲಿಲ್ಲದಿರುವುದರಿಂದ ಜರ್ಮನರೂ, ಮೋಕ್ಷಮೂಲರೂ ಸ್ವಲ್ಪ ಓದಿದುದೇ ಆ ದೇಶಕ್ಕೆ ದೊಡ್ಡದಾಗಿದೆ. ಆದರೆ ಆರ್ಯಾವರ್ತದ ಕಡೆ ನೋಡಿದರೆ ಅವರ ಗಣನೆ ಅತಿ ಕಡಿಮೆ. ಏಕೆಂದರೆ ಜರ್ಮನಿ ದೇಶವಾಸಿಯಾದ ಒಬ್ಬ 'ಪ್ರಿನ್ಸಿಪಲ್' ಮಹಾಶಯರು ಬರೆದಿರುವ ಪತ್ರವನ್ನು ನೋಡಿ, ಜರ್ಮನಿಯಲ್ಲಿ ಸಂಸ್ಕೃತದಲ್ಲಿ ಬರೆದ ಪತ್ರಗಳಿಗೆ ಅರ್ಥಮಾಡುವವರೂ ಸಹ ತೀರ ಕಡಿಮೆಯಾಗಿರುತ್ತಾರೆ ಎಂದು ತಿಳಿದೆ. ಮತ್ತು ಮೋಕ್ಷಮೂಲರ ಸಂಸ್ಕೃತ ಸಾಹಿತ್ಯವನ್ನೂ ವೇದಗಳ ವ್ಯಾಖ್ಯಾನವನ್ನೂ ಸ್ವಲ್ಪ ನೋಡಿ, ನನಗೆ ಆರ್ಯಾವರ್ತದ ಪಂಡಿತರು ಬರೆದಿರುವ ಟೀಕೆಗಳನ್ನು ಅಲ್ಲಿ-ಇಲ್ಲಿ ನೋಡಿ ಏನೇನೋ ಮನಬಂದಂತೆ ಬರೆದಿದ್ದಾರೆ ಎಂಬುದು ಕಂಡುಬಂದಿದೆ. ಉದಾಹರಣೆಗೆ—

ಯುಂಜಂತಿ ಬ್ರಧ್ನಮರುಷಂ ಚರಂತಂ ಪರಿತಸ್ಥುಷಃ ।
ರೋಚಂತೇ ರೋಚನಾ ದಿವಿ ॥

[ಋಕ್. ೧-೯-೫೪-

—ಎಂಬ ಮಂತ್ರಕ್ಕೆ ಕುದುರೆಯಪರವಾಗಿ ಅರ್ಥಮಾಡಿದ್ದಾರೆ. ಇದಕ್ಕಿಂತಲೂ ಸಾಯಣಾಚಾರ್ಯರು ಬರೆದಿರುವ ಸೂರ್ಯನಪರವಾದ ಅರ್ಥವು ಚೆನ್ನಾಗಿರುತ್ತದೆ. ಆದರೆ, ಇದರ ಸರಿಯಾದ ಅರ್ಥ ಪರಮಾತ್ಮ ಎಂದು. ಅದನ್ನು ನಾನು ಬರೆದಿರುವ ' ಋಗ್ವೇದಾದಿ ಭಾಷ್ಯಭೂಮಿಕೆ ' ಯಲ್ಲಿ ನೋಡಿಕೊಳ್ಳಿರಿ. ಅದರಲ್ಲಿ ಈ ಮಂತ್ರದ ಯಥಾರ್ಥವಾದ ಅರ್ಥ ಬರೆದಿದ್ದೇನೆ. ಇಷ್ಟರಿಂದ ಜರ್ಮನಿದೇಶದ ಮೋಕ್ಷಮೂಲರ ಸಾಹೇಬರಿಗೆ ಸಂಸ್ಕೃತವಿದ್ಯೆಯ ಪಾಂಡಿತ್ಯ ಎಷ್ಟಿದೆ ಎಂದು ತಿಳಿದುಕೊಳ್ಳಿರಿ. ಭೂಮಂಡಲದಲ್ಲಿ ವ್ಯಾಪಿಸಿರುವ ಸಮಸ್ತ ವಿದ್ಯೆಗಳೂ, ಮತಗಳೂ ಆರ್ಯಾವರ್ತದಿಂದಲೇ ಪ್ರಚಾರದಲ್ಲಿ ಬಂದವೆಂಬುದು ನಿಶ್ಚಯವಾಗಿದೆ. ನೋಡಿರಿ, ಪ್ಯಾರಿಸ್ ಅಂದರೆ ಫ್ರಾನ್ಸ್ ದೇಶದ ನಿವಾಸಿಯಾದ *ಜೆಕಾಲ್ಯೆಟ್ ಎಂಬುವನು ತನ್ನ ' ಬೈಬಲ್ ಇನ್ ಇಂಡಿಯಾ ' (Bible in India) ಎಂಬ ಗ್ರಂಥದಲ್ಲಿ " ಆರ್ಯಾವರ್ತವು ಸಮಸ್ತ ವಿದ್ಯೆಗಳಿಗೂ ಸೌಜನ್ಯಕ್ಕೂ ಭಂಡಾರವಾಗಿದೆ. ಈ ದೇಶದಿಂದಲೇ ಎಲ್ಲಾ ವಿದ್ಯೆಗಳೂ ಮತ್ತು ಮತಗಳೂ ಪ್ರಚಾರದಲ್ಲಿ ಬಂದಿವೆ " ಎಂದು ಬರೆದಿದ್ದಾನೆ ಮತ್ತು " ಹೇ ಪರಮೇಶ್ವರ; ಪ್ರಾಚೀನ ಕಾಲದಲ್ಲಿ ಆರ್ಯಾವರ್ತ ದೇಶದಲ್ಲಿ ಎಂತಹ ಉನ್ನತಿಯಿದ್ದಿತೋ, ಅಂತಹ ಉತ್ತಮ ಸ್ಥಿತಿಯನ್ನು ನಮ್ಮ ದೇಶಕ್ಕೂ ಅನುಗ್ರಹಿಸು " ಎಂದು ಪರಮಾತ್ಮನನ್ನು ಬೇಡಿಕೊಂಡಿದ್ದಾನೆ. ಆ ಗ್ರಂಥದಲ್ಲಿ ನೋಡಿಕೊಳ್ಳಿರಿ; ಹಾಗೂ ' ದಾರಾಶಿಕೋಹ 'ನೆಂಬ ಬಾದಶಹನೂ ಕೂಡ " ಸಂಸ್ಕೃತಭಾಷೆಯಲ್ಲಿರುವಂತೆ ಸಂಪೂರ್ಣ ವಿದ್ಯೆಯು ಬೇರೆ ಯಾವ ಭಾಷೆಯಲ್ಲಿಯೂ ಇಲ್ಲ "ವೆಂದು ನಿಶ್ಚಯಿಸಿದ್ದನು. ಅವನು ಉಪನಿಷತ್ತುಗಳ ಭಾಷಾಂತರದಲ್ಲಿ—' ನಾನು ಅರಬ್ಬಿ ಮೊದಲಾದ ಬಹಳ ಭಾಷೆಗಳನ್ನು ಅಭ್ಯಾಸ ಮಾಡಿದೆನು, ಆದರೆ ನನ್ನ ಮನದ ಸಂದೇಹಗಳು

* ಮೂಲತಃ ' ಮೋಲುಸ್ಪಕರ್ ' ಎಂಬುದು ಆತನ ಹೆಸರು.

ದೂರವಾಗಿ, ಆನಂದವಾಗಲಿಲ್ಲ. ಸಂಸ್ಕೃತಭಾಷೆಯನ್ನು ಓದಿ ಕೇಳಿದ ಮೇಲೆ ನನ್ನ ಮನಸ್ಸಿನ ಸಂದೇಹಗಳು ದೂರವಾಗಿ ಬಹಳ ಆನಂದ ವಾಗಿದೆ '' ಎಂದು ಬರೆದಿದ್ದಾನೆ. ಕಾಶಿಯಲ್ಲಿ 'ಮಾನಮಂದಿರ'ದಲ್ಲಿರುವ ' ಶಿಶುಮಾರ ಚಕ್ರವನ್ನು ನೋಡಿರಿ, ಅದು ಕಾಪಾಡುವವರಿಲ್ಲದೆ ಪಾಳು ಬಿದ್ದಿದ್ದರೂ, ಇಂದಿಗೂ ಖಗೋಳದ ವಿಷಯವಾಗಿ ಅನೇಕ ಸಮಾಚಾರ ಗಳನ್ನು ನಮಗೆ ತಿಳಿಯಪಡಿಸುವಷ್ಟು ಉತ್ತಮಸ್ಥಿತಿಯಲ್ಲಿರುತ್ತದೆ. ' ಸವಾಯಿ ಜಯಪುರಾಧೀಶರು ' ಮುರಿದುಬಿದ್ದಿರುವ ಅದನ್ನು ಸರಿಪಡಿ ಸಿದರೆ ಜಗತ್ತಿಗೆ ಬಹಳ ಒಳ್ಳೆಯದಾಗುವುದು. ಆದರೆ ಅಂತಹ ಶಿರೋ ಮಣಿ ದೇಶಕ್ಕೆ ಭಾರತ-ಯುದ್ಧವು ಇನ್ನೂ ಪೂರ್ವಸ್ಥಿತಿಗೆ ಬರಲಾಗ ದಂತೆ ಆಘಾತವನ್ನುಂಟುಮಾಡಿತು. ಏಕೆಂದರೆ—ಅಣ್ಣ-ತಮ್ಮಂದಿರು ಒಬ್ಬರನ್ನೊಬ್ಬರು ಸಾಯಿಸತೊಡಗಿದರೆ, ನಾಶಹೊಂದಿರುವುದಲ್ಲಿ ಸಂದೇಹವೇನು? ' ವಿನಾಶಕಾಲೇ ವಿಪರೀತ ಬುದ್ಧಿಃ ' [ವೃದ್ಧ ಚಾಣಕ್ಯ ೧೬, ೧೮] ಇದು ಯಾವನೋ ಒಬ್ಬ ಕವಿಯ ವಚನ. ವಿನಾಶಕಾಲವು ಸಮೀಪಿಸಿದಾಗ ಬುದ್ಧಿಯು ತಲೆಕೆಳಗಾಗಿ ವಿಪರೀತ ಕೆಲಸಗಳನ್ನು ಮಾಡುತ್ತಾರೆ. ಅಂತಹ ಸಮಯದಲ್ಲಿ ಯಾರಾದರೂ ಸರಿಯಾಗಿ ಬುದ್ಧಿವಾದಗಳನ್ನು ಹೇಳಿದರೆ, ಅದನ್ನು ತಪ್ಪೆಂದು ತಿಳಿಯುತ್ತಾರೆ. ಮತ್ತು ತಪ್ಪು ಉಪದೇಶವಿತ್ತರೆ, ಸರಿಯೆಂದು ತಿಳಿಯುತ್ತಾರೆ. ದೊಡ್ಡ ದೊಡ್ಡ ರಾಜರೂ, ಮಹಾರಾಜರೂ, ವಿದ್ವಾಂಸರೂ, ಋಷಿಗಳೂ, ಮಹರ್ಷಿಗಳೂ ಬಹುಮಂದಿ ಭಾರತ ಯುದ್ಧಕ್ಕೆ ಬಲಿಯಾಗಿ ಹೋದರು. ಅನೇಕರು ಸತ್ತುಹೋದರು. ವಿದ್ಯೆ ಮತ್ತು ವೈದಿಕ ಧರ್ಮದ ಪ್ರಚಾರವು ನಷ್ಟವಾಗುತ್ತ ಬಂದಿತು. ಪರಸ್ಪರ ಹೊಟ್ಟೆ ಕಿಚ್ಚು, ದ್ವೇಷ, ಅಹಂಕಾರಪಡಲಾರಂಭಿಸಿದರು. ಬಲಿಷ್ಠನಾದವನು ದೇಶವನ್ನು ಆಕ್ರಮಿಸಿಕೊಂಡು ತಾನೇ ರಾಜನಾಗಿ ಕುಳಿತನು. ಇದೇ ರೀತಿ ಆರ್ಯಾವರ್ತದೇಶದಲ್ಲಿ ತುಂಡುತುಂಡಾದ ರಾಜ್ಯಗಳು ತಲೆಯೆತ್ತಿ ದವು. ಇನ್ನು ದ್ವೀಪ-ದ್ವೀಪಾಂತರಗಳಲ್ಲಿ ರಾಜ್ಯ ವ್ಯವಸ್ಥೆ ಮಾಡುವವ ರಾರು? ಬ್ರಾಹ್ಮಣರೇ ವಿದ್ಯಾವಿಹೀನರಾಗಿಹೋದಮೇಲೆ, ಕ್ಷತ್ರಿಯ-ವೈಶ್ಯ-ಶೂದ್ರರ ಅವಿದ್ಯಾಂಸತನದ ಬಗ್ಗೆ ಹೇಳಬೇಕಾದುದೇನು? ಪರಂಪರೆಯಾಗಿ ಬಂದಿದ್ದ ಅರ್ಥಸಹಿತ ವೇದಾದಿ ಶಾಸ್ತ್ರಗಳ

ಅಧ್ಯಯನದ ಪ್ರಚಾರವೂ ಬಿಟ್ಟುಹೋಯಿತು. ಕೇವಲ ಹೊಟ್ಟೆಪಾಡಿಗಾಗಿ ಬ್ರಾಹ್ಮಣರು ವೇದಗಳ ಪಾಠ ಮಾತ್ರ ಮಾಡುತ್ತಿದ್ದರು. ಆ ಓದು ಪಾಠವನ್ನೂ ಕ್ಷತ್ರಿಯ ಮೊದಲಾದವರಿಗೆ ಕಲಿಸಲಿಲ್ಲ. ಏಕೆಂದರೆ– ವಿದ್ಯಾವಿಹೀನರಾದವರು ಗುರುಗಳಾದಾಗ ವಂಚನೆ, ಮೋಸ, ಅಧರ್ಮಗಳೂ ಅವರಲ್ಲಿ ಹೆಚ್ಚುತ್ತ ಬಂದವು. ಬ್ರಾಹ್ಮಣರು ಹೊಟ್ಟೆಪಾಡಿಗಾಗಿ ಏನಾದರೊಂದು ವ್ಯವಸ್ಥೆ ಮಾಡಬೇಕೆಂದು ಯೋಚಿಸಿದರು. ಪರಸ್ಪರ ಸಲಹೆ ಮಾಡಿಕೊಂಡು ನಿಶ್ಚಯಿಸಿ, ಕ್ಷತ್ರಿಯಾದಿಗಳಿಗೆ, "ನಾವೇ ನಿಮಗೆ ಪೂಜಾಯೋಗ್ಯರಾದ ದೇವತೆಗಳು. ನಮ್ಮ ಸೇವೆಯನ್ನು ಮಾಡದೆ ನಿಮಗೆ ಸ್ವರ್ಗವಾಗಲಿ, ಮುಕ್ತಿಯಾಗಲಿ ದೊರೆಯುವುದಿಲ್ಲ. ಆದರೆ ನಮ್ಮ ಸೇವೆಯನ್ನು ಮಾಡದಿದ್ದರೆ, ನೀವು ಘೋರ ನರಕದಲ್ಲಿ ಬೀಳುವಿರಿ" ಎಂದು ಉಪದೇಶ ಮಾಡತೊಡಗಿದರು. ಹೀಗೆ ಪೂರ್ಣ ವಿದ್ವಾಂಸರೂ, ಧಾರ್ಮಿಕರೂ ಆದವರಿಗೆ ಬ್ರಾಹ್ಮಣರೆಂದೂ ಪೂಜ್ಯರೆಂದೂ ವೇದಗಳಲ್ಲಿ ಮತ್ತು ಋಷಿಮುನಿಗಳ ಶಾಸ್ತ್ರಗಳಲ್ಲಿ ಬರೆದಿರುವುದನ್ನು ಮೂರ್ಖರೂ, ವಿಷಯಲಂಪಟರೂ, ಕಪಟಿಗಳೂ, ಅಧಾರ್ಮಿಕರೂ ಆದವರು ತಮ್ಮ ಪರವಾಗಿ ಅನ್ವಯಿಸಿಕೊಂಡು ಕುಳಿತರು. ಆಪ್ತ ವಿದ್ವಾಂಸರ ಲಕ್ಷಣಗಳು ಈ ಮೂರ್ಖರಿಗೆ ಎಂದಿಗಾದರೂ ಅನ್ವಯಿಸುವುವೆ? ಆದರೆ ಯಜಮಾನರಾದ ಕ್ಷತ್ರಿಯ ಮೊದಲಾದವರು ಸಂಸ್ಕೃತ ವಿದ್ಯೆಯಿಂದ ಪೂರ್ಣ ರಹಿತರಾದಾಗ ಅವರೆದುರಿಗೆ ಹೊಡೆದ ಬುರುಡೆಗಳನ್ನೆಲ್ಲಾ ಆ ಬಡಪಾಯಿಗಳು ಒಪ್ಪಿಕೊಂಡರು. ಆಗ ಈ ನಾಮಮಾತ್ರ ಬ್ರಾಹ್ಮಣರಿಗೆ ಅನುವು ದೊರೆಯಿತು. ಎಲ್ಲರನ್ನೂ ತಮ್ಮ ಮಾತಿನ ಬಲೆಯಲ್ಲಿ ಹಾಕಿಕೊಂಡು ವಶಪಡಿಸಿಕೊಂಡರು ಮತ್ತು 'ಬ್ರಹ್ಮವಾಕ್ಯಂ ಜನಾರ್ದನಃ'— "ಬ್ರಾಹ್ಮಣನ ಮುಖದಿಂದ ಹೊರಬಿದ್ದ ಮಾತುಗಳೆಲ್ಲವೂ ಸಾಕ್ಷಾತ್ ಭಗವಂತನ ಮುಖದಿಂದ ಬಂದವುಗಳೆಂದು ತಿಳಿಯಬೇಕು"—ಎಂದು ಬೋಧಿಸುತ್ತಾ ಬಂದರು. ಕ್ಷತ್ರಿಯಾದಿವರ್ಣಗಳು ಕಣ್ಣಿನಿಂದ ಕುರುಡರೂ, ದುಡ್ಡಿನಿಂದ ದೊಡ್ಡವರೂ ಆಗಿ, ಅಂದರೆ ಒಳಗೆ ವಿದ್ಯಾನೇತ್ರ ಒಡೆದುಹೋಗಿ, ಹಣದಗಂಟನ್ನು ಮಾತ್ರ ಪುಷ್ಕಳವಾಗಿ ಉಳ್ಳವರಾಗಿ ಇದ್ದ ಶಿಷ್ಯರು ಸಿಕ್ಕಿದಾಗ, ಈ ವೃಥಾ ಬ್ರಾಹ್ಮಣ ನಾಮಧಾರಿಗಳಿಗೆ,

ವಿಷಯಾನಂದಕ್ಕೆ ಉಪವನ ದೊರೆಯಿತು. ಆಗ ಇವರು ಭೂಮಂಡಲದಲ್ಲಿರುವ ಉತ್ತಮಪದಾರ್ಥಗಳೆಲ್ಲವೂ ಬ್ರಾಹ್ಮಣರಿಗಾಗಿಯೇ ಇವೆ— ಎಂದು ಕೂಡ ಪ್ರಸಿದ್ಧಪಡಿಸಿದರು. ಅಂದರೆ, ಗುಣ-ಕರ್ಮ-ಸ್ವಭಾವಗಳ ಮೂಲಕವಾಗಿದ್ದ ವರ್ಣವ್ಯವಸ್ಥೆಯನ್ನು ಹಾಳುಮಾಡಿ, ಜನ್ಮದಿಂದಲೇ ನಿರ್ಧರಿಸಿದರು ಮತ್ತು ಸತ್ತವನಿಗಾಗಿಯೂ ಕೂಡ ದಾನಗಳನ್ನು ಯಜಮಾನರಿಂದ ಪಡೆಯಲಾರಂಭಿಸಿದರು; ತಮಗೆ ಮನಬಂದಂತೆ ಆಚರಿಸತೊಡಗಿದರು. 'ನಾವು ಭೂದೇವರು. ನಮ್ಮ ಸೇವೆಯನ್ನು ಮಾಡದೆ, ಯಾರಿಗೂ ದೇವಲೋಕವು ಲಭಿಸುವುದಿಲ್ಲ.' ಎಂಬ ವರೆಗೆ ಬಂದರು. ಇವರೊಡನೆ 'ತಾವು ಯಾವ ಲೋಕಕ್ಕೆ ದಯಮಾಡಿಸುತ್ತೀರಿ? ನಿಮ್ಮ ಕಾರ್ಯಗಳಂತೂ ಘೋರ ನರಕಕ್ಕೆ ಅನುಕೂಲವಾಗಿವೆ. ಕ್ರಿಮಿ-ಕೀಟ-ಪತಂಗಾದಿಗಳಾಗಿ ಹುಟ್ಟುವಿರಿ' ಎಂದು ಹೇಳಿದರೆ ಇವರು ಕೋಪದಿಂದ 'ನಾವು ಶಾಪಕೊಟ್ಟರೆ, ನೀವು ಹಾಳಾಗಿಹೋಗುತ್ತೀರಿ. ಏಕೆಂದರೆ 'ಬ್ರಹ್ಮದ್ರೋಹೀ ವಿನಶ್ಯತಿ' ಬ್ರಾಹ್ಮಣರಿಗೆ ದ್ರೋಹಮಾಡುವವನು ಹಾಳಾಗಿಹೋಗುವನೆಂದು ಬರೆದಿದೆ' ಎಂದು ಉತ್ತರ ಹೇಳುವರು. ಹೌದು: ಸಂಪೂರ್ಣ ವೇದವನ್ನು, ಪರಮಾತ್ಮನನ್ನೂ ತಿಳಿದ ಧರ್ಮಾತ್ಮರೂ, ಸರ್ವಲೋಕೋಪಕಾರಿಗಳೂ ಆದ ಮಹಾಪುರುಷರೊಡನೆ ಹಗೆತನವನ್ನು ಕಟ್ಟಿಕೊಳ್ಳುವವನು ಅವಶ್ಯ ನಾಶಹೊಂದುವನು—ಎಂಬುದು ಸತ್ಯ. ಆದರೆ ಬ್ರಾಹ್ಮಣರಲ್ಲದವರಿಗೆ ಬ್ರಾಹ್ಮಣರೆಂಬ ಹೆಸರಾಗಲಿ ಅವರಿಗೆ ಸೇವೆಯನ್ನು ಮಾಡುವುದಾಗಲಿ ಯೋಗ್ಯನಲ್ಲ.

ಪ್ರಶ್ನೆ :—ಹಾಗಾದರೆ ನಾವು ಯಾರು?

ಉತ್ತರ :—ನೀವು ಪೋಪರು.

ಪ್ರಶ್ನೆ :—ಪೋಪರೆಂದು ಯಾರನ್ನು ಕರೆಯುತ್ತಾರೆ?

ಉತ್ತರ: —ರೋಮನ್ ಭಾಷೆಯಲ್ಲಿ ದೊಡ್ಡವನಿಗೂ, ತಂದೆಗೂ 'ಪೋಪ' ಎಂದು ಹೆಸರು; ಆದರೆ ಈಗ ಛಲ-ಕಪಟಗಳಿಂದ ಇತರರನ್ನು ಮೋಸಪಡಿಸಿ ತಮ್ಮ ಸ್ವಾರ್ಥ ಸಾಧಿಸಿಕೊಳ್ಳುವವರಿಗೆ 'ಪೋಪ' ರೆಂದು ಹೇಳುತ್ತಾರೆ.

ಪ್ರಶ್ನೆ:—ನಾವಾದರೋ ಬ್ರಾಹ್ಮಣರೂ, ಸಾಧುಗಳೂ ಆಗಿದ್ದೇವೆ. ಏಕೆಂದರೆ–ನಮ್ಮ ತಂದೆ–ಬ್ರಾಹ್ಮಣ ಮತ್ತು ತಾಯಿ ಬ್ರಾಹ್ಮಣಿತಿ; ಮತ್ತು ನಾವು ಇಂತಹ ಒಬ್ಬ ಸಾಧುವಿನ ಶಿಷ್ಯರಾಗಿದ್ದೇವೆ.

ಉತ್ತರ:—ಇದು ನಿಜ. ಆದರೆ ಸಹೋದರರೇ! ಕೇಳಿರಿ. ತಾಯಿತಂದೆಗಳು ಬ್ರಾಹ್ಮಣಿತಿ ಮತ್ತು ಬ್ರಾಹ್ಮಣರಾದ ಮಾತ್ರದಿಂದ ಮತ್ತು ಯಾವನೋ ಒಬ್ಬ ಸಾಧುವಿಗೆ ಶಿಷ್ಯರಾದ ಮಾತ್ರದಿಂದ ಬ್ರಾಹ್ಮಣರು ಅಥವಾ ಸಾಧುಗಳಾಗಲಾರರು. ಆದರೆ, ಯಾರು ಪರೋಪಕಾರಿಗಳಾಗಿರುತ್ತಾರೋ, ಅವರು ಪರಿಶುದ್ಧವಾದ ಗುಣ–ಕರ್ಮ–ಸ್ವಭಾವಗಳಿಂದ ಬ್ರಾಹ್ಮಣರು ಅಥವಾ ಸಾಧುಗಳು ಆಗುತ್ತಾರೆ. ರೋಮನ್ ದೇಶದ ಪೋಪರು ತಮ್ಮ ಶಿಷ್ಯರೊಡನೆ " ನೀವು ನಿಮ್ಮ ಪಾಪಗಳನ್ನು ನಮ್ಮ ಎದುರಿಗೆ ಹೇಳಿಕೊಂಡರೆ, ನಾವು ಅವುಗಳನ್ನು ಕ್ಷಮಿಸಿಬಿಡುವೆವು. ನಮ್ಮ ಸೇವೆಯನ್ನು ಮಾಡದೆ, ನಮ್ಮ ಅಪ್ಪಣೆಯನ್ನು ಪಡೆಯದೆ ಯಾವನೂ ಸ್ವರ್ಗಕ್ಕೆ ಹೋಗಲಾರನು. ನೀವು ಸ್ವರ್ಗಕ್ಕೆ ಹೋಗಬೇಕಾದರೆ, ನಮ್ಮ ಬಳಿ ಎಷ್ಟು ರೂಪಾಯಿಗಳನ್ನು, ಜಮೆಮಾಡಿಡುವಿರೋ, ಅಷ್ಟು ರೂಪಾಯಿಗಳ ಸಾಮಗ್ರಿಗಳು ಮಾತ್ರ ನಿಮಗೆ ಸ್ವರ್ಗದಲ್ಲಿ ದೊರೆಯುತ್ತವೆ." ಎಂದು ಹೇಳುತ್ತಿದ್ದರು. ಈ ಮಾತುಗಳನ್ನು ಕೇಳಿ ಯಾವನಾದರೂ ಕಣ್ಣಿನ ಕುರುಡ ಮತ್ತು ದುಡ್ಡಿನ ದೊಡ್ಡಪ್ಪನು ಸ್ವರ್ಗಕ್ಕೆ ಹೋಗಬೇಕೆಂಬ ಅಪೇಕ್ಷೆಯಿಂದ, ಪೋಪರಿಗೆ ಯಥೇಷ್ಟವಾಗಿ ಹಣವನ್ನು ಕೊಟ್ಟರೆ, ಆ ಪೋಪರು ಯೇಸು ಮತ್ತು ಮೇರಿಯ ವಿಗ್ರಹಗಳ ಮುಂದೆ ನಿಂತು, " ಹೇ, ಭಗವಾನ್ ಯೇಸುದೇವ! ಈ ಮನುಷ್ಯನು ಸ್ವರ್ಗಕ್ಕೆ ಬರಬೇಕೆಂಬ ಅಪೇಕ್ಷೆಯಿಂದ ನಿನ್ನ ಹೆಸರಿನಲ್ಲಿ ಒಂದು ಲಕ್ಷ ರೂಪಾಯಿಗಳನ್ನು ನಮ್ಮಲ್ಲಿ ಜಮೆಮಾಡಿ ಇಟ್ಟಿದ್ದಾನೆ. ಈತನು ಸ್ವರ್ಗಕ್ಕೆ ಬಂದಾಗ ನೀನು ನಿನ್ನ ತಂದೆಯ ಸ್ವರ್ಗರಾಜ್ಯದಲ್ಲಿ ಇಪ್ಪತ್ತೈದು ಸಾವಿರ ರೂಪಾಯಿಗಳ ತೋಟ–ತುಡಿಕೆಗಳನ್ನೂ, ಇಪ್ಪತ್ತೈದು ಸಾವಿರ ರೂಪಾಯಿಗಳ ವಾಹನಗಳು ಬೇಟೆನಾಯಿಗಳು ಮತ್ತು ಪರಿಚಾರಕರು ಇವುಗಳನ್ನೂ, ಇಪ್ಪತ್ತೈದು ಸಾವಿರ ರೂಪಾಯಿಗಳನ್ನು ಈತನ ಇಷ್ಟಮಿತ್ರರು, ಸಹೋದರರು ಬಂಧು-ಬಳಗ ಮೊದಲಾದವರ

ಔತಣಕ್ಕಾಗಿ ಕೊಡಿಸಬೇಕು'' ಎಂದು ಹುಂಡಿಯನ್ನು ಬರೆದುಕೊಡುತ್ತಿದ್ದರು. ಬಳಿಕ ಆ ಹುಂಡಿಯ ಕೆಳಗೆ ಪೋಪರು ತಮ್ಮ ರುಜುಹಾಕಿ, ಹುಂಡಿಯನ್ನು ಆತನ ಕೈಗೆ ಕೊಟ್ಟು—'' ನೀನು ಸತ್ತಾಗ ಈ ಹುಂಡಿಯನ್ನು ಗೋರಿಯಲ್ಲಿ ನಿನ್ನ ತಲೆಯ ಕೆಳಗೆ ಇಡುವಂತೆ ನಿನ್ನ ಬಂಧುಗಳಿಗೆ ಹೇಳಿರಬೇಕು. ಬಳಿಕ ನಿನ್ನನ್ನು ಕರೆದೊಯ್ಯಲು ದೇವದೂತರು ಬಂದು, ನಿನ್ನನ್ನೂ, ಹುಂಡಿಯನ್ನೂ ಸ್ವರ್ಗಕ್ಕೆ ಕರೆದುಕೊಂಡು ಹೋಗಿ, ಬರೆದಿರುವಂತೆ ಸಾಮಾನುಗಳನ್ನು ನಿನಗೆ ಕೊಡಿಸುವರು''—ಎಂದು ಹೇಳುತ್ತಿದ್ದರು ಎಂದು ಕೇಳಿದ್ದೇವೆ. ನೋಡಿರಿ! ಈ ಪೋಪರು ಸ್ವರ್ಗವನ್ನು ಗುತ್ತಿಗೆಗೆ ತೆಗೆದುಕೊಂಡಿರುವಂತೆ ಕಾಣುತ್ತದೆ. ಯೂರೋಪ್ ದೇಶದಲ್ಲಿ ಮೂರ್ಖತೆಯು ಇದ್ದವರೆಗೂ ಈ ಪೋಪರ ಲೀಲೆ ನಡೆಯುತ್ತಿದ್ದಿತು; ಆದರೆ ಈಚೆಗೆ ವಿದ್ಯಾಪ್ರಚಾರವು ಆಗಿರುವುದರಿಂದ, ಪೋಪರ ಸುಳ್ಳು ಲೀಲೆ ಹೆಚ್ಚಾಗಿ ನಡೆಯದು. ಆದರೂ ಪೂರ್ಣವಾಗಿ ನಿರ್ಮೂಲವೂ ಆಗಿಲ್ಲ. ಇದೇ ರೀತಿ ಆರ್ಯಾವರ್ತದಲ್ಲಿಯೂ, ಪೋಪರು ಲಕ್ಷಗಟ್ಟಲೆ ಅವತಾರಗಳನ್ನು ತಾಳಿ, ಲೀಲೆಯನ್ನು—ಅಂದರೆ ರಾಜರನ್ನೂ, ಪ್ರಜೆಗಳನ್ನೂ ವಿದ್ಯಾಭ್ಯಾಸದಿಂದ ದೂರಮಾಡಿ ಸತ್ಪುರುಷರ ಸಹವಾಸವು ದೊರೆಯದಂತೆ ಮಾಡುವಿಕೆ; ಹಗಲಿರುಳೂ ಇತರರನ್ನು ಮೋಸಪಡಿಸುವುದರ ಹೊರತು ಬೇರೆ ಕಾರ್ಯಗಳನ್ನು ಮಾಡದಿರುವಿಕೆ—ಇವನ್ನು ಹರಡಿರುವಂತೆ ಕಾಣುತ್ತದೆ. ಯಾರು ಛಲ-ಕಪಟ ಮೊದಲಾದ ಕುತ್ಸಿತ ವ್ಯವಹಾರ ಮಾಡುತ್ತಾರೋ, ಅವರು ಮಾತ್ರ ಪೋಪರೆನಿಸಿಕೊಳ್ಳುತ್ತಾರೆ. ಆದರೆ, ಅವರಲ್ಲಿಯೂ ಕೂಡ ಧಾರ್ಮಿಕರೂ, ವಿದ್ವಾಂಸರೂ, ಪರೋಪಕಾರಿಗಳೂ ಆದವರು ನಿಜವಾದ ಬ್ರಾಹ್ಮಣರೂ ಸಾಧುಗಳೂ ಆಗಿರುತ್ತಾರೆಂಬ ಮಾತನ್ನು ಎಲ್ಲರೂ ಲಕ್ಷ್ಯದಲ್ಲಿಡಬೇಕು. 'ಪೋಪ' ಶಬ್ದದಿಂದ ಛಲ-ಕಪಟದಿಂದ ಇತರರನ್ನು ಮೋಸಪಡಿಸಿ ಸ್ವಪ್ರಯೋಜನವನ್ನು ಸಾಧಿಸಿಕೊಳ್ಳುವವರನ್ನೂ, 'ಬ್ರಾಹ್ಮಣ' ಮತ್ತು 'ಸಾಧು' ಇವೆರಡು ಶಬ್ದಗಳಿಂದ ಉತ್ತಮ ಪುರುಷರನ್ನೂ ಗ್ರಹಿಸಬೇಕಾದ್ದು ಯೋಗ್ಯ. ನೋಡಿರಿ! ಉತ್ತಮ ಬ್ರಾಹ್ಮಣನಾಗಲಿ, ಸಾಧುವಾಗಲಿ ಯಾವನೂ ಇರದಿದ್ದರೆ, ವೇದಾದಿ ಸತ್ಯಶಾಸ್ತ್ರಗಳ

ಪುಸ್ತಕಗಳ ಸ್ವರಸಹಿತವಾದ ಪಠನ-ಪಾಠನಗಳೂ, ಜೈನ, ಮುಸಲ್ಮಾನ, ಕ್ರೈಸ್ತ ಮೊದಲಾದವರ ಬಲೆಯಿಂದ ಕಾಪಾಡಿ, ವೇದಾದಿ ಸತ್ಯಶಾಸ್ತ್ರಗಳಲ್ಲಿ ಪ್ರೀತಿಯುಕ್ತರನ್ನಾಗಿ ಮಾಡಿ ವರ್ಣಾಶ್ರಮಗಳಲ್ಲಿ ನಿಲ್ಲಿಸುವುದು—ಇವನ್ನೆಲ್ಲಾ ಬ್ರಾಹ್ಮಣ ಸಾಧುಗಳಲ್ಲದೆ ಮತ್ತಾರು ಮಾಡಬಲ್ಲವರಾಗಿದ್ದರು? "ವಿಷಾದಪ್ಯಮೃತಂ ಗ್ರಾಹ್ಯಮ್" [ಮನು] ವಿಷದಿಂದಲೂ ಅಮೃತವನ್ನು ಗ್ರಹಿಸುವಂತೆ, ಪೋಪಲೀಲೆಯಿಂದ ತಪ್ಪುಹಾದಿಗೆಳೆಯುವುದರಿಂದಲೂ ಕೂಡ ಆರ್ಯರು ಜೈನ ಮೊದಲಾದ ಮತಗಳಿಂದ ದೂರವುಳಿದುದು, ವಿಷದೊಳಗಿನಿಂದ ಅಮೃತ ಗ್ರಹಿಸಿದಂತೆ ಗುಣವೇ ಆಗಿರುತ್ತದೆಂದು ತಿಳಿಯಬೇಕು.

ಯಾವಾಗ ಯಜಮಾನರು ವಿದ್ಯಾವಿಹೀನರಾದರೋ, ಮತ್ತು ತಾವು ಸ್ವಲ್ಪ ಪೂಜಾ-ಪಾಠ ಕಲಿತರೋ ಆಗ, ಅಭಿಮಾನ ಹೊಂದಿ, ಎಲ್ಲರೂ ಪರಸ್ಪರ ಒಮ್ಮತ ಮಾಡಿಕೊಂಡು-ರಾಜ ಮೊದಲಾದವರೊಡನೆ, "ಬ್ರಾಹ್ಮಣರೂ, ಸಾಧುಗಳೂ ದಂಡಾರ್ಹರಲ್ಲ. ನೋಡಿರಿ: "ಬ್ರಾಹ್ಮಣೋ ನ ಹಂತವ್ಯಃ ಸಾಧುರ್ನಹಂತವ್ಯಃ"—ಮೊದಲಾದ ನಿಜವಾದ ಬ್ರಾಹ್ಮಣರಿಗೂ, ಸಾಧುಗಳಿಗೂ ಅನ್ವಯಿಸುವ ವಚನಗಳನ್ನೆಲ್ಲ ಪೋಪರು ತಮಗೇ ಹೊಂದಿಸಿಕೊಂಡರು. ಇನ್ನೂ ಸುಳ್ಳು ಸುಳ್ಳು ಮಾತುಗಳನ್ನುಳ್ಳ ಗ್ರಂಥಗಳನ್ನು ರಚಿಸಿ, ಅವುಗಳಲ್ಲಿ ಋಷಿ-ಮುನಿಗಳ ಹೆಸರನ್ನು ಇಟ್ಟು, ಅವರ ಹೆಸರಿನಿಂದಲೇ ಹೇಳುತ್ತಾ ಬಂದರು. ಆ ಪ್ರತಿಷ್ಠಿತರಾದ ಋಷಿಮಹರ್ಷಿಗಳ ಹೆಸರಿನಿಂದ, ತಮ್ಮ ಮೇಲಿನಿಂದ ದಂಡವ್ಯವಸ್ಥೆಯನ್ನು ತಪ್ಪಿಸಿಕೊಂಡರು. ಆಮೇಲೆ ಮನ ಬಂದಂತೆ ಆಚರಿಸತೊಡಗಿದರು. ಅಂದರೆ-ಈ ಪೋಪರ ಆಜ್ಞೆಯಿಲ್ಲದೆ ಮಲಗುವುದು, ಏಳುವುದು, ಕೂಡುವುದು, ನಡೆಯುವುದು, ತಿನ್ನುವುದು, ಕುಡಿಯುವುದು ಮೊದಲಾದುವನ್ನೂ ಮಾಡಲಾಗದಂತಹ ಕಠೋರನಿಯಮಗಳನ್ನು ಏರ್ಪಡಿಸಿದರು. ಪೋಪಸಂಜ್ಞಕರಾದ, ಕೇವಲ ನಾಮಧಾರಿಗಳಾದ ಬ್ರಾಹ್ಮಣರೂ, ಸಾಧುಗಳೂ ಏನುಮಾಡಿದರೂ ಅವರಿಗೆ ಎಂದಿಗೂ ಶಿಕ್ಷೆಯನ್ನು ವಿಧಿಸಬಾರದೆಂದು ರಾಜರುಗಳಿಗೆ ನಿಶ್ಚಯಮಾಡಿಸಿದರು. ಅಂದರೆ ಇವರನ್ನು ದಂಡಿಸಬೇಕೆಂಬ ಇಚ್ಛೆಯನ್ನು ಮನದಲ್ಲಿ ಮಾಡಬಾರದೆಂದು ತಿಳಿಸಿದರು. ಇಂತಹ

ಮೂರ್ಖತೆ ಹರಡಿದಮೇಲೆ, ಪೋಪರು ತಮಗೆ ಇಚ್ಛೆ ಬಂದಂತೆ ಮಾಡಿಸಲೂ ಆರಂಭಿಸಿದರು. ಅಂದರೆ, ಈ ದುರಾಚಾರಗಳ ಮೂಲವು ಮಹಾಭಾರತ ಯುದ್ಧಕ್ಕಿಂತ ಒಂದು ಸಾವಿರ ವರ್ಷಗಳಿಗೆ ಮೊದಲೇ ಪ್ರಾರಂಭವಾಗಿತ್ತು. ಏಕೆಂದರೆ—ಆ ಕಾಲದಲ್ಲಿ ಋಷಿ-ಮುನಿಗಳು ಸಹ ಇದ್ದರೂ, ದೇಶದಲ್ಲಿ ಆಲಸ್ಯ, ಪ್ರಮಾದ ಹೊಟ್ಟೆಕಿಚ್ಚು, ಪರಸ್ಪರ ದ್ವೇಷಗಳ ಮೊಳಕೆಗಳು ಹೊರಟಿದ್ದುವು; ಅವು ಬಲಿಯುತ್ತಾ ದೊಡ್ಡ ವಾದವು. ಸತ್ಯೋಪದೇಶವು ಇಲ್ಲವಾದಾಗ ಆರ್ಯಾವರ್ತದಲ್ಲಿ ಅವಿದ್ಯೆ ಹರಡಿ, ಪರಸ್ಪರ ಕಾದಾಡಲೂ, ಹೋರಾಡಲೂ ಆರಂಭಿಸಿದರು. ಏಕೆಂದರೆ—

ಉಪದೇಶ್ಯೋಪದೇಷ್ಟೃತ್ವಾತ್ ತತ್ಸಿದ್ಧಿಃ। ಇತರಥಾಂಧಪರಂಪರಾ

[ಸಾಂಖ್ಯ. ೪-೭೯-೮೧]

ಅರ್ಥಾತ್—ಉತ್ತಮರಾದ ಉಪದೇಶಕರಿರುವಾಗ, ಧರ್ಮಾರ್ಥ ಕಾಮ ಮೋಕ್ಷಗಳು ಚೆನ್ನಾಗಿ ಸಿದ್ಧಿಸುತ್ತವೆ. ಮತ್ತು ಉತ್ತಮರಾದ ಉಪದೇಶಕರೂ, ಶ್ರೋತೃಗಳೂ ಇಲ್ಲದಿರುವಾಗ ಅಂಧ ಪರಂಪರೆಯು ಆರಂಭವಾಗುತ್ತದೆ. ಮತ್ತೆ ಸತ್ಪುರುಷರು ಹುಟ್ಟಿ ಸತ್ಯೋಪದೇಶ ಮಾಡಿದಾಗಲೇ ಅಂಧ ಪರಂಪರೆ ನಾಶವಾಗಿ, ಪ್ರಕಾಶಪರಂಪರೆ ಆರಂಭ ವಾಗುತ್ತದೆ. ಪುನಃ ಆ ಪೋಪರು ತಮಗೂ ತಮ್ಮ ಕಾಲುಗಳಿಗೂ ಪೂಜೆಮಾಡಿಸಿಕೊಳ್ಳುವುದಕ್ಕೆ ಆರಂಭಿಸಿ, ನಿಮ್ಮ ಕಲ್ಯಾಣವು ಇದರ ಲ್ಲಿಯೇ ಇರುತ್ತದೆಂದು ಬೋಧಿಸತೊಡಗಿದರು. ಈ ಜನಗಳು ಇವರ ವಶರಾದಾಗ ಪ್ರಮಾದ ಮತ್ತು ವಿಷಯಾಸಕ್ತಿಯಲ್ಲಿ ಮಗ್ನರಾಗಿ ಕುರುಬ ರಂತೆ ಸುಳ್ಳು ಗುರುಗಳೂ, ಸುಳ್ಳು ಶಿಷ್ಯರೂ ಸಿಕ್ಕಿಕೊಂಡರು. ವಿದ್ಯೆ, ಬಲ, ಬುದ್ಧಿ, ಪರಾಕ್ರಮ, ಶೌರ್ಯ, ವೀರತೆ-ಮೊದಲಾದ ಒಳ್ಳೆಯ ಗುಣಗಳೆಲ್ಲವೂ ಲೋಪವಾಗುತ್ತ ನಡೆದವು. ಬಳಿಕ ವಿಷಯಾಸಕ್ತ ರಾದಾಗ ಗುಪ್ತವಾಗಿ ಮದ್ಯಮಾಂಸಗಳನ್ನು ಸೇವನೆ ಮಾಡತೊಡಗಿ ದರು. ಆಮೇಲೆ ಇವರಲ್ಲೇ ಒಬ್ಬನು ,'ವಾಮಮಾರ್ಗವನ್ನು' ಸ್ಥಾಪಿ ಸಿದನು. 'ಶಿವ ಉವಾಚ, ಪಾರ್ವತ್ಯುವಾಚ, ಭೈರವ ಉವಾಚ' ಈ

ಮೊದಲಾದ ನಾಮಗಳನ್ನು ಬರೆದು ತಂತ್ರಗಳೆಂದು ಹೆಸರಿಟ್ಟನು. ಅವುಗಳಲ್ಲಿ ಇಂತಿಂತಹ ವಿಚಿತ್ರ ಲೀಲೆಗಳ ಮಾತುಗಳನ್ನು ಬರೆದನು:—

ಮದ್ಯಂ ಮಾಂಸಂ ಚ ಮೀನಂ ಚ ಮುದ್ರಾ ಮೈಥುನಮೇವ ಚ।
ಏತೇ ಪಂಚಮಕಾರಾಃ ಸ್ಯುರ್ಮೋಕ್ಷದಾ ಹಿ ಯುಗೇ ಯುಗೇ॥

[ಕಾಲೀತಂತ್ರಾದಿ]

ಪ್ರವೃತ್ತೇ ಭೈರವೀಚಕ್ರೇ ಸರ್ವೇ ವರ್ಣಾ ದ್ವಿಜಾತಯಃ।
ನಿವೃತ್ತೇ ಭೈರವೀಚಕ್ರೇ ಸರ್ವೇ ವರ್ಣಾಃ ಪೃಥಕ್ಪೃಥಕ್ ॥೨॥

[ಕುಲಾರ್ಣವತಂತ್ರ]

ಪೀತ್ವಾ ಪೀತ್ವಾ ಪುನಃ ಪೀತ್ವಾ ಯಾವತ್ಪತತಿ ಭೂತಲೇ।
ಪುನರುತ್ಥಾಯ ವೈ ಪೀತ್ವಾ ಪುನರ್ಜನ್ಮ ನ ವಿದ್ಯತೇ ॥೩॥

[ಮಹಾನಿರ್ವಾಣತಂತ್ರ]

ಮಾತೃಯೋನಿಂ ಪರಿತ್ಯಜ್ಯ ವಿಹರೇತ್ ಸರ್ವಯೋನಿಷು।
ವೇದಶಾಸ್ತ್ರಪುರಾಣಾನಿ ಸಾಮಾನ್ಯ ಗಣಿಕಾ ಇವ।
ಏಕೈವ ಶಾಂಭವೀ ಮುದ್ರಾ ಗುಪ್ತಾ ಕುಲವಧೂರಿವ ॥೪॥

[ಜ್ಞಾನಸಂಕಲನೀತಂತ್ರ]

ಅಂದರೆ—ಈ ತಿಕ್ಕಲು ಮತಿಯ ಈ ಪ್ರೋಪರ ಲೀಲೆಗಳು ಎಂಥವೋ ನೋಡಿರಿ. ವೇದವಿರುದ್ಧವಾದ ಮಹಾ ಅಥರ್ವದ ಕರ್ಮಗಳನ್ನೇ ಶ್ರೇಷ್ಠವೆಂದು ವಾಮಮಾರ್ಗಿಗಳು ಒಪ್ಪಿದರು! ಮದ್ಯ, ಮಾಂಸ, ಮೀನ-ಅಂದರೆ ಮೀನು, ಮುದ್ರೆ, ಪೂರಿ, ಹಪ್ಪಳ, ಸಂಡಿಗೆ, ದಪ್ಪರೊಟ್ಟಿ ಮೊದಲಾದ ಚರ್ವಣಗಳು, ಮತ್ತು ಯೋನಿ, ಪಾತ್ರಾಧಾರ, ಮುದ್ರೆ ಮತ್ತು ಐದನೆಯದು ಮೈಥುನ ಅಂದರೆ ಎಲ್ಲಾ ಗಂಡಸರನ್ನು ಶಿವನಿಗೂ, ಎಲ್ಲಾ ಹೆಂಗಸರನ್ನು ಪಾರ್ವತಿಗೂ ಸಮನೆಂದೆಣಿಸಿ, "ಅಹಂ ಭೈರವಸ್ತ್ವಂ ಭೈರವೀ ಹ್ಯಾವಯೋರಸ್ತು ಸಂಗಮಃ" ಯಾವ ಗಂಡಸಾಗಲಿ, ಹೆಂಗಸಾಗಲಿ, ಈ ಅಸಂಬದ್ಧ ವಾಕ್ಯವನ್ನು ಉಚ್ಚರಿಸಿ, ಸಮಾಗಮವನ್ನು ನಡೆಸುವುದನ್ನು ವಾಮ

ಮಾರ್ಗಿಗಳು ದೋಷವೆಂದೆಣಿಸರು. ಅಂದರೆ ಮುಟ್ಟಬಾರದ ನೀಚ ಹೆಂಗಸರನ್ನು ಅತಿ ಪವಿತ್ರರೆಂದು ಅಂಗೀಕರಿಸಿದ್ದಾರೆ. ಶಾಸ್ತ್ರಗಳಲ್ಲಿ ರಜಸ್ವಲೆ ಮೊದಲಾದ ಸ್ತ್ರೀಯರ ಸ್ಪರ್ಶದ ನಿಷೇಧವಿದೆ; ವಾಮ ಮಾರ್ಗಿಗಳು ಅವರನ್ನು ಮಹಾಪವಿತ್ರವೆಂದು ಎಣಿಸಿದ್ದಾರೆ. ಇವರು ಬರೆದಿರುವ ಅಸಂಬದ್ಧ ಶ್ಲೋಕವನ್ನು ಕೇಳಿರಿ :—

ರಜಸ್ವಲಾ ಪುಷ್ಕರಂ ತೀರ್ಥಂ, ಚಾಂಡಾಲೀತು ಸ್ವಯಂ ಕಾಶೀ
ಚರ್ಮಕಾರೀ ಪ್ರಯಾಗಃ ಸ್ಯಾದ್ರಜಕೀ ಮಥುರಾಮತಾ।
ಅಯೋಧ್ಯಾ ಪುಕ್ಕಸೀ ಪ್ರೋಕ್ತಾ ॥

[ರುದ್ರಯಾಮಲ ತಂತ್ರ]

ಮೊದಲಾದುವು! ರಜಸ್ವಲೆಯಾದ ಸ್ತ್ರೀಯೊಡನೆ ಸಮಾಗಮವನ್ನು ನಡೆಸಿದರೆ ಪುಷ್ಕರ ತೀರ್ಥದಲ್ಲಿ ಸ್ನಾನ ಮಾಡಿದಂತೆಯೂ, ಚಂಡಾಲ ಸ್ತ್ರೀಯೊಡನೆ ಸಮಾಗಮವನ್ನು ನಡೆಸಿದರೆ ಕಾಶೀಯಾತ್ರೆಯನ್ನು ಮಾಡಿದಂತೆಯೂ, ಚಮ್ಮಾರಗಿತ್ತಿಯೊಡನೆ ಸಮಾಗಮವನ್ನು ನಡೆಸಿದರೆ ಪ್ರಯಾಗ ಸ್ನಾನಮಾಡಿದಂತೆಯೂ, ಅಗಸಗಿತ್ತಿಯೊಡನೆ ಸಮಾಗಮವನ್ನು ಮಾಡಿದರೆ ಮಥುರಾ ಯಾತ್ರೆಯನ್ನು ಮಾಡಿದಂತೆಯೂ, ಸೂಳೆಯೊಡನೆ ಸಮಾಗಮವನ್ನು ನಡೆಸಿದರೆ ಅಯೋಧ್ಯಾ ಯಾತ್ರೆ ಮಾಡಿದಂತೆಯೂ ಆಯಿತೆಂದು ತಿಳಿಯಬೇಕು! ಮದ್ಯಕ್ಕೆ 'ತೀರ್ಥ' ವೆಂದೂ, ಮಾಂಸಕ್ಕೆ 'ಶುದ್ಧಿ' ಮತ್ತು 'ಪುಷ್ಪ' ವೆಂದೂ, ಮೀನಿಗೆ 'ತೃತೀಯಾ' ಮತ್ತು 'ಜಲತುಂಬಿಕೆ' ಎಂದೂ, ಮುದ್ರೆಗೆ 'ಚತುರ್ಥಿ' ಎಂದೂ, ಮೈಥುನಕ್ಕೆ 'ಪಂಚಮಿ' ಯೆಂದೂ ಹೆಸರಿಟ್ಟಿದ್ದಾರೆ. ಬೇರೆಯವನು ತಿಳಿಯಬಾರದೆಂದೇ ಇಂತಹ ಹೆಸರುಗಳನ್ನಿಟ್ಟಿದ್ದಾರೆ. ತಮಗೆ ಕೌಲ, ಆರ್ದ್ರವೀರ, ಶಾಂಭವ, ಗಣ--ಮೊದಲಾದ ಹೆಸರುಗಳನ್ನು ಇಟ್ಟುಕೊಂಡಿದ್ದಾರೆ. ಮತ್ತು ವಾಮಮಾರ್ಗದ ಮತದಲ್ಲಿಲ್ಲದವರಿಗೆ "ಕಂಟಕ" "ವಿಮುಖ" "ಶುಷ್ಕಪಶು"—ಮೊದಲಾದ ಹೆಸರುಗಳನ್ನಿಟ್ಟಿದ್ದಾರೆ. ಮತ್ತು—"ಭೈರವೀ ಚಕ್ರದಲ್ಲಿರುವಾಗ ಬ್ರಾಹ್ಮಣನಿಂದ ಚಂಡಾಲನವರೆಗೆ ಎಲ್ಲರೂ ದ್ವಿಜರೆನ್ನಿಸಿಕೊಳ್ಳುತ್ತಾರೆ. ಮತ್ತು ಭೈರವೀ ಚಕ್ರದಿಂದ ಬೇರೆಯಾಗುತ್ತಲೇ

ಎಲ್ಲರೂ ತಮ್ಮ ತಮ್ಮ ವರ್ಣಸ್ಥರಾಗುತ್ತಾರೆ.” ಎಂದು ಹೇಳುತ್ತಾರೆ. ಭೈರವೀ ಚಕ್ರದಲ್ಲಿ ವಾಮಮಾರ್ಗಿಗಳು ಭೂಮಿಯ ಮೇಲಾಗಲಿ, ಹಲಿಗೆಯ ಮೇಲಾಗಲಿ ಒಂದು ಬಿಂದುವನ್ನು ತ್ರಿಕೋಣಾಕಾರವಾಗಿಯೂ, ಚತುಷ್ಕೋಣಾಕಾರವಾಗಿಯೂ, ವರ್ತುಲಾಕಾರವಾಗಿಯೂ ಮಾಡಿ, ಅದರ ಮೇಲೆ ಹೆಂಡದ ಗಡಿಗೆಯನ್ನಿಟ್ಟು, ಅದಕ್ಕೆ ಪೂಜೆ ಮಾಡುತ್ತಾರೆ. ಬಳಿಕ, ‘ಬ್ರಹ್ಮಶಾಪಂ ವಿಮೋಚಯ’ ‘ಎಲೈ ಹೆಂಡವೇ! ನೀನು ಬ್ರಹ್ಮಾದಿಗಳ ಶಾಪದಿಂದ ಮುಕ್ತವಾಗು’—ಎಂಬ ಮಂತ್ರವನ್ನು ಹೇಳುತ್ತಾರೆ. ವಾಮಮಾರ್ಗಿಗಳಲ್ಲದೆ ಬೇರೆಯವರಿಗೆ ಪ್ರವೇಶವಿಲ್ಲದ ಒಂದು ರಹಸ್ಯವಾದ ಸ್ಥಳದಲ್ಲಿ ಸ್ತ್ರೀಪುರುಷರೆಲ್ಲರೂ ಸೇರುತ್ತಾರೆ. ಅಲ್ಲಿ ಒಬ್ಬ ಸ್ತ್ರೀಯನ್ನು ಬೆತ್ತಲೆಯಾಗಿ ನಿಲ್ಲಿಸಿ, ಪೂಜಿಸುತ್ತಾರೆ ಮತ್ತು ಒಬ್ಬ ಪುರುಷನನ್ನು ಬೆತ್ತಲೆಯಾಗಿ ನಿಲ್ಲಿಸಿ ಸ್ತ್ರೀಯರು ಪೂಜೆಮಾಡುತ್ತಾರೆ. ಪುನಃ ಯಾವನೋ ಒಬ್ಬನ ಹೆಂಡತಿ, ತನ್ನ ಅಥವಾ ಬೇರೆಯವರ ಮಗಳು, ತನ್ನ ಮತ್ತು ಬೇರೆಯವರ ತಾಯಿ, ಸಹೋದರಿ ಸೊಸೆ ಮೊದಲಾದವರೆಲ್ಲರೂ ಸೇರಿರುತ್ತಾರೆ. ಆಮೇಲೆ ಒಂದು ಪಾತ್ರೆಯಲ್ಲಿ ಹೆಂಡವಿಟ್ಟು, ಮಾಂಸ-ವಡೆ ಮೊದಲಾದುವನ್ನು ಒಂದು ತಟ್ಟೆಯಲ್ಲಿಡುತ್ತಾರೆ. ಅವರಲ್ಲಿ ಆಚಾರ್ಯನಾದವನು ಒಂದು ಬಟ್ಟಲಲ್ಲಿ ಹೆಂಡದ ಬಟ್ಟಲನ್ನು ಕೈಯಲ್ಲಿ ಹಿಡಿದುಕೊಂಡು, ‘ಭೈರವೋಹಂ’ ‘ಶಿವೋಹಂ’ ಅಂದರೆ ‘ನಾನು ಭೈರವನು’ ‘ನಾನು ಶಿವನು’ ಎಂದು ಹೇಳಿ, ಕುಡಿಯುತ್ತಾನೆ. ಬಳಿಕ ಆ ಎಂಜಲುಪಾತ್ರೆಯಲ್ಲಿಯೇ ಎಲ್ಲರೂ ಕುಡಿಯುವರು. ಆಮೇಲೆ ಒಬ್ಬ ಹೆಂಗಸನ್ನಾಗಲಿ, ಸೂಳೆಯನ್ನಾಗಲಿ ಬೆತ್ತಲೆಮಾಡಿ, ಅಥವಾ ಯಾವನಾದರೂ ಪುರುಷನನ್ನು ಬೆತ್ತಲೆಯಾಗಿ ಮಾಡಿ ಕೈಯಲ್ಲಿ ಒಂದು ಕತ್ತಿಯನ್ನು ಕೊಟ್ಟು, ಸ್ತ್ರೀಯ ಹೆಸರನ್ನು ‘ದೇವಿ’ ಎಂದೂ, ಪುರುಷನ ಹೆಸರನ್ನು ಮಹಾದೇವ ಎಂದೂ ಇಡುತ್ತಾರೆ. ಅವರ ‘ಉಪಸ್ಥೇಂದ್ರಿಯ’ವನ್ನು ಪೂಜೆಮಾಡುತ್ತಾರೆ. ಆಗ ಆ ದೇವಿ ಅಥವಾ ಮಹಾದೇವನಿಗೆ ಹೆಂಡದ ಬಟ್ಟಲನ್ನು ಕುಡಿಸಿ, ಆ ಎಂಜಲು ಬಟ್ಟಲಲ್ಲಿಯೇ ಎಲ್ಲರೂ ಒಂದೊಂದು ಬಟ್ಟಲು ಕುಡಿಯುತ್ತಾರೆ. ಮತ್ತೆ ಅದೇರೀತಿ ಕ್ರಮಬದ್ಧವಾಗಿ ಕುಡಿದು ಕುಡಿದು ಮೈಮರೆತು ಯಾವಳಾದರೂ ಯಾರ ತಂಗಿ,

ಮಗಳು ಅಥವಾ ತಾಯಿಯೇ ಆಗಿರಲೊಲ್ಲಳೇಕೆ, ಬೇಕಾದವರು ಬೇಕಾದವರೊಂದಿಗೆ ಕುಕರ್ಮ ಮಾಡುತ್ತಾರೆ. ಆಗಾಗ ಹೆಂಡದ ಅಮಲು ಹೆಚ್ಚಿ ಎಕ್ಕಡ, ಒದೆ, ಗುದ್ದು, ಕೂದಲು ಹಿಡಿದು ಜಗ್ಗುವುದು ಈರೀತಿ ಪರಸ್ಪರ ಹೊಡೆದಾಡುತ್ತಾರೆ. ಅನೇಕರು ಕಕ್ಕಿಕೊಳ್ಳುವುದೂ ಉಂಟು. ಅವರಲ್ಲಿ ಸಿದ್ಧಿಪಡೆದ ಅಘೋರಿಯು ಅಂದರೆ ಎಲ್ಲರಲ್ಲಿಯೂ ದೊಡ್ಡ ಸಿದ್ಧಪುರುಷನೆಂದು ಎಣಿಸಲ್ಪಡುವವನು ಆ ಕಕ್ಕಿದ ಪದಾರ್ಥವನ್ನು ಕೂಡ ತಿಂದುಬಿಡುತ್ತಾನೆ. ಅವರಲ್ಲಿ ಅಂದರೆ ಸರ್ವಶ್ರೇಷ್ಠನಾದ ಸಿದ್ಧಪುರುಷನಾದವನ ಲಕ್ಷಣಗಳೇನೆಂದರೆ :—

ಹಾಲಾಂ ಪಿಬತಿ ದೀಕ್ಷಿತಸ್ಯ ಮುಂದಿರೇ ಸುಹ್ಞೋ ನಿಶಾಯಾಂ ಗಣಿಕಾಗೃಹೇಷು ।
ವಿರಾಜತೇ ಕೌಲವ ಚಕ್ರವರ್ತೀ ॥

ದೀಕ್ಷಿತ ಅಂದರೆ ಈಡಿಗರ ಮನೆಗೆಹೋಗಿ ಯಾವನು ಬುಡ್ಡಿ ಬುಡ್ಡಿ ಹೆಂಡ ಕುಡಿಯುವನೋ, ಸೂಳೆಯರ ಮನೆಗೆ ಹೋಗಿ ಅವರೊಡನೆ ಕುಕರ್ಮಮಾಡಿ ನಿದ್ರಿಸುವನೋ, ಅಂತಹ ಈ ಮೊದಲಾದ ಕಾರ್ಯಗಳನ್ನು ನಾಚಿಕೆಯೂ, ಸಂದೇಹವೂ ಇಲ್ಲದೆ ಮಾಡುವವನೇ ವಾಮಮಾರ್ಗಿಗಳಲ್ಲಿ ಎಲ್ಲರಿಗಿಂತ ದೊಡ್ಡ ಮುಖ್ಯ ಚಕ್ರವರ್ತಿ ರಾಜನಿಗೆ ಸಮನೆಂದು ಅಂಗೀಕರಿಸಲ್ಪಡುತ್ತಾರೆ. ಅಂದರೆ, ಅವರಲ್ಲಿ ಮಹಾಕುಕರ್ಮಿಯೇ ದೊಡ್ಡವನು; ಮತ್ತು ಸತ್ಕಾರ್ಯಗಳನ್ನು ಮಾಡುವವನೂ ಪಾಪಕ್ಕೆ ಅಂಜುವವನೂ ತುಚ್ಛನು. ಏಕೆಂದರೆ—

ಪಾಶಬದ್ಧೋ ಭವೇಜ್ಜೀವಃ ಪಾಶಮುಕ್ತಸ್ಸದಾಶಿವಃ ॥

[ಜ್ಞಾನಸಂಕಲನೀತಂತ್ರ, ಶ್ಲೋ. ೪೩.

ಲೋಕಲಜ್ಜೆ, ಶಾಸ್ತ್ರಲಜ್ಜೆ, ಕುಲಲಜ್ಜೆ, ದೇಶಲಜ್ಜೆ, ಮೊದಲಾದ ಪಾಶಗಳಿಂದ ಬಂಧಿಸಲ್ಪಟ್ಟವನು ಜೀವನೆಂದೂ, ನಾಚಿಗೆಯಿಲ್ಲದೆ ಪಾಪಕರ್ಮಗಳನ್ನು ಮಾಡುವವನು ಸದಾಶಿವನೆಂದೂ ತಂತ್ರದಲ್ಲಿ ಹೇಳುತ್ತಾರೆ. ಉಡ್ಡೀಸತಂತ್ರ ಮೊದಲಾದುದರಲ್ಲಿ ಒಂದು ಪ್ರಯೋಗ

ಬರೆದಿದೆ. ಅದೇನಂದರೆ—ಒಂದು ಮನೆಯಲ್ಲಿ ನಾಲ್ಕುಕಡೆಗಳಲ್ಲಿಯೂ ಗೂಡುಗಳಿರಬೇಕು. ಅವುಗಳಲ್ಲಿ ಹೆಂಡತುಂಬಿದ ಬುಡ್ಡಿಗಳನ್ನು ಇಟ್ಟಿರಬೇಕು. ಈ ಗೂಡಿನಿಂದ ಒಂದು ಬುಡ್ಡಿ ಕುಡಿದು ಮತ್ತೊಂದು ಗೂಡಿನ ಬಳಿಗೆ ಹೋಗಬೇಕು. ಅದರಲ್ಲಿಂದ ಕುಡಿದು ಮೂರನೆಯದಕ್ಕೂ ಮೂರನೆಯದರಿಂದ ಕುಡಿದು ನಾಲ್ಕನೆಯದಕ್ಕು ಹೋಗಬೇಕು. ಪ್ರಜ್ಞೆತಪ್ಪಿ ಕಟ್ಟಿಗೆಯಂತೆ ನೆಲೆದಮೇಲೆ ಬೀಳುವವರೆಗೂ ನಿಂತುಕೊಂಡು ಮದ್ಯ ಕುಡಿಯುತ್ತಿರಬೇಕು. ಮತ್ತೆ ಅವುಲು ಇಳಿದಮೇಲೆ, ಹಾಗೆಯೇ ಕುಡಿದು ಬೀಳಬೇಕು. ಮರಳಿ ಮೂರನೆಯಸಾರಿ ಹೀಗೆಯೇ ಕುಡಿದು, ಬಿದ್ದು, ಎದ್ದವನಿಗೆ ಪುನರ್ಜನ್ಮವಿರುವುದಿಲ್ಲ. ಅಂದರೆ, ಇಂತಹ ಮನುಷ್ಯರಿಗೆ ತಿರುಗಿ ಮನುಷ್ಯಜನ್ಮವು ಲಭಿಸುವುದೇ ಕಷ್ಟ. ಆದರೆ, ನೀಚಯೋನಿಯಲ್ಲಿ ಜನ್ಮತಾಳಿ ಬಹುಕಾಲದವರೆಗೆ ಬಿದ್ದಿರುವನು, ಎಂಬುದೇನೋ ಸತ್ಯವೇ. ಈ ವಾಮಮಾರ್ಗಿಗಳ ತಂತ್ರಗ್ರಂಥದಲ್ಲಿ ತಾಯಿಯೊಬ್ಬಳ ಹೊರತು ಉಳಿದ ಯಾವ ಸ್ತ್ರೀಯನ್ನು ಬಿಡಬಾರದೆಂದು ಹೇಳಿರುತ್ತದೆ. ಅಂದರೆ ಮಗಳಾಗಿರಲಿ, ಒಡಹುಟ್ಟಿದವಳು ಮೊದಲಾದ ಯಾರಾದರೂ ಆಗಿರಲಿ, ಎಲ್ಲರನ್ನೂ ಸಂಭೋಗಿಸಬೇಕು. ಈ ವಾಮಮಾರ್ಗಿಗಳಲ್ಲಿ 'ದಶಮಹಾವಿದ್ಯೆ'ಗಳು ಪ್ರಸಿದ್ಧವಾಗಿರುತ್ತದೆ. ಅವುಗಳಲ್ಲಿ ಒಬ್ಬ ಮಾತಂಗೀ ವಿದ್ಯೆಯವನು 'ಮಾತರಮಪಿ ನತ್ಯಜೇತ್' ಅಂದರೆ ತಾಯಿಯನ್ನೂ ಕೂಡ ಸಂಭೋಗಿಸದೆ ಬಿಡಬಾರದು' ಎಂದು ಹೇಳುತ್ತಾನೆ; ಮತ್ತು ಸ್ತ್ರೀಪುರುಷರ ಸಮಾಗಮ ಸಮಯದಲ್ಲಿ 'ನಮಗೆ ಸಿದ್ಧಿಯು ಪ್ರಾಪ್ತವಾಗಲಿ' ಎಂದು ಮಂತ್ರವನ್ನು ಜಪಿಸುತ್ತಾರೆ. ಇಂತಹ ಮತಿಗೆಟ್ಟ ಮಹಾಮೂರ್ಖ ಮಾನವರೂ ಸಹ ಈ ಪ್ರಪಂಚದಲ್ಲಿ ಬಹಳ ಕಡಿಮೆಯಾಗಿರಬಹುದು. ಯಾವ ಮಾನವನು ಸುಳ್ಳನ್ನು ಪ್ರಚಾರಪಡಿಸಬೇಕೆಂದಿರುವನೋ, ಅಂಥವನು ಸತ್ಯವನ್ನು ಅವಶ್ಯವಾಗಿ ನಿಂದಿಸುತ್ತಾನೆ. ನೋಡಿ; ವಾಮಮಾರ್ಗಿಗಳೇನು ಹೇಳುತ್ತಾರೆ?—ವೇದಶಾಸ್ತ್ರಪುರಾಣಗಳೆಲ್ಲವೂ ಸಾಮಾನ್ಯ ಸೂಳೆಯಂತೆ ಇರುತ್ತವೆ. ಮತ್ತು ಈ ಶಾಂಭವೀ ವಾಮಮಾರ್ಗದ ಮುದ್ರೆಯು ಗುಪ್ತ ಸ್ತ್ರೀಯಂತೆ ಇರುತ್ತದೆ! ॥೫॥ ಈ ಕಾರಣದಿಂದಲೇ ಇವರು ವೇದವಿರುದ್ಧವಾದ ಮತವನ್ನು ಸ್ಥಾಪಿಸಿದ್ದಾರೆ. ಬಳಿಕ ಈ ಮತವು

ಬಹಳ ಹರಡಿತು. ಆಗ ಧೂರ್ತತನವಾಡಿ, ವೇದಗಳ ಹೆಸರಿನಲ್ಲಿಯೂ ಕೂಡ ವಾಮಮಾರ್ಗದ ಹಲವು ಲೀಲೆಗಳನ್ನಾರಂಭಿಸಿದರು. ಅಂದರೆ—

ಸೌತ್ರಾಮಣ್ಯಾಂ ಸುರಾಂ ಪಿಬೇತ್ । ಪ್ರೋಕ್ಷಿತಂ ಭಕ್ಷಯೇನ್ಮಾಂಸಂ । ವೈದಿಕೀ ಹಿಂಸಾ ಹಿಂಸಾನಭವತಿ ॥
ನ ಮಾಂಸಭಕ್ಷಣೇ ದೋಷೋ ನ ಮದ್ಯೇ ನ ಚ ಮೈಥುನೇ । ಪ್ರವೃತ್ತಿರೇಷಾ ಭೂತಾನಾಂ ನಿವೃತ್ತಿಸ್ತು ಮಹಾಫಲಾ ॥

[ಮನು ೫, ೫೬]

ಸೌತ್ರಾಮಣೀ ಯಜ್ಞದಲ್ಲಿ ಮದ್ಯವನ್ನು ಕುಡಿಯಬೇಕು. ಇದರರ್ಥವೇನೆಂದರೆ ಸೌತ್ರಾಮಣೀ ಯಜ್ಞದಲ್ಲಿ ಸೋಮರಸ ಅಂದರೆ ಸೋಮಲತೆಯ ರಸ ಕುಡಿಯಬೇಕು. 'ಪ್ರೋಕ್ಷಿತ' ಅಂದರೆ ಯಜ್ಞದಲ್ಲಿ ಮಾಂಸವನ್ನು ತಿನ್ನುವುದರಲ್ಲಿ ದೋಷವಿಲ್ಲ. ಇಂತಹ ಪಾಮರ ವಚನಗಳನ್ನು ವಾಮಮಾರ್ಗಿಗಳು ಆರಂಭಿಸಿದ್ದಾರೆ. ವೈದಿಕೀ ಹಿಂಸೆಯು ಹಿಂಸೆಯೇ ಆಗದಿದ್ದರೆ, 'ನಿನ್ನನ್ನೂ ನಿನ್ನ ಕುಟುಂಬವನ್ನೂ ಸಾಯಿಸಿ ಹೋಮ ಮಾಡಿದರೆ ಚಿಂತೆಯೇನು?—ಎಂದು ಅವರನ್ನು ಕೇಳಬೇಕು. ಮಾಂಸಭಕ್ಷಣ ಮಾಡುವುದರಲ್ಲಿ, ಮದ್ಯ ಕುಡಿಯುವುದರಲ್ಲಿ, ಪರಸ್ತ್ರೀಸಂಗ ಮಾಡುವುದು ಮೊದಲಾದುದರಲ್ಲಿ ದೋಷವಿಲ್ಲವೆಂಬುದು ಹುಡುಗತನ. ಏಕೆಂದರೆ—ಪ್ರಾಣಿಗಳಿಗೆ ಬಾಧೆಯುಂಟು ಮಾಡದೆ, ಮಾಂಸ ದೊರಕುವುದಿಲ್ಲ; ಮತ್ತು ಅಪರಾಧವಿಲ್ಲದೆ ನೋವನ್ನೀಯುವುದು ಧರ್ಮದ ಕೆಲಸವಲ್ಲ. ಮದ್ಯಪಾನದ ನಿಷೇಧವಂತೂ ಎಲ್ಲ ರೀತಿಯಿಂದಲೂ ಇದೆ. ಏಕೆಂದರೆ—ಇದುವರೆಗೆ ವಾಮಮಾರ್ಗಿಗಳ ಹೊರತು ಯಾವ ಗ್ರಂಥದಲ್ಲಿಯೂ ಬರೆದಿಲ್ಲ; ಆದರೆ ಸರ್ವತ್ರ ನಿಷೇಧವಿರುತ್ತದೆ. ಮತ್ತು, ಮದುವೆಯಿಲ್ಲದೆ ಮೈಥುನದಲ್ಲಿಯೂ ದೋಷವಿರುತ್ತದೆ; ಇದನ್ನು ನಿರ್ದೋಷವೆಂದು ಹೇಳುವವನು ದೋಷಯುಕ್ತನು. ಇಂತಹ ವಚನಗಳನ್ನೂ ಕೂಡ ಋಷಿಗಳ ಗ್ರಂಥಗಳಲ್ಲಿ ಸೇರಿಸಿ, ಎಷ್ಟೋ ಮಂದಿ ಋಷಿ-ಮುನಿಗಳ ಹೆಸರಿನಲ್ಲಿ ಅನೇಕ ಗ್ರಂಥಗಳನ್ನು ಬರೆದು, ಗೋಮೇಧ, ಅಶ್ವಮೇಧ ಎಂಬ ಹೆಸರಿನ ಯಜ್ಞಗಳನ್ನು ಕೂಡ ಮಾಡಿಸಲಾರಂಭಿಸಿದ್ದರು. ಆದರೆ

ಈ ಪಶುಗಳನ್ನು ಕೊಂದು ಹೋಮ ಮಾಡುವುದರಿಂದ ಯಜಮಾನ ಮತ್ತು ಪಶುವಿಗೆ ಸ್ವರ್ಗ ಸಿಕ್ಕುವುದೆಂದು ಪ್ರಸಿದ್ಧಪಡಿಸಿದರು. ಇದರ ನಿರ್ಣಯವೇನೆಂದರೆ—ಬ್ರಾಹ್ಮಣ ಗ್ರಂಥಗಳಲ್ಲಿರುವ ಅಶ್ವಮೇಧ, ಗೋಮೇಧ, ನರಮೇಧ ಮೊದಲಾದ ಶಬ್ದಗಳಿಗೆ ಸರಿಯಾದ ಅರ್ಥವನ್ನು ತಿಳಿದುಕೊಂಡಿಲ್ಲ. ಏಕೆಂದರೆ—ಹಾಗೆ ತಿಳಿದಿದ್ದರೆ ಇಂತಹ ಅನರ್ಥಗಳನ್ನು ಏಕೆ ಮಾಡುತ್ತಿದ್ದರು?

ಪ್ರಶ್ನೆ :—ಅಶ್ವಮೇಧ, ಗೋಮೇಧ, ನರಮೇಧ ಮೊದಲಾದ ಶಬ್ದಗಳ ಅರ್ಥವೇನು?

ಉತ್ತರ :—ಇವುಗಳ ಅರ್ಥವಾದರೋ ಇದು :—

ರಾಷ್ಟ್ರಂ ವಾ ಅಶ್ವಮೇಧಃ॥

ಶತಪಥ, ೧೩, ೧, ೬, ೩.

ಅನ್ನಗ್ಂ ಹಿ ಗೌಃ॥

ಶತಪಥ ೪, ೩, ೧, ೨೫.

ಅಗ್ನಿರ್ವಾ ಅಶ್ವಃ। ಅಜ್ಯಂ ಮೇಧಃ॥

ಶತಪತ ಬ್ರಾಹ್ಮಣ.

ಕುದುರೆ, ಹಸು ಮೊದಲಾದ ಪಶುಗಳನ್ನೂ, ಮನುಷ್ಯನನ್ನೂ ಸಾಯಿಸಿ ಹೋಮ ಮಾಡಬೇಕೆಂದು ಎಲ್ಲಿಯೂ ಬರೆದಿಲ್ಲ. ಕೇವಲ ವಾಮಮಾರ್ಗಿಗಳ ಗ್ರಂಥಗಳಲ್ಲಿ ಇಂತಹ ಅನರ್ಥ ಬರೆಯಲ್ಪಟ್ಟಿದೆ. ಆದರೆ, ಈ ಮಾತನ್ನು ವಾಮಮಾರ್ಗಿಗಳೇ ಪ್ರಾರಂಭಿಸಿದರು. ಎಲ್ಲಿಯಾದರೂ ಉಲ್ಲೇಖವಿದ್ದಲ್ಲಿ ವಾಮಮಾರ್ಗಿಗಳೇ ‘ಪ್ರಕ್ಷೇಪ’ ಮಾಡಿದ್ದಾರೆ. ನೋಡಿರಿ. ರಾಜನು ನ್ಯಾಯಧರ್ಮಗಳಿಗೆ ಅನುಸಾರವಾಗಿ ಪ್ರಜಾಪಾಲನೆ ಮಾಡಬೇಕು; ವಿದ್ಯೆಯನ್ನು ಪ್ರಸಾರ ಮಾಡುವ ಯಜಮಾನನು ಅಗ್ನಿಯಲ್ಲಿ ತುಪ್ಪ ಮೊದಲಾದ ಉತ್ತಮ ಪದಾರ್ಥಗಳನ್ನು ಹೋಮಮಾಡುವುದು ಅಶ್ವಮೇಧ; ಅನ್ನ, ಇಂದ್ರಿಯ, ಕಿರಣ, ಪೃಥಿವೀ ಮೊದಲಾದುವನ್ನು ಪರಿಶುದ್ಧವಾಗಿಡುವುದು ‘ಗೋಮೇಧ’;

ಮನುಷ್ಯನು ಸತ್ತಬಳಿಕ ಅವನ ಶರೀರವನ್ನು ವಿಧಿಪೂರ್ವಕವಾಗಿ ಸುಡುವುದು ' ನರಮೇಧ ' ಎನ್ನಿಸಿಕೊಳ್ಳುತ್ತದೆ.

ಪ್ರ :—ಯಜ್ಞಮಾಡುವವರು " ಪಶುವನ್ನು ಸಾಯಿಸಿ ಯಜ್ಞ ಮಾಡುವುದರಿಂದ ಯಜಮಾನನೂ, ಪಶುವೂ ಸ್ವರ್ಗಕ್ಕೆ ಹೋಗುತ್ತಿದ್ದರು. ಮತ್ತು ಹೋಮಮಾಡಿ, ಪಶುವನ್ನು ತಿರುಗಿ ಬದುಕಿಸುತ್ತಿದ್ದರು." ಎಂದು ಹೇಳುತ್ತಾರೆ. ಈ ಮಾತು ನಿಜವೋ, ಅಲ್ಲವೋ ?

ಉ :—ಅಲ್ಲ ; ಹಾಗೆ ಸ್ವರ್ಗಕ್ಕೆ ಹೋಗುವ ಹಾಗಿದ್ದರೆ, ಅಂತಹ ಮಾತನ್ನು ಹೇಳುವವನನ್ನೇ ಸಾಯಿಸಿ, ಹೋಮಮಾಡಿ ಸ್ವರ್ಗಕ್ಕೆ ಕಳುಹಿಸಬೇಕು. ಇಲ್ಲದಿದ್ದರೆ, ಅವನ ಪ್ರಿಯ ತಾಯಿ, ತಂದೆ, ಸ್ತ್ರೀ, ಪುತ್ರ ಮೊದಲಾದವರನ್ನು ಸಾಯಿಸಿ, ಹೋಮಮಾಡಿ ಸ್ವರ್ಗಕ್ಕೆ ಏಕೆ ಕಳುಹಿಸುವುದಿಲ್ಲ ? ಅಥವಾ ವೇದಿಯಿಂದ ಅವರನ್ನು ಮತ್ತೆ ಏಕೆ ಬದುಕಿಸಿಕೊಳ್ಳಬಾರದು ?

ಪ್ರ :—ಯಜ್ಞಮಾಡುವಾಗ ವೇದಮಂತ್ರಗಳನ್ನು ಹೇಳುತ್ತಾರೆ. ವೇದಗಳಲ್ಲಿ ಇಲ್ಲದಿದ್ದರೆ ಎಲ್ಲಿಂದ ಹೇಳುತ್ತಿದ್ದರು ?

ಉ :—ಮಂತ್ರವು ಯಾವನನ್ನೂ, ಎಲ್ಲಿ ಹೇಳಿದರೂ ವಿರೋಧಿಸುವುದಿಲ್ಲ. ಏಕೆಂದರೆ ಅದು ಒಂದು ಶಬ್ದ. ಅದರ ಅರ್ಥವು ಪಶುಗಳನ್ನು ಸಾಯಿಸಿ ಹೋಮಮಾಡಬೇಕೆಂದಲ್ಲ. ಹೇಗೆಂದರೆ—' ಅಗ್ನಯೇ ಸ್ವಾಹಾ ' ಮೊದಲಾದ ಮಂತ್ರಗಳಿಗೆ ಅಗ್ನಿಯಲ್ಲಿ ಪುಷ್ಟಿಕಾರಕವಾದ ಹವಿಸ್ಸು, ತುಪ್ಪ ಮೊದಲಾದ ಉತ್ತಮ ಪದಾರ್ಥಗಳನ್ನು ಹೋಮಮಾಡುವುದರಿಂದ ವಾಯು ವೃಷ್ಟಿ ಜಲಗಳು ಶುದ್ಧವಾಗಿ ಜಗತ್ತಿಗೆ ಸುಖಕರವಾಗುತ್ತವೆಂದು ಅರ್ಥವಿರುತ್ತದೆ. ಆದರೆ ಈ ಸತ್ಯಾರ್ಥಗಳನ್ನು ಆ ಮೂಢನು ತಿಳಿದಿರಲಿಲ್ಲ. ಏಕೆಂದರೆ—ಸ್ವಾರ್ಥಬುದ್ಧಿಗಳು ಕೇವಲ ಸ್ವಪ್ರಯೋಜನವನ್ನು ಸಾಧಿಸಿಕೊಳ್ಳುವುದರ ಹೊರತು ಬೇರೇನನ್ನೂ ತಿಳಿಯುವುದಿಲ್ಲ. ಮತ್ತು ಒಪ್ಪುವುದಿಲ್ಲ. ಪೋಪರ ಈ ಬಗೆಯ ಅನಾಚಾರವನ್ನು ನೋಡಿ ಮತ್ತು ಸತ್ತವರಿಗಾಗಿ ತರ್ಪಣ, ಶ್ರಾದ್ಧ ಮೊದಲಾದುವನ್ನು ನೋಡಿ, ಮಹಾಭಯಂಕರವೂ, ವೇದವಿರುದ್ಧವೂ ಆದ ಜೈನ-ಬೌದ್ಧ ಮತಗಳು ಪ್ರಚಲಿತವಾದುವು. ಈ ದೇಶದಲ್ಲಿಯೇ

ಗೋರಖಪುರದ ರಾಜನೊಬ್ಬನಿದ್ದನು. ಪೋಪರು ಆತನಿಂದ ಯಜ್ಞ ಮಾಡಿಸಿದರು. ಆತನ ಪ್ರಿಯೆಯಾದ ರಾಣಿಯನ್ನು ಕುದುರೆಯೊಡನೆ ಸಮಾಗಮಮಾಡಿಸಿದ್ದರಿಂದ ಆಕೆಯು ಸತ್ತುಹೋದ ಮೇಲೆ, ರಾಜನು ವೈರಾಗ್ಯ ತಾಳಿ, ಮಗನಿಗೆ ರಾಜ್ಯಕೊಟ್ಟು, ತಾನು ಸಾಧುವಾಗಿ ಪೋಪರ ಟೊಳ್ಳನ್ನೆಲ್ಲಾ ಬಿಚ್ಚಿ ತೊಡಗಿದನು—ಎಂದು ಕೇಳುತ್ತೇವೆ. ಚಾರ್ವಾಕ ಮತ್ತು ಅಭ್ರಾಣಕಮತಗಳೂ ಕೂಡ ಇದರ ಶಾಖೆಗಳಂತೆಯೇ ಆದುವು. ಅವರು ಇಂತಹ ಶ್ಲೋಕಗಳನ್ನು ರಚಿಸಿದ್ದಾರೆ—

ಪಶುಶ್ಚೇನ್ನಿಹತಸ್ಸ್ವರ್ಗಂ ಜ್ಯೋತಿಷ್ಟೋಮೇ ಗಮಿಷ್ಯತಿ ।
ಸ್ವಪಿತಾ ಯಜಮಾನೇನ ತತ್ರ ಕಸ್ಮಾನ್ನ ಹಿಂಸ್ಯತೇ ॥೧॥
ಮೃತಾನಾಮಿಹ ಜಂತೂನಾಂ ಶ್ರಾದ್ಧಂ ಚೇತ್ತೃಪ್ತಿಕಾರಣಂ ।
ಗಚ್ಛತಾಮಿಹ ಜಂತೂನಾಂ ವ್ಯರ್ಥಂ ಪಾಥೇಯಕಲ್ಪನಂ ॥೨॥

“ಪಶುಗಳನ್ನು ಸಾಯಿಸಿ ಅಗ್ನಿಯಲ್ಲಿ ಹೋಮಮಾಡುವುದರಿಂದ ಪಶುವು ಸ್ವರ್ಗಕ್ಕೆ ಹೋಗುವುದಾದರೆ, ಯಜಮಾನನು ತನ್ನ ತಂದೆ ಮೊದಲಾದವರನ್ನು ಸಾಯಿಸಿ ಏಕೆ ಸ್ವರ್ಗಕ್ಕೆ ಕಳುಹಿಸುವುದಿಲ್ಲ? ॥೧॥ ಶ್ರಾದ್ಧ ತರ್ಪಣಗಳು ಸತ್ತುಹೋದ ಮನುಷ್ಯರ ತೃಪ್ತಿಗಾಗಿ ಇದ್ದರೆ ವಿದೇಶಕ್ಕೆ ಹೊರಡುವ ಮಾನವನಿಗೆ ಮಾರ್ಗದ ವೆಚ್ಚವನ್ನೂ, ತಿಂಡಿ-ತೀರ್ಥಗಳ ಸಲುವಾಗಿ ಗಂಟನ್ನೂ ಕೊಡುವುದು ವ್ಯರ್ಥ. ಏಕೆಂದರೆ—ಸತ್ತುಹೋದವನಿಗೆ ಶ್ರಾದ್ಧ ತರ್ಪಣದಿಂದ ಅನ್ನ-ನೀರು ತಲುಪುವುದಾದರೆ, ಜೀವಸಹಿತವಾಗಿ ಪರದೇಶದಲ್ಲಿ ಇರುವವನಿಗಾಗಲಿ ಮಾರ್ಗವನ್ನು ನಡೆಯುತ್ತಿರುವವನಿಗಾಗಲಿ, ಮನೆಯಲ್ಲಿ ಅಡಿಗೆ ಮಾಡಿದ ಪದಾರ್ಥಗಳೆಲ್ಲವನ್ನೂ ಎಲೆಯಲ್ಲಿ ಬಡಿಸಿ, ಒಂದು ಪಾತ್ರೆಯಲ್ಲಿ ನೀರನ್ನು ತುಂಬಿ ಅವನ ಹೆಸರನ್ನು ಹೇಳಿ ಇಟ್ಟರೆ ಏತಕ್ಕೆ ತಲಪುವುದಿಲ್ಲ? ಬದುಕಿರುವಾಗ ದೂರದೇಶದಲ್ಲಿಯೋ ಅಥವಾ ಹತ್ತು ಹೆಜ್ಜೆಗಳ ದೂರದಲ್ಲಿಯೋ ಇರುವ ಮನುಷ್ಯನಿಗೆ ಕೊಟ್ಟದ್ದು ಸೇರದಿರುವಾಗ ಸತ್ತವನ ಹತ್ತಿರ ಯಾವ ರೀತಿಯೂ ತಲುಪಲಾರದು. ಅವರ ಇಂತಹ ಯುಕ್ತಿಯುಕ್ತವಾದ ಉಪದೇಶಗಳನ್ನು ಒಪ್ಪತೊಡಗಿದರು. ಮತ್ತು ಅವರ ಮತವು ಹರಡತೊಡಗಿತು. ಯಾವಾಗ ಬಹುಮಂದಿ

ರಾಜರೂ, ಭೂಮಿಪತಿಗಳೂ, ಆ ಮತವನ್ನು ಸೇರಿದರೋ, ಆಗ ಪೋಪರೂ ಕೂಡ ಆ ಕಡೆಯೇ ವಾಲಿದರು. ಏಕೆಂದರೆ--ಪೋಪರು ಎಲ್ಲಿ ಲಾಭ ಜಾಸ್ತಿಗಿ ದೊರೆಯುವುದೋ, ಅಲ್ಲಿಗೇ ಹೊರಟುಹೋಗುವರು. ಅವರೂ ಕೂಡಲೇ ಜೈನರಾಗತೊಡತದರು. ಜೈನರಲ್ಲಿಯೂ ಕೂಡ ಬೇರೆ ವಿಧವಾದ ಪೋಪಲೀಲೆಗಳು ಬಹಳವಾಗಿರುತ್ತವೆ. ಅದನ್ನು ಹನ್ನೆರಡನೆಯ ಸಮುಲ್ಲಾಸದಲ್ಲಿ ಬರೆಯುವೆವು. ಬಹು ಜನರು ಇವರ ಮತವನ್ನು ಸ್ವೀಕರಿಸಿದರು; ಆದರೆ ಎಷ್ಟೋ ಜನ ಪರ್ವತ ಪ್ರಾಂತದವರೂ, ಕಾಶಿ, ಕನೋಜ್, ಪಶ್ಚಿಮ ಮತ್ತು ದಕ್ಷಿಣ ಪ್ರಾಂತ್ಯದವರೂ ಜೈನರ ಮತವನ್ನು ಸ್ವೀಕರಿಸಿರಲಿಲ್ಲ. ಈ ಜೈನರು ವೇದದ ಅರ್ಥವನ್ನರಿಯದೆ, ಭ್ರಾಂತಿಯಿಂದ, ಹೊರಗಣ ಪೋಪಲೀಲೆಯನ್ನು ವೇದ ಮೂಲಕವೆಂದು ತಿಳಿದು, ವೇದಗಳನ್ನೂ ಸಹ ನಿಂದಿಸಹತ್ತಿದರು. ಅವುಗಳ ಪಠನ-ಪಾಠನಗಳನ್ನೂ, ಯಜ್ಞೋಪವೀತಾದಿಗಳನ್ನೂ, ಬ್ರಹ್ಮಚರ್ಯ ಮೊದಲಾದ ನಿಯಮಗಳನ್ನೂ ಸಹ ಹಾಳುಮಾಡಿದರು. ಎಲ್ಲೆಲ್ಲಿ ಎಷ್ಟೆಷ್ಟು ವೇದಾದಿ ಗ್ರಂಥಗಳು ಸಿಕ್ಕಿದುವೋ, ಅವನ್ನು ನಾಶಮಾಡಿದರು. ಆರ್ಯರ ಮೇಲೆ ಬಹುಮಟ್ಟಿಗೆ ರಾಜ್ಯಾಧಿಕಾರವನ್ನೂ ನಡೆಸಿದರು; ದುಃಖಕೊಟ್ಟರು. ಅವರಿಗೆ ಭಯ-ಶಂಕೆಯಿಲ್ಲವಾದಾಗ, ತಮ್ಮ ಮತದ ಗೃಹಸ್ಥರ ಮತ್ತು ಸಾಧುಗಳ ಪ್ರತಿಷ್ಠೆಯನ್ನೂ ವೇದ ಮಾರ್ಗಿಗಳ ಅಪಮಾನವನ್ನೂ ಮಾಡುತ್ತಿದ್ದರು; ಮತ್ತು ಪಕ್ಷಪಾತದಿಂದ ದಂಡಿಸಲೂ ಆರಂಭಿಸಿದರು. ಮತ್ತು ತಾವು ಸುಖ, ವಿಶ್ರಾಂತಿ ಮತ್ತು ಗರ್ವದಿಂದ ಉಬ್ಬಿ ಓಡಾಡಹತ್ತಿದರು. ಋಷಭದೇವನ ಮೊದಲುಗೊಂಡು ಮಹಾವೀರನವರೆಗೂ ತಮ್ಮ ತೀರ್ಥಂಕರರ ದೊಡ್ಡ ದೊಡ್ಡ ವಿಗ್ರಹಗಳನ್ನು ಮಾಡಿ ಅವುಗಳಿಗೆ ಪೂಜೆಮಾಡತೊಡಗಿದರು. ಅಂದರೆ ಪಾಷಾಣಾದಿ ಮೂರ್ತಿಪೂಜೆಯ ಮೂಲವು ಜೈನರಿಂದ ಪ್ರಚಲಿತವಾಯಿತು. ಪರಮಾತ್ಮನನ್ನು ಅಂಗೀಕರಿಸುವುದು ಕಡಿಮೆಯಾಯಿತು; ಪಾಷಾಣಾದಿ ಮೂರ್ತಿಪೂಜೆಗಳಲ್ಲಿ ತೊಡಗಿದರು. ಹೀಗೆ ಮುನ್ನೂರು ವರ್ಷಗಳ ಕಾಲ ಆರ್ಯಾವರ್ತದಲ್ಲಿ ಜೈನರ ರಾಜ್ಯವಿದ್ದಿತು. ಪ್ರಾಯಶಃ ವೇದಾರ್ಥಜ್ಞಾನದಿಂದ ಶೂನ್ಯರಾಗಿದ್ದರು. ಇದಾಗಿ ಸುಮಾರು ಎರಡುಸಾವಿರದ ಐನೂರು ವರ್ಷಗಳಾಗಿರಬಹುದು.

ಸುಮಾರು ಎರಡುಸಾವಿರದ ಇನ್ನೂರು ವರ್ಷಗಳ ಹಿಂದೆ ದ್ರವಿಡದೇಶದಲ್ಲಿ ಹುಟ್ಟಿದ ಶಂಕರಾಚಾರ್ಯರೆಂಬ ಬ್ರಾಹ್ಮಣರೊಬ್ಬರು ಬ್ರಹ್ಮಚರ್ಯವನ್ನು ಪಾಲಿಸಿ, ವ್ಯಾಕರಣ ಮೊದಲಾದ ಸಮಸ್ತ ಶಾಸ್ತ್ರಗಳನ್ನೂ ಕಲಿತು, "ಅಹಹ! ಸತ್ಯವಾದ ಆಸ್ತಿಕವೇದಮತವು ಲುಪ್ತವಾಗುವುದು ಮತ್ತು ಜೈನ ನಾಸ್ತಿಕಮತವು ಹೊರಟಿರುವುದು ಅತ್ಯಂತ ಹಾನಿಕರವಾಗಿರುತ್ತದೆ. ಇವನ್ನು ಯಾವ ರೀತಿಯಿಂದಾದರೂ ಓಡಿಸಲೇಬೇಕು" ಎಂದು ಯೋಚಿಸಲಾರಂಭಿಸಿದರು. ಶಂಕರಾಚಾರ್ಯರು ಶಾಸ್ತ್ರಗಳನ್ನಂತೂ ಓದಿಯೇ ಇದ್ದರು. ಅಲ್ಲದೆ ಜೈನಮತಗ್ರಂಥಗಳನ್ನೂ ಕೂಡ ಓದಿದ್ದರು. ಅವರ ಯುಕ್ತಿಗಳು ಸಹ ಮಹಾ ಪ್ರಬಲವಾಗಿದ್ದವು. ಅವರು ಇವರನ್ನು ಯಾವ ರೀತಿಯಿಂದ ಓಡಿಸಬೇಕೆಂದು ಆಲೋಚಿಸಿದರು. ಉಪದೇಶ ಮತ್ತು ಶಾಸ್ತ್ರಾರ್ಥ ಮಾಡುವುದರಿಂದ ಇವರು ದೂರವಾಗುವರೆಂದು ನಿಶ್ಚಯಿಸಿಕೊಂಡರು. ಹೀಗೆ ನಿರ್ಧರಿಸಿ ಉಜ್ಜಯಿನೀ ನಗರಕ್ಕೆ ಬಂದರು. ಆಗ ಅಲ್ಲಿ ಸುಧನ್ವನೆಂಬ ಅರಸು ರಾಜ್ಯವಾಳುತ್ತಿದ್ದನು. ಆತನು ಜೈನಗ್ರಂಥಗಳನ್ನೂ, ಸ್ವಲ್ಪಮಟ್ಟಿಗೆ ಸಂಸ್ಕೃತವನ್ನೂ ಕಲಿತಿದ್ದನು. ಶಂಕರಾಚಾರ್ಯರು ಅಲ್ಲಿಗೆ ಹೋಗಿ ವೇದೋಪದೇಶ ಮಾಡಲಾರಂಭಿಸಿದರು. ಮತ್ತು ರಾಜನನ್ನು ಸಂದರ್ಶಿಸಿ ಆತನೊಡನೆ "ನೀವು ಸಂಸ್ಕೃತವನ್ನೂ, ಜೈನಗ್ರಂಥಗಳನ್ನು ಓದಿರುತ್ತೀರಿ. ಮತ್ತು ಜೈನಮತವನ್ನು ಒಪ್ಪುತ್ತೀರಿ. ಆದುದರಿಂದ ಜೈನಪಂಡಿತರ ಸಂಗಡ ಸೋತವರು ಗೆದ್ದವರ ಮತವನ್ನು ಸ್ವೀಕರಿಸಬೇಕೆಂಬ ಶಪಥದೊಂದಿಗೆ ಶಾಸ್ತ್ರಾರ್ಥ ಮಾಡಿಸಿರಿ. ಮತ್ತು ನೀವೂ ಸಹ ಗೆದ್ದವರ ಮತವನ್ನು ಸ್ವೀಕರಿಸಿ ಎಂದು ಹೇಳಿದರು. ಸುಧನ್ವರಾಜನು ಜೈನಮತಾವಲಂಬಿಯಾಗಿದ್ದರೂ ಸಂಸ್ಕೃತಗ್ರಂಥಗಳ ಅಧ್ಯಯನದಿಂದ ಆತನ ಬುದ್ಧಿಯಲ್ಲಿ ಸ್ವಲ್ಪಮಟ್ಟಿಗೆ ವಿದ್ಯಾಪ್ರಕಾಶವಿದ್ದಿತು. ಇದರಿಂದ ಆತನು ಮನದಲ್ಲಿ ಬಹಳ ಪಶುತ್ವ ಹರಡಿರಲಿಲ್ಲ. ಏಕೆಂದರೆ—ವಿದ್ಯಾವಂತನು ಸತ್ಯಾಸತ್ಯಗಳನ್ನು ಪರೀಕ್ಷಿಸಿ, ಸತ್ಯವನ್ನು ಸ್ವೀಕರಿಸಿ ಅಸತ್ಯವನ್ನು ಬಿಟ್ಟುಬಿಡುತ್ತಾನೆ. ಸುಧನ್ವರಾಜನು ದೊಡ್ಡ ವಿದ್ವಾಂಸನಾದ ಉಪದೇಶಕನು ದೊರೆಯುವವರೆಗೂ 'ಇವುಗಳಲ್ಲಿ ಯಾವುದು

ಸತ್ಯ, ಯಾವುದು ಅಸತ್ಯ'ವೆಂಬ ಸಂದೇಹದಲ್ಲಿದ್ದನು. ಶಂಕರಾಚಾರ್ಯರ ಮಾತನ್ನು ಕೇಳಿ. ಆತನು ಬಹಳ ಸಂತೋಷದಿಂದ—ಶಾಸ್ತ್ರಾರ್ಥವನ್ನು ನಡೆಸಿ, ಸತ್ಯಾಸತ್ಯಗಳ ನಿರ್ಣಯವನ್ನು ಅವಶ್ಯವಾಗಿ ಮಾಡಿಸುತ್ತೇನೆಂದು ಹೇಳಿದನು. ದೂರದೂರದೇಶಗಳಿಂದ ಜೈನರ ಪಂಡಿತರನ್ನು ಕರೆಸಿ, ಸಭೆಯನ್ನು ಸೇರಿಸಿದನು. ಅದರಲ್ಲಿ ಶಂಕರಾಚಾರ್ಯರದು ವೇದಮತವೂ, ಜೈನರದು ವೇದವಿರುದ್ಧಮತವೂ ಆಗಿದ್ದಿತು. ಅಂದರೆ—ಶಂಕರಾಚಾರ್ಯರ ಪಕ್ಷವು ವೇದಮತ ಸ್ಥಾಪನವೂ ಮತ್ತು ಜೈನಮತ ಖಂಡನವೂ, ಜೈನಪಂಡಿತರ ಪಕ್ಷವು ತಮ್ಮ ಮತದ ಸ್ಥಾಪನೆಯೂ ವೇದಮತದ ಖಂಡನೆಯೂ ಆಗಿದ್ದವು. ಶಾಸ್ತ್ರಾರ್ಥವು ಅನೇಕ ದಿನಗಳವರೆಗೆ ಆಯಿತು. "ಸೃಷ್ಟಿಯನ್ನು ರಚಿಸಿದ ಅನಾದಿ ಈಶ್ವರನು ಯಾವನೂ ಇಲ್ಲ; ಈ ಜಗತ್ತು ಮತ್ತು ಜೀವವು ಅನಾದಿ; ಇವುಗಳಿಗೆ ಎಂದೂ ಉತ್ಪತ್ತಿ ವಿನಾಶಗಳು ಇಲ್ಲ." ಎಂಬುದು ಜೈನರ ಮತವಾಗಿತ್ತು. ಇದಕ್ಕೆ ವಿರುದ್ಧವಾಗಿ "ಅನಾದಿಸಿದ್ಧವಾದ ಪರಮಾತ್ಮನೇ ಜಗತ್ಕರ್ತನು. ಈ ಜಗತ್ತು ಮತ್ತು ಜೀವವು ಸುಳ್ಳು. ಏಕೆಂದರೆ ಆ ಪರಮಾತ್ಮನು ತನ್ನ ಮಾಯೆಯಿಂದ ಈ ಜಗತ್ತನ್ನು ರಚಿಸಿದನು. ಅವನೇ ಧಾರಣ ಮತ್ತು ಪ್ರಳಯವನ್ನು ಮಾಡುತ್ತಾನೆ. ಮತ್ತು ಈ ಜೀವಗಳೂ, ಜಗತ್ತೂ ಸ್ವಪ್ನದಂತಿವೆ. ಪರಮಾತ್ಮನು ತಾನೇ ಸರ್ವರೂಪನಾಗಿ ಲೀಲೆ ಮಾಡುತ್ತಿದ್ದಾನೆ" ಎಂಬುದು ಶಂಕರಾಚಾರ್ಯರ ಮತವಾಗಿದ್ದಿತು. ಬಹುದಿನಗಳವರೆಗೆ ಶಾಸ್ತ್ರಾರ್ಥವು ನಡೆಯುತ್ತಿತ್ತು. ಕಡೆಗೆ ಯುಕ್ತಿ ಪ್ರಮಾಣಗಳಿಂದ ಜೈನಮತದ ಖಂಡನೆಯಾಯಿತು; ಮತ್ತು ಶಂಕರಾಚಾರ್ಯರ ಮತವು ಅಖಂಡಿತವಾಯಿತು. ಆಗ ಜೈನ ಪಂಡಿತರೂ, ಸುಧನ್ವ ರಾಜನೂ ಆ ಮತವನ್ನು ಸ್ವೀಕರಿಸಿದರು; ಜೈನಮತವನ್ನು ಬಿಟ್ಟರು. ಮತ್ತೆ ಭಾರೀ ಆಂದೋಲನವೆದ್ದಿತು. ಸುಧನ್ವ ರಾಜನು ತನ್ನ ಇಷ್ಟಮಿತ್ರರಾದ ಇತರ ರಾಜರಿಗೆ ಬರೆದು ಶಂಕರಾಚಾರ್ಯರ ಶಾಸ್ತ್ರಾರ್ಥವನ್ನು ಮಾಡಿಸಿದನು. ಆದರೆ ಜೈನರ ಪರಾಜಯಕಾಲವಾದುದರಿಂದ ಸೋಲುತ್ತಲೇ ಹೋದರು. ಆಮೇಲೆ ಸುಧನ್ವ ಮೊದಲಾದ ರಾಜರು ಶಂಕರಾಚಾರ್ಯರಿಗೆ ಆರ್ಯಾವರ್ತದಲ್ಲೆಲ್ಲಾ ಸಂಚರಿಸುವುದಕ್ಕೆ

ವ್ಯವಸ್ಥೆಯನ್ನು ಮಾಡಿದರು. ಮತ್ತು ಅವರ ರಕ್ಷಣೆಗಾಗಿ ಆಳುಕಾಳು ಗಳನ್ನೂ ಜೊತೆಗೆ ಇಟ್ಟರು. ಆಗಿನಿಂದಲೇ ಪುನಃ ಎಲ್ಲರಿಗೂ ಯಜ್ಞೋ ಪವೀತಧಾರಣವಾಯಿತು ಮತ್ತು ವೇದಗಳ ಪಠನ-ಪಾಠನಗಳೂ ಆರಂಭವಾದವು. ಶಂಕರಾಚಾರ್ಯರು ಹತ್ತು ವರ್ಷಗಳೊಳಗೆ ಆರ್ಯಾವರ್ತದಲ್ಲೆಲ್ಲಾ ಸಂಚರಿಸಿ, ಜೈನರ ಖಂಡನವನ್ನೂ ವೇದಗಳ ಮಂಡನವನ್ನೂ ಮಾಡಿದರು. ಮತ್ತು ಶಂಕರಾಚಾರ್ಯರ ಕಾಲದಲ್ಲಿ ಜೈನವಿಧ್ವಂಸವಾಯಿತು. ಅಂದರೆ ಇಂದು ಸಿಕ್ಕುವ ಜೈನಮೂರ್ತಿ ಗಳೆಲ್ಲಾ ಶಂಕರಾಚಾರ್ಯರ ಕಾಲದಲ್ಲಿ ಮುರಿದುಹೋದವುಗಳೇ. ಹಾಗೆ ಒಡೆಯದಿರುವ ವಿಗ್ರಹಗಳು ಒಡೆಯಲ್ಪಡುವುವೆಂಬ ಭೀತಿಯಿಂದ ಜೈನರು ಅವುಗಳನ್ನು ಭೂಮಿಯೊಳಗೆ ಹುದುಗಿಟ್ಟರು. ಈಗಲೂ ಕೂಡ ಭೂಮಿಯನ್ನು ಅಗೆಯುವಾಗ ಅನೇಕ ಕಡೆಗಳಲ್ಲಿ ಅಂತಹ ಮೂರ್ತಿಗಳು ದೊರೆಯುತ್ತಿರುತ್ತವೆ. ಶಂಕರಾಚಾರ್ಯರಿಗಿಂತ ಪೂರ್ವದಲ್ಲಿ ಶೈವಮತವೂ ಕೂಡ ಸ್ವಲ್ಪ ಮಟ್ಟಿಗೆ ಪ್ರಚಾರದಲ್ಲಿತ್ತು. ಶಂಕರಾಚಾರ್ಯರು ಅದನ್ನು ಖಂಡಿಸಿದರು. ವಾಮಮಾರ್ಗವನ್ನು ಖಂಡಿಸಿದರು. ಆ ಕಾಲದಲ್ಲಿ ಈ ದೇಶದಲ್ಲಿ ಬಹಳ ಐಶ್ವರ್ಯವಿತ್ತು; ಮತ್ತು ದೇಶಭಕ್ತಿಯೂ ಇದ್ದಿತು. ಶಂಕರಾಚಾರ್ಯರೂ, ಸುಧನ್ವ ರಾಜನೂ ಜೈನಮಂದಿರಗಳನ್ನು ಕೆಡಹಲಿಲ್ಲ; ಏಕೆಂದರೆ ಅವುಗಳಲ್ಲಿ ವೇದಾದಿಗಳ ಪಾಠಶಾಲೆಗಳನ್ನು ನಡೆಸಬೇಕೆಂಬ ಇಚ್ಛೆಯಿದ್ದಿತು. ವೇದಮತವು ಸ್ಥಾಪಿತವಾಗಿ, ವಿದ್ಯಾಪ್ರಚಾರವನ್ನು ಮಾಡಬೇಕೆಂದಿರು ವಷ್ಟರಲ್ಲಿಯೇ, ಜೈನರಿಬ್ಬರು ಹೊರಗೆ ಹೆಸರಿಗೆ ಮಾತ್ರ ವೇದ ಮತದವರು ಮತ್ತು ಒಳಗಿನಿಂದ ದೃಢ ಜೈನರು ಅಂದರೆ ಕಪಟ ಮುನಿಗಳಾಗಿದ್ದರು, ಶಂಕರಾಚಾರ್ಯರು ಇವರ ವಿಷಯದಲ್ಲಿ ಬಹಳ ಪ್ರಸನ್ನರಾಗಿದ್ದರು. ಅವರಿಬ್ಬರೂ ಸಮಯವನ್ನು ಕಾಯುತ್ತಿದ್ದು ಶಂಕರಾಚಾರ್ಯರಿಗೆ ಹಸಿವೇ ಆಡಗಿಹೋಗುವಂತಹ ವಿಷಯುಕ್ತ ವಸ್ತುವನ್ನು ತಿನ್ನಿಸಿದರು. ಆಮೇಲೆ ದೇಹದಲ್ಲೆಲ್ಲಾ ದೊಡ್ಡ ದೊಡ್ಡ ಹುಣ್ಣುಗಳೆದ್ದು ಆರು ತಿಂಗಳಲ್ಲಿ ಶರೀರವು ಬಿದ್ದುಹೋಯಿತು. ಆಗ ಎಲ್ಲರೂ ನಿರುತ್ಸಾಹಿಗಳಾದರು. ಮತ್ತು ಆಗಬೇಕಾಗಿದ್ದ ವಿದ್ಯಾ ಪ್ರಚಾರವೂ ಆಗದೇ ಹೋಯಿತು. ಅವರು ಬರೆದಿದ್ದ ಶಾರೀರಿಕ ಭಾಷ್ಯ

ಮೊಲಾದ ಗ್ರಂಥಗಳನ್ನು ಶಂಕರಾಚಾರ್ಯರ ಶಿಷ್ಯರು ಪ್ರಚಾರಮಾಡ ತೊಡಗಿದರು. ಅಂದರೆ ಜೈನರ ಖಂಡನಕ್ಕಾಗಿ ಯಾವ ಬ್ರಹ್ಮಸತ್ಯ, ಜಗನ್ಮಿಥ್ಯಾ ಮತ್ತು ಜೀವಬ್ರಹ್ಮೈಕ್ಯವನ್ನು ಹೇಳಿದ್ದರೋ, ಅದನ್ನು ಉಪದೇಶಿಸಲಾರಂಭಿಸಿದರು. ದಕ್ಷಿಣದಲ್ಲಿ ಶೃಂಗೇರಿ, ಪೂರ್ವದಲ್ಲಿ ಭೂಗೋವರ್ಧನ, ಉತ್ತರದಲ್ಲಿ ಜೋಶೀ ಮತ್ತು ಪಶ್ಚಿಮದಲ್ಲಿ ದ್ವಾರಕಾ ಈ ಪಟ್ಟಣಗಳಲ್ಲಿ ಶಾರದಾ ಮಠಗಳನ್ನು ಕಟ್ಟಿಸಿ, ಶಂಕರಾಚಾರ್ಯರ ಶಿಷ್ಯರು ಮಹಂತರ ಪದವಿಯನ್ನು ಹೊಂದಿ, ಮತ್ತು ಶ್ರೀಮಂತರಾಗಿ ಆನಂದಿಸತೊಡಗಿದರು. ಏಕೆಂದರೆ—ಶಂಕರಾಚಾರ್ಯರ ಬಳಿಕ ಅವರ ಶಿಷ್ಯರಿಗೆ ಬಹಳ ಪ್ರತಿಷ್ಠೆ ಸಿಕ್ಕಲಾಯಿತು.

ಈಗ ವಿಚಾರ ಮಾಡಬೇಕಾದುದೇನೆಂದರೆ–ಜೀವ ಪರಮಾತ್ಮನ ಏಕತ್ವ ಮತ್ತು ಜಗತ್ತು ಮಿಥ್ಯೆ ಎಂಬುದು ಶಂಕರಾಚಾರ್ಯರ ಮತ ವಾಗಿದ್ದರೆ ಅದು ಉತ್ತಮವಾದ ಮತವಲ್ಲ. ಜೈನಮತವನ್ನು ಖಂಡಿಸು ವುದಕ್ಕಾಗಿ ಆ ಮತವನ್ನು ಸ್ವೀಕರಿಸಿದ್ದರೆ ಸ್ವಲ್ಪ ಒಳ್ಳೆಯದು.

ನವೀನ ವೇದಾಂತಿಗಳ ಮತ ಹೀಗಿದೆ. ಪ್ರ :—ಜಗತ್ತು ಸ್ವಪ್ನ ದಂತೆ ಇರುತ್ತದೆ. ಹಗ್ಗದಲ್ಲಿ ಸರ್ಪದಂತೆಯೂ, ಮುತ್ತಿನ ಚಿಪ್ಪಿನಲ್ಲಿ ಬೆಳ್ಳಿಯಂತೆಯೂ, ಬಿಸಿಲ್ಗುದುರೆಯಲ್ಲಿ ನೀರಿನಂತೆಯೂ, ಗಂಧರ್ವ ನಗರ, ಇಂದ್ರಜಾಲದಂತೆಯೂ ಈ ಜಗತ್ತು ಸುಳ್ಳಿರುತ್ತದೆ. ಬ್ರಹ್ಮನು ಒಬ್ಬನೇ ಸತ್ಯವಾಗಿರುತ್ತಾನೆ.

ಸಿದ್ಧಾಂತಿ :—ಯಾವುದನ್ನು ನೀವು ಸುಳ್ಳೆಂದು ಹೇಳುತ್ತೀರಿ?

ನವೀನ :—ಯಾವ ಪದಾರ್ಥವು ಇಲ್ಲದಿದ್ದರೂ ಇರುವಂತೆ ಕಂಡುಬರುವುದೋ, ಅದನ್ನು.

ಸಿದ್ಧಾಂತಿ :—ವಸ್ತುವೇ ಇಲ್ಲದಿರುವಾಗ ಇರುವಂತೆ ಕಂಡಬರು ವುದು ಹೇಗೆ?

ನವೀನ :—ಅಧ್ಯಾರೋಪದಿಂದ.

ಸಿದ್ಧಾಂತಿ :–ಯಾವುದನ್ನು ಅಧ್ಯಾರೋಪವೆಂದು ಹೇಳುತ್ತೀರಿ?

ನವೀನ :—' ವಸ್ತುನ್ಯವಸ್ತ್ವಾರೋಪಣಮಧ್ಯಾಸಃ ; ಅಧ್ಯಾ ರೋಪಾಪವಾದಾಭ್ಯಾಂ ನಿಷ್ಪ್ರಪಂಚಂ ಪ್ರಪಂಚ್ಯತೇ '—ಅಂದರೆ

ಯಾವುದೋ ಪದಾರ್ಥವನ್ನು ಆರೋಪಿಸುವುದಕ್ಕೆ ' ಅಧ್ಯಾಸ ' ಅಥವಾ ' ಅಧ್ಯಾರೋಪ ' ವೆಂದು ಹೆಸರು. ಮತ್ತು ಅದನ್ನು ನಿರಾಕರಿಸುವುದಕ್ಕೆ ಅಪವಾದವೆಂದು ಹೆಸರು. ಇವೆರಡರಿಂದ ಪ್ರಪಂಚರಹಿತನಾದ ಬ್ರಹ್ಮನಲ್ಲಿ ಪ್ರಪಂಚರೂಪವಾದ ಜಗತ್ತನ್ನು ವಿಸ್ತಾರಮಾಡುತ್ತಾರೆ.

ಸಿದ್ಧಾಂತಿ :—ನೀವು ಹಗ್ಗವನ್ನು ವಸ್ತುವೆಂದೂ, ಸರ್ಪವನ್ನು ಅವಸ್ತುವೆಂದೂ ತಿಳಿದು ಈ ಭ್ರಮಜಾಲದಲ್ಲಿ ಬಿದ್ದಿರುವಿರಿ. ಸರ್ಪವು ವಸ್ತುವಲ್ಲವೆ? ಹಗ್ಗದಲ್ಲಿಲ್ಲವೆಂದು ಹೇಳುವುದಾದರೆ, ಅದು ಬೇರೊಂದು ಕಡೆ ಇರುತ್ತದೆ. ಮತ್ತು ಅದರ ಸಂಸ್ಕಾರ ಮಾತ್ರ ಹೃದಯದಲ್ಲಿರುತ್ತದೆ. ಮತ್ತೆ ಆ ಸರ್ಪವೂ ಅವಸ್ತುವಾಗಿ ಉಳಿಯಲಿಲ್ಲ. ಹಾಗೆಯೇ ಸ್ಥಾಣುವಿನಲ್ಲಿ ಪುರುಷ, ಚಿಪ್ಪಿನಲ್ಲಿ ಬೆಳ್ಳಿ ಮೊದಲಾದುವುಗಳ ವ್ಯವಸ್ಥೆಯನ್ನೂ ತಿಳಿಯಬೇಕು. ಮತ್ತು ಸ್ವಪ್ನದಲ್ಲಿಯೂ, ಕೂಡ ಯಾವುವುಗಳ ಪ್ರತೀತಿಯಾಗುವುದೋ ಅವು ಬೇರೆಡೆ ಇರುತ್ತವೆ. ಮತ್ತು ಅವುಗಳ ಸಂಸ್ಕಾರಗಳು ಆತ್ಮನಲ್ಲಿಯೂ ಇರುತ್ತವೆ. ಆದುದರಿಂದ ಆ ಸ್ವಪ್ನವೂ ಸಹ ವಸ್ತುವಿನಲ್ಲಿ ಅವಸ್ತುವಿದ ಆರೋಪಣದಂತೆ ಇಲ್ಲ.

ನವೀನ ವೇದಾಂತಿ :—ಎಂದೂ ನೋಡದುದು, ಎಂದೂ ಕೇಳದುದು, ಸ್ವಪ್ನದಲ್ಲಿ ಕಂಡುಬರುತ್ತವೆ. ಹೇಗೆಂದರೆ—ಸ್ವಪ್ನದಲ್ಲಿ ತನ್ನ ತಲೆಯು ಕತ್ತರಿಸಿಹೋಗಿದೆ; ತಾನೇ ಅಳುತ್ತಾನೆ. ಮತ್ತು ನೀರಿನ ಧಾರೆಯು ಮೇಲಕ್ಕೆ ಏರಿಹೋಗುತ್ತದೆ. ಯಾವುದೆಂದೂ ಆಗಲೇ ಇಲ್ಲವೋ ಅದೂ ಕಾಣುತ್ತದೆ. ಅದು ಹೇಗೆ ಸತ್ಯವಾದೀತು?

ಸಿದ್ಧಾಂತಿ :—ಈ ದೃಷ್ಟಾಂತವೂ ನಿಮ್ಮ ಪಕ್ಷವನ್ನು ಸಿದ್ಧಪಡಿಸುವುದಿಲ್ಲ. ಏಕೆಂದರೆ—ಕೇಳದೆಯೇ ನೋಡದೆಯೇ ಯಾವ ಸಂಸ್ಕಾರವೂ ಉಂಟಾಗುವುದಿಲ್ಲ. ಸಂಸ್ಕಾರವಿಲ್ಲದೆ ಸ್ಮೃತಿಯೂ ಮತ್ತು ಸ್ಮೃತಿಯಿಲ್ಲದೆ ಸಾಕ್ಷಾತ್ ಅನುಭವವೂ ಆಗುವುದಿಲ್ಲ. ಯಾರಿಂದಲಾದರೂ " ಇಂತಹವನ ತಲೆ ಕತ್ತರಿಸಿಹೋಯಿತು ಮತ್ತು ಅವನ ಬಂಧು ಮತ್ತು ತಂದೆ ಮೊದಲಾದವರು ಯುದ್ಧದಲ್ಲಿ ಪ್ರತ್ಯಕ್ಷವಾಗಿ ಅಳುತ್ತಿರುವುದನ್ನು ನೋಡಿದೆನು " ಎಂದು ಕೇಳಿದಾಗ ಅಥವಾ ನೋಡಿದಾಗ, ಚಿಲುಮೆಯ ನೀರು ಮೇಲಕ್ಕೇರುತ್ತಿರುವುದನ್ನು ನೋಡಿದಾಗ ಅಥವಾ ಕೇಳಿದಾಗ ಅದರ ಸಂಸ್ಕಾರ ಅವನ ಆತ್ಮದಲ್ಲಿಯೇ ಬೀಳು

ತ್ತದೆ. ಅವನು ಜಾಗ್ರತಾವಸ್ಥೆಯ ಪದಾರ್ಥಗಳಿಂದ ದೂರವಾಗಿ ನೋಡುವಾಗ, ತಾನು ನೋಡಿದ ಅಥವಾ ಕೇಳಿದ ಪದಾರ್ಥಗಳನ್ನು ತನ್ನ ಆತ್ಮನಲ್ಲಿ ನೋಡುತ್ತಾನೆ. ತನ್ನಲ್ಲಿಯೇ ನೋಡುವಾಗ ತನ್ನ ತಲೆಯೇ ಕತ್ತರಿಸಿದಂತೆಯೂ, ತಾನೇ ಅಳುತ್ತಿರುವಂತೆಯೂ ಜಲಧಾರೆ ಮೇಲಕ್ಕೇರುತ್ತಿರುವಂತೆಯೂ ಕಂಡುಬರುತ್ತದೆ. ಇದು ಕೂಡ ವಸ್ತುವಿನಲ್ಲಿ ಅವಸ್ತುವನ ಆರೋಪಣದಂತೆ ಇರುವುದಿಲ್ಲ. ಆದರೆ ಚಿತ್ರಕಾರನು ಹಿಂದೆ ಕಂಡ, ಕೇಳಿದ ಅಥವಾ ಮಾಡಿದವುಗಳನ್ನು ಆತ್ಮನಿಂದ ಹೊರತೆಗೆದು ಕಾಗದದ ಮೇಲೆ ಬರೆಯುವಂತೆ, ಅಥವಾ ಪ್ರತಿಬಿಂಬವನ್ನು ಬರೆಯುವವನು ಬಿಂಬವನ್ನು ನೋಡಿ, ತನ್ನ ಆತ್ಮನಲ್ಲಿ ಆ ಕೃತಿಯನ್ನು ಇಟ್ಟುಕೊಂಡು ಬರೆದುಬಿಡುವಂತೆ, ಈ ವಿಷಯ ವಿರುತ್ತದೆ. ಹೌದು; ಇಷ್ಟು ಆಗುವುದುಂಟು—ಒಂದೊಂದು ಸಲ ಸ್ವಪ್ನದಲ್ಲಿ ಸ್ಮರಣಯುಕ್ತ ಪ್ರತೀತಿ ಆಗುತ್ತದೆ. ಹೇಗೆಂದರೆ—ತನ್ನ ಅಧ್ಯಾಪಕನನ್ನು ಸ್ವಪ್ನದಲ್ಲಿ ನೋಡುತ್ತಾನೆ. ಮತ್ತು, ನೋಡಿ ಮತ್ತು ಕೇಳಿ ಬಹುಕಾಲ ಕಳೆದುಹೋದುದರ ಜ್ಞಾನವನ್ನು ಸಾಕ್ಷಾತ್ಕರಿಸಿಕೊಳ್ಳುತ್ತಾನೆ. ಆಗ "ನಾನು ನೋಡಿದುದನ್ನೇ, ಕೇಳಿದುದನ್ನೇ ಅಥವಾ ಮಾಡಿದುದನ್ನೇ ನೋಡುತ್ತೇನೆ; ಕೇಳುತ್ತೇನೆ ಅಥವಾ ಮಾಡುತ್ತೇನೆ"—ಎಂಬ ಸ್ಮರಣೆಯಿರುವುದಿಲ್ಲ. ಜಾಗ್ರತದಲ್ಲಿ ಸ್ಮರಿಸುವಂತೆ ಸ್ವಪ್ನದಲ್ಲಿ ನಿಯಮಪೂರ್ವಕವಾಗಿ ಸ್ಮರಣವಾಗುವುದಿಲ್ಲ. ನೋಡಿರಿ; ಹುಟ್ಟುಕುರುಡನಿಗೆ ರೂಪದ ವಿಷಯದಲ್ಲಿ ಸ್ವಪ್ನವು ಬೀಳುವುದಿಲ್ಲ. ಆದ್ದರಿಂದ ನಿಮ್ಮ ಅಧ್ಯಾಸ ಮತ್ತು ಅಧ್ಯಾರೋಪಗಳ ಲಕ್ಷಣವು ಸುಳ್ಳಿರುತ್ತದೆ. ಮತ್ತು ವೇದಾಂತಿಗಳು ಹೇಳುವ ವಿವರ್ತವಾದ ಅಂದರೆ ಹಗ್ಗದಲ್ಲಿ ಹಾವಿನ ಪ್ರತೀತಿಯಾಗುವ ದೃಷ್ಟಾಂತವನ್ನು ಬ್ರಹ್ಮದಲ್ಲಿ ಜಗತ್ತಿನ ಪ್ರತೀತಿಯಾಗುವುದರಲ್ಲಿ ಕೊಡುವುದೂ ಸಹ ಸರಿಯಾದುದಲ್ಲ.

ನವೀನ:—ಅಧಿಷ್ಠಾನವಿಲ್ಲದಿದ್ದರೆ ಅಧ್ಯಸ್ತವಸ್ತುವಿನ ಪ್ರತೀತಿಯಾಗುವುದಿಲ್ಲ. ಹೇಗೇದರೆ—ಹಗ್ಗವೇ ಇಲ್ಲದಿದ್ದರೆ ಸರ್ಪದ ಭ್ರಾಂತಿಯೂ ಉಂಟಾಗಲಾರದು. ಹಗ್ಗದಲ್ಲಿ ಸರ್ಪವು ಮೂರು ಕಾಲಗಳಲ್ಲಿಯೂ ಇರುವುದಿಲ್ಲ; ಆದರೆ ಅಂಧಕಾರ ಮತ್ತು ಅಲ್ಪ ಪ್ರಕಾ

ಶನ ಸಂಯೋಗದಲ್ಲಿ ಅಕಸ್ಮಾತ್ ಹಗ್ಗವನ್ನು ನೋಡಿದರೆ ಸರ್ಪವೆಂಬ ಭ್ರಾಂತಿಯಿಂದ ಭಯದಿಂದ ನಡಗುತ್ತಾನೆ. ದೀಪ ಮೊದಲಾದುದರಿಂದ ಅದನ್ನು ನೋಡಿದ ಕೂಡಲೇ ಭ್ರಮೆಯೂ, ಭಯವೂ ನಿವೃತ್ತವಾಗುತ್ತದೆ. ಹಾಗೆಯೇ ಸರ್ಪದ ನಿವೃತ್ತಿಯೂ, ಹಗ್ಗದ ಪ್ರತೀತಿಯೂ ಆಗುವಂತೆ ಬ್ರಹ್ಮನಲ್ಲಿ ಉಂಟಾಗುವ ಜಗತ್ತಿನ ಮಿಥ್ಯಾಪ್ರತೀತಿಯು ಬ್ರಹ್ಮಸಾಕ್ಷಾತ್ಕಾರವಾದಾಗ ನಿವೃತ್ತವಾಗಿಹೋಗುವುದು ಮತ್ತು ಬ್ರಹ್ಮನ ಪ್ರತೀತಿಯಾಗುವುದು.

ಸಿದ್ಧಾಂತಿ :—ಬ್ರಹ್ಮನಲ್ಲಿ ಜಗತ್ತಿನ ಭ್ರಾಂತಿಯು ಯಾರಿಗೆ ಉಂಟಾಯಿತು ?

ನವೀನ :—ಜೀವನಿಗೆ.

ಸಿದ್ಧಾಂತಿ :—ಜೀವನು ಎಲ್ಲಿಂದ ಆದನು ?

ನವೀನ :—ಅಜ್ಞಾನದಿಂದ.

ಸಿದ್ಧಾಂತಿ :—ಅಜ್ಞಾನವೆಲ್ಲಿಂದ ಉಂಟಾಯಿತು ? ಮತ್ತು ಅದೆಲ್ಲಿರುತ್ತದೆ?

ನವೀನ :—ಅಜ್ಞಾನವು ಅನಾದಿ ಮತ್ತು ಬ್ರಹ್ಮನಲ್ಲಿರುತ್ತದೆ.

ಸಿದ್ಧಾಂತಿ :—ಬ್ರಹ್ಮನಲ್ಲಿ ಬ್ರಹ್ಮನ ಅಜ್ಞಾನವುಂಟಾಯಿತೋ ಅಥವಾ ಬೇರೆಯವರದೋ ? ಮತ್ತು ಆ ಅಜ್ಞಾನವು ಯಾರಿಗುಂಟಾಗುತ್ತದೆ ?

ನವೀನ :—ಚಿದಾಭಾಸನಿಗೆ.

ಸಿದ್ಧಾಂತಿ :—ಚಿದಾಭಾಸನ ಸ್ವರೂಪವೇನು ?

ನವೀನ :—ಬ್ರಹ್ಮ ಅಂದರೆ ಬ್ರಹ್ಮನಿಗೆ ಬ್ರಹ್ಮನ ಅಜ್ಞಾನವಾಗುತ್ತದೆ ಅಂದರೆ ತನ್ನ ಸ್ವರೂಪವನ್ನು ತಾನೇ ಮರೆಯುತ್ತಾನೆ.

ಸಿದ್ಧಾಂತಿ :—ಅವನ ಮರೆವಿಗೆ ನಿಮಿತ್ತವೇನು ?

ನವೀನ :—ಅವಿದ್ಯೆ.

ಸಿದ್ಧಾಂತಿ :—ಅವಿದ್ಯೆಯು ಸರ್ವವ್ಯಾಪಿಯಾದ ಸರ್ವಜ್ಞನ ಗುಣವೋ ಅಥವಾ ಅಲ್ಪಜ್ಞನದೋ ?

ನವೀನ :—ಅಲ್ಪಜ್ಞನದು.

ಸಿದ್ಧಾಂತಿ :—ಹಾಗಾದರೆ ನಿಮ್ಮ ಮತದಲ್ಲಿ ಅನಂತವೂ ಸರ್ವಜ್ಞವೂ ಆದ ಚೇತನವೊಂದಲ್ಲದೆ ಬೇರೊಂದು ಚೇತನವು ಇರುವುದೋ ಇಲ್ಲವೋ ? ಮತ್ತು ಅಲ್ಪಜ್ಞನೆಲ್ಲಿಂದ ಬಂದನು ? ಹೌದು, ಬ್ರಹ್ಮನಿಂದ ಬೇರೆಯಾದ ಅಲ್ಪಜ್ಞಚೇತನವನ್ನು ಒಪ್ಪಿದರೆ ಸರಿ. ಬ್ರಹ್ಮನಿಗೆ ಒಂದು ಕಡೆ ತನ್ನ ಸ್ವರೂಪದ ಅಜ್ಞಾನವುಂಟಾದರೆ, ಅದು ಎಲ್ಲೆಡೆಯೂ ಹರಡುವುದು. ಶರೀರದಲ್ಲಿನ ಹುಣ್ಣಿನ ನೋವು ಸಮಸ್ತ ಶರೀರದ ಅಂಗಗಳನ್ನೂ ಕಾರ್ಯಕ್ಕೆ ಅಯೋಗ್ಯವಾಗಿ ಕಾಣುವಂತೆಯೇ ಬ್ರಹ್ಮನು ಒಂದುಕಡೆ ಅಜ್ಞಾನಿಯೂ, ಕ್ಲೇಶಯುಕ್ತನೂ ಆದಲ್ಲಿ, ಸಂಪೂರ್ಣ ಬ್ರಹ್ಮನೇ ಅಜ್ಞಾನಿಯೂ, ಕ್ಲೇಶಾನುಭವಯುಕ್ತನೂ ಆಗಿಹೋಗುವನು.

ನವೀನ :—ಇದೆಲ್ಲಾ ಉಪಾಧಿಯ ಲಕ್ಷಣವೇ ಹೊರತು ಬ್ರಹ್ಮನಲ್ಲ.

ಸಿದ್ಧಾಂತಿ :—ಉಪಾಧಿಯು ಜಡವೋ ಅಥವಾ ಚೇತನವೊ ? ಮತ್ತು ಸತ್ಯವೋ ಅಸತ್ಯವೋ ?

ನವೀನ :—' ಅನಿರ್ವಚನೀಯ ' ಅಂದರೆ—ಅದನ್ನು ಜಡವೆಂದಾಗಲಿ, ಚೇತನವೆಂದಾಗಲಿ, ಸತ್ಯವೆಂದಾಗಲಿ, ಅಸತ್ಯವೆಂದಾಗಲಿ ಹೇಳುವುದಕ್ಕಾಗುವುದಿಲ್ಲ.

ಸಿದ್ಧಾಂತಿ :—ಈ ನಿಮ್ಮ ಮಾತು ' ವದತೋ ವ್ಯಾಘಾತಃ ' ಎಂಬುದಕ್ಕೆ ಸಮವಾಗಿರುತ್ತದೆ. ಏಕೆಂದರೆ–ಅವಿದ್ಯೆಯಿದೆ–ಎನ್ನುತ್ತೀರಿ. ಅದನ್ನು ಜಡವೆಂದಾಗಲಿ, ಚೇತನವೆಂದಾಗಲಿ ಅಥವಾ ' ಸತ್ ' ಎಂದಾಗಲಿ, ' ಅಸತ್ ' ಎಂದಾಗಲಿ ಹೇಳಲಾರಿರಿ. ಇದು, ಚಿನ್ನದಲ್ಲಿ ಹಿತ್ತಾಳೆ ಬೆರೆತಿದ್ದು, ಅದನ್ನು ಅಕ್ಕಸಾಲೆಯ ಬಳಿಗೆ ತೆಗೆದುಕೊಂಡುಹೋಗಿ " ಇದು ಚಿನ್ನವೋ, ಹಿತ್ತಾಳೆಯೋ ? " ಎಂದು ಪರೀಕ್ಷೆಮಾಡಿಸಿದಂತಿರುತ್ತದೆ. ಆಗ ನೀವು—ಇದನ್ನು " ಹಿತ್ತಾಳೆಯೆಂದಾಗಲಿ, ಚಿನ್ನವೆಂದಾಗಲಿ ಹೇಳಲಾಗುವುದಿಲ್ಲ. ಆದರೆ ಇದರಲ್ಲಿ ಎರಡು ಧಾತುಗಳೂ ಸೇರಿರುತ್ತವೆ " ಎಂದೇ ಹೇಳುವಿರಿ.

ನವೀನ :—ನೋಡಿರಿ ; ಹೇಗೆ ಘಟಾಕಾಶ, ಮಠಾಕಾಶ, ಮೇಘಾಕಾಶ ಮತ್ತು ಮಹದಾಕಾಶಗಳು ಉಪಾಧಿ ಅಂದರೆ

ಮಡಿಕೆ, ಮನೆ ಮತ್ತು ಮೋಡಗಳ ಇರುವಿಕೆಯಿಂದ ಬೇರೆ ಬೇರೆಯಾಗಿ ಕಂಡುಬಂದರೂ ವಾಸ್ತವವಾಗಿ ಮಹದಾಕಾಶವೊಂದೇ ಇರುವುದೋ, ಹಾಗೆಯೇ ಮಾಯೆ, ಅವಿದ್ಯೆ, ಸಮಷ್ಟಿ, ವ್ಯಷ್ಟಿ ಮತ್ತು ಅಂತಃಕರಣ ಈ ಉಪಾಧಿಗಳಿಂದ ಬ್ರಹ್ಮನು ಅಜ್ಞಾನಿಗಳಿಗೆ ಬೇರೆ ಬೇರೆಯಾಗಿ ಕಾಣುತ್ತಾನೆ. ನಿಜವಾಗಿ ಒಬ್ಬನೇ ಇರುತ್ತಾನೆ. ನೋಡಿರಿ, ಮುಂದಿನ ಪ್ರಮಾಣದಲ್ಲಿ ಏನು ಹೇಳಿದೆ :—

ಅಗ್ನಿರ್ಯಥೈಕೋ ಭುವನಂ ಪ್ರವಿಷ್ಟೋ ರೂಪಂ ರೂಪಂ
ಪ್ರತಿರೂಪೋ ಬಭೂವ ।
ಏಕಸ್ತಥಾ ಸರ್ವಭೂತಾಂತರಾತ್ಮಾ ರೂಪಂ ರೂಪಂ
ಪ್ರತಿರೂಪೋ ಬಹಿಶ್ಚ ॥

[ಕಠ. ಉ. ವಲ್ಲೀ ೫. ಮಂ. ೯]

ಅಗ್ನಿಯು ಉದ್ದವಾದ, ಅಗಲವಾದ ಮತ್ತು ಗೋಲಾಕಾರವಾದ ಸಣ್ಣ ದೊಡ್ಡ ಎಲ್ಲಾ ಆಕಾರದ ಪದಾರ್ಥಗಳಲ್ಲಿಯೂ ವ್ಯಾಪಕವಾಗಿ, ಅಯಾ ಆಕಾರಗಳನ್ನೇ ಹೊಂದಿದಂತೆ ಕಂಡರೂ, ಅವುಗಳಿಂದ ಬೇರೆಯಾಗಿರುವಂತೆ, ಸರ್ವವ್ಯಾಪಿಯಾದ ಪರಮಾತ್ಮನೂ ಕೂಡ ಅಂತಃಕರಣಗಳಲ್ಲಿ ವ್ಯಾಪಿಸಿ, ಅಂತಃಕರಣಾಕಾರನಾಗಿದ್ದಾನೆ. ಆದರೆ ಅವುಗಳಿಂದ ಬೇರೆಯಾಗಿದ್ದಾನೆ.

ಸಿದ್ಧಾಂತಿ :—ಈ ನಿಮ್ಮ ಹೇಳಿಕೆ ಕೂಡ ವ್ಯರ್ಥವೆ. ಏಕೆಂದರೆ= ನೀವು ಘಟ, ಮಠ ಮತ್ತು ಮೇಘಗಳನ್ನು ಆಕಾಶಕ್ಕಿಂತಲೂ ಬೇರೆ ವಸ್ತುಗಳೆಂದು ಒಪ್ಪುವಂತೆ ಕಾರಣ-ಕಾರ್ಯರೂಪವಾದ ಜಗತ್ತನ್ನು, ಜೀವನನ್ನು ಬ್ರಹ್ಮನಿಂದಲೂ, ಬ್ರಹ್ಮನನ್ನು ಇವೆರಡರಿಂದಲೂ ಬೇರೆ— ಎಂದು ಒಪ್ಪಿಗೂಳ್ಳಿರಿ.

ನವೀನ :—ಅಗ್ನಿಯು ಎಲ್ಲದರಲ್ಲಿಯೂ ವ್ಯಾಪಿಸಿ, ನೋಡಲು ತದಾಕಾರವಾಗಿ ಕಂಡುಬರುವಂತೆಯೇ, ಪರಮಾತ್ಮನು ಜಡ ಮತ್ತು ಜೀವರಲ್ಲಿ ವ್ಯಾಪಿಸಿ, ಸಾಕಾರವಾಗಿ ಅಜ್ಞಾನಿಗಳಿಗೆ ಆಕಾರವುಳ್ಳವನಂತೆ ಕಂಡುಬರುತ್ತಾನೆ. ಯಥಾರ್ಥವಾಗಿ ಬ್ರಹ್ಮನು ಜಡವೂ ಅಲ್ಲ;

ಜೀವವೂ ಅಲ್ಲ. ಹೇಗೆಂದರೆ — ಸಾವಿರ ಗಡಿಗೆಗಳಲ್ಲಿ ನೀರು ತುಂಬಿದರೆ, ಅವುಗಳಲ್ಲಿ ಸೂರ್ಯ ಸಾವಿರಾರು ಪ್ರತಿಬಿಂಬಗಳು ಕಂಡುಬರುತ್ತವೆ; ವಸ್ತುತಃ ಸೂರ್ಯನು ಒಬ್ಬನೇ ಆಗಿರುತ್ತಾನೆ. ಗಡಿಗೆಗಳು ಒಡೆದು ಹೋಗುವುದರಿಂದ ನೀರು ಹರಿದುಹೋದರೆ ಮತ್ತು ಹರಡಿದರೆ ಸೂರ್ಯನು ನಷ್ಟವಾಗುವುದೂ ಇಲ್ಲ; ಚಲಿಸುವುದೂ ಇಲ್ಲ; ಹರಡುವುದೂ ಇಲ್ಲ. ಹಾಗೆಯೇ ಅಂತಃಕರಣಗಳಲ್ಲಿ ಚಿದಾಭಾಸವೆನ್ನಿಸಿಕೊಳ್ಳುವ ಬ್ರಹ್ಮನ ಪ್ರತಿಬಿಂಬವು ಬಿದ್ದಿದೆ. ಅಂತಃಕರಣವು ಇರುವವರೆಗೆ ಮಾತ್ರ ಜೀವನಿರುತ್ತಾನೆ. ಅಂತಃಕರಣವು ಜ್ಞಾನದಿಂದ ನಷ್ಟವಾಗಿ ಹೋಗುತ್ತಲೇ ಜೀವನು ಬ್ರಹ್ಮಸ್ವರೂಪನಾಗುತ್ತಾನೆ. ಈ ಚಿದಾಭಾಸನಿಗೆ, ಅವನ ಬ್ರಹ್ಮಸ್ವರೂಪದ ಅಜ್ಞಾನವು ಕರ್ತಾ, ಭೋಕ್ತಾ, ಸುಖೀ, ದುಃಖೀ, ಪಾಪೀ, ಪುಣ್ಯಾತ್ಮಾ, ಜನ್ಮ, ಮರಣ—ಈ ಮೊದಲಾದ ಭಾವಗಳನ್ನು ಅವನಲ್ಲಿಯೇ ಆರೋಪಣ ಮಾಡಿಸುತ್ತದೆ. ಅದುವರೆಗೆ ಸಾಂಸಾರಿಕ ಬಂಧನಗಳಿಂದ ಮುಕ್ತನಾಗುವುದಿಲ್ಲ.

ಸಿದ್ಧಾಂತಿ :—ಈ ನಿಮ್ಮ ದೃಷ್ಟಾಂತವು ವ್ಯರ್ಥವಾಗಿದೆ. ಏಕೆಂದರೆ—ಸೂರ್ಯನು ಆಕಾರವುಳ್ಳವನಾಗಿರುತ್ತಾನೆ. ಗಡಿಗೆಗಳೂ ಕೂಡ ಸಾಕಾರವೆ! ಸೂರ್ಯನು ಗಡಿಗೆಗಳಿಂದ ಬೇರೆ ಮತ್ತು ಗಡಿಗೆಗಳು ಸೂರ್ಯನಿಂದ ಬೇರೆಯಾಗಿರುತ್ತವೆ. ಆದುದರಿಂದಲೇ ಪ್ರತಿಬಿಂಬವು ಬೀಳುತ್ತದೆ. ನಿರಾಕಾರವಾಗಿದ್ದರೆ ಎಂದಿಗೂ ಅವುಗಳ ಪ್ರತಿಬಿಂಬವು ಉಂಟಾಗುತ್ತಿರಲಿಲ್ಲ. ಮತ್ತು ಪರಮಾತ್ಮನು ನಿರಾಕಾರನೂ ಆಕಾಶದಂತೆ ಸರ್ವತ್ರವ್ಯಾಪಕನೂ ಆಗಿರುವುದರಿಂದ ಬ್ರಹ್ಮನಿಂದ ಯಾವ ಪದಾರ್ಥವೂ ಅಥವಾ ಪದಾರ್ಥಗಳಿಂದ ಬ್ರಹ್ಮನೂ ಬೇರೆಯಾಗುವುದು ಸಾಧ್ಯವಿಲ್ಲ. ಮತ್ತು ವ್ಯಾಪ್ಯವ್ಯಾಪಕ ಸಂಬಂಧದಿಂದ ಒಂದೂ ಆಗಲಾರವು. ಅಂದರೆ ಅನ್ವಯವ್ಯತಿರೇಕಭಾವದಿಂದ ನೋಡಿದರೆ ವ್ಯಾಪ್ಯ-ವ್ಯಾಪಕ ಪದಾರ್ಥಗಳು, ಸೇರಿದವೂ ಮತ್ತು ಯಾವಾಗಲೂ ಬೇರೆ ಬೇರೆಯಾದವೂ ಆಗಿರುತ್ತವೆ. ಒಂದೇ ಆದಲ್ಲಿ, ತನ್ನಲ್ಲಿ ವ್ಯಾಪ್ಯ ವ್ಯಾಪಕ ಸಂಬಂಧವುಂಟಾಗುವ ಸಂಭವವಿಲ್ಲ. ಇದು ಬೃಹದಾರಣ್ಯಕೋಪನಿಷತ್ತಿನ ಅಂತರ್ಯಾಮಿಯ ಬ್ರಾಹ್ಮಣದಲ್ಲಿ ಸ್ಪಷ್ಟವಾಗಿ ಬರೆ

ದಿದೆ. ಮತ್ತು ಬ್ರಹ್ಮನ ಆಭಾಸವೂ ಬೀಳಲಾರದು. ಏಕೆಂದರೆ— ಆಕಾರವಿಲ್ಲದೆ ಆಭಾಸಬೀಳುವುದು ಅಸಂಭವ. ಅಂತಃಕರಣಗಳ ಉಪಾಧಿಯಿಂದ ಬ್ರಹ್ಮನನ್ನು ಜೀವನೆಂದು ಒಪ್ಪುವ ನಿಮ್ಮ ಮಾತು ಹುಡುಗಾಟಿಕೆಯದಾಗಿರುತ್ತದೆ. ಅಂತಃಕರಣವು ಚಲಾಯಮಾನವೂ, ಖಂಡಖಂಡವೂ ಆಗಿದೆ; ಮತ್ತು ಬ್ರಹ್ಮನು ಅಚಲನೂ ಅಖಂಡನೂ ಆಗಿರುತ್ತಾನೆ. ಬ್ರಹ್ಮ ಮತ್ತು ಜೀವರು ಬೇರೆ ಬೇರೆಯಾಗಿರುವರೆಂದು ನೀವು ಒಪ್ಪದಿದ್ದರೆ, ಇದಕ್ಕೆ ಉತ್ತರಕೊಡಿರಿ. ಅಂತಃಕರಣವು ಹೋಗುವ ಕಡೆಗಳಲ್ಲೆಲ್ಲಾ ಬ್ರಹ್ಮನನ್ನು ಅಜ್ಞಾನಿಯಾಗಿಯೂ, ಅದು ಬಿಟ್ಟುಹೋದ ಕಡೆಗಳಲ್ಲೆಲ್ಲಾ ಬ್ರಹ್ಮನನ್ನು ಜ್ಞಾನಿಯಾಗಿಯೂ ಮಾಡುತ್ತದೋ ಇಲ್ಲವೋ? ಪ್ರಕಾಶದ ಮಧ್ಯೆದಲ್ಲಿ ಹಿಡಿಯಲ್ಪಟ್ಟ ಕೊಡೆ ತಾನು ಹೋದ ಹೋದ ಕಡೆಯ ಪ್ರಕಾಶವನ್ನು ಆವರಣ ಯುಕ್ತವಾಗಿಯೂ, ಬಿಟ್ಟಬಿಟ್ಟಲ್ಲಿಯ ಪ್ರಕಾಶವನ್ನು ಆವರಣರಹಿತ ವಾಗಿಯೂ ಮಾಡುವಂತೆಯೇ ಅಂತಃಕರಣವು ಬ್ರಹ್ಮನನ್ನು ಕ್ಷಣ ಕ್ಷಣಕ್ಕೂ ಜ್ಞಾನಿಯನ್ನಾಗಿಯೂ, ಅಜ್ಞಾನಿಯನ್ನಾಗಿಯೂ, ಬದ್ಧನನ್ನಾ ಗಿಯೂ ಮಾಡುತ್ತಾ ಹೋಗುವುದು. ಅಖಂಡನಾದ ಬ್ರಹ್ಮನು ಚೇತನನಾಗಿರುವುದರಿಂದ ಆತನ ಒಂದು ಭಾಗದಲ್ಲುಂಟಾಗುವ ಆವರಣಪ್ರಭಾವವು ಎಲ್ಲಾ ಕಡೆಗಳಲ್ಲಿಯೂ ಉಂಟಾಗುವುದರಿಂದ ಸಂಪೂರ್ಣ ಬ್ರಹ್ಮನೇ ಅಜ್ಞಾನಿಯಾಗಿ ಹೋಗುವನು. ಮತ್ತು ಮಥುರೆಯಲ್ಲಿ ಯಾವ ಅಂತಃಕರಣಸ್ಥ ಬ್ರಹ್ಮನು ಯಾವ ವಸ್ತುವನ್ನು ನೋಡಿದನೋ ಅದರ ನೆನಪು ಅದೇ ಅಂತಃಕರಣಸ್ಥನಿಗೆ ಕಾಶಿಯಲ್ಲಾ ಗಲಾರದು. ಏಕೆಂದರೆ—"ಅನ್ಯದೃಷ್ಟಮನ್ಯೋ ನ ಸ್ಮರತೀತಿ ನ್ಯಾಯಾತ್" ಒಬ್ಬನು ನೋಡಿದುದರ ನೆನಪು ಮತ್ತೊಬ್ಬನಿಗೆ ಆಗ ಲಾರದು. ಮಥುರೆಯಲ್ಲಿ ನೋಡಿದ ಚಿದಾಭಾಸನು ಕಾಶಿಯಲ್ಲಿ ಇರುವುದಿಲ್ಲ. ಆದರೆ ಮಥುರೆಯಲ್ಲಿರುವ ಅಂತಃಕರಣದ ಪ್ರಕಾಶಕನು ಕಾಶಿಯಲ್ಲಿರುವ ಬ್ರಹ್ಮನೇ ಜೀವನಾಗಿದ್ದು ಬೇರೆಯಲ್ಲವಾದರೆ ಜೀವನೂ ಕೂಡ ಸರ್ವಜ್ಞನಾಗಿ ಇರಬೇಕು. ಬ್ರಹ್ಮನ ಪ್ರತಿಬಿಂಬ ಬೇರೆಯಾಗಿದ್ದಲ್ಲಿ ಪ್ರತ್ಯಭಿಜ್ಞಾ—ಅಂದರೆ ಮೊದಲು ಕಂಡುದರ, ಕೇಳಿದುದರ ಜ್ಞಾನವು ಯಾರಿಗೂ ಆಗಲಾರದು. ಬ್ರಹ್ಮನು ಒಬ್ಬನೇ ಆಗಿರುವುದ

ರಿಂದ ಸ್ಮರಣೆಯುಂಟಾಗುವುದೆಂದು ಹೇಳುವುದಾದರೆ, ಒಂದು ಭಾಗದಲ್ಲಿ ಅಜ್ಞಾನ ಅಥವಾ ದುಃಖವುಂಟಾದರೆ ಬ್ರಹ್ಮನ ಎಲ್ಲಾ ಭಾಗದಲ್ಲಿಯೂ ಅಜ್ಞಾನ ಅಥವಾ ದುಃಖವುಂಟಾಗಬೇಕಾಗುತ್ತದೆ. ಮತ್ತು ಇಂತಹ ದೃಷ್ಟಾಂತಗಳಿಂದ ನಿತ್ಯನೂ, ಶುದ್ಧನೂ, ಬುದ್ಧನೂ ಮುಕ್ತ ಸ್ವಭಾವನೂ ಆದ ಬ್ರಹ್ಮನನ್ನು ಅಶುದ್ಧ, ಅಜ್ಞಾನಿ, ಬದ್ಧ ಮೊದಲಾದ ದೋಷವುಳ್ಳವನನ್ನಾಗಿ ಮಾಡಿದಿರಿ. ಮತ್ತು ಅಖಂಡನನ್ನು ತುಂಡುತುಂಡಾಗಿ ಮಾಡಿದಿರಿ.

ನವೀನ :—ನಿರಾಕಾರವಾದ ವಸ್ತುವಿಗೂ ಕೂಡ ಪ್ರತಿಬಿಂಬವು ಉಂಟಾಗಬಲ್ಲದು. ಹೇಗೆಂದರೆ—ಕನ್ನಡಿಯಲ್ಲಿ ಅಥವಾ ನೀರು ಮೊದಲಾದುವುಗಳಲ್ಲಿ ಆಕಾಶದ ಆಭಾಸ ಬೀಳುತ್ತದೆ. ಆದು ನೀಲಿಯಾಗಿ ಅಥವಾ ಬೇರಾವುದಾದರೂ ರೀತಿಯಲ್ಲಿ ಗಂಭೀರವಾಗಿಯೂ, ಆಳವಾಗಿಯೂ ಕಾಣುತ್ತದೆ. ಹಾಗೆಯೇ ಎಲ್ಲಾ ಅಂತಃಕರಣಗಳಲ್ಲಿಯೂ ಬ್ರಹ್ಮನ ಆಭಾಸವು ಬೀಳುತ್ತದೆ.

ಸಿದ್ಧಾಂತಿ :—ಆಕಾಶದಲ್ಲಿ ರೂಪವೇ ಇಲ್ಲದಿರುವಾಗ, ಆದನ್ನು ಯಾವನೂ ಕಣ್ಣಿಂದ ನೋಡಲಾರನು. ಕಂಡುಬಾರದ ಪದಾರ್ಥವು ಕನ್ನಡಿಯಲ್ಲಾಗಲಿ ನೀರು ಮೊದಲಾದುವುಗಳಲ್ಲಾಗಲೀ, ಹೇಗೆ ಕಾಣಬಲ್ಲದು? ಆಳವಾಗಿ ಆಥವಾ ಹರಡಿರುವಂತೆ ಸಾಕಾರ ವಸ್ತು ಕಾಣುತ್ತದೆಯೇ ಹೊರತು ನಿರಾಕಾರವಲ್ಲ.

ನವೀನ :—ಹಾಗಾದರೆ ಮೇಲೆ ಯಾವುದು ನೀಲವಾಗಿ ಕಾಣುತ್ತದೋ, ಆದೇ ಪ್ರತಿಬಿಂಬ ಬೀಳುವಂತಹ ವಸ್ತುವಿನಲ್ಲಿ ಕಾಣುತ್ತದೆ. ಆದಾವ ಪದಾರ್ಥ?

ಸಿದ್ಧಾಂತಿ :—ಆದು ಭೂಮಿಯಿಂದ ಹಾರಿಹೋದ ಪೃಥಿವೀ, ನೀರು ಮತ್ತು ಅಗ್ನಿಯ ತ್ರಸರೇಣುಗಳು. ಎಲ್ಲಿಂದ ಮಳೆ ಬೀಳುವುದೋ, ಆಲ್ಲಿಯೇ ಜಲ ಇಲ್ಲದಿದ್ದರೆ ಮಳೆಯು ಎಲ್ಲಿಂದ ಬಂದೀತು? ಆದುದರಿಂದ ದೂರ ದೂರ ಗುಡಾರದಂತೆ ಕಾಣುವುದು ಜಲಚಕ್ರವು. ಹೇಗೆ ಹಿಮವು ದೂರಕ್ಕೆ ದಟ್ಟವಾಗಿರುವಂತೆ ಕಂಡುಬಂದು ಸಮೀಪದಿಂದ ತೆಳುವಾಗಿಯೂ, ಗುಡಾರದಂತೆಯೂ ಕಾಣುತ್ತದೋ, ಹಾಗೆಯೇ ಆಕಾಶದಲ್ಲಿ ನೀರು ಕಾಣುತ್ತದೆ.

ನವೀನ :—ನಮ್ಮ ಹಗ್ಗ, ಸರ್ಪ, ಸ್ವಪ್ನ ಮೊದಲಾದುವುಗಳ ದೃಷ್ಟಾಂತವು ಸುಳ್ಳೊ ?

ಸಿದ್ಧಾಂತಿ :—ಅಲ್ಲ. ನಿಮ್ಮ ತಿಳುವಳಿಕೆ ಸುಳ್ಳಾಗಿರುತ್ತದೆ. ಅದನ್ನು ನಾವು ಮೊದಲೇ ಬರೆದಿದ್ದೇವೆ. ಒಳ್ಳೆಯದು. ಮೊದಲು ಅಜ್ಞಾನ ಯಾರಿಗುಂಟಾಗುತ್ತದೆ ? ಎಂಬುದನ್ನಾದರೂ ಹೇಳಿರಿ.

ನವೀನ :—ಬ್ರಹ್ಮನಿಗೆ.

ಸಿದ್ಧಾಂತಿ :—ಬ್ರಹ್ಮನು ಅಲ್ಪಜ್ಞನೋ ಸರ್ವಜ್ಞನೋ ?

ನವೀನ :—ಸರ್ವಜ್ಞನೂ ಅಲ್ಲ ; ಅಲ್ಪಜ್ಞನೂ ಅಲ್ಲ. ಏಕೆಂದರೆ ಸರ್ವಜ್ಞತೆ ಮತ್ತು ಅಲ್ಪಜ್ಞತೆಯು ಉಪಾಧಿಯುಳ್ಳವನಲ್ಲಿ ಉಂಟಾಗುತ್ತದೆ.

ಸಿದ್ಧಾಂತಿ :—ಉಪಾಧಿಯಿಂದ ಕೂಡಿರುವವನು ಯಾರು ?

ನವೀನ :—ಬ್ರಹ್ಮ.

ಸಿದ್ಧಾಂತಿ :—ಹಾಗಾದರೆ ಬ್ರಹ್ಮನೇ ಅಲ್ಪಜ್ಞನೂ, ಸರ್ವಜ್ಞನೂ ಆದನು. ಮತ್ತೆ ನೀವು ಸರ್ವಜ್ಞ ಮತ್ತು ಅಲ್ಪಜ್ಞ ಎಂಬುದರ ನಿಷೇಧವನ್ನೇಕೆ ಮಾಡಿದ್ದಿರಿ ? ಉಪಾಧಿಯು ಕಲ್ಪಿತ ಅಂದರೆ ಮಿಥ್ಯೆಯೆನ್ನುವಿರಾದರೆ, ಕಲ್ಪಕ ಎಂದರೆ ಕಲ್ಪನೆಮಾಡುವವನಾರು ?

ನವೀನ :—ಜೀವನು ಬ್ರಹ್ಮನೋ ಅಥವಾ ಬೇರೆಯೋ ?

ಸಿದ್ಧಾಂತಿ :—ಬೇರೆಯಾಗಿರುತ್ತಾನೆ. ಏಕೆಂದರೆ–ಬ್ರಹ್ಮಸ್ವರೂಪನಾಗಿದ್ದಿದ್ದರೆ, ಸುಳ್ಳು ಕಲ್ಪನೆಯನ್ನು ಮಾಡಿದವನು ಬ್ರಹ್ಮನೇ ಆಗಲಾರನು. ಯಾವನ ಕಲ್ಪನೆಯೇ ಸುಳ್ಳೋ ಅವನು ಎಂದಿಗೆ ಸತ್ಯವಾಗಬಲ್ಲನು ?

ನವೀನ :—ನಾವು ಸತ್ಯಾಸತ್ಯಗಳನ್ನೇ ಸುಳ್ಳೆಂದು ಅಂಗೀಕರಿಸುತ್ತೇವೆ. ಮತ್ತು ನಾಲಿಗೆಯಿಂದ ಮಾತನಾಡುವುದೂ ಕೂಡ ಸುಳ್ಳಿರುತ್ತದೆ.

ಸಿದ್ಧಾಂತಿ :—ನೀವು ಸುಳ್ಳು ಹೇಳುವವರೂ, ಒಪ್ಪುವವರೂ ಆಗಿರುವಾಗ ಸುಳ್ಳುಗಾರರೇಕಲ್ಲ ?

ನವೀನ :—ಆಗಲಿ; ಸತ್ಯಾಸತ್ಯಗಳು ನಮ್ಮಲ್ಲೇ ಕಲ್ಪಿತವಾಗಿವೆ. ಮತ್ತು ನಾವು ಅವೆರಡರ ಸಾಕ್ಷಿಯಾಗಿಯೂ ಆಧಾರವಾಗಿಯೂ ಇರುತ್ತೇವೆ.

ಸಿದ್ಧಾಂತಿ :—ನೀವು ಸತ್ಯಾಸತ್ಯಗಳೆರಡಕ್ಕೂ ಆಧಾರವಾಗಿದ್ದರೆ, ಶ್ರೀಮಂತರು, ಕಳ್ಳರು ಇಬ್ಬರಿಗೂ ನೀವೇ ಸಮರಾದಿರಿ. ಈ ಕಾರಣದಿಂದ ನೀವು ಪ್ರಾಮಾಣಿಕರಾಗಿಯೂ ಉಳಿಯಲಿಲ್ಲ. ಏಕೆಂದರೆ—ಸತ್ಯವನ್ನೇ ಒಪ್ಪುವವನು, ಸತ್ಯವನ್ನೇ ನುಡಿಯುವವನು, ಸತ್ಯವನ್ನೇ ಆಚರಿಸುವವನು, ಅಸತ್ಯವನ್ನು ಒಪ್ಪದಿರುವವನು, ನುಡಿಯದಿರುವವನು ಮತ್ತು ಎಂದೂ ಆಚರಿಸದಿರುವವನು ಪ್ರಾಮಾಣಿಕನು. ನಿಮ್ಮ ಮಾತನ್ನು ನೀವೇ ಸುಳ್ಳೆಂದು ಹೇಳುತ್ತಿರುವುದರಿಂದ ನೀವು ಸ್ವತಃ ಸುಳ್ಳುಗಾರರಾದಿರಿ.

ನವೀನ :—ಬ್ರಹ್ಮನ ಆಶ್ರಯದಲ್ಲಿಯೇ ಇದ್ದು, ಬ್ರಹ್ಮನನ್ನೇ ಅವರಿಸುವ ಅನಾದಿ ಮಾಯೆಯನ್ನು ನೀವು ಒಪ್ಪುವಿರೋ ಇಲ್ಲವೋ?

ಸಿದ್ಧಾಂತಿ :—ಒಪ್ಪುವುದಿಲ್ಲ. ಏಕೆಂದರೆ—ನೀವು ಮಾಯೆ ಎಂಬ ಪದಕ್ಕೆ "ವಸ್ತುವು ಇಲ್ಲದಿದ್ದರೂ ಇದ್ದಂತೆ ಕಂಡುಬರುವುದು" ಎಂದು ಅರ್ಥಮಾಡುತ್ತೀರಿ. ಹೃದಯನೇತ್ರವು ಒಡೆದುಹೋಗಿರುವವನು ಮಾತ್ರ ಈ ಮಾತನ್ನು ಒಪ್ಪುವನು. ಏಕೆಂದರೆ—ಇಲ್ಲದಿರುವ ವಸ್ತುವು ಭಾಸವಾಗುವುದು ಸರ್ವದಾ ಅಸಂಭವ. ಉದಾಹರಣೆಗೆ—ಬಂಜೆಯ ಮಗನ ಪ್ರತಿಬಿಂಬ ಎಂದಿಗೂ ಉಂಟಾಗಲಾರದು. ಮತ್ತು 'ಸನ್ಮೂಲಾಃ ಸೌಮ್ಯೇಮಾಃ ಪ್ರಜಾಃ'—ಮೊದಲಾದ ಛಾಂದೋಗ್ಯೋಪನಿಷತ್ತಿನ ವಚನಗಳಿಗೆ ವಿರುದ್ಧವಾಗಿ ಹೇಳುತ್ತೀರಿ.

ನವೀನ :—ವಶಿಷ್ಠ ಮತ್ತು ಶಂಕರಾಚಾರ್ಯ ಮೊದಲಾದವರಿಂದ ಹಿಡಿದು ನಿಶ್ಚಲದಾಸರವರೆಗೆ ಆಗಿಹೋದ ನಿಮಗಿಂತ ದೊಡ್ಡ ಪಂಡಿತರು ಬರೆದುದನ್ನು ನೀವು ಖಂಡಿಸುತ್ತೀರಾ? ನಮಗಂತೂ, ವಶಿಷ್ಠ, ಶಂಕರಾಚಾರ್ಯ, ನಿಶ್ಚಲದಾಸ ಮೊದಲಾದವರು ಹೆಚ್ಚಿನವರೆಂದು ಕಾಣುತ್ತಾರೆ.

ಸಿದ್ಧಾಂತಿ :—ನೀವು ವಿದ್ವಾಂಸರೋ, ಅವಿದ್ವಾಂಸರೋ?

ನವೀನ :—ನಾವೂ ಕೂಡ ಸ್ವಲ್ಪಮಟ್ಟಿಗೆ ವಿದ್ವಾಂಸರೇ.

ಸಿದ್ಧಾಂತಿ :—ಒಳ್ಳೆಯದು! ನೀವು ವಶಿಷ್ಠ, ಶಂಕರಾಚಾರ್ಯ ಮತ್ತು ನಿಶ್ಚಲದಾಸರ ಪಕ್ಷವನ್ನು ನಮ್ಮ ಮುಂದೆ ಸ್ಥಾಪಿಸಿರಿ; ನಾವು ಅದನ್ನು ಖಂಡಿಸುತ್ತೇವೆ. ಯಾರ ಪಕ್ಷವು ಸಿದ್ಧವಾಗುವುದೋ ಅವರೇ ದೊಡ್ಡವರು. ಅವರ ಮತ್ತು ನಿಮ್ಮ ಮಾತು ಅಖಂಡನೀಯವಾಗಿದ್ದಲ್ಲಿ ಅವರ ಯುಕ್ತಿಗಳನ್ನೇ ತೆಗೆದುಕೊಂಡು ನಮ್ಮ ಮಾತನ್ನೂ ಏಕೆ ಖಂಡಿಸಲಾರಿರಿ? ಹಾಗೆ ಮಾಡಿದರೆ ನಿಮ್ಮ ಮತ್ತು ಅವರ ಮಾತು ಮಾನನೀಯವಾಗುವುದು. ಶಂಕರಾಚಾರ್ಯಾದಿಗಳು ಜೈನಮತವನ್ನು ಖಂಡಿಸುವುದಕ್ಕೋಸ್ಕರವೇ ಈ ಮಾತನ್ನು ಸ್ವೀಕರಿಸಿದ್ದರೆಂದು ತೋರುತ್ತದೆ. ಏಕೆಂದರೆ, ಎಷ್ಟೋಮಂದಿ ಸ್ವಾರ್ಥೀ ವಿದ್ವಾಂಸರು ದೇಶಕಾಲಕ್ಕೆ ಅನುಕೂಲವಾಗಿ ತಮ್ಮ ಪಕ್ಷವನ್ನು ಸಾಧಿಸುವುದಕ್ಕಾಗಿ ತಮ್ಮ ಆತ್ಮ ಜ್ಞಾನಕ್ಕೆ ವಿರುದ್ಧವಾಗಿಯೂ ವರ್ತಿಸುತ್ತಾರೆ. ಮತ್ತು ಈ ಮಾತುಗಳನ್ನು ಅಂದರೆ ಜೀವೇಶ್ವರರ ಏಕತ್ವ, ಜಗನ್ಮಿಥ್ಯಾ ಮೊದಲಾದ ವ್ಯವಹಾರಗಳನ್ನು ಸತ್ಯವೆಂದೇ ತಿಳಿಯುತ್ತಿದ್ದಲ್ಲಿ ಅವರ ಮಾತು ಸತ್ಯವಾಗಲಾರದು. ಮತ್ತು ನಿಶ್ಚಲದಾಸನ ಪಾಂಡಿತ್ಯವು ಹೀಗಿದೆ. ನೋಡಿರಿ! ಆತನು ವೃತ್ತಿಪ್ರಭಾಕರದಲ್ಲಿ ಜೀವಬ್ರಹ್ಮರ ಏಕತ್ವಕ್ಕೆ ಅನುಮಾನವಾಗಿ "ಜೀವೋ ಬ್ರಹ್ಮಾಭಿನ್ನಶ್ಚೇತನತ್ವಾತ್" ಅಂದರೆ ಚೇತನವಾಗಿರುವುದರಿಂದ ಜೀವನು ಬ್ರಹ್ಮನಿಂದ ಅಭಿನ್ನನು-ಎಂದು ಬರೆದಿದ್ದಾನೆ. ಇದು ಒಬ್ಬ ಅತಿ ಅಲ್ಪಜ್ಞನ ಮಾತಿನಂತಿರುತ್ತದೆ. ಏಕೆಂದರೆ-ಸಾಧರ್ಮ್ಯ ಮಾತ್ರದಿಂದ ಎರಡು ವಸ್ತುಗಳ ಏಕತ್ವ ಸಿದ್ಧಿಸಲಾರದು. ವೈಧರ್ಮ್ಯವು ಬೇರ್ಪಡಿಸುವಂತಹುದಾಗಿರುತ್ತದೆ. ಯಾವನಾದರೊಬ್ಬನು 'ಪೃಥಿವೀ ಜಲಾಽಭಿನ್ನಾ ಜಡತ್ವಾತ್'—ಜಡವಾಗಿರುವುದರಿಂದ ಪೃಥಿವಿಯು ಜಲದಿಂದ ಅಭಿನ್ನವಾದುದು—ಎಂದು ಹೇಳಿದರೆ, ಈ ವಾಕ್ಯವು ಹೇಗೆ ಎಂದಿಗೂ ಸಂಗತವಾಗಲಾರದೋ, ಹಾಗೆಯೇ ನಿಶ್ಚಲದಾಸನ ಲಕ್ಷಣವೂ ವ್ಯರ್ಥವೇ. ಏಕೆಂದರೆ—ಅಲ್ಪತ್ವ, ಅಲ್ಪಜ್ಞತ್ವ. ಭ್ರಾಂತಿಯುಕ್ತತೆ ಮೊದಲಾದ ಧರ್ಮಗಳು ಜೀವನಲ್ಲಿ ಬ್ರಹ್ಮನಿಗೂ, ಸರ್ವವ್ಯಾಪಕತ್ವ, ಸರ್ವಜ್ಞತ್ವ, ನಿರ್ಭ್ರಾಂತಿತ್ವ—ಮೊದಲಾದ ವೈಧರ್ಮ್ಯಗಳು ಬ್ರಹ್ಮನಲ್ಲಿ ಜೀವನಿಗೂ ವಿರುದ್ಧವಾಗಿವೆ.

ಆದುದರಿಂದ ಬ್ರಹ್ಮನೂ, ಜೀವನೂ ಬೇರೆಬೇರೆಯಾಗಿದ್ದಾರೆ. ಗಂಧವತ್ವ, ಕಠಿಣತ್ವ ಮೊದಲಾದ ಭೂಮಿಯ ಧರ್ಮಗಳು, ರಸವತ್ತ್ವ, ದ್ರವತ್ವ ಮೊದಲಾದ ಜಲದ ಧರ್ಮಗಳಿಗೆ ವಿರುದ್ಧವಾಗಿರುವುದರಿಂದ ಹೇಗೆ ಪೃಥಿವೀ ಮತ್ತು ಜಲ ಒಂದೇ ಆಲ್ಲವೋ, ಹಾಗೆ ಜೀವ ಮತ್ತು ಬ್ರಹ್ಮರಲ್ಲಿ ವೈಧರ್ಮ್ಯವಿರುವುದರಿಂದ ಜೀವ–ಬ್ರಹ್ಮರು ಎಂದೂ ಒಂದಾಗಿರಲಿಲ್ಲ; ಒಂದಾಗುವುದಿಲ್ಲ. ಇಷ್ಟರಿಂದಲೇ ನಿಶ್ಚಲದಾಸ ಮೊದಲಾದವರಲ್ಲಿ ಎಷ್ಟು ಪಾಂಡಿತ್ಯವಿತ್ತೆಂದು ತಿಳಿದುಕೊಳ್ಳಿರಿ. ಮತ್ತು ಯೋಗವಾಸಿಷ್ಠ ಬರೆದವನು ಯಾವನೋ ಆಧುನಿಕ ವೇದಾಂತಿಯಾಗಿದ್ದನು. ಅದು ವಾಲ್ಮೀಕಿ, ವಸಿಷ್ಠ, ಮತ್ತು ಮುತ್ತು ರಾಮಚಂದ್ರನು ಬರೆದುದು ಅಥವಾ ಹೇಳಿದುದು ಅಥವಾ ಕೇಳಿದುದು ಅಲ್ಲ. ಏಕೆಂದರೆ ಅವರೆಲ್ಲಾ ವೇದದ ಅನುಯಾಯಿಗಳಾಗಿದ್ದರು; ವೇದಕ್ಕೆ ವಿರುದ್ಧವಾಗಿ ಬರೆಯಲೂ, ಹೇಳಲೂ, ಕೇಳಲೂ ಅವರಿಗೆ ಸಾಧ್ಯವಿರಲಿಲ್ಲ.

ಪ್ರ :—ವ್ಯಾಸರು ಬರೆದ ಶಾರೀರಕ ಸೂತ್ರಗಳಲ್ಲಿಯೂ ಕೂಡ ಜೀವಬ್ರಹ್ಮರ ಏಕತ್ವ ಕಾಣುತ್ತದೆ. ನೋಡಿರಿ :—

ಸಂಪದ್ಯಾऽऽವಿರ್ಭಾವಃ ಸ್ವೇನ ಶಬ್ದಾತ್ ॥೧॥
ಬ್ರಾಹ್ಮೇಣ ಜೈಮಿನಿರುಪನ್ಯಾಸಾದಿಭ್ಯಃ ॥೨॥
ಚಿತಿತನ್ಮಾತ್ರೇಣ ತದಾತ್ಮಕತ್ವಾದಿತ್ಯೌಡುಲೋಮಿಃ ॥೩॥
ಏವಮಪ್ಯುಪನ್ಯಾಸಾತ್ ಪೂರ್ವಭಾವಾದವಿರೋಧಂ
ಬಾದರಾಯಣಃ ॥೪॥
ಅತ ಏವ ಚಾನನ್ಯಾಧಿಪತಿಃ ॥೫॥

[ವೇದಾಂತ ದರ್ಶನ, ಅ. ೪. ಪಾದ ೪, ಸೂತ್ರ ೧, ೨, ೩, ೭, ೯]

ಅಂದರೆ ಜೀವನು ತನ್ನ ಸ್ವರೂಪವನ್ನು ಅಂದರೆ ಮೊದಲಿನ ಬ್ರಹ್ಮಸ್ವರೂಪವನ್ನು ಹೊಂದಿ ಪ್ರಕಟವಾಗುತ್ತಾನೆ, ಏಕೆಂದರೆ ಇಲ್ಲಿ 'ಸ್ವ' ಎಂಬ ಶಬ್ದದಿಂದ ತನ್ನ ಬ್ರಹ್ಮಸ್ವರೂಪವೇ ಗ್ರಾಹ್ಯವಾಗಿರುತ್ತದೆ. ॥೧॥ 'ಅಯಮಾತ್ಮಾ ಅಪಹತಪಾಪ್ಮಾ' ಈ ಮೊದಲಾದ ಉಪನ್ಯಾಸಗಳಿಂದ ಈಶ್ವರತ್ವ ಪ್ರಾಪ್ತಿ ಪರ್ಯಂತದ ಹೇತುಗಳಿಂದ—ಬ್ರಹ್ಮಸ್ವರೂಪದಿಂದ ಜೀವನು ಸ್ಥಿತನಾಗುತ್ತಾನೆ ಎಂದು ಆಚಾರ್ಯ ಜೈಮಿನಿ

ಗಳ ಅಭಿಪ್ರಾಯವಿರುತ್ತದೆ. ॥೧೨॥ ತದಾತ್ಮಕ ಸ್ವರೂಪನಿರೂಪಣ ಮೊದಲಾದ ಬೃಹದಾರಣ್ಯಕದ ಹೇತುರೂಪ ವಚನಗಳಿಂದ ಜೀವನು ಮುಕ್ತಿಯಲ್ಲಿ ಚೈತನ್ಯಮಾತ್ರ ಸ್ವರೂಪನಾಗಿ ಸ್ಥಿತನಾಗಿರುತ್ತಾನೆಂದು ಆಚಾರ್ಯ ಔಡುಲೋಮಿಯ ಮತವಿರುತ್ತದೆ. ॥೩॥ ಇದೇ ಮೇಲೆ ಹೇಳಿದ ಉಪನ್ಯಾಸಾದಿ ಈಶ್ವರತ್ವ ಪ್ರಾಪ್ತಿರೂಪವಾದ ಹೇತುಗಳಿಂದ ಜೀವನು ಬ್ರಹ್ಮಸ್ವರೂಪವನ್ನು ಹೊಂದುವುದರಲ್ಲಿ ವಿರೋಧವಿಲ್ಲವೆಂದು ವ್ಯಾಸರು ಅಂಗೀಕರಿಸುತ್ತಾರೆ. ॥೪॥ ಯೋಗಿಯು ಐಶ್ವರ್ಯಸಹಿತವಾಗಿ ತನ್ನ ಬ್ರಹ್ಮಸ್ವರೂಪವನ್ನು ಹೊಂದಿ, ಅನ್ಯ ಅಧಿಪತಿಯಿಂದ ರಹಿತನಾಗಿ, ಅಂದರೆ ಸ್ವತಃ ತಾನೇ ತನ್ನ ಮತ್ತು ಎಲ್ಲರ ಅಧಿಪತಿರೂಪ ಬ್ರಹ್ಮಸ್ವರೂಪದಿಂದ ಮುಕ್ತಿಯಲ್ಲಿ ಸ್ಥಿತನಾಗಿರುತ್ತಾನೆ. ॥೫॥

ಉತ್ತರ :—ಈ ಸೂತ್ರಗಳಿಗೆ ಅರ್ಥವು ಈರೀತಿಯಲ್ಲ ; ಇವುಗಳ ಯಥಾರ್ಥವಾದ ಅರ್ಥವು ಹೀಗಿದೆ, ಕೇಳಿರಿ—ಜೀವನು ತನ್ನ ಸ್ವಕೀಯ ಶುದ್ಧ ಸ್ವರೂಪವನ್ನು ಹೊಂದಿ, ಸರ್ವ ಮಲಗಳಿಂದಲೂ ರಹಿತನಾಗಿ, ಪವಿತ್ರನಾಗುವವರೆಗೆ ಯೋಗದಿಂದ ಐಶ್ವರ್ಯಪ್ರಾಪ್ತಿಯುಂಟಾಗಿ ತನ್ನ ಅಂತರ್ಯಾಮಿಯಾಗಿರುವ ಬ್ರಹ್ಮನನ್ನು ಹೊಂದಿ ಆನಂದದಲ್ಲಿ ಸ್ಥಿತನಾಗಲಾರನು. ॥೧॥

ಈ ರೀತಿಯಾಗಿಯೇ ಪಾಪಾದಿರಹಿತನೂ, ಐಶ್ವರ್ಯಯುಕ್ತನೂ ಆದ ಯೋಗಿಯಾದಾಗಲೇ ಬ್ರಹ್ಮನೊಂದಿಗೆ ಮೋಕ್ಷಾನಂದವನ್ನು ಅನುಭವಿಸಬಲ್ಲನೆಂದು ಆಚಾರ್ಯ ಜೈಮಿನಿಗಳ ಅಭಿಪ್ರಾಯವಿರುತ್ತದೆ. ॥೨॥

ಜೀವನು ಅವಿದ್ಯಾದಿ ದೋಷಗಳಿಂದ ಮುಕ್ತನಾಗಿ, ಶುದ್ಧ ಚೈತನ್ಯಮಾತ್ರ ಸ್ವರೂಪದಿಂದ ಸ್ಥಿರನಾದಾಗಲೇ "ತದಾತ್ಮಕತ್ವ" ಅಂದರೆ ಬ್ರಹ್ಮಸ್ವರೂಪದೊಡನೆ ಸಂಬಂಧವನ್ನು ಪಡೆಯುತ್ತಾನೆ. ॥೩॥

ಬ್ರಹ್ಮನೊಂದಿಗೆ, ಐಶ್ವರ್ಯದಿಂದಲೂ, ಶುದ್ಧ ವಿಜ್ಞಾನದಿಂದಲೂ, ಬದುಕಿರುವಾಗಲೇ ಜೀವನ್ಮುಕ್ತನಾದಾಗ ಜೀವನು ತನ್ನ ನಿರ್ಮಲ ಸ್ವರೂಪವನ್ನು ಹೊಂದಿ, ಆನಂದಪಡುವನೆಂದು ವ್ಯಾಸ ಮಹರ್ಷಿಗಳ ಅಭಿಪ್ರಾಯವಿರುತ್ತದೆ. ॥೪॥

ಯೋಗಿಯ ಸಂಕಲ್ಪವು ಸತ್ಯವಾದಾಗ ತಾನಾಗಿಯೇ ಪರಮಾತ್ಮನನ್ನು ಪಡೆದು ಮುಕ್ತಿಸುಖವನ್ನು ಹೊಂದುತ್ತಾನೆ. ಅಲ್ಲಿ ಅವನು ಸ್ವಾಧೀನನಾಗಿ ಸ್ವತಂತ್ರನಾಗಿ ಇರುತ್ತಾನೆ. ಪ್ರಪಂಚದಲ್ಲಿ ಒಬ್ಬನು ಪ್ರಧಾನನಾಗಿಯೂ, ಮತ್ತೊಬ್ಬನು ಅಪ್ರಧಾನನಾಗಿಯೂ ಇರುವಂತೆ ಮೋಕ್ಷದಲ್ಲಿರುವುದಿಲ್ಲ. ಆದರೆ ಮುಕ್ತಜೀವರೆಲ್ಲರೂ ಒಂದೇ ಸಮವಾಗಿರುತ್ತಾರೆ. ॥೫॥ ಹೀಗಿಲ್ಲವಾದಲ್ಲಿ —

೧) ನೇತರೋಽನುಪಪತ್ತೇಃ (೧, ೧, ೧೬) ಭೇದವ್ಯಪದೇಶಾಚ್ಚ (೧, ೧, ೧೭)

೨) ವಿಶೇಷಣ ಭೇದವ್ಯಪದೇಶಾಭ್ಯಾಂ ಚ ನೇತರೌ ॥ (೧, ೧, ೨೨)

೩) ಅಸ್ಮಿನ್ನಸ್ಯ ಚ ತದ್ಯೋಗಂ ಶಾಸ್ತಿ (೧, ೧, ೧೯)

೪) ಅಂತಸ್ತದ್ಧರ್ಮೋಪದೇಶಾತ್ (೧, ೧, ೨೦)

೫) ಭೇದವ್ಯಪದೇಶಾಚ್ಚಾನ್ಯಃ (೧, ೧, ೨೧)

೬) ಗುಹಾಂ ಪ್ರವಿಷ್ಟಾವಾತ್ಮಾನೌ ಹಿ ತದ್ದರ್ಶನಾತ್ (೧, ೨, ೧೧)

೭) ಅನುಪಪತ್ತೇಸ್ತು ನ ಶಾರೀರಃ । (೧, ೨, ೩)

೮) ಅಂತರ್ಯಾಮ್ಯಧಿದೈವಾದಿಷು ತದ್ಧರ್ಮ ವ್ಯಪದೇಶಾತ್ (೧, ೨, ೧೮)

೯) ಶಾರೀರಶ್ಚೋಭಯೇಽಪಿ ಹಿ ಭೇದೇನೈನ ಮಧೀಯತೇ (೧, ೨, ೨೦) (೧೦॥)

[ವ್ಯಾಸಮುನಿಕೃತ ವೇದಾಂತಸೂತ್ರಾಣಿ]

ಅರ್ಥ :—ಬ್ರಹ್ಮನಿಂದ ಬೇರೆಯಾದ ಜೀವನು ಸೃಷ್ಟಿಕರ್ತನಲ್ಲ ; ಏಕೆಂದರೆ— ಈ ಅಲ್ಪನೂ, ಅಲ್ಪಜ್ಞನೂ, ಅಲ್ಪಶಕ್ತಿಯುಳ್ಳವನೂ ಆದ ಜೀವನಲ್ಲಿ ಸೃಷ್ಟಿಕರ್ತೃತ್ವವು ಉಂಟಾಗಲಾರದು. ಆದುದರಿಂದ ಜೀವನು ಬ್ರಹ್ಮನಲ್ಲ. ॥೧॥ " ರಸಂ ಹ್ಯೇ ವಾಯಂ ಲಬ್ಧ್ವಾಽನಂದೀಭವತಿ " ಎಂಬುದು ಉಪನಿಷತ್ತಿನ ವಚನ. ಜೀವ ಮತ್ತು ಬ್ರಹ್ಮ ಬೇರೆ ಬೇರೆಯಾಗಿದ್ದಾರೆ ; ಏಕೆಂದರೆ ಇವರಿಬ್ಬರ ಭೇದವನ್ನು ಪ್ರತಿಪಾದಿಸಿದ್ದಾರೆ.

ಹಾಗಿಲ್ಲದಿದ್ದರೆ "ರಸ" ಅಂದರೆ ಆನಂದಸ್ವರೂಪನಾದ ಬ್ರಹ್ಮನನ್ನು ಹೊಂದಿ ಜೀವನು ಆನಂದಸ್ವರೂಪನಾಗುತ್ತಾನೆ. ಎಂಬ ಈ ಪ್ರಾಪ್ತಿ ವಿಷಯನಾದ ಬ್ರಹ್ಮನ ಮತ್ತು ಪ್ರಾಪ್ತನಾಗುವ ಜೀವನ ನಿರೂಪಣೆಯು ಸಂಭವಿಸಲಾರದು. ಆದುದರಿಂದ ಜೀವನೂ ಬ್ರಹ್ಮನೂ ಒಂದಲ್ಲ. ॥೨॥

ದಿವ್ಯೋ ಹ್ಯಮೂರ್ತಃ ಪುರುಷಸ್ಸಬಾಹ್ಯಾಭ್ಯಂತರೋಹ್ಯಜಃ।
ಅಪ್ರಾಣೋ ಹ್ಯಮನಾಶ್ಶುಭ್ರೋ ಹ್ಯಕ್ಷರಾತ್ ಪರತಃ ಪರಃ॥

[ಮುಂಡಕ. ೨. ೧. ೨]

ದಿವ್ಯನು, ಶುದ್ಧನು, ಅಮೂರ್ತನು, ಸರ್ವತ್ರ ಪರಿಪೂರ್ಣನು, ಒಳಗೂ ಹೊರಗೂ ನಿರಂತರ ವ್ಯಾಪಿಸಿರುವವನು, ಅಜನು, ಹುಟ್ಟು ಸಾವುಗಳು ಶರೀರಧಾರಣಾದಿಗಳಿಂದ ರಹಿತನು, ಶ್ವಾಸಪ್ರಶ್ವಾಸಗಳು, ಶರೀರ ಮತ್ತು ಮನಸ್ಸಿನ ಸಂಬಂಧವಿಲ್ಲದವನು, ಪ್ರಕಾಶಸ್ವರೂಪನು— ಈ ಮೊದಲಾದ ಪರಮಾತ್ಮನ ವಿಶೇಷಣಗಳು, ಮತ್ತು ಆತನು ಅಕ್ಷರ ಎಂದರೆ ನಾಶರಹಿತವಾದ ಪ್ರಕೃತಿಗಿಂತ ಪರನಾದ ಅಂದರೆ ಸೂಕ್ಷ್ಮನಾದ ಜೀವನಿಗಿಂತಲೂ ಪರಮಾತ್ಮನು ಪರ ಎಂದರೆ ಬ್ರಹ್ಮನು ಸೂಕ್ಷ್ಮನಾಗಿದ್ದಾನೆ ಎಂಬ ಈ ಪ್ರಕೃತಿ ಮತ್ತು ಜೀವರಿಗಿಂತ ಬ್ರಹ್ಮನು ಬೇರೆಯೆಂಬ ಪ್ರತಿಪಾದನರೂಪಹೇತುಗಳಿಂದ, ಪ್ರಕೃತಿ ಮತ್ತು ಜೀವರಿಂದ ಬ್ರಹ್ಮನು ಭಿನ್ನನು. ॥೩॥ ಈ ಸರ್ವವ್ಯಾಪಕ ಬ್ರಹ್ಮನಲ್ಲಿಯೇ ಜೀವನ ಯೋಗವನ್ನೂ ಅಥವಾ ಜೀವನಲ್ಲಿ ಬ್ರಹ್ಮನ ಯೋಗವನ್ನು ಹೇಳುವುದರಿಂದ ಜೀವನೂ, ಬ್ರಹ್ಮನೂ ಬೇರೆ ಬೇರೆ. ಏಕೆಂದರೆ ಯೋಗವು ಭಿನ್ನ ಭಿನ್ನ ಪದಾರ್ಥಗಳಿಗೆ ಉಂಟಾಗುತ್ತದೆ. ॥೪॥ ಈ ಬ್ರಹ್ಮನಿಗೆ ಅಂತರ್ಯಾಮಿ ಮೊದಲಾದ ಧರ್ಮಗಳು ಹೇಳಲ್ಪಟ್ಟವೆ; ಮತ್ತು ಜೀವನಲ್ಲಿ ವ್ಯಾಪಿಸಿರುವುದರಿಂದ ವ್ಯಾಪ್ಯನಾದ ಜೀವನು ವ್ಯಾಪಕನಾದ ಬ್ರಹ್ಮನಿಗಿಂತ ಬೇರೆಯಾಗಿದ್ದಾನೆ. ಏಕೆಂದರೆ—ವ್ಯಾಪ್ಯವ್ಯಾಪಕ ಸಂಬಂಧವೂ ಕೂಡ ಭೇದವಿದ್ದಲ್ಲಿ ಸಂಘಟಿಸುತ್ತದೆ. ॥೫॥ ಹೇಗೆ ಬ್ರಹ್ಮನು ಜೀವನಿಂದ ಭಿನ್ನಸ್ವರೂಪನಾಗಿರುವನೋ ಹಾಗೆಯೇ ಇಂದ್ರಿಯಗಳು, ಅಂತಃಕರಣ, ಪೃಥಿವಿ ಮೊದಲಾದ ಭೂತಗಳು, ದಿಕ್ಕು, ವಾಯು, ಸೂರ್ಯಾದಿಗಳು ಮತ್ತು ದಿವ್ಯಗುಣಗಳ ಭೋಗದಿಂದ

ದೇವತೆಗಳೆಂದು ಹೇಳಿಸಿಕೊಳ್ಳುವ ವಿದ್ವಾಂಸರುಗಳಿಂದ ಸಹ ಪರಮಾತ್ಮನು ಬೇರೆಯಾಗಿದ್ದಾನೆ. ॥೬॥ "ಗುಹಾಂ ಪ್ರವಿಶ್ಯೌ ಸುಕೃತಸ್ಯ ಲೋಕೇ" ಈ ಮೊದಲಾದ ಉಪನಿಷತ್ತುಗಳ ವಚನಗಳಿಂದ ಜೀವನೂ ಪರಮಾತ್ಮನೂ ಬೇರೆ ಬೇರೆ. ಇದೇ ರೀತಿ ಉಪನಿಷತ್ತುಗಳಲ್ಲಿ ಬಹಳ ಕಡೆ ತೋರಿಸಲಾಗಿದೆ. ॥೭॥ "ಶರೀರೇ ಭವಃ ಶಾರೀರಃ" ಶರೀರ ಧಾರಿಯಾದ ಜೀವನು ಬ್ರಹ್ಮನಲ್ಲ. ಏಕೆಂದರೆ—ಬ್ರಹ್ಮನ ಗುಣ-ಕರ್ಮ-ಸ್ವಭಾವಗಳು ಜೀವನಲ್ಲಿ ಸಂಘಟಿಸುವುದಿಲ್ಲ. ॥೮॥ (ಅಧಿದೈವ) ದಿವ್ಯ ಗುಣಗಳುಳ್ಳ ಮನಸ್ಸು ಮೊದಲಾದ ಎಲ್ಲಾ ಇಂದ್ರಿಯಗಳಲ್ಲಿಯೂ (ಅಧಿಭೂತ) ಪೃಥಿವಿ ಮೊದಲಾದ ಭೂತಗಳಲ್ಲಿಯೂ (ಅಧ್ಯಾತ್ಮ) ಎಲ್ಲ ಜೀವರಲ್ಲಿಯೂ ಪರಮಾತ್ಮನು ಅಂತರ್ಯಾಮಿ ರೂಪದಿಂದ ಸ್ಥಿತನಾಗಿದ್ದಾನೆ. ಏಕೆಂದರೆ—ಅದೇ ಪರಮಾತ್ಮನ ವ್ಯಾಪಕತ್ವ ಮೊದಲಾದ ಧರ್ಮಗಳು ಉಪನಿಷತ್ತಿನಲ್ಲಿ ಸರ್ವತ್ರ ವಿಸ್ತರಿಸಲ್ಪಟ್ಟಿವೆ. ॥೯॥ ಶರೀರಧಾರಿಯಾದ ಜೀವನು ಬ್ರಹ್ಮನಲ್ಲ. ಏಕೆಂದರೆ—ಪರಮಾತ್ಮನಿಂದ ಜೀವನ ಭೇದವು ಸ್ವರೂಪದಿಂದ ಸಿದ್ಧವಾಗಿದೆ. ॥೧೦॥

ಈ ಮೊದಲಾದ ಶಾರೀರಿಕ ಸೂತ್ರಗಳಿಂದಲೂ ಕೂಡ ಸ್ವರೂಪದಿಂದಲೇ ಬ್ರಹ್ಮ ಮತ್ತು ಜೀವರ ಭೇದವು ಸಿದ್ಧವಾಗಿದೆ. ಹಾಗೆಯೇ ವೇದಾಂತಿಗಳ ಉಪಕ್ರಮ ಮತ್ತು ಉಪಸಂಹಾರವೂ ಕೂಡ ಸರಿಹೋಗುವುದಿಲ್ಲ. ಏಕೆಂದರೆ—ಇವರು (ಉಪಕ್ರಮ) ಆಂದರೆ ಆರಂಭವನ್ನು ಬ್ರಹ್ಮನಿಂದ ಮತ್ತು (ಉಪಸಂಹಾರ) ಆಂದರೆ ಪ್ರಳಯವನ್ನೂ ಕೂಡ ಬ್ರಹ್ಮನಲ್ಲಿಯೇ ಪ್ರತಿಪಾದಿಸುತ್ತಾರೆ. ಬೇರೆ ಯಾವ ವಸ್ತುವನ್ನೂ ಅಂಗೀಕರಿಸದಿರುವಾಗ, ಉತ್ಪತ್ತಿಪ್ರಳಯಗಳೂ ಬ್ರಹ್ಮನ ಧರ್ಮಗಳೇ ಆಗಿಹೋಗುತ್ತವೆ. ಮತ್ತು ವೇದಾದಿ ಸತ್ಯಶಾಸ್ತ್ರಗಳಲ್ಲಿ ಮಾಡಲ್ಪಟ್ಟಿರುವ ಉತ್ಪತ್ತಿವಿನಾಶರಹಿತ ಬ್ರಹ್ಮನ ಪ್ರತಿಪಾದನವು ನವೀನ ವೇದಾಂತಿಗಳ ಮೇಲೆ ಕೋಪಗೊಳ್ಳುವುದು. ಏಕೆಂದರೆ—ನಿರ್ವಿಕಾರ, ಅಪರಿಣಾಮಿ, ಶುದ್ಧ, ಸನಾತನ, ಭ್ರಾಂತಿರಹಿತ ಮೊದಲಾದ ವಿಶೇಷಣಗಳುಳ್ಳ ಬ್ರಹ್ಮನಲ್ಲಿ ವಿಕಾರ, ಉತ್ಪತ್ತಿ, ಅಜ್ಞಾನ ಮೊದಲಾದುವುಗಳ ಸಂಭವವು ಯಾವ ರೀತಿಯಿಂದಲೂ ಆಗಲಾರದು. ಮತ್ತು ಉಪಸಂಹಾರ (ಪ್ರಳಯ)ವಾದಮೇಲೂ ಕೂಡ ಬ್ರಹ್ಮ, ಕಾರಣ

ರೂಪವಾದ ಜಡ ಮತ್ತು ಜೀವರು ಇದ್ದೇಯಿರುತ್ತಾರೆ. ಆದುದರಿಂದ ಉಪಕ್ರಮೋಪಸಂಹಾರಗಳೂ ಕೂಡ ಈ ವೇದಾಂತಿಗಳ ಸುಳ್ಳು ಕಲ್ಪನೆ. ಶಾಸ್ತ್ರಗಳಿಗೂ, ಪ್ರತ್ಯಕ್ಷಾದಿ ಪ್ರಮಾಣಗಳಿಗೂ ವಿರುದ್ಧವಾದ ಇಂತಹ ಇನ್ನೂ ಎಷ್ಟೋ ಮಾತುಗಳಿರುತ್ತವೆ.

ಇದಾದಬಳಿಕ ಆರ್ಯಾವರ್ತದಲ್ಲಿ ಜೈನರ ಮತ್ತು ಶಂಕರಾಚಾರ್ಯರ ಅನುಯಾಯಿಗಳ ಉಪದೇಶದ ಸಂಸ್ಕಾರಗಳು ಸ್ವಲ್ಪ ಸ್ವಲ್ಪ ವ್ಯಾಪಿಸಿದ್ದವು; ಮತ್ತು ಪರಸ್ಪರ ಖಂಡನ-ಮಂಡನಗಳೂ ಸಹ ನಡೆಯುತ್ತಿದ್ದವು. ಶಂಕರಾಚಾರ್ಯರ ಮುನ್ನೂರು ವರ್ಷಗಳ ಅನಂತರ ಸ್ವಲ್ಪ ಪರಾಕ್ರಮಶಾಲಿಯಾದ ವಿಕ್ರಮಾದಿತ್ಯನೆಂಬುವನು ಉಜ್ಜಯಿನಿಯಲ್ಲಿ ಆಳಿದನು. ಆತನು ಎಲ್ಲಾ ರಾಜರುಗಳ ನಡುವೆ ನಡೆಯುತ್ತಿದ್ದ ಯುದ್ಧವನ್ನು ಹೋಗಲಾಡಿಸಿ, ಶಾಂತಿಯನ್ನು ಸ್ಥಾಪಿಸಿದನು. ಅದಾದಮೇಲೆ ಕಾವ್ಯಾದಿ ಶಾಸ್ತ್ರಗಳಲ್ಲಿಯೂ ಮತ್ತು ಅನ್ಯ ವಿದ್ಯೆಯಲ್ಲಿಯೂ ಸ್ವಲ್ಪ ವಿದ್ವಾಂಸನಾದ ರಾಜಾ ಭರ್ತೃಹರಿಯು ಬಂದನು. ಆತನು ವೈರಾಗ್ಯಶಾಲಿಯಾಗಿ, ರಾಜ್ಯವನ್ನು ಬಿಟ್ಟುಬಿಟ್ಟನು. ವಿಕ್ರಮಾದಿತ್ಯನ ಐದುನೂರು ವರ್ಷಗಳ ಬಳಿಕ ಭೋಜರಾಜನು ಪಟ್ಟಕ್ಕೆ ಬಂದನು. ಆತನು ಸ್ವಲ್ಪಮಟ್ಟಿಗೆ ವ್ಯಾಕರಣವನ್ನೂ, ಮತ್ತು ಆತನ ರಾಜ್ಯದಲ್ಲಿ ಕುರಿಮೇಯಿಸುವ ಕಾಳಿದಾಸನೂ ಕೂಡ ರಘುವಂಶ ಕಾವ್ಯದ ಕರ್ತೃವಾಗುವಷ್ಟು ಕಾವ್ಯಾಲಂಕಾರಾದಿಗಳನ್ನೂ ಪ್ರಚಾರ ಮಾಡಿದನು. ಭೋಜರಾಜನು ತನ್ನ ಬಳಿಗೆ ಉತ್ತಮವಾದ ಶ್ಲೋಕಗಳನ್ನು ರಚಿಸಿ ತೆಗೆದುಕೊಂಡು ಹೋಗುತ್ತಿದ್ದವನಿಗೆ ಬೇಕಾದಷ್ಟು ಧನವನ್ನು ಕೊಡುತ್ತಿದ್ದನು ಮತ್ತು ಗೌರವ ಸಿಕ್ಕುತ್ತಿದ್ದಿತು. ಆ ಬಳಿಕ ಅರಸರೂ ಶ್ರೀಮಂತರೂ ಓದುವುದನ್ನೇ ಬಿಟ್ಟುಬಿಟ್ಟರು. ಶಂಕರಾಚಾರ್ಯರಿಗೆ ಮೊದಲೂ, ವಾಮಮಾರ್ಗಿಗಳ ಅನಂತರದಲ್ಲಿಯೂ ಶೈವ ಮೊದಲಾದ ಸಂಪ್ರದಾಯಗಳ ಮತೀಯರು ಇದ್ದರೂ ಸಹ, ಅವರ ಬಲ ಬಹಳವಾಗಿರಲಿಲ್ಲ. ಮಹಾರಾಜಾ ವಿಕ್ರಮಾದಿತ್ಯನ ಕಾಲದಿಂದ ಶೈವರ ಪ್ರಾಬಲ್ಯವು ಹೆಚ್ಚಾಗುತ್ತ ಬಂದಿತು. ವಾಮಮಾರ್ಗಿಗಳಲ್ಲಿ ದಶಮಹಾವಿದ್ಯೆ ಮೊದಲಾದ ಶಾಖೆಗಳಿರುವಂತೆ, ಶೈವರಲ್ಲಿಯೂ ಕೂಡ ಪಾಶುಪತ ಮೊದಲಾದ ಅನೇಕ ಶಾಖೆಗಳುಂಟಾಗಿದ್ದುವು. ಜನರು ಶಂಕರಾಚಾರ್ಯ

ರನ್ನು ಶಿವನ ಅವತಾರವೆಂದು ಭಾವಿಸಿದರು. ಅವರ ಅನುಯಾಯಿಗಳಾದ ಸಂನ್ಯಾಸಿಗಳೂ ಕೂಡ ಶೈವಮತದಲ್ಲಿ ಪ್ರವೃತ್ತರಾಗಿಹೋದರು ಮತ್ತು ವಾಮಮಾರ್ಗಿಗಳನ್ನೂ ಸೇರಿಸಿಕೊಳ್ಳುತ್ತಿದ್ದರು. ವಾಮಮಾರ್ಗಿಗಳು ಶಿವನ ಪತ್ನಿಯಾದ ದೇವಿಯ ಹಾಗೂ ಶೈವರು ಮಹಾದೇವನ ಉಪಾಸಕರಾದರು. ಈ ಇಬ್ಬರೂ ಇಂದಿಗೂ ರುದ್ರಾಕ್ಷಿ ಮತ್ತು ಭಸ್ಮವನ್ನು ಧರಿಸುತ್ತಾರೆ; ಆದರೆ ವಾಮಮಾರ್ಗಿಗಳು ವೇದವಿರೋಧಿಗಳಾಗಿರುವಷ್ಟು ಶೈವರು ಆಗಿಲ್ಲ.

ಧಿಕ್ ದಿಕ್ಕಪಾಲಂ ಭಸ್ಮರುದ್ರಾಕ್ಷ ವಿಹೀನಂ ॥೧॥
ರುದ್ರಾಕ್ಷಾನ್ ಕಂಠದೇಶೇ ದಶನಪರಿಮಿತಾನ್ ಮುಸ್ತಕೇ
ವಿಂಶತಿದ್ವೇ
ಷಟ್ ಷಟ್ಕರ್ಣ ಪ್ರದೇಶೇ ಕರಯುಗಲ ಗತಾನ್
-ದ್ವಾದಶಾನ್ ದ್ವಾದಶೈವ ।
ಬಾಹ್ವೋರಿಂದೋಃ ಕಲಾಭಿಃ ಪೃಥಗಿತಿ ಗದಿತಮೇಕ ಮೇವಂ
ಶಿಖಾಯಾಂ ।
ವಕ್ಷಸ್ಯಷ್ಟಾಧಿಕಂ ಯಃ ಕಲಯತಿ ಶತಕಂ ಸಸ್ಪ್ವಯಂ
ನೀಲಕಂಠಃ ॥೨॥

ಈ ಮೊದಲಾದ ಅನೇಕ ವಿಧವಾದ ಶ್ಲೋಕಗಳನ್ನು ಈ ಜನರು ಬರೆದರು. ಮತ್ತು "ಹಣೆಯಲ್ಲಿ ಭಸ್ಮವನ್ನು, ಕೊರಳಲ್ಲಿ ರುದ್ರಾಕ್ಷಿಗಳನ್ನೂ ಧರಿಸಿದವನಿಗೆ ಧಿಕ್ಕಾರ." 'ತಂತ್ಯಜೇದಂತ್ಯಜಂ ಯಥಾ' ಅವನನ್ನು ಚಂಡಾಲನಂತೆ ಪರಿತ್ಯಜಿಸಬೇಕು. ॥೧॥ ಯಾವನು ಕೊರಳಲ್ಲಿ ಮೂವತ್ತೆರಡು, ಶಿರಸ್ಸಿನಲ್ಲಿ ನಲವತ್ತು, ಕಿವಿಗಳಲ್ಲಿ ಆರಾರು, ಕೈಗಳಲ್ಲಿ ಹನ್ನೆರಡು-ಹನ್ನೆರಡು, ಭುಜಗಳಲ್ಲಿ ಹದಿನಾರು-ಹದಿನಾರು, ಜುಟ್ಟಿನಲ್ಲಿ ಒಂದು, ಹೃದಯದಲ್ಲಿ ನೂರೆಂಟು. ರುದ್ರಾಕ್ಷಗಳನ್ನು ಧರಿಸುವನೋ ಅವನು ಸಾಕ್ಷಾತ್ ಮಹಾದೇವನಿಗೆ ಸಮಾನನು" ಎಂದು ಹೇಳಿತೊಡಗಿದರು. ॥೨॥ ಶಾಕ್ತರೂ ಕೂಡ ಹೀಗೆಯೇ ಒಪ್ಪುತ್ತಾರೆ. ಬಳಿಕ ಈ ವಾಮಮಾರ್ಗಿಗಳೂ, ಶೈವರೂ ಸಮ್ಮತಿಸಿ ಭಗಲಿಂಗವನ್ನು ಸ್ಥಾಪಿಸಿದರು. ಅದನ್ನು ಜಲಾಧಾರಿಯೆಂದೂ, ಲಿಂಗವೆಂದೂ

ಹೇಳುತ್ತಾರೆ ಮತ್ತು ಅದನ್ನು ಪೂಜಿಸತೊಡಗಿದರು. ಆ ಲಜ್ಜಾಹೀನರಿಗೆ ಇಂತಹ ಪಾಮರ ಕೆಲಸವನ್ನು ನಾವು ಏಕೆ ಮಾಡುತ್ತೇವೆಂಬುದಾಗಿ ಎಳ್ಳಷ್ಟಾದರೂ ನಾಚಿಕೆಯುಂಟಾಗಲಿಲ್ಲ. 'ಸ್ವಾರ್ಥೀ ದೋಷಂ ನಪಶ್ಯತಿ' ಎಂದು ಯಾವನೋ ಒಬ್ಬ ಕವಿಯು ಹೇಳಿದ್ದಾನೆ. ಸ್ವಾರ್ಥಿಗಳು ತಮ್ಮ ಪ್ರಯೋಜನವನ್ನು ಸಾಧಿಸಿಕೊಳ್ಳುವುದಕ್ಕಾಗಿ ದುಷ್ಟಕಾರ್ಯಗಳನ್ನು ಕೂಡ ಶ್ರೇಷ್ಠವೆಂದು ಎಣಿಸಿ, ದೋಷವನ್ನು ನೋಡುವುದಿಲ್ಲ. ಅದೇ ಪಾಷಾಣಾದಿಮೂರ್ತಿಗಳ ಮತ್ತು ಭಗಲಿಂಗದ ಪೂಜೆಯಲ್ಲಿ ಎಲ್ಲಾ ಧರ್ಮ, ಅರ್ಥ, ಕಾಮ, ಮೋಕ್ಷ ಮೊದಲಾದ ಸಿದ್ಧಿಗಳನ್ನು ತಿಳಿಯತೊಡಗಿದರು. ಭೋಜರಾಜನ ತರುವಾಯ ಯಾವಾಗ ಜೈನರು ತಮ್ಮ ಮಂದಿರಗಳಲ್ಲಿ ವಿಗ್ರಹಗಳನ್ನು ಸ್ಥಾಪಿಸಲೂ ದರ್ಶನ-ಸ್ಪರ್ಶನಕ್ಕೆ ಹೋಗಿಬರಲೂ ಆರಂಭಿಸಿದರೋ ಆಗ ಈ ಪ್ರೋಪರ ಶಿಷ್ಯರೂ ಕೂಡ ಜೈನಮಂದಿರಗಳಿಗೆ ಹೋಗಿ ಬಂದು ಮಾಡಲಾರಂಭಿಸಿದರು. ಮತ್ತು ಅತ್ತ ಪಶ್ಚಿಮದಲ್ಲಿ ಕೆಲವು ಅನ್ಯ ಮತಗಳು ಪ್ರಾರಂಭವಾದವು. ಮತ್ತು ಯವನರೂ ಸಹ ಆರ್ಯಾವರ್ತಕ್ಕೆ ಬಂದು ಹೋಗಲಾರಂಭಿಸಿದರು. ಆಗ ಪ್ರೋಪರು ಈ ಶ್ಲೋಕವನ್ನು ರಚಿಸಿದರು :—

ನ ವದೇದ್ಯಾವನೀಂ ಭಾಷಾಂ ಪ್ರಾಣೈಃ ಕಂಠಗತೈರಪಿ ।
ಹಸ್ತಿನಾ ತಾಡ್ಯಮಾನೋಪಿ ನ ಗಚ್ಛೇಜ್ಜೈನಮಂದಿರಮ್ ॥೧॥

'ಎಷ್ಟು ದುಃಖಬಂದರೂ, ಪ್ರಾಣವು ಕಂಠಗತವಾಗಿದ್ದರೂ ಅಂದರೆ ಮರಣಸಮಯವು ಪ್ರಾಪ್ತವಾಗಿದ್ದರೂ ಯಾವನೀ ಅಂದರೆ ಮ್ಲೇಚ್ಛಭಾಷೆಯನ್ನು ಬಾಯಿಂದ ಆಡಬಾರದು. ಮತ್ತು ಮದ್ದಾನೆಯು ಕೊಲ್ಲುವುದಕ್ಕಾಗಿ ಅಟ್ಟಿಕೊಂಡು ಬರುತ್ತಿರಲೊಲ್ಲದೇಕೆ ಮತ್ತು ಜೈನಮಂದಿರಕ್ಕೆ ಹೋಗುವುದರಿಂದ ಪ್ರಾಣರಕ್ಷಣೆ ಆಗುವಂತಿದ್ದರೂ, ಜೈನಮಂದಿರಕ್ಕೆ ಪ್ರವೇಶಿಸಬಾರದು. ಆದರೆ ಜೈನಮಂದಿರದಲ್ಲಿ ಪ್ರವೇಶಿಸಿ ಉಳಿದುಕೊಳ್ಳುವುದಕ್ಕಿಂತ ಆನೆಯ ಎದುರಿಗೆ ಹೋಗಿ ಸಾಯುವುದು ಲೇಸು' ಇಂತಹ ಉಪದೇಶಗಳನ್ನು ತಮ್ಮ ಶಿಷ್ಯರಿಗೆ ಮಾಡತೊಡಗಿದರು. ಯಾರಾದರೂ ಅವರನ್ನು ನಿಮ್ಮ ಮತದಲ್ಲಿ ಯಾವುದಾದರೂ

ಮಾನ್ಯಗ್ರಂಥದ ಪ್ರಮಾಣವೂ ಇರುವುದೋ? ಎಂದು ಪ್ರಮಾಣ ಕೇಳಿದರೆ, "ಹೌದು; ಇದೆ" ಎನ್ನುತ್ತಿದ್ದರು. 'ತೋರಿಸಿ' ಎಂದು ಅವರು ಕೇಳಿದಾಗ ದುರ್ಗಾಪಾಠದಲ್ಲಿಯೂ ದೇವಿಯ ವರ್ಣನೆ ಬರೆದಿರುವಂತೆ, ಮಾರ್ಕಂಡೇಯ ಪುರಾಣ ಮೊದಲಾದುವುಗಳ ವಚನಗಳನ್ನು ಓದಿ ಹೇಳುತ್ತಿದ್ದರು. ಭೋಜರಾಜನ ರಾಜ್ಯದಲ್ಲಿ ಯಾರೋ ವ್ಯಾಸರ ಹೆಸರಿನಲ್ಲಿ ಮಾರ್ಕಂಡೇಯ ಪುರಾಣ ಮತ್ತು ಶಿವಪುರಾಣವನ್ನು ಬರೆದು ಪ್ರಕಾಶಪಡಿಸಿದ್ದರು. ಈ ಸಮಾಚಾರವು ಭೋಜರಾಜನಿಗೆ ತಿಳಿಯಲು ಆ ಪಂಡಿತರಿಗೆ ಹಸ್ತಚ್ಛೇದನ ಮೊದಲಾದ ಶಿಕ್ಷೆಗಳನ್ನು ವಿಧಿಸಿದನು. ಮತ್ತು "ಯಾರಾದರೂ ಕಾವ್ಯಾದಿ ಗ್ರಂಥಗಳನ್ನು ರಚಿಸುವುದಾದರೆ ಅವರು ತಮ್ಮ ಹೆಸರಿನಿಂದ ರಚಿಸಬೇಕು; ಋಷಿ-ಮುನಿಗಳ ಹೆಸರಿನಿಂದಲ್ಲ" ಎಂದು ಹೇಳಿದನು. ಈ ಮಾತು ಭೋಜರಾಜನು ರಚಿಸಿರುವ 'ಸಂಜೀವಿನೀ' ಎಂಬ ಇತಿಹಾಸದಲ್ಲಿ ಬರೆದಿರುತ್ತದೆ. ಅದು ಗ್ವಾಲಿಯರ್ ರಾಜ್ಯದ 'ಭಿಂಡ್' ಎಂಬ ಪಟ್ಟಣದಲ್ಲಿರುವ ತಿವಾರೀ ಬ್ರಾಹ್ಮಣರ ಮನೆಯಲ್ಲಿರುತ್ತದೆ. ಲಖನೋ ನಗರದ ರಾವಸಾಹೇಬರೂ ಮತ್ತು ಅವರ ಗುಮಾಸ್ತರಾದ ರಾಮದಯಾಳು ಚೌಬೇಯವರೂ ಅದನ್ನು ಕಣ್ಣಾರೆ ಕಂಡಿದ್ದಾರೆ. "ವ್ಯಾಸರು ೪೪೦೦ ಶ್ಲೋಕಗಳನ್ನೂ, ಅವರ ಶಿಷ್ಯರು ೫೬೦೦ ಶ್ಲೋಕಗಳನ್ನೂ ಉಳ್ಳ ಅಂದರೆ ಒಟ್ಟು ಹತ್ತುಸಾವಿರ ಶ್ಲೋಕಗಳನ್ನುಳ್ಳ ಭಾರತವನ್ನು ರಚಿಸಿದ್ದರು. ಅದು ಮಹಾರಾಜ ವಿಕ್ರಮಾದಿತ್ಯನ ಕಾಲದಲ್ಲಿ ಇಪ್ಪತ್ತುಸಾವಿರವಾಯಿತು. "ನಮ್ಮ ತಂದೆಗಳ ಕಾಲದಲ್ಲಿ ಇಪ್ಪತ್ತೈದು ಸಾವಿರವಾಯಿತು. ನನಗೆ ಅರ್ಧ ವಯಸ್ಸು ಕಳೆದಿರುವ ಈ ಸಮಯದಲ್ಲಿ ಮೂವತ್ತುಸಾವಿರ ಶ್ಲೋಕಗಳುಳ್ಳ ಭಾರತದ ಪುಸ್ತಕವು ಸಿಕ್ಕುತ್ತದೆ. ಹೀಗೆಯೇ ಬೆಳೆಯುತ್ತ ಹೋದರೆ ಮಹಾಭಾರತದ ಪುಸ್ತಕವು ಒಂದು ಒಂಟೆಯ ಹೊರೆಯಾಗುವುದು. ಮತ್ತು ಋಷಿ-ಮುನಿಗಳ ಹೆಸರಿನಿಂದ ಪುರಾಣ ಮೊದಲಾದ ಗ್ರಂಥಗಳನ್ನು ರಚಿಸಿದರೆ ಆರ್ಯಾವರ್ತದ ಜನರು ಭ್ರಾಂತಿಜಾಲದಲ್ಲಿ ಸಿಕ್ಕಿಬಿದ್ದು, ವೈದಿಕಧರ್ಮವಿಹೀನರಾಗಿ, ಭ್ರಷ್ಟರಾಗಿ ಹೋಗುವರು" ಎಂದು ಭೋಜರಾಜನು ಅದರಲ್ಲಿ ಸ್ಪಷ್ಟವಾಗಿ ಬರೆದಿದ್ದಾನೆ. ಇದರಿಂದ ಭೋಜರಾಜನಿಗೆ ವೇದಗಳ

ಸ್ಪಲ್ಪಮಟ್ಟಿನ ಸಂಸ್ಕಾರವಿತ್ತೆಂಬುದು ಗೊತ್ತಾಗುತ್ತದೆ. ಇವನ 'ಭೋಜಪ್ರಬಂಧ'ದಲ್ಲಿ ಬರೆದಿದೆ :—

ಘಟ್ಯೈಕಯಾ ಕೋಶದಶೈಕಮುಶ್ವಃ ಸುಕೃತ್ರಿಮೋ ಗಚ್ಛತಿ ಚಾರುಗತ್ಯಾ ।
ವಾಯುಂ ದದಾತಿ ವ್ಯಜನಂ ಸುಪುಷ್ಕಲಂ ವಿನಾಮನುಷ್ಯೇಣ ಚಲತ್ಯಜಸ್ರಮ್ ॥

ಭೋಜರಾಜನ ರಾಜ್ಯದಲ್ಲಿಯೂ, ಆದರ ಸಮೀಪದಲ್ಲಿಯೂ, ಒಂದು ಗಳಿಗೆಯಲ್ಲಿ ಹನ್ನೊಂದು ಕೋಶ ಮತ್ತು ಒಂದು ಗಂಟೆಯಲ್ಲಿ ಇಪ್ಪತ್ತೇಳೂವರೆ ಕೋಶ ಹೋಗುವಂತಹ, ಯಂತ್ರಕಲಾಯುಕ್ತವಾದ ಕುದುರೆಯಾಕಾರದ ಒಂದು ಯಾನವನ್ನು ನಿರ್ಮಿಸಿದ್ದ ಶಿಲ್ಪವಿದ್ಯಾ ಪ್ರವೀಣರಾದ ಶಿಲ್ಪಿಗಳಿದ್ದರು. ಆದು ಭೂಮಿಯ ಮೇಲೆಯೂ, ಅಂತರಿಕ್ಷದಲ್ಲಿಯೂ ನಡೆಯುತ್ತಿತ್ತು. ಎರಡನೆಯದಾಗಿ, ಮನುಷ್ಯನು ನಡೆಸದಿದ್ದರೂ ಸಹ ಯಂತ್ರಕಲೆಯ ಬಲದಿಂದ ಸದಾ ಚಲಿಸುತ್ತಾ, ಪುಷ್ಕಳವಾದ ಗಾಳಿಯನ್ನು ಕೊಡುತ್ತಿದ್ದಂತಹ ಬೀಸಣಿಗೆಯನ್ನು ರಚಿಸಿದ್ದರು. ಈ ಎರಡು ಪದಾರ್ಥಗಳೂ ಇಂದಿನ ವರೆಗೂ ಇದ್ದಿದ್ದಲ್ಲಿ ಯೂರೋಪಿಯನ್ ಜನರು ಇಷ್ಟೊಂದು ಅಭಿಮಾನದಿಂದ ಏರಿಹೋಗುತ್ತಿರಲಿಲ್ಲ.

ಪೋಪರು ತಮ್ಮ ಶಿಷ್ಯರನ್ನು ಜೈನರ ಬಳಿ ಹೋಗದಂತೆ ತಡೆಯಲಾರಂಭಿಸಿದರೂ ಸಹ ಅವರು ಮಂದಿರಗಳಿಗೆ ಹೋಗದೆ ಇರಲಿಲ್ಲ. ಮತ್ತು ಜೈನರ ಪೋಪರು ಪೌರಾಣಿಕ ಪೋಪರ ಶಿಷ್ಯರನ್ನು ದಾರಿತಪ್ಪಿಸಲಾರಂಭಿಸಿದರು. ಆಗ ಪೌರಾಣಿಕರು "ಇದಕ್ಕೆ ಏನಾದರೂ ಉಪಾಯಮಾಡಬೇಕು. ಇಲ್ಲದಿದ್ದರೆ ತಮ್ಮ ಶಿಷ್ಯರು ಜೈನರಾಗಿ ಹೋಗುವರು." ಎಂದು ಯೋಚಿಸಿದರು. ಆಮೇಲೆ ಪೋಪರು — ಜೈನರಂತೆಯೇ ತಮ್ಮಲ್ಲಿಯೂ ಅವತಾರ, ಮಂದಿರ, ವಿಗ್ರಹಗಳು ಮತ್ತು ಕಥೆಯ ಪುಸ್ತಕಗಳನ್ನು ರಚಿಸಬೇಕೆಂದು ನಿಶ್ಚಯಿಸಿಕೊಂಡರು. ಇವರು ಜೈನರ ಇಪ್ಪತ್ತು ನಾಲ್ಕು ಮಂದಿ ತೀರ್ಥಂಕರರ ಹಾಗೆಯೇ ಇಪ್ಪತ್ತುನಾಲ್ಕು ಅವತಾರಗಳನ್ನು, ದೇವಾಲಯಗಳನ್ನು ಮಾಡಿದರು. ಮತ್ತು ಜೈನರ ಆದಿಪುರಾಣ ಮತ್ತು ಉತ್ತರ–ಮೊದಲಾದ ಪುರಾಣ

ಗಳಂತೆ, ಹದಿನೆಂಟು ಪುರಾಣಗಳನ್ನು ಬರೆಯತೊಡಗಿದರು. ಭೋಜ ರಾಜನ ಕಾಲವಾದ ಬಳಿಕ ೧೫೦ ವರ್ಷಗಳಿಗೆ ವೈಷ್ಣವ ಮತವು ಆರಂಭವಾಯಿತು. ಶಠಕೋಪನೆಂಬವನೊಬ್ಬನು ಮೇದರ ಜಾತಿಯಲ್ಲಿ ಹುಟ್ಟಿದ್ದನು; ಅವನಿಂದ ಸ್ವಲ್ಪಮಟ್ಟಿಗೆ ಪ್ರಚಾರವಾಯಿತು. ಅನಂತರ, ಹೊಲೆಯರ ಕುಲದಲ್ಲಿ ಹುಟ್ಟಿದ ಮುನಿವಾಹನ, ಮೂರನೆಯವನಾಗಿ ಯವನಕುಲದಲ್ಲಿ ಹುಟ್ಟಿದ ಯಾವನಾಚಾರ್ಯ ಇವರು ಆಚಾರ್ಯರಾದರು. ಆ ಬಳಿಕ ಬ್ರಾಹ್ಮಣ ಕುಲದಲ್ಲಿ ಹುಟ್ಟಿದ ರಾಮಾನುಜರು ನಾಲ್ಕನೆಯ ಆಚಾರ್ಯರಾದರು. ಅವರು ತಮ್ಮ ಮತವನ್ನು ಹರಡಿದರು. ಶೈವರು ಶಿವಪುರಾಣಾದಿಗಳನ್ನೂ, ಶಾಕ್ತರು ದೇವೀಭಾಗವತಾದಿಗಳನ್ನೂ, ವೈಷ್ಣವರು ವಿಷ್ಣುಪುರಾಣಾದಿಗಳನ್ನೂ ಬರೆದರು. ತಮ್ಮ ಹೆಸರಿನಲ್ಲಿ ಬರೆದರೆ ಯಾರೂ ಪ್ರಮಾಣವಾಗಿ ಎಣಿಸುವುದಿಲ್ಲವೆಂದು, ಅವುಗಳಲ್ಲಿ ತಮ್ಮ ಹೆಸರನ್ನಿಡಲಿಲ್ಲ. ಈ ಕಾರಣದಿಂದ ವ್ಯಾಸ ಮೊದಲಾದ ಋಷಿಮುನಿಗಳ ಹೆಸರನ್ನಿಟ್ಟು, ಪುರಾಣಗಳನ್ನು ಬರೆದರು. ಹೆಸರನ್ನೂ ಕೂಡ ಇವಕ್ಕೆ 'ನವೀನ' ವೆಂದೇ ಇಡಬೇಕಾಗಿತ್ತು; ಆದರೆ, ಯಾವನಾದರೂ ದರಿದ್ರನು ತನ್ನ ಮಗನಿಗೆ "ಮಹಾರಾಜಾಧಿರಾಜ" ಎಂದು ಹೆಸರಿಡುವಂತೆ, ಅಧುನಿಕ ಪದಾರ್ಥಕ್ಕೆ "ಸನಾತನ" ವೆಂದು ಹೆಸರಿಟ್ಟರೆ ಆಶ್ಚರ್ಯವೇನು? ಇವರಿಗೆ ತಮ್ಮ ತಮ್ಮಲ್ಲಿ ಪರಸ್ಪರ ಕಲಹವಿರುವಂತೆಯೇ ಪುರಾಣಗಳಲ್ಲಿಯೂ ತುಂಬಿದ್ದಾರೆ.

ನೋಡಿ! ದೇವೀಭಾಗವತದಲ್ಲಿ 'ಶ್ರೀ' ಎಂಬ ದೇವಿಯು ಶ್ರೀಪುರಕ್ಕೆ ಸ್ವಾಮಿನಿ ಯೆಂದು ಬರೆದಿದೆ. ಆಕೆಯೇ ಈ ಜಗತ್ತನ್ನು ರಚಿಸಿದಳು. ಮತ್ತು ಬ್ರಹ್ಮ-ವಿಷ್ಣು-ಮಹೇಶ್ವರರನ್ನು ಅವಳೇ ಉತ್ಪನ್ನ ಮಾಡಿದಳು. ಆ ದೇವಿಗೆ ಇಚ್ಛೆಯಾದಾಗ ಅವಳು ತನ್ನ ಕೈಗಳನ್ನು ತಿಕ್ಕಿದಳು. ಅದರಿಂದ ಕೈಯಲ್ಲಿ ಒಂದು ಬೊಕ್ಕೆಯುಂಟಾಯಿತು. ಅದರಿಂದ ಬ್ರಹ್ಮನ ಉತ್ಪತ್ತಿಯಾಯಿತು. ದೇವಿಯು ಅವನಿಗೆ "ನೀನು ನನ್ನನ್ನು ಮದುವೆಯಾಗು" ಎಂದು ಹೇಳಿದಳು. ಬ್ರಹ್ಮನು "ನೀನು ನನ್ನ ತಾಯಿಯಾಗಿದ್ದೀಯೆ. ನಿನ್ನನ್ನು ನಾನು ಮದುವೆಮಾಡಿಕೊಳ್ಳಲಾರೆ' ಎಂದನು. ಇದನ್ನು ಕೇಳಿ ಮಾತೆಗೆ ಕೋಪವೇರಿತು. ಮತ್ತು ಮಗನನ್ನು ಬೂದಿಮಾಡಿಬಿಟ್ಟಳು. ಮತ್ತು ಪುನಃ ಕೈಗಳನ್ನು ತಿಕ್ಕಿ

ಹಾಗೆಯೇ ಎರಡನೆಯ ಮಗನನ್ನು ಸೃಷ್ಟಿಸಿದಳು ಅವನಿಗೆ ವಿಷ್ಣು ವೆಂದು ಹೆಸರಿಟ್ಟಳು. ಆತನೊಡನೆಯೂ ಅದೇ ರೀತಿ ಹೇಳಿದಳು. ಅವನು ಒಪ್ಪದಿದ್ದುದರಿಂದ, ಅವನನ್ನೂ ಕೂಡ ಬೂದಿಮಾಡಿದಳು. ಮತ್ತೆ ಅದೇ ರೀತಿ ಮೂರನೆಯ ಮಗನನ್ನು ಸೃಷ್ಟಿಸಿದಳು. ಅವನಿಗೆ ಮಹಾದೇವನೆಂದು ಹೆಸರಿಟ್ಟಳು. ಮತ್ತು ಅವನಿಗೆ–" ನೀನು ನನ್ನನ್ನು ಮದುವೆಯಾಗು " ಎಂದು ಹೇಳಿದಳು. ಮಹಾದೇವನು–" ನಿನ್ನೊಡನೆ ನಾನು ಮದುವೆಮಾಡಿಕೊಳ್ಳಲಾರೆನು. ನೀನು ಬೇರೆ ಹೆಂಗಸಿನ ಶರೀರವನ್ನು ಧರಿಸು " ಎಂದನು. ದೇವಿಯು ಹಾಗೆಯೇ ಮಾಡಿದಳು. ಆಗ ಮಹಾದೇವನು ' ಈ ಎರಡು ಕಡೆ ಬೂದಿಯಂತೆ ಬಿದ್ದಿರುವುದೇನು ? ' ಎಂದು ಕೇಳಿದನು. ದೇವಿಯು " ಇವರಿಬ್ಬರೂ ನಿನ್ನ ಸಹೋದರರು. ಇವರು ನನ್ನ ಆಜ್ಞೆಯನ್ನು ಒಪ್ಪಲಿಲ್ಲ; ಆದುದರಿಂದ, ಬೂದಿಮಾಡಿಬಿಟ್ಟೆನು." ಎಂದು ಹೇಳಿದಳು. ಮಹಾದೇವನು–' ನಾನೊಬ್ಬನೇ ಏನು ಮಾಡಬಲ್ಲೆನು ? ಇವರಿಬ್ಬರನ್ನು ಬದುಕಿಸು ಮತ್ತು ಇನ್ನಿಬ್ಬರು ಸ್ತ್ರೀಯರನ್ನು ಸೃಷ್ಟಿಮಾಡು. ಮೂವರಿಗೂ ಮೂವರೊಂದಿಗೆ ಮದುವೆಯಾಗುವುದು ' ಎಂದನು. ದೇವಿಯು ಹಾಗೆಯೇ ಮಾಡಿದಳು. ಬಳಿಕ ಮೂವರಿಗೂ ಮೂವರೊಂದಿಗೆ ವಿವಾಹವಾಯಿತು." ಭೇಷ್ : ತಾಯಿಯೊಂದಿಗೆ ಮದುವೆಯಾಗಲಿಲ್ಲ. ತಂಗಿಯೊಡನೆ ಮಾಡಿಕೊಂಡರು. ಇದನ್ನು ಉಚಿತವೆಂದು ತಿಳಿಯಬೇಕೆ ? ಬಳಿಕ ಇಂದ್ರಾದಿಗಳನ್ನು ಉತ್ಪನ್ನಮಾಡಿದಳು. ಬಳಿಕ ಬ್ರಹ್ಮ, ವಿಷ್ಣು, ರುದ್ರ, ಇಂದ್ರ ಇವರನ್ನು ಪಲ್ಲಕ್ಕಿ ಹೊರುವ ಬೋಯಿಗಳಾಗಿ ನಿಯಮಿಸಿದಳು. ಎಂದು ಮೊದಲಾವ ಕಗ್ಗಗಳನ್ನು ಮನಬಂದಂತೆ ಬರೆದಿದ್ದಾರೆ. ಇವರನ್ನು ಯಾರಾದರೂ ಆ ದೇವಿಯ ಶರೀರವನ್ನೂ, ಶ್ರೀಪುರವನ್ನು ರಚಿಸುವವರು, ಮತ್ತು ಆಕೆಯ ತಂದೆ-ತಾಯಿಗಳು ಯಾರು ? ಎಂದು ಕೇಳಬೇಕು. " ದೇವಿಯು ಅನಾದಿ " ಎನ್ನುವಿರಾದರೆ, ಸಂಯೋಗದಿಂದ ಉತ್ಪನ್ನವಾದ ವಸ್ತುವು ಎಂದಿಗೂ ಅನಾದಿಯಾಗಲಾರದು. ತಾಯಿ-ಮಕ್ಕಳ ವಿವಾಹಕ್ಕೆ ಹೆದರುವರಾದರೆ, ಸೋದರ-ಸೋದರಿಯರ ಮದುವೆಯಲ್ಲಿ ಯಾವ ಗುಣವಿದೆ ?

ಈ ದೇವೀಭಾಗವತದಲ್ಲಿ ಬ್ರಹ್ಮ, ವಿಷ್ಣು, ಮಹಾದೇವ

ಮೊದಲಾದವರ ಕ್ಷುದ್ರತ್ವವನ್ನೂ, ದೇವಿಯ ದೊಡ್ಡಸ್ತಿಕೆಯನ್ನೂ ಬರೆದಿರುವಂತೆಯೇ, ಶಿವಪುರಾಣದಲ್ಲಿ ದೇವಿ ಮೊದಲಾದವರಿಗೆ ಬಹಳ ಕ್ಷುದ್ರತ್ವವನ್ನು ಬರೆದಿದ್ದಾರೆ; ಅಂದರೆ ಇವರೆಲ್ಲರೂ ಮಹಾದೇವನ ದಾಸರು; ಮಹಾದೇವನೇ ಎಲ್ಲರಿಗೂ ಈಶ್ವರನು ಎಂದು ಬರೆದಿರುತ್ತದೆ. ರುದ್ರಾಕ್ಷ ಅಂದರೆ ಒಂದು ಮರದ ಹಣ್ಣಿನ ಬೀಜವನ್ನೂ, ಬೂದಿಯನ್ನೂ ಧರಿಸುವುದರಿಂದ ಮುಕ್ತಿಯಾಗುವುದೆಂದು ಒಪ್ಪಿದಲ್ಲಿ ಬೂದಿಯಲ್ಲಿ ಹೊರಳಾಡುವ ಕತ್ತೆ ಮೊದಲಾದ ಪಶುಗಳೂ ಮತ್ತು ಗುಲಗಂಜಿ ಮೊದಲಾದುವನ್ನು ಧರಿಸುವ ಭಿಲ್ಲ, ಕಿರಾತ ಮೊದಲಾದವರೂ ಮುಕ್ತಿ ಹೊಂದಬೇಕು. ಮತ್ತು ಹಂದಿ, ನಾಯಿ, ಕತ್ತೆ ಮೊದಲಾದ ಬೂದಿಯಲ್ಲಿ ಹೊರಳಾಡುವ ಪಶುಗಳಿಗೆ ಏಕೆ ಮೋಕ್ಷ ದೊರೆಯುವುದಿಲ್ಲ?

ಪ್ರಶ್ನೆ :—ಕಾಲಾಗ್ನಿರುದ್ರೋಪನಿಷತ್ತಿನಲ್ಲಿ ಭಸ್ಮವನ್ನು ಧರಿಸುವ ವಿಧಾನವನ್ನು ಬರೆದಿದೆ. ಅದು ಸುಳ್ಳೆ? ಮತ್ತು 'ತ್ರ್ಯಾಯುಷಂ ಜಮದಗ್ನೇಃ' [ಯಜುರ್ವೇದವಚನ] ಈ ಮೊದಲಾದ ವೇದಮಂತ್ರಗಳಿಂದಲೂ ಭಸ್ಮಧಾರಣೆಯ ವಿಧಾನವು ಉಕ್ತವಾಗಿರುತ್ತದೆ. ಮತ್ತು ಪುರಾಣಗಳಲ್ಲಿ—"ರುದ್ರನ ಕಣ್ಣಿನ ಅಶ್ರುಪಾತದಿಂದ ಹುಟ್ಟಿದ ವೃಕ್ಷಕ್ಕೇ ರುದ್ರಾಕ್ಷವೆಂದು ಹೆಸರು. ಆದುದರಿಂದಲೇ ಅದನ್ನು ಧರಿಸುವುದರಲ್ಲಿ ಪುಣ್ಯವಿದೆಯೆಂದು ಬರೆದಿದೆ. ಒಂದು ರುದ್ರಾಕ್ಷವನ್ನಾದರೂ ಧರಿಸಿದರೆ ಸರ್ವಪಾಪ ಮುಕ್ತನಾಗಿ ಸ್ವರ್ಗಕ್ಕೆ ಹೋಗುವನು. ಯಮನ ಮತ್ತು ನರಕದ ಭಯವಿರುವುದಿಲ್ಲ.

ಉತ್ತರ :—ಕಾಲಾಗ್ನಿರುದ್ರೋಪನಿಷತ್ತನ್ನು ಯಾರೋ ಬೂದಿ ಬಡಕರು ಅಂದರೆ ಭಸ್ಮಧಾರಿಗಳು ರಚಿಸಿದ್ದಾರೆ. ಏಕೆಂದರೆ ಅದರಲ್ಲಿ 'ಯಾಸ್ಯ ಪ್ರಥಮಾ ರೇಖಾ ಸಾ ಭೂರ್ಲೋಕಃ'—ಮೊದಲಾದ ವಚನಗಳು ಅರ್ಥಹೀನವಾಗಿವೆ. ಪ್ರತಿದಿನವೂ ಕೈಯಿಂದ ತೆಗೆದ ರೇಖೆಯು ಭೂಲೋಕವಾಗಲಿ ಅದರ ವಾಚಕವಾಗಲಿ ಹೇಗಾಗ ಬಲ್ಲದು? ಮತ್ತು 'ತ್ರ್ಯಾಯುಷಂ ಜಮದಗ್ನೇಃ' ಮೊದಲಾದ ಮಂತ್ರಗಳು ಭಸ್ಮ ಅಥವಾ ತ್ರಿಪುಂಡ್ರಧಾರಣೆಯ ವಾಚಕಗಳಲ್ಲ. ಆದರೆ,

ಚಕ್ಷುರ್ನೋ ಜಮದಗ್ನಿಃ ॥ [ಶತಪಥ]

"ಹೇ, ಪರಮಾತ್ಮ! ನನ್ನ ಕಣ್ಣುಗಳ ಜ್ಯೋತಿಯು (ತ್ರ್ಯಾಯುಷಂ) ತ್ರಿಗುಣ ಅಂದರೆ ಮುನ್ನೂರು ವರ್ಷಗಳವರೆಗಿರಲಿ. ಮತ್ತು ನಾನೂ ಸಹ ನೇತ್ರಜ್ಯೋತಿಯು ನಾಶವಾಗದಂತಹ ಧರ್ಮ ಕಾರ್ಯಗಳನ್ನು ಮಾಡುತ್ತೇನೆ ಎಂದರ್ಥ. ಕಣ್ಣಿನ ಅಶ್ರುಪಾತದಿಂದಲೂ ಮರ ಹುಟ್ಟಬಲ್ಲದೆಂಬುದು ಎಷ್ಟು ದೊಡ್ಡ ಮೂರ್ಖತ್ವದ ಮಾತು? ಪರಮೇಶ್ವರನ ಸೃಷ್ಟಿಕ್ರಮವನ್ನು ಯಾರಾದರೂ ಬದಲಾಯಿಸಲು ಸಾಧ್ಯವೆ? ಯಾವ ಮರದ ಬೀಜವನ್ನು ಪರಮಾತ್ಮನು ಹೇಗೆ ರಚಿಸಿರುವನೋ ಅದರಿಂದಲೇ ಆ ಮರ ಹುಟ್ಟಬಲ್ಲದು; ಬೇರೆ ರೀತಿಯಿಲ್ಲ. ಆದುದರಿಂದ ರುದ್ರಾಕ್ಷ, ಬೂದಿ, ತುಲಸಿ, ಕಮಲಾಕ್ಷ, ತೃಣ, ಚಂದನ ಮೊದಲಾದುವುಗಳನ್ನು ಕೊರಳಿನಲ್ಲಿ ಧರಿಸುವುದು ಕಾಡು ಮೃಗಗಳಂತಿರುವ ಜನರ ಕೆಲಸವಾಗಿರುತ್ತದೆ. ಹೀಗೆ ಈ ವಾಮ ಮಾರ್ಗಿಗಳು ಮತ್ತು ಶೈವರು ಬಹಳ ಮಿಥ್ಯಾಚಾರಿಗಳೂ, ವಿರೋಧಿ ಗಳೂ, ಕರ್ತವ್ಯ ಕರ್ಮತ್ಯಾಗಿಗಳೂ ಆಗಿರುತ್ತಾರೆ. ಇವರಲ್ಲಿ ಶ್ರೇಷ್ಠ ಪುರುಷನಾದವನು ಈ ಮಾತುಗಳಲ್ಲಿ ವಿಶ್ವಾಸವಿಡದೆ, ಸತ್ಕರ್ಮಗಳನ್ನು ಮಾಡುತ್ತಾನೆ. ರುದ್ರಾಕ್ಷ ಮತ್ತು ಭಸ್ಮಧಾರಣೆಯಿಂದ ಯಮರಾಜನ ದೂತರು ಹೆದರುವುದಾದರೆ ಪೋಲೀಸಿನವರೂ, ಸಿಪಾಯಿಗಳೂ ಹೆದರಬಹುದು. ನಾಯಿ, ಸಿಂಹ, ಹಾವು, ಚೇಳು, ನೊಣ ಮತ್ತು ಸೊಳ್ಳೆ ಮೊದಲಾದುವೂ ಸಹ ರುದ್ರಾಕ್ಷ-ಭಸ್ಮಧಾರಣೆ ಮಾಡುವವರಿಗೆ ಹೆದರದಿರುವಾಗ, ನ್ಯಾಯಾಧೀಶನ ಭೃತ್ಯರೇಕೆ ಹೆದರುವರು?

ಪ್ರಶ್ನೆ:—ವಾಮಮಾರ್ಗಿಗಳು ಮತ್ತು ಶೈವರಂತೂ ಉತ್ತಮರಲ್ಲ. ಆದರೆ ವೈಷ್ಣವರಾದರೂ ಉತ್ತಮರೋ?

ಉತ್ತರ:—ಇವರೂ ಕೂಡ ವೇದವಿರೋಧಿಗಳಾಗಿರುವುದರಿಂದ ಅವರಿಗಿಂತಲೂ ನಿಕೃಷ್ಟರೇ ಆಗಿದ್ದಾರೆ.

ಪ್ರಶ್ನೆ:—'ನಮಸ್ತೇ ರುದ್ರಮನ್ಯವೇ' 'ವೈಷ್ಣವಮಸಿ' 'ವಾಮನಾಯಚ', 'ಗಣಾನಾಂ ತ್ವಾ ಗಣಪತಿಂ ಹವಾಮಹೇ' 'ಭಗವತೀ ಭೂಯಾಃ' 'ಸೂರ್ಯ ಆತ್ಮಾ ಜಗತಸ್ತಸ್ಥುಷಶ್ಚ'

ಇತ್ಯಾದಿ ವೇದ ಪ್ರಮಾಣಗಳಿಂದ ಶೈವ ಮೊದಲಾದ ಮತಗಳು ಸಿದ್ಧವಾಗುತ್ತವೆ; ಮತ್ತೆ ಏಕೆ ಖಂಡಿಸುತ್ತೀರಿ ?

ಉತ್ತರ:—ಈ ವಚನಗಳಿಂದ ಶೈವ ಮೊದಲಾದ ಸಂಪ್ರದಾಯಗಳು ಸಿದ್ಧವಾಗುವುದಿಲ್ಲ. ಏಕೆಂದರೆ–ರುದ್ರ ಎಂಬುದು ಪರಮಾತ್ಮ, ಪ್ರಾಣಾದಿ ವಾಯುಗಳು,ಜೀವ, ಅಗ್ನಿ ಮೊದಲಾದುವುಗಳ ಹೆಸರು. ಕ್ರೋಧ ಕರ್ತನಾದ ರುದ್ರನು ಅಂದರೆ ದುಷ್ಟರನ್ನು ಅಳಿಸುವ ಪರಮಾತ್ಮನಿಗೆ ನಮಸ್ಕಾರ ಮಾಡಬೇಕು. ಪ್ರಾಣ ಮತ್ತು ಜಾಠರಾಗ್ನಿಗೆ ಅನ್ನವನ್ನು ಕೊಡಬೆಂಕು. ' ನಮ ಇತ್ಯನ್ನನಾಮ ' (ನಿಘಂಟು ೨.೭) ಮಂಗಳಕಾರಿ, ಸರ್ವ ಜಗತ್ತಿನ ಅತ್ಯಂತ ಕಲ್ಯಾಣಕಾರಿಯಾದ ಪರಮಾತ್ಮನಿಗೆ ನಮಸ್ಕಾರ ಮಾಡಬೇಕು—ಎಂದರ್ಥ.

ಶಿವಸ್ಯ ಪರಮೇಶ್ವರಸ್ಯಾಯಂ ಭಕ್ತಃ ಶೈವಃ ।
ವಿಷ್ಣೋಃ ಪರಮಾತ್ಮನೋಽಯಂ ಭಕ್ತೋ ವೈಷ್ಣವಃ ।
ಗಣಪತೇಃ ಸಕಲ ಜಗತ್ಸ್ವಾಮಿನೋಽಯಂ ಸೇವಕೋ ಗಾಣಪತಃ ।
ಭಗವತ್ಯಾ ವಾಣ್ಯಾಯಂ ಸೇವಕಃ ಭಾಗವತಃ ।
ಸೂರ್ಯಸ್ಯ ಚರಾಚರಾತ್ಮನೋಽಯಂ ಸೇವಕಃ ಸೌರಃ ॥

ಈ ಎಲ್ಲಾ ರುದ್ರ, ಶಿವ, ವಿಷ್ಣು, ಗಣಪತಿ, ಸೂರ್ಯ ಮೊದಲಾದ ಶಬ್ದಗಳು ಪರಮಾತ್ಮನ ಹೆಸರುಗಳು ಮತ್ತು ಭಗವತೀ—ಎಂಬುದು ಸತ್ಯ ವಾಕ್ಯಗಳ ಹೆಸರಾಗಿರುತ್ತದೆ. ಇವನ್ನು ತಿಳಿಯಲಾರದೆ ಇಂತಹ ಕಲಹವನ್ನೆಬ್ಬಿಸಿದ್ದಾರೆ:—

ಯಾವನೋ ಒಬ್ಬ ಬೈರಾಗಿಗೆ ಇಬ್ಬರು ಶಿಷ್ಯರಿದ್ದರು. ಅವರು ಪ್ರತಿದಿನ ಗುರುವಿನ ಪಾದಗಳನ್ನು ಒತ್ತುತ್ತಿದ್ದರು. ಒಬ್ಬನು ಬಲಗಾಲಿನ ಮತ್ತು ಇನ್ನೊಬ್ಬನು ಎಡಗಾಲಿನ ಸೇವೆ ಮಾಡುವುದನ್ನು ಹಂಚಿಕೊಂಡಿದ್ದರು. ಒಂದು ದಿನ ಒಬ್ಬ ಶಿಷ್ಯನು ಪೇಟೆಗೆ ಹೋದನು. ಮತ್ತೊಬ್ಬನು ತನ್ನ ಭಾಗದ ಸೇವನೀಯವಾದ ಕಾಲನ್ನು ಒತ್ತುತ್ತ ಕುಳಿತಿದ್ದನು. ಅಷ್ಟರಲ್ಲಿ ಗುರುವು ಹೊರಳಿದನು. ಆಗ ಅವನ ಸೇವ್ಯವಾದ ಕಾಲಿನಮೇಲೆ ಮತ್ತೊಬ್ಬ ಶಿಷ್ಯನ ಸೇವನೀಯವಾದ ಪಾದ

ಬಿದ್ದಿತು. ಅವನ್ನು ದೊಣ್ಣೆಯನ್ನೆತ್ತಿ ಆ ಕಾಲಿನ ಮೇಲೆ ಎಳೆದು ಹೊಡೆದನು. ಆಗ ಗುರುವು "ಎಲೆ' ದುಷ್ಟ, ನೀನು, ಇದೇನು ಮಾಡಿದೆ ?" ಎಂದು ಕೇಳಿದನು. ಶಿಷ್ಯನು "ನನ್ನ ಸೇವನೀಯ ಪಾದದ ಮೇಲೆ ಈ ಕಾಲು ಏತಕ್ಕೆ ಬಂದು ಏರಿತು ?" ಎಂದು ಉತ್ತರ ಕೊಟ್ಟನು. ಅಷ್ಟರಲ್ಲಿ ಪೇಟೆಗೆ ಹೋಗಿದ್ದ ಶಿಷ್ಯನು ಬಂದು ಸೇರಿದನು. ಅವನೂ ಸಹ ತನ್ನ ಸೇವ್ಯಪಾದಕ್ಕೆ ಸೇವೆ ಮಾಡಹತ್ತಿದನು. ನೋಡಿದರೆ ಕಾಲು ಊದಿಕೊಂಡಿದೆ. "ಗುರುಗಳೇ ! ನನ್ನ ಸೇವನೀಯವಾದ ಈ ಕಾಲಿಗೆ ಏನಾಯಿತು ? ಎಂದು ಕೇಳಿದನು. ಗುರುವು ಎಲ್ಲಾ ವೃತ್ತಾಂತವನ್ನೂ ಹೇಳಿದನು. ಆ ಮೂರ್ಖನೂ ಸಹ ಉಸರೆತ್ತಲಿಲ್ಲ. ಆಲೋಚಿಸಲಿಲ್ಲ. ಸದ್ದಿಲ್ಲದೆ ದೊಣ್ಣೆಯನ್ನು ಎತ್ತಿ ಬಹಳ ಬಿರುಸಾಗಿ ಗುರುವಿನ ಮತ್ತೊಂದು ಕಾಲಿನಮೇಲೆ ಹೊಡೆದನು. ಆಗ ಗುರುವು ಗಟ್ಟಿಯಾಗಿ ಕೆರಿಚಿಕೊಂಡನು. ಆಗ ಶಿಷ್ಯರಿಬ್ಬರೂ ದೊಣ್ಣೆಗಳನ್ನು ಎತ್ತಿಕೊಂಡು ನುಗ್ಗಿದರು ಮತ್ತು ಗುರುವಿನ ಎರಡು ಪಾದಗಳನ್ನೂ ಅಪ್ಪಳಿಸ ತೊಡಗಿದರು. ಆಗ ವಿಪರೀತ ಗದ್ದಲವಾಯಿತು; ಕೇಳಿ ಜನರು ಬಂದರು. "ಸಾಧುಗಳೇ, ಏನಾಯಿತು ? ಎಂದು ಕೇಳತೊಡಗಿದರು. ಅವರಲ್ಲಿ ಬುದ್ಧಿವಂತನಾದವನೊಬ್ಬನು ಸಾಧುವನ್ನು ಬಿಡಿಸಿ, ಬಳಿಕ ಆ ಮೂರ್ಖ ಶಿಷ್ಯರಿಗೆ—"ನೋಡಿರಿ ! ಈ ಎರಡು ಕಾಲುಗಳೂ ನಿಮ್ಮ ಗುರುಗಳವೇ, ಇವೆರಡನ್ನೂ ಸೇವಿಸುವುದರಿಂದ ಅವರಿಗೇ ಸುಖವುಂಟಾಗುತ್ತದೆ. ಅವನ್ನು ನೋಯಿಸಿದರೂ ಅವರೊಬ್ಬರಿಗೇ ದುಃಖವುಂಟಾಗುತ್ತದೆ. ಎಂದು ಉಪದೇಶಿಸಿದನು.

ಒಬ್ಬ ಗುರುವಿನ ಸೇವೆಯಲ್ಲೆಯೇ ಶಿಷ್ಯರು ಲೀಲೆಮಾಡಿದಂತೆಯೇ ಮೂರ್ಖತನದಿಂದ ಅಖಂಡ ಸಚ್ಚಿದಾನಂದ ಅನಂತಸ್ವರೂಪನಾದ ಒಬ್ಬ ಪರಮಾತ್ಮನದೇ ಆದ ವಿಷ್ಣು, ರುದ್ರ ಮೊದಲಾದ ಅನೇಕ ನಾಮಗಳ ಅರ್ಥವನ್ನು ಪ್ರಥಮ ಸಮುಲ್ಲಾಸದಲ್ಲಿ ಪ್ರಕಾಶಿಸಿರುವಂತೆ ಸತ್ಯವಾಗಿ ತಿಳಿದುಕೊಳ್ಳದೆ ಶೈವ, ಶಾಕ್ತ, ವೈಷ್ಣವ ಮೊದಲಾದ ಸಂಪ್ರದಾಯಗಳವರು ಪರಸ್ಪರ ಒಬ್ಬರ ಹೆಸರನ್ನೊಬ್ಬರು ನಿಂದಿಸುತ್ತಾರೆ. ವಿಷ್ಣು, ರುದ್ರ, ಶಿವ ಮೊದಲಾದ ಹೆಸರುಗಳು

ಅದ್ವಿತೀಯನೂ, ಸರ್ವನಿಯಾಮಕನೂ, ಸರ್ವಾಂತರ್ಯಾಮಿಯೂ ಆದ ಒಬ್ಬ ಜಗದೀಶ್ವರನು ಅನೇಕ ಗುಣ, ಕರ್ಮ, ಸ್ವಭಾವಯುಕ್ತನಾಗಿರುವುದರಿಂದ ಅವನ ವಾಚಕಗಳೇ ಎಂಬುದನ್ನು ಈ ಮಂದಮತಿಗಳು ತಮ್ಮ ಬುದ್ಧಿಯನ್ನು ಸ್ವಲ್ಪವೂ ಹರಡಿ ಯೋಚಿಸುವುದಿಲ್ಲ. ಒಳ್ಳೆಯದು ಇಂತಹ ಮೂರ್ಖರ ಮೇಲೆ ಪರಮಾತ್ಮನು ಕೋಪಿಸದಿರುವನೆ? ಈಗ ಚಕ್ರಾಂಕಿತ ವೈಷ್ಣವರ ಅದ್ಭುತಮಾಯೆಯನ್ನು ನೋಡಿರಿ.

ತಾಪಃ ಪುಂಡ್ರಂ ತಥಾನಾಮ ಮಾಲಾ ಮುಂತ್ರಸ್ತಥೈವಚ ।
ಅಮಿಾ ಹಿ ಪಂಚ ಸಂಸ್ಕಾರಾಃ ಪರಮೈಕಾಂತ ಹೇತವಃ ।
ಆತಪ್ತತನೂರ್ನತದಾವೋ ಆಶ್ನುತೇ । ಇತಿ ಶ್ರುತೇಃ ॥

[ರಾಮಾನುಜ ಪಟಲ ಪದ್ಧತೌ]

ಅಂದರೆ (ತಾಪಃ) ಶಂಖ, ಚಕ್ರ, ಗದೆ ಮತ್ತು ಪದ್ಮಗಳ ಚಹ್ನೆಗಳನ್ನು ಬೆಂಕಿಯಲ್ಲಿ ಕಾಸಿ, ತೋಳುಗಳ ಮೇಲೆ ಬರೆಗಳನ್ನು ಹಾಕಿಸಿಕೊಂಡು ಬಳಿಕ ಹಾಲಿನ ಪಾತ್ರೆಯಲ್ಲಿ ಅದ್ದಿ ಆರಿಸುತ್ತಾರೆ. ಮತ್ತು ಕೆಲವರು ಆ ಹಾಲನ್ನು ಸಹ ಕುಡಿದುಬಿಡುತ್ತಾರೆ. ಈಗ ನೋಡಿರಿ. ಅವರಿಗೆ ಪ್ರತ್ಯಕ್ಷವಾಗಿ ನರಮಾಂಸದ ರುಚಿಯೂ ಅದರಲ್ಲಿ ಬರಬಹುದು. ಇಂತಹ ಕರ್ಮಗಳಿಂದ ಪರಮಾತ್ಮನನ್ನು ಹೊಂದುವ ನಿರೀಕ್ಷಣೆ ಮಾಡುತ್ತಾರೆ. ಮತ್ತು "ಶಂಖ-ಚಕ್ರಾದಿಗಳಿಂದ ಶರೀರವನ್ನು ಸುಡಿಸಿಕೊಳ್ಳದೆ ಜೀವನು ಪರಮಾತ್ಮನನ್ನು ಹೊಂದಲಾರನು. ಏಕೆಂದರೆ—ಅವನು (ಅಮಾ) ಅಂದರೆ ಪರಿಪಕ್ವನಾಗಿರುವುದಿಲ್ಲ. ರಾಜಪುರುಷನ ಚಿಹ್ನೆಗಳಿಂದ ಅವನನ್ನು ರಾಜಪುರುಷನೆಂದು ತಿಳಿದು, ಎಲ್ಲರೂ ಅವನಿಗೆ ಭಯಪಡುವಂತೆ ವಿಷ್ಣುವಿನ ಶಂಖ-ಚಕ್ರಾದಿ ಆಯುಧಗಳ ಚಿಹ್ನೆಗಳನ್ನು ನೋಡಿ, ಯಮರಾಜನೂ, ಅವನ ಭಟರೂ ಭಯಪಡುವರು ಮತ್ತು ಹೇಳುತ್ತಾರೆ :—

ದೋಹಾ ॥ ಚಾನಾ ಬಡಾ ದಯಾಲಕಾ ತಿಲಕ್ ಛಾಪ್ ಔರ್ ಮಾಲ್ ।
ಯಮ ಡರಪೈ ಕಾಲೂ ಕಹೇ ಭಯ ಮಾನೇ ಭೂಪಾಲ್ ॥

ಅಂದರೆ— ಪರಮಾತ್ಮನ ಚಿಹ್ನೆಯಾದ ತಿಲಕ, ಮುದ್ರೆ ಮತ್ತು ಮಾಲೆಯನ್ನು ಧರಿಸಿಕೊಳ್ಳುವುದು ದೊಡ್ಡದು. ಇದರಿಂದ ಯಮ, ರಾಜನೂ, ರಾಜರೂ ಹೆದರುತ್ತಾರೆ. (ಪುಂಡ್ರಂ) ಹಣೆಯಲ್ಲಿ ತ್ರಿಶೂಲದಂತಿರುವ ಚಿತ್ರವನ್ನು ಬರೆದುಕೊಳ್ಳುವುದು, (ನಾಮ–ಹೆಸರು) ನಾರಾಯಣದಾಸ, ವಿಷ್ಣುದಾಸ ಮೊದಲಾದ ದಾಸಶಬ್ದದಿಂದ ಕೊನೆಯಾಗುವ ಹೆಸರುಗಳನ್ನು ಇಟ್ಟುಕೊಳ್ಳುವುದು, (ಮಾಲೆ) ತಾವರೆ ಮಣಿಗಳ ಸರವನ್ನು ಹಾಕಿಕೊಳ್ಳುವುದು ಮತ್ತು ಐದನೆಯದಾಗಿ, ಮಂತ್ರ) "ಓನ್ನಮೋ ನಾರಾಯಣಾಯ" ಈ ಮಂತ್ರವನ್ನು ಇವರು ಸಾಧಾರಣ ಮನುಷ್ಯರಿಗಾಗಿ ಮಾಡಿದ್ದಾರೆ. ಮತ್ತು,

ಶ್ರೀಮನ್ನಾರಾಯಣಚರಣಂ ಶರಣಂ ಪ್ರಪದ್ಯೇ ॥೧॥
ಶ್ರೀಮತೇ ನಾರಾಯಣಾಯ ನಮಃ ॥೨॥
ಶ್ರೀಮತೇ ರಾಮಾನುಜಾಯ ನಮಃ ॥೩॥

ಈ ಮೊದಲಾದ ಮಂತ್ರಗಳನ್ನು ಧನಾಢ್ಯರಿಗಾಗಿಯೂ, ಮಾನನೀಯರಿಗಾಗಿಯೂ ಮಾಡಿಟ್ಟಿದ್ದಾರೆ. ನೋಡಿರಿ. ಇದೂ ಒಂದು ಅಂಗಡಿಯೇ ಆಯಿತು. ಎಂತಹ ಮುಖವೋ ಅಂತಹ ತಿಲಕ! ಚಕ್ರಾಂಕಿತರು ಈ ಪಂಚಸಂಸ್ಕಾರಗಳನ್ನು ಮುಕ್ತಿಯ ಹೇತುಗಳೆಂದು ಒಪ್ಪುತ್ತಾರೆ. ಈ ಮಂತ್ರಗಳ ಅರ್ಥವೇನೆಂದರೆ:—"ನಾನು ನಾರಾಯಣನಿಗೆ ನಮಸ್ಕಾರ ಮಾಡುತ್ತೇನೆ ॥೧॥ ನಾನು ಲಕ್ಷ್ಮೀಸಮೇತನಾದ ನಾರಾಯಣನ ಚರಣಾರವಿಂದಗಳ ಶರಣುಹೊಂದುತ್ತೇನೆ. ಮತ್ತು ಶ್ರೀಯುಕ್ತ ನಾರಾಯಣನಿಗೆ ನಮಸ್ಕಾರಮಾಡುತ್ತೇನೆ. ಅಂದರೆ ಶೋಭಾಯುಕ್ತನಾದ ನಾರಾಯಣನಿಗೆ ನನ್ನ ನಮಸ್ಕಾರ ॥೨॥ ಎಂದಿರುತ್ತದೆ. ವಾಮಮಾರ್ಗಿಗಳು ಪಂಚಮಕಾರಗಳನ್ನು ಒಪ್ಪುವಂತೆಯೇ ಚಕ್ರಾಂಕಿತರು ಪಂಚಸಂಸ್ಕಾರಗಳನ್ನು ಒಪ್ಪುತ್ತಾರೆ. ಮತ್ತು ತಮ್ಮ ಶಂಖ–ಚಕ್ರದಿಂದ ಸುಡಿಸಿಕೊಳ್ಳುವುದಕ್ಕೋಸ್ಕರ ಕೊಡುವ ವೇದಮಂತ್ರಪ್ರಮಾಣದ ಪಾಠ ಮತ್ತು ಅರ್ಥ ಹೀಗಿದೆ.

ಪವಿತ್ರಂ ತೇ ವಿತತಂ ಬ್ರಹ್ಮಣಸ್ಪತೇ ಪ್ರಭುರ್ಗಾತ್ರಾಣಿ
ಪರ್ಯೇಷಿ ವಿಶ್ವತಃ ।

ಅತಪ್ತತನೂರ್ನ ತದಾಮೋ ಅಶ್ನುತೇ ಶೃತಾಸ
ಇದ್ವಹನ್ತ್ಸ್ತತ್ಸಮಾಶತ ॥೧॥
ತಪೋಷ್ಪವಿತ್ರಂ ವಿತತಂ ದಿವಸ್ಪದೇ ॥೨॥

[ಋ, ಮಂ ೯. ಸೂ ೮೩. ಮಂ, ೧-೨]

ಓ ಬ್ರಹ್ಮಾಂಡವನ್ನೂ, ವೇದಗಳನ್ನೂ ಕಾಪಾಡುವ ಪ್ರಭುವೇ! ಸರ್ವಸಾಮರ್ಥ್ಯಯುಕ್ತ, ಸರ್ವಶಕ್ತಿವಂತನಾದ ನೀನು ನಿನ್ನ ವ್ಯಾಪ್ತಿಯಿಂದ ಪ್ರಪಂಚದ ಎಲ್ಲಾ ಅವಯವಗಳನ್ನೂ ವ್ಯಾಪ್ತಗೊಳಿಸಿದ್ದೀಯೆ. ಆ ನಿನ್ನ ಯಾವ ವ್ಯಾಪಕವೂ ಪವಿತ್ರವೂ ಆದ ಸ್ವರೂಪವಿದೆಯೋ, ಆ ನಿನ್ನ ಸ್ವರೂಪವನ್ನು, ಬ್ರಹ್ಮಚರ್ಯೆ, ಸತ್ಯಭಾಷಣ, ಶಮ, ದಮ, ಯೋಗಾಭ್ಯಾಸ, ಇಂದ್ರಿಯನಿಗ್ರಹ, ಸತ್ಪುರುಷರ ಸಂಗ ಮೊದಲಾದ ತಪಸ್ಚರ್ಯೆಯಿಲ್ಲದ, ಅಪರಿಪಕ್ವವಾದ ಆತ್ಮ ಮತ್ತು ಅಂತಃಕರಣವುಳ್ಳವನು ಹೊಂದುವುದಿಲ್ಲ. ಮತ್ತು ಮೇಲೆ ಹೇಳಿದ ತಪಸ್ಸಿನಿಂದ ಶುದ್ಧರಾದವರೇ ಈ ತಪಸ್ಸನ್ನಾಚರಿಸುತ್ತಾ ನಿನ್ನ ಶುದ್ಧ ಸ್ವರೂಪವನ್ನು ಉತ್ತಮರೀತಿಯಿಂದ ಹೊಂದುತ್ತಾರೆ. ॥೧॥ ಪ್ರಕಾಶಸ್ವರೂಪನಾದ ಪರಮಾತ್ಮನ ಸೃಷ್ಟಿಯಲ್ಲಿ ಪವಿತ್ರಾಚರಣೆಯೆಂಬ ತಪಸ್ಸನ್ನು ಮಾಡುವವರೇ ಪರಮಾತ್ಮನನ್ನು ಹೊಂದುವುದಕ್ಕೆ ಅರ್ಹರಾಗುತ್ತಾರೆ. ॥೨॥

ಈಗ ಯೋಚಿಸಿರಿ ಶ್ರೀ ರಾಮಾನುಜೀಯಾದಿ ವೈಷ್ಣವರು ಈ ಮಂತ್ರದಿಂದ ಚಕ್ರಾಂಕಿತರಾಗುವುದನ್ನು ಹೇಗೆ ಸಿದ್ಧಪಡಿಸುತ್ತಾರೆ? ಒಳ್ಳೆಯದು, ಅವರು ವಿದ್ವಾಂಸರಾಗಿದ್ದರೋ ಅವಿದ್ವಾಂಸರಾಗಿದ್ದರೋ ಹೇಳಿರಿ. ಅವರು ವಿದ್ವಾಂಸರಾಗಿದ್ದರು-ಎನ್ನುವಿರಾದರೆ, ಈ ಮಂತ್ರಕ್ಕೆ ಇಂತಹ ಅಸಂಭವವಾದ ಅರ್ಥವನ್ನು ಏಕೆ ಮಾಡುತ್ತಿದ್ದರು? ಏಕೆಂದರೆ ಈ ಮಂತ್ರದಲ್ಲಿ 'ಅತಪ್ತ ತನೂಃ' ಎಂಬ ಶಬ್ದವಿದೆ; "ಅತಪ್ತ ಭುಜ್ಯೈಕದೇಶಃ" ಎಂದಿಲ್ಲ. ಮತ್ತೆ 'ಅತಪ್ತ ತನೂಃ" ಎಂಬುದು ನಖದಿಂದ ಹಿಡಿದು ಶಿಖೆಯ ಕೊನೆಯವರೆಗಿನ ಸಮುದಾಯದ ವಾಚಕವಾಗಿರುತ್ತದೆ. ಈ ಪ್ರಮಾಣದಿಂದ ಚಕ್ರಾಂಕಿತರು ಅಗ್ನಿಯಿಂದಲೇ ಸುಡಬೇಕೆಂಬುದನ್ನು ಸ್ವೀಕರಿಸುವುದಾದರೆ, ಅವರು ತಮ್ಮ ಶರೀರ

ವೆಲ್ಲವನ್ನು ಭಟ್ಟಿಯೊಳಕ್ಕೆಸೆದು ಸುಡಿಸಿಕೊಳ್ಳಬೇಕು. ಇಷ್ಟಾದರೂ ಈ ಮಂತ್ರಾರ್ಥಕ್ಕೆ ವಿರುದ್ಧವೇ. ಏಕೆಂದರೆ—ಈ ಮಂತ್ರದಲ್ಲಿ ಸತ್ಯ ಭಾಷಣ ಮೊದಲಾದ ಪವಿತ್ರಕರ್ಮಗಳನ್ನು ಮಾಡುವುದು ತಪವೆಂದು ಗ್ರಹಿಸಲಾಗಿದೆ.

ಋತಂ ತಪಃ ಸತ್ಯಂ ತಪಃ ಶ್ರುತಂ ತಪಃ ಶಾಂತಂ ತಪೋ ದಮಸ್ತಪಃ ಸ್ವಾಧ್ಯಾಯಸ್ತಪಃ ॥

[ತೈತ್ತಿರೀಯ, ಪ್ರಪಾಠಕ ೧೦, ಅ. ೮]

ಈ ಮೊದಲಾದುವು ತಪವೆನಿಸುತ್ತವೆ.—ಅಂದರೆ (ಋತಂ ತಪಃ) ಯಥಾರ್ಥವಾದ ಶುದ್ಧಭಾವ, ಸತ್ಯವನ್ನು ಒಪ್ಪುವುದು, ಸತ್ಯವನ್ನಾಡುವುದು, ಸತ್ಯವನ್ನು ಆಚರಿಸುವುದು, ಮನಸ್ಸನ್ನು ಅಧರ್ಮದ ಕಡೆಗೆ ಬಿಡದಿರುವುದು, ಹೊರಗಿನ ಇಂದ್ರಿಯಗಳನ್ನು ಅನ್ಯಾಯಾಚರಣೆಗಳ ಕಡೆ ಹೋಗದಂತೆ ತಡೆಯುವುದು, ಅಂದರೆ ಶರೀರ, ಇಂದ್ರಿಯ ಮತ್ತು ಮನಸ್ಸಿನಿಂದ ಶುಭಕರ್ಮಗಳನ್ನು ಆಚರಿಸುವುದು, ವೇದಾದಿ ಸತ್ಯ ವಿದ್ಯೆಗಳನ್ನು ಓದುವುದು–ಓದಿಸುವುದು, ವೇದಾನುಸಾರ ಆಚರಿಸುವುದು–ಮೊದಲಾದ ಉತ್ತಮ ಧರ್ಮಯುಕ್ತ ಕರ್ಮಗಳಿಗೆ ತಪಸ್ಸೆಂದು ಹೆಸರು. ಲೋಹವನು ಕಾಯಿಸಿ ಚರ್ಮವನ್ನು ಸುಡಿಸಿಕೊಳ್ಳುವುದು ತಪಸ್ಸೆನಿಸಿಕೊಳ್ಳುವುದಿಲ್ಲ. ನೋಡಿರಿ! ಚಕ್ರಾಂಕಿತರು ತಮ್ಮನ್ನು ದೊಡ್ಡ ವೈಷ್ಣವರೆಂದು ತಿಳಿದುಕೊಂಡಿದ್ದಾರೆ. ಆದರೆ ಇವರು ತಮ್ಮ ಪರಂಪರೆ ಮತ್ತು ಕುಕರ್ಮಗಳ ಕಡೆ ನೋಡುವುದಿಲ್ಲ. ಮೊದಲು ಇವರ ಮೂಲಪುರುಷನು 'ಶಠಕೋಪ'. ಇವನ ವಿಷಯದಲ್ಲಿ ಚಕ್ರಾಂಕಿತರದೇ ಆದ ಗ್ರಂಥಗಳಲ್ಲಿಯೂ ನಾಭಾಡೂಮನು ಬರೆದ, "ಭಕ್ತಮಾಲ" ಗ್ರಂಥದಲ್ಲಿಯೂ ಹೀಗೆ ಬರೆದಿದೆ :—

"ವಿಕ್ರೀಯ ಶೂರ್ಪಂ ವಿಚಚಾರಯೋಗೀ" ಈ ಬಗೆಯ ವಚನಗಳು ಚಕ್ರಾಂಕಿತರ ಗ್ರಂಥಗಳಲ್ಲಿ ಬರೆಯಲ್ಪಟ್ಟವೆ. ಶಠಕೋಪ ಯೋಗಿಯು ಮೊರಗಳನ್ನು ಮಾಡಿ, ಮಾರುತ್ತಾ ತಿರುಗುತ್ತಿದ್ದನು. ಅಂದರೆ ಮೇದರ ಕುಲದಲ್ಲಿ ಹುಟ್ಟಿದ್ದನು. ಅವನು ಬ್ರಾಹ್ಮಣರಿಂದ ಓದಲು ಅಥವಾ ಕೇಳಲು ಅಪೇಕ್ಷಿಸಿರಬಹುದಾದ ಕಾಲದಲ್ಲಿ,

ಬ್ರಾಹ್ಮಣರು ತಿರಸ್ಕರಿಸಿರಬಹುದು. ಅವನು ಬ್ರಾಹ್ಮಣರ ವಿರುದ್ಧವಾಗಿ ಸಂಪ್ರದಾಯವನ್ನು, ತಿಲಕ ಚಕ್ರಾಂಕಿತ ಮೊದಲಾದ ಶಾಸ್ತ್ರವಿರುದ್ಧ ಮನಬಂದ ಮಾತುಗಳನ್ನೂ ಆರಂಭಿಸಿರಬಹುದು. ಚಾಂಡಾಲ ಕುಲದಲ್ಲಿ ಹುಟ್ಟಿದ ಮುನಿವಾಹನನು ಅವನ ಶಿಷ್ಯನಾಗಿದ್ದನು. ಯವನ ಕುಲದಲ್ಲಿ ಹುಟ್ಟಿದ ಯಾವನಾಚಾರ್ಯನು ಅವನು ಶಿಷ್ಯನಾಗಿದ್ದನು; ಕೆಲವರು ಅವನ ಹೆಸರನ್ನು ಪರಿವರ್ತಿಸಿ ಯಾಮುನಾಚಾರ್ಯನೆಂದೂ ಸಹ ಹೇಳುತ್ತಾರೆ. ಅವರ ಬಳಿಕ ಬ್ರಾಹ್ಮಣ ಕುಲೋತ್ಪನ್ನರಾದ ರಾಮಾನುಜರು ಚಕ್ರಾಂಕಿತರಾದರು. ಅವರಿಗೆ ಮೊದಲು ಕೆಲವು ಭಾಷ್ಯಾಗ್ರಂಥಗಳು ರಚಿತವಾಗಿದ್ದವು. ರಾಮಾನುಜರು ಸ್ವಲ್ಪ ಸಂಸ್ಕೃತ ಓದಿ, ಸಂಸ್ಕೃತದಲ್ಲಿ ಶ್ಲೋಕಬದ್ಧವಾದ ಗ್ರಂಥಗಳನ್ನು ಶಾರೀರಿಕ ಸೂತ್ರ ಮತ್ತು ಉಪನಿಷತ್ತುಗಳಿಗೆ ಶಂಕರಾಚಾರ್ಯರ ಟೀಕೆಗೆ ವಿರುದ್ಧವಾಗಿ ಟೀಕೆಯನ್ನು ಬರೆದರು. ಮತ್ತು ಶಂಕರಾಚಾರ್ಯರನ್ನು ಬಹುಮಟ್ಟಿಗೆ ನಿಂದಿಸಿದರು. 'ಅದ್ವೈತ' ಅಂದರೆ '' ಜೀವನೂ, ಬ್ರಹ್ಮನೂ ಒಂದೇ ಆಗಿದ್ದಾರೆ. ಬೇರೆ ಯಾವ ವಸ್ತುವೂ ವಾಸ್ತವಿಕವಲ್ಲ. ಜಗತ್ಪ್ರಪಂಚವೆಲ್ಲಾ ಮಿಥ್ಯಾ–ಮಾಯಾ ರೂಪವಾದುದು; ಅನಿತ್ಯವಾದುದು'' ಎಂಬ ಶಂಕರಾಚಾರ್ಯರ ಮತಕ್ಕೆ ವಿರುದ್ಧವಾಗಿ ಜೀವ, ಬ್ರಹ್ಮ ಮತ್ತು ಮಾಯೆ ಈ ಮೂರೂ ನಿತ್ಯವೆಂದು ರಾಮಾನುಜರ ಮತ. ಇಲ್ಲಿ ಶಂಕರಾಚಾರ್ಯರ ಮತವು ಅಂದರೆ ಬ್ರಹ್ಮನಲ್ಲದೆ ಜೀವ ಮತ್ತು ಕಾರಣ ವಸ್ತುವನ್ನು ಒಪ್ಪದಿರುವುದು ಒಳ್ಳೆಯದಲ್ಲ; ಮತ್ತು ಈ ಅಂಶದಲ್ಲಿ ರಾಮಾನುಜರು ವಿಶಿಷ್ಟಾದ್ವೈತ ಅಂದರೆ ಜೀವ–ಮಾಯಾ ಸಹಿತನಾದ ಪರಮೇಶ್ವರನು ಒಬ್ಬನೇ ಎಂದು ಈ ಮೂರನ್ನೊಪ್ಪುವುದು ಮತ್ತು ಅದ್ವೈತವೆಂದು ಹೇಳುವುದು ಸರ್ವಥಾ ವ್ಯರ್ಥ. ಮತ್ತು ಜೀವನು ಸರ್ವಥಾ ಈಶ್ವರಾಧೀನನು, ಪರತಂತ್ರನು ಎಂದು ಒಪ್ಪುವುದು, ಕಂಠಿ, ತಿಲಕ, ಮಾಲೆ, ಮೂರ್ತಿ ಪೂಜೆ ಮುಂತಾದ ಪಾಷಂಡಮತವನ್ನು ಪ್ರಸರಿಸುವುದು ಮೊದಲಾದ ಕೆಟ್ಟಚಾಳಿಗಳು ಚಕ್ರಾಂಕಿತ ಮೊದಲಾದವರಲ್ಲಿವೆ. ಚಕ್ರಾಂಕಿತಾದಿಗಳು ವೇದವಿರೋಧಿಗಳಾಗಿರುವಷ್ಟು ಶಂಕರಾಚಾರ್ಯರ ಮತದವರು ಆಗಿಲ್ಲ.

ಪ್ರಶ್ನೆ:—ಮೂರ್ತಿಪೂಜೆಯು ಎಲ್ಲಿಂದ ಆರಂಭವಾಯಿತು?

ಉತ್ತರ: ಜೈನರಿಂದ.

ಪ್ರಶ್ನೆ:—ಜೈನರು ಎಲ್ಲಿಂದ ಆರಂಭಿಸಿದರು?

ಉತ್ತರ:—ತಮ್ಮ ಮೂರ್ಖತನದಿಂದ.

ಪ್ರಶ್ನೆ:—ಶಾಂತವಾಗಿ ಧ್ಯಾನಾವಸ್ಥೆಯಲ್ಲಿ ಕುಳಿತುಕೊಂಡಿರುವ ವಿಗ್ರಹವನ್ನು ನೋಡಿ, ತಮ್ಮ ಜೀವರಿಗೂ ಸಹ ಹಾಗೆಯೇ ಶುಭ ಪರಿಣಾಮವುಂಟಾಗುವುದೆಂದು ಜೈನರು ಹೇಳುತ್ತಾರೆ.

ಉತ್ತರ:—ಜೀವನು ಚೇತನ; ಮತ್ತು ಮೂರ್ತಿಯು ಜಡ. ಜೀವನೂ ಮೂರ್ತಿಯಂತೆಯೇ ಜಡವಾಗಿ ಹೋಗುವನೆ? ಈ ಮೂರ್ತಿ ಪೂಜೆಯು ಕೇವಲ ಪಾಷಂಡಮತವಾಗಿರುತ್ತದೆ. ಇದನ್ನು ಜೈನರು ಪ್ರಸರಿಸಿದ್ದಾರೆ. ಆದುದರಿಂದ, ಇವರ ಖಂಡನೆಯನ್ನು ಹನ್ನೆರಡನೆಯ ಸಮುಲ್ಲಾಸದಲ್ಲಿ ಮಾಡುವೆವು.

ಪ್ರಶ್ನೆ:—ಶಾಕ್ತ ಮೊದಲಾದವರು ಮೂರ್ತಿಗಳಲ್ಲಿ ಜೈನರ ಅನುಕರಣಮಾಡಿಲ್ಲ. ಏಕೆಂದರೆ—ವೈಷ್ಣವಾದಿಗಳ ಮೂರ್ತಿಗಳು ಜೈನರ ಮೂರ್ತಿಗಳಂತಿಲ್ಲ.

ಉತ್ತರ:—ಹೌದು; ಇದು ಸರಿ. ಜೈನರಂತೆಯೇ ಮಾಡಿದ್ದರೆ, ಜೈನಮತದಲ್ಲಿಯೇ ಸೇರಿಹೋಗುತ್ತಿದ್ದರು. ಜೈನರ ವಿರೋಧ ಮಾಡುವುದು ಇವರ ಕಾರ್ಯವೂ, ಇವರನ್ನು ವಿರೋಧಿಸುವುದು ಮುಖ್ಯವಾಗಿ ಅವರ ಕಾರ್ಯವೂ ಆಗಿದ್ದುದರಿಂದ, ಜೈನವಿಗ್ರಹಗಳಿಗೆ ವಿರುದ್ಧವಾಗಿ ಮಾಡಿಕೊಂಡಿದ್ದಾರೆ. ಉದಾಹರಣೆಗಾಗಿ ಜೈನರು ಮೂರ್ತಿಗಳನ್ನು ಬೆತ್ತಲೆಯಾಗಿ, ಧ್ಯಾನಮಗ್ನರಾದ ವಿರಕ್ತಪುರುಷರಂತೆ ರಚಿಸಿರುವರು; ಆವರಿಗೆ ವಿರುದ್ಧವಾಗಿ ವೈಷ್ಣವಾದಿಗಳು ಯಥೇಷ್ಟ ಆಲಂಕಾರಸಹಿತವಾಗಿಯೂ, ಸ್ತ್ರೀ ಸಹಿತವಾಗಿಯೂ ರಂಗ-ರಾಗ-ಭೋಗಾದಿ ವಿಷಯಾಸಕ್ತಿಸಹಿತವಾಗಿಯೂ ಇರುವ ಆಕಾರವುಳ್ಳ, ಕುಳಿತ ಮತ್ತು ನಿಂತ ವಿಗ್ರಹಗಳನ್ನು ರಚಿಸಿರುತ್ತಾರೆ. ಜೈನರು ಶಂಖ, ಜಾಗಟೆ, ಘಂಟೆ ಮೊದಲಾದುವುಗಳನ್ನು ಹೆಚ್ಚಾಗಿ ಬಾರಿಸುವುದಿಲ್ಲ; ಇವರುಗಳು ಬಹಳ

ಕೋಲಾಹಲವನ್ನು ಎಬ್ಬಿಸುತ್ತಾರೆ. ಇಂತಹ ಲೀಲೆಗಳನ್ನು ರಚಿಸಿದುದರಿಂದಲೇ ವೈಷ್ಣವಾದಿ ಸಂಪ್ರದಾಯಿಗಳಾದ ಪೋಪರ ಶಿಷ್ಯರು, ಜೈನರ ಜಾಲದಿಂದ ದೂರವಾಗಿ ಇವರ ಲೀಲೆಗೆ ಬಂದು ಸಿಕ್ಕಿಕೊಂಡರು. ಮತ್ತು ವ್ಯಾಸ ಮೊದಲಾದ ಮಹರ್ಷಿಗಳ ಹೆಸರಿನಿಂದ ಮನಬಂದಂತೆ ಅಸಂಭವ ಗಾಥಾಯುಕ್ತವಾದ ಬಹಳ ಗ್ರಂಥಗಳನ್ನು ಬರೆದರು. ಅವಕ್ಕೆ ಪುರಾಣಗಳೆಂದು ಹೆಸರಿಟ್ಟು, ಕಥೆಗಳನ್ನು ಮಾಡತೊಡಗಿದರು. ಮತ್ತು ಆಮೇಲೆ ಎಂತೆಂತಹ ವಿಚಿತ್ರ ಮಾಯೆಗಳನ್ನು ರಚಿಸತೊಡಗಿದರೆಂದರೆ ಕಲ್ಲಿನ ವಿಗ್ರಹಗಳನ್ನು ಮಾಡಿಸಿ ಎಲ್ಲಿಯಾದರೂ ಬೆಟ್ಟ ಅಥವಾ ಕಾಡು ಮೊದಲಾದೆಡೆ ರಹಸ್ಯವಾಗಿ ಇಟ್ಟು ಬಂದರು. ಅಥವಾ ಭೂಮಿಯಲ್ಲಾದರೂ ಹುಗಿದಿಟ್ಟರು. ಬಳಿಕ ತಮ್ಮ ಶಿಷ್ಯರೊಡನೆ— "ಮಹಾದೇವ, ಪಾರ್ವತಿ, ರಾಧಾ ಕೃಷ್ಣ, ಸೀತಾ ರಾಮ, ಅಥವಾ ಲಕ್ಷ್ಮೀನಾರಾಯಣ ಮತ್ತು ಭೈರವ, ಹನುಮಂತ ಮೊದಲಾದವರು ನನಗೆ ರಾತ್ರಿ ಕನಸಿನಲ್ಲಿ ಬಂದು "ನಾವು ಇಂತಿಂತಹ ಸ್ಥಳಗಳಲ್ಲಿದ್ದೇವೆ. ನಮ್ಮನ್ನು ಅಲ್ಲಿಂದ ತಂದು, ದೇಗುಲದಲ್ಲಿ ಸ್ಥಾಪಿಸು. ಮತ್ತು ನೀನೇ ನಮ್ಮ ಪೂಜಾರಿಯಾದರೆ, ನಾವು ಮನೋವಾಂಛಿತ ಫಲವೀಯುವೆವು ಎಂದು ಹೇಳಿದ್ದಾರೆ" ಎಂಬುದಾಗಿ ಪ್ರಸಿದ್ಧ ಪಡಿಸಿದರು. ಕಣ್ಣಿನಿಂದ ಕುರುಡರಾದ ದುಡ್ಡಿನ ದೊಡ್ಡಪ್ಪಂದಿರು ಪೋಪರ ಲೀಲೆ ಕೇಳಿದಾಗ ನಿಜವೆಂದೇ ನಂಬಿದರು. ಮತ್ತು ಅವರನ್ನು 'ಇಂತಹ ಆ ಮೂರ್ತಿ ಎಲ್ಲಿದೆ?' ಎಂದು ಕೇಳಿದರು. ಆಗ ಪೋಪರು 'ಇಂತಹ ಬೆಟ್ಟ ಅಥವಾ ಕಾಡಿನಲ್ಲಿದೆ; ನನ್ನೊಡನೆ ನಡೆ; ತೋರಿಸುತ್ತೇನೆ' ಎಂದರು. ಆಗ ಆ ಕುರುಡರು ಆ ಧೂರ್ತರ ಸಂಗಡ ಅಲ್ಲಿ ಹೋಗಿ ನೋಡಿದರು. ಆಶ್ಚರ್ಯವಾಗಿ, ಆ ಪೋಪರ ಕಾಲಿಗೆರಗಿ, 'ಈ ದೇವತೆಯ ಕೃಪೆ ತಮ್ಮ ಮೇಲೆ ಬಹಳವಿದೆ. ಈಗ ತಾವು ತೆಗೆದುಕೊಂಡು ಬನ್ನಿರಿ. ನಾವು ಮಂದಿರವನ್ನು ಕಟ್ಟಿಸಿಕೊಡುತ್ತೇವೆ. ಅದರಲ್ಲಿ ಈ ವಿಗ್ರಹವನ್ನು ಸ್ಥಾಪಿಸಿ ತಾವೇ ಪೂಜೆಮಾಡಬೇಕು. ಮತ್ತು ನಾವೂ ಕೂಡ ಈ ಪ್ರತಾಪಶಾಲಿಯಾದ ದೇವತೆಯ ದರ್ಶನ-ಸ್ಪರ್ಶನಗಳನ್ನು ಮಾಡಿ, ಮನೋವಾಂಛಿತಫಲ ಪಡೆಯುವೆವು' ಎಂದು ಹೇಳಿದರು. ಹೀಗೆಯೇ ಒಬ್ಬನು ತನ್ನ ಲೀಲೆಯನ್ನು ನಡೆಸಿದಾಗ,

ಅದನ್ನು ನೋಡಿ, ಪೋಪರೆಲ್ಲರೂ ತಮ್ಮ ಹೊಟ್ಟೆಹೊರೆದುಕೊಳ್ಳುವುದಕ್ಕಾಗಿ ಫಲಕಪಟಗಳಿಂದ ಮೂರ್ತಿಗಳನ್ನು ಸ್ಥಾಪಿಸಿದರು.

ಪ್ರಶ್ನೆ :—ಪರಮೇಶ್ವರನು ನಿರಾಕಾರನಾಗಿರುವುದರಿಂದ ಅವನು ಧ್ಯಾನಕ್ಕೆ ಸಿಕ್ಕಲಾರನು. ಆದುದರಿಂದ ವಿಗ್ರಹವು ಅವಶ್ಯವಾಗಿ ಇರಬೇಕು. ಒಳ್ಳೆಯದು, ಏನು ಮಾಡದಿದ್ದರೂ ಆ ವಿಗ್ರಹದ ಸಮೀಪಕ್ಕೆ ಹೋಗಿ ಕೈಮುಗಿದು ಪರಮಾತ್ಮನನ್ನು ಸ್ಮರಿಸುತ್ತಾರೆ; ಮತ್ತು ಅವನ ಹೆಸರನ್ನು ಹೇಳುತ್ತಾರೆ. ಇದರಲ್ಲಿ ಹಾನಿಯೇನು?

ಉತ್ತರ :—ಪರಮಾತ್ಮನು ನಿರಾಕಾರನೂ, ಸರ್ವವ್ಯಾಪಕನೂ ಆಗಿರುವಾಗ, ಅತನ ವಿಗ್ರಹವೇ ಆಗಲಾರದು. ವಿಗ್ರಹವನ್ನು ನೋಡಿದ ಮಾತ್ರದಿಂದ ಪರಮಾತ್ಮನ ಸ್ಮರಣೆಯಾಗುವುದಾದರೆ, ಪರಮಾತ್ಮನು ಯಾವುದರಲ್ಲಿ ತನ್ನ ಅದ್ಭುತ ರಚನೆಯನ್ನು ತೋರಿಸಿದ್ದಾನೋ, ಅಂತಹ ಪರಮೇಶ್ವರ ರಚಿತವಾದ ಪೃಥಿವಿ, ಅಗ್ನಿ, ವಾಯು, ವನಸ್ಪತಿ ಮೊದಲಾದ ಪದಾರ್ಥಗಳನ್ನೂ, ಮತ್ತು ಯಾವುದರಿಂದ ಮನುಷ್ಯರು ರಚಿಸುವ ಮೂರ್ತಿಗಳಾಗುತ್ತವೆಯೋ, ಅಂತಹ ರಚನಾಯುಕ್ತವಾದ, ಈಶ್ವರಕೃತವಾದ ಪೃಥಿವಿ, ಪರ್ವತ ಮೊದಲಾದ ಮಹಾಮೂರ್ತಿಗಳನ್ನೂ ನೋಡಿ, ಪರಮಾತ್ಮನು ಸ್ಮರಣೆಯಾಗಲಾರದೋ? ಮೂರ್ತಿಯನ್ನು ನೋಡುವುದರಿಂದ ಪರಮಾತ್ಮನ ಸ್ಮರಣೆಯಾಗುತ್ತದೆಂಬ ನಿಮ್ಮ ಹೇಳಿಕೆ ಸರ್ವಥಾ ಸುಳ್ಳಿರುತ್ತದೆ. ಮತ್ತು ಆ ವಿಗ್ರಹವು ಎದುರಿಗಿಲ್ಲದಿರುವಾಗ ಪರಮಾತ್ಮನ ಸ್ಮರಣೆ ಆಗದಿರುವುದರಿಂದ ಮನುಷ್ಯನು ಏಕಾಂತವನ್ನು ಹೊಂದಿ, ಕಳವು, ವ್ಯಭಿಚಾರ ಮೊದಲಾದ ಕುಕರ್ಮಗಳನ್ನು ಮಾಡುವುದರಲ್ಲಿಯೂ ಪ್ರವೃತ್ತನಾಗಬಹುದು! ಏಕೆಂದರೆ, ಈ ಸಮಯದಲ್ಲಿ ಇಲ್ಲಿ ಯಾರೂ ನನ್ನನ್ನು ನೋಡುವುದಿಲ್ಲವೆಂದು ಅವನು ತಿಳಿಯುತ್ತಾನೆ; ಆದುದರಿಂದ ಅವನು ಅನರ್ಥ ಮಾಡದೆ ಬಿಡುವುದಿಲ್ಲ. ಈ ಮೊದಲಾದ ಅನೇಕ ದೋಷಗಳು ಪಾಷಾಣಾದಿ ಮೂರ್ತಿಪೂಜೆ ಮಾಡುವುದರಲ್ಲಿ ಸಿದ್ಧವಾಗುತ್ತವೆ. ಈಗ ನೋಡಿರಿ! ಈ ಜಡಮೂರ್ತಿಗಳನ್ನು ಒಪ್ಪದೆ ಯಾವಾಗಲೂ ಸರ್ವವ್ಯಾಪಕನೂ, ಸರ್ವಾಂತರ್ಯಾಮಿಯೂ, ನ್ಯಾಯಕಾರಿಯೂ ಆದ ಪರಮಾತ್ಮನು ಎಲ್ಲೆಲ್ಲಿಯೂ ಇರುವನೆಂದು ತಿಳಿಯುವ ಮತ್ತು ಒಪ್ಪುವ ಪುರುಷನು,

ಪರಮಾತ್ಮನನ್ನು ಯಾವಾಗಲೂ ಎಲ್ಲೆಡೆಯೂ ಎಲ್ಲರ ಒಳ್ಳೆಯ ಮತ್ತು ಕೆಟ್ಟ ಕಾರ್ಯಗಳ ದ್ರಷ್ಟನೆಂದು ತಿಳಿದು, ಒಂದು ಕ್ಷಣವೂ ಸಹ ತನ್ನನ್ನು ಪರಮಾತ್ಮನಿಂದ ದೂರನೆಂದು ತಿಳಿಯದೆ, ದುಷ್ಕರ್ಮ ಮಾಡುವುದಂತಿರಲಿ, ಮನಸ್ಸಿನಲ್ಲಿಯೂ ಸಹ ಕುಚೇಷ್ಟೆ ಮಾಡ ಲಾರನು. ಏಕೆಂದರೆ, '' ನಾನು ಮನಸ್ಸು, ವಾಕ್ಕು ಮತ್ತು ಶರೀರ ದಿಂದ ಏನಾದರೂ ಕೆಟ್ಟಕೆಲಸ ಮಾಡುವೆನಾದರೆ, ಈ ಅಂತರ್ಯಾಮಿಯ ನ್ಯಾಯಕ್ಕೆ ಅನುಸಾರವಾಗಿ ಶಿಕ್ಷೆಹೊಂದದೆ ಇರೆನು '' ಎಂದು ತಿಳಿಯು ತ್ತಾನೆ. ' ಸಕ್ಕರೆ ' ' ಸಕ್ಕರೆ ' ಎಂದು ಹೇಳುವುದರಿಂದ ಬಾಯಿ ಸಿಹಿಯೂ, ' ಬೇವಿನಸೊಪ್ಪು ' ' ಬೇವಿನಸೊಪ್ಪು ' ಎಂದು ಹೇಳುವುದ ರಿಂದ ಕಹಿಯೂ ಆಗದೆ, ನಾಲಿಗೆಯಿಂದ ಸವಿಯುವುದರಿಂದಲೇ ಸಿಹಿ ಅಥವಾ ಕಹಿ ತಿಳಿಯಲ್ಪಡುವಂತೆ, ನಾಮಸ್ಮರಣಮಾತ್ರದಿಂದ ಯಾವ ಫಲವೂ ಉಂಟಾಗುವುದಿಲ್ಲ.

ಪ್ರಶ್ನೆ:—ಪುರಾಣಗಳಲ್ಲಿ ಎಲ್ಲೆಲ್ಲಿಯೂ ನಾಮಸ್ಮರಣೆಯ ಮಹಿಮೆ ಬಹಳವಾಗಿ ಬರೆದಿದೆ. ನಾಮೋಚ್ಚಾರಣೆಯು ಸರ್ವಥಾ ಸುಳ್ಳೇನು?

ಉತ್ತರ:—ನಿನ್ನ ನಾಮಸ್ಮರಣೆಯ ರೀತಿಯು ಉತ್ತಮವಲ್ಲ ನೀವು ನಾಮಸ್ಮರಣಮಾಡುವ ರೀತಿ ಸುಳ್ಳು.

ಪ್ರಶ್ನೆ:—ನಮ್ಮ ರೀತಿಯು ಎಂತಹುದಾಗಿದೆ?

ಉತ್ತರ:—ವೇದವಿರುದ್ಧ.

ಪ್ರಶ್ನೆ:—ಒಳ್ಳೆಯದು! ನೀವು ನಮಗೆ ವೇದೋಕ್ತವಾದ ನಾಮಸ್ಮರಣೆಯ ರೀತಿಯನ್ನು ತಿಳಿಸಿರಿ.

ಉತ್ತರ:—ನಾಮಸ್ಮರಣವನ್ನು ಈ ರೀತಿ ಮಾಡಬೇಕು:—

' ನ್ಯಾಯಕಾರಿ ' ಎಂಬುದು ಪರಮಾತ್ಮನ ಒಂದು ಹೆಸರು. ಪರಮಾತ್ಮನು ಪಕ್ಷಪಾತರಹಿತನಾಗಿ, ಎಲ್ಲರಿಗೂ ಯಥಾವತ್ತಾಗಿ ನ್ಯಾಯವನ್ನು ಮಾಡುತ್ತಿರುವಂತೆ, ಅದನ್ನು ಗ್ರಹಿಸಿ ಸದಾ ನ್ಯಾಯ ಯುಕ್ತವಾದ ವ್ಯವಹಾರಮಾಡುವುದು, ಅನ್ಯಾಯವನ್ನೆಂದೂ ಮಾಡ

ದಿರುವುದು—ಇದು ಈ ಹೆಸರಿನಿಂದ ಅರಿಯಬೇಕಾದ ಅರ್ಥ. ಈ ರೀತಿ ಒಂದೇ ಹೆಸರಿನಿಂದಲೂ ಮನುಷ್ಯನಿಗೆ ಕಲ್ಯಾಣವಾಗಬಲ್ಲದು.

ಪ್ರಶ್ನೆ:—ಪರಮಾತ್ಮನು ನಿರಾಕಾರನೆಂಬುದನ್ನು ನಾವೂ ಬಲ್ಲೆವು. ಆದರೆ ಆತನು ಶಿವ, ವಿಷ್ಣು, ಗಣೇಶ, ಸೂರ್ಯ ಮೊದಲಾದ ಶರೀರಗಳನ್ನು ಧರಿಸಿ, ರಾಮ, ಕೃಷ್ಣ ಮೊದಲಾದ ಅವತಾರಗಳನ್ನೆತ್ತಿದನು. ಆದುದರಿಂದ ಅವನ ವಿಗ್ರಹ ಆಗುತ್ತದೆ. ಈ ಮಾತೂ ಸುಳ್ಳೆ?

ಉತ್ತರ:—ಹೌದು, ಹೌದು, ಸುಳ್ಳು. ಏಕೆಂದರೆ—'ಅಜ ಏಕ ಪಾತ್' 'ಅಕಾಯಂ' ಮೊದಲಾದ ವಿಶೇಷಣಗಳಿಂದ ಪರಮಾತ್ಮನು ಹುಟ್ಟು-ಸಾವುಗಳಿಂದ ಮತ್ತು ಶರೀರಧಾರಣೆಯಿಂದ ರಹಿತನೆಂದು ವೇದಗಳಲ್ಲಿ ಹೇಳಿದೆ. ಮತ್ತು ಯುಕ್ತಿಯಿಂದಲೂ ಕೂಡ ಪರಮಾತ್ಮನ ಅವತಾರವು ಎಂದಿಗೂ ಆಗಲಾರದು. ಏಕೆಂದರೆ—ಆಕಾಶದಂತೆ ಸರ್ವತ್ರವ್ಯಾಪಕನೂ, ಅನಂತನೂ, ಸುಖ, ದುಃಖ, ದೃಶ್ಯ ಮೊದಲಾದ ಗುಣಗಳಿಲ್ಲದವನೂ ಆದ ಆತನು ಒಂದು ಸಣ್ಣ ವೀರ್ಯದಲ್ಲಿಯೂ, ಗರ್ಭಾಶಯದಲ್ಲಿಯೂ, ಶರೀರದಲ್ಲಿಯೂ ಹೇಗೆ ಬರಬಲ್ಲನು? ಯಾವನು ಏಕದೇಶೀಯನೋ ಆತನೇ ಬರುತ್ತಾನೆ; ಹೋಗುತ್ತಾನೆ. ಮತ್ತು ಯಾವನು ಅಚಲನೂ, ಅದೃಶ್ಯನೂ ಆಗಿದ್ದಾನೋ, ಯಾವನಿಂದ ಒಂದು ಪರಮಾಣುವೂ, ರಿಕ್ತವಾಗಿಲ್ಲವೋ, ಅವನ ಅವತಾರವಾಗುವುದೆಂಬುದು ಬಂಜೆಯ ಮಗನಿಗೆ ಮದುವೆ ಮಾಡಿ ಅವಳ ಮೊಮ್ಮೊಗನನ್ನು ನೋಡುವ ಮಾತಿನಂತಿದೆ.

ಪ್ರಶ್ನೆ:—ಪರಮಾತ್ಮನು ವ್ಯಾಪಕನಾಗಿರುವುದರಿಂದ ವಿಗ್ರಹದಲ್ಲಿಯೂ ಸಹ ಇರುತ್ತಾನೆ. ಮತ್ತೆ ಯಾವ ವಸ್ತುವನ್ನಾಗಲಿ ಭಾವನೆ ಮಾಡಿ ಪೂಜಿಸುವುದು ಒಳ್ಳೆಯದೇಕಲ್ಲ? ನೋಡಿರಿ:—

ನ ಕಾಷ್ಠೇ ವಿದ್ಯತೇ ದೇವೋ ನ ಪಾಷಾಣೇ ನ ಮೃಣ್ಮಯೇ।
ಭಾವೇ ಹಿ ವಿದ್ಯತೇ ದೇವಸ್ತಸ್ಮಾದ್ಭಾವೋ ಹಿ ಕಾರಣಮ್ ॥

ಪರಮಾತ್ಮ ದೇವನು ಕಟ್ಟಿಗೆಯಲ್ಲಿಲ್ಲ; ಕಲ್ಲಿನಲ್ಲಿಲ್ಲ; ಮಣ್ಣು ಮೊದಲಾದುವುಗಳಿಂದ ಮಾಡಿದ ಪದಾರ್ಥಗಳಲ್ಲಿಲ್ಲ; ಆದರೆ ಪರಮೇ

ಶ್ವರನಾದರೋ ಭಾವನೆಯಲ್ಲಿರುತ್ತಾನೆ. ಎಲ್ಲಿ ಭಾವನೆಮಾಡುವೆವೋ, ಅಲ್ಲಿಯೇ ಪರಮಾತ್ಮನು ಸಿದ್ಧನಾಗುತ್ತಾನೆ.

ಉತ್ತರ:—ಪರಮಾತ್ಮನು ಎಲ್ಲೆಲ್ಲಿಯೂ ವ್ಯಾಪಿಸಿರುವಾಗ, ಯಾವುದೋ ಒಂದು ವಸ್ತುವಿನಲ್ಲಿ ಮಾತ್ರ ಆತನ ಭಾವನೆಯನ್ನು ಮಾಡುವುದೂ, ಉಳಿದಕಡೆ ಮಾಡದಿರುವುದೂ ಬಬ್ಬ ಚಕ್ರವರ್ತಿಯನ್ನು ಸರ್ವರಾಜ್ಯಾಧಿಕಾರದಿಂದ ಚ್ಯುತಗೊಳಿಸಿ, ಒಂದು ಚಿಕ್ಕ ಗುಡಿಸಿಲಿನ ಯಜಮಾನನೆಂದು ಭಾವಿಸುವಂತಹ ಮಾತಾಗಿದೆ. ಇದೆಷ್ಟು ದೊಡ್ಡ ಅಪಮಾನವೋ ನೋಡಿರಿ. ಹಾಗೆಯೇ ನೀವು ಪರಮಾತ್ಮನನ್ನು ಸಹ ಅಪಮಾನ ಪಡಿಸುತ್ತೀರಿ! ವ್ಯಾಪಕನೆಂದು ಒಪ್ಪುವಿರಾದರೆ, ತೋಟಗಳಿಂದ ಪತ್ರ-ಪುಷ್ಪಗಳನ್ನು ಕಿತ್ತುತಂದು, ಏಕೆ ಏರಿಸುತ್ತೀರಿ! ಗಂಧವನ್ನು ತೇದು, ಏಕೆ ಬಳಿಯುತ್ತೀರಿ? ಧೂಪ ಹೊತ್ತಿಸಿ ಏಕೆ ಅರ್ಪಿಸುತ್ತೀರಿ? ಘಂಟೆ, ಜಾಗಟೆ, ತಾಳ, ನಗಾರಿ-ಮೊದಲಾದುವುಗಳನ್ನು ಏಕೆ ಬಾರಿಸುತ್ತೀರಿ? ನಿಮ್ಮ ಕೈಗಳಲ್ಲಿ ಇದ್ದಾನೆ; ಏಕೆ ಜೋಡಿಸುತ್ತೀರಿ? ತಲೆಯಲ್ಲಿ ಇದ್ದಾನೆ; ತಲೆಯನ್ನೇಕೆ ಬಗ್ಗಿಸುತ್ತೀರಿ? ಅನ್ನ, ನೀರು ಮೊದಲಾದುವುಗಳಲ್ಲಿ ಇದ್ದಾನೆ; ಏಕೆ ನೈವೇದ್ಯವಿಡುತ್ತೀರಿ? ನೀರಿನಲ್ಲಿದ್ದಾನೆ; ಸ್ನಾನವನ್ನೇಕೆ ಮಾಡಿಸುತ್ತೀರಿ? ಆ ಎಲ್ಲಾ ವಸ್ತುಗಳಲ್ಲಿಯೂ ಪರಮಾತ್ಮನು ವ್ಯಾಪಕನಾಗಿದ್ದಾನೆ. ಮತ್ತು ನೀವು ವ್ಯಾಪಕನನ್ನು ಪೂಜಿಸುತ್ತೀರೋ, ಅಥವಾ ವ್ಯಾಪ್ಯವನ್ನೋ? ವ್ಯಾಪಕವನ್ನು ಪೂಜಿಸುತ್ತೀರಾದರೆ, ಕಲ್ಲು, ಮರ ಮೊದಲಾದುವುಗಳ ಮೇಲೆ ಚಂದನಪುಷ್ಪಾದಿಗಳನ್ನೇಕೆ ಏರಿಸುತ್ತೀರಿ? ಮತ್ತು ವ್ಯಾಪ್ಯದ ಪೂಜೆಮಾಡುತ್ತೀರಾದರೆ, ನಾವು ಪರಮೇಶ್ವರನ ಪೂಜೆ ಮಾಡುತ್ತೇವೆಂದು ಸುಳ್ಳೇಕೆ ಹೇಳುತ್ತೀರಿ? ನಾವು ಕಲ್ಲು ಮೊದಲಾದುವುಗಳ ಪೂಜಾರಿಗಳೆಂದು ಸತ್ಯವನ್ನೇಕೆ ಹೇಳುವುದಿಲ್ಲ? ಇನ್ನು 'ಭಾವ'ವು ಸತ್ಯವೋ ಅಥವಾ ಸುಳ್ಳೋ ಹೇಳಿರಿ. ಸತ್ಯವೆನ್ನುವಿರಾದರೆ ನಿಮ್ಮ ಭಾವಕ್ಕೆ ಅಧೀನನಾಗಿ ಪರಮಾತ್ಮನು ಬದ್ಧನಾಗಿ ಹೋಗುವನು. ಮತ್ತು ನೀವು ಮಣ್ಣಿನಲ್ಲಿ ಚಿನ್ನ, ಬೆಳ್ಳಿ ಮೊದಲಾದುವುಗಳನ್ನೂ, ಕಲ್ಲಿನಲ್ಲಿ ವ್ರಜ್ರ, ಪಚ್ಚೆ ಮೊದಲಾದುವನ್ನೂ, ಸಮುದ್ರದ ನೊರೆಯಲ್ಲಿ ಮುತ್ತನ್ನೂ, ನೀರಿನಲ್ಲಿ ತುಪ್ಪ, ಹಾಲು,

ಮೊಸರು ಮೊದಲಾದುವನ್ನೂ, ಮತ್ತು ಧೂಳಿನಲ್ಲಿ ಹಿಟ್ಟು, ಸಕ್ಕರೆ ಮೊದಲಾದುವನ್ನೂ ಭಾವಿಸಿ ಅವನ್ನು ಹಾಗೇಕೆ ಮಾರ್ಪಡಿಸುವುದಿಲ್ಲ? ನೀವು ದುಃಖದ ಭಾವನೆಯನ್ನೆಂದೂ ಮಾಡುವುದಿಲ್ಲ; ಅದೇಕೆ ಉಂಟಾಗುತ್ತದೆ? ಮತ್ತು ಸುಖದ ಭಾವನೆಯನ್ನು ಯಾವಾಗಲೂ ಮಾಡುತ್ತೀರಿ; ಅದೇಕೆ ಸಿಕ್ಕುವುದಿಲ್ಲ? ಕುರುಡನು ಕಣ್ಣಿನ ಭಾವನೆ ಮಾಡಿಕೊಂಡು ನೋಡುವುದಿಲ್ಲವೇಕೆ? ಸಾಯುವ ಭಾವನೆ ಮಾಡುವುದಿಲ್ಲ; ಸತ್ತೇಕೆ ಹೋಗುತ್ತೀರಿ? ಆದುದರಿಂದ ನಿಮ್ಮ ಭಾವನೆಯು ನಿಜವಲ್ಲ. ಏಕೆಂದರೆ—ಯಾವುದು ಹೇಗಿದೆಯೋ, ಅದನ್ನು ಹಾಗೆಯೇ ತಿಳಿಯುವುದಕ್ಕೆ ಭಾವನೆಯೆಂದು ಹೆಸರು. ಹೇಗೆಂದರೆ—ಬೆಂಕಿಯನ್ನು ಬೆಂಕಿಯೆಂದೂ, ನೀರನ್ನು ನೀರೆಂದೂ ತಿಳಿಯುವುದು ಭಾವನೆ. ಮತ್ತು ಬೆಂಕಿಯನ್ನು ನೀರೆಂದೂ, ನೀರನ್ನು ಬೆಂಕಿಯೆಂದೂ ತಿಳಿಯುವುದು ಅಭಾವನೆ. ಏಕೆಂದರೆ—ಯಾವುದು ಹೇಗಿದೆಯೋ, ಅದನ್ನು ಹಾಗೆ ತಿಳಿದುಕೊಳ್ಳುವುದು ಜ್ಞಾನ, ಮತ್ತು ವಿರುದ್ಧವಾಗಿ ತಿಳಿದುಕೊಳ್ಳುವುದು ಅಜ್ಞಾನ. ಈ ಕಾರಣದಿಂದ ನೀವು ಅಭಾವನೆಯನ್ನು ಭಾವನೆಯೆಂದೂ ಭಾವನೆಯನ್ನು ಅಭಾವನೆಯೆಂದೂ ಹೇಳುತ್ತೀರಿ.

ಪ್ರಶ್ನೆ :—ಸ್ವಾಮೀ! ವೇದಮಂತ್ರಗಳಿಂದ ಆವಾಹನೆಯನ್ನು ಮಾಡುವವರೆಗೂ ದೇವತೆಯು ಬರುವುದಿಲ್ಲ. ಮತ್ತು ಆವಾಹನೆಯನ್ನು ಮಾಡುವುದರಿಂದ ಕೂಡಲೇ ಬರುತ್ತದೆ. ಮತ್ತು ವಿಸರ್ಜನೆಯನ್ನು ಮಾಡುವುದರಿಂದ ಹೊರಟುಹೋಗುತ್ತದೆ.

ಉತ್ತರ :—ಮಂತ್ರವನ್ನು ಹೇಳಿ ಆವಾಹನೆಮಾಡುವುದರಿಂದ ದೇವತೆಯು ಬಂದುಬಿಡುವುದಾದರೆ, ವಿಗ್ರಹವು ಚೇತನವೇಕಾಗುವುದಿಲ್ಲ? ಮತ್ತು ವಿಸರ್ಜನೆಯನ್ನು ಮಾಡುವುದರಿಂದ ಏಕೆ ಹೊರಟು ಹೋಗುವುದಿಲ್ಲ? ಅದು ಎಲ್ಲಿಂದ ಬರುತ್ತದೆ? ಮತ್ತು ಎಲ್ಲಿಗೆ ಹೋಗುತ್ತದೆ? ಕೇಳಿರಿ! ಮುಗ್ಧರೇ, ಪೂರ್ಣನಾದ ಪರಮಾತ್ಮನು ಬರುವುದೂ ಇಲ್ಲ; ಹೋಗುವುದೂ ಇಲ್ಲ. ನೀವು ಮಂತ್ರಬಲದಿಂದ ಪರಮಾತ್ಮನನ್ನು ಕರೆಸಿಕೊಳ್ಳುವಿರಾದರೆ, ಅದೇ ಮಂತ್ರಗಳಿಂದ ನಿಮ್ಮ ಸತ್ತ ಮಗನ ದೇಹದಲ್ಲಿ ಜೀವನನ್ನು ಏತಕ್ಕೆ ಕರೆತರಿಸುವುದಿಲ್ಲ? ಮತ್ತು ಶತ್ರುವಿನ ಶರೀರದಲ್ಲಿ ಜೀವನನ್ನು ವಿಸರ್ಜಿಸಿ ಸಾಯಿಸ

ಲಾರಿರೇಕೆ? ಸೋದರರೇ! ಅರಿವಿಲ್ಲದ ಜನರೇ! ಕೇಳಿರಿ. ಈ ಪೋಪರು ನಿಮ್ಮನ್ನು ವಂಚಿಸಿ, ತಮ್ಮ ಸ್ವಾರ್ಥವನ್ನು ಪೂರೈಸಿಕೊಳ್ಳುತ್ತಾರೆ. ವೇದಗಳಲ್ಲಿ ಕಲ್ಲು ಮೊದಲಾದುವುಗಳ ವಿಗ್ರಹಗಳ ಪೂಜೆ ಮತ್ತು ಪರಮೇಶ್ವರನ ಆವಾಹನೆ-ವಿಸರ್ಜನೆ ಮಾಡುವ ಒಂದು ಅಕ್ಷರವೂ ಇಲ್ಲ.

ಪ್ರ :—

ಪ್ರಾಣಾ ಇಹಾಗಚ್ಛಂತು ಸುಖಂ ಚಿರಂ ತಿಷ್ಠಂತು ಸ್ವಾಹಾ।
ಆತ್ಮೇಹಾ ಗಚ್ಛತು ಸುಖಂ ಚಿರಂ ತಿಷ್ಠತು ಸ್ವಾಹಾ
ಇಂದ್ರಿಯಾ ಣೀಹಾಗಚ್ಛಂತು ಸುಖಂ ಚಿರಂ ತಿಷ್ಠಂತು ಸ್ವಾಹಾ॥

ಈ ಮೊದಲಾದ ವೇದಮಂತ್ರಗಳಿವೆ; ಇಲ್ಲವೆಂದು ಏಕೆ ಹೇಳುತ್ತೀರಿ?

ಉ :—ಓ ಬಂಧುಗಳೇ! ನಿಮ್ಮ ಬುದ್ಧಿಯನ್ನು ಸ್ವಲ್ಪವಾದರೂ ಉಪಯೋಗಿಸಿರಿ. ಇವೆಲ್ಲವೂ ವಾಮಮಾರ್ಗಿಗಳ ಕಪೋಲಕಲ್ಪಿತವಾದ ವೇದವಿರುದ್ಧ ತಂತ್ರಗ್ರಂಥಗಳ ಪೋಪರಚಿತ ಪಂಕ್ತಿಗಳು; ವೇದವಚನಗಳಲ್ಲ.

ಪ್ರ :—ತಂತ್ರ ಸುಳ್ಳೋ?

ಉ :—ಹೌದು; ಸರ್ವಥಾ ಸುಳ್ಳು. ಹೇಗೆ ಆವಾಹನ, ಪ್ರಾಣಪ್ರತಿಷ್ಠಾದಿಗಳ ಮತ್ತು ಪಾಷಾಣಾದಿ ಮೂರ್ತಿಗಳ ವಿಷಯದ ಒಂದು ಮಂತ್ರವೂ ವೇದಗಳಲ್ಲಿಲ್ಲವೋ, ಹಾಗೆಯೇ 'ಸ್ನಾನಂ ಸಮರ್ಪಯಾಮಿ' ಮೊದಲಾದ ವಚನಗಳೂ ಇಲ್ಲ. ಅಂದರೆ "ಪಾಷಾಣಾದಿ ಮೂರ್ತಿಂ ರಚಯಿತ್ವಾ ಮಂದಿರೇಷು ಸಂಸ್ಥಾಪ್ಯ ಗಂಧಾದಿಭಿಃ ಅರ್ಚಯೇತ್'—ಅಂದರೆ ಕಲ್ಲು ಮೊದಲಾದುವುಗಳ ವಿಗ್ರಹಗಳನ್ನು ತಯಾರಿಸಿ, ಮಂದಿರಗಳಲ್ಲಿ ಸ್ಥಾಪಿಸಿ, ಚಂದನ-ಅಕ್ಷತೆ ಮೊದಲಾದುವುಗಳಿಂದ ಪೂಜಿಸಬೇಕು' ಎಂದಿಷ್ಟೂ ಸಹ ಇಲ್ಲ; ಇಂತಹ ಲೇಶಮಾತ್ರವೂ ಇಲ್ಲ.

ಪ್ರ :—ವೇದಗಳಲ್ಲಿ ವಿಧಿಯು ಇಲ್ಲದಿದ್ದರೆ, ಖಂಡನೆಯೂ ಸಹ

ಇಲ್ಲ. ಮತ್ತು ಖಂಡಿನವಿದ್ದರೆ 'ಪ್ರಾಪ್ತೌ ಸತ್ಯಾಂ ನಿಷೇಧಃ' ಮೂರ್ತಿಯು ಇರುವುದರಿಂಲೇ ಖಂಡನವಾಗಬಲ್ಲದು.

ಉತ್ತರ :—ವಿಧಿಯಂತೂ ಇಲ್ಲ. ಆದರೆ ಪರಮಾತ್ಮನಿಗೆ ಪ್ರತಿಯಾಗಿ ಬೇರೆ ಯಾವ ವಸ್ತುವನ್ನೂ ಪೂಜನೀಯವೆಂದೊಪ್ಪಬಾರದೆಂದು ಬರೆದಿದೆ. ಮತ್ತು ಸರ್ವಥಾ ನಿಷೇಧಮಾಡಲ್ಪಟ್ಟದೆ. ಅಪೂರ್ವ ವಿಧಿಯಿರುವುದಿಲ್ಲವೆ ? ಇದೆ, ಕೇಳಿರಿ :—

೧. ಅಂಧಂ ತಮಃ ಪ್ರವಿಶಂತಿ ಯೇಽಸಂಭೂತಿಮುಪಾಸತೇ ।
ತತೋ ಭೂಯ ಇವ ತೇ ತಮೋ ಯ ಉ ಸಂಭೂತ್ಯಾಗ್ಂ ರತಾಃ ।।

[ಯಜು. ಅ. ೪೦, ಮಂ. ೯]

೨. ನ ತಸ್ಯ ಪ್ರತಿಮಾ ಅಸ್ತಿ ॥

[ಯಜು. ಅ. ೩೨, ಮಂ. ೩]

೩. ಯದ್ವಾಚಾ ನಾಭ್ಯುದಿತಂ ಯೇನ ವಾಗಭ್ಯುದ್ಯತೇ ।
ತದೇವ ಬ್ರಹ್ಮ ತ್ವಂ ವಿದ್ಧಿ ನೇದಂ ಯದಿದಮುಪಾಸತೇ ॥೧॥
೪. ಯನ್ಮನಸಾ ನ ಮನುತೇ ಯೇನಾಹುರ್ಮನೋ ಮತಮ್ ।
ತದೇವ ಬ್ರಹ್ಮ ತ್ವಂ ವಿದ್ಧಿ ನೇದಂ ಯದಿದಮುಪಾಸತೇ ॥
೫. ಯಚ್ಚಕ್ಷುಷಾ ನ ಪಶ್ಯತಿ ಯೇನ ಚಕ್ಷೂಂಷಿ ಪಶ್ಯತಿ ।
ತದೇವ ಬ್ರಹ್ಮ ತ್ವಂ ವಿದ್ಧಿ ನೇದಂ ಯದಿದಮುಪಾಸತೇ ॥
೬. ಯಚ್ಛ್ರೋತ್ರೇಣ ನ ಶೃಣೋತಿ ಯೇನ ಶ್ರೋತ್ರಮಿದಗ್ಂ ಶ್ರುತಂ ।
ತದೇವ ಬ್ರಹ್ಮ ತ್ವಂ ವಿದ್ಧಿ ನೇದಂ ಯದಿದಮುಪಾಸತೇ ॥
೭. ಯತ್ಪ್ರಾಣೇನ ನ ಪ್ರಾಣಿತಿ ಯೇನ ಪ್ರಾಣಃ ಪ್ರಣೀಯತೇ ।
ತದೇವ ಬ್ರಹ್ಮ ತ್ವಂ ವಿದ್ಧಿ ನೇದಂ ಯದಿದಮುಪಾಸತೇ ॥
ಕೇನೋಪನಿಷತ್ ॥

ಬ್ರಹ್ಮನಿಗೆ ಬದಲಾಗಿ ಅಸಂಭೂತಿ ಅಂದರೆ ಅನುತ್ಪನ್ನ ಅನಾದಿ ಪ್ರಕೃತಿ ಕಾರಣವನ್ನು ಉಪಾಸಿಸುವವರು ಅಂಧಕಾರ ಅಂದರೆ ಅಜ್ಞಾನ

ಮತ್ತು ದುಃಖಸಾಗರದಲ್ಲಿ ಮುಳುಗಿಹೋಗುತ್ತಾರೆ. ಮತ್ತು ಸಂಭೂತಿ ಅಂದರೆ ಕಾರಣದಿಂದಉತ್ಪನ್ನವಾಗಿ ಕಾರ್ಯರೂಪವಾಗಿರುವ ಪೃಥಿವೀ ಮೊದಲಾದ ಭೂತಗಳನ್ನು ಕಲ್ಲು, ಮರ ಮೊದಲಾದ ಅವಯವಗಳನ್ನೂ ಮನುಷ್ಯ ಮೊದಲಾದವರ ಶರೀರಗಳನ್ನೂ ಬ್ರಹ್ಮನಿಗೆ ಬದಲಾಗಿ ಉಪಾಸಿಸುವವರು ಆ ಅಂಧಕಾರಕ್ಕಿಂತಲೂ ಘೋರವಾದ ಅಂಧಕಾರದಲ್ಲಿ ಬೀಳುತ್ತಾರೆ; ಅಂದರೆ ಮಹಾಮೂರ್ಖರಾಗಿ ಚಿರಕಾಲ ಘೋರ ದುಃಖರೂಪವಾದ ನರಕದಲ್ಲಿ ಬಿದ್ದು ಬಹಳ ಕ್ಲೇಶವನ್ನು ಅನುಭವಿಸುತ್ತಾರೆ ॥೧॥

ಜಗತ್ತಿನಲ್ಲೆಲ್ಲಾ ವ್ಯಾಪಿಸಿಕೊಂಡಿರುವ ನಿರಾಕಾರನಾದ ಪರಮಾತ್ಮನ ಪ್ರತಿಮೆ, ಪರಿಮಾಣ, ಸಾದೃಶ್ಯ, ಅಥವಾ ಮೂರ್ತಿ ಇಲ್ಲ. ॥೨॥

'ಇದು ನೀರು, ತೆಗೆದುಕೊಳ್ಳಿರಿ' ಎಂಬಂತೆ ಯಾವನು ವಾಣಿಗೆ ನಿಲುಕುವ ವಿಷಯವಲ್ಲವೋ, ಮತ್ತು ಯಾವನ ಧಾರಣ ಮತ್ತು ಸತ್ತ್ವದಿಂದ ವಾಣಿಯು ಪ್ರವೃತ್ತವಾಗುತ್ತದೋ, ಅವನನ್ನೇ ಬ್ರಹ್ಮನೆಂದು ತಿಳಿ ಮತ್ತು ಉಪಾಸಿಸು. ಮತ್ತು ಆತನಿಂದ ಬೇರೆ ಯಾವದೂ ಉಪಾಸನೀಯವಲ್ಲ. ॥೩॥

ಯಾವನು "ಇಷ್ಟೇ" ಎಂದು ಮನಸ್ಸಿನಿಂದ ಮನನಕ್ಕೆ ತಂದುವುದಿಲ್ಲವೋ, ಯಾವನು ಮನಸ್ಸನ್ನು ತಿಳಿಯುತ್ತಾನೋ ಅವನನ್ನೇ ಬ್ರಹ್ಮನೆಂದು ನೀನು ತಿಳಿ ಮತ್ತು ಅವನನ್ನೇ ಉಪಾಸಿಸು. ಆತನಿಂದ ಭಿನ್ನವಾದ ಜೀವ ಮತ್ತು ಅಂತಃಕರಣವನ್ನು ಬ್ರಹ್ಮನ ಸ್ಥಾನದಲ್ಲಿ ಉಪಾಸಿಸಬೇಡ. ॥೪॥

ಯಾವನು ಕಣ್ಣುಗಳಿಗೆ ಕಾಣಿಸನೋ, ಮತ್ತು ಯಾವನಿಂದ ಎಲ್ಲಾ ಕಣ್ಣುಗಳೂ ನೋಡುತ್ತವೋ, ಅವನನ್ನೇ ನೀನು ಬ್ರಹ್ಮನೆಂದು ತಿಳಿ, ಮತ್ತು ಅವನನ್ನೇ ಉಪಾಸಿಸು. ಮತ್ತು ಆತನಿಂದ; ಬೇರೆಯಾದ ಸೂರ್ಯ, ವಿದ್ಯುತ್ತು, ಅಗ್ನಿ ಮೊದಲಾದ ಜಡ ಪದಾರ್ಥಗಳನ್ನು ಉಪಾಸಿಸಬೇಡ. ॥೫॥

ಯಾವನು ಕಿವಿಗಳಿಂದ ಕೇಳಲ್ಪಡನೋ ಮತ್ತು ಯಾವನಿಂದ ಕಿವಿಗಳು ಕೇಳುವುವೋ ಅವನನ್ನೇ ನೀನು ಬ್ರಹ್ಮನೆಂದು ತಿಳಿ. ಮತ್ತು

ಅವನನ್ನೇ ಉಪಾಸಿಸು. ಅತನಿಂದ ಬೇರೆಯಾದ ಶಬ್ದಾದಿಗಳನ್ನು ಅವನಿಗೆ ಬದಲಾಗಿ ಉಪಾಸಿಸಬೇಡ. ॥೬॥

ಯಾವನು ಪ್ರಾಣಗಳಿಂದ ಚಲಾಯಮಾನನಾಗನೋ ಯಾವನಿಂದ ಪ್ರಾಣವು ಚಲನೆಯನ್ನು ಹೊಂದುತ್ತದೋ, ಅವನನ್ನೇ ಬ್ರಹ್ಮನೆಂದು ನೀನು ತಿಳಿ ಮತ್ತು ಅವನನ್ನೇ ಉಪಾಸಿಸು. ಅತನಿಂದ ಬೇರೆಯಾದ ಈ ವಾಯುವನ್ನು ಉಪಾಸಿಸಬೇಡ. ॥೭॥

ಈ ಮೊದಲಾದ ಬಹಳ ನಿಷೇಧಗಳಿವೆ. ಪ್ರಾಪ್ತ ಮತ್ತು ಅಪ್ರಾಪ್ತ ಇವೆರಡರ ನಿಷೇಧವೂ ಉಂಟು. ಪ್ರಾಪ್ತದ ನಿಷೇಧವೆಂದರೆ, ಯಾವನಾದರೂ ಎಲ್ಲಿಯಾದರೂ ಕುಳಿತಿದ್ದರೆ ಅವನನ್ನು ಅಲ್ಲಿಂದ ಎಬ್ಬಿಸಿಬಿಡುವುದು. ಅಪ್ರಾಪ್ತದ ನಿಷೇಧವೆಂದರೆ—"ಮಗು, ನೀನು ಎಂದಿಗೂ ಕದಿಯಬೇಡ. ಬಾವಿಯಲ್ಲಿ ಬೀಳಬೇಡ ದುಷ್ಟರ ಸಂಗ ಮಾಡಬೇಡ. ವಿದ್ಯಾವಿಹೀನನಾಗಿ ಇರಬೇಡ" ಇತ್ಯಾದಿ. ಹೀಗೆ ಅಪ್ರಾಪ್ತದ ನಿಷೇಧವೂ ಇರುತ್ತದೆ. ಹೀಗೆ ಮಾನವರ ಜ್ಞಾನದಲ್ಲಿ ಅಪ್ರಾಪ್ತವೂ ಪರಮಾತ್ಮನ ಜ್ಞಾನದಲ್ಲಿ ಪ್ರಾಪ್ತವೂ ಆದುದರ ನಿಷೇಧ ಮಾಡಲ್ಪಟ್ಟಿದೆ. ಆದುದರಿಂದ ಪಾಷಾಣಾದಿ ಮೂರ್ತಿಪೂಜೆಯು ಅತ್ಯಂತ ನಿಷಿದ್ಧವಾಗಿರುತ್ತದೆ.

ಪ್ರಶ್ನೆ:—ಮೂರ್ತಿಪೂಜೆಯಲ್ಲಿ ಪುಣ್ಯವಿಲ್ಲದಿದ್ದರೆ ಪಾಪವೂ ಕೂಡ ಇಲ್ಲವಲ್ಲ!

ಉತ್ತರ:—ಕರ್ಮಗಳು ಎರಡೇ ವಿಧಗಳಾಗಿರುತ್ತವೆ. "ವಿಹಿತ" ವೆಂದರೆ—ಕರ್ತವ್ಯತ್ವದಿಂದ ವೇದಗಳಲ್ಲಿ ಪ್ರತಿಪಾದಿತವಾದ ಸತ್ಯ ಭಾಷಣ ಮೊದಲಾದುವುಗಳು. ಎರಡನೆಯದು "ನಿಷಿದ್ಧ"ವೆಂದರೆ—ಅಕರ್ತವ್ಯತ್ವದಿಂದ ವೇದಗಳಲ್ಲಿ ನಿಷೇಧಿಸಲ್ಪಟ್ಟ ಸುಳ್ಳು, ಕಳ್ಳತನ ಮೊದಲಾದುವುಗಳು. ವಿಹಿತವಾದುದನ್ನು ಅನುಷ್ಠಾನಮಾಡುವುದು ಧರ್ಮವೂ, ಅದನ್ನು ಮಾಡದಿರುವುದು ಅಧರ್ಮವೂ ಆಗಿರುವಂತೆಯೇ ನಿಷಿದ್ಧ ಕರ್ಮಗಳನ್ನು ಆಚರಿಸುವುದು ಅಧರ್ಮವೂ ಮತ್ತು ಅವನ್ನು ಆಚರಿಸದಿರುವುದು ಧರ್ಮವೂ ಆಗಿರುತ್ತದೆ. ವೇದಗಳಿಂದ ನಿಷಿದ್ಧವಾದ ಮೂರ್ತಿಪೂಜಾದಿ ಕರ್ಮಗಳನ್ನು ಮಾಡುವಾಗ, ನೀವು ಪಾಪಿಗಳೇಕಲ್ಲ?

ಪ್ರಶ್ನೆ :—ನೋಡಿರಿ! ವೇದಗಳು ಅನಾದಿಗಳು ಆ ಸಮಯದಲ್ಲಿ ಮೂರ್ತಿಗಳ ಅವಶ್ಯಕತೆಯೇನಿತ್ತು ? ಏಕೆಂದರೆ–ಮೊದಲಾದರೋ ದೇವತೆಗಳೆಲ್ಲರೂ ಪ್ರತ್ಯಕ್ಷರಾಗಿದ್ದರು. ಈ ಪದ್ಧತಿಯಾದರೋ ಅನಂತರ ತಂತ್ರ ಮತ್ತು ಪುರಾಣಗಳಿಂದ ಹೊರಟಿದೆ. ಮಾನವರ ಸಾಮರ್ಥ್ಯವೂ ಜ್ಞಾನವೂ ಕಡಿಮೆಯಾದಾಗ, ಪರಮಾತ್ಮನನ್ನು ತಮ್ಮ ಧ್ಯಾನದಲ್ಲಿ ತರಲಾರರಾದರು. ಮತ್ತು ಮೂರ್ತಿಯ ಧ್ಯಾನವನ್ನಂತೂ ಮಾಡ ಬಲ್ಲರು, ಈ ಕಾರಣದಿಂದ ಅಜ್ಞಾನಿಗಳಿಗಾಗಿ ಮೂರ್ತಿಪೂಜೆಯಿದೆ. ಏಕೆಂದರೆ ಮೆಟ್ಟಲಿನಿಂದ ಮೆಟ್ಟಲಿಗೆ ಹತ್ತಿದರೆ, ಮಹಡಿಯನ್ನು ಸೇರುವನು! ಮೊದಲ ಮೆಟ್ಟಲನ್ನು ಬಿಟ್ಟು ಮೇಲೆ ಹೋಗಬಯಸಿದರೆ, ಹೋಗಲಾರನು. ಆದುದರಿಂದ ಮೂರ್ತಿಯು ಮೊದಲ ಮೆಟ್ಟಲು. ಇದನ್ನು ಪೂಜಿಸುತ್ತಾ, ಪೂಣಿಸುತ್ತಾ ಯಾವಾಗ ಜ್ಞಾನವುಂಟಾಗುವುದೋ ಮತ್ತು ಅಂತಃಕರಣವು ಪವಿತ್ರವಾಗುವುದೋ ಆಗ ಪರಮಾತ್ಮನನ್ನು ಧ್ಯಾನಿಸಬಲ್ಲನು. ಗುರಿಯನ್ನು ಹೊಡೆಯುವವನು ಮೊದಲು ಸ್ಥೂಲವಾದ ಲಕ್ಷ್ಯವನ್ನು ಬಾಣದಿಂದಾಗಲಿ, ಗುಂಡಿನಿಂದಾಗಲಿ ಹೊಡೆಯುತ್ತಾ ಹೊಡೆಯುತ್ತಾ ಕಡೆಗೆ ಸೂಕ್ಷ್ಮವಾದುದಕ್ಕೂ ಗುರಿಯಿಟ್ಟು ಹೊಡೆಯಬಲ್ಲವನಾಗುವಂತೆ ಸ್ಥೂಲವಾದ ಮೂರ್ತಿಯನ್ನು ಪೂಜಿಸುತ್ತಾ, ಪೂಜಿಸುತ್ತಾ, ಕಡೆಗೆ ಸೂಕ್ಷ್ಮಬ್ರಹ್ಮನನ್ನೂ ಕೂಡ ಹೊಂದುತ್ತಾನೆ. ಹೆಣ್ಣುಮಕ್ಕಳು ನಿಜವಾದ ಗಂಡನು ಸಿಕ್ಕುವವರೆಗೆ ಬೊಂಬೆಯಾಟ ಆಡುವುದಿಲ್ಲವೆ ? ಈ ಮೊದಲಾದ ರೀತಿಗಳಿಂದ ಮೂರ್ತಿಪೂಜೆಯನ್ನು ಮಾಡುವುದು ದುಷ್ಕಾರ್ಯವಲ್ಲ.

ಉತ್ತರ :—ವೇದವಿಹಿತವಾದುದು ಧರ್ಮ ಮತ್ತು ವೇದವಿರುದ್ಧವಾದ ಆಚರಣದಲ್ಲಿ ಅಧರ್ಮವಿರುವಾಗ ನಿಮ್ಮ ಹೇಳಿಕೆಯಿಂದಲೂ ಕೂಡ ಮೂರ್ತಿಪೂಜೆಮಾಡುವುದು ಅಧರ್ಮವಾಯಿತು. ವೇದವಿರುದ್ಧವಾದ ಗ್ರಂಥಗಳನ್ನು ಪ್ರಮಾಣವಾಗಿ ತೆಗೆದುಕೊಳ್ಳುವುದು ನಾಸ್ತಿಕನಾಗಿ ಹೋಗುವಂತೆಯೇ ಸರಿ. ಕೇಳಿರಿ :—

ನಾಸ್ತಿಕೋ ವೇದನಿಂದಕಃ ॥೧೧॥

[ಮನು ೨-೧೧]

ಯಾ ವೇದಬಾಹ್ಯಾಃ ಸ್ಮೃತಯೋ ಯಾಶ್ಚ ಕಾಶ್ಚ ಕುದೃಷ್ಟಯಃ ।
ಸರ್ವಾಸ್ತಾ ನಿಷ್ಫಲಾಃ ಪ್ರೇತ್ಯ ತಮೋನಿಷ್ಠಾ ಹಿ ತಾಃ ಸ್ಮೃತಾಃ ॥
ಉತ್ಪದ್ಯಂತೇ ಚ್ಯವಂತೇ ಚ ಯಾನ್ಯತೋನ್ಯಾನಿ ಕಾನಿಚಿತ್ ।
ತಾನ್ಯರ್ವಾಕ್ಕಾಲಿಕತಯಾ ನಿಷ್ಫಲಾನ್ಯನೃತಾನಿಚ ॥

[ಮನು ೧೨-೯೫-೯೬]

ಮನು ಹೇಳುತ್ತಾನೆ :—ವೇದಗಳ ನಿಂದೆ ಅಂದರೆ ಅಪಮಾನ, ತ್ಯಾಗ, ವಿರುದ್ಧಾಚರಣ ಮಾಡುವವನು ನಾಸ್ತಿಕನೆನಿಸಿಕೊಳ್ಳುತ್ತಾನೆ. ॥೧॥ ಯಾವ ಗ್ರಂಥಗಳು ವೇದಬಾಹ್ಯಗಳೂ, ಕುತ್ಸಿತ ಪುರುಷರ ಕೃತಿಗಳೂ, ಜಗತ್ತನ್ನು ದುಃಖಸಾಗರದಲ್ಲಿ ಮುಳುಗಿಸುವಂತಹವುಗಳೂ ಆಗಿರುತ್ತವೋ, ಅವೆಲ್ಲಾ ನಿಷ್ಫಲವೂ, ಅಸತ್ಯವೂ, ಅಂಧಕಾರ ರೂಪವೂ, ಈ ಲೋಕ ಮತ್ತು ಪರಲೋಕಗಳಲ್ಲಿ ದುಃಖವನ್ನು ಕೊಡುವಂತಹುವೂ ಆಗಿರುತ್ತವೆ. ॥೨॥ ವೇದವಿರುದ್ಧವಾಗಿ ಹುಟ್ಟುವ ಈ ಗ್ರಂಥಗಳು ಆಧುನಿಕವಾದುದರಿಂದ ಶೀಘ್ರವಾಗಿಯೇ ನಷ್ಟವಾಗಿ ಹೋಗುತ್ತವೆ. ಅವುಗಳನ್ನು ಒಪ್ಪುವುದು ನಿಷ್ಫಲ ಹಾಗೂ ಸುಳ್ಳಾಗಿರುತ್ತದೆ. ॥೩॥ ಇದೇ ರೀತಿ ವೇದವಿರುದ್ಧವಾದುವುಗಳನ್ನು ಒಪ್ಪಬಾರದು; ಆದರೆ ವೇದಾನುಕೂಲವಾದುದನ್ನು ಆಚರಿಸುವುದೇ ಧರ್ಮ ಎಂದು ಬ್ರಹ್ಮನಿಂದ ಹಿಡಿದು ಜೈಮಿನಿ ಮಹರ್ಷಿಯವರೆಗಿನವರ ಅಭಿಪ್ರಾಯವಾಗಿರುತ್ತದೆ. ಏಕೆ ? ವೇದವು ಸತ್ಯಾರ್ಥದ ಪ್ರತಿಪಾದಕವಾಗಿರುತ್ತದೆ. ಇದಕ್ಕೆ ಪ್ರತಿಯಾಗಿ ಎಷ್ಟು ತಂತ್ರ ಮತ್ತು ಪುರಾಣಗಳಿವೆಯೋ, ಅವು ವೇದವಿರುದ್ಧವಾದುದರಿಂದ ಅಸತ್ಯವಾದುವು. ವೇದವಿರುದ್ಧವಾದ ಪುಸ್ತಕಗಳಲ್ಲಿ ಹೇಳಿರುವ ಮೂರ್ತಿಪೂಜೆಯೂ ಅಧರ್ಮರೂಪವಾಗಿದೆ. ಮಾನವರ ಜ್ಞಾನವು ಜಡವಸ್ತುಗಳ ಪೂಜೆಯಿಂದ ವೃದ್ಧಿಯಾಗುವುದಿಲ್ಲ. ಆದರೆ ಇದ್ದಬಿದ್ದ ಜ್ಞಾನವೂ ಸಹ ನಷ್ಟವಾಗಿ ಹೋಗುತ್ತದೆ. ಆದುದರಿಂದ ಜ್ಞಾನಿಗಳ ಸೇವಾ-ಸಂಗದಿಂದ ಜ್ಞಾನವು ವೃದ್ಧಿಯಾಗುತ್ತದೆ; ಕಲ್ಲು ಮೊದಲಾದುವುಗಳಿಂದಲ್ಲ. ಪಾಷಾಣಾದಿ ಮೂರ್ತಿಪೂಜೆಯಿಂದ ಪರಮಾತ್ಮನನ್ನು ಧ್ಯಾನದಲ್ಲಿ ಎಂದಾದರೂ ತರಬಲ್ಲನೆ ? ಇಲ್ಲ; ಇಲ್ಲ. ಮೂರ್ತಿಪೂಜೆಯ ಮೆಟ್ಟಿಲಲ್ಲ; ಅದೊಂದು ದೊಡ್ಡ ಹಳ್ಳ. ಅದರಲ್ಲಿ ಬಿದ್ದು ನುಚ್ಚುನುಚ್ಚಾಗಿ ಹೋಗುತ್ತಾನೆ. ಮರಳಿ ಆ ಹಳ್ಳದಿಂದ

ಹೊರಬರಲಾರನು; ಮತ್ತು ಅದರಲ್ಲಿಯೇ ಸತ್ತುಹೋಗುತ್ತಾನೆ. ಹೌದು. ಸಾಮಾನ್ಯ ಧಾರ್ಮಿಕ ವಿದ್ವಾಂಸರಿಂದ ಹಿಡಿದು ಪರಮ ವಿದ್ವಾಂಸರಾದ ಯೋಗಿಗಳವರೆಗಿನವರ ಸಂಗದಿಂದ ಉತ್ತಮ ವಿದ್ಯೆ, ಸತ್ಯಭಾಷಣ ಮೊದಲಾದುವುಗಳೇ, ಮೇಲ್ಮನೆಗೆ ಹೋಗುವ ಏಣಿಯಂತೆ ಪರಮಾತ್ಮನ ಪ್ರಾಪ್ತಿಗೆ ಸೋಪಾನಗಳಾಗಿರುತ್ತವೆ. ಆದರೆ ವಿಗ್ರಹ ಪೂಜೆ ಮಾಡುತ್ತಾ ಯಾವನೂ ಜ್ಞಾನಿಯಾಗಲಿಲ್ಲ. ಅದಕ್ಕೆ ಬದಲಾಗಿ ಎಲ್ಲಾ ಮೂರ್ತಿಪೂಜಕರು ಅಜ್ಞಾನಿಗಳಾಗಿಯೇ ಇದ್ದು, ಮನುಷ್ಯ ಜನ್ಮವನ್ನು ವ್ಯರ್ಥವಾಗಿ ಕಳೆದುಕೊಂಡು, ಬಹಳ ಬಹಳ ಜನರು ಸತ್ತುಹೋದರು. ಮತ್ತು ಈಗ ಇರುವವರೂ, ಮುಂದೆ ಆಗುವವರೂ ಕೂಡ ಮನುಷ್ಯಜನ್ಮದ ಧರ್ಮ, ಅರ್ಥ, ಕಾಮ ಮತ್ತು ಮೋಕ್ಷದ ಪ್ರಾಪ್ತಿಯೆಂಬ ಫಲಗಳಿಗೆ ವಿಮುಖರಾಗಿ ಪ್ರಯೋಜನವಿಲ್ಲದೆ ನಾಶವಾಗಿ ಹೋಗುವರು. ಬ್ರಹ್ಮನ ಪ್ರಾಪ್ತಿಗೆ ಮೂರ್ತಿಪೂಜೆಯಲ್ಲ; ಆದರೆ ಧಾರ್ಮಿಕ ವಿದ್ವಾಂಸರ ಸಹವಾಸವೂ, ಸೃಷ್ಟಿವಿದ್ಯೆಯೂ ಸ್ಥೂಲ ಲಕ್ಷ್ಯದ ಹಾಗಿರುತ್ತದೆ. ಇದನ್ನು ಹೆಚ್ಚಿಸಿಕೊಳ್ಳುತ್ತಾ ಹೆಚ್ಚಿಸಿಕೊಳ್ಳುತ್ತಾ, ಬ್ರಹ್ಮನನ್ನೂ ಹೊಂದುತ್ತಾನೆ. ಮತ್ತು ಮೂರ್ತಿಯು ಗೊಂಬೆಯಾಟದಂತಲ್ಲ. ಆದರೆ ಪ್ರಥಮ ಅಕ್ಷರಾಭ್ಯಾಸ ಮತ್ತು ಸುಶಿಕ್ಷಣದ ಆಗುವಿಕೆ, ಬೊಂಬೆಯಾಟದಂತೆ ಬ್ರಹ್ಮನ ಪ್ರಾಪ್ತಿಯ ಸಾಧನವಾಗಿರುತ್ತವೆ ಕೇಳಿರಿ, ಒಳ್ಳೆಯ ಶಿಕ್ಷಣ ಮತ್ತು ವಿದ್ಯೆಯನ್ನು ಪಡೆದಾಗ ನಿಜವಾದ ಸ್ವಾಮಿಯಾದ ಪರಮಾತ್ಮನನ್ನೂ ಹೊಂದುವನು.

ಪ್ರಶ್ನೆ:—ಸಾಕಾರದಲ್ಲಿ ಮನಸ್ಸು ಸ್ಥಿರವಾಗುತ್ತದೆ. ಮತ್ತು ನಿರಾಕಾರದಲ್ಲಿ ನಿಲ್ಲುವುದು ಕಠಿಣ. ಆದುದರಿಂದ ಮೂರ್ತಿಪೂಜೆಯು ಇರಬೇಕು.

ಉತ್ತರ:—ಸಾಕಾರದಲ್ಲಿ ಮನಸ್ಸು ಎಂದಿಗೂ ಸ್ಥಿರವಾಗಲಾರದು. ಏಕೆಂದರೆ—ಮನಸ್ಸು ಅದನ್ನು ಕೂಡಲೇ ಗ್ರಹಿಸಿ, ಅದರ ಪ್ರತಿಯೊಂದು ಅವಯವದಲ್ಲಿಯೂ ಸಂಚರಿಸುತ್ತಿದ್ದು, ಬಳಿಕ ಬೇರೊಂದರ ಕಡೆಗೆ ಓಡಿಹೋಗುತ್ತದೆ. ಮತ್ತು ನಿರಾಕಾರನಾದ ಪರಮಾತ್ಮನನ್ನು ಗ್ರಹಿಸುವುದರಲ್ಲಿ ಮನಸ್ಸು ಶಕ್ತಿಯಿದ್ದಷ್ಟು ವೇಗದಿಂದ ಓಡಿದರೂ ಅದಕ್ಕೆ ಅಂತವು ಸಿಕ್ಕುವುದಿಲ್ಲ. ನಿರವಯವನಾದುದ

ರಿಂದ ಚಂಚಲವಾಗಿಯೂ ಇರುವುದಿಲ್ಲ. ಆದರೆ, ಅವನ ಗುಣ-ಕರ್ಮ-ಸ್ವಭಾವಗಳನ್ನೇ ವಿಚಾರಮಾಡುತ್ತ ಮಾಡುತ್ತಾ, ಆನಂದದಲ್ಲಿ ಮಗ್ನವಾಗಿ, ಸ್ಥಿರವಾಗಿ ಹೋಗುತ್ತದೆ. ಮತ್ತು ಸಾಕಾರವಸ್ತುವಿನಲ್ಲಿ ಮನಸ್ಸು ಸ್ಥಿರವಾಗಿ ನಿಲ್ಲುವ ಹಾಗಿದ್ದಿದ್ದರೆ ಸಮಸ್ತ ಪ್ರಪಂಚದ ಮನಸ್ಸೂ ಸ್ಥಿರವಾಗಿ ಇರುತ್ತಿತ್ತು. ಏಕೆಂದರೆ—ಜಗತ್ತಿನಲ್ಲಿ ಮಾನವನು ಸ್ತ್ರೀ, ಪುತ್ರ, ಮಿತ್ರ, ಧನ ಮೊದಲಾದ ಸಾಕಾರವಸ್ತುಗಳಲ್ಲಿ ಸಿಕ್ಕಿಕೊಂಡಿರುತ್ತಾನೆ. ಆದರೆ ನಿರಾಕಾರದಲ್ಲಿ ಸೇರಿಸಿದ ಹೊರತು, ಯಾವನ ಮನಸ್ಸೂ, ಸ್ಥಿರವಾಗುವುದಿಲ್ಲ. ಏಕೆಂದರೆ—ಅವಯವರಹಿತವಾಗಿರುವುದರಿಂದ ಅವರಲ್ಲಿ ಮನಸ್ಸು ಸ್ಥಿರವಾಗಿಹೋಗುತ್ತದೆ. ಆದುದರಿಂದ ಮೂರ್ತಿಪೂಜೆಮಾಡುವುದು ಅಧರ್ಮವಾಗಿರುತ್ತದೆ. ಎರಡನೆಯದಾಗಿ—ಇದರಿಂದ ಕೋಟಗಟ್ಟಲೆ ಧನವನ್ನು ದೇವಾಲಯದಲ್ಲಿ ವೆಚ್ಚಮಾಡಿ ದರಿದ್ರರಾಗುತ್ತಾರೆ ಮತ್ತು ಅದರಲ್ಲಿ ಪ್ರಮಾದವಾಗುತ್ತದೆ. ೩-ಸ್ತ್ರೀಪುರುಷರು ದೇವಾಲಯಗಳಲ್ಲಿ ಒಟ್ಟುಗೂಡುವುದರಿಂದ ವ್ಯಭಿಚಾರ, ಕಲಹ, ಗೊಂದಲ, ರೋಗ ಮೊದಲಾದುವುಗಳು ಉಂಟಾಗುತ್ತವೆ. ೪-ಅದನ್ನೇ ಧರ್ಮ, ಅರ್ಥ, ಕಾಮ ಮತ್ತು ಮೋಕ್ಷದ ಸಾಧನವೆಂದು ತಿಳಿದು ಪುರುಷಾರ್ಥರಹಿತನಾಗಿ ಮಾನವನು ಮನುಷ್ಯಜನ್ಮವನ್ನು ವ್ಯರ್ಥವಾಗಿ ಹಾಳುಮಾಡಿಕೊಳ್ಳುತ್ತಾನೆ. ೫-ನಾನಾಬಗೆಯ ವಿರುದ್ಧ ಸ್ವರೂಪ, ನಾಮ ಮತ್ತು ಚರಿತ್ರೆಯುಳ್ಳ ವಿಗ್ರಹಗಳ ಪೂಜಾರಿಗಳ ಐಕಮತ್ಯವು ನಾಶವಾಗಿ, ವಿರುದ್ಧಮತಗಳಲ್ಲಿ ಪ್ರವೃತ್ತರಾಗಿ, ಪರಸ್ಪರ ಒಡಕನ್ನು ಹೆಚ್ಚಿಸಿ, ದೇಶವನ್ನು ನಾಶಮಾಡುತ್ತಾರೆ. ೬-ಅದರ ಭರವಸೆಯಲ್ಲೇ ಶತ್ರುಗಳಿಗೆ ಅಪಜಯವೂ, ತಮಗೆ ಜಯವೂ ಉಂಟಾಗುವುದೆಂದು ಕುಳಿತಿರುತ್ತಾರೆ. ಅವರಿಗೆ ಅಪಜಯವುಂಟಾಗಿ, ರಾಜ್ಯಸ್ವಾತಂತ್ರ್ಯ ಮತ್ತು ಐಶ್ವರ್ಯದ ಸುಖವು ಅವರ ಶತ್ರುಗಳ ಅಧೀನವಾಗುತ್ತದೆ. ಮತ್ತು ತಾವು ಅನ್ನಸತ್ರದವನ ತಟ್ಟುವಿನ ಮತ್ತು ಕುಂಬಾರನ ಕತ್ತೆಯಹಾಗೆ ಶತ್ರುಗಳಿಗೆ ಅಧೀನರಾಗಿ ಅನೇಕ ಬಗೆಯ ದುಃಖಗಳನ್ನು ಹೊಂದುತ್ತಾರೆ. ೭-ಯಾವನಾದರೂ, ಯಾವನಿಗಾದರೂ "ನಾವು ನೀನು ಕೂಡುವ ಸ್ಥಳಕ್ಕೆ ಅಥವಾ ಹೆಸರಿಗೆ ಕಲ್ಲು ಹಾಕುತ್ತೇವೆ" ಎಂದರೆ ಅವನು ಕ್ರುದ್ಧನಾಗಿ ಹೊಡೆಯುವಂತೆ

ಅಥವಾ ಬೈಯುವಂತೆ, ಈಶ್ವರೋಪಾಸನೆಯ ಸ್ಥಾನವಾಗಿರುವ ಹೃದಯದ ಮತ್ತು ಹೆಸರಿನಮೇಲೆ ಕಲ್ಲು ಮೊದಲಾದುವುಗಳ ಬೊಂಬೆಗಳನ್ನಿಡುವ ತಿಳಿಗೇಡಿಗಳ ಸರ್ವನಾಶವನ್ನು ಪರಮಾತ್ಮನು ಮಾಡದಿರುವನೇಕೆ? ೮–ಭ್ರಾಂತರಾಗಿ ದೇಶದೇಶಾಂತರಗಳಲ್ಲಿ ಮಂದಿರ ಮಂದಿರಗಳಿಗೂ ಅಲೆಯುತ್ತಾ, ಅಲೆಯುತ್ತಾ ದುಃಖಹೊಂದುತ್ತಲೂ, ಧರ್ಮದ, ಜಗತ್ತಿನ ಮತ್ತು ಪರಮಾರ್ಥದ ಕಾರ್ಯವನ್ನು ಹಾಳುಮಾಡುತ್ತಲೂ, ಕಳ್ಳರು ಮೊದಲಾದವರಿಂದ ಪೀಡಿತರಾಗುತ್ತಲೂ, ಠಕ್ಕರಿಂದ ವಂಚಿತರಾಗುತ್ತಲೂ ಇರುತ್ತಾರೆ. ೯–ದುಷ್ಟರಾದ ಪೂಜಾರಿಗಳಿಗೆ ಧನವನ್ನು ಕೊಡುತ್ತಾರೆ; ಅವರು ಅದನ್ನು ವೇಶ್ಯೆ, ಪರಸ್ತ್ರೀಗಮನ, ಮದ್ಯ, ಮಾಂಸ, ಜಗಳ ಗೊಂದಲಗಳಲ್ಲಿ ವೆಚ್ಚಮಾಡುತ್ತಾರೆ. ಇದರಿಂದ ದಾನಮಾಡುವವನ ಸುಖದ ಮೂಲವು ನಾಶವಾಗಿ ದುಃಖವುಂಟಾಗುತ್ತದೆ. ೧೦–ತಂದೆ, ತಾಯಿ ಮೊದಲಾದ ಪೂಜ್ಯರನ್ನು ಅವಮಾನಿಸಿ, ಪಾಷಾಣಾದಿ ಮೂರ್ತಿಗಳನ್ನು ಸನ್ಮಾನಿಸಿ ಕೃತಘ್ನರಾಗುತ್ತಾರೆ. ೧೧–ಆ ವಿಗ್ರಹಗಳನ್ನು ಯಾರಾದರೂ ಒಡೆದುಹಾಕಿದರೆ ಅಥವಾ ಕದ್ದುಕೊಂಡು ಹೋದರೆ "ಅಯ್ಯೋ ಅಯ್ಯೋ" ಎಂದು ರೋದಿಸುತ್ತಿರುತ್ತಾರೆ. ೧೨–ಬಹುಮಟ್ಟಿಗೆ ಪೂಜಾರಿಗಳು ಪರಸ್ತ್ರೀಯರ ಸಂಗದಿಂದಲೂ, ಪೂಜಾರಿಣಿಯರು ಪರಪುರುಷರ ಸಂಗದಿಂದಲೂ ದೂಷಿತರಾಗಿ ಸ್ತ್ರೀಪುರುಷರ ಪ್ರೇಮದ ಆನಂದವನ್ನು ಕಳೆದುಕೊಳ್ಳುತ್ತಾರೆ. ೧೩–ಸ್ವಾಮಿ ಸೇವಕರ ಆಜ್ಞಾಪಾಲನೆಯು ಸರಿಯಾಗಿ ನಡೆಯದಿರುವುದರಿಂದ ಪರಸ್ಪರವಿರುದ್ಧ ಭಾವವನ್ನು ತಾಳಿ, ನಷ್ಟ–ಭ್ರಷ್ಟರಾಗಿ ಹೋಗುತ್ತಾರೆ. ೧೪–ಜಡವನ್ನು ಧ್ಯಾನಿಸುವವರ ಆತ್ಮವೂ ಕೂಡ ಜಡಬುದ್ಧಿಯಾಗಿ ಹೋಗುತ್ತದೆ. ಏಕೆಂದರೆ—ಧ್ಯೇಯವಸ್ತುವಿನ ಜಡತ್ವಧರ್ಮವು ಅಂತಃಕರಣದ ಮೂಲಕ ಅವಶ್ಯವಾಗಿ ಜೀವಾತ್ಮನಲ್ಲಿ ಬರುತ್ತದೆ. ೧೫–ಪರಮಾತ್ಮನು ಸುಗಂಧಯುಕ್ತ ಪುಷ್ಪಾದಿಪದಾರ್ಥಗಳನ್ನು ವಾಯು–ಜಲಗಳ ದುರ್ಗಂಧದ ನಿವಾರಣೆಗಾಗಿಯೂ, ಆರೋಗ್ಯಕ್ಕಾಗಿಯೂ, ನಿರ್ಮಿಸಿದ್ದಾನೆ. ಅದನ್ನು ಪೂಜಾರಿಗಳು ಕಿತ್ತು ಮಧ್ಯದಲ್ಲಿಯೇ ನಾಶಮಾಡಿಬಿಡುತ್ತಾರೆ. ಆ ಪುಷ್ಪಾದಿಗಳ ಸುಗಂಧವು ಎಷ್ಟು ದಿನಗಳವರೆಗೆ ಆಕಾಶಕ್ಕೇರಿ,

ವಾಯು-ಜಲಗಳನ್ನು ಶುದ್ಧಿ ಪಡಿಸುತ್ತಿರುತ್ತಿದ್ದಿತೋ? ಮತ್ತು ಸುಗಂಧದ ಪೂರ್ಣಸಮಯದವರೆಗೆ ಸುಗಂಧವಿರುತ್ತಿತ್ತು. ಆದಕ್ಕೆ ವಿರುದ್ಧವಾಗಿ ಪುಷ್ಪಾದಿಗಳು ಕೆಸರಿನೊಂದಿಗೆ ಸೇರಿ ಕೊಳೆತು ದುರ್ಗಂಧವನ್ನು ಉಂಟುಮಾಡುತ್ತವೆ. ಪರಮಾತ್ಮನು ಕಲ್ಲುಗಳ ಮೇಲೆ ಏರಿಸುವುದ ಕ್ಕಾಗಿ ಈ ಪುಷ್ಪ ಮೊದಲಾದ ಸುಗಂಧಿಯುಕ್ತ ಪದಾರ್ಥಗಳನ್ನು ನಿರ್ಮಿಸಿದ್ದಾನೆಯೇ? ೧೬-ಕಲ್ಲಿನ ಮೇಲೆ ಏರಿಸಿದ ಹೂ, ಗಂಧ, ಅಕ್ಷತೆ ಮೊದಲಾದುವುಗಳು ನೀರಿನೊಡನೆಯೂ, ಮಣ್ಣಿನೊಡನೆಯೂ ಸೇರುವುದರಿಂದ, ತೊಟ್ಟಿಯಲ್ಲಾಗಲೀ ಚರಂಡಿಯಲ್ಲಾಗಲೀ ಬಿದ್ದು, ಕೊಳೆತು, ಮನುಷ್ಯ ಮಲಕ್ಕೆ ಸಮಾನವಾದ ದುರ್ಗಂಧವು ಆಕಾಶ ಕ್ಕೇರುತ್ತದೆ. ಮತ್ತು ಸಾವಿರಾರು ಜೀವಗಳು ಅದರಲ್ಲಿ ಬೀಳುತ್ತವೆ; ಅದರಲ್ಲಿಯೇ ಸತ್ತು, ಕೊಳೆಯುತ್ತವೆ. ಮೂರ್ತಿಪೂಜೆಯಲ್ಲಿ ಇಂತಹ ಅನೇಕ ದೋಷಗಳುಂಟಾಗುತ್ತವೆ; ಆದುದರಿಂದ ಸತ್ಪುರುಷರಿಗೆ, ಪಾಷಾಣಾದಿ ಮೂರ್ತಿಪೂಜೆಯು ಸರ್ವಥಾ ತ್ಯಾಜ್ಯವಾಗಿರುತ್ತದೆ. ಮತ್ತು ಯಾರು ಪಾಷಾಣಮಯಮೂರ್ತಿಯನ್ನು ಪೂಜಿಸಿದ್ದಾರೋ ಪೂಜಿಸುತ್ತಾರೋ ಮತ್ತು ಪೂಜಿಸುವರೋ, ಅವರು ಹಿಂದೆ ಹೇಳಿದ ದೋಷಗಳಿಂದ ಎಂದಿಗೂ ಬಿಡುಗಡೆ ಹೊಂದಿಲ್ಲ; ಹೊಂದುವುದಿಲ್ಲ; ಹೊಂದುವಂತಿಲ್ಲ.

ಪ್ರಶ್ನೆ :—ಯಾವುದೇ ರೀತಿಯ ಮೂರ್ತಿಪೂಜೆಯನ್ನೂ ಮಾಡ ಬಾರದೋ? ಮಾಡಿಸಬಾರದೋ? ನಮ್ಮ ಆರ್ಯಾವರ್ತದಲ್ಲಿ ಪಂಚದೇವ ಪೂಜೆ ಎಂಬ ಶಬ್ದವು ಪ್ರಾಚೀನ ಪರಂಪರೆಯಿಂದ ನಡೆದುಬಂದಿದೆ; ಶಿವ, ವಿಷ್ಣು, ಅಂಬಿಕಾ, ಗಣೇಶ ಮತ್ತು ಸೂರ್ಯ ಇವರ ಮೂರ್ತಿ ಗಳನ್ನು ಮಾಡಿ ಪೂಜಿಮಾಡುತ್ತಾರೆ. ಆ ಇದೇ ಪಂಚಾಯತನ ಪೂಜೆ ಹೌದೋ ಅಲ್ಲವೋ?

ಉತ್ತರ :—ಯಾವ ಪ್ರಕಾರವಾದ ಮೂರ್ತಿಪೂಜೆಯನ್ನೂ ಮಾಡಬಾರದು; ಆದರೆ ಮೂರ್ತಿಮಂತರಾದ ಕೆಳಗೆ ಹೇಳಿದವರ ಪೂಜೆಯನ್ನು ಅಂದರೆ ಸತ್ಕಾರವನ್ನು ಮಾಡಬೇಕು. ಆ 'ಪಂಚದೇವ ಪೂಜೆ' ಮತ್ತು 'ಪಂಚಾಯತನ ಪೂಜೆ' ಎಂಬ ಪದಗಳು ಬಹು ಉತ್ತಮವಾದ ಅರ್ಥವುಳ್ಳವುಗಳು. ಆದರೆ, ವಿದ್ಯಾವಿಹೀನರಾದ

ಮೂಢರು ಅದರ ಒಳ್ಳೆಯ ಅರ್ಥವನ್ನು ಬಿಟ್ಟು, ನಿಕೃಷ್ಟವಾದ ಅರ್ಥವನ್ನು ಹಿಡಿದರು. ಈ ಕಾಲದಲ್ಲಿ, ಶಿವ ಮೊದಲಾದ ಐವರ ಮೂರ್ತಿಗಳನ್ನು ರಚಿಸಿ, ಪೂಜಿಸುವುದರ ಖಂಡನವನ್ನಂತೂ ಇದೇ ತಾನೇ ಮಾಡಿದ್ದೇವೆ. ನಿಜವಾದ ವೇದೋಕ್ತ ಪಂಚಾಯತನ, ಮತ್ತು ವೇದಾನುಕೂಲೋಕ್ತವಾದ ದೇವಪೂಜೆ ಮತ್ತು ಮೂರ್ತಿಪೂಜೆ ಯಾವುದುಂಟೋ, ಕೇಳಿರಿ :—

ಮಾನೋವಧೀಃ ಪಿತರಂ ಮೋತಮಾತರಂ ॥೧॥

[ಯಜು. ಅ. ೧೯, ಮಂ. ೧೫]

ಆಚಾರ್ಯೋ ಬ್ರಹ್ಮಚರ್ಯೇಣ ಬ್ರಹ್ಮಚಾರಿಣಮಿಚ್ಛತೇ ॥೨॥

[ಅಥರ್ವ. ಕಾಂ. ೧೧, ವ. ೫, ಮಂ. ೧೭]

ಅತಿಥಿರ್ಗೃಹಾನಾಗಚ್ಛೇತ್ ॥೩॥

[ಅಥರ್ವ. ಕಾ. ೧೫, ವ. ೧೩, ಮಂ. ೬]

ಅರ್ಚತ ಪ್ರಾರ್ಚತ ಪ್ರಿಯಮೇಧಾಸೋ ಅರ್ಚತ ॥೪॥

[ಋಗ್ವೇದೇ]

ತ್ವಮೇವ ಪ್ರತ್ಯಕ್ಷಂ ಬ್ರಹ್ಮಾಸಿ ತ್ವಾಮೇವ ಪ್ರತ್ಯಕ್ಷಂ ಬ್ರಹ್ಮವದಿಷ್ಯಾಮಿ ॥೫॥

[ತೈತ್ತಿರೀಯೋಪನಿ. ವಲ್ಲೀ. ೧೧, ಅನು. ೧]

ಕತಮ ಏಕೋ ದೇವ ಇತಿ ಸ ಬ್ರಹ್ಮತ್ಯದಿತ್ಯಾಚಕ್ಷತೇ ॥೬॥

[ಶತಪಥ. ಕಾಂ. ೧೪. ಪ್ರಪಾಠ ೬। ಬ್ರಾಹ್ಮ. ೭, ಕಂಡಿಕಾ ೧೦]

ಮಾತೃದೇವೋಭವ ಪಿತೃದೇವೋಭವ ಆಚಾರ್ಯದೇವೋಭವ ಅತಿಥಿ ದೇವೋಭವ ॥೭॥

—ತೈತ್ತಿರೀಯೋಪನಿ। [ಪೂ. ಅನು. ೧೧]

ಪಿತೃಭಿರ್ಭ್ರಾತೃಭಿಶ್ಚೈತಾಃ ಪತಿಭಿರ್ದೇವರೈಸ್ತಥಾ ।
ಪೂಜ್ಯಾ ಭೂಷಯಿತವ್ಯಾಶ್ಚ ಬಹು ಕಲ್ಯಾಣ ಮೀಪ್ಸುಭಿಃ ॥೮॥

[ಮನು. ಅ. ೩, ೫೫]

ಪೂಜ್ಯೋ ದೇವವತ್ಪತಿಃ ॥೯॥

[ಮನು. ಸ್ಮೃತೌ]

ಮೊದಲು ತಾಯಿಯು ಮೂರ್ತಿಮತಿಯಾದ ಪೂಜನೀಯ ದೇವತೆಯಾಗಿರುತ್ತಾಳೆ. ಅಂದರೆ ಮಕ್ಕಳು ತನು ಮನ ಧನಗಳಿಂದ ಸೇವೆಮಾಡಿ, ತಾಯಿಯನ್ನು ಸಂತೋಷವಾಗಿಟ್ಟಿರಬೇಕು. ಆಕೆಗೆ ಹಿಂಸೆ ಎಂದರೆ ಪ್ರಹಾರವನ್ನು ಎಂದಿಗೂ ಮಾಡಬಾರದು. ಎರಡನೆಯದಾಗಿ ತಂದೆ ಸತ್ಕಾರಾರ್ಹನಾದ ದೇವತೆಯು. ಅವನಿಗೂ ತಾಯಿಯಂತೆಯೇ ಸೇವೆಮಾಡಬೇಕು. ಮೂರನೆಯದಾಗಿ ವಿದ್ಯಾದಾತನಾದ ಆಚಾರ್ಯನಿಗೆ ತನು-ಮನ-ಧನಗಳಿಂದ ಸೇವೆ ಮಾಡಬೇಕು. ನಾಲ್ಕನೆಯದಾಗಿ, ವಿದ್ವಾಂಸನೂ, ಧಾರ್ಮಿಕನೂ, ನಿಷ್ಕಪಟಿಯೂ, ಎಲ್ಲರ ಉನ್ನತಿಯನ್ನು ಕೋರುವವನೂ, ಜಗತ್ತಿನಲ್ಲಿ ಸಂಚರಿಸುತ್ತಾ, ಸತ್ಯೋಪದೇಶದಿಂದ ಎಲ್ಲರನ್ನೂ ಸುಖಪಡಿಸುವವನೂ ಆದ ಅತಿಥಿಗೆ ಸೇವೆ ಮಾಡಬೇಕು. ಐದನೆಯದಾಗಿ, ಸ್ತ್ರೀಗೆ ಪುರುಷನೂ, ಪುರುಷನಿಗೆ ಸ್ತ್ರೀಯೂ ಪೂಜನೀಯರಾಗಿರುತ್ತಾರೆ. ಈ ಐದು ಮಂದಿಯೂ ಮೂರ್ತಿಮಂತರಾದ ದೇವತೆಗಳು. ಇವರ ಸಂಗದಿಂದ ಮನುಷ್ಯದೇಹದ ಉತ್ಪತ್ತಿ, ಪಾಲನೆ, ಸತ್ಯಶಿಕ್ಷಣ, ವಿದ್ಯೆ ಮತ್ತು ಸತ್ಯೋಪದೇಶ ಇವುಗಳು ದೊರಕುತ್ತವೆ. ಇವರೇ ಪರಮಾತ್ಮನ ಪ್ರಾಪ್ತಿಯಾಗುವ ಮೆಟ್ಟಿಲುಗಳಾಗಿದ್ದಾರೆ. ಇವರಿಗೆ ಸೇವೆಮಾಡದೆ ಕಲ್ಲು ಮೊದಲಾದ ಬೊಂಬೆಗಳನ್ನು ಪೂಜಿಸುವವರು ಬಹಳ ಪಾಮರರೂ, ನರಕಗಾಮಿಗಳೂ ಆಗಿರುತ್ತಾರೆ.

ಪ್ರ :—ತಂದೆ-ತಾಯಿಗಳನ್ನು ಸೇವಿಸೋಣ; ಮತ್ತು ಮೂರ್ತಿಪೂಜೆಯನ್ನೂ ಮಾಡೋಣ; ಆಗ ಯಾವ ದೋಷವೂ ಇಲ್ಲವಷ್ಟೆ ?

ಉ :—ಪಾಷಾಣಾದಿ ಮೂರ್ತಿಪೂಜೆಯನ್ನು ಸರ್ವಥಾ ಬಿಡುವುದರಲ್ಲೇ ಮತ್ತು ತಾಯಿ-ತಂದೆ ಮೊದಲಾದವರ ಸೇವೆಯನ್ನು ಮಾಡುವುದರಲ್ಲೇ ಕಲ್ಯಾಣವಿದೆ. ಪ್ರತ್ಯಕ್ಷ ಸುಖದಾಯಕರಾಗಿರುವ ಸಾಕ್ಷಾತ್ ತಾಯಿ ಮೊದಲಾದ ದೇವತೆಗಳನ್ನು ಬಿಟ್ಟು, ದೇವರಲ್ಲದ ಕಲ್ಲು ಮೊದಲಾದುವುಗಳಲ್ಲಿ ತಲೆಚಚ್ಚಿಕೊಳ್ಳುವುದು ಬಹಳ ಅನರ್ಥದ ವಿಷಯ. ಇದನ್ನು ಮೂರ್ಖರು " ತಂದೆ-ತಾಯಿ ಮೊದಲಾದವರ

ಮುಂದೆ ನೈವೇದ್ಯವನ್ನಾಗಲಿ, ಕಾಣಿಕೆಯನ್ನಾಗಲಿ ಇಟ್ಟರೆ, ಅವರು ಸ್ವತಃ ತಿನ್ನುವರು. ಮತ್ತು ಕಪ್ಪ ಕಾಣಿಕೆಯನ್ನು ತೆಗೆದುಕೊಳ್ಳುವರು; ತಮ್ಮ ಬಾಯಿಗೆ ಅಥವಾ ಕೈಗೆ ಏನೂ ದಕ್ಕುವುದಿಲ್ಲ" ಎಂದೇ ಸ್ವೀಕರಿಸಿದ್ದಾರೆ. ಆದುದರಿಂದ ಕಲ್ಲು-ಮರ ಮೊದಲಾದುವುಗಳಲ್ಲಿ ವಿಗ್ರಹಗಳನ್ನು ಮಾಡಿ, ಅವುಗಳ ಮುಂದೆ ನೈವೇದ್ಯವನ್ನಿರಿಸಿ, 'ಠಣ, ಠಣ'ವೆಂದು ಘಂಟಾನಾದಮಾಡಿ, 'ಭೋಂ, ಭೋಂ' ಎಂದು ಶಂಖವನ್ನೂದಿ, ಕೋಲಾಹಲವೆಬ್ಬಿಸಿ ತಮ್ಮ ಹೆಬ್ಬೆರಳನ್ನು ವಿಗ್ರಹಕ್ಕೆ ತೋರಿಸುವರು. ಅಂದರೆ, 'ತ್ವಮಂಗುಷ್ಠಂ ಗೃಹಾಣ, ಭೋಜನಂ ಪದಾರ್ಥಂ ವಾಽಹಂ ಗ್ರಹೀಷ್ಯಾಮಿ" ಎಂದು, ಒಬ್ಬನು ಮತ್ತೊಬ್ಬನನ್ನು "ನೀನು ಗಂಟಿ ತೆಗೆದುಕೊ." ಎಂದು ಹೇಳಿ, ವಂಚಿಸುವಂತೆ ಅಥವಾ ರೇಗಿಸುವಂತೆ ಮತ್ತು ಎಲ್ಲಾ ಪದಾರ್ಥಗಳನ್ನೂ ತಾನೇ ಉಪಯೋಗಿಸುವಂತೆ, ಈ ಪೂಜಾರಿಗಳ, ಅಂದರೆ ಪೂಜೆ—ಎಂದರೆ ಸತ್ಕರ್ಮದ ಶತ್ರುಗಳ ಲೀಲೆಯೂ ಇರುತ್ತದೆ. ಇವರು ಥಳಕು-ಬೆಳಕುಗಳಿಂದ, ಒನಪು-ವೈಯಾರಗಳಿಂದ ಮೂರ್ತಿಯನ್ನು ಸಿಂಗರಿಸಿ, ತಾವು ವೇಶ್ಯೆಯರಂತೆ ಅಥವಾ ಹುಮ್ಮೈಳದವರಂತೆ ವೇಷತಾಳಿ, ಬಡಪಾಯಿಗಳೂ, ಮೂಢರೂ, ನಿರ್ಬುದ್ಧಿಗಳೂ, ಅನಾಥರೂ ಆದವರ ಸ್ವತ್ತನ್ನು ಸುಲಿದು ತಾವು ಉಲ್ಲಾಸಪಡುತ್ತಾರೆ. ಯಾವನಾದರೂ ಧಾರ್ಮಿಕನಾದ ರಾಜನು ಇದ್ದಿದ್ದರೆ, ಈ ಪಾಷಾಣಪ್ರಿಯರನ್ನು ಕಲ್ಲು ಒಡೆಯುವುದು, ಕೆತ್ತುವುದು ಮತ್ತು ಮನೆ ಕಟ್ಟುವುದು ಮೊದಲಾದ ಕೆಲಸಗಳಿಗೆ ನೇಮಿಸಿ, ತಿನ್ನಲು-ಕುಡಿಯಲು ಕೊಡುತ್ತಿದ್ದನು ಮತ್ತು ಜೀವನ ಮಾಡಿಸುತ್ತಿದ್ದನು.

ಪ್ರಶ್ನೆ:—ಸ್ತ್ರೀ ಮೊದಲಾದವರ ಪಾಷಾಣಾದಿ ಪ್ರತಿಮೆಗಳನ್ನು ನೋಡುವುದರಿಂದ ಕಾಮೋತ್ಪತ್ತಿಯುಂಟಾಗುವಂತೆ, ವೀತರಾಗನೂ, ಶಾಂತನೂ ಆದವನ ವಿಗ್ರಹವನ್ನು ನೋಡುವುದರಿಂದ ವೈರಾಗ್ಯ, ಮತ್ತು ಶಾಂತಿಯ ಪ್ರಾಪ್ತಿ ಏಕೆ ಉಂಟಾಗುವುದಿಲ್ಲ?

ಉತ್ತರ:—ಆಗಲಾರದು. ಏಕೆಂದರೆ—ಆ ವಿಗ್ರಹದ ಜಡತ್ವ ಧರ್ಮವು ಆತ್ಮನಲ್ಲಿ ಬರುವುದರಿಂದ, ವಿಚಾರಶಕ್ತಿಯು ಕುಗ್ಗಿಹೋಗುತ್ತದೆ. ವಿವೇಕವಿಲ್ಲದೆ ವೈರಾಗ್ಯವೂ, ವೈರಾಗ್ಯವಿಲ್ಲದೆ ವಿಜ್ಞಾನವೂ, ವಿಜ್ಞಾನವಿಲ್ಲದೆ ಶಾಂತಿಯೂ ಉಂಟಾಗಲಾರದು. ಮತ್ತು ಏನು ಅಲ್ಪ

ಸ್ವಲ್ಪ ಪ್ರಯೋಜನವುಂಟಾಗುತ್ತದೋ ಅದೂಕೂಡ, ಅವರ ಸಂಗ ಉಪದೇಶ ಮತ್ತು ಅವರ ಇತಿಹಾಸ ಮೊದಲಾದುವುಗಳನ್ನು ನೋಡು ವುದರಿಂದಲೇ ಉಂಟಾಗುತ್ತದೆ. ಏಕೆಂದರೆ ಯಾವನೊಬ್ಬನ ಗುಣ ಅಥವಾ ದೋಷಗಳನ್ನು ತಿಳಿದುಕೊಳ್ಳದೆ ಅವನ ಮೂರ್ತಿಯನ್ನು ಮಾತ್ರ ನೋಡುವುದರಿಂದ ಪ್ರೀತಿ ಉಂಟಾಗುವುದಿಲ್ಲ. ಪ್ರೀತಿ ಉಂಟಾ ಗುವುದಕ್ಕೆ ಕಾರಣ—ಗುಣ, ಜ್ಞಾನ. ಇಂತಹ ವಿಗ್ರಹಾರಾಧನೆ ಮೊದಲಾದ ದುಷ್ಕಾರಣಗಳಿಂದಲೇ ಆರ್ಯಾವರ್ತದಲ್ಲಿ ಕೆಲಸಕ್ಕೆ ಬಾರದ ಪೂಜಾರಿಗಳೂ, ಭಿಕ್ಷುಕರೂ, ಮೈಗಳ್ಳರೂ ಪುರುಷಾರ್ಥರಹಿತರೂ ಆದ ಮಾನವರು ಕೋಟಿಗಟ್ಟಲೆ ಹೆಚ್ಚಿದ್ದಾರೆ. ಅವರು ಮೂಢರಾಗಿರು ವುದರಿಂದ ಪ್ರಪಂಚದಲ್ಲೆಲ್ಲಾ ಮೂಢತನವನ್ನು ಹರಡಿದ್ದಾರೆ. ಸುಳ್ಳು, ಛಲ ಸಹ ಬಹಳ ಹರಡಿದೆ.

ಪ್ರಶ್ನೆ :—ನೋಡಿರಿ; ಔರಂಗಜೇಬ ಬಾದಶಹನಿಗೆ ಕಾಶಿಯಲ್ಲಿ ಲಾಟಭೈರವ ಮೊದಲಾದುವು ದೊಡ್ಡ ದೊಡ್ಡ ಚಮತ್ಕಾರಗಳನ್ನು ಮಾಡಿ ತೋರಿಸಿದ್ದವು. ಮುಸಲ್ಮಾನರು ಅವನ್ನು ಒಡೆಯಲು ಹೋದಾಗ ಮತ್ತು ಅವರು ಅವುಗಳ ಮೇಲೆ ತೋಪುಗಳನ್ನೂ ಗುಂಡು ಗಳನ್ನೂ ಹಾರಿಸಿದಾಗ, ದೊಡ್ಡ ದೊಡ್ಡ ದುಂಬಿಗಳು ಹೊರಬಂದು ಎಲ್ಲಾ ಸೈನ್ಯವನ್ನು ವ್ಯಾಕುಲಗೊಳಿಸಿ ಓಡಿಸಿಬಿಟ್ಟುವು.

ಉತ್ತರ :—ಇದು ಕಲ್ಲಿನ ಚಮತ್ಕಾರವಲ್ಲ. ಆದರೆ, ಅಲ್ಲಿ ದುಂಬಿಗಳ ಗೂಡುಗಳು ಇದ್ದಿರಬಹುದು. ಅವುಗಳ ಸ್ವಭಾವವೇ ಕ್ರೂರವಾದುದು. ಯಾರಾದರೂ ಅವುಗಳನ್ನು ರೇಗಿಸಿದರೆ, ಅವು ಅವರನ್ನು ಕಚ್ಚುವುದಕ್ಕಾಗಿ ಓಡುತ್ತವೆ. ಮತ್ತು ನಡೆಯುತ್ತಿದ್ದ ಹಾಲಿನ ಧಾರೆಯ ಚಮತ್ಕಾರವು ಪೂಜಾರಿಗಳ ಲೀಲೆಯಾಗಿದ್ದಿತು.

ಪ್ರಶ್ನೆ :—ನೋಡಿರಿ, ಮ್ಲೇಚ್ಛನಿಗೆ ದರ್ಶನಕೊಡದಿರುವುದ ಕ್ಕಾಗಿ ಮಹಾದೇವನು ಬಾವಿಯಲ್ಲಿಯೂ ವೇಣೀಮಾಧವನು ಒಬ್ಬ ಬ್ರಾಹ್ಮಣನ ಮನೆಯಲ್ಲಿಯೂ ಹೋಗಿ ಬಚ್ಚಿಟ್ಟುಕೊಂಡರು. ಇದೂ ಕೂಡ ಚಮತ್ಕಾರವಲ್ಲವೆ?

ಉತ್ತರ :—ಛಲೆ! ಕಾಲಭೈರವ, ಲಾಟಭೈರವ ಮೊದಲಾದ ಭೂತ-ಪ್ರೇತಗಳೂ, ಗರುಡಾದಿ ಗಣಗಳೂ ಯಾರ ದುರ್ಗರಕ್ಷಕರೋ,

ಅವರು ಕಾದಾಡಿ ಮುಸಲ್ಮಾನರನ್ನು ಏಕೆ ಆಟ್ಟಲಿಲ್ಲ? ತ್ರಿಪುರಾಸುರ ಮೊದಲಾದ ಅನೇಕ ಮಹಾಭಯಂಕರ ದುಷ್ಟರನ್ನು ಸುಟ್ಟು ಬೂದಿ ಮಾಡಿದರೆಂದು ಮಹಾದೇವನ ಮತ್ತು ವಿಷ್ಣುವಿನ ಪುರಾಣಗಳಲ್ಲಿ ಕಥೆಯಿರುವಾಗ, ಮುಸಲ್ಮಾನರನ್ನೇಕೆ ಸುಟ್ಟು ಬೂದಿಮಾಡಲಿಲ್ಲ? ಆ ಬಡಪಾಯಿಗಳಾದ ಕಲ್ಲುಗಳು ಏನು ಯುದ್ಧಮಾಡಬಲ್ಲವಾಗಿದ್ದವು, ಮಾಡಿಸಬಲ್ಲವಾಗಿದ್ದುವು? ಮುಸಲ್ಮಾನರು ದೇವಾಲಯಗಳನ್ನೂ, ವಿಗ್ರಹಗಳನ್ನೂ ಕೆಡುಹುತ್ತಾ-ಒಡೆಯುತ್ತಾ ಕಾಶಿಯ ಸಮೀಪಕ್ಕೆ ಬಂದಾಗ, ಪೂಜಾರಿಗಳು ಆ ಕಲ್ಲಿನ ಲಿಂಗವನ್ನು ಬಾವಿಯಲ್ಲಿ ಹಾಕಿ ಮತ್ತು ವೇಣೀಮಾಧವನನ್ನು ಬ್ರಾಹ್ಮಣನ ಮನೆಯಲ್ಲಿಟ್ಟು ಮರೆಮಾಡಿದರು. ಕಾಲಭೈರವನ ಭಯದಿಂದ ಯಮದೂತರು ಕಾಶಿಗೆ ಕಾಲಿಡದಾಗ ಮತ್ತು ಪ್ರಳಯಕಾಲದಲ್ಲಿಯೂ ಕೂಡ ಕಾಶಿಯನ್ನು ನಾಶವಾಗಗೊಡದಿರುವಾಗ ಮ್ಲೇಚ್ಛರ ದೂತರನ್ನೇಕೆ ಹೆದರಿಸಲಿಲ್ಲ? ಮತ್ತು ತಮ್ಮ ರಾಜನ ಮಂದಿರವನ್ನು ನಾಶವಾಗಲು ಏಕೆ ಬಿಟ್ಟರು? ಇವೆಲ್ಲವೂ ಪ್ರೇಪಮಾಯೆ.

ಪ್ರಶ್ನೆ:—ಗಯಾದಲ್ಲಿ ಶ್ರಾದ್ಧಮಾಡುವುದರಿಂದ ಪಿತೃಗಳ ಪಾಪವು ನಾಶವಾಗಿ ಅಲ್ಲಿನ ಶ್ರಾದ್ಧದ ಪುಣ್ಯಪ್ರಭಾವದಿಂದ ಪಿತೃಗಳು ಸ್ವರ್ಗಕ್ಕೆ ಹೋಗುತ್ತಾರೆ. ಮತ್ತು ಪಿತೃಗಳು ತಮ್ಮ ಕೈಗಳನ್ನು ನೀಡಿ, ಪಿಂಡಗಳನ್ನು ತೆಗೆದುಕೊಳ್ಳುತ್ತಾರೆ. ಇದೂ ಕೂಡ ಸುಳ್ಳುಮಾತೆ?

ಉತ್ತರ:—ಶುದ್ಧ ಸುಳ್ಳು. ಅಲ್ಲಿ ಪಿಂಡದಾನ ಮಾಡುವುದರ ಪ್ರಭಾವವು ಅದೇ ಆಗಿರುವುದಾದರೆ, ಯಾವ ಪುರೋಹಿತರಿಗೆ ಪಿತೃಗಳ ಸುಖಕ್ಕಾಗಿ ಲಕ್ಷಾಂತರ ರೂಪಾಯಿ ಕೊಡುತ್ತಾರೋ ಅದನ್ನು ಆ ಗಯಾನಿವಾಸಿಗಳು ವೇಶ್ಯಾಗಮನಾದಿ ಪಾಪಗಳಲ್ಲಿ ವ್ಯಯಮಾಡುತ್ತಾರೆ, ಆ ಪಾಪವೇಕೆ ನಾಶವಾಗುವುದಿಲ್ಲ? ಮತ್ತು ಅಲ್ಲಿ ಪುರೋಹಿತರ ಕೈಗಳ ಹೊರತು, ಬೇರೆ ಯಾವ ಕೈಯೂ ಈ ದಿನಗಳಲ್ಲಿ ಹೊರಗೆ ಬರುವುದು ಕಂಡುಬರುವುದಿಲ್ಲ. ಯಾವನೋ ಧೂರ್ತ ಹಿಂದೆ ಯಾವಾಗಲೋ ಒಂದು ಹಳ್ಳವನ್ನು ತೆಗೆದು, ಅದರಲ್ಲಿ ಒಬ್ಬ ಮನುಷ್ಯನನ್ನು ಕೂಡಿಸಿರಬಹುದು. ಮತ್ತು ಅದರ ಬಾಯಿನ ಮೇಲೆ ಹುಲ್ಲು ಹರಡಿ ಪಿಂಡವಿಟ್ಟಿರಬಹುದು. ಮತ್ತು ಆ ಕಪಟಿಯು ತೆಗೆದುಕೊಂಡಿರ

ಬಹುದು. ಈರೀತಿ ಕಣ್ಣಿದ್ದೂ ಕುರುಡನಾದ ದುಡ್ಡಿನ ದೊಡ್ಡಪ್ಪನಾವನನ್ನಾದರೂ ವಂಚಿಸಿದ್ದರೆ ಆಶ್ಚರ್ಯವಿಲ್ಲ. ಹೀಗೆಯೇ ರಾವಣನು ವೈದ್ಯನಾಥನನ್ನು ತಂದಿದ್ದನೆಂಬುದೂ ಸಹ ಸುಳ್ಳುಮಾತು.

ಪ್ರಶ್ನೆ :—ನೋಡಿರಿ ! ಕಳ್ಳತ್ತೆಯ ಕಾಳೀ ಮತ್ತು ಕಾಮಾಕ್ಷೀ ಮೊದಲಾದ ದೇವತೆಗಳನ್ನು ಲಕ್ಷಾಂತರ ಜನರು ನಂಬುತ್ತಾರೆ. ಇದು ಚಮತ್ಕಾರವಲ್ಲವೆ ?

ಉತ್ತರ :—ಏನೇನೂಅಲ್ಲ. ಈ ಕುರುಡಮಂದಿ ಕುರಿಗಳಂತೆ ; ಅವು ಒಂದರ ಹಿಂದೆ ಒಂದು ನಡೆಯುತ್ತವೆ ; ಭಾವಿ-ಹಳ್ಳಗಳಿಗೆ ಬೀಳುತ್ತವೆ ; ದೂರ ಸರಿಯಲಾರವು. ಹಾಗೆಯೇ ಒಬ್ಬ ಮೂರ್ಖನ ಹಿಂದೆ ಬೇರೆಯವರು ನಡೆದು, ಮೂರ್ತಿಪೂಜೆ-ಎಂಬ ಹಳ್ಳದಲ್ಲಿ ಸಿಕ್ಕಿಕೊಂಡು ದುಃಖಹೊಂದುತ್ತಾರೆ.

ಪ್ರಶ್ನೆ :—ಒಳ್ಳೆಯದು ; ಇದೂ ಹೋಗಲಿ ಬಿಡಿರಿ. ಜಗನ್ನಾಥದಲ್ಲಿ ಪ್ರತ್ಯಕ್ಷ ಚಮತ್ಕಾರಗಳು ನಡೆಯುತ್ತವೆ. ಒಂದು ಶರೀರವನ್ನು ಬದಲಿಸುವಾಗ ಸಮುದ್ರದಲ್ಲಿ ಒಂದು ಗಂಧದ ಕೊರಡು ತಾನಾಗಿ ಬರುತ್ತದೆ.. ಒಲೆಯಮೇಲೆ ಒಂದರಮೇಲೊಂದು ಏಳು ಹಂಡೆಗಳನ್ನಿಟ್ಟರೆ, ಮೇಲೆ ಮಿಲಿನದು ಮೊದಲು ಬೇಯುತ್ತದೆ. ಮತ್ತು ಅಲ್ಲಿ ಜಗನ್ನಾಥನ ಪ್ರಸಾದವನ್ನು ಯಾವನಾದರೂ ತಿನ್ನದಿದ್ದರೆ, ಅವನು ಕುಷ್ಠರೋಗಿಯಾಗಿ ಹೋಗುತ್ತಾನೆ. ಮತ್ತು ರಥವು ತಾನಾಗಿಯೇ ನಡೆಯುತ್ತದೆ. ಪಾಪಿಗೆ ದರ್ಶನವಾಗುವುದಿಲ್ಲ. ಇಂದ್ರದಮನನ ರಾಜ್ಯ ಕಾಲದಲ್ಲಿ ದೇವತೆಗಳು ಆ ಮಂದಿರವನ್ನು ಕಟ್ಟಿದ್ದಾರೆ. ಶರೀರವನ್ನು ಬದಲಾಯಿಸುವಾಗ ಒಬ್ಬ ರಾಜನೂ ಒಬ್ಬ ಪೂಜಾರಿಯೂ, ಒಬ್ಬ ಬಡಗಿಯೂ ಸಾಯುವುದು ಮೊವಲಾದ ಚಮತ್ಕಾರಗಳನ್ನು ನೀವು ಸುಳ್ಳುಮಾಡಲಾರಿರಿ.

ಉತ್ತರ :—ಹನ್ನೆರಡು ವರ್ಷಗಳವರೆಗೆ ಜಗನ್ನಾಥನ ಪೂಜೆ ಮಾಡಿದವನು ವಿರಕ್ತನಾದಿ ಮಥುರೆಗೆ ಬಂದಿದ್ದನು ; ನನ್ನನ್ನು ಸಂಧಿಸಿದ್ದನು. ನಾನು ಈ ಮಾತುಗಳ ಉತ್ತರ ಕೇಳಿದ್ದೆನು ; ಅವನು ಇವೆಲ್ಲವೂ ಸುಳ್ಳೆಂದು ಹೇಳಿದನು. ಆದರೆ ಆಲೋಚನೆಯಿಂದ ಆಗುವ

ನಿಶ್ಚಯವೇನೆಂದರೆ---ಶರೀರವನ್ನು ಬದಲಾಯಿಸುವ ಸಮಯಬಂದಾಗ, ದೋಣಿಯಲ್ಲಿ ಗಂಧದ ಕೊರಡನ್ನು ತೆಗೆದುಕೊಂಡುಹೋಗಿ ಸಮುದ್ರದಲ್ಲಿ ಹಾಕುತ್ತಾರೆ. ಅದು ಅಲೆಗಳ ಹೊಡೆತದಿಂದ ದಡವನ್ನು ಮುಟ್ಟುತ್ತದೆ. ಅದನ್ನು ತೆಗೆದುಕೊಂಡು, ಬಡಗಿಗಳು ವಿಗ್ರಹಗಳನ್ನು ಮಾಡುತ್ತಾರೆ. ಅಡಿಗೆಯಾಗುವಾಗ, ಬಾಗಿಲುಗಳನ್ನು ಹಾಕಿಕೊಂಡು, ಅಡಿಗೆಯವರನ್ನು ಬಿಟ್ಟು ಬೇರೆ ಯಾರನ್ನೂ ಒಳಕ್ಕೆ ಹೋಗಲೂ, ನೋಡಲೂ ಬಿಡುವುದಿಲ್ಲ. ನೆಲದಮೇಲೆ ನಾಲ್ಕೈಡೆಯೂ ಅರು, ಮತ್ತು ಮಧ್ಯದಲ್ಲಿ ಒಂದು ಒಲೆ ಚಕ್ರಾಕಾರವಾಗಿರುತ್ತವೆ; ಆ ಹಂಡೆಗಳ ಕೆಳಭಾಗದಲ್ಲಿ ತುಪ್ಪ, ಮಣ್ಣು ಮತ್ತು ಬೂದಿಯನ್ನು ಬಳಿದು, ಅರು ಒಲೆಗಳ ಮೇಲೆ ಅನ್ನವನ್ನು ಬೇಯಿಸಿ, ಅವುಗಳ ತಳಭಾಗವನ್ನು ತೊಳೆದು, ಮಧ್ಯದ ಹಂಡೆಗೆ ಅಕ್ಕಿಯನ್ನು ಆಗಲೇ ಹಾಕಿ, ಅರು ಹಂಡೆಗಳ ಬಾಯಿಗಳನ್ನೂ ಕಬ್ಬಿಣದ ಹೆಂಚುಗಳಿಂದ ಮುಚ್ಚಿ, ಧನಾಢ್ಯರಾದ ದರ್ಶಕರನ್ನು ಕರೆದು ತೋರಿಸುತ್ತಾರೆ. ಮೇಲೆಮೇಲಿನ ಹಂಡೆಗಳಿಂದ ಅನ್ನವನ್ನು ತೆಗೆದು, ಬೆಂದಿರುವ ಅಕ್ಕಿಯನ್ನು ತೋರಿಸಿ, ಕೆಳಗಿನ ಬೇಯದ ಅಕ್ಕಿಯನ್ನು ತೆಗೆದು ತೋರಿಸಿ, 'ಹಂಡೆಗಳಿಗಾಗಿ ಏನಾದರೂ ಅರ್ಪಿಸಿ' ಎನ್ನುತ್ತಾರೆ. ಬುದ್ಧಿಯಿಲ್ಲದ ಶ್ರೀಮಂತರು ರೂಪಾಯಿಗಳನ್ನೂ, ಚಿನ್ನದ ಮೊಹರುಗಳನ್ನೂ ಅರ್ಪಿಸುತ್ತಾರೆ; ಮತ್ತು ಕೆಲಕೆಲವರು ಮಾಸಿಕವಂತಿಕೆಯನ್ನು ಕಟ್ಟಿಬಿಡುತ್ತಾರೆ. ಶೂದ್ರರೂ ನೀಚಜನರೂ ದೇವರಿಗೆ ನೈವೇದ್ಯವನ್ನು ತರುತ್ತಾರೆ. ನೈವೇದ್ಯವಾದಮೇಲೆ ಆ ಶೂದ್ರರೂ, ನೀಚರೂ ಎಂಜಲು ಮಾಡುತ್ತಾರೆ. ಆ ಮೇಲೆ ಹಣಕೊಟ್ಟು ಹಂಡೆಯನ್ನು ತೆಗೆದುಕೊಳ್ಳುವವನ ಮನೆಗೆ ಅದನ್ನು ತಲುಪಿಸುತ್ತಾರೆ. ಮತ್ತು ಬಡವರಾದ ಗೃಹಸ್ಥರು ಮತ್ತು ಸಾಧು-ಸಂತರಿಂದ ಹಿಡಿದು ಶೂದ್ರ ಮತ್ತು ಅಂತ್ಯಜರವರೆಗೆ ಎಲ್ಲರೂ ಒಂದೇ ಪಂಕ್ತಿಯಲ್ಲಿ ಕುಳಿತು ಒಬ್ಬರ ಎಂಜಲನ್ನು ಮತ್ತೊಬ್ಬರು ತಿನ್ನುತ್ತಾರೆ. ಮತ್ತು ಒಂದು ಪಂಕ್ತಿ ಎದ್ದು ಹೋದಾಗ, ಅದೇ ಎಲೆಗಳ ಮೇಲೆ ಬೇರೆಯವರನ್ನು ಕೂಡಿಸುತ್ತಾ ಹೋಗುತ್ತಾರೆ. ಮಹಾ ಅನಾಚಾರವಾಗಿರುತ್ತದೆ. ಮತ್ತು ಎಷ್ಟೋಮಂದಿಗಳು ಅಲ್ಲಿ ಹೋಗಿ ಅವರ ಎಂಜಲನ್ನು ತಿನ್ನದೆ, ತಮ್ಮ ಕೈಯಿಂದಲೇ ಅಡಿಗೆ

ಮಾಡಿಕೊಂಡು, ಊಟಮಾಡಿ ಬರುತ್ತಾರೆ. ಕುಷ್ಠ ಮೊದಲಾದ ಯಾವ ರೋಗವೂ ಬರುವುದಿಲ್ಲ. ಮತ್ತು ಅದೇ ಜಗನ್ನಾಥಪುರಿಯ ಲ್ಲಿಯೂ, ಪ್ರಸಾದವನ್ನು ಬಹಳ ಜನ ತಿನ್ನುವುದಿಲ್ಲ. ಅವರಿಗೂ ಕುಷ್ಠಾದಿರೋಗಗಳು ಬರುವುದಿಲ್ಲ. ಮತ್ತು ಆ ಜಗನ್ನಾಥಪುರಿಯಲ್ಲಿಯೇ ಬಹುಮಂದಿ ಕುಷ್ಠರೋಗಿಗಳಿದ್ದಾರೆ; ದಿನವೂ ಎಂಜಲು ತಿಂದರೂ ರೋಗ ಹೋಗುವುದಿಲ್ಲ. ಮತ್ತು ಜಗನ್ನಾಥದಲ್ಲಿ ವಾಮಮಾರ್ಗಿಗಳು ಈ ಬೈರವೀಚಕ್ರವನ್ನು ಮಾಡಿದ್ದಾರೆ. ಏಕೆಂದರೆ ಸುಭದ್ರೆಯು ಶ್ರೀ ಕೃಷ್ಣ-ಬಲರಾಮರಿಗೆ ತಂಗಿಯಾಗಬೇಕು. ಅವಳನ್ನೇ ಇಬ್ಬರು ಸೋದರರ ಮಧ್ಯದಲ್ಲಿ ಹೆಂಡತಿಯ ಮತ್ತು ತಾಯಿಯ ಜಾಗದಲ್ಲಿ ಕೂಡಿಸಿದ್ದಾರೆ. ಭೈರವೀಚಕ್ರವಲ್ಲದೆ ಇದ್ದರೆ, ಇಂತಹ ವರ್ತನೆ ಎಂದೂ ಆಗುತ್ತಿರಲಿಲ್ಲ. ಮತ್ತು ರಥದ ಚಕ್ರದಲ್ಲಿ ಯಾವುದೋ ಒಂದು ಯಂತ್ರವನ್ನು ಮಾಡಿಟ್ಟಿದ್ದಾರೆ. ಅದನ್ನು ನೇರವಾಗಿ ತಿರುಗಿಸುವುದ ರಿಂದ ಅದು ತಿರುಗುತ್ತದೆ; ಆಗ ರಥವು ನಡೆಯುತ್ತದೆ. ಗುಂಪಿನ ನಡುವೆ ಸೇರಿದಾಗ, ಆ ಕೀಲನ್ನು ಹಿಂದಕ್ಕೆ ತಿರುಗಿಸುವುದರಿಂದ ರಥವು ನಿಂತುಹೋಗುತ್ತದೆ. ಆ ಪೂಜಾರಿಗಳು "ಜಗನ್ನಾಥನು ಪ್ರಸನ್ನನಾಗಿ ತನ್ನ ರಥವನ್ನು ನಡೆಸುವಂತೆ ಮತ್ತು ನಿಮ್ಮ ಧರ್ಮ ಉಳಿಯುವಂತೆ ದಾನಮಾಡಿರಿ" ಎಂದು ಕೂಗಿಕೊಳ್ಳುತ್ತಾರೆ. ಕಾಣಿಕೆ ಗಳು ಬರುತ್ತಿರುವವರೆಗೂ ಹೀಗೆಯೇ ಅರಚಿಕೊಳ್ಳುತ್ತಿರುತ್ತಾರೆ. ಮುಗಿದಬಳಿಕ ಉತ್ತಮವಾದ ವಸ್ತ್ರಗಳನ್ನೂ, ಶಾಲನ್ನೂ ಧರಿಸಿ ಕೊಂಡು ಒಬ್ಬ ವ್ರಜದೇಶೀಯನು ಮುಂದೆ ಬಂದು ನಿಂತು, ಕೈ ಜೋಡಿಸಿಕೊಂಡು, 'ಹೇ, ಜಗನ್ನಾಥಸ್ವಾಮಿಯವರೇ, ತಾವು ಕೃಪೆ ಮಾಡಿ ರಥವನ್ನು ನಡೆಸಿ ನಮ್ಮ ಧರ್ಮವನ್ನು ಕಾಪಾಡಿರಿ' ಎಂದು ಸ್ತುತಿಸುತ್ತಾನೆ. ಈ ಮೊದಲಾದುವನ್ನು ಹೇಳಿ ಸಾಷ್ಟಾಂಗ ದಂಡವತ್ ಪ್ರಣಾಮವನ್ನುಮಾಡಿ ತೇರನ್ನು ಹತ್ತುತ್ತಾನೆ. ಅದೇ ಸಮಯದಲ್ಲಿ ಕೀಲನ್ನು ನೇರವಾಗಿ ತಿರುಗಿಸಿಬಿಡುತ್ತಾರೆ. ಮತ್ತು ಸಾವಿರಾರು ಜನರು ಜಯಜಯಕಾರಮಾಡಿ, ಹಗ್ಗವನ್ನೆಳೆಯುತ್ತಾರೆ. ರಥವು ಸಾಗುತ್ತದೆ. ಮಂದಿರವು ಹಗಲಲ್ಲಿಯೇ ಕತ್ತಲುಕವಿದಿರುವಷ್ಟು ದೊಡ್ಡದಾಗಿದೆ. ಬಹಳ ಮಂದಿ ದರ್ಶನಕ್ಕಾಗಿ ಹೋಗುವಾಗ ದೀಪವನ್ನು ಹಚ್ಚಿಸ

ಬೇಕಾಗುತ್ತದೆ. ವಿಗ್ರಹಗಳ ಮುಂದೆ ಎಳೆದುಹಾಕುವಂತಹ ತೆರೆಗಳು ಎರಡು ಕಡೆಯೂ ಇರುತ್ತವೆ. ಪುರೋಹಿತ–ಪೂಜಾರಿಗಳು ಒಳಗೆ ನಿಂತಿರುತ್ತಾರೆ. ಒಂದು ಕಡೆಯವನು ತೆರೆಯನ್ನು ಎಳೆಯುತ್ತಲೇ ವಿಗ್ರಹವು ಮರೆಯಾಗಿಹೋಗುತ್ತದೆ. ಆಗ ಎಲ್ಲಾ ಪುರೋಹಿತ–ಪೂಜಾರಿಗಳೂ– " ಕಾಣಿಕೆಗಳನ್ನು ಅರ್ಪಿಸಿ. ನಿಮ್ಮ ಪಾಪಗಳು ಕಳೆದುಹೋಗುವುವು. ಆಗ ದರ್ಶನವಾಗುವುದು. ಜಾಗ್ರತೆ ಮಾಡಿರಿ " ಎಂದು ಗಟ್ಟಿಯಾಗಿ ಕೂಗಿ ಹೇಳುತ್ತಾರೆ. ಆ ಬಡಪಾಯಿಗಳಾದ ಅರಿಯದ ಮಾನವರು ಈ ಧೂರ್ತರ ಕೈಯಿಂದ ದರೋಡೆಮಾಡಲ್ಪಡುತ್ತಾರೆ. ಕೂಡಲೇ ಪೂಜಾರಿಗಳು ಇನ್ನೊಂದು ಪರದೆಯನ್ನು ಎಳೆಯುತ್ತಾರೆ; ಆಗಲೇ ದರ್ಶನವಾಗುತ್ತದೆ. ಆಗ, ಜಯಕಾರ ಮಾಡಿ. ಪ್ರಸನ್ನರಾಗಿ, ನೂಕ್ಕಲ್ಪಟ್ಟು ಶಿರಸ್ಕೃತರಾಗಿ ಹೊರಟುಬರುತ್ತಾರೆ. ಯಾವನ ಸಂತತಿಯವರು ಇಂದಿಗೂ ಕಲ್ಕತ್ತೆಯಲ್ಲಿದ್ದಾರೋ, ಅವನೇ ಇಂದ್ರದಮನು. ಅವನು ಧನಾಢ್ಯನಾದ ರಾಜನೂ, ದೇವಿಯ ಉಪಾಸಕನೂ ಆಗಿದ್ದನು. ಆರ್ಯಾವರ್ತದೇಶದ ಭೋಜನದ ಗೊಂದಲವನ್ನು ಈ ರೀತಿ ತಪ್ಪಿಸಬೇಕೆಂದು, ಅತನು ಲಕ್ಷಾಂತರ ರೂಪಾಯಿಗಳನ್ನು ವೆಚ್ಚ ಮಾಡಿ ದೇವಾಲಯವನ್ನು ಕಟ್ಟಿಸಿದ್ದನು, ಆದರೆ ಆ ಮೂರ್ಖರು ಎಂದಿಗೆ ಬಿಡುತ್ತಾರೆ? ದೇವತೆಗಳೆಂದು ಒಪ್ಪುವುದಾದರೆ, ಆ ಮಂದಿರವನ್ನು ಕಟ್ಟಿದ ಶಿಲ್ಪಿಗಳನ್ನೇ ಹಾಗೆ ಒಪ್ಪಿರಿ. ರಾಜ, ಪೂಜಾರಿ ಮತ್ತು ಬಡಗಿ ಆಗ ಸಾಯುವುದಿಲ್ಲ. ಆದರೆ ಆ ಮೂರು ಮಂದಿಯೂ, ಅಲ್ಲಿ ಮುಖ್ಯರಾಗಿರುತ್ತಾರೆ. ಚಿಕ್ಕವರಿಗೆ ದುಃಖಕೊಡುತ್ತಿರಬಹುದು. ಒಟ್ಟಾಗಿ ಸಲಹೆ ಮಾಡಿಕೊಂಡು–ಅದೇ ಸಮಯದಲ್ಲಿ, ಅಂದರೆ ಶರೀರ ಬದಲಾಯಿಸುವ ಕಾಲದಲ್ಲಿ ಅವರು ಮೂವರೂ ಅಲ್ಲಿಯೇ ಇರುತ್ತಾರೆ– ಮೂರ್ತಿಯ ಹೃದಯವನ್ನು ಟೊಳ್ಳಾಗಿಟ್ಟಿರುತ್ತಾರೆ. ಅದರಲ್ಲಿ ಒಂದು ಚಿನ್ನದ ಭರಣಿಯಲ್ಲಿ ಸಾಲಿಗ್ರಾಮವನ್ನು ಇಡುತ್ತಾರೆ. ಅದನ್ನು ನಿತ್ಯವೂ ತೊಳೆದು ಚರಣಾಮೃತವನ್ನು ಮಾಡುತ್ತಾರೆ. ರಾತ್ರಿಯ ಶಯನದ ಆರತಿಯಲ್ಲಿ ಅವರು ಅದರ ಮೇಲೆ ವಿಷದ ಅರ್ಕವನ್ನು ಹಚ್ಚಿರಬಹುದು. ಅದನ್ನು ತೊಳೆದು ಅದೇ ಮೂವರಿಗೆ ಕುಡಿಸಿರಬಹುದು. ಅದರಿಂದ ಅವರು ಎಂದೋ ಸತ್ತುಹೋಗಿರಬಹುದು.

ಅವರು ಸತ್ತುದೇನೋ ಹೀಗೆ; ಆದರೆ ಭೋಜನದ ಭಟ್ಟರು "ಜಗನ್ನಾಥನು ತನ್ನ ಶರೀರವನ್ನು ಬದಲಾಯಿಸುವಾಗ ಮೂವರು ಭಕ್ತರನ್ನು ಒಡನೆ ಕರೆದುಕೊಂಡು ಹೋದನು"—ಎಂದು ಪ್ರಸಿದ್ಧಿ ಪಡಿಸಿರಬಹುದು. ಇತರರ ಹಣವನ್ನು ಅಪಹರಿಸುವುದಕ್ಕಾಗಿ ಇಂತಹ ಸುಳ್ಳು ಮಾತುಗಳು ಬಹಳ ಹುಟ್ಟುತ್ತಿರುತ್ತವೆ.

ಪ್ರಶ್ನೆ :—ರಾಮೇಶ್ವರದಲ್ಲಿ ಗಂಗೋತ್ತರೀಯ ನೀರನ್ನು ಎರೆಯುವಾಗ ಲಿಂಗವು ದೊಡ್ಡದಾಗುತ್ತದೆ. ಈ ಮಾತು ಕೂಡ ಸುಳ್ಳೋ?

ಉತ್ತರ :—ಸುಳ್ಳು. ಆ ದೇವಾಲಯದಲ್ಲಿಯೂ ಕೂಡ ಹಗಲು ಹೊತ್ತಿನಲ್ಲಿ ಕತ್ತಲು ಕವಿದಿರುತ್ತದೆ. ರಾತ್ರಿ ಹಗಲು ದೀಪಗಳು ಉರಿಯುತ್ತಿರುತ್ತವೆ. ನೀರಿನ ಧಾರೆಯನ್ನು ಬಿಡುವಾಗ, ಆ ಜಲದಲ್ಲಿ ಮಿಂಚಿನಂತೆ ದೀಪದ ಪ್ರತಿಬಿಂಬ ಮಿರುಗುತ್ತದೆ. ಮತ್ತೇನೂ ಇಲ್ಲ. ಕಲ್ಲು ದೊಡ್ಡದೂ ಆಗದು; ಚಿಕ್ಕದೂ ಆಗದು. ಎಷ್ಟಿರುತ್ತದೋ ಅಷ್ಟೇ ಇರುತ್ತದೆ. ಇಂತಹ ಲೀಲೆ ರಚಿಸಿ, ಬಡಪಾಯಿಗಳಾದ ಬುದ್ಧಿಹೀನರನ್ನು ಮೋಸಪಡಿಸುತ್ತಾರೆ.

ಪ್ರಶ್ನೆ:—ರಾಮೇಶ್ವರನನ್ನು ರಾಮಚಂದ್ರನು ಸ್ಥಾಪಿಸಿದ್ದಾನೆ. ಮೂರ್ತಿಪೂಜೆಯು ವೇದವಿರುದ್ಧವಾದದ್ದಾದರೆ, ಶ್ರೀರಾಮಚಂದ್ರನು ಮೂರ್ತಿಸ್ಥಾಪನೆಯನ್ನು ಏಕೆ ಮಾಡುತ್ತಿದ್ದನು? ಮತ್ತು ವಾಲ್ಮೀಕಿಗಳು ರಾಮಾಯಣದಲ್ಲಿ ಏಕೆ ಬರೆಯುತ್ತಿದ್ದರು?

ಉತ್ತರ:—ಶ್ರೀರಾಮಚಂದ್ರನ ಕಾಲದಲ್ಲಿ ಆ ಲಿಂಗದ ಅಥವಾ ದೇವಾಲಯದ ಹೆಸರು ಗುರುತೂ ಸಹ ಇರಲಿಲ್ಲ. ಆದರೆ ದಕ್ಷಿಣದೇಶದವನಾದ ರಾಮನೆಂಬ ರಾಜನು ದೇವಸ್ಥಾನವನ್ನು ಕಟ್ಟಿಸಿ, ಲಿಂಗಕ್ಕೆ ರಾಮೇಶ್ವರವೆಂದು ಹೆಸರಿಟ್ಟಿದ್ದಾನೆ-ಎಂಬುದು ಸರಿ. ಶ್ರೀರಾಮಚಂದ್ರನು ಸೀತೆಯನ್ನು ಕರೆದುಕೊಂಡು, ಹನುಮಂತ ಮೊದಲಾದವರೊಡನೆ ಲಂಕೆಯಿಂದ ಹೊರಟು, ವಿಮಾನದಲ್ಲಿ ಕುಳಿತು ಆಕಾಶಮಾರ್ಗದಲ್ಲಿ ಅಯೋಧ್ಯೆಗೆ ಬರುತ್ತಿದ್ದಾಗ, ಸೀತೆಗೆ :—

ಅತ್ರ ಪೂರ್ವಂ ಮಹಾದೇವಃ ಪ್ರಸಾದಮಕರೋದ್ವಿಭುಃ ।
ಸೇತು ಬಂಧ ಇತಿವಿಖ್ಯಾತಮ್ ॥

[ವಾಲ್ಮೀಕಿ, ಲಂಕಾ : ೧೨೫-೨೦]

'ಹೇ ಸೀತೆ! ನಾವು ನಿನ್ನ ವಿಯೋಗದಿಂದ ವ್ಯಾಕುಲರಾಗಿ ತಿರುಗುತ್ತಿದ್ದೆವು. ಮತ್ತು ಈ ಪ್ರದೇಶದಲ್ಲಿಯೇ ಚಾತುರ್ಮಾಸ್ಯವನ್ನು ಮಾಡಿದ್ದೆವು ಮತ್ತು ಪರಮಾತ್ಮನ ಉಪಾಸನಾಧ್ಯಾನವನ್ನೂ ಕೂಡ ಮಾಡುತ್ತಿದ್ದೆವು. ಸರ್ವತ್ರ ವಿಭುವೂ (ವ್ಯಾಪಕ), ದೇವತೆಗಳಿಗೆ ದೇವನೂ, ಮಹಾದೇವನೂ ಆದ ಪರಮೇಶ್ವರನ ದಯೆಯಿಂದ ನಮಗೆ ಎಲ್ಲಾ ಸಾಮಗ್ರಿಗಳೂ ಇಲ್ಲಿ ದೊರೆತವು. ಮತ್ತು ನೋಡು; ನಾವು ಈ ಸೇತುವೆಯನ್ನು ಕಟ್ಟಿ, ಲಂಕೆಗೆ ಬಂದು, ರಾವಣನನ್ನು ಕೊಂದು ನಿನ್ನನ್ನು ಕರೆತಂದೆವು' ಎಂದು ಹೇಳಿದ್ದಾನೆ. ಇದರ ಹೊರತು ವಾಲ್ಮೀಕಿ ರಾಮಾಯಣದಲ್ಲಿ ಮತ್ತೇನೂ ಬರೆದಿಲ್ಲ.

ಪ್ರಶ್ನೆ:—

ರಂಗ್ ಹೈ ಕಾಲಿಯಾಕಂತ ಕೋ।

ಜಿಸ್‌ನೇ ಹುಕ್ಕಾ ಪಿಲಾಯಾ ಸಂತ್ ಕೋ।

ದಕ್ಷಿಣವಲ್ಲಿ ಕಾಲಿಯಾಕಂತನ ಒಂದು ಮೂರ್ತಿಯಿರುತ್ತದೆ. ಅದು ಇಂದಿಗೂ ಕೂಡ ಗುಡಿಗುಡಿಯನ್ನು ಸೇದುತ್ತದೆ. ಮೂರ್ತಿ ಪೂಜೆಯು ಸುಳ್ಳಾಗಿದ್ದರೆ ಈ ಚಮತ್ಕಾರವೂ ಸುಳ್ಳಾದೀತು!

ಉತ್ತರ:—ಸುಳ್ಳು, ಸುಳ್ಳು. ಇದೆಲ್ಲಾ ಪೋಪರ ಲೀಲೆಯಾಗಿರುತ್ತದೆ. ಏಕೆಂದರೆ, ಆ ವಿಗ್ರಹದ ಬಾಯಿ ಪೊಳ್ಳಾಗಿರಬಹುದು. ಅದರ ಛಿದ್ರವನ್ನು ಬೆನ್ನಿನಿಂದ ಹೊರಡಿಸಿ, ಗೋಡೆಗಾಚೆ ಬೇರೆ ಕೊಠಡಿಯಲ್ಲಿ ಕೊಳವೆಯಿಟ್ಟಿರಬಹುದು. ಪೂಜಾರಿಯು ಹುಕ್ಕಾ ತುಂಬಿಸಿ, ಕೊಳವೆ ಜೋಡಿಸಿ, ಬಾಯಿಗೆ ಅದನ್ನು ಹೊಂದಿಸಿ ಪರದೆಹಾಕಿ ಹೊರಗೆ ಬಂದಾಗಲೇ ಹಿಂದೆ ಕುಳಿತ ಮನುಷ್ಯನು ಬಾಯಿನಿಂದ ಎಳೆಯುತ್ತಿರಬಹುದು. ಮತ್ತು ಇಲ್ಲಿ ಹುಕ್ಕಾ ಗಡಗಡ ಶಬ್ದ ಮಾಡುತ್ತಿರಬಹುದು. ಬಾಯಿಗೂ ಮೂಳೆಗಳಿಗೂ ಸಂಬಂಧವಿರುವಂತೆ ಬೇರೊಂದು ರಂಧ್ರವಿರಬಹುದು. ಹಿಂದಿರುವವನು ಊದಿದಾಗ, ಬಾಯಿಂದಲೂ, ಮೂಗಿನ ಹೊಳ್ಳೆಗಳಿಂದಲೂ ಹೊಗೆ ಹೊರಡುತ್ತಿರಬಹುದು. ಆಗ ಬಹುಮಂದಿ ಮೂಢಜನರ ಸೂರೆಮಾಡಿ, ಹಣ

ಮೊದಲಾದ ಪದಾರ್ಥಗಳನ್ನು ಸುಲಿದುಕೊಂಡು ನಿರ್ಧನರನ್ನಾಗಿ ಮಾಡುತ್ತಿರಬಹುದು.

ಪ್ರಶ್ನೆ:—ನೋಡಿರಿ! ಠಾಕೋರನ ವಿಗ್ರಹವು ತನ್ನ ಭಕ್ತನೊಡನೆ ದ್ವಾರಕೆಯಿಂದ ಹೊರಟುಬಂದಿತು. ಎಷ್ಟೋ ಮಣಗಳ ಆ ವಿಗ್ರಹವು ಒಂದೂಕಾಲು ಗುಲಗಂಜಿಯ ತೂಕಕ್ಕೆ ಸಮವಾಯಿತು. ಇದು ಕೂಡ ಚಮತ್ಕಾರವಲ್ಲವೆ?

ಉತ್ತರ:—ಅಲ್ಲ. ಆ ಭಕ್ತನು ಆ ಮೂರ್ತಿಯನ್ನು ಕದ್ದು ತಂದಿರಬಹುದು. ಮತ್ತು ಒಂದೂಕಾಲು ಗುಲಗಂಜಿಯ ತೂಕಕ್ಕೆ ಮೂರ್ತಿ ಸಮವಾಗಿತ್ತೆಂಬುದು ಯಾವನೋ ಭಂಗಿಕೋರನು ಹೊಡೆದ ಬುರುಡೆಯಿರಬಹುದು..

ಉತ್ತರ:—ನೋಡಿರಿ! ಸೋಮನಾಥನು ಭೂಮಿಯಿಂದ ಮೇಲಕ್ಕೇ ಇರುತ್ತಿದ್ದನು. ಮತ್ತು ಅದು ಮಹಾ ಚಮತ್ಕಾರವಾಗಿತ್ತು! ಇದೂ ಸುಳ್ಳುಮಾತೋ?

ಉತ್ತರ:—ಹೌದು, ಸುಳ್ಳು. ಕೇಳಿರಿ! ಕೆಳಗೂ ಮೇಲೂ ಸೂಜಿಗಲ್ಲುಗಳನ್ನು ಹೊಂದಿಸಿಟ್ಟಿದ್ದರು. ಅದರ ಆಕರ್ಷಣದಿಂದ ಆ ವಿಗ್ರಹವು ನಡುವೆ ನಿಂತಿದ್ದಿತು. ಘಜನೀಮಹಮ್ಮದನು ಬಂದು ಹೋರಾಡಿದಾಗ ದೇವಾಲಯ ಮುರಿಯಲ್ಪಟ್ಟಿತು. ಮತ್ತು ಪೂಜಾರೀ ಭಕ್ತರಿಗೆ ದುರ್ಗತಿಯಾಯಿತು. ಮತ್ತು ಲಕ್ಷಾಂತರ ಸೇನೆಯು ಹತ್ತುಸಾವಿರ ಸೈನಿಕರಿಗೆ ಹಿಮ್ಮೆಟ್ಟಿ ಓಡಿತು. ಇದೇ ಚಮತ್ಕಾರ ಆದುದು! ಪೋಪಪೂಜಾರಿಗಳು "ಹೇ ಮಹಾದೇವ! ಈ ಮ್ಲೇಚ್ಛನನ್ನು ನೀನು ಕೊಂದುಹಾಕು; ನಮ್ಮನ್ನು ಕಾಪಾಡು' ಎಂದು ಪೂಜೆ, ಪುರಶ್ಚರಣೆ, ಸ್ತುತಿ, ಪ್ರಾರ್ಥನೆ ನಡೆಸಿದರು. ಮತ್ತು ತಮಗೆ ಶಿಷ್ಯರಾಗಿದ್ದ ರಾಜರಿಗೆ "ನೀವು ನಿಶ್ಚಿಂತರಾಗಿರಿ; ಮಹಾದೇವನು ಭೈರವನನ್ನಾಗಲಿ, ವೀರಭದ್ರನನ್ನಾಗಲಿ ಕಳುಹಿಸಿಕೊಡುವನು. ಅವರು ಎಲ್ಲಾ ಮ್ಲೇಚ್ಛರನ್ನೂ ಸಾಯಿಸಿಬಿಡುತ್ತಾರೆ. ಇಲ್ಲವೇ ಕುರುಡರನ್ನಾಗಿ ಮಾಡಿಬಿಡುತ್ತಾರೆ. ಇನ್ನೂ ನಮ್ಮ ದೇವರು ಪ್ರಸಿದ್ಧನಾಗುತ್ತಾನೆ. ಹನುಮಂತನೂ, ದುರ್ಗೆಯೂ, ಭೈರವನೂ 'ಎಲ್ಲಾ ಕೆಲಸ

ಗಳನ್ನೂ ನಾವು ಮಾಡಿಬಿಡುವೆವು' ಎಂದು ಸ್ವಪ್ನವಿತ್ತಿದ್ದಾರೆ" ಎಂದು ಉಪದೇಶಿಸುತ್ತಿದ್ದರು. ಏನೂ ಅರಿಯದ ಆ ರಾಜರೂ, ಕ್ಷತ್ರಿಯರೂ ಪೋಪರ ವಂಚನೆಯಿಂದ ನಂಬಿಕೆಯಿಂದಿದ್ದರು. ಎಷ್ಟೋ ಮಂದಿ ಜೋಯಿಸರು ಪೋಪರು "ನಿಮ್ಮ ಧಾಳಿಗೆ ಇನ್ನೂ ಮುಹೂರ್ತ ಬಂದಿಲ್ಲ" ಎಂದು ಹೇಳಿದರು. ಒಬ್ಬನು ಚಂದ್ರನು ಅಷ್ಟಮದಲ್ಲಿದಾನೆಂದನು; ಮತ್ತೊಬ್ಬನು ಯೋಗತಾರೆಯನ್ನು ಎದುರಿಗೆ ಕಾಣಿಸಿದನು. ಈ ಮೊದಲಾದ ದುಷ್ಪ್ರೇರಣೆಗೆ ಸಿಕ್ಕಿದ್ದರು. ಮ್ಲೇಚ್ಛರ ಸೈನ್ಯವು ಬಂದು ಮುತ್ತಿಗೆ ಹಾಕಿದಾಗ ದುರ್ದಶೆಗೆ ಸಿಕ್ಕಿ ಓಡಿ ಹೋದರು. ಎಷ್ಟೋ ಮಂದಿ ಪೋಪರೂ, ಪೂಜಾರಿಗಳೂ ಅವರ ಶಿಷ್ಯರೂ ಹಿಡಿಯಲ್ಪಟ್ಟರು. ಪೂಜಾರಿಗಳು ಕೈಜೋಡಿಸಿಕೊಂಡು, "ಮೂರುಕೋಟಿ ರೂಪಾಯಿಗಳನ್ನು ತೆಗೆದುಕೊಳ್ಳಿ. ದೇವಾಲಯವನ್ನು ಮೂರ್ತಿಯನ್ನೂ ಒಡೆಯಹಾಕಬೇಡಿರಿ" ಎಂದೂ ಸಹ ಬೇಡಿಕೊಂಡರು. ಮುಸಲ್ಮಾನರು 'ನಾವು ಮೂರ್ತಿಪೂಜಕರಲ್ಲ; ಆದರೆ ಮೂರ್ತಿಭೇದಕರು' ಎಂದು ಹೇಳಿದರು. ಹೋಗಿ, ದೇವಾಲಯವನ್ನು ಕೂಡಲೇ ಕೆಡಹಿಬಿಟ್ಟರು. ಮೇಲಿನ ಚಾವಣಿಯು ಮುರಿದಾಗ, ಆಯುಸ್ಕಾಂತವು ಬೇರೆಯಾದುದರಿಂದ ಮೂರ್ತಿ ಬಿದ್ದುಹೋಯಿತು. ಮೂರ್ತಿಯನ್ನು ಒಡೆದಾಗ, ಹದಿನೆಂಟು ಕೋಟಿ ರೂಪಾಯಿಗಳ ರತ್ನಗಳು ಸಿಕ್ಕಿದವೆಂದು ಕೇಳುತ್ತೇವೆ. ಪೂಜಾರಿ–ಪೋಪರಮೇಲೆ ಚಾವಟಿ ಏಟು ಬಿದ್ದಾಗ ಅಳಹತ್ತಿದರು. 'ನಿಮ್ಮ ಬೊಕ್ಕಸವನ್ನು ತೋರಿಸಿರಿ' ಎಂದು ಕೇಳಿದರು. ಏಟಿನ ಕಾರಣದಿಂದ ಕೂಡಲೇ ತೋರಿಸಿಬಿಟ್ಟರು. ಆಗ ದೇಶವನ್ನೆಲ್ಲಾ ಲೂಟಿಮಾಡಿ, ಹೊಡೆದು ಬಡೆದು ಪೋಪರನ್ನೂ ಅವರ ಶಿಷ್ಯರನ್ನೂ ಕೂಲಿಯಿಲ್ಲದ ದಾಸರನ್ನಾಗಿ ಮಾಡಿಕೊಂಡು, ಹಿಟ್ಟನ್ನು ಬೀಸಿಸಿದರು, ಹುಲ್ಲನ್ನು ಕೆತ್ತಿಸಿದರು, ಮಲ–ಮೂತ್ರಾದಿಗಳನ್ನು ಎತ್ತಿಸಿದರು ಮತ್ತು ತಿನ್ನುವುದಕ್ಕೆ ಕಡಲೆಕೊಟ್ಟರು! ಅಯ್ಯೋ ಕಲ್ಲುಗಳನ್ನು ಪೂಜಿಸಿ ಏಕೆ ಸರ್ವನಾಶಮಾಡಿಕೊಂಡಿರಿ! ಮ್ಲೇಚ್ಛರ ಹಲ್ಲು ಮುರಿಯಲಾಗುವಂತೆ, ಮತ್ತು ತಮ್ಮ ಜಯ ಸಾಧಿಸುವಂತೆ, ಪರಮಾತ್ಮನಲ್ಲೇಕೆ ಭಕ್ತಿಯಿಡಲಿಲ್ಲ? ನೋಡಿರಿ; ಎಷ್ಟು ಮೂರ್ತಿಗಳಿವೆಯೋ ಅಷ್ಟು ಜನ ಶೂರ–ವೀರರನ್ನಾದರೂ

ಪೂಜಿಸಿದ್ದರೆ ಎಷ್ಟು ರಕ್ಷಣೆಯಾಗುತ್ತಿತ್ತು? ಪೂಜಾರಿಗಳು ಈ ಕಲ್ಲು ಬೊಂಬೆಗಳಲ್ಲಿ ಇಷ್ಟೊಂದು ಭಕ್ತಿಯನ್ನು ಇಟ್ಟರೂ, ಒಂದು ವಿಗ್ರಹವಾದರೂ ಶತ್ರುಗಳ ತಲೆಯಮೇಲೆ ಎಗರಿ ಬೀಳಲಿಲ್ಲ; ವಿಗ್ರಹಕ್ಕೆ ಮಾಡಿದಂತೆ, ಯಾವನಾದರೂ ಒಬ್ಬ ಶೂರ-ವೀರಪುರುಷನ ಸೇವೆ ಮಾಡಿದ್ದರೆ ಆತನು ತನ್ನ ಸೇವಕರನ್ನು ಶಕ್ತಿಯಿದ್ದಷ್ಟು ಕಾಪಾಡುತ್ತಿದ್ದನು. ಮತ್ತು ಶತ್ರುಗಳನ್ನು ಕೊಂದುಹಾಕುತ್ತಿದ್ದನು.

ಪ್ರಶ್ನೆ :—ದ್ವಾರಕೆಯಲ್ಲಿ ರಣಛೋಡದೇವರು 'ನರಸಿ ಮೆಹತಾ'ನ ಹತ್ತಿರ ಹುಂಡಿಯನ್ನು ಕಳುಹಿಸಿದನು. ಮತ್ತು ಆತನ ಸಾಲ ತೀರಿಸಿಬಿಟ್ಟನು. ಈ ಮೊದಲಾದ ಮಾತುಗಳು ಸಹ ಸುಳ್ಳೋ?

ಉತ್ತರ :—ಯಾವನೋ ಸಾಹುಕಾರನು ರೂಪಾಯಿಗಳನ್ನು ಕೊಟ್ಟಿರಬಹುದು. ಯಾವನೋ ಶ್ರೀ ಕೃಷ್ಣನು ಕಳುಹಿಸಿದನೆಂದು ಸುಳ್ಳು ಸುದ್ದಿಯನ್ನು ಹುಟ್ಟಿಸಿರಬಹುದು. ವಿಕ್ರಮಶಕ ೧೯೧೪ನೆಯ ಸಂವತ್ಸರದಲ್ಲಿ ಆಂಗ್ಲೇಯರು ಗುಂಡುಗಳನ್ನು ಹೊಡೆದು ಮಂದಿರಗಳನ್ನೂ, ಮೂರ್ತಿಗಳನ್ನೂ ಹಾರಿಸಿಬಿಟ್ಟಿದ್ದಾಗ ಮೂರ್ತಿಯು ಎಲ್ಲಿ ಹೋಗಿತ್ತು? ಆದರೆ 'ಬಾಷ್ಕೇರ್' ಜನರು ಎಷ್ಟೋ ವೀರತನ ತೋರಿದರು ಮತ್ತು ಕಾದಾಡಿ, ಶತ್ರುಗಳನ್ನು ಕೊಂದರು. ಆದರೆ ಮೂರ್ತಿಯು ಒಂದು ನೊಣದ ಕಾಲನ್ನು ಮುರಿಯಲೂ ಸಮರ್ಥವಾಗಿರಲಿಲ್ಲ. ಶ್ರೀ ಕೃಷ್ಣನಂತಹವನು ಯಾವನಾದರೂ ಇದ್ದಲ್ಲಿ ಇವರ ಸೊಕ್ಕನ್ನು ಮುರಿದುಹಾಕುತ್ತಿದ್ದನು. ಮತ್ತು ಇವರು ಓಡುತ್ತಾ ಅಲೆಯುತ್ತಿದ್ದರು. ಒಳ್ಳೆಯದು, ಯಾರ ರಕ್ಷಕನೇ ಒದೆತಿನ್ನುತ್ತಾನೋ, ಅವರ ಶರಣಾಗತರೇಕೆ ಏಟು ತಿನ್ನದೆ ಇದ್ದಾರು? ಹೇಳಿರಿ.

ಪ್ರಶ್ನೆ :—ಜ್ವಾಲಾಮುಖಿಯಂತೂ ಪ್ರತ್ಯಕ್ಷ ದೇವಿಯಾಗಿರುತ್ತಾಳೆ; ಎಲ್ಲವನ್ನೂ ತಿಂದುಬಿಡುತ್ತಾಳೆ. ಮತ್ತು ಪ್ರಸಾದ ಕೊಟ್ಟರೆ, ಅರ್ಧ ತಿನ್ನುತ್ತಾಳೆ ಮತ್ತು ಅರ್ಧ ಬಿಟ್ಟುಬಿಡುತ್ತಾಳೆ. ಮುಸಲ್ಮಾನ ಬಾದಶಹರು ಅವಳ ಮೇಲೆ ನೀರಿನ ಕಾಲುವೆಯನ್ನು ಬಿಡಿಸಿದ್ದರು; ಮತ್ತು ಕಬ್ಬಿಣದ ತಗಡುಗಳನ್ನು ಹೊಡೆಯಿಸಿದ್ದರು. ಆದರೂ ಜ್ವಾಲೆಯು ಆರಲಿಲ್ಲ. ನಿಲ್ಲಲೂ ಇಲ್ಲ. ಹಾಗೆಯೇ ಹಿಂಗುಲಾಜ ದೇವತೆಯೂ ಸಹ ಅರ್ಧರಾತ್ರಿಯ ಸಮಯದಲ್ಲಿ ಸವಾರಿ ಮಾಡುತ್ತಾ

ಬೆಟ್ಟದ ಮೇಲೆ ಕಾಣಿಸಿಕೊಳ್ಳುತ್ತದೆ. ಪರ್ವತವನ್ನು ಗುಡುಗಿಸುತ್ತದೆ. ಮತ್ತು ಅಲ್ಲಿರುವ ಚಂದ್ರಕೂಪವು ಮಾತನಾಡುತ್ತದೆ. ಮತ್ತು ಯೋನಿ ಯಂತ್ರದಲ್ಲಿ ನುಸಿದು ಬಂದರೆ ಪುನರ್ಜನ್ಮವಿಲ್ಲ. ಠಮರೆಯನ್ನು ಧರಿಸುವುದರಿಂದ ಪೂರ್ಣ ಮಹಾಪುರುಷನೆನಿಸುತ್ತಾನೆ. ಹಿಂಗಲಾಜಿಗೆ ಹೋಗಿಬಾರದವರೆಗೆ ಅರ್ಧಮಹಾಪುರುಷನೆನಿಸಿಸುತ್ತಾನೆ. ಈ ಮೊದ ಲಾದ ಮಾತುಗಳೆಲ್ಲಾ ಒಪ್ಪಲು ಅರ್ಹವಾದುವಲ್ಲವೇ ?

ಉತ್ತರ !—ಅಲ್ಲ. ಏಕೆಂದರೆ ಜ್ವಾಲಾಮುಖೀ ಪರ್ವತದಿಂದ ಬೆಂಕಿಯು ಹೊರಡುತ್ತದೆ. ಅದರಲ್ಲಿ ಪೂಜಾರಿಗಳ ವಿಚಿತ್ರವಾದ ಲೀಲೆಯಿದೆ. ಒಗ್ಗರಣೆಯ ತುಪ್ಪದ ಸೌಟನಲ್ಲಿ ಉರಿ ಹೊತ್ತಿಕೊಳ್ಳು ತ್ತದೆ ; ಬೇರೆ ಮಾಡುವುದರಿಂದ ಅಥವಾ ಊದುವುದರಿಂದ ಆರಿಹೋಗು ತ್ತದೆ ; ಸ್ವಲ್ಪ ತುಪ್ಪವನ್ನು ತಿಂದುಬಿಡುತ್ತದೆ ; ಉಳಿದುದನ್ನು ಬಿಟ್ಟು ಬಿಡುತ್ತದೆ. ಹೀಗೆಯೇ ಅಲ್ಲಿಯೂ ನಡೆಯುತ್ತದೆ. ಒಲೆಯ ಉರಿಯಲ್ಲಿ ಹಾಕಿದುದೆಲ್ಲಾ ಭಸ್ಮವಾಗಿಹೋಗುತ್ತದೆ. ಹಾಗೆಯೇ ಕಾಡು ಮತ್ತು ಮನೆಗೆಬಿದ್ದ ಬೆಂಕಿ ಎಲ್ಲವನ್ನೂ ಕಬಳಿಸುತ್ತದೆ. ಇದಕ್ಕಿಂತ ಅಲ್ಲಿಹೆಚ್ಚೇನು ವಿಶೇಷವಿದೆ?ಅಲ್ಲಿ ಒಂದು ಮಂದಿರ, ಒಂದು ಕುಂಟೆ, ಮತ್ತು ಇಲ್ಲಿ-ಅಲ್ಲಿ ನಲ್ಲಿಗಳ ರಚನೆಯ ಹೊರತು, ಹಿಂಗಲಾಜಿನಲ್ಲಿ ಯಾವ ಸವಾರಿಯೂ ಇಲ್ಲ. ಏನಾದರೂ ಆಗುವುದಾದರೆ, ಅದೆಲ್ಲಾ ಪೋಪ-ಪೂಜಾರಿಗಳ ಲೀಲೆಯಿಂದ ; ಬೇರೇನೂ ಇಲ್ಲ. ಒಂದು ನೀರಿನ ಮತ್ತು ಕೆಸರಿನ ಹೊಂಡವನ್ನು ಮಾಡಿದ್ದಾರೆ. ಅದರ ಕೆಳಗಿನಿಂದ ನೀರು ಗುಳ್ಳೆಗಳು ಏಳುತ್ತವೆ. ಮೂಢರು ಅದನ್ನು ಸಫಲಯಾತ್ರೆಯೆಂದು ತಿಳಿಯುತ್ತಾರೆ. ಯೋನಿಯಂತ್ರವನ್ನು ಪೋಪರು ಹಣವನ್ನು ಸುಲಿಯುವುದಕ್ಕಾಗಿ ಮಾಡಿಸಿಟ್ಟಿದ್ದಾರೆ. ಮತ್ತು ಠಮರೆಯೂ ಸಹ ಅದೇ ರೀತಿ ಪೋಪ ಲೀಲೆಯದೇ ! ಅದರಿಂದ ಮಹಾಪುರುಷನಾಗುವನಾದರೆ ಒಂದು ಪಶುವಿನ ಮೇಲೆ ಠಮರೆಯ ಹೊರೆಯನ್ನು ಹೊರಿಸಿದರೆ ಅದು ಮಹಾಪುರುಷನಾಗಿಹೋಗುವುದೇ ? ಮಹಾಪುರುಷನಾದರೋ ಅತ್ಯು ತ್ತಮವಾದ ಧರ್ಮಯುಕ್ತವಾದ ಪುರುಷಾರ್ಥದಿಂದ ಆಗುತ್ತಾನೆ.

ಪ್ರಶ್ನೆ :—ಅಮೃತಸರದಲ್ಲಿರುವ ಕೆರೆಯು ಅಮೃತಸ್ವರೂಪ ವಾಗಿದೆ. ಅಲ್ಲಿರುವ ಅತಿಮಧುರಾಫಲದಲ್ಲಿ ಅರ್ಧ ಸಿಹಿಯಾಗಿದೆ.

ಮತ್ತು ಒಂದು ಗೋಡೆಯು ಬಗ್ಗುವುದು. ಆದರೆ ಬೀಳುವುದಿಲ್ಲ. ರೇವಾಲ ಸರಸ್ಸಿನಲ್ಲಿ ದೋಣಿಗಳು ತೇಲುತ್ತವೆ. ಅಮರನಾಥದಲ್ಲಿ ತಾವಾಗಿಯೇ ಲಿಂಗಗಳಾಗುವುವು. ಹಿಮಾಲಯದಿಂದ ಪಾರಿವಾಳಗಳ ಜೋಡಿಗಳು ಬಂದು ಎಲ್ಲರಿಗೂ ದರ್ಶನಕೊಟ್ಟು ಹೋಗುವುವು. ಇವೂ ಒಪ್ಪಲರ್ಹವಲ್ಲವೆ?

ಉತ್ತರ:—ಅಲ್ಲ. ಆ ಕೆರೆಗೆ ಹೆಸರು ಮಾತ್ರ ಅಮೃತಸರ. ಕಾಡಾಗಿದ್ದಾಗ ಯಾವಾಗಲೋ ಆ ಕೆರೆಯ ನೀರು ಚೆನ್ನಾಗಿದ್ದಿರಬಹುದು. ಆದುದರಿಂದ ಅದಕ್ಕೆ ಅಮೃತಸರಸ್ಸು ಎಂಬ ಹೆಸರು ಇಟ್ಟಿರಬಹುದು. ಅಮೃತವಾಗಿದ್ದರೆ, ಪೌರಾಣಿಕರ ನಂಬಿಕೆಯಂತೆ, ಯಾರಾದರೂ ಸಾಯುತ್ತಾರೇಕೆ? ಬಗ್ಗುವಂತೆಯೂ, ಕೆಳಗೆ ಬೀಳದಿರುವಂತೆಯೂ ಗೋಡೆಯ ನಿರ್ಮಾಣವಿರಬಹುದು. ಅಂಟುವಾಳದ ಕಾಯಿಗಳು ಕಶಿಯ ಫಲವಿರಬಹುದು, ಇಲ್ಲವೇ ಬುರುಡೆಯಾಗಿರಬಹುದು. ರೇವಾಲ ಸರೋವರದಲ್ಲಿ ಏನೋ ಚಳಕವಿರಬಹುದು. ಅಮರನಾಥದಲ್ಲಿ ಮುಂಜಿನ ಬೆಟ್ಟಗಳು ಆಗುತ್ತಿರುವಾಗ, ನೀರು ಗಟ್ಟಿಯಾಗಿ, ಸಣ್ಣ ಲಿಂಗವಾದುದು ಯಾವ ಆಶ್ಚರ್ಯ? ಮತ್ತು ಪಾರಿವಾಳಗಳ ಜೊತೆಗಳು ಸಾಕಿರುವುವಾಗಿರಬಹುದು; ಪರ್ವತದ ಮರೆಯಿಂದ ಪೋಷರು ಬಿಡುತ್ತಿರಬಹುದು; ತೋರಿಸಿ ದುಡ್ಡನ್ನು ಕಸಿಯುತ್ತಿರಬಹುದು.

ಪ್ರಶ್ನೆ:—ಹರಿದ್ವಾರವು ಸ್ವರ್ಗದ ಬಾಗಿಲಾಗಿರುತ್ತದೆ. ಹರ ಸೋಪಾನದಲ್ಲಿ ಸ್ನಾನಮಾಡಿದರೆ, ಪಾಪಗಳು ತೊಡೆದುಹೋಗುತ್ತವೆ. ಮತ್ತು ತಪೋವನದಲ್ಲಿರುವುದರಿಂದ ತಪಸ್ವಿಯಾಗುತ್ತಾನೆ. ದೇವಪ್ರಯಾಗ, ಗಂಗೋತ್ತರಿಯಲ್ಲಿ ಗೋಮುಖ, ಉತ್ತರಕಾಶಿಯಲ್ಲಿ ಗುಪ್ತಕಾಶಿ ಮತ್ತು ತ್ರಿಯುಗೀ ನಾರಾಯಣನ ಸಂದರ್ಶನವೂ ಲಭಿಸುತ್ತದೆ. ಕೇದಾರನನ್ನು ಮತ್ತು ಬದರೀನಾರಾಯಣನನ್ನು ವರ್ಷದಲ್ಲಿ ಆರುತಿಂಗಳವರೆಗೆ ಮನುಷ್ಯರೂ, ಆರುತಿಂಗಳವರೆಗೆ ದೇವತೆಗಳೂ ಪೂಜಿಸುತ್ತಾರೆ. ಪಶುಪತಿಯೆನಿಸುವ ಮಹಾದೇವನ ಮುಖವು ನೇಪಾಳದಲ್ಲಿಯೂ, ಪಿರ್ರೆಗಳು ಕೇದಾರದಲ್ಲಿಯೂ, ಮೊಣಕಾಲುಗಳು ತುಂಗನಾಥದಲ್ಲಿಯೂ ಪಾದಗಳು ಅಮರನಾಥದಲ್ಲಿಯೂ

ಇರುತ್ತವೆ. ಅವುಗಳ ದರ್ಶನ-ಸ್ಪರ್ಶನದಿಂದಲೂ ಸ್ನಾನದಿಂದಲೂ ಮೋಕ್ಷವುಂಟಾಗುತ್ತದೆ. ಅಲ್ಲಿ ಕೇದಾರದಿಂದ ಮತ್ತು ಬದರಿಯಿಂದ ಸ್ವರ್ಗಕ್ಕೆ ಹೋಗಬಯಸಿದರೆ ಹೋಗಬಹುದು. ಈ ಮೊದಲಾದ ಸಂಗತಿಗಳು ಹೇಗಿವೆ?

ಉತ್ತರ:—ಹರಿದ್ವಾರವು ಉತ್ತರ ಪರ್ವತಗಳಿಗೆ ಹೋಗುವ ಒಂದು ದಾರಿಯ ಪ್ರಾರಂಭವು. ಹರಸೋಪಾನವು ಸ್ನಾನಮಾಡುವುದ ಕ್ಕಾಗಿ ಕುಂಡಕ್ಕೆ ಕಟ್ಟಿರುವ ಸೋಪಾನ. ಸತ್ಯ ಕೇಳುವಿರಾದರೆ, ಅದು ಅಸ್ಥಿ ಸೋಪಾನವಾಗಿರುತ್ತದೆ. ಏಕೆಂದರೆ, ದೇಶದೇಶಾಂತರಗಳಲ್ಲಿ ಸತ್ತವರ ಮೂಳೆಗಳು ಅದರಲ್ಲಿ ಬೀಳುತ್ತಿರುತ್ತವೆ. ಪಾಪವು ಅನುಭವಿ ಸದೆ ಎಲ್ಲಿಯೂ ಎಂದಿಗೂ ಕಳೆದು ಹೋಗದು; ಅಥವಾ ಕಡಿಮೆಯೂ ಆಗದು. ತಪೋವನವು ಯಾವಾಗ ಆಗಿರಬಹುದೋ, ಆಗಿರಬಹುದು; ಈಗಂತೂ "ಭಿಕ್ಷುವನ" ವಾಗಿದೆ. ತಪೋವನಕ್ಕೆ ಹೋಗುವುದರಿಂದ-ಅಲ್ಲಿರುವುದರಿಂದ ತಪಸ್ಸು ಆಗುವುದಿಲ್ಲ. ತಪಸ್ಸಾದರೋ ಮಾಡುವುದ ರಿಂದ ಆಗುತ್ತದೆ. ಏಕೆಂದರೆ, ಅಲ್ಲಿ ಬಹುಮಂದಿ ಅಂಗಡಿಕಾರರು ಸುಳ್ಳುಹೇಳುವವರು ಇರುತ್ತಾರೆ. 'ಹಿಮವತಃ ಪ್ರಭವತಿ ಗಂಗಾ' ಪರ್ವತದ ಮೇಲಿಂದ ನೀರು ಬೀಳುತ್ತದೆ. ಗೋಮುಖದ ಆಕಾರವನ್ನು ಪೋಷಲೀಲೆಯಿಂದ ರಚಿಸಿರಬಹುದು. ಮತ್ತು ಅದೇ ಪರ್ವತ ಪೋಷನ ಸ್ವರ್ಗ. ಅಲ್ಲಿ ಉತ್ತರಕಾಶಿ ಮೊದಲಾದ ಪ್ರದೇಶಗಳು ಧ್ಯಾನಮಾಡು ವವರಿಗೆ ಉತ್ತಮವಾಗಿರುತ್ತವೆ: ಆದರೆ ವರ್ತಕರಿಗೆ ಅಲ್ಲಿಯೂ ವಾಣಿ ಜ್ಯವೇ. ದೇವಪ್ರಯಾಗವು ಪುರಾಣದ ಪೊಳ್ಳು ಹರಟೆಗಳ ಲೀಲೆ. ಅಂದರೆ—ಅಲಖನಂದ ಮತ್ತು ಗಂಗೆ ಅಲ್ಲಿ ಸೇರಿರುವುದರಿಂದ ದೇವತೆ ಗಳು ಅಲ್ಲಿ ವಾಸಿಸುತ್ತಾರೆ-ಎಂದು ಬುರುಡೆ ಹೊಡೆಯದಿದ್ದರೆ, ಅಲ್ಲಿ ಹೋಗುವವರಾರು? ಮತ್ತು ದುಡ್ಡನ್ನು ಯಾರು ಕೊಡುವರು? ಗುಪ್ತ ಕಾಶಿಯಂತೂ ಇಲ್ಲ; ಅದು ಪ್ರಸಿದ್ಧ ಕಾಶಿಯೇ ಆಗಿರುತ್ತದೆ. ಮೂರು ಯುಗಗಳ ಅಗ್ನಿಯೇನೋ ಕಾಣಿಸುವುದಿಲ್ಲ. ಆದರೆ-ಖಾಖಿಗಳ ಬೆಂಕಿ ಮತ್ತು ಪಾರಸಿಗಳ ಅಗಿಯಾರಿ ಸದಾ ಉರಿಯುತ್ತಿರುವಂತೆ, ಪೋಷರ ೧೦-೨೦ ತಲೆಮಾರುಗಳ ಬೆಂಕಿಯಿರಬಹುದು. ತಪ್ತ ಕುಂಡವೂ ಇಷ್ಟೆ; ಪರ್ವತಗಳ ಒಳಗೆ ಕಾವಿರುತ್ತದೆ; ನೀರು ಅದರಲ್ಲಿ ಕಾದು ಬರುತ್ತದೆ.

ಅದರ ಸಮೀಪದಲ್ಲಿ ಮತ್ತೊಂದು ಕುಂಡದಲ್ಲಿ ಮೇಲಿನ ನೀರು ಅಥವಾ ಕಾವಿಲ್ಲದ ಸ್ಥಳದ ನೀರು ಬರುತ್ತದೆ. ಅದರಿಂದ ತಣ್ಣಗಿರುತ್ತದೆ. ಬಹಳ ಉತ್ತಮವಾಗಿದೆ. ಆದರೆ ಅಲ್ಲಿಯೂ ಕೂಡ ಪೋಪರು ಮತ್ತು ಅವರ ಶಿಷ್ಯರು ದೃಢವಾದ ಕಲ್ಲು ಬಂಡೆಯ ಮೇಲೆ ಒಂದು ದೇವಾಲಯವನ್ನು ಕಟ್ಟಿದ್ದಾರೆ. ಅಲ್ಲಿರುವ ಮಹಂತರೂ, ಪೂಜಾರಿಗಳೂ, ಪಂಡರೂ ಬುದ್ಧಿಯಿಲ್ಲದ ಶ್ರೀಮಂತರಿಂದ ಹಣವನ್ನು ಸುಲಿದುಕೊಂಡು ವಿಷಯಸುಖವನ್ನನುಭವಿಸುತ್ತಾರೆ. ಹಾಗೆಯೇ ಬದರೀ ನಾರಾಯಣದಲ್ಲಿ ಠಕ್ಕುವಿದ್ಯೆಯವರು ಬಹುಮಂದಿ ಕುಳಿತಿದ್ದಾರೆ. ರಾವಲ್‌ಜೀ ಎಂಬುವನು ಆಲ್ಲಿನ ಪ್ರಧಾನನಾಗಿದ್ದಾನೆ. ಅವನು ಒಬ್ಬಳನ್ನು ಬಿಟ್ಟು ಅನೇಕಮಂದಿ ಹೆಂಗಸರನ್ನು ಇಟ್ಟುಕೊಂಡು ಕುಳಿತಿದ್ದಾನೆ. ಒಂದು ದೇವಾಲಯಕ್ಕೆ ಪಶುಪತಿಯೆಂದೂ, ವಿಗ್ರಹಕ್ಕೆ ಪಂಚಮುಖಿಯೆಂದೂ ಹೆಸರಿಟ್ಟಿದ್ದಾರೆ. ಯಾರೂ ಕೇಳದಿದ್ದಾಗಲೇ ಪೋಪಲೀಲೆಗಳು ಪ್ರಬಲವಾಗುತ್ತವೆ. ಆದರೆ ತೀರ್ಥದ ಜನರು ಧೂರ್ತರೂ, ದ್ರವ್ಯಾಪಹಾರಿಗಳೂ ಆಗಿರುವಂತೆ ಪರ್ವತೀಯರು ಆಗಿರುವುದಿಲ್ಲ. ಅಲ್ಲಿನ ಭೂಮಿಯು ಬಹಳ ರಮಣೀಯವೂ, ಪವಿತ್ರವೂ ಆಗಿರುತ್ತದೆ.

ಪ್ರಶ್ನೆ:—ವಿಂಧ್ಯಪರ್ವತದಲ್ಲಿ ವಿಂಧ್ಯೇಶ್ವರಿ, ಕಾಳೀ, ಅಷ್ಟಭುಜಾದೇವಿಯು ಪ್ರತ್ಯಕ್ಷ ಸತ್ಯವಾಗಿರುತ್ತದೆ. ವಿಂಧ್ಯೇಶ್ವರಿಯು ಮೂರುಕಾಲದಲ್ಲಿ ಮೂರು ರೂಪಗಳನ್ನು ಪರಿವರ್ತಿಸುತ್ತಾಳೆ. ಮತ್ತು ಅವಳ ಅಂಗಳದಲ್ಲಿ ನೊಣ ಒಂದೂ ಸಹ ಇರುವುದಿಲ್ಲ. ಪ್ರಯಾಗವು ತೀರ್ಥರಾಜ; ಅಲ್ಲಿ ತಲೆಬೋಳಿಸುವುದರಿಂದ ಸಿದ್ಧಿ ಲಭಿಸುತ್ತದೆ. ಗಂಗಾ-ಯಮುನಾಗಳ ಸಂಗಮದಲ್ಲಿ ಸ್ನಾನಮಾಡಿದರೆ ಇಷ್ಟ ಸಿದ್ಧಿಯಾಗುತ್ತದೆ. ಹಾಗೆಯೇ ಅಯೋಧ್ಯಾನಗರವು ಎಷ್ಟೋಸಲ ಹಾರಿ, ಜನ-ಜಂಗುಳಿಸಮೇತ ಸ್ವರ್ಗಕ್ಕೆ ಹೊರಟುಹೋಯಿತು. ಮಥುರೆ ಎಲ್ಲ ತೀರ್ಥಗಳಿಗಿಂತ ಹೆಚ್ಚು; ಬೃಂದಾವನವು ಲೀಲಾಸ್ಥಾನವಾಗಿರುತ್ತದೆ. ಗೋವರ್ಧನವ್ರಜಯಾತ್ರೆಯು ಬಹಳ ಅದೃಷ್ಟದಿಂದ ಲಭಿಸುತ್ತದೆ. ಕುರುಕ್ಷೇತ್ರದಲ್ಲಿ ಸೂರ್ಯಗ್ರಹಣದ ಸಮಯದಲ್ಲಿ ಲಕ್ಷಾಂತರ ಜನರ ಜಾತ್ರೆ ಸೇರುತ್ತದೆ. ಈ ಮಾತುಗಳೆಲ್ಲಾ ಸುಳ್ಳೇ?

ಉತ್ತರ:—ಪ್ರತ್ಯಕ್ಷವಾಗಿ ಮೂರು ವಿಗ್ರಹಗಳೂ ಕಲ್ಲಿನ

ಮೂರ್ತಿಗಳಾಗಿ ಕಾಣುತ್ತವೆ. ವಿಂಧ್ಯೇಶ್ವರಿಯು ಮೂರುಕಾಲಗಳಲ್ಲಿ ಮೂರು ರೂಪಗಳುಂಟಾಗುವುದಕ್ಕೆ ಪೂಜಾರಿಗಳು ವಸ್ತ್ರಾದಿ ಆ ಭೂಷಣಗಳನ್ನು ತೊಡಿಸುವ ಚಾತುರ್ಯವೇ ಕಾರಣ. ಮತ್ತು ನೊಣಗಳು ಸಾವಿರಾರು ಲಕ್ಷ್ಯಾಂತರ ಇರುತ್ತವೆ; ನಾನು ಕಣ್ಣಾರೆ ಕಂಡಿದ್ದೇನೆ. ಪ್ರಯಾಗದಲ್ಲಿ ಯಾವನೋ ಶ್ಲೋಕ ರಚಿಸುವ ಪಜಾಮನು ಸ್ವತಃ ಅಥವಾ ಪೋಪರಿಗೆ ಕೊಂಚ ಹಣವಿತ್ತು ತಲೆ ಬೋಳಿಸುವುದರ ಮಾಹಾತ್ಮ್ಯವನ್ನು ಬರೆದಿರಬಹುದು ಅಥವಾ ಬರೆಸಿರ ಬಹುದು. ಪ್ರಯಾಗದಲ್ಲಿ ಸ್ನಾನಮಾಡಿ ಸ್ವರ್ಗಕ್ಕೆ ಹೋಗುವುದಾದರೆ, ಯಾರೂ ಹಿಂದಿರುಗಿ ಮನೆಗೆ ಬರುವುದು ಕಾಣುತ್ತಿರಲಿಲ್ಲ; ಆದರೆ ಎಲ್ಲರೂ ಮನೆಗೆ ಬರುವುದು ಕಾಣುತ್ತದೆ. ಅಥವಾ ಯಾವನಾದರೂ ಅಲ್ಲಿ ಮುಳುಗಿ ಸತ್ತರೆ, ಅವರ ಜೀವವೂ ಆಕಾಶದಲ್ಲಿ ವಾಯುವಿನೊಡನೆ ತಿರುಗಿ, ಜನ್ಮವನ್ನು ಹೊಂದಬಹುದು. ತೀರ್ಥರಾಜ ಎಂಬ ಹೆಸರನ್ನೂ ಪೋಪರೇ ಇಟ್ಟಿದ್ದಾರೆ. ಜಡದಲ್ಲಿ ರಾಜ-ಪ್ರಜಾಭಾವವು ಎಂದೂ ಇರಲಾರದು. ಅಯೋಧ್ಯಾನಗರಿಯ ನಿವಾಸಿಗಳು, ನಾಯಿಗಳು, ಕತ್ತೆಗಳು, ಬೀದಿಯನ್ನು ಗುಡಿಸುವವನು, ಜೋಡನ್ನು ಹೊಲೆಯುವವನು, ಕಕ್ಕಸಗಳು ಮೊದಲಾದುವುಗಳೊಂದಿಗೆ ಮೂರುಸಲ ಸ್ವರ್ಗಕ್ಕೆ ಹೋಗಿತ್ತೆಂಬುದು ಬಹಳ ಅಸಂಭವವಾಗಿರುತ್ತದೆ. ಸ್ವರ್ಗ ಕ್ಕೇನೋ ಹೋಗಲಿಲ್ಲ; ಎಲ್ಲಿದ್ದಿತೋ ಅಲ್ಲಿಯೇ ಇರುತ್ತದೆ. ಆದರೆ ಪೋಪರ ಬಾಯಿನ ಪೊಳ್ಳು ಕೂಗುಗಳಲ್ಲಿ ಅಯೋಧ್ಯೆಯು ಸ್ವರ್ಗಕ್ಕೆ ಹಾರಿಹೋಯಿತು. ಈ ಶಬ್ದರೂಪವಾದ ಹರಟೆ ಹಾರುತ್ತಾ ತಿರುಗು ತ್ತಿರುತ್ತದೆ. ಹೀಗೆಯೇ ನೈಮಿಷಾರಣ್ಯ ಮೊದಲಾದುವುಗಳ ಪೋಪ ಲೀಲೆಯನ್ನೂ ತಿಳಿಯಬೇಕು. ಮಥುರೆಯು ಮೂರು ಲೋಕಗಳಿಗಿಂತ ವಿಲಕ್ಷಣವಾಗಿಯೇನೋ ಇಲ್ಲ; ಆದರೆ ಅದರಲ್ಲಿ ಮೂರು ವಿಚಿತ್ರ ಜಂತುಗಳು ಮಹಾ ಲೀಲಾಧಾರಿಗಳಾಗಿವೆ. ಅವುಗಳ ದೆಸೆಯಿಂದ ಜಲ, ಸ್ಥಳ ಮತ್ತು ಅಂತರಿಕ್ಷದಲ್ಲಿ ಯಾರಿಗೂ ಸುಖ ದೊರೆಯುವುದು ಕಠಿಣವಾಗಿರುತ್ತದೆ. ಒಂದನೆಯದಾಗಿ, ಯಾರಾದರೂ ಸ್ನಾನಮಾಡು ವುದಕ್ಕೆ ಹೋದರೆ, ತನ್ನ ತೆರಿಗೆಯನ್ನು ತೆಗೆದುಕೊಳ್ಳುವುದಕ್ಕಾಗಿ ನಿಂತಿದ್ದು, " ಬನ್ನಿರಿ ಯಜಮಾನರೇ! ಭಂಗಿ, ಮೀಣಸು ಮತ್ತು ಲಾಡು

ಗಳನ್ನು ತಿನ್ನೋಣ, ಕುಡಿಯೋಣ, ಯಜಮಾನಿನಿಗೆ ಜಯಕಾರ ಮಾಡೋಣ" ಎಂದು ಒದರುತ್ತಿರುವ ಚೌಬೆಗಳು. ಎರಡನೆಯದಾಗಿ ನೀರಿನಲ್ಲಿ ಅಮೆಗಳು ಕಚ್ಚಿಯೇ ಬಿಡುತ್ತವೆ; ಅವುಗಳ ದೆಸೆಯಿಂದ ಘಟ್ಟದಲ್ಲಿ ಸ್ನಾನಮಾಡುವುದೂ ಕೂಡ ಕಷ್ಟವಾಗಿರುತ್ತದೆ. ಮೂರನೆಯದಾಗಿ, ಆಕಾಶದಲ್ಲಿ ಕೆಂಪುವೋರೆಯು ಕೋತಿಗಳು ರುಮಾಲು, ಟೋಪಿ, ಹಾಗೂ ಆಭರಣಗಳನ್ನೂ, ಕಡೆಗೆ ಪಾದರಕ್ಷೆಗಳನ್ನು ಕೂಡ ಬಿಡುವುದಿಲ್ಲ; ಕಚ್ಚಿಬಿಡುತ್ತವೆ. ನೂಕಿ, ಬೀಳಿಸಿ, ಕೊಲ್ಲುತ್ತವೆ; ಮತ್ತು ಪೋಪರಿಗೂ, ಅವರ ಶಿಷ್ಯರಿಗೂ ಪೂಜನೀಯವಾಗಿವೆ. ಅವುಗಳ ಸೇವಕರು ಮಣಗಳಗಟ್ಟಲೆ ಕಡಲೆ ಮೊದಲಾದ ಧಾನ್ಯಗಳನ್ನು ಅಮೆಗಳಿಗೂ, ಹುರಿಗಡಲೆ ಮತ್ತು ಬೆಲ್ಲ ಮೊದಲಾದುವನ್ನು ಕೋತಿಗಳಿಗೂ ಮತ್ತು ಪಂಡರಿಗೆ ದಕ್ಷಿಣೆಯನ್ನೂ, ಲಾಡುವನ್ನೂ ಕೊಟ್ಟು ಸೇವೆಯನ್ನು ಮಾಡುತ್ತಾರೆ ಮತ್ತು ಬೃಂದಾವನ ಯಾವಾಗ ಇದ್ದಿತೋ, ಇದ್ದಿತು; ಈಗಂತೂ ವೇಶ್ಯಾವನದಂತೆ ಬಾಲ-ಬಾಲೆಯರ ಮತ್ತು ಗುರು-ಶಿಷ್ಯೆ ಮೊದಲಾದವರ ಲೀಲೆ ಹರಡುತ್ತಿದೆ. ಇದೇ ರೀತಿ ದೀಪ ಮಾಲಿಕಾಜಾತ್ರೆ, ಗೋವರ್ಧನ ಮತ್ತು ವ್ರಜಯಾತ್ರೆಯಲ್ಲಿಯೂ ಪೋಪರ ಸ್ವಾರ್ಥಸಿದ್ಧಿಯಾಗುತ್ತದೆ. ಕುರುಕ್ಷೇತ್ರದಲ್ಲಿಯೂ ಇದೇ ಹೊಟ್ಟೆಪಾಡಿನ ಲೀಲೆಯಿದೆ ಎಂದು ತಿಳಿದುಕೊಳ್ಳಿರಿ. ಇವರಲ್ಲಿರುವ ಧಾರ್ಮಿಕರೂ, ಪರೋಪಕಾರಿಗಳೂ ಆದ ಪುರುಷರು ಪೋಪಲೀಲೆಯಿಂದ ದೂರರಾಗಿ ಹೋಗುತ್ತಾರೆ.

ಪ್ರಶ್ನೆ:—ಈ ಮೂರ್ತಿಪೂಜೆಯೂ, ತೀರ್ಥಗಳೂ ಸನಾತನ ಕಾಲದಿಂದ ನಡೆದುಬಂದಿರುತ್ತವೆ. ಇವು ಹೇಗೆತಾನೆ ಸುಳ್ಳಾಗಬಲ್ಲವು?

ಉತ್ತರ:—ನೀವು ಯಾವುದನ್ನು ಸನಾತನವೆಂದು ಹೇಳುತ್ತೀರಿ?

ಪ್ರಶ್ನೆ:—ಸದಾಕಾಲದಿಂದ ಬಂದಿರುವುದನ್ನು.

ಉತ್ತರ:—ಇದು ಸದಾಕಾಲದಿಂದಲೂ ಇದ್ದುದಾದರೆ, ವೇದಗಳಲ್ಲಿ ಮತ್ತು ಋಷಿಮುನಿಗಳಿಂದ ರಚಿತವಾದ ಬ್ರಾಹ್ಮಣಾದಿ ಗ್ರಂಥಗಳಲ್ಲಿ ಇವುಗಳ ಹೆಸರು ಏಕಿಲ್ಲ? ಈ ಮೂರ್ತಿಪೂಜೆಯು ಎರಡು ಸಾವಿರದೈನೂರು-ಮೂರುಸಾವಿರ ವರ್ಷಗಳಿಂದ ಈಚೀಚೆಗೆ ವಾಮಮಾರ್ಗಿಗಳಿಂದಲೂ, ಜೈನರಿಂದಲೂ ಹೊರಟಿದೆ. ಮೊದಲು ಆರ್ಯಾ

ವರ್ತದಲ್ಲಿ ಇರಲಿಲ್ಲ. ಮತ್ತು ಈ ತೀರ್ಥಗಳೂ ಇರಲಿಲ್ಲ. ಜೈನರು ಗಿರಿನಾರ್, ಪಾಲಿಟಾನಾ, ಶಿಖರ, ಶತ್ರುಂಜಯ, ಆಬೂ ಮೊದಲಾದ ತೀರ್ಥಗಳನ್ನು ಕಲ್ಪಿಸಿದಾಗ, ಅವಕ್ಕೆ ಅನುಕೂಲವಾಗಿ ಇವರೂ ಕೂಡ ಮಾಡಿಕೊಂಡರು. ಯಾರಾದರೂ ಇವುಗಳ ಆರಂಭವನ್ನು ಪರೀಕ್ಷಿಸಬಯಸುವುದಾದರೆ, ಪಂಡರ ಪ್ರಾಚೀನತಮವಾದ ಪುಸ್ತಕಗಳು ಮತ್ತು ತಾಮ್ರಶಾಸನ ಮೊದಲಾದ ಲೇಖನಗಳನ್ನು ನೋಡಲಿ; ಆಗ ಈ ಎಲ್ಲಾ ತೀರ್ಥಗಳು ಐನೂರು ಆಥವಾ ಸಾವಿರ ವರ್ಷದ ಈಚೆಗೇ ಆಗಿರುತ್ತವೆ ಎಂಬುದು ನಿಶ್ಚಯವಾಗುತ್ತದೆ. ಸಾವಿರ ವರ್ಷಕ್ಕಿಂತ ಹಿಂದಿನ ಬರಹ ಯಾರ ಬಳಿಯೂ ಕಂಡುಬರುವುದಿಲ್ಲ. ಆದುದರಿಂದ ಆಧುನಿಕವಾದುವು.

ಪ್ರ :—ಯಾವ ಯಾವ ತೀರ್ಥದ ಆಥವಾ ಹೆಸರಿನ ಮಾಹಾತ್ಮ್ಯ ವಿದೆಯೋ ಅದು ಅಂದರೆ " ಅನ್ಯಕ್ಷೇತ್ರೇ ಕೃತಂ ಪಾಪಂ ಕಾಶೀಕ್ಷೇತ್ರೇ ವಿನಶ್ಯತಿ " ಎಂಬಂತಹ ಈ ಮೊದಲಾದ ಮಾತುಗಳೆಲ್ಲಾ ನಿಜವೋ ಅಲ್ಲವೋ ?

ಉತ್ತರ :—ಅಲ್ಲ. ಏಕೆಂದರೆ ಪಾಪಗಳು ತೊಡೆದುಹೋಗುವುದಾದರೆ ದರಿದ್ರರಿಗೆ ಧನವೂ, ರಾಜಪಟ್ಟವೂ, ಕುರುಡರಿಗೆ ಕಣ್ಣುಗಳೂ ಸಿಕ್ಕುತ್ತಿದ್ದವು; ಕುಷ್ಠರೋಗಿಗಳ ಕುಷ್ಠ ಮೊದಲಾದ ರೋಗಗಳೂ ಹೊರಟುಹೋಗುತ್ತಿದ್ದವು; ಆದರೆ ಹೀಗಾಗುವುದಿಲ್ಲ. ಆದುದರಿಂದ ಯಾರ ಪಾಪ ಅಥವಾ ಪುಣ್ಯವೂ ಬಿಟ್ಟುಹೋಗದು.

ಪ್ರಶ್ನೆ :—

ಗಂಗಾ ಗಂಗೇತಿ ಯೋ ಬ್ರೂಯಾತ್ ಯೋಜನಾನಾಂ ಶತೈರಪಿ।
ಮುಚ್ಯತೇ ಸರ್ವ ಪಾಪೇಭ್ಯೋ ವಿಷ್ಣುಲೋಕಂ ಸ ಗಚ್ಛತಿ ॥೧॥
ಹರಿರ್ಹರತಿ ಪಾಪಾನಿ ಹರಿರಿತ್ಯಕ್ಷರದ್ವಯಂ ॥೨॥
ಪ್ರಾತಃಕಾಲೇ ಶಿವಂ ದೃಷ್ಟ್ವಾ ನಿಶಿ ಪಾಪಂ ವಿನಶ್ಯತಿ।
ಆಜನ್ಮಕೃತಂ ಮಧ್ಯಾಹ್ನೇ ಸಾಯಾಹ್ನೇ ಸಪ್ತಜನ್ಮನಾಮ್॥೩॥

ಈ ಮೊದಲಾದ ಶ್ಲೋಕಗಳು ಪೋಪವುರಾಣದವು; ನೂರಾರು ಸಾವಿರಾರು ಗಾವುದಗಳ ದೂರದಿಂದಲಾದರೂ, ' ಗಂಗಾ, ಗಂಗಾ '

ಎಂದು ಹೇಳಿದರೆ, ಅವನ ಪಾಪಗಳು ನಾಶವಾಗಿ ವಿಷ್ಣುಲೋಕ—ಅಂದರೆ ವೈಕುಂಠಕ್ಕೆ ಹೋಗುತ್ತಾನೆ. ॥೧॥ 'ಹರಿ' ಎಂಬ ಈ ಎರಡು ಅಕ್ಷರಗಳ ನಾಮೋಚ್ಚಾರಣೆ ಪಾಪಗಳೆಲ್ಲವನ್ನು ದೂರಮಾಡುತ್ತದೆ. ಹಾಗೆಯೇ ರಾಮ, ಕೃಷ್ಣ, ಶಿವ, ಭಗವತಿ ಮೊದಲಾದ ಹೆಸರುಗಳಿಗೂ ಮಹಿಮೆಯಿರುತ್ತದೆ. ॥೨॥ ಮಾನವನು ಬೆಳಗ್ಗೆ ಶಿವನ ಅಂದರೆ ಲಿಂಗದ ಅಥವಾ ಮೂರ್ತಿಯ ದರ್ಶನಮಾಡಿದರೆ ರಾತ್ರಿಯಲ್ಲಿ ಮಾಡಿದ ಪಾಪವೂ, ಮಧ್ಯಾಹ್ನದಲ್ಲಿ ದರ್ಶನಮಾಡಿದರೆ ಸಮಗ್ರ ಜನ್ಮದ ಪಾಪವೂ ಸಾಯಂಕಾಲದಲ್ಲಿ ದರ್ಶನಮಾಡುವುದರಿಂದ ಏಳು ಜನ್ಮಗಳ ಪಾಪವೂ ನಾಶವಾಗುತ್ತದೆ. ಇದು ದರ್ಶನದ ಮಾಹಾತ್ಮ್ಯ ॥೩॥ ಇದೆಲ್ಲಾ ಸುಳ್ಳಾಗಿಹೋಗುವುದೇ?

ಉತ್ತರ :—ಸುಳ್ಳಾಗುವುದರಲ್ಲಿ ಸಂದೇಹವೇನು? ಏಕೆಂದರೆ—ಗಂಗೆ, ಹರಿ, ರಾಮ, ಕೃಷ್ಣ ನಾರಾಯಣ, ಶಿವ, ಭಗವತೀ ನಾಮಗಳ ಸ್ಮರಣದಿಂದ ಪಾಪ ಎಂದಿಗೂ ದೂರವಾಗದು. ದೂರವಾಗುವುದಾದರೆ ಯಾರೂ ದುಃಖಿಗಳಾಗಿರುವುದಿಲ್ಲ. ಮತ್ತು ಪಾಪ ಮಾಡುವುದಕ್ಕೆ ಯಾವನೂ ಹೆದರುವುದಿಲ್ಲ. ಉದಾಹರಣೆಗೆ, ಮೂಢರಿಗೆ "ನಾವು ಪಾಪಮಾಡಿ ನಾಮಸ್ಮರಣೆಯನ್ನಾಗಲಿ, ತೀರ್ಥಯಾತ್ರೆಯನ್ನಾಗಲಿ ಮಾಡಿದರೆ, ಪಾಪ ನಿವೃತ್ತಿಯಾಗುವುದು"—ಎಂಬ ನಂಬಿಕೆಯಿರುತ್ತದೆ. ಇದೇ ನಂಬಿಕೆಯ ಮೇಲೆ, ಪಾಪಮಾಡಿ ಇಹಲೋಕ-ಪರಲೋಕಗಳನ್ನು ಕೆಡಿಸಿಕೊಳ್ಳುತ್ತಾರೆ. ಆದರೆ, ಮಾಡಿದ ಪಾಪವನ್ನು ಅನುಭವಿಸಲೇಬೇಕಾಗುತ್ತದೆ.

ಪ್ರ :—ಹಾಗಾದರೆ ಸತ್ಯವಾದ ತೀರ್ಥ ಅಥವಾ ನಾಮಸ್ಮರಣೆ ಯಾವುದಾದರೂ ಇದೆಯೋ, ಇಲ್ಲವೋ?

ಉ :—ಇದೆ. ವೇದಾದಿ ಸತ್ಯಶಾಸ್ತ್ರಗಳನ್ನು ಓದುವುದು-ಓದಿಸುವುದು, ಧಾರ್ಮಿಕರಾದ ವಿದ್ವಾಂಸರ ಸಂಗ, ಪರೋಪಕಾರ, ಧರ್ಮಾನುಷ್ಠಾನ, ಯೋಗಾಭ್ಯಾಸ, ನಿರ್ವೈರತ್ವ, ನಿಷ್ಕಪಟತನ, ಸತ್ಯಭಾಷಣ, ಸತ್ಯವನ್ನು ಸ್ವೀಕರಿಸುವುದು, ಸತ್ಯವನ್ನೇ ಆಚರಿಸುವುದು, ಬ್ರಹ್ಮಚರ್ಯ, ಆಚಾರ್ಯ-ಅತಿಥಿ-ತಾಯಿ-ತಂದೆಗಳ ಸೇವೆ, ಪರಮಾತ್ಮನ ಸ್ತುತಿಪ್ರಾರ್ಥನೋಪಾಸನೆಗಳು, ಶಾಂತಿ, ಜಿತೇಂದ್ರಿಯತ್ವ, ಸುಶೀಲತೆ,

ಧರ್ಮಯುಕ್ತ ಪುರುಷಾರ್ಥ, ಜ್ಞಾನ, ವಿಜ್ಞಾನ ಮೊದಲಾದ ಶುಭ ಗುಣಕರ್ಮಗಳು ದುಃಖಗಳಿಂದ ಪಾರುಮಾಡಿಸುವಂತಹುವಾಗಿರುವುದರಿಂದ ತೀರ್ಥಗಳಾಗಿವೆ. ಮತ್ತು ನೀರು-ನೆಲದಿಂದ ಕೂಡಿದುವು ಎಂದಿಗೂ ತೀರ್ಥಗಳಾಗಲಾರವು. ಏಕೆಂದರೆ—'ಜನಾ ಯೈಸ್ತರಂತಿ ತಾನಿ ತೀರ್ಥಾನಿ' ಯಾವುದರ ಮೂಲಕ ಜನರು ದುಃಖಗಳನ್ನು ದಾಟುವರೋ ಅದಕ್ಕೆ ತೀರ್ಥವೆಂದು ಹೆಸರು. ಜಲ-ಸ್ಥಳಗಳು ದಾಟಿಸುವಂಥವುಗಳಲ್ಲ; ಆದರೆ, ಮುಳುಗಿಸಿ ಸಾಯಿಸುವಂತಹವು. ಆದರೆ, ನಾವೆ ಮೊದಲಾದುವುಗಳ ಹೆಸರು ತೀರ್ಥವೆಂದಾಗಬಹುದು. ಏಕೆಂದರೆ, ಇವುಗಳ ಮೂಲಕವೂ. ಸಮುದ್ರಾದಿಗಳನ್ನು ದಾಟುತ್ತಾರೆ.

ಸಮಾನ ತೀರ್ಥೇ ವಾಸೀ ॥

[ಅಷ್ಟಾ. ಅ. ೪, ಪಾ. ೪, ಸೂ. ೧೦೯]

ನಮುಸ್ತೀರ್ಥ್ಯಾಯ ಚ । ಯಜು. ಅ. ೧೯, ಮಂತ್ರ ೪೨ ।

ಒಬ್ಬ ಆಚಾರ್ಯನ ಬಳಿ ಒಂದೇ ಶಾಸ್ತ್ರವನ್ನು ಅಧ್ಯಯನ ಮಾಡುತ್ತಿರುವ ಬ್ರಹ್ಮಚಾರಿಗಳು ಸತೀರ್ಥ್ಯರು ಅಂದರೆ ಸಮಾನತೀರ್ಥ ಸೇವಿಗಳಾಗಿರುತ್ತಾರೆ. ವೇದಾದಿಶಾಸ್ತ್ರಗಳಲ್ಲಿಯೂ, ಸತ್ಯಭಾಷಣಾದಿ ಧರ್ಮಲಕ್ಷಣಗಳಲ್ಲಿಯೂ ಸಾಧುಗಳಾದವರಿಗೆ ಅನ್ನ ಮೊದಲಾದ ಪದಾರ್ಥಗಳನ್ನು ಕೊಡುವುದು ಮತ್ತು ಅವರಿಂದ ವಿದ್ಯೆಯನ್ನು ಗ್ರಹಿಸುವುದು ಈ ಮೊದಲಾದುವು ತೀರ್ಥಗಳೆನಿಸುತ್ತವೆ. ನಾಮಸ್ಮರಣೆಯೆಂದರೆ ಇದು :—

ಯಸ್ಯನಾಮ ಮಹದ್ಯಶಃ ॥ ಯಜು. ಅ. ೨೨, ಮಂತ್ರ ೩.

ಮಹದ್ಯಶ ಅಂದರೆ ಧಾರ್ಮಿಕ ಕರ್ಮಗಳ ಆಚರಣೆಯೇ ಪರಮೇಶ್ವರನ ನಾಮಸ್ಮರಣೆಯೆನಿಸಿಕೊಳ್ಳುತ್ತದೆ. ಹೇಗೆಂದರೆ—ಬ್ರಹ್ಮ, ಪರಮೇಶ್ವರ, ಈಶ್ವರ, ನ್ಯಾಯಕಾರೀ, ದಯಾಳು, ಸರ್ವಶಕ್ತ ಮೊದಲಾದ ನಾಮಗಳು ಪರಮಾತ್ಮನ ಗುಣ ಕರ್ಮ ಸ್ವಭಾವಗಳ ಕಾರಣದಿಂದಿರುತ್ತವೆ. ಬ್ರಹ್ಮ–ಎಲ್ಲರಿಗಿಂತ ದೊಡ್ಡವನು; ಪರಮೇಶ್ವರ–ಈಶ್ವರರಿಗೂ ಈಶ್ವರ; ಈಶ್ವರ–ಸಾಮರ್ಥ್ಯಯುಕ್ತ; ನ್ಯಾಯಕಾರಿ–ಎಂದಿಗೂ ಅನ್ಯಾಯ ಮಾಡುವುದಿಲ್ಲ; ದಯಾಳು–ಎಲ್ಲರ

ಮೇಲೆಯೂ ಕೃಪಾದೃಷ್ಟಿಯಿಡುತ್ತಾನೆ; ಸರ್ವಶಕ್ತಿಮಾನ್-ತನ್ನ ಸಾಮರ್ಥ್ಯದಿಂದಲೇ ಸರ್ವಜಗತ್ತಿನ ಉತ್ಪತ್ತಿ-ಸ್ಥಿತಿ-ಪ್ರಳಯಗಳನ್ನು ಮಾಡುತ್ತಾನೆ; ಸಹಾಯ ಯಾರದನ್ನೂ ತೆಗೆದುಕೊಳ್ಳುವುದಿಲ್ಲ; ಬ್ರಹ್ಮಾ-ವಿವಿಧ ಜಗತ್ತಿನ ಪದಾರ್ಥಗಳ ನಿರ್ಮಾತೃ; ವಿಷ್ಣು-ಎಲ್ಲರಲ್ಲಿಯೂ ವ್ಯಾಪಕನಾಗಿ ರಕ್ಷಿಸುತ್ತಾನೆ; ಮಹಾದೇವ-ಎಲ್ಲಾ ದೇವರದೇವ; ರುದ್ರ-ಪ್ರಳಯಕರ್ತ ಮೊದಲಾದ ಹೆಸರುಗಳ ಅರ್ಥವನ್ನು ತನ್ನಲ್ಲಿ ಧರಿಸಬೇಕು. ಅಂದರೆ ದೊಡ್ಡ ಕಾರ್ಯಗಳಿಂದ ದೊಡ್ಡವನಾಗಬೇಕು. ಸಮರ್ಥರಲ್ಲಿ ಸಮರ್ಥನಾಗಬೇಕು. ಸಾಮರ್ಥ್ಯಗಳನ್ನು ವೃದ್ಧಿಗೊಳಿಸಿಕೊಳ್ಳುತ್ತಾ ಹೋಗಬೇಕು; ಎಂದಿಗೂ ಅಧರ್ಮವನ್ನು ಆಚರಿಸಬಾರದು. ಎಲ್ಲರ ಮೇಲೆಯೂ ದಯೆಯನ್ನಿಡಬೇಕು. ಎಲ್ಲಾ ಪ್ರಕಾರದ ಸಾಧನಗಳನ್ನೂ ಸಾಧಿಸಿಕೊಳ್ಳಬೇಕು. ಶಿಲ್ಪವಿದ್ಯೆಯಿಂದ ನಾನಾವಿಧವಾದ ಪದಾರ್ಥಗಳನ್ನು ರಚಿಸಬೇಕು. ತನ್ನ ಆತ್ಮನಿಗಾಗುವಂತೆಯೇ ಜಗತ್ತಿನಲ್ಲೆಲ್ಲಾ ಸುಖ-ದುಃಖಗಳಾಗುವುವೆಂದು ತಿಳಿಯಬೇಕು. ಎಲ್ಲರನ್ನೂ ಕಾಪಾಡಬೇಕು. ವಿದ್ವಾಂಸರಲ್ಲಿ ವಿದ್ವಾಂಸನಾಗಬೇಕು. ದುಷ್ಕರ್ಮಗಳಿಗೂ, ದುಷ್ಕರ್ಮಕರ್ತರಿಗೂ ಪ್ರಯತ್ನದಿಂದ ದಂಡ ವಿಧಿಸಬೇಕು. ಮತ್ತು ಸತ್ಪುರುಷರನ್ನು ಕಾಪಾಡಬೇಕು. ಈರೀತಿಯಾಗಿ ಪರಮಾತ್ಮನ ನಾಮಗಳ ಅರ್ಥವನ್ನು ತಿಳಿದು, ಪರಮಾತ್ಮನ ಗುಣ ಕರ್ಮ ಸ್ವಭಾವಗಳಿಗೆ ಅನುಕೂಲವಾಗಿ ತನ್ನ ಗುಣ-ಕರ್ಮ-ಸ್ವಭಾವಗಳನ್ನು ಮಾಡಿಕೊಳ್ಳುತ್ತಾ ಹೋಗುವುದೇ ಪರಮೇಶ್ವರನ ನಾಮಸ್ಮರಣೆಯಾಗಿರುತ್ತದೆ.

ಪ್ರಶ್ನೆ: —

ಗುರುರ್ಬ್ರಹ್ಮಾ ಗುರುರ್ವಿಷ್ಣುಃ ಗುರುರ್ದೇವೋ ಮಹೇಶ್ವರಃ।
ಗುರುರೇವ ಪರಂಬ್ರಹ್ಮ ತಸ್ಮೈ ಶ್ರೀ ಗುರುವೇನಮಃ॥

ಈ ಮೊದಲಾದ ಗುರುಮಾಹಾತ್ಮ್ಯವಾದರೂ ನಿಜವೋ? ಗುರುವಿನ ಕಾಲುಗಳನ್ನು ತೊಳೆದು ಆ ನೀರನ್ನು ಕುಡಿಯಬೇಕು. ಹೇಗೆ ಆಜ್ಞಾಪಿಸುತ್ತಾನೋ ಹಾಗೆ ನಡೆಯಬೇಕು. ಲೋಭಿಯಾಗಿದ್ದರೆ ವಾಮನನಂತೆಯೂ, ಕೋಪಿಷ್ಠನಾಗಿದ್ದರೆ ನರಸಿಂಹನಂತೆಯೂ,

ಮೋಹಿಯಾಗಿದ್ದರೆ ಶ್ರೀ ರಾಮಚಂದ್ರನಂತೆಯೂ, ಕಾಮಿಯಾಗಿದ್ದರೆ ಶ್ರೀ ಕೃಷ್ಣನಂತೆಯೂ ಗುರುವನ್ನು ತಿಳಿಯಬೇಕು. ಗುರುವು ಎಂತಹ ಪಾಪಕೃತ್ಯಗಳನ್ನು ಬೇಕಾದರೂ ಮಾಡಿಲಿ, ಆದರೂ ಅಶ್ರದ್ಧೆಯನ್ನು ತೋರಿಸಬಾರದು. ಸಂತನ ಅಥವಾ ಗುರುವಿನ ದರ್ಶನಕ್ಕೆ ಹೋಗುವುದರಲ್ಲಿ ಪ್ರತಿ ಹೆಜ್ಜೆಗೂ ಅಶ್ವಮೇಧದ ಫಲವು ಲಭಿಸುತ್ತದೆ. ಈ ಮಾತು ಸರಿಯೋ ಅಲ್ಲವೋ ?

ಉತ್ತರ :—ಸರಿಯಲ್ಲ. ಬ್ರಹ್ಮ, ವಿಷ್ಣು ಮತ್ತು ಮಹೇಶ್ವರ ಮತ್ತು ಪರಬ್ರಹ್ಮ ಎಂಬುವು ಪರಮಾತ್ಮನ ಹೆಸರುಗಳಾಗಿರುತ್ತವೆ. ಗುರುವು ಎಂದಿಗೂ ಅವನಿಗೆ ಸಮನಾಗಲಾರನು. ಈ ಗುರು ಮಾಹಾತ್ಮ್ಯ, ಗುರುಗೀತೆಯೂ ಕೂಡ ಒಂದು ದೊಡ್ಡ ಪೋಪ ಲೀಲೆಯೇ; ತಾಯಿ, ತಂದೆ, ಆಚಾರ್ಯ ಮತ್ತು ಅತಿಥಿ—ಇವರು ಗುರುಗಳಾಗಿರುತ್ತಾರೆ. ಅವರ ಸೇವೆಯನ್ನು ಮಾಡುವುದು; ಅವರಿಂದ ವಿದ್ಯಾ ಶಿಕ್ಷಣಗಳನ್ನು ಪಡೆದುಕೊಳ್ಳುವುದು ಮತ್ತು ಕೊಡುವುದು ಶಿಷ್ಯನ ಮತ್ತು ಗುರುವಿನ ಕೆಲಸವಾಗಿರುತ್ತದೆ. ಆದರೆ ಗುರುವು ಲೋಭಿಯೂ, ಕ್ರೋಧಿಯೂ, ಮೋಹಿಯೂ, ಕಾಮಿಯೂ ಆಗಿದ್ದಲ್ಲಿ, ಅವನನ್ನು ಸರ್ವಥಾ ತ್ಯಜಿಸಬೇಕು; ಬೋಧನೆಕೊಡಬೇಕು; ಸಹಜವಾದ ಬೋಧನೆಗೆ ಬಾಗದಿದ್ದರೆ, ಅರ್ಘ್ಯ, ಪಾದ್ಯ—ಅಂದರೆ ಹೊಡೆತ, ದಂಡನೆ, ಪ್ರಾಣಹರಣವನ್ನೂ ಸಹ ಮಾಡುವುದರಲ್ಲಿ ದೋಷವಿಲ್ಲ. ಯಾರಿಗೆ ವಿದ್ಯಾದಿ ಸದ್ಗುಣಗಳಲ್ಲಿ ಗುರುತ್ವವಿಲ್ಲವೋ, ಯಾರು ಸುಳ್ಳು ಸುಳ್ಳೇ ಕಂಠಿ, ತಿಲಕ, ವೇದವಿರುದ್ಧವಾದ ಮಂತ್ರೋಪದೇಶಗಳನ್ನು ಮಾಡುವವರಾಗಿರುತ್ತಾರೋ, ಅವರು ಗುರುಗಳೇ ಅಲ್ಲ; ಆದರೆ ಕುರುಬರು. ಏಕೆಂದರೆ—ಕುರುಬರು ತಮ್ಮ ಕುರಿಗಳಿಂದ ಹಾಲು ಮೊದಲಾದುವುಗಳನ್ನು ಪಡೆದು ತಮ್ಮ ಪ್ರಯೋಜನವನ್ನು ಸಾಧಿಸಿಕೊಳ್ಳುವಂತೆಯೇ ಅವರು ಶಿಷ್ಯ-ಶಿಷ್ಯೆಯರ ಧನವನ್ನು ಅಪಹರಿಸಿ ತಮ್ಮ ಪ್ರಯೋಜನವನ್ನು ಸಾಧಿಸಿಕೊಳ್ಳುತ್ತಾರೆ.

ದೋ—ಗುರು ಲೋಭೀ ಚೇಲಾ ಲಾಲ್‌ಚೀ ದೋನೋಂ
ಖೇಲೇಂ ದಾವ್ ।
ಭವಸಾಗರಮೇಂ ಡೂಬತೇ ಬೈಠ್ ಪತ್ಥರ್ ಕೀ ನಾವ್ ॥

ಅರ್ಥಾತ್—ಗುರುವು ಶಿಷ್ಯ–ಶಿಷ್ಯೆಯರು ಏನಾದರೂ ಕೊಟ್ಟೇ ಕೊಡುವರೆಂದು ತಿಳಿಯುವನು. ಮತ್ತು ಶಿಷ್ಯನು ಸುಳ್ಳು ಶಪಥ ಮಾಡುವುದರಿಂದಲೇ ಗುರುವು ಪಾಪ ಬಿಡಿಸುವನೆಂದು ತಿಳಿಯುವನು. ಈ ಮೊದಲಾದ ಲೋಭದಿಂದ ಕಪಟ ಮುನಿಗಳಿಬ್ಬರೂ, ಕಲ್ಲಿನ ದೋಣಿಯಲ್ಲಿ ಕುಳಿತುಕೊಳ್ಳುವವರು ಸಮುದ್ರದಲ್ಲಿ ಮುಳುಗಿ ಸಾಯುವಂತೆ, ಭವಸಾಗರದ ದುಃಖದಲ್ಲಿ ಮುಳುಗಿಹೋಗುತ್ತಾರೆ. ಇಂತಹ ಗುರು ಮತ್ತು ಶಿಷ್ಯರ ಮುಖಕ್ಕೆ ಧೂಳು-ಬೂದಿ ಬೀಳಲಿ. ಅವರ ಹತ್ತಿರ ಯಾರೂ ನಿಲ್ಲಬಾರದು. ನಿಂತವನು ದುಃಖಸಾಗರದಲ್ಲಿ ಬೀಳುವನು. ಪೂಜಾರಿ, ಪೌರಾಣಿಕರು ಎಂತಹ ಪೋಪಲೀಲೆಯನ್ನು ಆರಂಭಿಸಿದ್ದಾರೋ ಅಂತಹ ಲೀಲೆಯನ್ನೇ ಈ ಕುರುಬಗುರುಗಳೂ ಆರಂಭಿಸಿದ್ದಾರೆ. ಈ ಎಲ್ಲಾ ಕೆಲಸವೂ ಸ್ವಾರ್ಥೀಜನರದು. ಪರಮಾರ್ಥಿಗಳಾದ ಜನರು ತಾವು ದುಃಖಪಡೆದರೂ ಜಗತ್ತಿಗೆ ಉಪಕಾರಮಾಡುವುದನ್ನು ಬಿಡುವುದಿಲ್ಲ. ಮತ್ತು ಗುರುಮಾಹಾತ್ಮ್ಯ, ಗುರುಗೀತೆ ಮೊದಲಾದುವನ್ನೂ ಸಹ ಈ ಲೋಭಿಗಳೂ, ದುಷ್ಕರ್ಮಿಗಳೂ ಆದ ಗುರುಗಳೇ ರಚಿಸಿದ್ದಾರೆ.

ಪ್ರಶ್ನೆ:—

ಆಷ್ಟಾದಶ ಪುರಾಣಾನಾಂ ಕರ್ತಾ ಸತ್ಯವತೀ ಸುತಃ ॥೧॥
ಇತಿಹಾಸ ಪುರಾಣಾಭ್ಯಾಂ ವೇದಾರ್ಥಮುಪಬೃಂಹಯೀತ್॥೨॥
[ಮಹಾಭಾರತ.]

ಪುರಾಣಾನಿಖಿಲಾನಿ ಚ ॥೩॥—[ಮನುಸ್ಮೃತಿ]
ದಶಮೇಽಹನಿ ಕಿಂಚಿತ್ಪುರಾಣಮಾಚಕ್ಷೀತ ॥೪॥
ಪುರಾಣವಿದ್ಯಾವೇದಃ ॥೫॥—[ಸೂತ್ರ]
ಇತಿಹಾಸಪುರಾಣಃ ಪಂಚಮೋ ವೇದಾನಾಂ ವೇದಃ ॥೬॥
[ಛಾಂದೋಗ್ಯ. ಪ್ರ. ೭, ಖಂ. ೧]

ಹದಿನೆಂಟು ಪುರಾಣಗಳ ಕರ್ತರು ವ್ಯಾಸರು. ವ್ಯಾಸವಚನವನ್ನು ಅವಶ್ಯವಾಗಿ ಪ್ರಮಾಣವೆಂದೆಣಿಸಬೇಕು. ॥೧॥ ಇತಿಹಾಸ, ಮಹಾಭಾರತ ಮತ್ತು ಹದಿನೆಂಟು ಪುರಾಣಗಳಿಂದ ವೇದಗಳ ಅರ್ಥವನ್ನು

ಓದಬೇಕು, ಓದಿಸಬೇಕು. ಏಕೆಂದರೆ ಇತಿಹಾಸ-ಪುರಾಣಗಳು ವೇದಾರ್ಥಕ್ಕೇ ಅನುಕೂಲವಾಗಿವೆ. ॥೨॥ ಪಿತೃಕರ್ಮದಲ್ಲಿ ಪುರಾಣವನ್ನೂ, ಖಿಲ ಅಂದರೆ ಹರಿವಂಶದ ಕತೆಯನ್ನೂ ಶ್ರವಣಮಾಡಬೇಕು. ॥೩॥ ಅಶ್ವಮೇಧದ ಕಡೆಯಲ್ಲಿ ಹತ್ತನೆಯ ದಿನ ಸ್ವಲ್ಪ ಪುರಾಣದ ಕಥೆಯನ್ನು ಕೇಳಬೇಕು. ॥೪॥ ಪುರಾಣ ವಿದ್ಯೆಗಳು ವೇದಾರ್ಥವನ್ನು ತಿಳಿಸುವುದರಿಂದಲೇ ವೇದಗಳಾಗಿರುತ್ತವೆ. ॥೫॥ ಇತಿಹಾಸ ಮತ್ತು ಪುರಾಣಗಳು ಐದನೆಯ ವೇದವೆನಿಸುತ್ತವೆ. ॥೬॥ ಈ ಮೊದಲಾದ ಪ್ರಮಾಣಗಳಿಂದ ಪುರಾಣಗಳ ಪ್ರಮಾಣವೂ ಮತ್ತು ಇವುಗಳ ಪ್ರಮಾಣದಿಂದ ಮೂರ್ತಿ ಪೂಜೆ ಮತ್ತು ತೀರ್ಥಗಳಿಗೂ ಕೂಡ ಪ್ರಮಾಣವಿರುತ್ತವೆ. ಏಕೆಂದರೆ—ಪುರಾಣಗಳಲ್ಲಿ ಮೂರ್ತಿಪೂಜೆಯೂ ಮತ್ತು ತೀರ್ಥಗಳ ವಿಧಾನವಿದೆ.

ಉತ್ತರ :—ಹದಿನೆಂಟು ಪುರಾಣಗಳ ಕರ್ತರು ವ್ಯಾಸರೇ ಆಗಿದ್ದರೆ, ಅವುಗಳಲ್ಲಿ ಇಷ್ಟು ಬರುಡೆಗಳು ಇರುತ್ತಿರಲಿಲ್ಲ. ಏಕೆಂದರೆ—ಶಾರೀರಿಕ ಸೂತ್ರಗಳು, ಯೋಗಶಾಸ್ತ್ರಭಾಷ್ಯ ಮೊದಲಾದ ವ್ಯಾಸಕೃತ ಗ್ರಂಥಗಳನ್ನು ನೋಡುವುದರಿಂದ ವ್ಯಾಸರು ದೊಡ್ಡ ವಿದ್ವಾಂಸರೂ, ಸತ್ಯವಾದಿಗಳೂ, ಧರ್ಮಾತ್ಮರೂ, ಯೋಗಿಗಳೂ ಆಗಿದ್ದರೆಂದು ತಿಳಿದು ಬರುತ್ತದೆ. ಅವರು ಇಂತಹ ಸುಳ್ಳು ಕಥೆಗಳನ್ನು ಎಂದಿಗೂ ಬರೆಯುತ್ತಿರಲಿಲ್ಲ. ಯಾವ ಸಾಂಪ್ರದಾಯಿಕ ಪರಸ್ಪರ ವಿರೋಧಿಗಳಾದ ಜನರು ಭಾಗವತ ಮೊವಲಾದ ನವೀನ ಕಪೋಲಕಲ್ಪಿತ ಗ್ರಂಥಗಳನ್ನು ಬರೆದಿದ್ದಾರೋ ಅವರಲ್ಲಿ ವ್ಯಾಸರ ಗುಣಗಳ ತಿಲಾಂಶವೂ ಇರಲಿಲ್ಲ—ಎಂಬುದು ಇದರಿಂದ ಸಿದ್ಧವಾಗುತ್ತದೆ. ಮತ್ತು ವೇದಶಾಸ್ತ್ರವಿರುದ್ಧವಾದ ಅಸತ್ಯವಾದವನ್ನು ಬರೆಯುವುದು ವ್ಯಾಸರಂತಹ ವಿದ್ವಾಂಸರ ಕೆಲಸವಲ್ಲ. ಆದರೆ ಈ ಕೆಲಸ ವಿರೋಧಿಗಳೂ, ಸ್ವಾರ್ಥಿಗಳೂ, ವಿದ್ಯೆಯಿಲ್ಲದವರೂ ಆದ ಪಾಮರರದಾಗಿರುತ್ತದೆ. ಇತಿಹಾಸ ಮತ್ತು ಪುರಾಣ ಎಂಬುದು ಶಿವಪುರಾಣ ಮೊದಲಾದುವುಗಳ ಹೆಸರಲ್ಲ. ಆದರೆ—

ಬ್ರಾಹ್ಮಣಾನೀತಿಹಾಸಾನ್ ಪುರಾಣಾನಿಕಲ್ಪಾನ್ ಗಾಥಾ ನಾರಾಶಂಸೀರಿತಿ ॥

ಇದು ಬ್ರಾಹ್ಮಣ ಮತ್ತು ಸೂತ್ರಗಳ ವಚನ. ಐತರೇಯ, ಶತಪಥ, ಸಾಮ ಮತ್ತು ಗೋಪಥವೆಂಬ ಬ್ರಾಹ್ಮಣ ಗ್ರಂಥಗಳಿಗೇ ಇತಿಹಾಸ' ಪುರಾಣ, ಕಲ್ಪ, ಗಾಥಾ ಮತ್ತು ನಾರಾಶಂಸೀ ಎಂಬ ಐದು ಹೆಸರುಗಳಿರುತ್ತವೆ. ಹೇಗೆಂದರೆ--(ಇತಿಹಾಸ) ಜನಕ ಮತ್ತು ಯಾಜ್ಞವಲ್ಕ್ಯರ ಸಂವಾದದಂತಹುದು (ಪುರಾಣ) ಜಗತ್ತಿನ ಉತ್ಪತ್ತಿ ಮೊದಲಾದುವುಗಳ ವರ್ಣನೆ (ಕಲ್ಪ) ವೇದಶಬ್ದಗಳ ಸಾಮರ್ಥ್ಯದ ವರ್ಣನೆ, ಅರ್ಥನಿರೂಪಣೆ ಮಾಡುವುದು (ಗಾಥಾ) ಯಾರಾದರೊಬ್ಬರ ದೃಷ್ಟಾಂತ-ದಾಷ್ಟಾರ್ಂತ ರೂಪವಾದ ಕಥಾಪ್ರಸಂಗ ಹೇಳುವುದು (ನಾರಾಶಂಸಿ) ಮನುಷ್ಯರ ಪ್ರಶಂಸನೀಯವಾದ ಮತ್ತು ಅಪ್ರಶಂಸನೀಯವಾದ ಕರ್ಮಗಳ ಕಥನಮಾಡುವುದು-ಇವುಗಳಿಂದಲೇ ವೇದಾರ್ಥದ ಜ್ಞಾನವಾಗುತ್ತದೆ. ಪಿತೃಕರ್ಮವೆಂದರೆ ಜ್ಞಾನಿಗಳ ಪ್ರಶಂಸೆಯಲ್ಲಿ ಏನಾದರೂ ಕೇಳುವುದು, ಅಶ್ವಮೇಧದ ವಿಷಯಲ್ಲಿಯೂ ಕೂಡ ಇದನ್ನೇ ಕೇಳಬೇಕೆಂದು ಬರೆತಿರುತ್ತದೆ. ಏಕೆಂದರೆ—ವ್ಯಾಸರ ಗ್ರಂಥವನ್ನು ಕೇಳುವುದು-ಹೇಳುವುದು ಅವರು ಹುಟ್ಟಿದಮೇಲೆ ಆಗಬಲ್ಲದೇ ಹೊರತು, ಅದಕ್ಕೆ ಮೊದಲು ಸಾಧ್ಯವಿಲ್ಲ. ವ್ಯಾಸರ ಜನ್ಮವೇ ಆಗದಿದ್ದಾಗಲೂ ಸಹ, ವೇದಾರ್ಥವನ್ನು ಓದುತ್ತಲೂ ಓದಿಸುತ್ತಲೂ, ಕೇಳುತ್ತಲೂ-ಹೇಳುತ್ತಲೂ ಇದ್ದರು. ಆದ್ದರಿಂದ ಎಲ್ಲಕ್ಕಿಂತ ಪ್ರಾಚೀನ ಗ್ರಂಥಗಳಾದ ಬ್ರಾಹ್ಮಣಗಳಿಗೇ ಇದೆಲ್ಲಾ ಅನ್ವಯಿಸಬಲ್ಲದು. ಈ ನೂತನವೂ, ಕಪೋಲಕಲ್ಪಿತವೂ ಆದ ಶ್ರೀಮದ್ಭಾಗವತ, ಶಿವಪುರಾಣ ಮೊದಲಾದ ಸುಳ್ಳು ಅಥವಾ ದೂಷಿತ ಗ್ರಂಥಗಳಿಗೆ ಅನ್ವಯಿಸಲಾರದು. ವ್ಯಾಸರು ವೇದವನ್ನು ಅಧ್ಯಯನಮಾಡಿ ಮತ್ತು ಅಧ್ಯಾಪನ ಮಾಡಿ ವೇದಾರ್ಥವನ್ನು ಹರಡಿದುದರಿಂದ ಅವರಿಗೆ ವೇದವ್ಯಾಸರೆಂಬ ಹೆಸರು ಬಂದಿತು. ಏಕೆಂದರೆ-ಅಡ್ಡಹಾಯುವ ಮಧ್ಯರೇಖೆಯನ್ನು ವ್ಯಾಸವೆನ್ನುತ್ತಾರೆ. ಅಂದರೆ ವ್ಯಾಸರು ಋಗ್ವೇದದ ಆರಂಭದಿಂದ ಹಿಡಿದು ಅಥರ್ವವೇದದ ಕಡೆಯವರೆಗೆ ಎಲ್ಲಾ ವೇದಗಳನ್ನೂ ಓದಿದ್ದರು ಮತ್ತು ಶುಕದೇವ, ಜೈಮಿನಿ ಮೊದಲಾದ ಶಿಷ್ಯರಿಗೂ ಕಲಿಸಿಯೂ ಇದ್ದರು. ಹಾಗಲ್ಲದಿದ್ದರೆ ಅವರ ಹುಟ್ಟು ಹೆಸರು 'ಕೃಷ್ಣ ದ್ವೈಪಾಯನ' ಎಂದಿತ್ತು. ವ್ಯಾಸರು ವೇದಗಳನ್ನು ಒಟ್ಟುಗೂಡಿಸಿದ

ರೆಂದು ಹಲವರು ಹೇಳುವುದು ಸುಳ್ಳುಮಾತಾಗಿರುತ್ತದೆ. ಏಕೆಂದರೆ— ವ್ಯಾಸರ ತಂದೆ, ತಾತ ಮತ್ತು ಮುತ್ತಾತರಾದ ಪರಾಶರ, ಶಕ್ತಿ, ವಶಿಷ್ಠ ಮತ್ತು ಬ್ರಹ್ಮ ಮೊದಲಾದವರೂ ಸಹ ನಾಲ್ಕು ವೇದಗಳನ್ನೂ ಓದಿದ್ದರು. ಈ ಮಾತು ಹೇಗೆ ಸಂಭವವಾದೀತು?

ಪ್ರಶ್ನೆ:—ಪುರಾಣಗಳಲ್ಲಿ ಎಲ್ಲವೂ ಸುಳ್ಳೋ ಆಥವಾ ಯಾವುದಾದರೂ ಸತ್ಯವಾದುದೂ ಇದೆಯೋ?

ಉತ್ತರ:—ಬಹಳ ಮಾತುಗಳು ಸುಳ್ಳಾಗಿಯೂ, ಕೆಲವು ಮಾತ್ರ 'ಘುಣಾಕ್ಷರನ್ಯಾಯ' ದಂತೆ ನಿಜವಾಗಿಯೂ ಇರುತ್ತವೆ. ನಿಜವಾದುವು ವೇದಾದಿ ಸತ್ಯಶಾಸ್ತ್ರಗಳವು; ಮತ್ತು ಸುಳ್ಳಾದಂತಹುವು ಈ ಪೋಷರ ಪುರಾಣವೆಂಬ ಮನೆಯವು. ಶೈವರು ಶಿವಪುರಾಣದಲ್ಲಿ ಶಿವನನ್ನೇ ಪರಮೇಶ್ವರನೆಂದು ಹೇಳಿ, ವಿಷ್ಣು, ಬ್ರಹ್ಮ, ಇಂದ್ರ, ಗಣೇಶ ಮತ್ತು ಸೂರ್ಯ ಮೊದಲಾದವರನ್ನು ಶಿವನ ದಾಸರನ್ನಾಗಿ ಮಾಡಿಕೂರಿಸಿದರು. ವೈಷ್ಣವರು ವಿಷ್ಣು ಪುರಾಣ ಮೊದಲಾದುವುಗಳಲ್ಲಿ ವಿಷ್ಣುವನ್ನೇ ಪರಮಾತ್ಮನೆಂದು ಅಂಗೀಕರಿಸಿದರು ಮತ್ತು ಶಿವ ಮೊದಲಾದವರನ್ನು ವಿಷ್ಣುವಿನ ದಾಸರನ್ನಾಗಿ ಮಾಡಿದರು. ದೇವೀಭಾಗವತದಲ್ಲಿ ದೇವಿಯನ್ನು ಪರಮೇಶ್ವರಿಯನ್ನಾಗಿಯೂ, ಶಿವ ವಿಷ್ಣು ಮೊದಲಾದವರನ್ನು ಆಕೆಯ ದಾಸರನ್ನಾಗಿಯೂ ಮಾಡಿದರು. ಗಣೇಶಖಂಡದಲ್ಲಿ ಗಣಪತಿಯನ್ನು ಈಶ್ವರನನ್ನಾಗಿಯೂ, ಬೇರೆ ಎಲ್ಲರನ್ನೂ ದಾಸರನ್ನಾಗಿಯೂ ಮಾಡಿದರು! ಒಳ್ಳೆಯದು, ಈ ಮಾತು ಈ ಸಾಂಪ್ರದಾಯಕ ಪೋಷರದಲ್ಲದಿದ್ದರೆ ಮತ್ತಾರದು? ಒಬ್ಬ ಮನುಷ್ಯನು ರಚಿಸಿದುದರಲ್ಲಿ ಇಂತಹ ಪರಸ್ಪರ ವಿರುದ್ಧವಾದ ಮಾತು ಇರುವುದಿಲ್ಲವೆಂದಮೇಲೆ, ವಿದ್ವಾಂಸರು ರಚಿಸಿದುದರಲ್ಲಿ ಎಂದಿಗೂ ಬರಲಾರದು. ಇವುಗಳಲ್ಲಿ ಒಂದು ಮಾತನ್ನು ಸತ್ಯವೆಂದು ಒಪ್ಪಿದರೆ, ಎರಡನೆಯದು ಸುಳ್ಳಾಗಿಯೂ, ಮತ್ತು ಎರಡರೆಯದನ್ನು ಸತ್ಯವೆಂದೊಪ್ಪಿದರೆ, ಮೂರನೆಯದು ಸುಳ್ಳಾಗಿಯೂ ಮೂರನೆಯದನ್ನು ಸತ್ಯವೆಂದೊಪ್ಪಿದರೆ ಉಳಿದುದೆಲ್ಲವೂ ಸುಳ್ಳಾಗಿಯೂ ಹೋಗುತ್ತವೆ. ಶಿವಪುರಾಣದವರು ಶಿವನಿಂದಲೂ, ವಿಷ್ಣು ಪುರಾಣದವರು ವಿಷ್ಣುವಿನಿಂದಲೂ, ದೇವೀಪುರಾಣದವರು ದೇವಿಯಿಂದಲೂ, ಗಣೇಶಖಂಡದವರು ಗಣೇಶನಿಂದಲೂ,

ಸೂರ್ಯಪುರಾಣದವರು ಸೂರ್ಯನಿಂದಲೂ ಮತ್ತು ವಾಯುಪುರಾಣದವರು ವಾಯುವಿನಿಂದಲೂ, ಸೃಷ್ಟಿಯ ಉತ್ಪತ್ತಿ-ಪ್ರಳಯಗಳು ಆಗುತ್ತವೆಂದು ಬರೆದು, ಪುನಃ ಯಾವ ಒಬ್ಬೊಬ್ಬರನ್ನು ಜಗತ್ತಿನ ಕಾರಣವೆಂದು ಬರೆದರೋ, ಅವರುಗಳ ಉತ್ಪತ್ತಿಯೂ ಒಬ್ಬೊಬ್ಬರಿಂದ ಆಯಿತೆಂದು ಬರೆದರು. ಯಾರಾದರೂ "ಜಗತ್ತಿನ ಸೃಷ್ಟಿ, ಸ್ಥಿತಿ, ಪ್ರಳಯಗಳನ್ನು ನಡೆಸುವವನು, ಹುಟ್ಟಿದಂತಹವನೂ ಮತ್ತು ಹುಟ್ಟುವಂತಹವನೂ ಜಗತ್ತಿನ ಕಾರಣನೂ ಎಂದಾದರೂ ಆಗಬಲ್ಲನೋ ಅಥವಾ ಇಲ್ಲವೋ?" ಎಂದು ಕೇಳಿದರೆ, ಸುಮ್ಮನಿರುವುದನ್ನು ಬಿಟ್ಟು, ಏನನ್ನೂ ಹೇಳಲಾರರು. ಮತ್ತು ಇವರೆಲ್ಲರ ಶರೀರೋತ್ಪತ್ತಿಯೂ ಸಹ ಇದರಿಂದಲೇ ಆಗಿರಬಹುದು. ಮತ್ತು ಅವರು ಸ್ವತಃ ಸೃಷ್ಟ್ಯಪದಾರ್ಥಗಳೂ, ಪರಿಚ್ಛಿನ್ನರೂ ಆಗಿ, ಜಗದುತ್ಪತ್ತಿಯ ಕರ್ತರಾಗಲು ಹೇಗೆ ಸಾಧ್ಯ? ಮತ್ತು ಉತ್ಪತ್ತಿಯನ್ನೂ ಸಹ ಸರ್ವಥಾ ಅಸಂಭವವಾದಂತಹ ವಿಲಕ್ಷಣ-ವಿಲಕ್ಷಣವಾದ ರೀತಿಯಲ್ಲಿ ಅಂಗೀಕರಿಸಿದ್ದಾರೆ. ಹೇಗೆಂದರೆ—

ಶಿವಪುರಾಣದಲ್ಲಿ, 'ಶಿವನು ಸೃಷ್ಟಿಯನ್ನು ಮಾಡಬೇಕೆಂದು ಅಪೇಕ್ಷೆಪಟ್ಟನು; ನಾರಾಯಣವೆಂಬ ಒಂದು ಜಲಾಶಯವನ್ನು ಸೃಷ್ಟಿಸಿದನು; ಅದರ ನಾಭಿಯಿಂದ ಒಂದು ಕಮಲವೂ, ಕಮಲದಿಂದ ಬ್ರಹ್ಮನೂ ಹುಟ್ಟಿದರು. ಅವನು ಎಲ್ಲವೂ ಜಲಮಯವಾಗಿರುವುದನ್ನು ಕಂಡನು; ಬೊಗಸೆಯಲ್ಲಿ ನೀರನ್ನು ತುಂಬಿಕೊಂಡು ಮೇಲಕ್ಕೆತ್ತಿ ನೋಡಿ, ಮರಳಿ ನೀರಿನಲ್ಲಿ ಹಾಕಿಬಿಟ್ಟನು. ಅದರಿಂದ ಒಂದು ನೀರ್ಗುಳ್ಳೆ ಉಂಟಾಯಿತು; ಮತ್ತು ನೀರ್ಗುಳ್ಳೆಯಿಂದ ಒಬ್ಬ ಪುರುಷನು ಹುಟ್ಟಿದನು. ಅವನು ಬ್ರಹ್ಮನನ್ನು ಕುರಿತು, "ಎಲೆ, ಮಗನೆ! ಜಗತ್ತನ್ನು ಸೃಷ್ಟಿಸು" ಎಂದನು. ಬ್ರಹ್ಮನು ಅವನಿಗೆ—"ನಾನು ನಿನ್ನ ಮಗನಲ್ಲ; ಆದರೆ ನೀನು ನನ್ನ ಮಗನಾಗಿದ್ದೀಯೆ" ಎಂದು ಹೇಳಿದನು. ಅವರಲ್ಲಿ ವಿವಾದ ಹುಟ್ಟಿತು. ಮತ್ತು ಒಂದು ಸಾವಿರ ದಿವ್ಯ ವರ್ಷಗಳವರೆಗೆ ಅವರಿಬ್ಬರೂ ನೀರಿನಮೇಲೆ ಹೋರಾಡುತ್ತಿದ್ದರು. ಆಗ ಮಹಾದೇವನು "ನಾನು ಸೃಷ್ಟಿಮಾಡುವುದಕ್ಕಾಗಿ ಕಳುಹಿಸಿದ ಇಬ್ಬರೂ ತಮ್ಮ ತಮ್ಮೊಳಗೆ ಗುದ್ದಾಡುತ್ತಿರುವರೆಂದು" ಯೋಚಿಸಿದನು. ಆಗ ಅವರಿಬ್ಬರ ಮಧ್ಯದಲ್ಲಿ ತೇಜೋಮಯವಾದ

ಒಂದು ಲಿಂಗವು ಉತ್ಪನ್ನವಾಯಿತು. ಮತ್ತು ಅದು ಬೇಗ ಆಕಾಶದ ವರೆಗೆ ಹೊರಟುಹೋಯಿತು. ಅದನ್ನು ಕಂಡು ಇಬ್ಬರೂ ಆಶ್ಚರ್ಯ ಗೊಂಡರು; ಇದರ ಆದ್ಯಂತಗಳನ್ನು ಕಂಡುಹಿಡಿಯಬೇಕು; ತುದಿ ಮೊದಲುಗಳನ್ನು ಕಂಡುಹಿಡಿದು ಬೇಗ ಹಿಂತಿರುಗಿ ಬರುವವನು ತಂದೆ; ಆಮೇಲೆ ಕಂಡುಹಿಡಿದು ಅಥವಾ ಅಳತೆ ಕಂಡುಹಿಡಿಯದೆ ಬರುವವನು ಮಗ ಎಂದೆನ್ನಿಸಿಕೊಳ್ಳಬೇಕೆಂದು ಆಲೋಚಿಸಿದರು. ವಿಷ್ಣುವು ಆಮೆಯ ರೂಪವನ್ನು ಧರಿಸಿ ಕೆಳಕ್ಕೆ ಹೊರಟನು ಮತ್ತು ಬ್ರಹ್ಮನು ಹಂಸದ ಶರೀರವನ್ನು ಧರಿಸಿ ಮೇಲಕ್ಕೆ ಹಾರಿದನು. ಇಬ್ಬರೂ ಮನೋ ವೇಗದಿಂದ ನಡೆದರು. ಒಂದು ಸಾವಿರ ದಿವ್ಯ ವರ್ಷಗಳವರೆಗೆ ಇಬ್ಬರೂ ನಡೆಯುತ್ತಿದ್ದರು; ಆದರೆ ಅದರ ಅಂತ್ಯವನ್ನು ಕಾಣಲಿಲ್ಲ. ಆಗ ವಿಷ್ಣುವು ಕೆಳಗಿನಿಂದ ಮೇಲಕ್ಕೂ, ಬ್ರಹ್ಮನು ಮೇಲಿನಿಂದ ಕೆಳಕ್ಕೂ "ಅವನು ಲಿಂಗದ ಅಂತ್ಯವನ್ನು ಕಂಡುಹಿಡಿದು ಬಂದಿರುವನಾದರೆ, ನಾನು ಮಗನಾಗಬೇಕಾಗುವುದು" ಎಂದು ಯೋಚಿಸಿದರು. ಹೀಗೆ ಯೋಚಿಸುತ್ತಿರುವಾಗಲೇ, ಒಂದು ಹಸುವೂ, ಒಂದು ಕೇತಕೀ ವೃಕ್ಷವೂ ಮೇಲಿನಿಂದ ಇಳಿದುಬಂದವು. ಅವನ್ನು ಬ್ರಹ್ಮನು "ನೀವೆಲ್ಲಿಂದ ಬಂದಿರಿ?" ಎಂದು ಕೇಳಿದನು. ಅವು "ನಾವು ಸಾವಿರ ವರ್ಷಗಳಿಂದ ಈ ಲಿಂಗದ ಆಧಾರದಿಂದ ನಡೆದುಬರುತ್ತಿದ್ದೇವೆ" ಎಂದವು. ಬ್ರಹ್ಮನು "ಈ ಲಿಂಗಕ್ಕೆ ಅಂತ್ಯವಿದೆಯೋ, ಇಲ್ಲವೋ?" ಎಂದು ಕೇಳಿದನು; ಅವು ಇಲ್ಲವೆಂದವು. ಆಗ ಬ್ರಹ್ಮನು ಅವುಗಳಿಗೆ "ನೀವು ನನ್ನೊಡನೆ ಹೊರಡಿರಿ, ಮತ್ತು ಹಸುವು 'ನಾನು ಈ ಲಿಂಗದ ತಲೆಯಮೇಲೆ ಹಾಲಿನ ಧಾರೆಯನ್ನು ಸುರಿಸುತ್ತಿದ್ದೆನು' ಎಂದೂ ವೃಕ್ಷವು 'ನಾನು ಹೂವುಗಳನ್ನು ಸುರಿಸುತ್ತಿದ್ದೆನು' ಎಂದೂ ಸಾಕ್ಷ್ಯಕೊಡಲಿ. ಹೀಗೆ ಸಾಕ್ಷ್ಯವೀಯುವಿರಾದರೆ ನಾನು ನಿಮ್ಮನ್ನು ಸ್ವಸ್ಥಳಕ್ಕೆ ಕರೆದೊಯ್ಯುವೆನು" ಎಂದನು. ಅವು "ನಾವು ಸುಳ್ಳು ಸಾಕ್ಷ್ಯವನ್ನು ನುಡಿಯುವುದಿಲ್ಲ" ವೆಂದು ಹೇಳಿದವು. ಆಗ ಬ್ರಹ್ಮನು ಕುಪಿತನಾಗಿ "ಸಾಕ್ಷ್ಯಕೊಡದಿದ್ದಲ್ಲಿ ನಿಮ್ಮನ್ನು ಈಗಲೇ ಸುಟ್ಟು ಬೂದಿಮಾಡಿಬಿಡುವೆನು?" ಎಂದು ಹೇಳಿದನು. ಆಗ ಎರಡೂ ಹೆದರಿ "ನೀವು ಹೇಳಿದಂತೆ ಸಾಕ್ಷ್ಯಕೊಡುವೆವು" ಎಂದು ಹೇಳಿದವು.

ಆಗ ಮೂವರೂ ಕೆಳಗಿಳಿದರು. ವಿಷ್ಣುವು ಮೊದಲೇ ಬಂದಿದ್ದನು. ಬ್ರಹ್ಮನೂ ಬಂದು ಸೇರಿದನು. ಬ್ರಹ್ಮನು ವಿಷ್ಣುವನ್ನು ಕುರಿತು "ನೀನು ತುದಿಮೊದಲನ್ನು ಕಂಡು ಬಂದೆಯೋ ಇಲ್ಲವೋ?" ಎಂದು ಕೇಳಿದನು. ಆಗ ವಿಷ್ಣುವು "ನನಗೆ ಕೊನೆ ಸಿಕ್ಕಲಿಲ್ಲ" ವೆಂದು ಉತ್ತರಕೊಟ್ಟನು. ಬ್ರಹ್ಮನು "ನಾನು ಕಂಡುಬಂದೆ" ಎಂದನು; ವಿಷ್ಣುವು 'ಏನಾದರೂ ಸಾಕ್ಷ್ಯವನ್ನು ಕೊಡು' ಎಂದು ಕೇಳಿದನು. ಆಗ ಹಸುವೂ, ವೃಕ್ಷವೂ "ನಾವಿಬ್ಬರೂ ಲಿಂಗದ ತಲೆಯ ಮೇಲಿದ್ದೆವು" ಎಂದು ಸಾಕ್ಷ್ಯವನ್ನು ನುಡಿದವು. ಆಗ ಲಿಂಗದೊಳಗಿನಿಂದ ಶಬ್ದ ಹೊರಟಿತು; ಮತ್ತು ವೃಕ್ಷಕ್ಕೆ 'ನೀನು ಸುಳ್ಳು ಹೇಳಿದುದರಿಂದ, ಜಗತ್ತಿನಲ್ಲಿ ನಿನ್ನ ಹೂವು ನನ್ನ ಅಥವಾ ಬೇರೆ ಯಾವ ದೇವತೆಯ ತಲೆಯ ಮೇಲೂ ಹತ್ತುವುದಿಲ್ಲ. ಮತ್ತು ಯಾವನಾದರೂ ಏರಿಸಿದಲ್ಲಿ, ಅವನ ಸರ್ವನಾಶವಾಗುವುದು" ಎಂದು ಶಾಪಕೊಟ್ಟಿತು. ಹಸುವಿಗೆ 'ನೀನು ಯಾವ ಬಾಯಿಯಿಂದ ಸುಳ್ಳು ಹೇಳಿದೆಯೋ, ಆ ಬಾಯಿಂದಲೇ ಹೇಸಿಗೆಯನ್ನು ತಿನ್ನುತ್ತಿರುವೆ? ನಿನ್ನ ಮುಖವನ್ನು ಯಾವನೂ ಪೂಜಿಸುವುದಿಲ್ಲ; ಬಾಲವನ್ನು ಪೂಜಿಸುವರು" ಎಂದು ಶಾಪ ಕೊಟ್ಟಿತು. ಮತ್ತು ವಿಷ್ಣುವಿಗೆ 'ನೀನು ಸತ್ಯವನ್ನು ನುಡಿದುದರಿಂದ ಎಲ್ಲೆಡೆಯೂ ನಿನ್ನ ಪೂಜೆಯಾಗುವುದು' ಎಂದು ವರವನ್ನು ಕೊಟ್ಟಿತು. ಪುನಃ ಇಬ್ಬರೂ ಸೇರಿ ಲಿಂಗವನ್ನು ಸ್ತೋತ್ರಮಾಡಿದರು. ಅದರಿಂದ ಪ್ರಸನ್ನನಾಗಿ ಆ ಲಿಂಗದಿಂದ ಒಂದು ಜಟಾಜೂಟವಾದ ಮೂರ್ತಿಯು ಹೊರಗೆ ಬಂದಿತು. ಮತ್ತು, "ಸೃಷ್ಟಿಮಾಡುವುದಕ್ಕಾಗಿ ನಾನು ನಿಮ್ಮಿಬ್ಬರನ್ನು ಕಳುಹಿಸಿದ್ದೆನು. ಏಕೆ ಜಗಳದಲ್ಲಿ ಬಿದ್ದಿರಿ?" ಎಂದು ಕೇಳಿತು. ಆಗ ಬ್ರಹ್ಮ ವಿಷ್ಣುಗಳು 'ಸಾಮಗ್ರಿ ಇಲ್ಲದೆ ನಾವು ಎಲ್ಲಿಂದ ಸೃಷ್ಟಿ ಮಾಡೋಣ" ಎಂದು ಕೇಳಿದರು. ಆಗ ಮಹಾದೇವನು ತನ್ನ ಜಟೆಯಿಂದ ಒಂದು ಬೂದಿಯ ಗುಳಿಗೆಯನ್ನು ತೆಗೆದುಕೊಟ್ಟನು; ಮತ್ತು ಹೋಗಿರಿ; ಇದರಿಂದ ಸಕಲ ಜಗತ್ತನ್ನು ಸೃಷ್ಟಿಸಿರಿ" ಎಂದು ಹೇಳಿದನು.—ಈ ಮೊದಲಾಗಿ ಬರೆದಿದೆ.

ಛೇಷ್! ಯಾರಾದರೂ ಈ ಪುರಾಣಕರ್ತರಾದ ಪೋಪರನ್ನು "ಸೃಷ್ಟಿತತ್ವಗಳೂ ಪಂಚಮಹಾಭೂತಗಳೂ ಇಲ್ಲದಿದ್ದಾಗ, ಬ್ರಹ್ಮ,

ವಿಷ್ಣು ಮತ್ತು ಮಹಾದೇವರ ಶರೀರಗಳೂ, ನೀರೂ, ಕಮಲವೂ, ಲಿಂಗವೂ, ಹಸುವೂ, ಕೇತಕೀವೃಕ್ಷವೂ, ಬೂದಿಯ ಗುಳಿಗೆಯೂ ನಿಮ್ಮ ತಾತನ ಮನೆಯಿಂದ ಬಂದು ಬಿದ್ದವೇ?' ಎಂದು ಕೇಳಬೇಕು. ಹಾಗೆಯೇ :—ಭಾಗವತದಲ್ಲಿ 'ವಿಷ್ಣುವಿನ ನಾಭಿಯಿಂದ ಕಮಲವೂ, ಕಮಲದಿಂದ ಬ್ರಹ್ಮನೂ, ಬ್ರಹ್ಮನ ಬಲಗಾಲಿನ ಹೆಬ್ಬೆಟ್ಟಿನಿಂದ ಸತ್ಯರೂಪೆಯೆಂಬ ರಾಣಿಯೂ, ಹಣೆಯಿಂದ ರುದ್ರನೂ, ಮತ್ತು ಮರೀಚಿ ಮೊದಲಾದ ಹತ್ತು ಮಂದಿ ಪುತ್ರರೂ, ಅವರಿಂದ ಹತ್ತು ಮಂದಿ ಪ್ರಜಾಪತಿಗಳೂ ಹುಟ್ಟಿದರು. ಅವರ ಹದಿಮೂರು ಮಂದಿ ಕನ್ಯೆಯರ ಮದುವೆ ಕಶ್ಯಪನೊಂದಿಗಾಯಿತು. ಅವರಲ್ಲಿ ದಿತಿಯಿಂದ ದೈತ್ಯರೂ, ದನುವಿನಿಂದ ದಾನವರೂ, ಅದಿತಿಯಿಂದ ಆದಿತ್ಯರೂ ವಿನತೆಯಿಂದ ಪಕ್ಷಿಗಳೂ, ಕದ್ರುವಿನಿಂದ ಹಾವುಗಳೂ, ಸರಮೆಯಿಂದ ನಾಯಿ, ನರಿ ಮೊದಲಾದುವೂ, ಮತ್ತು ಬೇರೆ ಸ್ತ್ರೀಯರಿಂದ ಆನೆ, ಕುದುರೆ, ಒಂಟೆ, ಕತ್ತೆ, ಕೋಣ, ಹುಲ್ಲು, ಸೊಪ್ಪು, ಮುಳ್ಳುಗಳಿಂದ ಕೂಡಿದ ಜಾಲಿ ಮೊದಲಾದ ಮರಗಳು ಹುಟ್ಟಿದವು.—ಎಂದು ಬರೆದಿದೆ! ಭಲೇ ಭಲೇ ಭಾಗವತವನ್ನು ರಚಿಸಿದ ಮಂಕುತಿಮ್ಮಣ್ಣ! ನಿನಗೆ ಏನೆನ್ನಬೇಕು? ಇಂತಹ ಸುಳ್ಳುಮಾತು ಬರೆಯುವುದಕ್ಕೆ ಸ್ವಲ್ಪವಾದರೂ ನಾಚಿಕೆಯಾಗಲಿಲ್ಲ ಮತ್ತು ಪೂರ್ಣಾಂಧನೇ ಆಗಿಹೋದೆ; ಒಳ್ಳೆಯದು. ಸ್ತ್ರೀ-ಪುರುಷರ ರಜೋವೀರ್ಯಗಳ ಸಂಯೋಗದಿಂದ ಮನುಷ್ಯರಂತೂ ಹುಟ್ಟೆಯೇ ಹುಟ್ಟುತ್ತಾರೆ; ಆದರೆ ಪರಮಾತ್ಮನ ಸೃಷ್ಟಿಕ್ರಮಕ್ಕೆ ವಿರುದ್ಧವಾಗಿ ಪಶು, ಪಕ್ಷಿ, ಹಾವು ಮೊದಲಾದುವು ಎಂದಿಗೂ ಹುಟ್ಟಲಾರವು. ಮತ್ತು ಆನೆ, ಒಂಟೆ, ಸಿಂಹ, ನಾಯಿ, ಕತ್ತೆ ಮತ್ತು ಮರ ಮೊದಲಾದುವುಗಳು ಸ್ತ್ರೀಯ ಗರ್ಭಾಶಯದಲ್ಲಿ ಸ್ಥಿತವಾಗಲು ಅವಕಾಶವಾದರೂ ಎಲ್ಲಿರಬಲ್ಲದು? ಮತ್ತು ಸಿಂಹ ಮೊದಲಾದುವು ಹುಟ್ಟಿ, ತಮ್ಮ ತಂದೆ-ತಾಯಿಗಳನ್ನು ಏಕೆ ತಿನ್ನಲಿಲ್ಲ? ಮತ್ತು ಮನುಷ್ಯ ಶರೀರದಿಂದ ಪಶು-ಪಕ್ಷಿಗಳೂ ಮರ-ಗಿಡ ಮೊದಲಾದುವೂ ಹುಟ್ಟುವುದು ಹೇಗೆತಾನೇ ಸಂಭವವಾದೀತು? ಜಗತ್ತನ್ನು ಇಂದಿನವರೆಗೂ ಭ್ರಾಂತಿಗೊಳಿಸಿಟ್ಟಿರುವ ಪೋಪನಿಗೂ, ಈ ಮಹಾ ಅಸಂಭವವಾದ ಪೋಪರಚಿತ ಲೀಲೆಗೂ ಧಿಕ್ಕಾರ! ಆಹಾ! ಈ ಮಹಾ

ಅಸತ್ಯವಾದ ಮಾತುಗಳನ್ನು ಆ ಕುರುಡು ಪೋಪರೂ, ಒಡೆದು ಹೋದ ಒಳಗಿನ ಮತ್ತು ಹೊರಗಿನ ಕಣ್ಣುಗಳನ್ನುಳ್ಳ ಅವರ ಶಿಷ್ಯರೂ ಕೇಳುತ್ತಾರೆ; ಮತ್ತು ಒಪ್ಪುತ್ತಾರೆ! ಇವರು ಮಾನವರೋ ಅಥವಾ ಬೇರೆ ಇನ್ನಾರೋ—ಎಂದು ಮಹಾ ಆಶ್ಚರ್ಯವಾಗುತ್ತದೆ! ಈ ಭಾಗವತಾದಿ ಪುರಾಣಗಳನ್ನು ಬರೆದವರು ಗರ್ಭದಲ್ಲಿಯೇ ಏಕೆ ನಾಶವಾಗಲಿಲ್ಲ? ಅಥವಾ ಹುಟ್ಟುತ್ತಲೇ ಏಕೆ ಸಾಯಲಿಲ್ಲ? ಏಕೆಂದರೆ ಈ ಪಾಪಗಳಿಂದ ದೂರವಿದ್ದಲ್ಲಿ ಆರ್ಯಾವರ್ತದೇಶವು ದುಃಖಗಳಿಂದ ದೂರವಿರುತ್ತಿತ್ತು.

ಪ್ರ :—ಈ ಮಾತುಗಳಲ್ಲಿ ವಿರೋಧ ಬರಲಾರದು. ಏಕೆಂದರೆ—'ಮದುವೆಯು ಯಾರದೋ ಹಾಡೂ ಅವನದೇ.'' ವಿಷ್ಣುವನ್ನು ಸ್ತೋತ್ರಮಾಡಹತ್ತಿದಾಗ, ವಿಷ್ಣುವನ್ನು ಪರಮೇಶ್ವರನನ್ನಾಗಿಯೂ, ಉಳಿದವರನ್ನು ದಾಸರನ್ನಾಗಿಯೂ, ಶಿವನ ಗುಣಗಾನ ಮಾಡತೊಡಗಿದಾಗ, ಶಿವನನ್ನು ಪರಮಾತ್ಮನನ್ನಾಗಿಯೂ, ಉಳಿದವರನ್ನು ಕಿಂಕರರನ್ನಾಗಿಯೂ ಮಾಡಿದರು, ಮತ್ತು ಪರಮಾತ್ಮನ ಮಾಯೆಯಲ್ಲಿ ಎಲ್ಲವೂ ಆಗಬಹುದು. ಮನುಷ್ಯರಿಂದ ಮೃಗಾದಿಗಳನ್ನೂ, ಮೃಗಾದಿಗಳಿಂದ ಮನುಷ್ಯರನ್ನೂ ಪರಮೇಶ್ವರನು ಹುಟ್ಟಿಸಬಲ್ಲನು. ನೋಡಿರಿ. ಕಾರಣವಿಲ್ಲದೆ ತನ್ನ ಮಾಯೆಯಿಂದ ಸಮಗ್ರ ವಿಶ್ವವನ್ನು ರಚಿಸಿದ್ದಾನೆ. ಅವನಿಗೆ ಯಾವುದು ತಾನೇ ಅಸಾಧ್ಯ? ಮಾಡಬೇಕೆಂದು ಇಚ್ಛಿಸಿದುದನ್ನೆಲ್ಲಾ ಮಾಡಬಲ್ಲನು.

ಉತ್ತರ :—ಅಯ್ಯೋ, ಅಜ್ಞರೇ! ಮದುವೆಯಲ್ಲಿ ಯಾವನನ್ನು ಕುರಿತು ಹಾಡುವರೋ, ಅವನನ್ನು ಎಲ್ಲರಿಗಿಂತ ದೊಡ್ಡವನನ್ನಾಗಿ ಮತ್ತು ಬೇರೆಯವರನ್ನು ಚಿಕ್ಕವರನ್ನಾಗಿ ಮಾಡುವುದಿಲ್ಲ ಅಥವಾ ನಿಂದಿಸುವುದಿಲ್ಲ; ಅಥವಾ ಅವನನ್ನು ಎಲ್ಲರ ತಂದೆಯನ್ನಾಗಿ ಮಾಡುವುದಿಲ್ಲವಲ್ಲ! ಹೇಳಿರಿ, ನೀವು ಪೋಪರೇ! ವಂದಿಮಾಗಧರನ್ನೂ, ಹೊಗಳುಭಟ್ಟರಾದ ಸ್ತುತಿಪಾಠಕರನ್ನೂ ಮೀರಿಸಿದ ಹರಟೆಮಲ್ಲರಹುದೋ ಅಲ್ಲವೋ? ಯಾರನ್ನು ಆಶ್ರಯಿಸಿರುವಿರೋ ಅವನನ್ನು ಎಲ್ಲರಿಗಿಂತಲೂ ದೊಡ್ಡವನನ್ನಾಗಿ ಮಾಡಿಬಿಡುವಿರಿ. ಮತ್ತು ಯಾರನ್ನು ವಿರೋಧಿಸುವಿರೋ ಅವನನ್ನು ಎಲ್ಲರಿಗಿಂತ ಹೀನನನ್ನಾಗಿ ಮಾಡಿಬಿಡುವಿರಿ. ನಿಮಗೆ

ಧರ್ಮ-ಸತ್ಯಗಳಿಂದ ಉಪಯೋಗವೇನು? ಆದರೆ, ನಿಮಗೆ ನಿಮ್ಮ ಸ್ವಾರ್ಥಮಾತ್ರ ಬೇಕಾಗಿದೆ. ಮಾಯೆ ಮನುಷ್ಯರಲ್ಲಿರಬಲ್ಲದು. ಛಲಿಗಳೂ, ಕಪಟಿಗಳೂ ಆದವರನ್ನೇ ಮಾಯಾವಿಗಳೆನ್ನುತ್ತಾರೆ. ಪರಮೇಶ್ವರನಲ್ಲಿ ಛಲ, ಕಪಟ ಮೊದಲಾದ ದೋಷಗಳಿಲ್ಲದಿರುವುದರಿಂದ, ಅವನನ್ನು ಮಾಯಾವಿಯೆನ್ನಲಾರಿರಿ. ಆದಿಸೃಷ್ಟಿಯಲ್ಲಿ ಕಶ್ಯಪ ಮತ್ತು ಅವನ ಹೆಂಡತಿಯರಿಂದ ಪಶು, ಪಕ್ಷಿ, ಹಾವು, ಮರ ಮೊದಲಾದುವುಗಳು ಹುಟ್ಟಿದ್ದರೆ. ಅಂತಹ ಸಂತಾನವು ಈಗಲೂ ಏಕೆ ಹುಟ್ಟುವುದಿಲ್ಲ? ಮೊದಲು ಬರೆದಿರುವ ಸೃಷ್ಟಿಕ್ರಮವೇ ಸರಿಯಾಗಿರುತ್ತದೆ. ಮತ್ತು ಪ್ರೋಪರು ಈ ಸ್ಥಳದಲ್ಲೇ ಮೋಸಹೋಗಿ ಏನೇನೋ ಒದರಿರಬಹುದೆಂದು ಅನುಮಾನವಾಗುತ್ತದೆ.

ತಸ್ಮಾತ್ತಾಕ್ಶ್ಯಪ್ಯ ಇಮಾಃ ಪ್ರಜಾಃ॥ [ಶತಪಥ ೭, ೫, ೧, ೫.]

ಶತಪಥದಲ್ಲಿ—" ಈ ಎಲ್ಲಾ ಸೃಷ್ಟಿಯೂ ಕಶ್ಯಪನು ಮಾಡಿದುದು " ಎಂದು ಬರೆದಿದೆ.

ಕಶ್ಯಪಃ ಕಸ್ಮಾತ್ ಪಶ್ಯಕೋ ಭವತೀತಿ॥

[ನಿರುಕ್ತ. ೮. ೨. ೩ಂ, ೭.]

" ಪಶ್ಯಕ " ಅಂದರೆ " ಪಶ್ಯತೀತಿಪಶ್ಯಃ ಪಶ್ಯ ಏವ ಪಶ್ಯಕಃ "—ಅಂದರೆ ನಿರ್ಭ್ರಮನಾಗಿ ಚರಾಚರಜಗತ್ತು, ಸರ್ವ ಜೀವರು ಮತ್ತು ಅವರ ಕರ್ಮಗಳನ್ನೂ ಹಾಗೂ ಸರ್ವ ವಿದ್ಯೆಗಳನ್ನೂ ಯಥಾವತ್ತಾಗಿ ನೋಡುವುದರಿಂದ ಸೃಷ್ಟಿಕರ್ತನಾದ ಪರಮಾತ್ಮನಿಗೆ ಕಶ್ಯಪನೆಂದು ಹೆಸರು. ಮತ್ತು " ಆದ್ಯಂತ ವಿಪರ್ಯಯಶ್ಚ " ಎಂಬ ಮಹಾಭಾಷ್ಯದ ವಚನದಂತೆ, ಮೊದಲಿನಲ್ಲಿರುವ ಅಕ್ಷರವು ಕೊನೆಗೂ, ಕೊನೆಯಲ್ಲಿರುವ ವರ್ಣವು ದೊದಲಿಗೂ ಬಂದುದರಿಂದ " ಪಶ್ಯಕ " ದಿಂದ " ಕಶ್ಯಪ " ಎಂಬುದಾಗಿರುತ್ತದೆ. ಇದರ ಅರ್ಥವನ್ನು ತಿಳಿಯದೆ, ಭಂಗಿಯ ಬೊಂಬನ್ನೇರಿಸಿ ತಮ್ಮ ಜನ್ಮವನ್ನು ಸೃಷ್ಟಿನಿಯಮಕ್ಕೆ ವಿರುದ್ಧವಾಗಿ ಕಥನಮಾಡುವುದರಲ್ಲಿ ಹಾಳುಮಾಡಿಕೊಂಡರು.

ಇನ್ನು ಮಾರ್ಕಂಡೇಯ ಪುರಾಣದ ದುರ್ಗಾಪಾಠದಲ್ಲಿ, " ದೇವತೆಗಳ ಶರೀರದಿಂದ ಒಂದು ತೇಜಸ್ಸು ಹೊರಟು, ಒಬ್ಬಳು

ದೇವಿಯು ಉದ್ಭವಿಸಿದಳು, ಅವಳು ಮಹಿಷಾಸುರನನ್ನು ಕೊಂದಳು. ರಕ್ತಬೀಜನ ಶರೀರದ ಒಂದು ಬಿಂದುವು ಭೂಮಿಯ ಮೇಲೆ ಬೀಳುವುದರಿಂದ ಅವನಂತಹ ರಕ್ತಬೀಜರು ಉತ್ಪನ್ನರಾಗಿ ಜಗತ್ತಿನಲ್ಲೆಲ್ಲಾ ರಕ್ತಬೀಜರು ತುಂಬಿಹೋಗುವರು. ರಕ್ತದ ನದಿ ಹರಿಯುವುದು" ಈ ಮೊದಲಾದ ಬಹಳ ಬುರುಡೆಗಳನ್ನು ಬರೆದಿಟ್ಟಿದ್ದಾರೆ. ಜಗತ್ತೆಲ್ಲಾ ರಕ್ತಬೀಜರಿಂದ ತುಂಬಿಹೋಗಿದ್ದಾಗ ದೇವಿಯೂ, ದೇವಿಯ ಸಿಂಹವೂ ಮತ್ತು ಆಕೆಯ ಸೈನ್ಯವೂ ಎಲ್ಲಿದ್ದುವು? ರಕ್ತಬೀಜರು ದೇವಿಯಿಂದ ದೂರದೂರ ಇದ್ದರೆಂದು ಹೇಳುವಿರಾದರೆ, ಜಗತ್ತೆಲ್ಲಾ ರಕ್ತಬೀಜರಿಂದ ತುಂಬಿರಲಿಲ್ಲ. ತುಂಬಿಹೋಗಿದ್ದರೆ, ಪಶು, ಪಕ್ಷಿ, ಮನುಷ್ಯಾದಿ ಜೀವಿಗಳೂ, ಮೊಸಳೆ, ತಿಮಿಂಗಿಲ, ಆಮೆ, ಮತ್ಸ್ಯ ಮೊದಲಾದ ಜಲಚರಗಳೂ, ವನಸ್ಪತಿ—ಮೊದಲಾದ ವೃಕ್ಷಗಳೂ ಎಲ್ಲಿರುತ್ತಿದ್ದವು? ದುರ್ಗಾಪಾಠವನ್ನು ಬರೆದ ಪೋಪರ ಮನೆಯೊಳಕ್ಕೆ ಓಡಿಹೋಗಿರ ಬಹುದೆಂದೇ ನಿಶ್ಚಿತವಾಗಿ ತಿಳಿಯಬೇಕು. ನೋಡಿರಿ! ಭಂಗಿಯ ಅಮಲಿನಲ್ಲಿ ಎಂತಹ ತುದಿಮೊದಲಿಲ್ಲದ ಅಸಂಭವವಾದ ಕಥೆಯ ಹರಟೆಯನ್ನು ಹೊಡೆದಿದ್ದಾರೆ! ಈಗ, ಯಾವುದನ್ನು "ಶ್ರೀಮದ್ಭಾಗವತ"ವೆಂದು ಕರೆಯುತ್ತಾರೋ, ಅದರ ಲೀಲೆಯನ್ನು ಕೇಳಿರಿ. ನಾರಾಯಣನು ಬ್ರಹ್ಮನಿಗೆ ಚತುಃಶ್ಲೋಕೀ ಭಾಗವತವನ್ನು ಉಪದೇಶಿಸಿದನು :—

ಜ್ಞಾನಂ ಪರಮಗುಹ್ಯಂ ಮೇ ಯದ್ವಿಜ್ಞಾನ ಸಮನ್ವಿತಂ ।
ಸರಹಸ್ಯಂ ತದಂಗಂಚ ಗೃಹಾಣ ಗದಿತಂ ಮಯಾ ॥

[ಭಗವತ, ಸ್ಕಂಧ, ೨, ಅ. ೯, ಶ್ಲೋ. ೩೦]

ಭಾಗವತದ ಮೂಲವೇ ಸುಳ್ಳಾಗಿರುವಾಗ, ಅದರ ಮರವೇಕೆ ಸುಳ್ಳಾಗಿರಲಾರದು?

ಅರ್ಥ!—"ಹೇ, ಬ್ರಹ್ಮ! ಯಾವುದು ವಿಜ್ಞಾನ ಮತ್ತು ರಹಸ್ಯದಿಂದ ಕೂಡಿದೆಯೋ ಮತ್ತು ಯಾವುದು ಧರ್ಮ, ಅರ್ಥ, ಕಾಮ ಹಾಗೂ ಮೋಕ್ಷದ ಅಂಗವಾಗಿದೆಯೋ, ಅಂತಹ, ನನ್ನ ಪರಮ ಗುಹ್ಯವಾದ ಜ್ಞಾನವನ್ನೇ ನನ್ನಿಂದ ಗ್ರಹಿಸು" ವಿಜ್ಞಾನಯುಕ್ತವಾದ

ಜ್ಞಾನವೆಂದು ಹೇಳಿದ ಮೇಲೆ, ' ಪರಮ ' ಎಂದರೆ ಜ್ಞಾನದ ವಿಶೇಷಣ ವನ್ನಿಡುವುದು ವ್ಯರ್ಥ; ಮತ್ತು ' ಗುಹ್ಯ' ಎಂಬ ವಿಶೇಷಣವಿರುವುದ ರಿಂದ ' ರಹಸ್ಯ' ಎಂಬುದು ಪುನರುಕ್ತವು! ಮೂಲಶ್ಲೋಕವು ಅನ ರ್ಥಕವಾಗಿರುವಾಗ, ಗ್ರಂಥವೇಕೆ ಅನರ್ಥಕವಲ್ಲ? ಬ್ರಹ್ಮನಿಗೆ ಹೀಗೆ ವರವಿತ್ತನು :—

ಭವಾನ್ ಕಲ್ಪವಿಕಲ್ಪೇಷು ನ ವಿಮುಹ್ಯತಿ ಕರ್ಹಿಚಿತ್ |

[ಭಾಗವತ. ಸ್ಕಂ. ೨, ಅ. ೯, ಶ್ಲೋ. ೩೬]

" ನೀನು ಕಲ್ಪ, ಅಂದರೆ ಸೃಷ್ಟಿಯಲ್ಲಿ ಮತ್ತು ವಿಕಲ್ಪ ಅಂದರೆ ಪ್ರಳಯದಲ್ಲಿಯೂ ಸಹ ಎಂದೂ ಮೋಹಹೊಂದುವುದಿಲ್ಲ. " ಹೀಗೆ, ಬರೆದು, ಮತ್ತೆ ದಶಮಸ್ಕಂದದಲ್ಲಿ ಮೋಹಿತನಾಗಿ ಕರುಗಳನ್ನು ಕದ್ದನೆಂದು ಬರೆದಿದೆ. ಇವೆರಡರಲ್ಲಿ ಒಂದು ಮಾತು ನಿಜ; ಇನ್ನೊಂದು ಸುಳ್ಳು. ಹೀಗಾಗಿ ಎರಡು ಮಾತುಗಳೂ ಸುಳ್ಳೇ. ವೈಕುಂಠದಲ್ಲಿ ರಾಗ, ದ್ವೇಷ, ಕ್ರೋಧ, ಈರ್ಷ್ಯೆ, ದುಃಖ—ಇವಿಲ್ಲದಿರುವಾಗ, ಸನಕಾದಿಗಳಿಗೆ ವೈಕುಂಠದ ದ್ವಾರದಲ್ಲಿ ಕ್ರೋಧವೇಕುಂಟಾಯಿತು? ಕ್ರೋಧವುಂಟಾದಲ್ಲಿ, ಅದು ಸ್ವರ್ಗವೇ ಅಲ್ಲ. ಆಗ ಜಯ-ವಿಜಯರು ದ್ವಾರಪಾಲಕರಾಗಿದ್ದರು. ಸ್ವಾಮಿಯ ಆಜ್ಞೆಯನ್ನು ಅವಶ್ಯವಾಗಿ ಪಾಲಿಸಬೇಕಾಗಿತ್ತು. ಅವರು ಸನಕಾದಿಗಳನ್ನು ತಡೆದರೆ, ಅಪರಾಧ ವೇನಾಯಿತು? ಇದರಮೇಲೆ, ಅಪರಾಧವಿಲ್ಲದೆ, ಶಾಪವೇ ತಟ್ಟ ಲಾರದು. " ನೀವು ಪೃಥ್ವಿಯ ಮೇಲೆ ಬಿದ್ದುಹೋಗಿರಿ " ಎಂದು ಶಾಪವುಂಟಾಯಿತು ಎಂದು ಹೇಳುವುದರಿಂದ, ಅಲ್ಲಿ ಪೃಥ್ವಿಯಿರು ವುದಿಲ್ಲ; ಆಕಾಶ, ವಾಯು, ಅಗ್ನಿ ಮತ್ತು ಜಲ ಇರಬಹುದು, ಎಂದು ಸಿದ್ಧವಾಗುತ್ತದೆ. ಹಾಗಿದ್ದರೆ, ದ್ವಾರ, ಮಂದಿರ ಮತ್ತು ನೀರು ಏತರ ಆಧಾರದ ಮೇಲಿದ್ದುವು? ಮತ್ತೆ, ಜಯ-ವಿಜಯರು—" ಸ್ವಾಮಿ ಗಳೇ! ಪುನಃ ನಾವು ವೈಕುಂಠಕ್ಕೆ ಯಾವಾಗ ಬರುವೆವು?" ಎಂದು ಸನಕಾದಿಗಳನ್ನು ಸ್ತುತಿಸಿದರು. ಅವರು ಅವರಿಗೆ—" ನೀವು ಪ್ರೇಮದಿಂದ ನಾರಾಯಣನಲ್ಲಿ ಭಕ್ತಿಯಿಡುವಿರಾದರೆ ಏಳನೆಯ ಜನ್ಮದಲ್ಲಿ ಮತ್ತು ವಿರೋಧದಿಂದ ಭಕ್ತಿಯಿಡುವಿರಾದರೆ ಮೂರನೆಯ

ಜನ್ಮದಲ್ಲಿ ವೈಕುಂಠವನ್ನು ಗಳಿಸಿಕೊಳ್ಳುವಿರಿ'' ಎಂದು ಹೇಳಿದರು. ಇದರಲ್ಲಿ ಆಲೋಚಿಸಬೇಕಾದುದಿದು—ಜಯವಿಜಯರು ನಾರಾಯಣನ ಭೃತ್ಯರಾಗಿದ್ದರು. ಅವರನ್ನು ರಕ್ಷಿಸುವುದು ಮತ್ತು ಸಹಾಯಮಾಡುವುದು ನಾರಾಯಣನ ಕರ್ತವ್ಯ ಕಾರ್ಯವಾಗಿದ್ದಿತು. ಯಾವ ಸ್ವಾಮಿಯು ತನ್ನ ಸೇವಕರಿಗೆ ಅಪರಾಧವಿಲ್ಲದೆ ದುಃಖಕೊಡುವವರನ್ನು ದಂಡಿಸುವುದಿಲ್ಲವೋ, ಅವನ ಸೇವಕರನ್ನು ಪ್ರತಿಯೊಬ್ಬರೂ ದುರ್ದಶೆ ಗೀಡುಮಾಡಿಬಿಡುವರು. ಜಯವಿಜಯರಿಗೆ ಸತ್ಕಾರಮಾಡುವುದೂ ಮತ್ತು ಸನಕಾದಿಗಳಿಗೆ ಚೆನ್ನಾಗಿ ದಂಡವಿಧಿಸುವುದೂ ನಾರಾಯಣನಿಗೆ ಉಚಿತವಾಗಿತ್ತು. ಏಕೆಂದರೆ—ಅವರು ಒಳಗೆ ಬರಲು ಹಠವನ್ನೇಕೆ ಮಾಡಿದರು? ಮತ್ತು ಸೇವಕರೊಂದಿಗೆ ಗುದ್ದಾಡಿದರೇಕೆ? ಶಾಪ ಕೊಟ್ಟರು! ಅವರಿಗೆ ಪ್ರತಿಯಾಗಿ ಸನಕಾದಿಗಳನ್ನು ಭೂಮಿಗೆಸೆಯುವುದು ನಾರಾಯಣನಿಗೆ ನ್ಯಾಯವಾಗಿತ್ತು. ನಾರಾಯಣನ ಮನೆಯಲ್ಲೇ ಇಷ್ಟು ಅವಾಂತರವಿರುವಾಗ, ವೈಷ್ಣವರೆನಿಸಿಕೊಳ್ಳುವ ಅವನ ಸೇವಕರಿಗೆ ಎಷ್ಟು ದುರ್ದಶೆ ಬಂದರೂ ಕಡಿಮೆಯೇ. ಮತ್ತೆ ಅವರು ಹಿರಣ್ಯಾಕ್ಷ-ಹಿರಣ್ಯಕಶಿಪುಗಳಾಗಿ ಹುಟ್ಟಿದರು. ಅವರಲ್ಲಿ ಹಿರಣ್ಯಾಕ್ಷನನ್ನು ವರಾಹನು ಕೊಂದನು. ಅವನ ಕತೆಯನ್ನು ಹೀಗೆ ಬರೆದಿದ್ದಾರೆ. ಅವನು ಭೂಮಿಯನ್ನು ಚಾಪೆಯಂತೆ ಸುತ್ತಿ ತಲೆಕೆಳಗಿಟ್ಟುಕೊಂಡು ಮಲಗಿದನು. ವಿಷ್ಣುವು ವರಾಹನಸ್ವರೂಪವನ್ನು ಧರಿಸಿ, ಅವನ ತಲೆಯ ಕೆಳಗಿನಿಂದ ಪೃಥಿವಿಯನ್ನು ಎತ್ತಿ ಬಾಯಿಯಲ್ಲಿಟ್ಟುಕೊಂಡನು. ಅವನು ಎದ್ದನು. ಇಬ್ಬರಿಗೂ ಯುದ್ಧವಾಯಿತು. ವರಾಹನು ಹಿರಣ್ಯಾಕ್ಷನನ್ನು ಕೊಂದುಹಾಕಿದನು. ಈ ಪ್ರೋಪರನ್ನು ಯಾರಾದರೂ—'ಪೃಥ್ವಿಯು ಗುಂಡಾಗಿದೆಯೋ ಅಥವಾ ಚಾಪೆಯಂತೆಯೋ?''—ಎಂದು ಕೇಳಿದರೆ, ಏನನ್ನೂ ಹೇಳಲಾರರು. ಏಕೆಂದರೆ—ಪೌರಾಣಿಕರು ಭೂಗೋಳವಿದ್ಯೆಯ ಶತ್ರುಗಳು. ಒಳ್ಳೆಯದು, ಸುರಳಿಸುತ್ತಿ ತಲೆಕೆಳಗಿಟ್ಟುಕೊಂಡಾಗ, ತಾನು ಏತರ ಮೇಲೆ ನಿದ್ರಿಸಿದನು? ಮತ್ತು ವರಾಹನು ಏತರ ಮೇಲೆ ಕಾಲಿಟ್ಟು ಓಡಿಬಂದನು? ಪೃಥ್ವಿಯನ್ನಂತೂ ವರಾಹನು ಬಾಯಿಯಲ್ಲಿಟ್ಟುಕೊಂಡನು; ಮತ್ತೆ ಇಬ್ಬರೂ ಏತರ ಮೇಲೆ ನಿಂತು ಹೋರಾಡಿದರು? ಅಲ್ಲಿಯಂತೂ ನಿಂತು

ಕೊಳ್ಳುವ ಬೇರಾವ ಜಾಗವೂ ಇರಲಿಲ್ಲ. ಆದರೆ, ಭಾಗವತ ಮೊದ ಲಾದ ಪುರಾಣಗಳನ್ನು ಬರೆದಂತಹ ಪೋಪರ ಎದೆಯ ಮೇಲೆ ನಿಂತು ಕಾದಾಡಿರಬಹುದೆ? ಆದರೆ ಪೋಪರು ಏತರ ಮೇಲೆ ಮಲಗಿದ್ದಿರ ಬಹುದು? ಈ ಮಾತು—"ಹರಟೆಮಲ್ಲನ ಮನೆಗೆ ಹರಟೆಮಲ್ಲರು ಬಂದರು; ಹರಟೆಮಲ್ಲರು ಹರಟೆದರು"—ಎಂಬಂತಿದೆ. ಮಿಥ್ಯಾವಾ ದಿಗಳ ಮನೆಗೆ ಹರಟೆಮಲ್ಲರು ಬಂದಾಗ, ಬುರುಡೆಹೊಡೆಯುವುದಕ್ಕೆ ಕಡಿಮೆಯೇನು? ಇನ್ನು ಉಳಿದನು ಹಿರಣ್ಯಕಶ್ಯಪನು. ಅವನ ಮಗ ಪ್ರಹ್ಲಾದನು ಭಕ್ತನಾಗಿದ್ದನು. ಅವನ ತಂದೆ, ಓದಿಸಲು ಪಾಠ ಶಾಲೆಗೆ ಕಳುಹಿಸುತ್ತಿದ್ದನು. ಆಗ ಅವನು ಆಧ್ಯಾಪಕರಿಗೆ—"ನನ್ನ ಹಲಗೆಯ ಮೇಲೆ ರಾಮ, ರಾಮ—ಎಂದು ಬರೆದುಕೊಡಿರಿ" ಎಂದು ಹೇಳುತ್ತಿದ್ದನು. ಅವನ ತಂದೆಯು ಇದದ್ದು ಕೇಳಿದಾಗ, "ನೀನು ನನ್ನ ಶತ್ರುವಿನ ಭಜನೆಯನ್ನೇಕೆ ಮಾಡುತ್ತೀಯೆ?" ಎಂದು ಪ್ರಶ್ನಿಸಿ ದನು. ಪೋಪನು ಒಪ್ಪಲಿಲ್ಲ. ಆಗ ಅವನ ತಂದೆಯು ಅವನನ್ನು ಕಟ್ಟೆ ಪರ್ವತದಿಂದ ಬೀಳಿಸಿದನು, ಭಾವಿಯಲ್ಲಿ ಹಾಕಿದನು. ಆದರೆ—ಅವನಿಗೆ ಏನೂ ಆಗಲಿಲ್ಲ. ಆಗವನು ಒಂದು ಕಬ್ಬಿಣದ ಕಂಬವನ್ನು ಬೆಂಕಿ ಯಲ್ಲಿ ಕಾಸಿ-"ನಿನ್ನ ಇಷ್ಟದೇವನಾದ ರಾಮನು ನಿಜವಾದರೆ, ನೀನು ಇದನ್ನು ಹಿಡಿದುಕೊಂಡರೆ ಸುಟ್ಟುಹೋಗುವುದಿಲ್ಲ." ಎಂದು ಅವನಿಗೆ ಹೇಳಿದನು. ಪ್ರಹ್ಲಾದನು ಹಿಡಿದುಕೊಳ್ಳಲು ಹೊರಟನು. ಮನಸ್ಸಿನಲ್ಲಿ "ಸುಟ್ಟುಹೋಗದೆ ಉಳಿಯುವೆನೋ, ಇಲ್ಲವೋ"ಎಂದು ಶಂಕೆಹುಟ್ಟಿತು. ನಾರಾಯಣನು ಆ ಕಂಬದ ಮೇಲೆ ಚಿಕ್ಕ ಚಿಕ್ಕ ಇರುವೆಗಳ ಸಾಲನ್ನು ಹರಿಸಿದನು. ಅವನಿಗೆ ನಿಶ್ಚಯವಾಯಿತು. ಕೂಡಲೇ ಹೋಗಿ ಕಂಬವನ್ನು ಹಿಡಿದುಕೊಂಡನು. ಅದು ಸೀಳಿಹೋಯಿತು. ಅದರಿಂದ ನೃಸಿಂಹನು ಹೊರಟನು. ಮತ್ತು ಅವನ ತಂದೆಯನ್ನು ಹಿಡಿದು, ಹೊಟ್ಟೆಯನ್ನು ಬಗೆದುಹಾಕಿದನು. ಆಮೇಲೆ ಅಕ್ಕರೆಯಿಂದ ಪ್ರಹ್ಲಾದ ನನ್ನು ನಾಕತೊಡಗಿದನು. ಪ್ರಹ್ಲಾದನಿಗೆ—"ವರ ಕೇಳು" ಎಂದು ಹೇಳಿದನು. ಅವನು ತನ್ನ ತಂದೆಗೆ ಸದ್ಗತಿಯಾಗಬೇಕೆಂದು ಕೇಳಿ ಕೊಂಡನು. ನೃಸಿಂಹನು—"ನನ್ನ ಹಿಂದಿನ ೨೧ ತಲೆಮಾರಿನವರು ಸದ್ಗತಿ ಪಡೆದರು" ಎಂದು ವರವಿತ್ತನು! ಈಗ ನೋಡಿರಿ! ಇದೂ

ಕೂಡ ಬೇರೆ ಹರಟೆಯ ಸೋದರನಾದ ಹರಟೆಯಾಗಿದೆ. ಭಾಗವತವನ್ನು ಆಲಿಸುವ ಅಥವಾ ಓದಿಹೇಳುವ ಯಾವನನ್ನಾದರೂ ಹಿಡಿದು, ಪರ್ವತದ ಮೇಲಿನಿಂದ ಕೆಡಹಿದರೆ, ಯಾವನೂ ರಕ್ಷಿಸುವುದಿಲ್ಲ; ಪುಡಿಪುಡಿಯಾಗಿ ಸತ್ತೇಹೋಗುತ್ತಾನೆ. ಪ್ರಹ್ಲಾದನನ್ನು ಅವನ ತಂದೆ ಓದಲು ಕಳುಹುತ್ತಿದ್ದನು; ಕೆಟ್ಟಕೆಲಸವೇನು ಮಾಡಿದ್ದನು? ಮತ್ತು ಆ ಪ್ರಹ್ಲಾದನು ಓದುವುದನ್ನು ಬಿಟ್ಟು ಬೈರಾಗಿಯಾಗಲು ಬಯಸುವಂತಹ ಮೂರ್ಖನಾಗಿದ್ದನು. ಯಾವನು 'ಉರಿಯುತ್ತಿದ್ದ ಕಂಬದ ಮೇಲೆ ಇರುವೆ ಹತ್ತಲಾರಂಭಿಸಿತು ಮತ್ತು ಪ್ರಹ್ಲಾದನು ಸ್ಪರ್ಶಮಾಡಿದರೂ ಸುಟ್ಟುಹೋಗಲಿಲ್ಲ' ಎಂಬ ಈ ಮಾತನ್ನು ಸತ್ಯವೆಂದು ಒಪ್ಪುತ್ತಾನೋ, ಅವನನ್ನೂ ಕಂಬಕ್ಕೆ ತಗುಲಿಸಿಬಿಡಬೇಕು. ಇವನು ಸುಟ್ಟುಹೋಗದಿದ್ದರೆ, ಅವನು ಸುಟ್ಟುಹೋಗಿರಲಾರನೆಂದು ತಿಳಿಯಿರಿ. ಮತ್ತು ನೃಸಿಂಹನೂ ಕೂಡ ಸುಟ್ಟುಹೋಗಲಿಲ್ಲವೇಕೆ? ಮೊದಲು ಮೂರನೆಯ ಜನ್ಮದಲ್ಲಿ ವೈಕುಂಠಕ್ಕೆ ಬರುವುದೆಂದು ಸನಕಾದಿಗಳ ವರವಿತ್ತು. ಅದನ್ನು ನಿಮ್ಮ ನಾರಾಯಣನು ಮರೆತು ಹೋದನೇನು? ಭಾಗವತದ ರೀತಿಯಿಂದ ಬ್ರಹ್ಮಾ, ಪ್ರಜಾಪತಿ, ಕಶ್ಯಪ, ಹಿರಣ್ಯಾಕ್ಷ ಮತ್ತು ಹಿರಣ್ಯಕಶ್ಯಪು ನಾಲ್ಕನೆಯ ಪೀಳಿಗೆಯಲ್ಲಾಗುತ್ತಾರೆ. ಇಪ್ಪತ್ತೊಂದು ತಲೆಮಾರು ಪ್ರಹ್ಲಾದನದು ಆಗಲೇ ಇಲ್ಲ; ಮತ್ತೆ ೨೧ ಜನ ಪೂರ್ವಜರು ಸದ್ಗತಿಗೆ ಹೋದರೆಂದು ಹೇಳಿಬಿಡುವುದು ಎಷ್ಟು ಪ್ರಮಾದ? ಮತ್ತು ಆ ಹಿರಣ್ಯಾಕ್ಷ-ಹಿರಣ್ಯಕಶ್ಯಪುಗಳೇ ರಾವಣ-ಕುಂಭಕರ್ಣರಾಗಿ ಮತ್ತು ಶಿಶುಪಾಲ-ದಂತವಕ್ರರಾಗಿ ಹುಟ್ಟಿದರೆ, ನೃಸಿಂಹನ ವರವೆಲ್ಲಿ ಹಾರಿಹೋಯಿತು? ಇಂತಹ ಪ್ರಮಾದದ ಮಾತುಗಳನ್ನು ಪ್ರಮಾದಿಗಳೇ ಹೇಳುತ್ತಾರೆ, ಕೇಳುತ್ತಾರೆ ಮತ್ತು ಒಪ್ಪುತ್ತಾರೆ; ವಿದ್ವಾಂಸರಲ್ಲ.

ಮತ್ತು ಅಕ್ರೂರನು :—

ರಥೇನ ವಾಯುವೇಗೇನ [ಭಾಗ ೧೦, ೩೯, ೩೮]
ಜಗಾಮ ಗೋಕುಲಂಪ್ರತಿ [ಭಾಗ ೧೦, ೩೮,೨೪]

ಅಕ್ರೂರನು, ಕಂಸನು ಕಳುಹಿಸಿದುದರಿಂದ, ವಾಯುವೇಗದಂತೆ ಓಡುವ ಕುದುರೆಗಳ ರಥದಲ್ಲಿ ಕುಳಿತು, ಸೂರ್ಯೋದಯಕಾಲಕ್ಕೆ

ಹೊರಟನು. ಮತ್ತು ನಾಲ್ಕು ಮೈಲಿ ದೂರದ ಗೋಕುಲಕ್ಕೆ ಸೂರ್ಯಾಸ್ತದ ಸಮಯಕ್ಕೆ ತಲುಪಿದನು. ಏನಾದರೂ ಕುದುರೆಗಳು ಭಾಗವತ ಬರೆದವನಿಗೆ ಪ್ರದಕ್ಷಿಣೆ ಮಾಡುತ್ತಿದ್ದಿರಬಹುದೊ? ಅಥವಾ ದಾರಿ ಮರೆತು, ಕುದುರೆ ನಡೆಸುವವರೂ, ಅಕ್ರೂರನೂ ಭಾಗವತ ಬರೆದವನ ಮನೆಗೆ ಬಂದು ನಿದ್ದೆಹೋಗಿರಬಹುದೇ?

ಪೂತನೆಯ ಶರೀರ ಆರು ಕೋಶ ಆಗಲ ಮತ್ತು ಬಹಳ ಉದ್ದವಾಗಿತ್ತೆಂದು ಬರೆದಿದೆ. ಮಥುರಾ ಮತ್ತು ಗೋಕುಲದ ನಡುವೆ ಅವಳನ್ನು ಶ್ರೀಕೃಷ್ಣನು ಕೊಂದು ಬಿಸಾಕಿದುದು. ಹೀಗಾಗಿದ್ದರೆ, ಮಥುರಾ ಮತ್ತು ಗೋಕುಲ ಎರಡೂ ಅಪ್ಪಚ್ಚಿಯಾಗಿ, ಪೋಪರ ಮನೆಯೂ ಜಜ್ಜಿಹೋಗುತ್ತಿದ್ದಿತು.

ಮತ್ತು ಅಜಾಮಿಳನ ಕಥೆಯನ್ನು ಗೊತ್ತುಗುರಿಯಿಲ್ಲದೆ ಬರೆದಿದ್ದಾರೆ. ಅವನು ನಾರದನ ಹೇಳಿಕೆಯಿಂದ ತನ್ನ ಮಗನಿಗೆ ನಾರಾಯಣನೆಂದು ಹೆಸರಿಟ್ಟಿದ್ದನು. ಸಾಯುವ ಕಾಲದಲ್ಲಿ ತನ್ನ ಪುತ್ರನನ್ನು ಕರೆದನು. ನಡುವೆ ನಾರಾಯಣನು ಧುಮುಕಿ ಬಂದನು. ನಾರಾಯಣನಿಗೆ—"ಅವನು ತನ್ನ ಮಗನನ್ನು ಕರೆಯುತ್ತಿದ್ದಾನೆ; ನನ್ನನ್ನಲ್ಲ" ಎಂದು ಅವನ ಅಂತಃಕರಣದ ಭಾವವು ಗೊತ್ತಾಗುತ್ತಿರಲಿಲ್ಲವೆ? ನಾಮ ಮಾಹಾತ್ಮ್ಯವು ಇಂತಹುದೇ ಆಗಿದ್ದಲ್ಲಿ, ಇಂದೂ ಸಹ ನಾರಾಯಣನ ಸ್ಮರಣೆಮಾಡುವವರ ದುಃಖವನ್ನು ಬಿಡಿಸಲು ಬರುವುದಿಲ್ಲವೇಕೆ? ಈ ಮಾತು ನಿಜವಾಗಿದ್ದರೆ, ಸೆರೆಯಾಳುಗಳು "ನಾರಾಯಣ, ನಾರಾಯಣ" ಎಂದು ಹೇಳಿ ಬಿಡುಗಡೆ ಹೊಂದುವುದಿಲ್ಲವೇಕೆ? ಹೀಗೆಯೇ ಜ್ಯೋತಿಷಶಾಸ್ತ್ರಕ್ಕೆ ವಿರುದ್ಧವಾಗಿ ಸುಮೇರುಪರ್ವತದ ಪರಿಮಾಣವನ್ನು ಬರೆದಿದ್ದಾರೆ ಮತ್ತು ಪ್ರಿಯವ್ರತರಾಜನ ರಥದ ಚಕ್ರದ ಜಾಡಿನಿಂದ ;ಸಮುದ್ರಗಳಾದವು. ಪೃಥಿವಿಯು ೪೯ ಕೋಟಿ ಯೋಜನವಿದೆ. ಈ ಮೊದಲಾದ ಸುಳ್ಳುಮಾತುಗಳು ಯಾವ ತುದಿ ಮೊದಲೂ ಇಲ್ಲದ ಹರಟೆ ಭಾಗವತದಲ್ಲಿ ಬರೆದಿದೆ.

ಯಾವನ ಸಹೋದರ ಜಯದೇವನು "ಗೀತಗೋವಿಂದ"ವನ್ನು ರಚಿಸಿದ್ದಾನೋ, ಆ ಬೋಬದೇವನು ಈ ಭಾಗವತವನ್ನು ರಚಿಸಿದ್ದಾನೆ. ಅವನು, ತಾನು ಬರೆದ "ಹೆಮಾದ್ರಿ" ಎಂಬ ಗ್ರಂಥದಲ್ಲಿ "ಶ್ರೀಮ

ದ್ಭಾಗವತ ಪುರಾಣವನ್ನು. ನಾನು ರಚಿಸಿದ್ದೇನೆ" ಎಂಬ ಶ್ಲೋಕಗಳನ್ನು ಬರೆದಿದ್ದಾನೆ, ನೋಡಿರಿ. ಆ ಲೇಖನದ ಮೂರು ಹಾಳೆಗಳು ನನ್ನ ಹತ್ತಿರ ಇದ್ದುವು. ಅವುಗಳಲ್ಲಿ ಒಂದು ಹಾಳೆ ಕಳೆದುಹೋಗಿದೆ. ಆ ಹಾಳೆಯಲ್ಲಿನ ಶ್ಲೋಕಗಳ ಆಶಯವೇನಿತ್ತೋ, ಆ ಆಶಯದ ಎರಡು ಶ್ಲೋಕಗಳನ್ನು ನಾವು ರಚಿಸಿ, ಕೆಳಗೆ ಬರೆದಿದ್ದೇವೆ. ನೋಡಬೇಕಾದವರು "ಹಿಮಾದ್ರಿ" ಗ್ರಂಥದಲ್ಲಿ ನೋಡಿಕೊಳ್ಳಲಿ.—

ಹಿಮಾದ್ರೇಃ ಸಚಿವಸ್ಯಾರ್ಥೇ ಸೂಚನಾ ಕ್ರಿಯತೇಽಧುನಾ।
ಸ್ಕಂಧಾಽಧ್ಯಾಯಕಥಾನಾಂಚ ಯತ್ಪ್ರಮಾಣಂ ಸಮಾಸತಃ ॥೧
ಶ್ರೀಮದ್ಭಾಗವತಂ ನಾಮ ಪುರಾಣಂ ಚ ಮಯೇರಿತಂ।
ವಿದುಷಾ ಬೋಬದೇವೇನ ಶ್ರೀಕೃಷ್ಣಸ್ಯ ಯಶೋಽನ್ವಿತಂ ॥೨॥

ಕಳೆದುಹೋದ ಹಾಳೆಯಲ್ಲಿ ಇದೇ ಬಗೆಯ ಶ್ಲೋಕಗಳಿದ್ದುವು. ಅಂದರೆ–ರಾಜನ ಸಚಿವನಾದ ಹಿಮಾದ್ರಿಯು ಬೋಬದೇವ ಪಂಡಿತನಿಗೆ "ನೀನು ಬರೆದ ಶ್ರೀಮದ್ಭಾಗವತವನ್ನು ಸಂಪೂರ್ಣವಾಗಿ ಕೇಳಲು ನನಗೆ ಬಿಡುವಿಲ್ಲ. ಆದುದರಿಂದ, ಯಾವುದನ್ನು ನೋಡಿ ನಾನು ಶ್ರೀಮದ್ಭಾಗವತದ ಕಥೆಯನ್ನು ಸಂಕ್ಷೇಪವಾಗಿ ತಿಳಿದುಕೊಳ್ಳಲಾಗುವುದೋ, ಅಂತಹ ಶ್ಲೋಕಬದ್ಧವಾದ ಸೂಚೀಪತ್ರವನ್ನು ಸಂಕ್ಷೇಪವಾಗಿ ರಚಿಸು"—ಎಂದು ಹೇಳಿದನು. ಆದುದರಿಂದ, ಕೆಳಗೆ ಬರೆದಿರುವ ಸೂಚೀಪತ್ರವನ್ನು ಬೋಬದೇವನು ರಚಿಸಿದನು. ಆದರಲ್ಲಿ, ಹಾಳಾಗಿ ಹೋದ ಹಾಳೆಯಲ್ಲಿನ ಹತ್ತು ಶ್ಲೋಕಗಳು ಕಳೆದುಹೋಗಿವೆ. ಹನ್ನೊಂದನೆಯ ಶ್ಲೋಕದಿಂದ ಬರೆಯುತ್ತೇವೆ. ಈ ಕೆಳಗೆ ಬರೆದ ಶ್ಲೋಕಗಳೆಲ್ಲಾ ಬೋಬದೇವನು ಬರೆದುವು. ಅವು:—

ಬೋಧಂತೀತಿ ಹಿ ಪ್ರಾಹುಃ ಶ್ರೀಮದ್ಭಾಗವತಂ ಪುನಃ।
ಪಂಚಪ್ರಶ್ನಾಃ ಶೌನಕಸ್ಯ ಸೂತಸ್ಯಾತ್ರೋತ್ತರಂ ತ್ರಿಷು ॥೧೧॥
ಪ್ರಶ್ನಾವತಾರಯೋಶ್ಚೈವ ವ್ಯಾಸಸ್ಯ ನಿರ್ವೃತಿಃ ಕೃತಾತ್।
ನಾರದಸ್ಯಾತ್ರ ಹೇತೂಕ್ತಿಃ ಪ್ರತೀತ್ಯರ್ಥಂ ಸ್ವಜನ್ಮ ಚ ॥೧೨॥

ಸುಪ್ತಘ್ನಂ ದ್ರೌಣ್ಯಭಿಭವಸ್ತದಸ್ತ್ರತ್ವಾಂಡವಾ ವನಂ ।
ಭೀಷ್ಮಸ್ಯ ಸ್ವಪದ ಪ್ರಾಪ್ತಿಃ ಕೃಷ್ಣಸ್ಯ ದ್ವಾರಿಕಾಗಮಃ ॥೧೩॥

ಶ್ರೋತುಃ ಪರೀಕ್ಷಿತೋ ಜನ್ಮ ಧೃತರಾಷ್ಟ್ರಸ್ಯ ನಿರ್ಗಮಃ ।
ಕೃಷ್ಣಮರ್ತ್ಯತ್ಯಾಗಸೂಚಾ ತತಃ ಪಾರ್ಥಮಹಾಪಥಃ ॥೧೪॥

ಇತ್ಯಷ್ಟಾದಶಭಿಃ ಪಾದ್ಯೈರಧ್ಯಾಯಾರ್ಥಃ ಕ್ರಮಾತ್ಕೃತಃ ।
ಸ್ವಪರಪ್ರತಿಬಂಧೋನಂ ಸ್ಫೀತಂ ರಾಜ್ಯಂ ಜಹೌ ನೃಪಃ ॥೧೫॥

ಇತಿ ವೈ ರಾಜ್ಞೋ ದಾಢ್ರ್ಯೋಕ್ತೌ ಪ್ರೋಕ್ತಾ ದ್ರೌಣಿ
ಜಯಾದಯಃ ॥

[ಇತಿ ಪ್ರಥಮಸ್ಕಂಧಃ ೧]

ಈ ಮೊದಲಾಗಿ, ಹನ್ನೆರಡು ಸ್ಕಂಧಗಳ ಸೂಚೀಪತ್ರವನ್ನು ಇದೇ ರೀತಿ ಬರೆದು ಬೋಬದೇವನು ಹೇಮಾದ್ರಿಸಚಿವನಿಗೆ ಕೊಟ್ಟನು. ವಿಸ್ತಾರವನ್ನು ನೋಡಬಯಸುವವರು ಬೋಬದೇವನು ಬರೆದ ಹೇಮಾದ್ರಿ ಗ್ರಂಥದಲ್ಲಿ ನೋಡಿಕೊಳ್ಳಬಹುದು ಇದೇ ರೀತಿ ಬೇರೆ ಪುರಾಣಗಳ ಲೀಲೆಯನ್ನೂ ತಿಳಿಯಬೇಕು. ಆದರೆ—ಹತ್ತೊಂಬತ್ತು, ಇಪ್ಪತ್ತು–ಇಪ್ಪತ್ತೊಂದು, ಒಂದನ್ನೊಂದು ಮೀರಿಸಿವೆ.

ನೋಡಿರಿ ! ಶ್ರೀಕೃಷ್ಣನ ಇತಿಹಾಸವು ಮಹಾಭಾರತದಲ್ಲಿ ಅತಿ ಉತ್ತಮವಾಗಿದೆ. ಅವನ ಗುಣ, ಕರ್ಮ, ಸ್ವಭಾವ ಮತ್ತು ಚರಿತ್ರಗಳು ಆಪ್ತಪುರುಷವರಂತಿವೆ. ಅದರಲ್ಲಿ ಶ್ರೀಕೃಷ್ಣನು ಜನನದಿಂದ ಹಿಡಿದು ಮರಣದವರೆಗೆ ಯಾವುದಾದರೂ ಅಧರ್ಮದ ಆಚರಣೆಯನ್ನೂ ಸ್ವಲ್ಪವಾದರೂ ಕೆಟ್ಟಕೆಲಸವನ್ನೂ ಮಾಡಿರುವಂತೆ ಬರೆದಿಲ್ಲ ; ಮತ್ತು ಈ ಭಾಗವತಕಾರನು ಅನುಚಿತವಾದ ಮನಸ್ಸಿಗೆ ಬಂದ ದೋಷಗಳನ್ನು ಆರೋಪಿಸಿದ್ದಾನೆ. ಹಾಲು, ಮೊಸರು, ಬೆಣ್ಣೆ ಮೊದಲಾದುವುಗಳ ಕಳವು ಮತ್ತು ಕುಬ್ಜೆಯೆಂಬ ದಾಸಿಯೊಂದಿಗೆ ಸಮಾಗಮ, ಪರನಾರಿಯೊಂದಿಗೆ ರಾಸಕ್ರೀಡೆ, ಆಟ ಮೊದಲಾದ ಮಿಥ್ಯಾದೋಷಗಳನ್ನು ಶ್ರೀಕೃಷ್ಣನ ಮೇಲೆ ಹೊರೆಸಿದ್ದಾನೆ. ಇದನ್ನು ಓದಿ–ಓದಿಸಿ, ಕೇಳಿ–ಕೇಳಿಸಿ, ಅನ್ಯಮತೀಯರು ಶ್ರೀಕೃಷ್ಣನನ್ನು ಬಹಳವಾಗಿ ನಿಂದಿಸು

ತ್ತಾರೆ. ಈ ಭಾಗವತವಿಲ್ಲದಿದ್ದರೆ, ಶ್ರೀಕೃಷ್ಣನಂತಹ ಮಹಾತ್ಮರ ಸುಳ್ಳುನಿಂದೆ ಆಗುತ್ತಿದ್ದಿತಾದರೂ ಹೇಗೆ? ಯಾವುಗಳಲ್ಲಿ ಪ್ರಕಾಶವು ಲೇಶಮಾತ್ರವೂ ಇಲ್ಲವೋ, ರಾತ್ರಿಯಲ್ಲಿ ದೀಪವಿಲ್ಲದೆ ಯಾವ ಲಿಂಗಗಳೂ ಕೂಡ ಸ್ವತಃ ಕತ್ತಲಲ್ಲಿ ಕಾಣುವುದಿಲ್ಲವೋ, ಅಂತಹ ಹನ್ನೆರಡು ಜ್ಯೋತಿರ್ಲಿಂಗಗಳು ಶಿವಪುರಾಣದಲ್ಲಿ ವರ್ಣಿತವಾಗಿವೆ; ಈ ಎಲ್ಲಾ ಲೀಲೆಯೂ ಪೋಪರದು.

ಪ್ರಶ್ನೆ :—ವೇದಗಳನ್ನೋದುವ ಸಾಮರ್ಥ್ಯವಿಲ್ಲವಾದಾಗ ಸ್ಮೃತಿಯೂ, ಸ್ಮೃತಿಯನ್ನೋದುವ ಬುದ್ಧಿಯೂ ಇಲ್ಲವಾದಾಗ ಶಾಸ್ತ್ರಗಳೂ, ಶಾಸ್ತ್ರಗಳನ್ನೋದುವ ಸಾಮರ್ಥ್ಯವು ಉಳಿಯದಿದ್ದಾಗ ಪುರಾಣಗಳೂ ರಚಿತವಾದುವು. ಕೇವಲ ಸ್ತ್ರೀಯರು ಮತ್ತು ಶೂದ್ರರಿಗಾಗಿ, ಏಕೆಂದರೆ ಇವರಿಗೆ ವೇದಗಳನ್ನೋದುವ ಕೇಳುವ ಅಧಿಕಾರವಿಲ್ಲ.

ಉತ್ತರ :—ಈ ಮಾತು ಸುಳ್ಳು. ಏಕೆಂದರೆ, ಸಾಮರ್ಥ್ಯ ಓದುವುದು ಮತ್ತು ಓದಿಸುವುದರಿಂದಲೇ ಉಂಟಾಗುತ್ತದೆ. ಮತ್ತು ವೇದಗಳನ್ನೋದುವ-ಕೇಳುವ ಅಧಿಕಾರ ಎಲ್ಲರಿಗೂ ಇದೆ. ನೋಡಿರಿ, ಗಾರ್ಗೀ ಮೊದಲಾದ ಸ್ತ್ರೀಯರೂ ಮತ್ತು ಛಾಂದೋಗ್ಯದಲ್ಲಿ ಬರುವ ಜಾನುಶ್ರುತಿ ಎಂಬ ಶೂದ್ರನೂ ಸಹ ವೇದವನ್ನು ರೈಕ್ವಮುನಿಯ ಬಳಿ ಓದಿದ್ದರು. ಮತ್ತು ಯಜುರ್ವೇದದ ೨೬ ನೆಯ ಅಧ್ಯಾಯದ ಎರಡನೆಯ ಮಂತ್ರದಲ್ಲಿ ಸ್ಪಷ್ಟವಾಗಿ ವೇದಗಳನ್ನೋದುವ ಮತ್ತು ಕೇಳುವ ಅಧಿಕಾರ ಮನುಷ್ಯಮಾತ್ರರಿಗಿದೆ ಎಂದು ಬರೆದಿದೆ. ಮತ್ತೆ ಯಾರು ಇಂತಿಂತಹ ಮಿಥ್ಯಾಗ್ರಂಥಗಳನ್ನು ರಚಿಸಿ, ಜನರನ್ನು ಸತ್ಯಗ್ರಂಥಗಳಿಗೆ ವಿಮುಖವಾದ ಜಾಲದಲ್ಲಿ ಸಿಕ್ಕಿಸಿ, ತಮ್ಮ ಸ್ವಾರ್ಥವನ್ನು ಸಾಧಿಸಿಕೊಳ್ಳುತ್ತಾರೋ' ಅವರು ಮಹಾಪಾಪಿಗಳೇತಕ್ಕಲ್ಲ?

ವಿದ್ಯಾಹೀನರಾದ ಮಾನವರನ್ನು ಕಚ್ಚಿಹಿಡಿದಿರುವ ಗ್ರಹಗಳ ಚಕ್ರವನ್ನು ಹೇಗೆ ತಿರುಗಿಸಿಟ್ಟ್ದಾರೆ, ನೋಡಿರಿ. "ಆಕೃಷ್ಣೇನ ರಜಸಾ" ॥೧॥ ಸೂರ್ಯನ ಮಂತ್ರ; "ಇಮಂ ದೇವಾ ಅಸಪತ್ನಂ ಸುವಧ್ವಂ" ॥೨॥ ಚಂದ್ರ; "ಅಗ್ನಿರ್ಮೂರ್ಧಾದಿವಃ ಕಕುತ್ಪತಿಃ"

॥೩॥ ಮಂಗಳ; "ಉದ್ಬುಧ್ಯಸ್ವಾಗ್ನೇ" ॥೪॥ ಬುಧ; "ಬೃಹಸ್ಪತೇ ಅತಿಯದರ್ಯೋ" ॥೫॥ ಬೃಹಸ್ಪತಿ; "ಶುಕ್ರ ಮಂಧಸಃ" ॥೬॥ ಶುಕ್ರ; "ಶನ್ನೋ ದೇವೀರಭಿಷ್ಟಯ" ॥೭॥ ಶನಿ; "ಕಯಾ ನಶ್ಚಿತ್ರ ಆಭುವ" ॥೮॥ ರಾಹು: ಮತ್ತು "ಕೇತುಂ ಕೃಣ್ವನ್ನಕೇತವೇ" ॥೯॥ ಇದನ್ನು ಕೇತುವಿನ ಕಂಡಿಕೆಯೆನ್ನುತ್ತಾರೆ. [ಆ ಕೃಷ್ಣೇನ] ಇದು ಸೂರ್ಯ ಮತ್ತು ಭೂಮಿಯ ಆಕರ್ಷಣದ ವಿಷಯ; ಎರಡನೆಯದು ರಾಜಗುಣವಿಧಾಯಕವಾದುದು; ॥೨॥ ಮೂರನೆಯದು ಅಗ್ನಿವಿಷಯಕವಾದುದು. ॥೩॥ ಮತ್ತು ನಾಲ್ಕನೆಯದು ಯಜಮಾನನ ವಿಷಯವುಳ್ಳದು. ॥೪॥ ಐದನೆಯದು ವಿದ್ವಾಂಸ ವಿಷಯವಾದುದು. ॥೫॥ ಆರನೆಯದು ಅನ್ನ ಮತ್ತು ವೀರ್ಯವಿಷಯಕವಾದುದು. ॥೬॥ ಏಳನೆಯದು ನೀರು, ಪ್ರಾಣ ಮತ್ತು ಪರಮೇಶ್ವರ ವಿಷಯಕವಾದುದು. ॥೭॥ ಎಂಟನೆಯದು ಮಿತ್ರವಿಷಯಕವಾದುದು. ॥೮॥ ಒಂಬತ್ತನೆಯದು ಜ್ಞಾನಗ್ರಹಣವಿಧಾಯಕವಾದ ಮಂತ್ರವು॥೯॥ ಇವು ಗ್ರಹಗಳ ವಾಚಕವಲ್ಲ. ಅರ್ಥವನ್ನು ತಿಳಿಯದಿರುವುದರಿಂದ ಭ್ರಮಜಾಲದಲ್ಲಿ ಬಿದ್ದಿದ್ದಾರೆ.

ಪ್ರಶ್ನೆ:—ಗ್ರಹಗಳ ಫಲ ಉಂಟಾಗುತ್ತದೋ, ಇಲ್ಲವೋ?—

ಉತ್ತರ:—ಪೋಪಲೀಲೆಯದರಂತಹುದಲ್ಲ; ಆದರೆ, ಸೂರ್ಯ ಚಂದ್ರರ ಕಿರಣಗಳ ಮೂಲಕ ಉಷ್ಣತೆ ಮತ್ತು ಶೀತತೆ, ಅಥವಾ ಋತುನಕ್ಷತ್ರಾಲಚಕ್ರದ ಸಂಬಂಧಮಾತ್ರದಿಂದ ತನ್ನ ಪ್ರಕೃತಿಗೆ ಅನುಕೂಲವಾಗಿ ಅಥವಾ ಪ್ರತಿಕೂಲವಾಗಿ ಸುಖ-ದುಃಖಗಳಿಗೆ ಅವು ನಿಮಿತ್ತವಾಗುತ್ತವೆ. ಆದರೆ ಪೋಪಲೀಲೆಯವರು—"ಕೇಳಿ ಸ್ವಾಮಿಗಳೇ, ಸಾಹುಕಾರರೇ, ಯಜಮಾನರೇ! ಇಂದು ನಿಮಗೆ ಎಂಟನೆಯ ಸ್ಥಾನದ ಚಂದ್ರ-ಸೂರ್ಯ ಮೊದಲಾದವರು ಕ್ರೂರವಾದ ಮನೆಗೆ ಬಂದಿದ್ದಾರೆ. ಎರಡೂವರೆ ವರ್ಷದ ಶನೈಶ್ಚರನು ಪಾದಕ್ಕೆ ಬಂದಿದ್ದಾನೆ. ನಿಮಗೆ ಭಾರೀ ವಿಘ್ನವುಂಟಾಗುವುದು. ಮನೆ-ಬಾಗಿಲಿನಿಂದ ದೂರಮಾಡಿ, ಪರಸ್ಥಳದಲ್ಲಿ! ಅಲೆದಾಡಿಸುವುದು. ಆದರೆ, ನೀವು ಗ್ರಹಗಳ ದಾನ, ಜಪ, ಪಾಠ, ಪೂಜೆ ಮಾಡಿಸುವಿರಾದರೆ, ದುಃಖದಿಂದ ಪಾರಾಗುವಿರಿ" ಎಂದು ಹೇಳುತ್ತಾರೆ; ಇವರನ್ನು "ಪೋಪರೇ,

ಕೇಳಿರಿ. ನಿಮಗೂ, ಗ್ರಹಗಳಿಗೂ ಏನು ಸಂಬಂಧ? ಗ್ರಹ ಏನು ವಸ್ತು?" ಎಂದು ಪ್ರಶ್ನಿಸಬೇಕು.

ಪೋಪರು :—

ದೈವಾಧೀನಂ ಜಗತ್ಸರ್ವಂ ಮಂತ್ರಾಧೀನಾಶ್ಚ ದೇವತಾಃ।
ತೇ ಮಂತ್ರಾ ಬ್ರಾಹ್ಮಣಾಧೀನಾಸ್ತಸ್ಮಾದ್ಬ್ರಾಹ್ಮಣದೈವತಂ॥

ನೋಡಿರಿ, ಎಂತಹ ಪ್ರಮಾಣವಿದೆ? ಎಲ್ಲಾ ಜಗತ್ತೂ ದೇವತೆಗಳ ಅಧೀನ; ಎಲ್ಲಾ ದೇವತೆಗಳೂ ಮಂತ್ರಗಳ ಅಧೀನ ಮತ್ತು ಆ ಮಂತ್ರಗಳು ಬ್ರಾಹ್ಮಣರಿಗೆ ಆಧೀನವಾಗಿವೆ. ಆದುದರಿಂದ—ಬ್ರಾಹ್ಮಣರು ದೇವತೆಗಳೆನಿಸುತ್ತಾರೆ. ಏಕೆಂದರೆ—ಬೇಕಾದ ದೇವತೆಯನ್ನು ಮಂತ್ರದ ಬಲದಿಂದ ಬರಮಾಡಿಕೊಂಡು, ಪ್ರಸನ್ನಗೊಳಿಸಿ, ಕಾರ್ಯವನ್ನು ಸಾಧಿಸಿಕೊಳ್ಳುವ ಅಧಿಕಾರ ನಮ್ಮದೇ ಆಗಿರುತ್ತದೆ. ನಮ್ಮಲ್ಲಿ ಮಂತ್ರಶಕ್ತಿ ಇರದಿದ್ದರೆ, ನಿಮ್ಮಂತಹ ನಾಸ್ತಿಕರು ನಮ್ಮನ್ನು ಪ್ರಪಂಚದಲ್ಲಿರುವುದಕ್ಕೇ ಬಿಡುತ್ತಿರಲಿಲ್ಲ.

ಸತ್ಯವಾದಿ :—ಕಳ್ಳರೂ, ಡಕಾಯಿತರೂ, ದುಷ್ಕರ್ಮಿಗಳೂ ಆದ ಜನರೂ ಕೂಡ ನಿಮ್ಮ ದೇವತೆಗಳಿಗೆ ಅಧೀನವಾಗಿರಬಹುದಲ್ಲವೇ? ದೇವತೆಗಳೇ ಅವರಿಂದ ದುಷ್ಟಕಾರ್ಯಮಾಡಿಸುತ್ತಿರಬಹುದೇ? ಹಾಗಿರುವುದಾದರೆ, ನಿಮ್ಮ ದೇವತೆಗಳಿಗೂ, ರಾಕ್ಷಸರಿಗೂ ಸ್ವಲ್ಪವೂ ವ್ಯತ್ಯಾಸ ಉಳಿಯುವುದಿಲ್ಲ. ನಿಮ್ಮ ಅಧೀನದಲ್ಲಿರುವ ಮಂತ್ರಗಳಿಂದ ನೀವು ಬೇಕಾದುದನ್ನೆಲ್ಲಾ ಮಾಡಿಸಬಲ್ಲಿರಾದರೆ, ಆ ಮಂತ್ರಗಳಿಂದ ದೇವತೆಗಳನ್ನು ವಶಪಡಿಸಿಕೊಂಡು, ರಾಜರುಗಳ ಕೋಶವನ್ನು ಎತ್ತಿಸಿ ತಂದು ನಿಮ್ಮ ಮನೆಗಳಲ್ಲಿ ತುಂಬಿಸಿಕೊಂಡು, ಕುಳಿತು ಆನಂದವನ್ನು ಅನುಭವಿಸುವುದಿಲ್ಲವೇಕೆ? ಶನೈಶ್ಚರ—ಮೊದಲಾದವರ ಎಣ್ಣೆ ಮೊದಲಾದ ಛಾಯಾದಾನಗಳನ್ನು ತೆಗೆದುಕೊಳ್ಳುವುದಕ್ಕಾಗಿ ಮನೆಮನೆಗೆ ತಿರುಗಾಡುತ್ತೀರೇಕೆ? ಮತ್ತು ಯಾರನ್ನು ನೀವು ಕುಬೇರನೆಂದು ತಿಳಿಯುತ್ತೀರೋ, ಅವನನ್ನು ವಶಪಡಿಸಿಕೊಂಡು ಬೇಕಾದಷ್ಟು ಧನವನ್ನು ತೆಗೆದುಕೊಳ್ಳುತ್ತಿರಿ. ಬಡಪಾಯಿಗಳಾದ ದರಿದ್ರರನ್ನು ಏತಕ್ಕೆ ಸೂರೆಮಾಡುತ್ತೀರಿ? ನಿಮಗೆ ದಾನ ಕೊಡುವುದರಿಂದ ಗ್ರಹಗಳು

ಪ್ರಸನ್ನವೂ, ಕೊಡದಿರುವುದರಿಂದ ಅಪ್ರಸನ್ನವೊ ಆಗುವುದಾದರೆ, ನಿಮಗೆ ಸೂರ್ಯ ಮೊದಲಾದುವುಗಳ ಪ್ರಸನ್ನತೆ-ಅಪ್ರಸನ್ನತೆಗಳನ್ನು ಪ್ರತ್ಯಕ್ಷವಾಗಿ ತೋರಿಸಿರಿ. ಎಂಟನೆಯ ಸ್ಥಾನದಲ್ಲಿ ಸೂರ್ಯ-ಚಂದ್ರರನ್ನುಳ್ಳ ಒಬ್ಬನನ್ನೂ, ಮೂರನೆಯ ಸ್ಥಾನದಲ್ಲಿ ಉಳ್ಳ ಇನ್ನೊಬ್ಬನನ್ನೂ-ಆ ಇಬ್ಬರನ್ನೂ ಜ್ಯೇಷ್ಠಮಾಸದಲ್ಲಿ, ಪಾದರಕ್ಷೆಗಳಿಲ್ಲದೆ, ಕಾದ ಭೂಮಿಯ ಮೇಲೆ ನಡೆಯಿಸಿರಿ. ಯಾವನ ಮೇಲೆ ಪ್ರಸನ್ನರಾಗಿದ್ದಾರೋ ಅವನ ಪಾದಗಳೂ, ಶರೀರವೂ ಸುಡಬಾರದು ಮತ್ತು ಯಾರ ಮೇಲೆ ಕ್ರೋಧಿತರಾಗಿದ್ದಾರೋ, ಅವರವು ಸುಟ್ಟುಹೋಗಬೇಕು. ಮತ್ತು ಪುಷ್ಯಮಾಸದಲ್ಲಿ ಇಬ್ಬರನ್ನೂ ಬೆತ್ತಲೆಮಾಡಿ, ಹುಣ್ಣಿಮೆಯ ರಾತ್ರಿಯೆಲ್ಲಾ ಬಯಲಿನಲ್ಲಿಡಿರಿ. ಒಬ್ಬನಿಗೆ ಚಳಿಯಾಗಿ, ಮತ್ತೊಬ್ಬನಿಗೆ ಆಗದಿದ್ದರೆ, ಗ್ರಹಗಳೂ ಕ್ರೂರದೃಷ್ಟಿಯವೂ, ಸೌಮ್ಯದೃಷ್ಟಿಯವೂ ಆಗಿರುತ್ತವೆಂದು ತಿಳಿಯಿರಿ. ಮತ್ತು ಗ್ರಹಗಳು ನಿಮ್ಮ ಸಂಬಂಧಿಕರೇನು? ಮತ್ತು ನಿಮ್ಮ ಟಪಾಲು ಅಥವಾ ತಂತಿ ಅವುಗಳ ಹತ್ತಿರ ಹೋಗಿಬರುತ್ತದೇನು? ಇಲ್ಲವೇ, ನೀವು ಅವುಗಳ ಹತ್ತಿರವಾಗಲೀ, ಅವು ನಿಮ್ಮ ಹತ್ತಿರವಾಗಲೀ ಹೋಗಿ ಬರುವುದುಂಟೇ? ನಿಮ್ಮಲ್ಲಿ ಮಂತ್ರಶಕ್ತಿಯಿರುವುದಾದರೆ, ನೀವು ಸ್ವತಃ ರಾಜರು, ಅಥವಾ ಧನಾಢ್ಯರು ಆಗಬಾರದೇಕೆ? ಅಥವಾ ಶತ್ರುಗಳನ್ನು ನಿಮ್ಮ ವಶಕ್ಕೇಕೆ ತಂದುಕೊಳ್ಳುವುದಿಲ್ಲ? ಯಾವನು ಈಶ್ವರನ ಆಜ್ಞೆಯಾದ ವೇದಕ್ಕೆ ವಿರುದ್ಧವಾಗಿ ಪೋಪಲೀಲೆ ನಡೆಸುತ್ತಾನೋ, ಅವನು ನಾಸ್ತಿಕನಾಗಿರುತ್ತಾನೆ. ನಿಮಗೆ ಗ್ರಹದಾನವನ್ನು ಕೊಡದೆ, ಯಾವನ ಮೇಲೆ ಗ್ರಹವೇರಿದೆಯೋ, ಅವನೇ ಗ್ರಹದಾನವನ್ನನುಭವಿಸಿದರೆ ಚಿಂತೆಯೇನು? ನೀವು "ಇಲ್ಲ; ನಮಗೇ ಕೊಡುವುದರಿಂದ ಅವು ಪ್ರಸನ್ನವಾಗುತ್ತವೆ; ಬೇರೆಯವನಿಗೆ ಕೊಡುವುದರಿಂದ ಆಗುವುದಿಲ್ಲ" ಎನ್ನುವಿರಾದರೆ, ನೀವು ಗ್ರಹಗಳನ್ನು ಗುತ್ತಿಗೆಗೆ ತೆಗೆದುಕೊಂಡಿದ್ದೀರೇನು? ಗುತ್ತಿಗೆಗೆ ತೆಗೆದುಕೊಂಡಿರುವಿರಾದರೆ, ಸೂರ್ಯ-ಮೊದಲಾದವರನ್ನು ನಿಮ್ಮ ಮನೆಗೆ ಬರಮಾಡಿಕೊಂಡು ಬೆಂದು ಸಾಯಿರಿ. ಸತ್ಯವೇನೆಂದರೆ—ಸೂರ್ಯ ಮೊದಲಾದ ಲೋಕಗಳು ಜಡ. ಅವು ಯಾರಿಗೂ ದುಃಖ ಮತ್ತು ಸುಖ ಕೊಡುವ ಕ್ರಿಯೆಯನ್ನು ಮಾಡಲಾರವು. ಆದರೆ, ನೀವೆಷ್ಟು

ಜನ ಗ್ರಹದಾನೋಪಜೀವಿಗಳಿದ್ದೀರೋ, ಆ ನೀವೆಲ್ಲಾ ಗ್ರಹಗಳ ಮೂರ್ತಿಗಳಾಗಿದ್ದೀರಿ, ಏಕೆಂದರೆ, ಗ್ರಹವೆಂಬ ತಬ್ದದ ಅರ್ಥವೂ ನಿಮಗೆ ಅನ್ವಯಿಸುತ್ತವೆ. " ಯೇ ಗೃಹ್ಣಂತಿ ತೇ ಗ್ರಹಾಃ " ಯಾರು ಗ್ರಹಣಮಾಡುತ್ತಾರೋ, ಅವರಿಗೆ ಗ್ರಹಗಳೆಂದು ಹೆಸರು. ಎಲ್ಲಿಯವರೆಗೆ ನಿಮ್ಮ ಪಾದಗಳು ರಾಜರು, ಜಾಗೀರುದಾರರು, ಶ್ರೀಮಂತರು, ಸಾಹುಕಾರರು ಮತ್ತು ಬಡವರ ಹತ್ತಿರ ಸೇರುವುದಿಲ್ಲವೋ, ಅದುವರೆಗೆ ಯಾರಿಗೂ ನವಗ್ರಹದ ನೆನಪೂ ಸಹ ಆಗುವುದಿಲ್ಲ. ಯಾವಾಗ ನೀವು ಸಾಕ್ಷಾತ್ತಾಗಿ ಸೂರ್ಯ, ಶನೈಶ್ಚರ ಮೊದಲಾದವರ ಮೂರ್ತಿಮಂತ ಕ್ರೂರರೂಪವನ್ನು ಧರಿಸಿ, ಅವರ ಮೇಲೆ ಏರಿಹೋಗುತ್ತೀರೋ, ಆಗ ಗ್ರಹಣಮಾಡದೆ ಅವರನ್ನೆಂದಿಗೂ ಬಿಡುವುದಿಲ್ಲ ಮತ್ತು ಯಾವನಾದರೂ ನಿಮ್ಮ ಹಿಡಿತಕ್ಕೆ ಸಿಕ್ಕದಿದ್ದರೆ, ನಾಸ್ತಿಕ ಮೊದಲಾದ ಶಬ್ದಗಳಿಂದ ಅವನನ್ನು ನಿಂದಿಸುತ್ತಾ ತಿರುಗುತ್ತೀರಿ !

ಪೋಪರು :—ನೋಡಿರಿ—ಜ್ಯೋತಿಷದ ಪ್ರತ್ಯಕ್ಷ ಫಲವನ್ನು, ಆಕಾಶದಲ್ಲಿರುವ ಸೂರ್ಯ-ಚಂದ್ರರು ಮತ್ತು ರಾಹು-ಕೇತುಗಳ ಸಂಯೋಗರೂಪವಾದ ಗ್ರಹಣವನ್ನು ಮೊದಲೇ ಹೇಳಿಬಿಡುತ್ತೇವೆ. ಇದು ಪ್ರತ್ಯಕ್ಷವಾಗುವಂತೆಯೇ, ಗ್ರಹಗಳ ಫಲವೂ ಪ್ರತ್ಯಕ್ಷವಾಗಿ ಹೋಗುತ್ತದೆ. ನೋಡಿರಿ ! ಧನಾಢ್ಯರೂ, ದರಿದ್ರರೂ, ರಾಜರೂ, ಭಿಕ್ಷುಕರೂ, ಸುಖಿಗಳೂ, ದುಃಖಿಗಳೂ ಗ್ರಹಗಳಿಂದಲೇ ಆಗುತ್ತಾರೆ.

ಸತ್ಯವಾದಿ :—ಗ್ರಹಣರೂಪವಾದ ಪ್ರತ್ಯಕ್ಷ ಫಲವು ಗಣಿತ ವಿದ್ಯೆಯದು ; ಫಲಿತದ್ದಲ್ಲ. ಗಣಿತವಿದ್ಯೆಯು ನಿಜವಾದುದು ಮತ್ತು ಫಲಿತವಿದ್ಯೆಯು, ಸ್ವಾಭಾವಿಕ ಸಂಬಂಧಜನ್ಯವಾದುದನ್ನು ಬಿಟ್ಟು ಸುಳ್ಳಾದುದು. ಅನುಲೋಮ-ಪ್ರತಿಲೋಮವಾಗಿ ತಿರುಗುತ್ತಿರುವ ಪೃಥಿವೀ ಮತ್ತು ಚಂದ್ರನ ಗಣಿತದಿಂದ ಇಂತಹ ಕಾಲದಲ್ಲಿ, ಇಂತಹ ದೇಶದಲ್ಲಿ, ಇಂತಹ ಅವಯವದಲ್ಲಿ ಸೂರ್ಯನ ಅಥವಾ ಚಂದ್ರನ ಗ್ರಹಣವಾಗುವುದು ಎಂದು ಸ್ಪಷ್ಟವಾಗಿ ಗೊತ್ತಾಗುತ್ತದೆ. ಹೇಗೆಂದರೆ—

ಛಾದಯತ್ಯರ್ಕಮಿಂದುರ್ಮಧು ಭೂಮಿಛಾಃ ॥

ಇದು ಸಿದ್ಧಾಂತಶಿರೋಮಣಿಯ ವಚನ. ಮತ್ತು ಇದೇ ಪ್ರಕಾರ ಸೂರ್ಯಸಿದ್ಧಾಂತ ಮೊದಲಾದುವುಗಳಲ್ಲಿಯೂ ಇದೆ. ಅಂದರೆ

ಯಾವಾಗ ಸೂರ್ಯ ಮತ್ತು ಭೂವಿಯ ನಡುವೆ ಚಂದ್ರನು ಬರುತ್ತಾನೋ, ಆಗ ಸೂರ್ಯಗ್ರಹಣವೂ ಮತ್ತು ಯಾವಾಗ ಸೂರ್ಯ ಚಂದ್ರರ ನಡುವೆ ಭೂಮಿಯು ಬರುತ್ತದೋ, ಆಗ ಚಂದ್ರಗ್ರಹಣವೂ ಆಗುತ್ತವೆ. ಅಂದರೆ ಚಂದ್ರನ ಛಾಯೆಯು ಭೂಮಿಯಮೇಲೆ ಮತ್ತು ಭೂಮಿಯ ಛಾಯೆಯು ಚಂದ್ರನಮೇಲೆ ಬೀಳುತ್ತದೆ. ಸೂರ್ಯನು ಪ್ರಕಾಶರೂಪನಾಗಿರುವುದರಿಂದ ಅದರೆದುರಿಗೆ ಯಾರ ಛಾಯೆಯೂ ಬೀಳುವುದಿಲ್ಲ. ಆದರೆ ಪ್ರಕಾಶಮಾನನಾದ ಸೂರ್ಯನಿಂದ ಅಥವಾ ದೀಪದಿಂದ ದೇಹ ಮೊದಲಾದುವುಗಳ ನೆರಳು ವಿರುದ್ಧವಾಗಿ ಬೀಳುವಂತೆಯೇ ಗ್ರಹಣದಲ್ಲಿಯೂ ಆಗುವುದೆಂದು ತಿಳಿಯಿರಿ. ಧನಾಢ್ಯರೂ, ದರಿದ್ರರೂ, ಪ್ರಜೆಗಳೂ, ರಾಜರೂ, ಭಿಕ್ಷುಕರೂ ಆಗುವವರು ತಮ್ಮ ಕರ್ಮಗಳಿಂದಾಗುತ್ತಾರೆ; ಗ್ರಹಗಳಿಂದಲ್ಲ. ಬಹುಮಂದಿ ಜ್ಯೋತಿಷಿಗಳು ತಮ್ಮ ಪುತ್ರ-ಪುತ್ರಿಯರ ವಿವಾಹವನ್ನು ಗ್ರಹಗಳ ಗಣಿತ ವಿದ್ಯೆಗನುಸಾರ ಮಾಡುತ್ತಾರೆ; ಆದರೂ ಅವರಲ್ಲಿ ವಿರೋಧವಾಗುತ್ತದೆ; ಅಥವಾ ವಿಧವೆಯರೂ, ವಿಧುರರೂ ಆಗಿಹೋಗುತ್ತಾರೆ. ಫಲವು ಸತ್ಯವಾಗಿದ್ದಿದ್ದರೆ, ಹೀಗೇಕಾಗುತ್ತಿದ್ದಿತು? ಆದುದರಿಂದ, ಕರ್ಮದಗತಿ ಸತ್ಯವಾದುದು; ಮತ್ತು ಗ್ರಹಗಳ ಗತಿಯು ಸುಖ-ದುಃಖಗಳ ಭೋಗಕ್ಕೆ ಕಾರಣವಲ್ಲ. ಒಳ್ಳೆಯದು, ಗ್ರಹಗಳು ಆಕಾಶದಲ್ಲಿ ಮತ್ತು ಪೃಥಿವಿಯೂ ಸಹ ಆಕಾಶದಲ್ಲಿ ಅತಿ ದೂರದಲ್ಲಿವೆ; ಕರ್ತೃ ಮತ್ತು ಕರ್ಮಗಳೊಂದಿಗೆ ಇವುಗಳ ಸಾಕ್ಷಾತ್ಸಂಬಂಧವಿಲ್ಲ. ಕರ್ಮದ ಮತ್ತು ಕರ್ಮಫಲದ ಕರ್ತನೂ, ಭೋಕ್ತನೂ ಜೀವನು; ಮತ್ತು ಕರ್ಮಗಳ ಫಲಗಳನ್ನು ಉಣಿಸುವವನು ಪರಮಾತ್ಮನು. ನೀವು ಗ್ರಹಗಳ ಫಲವನ್ನೊಪ್ಪುವಿರಾದರೆ, ಇದಕ್ಕೆ ಉತ್ತರಕೊಡಿರಿ. ನೀವು ಧ್ರುವಾತ್ಪುಟೆಯೆಂದು ಅಂಗೀಕರಿಸಿ ಜನ್ಮಪತ್ರವನ್ನು ರಚಿಸುವ ಯಾವ ಕ್ಷಣದಲ್ಲಿ ಒಬ್ಬ ಮನುಷ್ಯನ ಜನನವಾಗುತ್ತದೋ, ಅದೇ ಕ್ಷಣದಲ್ಲಿ ಭೂಮಂಡಲದಲ್ಲಿ ಬೇರೊಬ್ಬನ ಜನನವಾಗುತ್ತದೋ ಇಲ್ಲವೋ? ಇಲ್ಲವೆನ್ನುವಿರಾದರೆ-ಸುಳ್ಳು; ಆಗುತ್ತದೆ-ಎನ್ನುವಿರಾದರೆ, ಒಬ್ಬ ಚಕ್ರವರ್ತಿಗೆ ಸಮನಾಗಿ ಭೂಮಂಡಲದಲ್ಲಿ ಮತ್ತೊಬ್ಬ ಚಕ್ರವರ್ತಿ ರಾಜನು ಏತಕ್ಕಾಗುವುದಿಲ್ಲ? ಹೌದು; ಈ ಲೀಲೆ ನಿಮ್ಮ ಹೊಟ್ಟೆ

ತುಂಬಿಸಿಕೊಳ್ಳುವುದಕ್ಕೆಂದು ಇಷ್ಟು ಮಾತ್ರ ನೀವು ಹೇಳಬಹುದು; ಅದನ್ನು ಯಾರಾದರೂ ಒಪ್ಪಲೂಬಹುದು.

ಪ್ರಶ್ನೆ:—ಗರುಡಪುರಾಣವೂ ಕೂಡ ಸುಳ್ಳೇ?

ಉತ್ತರ:—ಹೌದು, ಅಸತ್ಯ.

ಪ್ರಶ್ನೆ:—ಹಾಗಾದರೆ, ಸತ್ತಜೀವನ ಗತಿ ಏನಾಗುತ್ತದೆ?

ಉತ್ತರ:—ಅವನ ಕರ್ಮಗಳಿಗನುಸಾರ.

ಪ್ರಶ್ನೆ:—ಯಮರಾಜನು ರಾಜನು; ಚಿತ್ರಗುಪ್ತನು ಮಂತ್ರಿ; ಕಾಡಿಗೆಯ ಪರ್ವತದಂತಹ ಶರೀರಗಳನ್ನುಳ್ಳ ಅವನ ಮಹಾ ಭಯಂಕರರಾದ ದೂತರು ಜೀವನನ್ನು ಹಿಡಿದು ಕರೆದುಕೊಂಡು ಹೋಗುತ್ತಾರೆ; ಅವನಿಗಾಗಿ ದಾನ ಪುಣ್ಯ, ಶ್ರಾದ್ಧ, ತರ್ಪಣ ಮೊದ ಲಾದುವನ್ನೂ, ವೈತರಣೀ ನದಿಯನ್ನು ದಾಟುವುದಕ್ಕಾಗಿ ಗೋದಾನ ಮೊದಲಾದುವನ್ನೂ ಮಾಡುತ್ತಾರೆ. ಈ ಮಾತುಗಳೆಲ್ಲಾ ಸುಳ್ಳೆಂತಾಗ ಬಲ್ಲವು?

ಉತ್ತರ:—ಈ ಎಲ್ಲಾ ಮಾತುಗಳೂ ಪೋಪಲೀಲೆಯ ಬುರುಡೆ ಗಳು. ಬೇರೆಡೆಯ ಜೀವರು ಅಲ್ಲಿ ಹೋಗುತ್ತಾರೆ; ಚಿತ್ರಗುಪ್ತ ಮೊದ ಲಾದವರು ಅವರ ನ್ಯಾಯತೀರ್ಮಾನಮಾಡುತ್ತಾರೆ; ಎಂದಾದಲ್ಲಿ, ಆ ಯಮಲೋಕದ ಜೀವರು ಪಾಪಮಾಡಿದರೆ, ಬೇರೆಡೆಯ ನ್ಯಾಯಾ ಧೀಶರು ಅವರ ನ್ಯಾಯತೀರ್ಮಾನಮಾಡಲು ಇನ್ನೊಂದು ಯಮ ಲೋಕವನ್ನಂಗೀಕರಿಸಬೇಕು. ಮತ್ತು ಯಮದೂತರ ಶರೀರಗಳು ಪರ್ವತಗಳಂತಿರುವುದಾಗರೆ, ಏತಕ್ಕೆ ಕಾಣಿಸುವುದಿಲ್ಲ? ಮತ್ತು ಸಾಯುವ ಜೀವನನ್ನು ಕರೆದುಕೊಂಡು ಹೋಗುವಾಗ, ಚಿಕ್ಕಬಾಗಿಲಿ ನಲ್ಲಿ ಅವರದೊಂದು ಬೆರಳೂ ಹೋಗಲಾರದು. ಮತ್ತು ಹಾದಿ-ಸಂದಿ ಗಳಲ್ಲಿ ಸಿಕ್ಕಿಕೊಳ್ಳುವುದಿಲ್ಲವೇಕೆ? ಅವರು ಸೂಕ್ಷ್ಮಶರೀರವನ್ನೂ ಕೂಡ ಧರಿಸಿಕೊಳ್ಳುತ್ತಾರೆಂದು ಹೇಳುವಿರಾದರೆ, ಮೊದಲಿನ ಪರ್ವತದಂತಹ ಶರೀರದ ದೊಡ್ಡ ದೊಡ್ಡ ಮೂಳೆಗಳನ್ನು ಪೋಪರು ತಮ್ಮ ಮನೆ ಯನ್ನು ಬಿಟ್ಟು ಮತ್ತೆಲ್ಲಿಡುವರು? ಕಾಡಿನಲ್ಲಿ ಕಿಚ್ಚುಂಟಾದಾಗ, ಇದ್ದ ಕ್ಕಿದ್ದಂತೆಯೇ ಇರುವೆ ಮೊದಲಾದ ಜೀವಗಳ ಶರೀರಗಳು ಬಿಟ್ಟು

ಹೋಗುತ್ತವೆ. ಅವನ್ನು ಹಿಡಿದುಕೊಳ್ಳುವುದಕ್ಕೆ ಅಸಂಖ್ಯ ಯಮದೂತರು ಬರುವರಾದರೆ, ಅಲ್ಲಿ ಕತ್ತಲಾಗಿಹೋಗಬೇಕು ಮತ್ತು ಜೀವರನ್ನು ಹಿಡಿಯುವುದಕ್ಕಾಗಿ ಪರಸ್ಪರ ಓಡುವಾಗ, ಯಾವಾಗಲಾದರೂ ಅವರ ಶರೀರಗಳು ಡಿಕ್ಕಿಹೊಡೆದರೆ, ಪರ್ವತದ ದೊಡ್ಡ ದೊಡ್ಡ ಶಿಖರಗಳು ಮುರಿದು ಭೂಮಿಯಮೇಲೆ ಬೀಳುವಂತೆ, ಅವರ ದೊಡ್ಡದೊಡ್ಡ ಅವಯವಗಳು ಗರುಡಪುರಾಣವನ್ನೋದುವವರ ಮತ್ತು ಕೇಳುವವರ ಅಂಗಳದಲ್ಲಿ ಬಿದ್ದುಹೋದರೆ, ಅವರು ಅದುಮಿಹೋಗಿ ಸಾಯುವರು; ಅಥವಾ ಮನೆಯ ಬಾಗಿಲು, ಇಲ್ಲವೇ ಹಾದಿ ಮುಚ್ಚಿಹೋದರೆ, ಅವರು ಹೇಗೆ ಹೊರಗಾಗಬಲ್ಲರು ಮತ್ತು ನಡೆಯಬಲ್ಲರು? ಶ್ರಾದ್ಧ, ತರ್ಪಣ, ಪಿಂಡದಾನ—ಇವು ಆ ಸತ್ತ ಜೀವರಿಗಂತೂ ತಲುಪುವುದಿಲ್ಲ; ಆದರೆ ಸತ್ತವರ ಪ್ರತಿನಿಧಿಗಳಾದ ಪೋಪರ ಮನೆ, ಹೊಟ್ಟೆ ಮತ್ತು ಕೈಗೆ ತಲುಪುತ್ತದೆ. ವೈತರಣಿಗಾಗಿ ಯಾವ ಗೋವನ್ನು ದಾನ ಪಡೆಯುತ್ತಾರೋ ಅದಂತೂ ಪೋಪರ ಮನೆಗೆ ಅಥವಾ ಕಟುಕ ಮೊದಲಾದವರ ಮನೆಗೆ ಸೇರುತ್ತದೆ. ವೈತರಣಿಯ ಬಳಿ ಹಸು ಹೋಗುವುದಿಲ್ಲ; ಇನ್ನು ಯಾವುದರ ಬಾಲವನ್ನು ಹಿಡಿದು ದಾಟುವನು? ಮತ್ತು ಕೈಯಂತೂ ಇಲ್ಲಿಯೇ ದಹಿಸಲ್ಪಟ್ಟಿತು; ಅಥವಾ ಹೂಳಲ್ಪಟ್ಟಿತು; ಇನ್ನು ಬಾಲವನ್ನು ಹೇಗೆ ಹಿಡಿದುಕೊಳ್ಳುವನು? ಈ ಮಾತಿಗೆ ಇಲ್ಲಿ ಒಂದು ದೃಷ್ಟಾಂತವು ಉಪಯುಕ್ತವಾಗಿರುತ್ತದೆ

ಒಬ್ಬ ಜಾಟನಿದ್ದನು, ಅವನ ಮನೆಯಲ್ಲಿ ಒಂದು ಬಹು ಒಳ್ಳೆಯ ಮತ್ತು ಇಪ್ಪತ್ತುಸೇರು ಹಾಲೀಯುವ ಹಸುವಿದ್ದಿತು. ಅದರ ಹಾಲು ಬಹಳ ರುಚಿಕರವಾಗಿರುತ್ತಿತ್ತು. ಆಗಾಗ ಪೋಪರ ಬಾಯಿಗೂ ಬೀಳುತ್ತಿತ್ತು. ಅವನ ಪುರೋಹಿತರು--"ಜಾಟನ ಮುದುಕನಾದ ತಂದೆ ಸಾಯತೊಡಗಿದಾಗ, ಇದೇ ಹಸುವಿನ ಸಂಕಲ್ಪವನ್ನು ಮಾಡಿಸಿಕೊಳ್ಳುವೆನು"—ಎಂದೇ ಧ್ಯಾನಮಾಡುತ್ತಿದ್ದನು. ಕೆಲವುದಿನಗಳಲ್ಲಿ ದೈವಯೋಗದಿಂದ ಅವನ ತಂದೆಯ ಮರಣಸಮಯವು ಬಂದಿತು. ನಾಲಿಗೆ ನಿಂತುಹೋಯಿತು; ಮತ್ತು ಮಂಚದಿಂದ ನೆಲದಮೇಲಕ್ಕೆಳಸಿಕೊಂಡರು. ಅಂದರೆ–ಪ್ರಾಣಬಿಡುವ ಸಮಯ ಬಂದಿತು. ಆ ಸಮಯದಲ್ಲಿ ಜಾಟನ ಇಷ್ಟಮಿತ್ರರೂ, ಸಂಬಂಧಿಗಳೂ ಸಹ ನೆರೆದಿದ್ದರು.

ಆಗ ಪೋಪರು—" ಯಜಮಾನ! ಈಗ ನೀನು ಇವನ ಕೈಯಿಂದ ಗೋದಾನವಮಾಡಿಸು " ಎಂದು ಕೂಗಿಕೊಂಡರು. ಜಾಟನು ಹತ್ತು ರೂಪಾಯಿಗಳನ್ನು ತೆಗೆದು ತಂದೆಯ ಕೈಯಲ್ಲಿಟ್ಟು " ಸಂಕಲ್ಪ ಮಾಡಿ " ಎಂದನು. ಪೋಪರು—" ಛೇಷ್ ಛೇಷ್! ತಂದೆ ಮತ್ತೆ ಮತ್ತೆ ಸಾಯುತ್ತಾನೇನು? ಈಗಲಾದರೋ ಹಾಲುಕರೆಯುವಂತಹುದೂ, ಮುದಿಯಲ್ಲದುದೂ, ಎಲ್ಲಾ ರೀತಿಯಿಂದಲೂ ಉತ್ತಮವಾದುದೂ ಆದ ಸಾಕ್ಷಾತ್ ಗೋವನ್ನು ತೆಗೆದುಕೊಂಡುಬಾ, ಇಂತಹ ಹಸುವಿನ ದಾನ ಮಾಡಿಸಬೇಕು.

ಜಾಟ:—ನಮ್ಮ ಬಳಿಯಾದರೋ ಒಂದೇ ಹಸುವಿದೆ. ಅದಿಲ್ಲದೆ ಮಕ್ಕಳೊಂದಿಗರಾದ ನಮ್ಮ ನಿರ್ವಾಹವಾಗಲಾರದು. ಆದುದರಿಂದ ಅದನ್ನು ಕೊಡುವುದಿಲ್ಲ. ಇಪ್ಪತ್ತು ರೂಪಾಯಿಗಳ ಸಂಕಲ್ಪ ಹೇಳಿಬಿಡಿರಿ. ಮತ್ತು ಈ ರೂಪಾಯಿಗಳಿಂದ ಬೇರೆ ಕರೆಯುವ ಹಸುವನ್ನು ತೆಗೆದುಕೊಂಡುಬಿಡಿರಿ

ಪೋಪರು:—ಆಯಿತಯ್ಯಾ, ಆಯಿತು! ನೀನು ಹಸುವನ್ನು ನಿನ್ನ ತಂದೆಗಿಂತ ಹೆಚ್ಚೆಂದು ತಿಳಿಯುತ್ತೀಯಾ? ನಿನ್ನ ತಂದೆಯನ್ನು ವೈತರಣೀ ನದಿಯಲ್ಲಿ ಮುಳುಗಿಸಿ ದುಃಖವೀಯಬಯಸುತ್ತೀಯಾ? ನೀನು ಒಳ್ಳೆಯ ಸುಪುತ್ರ ಹುಟ್ಟಿದೆಯಯ್ಯಾ!

ಆಗ ಸಂಸಾರದವರೆಲ್ಲಾ ಪೋಪರ ಕಡೆಗೇ ಆದರು. ಏಕೆಂದರೆ—ಪೋಪರು ಅವರನ್ನೆಲ್ಲಾ ಮೊದಲೇ ದಾರಿಗೆಡಿಸಿಟ್ಟಿದ್ದರು ಮತ್ತು ಆಗಲೂ ಸಹ ಸಂಗೀತ ಮಾಡಿಬಿಟ್ಟರು. ಎಲ್ಲರೂ ಸೇರಿ, ಹಠಮಾಡಿ, ಆದೇ ಹಸುವಿನ ದಾನವನ್ನು ಆ ಪೋಪರಿಗೇ ಮಾಡಿಸಿಬಿಟ್ಟರು. ಆಗ ಜಾಟನೇನೂ ಹೇಳಲಿಲ್ಲ. ಅವನ ತಂದೆ ತೀರಿಹೋದನು ಮತ್ತು ಪೋಪರು ಕರುವಿನೊಂದಿಗೆ ಹಸುವನ್ನೂ, ಕರೆಯುವ ಪಾತ್ರೆಯನ್ನೂ ತೆಗೆದುಕೊಂಡುಹೋಗಿ, ತನ್ನ ಮನೆಯಲ್ಲಿ ಗೋವನ್ನು ಕಟ್ಟಿಹಾಕಿ, ಪಾತ್ರೆಯನ್ನಿಟ್ಟು ಮರಳಿ ಜಾಟನ ಮನೆಗೆ ಬಂದನು ಮತ್ತು ಮೃತನೊಂದಿಗೆ ಶ್ಮಶಾನಭೂಮಿಗೆ ಹೋಗಿ ದಹನಕರ್ಮವನ್ನು ಮಾಡಿಸಿದನು. ಅಲ್ಲಿಯೂ ಸ್ವಲ್ಪ ಸ್ವಲ್ಪ ಪೋಪಲೀಲೆ ನಡೆಸಿದರು. ಅನಂತರ,

ದಶಗಾತ್ರ–ಸಪಿಂಡೀಕರಣ ಮಾಡುವುದು ಮೊದಲಾದುದರಲ್ಲಿಯೂ ಅವನನ್ನು ಬೋಳಿಸಿದರು. ಮಹಾಬ್ರಾಹ್ಮಣರೂ ಕೂಡ ಅವನನ್ನು ಸೂರೆಗೈದರು ಮತ್ತು ಹೊಟ್ಟೆಬಾಕರೂ ಸಹ ಬಹಳ ವಸ್ತುಗಳನ್ನು ಹೊಟ್ಟೆಗೆ ತುಂಬಿಸಿಕೊಂಡರು. ಅಂದರೆ–ಎಲ್ಲಾ ಕ್ರಿಯೆಗಳೂ ಆದ ಮೇಲೆ, ಜಾಟನು ಆವರಿವರ ಮನೆಯಿಂದ ಹಾಲನ್ನು ಬೇಡಿತಂದು ನಿರ್ವಾಹಮಾಡಿದನು. ಹದಿದಾಲ್ಕನೆಯ ದಿನ ಬೆಳಗ್ಗೆ ಪೋಪರ ಮನೆಗೆ ಹೋದನು. ನೋಡಿದರೆ, ಪೋಪರು ಹಾಲನ್ನು ಕರೆದು, ಪಾತ್ರೆತುಂಬಿಸಿಕೊಂಡು ಏಳುವ ಸನ್ನಾಹದಲ್ಲಿದ್ದರು. ಇಷ್ಟರಲ್ಲಿಯೇ ಜಾಟನು ಸೇರಿದನು. ಅವನನ್ನು ನೋಡಿ ಪೋಪರು—" ಬನ್ನಿ, ಯಜಮಾನರೇ ! ಕುಳಿತುಕೊಳ್ಳಿರಿ" ಎಂದರು.

ಜಾಟ :—ಪುರೋಹಿತರೇ ! ನೀವೂ ಇತ್ತ ಬನ್ನಿ.

ಪೋಪರು :—ಒಳ್ಳೆಯದು, ಹಾಲಿಟ್ಟು ಬರುವೆ.

ಜಾಟ :—ಇಲ್ಲ, ಇಲ್ಲ ! ಹಾಲಿನ ಪಾತ್ರೆಯನ್ನು ಇಲ್ಲಿ ತನ್ನಿರಿ.

ಬಡಪಾಯಿ ಪೋಪರು ಹೋಗಿ ಕುಳಿತರು ಮತ್ತು ಹಾಲಿನ ಪಾತ್ರೆಯನ್ನು ಎದುರಿಗಿಟ್ಟುಬಿಟ್ಟರು.

ಜಾಟ :—ನೀವು ದೊಡ್ಡ ಸುಳ್ಳುಗಾರರು.

ಪೋಪರು :—ಸುಳ್ಳೇನು ಮಾಡಿದೆ ?

ಜಾಟ :—ಹೇಳಿರಿ ನೀವು ಹಸುವನ್ನು ಏತಕ್ಕಾಗಿ ತೆಗೆದುಕೊಂಡಿದ್ದಿರಿ ?

ಪೋಪರು :—ನಿಮ್ಮ ತಂದೆ ವೈತರಣೀ ನದಿಯನ್ನು ದಾಟುವುದಕ್ಕಾಗಿ,

ಜಾಟ :—ಒಳ್ಳೆಯದು, ನೀವು ಅಲ್ಲಿ ವೈತರಣಿಯ ದಡಕ್ಕೆ ಹಸುವನ್ನೇಕೆ ತಲುಪಿಸಲಿಲ್ಲ ? ನಾವಾದರೋ ನಿಮ್ಮ ಭರವಸೆಯ ಮೇಲಿದ್ದೆವು ಮತ್ತು ನೀವು ನಿಮ್ಮ ಮನೆಯಲ್ಲಿ ಕಟ್ಟಿಕೊಂಡು ಕುಳಿತಿರಿ ! ನನ್ನ ತಂದೆ ವೈತರಣಿಯಲ್ಲಿ ಎಷ್ಟು ಸಾರಿ ಮುಳುಗು ಹಾಕಿದ್ದಾರೋ ಗೊದ್ತಿಲ್ಲ !

ಪೋಪರು :—ಇಲ್ಲ ಇಲ್ಲ. ಈ ದಾನದ ಪುಣ್ಯದ ಪ್ರಭಾವದಿಂದ ಇನ್ನೊಂದು ಹಸು ರೂಪಗೊಂಡು ಅವನನ್ನು ದಾಟಿಸಿರಬಹುದು.

ಜಾಟ :—ವೈತರಣೀ ನದಿ ಇಲ್ಲಿಂದ ಎಷ್ಟು ದೂರ ಮತ್ತು ಯಾವ ಕಡೆಗಿದೆ?

ಪೋಪರು :—ಅಂದಾಜಿನಿಂದ ಸುಮಾರು ಮೂವತ್ತುಕೋಟಿ ಹರಿದಾರಿ ದೂರವಿದೆ, ಏಕೆಂದರೆ-ನಾಲ್ವತ್ತೊಂಬತ್ತುಕೋಟಿ ಯೋಜನ ಪೃಥಿವಿಯಿದೆ. ಮತ್ತು ದಕ್ಷಿಣ-ನೈಋತ್ಯದಿಕ್ಕಿನಲ್ಲಿ ವೈತರಣೀನದಿಯಿದೆ.

ಜಾಟ :—ಇಷ್ಟು ದೂರದಿಂದ ನಿಮ್ಮ ಕಾಗದ ಅಥವಾ ತಂತಿಯ ಸಮಾಚಾರ ಹೋಗಿದ್ದು, "ಅಲ್ಲಿ ಪುಣ್ಯದ ಹಸು ಹುಟ್ಟಿತು; ಇಂತಹ ವನ ತಂದೆಯನ್ನು ದಡಹಾಯಿಸಿತು"—ಎಂದು ಅದಕ್ಕೆ ಉತ್ತರ ಬಂದಿದ್ದರೆ, ತೋರಿಸಿ.

ಪೋಪರು :—ನಮ್ಮ ಬಳಿ ಗರುಡಪುರಾಣದ ಬರಹದ ಹೊರತು ಟಪಾಲು ಅಥವಾ ತಂತೀವ್ಯವಸ್ಥೆ ಬೇರಾವುದೂ ಇಲ್ಲ.

ಜನಟ :—ಈ ಗರುಡಪುರಾಣವನ್ನು ನಾವು ದಿಟವೆಂದು ಹೇಗೆ ಒಪ್ಪೋಣ?

ಪೋಪರು :—ಎಲ್ಲರೂ ಒಪ್ಪುವಂತೆ.

ಜಾಟ :—ಈ ಪುಸ್ತಕವನ್ನು ನಿಮ್ಮ ಪೂರ್ವಜರು ನಿಮ್ಮ ಹೊಟ್ಟೆಪಾಡಿಗಾಗಿ ರಚಿಸಿದ್ದಾರೆ. ಏಕೆಂದರೆ—ತಂದೆಗೆ ತನ್ನ ಮಕ್ಕಳಲ್ಲದೆ ಬೇರಾರೂ ಪ್ರಿಯರಲ್ಲ. ಯಾವಾಗ ನನ್ನ ತಂದೆಯು ನನ್ನ ಬಳಿಗೆ ಕಾಗದ-ಪತ್ರ ಅಥವಾ ತಂತಿ ಕಳುಹಿಸುವನೋ, ಆಗಲೇ ನಾನು ವೈತರಣಿಯ ದಡಕ್ಕೆ ಹಸುವನ್ನು ತಲುಪಿಸುವೆನು. ಮತ್ತು ಅವರನ್ನು ತಟಕ್ಕಿಳಿಸಿ, ಮತ್ತೆ ಹಸುವನ್ನು ಮನೆಗೆ ತಂದು, ನಾನೂ, ನನ್ನ ಮಕ್ಕಳು-ಮರಿಗಳೂ ಹಾಲನ್ನು ಕುಡಿದುಕೊಂಡಿರುವೆವು. ತನ್ನಿರಿ.

ಹಾಲಿನಿಂದ ತುಂಬಿದ ಪಾತ್ರೆಯನ್ನೂ, ಹಸುವನ್ನೂ, ಕರುವನ್ನೂ ತೆಗೆದುಕೊಂಡು ಜಾಟನು ತನ್ನ ಮನೆಗೆ ಹೊರಟನು.

ಪೋಪರು :—ನೀನು ದಾನಕೊಟ್ಟು, ಹಿಂದಕ್ಕೆ ತೆಗೆದುಕೊಳ್ಳುತ್ತೀಯೆ. ನಿನ್ನ ಸರ್ವನಾಶವಾಗಿಹೋಗುವುದು.

ಜಾಟ :—ಸುಮ್ಮನಿರಿ. ಇಲ್ಲದಿದ್ದರೆ, ಹದಿಮೂರು ದಿನಗಳ ವರೆಗೆ ಹಾಲಿಲ್ಲದೆ ನಾವೆಷ್ಟು ದುಃಖಪಟ್ಟಿದ್ದೇವೋ ಅದನ್ನೆಲ್ಲಾ ಕಕ್ಕಿಸಿ ಬಿಡುತ್ತೇನೆ.

ಆಗ ಪೋಪರು ಸುಮ್ಮನಾದರು ಮತ್ತು ಜಾಟನು ಹಸು-ಕರುಗಳನ್ನು ಹೊಡೆದುಕೊಂಡು ತನ್ನ ಮನೆ ಸೇರಿದನು.

ಇಂತಹ, ಜಾಟನಂತಹ ಪುರುಷರೇ ಇದ್ದಾಗ, ಪೋಪಲೀಲೆ ಪ್ರಪಂಚದಲ್ಲಿ ನಡೆಯದು. ಈ ಜನರು ದಶಗಾತ್ರದ ಪಿಂಡಗಳಿಂದ ಹತ್ತು ಅಂಗಗಳ ಸಪಿಂಡೀಕರಣ ಮಾಡುವುದರಿಂದ, ಶರೀರದೊಂದಿಗೆ ಜೀವನ ಸಂಯೋಗವಾಗಿ, ಹೆಬ್ಬೆಟ್ಟಿನ ಗಾತ್ರದ ಶರೀರವುಂಟಾಗಿ, ಆಮೇಲೆ ಯಮಲೋಕಕ್ಕೆ ಹೋಗುತ್ತಾನೆಂದು ಹೇಳುವುದಾದರೆ, ಯಮದೂತರ ಆಗಮನ ವ್ಯರ್ಥವಾಗುತ್ತದೆ. ತ್ರಯೋದಶಾಹದ ನಂತರ ಬರಬೇಕು. ಶರೀರವುಂಟಾಗುವುದಾದರೆ, ತನ್ನ ಹೆಂಡತಿ-ಮಕ್ಕಳು ಮತ್ತು ಇಷ್ಟಮಿತ್ರರ ಮೋಹದಿಂದ ಹಿಂದಿರುಗಿ ಏತಕ್ಕೆ ಬರುವುದಿಲ್ಲ?

ಪ್ರಶ್ನೆ :—ಸ್ವರ್ಗದಲ್ಲಿ ಏನೂ ಸಿಕ್ಕುವುದಿಲ್ಲ. ಏನು ದಾನ ಮಾಡಲ್ಪಡುತ್ತದೋ, ಅದೇ ಅಲ್ಲಿ ಸಿಕ್ಕುತ್ತದೆ. ಆದುದರಿಂದ, ಎಲ್ಲಾ ದಾನಗಳನ್ನೂ ಮಾಡಬೇಕು.

ಉತ್ತರ :—ಆ ನಿಮ್ಮ ಸ್ವರ್ಗಕ್ಕಿಂತ. ಧರ್ಮಶಾಲೆಗಳಿರುವ, ಜನರು ದಾನಕೊಡುವ, ಇಷ್ಟಮಿತ್ರರು ಮತ್ತು ಸಮಾಜದಲ್ಲಿ ಚೆನ್ನಾಗಿ ಔತಣಗಳಾಗುವ, ಒಳ್ಳೆಒಳ್ಳೆಯ ಬಟ್ಟೆಗಳು ಸಿಕ್ಕುವ ಈ ಲೋಕವೇ ಚೆನ್ನಾಗಿವೆ. ನಿಮ್ಮ ಹೇಳಿಕೆಗನುಸಾರ ಸ್ವರ್ಗದಲ್ಲಿ ಏನೂ ಸಿಕ್ಕುವುದಿಲ್ಲ. ಅಂತಹ ನಿರ್ದಯವೂ, ಕೃಪಣವೂ, ದರಿದ್ರವೂ ಆದ ಸ್ವರ್ಗಕ್ಕೆ ಪೋಪರು ಹೋಗಿ ಕೆಡಲಿ; ಆಲ್ಲಿ ಒಳ್ಳೊಳ್ಳೆಯ ಮನುಷ್ಯರಿಗೇನು ಕೆಲಸ?

ಪ್ರಶ್ನೆ :—ನಿಮ್ಮ ಕಥನದಂತೆ ಯಮಲೋಕ ಮತ್ತು ಯಮನು ಇಲ್ಲವಾದರೆ, ಸತ್ತು ಜೀವನೆಲ್ಲಿ ಹೋಗುತ್ತಾನೆ? ಮತ್ತು ಇವರ ನ್ಯಾಯವನ್ನು ಯಾವನು ಮಾಡುತ್ತಾನೆ?

ಉತ್ತರ :—ನಿಮ್ಮ ಗರುಡಪುರಾಣವು ಹೇಳಿರುವುದಂತೂ ಅಪ್ರಮಾಣ; ಆದರೆ ಯಾವುದು ವೇದೋಕ್ತವೋ, ಅದು ಹೀಗಿದೆ :—

ಯಮೇನ, ವಾಯುನಾ । ಸತ್ಯರಾಜನ್ ।

[ಯಜುರ್ವೇದ ೨೦. ೪]

ಈ ಮೊದಲಾದ ವೇದವಚನಗಳಿಂದ ಯಮನೆಂಬುದು ವಾಯುವಿನ ಹೆಸರೆಂಬುದು ನಿಶ್ಚಯವಾಗಿದೆ. ಜೀವರು ಶರೀರವನ್ನು ಬಿಟ್ಟು, ವಾಯುವಿನೊಂದಿಗೆ ಅಂತರಿಕ್ಷದಲ್ಲಿರುತ್ತಾರೆ ಮತ್ತು ಸತ್ಯಕಾರಿಯೂ, ಪಕ್ಷಪಾತರಹಿತನೂ ಆದ, "ಧರ್ಮರಾಜ" ನಾದ ಪರಮಾತ್ಮನೇ ಎಲ್ಲರ ನ್ಯಾಯವನ್ನೂ ಮಾಡುವವನಾಗಿದ್ದಾನೆ.

ಪ್ರಶ್ನೆ :—ನಿಮ್ಮ ಹೇಳಿಕೆಯಿಂದ ಗೋದಾನ ಮೊದಲಾದ ದಾನಗಳನ್ನು ಯಾರಿಗೂ ಕೊಡಬಾರದು ಮತ್ತು ದಾನ-ಪುಣ್ಯ ಏನನ್ನೂ ಮಾಡಬಾರದು ಎಂದು ಸಿದ್ಧವಾಗುತ್ತದೆ.

ಉತ್ತರ :—ಈ ನಿಮ್ಮ ಕಥನ ಸರ್ವಥಾ ವ್ಯರ್ಥವಾದುದು. ಏಕೆಂದರೆ, ಸುಪಾತ್ರರಿಗೆ ಪರೋಪಕಾರಿಗಳಿಗೆ ಪರೋಪಕಾರಕ್ಕಾಗಿ ಚಿನ್ನ, ಬೆಳ್ಳಿ, ವಜ್ರ, ಮುತ್ತು, ಮಾಣಿಕ್ಯ, ಅನ್ನ, ಜಲ, ಸ್ಥಾನ, ವಸ್ತ್ರ—ಮೊದಲಾದ ದಾನಗಳನ್ನು ಅವಶ್ಯವಾಗಿ ಮಾಡುವುದುಚಿತವಾಗಿರುತ್ತದೆ. ಆದರೆ ಕುಪಾತ್ರರಿಗೆಂದೂ ಕೊಡಬಾರದು.

ಪ್ರಶ್ನೆ :—ಕುಪಾತ್ರ ಮತ್ತು ಸುಪಾತ್ರರ ಲಕ್ಷಣವೇನು?

ಉತ್ತರ :—ಛಲಿಗಳೂ, ಕಪಟಗಳೂ, ವಿಷಯಿಗಳೂ, ಕಾಮ-ಕ್ರೋಧ-ಲೋಭ-ಮೋಹಯುಕ್ತರೂ, ಪರಹಾನಿಮಾಡುವವರೂ, ಲಂಪಟರೂ, ಮಿಥ್ಯಾವಾದಿಗಳೂ, ಅವಿದ್ವಾಂಸರೂ, ದುಃಸಂಗಿಗಳೂ, ಆಲಸ್ಯವಂತರೂ ಆಗಿರುವುದು; ಯಾವನಾದರೂ ಕೊಡುವವನಿದ್ದರೆ, ಅವನ ಬಳಿ ಮತ್ತೆಮತ್ತೆ ಕೇಳುವುದು, ಪಟ್ಟು ಹಿಡಿದು ಕೂಡುವುದು, ಇಲ್ಲವೆಂದು ಹೇಳಿದಮೇಲೆಯೂ ಬೇಡುತ್ತಲೇ ಹೋಗುವುದು, ಸಂತೋಷಗೊಳ್ಳದಿರುವುದು, ಕೊಡದವನನ್ನು ನಿಂದಿಸುವುದು, ಶಪಿಸುವುದು ಮತ್ತು ಬೈಯುವುದು, ಮುಂತಾದುವನ್ನೆಸಗುವುದು, ಅನೇಕಸಾರಿ ಸೇವೆಮಾಡಿ, ಒಂದುಸಾರಿ ಮಾಡದವನ ಶತ್ರುವಾಗಿಹೋಗುವುದು,

ಮೇಲಿನಿಂದ ಸಾಧುವಿನ ವೇಷಧರಿಸಿ, ಜನರನ್ನು ತಪ್ಪು ಹಾದಿಗೆಳೆದು ವಂಚಿಸುವುದು, ಮತ್ತು ತನ್ನಬಳಿ ಪದಾರ್ಥವಿದ್ದರೂ 'ನನ್ನ ಹತ್ತಿರ ಏನೂ ಇಲ್ಲ'—ಎಂದು ಹೇಳುವುದು, ಎಲ್ಲರನ್ನೂ ಪುಸಲಾಯಿಸಿ ಬುದ್ಧಿಕೆಡಿಸಿ ಸ್ವಾರ್ಥ ಸಾಧಿಸಿಕೊಳ್ಳುವುದು, ಇರುಳೂ ಹಗಲೂ ತಿರುಪೆ ಬೇಡುವುದರಲ್ಲೇ ಪ್ರವೃತ್ತರಾಗಿರುವುದು, ಔತಣವಿತ್ತಾಗ ಯಥೇಷ್ಟವಾಗಿ ಭಂಗಿ ಮೊದಲಾದ ಮಾದಕದ್ರವ್ಯಗಳನ್ನು ತಿಂದು ಕುಡಿದು, ಬೇರೆಯವರ ಪದಾರ್ಥಗಳನ್ನು ಬಹಳವಾಗಿ ಭಕ್ಷಿಸುವುದು, ಮತ್ತೆ ಉನ್ಮತ್ತರಾಗಿ ಪ್ರಮಾದಮಾಡುವವರಾಗುವುದು, ಸತ್ಯಮಾರ್ಗವನ್ನು ವಿರೋಧಿಸುವುದು ಮತ್ತು ತನ್ನ ಸ್ವಾರ್ಥಕ್ಕಾಗಿ ಸುಳ್ಳುಹಾದಿಯಲ್ಲಿ ನಡೆಯುವುದು, ಹಾಗೆಯೇ ತಮ್ಮ ಶಿಷ್ಯರಿಗೆ ತಮ್ಮ ಸೇವೆಯನ್ನೇ ಮಾಡಬೇಕೆಂದು ಉಪದೇಶಿಸುವುದು, ಬೇರೆ ಯೋಗ್ಯಪುರುಷರ ಸೇವೆ ಮಾಡುವ ಉಪದೇಶಕೊಡದಿರುವುದು, ಸದ್ವಿದ್ಯೆ ಮೊದಲಾದ ಪ್ರವೃತ್ತಿಗಳಿಗೆ ವಿರೋಧಿಗಳಾಗಿರುವುದು, "ಇವೆಲ್ಲಾ ಅಸತ್ಯ; ಮತ್ತು ಈ ಜಗತ್ತು ಕೂಡ ಮಿಥ್ಯೆ"—ಈ ಮೊದಲಾಗಿ ದುಷ್ಟ ಉಪದೇಶಮಾಡುವುದು, ಜಗತ್ತಿನ ವ್ಯವಹಾರಗಳಲ್ಲಿ, ಅಂದರೆ—ಪತ್ನಿಯರು, ಪತಿಗಳು, ಮಾತಾ, ಪಿತೃ, ಸಂತತಿ, ರಾಜ, ಪ್ರಜೆ, ಇಷ್ಟಮಿತ್ರರು ಇವರಲ್ಲಿ ಅಪ್ರೀತಿಯನ್ನುಂಟುಮಾಡುವುದು ಮೊದಲಾದುವು ಕುಪಾತ್ರದ ಲಕ್ಷಣಗಳಾಗಿರುತ್ತವೆ. ಮತ್ತು ಬ್ರಹ್ಮಚಾರಿಗಳೂ, ಜಿತೇಂದ್ರಿಯರೂ, ವೇದ ಮೊದಲಾದ ವಿದ್ಯೆಗಳ ಅಧ್ಯಯನಾಧ್ಯಾಪನಗಳನ್ನು ಮಾಡುವವರೂ, ಸುಶೀಲರೂ, ಸತ್ಯವಾದಿಗಳೂ, ಪರೋಪಕಾರಪ್ರಿಯರೂ, ಪುರುಷಾರ್ಥಿಗಳೂ, ಉದಾರರೂ, ವಿದ್ಯಾಧರ್ಮಗಳ ನಿರಂತರ ಉನ್ನತಿಯನ್ನೂ ಸಾಧಿಸುವವರೂ, ಧರ್ಮಾತ್ಮರೂ, ಶಾಂತರೂ, ನಿಂದಾಸ್ತುತಿಗಳಲ್ಲಿ ಹರ್ಷ-ಶೋಕರಹಿತರಾದವರೂ, ನಿರ್ಭಯರೂ, ಉತ್ಸಾಹಿಗಳೂ, ಯೋಗಿಗಳೂ, ಜ್ಞಾನಿಗಳೂ, ಸೃಷ್ಟಿಕ್ರಮ, ವೇದಾಜ್ಞೆ, ಈಶ್ವರನ ಗುಣಕರ್ಮಸ್ವಭಾವಗಳಿಗೆ ಅನುಕೂಲವಾಗಿ ವರ್ತಿಸುವವರೂ, ನ್ಯಾಯರೀತಿಯುಕ್ತವೂ, ಪಕ್ಷಪಾರಹಿತವೂ ಆದ ಸತ್ಯೋಪದೇಶವನ್ನು ಮತ್ತು ಸತ್ಯಶಾಸ್ತ್ರಗಳ ಅಧ್ಯಯನಾಧ್ಯಾಪನಗಳನ್ನು ಮಾಡುವವನನ್ನು ಪರೀಕ್ಷಿಸುವವರೂ, ಯಾವನಿಗೂ ಬೆಣ್ಣೆ ಹಚ್ಚಿದ ಮಾತನ್ನಾಡದವರೂ, ಪ್ರಶ್ನೆ

ಗಳಿಗೆ ಯಥಾರ್ಥವಾಗಿ ಸಮಾಧಾನ ಹೇಳುವವರೂ, ತಮ್ಮ ಆತ್ಮನಿಗೆ ಸಮನಾಗಿ ಇತರರ ಸುಖ-ದುಃಖಗಳನ್ನೂ, ಹಾನಿ-ಲಾಭಗಳನ್ನೂ ತಿಳಿಯುವವರೂ, ಅವಿದ್ಯೆ ಮೊದಲಾದ ಕ್ಲೇಶಗಳು, ಹಠ, ದುರಾಗ್ರಹ ಮತ್ತು ಅಭಿಮಾನವಿಲ್ಲದವರೂ, ಅಪಮಾನವನ್ನು ಅಮೃತಕ್ಕೆಣೆಯೆಂದೂ, ಮಾನವನ್ನು ವಿಷಕ್ಕೆಸಮನೆಂದೂ ತಿಳಿಯುವ ಸಂತೋಷಯುಕ್ತರೂ, ಯಾರಾದರೂ ಪ್ರೀತಿಯಿಂದ ಎಷ್ಟು ಕೊಡುತ್ತಾರೋ, ಅಷ್ಟರಿಂದಲೇ ಪ್ರಸನ್ನರಾಗುವವರೂ ಆಗಿರುವುದೂ; ಒಂದುಸಾರಿ ಆಪತ್ಕಾಲದಲ್ಲಿ ಬೇಡಿದರೂ ಕೊಡದಿದ್ದರೆ ಅಥವಾ ನಿಷೇಧಿಸಿದರೆ, ಆಗಲೂ ದುಃಖಿಸದಿರುವುದು; ಅಥವಾ ದುಶ್ಚೇಷ್ಟೆ ಮಾಡದಿರುವುದು; ಅಲ್ಲಿಂದ ಕೂಡಲೇ ಹಿಂದಿರುಗುವುದು ಅವನನ್ನು ನಿಂದಿಸದಿರುವುದೂ, ಸುಖಿಗಳಾದ ಪುರುಷರೊಂದಿಗೆ ಮೈತ್ರಿಯನ್ನೂ, ದುಃಖಿಗಳ ಮೇಲೆ ಕರುಣೆಯನ್ನೂ, ಪುಣ್ಯಾತ್ಮರ ದೆಸೆಯಿಂದ ಆನಂದಭಾವವನ್ನೂ, ಪಾಪಿಗಳಲ್ಲಿ "ಉಪೇಕ್ಷೆ" ಅಂದರೆ ರಾಗ ದ್ವೇಷ ರಹಿತತ್ವವನ್ನೂ ಇಟ್ಟುಕೊಂಡಿರುವುದು; ಸತ್ಯವನ್ನಂಗೀಕರಿಸುವವರೂ, ಸತ್ಯವಾದಿಗಳೂ, ಸತ್ಯಕಾರಿಗಳೂ, ನಿಷ್ಕಪಟರೂ, ಈರ್ಷ್ಯಾದ್ವೇಷರಹಿತರೂ, ಗಂಭೀರಾಶಯರೂ, ಸತ್ಪುರುಷರೂ ಧರ್ಮಯುಕ್ತರೂ ಮತ್ತು ಸರ್ವಥಾ ದುಷ್ಟಾಚಾರರಹಿತರೂ ತಮ್ಮ ತನುಮನಧನಗಳನ್ನು ಪರೋಪಕಾರ ಮಾಡುವುದರಲ್ಲಿ ವಿನಿಯೋಗಿಸುವವರೂ, ಪರಸುಖಕ್ಕಾಗಿ ತಮ್ಮ ಪ್ರಾಣಗಳನ್ನಾದರೂ ಸಮರ್ಪಿಸುವವರೂ ಆಗಿರುವುದು; ಈ ಮೊದಲಾದ ಶುಭಲಕ್ಷಣಗಳಿಂದ ಯುಕ್ತರಾದವರು ಸುಪಾತ್ರರಾಗಿರುತ್ತಾರೆ. ಆದರೆ— ದುರ್ಭಿಕ್ಷ ಮೊದಲಾದ ಆಪತ್ಕಾಲದಲ್ಲಿ ಪ್ರಾಣಿಮಾತ್ರರೆಲ್ಲರೂ ಅನ್ನ, ವಸ್ತ್ರ, ಮತ್ತು ಔಷಧ-ಪಥ್ಯ-ಸ್ಥಾನಗಳಿಗೆ ಅಧಿಕಾರಿಗಳಾಗಬಲ್ಲರು.

ಪ್ರಶ್ನೆ :—ದಾತೃಗಳು ಎಷ್ಟು ಬಗೆಯವರಿರುತ್ತಾರೆ?

ಉತ್ತರ :—ಮೂರುಬಗೆಯವರು-ಉತ್ತಮ, ಮಧ್ಯಮ ಮತ್ತು ನಿಕೃಷ್ಟ ಎಂದು. ದೇಶ, ಕಾಲ ಮುತ್ತು ಪಾತ್ರವನ್ನರಿತು, ಸತ್ಯ ವಿದ್ಯೆ ಧರ್ಮದ ಅಭಿವೃದ್ಧಿಯೆಂಬ ಪರೋಪಕಾರಕ್ಕಾಗಿ ದಾನಮಾಡುವವನನ್ನು ಉತ್ತಮ ದಾತೃವೆನ್ನುತ್ತಾರೆ. ಕೀರ್ತಿ ಅಥವಾ ಸ್ವಾರ್ಥಕ್ಕಾಗಿ ದಾನಮಾಡುವವನು ಮಧ್ಯಮನು. ತನಗೆ ಅಥವಾ ಪರರಿಗೆ ಸ್ವಲ್ಪವೂ

ಉಪಕಾರ ಮಾಡಲಾರದವನಾಗಿ, ವೇಶ್ಯಾಗಮನ ಮೊದಲಾದುವಕ್ಕೆ ಅಥವಾ ಸ್ತುತಿಪಾಠಕರು-ಹೊಗಳುಭಟ್ಟರಿಗೆ ದಾನಮಾಡುವವನು ನೀಚನು; ಕೊಡುವ ಕಾಲದಲ್ಲಿ ತಿರಸ್ಕಾರ, ಅಪಮಾನ, ಮೊದಲಾದ ದುಶ್ಚೇಷ್ಟೆಗಳನ್ನು ಮಾಡುವವನೂ, ಪಾತ್ರ-ಕುಪಾತ್ರರ ಭೇದವನ್ನು ಸ್ವಲ್ಪವೂ ತಿಳಿಯದವನೂ, ಆದರೆ "ಧಾನ್ಯವೆಲ್ಲಾ ಹನ್ನೆರಡು ಪಂಜೇರು" ಎಂದು ಮಾರಾಟ ಮಾಡುವವರಂತೆ ವಿವಾದ-ಜಗಳ ಮಾಡುವವನೂ, ಅನ್ಯಧರ್ಮಾತ್ಮರಿಗೆ ದುಃಖವಿತ್ತು ತಾನು ಸುಖಿಯಾಗುವುದಕ್ಕಾಗಿ ದಾನಕೊಡುವ ರೂಢಿಯುಳ್ಳವನೂ ಅಥವು ದಾತೃವು. ಅಂದರೆ—ಪರೀಕ್ಷಾಪೂರ್ವಕವಾಗಿ ವಿದ್ವಾಂಸರಾದ ಧರ್ಮಾತ್ಮರನ್ನು ಸತ್ಕರಿಸುವವನು ಉತ್ತಮನು; ಆದರೆ ಪರೀಕ್ಷೆ ಏನಾದರೂ ಮಾಡಿದರೂ ಅಥವಾ ಮಾಡದಿದ್ದರೂ, ತನಗೆ ಹೊಗಳಿಕೆ ಸಿಕ್ಕುವಂತೆ ದಾನಮಾಡುವವನು ಮಧ್ಯಮನು ಮತ್ತು ವಿವೇಚನೆಯಿಲ್ಲದೆ, ಪರೀಕ್ಷಾರಹಿತವೂ, ನಿಷ್ಫಲವೂ ಆದ ದಾನವನ್ನು ಮಾಡುತ್ತಿರುವವನು ನೀಚ ದಾತೃವು ಎನಿಸುತ್ತಾರೆ.

ಪ್ರ :—ದಾನದ ಫಲಗಳು ಇಲ್ಲಿ ಉಂಟಾಗುತ್ತವೋ, ಅಥವಾ ಪರಲೋಕದಲ್ಲಿಯೋ?

ಉತ್ತರ : — ಎಲ್ಲಿಡೆಯೂ ಉಂಟಾಗುತ್ತವೆ.

ಪ್ರಶ್ನೆ :—ಸ್ವತಃ ಉಂಟಾಗುತ್ತವೋ ಅಥವಾ ಯಾವನಾದರೂ ಫಲವೀಯುವವನಿದ್ದಾನೋ?

ಉತ್ತರ :—ಫಲಕೊಡುವವನು ಈಶ್ವರನು. ಹೇಗೆ ಯಾವ ಕಳ್ಳನೂ, ದರೋಡೆಕಾರನೂ ಸ್ವತಃ ಸೆರೆಮನೆಗೆ ಹೋಗಲಿಚ್ಛಿಸುವುದಿಲ್ಲವೋ, ಆದರೆ ರಾಜನು ಅವಶ್ಯವಾಗಿ ಕಳುಹಿಸುತ್ತಾನೋ, ಧರ್ಮಾತ್ಮರ ಸುಖವನ್ನು ರಕ್ಷಿಸುತ್ತಾನೋ, ಉಣಿಸುತ್ತಾನೋ, ದರೋಡೆಕಾರ ಮೊದಲಾದವರಿಂದ ಕಾಪಾಡಿ ಅವರನ್ನು ಸುಖದಲ್ಲಿಡುತ್ತಾನೋ, ಹಾಗೆಯೇ ಪರಮಾತ್ಮನು ಎಲ್ಲರಿಗೂ ಪಾಪಪುಣ್ಯಗಳ ದುಃಖ ಮತ್ತು ಸುಖ ಎಂಬ ಫಲಗಳನ್ನು ಯಥಾವತ್ತಾಗಿ ಉಣಿಸುತ್ತಾನೆ.

ಪ್ರಶ್ನೆ :—ಈ ಗರುಡಪುರಾಣ ಮೊದಲಾದ ಗ್ರಂಥಗಳು ವೇದಾ

ರ್ಥವನ್ನು ಅಥವಾ ವೇದವನ್ನು ಪುಷ್ಟಿಗೊಳಿಸುವಂತಹವು ಆಗಿವೆಯೋ ಅಥವಾ ಇಲ್ಲವೋ ?

ಉತ್ತರ :—ಇಲ್ಲ. ಆದರೆ ವೇದದ ವಿರೋಧಿಗಳು, ಮತ್ತು ವಿರುದ್ಧವಾಗಿ ನಡೆಯುತ್ತವೆ. ಮತ್ತು ತಂತ್ರಗಳೂ ಹಾಗೆಯೇ ಇವೆ. ಯಾವನಾದರೊಬ್ಬ ಮಾನವನು ಒಬ್ಬನಿಗೆ ಮಿತ್ರನಾಗಿ ಸಕಲ ಜಗತ್ತಿಗೂ ಶತ್ರುವಾಗಿರುವಂತೆಯೇ ಪುರಾಣ ಮತ್ತು ತಂತ್ರಗಳನ್ನೊಪ್ಪುವ ಪುರುಷನೂ ಆಗಿರುತ್ತಾನೆ, ಏಕೆಂದರೆ—ಒಬ್ಬರಿಂದೊಬ್ಬರ ವಿರೋಧವನ್ನು ಮಾಡಿಸುವ ಗ್ರಂಥಗಳು ಇವಾಗಿವೆ, ಇವನ್ನು ಒಪ್ಪುವುದು ಯಾವ ಮಾನವನ ಕಾರ್ಯವೂ ಅಲ್ಲ ; ಆದರೆ ಇವುಗಳನ್ನು ಸ್ವೀಕರಿಸುವುದು ಪಶುತ್ವವಾಗಿದೆ, ನೋಡಿರಿ ! ಶಿವಪುರಾಣದಲ್ಲಿ ತ್ರಯೋದಶೀ ಮತ್ತು ಸೋಮವಾರ ; ಆದಿತ್ಯಪುರಾಣದಲ್ಲಿ ಭಾನುವಾರ ; ಚಂದ್ರಖಂಡದಲ್ಲಿ ಸೋಮಗ್ರಹಯುಕ್ತ ಮಂಗಳ, ಬುಧ, ಬೃಹಸ್ಪತಿ, ಶುಕ್ರ, ಶನೈಶ್ಚರ, ರಾಹು ಮತ್ತು ಕೇತುಗಳ ವೈಷ್ಣವ ಏಕಾದಶೀ ; ವಾಮನದ್ವಾದಶೀ ; ನರಸಿಂಹನ ಮತ್ತು ಅನಂತನ ಚತುರ್ದಶೀ ; ಚಂದ್ರನ ಪೂರ್ಣಿಮೆ ; ದಿಕ್ಪಾಲಕರ ದಶಮೀ ; ದುರ್ಗಾನವಮೀ ; ವಸುಗಳ ಅಷ್ಟಮೀ ; ಮುನಿಗಳ ಸಪ್ತಮೀ ; ಕಾರ್ತಿಕಸ್ವಾಮಿಯ ಷಷ್ಠೀ ; ನಾಗಪಂಚಮೀ ; ಗಣೇಶ ಚತುರ್ಥೀ ; ಗೌರೀತೃತೀಯಾ ; ಅಶ್ವಿನೀ ಕುಮಾರ ದ್ವಿತೀಯಾ ; ಆದ್ಯಾದೇವಿಯ ಪ್ರತಿಪದಾ ಮತ್ತು ಪಿತೃಗಳ ಅಮಾವಾಸ್ಯೆ—ಈ ದಿನಗಳು ಪುರಾಣಗಳ ಪ್ರಕಾರ ಉಪವಾಸ ಮಾಡತಕ್ಕವಾಗಿವೆ. ಮತ್ತು ಎಲ್ಲೆಡೆಯೂ—" ಯಾವ ಮಾನವನು ಈ ವಾರ ಮತ್ತು ತಿಥಿಗಳಲ್ಲಿ ಅನ್ನ-ಪಾನಗಳನ್ನು ತೆಗೆದುಕೊಳ್ಳುವನೋ, ಅವನು ನರಕಗಾಮಿಯಾಗುವನು "—ಎಂದೇ ಬರೆದಿದೆ. ಈಗ ಪೋಪರು ಮತ್ತು ಪೋಪರ ಶಿಷ್ಯರು ಯಾವ ವಾರವೂ ಅಥವಾ ಯಾವ ತಿಥಿಯಲ್ಲಿಯೂ ಭೋಜನಮಾಡಬಾರದು ; ಏಕೆಂದರೆ ಭೋಜನ ಅಥವಾ ಪಾನಮಾಡಿದರೆ, ನರಕಗಾಮಿಗಳಾಗುವರು. ಇನ್ನು, ಪ್ರಮಾದಿಗಳಾದ ಜನರಿಂದ ರಚಿತವಾದ " ನಿರ್ಣಯಸಿಂಧು ", " ವ್ರತಾರ್ಕ " ಮೊದಲಾದ ಗ್ರಂಥಗಳಲ್ಲಿಯೇ ಒಂದೊಂದು ವ್ರತಕ್ಕೆ ಎಂತಹ ದುರ್ದಶೆ ತಂದಿದ್ದಾರೆ ; ಕೆಲವರು ದಶಮೀವಿದ್ಧಾ ಏಕಾದಶಿಯ

ದಿನವೂ, ಹಲವರು ದ್ವಾದಶಿಯಲ್ಲಿಯೂ ಏಕಾದಶೀವ್ರತವನ್ನು ಮಾಡುತ್ತಾರೆ. ಎಂದರೆ—ಎಷ್ಟು ದೊಡ್ಡ, ವಿಚಿತ್ರವಾದ ಪೋಪಲೀಲೆ—ಉಪವಾಸ ಸಾಯುವುದರಲ್ಲಿಯೂ ವಾದವಿವಾದವನ್ನೇ ಮಾಡುತ್ತಾರೆ; ಯಾವನು ಏಕಾದಶಿಯ ವ್ರತವನ್ನು ಆರಂಭಿಸಿದ್ದಾನೋ, ಅದರಲ್ಲಿ ಅವನ ಸ್ವಾರ್ಥವೇ ಇದೆ; ದಯೆ ಸ್ವಲ್ಪವೂ ಇಲ್ಲ; ಅವರು ಹೇಳುತ್ತಾರೆ:—

ಏಕಾದಶ್ಯಾಮನ್ನೇ ಪಾಪಾನಿ ವಸಂತಿ।

ಇರುವ ಪಾಪಗಳೆಲ್ಲಾ ಏಕಾದಶಿಯ ದಿನ ಅನ್ನದಲ್ಲಿ ವಾಸ ಮಾಡುತ್ತವೆ. ಈ ಪೋಪರನ್ನು—"ಯಾರ ಪಾಪಗಳು ನೆಲಸುತ್ತವೆ? ನಿಮ್ಮದೋ, ಅಥವಾ ನಿಮ್ಮ ತಂದೆ ಮೊದಲಾದವರದೋ?"—ಎಂದು ಕೇಳಬೇಕು. ಎಲ್ಲಾ ಪಾಪಗಳು ಏಕಾದಶಿಯ ಅನ್ನದಲ್ಲಿ ಹೋಗಿ ನೆಲಸುವುದಾದರೆ, ಏಕಾದಶಿಯ ದಿನ ಯಾರಿಗೂ ದುಃಖವಿರಬಾರದು. ಹೀಗಂತೂ ಆಗುವುದಿಲ್ಲ; ಆದರೆ; ಪ್ರತಿಯಾಗಿ ಹಸಿವು ಮೊದಲಾದುವುಗಳಿಂದ ದುಃಖವುಂಟಾಗುತ್ತದೆ. ದುಃಖವು ಪಾಪದ ಫಲ. ಆದುದರಿಂದ, ಹಸಿದು ಸಾಯುವುದು ಪಾಪ. ಯಾವುದರ ಕಥೆಯನ್ನು ಓದಿ ಬಹುಮಂದಿ ಮೋಸಹೋಗುತ್ತಾರೋ, ಅಂತಹ ಮಾಹಾತ್ಮ್ಯವನ್ನೂ ಇದಕ್ಕೆ ಕಲ್ಪಿಸಿದ್ದಾರೆ. ಆದರಲ್ಲಿ ಒಂದು ಗಾಥೆಯಿದೆ:—

ಬ್ರಹ್ಮಲೋಕದಲ್ಲಿ ಒಬ್ಬಳು ವೇಶ್ಯೆಯಿದ್ದಳು. ಅವಳು ಏನೋ ಅಪರಾಧಮಾಡಿದಳು. ಅವಳಿಗೆ ಶಾಪವುಂಟಾಯಿತು. ಅವಳು ಭೂಮಿಗೆ ಬಿದ್ದು—"ನಾನು ಸ್ವರ್ಗಕ್ಕೆ ಪುನಃ ಹೇಗೆ ಏರಬಲ್ಲೆನು?" ಎಂದು ಸ್ತುತಿಮಾಡಿದಳು. "ಯಾವಾಗಲಾದರೂ ಏಕಾದಶಿಯ ವ್ರತದ ಫಲವನ್ನು ಯಾವನಾದರೂ ನಿನಗೆ ಕೊಡುವನಾದರೆ, ಕೂಡಲೇ ನೀನು ಸ್ವರ್ಗಕ್ಕೆ ಬಂದುಬಿಡುವೆ" ಎಂದು ಅವನು ಹೇಳಿದನು. ಅವಳು ವಿಮಾನಸಹಿತ ಯಾವುದೋ ನಗರಕ್ಕೆ ಬಂದು ಬಿದ್ದಳು. ಅಲ್ಲಿನ ರಾಜನು ಅವಳನ್ನು 'ನೀನಾರು?' ಎಂದು ಕೇಳಿದನು. ಆಗವಳು ಎಲ್ಲಾ ವೃತ್ತಾಂತವನ್ನೂ ಹೇಳಿ ತಿಳಿಸಿದಳು ಮತ್ತು "ಯಾವನಾದರೂ ನನಗೆ ಏಕಾದಶಿಯ ಫಲವನ್ನು ಅರ್ಪಿಸುವನಾದರೆ,

ನಾನು ಪುನಃ ಸ್ವರ್ಗಕ್ಕೆ ಹೋಗಬಲ್ಲೆನು'' ಎಂದಳು. ರಾಜನು ನಗರದಲ್ಲಿ ಹುಡುಕಿಸಿದನು. ಯಾವನೂ ಏಕಾದಶಿಯ ವ್ರತಮಾಡುವವನು ಸಿಕ್ಕಲಿಲ್ಲ. ಆದರೆ ಒಂದು ದಿನ ಯಾರೋ ಶೂದ್ರ ಗಂಡ ಹೆಂಡಿರಲ್ಲಿ ಜಗಳವಾಗಿತ್ತು. ಕೋಪದಿಂದ ಹೆಂಗಸು ಹಗಲು-ರಾತ್ರಿ ಉಪವಾಸಮಾಡಿದ್ದಳು. ದೈವಯೋಗದಿಂದ ಆದಿನ ಏಕಾದಶಿಯಾಗಿತ್ತು. ಅವಳು—'' ನಾನು ತಿಳಿದೇನೋ ಏಕಾದಶಿಯನ್ನಾಚರಿಸಲಿಲ್ಲ. ಅಕಸ್ಮಾತ್ತಾಗಿ ಅಂದು ಹಸಿದಿದ್ದೆನು'' ಎಂದು ರಾಜನ ಸಿಪಾಯಿಗಳಿಗೆ ಹೇಳಿದಳು. ಆಗಲಾದರೋ ಅವರು ಅವಳನ್ನು ರಾಜನ ಸಮ್ಮುಖಕ್ಕೆ ಕರೆತಂದರು. ರಾಜನು ಅವಳಿಗೆ—'' ನೀನು ಈ ವಿಮಾನವನ್ನು ಮುಟ್ಟು'' ಎಂದು ಹೇಳಿದನು. ಅವಳು ಮುಟ್ಟಿದಳು. ನೋಡಿರಿ! ಆಗಲೇ ವಿಮಾನವು ಮೇಲಕ್ಕೆ ಹಾರಿಹೋಯಿತು. ಇದಾದರೋ ತಿಳಿಯದೇ ಮಾಡಿದ ಏಕಾದಶಿಯ ಫಲವು; ಇನ್ನು ತಿಳಿದು ಮಾಡುವುದಾದರೆ ಅದರ ಫಲಕ್ಕೆ ಪಾರವೇನು!!! ಛಲೇ ಕಣ್ಣಿದ್ದೂ ಕುರುಡರಾದ ಜನರೇ! ಈ ಮಾತು ನಿಜವಾಗಿದ್ದರೆ, ನಾವು ಸ್ವರ್ಗದಲ್ಲಿಲ್ಲದ ಒಂದು ವೀಳೆಯದೆಲೆಯ ಸುರುಳಿಯನ್ನು ಸ್ವರ್ಗಕ್ಕೆ ಕಳುಹಬಯಸುತ್ತೇವೆ. ಎಲ್ಲಾ ಏಕಾದಶಿಯವರೂ ನಿಮ್ಮ ಫಲಗಳನ್ನು ಕೊಟ್ಟುಬಿಡಿರಿ. ಒಂದು ವೀಳೆಯದೆಲೆಯ ಸುರುಳಿ ಮೇಲಕ್ಕೆ ಹೊರಟು ಹೋಗುವುದಾದರೆ, ಮತ್ತೆ ಲಕ್ಷಾಂತರ-ಕೋಟ್ಯಾಂತರ ಸುರುಳಿಗಳನ್ನು ಅಲ್ಲಿಗೆ ಕಳುಹಿಸುವೆವು ಮತ್ತು ನಾವೂ ಕೂಡ ಏಕಾದಶಿಯನ್ನು ಮಾಡುವ ರೂಢಿಯಿಟ್ಟುಕೊಳ್ಳುವೆವು. ಮತ್ತು ಹೀಗೆ ಆಗದೇ ಹೋದರೆ, ನಿಮ್ಮಗಳನ್ನು ಉಪವಾಸದಿಂದ ಸಾಯುವುದೆಂಬ ಈ ಆಪತ್ತಾಲದಿಂದ ದೂರಮಾಡಿ ರಕ್ಷಿಸುವೆವು. ಈ ಇಪ್ಪತ್ತುನಾಲ್ಕು ಏಕಾದಶಿಗಳಿಗೆ ಬೇರೆ ಬೇರೆ ಹೆಸರಿಟ್ಟಿದ್ದಾರೆ. ಒಂದಕ್ಕೆ '' ಧನದಾ '' ಒಂದಕ್ಕೆ '' ಕಾಮದಾ '', ಒಂದಕ್ಕೆ '' ಪುತ್ರದಾ '', ಒಂದಕ್ಕೆ '' ನಿರ್ಜಲಾ ''! ಬಹುಮಂದಿ ದರಿದ್ರರೂ, ಬಹುಮಂದಿ ಕಾಮಿಗಳೂ, ಮತ್ತು ಬಹುಮಂದಿ ನಿಸ್ಸಂತಾನರೂ ಏಕಾದಶಿಯನ್ನಾಚರಿಸಿ ವೃದ್ಧರಾಗಿಹೋದರು ಮತ್ತು ಸತ್ತೂ ಸಹ ಹೋದರು; ಆದರೆ ಧನ, ಕಾಮನೆ ಮತ್ತೆ ಮಗ ಸಿಕ್ಕಲಿಲ್ಲ. ಮತ್ತು ಜ್ಯೇಷ್ಠಮಾಸದ ಶುಕ್ಲಪಕ್ಷದಲ್ಲಿ, ಯಾವಾಗ ಒಂದು

ಗಳಿಗೆ ನೀರು ಸಿಕ್ಕದಿದ್ದರೆ ಮಾನವನು ವ್ಯಾಕುಲನಾಗಿಹೋಗುತ್ತಾನೋ, ಆಗ, ವ್ರತಮಾಡುವವರಿಗೆ ಮಹಾದುಃಖವುಂಟಾಗುತ್ತದೆ. ಅದರಲ್ಲಿಯೂ ಬಂಗಾಳದಲ್ಲಿ ಏಕಾದಶಿಯ ದಿನ ಎಲ್ಲಾ ವಿಧವೆಯರಾದ ನಾರಿಯರಿಗೂ ಮಹಾದುರ್ದಶೆಯುಂಟಾಗುತ್ತದೆ. ಈ ನಿರ್ದಯವಾದ ಕಟುಕನಿಗೆ, ಬರೆಯುವ ಕಾಲದಲ್ಲಿ ಮನಸ್ಸಿನಲ್ಲಿ ಸ್ವಲ್ಪವಾದರೂ ದಯೆ ಬಾರಲಿಲ್ಲ. ಹಾಗಿಲ್ಲದಿದ್ದರೆ, 'ನಿರ್ಜಲೆ'ಗೆ 'ಸಜಲೆ' ಎಂದೂ, ಪುಷ್ಯ ಮಾಸದ ಶುಕ್ಲಪಕ್ಷದ ಏಕಾದಶಿಗೆ 'ನಿರ್ಜಲಾ' ಎಂದೂ ಹೆಸರಿಟ್ಟಿದ್ದರಾದರೂ ಸ್ವಲ್ಪ ಒಳ್ಳೆಯದಾಗುತ್ತಿತ್ತು. ಆದರೆ ಈ ಪ್ರೇಪನಿಗೆ ದಯೆಯಿಂದ ಕೆಲಸವೇನು? "ಯಾರಾದರೂ ಜೀವಿಸಿರಲಿ, ಇಲ್ಲವೇ ಸಾಯಲಿ; ಪ್ರೇಪರ ಹೊಟ್ಟೆಯನ್ನು ಪೂರ್ತಿ ತುಂಬಿಸಿರಿ"! ಒಳ್ಳೆಯದು, ಗರ್ಭಿಣಿಯೂ ಅಥವಾ ಅದೇತಾನೇ ವಿವಾಹಿತೆಯಾದ ಸ್ತ್ರೀಯೂ ಬಾಲಕರೂ ಮತ್ತು ಯುವಕರಾದ ಪುರುಷರಂತೂ ಎಂದೂ ಉಪವಾಸ ಮಾಡಬಾರದು. ಆದರೆ, ಯಾರಾದರೂ ಮಾಡಬೇಕಾಗಿದ್ದರೂ ಕೂಡ, ಎಂದು ಅಜೀರ್ಣವಾಗಿರುವುದೋ, ಹಸಿವಾಗುವುದಿಲ್ಲವೋ ಅಂದು ಶರಬತ್ತು ಅಥವಾ ಹಾಲು ಕುಡಿದು ಇರಬೇಕು. ಯಾರು ಹಸಿವಿನಲ್ಲಿ ಉಣ್ಣುವುದಿಲ್ಲವೋ ಮತ್ತು ಯಾರು ಹಸಿವಿಲ್ಲದಾಗ ಊಟಮಾಡುತ್ತಾರೋ, ಆ ಇಬ್ಬರೂ ರೋಗಸಾಗರದಲ್ಲಿ ಮುಳುಗಿ, ದುಃಖಹೊಂದುತ್ತಾರೆ. ಈ ಪ್ರಮಾದಿಗಳ ಹೇಳಿಕೆಯನ್ನೂ ಬರಹವನ್ನೂ ಯಾರೂ ಪ್ರಮಾಣವೆಂದು ತಿಳಿಯಬಾರದು.

ಈಗ ಗುರು-ಶಿಷ್ಯರ ಮಂತ್ರೋಪದೇಶ ಮತ್ತು ಮತಮತಾಂತರಗಳ ಚರಿತ್ರಗಳ ವೃತ್ತಾಂತವನ್ನು ಹೇಳುತ್ತೇವೆ. ಮೂರ್ತಿಪೂಜಕರಾದ ಸಾಂಪ್ರದಾಯಿಕರು—"ವೇದಗಳು ಅನಂತವಾಗಿವೆ. ಋಗ್ವೇದಕ್ಕೆ ೨೧, ಯಜುರ್ವೇದಕ್ಕೆ ೧೦೧, ಸಾಮವೇದಕ್ಕೆ ೧೦೦೦ ಮತ್ತು ಅಥರ್ವವೇದಕ್ಕೆ ೯ ಶಾಖೆಗಳಿವೆ. ಇವುಗಳಲ್ಲಿ ಕೆಲಂಚಶಾಖೆಗಳು ಸಿಕ್ಕುತ್ತವೆ; ಉಳಿದುವು ಲುಪ್ತವಾಗಿಹೋಗಿವೆ. ಆವುಗಳಲ್ಲಿಯೇ ಮೂರ್ತಿಪೂಜೆ ಮತ್ತು ತೀರ್ಥಗಳಿಗೆ ಪ್ರಮಾಣವಿರಬಹುದು. ಇರದಿದ್ದರೆ, ಪುರಾಣಗಳಲ್ಲಿ ಎಲ್ಲಿಂದ ಬರುತ್ತಿತ್ತು? ಕಾರ್ಯವನ್ನು ನೋಡಿ ಕಾರಣದ ಅನುಮಾನವುಂಟಾಗುವಾಗ, ಪುರಾಣಗಳನ್ನು ನೋಡಿದ

ಮೇಲೆ ಮೂರ್ತಿಪೂಜೆಯಲ್ಲೇನು ಸಂದೇಹ?''—ಎಂದು ಪ್ರಶ್ನಿಸುತ್ತಾರೆ.

ಉತ್ತರ:—ಶಾಖೆಗಳು ಯಾವ ವೃಕ್ಷದವಾಗಿರುತ್ತವೋ, ಆದಕ್ಕೆ ಸದೃಶವಾಗಿರುತ್ತವೆ; ವಿರುದ್ಧವಾಗಿರುವುದಿಲ್ಲ. ಶಾಖೆಗಳು ಬೇಕಾದರೆ ಚಿಕ್ಕವಾಗಿರಬಹುದು ಅಥವಾ ದೊಡ್ಡವಾಗಿರಬಹುದು; ಆದರೆ ಅವುಗಳಲ್ಲಿ ವಿರೋಧವಿರಲಾರದು. ಹಾಗೆಯೇ, ಎಷ್ಟು ಶಾಖೆಗಳು ಸಿಕ್ಕುತ್ತವೋ, ಇವುಗಳಲ್ಲಿ ಪಾಷಾಣಾದಿ ಮೂರ್ತಿಗಳಿಗೆ ಮತ್ತು ಜಲ-ಸ್ಥಳ ವಿಶೇಷವಾದ ತೀರ್ಥಗಳಿಗೆ ಪ್ರಮಾಣ ಸಿಕ್ಕದಿರುವಾಗ, ಆ ಲುಪ್ತಶಾಖೆಗಳಲ್ಲಿಯೂ ಇರಲಿಲ್ಲ. ಮತ್ತು ನಾಲ್ಕು ವೇದಗಳು ಪೂರ್ಣವಾಗಿ ಸಿಕ್ಕುತ್ತವೆ. ಅವಕ್ಕೆ ವಿರುದ್ಧವಾಗಿ ಶಾಖೆಗಳೆಂದಿಗೂ ಇರಲಾರವು. ಮತ್ತು ಯಾವುವು ವಿರುದ್ಧವಾಗಿವೆಯೋ, ಅವನ್ನು ಯಾವನೂ ಶಾಖೆಯೆಂದು ಸಿದ್ಧಪಡಿಸಲಾರನು. ಸ್ಥಿತಿ ಹೀಗಿರುವಾಗ, ಪುರಾಣಗಳು, ವೇದಗಳ ಶಾಖೆಗಳಲ್ಲ; ಆದರೆ ಸಾಂಪ್ರದಾಯಿಕಜನರು ಪರಸ್ಪರ ವಿರುದ್ಧವಾದ ಗ್ರಂಥಗಳನ್ನು ರಚಿಸಿಟ್ಟಿದ್ದಾರೆ. ನೀವು ವೇದಗಳನ್ನು ಈಶ್ವರಕೃತವೆಂದೊಪ್ಪುವಿರಾದರೆ, "ಆಶ್ವಲಾಯನ" ಮೊದಲಾದ ಋಷಿ-ಮುನಿಗಳ ಹೆಸರಿನಿಂದ ಪ್ರಸಿದ್ಧರಾಗಿರುವ ಗ್ರಂಥಗಳನ್ನು ವೇದಗಳೆಂದು ಏಕೆ ಅಂಗೀಕರಿಸುತ್ತೀರಿ? ಕೊಂಬೆಗಳು ಮತ್ತು ಎಲೆಗಳನ್ನು ನೋಡುವುದರಿಂದ ಅರಳಿ, ಆಲ ಮತ್ತು ಮಾವು ಮೊದಲಾದ ಮರಗಳ ಪರಿಚಯವಾಗುವಂತೆಯೇ ಋಷಿ-ಮುನಿಗಳಿಂದ ರಚಿತವಾದ ವೇದಾಂಗಗಳು, ನಾಲ್ಕು ಬ್ರಾಹ್ಮಣಗಳು, ಅಂಗೋಪಾಂಗಗಳು ಮತ್ತು ಉಪವೇದಗಳು ಮೊದಲಾದುವುಗಳಿಂದ ವೇದಾರ್ಥವು ಗುರುತಿಸಲ್ಪಡುತ್ತದೆ. ಆದುದರಿಂದ ಈ ಗ್ರಂಥಗಳನ್ನು ಶಾಖೆಗಳೆಂದು ಅಂಗೀಕರಿಸಿದ್ದಾರೆ. ವೇದಗಳಿಗೆ ವಿರುದ್ಧವಾಗಿರುವುದರ ಪ್ರಮಾಣವೂ, ಅನುಕೂಲವಾಗಿರುವುದರ ಅಪ್ರಮಾಣವೂ ಆಗಲಾರದು. ಅದೃಷ್ಟವಾದ ಶಾಖೆಗಳಲ್ಲಿ ನೀವು ವಿಗ್ರಹ ಮೊದಲಾದುದರ ಪ್ರಮಾಣದ ಕಲ್ಪನೆ ಮಾಡುವಿರಾದರೆ, ಯಾವನಾದರೂ—"ಲುಪ್ತವಾದ ಶಾಖೆಗಳಲ್ಲಿ ವರ್ಣವ್ಯವಸ್ಥೆಯನ್ನು ತಲೆಕೆಳಗಾಗಿ, ಅಂದರೆ-ಅಂತ್ಯಜರು ಮತ್ತು ಶೂದ್ರರ ಹೆಸರು ಬ್ರಾಹ್ಮಣ ಮೊದಲಾದುವೆಂದೂ, ಬ್ರಾಹ್ಮಣ ಮೊದಲಾದವರ ಹೆಸರು

ಶೂದ್ರ, ಅಂತ್ಯಜ--ಮೊದಲಾದುದೆಂದೂ, ಅಗಮನೀಯಾಗಮನ-ಅಕರ್ತವ್ಯಗಳು ಕರ್ತವ್ಯವೆಂದೂ, ಮಿಥ್ಯಾಭಾಷಣ ಮೊದಲಾದುವು ಧರ್ಮವೆಂದೂ, ಸತ್ಯಭಾಷಣ ಮೊದಲಾದುವು ಅಧರ್ಮ ಎಂದೂ ಈ ಮೊದಲಾಗಿ ಬರೆದಿರಬಹುದು'' ಎಂಬ ಪಕ್ಷವನ್ನು ಸ್ಥಾಪಿಸಿದರೆ, ನೀವು ಆವನಿಗೆ, ನಾವು ನಿಮಗೆ ಕೊಟ್ಟ ಉತ್ತರವನ್ನೇ, ಅಂದರೆ--" ವೇದಗಳು ಮತ್ತು ಪ್ರಸಿದ್ಧ ಶಾಖೆಗಳಲ್ಲಿ ಯಾವರೀತಿ ಬ್ರಾಹ್ಮಣ ಮೊದಲಾದವರ ಹೆಸರನ್ನು ಬ್ರಾಹ್ಮಣಾದಿಗಳೆಂದೂ, ಶೂದ್ರ ಮೊದಲಾದವರ ಹೆಸರನ್ನು ಶೂದ್ರಾದಿಗಳೆಂದೂ ಬರೆದಿದೆಯೋ, ಹಾಗೆಯೇ ಆದೃಷ್ಟಶಾಖೆಗಳಲ್ಲಿಯೂ ಬರೆದಿದೆಯೆಂದು ಒಪ್ಪಿಕೊಳ್ಳಬೇಕು ; ಇಲ್ಲವಾದೆ-ವರ್ಣಾಶ್ರಮವ್ಯವಸ್ಥೆ ಮೊದಲಾದುವೆಲ್ಲಾ ಬೇರೆ ಬಗೆಯಾಗಿ ಹೋಗುವುವು " ಎಂಬುದಾಗಿಯೇ ಹೇಳುವಿರಿ. ಒಳ್ಳೆಯದು, ಜೈಮಿನಿ, ವ್ಯಾಸ ಮತ್ತು ಪತಂಜಲಿಯ ಕಾಲದವರೆಗಾದರೂ ಎಲ್ಲಾ ಶಾಖೆಗಳೂ ಇದ್ದುವೋ, ಅಥವಾ ಇಲ್ಲವೋ ? ಇರಲಿಲ್ಲವಾದರೆ, ನೀವೆಂದಿಗೂ ನಿಷೇಧಿಸಲಾರಿರಿ ಮತ್ತು ಇರಲಿಲ್ಲವೆಂದು ಹೇಳುವಿರಾದರೆ, ಮತ್ತೆ ಶಾಖೆಗಳ ಅಸ್ತಿತ್ವಕ್ಕೆ ಪ್ರಮಾಣವೇನು ? ನೋಡಿರಿ ! ಜೈಮಿನಿಯು ಮಿಮಾಂಸಾಶಾಸ್ತ್ರದಲ್ಲಿ ಸಮಸ್ತ ಕರ್ಮಕಾಂಡವನ್ನೂ, ಪತಂಜಲಿಮುನಿಯು ಯೋಗಶಾಸ್ತ್ರದಲ್ಲಿ ಸಮಸ್ತ ಉಪಾಸನಾಕಾಂಡವನ್ನೂ ಮತ್ತು ವ್ಯಾಸಮುನಿಯು ಶಾರೀರಿಕ ಸೂತ್ರಗಳಲ್ಲಿ ಸಮಸ್ತ ಜ್ಞಾನಕಾಂಡವನ್ನೂ ವೇದಾನುಕೂಲವಾಗಿ ಬರೆದಿದ್ದಾರೆ. ಅವುಗಳಲ್ಲಿ ಪಾಷಾಣಾದಿ ಮೂರ್ತಿಪೂಜೆಯು ಅಥವಾ ಪ್ರಯಾಗಾದಿ ತೀರ್ಥಗಳ ಹೆಸರು-ಗುರುತುಗಳನ್ನೂ ಕೂಡ ಬರೆಯಲಿಲ್ಲ. ಬರೆಯುವರಾದರೂ ಎಲ್ಲಿಂದ ? ವೇದಗಳಲ್ಲಿ ಎಲ್ಲಿಯಾದರೂ ಇದ್ದಿದ್ದರೆ, ಬರೆಯದೆ ಎಂದಿಗೂ ಬಿಡುತ್ತಿರಲಿಲ್ಲ. ಆದುದರಿಂದಲುಪ್ತಶಾಖೆಗಳಲ್ಲಿಯೂ ಕೂಡ ಈ ಮೂರ್ತಿಪೂಜೆ ಮೊದಲಾದುವಕ್ಕೆ ಪ್ರಮಾಣವಿರಲಿಲ್ಲ. ಈ ಎಲ್ಲಾ ಶಾಖೆಗಳೂ ವೇದಗಳಲ್ಲ ; ಏಕೆಂದರೆ-ಇವುಗಳಲ್ಲಿ ಈಶ್ವರಕೃತವಾದ ವೇದಗಳ ಪ್ರತೀಕವನ್ನು ಧ್ವರಿಸಿ, ವ್ಯಾಖ್ಯಾನವನ್ನೂ ಮತ್ತು ಪ್ರಾಪಂಚಿಕ ಮಾನವರ ಚರಿತ್ರೆ ಮೊದಲಾದವನ್ನೂ ಬರೆದಿದ್ದಾರೆ. ಆದುದರಿಂದ ವೇದಗಳಲ್ಲಿ ಇವೆಂದಿಗೂ ಇರಲು ಶಕ್ಯವಿಲ್ಲ. ವೇದಗಳಲ್ಲಿಯಾದರೋ ಕೇವಲ ಮಾನವರಿಗೆ ವಿದ್ಯೆಯ ಉಪ

ದೇಶಮಾಡಲಾಗಿದೆ. ಯಾವ ಮನುಷ್ಯನ ಹೆಸರೂ ಕೂಡ ಇಲ್ಲ. ಆದುದರಿಂದ, ಮೂರ್ತಿಪೂಜೆಗೆ ಎಲ್ಲ ವಿಧದಿಂದಲೂ ಖಂಡನವಿದೆ. ನೋಡಿರಿ! ಮೂರ್ತಿಪೂಜೆಯಿಂದ ಶ್ರೀರಾಮಚಂದ್ರ, ಶ್ರೀಕೃಷ್ಣ, ನಾರಾಯಣ, ಶಿವ ಮೊದಲಾದವರ ಮಹಾನಿಂದೆಯೂ, ಅಪಹಾಸ್ಯವೂ ಆಗುತ್ತವೆ. ಅವರು ದೊಡ್ಡ ಮಹಾರಾಜಾಧಿರಾಜರಾಗಿದ್ದರು; ಅವರ ಪತ್ನಿಯರಾದ ಸೀತೆ, ರುಕ್ಮಿಣಿ, ಲಕ್ಷ್ಮೀ ಮತ್ತು ಪಾರ್ವತಿ ಮೊದಲಾದವರು ಮಹಾರಾಣಿಯರಾಗಿದ್ದರು ಎಂಬುದು ಎಲ್ಲರಿಗೂ ಗೊತ್ತು. ಆದರೆ, ಅವರ ಪ್ರತಿಮೆಗಳನ್ನು ದೇವಾಲಯಗಳಲ್ಲಿಟ್ಟು ಪೂಜಾರಿಗಳು ಅವರ ಹೆಸರಿನಿಂದ ಭಿಕ್ಷೆ ಬೇಡುವಾಗ, ಅಂದರೆ ಅವರನ್ನು—" ಬನ್ನಿ ಸ್ವಾಮೀ! ಮಹಾರಾಜರೇ! ಸೇಠರೇ! ಸಾಹುಕಾರರೇ! ದರ್ಶನ ಮಾಡಿರಿ, ಕುಳಿತುಕೊಳ್ಳಿರಿ, ಚರಣಾಮೃತವನ್ನು ತೆಗೆದುಕೊಳ್ಳಿರಿ. ಏನಾದರೆ ಕಾಣಿಕೆಯನ್ನು ಅರ್ಪಿಸಿರಿ. ಸ್ವಾಮಿ! ಸೀತಾಮರಿಗೆ, ಕೃಷ್ಣರುಕ್ಮಿಣಿಯರಿಗೆ, ರಾಧಾಕೃಷ್ಣರಿಗೆ, ಲಕ್ಷ್ಮೀ-ನಾರಾಯಣರಿಗೆ ಮತ್ತು ಮಹದೇವ-ಪಾರ್ವತಿಯರಿಗೆ ಮೂರುದಿನದಿಂದ ಬಾಲ ಭೋಗವು ಅಥವಾ ರಾಜಭೋಗವು, ಅಂದರೆ--ಅಲ್ಪಾಹಾರ ಅಥವಾ ಅನ್ನನೀರುಗಳೂ ಸಹ ಸಿಕ್ಕಿಲ್ಲ ಇಂದು ಇವರ ಹತ್ತಿರ ಏನೂ ಇಲ್ಲ. ಸೀತೆ ಮೊದಲಾದವರಿಗೆ ಮೂಗುಬೊಟ್ಟು ಮೊದಲಾದುವನ್ನು ರಾಣಿಯರಾಗಲೀ ಸೇಠಾನಿಯರಾಗಲೀ ಮಾಡಿಸಿಕೊಡಿರಿ. ಅನ್ನ-ಮೊದಲಾದುವನ್ನು ಕಳುಹಿಸುವಿರಾದರೆ, ರಾಮ, ಕೃಷ್ಣ-ಮೊದಲಾದವರಿಗೆ ನೈವೇದ್ಯ ಮಾಡುವೆವು. ಬಟ್ಟೆಗಳೆಲ್ಲಾ ಹರಿದುಹೋಗಿವೆ. ದೇವಾಲಯದ ಮೂಲೆಗಳೆಲ್ಲಾ ಮುರಿದುಬಿದ್ದಿವೆ. ಮೇಲಿನಿಂದ ಸೋರುತ್ತದೆ. ಮತ್ತು ನೀಚರಾದ ಕಳ್ಳರು ಇದ್ದುಬದ್ದುದನ್ನೂ ಎತ್ತಿಕೊಂಡು ಹೋದರು. ಕೆಲವನ್ನು ಇಲಿಗಳು ಕಡಿದುಹಾಗದುವು. ನೋಡಿರಿ! ಒಂದು ದಿನ ಇಲಿಗಳು ಎಂತಹ ಅನರ್ಥಮಾಡಿದುವೆಂದರೆ ಇವರ ಕಣ್ಣನ್ನೂ ಕಿತ್ತುಕೊಂಡು ಓಡಿಹೋದುವು! ಈಗ ನಾವು ಬೆಳ್ಳಿಯ ಕಣ್ಣನ್ನು ಮಾಡಿಸಲಾರದೇಹೋದೆವು; ಆದುದರಿಂದ ಕವಡೆಯದನ್ನು ಅಂಟಿಸಿದ್ದೇವೆ"—ಎಂದು ಹೇಳುತ್ತಾ ಭಿಕ್ಷುಕರನ್ನಾಗಿ ಮಾಡುತ್ತಾರೆ! ರಾಮಲೀಲೆ ಮತ್ತು ರಾಸಕ್ರೀಡೆಯನ್ನೂ ಕೂಡ ಮಾಡಿಸುತ್ತಾರೆ.

ಸೀತಾರಾಮರೂ, ರಾಧಾಕೃಷ್ಣರೂ ಕುಣಿಯುತ್ತಿದ್ದಾರೆ; ರಾಜರೂ, ಮಹಂತರೂ ಮೊದಲಾದ ಅವರ ಸೇವಕರು ಆನಂದದಿಂದ ಕುಳಿತಿದ್ದಾರೆ! ದೇವಾಲಯದಲ್ಲಿ ಸೀತಾ–ರಾಮು ಮೊದಲಾದವರು ನಿಂತಿರುತ್ತಾರೆ ಮತ್ತು ಪೂಜಾರಿಗಳು ಅಥವಾ ಮಹಂತರು ಆಸನದಮೇಲೆ ಅಥವಾ ಗದ್ದುಗೆಯ ಮೇಲೆ ದಿಂಬಿಗೊರಗಿ ಕುಳಿತಿರುತ್ತಾರೆ. ಬಹಳ ಕಾವಿನಲ್ಲಿಯೂ ಸಹ ಬೀಗಹಾಕಿ, ಒಳಗೆ ಮುಚ್ಚಿಟ್ಟುಬಿಡುತ್ತಾರೆ ಮತ್ತು ತಾವು ಸೊಗಸಾದ ಗಾಳಿಯಲ್ಲಿ ಮಂಚಹಾಕಿಕೊಂಡು ನಿದ್ರಿಸುತ್ತಾರೆ! ಬಹುಮಂದಿ ಪೂಜಾರಿಗಳು ತಮ್ಮ ನಾರಾಯಣನನ್ನು ಡಬ್ಬಿಯಲ್ಲಿ ಮುಚ್ಚಿ, ಮೇಲಿನಿಂದ ಬಟ್ಟೆ ಮೊದಲಾದುವನ್ನು ಸುತ್ತಿ, ಕೊರಳಿಗೆ ತಗಲುಹಾಕಿಕೊಳ್ಳುತ್ತಾರೆ. ಹೆಣ್ಣು ಕೋತಿಯು ತನ್ನ ಮರಿಯನ್ನು ಕುತ್ತಿಗೆಗೆ ತಗಲುಹಾಕಿಕೊಳ್ಳುವಂತೆ, ಪೂಜಾರಿಗಳ ಕೊರಳಿನಲ್ಲಿಯೂ ನೇತಾಡುತ್ತವೆ! ಯಾವನಾದರೂ ವಿಗ್ರಹವನ್ನು ಒಡೆದುಹಾಕಿದಾಗ ಆಗ "ಅಯ್ಯೋ ಅಯ್ಯೋ" ಎಂದು ಎದೆ ಚಚ್ಚಿಕೊಂಡು, "ಸೀತಾರಾಮರನ್ನು, ರಾಧಾಕೃಷ್ಣರನ್ನು ಮತ್ತು ಶಿವ–ಪಾರ್ವತಿಯರನ್ನು ದುಷ್ಟರು ಒಡೆದುಹಾಕಿಬಿಟ್ಟಿರು. ಈಗ ಒಳ್ಳೆಯ ಶಿಲ್ಪಿಯು ಅಮೃತಶಿಲೆಯಿಂದ ಮಾಡಿರುವ ಬೇರೆ ವಿಗ್ರಹವನ್ನು ತರಿಸಿ, ಸ್ಥಾಪಿಸಿ, ಪೂಜಿಸಬೇಕು" ಎಂದು ಒದರುತ್ತಾರೆ! "ನಾರಾಯಣನಿಗೆ ತುಪ್ಪವಿಲ್ಲದೆ ನೈವೇದ್ಯ ಸೇರುವುದಿಲ್ಲ. "ಬಹಳವಿಲ್ಲದಿದ್ದರೆ ಸ್ವಲ್ಪವಾದರೂ ಅವಶ್ಯವಾಗಿ ಕಳುಹಿಸಿರಿ"—ಎಂದು ಮೊದಲಾಗಿ, ಅವರುಗಳ ಮೇಲೆ ಹೊರೆಸುತ್ತಾರೆ! ಮತ್ತು ರಾಸಕ್ರೀಡೆ ಅಥವಾ ರಾಮಲೀಲೆಯ ಕೊನೆಯಲ್ಲಿ ಸೀತಾರಾಮರಿಂದ ಅಥವಾ ರಾಧಾಕೃಷ್ಣರಿಂದ ತಿರುಪೆಬೇಡಿಸುತ್ತಾರೆ. ಈ ಮೊದಲಾದ ಸಂಗತಿಗಳು ಎಷ್ಟು ದೊಡ್ಡ ಶೋಕಾಸ್ಪದವಾದುವೆಂಬುದನ್ನು ನೀವು ಆಲೋಚಿಸಿಕೊಳ್ಳಿರಿ. ಒಳ್ಳೆಯದು, ಹೇಳಿರಿ ನೋಡೋಣ, ಸೀತಾರಾಮರು—ಮೊದಲಾದವರು ಇಂತಹ ದರಿದ್ರರೂ, ಭಿಕ್ಷುಕರೂ ಆಗಿದ್ದರೇ? ಇದವರ ಅಪಹಾಸ್ಯ ಮತ್ತು ನಿಂದೆಯಲ್ಲದಿದ್ದರೆ ಮತ್ತೇನು? ಇದರಿಂದ ನಮ್ಮ ಮಾನನೀಯರಾದ ಪುರುಷರಿಗೆ ಬಹಳ ನಿಂದೆಯುಂಟಾಗುತ್ತದೆ. ಒಳ್ಳೆಯದು, ಯಾವಾಗ ಇವರಿದ್ದರೋ, ಆಗ ಸೀತೆ, ರುಕ್ಮಿಣಿ, ಲಕ್ಷ್ಮಿ

ಮತ್ತು ಪಾರ್ವತಿಯರನ್ನು ಬೀದಿಯಲ್ಲಿ ಅಥವಾ ಯಾವುದಾದರೂ ಮನೆಯಲ್ಲಿ ನಿಲ್ಲಿಸಿ, ಪೂಜಾರಿಗಳು—"ಬನ್ನಿರಿ. ಇವರ ದರ್ಶನ ಮಾಡಿರಿ. ಏನಾದರೂ ಕಪ್ಪಕಾಣಿಕೆ ಅರ್ಪಿಸಿರಿ"—ಎಂದು ಹೇಳಿದ್ದರೆ, ಸೀತಾರಾಮರು ಮೊದಲಾದವರು ಈ ಮೂರ್ಖರ ಹೇಳಿಕೆಯಿಂದ ಇಂತಹ ಕೆಲಸವನ್ನೆಂದಿಗೂ ಮಾಡುತ್ತಿರಲಿಲ್ಲ ಮತ್ತು ಮಾಡಗೊಡುತ್ತಿರಲಿಲ್ಲ. ಯಾವನಾದರೂ ಅಂತಹ ಅಪಹಾಸ್ಯವನ್ನು ಮಾಡಿದ್ದರೆ, ಅವನನ್ನು ದಂಡಿಸದೆ ಎಂದಿಗಾದರೂ ಬಿಡುತ್ತಿದ್ದರೇ? ಹೌದು; ಅವರಿಂದ ಶಿಕ್ಷೆಹೊಂದದಿದ್ದಾಗ, ಇವರ ಕರ್ಮಗಳು ಪೂಜಾರಿಗಳಿಗೆ ವಿಗ್ರಹವಿರೋಧಿಗಳಿಂದ ಬಹಳ ಪ್ರಸಾದವನ್ನು ಕೊಡಿಸಿದುವು ಮತ್ತು ಈಗಲೂ ಸಿಕ್ಕುತ್ತದೆ. ಮತ್ತು ಯಾವತ್ತಿನವರೆಗೆ ಈ ದುಷ್ಕರ್ಮವನ್ನು ಬಿಡುವುದಿಲ್ಲವೋ ಆ ಹೊತ್ತಿನವರೆಗೂ ಸಿಕ್ಕುವುದು. ಆರ್ಯಾವರ್ತಕ್ಕೆ ಪ್ರತಿದಿನವೂ ಮಹಾಹಾನಿಯೂ ಪಾಷಾಣಾದಿ ಮೂರ್ತಿಪೂಜಕರ ಪರಾಜಯವೂ ಈ ಕರ್ಮಗಳಿಂದಲೇ ಆಗುತ್ತವೆ—ಎಂಬುದರಲ್ಲಿ ಸಂದೇಹವೇನು? ಏಕೆಂದರೆ—ಪಾಪದ ಫಲವು ದುಃಖವು. ಇದೇ ಪಾಷಾಣಾದಿ ಮೂರ್ತಿಗಳ ಮೇಲಿನ ನಂಬಿಕೆಯಿಂದ ಬಹಳ ಹಾನಿಯುಂಟಾಗಿಹೋಯಿತು. ಬಿಡದೇಹೋದರೆ, ಪ್ರತಿದಿನವೂ ಹೆಚ್ಚು ಹೆಚ್ಚಾಗಿ ಆಗುತ್ತಾ ಹೋಗುವುದು. ಇವರಲ್ಲಿ ವಾಮಮಾರ್ಗಿಗಳು ಬಹು ದೊಡ್ಡ ಅಪರಾಧಿಗಳು, ಅವರು ಶಿಷ್ಯನನ್ನು ಮಾಡಿಕೊಳ್ಳುವಾಗ ಸಾಧಾರಣನಾದವನಿಗೆ—

ದಂ ದುರ್ಗಾಯೈ ನಮಃ। ಭಂ ಭೈರವಾಯ ನಮಃ। ಐಂ ಹ್ರೀಂ ಕ್ಲೀಂ ಚಾಮುಂಡಾಯೈ ವಿಚ್ಚೇ॥

ಮೊದಲಾದ ಮಂತ್ರಗಳನ್ನು ಪದೇಶಿಸಿಬಿಡುತ್ತಾರೆ. ಮತ್ತು ಬಂಗಾಳದಲ್ಲಿ ವಿಶೇಷತಃ ಏಕಾಕ್ಷರೀಮಂತ್ರೋಪದೇಶವನ್ನು ಮಾಡುತ್ತಾರೆ. ಹೇಗೆಂದರೆ :—

ಹ್ರೀಂ ಶ್ರೀಂ ಕ್ಲೀಂ॥ [ಶಾವರತಂ. ಬಂ. ಪ್ರಕೀ. ಪ್ರ. ೪೪]

ಮೊದಲಾದುವನ್ನು ಪದೇಶಿಸುತ್ತಾರೆ. ಮತ್ತು ಧನಾಢ್ಯರಿಗೆ

ಪೂರ್ಣಾಭಿಷೇಕಮಾಡುತ್ತಾರೆ. ಹೀಗೆಯೇ ದಶಮಹಾವಿದ್ಯೆಗಳ ಮಂತ್ರಗಳು.

ಹ್ರಾಂ ಹ್ರೀಂ ಹ್ರುಂ ಬಗಲಾಮುಖ್ಯೈ ಫಟ್ ಸ್ವಾಹಾ ॥

[ಶಾ. ಪ್ರಕೀ. ಪ್ರ. ೪೧]

ಒಂದೊಂದುಕಡೆ—

ಹ್ರೂಂ ಫಟ್ ಸ್ವಾಹಾ ॥ [ಕಾಮರತ್ನ ತಂಡ್ರ, ಬೀಜಮಂ ೪]

ಮತ್ತು ಮಾರಣ, ಮೋಹನ, ಉಚ್ಚಾಟನ, ವಿದ್ವೇಷಣ, ವಶೀಕರಣ ಮೊದಲಾದ ಪ್ರಯೋಗಗಳನ್ನು ಮಾಡುತ್ತಾರೆ. ಅದು ಮಂತ್ರದಿಂದಂತೂ ಏನೂ ಆಗುವುದಿಲ್ಲ; ಆದರೆ ಕ್ರಿಯೆಯಿಂದ ಎಲ್ಲವನ್ನೂ ಮಾಡುತ್ತಾರೆ. ಯಾರನ್ನಾದರೂ ಸಾಯಿಸುವ ಪ್ರಯೋಗವನ್ನು ಮಾಡುವಾಗ, ಇತ್ತ ಮಾಡಿಸುವವನಿಂದ ಹಣವನ್ನು ತೆಗೆದುಕೊಂಡು, ಯಾವನನ್ನು ಕೊಲ್ಲಬಯಸುತ್ತಾರೋ, ಅವನ ಹಿಟ್ಟಿನ ಅಥವಾ ಮಣ್ಣಿನ ಗೊಂಬೆಯನ್ನು ಮಾಡುತ್ತಾರೆ. ಅದರ ಎದೆ, ಹೊಕ್ಕಳು, ಕುತ್ತಿಗೆ ಇವುಗಳಿಕೆ ಚೂರಿಯನ್ನು ತೂರಿಸುತ್ತಾರೆ; ಕಣ್ಣು, ಕೈಗಳು ಮತ್ತು ಕಾಲುಗಳಿಗೆ ಮೊಳೆ ಹೊಡೆಯುತ್ತಾರೆ. ಅದರ ನಂತರ, ಭೈರವನ ಅಥವಾ ದುರ್ಗೆಯ ಪ್ರತಿಮೆಯನ್ನು ಮಾಡಿ, ಕೈಯಲ್ಲಿ ತ್ರಿಶೂಲವಿತ್ತು, ಅದರ ಹೃದಯದ ಮೇಲೆ ಚುಚ್ಚಿಸುತ್ತಾರೆ. ಒಂದು ವೇದಿಯನ್ನು ನಿರ್ಮಿಸಿ, ಮಾಂಸ—ಮೊದಲಾದುವುಗಳ ಹೋಮವನ್ನು ಮಾಡತೊಡಗುತ್ತಾರೆ ಮತ್ತು ಅತ್ತ ದೂತರು ಮೊದಲಾದವರನ್ನು ಕಳುಹಿಸಿ, ಅವನನ್ನು ವಿಷ ಮೊದಲಾದುವುಗಳಿಂದ ಸಾಯಿಸುವ ಉಪಾಯವನ್ನು ಮಾಡುತ್ತಾರೆ. ತಮ್ಮ ಪುರಶ್ಚರಣದ ನಡುವೆ ಅವನನ್ನು ಸಾಯಿಸಿಬಿಟ್ಟರೆ, ತಮ್ಮನ್ನು ಭೈರವನ ಮತ್ತು ದೇವಿಯ ಸಿದ್ಧಿಯಿಳ್ಳವರು ಎಂದು ಹೇಳಿಕೊಳ್ಳುತ್ತಾರೆ. " ಭೈರವೋ ಭೂತನಾಥಶ್ಚ " ಮೊದಲಾದುವುಗಳನ್ನು ಪಠಿಸುತ್ತಾರೆ.

ಮಾರಯ ಮಾರಯ, ಉಚ್ಚಾಟಯ ಉಚ್ಚಾಟಯ, ವಿದ್ವೇಷಯ ವಿದ್ವೇಷಯ, ಛಿಂಧಿ ಛಿಂಧಿ, ಭಿಂಧಿ ಭಿಂಧಿ, ವಶೀಕುರು ವಶೀಕುರು„ ಖಾದಯ ಖಾದಯ, ಭಕ್ಷಯ ಭಕ್ಷಯ,

ತ್ರೋಟಯ ತ್ರೋಟಯ, ನಾಶಯ ನಾಶಯ, ಮಮ ಶತ್ರೂನ್ ವಶೀಕುರು ವಶೀಕುರು ಹುಂ ಫಟ್ ಸ್ವಾಹಾ ॥

[ಕಾಮರತ್ನತಂತ್ರ, ಉಚ್ಚಾಟನಪ್ರಕರಣ, ಮಂ. ೫-೭]

ಈ ಮೊದಲಾದ ಮಂತ್ರಗಳನ್ನು ಜಪಿಸುತ್ತಾರೆ; ಮದ್ಯ ಮಾಂಸ ಮೊದಲಾದುವನ್ನು ಯಥೇಷ್ಟವಾಗಿ ತಿನ್ನುತ್ತಾರೆ-ಕುಡಿಯುತ್ತಾರೆ; ಹುಬ್ಬುಗಳ ನಡುವೆ ಕುಂಕುಮದ ಗೆರೆಯನ್ನಿಟ್ಟುಕೊಳ್ಳುತ್ತಾರೆ; ಒಂದೊಂದು ಸಲ ಕಾಳಿ ಮೊದಲಾದವರಿಗಾಗಿ ಯಾವನಾದರೂ ಮನುಷ್ಯನನ್ನು ಹಿಡಿದು, ಕೊಂದು, ಹೋಮಮಾಡಿ, ಅವನ ಮಾಂಸವನ್ನು ಕೊಂಚ ಕೊಂಚ ತಿಂದೂ ತಿನ್ನುತ್ತಾರೆ. ಯಾವನಾದರೂ ಭೈರವೀ ಚಕ್ರಕ್ಕೆ ಹೋಗಿ, ಮದ್ಯ-ಮಾಂಸಗಳನ್ನು ಕುಡಿಯದೆ ತಿನ್ನದೇ ಇದ್ದರೆ, ಅವನನ್ನು ಕೊಂದು ಹೋಮಮಾಡಿಬಿಡುತ್ತಾರೆ. ಅವರಲ್ಲಿ ಅಘೋರಿಯಾಗಿರುವವನು ಸತ್ತಮನುಷ್ಯನ ಮಾಂಸವನ್ನೂ ಕೂಡ ತಿನ್ನುತ್ತಾನೆ. ಅಜರೀವಜರೀ ಮಾಡುವವರು ಮಲ-ಮೂತ್ರಗಳನ್ನೂ ಸಹ ತಿನ್ನುತ್ತಾರೆ, ಕುಡಿಯುತ್ತಾರೆ.

ಒಂದು ಚೋಲೀ ಮಾರ್ಗ; ಎರಡನೆಯದಾಗಿ ಬೀಜಮಾರ್ಗಿಗಳೂ ಕೂಡ ಇರುತ್ತಾರೆ. ಚೋಲೀಮಾರ್ಗದವರು ಒಂದು ಗುಪ್ತವಾದ ಸ್ಥಳದಲ್ಲಿ ಅಥವಾ ನೆಲದಲ್ಲಿ ಒಂದು ಜಾಗಮಾಡಿಕೊಳ್ಳುತ್ತಾರೆ. ಅಲ್ಲಿ ಎಲ್ಲರ ಸ್ತ್ರೀಯರು, ಪುರುಷರು, ಹುಡುಗರು, ಹುಡುಗಿಯರು, ಸೋದರಿಯರು, ಮಾತೆಯರು, ಸೊಸೆಯರು ಮೊದಲಾದವರೆಲ್ಲಾ ಒಟ್ಟುಗೂಡಿ, ಎಲ್ಲರೂ ಒಟ್ಟಾಗಿ ಮಾಂಸವನ್ನು ತಿನ್ನುತ್ತಾರೆ; ಹೆಂಡವನ್ನು ಕುಡಿಯುತ್ತಾರೆ. ಒಬ್ಬಳು ಹೆಂಗಸನ್ನು ಬೆತ್ತಲೆಮಾಡಿ, ಅವಳ ಗುಪ್ತೇಂದ್ರಿಯವನ್ನು ಪುರುಷರೆಲ್ಲರೂ ಪೂಜಿಸುತ್ತಾರೆ ಮತ್ತು ಅವಳಿಗೆ ದುರ್ಗಾದೇವಿ—ಎಂದು ಹೆಸರಿಡುತ್ತಾರೆ. ಒಬ್ಬ ಪುರುಷನನ್ನು ಬೆತ್ತಲೆಮಾಡಿ, ಅವನ ಗುಪ್ತೇಂದ್ರಿಯವನ್ನು ಸ್ತ್ರೀಯರೆಲ್ಲರೂ ಪೂಜಿಸುತ್ತಾರೆ. ಮಧ್ಯಪಾನ ಮಾಡಿಮಾಡಿ ಉನ್ಮತ್ತರಾಗಿ ಹೋದಾಗ, 'ಚೋಲೀ' ಎಂದು ಕರೆಯುವ ಸ್ತ್ರೀಯರ ಎದೆಯವಸ್ತ್ರ (ಕುಪ್ಪಸ)ವನ್ನು ಒಂದು ದೊಡ್ಡ ಮಣ್ಣಿನ ಗಡಿಗೆಯಲ್ಲಿ ಒಟ್ಟು ಸೇರಿಸಿಯಿಟ್ಟು, ಒಬ್ಬೊಬ್ಬ

ಪುರುಷನೂ ಅದರಲ್ಲಿ ಕೈಹಾಕಿ ತೆಗೆದುಕೊಳ್ಳುತ್ತಾನೆ; ಯಾವನ ಕೈಗೆ ಯಾವಳ ಕುಪ್ಪಸ ಬರುವದೋ, ಅವಳು ತಾಯಿ, ಸೋದರಿ, ಮಗಳು ಅಥವಾ ಸೊಸೆಯಾಗಿರಲೊಲ್ಲಳೇಕೆ, ಆ ಕಾಲಕ್ಕೆ ಅವನ ಪತ್ನಿಯಾಗಿಹೋಗುತ್ತಾಳೆ; ತಮ್ಮತಮ್ಮಲ್ಲಿ ಕುಕರ್ಮಮಾಡುವುದರಿಂದ ಮತ್ತು ಬಹಳ ಅಮಲೇರುವುದರಿಂದ ಎಕ್ಕಡ ಮೊದಲಾದುವುಗಳಿಂದಲೂ ಹೊಡೆದಾಡುತ್ತಾರೆ; ಹೊಯ್ದಾಡುತ್ತಾರೆ. ಬೆಳಗ್ಗೆ ಸ್ವಲ್ಪ ಕತ್ತಲಿರುವಾಗ ತಮ್ಮ ತಮ್ಮ ಮನೆಗಳಿಗೆ ಹೊರಟುಹೋದಮೇಲೆ, ತಾಯಿ ತಾಯಿಯೂ, ಮಗಳು ಮಗಳೂ, ಸೋದರಿಯು ಸೋದರಿಯೂ, ಮತ್ತು ಸೊಸೆಯು ಸೊಸೆಯಾಗಿ ಆಗಿಹೋಗುತ್ತಾರೆ; ಮತ್ತು ಬೀಜಮಾರ್ಗಿಗಳು ಸ್ತ್ರೀ-ಪುರುಷ ಸಮಾಗಮಮಾಡಿ, ನೀರಿನಲ್ಲಿ ವೀರ್ಯವನ್ನು ಹಾಕಿ, ಬೆರೆಸಿ ಕುಡಿಯುತ್ತಾರೆ. ಈ ಪಾಮರರು ಇಂತಹ ಕರ್ಮಗಳನ್ನು ಮುಕ್ತಿಯ ಸಾಧನಗಳೆಂದು ತಿಳಿಯುತ್ತಾರೆ. ವಿದ್ಯೆ, ವಿಚಾರ, ಸೌಜನ್ಯ ಮೊದಲಾದುವುಗಳಿಂದ ರಹಿತರಾಗಿರುತ್ತಾರೆ.

ಪ್ರಶ್ನೆ :—ಶೈವಮತದವರಾದರೂ ಒಳ್ಳೆಯವರಾಗಿರುತ್ತಾರೋ?

ಉತ್ತರ :—ಒಳ್ಳೆಯವರೆಲ್ಲಿಂದ ಆಗುತ್ತಾರೆ? "ಪ್ರೇತನಾಥನಂತೆ ಭೂತನಾಥ!" ವಾಮಮಾರ್ಗಿಗಳು ಮುಂತ್ರೋಪದೇಶ—ಮೊದಲಾದುವುಗಳಿಂದ ಅವರ ಧನವನ್ನು ಕಸಿಯುವಂತೆ, ಶೈವರೂ ಕೂಡ "ಓಂ ನಮಃ ಶಿವಾಯ" ಮೊದಲಾದ ಪಂಚಾಕ್ಷರ ಮುಂತಾದ ಮಂತ್ರಗಳನ್ನು ಪದೇಶಿಸುತ್ತಾರೆ; ರುದ್ರಾಕ್ಷ-ಭಸ್ಮಧಾರಣೆ ಮಾಡುತ್ತಾರೆ; ಮಣ್ಣಿನ ಮತ್ತು ಕಲ್ಲು ಮೊದಲಾದುವುಗಳ ಲಿಂಗಗಳನ್ನು ಮಾಡಿ ಪೂಜಿಸುತ್ತಾರೆ. ಮತ್ತು "ಹರಹರ ಬಂ ಬಂ" ಮತ್ತು ಹೋತನ ಕೂಗಿನಂತೆ ಬಾಯಿನಿಂದ "ಬಡ ಬಡ ಬಡ" ಎಂಬ ಶಬ್ದವನ್ನು ಮಾಡುತ್ತಾರೆ. ಅದಕ್ಕೆ ಹೀಗೆ ಕಾರಣವನ್ನು ಹೇಳುತ್ತಾರೆ:—ಚಪ್ಪಾಳೆ ಹೊಡೆಯುವುದರಿಂದ ಮತ್ತು ಬಂ ಬಂ ಶಬ್ದವನ್ನು ಉಚ್ಚರಿಸುವುದರಿಂದ ಪಾರ್ವತಿಯು ಪ್ರಸನ್ನಳೂ ಮತ್ತು ಮಹಾದೇವನು ಅಪ್ರಸನ್ನನೂ ಆಗುತ್ತಾರೆ; ಏಕೆಂದರೆ—ಭಸ್ಮಾಸುರನ ಎದುರಿನಿಂದ ಮಹಾದೇವನು ಓಡಿಹೋಗಿದ್ದಾಗ, ಬಂ ಬಂ ಶಬ್ದವೂ, ಹಾಸ್ಯದ ಚಪ್ಪಾಳೆ ಶಬ್ದಗಳೂ ಆಗಿದ್ದುವು. ಮತ್ತು ಕೆನ್ನೆತಟ್ಟಿಕೊಂಡು ಶಬ್ದ

ಮಾಡುವುದರಿಂದ ಪಾರ್ವತಿಯು ಅಪ್ರಸನ್ನಳೂ ಮತ್ತು ಮಹಾದೇವನು ಪ್ರಸನ್ನನೂ ಆಗುತ್ತಾರೆ. ಏಕೆಂದರೆ—ಪಾರ್ವತಿಯ ತಂದೆಯಾದ ದಕ್ಷಪ್ರಜಾಪತಿಯ ತಲೆಯನ್ನು ಕತ್ತರಿಸಿ, ಬೆಂಕಿಗೆ ಹಾಕಿ, ಅವನ ಮುಂಡದ ಮೇಲೆ ಹೋತನ ತಲೆಯನ್ನು ಹೊಂದಿಸಿದ್ದನು. ಹೋತನ ಕೂಗಿನಂತೆ ಕೆನ್ನೆಒಡೆದುಕೊಳ್ಳುವುದನ್ನು ಅದರ ಅನುಕರಣವೆಂದು ತಿಳಿಯುತ್ತಾರೆ. ಶಿವರಾತ್ರಿ ಪ್ರದೋಷವ್ರತವನ್ನು ಮಾಡುತ್ತಾರೆ. ಈ ಮೊದಲಾದುವುಗಳಿಂದ ಮುಕ್ತಿಯಾಗುವುದೆಂದು ಒಪ್ಪುತ್ತಾರೆ. ಆದುದರಿಂದ ಹೇಗೆ ವಾಮಮಾರ್ಗಿಗಳು ಭ್ರಾಂತರಾಗಿದ್ದಾರೋ, ಹಾಗೆ ಶೈವರೂ ಕೂಡ. ಇವರಲ್ಲಿ ವಿಶೇಷವಾಗಿ ಛಿದ್ರಕರ್ಣರು, ನಾಥರು, ಗಿರಿಗಳು, ಪುರಿಗಳು, ವನಗಳು, ಅರಣ್ಯರು, ಪರ್ವತರು, ಸಾಗರರು ಮತ್ತು ಗೃಹಸ್ಥರೂ ಕೂಡ ಶೈವರಾಗಿರುತ್ತಾರೆ. ಕೆಲಕೆಲವರು "ಎರಡು ಕುದುರೆಗಳ ಮೇಲೂ ಹತ್ತುತ್ತಾರೆ." ಅಂದರೆ ವಾಮ ಮತ್ತು ಶೈವ—ಎರಡು ಮತಗಳನ್ನೂ ಒಪ್ಪುತ್ತಾರೆ. ಮತ್ತೆ ಎಷ್ಟೋ ಮಂದಿ ವೈಷ್ಣವರಾಗಿಯೂ ಇರುತ್ತಾರೆ.

ಅಂತಃಶಾಕ್ತಾ ಬಹಿಃ ಶೈವಾಃ ಸಭಾಮಧ್ಯೇಚ ವೈಷ್ಣವಾಃ ।
ನಾನಾರೂಪಧರಾಃ ಕೌಲಾ ವಿಚರಂತಿ ಮಹೀತಲೇ ॥

ಇದು ಅವರ ತಂತ್ರದ ಶ್ಲೋಕ. ಒಳಗೆ ಶಾಕ್ತರು—ಅಂದರೆ ವಾಮಮಾರ್ಗಿಗಳೂ; ಹೊರಗೆ ಶೈವರು ಅಂದರೆ ರುದ್ರಾಕ್ಷಭಸ್ಮ ಧಾರಣೆ ಮಾಡುತ್ತಾರೆ; ಮತ್ತು ಸಭೆಯಲ್ಲಿ "ವೈಷ್ಣವರು ನಾವು ವಿಷ್ಣುವಿನ ಉಪಾಸಕರು." ಎಂದು ಹೇಳಿಕೊಳ್ಳುತ್ತಾರೆ. ಹೀಗೆ ನಾನಾ ಪ್ರಕಾರವಾದ ರೂಪಗಳನ್ನು ಧರಿಸಿ ವಾಮಮಾರ್ಗಿಗಳು ಪೃಥಿವಿಯಲ್ಲಿ ವಿಚರಿಸುತ್ತಾರೆ.

ಪ್ರ :—ವೈಷ್ಣವರಾದರೂ ಒಳ್ಳೆಯವರೊ?

ಉತ್ತರ :—ಏನು ಮಣ್ಣು ಒಳ್ಳೆಯವರು! ಹೇಗೆ ಅವರೋ, ಹಾಗೆ ಇವರು! ನೋಡಿರಿ, ವೈಷ್ಣವರ ಲೀಲೆಯನ್ನು—ತಮ್ಮನ್ನು ವಿಷ್ಣುವಿನ ದಾಸರೆಂದು ತಿಳಿಯುತ್ತಾರೆ. ಅವರಲ್ಲಿ ಚಕ್ರಾಂಕಿತರಾದ ಶ್ರೀವೈಷ್ಣವರು ತಮ್ಮನ್ನು ಎಲ್ಲರಿಗಿಂತ ಉಚ್ಚರೆಂದು ತಿಳಿದುಕೊಳ್ಳುತ್ತಾರೆ. ಹಾಗೇನೂ ಇಲ್ಲ!

ಪ್ರಶ್ನೆ :—ಏಕೆ? ಎಲ್ಲವೂ ಏನೂ ಇಲ್ಲವೇ? ಎಲ್ಲವೂ ಇದೆ ನೋಡಿರಿ! ಹಣೆಯಲ್ಲಿ ನಾರಾಯಣನ ಚರಣಾರವಿಂದದಂತಹ ತಿಲಕ; ಮತ್ತು ನಡುವೆ ಹಳದಿಗೆರೆ "ಶ್ರೀ" ಯಾಗಿರುತ್ತದೆ. ಆದುದರಿಂದ ನಾವು ಶ್ರೀವೈಷ್ಣವರೆನಿಸಿಕೊಳ್ಳುತ್ತೇವೆ. ಒಬ್ಬ ನಾರಾಯಣನನ್ನು ಬಿಟ್ಟು ಬೇರೆ ಯಾವನನ್ನೂ ಒಪ್ಪುವುದಿಲ್ಲ. ಮಹಾದೇವನ ಲಿಂಗದ ದರ್ಶನವನ್ನೂ ಕೂಡ ಮಾಡುವುದಿಲ್ಲ; ಏಕೆಂದರೆ, ನಮ್ಮ ಲಲಾಟದಲ್ಲಿ "ಶ್ರೀ" ವಿರಾಜಮಾನಳಾಗಿದ್ದಾಳೆ; ಅವಳು ಲಜ್ಜಿತೆಯಾಗುತ್ತಾಳೆ. ಆಲಮಂದಾರ ಮೊದಲಾದ ಸ್ತೋತ್ರಗಳನ್ನು ಪಠಿಸುತ್ತೇವೆ. ನಾರಾಯಣನನ್ನು ಮಂತ್ರಪೂರ್ವಕವಾಗಿ ಪೂಜಿಸುತ್ತೇವೆ. ಮಾಂಸವನ್ನು ತಿನ್ನುವುದಿಲ್ಲ; ಮದ್ಯವನ್ನೂ ಕುಡಿಯುವುದಿಲ್ಲ. ಮತ್ತೆ ಉತ್ತಮರೇಕಲ್ಲ?

ಉತ್ತರ :—ಈ ತಿಲಕವನ್ನು ಹರಿಪದಾಕೃತಿಯೆಂದೂ, ಈ ಹಳದಿ ಗೆರೆಯನ್ನು ಶ್ರೀಯೆಂದೂ ಒಪ್ಪುವುದು ವ್ಯರ್ಥ. ಏಕೆಂದರೆ—ಇದಂತೂ ನಿಮ್ಮ ಕೈಯಿನ ಕೃತಿ ಮತ್ತು ಆನೆಯ ಲಲಾಟವನ್ನು ಚಿತ್ರ ವಿಚಿತ್ರವಾಗಿ ಮಾಡುವಂತೆ ಹಣೆಯ ಮೇಲಿನ ಚಿತ್ರ. ನಿಮ್ಮ ಹಣೆಯ ಮೇಲೆ ವಿಷ್ಣುವಿನ ಪದದ ಚಿಹ್ನೆ ಎಲ್ಲಿಂದ ಬಂದಿತು? ಯಾವನಾದರೂ ವೈಕುಂಠಕ್ಕೆ ಹೋಗಿ ವಿಷ್ಣುನ ಪಾದದ ಗುರುತನ್ನು ಹಣೆಯಮೇಲೆ ಮಾಡಿಕೊಂಡು ಬಂದನೇ?

ವಿವೇಕಿ :—ಮತ್ತು "ಶ್ರೀ" ಜಡಳೋ ಚೇತನಳೋ?

ವೈಷ್ಣವ :—ಚೇತನಳು.

ವಿವೇಕಿ :—ಹಾಗಾದರೆ ಈ ಗೆರೆ ಜಡವಾದುದರಿಂದ ಶ್ರೀಯಲ್ಲ. ಶ್ರೀಯು ನಿರ್ಮಿತಳಾದವಳೋ, ಅನಿರ್ಮಿತಳೋ ಎಂದು ನಾವು ಕೇಳುತ್ತೇವೆ. ಅನಿರ್ಮಿತಳಾದರೆ, ಇದು ಶ್ರೀಯಲ್ಲ; ಏಕೆಂದರೆ ಇದನ್ನಾದರೋ ನೀವು ದಿನವೂ ನಿಮ್ಮ ಕೈಯಿಂದ ರಚಿಸುತ್ತೀರಿ. ಇನ್ನು ಶ್ರೀಯಾಗಲಾರಳು. ನಿಮ್ಮ ಲಲಾಟದಲ್ಲಿ ಶ್ರೀಯಿರುವುದಾದರೆ, ಎಷ್ಟೋ ಜನ ವೈಷ್ಣವರ ಮುಖವು ಕೆಟ್ಟದಾಗಿ ಅಂದರೆ ಶೋಭಾರಹಿತವಾಗಿ ಏಕೆ ಕಾಣುತ್ತದೆ? ಲಲಾಟದಲ್ಲಿ ಶ್ರೀ ಮತ್ತು ಮನೆ ಮನೆಯಲ್ಲಿ ಭಿಕ್ಷೆಬೇಡುತ್ತಾ ಮತ್ತು ಅನ್ನದಾನಪಡೆದು ಹೊಟ್ಟೆತುಂಬಿಸಿಕೊಳ್ಳುತ್ತಾ ಏಕೆ ಅಲೆಯುತ್ತೀರಿ? ಕಪಾಲದಲ್ಲಿ ಶ್ರೀ ಮತ್ತು ಮಹಾ

ದರಿದ್ರರ ಕಾರ್ಯ—ಇದು ದುರಾಗ್ರಹಿಗಳೂ, ನಿರ್ಲಜ್ಜರೂ ಆದವರ ಮಾತು.

ಇವರಲ್ಲಿ " ಪರಕಾಲ " ನೆಂಬ ಒಬ್ಬ ವೈಷ್ಣವ ಭಕ್ತನಿದ್ದನು. ಅವನು ಕಳುವು, ದರೋಡೆಮಾಡಿ, ಛಲಕಪಟನಡೆಸಿ, ಪರರ ಧನವನ್ನ ಪಹರಿಸಿ, ವೈಷ್ಣವರ ಬಳಿ ಸಮರ್ಪಿಸಿ, ಪ್ರಸನ್ನನಾಗುತ್ತಿದ್ದನು. ಒಂದು ಸಮಯದಲ್ಲಿ ಅವನಿಗೆ ಸೂರೆಮಾಡಲು ಕಳುವಿನಲ್ಲಿ ಯಾವ ಪದಾರ್ಥವೂ ಸಿಕ್ಕಲಿಲ್ಲ. ವ್ಯಾಕುಲನಾಗಿ ತಿರುಗುತ್ತಿದ್ದನು. ನಾರಾಯಣನು " ನಮ್ಮ ಭಕ್ತನು ದುಃಖಪಡೆಯುತ್ತಾನೆ."—ಎಂದು ತಿಳಿದನು; ಸೇಠರ ಸ್ವರೂಪವನ್ನು ಧರಿಸಿ, ಉಂಗುರ ಮೊದಲಾದ ಒಡವೆಗಳನ್ನು ತೊಟ್ಟು, ರಥದಲ್ಲಿ ಕುಳಿತು ಎದುರಿಗೆ ಬಂದನು. ಆಗಲಾದರೋ ಪರಕಾಲನು ರಥದ ಬಳಿಗೆ ಹೋದನು. ಸೇಠನಿಗೆ—' ಎಲ್ಲಾ ವಸ್ತುಗಳನ್ನೂ ಬೇಗ ತೆಗೆದುಬಿಡು; ಇಲ್ಲವಾದರೆ ಕೊಂದುಹಾಕುವೆನು ' ಎಂದು ಹೇಳಿದನು. ತೆಗೆಯುತ್ತಾ ಉಂಗುರ ಕಳಚುವುದರಲ್ಲಿ ತಡವಾಯಿತು. ಪರಕಾಲನು ನಾರಾಯಣನ ಬೆರಳನ್ನು ಕತ್ತರಿಸಿ, ಉಂಗುರವನ್ನು ತೆಗೆದುಕೊಂಡನು. ನಾರಾಯಣನು ಬಹಳ ಪ್ರಸನ್ನನಾಗಿ, ಚತುರ್ಭುಜಶರೀರವನ್ನು ಧರಿಸಿ, ದರ್ಶನವಿತ್ತನು; " ನೀನು ನನ್ನ ದೊಡ್ಡ ಪ್ರಿಯಭಕ್ತನು; ಏಕೆಂದರೆ ಎಲ್ಲಾ ಧನವನ್ನೂ ಹೊಡೆದು, ಸೂರೆಗೈದು, ಕದ್ದು, ವೈಷ್ಣವರ ಸೇವೆ ಮಾಡುತ್ತೀಯೆ. ಆದುದರಿಂದ ನೀನು ಧನ್ಯನು "—ಎಂದು ಹೇಳಿದನು. ಮತ್ತು ಅವನು ಹೋಗಿ ವೈಷ್ಣವರ ಬಳಿ ಎಲ್ಲಾ ಒಡವೆಗಳನ್ನೂ ಅರ್ಪಿಸಿಬಿಟ್ಟನು. ಒಂದುಸಲ ಯಾವನೋ ಸಾಹುಕಾರನು ಪರಕಾಲನನ್ನು ಸೇವಕನನ್ನಾಗಿ ಮಾಡಿಕೊಂಡು, ಹಡಗಿನಲ್ಲಿ ಕೂಡಿಸಿ, ದೇಶಾಂತರಕ್ಕೆ ಕರೆದೊಯ್ದನು. ಅಲ್ಲಿಂದ ಹಡಗಿನಲ್ಲಿ ಅಡಿಕೆಯನ್ನು ತುಂಬಿದನು. ಪರಕಾಲನು ಒಂದು ಅಡಿಕೆಯನ್ನು ಮುರಿದು ಅರ್ಧ ತುಂಡು ಮಾಡಿ ವರ್ತಕನಿಗೆ—" ಈ ನನ್ನ ಅರ್ಧ ಅಡಿಕೆಯನ್ನು ಹಡಗಿನಲ್ಲಿಟ್ಟುಬಿಡು, ಮತ್ತು " ಹಡಗಿನಲ್ಲಿ ಅರ್ಧ ಅಡಿಕೆ ಪರಕಾಲನದು " ಎಂದು ಬರೆದುಕೊಡು—ಎಂದು ಹೇಳಿದನು. ವರ್ತಕನು—" ಬೇಕಾದರೆ ನೀನು ಸಾವಿರ ಅಡಿಕೆ ತೆಗೆದುಕೊಂಡುಬಿಡು "—ಎಂದನು. ಪರಕಾಲನು—" ಸುಳ್ಳು ಸುಳ್ಳೇ ತೆಗೆದುಕೊಂಡುಬಿಡುವುದಕ್ಕೆ ನಾವು

ಅಥವಿರ್ಗಳಲ್ಲ. ನಮಗಂತೂ ಅರ್ಥ ಬೇಕು.''—ಎಂದನು. ಸರಳ ಸ್ವಭಾವದವನಾಗಿದ್ದ ಬಡಪಾಯಿ ವರ್ತಕನು ಬರೆದು ಕೊಟ್ಟನು. ತನ್ನ ದೇಶದ ಬಂದರಿಗೆ ಹಡಗು ಬಂದು, ಅಡಿಕೆಯನ್ನಿಳಿಸುವ ಸಿದ್ಧತೆಯಾದಾಗ, ಪರಕಾಲನು ' ನಮ್ಮ ಅರ್ಥ ಅಡಿಕೆಯನ್ನು ಕೊಟ್ಟುಬಿಡು ''—ಎಂದನು. ವರ್ತಕನು ಅದೇ ಅರ್ಥ ಅಡಿಕೆಯನ್ನು ಕೊಡತೊಡಗಿದನು. ಆಗ ಪರಕಾಲನು—" ನನ್ನದಂತೂ ಹಡಗಿನಲ್ಲಿ ಅರ್ಥ ಅಡಿಕೆಯಿದೆ. ಅರ್ಥ ಹಂಚಿಕೊಳ್ಳುವೆನು "—ಎಂದು ಜಗಳವಾಡಹತ್ತಿದನು. ಜಗಳವು ರಾಜಪುರುಷರವರೆಗೆ ಹೋಯಿತು. ಪರಕಾಲನು—" ಇವನು ಅರ್ಥ ಅಡಿಕೆ ಕೊಡುವುದಾಗಿ ಬರೆದಿದ್ದಾನೆ " ಎಂದು ವರ್ತಕನ ಪತ್ರವನ್ನು ತೋರಿಸಿದನು. ವರ್ತಕನು ಬಹಳವಾಗಿ ಹೇಳುತ್ತಲೇ ಇದ್ದನು; ಆದರೆ ಅವನು ಒಪ್ಪಲಿಲ್ಲ. ಅರ್ಥ ಅಡಿಕೆಯನ್ನು ತೆಗೆದುಕೊಂಡು ವೈಷ್ಣವರಿಗೆ ಅರ್ಪಿಸಿಬಿಟ್ಟನು. ಆಗಲಂತೂ ವೈಷ್ಣವರು ಬಹಳ ಪ್ರಸನ್ನರಾದರು. ಈಗಿನವರೆಗೂ ಆ ದರೋಡೆಕೋರನೂ, ಕಳ್ಳನೂ ಆದ ಪರಕಾಲನ ವಿಗ್ರಹವನ್ನು ದೇವಾಲಯಗಳಲ್ಲಿಡುತ್ತಾರೆ. ಈ ಕಥೆಯನ್ನು ಭಕ್ತಮಾಲದಲ್ಲಿ ಬರೆದಿದ್ದಾರೆ. ವೈಷ್ಣವರು, ಅವರ ಸೇವಕರು ಮತ್ತು ನಾರಾಯಣ—ಈ ಮೂವರೂ ಕಳ್ಳರ ಗುಂಪಿನವರು ಹೌದೋ ಅಲ್ಲವೋ, ಬುದ್ಧಿವಂತರು ನೋಡಿಕೊಳ್ಳಲಿ. ಮತಮತಾಂತರಗಳಲ್ಲಿ ಯಾವನಾದರೂ ಸ್ವಲ್ಪ ಒಳ್ಳೆಯವನೂ ಸಹ ಆಗಬಹುದು; ಆದರೂ ಆ ಮತದಲ್ಲಿದ್ದು ಸರ್ವಥಾ ಒಳ್ಳೆಯವನಾಗಲಾರನು. ಈಗ ವೈಷ್ಣವರಲ್ಲಿ ಹೇಗೆ ಒಡಕು-ಮುರುಕುಗಳಿವೆಯೋ ನೋಡಿರಿ. ರಾಮಾನಂದಿಗಳು ಮಗ್ಗುಲಿನಲ್ಲಿ ಗೋಪೀಚಂದನ ಮತ್ತು ನಡುವೆ ಕೆಂಪುರೇಖೆಯನ್ನೂ, ನೀಮಾವತರು ಎರಡು ತೆಳ್ಳನೆಯ ಗೆರೆಗಳು ಮತ್ತು ನಡುವೆ ಕಪ್ಪು ಚುಕ್ಕೆಯನ್ನೂ, ಮಾಧ್ವರು ಕರಿಯ ಗೆರೆಯನ್ನೂ, ಮತ್ತು ಗೌಡಬಂಗಾಳಿಗಳು ಕಟಾರಿಯಂತಹದನ್ನೂ ಮತ್ತು ರಾಮಪ್ರಸಾದೀಯರು ಎರಡು ಚಂದ್ರರೇಖೆಗಳ ಒಂದು ಬಿಳಿಯ ಗುಂಡು ಬೊಟ್ಟನ್ನೂ, ಈ ರೀತಿ ಬೇರೆ ಬೇರೆ ತಿಲಕಗಳನ್ನೂ, ಕಂಠಿಗಳನ್ನೂ ಧರಿಸುತ್ತಾರೆ. ಈ ಮೊದಲಾದ ಇವರ ಕಥನಗಳು ವಿಲಕ್ಷಣವಾಗಿವೆ. ರಾಮಾನಂದಿಗಳು ಕೆಂಪುಗೆರೆಯನ್ನು ನಾರಾಯಣನ

ಹೃದಯದಲ್ಲಿ ಲಕ್ಷ್ಮಿಯ ಚಿಹ್ನೆಯೆಂದೂ, ಗೋಸಾಯಿಗಳು ಶ್ರೀಕೃಷ್ಣನ ಹೃದಯದಲ್ಲಿ ರಾಧೆ ವಿರಾಜಮಾನಳಾಗಿದ್ದಾಳೆ ಎಂದೂ ಈ ಮೊದಲಾಗಿ ಹೇಳುತ್ತಾರೆ.

ಭಕ್ತಮಾಲದಲ್ಲಿ ಒಂದು ಕಥೆ ಬರೆದಿದೆ. ಯಾವನೋ ಒಬ್ಬ ಮನುಷ್ಯನು ಒಂದು ಮರದ ಕೆಳಗೆ ನಿದ್ರಿಸುತ್ತಿದ್ದನು. ನಿದ್ರಿಸುತ್ತ ನಿದ್ರಿಸುತ್ತಲೇ ಸತ್ತುಹೋದನು. ಮೇಲಿನಿಂದ ಕಾಗೆಯು ಮಲವಿಸರ್ಜನೆ ಮಾಡಿಬಿಟ್ಟಿತು. ಅದು ಹಣೆಯಮೇಲೆ ತಿಲಕಾಕಾರವಾಗಿ ಆಗಿದ್ದಿತು. ಅಲ್ಲಿಗೆ ಯಮನ ದೂತರು ಅವನನ್ನು ಕರೆದೊಯ್ಯಲು ಬಂದರು. ಇಷ್ಟರಲ್ಲಿ ವಿಷ್ಣುವಿನ ದೂತರೂ ಕೂಡ ಬಂದು ಸೇರಿದರು. ಇಬ್ಬರೂ ವಿವಾದ ಮಾಡುತ್ತಿದ್ದರು; ''ಇದು ನಮ್ಮ ಸ್ವಾಮಿಯ ಆಜ್ಞೆ; ನಾವು ಯಮಲೋಕಕ್ಕೆ ಕೊಂಡೊಯ್ಯುವೆವು'' ಎಂದರು ಯಮದೂತರು. ವಿಷ್ಣುವಿನ ದೂತರು—''ವೈಕುಂಠಕ್ಕೆ ಕರೆದೊಯ್ಯಬೇಕೆಂದು ನಮ್ಮ ಸ್ವಾಮಿಯ ಆಜ್ಞೆಯಾಗಿದೆ. ನೋಡಿರಿ, ಇವನ ಹಣೆಯಲ್ಲಿ ವೈಷ್ಣವನ ತಿಲಕವಿದೆ. ನೀವು ಹೇಗೆ ಕರೆದೊಯ್ಯುವಿರಿ?''—ಎಂದು ಹೇಳಿದರು. ಆಗಲಾದರೋ ಯಮನ ದೂತರು ಮೌನಧರಿಸಿ ಹೊರಟುಹೋದರು. ವಿಷ್ಣುದೂತರು ಸುಖದಿಂದ ಅವನನ್ನು ವೈಕುಂಠಕ್ಕೆ ಕರೆದೊಯ್ದರು. ನಾರಾಯಣನು ಅವನನ್ನು ವೈಕುಂಠದಲ್ಲಿರಿಸಿಕೊಂಡನು. ನೋಡಿರಿ, ಅಕಸ್ಮಾತ್ತಾಗಿ ತಿಲಕವುಂಟಾಗುವುದಕ್ಕೇ ಇಂತಹ ಮಾಹಾತ್ಮ್ಯವಿದ್ದರೆ, ತಮ್ಮ ಪ್ರೀತಿಯಿಂದ ಮತ್ತು ತಮ್ಮ ಕೈಯಿಂದ ತಿಲಕವಿಟ್ಟುಕೊಳ್ಳುವವರು ನರಕದಿಂದ ಬಿಡುಗಡೆಯಾಗಿ ವೈಕುಂಠಕ್ಕೆ ಹೋದರೆ, ಇದರಲ್ಲಿ ಆಶ್ಚರ್ಯವೇನು? ನಾವು ''ಚಿಕ್ಕದಾದ ತಿಲಕವಿಟ್ಟುಕೊಳ್ಳುವುದರಿಂದ ವೈಕುಂಠಕ್ಕೆ ಹೋಗುವರಾದರೆ, ಮುಖದ ಮೇಲೆಲ್ಲಾ ಲೇಪನಮಾಡಿಕೊಳ್ಳುವುದರಿಂದ, ಅಥವಾ ಮುಖವನ್ನು ಕಪ್ಪಗೆ ಮಾಡಿಕೊಳ್ಳುವುದರಿಂದ, ಇಲ್ಲವೇ ಶರೀರದ ಮೇಲೆ ಲೇಪನ ಮಾಡಿಕೊಳ್ಳುವುದರಿಂದ ವೈಕುಂಠಕ್ಕಿಂತ ಮುಂದೆ ತೆರಳುತ್ತಾರೋ ಇಲ್ಲವೋ?'' ಎಂದು ಕೇಳುತ್ತೇವೆ. ಆದುದರಿಂದ ಈ ಮಾತುಗಳೆಲ್ಲಾ ವ್ಯರ್ಥ. ಈಗ ಇವರಲ್ಲಿ ಬಹುಮಂದಿ ಖಾವಿಗಳು ಕಟ್ಟಿಗೆಯ ಲಂಗೋಟಿ

ಹಾಕಿಕೊಂಡು, ಬೆಂಕಿಕಾಯಿಸಿಕೊಳ್ಳುತ್ತಾರೆ; ಜಡೆ ಬೆಳೆಸಿಕೊಳ್ಳುತ್ತಾರೆ; ಸಿದ್ಧನ ವೇಷವನ್ನು ಹಾಕಿಕೊಳ್ಳುತ್ತಾರೆ. ಕೊಕ್ಕರೆಗಳಂತೆ ಧ್ಯಾನಾವಸ್ಥಿತರಾಗುತ್ತಾರೆ; ಗಾಂಜಾ, ಭಂಗಿ, ಚರಸುಗಳನ್ನು ಸೇದುತ್ತಾರೆ; ಕಣ್ಣುಗಳನ್ನು ಕೆಂಪಗೆ ಮಾಡಿಕೊಂಡಿರುತ್ತಾರೆ. ಎಲ್ಲರಿಂದಿಲೂ ಚಿಟಿಕೆಚಿಟಿಕೆ ಅನ್ನ, ಹಿಟ್ಟು, ಕವಡೆ, ಕಾಸುಗಳನ್ನು ಬೇಡುತ್ತಾರೆ. ಗೃಹಸ್ಥರ ಮಕ್ಕಳನ್ನು ದಾರಿತಪ್ಪಿಸಿ ಶಿಷ್ಯರನ್ನಾಗಿ ಮಾಡಿಕೊಳ್ಳುತ್ತಾರೆ. ವಿಶೇಷವಾಗಿ ಕೂಲಿಗಾರರೇ ಅವರಲ್ಲಿರುತ್ತಾರೆ. ಯಾವನಾದರೂ ವಿದ್ಯೆ ಕಲಿಯುವುದಾದರೆ, ಅವನನ್ನು ಕಲಿಯಿಲು ಬಿಡುವುದಿಲ್ಲ. ಆದರೆ ಹೀಗೆ ಹೇಳುತ್ತಾರೆ:—

ಪಠಿತವ್ಯಂ ತದಪಿ ಮರ್ತವ್ಯಂ ದಂತಕಟಾಕಟೇತಿ
ಕಿಂ ಕರ್ತವ್ಯಂ ॥

ಸಂತರಿಗೆ ವಿದ್ಯೆ ಕಲಿಯುವುದರಿಂದೇನು ಕೆಲಸ? ಏಕೆಂದರೆ—ವಿದ್ಯೆ ಕಲಿಯುವವರೂ ಸಹ ಸತ್ತುಹೋಗುತ್ತಾರೆ. ಮತ್ತೆ ಹಲ್ಲನ್ನು 'ಕಟಕಟ' ಎನ್ನಿಸಬೇಕೇತಕ್ಕೆ? ಸಾಧುಗಳು ನಾಲ್ಕುಧಾಮಗಳಿಗೆ ತಿರುಗಿ ಬರಬೇಕು; ಸಂತರ ಸೇವೆ ಮಾಡಬೇಕು; ರಾಮರ ಭಜನೆ ಮಾಡಬೇಕು.

ಯಾರಾದರೂ ಮೂರ್ಖ ಅವಿದ್ಯಾಮೂರ್ತಿಯನ್ನು ನೋಡಿಲ್ಲವಾದರೆ, ಖಾಖಿಯ ದರ್ಶನ ಮಾಡಿಬರಲಿ. ಅವರ ಹತ್ತಿರ ಯಾರೇ ಹೋದರೂ, ಅವರು ಖಾಖಿಯ ತಂದೆ-ತಾಯಿಗಳಿಗೆ ಸಮವಾಗಿಯೇ ಇರಲೊಲ್ಲರೇಕೆ, ಅವರನ್ನು 'ಮಗನೇ, ಮಗಳೇ!' ಎಂದು ಕರೆಯುತ್ತಾರೆ. ಖಾಖಿಗಳು ಹೇಗೋ, ಹಾಗೆಯೇ ರೂಂಖಡ, ಸೂಂಖಡ, ಗೋದಡಿಯೇ, ಜಮಾತವಾಲೇ, ಸುತರೇಸಾಯಿಂ ಮತ್ತು ಅಕಾಲೀ, ಕನಫಟೇ, ಜೋಗೀ, ಔಘಡ ಮೊದಲಾದ ಎಲ್ಲರೂ ಒಂದೇ ಬಗೆಯಾಗಿದ್ದಾರೆ. ಖಾಖಿಯ ಶಿಷ್ಯನೊಬ್ಬನು "ಶ್ರೀ ಗಣೇಶಾಯ ನಮಃ" ಎಂಬುವುದನ್ನು ತೊದಲು ತೊದಲಾಗಿ ಉರುಹಾಕುತ್ತಾ ಹಾಕುತ್ತಾ ಬಾವಿಗೆ ನೀರು ತರಲು ಹೋದನು. ಅಲ್ಲಿ ಪಂಡಿತನು ಕುಳಿತಿದ್ದನು. ಅವನು ಆತನು "ಸ್ರೀಗನೇಸಾಜನಮೇ" ಎಂದು ಉರುಹೊಡೆಯುತ್ತಿರು

ವುದನ್ನು ನೋಡಿ, " ಅಯ್ಯಾ ಸಾಧುವೇ ! ಅಶುದ್ಧವಾಗಿ ಗಟ್ಟುಮಾಡುತ್ತೀಯೆ." " ಶ್ರೀ ಗಣೇಶಾಯ ನಮಃ " ಎಂದು ಗಟ್ಟುಮಾಡು, ಎಂದು ಹೇಳಿದನು. ಅವನು ಬೇಗ ತಂಬಿಗೆ ತುಂಬಿಸಿಕೊಂಡು, ಗುರುಗಳ ಹತ್ತಿರ ಹೋಗಿ " ಒಬ್ಬ ಹಾರುವಯ್ಯ ನನ್ನ ಉರುಹೊಡೆಯಾಟವನ್ನು ಅಸುದ್ಧವೆಂದು ಹೇಳುತ್ತಾನೆ " ಎಂದು ಹೇಳಿದನು. ಇದನ್ನು ಕೇಳಿ ಖಾಖಿಯು ಸರ್ರನೆ ಎದ್ದನು; ಬಾವಿಯ ಹತ್ತಿರ ಹೋದನು ಮತ್ತು ಪಂಡಿತನಿಗೆ—" ನೀನು ನನ್ನ ಶಿಷ್ಯನನ್ನು ಮೋಸಪಡಿಸುತ್ತೀಯಾ ? ಗುರುಲಂಠ ! ನೀನೇನು ಓದಿದ್ದೀಯಾ ? ನೋಡು, ನೀನು ಒಂದು ಬಗೆಯ ಪಾಠವನ್ನು ಬಲ್ಲೆ; ನಾವು ಮೂರು ಬಗೆಯದನ್ನು ಬಲ್ಲೆವು. " ಸ್ರೀಗನೇಸಾಜನ್ನಮೇ " " ಸ್ರೀಗನೇಸಾಯನ್ನಮೇ " " ಶ್ರೀ ಗನೇಸಾಯನಮೇ "

ಪಂಡಿತ :—ಕೇಳಿ ಸಾಧುಗಳೇ ! ವಿದ್ಯೆಯ ವಿಷಯ ಬಹು ಕಠಿನ. ಓದದೇ ಬರುವುದಿಲ್ಲ.

ಖಾಖಿ :—ಹೋಗೋ ! ಎಲ್ಲಾ ವಿದ್ವಾಂಸರನ್ನೂ ಅರೆದುಹಾಕಿದೆವು. ಭಂಗಿಯಲ್ಲಿ ತೀಡಿ ಒಂದೇ ಸಲಕ್ಕೆ ಎಲ್ಲರನ್ನೂ ಹಾರಿಸಿಬಿಟ್ಟಿವು. ಸಂತರ ಮನೆ ದೊಡ್ಡದು. ಬೆಪ್ಪಣ್ಣ ನೀನೇನು ಬಲ್ಲೆ ?

ಪಂಡಿತ :—ನೋಡಿರಿ ! ನೀವು ವಿದ್ಯೆಯನ್ನೋದಿದ್ದರೆ, ಇಂತಹ ಅಪಶಬ್ದಗಳನ್ನೇಕೆ ಹೇಳುತ್ತಿದ್ದಿರಿ ? ನಿಮಗೆ ಎಲ್ಲಾ ವಿಧವಾದ ಜ್ಞಾನವೂ ಇರುತ್ತಿತ್ತು.

ಖಾಖಿ :—ಎಲೋ ! ನೀನು ನಮ್ಮ ಗುರುವಾಗುತ್ತೀಯಾ ? ನಿನ್ನ ಉಪದೇಶವನ್ನು ನಾವು ಕೇಳುವುದಿಲ್ಲ.

ಪಂಡಿತ :—ಕೇಳುತ್ತೀರಾದರೂ ಎಲ್ಲಿಂದ ? ಬುದ್ಧಿಯೇ ಇಲ್ಲ ! ಉಪದೇಶವನ್ನು ಆಲಿಸಲೂ, ತಿಳಿದುಕೊಳ್ಳಲೂ ವಿದ್ಯೆಬೇಕು.

ಖಾಖಿ :—ಎಲ್ಲಾ ಶಾಸ್ತ್ರಗಳನ್ನೂ ಓದಿಯೂ ಯಾವನು ಸಂತರನ್ನು ಒಪ್ಪುವುದಿಲ್ಲವೋ, ಅವನು ಏನೇನೂ ಓದಿಲ್ಲವೆಂದು ತಿಳಿ.

ಪಂಡಿತ :—ಹೌದು, ನಾವು ಸಂತರ ಸೇವೆಯನ್ನು ಮಾಡುತ್ತೇವೆ; ಆದರೆ ನಿಮ್ಮಂತಹ ಉಚ್ಛೃಂಖಲರ ಸೇವೆಯನ್ನು ಮಾಡುವು

ದಿಲ್ಲ. ಏಕೆಂದರೆ ಸಜ್ಜನರೂ, ವಿದ್ವಾಂಸರೂ, ಧಾರ್ಮಿಕರೂ, ಪರೋಪಕಾರಿಗಳೂ ಆದ ಪುರುಷರನ್ನು ಸುತರೆನ್ನುತ್ತಾರೆ.

ಖಾಖಿ :—ನೋಡು, ನಾವು ರಾತ್ರಿ ಹಗಲು ಬೆತ್ತಲೆಯಿರುತ್ತೇವೆ; ಬೆಂಕಿಕಾಯಿಸುತ್ತೇವೆ; ಗಾಂಜಾ-ಚರಸುಗಳ ನೂರಾರು ದಮ್ಮುಗಳನ್ನೇರಿಸುತ್ತೇವೆ; ಮೂರು ಮೂರು ತಂಬಿಗೆ ಭಂಗೀ ಕುಡಿಯುತ್ತೇವೆ; ಗಾಂಜಾ, ಭಂಗೀ, ದತ್ತೂರಿ ಎಲೆಗಳ ಪಲ್ಯಮಾಡಿ ತಿನ್ನುತ್ತೇವೆ; ಶಂಖಪಾಷಾಣ ಮತ್ತು ಅಫೀಮನ್ನೂ ಕೂಡ ಗಬಕ್ಕನೆ ನುಂಗಿಬಿಡುತ್ತೇವೆ; ಮತ್ತಿನಲ್ಲಿ ಮುಳುಗಿದವರಾಗಿ, ರಾತ್ರಿ ಹಗಲು ದುಃಖರಹಿತರಾಗಿರುತ್ತೇವೆ; ಪ್ರಪಂಚನನ್ನು ಲೆಕ್ಕಕ್ಕೇ ತರುವುದಿಲ್ಲ; ಭಿಕ್ಷೆಬೇಡಿ, ದಪ್ಪ ರೊಟ್ಟಿ ಬೇಯಿಸಿ ತಿನ್ನುತ್ತೇವೆ; ಹತ್ತಿರ ಮಲಗಿದವನಿಗೂ ಎಂದಿಗೂ ನಿದ್ದೆ ಬಾರದಂತೆ ರಾತ್ರಿಯೆಲ್ಲಾ ಕೆಮ್ಮುಬರುತ್ತದೆ. ಈ ಮೊದಲಾದ ಸಿದ್ಧಿಗಳೂ, ಸಾಧುತ್ವವೂ ನಮ್ಮಲ್ಲಿವೆ. ಮತ್ತು ನೀನು ನಮ್ಮನ್ನೇಕೆ ನಿಂದಿಸುತ್ತೀಯೆ? ಮುಂಕಣ್ಣ! ಎಚ್ಚರಿಕೆ! ನಮ್ಮನ್ನು ಬೇಸರಪಡಿಸಿದರೆ, ನಾವು ನಿನ್ನನ್ನು ಬೂದಿಮಾಡಿಬಿಡುವೆವು.

ಪಂಡಿತ :—ಈ ಎಲ್ಲಾ ಲಕ್ಷಣಗಳೂ ಅಸಾಧುಗಳು, ಮೂರ್ಖರು ಮತ್ತು ಬೆಪ್ಪರವು; ಸಾಧುಗಳವಲ್ಲ. ಕೇಳಿರಿ. "ಸಾಧ್ನೋತಿ ಪರಾಣಿ ಧರ್ಮಕಾರ್ಯಾಣಿ ಸ ಸಾಧುಃ"—ಯಾವನು ಧರ್ಮಯುಕ್ತವಾದ ಉತ್ತಮ ಕಾರ್ಯಗಳನ್ನು ಮಾಡುತ್ತಾನೋ, ಪರೋಪಕಾರದಲ್ಲಿ ತೊಡಗಿರುತ್ತಾನೋ, ಯಾವನಲ್ಲಿ ಯಾವ ದುರ್ಗುಣವೂ ಇರುವುದಿಲ್ಲವೋ, ಯಾವ ವಿದ್ವಾಂಸನು ಸತ್ಯೋಪದೇಶದಿಂದ ಸರ್ವರ ಉಪಕಾರವನ್ನು ಮಾಡುತ್ತಾನೋ, ಅವನನ್ನು ಸಾಧುವೆನ್ನುತ್ತಾರೆ.

ಖಾಖಿ :—ನಡೆಯೋ! ನೀನು ಸಾಧುವಿನ ಕರ್ಮಗಳನ್ನೇನು ಬಲ್ಲೆ? ಸಂತರ ಮನೆ ದೊಡ್ಡದು. ಯಾವ ಸಂತನನ್ನೂ ಕೇಣಕ ಬಾರದು. ಇಲ್ಲದಿದ್ದರೆ ನೋಡು, ಒಂದು ಚಿನುಟವೆತ್ತಿ ಹೊಡೆಯುವನು; ಬುರುಡೆ ಒಡೆಯಿಸಿಕೊಳ್ಳುವೆ!

ಪಂಡಿತ :—ಒಳ್ಳೆಯದು ಖಾಖಿ, ಹೋಗು ನಿನ್ನ ಸ್ಥಳಕ್ಕೆ. ನಮ್ಮ ಮೇಲೆ ಬಹಳ ಮುನಿಯಬೇಡ. ರಾಜ್ಯ ಹೇಗಿದೆ, ಗೊತ್ತೋ?

ಯಾವನನ್ನಾದರೂ ಹೊಡೆಯುವೆಯಾದರೆ, ಹಿಡಿಯಲ್ಪಡುವೆ; ಸೆರೆಯನ್ನನುಭವಿಸುವೆ; ಬೆತ್ತದೇಟು ತಿನ್ನುವೆ, ಅಥವಾ ಯಾವನಾದರೂ ನಿನ್ನನ್ನೂ ಹೊಡೆದುಬಿಟ್ಟರೆ, ಮತ್ತೇನು ಮಾಡುವೆ? ಇದು ಸಾಧುವಿನ ಲಕ್ಷಣವಲ್ಲ.

ಖಾಖಿ :—ನಡೆಯೋ ಶಿಷ್ಯ, ಯಾವ ರಾಕ್ಷಸನ ಮುಖ ತೋರಿಸಿದೆ?

ಪಂಡಿತ :—ನೀನು ಎಂದೂ ಯಾವ ಮಹಾತ್ಮನ ಸಂಗವನ್ನೂ ಮಾಡಿಲ್ಲ; ಇಲ್ಲದಿದ್ದರೆ, ಹೀಗೆ ಜಡಮೂರ್ಖನಾಗಿರುತ್ತಿರಲಿಲ್ಲ.

ಖಾಖಿ :—ನಾವು ಖುದ್ದಾಗಿ ಮಹಾತ್ಮರು. ನಮಗೆ ಬೇರೆ ಯಾವನೊಬ್ಬನ ಗೋಜೂ ಬೇಕಾಗಿಲ್ಲ.

ಪಂಡಿತ :—ಯಾರ ಭಾಗ್ಯ ಹಾಳಾಗಿರುತ್ತದೋ, ಅವರಿಗೆ ನಿನ್ನಂತಹ ಬುದ್ಧಿ ಮತ್ತು ಅಭಿಮಾನವುಂಟಾಗುತ್ತದೆ. ಖಾಖಿಯು ಸ್ಥಾನಕ್ಕೆ ಹೋದನು ಮತ್ತು ಪಂಡಿತನು ಮನೆಗೆ ತೆರಳಿದನು. ಯಾವಾಗ ಸಂಜೆಯ ಆರತಿಯಾಯಿತೋ, ಆಗ ಆ ಖಾಖಿಯನ್ನು ಮುದುಕನೆಂದರಿತು ಬಹುಮಂದಿ ಖಾಖಿಗಳು "ಡಂಡೋತ್, ಡಂಡೋತ್" ಎಂದು ಹೇಳುತ್ತಾ ಸಾಷ್ಟಾಂಗ ಪ್ರಣಾಮ ಮಾಡಿಕುಳಿತರು. ಆ ಖಾಖಿಯು ಕೇಳಿದನು—"ಎಲೋ ರಾಮುದಾಸ! ನೀನೇನು ಓದಿದ್ದೀಯೋ?"

ರಾಮುದಾಸ :—ಮಹಾರಾಜ್! ನಾನು "ಬೇಸ್ನು ಸಹಸರ ನಾಮ"ವನ್ನು ಓದಿದ್ದೇನೆ.

ಖಾಖಿ :—ಎಲೋ ಗೋವಿಂದದಾಸ! ನೀನೇನು ಓದಿದ್ದೀಯೆ?

ಗೋವಿಂದದಾಸ :—ನಾನು "ರಾಮಸತವರಾಜ"ವನ್ನು ಓದಿದ್ದೇನೆ–ಇಂತಹ ಖಾಖಿಗಳ ಹತ್ತಿರ. ಆಗ ರಾಮುದಾಸನು–"ಸ್ವಾಮೀ! ತಾವೇನು ಓದಿದ್ದೀರಿ?" ಎಂದು ಕೇಳಿದನು.

ಖಾಖಿ :—ನಾವು ಗೀತೆ ಓದಿದ್ದೇವೆ.

ರಾಮುದಾಸ :—ಯಾರ ಹತ್ತಿರ?

ಖಾಖಿ :—ಹೋಗೋ ಹೈದ! ನಾವು ಯಾವನನ್ನೂ ಗುರು

ವಾಗಿ ಮಾಡಿಕೊಳ್ಳುವುದಿಲ್ಲ. ನೋಡು, ನಾವು " ಪರಾಗರಾಜ " ದಲ್ಲಿದ್ದೆವು. ನಮಗೆ ಅಕ್ಷರ ಬರುತ್ತಿರಲಿಲ್ಲ. ಯಾವನಾದರೂ ಉದ್ದವಾದ ಧೋತ್ರದ ಪಂಡಿತನನ್ನು ನೋಡಿದಾಗ ಗೀತೆಯ ಕಿರುಹೊತ್ತಿಗೆಯಲ್ಲಿನ " ಈ ಕೊಂಬಿನ ಅಕ್ಷರದ ಹೆಸರೇನು? "—ಎಂದು ಕೇಳುತ್ತಿದ್ದೆ; ಹೀಗೆ ಕೇಳುತ್ತಾ ಕೇಳುತ್ತಾ ಹದಿನೆಂಟು ಅಧ್ಯಾಯ ಗೀತೆಯನ್ನೂ ತೀಡಿಹಾಕಿದೆ; ಗುರು ಒಬ್ಬನನ್ನೂ ಮಾಡಿಕೊಳ್ಳಲಿಲ್ಲ.

ಒಳ್ಳೆಯದು, ಅವಿದ್ಯೆಯು, ಇಂತಹ ವಿದ್ಯೆಯ ಶತ್ರುಗಳನ್ನು ಮನೆಯಾಗಿ ಮಾಡಿಕೊಂಡು ನಿಲ್ಲದಿದ್ದರೆ, ಮತ್ತೆಲ್ಲಿ ಹೋಗಬೇಕು?

ಈ ಜನರು, ಮತ್ತು, ಪ್ರಮಾದ, ಜಗಳ, ತಿನ್ನುವುದು, ನಿದ್ರಿಸುವುದು, ತಾಳಬಾರಿಸುವುದು, ಘಂಟೆ-ಜಾಗಟೆ-ಶಂಖನಾದ ಮಾಡುವುದು, ಬೆಂಕಿಯುರಿ ಹಾಕಿಕೊಂಡಿರುವುದು, ಸ್ನಾನಮಾಡುವುದು, ತೊಳೆಯುವುದು, ಎಲ್ಲಾ ದಿಕ್ಕುಗಳಲ್ಲಿಯೂ ವ್ಯರ್ಥವಾಗಿ ತಿರುಗುತ್ತಿರುವುದು—ಇದನ್ನು ಬಿಟ್ಟು ಬೇರಾವ ಒಳ್ಳೆಯ ಕೆಲಸವನ್ನೂ ಕೊಂಚವೂ ಮಾಡುವುದಿಲ್ಲ. ಯಾವನಾದರೂ ಕಲ್ಲನ್ನು ಬೇಕಾದರೂ ಕರಗಿಸಿಬಿಡಬಹುದು; ಆದರೆ ಈ ಖಾಖಿಗಳ ಆತ್ಮಗಳಿಗೆ ಜ್ಞಾನವನ್ನುಂಟುಮಾಡಿಸುವುದು ಕಠಿಣ; ಏಕೆಂದರೆ—ಬಹುತೇಕವಾಗಿ ಅವರು ಶೂದ್ರವರ್ಣದವರು—ಕೂಲಿಗಾರರು, ರೈತರು, ನೀರುಹೊರುವವರು—ಮೊದಲಾದವರು ತಮ್ಮ ವೃತ್ತಿಗಳನ್ನು ಬಿಟ್ಟು ಕೇವಲ ಬೂದಿಬಳಿದುಕೊಂಡು ವೈರಾಗಿಗಳು, ಖಾಖಿಗಳು—ಮುಂತಾದವರಾಗಿಬಿಡುತ್ತಾರೆ. ಅವರಿಗೆ ವಿದ್ಯೆ ಅಥವಾ ಸತ್ಸಂಗ ಮೊದಲಾದುದರ ಮಹಿಮೆಯು ತಿಳಿದುಬರಲಾರದು. ಇವರಲ್ಲಿ ನಾಥರ ಮಂತ್ರವು—" ನಮಃ ಶಿವಾಯ "—ಎಂಬುದು; ಖಾಖಿಗಳದು—" ನೃಸಿಂಹಾಯ ನಮಃ "—ಎಂಬುದು; ರಾಮಾವತರದು—" ಶ್ರೀರಾಮಚಂದ್ರಾಯ ನಮಃ " ಅಥವಾ " ಸೀತಾರಾಮಾಭ್ಯಾಂ ನಮಃ "—ಎಂಬುದು; ಕೃಷ್ಣೋಪಾಸಕರದು—ಶ್ರೀ ರಾಧಾಕೃಷ್ಣಾಭ್ಯಾಂ ನಮಃ; ನಮೋಭಗವತೇ ವಾಸುದೇವಾಯ "—ಎಂಬುದು; ಮತ್ತು ಬಂಗಾಳಿಗಳದು—" ಗೋವಿಂದಾಯ ನಮಃ "—ಎಂಬುದು. ಈ ಮಂತ್ರಗಳನ್ನು ಕಿವಿಯಲ್ಲಿ ಕೇವಲ ಉಚ್ಚರಿಸುವುದರಿಂದ ಶಿಷ್ಯರನ್ನು ಮಾಡಿಕೊಳ್ಳುತ್ತಾರೆ. ಮತ್ತು

ಈ ಬಗೆಯ ಶಿಕ್ಷಣಗಳನ್ನಿಯುತ್ತಾರೆ :—"ಮಗನೇ! ತಂಬಿಗೆಯು ಮಂತ್ರವನ್ನು ಉಚ್ಚರಿಸು"—

ಜಲ ಪವಿತರ ಸಥಲ ಪವಿತರ ಖೀರ ಪವಿತರ ಕುಆ।
ಶಿವ ಕಹೇ ಸುನ ಪಾರ್ವತೀ ತೂಂಬಾ ಪವಿತರ ಹುಆ॥

ಒಳ್ಳೆಯದು, ಇಂತಹವರಿಗೆ ಸಾಧುಗಳು ಅಥವಾ ವಿದ್ವಾಂಸರಾಗುವ, ಅಥವಾ ಜಗತ್ತಿಗೆ ಉಪಕಾರಮಾಡುವ ಯೋಗ್ಯತೆ ಎಂದಿಗಾದರೂ ಉಂಟಾದೀತೇ? ಖಾಖಿಗಳು ರಾತ್ರಿಹಗಲು ಕೊರಡು-ಬೆರಣಿಗಳನ್ನು ಉರಿಸುತ್ತಿರುತ್ತಾರೆ. ಒಂದು ತಿಂಗಳಿನಲ್ಲಿ ಅನೇಕ ರೂಪಾಯಿಗಳ ಸೌದೆಯನ್ನು ಊದಿಬಿಡುತ್ತಾರೆ. ಒಂದು ತಿಂಗಳಿನ ಸೌದೆಯ ಬೆಲೆಯಿಂದ ಕಂಬಳಿ-ಮೊದಲಾದ ಬಟ್ಟೆಗಳನ್ನು ತೆಗೆದು ಕೊಂಡರೆ, ನೂರನೆಯ ಒಂದು ಅಂಶ ಹಣದಿಂದ ಆನಂದದಿಂದ ಇರಬಹುದು. ಅವರಿಗೆ ಇಷ್ಟು ಬುದ್ಧಿ ಎಲ್ಲಿಂದ ಬರಬೇಕು? ಮತ್ತು ಅದೇ ಬೆಂಕಿಯಲ್ಲಿ ಕಾಯುತ್ತಿರುವುದರಿಂದಲೇ ತಮ್ಮ ಹೆಸರನ್ನು ತಪಸ್ವಿಗಳೆಂದಿಟ್ಟುಕೊಂಡಿದ್ದಾರೆ. ಈರೀತಿ ತಪಸ್ವಿಗಳಾಗಬಹುದಾದರೆ, ಕಾಡುಮನುಷ್ಯರು ಇವರಿಗಿಂತ ಹೆಚ್ಚು ತಪಸ್ವಿಗಳಾದರು. ಜಡೆ ಬೆಳೆಸುವುದರಿಂದಲೂ, ಬೂದಿ ಬಳೆದುಕೊಳ್ಳುವುದರಿಂದಲೂ, ತಿಲಕ ಇಟ್ಟುಕೊಳ್ಳುವುದರಿಂದಲೂ ತಪಸ್ವಿಯಾಗುವುದಾದರೆ, ಎಲ್ಲರೂ ಹಾಗೆ ಮಾಡಬಹುದು. ಇವರು ಹೊರಗಿನಿಂದ ತ್ಯಾಗ ಸ್ವರೂಪರೂ; ಒಳಗಿನಿಂದ ಮಹಾಸಂಗ್ರಹಿಗಳೂ ಆಗಿರುತ್ತಾರೆ.

ಪ್ರಶ್ನೆ:—ಕಬೀರಪಂಥಗಳಾದರೂ ಒಳ್ಳೆಯವರಾಗಿದ್ದಾರೋ?

ಉತ್ತರ:—ಇಲ್ಲ.

ಪ್ರಶ್ನೆ:—ಒಳ್ಳೆಯವರೇಕಲ್ಲ? ಪಾಷಾಣಾದಿ ಮೂರ್ತಿಪೂಜೆಯನ್ನು ಖಂಡಿಸುತ್ತಾರೆ. ಕಬೀರಸಾಹೇಬರು ಹೂವುಗಳಿಂದ ಹುಟ್ಟಿದ್ದರು; ಮತ್ತು ಕೊನೆಯಲ್ಲಿಯೂ ಹೂವಾಗಿಹೋದರು. ಬ್ರಹ್ಮ, ವಿಷ್ಣು, ಮಹೇಶ್ವರರ ಜನನವು ಆಗದಿದ್ದಾಗಲೂ ಸಹ ಕಬೀರಸಾಹೇಬರಿದ್ದರು. ಮಹಾಸಿದ್ಧರು, ಎಂತಹವರೆಂದರೆ—ಯಾವ ಮಾತನ್ನು ವೇದ ಪುರಾಣಗಳೂ ತಿಳಿಯಲಾರವೋ, ಅದನ್ನು ಕಬೀರರು ತಿಳಿಯು

ತ್ತಾರೆ. ಸತ್ಯವಾದ ಮಾರ್ಗವನ್ನು ಕಬೀರರೇ ತೋರಿಸಿದ್ದಾರೆ. ಇವರ ಮಂತ್ರವು '' ಸತ್ಯನಾಮು ಕಬೀರ '' ಮುಂತಾದುವು.

ಉತ್ತರ :—ಕಲ್ಲು ಮೊದಲಾದುವನ್ನು ಬಿಟ್ಟು, ಮಂಚ, ಹಾಸಿಗೆ, ದಿಂಬು, ಹಾವುಗೆ ಜ್ಯೋತಿ—ಅಂದರೆ ದೀಪ ಮೊದಲಾದುವನ್ನು ಪೂಜಿಸುವುದು ಪಾಷಾಣಮೂರ್ತಿ ಪೂಜೆಗಿಂತ ಕಡಿಮೆಯಲ್ಲ. ಹೂವುಗಳಿಂದ ಹುಟ್ಟಲು ಕಬೀರಸಾಹೇಬರು ಗುಂಗಾಡಾಗಿದ್ದರೇ ? ಆಥವಾ ಮೊಗ್ಗಾಗಿದ್ದರೆ? ಮತ್ತು ಕೊನೆಯಲ್ಲಿ ಹೂವಾಗಿ ಹೋದರೇ ? ಇಲ್ಲಿ ಕೇಳಲ್ಪಡುವ ಈ ಮಾತೇ ನಿಜವಾಗಿರಬಹುದು :—ಯಾವನೋ ನೇಯ್ಗೆಯವನು ಕಾಶಿಯಲ್ಲಿ ವಾಸಿಸುತ್ತಿದ್ದನು. ಅವನಿಗೆ ಮಕ್ಕಳು–ಮರಿಗಳಿರಲಿಲ್ಲ. ಒಂದುಸಾರಿ ಸ್ವಲ್ಪ ರಾತ್ರಿಯುಳಿದಿತ್ತು. ಒಂದು ಗಲ್ಲಿಯಲ್ಲಿ ಹೋಗುತ್ತಿದ್ದಾಗ, ರಸ್ತೆಯ ಮಗ್ಗುಲಿನಲ್ಲಿ ಒಂದು ಬುಟ್ಟಿಯಲ್ಲಿ ಹೂವುಗಳ ಮಧ್ಯವಲ್ಲಿ ಅದೇ ರಾತ್ರಿ ಹುಟ್ಟಿದ ಒಂದು ಗಂಡು ಮಗುವಿದ್ದುದನ್ನು ನೋಡಿದನು. ಅವನು ಅದನ್ನು ಎತ್ತಿಕೊಂಡು ಹೋದನು ; ತನ್ನ ಹೆಂಡತಿಗೆ ಕೊಟ್ಟನು. ಅವಳು ಪಾಲನೆಮಾಡಿದಳು. ಅವನು ದೊಡ್ಡವನಾದಾಗ, ನೇಯ್ಗೆಯವನ ಕೆಲಸಮಾಡುತ್ತಿದ್ದನು. ಯಾವನೋ ಪಂಡಿತನ ಹತ್ತಿರ ಸಂಸ್ಕೃತವನ್ನೋದಲು ಹೋದನು ; ಅವನು ಆತನಿಗೆ ಅವಮಾನಮಾಡಿದನು ; '' ನಾವು ನೇಯ್ಗೆಯವನಿಗೆ ಓದಿಸುವುದಿಲ್ಲ.'' ಎಂದು ಹೇಳಿದನು. ಇದೇ ರೀತಿ ಅನೇಕ ಪಂಡಿತರ ಬಳಿಗೆ ತಿರುಗಾಡಿದನು ; ಆದರೆ ಯಾವನೂ ಓದಿಸಲಿಲ್ಲ. ಆಗ ಅಸಂಬದ್ಧವಾಗಿ ಭಾಷೆಯನ್ನು ರಚಿಸಿ, ನೇಯ್ಗೆಯವರು ಮೊದಲಾದ ಕೀಳುಜನರಿಗೆ ಬೋಧನೆಮಾಡತೊಡಗಿದನು. ತಂಬೂರಿ ಬಾರಿಸಿ ಹಾಡುತ್ತಿದ್ದನು ; ಭಜನೆಗಳನ್ನು ರಚಿಸುತ್ತಿದ್ದನು. ವಿಶೇಷವಾಗಿ ಪಂಡಿತರನ್ನೂ, ಶಾಸ್ತ್ರಗಳನ್ನೂ, ವೇದಗಳನ್ನೂ ನಿಂದಿಸುತ್ತಿದ್ದನು. ಹಲ ಮೂರ್ಖ ಜನರು ಅವನ ಬಲೆಯಲ್ಲಿ ಸಿಕ್ಕಿಕೊಂಡರು. ಸತ್ತುಹೋದಾಗ, ಜನರು ಆತನನ್ನು ಸಿದ್ಧನನ್ನಾಗಿ ಮಾಡಿಕೊಂಡರು. ಅವನು ಜೀವಿತನಾಗಿದ್ದಾಗ ರಚಿಸಿದ್ದುದನ್ನು ಅವನ ಶಿಷ್ಯರು ಓದುತ್ತಿದ್ದರು. ಕಿವಿಯನ್ನು ಮುಚ್ಚಿಕೊಂಡರೆ ಯಾವ ಶಬ್ದವು ಕೇಳಲ್ಪಡುತ್ತದೋ ಅದು ಅನಹತಶಬ್ದವೆಂಬ ಸಿದ್ಧಾಂತವನ್ನು ನಿಷ್ಕರ್ಷಿಸಿದರು.

ಮನಸ್ಸಿನ ವೃತ್ತಿಯನ್ನು 'ಸುರತಿ' ಎನ್ನುತ್ತಾರೆ: ಅದನ್ನು ಆ ಶಬ್ದವನ್ನು ಕೇಳುವುದರಲ್ಲಿ ನಿಲ್ಲಿಸುವುದನ್ನೇ ಸಂತನ ಮತ್ತು ಪರಮೇಶ್ವರನ ಧ್ಯಾನವೆಂದು ಹೇಳುತ್ತಾರೆ. ಅಲ್ಲಿ ಕಾಲನು ಸೇರುವುದಿಲ್ಲ. ಭರ್ಜಿಯಂತಹ ತಿಲಕವನ್ನೂ, ಶ್ರೀಗಂಧ ಮೊದಲಾದ ಮರದ ಮಣಿಗಳ ಮಾಲೆಯನ್ನೂ ಧರಿಸಿಕೊಳ್ಳುತ್ತಾರೆ. ಒಳ್ಳೆಯದು, ಇದರಲ್ಲಿ ಆತ್ಮನ ಉನ್ನತಿಯಾಗುವುದೇ ಮತ್ತು ಜ್ಞಾನ ಹೆಚ್ಚಬಲ್ಲದೇ ಎಂದು ಆಲೋಚಿಸಿ ನೋಡಿರಿ. ಇದು ಕೇವಲ ಹುಡುಗರ ಆಟಕ್ಕೆ ಸಮಾನವಾದ ಲೀಲೆ.

ಪ್ರಶ್ನೆ:—ಪಂಜಾಬ್ ದೇಶದಲ್ಲಿ ನಾನಕರವರು ಒಂದು ಪಥವನ್ನು ಹೊರಡಿಸಿದ್ದಾರೆ. ಏಕೆಂದರೆ—ಅವರೂ ಕೂಡ ಮೂರ್ತಿಯನ್ನು ಖಂಡಿಸುತ್ತಿದ್ದರು; ಮುಸಲ್ಮಾನರಾಗುವುದನ್ನು ತಪ್ಪಿಗಟ್ಟಿದರು. ಅವರು ಸಾಧುಗಳೂ ಆಗಲಿಲ್ಲ. ಆದರೆ ಗೃಹಸ್ಥರಾಗಿ ಉಳಿದಿದ್ದರು. ನೋಡಿರಿ, ಅವರು ಈ ಮಂತ್ರವನ್ನು ಉಪದೇಶಿಸಿದ್ದಾರೆ. ಇದರಿಂದಲೇ ಅವರ ಆಶಯವು ಒಳ್ಳೆಯದಾಗಿತ್ತೆಂಬುದು ವಿದಿತವಾಗುತ್ತದೆ.

ಓಂ ಸತ್ಯನಾಮುಕರ್ತಾ ಪುರುಷನಿರ್ಭೋ ನಿರ್ವೈರ ಅಕಾಲ ಮೂರ್ತ ಅಜೋನಿ ಸಹಭಂಗುರು ಪ್ರಸಾದ ಜಪ ಆದಿ ಸಚ ಜುಗಾದಿ ಸಚಹೈಭೀ ಸಚ ನಾನಕ ಹೋಸೀಭೀ ಸಚ ॥ [ಜಪಜೀಪೌಡೀ ೧]

"ಓಂ" ಎಂಬುದು ಯಾವನ ಸತ್ಯವಾದ ಹೆಸರಾಗಿದೆಯೋ, ಅವನು ಕರ್ತನಾದ ಪುರುಷನು; ಭಯ ಮತ್ತು ವೈರರಹಿತನು; ಅಕಾಲಮೂರ್ತಿಯು; ಯಾವನು ಕಾಲದಲ್ಲಿ ಮತ್ತು ಯೋನಿಯಲ್ಲಿ ಸಿಕ್ಕಿಕೊಳ್ಳುವುದಿಲ್ಲವೋ, ಯಾವನು ಪ್ರಕಾಶಮಾನವಾಗಿದ್ದಾನೋ, ಅವನ ಜಪವನ್ನೇ ಗುರುವಿನ ಕೃಪೆಯಿಂದ ಮಾಡು. ಆ ಪರಮಾತ್ಮನು ಆದಿಯಲ್ಲಿ ಸತ್ಯನಾಗಿದ್ದನು; ಯುಗಗಳ ಆದಿಯಲ್ಲಿ ಸತ್ಯನು; ವರ್ತ ವರ್ತಮಾನದಲ್ಲಿ ಸತ್ಯನು; ಮತ್ತು ಸತ್ಯನೂ ಆಗುವನು.

ಉತ್ತರ:—ನಾನಕರ ಆಶಯವೇನೋ ಒಳ್ಳೆಯದಾಗಿತ್ತು; ಆದರೆ ವಿದ್ಯೆ ಸ್ವಲ್ಪವೂ ಇರಲಿಲ್ಲ. ಹೌದು, ಆ ದೇಶದ ಗ್ರಾಮುಗಳ ಭಾಷೆಯನ್ನು ಅರಿತಿದ್ದರು. ವೇದಾದಿಶಾಸ್ತ್ರಗಳನ್ನೂ, ಸಂಸ್ಕೃತವನ್ನೂ

ಸ್ವಲ್ಪವೂ ಅರಿತಿರಲಿಲ್ಲ. ಅರಿತಿದ್ದರೆ, 'ನಿರ್ಭಯ' ಶಬ್ದವನ್ನು 'ನಿರ್ಭೋ' ಎಂದೇಕೆ ಬರೆಯುತ್ತಿದ್ದರು? ಮತ್ತು ಇದಕ್ಕೆ ದೃಷ್ಟಾಂತ ಅವರು ರಚಿಸಿದ ಸಂಸ್ಕೃತ ಸ್ತೋತ್ರ. "ನಾನು ಸಂಸ್ಕೃತದಲ್ಲಿಯೂ ಕಾಲುಹಾಕಬೇಕು"—ಎಂದು ಬಯಸುತ್ತಿದ್ದರು. ಆದರೆ ಓದದೆ ಸಂಸ್ಕೃತ ಹೇಗೆ ಬರಬಲ್ಲದು? ಹೌದು, ಸಂಸ್ಕೃತವನ್ನು ಎಂದೂ ಕೇಳಿಯೂ ಸಹ ಇಲ್ಲದ ಆ ಗ್ರಾಮೀಣರ ಮುಂದೆ, ಸಂಸ್ಕೃತ ರಚಿಸಿ, ಸಂಸ್ಕೃತದ ಪಂಡಿತರೂ ಆಗಿಹೋಗಿರಬಹುದು. ಒಳ್ಳೆಯದು, ತಮ್ಮ ಮಾನಪ್ರತಿಷ್ಠೆ ಮತ್ತು ತಮ್ಮ ಪ್ರಖ್ಯಾತಿಯ ಇಚ್ಛೆಯಿಲ್ಲದಿದ್ದರೆ, ಹೀಗೆಂದಿಗೂ ಮಾಡುತ್ತಿರಲಿಲ್ಲ. ಅವರಿಗೆ ತಮ್ಮ ಪ್ರತಿಷ್ಠೆಯ ಇಚ್ಛೆ ಅವಶ್ಯವಾಗಿತ್ತು; ಇಲ್ಲದಿದ್ದರೆ ಎಂತಹ ಭಾಷೆಯನ್ನು ಅರಿತಿದ್ದರೋ, ಅದನ್ನು ಆಡಿಕೊಂಡಿರುತ್ತಿದ್ದರು ಮತ್ತು ನಾನು ಸಂಸ್ಕೃತವನ್ನೋದಿಲ್ಲವೆಂದೂ ಕೂಡ ಹೇಳಿಬಿಡುತ್ತಿದ್ದರು. ಸ್ವಲ್ಪ ಅಭಿಮಾನವಿದ್ದ ಮೇಲೆ ಮಾನಪ್ರತಿಷ್ಠೆಗಾಗಿ ಕೊಂಚ ದಂಭವನ್ನೂ ಮಾಡಿರಬಹುದು! ಇದೇ ಕಾರಣದಿಂದ ಅವರ ಗ್ರಂಥಗಳಲ್ಲಿ ಅಲ್ಲಲ್ಲಿ ವೇದಗಳ ನಿಂದೆ ಮತ್ತು ಸ್ತುತಿಯೂ ಕೂಡ ಇದೆ. ಏಕೆಂದರೆ–ಹೀಗೆ ಮಾಡದಿದ್ದರೆ, ಅವರನ್ನೂ ಸಹ ಯಾವನಾದರೂ ವೇದದ ಅರ್ಥವನ್ನು ಕೇಳುತ್ತಿದ್ದನು. ಬಾರದಿದ್ದಾಗ ಪ್ರತಿಷ್ಠೆಯು ನಾಶವಾಗುತ್ತಿತ್ತು. ಆದುದರಿಂದ, ಮೊದಲೇ ತಮ್ಮ ಶಿಷ್ಯರ ಮುಂದೆ ಒಂದೊಂದು ಕಡೆ ವೇದಗಳಿಗೆ ವಿರುದ್ಧವಾಗಿ ಮಾತನಾಡುತ್ತಿದ್ದರು. ಮತ್ತು ಒಂದೊಂದು ಕಡೆ ವೇದಗಳ ಬಗ್ಗೆ ಒಳ್ಳೆಯದನ್ನೂ ಹೇಳಿದ್ದಾರೆ. ಏಕೆಂದರೆ—ಎಲ್ಲಿಯೂ ಒಳ್ಳೆಯದನ್ನು ಹೇಳದಿದ್ದರೆ, ಜನರು ಅವರನ್ನು ನಾಸ್ತಿಕರೆಂದು ನಿರ್ಧರಿಸುತ್ತಿದ್ದರು. ಉದಾಹರಣೆಗೆ :—

ವೇದ ಪಢತ ಬ್ರಹ್ಮ ಮುರೇ ಚಾರೋಂ ವೇದ ಕಹಾನಿ।
ಸಂತ (ಸಾಧ) ಕೆ ಮಹಿಮಾ ವೇದ ನ ಜಾನೇ॥

[ಸುಖಮನೀ, ಪೌಡೀ-೭. ಶ್ಲೋ. ೮]

ನಾನಕ ಬ್ರಹ್ಮಜ್ಞಾನೀ ಆಪ ಪರಮೇಶ್ವರ॥

[ಸು. ಪೌ. ೮. ಶ್ಲೋ. ೬]

ವೇದವನ್ನೋದುವವರು ಸತ್ತುಹೋದರು! ಮತ್ತು ನಾನಕ ಮೊದಲಾದವರು ತಮ್ಮನ್ನು ಅಮರರೆಂದು ತಿಳಿಯುತ್ತಿದ್ದರೇ? ಅವರು ಸತ್ತುಹೋಗಲಿಲ್ಲವೇ? ವೇದಗಳಂತೂ ಸರ್ವವಿದ್ಯಾಭಂಡಾರ. ಆದರೆ ಯಾವನು ನಾಲ್ಕು ವೇದಗಳನ್ನೂ ಕತೆಯೆಂದು ಹೇಳುತ್ತಾನೋ, ಅವನ ಮಾತುಗಳೆಲ್ಲಾ ಕತೆಯೇ ಸರಿ. ಮೂರ್ಖರಿಗೆ ಸಂತರೆಂದು ಹೆಸರಾದರೆ, ಆ ಬಡಪಾಯಿಗಳ ವೇದಗಳ ಮಹಿಮೆಯನ್ನೆಂದಿಗೂ ತಿಳಿಯಲಾರರು! ನಾನಕರು ವೇದಗಳನ್ನೇ ಮಾನಿಸಿದ್ದರೆ, ಅವರ ಸಂಪ್ರದಾಯ ಪ್ರಚಲಿತವಾಗುತ್ತಿರಲಿಲ್ಲ; ಅವರು ಗುರುಗಳಾಗಲೂ ಆಗುತ್ತಿರಲಿಲ್ಲ. ಏಕೆಂದರೆ—ಸಂಸ್ಕೃತವಿದ್ಯೆಯನ್ನಂತೂ ಓದಿಯೇ ಇರಲಿಲ್ಲ; ಇನ್ನು ಅನ್ಯರಿಗೆ ಓದಿಸಿ ಶಿಷ್ಯರನ್ನಾಗಿ ಮಾಡಿಕೊಳ್ಳಲು ಹೇಗೆ ಸಾಧ್ಯವಾಗುತ್ತಿತ್ತು? ಯಾವಕಾಲದಲ್ಲಿ ನಾನಕರು ಪಂಜಾಬಿನಲ್ಲಿ ಹುಟ್ಟಿದ್ದರೋ, ಆ ಕಾಲದಲ್ಲಿ ಪಂಜಾಬು ಸಂಸ್ಕೃತ ವಿದ್ಯೆಯಿಂದ ಸರ್ವಥಾರಹಿತವಾಗಿಯೂ, ಮುಸಲ್ಮಾನರಿಂದ ಪೀಡಿತವಾಗಿಯೂ ಇದ್ದಿತು—ಎಂಬುದು ಸತ್ಯ. ಆಗವರು ಹಲಜನರನ್ನು ಉಳಿಸಿದರು. ನಾನಕರೆದುರಿಗೆ ಅವರ ಸಂಪ್ರದಾಯವಾಗಲಿ, ಬಹುಮಂದಿ ಶಿಷ್ಯರಾಗಲೀ ಆಗಿರಲಿಲ್ಲ. ಏಕೆಂದರೆ—ಸತ್ತಮೇಲೆ ಜನರನ್ನು ಸಿದ್ಧಪುರುಷರಾಗಿಮಾಡಿ ಕೂಡಿಸುವುದು ಅವಿದ್ವಾಂಸರಲ್ಲಿ ಒಂದು ನಡತೆಯಾಗಿರುತ್ತದೆ. ಅಮೇಲೆ ಬಹಳ ಮಾಹಾತ್ಮ್ಯವನ್ನು ಕಲ್ಪಿಸಿ, ಈಶ್ವರನಿಗೆ ಸಮಾನವೆಂದು ಅಂಗೀಕರಿಸಿಬಿಡುತ್ತಾರೆ. ಹೌದು. ನಾನಕರು ಬಹಳ ಧನಾಢ್ಯರೂ, ಜಾಗೀರುದಾರರೂ ಕೂಡ ಆಗಿರಲಿಲ್ಲ. ಆದರೆ ಅವರ ಶಿಷ್ಯರು "ನಾನಕಚಂದ್ರೋದಯ" ಮತ್ತು "ಜನ್ಮಸಾಖೀ" ಮೊದಲಾದುವುಗಳಲ್ಲಿ, ದೊಡ್ಡ ಸಿದ್ಧರಾಗಿದ್ದರು ಮಹಾಮಹಾ ಐಶ್ವರ್ಯಶಾಲಿಗಳಾಗಿದ್ದರು—ಎಂದು ಬರೆದಿದ್ದಾರೆ. ನಾನಕರು ಬ್ರಹ್ಮ—ಮೊದಲಾದವರೊಂದಿಗೆ ಭೇಟಿಮಾಡಿದರು; ವಾರ್ತಾಲಾಪವನ್ನು ಮಾಡಿದರು; ಎಲ್ಲರೂ ಇವರನ್ನು ಗೌರವಿಸಿದರು; ನಾನಕರ ವಿವಾಹದಲ್ಲಿ ಚಿನ್ನ, ಬೆಳ್ಳಿ, ಮುತ್ತು, ಪಚ್ಚೆ—ಮೊದಲಾದ ರತ್ನಗಳಿಂದ ಅಲಂಕೃತವಾದ ಬಹಳ ಕುದುರೆಗಳೂ, ರಥಗಳೂ, ಆನೆಗಳೂ ಇದ್ದುವು; ಮತ್ತು ಅಮೂಲ್ಯ ರತ್ನಗಳಿಗೆ ತುದಿಮೊದಲಿರಲಿಲ್ಲ—ಎಂದು

ಬರೆದಿದ್ದಾರೆ. ಒಳ್ಳೆಯದು, ಇವು ಬುರುಡೆಗಳಲ್ಲದಿದ್ದರೆ ಮತ್ತೇನು? ಇದರಲ್ಲಿ ಇವರ ಶಿಷ್ಯರ ದೋಷವಿದೆ; ನಾನಕರದಲ್ಲ. ಎರಡನೆಯುದಾಗಿ, ಅವರನಂತರ, ಅವರ ಮಗನಿಂದ ಉದಾಸೀ ಸಂಪ್ರದಾಯದವರು ಪ್ರಚಲಿತರಾದರು ಮತ್ತು ರಾಮದಾಸ ಮೊದಲಾದವರಿಂದ ನಿರ್ಮಲ ಸಂಪ್ರದಾಯದವರು ಆದರು. ಎಷ್ಟೋ ಜನ ಗುರುಪೀಠಸ್ಥರು ಭಾಷಾರಚನೆಮಾಡಿ ಗ್ರಂಥದಲ್ಲಿಟ್ಟಿದ್ದಾರೆ. ಅಂದರೆ ಗೋವಿಂದ ಸಿಂಹರು ಇವರ ಹತ್ತನೆಯ ಗುರುವಾದರು. ಅವರನಂತರ ಆ ಗ್ರಂಥದಲ್ಲಿ ಯಾರ ಭಾಷೆಯೂ ಸೇರಿಸಲ್ಪಡಲಿಲ್ಲ. ಆದರೆ ಅಲ್ಲಿನವರೆಗಿನ ಎಷ್ಟು ಚಿಕ್ಕ ಚಿಕ್ಕ ಪುಸ್ತಕಗಳಿದ್ದುವೋ, ಅವೆಲ್ಲವನ್ನೂ ಒಟ್ಟಿಗೆ ಸೇರಿಸಿ, ಹೊಲಿಸಿ ರಟ್ಟುಹಾಕಿಸಿಬಿಟ್ಟರು. ಈ ಜನರೂ ಕೂಡ ನಾನಕರ ಬಳಿಕ ಬಹಳ ಭಾಷಾಕೃತಿಗಳನ್ನು ರಚಿಸಿದರು. ಎಷ್ಟೋ ಜನರು ನಾನಾ ಬಗೆಯ ಪುರಾಣಗಳ ಸುಳ್ಳು ಕಥೆಗಳಂತಹುದನ್ನೂ ಬರೆದುಹಾಕಿದರು; ಆದರೆ ಬ್ರಹ್ಮಜ್ಞಾನಿಗಳಾದ ತಾವು ಪರಮೇಶ್ವರರಾಗಿ, ಅದರ ಮೇಲೆ ಕರ್ಮೋಪಾಸನೆಯನ್ನು ಬಿಟ್ಟು, ಇವರ ಶಿಷ್ಯರು ತಗ್ಗುತ್ತಾ ಬಂದರು; ಇದು ಬಹಳ ಕೆಡುಕನ್ನುಂಟುಮಾಡಿತು. ಹಾಗಲ್ಲದೆ, ನಾನಕರು ಬರೆದಿದ್ದ ಈಶ್ವರನ ಭಕ್ತಿವಿಶೇಷವನ್ನು ಪಾಲಿಸಿಕೊಂಡು ಬಂದಿದ್ದರೆ ಚೆನ್ನಾಗಿರುತ್ತಿತ್ತು. ಈಗ ಉದಾಸಿಗಳು "ನಾವು ದೊಡ್ಡವರು" ಎನ್ನುತ್ತಾರೆ; ನಿರ್ಮಲಾಪಂಥದವರು—"ನಾವು ದೊಡ್ಡವರು" ಎನ್ನುತ್ತಾರೆ; ಅಕಾಲಿಗಳು ಮತ್ತು ಸೂತರಹಸಾಯಿಗಳು "ಎಲ್ಲರ ಮೇಲಿನವರು ನಾವು" ಎನ್ನುತ್ತಾರೆ. ಇವರಲ್ಲಿ ಗೋವಿಂದಸಿಂಹರು ಶೂರವೀರರಾಗಿದ್ದರು. ಅವರ ಪೂರ್ವಜರಿಗೆ ಮುಸಲ್ಮಾನರು ಕೊಟ್ಟದ್ದ ಬಹಳ ದುಃಖಕ್ಕೆ ಪ್ರತಿಯಾಗಿ, ಅವರಿಗೆ ಪ್ರತೀಕಾರಮಾಡಬೇಕೆಂದು ಅಪೇಕ್ಷಿಸುತ್ತಿದ್ದರು. ಆದರೆ ಇವರ ಬಳಿ ಯಾವ ಸಾಧನವೂ ಇರಲಿಲ್ಲ; ಆದ್ದು ಅತ್ತ ಮುಸಲ್ಮಾನರ ಸಾಮ್ರಾಜ್ಯವು ಉಜ್ವಲವಾಗಿ ಬೆಳಗುತ್ತಿದ್ದಿತು. ಇವರು ಒಂದು ಪುರಶ್ಚರಣವನ್ನು ಮಾಡಿಸಿದರು. "ನೀನು ಮುಸಲ್ಮಾನರೊಂದಿಗೆ ಹೋರಾಡು; ನಿನಗೆ ವಿಜಯವಾಗುವುದು, ಎಂದು ದೇವಿಯು ನನಗೆ ವರವನ್ನೂ, ಖಡ್ಗವನ್ನೂ ಕೊಟ್ಟದ್ದಾಳೆ" ಎಂದು ಪ್ರಸಿದ್ಧ ಪಡಿಸಿದರು.

ಬಹುಮಂದಿ ಅವರ ಸಂಗಾತಿಗಳಾಗಿಹೋದರು. ಮತ್ತು ಅವರು, ವಾಮಮಾರ್ಗಿಗಳು ಪಂಚ ಮಕಾರಗಳನ್ನೂ, ಚಕ್ರಾಂಕಿತರು ಪಂಚ ಸಂಸ್ಕಾರಗಳನ್ನೂ ಪ್ರಚಲಿತವಾಗಿ ಮಾಡಿದಂತೆ, ಪಂಚ ಕಕಾರಗಳನ್ನು ಪ್ರಚುರಗೊಳಿಸಿದರು. ಅಂದರೆ—ಇವರ ಪಂಚ ಕಕಾರಗಳು ಯುದ್ಧೋಪಯೋಗಿಗಳಾಗಿದ್ದುವು. ಒಂದನೆಯದು—ಯಾವುದನ್ನಿಟ್ಟು ಕೊಳ್ಳುವುದರಿಂದ ಯುದ್ಧದಲ್ಲಿ ಕಟ್ಟಿಗೆ ಮತ್ತು ಖಡ್ಗದ ಕಡೆಯಿಂದ ಸ್ವಲ್ಪಮಟ್ಟಿನ ರಕ್ಷಣೆ ಸಿಕ್ಕುವುದೋ, ಆ "ಕೇಶ"; ಎರಡನೆಯದು—ಆಕಾಲಿಗಳು ತಲೆಯ ಮೇಲೆ, ಪೇಟದೊಳಗೆ ಧರಿಸುವ "ಕಂಗಣ" ಮತ್ತು ಕೈಯಲ್ಲಿನ "ಕಡಾ"; ಇದರಿಂದ ಕೈ ಮತ್ತು ತಲೆಯ ರಕ್ಷಣೆ ಯಾಗುವುದು; ಮೂರನೆಯದು—ಓಡುವುದಕ್ಕೂ, ಧುಮುಕುವು ದಕ್ಕೂ ಅನುಕೂಲವಾಗಿರುವ, ತೊಡೆಯ ಮೇಲಕ್ಕಿರುವ ಚಡ್ಡಿಯಾದ "ಕಾಛ", ವಿಶೇಷವಾಗಿ ಕುಸ್ತಿಯಾಡುವವರೂ, ಮತ್ತು ದೊಂಬರೂ ಸಹ ಶರೀರದ ಮರ್ಮಸ್ಥಾನವು ರಕ್ಷಿತವಾಗಿರಲಿ ಮತ್ತು ಅಡ್ಡಿಯಾಗ ದಿರಲಿ ಎಂಬ ಕಾರಣದಿಂದಲೇ ಇದನ್ನು ಧರಿಸುತ್ತಾರೆ. ನಾಲ್ಕನೆ ಯದು—ಕೂದಲನ್ನು ಬಾಚಿಕೊಳ್ಳುವ "ಕಂಗಾ"; ಐದನೆಯದು—ಶತ್ರುವಿನೊಂದಿಗೆ ಭೇಟಿ-ತಿಕ್ಕಾಟವಾದಾಗ ಕೆಲಸಕ್ಕೊದಗುವ "ಕಾಚೂ" [ಚಾಕು]. ಈ ಕಾರಣದಿಂದಲೇ ಈ ಪದ್ಧತಿಯನ್ನು ಗೋವಿಂದಸಿಂಹರು ತಮ್ಮ ಬುದ್ಧಿವಂತಿಕೆಯಿಂದ ಆ ಕಾಲಕ್ಕಾಗಿ ಏರ್ಪಡಿಸಿದ್ದರು. ಈಗ, ಈ ಕಾಲದಲ್ಲಿ ಅವನ್ನು ಇಟ್ಟುಕೊಳ್ಳುವುದು ಏನೂ ಉಪಯೋಗಕರವಲ್ಲ. ಆದರೀಗ, ಯುದ್ಧದ ಸಲುವಾಗಿ ಮಾಡಬೇಕಾಗಿದ್ದ ವ್ಯವಸ್ಥೆಗಳನ್ನು, ಧರ್ಮದೊಂದಿಗೆ ಅಂಗೀಕರಿಸಿ ದ್ದಾರೆ. ಮೂರ್ತಿಪೂಜೆಯನ್ನೇನೋ ಮಾಡುವುವಿಲ್ಲ; ಆದರೆ ಅದಕ್ಕಿಂತ ಹೆಚ್ಚಾಗಿ ಗ್ರಂಥದ ಪೂಜೆಯನ್ನು ಮಾಡುತ್ತಾರೆ. ಇದು ಮೂರ್ತಿ ಪೂಜೆಯಲ್ಲವೇ? ಯಾವುದಾದರೂ ಜಡಪದಾರ್ಥದೆದುರಿಗೆ ತಲೆಬಾಗಿ ಸುವುದು ಅಥವಾ ಅದನ್ನು ಪೂಜಿಸುವುದು, ಎಲ್ಲವೂ ಮೂರ್ತಿ ಪೂಜೆಯೇ. ತಮ್ಮ ಅಂಗಡಿಯನ್ನು ನೆಲೆಗೊಳಿಸಿ, ಜೀವಿಕೆಯನ್ನು ಏರ್ಪಡಿಸಿಕೊಂಡಿರುವಂತೆ, ಈ ಜನರೂ ಕೂಡ ಮಾಡಿಕೊಂಡಿದ್ದಾರೆ. ಹೇಗ ಪೂಜಾರಿಗಳು ಮೂರ್ತಿಯ ದರ್ಶನಮಾಡಿಸುತ್ತಾರೋ, ಕಾಣಿಕೆ

ಕಟ್ಟಿಸುತ್ತಾರೋ, ಹಾಗೆ ನಾನಕಪಂಥಿಗಳು ಗ್ರಂಥದ ಪೂಜೆಮಾಡುತ್ತಾರೆ, ಮಾಡಿಸುತ್ತಾರೆ ಮತ್ತು ಕಾಣಿಕೆಯನ್ನು ಕೂಡ ಅರ್ಪಣೆ ಮಾಡಿಸುತ್ತಾರೆ. ಅಂದರೆ ಮೂರ್ತಿಪೂಜಕರು ವೇದವನ್ನು ಗೌರವಿಸುವಷ್ಟು "ಗ್ರಂಥಸಾಹಬ್"ದವರಾದ ಈ ಜನರು ಗೌರವಿಸುವುದಿಲ್ಲ. ಹೌದು; ಇವರು ವೇದಗಳನ್ನು ಆಲಿಸಲೂ ಇಲ್ಲ; ನೋಡಲೂ ಇಲ್ಲ, ಎಂದು ಹೇಳಬಹುದು. ಮಾಡುವರೇನನ್ನು? ಆಲಿಸಲೂ, ನೋಡಲೂ ಸಿಕ್ಕಿದ ಪಕ್ಷದಲ್ಲಿ, ಹರಿಗಳೂ, ದುರಾಗ್ರಹಿಗಳೂ ಆಲ್ಲದ, ಬುದ್ಧಿವಂತರಾದ ಸರ್ವಸಂಪ್ರದಾಯಸ್ಥರೂ ವೇದಮತಕ್ಕೆ ಬಂದುಬಿಡುತ್ತಾರೆ. ಆದರೆ ಇವರು ಊಟದ ಗೊಂದಲವನ್ನು ಬಹುಮಟ್ಟಿಗೆ ದೂರಮಾಡಿದ್ದಾರೆ; ಇದನ್ನು ದೂರ ಸರಿಸಿರುವಂತೆ, ವಿಷಯಾಸಕ್ತಿ, ದುರಭಿಮಾನಗಳನ್ನೂ ದೂರಮಾಡಿ, ವೇದಮತದ ಅಭಿವೃದ್ಧಿಯನ್ನು ಸಾಧಿಸುವರಾದರೆ, ಬಹಳ ಒಳ್ಳೆಯದು.

ಪ್ರಶ್ನೆ:—ದಾದೂಪಂಥಿಯ ಮಾರ್ಗವಾದರೂ ಒಳ್ಳೆಯದೋ?

ಉತ್ತರ:—ಒಳ್ಳೆಯದು ಎಂದರೆ ವೇದಮಾರ್ಗ; ಹಿಡಿಯಲು ಸಾಧ್ಯವಾದರೆ ಹಿಡಿಯಿರಿ; ಇಲ್ಲದಿದ್ದರೆ ಯಾವಾಗಲೂ ಮುಳುಗು ಹಾಕುತ್ತಿರುವಿರಿ. ಇವರ ಮತದಲ್ಲಿ ದಾದುವಿನ ಜನನವು ಗುಜರಾತಿನಲ್ಲಿ ಆಗಿತ್ತು. ಆಮೇಲೆ ಜಯಪುರದ ಬಳಿ "ಆಮೇರಿ"ನಲ್ಲಿರುತ್ತಿದ್ದರು; ಗಾಣಿಗನ ಕೆಲಸವನ್ನು ಮಾಡುತ್ತಿದ್ದರು. ದಾದುವೂ ಪೂಜೆ ಹೊಂದಲಾರಂಭಿಸಿದುದು ಈಶ್ವರನ ಸೃಷ್ಟಿಯ ವಿಚಿತ್ರಲೀಲೆ. ಈಗ ವೇದಾದಿಶಾಸ್ತ್ರಗಳ ಎಲ್ಲಾ ಮಾತುಗಳನ್ನೂ ಬಿಟ್ಟು, "ದಾದೂರಾಮ್, ದಾದೂರಾಮ್" ಎನ್ನುವುದರಲ್ಲಿಯೇ ಮುಕ್ತಿಯನ್ನಂಗೀಕರಿಸಿಬಿಟ್ಟಿದ್ದಾರೆ! ಸತ್ಯೋಪದೇಶಕನು ಇಲ್ಲವಾದಾಗ ಈ ಬಗೆಯ ಗೊಂದಲಗಳೇ ಉಂಟಾಗುತ್ತವೆ. ಶಾಹಪುರದಿಂದ ಒಂದು 'ರಾಮ ಸ್ನೇಹೀ' ಮತವು ಉದ್ಭವಿಸಿ, ಕೆಲವು ದಿನಗಳಾಗಿವೆ. ಅವರು ಎಲ್ಲಾ ವೇದೋಕ್ತಧರ್ಮವನ್ನೂ ಬಿಟ್ಟು, "ರಾಮ, ರಾಮ" ಎಂದು ಕೂಗುವುದನ್ನು ಒಳ್ಳೆಯದೆಂದು ಒಪ್ಪಿದ್ದಾರೆ. ಅದರಲ್ಲಿಯೇ ಜ್ಞಾನ, ಧ್ಯಾನ, ಮುಕ್ತಿಗಳನ್ನು ಒಪ್ಪುತ್ತಾರೆ; ಆದರೆ, ಹಸಿವಾದಾಗ "ರಾಮನಾಮ" ದೊಳಗಿನಿಂದ ರೊಟ್ಟಿ-ಪಲ್ಯ ಹೊರಟುಬರುವುದಿಲ್ಲ. ಏಕೆಂದರೆ,

ಖಾದ್ಯಪೇಯ ಮೊದಲಾದುವಾದರೋ ಗೃಹಸ್ಥರ ಮನೆಗಳಲ್ಲಿಯೇ ದೊರೆಯುತ್ತವೆ. ಅವರೂ ಮೂರ್ತಿಪೂಜೆಯನ್ನು ಧಿಕ್ಕರಿಸುತ್ತಾರೆ; ಆದರೆ ತಾವು ಸ್ವತಃ ಮೂರ್ತಿಗಳಾಗುತ್ತಿದ್ದಾರೆ! ಸ್ತ್ರೀಯರ ಜೊತೆಯಲ್ಲಿ ಬಹಳ ಇರುತ್ತಾರೆ; ಏಕೆಂದರೆ, ರಾಮುರಿಗೆ "ರಾಮೆ" ಇಲ್ಲದೆ, ಆನಂದವೇ ಸಿಕ್ಕಲಾರದು. ಈಗ ರಾಮುಸ್ನೇಹೀಮತದ ವಿಷಯದಲ್ಲಿ ಸ್ವಲ್ಪ ವಿಶೇಷವಾಗಿ ಬರೆಯುತ್ತೇವೆ:—

ಯಾವನ ಮತವು ಮುಖ್ಯವಾಗಿ ಮೇವಾಡಿನ ಶಾಹಪುರ ಎಂಬ ಸ್ಥಳದಿಂದ ಹೊರಟಿದೆಯೋ, ಆ ರಾಮುಚರಣನೆಂಬ ಸಾಧುವೊಬ್ಬನು ಆಗಿಹೋಗಿದ್ದಾನೆ. ಅವರು "ರಾಮು ರಾಮು" ಎನ್ನುವುದನ್ನೇ ಪರಮ ಮಂತ್ರವೆಂದೂ, ಮತ್ತು ಇದನ್ನೇ ಸಿದ್ಧಾಂತವೆಂದೂ ಅಂಗೀಕರಿಸುತ್ತಾರೆ. ಸಂತದಾಸ—ಮೊದಲಾದವರ ವಾಣಿಯಿರುವ ಅವರ ಒಂದು ಗ್ರಂಥದಲ್ಲಿ ಹೀಗೆ ಬರೆಯುತ್ತಾರೆ:—

ಅವರ ವಚನ

ಭರಮುರೋಗ ತಬಹೀ ಮಿಟ್ಯಾ ರಟ್ಯಾ ನಿರಂಜನರಾಇ।
ತಬ ಜಮುಕಾ ಕಾಗಜಫಟ್ಯಾ ಕಟ್ಯಾ ಕರ್ಮ ತಬ ಜಾಇ॥

[ಸಾಖಿ-೬೩]

"ರಾಮು ರಾಮು" ಎನ್ನುವುದರಿಂದ, ಅಜ್ಞಾನವೇ ಆದ ಭ್ರಮುವಾಗಲೀ, ಯಮರಾಜನ ಪಾಪಾನುಸಾರವಾದ ಶಿಕ್ಷೆಯಾಗಲೀ, ಮಾಡಿದ ಕರ್ಮಗಳಾಗಲೀ ಎಂದಿಗಾದರೂ ಬಿಟ್ಟುಹೋಗಬಲ್ಲವೋ, ಅಥವಾ ಇಲ್ಲವೋ ಎಂಬುದನ್ನು ಈಗ ಬುದ್ಧಿವಂತರಾದ ಜನರು ಯೋಚಿಸಿಕೊಳ್ಳಲಿ. ಇದು ಕೇವಲ ಮಾನವರನ್ನು ಪಾಪದಲ್ಲಿ ಸಿಕ್ಕಿಸುವುದು ಮತ್ತು ಮನುಷ್ಯಜನ್ಮವನ್ನು ನಾಶಮಾಡುವುದಾಗಿದೆ. ಈಗ, ಇವರ ಮುಖ್ಯಗುರುವಾಗಿದ್ದ "ರಾಮುಚರಣ"ನ ವಚನಗಳು:—

ಮುಹವಾ ನಾಂವ ಪ್ರತಾಪಕೀ, ಸುನೌ ಸರವಣ ಚಿತ ಲಾಇ।
ರಾಮುಚರಣ ರಸನಾ ರಟಾ ಕ್ರಮು ಸಕಲ ಝುಡ ಜಾಇ॥

ಜಿನಜಿನ ಸುಮುರ್ಯಾ ನಾಂವಕೂಂ, ಸೋ ಸಬ ಉತರ್ಯಾ
ಪಾರ್ ।
ರಾಮುಚರಣ ಜೋ ಬೀಸರ್ಯಾ, ಸೋಹೀ ಜಮುಕೇ ದ್ವಾರ್॥

ರಾಮು ಬಿನಾ ಸಬ ಝೂಠ ಬತಾಯೋ ॥
ರಾಮು ಭಜತ ಛೂಟ್ಯಾ ಸಬ ಕ್ರಮ್ಮಾ ।
ಚಂದ ಅರು ಸೂರದೇಇ ಪರಕಮ್ಮಾ ॥
ರಾಮು ಕಹೇ ತಿನಕೂಂ ಭೈ ನಾಹೀಂ ।
ತೀನ ಲೋಕ ಮೇಂ ಕೀರತಿಗಾಹೀಂ ॥
ರಾಮು ರಟತ ಜಗ ಜೋರ ನ ಲಾಗೈ ॥
ರಾಮುನಾಮು ಲಿಖು ಪಥರತ ರಾಖೈ ।
ಭಗತಿ ಹೇತಿ ಔತಾರ ಹೀ ಧರಹೀ ॥
ಊಂಚನೀಚ ಕುಲಭೇದವಿಚಾರೈ ।
ಸೋತೋ ಜನಮು ಆಪಣೋಹಾರೈ ॥
ಸಂತಾ ಕೈ ಕುಲದೀಸೈ ನಾಹೀಂ ।
ರಾಂಮು ರಾಂಮು ಕಹ ರಾಮು ಸಮ್ಹಾಂ ಹೀಂ ॥
ಐಸೋ ಕುಣ ಜೋ ಕೀರತಿಗಾವೈ ।
ಹರಿ ಹರಿ ಜನಕೋ ಪಾರ್ ನ ಪಾವೈ ॥
ರಾಮು ಸಂತಾಂಕಾ ಅಂತ ನ ಆವೈ ।
ಆಪ ಆಪಕೀ ಬುದ್ಧಿ ಸಮುಗಾವೈ ॥

ಇವುಗಳ ಖಂಡನ

ಮೊದಲನೆಯದಾಗಿ ರಾಮುಚರಣ ಮೊದಲಾದವರ ಗ್ರಂಥಗಳನ್ನು ನೋಡುವುದರಿಂದ, ಈ ಹಳ್ಳಿಗನು ಒಬ್ಬ ಸರಳಸ್ವಭಾವದ ಮನುಷ್ಯನಾಗಿದ್ದನೆಂದು ವಿದಿತವಾಗುತ್ತದೆ. ಅವನು ಏನನ್ನೂ ಓದಿರಲಿಲ್ಲ; ಹಾಗಲ್ಲದಿದ್ದರೆ ಇಂತಹ ಕಾಡುಹರಟೆಯನ್ನೇಕೆ ಬರೆಯುತ್ತಿದ್ದನು? 'ರಾಮರಾಮ' ಎನ್ನುವುದರಿಂದ ಕರ್ಮಗಳು ಬಿಟ್ಟು

ಹೋಗುವುವು ಎಂಬುದು ಇವರ ಕೇವಲ ಭ್ರಮ. ಇವರು ಕೇವಲ ತಮ್ಮ ನುತ್ತು ಬೇರೆಯವರ ಜನ್ಮವನ್ನು ಹಾಳುಮಾಡುತ್ತಾರೆ. ಯಮನ ಭಯವಾದರೋ ಬಹಳದೊಡ್ಡದು; ಆದರೆ ರಾಜನ ಸೈನಿಕರು, ಕಳ್ಳರು, ದರೋಡೆಕೋರರು, ಹುಲಿಗಳು, ಸರ್ಪಗಳು, ಚೇಳುಗಳು ಮತ್ತು ಸೊಳ್ಳೆಗಳು ಮೊದಲಾದುವುಗಳ ಭಯವೆಂದಿಗೂ ನಿವಾರಣೆಯಾಗುವುದಿಲ್ಲ. ಬೇಕಾದರೆ ರಾತ್ರಿ ಹಗಲು 'ರಾಮರಾಮ' ಎಂದು ಹೇಳುತ್ತಿರಲಿ; ಏನೂ ಸಿದ್ಧಿಸಲಾರದು. ಹೇಗೆ 'ಸಕ್ಕರೆ ಸಕ್ಕರೆ' ಎನ್ನುವುದರಿಂದ ಬಾಯಿ ಸಿಹಿಯಾಗುವುದಿಲ್ಲವೋ, ಹಾಗೆ ಸತ್ಯಭಾಷಣ ಮೊದಲಾದ ಕರ್ಮಗಳನ್ನು ಮಾಡದೆ 'ರಾಮರಾಮ' ಎನ್ನುವುದರಿಂದ ಏನೂ ಆಗುವುದಿಲ್ಲ. ಮತ್ತು 'ರಾಮರಾಮ' ಎನ್ನುವುದನ್ನು ಇವರ ರಾಮನು ಕೇಳುವುದಿಲ್ಲವಾದರೆ, ಇಡೀ ಜೀವನದಲ್ಲಿ ಹೇಳುವುದರಿಂದಲೂ ಕೇಳುವುದಿಲ್ಲ; ಮತ್ತು ಕೇಳುವುದಾದರೆ, ಎರಡನೆಯಸಾರಿಯೂ 'ರಾಮರಾಮ' ಎನ್ನುವುದು ವ್ಯರ್ಥ. ಈ ಜನರು ತಮ್ಮ ಹೊಟ್ಟೆ ತುಂಬಿಸಿಕೊಳ್ಳುವುದಕ್ಕಾಗಿ ಮತ್ತು ಬೇರೆಯವರ ಜನ್ಮವನ್ನೂ ಕೂಡ ನಷ್ಟಗೊಳಿಸುವುದಕ್ಕಾಗಿ ಒಂದು ಪಾಷಂಡವನ್ನು ಸ್ಥಾಪಿಸಿದ್ದಾರೆ. ಇದು ಬಹಳ ಆಶ್ಚರ್ಯ! ಹೆಸರೇನೋ 'ರಾಮಸ್ನೇಹೀ' ಎಂದಿಟ್ಟರು; ಮತ್ತು ರಂಡೆಸ್ನೇಹಿಯ ಕೆಲಸಮಾಡುತ್ತಾರೆ ಎಂಬುದನ್ನು ನಾವು ಕೇಳುತ್ತೇವೆ ಮತ್ತು ನೋಡುತ್ತೇವೆ. ಎಲ್ಲಿ ನೋಡಿದರೆ ಅಲ್ಲಿ ವಿಧವೆಯರೇ ಸಂತರನ್ನು ಮುತ್ತಿಕೊಂಡಿರುತ್ತಾರೆ. ಈ ತೆರನಾದ ಪಾಷಂಡಗಳು ಹೊರಡದಿದ್ದರೆ, ಆರ್ಯಾವರ್ತದೇಶಕ್ಕೆ ದುರ್ದಶೆಯೇಕೆ ಉಂಟಾಗುತ್ತಿದ್ದಿತು? ಈ ಜನರು ತಮ್ಮ ಶಿಷ್ಯರಿಗೆ ಎಂಜಲನ್ನು ತಿನ್ನಿಸುತ್ತಾರೆ ಮತ್ತು ಸ್ತ್ರೀಯರೂ ಸಹ ಉದ್ದವಾಗಿ ಮಲಗಿ ದಂಡವತ್ ಪ್ರಣಾಮಮಾಡುತ್ತಾರೆ. ಏಕಾಂತದಲ್ಲಿಯೂ ಸ್ತ್ರೀಯರ ಮತ್ತು ಸಾಧುಗಳ ಲೀಲೆ ನಡೆಯುತ್ತಿರುತ್ತದೆ.

ಈಗ ಇವರ ಇನ್ನೊಂದು ಶಾಖೆಯೂ ಮಾರವಾಡದೇಶದ ಖೇಡಾಪಾ ಗ್ರಾಮದಿಂದ ಹೊರಟಿದೆ. ಅದರ ಇತಿಹಾಸವಿದು:— ರಾಮದಾಸನೆಂಬೊಬ್ಬ ಮೋಚೀಜಾತಿಯವನು ಬಹಳ ಚತುರನಾಗಿದ್ದನು. ಅವನಿಗೆ ಇಬ್ಬರು ಸ್ತ್ರೀಯರಿದ್ದರು. ಅವನು ಮೊದಲು

ಬಹು ದಿನದವರೆಗೆ ಔಘಡನಾಗಿ ನಾಯಿಗಳೊಂದಿಗೆ ತಿನ್ನುತ್ತಿದ್ದನು; ಆಮೇಲೆ ವಾಮೀ ಕೂಂಡಾಪಂಥಿಯಾದನು. ಆಮೇಲೆ "ರಾಮದೇವ"ನ "ಕಾಮಡಿಯಾ"* ಆದನು. ತನ್ನ ಇಬ್ಬರು ಸ್ತ್ರೀಯರೊಂದಿಗೆ ಹಾಡುತ್ತಿದ್ದನು. ಹೀಗೆ ತಿರುಗುತ್ತಾ ತಿರುಗುತ್ತಾ "ಶೀಥಲ"†ದಲ್ಲಿದ್ದ ಮೋಚಿಗಳ ಗುರುವಾದ ರಾಮದಾಸನನ್ನು ಸಂಧಿಸಿದನು. ಆತನು ಅದನ್ನು "ರಾಮದೇವನ ಪಂಥ" ಎಂದು ಹೇಳಿ, ಅವನನ್ನು ತನ್ನ ಶಿಷ್ಯನನ್ನಾಗಿ ಮಾಡಿಕೊಂಡನು. ಆ ರಾಮದಾಸನು ಖೇಡಾಪಾ ಗ್ರಾಮದಲ್ಲಿ ಸ್ಥಳಮಾಡಿಕೊಂಡನು ಮತ್ತು ಇತ್ತ ಇವನ ಮತ ಹೊರಟಿತು. ಅತ್ತ ಶಾಹಪುರದಲ್ಲಿ ರಾಮಚರಣನದು. ಅವನ ಇತಿಹಾಸವನ್ನೂ ಹೀಗೆ ಕೇಳಿದ್ದೇವೆ:—ಅವನು ಜಯಪುರದ ವರ್ತಕನಾಗಿದ್ದನು. ಅವನು "ದಾಂತಡಾ" ಗ್ರಾಮದಲ್ಲಿ ಒಬ್ಬ ಸಾಧುವಿನಿಂದ ವೇಷ ಪಡೆದನು ಮತ್ತು ಆತನನ್ನು ಗುರುವನ್ನಾಗಿ ಮಾಡಿಕೊಂಡನು; ಹಾಗೂ ಶಾಹಪುರಕ್ಕೆ ಹೋಗಿ ತಳವೂರಿದನು. ಪಾಮರ ಜನರಲ್ಲಿ ಪಾಷಂಡವು ಬೇಗ ಬೇರೂರುತ್ತದೆ; ಬೇರೂರಿತು. ಇವರೆಲ್ಲರಲ್ಲಿಯೂ ಮೇಲೆ ಹೇಳಿದ ರಾಮಚರಣನ ವಚನದ ಪ್ರಮಾಣದಂತೆ, ಶಿಷ್ಯರನ್ನಾಗಿ ಮಾಡಿಕೊಂಡಮೇಲೆ ಉಚ್ಚನೀಚರೆಂಬ ಯಾವ ಭೇದವೂ ಇಲ್ಲ. ಬ್ರಾಹ್ಮಣರಿಂದ ಹಿಡಿದು ಅಂತ್ಯಜರವರೆಗೆ ಇವರಲ್ಲಿ ಎಲ್ಲರೂ ಶಿಷ್ಯರಾಗುತ್ತಾರೆ. ಈಗಲೂ ಕೂಂಡಾಪಂಥಿಗಳಂತೆಯೇ ಇದ್ದಾರೆ; ಏಕೆಂದರೆ ಮಣ್ಣಿನ ಪಾತ್ರೆಗಳಲ್ಲಿಯೇ ತಿನ್ನುತ್ತಾರೆ. ಮತ್ತು ಸಾಧುಗಳ ಎಂಜಲನ್ನು ತಿನ್ನುತ್ತಾರೆ. ವೇದಧರ್ಮದಿಂದಲೂ, ಮಾತಾಪಿತೃಗಳಿಂದಲೂ, ಸಾಂಸಾರಿಕ ವ್ಯವಹಾರಗಳಿಂದಲೂ, ದುಪ್ರೇರಣೆ ಮಾಡಿ ದೂರಗೊಳಿಸುತ್ತಾರೆ ಮತ್ತು ಶಿಷ್ಯರನ್ನಾಗಿ ಮಾಡಿಕೊಂಡು

---

*ರಾಜಪುತ್ರಸ್ಥಾನದಲ್ಲಿ ಚಮ್ಮಾರರು ಕಾವಿಬಟ್ಟೆ ಧರಿಸಿ, ತಾವು 'ಶಬ್ದ' ಎಂದು ಕರೆಯುವ, ರಾಮದೇವ-ಮೊದಲಾದವರ ಹಾಡುಗಳನ್ನು ಚಮ್ಮಾರರು ಮತ್ತು ಬೇರೆ ಜಾತಿಯವರಿಗಾಗಿ ಹಾಡುತ್ತಾರೆ. ಅವರು 'ಕಾಮಡಿಯಾ'ಗಳೆನಿಸಿಕೊಳ್ಳುತ್ತಾರೆ. —ಸ. ದಾ.

†ಸೀಥಲ—ಎಂಬುದು ಜೋಧಪುರ ರಾಜ್ಯದಲ್ಲಿ ಒಂದು ದೊಡ್ಡ ಗ್ರಾಮ. —ಸ. ದಾ.

ಬಿಡುತ್ತಾರೆ. ಹಾಗೂ ರಾಮನಾಮವನ್ನು ಮಹಾಮಂತ್ರವೆಂದು ತಿಳಿಯುತ್ತಾರೆ ಮತ್ತು ಇದನ್ನೇ "ಋಚ್ಛಮ"* ವೇದವೆಂದೂ ಹೇಳುತ್ತಾರೆ. "ರಾಮ ರಾಮ" ಎನ್ನುವುದರಿಂದ ಅನಂತ ಜನ್ಮಗಳ ಪಾಪಗಳು ಬಿಟ್ಟುಹೋಗುತ್ತವೆ; ಇದಿಲ್ಲದೆ ಯಾವನಿಗೂ ಮುಕ್ತಿಯುಂಟಾಗುವುದಿಲ್ಲ! ಯಾವನ ಶ್ವಾಸ ಮತ್ತು ಪ್ರಶ್ವಾಸಗಳೊಂದಿಗೆ "ರಾಮ ರಾಮ" ಎನ್ನುವುದನ್ನು ಹೇಳಿಕೊಡುತ್ತಾನೋ, ಅವನನ್ನು ಸತ್ಯಗುರುವೆನ್ನುತ್ತಾರೆ ಮತ್ತು ಸತ್ಯಗುರುವನ್ನು ಪರಮೇಶ್ವರನಿಗಿಂತಲೂ ದೊಡ್ಡವನೆಂದು ಅಂಗೀಕರಿಸುತ್ತಾರೆ; ಹಾಗೂ ಅವನ ಮೂರ್ತಿಯನ್ನು ಧ್ಯಾನಿಸುತ್ತಾರೆ. ಸಾಧುಗಳ ಚರಣಗಳನ್ನು ತೊಳೆದು ಕುಡಿಯುತ್ತಾರೆ. ಯಾವಾಗ ಶಿಷ್ಯನು ಗುರುವಿನಿಂದ ದೂರಕ್ಕೆ ಹೋಗುತ್ತಾನೋ, ಆಗ ಗುರುವಿನ ಉಗುರನ್ನೂ ಮತ್ತು ಗಡ್ಡದ ಕೂದಲುಗಳನ್ನೂ ತನ್ನ ಹತ್ತಿರ ಇಟ್ಟುಕೊಳ್ಳಬೇಕು; ಅವನ ಚರಣಾಮೃತವನ್ನು ನಿತ್ಯವೂ ತೆಗೆದುಕೊಳ್ಳಬೇಕು. ರಾಮದಾಸ ಮತ್ತು ಹರರಾಮದಾಸರ ವಾಣಿಯ ಪುಸ್ತಕಗಳನ್ನು ವೇದಗಳಿಗಿಂತ ಅಧಿಕವೆಂದು ತಿಳಿಯುತ್ತಾರೆ. ಅದಕ್ಕೆ ಪ್ರದಕ್ಷಿಣೆಯನ್ನೂ, ಎಂಟು ದಂಡವತ್ಪ್ರಣಾಮಗಳನ್ನೂ ಮಾಡುತ್ತಾರೆ. ಮತ್ತು ಗುರುವು ಸಮೀಪದಲ್ಲಿದ್ದರೆ, ಗುರುವಿಗೆ ದಂಡವತ್ ಪ್ರಣಾಮವನ್ನು ಮಾಡಿಕೊಳ್ಳುತ್ತಾರೆ. ಸ್ತ್ರೀಗಾಗಲಿ, ಪುರುಷನಿಗಾಗಲಿ "ರಾಮ ರಾಮ" ಎಂಬ ಒಂದೇ ಬಗೆಯ ಮುಂತ್ರೋಪದೇಶವನ್ನು ಮಾಡುತ್ತಾರೆ ಮತ್ತು ನಾಮಸ್ಮರಣದಿಂದಲೇ ಕಲ್ಯಾಣವಾಗುವುದೆಂದು ಒಪ್ಪುತ್ತಾರೆ; ಮತ್ತೆ ಓದುವುದರಲ್ಲಿ ಪಾಪವಿದೆಯೆಂದು ತಿಳಿಯುತ್ತಾರೆ. ಅವರ ಪದ್ಯವಿದು :—

ಪಂಡತಾಈ ಪಾನೇ ಪಡೀ ಓ ಪೂರಬಲೋ ಪಾಹೆ ।
ರಾಮುರಾಮು ಸುಮುರ್ಯಾಂವಿನಾ ರಯಿಗ್ಯಾ ರಾತೋ ಆಪ್ ॥
ವೇದ ಪುರಾಣ ಪಢೇ ಪಢಗೀತಾ ರಾಮುಭಜನ ಬಿನ
ರಹಗಯೋ ರೀತಾ ॥

---

* "ಋಚ್ಛಮ" ಅಂದರೆ ಸೂಕ್ಷ್ಮ —ಸ. ದಾ.

ಇಂತಿಂತಹ ಪುಸ್ತಕಗಳನ್ನು ರಚಿಸಿದ್ದಾರೆ. ಸ್ತ್ರೀಗೆ ಪತಿಯ ಸೇವೆ ಮಾಡುವುದರಲ್ಲಿ ಪಾಪವೂ ಮತ್ತು ಗುರು ಹಾಗೂ ಸಾಧುವಿನ ಸೇವೆಯಲ್ಲಿ ಧರ್ಮವೂ ಉಂಟಾಗುವುದೆಂದು ಹೇಳುತ್ತಾರೆ; ವರ್ಣಾಶ್ರಮವನ್ನೊಪ್ಪುವುದಿಲ್ಲ. ಬ್ರಾಹ್ಮಣನು ರಾಮಸ್ನೇಹಿಯಾಗದಿದ್ದರೆ ಅವನನ್ನು ನೀಚನೆಂದೂ, ಮತ್ತು ಚಂಡಾಲನು ರಾಮಸ್ನೇಹಿಯಾಗಿದ್ದರೆ ಅವನನ್ನು ಉತ್ತಮನೆಂದೂ ತಿಳಯುತ್ತಾರೆ. ಈಗ ಈಶ್ವರನ ಅವತಾರವನ್ನೊಪ್ಪುವುದಿಲ್ಲ. ಮತ್ತು ಮೇಲೆ ಬರೆದಿರುವ ರಾಮಚರಣನ ಈ ವಚನದಂತೆ—

ಭಗತಿ ಹೇತಿ ಔತಾರ ಹೀ ಧರಹೀ ।

ಭಕ್ತಿ ಮತ್ತು ಸಂತರ ಸಲುವಾಗಿ ಅವತಾರವನ್ನೂ ಕೂಡ ಅಂಗೀಕರಿಸುತ್ತಾರೆ. ಈ ಮೊದಲಾದ ಇವರ ಎಷ್ಟು ಪಾಷಂಡಪ್ರಪಂಚ ವಿದೆಯೋ, ಅದೆಲ್ಲವೂ ಆರ್ಯಾವರ್ತಕ್ಕೆ ಅಹಿತಕಾರಕವಾದುದು. ಇಷ್ಟರಿಂದಲೇ ಬುದ್ಧಿವಂತರು ಹೆಚ್ಚಾಗಿ ತಿಳಿದುಕೊಳ್ಳುವರು.

ಪ್ರಶ್ನೆ;—ಗೋಕುಲೀಯ ಗೋಸಾಯಿಗಳ ಮತವಂತೂ ಬಹಳ ಸೊಗಸಾಗಿದೆ. ನೋಡಿರಿ, ಎಂತಹ ಐಶ್ವರ್ಯವನ್ನನುಭವಿಸುತ್ತಾರೆ! ಲೀಲೆಯಿಲ್ಲದೆ ಇಂತಹ ಐಶ್ವರ್ಯ ಉಂಟಾಗಬಲ್ಲದೇ?

ಉತ್ತರ:—ಈ ಐಶ್ವರ್ಯ ಗೃಹಸ್ಥರಾದ ಜನರದು; ಗೋಸಾಯಿಗಳದೇನೂ ಅಲ್ಲ.

ಪ್ರಶ್ನೆ:—ವಾಹ-ವಾಹ! ಗೋಸಾಯಿಗಳ ಪ್ರತಾಪದಿಂದ ಇದೆ; ಏಕೆಂದರೆ ಇಂತಹ ಐಶ್ವರ್ಯ ಬೇರೆಯವರಿಗೇಕೆ ಸಿಕ್ಕುವುದಿಲ್ಲ?

ಉತ್ತರ:—ಬೇರೆಯವರೂ ಕೂಡ ಇದೇ ರೀತಿಯ ಛಲ-ಪ್ರಪಂಚವನ್ನು ರಚಿಸಿದರೆ, ಐಶ್ವರ್ಯ ಸಿಕ್ಕುವುದರಲ್ಲಿ ಸಂದೇಹವೇನು? ಮತ್ತು ಇವರಿಗಿಂತ ಹೆಚ್ಚು ಧೂರ್ತತನವನ್ನು ಮಾಡಿದರೆ, ಹೆಚ್ಚು ಐಶ್ವರ್ಯವೂ ಕೂಡ ಉಂಟಾಗಬಲ್ಲದು.

ಪ್ರಶ್ನೆ:—ಚೆನ್ನಾಯಿತು ಸ್ವಾಮೀ, ಚೆನ್ನಾಯಿತು! ಇದರಲ್ಲೇನು ಧೂರ್ತತನವಿದೆ? ಇದೆಲ್ಲವೂ ಗೋಲೋಕದ ಲೀಲೆಯಾಗಿದೆ.

ಉತ್ತರ :—ಗೋಲೋಕದ ಲೀಲೆಯಲ್ಲ; ಆದರೆ ಗೋಸಾಯಿಗಳ ಲೀಲೆಯಾಗಿದೆ. ಗೋಲೋಕದ ಲೀಲೆಯಾಗಿದ್ದ ಪಕ್ಷದಲ್ಲಿ, ಗೋಲೋಕವೂ ಹೀಗೆಯೇ ಇರಬಹುದು. ಈ ಮತವು ತೈಲಂಗ ದೇಶದಿಂದ ಹೊರಟಿದೆ. ಏಕೆಂದರೆ ಲಕ್ಷ್ಮಣಭಟ್ಟನೆಂಬ ಒಬ್ಬ ತೈಲಂಗ ಬ್ರಾಹ್ಮಣನು ವಿವಾಹಮಾಡಿಕೊಂಡು, ಯಾವುದೋ ಕಾರಣದಿಂದ ತಾಯಿ, ತಂದೆ ಮತ್ತು ಹೆಂಡತಿಯನ್ನು ಬಿಟ್ಟು, ಕಾಶಿಗೆಹೋಗಿ, ಸಂನ್ಯಾಸವನ್ನು ತೆಗೆದುಕೊಂಡಿದ್ದನು. ಮತ್ತು 'ನನಗೆ ವಿವಾಹವಾಗಿಲ್ಲ' ಎಂದು ಸುಳ್ಳನ್ನಾಡಿದ್ದನು. ದೈವಯೋಗದಿಂದ ಅವನ ತಾಯಿತಂದೆಗಳೂ, ಹೆಂಡತಿಯೂ ಅವನು ಕಾಶಿಯಲ್ಲಿ ಸಂನ್ಯಾಸಿಯಾಗಿದ್ದಾನೆಂದು ಕೇಳಿದರು. ಅವನ ತಾಯಿತಂದೆಗಳೂ ಮತ್ತು ಹೆಂಡತಿಯೂ ಕಾಶಿಯನ್ನು ತಲುಪಿದರು; ಅವನಿಗೆ ಸಂನ್ಯಾಸವನ್ನು ಕೊಟ್ಟಿದ್ದವನನ್ನು ಕುರಿತು ತಾಯಿತಂದೆಗಳು—"ನಮ್ಮ ಪುತ್ರನನ್ನು ಸಂನ್ಯಾಸಿಯನ್ನಾಗಿ ಏಕೆ ಮಾಡಿದಿರಿ? ನೋಡಿ, ಇವಳು ಈತನ ಯುವತಿಯಾದ ಪತ್ನಿ" ಎಂದು ಹೇಳಿದರು ಮತ್ತು ಸ್ತ್ರೀಯು—"ತಾವು ನನ್ನ ಪತಿಯನ್ನು ನನ್ನ ಜೊತೆಗೆ ಸೇರಿಸುವುದಿಲ್ಲವಾದರೆ, ನನಗೂ ಸಂನ್ಯಾಸವನ್ನು ಕೊಟ್ಟುಬಿಡಿರಿ" ಎಂದು ಹೇಳಿದಳು. ಆಗಲಾದರೋ ಅವನನ್ನು ಕರೆದು—"ನೀನು ಮಹಾ ಮಿಥ್ಯಾವಾದಿಯಾಗಿದ್ದೀಯೆ. ಸಂನ್ಯಾಸವನ್ನು ಬಿಟ್ಟು, ಗೃಹಾಶ್ರಮವನ್ನು ತೆಗೆದುಕೋ. ಏಕೆಂದರೆ—ನೀನು ಸುಳ್ಳು ಹೇಳಿ ಸಂನ್ಯಾಸವನ್ನು ತೆಗೆದುಕೊಂಡೆ"—ಎಂದು ಹೇಳಿದನು. ಅವನು ಪುನಃ ಹಾಗೆಯೇ ಮಾಡಿದನು. ಸಂನ್ಯಾಸವನ್ನು ಬಿಟ್ಟು, ಅವಳೊಂದಿಗೆ ಸೇರಿಕೊಂಡನು. ನೋಡಿರಿ, ಈ ಮತದ ಮೂಲವೇ ಸುಳ್ಳು-ಕಪಟಗಳಿಂದ ಹೊರಟಿತು. ತೈಲಂಗದೇಶಕ್ಕೆ ಹೋದಾಗ, ಯಾವನೂ ಅವನನ್ನು ಜಾತಿಗೆ ಸೇರಿಸಲಿಲ್ಲ. ಆಗ ಅಲ್ಲಿಂದ ಹೊರಟು ತಿರುಗಾಡಲಾರಂಭಿಸಿದರು. ಕಾಶಿಯ ಹತ್ತಿರವಿರುವ "ಚರಣಾದ್ರಿ"ದ ಸಮೀಪದ "ಚಂಪಾರಣ್ಯ"ವೆಂಬ ಕಾಡಿನಲ್ಲಿ ಹೋಗುತ್ತಿದ್ದರು. ಅಲ್ಲಿ ಯಾವನೋ ಒಬ್ಬನು ಒಬ್ಬ ಬಾಲಕನನ್ನು ಕಾಡಿನಲ್ಲಿ ಬಿಟ್ಟು, ನಾಲ್ಕುಕಡೆಯೂ ದೂರದೂರಕ್ಕೆ ಬೆಂಕಿ ಹೊತ್ತಿಸಿ ಹೊರಟುಹೋಗಿದ್ದನು. ಏಕೆಂದರೆ—

ಬಿಟ್ಟುಹೋದವನು--" ಬೆಂಕಿಯನ್ನು ನಾನು ಹೊತ್ತಿಸದಿದ್ದರೆ, ಈಗಲೇ ಯಾವುದಾದರೂ ಪ್ರಾಣಿಯು ಕೊಂದುಹಾಕುವುದು "---ಎಂದು ತಿಳಿದಿದ್ದನು. ಲಕ್ಷ್ಮಣಭಟ್ಟನೂ ಮತ್ತು ಅವನ ಹೆಂಡತಿಯೂ ಬಾಲಕನನ್ನೆತ್ತಿಕೊಂಡು ತಮ್ಮ ಪುತ್ರನನ್ನಾಗಿ ಮಾಡಿಕೊಂಡರು. ಮತ್ತೆ ಕಾಶಿಯಲ್ಲಿ ಹೋಗಿ ನೆಲಸಿದರು. ಆ ಬಾಲಕನು ದೊಡ್ಡವನಾದಾಗ, ಅವನ ತಾಯಿತಂದೆಗಳ ಶರೀರ ಬಿದ್ದುಹೋಯಿತು. ಕಾಶಿಯಲ್ಲಿ ಬಾಲ್ಯಾವಸ್ಥೆಯಿಂದ ಯುವಾವಸ್ಥೆಯ ವರೆಗೆ ಸ್ವಲ್ಪ ಅಧ್ಯಯನ ಮಾಡುತ್ತಲೂ ಇದ್ದನು. ಆನಂತರ, ಬೇರೆಲ್ಲಿಗೋ ಹೋಗಿ, ಒಂದು ವಿಷ್ಣುಸ್ವಾಮಿಯ ದೇವಾಲಯದಲ್ಲಿ ಶಿಷ್ಯನಾಗಿ ಹೋದನು. ಯಾವಾಗಲೋ ಏನೋ ಗೊಂದಲವಾದುದರಿಂದ, ಅಲ್ಲಿಂದ ಮರಳಿ ಕಾಶಿಗೆ ಹೊರಟುಹೋದನು ಮತ್ತು ಸಂನ್ಯಾಸವನ್ನು ತೆಗೆದುಕೊಂಡನು. ಮತ್ತೆ ಯಾವನೋ ಅದೇ ರೀತಿ ಜಾತಿಯಿಂದ ಬಹಿಷ್ಕೃತನಾದ ಬ್ರಾಹ್ಮಣನೊಬ್ಬನು ಕಾಶಿಯಲ್ಲಿರುತ್ತಿದ್ದನು. ಅವನ ಮಗಳು ಯುವತಿಯಾಗಿದ್ದಳು. ಅವನು ಇವನಿಗೆ--"ನೀನು ಸಂನ್ಯಾಸವನ್ನು ಬಿಟ್ಟು, ನನ್ನ ಮಗಳನ್ನು ಮದುವೆಮಾಡಿಕೊ" ಎಂದು ಹೇಳಿದನು. ಹಾಗೆಯೇ ಆಯಿತು. ತಂದೆಯು ಎಂತಹ ಲೀಲೆಯನ್ನು ಮಾಡಿದ್ದನೋ, ಪುತ್ರನು ಅಂತಹುದನ್ನೇಕೆ ಮಾಡದೇ ಇದ್ದಾನು? ಆ ಸ್ತ್ರೀಯನ್ನು ಕರೆದುಕೊಂಡು, ಮೊದಲು ಎಲ್ಲಿ, ವಿಷ್ಣುಸ್ವಾಮಿಯ ದೇವಾಲಯದಲ್ಲಿ ಶಿಷ್ಯನಾಗಿದ್ದನೋ, ಅಲ್ಲಿಗೇ ಹೊರಟುಹೋದನು. ವಿವಾಹಮಾಡಿಕೊಂಡುದರಿಂದ, ಅವರನ್ನು ಅಲ್ಲಿಂದ ಓಡಿಸಿಬಿಟ್ಟರು. ಆಮೇಲೆ, ಎಲ್ಲಿ ಅವಿದ್ಯೆಯು ಮನೆಮಾಡಿಕೊಂಡಿದೆಯೋ, ಆ ವ್ರಜದೇಶಕ್ಕೆ ಹೋಗಿ, ಅನೇಕ ಬಗೆಯ ಛಲ-ಯುಕ್ತಿಗಳಿಂದ ತನ್ನ ಪ್ರಪಂಚವನ್ನು ವಿಸ್ತರಿಸ ತೊಡಗಿದನು. ಮತ್ತು "ಶ್ರೀಕೃಷ್ಣನು ನನ್ನನ್ನು ಸಂಧಿಸಿದನು. ಮತ್ತು ಗೋಲೋಕದಿಂದ ಮರ್ತ್ಯಲೋಕಕ್ಕೆ ಬಂದಿರುವ "ದೇವೀಜೀವ" ರನ್ನು ಬ್ರಹ್ಮಸಂಬಂಧ ಮೊದಲಾದುದರಿಂದ ಪವಿತ್ರಗೊಳಿಸಿ, ಗೋಲೋಕಕ್ಕೆ ಕಳುಹಿಸು ಎಂದು ಹೇಳಿದನು" ಎಂದು ಸುಳ್ಳುಮಾತುಗಳನ್ನು ಪ್ರಸಿದ್ಧಿಗೊಳಿಸತೊಡಗಿದನು. ಮೂರ್ಖರಿಗೆ ಈ ಮೊದಲಾದ ಪ್ರಲೋಭನದ ಮಾತುಗಳನ್ನು ಹೇಳಿ, ಸ್ವಲ್ಪಜನರನ್ನು, ಅಂದರೆ

ಎಂಬತ್ತುನಾಲ್ಕು ಮಂದಿಗಳನ್ನು ವೈಷ್ಣವರನ್ನಾಗಿ ಮಾಡಿದನು. ಮತ್ತು ಕೆಳಗೆ ಬರೆದ ಮಂತ್ರಗಳನ್ನು ನಿರ್ಮಿಸಿಕೊಂಡನು ಹಾಗೂ, ಅವುಗಳಲ್ಲಿಯೂ ವ್ಯತ್ಯಾಸವಿಟ್ಟಿದ್ದಾನೆ. ಉದಾಹರಣೆಗೆ :—

ಶ್ರೀಕೃಷ್ಣಃ ಶರಣಂ ಮಮ ।
ಕ್ಲೀಂ ಕೃಷ್ಣಾಯ ಗೋಪೀಜನವಲ್ಲಭಾಯ ಸ್ವಾಹಾ ॥

[ಗೋಪಾಲ ಸಹಸ್ರನಾಮ]

ಈ ಎರಡೂ ಸಾಧಾರಣಮಂತ್ರಗಳು ಆದರೆ ಮುಂದಿನ ಮಂತ್ರವು ಬ್ರಹ್ಮಸಂಬಂಧವನ್ನೂ, ಸಮರ್ಪಣವನ್ನೂ ಮಾಡಿಸುವುದಾಗಿದೆ :—

ಶ್ರೀಕೃಷ್ಣಃ ಶರಣಂ ಮಮ ಸಹಸ್ರಪರಿವತ್ಸರ
ವ್ಯಿತಕಾಲಜಾತಕೃಷ್ಣವಿಯೋಗಜನಿತತಾಪಕ್ಲೇಶಾನಂತ
ತಿರೋಭಾವೋಽಹಂ ಭಗವತೇ ಕೃಷ್ಣಾಯ ದೇಹೇಂ
ದ್ರಿಯ ಪ್ರಾಣಾಂತಃಕರಣ ತದ್ಧರ್ಮಾಂಶ್ಚ ದಾರಾಗಾರ
ಪುತ್ರಾಪ್ತವಿತ್ತೇಹಪರಾಣ್ಯಾತ್ಮನಾ ಸಹ ಸಮರ್ಪಯಾಮಿ
ದಾಸೋಽಹಂ ಕೃಷ್ಣತವಾಸ್ಮಿ ॥

ಈ ಮಂತ್ರವನ್ನು ಪದೇಶಿಸಿ, ಶಿಷ್ಯಶಿಷ್ಯೆಯರನ್ನು ಸಮರ್ಪಣ ಮಾಡಿಸುತ್ತಾರೆ. "ಕ್ಲೀಂ ಕೃಷ್ಣಾಯೇತಿ" ಈ "ಕ್ಲೀಂ" ತಂತ್ರಗ್ರಂಥದ್ದು. ಇದರಿಂದ ಈ ವಲ್ಲಭಮತವೂ ವಾಮಮಾರ್ಗಿಗಳ ಒಂದು ಭೇದವೆಂಬುದು ವಿದಿತವಾಗುತ್ತದೆ. ಇದರಿಂದಲೇ ಗೋಸಾಯಿಗಳು ಬಹುತೇಕವಾಗಿ ಸ್ತ್ರೀಸಂಗವನ್ನು ಮಾಡುತ್ತಾರೆ. "ಗೋಪೀವಲ್ಲಭೇತಿ" ಕೃಷ್ಣನು ಗೋಪಿಯರಿಗೆ ಮಾತ್ರ ಪ್ರಿಯನಾಗಿದ್ದನೋ? ಬೇರೆಯವರಿಗೆ ಆಗಿರಲಿಲ್ಲವೋ? ಯಾವನು ಸ್ತ್ರೈಣ–ಅಂದರೆ ಸ್ತ್ರೀಭೋಗದಲ್ಲಿ ಸಿಕ್ಕಿಕೊಂಡಿರುತ್ತಾನೋ, ಅವನೇ ಸ್ತ್ರೀಯರಿಗೆ ಪ್ರಿಯನಾಗಿರುತ್ತಾನೆ. ಕೃಷ್ಣನು ಇಂತಹವನಾಗಿದ್ದನೇ? ಈಗ "ಸಹಸ್ರಪರಿವತ್ಸರೇತಿ" ಸಾವಿರ ವರ್ಷಗಳ ಗಣನೆ ವ್ಯರ್ಥ; ಏಕೆಂದರೆ—ವಲ್ಲಭನೂ, ಆತನ ಶಿಷ್ಯರೂ ಸರ್ವಜ್ಞರೇನಲ್ಲ. ಕೃಷ್ಣನ ವಿಯೋಗವು ಸಹಸ್ರ ವರ್ಷಗಳಿಂದಾಯಿತೇ? ಮತ್ತು ಇಂದಿನವರೆಗೆ, ಅಂದರೆ, ಎಂದಿನವರೆಗೆ

ವಲ್ಲಭನ ಮತವಿರಲಿಲ್ಲವೋ, ವಲ್ಲಭನೂ ಹುಟ್ಟಿರಲಿಲ್ಲವೋ, ಅದಕ್ಕೆ ಮುಂಚೆ ತನ್ನ ದೈವೀಜೀವರನ್ನುದ್ಧರಿಸಲು ಏತಕ್ಕೆ ಬರಲಿಲ್ಲ? "ತಾಪ" ಮತ್ತು "ಕ್ಲೇಶ" ಇವೆರಡೂ ಪರ್ಯಾಯವಾಚಕಗಳು. ಇವುಗಳಲ್ಲಿ ಒಂದನ್ನು ಗ್ರಹಿಸುವುದು ಉಚಿತವಾಗಿತ್ತು; ಎರಡನ್ನೂ ಅಲ್ಲ. "ಅನಂತ" ಶಬ್ದವನ್ನು ಪಠಿಸುವುದು ವ್ಯರ್ಥ; ಮತ್ತು ಯಾವನು ಅನಂತಕಾಲದವರೆಗೆ "ತಿರೋಹಿತ" ಅಂದರೆ ಆಚ್ಛಾದಿತನಾಗಿರುವನೋ, ಅವನ ಮುಕ್ತಿಗಾಗಿ ವಲ್ಲಭನ ಜನನವೂ ಕೂಡ ವ್ಯರ್ಥವಾಗಿರುತ್ತದೆ. ಏಕೆಂದರೆ—ಅನಂತಕ್ಕೆ ಅಂತವಿರುವುದಿಲ್ಲ. ಒಳ್ಳೆಯದು, ದೇಹೇಂದ್ರಿಯಗಳು, ಪ್ರಾಣಾಂತಃಕರಣಗಳು ಮತ್ತು ಅವುಗಳ ಧರ್ಮಗಳು, ಸ್ತ್ರೀ, ಸ್ಥಾನ, ಪುತ್ರ, ಪ್ರಾಪ್ತವಾದ ಧನ—ಇವುಗಳನ್ನೆಲ್ಲಾ ಕೃಷ್ಣನಿಗೇಕೆ ಅರ್ಪಿಸಬೇಕು? ಏಕೆಂದರೆ—ಕೃಷ್ಣನು ಪೂರ್ಣಕಾಮನಾದುದರಿಂದ ಯಾವನ ದೇಹಾದಿಗಳನ್ನೂ ಇಚ್ಛಿಸಲಾರನು. ಮತ್ತು ದೇಹಾದಿಗಳ ಅರ್ಪಣೆಮಾಡುವುದೂ ಸಹ ಅಸಂಭವ. ಏಕೆಂದರೆ—ಉಗುರಿನಿಂದ ಹಿಡಿದು ಶಿಖೆಯವರೆಗೆ ದೇಹವೆನಿಸುತ್ತದೆ. ದೇಹದ ಅರ್ಪಣವೆಂದರೆ—ಅದರಲ್ಲಿ ಯಾವ ಯಾವ ಒಳ್ಳೆಯ, ಕೆಟ್ಟ ವಸ್ತುಗಳಿವೆಯೋ, ಅವುಗಳೆಲ್ಲದರ, ಮಲಮೂತ್ರಾದಿಗಳದೂ ಸಹ ಅರ್ಪಣವನ್ನು ಹೇಗೆ ಮಾಡಬಲ್ಲೆರಿ? ಮತ್ತು ಪಾಪ-ಪುಣ್ಯ ಎಂಬ ಯಾವ ಕರ್ಮಗಳಿರುತ್ತವೋ, ಅವನ್ನು ಕೃಷ್ಣಾರ್ಪಣಮಾಡುವುದರಿಂದ, ಅವುಗಳ ಫಲಕ್ಕೂ ಕೃಷ್ಣನೇ ಭಾಗಿಯಾಗಬೇಕಾಗುತ್ತದೆ. ಅಂದರೆ, ಹೆಸರೇನೋ ಕೃಷ್ಣನದನ್ನು ಹೇಳುತ್ತಾರೆ ಮತ್ತು ಸಮರ್ಪಣವನ್ನು ತಮಗಾಗಿ ಮಾಡಿಸಿಗೂಳ್ಳುತ್ತಾರೆ. ದೇಹದಲ್ಲಿ ಮಲಮೂತ್ರ ಮೊದಲಾದುದು ಏನೇನಿದೆಯೋ, ಅದೆಲ್ಲಾ ಗೋಸಾಯಿಗಳಿಗೇಕೆ ಅರ್ಪಣವಾಗುವುದಿಲ್ಲ? "ಸಿಹಿಸಿಹಿಯಾದುದೆಲ್ಲಾ ಒಳಕ್ಕೆ; ಕಹಿಕಹಿಯಾದುದೆಲ್ಲಾ ನೆಲಕ್ಕೆ?" ಮತ್ತು "ಗೋಸಾಯಿಗಳಿಗೇ ಅರ್ಪಿಸಬೇಕು, ಅನ್ಯಮತೀಯರಿಗಲ್ಲ" ಎಂದೂ ಸಹ ಬರೆದಿದ್ದಾರೆ. ಇವೆಲ್ಲಾ ಸ್ವಾರ್ಥಪರತ್ವ ಮತ್ತು ಪರರ ಧನ ಮೊದಲಾದುವನ್ನು ಅಪಹರಿಸುವುದಕ್ಕೂ ಲೀಲೆಯನ್ನು ರಚಿಸಿದ್ದಾರೆ. ವಲ್ಲಭನ ಈ ಪ್ರಪಂಚವನ್ನು ನೋಡಿರಿ:—

ಶ್ರಾವಣಸ್ಯಾಮಲೇ ಪಕ್ಷ ಏಕಾದಶ್ಯಾಂ ಮಹಾನಿಶಿ ।
ಸಾಕ್ಷಾದ್ಭಗವತಾ ಪ್ರೋಕ್ತಂ ತದಕ್ಷರಶ ಉಚ್ಯತೇ ॥೧॥

ಬ್ರಹ್ಮಸಂಬಂಧಕರಣಾತ್ಸರ್ವೇಷಾಂ ದೇಹ ಜೀವಯೋಃ ।
ಸರ್ವದೋಷನಿವೃತ್ತಿರ್ಹಿ ದೋಷಾಃ ಪಂಚವಿಧಾಃ ಸ್ಮೃತಾಃ ॥

ಸಹಜಾ ದೇಶಕಾಲೋತ್ಥಾ ಲೋಕವೇದವಿರೂಪಿತಾಃ ।
ಸಂಯೋಗಜಾಃ ಸ್ಪರ್ಶಜಾಶ್ಚ ನ ಮುಂತವ್ಯಾಃ ಕದಾಚನ ॥೩॥

ಅನ್ಯಥಾ ಸರ್ವದೋಷಾಣಾಂ ನ ನಿವೃತ್ತಿಃ ಕಥಂಚನ ।
ಅಸಮರ್ಪಿತವಸ್ತೂನಾಂ ತಸ್ಮಾದ್ವರ್ಜನಮಾಚರೇತ್ ॥೪॥

ನಿವೇದಿಭಿಃ ಸಮಶ್ನೀಯಾದೇವ ಸರ್ವಂ ಕುರ್ಯಾದಿತಿ ಸ್ಮೃತಿಃ ।
ನ ಮತಂ ದೇವದೇವಸ್ಯ ಸ್ವಾಮಿಭುಕ್ತಿಸಮರ್ಪಣಂ ॥೫॥

ತಸ್ಮಾದಾದೌ ಸರ್ವಕಾರ್ಯೇ ಸರ್ವವಸ್ತುಸಮರ್ಪಣಂ ।
ದತ್ತಾಪಹಾರವಚನಂ ತಥಾ ಚ ಸಕಲಂ ಹರೇಃ ॥೬॥

ನ ಗ್ರಾಹ್ಯಮಿತಿ ವಾಕ್ಯಂಹಿ ಭಿನ್ನಮಾರ್ಗಪರಂ ಮತಂ ।
ಸೇವಕಾನಾಂ ಯಥಾಲೋಕೇ ವ್ಯವಹಾರಃ ಪ್ರಸಿದ್ಧ್ಯತಿ ॥೭॥

ತಥಾಕಾರ್ಯಂ ಸಮಶ್ನೀಯಾದೇವ ಸರ್ವೇಷಾಂ ಬ್ರಹ್ಮತಾ ತತಃ ।
ಗಂಗಾತ್ವೇ ಗುಣದೋಷಾಣಾಂ ಗುಣದೋಷಾದಿ ವರ್ಣನಂ॥೮॥

ಈ ಮೊದಲಾದ ಶ್ಲೋಕಗಳು ಗೋಸಾಯಿಗಳ ಸಿದ್ಧಾಂತರಹಸ್ಯ ಮೊದಲಾದ ಗ್ರಂಥಗಳಲ್ಲಿ ಬರೆಯಲ್ಪಟ್ಟವೆ. ಇದೇ ಗೋಸಾಯಿಗಳ ಮತದ ಮೂಲತತ್ವವಾಗಿದೆ. ಒಳ್ಳೆಯದು, ಇವರನ್ನು ಯಾರಾದರೂ– "ಶ್ರೀಕೃಷ್ಣನ ನಿಧನವಾಗಿ ಸ್ವಲ್ಪ ಕಡಿಮೆ ಐದುಸಾವಿರ ವರ್ಷಗಳು ಕಳೆದುವು. ಅವನು ವಲ್ಲಭನನ್ನು ಶ್ರಾವಣಮಾಸದ ಅರ್ಧ ರಾತ್ರಿಯಲ್ಲಿ ಹೇಗೆ ಸಂಧಿಸಬಲ್ಲವನಾಗಿದ್ದನು?" ಎಂದು ಪ್ರಶ್ನಿಸಬೇಕು. ॥೧॥ ಯಾವನು ಗೋಸಾಯಿಯ ಶಿಷ್ಯನಾಗುತ್ತಾನೋ, ಮತ್ತು ಅವನಿಗೆ ಸಮಸ್ತ ಪದಾರ್ಥಗಳನ್ನೂ ಸಮರ್ಪಿಸುತ್ತಾನೋ, ಅವನ ಶರೀರದ ಮತ್ತು ಜೀವನ ದೋಷಗಳೆಲ್ಲಾ ನಿವೃತ್ತಿಹೊಂದಿಬಿಡುತ್ತವೆ. ಇದೇ

ಮೂರ್ಖರನ್ನು ದಾರಿತಪ್ಪಿಸಿ ತನ್ನ ಮತದಲ್ಲಿ ಪ್ರವೇಶಗೊಳಿಸುವ ವಲ್ಲಭನ ಪ್ರಪಂಚವಾಗಿರುತ್ತದೆ. ಗೋಸಾಯಿಗಳ ಶಿಷ್ಯಶಿಷ್ಯೆಯರ ಎಲ್ಲಾ ದೋಷಗಳೂ ನಿವೃತ್ತವಾಗುವುವಾದರೆ, ರೋಗ, ದಾರಿದ್ರ್ಯ—ಮೊದಲಾದುವುಗಳಿಂದ ಪೀಡಿತರಾಗಿ ಏಕಿರುತ್ತಾರೆ? ಮತ್ತು ಆ ದೋಷಗಳು ಐದು ಬಗೆಯವಾಗಿರುತ್ತವೆ. ॥೨॥ ಒಂದನೆಯದು—ಸ್ವಾಭಾವಿಕವಾದುದು. ಅಂದರೆ ಕಾಮಕ್ರೋಧಾದಿಗಳಿಂದ ಉತ್ಪನ್ನವಾಗುವ ಸಹಜ ದೋಷಗಳು. ಎರಡನೆಯವು—ಯಾವುದೋ ದೇಶ–ಕಾಲದಲ್ಲಿ ಮಾಡುವ ನಾನಾ ಪ್ರಕಾರವಾದ ಪಾಪಗಳು. ಮೂರನೆಯವು—ಲೋಕದಲ್ಲಿ ಭಕ್ಷ್ಯಾಭಕ್ಷ್ಯಗಳೆಂದು ಹೇಳಲ್ಪಡುವಂತಹವು ಮತ್ತು ಮಿಥ್ಯಾಭಾಷಣ ಮೊದಲಾದ ವೇದೋಕ್ತವಾದಂತಹವು. ನಾಲ್ಕನೆಯವು—ಕೆಟ್ಟಸಂಗದಿಂದ, ಅಂದರೆ—ಕಳವು, ಹಾದರ, ತಾಯಿ–ಸೋದರಿ–ಮಗಳು–ಸೊಸೆ–ಗುರುಪತ್ನಿ ಮೊದಲಾದವರೊಂದಿಗೆ ಸಂಯೋಗ ಮಾಡುವುದರಿಂದ ಹುಟ್ಟುವಂತಹ ಸಂಯೋಗದ ದೋಷಗಳು. ಐದನೆಯದು—ಸ್ಪರ್ಶಜದೋಷಗಳು, ಅಂದರೆ—ಅಸ್ಪರ್ಶನೀಯರನ್ನು ಸ್ಪರ್ಶಮಾಡುವುದು. ಈ ಐದು ದೋಷಗಳನ್ನೂ ಗೋಸಾಯಿಗಳ ಮತದವರು ಎಂದೂ ಅಂಗೀಕರಿಸಬಾರದು; ಅಂದರೆ–ಯಥೇಷ್ಟಾಚಾರವನ್ನು ಮಾಡಬೇಕು. ॥೩॥ ಗೋಸಾಯಿಗಳ ಮತವಲ್ಲದೆ, ದೋಷಗಳ ನಿವೃತ್ತಿಗೆ ಬೇರೆ ಯಾವ ಮಾರ್ಗವೂ ಇಲ್ಲ. ಆದುದರಿಂದ ಸಮರ್ಪಣೆ ಮಾಡದ—ಪದಾರ್ಥವನ್ನು ಗೋಸಾಯಿಗಳ ಶಿಷ್ಯರು ಅನುಭವಿಸಬಾರದು. ಆದುದರಿಂದಲೇ ಇವರ ಶಿಷ್ಯರು ತಮ್ಮ ಸ್ತ್ರೀಯರು, ಕನ್ಯೆಯರು, ಸೊಸೆಯರು ಮತ್ತು ಧನ ಮೊದಲಾದ ವಸ್ತುಗಳನ್ನೂ ಸಹ ಸಮರ್ಪಣೆಮಾಡುತ್ತಾರೆ; ಆದರೆ, ಎಂದಿನವರೆಗೆ ಗೋಸಾಯಿಗಳ ಚರಣಸೇವೆಯಲ್ಲಿ ಸಮರ್ಪಿತಳಾಗುವುದಿಲ್ಲವೋ, ಅದುವರೆಗೆ ಅವಳ ಸ್ವಾಮಿಯು ತನ್ನ ಪತ್ನಿಯನ್ನು ಸ್ಪರ್ಶಿಸಬಾರದು—ಎಂಬುದು ಸಮರ್ಪಣದ ನಿಯಮವಾಗಿರುತ್ತದೆ. ॥೪॥ ಈ ಕಾರಣದಿಂದ ಗೋಸಾಯಿಗಳ ಶಿಷ್ಯರು ಸಮರ್ಪಣಮಾಡಿ, ಆಮೇಲೆ ತಮ್ಮ ತಮ್ಮ ಪದಾರ್ಥಗಳನ್ನು ಅನುಭವಿಸಬೇಕು; ಏಕೆಂದರೆ, ಸ್ವಾಮಿಯು ಅನುಭವಿಸಿದ ಮೇಲೆ ಸಮರ್ಪಣವಾಗಲಾರದು. ॥೫॥ ಆದುದರಿಂದ

ಮೊದಲು ಎಲ್ಲಾ ಕೆಲಸಗಳಲ್ಲಿಯೂ ಎಲ್ಲಾ ವಸ್ತುಗಳ ಸಮರ್ಪಣವನ್ನೂ ಮಾಡಬೇಕು. ಮೊದಲು ಗೋಸಾಯಿಗಳಿಗೆ ಭಾರ್ಯೆ–ಮೊದಲಾದವರನ್ನು ಸಮರ್ಪಿಸಿ, ಆಮೇಲೆ ಗ್ರಹಿಸಬೇಕು. ಹಾಗೆಯೇ ಹರಿಗೆ ಸಂಪೂರ್ಣಪದಾರ್ಥಗಳನ್ನು ಸಮರ್ಪಿಸಿ, ಗ್ರಹಿಸಬೇಕು. ॥೬॥ ಗೋಸಾಯಿಗಳ ಮತದಿಂದ ಬೇರೆಯಾದ ಮಾರ್ಗದ ವಾಕ್ಯಮಾತ್ರವನ್ನೂ ಗೋಸಾಯಿಗಳ ಶಿಷ್ಯಶಿಷ್ಯೆಯರು ಎಂದೂ ಆಲಿಸಬಾರದು; ಗ್ರಹಿಸಲೂಬಾರದು. ಇದೇ ಅವರ ಶಿಷ್ಯರ ವ್ಯವಹಾರವೆಂದು ಪ್ರಸಿದ್ಧವಾಗಿದೆ. ॥೭॥ ಹಾಗೆಯೇ ಎಲ್ಲಾ ವಸ್ತುಗಳ ಸಮರ್ಪಣವನ್ನು ಮಾಡಿ, ಎಲ್ಲರಲ್ಲಿಯೂ ಬ್ರಹ್ಮಬುದ್ಧಿಯನ್ನಿಡಬೇಕು. ಅದರನಂತರ, ಬೇರೆ ನೀರು ಗಂಗೆಯಲ್ಲಿ ಸೇರಿ ಗಂಗಾರೂಪವಾಗಿ ಹೋಗುವಂತೆಯೇ, ತಮ್ಮ ಮತದಲ್ಲಿ ಗುಣಗಳೂ ಮತ್ತು ಬೇರೆ ಮತದಲ್ಲಿ ದೋಷಗಳೂ ಇವೆ. ಅದುದರಿಂದ ತಮ್ಮ ಮತದಲ್ಲಿ ಗುಣಗಳನ್ನು ವರ್ಣಿಸುತ್ತಿರಬೇಕು.॥೮॥ ಈಗ ನೋಡಿರಿ, ಗೋಸಾಯಿಗಳ ಮತವು ಎಲ್ಲಾ ಮತಗಳಿಗಿಂತ ಹೆಚ್ಚಾಗಿ ತನ್ನ ಸ್ವಾರ್ಥವನ್ನು ಸಾಧಿಸಿಕೊಳ್ಳುವಂತಹುದಾಗಿದೆ. ಒಳ್ಳೆಯದು, ಈ ಗೋಸಾಯಿಗಳನ್ನು ಯಾರಾದರೂ “ನೀವು ಬ್ರಹ್ಮನ ಒಂದು ಲಕ್ಷಣವನ್ನು ಸಹ ತಿಳಿದಿಲ್ಲ; ಇನ್ನು ಶಿಷ್ಯ–ಶಿಷ್ಯೆಯರಿಗೆ ಬ್ರಹ್ಮ ಸಂಬಂಧವನ್ನು ಹೇಗೆ ಮಾಡಿಸಬಲ್ಲಿರಿ” ಎಂದು ಪ್ರಶ್ನಿಸಬೇಕು. “ನಾವೇ ಬ್ರಹ್ಮ; ನಮ್ಮೊಂದಿಗೆ ಸಂಬಂಧವಾಗುವುದರಿಂದ ಬ್ರಹ್ಮ ಸಂಬಂಧವಾಗಿ ಹೋಗುತ್ತದೆ” ಎನ್ನುವಿರಾದರೆ, ನಿಮ್ಮಲ್ಲಿ ಬ್ರಹ್ಮನ ಗುಣ–ಕರ್ಮ–ಸ್ವಭಾವ ಒಂದಾದರೂ ಇಲ್ಲ. ಮತ್ತೆ ನೀವು ಕೇವಲ ಭೋಗವಿಲಾಸಕ್ಕಾಗಿ ಬ್ರಹ್ಮರಾಗಿ ಕುಳಿತಿದ್ದೀರೋ? ಒಳ್ಳೆಯದು, ಶಿಷ್ಯ–ಶಿಷ್ಯೆಯರನ್ನಂತೂ ನೀವು ನಿಮಗೆ ಸಮರ್ಪಣೆಮಾಡಿಸಿಕೊಂಡು ಪವಿತ್ರಗೊಳಿಸುತ್ತೀರಿ; ಆದರೆ ನೀವು, ನಿಮ್ಮ ಸ್ತ್ರೀ, ಹೆಣ್ಣುಮಗಳು, ಸೊಸೆ–ಮೊದಲಾದವರು ಅಸಮರ್ಪಿತರಾಗಿ ಉಳಿದುಹೋಗುವುದರಿಂದ, ಅಶುದ್ಧರಾಗಿ ಉಳಿದರೋ ಇಲ್ಲವೋ? ಮತ್ತು ನೀವು ಅಸಮರ್ಪಿತ ವಸ್ತುವನ್ನು ಅಶುದ್ಧವೆಂದು ಅಂಗೀಕರಿಸುತ್ತೀರಿ; ಮತ್ತು ಅವುಗಳಿಂದ ಉತ್ಪನ್ನರಾದ ನೀವುಗಳು ಅಶುದ್ಧರೇಕಲ್ಲ? ಆದುದರಿಂದ ನಿಮ್ಮ ಹೆಂಡತಿ, ಮಗಳು, ಸೊಸೆ ಮೊದಲಾದವರನ್ನು ಅನ್ಯಮತೀಯರಿಗೆ

ಸಮರ್ಪಣೆ ಮಾಡುತ್ತಿರಬೇಕಾದುದು ನಿಮಗೂ ಉಚಿತವಾಗಿದೆ. " ಇಲ್ಲ, ಇಲ್ಲ " ಎನ್ನುವಿರಾದರೆ, ನೀವೂ ಕೂಡ ಅನ್ಯ ಸ್ತ್ರೀಪುರುಷರು ಮತ್ತು ಧನ ಮೊದಲಾದ ಪದಾರ್ಥಗಳನ್ನು ಸಮರ್ಪಿಸುವುದು–ಸಮರ್ಪಣೆ ಮಾಡಿಸುವುದನ್ನು ಬಿಟ್ಟುಬಿಡಿ. ಒಳ್ಳೆಯದು, ಇದುವರೆಗೆ ಆದುದಾಯಿತು. ಆದರೆ ಈಗಲಾದರೂ ನಿಮ್ಮ ಮಿಥ್ಯಾಪ್ರಪಂಚ ಮೊದಲಾದ ಕೆಡಕುಗಳನ್ನು ಬಿಡಿರಿ ಮತ್ತು ಸುಂದರವೂ, ಈಶ್ವರೋಕ್ತವೂ ಆದ ವೇದವಿಹಿತ ಸನ್ಮಾರ್ಗಕ್ಕೆ ಬಂದು, ನಿಮ್ಮ ಮನುಷ್ಯರೂಪ ಜನ್ಮವನ್ನು ಸಫಲಗೊಳಿಸಿಕೊಂಡು, ಧರ್ಮ, ಅರ್ಥ, ಕಾಮ, ಮೋಕ್ಷ–ಈ ಫಲಚತುಷ್ಟಯವನ್ನು ಪಡೆದು, ಆನಂದವನ್ನನುಭವಿಸಿರಿ. ಮತ್ತೂ ನೋಡಿರಿ, ಈ ಗೋಸಾಯಿಗಳು ತಮ್ಮ ಸಂಪ್ರದಾಯವನ್ನು " ಪುಷ್ಟಿಮಾರ್ಗ " ವೆಂದು ಹೇಳುತ್ತಾರೆ. ಅಂದರೆ-ತಿನ್ನುವುದು, ಕುಡಿಯುವುದು, ಪುಷ್ಟರಾಗುವುದು ಮತ್ತು ಎಲ್ಲಾ ಸ್ತ್ರೀಯರೊಂದಿಗೂ ಯಥೇಷ್ಟವಾಗಿ ಭೋಗವಿಲಾಸ ಮಾಡುವುದನ್ನು ಪುಷ್ಟಿಮಾರ್ಗವೆನ್ನುತ್ತಾರೆ. ಆದರೆ, ದೊಡ್ಡ ದೊಡ್ಡ, ದುಃಖಪ್ರದವಾದ ಭಗಂದರ ಮೊದಲಾದ ರೋಗಗಳಿಂದ ಗ್ರಸ್ತರಾಗಿ ಹೇಗೆ ಒದ್ದಾಡಿ ಒದ್ದಾಡಿ ಸಾಯುತ್ತಾರೆಂದರೆ, ಅದು ಇವರಿಗೇ ಗೊತ್ತಿರಬೇಕು. ಇವರನ್ನು ಕೇಳಬೇಕು. ನಿಜವನ್ನು ಕೇಳುವಿರಾದರೆ ಪುಷ್ಟಿಮಾರ್ಗವಲ್ಲ; ಆದರೆ ಕುಷ್ಟಿಮಾರ್ಗ. ಹೇಗೆ ಕುಷ್ಠರೋಗಿಯ ಶರೀರದ ಧಾತುವೆಲ್ಲಾ ಕರಗಿ ಕರಗಿ ಹೊರಟುಹೋಗುತ್ತದೋ ಮತ್ತು ಅವನು ವಿಲಾಪಮಾಡುತ್ತಾ ಶರೀರತ್ಯಾಗಮಾಡುತ್ತಾನೋ, ಹಾಗೆಯೇ ಇವರ ಲೀಲೆಯೂ ಕಂಡು ಬರುತ್ತದೆ. ಆದುದರಿಂದ, ನರಕಮಾರ್ಗವೆಂದೂ ಇದನ್ನೇ ಕರೆಯುವುದು ಸರಿಯಾಗಬಲ್ಲದು; ಏಕೆಂದರೆ-ದುಃಖಕ್ಕೆ ನರಕವೆಂದು ಹೆಸರು ಮತ್ತು ಸುಖಕ್ಕೆ ಸ್ವರ್ಗವೆಂದು ಹೆಸರು. ಇದೇ ರೀತಿ ಸುಳ್ಳು ಬಲೆಯನ್ನು ನಿರ್ಮಿಸಿ, ಬಡಪಾಯಿಗಳಾದ ಸರಳ ಸ್ವಭಾವದ ಮಾನವರನ್ನು ಬಲೆಗೆ ಸಿಕ್ಕಿಸಿಕೊಂಡರು ಮತ್ತು ತಮ್ಮನ್ನು ತಾವು ಶ್ರೀ ಕೃಷ್ಣನೆಂದು ಒಪ್ಪಿಕೊಂಡು ಎಲ್ಲರಿಗೂ ಒಡೆಯರಾಗುತ್ತಾರೆ. " ಎಷ್ಟು ದೈವೀಜೀವರು ಗೋಲೋಕದಿಂದ ಇಲ್ಲಿಗೆ ಬಂದಿದ್ದಾರೋ, ಅವರ ಉದ್ಧಾರಮಾಡುವುದಕ್ಕಾಗಿ ಲೀಲಾಪುರುಷೋತ್ತಮರಾದ ನಾವು ಜನ್ಮವೆತ್ತಿದ್ದೇವೆ. ಎಲ್ಲಿಯವರೆಗೆ, ನಮ್ಮ

ಉಪದೇಶಪಡೆಯುವುದಿಲ್ಲವೋ ಅಲ್ಲಿಯವರೆಗೆ ಗೋಲೋಕ ಪ್ರಾಪ್ತಿಯಾಗುವುದಿಲ್ಲ. ಅಲ್ಲಿ ಶ್ರೀಕೃಷ್ಣನೊಬ್ಬನು ಪುರುಷನು; ಮತ್ತೆಲ್ಲರೂ ಸ್ತ್ರೀಯರು."—ಎಂದು ಇವರು ಹೇಳುತ್ತಾರೆ. ಛೇಷ್ ಛೇಷ್; ಒಳ್ಳೆತಾಗಿದೆ ನಿಮ್ಮ ಮತ! ಗೋಸಾಯಿಗಳ ಶಿಷ್ಯರೆಷ್ಟು ಜನರಿದ್ದಾರೋ, ಅವರೆಲ್ಲಾ ಗೋಪಿಯರಾಗಿ ಹೋಗುವರು. ಈಗ ಯೋಚಿಸಿರಿ. ಒಳ್ಳೆಯದು, ಯಾವ ಪುರುಷನಿಗೆ ಇಬ್ಬರು ಪತ್ನಿಯರಿರುತ್ತಾರೋ, ಅವನಿಗೆ ಬಹಳ ದುಃಸ್ಥಿತಿಯುಂಟಾಗಿ ಬಿಡುತ್ತದೆ. ಹೀಗಿರುವಾಗ ಎಲ್ಲಿ ಒಬ್ಬನೇ ಪುರುಷನಿದ್ದು, ಆ ಒಬ್ಬನ ಹಿಂದೆ ಕೋಟ್ಯಾಂತರ ಸ್ತ್ರೀಯರು ಹತ್ತಿಕೊಂಡಿರುವರೋ, ಅಲ್ಲಿ ಅವನ ದುಃಖಕ್ಕೆ ತುದಿಮೊದಲೇನು? ಶ್ರೀಕೃಷ್ಣನಲ್ಲಿ ಬಹುದೊಡ್ಡ ಸಾಮರ್ಥ್ಯವಿದೆ; ಎಲ್ಲರನ್ನೂ ಪ್ರಸನ್ನಗೊಳಿಸುತ್ತಾನೆ."—ಎನ್ನುವಿರಾದರೆ, ಯಾವಳನ್ನು 'ಸ್ವಾಮಿನೀ' ಎಂದು ಕರೆಯುತ್ತಾರೋ, ಆತನ ಆ ಸ್ತ್ರೀಯಲ್ಲಿಯೂ ಶ್ರೀಕೃಷ್ಣನಿಗೆ ಸಮಾನವಾದ ಸಾಮರ್ಥ್ಯವಿರಬಹುದು; ಏಕೆಂದರೆ–ಅವಳು ಆತನ ಅರ್ಧಾಂಗಿಯು. ಇಲ್ಲಿ ಸ್ತ್ರೀ ಪುರುಷರ ಕಾಮಚೇಷ್ಟೆಯು ಸಮನಾಗಿ ಅಥವಾ ಪುರುಷನಿಗಿಂತ ಸ್ತ್ರೀಯಳದು ಅಧಿಕವಾಗಿರುವಂತೆ, ಗೋಲೋಕದಲ್ಲೇಕಿಲ್ಲ? ಹೀಗಿದ್ದಪಕ್ಷದಲ್ಲಿ ಅನ್ಯಸ್ತ್ರೀಯರೊಂದಿಗೆ ಸ್ವಾಮಿನಿಯ ದೊಡ್ಡ ಹೋರಾಟ–ಗೊಂದಲ ಉಂಟಾಗುತ್ತಿರಬಹುದು; ಏಕೆಂದರೆ ಸವತಿತನ ಬಹಳ ಕೆಟ್ಟದು. ಮತ್ತೆ ಗೋಲೋಕವು ಸ್ವರ್ಗಕ್ಕೆ ಬದಲು ನರಕದಂತಾಗಿ ಹೋಗಿರಬಹುದು; ಅಥವಾ ಅತಿ ಸ್ತ್ರೀಗಾಮಿಯಾದ ಪುರುಷನು ಭಗಂದರ ಮೊದಲಾದ ರೋಗಗಳಿಂದ ಪೀಡಿತನಾಗಿರುವಂತೆಯೇ ಗೋಲೋಕದಲ್ಲಿಯೂ ಇರಬಹುದು. ಛಿ! ಛಿ!! ಛಿ!!! ಇಂತಹ ಗೋಲೋಕಕ್ಕಿಂತ ಮರ್ತ್ಯಲೋಕವೇ ಬಡಪಾಯಿ ಒಳ್ಳೆಯದು. ಯಾವ ರೀತಿ ಇಲ್ಲಿ ಗೋಸಾಯಿಗಳು ತಮ್ಮನ್ನು ಶ್ರೀಕೃಷ್ಣನೆಂದು ತಿಳಿದುಕೊಳ್ಳುತ್ತಾರೋ, ಮತ್ತು ಬಹು ಸ್ತ್ರೀಯರೊಂದಿಗೆ ಲೀಲೆಮಾಡುವುದರಿಂದ ಭಗಂದರ ಮತ್ತು ಪ್ರಮೇಹ ಮೊದಲಾದ ರೋಗಗಳಿಂದ ಪೀಡಿತರಾಗಿ ಮಹಾದುಃಖವನ್ನನುಭವಿಸುತ್ತಾರೋ ನೋಡಿರಿ. ಈಗ ಹೇಳಿರಿ, ಯಾವನ ಸ್ವರೂಪನಾದ ಗೋಸಾಯಿಯು ಪೀಡಿತನಾಗುತ್ತಾನೋ, ಆ ಗೋಲೋಕದ ಸ್ವಾಮಿಯಾದ ಶ್ರೀಕೃಷ್ಣನು, ಈ

ರೋಗಗಳಿಂದ ಪೀಡಿತನೇಕಾಗುವುದಿಲ್ಲ? ಮತ್ತು ಆಗುವುದಿಲ್ಲವಾದರೆ, ಅವನ ಸ್ವರೂಪರಾದ ಗೋಸಾಯಿಗಳೇಕೆ ಪೀಡಿತರಾಗುತ್ತಾರೆ?

ಪ್ರಶ್ನೆ :—ಮರ್ತ್ಯಲೋಕದಲ್ಲಿ ಲೀಲಾವತಾರ ಧಾರಣಮಾಡುವುದರಿಂದ ರೋಗ-ದೋಷವುಂಟಾಗುತ್ತದೆ. ಗೋಲೋಕದಲ್ಲಿ ಉಂಟಾಗುವುದಿಲ್ಲ. ಏಕೆಂದರೆ—ಅಲ್ಲಿ ರೋಗ-ದೋಷಗಳೇ ಇಲ್ಲ.

ಉತ್ತರ :—" ಭೋಗೇ ರೋಗಭಯಂ " ಭೋಗವಿದ್ದಲ್ಲಿ ರೋಗವು ಅಗತ್ಯವಾಗಿರುತ್ತದೆ. ಮತ್ತು ಶ್ರೀ ಕೃಷ್ಣನಿಗೆ ಕೋಟ್ಯಾನುಕೋಟಿ ಸ್ತ್ರೀಯರಿಂದ ಮಕ್ಕಳಾಗುತ್ತವೋ, ಇಲ್ಲವೋ? ಮತ್ತು, ಆಗುವುದಾದರೆ ಬರಿಯ ಗಂಡುಗಳೇ ಆಗುತ್ತವೋ ಅಥವಾ ಬರಿಯ ಹೆಣ್ಣುಗಳೋ? ಇಲ್ಲವೋ ಎರಡೂ ಆಗುತ್ತವೋ? " ಬರಿಯ ಹೆಣ್ಣು ಮಕ್ಕಳೇ ಆಗುತ್ತವೆ " ಎನ್ನುವಿರಾದರೆ, ಆವರ ಮದುವೆ ಯಾರೊಂದಿಗಾಗುತ್ತಿರಬಹುದು? ಏಕೆಂದರೆ—ಅಲ್ಲಿ ಶ್ರೀ ಕೃಷ್ಣನನ್ನು ಬಿಟ್ಟು, ಬೇರೆ ಯಾವ ಪುರುಷನೂ ಇಲ್ಲ. ಬೇರೆಯವನಿರುವುದಾದರೆ, ನಿಮ್ಮ ಪ್ರತಿಜ್ಞೆಗೆ ಹಾನಿ ಬಂದಿತು. " ಕೇವಲ ಗಂಡುಮಕ್ಕಳೇ ಆಗುತ್ತವೆ " ಎನ್ನುವಿರಾದರೂ, " ಅವರ ಮದುವೆ ಎಲ್ಲಿ ಮತ್ತು ಯಾರೊಂದಿಗೆ ಆಗುತ್ತದೆ? " ಎಂಬ ಈ ದೋಷವೇ ಬಂದೊದಗುತ್ತದೆ. ಅಥವಾ ಮನೆಯ ಒಳಗೊಳಗೇ ಕೂಡಿಕೊಂಡುಬಿಡುತ್ತಾರೋ? ಇಲ್ಲವೇ, ಬೇರೆ ಯಾರಾದರೊಬ್ಬರ ಹುಡುಗಿಯರಾಗಲಿ, ಹುಡುಗರಾಗಲಿ ಇದ್ದಾರೋ? ಹಾಗಾದರೂ, " ಗೋಲೋಕದಲ್ಲಿ ಒಬ್ಬ ಶ್ರೀ ಕೃಷ್ಣನೇ ಪುರುಷನು " ಎಂಬ ನಿಮ್ಮ ಪ್ರತಿಜ್ಞೆಯು ನಷ್ಟವಾಗಿಹೋಗುತ್ತದೆ. ಮತ್ತು " ಮಕ್ಕಳಾಗುವುದೇಇಲ್ಲ " ಎನ್ನುವಿರಾದರೆ, ಶ್ರೀ ಕೃಷ್ಣನಲ್ಲಿ ನಪುಂಸಕತ್ವದ ಮತ್ತು ಸ್ತ್ರೀಯರಲ್ಲಿ ಬಂಜೆತನದ ದೋಷವುಂಟಾಗುತ್ತದೆ. ಒಳ್ಳೆಯದು, ಈ ಗೋಕುಲ ಏನಾಯಿತು? ದಿಲ್ಲಿಯ ಬಾದಶಹನ ಬೀಬಿಯರ ಸೈನ್ಯವೇ—ಎಂದು ತಿಳಿಯಿರಿ. ಈಗ ಗೋಸಾಯಿಗಳು ತಮ್ಮ ಶಿಷ್ಯರ ಮತ್ತು ಶಿಷ್ಯೆಯರ ತನು-ಮನ-ಧನಗಳನ್ನು ತಮಗೆ ಅರ್ಪಣೆಮಾಡಿಸಿಕೊಳ್ಳುವುದೂ ಕೂಡ ಸರಿಯಲ್ಲ. ಏಕೆಂದರೆ—ಶರೀರವಂತೂ ವಿವಾಹದ ಕಾಲದಲ್ಲಿ ಸ್ತ್ರೀಗೆ ಮತ್ತು ಪತಿಗೆ ಸಮರ್ಪಣವಾಗಿ ಹೋಗುತ್ತದೆ. ಮತ್ತೆ, ಮನವೂ ಕೂಡ ಬೇರೆಯವನಿಗೆ

ಸಮರ್ಪಣವಾಗಲಾರದು; ಏಕೆಂದರೆ ಮನಸ್ಸಿನ ಸಂಗಡವೇ ತನು ವನ್ನೂ ಸಮರ್ಪಿಸುವುದು ಮಾತ್ರ ಸಾಧ್ಯ. ಮತ್ತು, ಮಾಡುವದಾದರೆ, ವ್ಯಭಿಚಾರಿಗಳೆನಿಸುವರು. ಇನ್ನು ಉಳಿಯಿತು ಧನ. ಅದರದೂ ಇದೇ ಲೇಲೆ ಎಂದರಿಯಿರಿ. ಅಂದರೆ—ಮನವಿಲ್ಲದೆ ಏನೂ ಅರ್ಪಣವಾಗ ಲಾರದು. "ಸಂಪಾದನೆಯನ್ನೇನೋ ಶಿಷ್ಯರು ಮಾಡಲಿ; ಮತ್ತು ಆನಂದವನ್ನು ನಾವು ಅನುಭವಿಸೋಣ"—ಎಂಬುದು ಈ ಗೋಸಾಯಿ ಗಳ ಅಭಿಪ್ರಾಯ. ವಲ್ಲಭಸಂಪ್ರದಾಯಸ್ಥರಾದ ಎಷ್ಟು ಜನ ಗೋಸಾಯಿಗಳಿದ್ದಾರೋ ಅವರು ಇದುವರೆಗೂ ತೈಲಂಗಜಾತಿಯಲ್ಲಿಲ್ಲ. ಮತ್ತು ಯಾವನಾದರೂ ಅಪ್ಪಿತಪ್ಪಿ ಇವರಿಗೆ ಕನ್ಯೆಯನ್ನು ಕೊಟ್ಟರೆ, ಅವನೂ ಕೂಡ ಜಾತಿಬಾಹಿರನಾಗಿ ಭ್ರಷ್ಟನಾಗಿಹೋಗುತ್ತಾನೆ; ಏಕೆಂದರೆ—ಇವರು ಜಾತಿಯಿಂದ ಕೆಳದೂಡಲ್ಪಟ್ಟಿದ್ದಾರೆ. ಮತ್ತು ರಾತ್ರಿಹಗಲು ಪ್ರಮಾದದಲ್ಲಿರುತ್ತಾರೆ. ಮತ್ತೆ ನೋಡಿರಿ. ಯಾವ ನಾದರೂ ಗೋಸಾಯಿಯನ್ನು ಬಿಜಯಮಾಡಿಸಿದಾಗ, ಅವನ ಮನೆಗೆಹೋಗಿ, ಸುಮ್ಮನೆ ಮರದಗೊಂಬೆಯಂತೆ ಕುಳಿತಿರುತ್ತಾನೆ. ಮಾತನಾಡುವುಲ್ಲ; ಅಲುಗಾಡುವುದಿಲ್ಲ. ಬಡಪಾಯಿ, ಮೂರ್ಖನಾ ಗಿರದಿದ್ದರೆ ತಾನೇ ಮಾತದಾಡಬೇಕು? "ಮೂರ್ಖಾಣಾಂ ಬಲಂ ಮೌನಂ"—ಏಕೆಂದರೆ–ಮೌನವು ಮೂರ್ಖರ ಬಲ; ಮಾತನಾಡಿದರೆ, ಅವನ ಪೊಳ್ಳು ಹೊರಬಿದ್ದೀತು! ಆದರೆ ಸ್ತ್ರೀಯರ ಕಡೆಗೆ ಲಕ್ಷಣವಾಗಿ ಗಮನವಿತ್ತು ನಿಟ್ಟಿಸುತ್ತಿರುತ್ತಾನೆ. ಮತ್ತು ಯಾವಳ ಕಡೆಗೆ ಗೋಸಾ ಯಿಗಳು ನೋಡುತ್ತಾರೋ, ಅವಳಿಗದು ಮಹಾಭಾಗ್ಯದ ಮಾತೆಂದು ತಿಳಿಯಿರಿ. ಮತ್ತು ಅವಳ ಪತಿ, ಸೋದರ, ಬಂಧು, ಮಾತೆ, ಪಿತ– ಇವರು ಅತಿ ಪ್ರಸನ್ನರಾಗುತ್ತಾರೆ. ಅಲ್ಲಿ ಎಲ್ಲಾ ಸ್ತ್ರೀಯರೂ ಗೋಸಾ ಯಿಗಳ ಪಾದಗಳನ್ನು ಮುಟ್ಟುತ್ತಾರೆ. ಯಾವಳಲ್ಲಿ ಗೋಸಾಯಿಯ ಮನಸ್ಸು ನಿಲ್ಲುವುದೋ' ಅಥವಾ ದಯೆ ಬರುವುದೋ, ಅವಳ ಬೆರ ಳನ್ನು ಕಾಲಿನಿಂದ ಒತ್ತಿ ಬಿಡುತ್ತಾರೆ. ಆ ಸ್ತ್ರೀಯೂ, ಅವಳ ಪತಿ– ಮೊದಲಾದವರೂ ತಮ್ಮ ಭಾಗ್ಯ ಧನ್ಯವಾದುದೆಂದು ತಿಳಿಯುತ್ತಾರೆ. ಮತ್ತು ಆ ಸ್ತ್ರೀಯಳಿಗೆ ಅವಳ ಪತಿ ಮೊದಲಾದರೆಲ್ಲಾ, "ನೀನು ಗೋಸಾಯಿಗಳ ಚರಣ ಸೇವೆಗೆ ಹೋಗು."—ಎಂದು ಹೇಳಿಯೂ

ಹೇಳುತ್ತಾರೆ. ಮತ್ತು ಎಲ್ಲಿಯಾದರೂ ಪತಿ ಮೊದಲಾದವರು ಪ್ರಸನ್ನರಾಗದಿದ್ದರೆ, ಅಲ್ಲಿ ದೂತೆಯರಿಂದಲೂ, ಕುಟನಿಯರಿಂದಲೂ ಕಾರ್ಯವನ್ನು ನೆರವೇರಿಸಿಕೊಳ್ಳುತ್ತಾರೆ. ನಿಜ ಹೇಳಬೇಕೆಂದರೆ:— ಇಂತಹ ಕೆಲಸ ಮಾಡುವವರು ಅವರ ದೇವಾಲಯಗಳಲ್ಲಿ ಮತ್ತು ಅವರ ಸಮೀಪದಲ್ಲಿ ಬಹು ಮುಂದಿಯಿರುತ್ತಾರೆ. ಇನ್ನು ಇವರ ದಕ್ಷಿಣೆಯ ಲೀಲೆ; ಅಂದರೆ, ಈ ರೀತಿಬೇಡುತ್ತಾರೆ:—"ಕಾಣಿಕೆ ತನ್ನಿರಿ–ಗೋಸಾಯಿಗಳದು; ಅಮ್ಮನವರದು, ಪುತ್ರರದು, ಪುತ್ರಿಯರದು, ಯಜಮಾನರದು, ಬಾಗಿಲು ಕಾಯುವವರದು, ಹಾಡುಗಾರರದು ಮತ್ತು ದೇವರದು." ಈ ಎಂಟು ಅಂಗಡಿಗಳಿಂದ ಯಥೇಷ್ಟವಾಗಿ ಮಾಲನ್ನು ಕಬಳಿಸುತ್ತಾರೆ. ಗೋಸಾಯಿಗಳ ಸೇವಕನಾವನಾದರೂ ಮರಣಾಸನ್ನನಾದಾಗ, ಗೋಸಾಯಿಗಳು ಅವನ ಎದೆಯ ಮೇಲೆ ಪಾದವಿಡುತ್ತಾರೆ ಮತ್ತು ಏನೇನು ಸಿಕ್ಕುತ್ತದೋ, ಅದನ್ನು ಗೋಸಾಯಿಗಳು ನುಂಗಿ ಬಿಡುತ್ತಾರೆ. ಈ ಕಾರ್ಯವು ಮಹಾ ಬ್ರಾಹ್ಮಣನ ದರಂತೆ, ಚಂಡಾಲರದರಂತೆ ಅಥವಾ ಹೆಣ ಹೊರುವವರದರಂತೆ ಇಲ್ಲವೇ? ಒಬ್ಬೊಬ್ಬ ಶಿಷ್ಯರು ವಿವಾಹದಲ್ಲಿ ಗೋಸಾಯಿಗಳನ್ನು ಬರಮಾಡಿ, ಅವರಿಂದಲೇ ವರ-ಕನ್ಯೆಯರ ಪಾಣಿಗ್ರಹಣ ಮಾಡಿಸುತ್ತಾರೆ. ಮತ್ತು ಹಲಕೆಲವು ಸೇವಕರು ಕೇಸರ ಸ್ನಾನ ಮಾಡಿಸುತ್ತಾರೆ. ಅಂದರೆ–ಗೋಸಾಯಿಗಳ ಶರೀರದ ಮೇಲೆ ಸ್ತ್ರೀಯರು ಕೇಸರಿಯನ್ನು ಲೇಪಿಸಿ, ಆ ಮೇಲೆ ಒಂದು ದೊಡ್ಡ ಪಾತ್ರೆಯಲ್ಲಿ ಮಣೆಯನ್ನು ಹಾಕಿ, ಸ್ತ್ರೀ–ಪುರುಷರು ಸೇರಿ ಸ್ನಾನ ಮಾಡಿಸುತ್ತಾರೆ. ಆದರೆ ವಿಶೇಷವಾಗಿ ಸ್ತ್ರೀಯರು ಸ್ನಾನ ಮಾಡಿಸುತ್ತಾರೆ. ಮತ್ತೆ ಗೋಸಾಯಿಗಳು ಪೀತಾಂಬರವನ್ನುಟ್ಟು ಮತ್ತು ಹಾವು ಗೆಯನ್ನು ಮೆಟ್ಟಿ ಹೊರ ಬರುತ್ತಾರೆ. ಮತ್ತು ಪಂಚೆಯನ್ನು ಅದರಲ್ಲಿಯೇ ಹಾಕಿಬಿಡುತ್ತಾರೆ. ಆ ಮೇಲೆ ಅವರ ಸೇವಕರು ಆ ನೀರಿನಿಂದ ಆಚಮನಮಾಡುತ್ತಾರೆ ಮತ್ತು ಒಳ್ಳೆಯ ಮಸಾಲೆ ಹಾಕಿ ವೀಳೆಯದೆಲೆಯ ಸುತ್ತನ್ನು ಗೋಸಾಯಿಗಳಿಗೆ ಕೊಡುತ್ತಾರೆ. ಅದನ್ನು ಜಗಿದು ಸ್ವಲ್ಪವನ್ನು ನುಂಗಿಬಿಡುತ್ತಾರೆ, ಉಳಿದ ತಂಬುಲವನ್ನು ಅವರ ಸೇವಕನು ಬಾಯಿನೆದುರಿಗೆ ಹಿಡಿದ ಒಂದು ಬೆಳ್ಳಿಯ

ಬಟ್ಟಲಿನಲ್ಲಿ ಉಗುಳಿಬಿಡುತ್ತಾರೆ. ಅದರ ಪ್ರಸಾದವೂ ಹಂಚಲ್ಪಡುತ್ತದೆ; ಅದನ್ನು "ಅಪ್ಪಟ ಪ್ರಸಾದ"ವೆನ್ನುತ್ತಾರೆ. ಈಗ, ಇವರು ಯಾವ ಬಗೆಯ ಮನುಷ್ಯರೆಂದು ಯೋಚಿಸಿರಿ. ಮೌಢ್ಯ ಮತ್ತು ಅನಾಚಾರ ಇರುವುದಾದರೆ, ಇಷ್ಟೇ ಇರಬಹುದುದು- ಬಹುಮಂದಿ ಸಮರ್ಪಣವನ್ನು ತೆಗೆದುಕೊಳ್ಳುತ್ತಾರೆ. ಆವರಲ್ಲಿ ಎಷ್ಟೋಜನ ವೈಷ್ಣವರ ಕೈಯಿನದನ್ನು ತಿನ್ನುತ್ತಾರೆ; ಬೇರೆಯವರ ಕೈಯಿನದನ್ನು ತಿನ್ನುವುದಿಲ್ಲ. ಎಷ್ಟೋ ಜನರು ವೈಷ್ಣನವರ ಕೈಯಿನದನ್ನೂ ತಿನ್ನುವುದಿಲ್ಲ; ಕಟ್ಟಗೆಯನ್ನೂ ಕೂಡ ತೊಳೆದು ತೆಗೆದುಕೊಳ್ಳುತ್ತಾರೆ. ಆದರೆ. ಹಿಟ್ಟು, ಬೆಲ್ಲ, ಸಕ್ಕರೆ, ತುಪ್ಪ ಮೊದಲಾದುವನ್ನು ತೊಳೆದರೆ, ಅವುಗಳು ಮೈಲಿಗೆಯಾಗುತ್ತವೆ! ಏನು ಮಾಡಬೇಕು, ಬಡಪಾಯಿಗಳು? ಇವುಗಳನ್ನು ತೊಳೆದರೆ, ಪದಾರ್ಥಗಳನ್ನೇ ಕೈಯಿಂದ ಕಳೆದುಕೊಂಡಾರು! ಅವರು—"ನಾವು ದೇವರ ಶೃಂಗಾರ-ಸಂಗೀತ-ನೈವೇದ್ಯಗಳಲ್ಲಿ ಬಹಳ ಧನವನ್ನು ವೆಚ್ಚ ಮಾಡುತ್ತೇವೆ."—ಎಂದು ಹೇಳುತ್ತಾರೆ; ಆದರೆ ಅವರು ಶೃಂಗಾರ-ಸಂಗೀತ-ನೈವೇದ್ಯಗಳನ್ನು ತಾವೇ ಮಾಡಿಕೊಳ್ಳುತ್ತಾರೆ ಮತ್ತು ನಿಜ ಹೇಳುವುದಾದರೆ, ದೊಡ್ಡ ದೊಡ್ಡ ಅನರ್ಥಗಳಾಗುತ್ತವೆ, ಅಂದರೆ ಹೋಳಿಕೋತ್ಸವದ ಸಮಯದಲ್ಲಿ, ಪಿಚಕಾರಿಗಳನ್ನು ತುಂಬಿಸಿ, ಸ್ತ್ರೀಯರ ಅಸ್ಪರ್ಶನೀಯವಾದ ಅವಯವಗಳು ಅಂದರೆ ಗುಪ್ತ ಸ್ಥಾನಗಳ ಮೇಲೆ ಹೊಡೆಯುತ್ತಾರೆ. ಮತ್ತು ರಸವಿಕ್ರಯವು ಬ್ರಾಹ್ಮಣನಿಗೆ ನಿಷಿದ್ಧವಾದ ಕರ್ಮ; ಅದನ್ನೂ ಕೂಡಾ ಮಾಡುತ್ತಾರೆ.

ಪ್ರಶ್ನೆ:—ಗೋಸಾಯಿಗಳು ರೊಟ್ಟಿ, ತೊವ್ವೆ, ಪಳಿದ್ಯ, ಅನ್ನ, ಪಲ್ಯ ಮತ್ತು ಕಜ್ಜಾಯ ಹಾಗೂ ಉಂಡೆ ಮೊದಲಾದುವನ್ನು ಪ್ರತ್ಯಕ್ಷವಾಗಿ ಪೇಟೆಯಲ್ಲಿ ಕುಳಿತೇನೂ ಮಾರುವುದಿಲ್ಲ. ಆದರೆ-ತಮ್ಮ ಆಳು-ಕಾಳುಗಳಿಗೆ ಎಲೆಗಳನ್ನು ಹಂಚಿ ಬಿಡುತ್ತಾರೆ. ಆ ಜನರು ಮಾರುತ್ತಾರೆ; ಗೋಸಾಯಿಗಳಲ್ಲ.

ಉತ್ತರ:—ಗೋಸಾಯಿಗಳು ಅವರಿಗೆ ತಿಂಗಳ ಹಣವಿತ್ತರೆ, ಅವರು ಎಲೆಗಳನ್ನೇಕೆ ತೆಗೆದುಕೊಳ್ಳುವರು? ಗೋಸಾಯಿಗಳು ಸೇವಕರ ಕೈಗೆ ತೊವ್ವೆ-ಅನ್ನ ಮೊದಲಾದುವನ್ನು ಸೇವೆಗೆ ಪ್ರತಿಯಾಗಿ

ಮಾರಿಬಿಡುತ್ತಾರೆ; ಅವರು ತೆಗೆದೊಯ್ದು ಅಂಗಡಿ-ಪೇಟೆಯಲ್ಲಿ ಮಾರುತ್ತಾರೆ. ಗೋಸಾಯಿಗಳು ಸ್ವತಃ ಮಾರದಿದ್ದರೆ, ಬ್ರಾಹ್ಮಣರು ಮೊದಲಾದ ಅವರ ಸೇವಕರಾದರೂ ರಸವಿಕ್ರಯದೋಷದಿಂದ ದೂರ ವಿರುತ್ತಿದ್ದರು. ಮತ್ತು ಕೇವಲ ಗೋಸಾಯಿಗಳೇ ರಸವಿಕ್ರಯವೆಂಬ ಪಾಪಕ್ಕೆ ಭಾಗಿಗಳಾಗುತ್ತಿದ್ದರು. ಮೊದಲನೆಯದಾಗಿಯಂತೂ ಈ ಪಾಪದಲ್ಲಿ ತಾವು ಮುಳುಗಿದರು; ಬೇರೆಯವರನ್ನೂ ಎಳೆದುಕೊಂಡರು. ಮತ್ತು ಒಂದೊಂದು ಕಡೆ ನಾಥದ್ವಾರಾ ಮೊದಲಾದುದರಲ್ಲಿ ಗೋಸಾಯಿಗಳೂ ಮಾರುತ್ತಾರೆ. ರಸವಿಕ್ರಯಮಾಡುವುದು ನೀಚರ ಕೆಲಸ; ಉತ್ತಮರದಲ್ಲ. ಇಂತಹ ಜನರು ಈ ಆರ್ಯಾವರ್ತವನ್ನು ಅಧೋಗತಿಗೆ ಇಳಿಸಿದರು.

ಪ್ರಶ್ನೆ :—ಸ್ವಾಮೀ ನಾರಾಯಣನ ಮತ ಹೇಗಿದೆ?

ಉತ್ತರ :—" ಯಾದೃಶೀ ಶೀತಲಾ ದೇವೀ ತಾದೃಶೋ ವಾಹನಃ ಖರಃ ॥ " ಧನಹರಣ ಮೊದಲಾದುದರಲ್ಲಿ ಗೋಸಾಯಿಗಳ ವಿಚಿತ್ರಲೀಲೆ ಹೇಗಿದೆಯೋ, ಸ್ವಾಮೀ ನಾರಾಯಣನದೂ ಹಾಗೆಯೇ ಇದೆ. ನೋಡಿರಿ, ಅಯೋಧ್ಯೆಯ ಸಮೀಪದ ಒಂದು ಗ್ರಾಮದಲ್ಲಿ ಹುಟ್ಟಿದ ಸಹಜಾನಂದನೆಂಬ ಹೆಸರಿನವನೊಬ್ಬನಿದ್ದನು. ಅವನು ಬ್ರಹ್ಮಚಾರಿಯಾಗಿ ಗುಜರಾತ್, ಕಾಠಿಯಾವಾಡ್, ಕಚ್ಛಭುಜ—ಮೊದಲಾದ ಪ್ರದೇಶಗಳಲ್ಲಿ ಸಂಚರಿಸುತ್ತಿದ್ದನು. ಅವನು—" ಈ ದೇಶವು ಮೂರ್ಖವೂ, ಸರಳವೂ ಆಗಿದೆ; ಇಲ್ಲಿನ ಜನರನ್ನು ಎಂತು ತನ್ನ ಮತಕ್ಕೆ ಒಲಿಸಿಕೊಳ್ಳಬೇಕೆಂದರೂ, ಅಂತೆಯೇ ಇವರು ಓಲಬಲ್ಲರು "—ಎಂಬುದನ್ನು ಕಂಡನು. ಅಲ್ಲಿ ಅವನು ಮೂರು-ನಾಲ್ಕು ಜನ ಶಿಷ್ಯರನ್ನು ಮಾಡಿಕೊಂಡನು. ಅವರೆಲ್ಲಾ ಪರಸ್ಪರ ಸಮಾಲೋಚನೆ ಮಾಡಿಕೊಂಡು—" ಸಹಜಾನಂದನು ನಾರಾಯಣನ ಅವತಾರ; ಮತ್ತು ಭಾರೀ ಸಿದ್ಧಪುರುಷನು. ಹಾಗೂ ಚತುರ್ಭುಜ ಮೂರ್ತಿ ಧಾರಣಮಾಡಿ, ಭಕ್ತರಿಗೆ ಸಾಕ್ಷಾತ್ ದರ್ಶನವನ್ನೂ ನೀಡುತ್ತಾನೆ "—ಎಂದು ಪ್ರಸಿದ್ಧಪಡಿಸಿದರು. ಒಂದುಸಾರಿ, ಒಬ್ಬ ಕಾಠಿಯು, ಅಂದರೆ, " ದಾದಾ ಖಾಚರ "ನೆಂಬುವನು " ಗಥಡೆ "ಯ ಜಮೀನುದಾರನಾಗಿದ್ದನು. ಶಿಷ್ಯರು ಅವನಿಗೆ—" ನೀನು ಚತುರ್ಭುಜ

ನಾರಾಯಣನ ದರ್ಶನವನ್ನು ಮಾಡಲಿಚ್ಛಿಸುವೆಯಾದರೆ, ನಾವು ಸಹಜಾನಂದರಲ್ಲಿ ಪ್ರಾರ್ಥಿಸಿಕೊಳ್ಳುತ್ತೇವೆ.''—ಎಂದು ಹೇಳಿದರು. ಅವನು—'' ಬಹಳ ಒಳ್ಳೆಯದು '' ಎಂದನು. ಆವನು ಸರಳಸ್ವಭಾವದ ಮನುಷ್ಯನಾಗಿದ್ದನು. ಒಂದು ಚಿಕ್ಕ ಮನೆಯಲ್ಲಿ ಸಹಜಾನಂದನು ತಲೆಯಮೇಲೆ ಕಿರೀಟಧಾರಣಮಾಡಿಕೊಂಡು, ತನ್ನ ಕೈಗಳನ್ನೆತ್ತಿ ಶಂಖಚಕ್ರಗಳನ್ನು ಹಿಡಿದನು; ಮತ್ತು ಇನ್ನೊಬ್ಬ ಮನುಷ್ಯನು ಅವನ ಹಿಂದೆ ನಿಂತುಕೊಂಡು, ತನ್ನ ಕೈಗಳಲ್ಲಿ ಗದೆ ಮತ್ತು ಪದ್ಮವನ್ನು ಹಿಡಿದು, ಸಹಜಾನಂದನ ಕಂಕುಳುಗಳ ಕೆಳಗಿನಿಂದ ಕೈಗಳನ್ನು ಚಾಚಿದನು; ಈ ರೀತಿ ಚತುರ್ಭುಜನಂತೆ ರೂಪತಾಳಿದರು. ಅವನ ಶಿಷ್ಯರು ದಾದಾ ಖಾಚರನಿಗೆ—'' ಒಂದುಸಾರಿ ಕಣ್ಣು ತೆರೆದು ನೋಡಿ, ಮತ್ತೆ ಕಣ್ಣು ಮುಚ್ಚಿಕೊಂಡುಬಿಡಬೇಕು ಮತ್ತು ಕೂಡಲೇ ಈ ಕಡೆ ಹೊರಟು ಬರಬೇಕು. ಬಹಳ ದಿಟ್ಟಿಸುವೆಯಾದರೆ, ನಾರಾಯಣನು ಕೋಪಗೊಳ್ಳುವನು '' ಎಂದು ಹೇಳಿದರು. ಅಂದರೆ—ಶಿಷ್ಯರ ಮನಸ್ಸಿನಲ್ಲೇನೋ '' ನಮ್ಮ ಮೋಸವನ್ನು ಪರೀಕ್ಷಿಸದಿರಲಿ '' ಎಂದಿತ್ತು. ಅವನನ್ನು ಕರೆದುಕೊಂಡು ಹೋದರು. ಆ ಸಹಜಾನಂದನು ಕಲಾಬತ್ತಿನ ಮತ್ತು ಪಳಪಳನೆ ಮಿರುಗುತ್ತಿರುವ ರೇಷ್ಮೆಯ ಬಟ್ಟೆಗಳನ್ನು ಧರಿಸಿದನ್ದು. ಕತ್ತಲೆಯ ಕೋಣೆಯಲ್ಲಿ ನಿಂತಿದ್ದನು. ಅವನ ಶಿಷ್ಯರು ತಟ್ಟನೆ ಲಾಂದ್ರದಿಂದ ಕೋಣೆಯ ಕಡೆಗೆ ಬೆಳಕನ್ನು ಬೀರಿದರು. ದಾದಾಖಾಚರನು ನೋಡಿದರೆ, ಚತುರ್ಭುಜಮೂರ್ತಿ ಕಾಣಿಸಿತು. ಮತ್ತೆ ಕೂಡಲೇ ದೀಪವನ್ನು ಮರೆಮಾಡಿದರು. ಅವರೆಲ್ಲರೂ ಕೆಳಗೊರಗಿ, ನಮಸ್ಕಾರಮಾಡಿ ಬೇರೆಕಡೆಗೆ ಹೊರಟುಬಂದರು. ಮತ್ತು ಅದೇ ಸಮಯದಲ್ಲಿ '' ನಿನ್ನ ಅದೃಷ್ಟ ಧನ್ಯ. ಈಗ ನೀನು ಮಹಾರಾಜರ ಶಿಷ್ಯನಾಗಿಬಿಡು '' ಎಂದು ಹೇಳಿದರು. ಅವನು—'' ಒಳ್ಳೆಯದು '' ಎಂದನು. ಸುತ್ತಿಕೊಂಡು ಬೇರೆ ಕಡೆಗೆ ಹೋಗುವ ಹೊತ್ತಿಗೆ, ಬೇರೆ ವಸ್ತ್ರಗಳನ್ನು ಧರಿಸಿ, ಸಹಜಾನಂದನು ಗದ್ದುಗೆಯ ಮೇಲೆ ಕುಳಿತು ಕಂಡುಬಂದನು. ಆಗ ಶಿಷ್ಯರು—'' ನೋಡು! ಈಗ ಬೇರೆ ಸ್ವರೂಪವನ್ನು ಧರಿಸಿ, ಇಲ್ಲಿ ವಿರಾಜಿಸುತ್ತಿದ್ದಾರೆ '' ಎಂದರು. ಆ ದಾದಾಖಾಚರನು ಇವರ ಬಲೆಗೆ ಬಿದ್ದುಬಿಟ್ಟನು. ಅಲ್ಲಿಂದಲೇ

ಅವನ ಮತ ಬೇರೂರಿತು ; ಏಕೆಂದರೆ—ಅವನೊಬ್ಬ ದೊಡ್ಡ ಜಮೀನು ದಾರನಾಗಿದ್ದನು. ಅಲ್ಲಿಯೇ ಬೇರನ್ನು ಭದ್ರಪಡಿಸಿಕೊಂಡನು. ಆಮೇಲೆ ಇಲ್ಲಿ ಅಲ್ಲಿ ಸಂಚಾರಮಾಡುತ್ತಿದ್ದನು ; ಎಲ್ಲರಿಗೂ ಉಪದೇಶ ಮಾಡುತ್ತಿದ್ದನು ; ಬಹುಜನರನ್ನು ಸಾಧುಗಳನ್ನಾಗಿಯೂ ಮಾಡುತ್ತಿದ್ದನು. ಆಗಾಗ ಯಾವನಾದರೂ ಸಾಧುವಿನ ಕೊರಳ ನಾಡಿಯನ್ನು ತಿಕ್ಕಿ ಮೂರ್ಛೆಗೊಳಿಸುತ್ತಲೂ ಇದ್ದನು ಮತ್ತು "ನಾವು ಇವನಿಗೆ ಸಮಾಧಿಯನ್ನುಂಟುಮಾಡಿದ್ದೇವೆ" ಎಂದು ಎಲ್ಲರಿಗೂ ಹೇಳುತ್ತಿದ್ದನು. ಈಬಗೆಯ ಧೂರ್ತತನದಿಂದ ಕಾಥಿಯಾವಾಡಿನ ಸರಳಮನಸ್ಕರಾದ ಜನರು ಅವನ ತೊಡಕಿನಲ್ಲಿ ಸಿಕ್ಕಿಬಿದ್ದರು, ಅವನು ಸತ್ತುಹೋದಾಗ, ಅವನ ಶಿಷ್ಯರು ಬಹಳ ಪಾಷಂಡವನ್ನು ಬಿತ್ತರಿಸಿದರು. ಇದಕ್ಕೊಂದು ದೃಷ್ಟಾಂತ ಉಚಿತವಾಗಿರುತ್ತದೆ :—ಯಾವನೋ ಒಬ್ಬನು ಕಳುವು ಮಾಡುತ್ತಿರುವಾಗ ಹಿಡಿಯಲ್ಪಟ್ಟಿದ್ದನು. ನ್ಯಾಯಾಧೀಶನು ಅವನ ಮೂಗು-ಕಿವಿ ಕತ್ತರಿಸಿಹಾಕುವ ಶಿಕ್ಷೆಯಿತ್ತನು. ಅವನ ಮೂಗು ಕತ್ತರಿಸಲ್ಪಟ್ಟಾಗ, ಆ ಧೂರ್ತನು ಕುಣಿಯಲೂ, ಹಾಡಲೂ ಮತ್ತು ನಗಲೂ ಆರಂಭಿಸಿದನು. ಜನರು "ನೀನೇಕೆ ನಗುತ್ತೀಯೆ?" ಎಂದು ಕೇಳಿದರು. ಆವನು "ಹೇಳುವಂತಹ ಮಾತೇ ಅಲ್ಲ."—ಎಂದನು. ಜನರು "ಅಂತಹ ಮಾತು ಅದೇನು?"—ಎಂದು ಪ್ರಶ್ನಿಸಿದರು. ಅವರು—"ಅತಿ ದೊಡ್ಡ ಆಶ್ಚರ್ಯದ ಮಾತು. ಇಂತಹುದನ್ನು ನಾವೆಂದೂ ನೋಡಲಿಲ್ಲ!"—ಎಂದನು. ಜನರು—"ಹೇಳು, ಅದೇನು ಸಂಗತಿ"—ಎಂದು ನುಡಿದರು. ಅವನು—"ನನ್ನ ಮುಂದೆ ಸಾಕ್ಷಾತ್ ಚತುರ್ಭುಜನಾರಾಯಣನು ನಿಂತಿದ್ದಾನೆ! ನಾನು ನೋಡಿ, ಅತಿ ಪ್ರಸನ್ನನಾಗಿ, ಕುಣಿಯುತ್ತೇನೆ ; ಹಾಡುತ್ತೇನೆ ; ನಾನು ನಾರಾಯಣನ ಸಾಕ್ಷಾತ್ ದರ್ಶನ ಮಾಡುತ್ತಿದ್ದೇನಲ್ಲ—ಎಂದು ತನ್ನ ಭಾಗ್ಯಕ್ಕೆ ಧನ್ಯವಾದ ಸಮರ್ಪಿಸುತ್ತಿದ್ದೇನೆ"—ಎಂದು ಹೇಳಿದನು. ಜನರು—"ನಮಗೇಕೆ ದರ್ಶನವಾಗುವುದಿಲ್ಲ?"—ಎಂದು ಕೇಳಿದರು. ಅವನು—"ಮೂಗು ಅಡ್ಡಬರುತ್ತಿದೆ. ಮೂಗನ್ನು ಕೊಯ್ಯಿಸಿಕೊಳ್ಳುವಿರಾದರೆ, ನಾರಾಯಣನು ಕಂಡುಬರುವನು ; ಇಲ್ಲದಿದ್ದರೆ—ಇಲ್ಲ" ಎಂದನು. ಅವರಲ್ಲಿ ಯಾವನೋ ಒಬ್ಬ ಮೂರ್ಖನು—"ಮೂಗು

ಹೋದರೆ ಹೋಗಲಿ, ಆದರೆ ನಾರಾಯಣನ ದರ್ಶನವನ್ನು ಅಗತ್ಯವಾಗಿ ಮಾಡಬೇಕು.''—ಎಂದು ಅಪೇಕ್ಷಿಸಿದನು. ಅವನು—'' ನನ್ನ ಮೂಗನ್ನು ಕೊಯ್ದುಹಾಕು; ನಾರಾಯಣನನ್ನು ತೊರಿಸು.''—ಎಂದನು. ಅವನು ಅವನ ಮೂಗನ್ನು ಕೊಯ್ದುಹಾಕಿ, ಕಿವಿಯಲ್ಲಿ, '' ನೀನೂ ಹೀಗೆಯೇ ಮಾಡು. ಇಲ್ಲದಿದ್ದರೆ ನನಗೆ ಮತ್ತು ನಿನಗೆ ಅಪಹಾಸ್ಯವುಂಟಾಗುವುದು.''—ಎಂದು ಸುರಿದನು. ಅವನೂ ಕೂಡ—'' ಈಗ ಮೂಗಂತೂ ಬರುವುದಿಲ್ಲ. ಆದುದರಿಂದ ಹೀಗೆಯೇ ಹೇಳುವುದು ಸರಿ '' ಎಂದರಿತನು. ಆಗಲಾದರೋ ಅವನೂ ಸಹ ಅಲ್ಲಿ ಆತನಂತೆಯೇ ಕುಣಿದಾಡಲೂ, ಕುಪ್ಪಳಿಸಲೂ, ಹಾಡಲೂ, ಮೇಳ ಬಾರಿಸಲೂ, ನಗಲೂ ಮತ್ತು "ನನಗೂ ನಾರಾಯಣನು ಕಾಣುತ್ತಾನೆ" ಎಂದು ಹೇಳಲೂ ಆರಂಭಿಸಿದನು. ಹಾಗೆ ಆಗುತ್ತಾ ಆಗುತ್ತಾ ಒಂದು ಸಹಸ್ರ ಜನರ ಗುಂಪಾಯಿತು; ಬಹಳ ಕೋಲಾಹಲವುಂಟಾಯಿತು. ಮತ್ತು ತಮ್ಮ ಸಂಪ್ರದಾಯಕ್ಕೆ '' ನಾರಾಯಣದರ್ಶಿ '' ಎಂದು ಹೆಸರಿಟ್ಟರು. ಯಾವನೋ ಮೂರ್ಖರಾಜನು ಆಲಿಸಿದನು, ಅವರನ್ನು ಕರೆದನು. ರಾಜನು ಅವರ ಬಳಿಗೆ ಹೋದಾಗಲಂತೂ ಅವರು ಅತಿಯಾಗಿ ಕುಣಿದಾಡಲೂ, ಕುಪ್ಪಳಿಸಲೂ, ನಗಲೂ ಆರಂಭಿಸಿದರು. ಆಗ ರಾಜನು—'' ಇದೇನು ಸಂಗತಿ? '' ಎಂದು ಕೇಳಿದನು. ಅವರು '' ಸಾಕ್ಷಾತ್ ನಾರಾಯಣನು ನಮಗೆ ಕಾಣುತ್ತಾನೆ.''—ಎಂದರು.

ರಾಜ:—ನಮಗೇಕೆ ಕಾಣುವುದಿಲ್ಲ?

ನಾರಾಯಣದರ್ಶಿ:—ಎದುವರೆಗೆ ಮೂಗಿದೆಯೋ, ಅದುವರೆಗೆ ಕಾಣಿಸುವುದಿಲ್ಲ. ಮತ್ತು ಯಾವಾಗ ಮೂಗು ಕೊಯ್ಯಿಸಿಕೊಳ್ಳುವರೋ, ಆಗ ನಾರಾಯಣನು ಪ್ರತ್ಯಕ್ಷವಾಗಿ ಕಾಣಿಸುವನು. ಆ ರಾಜನು—" ಈ ಮಾತು ಸರಿ "--ಎಂದು ಯೋಚಿಸಿದನು. ರಾಜನು " ಜ್ಯೋಯಿಸರೇ! ಮುಹೂರ್ತನೋಡಿರಿ. "—ಎಂದು ಹೇಳಿದನು. ಜೋಯಿಸರು-" ಅಪ್ಪಣೆಯಂತೆ, ಅನ್ನದಾತ! ದಶಮಿಯ ದಿನ ಪ್ರಾತಃಕಾಲ ಎಂಟು ಘಂಟೆಗೆ ಮೂಗು ಕೊಯ್ಯಿಸಿಕೊಳ್ಳುವುದಕ್ಕೆ ಮತ್ತು ನಾರಾಯಣನ ದರ್ಶನ ಮಾಡುವುದಕ್ಕೆ ಬಹು ಪ್ರಶಸ್ತವಾದ ಮಹೂರ್ತವಿದೆ "—ಎಂದು ಉತ್ತರವಿತ್ತರು! ಭಲೇ ಪೋಪರೇ! ತಮ್ಮ

ಗ್ರಂಥದಲ್ಲಿ ಮೂಗು ಕೊಯ್ಯುವುದಕ್ಕೂ ಕೊಯ್ಯಿಸುವುದಕ್ಕೂ ಕೂಡಾ ಮಹೂರ್ತವನ್ನು ಬರೆದು ಬಿಟ್ಟರಿ! ರಾಜನಿಗೆ ಬಯಕೆಯುಂಟಾಗಿ, ಆ ಸಹಸ್ರ ಛಿನ್ನನಾಸಿಕರಿಗೂ ಅನ್ನ ಸಾಮಗ್ರಿಗಳ ದಾನವನ್ನು ಗೊತ್ತುಮಾಡಿದಾಗಲಂತೂ, ಅವರು ಅತ್ಯಂತ ಹರ್ಷಿತರಾಗಿ ಕುಳಿದಾಡಲೂ, ಕುಪ್ಪಳಿಸಲೂ, ಹಾಡಲೂ, ಆರಂಭಿಸಿದರು. ಇದು ರಾಜನ ದಿವಾನನೇ ಮೊದಲಾದ ಸ್ವಲ್ಪಸ್ವಲ್ಪ ಬುದ್ಧಿಯುಳ್ಳವರಿಗೆ ಸೊಗಸಲಿಲ್ಲ. ರಾಜನಿಗೆ, ನಾಲ್ಕು ಪೀಳಿಗೆಯ, ೯೦ ವರ್ಷದವನಾದ ಒಬ್ಬ ವೃದ್ಧನಾದ ದಿವಾನನಾಗಿದ್ದ ಅವನ ಮೊಮ್ಮಗನ ಮಗನು, ಅವನ ಹತ್ತಿರ ಹೋಗಿ, ಆ ಮಾತನ್ನು ಹೇಳಿದನು. ಆಗ ಆ ವೃದ್ಧನು—" ಅವರು ಧೂರ್ತರು. ನೀನು ನನ್ನನ್ನು ರಾಜನ ಬಳಿಗೆ ಕರೆದುಕೊಂಡು ಹೋಗು. "—ಎಂದನು. ಅವನು ಕರೆದೊಯ್ದನು. ಕುಳಿತುಕೊಳ್ಳುವಾಗ ರಾಜನು ಬಹಳ ಹರ್ಷಿತನಾಗಿ ಆ ಛಿನ್ನನಾಸಿಕರ ಸಂಗತಿಗಳನ್ನು ತಿಳಿಸಿದನು. ದಿವಾನನು—" ಕೇಳಿ, ಮಹಾರಾಜರೇ! ಹೀಗೆ ಆತುರ ಪಡಬಾರದು. ಪರೀಕ್ಷಿಸದಿದ್ದರೆ, ಪಶ್ಚಾತ್ತಾಪವುಂಟಾಗುತ್ತದೆ.

ರಾಜ :—ಈ ಸಾವಿರ ಜನರೂ ಸುಳ್ಳಾಡುತ್ತಿರಬಹುದೇ ?

ದಿವಾನ :—ಸುಳ್ಳು ಹೇಳುತ್ತಿದ್ದಾರೋ, ಅಥವಾ ಸತ್ಯವನ್ನಾಡುತ್ತಿದ್ದಾರೋ—ಪರೀಕ್ಷಿಸದೆ ದಿಟ–ಸಟೆಯೆಂದು ಹೇಗೆ ಹೇಳ ಬಲ್ಲೆವು?

ರಾಜ :—ಪರೀಕ್ಷೆಯನ್ನು ಹೇಗೆಮಾಡಬೇಕು ?

ದಿವಾನ :—ವಿದ್ಯೆ, ಸೃಷ್ಟಿಕ್ರಮ, ಪ್ರತ್ಯಕ್ಷಾದಿಪ್ರಮಾಣಗಳು–ಇವುಗಳಿಂದ.

ರಾಜ :—ಯಾವನು ಓದಿಲ್ಲವೋ, ಅವನು ಹೇಗೆ ಪರೀಕ್ಷಿಸಬೇಕು ?

ದಿವಾನ :—ವಿದ್ವಾಂಸರ ಸಂಗದಿಂದ ಜ್ಞಾನವನ್ನು ವೃದ್ಧಿಪಡಿಸಿಕೊಂಡು.

ರಾಜ :—ವಿದ್ವಾಂಸನು ಸಿಕ್ಕದಿದ್ದರೆ ?

ದಿವಾನ :—ಪುರುಷಾರ್ಥಿಗೆ ಯಾವುದೂ ದುರ್ಲಭವಲ್ಲ.

ರಾಜ :—ಹಾಗಾದರೆ, ತಾವೇ ಹೇಳಿರಿ, ಯಾವರೀತಿ ಮಾಡೋಣ ?

ದಿವಾನ :—ನಾನು ಮುದುಕನು ಮತ್ತು ಮನೆಯಲ್ಲಿ ಕುಳಿತಿರುತ್ತೇನೆ. ಮತ್ತು ಇನ್ನು ಬದುಕಿರುವುದೂ ಕೂಡ ಕೆಲವೇ ದಿನ. ಆದುದರಿಂದ ಮೊದಲು ನಾನು ಪರೀಕ್ಷಿಸಿಕೊಳ್ಳುವೆನು; ಅದರನಂತರ ಹೇಗೆ ಉಚಿತವೆಂದು ತಿಳಿಯುವಿರೋ, ಹಾಗೆ ಮಾಡಿರಿ.

ರಾಜ :—ಬಹಳ ಒಳ್ಳೆಯ ಮಾತು. ಜೋಯಿಸರೇ ! ದಿವಾನರಿಗೆ ಮುಹೂರ್ತವನ್ನು ನೋಡಿರಿ.

ಜೋಯಿಸರು :—ಮಹಾರಾಜರ ಅಪ್ಪಣೆಯಂತೆ. ಇದೇ ಶುಕ್ಲ ಪಂಚಮೀ ಹತ್ತು ಘಂಟೆಯ ಮುಹೂರ್ತ ಪ್ರಶಸ್ತವಾಗಿದೆ. ”

ಪಂಚಮಿಯು ಬಂದಾಗ, ಎಂಟು ಘಂಟೆಗೆ ವೃದ್ಧ ದಿವಾನನು ರಾಜನ ಹತ್ತಿರ ಬಂದು, ರಾಜನಿಗೆ—“ ಸಾವಿರ, ಎರಡುಸಾವಿರ ಸೇನೆಯನ್ನು ತೆಗೆದುಕೊಂಡು ಹೊರಡಬೇಕು ” ಎಂದು ಹೇಳಿದನು.

ರಾಜ :—ಅಲ್ಲಿ ಸೈನ್ಯಕ್ಕೇನು ಕೆಲಸ ?

ದಿವಾನ :—ತಮಗೆ ರಾಜ್ಯವ್ಯವಸ್ಥೆಯ ಅರಿವಿಲ್ಲ. ನಾನು ಹೇಳುವಹಾಗೆ ಮಾಡಿರಿ.

ರಾಜ :—ಒಳ್ಳೆಯದು. ಹೋಗು ಸೋದರ, ಸೈನ್ಯವನ್ನು ಸಜ್ಜುಗೊಳಿಸು. ಒಂಬತ್ತೂವರೆ ಘಂಟೆಗೆ ಸವಾರಿ ಬೆಳಸಿ, ರಾಜನು ಎಲ್ಲರನ್ನೂ ಕರೆದುಕೊಂಡು ಹೋದನು. ಅವರನ್ನು ಕಂಡು, ಅವರು ಕುಣಿದಾಡಲೂ, ಹಾಡಲೂ ಆರಂಭಿಸಿದರು. ಹೋಗಿ ಕುಳಿತರು. ಯಾವನು ಈ ಸಂಪ್ರದಾಯವನ್ನು ಪ್ರಾರಂಭಿಸಿದ್ದನೋ, ಯಾವನ ಮೂಗು ಮೊದಲು ಕತ್ತರಿಸಿದ್ದಿತೋ, ಅಂತಹ, ಅವರ ಮಹಂತನನ್ನು ಕರೆದು—“ ಇಂದು ನಮ್ಮ ದಿವಾನರಿಗೆ ನಾರಾಯಣನ ದರ್ಶನವನ್ನು ಮಾಡಿಸಿರಿ ” ಎಂದು ಹೇಳಿದನು. ಅವನು—“ ಒಳ್ಳೆಯದು ” ಎಂದನು. ಹತ್ತುಘಂಟೆಯ ಸಮಯ ಬಂದಾಗ, ಒಬ್ಬ ಮನುಷ್ಯನು ಒಂದು ತಟ್ಟೆಯನ್ನು ಮೂಗಿನ ಕೆಳಗೆ ಹಿಡಿದನು. ಅವನು ಚೂಪಾದ ಚಾಕುವನ್ನು ತೆಗೆದುಕೊಂಡು, ಮೂಗನ್ನು ಕೊಯ್ದು ತಟ್ಟೆಯೊಳಕ್ಕೆ

ಹಾಕಿಬಿಟ್ಟನು. ಮತ್ತು ದಿವಾನರ ಮೂಗಿನಿಂದ ರಕ್ತದ ಧಾರೆ ಹೊರಡ ಹತ್ತಿತು. ದಿವಾನನ ಮುಖ ಮ್ಲಾನವಾಗಿಹೋಯಿತು. ಮತ್ತೆ ಆ ಧೂರ್ತನು ದಿವಾನನ ಕಿವಿಯಲ್ಲಿ "ತಾವೂ ಕೂಡ ನಕ್ಕು, ಎಲ್ಲರಿಗೂ "ನನಗೆ ನಾರಾಯಣನು ಕಾಣುತ್ತಾನೆ" ಎಂದು ಹೇಳಿರಿ. ಈಗ ಕತ್ತರಿಸಿದ ಮೂಗು ಬರುವುದಿಲ್ಲ. ಹೀಗೆ ಹೇಳದಿದ್ದರೆ—ನಿಮಗೆ ಬಹಳ ಅಪಹಾಸ್ಯವುಂಟಾಗುವುದು; ಎಲ್ಲ ಜನರೂ ಗೇಲಿ ಮಾಡುವರು" ಎಂದು ಮುಂತ್ರೋಪದೇಶಮಾಡಿದನು. ಅನನು ಇಷ್ಟು ಹೇಳಿ ಬೇರೆಯಾದನು ಮತ್ತು ದಿವಾನನು ಅಂಗವಸ್ತ್ರವನ್ನು ಕೈಗೆ ತೆಗೆದು ಕೊಂಡು ಮೂಗಿಗೆ ಮರೆಯಾಗಿ ಹೆಡಿದುಕೊಂಡನು. ದಿವಾನನನ್ನು ರಾಜನು—"ಹೇಳಿರಿ, ನಾರಾಯಣನು ಕಾಣುತ್ತಾನೋ, ಇಲ್ಲವೋ?" ಎಂದು ಕೇಳಿದಾಗ, ದಿವಾನನು ರಾಜನ ಕಿವಿಯಲ್ಲಿ—"ಏನೂ ಕಾಣಿಸುವುದಿಲ್ಲ, ವ್ಯರ್ಥವಾಗಿ ಈ ಧೂರ್ತನು ಸಾವಿರಾರು ಜನರನ್ನು ಹಾಳುಮಾಡಿದನು" ಎಂದು ಹೇಳಿದನು. ರಾಜನು, ದಿವಾನನನ್ನು "ಈಗೇನು ಮಾಡಬೇಕು?" ಎಂದು ಕೇಳಿದನು. ದಿವಾನನು—"ಇವರನ್ನು ಹಿಡಿದು ಕಠಿಣಸಜೆ ವಿಧಿಸಬೇಕು. ಬದುಕಿರುವವರೆಗೂ ಸೆರೆಮನೆಯಲ್ಲಿಟ್ಟಿರಬೇಕು. ಮತ್ತು ಇವರೆಲ್ಲರನ್ನೂ ಕೆಡಿಸಿರುವ ಈ ದುಷ್ಟನನ್ನು ಕತ್ತೆಯಮೇಲೆ ಏರಿಸಿ, ಬಹಳ ದುರ್ದಶೆಯೊಂದಿಗೆ ಸಾಯಿಸಬೇಕು" ಎಂದು ಹೇಳಿದನು. ರಾಜನೂ, ದಿವಾನನೂ ಕಿವಿಯಲ್ಲಿ ಮಾತನಾಡಲಾರಂಭಿಸಿದಾಗ, ಅವರು ಹೆದರಿ ಓಡಿಹೋಗುವ ಸನ್ನಾಹ ಮಾಡಿದರು; ಆದರೆ ನಾಲ್ಕು ಕಡೆಯೂ ಸೈನ್ಯವು ಮುತ್ತಿಗೆ ಹಾಕಿದ್ದಿತು; ಓಡಲಾರದೇ ಹೋದರು. ರಾಜನು—"ಎಲ್ಲರನ್ನೂ ಹಿಡಿದು ಕೋಳಗಳನ್ನು ತೊಡಿಸಿರಿ. ಮತ್ತು ಈ ದುಷ್ಟನ ಮುಖಕ್ಕೆ ಮಸಿಬಳಿದು, ಕತ್ತೆಯಮೇಲೆ ಕೂಡಿಸಿ, ಇವನ ಕೊರಳಿಗೆ ಹರಿದ ಎಕ್ಕಡಗಳ ದಾರವನ್ನು ಹಾಕಿ, ಎಲ್ಲೆಡೆಯೂ ತಿರುಗಾಡಿಸಿ, ಪೋರರು ಗಳಿಂದ ಇವನ ಮೇಲೆ ಧೂಳನ್ನೂ, ಬೂದಿಯನ್ನೂ ಎರಚಿಸಿ, ಪ್ರತಿಯೊಂದು ಚೌಕದಲ್ಲಿಯೂ ಎಕ್ಕಡಗಳಿಂದ ಹೊಡೆಯಿಸಿ, ನಾಯಿ ಗಳಿಂದ ಕಚ್ಚಿಸಿ, ಸಾಯಿಸಿಬಿಡಲ್ಪಡಲಿ. ಹೀಗೆ ಆಗದಿದ್ದರೆ, ಬೇರೆ ಯವರೂ ಇಂತಹ ಕಾರ್ಯ ಮಾಡಲು ಹೆದರುವುದಿಲ್ಲ" ಎಂದು

ಆಜ್ಞಾಪಿಸಿದನು. ಹೀಗಾದಮೇಲೆ, ಭಿನ್ನನಾಸಿಕರ ಸಂಪ್ರದಾಯ ಕೊನೆಯಾಯಿತು.

ಇದೇ ರೀತಿ ವೇದವಿರೋಧಿಗಳೆಲ್ಲರೂ ಬೇರೆಯವರ ಧನವನ್ನು ಅಪಹರಿಸುವುದರಲ್ಲಿ ಬಹಳ ಚತುರರಾಗಿರುತ್ತಾರೆ. ಇದು ಸಂಪ್ರದಾಯಗಳ ಲೀಲೆ. ಈ ಸ್ವಾಮೀ ನಾರಾಯಣಮತೀಯರು ಧನಾಪಹಾರಿಗಳು; ಛಲ ಕಪಟ ಯುಕ್ತವಾದ ಕೆಲಸಗಳನ್ನು ಮಾಡುತ್ತಾರೆ. ಎಷ್ಟೋ ಜನರು ಮೂರ್ಖರನ್ನು ದಾರಿ ತಪ್ಪಿಸುವುದಕ್ಕಾಗಿ, ಸಾಯುವ ಕಾಲದಲ್ಲಿ " ಬಿಳಿಯ ಕುದುರೆಯ ಮೇಲೆ ಕುಳಿತು ಸಹಜಾನಂದರು ಮುಕ್ತಿಗೆ ಕರೆದೊಯ್ಯಲು ಬಂದಿದ್ದಾರೆ ಮತ್ತು ದಿನವೂ ಒಂದುಸಾರಿ ಈ ದೇವಾಲಯಕ್ಕೆ ಬಂದು ಹೋಗುತ್ತಾರೆ "—ಎಂದು ಹೇಳುತ್ತಾರೆ. ಜಾತ್ರೆಯಾಗುವಾಗ, ದೇವಾಲಯದೊಳಗೆ ಪೂಜಾರಿಗಳಿರುತ್ತಾರೆ; ಮತ್ತು ಕೆಳಗೆ ಅಂಗಡಿ ಹಾಕಿದ್ದಾರೆ. ದೇವಾಲಯದೊಳಗಿನಿಂದ ಅಂಗಡಿಗೆ ಹೋಗುವುದಕ್ಕೆ ತೂತನ್ನು ಮಾಡಿರುತ್ತಾರೆ. ಯಾವನಾದರೂ ತೆಂಗಿನಕಾಯನ್ನರ್ಪಿಸಿದರೆ' ಅದನ್ನೇ ಅಂಗಡಿಗೆಸೆದರು. ಅಂದರೆ—ಇದೇ ರೀತಿ ಒಂದು ತೆಂಗಿನಕಾಯಿ ದಿನಕ್ಕೆ ಸಾವಿರಾರು ಸಾರಿ ಮಾರುತ್ತದೆ. ಹೀಗೆಯೇ ಎಲ್ಲಾ ಪದಾರ್ಥಗಳನ್ನು ಮಾರುತ್ತಾರೆ. ಸಾಧುವು ಯಾವ ಜಾತಿಯವನಾಗಿರುತ್ತಾನೋ, ಅವನಿಂದ ಅಂತಹ ಕೆಲಸವನ್ನೇ ಮಾಡಿಸುತ್ತಾರೆ. ಉದಾಹರಣೆಗೆ—ಕ್ಷೌರಿಕನಾಗಿದ್ದರೆ, ಅವನಿಂದ ಕ್ಷೌರಿಕನ, ಕುಂಬಾರನಿಂದ ಕುಂಬಾರನ, ಶಿಲ್ಪಿಯಿಂದ ಶಿಲ್ಪಿಯ, ವರ್ತಕನಿಂದ ವರ್ತಕನ, ಮತ್ತು ಶೂದ್ರನಿಂದ ಶೂದ್ರ ಮೊದಲಾದವರ ಕೆಲಸಗಳನ್ನು ಮಾಡಿಸಿಕೊಳ್ಳುತ್ತಾರೆ. ತಮ್ಮ ಶಿಷ್ಯರ ಮೇಲೆ ಒಂದು ತೆರಿಗೆಯನ್ನು ಹೊರಿಸಿದ್ದಾರೆ. ಮೋಸ ಮಾಡಿ ಲಕ್ಷಾಂತರ—ಕೋಟ್ಯಾಂತರ ರೂಪಾಯಿಗಳನ್ನು ಒಟ್ಟು ಮಾಡಿಕೊಂಡಿದ್ದಾರೆ; ಇನ್ನೂ ಮಾಡುತ್ತಾ ಹೋಗುತ್ತಾರೆ. ಗದ್ದಿಗೇರುವವನು ಗೃಹಸ್ಥನು, ವಿವಾಹ ಮಾಡಿಕೊಳ್ಳುತ್ತಾನೆ; ಒಡವೆ ಮೊದಲಾದುವನ್ನು ಧರಿಸುತ್ತಾನೆ. ಯಾವೆಡೆಗಾದರೂ ವಿಜಯವಾದರೆ, ಅಲ್ಲಿ ಗೋಕುಲೀಯರಂತೆ ಗೋಸಾಯಿಗಳು, ಅಮ್ಮನವರು ಮೊದಲಾದವರ ಹೆಸರಿನಿಂದ ಕಾಣಿಕೆ-ಪೂಜೆಪಡೆಯುತ್ತಾರೆ. ತಮ್ಮನ್ನು

‘ಸತ್ಸಂಗಿ’ಗಳೆಂದೂ, ಅನ್ಯಮತೀಯರನ್ನು ‘ಕುಸಂಗಿ’ಗಳೆಂದೂ ಹೇಳುತ್ತಾರೆ. ತಮಗಲ್ಲದೆ, ಬೇರೆಯವನು ಎಂತಹ ಉತ್ತಮನೂ, ಧಾರ್ಮಿಕನೂ, ವಿದ್ವಾಂಸನೂ ಆದ ಪುರುಷನೇ ಆಗಿರಲೊಲ್ಲನೇಕೆ, ಅವನಿಗೆ ಮರ್ಯಾದೆಯನ್ನೂ, ಸೇವೆಯನ್ನೂ ಎಂದಿಗೂ ಮಾಡುವುದಿಲ್ಲ; ಏಕೆಂದರೆ—ಅನ್ಯಮತಸ್ಥನಿಗೆ ಸೇವೆಮಾಡುವುದರಲ್ಲಿ ಪಾಪವನ್ನೆಣಿಸುತ್ತಾರೆ. ಪ್ರಕಟರೂಪವಾಗಿ ಅವರ ಸಾಧುಗಳು ಸ್ತ್ರೀಯರ ಮುಖವನ್ನು ನೋಡುವುದಿಲ್ಲ: ಆದರೆ ಗುಪ್ತವಾಗಿ ಏನು ಲೀಲೆ ನಡೆಯುತ್ತಿರಬಹುದೋ ತಿಳಿಯದು. ಇದರ ಪ್ರಸಿದ್ಧಿಯು ಎಲ್ಲೆಡೆಯೂ ಕೊಂಚ ಆಗಿದೆ. ಒಂದೊಂದು ಕಡೆ ಸಾಧುಗಳ ಪರಸ್ತ್ರೀಗಮನ ಮೊದಲಾದ ಲೀಲೆಯು ಪ್ರಸಿದ್ಧವಾಗಿಹೋಗಿದೆ. ಮತ್ತು ಅವರಲ್ಲಿ ದೊಡ್ಡದೊಡ್ಡವರು ಯಾರಾರಿದ್ದಾರೋ, ಅವರು ಸಾಯುವಾಗ, ಅವರನ್ನು ಗುಪ್ತವಾಗಿ ಭಾವಿಗೆಸೆದುಬಿಟ್ಟು, “ಇಂತಹ ಮಹಾರಾಜರು ದೇಹಸಹಿತವಾಗಿ ವೈಕುಂಠಕ್ಕೆ ಹೋದರು. ಸಹಜಾನಂದರು ಬಂದು ಕರೆದುಕೊಂಡು ಹೋದರು. ನಾವು “ಮಹಾರಾಜ್! ಇವರನ್ನು ಕರೆದುಕೊಂಡು ಹೋಗಬೇಡಿರಿ. ಏಕೆಂದರೆ—ಈ ಮಹಾತ್ಮರು ಇಲ್ಲಿದ್ದರೆ ಒಳ್ಳೆಯದು” ಎಂದು ಬಹಳವಾಗಿ ಪ್ರಾರ್ಥಿಸಿಕೊಂಡೆವು. ಆದರೆ ಸಹಜಾನಂದರು—“ಉಹು, ಈಗ ವೈಕುಂಠದಲ್ಲಿ ಇವರ ಆವಶ್ಯಕತೆ ಬಹಳವಿದೆ. ಆದುದರಿಂದ ಕರೆದೊಯುತ್ತೇವೆ.”—ಎಂದು ಹೇಳಿದರು, ನಾವು ನಮ್ಮ ಕಣ್ಣುಗಳಿಂದ ಸಹಜಾನಂದರನ್ನೂ, ವಿಮಾನವನ್ನೂ ನೋಡಿದೆವು. ಮತ್ತು ಸಾಯಲಿಕ್ಕಿದ್ದವರನ್ನು ವಿಮಾನದಲ್ಲಿ ಕುಳ್ಳಿರಿಸಿಬಿಟ್ಟರು.; ಮೇಲಕ್ಕೆ ಕರೆದುಕೊಂಡುಹೋದರು; ಮತ್ತು ಹೂಮಳೆಗರೆಯುತ್ತಾ ಹೋದರು” ಎಂದು ಪ್ರಸಿದ್ಧಿಗೊಳಿಸುತ್ತಾರೆ. ಮತ್ತು ಯಾವನಾದರೂ ಸಾಧುವು ಯಾವಾಗ ಖಾಯಿಲೆಬೀಳುತ್ತಾನೋ, ಮತ್ತು ಉಳಯುವ ನಂಬಿಕೆಯಿರುವುದಿಲ್ಲವೋ, ಆಗ “ನಾನು ನಾಳೆ ರಾತ್ರಿ ವೈಕುಂಠಕ್ಕೆ ಹೋಗುವೆನು” ಎಂದು ಹೇಳುತ್ತಾನೆ. ಆ ರಾತ್ರಿ ಅವನ ಪ್ರಾಣ ಹೋಗದಿದ್ದರೆ ಮತ್ತು ಅವನು ಮೂರ್ಛಿತನಾಗಿದ್ದರೂ ಸಹ ಅವನನ್ನು ಬಾವಿಯೊಳಕ್ಕೆಸೆದುಬಿಡುತ್ತಾರೆ—ಎಂದು ಕೇಳಿದ್ದೇವೆ. ಏಕೆಂದರೆ ಆ ರಾತ್ರಿ ಎಸೆಯದಿದ್ದರೆ, ಸುಳ್ಳುಗಾರ

ರಾಗುವರು. ಆದುದರಿಂದ ಇಂತಹ ಕೆಲಸ ಮಾಡುತ್ತಿರಬಹುದು. ಹೀಗೆಯೇ ಗೋಕುಲೀಯ ಗೋಸಾಯಿ ಯಾವಾಗ ಸಾಯುತ್ತಾನೋ, ಆಗ ಅವನ ಶಿಷ್ಯರು—"ಗೋಸಾಯಿಗಳು ಲೀಲಾವಿಸ್ತಾರಮಾಡಿ ಹೋದರು" ಎಂದು ಹೇಳುತ್ತಾರೆ. ಈ ಗೋಸಾಯಿಗಳು ಮತ್ತು ಸ್ವಾಮೀ ನಾರಾಯಣೀಯರು ಉಪದೇಶಮಾಡುವ ಮಂತ್ರವು ಒಂದೇ ಆಗಿದೆ. "ಶ್ರೀ ಕೃಷ್ಣಃ ಶರಣಂ ಮಮ" ಇದಕ್ಕೆ "ಶ್ರೀ ಕೃಷ್ಣನು ನನ್ನ ಶರಣ" ಅಂದರೆ—"ನಾನು ಶ್ರೀ ಕೃಷ್ಣನ ಶರಣಾಗತನು" ಎಂದು ಅರ್ಥಮಾಡುತ್ತಾರೆ. ಆದರೆ, ಇದಕ್ಕೆ—"ಶ್ರೀ ಕೃಷ್ಣನು ನನ್ನ ಶರಣವನ್ನು ಪ್ರಾಪ್ತನಾಗಲಿ, ಅಂದರೆ—ನನಗೆ ತರಣಾಗತ ನಾಗಲಿ" ಎಂದೂ ಸಹ ಅರ್ಥವಾಗಬಹುದು. ಈ ಎಲ್ಲಾ ಮತಗಳೂ ಎಷ್ಟಿವೆಯೋ, ಆ ಮತಗಳವರು ವಿದ್ಯಾಹೀನರಾದುದರಿಂದ ಅಸಂಬದ್ಧವಾಗಿ ಶಾಸ್ತ್ರವಿರುದ್ಧವಾದ ವಾಕ್ಯಗಳನ್ನು ರಚಿಸುತ್ತಾರೆ; ಏಕೆಂದರೆ ಅವರಿಗೆ ವಿದ್ಯೆಯು ನಿಯಮಗಳ ಸುಳಿವಿಲ್ಲ.

ಪ್ರಶ್ನೆ :—ಮಾಧ್ವಮತವಾದರೂ ಒಳ್ಳೆಯದೋ ?

ಉತ್ತರ :—ಅನ್ಯಮತಾವಲಂಬಿಗಳು ಹೇಗಿದ್ದಾರೋ, ಮಾಧ್ವರೂ ಹಾಗೆಯೇ ಇದ್ದಾರೆ. ಇವರೂ ಚಕ್ರಾಂಕಿತರಾಗುತ್ತಾರೆ. ಚಕ್ರಾಂಕಿತರಿಗಿಂತ ಇವರಲ್ಲಿ ಇಷ್ಟು ವಿಶೇಷವಿದೆ :—ರಾಮಾನುಜೀಯರು ಒಂದು ಸಾರಿ ಚಕ್ರಾಂಕಿತರಾಗುತ್ತಾರೆ ಮತ್ತು ಮಾಧ್ವರು ವರ್ಷವರ್ಷವೂ ಮತ್ತೆ ಮತ್ತೆ ಚಕ್ರಾಂಕಿತರಾಗುತ್ತಾ ಹೋಗುತ್ತಾರೆ. ಚಕ್ರಾಂಕಿತರು ಹಣೆಯ ಮೇಲೆ ಹಳದಿ ಗೆರೆಯನ್ನೂ, ಮಾಧ್ವರು ಕಪ್ಪುರೇಖೆಯನ್ನೂ ಹಾಕಿಕೊಳ್ಳುತ್ತಾರೆ. ಒಬ್ಬ ಮಾಧ್ವ ಪಂಡಿತನೊಂದಿಗೆ ಯಾವನೋ ಒಬ್ಬ ಮಹಾತ್ಮನ ಶಾಸ್ತ್ರಾರ್ಥ ನಡೆದಿತ್ತು.

ಮಹಾತ್ಮ :—ನೀನು ಈ ಕರೀಗೆರೆಯನ್ನೂ, ಚಂದ್ರ (ತಿಲಕ)ವನ್ನೂ ಏಕೆ ಹಾಕಿಕೊಂಡೆ ?

ಮಾಧ್ವ :—ಇದನ್ನು ಹಾಕಿಕೊಳ್ಳುವುದರಿಂದ ನಾವು ವೈಕುಂಠಕ್ಕೆ ಹೋಗುವೆವು. ಮತ್ತು ಶ್ರೀ ಕೃಷ್ಣನ ಶರೀರವೂ ಶ್ಯಾಮವರ್ಣದ್ದಾಗಿತ್ತು. ಆದುದರಿಂದ ನಾವು ಕಪ್ಪು ತಿಲಕವನ್ನು ಹಚ್ಚಿಕೊಳ್ಳುತ್ತೇವೆ.

ಮಹಾತ್ಮ :—ಕಪ್ಪು ತಿಲಕವನ್ನೂ, ಚಂದ್ರಚಿಹ್ನವನ್ನೂ ಹಚ್ಚಿಕೊಳ್ಳುವುದರಿಂದ ವೈಕುಂಠಕ್ಕೆ ಹೊಗುವಿರಾದರೆ, ಮುಖವನ್ನೆಲ್ಲಾ ಕಪ್ಪಗೆಮಾಡಿಕೊಂಡರೆ ಎಲ್ಲಿಗೆ ಹೋಗುವಿರಿ? ವೈಕುಂಠವನ್ನೂ ದಾಟಿ ಆಚೆಗೆ ಹೋಗುವಿರೋ? ಮತ್ತು ಶ್ರೀಕೃಷ್ಣನ ಶರೀರವೆಲ್ಲಾ ಕಪ್ಪಗಿದ್ದಂತೆ, ನೀವೂ ಶರೀರವನ್ನೆಲ್ಲಾ ಕಪ್ಪಗೆ ಮಾಡಿಕೊಳ್ಳುವ ರೂಢಿಯಿಟ್ಟುಕೊಳ್ಳಿರಿ. ಆಗ ಶ್ರೀಕೃಷ್ಣನೊಂದಿಗೆ ಸಾದೃಶ್ಯವುಂಟಾಗಬಲ್ಲದು ಆದುದರಿಂದ, ಇದೂ ಮೊದಲಿನವುಗಳಂತಿದೆ.

ಪ್ರಶ್ನೆ :—ಲಿಂಗಾಂಕಿತನ ಮತ ಹೇಗಿದೆ?

ಉತ್ತರ :—ಚಂಕ್ರಾಂಕಿತನದಂತೆ. ಚಂಕ್ರಾಂಕಿತರು ಚಕ್ರದಿಂದ ಮುದ್ರೆಯೊತ್ತಿಸಿಕೊಳ್ಳುವಂತೆ ಮತ್ತು ನಾರಾಯಣನ ಹೊರತು ಯಾವನನ್ನೂ ಒಪ್ಪದಂತೆ, ಲಿಂಗಾಂಕಿತರು ಲಿಂಗಾಕೃತಿಯಿಂದ ಮುದ್ರೆಯೊತ್ತಿಸಿಕೊಳ್ಳುತ್ತಾರೆ. ಮತ್ತು ಮಹಾದೇವನನ್ನು ಬಿಟ್ಟು ಯಾವನನ್ನೂ ಒಪ್ಪುವುದಿಲ್ಲ ಲಿಂಗಾಂಕಿತರು ಕಲ್ಲಿನ ಒಂದು ಲಿಂಗವನ್ನು ಚಿನ್ನದಲ್ಲಿ ಅಥವಾ ಬೆಳ್ಳಿಯಲ್ಲಿ ಮುಚ್ಚಿಸಿ, ಕೊರಳಿಗೆ ಹಾಕಿಕೊಂಡಿರುತ್ತಾರೆ; ನೀರನ್ನು ಕುಡಿಯುವಾಗ, ಅದಕ್ಕೆ ತೋರಿಸಿ ಕುಡಿಯುತ್ತಾರೆ—ಇದು ಇವರಲ್ಲಿ ವಿಶೇಷ. ಅವರ ಮಂತ್ರವೂ ಶೈವರದಕ್ಕೆ ಸಮಾನವಾಗಿರುತ್ತದೆ.

ಈಗ ಬ್ರಾಹ್ಮಸಮಾಜ ಮತ್ತು ಪ್ರಾರ್ಥನಾಸಮಾಜದ ಗುಣದೋಷಕಥನ

ಪ್ರಶ್ನೆ :—ಬ್ರಾಹ್ಮಸಮಾಜ ಮತ್ತು ಪಾರ್ಥನಾಸಮಾಜಗಳಾದರೂ ಉತ್ತಮವಾಗಿವೆಯೋ, ಇಲ್ಲವೊ?

ಉತ್ತರ :—ಕೆಲಕೆಲವು ಮಾತುಗಳು ಚೆನ್ನಾಗಿವೆ; ಮತ್ತು ಬಹಳ ಮಾತುಗಳು ಕೆಟ್ಟವಾಗಿವೆ.

ಪ್ರಶ್ನೆ :—ಬ್ರಾಹ್ಮಸಮಾಜ ಮತ್ತು ಪ್ರಾರ್ಥನಾಸಮಾಜ ಎಲ್ಲಕ್ಕಿಂತ ಒಳ್ಳೆಯದು; ಏಕೆಂದರೆ—ಇವುಗಳ ನಿಯಮಗಳು ಬಹಳ ಒಳ್ಳೆಯವಾಗಿವೆ.

ಉತ್ತರ :—ನಿಯಮಗಳು ಎಲ್ಲಾ ಅಂಶಗಳಲ್ಲಿಯೂ ಒಳ್ಳೆಯವಾಗಿಲ್ಲ; ಏಕೆಂದರೆ—ವೇದವಿದ್ಯಾವಿಹೀನರಾದ ಜನರ ಕಲ್ಪನೆ ಸರ್ವಥಾ ಸತ್ಯವಾಗಬಲ್ಲದಾದರೂ ಹೇಗೆ? ಬ್ರಾಹ್ಮಸಮಾಜಿಗಳು ಮತ್ತು ಪ್ರಾರ್ಥನಾಸಮಾಜಿಗಳು, ಹಲಜನರು ಕ್ರೈಸ್ತಮತಕ್ಕೆ ಸೇರುವುದನ್ನು ತಪ್ಪಿಸಿದರು; ಮತ್ತು ಪಾಷಾಣಾದಿ ಮೂರ್ತಿಪೂಜೆಯನ್ನು ಸ್ವಲ್ಪಮಟ್ಟಿಗೆ ದೂರಮಾಡಿದರು; ಬೇರೆ ಕೃತ್ರಿಮಗ್ರಂಥಗಳ ಪಾಶದಿಂದಲೂ ಸ್ವಲ್ಪಮಟ್ಟಿಗೆ ಬಿಡಿಸಿದರು—ಈ ಮೊದಲಾದುವು ಒಳ್ಳೆಯ ಸಂಗತಿಗಳು. ಆದರೆ, ಈ ಜನರಲ್ಲಿ ಸ್ವದೇಶಭಕ್ತಿ ಬಹಳ ಕಡಿಮೆಯಿದೆ. ಬಹಳವಾಗಿ ಕ್ರೈಸ್ತರ ಆಚರಣೆಗಳನ್ನು ತೆಗೆದುಕೊಂಡಿದ್ದಾರೆ. ಭೋಜನ-ಪಾನ, ವಿವಾಹ ಮೊದಲಾದುವುಗಳ ನಿಯಮಗಳನ್ನೂ ಪರಿವರ್ತಿಸಿಬಿಟ್ಟಿದ್ದಾರೆ.

೨. ತಮ್ಮ ದೇಶದ ಪ್ರಶಂಸೆ ಮತ್ತು ಪೂರ್ವಜರ ಮಹತ್ವವನ್ನು ಕೊಂಡಾಡುವುದಂತೂ ದೂರವುಳಿಯಿತು; ಅದಕ್ಕೆ ಪ್ರತಿಯಾಗಿ ಮನಃಪೂರ್ತಿಯಾಗಿ ನಿಂದಿಸುತ್ತಾರೆ. ಭಾಷಣಗಳಲ್ಲಿ ಕ್ರೈಸ್ತರೇ ಮೊದಲಾದ ಆಂಗ್ಲರನ್ನು ಹೊಟ್ಟಿತುಂಬ ಹೊಗಳುತ್ತಾರೆ—ಬ್ರಹ್ಮ ಮೊದಲಾದ ಮಹರ್ಷಿಗಳ ಹೆಸರನ್ನೂ ಎತ್ತುವುದಿಲ್ಲ. ಪ್ರತಿಯಾಗಿ, "ಜಗತ್ತಿನಲ್ಲಿ ಇಂದಿನವರೆಗೆ ಆಂಗ್ಲರನ್ನುಳಿದು ಬೇರಾರೂ ವಿದ್ವಾಂಸರಾಗಲಿಲ್ಲ; ಆರ್ಯಾವರ್ತೀಯ ಜನರು ಸದಾ ಮೂರ್ಖರಾಗಿಯೇ ನಡೆದು ಬಂದಿದ್ದಾರೆ. ಎಂದೂ ಇವರ ಉನ್ನತಿಯಾಗಲೇ ಇಲ್ಲ."—ಎಂದು ಹೇಳುತ್ತಾರೆ.

೩. ವೇದ ಮೊದಲಾದುವುಗಳ ಗೌರವವಂತೂ ದೂರವೇ ಉಳಿಯಿತು. ಆದರೆ—ನಿಂದಿಸುವುದರಿಂದ ದೂರವಿರುವುದಿಲ್ಲ. ಬ್ರಾಹ್ಮಸಮಾಜದ ಉದ್ದೇಶ್ಯದ ಪುಸ್ತಕದಲ್ಲಿ, ಸಾಧುಗಳ ಸಂಖ್ಯೆಯಲ್ಲಿ 'ಯೇಸು, ಮೋಸೆಸ್, ಮುಹಮ್ಮದ್, ನಾನಕ್ ಮತ್ತು ಚೈತನ್ಯ' ರನ್ನು ಉಲ್ಲೇಖಿಸಿದ್ದಾರೆ. ಯಾವ ಋಷಿ-ಮಹರ್ಷಿಯ ಹೆಸರನ್ನೂ ಬರೆಯಲಿಲ್ಲ. ಇವರು ಯಾರ ಹೆಸರುಗಳನ್ನು ಬರೆದಿದ್ದಾರೋ, ಅವರುಗಳ ಮತಕ್ಕೇ ಅನುಸಾರವಾದ ಮತವನ್ನುಳ್ಳವರೆಂಬುದು ಇದರಿಂದ ತಿಳಿಯಲ್ಪಡುತ್ತದೆ. ಒಳ್ಳೆಯದು, ಆರ್ಯಾವರ್ತದೇಶದಲ್ಲಿ ಉತ್ಪನ್ನ

ರಾಗಿದ್ದಾರೆ; ಮತ್ತು ಇದೇ ದೇಶದ ಅನ್ನ-ಜಲಗಳನ್ನು ತಿಂದರು, ಕುಡಿದರು; ಈಗಲೂ ತಿನ್ನುತ್ತಾರೆ, ಕುಡಿಯುತ್ತಾರೆ; ಹೀಗಿದ್ದರೂ, ತಮ್ಮ ತಾಯಿ, ತಂದೆ, ತಾತ ಮೊದಲಾದವರ ಮಾರ್ಗವನ್ನು ಬಿಟ್ಟು, ಬೇರೆ ವಿದೇಶೀಯ ಮತಗಳ ಕಡೆಗೆ ಹೆಚ್ಚಾಗಿ ಓಲುವುದು ಬ್ರಾಹ್ಮ ಸಮಾಜ ಮತ್ತು ಪ್ರಾರ್ಥನಾ ಸಮಾಜಿಗಳಿಗೆ ಎಲ್ಲಿಯವರೆಗೆ ಉಚಿತ? ಇವರು ಈ ದೇಶದಲ್ಲಿನ ಸಂಸ್ಕೃತವಿದ್ಯೆಯಿಂದ ರಹಿತರಾಗಿ, ತಮ್ಮನ್ನು ವಿದ್ವಾಂಸರೆಂದು ಪ್ರಕಟಗೊಳಿಸುತ್ತಾರೆ. ಆಂಗ್ಲಭಾಷೆಯನ್ನೋದಿ, ಪಂಡಿತಾಭಿಮಾನಿಗಳಾಗಿ, ಥಟ್ಟನೆ ಒಂದು ಮತವನ್ನು ಸ್ಥಾಪಿಸುವುದರಲ್ಲಿ ಪ್ರವೃತ್ತರಾಗುವುದು ಮಾನವರನ್ನು ಸ್ಥಿರಗೊಳಿಸುವ ಮತ್ತು ವೃದ್ಧಿಪಡಿಸುವ ಕಾರ್ಯವೆಂತಾಗಬಲ್ಲದು?

೪. ಆಂಗ್ಲರು, ಯವನರು, ಅಂತ್ಯಜರು–ಮೊದಲಾದವರೊಂದಿಗೂ ಸಹ ಭೋಜನ–ಪಾನಗಳ ಭೇದವನ್ನಿಡಲಿಲ್ಲ. ಇವರು 'ಭೋಜನ–ಪಾನ ಮತ್ತು ಜಾತಿಯ ಭೇದವನ್ನು ಮುರಿಯುವುದರಿಂದ ನಾವು ಮತ್ತು ನಮ್ಮ ದೇಶ ಸುಧಾರಣೆ ಹೊಂದುವುದು'–ಎಂದೇ ತಿಳಿದಿರಬಹುದು. ಆದರೆ–ಇಂತಹ ಮಾತುಗಳಿಂದ ಸುಧಾರಣೆಯಾದರೋ ಎಲ್ಲಿ, ಪ್ರತಿಯಾಗಿ ಕೇಡುಂಟಾಗುತ್ತದೆ.

೫. ಪ್ರಶ್ನೆ:–ಜಾತಿಭೇದವು ಈಶ್ವರಕೃತವೋ ಅಥವಾ ಮನುಷ್ಯಕೃತವೋ?

ಉತ್ತರ:–ಜಾತಿಭೇದವು ಈಶ್ವರಕೃತವೂ ಆಹುದು; ಮತ್ತು ಮನುಷ್ಯಕೃತವಾದುದೂ ಇದೆ.

ಪ್ರಶ್ನೆ:–ಯಾವವು ಈಶ್ವರಕೃತವಾದುವು ಮತ್ತು ಯಾವವು ಮನುಷ್ಯಕೃತವಾದುವು?

ಉತ್ತರ:–ಮನುಷ್ಯ, ಪಶು, ಪಕ್ಷಿ, ವೃಕ್ಷ, ಜಲ, ಜಂತು–ಮೊದಲಾದ ಜಾತಿಗಳು ಪರಮೇಶ್ವರಕೃತವಾದುವು. ಹೇಗೆ ಪಶುಗಳಲ್ಲಿ ಗೋವು, ಅಶ್ವ, ಆನೆ–ಮೊದಲಾದ ಜಾತಿಗಳೂ, ವೃಕ್ಷಗಳಲ್ಲಿ ಅರಳಿ, ಅಲ, ಮಾವು–ಮೊದಲಾದುವೂ, ಪಕ್ಷಿಗಳಲ್ಲಿ ಹಂಸ, ಕಾಗೆ, ಕೊಕ್ಕರೆ–ಮೊದಲಾದುವೂ, ಜಲ–ಜಂತುಗಳಲ್ಲಿ ಮೀನು, ಮಕರ-ಮೊದಲಾದ

ಜಾತಿಭೇದಗಳೂ ಇವೆಯೋ, ಹಾಗೆ ಮಾನವರಲ್ಲಿ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ, ಅಂತ್ಯಜ-ಎಂಬ ಜಾತಿಭೇದಗಳು ಈಶ್ವರಕೃತವಾಗಿವೆ. ಆದರೆ-ಮಾನವರಲ್ಲಿ ಬ್ರಾಹ್ಮಣ ಮೊದಲಾದುವನ್ನು ಸಾಮಾನ್ಯ ಜಾತಿಯಲ್ಲಿ ಗಣಿಸದೆ, ಸಾಮಾನ್ಯ ವಿಶೇಷಾತ್ಮಕ ಜಾತಿಯಲ್ಲಿ ಗಣಿಸುತ್ತಾರೆ. ಮೊದಲು ವರ್ಣಾಶ್ರಮ ವ್ಯವಸ್ಥೆಯಲ್ಲಿ ಬರೆದಿರುವಂತೆಯೇ ಗುಣ-ಕರ್ಮ-ಸ್ವಭಾವದಿಂದ ವರ್ಣವ್ಯವಸ್ಥೆಯನ್ನಂಗೀಕರಿಸುವುದು ಅವಶ್ಯವಾಗಿದೆ. ಇದರಲ್ಲಿ ಮನುಷ್ಯಕೃತತ್ವವೇನೆಂದರೆ-ಅವರ ಗುಣಕರ್ಮ ಸ್ವಭಾವದಿಂದ, ಮೊದಲು ಹೇಳಿದ ಅನುಸಾರವಾಗಿ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಮೊದಲಾದ ವರ್ಣಗಳ ವ್ಯವಸ್ಥೆಯನ್ನು ಪರೀಕ್ಷಾಪೂರ್ವಕವಾಗಿ ಮಾಡುವುದು ರಾಜನ ಮತ್ತು ವಿದ್ವಾಂಸರ ಕಾರ್ಯ. ಭೋಜನಭೇದವೂ ಕೂಡ ಈಶ್ವರಕೃತವೂ, ಮನುಷ್ಯಕೃತವೂ ಆಗಿದೆ. ಉದಾಹರಣೆಗೆ, ಸಿಂಹವು ಮಾಂಸಾಹಾರಿ; ಮತ್ತು ಕಾಡುಕೋಣ, ಕೋಣ-ಇವು ಹುಲ್ಲು ಮೊದಲಾದುವನ್ನು ತಿನ್ನುತ್ತವೆ. ಇದು ಈಶ್ವರಕೃತವಾದುದು ಮತ್ತು ದೇಶ, ಕಾಲ, ವಸ್ತು-ಇವುಗಳ ಭೇದದಿಂದ ಆಗುವ ಭೋಜನ ಭೇದವು ಮನುಷ್ಯಕೃತವಾದುದು.

ಪ್ರಶ್ನೆ :—ನೋಡಿರಿ, ಯೂರೋಪೀಯರು ಮೆಟ್ಟು, ಬೂಟು, ಕೋಟು, ಷರಾಯಿ ಹಾಕಿಕೊಳ್ಳುತ್ತಾರೆ; ಹೋಟಲಿನಲ್ಲಿ ಎಲ್ಲರ ಕೈಯಿನದನ್ನೂ ತಿನ್ನುತ್ತಾರೆ. ಆದುದರಿಂದಲೇ ತಮ್ಮ ಉನ್ನತಿಯನ್ನು ಮಾಡಿಕೊಳ್ಳುತ್ತಾ ಹೋಗುತ್ತಾರೆ.

ಉತ್ತರ :—ಇದು ನಿಮ್ಮ ತಪ್ಪು ತಿಳುವಳಿಕೆ. ಏಕೆಂದರೆ—ಮುಸಲ್ಮಾನರೂ, ಅಂತ್ಯಜರೂ ಎಲ್ಲರ ಕೈಯಿನದನ್ನೂ ತಿನ್ನುತ್ತಾರೆ. ಮತ್ತೆ ಅವರ ಉನ್ನತಿ ಆಗುವುದಿಲ್ಲವೇಕೆ? ಯೂರೋಪೀಯರಲ್ಲಿ ಬಾಲ್ಯಾವಸ್ಥೆಯಲ್ಲಿ ವಿವಾಹವಾಗದಿರುವುದು, ಬಾಲಕ-ಬಾಲಿಕೆಯರಿಗೆ ವಿದ್ಯೆ-ಸುಶಿಕ್ಷಣಗಳನ್ನು ಕೊಡುವುದು-ಕೊಡಿಸುವುದು, ಸ್ವಯಂವರ ವಿವಾಹವಾಗುವುದು-ಮೊದಲಾದ ಗುಣಗಳಿವೆ; ಕೆಟ್ಟ ಕೆಟ್ಟ ಜನರ ಉಪದೇಶವಾಗುವುದಿಲ್ಲ; ಅವರು ವಿದ್ವಾಂಸರಾಗಿ, ಕಂಡಕಂಡವರ ಪಾಷಂಡಕ್ಕೆ ಸಿಕ್ಕಿಬೀಳುವುದಿಲ್ಲ; ಏನು ಮಾಡಿದರೂ, ಎಲ್ಲವನ್ನೂ ಪರಸ್ಪರ ಸಮಾಲೋಚನೆ ಮತ್ತು ಸಭೆಯಲ್ಲಿ ನಿಶ್ಚಯಮಾಡಿ,

ಮಾಡುತ್ತಾರೆ; ತಮ್ಮ ಸ್ವಜಾತಿಯ ಉನ್ನತಿಗಾಗಿ ತನುಮನಧನಗಳನ್ನು ವ್ಯಯಿಸುತ್ತಾರೆ; ಆಲಸ್ಯವನ್ನು ಬಿಟ್ಟು, ಉದ್ಯೋಗಮಾಡುತ್ತಿರುತ್ತಾರೆ. ನೋಡಿರಿ! ತಮ್ಮ ದೇಶದಲ್ಲಿ ನಿರ್ಮಿತವಾದ ಪಾದರಕ್ಷೆಯನ್ನು ಆಫೀಸುಗಳ ಮತ್ತು ನ್ಯಾಯಾಲಯಗಳ ಒಳಕ್ಕೆ ಹೋಗಗೊಡುತ್ತಾರೆ; ಈ ದೇಶದ ಎಕ್ಕಡಗಳನ್ನು ಒಳಕ್ಕೆ ಬಿಡುವುದಿಲ್ಲ! ತಮ್ಮ ದೇಶದಲ್ಲಾದ ಪಾದರಕ್ಷೆಗಳಿಗೆ ಕೊಡುವಷ್ಟು ಮಾನಪ್ರತಿಷ್ಠೆಗಳನ್ನೂ ಸಹ ಅನ್ಯದೇಶಸ್ಥರಾದ ಮಾನವರಿಗೆ ಕೊಡುವುದಿಲ್ಲ—ಎಂಬುದನ್ನು ಇಷ್ಟರಿಂದಲೇ ತಿಳಿದುಕೊಳ್ಳಿರಿ. ನೋಡಿರಿ! ಯೂರೋಪೀಯರು ಈ ದೇಶಕ್ಕೆ ಬಂದು ನೂರು ವರ್ಷಗಳಿಗಿಂತ ಸ್ವಲ್ಪ ಹೆಚ್ಚಾಯಿತು ಮತ್ತು ಇಂದಿನವರೆಗೂ ಈ ಜನರು, ಸ್ವದೇಶದಲ್ಲುಡುತ್ತಿದ್ದಂತೆ, ದಪ್ಪನಾದ ಬಟ್ಟೆಗಳು ಮೊದಲಾದುವನ್ನು ಧರಿಸುತ್ತಾರೆ; ಆದರೆ ಅವರು ತಮ್ಮ ದೇಶದ ರೀತಿನೀತಿಗಳನ್ನು ಬಿಡಲಿಲ್ಲ. ಮತ್ತು ನಿಮ್ಮಲ್ಲಿ ಬಹುಮಂದಿಗಳು ಅವರ ಅನುಕರಣವನ್ನು ಮಾಡಿಕೊಂಡಿರಿ. ಇದರಿಂದಲೇ ನೀವು ಬುದ್ಧಿಹೀನರು ಮತ್ತು ಅವರು ಬುದ್ಧಿವಂತರೆಂದು ಸಿದ್ಧವಾಗುತ್ತದೆ. ಅನುಕರಣ ಮಾಡುವುದು ಯಾವ ಬುದ್ಧಿವಂತನ ಕೆಲಸವೂ ಅಲ್ಲ. ಮತ್ತು ಅವರಲ್ಲಿ ಯಾವನು ಯಾವ ಕೆಲಸದ ಮೇಲಿರುತ್ತಾನೋ, ಆವನು ಅದನ್ನು ಯಥೋಚಿತವಾಗಿ ಮಾಡುತ್ತಾನೆ; ಸರಿಯಾಗಿ ಆಜ್ಞಾನುವರ್ತಿಗಳಾಗಿರುತ್ತಾರೆ. ತಮ್ಮ ದೇಶೀಯರಿಗೆ ವ್ಯಾಪಾರ–ಮೊದಲಾದುವುಗಳಲ್ಲಿ ಸಹಾಯ ನೀಡುತ್ತಾರೆ. ಈ ಮೊದಲಾದ ಗುಣಗಳಿಂದ ಮತ್ತು ಒಳ್ಳೆ ಒಳ್ಳೆಯ ಕರ್ಮಗಳಿಂದ ಅವರಿಗೆ ಉನ್ನತಿಯುಂಟಾಗಿದೆ. ಮೆಟ್ಟುಬೂಟು, ಕೋಟು, ಷರಾಯಿ, ಹೋಟಲಿನಲ್ಲಿ ತಿನ್ನುವುದು–ಕುಡಿಯುವುದು–ಮೊದಲಾದ ಸಾಧಾರಣವಾದ ಮತ್ತು ಕೆಟ್ಟದಾದ ಕೆಲಸಗಳಿಂದ ಮುಂದೆ ಬಂದಿಲ್ಲ! ಮತ್ತು ಇವರಲ್ಲಿ ಜಾತಿಭೇದವೂ ಇದೆ, ನೋಡಿರಿ! ಯಾವನಾದರೂ ಯೂರೋಪೀಯನು ಎಷ್ಟೇ ದೊಡ್ಡ ಅಧಿಕಾರದ ಮೇಲಿರಲಿ ಅಥವಾ ಪ್ರತಿಷ್ಠಿತನಾಗಿರಲಿ, ಯಾವಳಾದರೂ ಅನ್ಯದೇಶೀಯರ ಅಥವಾ ಅನ್ಯಮತೀಯರ ಹುಡುಗಿಯೊಂದಿಗೆ, ಅಥವಾ ಯೂರೋಪೀಯ ಕನ್ಯೆಯು ಅನ್ಯದೇಶೀಯನೊಂದಿಗೆ ಮದುವೆ ಮಾಡಿಕೊಂಡುಬಿಟ್ಟರೆ, ಕೂಡಲೇ ಬೇರೆ ಜನರು ಅವನನ್ನು ಅಹ್ವಾ

ನಿಸುವುದು, ಜೊತೆಯಲ್ಲಿ ಕುಳಿತು ಊಟಮಾಡುವುದು ಮತ್ತು ಮದುವೆ ಮೊದಲಾದುವನ್ನು ನಿಲ್ಲಿಸಿಬಿಡುತ್ತಾರೆ. ಇದು ಜಾತಿಭೇದ ವಲ್ಲದಿದ್ದರೆ ಮತ್ತೇನು? ಮತ್ತು ಸರಳಹೃದಯರಾದ ನಿಮ್ಮನ್ನು "ನಮ್ಮಲ್ಲಿ ಜಾತಿಭೇದವಿಲ್ಲ" ಎಂದು ಹೇಳಿ ವಂಚಿಸುತ್ತಾರೆ; ನೀವು ನಿಮ್ಮ ಮೂರ್ಖತನದಿಂದ ಒಪ್ಪಿಕೊಂಡೂಬಿಡುತ್ತೀರಿ! ಆದ್ದರಿಂದ, ಏನುಮಾಡಬೇಕಾದರೂ, ಮತ್ತೆ ಪಶ್ಚಾತ್ತಾಪ ಪಡಬೇಕಾಗದಂತೆ, ಯೋಚಿಸಿ-ವಿವೇಚಿಸಿ ಮಾಡಬೇಕು. ನೋಡಿರಿ! ವೈದ್ಯನ ಮತ್ತು ಔಷಧದ ಆವಶ್ಯಕತೆ ಸ್ವಸ್ಥನಿಗಲ್ಲ; ರೋಗಿಗೆ ಇರುತ್ತದೆ. ವಿದ್ಯಾವಂತನು ರೋಗರಹಿತನೂ, ಮತ್ತು ವಿದ್ಯಾರಹಿತನು ಅವಿದ್ಯಾರೋಗಗ್ರಸ್ತನೂ ಆಗಿರುತ್ತಾರೆ. ಆ ರೋಗವನ್ನು ದೂರಮಾಡುವುದಕ್ಕಾಗಿ ಸತ್ಯವಿದ್ಯೆ ಮತ್ತು ಸತ್ಯೋಪದೇಶವಿರುತ್ತದೆ. ಅವಿದ್ಯೆಯಿಂದ ಅವರಿಗೆ ಉಂಟಾಗಿರುವ ರೋಗವಾವುದೆಂದರೆ ತಿನ್ನುವುದು ಕುಡಿಯುವುದರಲ್ಲಿಯೇ ಧರ್ಮವಿರುತ್ತದೆ ಮತ್ತು ಹೋಗುತ್ತದೆ. ಎಂಬುವುದು ಯಾವಾಗ ಯಾವನಾದರೂ ತಿನ್ನುವುದು-ಕುಡಿಯುವುದರಲ್ಲಿ ಅನಾಚಾರಮಾಡುವುದನ್ನು ನೋಡುತ್ತಾರೊ, ಆಗ "ಅವನು ಧರ್ಮಭ್ರಷ್ಟನಾಗಿ ಹೋದನು; ಅವನ ಮಾತನ್ನು ಕೇಳಬಾರದು"—ಎಂದು ಹೇಳುತ್ತಾರೆ ಮತ್ತು ತಿಳಿಯುತ್ತಾರೆ. ಮತ್ತು ಅವನ ಹತ್ತಿರ ಕುಳಿತುಕೊಳ್ಳುವುದೂ ಇಲ್ಲ; ಅವನನ್ನು ತಮ್ಮ ಹತ್ತಿರ ಕುಳಿತುಕೊಳ್ಳಗೊಡುವುದೂ ಇಲ್ಲ. ಈಗ ಹೇಳಿರಿ, ನಿಮ್ಮ ವಿದ್ಯೆ ಸ್ವಾರ್ಥಕ್ಕಾಗಿದೆಯೋ, ಪರಮಾರ್ಥಕ್ಕಾಗಿಯೋ? ನಿಮ್ಮ ವಿದ್ಯೆಯಿಂದ ಅಜ್ಞಾನಿಗಳಿಗೆ ಲಾಭ ಸಿಕ್ಕಿದ್ದರೆ, ಆಗ ಮಾತ್ರ ಪರಮಾರ್ಥಸಿದ್ಧಿಸುತ್ತಿದ್ದಿತು. "ಅವರು ಪಡೆಯುವುದಿಲ್ಲ; ನಾವೇನು ಮಾಡೋಣ?"—ಎನ್ನುವಿರಾದರೆ, ಇದು ನಿಮ್ಮದೋಷ; ಅವರದಲ್ಲ; ಏಕೆಂದರೆ—ನೀವು ನಿಮ್ಮ ಆಚರಣವನ್ನು ಸರಿಯಾಗಿಟ್ಟುಕೊಂಡಿದ್ದರೆ, ಅವರು ನಿಮ್ಮಲ್ಲಿ ಪ್ರೇಮವಿಟ್ಟು, ಉಪಕಾರ ಹೊಂದುತ್ತಿದ್ದರು. ಹೀಗೆ ನೀವು ಸಾವಿರಾರು ಜನರ ಉಪಕಾರವನ್ನು ನಾಶಮಾಡಿ ತಮ್ಮ ಸುಖವನ್ನೇ ಗಳಿಸಿಕೊಂಡಿರಿ. ನಿಮಗೆ ಇದೊಂದು ದೊಡ್ಡ ಅಪರಾಧ ಬೆನ್ನುಹತ್ತಿತು. ಏಕೆಂದರೆ—ಪರೋಪಕಾರಮಾಡುವುದು ಧರ್ಮ; ಮತ್ತು ಪರಹಾನಿ ಮಾಡುವುದು ಅಧರ್ಮ—ಎನಿಸುತ್ತದೆ. ಆದುದರಿಂದ

ವಿದ್ವಾಂಸನು ಯಥಾಯೋಗ್ಯವಾದ ವ್ಯವಹಾರವನ್ನಿಟ್ಟುಕೊಂಡು, ಅಜ್ಞಾನಿಗಳನ್ನು ದುಃಖಸಾಗರದಿಂದ ಪಾರುಮಾಡುವುದಕ್ಕೆ ನೌಕೆಯಂತೆ ಯಾಗಬೇಕು. ಮೂರ್ಖರದರಂತಹ ಕರ್ಮಗಳನ್ನು ಸರ್ವಥಾ ಮಾಡಬಾರದು. ಆದರೆ ಯಾವುದರಿಂದ ಅವರ ಮತ್ತು ತಮ್ಮ ಉನ್ನತಿಯು ದಿನದಿನವೂ ಆಗುವುದೋ, ಅಂತಹ ಕರ್ಮಗಳನ್ನಾಚರಿಸುವುದು ಉಚಿತವಾಗಿರುತ್ತದೆ.

ಪ್ರಶ್ನೆ :—ನಾವು ಯಾವ ಪುಸ್ತಕವನ್ನೂ ಈಶ್ವರ ಪ್ರಣೀತವಾದುದು ಅಥವಾ ಸರ್ವಾಂಶದಲ್ಲಿಯೂ ಸತ್ಯವಾದುದು-ಎಂದೊಪ್ಪುವುದಿಲ್ಲ. ಏಕೆಂದರೆ—ಮಾನವರ ಬುದ್ಧಿ ನಿರ್ಭ್ರಾಂತವಾಗಿರುವುದಿಲ್ಲ. ಆದುದರಿಂದ ಅವರು ರಚಿಸಿದ ಗ್ರಂಥಗಳೆಲ್ಲಾ ಭ್ರಾಂತವಾಗಿರುತ್ತವೆ. ಆದಕಾರಣ, ನಾವು ಎಲ್ಲದರಿಂದಲೂ ಸತ್ಯವನ್ನು ಗ್ರಹಿಸುತ್ತೇವೆ ಮತ್ತು ಅಸತ್ಯವನ್ನು ಬಿಟ್ಟು ಬಿಡುತ್ತೇವೆ. ಸತ್ಯವು ಬೇಕಾದರೆ ವೇದದಲ್ಲಿ, ಬೈಬಲಿನಲ್ಲಿ ಅಥವಾ ಕುರಾನಿನಲ್ಲಿ, ಇಲ್ಲವೇ ಬೇರೆ ಯಾವುದಾದರೂ ಗ್ರಂಥದಲ್ಲಿರಲಿ, ನಮಗೆ ಗ್ರಾಹ್ಯ ; ಅಸತ್ಯ ಯಾವುದರದೂ ಗ್ರಾಹ್ಯವಲ್ಲ.

ಉತ್ತರ :—ಯಾವ ಮಾನದಿಂದ ನೀವು ಸತ್ಯಗ್ರಾಹಿಗಳಾಗಬಯಸುತ್ತಿರೋ, ಆ ಮಾತಿನಿಂದಲೇ ಅಸತ್ಯಗ್ರಾಹಿಗಳೂ ಆಗುತ್ತೀರಿ. ಏಕೆಂದರೆ—ಯಾವಾಗ ಎಲ್ಲಾ ಮನುಷ್ಯರೂ ಭ್ರಾಂತಿರಹಿತರಾಗಲಾರರೋ, ಆಗ ನೀವೂ ಮಾನವರಾದುದರಿಂದ ಭ್ರಾಂತಿಸಹಿತರಾಗಿರುತ್ತೀರಿ. ಭ್ರಾಂತಿಸಹಿತನಾದವನ ವಚನಗಳು ಸರ್ವಾಂಶದಲ್ಲಿ ಪ್ರಾಮಾಣಿಕವಾಗದಿರುವಾಗ, ನಿಮ್ಮ ವಚನದ ಮೇಲೂ ನಂಬಿಕೆಯುಂಟಾಗುವುದಿಲ್ಲ. ಮತ್ತೆ ನಿಮ್ಮ ವಚನದ ಮೇಲೂ ಸರ್ವಥಾ ನಂಬಿಕೆಯಿಡಬಾರದು. ಹೀಗಿರುವಾಗ, ವಿಷಯುಕ್ತವಾದ ಅನ್ನದಂತೆ, ತ್ಯಾಗಕ್ಕೆ ಯೋಗ್ಯವಾಗಿವೆ. ಮತ್ತೆ ನಿಮ್ಮ ರಚನೆಯಾದ ವಾಖ್ಯಾನ ಪುಸ್ತಕವನ್ನು ಯಾವನೂ ಪ್ರಮಾಣವೆಂದಂಗೀಕರಿಸಬಾರದು. ಹೊರಟದ್ದರು ಚತುರ್ವೇದಿಗಳು ಷಡ್ವೇದಿಗಳಾಗಲೋಸುಗ ; ಗಂಟಿನಿಂದ ಎರಡನ್ನು ಕಳೆದುಕೊಂಡು ದ್ವಿವೇದಿಗಳಾಗಿಹೋದರು !" ಬೇರೆಯ ಮಾನವರು ಸರ್ವಜ್ಞರಲ್ಲದಿರುವಂತೆ, ನೀವೂ ಸರ್ವಜ್ಞರೇನಲ್ಲ.

ಒಂದೊಂದು ಸಲ ಭ್ರಮದಿಂದ ಅಸತ್ಯವನ್ನು ಗ್ರಹಿಸಿ, ಸತ್ಯವನ್ನು ಬಿಟ್ಟು ಬಿಡುತ್ತಲೂ ಇರಬಹುದು. ಆದುದರಿಂದ ಸರ್ವಜ್ಞನಾದ ಪರಮಾತ್ಮ ವಚನದ ಸಹಾಯವು ಅಲ್ಪಜ್ಞರಾದ ನಮಗೆ ಅವಶ್ಯವಾಗಿ ಇರಬೇಕು. ವೇದದ ವ್ಯಾಖ್ಯಾನದಲ್ಲಿ ಬರೆದಿರುವಂತೆ, ನೀವು ಅವಶ್ಯವಾಗಿಯೂ ಒಪ್ಪಬೇಕು. ಇಲ್ಲದಿದ್ದರೆ—" ಇತೋ ಭ್ರಷ್ಟಸ್ತತೋ ಭ್ರಷ್ಟ: "—ಆಗಿಹೋಗಬೇಕಾಗುತ್ತದೆ. ಯಾವುವುಗಳಲ್ಲಿ ಸ್ವಲ್ಪವೂ ಅಸತ್ಯವಿಲ್ಲಪ್ಪೋ, ಅಂತಹ ವೇದಗಳಿಂದ ಎಲ್ಲಾ ಸತ್ಯವೂ ಪ್ರಾಪ್ತವಾಗುವಾಗ, ಅವುಗಳನ್ನು ಗ್ರಹಿಸುವುದರಲ್ಲಿ ಶಂಕಿಸುವುದು ತಮ್ಮ ಮತ್ತು ಪರರ ಹಾನಿಯನ್ನು ಮಾತ್ರ ಮಾಡಿಕೊಳ್ಳುವಂತಿರುತ್ತದೆ. ಈ ಮಾತಿನಿಂದ ನಿಮ್ಮನ್ನು ಆರ್ಯಾವರ್ತೀಯರು ತಮ್ಮವರೆಂದು ತಿಳಿಯುವುದಿಲ್ಲ. ಮತ್ತು ನೀವು ಆರ್ಯಾವರ್ತದ ಉನ್ನತಿಗೆ ಕಾರಣವೂ ಆಗಲಾರದೇ ಹೋದಿರಿ; ಏಕೆಂದರೆ-ನೀವು ಎಲ್ಲಾ ಮನೆಗಳ ಭಿಕ್ಷುಕರಾಗುಳಿದಿದ್ದೀರಿ. " ನಾವು ಈ ಮಾತಿನಿಂದ ತಮ್ಮ ಮತ್ತು ಪರರ ಉಪಕಾರಮಾಡಬಲ್ಲೆವು "-ಎಂದು ನೀವು ತಿಳಿದಿದ್ದೀರಿ; ಹಾಗೆ ಮಾಡಲಾರಿರಿ. ಯಾವನಾದರೊಬ್ಬನ ತಂದೆತಾಯಿಗಳಿಬ್ಬರೇ ಸಮಗ್ರ ಜಗತ್ತಿನ ಬಾಲಕರೆಲ್ಲರ ಪಾಲನೆಯನ್ನೂ ಮಾಡಲಾರಂಭಿಸಿದರೆ, ಎಲ್ಲರ ಪಾಲನೆಯನ್ನೂ ಮಾಡುವುದಂತೂ ಅಸಂಭವವಾಗಿರುತ್ತದೆ; ಆದರೆ ಆ ಯತ್ನದಿಂದ ತಮ್ಮ ಮಕ್ಕಳನ್ನೂ ನಾಶಮಾಡಿಕೊಳ್ಳುತ್ತಾರೆ; ನಿಮ್ಮಗಳ ಗತಿಯೂ ಹಾಗೆಯೇ ಇದೆ ಒಳ್ಳೆಯದು, ವೇದಾದಿ ಸತ್ಯಶಾಸ್ತ್ರಗಳನ್ನೊಪ್ಪದೆ, ನೀವು ನಿಮ್ಮ ವಚನಗಳ ಸತ್ಯತೆ ಮತ್ತು ಅಸತ್ಯತೆಯ ಪರೀಕ್ಷೆಯನ್ನೂ, ಮತ್ತು ಆರ್ಯಾವರ್ತದ ಉನ್ನತಿಯನ್ನೂ ಕೂಡ ಎಂದಿಗಾದರೂ ಮಾಡಬಲ್ಲಿರೇ? ಯಾವ ದೇಶಕ್ಕೆ ರೋಗವುಂಟಾಗಿವೆಯೋ, ಅದರ ಔಷಧಿ ನಿಮ್ಮ ಹತ್ತಿರವಿಲ್ಲ. ಮತ್ತು ಯೂರೋಪೀಯರು ನಿಮ್ಮನ್ನು ಅಪೇಕ್ಷಿಸುವುದಿಲ್ಲ. ಹಾಗೂ ಆರ್ಯಾವರ್ತೀಯರು ನಿಮ್ಮನ್ನು ಅನ್ಯಮತೀಯರಿಗೆಣೆಯೆಂದು ತಿಳಿಯುತ್ತಾರೆ. ಈಗಲೂ ಕೂಡ ತಿರುಕೊಂಡು, ವೇದಾದಿಗಳನ್ನು ಗೌರವಿಸುವುದರಿಂದ ದೇಶದ ಉನ್ನತಿಯನ್ನು ಸಾಧಿಸತೊಡಗುವಿರಾದರೆ, ಅದೂ ಒಳ್ಳೆಯದೇ, ನೀವು ಎಲ್ಲಾ ಸತ್ಯವೂ ಪರಮೇಶ್ವರನಿಂದ ಪ್ರಕಾಶಿತವಾಗುತ್ತದೆಂದು ಹೇಳು

ತ್ತೀರಿ; ಇನ್ನು ಋಷಿಗಳ ಅತ್ಮದಲ್ಲಿ ಈಶ್ವರನಿಂದ ಪ್ರಕಾಶಿತವಾದ ಸತ್ಯಾರ್ಥಗಳಾದ ವೇದಗಳನ್ನೇಕೆ ಅಂಗೀಕರಿಸುವುದಿಲ್ಲ; ಹೌದು, ನೀವು ವೇದಗಳನ್ನೋದಿಲ್ಲ; ಮತ್ತು ಓದಲು ಇಚ್ಛಿಸುವುದೂ ಇಲ್ಲ—ಇದೇ ಕಾರಣ. ಹೇಗೆ ತಾನೆ ನಿಮಗೆ ವೇದೋಕ್ತ ಜ್ಞಾನವುಂಟಾದೀತು?

೬. ಎರಡನೆಯದಾಗಿ, ಜಗತ್ತಿನ ಉಪಾದಾನಕಾರಣವಿಲ್ಲದೆ ಜಗತ್ತಿನ ಉತ್ಪತ್ತಿಯಾಯಿತೆಂದೂ ಮತ್ತು ಜೀವನೂ ಸಹ ಉತ್ಪನ್ನನಾದವನೆಂದೂ, ಕ್ರೈಸ್ತರು, ಮುಸಲ್ಮಾನರು ಮೊದಲಾದವರಂತೆ ಒಪ್ಪುತ್ತೀರಿ. ಇದರ ಉತ್ತರವನ್ನು ಸೃಷ್ಟ್ಯುತ್ಪತ್ತಿ ಮತ್ತು ಜೀವೇಶ್ವರರ ವ್ಯಾಖ್ಯಾನದಲ್ಲಿ ನೋಡಿಕೊಳ್ಳಿರಿ. ಕಾರಣವಿಲ್ಲದೆ ಕಾರ್ಯವಾಗುವುದು ಸರ್ವಥಾ ಅಸಂಭವ ಮತ್ತು ಉತ್ಪನ್ನವಸ್ತುವು ನಾಶವಾಗದಿರುವುದೂ ಹಾಗೆಯೇ ಅಸಂಭವ.

೭. ಪಶ್ಚಾತ್ತಾಪ ಮತ್ತು ಪ್ರಾರ್ಥನೆಯಿಂದ ಪಾಪಗಳ ನಿವೃತ್ತಿಯನ್ನು ಒಪ್ಪುವುದೂ ಕೂಡ ನಿಮ್ಮದೊಂದು ದೋಷ. ಈ ಮಾತಿನಿಂದಲೇ ಜಗತ್ತಿನಲ್ಲಿ ಪಾಪಗಳು ಬಹುವಾಗಿ ಹೆಚ್ಚಿಹೋಗಿವೆ. ಏಕೆಂದರೆ, ಪೌರಾಣಿಕರು ತೀರ್ಥ ಮೊದಲಾದುವುಗಳ ಯಾತ್ರೆಗಳಿಂದಲೂ, ಜೈನರೂ ಕೂಡ ನವಕಾರಮಂತ್ರದ ಜಪದಿಂದಲೂ ಮತ್ತು ತೀರ್ಥ ಮೊದಲಾದವುಗಳಿಂದಲೂ, ಕ್ರೈಸ್ತರು ಏಸುವಿನ ವಿಶ್ವಾಸದಿಂದಲೂ, ಮುಸಲ್ಮಾನರು 'ತೋಬಾ' ಮಾಡುವುದರಿಂದಲೂ, ಅನುಭವಿಸದೆಯೇ ಪಾಪಗಳು ಕಳೆದುಹೋಗುತ್ತವೆಂದು ತಿಳಿಯುತ್ತಾರೆ. ಇದರಿಂದ, ಪಾಪಗಳಿಂದ ಭಯವುಂಟಾಗದೆ ಪಾಪದಲ್ಲಿ ಪ್ರವೃತ್ತಿಯು ಹೆಚ್ಚಿಹೋಗಿದೆ. ಈ ವಿಷಯದಲ್ಲಿ ಬ್ರಾಹ್ಮಸಮಾಜಿಗಳೂ. ಪ್ರಾರ್ಥನಾಸಮಾಜಿಗಳೂ ಕೂಡ ಪೌರಾಣಿಕರು ಮೊದಲಾದವರಿಗೆ ಸಮಾನರಾಗಿದ್ದಾರೆ. ವೇದಗಳನ್ನಂಗೀಕರಿಸಿದ್ದಲ್ಲಿ, ಅನುಭವಿಸಿದಲ್ಲದೆ ಪಾಪಪುಣ್ಯಗಳ ನಿವೃತ್ತಿಯಾಗದಿರುವುದರಿಂದ, ಪಾಪಗಳಿಗೆ ಹೆದರುತ್ತಿದ್ದರಿ ಮತ್ತು ಧರ್ಮದಲ್ಲಿ ಸದಾ ಪ್ರವೃತ್ತರಾಗಿರುತ್ತಿದ್ದರಿ. ಅನುಭವಿಸದೆಯೇ ನಿವೃತ್ತಿಯಾಗುವುದೆಂದು ಒಪ್ಪಿದರೆ. ಈಶ್ವರನು ಅನ್ಯಾಯಕಾರಿಯಾಗುತ್ತಾನೆ.

೮. ನೀವು ಜೀವನ ಅನಂತವಾದ ಉನ್ನತಿಯನ್ನು ಒಪ್ಪುವುದು

ಎಂದಿಗೂ ಆಗಲಾರದು. ಏಕೆಂದರೆ, ಸೀಮಾವಂತನಾದ ಜೀವನ ಗುಣ ಕರ್ಮಸ್ವಭಾವದ ಫಲವೂ ಕೂಡ ಸೀಮಿತವಾಗಿರುವುದು ಅವಶ್ಯವು.

ಪ್ರಶ್ನೆ :—ಪರಮೇಶನು ದಯಾಳುವು. ಸೀಮಾಯುಕ್ತವಾದ ಕರ್ಮಗಳಿಗೆ ಅನಂತಫಲವನ್ನು ಕೊಟ್ಟುಬಿಡುವನು.

ಉತ್ತರ :—ಹೀಗೆ ಮಾಡಿದಲ್ಲಿ, ಪರಮೇಶ್ವರನ ನ್ಯಾಯವು ನಾಶವಾಗಿಹೋದೀತು. ಮತ್ತು ಯಾವನೂ ಸತ್ಕರ್ಮಗಳ ಉನ್ನತಿಯನ್ನೂ ಸಾಧಿಸುವುದಿಲ್ಲ. ಏಕೆಂದರೆ, ಸ್ವಲ್ಪ ಸತ್ಕರ್ಮಕ್ಕೂ ಕೂಡ ಅನಂತಫಲವನ್ನು ಪರಮೇಶ್ವರನು ಕೊಟ್ಟುಬಿಡುವನು ಮತ್ತು ಪಾಪಗಳು ಎಷ್ಟುಬೇಕಾದರೂ ಇರಲಿ, ಪಶ್ಚಾತ್ತಾಪ ಮತ್ತು ಪ್ರಾರ್ಥನೆಯಿಂದ ಬಿಟ್ಟುಹೋಗುವುವು. ಇಂತಹ ಮಾತುಗಳಿಂದ ಧರ್ಮದ ಹಾನಿಯೂ ಮತ್ತು ಪಾಪಕರ್ಮಗಳ ವೃದ್ಧಿಯೂ ಉಂಟಾಗುತ್ತದೆ.

ಪ್ರಶ್ನೆ :—ನಾವು ಸ್ವಾಭಾವಿಕ ಜ್ಞಾನವನ್ನು ವೇದಕ್ಕಿಂತಲೂ ದೊಡ್ಡದೆಂದು ತಿಳಿಯುತ್ತೇವೆ ; ನೈಮಿತ್ತಿಕ ಜ್ಞಾನವನ್ನಲ್ಲ. ಏಕೆಂದರೆ–ನಮ್ಮಲ್ಲಿ ಪರಮೇಶ್ವರದತ್ತವಾದ ಸ್ವಾಭಾವಿಕ ಜ್ಞಾನವು ಇರದಿದ್ದರೆ, ವೇದಗಳನ್ನಾದರೂ ಹೇಗೆ ಓದಲೂ–ಓದಿಸಲೂ, ತಿಳಿಯಲೂ–ತಿಳಿಸಲೂ ಸಮರ್ಥರಾಗುತ್ತಿದ್ದೆವು? ಆದುದರಿಂದ ನಮ್ಮಗಳ ಮತ ಬಹಳ ಚೆನ್ನಾಗಿದೆ.

ಉತ್ತರ :— ಈ ನಿನ್ನ ಮಾತು ನಿರರ್ಥಕ. ಏಕೆಂದರೆ–ಯಾವ ಜ್ಞಾನವು ಯಾವನಿಂದಲಾದರೂ ಕೊಟ್ಟುದುದಾಗಿರುತ್ತದೆಯೋ, ಅದು ಸ್ವಾಭಾವಿಕವಾದುದಾಗಿರುವುದಿಲ್ಲ. ಸ್ವಾಭಾವಿಕವಾದುದು ಸಹಜ ಜ್ಞಾನವಾಗಿರುತ್ತದೆ; ಮತ್ತು ಅದು ಕುಗ್ಗಲೂಲಾರದು ; ಹಿಗ್ಗಲೂ ಲಾರದು. ಅದರಿಂದ ಯಾವನೂ ಉನ್ನತಿಹೊಂದಲಾರನು. ಏಕೆಂದರೆ-ಕಾಡುಮನುಷ್ಯರಿಗೂ ಸ್ವಾಭಾವಿಕ ಜ್ಞಾನವಿದೆ. ಅವರೇಕೆ ತಮ್ಮ ಉನ್ನತಿಯನ್ನು ಸಾಧಿಸಲಾರರು ? ಮತ್ತು ಯಾವ ನೈಮಿತ್ತಿಕ ಜ್ಞಾನ ವಿದೆಯೋ, ಅದೇ ಉನ್ನತಿಗೆ ಕಾರಣ. ನೋಡಿರಿ ! ನೀವೂ, ನಾವೂ ಬಾಲ್ಯಾವಸ್ಥೆಯಲ್ಲಿ ಕರ್ತವ್ಯಾಕರ್ತವ್ಯ ಮತ್ತು ಧರ್ಮಾಧರ್ಮಗಳನ್ನು ಸರಿಯಾಗಿ ಸ್ವಲ್ಪವೂ ತಿಳಿಯುತ್ತಿರಲಿಲ್ಲ. ನಾವು ವಿದ್ವಾಂಸರ ಬಳಿ ಓದಿದ ಮೇಲೆಯೇ ಕರ್ತವ್ಯಾಕರ್ತವ್ಯ ಮತ್ತು ಧರ್ಮಾಧರ್ಮಗಳನ್ನು

ಆರಿತುಕೊಳ್ಳಲಾರಂಭಿಸಿದೆವು. ಆದುದರಿಂದ ಸ್ವಾಭಾವಿಕ ಜ್ಞಾನವನ್ನು ಸರ್ವೋತ್ಕೃಷ್ಟವೆಂದಂಗೀಕರಿಸುವುದು ಸರಿಯಲ್ಲ.

೯. ನೀವು ಪೂರ್ವ ಮತ್ತು ಪುನರ್ಜನ್ಮವನ್ನೊಪ್ಪದಿರುವುದನ್ನು, ಕ್ರೈಸ್ತರು ಮತ್ತು ಮುಸಲ್ಮಾನರಿಂದ ಗ್ರಹಿಸಿರಬಹುದು. ಇದರ ಉತ್ತರವನ್ನೂ ಕೂಡ ಪುನರ್ಜನ್ಮದ ವ್ಯಾಖ್ಯಾನದಿಂದ ತಿಳಿದುಕೊಳ್ಳಿರಿ. ಆದರೆ—ಜೀವನು ಶಾಶ್ವತನು ಅಂದರೆ ನಿತ್ಯನು; ಮತ್ತು ಅವನ ಕರ್ಮಗಳೂ ಕೂಡ ಪ್ರವಾಹರೂಪದಿಂದ ನಿತ್ಯವಾಗಿವೆ; ಕರ್ಮಗಳ ಮತ್ತು ಕರ್ಮವಂತನ ಸಂಬಂಧ ನಿತ್ಯವಾದುದಾಗಿರುತ್ತದೆ-ಎಂದಿಷ್ಟು ತಿಳಿಯಿರಿ. ಆ ಜೀವನು ಎಲ್ಲಿಯಾದರೂ ನಿಷ್ಕರ್ಮನಾಗಿ ಕುಳಿತುಕೊಂಡಿದ್ದನೇ? ಅಥವಾ ಕುಳಿತುಕೊಂಡಿರುವನೇ? ಮತ್ತು ನಿಮ್ಮ ಹೇಳಿಕೆಯಿಂದ ಪರಮೇಶ್ವರನೂ ಕೂಡ ನಿಷ್ಕರ್ಮನಾಗುತ್ತಾನೆ. ಪೂರ್ವಾಪರ ಜನ್ಮಗಳನ್ನೊಪ್ಪದಿರುವುದರಿಂದ ಕೃತಹಾನಿ ಮತ್ತು ಅಕೃತಾಭ್ಯಾಗಮ, ನೈರ್ಘೃಣ್ಯ ಹಾಗೂ ವೈಷಮ್ಯದೋಷಗಳೂ ಕೂಡ ಈಶ್ವರನಲ್ಲಿ ಬರುತ್ತವೆ. ಏಕೆಂದರೆ—ಜನ್ಮವಿಲ್ಲದಿದ್ದರೆ, ಪಾಪ ಪುಣ್ಯಗಳ ಫಲಭೋಗಕ್ಕೆ ಹಾನಿಯುಂಟಾದೀತು. ಏಕೆಂದರೆ—ಬೇರೆಯವನಿಗೆ ಕೊಟ್ಟಿರುವ ಸುಖ, ದುಃಖ, ಹಾನಿ, ಲಾಭಗಳಿಗೆ ತಕ್ಕಂತಹ ಫಲವು ಶರೀರಧಾರಣೆಮಾಡದೆ ಉಂಟಾಗಲಾರದು. ಎರಡನೆಯದಾಗಿ, ಪೂರ್ವಜನ್ಮದ ಪಾಪ-ಪುಣ್ಯಗಳಿಲ್ಲದೆ ಸುಖ-ದುಃಖಗಳ ಪ್ರಾಪ್ತಿಯು ಈ ಜನ್ಮದಲ್ಲಿ ಹೇಗೆ ಉಂಟಾದೀತು? ಪೂರ್ವಜನ್ಮದ ಪಾಪಪುಣ್ಯಾನುಸಾರ ಉಂಟಾಗದಿದ್ದಲ್ಲಿ, ಪರಮೇಶ್ವರನು ಅನ್ಯಾಯಕಾರಿಯಾಗುವನು ಮತ್ತು ಅನುಭವಿಸದೆ ಕರ್ಮದ ಫಲವು ನಾಶವಾದಂತಾಗುವುದು. ಆದುದರಿಂದ ತಮ್ಮಗಳ ಈ ಮಾತೂ ಕೂಡ ಒಳ್ಳೆಯದಲ್ಲ.

೧೦. ಈಶ್ವರನನ್ನಲ್ಲದೆ, ದಿವ್ಯಗುಣಗಳನ್ನುಳ್ಳ ಪದಾರ್ಥಗಳನ್ನೂ ಮತ್ತು ವಿದ್ವಾಂಸರನ್ನೂ ಕೂಡ "ದೇವ" ಎಂದು ಒಪ್ಪದಿರುವ ಈ ಇನ್ನೊಂದು ಮಾತು ಸರಿಯಲ್ಲ. ಏಕೆಂದರೆ—ಪರಮೇಶ್ವರನು ಮಹಾದೇವನು; ಮತ್ತು ದೇವನೇ ಇಲ್ಲದಿದ್ದರೆ ಎಲ್ಲಾ ದೇವರುಗಳ ಸ್ವಾಮಿಯಾದುದರಿಂದ ಮಹಾದೇವನು ಎಂದು ಏಕೆ ಎನ್ನಿಸುತ್ತಿದ್ದನು?

೧೧. ಅಗ್ನಿಹೋತ್ರ ಮೊದಲಾದ ಪರೋಪಕಾರಕ ಕರ್ಮಗಳನ್ನೂ ಕೂಡ ಕರ್ತವ್ಯವೆಂದರಿಯದಿರುವುದೊಂದು ಒಳ್ಳೆಯದಲ್ಲ.

೧೨. ಋಷಿಮುಹರ್ಷಿಗಳು ಮಾಡಿದ ಉಪಕಾರಗಳನ್ನೊಪ್ಪದೆ ಯೇಸು—ಮೊದಲಾದವರ ಹಿಂದೆ ಓಲುವುದು ಒಳ್ಳೆಯದಲ್ಲ.

೧೩. ಮತ್ತು ಕಾರಣವಿದ್ಯೆಯಾದ ವೇದಗಳಿಲ್ಲದೆ, ಬೇರೆಯ ಕಾರ್ಯವಿದ್ಯೆಗಳ ಪ್ರವೃತ್ತಿಯನ್ನೊಪ್ಪುವುದು ಸರ್ವಥಾ ಅಸಂಭವ.

೧೪. ಮತ್ತು ವಿದ್ಯೆಯ ಚಿಹ್ನೆಯಾದ ಯಜ್ಞೋಪವೀತವನ್ನು ಮತ್ತು ಶಿಖೆಯನ್ನು ಬಿಟ್ಟು, ಮುಸಲ್ಮಾನ-ಕ್ರೈಸ್ತರಂತೆ ಆಗಿಹೋಗುವುದು ವ್ಯರ್ಥವಾದುದು. ಷರಾಯಿ ಮೊದಲಾದುವನ್ನು ಹಾಕಿಕೊಳ್ಳುವಾಗ ಮತ್ತು "ಪದಕ"ಗಳನ್ನು ಇಚ್ಛಿಸುವಾಗ, ಯಜ್ಞೋಪವೀತ ಮೊದಲಾದುವುಗಳ ಭಾರವೇನಾದರೂ ಹೆಚ್ಚಾಗಿಹೋಗಿದ್ದಿತೇನು?

೧೫. ಮತ್ತು ಬ್ರಹ್ಮನಿಂದಾರಂಭಿಸಿ, ಆಮೇಲೆ-ಆಮೇಲೆ ಆರ್ಯಾವರ್ತದಲ್ಲಿ ಬಹುಮಂದಿ ವಿದ್ವಾಂಸರಾಗಿಹೋಗಿದ್ದಾರೆ. ಅವರ ಪ್ರಶಂಸೆಯನ್ನು ಮಾಡದೆ, ಯೂರೋಪೀಯರ ಸ್ತುತಿಗೇ ಇಳಿದುಬಿಡುವುದನ್ನು ಪಕ್ಷಪಾತ ಮತ್ತು ಹೊಗಳಿಕೆ-ಎಂದಲ್ಲದೆ ಮತ್ತೇನೆನ್ನಲಾದೀತು?

೧೬. ಮತ್ತು ಬೀಜಾಂಕುರದಂತೆ ಜಡಚೇತನಯೋಗದಿಂದ ಜೀವೋತ್ಪತ್ತಿಯನ್ನಂಗೀಕರಿಸುವುದು, ಉತ್ಪತ್ತಿಗೆ ಮೊದಲು ಜೀವತತ್ವವನ್ನೊಪ್ಪದಿರುವುದು ಮತ್ತು ಉತ್ಪನ್ನ ಜೀವನ ನಾಶವನ್ನೊಪ್ಪದಿರುವುದು ಪೂರ್ವಾಪರ ವಿರುದ್ಧವಾಗಿದೆ. ಉತ್ಪತ್ತಿಗೆ ಪೂರ್ವದಲ್ಲಿ ಚೇತನ ಮತ್ತು ಜಡವಸ್ತುವಿಲ್ಲದಿದ್ದರೆ, ಜೀವನೆಲ್ಲಿಂದ ಬಂದನು? ಮತ್ತು ಸಂಯೋಗ ಯಾರಿಗಾಯಿತು? ಇವೆರಡನ್ನೂ ಸನಾತನವೆಂದೊಪ್ಪುವಿರಾದರೆ-ಸರಿ; ಆದರೆ-ಸೃಷ್ಟಿಗೆ ಮೊದಲು ಈಶ್ವರನ ಹೊರತು ಬೇರಾವ ತತ್ವವನ್ನೂ ಒಪ್ಪಬಾರದು-ಎಂಬ ತಮ್ಮ ಈ ಪಕ್ಷವು ವ್ಯರ್ಥವಾಗಿ ಹೋಗುವುದು. ಆದುದರಿಂದ, ಉನ್ನತಿ ಹೊಂದ ಬಯಸುವಿರಾದರೆ, "ಆರ್ಯಸಮಾಜ"ದ ಸಂಗಡ ಸೇರಿ, ಅದರ ಉದ್ದೇಶ್ಯಾನುಸಾರವಾಗಿ ಆಚರಣೆಮಾಡುವುದನ್ನು ಸ್ವೀಕರಿಸಿರಿ. ಇಲ್ಲದಿದ್ದರೆ-ಕೈಗೇನೂ ದಕ್ಕುವುದಿಲ್ಲ. ಏಕೆಂದರೆ-ಯಾವ ದೇಶದ ಪದಾರ್ಥಗಳಿಂದ ನಮ್ಮ

ಶರೀರವುಂಟಾಗಿದೆಯೋ, ಈಗಲೂ ಪಾಲನೆಯಾಗುತ್ತದೋ, ಮುಂದಕ್ಕೆ ಪಾಲನೆಯಾಗುವುದೋ. ಅದರ ಉನ್ನತಿಯನ್ನು ಎಲ್ಲ ಜನರೂ ಸೇರಿ ತನು-ಮನ-ಧನಗಳಿಂದ, ಪ್ರೀತಿಯಿಂದ ಸಾಧಿಸುವುದು ನಮಗೆ ಮತ್ತು ತಮಗೆ ಉಚಿತವಾಗಿರುತ್ತದೆ. ಆದುದರಿಂದ ಹೇಗೆ ಆರ್ಯಸಮಾಜವು ಆರ್ಯಾವರ್ತದೇಶದ ಉನ್ನತಿಯ ಕಾರಣವಾಗಿರುತ್ತದೋ, ಹಾಗೆ ಬೇರೆಯದು ಆಗಲಾರದು. ಈ ಸಮಾಜಕ್ಕೆ ಯಥಾವತ್ತಾಗಿ ಸಹಾಯ ವಿತ್ತರೆ ಒಳ್ಳೆಯದು. ಏಕೆಂದರೆ-ಸಮಾಜದ ಸೌಭಾಗ್ಯವನ್ನು ವರ್ಧಿಸುವುದು ಒಬ್ಬನದಲ್ಲ; ಸಮುದಾಯದ ಕೆಲಸವಾಗಿದೆ.

ಪ್ರಶ್ನೆ:—ತಾವು ಎಲ್ಲರನ್ನೂ ಖಂಡಿಸುತ್ತಲೇ ಬರುತ್ತಿದ್ದೀರಿ. ಆದರೆ-ತಮ್ಮ ತಮ್ಮ ಧರ್ಮದಲ್ಲಿ ಎಲ್ಲರೂ ಒಳ್ಳೆಯವರೇ. ಯಾವುದರ ಖಂಡನವನ್ನೂ ಮಾಡಬಾರದು. ಮಾಡುವಿರಾದರೆ-ತಾವು ಇವರಿಗಿಂತ ಹೆಚ್ಚಾಗಿ ಹೇಳುತ್ತೀರೇನನ್ನು? ಹೇಳುತ್ತೀರಾದರೆ, ತಮಗಿಂತ ಹೆಚ್ಚಾದ ಅಥವಾ ಸಮನಾದ ಯಾವಪುರುಷನೂ ಇರಲಿಲ್ಲವೇ? ಮತ್ತು ಇಲ್ಲವೇ? ಇಂತಹ ಅಭಿಮಾನಪಡುವುದು ತಮಗೆ ಉಚಿತವಲ್ಲ; ಏಕೆಂದರೆ—ಪರಮಾತ್ಮನ ಸೃಷ್ಟಿಯಲ್ಲಿ ಒಬ್ಬರಿಗಿಂತ ಒಬ್ಬರು ಅಧಿಕರಾದವರೂ, ಸಮನಾದವರೂ, ನ್ಯೂನರಾದವರೂ ಬಹುಜನರಿದ್ದಾರೆ. ಜಂಭಪಡುವುದು ಯಾವನಿಗೂ ಉಚಿತವಲ್ಲ!

ಉತ್ತರ:—ಧರ್ಮವು ಎಲ್ಲರಿಗೂ ಒಂದೇ ಆಗಿರುತ್ತದೋ, ಅಥವಾ ಅನೇಕವೋ? ಅನೇಕವಿರುತ್ತವೆಂದು ಹೇಳುವಿರಾದರೆ, ಒಂದಕ್ಕೊಂದು ವಿರುದ್ಧವಾಗಿರುತ್ತವೋ, ಅಥವಾ ಅವಿರುದ್ಧವಾಗಿಯೋ? ವಿರುದ್ಧವಾಗಿರುವವೆಂದು ಹೇಳುವಿರಾದರೆ, ಒಂದನ್ನುಳಿದು ಬೇರೆಯದು ಧರ್ಮವಾಗಲಾರದು; ಮತ್ತು ಅವಿರುದ್ಧವಾಗಿರುತ್ತವೆನ್ನುವಿರಾದರೆ, ಬೇರೆ ಬೇರೆಯಿರುವುದು ವ್ಯರ್ಥ. ಆದುದರಿಂದ ಧರ್ಮ ಮತ್ತು ಅಧರ್ಮ ಒಂದೊಂದೇ ಹೊರತು ಅನೇಕವಲ್ಲ. ತಾವು ವಿಶೇಷವಾಗಿ ಹೇಳುವುದಿದೇ:—ಎಲ್ಲಾ ಸಂಪ್ರದಾಯಗಳ ಉಪದೇಶಗಳನ್ನೂ ಯಾವನಾದರೂ ರಾಜನು ಒಂದುಗೂಡಿಸಿದರೆ, ಒಂದುಸಾವಿರಕ್ಕೆ ಕಡಿಮೆಯಾಗಿರುವುದಿಲ್ಲ. ಆದರೆ ಮುಖ್ಯಭಾಗವನ್ನು ನೋಡಿದರೆ ಪೌರಾಣಿಕ, ಕ್ರೈಸ್ತ, ಜೈನ ಮತ್ತು ಮುಸಲ್ಮಾನ ಈ ನಾಲ್ಕೇ ಇರು-

ತ್ತವೆ. ಏಕೆಂದರೆ, ಈ ನಾಲ್ಕರಲ್ಲಿ ಎಲ್ಲಾ ಸಂಪ್ರದಾಯಗಳೂ ಬಂದು ಬಿಡುತ್ತವೆ. ಯಾವನಾದರೂ ರಾಜನು ಅವರ ಸಭೆ ಸೇರಿಸಿ, ಯಾವ ನಾದರೊಬ್ಬನು ಜಿಜ್ಞಾಸುವಾಗಿ, ಮೊದಲು ವಾಮಮಾರ್ಗಿಯನ್ನು "ಸ್ವಾಮಿ! ನಾನಿಂದಿನವರೆಗೆ ಯಾವನನ್ನೂ ಗುರುವಾಗಿಯೂ ಮಾಡಿ ಕೊಳ್ಳಲಿಲ್ಲ; ಯಾವ ಧರ್ಮವನ್ನೂ ಗ್ರಹಿಸಲೂ ಇಲ್ಲ. ಯಾರದು ಧರ್ಮಗಳಲ್ಲೆಲ್ಲಾ ಉತ್ತಮ ಧರ್ಮ ಹೇಳಿರಿ. ನಾನದನ್ನು ಸ್ವೀಕರಿ ಸುವೆ" ಎಂದು ಕೇಳಬೇಕು.

ವಾಮಮಾರ್ಗಿ :—ನಮ್ಮದು.

ಜಿಜ್ಞಾಸು :—ಈ ಒಂಭೈನೂರ ತೊಂಬತ್ತೊಂಬತ್ತು ಹೇಗಿವೆ!

ವಾಮಮಾರ್ಗಿ :—ಎಲ್ಲವೂ ಸುಳ್ಳು ಮತ್ತು ನರಕಗಾಮಿಗಳು. ಏಕೆಂದರೆ, "ಕೌಲಾತ್ಪರತರಂನಹಿ" ಈ ವಚನದ ಪ್ರಮಾಣದಿಂದ, ನಮ್ಮ ಧರ್ಮಕ್ಕಿಂತ ಮೇಲೆ ಬೇರಾವ ಧರ್ಮವೂ ಇಲ್ಲ.

ಜಿಜ್ಞಾಸು :—ತಮ್ಮ ಧರ್ಮವೇನು?

ವಾಮಮಾರ್ಗಿ :—ಭಗವತಿಯನ್ನಂಗೀಕರಿಸುವುದು, ಮದ್ಯ-ಮಾಂಸ ಮೊದಲಾದ ಪಂಚಮಕಾರಗಳ ಸೇವನೆ ಮತ್ತು ರುದ್ರ ಯಾಮಲ ಮೊದಲಾದ ಅರವತ್ತುನಾಲ್ಕು ತಂತ್ರಗಳನ್ನು ಒಪ್ಪುವುದು, ಈ ಮೊದಲಾದುದು. ನೀನು ಮುಕ್ತಿಯರ್ನು ಇಚ್ಛಿಸುತ್ತೀಯಾದರೆ, ನಮ್ಮ ಶಿಷ್ಯನಾಗಿ ಬಿಡು.

ಜಿಜ್ಞಾಸು :—ಒಳ್ಳೆಯದು; ಆದರೆ ಬೇರೆಯ ಮಹಾತ್ಮರುಗಳ ದರ್ಶನವನ್ನೂ ಮಾಡಿ, ಕೇಳಿಕೊಂಡು ಬರುವೆ. ಆಮೇಲೆ ಯಾವನಲ್ಲಿ ನನಗೆ ಶ್ರದ್ಧೆ ಮತ್ತು ಪ್ರೀತಿಯುಂಟಾಗುವುದೋ ಆತನ ಶಿಷ್ಯನಾಗಿ ಬಿಡುವೆನು.

ವಾಮಮಾರ್ಗಿ :—ಎಲೈ, ಭ್ರಾಂತಿಯಲ್ಲೀಕೆ ಬಿದ್ದಿದ್ದೀಯೆ? ಈ ಜನರು ನಿನ್ನನ್ನು ತಪ್ಪುದಾರಿಗೆಳೆದು ತಮ್ಮ ಬಲೆಯಲ್ಲಿ ಸಿಕ್ಕಿಸಿ ಕೊಂಡುಬಿಡುವರು. ಯಾವನ ಬಳಿಗೂ ಹೋಗದಿರು. ನಮಗೇ ಶರಣಾಗತನಾಗಿಬಿಡು. ಇಲ್ಲದಿದ್ದರೆ ಪಶ್ಚಾತ್ತಾಪಪಡುವೆ. ನೋಡು ನಮ್ಮ ಮತದಲ್ಲಿ ಭೋಗ ಮತ್ತು ಮೋಕ್ಷ ಎರಡೂ ಇವೆ.

ಜಿಜ್ಞಾಸು :—ಒಳ್ಳೆಯದು, ನೋಡಿಯಂತೂ ಬರೋಣ. ಮುಂದೆ ಹೋಗಿ, ಶೈವನ ಬಳಿ ಸೇರಿ ಕೇಳಿದರೆ, ಇಂತಹ ಉತ್ತರವನ್ನೇ ಆತನೂ ಕೊಟ್ಟನು; ಶಿವ, ರುದ್ರಾಕ್ಷ, ಭಸ್ಮಧಾರಣ ಮತ್ತು ಲಿಂಗಾರ್ಚನೆಯಿಲ್ಲದೆ ಮುಕ್ತಿ ಎಂದಿಗೂ ಆಗುವುದಿಲ್ಲವೆಂದಿಷ್ಟು ಹೆಚ್ಚಾಗಿ ಹೇಳಿದನು. ಅವನು ಆತನನ್ನು ಬಿಟ್ಟು ನವೀನ ವೇದಾಂತಿಗಳ ಹತ್ತಿರ ಹೋದನು.

ಜಿಜ್ಞಾಸು :—ಹೇಳಿ ಸ್ವಾಮೀ ! ತಮ್ಮ ಧರ್ಮವೇನು ?

ವೇದಾಂತಿ :—ನಾವು ಧರ್ಮಾಧರ್ಮವೇನನ್ನೂ ಒಪ್ಪುವುದಿಲ್ಲ. ನಾವು ಸಾಕ್ಷಾತ್ ಬ್ರಹ್ಮನಾಗಿದ್ದೇವೆ. ನಮ್ಮಲ್ಲಿ ಧರ್ಮಾಧರ್ಮಗಳೆಲ್ಲಿ ? ಈ ಜಗತ್ತೆಲ್ಲಾ ಮಿಥ್ಯೆ; ಮತ್ತು ಜ್ಞಾನಿಯೂ, ಶುದ್ಧಚೇತನನೂ ಆಗಬಯಸುವೆಯಾದರೆ, ತನ್ನನ್ನು ಬ್ರಹ್ಮನೆಂದು ಒಪ್ಪು ; ಜೀವ ಭಾವವನ್ನುಳಿದು ನಿತ್ಯಮುಕ್ತನಾಗಿಹೋಗುವೆ.

ಜಿಜ್ಞಾಸು :—ನೀವು ಬ್ರಹ್ಮನೂ, ನಿತ್ಯಮುಕ್ತರೂ ಆಗಿರುವಿರಾದರೆ, ಬ್ರಹ್ಮನ ಗುಣ-ಕರ್ಮ-ಸ್ವಭಾವಗಳು ನಿಮ್ಮಲ್ಲೇಕಿಲ್ಲ ? ಮತ್ತು ಶರೀರದಲ್ಲೇಕೆ ಬದ್ಧರಾಗಿದ್ದೀರಿ ?

ವೇದಾಂತಿ :—ನಿನಗೆ ಶರೀರಗಳು ಕಾಣಿಸುತ್ತವೆ ; ಆದುದರಿಂದ ನೀನು ಭ್ರಾಂತನಾಗಿದ್ದೀಯೆ. ನಮಗೆ ಬ್ರಹ್ಮನ ಹೊರತು ಏನೂ ಕಾಣಿಸುವುದಿಲ್ಲ.

ಜಿಜ್ಞಾಸು :—ನೋಡುವವರಾದ ನೀವಾರು ? ಮತ್ತು ಯಾವನನ್ನು ನೋಡುತ್ತೀರಿ ?

ವೇದಾಂತಿ :—ನೋಡುವವನು ಬ್ರಹ್ಮ ಮತ್ತು ಬ್ರಹ್ಮನನ್ನು ಬ್ರಹ್ಮನೂ ನೋಡುತ್ತಾನೆ.

ಜಿಜ್ಞಾಸು :—ಇಬ್ಬರು ಬ್ರಹ್ಮರಿದ್ದಾರೇನು ?

ವೇದಾಂತಿ :—ಇಲ್ಲ ; ತನ್ನನ್ನು ತಾನು ನೋಡುತ್ತಾನೆ.

ಜಿಜ್ಞಾಸು :—ಯಾವನಾದರೂ ತನ್ನ ಹೆಗಲಿನ ಮೇಲೆ ತಾನು ಹತ್ತಬಲ್ಲನೇನು ? ನಿಮ್ಮ ಮಾತು ಹುರುಳಿಲ್ಲದುದು ; ಹುಚ್ಚಿನದು ಮಾತ್ರ. ಅವನು ಮುಂದೆ ನಡೆದು ಜೈನರ ಹತ್ತಿರ ಹೋಗಿ ಕೇಳಿದನು.

ಅವರೂ ಹಾಗೆಯೇ ಹೇಳಿದರು. ಆದರೆ—" ಜಿನಧರ್ಮದ ಹೊರತು ಎಲ್ಲಾ ಧರ್ಮವೂ ಕೃತ್ರಿಮ; ಜಗತ್ತಿನ ಕರ್ತನಾದ ಅನಾದಿಯಾದ ಈಶ್ವರನಾವನೂ ಇಲ್ಲ; ಜಗತ್ತು ಅನಾದಿಕಾಲದಿಂದ ಇದ್ದುದು ಇದ್ದ ಹಾಗೆಯೇ ನಡೆದುಬಂದಿದೆ; ಮತ್ತು ನಡೆಯುತ್ತಿರುವುದು. ಬಾ, ನೀನು ನಮ್ಮ ಶಿಷ್ಯನಾಗಿಬಿಡು. ಏಕೆಂದರೆ—ನಾವು ಸಮ್ಯಕ್ತ್ವಿಗಳು ಅಂದರೆ ಎಲ್ಲಾ ರೀತಿಯಿಂದಲೂ ಒಳ್ಳೆಯವರು; ಉತ್ತಮವಾದ ಮಾತುಗಳನ್ನಂಗೀಕರಿಸುತ್ತೇವೆ. ಜೈನಮಾರ್ಗದಿಂದ ಬೇರೆಯಾದವರೆಲ್ಲರೂ ಮಿಥ್ಯಾತ್ವಿಗಳು "—ಎಂದಿಷ್ಟು ಹೆಚ್ಚಾಗಿ ಹೇಳಿದರು. ಮುಂದೆ ಹೋಗಿ ಕ್ರೈಸ್ತನನ್ನು ಪ್ರಶ್ನಿಸಿದನು. ಅವನು ವಾಮಮಾರ್ಗಿಯಂತೆ ಎಲ್ಲಾ ಪ್ರಶ್ನೋತ್ತರಗಳನ್ನೂ ನಡೆಸಿದನು. " ಎಲ್ಲಾ ಮಾನವರೂ ಪಾಪಿಗಳು. ತನ್ನ ಸಾಮರ್ಥ್ಯದಿಂದ ಪಾಪ ಬಿಟ್ಟು ಹೋಗುವುದಿಲ್ಲ. ಏಸುವಿನ ಮೇಲೆ ನಂಬಿಕೆಯಿಲ್ಲದೆ, ಪವಿತ್ರನಾಗಿ ಮುಕ್ತಿಯನ್ನು ಹೊಂದಲಾರನು. ಏಸುವು ಎಲ್ಲರ ಪ್ರಾಯಶ್ಚಿತ್ತಕ್ಕಾಗಿ ತನ್ನ ಪ್ರಾಣಗಳನ್ನು ತೆತ್ತು, ದಯೆಯನ್ನು ಪ್ರಕಟಪಡಿಸಿದ್ದಾನೆ. ನೀನು ನಮ್ಮ ಶಿಷ್ಯನಾಗಿಬಿಡು "—ಎಂದಿಷ್ಟು ಹೆಚ್ಚಾಗಿ ಹೇಳಿದನು. ಜಿಜ್ಞಾಸುವು ಆಲಿಸಿ, ಮೌಲ್ವೀ ಸಾಹೇಬರ ಹತ್ತಿರ ಹೋದನು. ಅವರೊಂದಿಗೂ ಇದೇ ರೀತಿ ಪ್ರಶ್ನೋತ್ತರಗಳಾದುವು. " ಅದ್ವಿತೀಯನಾದ ಖುದಾ, ಅತನ ಪೈಗಂಬರ ಮತ್ತು ಕುರಾನ್ ಶರೀಫನ್ನು ಒಪ್ಪದೆ, ಯಾವನೂ ಮುಕ್ತಿಯನ್ನು ಹೊಂದಲಾರನು. ಯಾವನು ಈ ಧರ್ಮವನ್ನಂಗೀಕರಿಸುವುದಿಲ್ಲವೋ, ಅವನು ನಾರಕೀಯನು ಮತ್ತು ಅವಿಶ್ವಾಸಿಯು; ಹತ್ಯಾಯೋಗ್ಯನು "—ಎಂದಿಷ್ಟು ಅಧಿಕವಾಗಿ ನುಡಿದನು. ಜಿಜ್ಞಾಸುವು ಆಲಿಸಿ, ವೈಷ್ಣವನ ಹತ್ತಿರ ಹೋದನು. ಅದೇ ರೀತಿ ಸಂವಾದ ನಡೆಯಿತು. " ನಮ್ಮ ತಿಲಕ-ಪಟ್ಟಿ ನೋಡಿ ಯಮರಾಜನು ಹೆದರುತ್ತಾನೆ " ಎಂದಿಷ್ಟು ವಿಶೇಷವಾಗಿ ಹೇಳಿದನು. ಜಿಜ್ಞಾಸುವು ಮನಸ್ಸಿನಲ್ಲಿ—" ಸೊಳ್ಳೆಗಳು, ನೊಣ, ಪೋಲೀಸ್ ಸಿಪಾಯಿಗಳು, ಕಳ್ಳರು, ಡಕಾಯಿತರು ಮತ್ತು ಶತ್ರುಗಳು ಹೆದರದಿರುವಾಗ ಯಮರಾಜನ ದೂತರೇಕೆ ಅಂಜುವರು? "—ಎಂದು ತಿಳಿದನು. ಮತ್ತು ಮುಂದೆ ನಡೆದರೆ, ಎಲ್ಲಾ ಮತದವರೂ ತಮ್ಮ ತಮ್ಮದನ್ನು

ಸತ್ಯವೆಂದು ಹೇಳಿಕೊಂಡರು. ಒಬ್ಬನು—" ನಮ್ಮ ಕಬೀರನು ಸತ್ಯ ಎಂದನು; ಒಬ್ಬನು ನಾನಕನನ್ನೂ, ಇನ್ನೊಬ್ಬನು ದಾದುವನ್ನೂ, ಮತ್ತೊಬ್ಬನು ವಲ್ಲಭನನ್ನೂ ಮಗದೊಬ್ಬನು, ಸಹಜಾನಂದನನ್ನೂ, ಬೇರೆಯೊಬ್ಬನು ಮಧ್ವ ಮೊದಲಾದವರನ್ನೂ ದೊಡ್ಡವರು ಅಥವಾ ಅವತಾರ ಎಂದು ಹೇಳುವುದನ್ನು ಕೇಳಿದನು. ಸಾವಿರ ಜನರನ್ನೂ ಕೇಳಿ, ಅವರ ಒಬ್ಬರೊಬ್ಬರ ಪರಸ್ಪರ ವಿರೋಧವನ್ನು ನೋಡಿ—" ಇವರಲ್ಲಿ ಗುರುವಾಗಿ ಮಾಡಿಕೊಳ್ಳಲು ಯಾವನೂ ಯೋಗ್ಯನಲ್ಲ ಏಕೆಂದರೆ, ಒಬ್ಬೊಬ್ಬನು ಸುಳ್ಳಿಂಬುದಕ್ಕೆ ೯೯ ಜನ ಸಾಕ್ಷಿಗಳು ಸಿಕ್ಕಿದರು. ಸುಳ್ಳುಗಾರರಾದ ಅಂಗಡಿಕಾರರೂ, ಅಥವಾ ವೇಶ್ಯೆಯರೂ ಮತ್ತು ಹೊಗಳುಭಟ್ಟರೂ ತಮ್ಮ ತಮ್ಮ ವಸ್ತುವಿನ ಮೇಲ್ಮೆಯನ್ನು ಬಣ್ಣಿಸಿ, ಬೇರೆಯವರ ಕೆಡಕನ್ನು ಬಿತ್ತರಿಸುವಂತೆಯೇ ಇವರುಗಳೂ ಇದ್ದಾರೆ" ಎಂದು ವಿಶೇಷವಾಗಿ ನಿಶ್ಚಯಿಸಿದನು; ಹೀಗೆ ತಿಳಿದು :—

ತದ್ವಿಜ್ಞಾನಾರ್ಥಂ ಸ ಗುರುಮೇವಾಭಿಗಚ್ಛೇತ್ ।
ಸಮಿತ್ಪಾಣಿಃ ಶ್ರೋತ್ರಿಯಂ ಬ್ರಹ್ಮನಿಷ್ಠಂ ॥೧॥
ತಸ್ಮೈ ಸ ವಿದ್ವಾನುಪಸನ್ನಾಯ ಸಮ್ಯಕ್ಪ್ರಶಾಂತಚಿತ್ತಾಯ
ಶಮಾನ್ವಿತಾಯ ।
ಯೇನಾಕ್ಷರಂ ಪುರುಷಂ ವೇದ ಸತ್ಯಂ ಪ್ರೋವಾಚ ತಾಂ
ತತ್ವತೋ ಬ್ರಹ್ಮವಿದ್ಯಾಂ ॥೨॥

[ಮುಂಡಕ ೧, ಖಂ. ೨, ಮಂ. ೧೨-೧೩]

ಆ ಸತ್ಯದ ವಿಜ್ಞಾನದ ಸಲುವಾಗಿ, ಅವನು ಸಮಿತ್ಪಾಣಿಯಾಗಿ ಅಂದರೆ—ಕೈಜೋಡಿಸಿ, ಬರಿದಲ್ಲದ ಕೈಯುಳ್ಳವನಾಗಿ, ವೇದ ವೇತ್ತನೂ, ಬ್ರಹ್ಮನಿಷ್ಠನೂ, ಪರಮಾತ್ಮನನ್ನು ತಿಳಿಯುವವನೂ ಆದ ಗುರುವಿನ ಬಳಿಗೆ ಹೋಗಬೇಕು; ಈ ಪಾಷಂಡಿಗಳ ಬಲೆಯಲ್ಲಿ ಬೀಳ ಬಾರದು. ॥೧॥ ಇಂತಹ ಜಿಜ್ಞಾಸುವು ವಿದ್ವಾಂಸನ ಬಳಿಗೆ ಹೋದಾಗ, ಶಾಂತಚಿತ್ತನೂ, ಜಿತೇಂದ್ರಿಯನೂ, ಸಮೀಪಕ್ಕೆ ಬಂದವನೂ ಆದ ಆ ಜಿಜ್ಞಾಸುವಿಗೆ ಯಥಾರ್ಥವಾದ ಬ್ರಹ್ಮವಿದ್ಯೆ, ಪರಮಾತ್ಮನ ಗುಣ, ಕರ್ಮ ಸ್ವಭಾವದ ಉಪದೇಶವನ್ನು ಮಾಡಬೇಕು ಮತ್ತು ಯಾವ

ಯಾವ ಸಾಧನದಿಂದ ಆ. ಶ್ರೋತೃವು ಧರ್ಮಾರ್ಥಕಾಮಮೋಕ್ಷಗಳನ್ನೂ, ಹಾಗೂ ಪರಮಾತ್ಮನನ್ನೂ ತಿಳಿಯಬಲ್ಲನೋ, ಅಂತಹ ಶಿಕ್ಷಣವನ್ನು ಕೊಡುತ್ತಿರಬೇಕು. ॥೨॥

ಯಾವಾಗ ಅವನು ಇಂತಹ ಪುರುಷನ ಹತ್ತಿರ ಹೋಗಿ—"ಸ್ವಾಮೀ! ಈಗ ಈ ಸಂಪ್ರದಾಯಗಳ ಗೊಂದಲಗಳಿಂದ ನನ್ನ ಚಿತ್ತವು ಭ್ರಾಂತವಾಗಿಹೋಯಿತು; ಏಕೆಂದರೆ—ನಾನು ಇವರಲ್ಲಿ ಯಾವನನಾದರೊಬ್ಬನ ಶಿಷ್ಯನಾಗಿಹೋಗುವೆನಾದರೆ, ಒಂಭೈನೂರು ತೊಂಬತ್ತೊಬತ್ತರೊಂದಿಗೆ ವಿರೋಧಿಯಾಗಬೇಕಾಗುವುದು. ಯಾವ ನಿಗೆ ಒಂಭೈನೂರ ತೊಂಬತ್ತೊಂಬತ್ತು ಮಂದಿ ಶತ್ರುಗಳೂ, ಒಬ್ಬ ಮಿತ್ರನೂ ಇರುವರೋ, ಅವನಿಗೆಂದಿಗೂ ಸುಖವುಂಟಾಗಲಾರದು. ಆದುದರಿಂದ, ನಾನು ಗ್ರಹಿಸಲಾಗುವಂತೆ, ತಾವು ನನಗೆ ಉಪದೇಶವನ್ನು ಮಾಡಿರಿ.

ಆಪ್ತವಿದ್ವಾಂಸ:—ಈ ಎಲ್ಲಾ ಮತಗಳೂ ಅವಿದ್ಯಾಜನ್ಯವಾದುವು; ವಿದ್ಯಾವಿರೋಧಿಗಳು. ಮೂರ್ಖನೂ, ಪಾಮರನೂ ಮತ್ತು ಕಾಡಾಡಿಯೂ ಆದ ಮನುಷ್ಯನನ್ನು ದಾರಿ ತಪ್ಪಿಸಿ, ತಮ್ಮ ಜಾಲಕ್ಕೆ ಸಿಕ್ಕಿಸಿಕೊಂಡು, ತಮ್ಮ ಸ್ವಾರ್ಥವನ್ನು ಸಾಧಿಸಿಕೊಳ್ಳುತ್ತಾರೆ. ಆ ಬಡಪಾಯಿಗಳು ತಮ್ಮ ಮನುಷ್ಯಜನ್ಮದ ಫಲದಿಂದ ರಹಿತರಾಗಿ, ತಮ್ಮ ಮನುಷ್ಯ ಜನ್ಮವನ್ನು ವ್ಯರ್ಥವಾಗಿ ಕಳೆಯುತ್ತಾರೆ. ನೋಡು, ಈ ಸಾವಿರ ಮತಗಳೂ ಯಾವ ಒಂದು ಮಾತಿನಲ್ಲಿ ಒಂದಾಗಿರುತ್ತವೋ, ಆ ವೇದಮತವು ಗ್ರಾಹ್ಯವಾಗಿರುತ್ತದೆ. ಮತ್ತು ಯಾವುದರಲ್ಲಿ ಪರಸ್ಪರ ವಿರೋಧವಿರುತ್ತದೋ, ಅದು ಕಲ್ಪಿತವೂ, ಸುಳ್ಳೂ, ಅಧರ್ಮವೂ, ಅಗ್ರಾಹ್ಯವೂ ಆಗಿರುತ್ತದೆ.

ಜಿಜ್ಞಾಸು:—ಇದರ ಪರೀಕ್ಷೆ ಹೇಗಾಗಬೇಕು?

ಆಪ್ತ:—ನೀನು ಹೋಗಿ ಈ ಮಾತುಗಳನ್ನು ಕೇಳು. ಎಲ್ಲರದೂ ಒಂದು ಸಮ್ಮತಿಯಾಗುವುದು. ಆಗವನು ಆ ಸಹಸ್ರಜನರ ಮಂಡಲಿಯ ನಡುವೆ ನಿಂತು—"ಕೇಳಿರಿ, ಎಲ್ಲಾ ಜನರೇ! ಸತ್ಯಭಾಷಣದಲ್ಲಿ ಧರ್ಮವಿದೆಯೋ, ಅಥವಾ ಸುಳ್ಳಿನಲ್ಲಿಯೋ?" ಎಂದು ಕೇಳಿದನು. ಎಲ್ಲರೂ ಏಕಸ್ವರದಿಂದ "ಸತ್ಯಭಾಷಣದಲ್ಲಿ ಧರ್ಮವಿದೆ ಮತ್ತು

ಅಸತ್ಯಭಾಷಣದಲ್ಲಿ ಅಧರ್ಮವಿದೆ'' ಎಂದು ಹೇಳಿದರು. ಅದೇರೀತಿ ''ವಿದ್ಯಾಪಠನ, ಬ್ರಹ್ಮಚರ್ಯಪಾಲನೆ, ಪೂರ್ಣಯುವಾವಸ್ಥೆಯಲ್ಲಿ ವಿವಾಹ, ಸತ್ಸಂಗ, ಪುರುಷಾರ್ಥ, ಸತ್ಯವ್ಯವಹಾರ ಮೊದಲಾದುದರಲ್ಲಿ ಧರ್ಮವಿದೆಯೋ, ಅಥವಾ ಅವಿದ್ಯಾಗ್ರಹಣ, ಬ್ರಹ್ಮಚರ್ಯಪಾಲಿಸದಿರುವುದು, ವ್ಯಭಿಚಾರಮಾಡುವುದು, ಕುಸಂಗ, ಆಲಸ್ಯ, ಅಸತ್ಯವ್ಯವಹಾರ, ಛಲ, ಕಪಟ, ಹಿಂಸೆ, ಪರಹಾನಿಮಾಡುವುದು-ಮೊದಲಾದ ಕರ್ಮಗಳಲ್ಲಿಯೋ ?'' ಎಂದು ಕೇಳಿದನು. ಎಲ್ಲರೂ ಏಕಮತರಾಗಿ– ವಿದ್ಯೆ ಮೊದಲಾದುವುಗಳ ಗ್ರಹಣದಲ್ಲಿ ಧರ್ಮವಿದೆ ಮತ್ತು ಅವಿದ್ಯೆ ಮೊದಲಾದುವುಗಳ ಗ್ರಹಣದಲ್ಲಿ ಅಧರ್ಮವಿದೆ'' ಎಂದರು. ಆಗ ಜಿಜ್ಞಾಸುವು ಎಲ್ಲರನ್ನೂ ಕುರಿತು—'' ನೀವು ಇದೇ ಪ್ರಕಾರ ಎಲ್ಲರೂ ಏಕಮತರಾಗಿ ಸತ್ಯಧರ್ಮದ ಉನ್ನತಿಯನ್ನೂ, ಮಿಥ್ಯಾಮಾರ್ಗದ ಹಾನಿಯನ್ನೂ ಏಕೆ ಸಾಧಿಸುವುದಿಲ್ಲ?'' ಎಂದು ಕೇಳಿದನು. ಅವರೆಲ್ಲರೂ—'' ನಾವು ಹೀಗೆ ಮಾಡಿದರೆ, ನಮ್ಮನ್ನು ಕೇಳುವವನಾವನು ? ನಮ್ಮ ಶಿಷ್ಯರು ನಮ್ಮ ಆಜ್ಞೆಯಲ್ಲಿರುವುದಿಲ್ಲ. ಜೀವಿಕೆ ನಷ್ಟವಾಗಿ ಹೋಗುವುದು. ಆಮೇಲೆ, ನಾವು ಪಡುತ್ತಿರುವ ಆನಂದವೆಲ್ಲಾ ಕೈಯಿಂದ ನುಸುಳಿಹೋಗುವುದು. ಆದುದರಿಂದ, ನಾವು ತಿಳಿದಿದ್ದರೂ ಕೂಡ ತಮ್ಮ ತಮ್ಮ ಮತದ ಉಪದೇಶವನ್ನೂ, ಆಗ್ರಹವನ್ನೂ ಮಾಡುತ್ತಲೇ ಹೋಗುತ್ತೇವೆ. ಏಕೆಂದರೆ—'' ರೊಟ್ಟಿಯ ತಿನ್ನಿರಿ ಸಕ್ಕರೆಯಿಂದ ; ಜಗವನು ವಂಚಿಸಿ ಛಲದೊರೆಯಿಂದ'' ಹೀಗಿದೆ ವಿಷಯ. ನೋಡಿರಿ ! ಜಗತ್ತಿನಲ್ಲಿ ಸರಳನೂ, ಸತ್ಯವಂತನೂ ಆದ ಮಾನವನಿಗೆ ಯಾವನೂ ಕೊಡುವುದಿಲ್ಲ ; ಕೇಳುವುದೂ ಇಲ್ಲ ; ಯಾವನು ಏನಾದರೂ ಛಳಕನ್ನೂ, ಧೂರ್ತತನವನ್ನೂ ಮಾಡುತ್ತಾನೋ, ಅವನೇ ಪದಾರ್ಥಗಳನ್ನು ಪಡೆಯುತ್ತಾನೆ.''

ಜೆಜ್ಞಾಸು :—ಈರೀತಿ ಪಾಷಾಂಡವನ್ನು ನಡೆಯಿಸಿ, ಬೇರೆ ಮನುಷ್ಯರನ್ನು ವಂಚಿಸುವಾಗ, ನಿಮಗೆ ರಾಜನೇಕೆ ದಂಡವಿಧಿಸುವುದಿಲ್ಲ?

ಮತೀಯರು :—ನಾವು ರಾಜನನ್ನೂ ನಮ್ಮ ಶಿಷ್ಯನನ್ನಾಗಿ ಮಾಡಿಕೊಂಡಿದ್ದೇವೆ. ನಾವು ದೃಢವಾದ ವ್ಯವಸ್ಥೆಮಾಡಿದ್ದೇವೆ, ಬಿಡಿಸಿಕೊಳ್ಳುವುದಿಲ್ಲ.

ಜಿಜ್ಞಾಸು :—ನೀವು ಥಲದಿಂದ ಅನ್ಯಮತಸ್ಥರಾದ ಮಾನವರನ್ನು ವಂಚಿಸಿ, ಅವರಿಗೆ ಹಾನಿಯನ್ನುಂಟುಮಾಡುತ್ತೀರಿ; ಪರಮೇಶ್ವರನೆದುರಿಗೆ ಏನುತ್ತರವೀಯುತ್ತೀರಿ? ಮತ್ತು ಘೋರ ನರಕದಲ್ಲಿ ಬೀಳುವಿರಿ. ಸ್ವಲ್ಪ ಜೀವನಕ್ಕಾಗಿ ಇಷ್ಟು ದೊಡ್ಡ ಅಪರಾಧಮಾಡುವುದನ್ನು ಏಕೆ ಬಿಡುವುದಿಲ್ಲ?

ಮತೀಯರು :—ಯಾವಾಗ ಹೇಗಾಗುವುದೋ, ಆಗ ನೋಡಲಾಗುವುದು. ನರಕವೂ, ಪರಮೇಶ್ವರನ ಶಿಕ್ಷೆಯೂ, ಯಾವಾಗ ಸಿಕ್ಕುವುದೋ, ಆಗ ಸಿಕ್ಕುವುದು. ಈಗಂತೂ ಆನಂದಪಡುತ್ತೇವೆ. ನಮಗೆ ಪ್ರಸನ್ನತೆಯಿಂದ ಹಣ ಮೊದಲಾದ ಪದಾರ್ಥಗಳನ್ನು ಕೊಡುತ್ತಾರೆ; ಬಲಾತ್ಕಾರದಿಂದೇನೂ ತೆಗೆದುಕೊಳ್ಳುವುದಿಲ್ಲ. ಮತ್ತೆ ರಾಜನೇತಕ್ಕೆ ಶಿಕ್ಷೆ ವಿಧಿಸುವನು?

ಜಿಜ್ಞಾಸು :—ಯಾವನಾದರೂ ಚಿಕ್ಕ ಬಾಲಕನನ್ನು ಪುಸಲಾಯಿಸಿ ಹಣ ಮೊದಲಾದುವನ್ನು ಕಸಿದುಕೊಂಡರೆ, ಹೇಗೆ ಅವನಿಗೆ ಶಿಕ್ಷ ಸಿಕ್ಕುತ್ತದೋ, ಹಾಗೆ ನಿಮಗೇಕೆ ಸಿಕ್ಕುವುಗಿಲ್ಲ? ಏಕೆಂದರೆ :—

ಅಜ್ಞೋ ಭವತಿ ವೈ ಬಾಲಃ ಪಿತಾ ಭವತಿ ಮಂತ್ರದಃ ॥

[ಮನು. ೨, ಶ್ಲೋ. ೫೩]

ಜ್ಞಾನರಹಿತನಾದವನು ಬಾಲಕನು; ಮತ್ತು ಜ್ಞಾನವನ್ನು ಕೊಡುವವನು ಪಿತನು ಮತ್ತು ವೃದ್ಧನು ಎನಿಸುತ್ತಾನೆ. ಬುದ್ಧಿವಂತನೂ, ವಿದ್ವಾಂಸನೂ ಆದವನಂತೂ ನಿಮ್ಮ ಮಾತುಗಳಲ್ಲಿ ಸಿಕ್ಕೆಕೊಳ್ಳುವುದಿಲ್ಲ. ಬಾಲಕನಿಗೆ ಸಮಾನರಾಗಿರುವ ಅಜ್ಞಾನಿಗಳನ್ನು ವಂಚಿಸುವುದರಿಂದ ನಿಮಗೆ ಅವಶ್ಯವಾಗಿ ರಾಜದಂಡವು ಸಿಕ್ಕಬೇಕು.

ಮತೀಯರು;—ರಾಜನೂ, ಪ್ರಜೆಗಳೂ ಎಲ್ಲರೂ ನಮ್ಮ ಮತದಲ್ಲಿರುವಾಗ, ನಮಗೆ ಶಿಕ್ಷೆಯನ್ನು ಕೊಡುವವನಾವನು? ಇಂತಹ ವ್ಯವಸ್ಥೆಯಾದಾಗ, ಈ ಮಾತುಗಳನ್ನು ಬಿಟ್ಟು, ಬೇರೆ ವ್ಯವಸ್ಥೆ ಮಾಡುವೆವು.

ಜಿಜ್ಞಾಸು :—ನೀವು ಅಚ್ಚುಕಟ್ಟಾಗಿ ಕುಳಿತು ವ್ಯರ್ಥವಾಗಿ ಕವಳ ಕತ್ತರಿಸುವ ಬದಲು, ವಿದ್ಯಾಭ್ಯಾಸ ಮಾಡಿ, ಗೃಹಸ್ಥರು

ಹುಡುಗ-ಹುಡುಗಿಯರಿಗೆ ಕಲಿಸಿದರೆ, ನಿಮ್ಮ ಮತ್ತು ಗೃಹಸ್ಥರ ಕಲ್ಯಾಣವಾದರೂ ಆದೀತು.

ಮತೀಯರು :—ನಾವು ಬಾಲ್ಯಾವಸ್ಥೆಯಿಂದ ಹಿಡಿದು ಮರಣದ ವರೆಗಿನ ಸುಖಗಳನ್ನು ಬಿಟ್ಟರೆ, ಬಾಲ್ಯಾವಸ್ಥೆಯಿಂದ ಯುವಾವಸ್ಥೆಯ ವರೆಗೆ ವಿದ್ಯೆ ಕಲಿಯುವುದರಲ್ಲಿ ತೊಡಗಿ, ಅನಂತರ ಕಲಿಸುವುದರಲ್ಲಿಯೂ, ಉಪದೇಶಮಾಡುವುದರಲ್ಲಿ ಜೀವನಪರ್ಯಂತ ಪರಿಶ್ರಮ ಪಟ್ಟರೆ ನಮಗೇನು ಪ್ರಯೋಜನ? ನಮಗೆ ಹೀಗೆಯೇ ಲಕ್ಷಾಂತರ ರೂಪಾಯಿಗಳು ಸಿಕ್ಕಿಬಿಡುತ್ತವೆ; ಸುಖಪಡುತ್ತೇವೆ. ಅದನ್ನೇಕೆ ಬಿಡೋಣ?

ಜಿಜ್ಞಾಸು :—ಇದರ ಪರಿಣಾಮವಂತೂ ಕೆಟ್ಟದು, ನೋಡಿರಿ, ನಿಮಗೆ ದೊಡ್ಡರೋಗಗಳುಂಟಾಗುತ್ತವೆ; ಬೇಗ ಸತ್ತುಹೋಗುತ್ತೀರಿ; ಬುದ್ಧಿವಂತರಲ್ಲಿ ನಿಂದೆಗೀಡಾಗುತ್ತೀರಿ; ಆದರೂ ತಿಳಿದುಕೊಳ್ಳುವುದಿಲ್ಲವೇಕೆ?

ಮತೀಯರು :—ಅಯ್ಯೋ ಸೋದರನೇ!

ಟಕಾ ಧರ್ಮಷ್ಟಕಾ ಕರ್ಮ ಟಕಾಹಿ ಪರಮಂ ಪದಂ।
ಯಸ್ಯಗೃಹೇ ಟಕಾನಾಸ್ತಿ ಹಾ! ಟಕಾ! ಟಕಟಕಾಯತೇ ॥೧॥
ಆನಾ ಅಂಶಕಲಾಃ ಪ್ರೋಕ್ತಾ ರೂಪ್ಯೋಽಸೌ ಭಗವಾನ್ಸ್ವಯಂ।
ಅತಸ್ತಂ ಸರ್ವ ಇಚ್ಛಂತಿ ರೂಪ್ಯಂ ಹಿ ಗುಣವತ್ತಮಂ ॥೨॥

ನೀನು ಹುಡುಗ; ಜಗತ್ತಿನ ಮಾತುಗಳನ್ನರಿಯೆ. ನೋಡು, ದುಡ್ಡಿಲ್ಲದೆ ಧರ್ಮವಿಲ್ಲ; ದುಡ್ಡಿಲ್ಲದೆ ಕರ್ಮವಿಲ್ಲ; ದುಡ್ಡಿಲ್ಲದೆ ಪರಮ ಪದವಿಲ್ಲ. ಯಾವನ ಮನೆಯಲ್ಲಿ ದುಡ್ಡಿಲ್ಲವೋ, ಅವನು "ಹಾ! ದುಡ್ಡು!! ದುಡ್ಡು!!" ಎನ್ನುತ್ತಾ ಎನ್ನುತ್ತಾ, "ಅಯ್ಯೋ! ನನ್ನ ಬಳಿ ದುಡ್ಡಿದ್ದಲ್ಲಿ, ಈ ಉತ್ತಮ ಪದಾರ್ಥವನ್ನು ನಾನು ಅನುಭವಿಸುತ್ತಿದೆ" ಎಂದು ಉತ್ತಮ ಪದಾರ್ಥವನ್ನು ಬಿಟ್ಟು ಕಣ್ಣುಗಳಿಂದ ಸಿಟ್ಟುಸುತ್ತಿರುತ್ತಾನೆ. ॥೧॥ ಏಕೆಂದರೆ—ಎಲ್ಲರೂ ಷೋಡಶಕಲಾಯುಕ್ತನಾದ ಅದೃಶ್ಯ ಭಗವಂತನ ಕಥನವನ್ನೂ, ಶ್ರವಣವನ್ನೂ ಮಾಡು

ತ್ತಾರೆ; ಅವನಂತೂ ಕಾಣಿಸುವುದಿಲ್ಲ. ಆದರೆ, ಹದಿನಾರಾಣೆ ಮತ್ತು ಬಿಲ್ಲೆ-ಕಾಸು ಎಂಬ ಅಂಶಕಲಾಯುಕ್ತವಾದ ರೂಪಾಯಿಯೇ ಸಾಕ್ಷಾತ್ ಭಗವಂತನು. ಆದುದರಿಂದಲೇ ಎಲ್ಲರೂ ರೂಪಾಯಿಗಳ ಅನ್ವೇಷಣವಲ್ಲಿ ತೊಡಗಿರುತ್ತಾರೆ. ಏಕೆಂದರೆ—ಎಲ್ಲಾ ಕಾರ್ಯಗಳೂ ರೂಪಾಯಿಗಳಿಂದ ಸಿದ್ಧಿಸುತ್ತವೆ. ॥೨॥

ಜಿಜ್ಞಾಸು :—ಸರಿ; ನಿಮ್ಮ ಆಂತರಿಕ ಲೀಲೆ ಹೊರಗೆ ಬಂದು ಬಿಟ್ಟಿತು. ನೀವು ಈ ಪಾಷಂಡವೆಷ್ಟನ್ನು ಕಟ್ಟಿದ್ದೀರೋ ಅದನ್ನೆಲ್ಲಾ ನಿಮ್ಮ ಸುಖಕ್ಕಾಗಿ ಕಟ್ಟಿದ್ದೀರಿ. ಆದರೆ—ಇದರಲ್ಲಿ ಜಗತ್ತಿಗೆ ನಾಶವುಂಟಾಗುತ್ತದೆ. ಏಕೆಂದರೆ—ಸತ್ಯೋಪದೇಶದಿಂದ ಜಗತ್ತಿಗೆ ಲಾಭವುಂಟಾಗುವಂತೆಯೇ ಅಸತ್ಯೋಪದೇಶದಿಂದ ಹಾನಿಯುಂಟಾಗುತ್ತದೆ. ನಿಮಗೆ ಹಣದ ಪ್ರಯೋಜನವೇ ಇದ್ದಲ್ಲಿ, ಸೇವಕತನ ಮತ್ತು ವ್ಯಾಪಾರ ಮೊದಲಾದ ಕಾರ್ಯಗಳನ್ನು ಮಾಡಿ, ಧನವನ್ನೇಕೆ ಕೂಡಿಸಿಕೊಳ್ಳುವುದಿಲ್ಲ?

ಮತೀಯರು :—ಅದರಲ್ಲಿ ಪರಿಶ್ರಮಾಧಿಕ ಮತ್ತು ಹಾನಿಯೂ ಉಂಟಾಗಿಬಿಡುತ್ತದೆ. ಆದರೆ ನಮ್ಮ ಈ ಲೀಲೆಯಲ್ಲಿ ಹಾನಿಯೆಂದಿಗೂ ಉಂಟಾಗುವುದಿಲ್ಲ; ಆದರೆ ಸರ್ವದಾ ಲಾಭವೇ ಲಾಭ ಉಂಟಾಗುತ್ತದೆ! ನೋಡಿರಿ! ತುಳಸೀದಳವನ್ನು ಹಾಕಿ ಚರಣಾಮೃತವನ್ನು ಕೊಟ್ಟು, ಕಂಠಿಯನ್ನು ಭಿಗಿಯುತ್ತೇವೆ; ಶಿಷ್ಯನನ್ನಾಗಿ ಮಾಡಿ, ಬೋಳಿಸಿ ಕೂಡಿಸಿದರೆ ಆಜೀವನವೂ ಪಶುವಿನಂತಾಗಿ ಹೋಗುತ್ತಾನೆ. ಮತ್ತೆ ಹೇಗೆ ಬೇಕೆಂದರೆ ಹಾಗೆ ನಡೆಯಿಸಿ; ನಡೆಯಬಲ್ಲದು.

ಜಿಜ್ಞಾಸು :—ಈ ಜನರು ನಿಮಗೆ ಬಹಳ ಧನವನ್ನು ಏತಕ್ಕಾಗಿ ಕೊಡುತ್ತಾರೆ?

ಮತೀಯರು :—ಧರ್ಮ, ಸ್ವರ್ಗ ಮತ್ತು ಮುಕ್ತಿಯ ಸಲುವಾಗಿ.

ಜಿಜ್ಞಾಸು :—ನೀವೇ ಮುಕ್ತರಾಗದಿರುವಾಗ ಮತ್ತು ಮುಕ್ತಿಯ ಸ್ವರೂಪವನ್ನೂ, ಸಾಧನವನ್ನೂ ತಿಳಿಯದಿರುವಾಗ, ನಿಮ್ಮ ಸೇವೆ ಮಾಡುವವರಿಗೆ ಏನು ಸಿಕ್ಕುತ್ತದೆ?

ಮತೀಯರು :—ಈ ಲೋಕದಲ್ಲಿ ಸಿಕ್ಕುತ್ತದೆಯೇ? ಇಲ್ಲ; ಆದರೆ. ಸತ್ತಮೇಲೆ, ಅನಂತರ ಪರಲೋಕದಲ್ಲಿ ಸಿಕ್ಕುತ್ತವೆ. ಈ

ಜನರು ನಮಗೆ ಎಷ್ಟು ಕೊಡುತ್ತಾರೋ, ಮತ್ತು ಸೇವೆಮಾಡುತ್ತಾರೋ, ಅದೆಲ್ಲಾ ಈ ಜನರಿಗೆ ಪರಲೋಕದಲ್ಲಿ ಸಿಕ್ಕಿಬಿಡುತ್ತದೆ.

ಜಿಜ್ಞಾಸು :—ಇವರಿಗಂತೂ ಕೊಟ್ಟುದು ಸಿಕ್ಕುತ್ತದೋ, ಇಲ್ಲವೋ, ತೆಗೆದುಕೊಳ್ಳುವ ನಿಮಗೆ ಏನು ಸಿಕ್ಕುವುದು? ನರಕವೋ ಅಥವಾ ಏನಾದರೂ ಬೇರೆಯೋ?

ಮತೀಯರು :—ನಾವು ಭಜನೆಮಾಡುತ್ತಿರುತ್ತೇವೆ. ಅದರ ಸುಖ ನಮಗೆ ಸಿಕ್ಕುವುದು.

ಜಿಜ್ಞಾಸು :—ನಿಮ್ಮ ಭಜನೆಯಾದರೋ ದುಡ್ಡಿಗಾಗಿಯೇ ಇದೆ. ಆ ಎಲ್ಲಾ ದುಡ್ಡುಗಳೂ ಇಲ್ಲೇ ಬಿದ್ದಿರುವುವು. ಮತ್ತು ಯಾವ ಮಾಂಸಪಿಂಡವನ್ನು ಇಲ್ಲಿ ಪಾಲಿಸುತ್ತೀರೋ, ಅದೂಕೂಡ ಭಸ್ಮವಾಗಿ ಇಲ್ಲಿಯೇ ಉಳಿದುಹೋಗುವುದು. ನೀವು ಪರಮೇಶ್ವರನ ಭಜನೆಯನ್ನು ಮಾಡುತ್ತಿದ್ದ ಪಕ್ಷದಲ್ಲಿ, ನಿಮ್ಮ ಆತ್ಮವೂ ಪವಿತ್ರವಾಗುತ್ತಿತ್ತು.

ಮತೀಯರು :—ನಾವು ಅಶುದ್ಧರೇನು?

ಜಿಜ್ಞಾಸು :—ಒಳಗಿನಿಂದ ಬಹಳ ಕೊಳಕರಾಗಿದ್ದೀರಿ.

ಮತೀಯರು :—ನೀನು ಹೇಗೆ ತಿಳಿದೆ?

ಜಿಜ್ಞಾಸು :—ನಿಮ್ಮ ನಡೆನುಡಿವ್ಯವಹಾರಗಳಿಂದ.

ಮತೀಯರು :—ಮಹಾತ್ಮರುಗಳ ವ್ಯವಹಾರವು ಆನೆಯ ಹಲ್ಲಿನಂತಿರುತ್ತದೆ. ಆನೆಯ ದಂತಗಳು ತಿನ್ನುವುದಕ್ಕೇ ಬೇರೆ. ತೋರಿಸುವುದಕ್ಕೇ ಬೇರೆ ಇರುವಂತೆಯೇ, ನಾವು ಒಳಗಿನಿಂದ ಪವಿತ್ರರಾಗಿದ್ದೇವೆ ಮತ್ತು ಹೊರಗಿನಿಂದ ಕೇವಲ ಲೀಲೆಯನ್ನು ನಡೆಸುತ್ತೇವೆ.

ಜಿಜ್ಞಾಸು :—ನೀವು ಒಳಗಿನಿಂದ ಶುದ್ಧರಾಗಿದ್ದಿದ್ದರೆ, ನಿಮ್ಮ ಹೊರಗಣ ಕೆಲಸಗಳೂ ಶುದ್ಧವಾಗಿರುತ್ತಿದ್ದವು. ಆದುದರಿಂದ—ನೀವು ಒಳಗೂ ಸಹ ಕೊಳಕಾಗಿದ್ದೀರಿ.

ಮತೀಯರು :—ನಾವು ಹೇಗೆಬೇಕಾದರೂ ಇರಲಿ; ಆದರೆ, ನಮ್ಮ ಶಿಷ್ಯರಾದರೂ ಉತ್ತಮರಾಗಿದ್ದಾರಲ್ಲ!

ಜಿಜ್ಞಾಸು :—ಗುರುಗಳಾದ ನೀವು ಹೇಗಿದ್ದೀರೋ, ಹಾಗೆಯೇ ನಿಮ್ಮ ಶಿಷ್ಯರೂ ಇರಬಹುದು.

ಮತೀಯರು :—ಒಂದು ಮತ ಎಂದಿಗೂ ಆಗಲಾರದು, ಏಕೆಂದರೆ—ಮಾನವರ ಗುಣ-ಕರ್ಮ-ಸ್ವಭಾವಗಳು ಬೇರೆ ಬೇರೆ ಯಾಗಿದೆ.

ಜಿಜ್ಞಾಸು :—ಬಾಲ್ಯಾವಸ್ಥೆಯಲ್ಲಿ ಒಂದೇ ಬಗೆಯ ಶಿಕ್ಷಣ ಸಿಕ್ಕಿದಲ್ಲಿ, ಸತ್ಯಭಾಷಣ ಮೊದಲಾದ ಧರ್ಮದ ಸ್ವೀಕಾರವನ್ನೂ ಮಿಥ್ಯಾಭಾಷಣ ಮೊದಲಾದ ಅಧರ್ಮದ ತ್ಯಾಗವನ್ನೂ ಮಾಡಿದಲ್ಲಿ ಒಂದು ಮತವು ಅವಶ್ಯವಾಗಿ ಆದೀತು ಮತ್ತು ಎರಡು ಮತಗಳು, ಅಂದರೆ—ಧರ್ಮಾತ್ಮರು ಮತ್ತು ಅಧರ್ಮಾತ್ಮರು ಸದಾ ಇರುತ್ತಾರೆ; ಅವಂತೂ ಇರುವವು. ಆದರೆ ಧರ್ಮಾತ್ಮರು ಅಧಿಕವಾಗಿಯೂ, ಅಧರ್ಮಾತ್ಮರೂ ನ್ಯೂನವಾಗಿಯೂ ಇರುವುದರಿಂದ ಜಗತ್ತಿನಲ್ಲಿ ಸುಖವು ಹೆಚ್ಚುತ್ತದೆ. ಮತ್ತು ಅಧರ್ಮಿಗಳು ಅಧಿಕವಾದಾಗ ದುಃಖವು ಹೆಚ್ಚುತ್ತದೆ. ಎಲ್ಲಾ ವಿದ್ವಾಂಸರೂ ಒಂದೇ ಬಗೆಯ ಉಪದೇಶಮಾಡುವರಾದರೆ, ಏಕಮತವು ಸಿದ್ಧಿಸುವುದರಲ್ಲಿ ಏನೇನೂ ವಿಳಂಬವಾಗದು.

ಮತೀಯರು :—ಈ ದಿನಗಳಲ್ಲಿ ಕಲಿಯುಗವಿದೆ; ಸತ್ಯಯುಗದ ಸಂಗತಿಗಳನ್ನು ಬಯಸಬೇಡ.

ಜಿಜ್ಞಾಸು :—ಕಲಿಯುಗವೆಂಬುದು ಕಾಲದ ಹೆಸರು. ಕಾಲವು ನಿಷ್ಕ್ರಿಯವಾಗಿರುವುದರಿಂದ ಧರ್ಮಾಧರ್ಮಗಳನ್ನು ಆಚರಿಸುವುದರಲ್ಲಿ ಸಾಧಕ-ಬಾಧಕವೇನೂ ಅಲ್ಲ. ಆದರೆ ನೀವೇ ಕಲಿಯುಗದ ಮೂರ್ತಿಗಳಾಗಿದ್ದೀರಿ. ಮಾನವರೇ ಸತ್ಯಯುಗ-ಕಲಿಯುಗಗಳಲ್ಲದಿದ್ದರೆ, ಜಗತ್ತಿನಲ್ಲಾವನೂ ಧರ್ಮಾತ್ಮನಾಗುವುದಿಲ್ಲ. ಇವೆಲ್ಲಾ ಸಂಗದ ಗುಣದೋಷಗಳು; ಸ್ವಾಭಾವಿಕವಲ್ಲ. ಇಷ್ಟು ಹೇಳಿ, ಆಪ್ತನ ಬಳಿಗೆ ಹೋದನು. ಆತನಿಗೆ—"ಸ್ವಾಮಿ! ನೀವು ನನ್ನ ಉದ್ಧಾರವನ್ನು ಮಾಡಿದಿರಿ. ಇಲ್ಲದಿದ್ದರೆ-ನಾನೂ ಯಾವನಾದರೊಬ್ಬನ ಬಲೆಯಲ್ಲಿ ಸಿಕ್ಕಿಕೊಂಡು ನಷ್ಟಭ್ರಷ್ಟನಾಗಿ ಹೋಗುತ್ತಿದ್ದೆನು. ಈಗ ನಾನೂ ಕೂಡ ಈ ಪಾಷಂಡಿಗಳ ಖಂಡನವನ್ನೂ, ವೇದೋಕ್ತ ಸತ್ಯ ಮತದ ಮಂಡನವನ್ನು ಮಾಡುವುದರಲ್ಲಿ ತೊಡಗುವೆನು.

ಆಪ್ತ:—ಇದೇ ಮಾನವರೆಲ್ಲರ ವಿಶೇಷತಃ ವಿದ್ವಾಂಸರ ಮತ್ತು

ಸಂನ್ಯಾಸಿಗಳ ಕೆಲಸ; ಏನೆಂದರೆ—ಸರ್ವಮಾನವರಿಗೂ ಸತ್ಯದ ಮಂಡನವನ್ನೂ, ಅಸತ್ಯದ ಖಂಡನವನ್ನೂ ಓದಿಸಿ-ಹೇಳಿ, ಸತ್ಯೋಪದೇಶದಿಂದ ಉಪಕಾರವನ್ನುಂಟುಮಾಡಬೇಕು.

ಪ್ರಶ್ನೆ:—ಯಾವ ಬ್ರಹ್ಮಚಾರಿಗಳೂ, ಸಂನ್ಯಾಸಿಗಳೂ ಇದ್ದಾರೋ ಅವರಾದರೂ ಸರಿಯಾಗಿದ್ದಾರೋ?

ಉತ್ತರ:—ಈ ಆಶ್ರಮಗಳೇನೋ ಸರಿಯೇ. ಆದರೆ-ಪ್ರಸ್ತುತ ಇವರಲ್ಲಿಯೂ ಬಹಳ ಅವಾಂತರವಿದೆ. ಎಷ್ಟೋ ಜನರು ಬ್ರಹ್ಮಚಾರಿಗಳೆಂದು ಹೆಸರಿಟ್ಟುಕೊಳ್ಳುತ್ತಾರೆ; ಮತ್ತು ಸುಳ್ಳು ಸುಳ್ಳೇ, ಜಡೆ ಬೆಳೆಸಿಕೊಂಡು 'ಸಿದ್ಧತನ'ವನ್ನು ತೋರಿಸಿಕೊಳ್ಳುತ್ತಾರೆ; ಮತ್ತು ಜಪ-ಪುರಶ್ಚರಣ-ಮೊದಲಾದುವುಗಳಲ್ಲಿ ಸಿಕ್ಕಿಕೊಂಡಿರುತ್ತಾರೆ. ಯಾವ ಕಾರಣದಿಂದ ಬ್ರಹ್ಮಚಾರಿಯೆಂಬ ಹೆಸರುಂಟಾಗುತ್ತದೋ, ಆ ವಿದ್ಯೆಯನ್ನೋದುವ ಹೆಸರನ್ನೂ ಕೂಡ ಎತ್ತುವುದಿಲ್ಲ. ಆ ಬ್ರಹ್ಮ-ಅಂದರೆ ವೇದಗಳನ್ನೋದುವುದರಲ್ಲಿ ಸ್ವಲ್ಪವಾದರೂ ಪರಿಶ್ರಮಪಡುವುದಿಲ್ಲ. ಆ ಬ್ರಹ್ಮಚಾರಿಗಳು ಆಡಿನ ಕೊರಳಿನ ಮೊಲೆಯಂತೆ ನಿರರ್ಥಕರು. ಮತ್ತು ಅದೇ ಬಗೆಯ ಸಂನ್ಯಾಸಿಗಳು ವಿದ್ಯಾವಿಹೀನರಾಗಿ, ದಂಡ ಕಮಂಡಲುಗಳನ್ನು ಹಿಡಿದು ಕೇವಲ ಭಿಕ್ಷೆಮಾಡುತ್ತಾ ತಿರುಗುತ್ತಾರೆ; ಅವರು ವೇದಮಾರ್ಗದ ಉನ್ನತಿಯನ್ನು ಸ್ವಲ್ಪವಾದರೂ ಸಾಧಿಸುವುದಿಲ್ಲ ಸಣ್ಣವಯಸ್ಸಿನಲ್ಲಿ ಸಂನ್ಯಾಸವನ್ನು ತೆಗೆದುಕೊಂದು ಅಲೆದಾಡುತ್ತಾರೆ ಮತ್ತು ವಿದ್ಯಾಭ್ಯಾಸವನ್ನು ಬಿಟ್ಟುಬಿಡುತ್ತಾರೆ. ಇಂತಹ ಬ್ರಹ್ಮಚಾರಿಗಳೂ ಇಲ್ಲಿ-ಅಲ್ಲಿ ಜಲ, ಸ್ಥಳ, ಕಲ್ಲು ಮೊದಲಾದುವುಗಳ ವಿಗ್ರಹಗಳ ದರ್ಶನವನ್ನೂ, ಪೂಜನವನ್ನೂ ಮಾಡುತ್ತಾ ತಿರುಗಾಡುತ್ತಾರೆ; ವಿದ್ಯೆಯನ್ನರಿತಿದ್ದರೂ ಕೂಡ ಮೌನವಾಗಿಯೇ ಇರುತ್ತಾರೆ; ಏಕಾಂತ ಪ್ರದೇಶದಲ್ಲಿ ಯಥೇಷ್ಟವಾಗಿ ತಿಂದು-ಕುಡಿದು ನಿದ್ರಿಸುತ್ತಾ ಬಿದ್ದಿರುತ್ತಾರೆ. ಮತ್ತು ಈರ್ಷ್ಯಾದ್ವೇಷಗಳಿಗೆ ಸಿಕ್ಕಿಕೊಂಡು ನಿಂದೆ-ಕುಚೇಷ್ಟೆಗಳನ್ನು ಮಾಡಿ ನಿರ್ವಾಹವಮಾಡಿಕೊಳ್ಳುತ್ತಾರೆ. ಕಾಷಾಯವಸ್ತ್ರ ಮತ್ತು ದಂಡಗ್ರಹಣ ಮಾತ್ರದಿಂದ ತಮ್ಮನ್ನು ಕೃತಕೃತ್ಯರೆಂದು ತಿಳಿದುಕೊಳ್ಳುತ್ತಾರೆ. ತಮ್ಮನ್ನು ಸರ್ವೋತ್ಕೃಷ್ಟರೆಂದು ತಿಳಿದುಕೊಂಡು, ಉತ್ತಮ ಕೆಲಸವನ್ನು ಮಾಡುವುದಿಲ್ಲ. ಅಂತಹ ಸಂನ್ಯಾಸಿಗಳೂ ಸಹ ಜಗತ್ತಿನಲ್ಲಿ

ವ್ಯರ್ಥವಾಗಿ ವಾಸಿಸುತ್ತಾರೆ. ಮತ್ತು ಎಲ್ಲಾ ಜಗತ್ತಿನ ಹಿತವನ್ನೂ ಸಾಧಿಸುವವರು ಸರಿಯಾಗಿದ್ದಾರೆ.

ಪ್ರಶ್ನೆ :—ಗಿರಿ, ಪುರಿ, ಭಾರತಿ—ಮೊದಲಾದ ಗೋಸಾಯಿಗಳಾದರೂ ಉತ್ತಮರಾಗಿದ್ದಾರೋ? ಏಕೆಂದರೆ—ಮುಂಡಲಿಗಳನ್ನು ರಚಿಸಿಕೊಂಡು ಅತ್ತಿತ್ತ ತಿರುಗಾಡುತ್ತಾರೆ; ನೂರಾರು ಜನ ಸಾಧುಗಳಿಗೆ ಆನಂದವನ್ನುಂಟುಮಾಡುತ್ತಾರೆ; ಮತ್ತು ಎಲ್ಲೆಡೆಯೂ ಅದ್ವೈತಮತದ ಉಪದೇಶವನ್ನು ಮಾಡುತ್ತಾರೆ. ಮತ್ತು ಸ್ವಲ್ಪ ಸ್ವಲ್ಪ ಓದುವುದೂ–ಓದಿಸುವುದೂ ಉಂಟು. ಆದುದರಿಂದ, ಅವರು ಉತ್ತಮರಾಗಿರಬಹುದು.

ಉತ್ತರ :- ಈ ಎಲ್ಲಾ ಹತ್ತು ಹೆಸರುಗಳನ್ನು ಹಿಂದಿನಿಂದ ಕಲ್ಪಿಸಿದ್ದಾರೆ; ಸನಾತನವಲ್ಲ. ಅವರ ಮುಂಡಲಿಗಳು ಕೇವಲ ಭೋಜನದಸಲುವಾಗಿವೆ. ಬಹಳ ಜನ ಸಾಧುಗಳು ಭೋಜನಕ್ಕಾಗಿಯೇ ಮುಂಡಲಿಗಳಲ್ಲಿರುತ್ತಾರೆ. ದಾಂಭಿಕರೂ ಆಗಿರುತ್ತಾರೆ; ಏಕೆಂದರೆ—ಒಬ್ಬನನ್ನು ಮಹಂತನನ್ನಾಗಿಮಾಡಿ, ಅವರಲ್ಲಿ ಪ್ರಧಾನವಾದ ಒಬ್ಬ ಮಹಂತನು ಗಾದಿಯ ಮೇಲೆ ಸಾಯಂಕಾಲ ಕುಳಿತುಕೊಳ್ಳುತ್ತಾನೆ. ಎಲ್ಲಾ ಬ್ರಾಹ್ಮಣರೂ, ಸಾಧುಗಳೂ ನಿಂತುಕೊಂಡು ಕೈಯಲ್ಲಿ ಪುಷ್ಪಗಳನ್ನು ತೆಗೆದುಕೊಂಡು :—

ನಾರಾಯಣಂ ಪದ್ಮಭವಂ ವಸಿಷ್ಠಂ ಶಕ್ತಿಂಚ ತತ್ಪುತ್ರ
ಪರಾಶರಂ ಚ ।
ವ್ಯಾಸಂ ಶುಕಂ ಗೌಡ ಪಾದಂ ಮಹಾಂತಂ ॥

ಈ ಮೊದಲಾದ ಶ್ಲೋಕಗಳನ್ನು ಪಠಿಸಿ, "ಹರಹರ" ಎಂದು ಕೂಗಿ, ಅವರ ಮೇಲೆ ಹೂಮಳೆಗರೆದು, ಸಾಷ್ಟಾಂಗ ನಮಸ್ಕಾರ ಮಾಡುತ್ತಾರೆ. ಯಾವನಾದರೂ ಹೀಗೆ ಮಾಡದಿದ್ದರೆ, ಅವನಿಗೆ ಅಲ್ಲಿರುವುದೂ ಸಹ ಕಠಿಣವಾಗುತ್ತದೆ. ಜಗತ್ತಿನಲ್ಲಿ ಪ್ರತಿಷ್ಠೆಯುಂಟಾಗಿ, ವಸ್ತು ಸಿಕ್ಕಲೆಂದು, ಜಗತ್ತಿಗೆ ತೋರಿಸುವುದಕ್ಕಾಗಿ ಈ ದಂಭವನ್ನು ಮಾಡುತ್ತಾರೆ. ಎಷ್ಟೋ ಜನ ಮಠಾಧೀಶರು ಗೃಹಸ್ಥರಾಗಿದ್ದೂ ಸಹ ಸಂನ್ಯಾಸದ ಅಭಿಮಾನವನ್ನು ಮಾತ್ರ ಮಾಡುತ್ತಾರೆ; ಕರ್ಮ

ವೇನೇನೂ ಇಲ್ಲ. ಐದನೆಯ ಸಮುಲ್ಲಾಸದಲ್ಲಿ ಬರೆದು ಬಂದಿರುವುದೇ ಸಂನ್ಯಾಸದ ಕರ್ಮ; ಅದನ್ನು ಮಾಡದೆ, ವ್ಯರ್ಥವಾಗಿ ಸಮಯವನ್ನು ಕಳೆಯುತ್ತಾರೆ. ಯಾವನಾದರೂ ಒಳ್ಳೆಯ ಉಪದೇಶ ಮಾಡಿದರೆ, ಅವನಿಗೂ ವಿರೋಧಿಗಳಾಗುತ್ತಾರೆ. ಬಹುತೇಕವಾಗಿ ಈ ಜನರು ಭಸ್ಮರುದ್ರಾಕ್ಷಧಾರಣ ಮಾಡುತ್ತಾರೆ; ಮತ್ತು ಒಬ್ಬೊಬ್ಬರು ಶೈವ ಸಂಪ್ರದಾಯದ ಅಭಿಮಾನವಿಟ್ಟುಕೊಂಡಿರುತ್ತಾರೆ. ಮತ್ತು ಯಾವಾಗ ಲಾದರೂ ಶಾಸ್ತ್ರಾರ್ಥ ಮಾಡಿದರೆ, ತಮ್ಮ ಮತದ, ಅಂದರೆ—ಶಂಕರಾಚಾರ್ಯೋಕ್ತ ಮತದ ಸ್ಥಾಪನೆಯಲ್ಲಿಯೂ, ಮತ್ತು ಚಕ್ರಾಂಕಿತ ಮೊದಲಾದುದರ ಖಂಡನೆಯಲ್ಲಿಯೂ ಪ್ರವೃತ್ತರಾಗಿರುತ್ತಾರೆ. ವೇದಮಾರ್ಗದ ಉನ್ನತಿಯಲ್ಲಿಯೂ, ಪಾಷಂಡಮಾರ್ಗಗಳಿಷ್ಟವೆಯೋ, ಅಷ್ಟರ ಖಂಡನವಲ್ಲಿಯೂ ಪ್ರವೃತ್ತರಾಗುವುದಿಲ್ಲ. ಈ ಸಂನ್ಯಾಸಿಗಳು–'' ನಮಗೆ ಖಂಡನ–ಮಂಡನದಿಂದೇನುಪ್ರಯೋಜನ? ನಾವಾದರೋ ಮಹಾತ್ಮರು!'' ಎಂದು ತಿಳಿಯುತ್ತಾರೆ. ಇಂತಹ ಜನರೂ ಕೂಡ ಜಗತ್ತಿನಲ್ಲಿ ಭಾರರೂಪರು. ಹೀಗಿರುವುದರಿಂದಲೇ ವೇದಮಾರ್ಗವಿರೋಧಿಗಳಾದ ವಾಮಮಾರ್ಗ ಮೊದಲಾದ ಸಾಂಪ್ರದಾಯಿಕರು, ಕ್ರೈಸ್ತರು, ಮುಸಲ್ಮಾನರು, ಜೈನರು ಮೊದಲಾದವರು ಹೆಚ್ಚಿಹೋದರು; ಈಗಲೂ ಹೆಚ್ಚುತ್ತಾ ಹೋಗುತ್ತಾರೆ. ಮತ್ತು ಇವರ ನಾಶವಾಗುತ್ತಾ ಹೋಗುತ್ತದೆ; ಆದರೂ ಇವರ ಕಣ್ಣು ತೆರೆದುಕೊಳ್ಳುವುದಿಲ್ಲ! ತೆರೆದುಕೊಂಡೀತಾದರೂ ಎಲ್ಲಿಂದ? ಅವರ ಮನಸ್ಸಿನಲ್ಲಿ ಸ್ವಲ್ಪವಾದರೂ ಪರೋಪಕಾರಬುದ್ಧಿ ಮತ್ತು ಕರ್ತವ್ಯ ಕರ್ಮಮಾಡುವುದರಲ್ಲಿ ಉತ್ಸಾಹವಿದ್ದರಲ್ಲವೇ? ಆದರೆ ಈ ಜನರು ತಮ್ಮ ಪ್ರತಿಷ್ಠೆ, ಭೋಜನ, ಪಾನ—ಇವುಗಳ ಮುಂದೆ ಬೇರೇನನ್ನೂ ಅಧಿಕವೆಂದು ತಿಳಿಯುವುದಿಲ್ಲ. ಮತ್ತು ಜಗತ್ತಿನ ಕಡೆಯಿಂದಾಗುವ ನಿಂದೆಗೆ ಬಹಳ ಹೆದರುತ್ತಾರೆ. ಮತ್ತೆ, (ಲೋಕೈಷಣಾ) ಲೋಕದಲ್ಲಿ ಪ್ರತಿಷ್ಠೆ, (ವಿತ್ತೈಷಣಾ) ಧನವರ್ಧನದಲ್ಲಿ ತತ್ಪರರಾಗಿ ವಿಷಯಭೋಗ ಮಾಡುವುದು, (ಪುತ್ರೈಷಣಾ) ಪುತ್ರರಂತೆ ಶಿಷ್ಯರ ಮೇಲೆ ಮೋಹಿತರಾಗುವುದು ಈ ಮೂರು ಏಷಣೆಗಳನ್ನೂ ತ್ಯಜಿಸುವುದು ಉಚಿತವಾಗಿರುತ್ತದೆ. ಏಷಣೆಯೇ ಬಿಟ್ಟುಹೋಗದಿರುವಾಗ,

ಮತ್ತೆ ಸಂನ್ಯಾಸವೆಂತಾಗಬಲ್ಲದು? ಅಂದರೆ ಪಕ್ಷಪಾತರಹಿತವಾದ ವೇದಮಾರ್ಗೋಪದೇಶದಿಂದ ಜಗತ್ಕಲ್ಯಾಣ ಮಾಡುವುದರಲ್ಲಿ ಅಹರ್ನಿಶಿಯೂ ಪ್ರವೃತ್ತರಾಗಿರುವುದು ಸಂನ್ಯಾಸಿಗಳ ಮುಖ್ಯ ಕರ್ಮ. ತಮ್ಮ ತಮ್ಮ ಅಧಿಕಾರವಾದ ಕರ್ಮಗಳನ್ನು ಮಾಡದಿರುವಾಗ ಸಂನ್ಯಾಸ ಮೊದಲಾದ ಹೆಸರುಗಳನ್ನಿಡಿಸಿಕೊಳ್ಳುವುದು ವ್ಯರ್ಥ. ಇಲ್ಲದಿದ್ದರೆ, ಗೃಹಸ್ಥರು ವ್ಯವಹಾರಗಳಲ್ಲಿ ಮತ್ತು ಸ್ವಾರ್ಥದಲ್ಲಿ ಹೇಗೆ ಪರಿಶ್ರಮ ಪಡುತ್ತಾರೋ, ಹಾಗೆ ಅವರಿಗಿಂತ ಹೆಚ್ಚು ಪರಿಶ್ರಮದಲ್ಲಿ, ಪರೋಪಕಾರ ಮಾಡುವುದರಲ್ಲಿ ಸಂನ್ಯಾಸಿಗಳೂ ಕೂಡ ತತ್ಪರರಾದಾಗಲೇ ಎಲ್ಲಾ ಆಶ್ರಮಗಳೂ ಏಳಿಗೆಯಲ್ಲಿರುತ್ತವೆ. ನೋಡಿರಿ! ನಿಮ್ಮೊಳಗಿರಿಗೆ ಪಾಷಂಡಮತಗಳು ವರ್ಧಿಸುತ್ತಾ ಹೋಗುತ್ತವೆ; ಕ್ರೈಸ್ತ-ಮುಸಲ್ಮಾನರೂ ಕೂಡ ಲಗಿಹೋಗುತ್ತಾರೆ. ನಿಮ್ಮಿಂದ ಸ್ವಲ್ಪವೂ ಕೂಡ ನಿಮ್ಮ ಮನೆಯ ರಕ್ಷಣೆ ಮತ್ತು ಬೇರೆಯವರನ್ನೂ ಸೇರಿಸಿಕೊಳ್ಳುವುದು ಸಾಧ್ಯವಿಲ್ಲ! ನೀವು ಮಾಡಲಪೇಕ್ಷಿಸಿದಾಗ ತಾನೇ ಸಾಧ್ಯವಾಗುವುದು? ಎದುವರೆಗೆ ಈಗ ಮತ್ತು ಮುಂದಕ್ಕೆ ಉನ್ನತಿಶೀಲರಾಗುವುದಿಲ್ಲವೋ, ಅದುವರೆಗೆ ಆರ್ಯಾವರ್ತ ಮತ್ತು ಅನ್ಯದೇಶಸ್ಥರಾದ ಮಾನವರ ವೃದ್ಧಿಯಾಗುವುದಿಲ್ಲ. ವೃದ್ಧಿಯ ಕಾರಣಗಳಾದ ವೇದಾದಿ ಸತ್ಯ ಶಾಸ್ತ್ರಗಳ ಪಠನ-ಪಾಠನಗಳು, ಬ್ರಹ್ಮಚರ್ಯ ಮೊದಲಾದ ಆಶ್ರಮಗಳ ಯಥಾವತ್ತಾದ ಅನುಷ್ಠಾನ ಸತ್ಯೋಪದೇಶಗಳು ಯಾವಾಗ ನಡೆಯುತ್ತವೋ, ಆಗಲೇ ದೇಶೋನ್ನತಿಯಾಗುತ್ತದೆ. ಎಚ್ಚರಿಕೆಯಿರಲಿ! ಪಾಷಂಡದ ಬಹಳ ಮಾತುಗಳು ನಿಮಗೆ ಸತ್ಯವೆಂದು ಕಂಡು ಬರುತ್ತವೆ. ಉದಾಹರಣೆಗೆ—ಯಾವನಾದರೂ ಸಾಧುವು ಅಥವಾ ಅಂಗಡಿಕಾರನು ಸಂತತಿ ಮೊದಲಾದುವನ್ನು ಕೊಡುವ ಸಿದ್ಧಿಗಳನ್ನು ತೋರಿಸಿದಾಗ, ಅವನ ಬಳಿ ಬಹುಮಂದಿ ಸ್ತ್ರೀಯರು ಹೋಗುತ್ತಾರೆ; ಮತ್ತು ಕೈಜೋಡಿಸಿ ಮಕ್ಕಳನ್ನು ಕೇಳಿಕೊಳ್ಳುತ್ತಾರೆ. ಮತ್ತು ಬಾಬನು ಎಲ್ಲರಿಗೂ ಮಕ್ಕಳಾಗುವ ಆಶೀರ್ವಾದವನ್ನು ನೀಡುತ್ತಾನೆ. ಅವರಲ್ಲಿ ಯಾರಾರಿಗೆ ಮಕ್ಕಳಾಗುತ್ತವೋ, ಅವರು ಬಾಬನ ಮಾತಿನಿಂದಾಯಿತೆಂದು ತಿಳಿಯುತ್ತಾರೆ. ಅವರನ್ನಾರಾದರೂ ಹಂದಿ, ನಾಯಿ, ಕತ್ತೆ, ಮತ್ತು ಕೋಳಿ ಮೊದಲಾದುವಕ್ಕೆ ಮಕ್ಕಳು ಮರಿಗಳು ಯಾವ

ಬಾಬನ ವಚನದಿಂದಾಗುತ್ತವೆಂದೂ ಕೇಳಿದರೆ, ಆಗ ಏನೂ ಉತ್ತರ ವೀಯಲಾರರು. ಯಾವನಾದರೂ – " ನಾನು ಬಾಲಕನನ್ನು ಜೀವಿತ ನಾಗಿಡಬಲ್ಲೆ " ಎಂದು ಹೇಳುವನಾದರೆ, ತಾನೇ ಸತ್ತುಹೋಗುತ್ತಾ ನೇತಕ್ಕೆ ? ಎಷ್ಟೊ ಮಂದಿ ಧೂರ್ತ ಜನರು, ಧನಸಾರಿಯ ಠಕ್ಕರಂತೆ, ದೊಡ್ಡ ದೊಡ್ಡ ಬುದ್ಧಿವಂತರೂ ಕೂಡ ಮೋಸಹೋಗಿಬಿಡುವಂತೆ ಮಾಯೆಯನ್ನು ರಚಿಸುತ್ತಾರೆ. ಈ ಜನರು ಐದಾರುಜನ ಸೇರಿ ದೂರ ದೂರ ದೇಶಕ್ಕೆ ಹೋಗುತ್ತಾರೆ. ಯಾವನು ಶರೀರದಿಂದ ಹೃಷ್ಟ ಪುಷ್ಟನಾಗಿ ಚೆನ್ನಾಗಿರುತ್ತಾನೋ, ಅವನನ್ನು ಸಿದ್ಧನನ್ನಾಗಿ ಮಾಡಿ ಕೊಳ್ಳುತ್ತಾರೆ. ಯಾವ ನಗರ ಅಥವಾ ಗ್ರಾಮದಲ್ಲಿ ಧನಾಢ್ಯರಿರು ತ್ತಾರೋ, ಅದರ ಸಮೀಪದಲ್ಲಿ, ಕಾಡಿನಲ್ಲಿ ಆ ಸಿದ್ಧನನ್ನು ಕುಳ್ಳಿರಿಸು ತ್ತಾರೆ. ಅವನ ಸಾಧಕರು ನಗರದೊಳಕ್ಕೆ ಹೋಗಿ, ತಿಳಿಯದವರಂತಾಗಿ. ಯಾರು ಕಂಡರೂ—" ನೀವು ಇಂತಹ ಮಹಾತ್ಮನನ್ನು ಇಲ್ಲೆಲ್ಲಿ ಯಾದರೂ ನೋಡಿದಿರೋ, ಇಲ್ಲವೋ ? " ಎಂದು ಕೇಳುತ್ತಾರೆ. ಇದನ್ನು ಕೇಳಿ ಅವರು—" ಆ ಮಹಾತ್ಮನು ಯಾರು ಮತ್ತು ಹೇಗಿದ್ದಾನೆ ? " ಎಂದು ಪ್ರಶ್ನಿಸುತ್ತಾರೆ.

ಸಾಧಕರು :—ದೊಡ್ಡ ಸಿದ್ಧಪುರುಷನು. ಮನಸ್ಸಿನ ಮಾತು ಗಳನ್ನು ಹೇಳಿಬಿಡುತ್ತಾನೆ. ಬಾಯಿನಿಂದ ಏನು ಹೇಳುತ್ತಾನೋ, ಅದು ಆಗಿಬಿಟ್ಟುತ್ತದೆ. ಮಹಾಯೋಗಿರಾಜನು. ಆತನ ದರ್ಶನಕ್ಕಾಗಿ ನಾವು ನಮ್ಮ ಮನೆ–ಬಾಗಿಲು ಬಿಟ್ಟು ನೋಡುತ್ತಾ ತಿರುಗುತ್ತೇವೆ. ನಾನು-" ಆ ಮಹಾತ್ಮರು ಇತ್ತಕಡೆ ಬಂದಿದ್ದಾರೆ ' ಎಂದು ಯಾರಿಂದಲೋ ಕೇಳಿದ್ದೆನು.

ಗೃಹಸ್ಥ :—ಯಾವಾಗ ಆ ಮಹಾತ್ಮನು ನಿಮಗೆ ಸಿಕ್ಕುವನೋ, ಆಗ ನಮಗೂ ಹೇಳಿರಿ. ದರ್ಶನಮಾಡುವೆವು ಮತ್ತು ಮನಸ್ಸಿನ ಮಾತುಗಳನ್ನು ಕೇಳುವೆವು.

ಇದೇ ರೀತಿ ಹಗಲೆಲ್ಲಾ ನಗರದಲ್ಲಿ ತಿರುಗುತ್ತಾರೆ ಮತ್ತು ಪ್ರತಿಯೊಬ್ಬನಿಗೂ ಆ ಸಿದ್ಧನ ಸಂಗತಿಯನ್ನು ಹೇಳಿ. ರಾತ್ರಿ ಸಿದ್ಧ – ಸಾಧಕರು ಸೇರಿ ತಿನ್ನುತ್ತಾರೆ–ಕುಡಿಯುತ್ತಾರೆ ಮತ್ತೆ ನಿದ್ರಿಸುತ್ತಾರೆ. ಪುನಃ ಪ್ರಾತಃಕಾಲ ನಗರ ಅಥವಾ ಗ್ರಾಮಕ್ಕೆ ಹೋಗಿ, ಅದೇ ರೀತಿ

ಎರಡು-ಮೂರು ದಿನ ಹೇಳಿ, ಮತ್ತೆ ನಾಲ್ವರು ಸಾಧಕರೂ ಯಾವ ನಾದರೂ ಒಬ್ಬೊಬ್ಬ ಗೃಹಸ್ಥನಿಗೆ-" ಆ ಮಹಾತ್ಮರು ಸಿಕ್ಕಿಬಿಟ್ಟರು. ನೀವು ದರ್ಶನಮಾಡಬೇಕಾಗಿದ್ದರೆ, ಹೊರಡಿರಿ."ಎಂದು ಹೇಳುತ್ತಾರೆ. ಅವರು ಸನ್ನದ್ಧರಾದಾಗ, ಸಾಧಕರು ಅವರಿಗೆ—" ನೀವು ಯಾವ ಮಾತನ್ನು ಕೇಳ ಬಯಸುತ್ತೀರಿ? ನಮಗೆ ಹೇಳಿರಿ." ಎಂದು ಹೇಳುತ್ತಾರೆ. ಒಬ್ಬನು ಪುತ್ರನನ್ನು ಬಯಸುತ್ತಾನೆ; ಒಬ್ಬನು ಧನವನ್ನು ಬಯಸುತ್ತಾನೆ; ಒಬ್ಬನು ರೋಗನಿವಾರಣವನ್ನು ಬಯಸುತ್ತಾನೆ; ಒಬ್ಬನು ಶತ್ರುವನ್ನು ಗೆಲ್ಲಲಿಚ್ಛಿಸುತ್ತಾನೆ. ಅವರನ್ನು ಆ ಸಾಧಕರು ಕರೆದುಕೊಂಡು ಹೋಗುತ್ತಾರೆ. ಸಿದ್ಧ-ಸಾಧಕರು ಸಂಕೇತಮಾಡಿ ಕೊಂಡಿರುವಂತೆ, ಅಂದರೆ, ಧನವನ್ನು ಇಚ್ಛಿಸುವವನನ್ನು ಬಲಗಡೆ, ಪುತ್ರನನ್ನು ಇಚ್ಛಿಸುವವನನ್ನು ಎದುರಿಗೆ, ರೋಗನಿವಾರಣೆಯನ್ನಿಚ್ಛಿಸುವವನನ್ನು ಎಡಗಡೆ, ಮತ್ತು ಶತ್ರುವನ್ನು ಜಯಿಸ ಬಯಸುವವನನ್ನು ಹಿಂದಿನಿಂದ ಕರೆದುಕೊಂಡು ಹೋಗಿ, ಮುಂದಿನವರ ನಡುವೆ ಕುಳ್ಳಿರಿಸುತ್ತಾರೆ. ನಮಸ್ಕಾರಮಾಡುವ ಸಮಯದಲ್ಲಿಯೇ ಆ ಸಿದ್ಧನು ತನ್ನ ಸಿದ್ಧತನದ ಬಿಂಕದಿಂದ, ಉಚ್ಚಸ್ವರದಿಂದ-" ನೀನು ಪುತ್ರನ ಇಚ್ಛೆಮಾಡಿಕೊಂಡು ಬರಲು ಇಲ್ಲಿ ನಮ್ಮ ಬಳಿ ಮುಕ್ಕಳಿದ್ದಾರೇನು?" ಎಂದು ಕೇಳುತ್ತಾನೆ. ಇದೇ ರೀತಿ ಧನವನ್ನಿಚ್ಛಿಸುವವನ್ನು ಕುರಿತು—" ಧನವನ್ನಿಚ್ಛಿಸಿಬರಲು ಚೀಲಗಳನ್ನಿಟ್ಟಿದ್ದೇವೆಯೇ? ಫಕೀರನ ಹತ್ತಿರ ಧನವೆಲ್ಲಿದೆ?" ಎಂದು ಕೇಳುತ್ತಾನೆ. ರೋಗದವನನ್ನು ಕುರಿತು—" ರೋಗವನ್ನು ದೂರಮಾಡುವ ಇಚ್ಛೆಯಿಂದ ಬರಲು ನಾವು ವೈದ್ಯರೇ? ನಿನ್ನ ರೋಗವನ್ನು ಬಿಡಿಸಲು ನಾವು ವೈದ್ಯರಲ್ಲ. ಹೋಗು ಯಾವ ನಾದರೂ ವೈದ್ಯನ ಹತ್ತಿರ." ಎಂದು ಹೇಳುತ್ತಾನೆ. ಅದರೆ, ಅವನ ತಂದೆ ರೋಗ ಹೊಂದಿದ್ದರೆ, ಆತನ ಸಾಧಕನು ಹೆಬ್ಬೆರಳನ್ನೂ, ತಾಯಿಯು ರೋಗಿಯಾಗಿದ್ದರೆ ತರ್ಜನಿಯನ್ನೂ, ಸೋದರನು ರೋಗಿಯಾಗಿದ್ದರೆ ನಡುಬೆರಳನ್ನೂ, ಹೆಂಡತಿಯು ರೋಗಿಣಿಯಾಗಿದ್ದರೆ ಉಂಗುರದ ಬೆರಳನ್ನೂ, ಮಗಳು ರೋಗಿಣಿಯಗಿದ್ದರೆ ಕಿರುಬೆರಳನ್ನೂ ಅಲ್ಲಾಡಿಸಿಬಿಡುತ್ತಾನೆ ಅದನ್ನು ನೋಡಿ ಆ ಸಿದ್ಧನು—" ನಿನ್ನ ತಂದೆ ರೋಗಿಯಾಗಿದ್ದಾನೆ; ನಿನ್ನ ತಾಯಿ, ನಿನ್ನ ಸೋದರ, ನಿನ್ನ ಹೆಂಡತಿ

ಮತ್ತು ನಿನ್ನ ಮಗಳು ರೋಗಿಯಾಗಿದ್ದಾಳೆ"—ಎಂದು ಹೇಳುತ್ತಾನೆ. ಆಗಲಂತೂ ಆ ನಾಲ್ವರೂ ಬಹಳ ಮುಗ್ಧರಾಗಿಹೋಗುತ್ತಾರೆ. ಸಾಧಕರು ಅವರಿಗೆ—"ನೋಡಿರಿ! ನಾವು ಹೇಗೆ ಹೇಳಿದ್ದೆವೋ, ಹಾಗೆಯೇ ಇದ್ದಾರೋ ಇಲ್ಲವೋ?—ಎಂದು ಪ್ರಶ್ನಿಹಾಕುತ್ತಾರೆ.

ಗೃಹಸ್ಥರು:—ಹೌದು; ನೀವು ಹೇಗೆ ಹೇಳಿದ್ದಿರೋ, ಹಾಗೆಯೇ ಇದ್ದಾರೆ. ನೀವು ನಮಗೆ ಬಹಳ ಉಪಕಾರಮಾಡಿದಿರಿ. ಇಂತಹ ಮಹಾತ್ಮರು ಸಿಕ್ಕಿದುದು ನಮ್ಮಗಳ ಮಹಾ ಭಾಗ್ಯೋದಯವೂ ಅಹುದು; ಅವರ ದರ್ಶನ ಮಾಡಿ ನಾವು ಕೃತಾರ್ಥರಾದೆವು.

ಸಾಧಕರು:—ಕೇಳಿ ಬಂಧುಗಳೇ! ಈ ಮಹಾತ್ಮರು ಮನೋಗಾಮಿಗಳು. ಇಲ್ಲಿ ಬಹುದಿನ ಇರತಕ್ಕವರಲ್ಲ. ಇವರ ಆಶೀರ್ವಾದ ವೇನಾದರೂ ಪಡೆಯಬೇಕಾಗಿದ್ದರೆ, ನಿಮ್ಮ ನಿಮ್ಮ ಶಕ್ತಿಗನುಕೂಲವಾಗಿ ಇವರಿಗೆ ತನು-ಮನ-ಧನಗಳಿಂದ ಸೇವೆಮಾಡಿರಿ. ಏಕೆಂದರೆ—"ಸೇವೆಯಿಂದ ಫಲ ಸಿಕ್ಕುತ್ತದೆ." ಯಾರಮೇಲಾದರೂ ಪ್ರಸನ್ನರಾಗಿ ಹೋದರೆ, ಏನು ವರ ದಯಪಾಲಿಸುತ್ತಾರೋ ತಿಳಿಯದು. "ಸಂತರ ಗತಿ ಅಪಾರವಾದುದು."

ಗೃಹಸ್ಥರು ಇಂತಹ ಬೆಣ್ಣೆ ಹಚ್ಚಿದ ಮಾತುಗಳನ್ನು ಕೇಳಿ, ಬಹಳ ಹರ್ಷದಿಂದ ಅವರನ್ನು ಪ್ರಶಂಸಿಸುತ್ತಾ ಮನೆಯ ಕಡೆ ಹೋಗುತ್ತಾರೆ. ಸಾಧಕರೂ ಸಹ, ಅವರ ಪಾಷಂಡವನ್ನು ಯಾರೂ ಬಯಲಿಗೆಳೆಯದಿರಲೆಂದು ಅವರ ಜೊತೆಯಲ್ಲೇ ಹೊರಟುಹೋಗುತ್ತಾರೆ. ಆ ಧನಾಢ್ಯರ ಮಿತ್ರನಾವನಾದರೂ ಸಿಕ್ಕಿದರೆ, ಅವನೆದುರಿಗೆ ಪ್ರಶಂಸೆ ಮಾಡುತ್ತಾರೆ. ಇದೇ ರೀತಿ ಯಾರು ಯಾರು ಸಾಧಕರ ಸಂಗಡ ಹೋಗುತ್ತಾರೋ, ಅವರವರ ಸಂಗತಿಗಳನ್ನೆಲ್ಲಾ ಹೇಳಿಬಿಡುತ್ತಾರೆ. ಆಗ "ಇಂತಹ ಸ್ಥಳಕ್ಕೆ ಒಬ್ಬ ಮಹಾ ದೊಡ್ಡ ಸಿದ್ಧರು ಬಂದಿದ್ದಾರೆ; ನಡೆಯಿರಿ ಅವರ ಬಳಿಗೆ."—ಎಂದು ನಗರದಲ್ಲಿ ಕೋಲಾಹಲವೇಳುತ್ತದೆ. ಗುಂಪಿಗೆ ಗುಂಪೇ ಹೋಗಿ, ಬಹಳ ಜನರು-"ಸ್ವಾಮಿ ಮನಸ್ಸಿನ ವಿಷಯವನ್ನು ಹೇಳಿರಿ."—ಎಂದು ಕೇಳತೊಡಗಿದಾಗಲಂತೂ ವ್ಯವಸ್ಥೆ ಕೆಟ್ಟುಹೋಗುವುದರಿಂದ ಸುಮ್ಮನಾಗಿ ಮೌನ ಧರಿಸುತ್ತಾನೆ ಮತ್ತು "ನಮ್ಮನ್ನು ಬಹಳ ಪೀಡಿಸಬೇಡಿ"—ಎಂದು ಹೇಳುತ್ತಾನೆ.

ಆಗಲಾದರೋ ಥಟ್ಟನೆ ಅವನ ಸಾಧಕರೂ ಕೂಡ–" ನೀವು ಇವರನ್ನು ಬಹಳ ಪೀಡಿಸುವಿರಾದರೆ, ಇವರು ಹೊರಟುಹೋಗುವರು."—ಎಂದು ಹೇಳಲಾರಂಭಿಸುತ್ತಾರೆ. ಮತ್ತು ಯಾವನಾದರೂ ದೊಡ್ಡ ಮನುಷ್ಯ ನಾದವನು, ಸಾಧಕನನ್ನು ಬೇರೆ ಕರೆದು—" ನಮ್ಮ ಮನಸ್ಸಿನ ಮಾತನ್ನು ಹೇಳಿಸಿ ಬಿಟ್ಟರೆ, ನಾವು ಸತ್ಯವೆಂದೊಪ್ಪುತ್ತೇವೆ "–ಎಂದು ಹೇಳುತ್ತಾನೆ. ಸಾಧಕನು—" ಯಾವ ಮಾತು "—ಎಂದು ಕೇಳಿದನು; ಧನಾಢ್ಯನು ಅವನಿಗೆ ಹೇಳಿಬಿಟ್ಟನು. ಆಗ ಅವನನ್ನು ಅದೇ ಬಗೆಯ ಸಂಕೇತದಿಂದ ಕರೆದೊಯ್ದು ಕುಳ್ಳಿರಿಸಿಬಿಡುತ್ತಾನೆ. ಆ ಸಿದ್ಧನು ತಿಳಿದುಕೊಂಡು ಥಟ್ಟನೆ ಹೇಳಿಬಿಟ್ಟನು! ಆಗಲಂತೂ ಗುಂಪೆಲ್ಲಾ " ಅಹೋ! ಬಹಳ ದೊಡ್ಡ ಸಿದ್ಧ ಪುರುಷರು " ಎಂಬುದನ್ನು ಆಲಿಸಿತು! ಒಬ್ಬನು ಮಿಠಾಯಿಯನ್ನೂ, ಒಬ್ಬನು ದುಡ್ಡನ್ನೂ, ಒಬ್ಬನು ರೂಪಾಯಿಯನ್ನೂ, ಒಬ್ಬನು ಮೊಹರನ್ನೂ, ಒಬ್ಬನು ಬಟ್ಟೆಯನ್ನೂ, ಮತ್ತೊಬ್ಬನು ಬೇಯಿಸಿದ ಸಾಮಾನುಗಳನ್ನೂ ಅರ್ಪಿಸುತ್ತಾರೆ. ಮತ್ತೆ ಯದುವರೆಗೆ ಗೌರವಪುಷ್ಪಗಳವಾಗಿರುತ್ತದೋ, ಅದುವರೆಗೆ ಯಥೇಷ್ಟವಾಗಿ ಸೂರೆಗೊಳ್ಳುತ್ತಾರೆ. ಮತ್ತು ಒಬ್ಬೊಬ್ಬ ಅಂತರ್ನೇತ್ರಹೀನ ಧನವಂತರಿಗೆ ಪುತ್ರರಾಗುವ ಆಶೀರ್ವಾದ ವನ್ನಾಗಲೀ, ಬೂದಿಯನ್ನಾಗಲೀ ಎತ್ತಿ ಕೊಟ್ಟು ಬಿಡುತ್ತಾನೆ ಮತ್ತು ಅವನಿಂದ ಸಾವಿರಾರು ರೂಪಾಯಿಗಳನ್ನು ತೆಗೆದುಕೊಂಡು " ನಿನ್ನ ಭಕ್ತಿ ನಿಜವಾಗಿದ್ದರೆ, ಪುತ್ರನು ಹುಟ್ಟುವನು. " ಎಂದು ಹೇಳಿ ಬಿಡುತ್ತಾನೆ. ಯಾರನ್ನು ವಿದ್ವಾಂಸರು ಮಾತ್ರ ಪರೀಕ್ಷಿಸ ಬಲ್ಲರೋ ಮತ್ತು ಬೇರೆಯವರಿಗೆ ಸಾಧ್ಯವಿಲ್ಲವೋ, ಅಂತಹ, ಈ ಬಗೆಯ ಬಹುಮಂದಿ ಠಕ್ಕರಿರುತ್ತಾರೆ. ಆದುದರಿಂದ, ಯಾವನೂ ಅವನನ್ನು ಠಕ್ಕುತನದಲ್ಲಿ ಸಿಕ್ಕಿಸಿಕೊಳ್ಳಲಾಗದಂತೆ ಮತ್ತು ಬೇರೆ ಯವರನ್ನೂ ಉಳಿಸಲಾಗುವಂತೆ, ವೇದಾದಿ ವಿದ್ಯೆಯನ್ನು ಕಲಿಯ ಬೇಕಾಗಿರುತ್ತದೆ ಮತ್ತು ಸತ್ಸಂಗವನ್ನು ಮಾಡ ಬೇಕಾಗಿರುತ್ತದೆ. ಏಕೆಂದರೆ—ಮನುಷ್ಯನ ನೇತ್ರವು ವಿದ್ಯೆಯೇ ಆಗಿರುತ್ತದೆ. ವಿದ್ಯಾ—ಶಿಕ್ಷಣವಿಲ್ಲದೆ ಜ್ಞಾನವುಂಟಾಗುವುದಿಲ್ಲ. ಬಾಲ್ಯಾವಸ್ಥೆಯಿಂದ ಉತ್ತಮ ಶಿಕ್ಷಣವನ್ನು ಹೊಂದುವವರೇ ಮನುಷ್ಯರೂ, ವಿದ್ವಾಂಸರೂ ಆಗು

ತ್ತಾರೆ. ಯಾರಿಗೆ ದುಃಸಂಗವಿರುತ್ತದೋ, ಆವರು ದುಷ್ಟರೂ, ಪಾಪಿಗಳೂ, ಮಹಾ ಮೂರ್ಖರೂ ಆಗಿ ಮಹಾ ದುಃಖವನ್ನು ಹೊಂದುತ್ತಾರೆ. ಆದುದರಿಂದ "ಅರಿತವನೇ ಒಪ್ಪುವನು"—ಎಂದು, ಜ್ಞಾನವನ್ನು ವಿಶೇಷವೆಂದು ಹೇಳಿದ್ದಾರೆ.

ನ ವೇತ್ತಿ ಯೋ ಯಸ್ಯ ಗುಣಪ್ರಕರ್ಷಂ
ಸ ತಸ್ಯ ನಿಂದಾಂ ಸತತಂ ಕರೋತಿ।
ಯಥಾ ಕಿರಾತೀ ಕರಿಕುಂಭ ಜಾತಾ
ಮುಕ್ತಾಃ ಪರಿತ್ಯಜ್ಯ ಬಿಭರ್ತಿ ಗುಂಜಾಃ ॥

[ವೈ. ಚಾ. ಅ—೧೧; ಶ್ಲೋ—೧೬]

ಇದಾವನೋ ಕವಿಯ ಶ್ಲೋಕ. ಕಾಡು ಜನರಾದ ಭಿಲ್ಲರು ಆನೆಯ ಮುತ್ತುಗಳನ್ನು ಬಿಟ್ಟು, ಗುಲಗಂಜಿಯ ಹಾರವನ್ನು ಹಾಕಿಕೊಳ್ಳುವಂತೆ, ಯಾವನು ಯಾವುದರ ಗುಣವನ್ನರಿಯನೋ, ಅದನು ಸರ್ವದಾ ಅದನ್ನು ನಿಂದಿಸುತ್ತಾನೆ. ಅದೇ ರೀತಿ ಯಾವ ವುರುಷನು ವಿದ್ವಾಂಸನೂ, ಜ್ಞಾನಿಯೂ, ಧಾರ್ಮಿಕನೂ, ಸತ್ಪು ರುಷರ ಸಂಗಿಯೂ, ಯೋಗಿಯೂ, ಪುರುಷಾರ್ಥಿಯೂ, ಜಿತೇಂದ್ರಿ ಯನೂ, ಸುಶೀಲನೂ ಆಗಿರುತ್ತಾನೋ, ಅವನೇ ಧರ್ಮ, ಅರ್ಥ, ಕಾಮ ಮೋಕ್ಷಗಳನ್ನು ಗಳಿಸಿ ಈ ಜನ್ಮದಲ್ಲಿ ಮತ್ತು ಪರಜನ್ಮದಲ್ಲಿ ಸದಾ ಆನಂದದಲ್ಲಿರುತ್ತಾನೆ.

ಆರ್ಯಾವರ್ತನಿವಾಸಿಗಳಾದ ಜನರ ಮತಪ ವಿಷಯದಲ್ಲಿ ಇದನ್ನು ಸಂಕ್ಷೇಪವಾಗಿ ಬರೆದೆವು. ಇದರ ನಂತರ, ಸಿಕ್ಕಿರುವ ಆರ್ಯರಾಜರುಗಳ ಸ್ವಲ್ಪ ಮಟ್ಟಿನ ಇತಿಹಾಸವು, ಸಜ್ಜನರಿಗೆ ತಿಳಿಸುವುದಕ್ಕಾಗಿ ಪ್ರಕಾಶಿಸಲ್ಪಡುತ್ತದೆ.

ಈಗ ಶ್ರೀಮನ್ಮಹಾರಾಜಾ ಯುಧಿಷ್ಠಿರನಿಂದ ಹಿಡಿದು ಮಹಾರಾಜಾ ಯಶಪಾಲನವರೆಗಿನ ಆರ್ಯಾವರ್ತ ದೇಶೀಯ ರಾಜವಂಶದ ಸ್ವಲ್ಪಮಟ್ಟಿನ ಇತಿಹಾಸವನ್ನು ಬರಯುತ್ತೇವೆ. ಮತ್ತು ಶ್ರೀಮನ್ಮಹಾರಾಜಾ ಸ್ವಾಯಂಭವ ಮನುವಿನಿಂದ ಹಿಡಿದು ಮಹಾರಾಜಾ ಯುಧಿಷ್ಠಿರನ ವರಿಗಿನ ಇತಿಹಾಸವು ಮಹಾ

ಭಾರತ ಮೊದಲಾದುವುಗಳಲ್ಲಿ ಬರೆದೇ ಇದೆ ಮತ್ತು ಇದರಿಂದ ಸಜ್ಜನರಿಗೆ ಇತ್ತೀಚಿನ ಕೊಂಚ, ಇತಿಹಾಸದ ಸಂಗತಿ ವಿದಿತವಾಗುವುದು. ರಾಜಪುತ್ರಸ್ಥಾನ ದೇಶದ ಮೇವಾಡ ರಾಜ್ಯದ ಉದಯಪುರ—ಚಿತ್ತೋರ್ ಗಢದಲ್ಲಿ ಎಲ್ಲರಿಗೂ ಗೊತ್ತಿರುವ ಶ್ರೀನಾಥದ್ವಾರದಿಂದ ಹೊರಡುತ್ತಿದ್ದ ವಿದ್ಯಾರ್ಥೀ ಸಮ್ಮಿಲಿತವಾದ "ಹರಿಶ್ಚಂದ್ರ ಚಂದ್ರಿಕಾ" ಮತ್ತು "ಮೋಹನ ಚಂದ್ರಿಕಾ" ಎಂಬ ಪಾಕ್ಷಿಕ ಪತ್ರದಿಂದ ನಾವು ಈ ವಿಷಯದ ಅನುವಾದವನ್ನು ಮಾಡಿದ್ದೇವೆ. ಇದೇ ರೀತಿ ನಮ್ಮ ಆರ್ಯ ಸಜ್ಜನರು ಇತಿಹಾಸ ಮತ್ತು ವಿದ್ಯಾ ಪುಸ್ತಕಗಳ ಅನುಸಂಧಾನ ಮಾಡಿ ಪ್ರಕಾಶ ಪಡಿಸುವರಾದರೆ, ದೇಶಕ್ಕೆ ಬಹಳ ಲಾಭವುಂಟಾಗುವುದು. ಆ ಪತ್ರದ ಸಂಪಾದಕ ಮಹಾಶಯರು ತಮ್ಮ ಮಿತ್ರರಿಂದ ವಿಕ್ರಮ ಸಂವತ್ ೧೭೬೨ ರಲ್ಲಿ ಬರೆದ ಒಂದು ಪ್ರಾಚೀನ ಪುಸ್ತಕವನ್ನು ತೆಗೆದುಕೊಂಡು ತಮ್ಮ ಸಂವತ್ ೧೯೩೯ ರ ಮಾರ್ಗಶೀರ್ಷ ಶುಕ್ಲ ಪಕ್ಷದ ೧೯ ಮತ್ತು ೨೦ ನೆಯ ಕಿರಣಗಳಲ್ಲಿ, ಅಂದರೆ ಎರಡು ಪಾಕ್ಷಿಕ ಪತ್ರಗಳಲ್ಲಿ ಮುದ್ರಿಸಿದ್ದಾರೆ; ಅದನ್ನು ಕೆಳಗೆ ಬರೆದಿರುವಂತೆ ತಿಳಿಯಿರಿ:—

ಆರ್ಯಾವರ್ತದೇಶೀಯ ರಾಜವಂಶಾವಳಿ

ಇಂದ್ರಪ್ರಸ್ಥದಲ್ಲಿ ಆರ್ಯರುಗಳು ಶ್ರೀಮನ್ಮಹಾರಾಜ ಯಶಪಾಲನವರೆಗೆ ರಾಜ್ಯವಾಳಿದರು. ಅವರಲ್ಲಿ ಶ್ರೀಮನ್ಮಹಾರಾಜಾ ಯುಧಿಷ್ಠಿರನಿಂದ ಮಹಾರಾಜಾ ಯಶಪಾಲನವರೆಗಿನ ವಂಶ ಅಂದರೆ ಪೀಳಿಗೆಯಲ್ಲಿ ಸುಮಾರು ೧೨೪ ಜನ ರಾಜರು. ೪೧೫೭ ವರ್ಷ, ೯ ತಿಂಗಳು, ೧೪ ದಿನಗಳ ಸಮಯದಲ್ಲಿ ಆಗಿಹೋಗಿದ್ದಾರೆ. ಇವರುಗಳ ವಿವರಣೆ:—

ರಾಜರು	ವರ್ಷ	ಮಾಸ	ದಿನ
ಆರ್ಯರಾಜರು-೧೨೪	೪೧೫೭	೯	೧೪

ಶ್ರೀಮನ್ಮಹಾರಾಜಾ ಯುಧಿಷ್ಠಿರನಿಂದ ಮೊದಲಾದ ವಂಶ; ಸುಮಾರು ೩೦ ಪೀಳಿಗೆಗಳು; ೧೭೭೦ ವರ್ಷ, ೧೧ ತಿಂಗಳು, ೨೦ ದಿನ. ಇವರ ವಿಸ್ತಾರ:—

ಆರ್ಯರಾಜರು	ವರ್ಷ	ಮಾಸ	ದಿನ
೧. ರಾಜಾ ಯುಧಿಷ್ಠಿರ	೩೬	೮	೨೫
೨. ರಾಜಾ ಪರೀಕ್ಷಿತ	೬೦	೦	೦
೩. ರಾಜಾ ಜನಮೇಜಯ	೮೪	೭	೨೩
೪. ರಾಜಾ ಅಶ್ವಮೇಧ	೮೨	೮	೨೨
೫. ದ್ವಿತೀಯರಾಮ	೮೮	೨	೮
೬. ಛತ್ರಮಲ್ಲ	೮೧	೧೧	೨೭
೭ ಚಿತ್ರರಥ	೭೫	೩	೧೮
೮. ದುಷ್ಪಶೈಲ್ಯ	೭೫	೧೦	೨೪
೯. ರಾಜಾ ಉಗ್ರಸೇನ	೭೮	೭	೨೧
೧೦. ರಾಜಾ ಶೂರಸೇನ	೭೮	೭	೨೧
೧೧. ಭುವನಪತಿ	೬೯	೫	೫
೧೨. ರಣಜೇತ	೬೫	೧೦	೪
೧೩. ಋಕ್ಷಕ	೬೪	೭	೪
೧೪. ಸುಖದೇವ	೬೨	೦	೨೪
೧೫. ನರಹರಿದೇವ	೫೧	೧೦	೨
೧೬. ಸುಚಿರಥ	೪೨	೧೧	೨
೧೭. ಶೂರಸೇನ (ದ್ವಿ)	೫೮	೧೦	೮
೧೮. ಪರ್ವತಸೇನ	೫೫	೮	೧೦
೧೯. ಮೇಧಾವಿ	೫೨	೧೦	೧೦
೨೦. ಸೋನಚೀರ	೫೦	೮	೨೧
೨೧. ಭೀಮದೇವ	೪೭	೯	೨೦
೨೨. ನೃಹರಿದೇವ	೪೫	೧೧	೨೩
೨೩. ಪೂರ್ಣಮಲ್ಲ	೪೪	೮	೭
೨೪. ಕರದವೀ	೪೪	೧೦	೮
೨೫. ಅಲಮ್ಮಿಕ	೫೦	೧೧	೮
೨೬. ಉದಯಪಾಲ	೩೮	೯	೦
೨೭. ದುವನಮಲ್ಲ	೪೦	೧೦	೨೬

ಆರ್ಯರಾಜರು	ವರ್ಷ	ಮಾಸ	ದಿನ
೨೮. ದಮಾತ	೩೨	೦	೦
೨೯. ಭೀಮಪಾಲ	೫೮	೫	೮
೩೦. ಕ್ಷೇಮಕ	೪೮	೧೧	೨೧

ರಾಜಾಕ್ಷೇಮುಕನ ಪ್ರಧಾನನಾದ ವಿಶ್ರವನು ಕ್ಷೇಮುಕರಾಜನನ್ನು ಕೊಂದು ರಾಜ್ಯವಾಳಿದನು. ಪೀಳಿಗೆ-೧೪; ವರ್ಷ-೫೦೦; ಮಾಸ-೩; ದಿನ-೧೭. ಇವುಗಳ ವಿವರಣೆ :—

ಆರ್ಯರಾಜರು	ವರ್ಷ	ಮಾಸ	ದಿನ
೧. ವಿಶ್ರವಾ	೧೭	೩	೨೯
೨. ಪುರಸೇನೀ	೪೨	೮	೨೧
೩. ವೀರಸೇನೀ	೫೨	೧೦	೭
೪. ಅನಂಕಶಾಯೀ	೪೭	೮	೨೩
೫. ಹರಿಜಿತ್	೩೫	೯	೧೭
೬. ಪರಮಸೇನೀ	೪೪	೨	೨೩
೭. ಸುಖಪಾತಾಲ	೩೦	೨	೨೧
೮. ಕದ್ರುತ	೪೨	೯	೨೪
೯. ಸಜ್ಜು	೩೨	೨	೧೪
೧೦. ಅಮರಚೂಡ	೨೭	೩	೧೬
೧೧. ಅಮೀಪಾಲ	೨೨	೧೧	೨೫
೧೨. ದಶರಥ	೨೫	೪	೧೨
೧೩. ವೀರಸಾಲ	೩೧	೮	೧೧
೧೪. ವೀರಸಾಲಸೇನ	೪೭	೦	೧೪

ರಾಜಾ ವೀರಸಾಲ ಸೇನನನ್ನು ವೀರಮಹಾ ಪ್ರಧಾನನು ಕೊಂದು ರಾಜ್ಯವಾಳಿದನು. ಪೀಳಿಗೆ—೧೬. ವರ್ಷ—೪೪೫, ಮಾಸ ೫, ದಿನ—೩. ಇವುಗಳ ವಿಸ್ತಾರ:—

ಆರ್ಯರಾಜರು	ವರ್ಷ	ಮಾಸ	ದಿನ
೧. ರಾಜಾ ವೀರಮಹಾ	೩೫	೧೦	೮
೨. ಅಜಿತಸಿಂಹ	೨೭	೭	೧೯
೩. ಸರ್ವದತ್ತ	೨೮	೩	೧೦
೪. ಭುವನಪತಿ	೧೫	೪	೧೦
೫. ವೀರಸೇನ	೨೧	೨	೧೩
೬. ಮಹೀಪಾಲ	೪೦	೮	೭
೭. ಶತ್ರುಶಾಲ	೨೬	೪	೩
೮. ಸಂಘರಾಜ	೧೭	೨	೧೦
೯. ತೇಜಪಾಲ	೨೮	೧೧	೧೦
೧೦, ಮಾಣಿಕ್ ಚಂದ್	೩೭	೭	೨೧
೧೧. ಕಾಮಸೇನಿ	೪೨	೫	೧೦
೧೨. ಶತ್ರುಮರ್ದನ	೮	೧೧	೧೩
೧೩. ಜೀವನಲೋಕ	೨೮	೯	೧೭
೧೪. ಹರಿರಾವ್	೨೬	೧೦	೨೯
೧೫. ವೀರಸೇನ(ದ್ವಿ)	೩೫	೨	೨೦
೧೬. ಆದಿತ್ಯಕೇತು	೨೩	೧೧	೧೩

ಮಗಧ ದೇಶದ ರಾಜನಾದ ರಾಜಾ ಆದಿತ್ಯ ಕೇತುವನ್ನು ಪ್ರಯಾಗದ ರಾಜನಾದ "ಧಂಧರ" ನೆಂಬುವನು ಕೊಂದು ರಾಜ್ಯ ವಾಳಿದನು. ಪೀಳಿಗೆ—೯; ವರ್ಷ—೩೭೪, ಮಾಸ—೧೧, ದಿನ—೨೬. ಇವುಗಳ ವಿಸ್ತಾರ:—

ರಾಜರು	ವರ್ಷ	ಮಾಸ	ದಿನ
೧. ರಾಜಾ ಧಂಧರ	೪೨	೭	೨೪
೨. ಮಹರ್ಷಿ೯	೪೧	೨	೨೯
೩. ಸನರಚ್ಚೀ	೫೦	೧೦	೧೯
೪. ಮಹಾಯುದ್ಧ	೩೦	೩	೮
೫. ದುರನಾಥ	೨೮	೫	೨೫

ಆರ್ಯರಾಜರು	ವರ್ಷ	ಮಾಸ	ದಿನ
೬. ಜೀವನರಾಜ	೪೫	೨	೫
೭. ರುದ್ರಸೇನ	೪೭	೪	೨೮
೮. ಆರೀಲಕ	೫೨	೧೦	೮
೯. ರಾಜಪಾಲ	೩೬	೦	೦

ರಾಜಾ ರಾಜಪಾಲನನ್ನು ಸಾಮಂತ ಮಹಾನ್‌ಪಾಲನು ಕೊಂದು ರಾಜ್ಯವಾಳಿದನು. ಪೀಳಿಗೆ-೧, ವರ್ಷ-೧೪, ಮಾಸ-೦, ದಿನ-೦ ಇವರ ವಿಸ್ತಾರವಿಲ್ಲ.

ರಾಜಾ ಮಹಾನ್‌ಪಾಲನ ರಾಜ್ಯದ ಮೇಲೆ ರಾಜಾ ವಿಕ್ರಮಾದಿತ್ಯನು ಅವಂತಿಕೆ (ಉಜ್ಜಯಿನಿ) ಯಿಂದ ಯುದ್ಧಮಾಡಿ, ರಾಜಾ ಮಹಾನ್‌ಪಾಲನನ್ನು ಕೊಂದು ರಾಜ್ಯವಾಳಿದನು. ಪೀಳಿಗೆ-೧, ವರ್ಷ-೯೩, ಮಾಸ-೦, ದಿನ-೦ ಇವರ ವಿಸ್ತಾರವಿಲ್ಲ.

ರಾಜಾ ವಿಕ್ರಮಾದಿತ್ಯನನ್ನು ಶಾಲಿವಾಹನನ ರಾಜಮನೆತನದವನಾದ ಪೈಠಣದ ಸಮುದ್ರಪಾಲಯೋಗಿಯು ಕೊಂದು ರಾಜ್ಯವಾಳಿದನು. ಪೀಳಿಗೆ-೧೬, ವರ್ಷ-೩೭೨, ಮಾಸ-೪, ದಿನ-೨೭. ಇವುಗಳ ವಿಸ್ತಾರ:—

ಆರ್ಯರಾಜರು	ವರ್ಷ	ಮಾಸ	ದಿನ
೧. ಸಮುದ್ರಪಾಲ	೫೪	೨	೨೦
೨. ಚಂದ್ರಪಾಲ	೩೬	೫	೪
೩. ಸಾಹಾಯಪಾಲ	೧೧	೪	೧೧
೪. ದೇವಪಾಲ	೨೭	೧	೨೮
೫. ನರಸಿಂಹಪಾಲ	೧೪	೦	೨೦
೬. ಸಾಮಪಾಲ	೨೭	೧	೧೭
೭. ರಘುಪಾಲ	೨೨	೩	೨೫
೮. ಗೋವಿಂದಪಾಲ	೨೭	೧	೧೭
೯. ಅಮೃತಪಾಲ	೩೬	೧೦	೧೩
೧೦. ಬಲೀಪಾಲ	೧೨	೫	೨೭

ಆರ್ಯರಾಜರು	ವರ್ಷ	ಮಾಸ	ದಿನ
೧೧. ಮಹೀಪಾಲ	೧೩	೮	೪
೧೨. ಹರೀಪಾಲ	೧೪	೮	೪
೧೩. ಸೀಸಪಾಲ*	೧೧	೧೦	೧೩
೧೪. ಮದನಪಾಲ	೧೭	೧೦	೧೯
೧೫. ಕರ್ಮಪಾಲ	೧೬	೨	೨
೧೬. ವಿಕ್ರಮಪಾಲ	೨೪	೧೧	೧೪

ರಾಜಾವಿಕ್ರಮಪಾಲನು ಪಶ್ಚಿಮ ದಿಕ್ಕಿನ ರಾಜನಾದ ಮಲುಖ ಚಂದ್ರ ಬೋಹರಾ ಎಂಬುವನ ಮೇಲೆ ಧಾಳಿಯಿಟ್ಟು ರಂಗದಲ್ಲಿ ಹೋರಾಡಿದನು. ಈ ಯುದ್ಧದಲ್ಲಿ ಮಲುಖಚಂದ್ರನು ವಿಕ್ರಮಪಾಲನನ್ನು ಕೊಂದು ಇಂದ್ರಪ್ರಸ್ಥದ ರಾಜ್ಯವನ್ನಾಳಿದನು. ಪೀಳಿಗೆ—೧೦, ವರ್ಷ ೧೯೧, ಮಾಸ ೧, ದಿನ ೧೬, ಇವುಗಳ ವಿಸ್ತಾರ :—

ರಾಜರು	ವರ್ಷ	ಮಾಸ	ದಿನ
೧. ಮಲುಖಚಂದ್ರ	೫೪	೨	೧೦
೨. ವಿಕ್ರಮಚಂದ	೧೨	೭	೧೨
೩. ಅಮೀನಚಂದ*	೧೦	೦	೫
೪. ರಾಮಚಂದ	೧೩	೧೧	೮
೫. ಹರೀಚಂದ	೧೪	೯	೨೪
೬. ಕಲ್ಯಾಣಚಂದ	೧೦	೫	೪
೭. ಭೀಮಚಂದ	೧೬	೨	೯
೮. ಲೋವಚಂದ	೨೬	೩	೨೨
೯. ಗೋವಿಂದಚಂದ	೩೧	೭	೧೨
೧೦. ರಾಣೀ ಪದ್ಮಾವತೀ†	೧	೦	೦

ರಾಣೀ ಪದ್ಮಾವತಿಯು ತೀರಿಹೋದಳು. ಇವಳಿಗೆ ಮಗನೂ

---

* ಒಂದು ಇತಿಹಾಸದಲ್ಲಿ ' ಭೀಮಪಾಲ ' ಎಂದೂ ಬರೆದಿದೆ.

* ಈತನ ಹೆಸರನ್ನು ಒಂದೆಡೆ ' ಮಾನಕಚಂದ ' ಎಂದೂ ಬರೆದಿದೆ.

† ಈ ಪದ್ಮಾವತಿಯು ಗೋವಿಂದಚಂದನ ರಾಣಿಯಾಗಿದ್ದಳು.

ಕೂಡ ಯಾರೂ ಇರಲಿಲ್ಲ. ಆದುದರಿಂದ ಎಲ್ಲಾ ಮುತ್ಸದ್ದಿಗಳೂ ಸಮಾಲೋಚನೆ ಮಾಡಿ, ಹರಿಪ್ರೇಮ ವೈರಾಗಿಯನ್ನು ಸಿಂಹಾಸನದ ಮೇಲೆ ಕೂಡಿಸಿ, ಮುತ್ಸದ್ದಿಗಳು ಆಳತೊಡಗಿದರು. ಪೀಳಿಗೆ-೪; ವರ್ಷ-೫೦, ದಿನ-೨೧. ಹರಿಪ್ರೇಮನ ವಿಸ್ತಾರ:—

ಆರ್ಯರಾಜರು	ವರ್ಷ	ಮಾಸ	ದಿನ
೧. ಹರಿಪ್ರೇಮ	೭	೫	೧೬
೨. ಗೋವಿಂದ ಪ್ರೇಮ	೨೦	೨	೮
೩. ಗೋಪಾಲ ಪ್ರೇಮ	೧೫	೭	೨೮
೪. ಮಹಾ ಬಾಹು	೬	೮	೨೯

ರಾಜಾ ಮಹಾ ಬಾಹುವು ರಾಜ್ಯವನ್ನು ಬಿಟ್ಟು ಕಾಡಿನಲ್ಲಿ ತಪಸ್ಸನ್ನು ಮಾಡಲು ಹೋದನು. ಇದನ್ನು ಬಂಗಾಳದ ರಾಜನಾದ ಆಧಿಸೇನನು ಕೇಳಿ, ಇಂದ್ರಪ್ರಸ್ಥಕ್ಕೆ ಬಂದು ತಾನು ರಾಜ್ಯವಾಳ ತೊಡಗಿದನು. ಪೀಳಿಗೆ—೧೨; ವರ್ಷ—೧೫೧, ಮಾಸ—೧೧, ದಿನ—೨. ಇವುಗಳ ವಿಸ್ತಾರ:—

ಆರ್ಯರಾಜರು	ವರ್ಷ	ಮಾಸ	ದಿನ
೧. ರಾಜಾ ಆಧೀಸೇನ	೧೪	೫	೨೧
೨. ವಿಲಾವಲ ಸೇನ	೧೨	೪	೨
೩. ಕೇಶವ ಸೇನ	೧೫	೭	೧೨
೪. ಮಾಧವ ಸೇನ	೧೨	೪	೨
೫. ಮಯೂರ ಸೇನ	೨೦	೧೧	೨೭
೬. ಭೀಮ ಸೇನ	೫	೧೦	೯
೭. ಕಲ್ಯಾಣಸೇನ	೪	೪	೨೧
೮. ಹರೀಸೇನ	೧೨	೦	೨೫
೯. ಕ್ಷೇಮಸೇನ	೪	೧೧	೧೫
೧೦. ನಾರಾಯಣಸೇನ	೨	೨	೨೯
೧೧. ಲಕ್ಷ್ಮೀಸೇನ	೨೬	೧೦	೦
೧೨. ದಾಮೋದರಸೇನ	೧೧	೫	೧೯

ರಾಜಾದಾಮೋದರಸೇನನು ತನ್ನ ರಾಜಮನೆತನದವರಿಗೆ ಬಹಳ ದುಃಖವನ್ನಿತ್ತನು. ಆದುದರಿಂದ ರಾಜಮನೆತನದ ದೀಪಸಿಂಹನು ಸೈನ್ಯಕೂಡಿಸಿ, ರಾಜನ ಸಂಗಡ ಯುದ್ಧಮಾಡಿದನು. ಆ ಯುದ್ಧದಲ್ಲಿ ರಾಜನನ್ನು ಕೊಂದು ದೀಪಸಿಂಹನು ತಾನೇ ರಾಜ್ಯವಾಳಹತ್ತಿದನು. ಪೀಳಿಗೆ ೬; ವರ್ಷ ೧೦೭; ಮಾಸ ೬; ದಿನ ೨೨. ಇವುಗಳ ವಿಸ್ತಾರ:—

ಆರ್ಕರಾಜರು	ವರ್ಷ	ಮಾಸ	ದಿನ
೧. ದೀಪಸಿಂಹ	೧೭	೧	೨೬
೨. ರಾಜಸಿಂಹ	೧೪	೫	೦
೩. ರಣಸಿಂಹ	೯	೮	೧೧
೪. ನರಸಿಂಹ	೪೫	೦	೧೫
೫. ಹರಿಸಿಂಹ	೧೩	೨	೨೯
೬. ಜೀವನಸಿಂಹ	೮	೦	೧

ರಾಜಾ ಜೀವನಸಿಂಹನು ಯಾವುದೋ ಕಾರಣದಿಂದ ತನ್ನ ಸಮಸ್ತ ಸೈನ್ಯವನ್ನೂ ಉತ್ತರದಿಕ್ಕಿಗೆ ಕಳುಹಿಸಿಬಿಟ್ಟನು. ವೈರಾಟದ ರಾಜನಾದ ಪೃಥ್ವೀರಾಜ ಚೌಹಾನನು ಈ ಸಮಾಚಾರವನ್ನು ಕೇಳಿ ಜೀವನಸಿಂಹನ ಮೇಲೆ ಧಾಳಿಯಿಟ್ಟು ಬಂದನು. ಮತ್ತು ಯುದ್ಧದಲ್ಲಿ ಜೀವನಸಿಂಹನನ್ನು ಕೊಂದು ಇಂದ್ರಪ್ರಸ್ಥರಾಜ್ಯವನ್ನಾಳಿದನು.* ಪೀಳಿಗೆ–೫, ವರ್ಷ–೮೬, ದಿನ–೨೦. ಇವುಗಳ ವಿಸ್ತಾರ:—

---

* ಇದರ ಮುಂದಕ್ಕೆ ಬೀರೆ ಇತಿಹಾಸದಲ್ಲಿ ಹೀಗೆ ಬರೆದಿದೆ:—ಮಹಾರಾಜ ಪೃಥ್ವೀರಾಜನ ಮೇಲೆ ಸುಲ್ತಾನ್ ಶಹಾಬುದ್ದೀನ್ ಗೋರಿಯು ಧಾಳಿಯಿಟ್ಟು ಬಂದನು ಮತ್ತು ಅನೇಕ ಸಾರಿ ಸೋತು ಹಿಂದಿರುಗಿದನು. ಕೊನೆಗೆ ಸಂವತ್ ೧೨೪೯ ರಲ್ಲಿ ಪಾರಸ್ಪರಿಕ ಒಡಕಿನ ಕಾರಣದಿಂದ, ಮಹಾರಾಜ ಪೃಥ್ವೀರಾಜನನ್ನು ಗೆದ್ದು, ಕುರುಡನನ್ನಾಗಿ ಮಾಡಿ, ತನ್ನ ದೇಶಕ್ಕೆ ಕರೆದುಕೊಂಡು ಹೋದನು. ಅನಂತರ ದಿಲ್ಲಿಯ (ಇಂದ್ರಪ್ರಸ್ಥದ) ರಾಜ್ಯವನ್ನು ತಾನೇ ಆಳತೊಡಗಿದನು. ಮುಸಲ್ಮಾನರ ರಾಜ್ಯ ೪೫ ಪೀಳಿಗೆ ಮತ್ತು ೬೧೩ ವರ್ಷಗಳವರೆಗೆ ಇದ್ದಿತು.

ರಾಜರು	ವರ್ಷ	ಮಾಸ	ದಿನ
೧. ಪೃಥ್ವೀರಾಜ	೧೨	೨	೧೯
೨. ಅಭಯಪಾಲ	೧೪	೫	೧೭
೩. ದುರ್ಜನಪಾಲ	೧೧	೪	೧೪
೪. ಉದಯಪಾಲ	೧೧	೭	೩
೫. ಯಶಪಾಲ	೩೯	೪	೨೭

ರಾಜಾ ಯಶಪಾಲನ ಮೇಲೆ ಸುಲ್ತಾನ್ ಶಹಾಬುದ್ದೀನ್ ಗೋರಿಯು ಗಜನೀಗಢದಿಂದ ಧಾಳಿಯಿಟ್ಟು ಬಂದನು ಮತ್ತು ರಾಜಾ ಯಶಪಾಲನನ್ನು ಸಂವತ್ ೧೨೪೯ ರಲ್ಲಿ ಹಿಡಿದು ಪ್ರಯಾಗದ ಕೋಟೆಯಲ್ಲಿ ಸೆರೆಯಿಟ್ಟನು. ಆಮೇಲೆ ಇಂದ್ರಪ್ರಸ್ಥ ಅಂದರೆ ದಿಲ್ಲಿಯ ರಾಜ್ಯವನ್ನು ತಾನು (ಸುಲ್ತಾನ್ ಶಹಾಬುದ್ದೀನ್) ಆಳತೊಡಗಿದನು. ಪೀಳಿಗೆ–೫೩, ವರ್ಷ–೭೫೪, ಮಾಸ–೧, ದಿನ–೧೭. ಇವುಗಳ ವಿಸ್ತಾರವನ್ನು ಬಹಳ ಇತಿಹಾಸ ಪುಸ್ತಕಗಳಲ್ಲಿ ಬರೆದಿದ್ದಾರೆ; ಆದುದರಿಂದ ಇಲ್ಲಿ ಬರೆಯಲಿಲ್ಲ. ಇದರನಂತರ ಬೌದ್ಧ–ಜೈನ ಮತ ವಿಷಯದಲ್ಲಿ ಬರೆಯಲಾಗುವುದು.

ಇತಿ ಶ್ರೀಮದ್ದಯಾನಂದಸರಸ್ವತೀಸ್ವಾಮಿಕೃತೇ
ಸತ್ಯಾರ್ಥಪ್ರಕಾಶೇ ಸುಭಾಷಾವಿಭೂಷಿತೇ
ಆರ್ಯಾವರ್ತೀಯಮತಖಂಡನಮಂಡನ ವಿಷಯೇ
ಏಕಾದಶಸಮುಲ್ಲಾಸಃ ಸಂಪೂರ್ಣಃ

ಅನುಭೂಮಿಕಾ (೨)

ಆರ್ಯಾವರ್ತದ ಮನುಷ್ಯರಲ್ಲಿ ಯಾವಾಗ, ಸತ್ಯಾಸತ್ಯದ ಯಥಾವತ್ ನಿರ್ಣಯಮಾಡುವ ವೇದವಿದ್ಯೆಯು ಹೋಗಿ, ಅವಿದ್ಯೆಯು ಹರಡಿ, ಮತಮತಾಂತರಗಳು ಎದ್ದು ನಿಂತುಕೊಂಡವೋ, ಆವಾಗ ಇದೇ ಜೈನ ಆದಿ ವಿದ್ಯಾವಿರುದ್ಧ ಮತಪ್ರಚಾರದ ಕಾರಣವುಂಟಾಯಿತು; ಯಾಕೆಂದರೆ, ವಾಲ್ಮೀಕೀಯದಲ್ಲಿಯೂ, ಮಹಾಭಾರತದಲ್ಲಿಯೂ, ಜೈನಿಯರ ಹೆಸರು ಕೂಡ ಬರೆದಿಲ್ಲ; ಮತ್ತು ಜೈನಿಗಳ ಗ್ರಂಥಗಳಲ್ಲಿ ವಾಲ್ಮೀಕೀಯ ಮತ್ತು ಭಾರತಕಥಿತ ರಾಮಕೃಷ್ಣಾದಿಗಳ ಗಾಥೆಯು ಬಹಳ ವಿಸ್ತಾರಪೂರ್ವಕ ಬರೆಯಲ್ಪಟ್ಟಿದೆ. ಆದುದರಿಂದ ಈ ಮತವು, ಇವುಗಳ ನಂತರ ಪ್ರಚಲಿತವಾಯಿತೆಂಬೀ ಸಿದ್ಧಾಂತವು ಆಗುತ್ತದೆ; ಏಕೆಂದರೆ, ಜೈನಿಯರು ಹೇಳಿಕೊಳ್ಳುವಂತೆ ತಮ್ಮ ಮತವು ಬಹಳ ಪ್ರಾಚೀನವಾಗಿದ್ದಿದ್ದರೆ, ಅವರ ಕಥೆಯು ವಾಲ್ಮೀಕೀಯಾದಿ ಗ್ರಂಥಗಳಲ್ಲಿ ಅವಶ್ಯವಾಗಿರುತ್ತಿತ್ತು. ಆದುದರಿಂದ ಜೈನಮತವು ಈ ಗ್ರಂಥಗಳ ನಂತರ ಪ್ರಚಲಿತವಾಗಿದೆ. ಜೈನಿಯರ ಗ್ರಂಥಗಳಿಂದ ಕಥೆಗಳನ್ನು ತೆಗೆಮುಕೊಂಡು ವಾಲ್ಮೀಕೀಯಾದಿಗ್ರಂಥಗಳು ನಿರ್ಮಿಸಲ್ಪಟ್ಟಿರಬಹುದು ಎಂದು ಯಾರಾದರೂ ಹೇಳಿದರೆ, " ವಾಲ್ಮೀಕೀಯಾದಿಗಳಲ್ಲಿ ನಿಮ್ಮ ಗ್ರಂಥಗಳ ಹೆಸರನ್ನು ಬರೆದಿರುವುದು ಕೂಡ ಏಕಿಲ್ಲ? ನಿಮ್ಮ ಗ್ರಂಥಗಳಲ್ಲಿ ಏಕಿದೆ? ತಂದೆಯ ಜನ್ಮದ ದರ್ಶನವನ್ನು ಮಗನು ಮಾಡಬಲ್ಲನೊ? ಯಾವಾಗಲೂ ಇಲ್ಲ " ಎಂದು ಕೇಳಬೇಕು. ಇದರಿಂದ, ಜೈನಬೌದ್ಧಮತವು ಶೈವಶಾಕ್ತಾದಿಮತಗಳ ನಂತರ ಪ್ರಚಲಿತವಾಗಿದೆ ಎಂಬಿದೇ ಸಿದ್ಧವಾಗುತ್ತದೆ. ಈಗ ಈ ಹನ್ನೆರಡನೆಯ ಸಮುಲ್ಲಾದಲ್ಲಿ ಯಾವ ಯಾವದು ಜೈನಿಗಳ ಮತವಿಷಯದಲ್ಲಿ ಬರೆಯಲ್ಪಟ್ಟಿದೆಯೋ ಅದದು ಅವರ ಗ್ರಂಥಗಳ ಹೆಸರು ಮುಂತಾದುವುಗಳ ಪೂರ್ವಕ ಬರೆಯಲ್ಪಟ್ಟಿದೆ. ಇದರಲ್ಲಿ ಜೈನಿಗಳು ನೊಂದುಕೊಳ್ಳಬಾರದು. ಯಾಕೆಂದರೆ, ಅವರ ಮತವಿಷಯದಲ್ಲಿ ನಾವು ಯಾವದನ್ನು ಬರೆದಿದ್ದೇವೆಯೋ ಅದು ಕೇವಲ ಸತ್ಯಾಸತ್ಯ ನಿರ್ಣಯಾರ್ಥವಾಗಿದೆ.

ವಿರೋಧ ಅಥವಾ ಹಾನಿಯನ್ನುಂಟುಮಾಡುವದಕ್ಕಲ್ಲ. ಈ ಲೇಖನವನ್ನು ಜೈನೀ, ಬೌದ್ಧ ಅಥವಾ ಇತರರು ಯಾವಾಗ ನೋಡುವರೋ ಆವಾಗ ಎಲ್ಲರಿಗೂ ಸತ್ಯಾಸತ್ಯ ನಿರ್ಣಯದಲ್ಲಿ ವಿಚಾರವೂ, ಲೇಖ ಮಾಡುವುದರಲ್ಲಿ ಸಮಯವೂ ಸಿಕ್ಕುವುದು ಮತ್ತು ಜ್ಞಾನವುಂಟಾಗುವುದು. ವಾದಿ ಮತ್ತು ಪ್ರತಿವಾದಿಗಳಾಗಿ ಯಾವಾಗಿನವರಿಗೆ ಪ್ರೀತಿಯಿಂದ ವಾದವನ್ನಾಗಲೀ ಲೇಖವನ್ನಾಗಲಿ ಮಾಡುವುದಿಲ್ಲವೋ ಆವಾಗಿನವರೆಗೆ ಸತ್ಯಾಸತ್ಯದ ನಿರ್ಣಯವಾಗಲಾರದು. ಯಾವಾಗ ವಿದ್ವಾಂಸರಲ್ಲಿ ಸತ್ಯಾಸತ್ಯದ ನಿರ್ಣಯವುಂಟಾಗುವುದಿಲ್ಲವೊ ಆವಾಗಲೇ ಅವಿದ್ವಾಂಸರು ಅಂಧಕಾರದಲ್ಲಿ ಬಿದ್ದು ಬಹಳ ದುಃಖವನ್ನನುಭವಿಸಬೇಕಾಗಿ ಬರುತ್ತದೆ. ಆದುದರಿಂದ ಸತ್ಯದ ಜಯ ಮತ್ತು ಅಸತ್ಯದ ಕ್ಷಯಾರ್ಥವಾಗಿ, ಮೈತ್ರಿಯಿಂದ ವಾದ ಮಾಡುವುದು ಅಥವಾ ಲೇಖ ಬರೆಯುವುದು ನಮ್ಮ ಮನುಷ್ಯಜಾತಿಯ ಮುಖ್ಯ ಕೆಲಸವು. ಹೀಗಿಲ್ಲದಿದ್ದರೆ ಮನುಷ್ಯನ ಉನ್ನತಿಯು ಯಾವಾಗಲೂ ಆಗಲಾರದು. ಮತ್ತು ಬೌದ್ಧ ಜೈನಮತದ ವಿಷಯವು ಇವರಿಗಲ್ಲದೆ ಇತರ ಮತದವರಿಗೂ ಅಪೂರ್ವ ಲಾಭ ಮತ್ತು ಜ್ಞಾನವನ್ನುಂಟುಮಾಡುವುದಾಗುವುದು; ಯಾಕೆಂದರೆ ಇವರು ತಮ್ಮ ಪುಸ್ತಕಗಳನ್ನು ಅನ್ಯಮತದವನಾದ ಯಾವನಿಗೂ, ನೋಡಲೂ ಓದಲೂ ಅಥವಾ ಬರೆಯಲೂ ಕೊಡುವುದಿಲ್ಲ. ಬಹಳ ಪರಿಶ್ರಮದಿಂದ ನನ್ನ, ಮತ್ತು ವಿಶೇಷವಾಗಿ ಮುಂಬಯಿ ಆರ್ಯಸಮಾಜದ ಮಂತ್ರಿ ಸೇಠ್ ಸೇವಕಲಾಲ್ ಕೃಷ್ಣದಾಸರವರ, ಪುರುಷಾರ್ಥದಿಂದ ಗ್ರಂಥಗಳು ಪ್ರಾಪ್ತವಾಗಿವೆ. ಮತ್ತು ಕಾಶಿಯಲ್ಲಿರುವ 'ಜೈನಪ್ರಭಾಕರ' ಯಂತ್ರಾಲಯದಲ್ಲಿ ಮುದ್ರಿತವಾದುದರಿಂದಲೂ, ಮತ್ತು ಮುಂಬಯಿಯಲ್ಲಿ 'ಪ್ರಕರಣರತ್ನಾಕರ'ವೆಂಬ ಗ್ರಂಥವು ಮುದ್ರಿತವಾದುದರಿಂದಲೂ, ಎಲ್ಲರಿಗೂ ಜೈನಿಗಳ ಮತವನ್ನು ನೋಡುವುದು ಸಹಜವಾಯಿತು. ಭಲಾ! ತಮ್ಮ ಮತದ ಪುಸ್ತಕವನ್ನು ತಾವೇ ನೋಡಿಕೊಳ್ಳುವುದೂ ಇತರರಿಗೆ ತೋರಿಸದಿರುವುದೂ ಯಾವ ವಿದ್ವಾಂಸರ ಮಾತು? ಇದರಿಂದಲೇ ಈ ಗ್ರಂಥಗಳನ್ನು ಬರೆಯುವವರಿಗೆ ಇವುಗಳಲ್ಲಿ ಅಸಂಭವವಾದ ಮಾತುಗಳಿರುವುವೆಂದೂ, ಇವುಗಳನ್ನು ಇತರ ಮತದವರು ನೋಡಿದರೆ ಖಂಡನೆಮಾಡುವರೆಂದೂ ಮತ್ತು

ನಮ್ಮ ಮತದವರು ಇತರರ ಗ್ರಂಥಗಳನ್ನು ನೋಡಿದರೆ ಈ ಮತದಲ್ಲಿ ಶ್ರದ್ಧೆಯಿರುವದಿಲ್ಲವೆಂದೂ ಮೊದಲೇ ಶಂಕೆಯು ಇದ್ದಿತು ಎಂದು ವಿದಿತವಾಗುತ್ತದೆ. ಅಸ್ತು. ಏನಾದರೂ ಆಗಲಿ, ತಮ್ಮ ದೋಷಗಳೇನೋ ತಿಳಿಯುವದಿಲ್ಲ. ಆದರೆ ಇತರರ ದೋಷಗಳನ್ನು ನೋಡುವುದರಲ್ಲಿ ಅತ್ಯುದ್ಯುಕ್ತರಾಗಿ ಇರುವಂತಹ ಮನುಷ್ಯರು ಬಹಳ ಇರುತ್ತಾರೆ. ಇದು ನ್ಯಾಯವಲ್ಲ. ಏಕೆಂದರೆ, ಮೊದಲು ತಮ್ಮ ದೋಷಗಳನ್ನು ನೋಡಿ, ತೆಗೆದುಹಾಕಿ, ನಂತರ ಇತರರ ದೋಷಗಳಿಗೆ ದೃಷ್ಟಿಕೊಟ್ಟು ತೆಗೆದುಹಾಕಬೇಕು. ಈಗ ಈ ಬೌದ್ಧ ಜೈನಿಗಳ ಮತದ ವಿಷಯಗಳನ್ನು ಎಲ್ಲಾ ಸಜ್ಜನರ ಮುಂದೆಯೂ ಇಡುತ್ತೇನೆ. ಹೇಗಿದೆಯೋ ಹಾಗೆ ವಿಚಾರಮಾಡಲಿ.

ಕಿಮುಧಿಕಲೇಖೇನ ಬುದ್ಧಿಮುದ್ವರ್ಯೇಷು

॥ ಓಂ ॥

ಅಥ ದ್ವಾದಶ ಸಮುಲ್ಲಾಸಾರಂಭಃ

ಅಥ ನಾಸ್ತಿಕಮತಾಂತರ್ಗತ ಚಾರ್ವಾಕ ಬೌದ್ಧಜೈನ
ಮತ ಖಂಡನಮಂಡನ ವಿಷಯಾನ್ ವ್ಯಾಖ್ಯಾಸ್ಯಾಮಃ ॥

ಯಾವನೋ ಬೃಹಸ್ಪತಿಯೆಂಬೊಬ್ಬ ಪುರುಷನಿದ್ದನು. ಅವನು ವೇದ, ಈಶ್ವರ ಮತ್ತು ಯಜ್ಞಾದಿ ಉತ್ತಮ ಕರ್ಮಗಳನ್ನು ಕೂಡ ನಂಬುತ್ತಿರಲಿಲ್ಲ ಅವನ ಮತವನ್ನು ನೋಡಿರಿ—

ಯಾವಜ್ಜೀವಂ ಸುಖಂ ಜೀವೇನ್ನಾಸ್ತಿ ಮೃತ್ಯೋರಗೋಚರಃ।
ಭಸ್ಮೀಭೂತಸ್ಯ ದೇಹಸ್ಯ ಪುನರಾಗಮನಂ ಕುತಃ ॥

ಮನುಷ್ಯ ಮೊದಲಾದ ಯಾವ ಪ್ರಾಣಿಯೂ ಮೃತ್ಯುವಿಗೆ ಅಗೋಚರವಾಗಿರಲಾರದು. ಅಂದರೆ ಪ್ರತಿಯೊಬ್ಬನೂ ಸಾಯಲೇ ಬೇಕಾಗುವುದು. 'ಜೀವನದಿಂದಿರುವತನಕ ಸುಖವಾಗಿರಬೇಕು. ಧರ್ಮಾಚರಣದಿಂದ ಕಷ್ಟವಾಗುತ್ತದೆ. ಧರ್ಮವನ್ನು ಬಿಟ್ಟರೆ ಪುನರ್ಜನ್ಮದಲ್ಲಿ ಬಹಳ ದುಃಖವನ್ನನುಭವಿಸಬೇಕಾದೀತು—ಎಂದು ಯಾರಾದರೂ ಹೇಳಿದರೆ ಅವರಿಗೆ ಚಾರ್ವಾಕನು ಹೀಗೆ ಉತ್ತರವನ್ನೀಯುತ್ತಾನೆ—ತಿಳುವಳಿಕೆಯಿಲ್ಲದ ತಮ್ಮ! ಸತ್ತ ಬಳಿಕ ತಿಂದು ಕುಡಿದು ಬೆಳೆದ ಶರೀರವು ಭಸ್ಮವಾಗಿಹೋಗುತ್ತದೆ. ಅದು ಪುನಃ ಜಗತ್ತಿಗೆ ಬರಲಾರದು. ಆದುದರಿಂದ ಸಾಧ್ಯವಾದ ರೀತಿಯಲ್ಲಿ ಆನಂದದಿಂದಿರು. ಲೋಕದಲ್ಲಿ ನೀತಿಯಿಂದ ವರ್ತಿಸು. ಐಶ್ವರ್ಯವನ್ನು ಹೆಚ್ಚಿಸಿ ಅದರಿಂದ ಬಯಸುವ ಭೋಗಗಳನ್ನುಣ್ಣು. ಈ ಲೋಕವನ್ನು ಬಿಟ್ಟು ಪರಲೋಕ ವಾವುದೂ ಇಲ್ಲವೆಂದು ತಿಳಿ. ನೋಡು! ಪೃಥ್ವಿ, ಜಲ, ಅಗ್ನಿ ಮತ್ತು ವಾಯು ಈ ನಾಲ್ಕು ತತ್ವಗಳ ಪರಿಣಾಮವಾಗಿ ಈ ಶರೀರವಾಗಿದೆ. ಇದರಲ್ಲಿ ಆ ತತ್ವಗಳ ಯೋಗದಿಂದಲೇ ಚೈತನ್ಯವು ಹುಟ್ಟುತ್ತದೆ. ಅಮಲು

ಪದಾರ್ಥಗಳನ್ನು ತಿನ್ನುವುದರಿಂದಾಗಲೀ, ಕುಡಿಯುವುದರಿಂದಾಗಲಿ, ಅಮಲೇರುವಂತೆ, ಜೀವನು ಶರೀರದೊಂದಿಗೆ ಹುಟ್ಟಿ ಶರೀರದ ನಾಶದೊಂದಿಗೇ ನಾಶಹೊಂದುತ್ತಾನೆ. ಪುನಃ ಪಾಪಪುಣ್ಯಗಳ ಫಲ ಸಿಕ್ಕುವುದಾದರೂ ಯಾರಿಗೆ?

ತಚ್ಚೈತನ್ಯವಿಶಿಷ್ಟದೇಹ ಏವ ಆತ್ಮಾ ದೇಹಾತಿರಿಕ್ತ ಆತ್ಮನಿ ಪ್ರಮಾಣಾಭಾವಾತ್ ॥

ಈ ಶರೀರದಲ್ಲಿ ನಾಲ್ಕು ತತ್ವಗಳ ಸಂಯೋಗದಿಂದ ಜೀವಾತ್ಮನು ಹುಟ್ಟಿ ಅವುಗಳ ವಿಯೋಗದೊಂದಿಗೇ ನಾಶಹೊಂದುತ್ತಾನೆ. ಏಕೆಂದರೆ– ಸತ್ತನಂತರ ಯಾವ ಜೀವವೂ ಪ್ರತ್ಯಕ್ಷನಾಗುವುದಿಲ್ಲ. ನಾವು ಪ್ರತ್ಯಕ್ಷವೊಂದನ್ನೇ ನಂಬುತ್ತೇವೆ. ಏಕೆಂದರೆ ಪ್ರತ್ಯಕ್ಷವಿಲ್ಲದೆ ಅನುಮಾನಾದಿಗಳು ಆಗುವುದೇ ಇಲ್ಲ. ಆದುದರಿಂದ ಮುಖ್ಯವಾದ ಪ್ರತ್ಯಕ್ಷದ ಎದುರಿನಲ್ಲಿ ಅನುಮಾನಾದಿಗಳು ಗೌಣವಾಗಿರುವುದರಿಂದ ಇವುಗಳನ್ನು ಗ್ರಹಣಮಾಡುವುದಿಲ್ಲ. ಸುಂದರಿಯಾದ ಸ್ತ್ರೀಯ ಆಲಿಂಗನದಿಂದಾಗುವ ಆನಂದವು ಪುರುಷಾರ್ಥದ ಫಲ.

ಉತ್ತರ:—ಈ ಪೃಥ್ವಿ ಮೊದಲಾದ ಭೂತಗಳು. ಜಡಗಳು ಅವುಗಳಿಂದ ಚೇತನವೆಂದಿಗೂ ಹುಟ್ಟಲಾರದು. ಈಗ ತಾಯಿ ತಂದೆಗಳ ಸಂಯೋಗದಿಂದ ಶರೀರವು ಉತ್ಪನ್ನವಾಗುವಂತೆಯೇ ಆದಿಸೃಷ್ಟಿಯಲ್ಲಿ ಮನುಷ್ಯಾದಿಗಳ ಶರೀರಗಳ ಆಕೃತಿಯು ಕರ್ತೃವಾದ ಪರಮಾತ್ಮನ ಹೊರತು ಎಂದಿಗೂ ಆಗಲಾರದು. ಅಮಲಿನ ರೀತಿಯಲ್ಲಿ ಚೇತನದ ಉತ್ಪತ್ತಿವಿನಾಶಗಳಾಗಲಾರವು. ಏಕೆಂದರೆ ಅಮಲಾಗುವುದು ಚೇತನ ವಸ್ತುವಿಗೇ ಹೊರತು ಜಡವಸ್ತುವಿಗಲ್ಲ. ಪದಾರ್ಥಗಳು ನಷ್ಟ ಅಂದರೆ ಅದೃಷ್ಟವಾಗುತ್ತವೆಯೇ ಹೊರತು ಯಾವುದರ ಅಭಾವವೂ ಆಗುವುದಿಲ್ಲ. ಇದೇ ರೀತಿ ಅದೃಶ್ಯನಾಗಿರುವುದರಿಂದ ಜೀವಾತ್ಮನ ಅಭಾವವೆಂದು ತಿಳಿಯಬಾರದು. ಜೀವಾತ್ಮನು ದೇಹದೊಡನಿರುವಾಗಲೇ ಪ್ರಕಟನಾಗುತ್ತಾನೆ. ಅವನು ಶರೀರ ಬಿಟ್ಟಾಗ ಮರಣ ಹೊಂದಿದ ಈ ಶರೀರವು ಮೊದಲಿನಂತೆ ಚೈತನ್ಯ ಯುಕ್ತವಾಗಿರುವುದಿಲ್ಲ. ಈ ಮಾತನ್ನೇ ಬೃಹದಾರಣ್ಯಕದಲ್ಲಿ ಹೇಳಿದ್ದಾರೆ—

ನಾಹಂ ಮೋಹಂ ಬ್ರವೀಮಿ ಅನುಚ್ಛಿತ್ತಿಧರ್ಮಾಯವಾತ್ಮೇತಿ

[ಬೃಹದಾರಣ್ಯಕ. ೪।೫।೧೪॥

ಯಾಜ್ಞವಲ್ಕ್ಯರು ಹೇಳುತ್ತಾರೆ—ಮೈತ್ರೇಯಿ! ನಾನು ಮೋಹದಿಂದ ಮಾತನಾಡುತ್ತಿಲ್ಲ. ಆದರೆ ಆತ್ಮನು ಅವಿನಾಶಿಯು. ಆವನ ಯೋಗದಿಂದಲೇ ಶರೀರವು ಚೈತನ್ಯವುಳ್ಳದ್ದಾಗುತ್ತದೆ. ಜೀವನು ಶರೀರದಿಂದ ಬೇರೆಯಾದಾಗ ಶರೀರದಲ್ಲಿ ಯಾವ ಜ್ಞಾನವೂ ಇರುವುದಿಲ್ಲ ದೇಹದಿಂದ ಆತ್ಮನು ಬೇರೆಯಲ್ಲವೆನ್ನುವುದಾದರೆ, ಯಾವನ ಸಂಯೋಗದಿಂದ ಚೈತನ್ಯವೂ, ವಿಯೋಗದಿಂದ ಜಡತ್ವವೂ ಉಂಟಾಗುವುದೋ ಅವನು ಶರೀರದಿಂದ ಬೇರೆಯಾಗಿರುವನು. ಕಣ್ಣು ಎಲ್ಲವನ್ನೂ ನೋಡುತ್ತಿದ್ದರೂ ತನ್ನನ್ನು ಹೇಗೆ ನೋಡಲಾರದೋ ಹಾಗೆಯೇ ಪ್ರತ್ಯಕ್ಷಮಾಡಿಕೊಳ್ಳುವವನು ತನ್ನ ಇಂದ್ರಿಯ ಪ್ರತ್ಯಕ್ಷವನ್ನು ಮಾಡಿಕೊಳ್ಳಲಾರನು. ಕಣ್ಣಿನಿಂದ ಘಟ, ಪಟ, ಮೊದಲಾದ ಪದಾರ್ಥಗಳನ್ನು ನೋಡುವಂತೆಯೇ ಕಣ್ಣನ್ನು ತನ್ನ ಜ್ಞಾನದಿಂದ ನೋಡಿಕೊಳ್ಳುತ್ತಾನೆ. ನೋಡುವವನು ದ್ರಷ್ಟನೇ ಆಗಿರುತ್ತಾನೆ; ದೃಶ್ಯವೆಂದಿಗೂ ಆಗಲಾರನು. ಆಧಾರದ ವಿಲ್ಲದೆ ಆಧೇಯವೂ, ಕಾರಣವಿಲ್ಲದೆ ಕಾರ್ಯವೂ ಅವಯವವಿಲ್ಲದೆ ಅವಯವವೂ, ಕರ್ತನಿಲ್ಲದೆ ಕರ್ಮವೂ ಹೇಗೆ ಇರಲಾರದೋ ಹಾಗೆ ಕರ್ತನ ಹೊರತು ಪ್ರತ್ಯಕ್ಷವು ಹೇಗಾಗಬಲ್ಲದು? ಸುಂದರಿಯಾದ ಸ್ತ್ರೀ ಯೊಡನೆ ಸಮಾಗಮ ಮಾಡುವುದೇ ಪುರುಷಾರ್ಥವೆಂದೊಪ್ಪಿದರೆ ಅದರಿಂದುಂಟಾಗುವ ಕ್ಷಣಿಕ ಸುಖವೂ, ದುಃಖವೂ ಪುರುಷಾರ್ಥದ ಫಲವೇ ಆದೀತು. ಹಾಗಾದರೆ ಸ್ವರ್ಗಹಾನಿಯಾಗುವುದರಿಂದ ದುಃಖವನ್ನನುಭವಿಸಬೇಕಾದೀತು. ದುಃಖವನ್ನು ಹೋಗಲಾಡಿಸಿ ಸುಖವನ್ನು ಹೆಚ್ಚಿಸಲು ಪ್ರಯತ್ನ ಪಡಬೇಕೆಂದು ಹೇಳುವುದಾದರೆ ಮುಕ್ತಿಸುಖದ ಹಾನಿಯಾಗುತ್ತದೆ. ಆದುದರಿಂದ ಅದು ಪುರುಷಾರ್ಥದ ಫಲವಲ್ಲ.

ಚಾರ್ವಾಕ:—ದುಃಖದಿಂದ ಕೂಡಿದ ಸುಖವನ್ನು ತ್ಯಜಿಸುವವರು ಮೂರ್ಖರು. ಧಾನ್ಯವನ್ನು ಬಯಸುವವನು ಧಾನ್ಯವನ್ನು ತೆಗೆದುಕೊಂಡು ಹೊಟ್ಟನ್ನು ಬಿಡುವಂತೆ, ಜಗತ್ತಿನಲ್ಲಿ ಬುದ್ಧಿವಂತನು

ಸುಖವನ್ನು ಗ್ರಹಿಸಿ ದುಃಖವನ್ನು ಬಿಡಬೇಕು. ಏಕೆಂದರೆ, ಈ ಲೋಕದಲ್ಲಿ ದೊರೆತಿರುವ ಸುಖವನ್ನು ಬಿಟ್ಟು ದೊರೆಯದ ಸ್ವರ್ಗಸುಖವನ್ನು ಬಯಸಿ, ಪರಲೋಕಕ್ಕಾಗಿ ಧೂರ್ತರು ಹೇಳುವ ವೇದೋಕ್ತ ಅಗ್ನಿಹೋತ್ರಾದಿಕರ್ಮಗಳನ್ನೂ, ಉಪಾಸನೆಯನ್ನೂ ಮತ್ತು ಜ್ಞಾನಕಾಂಡದ ಅನುಷ್ಠಾನವನ್ನೂ ಮಾಡುವವರು ಅಜ್ಞಾನಿಗಳು. ಪರಲೋಕವೇ ಇಲ್ಲದ ಮೇಲೆ ಅದನ್ನು ಬಯಸುವುದು ಮೂರ್ಖತನ.

ಅಗ್ನಿಹೋತ್ರಂ ತ್ರಯೋವೇದಾಸ್ತ್ರಿದಂಡಂ ಭಸ್ಮಗುಂಠನಂ ।
ಬುದ್ಧಿಪೌರುಷಹೀನಾನಾಂ ಜೀವಿಕೇತಿ ಬೃಹಸ್ಪತಿಃ ॥

ಚಾರ್ವಾಕಮತಪ್ರಚಾರಕನಾದ ಬೃಹಸ್ಪತಿಯು ಹೀಗೆ ಹೇಳುತ್ತಾನೆ.—ಅಗ್ನಿಹೋತ್ರ, ಮೂರು ವೇದಗಳು, ಮೂರು ದಂಡಗಳು ಮತ್ತು ಭಸ್ಮಧಾರಣ—ಇವನ್ನು ಬುದ್ಧಿ ಮತ್ತು ಪೌರುಷವಿಲ್ಲದ ಜನರು ಜೀವನ ನಿರ್ವಾಹಕ್ಕಾಗಿ ಮಾಡಿಕೊಂಡಿದ್ದಾರೆ. ಮುಳ್ಳು ತಾಗುವುದು ಮೊದಲಾದುವುಗಳಿಂದ ಉಂಟಾದ ದುಃಖವೇ ನರಕ, ಲೋಕಪ್ರಸಿದ್ಧನಾದ ರಾಜನೇ ಪರಮೇಶ್ವರ ಮತ್ತು ದೇಹದ ನಾಶವೇ ಮುಕ್ತಿ. ಇವುಗಳ ಹೊರತು ಮತ್ತೇನೂ ಇಲ್ಲ.

ಉತ್ತರ:—ವಿಷಯಸುಖವನ್ನೇ ಪುರುಷಾರ್ಥದ ಫಲವೆಂದು ತಿಳಿದು, ವಿಷಯ-ದುಃಖನಿವಾರಣೆಯಲ್ಲಿಯೇ ಕೃತಕೃತ್ಯತೆಯೆಂದೂ, ಸ್ವರ್ಗವೆಂದೂ ನಂಬುವುದು ಮೂರ್ಖತನ. ಅಗ್ನಿಹೋತ್ರಾದಿ ಯಜ್ಞಗಳಿಂದ ವಾಯು ಮತ್ತು ವರ್ಷಾಜಲವು ಶುದ್ಧವಾಗಿ ಆರೋಗ್ಯವುಂಟಾಗುವುದನ್ನೂ, ಅದರಿಂದ ಧರ್ಮಾರ್ಥಕಾಮಮೋಕ್ಷಗಳು ಸಿದ್ಧಿಸುವವೆಂಬುದನ್ನೂ ತಿಳಿಯದೆ ವೇದಗಳು, ಈಶ್ವರ ಮತ್ತು ವೇದೋಕ್ತ ಧರ್ಮವನ್ನು ನಿಂದಿಸುವುದು ಧೂರ್ತರ ಕೆಲಸ. ತ್ರಿದಂಡ ಮತ್ತು ಭಸ್ಮಧಾರಣೆಯನ್ನು ಖಂಡಿಸಿರುವುದು ಸರಿಯಾಗಿದೆ. ಮುಳ್ಳು ಮೊದಲಾದವುಗಳಿಂದುಂಟಾಗುವ ದುಃಖವೇ ನರಕವಾಗಿದ್ದರೆ ಅವಕ್ಕಿಂತಲೂ ಹೆಚ್ಚಾದ ಮಹಾರೋಗಾದಿಗಳು ನರಕವೇಕಲ್ಲ? ರಾಜನು ಐಶ್ವರ್ಯವಂತನೂ, ಪ್ರಜಾಪಾಲನೆಯಲ್ಲಿ ಸಮರ್ಥನೂ ಆಗಿರುವುದರಿಂದ ಆತನನ್ನು ಶ್ರೇಷ್ಠನೆಂದು ತಿಳಿಯುವುದಾದರೆ ಸರಿ. ಆದರೆ ಅನ್ಯಾಯ

ಕಾರಿಯೂ, ಪಾಪಿಯೂ ಆಗಿರುವ ರಾಜನನ್ನೂ ಕೂಡ ಪರಮೇಶ್ವರನಿಗೆ ಸಮನೆಂದು ನಂಬುವುದಾದರೆ ನಿಮ್ಮಂತಹ ಮೂರ್ಖನು ಇನ್ನೊಬ್ಬನಿರಲಿಕ್ಕಿಲ್ಲ. ಶರೀರವಿಚ್ಛೇದವಾಗುವುದಷ್ಟೇ ಮೋಕ್ಷವಾಗಿರುವುದಾದರೆ ಕತ್ತೆ ನಾಯಿಗಳಿಗೂ ನಿಮಗೂ ಭೇದವೇನುಳಿಯಿತು? ಆಕೃತಿಮಾತ್ರ ಬೇರೆಯಾಯಿತು.

ಚಾರ್ವಾಕ :—

ಅಗ್ನಿರುಷ್ಣೋ ಜಲಂ ಶೀತಂ ಶೀತಸ್ಪರ್ಶಸ್ತಥಾऽನಿಲಃ।
ಕೇನೇದಂ ಚಿತ್ರಿತಂ ತಸ್ಮಾತ್ಸ್ವಭಾವಾತ್ತದ್ವ್ಯವಸ್ಥಿತಿಃ ॥೧॥

ನ ಸ್ವರ್ಗೋ ನಾಪವರ್ಗೋ ವಾ ನೈವಾತ್ಮಾ ಪಾರಲೌಕಿಕಃ।
ನೈವ ವರ್ಣಾಶ್ರಮಾದೀನಾಂ ಕ್ರಿಯಾಶ್ಚ ಫಲದಾಯಿಕಾಃ ॥೨॥

ಪಶುಶ್ಚೇನ್ನಿಹತಃ ಸ್ವರ್ಗಂ ಜ್ಯೋತಿಷ್ಟೋಮೇ ಗಮಿಷ್ಯತಿ।
ಸ್ವಪಿತಾ ಯಜಮಾನೇನ ತತ್ರ ಕಸ್ಮಾನ್ನ ಹಿಂಸ್ಯತೇ ॥೩॥

ಮೃತಾನಾಮಪಿ ಜಂತೂನಾಂ ಶ್ರಾದ್ಧಂ ಚೇತ್ತೃಪ್ತಿಕಾರಣಂ।
ಗಚ್ಛತಾಮಿಹ ಜಂತೂನಾಂ ವ್ಯರ್ಥಂ ಪಾಥೇಯಕಲ್ಪನಂ ॥೪॥

ಸ್ವರ್ಗಸ್ಥಿತಾ ಯದಾ ತೃಪ್ತಿಂ ಗಚ್ಛೇಯುಸ್ತತ್ರ ದಾನತಃ।
ಪ್ರಾಸಾದಸ್ಯೋಪರಿಸ್ಥಾನಾಮತ್ರ ಕಸ್ಮಾನ್ನ ದೀಯತೇ ॥೫॥

ಯಾವಜ್ಜೀವೇತ್ಸುಖಂ ಜೀವೇದೃಣಂ ಕೃತ್ವಾ ಘೃತಂ ಪಿಬೇತ್।
ಭಸ್ಮೀಭೂತಸ್ಯ ದೇಹಸ್ಯ ಪುನರಾಗಮನಂ ಕುತಃ ॥೬॥

ಯದಿಗಚ್ಛೇತ್ಪರಂ ಲೋಕಂ ದೇಹಾದೇಷ ವಿನಿರ್ಗತಃ।
ಕಸ್ಮಾದ್ಭೂಯೋ ನ ಚಾಯಾತಿ ಬಂಧುಸ್ನೇಹಸಮಾಕುಲಃ ॥೭॥

ತತಶ್ಚ ಜೀವನೋಪಾಯೋ ಬ್ರಾಹ್ಮಣೈರ್ವಿಹಿತಸ್ತ್ವಿಹ।
ಮೃತಾನಾಂ ಪ್ರೇತಕಾರ್ಯಾಣಿ ನ ತ್ವನ್ಯದ್ವಿದ್ಯತೇ ಕ್ವಚಿತ್ ॥೮॥

ತ್ರಯೋ ವೇದಸ್ಯ ಕರ್ತಾರೋ ಭಂಡಧೂರ್ತನಿಶಾಚರಾಃ।
ಜರ್ಫರೀ ತುರ್ಫರೀತ್ಯಾದಿ ಪಂಡಿತಾನಾಂ ವಚಃ ಸ್ಮೃತಂ ॥೯॥

ಅಶ್ವಸ್ಯಾತ್ರ ಹಿ ಶಿಶ್ನಂತು ಪತ್ನೀಗ್ರಾಹ್ಯಂ ಪ್ರಕೀರ್ತಿತಂ।
ಭಂಡ್ಯೈಸ್ತದ್ವತ್ಪರಂ ಚೈವ ಗ್ರಾಹ್ಯಜಾತಂ ಪ್ರಕೀರ್ತಿತಂ ॥೧೦॥
ಮಾಂಸಾನಾಂ ಖಾದನಂ ತದ್ವನ್ನಿಶಾಚರಸಮೀರಿತಂ ॥೧೧॥

ಚಾರವಾಕ, ಆಭಾಣಕ, ಬೌದ್ಧ ಮತ್ತು ಜೈನರು ಜಗತ್ತು ಸ್ವಭಾವದಿಂದ ಹುಟ್ಟಿರುವುದೆಂದು ನಂಬುತ್ತಾರೆ. ಯಾವ ಯಾವ ಸ್ವಾಭಾವಿಕ ಗುಣಗಳಿವೆಯೋ ಅವುಗಳೊಡನೆ ದ್ರವ್ಯಗಳು ಸೇರಿ ಎಲ್ಲ ಪದಾರ್ಥಗಳು ಆಗುತ್ತವೆ. ಜಗತ್ತಿನ ಕರ್ತನು ಯಾರೂ ಇಲ್ಲ. ॥೧॥ ಆದರೆ ಇವರಲ್ಲಿ ಚಾರವಾಕನು ಹೀಗೆ ಒಪ್ಪುತ್ತಾನೆ. ಆದರೆ ಬೌದ್ಧ ಜೈನರು ಆತ್ಮನನ್ನು ಪರಲೋಕವನ್ನು ಒಪ್ಪುತ್ತಾರೆ. ಚಾರವಾಕನು ನಂಬುವುದಿಲ್ಲ. ಬೇರೆ ವಿಷಯದಲ್ಲಿ ಒಂದೊಂದು ಮಾತನ್ನು ಬಿಟ್ಟು ಈ ಮೂರು ಮತಗಳೂ ಒಂದೇರೀತಿಯಿವೆ. ಸ್ವರ್ಗ, ನರಕ ಅಥವಾ ಪರಲೋಕಕ್ಕೆ ತೆರಳುವ ಆತ್ಮನಾರೂ ಇಲ್ಲ. ವರ್ಣಾಶ್ರಮಗಳ ಕ್ರಿಯೆಯೂ ಫಲದಾಯಕವಲ್ಲ. ॥೨॥ ಯಜ್ಞದಲ್ಲಿ ಪಶುವನ್ನು ಕೊಂದು ಹೋಮ ಮಾಡುವುದರಿಂದ ಅದು ಸ್ವರ್ಗಕ್ಕೆ ತೆರಳುವುದಾದರೆ ಯಜಮಾನನು ತನ್ನ ತಂದೆ ಮೊದಲಾದವರನ್ನು ಕೊಂದು ಹೋಮಮಾಡಿ ಸ್ವರ್ಗಕ್ಕೇಕೆ ಕಳುಹಿಸಬಾರದು? ॥೩॥ ಶ್ರಾದ್ಧತರ್ಪಣಗಳಿಂದ ಸತ್ತ ಜೀವರಿಗೆ ತೃಪ್ತಿಯಾಗುವುದಾದರೆ, ಪರದೇಶಕ್ಕೆ ಹೋಗುವವರು ಮಾರ್ಗದಲ್ಲಿ ನಿರ್ವಾಹಾರ್ಥವಾಗಿ ಅನ್ನ ವಸ್ತ್ರಗಳನ್ನೂ ಹಣವನ್ನೂ ಏಕೆ ಕೊಂಡು ಹೋಗುತ್ತಾರೆ? ಏಕೆಂದರೆ ಸತ್ತವನ ಹೆಸರಿನಲ್ಲಿ ಅರ್ಪಿಸಿದ ಪದಾರ್ಥವು ಸ್ವರ್ಗಕ್ಕೆ ತಲಪುವುದಾದರೆ ಪರದೇಶಕ್ಕೆ ಹೋದವರ ಸಂಬಂಧಿಕರು ಮನೆಯಲ್ಲಿ ಅವರ ಹೆಸರಿನಲ್ಲಿ ಅರ್ಪಿಸಿ ದೇಶಾಂತರಕ್ಕೆ ತಲುಪಿಸಿಬಿಡಲಿ. ಇದು ತಲುಪುವುದಿಲ್ಲವಾದರೆ ಸ್ವರ್ಗಕ್ಕೆ ಅದು ಹೇಗೆ ತಲಪಬಲ್ಲದು? ॥೪॥ ಮರ್ತ್ಯಲೋಕದಲ್ಲಿ ದಾನಮಾಡುವುದರಿಂದ ಸ್ವರ್ಗವಾಸಿಗಳು ತೃಪ್ತರಾಗುವುದಾದರೆ ಮೇಲಿರುವವನಿಗೆ ಕೆಳಗಿನಿಂದ ದಾನಮಾಡುವುದರಿಂದ ತೃಪ್ತಿಯಾಗುವುದಿಲ್ಲವೇಕೆ? ॥೫॥ ಆದುದರಿಂದ ಜೀವಿಸಿರುವಷ್ಟು ಕಾಲ ಸುಖದಿಂದ ಬಾಳಬೇಕು. ಮನೆಯಲ್ಲಿ ವಸ್ತುಗಳಿಲ್ಲದಿದ್ದರೆ ಸಾಲ ಮಾಡಿ ಆನಂದಿಸಬೇಕು. ಸಾಲವನ್ನು ತೀರಿಸಬೇಕಾಗಿಲ್ಲ. ಏಕೆಂದರೆ,

ಯಾವ ಶರೀರದಿಂದ ಜೀವನು ತಿಂದುಂಡುಕೊಂಡಿದ್ದನೋ ಆವೆರಡೂ ಹಿಂದಿರುಗಿ ಬರದಿರುವುದರಿಂದ ಸಾಲವನ್ನಾರು ಕೇಳುವರು ? ಯಾರು ಕೊಡುವರು ? ॥೬॥ ಸಾಯುವ ವೇಳೆಯಲ್ಲಿ ಜೀವನು ಎದ್ದು ಪರಲೋಕಕ್ಕೆ ಹೋಗುತ್ತಾನೆಂದು ಜನರು ಹೇಳುವುದು ಸುಳ್ಳು. ಏಕೆಂದರೆ, ಹಾಗಾಗಿದ್ದರೆ ಕುಟುಂಬದ ಮೇಲಣ ಮೋಹದಿಂದ ಆವನು ಮರಳಿ ಬರುವುದಿಲ್ಲವೇಕೆ ? ॥೭॥ ಆದುದರಿಂದ ಬ್ರಾಹ್ಮಣರು ಇದೆಲ್ಲವನ್ನೂ ತಮ್ಮ ಜೀವನೋಪಾಯಕ್ಕಾಗಿ ಮಾಡಿಕೊಂಡಿದ್ದಾರೆ. ದಶರಾತ್ರಾದಿ ಮೃತಕ ಕ್ರಿಯೆಗಳೆಲ್ಲವೂ ಆವರ ಜೀವನೋಪಾಯಗಳು ॥೮॥ ಭಂಡರು ಧೂರ್ತರು ನಿಶಾಚರ ರಾಕ್ಷಸರು ಈ ಮೂರು ಮಂದಿ ವೇದಗಳನ್ನು ರಚಿಸಿದವರು. 'ಜರ್ಫರೀ' 'ತುರ್ಫರೀ' ಮೊದಲಾದುವು ಪಂಡಿತರ ಧೂರ್ತತನದಿಂದ ಕೂಡಿದ ವಚನಗಳು ॥೯॥ ಧೂರ್ತರ ರಚನೆ ನೋಡಿರಿ—ಕುದುರೆಯ ಗುಪ್ತಾಂಗವನ್ನು ಸ್ತ್ರೀಯು ಗ್ರಹಣಮಾಡಬೇಕು. ಅದು ಯಜಮಾನನ ಸ್ತ್ರೀಯೊಡನೆ ಸಮಾಗಮ ಮಾಡಬೇಕು. ಕನ್ಯೆಯೊಡನೆ ತಮಾಷೆ ಮಾಡಬೇಕು. ಮೊದಲಾಗಿ ಬರೆಯುವುದು ಧೂರ್ತರ ಹೊರತು ಬೇರೆಯವರಿಂದ ಸಾಧ್ಯವಿಲ್ಲ. ॥೧೦॥ ಮಾಂಸವನ್ನು ತಿನ್ನಬೇಕೆನ್ನುವ ವೇದಭಾಗವು ರಾಕ್ಷಸನು ಬರೆದುದಾಗಿದೆ॥೧೧॥

ಉತ್ತರ :—ಚೇತನನಾದ ಪರಮಾತ್ಮನು ನಿರ್ಮಿಸಿದ ಜಡ ಪದಾರ್ಥಗಳು ತಾವಾಗಿ ಪರಸ್ಪರ ಸ್ವಭಾವದಿಂದ ನಿಯಮಪೂರ್ವಕವಾಗಿ ಒಟ್ಟುಗೂಡಿ ಉತ್ಪನ್ನವಾಗಲಾರವು. ಸ್ವಭಾವದಿಂದಲೇ ಹುಟ್ಟುವುದಾದರೆ ಎರಡನೆ ಸೂರ್ಯ, ಚಂದ್ರ, ಪೃಥ್ವಿ, ನಕ್ಷತ್ರ ಮೊದಲಾದ ಲೋಕಗಳು ತಾವಾಗಿ ಏಕೆ ಹುಟ್ಟುವುದಿಲ್ಲ ? ॥೧॥ ಸುಖ ಭೋಗವು ಸ್ವರ್ಗವೂ ದುಃಖ ಭೋಗವು ನರಕವೂ ಆಗಿರುತ್ತದೆ. ಜೀವಾತ್ಮನೇ ಇಲ್ಲದಿದ್ದರೆ ಸುಖದುಃಖಗಳನ್ನನುಭವಿಸುವವನು ಯಾರು ? ಈ ಸಮಯದಲ್ಲಿ ಹೇಗೆ ಸುಖದುಃಖಗಳನ್ನನುಭವಿಸುವ ಜೀವನಿದಾನೋ ಹಾಗೆಯೇ ಪರಜನ್ಮದಲ್ಲಿಯೂ ಇರುತ್ತಾನೆ. ವರ್ಣಾಶ್ರಮಿಗಳ ಸತ್ಯ ಭಾಷಣ, ಪರೋಪಕಾರ ಮೊಲಾದ ಕರ್ಮಗಳೂ ನಿಷ್ಫಲವಾಗುವವೆ ? ಇಲ್ಲ. ಎಂದಿಗೂ ಇಲ್ಲ. ॥೨॥ ಪಶುವನ್ನು ಕೊಂದು ಹೋಮಮಾಡಬೇಕೆಂದು ವೇದಾದಿ ಸತ್ಯಶಾಸ್ತ್ರಗಳಲ್ಲೆಲ್ಲೂ ಬರೆದಿಲ್ಲ. ಮೃತಕರಿಗೆ ಶ್ರಾದ್ಧ

ತರ್ಪಣ ಮಾಡುವುದು ಕಪೋಲಕಲ್ಪಿತವಾದುದು. ಏಕೆಂದರೆ ಇದು ವೇದಾದಿ ಸತ್ಯಶಾಸ್ತ್ರಗಳಿಗೆ ವಿರುದ್ಧವೂ, ಭಾಗವತಾದಿ ಪುರಾಣಮತದವರ ಮತವೂ ಆಗಿರುವುದರಿಂದ ಈ ಮಾತಿನ ಖಂಡನವು ಅಖಂಡನೀಯವಾಗಿದೆ. 'ಸ-ಳ-ಶ' ಇರುವ ವಸ್ತುವಿನ ಅಭಾವವೆಂದಿಗೂ ಆಗುವುದಿಲ್ಲ. ಆಸ್ತಿತ್ವದಲ್ಲಿರುವ ಜೀವನ ಅಭಾವವಾಗಲಾರದು. ದೇಹ ಭಸ್ಮವಾಗುತ್ತದೆಯೇ ಹೊರತು ಜೀವಾತ್ಮನಲ್ಲ. ಅವನಾದರೋ ಬೇರೆ ಶರೀರವನ್ನು ಪ್ರವೇಶಿಸುತ್ತಾನೆ. ಆದುದರಿಂದ ಸಾಲ ಮೊದಲಾದವುಗಳಿಂದ ಬೇರೆಯವರ ಪದಾರ್ಥಗಳನ್ನು ತಿಂದು ಸಾಲತೀರಿಸದಿರುವವರು ನಿಶ್ಚಯವಾಗಿಯೂ ಪಾಪಿಗಳಾಗಿ ಇನ್ನೊಂದು ಜನ್ಮದಲ್ಲಿ ದುಃಖರೂಪವಾದ ನರಕವನ್ನ ನುಭವಿಸುತ್ತಾರೆಂಬುದರಲ್ಲೇನೂ ಸಂದೇಹವಿಲ್ಲ. ॥೬॥ ದೇಹದಿಂದ ಹೊರಹೊರಟು ಜೀವನು ಸ್ಥಾನಾಂತರವನ್ನೂ, ಶರೀರಾಂತರವನ್ನೂ ಹೊಂದುತ್ತಾನೆ. ಆಗ ಅವನಿಗೆ ಪೂರ್ವಜನ್ಮದ ಅಥವಾ ಕುಟುಂಬದ ಅರಿವೇನೂ ಇರುವುದಿಲ್ಲವಾದುದರಿಂದ ಮರಳಿ ಕುಟುಂಬದೆಡೆಗೆ ಬರಲಾರನು. ॥೭॥ ಬ್ರಾಹ್ಮಣರು ಪ್ರೇತಕರ್ಮವನ್ನು ತಮ್ಮ ಜೀವಿಕೆಗಾಗಿ ಆರಂಭಿಸಿರುವರೆಂಬುದು ನಿಜ. ವೇದೋಕ್ತವಲ್ಲದುದರಿಂದ ಅದು ಖಂಡನಯೋಗ್ಯವಾದುದು. ॥೮॥ ಈಗ ಹೇಳಿರಿ. ಚಾರವಾಕಾದಿಗಳು ವೇದಾದಿ ಸತ್ಯಶಾಸ್ತ್ರಗಳನ್ನು ನೋಡಿ, ಕೇಳಿ, ಅಥವಾ ಓದಿದ್ದರೆ ಅವುಗಳನ್ನು ಭಂಡರು, ಧೂರ್ತರು ಮತ್ತು ನಿಶಾಚರರಂತಹ ಮನುಷ್ಯರು ಬರೆದಿರುವರೆಂಬ ನಿಂದಾವಚನವನ್ನೆಂದಿಗೂ ಹೇಳುತ್ತಿರಲಿಲ್ಲ. ಭಂಡಧೂರ್ತನಿಶಾಚರರಂತೆ ಮಹೀಧರ ಮೊದಲಾದ ಟೀಕಾಕಾರರೇನೋ ಆಗಿರುವುದು ನಿಜವೇ. ಅದು ಅವರ ಧೂರ್ತತನವೇ ಹೊರತು ವೇದಗಳದಲ್ಲ. ಶೋಚನೀಯವಿಷಯವೆಂದರೆ, ಚಾರವಾಕ, ಆಭಾಣಕ, ಬೌದ್ಧ ಮತ್ತು ಜೈನ—ಇವರು ನಾಲ್ಕೂ ವೇದಗಳ ಮೂಲಸಂಹಿತೆಗಳನ್ನು ಕೂಡ ಕೇಳಲಿಲ್ಲ; ನೋಡಲಿಲ್ಲ. ಮತ್ತು ಯಾವನಾದರೂ ವಿದ್ವಾಂಸನ ಹತ್ತಿರ ಹೋಗಿ ಓದಿಯೂ ಇಲ್ಲ. ಆದುದರಿಂದ ನಷ್ಟಭ್ರಷ್ಟವಾದ ಬುದ್ಧಿಯುಳ್ಳವರಾಗಿ ಮನಬಂದಂತೆ ವೇದಗಳನ್ನು ನಿಂದಿಸತೊಡಗಿದರು. ದುಷ್ಟರಾದ ವಾಮಮಾರ್ಗಿಗಳ ಪ್ರಮಾಣಶೂನ್ಯವೂ ಕಪೋಲಕಲ್ಪಿತವೂ ಆದ ಭ್ರಷ್ಟ ಟೀಕೆಗಳನ್ನು ನೋಡಿ ವೇದ

ವಿರೋಧಿಗಳಾಗಿ ಅವಿದ್ಯೆಯೆಂಬ ಅಗಾಧಸಮುದ್ರವಲ್ಲಿ ಹೋಗಿ ಬಿದ್ದಿರುವರು. ॥೯॥ ಸ್ತ್ರೀಯಿಂದ ಆಶ್ವದ ಉಪಸ್ಥೇಂದ್ರಿಯವನ್ನು ಹಿಡಿಸಿ ಅದರೊಡನೆ ಸಮಾಗಮ ಮಾಡಿಸುವುದೂ, ಯಜಮಾನನ ಕನ್ಯೆಯೊಡನೆ ಹಾಸ್ಯಾಲಾಪಗಳನ್ನಾಡುವುದೂ ವಾಮಮಾರ್ಗಿಗಳ ಹೊರತು ಇನ್ನಾರ ಕೆಲಸವೂ ಅಲ್ಲ. ಈ ಮಹಾಪಾಪಿಗಳಾದ ವಾಮಮಾರ್ಗಿಗಳ ಹೊರತು ಭ್ರಷ್ಟವೂ, ವೇದಾರ್ಥ ವಿರುದ್ಧವೂ ಆದ ಅಶುದ್ಧ ಭಾಷ್ಯವನ್ನಾರು ಮಾಡುತ್ತಿದ್ದರು ? ಎಂಬುದನ್ನು ಯೋಚಿಸಬೇಕು. ಅತ್ಯಂತ ಶೋಕವಾದರೂ ಈ ಚಾರವಾಕ ಮೊದಲಾದವರ ವಿಷಯದಲ್ಲಾಗುತ್ತದೆ. ಇವರು ಯೋಚಿಸದೆಯೇ ವೇದಗಳನ್ನು ನಿಂದಿಸಲು ತತ್ಪರರಾದರು. ಸ್ವಲ್ಪವಾದರೂ ಬುದ್ಧಿಯನ್ನುಪಯೋಗಿಸಬಹುದಾಗಿತ್ತು. ಅವರೇನು ಮಾಡಾರು ? ಪಾಪ ! ಸತ್ಯಾಸತ್ಯಗಳ ವಿಚಾರಗೈದು ಸತ್ಯದ ಮಂಡನವನ್ನು ಅಸತ್ಯದ ಖಂಡನವನ್ನು ಮಾಡಲು ಸಾಕಷ್ಟು ವಿದ್ಯೆಯಾದರೂ ಇರಬೇಕಲ್ಲ ! ॥೧೧॥ ಮಾಂಸವನ್ನು ತಿನ್ನಬೇಕೆಂಬುದು ಆ ವಾಮಮಾರ್ಗಿಗಳಾದ ಟೀಕಾಕಾರರ ಲೀಲೆಯೇ. ಆದುದರಿಂದ ಅವರನ್ನು ರಾಕ್ಷಸರೆನ್ನುವುದುಚಿತ. ಆದರೆ ವೇದಗಳಲ್ಲೆಲ್ಲಿಯೂ ಮಾಂಸ ತಿನ್ನಬೇಕೆಂದು ಬರೆದಿಲ್ಲ. ಅದಕಾರಣ ಈ ಮೊದಲಾದ ಸುಳ್ಳು ಮಾತುಗಳ ಪಾಪವು ಆ ಟೀಕಾಕಾರರಿಗೂ ಮತ್ತು ವೇದಗಳನ್ನು ತಿಳಿಯದೆ ಕೇಳದೆ ಮನಬಂದಂತೆ ನಿಂದಿಸುವವರಿಗೂ ಅವಶ್ಯವಾಗಿ ತಾಗುವುದು. ನಿಜವಾಗಿ ಹೇಳುವುದಾದರೆ ವೇದಗಳನ್ನು ವಿರೋಧಿಸುತ್ತಿರುವವರು ಮತ್ತು ಮುಂದೆ ವಿರೋಧಿಸುವವರು ನಿಃಸ್ಸಂದೇಹವಾಗಿ ಅವಿದ್ಯೆಯೆಂಬ ಅಂಧಕಾರದಲ್ಲಿ ಬಿದ್ದು, ಸುಖಕ್ಕೆ ಬದಲಾಗಿ ಎಷ್ಟು ದಾರುಣ ದುಃಖವನ್ನನುಭವಿಸಿದರೂ ಕಡಿಮೆಯೆನ್ನಬೇಕು. ಆದುದರಿಂದ ಮನುಷ್ಯಮಾತ್ರರು ವೇದಾನುಕೂಲವಾಗಿ ವರ್ತಿಸುವುದುಚಿತ. ॥೧೧॥ ವಾಮಮಾರ್ಗಿಗಳು ಮಿಥ್ಯಾಕಪೋಲಕಲ್ಪನೆಗಳನ್ನು ಮಾಡಿ ವೇದಗಳ ಹೆಸರಿನಲ್ಲಿ ತಮ್ಮ ಪ್ರಯೋಜನವನ್ನು ಸಾಧಿಸಲು ಅಂದರೆ–ಯಥೇಷ್ಟವಾಗಿ ಮದ್ಯಪಾನ, ಮಾಂಸಾಹಾರ ಮತ್ತು ಪರಸ್ತ್ರೀಗಮನ ಮೊದಲಾದ ಕಲಂಕ ಹೊರಿಸಿದರು. ಈ ಮಾತುಗಳನ್ನೇ ನೋಡಿ ಚಾರವಾಕ, ಬೌದ್ಧ ಮತ್ತು ಜೈನರು ವೇದ

ಗಳನ್ನು ನಿಂದಿಸ ತೊಡಗಿ, ಪ್ರತ್ಯೇಕವಾಗಿ ವೇದವಿರುದ್ಧವಾದ ಅನೀಶ್ವರವಾದಿ ಎಂದರೆ ನಾಸ್ತಿಕಮತವೊಂದನ್ನು ಸ್ಥಾಪಿಸಿದರು. ಚಾರವಾಕ ಮೊದಲಾದವರು ವೇದಗಳ ಮೂಲಾರ್ಥವನ್ನು ನೋಡಿದ್ದರೆ, ಸುಳ್ಳು ಟೀಕೆಗಳನ್ನು ನೋಡಿ ವೇದೋಕ್ತವಾದ ಸತ್ಯಮತದಿಂದ ವಂಚಿತರಾಗುತ್ತಿದ್ದರೇಕೆ? ಪಾಪ, ಅವರೇನು ಮಾಡಿಯಾರು? "ವಿನಾಶಕಾಲೇ ವಿಪರೀತಬುದ್ಧಿಃ" ನಷ್ಟಭ್ರಷ್ಟವಾಗುವ ಸಮಯ ಬಂದಾಗ ಮನುಷ್ಯರ ಬುದ್ಧಿಯು ವಿಪರೀತವಾಗುತ್ತದೆ.

ಇನ್ನು ಚಾರವಾಕಾದಿಗಳಲ್ಲಿರುವ ಭೇದವನ್ನು ಬರೆಯುತ್ತೇವೆ. ಈ ಚಾರವಾಕ ಮೊದಲಾದವರು ಬಹಳ ವಿಷಯಗಳಲ್ಲಿ ಸಮಾನರಾಗಿದ್ದಾರೆ. ಆದರೆ ಚಾರವಾಕರು ದೇಹೋತ್ಪತ್ತಿಯೊಡನೆಯೇ ಜೀವವೂ ಹುಟ್ಟುತ್ತದೆಂದೂ ಶರೀರನಾಶದೊಡನೆ ನಾಶವಾಗುತ್ತದೆಂದೂ ನಂಬುತ್ತಾರೆ. ಪುನರ್ಜನ್ಮವನ್ನೂ ಪರಲೋಕವನ್ನೂ ನಂಬುವುದಿಲ್ಲ. ಪ್ರತ್ಯಕ್ಷವನ್ನು ಬಿಟ್ಟು ಅನುಮಾನ ಮೊದಲಾದ ಪ್ರಮಾಣಗಳನ್ನು ಒಪ್ಪುವುದಿಲ್ಲ. "ಮಾತನಾಡುವುದರಲ್ಲಿ ಚತುರನೂ ವಿಶೇಷಾರ್ಥಮಾಡುವ ವೈತಂಡಿಕನೂ ಆಗಿರುವನೆಂಬುದು ಚಾರವಾಕ ಶಬ್ದದ ಅರ್ಥವು. ಬೌದ್ಧ-ಜೈನರು ಪ್ರತ್ಯಕ್ಷ ಮೊದಲಾದ ನಾಲ್ಕೂ ಪ್ರಮಾಣಗಳನ್ನೂ, ಅನಾದಿಜೀವ, ಪುನರ್ಜನ್ಮ, ಪರಲೋಕ ಮತ್ತು ಮುಕ್ತಿಯನ್ನೂ ಒಪ್ಪುತ್ತಾರೆ. ಇಷ್ಟೇ ಚಾರವಾಕನಿಗೂ, ಬೌದ್ಧ ಜೈನರಿಗೂ ಇರುವ ಭೇದ. ನಾಸ್ತಿಕತೆ, ವೇದದ್ವೇಷ, ಆರು ಯತ್ನ (ಮುಂದೆ ಹೇಳಲ್ಪಡುವ ಆರುಕರ್ಮ) ಗಳು ಮತ್ತು ಜಗತ್ತಿನ ಕರ್ತೃ ವಾರೂ ಇಲ್ಲವೆನ್ನುವುದು—ಇತ್ಯಾದಿ ವಿಷಯಗಳಲ್ಲಿ ಎಲ್ಲರೂ ಒಮ್ಮತವಾಗಿದ್ದಾರೆ:—

ಇಷ್ಟು ಚಾರವಾಕಮತ ವಿಷಯವನ್ನು ಸಂಕ್ಷೇಪವಾಗಿ ತಿಳಿಸಲಾಯಿತು.

ಇನ್ನು ಬೌದ್ಧಮತ ವಿಷಯದಲ್ಲಿ ಸಂಕ್ಷೇಪವಾಗಿ ಬರೆಯುವೆವು

ಕಾರ್ಯಕಾರಣಭಾವಾದ್ವಾ ಸ್ವಭಾವಾದ್ವಾ ನಿಯಾಮಕಾತ್ ।
ಅವಿನಾಭಾವನಿಯಮೋ ದರ್ಶನಾಂತರದರ್ಶನಾತ್ ॥

ಕಾರ್ಯಕಾರಣಭಾವ ಅಂದರೆ ಕಾರ್ಯವನ್ನು ನೋಡಿ ಕಾರಣದ ಮತ್ತು ಕಾರಣವನ್ನು ನೋಡಿ ಕಾರ್ಯ ಮೊದಲಾದುದರ ಸಾಕ್ಷಾತ್ಕಾರವೂ ಪ್ರತ್ಯಕ್ಷದಿಂದ ಉಳಿದ ವಿಷಯಗಳಲ್ಲಿ ಅನುಮಾನವೂ ಹೊಂಟಾಗುತ್ತದೆ. ಇದರ ಹೊರತು ಪ್ರಾಣಿಗಳ ಎಲ್ಲಾ ವ್ಯವಹಾರಗಳೂ ಪೂರ್ಣವಾಗ ಲಾರವು. ಈ ಮೊದಲಾದ ಲಕ್ಷಣಗಳಿಂದ ಅನುಮಾನವು ಅಧಿಕವೆಂದು ನಂಬಿ ಚಾರವಾಕರಿಂದ ಭಿನ್ನ ಶಾಖೆಯೊಂದು ಬೌದ್ಧರದಾಯಿತು. ಬೌದ್ಧರು ನಾಲ್ಕು ಪ್ರಕಾರವಾಗಿರುವರು.

೧. ಮಾಧ್ಯಮಿಕ, ೨. ಯೋಗಾಚಾರ, ೩. ಸೌತ್ರಾಂತಿಕ, ೪. ವೈಭಾಷಿಕ. **"ಬುದ್ಧ್ಯಾ ನಿರ್ವರ್ತತೇ ಸ ಬೌದ್ಧಃ"** ಬುದ್ಧಿಯಿಂದ ಸಿದ್ಧವಾದುದನ್ನು ಅಂದರೆ ತನ್ನ ಬುದ್ಧಿಗೆ ಸರಿತೋರಿದ ವಿಷಯವನ್ನು ನಂಬುವವನು ಮತ್ತು ಬುದ್ಧಿಗೆಟಕದಿದ್ದುದನ್ನು ನಂಬದವನು ಬೌದ್ಧನು. ಇವರಲ್ಲಿ ಮೊದಲನೆಯವನಾದ 'ಮಾಧ್ಯಮಿಕನು' ಸರ್ವವೂ ಶೂನ್ಯವೆಂದು ತಿಳಿಯುತ್ತಾನೆ. ಈ ಜಗತ್ತಿನಲ್ಲಿರುವ ಪದಾರ್ಥಗಳೆಲ್ಲವೂ ಶೂನ್ಯವು ಅಂದರೆ ಆದಿ ಅಂತಗಳೆರಡರಲ್ಲಿಯೂ ಇರದಿರುವಂತಹವು ಮಧ್ಯಕಾಲದಲ್ಲಿ ತೋರುವುದೂ ಕೂಡ ಪ್ರತೀತಿ ಸಮಯದಲ್ಲಿಯೇ. ಆ ನಂತರ ಶೂನ್ಯವಾಗುತ್ತದೆ. ಉದಾ—ಉತ್ಪತ್ತಿಯ ಮೊದಲು ಗಡಿಗೆಯಿರಲಿಲ್ಲ. ಧ್ವಂಸವಾದ ನಂತರವೂ ಇರುವುದಿಲ್ಲ. ಘಟಜ್ಞಾನ ಸಮಯದಲ್ಲಿ ಭಾಸವಾಗುತ್ತದೆ. ಮನಸ್ಸು ಬೇರೆ ಪದಾರ್ಥಕ್ಕೆ ಹೋಯಿತೆಂದರೆ ಆ ಘಟಜ್ಞಾನವೂ ಇರುವುದಿಲ್ಲ. ಆದುದರಿಂದ ಶೂನ್ಯವೇ ನಿಜವಾದ ತತ್ವ. ಎರಡನೆಯವನಾದ 'ಯೋಗಾಚಾರನು' ಬಾಹ್ಯಶೂನ್ಯವೆಂದು ತಿಳಿಯುತ್ತಾನೆ.

ಅಂದರೆ ಪದಾರ್ಥಗಳು ನಮ್ಮ ಒಳಗೆ-ಜ್ಞಾನದಲ್ಲಿ ಭಾಸವಾಗುತ್ತವೆ. ಅವು ಹೊರಗಿರುವುದಿಲ್ಲ. ಉದಾ—'' ಘಟಜ್ಞಾನವು ಆತ್ಮದಲ್ಲಿದ್ದುದರಿಂದಲೇ ಮನುಷ್ಯನು ' ಇದು ಗಡಿಗೆ 'ಯೆಂದು ಹೇಳುತ್ತಾನೆ. ಜ್ಞಾನವು ಒಳಗಿಲ್ಲದಿದ್ದರೆ ಹೇಳಲಾರನು '' ಎಂದು ತಿಳಿಯುತ್ತಾನೆ. ಮೂರನೆಯವನಾದ ' ಸೌತ್ರಾಂತಿಕನು ' ಹೊರಗೆ ಪದಾರ್ಥದ ಅನುಮಾನವಾಗುತ್ತದೆನ್ನುತ್ತಾನೆ. ಹೊರಗಿನ ಯಾವ ಪದಾರ್ಥವೂ ಸಾಂಗೋಪಾಂಗವಾಗಿ ಪ್ರತ್ಯಕ್ಷವಾಗುವುದಿಲ್ಲ. ಆದರೆ ಏಕದೇಶವೇ ಪ್ರತ್ಯಕ್ಷವಾಗುವುದು. ಉಳಿದುದರಲ್ಲಿ ಅನುಮಾನ ಮಾಡಬೇಕು. ಎಂಬುದು ಇವನ ಅಭಿಪ್ರಾಯ. ನಾಲ್ಕನೆಯವನಾದ ' ವೈಭಾಷಿಕ 'ನು ಪದಾರ್ಥವು ಹೊರಗೆ ಪ್ರತ್ಯಕ್ಷವಾಗುತ್ತದೆ. ಒಳಗಾಗುವುದಿಲ್ಲ. ಉದಾ– '' ಅಯಂ ನೀಲೋ ಘಟಃ '' ಈ ಪ್ರತೀತಿಯಲ್ಲಿ ನೀಲಯುಕ್ತವಾದ ಘಟಾಕೃತಿಯ ಪ್ರತೀತಿಯು ಹೊರಗಾಗುತ್ತದೆಯೆಂದು ನಂಬುತ್ತಾನೆ. ಇವರ ಆಚಾರ್ಯ ಬುದ್ಧನೊಬ್ಬನೇ ಆದರೂ, ಶಿಷ್ಯರ ಬುದ್ಧಿಯ ತಾರತಮ್ಯದಿಂದ ನಾಲ್ಕು ಪ್ರಕಾರದ ಶಾಖೆಗಳು ಪ್ರಚಲಿತವಾಗಿವೆ ಉದಾ ಸೂರ್ಯಾಸ್ತಸಮಯದಲ್ಲಿ ಜಾರರು ಪರಸ್ತ್ರೀ ಗಮನವನ್ನೂ, ವಿದ್ವಾಂಸರು ಸತ್ಯಭಾಷಣಾದಿ ಶ್ರೇಷ್ಠಕರ್ಮಗಳನ್ನೂ ಮಾಡುತ್ತಾರೆ. ಸಮಯವೊಂದೇ ಆಗಿದ್ದರೂ ತಮ್ಮ ತಮ್ಮ ಬುದ್ಧಿಗೆ ತೋರಿದಂತೆ ಬೇರೆ ಬೇರೆ ಕಾರ್ಯಗಳನ್ನು ಮಾಡುತ್ತಾರೆ. ಮೇಲೆ ಹೇಳಿದ ನಾಲ್ವರಲ್ಲಿ ' ಮಾಧ್ಯಮಿಕನು ' ಎಲ್ಲವನ್ನೂ ಕ್ಷಣಿಕವೆಂದು ಒಪ್ಪುತ್ತಾನೆ. ಅಂದರೆ ಕ್ಷಣಕ್ಷಣಗಳಲ್ಲಿ ಬುದ್ಧಿಯು ಪರಿಣಾಮವಾಗುವುದರಿಂದ, ಪೂರ್ವಕ್ಷಣದಲ್ಲಿ ತಿಳಿಯಲ್ಪಟ್ಟ ವಸ್ತುವು ಅದೇ ರೀತಿ ಇನ್ನೊಂದು ಕ್ಷಣದಲ್ಲಿರುವುದಿಲ್ಲ. ಆದುದರಿಂದ ಎಲ್ಲವೂ ಕ್ಷಣಿಕವೆಂದು ತಿಳಿಯಬೇಕೆಂದು ಹೇಳುತ್ತಾನೆ. ಎರಡನೆಯವನಾದ ಯೋಗಾಚಾರನು ಪ್ರಾಪ್ತವಾದುದರಲ್ಲಾವನೂ ತೃಪ್ತನಾಗಿರುವುದಿಲ್ಲ. ಒಂದು ಪ್ರಾಪ್ತವಾದರೆ ಇನ್ನೊಂದರ ಇಚ್ಛೆ ಇದ್ದೇ ಇರುತ್ತದೆ ಆದುದರಿಂದ ಪ್ರವೃತ್ತಿಯೆಲ್ಲವೂ ದುಃಖರೂಪವಾಗಿದೆಯೆಂದು ತಿಳಿಯುತ್ತಾನೆ. ಮೂರನೆಯವನಾದ ಸೌತ್ರಾಂತಿಕನು ಗೋವಿನ ಚಿಹ್ನೆಗಳಿಂದ ಗೋವೂ, ಕುದುರೆಯ ಚಿಹ್ನೆಗಳಿಂದ ಕುದುರೆಯು ತಿಳಿಯಲ್ಪಡುವಂತೆ ಲಕ್ಷಣಗಳು

ಲಕ್ಷ್ಯದಲ್ಲಿಯಾವಾಗಲೂ ಇರುತ್ತವೆ. ಆದುದರಿಂದ ಸರ್ವ ಪದಾರ್ಥಗಳೂ ಲಕ್ಷಣಗಳಿಂದ ಲಕ್ಷಿತವಾಗುತ್ತಿವೆಯೆಂದು ಹೇಳುತ್ತಾನೆ. ನಾಲ್ಕನೆಯ ವೈಭಾಷಿಕನು ಶೂನ್ಯವನ್ನೇ ಒಂದು ಪದಾರ್ಥವೆನ್ನುತ್ತಾನೆ. ಮೊದಲು ಮಾಧ್ಯಮಿಕನು ಎಲ್ಲವನ್ನು ಶೂನ್ಯವೆನ್ನುತ್ತಿದ್ದನು. ವೈಭಾಷಿಕನ ಪಕ್ಷವೂ ಅದೇ. ಇಂತಹ ಎಷ್ಟೋ ವಿವಾದ ಪಕ್ಷಗಳು ಬೌದ್ಧರಲ್ಲಿವೆ. ಈರೀತಿ ನಾಲ್ಕು ಪ್ರಕಾರ ಭಾವನೆಗಳನ್ನವರು ನಂಬುತ್ತಾರೆ.

ಉತ್ತರ :—ಎಲ್ಲವೂ ಶೂನ್ಯವಾಗಿದ್ದರೆ ಶೂನ್ಯವನ್ನರಿಯುವವನು ಶೂನ್ಯವಾಗಿರಲಾರನು. ಮತ್ತು ಎಲ್ಲವೂ ಶೂನ್ಯವಾಗಿದ್ದರೆ, ಶೂನ್ಯವನ್ನು ಶೂನ್ಯವರಿಯಲಾರದು. ಆದುದರಿಂದ ಶೂನ್ಯದ ಜ್ಞಾತ ಮತ್ತು ಜ್ಞೇಯ ಇವೆರಡು ಪದಾರ್ಥಗಳು ಸಿದ್ಧವಾಗುತ್ತವೆ. ಯೋಗಾಚಾರನು ಬಾಹ್ಯಶೂನ್ಯತ್ವವನ್ನು ನಂಬುವುದಾದರೆ ಪರ್ವತವು ಅವನ ಒಳಗಿರಬೇಕು. ಪರ್ವತ ಒಳಗಿದೆಯೆಂದು ಹೇಳುವುದಾದರೆ ಪರ್ವತಕ್ಕೆ ಬೇಕಾದ ಸ್ಥಳವಾದರೂ ಅವನ ಹೊಟ್ಟೆಯಲ್ಲಿಲ್ಲಿದೆ? ಆದಕಾರಣ ಪರ್ವತವಿರುವುದು ಹೊರಗೆ ಮಾತ್ರ. ಪರ್ವತಜ್ಞಾನವು ಆತ್ಮನೊಳಗಿದೆ. ಸೌತ್ರಾಂತಿಕನು ಯಾವ ಪದಾರ್ಥದ ಪ್ರತ್ಯಕ್ಷವೂ ಆಗುತ್ತದೆಂದು ನಂಬುವುದಿಲ್ಲವಾದುದರಿಂದ ಸ್ವಯಂ ಅವನೂ, ಅವನ ವಚನವೂ ಅನುಮೇಯವಾಗಿರಬೇಕಾಗುತ್ತದೆಯೇ ಹೊರತು ಪ್ರತ್ಯಕ್ಷವಲ್ಲ. ಪ್ರತ್ಯಕ್ಷವೇ ಆಗದ ನಂತರ ' ಅಯಂ ಘಟಃ ' (ಇದು ಗಡಿಗೆ) ಎಂಬ ಪ್ರಯೋಗವೂ ಆಗದೆ ' ಅಯಂ ಘಟೈಕದೇಶಃ ' ಇದು ಗಡಿಗೆಯ ಒಂದು ಅಂಶ ಎಂದಾಗಬೇಕು. ಅಂಶದ ಹೆಸರು ಘಟವೆಂದಾಗುವುದಿಲ್ಲ. ಸಮುದಾಯವೇ ಗಡಿಗೆಯಾಗಿರುತ್ತದೆ. ' ಇದು ಗಡಿಗೆ ' ಎಂಬುದು ಅನುಮೇಯವಲ್ಲ, ಇದು ಪ್ರತ್ಯಕ್ಷ. ಎಲ್ಲಾ ಅವಯವಗಳಲ್ಲಿರುವ ಅವಯವಿಯೊಂದೇ. ಅದು ಪ್ರತ್ಯಕ್ಷವಾಗುವುದರಿಂದ ಗಡಿಗೆಯ ಎಲ್ಲ ಅವಯವಗಳೂ ಪ್ರತ್ಯಕ್ಷವಾಗುತ್ತದೆ. ಅಂದರೆ—ಅವಯವಸಹಿತವಾದ ಘಟವು ಪ್ರತ್ಯಕ್ಷವಾಗುತ್ತದೆ. ನಾಲ್ಕನೆಯವನಾದ ವೈಭಾಷಿಕನು ಬಾಹ್ಯಪದಾರ್ಥಗಳನ್ನು ಪ್ರತ್ಯಕ್ಷವೆನ್ನುತ್ತಾನೆ. ಅದೂ ಸರಿಯಲ್ಲ. ಏಕೆಂದರೆ ಜ್ಞಾತನೂ ಜ್ಞಾನವೂ ಇರುವಲ್ಲೇ ಪ್ರತ್ಯಕ್ಷವಾಗುತ್ತದೆ. ಪ್ರತ್ಯಕ್ಷದ

ವಿಷಯವು ಬಾಹ್ಯವಾಗಿದ್ದರೂ ತದಾಕಾರಜ್ಞಾನವು ಆತ್ಮನಿಗಾಗುತ್ತದೆ. ಪದಾರ್ಥವೂ ಅದರ ಜ್ಞಾನವೂ ಕ್ಷಣಿಕವಾಗಿದ್ದರೆ 'ಪ್ರತ್ಯಭಿಜ್ಞಾ' ಆಂದರೆ ನಾನು "ಆ ಮಾತನ್ನು ಹೇಳಿದ್ದೆನು" ಎಂಬ ಸ್ಮರಣೆಯಿರುತ್ತಿರಲಿಲ್ಲ. ಆದರೆ ಮೊದಲು ನೋಡಿದ ಅಥವಾ ಕೇಳಿದುದರ ನೆನಪಾಗುತ್ತದೆ. ಆದುದರಿಂದ ಕ್ಷಣಿಕವಾದವೂ ಸರಿಯಲ್ಲ. ಸರ್ವವೂ ದುಃಖವೇ ಆಗಿದ್ದು, ಸುಖವು ಏನೇನೂ ಇಲ್ಲದಿರುತ್ತಿದ್ದರೆ ಸುಖವಿಲ್ಲದ ಹೊರತು ದುಃಖವೂ ಸಿದ್ಧವಾಗಲಾರದು. ಉದಾ—ರಾತ್ರಿಯಿರುವುದರಿಂದ ಹಗಲೂ, ಹಗಲಿರುವುದರಿಂದ ರಾತ್ರಿಯೂ ಆಗುತ್ತದೆ. ಆದಕಾರಣ ಎಲ್ಲವೂ ದುಃಖವೆಂದು ತಿಳಿಯುವುದು ಸರಿಯಲ್ಲ. ಸ್ವಲಕ್ಷಣಸಿದ್ಧಾಂತವನ್ನೊಪ್ಪಿದರೆ, ನೇತ್ರವು ರೂಪದ ಲಕ್ಷಣ ಮತ್ತು ರೂಪವು ಲಕ್ಷ್ಯವಾಗುತ್ತದೆ. ಉದಾ—ಘಟದ ರೂಪದ ಲಕ್ಷಣವಾದ ನೇತ್ರವು ಲಕ್ಷ್ಯದಿಂದ ಬೇರೆಯಾಗಿರುತ್ತದೆ. ಮತ್ತು ಗಂಧವು ಸೃಷ್ಟಿಯಿಂದ ಅಭಿನ್ನವಾದುದು. ಇದೇ ರೀತಿ ಭಿನ್ನಭಿನ್ನ ಲಕ್ಷ್ಯಲಕ್ಷಣವನ್ನು ತಿಳಿದುಕೊಳ್ಳಬೇಕು. ಶೂನ್ಯದ ಉತ್ತರವನ್ನು ಮೊದಲೇ ಕೊಟ್ಟಿರುತ್ತೇವೆ. ಶೂನ್ಯದ ಜ್ಞಾತನು ಶೂನ್ಯಕ್ಕಿಂತಲೂ ಬೇರೆಯಾಗಿರುತ್ತಾನೆ.

ಸರ್ವಸ್ಯ ಸಂಸಾರಸ್ಯ ದುಃಖಾತ್ಮಕತ್ವಂ ಸರ್ವತೀರ್ಥಂಕರ ಸಂಗತಂ ॥

ಸರ್ವದರ್ಶನಸಂಗ್ರಹ.

ಯಾರನ್ನು ಬೌದ್ಧರು ತೀರ್ಥಂಕರರೆಂದು ನಂಬುತ್ತಾರೋ ಅವರನ್ನೇ ಜೈನರು ನಂಬುತ್ತಾರೆ. ಆದಕಾರಣ ಇವರಿಬ್ಬರೂ ಒಂದೇ. ಹಿಂದೆ ಹೇಳಿದ ಭಾವನಾಚತುಷ್ಟಯಗಳಿಂದ—ನಾಲ್ಕು ಭಾವನೆಗಳಿಂದ—ಸಕಲ ವಾಸನೆಗಳ ನಿವೃತ್ತಿಯಾಗಿ ಶೂನ್ಯರೂಪವಾದ ನಿರ್ವಾಣವನ್ನು, ಮುಕ್ತಿಯೆಂದು ತಿಳಿಯುತ್ತಾರೆ. ತಮ್ಮ ಶಿಷ್ಯರಿಗೆ ಯೋಗಾಚಾರವನ್ನು ಪದೇಶಿಸುತ್ತಾರೆ. ಗುರುವಿನ ವಚನವನ್ನು ಪ್ರಮಾಣವಾಗಿ ತೆಗೆದುಕೊಳ್ಳುತ್ತಾರೆ. ಅನಾದಿಬುದ್ಧಿಯಲ್ಲಿ ವಾಸನೆಯಿರುವುದರಿಂದ ಬುದ್ಧಿಯೇ ಅನೇಕಾಕಾರವಾಗಿ ಭಾಸವಾಗುತ್ತದೆ. ಅವುಗಳಲ್ಲಿ ಮೊದಲನೆಯದು,

ಸ್ಕಂಧ :—

ರೂಪವಿಜ್ಞಾನ ವೇದನಾಸಂಜ್ಞಾ ಸಂಸ್ಕಾರ ಸಂಜ್ಞಕಃ ॥

೧. ಇಂದ್ರಿಯಗಳಿಂದ ರೂಪಾದಿವಿಷಯಗಳನ್ನು ಗ್ರಹಣ ಮಾಡುವುದು ' ರೂಪಸ್ಕಂಧವು.' ೨. ಆಲಯ ವಿಜ್ಞಾನ, ಪ್ರವೃತ್ತಿ ಯನ್ನು ತಿಳಿಯುವ ವ್ಯವಹಾರವು ' ವಿಜ್ಞಾನಸ್ಕಂಧ 'ವು. ೩. ರೂಪ ಸ್ಕಂಧ ವಿಜ್ಞಾನಸ್ಕಂಧಗಳಿಂದ ಉತ್ಪನ್ನವಾದ ಸುಖದುಃಖ ಮೊದ ಲಾದುವುಗಳ ಪ್ರತೀತಿರೂಪವಾದ ವ್ಯವಹಾರವು ' ವೇದನಾಸ್ಕಂಧ 'ವು. ೪. ಗೌ ಮೊದಲಾದ ಸಂಜ್ಞೆಗಳ ಸಂಬಂಧವನ್ನು ಸಂಜ್ಞೆಗಳೊಂದಿಗೆ ತಿಳಿಯುವುದು ' ಸಂಜ್ಞಾಸ್ಕಂಧ 'ವು. ೫. ವೇದನಾಸ್ಕಂಧದಿಂದ ರಾಗ ದ್ವೇಷಾದಿಕ್ಲೇಶಗಳೂ, ಹಸಿವು, ಬಾಯಾರಿಕೆ ಮೊದಲಾದ ಉಪಕ್ಲೇಶ ಗಳೂ ಮತ್ತು ಮದ, ಪ್ರಮಾದ, ಅಭಿಮಾನ, ಧರ್ಮ ಮತ್ತು ಅಧರ್ಮ ರೂಪವಾದ ವ್ಯವಹಾರವು ' ಸಂಸ್ಕಾರ ಸ್ಕಂಧವು ' ಎಂದು ತಿಳಿಯು ತ್ತಾರೆ. ಎಲ್ಲ ಜಗತ್ತನ್ನು ದುಃಖರೂಪವೆಂದೂ, ದುಃಖದ ಮನೆ ಯೆಂದೂ, ದುಃಖದ ಸಾಧನರೂಪವೆಂದೂ ಭಾವಿಸಿ ಜಗತ್ತಿನಿಂದ ಬಿಡುಗಡೆ ಹೊಂದುವುದು ಮುಕ್ತಿಯು, ಅನುಮಾನ ಮತ್ತು ಜೀವ ನನ್ನು ಒಪ್ಪದಿರುವುದು, ಇವನ್ನು ಬೌದ್ಧರು ಚಾರವಾಕರಿಗಿಂತ ಅಧಿಕ ವಾಗಿ ನಂಬುತ್ತಾರೆ.

ದೇಶನಾ ಲೋಕನಾಥಾನಾಂ ಸತ್ವಾಶಯವಶಾನುಗಾಃ।
ಭಿದ್ಯಂತೇ ಬಹುಧಾ ಲೋಕೇ ಉಪಾಯೈರ್ಬಹುಭಿಃ ಕಲ॥೧॥
ಗಂಭೀರೋತ್ತಾನಭೇದೇನ ಕ್ವಚಿಚ್ಚೋ ಭಯಲಕ್ಷಣಃ।
ಭಿನ್ನಾ ಹಿ ದೇಶನಾ ಭಿನ್ನ ಶೂನ್ಯತಾದ್ವಯಲಕ್ಷಣಾ ॥೨॥
ಆರ್ಹಾನುಪಾಜ್ಯ ಬಹುಶೋ ದ್ವಾದಶಾಯತನಾನಿ ವೈ।
ಪರಿತಃ ಪೂಜನೀಯಾನಿ ಕಮನ್ಯೈರಿಹ ಪೂಜಿತೈಃ ॥೩॥
ಜ್ಞಾನೇಂದ್ರಿಯಾಣಿ ಪಂಚೈವ ತಥಾ ಕರ್ಮೇಂದ್ರಿಯಾಣಿ ಚ।
ಮನೋ ಬುದ್ಧಿರಿತಿ ಪ್ರೋಕ್ತಂ ದ್ವಾದಶಾಯತನಂ ಬುಧೈಃ ॥೪॥

ಅಂದರೆ ಜ್ಞಾನಿಗಳೂ, ವಿರಕ್ತರೂ, ಜೀವನ್ಮುಕ್ತರೂ, ಲೋಕ ನಾಥರೂ ಆದ ಬುದ್ಧ ಮೊದಲಾದ ತೀರ್ಥಂಕರರ, ಪದಾರ್ಥಗಳ ಸ್ವರೂಪವನ್ನರಿಯುವ ಭಿನ್ನ ಭಿನ್ನ ಪದಾರ್ಥಗಳ ಬಹಳ ಭೇದ

ಗಳಿಂದಲೂ, ಉಪಾಯಗಳಿಂದಲೂ ಹೇಳಲ್ಪಟ್ಟ ಉಪದೇಶವನ್ನು ಒಪ್ಪಬೇಕು. ॥೧॥ ಗುರುಗಳ ಬಹಳ ಗಂಭೀರವೂ, ಪ್ರಸಿದ್ಧವೂ ಆದ ಶೂನ್ಯಲಕ್ಷಣಯುಕ್ತವಾದ ಭೇದದಿಂದ, ಹಲವೆಡೆ ಗುಪ್ತ ಮತ್ತು ಪ್ರಕಟರೂಪದಿಂದ ಮೊದಲು ಹೇಳಲ್ಪಟ್ಟ ಉಪದೇಶಗಳನ್ನು ಒಪ್ಪುವುದು. ॥೨॥ ದ್ವಾದಶಾಯತನಪೂಜೆಯೇ ಮೋಕ್ಷವನ್ನು ಕೊಡುವಂತಹುದು. ಆ ಪೂಜೆಗಾಗಿ ಬಹಳವಾದ ದ್ರವ್ಯಾದಿ ಪದಾರ್ಥಗಳನ್ನು ಗಳಿಸಿಕೊಂಡು ದ್ವಾದಶಾಯತನ ಅಂದರೆ ಹನ್ನೆರಡು ವಿಧವಾದ ಸ್ಥಾನ ವಿಶೇಷಗಳನ್ನು ನಿರ್ಮಿಸಿ ಎಲ್ಲ ವಿಧದಿಂದ ಪೂಜೆಮಾಡಬೇಕು. ಬೇರೆಯವರ ಪೂಜೆಮಾಡುವುದರಿಂದೇನುಪ್ರಯೋಜನ? ॥೩॥ ಇವರ ದ್ವಾದಶಾಯತನ ಪೂಜೆ ಹೀಗಿದೆ—ಶ್ರೋತ್ರ, ತ್ವಕ್, ಚಕ್ಷು, ಜಿಹ್ವಾ ಮತ್ತು ನಾಸಿಕಾ ಎಂಬ ಪಂಚಜ್ಞಾನೇಂದ್ರಿಯಗಳೂ, ವಾಣಿ, ಹಸ್ತ, ಪಾದ, ಗುಹ್ಯೇಂದ್ರಿಯ ಮತ್ತು ಉಪಸ್ಥ ಈ ಪಂಚಕರ್ಮೇಂದ್ರಿಗಳೂ, ಒಟ್ಟಿಗೆ ಈ ಹತ್ತು ಇಂದ್ರಿಗಳು, ಮನಸ್ಸು ಮತ್ತು ಬುದ್ಧಿ ಇವುಗಳ ಸತ್ಕಾರ ಮಾಡುವುದು; ಅಂದರೆ ಇವುಗಳನ್ನು ಆನಂದದಲ್ಲಿ ಪ್ರವೃತ್ತಗೊಳಿಸುವುದು. ಈ ಮೊದಲಾದುದು ಬೌದ್ಧರ ಮತ ॥೪॥

ಉತ್ತರ:—ಎಲ್ಲ ಜಗತ್ತು ದುಃಖರೂಪವಾಗಿದ್ದರೆ ಯಾವ ಜೀವನಲ್ಲಿಯೂ ಪ್ರವೃತ್ತಿ ಇರಬಾರದಿತ್ತು. ಜಗತ್ತಿನಲ್ಲಿ ಜೀವಾತ್ಮರ ಪ್ರವೃತ್ತಿಯು ಪ್ರತ್ಯಕ್ಷವಾಗಿ ಕಂಡುಬರುತ್ತದೆ. ಆದುದರಿಂದ ಇಡೀ ಜಗತ್ತು ದುಃಖರೂಪವಾಗಲಾರದು. ಇದರಲ್ಲಿ ಸುಖದುಃಖಗಳೆರಡೂ ಇವೆ. ಬೌದ್ಧರು ಇದೇ ರೀತಿಯ ಸಿದ್ಧಾಂತವನ್ನು ನಂಬುತ್ತಾರಾದರೆ ಊಟ ಉಪಚಾರಗಳನ್ನೂ, ಪಥ್ಯ ಔಷಧಾದಿ ಸೇವನವನ್ನು ಮಾಡಿ ಶರೀರರಕ್ಷಣೆ ಮಾಡುವುದರಲ್ಲಿ ಪ್ರವೃತ್ತರಾಗಿ ಸುಖವೆಂದು ಏಕೆ ತಿಳಿಯುತ್ತಾರೆ? 'ನಾವು ಪ್ರವೃತ್ತರೇನೋ ಆಗುತ್ತೇವೆ. ಆದರೂ ದುಃಖವೆಂದೇ ತಿಳಿಯುತ್ತೇವೆ ಎಂದು ಯಾರಾದರೂ ಹೇಳುವುದಾದರೆ ಈ ಹೇಳಿಕೆಯೇ ಸಂಭವವಲ್ಲ. ಏಕೆಂದರೆ ಜೀವನು ಸುಖವೆಂದು ತಿಳಿದು ಪ್ರವೃತ್ತನೂ, ದುಃಖವೆಂದು ತಿಳಿದು ನಿವೃತ್ತನೂ ಆಗುತ್ತಾನೆ. ಪ್ರಪಂಚದಲ್ಲಿ ಧರ್ಮಕ್ರಿಯೆ, ವಿದ್ಯೆ, ಸತ್ಸಂಗಾದಿ ಶ್ರೇಷ್ಠವ್ಯವಹಾರಗಳೆಲ್ಲವೂ ಸುಖವನ್ನು ಕೊಡುತ್ತವೆ. ಇವುಗಳನ್ನು ಬೌದ್ಧರ ಹೊರತು ಇನ್ನಾರೂ

ದುಃಖದ ಕಾರಣಗಳೆಂದು ನಂಬಲಾರನು. ಪಂಚಸ್ಕಂಧಗಳೂ ಅತ್ಯಂತ ಅಪೂರ್ಣವಾಗಿವೆ. ಇಂತಹ ಸ್ಕಂಧಗಳನ್ನು ಮಾಡತೊಡಗಿದರೆ ಒಂದೊಂದರ ಭೇದಗಳೇ ಅನೇಕವಾಗಬಲ್ಲುವು. ನಾಥರಿಗೂ ನಾಥನಾದ ಅನಾದಿ ಪರಮಾತ್ಮನನ್ನು ನಂಬದ ಮೇಲೆ, ಉಪದೇಶಕರು ಮತ್ತು ಲೋಕನಾಥರೆಂದು ತಿಳಿಯಲ್ಪಡುವ ತೀರ್ಥಂಕರರು ಯಾರಿಂದ ಉಪದೇಶವನ್ನು ಪಡೆದರು? ಸ್ವಯಂ ಪ್ರಾಪ್ತವಾಯಿತು ಎಂದು ಹೇಳುವುದೇನೂ ಸರಿಯಲ್ಲ. ಏಕೆಂದರೆ ಕಾರಣದ ವಿನಾ ಕಾರ್ಯವಾಗುವುದಿಲ್ಲ. ಅಥವಾ ಅವರ ಕಥನದಂತೆ ಹಾಗೆಯೇ ಆಗಿದ್ದರೆ, ಈಗಲೂ ಅವರಲ್ಲಿ ಓದದೆ ಓದಿಸದೆ, ಕೇಳದೆ ಹೇಳದೆ ಮತ್ತು ಜ್ಞಾನಿಗಳ ಸತ್ಸಂಗ ಗೈಯದೆ ಜ್ಞಾನಿಗಳಾಗುವುದಿಲ್ಲವೇಕೆ? ಆಗುವುದಿಲ್ಲವೆಂದ ಮೇಲೆ ಇವರ ಕಥನವು ಸರ್ವಥಾ ನಿರ್ಮೂಲವೂ, ಯುಕ್ತಿಶೂನ್ಯವೂ, ಸನ್ನಿಪಾತರೋಗಗ್ರಸ್ತನ ಬಡಬಡಿಕೆಯಂತೆಯೂ ಆಗಿರುತ್ತದೆ. ಶೂನ್ಯರೂಪವೇ ಆದ ಅದ್ವೈತದ ಉಪದೇಶವು ಬೌದ್ಧರದಾದರೆ, ವಿದ್ಯಮಾನದಲ್ಲಿರುವ ವಸ್ತುವು ಎಂದಿಗೂ ಶೂನ್ಯರೂಪವಾಗಲಾರದು. ಸೂಕ್ಷ್ಮ ಕಾರಣರೂಪವೇನೊ ಆಗಬಲ್ಲುದು. ಆದುದರಿಂದ ಈ ಹೇಳಿಕೆಯೂ ಭ್ರಮಾತ್ಮಕವಾದುದು. ದ್ರವ್ಯೋಪಾರ್ಜನೆಯಿಂದಲೇ ಪೂರ್ವೋಕ್ತವಾದ ದ್ವಾದಶಾಯತನ ಪೂಜೆಯು ಮೋಕ್ಷಸಾಧಕವೆಂದು ತಿಳಿಯುವುದಾದರೆ ದಶಪ್ರಾಣಗಳ ಮತ್ತು ಹನ್ನೊಂದನೆಯವನಾದ ಜೀವಾತ್ಮನ ಪೂಜೆಯನ್ನೇಕೆ ಮಾಡುವುದಿಲ್ಲ? ಇಂದ್ರಿಯಗಳ ಮತ್ತು ಅಂತಃಕರಣದ ಪೂಜೆಯೂ ಮೋಕ್ಷಪ್ರದವಾಗಿರುವುದಾದರೆ ಬೌದ್ಧರಿಗೂ, ವಿಷಯ ಭೋಗಿಗಳಿಗೂ ಭೇದವೇನುಳಿಯಿತು? ಇವುಗಳಿಂದ ಬೌದ್ಧರು ದೂರವಾಗಲಾರದೇ ಹೋದದಮೇಲೆ ಇಂತಹ ಮುಕ್ತಿಯಾದರೂ ಎಲ್ಲಿ ಉಳಿಯಿತು? ವಿಷಯಗಳಿರುವಲ್ಲಿ ಮುಕ್ತಿಗೇನು ಕೆಲಸ? ಸಾದೃಶ್ಯವು ಬೇರೆಲ್ಲಿಯೂ ಸಿಕ್ಕಲಾರದಂಥಾ ತಮ್ಮ ಅವಿದ್ಯೆಯ ಉನ್ನತಿಯನ್ನಿವರು ಮಾಡಿಕೊಂಡಿರುತ್ತಾರೇನು? ವೇದ ಮತ್ತು ಪರಮಾತ್ಮನ ಮೇಲೆ ವಿರೋಧ ಕಟ್ಟಿಕೊಂಡುದಕ್ಕೆ ಇವರಿಗೆ ಸಿಕ್ಕಿದ ಫಲವಾದರೂ ಇದೇ ಎಂದು ನಿಶ್ಚಯವಾಗುತ್ತದೆ. ಮೊದಲೇನೊ ಎಲ್ಲ ಜಗತ್ತು ದುಃಖರೂಪವಾದುದೆಂಬ ಭಾವನೆಗೈದರು. ನಡುವೆ ದ್ವಾದಶಾಯತನ ಪೂಜೆಯನ್ನು

ತಂದು ತೂರಿದರು. ಇವರ ದ್ವಾದಶಾಯತನಪೂಜೆಯು ಮುಕ್ತಿಯನ್ನು ಕೊಡುವಂತಹದಾಗಿರಬೇಕಾದರೆ ಅದೇನು ಸಾಂಸಾರಿಕಪದಾರ್ಥ ಗಳಿಂದ ಬೇರೆಯಾದುದೆ? ಕಣ್ಣು ಯಾವುದಾದರೂ ರತ್ನವನ್ನು ಹುಡುಕ ಲೆಳಸಿದರೆ ಅಥವಾ ಹುಡುಕಿದರೆ ಅದು ಸಿಕ್ಕೀತೆ? ವೇದ ಮತ್ತು ಪರಮಾತ್ಮನನ್ನು ನಂಬದಿರುವುದರಿಂದ ಇವರ ಲೀಲೆಯೂ ಅದೇ ರೀತಿ ಯಾಯಿತು. ಸುಖವನ್ನಿಚ್ಛಿಸುವುದಾದರೆ ಈಗಲಾದರೂ ವೇದ ಮತ್ತು ಪರಮಾತ್ಮನ ಆಶ್ರಯವನ್ನು ಹೊಂದಿ ತಮ್ಮ ಜನ್ಮವನ್ನು ಸಫಲಗೊಳಿಸ ಬೇಕು. ವಿವೇಕವಿಲಾಸವೆಂಬ ಗ್ರಂಥದಲ್ಲಿ ಬೌದ್ಧರ ಮತವನ್ನು ಈ ರೀತಿ ಪ್ರತಿಪಾದಿಸಿದ್ದಾರೆ:—

ಬೌದ್ಧಾನಾಂ ಸುಗತೋ ದೇವೋ ವಿಶ್ವಂ ಚ ಕ್ಷಣಭಂಗುರಂ।
ಆರ್ಯಸತ್ವಾಖ್ಯಯಾ ತತ್ವಚತುಷ್ಟಯಮಿದಂ ಕ್ರಮಾತ್ ॥೧॥

ದುಃಖಮಾಯತನಂ ಚೈವ ತತಃ ಸಮುದಯೋ ಮತಃ।
ಮಾರ್ಗಶ್ಚೇತ್ಯಸ್ಯ ಚ ವ್ಯಾಖ್ಯಾ ಕ್ರಮೇಣ ಶ್ರೂಯತಾಮತಃ॥೨

ದುಃಖಸಂಸ್ಕಾರಿಣಸ್ಕಂಧಾಸ್ತೇ ಚ ಪಂಚ ಪ್ರಕೀರ್ತಿತಾಃ।
ವಿಜ್ಞಾನಂ ವೇದನಾಸಂಜ್ಞಾ ಸಂಸ್ಕಾರೋ ರೂಪಮೇವ ಚ॥೩॥

ಪಂಚೇಂದ್ರಿಯಾಣಿ ಶಬ್ದಾದ್ಯಾಃ ವಿಷಯಾಃ ಪಂಚಮಾನಸಂ।
ಧರ್ಮಾಯತನಮೇತಾನಿ ದ್ವಾದಶಾಯತನಾನಿ ತು ॥೪॥

ರಾಗಾದೀನಾಂ ಗಣೋ ಯಃಸ್ಯಾತ್ಸಮುದೇತಿ ನೃಣಾಂ ಹೃದಿ।
ಆತ್ಮಾತ್ಮೀಯ ಸ್ವಭಾವಾಖ್ಯಃ ಸಸ್ಯಾತ್ಸಮುದಯಃ ಪುನಃ ॥೫॥

ಕ್ಷಣಿಕಾಃ ಸರ್ವಸಂಸ್ಕಾರಾ ಇತಿ ಯಾ ವಾಸನಾಸ್ಥಿರಾ।
ಸ ಮಾರ್ಗ ಇತಿ ವಿಜ್ಞೇಯಃ ಸ ಚ ಮೋಕ್ಷೋಽಭಿಧೀಯತೇ॥

ಪ್ರತ್ಯಕ್ಷಮನುಮಾನಂ ಚ ಪ್ರಮಾಣಂ ದ್ವಿತಯಂ ತಥಾ।
ಚತುಃಪ್ರಸ್ಥಾನಿಕಾ ಬೌದ್ಧಾ ಖ್ಯಾತಾ ವೈಭಾಷಿಕಾದಯಃ ॥೬॥

ಅರ್ಥೋರ್ಜ್ಞಾನಾನ್ವಿತೋ ವೈಭಾಷಿಕೇಣ ಬುಧು ಮನ್ಯತೇ।
ಸೌತ್ರಾಂತಿಕೇನ ಪ್ರತ್ಯಕ್ಷಗ್ರಾಹ್ಯೋಽರ್ಥೋ ನ ಬಹಿರ್ಮತಃ॥

ಆಕಾರಸಹಿತಾ ಬುದ್ಧಿರ್ಯೋಗಾ ಚಾರಸ್ಯ ಸಮ್ಮತಾ।
ಕೇವಲಾಂ ಸಂವಿದಾಂ ಸ್ವಸ್ಥಾಂ ಮನ್ಯಂತೇ ಮಧ್ಯಮಾಃ ಪುನಃ ॥

ರಾಗಾದಿಜ್ಞಾನಸಂತಾನವಾಸನಾಚ್ಛೇದಸಂಭವಾ।
ಚತುರ್ಣಾಮಪಿ ಬೌದ್ಧಾನಾಂ ಮುಕ್ತಿರೇಷಾ ಪ್ರಕೀರ್ತಿತಾ ॥೧೦

ಕೃತ್ತಿಃ ಕಮಂಡಲುರ್ಮೌಂಡ್ಯಂ ಚೀರಂ ಪೂರ್ವಾಹ್ಣಭೋಜನಂ
ಸಂಘೋ ರಕ್ತಾಂಬರತ್ವಂ ಚ ಶಿಶ್ರಿಯೇ ಬೌದ್ಧಭಿಕ್ಷುಭಿಃ ॥೧೧॥

ವಿವೇಕವಿಲಾಸ ಉಲ್ಲಾಸ ೮

ಸುಗತದೇವನಾದ ಬುದ್ಧಭಗವಂತನು ಬೌದ್ಧರ ಪೂಜನೀಯ ದೇವರು. ಜಗತ್ತು ಕ್ಷಣಭಂಗುರವಾದುದು, ಆರ್ಯವುರುಷ, ಆರ್ಯಾಸ್ತ್ರೀ, ಮತ್ತು ತತ್ವಗಳ ಆಖ್ಯಾ, ಸಂಜ್ಞಾದಿಸ್ಪಸಿದ್ಧಿ—ಇವು ನಾಲ್ಕು ತತ್ವಗಳು ಬೌದ್ಧರ ಮಂತವ್ಯವ್ಯಪದಾರ್ಥಗಳು ॥೧॥ ಈ ವಿಶ್ವವನ್ನು ದುಃಖದ ಆಯತವೆಂದು ತಿಳಿಯಬೇಕು. ಅನಂತರ ಸಮುದಯ ಅಂದರೆ ಉನ್ನತಿಯಾಗುತ್ತದೆ. ಇವುಗಳ ವ್ಯಾಖ್ಯಾನವನ್ನು ಕ್ರಮವಾಗಿ ಕೇಳಿರಿ. ॥೨॥ ಜಗತ್ತಿನಲ್ಲಿರುವುದು ದುಃಖವೇ. ಹಿಂದೆ ಹೇಳಿದ ಪಂಚಸ್ಕಂಧ ಗಳನ್ನು ತಿಳಿದುಕೊಳ್ಳಬೇಕು. ॥೩॥ ಪಂಚಜ್ಞಾನೇಂದ್ರಿಯಗಳು, ಶಬ್ದ ಮೊದಲಾದ ಅವುಗಳ ಪಂಚವಿಷಯಗಳು. ಮನಸ್ಸು ಮತ್ತು ಬುದ್ಧಿ, ಈ ಅಂತಃಕರಣಗಳು—ಇದು ದ್ವಾದಶಧರ್ಮಾಯತನಗಳು. ॥೪॥ ಮನುಷ್ಯರ ಹೃದಯದಲ್ಲಿ ಆಗುವ ರಾಗದ್ವೇಷಾದಿಗಳ ಸಮೂಹದ ಉತ್ಪತ್ತಿಯೇ ಸಮುದಯವು. ಮತ್ತು ಆತ್ಮ ಮತ್ತು ಆತ್ಮನ ಸಂಬಂಧವಾದ ಸ್ವಭಾವವು ಆಖ್ಯಾ ಇವುಗಳಿಂದಲೇ ಪುನಃ ಸಮುದಯವಾಗುತ್ತದೆ. ॥೫॥ ಎಲ್ಲ ಸಂಸ್ಕಾರಗಳೂ ಕ್ಷಣಿಕವೆಂಬ ವಾಸನೆಯು ಸ್ಥಿರವಾಗುವುದು ಬೌದ್ಧರಮಾರ್ಗವು. ಆ ಶೂನ್ಯತತ್ವವೇ ಶೂನ್ಯರೂಪವಾಗಿ ಬಿಡುವುದು ಮೋಕ್ಷವು. ॥೬॥ ಬೌದ್ಧರು ಪ್ರತ್ಯಕ್ಷ ಮತ್ತು ಅನುಮಾನ ಎಂಬ ಎರಡೇ ಪ್ರಮಾಣಗಳನ್ನು ನಂಬುತ್ತಾರೆ. ಇವರಲ್ಲಿ ವೈಭಾಷಿಕ, ಸೌತ್ರಾಂತಿಕ, ಯೋಗಾಚಾರ ಮತ್ತು ಮಾಧ್ಯ ಮಿಕ ಎಂಬ ವಾಲ್ಕು ಭೇದಗಳವೆ. ॥೭॥ ಇವರಲ್ಲಿ ವೈಭಾಷಿಕನು ಜ್ಞಾನದಲ್ಲಿರುವ ಅರ್ಥವು ವಿದ್ಯಮಾನವಾಗಿದೆಯೆಂದು ತಿಳಿಯುತ್ತಾನೆ.

ಏಕೆಂದರೆ ಜ್ಞಾನದಲ್ಲಿಲ್ಲದಿದ್ದುದರ ಇರುವಿಕೆಯನ್ನು ಸಿದ್ಧಪುರುಷನು ಒಪ್ಪಲಾರನು. ಮತ್ತು ಸೌತ್ರಾಂತಿಕನು ಒಳಗೆ ಪ್ರತ್ಯಕ್ಷ ಪದಾರ್ಥವನ್ನು ಒಪ್ಪುತ್ತಾನೆ. ಹೊರಗೆ ಒಪ್ಪುವುದಿಲ್ಲ. ॥೮॥ ಯೋಗಾಚಾರನು ಆಕಾರಸಹಿತವೂ, ವಿಜ್ಞಾನಯುಕ್ತವೂ ಆದ ಬುದ್ಧಿಯನ್ನು ನಂಬುತ್ತಾನೆ. ಮಾಧ್ಯಮಿಕನು ತನ್ನಲ್ಲಿ ಬರೇ ಪದಾರ್ಥಗಳ ಜ್ಞಾನವನ್ನು ಮಾತ್ರ ನಂಬುತ್ತಾನೆ. ಪದಾರ್ಥಗಳನ್ನು ನಂಬುವುದಿಲ್ಲ. ॥೯॥ ರಾಗಾದಿ ಜ್ಞಾನಪ್ರವಾಹದ ವಾಸನೆಯ ನಾಶದಿಂದ ಉತ್ಪನ್ನವಾದ ಮುಕ್ತಿಯು ನಾಲ್ವರು ಬೌದ್ಧರಿಗೂ ಸಮ್ಮತವಾದುದು. ॥೧೦॥ ಮೃಗಚರ್ಮ, ಕಮಂಡಲು, ತಲೆಬೋಳಿಸಿರುವುದು, ವಲ್ಕಲವಸ್ತ್ರ, ಪೂರ್ವಾಹ್ಣ ಅಂದರೆ ಒಂಭತ್ತು ಗಂಟೆಗಳ ಮೊದಲೇ ಊಟ ಮಾಡುವುದು, ಒಬ್ಬಂಟಿಗನಾಗಿರದಿರುವುದು, ರಕ್ತವಸ್ತ್ರಧಾರಣ ಇದು ಬೌದ್ಧಸಂನ್ಯಾಸಿಗಳ ವೇಷವು. ॥೧೧॥.

ಉತ್ತರ:--ಸುಗತಬುದ್ಧನೇ ಬೌದ್ಧರ ದೇವರಾದರೆ ಅವನ ಗುರುವು ಯಾರಾಗಿದ್ದನು? ಮತ್ತು ವಿಶ್ವವು ಕ್ಷಣಭಂಗುರವಾಗಿದ್ದರೆ ಎಷ್ಟೋ ಕಾಲದ ಹಿಂದೆ ನೋಡಿದ ವಸ್ತುವಿನ ಅದೇ ಇದು ಎಂಬ ಸ್ಮರಣೆಯಾಗಬಾರದು. ಕ್ಷಣಭಂಗುರವಾಗಿದ್ದರೆ ಆ ಪದಾರ್ಥವು ಉಳಿಯುತ್ತಿರಲಿಲ್ಲ. ಆಂದಮೇಲೆ ಸ್ಮರಣೆಮಾಡುವುದಾದರೂ ಯಾವುದರದ್ದು? ಕ್ಷಣಿಕವಾದವೇ ಬೌದ್ಧರ ಮಾರ್ಗವಾದರೆ ಅವರ ಮೋಕ್ಷವೂ ಕೂಡ ಕ್ಷಣಭಂಗುರವಾಗುವುದು. ಜ್ಞಾನಯುಕ್ತವಾದುದು ದ್ರವ್ಯವಾದರೆ ಜಡದ್ರವ್ಯದಲ್ಲಿಯೂ ಜ್ಞಾನವಿರಬೇಕು. ಅದು ಚಲನಾದಿ ಕ್ರಿಯೆಗಳನ್ನು ಯಾವುದರ ಮೇಲೆ ಮಾಡುತ್ತದೆ? ಹೊರಗೆ ತೋರುವಂತಹುದು ಹೇಗೆ ಮಿಥ್ಯೆಯಾಗಬಲ್ಲುದು? ಬುದ್ಧಿಯು ಆಕಾರಸಹಿತವಾಗಿದ್ದರೆ ಅದು ಕಣ್ಣಿಗೆ ತೋರುವಂತಹುದಾಗಿರಬೇಕಿತ್ತು. ಕೇವಲ ಜ್ಞಾನವೇ ಹೃದಯದಲ್ಲಿ ಆತ್ಮಸ್ಥವಾಗಿದ್ದರೆ, ಮತ್ತು ಬಾಹ್ಯ ಪದಾರ್ಥಗಳನ್ನು ಕೇವಲ ಜ್ಞಾನವೆಂದೇ ಒಪ್ಪುವುದಾದರೆ, ಜ್ಞೇಯ ಪದಾರ್ಥದ ವಿನಾ ಜ್ಞಾನವೇ ಇರಲಾರದು. ವಾಸನಾಚ್ಛೇದವೇ ಮುಕ್ತಿಯೆಂದು ನಂಬಿದರೆ ಸುಷುಪ್ತಿಯನ್ನು ಮುಕ್ತಿಯೆನ್ನಬೇಕಾದೀತು.

ಹಾಗೆ ತಿಳಿಯುವುದು ವಿದ್ಯೆಗೆ ವಿರುದ್ಧವಾದುದರಿಂದ ತಿರಸ್ಕಾರ ಮಾಡಲು ಯೋಗ್ಯವಿದೆ.

ಬೌದ್ಧಮತದವರ ಈ ಮೊದಲಾದ ಎಲ್ಲ ವಿಷಯಗಳನ್ನು ಸಂಕ್ಷೇಪವಾಗಿ ಪ್ರದರ್ಶಿಸಿರುತ್ತೇವೆ. ಇನ್ನು ಬುದ್ಧಿವಂತರೂ, ವಿಚಾರ ಶೀಲರೂ ಆದ ಜನರು ಅವಲೋಕನಗೈದು ಇವರ ವಿದ್ಯೆಯೂ ಮತವೂ ಯಾವ ರೀತಿಯಿವೆಯೆಂಬುದನ್ನು ಅರಿತುಕೊಳ್ಳುವರು. ಇದನ್ನು ಜೈನರೂ ನಂಬುತ್ತಾರೆ.

ಇನ್ನು ಮುಂದೆ ಜೈನಮತದ ವರ್ಣನೆ

ಪ್ರಕರಣರತ್ನಾಕರ ಮೊದಲನೆಯ ಭಾಗ, ನಯಚಕ್ರಸಾರದಲ್ಲಿ ಕೆಳಗಿನ ವಿಷಯಗಳನ್ನು ಬರೆದಿದ್ದಾರೆ :--

ಬೌದ್ಧರು ಸಮುಯಸಮುಯಗಳಲ್ಲಿ ನವೀನರೀತಿಯಿಂದ (೧) ಆಕಾಶ (೨) ಕಾಲ, (೩) ಜೀವ ಮತ್ತು (೪) ಪುದ್ಗಲ ಈ ನಾಲ್ಕು ದ್ರವ್ಯ ಗಳನ್ನು ನಂಬುತ್ತಾರೆ. ಜೈನರು ಧರ್ಮಾಸ್ತಿಕಾಯ, ಅಧರ್ಮಾಸ್ತಿ ಕಾಯ, ಆಕಾಶಾಸ್ತಿಕಾಯ, ಪುದ್ಗಲಾಸ್ತಿಕಾಯ, ಜೀವಾಸ್ತಿಕಾಯ ಮತ್ತು ಕಾಲ—ಈ ಆರು ದ್ರವ್ಯಗಳನ್ನು ನಂಬುತ್ತಾರೆ. ಇವುಗಳಲ್ಲಿ ಕಾಲವನ್ನು ಅಸ್ತಿಕಾಯವೆನ್ನುವುದಿಲ್ಲ. ಮಾತ್ರವಲ್ಲ ಅದು ಉಪಚಾರ ದಿಂದ ದ್ರವ್ಯವೇ ಹೊರತು ನಿಜವಾಗಿ ದ್ರವ್ಯವಲ್ಲ ಎಂದು ಹೇಳುತ್ತಾರೆ ಅವುಗಳಲ್ಲಿ ಗತಿಪರಿಣಾಮಾತನದಿಂದ ಪರಿಣಾಮವನ್ನು ಹೊಂದಿದ ಜೀವ ಮತ್ತು ಪುದ್ಗಲಗಳ ಗತಿಯನ್ನು ಸಮಾಪದಿಂದ ಸ್ತಂಭನ ಮಾಡುವ ಹೇತುವೇ ಮೊದಲನೆಯ ‘‘ಧರ್ಮಾಸ್ತಿಕಾಯ’’ವು. ಇದು ಅಸಂಖ್ಯಪ್ರದೇಶ ಪರಿಮಾಣ ಮತ್ತು ಲೋಕದಲ್ಲಿ ವ್ಯಾಪಕವಾಗಿದೆ. ಸ್ಥಿರತೆಯಿಂದ ಪರಿಣಾಮಿಗಳಾದ ಜೀವವುದ್ಗಲಗಳ ಸ್ಥಿತಿಯ ಆಶ್ರಯದ ಹೇತುವೇ ಎರಡನೆಯ ‘ಅಧರ್ಮಾಸ್ತಿಕಾಯ’ವು. ಸರ್ವದ್ರವ್ಯಗಳ ಆಧಾರವೂ, ಅವಗಾಹನ, ಪ್ರವೇಶ ನಿರ್ಗಮನಾದಿ ಕ್ರಿಯೆಗಳನ್ನು ಮಾಡುವ ಜೀವ ಮತ್ತು ಪುದ್ಗಲಗಳ ಅವಗಾಹನದ ಹೇತುವೂ ಆಗಿದ್ದು ಸರ್ವವ್ಯಾಪಿಯಾಗಿರುವಂತಹುದು ಮೂರನೆಯ ‘ಆಕಾಶಾಸ್ತಿಕಾಯ’ವು. ಕಾರಣರೂಪವೂ, ಸೂಕ್ಷ್ಮವೂ, ನಿತ್ಯವೂ, ನಿರವಸ, ವರ್ಣಗಂಧ ಸ್ಪರ್ಶ

ಗಳನ್ನುಳ್ಳುದೂ, ಕಾರ್ಯದ ಲಿಂಗವೂ ಮತ್ತು ಪೂರಣಗಲನ ಸ್ವಭಾವವುಳ್ಳುದೂ ಆದುದು ನಾಲ್ಕನೆಯ ' ಪುದ್ಗಲಾಸ್ತಿಕಾಯ 'ವು. ಜೀತನಾ ಲಕ್ಷಣನೂ, ಜ್ಞಾನದರ್ಶನೋಪಯೋಗಿಯೂ, ಅನಂತಪರ್ಯಾಯಗಳಿಂದ ಪರಿಣಾಮಿಯೂ, ಕರ್ತೃವೂ ಭೋಕ್ತೃವೂ ಆದ ಜೀವನು ಐದನೆಯ ' ಜೀವಾಸ್ತಿಕಾಯ 'ವು. ಪೂರ್ವೋಕ್ತವಾದ ಪಂಚಾಸ್ತಿಕಾಯಗಳ ಪರತ್ವ-ಅಪರತ್ವ, ನವೀನತ್ವ-ಪ್ರಾಚೀನತೆ ಮೊದಲಾದ ಚಿಹ್ನೆಯಂತಿದ್ದು, ಪ್ರಸಿದ್ಧ ವರ್ತಮಾನರೂಪ ಪರ್ಯಾಯಯುಕ್ತವಾದುದೇ ಆರನೆಯ ' ಕಾಲ 'ವು.

ಸಮೀಕ್ಷಕ—ಬೌದ್ಧರು ನಾಲ್ಕು ದ್ರವ್ಯಗಳನ್ನು ಪ್ರತಿ ಸಮಯದಲ್ಲಿ ನವನವೀನವಾಗಿ ನಂಬಿರುವುದು ಸರಿಯಲ್ಲ. ಏಕೆಂದರೆ ಅಕಾಶ, ಕಾಲ, ಜೀವ ಮತ್ತು ಪರಮಾಣು—ಇವು ನಾಲ್ಕು ಅನಾದಿಯೂ ಕಾರಣರೂಪದಿಂದ ಅವಿನಾಶಿಯೂ ಆಗಿರುವುದರಿಂದ ನವೀನ ಅಥವಾ ಪ್ರಾಚೀನ ಎಂದಿಗೂ ಆಗಲಾರದು; ಮತ್ತೆ ನವೀನತ್ವ-ಪ್ರಾಚೀನತ್ವಗಳು ಹೇಗೆ ಹೊಂದಬಲ್ಲವು? ಜೈನರು ನಂಬುವುದೂ ಸರಿಯಲ್ಲ, ಏಕೆಂದರೆ ಧರ್ಮಾಧರ್ಮಗಳು ದ್ರವ್ಯಗಳಲ್ಲ; ಅವು ಗುಣಗಳು. ಇವೆರಡೂ ಜೀವಾಸ್ತಿಕಾಯದಲ್ಲಿ ಬಂದು ಬಿಡುವುದರಿಂದ ಆಕಾಶ, ಪರಮಾಣು, ಜೀವ ಮತ್ತು ಕಾಲ—ಇವುಗಳನ್ನು ಮಾತ್ರ ನಂಬಿದರೆ ಸರಿಯಾಗುತ್ತಿತ್ತು. ವೈಶೇಷಿಕರು ನಂಬಿದ ನವದ್ರವ್ಯಗಳೇ ಸರಿಯಾಗಿರುತ್ತವೆ. ಪೃಥಿವ್ಯಾದಿ ಪಂಚತತ್ವಗಳೂ, ಕಾಲ, ದಿಕ್ಕು, ಆತ್ಮ ಮತ್ತು ಮನಸ್ಸು ಈ ಒಂಭತ್ತು ಬೇರೆ ಬೇರೆ ದ್ರವ್ಯಗಳು ನಿಶ್ಚಿತವಾಗಿವೆ. ಜೀವನೊಬ್ಬನನ್ನು ಚೇತನವೆಂದು ನಂಬಿ ಪರಮಾತ್ಮನನ್ನು ನಂಬದಿರುವುದು ಜೈನಬೌದ್ಧರ ಮಿಥ್ಯೆಯ ಸಕ್ಷಪಾತದ ವಿಷಯವು.

ಈಗ ಬೌದ್ಧರೂ ಜೈನರೂ ನಂಬುವ ಸ್ಯಾದ್ವಾದವೆಂಬ ಸಪ್ತಭಂಗಿಯು ಹೀಗಿದೆ:—' ಸನ್ ಘಟಃ ' ಇದು ಪ್ರಥಮಭಂಗವು ಏಕೆಂದರೆ ಘಟವು ತನ್ನ ವಿದ್ಯಮಾನತೆಯಿಂದ ಯುಕ್ತವಾಗಿದೆ, ಅಂದರೆ ' ಘಟವಿದೆ 'ಯೆಂಬುದು ಅಭಾವವನ್ನು ವಿರೋಧಿಸಿದೆ. ' ಅಸನ್ ಘಟಃ ' ಇದು ಎರಡನೆಯ ಭಂಗವು. ' ಗಡಿಗೆಯಲ್ಲಿ ' ಪ್ರಥಮ ಘಟದ ಸದ್ಭಾವಕ್ಕೂ ಈ ಘಟದ ಅಸದ್ಭಾವಕ್ಕೂ ಎರಡನೆಯ ಭಂಗವಾಗು

ತ್ತವೆ. 'ಸನ್ನಸನ್ ಘಟಃ' ಅಂದರೆ ಇದು ಗಡಿಗೆಯೇನೊ ಹೌದು, ಆದರೆ ಬಟ್ಟೆಯಲ್ಲ, ಏಕೆಂದರೆ ಮೊದಲಿನ ಎರಡಕ್ಕಿಂತಲೂ ಭಿನ್ನವಾದುದರಿಂದ ಇದು ತೃತೀಯಭಂಗವು. 'ಘಟೋಽಘಟಃ' ಹೇಗೆ 'ಅಘಟಃ ಪಟಃ' ಎಂಬಲ್ಲಿ ಪಟದಲ್ಲಿ ಘಟದ ಅಭಾವವಿರುವಂತೆ ಎರಡನೆಯ ಘಟದ ಅಭಾವದ ಅಪೇಕ್ಷೆಯು ತನ್ನಲ್ಲಿರುವುದರಿಂದ ಘಟವು ಅಘಟವೆಂದು ಹೇಳಿಸಿಕೊಳ್ಳುವುದು; ಒಂದೇ ಸಲ ಅದಕ್ಕೆ ಎರಡು ಹೆಸರುಗಳವೆ; ಅಂದರೆ 'ಘಟವೂ ಹೌದು; ಅಘಟ'ವೂ ಹೌದು. ಇದು ಚತುರ್ಥಭಂಗವು. ಘಟವನ್ನು ಪಟವೆನ್ನುವುದು ಅಯೋಗ್ಯವಾಗಿದೆ. ಅಂದರೆ ಅದರಲ್ಲಿ ಘಟತ್ವವು ವಕ್ತವ್ಯವೂ ಪಟತ್ವವು ಅವಕ್ತವ್ಯವೂ ಆಗಿದೆ. ಇದು ಪಂಚಮಭಂಗವು. ಯಾವುದು ಘಟವಲ್ಲವೊ ಅದು ಹೇಳಲು ಯೋಗ್ಯವೂ ಅಲ್ಲ. ಮತ್ತು ಯಾವುದು ಅಹುದೋ ಅದು ಇದೆ ಮತ್ತು ಹೇಳಲು ಯೋಗ್ಯವೂ ಆಗಿದೆ. ಇದು ಷಷ್ಠಭಂಗವು. ಹೇಳಲು ಇಷ್ಟವೇನೋ ಇದೆ; ಆದರೆ ಅದಿಲ್ಲ. ಆದುದರಿಂದ ಅದು ಹೇಳಲು ಯೋಗ್ಯವಾದ ಘಟವಲ್ಲ; ಇದು ಸಪ್ತಮ ಭಂಗವು. ಇದೇ ರೀತಿ :—

ಸ್ಯಾದಸ್ತಿ ಜೀವೋಽಯಂ ಪ್ರಥಮೋ ಭಂಗಃ ॥೧॥
ಸ್ಯಾನ್ನಾಸ್ತಿ ಜೀವೋ ದ್ವಿತೀಯೋ ಭಂಗಃ ॥೨॥
ಸ್ಯಾದವಕ್ತವ್ಯೋ ಜೀವಸ್ತೃತೀಯೋ ಭಂಗಃ ॥೩॥
ಸ್ಯಾದಸ್ತಿ ನಾಸ್ತಿರೂಪೋ ಜೀವಶ್ಚತುರ್ಥೋ ಭಂಗಃ ॥೪॥
ಸ್ಯಾದಸ್ತಿ ಅವಕ್ತವ್ಯೋ ಜೀವಃ ಪಂಚಮೋ ಭಂಗಃ ॥೫॥
ಸ್ಯಾನ್ನಾಸ್ತಿ ಅವಕ್ತವ್ಯೋ ಜೀವಃ ಷಷ್ಠೋ ಭಂಗಃ ॥೬॥
ಸ್ಯಾದಸ್ತಿ ನಾಸ್ತಿ ಅವಕ್ತವ್ಯೋ ಜೀವ ಇತಿ ಸಪ್ತಮೋಭಂಗಃ॥೭॥

ಅಂದರೆ 'ಇದ್ದಾನೆ ಜೀವನು' ಹೀಗೆ ಕಥನವಾದರೆ ಜೀವ ವಿರೋಧಿಗಳಾದ ಜಡಪದಾರ್ಥಗಳ ಜೀವನಲ್ಲಿ ಅಭಾವರೂಪಭಂಗವು ಮೊದಲನೆಯದೆನಿಸುತ್ತದೆ. 'ಇಲ್ಲ ಜೀವನು' ಜಡದಲ್ಲಿ ಎಂಬ ಕಥನವೂ ಆಗುತ್ತದೆ. ಆದುದರಿಂದ ಇದು ಎರಡನೆಯ ಭಂಗ. 'ಜೀವನು ಹೇಳಲು ಯೋಗ್ಯನಾಗಿಲ್ಲ' ಇದು ಮೂರನೆಯ ಭಂಗ. ಶರೀರವನ್ನು

ಧರಿಸಿದಾಗ ಪ್ರಸಿದ್ಧನೂ, ಶರೀರದಿಂದ ಬೇರೆಯಾದಾಗ ಅಪ್ರಸಿದ್ಧನೂ ಆಗುತ್ತಾನೆ, ಎಂದು ಕಥನವಾದರೆ ಅದನ್ನು ಚತುರ್ಥಭಂಗವೆನ್ನುತ್ತಾರೆ. 'ಜೀವನಿದ್ದಾನೆ ಆದರೆ ಹೇಳಲು ಯೋಗ್ಯನಲ್ಲ' ಹೀಗೆ ಹೇಳುವುದು ಪಂಚಮಭಂಗವು. 'ಜೀವನನ್ನು ಪ್ರತ್ಯಕ್ಷಪ್ರಮಾಣದಿಂದ ಹೇಳಬರುವುದಿಲ್ಲ. ಆದುದರಿಂದ ಚಕ್ಷುಃ ಪ್ರತ್ಯಕ್ಷವಲ್ಲ, ಈ ವ್ಯವಹಾರವನ್ನು ಆರನೇ ಭಂಗವೆನ್ನುತ್ತಾರೆ. ಒಂದೇ ಕಾಲದಲ್ಲಿ ಜೀವನು ಅನುಮಾನದಿಂದ ಇರುವುದು, ಅದೃಶ್ಯತ್ವದಿಂದ ಇಲ್ಲದಿರುವುದು ಮತ್ತು ಒಂದೇ ರೀತಿಯಲ್ಲಿರದೆ, ಕ್ಷಣಕ್ಷಣದಲ್ಲಿ ಪರಿಣಾಮವನ್ನು ಹೊಂದುವುದು ಅಸ್ತಿ ನಾಸ್ತಿ ಮತ್ತು ನಾಸ್ತಿಅಸ್ತಿ ಎಂಬ ವ್ಯವಹಾರಗಳೂ ಇಲ್ಲದಿರುವುದು ಏಳನೆಯ ಭಂಗವೆನಿಸುತ್ತದೆ.

ಇದೇ ರೀತಿ ನಿತ್ಯತ್ವ, ಸಪ್ತಭಂಗಿ, ಅನಿತ್ಯತ್ವ, ಸಾಮಾನ್ಯಧರ್ಮ, ವಿಶೇಷಧರ್ಮ, ಗುಣ ಮತ್ತು ಪರ್ಯಾಯ—ಇವೆಲ್ಲವುಗಳಲ್ಲಿ ಸಪ್ತಭಂಗಿಯು ಪ್ರತ್ಯೇಕ ವಸ್ತುವಿನಲ್ಲಿ ಆಗುತ್ತದೆ. ಹೀಗಾಗಿ ದ್ರವ್ಯ-ಗುಣ-ಸ್ವಭಾವ-ಪರ್ಯಾಯಗಳು ಅನಂತವಾಗಿರುವುದರಿಂದ ಸಪ್ತಭಂಗಿಯೂ ಅನಂತವಾಗಿರುವುದೆಂಬುದು ಬೌದ್ಧರ ಮತ್ತು ಜೈನರ ಸ್ಯಾದ್ವಾದ ಮತ್ತು ಸಪ್ತಭಂಗಿನ್ಯಾಯವು.

ಸಮೀಕ್ಷಕ—ಈ ಕಥನವು ಒಂದು ಅನ್ಯೋನ್ಯಾಭಾವ ಮತ್ತು ಸಾಧರ್ಮ್ಯ ವೈಧರ್ಮ್ಯಗಳಲ್ಲಿ ಚರಿತಾರ್ಥವಾಗಬಲ್ಲುದು. ಈ ಸರಳವಾದ ಪ್ರಕರಣವನ್ನು ಬಿಟ್ಟು, ಕಠಿಣ ಜಾಲವನ್ನು ರಚಿಸುವುದು ಕೇವಲ ಅಜ್ಞಾನಿಗಳನ್ನು ಸಿಲುಕಿಸಿಕೊಳ್ಳಲಿಕ್ಕಾಗಿಸೆ. ನೋಡಿರಿ! ಅಜೀವದಲ್ಲಿ ಜೀವದ, ಮತ್ತು ಜೀವದಲ್ಲಿ ಅಜೀವದ ಅಭಾವವಿದ್ದೇ ಇರುತ್ತದೆ. ಉದಾ—ಜೀವ ಮತ್ತು ಜಡವು ಇರುವುದರಿಂದ ಸಾಧರ್ಮ್ಯವೂ, ಚೇತನ ಮತ್ತು ಜಡವಾಗಿರುವುದರಿಂದ ವೈಧರ್ಮ್ಯವೂ ಇದೆ. ಅಂದರೆ ಜೀವನದಲ್ಲಿ ಚೈತನ್ಯವಿದೆ. ಜಡತ್ವವು (ನಾಸ್ತಿ) ಇಲ್ಲ. ಹೀಗೆಯೇ ಜಡದಲ್ಲಿ ಜಡತ್ವವಿದೆ; ಚೇತನತ್ವವಿಲ್ಲ. ಇದರಿಂದ ಗುಣ ಕರ್ಮ ಸ್ವಭಾವಗಳ ಸಮಾನಧರ್ಮ ಮತ್ತು ವಿರುದ್ಧಧರ್ಮದ ವಿಚಾರದಿಂದ ಇವರ ಸಪ್ತಭಂಗಿ ಮತ್ತು ಸ್ಯಾದ್ವಾದವು ಸಹಜವಾಗಿಯೇ ಗೊತ್ತಾಗುತ್ತದೆ. ಇಷ್ಟೆಲ್ಲ ಗೊಂದಲವೆಬ್ಬಿಸುವುದು ಯಾವ ಕಾರ್ಯಕ್ಕೆ?

ಬೌದ್ಧ ಜೈನರಲ್ಲಿ ಇಬ್ಬರ ಅಭಿಪ್ರಾಯವೂ ಈ ವಿಷಯದಲ್ಲಿ ಒಂದೇ ಯಾಗಿದೆ. ಸ್ವಲ್ಪ ವ್ಯತ್ಯಾಸವಿರುವುದರಿಂದ ಭಿನ್ನಭಾವವೂ ಬರುತ್ತದೆ.

ಇನ್ನು ಮುಂದೆ ಕೇವಲ ಜೈನಮತ ವಿಷಯವು ಬರೆಯಲ್ಪಡುತ್ತದೆ.

ಚಿದಚಿದ್ದ್ವೀ ಪರೇ ತತ್ವೇ ವಿವೇಕಸ್ತದ್ವಿವೇಚನಂ।
ಉಪಾದೇಯವಮುಪಾದೇಯಂ ಹೇಯಂ ಹೇಯಂ ಚ
ಕುರ್ವತಃ ॥೧॥
ಹೇಯಂ ಹಿ ಕರ್ತೃರಾಗಾದಿ ತತ್ಕಾರ್ಯಮವಿವೇಕಿನಃ।
ಉಪಾದೇಯಂ ಪರಂಜ್ಯೋತಿರುಪಯೋಗೈಕಲಕ್ಷಣಂ ॥೨॥

ಸರ್ವದರ್ಶನಸಂಗ್ರಹ

ಜೈನರು ಚಿತ್—ಚೇತನ, ಮತ್ತು ಅಚಿತ್—ಜಡ ಎಂಬ ಎರಡೇ ಪರತತ್ವಗಳನ್ನು ತಿಳಿಯುತ್ತಾರೆ. ಅವುಗಳನ್ನು ವಿವೇಚಿಸುವುದಕ್ಕೆ ವಿವೇಕವೆಂದೂ, ಗ್ರಾಹ್ಯವಾದುದನ್ನು ಗ್ರಹಿಸಿ ತ್ಯಾಜ್ಯವಾದುದನ್ನು ತ್ಯಜಿಸುವವನಿಗೆ ವಿವೇಕಿಯೆಂದೂ ಹೇಳುತ್ತಾರೆ. ॥೧॥ ಜಗತ್ತಿನ ಕರ್ತೃ ಎಂಬುದನ್ನೂ, ರಾಗ ಮೊದಲಾದುವುಗಳನ್ನೂ, ಪರಮಾತ್ಮನು ಸೃಷ್ಟಿಯನ್ನು ನಿರ್ಮಿಸಿದ್ದಾನೆ ಎಂಬ ಅವಿವೇಕೀ ಮತವನ್ನು ತ್ಯಜಿಸುವುದೂ, ಮತ್ತು ಯೋಗಲಕ್ಷಿತನೂ, ಪರಮಜ್ಯೋತಿಸ್ವರೂಪನೂ ಆದ ಜೀವಾತ್ಮನ ಗ್ರಹಣಮಾಡುವುದೂ ಉತ್ತಮ. ॥೨॥ ಅಂದರೆ ಜೀವಾತ್ಮನ ಹೊರತು ಅನ್ಯಚೇತನತತ್ವವನ್ನವರು ಒಪ್ಪುವುದಿಲ್ಲ. ಅನಾದಿಸಿದ್ಧವಾದ ಈಶ್ವರನಾರೂ ಇಲ್ಲವೆಂದು ಜೈನಬೌದ್ಧರು ಹೇಳುತ್ತಾರೆ. ರಾಜಾ ಶಿವಪ್ರಸಾದರು ತನ್ನ "ಇತಿಹಾಸತಿಮಿರನಾಶಕ" ವೆಂಬ ಗ್ರಂಥದಲ್ಲಿ ಹೀಗೆ ಬರೆದಿದ್ದಾರೆ:—ಇವರಿಗೆ ಎರಡು ಹೆಸರುಗಳಿವೆ. ಒಂದು ಜೈನ ಎರಡನೆಯದು ಬೌದ್ಧ; ಇವು ಪರ್ಯಾಯವಾಚೀ ಶಬ್ದಗಳು. ಆದರೆ ಬೌದ್ಧರಲ್ಲಿ ವಾಮಮಾರ್ಗಿಗಳೂ, ಮದ್ಯಮಾಂಸಾಹಾರಿಗಳೂ ಆದ ಬೌದ್ಧರಿದ್ದಾರೆ. ಇವರೊಡನೆ ಜೈನರ ವಿರೋಧವಿದೆ. ಮಹಾವೀರ ಮತ್ತು ಗೌತಮಗಣಧರರ ಹೆಸರನ್ನು ಬೌದ್ಧರು ಬುದ್ಧ ಎಂಬುದಾಗಿ ಇಟ್ಟಿದ್ದಾರೆ, ಮತ್ತು ಜೈನರು ಗಣಧರರ

ಮತ್ತು ಜಿನವರರೆಂದು ಕರೆದಿದ್ದಾರೆ. ಜೈನಮತದ ಪರಂಪರೆಯವರಾದ ರಾಜಾಶಿವಪ್ರಸಾದರು 'ಇತಿಹಾಸತಿಮಿರನಾಶಕ' ಗ್ರಂಥದ ಮೂರನೆಯ ಖಂಡದಲ್ಲಿ ಹೀಗೆ ಬರೆದಿದ್ದಾರೆ—ಕೆಲವು ಸಾವಿರ ವರ್ಷಗಳ ಮೊದಲು ಆಗಿ ಹೋದ ಸ್ವಾಮಿ ಶಂಕರಾಚಾರ್ಯರ ಮೊದಲು, ಇಡೀ ಭಾರತವರ್ಷದಲ್ಲಿ ಬೌದ್ಧ ಅಥವಾ ಜೈನಮತವು ಹಬ್ಬಿಕೊಂದಿತ್ತು. ಇದಕ್ಕೆ ಟಿಪ್ಪಣಿ ಹೀಗಿದೆ—'ಬೌದ್ಧರೆಂಬುದರ ತಾತ್ಪರ್ಯವು, ಮಹಾವೀರನ ಗಣಧರರಾದ ಗೌತಮಸ್ವಾಮಿಯ ಸಮಯದಿಂದ ಹಿಡಿದು ಶಂಕರಾಚಾರ್ಯರ ಕಾಲದ ವರೆಗೆ ಭಾರತವರ್ಷದಲ್ಲಿ ಹಬ್ಬಿಕೊಂಡಿದ್ದ, ಅಶೋಕನೂ ಈಗಿನ ಮಹಾರಾಜನೂ ಅನುಸರಿಸಿದ ವೇದವಿರುದ್ಧ ಮತವೆಂಬುದಿದೆ. ಅದರಿಂದ ಜೈನರು ಹೇಗೂ ಹೊರಗಾಗಲಾರರು. ಜಿನ ಎಂಬುದರಿಂದ ಜೈನ ಮತ್ತು ಬುದ್ಧ ಎಂಬುದರಿಂದ ಬೌದ್ಧ ಶಬ್ದವು ಹೊರಟಿದೆ. ಎರಡೂ ಸಮಾನಾರ್ಥಕಶಬ್ದಗಳು. ಕೋಶದಲ್ಲಿ ಎರಡರ ಅರ್ಥವೂ ಒಂದೇ ಎಂದು ಬರೆದಿದೆ. ಗೌತಮನನ್ನು ಇಬ್ಬರೂ ಒಪ್ಪುತ್ತಾರೆ. ಹಾಗಲ್ಲದಿದ್ದರೆ ದೀಪವಂತ ಮೊದಲಾದ ಪ್ರಾಚೀನ ಬೌದ್ಧಗ್ರಂಥಗಳಲ್ಲಿ ಶಾಕ್ಯಮುನಿಗೌತಮ ಬುದ್ಧನನ್ನು ಸಾಧಾರಣವಾಗಿ ಮಹಾವೀರ ಎಂದೇ ಬರೆದಿದ್ದಾರೆ. ಅವರ ಸಮಯದಲ್ಲಿ ಎರಡು ಮತಗಳೂ ಒಂದೇಯಾಗಿರಬಹುದೇನೊ. ಜೈನವೆಂದು ಬರೆಯದೆ ಗೌತಮನ ಮತದವರನ್ನು ಬೌದ್ಧರೆಂದು ನಾವು ಬರೆದುದರ ಪ್ರಯೋಜನವೂ ಅನ್ಯದೇಶೀಯರು ಅದನ್ನು ಬೌದ್ಧವೆಂದೇ ಬರೆದುದಾಗಿದೆ.'' ಹೀಗೆಯೇ ಅಮರಕೋಷದಲ್ಲಿಯೂ ಇದೆ—

ಸರ್ವಜ್ಞಃ ಸುಗತೋ ಬುದ್ಧೋ ಧರ್ಮರಾಜಸ್ತಥಾಗತಃ ।
ಸಮಂತ ಭದ್ರೋ ಭಗವಾನ್ಮಾರಜಿಲ್ಲೋಕ ಜಿಜ್ಜಿನಃ ॥೧॥
ಷಡಭಿಜ್ಞೋದಶಬಲೋಽದ್ವಯವಾದೀ ವಿನಾಯಕಃ ।
ಮುನೀಂದ್ರಃ ಶ್ರೀಘನಃ ಶಾಸ್ತಾ ಮುನಿಃ ಶಾಕ್ಯಮುನಿಸ್ತುಯಃ ॥
ಶಶಾಕ್ಯಸಿಂಹಃ ಸರ್ವಾರ್ಥಃ ಸಿದ್ಧಶೌದ್ಧೋದನಿಶ್ಚಸಃ ।
ಗೌತಮಶ್ಚಾರ್ಕ ಬಂಧುಶ್ಚ ಮಾಯಾದೇವೀ ಸುತಶ್ಚಸಃ ॥೩॥

[ಅಮರಕೋಷ ೧, ೧, ೮-೧೦]

ಈಗ ನೋಡಿರಿ. ಬುದ್ಧ, ಜಿನ ಮತ್ತು ಬೌದ್ಧ, ಜೈನ ಎಂಬಿವು ಒಬ್ಬನದೇ ಹೆಸರುಗಳು ಹೌದೊ ಅಲ್ಲವೊ? ಅಮರಸಿಂಹನೂ ಬುದ್ಧ, ಜಿನರು ಒಬ್ಬರೇ ಎಂದು ತಪ್ಪು ಬರೆದನೇನು?

ಅವಿದ್ವಾಂಸರಾದ ಜೈನರಿಗೆ ತಮ್ಮದೂ ಗೊತ್ತಿಲ್ಲ ಬೇರೆಯವರದೂ ಗೊತ್ತಿಲ್ಲ. ಕೇವಲ ದುರಾಗ್ರಹದಿಂದ ಒದರುತ್ತಿರುತ್ತಾರೆ. ಅವರಲ್ಲಿರುವ ವಿದ್ವಾಂಸರಾದರೋ ಬುದ್ಧ, ಜಿನ ಮತ್ತು ಬೌದ್ಧ, ಜೈನ ಎಂಬಿವು ಪರ್ಯಾಯವಾಚಿ ಶಬ್ದಗಳೆಂದು ತಿಳಿದಿರುವರೆಂಬುದರಲ್ಲಿ ಸಂದೇಹವೇನೂ ಇಲ್ಲ. ಜೀವಾತ್ಮನೇ ಪರಮಾತ್ಮನಾಗುತ್ತಾನೆಂದು ಜೈನರು ಹೇಳುತ್ತಾರೆ. ತಮ್ಮ ತೀರ್ಥಂಕರರೇ ಕೇವಲಿಗಳು, ಮುಕ್ತಿಯನ್ನು ಪಡೆದವರು ಪರಮೇಶ್ವರರು. ಅನಾದಿ ಪರಮಾತ್ಮನಾರೂ ಇಲ್ಲ ಎಂದು ತಿಳಿಯುತ್ತಾರೆ. ಸರ್ವಜ್ಞ, ವೀತರಾಗ, ಅರ್ಹನ್, ಕೇವಲೀ, ತೀರ್ಥಕೃತ, ಜಿನ ಇವು ಆರು ನಾಸ್ತಿಕರ ದೇವತೆಗಳ ಹೆಸರುಗಳು. ಆದಿದೇವನ ಸ್ವರೂಪವನ್ನು ಚಂದ್ರಸೂರಿಯು 'ಆಪ್ತ ನಿಶ್ಚಯಾಲಂಕಾರ' ಗ್ರಂಥದಲ್ಲಿ ಹೀಗೆ ಬರೆದಿದ್ದಾನೆ:—

ಸರ್ವಜ್ಞೋ ವೀತರಾಗಾದಿದೋಷಸ್ತ್ರೈಲೋಕ್ಯಪೂಜಿತಃ।
ಯಥಾ ಸ್ಥಿತಾರ್ಥವಾದೀ ಚ ದೇವೋರ್ಹನ್ ಪರಮೇಶ್ವರಃ ॥

ಇದೇರೀತಿ ತೌತಾತಿತರು ಬರೆದಿದ್ದಾರೆ:—

ಸರ್ವಜ್ಞೋ ದೃಶ್ಯತೇ ತಾವನ್ನೇದಾನೀಮಸ್ಮದಾದಿಭಿಃ।
ದೃಷ್ಟೋ ನ ಚೈಕದೇಶೋಽಸ್ತಿ ಲಿಂಗಂ ವಾ ಯೋಽನುಮಾಪ-
ಯೇತ್ ॥೨॥
ನ ಚಾಗಮವಿಧಿಃ ಕಶ್ಚಿನ್ನಿತ್ಯ ಸರ್ವಜ್ಞಬೋಧಕಃ।
ನ ಚ ತತ್ಪಾರ್ಥ ವಾದಾನಾಂ ತಾತ್ಪರ್ಯಮಪಿ ಕಲ್ಪತೇ ॥೩॥
ನ ಚಾನ್ಯಾರ್ಥ ಪ್ರಧಾನೈಸ್ತೈಸ್ತದಸ್ತಿತ್ವಂ ವಿಧೀಯತೇ।
ನ ಚಾನುವಾದಿತುಂ ತಕ್ಯಃ ಪೂರ್ವಮನ್ಯೈರಬೋಧಿತಃ ॥೪॥

[ಸ. ದ. ಸಂಗ್ರಹಃ]

ರಾಗಾದಿದೋಷರಹಿತನೂ, ತ್ರೈಲೋಕ್ಯಪೂಜ್ಯನೂ, ಪದಾರ್ಥಗಳ ಯಥಾವತ್ತಾದವಕ್ತೃವೂ, ಸರ್ವಜ್ಞನೂ ಆದ ಅರ್ಹನ್ ದೇವನೇ

ಪರಮೇಶ್ವರನು ||೧|| ಈ ಸಮಯದಲ್ಲಿ ನಾವು ಪರಮೇಶ್ವರನನ್ನು ನೋಡುತ್ತಿಲ್ಲವಾದುದರಿಂದ ಸರ್ವಜ್ಞನೂ, ಅನಾದಿಯೂ ಆದ ಪರಮೇಶ್ವರನಾರೂ ಪ್ರತ್ಯಕ್ಷವಾಗುವುದಿಲ್ಲ. ಅವನಲ್ಲಿ ಪ್ರತ್ಯಕ್ಷಪ್ರಮಾಣವೇ ಅನ್ವಯಿಸದ ಮೇಲೆ ಅನುಮಾನವೂ ಆಗಲಾರದು. ಏಕೆಂದರೆ ಏಕದೇಶಪ್ರತ್ಯಕ್ಷದ ವಿನಾ ಅನುಮಾನವಾಗುವುದಿಲ್ಲ. ||೨|| ಪ್ರತ್ಯಕ್ಷಾನುಮಾನಗಳಿಲ್ಲದ ಮೇಲೆ ಆಗಮ ಅಂದರೆ ನಿತ್ಯನೂ, ಅನಾದಿಯೂ, ಸರ್ವಜ್ಞನೂ ಆದ ಪರಮಾತ್ಮನನ್ನು ಬೋಧಿಸುವ ಶಬ್ದಪ್ರಮಾಣವೂ ಇರಲಾರದು. ಈ ಮೂರೂ ಪ್ರಮಾಣಗಳಿಂದ ಮೇಲೆ ಅರ್ಥವಾದ– ಅಂದರೆ ಸ್ತುತಿ-ನಿಂದಾ-ಪರಕೃತಿ ಅಂದರೆ ಅನ್ಯರ ಚರಿತ್ರವರ್ಣನ ಮತ್ತು ಪುರಾಕಲ್ಪದ ಅಂದರೆ ಇತಿಹಾಸದ ತಾತ್ಪರ್ಯವೂ ಘಟಿಸಲಾರವು ||೩|| ಅನ್ಯಾರ್ಥ ಪ್ರಧಾನವಾದ ಬಹುವ್ರೀಹಿ ಸಮಾಸದಂತೆ ಪರೋಕ್ಷ ಪರಮಾತ್ಮನ ಸಿದ್ಧಿಯ ವಿಧಾನವೂ ಸಹ ಆಗಲಾರದು. ಹೀಗಿರುವಾಗ ಪರಮಾತ್ಮನನ್ನು ಉಪದೇಶಿಸುವವರಿಂದ ಕೇಳದೆ ಅನುವಾದವಾದರೂ ಹೇಗಾಗಬಲ್ಲುದು? ||೪||

ಇದರ ಪ್ರತ್ಯಾಖ್ಯಾನ ಅರ್ಥಾತ್ ಖಂಡನ—ಅನಾದಿ ಪರಮಾತ್ಮನಾರೂ ಇಲ್ಲದಿದ್ದರೆ 'ಅರ್ಹನ್' ದೇವನ ಮಾತಾಪಿತ ಮೊದಲಾದವರ ಶರೀರದ ಪಡಿಯಚ್ಚನ್ನು ನಿರ್ಮಿಸುವವರಾರು? ಸಂಯೋಗಕರ್ತನ ಹೊರತು, ಯಥಾಯೋಗ್ಯವೂ, ಸರ್ವಾವಯವಸಂಪನ್ನವೂ, ಯಥೋಚಿತವಾದ ಕಾರ್ಯವನ್ನು ಮಾಡಲುಪಯುಕ್ತವೂ ಆದ ಶರೀರವಾಗಲೀಲಾರದು. ಮತ್ತು ಯಾವ ಪದಾರ್ಥಗಳಿಂದ ಈ ದೇಹವು ನಿರ್ಮಿಸಲ್ಪಟ್ಟಿದೆಯೋ ಆ ಪದಾರ್ಥಗಳು ಜಡವಾಗಿರುವುದರಿಂದ, ಸ್ವಯಂ ಇಂತಹ ಉತ್ತಮರಚನಾಯುಕ್ತವಾದ ಶರೀರವೂ ರೂಪವೂ ಆಗಲಾರವು. ಏಕೆಂದರೆ ಅವುಗಳಲ್ಲಿ ಯಥಾಯೋಗ್ಯವಾಗಿ ನಿರ್ಮಿತವಾಗಲು ಜ್ಞಾನವೇ ಇಲ್ಲ. ರಾಗಾದಿದೋಷಸಹಿತನಾಗಿದ್ದು ಅನಂತರ ದೋಷರಹಿತನಾದವನು ಪರಮಾತ್ಮನೆಂದಿಗೂ ಆಗಲಾರನು. ಏಕೆಂದರೆ—ಯಾವ ನಿಮಿತ್ತದಿಂದ ಅವನು ರಾಗಾದಿಗಳಿಂದ ಮುಕ್ತನಾಗುತ್ತಾನೋ ಆ ನಿಮಿತ್ತವು ತೊಲಗಿಹೋಗುವುದರಿಂದ ಅದರ ಕಾರ್ಯವಾದ ಆ ಮುಕ್ತಿಯೂ ಅನಿತ್ಯವಾಗಿ ಹೋಗುವುದು. ಅಲ್ಪನೂ,

ಅಲ್ಪಜ್ಞನೂ ಆದವನು ಎಂದಿಗೂ ಸರ್ವವ್ಯಾಪಕನೂ, ಸರ್ವಜ್ಞನೂ ಆಗಲಾರನು. ಏಕೆಂದರೆ ಜೀವಾತ್ಮನ ಸ್ವರೂಪವು ಏಕದೇಶಿಯೂ, ಪರಿಮಿತ-ಗುಣ-ಕರ್ಮ-ಸ್ವಭಾವಗಳನ್ನುಳ್ಳದೂ ಆಗಿರುವುದರಿಂದ ಸರ್ವ ವಿದ್ಯೆಗಳಲ್ಲಿ ಅವನು ಸರ್ವರೀತಿಯ ಯಥಾರ್ಥವಕ್ತನಾಗಲಾರನು. ಆದಕಾರಣ ನಿಮ್ಮ ತೀರ್ಥಂಕರರೆಂದಿಗೂ ಪರಮೇಶ್ವರರಾಗಲಾರರು. ॥೧॥ ಪ್ರತ್ಯಕ್ಷ ಪದಾರ್ಥಗಳನ್ನೇ ನಂಬಿ ಅಪ್ರತ್ಯಕ್ಷವಾದುವುಗಳನ್ನು ನೀವು ನಂಬುವುದೇ ಇಲ್ಲವೆ? ಅನಾದಿಪರಮಾತ್ಮನನ್ನು ನೋಡುವ ಸಾಧನವು ಶುದ್ಧಾಂತಃಕರಣವು; ವಿದ್ಯೆ ಮತ್ತು ಯೋಗಾಭ್ಯಾಸ– ಇವುಗಳಿಂದ ಪವಿತ್ರಾತ್ಮನಾದವನು ಪರಮಾತ್ಮನನ್ನು ಪ್ರತ್ಯಕ್ಷ ನೋಡುತ್ತಾನೆ. ಕಿವಿಯಿಂದ ರೂಪವನ್ನೂ, ಕಣ್ಣಿನಿಂದ ಶಬ್ದವನ್ನೂ ಹೇಗೆ ಗ್ರಹಿಸಲಾರರೋ, ವಿದ್ಯೆಯನ್ನೋದದೆ ಹೇಗೆ ಅದರ ಪ್ರಯೋಜನವು ದೊರೆಯುವುದಿಲ್ಲವೊ, ಅದೇರೀತಿ ಯೋಗಾಭ್ಯಾಸ ಮತ್ತು ವಿಜ್ಞಾನದ ಹೊರತು ಪರಮಾತ್ಮನೂ ಕಂಡುಬರುವುದಿಲ್ಲ. ಭೂಮಿಯ ರೂಪಾದಿ ಗುಣಗಳನ್ನು ನೋಡಿ, ತಿಳಿದುಕೊಂಡು ಆ ಗುಣಗಳಿಂದ ಅವ್ಯವಹಿತ ಸಂಬಂಧದಿಂದ ಪೃಥಿವಿಯು ಪ್ರತ್ಯಕ್ಷವಾಗುವಂತೆ ಈ ಸೃಷ್ಟಿಯಲ್ಲಿ ಪರಮಾತ್ಮನ ರಚನಾವಿಶೇಷವಾದ ಲಿಂಗ (ಚಿಹ್ನೆ) ವನ್ನು ನೋಡಿ ಪರಮಾತ್ಮನ ಪ್ರತ್ಯಕ್ಷವಾಗುತ್ತದೆ. ಪಾಪವನ್ನಾಚರಿಸಲು ಹೊರಟಾಗ ಭಯ–ಸಂದೇಹ–ಲಜ್ಜೆಗಳು ಹುಟ್ಟುವುದು ಅಂತರ್ಯಾಮಿಯಾಗಿರುವ ಪರಮಾತ್ಮನ ಕಡೆಯಿಂದಾಗಿರುತ್ತದೆ. ಇದರಿಂದಲೂ ಪರಮಾತ್ಮನು ಪ್ರತ್ಯಕ್ಷನಾಗುತ್ತಾನೆ. ಅನುಮಾನವಾಗುವುದರಲ್ಲಿ ಸಂದೇಹವಾದರೂ ಏನು? ॥ ೨ ॥ ಪ್ರತ್ಯಕ್ಷಾನುಮಾನಗಳಿರುವುದರಿಂದ ಆಗಮಪ್ರಮಾಣವೂ, ನಿತ್ಯ, ಅನಾದಿ ಮತ್ತು ಸರ್ವಜ್ಞನಾದ ಪರಮಾತ್ಮನ ಬೋಧಕವಾಗುತ್ತದೆ. ಆದುದರಿಂದ ಈಶ್ವರನ ಅಸ್ತಿತ್ವವನ್ನು ಸಾಧಿಸಲು ಶಬ್ದ ಪ್ರಮಾಣವೂ ಇದೆ. ಮೂರು ಪ್ರಮಾಣಗಳಿಂದಲೂ ಜೀವನು ಪರಮಾತ್ಮನನ್ನು ತಿಳಿಯಬಲ್ಲನೆಂದಮೇಲೆ ಅವನ ಗುಣಗಳ ಪ್ರಶಂಸಾರೂಪವಾದ ಅರ್ಥವಾದವೂ ಯಥಾರ್ಥವಾಗಿ ಹೊಂದಿಕೊಳ್ಳುತ್ತದೆ. ನಿತ್ಯಪದಾರ್ಥಗಳ ಗುಣಕರ್ಮಸ್ವಭಾವಗಳೂ ನಿತ್ಯವಾಗಿರುವುದರಿಂದ ಅವುಗಳನ್ನು ಪ್ರಶಂಸಿಸುವದಕ್ಕೆ ಯಾವ ಅಡ್ಡಿ ಆತಂಕವೂ ಇಲ್ಲ. ॥೩॥

ಮನುಷ್ಯರಲ್ಲಿ ಹೇಗೆ ಕರ್ತನ ಹೊರತು ಕಾರ್ಯವಾಗಲಾರದೋ, ಅದೇ ರೀತಿ ಈ ಮಹಾಕಾರ್ಯವೂ ಕರ್ತನ ಹೊರತು ಆಗುವುದು ತೀರ ಅಸಂಭವವೇ. ಹೀಗಿದ್ದಮೇಲೆ ಮೂಢಮನುಷ್ಯನಿಗೂ ಸಹ ಪರಮಾತ್ಮನ ಅಸ್ತಿತ್ವದ ಬಗ್ಗೆ ಸಂದೇಹವಾಗಲಾರದು. ಪರಮಾತ್ಮನನ್ನು ಪ ದೇಶಿಸುವವರ ಮುಖದಿಂದ ಕೇಳಿದ ನಂತರ ಅನುವಾದವೂ ಸರಳವಿದೆ. ॥ ೪ ॥ ಆದುದರಿಂದ ಪ್ರತ್ಯಕ್ಷಾದಿ ಪ್ರಮಾಣಗಳಿಂದ ಈಶ್ವರನನ್ನು ಖಂಡಿಸುವ ಜೈನರ ವ್ಯವಹಾರವು ಅನುಚಿತವಾಗಿರುತ್ತದೆ.

ಪ್ರಶ್ನೆ:—

ಅನಾದೇರಾಗನುಸ್ಯಾರ್ಥೋ ನ ಚ ಸರ್ವಜ್ಞ ಆದಿಮಾನ್ ।
ಕೃತ್ರಿಮೇಣ ತ್ವಸತ್ಯೇನ ಸ ಕಥಂ ಪ್ರತಿಪಾದ್ಯತೇ ॥೧॥
ಅಥ ತದ್ವಚನೇನೈವ ಸರ್ವಜ್ಞೋಽಜ್ಞೈಃ ಪ್ರತೀಯತೇ ।
ಪ್ರಕಲ್ಪೇತ ಕಥಂ ಸಿದ್ಧಿರನ್ಯೋನ್ಯಾಶ್ರಯ ಯೋಽಸ್ತಯೋಃ ॥೨॥
ಸರ್ವಜ್ಞೋಕ್ತತಯಾ ವಾಕ್ಯಂ ಸತ್ಯಂ ತೇನ ತದಸ್ತಿತಾ ।
ಕಥಂ ತದುಭಯಂ ಸಿದ್ಧ್ಯೇತ್ಸಿದ್ಧಮೂಲಾಂತರಾದೃತೇ ॥೩॥

ಮಧ್ಯದಲ್ಲಿ ಸರ್ವಜ್ಞನಾದವನು ಅನಾದಿಶಾಸ್ತ್ರದ ವಿಷಯವಾಗಲಾರನು. ಏಕೆಂದರೆ ಆಡಲ್ಪಟ್ಟ ಅಸತ್ಯವಚನದಿಂದ ಅವನ ಪ್ರತಿಪಾದನವು ಹೇಗಾಗಬಲ್ಲುದು? ॥೧॥ ಪರಮಾತ್ಮನ ವಚನದಿಂದಲೇ ಪರಮಾತ್ಮನು ಸಿದ್ಧಿಸುವನಾದರೆ ಅನಾದಿ ಈಶ್ವರನಿಂದ ಅನಾದಿ ಶಾಸ್ತ್ರದ ಸಿದ್ಧಿ ಮತ್ತು ಅನಾದಿಶಾಸ್ತ್ರದಿಂದ ಅನಾದಿ ಈಶ್ವರನ ಸಿದ್ಧಿ ಎಂಬ ಅನ್ಯೋನ್ಯಾಶ್ರಯದೋಷವು ತಲೆದೋರುತ್ತದೆ. ॥ ೨ ॥ ಏಕೆಂದರೆ– ಸರ್ವಜ್ಞನ ಕಥನವಾದುದರಿಂದ ಆ ವೇದವಾಕ್ಯವು ಸತ್ಯವು. ಆ ವೇದವಾಕ್ಯದಿಂದ ಪರಮಾತ್ಮನ ಸಿದ್ಧಿಯನ್ನು ಮಾಡುತ್ತೀರಿ. ಅದು ಹೇಗಾಗಬಲ್ಲುದು? ಆ ಶಾಸ್ತ್ರ ಮತ್ತು ಪರಮಾತ್ಮನ ಸಿದ್ಧಿಗಾಗಿ ಬೇರಾವುದಾದರೂ ಮೂರನೆಯ ಪ್ರಮಾಣ ಬೇಕಾಗುತ್ತದೆ. ಅದನ್ನೊಪ್ಪಿಕೊಂಡರೆ ಅನವಸ್ಥಾದೋಷವು ತಲೆದೋರುತ್ತದೆ. ॥೩॥

ಉತ್ತರ:—ನಾವು ಪರಮಾತ್ಮನನ್ನೂ, ಅವನ ಗುಣ, ಕರ್ಮ, ಸ್ವಭಾವಗಳನ್ನೂ ಅನಾದಿಯೆಂದು ಹೇಳುತ್ತೇವೆ. ಅನಾದಿಸತ್ಯಪದಾರ್ಥ

ಗಳಲ್ಲಿ ಅನ್ಯೋನ್ಯಾಶ್ರಯದೋಷವು ತಲೆದೋರಲಾರದು. ಕಾರ್ಯದಿಂದ ಕಾರಣಜ್ಞಾನವೂ, ಕಾರಣದಿಂದ ಕಾರ್ಯಜ್ಞಾನವೂ ಆಗುತ್ತದೆ. ಕಾರ್ಯದಲ್ಲಿ ಕಾರಣದ ಸ್ವಭಾವವೂ, ಕಾರಣದ ಕಾರ್ಯಸ್ವಭಾವವೂ ನಿತ್ಯವಾಗಿರುವಂತೆ ಪರಮಾತ್ಮನೂ, ಅವನ ಅನಂತ ವಿದ್ಯಾದಿಗುಣಗಳೂ ನಿತ್ಯವಾಗಿರುವುದರಿಂದ ಈಶ್ವರಪ್ರಣೀತವಾದ ವೇದದಲ್ಲಿ ಅನವಸ್ಥಾದೋಷವು ಬರುವುದಿಲ್ಲ. "೧, ೨, ೩" ನೀವು ತೀರ್ಥಂಕರರನ್ನು ಪರಮೇಶ್ವರರೆಂದು ಹೇಳುವುದು ಎಂದಿಗೂ ಸರಿಹೋಗಲಾರದು. ತಾಯಿತಂದೆಗಳ ಹೊರತು ಅವರ ಶರೀರವೇ ಆಗುವುದಿಲ್ಲವೆಂದಮೇಲೆ, ಅವರು ತಪಶ್ಚರ್ಯೆ, ಜ್ಞಾನ ಮತ್ತು ಮುಕ್ತಿಯನ್ನಾದರೂ ಹೇಗೆ ಗಳಿಸಿಕೊಂಡಾರು? ಅದೇ ರೀತಿ ಸಂಯೋಗಕ್ಕೆ ಆದಿಯು ಅವಶ್ಯವಾಗಿಯೂ ಇರಬೇಕು. ಏಕೆಂದರೆ, ಯೋಗದ ಹೊರತು ಸಂಯೋಗವೇ ಆಗುವುದಿಲ್ಲವಾದ ಕಾರಣ ಅನಾದಿಯೂ ಸೃಷ್ಟಿಕರ್ತನೂ ಆದ ಪರಮಾತ್ಮನನ್ನು ಒಪ್ಪಿರಿ; ನೋಡಿರಿ! ಎಂತಹ ಸಿದ್ಧಪುರುಷನಾದರೂ ಸಹ ಶರೀರಾದಿಗಳ ರಚನೆಯನ್ನು ಸಂಪೂರ್ಣವಾಗಿ ಅರಿತುಕೊಳ್ಳಲಾರನು. ಸಿದ್ಧಜೀವನಿಗೆ ಸುಷುಪ್ತಾವಸ್ಥೆಯಲ್ಲಿ ಯಾವುದರ ಅರಿವೂ ಇರುವುದಿಲ್ಲ. ಜೀವನು ದುಃಖವನ್ನು ಪಡೆಯುವಾಗ ಅವನ ಜ್ಞಾನವೂ ನ್ಯೂನವಾಗಿರುತ್ತದೆ. ಇಂತಹ ಪರಿಚ್ಛಿನ್ನ ಸಾಮರ್ಥ್ಯವುಳ್ಳವನೂ, ಏಕದೇಶದಲ್ಲಿ ನಿವಾಸಿಸುವವನೂ ಆದವನನ್ನು ಈಶ್ವರನೆಂದು ಭ್ರಾಂತ ಬುದ್ಧಿಯುಕ್ತರಾದ ಜೈನರ ಹೊರತು ಇನ್ನಾರೂ ಒಪ್ಪಲಾರರು. ಆ ತೀರ್ಥಂಕರರು ತಮ್ಮ ತಾಯಿತಂದೆಗಳ ಹೊಟ್ಟೆಯಲ್ಲಿ ಹುಟ್ಟಿದರೆಂದು ಹೇಳುವಿರಾದರೆ, ಅವರೂ ಅವರ ತಾಯಿತಂದೆಗಳೂ ಯಾರಿಂದ ಹುಟ್ಟಿದರು? ಅವರ ತಂದೆತಾಯಿಗಳೂ ಯಾರಿಂದ ಹುಟ್ಟಿದರು? ಇತ್ಯಾದಿಯಾಗಿ ಅನವಸ್ಥಾದೋಷವು ತಟ್ಟುತ್ತದೆ.

ಆಸ್ತಿಕ ನಾಸ್ತಿಕ ಸಂವಾದ

ಇನ್ನು ಮುಂದೆ ಮಹಾಮಹಾಜೈನರು ಸಮ್ಮತರಾಗಿ ಮುಂಬಯಿಯಲ್ಲಿ ಅಚ್ಚುಹಾಕಿಸಿದ ಪ್ರಕರಣರತ್ನಾಕರದ ಎರಡನೆಯ ಭಾಗದ ಆಸ್ತಿಕ ನಾಸ್ತಿಕ ಸಂವಾದದ ಪ್ರಶ್ನೋತ್ತರವನ್ನಿಲ್ಲಿ ಕೊಡುತ್ತೇವೆ:—

ನಾಸ್ತಿಕ :—ಈಶ್ವರನ ಇಚ್ಛೆಯಿಂದೇನೂ ಆಗುವುದಿಲ್ಲ. ಕರ್ಮದಿಂದಲೇ ಆಗುವುದೆಲ್ಲಾ ಆಗುವುದು.

ಆಸ್ತಿಕ :—ಎಲ್ಲವೂ ಕರ್ಮದಿಂದಾಗುವುದಾದರೆ ಕರ್ಮವು ಏತರಿಂದಾಗುತ್ತದೆ? ಜೀವ ಮೊದಲಾದವರಿಂದ ಆಗುತ್ತದೆಂದು ಹೇಳುವಿರಾದರೆ ಜೀವಾತ್ಮನ ಕರ್ಮಸಾಧನಗಳಾದ ಶ್ರೋತ್ರಾದಿಗಳು ಏತರಿಂದ ಆದುವು? ಅನಾದಿಕಾಲ ಮತ್ತು ಸ್ವಭಾವದಿಂದ ಆಗುತ್ತವೆನ್ನುವಿರಾದರೆ ಅನಾದಿಯ ನಾಶವು ಅಸಂಭವವಾದುದರಿಂದ ನಿಮ್ಮ ಮತದಲ್ಲಿ ಮುಕ್ತಿಯ ಅಭಾವ ತಲೆದೋರಿತು. ಪ್ರಾಗಭಾವದಂತೆ ಅನಾದಿಯೂ ಸಾಂತವೂ ಆಗಿರುವವು ಎನ್ನುವುದಾದರೆ ಯತ್ನಮಾಡದೇನೇ ಎಲ್ಲರ ಕರ್ಮಗಳೂ ನಿವೃತ್ತವಾಗಬೇಕಾಗುತ್ತದೆ. ಫಲದಾತನಾದ ಪರಮಾತ್ಮ ನಿಲ್ಲದಿದ್ದರೆ ಪಾಪದ ಫಲವಾದ ದುಃಖವನ್ನು ಜೀವಾತ್ಮರು ತಮ್ಮಿಚ್ಛೆಯಿಂದ ಎಂದಿಗೂ ಭೋಗಿಸುವುದಿಲ್ಲ. ಚೋರ ಮೊದಲಾದವರು ಕಳ್ಳತನದ ಫಲವಾದ ಶಿಕ್ಷೆಯನ್ನು ತಮ್ಮಿಚ್ಛೆಯಿಂದ ಅನುಭವಿಸದೆ ರಾಜ್ಯವ್ಯವಸ್ಥೆಯಿಂದ ಅನುಭವಿಸುವಂತೆಯೇ ಪರಮಾತ್ಮನು ಫಲವನ್ನೀಯುವುದರಿಂದ ಜೀವಾತ್ಮರು ಪಾಪಪುಣ್ಯಗಳ ಫಲಗಳನ್ನನುಭವಿಸುತ್ತಾರೆ. ಇಲ್ಲದಿದ್ದರೆ ಕರ್ಮಸಂಕರವಾಗುವುದು. ಒಬ್ಬನ ಕರ್ಮಗಳನ್ನು ಇನ್ನೊಬ್ಬನು ಅನುಭವಿಸಬೇಕಾಗುವುದು.

ನಾಸ್ತಿಕ—ಪರಮಾತ್ಮನು ಕರ್ಮಮಾಡಿದರೆ ಅದರ ಫಲವನ್ನು ಅನುಭವಿಸಬೇಕಾಗುವುದರಿಂದ ಅವನು ಅಕ್ರಿಯನಾಗಿರುವನು. ಆದ ಕಾರಣ ನಾವು ಕೇವಲಿಯನ್ನು ಹೊಂದಿದ ಮುಕ್ತರನ್ನು ಅಕ್ರಿಯರೆಂದು ತಿಳಿಯುವಂತೆ ನೀವೂ ತಿಳಿಯಿರಿ.

ಆಸ್ತಿಕ—ಈಶ್ವರನು ಅಕ್ರಿಯನಲ್ಲ. ಆದರೆ ಪಕ್ರಿಯನು. ಚೇತನನಾಗಿರುವಾಗ ಅವನು ಕರ್ತನಲ್ಲವೇಕೆ? ಕರ್ತನಾದಮೇಲೆ ಎಂದಿಗೂ ಕ್ರಿಯೆಯಿಂದ ಪೃಥಕ್ಕಾಗಲಾರನು. ಕೃತ್ರಿಮನಾದ, ಕಲ್ಪಿತನಾದ ಈಶ್ವರ ತೀರ್ಥಂಕರನನ್ನು ಜೀವನಿಂದಾದವನೆಂದು ನೀವು ತಿಳಿಯುವಂತೆ ಇಂತಹ ಈಶ್ವರನನ್ನು ಯಾವೊಬ್ಬ ವಿದ್ವಾಂಸನೂ ನಂಬಲಾರನು. ಏಕೆಂದರೆ—ನಿಮಿತ್ತದಿಂದಾದ ಈಶ್ವರನು ಅನಿತ್ಯನೂ ಪರಾಧೀನನೂ ಆಗುವನು. ಈಶ್ವರನಾಗುವ ಮೊದಲು ಅವನು ಜೀವಾತ್ಮನಾಗಿದ್ದನು.

ನಂತರ ಯಾವುದೋ ಒಂದು ನಿಮಿತ್ತದಿಂದ ಈಶ್ವರನಾಗಿದ್ದರೆ ಪುನಃ ಜೀವನಾಗಿಯೇ ಬಿಡುತ್ತಾನೆ. ತನ್ನ ಜೀವಶ್ವಸ್ವಭಾವವನ್ನೆಂದಿಗೂ ಬಿಡಲಾರನು. ಏಕೆಂದರೆ—ಅನಂತಕಾಲದಿಂದ ಅವನು ಜೀವನೇ ಆಗಿದ್ದಾನೆ. ಅನಂತ ಕಾಲದವರೆಗೂ ಜೀವನೇ ಆಗಿರುವನು. ಆದುದರಿಂದ ಈ ಅನಾದಿಯೂ ಸ್ವತಃಸಿದ್ಧನೂ ಆದ ಪರಮಾತ್ಮನನ್ನು ಒಪ್ಪುವುದು ಯೋಗ್ಯವು. ನೋಡಿರಿ! ಜೀವನು ಈಗ ಪಾಪಪುಣ್ಯಗಳನ್ನು ಮಾಡುತ್ತ, ಸುಖದುಃಖಗಳನ್ನನುಭವಿಸುವಂತೆ ಈಶ್ವರನು ಎಂದಿಗೂ ಅನುಭವಿಸಲಾರನು. ಈಶ್ವರನು ಕ್ರಿಯಾವಂತನಲ್ಲದಿದ್ದರೆ ಈ ಎಲ್ಲ ಜಗತ್ತನ್ನು ಹೇಗೆ ನಿರ್ಮಿಸುತ್ತಿದ್ದನು? ಕರ್ಮಗಳನ್ನು ಪ್ರಾಗಭಾವದ ರೀತಿಯಲ್ಲಿ ಅನಾದಿಯೂ ಸಾಂತವೂ ಆಗಿವೆಯೆಂದು ಒಪ್ಪಿದರೆ ಕರ್ಮವು ಸಮವಾಯಸಂಬಂಧದಲ್ಲಿರಲಾರದು. ಸಮವಾಯಸಂಬಂಧದಿಂದ ಇರದೆ ಇರುವಂತಹದು ಸಂಯೋಗಜವಾಗಿ ಅನಿತ್ಯವಾಗಿರುತ್ತದೆ. ಮುಕ್ತಿಯಲ್ಲಿ ಕ್ರಿಯೆಯಿರುವುದಿಲ್ಲವೆಂದು ಒಪ್ಪುವಿರಾದರೆ ಮುಕ್ತಿಯಲ್ಲಿ ಅವರು ಜ್ಞಾನವಂತರಾಗಿರುತ್ತಾರೋ ಇಲ್ಲವೊ? ಇರುತ್ತಾರಾದರೆ ಅಂತಃ ಕ್ರಿಯಾವಂತರಾದರು. ಮುಕ್ತಿಯಲ್ಲಿ ಕಲ್ಲಿನಂತೆ ಜಡವಾಗಿಬಿಡುತ್ತಾರೆಯೆ? ಒಂದು ಕಡೆ ಬಿದ್ದುಕೊಂಡಿರುತ್ತಾರೆಯೆ? ಏನೂ ಕ್ರಿಯೆ ಮಾಡುವುದಿಲ್ಲವೆ? ಹಾಗಿದ್ದರೆ ಅದು ಮುಕ್ತಿಯೇನಾಯಿತು? ಅಂಧಕಾರ ಮತ್ತು ಬಂಧನದಲ್ಲಿದ್ದಂತಾಯಿತು.

ನಾಸ್ತಿಕ—ಪರಮಾತ್ಮನು ವ್ಯಾಪಕನಾಗಿಲ್ಲ. ವ್ಯಾಪಕನಾಗಿದ್ದರೆ ಎಲ್ಲ ವಸ್ತುಗಳೇಕೆ ಚೇತನವಾಗುವುದಿಲ್ಲ? ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರರ ಸ್ಥಿತಿಯು ಉತ್ತಮ, ಮಧ್ಯಮ ಮತ್ತು ನಿಕೃಷ್ಟವೆಂದು ಏಕಾಯಿತು? ಎಲ್ಲರಲ್ಲಿಯೂ ಪರಮಾತ್ಮನು ಏಕರಸವಾಗಿ ವ್ಯಾಪ್ತನಾಗಿರುವಾಗ ಮೇಲು ಕೀಳೆಂಬುದು ಇರಬಾರದು.

ಆಸ್ತಿಕ—ವ್ಯಾಪ್ಯ ವ್ಯಾಪಕಗಳು ಒಂದೇಯಾಗಿರುವುದಿಲ್ಲ. ವ್ಯಾಪ್ಯವು ಏಕದೇಶಿಯೂ, ವ್ಯಾಪಕವು ಸರ್ವದೇಶಿಯೂ ಆಗಿರುತ್ತದೆ. ಉದಾ—ವ್ಯಾಪಕವಾದ ಆಕಾಶವು ಎಲ್ಲದರಲ್ಲಿದೆ. ವ್ಯಾಪ್ಯವಾದ ಘಟ ಪಟಾದಿಗಳೆಲ್ಲವೂ ಏಕದೇಶಿಯಾಗಿವೆ. ಪೃಥ್ವಿ ಮತ್ತು ಆಕಾಶವು ಹೇಗೆ ಒಂದಲ್ಲವೋ ಅದೇರೀತಿ ಈಶ್ವರ ಜಗತ್ತುಗಳು ಒಂದಲ್ಲ. ಘಟಪಟಾದಿ

ಗಳಲ್ಲಿ ಆಕಾಶವು ವ್ಯಾಪಕವಾಗಿದ್ದರೂ ಅವು ಹೇಗೆ ಆಕಾಶವಾಗಲಾರವೊ ಅದೇರೀತಿ ಚೇತನನಾದ ಪರಮಾತ್ಮನು ಎಲ್ಲದರಲ್ಲಿದ್ದರೂ ಎಲ್ಲವೂ ಚೇತನವಾಗುವುದಿಲ್ಲ. ವಿದ್ವಾಂಸ-ಅವಿದ್ವಾಂಸರೂ, ಧರ್ಮಾತ್ಮ-ಅಧರ್ಮಾತ್ಮರೂ ಹೇಗೆ ಸರಿಸಮಾನರಲ್ಲವೊ ಅದೇರೀತಿ ವಿದ್ಯಾದಿ ಸದ್ಗುಣಗಳಲ್ಲೂ, ಸತ್ಯಭಾಷಣಾದಿ ಕರ್ಮಗಳಲ್ಲೂ, ಸೌಶೀಲ್ಯಾದಿ ಸ್ವಭಾವಗಳಲ್ಲೂ ನ್ಯೂನಾಧಿಕವಾಗಿರುವುದರಿಂದ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಮತ್ತು ಅಂತ್ಯಜರು ಮೇಲುಕೀಳೆಂಬುದಾಗಿ ಪರಿಗಣಿಸಲ್ಪಡುತ್ತಾರೆ. ವರ್ಣಗಳ ವ್ಯಾಖ್ಯಾನವನ್ನು ಚತುರ್ಥ ಸಮುಲ್ಲಾಸದಲ್ಲಿ ಬರೆದಿರುವೆವು. ಅಲ್ಲಿ ನೋಡಿಕೊಳ್ಳುವುದು.

ನಾಸ್ತಿಕ :—ಈಶ್ವರನ ರಚನೆಯಿಂದ ಸೃಷ್ಟಿಯಾಗುವುದಾದರೆ ತಂದೆತಾಯಿಗಳ ಅಗತ್ಯವೇನಿದೆ?

ಆಸ್ತಿಕ :—ಪರಮಾತ್ಮನು ಐಶ್ವರೀಸೃಷ್ಟಿಯ ಕರ್ತನೇ ಹೊರತು ಜೀವಸೃಷ್ಟಿಯ ಕರ್ತನಲ್ಲ. ಜೀವರ ಕರ್ತವ್ಯಕರ್ಮಗಳನ್ನು ಅವನು ಮಾಡುವುದಿಲ್ಲ. ಜೀವಾತ್ಮರೇ ಮಾಡಬೇಕು. ವೃಕ್ಷ, ಫಲ, ಔಷಧಿ, ಅನ್ನಾದಿಗಳನ್ನು ಪರಮಾತ್ಮನು ಹುಟ್ಟಿಸಿದ್ದಾನೆ. ಅವುಗಳನ್ನು ಮನುಷ್ಯನು ಬೀಸದೆ, ಕುಟ್ಟದೆ, ರೊಟ್ಟಿ ಮೊದಲಾದುವುಗಳನ್ನು ಮಾಡದೆ, ತಿನ್ನದೆ ಇದ್ದರೆ ಪರಮಾತ್ಮನು ಆ ಎಲ್ಲ ಕೆಲಸಗಳನ್ನು ಮಾಡಿಕೊಟ್ಟಾನೆ? ಜೀವನು ಆ ಕೆಲಸಗಳನ್ನು ಮಾಡದಿದ್ದರೆ ಜೀವನವೂ ಸಾಗಲಾರದು. ಆದುದರಿಂದ ಆದಿಸೃಷ್ಟಿಯಲ್ಲಿ ಜೀವರುಗಳ ಶರೀರಗಳನ್ನೂ, ಪಡಿಯಚ್ಚನ್ನೂ ನಿರ್ಮಿಸುವುದು ಈಶ್ವರಾಧೀನವೂ, ಅನಂತರ ಅವುಗಳಿಂದ ಪುತ್ರಾದಿಗಳನ್ನು ಉತ್ಪನ್ನಮಾಡುವುದು ಜೀವಾತ್ಮರ ಕರ್ತವ್ಯಕರ್ಮವಾಗಿದೆ.

ನಾಸ್ತಿಕ :—ಪರಮಾತ್ಮನು ಶಾಶ್ವತನೂ, ಅನಾದಿಯೂ ಚಿದಾನಂದನೂ, ಜ್ಞಾನಸ್ವರೂಪನೂ ಆಗಿದ್ದ ಮೇಲೆ ಜಗತ್ತಿನ ಗೊಂದಲ ಮತ್ತು ದುಃಖದಲ್ಲೇಕೆ ಬಿದ್ದನು? ಆನಂದವನ್ನು ತ್ಯಜಿಸಿ ದುಃಖವನ್ನು ಕೊಳ್ಳುವ ಕಾರ್ಯವನ್ನು ಒಬ್ಬ ಸಾಧಾರಣ ಮನುಷ್ಯನೂ ಮಾಡುವುದಿಲ್ಲವೆಂದಮೇಲೆ ಪರಮಾತ್ಮನೇಕೆ ಮಾಡಿದನು?

ಆಸ್ತಿಕ :—ಪರಮಾತ್ಮನು ಯಾವ ಗೊಂದಲದಲ್ಲಾಗಲೀ ದುಃಖದಲ್ಲಾಗಲೀ ಬೀಳುವುದಿಲ್ಲ. ತನ್ನ ಆನಂದವನ್ನು ಬಿಡುವುದಿಲ್ಲ. ಏಕೆಂದರೆ ಗೊಂದಲ ಮತ್ತು ದುಃಖದಲ್ಲಿ ಬೀಳುವುದು ಏಕದೇಶಿಗೆ ಸಂಬಂಧಪಟ್ಟುದೇ ಹೊರತು ಸರ್ವದೇಶಿಗೆ ಸಂಬಂಧಪಟ್ಟುದಲ್ಲ. ಅನಾದಿಯೂ, ಚಿದಾನಂದನೂ, ಜ್ಞಾನಸ್ವರೂಪನೂ ಆದ ಪರಮಾತ್ಮನು ಜಗತ್ತನ್ನು ನಿರ್ಮಿಸದಿದ್ದರೆ ಬೇರಾವನು ನಿರ್ಮಿಸಬಲ್ಲನು? ಜೀವಾತ್ಮನಲ್ಲಿ ಜಗತ್ತನ್ನು ನಿರ್ಮಿಸುವ ಸಾಮರ್ಥ್ಯವಿಲ್ಲ. ಜಡದಲ್ಲಿ ತಾನಾಗಿ ಉಂಟಾಗುವ ಸಾಮರ್ಥ್ಯವಿಲ್ಲ. ಪರಮಾತ್ಮನೇ ಜಗತ್ತನ್ನುಂಟುಮಾಡುತ್ತಾನೆ. ಮತ್ತು ಸದಾ ಆನಂದಮಗ್ನನಾಗಿರುತ್ತಾನೆಂಬುದು ಇದರಿಂದ ಸಿದ್ಧವಾಗುತ್ತದೆ. ಅವನು ಪರಮಾಣುಗಳಿಂದ ಸೃಷ್ಟಿಯನ್ನು ನಿರ್ಮಿಸಿರುವಂತೆಯೇ ಮಾತಾಪಿತೃರೂಪವಾದ ನಿಮಿತ್ತಕಾರಣದಿಂದಲೂ ಉತ್ಪತ್ತಿಯಾಗುವ ವ್ಯವಸ್ಥೆಯನ್ನು ಮಾಡಿರುವನು.

ನಾಸ್ತಿಕ :—ಪರಮಾತ್ಮನು ಮುಕ್ತಿರೂಪವಾದ ಸುಖವನ್ನು ತ್ಯಜಿಸಿ ಸೃಷ್ಟಿಸುವುದು ಪಾಲಿಸುವುದು ಮತ್ತು ಪ್ರಳಯಗೈಯುವುದೆಂಬ ಗೊಂದಲದಲ್ಲೇಕೆ ಬಿದ್ದನು?

ಆಸ್ತಿಕ :—ಪರಮಾತ್ಮನು ಸದಾ ಮುಕ್ತನಾಗಿರುವುದರಿಂದ ಸಾಧನಗಳಿಂದ ಸಿದ್ಧರಾದ, ಏಕದೇಶದಲ್ಲಿರುವ ಮತ್ತು ಬಂಧಪೂರ್ವಕವಾದ ಮುಕ್ತಿಯಲ್ಲಿರುವ ನಿಮ್ಮ ತೀರ್ಥಂಕರರಂತಿರುವುದಿಲ್ಲ. ಅನಂತ ಸ್ವರೂಪ-ಗುಣ-ಕರ್ಮ-ಸ್ವಭಾವಯುಕ್ತನಾದ ಪರಮಾತ್ಮನು ಕಿಂಚಿತ್ತಾದ ಈ ಜಗತ್ತನ್ನು ನಿರ್ಮಿಸಿ, ಧರಿಸಿ ಅದರ ಪ್ರಳಯವನ್ನು ಮಾಡುತ್ತಲೂ ಬಂಧನಕ್ಕೆ ಸಿಲುಕುವುದಿಲ್ಲ. ಏಕೆಂದರೆ ಬಂಧನಮೋಕ್ಷಗಳು ಸಾಪೇಕ್ಷವಾಗಿವೆ. ಮುಕ್ತಿಯ ಅಪೇಕ್ಷೆಯಿಂದ ಬಂಧನವೂ, ಬಂಧನದ ಅಪೇಕ್ಷೆಯಿಂದ ಮೋಕ್ಷವೂ ಇದೆ. ಎಂದೂ ಬದ್ಧನಾಗಿಲ್ಲದವನನ್ನ ಮುಕ್ತನೆಂದು ಹೇಗೆ ಹೇಳಬಹುದು? ಏಕದೇಶಿಗಳಾದ ಜೀವರುಗಳೇ ಬದ್ಧರೂ ಮುಕ್ತರೂ ಆಗುತ್ತಿರುತ್ತಾರೆ. ಅನಂತನೂ, ಸರ್ವದೇಶಿಯೂ, ಸರ್ವವ್ಯಾಪಕನೂ ಆದ ಪರಮಾತ್ಮನು ಬಂಧನದ ಅಥವಾ ನೈಮಿತ್ತಿಕ ಮುಕ್ತಿಯ ಚಕ್ರಕ್ಕೆ ನಿಮ್ಮ ತೀರ್ಥಂಕರರಂತೆ ಸಿಕ್ಕುವುದಿಲ್ಲ. ಆದುದರಿಂದ ಅವನು ಸದಾ ಮುಕ್ತನೆನಿಸುತ್ತಾನೆ.

ನಾಸ್ತಿಕ :—ಭಂಗಿಯನ್ನು ಕುಡಿದುದರ ಅಮಲನ್ನು ಮನುಷ್ಯನು ತಾನಾಗಿ ಅನುಭವಿಸುವಂತೆ ಜೀವರು ಕರ್ಮದ ಫಲವನ್ನು ತಾವಾಗಿ ಅನುಭವಿಸಬಲ್ಲರು. ಅದಕ್ಕೆ ಪರಮಾತ್ಮನ ಅಗತ್ಯವಿಲ್ಲ.

ಆಸ್ತಿಕ : ರಾಜನ ಹೊರತು ದರೋಡೆಗಾರ, ಲಂಪಟ, ಕಳ್ಳ ಮೊದಲಾದವರು ತಾವಾಗಿ ಮೃತ್ಯುದಂಡಕ್ಕಾಗಲಿ, ಜೈಲಿಗಾಗಲೀ ಹೋಗುವುದಿಲ್ಲ. ಮತ್ತು ಬಯಸುವುದೂ ಇಲ್ಲ. ರಾಷ್ಟ್ರದ ನ್ಯಾಯವ್ಯವಸ್ಥೆಗನುಸಾರವಾಗಿ ಬಲಾತ್ಕಾರದಿಂದ ಹಿಡಿಸಿ, ರಾಜನು ಯಥೋಚಿತವಾಗಿ ದಂಡವನ್ನು ವಿಧಿಸುತ್ತಾನೆ. ಅದೇ ರೀತಿ ಯಾವ ಜೀವನೂ ತನ್ನ ದುಷ್ಕರ್ಮಗಳ ಫಲವನ್ನನುಭವಿಸಬಯಸುವುದಿಲ್ಲವಾದಕಾರಣ, ಪರಮಾತ್ಮನೇ ತನ್ನ ವ್ಯವಸ್ಥೆಗನುಸಾರವಾಗಿ ಆಯಾಯಾ ವ್ಯಕ್ತಿಯ ಕರ್ಮಗಳಿಗೆ ಯೋಗ್ಯವಾದ ದಂಡವನ್ನೀಯುತ್ತಾನೆ. ಆದುದರಿಂದ ನ್ಯಾಯಾಧೀಶನಾದ ಪರಮಾತ್ಮನ ಆವಶ್ಯಕತೆ ಇದೆ.

ನಾಸ್ತಿಕ :—ಜಗತ್ತಿನಲ್ಲಿರುವುದು ಒಬ್ಬ ಪರಮಾತ್ಮನಲ್ಲ. ಮುಕ್ತ ಜೀವರುಗಳೆಲ್ಲರೂ ಪರಮಾತ್ಮರೇ ಆಗಿರುವರು.

ಆಸ್ತಿಕ :—ಈ ಮಾತು ಸರ್ವಥಾ ವ್ಯರ್ಥ. ಮೊದಲು ಬದ್ಧರಾಗಿದ್ದು ಮುಕ್ತರಾದರೆ ಪುನಃ ಅವಶ್ಯವಾಗಿ ಅವರು ಬಂಧನದಲ್ಲಿ ಬೀಳುವರು. ಅವರು ಸ್ವಾಭಾವಿಕವಾಗಿ ಯಾವಾಗಲೂ ಮುಕ್ತರಾಗಿರುವುದಿಲ್ಲ. ಉದಾ—ನಿಮ್ಮ ಇಪ್ಪತ್ತನಾಲ್ಕು ಮಂದಿ ತೀರ್ಥಂಕರರು ಮೊದಲು ಬದ್ಧರಾಗಿದ್ದು ಅನಂತರ ಮುಕ್ತರಾದರು. ಪುನಃ ಅವಶ್ಯವಾಗಿ ಬಂಧನದಲ್ಲಿ ಬೀಳುವರು. ಜೀವರು ಅನೇಕರಿರುವುದರಿಂದ ತಂಟೆ, ಜಗಳಗಳನ್ನು ಮಾಡುತ್ತಿರುವಂತೆ ಪರಮಾತ್ಮರು ಅನೇಕರಿದ್ದರೆ ಅವರೂ ಜಗಳವಾಡಿಕೊಂಡಾರು.

ನಾಸ್ತಿಕ :—ಮೂಢ! ಜಗತ್ತಿನ ಕರ್ತನಾರೂ ಇಲ್ಲ. ಜಗತ್ತು ಸ್ವಯಂಸಿದ್ಧವಾದುದು.

ಆಸ್ತಿಕ :—ಇದು ಜೈನರ ಎಷ್ಟು ದೊಡ್ಡ ತಪ್ಪು ತಿಳುವಳಿಕೆ? ಕರ್ತನಿಲ್ಲದೆ ಕರ್ಮವೂ, ಕರ್ಮದ ಹೊರತು ಕಾರ್ಯವೂ ಜಗತ್ತಿನಲ್ಲಾಗುವುದೆಲ್ಲಿಯಾದರೂ ತೋರುತ್ತದೆಯೆ? ಹೊಲದಲ್ಲಿ ಗೋಧಿಯು

ತಾನಾಗಿ ಹುಟ್ಟಿ, ಬೀಸಿ, ರೊಟ್ಟಿಯಾಗಿ ಜೈನರ ಹೊಟ್ಟೆಯನ್ನು ಸೇರಿ ಕೊಳ್ಳುತ್ತದೆ' ಎನ್ನುವಂತಹ ಮಾತಿದು. ಹತ್ತಿಯು ತಾನಾಗಿ ಎಂದಿಗೂ ದಾರ, ಬಟ್ಟೆ, ಅಂಗವಸ್ತ್ರ, ಶಾಲು, ಪಂಚೆ, ಪೇಟಾ ಮೊದಲಾದುವು ಆಗಿ ಬರುವುದಿಲ್ಲ. ಇಷ್ಟು ಆಗದಿದ್ದ ಮೇಲೆ ಕರ್ತನಾದ ಪರಮಾತ್ಮನ ಹೊರತು ಈ ವಿವಿಧ ಜಗತ್ತೂ, ನಾನಾವಿಧವಾದ ರಚನಾವಿಶೇಷವೂ ಹೇಗಾಗಬಲ್ಲುದು? ಹಠಮಾರಿತನದಿಂದ ನೀವು ಜಗತ್ತು ಸ್ವಯಂ ನಿರ್ಮಿತವಾದುದೆಂದು ನಂಬಿದರೆ ಮೇಲಿನ ವಸ್ತುಗಳನ್ನು ಕರ್ತನಿಲ್ಲದೆ ಸ್ವಯಂಸಿದ್ಧವಾಗುವುದನ್ನು ಪ್ರತ್ಯಕ್ಷವಾಗಿ ತೋರಿಸಿ. ಹಾಗೆ ತೋರಿಸ ಲಾರಿರಾದರೆ ನಿಮ್ಮ ಪ್ರಮಾಣಶೂನ್ಯಕಥನವನ್ನು ಬುದ್ಧಿವಂತನಾಗಿರು ವವನಾವನು ನಂಬಬಲ್ಲನು?

ನಾಸ್ತಿಕ:—ಪರಮಾತ್ಮನು ವಿರಕ್ತನೋ ಮೋಹಿತನೋ? ವಿರಕ್ತನಾಗಿರುವುದಾದರೆ ಜಗತ್ತಿನ ಗೊಂದಲದಲ್ಲೇಕೆ ಬಿದ್ದನು? ಮೋಹಿತನಾಗಿರುವುದಾದರೆ ಜಗತ್ತನ್ನು ನಿರ್ಮಿಸುವ ಸಾಮರ್ಥ್ಯವಂತ ನಾಗಲಾರನು.

ಆಸ್ತಿಕ:—ಪರಮಾತ್ಮನಲ್ಲಿ ವಿರಕ್ತಿಯಾಗಲೀ ಮೋಹವಾಗಲೀ ಘಟಿಸಲಾರದು. ಏಕೆಂದರೆ—ಸರ್ವವ್ಯಾಪಕನಾಗಿರುವವನು ಯಾವು ದನ್ನು ಬಿಡಬೇಕು; ಯಾವುದನ್ನು ಗ್ರಹಣಮಾಡಬೇಕು? ಪರಮಾತ್ಮ ನಿಗಿಂತ ಉತ್ತಮನಾಗಲೀ ಅವನನ್ನು ಅಪ್ರಾಪ್ತವಾಗಲೀ ಆಗಿರುವ ಯಾವ ಪದಾರ್ಥವೂ ಇಲ್ಲ. ಆದುದರಿಂದ ಅವನಿಗೆ ಯಾವುದರಲ್ಲಿಯೂ ಮೋಹವಿರುವುದಿಲ್ಲ. ವೈರಾಗ್ಯ ಮೋಹಗಳಿರುವುದು ಜೀವಾತ್ಮನಲ್ಲಿ ಘಟಿಸುತ್ತದೆಯೇ ವಿನಾ ಪರಮಾತ್ಮನಲ್ಲಿ ಘಟಿಸುವುದಿಲ್ಲ.

ನಾಸ್ತಿಕ:—ಪರಮಾತ್ಮನನ್ನು ಜಗತ್ಕರ್ತೃವೆಂದೂ, ಜೀವಾತ್ಮರ ಕರ್ಮಫಲವನ್ನು ಕೊಡುವವನೆಂದೂ ಒಪ್ಪುವುದಾದರೆ ಅವನು ಸಾಂಸಾ ರಿಕನಾಗಿ ದುಃಖವನ್ನನುಭವಿಸುವನು.

ಆಸ್ತಿಕ:—ಅನೇಕ ವಿಧವಾದ ಕರ್ಮಗಳನ್ನು ಮಾಡುವವನೂ, ಪ್ರಾಣಿಗಳಿಗೆ ಫಲವನ್ನೀಯುವವನೂ ಆದ ಧಾರ್ಮಿಕನ್ಯಾಯಾಧೀಶ ವಿದ್ವಾಂಸನು ಕರ್ಮಗಳಲ್ಲಿ ಸಿಲುಕುವುದಿಲ್ಲ. ಸಾಂಸಾರಿಕನಾಗುವುದಿಲ್ಲ

ವೆಂದವೇಲೆ ಅನಂತಸಾಮರ್ಥ್ಯವಂತನಾದ ಪರಮಾತ್ಮನು ಪ್ರಪಂಚಿಯೂ ದುಃಖಿಯೂ ಏಕೇಕಾಗುವನು ? ಹೌದು. ಸ್ವ-ಅಜ್ಞಾನದಿಂದ ನೀವು ಪರಮಾತ್ಮನನ್ನು ತಮ್ಮಂತೆಯೂ, ತಮ್ಮ ತೀರ್ಥಂಕರರಂತೆಯೂ ಇರುವನೆಂದು ತಿಳಿಯುವುದು ನಿಮ್ಮ ಅವಿದ್ಯೆಯ ಲೀಲೆಯಾಗಿರುತ್ತದೆ. ಅವಿದ್ಯಾದಿ ದೋಷಗಳಿಂದ ನೀವು ಮುಕ್ತರಾಗಬಯಸುವುದಾದರೆ ವೇದಾದಿಸತ್ಯಶಾಸ್ತ್ರಗಳ ಆಶ್ರಯವನ್ನು ಪಡೆಯಿರಿ. ಭ್ರಮೆಯಲ್ಲಿ ಬಿದ್ದು ಮುಗ್ಗರಿಸುವಿರೇಕೆ ?

ಇನ್ನು ಜೈನರು ಜಗತ್ತನ್ನು ಯಾವರೀತಿ ತಿಳಿಯುತ್ತಾರೆಂಬುದನ್ನು ಅವರ ಸೂತ್ರಗಳಿಗನುಸಾರವಾಗಿ ತೋರಿಸುತ್ತೇವೆ. ಮೊದಲು ಸಂಕ್ಷೇಪವಾಗಿ ಮೂಲಾರ್ಥವನ್ನು ಮಾಡಿ ಅನಂತರ ಸತ್ಯಾಸತ್ಯಗಳ ಸಮೀಕ್ಷೆಮಾಡಿ ತೋರಿಸುತ್ತೇವೆ.

ಸಾಮಿಅಣಾಇ ಅಣಂತೇ ಚ ನೂಗಇ ಸಂಸಾರ ಘೋರ
ಕಾಂತರೇ ।
ಮೋಹಾಇ ಕಮ್ಮಗುರುರಿಇ ವಿವಾರ್ಗ ವಸನುಭವುಇ
ಜೀವ ರೋ ॥

[ಪ್ರಕರಣರತ್ನಾಕರ ಭಾ. ೨. ಷ. ೬೦, ಸೂತ್ರ ೨]

ಇದು ರತ್ನಸಾರಭಾಗ ಎಂಬ ಗ್ರಂಥದ ಸಮ್ಯಕ್ತ್ವಪ್ರಕಾಶ ಪ್ರಕರಣದಲ್ಲಿ ಗೌತಮಮಹಾವೀರರ ಸಂವಾದವು.

ಸಂಕ್ಷೇಪವಾಗಿ ಇದರ ಉಪಯುಕ್ತವಾದ ಅರ್ಥ—ಈ ಜಗತ್ತು ಅನಾದಿಯೂ, ಅನಂತವೂ ಆಗಿರುತ್ತದೆ. ಇದರ ಉತ್ಪತ್ತಿ ಎಂದೂ ಆಗಲಿಲ್ಲ; ನಾಶವೆಂದಿಗೂ ಆಗುವುದಿಲ್ಲ. ಆಂದರೆ ಯಾರಿಂದಲೂ ನಿರ್ಮಿಸಲ್ಪಟ್ಟುದಲ್ಲವೆಂಬುದನ್ನು ಆಸ್ತಿಕ ನಾಸ್ತಿಕ ಸಂವಾದದಲ್ಲಿ ' ಮೂಢ ! ಜಗತ್ತಿನ ಕರ್ತನಾರೂ ಇಲ್ಲ. ಇದು ಎಂದಿಗೂ ಹುಟ್ಟಿಯೂ ಇಲ್ಲ, ನಾಶವೂ ಆಗುವುದಿಲ್ಲ ' ಎಂದು ಹೇಳಿದೆ.

ಸಮೀಕ್ಷಕ :—ಸಂಯೋಗದಿಂದ ಉತ್ಪನ್ನವಾಗುವಂತಹುದು ಅನಾದಿ ಮತ್ತು ಅನಂತವೆಂದಿಗೂ ಆಗಲಾರದು. ಉತ್ಪತ್ತಿ ವಿನಾಶಗಳ ಹೊರತು ಕರ್ಮವಿರುವುದಿಲ್ಲ. ಜಗತ್ತಿನಲ್ಲಿ ಉತ್ಪನ್ನವಾಗುವ ಎಲ್ಲ

ವಸ್ತುಗಳೂ ಸಂಯೋಗಜಗಳಾಗಿ ಉತ್ಪತ್ತಿವಿನಾಶವುಳ್ಳವೇ ಆಗಿರುವಾಗ. ಜಗತ್ತು ಉತ್ಪತ್ತಿವಿನಾಶಗಳಿಲ್ಲದಿರುವುದು ಹೇಗೆ? ಆದಕಾರಣ ನಿಮ್ಮ ತೀರ್ಥಂಕರರಿಗೆ ಸರಿಯಾದ ಜ್ಞಾನವಿರಲಿಲ್ಲ. ಇದ್ದಿದ್ದರೆ ಇಂತಹ ಅಸಂಭವವಾದ ಮಾತುಗಳನ್ನೇಕೆ ಬರೆಯುತ್ತಿದ್ದರು? ಹೇಗೆ ನಿಮ್ಮ ಗುರುಗಳಿರುವರೋ ಆದೇ ರೀತಿ ಶಿಷ್ಯರಾದ ನೀವೂ ಇರುವಿರಿ. ನಿಮ್ಮ ಮಾತನ್ನು ಕೇಳುವವನಿಗೆ ಪದಾರ್ಥಜ್ಞಾನವೆಂದಿಗೂ ಆಗಲಾರದು. ಸಂಯುಕ್ತವಾದ ಪದಾರ್ಥವು ಪ್ರತ್ಯಕ್ಷವಾಗಿ ಕಾಣುತ್ತಿರುವಾಗ ಅದರ ಉತ್ಪತ್ತಿವಿನಾಶಗಳನ್ನೇಕೆ ಒಪ್ಪುವುದಿಲ್ಲ? ಇವರ ಆಚಾರ್ಯರಿಗೆ ಅಥವಾ ಜೈನರಿಗೆ ಭೂಗೋಳ ಖಗೋಳ ವಿದ್ಯೆಗಳೇನೂ ತಿಳಿದಿರಲಿಲ್ಲ. ಈಗಲೂ ಅವರಲ್ಲಿ ಆ ವಿದ್ಯೆಗಳಿಲ್ಲ. ಇದ್ದಿದ್ದರೆ ಕೆಳಗೆ ಬರೆಯಲ್ಪಡುವ ಅಸಂಭವ ಮಾತುಗಳನ್ನು ಹೇಗೆ ಒಪ್ಪುತ್ತಿದ್ದರು? ಅಥವಾ ಹೇಳುತ್ತಿದ್ದರು? ನೋಡಿರಿ! ಈ ಸೃಷ್ಟಿಯಲ್ಲಿ **ಪೃಥಿವೀಕಾಯ** ಅಂದರೆ ಪೃಥಿವಿಯೇ ಶರೀರವಾಗಿರುವ ಜೀವಿಯೂ, ಜಲಕಾಯಜೀವಿಯೂ ಇದೆಯೆಂದು ಒಪ್ಪುತ್ತಾರೆ. ಇದನ್ನಾರೂ ಒಪ್ಪಲಾರರು. ಇನ್ನೂ ಇವರ ಮಿಥ್ಯಾವಚನಗಳನ್ನು ನೋಡಿ, ಜೈನರು ಸಮ್ಯಕ್‌ಜ್ಞಾನಿಗಳೆಂದೂ, ಪರಮೇಶ್ವರರೆಂದೂ ತಿಳಿಯುವ ತೀರ್ಥಂಕರರ ಮಿಥ್ಯಾವಚನಗಳ ಮಾದರಿಗಳಿವು. 'ರತ್ನಸಾರಭಾಗ' (ಈ ಗ್ರಂಥವನ್ನು ಜೈನರು ಒಪ್ಪುತ್ತಾರೆ. ಸನ್ ೧೮೭೯ನೇ ಇಸವಿ ಏಪ್ರಿಲ್ ತಾ|| ೨೦ಕ್ಕೆ ಕಾಶಿಯಲ್ಲಿ 'ಜೈನಪ್ರಭಾಕರ ಪ್ರೆಸ್' ನಾನಕಚಂದ ಜತೀ ಎಂಬುವರು ಇದನ್ನು ಅಚ್ಚುಹಾಕಿಸಿ ಪ್ರಕಟಿಸಿದ್ದಾರೆ) ದ ೧೪೫ನೇ ಪುಟದಲ್ಲಿ ಕಾಲದ ವ್ಯಾಖ್ಯೆಯನ್ನು ಹೀಗೆ ಮಾಡಿರುವರು—"(ಸಮುಯಃ ಸೂಕ್ಷ್ಮಃ ಕಾಲಃ) ಸೂಕ್ಷ್ಮವಾದ ಕಾಲವು ಸಮುಯವು. ಅಸಂಖ್ಯಾತ ಸಮುಯಗಳಿಗೆ 'ಆವಲಿ' ಯೆಂದು ಹೆಸರು. ಒಂದುಕೋಟಿ ಅರವತ್ತೇಳುಲಕ್ಷ ಎಪ್ಪತ್ತು ಸಾವಿರದ ಇನ್ನೂರಹದಿನಾರು ಆವಲಿಗಳಿಗೆ ಒಂದುಮುಹೂರ್ತ. ಅಂತಹ ಮೂವತ್ತು ಮುಹೂರ್ತಗಳಿಗೆ ಒಂದು ದಿವಸ. ಹದಿನೈದು ದಿವಸಗಳಿಗೊಂದು ಪಕ್ಷವೂ, ಎರಡು ಪಕ್ಷಗಳಿಗೊಂದು ಮಾಸವೂ, ಹನ್ನೆರಡು ಮಾಸಗಳಿಗೊಂದು ವರ್ಷವೂ ಆಗಿರುತ್ತದೆ. ಅಂತಹ ಎಪ್ಪತ್ತುಲಕ್ಷ ಕೋಟಿ, ಐವತ್ತಾರು ಸಾವಿರಕೋಟಿ (೭೦೫೬೦೦೦೦೦೦೦೦೦)

ವರ್ಷಗಳಿಗೊಂದು ಪೂರ್ವವೂ ಅಸಂಖ್ಯಾತ ಪೂರ್ವಗಳಿಗೊಂದು ಪಲ್ಯೋಪಮಕಾಲವೂ ಆಗಿರುತ್ತದೆ. ಅಸಂಖ್ಯಾತ ಎಂದರೆ—ನಾಲ್ಕು ಹರದಾರಿ ಚೌಕೋಣ ಮತ್ತು ಅಷ್ಟೇ ಆಳವಾದ ಭಾವಿಯನ್ನು ತೋಡಿ ಅದನ್ನು ಕೆಳಗೆ ಬರೆದಿರುವಂತೆ ಜುಗುಲಿಯಾ ಮನುಷ್ಯನ ಶರೀರದ ಕೂದಲುಗಳ ತುಂಡುಗಳಿಂದ ತುಂಬುವುದು; ಏಂದರೆ, ಈಗಿನ ಮನುಷ್ಯರ ಕೂದಲುಗಳಿಗಿಂತ ಜುಗುಲಿಯಾ ಮನುಷ್ಯನ ಕೂದಲು ನಾಲ್ಕುಸಾವಿರ ತೊಂಭತ್ತಾರು ಭಾಗ ಸೂಕ್ಷ್ಮವಾಗಿರುತ್ತದೆ. ಜುಗುಲಿಯಾ ಮನುಷ್ಯರ ನಾಲ್ಕುಸಾವಿರ ತೊಂಭತ್ತಾರು ಕೂದಲುಗಳನ್ನು ಒಟ್ಟುಗೂಡಿಸಿದರೆ ಈಗಿನ ಮನುಷ್ಯನ ಒಂದು ಕೂದಲಾಗುತ್ತದೆ. ಜುಗುಲಿಯಾ ಮನುಷ್ಯನ ಒಂದು ಕೂದಲಿನ ಒಂದು ಅಂಗುಲ ಭಾಗದ ಎಂಟೆಂಟು ತುಂಡುಗಳನ್ನು ಏಳುಸಾರಿ ಮಾಡಿದರೆ ೨೦೯೭೧೫೨ ಇಪ್ಪತ್ತುಲಕ್ಷ ತೊಂಭತ್ತೇಳು ಸಾವಿರದ ನೂರೈವತ್ತೆರಡು ತುಂಡುಗಳಾಗುತ್ತವೆ. ಇಂತಹ ತುಂಡುಗಳಿಂದ ಮೇಲೆ ಹೇಳಿದ ಭಾವಿಯನ್ನು ತುಂಬಿ ಅದರಿಂದ ನೂರು ವರ್ಷಗಳ ಅವಧಿಯಲ್ಲಿ ಒಂದೊಂದು ತುಂಡನ್ನು ತೆಗೆಯುತ್ತಾ ಎಲ್ಲ ತುಂಡುಗಳನ್ನು ತೆಗೆದು ಭಾವಿ ಬರಿದಾದರೂ ಅದು ಸಂಖ್ಯಾತಕಾಲವೇ. ಅನಂತರ ಆ ಒಂದೊಂದು ತುಂಡನ್ನು ಅಸಂಖ್ಯಾತ ತುಂಡುಗಳನ್ನಾಗಿ ಮಾಡಿ ಅವುಗಳಿಂದ ಅದೇ ಭಾವಿಯನ್ನು ಚಕ್ರವರ್ತಿಯ ಸೈನ್ಯವು ನಡೆದು ಹೋದರೂ ಜಗ್ಗದಷ್ಟು ಗಟ್ಟಿಯಾಗಿ ತುಂಬಿ ನೂರು ವರ್ಜಗಳ ಅವಧಿಯಲ್ಲಿ ಒಂದೊಂದು ತುಂಡನ್ನು ತೆಗೆಯುತ್ತಾ ಭಾವಿಯು ಬರಿದಾದಾಗ ಅದು ಅಸಂಖ್ಯಾತ. ಇಂತಹ ಅಸಂಖ್ಯಾತಪೂರ್ವಗಳಿಗೆ ಒಂದು ಪಲ್ಯೋಪಮಕಾಲವು. ಅದನ್ನು ಭಾವಿಯ ದೃಷ್ಟಾಂತದಿಂದ ತಿಳಿದುಕೊಳ್ಳಬೇಕು. ದಶಕೋಟ್ಯಾನುಕೋಟಿಪಲ್ಯೋಪಮಕಾಲಗಳು ಕಳೆದಾಗ ಒಂದು "ಸಾಗರೋಪಮಕಾಲವಾಗುತ್ತದೆ. ದಶಕೋಟ್ಯಾನುಕೋಟಿ ಸಾಗರೋಪಮಕಾಲಗಳು ಕಳೆದರೆ ಒಂದು 'ಉತ್ಸರ್ಪಣೀ ಕಾಲ" ವಾಗುತ್ತದೆ. ಒಂದು ಉತ್ಸರ್ಪಣಿಯೂ ಒಂದು ಅವಸರ್ಪಣಿಯೂ ಕಳೆದರೆ ಆಗ ಒಂದು 'ಕಾಲಚಕ್ರ' ವಾಗುತ್ತದೆ. ಅನಂತಕಾಲ ಚಕ್ರಗಳು ಕಳೆದರೆ

ಒಂದು 'ಪುದ್ಗಲಪರಾವೃತ್ತ' ವಾಗುತ್ತದೆ. ಇನ್ನು ಅನಂತಕಾಲವೆಂದು ಯಾವುದಕ್ಕೆ ಹೇಳುತ್ತಾರೆ? ಸಿದ್ಧಾಂತಪುಸ್ತಕಗಳಲ್ಲಿ ನವದೃಷ್ಟಾಂತಗಳಿಂದ ಮಾಡಿದ ಕಾಲಸಂಖ್ಯೆಯ ಅನಂತರ 'ಅನಂತಕಾಲ' ವೆನಿಸುತ್ತದೆ. ಅಂತಹ ಅನಂತಪುದ್ಗಲಪರಾವೃತ್ತಕಾಲಗಳು ಜೀವನು ಭ್ರಮಿಸುತ್ತಾ ಕಳೆದಿವೆಯೆಂದು ಮೊದಲಾಗಿ ಬರೆದಿದ್ದಾರೆ." ಗಣಿತವಿದ್ಯಾವಂತರಾದ ಅಣ್ಣತಮ್ಮಂದಿರೆ! ಕೇಳಿರಿ. ಜೈನರ ಗ್ರಂಥಗಳ ಕಾಲಸಂಖ್ಯೆಯನ್ನು ಎಣಿಸಬಲ್ಲಿರೆ ಇಲ್ಲವೆ? ನೋಡಿರಿ! ಈ ತೀರ್ಥಂಕರರು ಇಂತಹ ಗಣಿತವಿದ್ಯೆಯನ್ನು ಓದಿದ್ದರು. ಅವಿದ್ಯೆಯಪಾರಾವಾರವಿಲ್ಲದ ಇಂತಹ ಗುರುಶಿಷ್ಯರು ಇವರಲ್ಲಿದ್ದಾರೆ. ಇನ್ನು ಇವರ ಅಜ್ಞಾನಾಂಧಕಾರ ನೋಡಿರಿ; ರತ್ನಸಾರಭಾಗ ೧೩೩ನೇ ಪುಟದಿಂದ ಋಷಭದೇವನಿಂದ ಹಿಡಿದು ಮಹಾವೀರನ ವರೆಗಾದ ಜೈನರ ಇಪ್ಪತ್ತನಾಲ್ಕು ಮಂದಿ ತೀರ್ಥಂಕರರ ವಚನಗಳ ಸಾರಸಂಗ್ರಹವಿದೆ. ರತ್ನಸಾರಭಾಗ ಪುಟ ೧೪೮ ರಲ್ಲಿ ಹೀಗೆ ಬರೆದಿದೆ—ಪೃಥಿವೀಕಾಯದ ಜೀವ, ಮಣ್ಣು, ಪಾಷಾಣ ಮೊದಲಾದ ಪೃಥಿವಿಯ ಭೇದವನ್ನರಿತುಕೊಳ್ಳಬೇಕು. ಅವುಗಳಲ್ಲಿರುವ ಜೀವರ ಶರೀರದ ಪರಿಮಾಣವು ಒಂದು ಅಂಗುಲದ ಅಸಂಖ್ಯಾತದ ಭಾಗ ಅಂದರೆ ಅತ್ಯಂತ ಸೂಕ್ಷ್ಮವಾದವರೆಂದು ತಿಳಿಯಬೇಕು. ಅವರ ಆಯುಷ್ಯವು ಹೆಚ್ಚೆಂದರೆ ೨೨ ಸಾವಿರ ವರ್ಷಗಳವರೆಗಿದೆ.

(ರತ್ನಸಾರ ಪುಟ ೧೪೯) 'ವನಸ್ಪತಿಯ ಒಂದು ಶರೀರದಲ್ಲಿ ಅನಂತಜೀವಗಳಿದ್ದು ಅವು ಸಾಧಾರಣ ವನಸ್ಪತಿಗಳೆಂದು ಕರೆಯಲ್ಪಡುತ್ತವೆ. ಕಂದ ಮೂಲಪ್ರಮುಖವೂ, ಅನಂತಕಾಯಪ್ರಮುಖವೂ ಆದ ಅವರು ಸಾಧಾರಣ ವನಸ್ಪತಿಯ ಜೀವರೆಂದು ಹೇಳಬೇಕು. ಅನಂತ ಮುಹೂರ್ತವು ಅವರ ಆಯುಮಾನವು. ಈ ಮುಹೂರ್ತವು ಮೊದಲು ಹೇಳಿದ ಮುಹೂರ್ತವೆಂದು ತಿಳಿಯಬೇಕು. ಒಂದು ಶರೀರದಲ್ಲಿ ಸ್ಪರ್ಶವನ್ನುಳ್ಳ ಏಕೇಂದ್ರಿಯವುಳ್ಳವನಾಗಿ ಒಬ್ಬನೇ ಜೀವನು ಅದರಲ್ಲಿ ವಾಸಿಸುತ್ತಾನೆ. ಅದನ್ನು ಪ್ರತ್ಯೇಕ ವನಸ್ಪತಿಯೆನ್ನುತ್ತಾರೆ. ಅದರ ದೇಹಗಾತ್ರವು ಒಂದುಸಾವಿರ ಯೋಜನ. ಅಂದರೆ ಪೌರಾಣಿಕರ ಯೋಜನವು ನಾಲ್ಕು ಹರದಾರಿಗಳದಾದರೆ ಜೈನರ ಯೋಜನವು

೧೦,೦೦೦ (ವರಸಹಸ್ರ) ಹರದಾರಿಗಳದಾಗಿದೆ. ಇಂತಹ ಸಾವಿರ ಯೋಜನದ ಒಂದು ಶರೀರವಿರುತ್ತದೆ. ಅವನ ಆಯುಮಾನವು ಹೆಚ್ಚೆಂದರೆ ಹತ್ತುಸಾವಿರ ವರ್ಷಗಳು. ಇನ್ನು ಎರಡಿಂದ್ರಿಯವುಳ್ಳ ಜೀವಗಳು ಅಂದರೆ ಶರೀರ ಮತ್ತು ಮುಖವಿರುವ ಶಂಖ, ಕವಡೆ, ಹೇನು ಮೊದಲಾದುವುಗಳು. ಅವುಗಳ ದೇಹ ಗಾತ್ರವು ಅಧಿಕಾಧಿಕ ವೆಂದರೆ ನಾಲ್ಪತ್ತೆಂಟು ಯೋಜನಸ್ಥೂಲವಿರುತ್ತದೆ. ಆಯುಮಾನವು ಹೆಚ್ಚೆಂದರೆ ಹನ್ನೆರಡು ವರ್ಷವಿರುತ್ತದೆ, ಇಲ್ಲಿ ಈ ಮನುಷ್ಯನು ಬಹಳ ತಪ್ಪುಮಾಡಿದ್ದಾನೆ. ಇಷ್ಟು ದೊಡ್ಡ ಶರೀರದ ಆಯುಷ್ಯವು ಹೆಚ್ಚು ಬರೆಯಬೇಕಾಗಿತ್ತು. ನಾಲ್ಪತ್ತೆಂಟು ಹರದಾರಿ ಸ್ಥೂಲವಿರುವ ಹೇನು ಜೈನರ ಶರೀರದಲ್ಲಿ ಬಿದ್ದಿರಬಹುದು; ಅವರೇ ನೋಡಿರಬಹುದು. ಇಷ್ಟು ದೊಡ್ಡ ಹೇನನ್ನು ನೋಡುವ ಭಾಗ್ಯವು ಬೇರೆಯವರಿಗೆಲ್ಲಿಂದ ಬಂದೀತು!!!

(ರತ್ನಸಾರ ಭಾಗ ಪು. ೧೫೦) ಮತ್ತೂ ನೋಡಿರಿ ಇವರ ಬರುಡೆಯನ್ನು. 'ಜೇಳು, ತಿಗಣೆ, ಚಿಗಟ ಮತ್ತು ನೊಣಗಳಿಗೆ ಒಂದೊಂದು ಯೋಜನದ ಶರೀರವಿರುತ್ತದೆ. ಆಯುಮಾನವು ಅಧಿಕ ವೆಂದರೆ ಆರುತಿಂಗಳು.' ಸಹೋದರರೇ! ನೋಡಿರಿ. ನಾಲ್ಕು ನಾಲ್ಕು ಹರದಾರಿಗಳ ಜೇಳನ್ನು ಬೇರಾರೂ ನೋಡಿರಲಿಕ್ಕಿಲ್ಲ. ಎಂಟು ಮೈಲಿಗಳ ವರೆಗೆ ಗಾತ್ರವುಳ್ಳ ಜೇಳು ನೊಣಗಳು ಜೈನಮತದಲ್ಲಿವೆ. ಅವೆಲ್ಲವೂ ಅವರ ಮನೆಯಲ್ಲೇ ಇರುತ್ತಿರಬಹುದು. ಅವರೇ ನೋಡಿರಬಹುದು. ಜಗತ್ತಿನಲ್ಲಿ ಬೇರಾರೂ ನೋಡಿರಲಿಕ್ಕಿಲ್ಲ, ಎಂದಾದರೂ ಇಂತಹ ಜೇಳುಗಳು ಜೈನರನ್ನು ಕಡಿದವೆಂದರೆ ಅವರ ಗತಿಯೇನಾಗುತ್ತದೊ! ಜಲಚರಗಳಾದ ಮೀನು ಮೊದಲಾದವುಗಳ ಶರೀರ ಪರಿಮಾಣವು ಒಂದು ಸಹಸ್ರಯೋಜನ ಅಂದರೆ ೧೦,೦೦೦ ಕೋಶದ ಲೆಕ್ಕದಿಂದ ೧,೦೦,೦೦೧೦೦೦ (ಒಂದು ಕೋಟಿ) ಹರದಾರಿಗಳಾದುವು. ಒಂದು ಕೋಟಿ ಪೂರ್ವವರ್ಷಗಳು ಅವರ ಆಯುಮಾನವು. ಅಂತಹ ಸ್ಥೂಲ ಜಲಚರಜಂತುವನ್ನು ಜೈನರ ಹೊರತು ಬೇರಾರೂ ನೋಡಿರಲಿಕ್ಕಿಲ್ಲ. ಚತುಷ್ಪಾದ ಪ್ರಾಣಿಗಳಾದ ಆನೆ ಮೊದಲಾದವುಗಳ ಶರೀರವು ಎರಡು ಹರದಾರಿಯಿಂದ ಒಂಭತ್ತು ಹರದಾರಿವರೆಗಿರುತ್ತದೆಂದೂ ಆಯುಷ್ಯವು

ಎಂಭತ್ತು ನಾಲ್ಕು ಸಾವಿರ ವರ್ಷಗಳೆಂದೂ ಬರೆದಿರುವರು. ಇಂತಹ ದೊಡ್ಡ ದೊಡ್ಡ ಶರೀರವುಳ್ಳ ಜೀವಿಗಳನ್ನು ಜೈನರೇ ನೋಡಿರಬಹುದು. ಅವರೇ ಇವನ್ನು ತಿಳಿಯುತ್ತಾರೆ. ಬೇರಾರೂ ಒಪ್ಪಲಾರರು.

(ರತ್ನಸಾರ ಭಾಗ ಪು. ೧೫೧) 'ಗರ್ಭಜ ಜಲಚರ ಜಂತುಗಳ ದೇಹಮಾನವು ಉತ್ಕೃಷ್ಟವಾದ ಒಂದು ಸಹಸ್ರ ಯೋಜನ ಅಂದರೆ ೧,೦೦,೦೦,೦೦೦ (ಒಂದು ಕೋಟಿ) ಹರದಾರಿಗಳೂ, ಆಯುಮಾನವು ಒಂದು ಕೋಟಿ ಪೂರ್ವವರ್ಷಗಳೂ ಆಗಿರುತ್ತದೆ.' ಇಷ್ಟು ದೊಡ್ಡ ಶರೀರ ಮತ್ತು ಆಯುಷ್ಯವುಳ್ಳ ಜೀವಿಗಳನ್ನು ಇವರ ಆಚಾರ್ಯರೇ ಸೃಷ್ಟಿದಲ್ಲಿ ನೋಡಿರಬಹುದು. ಕದಾಪಿ ಸಂಭವವಲ್ಲದ ಈ ಮಾತು ಮಹಾ ಅಸತ್ಯವಲ್ಲವೆ?

ಇನ್ನು ಭೂಮಿಯ ಪರಿಮಾಣವನ್ನು ಕೇಳಿರಿ. (ರತ್ನಸಾರ ಭಾ. ಪು. ೧೫೨) 'ಓರೆಯಾಗಿರುವ ಈ ಲೋಕದಲ್ಲಿ ಅಸಂಖ್ಯಾತ ದ್ವೀಪಗಳೂ ಸಮುದ್ರಗಳೂ ಇವೆ. ಈ ಅಸಂಖ್ಯಾತ ದ್ವೀಪ ಮತ್ತು ಸಮುದ್ರಗಳು ಎರಡೂವರೆ ಸಾಗರೋಪಮ ಕಾಲದಲ್ಲಿ ಎಷ್ಟು ಸಮಯಗಳಾಗುತ್ತವೋ ಅಷ್ಟು ಇವೆ. ಈ ಪೃಥ್ವಿಯಲ್ಲಿ ಪ್ರಥಮವಾದ ಜಂಬೂದ್ವೀಪವು ಎಲ್ಲ ದ್ವೀಪಗಳ ಮಧ್ಯದಲ್ಲಿದೆ. ಅದರ ಪ್ರಮಾಣವು ಒಂದು ಲಕ್ಷ ಯೋಜನ ಅಂದರೆ ಒಂದು ಅರ್ಬ ಹರದಾರಿಗಳಷ್ಟಿದೆ. ಅದರ ನಾಲ್ಕೂ ಕಡೆ ಲವಣಸಮುದ್ರವಿದೆ. ಅದರ ಪರಿಣಾಮವು ಎರಡು ಲಕ್ಷ ಯೋಜನಗಳು ಅಂದರೆ ಎರಡು ಅರ್ಬ ಹರದಾರಿಗಳಷ್ಟಿದೆ. ಈ ಜಂಬೂದ್ವೀಪದ ನಾಲ್ಕು ಕಡೆ ಅರ್ಬ ಹರದಾರಿಗಳಷ್ಟಿದೆ. ಅದರ ಹಿಂದೆ ಎಂಟು ಲಕ್ಷ ಯೋಜನ ಅಂದರೆ ಎಂಟು ಅರಬ ಹರದಾರಿ ಪರಿಮಾಣವುಳ್ಳ ಕಾಲೋದಧಿ ಸಮುದ್ರವಿದೆ. ಅದರ ಹಿಂದೆ ಹದಿನಾರು ಅರ್ಬ ಹರದಾರಿ ಪರಿಮಾಣವುಳ್ಳ ಪುಷ್ಕರಾವರ್ತ ದ್ವೀಪವಿದೆ. ಅದರೊಳಗೆ ಹಳ್ಳದಿಣ್ಣೆಗಳಿವೆ. ಆ ದ್ವೀಪದ ಅರ್ಧಭಾಗದಲ್ಲಿ ಮನುಷ್ಯರು ವಾಸಿಸುತ್ತಾರೆ. ಆ ನಂತರ ಅಸಂಖ್ಯಾತ ದ್ವೀಪಗಳೂ ಸಮುದ್ರಗಳೂ ಇವೆ. ಅವುಗಳಲ್ಲಿ ತಿರ್ಯಗ್ಯೋನಿಜೀವಗಳಿರುತ್ತವೆ.

(ರತ್ನಸಾರ ಭಾ. ಪು. ೧೫೩) ಜಂಬೂದ್ವೀಪದಲ್ಲಿ ಹಿಮವಂತ,

ಐರಂಡವಂತ, ಹರಿವರ್ಷ, ರಮ್ಯಕ, ದೇವಕುರು, ಉತ್ತರಕುರು ಎಂಬ ಆರು ಕ್ಷೇತ್ರಗಳಿವೆ.'

ಸಮಿಕ್ಷ—ಕೇಳಿ ತಮ್ಮಂದಿರೆ! ಭೂಗೋಳವಿದ್ಯೆಯನ್ನರಿಯುವವರೆ! ಭೂಗೋಳದ ಪರಿಮಾಣವನ್ನು ಕಂಡು ಹಿಡಿಯುವಾಗ ನೀವು ತಪ್ಪಿರುವಿರೆ ಅಥವಾ ಜೈನರು ತಪ್ಪಿರುವರೆ? ಜೈನರು ತಪ್ಪಿದ್ದರೆ ಅವರಿಗೆ ಸ್ವಲ್ಪ ತಿಳಿಸಿರಿ. ನೀವು ತಪ್ಪಿದ್ದರೆ ಅವರಿಂದ ತಿಳಿದುಕೊಳ್ಳಿರಿ. ಸ್ವಲ್ಪ ಯೋಚಿಸಿ ನೋಡಿದರೆ ಜೈನರ ಆಚಾರ್ಯರೂ ಶಿಷ್ಯರೂ ಭೂಗೋಳ ಖಗೋಳ ಮತ್ತು ಗಣಿತವಿದ್ಯೆಗಳನ್ನೇನೂ ಓದಿರಲಿಲ್ಲವೆಂಬುದು ನಿಶ್ಚಯವಾಗುತ್ತದೆ. ಓದಿದ್ದರೆ ಅಸಂಭವಗಳಾದ ಬುರುಡೆಗಳನ್ನು ಹೊಡೆದರೇಕೆ? ಇಂತಹ ಅವಿದ್ವಾಂಸರು ಜಗತ್ತು ಅಕರ್ತೃಕವೆಂದೂ, ಈಶ್ವರನಿಲ್ಲವೆಂದೂ ತಿಳಿದರೆ ಆಶ್ಚರ್ಯವಾದರೂ ಏನು? ಆದುದರಿಂದಲೇ ಜೈನರು ತಮ್ಮ ಪುಸ್ತಕಗಳನ್ನು ವಿದ್ವಾಂಸರಿಗಾಗಲೀ ಅನ್ಯಮತದವರಿಗಾಗಲೀ ಕೊಡುವುದಿಲ್ಲ. ಏಕೆಂದರೆ ಪ್ರಮಾಣಿಕರಾದ ತೀರ್ಥಂಕರರು ನಿರ್ಮಿಸಿರುವಂತಹವುಗಳೆಂದು ನಂಬಿರುವ ಗ್ರಂಥಗಳಲ್ಲೇ ಇಂತಹ ಅವಿದ್ಯಾಯುಕ್ತವಾದ ವಿಷಯಗಳು ತುಂಬಿಕೊಂಡಿವೆ. ಆದಕಾರಣ ಕೊಡುವುದಿಲ್ಲ. ಕೊಟ್ಟರೆ ಹುಳುಕೆಲ್ಲವೂ ಬಯಲಾಗುವುದು. ಇವರ ಹೊರತು ಸ್ವಲ್ಪ ಬುದ್ಧಿಯುಳ್ಳ ಯಾವ ಮನುಷ್ಯನಾದರೂ ಈ ಬುರುಡೆಪುರಾಣಗಳನ್ನು ಸತ್ಯವೆಂದು ನಂಬಲಾರನು. ಈ ಎಲ್ಲಾ ಗೊಂದಲವನ್ನು ಜೈನರು ಜಗತ್ತನ್ನು ಅನಾದಿಯೆಂದು ವಾದಿಸುವುದಕ್ಕಾಗಿ ರಚಿಸಿದ್ದಾರೆ. ಆದರೆ ಇದೆಲ್ಲವೂ ಸುಳ್ಳು. ಜಗತ್ತಿನ ಕಾರಣವಾದರೋ ಅನಾದಿಯೆಂಬುದು ನಿಜ. ಪರಮಾಣು ಮೊದಲಾದ ತತ್ವಸ್ವರೂಪವು ಅಕರ್ತೃಕವಾಗಿರುತ್ತದೆ. ಆದರೆ ಅವುಗಳಲ್ಲಿ ನಿಯಮ ಪ್ರಕಾರವಾಗಿ ಉಂಟಾಗುವ ಮತ್ತು ನಾಶವಾಗುವ ಸಾಮರ್ಥ್ಯವೇನೂ ಇಲ್ಲ. ಏಕೆಂದರೆ ಪರಮಾಣುವೆಂದು ಯಾವುದೋ ಒಂದು ದ್ರವ್ಯದ ಹೆಸರು. ಅವೆಲ್ಲವೂ ಬೇರೆ ಬೇರೆಯಾಗಿಯೂ ಜಡವಾಗಿಯೂ ಇವೆ. ತಾವಾಗಿ ಅವು ಯಥಾಯೋಗ್ಯವಾಗಿ ಏನೂ ಆಗಲಾರವು. ಆದುದರಿಂದ ನಿರ್ಮಿಸುವವನಾದ ಚೇತನನೊಬ್ಬನು ಅವಶ್ಯವಾಗಿದ್ದಾನೆ. ಅವನು ಜ್ಞಾನಸ್ವರೂಪನಾಗಿರುವನು. ನೋಡಿರಿ! ಪೃಥಿವಿ, ಸೂರ್ಯ

ಮೊದಲಾದ ಎಲ್ಲಾ ಲೋಕಗಳನ್ನು ನಿಯಮದಲ್ಲಿಡುವುದು ಅನಂತನೂ, ಅನಾದಿಯೂ ಆದ ಚೇತನಪರಮಾತ್ಮನ ಕೆಲಸವು. ಸಂಯೋಗವೂ, ರಚನಾವಿಶೇಷವೂ ಯಾವುದರಲ್ಲಿ ತೋರುತ್ತವೊ, ಆ ಸ್ಥೂಲಜಗತ್ತಿಂದಿಗೂ ಅನಾದಿಯಾಗಲಾರದು. ಕಾರ್ಯಜಗತ್ತನ್ನು ನಿತ್ಯವೆಂದು ಭಾವಿಸಿದರೆ ಅದರ ಕಾರಣವಾವುದೂ ಇರಲಾರದು. ಅದೊಂದೇ ಕಾರ್ಯಕಾರಣವಾಗುವುದು. ಎಂದು ಹೇಳುವುದಾದರೆ ತನ್ನ ಕಾರ್ಯ ಮತ್ತು ಕಾರಣವು ತಾನೇ ಆಗುವುದರಿಂದ ಅನ್ಯೋನ್ಯಾಶ್ರಯ ಮತ್ತು ಆತ್ಮಾಶ್ರಯ ದೋಷಗಳು ತಟ್ಟುತ್ತವೆ. ತನ್ನ ಹೆಗಲ ಮೇಲೆ ತಾನೇ ಏರುವುದೂ, ತನ್ನ ತಂದೆ ಮತ್ತು ಪುತ್ರನು ತಾನೇ ಎನ್ನುವುದೂ ಆಗಲಾರದು. ಆದುದರಿಂದ ಜಗತ್ತಿನ ಕರ್ತೃವನ್ನು ಅವಶ್ಯ ನಂಬಬೇಕು.

ಪ್ರಶ್ನೆ :—ಜಗತ್ತಿನ ಕರ್ತನು ಪರಮಾತ್ಮನಾದರೆ ಪರಮಾತ್ಮನ ಕರ್ತನಾರು?

ಉತ್ತರ :—ಕರ್ತನಿಗೆ ಕರ್ತನು ಮತ್ತು ಕಾರಣಕ್ಕೆ ಕಾರಣವು ಯಾವುದೂ ಇರಲಾರದು. ಏಕೆಂದರೆ ಮೊದಲು ಕರ್ತೃ ಕಾರಣಗಳಿರುವುದರಿಂದಲೇ ಕಾರ್ಯವಾಗುತ್ತದೆ. ಸಂಯೋಗ ವಿಯೋಗಗಳನ್ನು ಹೊಂದದ ಮತ್ತು ಪ್ರಥಮ ಸಂಯೋಗವಿಯೋಗಗಳಿಗೆ ಕಾರಣವಾದ ವಸ್ತುವಿನ ಕರ್ತನಾಗಲೀ ಕಾರಣವಾಗಲೀ ಯಾವ ರೀತಿಯೂ ಇರುವುದಿಲ್ಲ. ಇದರ ವಿಶೇಷ ವಿವರಣವನ್ನು ಎಂಟನೆಯ ಸಮುಲ್ಲಾಸದ ಸೃಷ್ಟಿವ್ಯಾಖ್ಯಾನದಲ್ಲಿ ಬರೆದಿದೆ. ಅಲ್ಲಿ ನೋಡಿಕೊಳ್ಳುವುದು. ಈ ಜೈನರಿಗೆ ಸ್ಥೂಲವಿಷಯದ ಜ್ಞಾನವೂ ಯಥಾವತ್ತಾಗಿ ಇಲ್ಲದಿದ್ದ ಮೇಲೆ ಪರಮ ಸೂಕ್ಷ್ಮವಾದ ಸೃಷ್ಟಿವಿದ್ಯೆಯ ಬೋಧವಾದರೂ ಹೇಗಾಗಬಲ್ಲುದು? ಆದುದರಿಂದ ಸೃಷ್ಟಿ, ಮತ್ತು ದ್ರವ್ಯ ಪರ್ಯಾಯಗಳು ಅನಾದಿಯೂ ಅನಂತವೂ ಆಗಿವೆಯೆಂದೂ, ಪ್ರತಿಯೊಂದು ಗುಣದಲ್ಲಿಯೂ ದೇಶದಲ್ಲಿಯೂ ಪರ್ಯಾಯಗಳು ಮತ್ತು ಪ್ರತಿಯೊಂದು ವಸ್ತುವಿನಲ್ಲಿ ಅನಂತಪರ್ಯಾಯಗಳಿವೆಯೆಂದೂ ಜೈನರು ನಂಬುತ್ತಾರೆ. ಇದು ಪ್ರಕರಣರತ್ನಾಕರದ ಪ್ರಥಮಭಾಗದಲ್ಲಿ ಬರೆದಿದೆ. ಈ ವಿಷಯವೂ ಕೂಡ ಎಂದಿಗೂ ಸರಿಹೋಗಲಾರದು. ಅಂತ ಅಂದರೆ

ಸೀಮೆಯಿರುವ ವಸ್ತುಗಳಿಗೆ ಸಂಬಂಧಪಟ್ಟ ವಸ್ತುಗಳೆಲ್ಲವೂ, ಅಂತವುಳ್ಳವೇ ಆಗಿರುತ್ತವೆ. ಅನಂತವನ್ನು ಅಸಂಖ್ಯವೆಂದು ಹೇಳಿದರೂ ಸರಿಯಲ್ಲ. ಅದು ಜೀವರ ಅಪೇಕ್ಷೆಯಿಂದ ಈ ಮಾತು ಘಟಿಸಬಲ್ಲುದೆ ವಿನಹ ಪರಮಾತ್ಮನ ಎದುರಿನಲ್ಲಲ್ಲ. ಏಕೆಂದರೆ ಒಂದೊಂದು ದ್ರವ್ಯದಲ್ಲಿ ತನ್ನದೇ ಆದ ಒಂದೊಂದು ಕಾರ್ಯಕಾರಣ ಸಾಮರ್ಥ್ಯವನ್ನು ಅವಿಭಾಗಪರ್ಯಾಯಗಳಿಂದ ಅನಂತ ಸಾಮರ್ಥ್ಯವೆಂದು ತಿಳಿಯುವುದು--ಬರೇ ಅವಿದ್ಯೆಯ ಮಾತು. ಒಂದು ಪರಮಾಣುವು ದ್ರವ್ಯದ ಸೀಮೆ ಯಾವಾಗ ಆಯಿತೊ ಅದರಲ್ಲಿ ಅನಂತ ವಿಭಾಗರೂಪವಾದ ಪರ್ಯಾಯಗಳು ಹೇಗಿರಬಲ್ಲವು? ಇದೇ ರೀತಿ ಒಂದೊಂದು ದ್ರವ್ಯದಲ್ಲಿ ಅನಂತ ಗುಣಗಳೂ ಒಂದು ಗುಣ ಪ್ರದೇಶದಲ್ಲಿ ಅವಿಭಾಗರೂಪವಾದ ಅನಂತ ಪರ್ಯಾಯಗಳೂ ಇವೆಯೆಂದು ತಿಳಿಯುವುದು ಕೂಡ ಕೇವಲ ಮಕ್ಕಳಾಟಿಕೆಯ ಮಾತು. ಯಾವುದರ ಅಧಿಕರಣದ ಅಂತ ವಿದೆಯೊ, ಅದರಲ್ಲಿರುವವುಗಳ ಅಂತವೇಕಿಲ್ಲ? ಇದೇ ರೀತಿಯ ಉದ್ದುದ್ದ ಸುಳ್ಳುಮಾತುಗಳನ್ನು ಬರೆದಿದ್ದಾರೆ. ಜೀವ ಮತ್ತು ಅಜೀವ ಈ ಎರಡು ಪದಾರ್ಥಗಳ ವಿಷಯದಲ್ಲಿ ಜೈನರ ನಿರ್ಣಯವು ಹೀಗಿದೆ--

ಚೇತನಾ ಲಕ್ಷಣೋ ಜೀವಃ ಸ್ಯಾದ್ಯಜೀವಸ್ತದವ್ಯಕಃ ।।
ಸತ್ಕರ್ಮ ಪುದ್ಗಲಾಃ ಪುಣ್ಯಂ ಪಾಪಂ ತಸ್ಯ ವಿಪರ್ಯಯಃ॥

ಇದು ಜಿನದತ್ತಸೂರಿಯ ವಚನವು. ಪ್ರಕರಣರತ್ನಾಕರದ ಮೊದಲನೆಯ ಭಾಗದ ನಯಚಕ್ರಸಾರದಲ್ಲಿಯೂ ಚೇತನಾಲಕ್ಷಣನು ಜೀವಾತ್ಮನು. ಅಜೀವ ಅಂದರೆ ಜಡವು ಚೇತನಾರಹಿತವಾದುದು. ಸತ್ಕರ್ಮರೂಪ ಪುದ್ಗಲಗಳು ಪುಣ್ಯವೂ ಪಾಪಕರ್ಮರೂಪ ಪುದ್ಗಲಗಳು ಪಾಪವೂ ಆಗಿರುವುದೆಂದು ಬರೆದಿದ್ದಾರೆ.

ಸಮೀಕ್ಷೆ--ಜೀವ ಮತ್ತು ಜಡದ ಲಕ್ಷಣಗಳೇನೋ ಸರಿಯಾಗಿವೆ. ಜಡರೂಪವಾದ ಪುದ್ಗಲಗಳೆಂದಿಗೂ ಪಾಪಪುಣ್ಯಯುಕ್ತವಾಗಲಾರವು. ಏಕೆಂದರೆ ಪಾಪಪುಣ್ಯಗಳನ್ನು ಮಾಡುವ ಸ್ವಭಾವವಿರುವುದು ಚೇತನ ವಸ್ತುವಿನಲ್ಲಿ. ನೋಡಿರಿ! ಈ ಜಡಪದಾರ್ಥಗಳೆಲ್ಲವೂ ಪಾಪಪುಣ್ಯರಹಿತವಾಗಿವೆ. ಜೀವಾತ್ಮರನ್ನು ಅನಾದಿಯೆಂದು ತಿಳಿಯುವುದು

ಸರಿ. ಆದರೆ ಆ ಅಲ್ಪ ಮತ್ತು ಅಲ್ಪಜ್ಞರಾದ ಜೀವಾತ್ಮರನ್ನು ಮುಕ್ತಿಯ ಸ್ಥಿತಿಯಲ್ಲಿ ಸರ್ವಜ್ಞರಾಗುತ್ತಾರೆಂದು ತಿಳಿಯುವುದು ತಪ್ಪು. ಅಲ್ಪನೂ ಅಲ್ಪಜ್ಞನೂ ಆದವನ ಸಾಮರ್ಥ್ಯವೂ ಸರ್ವಥಾ ಸೀಮವಾಗಿಯೇ ಇರುವುದು. ಜೈನರು ಜಗತ್ತು, ಜೀವಾತ್ಮ, ಅವನ ಕರ್ಮ ಮತ್ತು ಬಂಧವನ್ನು ಅನಾದಿಯೆಂದು ತಿಳಿಯುತ್ತಾರೆ. ಈ ವಿಷಯದಲ್ಲಿಯೂ ಜೈನರ ತೀರ್ಥಂಕರರು ತಪ್ಪು ಮಾಡಿದ್ದಾರೆ. ಏಕೆಂದರೆ ಸಂಯುಕ್ತ ಜಗತ್ತಿನ ಕಾರ್ಯಕಾರಣಗಳು, ಪ್ರವಾಹದಿಂದ ನಡೆಯುವ ಕಾರ್ಯ, ಜೀವಾತ್ಮನ ಕರ್ಮ ಮತ್ತು ಬಂಧಗಳೂ ಅನಾದಿಯಾಗಲಾರವು. ಹಾಗೆ ಅನಾದಿಯೆಂದು ತಿಳಿಯುತ್ತಿರುವಾಗ ಕರ್ಮಬಂಧಗಳು ನಾಶವಾಗುತ್ತವೆಂದು ಏಕೆ ನಂಬುತ್ತೀರಿ? ಅನಾದಿಪದಾರ್ಥವೆಂದಿಗೂ ನಾಶವಾಗಲಾರದು. ಅನಾದಿಯು ನಾಶವಾಗುತ್ತದೆಂದು ನಂಬಿದರೆ ನಿಮ್ಮ ಎಲ್ಲಾ ಅನಾದಿಪದಾರ್ಥಗಳ ನಾಶದ ಪ್ರಸಂಗ ಬಂದೀತು. ಅನಾದಿಯನ್ನು ನಿತ್ಯವೆಂದು ಒಪ್ಪಿದರೆ ಕರ್ಮಬಂಧಗಳೂ ನಿತ್ಯವಾದವು. ಎಲ್ಲಾ ಕರ್ಮಗಳು ನಾಶವಾಗುವುದೇ ಮುಕ್ತಿಯೆಂದು ನಂಬುವುದಾದರೆ ಎಲ್ಲಾ ಕರ್ಮಗಳು ನಾಶವಾಗುವುದು ಮುಕ್ತಿಯ ನಿಮಿತ್ತವಾಯಿತು. ಆಗ ನೈಮಿತ್ತಿಕವಾದ ಮುಕ್ತಿಯು ಸದಾ ಇರಲಾರದು. ಮತ್ತು ಕರ್ಮ ಕರ್ತೃಗಳ ನಿತ್ಯಸಂಬಂಧವಿರುವುದರಿಂದ ಕರ್ಮಗಳೂ ಎಂದಿಗೂ ನಾಶವಾಗಲಾರವು. ಹೀಗಿರುವಾಗ ತಮ್ಮ ಮತ್ತು ತಮ್ಮ ತೀರ್ಥಂಕರರ ಮುಕ್ತಿಯು ನಿತ್ಯವೆಂದು ತಿಳಿದುಕೊಂಡಿರುವುದು ಸರಿಹೋಗಲಾರದು.

ಪ್ರಶ್ನೆ :—ಧಾನ್ಯದ ಸಿಪ್ಪೆ ಉದುರಿಹೋಗುವುದರಿಂದಾಗಲೀ, ಅಗ್ನಿಯ ಸಂಯೋಗವಾದರಾಗಲೀ ಬೀಜಕ್ಕೆ ಹೇಗೆ ಮೊಳಕೆ ಬರುವುದಿಲ್ಲವೊ ಅದೇ ರೀತಿ ಮುಕ್ತಿಗೆ ತೆರಳಿದ ಜೀವನು ಪುನಃ ಜನ್ಮಮರಣ ರೂಪವಾದ ಜಗತ್ತಿಗೆ ಬರುವುದಿಲ್ಲ.

ಉತ್ತರ :—ಜೀವ–ಕರ್ಮಗಳ ಸಂಬಂಧವು ಬೀಜ–ಸಿಪ್ಪೆಗಳಂತಿಲ್ಲ. ಅದು ಸಮವಾಯ ಸಂಬಂಧವು. ಆದುದರಿಂದ ಅನಾದಿಕಾಲದಿಂದ ಜೀವ ಮತ್ತು ಅವನಲ್ಲಿ ಕರ್ಮ ಮತ್ತು ಕರ್ತೃತ್ವ ಶಕ್ತಿಯ ಅಭಾವವನ್ನು ನಂಬುವಿರಾದರೆ ಎಲ್ಲಾ ಜೀವರು ಕಲ್ಲುಬಂಡೆಯಂತಾಗುವರು. ಮುಕ್ತಿಯನ್ನು ಅನುಭವಿಸುವ ಶಕ್ತಿಯೂ ಅವರಲ್ಲಿರದು.

ಅನಾದಿಕಾಲದಿಂದಿದ್ದ ಕರ್ಮಬಂಧನವು ತೊಲಗಿ ಜೀವಾತ್ಮನು ಮುಕ್ತನಾಗುವನಾದರೆ ನಿಮ್ಮ ನಿತ್ಯಮುಕ್ತಿಯಿಂದಲೂ ಬಿಡುಗಡೆಯಾಗಿ ಬಂಧನದಲ್ಲಿ ಬೀಳುವನು. ಏಕೆಂದರೆ ಮುಕ್ತಿಸಾಧನವಾದ ಕರ್ಮದಿಂದ ಬಿಡುಗಡೆಯಾಗಿ ಮುಕ್ತಿಯಾಗುತ್ತಾನೆಂದು ನಂಬುವಂತೆ ನಿತ್ಯಮುಕ್ತಾವಸ್ಥೆಯಿಂದಲೂ ಬಿಡುಗಡೆಯಾಗಿ ಬಂಧನದಲ್ಲಿ ಬಿದ್ದಾನು. ಸಾಧನಗಳಿಂದ ಸಿದ್ಧವಾಗದೇನೇ ಮುಕ್ತಿಯಾಗುತ್ತದೆಂದು ನಂಬುವುದಾದರೆ ಕರ್ಮಗಳಿಲ್ಲದೇನೇ ಬಂಧನವು ಪ್ರಾಪ್ತವಾಗಬಹುದು. ಬಟ್ಟೆಗಳಿಗೆ ಕೊಳೆತಾಗುತ್ತದೆ. ಒಗೆಯುವುದರಿಂದ ಅದು ಹೋಗುತ್ತದೆ. ಪುನಃ ಕೊಳೆ ತಾಗಿಯೇ ತಾಗುತ್ತದೆ. ಅದೇ ರೀತಿ ಮಿಥ್ಯಾತ್ವಾದಿ ಹೇತುಗಳಿಂದಲೂ ರಾಗದ್ವೇಷಾದಿಗಳ ಆಶ್ರಯದಿಂದಲೂ, ಜೀವನಿಗೆ ಕರ್ಮರೂಪವಾದ ಫಲವು ದೊರೆಯುತ್ತದೆ. ಸಮ್ಯಜ್ಞಾನ, ದರ್ಶನ, ಚಾರಿತ್ರಗಳಿಂದ ಜೀವನು ನಿರ್ಮಲನಾಗುತ್ತಾನೆ. ಕೊಳೆತಾಗುವ ಕಾರಣಗಳಿಂದ ಕೊಳೆ ತಾಗುತ್ತದೆಂದು ನಂಬುವುದಾದರೆ ಮುಕ್ತ ಜೀವನು ಸಾಂಸಾರಿಕನೂ, ಸಾಂಸಾರಿಕ ಜೀವನು ಮುಕ್ತನೂ ಆಗುತ್ತಾನೆಂದು ಅವಶ್ಯ ನಂಬಬೇಕು. ಏಕೆಂದರೆ ನಿಮಿತ್ತಗಳಿಂದ ಮಲಿನತೆಯು ಹೋಗುವಂತೆ ನಿಮಿತ್ತಗಳಿಂದ ಕೊಳೆ ಅಂಟಿಕೊಳ್ಳುವುದೂ ಇದೆ. ಅದುದರಿಂದ ಜೀವಾತ್ಮನ ಬಂಧಮುಕ್ತಿಗಳು ಪ್ರವಾಹದಿಂದ ಅನಾದಿಯಂದು ನಂಬಿರಿ. ಅನಂತತೆಯಿಂದ ಅನಾದಿಯೆಂದಲ್ಲ.

ಪ್ರಶ್ನೆ :—ಜೀವನು ನಿರ್ಮಲನೆಂದಿಗೂ ಆಗಿರಲಿಲ್ಲ. ಮಲಸಹಿತನಾಗಿಯೇ ಇದ್ದನು.

ಉತ್ತರ :—ಎಂದೂ ನಿರ್ಮಲನಾಗಿಲ್ಲದಿದ್ದರೆ ಎಂದಿಗೂ ನಿರ್ಮಲನಾಗಲಾರನು. ಶುದ್ಧವಸ್ತ್ರದ ಅನಂತರ ತಾಗಿದ ಕೊಳೆಯನ್ನು ಒಗೆದು ಹೋಗಲಾಡಿಸುತ್ತೇವೆ. ಅದರ ಸ್ವಾಭಾವಿಕವಾದ ಬಿಳಿಯ ಬಣ್ಣವನ್ನು ಹೋಗಲಾಡಿಸಲಾರೆವು. ಪುನಃ ಅದಕ್ಕೆ ಕೊಳತಾಗುತ್ತದೆ. ಮುಕ್ತಿಯಲ್ಲಿಯೂ ಹೀಗೆಯೇ ತಾಗುತ್ತದೆ.

ಪ್ರಶ್ನೆ :—ಜೀವಾತ್ಮನು ತನ್ನ ಪೂರ್ವೋಪಾರ್ಜಿತಕರ್ಮಗಳಿಂದಲೇ ಶರೀರವನ್ನು ಧರಿಸಿಕೊಳ್ಳುತ್ತಾನೆ. ಈಶ್ವರನನ್ನು ಒಪ್ಪುವುದು ವ್ಯರ್ಥ.

ಉತ್ತರ:—ಕೇವಲ ಕರ್ಮವೇ ಶರೀರಧಾರಣದ ನಿಮಿತ್ತವಾಗಿದ್ದು ಪರಮಾತ್ಮನು ಕಾರಣನಲ್ಲದಿದ್ದರೆ ಜೀವಾತ್ಮನು ಅನೇಕ ದುಃಖಗಳನ್ನುಳ್ಳ ಕೆಟ್ಟಜನ್ಮವನ್ನೆಂದಿಗೂ ಧರಿಸನು. ಒಳ್ಳೆಯ ಒಳ್ಳೆಯ ಜನ್ಮವನ್ನೇ ಧರಿಸುವನು. ಕರ್ಮವು ಅದಕ್ಕೆ ಪ್ರತಿಬಂಧಕವಾಗಿದೆಯೆನ್ನುವಿರಾದರೆ ಕಳ್ಳನು ಹೇಗೆ ತಾನಾಗಿ ಜೈಲಿಗೆ ಹೋಗುವುದಿಲ್ಲವೊ, ತಾನಾಗಿ ಹೇಗೆ ಶೂಲಕ್ಕೇರುವುದಿಲ್ಲವೊ, ಅದರೆ ರಾಜನು ಶಿಕ್ಷೆಯನ್ನೀಯುತ್ತಾನೋ ಅದೇ ರೀತಿ ಜೀವನಿಗೆ ಶರೀರಧಾರಣಮಾಡಿಸುವ ಮತ್ತು ಅವನ ಕರ್ಮಾನುಸಾರವಾದ ಫಲವನ್ನೀಯುವ ಪರಮಾತ್ಮನನ್ನು ನೀವೂ ಒಪ್ಪಿರಿ.

ಪ್ರಶ್ನೆ:—ಅನುಲಿನ ಹಾಗೆ ಕರ್ಮವು ತಾನಾಗಿ ಪ್ರಾಪ್ತವಾಗುತ್ತದೆ. ಫಲವನ್ನೀಯಲು ಅನ್ಯರ ಅವಶ್ಯಕತೆಯಿಲ್ಲ.

ಉತ್ತರ:—ಹಾಗಿದ್ದರೆ ಮದ್ಯಪಾನಮಾಡುವವರಿಗೆ ಕಡಿಮೆ ಅಮಲೂ, ಅಭ್ಯಾಸವಿಲ್ಲದವರಿಗೆ ಹೆಚ್ಚು ಅಮಲೂ ಏರುವಂತೆ ನಿತ್ಯವೂ ಹೆಚ್ಚು ಪಾಪಪುಣ್ಯ ಮಾಡುವವರಿಗೆ ಕಡಿಮೆ ಫಲವೂ, ಒಂದೊಂದು ಸಲ ಸ್ವಲ್ಪ ಸ್ವಲ್ಪ ಮಾಡುವವರಿಗೆ ಮತ್ತು ಸಣ್ಣ ಕರ್ಮದವರಿಗೆ ಹೆಚ್ಚು ಫಲವೂ ದೊರೆಯಬೇಕು.

ಪ್ರಶ್ನೆ:—ಯಾವನ ಸ್ವಭಾವವು ಹೇಗಿರುತ್ತದೊ ಅವನಿಗೆ ಹಾಗೆಯೇ ಫಲ ದೊರೆಯುತ್ತದೆ.

ಉತ್ತರ:—ಸ್ವಭಾವದಿಂದಲೆ ಅದು ತೊಲಗಲೂ ಸಿಕ್ಕಲೂ ಸಾಧ್ಯವಿಲ್ಲ. ಶುದ್ಧ ವಸ್ತ್ರದಲ್ಲಿ ನಿಮಿತ್ತದಿಂದ ತಾಗಿದ ಮಲಿನತೆಯು ಹೋಗಲಾಡಿಸುವ ನಿಮಿತ್ತಗಳಿಂದ ತೊಲಗುವಂತೆ ಇದೆಯೆಂದು ನಂಬುವುದೇ ಸರಿಯಾದುದು.

ಪ್ರಶ್ನೆ:—ಸಂಯೋಗದ ಹೊರತು ಕರ್ಮವು ಪರಿಣಾಮವನ್ನು ಹೊಂದಲಾರದು. ಉದಾ—ಹಾಲು ಮತ್ತು ಹುಳಿಯ ಸಂಯೋಗದ ಹೊರತು ಮೊಸರು ಆಗುವುದಿಲ್ಲ. ಜೀವ ಮತ್ತು ಕರ್ಮದ ಯೋಗದಿಂದ ಕರ್ಮವು ಪರಿಣಾಮವನ್ನು ಹೊಂದುತ್ತದೆ.

ಉತ್ತರ:—ಹಾಲನ್ನು ಹುಳಿಯನ್ನು ಸೇರಿಸುವವನು ಮೂರನೆ

ಯವನೊಬ್ಬನಿರುವಂತೆ ಜೀವರನ್ನು ಕರ್ಮಗಳ ಫಲದೊಡನೆ ಸಂಯೋಜನಗೊಳಿಸುವವನು ಮೂರನೆಯವನಾದ ಈಶ್ವರನಿರಬೇಕು. ಜಡ ಪದಾರ್ಥಗಳು ತಾವಾಗಿ ನಿಯಮದಿಂದ ಸಂಯುಕ್ತವಾಗಲಾರವು. ಜೀವಾತ್ಮರೂ ಅಲ್ಪಜ್ಞರಾದುದರಿಂದ ತಾವಾಗಿ ಕರ್ಮಫಲವನ್ನು ಪಡೆಯಲಾರರು. ಇದರಿಂದ ಈಶ್ವರಸ್ಥಾಪಿತವಾದ ಸೃಷ್ಟಿಕ್ರಮದ ಹೊರತು ಕರ್ಮಫಲವ್ಯವಸ್ಥೆಯು ನಡೆಯಲಾರದೆಂಬುದು ಸಿದ್ಧವಾಗುತ್ತದೆ.

ಪ್ರಶ್ನೆ :— ಕರ್ಮಮುಕ್ತನಾದವನೇ ಈಶ್ವರನೆನಿಸುತ್ತಾನೆ.

ಉತ್ತರ :—ಅನಾದಿಕಾಲದಿಂದಲೂ ಕರ್ಮಗಳು ಜೀವಾತ್ಮನನ್ನಂಟಿಕೊಂಡಿರುವವೆಂದಮೇಲೆ ಅವನೆಂದಿಗೂ ಆ ಕರ್ಮಗಳಿಂದ ಮುಕ್ತನಾಗಲಾರನು

ಪ್ರಶ್ನೆ :— ಕರ್ಮಬಂಧನವು ಆದಿಯುಳ್ಳದು.

ಉತ್ತರ :—ಸಾದಿಯಾಗಿದ್ದರೆ ಕರ್ಮಗಳ ಯೋಗವು ಅನಾದಿಯಲ್ಲ. ಸಂಯೋಗದ ಮೊದಲು ಜೀವಾತ್ಮನು ನಿಷ್ಕರ್ಮನಾಗಿರಬೇಕು. ನಿಷ್ಕರ್ಮನಿಗೆ ಕರ್ಮಗಳು ಅಂಟಿಕೊಂಡವೆಂದಮೇಲೆ ಮುಕ್ತನಿಗೂ ಅಂಟಿಕೊಳ್ಳಲೇಬೆಕು. ಕರ್ಮ ಮತ್ತು ಕರ್ತೃ ಇವೆರಡರಲ್ಲಿ ಸಮವಾಯ ಅಂದರೆ ನಿತ್ಯಸಂಬಂಧವಿದೆ. ಅದೆಂದಿಗೂ ನಾಶವಾಗದು. ಅದುದರಿಂದ ಒಂಭತ್ತನೇ ಸಮುಲ್ಲಾಸದಲ್ಲಿ ಬರೆದು ಬಂದಂತೆ ನಂಬುವುದೇ ಸರಿಯಾದುದು. ಜೀವಾತ್ಮನು ತನ್ನ ಜ್ಞಾನವನ್ನೂ ಸಾಮರ್ಥ್ಯವನ್ನೂ ಎಷ್ಟು ಹೆಚ್ಚಿಸಿಕೊಂಡರೂ ಕೂಡ ಪರಿಮಿತವಾದ ಜ್ಞಾನವೂ, ಸಸೀಮವಾದ ಸಾಮರ್ಥ್ಯವೂ ಇರುವುದು. ಈಶ್ವರನಿಗೆ ಸಮಾನನೆಂದಿಗೂ ಆಗಲಾರನು. ಸಾಧ್ಯವಿದ್ದಷ್ಟು ಸಾಮರ್ಥ್ಯವನ್ನು ಯೋಗಾಭ್ಯಾಸದಿಂದ ಹೆಚ್ಚಿಸಿಕೊಳ್ಳಬಲ್ಲನು. ದೇಹಪರಿಮಾಣದಷ್ಟೇ ಜೀವಪರಿಮಾಣವಿದೆಯೆಂದು ಹೇಳುವ ಜೈನರಲ್ಲಿನ ಆರ್ಹತರನ್ನು ಈರೀತಿ ಪ್ರಶ್ನಿಸಬೇಕು—' ಹಾಗಿದ್ದರೆ ಆನೆಯ ಜೀವವು ಇರುವೆಯಲ್ಲಿಯೂ, ಇರುವೆಯ ಜೀವವು ಆನೆಯಲ್ಲಿಯೂ ಹೇಗೆ ಇರಬಲ್ಲುದು ? ' ಇದೂ ಒಂದು ಮೂರ್ಖತ್ವದ ವಿಷಯವು. ಏಕೆಂದರೆ ಜೀವವು ಒಂದು ಸೂಕ್ಷ್ಮಪದಾರ್ಥವು. ಒಂದು ಪರಮಾಣುವಿನಲ್ಲಿಯೂ

ಆದು ಇರಬಲ್ಲುದು. ಆದರೆ ಆವರ ಶಕ್ತಿಗಳು ಶರೀರದಲ್ಲಿನ ಪ್ರಾಣ, ವಿದ್ಯುತ್ತು ಮತ್ತು ನಾಡಿಗಳೊಂದಿಗೆ ಸಂಯುಕ್ತವಾಗಿರುತ್ತವೆ. ಆವುಗಳಿಂದ ಜೀವನು ಶರೀರದ ಎಲ್ಲ ವಿದ್ಯಮಾನಗಳನ್ನರಿತುಕೊಳ್ಳುತ್ತಾನೆ. ಸತ್ಸಂಗದಿಂದ ಒಳ್ಳೆಯವನೂ ಕುಸಂಗದಿಂದ ಕೆಟ್ಟವನೂ ಆಗುತ್ತಾನೆ.

ಜೈನರು ಧರ್ಮವನ್ನು ಈ ರೀತಿ ನಂಬುತ್ತಾರೆ—

ಮೂಲ :—

ರೇ ಜೀವ ಭವದುಹಾಇಂ ಇಕ್ಕಂ ಚಿಯ ಹರಇ ಜಿಣಮುಯಂ ಧಮ್ಮಂ।
ಇಯರಾಣಂ ಹರವುಂತೋ ಸುಹಕಹ್ಯೆ ಮೂಢ ಮುಸಿ ಓಸಿ॥

[ಪ್ರಕರಣರತ್ನಾಕರ ಭಾಗ ೨, ಷಷ್ಠೀಶತಕ ೬೦, ಸೂ. ೩]

ಎಲೈ ಜೀವನೆ! ಶ್ರೀವೀತರಾಗಭಾಷಿತವಾದ ಒಂದೇ ಜಿನಮತ ಧರ್ಮವು ಪ್ರಾಪಂಚಿಕ ಜನ್ಮ-ಜರಾ-ಮರಣಾದಿ ದುಃಖಗಳನ್ನು ಹರಣ ಮಾಡುವುದು. ಇದೇರೀತಿ ಸುದೇವ ಸುಗುರು ಎಂದು ಜೈನಮತದವರನ್ನೇ ತಿಳಿಯಬೇಕು. ಋಷಭದೇವನಿಂದ ಹಿಡಿದು ಮಹಾವೀರನವರೆಗಿನ ವೀತರಾಗದೇವರನ್ನು ಬಿಟ್ಟು ಇತರ ಹರಿ, ಹರ ಬ್ರಹ್ಮಾದಿ ಕೆಟ್ಟ ದೇವರುಗಳನ್ನು ತನ್ನ ಕಲ್ಯಾಣಕ್ಕೋಸ್ಕರ ಪೂಜಿಸುವ ಮನುಷ್ಯರು ಮೋಸಹೋಗಿರುತ್ತಾರೆ. ಜೈನಮತದ ಸುದೇವ, ಸುಗುರು, ಸುಧರ್ಮಗಳನ್ನು ಬಿಟ್ಟು ಅನ್ಯ ಕುದೇವ, ಕುಗುರು, ಕುಧರ್ಮಗಳನ್ನು ಸೇವಿಸುವುದರಿಂದೇನೂ ಕಲ್ಯಾಣವಾಗುವುದಿಲ್ಲವೆಂಬುದೇ ಇದರ ತಾತ್ಪರ್ಯವು.

ಸಮೀಕ್ಷಕ :—ಇವರ ಧರ್ಮ ಪುಸ್ತಕಗಳು ಎಂತಹ ನಿಂದೆಗಳಿಂದ ತುಂಬಿಕೊಂಡಿವೆಯೆಂಬುದನ್ನು ವಿದ್ವಾಂಸರೇ ಯೋಚಿಸಬೇಕು.

ಮೂಲ :—

ಅರಿಹಂ ದೇವೋ ಸುಗುರು ಸುದ್ಧಂ ಧಮ್ಮಂ ಚ ಪಂಚ ನವಕಾರೋ।
ಧನ್ನಾಣಂ ಕಯಚ್ಚಾಣಂ ನಿರಂತರಂ ವಸಇ ಹಿಯಯಮ್ಮಿ॥

[ಪ್ರಕ. ಭಾ. ೨, ಷಷ್ಠೀ. ೬೦, ಸೂ. ೧]

ಅರಿಹನ್ ದೇವೇಂದ್ರಕೃತ ಪೂಜಾದಿಗಳಿಗೆ ಯೋಗ್ಯವಾದ ಪದಾರ್ಥವು ಬೇರಾವುದೂ ಇಲ್ಲ. ಇಂತಹ ದೇವಾಧಿದೇವನನೂ, ಶೋಭಾಯಮಾನನೂ, ಜ್ಞಾನಕ್ರಿಯಾವಂತನೂ, ಶಾಸ್ತ್ರಗಳನ್ನು ಉಪದೇಶಿಸುವವನೂ ಆದ ಅರಿಹಂತದೇವನ ಶುದ್ಧವೂ ಕಷಾಯ-ಮಲ ರಹಿತವೂ ಸಮ್ಯಕ್ತ್ವ ವಿನಯ ದಯಾಮೂಲವೂ ಜಿನಭಾಷಿತವೂ ಆದ ಧರ್ಮವೇ ದುರ್ಗತಿಗೀಡಾಗುವ ಪ್ರಾಣಿಗಳನ್ನುದ್ಧರಿಸುತ್ತದೆ. ಇತರ ಹರಿಹರಾದಿಗಳ ಧರ್ಮವು ಜಗತ್ತಿನಲ್ಲಿ ಉದ್ಧಾರಮಾಡುವಂತಹುದಲ್ಲ. ಪಂಚ ಅರಿಹಂತಾದಿಗಳು, ಪರಮೇಷ್ಠಿಗಳು, ಅವರ ಸಂಬಂಧಿಕರು ಮತ್ತು ಅವರಿಗೆ ಮಾಡಲ್ಪಡುವ ನಮಸ್ಕಾರ ಈ ನಾಲ್ಕು ವಸ್ತುಗಳೇ ಧನ್ಯ-ಶ್ರೇಷ್ಠವಾದವುಗಳು. ಅಂದರೆ ದಯಾ, ಕ್ಷಮಾ, ಸಮ್ಯಕ್ತ್ವ, ಜ್ಞಾನ, ದರ್ಶನ ಮತ್ತು ಚಾರಿತ್ರ ಇದು ಜೈನರ ಧರ್ಮವು.

ಸಮೀಕ್ಷಕ—ಮನುಷ್ಯಮಾತ್ರರ ಮೇಲೆ ತೋರಿಸದಿರುವ ದಯೆ ದಯೆಯೂ ಅಲ್ಲ ಕ್ಷಮೆಯೂ ಅಲ್ಲ. ಜ್ಞಾನದ ಬದಲು ಅಜ್ಞಾನ ದರ್ಶನ, ಅಂಧಕಾರ, ಮತ್ತು ಚಾರಿತ್ರದ ಬದಲು ಉಪವಾಸ ಸಾಯುವುದು, ಯಾವ ಮಹಾ ಒಳ್ಳೆಯ ಮಾತು? ಜೈನಮತದ ಧರ್ಮ ಪ್ರಶಂಸೆ—

ಮೂಲ :—

ಜಇನ ಕುಣಸಿ ತವ ಚರಣಂ ನ ಪಢಸಿ ನ ಗುಣೋಸಿ
ದೇಸಿನೋ ದಾಣಂ ।
ತಾ ಇತ್ತಿಯಂ ನ ಸಕ್ಕಸಿಜಂ ದೇವೋ ಇಕ್ಕ ಅರಿಹಂತೋ ॥

[ಪ್ರಕ. ಭಾ, ೨, ಷಷ್ಠೀ. ೬೦, ಸೂ. ೨]

ಹೇ ಮನುಷ್ಯ! ನೀನು ತಪಚಾರಿತ್ರಗಳನ್ನು ಮಾಡಲಾರೆಯಾದರೂ, ಸೂತ್ರ ಓದಲಾರೆಯಾದರೂ, ಪ್ರಕರಣಾದಿಗಳನ್ನು ವಿಚಾರಮಾಡಲಾರೆಯಾದರೂ, ಸುಪಾತ್ರಸಿಗೆ ದಾನ ಕೊಡಲಾರೆಯಾದರೂ ಒಬ್ಬನೇ ದೇವರಾದ ಅರಿಹಂತನನ್ನು ಆರಾಧನಾಯೋಗ್ಯನಾದ ಸುಗುರುವೆಂದು ನಂಬಿ, ಸುಧರ್ಮವಾದ ಜೈನಮತದ ಮೇಲೆಶ್ರದ್ಧೆಯನ್ನಿಡುವುದು ಸರ್ವೋತ್ತಮವೂ, ಉದ್ಧಾರಹೇತುವೂ ಆಗಿರುತ್ತದೆ.

ಸಮೀಕ್ಷಕ :—ದಯೋಕ್ಷಮೆಗಳು ಒಳ್ಳೆಯವಾದರೂ ಪಕ್ಷಪಾತದಲ್ಲಿ ಸಿಕ್ಕುವುದರಿಂದ ದಯೆಯು ಅದಯೆಯಾಗಿಯೂ, ಕ್ಷಮೆಯು ಅಕ್ಷಮೆಯಾಗಿಯೂ ಮಾಪಡುತ್ತದೆ. ಯಾವ ಜೀವಿಗೂ ದುಃಖವನ್ನೀಯದಿರುವುದು ಸಂಭವವಲ್ಲ. ದುಷ್ಟರನ್ನು ದಂಡಿಸುವುದೂ ದಯೆಯೆನಿಸುತ್ತದೆ. ಒಬ್ಬ ದುಷ್ಟನನ್ನು ದಂಡಿಸದಿದ್ದರೆ ಸಾವಿರಾರು ಜನರಿಗೆ ದುಃಖವು ಲಭಿಸುವುದು. ಆದುದರಿಂದು ಆ ದಯೆಯು ಅದೆಯೆಯೂ ಕ್ಷಮೆಯು ಅಕ್ಷಮೆಯೂ ಆಗುತ್ತದೆ. ಎಲ್ಲ ಪ್ರಾಣಿಗಳ ದುಃಖವನ್ನು ಹೋಗಲಾಡಿಸಿ ಅವರಿಗೆ ಸುಖವನ್ನುಂಟುಮಾಡುವುದೇ ದಯೆಯ ಪ್ರಯೋಜನವಾಗಿರುತ್ತದೆ. ಕೇವಲ ನೀರನ್ನು ವಸ್ತ್ರಗಾಳಿತಮಾಡಿ ಕುಡಿಯುವುದೂ ಕ್ಷುದ್ರ ಜಂತುಗಳನ್ನು ರಕ್ಷಿಸುವುದೂ ದಯೆಯಲ್ಲ. ಆದರೆ ಅಂತಹ ದಯೆಯೂ ಜೈನರ ಬಾಯಿಯಲ್ಲಿರುತ್ತದೆಯೇ ವಿನಹ ವ್ಯವಹಾರದಲ್ಲಿ ಬರುವುದಿಲ್ಲ. ಮನುಷ್ಯರಲ್ಲಿ ಯಾವ ಮತದವನಾಗಿದ್ದರೂ ದಯೆಯಿಂದ ಅವನನ್ನು ತಿಂಡಿ ತೀರ್ಥಗಳಿಂದ ಸತ್ಕರಿಸುವುದೂ ಅನ್ಯಮತೀಯ ವಿದ್ವಾಂಸರ ಮನ್ನಣೆಯನ್ನೂ ಸೇವೆಯನ್ನೂ ಮಾಡುವುದೂ ದಯೆಯಲ್ಲವೇನು? ಇವರ ದಯೆಯು ನಿಜವಾದ ದಯೆಯೆ? ವಿವೇಕನಾದ ಪುಟ ೨೨ಗ ನೋಡಿರಿ, ಏನು ಬರೆದಿದ್ದಾರೆ? ಒಬ್ಬ "ಪರಮತೀಯನ ಸ್ತುತಿ" ಅರ್ಥಾತ್ ಗುಣಕೀರ್ತನವನ್ನೆಂದಿಗೂ ಮಾಡಬಾರದು. ೨—ಅವರಿಗೆ "ನಮಸ್ಕಾರ" ವಂದನವನ್ನು ಮಾಡಕೂಡದು. ೩—"ಆಲಾಪನ" ಅಂದರೆ ಅನ್ಯಮತೀಯನೊಡನೆ ಸ್ವಲ್ಪ ಮಾತನಾಡಬೇಕು. ೪—"ಸಂಲಪನ" ಅಂದರೆ ಅಗಾಗ್ಯೆ ಮಾತನಾಡಲಾಗದು. ೫—"ಅನ್ನವಸ್ತ್ರಾದಿ ದಾನ" ಅಂದರೆ ಊಟ ಉಡಿಗೆ ಕೊಡಬಾರದು. ೬—"ಗಂಧಪುಷ್ಪಾದಿದಾನ" ಅನ್ಯಮತದವರ ಮೂರ್ತಿಯ ಪೂಜೆಗಾಗಿ ಗಂಧಪುಷ್ಪಾದಿಗಳನ್ನು ಕೊಡಕೂಡದು. ಈ ಆರು ಯತ್ನಗಳನ್ನು ಕರ್ಮಗಳನ್ನು ಜೈನರು ಎಂದಿಗೂ ಮಾಡಕೂಡದು.

ಸಮೀಕ್ಷಕ :—ಅನ್ಯಮತದವರ ಮೇಲೆ ಜೈನರಿಗೆ ಎಷ್ಟರ ಮಟ್ಟಿನ, ಅದಯೆ, ಕುದೃಷ್ಟಿ ಮತ್ತು ದ್ವೇಷವಿದೆಯೆಂಬುದನ್ನೀಗ ಬುದ್ಧಿವಂತರೇ ಯೋಚಿಸಬೇಕು. ಅನ್ಯಮತೀಯರ ಮೇಲೆ ಇಷ್ಟು ಅದಯೆಯಿದ್ದನಂತರ ಜೈನರನ್ನು ದಯಾಹೀನರೆಂದು ಕರೆಯುವುದೇ ಸರಿಯಾ

ಗಿರುತ್ತದೆ. ತಮ್ಮ ಮನೆಯವರ ಸೇವೆಯನ್ನಷ್ಟೇ ಮಾಡುವುದು ಧರ್ಮ ವೆನಿಸುವುದಿಲ್ಲ. ತಮ್ಮ ಮತದವರು ತಮ್ಮ ಮನೆಯವರಿದ್ದಂತಾದರು. ಆವರ ಸೇವೆ ಮಾಡುವ ಮತ್ತು ಬೇರೆಯವರ ಸೇವೆ ಮಾಡದಿರು ವನರನ್ನು ಯಾವ ಬುದ್ಧಿವಂತನು ತಾನೆ ದಯಾವಂತರೆಂದು ಹೇಳ ಬಲ್ಲನು? ವಿವೇಕ. ಪುಟ ೧೦೮ ರಲ್ಲಿ ಮಥುರೆಯ ರಾಜನ ನಮುಚಿ ಯೆಂಬ ದಿವಾನನನ್ನು ಜೈನರು ತಮ್ಮ ವಿರೋಧಿಯೆಂದು ತಿಳಿದು ಕೊಂಡು ಕೊಂದುಹಾಕಿ ಆಲೋಯಣಾ (ಪ್ರಾಯಶ್ಚಿತ್ತ) ಮಾಡಿ ಶುದ್ಧರಾದರು ಎಂದು ಬರೆದಿದೆ. ಇದೂ ದಯಾಕ್ಷಮೆಗಳನ್ನು ನಾಶ ಪಡಿಸುವ ಕಾರ್ಯವಲ್ಲವೆ? ಅನ್ಯಮತೀಯರ ಪ್ರಾಣ ಹೀರುವಂತಹ ವೈರಬುದ್ಧಿಯನ್ನು ಉಳ್ಳ ಇವರನ್ನು ದಯಾಳುಗಳೆನ್ನುವುದರ ಬದಲಿಗೆ ಹಿಂಸಕರೆಂದು ಕರೆಯುವುದೇ ಸಾರ್ಥಕವಾದುದು.

ಸಮ್ಯಕ್ತ್ವದರ್ಶನಾದಿಗಳ ಲಕ್ಷಣಗಳನ್ನು ಆರ್ಹತ ಪ್ರವಚನ ಸಂಗ್ರಹವಾದ ಪರಮಾಗಮನಸಾರದಲ್ಲಿ ಹೇಳಿದೆ. ಸಮ್ಯಕ್‌ಶ್ರದ್ಧಾನ, ಸಮ್ಯಗ್ದರ್ಶನ, ಜ್ಞಾನ, ಚಾರಿತ್ರ ಇವು ನಾಲ್ಕು ಮೋಕ್ಷಮಾರ್ಗದ ಸಾಧನಗಳಾಗಿವೆ. ಇವುಗಳ ವ್ಯಾಖ್ಯೆಯನ್ನು ಯೋಗದೇವನು ಮಾಡಿರು ತ್ತಾನೆ. ಜೀವಾದಿ ದ್ರವ್ಯಗಳು ಯಾವ ರೂಪದಲ್ಲಿ ಅವಸ್ಥಿತವಾಗಿದೆಯೊ, ಅದೇ ರೂಪದಲ್ಲಿ ಜಿನಪ್ರತಿಪಾದಿತ ಗ್ರಂಥಕ್ಕನುಸಾರ ವಿಪರೀತವಾದ ಅಭಿನಿವೇಷಣಾದಿರಹಿತವಾದ ಶ್ರದ್ಧೆ—ಜಿನಮತದ ಮೇಲಿನ ಪ್ರೀತಿ— ಯೇ ಸಮ್ಯಕ್‌ಶ್ರದ್ಧಾನ ಮತ್ತು ಸಮ್ಯಗ್ದರ್ಶನಗಳಾಗಿವೆ.

ರುಚಿರ್ಜಿನೋಕ್ತತತ್ತ್ವೇಷು ಸಮ್ಯಕ್‌ಶ್ರದ್ಧಾನಮುಚ್ಯತೇ।

ಜಿನೋಕ್ತವಾದ ತತ್ವಗಳಲ್ಲಿ ಸರಿಯಾಗಿ ಶ್ರದ್ಧೆಯನ್ನಿಡಬೇಕು. ಬೇರೆಲ್ಲೂ ಅಲ್ಲ.

ಯಥಾವಸ್ಥಿತತತ್ವಾನಾಂ ಸಂಕ್ಷೇಪಾದ್ವಿಸ್ತರೇಣವಾ।
ಯೋ ಬೋಧಸ್ತಮತ್ರಾಹುಃ ಸಮ್ಯಗ್ ಜ್ಞಾನಂ ಮುನೀಷಿಣಃ।

ಯಾವ ಪ್ರಕಾರದಲ್ಲಿ ಜೀವಾದಿ ತತ್ವಗಳಿವೆಯೋ, ಸಂಕ್ಷೇಪವಾ ಅಥವಾ ವಿಸ್ತಾರವಾಗಿ ಅವುಗಳ ಬೋಧವಾಗುವುದಕ್ಕೇನೇ ಬುದ್ಧಿ ವಂತರು ಸಮ್ಯಗ್ ಜ್ಞಾನವೆನ್ನುತ್ತಾರೆ.

ಸರ್ವಥಾನವದ್ಯಯೋಗಾನಾಂ ತ್ಯಾಗಶ್ಚಾರಿತ್ರಮುಚ್ಯತೇ।
ಕೀರ್ತಿತಂ ತದಹಿಂಸಾದಿ ವ್ರತಭೇದೇನ ಪಂಚಧಾ ॥
ಅಹಿಂಸಾಸೂನೃತಾಸ್ತೇಯ ಬ್ರಹ್ಮಚರ್ಯಾಪರಿಗ್ರಹಾಃ।

ಎಲ್ಲ ವಿಧದಿಂದ ನಿಂದನೀಯವಾದ ಅನ್ಯಮತಸಂಬಂಧವನ್ನು ತ್ಯಜಿಸುವುದಕ್ಕೆ ಚಾರಿತ್ರವೆಂದು ಹೆಸರು. ಅಹಿಂಸಾದಿಭೇದಗಳಿಂದ ವ್ರತವು ಐದು ವಿಧವಾಗಿದೆ. ೧. (ಅಹಿಂಸೆ) ಯಾವ ಪ್ರಾಣಿಯನ್ನು ಕೊಲ್ಲದಿರುವುದು. ೨. (ಸೂನೃತಾ) ಪ್ರಿಯವಾದ ವಚನಗಳನ್ನಾಡುವುದು. ೩. (ಅಸ್ತೇಯ) ಕಳ್ಳತನಮಾಡದಿರುವುದು. ೪. (ಬ್ರಹ್ಮಚರ್ಯ) ಉಪಸ್ಥೇಂದ್ರಿಯ ಸಂಯಮನ. ೫. (ಅಪರಿಗ್ರಹ) ಎಲ್ಲಾ ವಸ್ತುಗಳ ತ್ಯಾಗಮಾಡುವುದು. ಇವುಗಳಲ್ಲಿ ಅಹಿಂಸೆಯೂ ಕಳ್ಳತನವೇ ಮೊದಲಾದ ನಿಂದನೀಯಕಾರ್ಯಗಳ ತ್ಯಾಗ ಮೊದಲಾದ ಬಹಳ ವಿಷಯಗಳು ಒಳ್ಳೆಯವು. ಮೊದಲು ಚಿತ್ರದಲ್ಲಿ ಬರೆದು ಬಂದ ಹರಿಹರಾದಿಗಳ ಧರ್ಮವು ಜಗತ್ತಿನಲ್ಲಿ ಉದ್ಧರಿಸುವಂತಹುದಲ್ಲ, ಮೊದಲಾದ ಅನ್ಯಮತದ ನಿಂದೆಯೇ ಮೊದಲಾದ ದೋಷಗಳಿಂದ ಒಳ್ಳೆಯ ವಿಷಯಗಳೂ ದೋಷಯುಕ್ತವಾಗಿದೆ. ಯಾರ ಗ್ರಂಥಗಳನ್ನು ನೋಡುವುದರಿಂದಲೇ ಪೂರ್ಣವಿದ್ಯೆಯೂ ಧಾರ್ಮಿಕತ್ವವೂ ಗೋಚರವಾಗುತ್ತವೆಯೋ ಅಂತಹವರ ಧರ್ಮವನ್ನು ಕೆಟ್ಟದೆನ್ನುವುದು, ಮೊದಲು ಬರೆದು ಬಂದ ಮಹಾ ಅಸಂಭವವಾದ ಮಾತುಗಳನ್ನಾಡುವ ತಮ್ಮ ತೀರ್ಥಂಕರರ ಸ್ತುತಿಗೈಯುವುದು ಅಲ್ಪ ನಿಂದೆಯೇನು? ಇವು ಕೇವಲ ದುರಾಗ್ರಹದ ಮಾತುಗಳು. ಸ್ವಲ್ಪವೂ ಚಾರಿತ್ರವನ್ನು ಮಾಡಲಾರದ, ಸ್ವಲ್ಪವೂ ಓದಲಾಗದ, ದಾನವನ್ನೀಯುವ ಸಾಮರ್ಥ್ಯವಿಲ್ಲದ ಜೈನಮತವು ನಿಜ ಎಂದಿಷ್ಟು ಹೇಳುವುದರಿಂದ ಉತ್ತಮವಾಗಿ ಹೋಗುವುದೇ? ಅನ್ಯಮತದ ಶ್ರೇಷ್ಠರೂ ಕೆಟ್ಟವರಾದರೆ? ಹೀಗೆ ಮಾತನಾಡುವ ಜನರನ್ನು ಭ್ರಾಂತರೆಂದೂ, ಬಾಲಬುದ್ಧಿಗಳೆಂದೂ ಹೇಳದೆ ಮತ್ತೇನು ಹೇಳಬಹುದು? ಇವರ ಆಚಾರ್ಯರು ಪೂರ್ಣ ವಿದ್ವಾಂಸರಾಗಿರಲಿಲ್ಲ; ಬರೇ ಸ್ವಾರ್ಥಗಳಾಗಿದ್ದರೆಂಬುದು ಇದರಿಂದ ವ್ಯಕ್ತವಾಗುತ್ತದೆ. ಎಲ್ಲರ ನಿಂದೆಯನ್ನವರೂ ಮಾಡದೆ ಇರುತ್ತಿದ್ದರೆ, ಇಂತಹ ಸುಳ್ಳುಮಾತುಗಳನ್ನಾರೂ ನಂಬುತ್ತಿರಲಿಲ್ಲ. ಜೈನಮತವು ನಡುನೀರಿನಲ್ಲಿ ಕೈಬಿಡುವಂತ

ಹುದು. ವೇದಮತವೇ ಉದ್ಧಾರಮಾಡುವಂತಹುದು ಎಂಬುದೇನೋ ಸಿದ್ಧವಾಗುತ್ತದೆ. ಹರಿಹರಾದಿಗಳು ಸುದೇವರು ಇವರ ಋಷಭದೇವಾದಿಗಳೆಲ್ಲ ಕುದೇವರು ಎಂದೂ ಯಾರಾದರೂ ಹೇಳಿದರೆ ಜೈನರಿಗೆ ಕೆಟ್ಟದೆಂದು ತೋರದೆ? ಇವರ ಆಚಾರ್ಯರ ಮತ್ತು ಅವರನ್ನು ಒಪ್ಪುವವರ ಇನ್ನೂ ತಪ್ಪುಗಳನ್ನು ನೋಡಿರಿ—

ಮೂಲ :—

ಜಿಣವರ ಆಣಾಭಂಗಂ ಉಮಗ್ಗ ಉಸ್ಸುತ್ತಲೇ ಸದೇಸಣಉ ।
ಆಣಾಭಂಗೇ ಪಾವಂತಾ ಜಿಣಮಯು ದುಕ್ಕರಂ ಧಮ್ಮಂ ॥

[ಪ್ರಕ. ಭಾ. ೨, ಷಷ್ಠೀಶ ೬, ಸೂ. ೧೧]

ಉನ್ಮಾರ್ಗ ಉತ್ಸೂತ್ರಗಳ ತೀರವನ್ನು ತೋರಿಸುವುದರಿಂದಾಗುವ ಜಿನವರವೀತರಾಗ ತೀರ್ಥಂಕರರ—ಆಜ್ಞಾಭಂಗವು ದುಃಖ ಹೇತುವೂ ಪಾಪವೂ ಆಗಿರುತ್ತದೆ. ಜಿನೇಶ್ವರ ಕಥಿತವಾದ ಸಮ್ಯಕ್ತ್ವಾದಿಧರ್ಮದ ಗ್ರಹಣಮಾಡುವುದು ಬಹಳ ಕಠಿಣವಾಗಿರುವುದರಿಂದ ಜಿನ ಆಜ್ಞೆಗೆ ಭಂಗಬಾರದಂತೆ ವರ್ತಿಸಬೇಕು.

ಸಮೀಕ್ಷಕ :—ತನ್ನ ಬಾಯಿಂದಲೇ ತನ್ನ ಪ್ರಶಂಸೆ ಮಾಡುವುದೂ, ತನ್ನ ಧರ್ಮವೇ ಶ್ರೇಷ್ಠವೆನ್ನುವುದೂ ಅನ್ಯರ ಧರ್ಮವನ್ನು ನಿಂದಿಸುವುದೂ ಮೂರ್ಖತನದ ಲಕ್ಷಣವಾಗಿರುತ್ತದೆ. ಬೇರೆ ವಿದ್ವಾಂಸರು ಯಾವುದರ ಪ್ರಶಂಸೆ ಮಾಡುತ್ತಾರೋ ಅದೇ ಸರಿಯು. ತಮ್ಮ ಬಾಯಿಂದ ತಮ್ಮನ್ನು ಕಳ್ಳರೂ ಹೊಗಳಿಕೊಳ್ಳುತ್ತಾರೆ. ಅವರು ಪ್ರಶಂಸಾರ್ಹವಾಗಬಲ್ಲರೆ? ಇವರ ಮಾತುಗಳೂ ಅಂತಹವೇ.

ಬಹು ಗುಣವಿಜ್ಞಾನಿಲಯೋ ಉಸ್ಸುತ್ತ ಭಾಸೀ ತಹಾ
ವಿಮುತ್ತಬ್ಬೋ।
ಜಹ ವರಮಣಿಜುತೋ ವಿಹು ವಿಗ್ಘಕರೋ ವಿಸಹರೋ
ಲೋಯೀ ॥

[ಪ್ರಕ. ಭಾ. ೨ ಷಷ್ಠಿ ಸೂ.೧೮]

ವಿಷಧರ ಸರ್ಪದ ಮೇಲಿರುವ ಮಣಿಯನ್ನು ಹೇಗೆ ತ್ಯಜಿಸ

ಬೇಕೊ ಆದೇ ರೀತಿ ಜೈನಮತದಲ್ಲಿಲ್ಲದ ಎಷ್ಟೇ ದೊಡ್ಡ ಧಾರ್ಮಿಕ ಪಂಡಿತನನ್ನಾದರೂ ತ್ಯಜಿಸುವುದು ಜೈನರಿಗೆ ಯೋಗ್ಯವಾಗಿರುತ್ತದೆ.

ಸಮೀಕ್ಷಕ—ನೋಡಿರಿ! ಎಷ್ಟು ತಪ್ಪು ತಿಳುವಳಿಕೆಯಿದು? ಇವರ ಶಿಷ್ಯರೂ ಆಚಾರ್ಯರೂ ವಿದ್ವಾಂಸರಾಗಿರುತ್ತಿದ್ದರೆ ವಿದ್ವಾಂಸರನ್ನು ಪ್ರೀತಿಸುತ್ತಿದ್ದರು. ಇವರ ತೀರ್ಥಂಕರರೂ ಅವಿದ್ವಾಂಸರೆಂದ ಮೇಲೆ ವಿದ್ವಾಂಸರಿಗೆ ಗೌರವವನ್ನಾದರೂ ಏಕೆ ತೋರಿಸುವರು? ಚಿನ್ನವು ಕೊಳೆಯಲ್ಲಾಗಲೀ ಕೆಸರಲ್ಲಾಗಲೀ ಬಿದ್ದರೆ ಯಾರಾದರೂ ಬಿಟ್ಟುಬಿಡುತ್ತಾರೆಯೇ? ಆದುದರಿಂದ ಜೈನರಂತೆ ಪಕ್ಷಪಾತಿಗಳೂ, ಹಠಮಾರಿಗಳೂ ದುರಾಗ್ರಹಿಗಳೂ ವಿದ್ಯಾಹೀನರೂ ಬೇರಾರಿರಬಹುದು?

अइ सयसा वियसा वाहमि आपब्बे सुतो विसा
वरयो।
न चलंति सुद्धधवमोर धन्ना केविसावपव्वेसु॥

[ಪ್ರಕರ. ಭಾ. ೨, ಷಷ್ಠೀ. ಸೂ. ೨೯]

ಜೈನರು ಅನ್ಯದರ್ಶನಿಗಳು, ಕುಲಿಂಗಿಗಳು ಅಂದರೆ ಜೈನಮತ ವಿರೋಧಿಗಳಾದವರ ದರ್ಶನವನ್ನು ಗೈಯಬಾರದು.

ಸಮೀಕ್ಷಕ—ಇದೆಷ್ಟು ಪಾಮರತನದ ಮಾತೆಂಬುದನ್ನು ಬುದ್ಧಿವಂತರೇ ನೋಡಬೇಕು. ನಿಜವಾಗಿ ಹೇಳಬೇಕಾದರೆ ಯಾವನ ಮತವು ಸತ್ಯವಾಗಿದೆಯೊ ಅವನಿಗೆ ಬೇರಾರಿಂದಲೂ ಭಯವಿರುವುದಿಲ್ಲ. ತಮ್ಮ ಮತವು ಟೊಳ್ಳು ಪೊಳ್ಳು ಎಂದೂ ಬೇರೆಯವರಿಗೆ ಹೇಳಿದರೆ ಖಂಡಿಸಲ್ಪಡುವುದೆಂದೂ ಇವರ ಆಚಾರ್ಯರು ತಿಳಕೊಂಡಿದ್ದರು. ಆದುದರಿಂದ ಎಲ್ಲರನ್ನು ನಿಂದಿಸಿ ಮೂರ್ಖರನ್ನು ಬಲೆಯಲ್ಲಿ ಸಿಕ್ಕಿಸಿಕೊಳ್ಳುವುದೇ ಯುಕ್ತವೆಂದು ಭಾವಿಸಿದ್ದರು.

नामुं पिसस्स अ सुहं जेणनिंदिआइ मिच्छापहब्बाइ।
जेसिं अणुसंगा उधमिणा विहो इ सावमुणे॥

[ಪ್ರಕ. ಭಾ ೨ ಷಷ್ಠಿ ೬ ಸೂ. ೨೭]

ಜೈನಧರ್ಮಕ್ಕೆ ವಿರುದ್ಧವಾದ ಧರ್ಮಗಳಿಲ್ಲವೂ ಮನುಷ್ಯರನ್ನು ಪಾಪಿಗಳನ್ನಾಗಿ ಮಾಡುತ್ತವೆ. ಆದುದರಿಂದ ಯಾರ ಬೇರೆಯ ಧರ್ಮವನ್ನೂ ನಂಬದೆ ಜೈನಧರ್ಮದಮೇಲೆ ವಿಶ್ವಾಸವಿಡುವುದೇ ಶ್ರೇಷ್ಠವಾದುದು.

ಸವಿಾಕ್ಷಕ :—ಎಲ್ಲರ ಮೇಲೆ ವೈರ, ವಿರೋಧ, ನಿಂದೆ, ಈರ್ಷ್ಯೆಗಳನ್ನು ಮಾಡಿ ದುಷ್ಟಕರ್ಮರೂಪವಾದ ಸಾಗರದಲ್ಲಿ ಮುಳುಗಿಸುವಂತಹುದು ಜೈನಮಾರ್ಗವೆಂಬುದು ಇವರಿಂದ ಸಿದ್ಧವಾಗುತ್ತದೆ. ಜೈನರು ಎಲ್ಲರ ನಿಂದಕರಾಗಿರುವಂತೆ ಬೇರಾವ ಮತದವನೂ ಮಹಾ ನಿಂದಕನೂ ಅಧರ್ಮಿಯೂ ಆಗಿರಲಾರನು. ಒಂದು ಕಡೆಯಿಂದ ಎಲ್ಲರ ನಿಂದೆಯನ್ನೂ ಇನ್ನೊಂದು ಕಡೆಯಿಂದ ತಮ್ಮ ಪ್ರಶಂಸೆಯನ್ನೂ ಮಾಡುವುದು ಶತಮನುಷ್ಯರ ಕಾರ್ಯವಲ್ಲವೆ ? ವಿವೇಕಿಗಳು ಯಾವ ಮತದವರಾಗಿದ್ದರೂ ಒಳ್ಳೆಯವನನ್ನು ಒಳ್ಳೆಯವನೆಂದು ಕೆಟ್ಟವನನ್ನು ಕೆಟ್ಟವನೆಂದೂ ಹೇಳುತ್ತಾರೆ.

ಮೂಲ :—

ಹಾಹಾ ಗುರು ಅಅಕಜ್ಜಂ ಸಾವಿಾ ನಹುಅಚ್ಛಿಕ್ಖಸ್ಸ ಪುಕ್ಕರೀ ನೋ ।
ಕಹ ಜಿತಾವಯಾಣ ಕಹ ಸುಗುರು ಸಾವಯಾ ಕಹ ಇಯು ಅಕಜ್ಜಂ ॥

[ಪ್ರಕ. ಭಾ. ೨, ಷಷ್ಠೀ. ಸೂ. ೩೫]

ಸರ್ವಜ್ಞಭಾಷಿತವಾದ ಜಿನವಚನ ಜೈನವರಸುಗುರುಗಳು ಮತ್ತು ಜೈನಧರ್ಮವೂ ಎತ್ತ. ಅವರಿಗೆ ವಿರುದ್ಧರಾದ ಕುಗುರುಗಳು ಮತ್ತು ಅನ್ಯಮಾರ್ಗೋಪದೇಶಕರೂ ಎತ್ತ? ಅರ್ಥಾತ್ ನಮ್ಮದು ಸುಗುರು, ಸುದೇವ, ಸುಧರ್ಮಗಳೂ ಅನ್ಯರದು ಕುಗುರು, ಕುದೇವ, ಕುಧರ್ಮಗಳೂ ಆಗಿರುತ್ತವೆ.

ಸವಿಾಕ್ಷಕ :—ಈ ಮಾತು ಎಲ್ಲಾ ಹಣ್ಣುಮಾರುವ ಅಜ್ಜಮ್ಮನ ದರಂತಿದೆ. ಅವಳು ತನ್ನ ಹುಳಿಹಣ್ಣುಗಳನ್ನು ಸಿಹಿಯೆಂತಲೂ ಅನ್ಯಳ ಸಿಹಿ ಹಣ್ಣುಗಳನ್ನು ಹುಳಿ ಮತ್ತು ಕೆಟ್ಟವೆಯೆಂತಲೂ ಹೇಳುತ್ತಾಳೆ.

ಜೈನರ ಮಾತೂ ಹಾಗೆಯೇ ಇದೆ. ಇವರು ತಮ್ಮ ಮತಕ್ಕಿಂತ ಇತರ ಮತದವನ ಸೇವೆಮಾಡುವುದು ಮಹಾ ಅಕಾರ್ಯ—ಪಾಪವೆಂದು ತಿಳಿಯುತ್ತಾರೆ.

ಸಪ್ಪೋ ಇತ್ಥಂ ಮರಣಂ ಕುಗುರು ಅಣಂತಾ ಇದೇಇ
ಮರಣಾ ಇ।
ತೋ ವರ ಸಪ್ತಂ ಗಹಿಯುಂ ಮಾ ಕುಗುರು ಸೇವಣಂ ಭದ್ದಂ॥
[ಪ್ರಕ. ಭಾ. ೨, ಸೂ. ೩೭]

ಸರ್ಪದ ಮೇಲಿದ್ದ ಮಣಿಯನ್ನು ಬಿಟ್ಟುಬಿಡುವುದು ಉಚಿತವಾಗಿರುವಂತೆ ಅನ್ಯಮಾರ್ಗಿಗಳ ಶ್ರೇಷ್ಠರಾದ ಧಾರ್ಮಿಕರನ್ನು ತ್ಯಜಿಸಬೇಕೆಂದು ಮೊದಲೇ ಬರೆದಿದ್ದೇವೆ. ಈಗ ಅದಕ್ಕಿಂತಲೂ ಹೆಚ್ಚಾಗಿ ಅನ್ಯಮತದವರನ್ನು ನಿಂದಿಸುತ್ತಾರೆ. ಜೈನಮತಕ್ಕಿಂತ ಭಿನ್ನರಾದವರೆಲ್ಲ ಕುಗುರುಗಳು ಸರ್ಪಕ್ಕಿಂತಲೂ ನೀಚರಾದವರು ಆಗಿರುವರು. ಅವರ ದರ್ಶನ, ಸೇವೆ, ಮತ್ತು ಸಂಗವನ್ನೆಂದಿಗೂ ಮಾಡಕೂಡದು. ಏಕೆಂದರೆ ಸರ್ಪದ ಸಂಗದಿಂದ ಒಂದೇಬಾರಿ ಮರಣ ಸಂಭವಿಸುತ್ತದೆ. ಆದರೆ ಅನ್ಯಮಾರ್ಗಿಗಳಾದ ಕುಗುರುಗಳ ಸಂಸರ್ಗದಿಂದ ಅನೇಕ ಸಲದ ಜನ್ಮ ಮರಣಗಳಲ್ಲಿ ಸಿಕ್ಕಬೇಕಾಗುತ್ತದೆ. ಆದುದರಿಂದ ಭದ್ರನೆ! ಅನ್ಯ ಮಾರ್ಗಿಗಳ ಗುರುಗಳ ಹತ್ತಿರ ನಿಲ್ಲಲೂ ಬೇಡ. ಏಕೆಂದರೆ ಅನ್ಯಮಾರ್ಗಿಗಳ ಸೇವೆಯನ್ನು ಸ್ವಲ್ಪಮಾಡಿದರೂ ದುಃಖಕ್ಕೀಡಾಗುವೆ.

ಸಮಿಕ್ಷಕ :—ನೋಡಿರಿ! ಜೈನರಿಗೆ ಸರಿಸಮಾನರಾದ ಕಠೋರರೂ, ಭ್ರಾಂತರೂ, ದ್ವೇಷಿಗಳೂ, ನಿಂದಕರೂ, ಮಾರ್ಗ ತಪ್ಪಿದವರೂ, ಬೇರೆ ಯಾವ ಮತದಲ್ಲಿಯೂ ಇರಲಾರರು. ಅನ್ಯರ ನಿಂದೆಯನ್ನೂ ನಮ್ಮ ಪ್ರಶಂಸೆಯನ್ನೂ ನಾವು ಮಾಡಿಕೊಳ್ಳದಿದ್ದರೆ ನಮಗೆ ಸೇವೆಯನ್ನು ಗೌರವವನ್ನು ಯಾರೂ ಸಲ್ಲಿಸಲಾರರು ಎಂದು, ಇವರು ಯೋಚಿಸಿಕೊಂಡಿದ್ದಾರೆ. ಆದರೆ ಇದು ಅವರ ದೌರ್ಭಾಗ್ಯವೆನ್ನಬೇಕು. ಏಕೆಂದರೆ ಉತ್ತಮ ವಿದ್ವಾಂಸರ ಸಂಸರ್ಗವನ್ನೂ ಸೇವೆಯನ್ನೂ ಮಾಡದೆ ಇವರಿಗೆ ಯತಾರ್ಥ ಜ್ಞಾನವೂ, ಸತ್ಯಧರ್ಮದ ಪ್ರಾಪ್ತಿಯೂ ಆಗಲಾರದು, ಆದುದರಿಂದ ಜೈನರು ವಿದ್ಯಾವಿರುದ್ಧವಾದ ತಮ್ಮ ಸುಳ್ಳು

ಮಾತುಗಳನ್ನು ಬಿಟ್ಟು ವೇದೋಕ್ತ ಸತ್ಯವಚನಗಳನ್ನು ಗ್ರಹಣಮಾಡುವುದುಚಿತವಿದೆ. ಇದರಿಂದಲೇ ಅವರ ಕಲ್ಯಾಣವಾಗುವುದು.

ಕಿಂ ಭಣಿಮೋ ಕಿಂ ಕರಿಮೋ ತಾಣ ಹಯಾಸಾಣ ಧಿಶದುಶಾಣಂ।
ಜೇ ದಂಸಿ ಊಣ ಲಿಂಗಂ ಖಿವಂತಿ ನರಯಮ್ಮಿ ಮುದ್ಧ ಜಣಂ ॥

[ಪ್ರಕ. ಭಾ. ೨। ಷಷ್ಠೀ. ಸೂತ್ರ ೪೦]

ಕಲ್ಯಾಣಮಾರ್ಗದಿಂದ ಹತಾಶರೂ, ದುಷ್ಕರ್ಮಗಳಲ್ಲಿ ಚತುರರೂ, ದುಷ್ಟರೂ, ದೋಷಿಗಳೂ ಆದವರಿಗೆ ಏನು ಹೇಳುವುದು? ಏನು ಮಾಡುವುದು? ಏಕೆಂದರೆ ತನಗೆ ಉಪಕಾರಮಾಡಿದವನ ನಾಶವನ್ನೇ ಅವನು ಮಾಡುವನು. ಯಾರಾದರೂ ದಯೆದೋರಿ, ಕುರುಡು ಸಿಂಹಕ್ಕೆ ಕಣ್ಣುಕೊಡಹೋದರೆ ಅದು ಅವನನ್ನೇ ತಿಂದುಬಿಡುವಂತೆ ಕುಗುರುಗಳ–ಅನ್ಯಮಾರ್ಗಿಗಳಿಗೆ ಉಪಕಾರಮಾಡುವುದು ತನ್ನ ನಾಶವನ್ನು ಮಾಡಿಕೊಂಡಂತೆಯೇ ಸರಿ. ಯಾವಾಗಲೂ ಅವರಿಂದ ದೂರವಾಗಿರಬೇಕು.

ಸಮಾಕ್ಷಕ:—ಜೈನರು ಯೋಚಿಸುವಂತೆ ಇತರರೂ ಯೋಚಿಸತೊಡಗಿದರೆ ಅವರಿಗೆ ಎಷ್ಟು ದುರ್ಗತಿಯಾಗಬಹುದು? ಯಾರೂ ಅವರಿಗೆ ಉಪಕಾರ ಮಾಡದಿದ್ದರೆ ಕಾರ್ಯಗಳೆಲ್ಲ ಕೈಗೂಡದೆ ಎಷ್ಟು ನಷ್ಟ ಸಂಭವಿಸಲಿಕ್ಕಿಲ್ಲ? ಇದೇ ರೀತಿ ಜೈನರು ಬೇರೆಯವರ ವಿಷಯದಲ್ಲಿಯೂ ಯೋಚಿಸುವುದಿಲ್ಲವೇಕೆ?

ಜಹ ಜಹ ತುಟ್ಟೈ ಧನ್ಮೋ ಜಹ ಜಹ ದುಶಾಣಹೋಯು ಅ ಇಉದಉ।
ಸಮುದ್ದಿಶಿಜಿಯಾಣ ತಹ ತಹ ಉಲ್ಲಸ ಇಸ ಭತ್ತಂ ॥

[ಪ್ರಕ. ಭಾ. ೨। ಷ. ಪೂ. ೪೨]

ಹೇಗೆ ಹೇಗೆ ದರ್ಶನಭ್ರಷ್ಟರು, ನಿಹ್ನವರು, ಪಾಚ್ಚತ್ತರು, ಉತ್ಸನ್ನರು ತಥಾ ಕುಸೀಲಿಯಾದಿಗಳು ಮತ್ತು ಅನ್ಯದರ್ಶನಿಗಳು, ತ್ರಿದಂಡಿಗಳು, ಪರಿವ್ರಾಜಕರು, ವಿಪ್ರಾದಿ ದುಷ್ಟಮನುಷ್ಯರು—ಇವರ ಪ್ರಾಬಲ್ಯ, ಸತ್ಕಾರಪೂಜೆ ಮೊದಲಾದುವು ಹೆಚ್ಚುತ್ತವೋ ಹಾಗೆ

ಹಾಗೆ ಸಮ್ಯಗ್ದೃಷ್ಟಿಗಳ ಸಮ್ಯಕ್ತ್ವವು ವಿಶೇಷವಾಗಿ ಪ್ರಕಾಶಿಸುತ್ತದೆಂಬುದು ಆಶ್ಚರ್ಯ.

ಸವಿಾಕ್ಷಕ?—ಈಗ ನೋಡಿ! ಈ ಜೈನರಿಗಿಂತಲೂ ಹೆಚ್ಚಾದ ಈರ್ಷ್ಯಾ ದ್ವೇಷ ವೈರ ಬುದ್ಧಿಯವರು ಬೇರೆಯಾದರೂ ಇರಬಲ್ಲರೆ? ಬೇರೆ ಮತಗಳಲ್ಲಿಯೂ ಈರ್ಷ್ಯಾದ್ವೇಷಗಳಿವೆಯೆಂಬುದು ನಿಜ. ಆದರೆ ಜೈನರಲ್ಲಿದ್ದಷ್ಟು ಬೇರಾರಲ್ಲಿಯೂ ಇಲ್ಲ. ದ್ವೇಷವೇ ಪಾಪಕ್ಕೆ ಮೂಲವಾದುದರಿಂದ ಜೈನರಲ್ಲಿ ಪಾಪಾಚರಣೆಯಾದರೂ ಏನಿರದು?

ಸಂಗೋ ವಿಜಾಣ ಅಹಿಲು ತೇಸಿಂ ಧಮ್ಮಾ ಇ ಜೆ ಪಕುಬ್ಬಂತಿ।
ಮುತೂಣ ಚೋರಸಂಗಂ ಕರಂತಿ ತೇ ಚೋರಿಯಂ ಪಾವಾ॥

[ಪ್ರಕ. ಭಾ. ೨। ಷ. ಸೂ. ೭೫]

ಇದರ ಮುಖ್ಯ ತಾತ್ಪರ್ಯವಿಷ್ಟ—ಮೂಢರು ಹೇಗೆ ಕಳ್ಳರ ಸಂಸರ್ಗದಲ್ಲಿದ್ದು ಮೂಗುಕೊಯ್ಯುವುದೇ ಮೊದಲಾದ ಶಿಕ್ಷೆಗಳಿಗೆ ಹೆದರುವುದಿಲ್ಲವೋ ಅದೇ ರೀತಿ ಜೈನಮತಕ್ಕಿಂತ ಭಿನ್ನವಾದ ಚೋರ ಧರ್ಮದಲ್ಲಿರುವ ಜನರು ತಮ್ಮ ಐಕಲ್ಯಾಣಕ್ಕಾಗಿ ಭಯಪಡುವುದಿಲ್ಲ.

ಸವಿಾಕ್ಷಕ—ತಮ್ಮಂತೆಯೇ ಅನ್ಯರೆಂದು ಜನರೆಲ್ಲ ಭಾವಿಸುತ್ತಾರೆ. ಬೇರೆಯೆಲ್ಲವೂ ಚೋರಮತಗಳು, ಜೈನಮತವೇ ಒಳ್ಳೆಯ ಮತವೆಂಬ ಮಾತು ನಿಜವಾಗಬಲ್ಲುದೆ? ಮನುಷ್ಯನ ಬುದ್ಧಿಯು ಅತ್ಯಂತ ಅಜ್ಞಾನದಿಂದಲೂ ಕುಸಂಗದಿಂದಲೂ ಭ್ರಷ್ಟವಾದಾಗ ಅವನು ಬೇರೆಯವರೊಡನೆ ಅತಿಯಾದ ಈರ್ಷ್ಯಾದ್ವೇಷಗಳನ್ನೂ, ದುಷ್ಟತನವನ್ನೂ ಮಾಡುವುದನ್ನು ಬಿಡಲಾರ. ಜೈನಮತದಂತಹ ಪರದ್ವೇಷಿಯಾದ ಮತವು ಯಾವುದೂ ಇಲ್ಲ.

ಜಚ್ಛ ಪಸುಮಹಿಸಲರಕಾ ಪವ್ವಂ ಹೋಮಂತಿ ಪಾವನ ಸವಿಾವಿ।
ಪೂವಂತಿ ತಂಪಿ ಸಡ್ಢಾ ಹಾ ಹೀ ಲಾವೀ ಪರಾಯಸ್ಸಂ॥

[ಪ್ರಕ. ಭಾ. ೨ ಷ. ಸೂ. ೭೬]

ಜೈನರಿಂದ ಇತರ ಮತಗಳೆಲ್ಲವೂ ಮಿಥ್ಯಾತ್ವಿಗಳೆಂದೂ ತಾವು ಸಮ್ಯಕ್ತ್ವಿಗಳೆಂದೂ ಹಿಂದಿನ ಸೂತ್ರದಲ್ಲಿ ಹೇಳಿದೆ. ಅಂದರೆ ಅನ್ಯರೆಲ್ಲರೂ

ಪಾಪಿಗಳು, ಜೈನರು ಪುಣ್ಯಾತ್ಮರು. ಆದುದರಿಂದ ಯಾರಾದರೂ ಮಿಥ್ಯಾತ್ವಿಯ ಧರ್ಮವನ್ನು ಸ್ಥಾಪಿಸಿದರೆ ಅವನು ಪಾಪಿಯಾಗುವನು.

ಸಮಿಾಕ್ಷಕ—ಅನ್ಯರ ದೃಷ್ಟಿಯಲ್ಲಿ ಚಾಮುಂಡಿ, ಕಾಳಿಕಾ, ಜ್ವಾಲಾ ಮೊದಲಾದವರ ಎದುರಿನಲ್ಲಿ ನವಮಿವ್ರತವು ಪಾಪವಾಗಿರುವಂತೆ ಅಂದರೆ—ದುರ್ಗಾನವಮಿ ಮೊದಲಾದುವು ಕೆಟ್ಟವಾಗಿರುವಂತೆ ಮಹಾ ಕಷ್ಟಪ್ರದವಾದ ನಿಮ್ಮ ಪಜೂಸಣ ಮೊದಲಾದ ವ್ರತಗಳು ಕೆಟ್ಟವಲ್ಲವೆ? ಇಲ್ಲಿ ವಾಮನವಾರ್ಗಿಗಳ ಲೀಲೆಯು ಖಂಡನವೇನೋ ಸರಿಯೇ ಆದುದು. ಆದರೆ ಶಾಸನದೇವಿ ಮರುತದೇವಿ ಮೊದಲಾದವರನ್ನು ನಂಬುತ್ತಾರೆ. ಅವರನ್ನು ಖಂಡಿಸಿದ್ದರೆ ಒಳ್ಳೆಯದಿತ್ತು. ನಮ್ಮ ದೇವಿ ಹಿಂಸಕಳಲ್ಲವೆನ್ನುವುದಾದರೆ ಆ ಮಾತು ತೀರಾ ಸುಳ್ಳಾದುದು. ಶಾಸನದೇವಿಯು ಒಬ್ಬ ಮನುಷ್ಯ ಮತ್ತು ಒಂದು ಗಂಡು ಮೇಕೆಯ ಕಣ್ಣು ಕುಕ್ಕಿದ್ದಳು. ಹೀಗಿದ್ದಮೇಲೆ ಅವಳು ರಾಕ್ಷಸಿಯೂ ದುರ್ಗಾ, ಕಾಳಿಕಾ ಮೊದಲಾದವರ ಸಹೋದರಿಯೂ ಅಲ್ಲವೇಕೆ? ತಮ್ಮ ಯಚ್ಚ ಬಾಣ ಮೊದಲಾದ ವ್ರತಗಳು ಶ್ರೇಷ್ಠವೆಂದೂ ನವಮಿ ಮೊದಲಾದುವು ಕೆಟ್ಟವೆಂದೂ ಹೇಳುವುದು ಮೂಢತನದ ಮಾತು. ಬೇರೆಯವರ ಉಪವಾಸವನ್ನು ನಿಂದಿಸಿ ತಮ್ಮ ಉಪವಾಸಗಳನ್ನು ಹೊಗಳಿಕೊಳ್ಳುವುದು ಮೂರ್ಖತನವೇ ಸರಿ. ಸತ್ಯಭಾಷಣಾದಿ ವ್ರತಗಳನ್ನು ಆಚರಿಸುವುದು ಎಲ್ಲರಿಗೂ ಉತ್ತಮವಾಗಿರುತ್ತದೆ. ಉಪವಾಸವು ಜೈನರದಾಗಲೀ ಬೇರೆ ಯಾರದಾದರೂ ಆಗಿರಲಿ ನಿಜವಲ್ಲ.

ಚೇಸಾಣವಂದಿಯಾಣಯವಾಹಣಹುಂ ಬಾಣಜರ ಕಸಿರ ಕಾಣಂ।
ಭತ್ತಾ ಭರ ಕಠಾಣಂ ಬಿಯಾಣಂ ಜಂತಿ ದೂರೇಣಂ ॥

[ಪ್ರ.ಕ. ಭಾ. ೨ ಷಷ್ಠೀ. ಸೂ. ೮೨]

ಇದರ ಮುಖ್ಯ ತಾತ್ಪರ್ಯವಿಷ್ಟೆ—ವೇಶ್ಯೆಯರು, ಚಾರಣರು, ಸ್ತುತಿಪಾಠಕರು ಬ್ರಾಹ್ಮಣರು, ಯಕ್ಷರು, ಗಣೇಶ ಮೊದಲಾದ ಮಿಥ್ಯಾದೃಷ್ಟಿಯುಳ್ಳ ದೇವೀದೇವತೆಗಳ ಭಕ್ತರು—ಇವರನ್ನೆಲ್ಲ ನಂಬು

ವವರು ಮುಳುಗಿಸುವವರೂ ಮುಳುಗುವವರೂ ಆಗಿರುವರು. ಏಕೆಂದರೆ ಇವರ ಹತ್ತಿರವೇ ಆ ಎಲ್ಲ ವಸ್ತುಗಳಿರುತ್ತವೆ ಮತ್ತು ಇವರು ವೀತರಾಗ ಪುರುಷರಿಂದ ದೂರವಾಗಿರುತ್ತಾರೆ.

ಸಮೀಕ್ಷಕ—ಅನ್ಯಮಾರ್ಗಿಗಳ ದೇವತೆಗಳನ್ನು ಸುಳ್ಳೆನ್ನುವುದು ಮತ್ತು ತಮ್ಮ ದೇವತೆಗಳನ್ನು ಸತ್ಯವೆನ್ನುವುದು ಕೇವಲ ಪಕ್ಷಪಾತದ ಮಾತಾಗಿರುತ್ತದೆ. ಮತ್ತು ಇತರ ವಾಮಮಾರ್ಗಿಗಳ ದೇವೀದೇವತೆ ಗಳನ್ನೇನೊ ಖಂಡಿಸುತ್ತಾರೆ; ಆದರೆ ತಮ್ಮ ಶ್ರಾದ್ಧದಿನಕೃತ್ಯದ ೪೬ ನೇ ಪುಟದಲ್ಲಿ ಶಾಸನದೇವಿಯು ರಾತ್ರಿಯಲ್ಲಿ ಊಟಮಾಡಿದ ಒಬ್ಬ ಮನುಷ್ಯನ ಕೆನ್ನೆಗೆ ಹೊಡೆದಳು. ಅವನ ಕಣ್ಣನ್ನು ಕುಕ್ಕಿ ತೆಗೆದಳು. ಅದರ ಬದಲಿಗೆ ಗಂಡುಮೇಕೆಯ ಕಣ್ಣನ್ನಿರಿಸಿದಳು. ಎಂದು ಬರೆಯಲ್ಪಟ್ಟಿರುವ ದೇವಿಯನ್ನು ಹಿಂಸಕಳೆಂದು ಹೇಳುವುದಿಲ್ಲವೇಕೆ? ರತ್ನಸಾರ ಭಾಗ ೧, ಪುಟ ೬೭ ರಲ್ಲಿ ನೋಡಿರಿ—ಮರುತದೇವಿಯು ದಾರಿಹೋಕರಿಗೆ ಕಲ್ಲಿನ ಪ್ರತಿಮೆಯಾಗಿ ಸಹಾಯ ಮಾಡುತ್ತಿದ್ದಳು. ಎಂದು ಬರೆದುದನ್ನು ಅದೇ ರೀತಿಯೆಂದು ತಿಳಿಯುವುದಿಲ್ಲವೇಕೆ?

ಕಿಂ ಸೋಪಿ ಜಣಣಿ ಜಾಓ ಜಾಣೋ ಜಣಣೇ ಇಕಿಂ ಅಗೋ ವಿದ್ಧಿ।
ಜಇವಿಚ್ಛರಓ ಜಾಓ ಗುಣೇ ಸುತವುಚ್ಛರಂ ಬಹಇ॥

[ಪ್ರಕ. ಭಾ. ೨ ಷ. ಸೂ. ೮೧]

ಜೈನಮತವಿರೋಧಿಗಳಾದ ಮಿಥ್ಯಾತ್ವಿಗಳು ಮಿಥ್ಯಾಧರ್ಮ ದವರು ಹುಟ್ಟದರೇಕೆ? ಹುಟ್ಟಿದ್ದರೆ ದೊಡ್ಡವರೇಕಾದರು? ಅಂದರೆ—ಬೇಗನೇ ಸತ್ತುಹೋಗಿದ್ದರೆ ಚೆನ್ನಾಗಿತ್ತು.

ಸಮೀಕ್ಷಕ—ಇವರ ವೀತರಾಗಿಗಳು ಹೇಳಿದ ದಯಾಧರ್ಮವ ನ್ನಾದರೂ ನೋಡಿರಿ! ಬೇರೆ ಮತದವರು ಜೀವಿಸಿಕೊಂಡಿರಬೇಕೆಂದೂ ಬಯಸುವುದಿಲ್ಲ! ಇವರ ದಯಾಧರ್ಮವು ಕೇವಲ ಹೇಳಲಿಕ್ಕೆ ಮಾತ್ರವಿದೆ. ಇದ್ದರೂ ಕ್ಷುದ್ರಜೀವಿ ಮತ್ತು ಪಶುಗಳಿಗಾಗಿ ಇದೆ. ಜೈನರಿಗಿಂತ ಬೇರೆಯಾದ ಮನುಷ್ಯರಿಗಲ್ಲ.

ಶುದ್ಧೇ ಮಗ್ಗೇ ಜಾಯ ಸುಹೇಣ ಗಚ್ಛತ್ತಿ ಸುದ್ಧಿಮಗ್ಗಮಿ।
ಜೇ ಪುಣ ಅಮಗ್ಗಜಾಯಾ ಮಗ್ಗೇ ಗಚ್ಛಂತಿ ತೇ ಚುಪ್ಪಂ॥

[ಪ್ರಕ. ಭಾ. ೨ ಷ. ಸೂ. ೮೩]

ಇದರ ಮುಖ್ಯ ತಾತ್ಪರ್ಯ ಹೀಗಿದೆ—ಜೈನಕುಲದಲ್ಲಿ ಜನ್ಮವೆತ್ತಿ ಮುಕ್ತಿಗೆ ಹೋದರೆ ಆಶ್ಚರ್ಯವೇನೂ ಇಲ್ಲ. ಆದರೆ ಜೈನೇತರ ಕುಲದಲ್ಲಿ ಹುಟ್ಟಿದ ಮಿಥ್ಯಾತ್ವಿಗಳಾದ ಅನ್ಯಮಾರ್ಗಿಗಳು ಮುಕ್ತಿಯನ್ನು ಹೊಂದುವುದು ಬಹಳ ಆಶ್ಚರ್ಯ. ಜೈನರೇ ಮುಕ್ತಿಯನ್ನು ಪಡೆಯುತ್ತಾರೆ ಬೇರಾರೂ ಇಲ್ಲ. ಜೈನಮತವನ್ನು ಸ್ವೀಕರಿಸದಿರುವವರು ನರಕಗಾಮಿಗಳು ಎಂಬುದೇ ಫಲಿತಾರ್ಥವು.

ಸಮಿಾಕ್ಷಕ—ಜೈನಮತದವರಾರೂ ದುಷ್ಟರೂ ನರಕಗಾಮಿಗಳೂ ಆಗುವುದಿಲ್ಲವೆ? ಎಲ್ಲರೂ ಮುಕ್ತಿಗೆ ತೆರಳುವರೆ? ಬೇರಾರೂ ಹೋಗಲಿಕ್ಕಿಲ್ಲವೆ? ಇದು ಹುಚ್ಚಾಟದ ಮಾತಲ್ಲವೇನು? ತಿಳುವಳಿಕೆಯಿಲ್ಲದವರ ವಿನಾ ಇದನ್ನು ಯಾರು ನಂಬಬಲ್ಲರು?

ತಿಚ್ಛ್ಹರಾಣಂ ಪೂಆ ಸಂವುತ್ತ ಗುಣಾಣಕಾರಿಣೇ ಭಣಿಯಾ।
ಸಾವಿಯಮಿಚ್ಛತ್ತಯರೀ ಜಿಣ ಸಮುಯೀ ದೇಸಿಯಾ ಪೂ ಆ॥

ಪ್ರಕ. ಭಾ. ೧ ಷ. ಸೂ. ೯೦

ಜಿನಮೂರ್ತಿಗಳ ಪೂಜೆಯೊಂದೇ ಸಾರವೂ, ಇತರ ಮಾರ್ಗಿಗಳ ಮೂರ್ತಿಪೂಜೆಯು ಅಸಾರವೂ ಆಗಿರುತ್ತದೆ. ಜಿನಮಾರ್ಗದ ಆಜ್ಞೆಯನ್ನು ಪಾಲಿಸುವವನು ತತ್ವಜ್ಞಾನಿ, ಪಾಲಿಸದಿರುವವನು ತತ್ವಜ್ಞಾನಿಯಲ್ಲ.

ಸಮಿಾಕ್ಷಕನು:—ಅಹಹ: ಏನು ಹೇಳಬೇಕು!! ವೈಷ್ಣವ ಮೊದಲಾದವರಂತೆ ನಿಮ್ಮ ಮೂರ್ತಿಗಳು ಕಲ್ಲು ಮೊದಲಾದ ಜಡ ಪದಾರ್ಥಗಳಿಂದ ನಿರ್ಮಿಲ್ಪಟ್ಟಿದ್ದಲ್ಲವೆ? ವೈಷ್ಣವಾದಿಗಳ ಮೂರ್ತಿ ಪೂಜೆಯು ಮಿಥ್ಯೆಯಾಗಿರುವಂತೆ ನಿಮ್ಮ ಮೂರ್ತಿಪೂಜೆಯೂ ಮಿಥ್ಯೆಯೇ ಆಗಿರುತ್ತದೆ. ನೀವು ತತ್ವಜ್ಞಾನಿಗಳಾಗಿ ಬೇರೆಯವರನ್ನು ಅತತ್ವಜ್ಞಾನಿಗಳಾಗಿ ಮಾಡುವುದನ್ನು ನೋಡಿದರೆ ನಿಮ್ಮ ಮತದಲ್ಲಿ ತತ್ವಜ್ಞಾನಿಯೇ ಇಲ್ಲವೆಂದು ಭಾಸವಾಗುತ್ತದೆ.

ಜಿಣ ಆಣಾ ಏಧನ್ಮೋ ಅಣಾ ರಹಿ ಆಣ ಪುಡಂ ಅಹವುತ್ತಿ।
ಇಯನುಣೆ ಊಣ ಯುತತ್ತಂ ಜಿಣ ಆಣಾ ಏ ಕುಣಹು ಧನ್ಮಂ

[ಪ್ರಕ. ಭಾ. ೨, ಷ. ಸೂ. ೯೨]

ಜಿನದೇವನ ಆಜ್ಞೆಯಾದ ದಯೆ, ಕ್ಷಮೆ ಮೊದಲಾದುವು ಧರ್ಮವೂ, ಅದ್ದರಿಂದ ಬೇರಾದ ಎಲ್ಲಾ ಆಜ್ಞೆಗಳೂ ಅಧರ್ಮವೂ ಆಗಿರುತ್ತವೆ.

ಸಮೀಕ್ಷಕ :—ಇದೆಷ್ಟು ದೊಡ್ಡ ಅನ್ಯಾಯದ ಮಾತು!! ಜೈನ ಮತಕ್ಕಂತ ಬೇರೆ ಸತ್ಯವಾದಿಯು ಧರ್ಮಾತ್ಮನೂ ಆದವನು ಯಾರೂ ಇಲ್ಲವೇ? ಅಂತಹ ಧರ್ಮಾತ್ಮನನ್ನು ನಂಬಬಾರದೆ? ಜೈನರ ಬಾಯಿ ನಾಲಿಗೆಗಳು ಚರ್ಮದಿಂದ ನಿರ್ಮಿಸಿರದೆ, ಬೇರೆಯವರದು ಮಾತ್ರ ಚರ್ಮದಿಂದ ನಿರ್ಮಿತವಾಗಿದ್ದರೆ ಈ ಮಾತು ಸರಿಹೋಗುತ್ತಿತ್ತು. ತಮ್ಮ ಮತದ ಗ್ರಂಥ, ವಚನ, ಸಾಧು ಮೊದಲಾದವರನ್ನು ಹೊಗಳಿದ್ದು ನೋಡಿದರೆ ಇವರು ಚಾರಣರ ಅಣ್ಣಂದಿರೊ ಏನೊ ಎಂಬಂತಿದೆ.

ವನ್ನೇಮಿನಾರಯಾ ಉವಿಜೇಸಿಂದುರಕಾಯಿ ಸಂಭರಂ ತಾಣಂ।
ಭವ್ವಾಣ ಜಣಇ ಹರಿಹರರಿದ್ಧಿ ಸ ಮಿದ್ಧೀ ವಿಉದ್ಧೋಸಂ ॥

[ಪ್ರಕ. ಭಾ. ೨। ಷ. ಸೂ. ೯೫]

ಇದರ ಮುಖ್ಯತಾತ್ಪರ್ಯ—ಹರಿಹರಾದಿ ದೇವರ ವಿಭೂತಿಯು ನರಕಹೇತುವಾಗಿರುತ್ತದೆ. ಅದನ್ನು ನೋಡಿ ಜೈನರಿಗೆ ರೋಮಾಂಚವೇಳುತ್ತದೆ. ರಾಜಾಜ್ಞೆಯನ್ನು ಮುರಿಯುವವನು ಸಾಯುವ ತನಕ ದುಃಖಭಾಗಿಯಾಗುವಂತೆ ಜಿನೇಂದ್ರನ ಆಜ್ಞಾಭಂಗಮಾಡುವವನು ಜನ್ಮಮರಣರೂಪವಾದ ದುಃಖವನ್ನು ಪಡೆಯಲಾರನಾದರೂ ಏಕೆ?

ಸಮೀಕ್ಷಕ—ಜೈನರ ಆಚಾರ್ಯ ಮೊವಲಾದವರ ಮಾನಸಿಕ ವೃತ್ತಿಯನ್ನಾದರೂ ನೋಡಿರಿ! ಮೇಲಿನ ಕಪಟ ಮತ್ತು ಜಂಭದ ಲೀಲೆ ಕಂಡು ಬಂದೇ ಇತ್ತು; ಈಗ ಆಂತರಿಕಭಾವನೆಯೂ ಹೊರಗೆ ಬಂತು. ಹರಿಹರಾದಿಗಳ ಮತ್ತು ಅವರ ಉಪಾಸಕರ ಐಶ್ವರ್ಯವನ್ನೂ ಉನ್ನತಿಯನ್ನು ನೋಡಿ 'ಬೇರೆಯವರ ಉನ್ನತಿಯೇಕಾಗುತ್ತದೆ'ಂದು ಇವರಿಗೆ ರೋಮಾಂಚನವಾಗುತ್ತಿದೆ. ಅವರ ಎಲ್ಲ ಐಶ್ವರ್ಯವು ತಮಗೆ

ಸಿಕ್ಕಿ ಅವರು ದರಿದ್ರರಾದರೆ ಒಳ್ಳೆಯದಾದೀತು ಎಂದು ಭಾವಿಸುತ್ತಿರ ಬಹುದು. ರಾಜನ ಆಜ್ಞೆಯ ದೃಷ್ಟಾಂತವನ್ನು ಇವರು ಕೊಡುವ ಕಾರಣವಿದು—ಜೈನರು ರಾಜನ ಹೊಗಳುಭಟ್ಟರೂ ರಾಜನನ್ನು ನೋಡಿ ಹೆದರುವವರೂ ಆಗಿದ್ದಾರೆ. ರಾಜನ ಸುಳ್ಳು ಮಾತನ್ನು ಒಪ್ಪಿಕೊಳ್ಳಬೇಕೆ? ಜೈನರಿಗಿಂತ ಹೆಚ್ಚಿನ ಈರ್ಷ್ಯಾದ್ವೇಷಿಗಳೂ ಇರಲಿಕ್ಕಿಲ್ಲ.

ಮೂಲ :—

ಜೋ ದೇಇ ಶುದ್ಧಧಮ್ಮಂ ಸೋ ಪರಮುಪ್ಪಾಜಯಮ್ಮಿ ನಹು ಅನ್ನೋ ।
ಕಂ ಕಪ್ಪದ್ದುಮ್ಮಂಸರಿಸೋ ಇಯರತರೂ ಹೋಇಕಇಯಾವಿ॥

ಪ್ರಕ. ಭಾ. ೨ ಷ. ಸೂ. ೧೦೧

ಜೈನಧರ್ಮಕ್ಕೆ ವಿರುದ್ಧವಾದ ಜನರು ಮೂರ್ಖರೂ, ಜಿನೇಂದ್ರ ಭಾಷಿತ ಧರ್ಮದ ಉಪದೇಶಕರೂ, ಸಾಧುಗಳೂ, ಗೃಹಸ್ಥರೂ ಶಿಥವಾ ಗ್ರಂಥಕರ್ತರೂ, ತೀರ್ಥಂಕರರಿಗೆ ಸಮಾನರೂ ಆಗಿರುವರು. ಅವರ ಸರಿಸಮಾನರಾದವರಾರೂ ಇಲ್ಲ.

ಸಮಿಾಕ್ಷಕ ಏಕಾಗಬಾರದು? ಜೈನರು ಬಾಲಬುದ್ಧಿಯನ ರಾಗದಿದ್ದರೆ ಇಂತಹ ಮಾತನ್ನೇಕೆ ಒಪ್ಪುತ್ತಿದ್ದರು? ವೇಶ್ಯೆಯು ತನ್ನ ಹೊರತು ಬೇರಾರನ್ನು ಹೊಗಳದಿರುವಂತೆ ಈ ಮಾತೂ ಅದೇ ರೀತಿಯಾ ಗಿರುತ್ತದೆ.

ಜೇ ಅಣುಣೆ ಅಗುಣದೋಷಾತೇ ಕಹ ಅವುಹಾಣಹ್ಯಂತಿವು ಝುಚ್ಛಾ ।
ಅಹ ತೇ ವಿಹ್ಯುವು ಝುಚ್ಛಾತಾ ವಿಸಅವಿ ಆಣ ತುಲ್ಲತ್ತಂ ॥

ಪ್ರಕ. ಭಾ. ೨ ಷ. ಸೂ. ೧೦೨

ಜಿನೇಂದ್ರದೇವ, ಅವನಿಂದ ಹೇಳಲ್ಪಟ್ಟ ಸಿದ್ಧಾಂತ ಮತ್ತು ಜಿನಮತದ ಉಪದೇಶಕರು— ಇವುಗಳನ್ನು ತ್ಯಜಿಸುವುದು ಜೈನರಿಗುಚಿತವಲ್ಲ.

ಸಮೀಕ್ಷಕ—ಇದು ಜೈನದ ಹಠ, ಪಕ್ಷಪಾತ ಮತ್ತು ಅವಿದ್ಯೆಯ ಫಲವಲ್ಲದೆ ಮತ್ತೇನು? ಇವರ ಕೆಲವು ಮಾತುಗಳನ್ನು ಬಿಟ್ಟು ಬೇರೆಲ್ಲವೂ ತ್ಯಾಜ್ಯವಾಗಿವೆ. ಸ್ವಲ್ಪವಾದರೂ ಬುದ್ಧಿಯಿರುವವನು ಜೈನರ ದೇವ, ಸಿದ್ಧಾಂತಗ್ರಂಥ ಮತ್ತು ಉಪದೇಶಕರನ್ನು ನೋಡಿದರೆ, ಕೇಳಿದರೆ ಅಥವಾ ವಿಚಾರಿಸಿಕೊಂಡರೆ ತಕ್ಷಣವೇ ನಿಸ್ಸಂದೇಹನಾಗಿ ಬಿಟ್ಟುಬಿಡುವನು.

वयणे विसुगुरु जिणवल्लहस्सकेसिन उल्लस इसवम्मं।
अहकहदिण मुणतेयं उलुअणंहरइ अंधत्तं ॥

[ಪ್ರಕ. ಭಾ. ೨, ಷ. ಸೂ. ೧-೮]

ಜಿನವಚನಕ್ಕನುಸಾರವಾಗಿ ನಡೆಯುವವರು ಪೂಜನೀಯರೂ, ವಿರುದ್ಧವಾಗಿ ನಡೆಯುವವರು ಅಪೂಜ್ಯರೂ ಆಗಿರುವರು. ಜೈನರ ಗುರುಗಳನ್ನು ಒಪ್ಪಬೇಕು. ಅನ್ಯಮಾರ್ಗಿಗಳನ್ನು ನೆಚ್ಚಬಾರದು.

ಸಮೀಕ್ಷಕ :—ಜೈನರು ಅಜ್ಞಾನಿಗಳನ್ನು ಪಶುಗಳಂತೆ ತಮ್ಮ ಶಿಷ್ಯರನ್ನಾಗಿಡದಿದ್ದರೆ ಅವರ ಬಲೆಯಿಂದ ತಪ್ಪಿಸಿಕೊಂಡು ಹೋಗಿ ತಮ್ಮ ಮುಕ್ತಿಯನ್ನು ಸಾಧಿಸಿ ಜನ್ಮವನ್ನು ಸಫಲಗೊಳಿಸುತ್ತಿದ್ದರು. ಯಾರಾದರೂ ನಿಮ್ಮನ್ನು ಕುಮಾರ್ಗಿಗಳು, ಕುಗುರುಗಳು, ಮಿಥ್ಯಾತ್ವಿಗಳು ಮತ್ತು ಕೆಟ್ಟ ಉಪದೇಶಕರೆಂದು ಕರೆದರೆ ಅದೆಷ್ಟು ನಿಮಗೆ ದುಃಖವಾದೀತು? ಅದೇ ರೀತಿ ನೀವು ಬೇರೆಯವರಿಗೆ ದುಃಖದಾಯಕರಾಗಿರುವುದರಿಂದ ನಿಮ್ಮ ಮತದಲ್ಲಿ ಅಸಾರ ಮಾತುಗಳು ತುಂಬಾ ತುಂಬಿಕೊಂಡಿರುವುದು.

तिहुअण जणं मरंतं दहूण निअंतिजेन अप्पाणं।
विरमंतिन सावा उधिद्धी धित्तणं ताणं ॥

[ಪ್ರಕ. ಭಾ. ೨, ಷ. ಸೂ. ೧೦೯]

ಸಾಯುವ ವರೆಗೆ ದುಃಖವಿರುವುದಾದರೂ ನರಕಕ್ಕೊಯ್ಯುವ ಕಾರ್ಯಗಳಾಗಿರುವುದರಿಂದ ಜೈನರು ಕೃಷಿ, ವ್ಯಾಪಾರ ಮೊದಲಾದುವುಗಳನ್ನೆಂದಿಗೂ ಮಾಡದಿರಲಿ.

ಸಮಿಾಕ್ಷಕ :—ನೀವು ವ್ಯಾಪಾರಾದಿಕರ್ಮಗಳನ್ನೇಕೆ ಮಾಡುತ್ತಿದ್ದೀರೆಂದು ಯಾರಾದರೂ ಇವರನ್ನು ಕೇಳಬೇಕು? ಅವುಗಳನ್ನು ಬಿಟ್ಟುಬಿಟ್ಟರೆ ಶರೀರದ ಪಾಲನಪೋಷಣವೂ ಸಾಧ್ಯವಾಗಲಾರದು. ನೀವು ಹೇಳುವಂತೆ ಎಲ್ಲರೂ ಬಿಟ್ಟುಬಿಟ್ಟರೆ ಮತ್ತೆ ನೀವೇನು ತಿಂದು ಬದುಕುವಿರಿ? ಇಂತಹ ಅತ್ಯಾಚಾರವನ್ನು ಪದೇಶಿಸುವುದು ತೀರಾ ವ್ಯರ್ಥವಾದುದು. ಏನುಮಾಡುವುದು ಪಾಪ. ವಿದ್ಯಾಸತ್ಸಂಗವಿಲ್ಲದೆ ಮನಸ್ಸಿಗೆ ತೋಚಿದುದನ್ನೇ ಒದರಿದರು.

ಮೂಲ :—

त इयं हवमाण अहवमा कारण रहियं अनाण
गवेण ।
जे जंपंति उसुत्तं तेसिंदिद्धिच्छपमिच्छं ॥

[ಪ್ರಕ. ಭಾ. ೨, ಷ. ಸೂ. ೧೨೧]

ಜೈನಾಗಮುಗಳಿಗೆ ವಿರುದ್ಧವಾಗಿರುವ ಶಾಸ್ತ್ರಗಳನ್ನು ನಂಬುವವರು ಅಥಮಾಥಮರಾಗಿರುತ್ತಾರೆ. ಯಾವುದಾದರೂ ಪ್ರಯೋಜನವಾಗುವುದಾದರೂ ಜೈನಮತಕ್ಕೆ ವಿರುದ್ಧವಾಗಿ ಆಡಬಾರದು. ನಂಬಬಾರದು. ಮಾತ್ರವಲ್ಲ, ಪ್ರಯೋಜನ ಸಿದ್ಧವಾಗುವುದಾದರೂ ಅನ್ಯ ಮತವನ್ನು ಬಿಡಬೇಕು.

ಸಮಿಾಕ್ಷಕ :—ನಿಮ್ಮ ಆಗಿಹೋದ ಮೂಲಪುರುಷರೂ ಇನ್ನು ಆಗುವವರೂ ಅನ್ಯಮತಗಳನ್ನು ಬಯ್ಯುವುದರ ಹೊರತು ಬೇರಾವ ಮಾತನ್ನೂ ಆಡಿಲ್ಲ. ಇನ್ನು ಆಡಲಿಕ್ಕಿಲ್ಲ. ತಮ್ಮ ಪ್ರಯೋಜನವು ಸಿದ್ಧಿಸುತ್ತದೆಂದು ತೋರುವಲ್ಲಿ ಜೈನರು ತಮ್ಮ ಶಿಷ್ಯರಿಗೂ ಶಿಷ್ಯರಾಗಿ ಬಿಡುತ್ತಾರಾದರೂ ಇಂತಹ ಉದ್ದುದ್ದ ಮಾತುಗಳನ್ನಾಡುವಾಗ ಸ್ವಲ್ಪವೂ ಲಜ್ಜೆಯಾಗುವುದಿಲ್ಲವೆಂಬುದು ಮಹಾಶೋಕಾಸ್ಪದವಾದ ವಿಷಯ.

जंबीर जिणस्सजिओ मिरई उसुत्तलेसदेसण ओ ।
सागर कोडी कोडिंहिं मुइ अइ भी भवरणे ॥

[ಪ್ರಕ. ಭಾ. ೨, ಷ. ಸೂ. ೧೨೨]

ಧರ್ಮವು ಜೈನಸಾಧುಗಳಲ್ಲಿಯೂ ಇದೆ ನಮ್ಮಲ್ಲಿ ಮತ್ತು ಅನ್ಯರಲ್ಲಿಯೂ ಇದೆ ಎಂದು ಯಾರಾದರೂ ಹೇಳಿದರೆ ಅವನು ಕೋಟ್ಯಾನು ಕೋಟಿ ವರ್ಷಗಳ ವರೆಗೆ ನರಕದಲ್ಲಿದ್ದು ಮರಳಿಯೂ ನೀಚಜನ್ಮಕ್ಕೆ ಹೋಗುತ್ತಾನೆ.

ಸಮೀಕ್ಷಕ :—ವಾಹವ್ವ! ವಿದ್ಯಾಶತ್ರುಗಳೆ! ತಮ್ಮ ಮಿಥ್ಯಾ ವಚನಗಳನ್ನಾರೂ ಖಂಡಿಸದಿರಲೆಂದೇ ನೀವು ಯೋಚಿಸಿರಬೇಕಲ್ಲವೆ? ಆದುದರಿಂದಲೇ ಈ ಭಯಂಕರವಾದ ಮಾತನ್ನು ಬರೆದಿರಿ! ಅಸಂಭವವಾದುದಿದು. ಇನ್ನು ನಿಮಗೆ ಎಷ್ಟೆಂತ ತಿಳಿಯಪಡಿಸಲಿ? ನೀವಾದರೂ ಅಸತ್ಯ, ನಿಂದೆ ಮತ್ತು ಮತಗಳೊಡನೆ ವೈರವಿರೋಧಗಳನ್ನು ಗೈಯುವುದಕ್ಕೇನೇ ಕಟಿಬದ್ಧರಾಗಿ ತಮ್ಮ ಸ್ವಾರ್ಥವನ್ನು ಸಾಧಿಸಿಕೊಳ್ಳುವುದೇ ಪರಮಾನ್ನವೆಂದೆಣಿಸಿರುವಿರಿ.

ದೂರೇ ಕರಣಂ ದೂರಮ್ಮಿ ಸಾಹೂಣಂ ತಹಯ ಭಾವಣಾ ದೂರೇ।
ಜಿಣಧಮ್ಮ ಸದ್ದಹಾಣಂ ಪಿತಿರ ಕದುರ ಕಾಇನಿತವಇ॥

[ಪ್ರಕ. ಭಾ. ೨, ಷ. ಸೂ. ೧೨೭]

ಜೈನಧರ್ಮದ ಅನುಷ್ಠಾನ ಮಾಡಲಾರನಾದರೂ ಮನುಷ್ಯನು ಜೈನಧರ್ಮದ ಹೊರತು ಬೇರಾವುದೂ ಸತ್ಯವಲ್ಲವೆಂದು ಇಷ್ಟುಮಾತ್ರ ಶ್ರದ್ಧೆಯಿಡುವುದರಿಂದಲೇ ಅವನು ದುಃಖದಿಂದ ಪಾರಾಗುವನು.

ಸಮೀಕ್ಷಕ :—ಮೂರ್ಖರನ್ನು ತಮ್ಮ ಮತಜಾಲದಲ್ಲಿ ಸಿಲುಕಿಸಿಕೊಳ್ಳುವ ಉಪಾಯವು ಇದಕ್ಕಿಂತ ಬೇರಾವುದಿರಬಹುದು? ಏಕೆಂದರೆ, ಯಾವ ಕರ್ಮವನ್ನೂ ಮಾಡಬೇಕಾದುದಿಲ್ಲ; ಮುಕ್ತಿಯೂ ಆಗಿಯೇ ಹೋಗುವುದು. ಇದರಂತಹ ಬೆಪ್ಪುಮತ ಬೇರಾವುದಿದ್ದೀತು?

ಮೂಲ :—

ಕಇಯಾ ಹೋಹೀ ದಿವಸೋ ಜಇಯಾ ಸುಗುರುಣ ಪಾಯಮೂಲಮ್ಮಿ।
ಉಸ್ಸುತ್ತ ಸವಿಸಲವರ ಹಿಲೇಓನಿಸುಣೇ ಸುಜಿಣ ಧಮ್ಮಂ॥

[ಪ್ರಕ. ಭಾ. ೨, ಮಾ. ಸೂ. ೧೨೮]

" ನಾನು ಮನುಷ್ಯನಾಗಿರುವುದಾದರೆ ಜಿನಾಗಮ, ಜೈನಶಾಸ್ತ್ರಗಳನ್ನು ಆಲಿಸುವೆನು. ಉತ್ಸೂತ್ರ, ಅನ್ಯಮತಗ್ರಂಥಗಳನ್ನೆಂದಿಗೂ ಕೇಳುವುದಿಲ್ಲ " ಎಂದು ಬಯಸುವುದರಿಂದ, ಇಷ್ಟು ಬಯಕೆಯಿಂದಲೇ ಮನುಷ್ಯನು ದುಃಖಸಾಗರದಿಂದ ಪಾರಾಗುತ್ತಾನೆ.

ಸಮಿಾಕ್ಷಕ :—ಈ ಮಾತೂ ತಿಳುವಳಿಕೆಯಿಲ್ಲದವರನ್ನು ಸಿಕ್ಕಿಸಿಕೊಳ್ಳುವುದಕ್ಕಾಗಿ ಇದೆ. ಈ ಮೇಲಿನ ಇಚ್ಛೆಯಿಂದ ಯಾವನೂ ಇಲ್ಲಿನ ದುಃಖಸಾಗರದಿಂದಲೂ ಪಾರಾಗುವುದಿಲ್ಲ. ಪೂರ್ವಜನ್ಮದ ಸಂಚಿತ ಪಾಪಫಲವಾದ ದುಃಖವನ್ನನುಭವಿಸದೆ ಬಿಡುಗಡೆಹೊಂದಲಾರನು. ಇಂತಹ ಅಸತ್ಯ ಅಂದರೆ ವಿದ್ಯಾವಿರುದ್ಧದ ಮಾತುಗಳನ್ನು ಬರೆಯಿದ್ದರೆ ವೇದಾದಿಶಾಸ್ತ್ರಗಳನ್ನೋದಿ, ಕೇಳಿ ಜನರು ಸತ್ಯಾಸತ್ಯಗಳನ್ನರಿತು, ಇವರ ಅವಿದ್ಯಾರೂಪವಾದ ಮತ್ತು ಬೆಪ್ಪುತನದ ಗ್ರಂಥಗಳನ್ನು ಬಿಟ್ಟುಬಿಡುತ್ತಿದ್ದರು. ಆದರೆ ಯಾವರೀತಿ ಬಿಗಿಯಾಗಿ ಅಜ್ಞಾನಿಗಳನ್ನು ಇವರು ಕಟ್ಟಿಹಾಕಿದ್ದಾರೆಂದರೆ ಈ ಬಲೆಯಿಂದ, ಬುದ್ಧಿವಂತನೂ, ಸತ್ಸಂಗಿಯೂ ಆದವನು ಮಾತ್ರ ಬಿಡುಗಡೆಯಾಗುವುದು ಸಾಧ್ಯವಿದೆ; ಆದರೆ ಬೇರೆ ಜಡಬುದ್ಧಿಗಳು ಪಾರಾಗುವುದು ಬಹಳ ಕಠಿಣವಾಗಿದೆ.

ಮೂಲ :—

ಬ್ರಹ್ಮ ಜೇಣಂ ಹಿಂಭಣಿಯಂ ಸುಯವವಹಾರಂ ವಿಸಾಹಿಯಂ ತಸ್ಸ।
ಜಾಯುಇ ವಿಸುದ್ಧ ಬೋಹೀ ಜಿಣಆಣಾರಾಹಗತ್ತಾಓ॥

ಪ್ರಕ. ಭಾ. ೨ ಷ. ಸೂ. ೧೩೮

ಜಿನಾಚಾರ್ಯರು ಹೇಳಿದ ಸೂತ್ರ, ನಿರುಕ್ತಿ, ವೃತ್ತಿ, ಭಾಷ್ಯ ಚೂರ್ಣಿ ಇವುಗಳನ್ನು ಒಪ್ಪುವವರೇ ಶುಭ ಮತ್ತು ದುಃಸಹವಾದ ವ್ಯವಹಾರಗಳನ್ನು ಮಾಡುವುದರಿಂದ ಚಾರಿತ್ರ್ಯಯುಕ್ತರಾಗಿ ಸುಖವನ್ನು ಪಡೆಯುತ್ತಾರೆ, ಅನ್ಯಮತಗಳ ಗ್ರಂಥಗಳನ್ನು ನೋಡುವುದರಿಂದ ಪಡೆಯಲಾರರು.

ಸಮೀಕ್ಷಕ—ಅತ್ಯಂತವಾಗಿ ಹಸಿದು ಸಾಯುವುದೇ ಮೊದಲಾದುವಕ್ಕೆ ಚಾರಿತ್ರವೆನ್ನುತ್ತಾರೆಯೆ? ಉಪವಾಸ ಸಾಯುವುದೇ ಚಾರಿತ್ರವಾಗಿರುವುದಾದರೆ ಬಹುಮಂದಿ ಬರಗಾಲದಿಂದಾಗಲೀ ಅನ್ನಸಿಕ್ಕದೆಯಾಗಲೀ ಉಪವಾಸ ಸಾಯುವವರೂ ಶುದ್ಧರಾಗಿ ಶುಭಫಲಗಳನ್ನು ಪಡೆಯಬೇಕಾಗುವುದು. ಅವರು ಶುದ್ಧರಾಗುವುದೂ ಇಲ್ಲ. ನೀವೂ ಇಲ್ಲ. ಪಿತ್ತಾದಿಗಳ ಪ್ರಕೋಪದಿಂದ ರೋಗಿಗಳಾಗಿ ಸುಖದ ಬದಲಾಗಿ ದುಃಖವನ್ನು ಹೊಂದುತ್ತಾರೆ. ಧರ್ಮವಾದರೋ ನ್ಯಾಯಾಚರಣ, ಬ್ರಹ್ಮಚರ್ಯ, ಸತ್ಯಭಾಷಣಾದಿಗಳಿಂದಾಗುತ್ತದೆ. ಅಸತ್ಯಭಾಷಣ, ಅನ್ಯಾಯಾಚರಣ ಮೊದಲಾದುವುಗಳೇ ಪಾಪವಾಗಿರುತ್ತದೆ. ಎಲ್ಲರೊಡನೆ ಪ್ರೀತಿಪೂರ್ವಕವಾಗಿ ಪರೋಪಕಾರದಿಂದ ವರ್ತಿಸುವುದೇ ಶುಭಚರಿತ್ರವೆನಿಸುತ್ತದೆ. ಜೈನಮತಸ್ಥರ ಉಪವಾಸ ಸಾಯುವುದು ಧರ್ಮವೆನಿಸುವುದಿಲ್ಲ. ಈ ಸೂತ್ರಗಳನ್ನು ನಂಬುವುದರಿಂದ ಸ್ವಲ್ಪ ಸತ್ಯವನ್ನೂ ಹೆಚ್ಚಾಗಿ ಅಸತ್ಯವನ್ನೂ ಹೊಂದಿ ದುಃಖಸಾಗರದಲ್ಲಿ ಮುಳುಗುತ್ತಾರೆ.

ಮೂಲ :—

ಜಯಿ ಜಾಣಸಿ ಜಿಣನಾಹೋ ಲೋಯಾಯಾ ರಾವಿಪರಕ
ಏಭೂಓ ।
ತಾತಂತಂ ಮುನ್ನಂ ತೋ ಕಹಮುನ್ನಸಿ ಲೋಯು ಆಯಾರಂ ॥

ಪ್ರಕ. ಭಾ. ೨। ಷ. ಸೂ. ೧೪೮॥

ಉತ್ತಮವಾದ ಅದೃಷ್ಟವುಳ್ಳವರೇ ಜಿನಧರ್ಮವನ್ನು ಸ್ವೀಕರಿಸುತ್ತಾರೆ. ಅಂದರೆ ಜಿನಧರ್ಮವನ್ನನುಸರಿಸದವರ ಅದೃಷ್ಟವು ನಾಶ ಹೊಂದಿದೆ.

ಸಮೀಕ್ಷಕ—ಈ ಮಾತು ತಪ್ಪೂ, ಸುಳ್ಳೂ ಅಲ್ಲವೆ? ಅನ್ಯಮತದಲ್ಲಿ ಶ್ರೇಷ್ಠ ಅದೃಷ್ಟವುಳ್ಳವರೂ ಜೈನಮತದಲ್ಲಿ ದುರದೃಷ್ಟವುಳ್ಳವರೂ ಇಲ್ಲವೆ? ಸಧರ್ಮಿಗಳು–ಜೈನಧರ್ಮಿಗಳು–ಪರಸ್ಪರ ಕ್ಲೇಶವನ್ನುಂಟುಮಾಡದೆ ಪ್ರೀತಿಪೂರ್ವಕವಾಗಿ ವ್ಯವಹರಿಸಬೇಕೆಂದು ಹೇಳಿರುವುದರಿಂದ ಅವರೊಡನೆ ಕಲಹಮಾಡುವುದು ಕೆಟ್ಟದೆಂದು ಜೈನರು

ಭಾವಿಸುವುದಿಲ್ಲವೆಂಬುದು ಸಿದ್ಧವಾಗುತ್ತದೆ. ಈ ಇವರ ಮಾತೂ ಅನುಚಿತ. ಏಕೆಂದರೆ–ಸಜ್ಜನರು ಸಜ್ಜನರೊಡನೆ ಪ್ರೀತಿಯಿಟ್ಟು ದುಷ್ಟರಿಗೆ ಶಿಕ್ಷಣವನ್ನಿತ್ತು ಅವರನ್ನು ತಿದ್ದುತ್ತಾರೆ. ಬ್ರಾಹ್ಮಣ, ತ್ರಿದಂಡಿ, ಪರಿವ್ರಾಜಕಾಚಾರ್ಯ, ಸಂನ್ಯಾಸಿ ಮತ್ತು ತಪಸ್ವಿಯೇ ಮೊದಲಾದವರನ್ನು ಜೈನಮತದ ಶತ್ರುಗಳೆಂದು ಬರೆದಿದ್ದಾರೆ. ಎಲ್ಲರನ್ನೂ ಶತ್ರು ಭಾವನೆಯಿಂದ ನೋಡಿ ನಿಂದಿಸುವಾಗ ಜೈನರ ದಯಾ ಕ್ಷಮಾರೂಪವಾದ ಧರ್ಮವೆಲ್ಲುಳಿಯಿತು? ಏಕೆಂದರೆ, ಬೇರೆಯವರನ್ನು ದ್ವೇಷಿಸುವುದೇ ದಯಾಕ್ಷಮೆಗಳ ನಾಶವೇ ಆಗಿರುತ್ತದೆ; ಮಾತ್ರವಲ್ಲ; ಇವುಗಳ ಅಭಾವದಂತಹ ಹಿಂಸಾರೂಪದೋಷವು ಬೇರೊಂದಿರುವುದಿಲ್ಲ. ಜೈನರಂತಹ ದ್ವೇಷದ ಪ್ರತಿಮೂರ್ತಿಗಳು ಬೇರೆಯವರು ಬಹಳ ಕಡಿಮೆ ಇರಬಹುದು. ಋಷಭದೇವನಿಂದ ಹಿಡಿದು ಮಹಾವೀರನ ವರೆಗಿನ ೨೪ ತೀರ್ಥಂಕರರನ್ನು ರಾಗಿಗಳೆಂದೂ, ದ್ವೇಷಿಗಳೆಂದೂ ಮಿಥ್ಯಾತ್ವಿಗಳೆಂದೂ ಹೇಳಿದರೆ, ಜೈನಮತವನ್ನು ನಂಬುವವನನ್ನು ಸನ್ನಿಪಾತ ಜ್ವರಗ್ರಸ್ತನೆಂದು ಭಾವಿಸಿದರೆ ಮತ್ತು ಅವರ ಧರ್ಮವು ನರಕ ಮತ್ತು ವಿಷಕ್ಕೆ ಸಮಾನವಾಗಿರುವುದೆಂದು ಹೇಳಿದರೆ ಜೈನರಿಗೆ ಅದೆಷ್ಟು ಕೆಟ್ಟದು ತೋರಲಿಕ್ಕಿಲ್ಲ? ಆದಕಾರಣ ಜೈನರು ನಿಂದೆ ಮತ್ತು ಪರಮತದ್ವೇಷವೆಂಬ ನರಕದಲ್ಲಿ ಬಿದ್ದು ಮಹಾಕ್ಲೇಶವನ್ನು ಅನುಭವಿಸುತ್ತಿದ್ದಾರೆ. ಈ ವಿಷಯವನ್ನವರು ಬಿಟ್ಟುಬಿಡುವುದಾದರೆ ಬಹಳ ಒಳ್ಳೆಯದು.

ಮೂಲ :—

ಏಗೋ ಆಗರೂ ಏಗೋ ವಿಸಾವ ಗೋಚೇ ಇಆಜಿ ವಿವಹಾಣಿ।
ತಚ್ಛಯಜಂ ಜಿಣದಬ್ಬಂ ಪರುಪ್ಪರಂತಂ ನ ವಿಚ್ಛಂತಿ ॥

ಪ್ರಕ. ಭಾ. ೨। ಷ. ಸೂ. ೧೫೦ ॥

ಎಲ್ಲಾ ಶ್ರಾವಕರ ದೇವ, ಗುರು ಮತ್ತು ಧರ್ಮವು ಒಂದೇ. ಚೈತ್ಯವಂದನ ಅಂದರೆ ಜಿನಪ್ರತಿಬಿಂಬ, ಮೂರ್ತಿದೇವಾಲಯ ಮತ್ತು ಜಿನದ್ರವ್ಯದ ರಕ್ಷಣವೂ ಮೂರ್ತಿಪೂಜೆಯೂ ಧರ್ಮವಾಗಿರುತ್ತದೆ.

ಸವಿಾಕ್ಷಕ—ಈಗ ನೋಡಿ! ಮೂರ್ತಿಪೂಜೆಯ ಗೊಂದಲವೆಲ್ಲವೂ ಜೈನರ ಮನೆಯಿಂದ ಹೊರಟಿದೆ. ಪಾಷಂಡತನದ ಬುಡವೂ

ಜೈನಮತವೇ ಆಗಿದೆ. ಶ್ರಾದ್ಧದಿನ ಕೃತ್ಯದ ಮೊದಲನೆಯ ಪುಟದಲ್ಲಿ ಮೂರ್ತಿಪೂಜೆಗೆ ಪ್ರಮಾಣ :—

ನವಕಾರೇಣ ವಿಪೋಹೋ ॥೧॥ ಅನುಸರಣಂ ಸಾವ ಉ ॥೨॥
ವಯಾ ಇಂ ಇನೋ ॥೩॥ ಜೋಗೋ ॥೪॥
ಚಿಯ ವಂದಣಗೋ॥೫॥ ಯುಚ್ಚರಖಾಣಂತು ವಿಹಿಪುಚ್ಛಂ॥೬॥

ಇತ್ಯಾದಿ

ಶ್ರಾವಕರು ಮೊದಲನೆಯ ದ್ವಾರದಲ್ಲಿ ನವಕಾರವನ್ನು ಜಪಿಸುವುದು. ॥೧॥ ಎರಡನೆಯದರಲ್ಲಿ ನವಕಾರವನ್ನು ಜಪಿಸಿದನಂತರ ತಾನು ಶ್ರಾವಕನೆಂದು ಸ್ಮರಿಸುವುದು. ॥೨॥ ಮೂರನೆಯದರಲ್ಲಿ ನಮ್ಮ ಅಣುವ್ರತಾದಿಗಳು ಎಷ್ಟಿವೆ? ಎಂಬುದನ್ನು ಸ್ಮರಿಸುವುದು. ॥೩॥ ನಾಲ್ಕನೆಯದರಲ್ಲಿ (ಜೀವನೋದ್ದೇಶ್ಯವಾದ) ನಾಲ್ಕು ವರ್ಗಗಳಲ್ಲಿ ಮೋಕ್ಷವೇ ಅಗ್ರಗಾಮಿಯು. ಜ್ಞಾನಾದಿಗಳಿಲ್ಲವೂ ಅದಕ್ಕಾಗಿಯೇ ಇವೆ. ಅದಕ್ಕೇ ಯೋಗವೂ ಇರುತ್ತದೆ. ಅದರ ಸಮಸ್ತ ಅತೀಚಾರಗಳನ್ನು ನಿರ್ಮೂಲ ಪಡಿಸಲು ಬೇಕಾಗುವ ಆರು ಆವಶ್ಯಕ ಕಾರಣಗಳೂ ಉಪಚಾರದಿಂದ ಯೋಗ್ಯವೆನ್ನಿಸುತ್ತವೆ. ಇಂತಹ ಯೋಗವನ್ನು ವರ್ಣಿಸುವೆವು. ॥೪॥ ಐದನೆಯ ಜೈತ್ಯವಂದ ಅರ್ಥಾತ್ ಮೂರ್ತಿಗೆ ನಮಸ್ಕಾರ, ದ್ರವ್ಯಪೂಜೆ ಮತ್ತು ಭಾವಪೂಜೆ ಮಾಡುವುದನ್ನು ಹೇಳುವೆವು. ॥೫॥ ಆರನೆಯ ಪ್ರತ್ಯಾಖ್ಯಾನ ದ್ವಾರ ಅಂದರೆ ' ನವಕಾರಸೀ ' ಮೊದಲಾದುವುಗಳನ್ನು ವಿಧಿಪೂರ್ವಕವಾಗಿ ಹೇಳುವೆವು. ಇತ್ಯಾದಿ ॥೬॥ ಇದೇ ಗ್ರಂಥದಲ್ಲಿ ಮುಂದೆ ಬರೆದ ಸಂಧ್ಯಾಕಾಲದ ಊಟದ ಸಮಯದಲ್ಲಿ ಜಿನಬಿಂಬವನ್ನು ತೀರ್ಥಂಕರರ ಮೂರ್ತಿಯನ್ನು ಪೂಜಿಸಬೇಕು, ದ್ವಾರವನ್ನು ಪೂಜಿಸಬೇಕು ಎಂದು ಮೊದಲಾದ ವಿಧಿಗಳನ್ನು ಬರೆದಿರುವರು. ದ್ವಾರಪೂಜೆಯಲ್ಲಿ ಮಹಾಮಹಾ ಆಡಂಬರಗಳಿವೆ. ಮಂದಿರಗಳನ್ನು ಕಟ್ಟಿಸುವ ನಿಯಮಗಳು–ಮಂದಿರಗಳನ್ನು ನಿರ್ಮಿಸುವುದರಿಂದಲೂ ಜೀರ್ಣೋದ್ಧಾರ ಮಾಡುವುದರಿಂದಲೂ ಮುಕ್ತಿಯು ದೊರೆಯುತ್ತದೆ. ಮಂದಿರಕ್ಕೆ ತೆರಳಿ ಈ ರೀತಿ ಕುಳಿತಿರಬೇಕು. ಬಹಳ ಭಾವಪ್ರೀತಿಗಳಿಂದ ಪೂಜೆ ಮಾಡಬೇಕು. " ನಮೋ ಜಿನೇಂದ್ರೇಭ್ಯಃ " ಮೊದಲಾದ ಮಂತ್ರ

ಗಳಿಂದ ಸ್ನಾನಾದಿಗಳನ್ನು ಮಾಡಿಸಬೇಕು. "ಜಲಚಂದನ ಪುಷ್ಪ ಧೂಪದೀಪನೈಃ" ಮೊದಲಾದುವುಗಳಿಂದ ಗಂಧಾದಿಗಳನ್ನು ಹಚ್ಚ ಬೇಕು. ರತ್ನಸಾರಭಾಗದ ೧೨ನೇ ಪುಟದಲ್ಲಿ ಮೂರ್ತಿಪೂಜೆಯ ಫಲವನ್ನು ಹೀಗೆ ಬರೆದಿದ್ದಾರೆ. ರಾಜನಾಗಿರಲಿ ಪ್ರಜೆಗಳಾಗಿರಲಿ ಯಾರೂ ಪೂಜಾರಿಯನ್ನು ತಡೆಗಟ್ಟಲಾರರು.

ಸಮೀಕ್ಷಕ—ಎಷ್ಟೋ ಮಂದಿ ಜೈನ ಪೂಜಾರಿಗಳನ್ನು ರಾಜಾದಿಗಳು ತಡೆಯುತ್ತಾರೆ. ಆದುದರಿಂದ ಇವೆಲ್ಲ ಕಪೋಲಕಲ್ಪಿತವಾದ ಮಾತುಗಳು. ರತ್ನಸಾರಭಾಗ ಪುಟ ೩೯ರಲ್ಲಿ ಬರೆದಿದ್ದಾರೆ.—ಮೂರ್ತಿ ಪೂಜೆಯಿಂದ ರೋಗ, ಪೀಡೆ ಮತ್ತು ಮಹಾದೋಷಗಳೂ ನಿವಾರಣೆ ಯಾಗುತ್ತವೆ. ಯಾರೋ ಒಬ್ಬನು ಐದು ಕಾಸುಗಳ ಹೂವನ್ನು ಸಮರ್ಪಿಸಿದನು. ಅವನಿಗೆ ೧೮ ದೇಶಗಳ ರಾಜ್ಯಭಾರ ದೊರೆಯಿತು. ಅವನ ಹೆಸರು ಕುಮಾರಪಾಲನೆಂದಾಯಿತು. ಈ ಮೊದಲಾದುವು ಮೂರ್ಖರನ್ನು ಸೆಳೆಯಲಿಕ್ಕಾಗಿ ಬರೆದ ಸುಳ್ಳುಮಾತುಗಳಾಗಿರುತ್ತವೆ. ಏಕೆಂದರೆ, ಎಷ್ಟೋ ಮಂದಿ ಜೈನರು ಪೂಜೆ ಮಾಡುತ್ತಾ ಮಾಡುತ್ತಾ ರೋಗದಲ್ಲೇಯೇ ಬಿದ್ದಿರುತ್ತಾರೆ ಮತ್ತು ಅರ್ಧ ಎಕರೆಯ ರಾಜ್ಯವೂ ಪಾಷಾಣಾದಿ ಮೂರ್ತಿಗಳ ಪೂಜೆಯಿಂದ ದೊರೆಯುವುದಿಲ್ಲ. ಐದು ಕಾಸಿನ ಹೂವನ್ನು ಸಮರ್ಪಿಸಿದುದರಿಂದ ರಾಜ್ಯ ಸಿಕ್ಕಿದರೆ ಐದೈದು ಕಾಸುಗಳ ಹೂವನ್ನು ಸಮರ್ಪಿಸಿ ಇಡೀ ಭೂಗೋಳವನ್ನೇ ತಮ್ಮ ರಾಜ್ಯವನ್ನಾಗಿ ಮಾಡಿಕೊಳ್ಳುವುದಿಲ್ಲವೇಕೆ? ರಾಜದಂಡವನ್ನೇಕೆ ಅನುಭವಿಸುತ್ತಾರೆ? ಮೂರ್ತಿಪೂಜೆಯಿಂದ ಭವಸಾಗರದ ಪಾರಗಾಣುವುದಾದರೆ, ಜ್ಞಾನ, ಸಮ್ಯಗ್ದರ್ಶನ ಮತ್ತು ಚಾರಿತ್ರ್ಯಗಳನ್ನೇಕ ಮಾಡುತ್ತೀರಿ? ರತ್ನಸಾರಭಾಗ ಪುಟ ೧೩ರಲ್ಲಿ ಗೌತಮನ ಅಂಗುಷ್ಠದಿಂದ ಅಮೃತವನ್ನೂ, ಅದರ ಸ್ಮರಣೆಯಿಂದ ಮನೋವಾಂಛಿತ ಫಲವನ್ನೂ ಪಡೆಯಬಹುದೆಂದು ಬರೆದಿದ್ದಾರೆ. ಹಾಗಿದ್ದರೆ ಜೈನರೆಲ್ಲರೂ ಅಮರ ರಾಗಬೇಕಾಗಿತ್ತು? ಆದರೆ ಆಗುತ್ತಿಲ್ಲವಾದುದರಿಂದ ಇದು ಕೇವಲ ಮೂರ್ಖರನ್ನು ಮೋಸಗೊಳಿಸುವ ಮಾತಾಗಿರುತ್ತದೆ. ಎರಡನೆಯದಾಗಿ ಇದರಲ್ಲೇನೂ ತತ್ವವಿಲ್ಲ. ಇವರ ಪೂಜೆಯ ಶ್ಲೋಕವು ರತ್ನಸಾರಭಾಗ ಪುಟ ೫೨ರಲ್ಲಿದೆ—

ಜಲಚಂದನ ಧೂಪನೈರಥ ದೀಪಾಕ್ಷತಕೈರ್ನೈವೇದ್ಯವಸ್ತ್ರೈಃ।
ಉಪಚಾರವರೈರ್ಜಿನೇಂದ್ರಾನ್ ರುಚಿರೈರದ್ಯ ಯಜಾಮಹೇ ॥

ನಾವು ಜಲ, ಚಂದನ, ಅಕ್ಷತೆ, ಪುಷ್ಪ, ಧೂಪ, ದೀಪ, ನೈವೇದ್ಯ, ವಸ್ತ್ರ ಮತ್ತು ಅತಿಶ್ರೇಷ್ಠವಾದ ಉಪಚಾರಗಳಿಂದ ಜಿನೇಂದ್ರ ಅಂದರೆ ತೀರ್ಥಂಕರರನ್ನು ಪೂಜಿಸುವ. ಇದರಿಂದಲೇ ಮೂರ್ತಿ ಪೂಜೆಯು ಜೈನರಿಂದ ಪ್ರಾರಂಭವಾಯಿತೆಂದು ನಾವು ಹೇಳುವುದು.

ವಿವೇಕಸಾರ ಪುಟ ೨೧—ಜಿನಮಂದಿರದಲ್ಲಿ ಮೋಹವುತ್ಪನ್ನವಾಗುವುದಿಲ್ಲ. ಮತ್ತು ಅದು ಭವಸಾಗರವನ್ನು ಪಾರುಗಾಣಿಸುತ್ತದೆ. ವಿವೇಕಸಾರ ಪುಟ ೫೧-೫೨—ಮೂರ್ತಿಪೂಜೆಯಿಂದ ಮುಕ್ತಿ ದೊರೆಯುತ್ತದೆ. ಜಿನಮಂದಿರಕ್ಕೆ ಹೋಗುವುದರಿಂದ ಸದ್ಗುಣಗಳು ಬರುತ್ತದೆ. ಜಲಚಂದನಾದಿಗಳಿಂದ ತೀರ್ಥಂಕರರನ್ನು ಪೂಜಿಸುವವರು ನರಕದಿಂದ ಮುಕ್ತರಾಗಿ ಸ್ವರ್ಗಕ್ಕೆ ಹೋಗುತ್ತಾರೆ. ವಿವೇಕಸಾರ ಪು. ೫೫—ಜಿನಮಂದಿರದಲ್ಲಿ ಋಷಭದೇವಾದಿಗಳ ಮೂರ್ತಿಗಳನ್ನು ಪೂಜಿಸುವುದರಿಂದ ಧರ್ಮಾರ್ಥಕಾಮಮೋಕ್ಷಗಳು ಸಿದ್ಧಿಸುತ್ತವೆ. ವಿವೇಕಸಾರ ಪು. ೬೧—ಜಿನಮೂರ್ತಿಗಳನ್ನು ಪೂಜಿಸಿದರೆ ಜಗತ್ತಿನ ಎಲ್ಲಾ ಕ್ಲೇಶಗಳೂ ದೂರವಾಗುವುವು.

ಸಮೀಕ್ಷೆ—ಈಗ ನೋಡಿ! ಇವರ ಅಜ್ಞಾನದಿಂದ ಕೂಡಿದ ಅಸಂಭವಮಾತುಗಳನ್ನು. ಇಂತಹ ಪಾಪಾದಿ ದುಷ್ಕರ್ಮಗಳು ತೊಲಗಿ ಹೋದರೆ, ಮೋಹಬಾರದಿದ್ದರೆ, ಭವಸಾಗರವ ಪಾರುಗಾಣುವುದಾದರೆ ಸದ್ಗುಣಗಳು ಬರುವುದಾದರೆ, ನರಕವನ್ನು ಬಿಟ್ಟು ಸ್ವರ್ಗಕ್ಕೆ ತೆರಳುವುದಾದರೆ, ಧರ್ಮಾರ್ಥಕಾಮಮೋಕ್ಷಗಳನ್ನು ಪಡೆಯುವುದಾದರೆ, ಮತ್ತು ಎಲ್ಲಾ ಕ್ಲೇಶಗಳು ದೂರವಾಗುವುದಾದರೆ ಎಲ್ಲಾ ಜೈನರು ಸುಖಿಗಳಾಗಿ ಸರ್ವಪದಾರ್ಥಗಳ ಸಿದ್ಧಿಯನ್ನೇಕೆ ಹೊಂದುವುದಿಲ್ಲ?

ಅದೇ ವಿವೇಕಸಾರದ ೩ನೇ ಪುಟ—"ಜಿನಮೂರ್ತಿಯನ್ನು ಸ್ಥಾಪಿಸಿದವರು ತಮ್ಮ ಮತ್ತು ತಮ್ಮ ಕುಟುಂಬದ ಜೀವಿಕಾಮಾರ್ಗವನ್ನು ರಚಿಸಿದ್ದಾರೆ." ವಿವೇಕಸಾರ ಪುಟ ೨೨೫—"ಶಿವ-ವಿಷ್ಣು ಮೊದಲಾದವರ ಮೂರ್ತಿಗಳನ್ನು ಪೂಜಿಸುವುದು ಬಹಳ ಕೆಟ್ಟದು ಅಂದರೆ ಅದು ನರಕಸಾಧನ.

ಸಮೀಕ್ಷಕ—ಶಿವಾದಿಗಳ ಮೂರ್ತಿಗಳು ನರಕಸಾಧನವಾದರೆ ಜೈನರ ಮೂರ್ತಿಗಳು ಹಾಗಿಲ್ಲವೇಕೆ? ನಮ್ಮ ಮೂರ್ತಿಗಳು ತ್ಯಾಗಿಗಳೂ, ಶಾಂತವೂ, ಶುಭಮುದ್ರೆಗಳಿಂದ ಕೂಡಿರುವವೂ ಆಗಿರುವುದರಿಂದ ಒಳ್ಳೆಯವೂ, ಶಿವಾದಿಗಳ ಮೂರ್ತಿಗಳು ಹಾಗಿಲ್ಲದಿರುವುದರಿಂದ ಕೆಟ್ಟವೂ ಆಗಿರುವವೆಂದು ಹೇಳುವುದಾದರೆ, ನಿಮ್ಮ ಮೂರ್ತಿಗಳಾದರೋ ಲಕ್ಷಾಂತರ ರೂಪಾಯಿ ಬೆಲೆಬಾಳುವ ದೇವಾಲಯಗಳಲ್ಲಿರುತ್ತವೆ. ಚಂದನ, ಕೇಸರಿ ಮೊದಲಾದವುಗಳನ್ನು ಅವುಗಳ ಮೇಲೆ ಬಳಿಯುವಾಗ ಅವು ತ್ಯಾಗಿಗಳು ಹೇಗಾಗುತ್ತವೆ? ಶಿವಾದಿಗಳ ಮೂರ್ತಿಗಳು ನೆರಳಿಲ್ಲದೆಯೂ ಇರುತ್ತವೆ. ಅವೇಕೆ ತ್ಯಾಗಿಗಳಲ್ಲ? ಎಂದು ಅವರನ್ನು ಕೇಳಬೇಕು. ನಮ್ಮ ಮೂರ್ತಿಗಳು ಶಾಂತವಾಗಿವೆಯೆನ್ನುವಿರಾದರೆ ಜಡ ಪದಾರ್ಥಗಳೆಲ್ಲವೂ ನಿಶ್ಚಲವಾಗಿರುವುದರಿಂದ ಶಾಂತವೇ ಆಗಿರುತ್ತವೆ. ಎಲ್ಲಾ ಮತಗಳ ಮೂರ್ತಿಪೂಜೆಯೂ ನಿಷ್ಪ್ರಯೋಜಕವಾಗಿರುತ್ತವೆ.

ಪ್ರಶ್ನೆ :—ನಮ್ಮ ಮೂರ್ತಿಗಳು ವಸ್ತ್ರಾಭರಣಗಳನ್ನು ಧರಿಸದಿರುವುದರಿಂದ ಒಳ್ಳೆಯವು.

ಉತ್ತರ : ಎಲ್ಲರ ಎದುರಿನಲ್ಲಿ ಬೆತ್ತಲೆ ಮೂರ್ತಿಗಳನ್ನಿಡುವುದು ಪಶುಗಳಂತಹ ಲೀಲೆಯಾಗಿರುತ್ತದೆ.

ಪ್ರಶ್ನೆ :—ಸ್ತ್ರೀಯ ಮೂರ್ತಿಯನ್ನಾಗಲೀ, ಚಿತ್ರವನ್ನಾಗಲೀ ನೋಡುವುದರಿಂದ ಕಾಮೋತ್ಪತ್ತಿಯಾಗುವಂತೆ, ಸಾಧು ಮತ್ತು ಯೋಗಿಗಳ ಮೂರ್ತಿಗಳನ್ನು ನೋಡುವುದರಿಂದ ಶುಭಗುಣಗಳು ಪ್ರಾಪ್ತವಾಗುತ್ತವೆ.

ಉತ್ತರ :—ಪಾಷಾಣಮೂರ್ತಿಗಳನ್ನು ನೋಡುವುದರಿಂದ ಶುಭ ಪರಿಣಾಮವಾಗುವುದೆಂದು ನಂಬುತ್ತೀರಾದರೆ ಅವುಗಳ ಜಡತ್ವ ಮೊದಲಾದ ಗುಣಗಳೂ ನಿಮ್ಮಲ್ಲಿ ಬಂದು ಬಿಡುವವು. ಜಡಬುದ್ಧಿಗಳಾದ ಮೇಲೆ ಸರ್ವಥಾ ನಾಶಹೊಂದುವಿರಿ. ಎರಡನೆಯದಾಗಿ, ಉತ್ತಮರಾದ ವಿದ್ವಾಂಸರ ಸೇವಾಸಂಸರ್ಗಗಳಿಂದ ತಪ್ಪಿಹೋಗುವುದರಿಂದ ಮೂಢತನವೂ ಹೆಚ್ಚುವುದು. ಹನ್ನೊಂದನೆಯ ಸಮುಲ್ಲಾಸದಲ್ಲಿ ಬರೆದ ದೋಷಗಳೆಲ್ಲವೂ ಪಾಷಾಣಾದಿ ಮೂರ್ತಿಗಳನ್ನು ಪೂಜಿಸುವವರಿಗೆ

ಉಂಟಾಗುತ್ತವೆ. ಜೈನರು ಮೂರ್ತಿಪೂಜೆಯಲ್ಲಿ ಕೋಲಾಹಲ ನಡೆಸಿದಂತೆ ಅವರ ಮಂತ್ರಗಳಲ್ಲಿಯೂ ಎಷ್ಟೋ ಅಸಂಭವವಾದ ವಿಷಯಗಳನ್ನು ಬರೆದಿದ್ದಾರೆ. ಅವರ ಮಂತ್ರವು ರತ್ನಸಾರ ಭಾಗ ಪುಟ ಒಂದರಲ್ಲಿ—

ನಮೋ ಅರಿಹಂತಾಣಂ, ನಮೋ ಸಿದ್ಧಾಣಂ, ನಮೋ ಆಯರಿಯಾಣಂ, ನಮೋ ಉವಜ್ಝಾಯಾಣಂ, ನಮೋ ಲೋ ಏ ಸಬ್ಬಸಾಹೂಣಂ, ಏಸೋ ಪಂಚ ನಮುಕ್ಕಾರೋ, ಸವ್ವ ಪಾವಪ್ಪಣಾಸಣೋ ಮುಂಗಲಾಚರಣಂ ಚ ಸಬ್ಬೇ ಸಿಪಢಮುಂ ಹವಇ ಮುಂಗಲಂ ॥೧೧॥

ಇದರ ಮಾಹಾತ್ಮ್ಯವನ್ನು ಬಹಳವಾಗಿ ಬರೆದಿದ್ದಾರೆ. ಇದೇ ಎಲ್ಲಾ ಜೈನರ ಗುರುಮಂತ್ರ. ಇದಕ್ಕೆ ಮಹಿಮೆಯನ್ನು ತಂತ್ರ-ಪುರಾಣ-ಚಾರಣದ ಕಥೆಗಳನ್ನು ವಿಾರಿಸುವಂತೆ ಬರೆದಿದ್ದಾರೆ. ಶ್ರಾದ್ಧದಿನಕೃತ್ಯ ಪುಟ ೩—

ನಮುಕ್ಕಾರ ಉಪಥೇ ॥೯॥
ಜ ಉಕಬ್ಬಂ । ಮುಂತ್ರಾಣ ಮುಂತೋ ಪರೆನೋ ಇಮುತ್ತಿ
ಧೇಯಾಣಧೇಯಂ ಪರಮುಂ ಇಮುತ್ತಿ ।
ತತ್ತಾಣತತ್ತಂ ಪರಮುಂ ಪವಿತ್ತಂ ಸಂಸಾರಸತ್ತಾಣ ದುಹಾ-
ಹಯಾಣಂ ॥೧೦॥
ತಾಣಂ ಅನ್ನಂ ತು ನೋ ಅತ್ಥಿ । ಜೀವಾಣಂ ಭವಸಾಯರೇ ।
ಬುಡ್ಡೂಂ ತಾಣಂ ಇಮುಂ ಮುತ್ತುಂ । ನ ಮುಕ್ಕಾರಂ
ಸುಪ್ಪೋಯುಯುಂ ॥೧೧॥
ಕಬ್ಬಂ । ಅಣೇ ಗಜಂಮ್ಮುಂ ತರಸಂಚಿಆಣಂ ।
ದುಹಾಣಂ ಸಾರೀರಿ ಅಮಾಣು ಸಾಣು ಸಾಣಂ ।
ಕತ್ತೊಯಭವ್ವಾಣ ಭವಿಜ್ಜನಾಸೋ ನ ಜಾವಪತ್ತೋ
ನವಕಾರ ಮುಂತೋ ॥೧೨॥

" ಈ ಮಂತ್ರವು ಪವಿತ್ರವೂ ಪರಮವೂ ಆಗಿರುತ್ತದೆ. ಧ್ಯಾನ

ಯೋಗ್ಯವಾದವುಗಳಲ್ಲಿದು ಸರ್ವೋತ್ಕೃಷ್ಟವಾಗಿದೆ. ತತ್ವಗಳಲ್ಲಿ ಪರಮ ತತ್ವ. ದುಃಖದಿಂದ ಪೀಡಿತರಾದ ಸಾಂಸಾರಿಕರಿಗೆ ಈ ನವಕಾರ ಮಂತ್ರವು ಸಮುದ್ರವನ್ನು ಪಾರುಗಾಣಿಸುವ ನೌಕೆಯಂತಿದೆ. ॥೧೦॥ ನೌಕಾಸಮವಾದ ಈ ಮಂತ್ರವನ್ನು ಬಿಟ್ಟುಬಿಡುವವರು ಭವಸಾಗರದಲ್ಲಿ ಮುಳುಗಿಹೋಗುತ್ತಾರೆ. ಇದನ್ನು ಗ್ರಹಿಸುವವರು ದುಃಖಗಳಿಂದ ಪಾರಾಗುತ್ತಾರೆ. ಜೀವಾತ್ಮರನ್ನು ದುಃಖದಿಂದ ದೂರವಿರುವ, ಸರ್ವ ಪಾಪಗಳನ್ನೂ ನಾಶಮಾಡುವ, ಮುಕ್ತಿಯನ್ನೀವ ಮಂತ್ರವು ಇದನ್ನು ಬಿಟ್ಟರೆ ಬೇರೆಯಿಲ್ಲ. ॥೧೧॥ ಅನೇಕ ಭವಾಂತರಗಳಲ್ಲಿ ಉತ್ಪನ್ನವಾದ ಶಾರೀರಕ ದುಃಖದಿಂದ–ಭವಸಾಗರದಿಂದ–ಭವ್ಯಜೀವರನ್ನು ಪಾರುಗಾಣಿಸುವ ಮಂತ್ರವು ಇದೇ. ನವಕಾರಮಂತ್ರವನ್ನು ಪಡೆಯದಿರುವವರೆಗೆ ಜೀವನು ಭವಸಾಗರದಿಂದ ಪಾರಾಗಲಾರ" ಎಂಬ ಅರ್ಥವನ್ನು ಸೂತ್ರದಲ್ಲಿ ಹೇಳಿದೆ. ಅಗ್ನಿ ಮೊದಲಾದ ಅಷ್ಟಮಹಾಭಯಗಳಲ್ಲಿ ನವಕಾರ ಮಂತ್ರದ ಹೊರತು ಯಾವುದೂ ಸಹಾಯ ಮಾಡಲಾರದು. ಮಹಾರತ್ನವಾದ ವೈಡೂರ್ಯ ಮಣಿಯು ದೊರೆತಂತೆ ಅಥವಾ ಶತ್ರುಗಳಿಂದ ಭಯವಿರುವಾಗ ಅಮೋಘಶಸ್ತ್ರವು ಸಿಕ್ಕಿದಂತೆ ಶ್ರುತ ಕೇವಲಿಯನ್ನು ಗ್ರಹಣಮಾಡಬೇಕು. ನವಕಾರಮಂತ್ರವೇ ದ್ವಾದಶಾಂಗಗಳ ರಹಸ್ಯವಾಗಿರುತ್ತದೆ. ಅದರ ಅರ್ಥ ಹೀಗಿದೆ. (ನಮೋ ಅರಿಹಂತಾಣಂ) ಎಲ್ಲಾ ತೀರ್ಥಂಕರರಿಗೆ ನಮಸ್ಕಾರ. (ನಮೋ ಸಿದ್ಧಾನಾಂ) ಜೈನ ಮತದ ಸಕಲ ಸಿದ್ಧಪುರುಷರಿಗೆ ನಮಸ್ಕಾರ. (ನಮೋ ಆಯರಿಯಾಣಂ) ಜೈನಮತದ ಎಲ್ಲ ಆಚಾರ್ಯರಿಗೆ ನಮಸ್ಕಾರ. (ನಮೋ ಜ್ಝಾಯಾಣಂ) ಜೈನಮತದ ಎಲ್ಲ ಉಪಾಧ್ಯಾಯರಿಗೆ ನಮಸ್ಕಾರ. (ನಮೋಲೋಏ ಸಬ್ಬ ಸಾಹೂಣಂ) ಜೈನಮತದ ಎಲ್ಲ ಸಾಧುಗಳಿಗೆ ನಮಸ್ಕಾರ. ಮಂತ್ರದಲ್ಲಿ ಜೈನವೆಂಬ ಪದವೇನೂ ಇಲ್ಲದಿದ್ದರೂ ಅವರ ಅನೇಕ ಗ್ರಂಥಗಳಲ್ಲಿ ಜೈನಮತದವರ ಹೊರತು ಇನ್ನಾರಿಗೂ ನಮಸ್ಕಾರ ಮಾಡಬಾರದೆಂದು ಬರೆದಿರುವುದರಿಂದ ಈ ಅರ್ಥವೇ ಸರಿಯಿದೆ. ತತ್ವವಿವೇಕ ಪುಟ ೧೬೯–ಕಲ್ಲುಕಟ್ಟಿಗೆ ಮೊದಲಾದುವುಗಳನ್ನು ದೇವರೆಂಬುದಾಗಿ ತಿಳಿದು ಪೂಜಿಸುವವರು ಒಳ್ಳೆಯ ಫಲವನ್ನು ಪಡೆಯುತ್ತಾರೆ.

ಸಮೀಕ್ಷಕ :—ಹಾಗಿದ್ದರೆ ಎಲ್ಲರೂ ದರ್ಶನಗೈದು ಸುಖರೂಪವಾದ ಫಲವನ್ನೇಕೆ ಪಡೆಯುವುದಿಲ್ಲ? ರತ್ನಸಾರಭಾಗ ಪುಟ ೧೦—ಪಾರ್ಶ್ವನಾಥನ ಮೂರ್ತಿಯ ದರ್ಶನಮಾಡುವುದರಿಂದ ಪಾಪವು ನಾಶವಾಗುತ್ತದೆ. ಕಲ್ಪಭಾಷ್ಯ ಪುಟ ೫೧ ರ ಒಂದೂಕಾಲು ಲಕ್ಷ ಮಂದಿರಗಳ ಜೀರ್ಣೋದ್ಧಾರ ಮಾಡಿದರು . . . . ಈ ಮೊದಲಾಗಿ ಬರೆದಿದೆ. ಮೂರ್ತಿಪೂಜೆಯ ವಿಷಯದಲ್ಲಿ ಇವರು ಎಷ್ಟೋ ಬರೆದಿದ್ದಾರೆ. ಇದರಿಂದಲೇ ಮೂರ್ತಿಪೂಜೆಯ ಬುಡವು ಜೈನಮತವೆಂಬುದನ್ನು ತಿಳಿಯಬಹುದು. ಇನ್ನು ಜೈನಸಾಧುಗಳ ಲೀಲೆ ನೋಡಿರಿ --

(ವಿವೇಕಸಾರ ಪುಟ ೨೭೮) ಜೈನಮತದ ಸಾಧುವೊಬ್ಬನು ಕೋಶಾ ಎಂಬುವ ವೇಶ್ಯೆಯೊಬ್ಬಳೊಡನೆ ಭೋಗಪಟ್ಟು ಅನಂತರ ತ್ಯಾಗಿಯಾಗಿ ಸ್ವರ್ಗಲೋಕಕ್ಕೆ ತೆರಳಿದನು. (ವಿವೇಕಸಾರ ಪು. ೧೦) ಅರ್ಣಕಮುನಿಯು ಸದಾಚಾರದಿಂದ ಪತಿತನಾಗಿ ದತ್ತ ಎಂಬ ಶ್ರೇಷ್ಠಿಯ ಮನೆಯಲ್ಲಿ ಅನೇಕ ವರ್ಷಗಳವರೆಗೆ ವಿಷಯಭೋಗಗಳನ್ನನುಭವಿಸಿ ಅನಂತರ ದೇವಲೋಕಕ್ಕೆ ಹೋದನು. ಶ್ರೀ ಕೃಷ್ಣನ ಮಗನಾದ ಘಂಢಣಮುನಿಯನ್ನು ಸಾಂಬಲಿಯಾ ಎಂಬವನು ಎತ್ತಿಕೊಂಡು ಹೋದನು; ಕಡೆಗೆ ದೇವತ್ವವನ್ನು ಪಡೆದನು. (ವಿವೇಕಸಾರ ಪು. ೧೫೬) " ಜೈನಮತದ ಸಾಧುವು ಲಿಂಗಧಾರಿ—ಅಂದರೆ ಕೇವಲ ವೇಷಧಾರಿಯಾಗಿದ್ದರೂ ಅವನನ್ನು ಶ್ರಾವಕರು ಸತ್ಕರಿಸಬೇಕು. ಶುದ್ಧ ಚರಿತ್ರರಾಗಿರಲಿ, ಅಶುದ್ಧಚರಿತ್ರರಾಗಿರಲಿ ಸಾಧುಗಳೆಲ್ಲರೂ ಪೂಜನೀಯರು. (ವಿವೇಕಸಾರ, ಪುಟ ೧೬೮) ಜೈನಮತದ ಸಾಧುಗಳು ಆಚಾರಹೀನರಾಗಿದ್ದರೂ ಅನ್ಯಮತದ ಸಾಧುಗಳಿಗಿಂತ ಶ್ರೇಷ್ಠರಾಗಿರುವರು " (ವಿವೇಕಸಾರ ಪುಟ ೧೭೧) ಜೈನಮತದ ಸಾಧುಗಳು ಭ್ರಷ್ಟಾಚಾರರು ಮತ್ತು ಚರಿತ್ರರಹಿತರೆಂಬುದಾಗಿ ಕಂಡುಬಂದರೂ ಅವರ ಸೇವೆ ಮಾಡಬೇಕು. (ವಿವೇಕಸಾರ ಪು. ೨೧೬) " ಕಳ್ಳನೊಬ್ಬನು ಐದು ಹಿಡಿ ಕೂದಲುಗಳನ್ನು ಕಿತ್ತುಹಾಕಿ ಚಾರಿತ್ರವನ್ನು ಸ್ವೀಕರಿಸಿದನು. ಬಹಳ ಕಷ್ಟವನ್ನನುಭವಿಸಿ ಪಶ್ಚಾತ್ತಾಪಪಟ್ಟನು. ಆರನೆಯ ತಿಂಗಳಲ್ಲಿ ಅವನು ಕೇವಲ ಜ್ಞಾನವನ್ನು ಪಡೆದು ಸಿದ್ಧಪುರುಷನಾದನು "

ಸಮಿಾಕ್ಷಕ—ಇವರ ಸಾಧುಗಳ ಮತ್ತು ಗೃಹಸ್ಥರ ಲೀಲೆಯನ್ನು ನೋಡಿರಿ. ಇವರ ಮತದಲ್ಲಿ ಬಹಳ ಕುಕರ್ಮ ಮಾಡುವ ಸಾಧುವೂ ಸಹ ಸದ್ಗತಿಗೆ ಹೋದನು.

(ವಿವೇಕಸಾರ ಪು. ೧೦೬) ಶ್ರೀ ಕೃಷ್ಣನು ಮೂರನೆಯ ನರಕಕ್ಕೆ ತೆರಳಿದನು. (ವಿವೇಕಸಾರ ಪು. ೧೪೫) ಧನ್ವಂತರಿಯು ನರಕಕ್ಕೆ ಹೋದನು. (ವಿವೇಕಸಾರ ಪು. ೪೮) ಎಷ್ಟೋ ಜೋಗಿಗಳು, ಜಂಗಮರು, ಮುಲ್ಲಾಗಳು, ಕಾಜಿಗಳು ಅಜ್ಞಾನದಿಂದ ತಪಸ್ಸನ್ನು ಮಾಡಿ ಕಷ್ಟವನ್ನನುಭವಿಸಿಯೂ ಕುಗತಿಯನ್ನು ಹೊಂದುತ್ತಾರೆ. (ರತ್ನಸಾರಭಾಗ ಪುಟ ೧೬೧) ಒಂಭತ್ತು ವಾಸುದೇವರು ಅಂದರೆ ತ್ರಿಪೃಷ್ಠವಾಸುದೇವ, ದ್ವಿಪೃಷ್ಠವಾಸುದೇವ, ಸ್ವಯಂಭೂವಾಸುದೇವ, ಪುರುಷೋತ್ತಮವಾಸುದೇವ, ಸಿಂಹಪುರುಷ ವಾಸುದೇವ, ಪುರುಷ ಪುಂಡರೀಕ ವಾಸುದೇವ, ದತ್ತ ವಾಸುದೇವ, ಲಕ್ಷ್ಮಣ ವಾಸುದೇವ ಮತ್ತು ಶ್ರೀಕೃಷ್ಣ ವಾಸುದೇವ ಇವರೆಲ್ಲರೂ ಹನ್ನೊಂದನೆ, ಹನ್ನೆರಡನೆ, ಹದಿನಾಲ್ಕನೆ, ಹದಿನೆಂಟನೆ, ಇಪ್ಪತ್ತನೆ ಮತ್ತು ಇಪ್ಪತ್ತೆರಡನೆ ತೀರ್ಥಂಕರರ ಸಮಯದಲ್ಲಿ ನರಕಕ್ಕೆ ಹೋದರು. ಮತ್ತು ಅಶ್ವಗ್ರೀವ ಪ್ರತಿ ವಾಸುದೇವ, ತಾರಕಪ್ರತಿ ವಾಸುದೇವ, ಮೋದಕಪ್ರತಿ ವಾಸುದೇವ, ಮಧುಪ್ರತಿ ವಾಸುದೇವ, ನಿಶುಂಭಪ್ರತಿ ವಾಸುದೇವ, ಬಲೀಪ್ರತಿ ವಾಸುದೇವ, ಪ್ರಹ್ಲಾದಪ್ರತಿ ವಾಸುದೇವ, ರಾವಣಪ್ರತಿ ವಾಸುದೇವ ಮತ್ತು ಜರಾಸಂಧಪ್ರತಿ ವಾಸುದೇವ ಎಂಬ ಒಂಭತ್ತುಮಂದಿ ಪ್ರತಿ ವಾಸುದೇವರೆಲ್ಲರೂ ನರಕಗಾಮಿಗಳಾದರು. ಋಷಭದೇವನಿಂದ ಹಿಡಿದು ಮಹಾವೀರನವರೆಗಿನ ೨೪ ತೀರ್ಥಂಕರರೆಲ್ಲರೂ ಮೋಕ್ಷವನ್ನು ಪಡೆದರೆಂದು ಕಲ್ಪಭಾಷ್ಯದಲ್ಲಿ ಬರೆದಿದೆ.

ಸಮಿಾಕ್ಷಕ—ಭಲೆ! ಯಾವನಾದರೂ ಬುದ್ಧಿವಂತನಾದ ಮಾನವನು ವಿಚಾರಮಾಡಲಿ. ಇವರ ಬಹುಮುಟ್ಟಿನ ವೇಶ್ಯಾಗಾಮಿಗಳೂ, ಪರಸ್ತ್ರೀಗಾಮಿಗಳೂ, ಕಳ್ಳರೂ, ಮೊದಲಾಗಿದ್ದ ಜೈನಮತದ ಸಾಧುಗಳು, ಗೃಹಸ್ಥರು ಮತ್ತು ತೀರ್ಥಂಕರರು ಸ್ವರ್ಗವನ್ನೂ ಮುಕ್ತಿಯನ್ನೂ ಪಡೆದರಂತೆ. ಶ್ರೀಕೃಷ್ಣ ಮೊದಲಾದ ಮಹಾಧಾರ್ಮಿಕರೂ ಮಹಾತ್ಮರೂ ಆಗಿದ್ದವರೆಲ್ಲ ನರಕಕ್ಕೂ ಹೋದರಂತೆ. ಇದೆಂತಹ

ಹೊಲಸು ಮಾತು? ಯೋಚಿಸಿ ನೋಡುವುದಾದರೆ ಸಜ್ಜನರು ಜೈನರ ಸಂಸರ್ಗಮಾಡುವುದಾಗಲೀ ಅಥವಾ ಅವರನ್ನು ನೋಡುವುದಾಗಲೀ ಕೆಟ್ಟದ್ದೆಂದು ತೋರುತ್ತದೆ. ಇವರ ಸಂಸರ್ಗ ಮಾಡುವವನ ಹೃದಯದಲ್ಲಿಯೂ ಇಂತಹ ಸುಳ್ಳು ಮಾತುಗಳು ಮನೆಮಾಡಿಕೊಳ್ಳುತ್ತವೆ. ಈ ಮಹಾ ಹಠಮಾರಿಗಳೂ ದುರಾಗ್ರಹಿಗಳೂ ಆದವರ ಸಂಸರ್ಗದಿಂದ ದುರ್ಗುಣಗಳ ಹೊರತು ಬೇರೇನೂ ಲಾಭವಾಗಲಿಕ್ಕಿಲ್ಲ. ಜೈನರಲ್ಲಿರುವ ಉತ್ತಮ ಜನರೊಡನೆ ಸತ್ಸಂಗಾದಿಗಳನ್ನು ಮಾಡುವುದರಲ್ಲಾದರೊ, ಯಾವ ದೋಷವೂ ಇಲ್ಲ.

ವಿವೇಕಸಾರ ಪು ೫೫—ಗಂಗಾದಿ ತೀರ್ಥಗಳ ಮತ್ತು ಕಾಶಿ ಮೊದಲಾದ ಕ್ಷೇತ್ರಗಳ ಸೇವನದಿಂದ ಯಾವ ಪರಮಾರ್ಥವೂ ಸಿದ್ಧಿಸದು. ನಮ್ಮ ಗಿರನಾರ, ಪಾಲೀಟಾಣಾ ಮತ್ತು ಆಬೂ ಮೊದಲಾದ ತೀರ್ಥಕ್ಷೇತ್ರಗಳು ಮುಕ್ತಿಯವರೆಗೂ ಕೊಡುತ್ತವೆ.

ಸಮೀಕ್ಷಕ :—ಇಲ್ಲಿ ಸ್ವಲ್ಪ ಯೋಚನೆಮಾಡಬೇಕು. ಶೈವ, ವೈಷ್ಣವಾದಿಗಳ ತೀರ್ಥ ಮತ್ತು ಕ್ಷೇತ್ರಗಳಂತೆ ಜೈನರ ತೀರ್ಥಕ್ಷೇತ್ರಗಳೂ ಜಲ, ಸ್ಥಳ ಮತ್ತು ಜಡರೂಪವಾಗಿರುವುದರಿಂದ ಇವುಗಳಲ್ಲಿ ಒಂದನ್ನು ನಿಂದಿಸುವುದೂ, ಇನ್ನೊಂದನ್ನು ಹೊಗಳುವುದೂ ಮೂರ್ಖತನದ ಕೆಲಸವಾಗಿರುತ್ತದೆ.

ಜೈನರ ಮುಕ್ತಿವರ್ಣನೆ

(ರತ್ನಸಾರ ಭಾ. ಪುಟ ೨೩) ಮಹಾವೀರ ತೀರ್ಥಂಕರನು ಗೌತಮನಿಗೆ ಹೇಳುತ್ತಿದ್ದಾನೆ. ಊರ್ಧ್ವಲೋಕದಲ್ಲೊಂದು ಸಿದ್ಧಶಿಲಾಸ್ಥಾನವಿದೆ. ಅದು ಸ್ವರ್ಗಪುರಿಯ ಮೇಲೆ ೫೫ ಲಕ್ಷ ಯೋಜನ ಉದ್ದವೂ, ಅಷ್ಟೇ ಅಗಲವೂ ಆಗಿದ್ದು ಎರಡು ಯೋಜನ ದಪ್ಪವಾಗಿದೆ. ಮುತ್ತಿನ ಬಿಳೀಹಾರ ಅಥವಾ ಹಸುವಿನ ಹಾಲಿಗಿಂತಲೂ ಬಿಳಿಯಾಗಿದೆ. ಚಿನ್ನದಂತೆ ಪ್ರಕಾಶಮಾನವಾಗಿದ್ದು ಸ್ಫಟಿಕಕ್ಕಿಂತಲೂ ನಿರ್ಮಲವಾಗಿದೆ. ಈ ಸಿದ್ಧಶಿಲೆಯು ಹದಿನಾಲ್ಕನೆಯ ಲೋಕದ ಶಿಖರದಲ್ಲಿದೆ. ಆ ಸಿದ್ಧಶಿಲೆಯ ಮೇಲೆ ಶಿವಪುರಧಾಮವಿದೆ. ಅದರಲ್ಲಿಯೂ ಮುಕ್ತಾತ್ಮರು ತಳಮುಟ್ಟದೆ ನಿವಾಸಿಸುತ್ತಾರೆ. ಅಲ್ಲಿ ಜನ್ಮ,

ಮರಣ ಮೊದಲಾದ ಯಾವ ದೋಷಗಳೂ ಇಲ್ಲ. ಅವರು ಯಾವಾಗಲೂ ಆನಂದವನ್ನು ಪಯೋಗಿಸುತ್ತಾರೆ. ಮರಳಿ ಜನ್ಮ ಮರಣಗಳಿಗೆ ಬರುವುದಿಲ್ಲ. ಕರ್ಮಗಳಿಂದ ಮುಕ್ತರಾಗುತ್ತಾರೆ. ಇದು ಜೈನರ ಮುಕ್ತಿ.

ಸಮೀಕ್ಷಕ--ಈಗ ನೋಡಿರಿ! ವೈಕುಂಠ, ಕೈಲಾಸ, ಗೋಲೋಕ, ಶ್ರೀಪುರ ಈ ಮೊದಲಾದವುಗಳನ್ನು ನಂಬುವ ಪೌರಾಣಿಕರ, ನಾಲ್ಕನೆಯ ಆಕಾಶವನ್ನು ನಂಬುವ ಕ್ರೈಸ್ತರ, ಮತ್ತು ಏಳನೇ ಆಕಾಶವನ್ನು ನಂಬುವ ಮುಸಲ್ಮಾನರ ಮತಗಳಲ್ಲಿ ಮುಕ್ತಿಯ ಸ್ಥಾನವನ್ನು ಹೇಳಿರುವಂತೆಯೇ ಜೈನರ ಸಿದ್ಧಶಿಲೆ ಮತ್ತು ಶಿವಪುರಗಳಲ್ಲಿ ಇವೆ. ಯಾವುದನ್ನು ಜೈನರು ಮೇಲೆ ಇದೆಯೆಂದು ನಂಬುತ್ತಾರೋ ಅದನ್ನೇ ನಮಗಿಂತ ಕೆಳಗಿನ ಭೂಗೋಳದಲ್ಲಿರುವವರು, ಅವರಿಗೆ ಅದು ಕೆಳಗಿರುವುದರಿಂದ ಕೆಳಗಿದೆಯೆಂದು ತಮ್ಮ ದೃಷ್ಟಿಯಿಂದ ತಿಳಿಯುತ್ತಾರೆ. ಮೇಲುಕೀಳೆಂಬುದು ವ್ಯವಸ್ಥಿತವಾದ ಪದಾರ್ಥವಲ್ಲ. ಆರ್ಯಾವರ್ತನಿವಾಸಿಗಳಾದ ಜೈನರು ಯಾವುದನ್ನು ಮೇಲಿದೆಯೆಂದು ಹೇಳುತ್ತಾರೋ ಅದನ್ನೇ ಅಮೇರಿಕಾದವರು ಕೆಳಗಿದೆಯೆಂದು ಭಾವಿಸುತ್ತಾರೆ ಆರ್ಯಾವರ್ತೀಯರು ಕೆಳಗಿದೆಯೆಂದು ಹೇಳುವುದನ್ನೇ ಅಮೇರಿಕದವರು ಮೇಲಿದೆಯೆಂದು ಹೇಳುತ್ತಾರೆ. ಆ ಶಿಲೆಯು ೪೫ ಲಕ್ಷಗಳ ಎರಡರಷ್ಟು ೯೦ ಲಕ್ಷ ಯೋಜನಗಳಷ್ಟಿದ್ದರೂ ಮುಕ್ತಾತ್ಮರು ಬಂಧನದಲ್ಲಿದ್ದಾರೆ. ಏಕೆಂದರೆ ಆ ಶಿಲೆಯ ಶಿವಪುರದ ಹೊರಗೆ ಬರುವುದರಿಂದ ಅವರ ಮುಕ್ತಿಯು ತೊಲಗಿಹೋಗುತ್ತದೊ ಏನೊ !! ಸದಾ ಅಲ್ಲಿರಲು ಪ್ರೀತಿಯೂ ಹೊರಗೆ ಹೋಗಲು ಅಪ್ರೀತಿಯೂ ಇರಬಹುದು. ಯಾವನಿಗೆ ತಡೆ, ಪ್ರೀತಿ—ಅಪ್ರೀತಿಗಳಿವೆಯೋ ಅದನ್ನು ಮುಕ್ತಿಯೆಂದು ಹೇಗೆ ಹೇಳಲಾದೀತು? ಮುಕ್ತಿಯನ್ನು ನವನು ಸಮುಲ್ಲಾಸದಲ್ಲಿ ಬರೆದು ಬಂದಂತೆ ತಿಳಿಯುವುದೇ ಸರಿಯಾಗಿರುತ್ತದೆ. ಈ ಜೈನರ ಮುಕ್ತಿಯೂ ಒಂದು ಪ್ರಕಾರದ ಬಂಧನವೇ ಆಗಿರುತ್ತದೆ. ಮುಕ್ತಿ ವಿಷಯದಲ್ಲಿ ಜೈನರೂ ಭ್ರಮೆಗೆ ಸಿಕ್ಕಿದ್ದಾರೆ.

---

* ಉತ್ತಮನಾಗಿದ್ದವನು ಇಂತಹ ಜೈನಮತದಲ್ಲಿಂದಿಗೂ ಇರಲಾರನು.

ವೇದಗಳ ಯಥಾರ್ಥವಾದ. ಅರ್ಥವನ್ನು ತಿಳಿದುಕೊಳ್ಳದೆ ಮುಕ್ತಿಯ ಸ್ವರೂಪವನ್ನೆಂದಿಗೂ ತಿಳಿದುಕೊಳ್ಳಲು ಸಾಧ್ಯವಿಲ್ಲ.

ಇವರ ಅಸಂಭವ ಮಾತುಗಳನ್ನು ಇನ್ನೂ ಸ್ವಲ್ಪ ಕೇಳಿರಿ. (ವಿವೇಕಸಾರ ಪು. ೭೮) ಒಂದು ಕೋಟಿ ೬೦ ಲಕ್ಷ ಕಲಶಗಳಿಂದ ಮಹಾವೀರನಿಗೆ ಜನ್ಮಸಮಯದಲ್ಲಿ ಸ್ನಾನಮಾಡಿಸಿದರು. (ವಿವೇಕ ಸಾರ ಪು. ೧೩೬) ದಶಾರ್ಣರಾಜನು ಮಹಾವೀರನ ದರ್ಶನಕ್ಕಾಗಿ ಹೋಗಿ ಅಲ್ಲಿ ಸ್ವಲ್ಪ ಅಹಂಕಾರಪಟ್ಟನು. ಅದರ ನಿವಾರಣೆಗಾಗಿ ೧೬,೭೭,೭೨,೧೬,೦೦೦ ಇಂದ್ರನ ಸ್ವರೂಪಗಳೂ, ಮತ್ತು ೧೩,೩೭,೦೫,೭೨,೪೦,೦೦,೦೦,೦೦೦ ಇಂದ್ರಾಣಿಯರೂ ಅಲ್ಲಿಗೆ ಬಂದಿದ್ದರು. ಅವರನ್ನು ನೋಡಿ ರಾಜನು ಆಶ್ಚರ್ಯಪಟ್ಟನು.

ಸಮೀಕ್ಷಕ—ಅಷ್ಟು ಇಂದ್ರರೂ, ಇಂದ್ರಾಣಿಯರೂ ನಿಂತು ಕೊಳ್ಳುವುದಕ್ಕೆ ಇಂತಹ ಎಷ್ಟು ಭೂಗೋಳಗಳು ಬೇಕಾಗುತ್ತವೆಂಬುದನ್ನೀಗ ವಿಚಾರಮಾಡಬೇಕು.

ಶ್ರಾದ್ಧದಿನ ಕತೃ ಆತ್ಮಸಿಂದಾಭಾವನಾ, ಪುಟ ೩೧ ರಲ್ಲಿ ಭಾವಿಯನ್ನೂ, ಕೆರೆಯನ್ನೂ ತೋಡಬಾರದೆಂದು ಬರೆದಿದೆ.

ಸಮೀಕ್ಷಕ—ಎಲ್ಲರೂ ಜೈನಮತಸ್ಥರಾಗಿ ಭಾವಿ, ಕೆರೆ, ಮೊದಲಾದುವುಗಳನ್ನಾರೂ ತೋಡದಿದ್ದರೆ ಜನರೆಲ್ಲ ನೀರನ್ನೆಲ್ಲಿಂದ ಕುಡಿಯಬೇಕು?

ಪ್ರಶ್ನೆ :—ಕೆರೆ ಮೊದಲಾದುವುಗಳನ್ನು ತೋಡುವುದರಿಂದ ಜೀವಿಗಳು ಅವುಗಳಲ್ಲಿ ಬಿದ್ದು ತೋಡಿದವನಿಗೆ ಪಾಪ ತಟ್ಟುತ್ತದಾದ್ದರಿಂದ ಜೈನರಾದ ನಾವು ಆ ಕೆಲಸವನ್ನು ಮಾಡುವುದಿಲ್ಲ.

ಉತ್ತರ :—ನಿಮ್ಮ ಬುದ್ಧಿಯೇಕೆ ಹಾಳಾಗಿಹೋಗಿದೆ? ಅತಿ ಕ್ಷುದ್ರ ಜಂತುಗಳು ಸಾಯುವುದರಿಂದ ಪಾಪ ಬರುವುದೆಂದು ಹೇಳಿದರೆ ದೊಡ್ಡ ದೊಡ್ಡ ಹಸು ಮೊದಲಾದ ಪಶುಗಳೂ, ಮನುಷ್ಯಾದಿ ಪ್ರಾಣಿಗಳೂ ನೀರು ಕುಡಿಯುವುದರಿಂದ ಪುಣ್ಯವಾಗುತ್ತದೆಂದು ನಂಬುವುದಿಲ್ಲವೇಕೆ?

(ತತ್ವವಿವೇಕ ಪು. ೧೯೬) ಈ ನಗರದಲ್ಲಿ ನಂದಮಣಿಕಾರನೆಂಬ ಸಾಹುಕಾರನೊಬ್ಬನು ಬಾವಡಿಯನ್ನು ತೋಡಿದ್ದರಿಂದ ಧರ್ಮಭ್ರಷ್ಟನಾಗಿ ಅವನಿಗೆ ಹದಿನಾರು ಮಹಾರೋಗಗಳಾದುವು. ಸತ್ತುಹೋಗಿ ಆ ಬಾವಡಿಯಲ್ಲಿಯೇ ಕಪ್ಪೆಯಾಗಿ ಹುಟ್ಟಿದನು. ಮಹಾವೀರನ ದರ್ಶನದಿಂದ ಅವನಿಗೆ ಜಾತಿಸ್ಮರಣೆಯಾಯಿತು. ಮಹಾವೀರನು ಹೇಳುತ್ತಾನೆ—ನಾನು ಬರುವುದನ್ನು ಕೇಳಿ ಅವನು ಪೂರ್ವಜನ್ಮದ ಧರ್ಮಾಚಾರ್ಯನೆಂದು ನನ್ನನ್ನು ತಿಳಿದು ವಂದನೆಗಾಗಿ ಬರತೊಡಗಿದನು. ಮಾರ್ಗದಲ್ಲಿ ಶ್ರೇಣಿಕನ ಕುದುರೆಯ ಕಾಲಿನಡಿಯಲ್ಲಿ ಬಿದ್ದು ಗತಾಸುವಾಗಿ ಶುಭಧ್ಯಾನದ ಯೋಗದಿಂದ ದರ್ದುರಾಂಕನೆಂಬ ಮಹರ್ದ್ಧಿಕ ದೇವತೆಯಾದನು. ಅವಧಿಜ್ಞಾನದಿಂದ ನಾನು ಇಲ್ಲಿ ಬಂದಿರುವೆನೆಂದು ತಿಳಿದು ವಂದನಾಪೂರ್ವಕವಾಗಿ ಋದ್ಧಿಯನ್ನು ತೋರಿಸಿ ಹೋದನು.

ಸವಿಾಕ್ಷಕ—ಈ ಎಲ್ಲ ವಿದ್ಯಾವಿರುದ್ಧವೂ, ಅಸಂಭವವೂ, ಆದ ಸುಳ್ಳು ಮಾತುಗಳನ್ನಾಡುವ ಮಹಾ ವೀರನನ್ನು ಸರ್ವೋತ್ತಮನೆಂದು ತಿಳಿಯುವುದು ಮಹಾ ಭ್ರಾಂತಿಯ ವಿಷಯವಾಗಿರುತ್ತದೆ.

ಶ್ರಾದ್ಧದಿನಕೃತ್ಯ ಪುಟ ೩೬ ರಲ್ಲಿ ಮೃತಕನ ವಸ್ತ್ರವನ್ನು ಸಾಧುವು ತೆಗೆದುಕೊಳ್ಳಬೇಕೆಂದು ಬರೆದಿದೆ.

ಸವಿಾಕ್ಷಕ—ನೋಡಿರಿ! ಇವರ ಸಾಧುಗಳೂ ಮಹಾ ಬ್ರಾಹ್ಮಣ (ಸ್ಮಶಾನ ಪುರೋಹಿತ) ನಂತಾದರು. ವಸ್ತ್ರಗಳನ್ನೇನೋ ಸಾಧುವು ತೆಗೆದುಕೊಳ್ಳಬೇಕು. ಆದರೆ ಅವನ ಆಭರಣಗಳನ್ನು ಯಾರು ತೆಗೆದುಕೊಳ್ಳಬೇಕು? ಅವು ಬೆಲೆಬಾಳುವವಾದುವರಿಂದ ಮನೆಯಲ್ಲಿಟ್ಟುಕೊಳ್ಳುವರಾದರೆ ಅವರು ಯಾರಾದರು?

ರತ್ನಸಾರ ಪು. ೧೦೫—ಹುರಿಯುವುದು, ಕುಟ್ಟುವುದು, ಬೀಸುವುದು ಅನ್ನವನ್ನು ಬೇಯಿಸುವುದು ಮೊದಲಾದ ಕಾರ್ಯಗಳಿಂದ ಪಾಪ ತಟ್ಟುತ್ತದೆ.

ಸವಿಾಕ್ಷಕ—ಇವರ ವಿದ್ಯಾಹೀನತೆಯನ್ನು ನೋಡಿರಿ! ಈ ಎಲ್ಲಾ ಕಾರ್ಯಗಳನ್ನು ಮಾಡದಿದ್ದರೆ ಮನುಷ್ಯಾದಿ ಪ್ರಾಣಿಗಳು

ಜೀವಿಸುವುದಾದರೂ ಹೇಗೆ? ಜೈನರೂ ಪೀಡೆಗೊಳಪಟ್ಟು ನಾಯ ಬೇಕಾದೀತು.

ರತ್ನಸಾರ ಪುಟ ೧೦೪—ತೋಟವನ್ನು ಮಾಡುವುದರಿಂದ ತೋಟಗಾರನಿಗೆ ಒಂದು ಲಕ್ಷ ಪಾಪವು ತಾಗುತ್ತದೆ.

ಸಮಾಕ್ಷಕ—ತೋಟಗಾರನಿಗೆ ಲಕ್ಷ ಪಾಪ ತಾಗುವುದಾದರೆ ಅನೇಕ ಜೀವಿಗಳು ಪತ್ರ, ಫಲ, ಪುಷ್ಪ ಮತ್ತು ನೆರಳಿನಿಂದ ಆನಂದಿತ ರಾಗುವುದರಿಂದ ಕೋಟ್ಯಂತರ ಪಾಲು ಪುಣ್ಯವೂ ಆಗುತ್ತದೆ. ಈ ವಿಷಯವನ್ನು ನೋಡದಿರುವುದು ಅದೆಷ್ಟರಮಟ್ಟಿನ ಅಜ್ಞಾನವು?

ತತ್ವವಿವೇಕ ಪು. ೨೦೨—ಒಂದು ದಿವಸ ಲಬ್ಧಿ ಎಂಬ ಸಾಧುವು ತಪ್ಪಿ ವೇಶ್ಯೆಯ ಮನೆಗೆ ಹೋಗಿ ಧರ್ಮದ ಭಿಕ್ಷೆಯನ್ನು ಬೇಡಿದನು. 'ಇಲ್ಲಿ ಧರ್ಮದ ಮಾತಿಲ್ಲ. ಅರ್ಥದ ಮಾತಿರುವುದು' ಎಂದಳು. ಆಗ ಲಬ್ಧಿಯು ಹನ್ನೆರಡೂವರೆಲಕ್ಷ ನಾಣ್ಯಗಳನ್ನು ಅವಳ ಮನೆಯಲ್ಲಿ ಮಳಿಗರೆಯಿಸಿದನು.

ಸಮಾಕ್ಷಕ—ಈ ಮಾತನ್ನು ಭ್ರಷ್ಟಬುದ್ಧಿಯ ಹೊರತು ಯಾರು ತಾನೆ ನಿಜವೆಂದು ನಂಬುವರು?

ರತ್ನಸಾರಭಾಗ ಪುಟ ೬೭ ರಲ್ಲಿ 'ಪಾಷಾಣದ ಮೂರ್ತಿಯೊಂದು ಕುದುರೆಯನ್ನೇರಿ ಸ್ಮರಿಸಿದಲ್ಲೆಲ್ಲಾ ಬಂದು ರಕ್ಷಿಸುತ್ತದೆ ಎಂದು ಬರೆದಿದೆ.

ಸಮಾಕ್ಷಕ—ಹೇಳಿ ಜೈನರೆ! ಈ ಕಾಲದಲ್ಲಿ ನಿಮ್ಮಲ್ಲಿ ಕಳ್ಳತನ, ಸುಲಿಗೆ ಮೊದಲಾದುವುಗಳೂ ನಿಮಗೆ ಶತ್ರುಗಳಿಂದ ಭಯವೂ ಆಗುತ್ತ ಲಿರುವಾಗ ಅದನ್ನು ಸ್ಮರಿಸಿ ನೀವು ತಮ್ಮ ರಕ್ಷಣೆಯನ್ನೇಕೆ ಮಾಡಿ ಕೊಳ್ಳುವುದಿಲ್ಲ? ಸಿಕ್ಕಿದೆಡೆ ಪೋಲೀಸರೇ ಮೊದಲಾದ ರಾಜಾಶ್ರಯ ಕ್ಕಾಗಿ ಏಕೆ ಅಲೆದಾಡುತ್ತೀರಿ?

ಇವರ ಸಾಧುಗಳ ಲಕ್ಷಣಗಳು—

ಸರಜೋಹರಣಾ ಭೈಕ್ಷಭುಜೋ ಲುಂಚಿತಮೂರ್ದ್ಧಜಾಃ।
ಶ್ವೇತಾಂಬರಾಃ ಕ್ಷಮಾಶೀಲಾ ನಿಃಸಂಗಾ ಜೈನಸಾಧವಃ ॥೧॥

ಲುಂಚಿತಾ ಪಿಚ್ಛಿಕಾಹಸ್ತಾ ಪಾಣಿಪಾತ್ರಾ ದಿಗಂಬರಾಃ।
ಊರ್ಧ್ವಾಸಿನೋ ಗೃಹೇ ದಾತುರ್ದ್ವಿತೀಯಾಃ ಸ್ಯುರ್ಜಿನರ್ಷಯಃ ॥೨॥

ಭುಂಕ್ತೇ ನ ಕೇವಲಂ ನ ಸ್ತ್ರೀ ಮೋಕ್ಷಮೇತಿ ದಿಗಂಬರಃ।
ಪ್ರಾಹುರೇಷಾವಯಂ ಭೇದೋ ಮಹಾನ್ ಶ್ವೇತಾಂಬರೈಃ ಸಹ ॥೩॥

ಜೈನ ಸಾಧುಗಳ ಲಕ್ಷಣಗಳನ್ನು ಜಿನದತ್ತಸೂರಿಯು ಈ ಶ್ಲೋಕಗಳಿಂದ ಹೇಳಿದ್ದಾನೆ. (ಸರಜೋಹರಣಾ) ಚಾಮರವನ್ನು ಹಿಡಿಯುವುದು. ಭಿಕ್ಷೆಬೇಡಿ ತಿನ್ನುವುದು, ತಲೆಗೂದಲುಗಳನ್ನು ಕಿತ್ತುಹಾಕುವುದು. ಬಿಳಿಬಟ್ಟೆಯನ್ನುಡುವುದು, ಕ್ಷಮಾಶೀಲನಾಗಿರುವುದು, ಯಾರ ಸಂಸರ್ಗವನ್ನೂ ಮಾಡದಿರುವುದು. ಇದೆಲ್ಲ ಯತಿಗಳಿಗಿಸುವ ಶ್ವೇತಾಂಬರ ಜೈನರ ಸಾಧುಗಳ ಲಕ್ಷಣವು ॥೧॥ ವಸ್ತ್ರವನ್ನುಡದಿರುವುದು. ತಲೆಗೂದಲುಗಳನ್ನು ಕಿತ್ತುಹಾಕುವುದು ಪಿಚ್ಛಿಕಾ ಅಂದರೆ ಉಣ್ಣೆಯ ನೂಲಿನ ಒಂದು ಪೊರಕೆ (ಕಸಬರಿಕೆ) ಯನ್ನು ಕಸ ಗುಡಿಸುವುದಕ್ಕಾಗಿ ಕಂಕುಳಲ್ಲಿ ಹಿಡಿದುಕೊಳ್ಳುವುದು, ಯಾರಾದರೂ ಭಿಕ್ಷೆಯನ್ನಿತ್ತರೆ ಕೈಯಲ್ಲಿ ತೆಗೆದುಕೊಂಡು ತಿನ್ನುವುದು. ಇದು ದಿಗಂಬರಸಾಧುಗಳ ಪೈಕಿ ಮೊದಲನೆಯವರ ಲಕ್ಷಣವು. ಭಿಕ್ಷೆಯನ್ನೀಯುವ ಗೃಹಸ್ಥನು ಉಂಡ ಅನಂತರ ಊಟಮಾಡುವವರು, ಜಿನರ್ಷಿಯೆಂದರೆ ಮೂರನೆಯ ವಿಧದ ಸಾಧುಗಳಾಗಿರುತ್ತಾರೆ. ॥೨॥ ದಿಗಂಬರರಿಗೂ ಶ್ವೇತಾಂಬರರಿಗೂ ಭೇದವಿಷ್ಟೇ. ದಿಗಂಬರರು ಸ್ತ್ರೀಯು ಮೋಕ್ಷವನ್ನು ಪಡೆಯುವುದಿಲ್ಲವೆಂದೂ ಶ್ವೇತಾಂಬರರು ಪಡೆಯುತ್ತಾಳೆಂದೂ ನಂಬುತ್ತಾರೆ. ಇತ್ಯಾದಿ ಮಾತುಗಳಿಂದ ಅವರು ಮೋಕ್ಷವನ್ನು ಪಡೆಯುತ್ತಾರೆ. ॥೩॥ ಇದು ಇವರ ಸಾಧುಗಳ ಭೇದವು. ಜೈನರ ಕೇಶಲುಂಚನವು ಎಲ್ಲಾ ಕಡೆ ಪ್ರಸಿದ್ಧವಿದೆ. ಕೆಲವು ಕಡೆ ಐದು ಹಿಡಿ ಕೀಳಬೇಕೆಂದು ಮೊದಲಾಗಿಯೂ ಬರೆದಿದ್ದಾರೆ.

ವಿವೇಕಸಾ. ಭಾ. ಪು. ೨೧೬ ರಲ್ಲಿ ಐದು ಹಿಡಿಗಳನ್ನು ಲುಂಚನ ಮಾಡಿ ಚಾರಿತ್ರವನ್ನು ಸ್ವೀಕರಿಸಿದನು ಅಂದರೆ ಐದು ಹಿಡಿ ತಲೆಗೂದಲು

ಗಳನ್ನು ಕಿತ್ತುಹಾಕಿ ಸಾಧುವಾದನು ಎಂದು ಬರೆದಿದೆ. ಕಲ್ಪಸೂತ್ರ ಭಾಷ್ಯ ಪುಟ ೧೦೮—ಕೇಶಲುಂಚನ ಮಾಡಿ ಗೋವಿನ ರೋಮುಗಳಂತಿಡಬೇಕು—ಎಂದು ಬರೆದಿದ್ದಾರೆ.

ಸಮೀಕ್ಷಕ—ಜೈನರೇ! ಈಗ ಹೇಳಿರಿ. ನಿಮ್ಮ ದಯಾಧರ್ಮ ವೆಲ್ಲುಳಿಯಿತು? ಇದೇನು ಹಿಂಸೆಯಲ್ಲವೆ? ತನ್ನ ಕೈಯಿಂದ ಕೀಳಲಿ ಅಥವಾ ಗುರುವೇ ಕೀಳಲಿ ಅಥವಾ ಬೇರೆ ಯಾರಾದರೂ ಕೀಳಲಿ. ಎಷ್ಟು ಮಟ್ಟಿನ ಕಷ್ಟವು ಆ ಜೀವಕ್ಕೆ ಆಗುವುದಿಲ್ಲ? ಜೀವಕ್ಕೆ ಕಷ್ಟ ಕೊಡುವುದೇ ಹಿಂಸೆಯೆನಿಸುತ್ತದೆ.

ವಿವೇಕಸಾರದಲ್ಲಿ—ವಿಕ್ರಮ ಸಂ|| ೧೬೩೩ ರಲ್ಲಿ ಶ್ವೇತಾಂಬರರಿಂದ ಢೂಂಢಿಯೆಗಳು, ಢೂಂಢಿಯೆಗಳಿಂದ ತೇರಹ ಪಂಥಿ ಮೊದಲಾದ ಢೋಂಗಿಗಳು ಹೊರಟಿರುವರು. ಢೂಂಢಿಯೆಗಳು ಪಾಷಾಣಾದಿ ಮೂರ್ತಿಗಳನ್ನು ನಂಬುವುದಿಲ್ಲ. ಇವರು ಊಟ ಸ್ನಾನಗಳ ಸಮಯದ ಹೊರತು ಯಾವಾಗಲೂ ಬಾಯಿಯ ಮೇಲೆ ವಸ್ತ್ರವನ್ನು ಕಟ್ಟಿರುತ್ತಾರೆ. ಜತಿ ಮೊದಲಾದವರು ಪುಸ್ತಕವನ್ನೋದುವಾಗ ಮಾತ್ರ ಕಟ್ಟಿಕೊಳ್ಳುತ್ತಾರೆ ಬೇರೆ ಸಮಯದಲ್ಲಿ ಕಟ್ಟಿಕೊಳ್ಳುವುದಿಲ್ಲವೆಂದು ಬರೆದಿದೆ.

ಪ್ರಶ್ನೆ :—ಮುಖದಮೇಲೆ ಪಟ್ಟಿಯನ್ನು ಅವಶ್ಯವಾಗಿ ಕಟ್ಟಿಕೊಳ್ಳಬೇಕು. ಏಕೆಂದರೆ—ವಾಯುಕಾಯ—ವಾಯುವಿನಲ್ಲಿರುವ ಸೂಕ್ಷ್ಮಶರೀರವುಳ್ಳ ಜಂತುಗಳು ಬಾಯಿಯ ಆವಿಯ ಉಷ್ಣತೆಯಿಂದ ಸಾಯುತ್ತವೆ. ಅದರ ಪಾಪವು ಬಾಯಿಯ ಮೇಲೆ ವಸ್ತ್ರವನ್ನು ಕಟ್ಟದವರಿಗೆ ತಾಗುತ್ತದೆ. ಆದುದರಿಂದ ನಾವು ಮುಖದ ಮೇಲೆ ವಸ್ತ್ರವನ್ನು ಕಟ್ಟಿಕೊಳ್ಳುವುದನ್ನು ಒಳ್ಳೆಯದೆಂದು ತಿಳಿಯುತ್ತೇವೆ.

ಉತ್ತರ :—ಜೀವಾತ್ಮರು ಅಜರರೂ ಅಮರರೂ ಆಗಿರುವರೆಂದು ನೀವೂ ನಂಬುತ್ತೀರಿ ಅಂದಮೇಲೆ ಬಾಯಿಯ ಆವಿಯಿಂದೇನೂ ಅವರು ಸಾಯಲಾರರು. ಆದುದರಿಂದ ನಿಮ್ಮ ಈ ಮಾತು ವಿದ್ಯೆ ಮತ್ತು ಪ್ರತ್ಯಕ್ಷಾದಿಪ್ರಮಾಣಗಳಿಗನುಸಾರವಾಗಿ ಅಯುಕ್ತವಾಗಿರುತ್ತದೆ.

ಪ್ರಶ್ನೆ :—ಜೀವಾತ್ಮನೇನೂ ಸಾಯುವುದಿಲ್ಲ. ಆದರೆ ಮುಖದ ಉಷ್ಣವಾಯುವಿನಿಂದ ಅವರಿಗೆ ಪೀಡೆಯಾಗುತ್ತದೆ. ಆ ಪೀಡೆಯು

ನ್ನುಂಟುಮಾಡುವವನಿಗೆ ಪಾಪವು ತಾಗುತ್ತದೆ. ಆದುದರಿಂದಲೇ ಬಾಯಿಯ ವಸ್ತ್ರವನ್ನು ಕಟ್ಟಿಕೊಳ್ಳುವುದೊಳ್ಳೆಯದು.

ಉತ್ತರ :—ನಿಮ್ಮ ಈ ಮಾತು ಸರ್ವಥಾ ಅಸಂಭವವೇ ಆಗಿದೆ. ಪೀಡೆಯನ್ನಿಲ್ಲದೆ ಯಾವ ಜೀವಿಯ ಕಿಂಚಿತ್ ನಿರ್ವಾಹವೂ ಸಾಗ ಲಾರದು. ನಿಮ್ಮ ಅಭಿಪ್ರಾಯದಂತೆ ಮುಖದ ವಾಯುವಿನಿಂದ ಜೀವಿಗಳಿಗೆ ಪೀಡೆಯುಂಟಾಗುತ್ತದಾದರೆ ಚಲಿಸುವುದು, ಓಡಾಡುವುದು, ಕುಳಿತುಕೊಳ್ಳುವುದು ಕೈಯೆತ್ತುವುದು ಮತ್ತು ಕಣ್ಣುಗಳನ್ನು ಮುಚ್ಚುವುದು ಮೊದಲಾದ ಕಾರ್ಯಗಳಿಂದಲೂ ಪೀಡೆಯಾಗುತ್ತಿರಬಹುದು. ಆದುದರಿಂದ ನೀವೂ ಜೀವಿಗಳಿಗೆ ಪೀಡೆಯನ್ನುಂಟುಮಾಡದೆ ಇರಲಾರಿರಿ.

ಪ್ರಶ್ನೆ :—ಹೌದು. ಸಾಧ್ಯವಾದಷ್ಟರಮಟ್ಟಿಗೆ ಜೀವಿಗಳನ್ನು ರಕ್ಷಿಸ ಬೇಕು. ನಾವು ರಕ್ಷಿಸಲಸಮರ್ಥರಾದಲ್ಲಿ ಅಶಕ್ತರಾಗಿದ್ದೇವೆ. ವಾಯು ಮೊದಲಾದ ಪದಾರ್ಥಗಳಲ್ಲೆಲ್ಲಾ ಜೀವಿಗಳು ತುಂಬಿಕೊಂಡಿವೆ. ನಾವು ಬಾಯಿಯ ಮೇಲೆ ವಸ್ತ್ರವನ್ನು ಕಟ್ಟದಿದ್ದರೆ ಬಹಳ ಜೀವಿಗಳು ಸಾಯುವವು. ಬಟ್ಟೆ ಕಟ್ಟದರೆ ಕಡಮೆ ಸಾಯುತ್ತವೆ.

ಉತ್ತರ :—ನಿಮ್ಮ ಈ ಕಥನವೂ ಯುಕ್ತಿಶೂನ್ಯವಾಗಿದೆ. ಏಕೆಂದರೆ ಬಟ್ಟೆಯನ್ನು ಕಟ್ಟುವುದರಿಂದ ಜೀವಿಗಳಿಗೆ ಹೆಚ್ಚು ದುಃಖ ವಾಗುತ್ತದೆ. ಯಾವನಾದರೂ ಮುಖದ ಮೇಲೆ ಬಟ್ಟೆ ಕಟ್ಟದರೆ ಬಾಯಿಯಲ್ಲಿನ ಗಾಳಿಯು ತಡೆದಂತಾಗಿ ಒಟ್ಟುಗೂಡಿ ಕೆಳಗಿನಿಂದ ಅಥವಾ ಒಂದು ಬದಿಯಿಂದ ಅಥವಾ ಮೌನವಾಗಿರುವಾಗ ಮೂಗಿನ ದ್ವಾರದಿಂದ ವೇಗವಾಗಿ ಹೊರಡುತ್ತದೆ. ಆದರಿಂದ ಉಷ್ಣತೆಯು ಹೆಚ್ಚಿ ನಿಮ್ಮ ಅಭಿಪ್ರಾಯಾನುಸಾರವಾಗಿ ಜೀವಿಗಳಿಗೆ ಹೆಚ್ಚಾದ ಪೀಡೆ ಯುಂಟಾಗುವುದು. ನೋಡಿರಿ ! ಒಂದು ಮನೆ ಅಥವಾ ಕೊಠಡಿಯ ಎಲ್ಲ ಕದಗಳನ್ನು ಮುಚ್ಚಿದರೆ ಅಥವಾ ಅವುಗಳ ಮೇಲೆ ಪರದೆ ಹಾಕಿ ಬಿಟ್ಟರೆ ವಿಶೇಷ ಉಷ್ಣವೂ ತೆರೆದಿಡುವುದರಿಂದ ಕಡಿಮೆ ಉಷ್ಣವೂ ಆಗುವಂತೆ ಬಾಯಿಯ ಮೇಲೆ ಬಟ್ಟೆ ಕಟ್ಟದರೆ ಅಧಿಕ ಉಷ್ಣವೂ ಕಟ್ಟ ದಿದ್ದರೆ ಕಮ್ಮಿ ಉಷ್ಣವೂ ಆಗುತ್ತದಾದ್ದರಿಂದ ನಿಮ್ಮ ಅಭಿಪ್ರಾಯದ ಮೇರೆಗೆ ಜೀವರಿಗೆ ಹೆಚ್ಚು ದುಃಖವಾದೀತು. ಬಾಯಿಯನ್ನು ಮುಚ್ಚಿರು

ವಾಗ ಮೂಗು ದ್ವಾರಗಳಿಂದ ತಡೆಗಟ್ಟಲ್ಪಟ್ಟ ವಾಯುವು ಒಂದೇ ಸಮನೆ ವೇಗದಿಂದ ಹೊರಡುವುದರಿಂದ ಜೀವಿಗಳಲ್ಲಿ ಹೆಚ್ಚು ಒತ್ತಡವನ್ನೂ ದುಃಖವನ್ನೂ ಉಂಟುಮಾಡುತ್ತಿರಬಹುದು. ನೋಡಿರಿ! ಯಾವನಾದರೂ ಬರೇ ಮುಖದಿಂದ ಊದಿ ಬೆಂಕಿಯನ್ನು ರಿಸಹೋದರೆ ಗಾಳಿಯು ಹರಡಿಕೊಂಡು ನ್ಯೂನ ಬಲವೂ ನಳಿಗೆಯಿಂದ ಊದಿದರೆ ಅದರ ಗಾಳಿಯು ಒಟ್ಟಿಗಿರುವುದರಿಂದ ಅಧಿಕಬಲವೂ ಆಗಿ ಅಗ್ನಿಗೆ ತಾಗುವಂತೆ, ಬಾಯಿಗೆ ವಸ್ತ್ರವನ್ನು ಕಟ್ಟಿ, ಗಾಳಿಯನ್ನು ತಡೆಯುವುದರಿಂದ ಅದು ಮೂಗಿನಿಂದ ಬಹು ವೇಗದಿಂದ ಹೊರಟು, ಪ್ರಾಣಿಗಳಿಗೆ ಅಧಿಕ ದುಃಖವನ್ನೀಯುತ್ತದೆ. ಆದುದರಿಂದ ಮುಖದ ಮೇಲೆ ಬಟ್ಟೆ ಕಟ್ಟುವವರಿಗಿಂತ ಕಟ್ಟದಿರುವವರೇ ಧರ್ಮಾತ್ಮರಾಗಿರುವರು. ಬಾಯಿಗೆ ಬಟ್ಟೆ ಕಟ್ಟುವುದರಿಂದ ಸ್ಥಾನಪ್ರಯತ್ನಗಳಿಗನುಸಾರವಾಗಿ ಅಕ್ಷರಗಳ ಉಚ್ಚಾರಣೆಯೂ ಆಗುವುದಿಲ್ಲ. ನಿರನುನಾಸಿಕ ಅಕ್ಷರಗಳನ್ನು ಸಾನುನಾಸಿಕವಾಗಿ ಉಚ್ಚರಿಸುವುದರಿಂದ ನಿಮಗೆ ದೋಷ ತಟ್ಟುತ್ತದೆ. ಬಟ್ಟೆ ಕಟ್ಟುವುದರಿಂದ ದುರ್ಗಂಧವೂ ಹೆಚ್ಚುತ್ತದೆ. ಶರೀರದ ಒಳಗೆ ದುರ್ಗಂಧವು ತುಂಬಿಕೊಂಡಿದೆ. ಹೊರಗೆ ಹೊರಡುವ ಗಾಳಿಯು ದುರ್ಗಂಧವಾಗಿರುವುದು ಪ್ರತ್ಯಕ್ಷವೇ ಆಗಿರುತ್ತದೆ. ಅದನ್ನು ತಡೆದರೆ ಶರೀರದಲ್ಲಿ ದುರ್ಗಂಧವೂ ಹೆಚ್ಚುವುದು. ಮುಚ್ಚಿಕೊಂಡಿರುವ ಚರಂಡಿಯು ಅಧಿಕ ದುರ್ಗಂಧಯುತವೂ ಅದೇ ತೆರೆದಿರುವಂತಹದು ನ್ಯೂನ ದುರ್ಗಂಧಯುತವೂ ಆಗಿರುವಂತೆ, ಬಾಯಿಗೆ ಬಟ್ಟೆ ಕಟ್ಟುವುದು, ಹಲ್ಲುಜ್ಜುವುದು, ಮೋರೆ ತೊಳೆಯುವುದು ಮತ್ತು ಸ್ನಾನ ಮೊದಲಾದುವುಗಳನ್ನು ಮಾಡದಿದ್ದರೆ, ಬಟ್ಟೆಯನ್ನೊಗೆಯದಿದ್ದರೆ ನಿಮ್ಮ ಶರೀರದಲ್ಲಿ ಹೆಚ್ಚು ದುರ್ಗಂಧವುತ್ಪನ್ನವಾಗಿ ಜಗತ್ತಿನಲ್ಲಿ ಎಷ್ಟೋ ರೋಗಗಳು ಹುಟ್ಟಿ, ಜೀವರುಗಳಿಗೆ ಪೀಡೆಯನ್ನು ಕೊಡುವಷ್ಟೂ ಹೆಚ್ಚಾಗಿ ನಿಮಗೆ ಪಾಪ ಹೆಚ್ಚಾಗಿ ತಗಲುವುದು. ಜಾತ್ರೆ ಮೊದಲಾದುವುಗಳಲ್ಲಿ ದುರ್ಗಂಧವು ಹೆಚ್ಚುವುದರಿಂದ "ವಿಶೂಚಿಕಾ" ಅಂದರೆ ಕಾಲರಾ ಮೊದಲಾದ ಬಹಳ ವಿಧವಾದ ರೋಗಗಳು ಹುಟ್ಟಿ ಜೀವರುಗಳಿಗೆ ದುಃಖವನ್ನೀಯುತ್ತವೆ. ಕಡಿಮೆ ದುರ್ಗಂಧವಾದರೆ ರೋಗಗಳೂ ಕಡಿಮೆ ಹುಟ್ಟಿ, ಅವರಿಗೆ ಹೆಚ್ಚು ದುಃಖವುಂಟಾಗುವುದಿಲ್ಲ.

ಆದಕಾರಣ ನೀವು ಹೆಚ್ಚು ದುರ್ಗಂಧವನ್ನುಂಟುಮಾಡುವುದರಿಂದ ಅಧಿಕ ಅಪರಾಧಿಗಳಾಗಿರುವಿರಿ. ಮುಖಕ್ಕೆ ಬಟ್ಟೆಯನ್ನು ಕಟ್ಟದೆ, ದಂತಧಾವನ-ಮುಖಪ್ರಕ್ಷಾಳನ-ಸ್ನಾನಗಳನ್ನು ಮಾಡಿ ವಸ್ತ್ರಗಳನ್ನು ಶುದ್ಧವಾಗಿಡುವವರು ನಿಮಗಿಂತ, ಅಂತ್ಯಜರ ದುರ್ಗಂಧಯುಕ್ತ ಸಹವಾಸದಿಂದ ದೂರವಿರುವವರಂತೆ, ಉತ್ತಮರಾಗಿರುತ್ತಾರೆ. ಅವರ ದುರ್ಗಂಧದ ಸಹವಾಸದಿಂದ ನಿರ್ಮಲ ಬುದ್ಧಿಯು ಹುಟ್ಟದಿರುವಂತೆ ನಿಮ್ಮ ಮತ್ತು ನಿಮ್ಮ ಸಂಗಡಿಗರ ಬುದ್ಧಿಯೂ ವೃದ್ಧಿಹೊಂದುವುದಿಲ್ಲ. ರೋಗದ ಆಧಿಕ್ಯವೂ, ಸ್ವಲ್ಪ ಬುದ್ಧಿತ್ವವೂ ಇರುವುದರಿಂದ ಧರ್ಮಾನುಷ್ಠಾನಕ್ಕೆ ಬಾಧೆ ತಗಲುವಂತೆಯೇ ದುರ್ಗಂಧಯುತರಾದ ನಿಮ್ಮ ಮತ್ತು ನಿಮ್ಮ ಸಂಗಾತಿಗಳ ಸ್ಥಿತಿಯೂ ಆಗುತ್ತಿರಬಹುದು.

ಪ್ರಶ್ನೆ :—ಒಂದಾಗಿರುವ ಕೋಣೆಯಲ್ಲಿ ಉರಿಸಿದ ಅಗ್ನಿಯ ಜ್ವಾಲೆಯು ಹೊರಗೆ ಬಂದು ದುಃಖವನ್ನಿತ್ತಿಯದಂತೆ, ಬಾಯಿಗೆ ಬಟ್ಟೆ ಕಟ್ಟಿ ವಾಯುವನ್ನು ತಡೆದು ಜೀವರುಗಳಿಗೆ ಕಡಿಮೆ ದುಃಖವನ್ನುಂಟು ಮಾಡುವವರು ನಾವು. ಬಟ್ಟೆ ಕಟ್ಟಿಕೊಳ್ಳುವುದರಿಂದ ಹೊರಗಿನ ಜೀವರುಗಳಿಗೆ ಪೀಡೆಯುಂಟಾಗುವುದಿಲ್ಲ ಎದುರಿನಲ್ಲಿ ಉರಿಯುತ್ತಿರುವ ಅಗ್ನಿಗೆ ತಡೆಯಾಗಿ ಕೈಹಿಡಿಯುವುದರಿಂದಲೂ ಕಡಿಮೆ ದಾಹವಾಗುತ್ತದೆ. ಮತ್ತು ವಾಯು ಜೀವಿಗಳು ಸಶರೀರವಾಗುವುದರಿಂದ ಅವುಗಳಿಗೆ ಅವಶ್ಯವಾಗಿಯೂ ಪೀಡೆಯಾಗುತ್ತದೆ.

ಉತ್ತರ :—ಇದು ಮಕ್ಕಳಾಟಿಕೆಯ ಮಾತು. ಮೊದಲನೆಯದಾಗಿ ಛಿದ್ರವಿದ್ದು ಒಳಗಿನ ವಾಯುವಿಗೂ ಹೊರಗಿನ ವಾಯುವಿಗೂ ಸಂಬಂಧವಿಲ್ಲದಿದ್ದರೆ ಅಗ್ನಿಯೇ ಉರಿಯಲಾರದು. ಇದನ್ನು ಪ್ರತ್ಯಕ್ಷವಾಗಿ ನೋಡಬೇಕಾಗಿದ್ದರೆ ಒಂದು ಗೋಂಚಲು ದೀಪವನ್ನು ಹಚ್ಚಿ ಎಲ್ಲಾ ತೂತುಗಳನ್ನು ಮುಚ್ಚಿದರೆ ದೀಪವು ತಕ್ಷಣವೇ ಆರಿಹೋಗುವುದು. ಪೃಥ್ವಿಯ ಮೇಲಿರುವ ಮನುಷ್ಯಾದಿ ಪ್ರಾಣಿಗಳು ಬಾಹ್ಯ ವಾಯುವಿಲ್ಲದೆ ಹೇಗೆ ಜೀವಿಸಲಾರವೋ ಅದೇ ರೀತಿ ಅಗ್ನಿಯೂ ಉರಿಯಲಾರದು. ಒಂದು ಕಡೆಯಿಂದ ಅದರ ವೇಗವನ್ನು ತಡೆದರೆ ಇನ್ನೊಂದು ಕಡೆಯಿಂದ ಅದು ಅಧಿಕವೇಗದಿಂದ ಹೊರಡುವುದು. ಕೈಯನ್ನು ಎದುರಿಗೆ ಹಿಡಿಯುವುದರಿಂದ ಮೋರೆಯ ಮೇಲೇನೋ

ಜ್ವಾಲೆಯು ಕಡಿಮೆ ಬರಬಹುದು. ಆದರೆ ಆದು ಕೈಗೆ ಹೆಚ್ಚಾಗಿ ತಾಗುತ್ತಿದೆ. ಆದುದರಿಂದ ನಿಮ್ಮ ಮಾತು ಸರಿಯಲ್ಲ.

ಪ್ರಶ್ನೆ :—ಯಾವನಾದರೂ ತನಗಿಂತ ದೊಡ್ಡವನೊಡನೆ ಕಿವಿಯಲ್ಲಿ ಅಥವಾ ಹತ್ತಿರವಿದ್ದು ಮಾತನಾಡುವಾಗ ಬಾಯಿಗೆ ಸೆರಗನ್ನು ಹಿಡಿಯುತ್ತಾನೆ. ತನ್ನ ಮುಖದಿಂದ ಎಂಜಲಾಗಲೀ ದುರ್ಗಂಧವಾಗಲೀ ಅವನಿಗೆ ತಾಗದಿರಲಿ ಎಂಬುದೇ ಅದರ ರಹಸ್ಯವು. ಪುಸ್ತಕವನ್ನೋದುತ್ತಿರುವಾಗ ಎಂಜಲು ಪುಸ್ತಕದ ಮೇಲೆ ಹಾರಿಯೇ ಹಾರುತ್ತದೆಂಬುದನ್ನು ಎಲ್ಲರೂ ಬಲ್ಲರು. ಆದಕಾರಣ ಮುಖಕ್ಕೆ ಬಟ್ಟೆ ಕಟ್ಟುವು ದೊಳ್ಳೆಯದು.

ಉತ್ತರ:—ಜೀವರಕ್ಷಣೆಗಾಗಿ ಬಟ್ಟೆ ಕಟ್ಟುವುದು ವ್ಯರ್ಥವೆಂಬುದು ಇದರಿಂದ ಸಿದ್ಧವಾಯಿತು. ದೊಡ್ಡವನೊಡನೆ ಮಾತನಾಡುವಾಗ ಬಾಯಿಗೆ ಕೈಯನ್ನಾಗಲೀ ಸೆರಗನ್ನಾಗಲೀ ಹಿಡಿಯುವುದು ಗುಪ್ತಮಾತನ್ನು ಯಾರೂ ಕೇಳದಿರಲಿ ಎಂಬುದಕ್ಕಾಗಿದೆ. ರಹಸ್ಯವಲ್ಲದ ಮಾತನ್ನು ಆಡುವಾಗ ಯಾರೂ ಕೈಯನ್ನಾಗಲೀ ಸೆರಗನ್ನಾಗಲೀ ಮುಖದ ಮೇಲೆ ಹಿಡಿಯುವುದಿಲ್ಲ. ಆದುದರಿಂದ ರಹಸ್ಯವಚನಕ್ಕಾಗಿ ಹಾಗೆ ಮಾಡುವುದು ವಿದಿತವಾಗುತ್ತದೆ. ದಂತಧಾವನ ಮೊದಲಾದುವುಗಳನ್ನು ಮಾಡದಿರುವುದರಿಂದ ನಿಮ್ಮ ಮುಖದಿಂದ ಅತ್ಯಂತ ದುರ್ಗಂಧವು ಹೊರಡುತ್ತದೆ. ನೀವು ಅನ್ಯರ ಹತ್ತಿರ ಅಥವಾ ನಿಮ್ಮ ಹತ್ತಿರ ಯಾರಾದರೂ ಕುಳಿತುಕೊಂಡಾಗ ದುರ್ಗಂಧದ ಹೊರತು ಮತ್ತೇನು ಬರಬಲ್ಲದು? ಬಾಯಿಗೆ ಅಡ್ಡವಾಗಿ ಕೈಯನ್ನಾಗಲೀ ಸೆರಗನ್ನಾಗಲೀ ಹಿಡಿಯುವುದರ ಪ್ರಯೋಜನಗಳು ಅನೇಕವಿವೆ. ಉದಾ—ಮನುಷ್ಯರ ಎದುರಿನಲ್ಲಿ ರಹಸ್ಯವಾದ ಮಾತನ್ನಾಡುವಾಗ ಕೈಯನ್ನಾಗಲೀ ಸೆರಗನ್ನಾಗಲೀ ಹಿಡಿಯದಿದ್ದರೆ ಬೇರೆಯವರ ಕಡೆ ಗಾಳಿಯು ಹರಡುವುದರಿಂದ ಮಾತೂ ಹರಡಿಕೊಂಡೀತು. ಇಬ್ಬರೂ ಏಕಾಂತದಲ್ಲಿ ಮೂತನಾಡುವಾಗ ಮೂರನೆಯವನಾರೂ ಇಲ್ಲಿ ಕೇಳಲು ಇಲ್ಲವೆಂದು ಕೈಯನ್ನು ಅಡ್ಡ ಹಿಡಿದುಕೊಳ್ಳುವುದಿಲ್ಲ. ದೊಡ್ಡವರ ಮೇಲೆ ಎಂಜಲನ್ನು ಬೀಳಿಸಬಾರದು ಎನ್ನುವುದಾದರೆ ಸಣ್ಣವರ ಮೇಲೆ ಬೀಳಿಸಬಹುದೇ? ಮನುಷ್ಯನ ಮೇಲೆ ಆ ಎಂಜಲು ಬೀಳದೆ

ಇರಲಾರದು. ನಾವು ದೂರ ನಿಂತು ಮಾತನಾಡಿದರೂ ನಮ್ಮ ಕಡೆಯಿಂದ ಗಾಳಿಯು ಬೇರೆಯವರ ಕಡೆಗೆ ಹಾದು ಹೋಗುವಾಗ ಅವರ ಮೈ ಮೇಲೆ ಸೂಕ್ಷ್ಮವಾಗಿ ತ್ರಸರೇಣುಗಳು ವಾಯುವಿನೊಂದಿಗೆ ಅವಶ್ಯವಾಗಿಯೂ ಬೀಳುವುವು. ಅದರ ದೋಷವನ್ನೆಣಿಸುವುದು ಅಜ್ಞಾನದ ಮಾತಾಗಿರುತ್ತದೆ. ಮುಖದ ಉಷ್ಣತೆಯಿಂದ ಜೀವರುಗಳು ಸಾಯುವುದಾದರೆ ಅಥವಾ ಅವರಿಗೆ ಪೀಡೆಯಾಗುವುದಾದರೆ ವೈಶಾಖ ಅಥವಾ ಜೇಷ್ಠಮಾಸದ ಸೂರ್ಯನ ಮಹಾ ಉಷ್ಣತೆಯಿಂದ ವಾಯುಕಾಯ ಜೀವರುಗಳು ಪೈಕಿ ಒಂದೂ ಬಾಕಿ ಉಳಿಯಲಿಕ್ಕಿಲ್ಲಲಾರದು. ಆ ಉಷ್ಣತೆಯಿಂದ ಅವು ಸಾಯುವುದಿಲ್ಲವಾದುದರಿಂದ ನಿಮ್ಮೀ ಸಿದ್ಧಾಂತವೇ ಸುಳ್ಳಾದುದು. ನಿಮ್ಮ ತೀರ್ಥಂಕರರಾದರೂ ಪೂರ್ಣ ವಿದ್ವಾಂಸರಾಗಿರುತ್ತಿದ್ದರೆ ಇಂತಹ ವ್ಯರ್ಥವಾದ ಮಾತುಗಳನ್ನೇಕೆ ಆಡುತ್ತಿದ್ದರು? ನೋಡಿರಿ! ಯಾವ ಜೀವರ ವೃತ್ತಿಯು ಸರ್ವಾವಯವಗಳಲ್ಲಿರುತ್ತದೋ ಆ ಜೀವರಿಗೇನೇ ಪೀಡೆಯುಂಟಾಗುತ್ತದೆ. ಪ್ರಮಾಣ—

ಪಂಚಾವಯವಯೋಗಾತ್ಸುಖಸಂವಿತ್ತಿಃ ॥ [ಸಾಂಖ್ಯ ೫, ೨೭]

ಐದೂ ಇಂದ್ರಿಯಗಳ ಸಂಬಂಧವು ಐದೂ ವಿಷಯುಗಳೊಂದಿಗೆ ಆದಾಗಲೇ ಸುಖ ಅಥವಾ ದುಃಖದ ಅನುಭವವಾಗುತ್ತದೆ. ಉದಾ: ಕಿವುಡನಿಗೆ ಬಯ್ಯುವುದೂ, ಕುರುಡನಿಗೆ ರೂಪ ಅಥವಾ ಎದುರಿನಿಂದ ಸರ್ಪವಾಗಲೀ ಹುಲಿಯಾಗಲೀ ಹಾದುಹೋಗುವುದೂ, ಪಾರ್ಶ್ವಘಾತವಾದವನಿಗೆ ಸ್ಪರ್ಶ, ಪೀನಾಶೀ ರೋಗದವನಿಗೆ ವಾಸನೆ, ನಾಲಿಗೆಯಿಲ್ಲದವನಿಗೆ ರಸ ಇವುಗಳ ಅನುಭವವಾಗಲಾರದು. ಜೀವರುಗಳ ವ್ಯವಸ್ಥೆಯೂ ಇದೇರೀತಿಯಿದೆ. ನೋಡಿರಿ! ಮನುಷ್ಯನ ಆತ್ಮವು ಸುಷುಪ್ತಾವಸ್ಥೆಯಲ್ಲಿರುವಾಗ ಅದಕ್ಕೆ ಸುಖದುಃಖಗಳ ಪ್ರಾಪ್ತಿಯೇನೂ ಆಗುವುದಿಲ್ಲ. ಏಕೆಂದರೆ, ಆತ್ಮವು ಒಳಗಿದ್ದರೂ ಬಾಹ್ಯ ಅವಯವಗಳೊಂದಿಗೆ ಅದರ ಸಂಬಂಧವಿಲ್ಲದುದರಿಂದ ಸುಖದುಃಖಗಳನ್ನು ಪಡೆಯಲಾರದು. ವೈದ್ಯರಾಗಲೀ ಇಂದಿನ ಡಾಕ್ಟರರಾಗಲೀ ಅಮಲುಪದಾರ್ಥವನ್ನು ತಿನ್ನಿಸಿ ಅಥವಾ ಮೂಸಿಸಿ, ರೋಗಿಯ ಶರೀರಾವಯವಗಳನ್ನು ಕತ್ತರಿಸುತ್ತಾರೆ. ಆಗ ಅವನಿಗೆ ಯಾವ ದುಃಖವೂ ಆಗದಿರುವಂತೆ

ವಾಯುಕಾಯವನ್ನುಳ್ಳ ಅಥವಾ ಅನ್ಯ ಸ್ಥಾವರಶರೀರವುಳ್ಳ ಜೀವರಿಗೆ ಸುಖ ಅಥವಾ ದುಃಖವೇದೂ ಸಿಕ್ಕಲಾರದು. ಮೂರ್ಛೆಹೊಂದಿದ ಪ್ರಾಣಿಗೆ ಸುಖದುಃಖಗಳು ದೊರೆಯದಿರುವಂತೆ ವಾಯುಕಾಯಾದಿ ಜೀವಗಳೂ ಅತ್ಯಂತ ಮೂರ್ಛಿತವಾಗಿರುವುದರಿಂದ ಸುಖದುಃಖಗಳನ್ನು ಪಡೆಯಲಾರವು. ಅಂದಮೇಲೆ ಅವುಗಳನ್ನು ಪೀಡೆಯಿಂದ ತಪ್ಪಿಸುವ ವಿಷಯವಾದರೂ ಎಲ್ಲಿ ಸಿದ್ಧವಾಗುತ್ತದೆ? ಅವುಗಳಿಗೆ ಸುಖದುಃಖಗಳ ಪ್ರಾಪ್ತಿಯೇ ಪ್ರತ್ಯಕ್ಷವಿಲ್ಲದಿರುವಾಗ ಅನುಮಾನಾದಿಗಳಾದರೂ ಇಲ್ಲಿ ಹೇಗೆ ಯುಕ್ತವಾಗಬಲ್ಲುವು?

ಪ್ರಶ್ನೆ:—ಅವರು ಜೀವರಾಗಿರುವಾಗ ಅವರಿಗೆ ಸುಖದುಃಖಗಳೇಕೆ ದೊರೆಯುವುದಿಲ್ಲ?

ಉತ್ತರ:—ಅಜ್ಞೋಧ ಜನರೆ! ಆಲಿಸಿರಿ. ಸುಷುಪ್ತಾವಸ್ಥೆಯಲ್ಲಿರುವಾಗ ನಿಮಗೆ ಸುಖದುಃಖಗಳೇಕೆ ಲಭಿಸುವುದಿಲ್ಲ? ಪ್ರಸಿದ್ಧ ಸಂಬಂಧವೇ ಸುಖದುಃಖಪ್ರಾಪ್ತಿಯ ಹೇತುವು. ಈಗತಾನೇ ನಾವು ಉತ್ತರಕೊಟ್ಟು ಬಂದಿದ್ದೇವೆ. ಅಮಲನ್ನು ಮೂಸಿಸಿ ಡಾಕ್ಟರರು ಅವಯವಗಳನ್ನು ತಿವಿಯುತ್ತಾರೆ ಹರಿಯುತ್ತಾರೆ ಮತ್ತು ಕತ್ತರಿಸುತ್ತಾರೆ. ಅವರಿಗೆ ಹೇಗೆ ದುಃಖದ ಅರಿವಾಗುವುದಿಲ್ಲವೋ ಹಾಗೆಯೇ ಅತಿ ಮೂರ್ಛೆಲ್ಲಿರುವ ಜೀವಿಗಳಿಗೆ ಸುಖದುಃಖಗಳ ಪ್ರಾಪ್ತಿಯು ಹೇಗಾದೀತು? ಏಕೆಂದರೆ—ಅಲ್ಲಿ ಪ್ರಾಪ್ತಿಯ ಯಾವೊಂದು ಸಾಧನವೂ ಇಲ್ಲು

ಪ್ರಶ್ನೆ:—ನೋಡಿರಿ! ಹಸುರು ಕಾಯಿ ಪಲ್ಯ, ಸೊಪ್ಪು. ಗೆಡ್ಡೆ, ಗೆಣಸುಗಳನ್ನು ನಾವು ತಿನ್ನುವುದಿಲ್ಲ. ಏಕೆಂದರೆ ಹಸುರು ಕಾಯಿಪಲ್ಯ ಮೊದಲಾದುವುಗಳಲ್ಲಿ ಬಹಳ ಮತ್ತು ಗೆಡ್ಡೆ ಗೆಣಸುಗಳಲ್ಲಿ ಅನಂತ ಜೀವಗಳಿವೆ. ಅವುಗಳನ್ನು ನಾವು ತಿಂದರೆ, ಅವನ್ನು ಕೊಲ್ಲುವುದರಿಂದಲೂ, ನೋವನ್ನೀಯುವುದರಿಂದಲೂ, ನಾವು ಪಾಪಿಗಳಾದೇವು.

ಉತ್ತರ:—ನಿಮ್ಮ ಮಹಾ ಅಜ್ಞಾನದ ಮಾತಿದು. ಹಸುರು ಕಾಯಿಪಲ್ಯವನ್ನು ತಿನ್ನುದರಿಂದ ಜೀವಿಗಳು ಸಾಯುತ್ತವೆಂದೂ ಅವಕ್ಕೆ

ಪೀಡೆಯಾಗುತ್ತದೆಂದೂ ಏಕೆ ನಂಬುತ್ತೀರಿ? ಅವುಗಳಿಗೆ ಪೀಡೆಯಾಗುವುದು ನಿಮಗೇನೂ ಪ್ರತ್ಯಕ್ಷವಾಗಿ ಕಾಣಿಸುವುದಿಲ್ಲ. ಕಾಣಿಸುತ್ತದಾದರೆ ನಮಗೂ ತೋರಿಸಿಬಿಡಿ. ನೀವೆಂದೂ ಪ್ರತ್ಯಕ್ಷ ನೋಡಲಾರಿರಿ ನಮಗೆ ತೋರಿಸಲಾರಿರಿ. ಪ್ರತ್ಯಕ್ಷವೇ ಇಲ್ಲದ ಮೇಲೆ ಅನುಮಾನ-ಉಪಮಾನ ಶಬ್ದಪ್ರಮಾಣಗಳೂ ಇರಲಾರವು. ಹಾಗಿದ್ದಮೇಲೆ ನಾವು ಮೇಲೆ ಕೊಟ್ಟ ಉತ್ತರವೇ ಇವರ ಉತ್ತರವೂ ಆಗಿರುತ್ತದೆ. ಏಕೆಂದರೆ ಅತ್ಯಂತ ಅಂಧಕಾರ, ಮಹಾಸುಷುಪ್ತಿ ಮತ್ತು ಮಹಾ ಅಮಲಿನಲ್ಲಿರುವ ಜೀವಾತ್ಮರಿಗೆ ಸುಖದುಃಖಗಳು ದೊರೆಯುತ್ತವೆಂದು ನಂಬುವುದು, ಯುಕ್ತಿಗೂ ವಿದ್ಯೆಗೂ ವಿರುದ್ಧವಾದ ಉಪದೇಶವನ್ನು ನಿಮಗಿತ್ತ ತೀರ್ಥಂಕರರ ತಪ್ಪೆಂದು ತೋರುತ್ತದೆ. ಒಂದು ಮನೆಯ ಅಂತವಿರುವಾಗ ಆ ಮನೆಯಲ್ಲಿ ನಿವಾಸಿಸುವವರು ಹೇಗೆ ತಾನೇ ಅನಂತರಾಗಬಲ್ಲರು? ಗೆಡ್ಡೆಯ ಅಂತವಿರುವಾಗ ಅವರಲ್ಲಿರುವ ಜೀವಾತ್ಮರ ಅಂತ ವೇಕಿಲ್ಲ? ಆದುದರಿಂದ ನಿಮ್ಮ ಮಾತು ತೀರಾತಪ್ಪಾದುದು.

ಪ್ರಶ್ನೆ:—ನೋಡಿರಿ! ನೀರನ್ನು ಬಿಸಿ ಮಾಡದೆ ಕುಡಿಯುವವರಾದ ನೀವು ಬಹಳ ಪಾಪ ಮಾಡುತ್ತಿದ್ದೀರಿ. ನಮ್ಮಂತೆ ನೀವೂ ಬಿಸಿ ನೀರನ್ನು ಕುಡಿಯಿರಿ.

ಉತ್ತರ:—ಇದೂ ನಿಮ್ಮ ಭ್ರಮೆ ಜಾಲದ ಮಾತು. ನೀವು ನೀರನ್ನು ಬಿಸಿ ಮಾಡುತ್ತಿರುವಾಗ ಅದರಲ್ಲಿರುವ ಜೀವಾತ್ಮರೆಲ್ಲರೂ ಸಾಯುತ್ತಿರಬಹುದು. ಅವರ ಶರೀರವೂ ಆ ನೀರಿನಲ್ಲಿ ಬೆಂದು ನೀರು ಸೋಂಪುಕಾಳಿನ ಅರ್ಕದಂತಾಗುವುದರಿಂದ ನೀವು ಅವರ ಶರೀರಗಳ ದ್ರಾವಕವನ್ನು ಕುಡಿದಂತಾಯಿತು. ಆದುದರಿಂದ ನೀವು ಮಹಾಪಾಪಿಗಳಾಗಿರುವಿರಿ. ತಣ್ಣೀರು ಕುಡಿಯುವವರು ಪಾಪಿಗಳಲ್ಲ. ಏಕೆಂದರೆ ತಣ್ಣೀರು ಕುಡಿದರೆ ಅದು ಹೊಟ್ಟೆಗೆ ಹೋಗಿ ಸ್ವಲ್ಪ ಉಷ್ಣತೆಯನ್ನು ಪಡೆದಾಗ ಶ್ವಾಸದ್ವಾರದಿಂದ ಜೀವಾತ್ಮರೂ ಹೊರ ಹೊರಟು ಹೋಗುವರು. ಜಲಕಾಯ ಜೀವಿಗಳಿಗೆ ಮೊದಲು ಹೇಳಿದಂದೆ ಸುಖದುಃಖಗಳೇನೂ ಪ್ರಾಪ್ತವಾಗಲಾರದೆಂದ ಮೇಲೆ ಅದರಿಂದ ಪಾಪವೇನೂ ತಾಗಲಾರದು.

ಪ್ರಶ್ನೆ:—ಜಠರಾಗ್ನಿಯಿಂದ ಹೊರ ಹೊರಡುವಂತೆ ಜೀವಾತ್ಮರು

(ನೀರು ಬಿಸಿಯಾಗುತ್ತಿರುವಾಗ) ಉಷ್ಣತೆ ತಾಗಿದಕೂಡಲೇ ಹೊರಗೆ ಹೋಗಲಾರರೇಕೆ ?

ಉತ್ತರ:—ಹೌದು. ಹೊರಗೆ ಹೋಗಬಲ್ಲರು. ಆದರೆ ನೀವು ವಾಯುವಿನ ಉಷ್ಣತೆಯಿಂದಲೇ ಜೀವನು ಸತ್ತು ಹೋಗುತ್ತಾನೆಂದು ನಂಬುತ್ತೀರಾದ್ದರಿಂದ ನೀರನ್ನು ಬಿಸಿ ಮಾಡುವಾಗ ನಿಮ್ಮ ಅಭಿಪ್ರಾಯದ ಮೇರೆಗೆ ಜೀವರು ಸತ್ತುಹೋದಾರು ಅಥವಾ ಅಧಿಕ ಪೀಡೆಯನ್ನನುಭವಿಸಿ ಹೊರಗೆ ಬಂದಾರು. ಅವರ ಶರೀರಗಳು ಆ ನೀರಿನಲ್ಲೇ ಬೆಂದು ಹೋಗುವುವು. ಆದ್ದರಿಂದ ನೀವು ಅಧಿಕ ಪಾಪಿಗಳಾಗುವಿರೊ ಇಲ್ಲವೊ ?

ಪ್ರಶ್ನೆ—ನಾವೇನೂ ನಮ್ಮ ಕೈಯಿಂದ ನೀರನ್ನು ಬಿಸಿಮಾಡುವುದಿಲ್ಲ. ಗೃಹಸ್ಥರಿಗೆ ಮಾಡಲು ಹೇಳುವುದೂ ಇಲ್ಲ. ಆದ್ದರಿಂದ ನಮಗೆ ಪಾಪವಿಲ್ಲ.

ಉತ್ತರ—ನೀವು ಬಿಸಿ ನೀರನ್ನು ತೆಗೆದುಕೊಳ್ಳದಿದ್ದರೆ ಅಥವಾ ಕುಡಿಯದಿದ್ದರೆ ಗೃಹಸ್ಥರೇಕೆ ಬಿಸಿಮಾಡುವರು ? ಆದುದರಿಂದ ಆ ಪಾಪಕ್ಕೆ ನಿವೇ ಹೊಣೆಗಾರರು ; ಇನ್ನೂ ಹೆಚ್ಚು ಪಾಪಿಗಳು. ನೀವು ಯಾವನಾದರೂ ಒಬ್ಬ ಗೃಹಸ್ಥನಿಗೆ ಬಿಸಿಮಾಡಲು ಹೇಳುತ್ತಿದ್ದರೆ ಒಂದೇ 'ಕಡೆ ನೀರು ಬಿಸಿಮಾಡುತ್ತಿದ್ದರು. ಆದರೆ ' ಸಾಧುಗಳು ಯಾವ ಮನೆಗೆ ಹೋಗುತ್ತಾರೊ ಏನೊ ?' ಎಂದು ಭ್ರಮೆಯಲ್ಲಿ ಬಿದ್ದು ಪ್ರತಿಯೊಬ್ಬ ಗೃಹಸ್ಥನೂ ತನ್ನ ತನ್ನ ಮನೆಯಲ್ಲಿ ನೀರು ಬಿಸಿ ಮಾಡಿಟ್ಟಿರುತ್ತಾನೆ. ಎಲ್ಲ ಪಾಪದ ಭಾಗಿಗಳು ನಿವೇ ಆಗಿರುವುದರಿಂದ ಅಧಿಕ ಪಾಪಿಗಳಾದಿರಿ. ಎರಡನೆಯದಾಗಿ ಅಧಿಕ ಕಟ್ಟಿಗೆಯನ್ನೂ, ಬೆಂಕಿಯನ್ನೂ ಉರಿಸುವುದರಿಂದ ಮೇಲೆ ಬರೆದು ಬಂದ ಅಡಿಗೆ, ಕೃಷಿ, ವ್ಯಾಪಾರಾದಿಗಳಲ್ಲಿ ಪಾಪ ತಾಗುತ್ತದೆಂಬುದರ ಮೇರೆಗೆ ನೀವು ಇನ್ನು ಅಧಿಕ ಪಾಪಿಗಳಾಗಿ ನರಕಗಾಮಿಗಳಾಗುತ್ತೀರಿ. ನೀರನ್ನು ಬಿಸಿಮಾಡಲು ಮುಖ್ಯ ಕಾರಣರೂ ನೀವೇ. ಬಿಸಿ ನೀರನ್ನು ಕುಡಿಯಲು ಮತ್ತು ತಣ್ಣೀರನ್ನು ಕುಡಿಯದಿರಲು ಉಪದೇಶವಿತ್ತುದರಿಂದ ಮುಖ್ಯಪಾಪದ ಭಾಗಿಗಳೂ ನೀವೇ ಆಗಿರುವಿರಿ. ನಿಮ್ಮ ಉಪದೇಶವನ್ನು ಕೇಳಿ ಹಾಗೆ ಮಾಡುವವರೂ ಪಾಪಿಗಳಾಗುತ್ತಾರೆ. ನೀವು ಮಹಾ ಅಜ್ಞಾನದಲ್ಲಿರು

ವುದು ಹೌದೊ ಅಲ್ಲವೊ ಎಂಬುದನ್ನೀಗ ತಾವಾಗಿ ನೋಡಿರಿ. ಸಣ್ಣ ಸಣ್ಣ ಜೀವಿಗಳ ಮೇಲೆ ದಯೆ ತೋರಿಸುವುದು ಮತ್ತು ಅನ್ಯಮತ ದವರ ನಿಂದೆಯನ್ನೂ, ಅವರಿಗೆ ಅನುಪಕಾರವನ್ನೂ ಮಾಡುವುದು ಕಡಿಮೆ ಪಾಪವೇನು? ನಿಮ್ಮ ತೀರ್ಥಂಕರರ ಹೇಳಿಕೆಯು ನಿಜವಾಗಿದ್ದರೆ ಪರಮಾತ್ಮನು ಇಷ್ಟೆಲ್ಲ ಮಳೆಯನ್ನೂ, ನದಿಗಳ ಹರಿಯುವಿಕೆಯನ್ನೂ, ಇಷ್ಟು ಜಲವನ್ನು ಏಕೆ ಹುಟ್ಟಿಸಿದನು? ನಿಮ್ಮ ಮತಾನುಸಾರ ಸೂರ್ಯ ನಿಂದಲೂ ಎಷ್ಟೋ ಕೋಟ್ಯಾನುಕೋಟಿ ಜೀವಿಗಳು ಸಾಯಬಹು ದಾದ್ದರಿಂದ ಅವನನ್ನು ಸೃಷ್ಟಿಸಬಾರದಿತ್ತು. ಯಾವ ತೀರ್ಥಂಕರ ರನ್ನು ನೀವು ಈಶ್ವರರೆಂದು ನಂಬುತ್ತೀರೋ ಅವರು ದಯೆದೋರಿ, ಸೂರ್ಯನ ತಾಪನನ್ನೂ, ಮೋಡಗಳನ್ನೂ ಕಡೆಗಾಣಿಸಲಿಲ್ಲವೇಕೆ? ನಾವು ಮೊದಲು ಹೇಳಿದಂತೆ ಇರುವ ಪ್ರಾಣಿಗಳ ಹೊರತು ಕಂದ ಮೂಲಾದಿ ಪದಾರ್ಥಗಳಲ್ಲಿರುವ ಜೀವಾತ್ಮರಿಗೆ ಸುಖದುಃಖಗಳ ಪ್ರಾಪ್ತಿಯಾವುದಿಲ್ಲ. ಎಲ್ಲರ ಜೀವಿಗಳ ಮೇಲೆ ದಯೆಮಾಡುವುದೂ ದುಃಖದ ಕಾರಣವಾಗುತ್ತದೆ. ನೀವು ಹೇಳುವಂತೆಯೇ ಎಲ್ಲರೂ ಆಗಿಬಿಟ್ಟರೆ, ಕಳ್ಳಕಾಕರನ್ನು ಯಾರೂ ದಂಡಿಸದಿದ್ದರೆ ಪಾಪವು ಎಷ್ಟರಮಟ್ಟಿಗೆ ಹೆಚ್ಚಬಹುದು? ಆದುದರಿಂದ ದುಷ್ಟರನ್ನು ದಂಡಿಸಿ ಶಿಷ್ಟರನ್ನು ಪಾಲಿಸುವುದು ದಯೆಯೂ, ಇದಕ್ಕೆ ವಿಪರೀತವಾಗಿ ಮಾಡುವುದು ದಯಾಕ್ಷಮಾರೂಪವಾದ ಧರ್ಮದ ನಾಶವೂ, ಆಗಿರುತ್ತದೆ. ಎಷ್ಟೋ ಜೈನರು ವ್ಯಾಪಾರಮಾಡುತ್ತಾರೆ. ಅವರ ವ್ಯವಹಾರ ಗಳಲ್ಲಿ ಸುಳ್ಳುಹೇಳುತ್ತಾರೆ. ಅನ್ಯರ ಹಣವನ್ನು ದೋಚುತ್ತಾರೆ. ಮತ್ತು ಬಡವರಿಗೆ ಮೋಸಪಡಿಸುವುದೇ ಮೊದಲಾದ ಕುಕರ್ಮ ಮಾಡುತ್ತಾರೆ. ಇದನ್ನು ಬಿಡಲು ಅವರಿಗೇಕೆ ನೀವು ವಿಶೇಷವಾಗಿ ಉಪ ದೇಶಮಾಡುವುದಿಲ್ಲ? ಬಾಯಿಗೆ ಬಟ್ಟೆ ಕಟ್ಟುವ ಆಡಂಬರವನ್ನೇಕೆ ರಚಿಸುತ್ತೀರಿ? ನೀವು ಶಿಷ್ಯರನ್ನಾಗಲೀ ಶಿಷ್ಯೆಯರನ್ನಾಗಲೀ ಮಾಡಿ ಕೊಳ್ಳುವಾಗ ಕೇಶ ಲುಂಚನ, ಹೆಚ್ಚುದಿವಸ ಉಪವಾಸವಿರುವುದು ಮೊದಲಾದ ಕಾರ್ಯಗಳಿಂದ ಅನ್ಯರ ಅಥವಾ ತನ್ನಾತ್ಮಕ್ಕೆ ಪೀಡೆ ಯನ್ನು ಕೊಡುವುದು, ಬೇರೆಯವರಿಗೆ ದುಃಖವನ್ನೀಯುವುದು ಮತ್ತು ಆತ್ಮಹತ್ಯೆ ಅಂದರೆ ಆತ್ಮಕ್ಕೆ ದುಃಖವನ್ನೀಯುವವರಾಗಿ ಹಿಂಸಕರೇಕೆ

ಆಗುತ್ತಿದ್ದೀರಿ? ಆನೆ, ಕುದುರೆ, ಎತ್ತು, ಒಂಟೆಗಳ ಮೇಲೆ ಹತ್ತುವುದು, ಜನರಿಂದ ದುಡಿಸಿಕೊಳ್ಳುವುದು ಪಾಪವೆಂದು ಜೈನರು ಎಣಿಸುವುದಿಲ್ಲ ವೇಕೆ? ನಿಮ್ಮ ಶಿಷ್ಯರು ಸಿಕ್ಕಾಪಟ್ಟೆ ಮಾತುಗಳನ್ನು ಸತ್ಯವೆಂದು ಸಿದ್ಧ ಪಡಿಸಲಾರದ ಮೇಲೆ ನಿಮ್ಮ ತೀರ್ಥಂಕರರೂ ಸಿದ್ಧಪಡಿಸಲಾರರು. ನೀವು ಪ್ರವಚನವನ್ನು ಮಾಡುವಾಗ ನಿಮ್ಮ ಅಭಿಪ್ರಾಯದಂತೆ ನಿಮ್ಮ ಮತ್ತು ಶ್ರೋತೃಗಳ ನಡುವೆ ಜೀವರು ಸಾಯುತ್ತಲೇ ಇರಬಹುದು. ಆದುದರಿಂದ ಆ ಪಾಪಕ್ಕೆ ಮುಖ್ಯಕಾರಣರಾಗುತ್ತೀರಿ. ಈ ಸ್ವಲ್ಪ ಕಥನದಿಂದಲೇ ಆ ಜಲ, ಸ್ಥಳ, ವಾಯುಗಳ ಸ್ಥಾವರಶರೀರವುಳ್ಳ ಅತ್ಯಂತ ಮೂರ್ಛಿತ ಜೀವರುಗಳಿಗೆ ದುಃಖವಾಗಲೀ, ಸುಖವಾಗಲೀ ಎಂದಿಗೂ ದೊರೆಯಲಾರದು ಎಂದು ಚೆನ್ನಾಗಿ ತಿಳಿದುಕೊಳ್ಳಬೇಕು.

ಇನ್ನು ಜೈನರ ಮತ್ತೂ ಕೆಲವು ಅಸಂಭವ ವಿಷಯಗಳನ್ನೂ ಬರೆಯುತ್ತೇವೆ. ಆಲಿಸಬೇಕು. ಮೂರೂವರೆ ಕೈಗಳ ಪರಿಮಾಣವು ಒಂದು ಧನುಷವೆನಿಸುತ್ತದೆಂದು ಗಮನದಲ್ಲಿಡಬೇಕು. ಕಾಲದ ಪರಿಮಾಣವನ್ನು ಮೊದಲು ಹೇಳಿದಂತೆಯೇ ಎಂದು ತಿಳಿಯಬೇಕು. ರತ್ನ ಸಾರ ಭಾಗ ೧, ಪುಟ೧ ೬೬-೧೬೭ ರಲ್ಲಿ ಹೀಗೆ ಬರೆದಿದೆ—

(೧) ಋಷಭದೇವನ ಶರೀರವು ೫೦೦ ಧನುಷಗಳು ಪರಿಮಾಣವುಳ್ಳದು. ೪೪,೦೦.೦೦೦ ಪೂರ್ವ ವರ್ಷಗಳ ಆಯುಷ್ಯ. (೨) ಅಜಿತನಾಥನ ಶರೀರವು ೪೫೦ ಧನುಷ ಪರಿಮಾಣವುಳ್ಳದು. ೭೨,೦೦-೦೦೦ ಪೂರ್ವ ವರ್ಷಗಳ ಆಯಸ್ಸು. (೩) ಸಂಭವನಾಥನ ಶರೀರವು ೪೦೦ ಧನುಷ ಪರಿಮಾಣದ್ದು. ೬೦,೦೦,೦೦೦ ಪೂರ್ವ ವರ್ಷಗಳ ಆಯಸ್ಸು. (೪) ಅಭಿನಂದನನ ಶರೀರವು ೩೫೦ ಧನುಷ ಪರಿಮಾಣವುಳ್ಳದು. ೫೦,೦೦,೦೦೦ ಪೂರ್ವ ವರ್ಷಗಳ ಆಯಸ್ಸು. (೫) ಸುಮತಿನಾಥನ ಶರೀರವು ೩೦೦ ಧನುಷ ಪರಿಮಾಣದ್ದು. ೪೦,೦೦-೦೦೦ ಪೂರ್ವ ವರ್ಷಗಳ ಆಯಸ್ಸು. (೬) ಪದ್ಮಪ್ರಭನ ಶರೀರವು ೨೫೦ ಧನುಷ ಪರಿಮಾಣದ್ದು. ೩೦,೦೦,೦೦೦ ಪೂರ್ವ ವರ್ಷಗಳ ಆಯಸ್ಸು. (೭) ಸುಪಾರ್ಶ್ವನಾಥನ ಶರೀರವು ೨೦೦ ಧನುಷ ಪರಿಮಾಣದ್ದು. ೨೦,೦೦,೦೦೦ ಪೂರ್ವ ವರ್ಷಗಳ ಆಯಸ್ಸು. (೮) ಚಂದ್ರಪ್ರಭನ ಶರೀರವು ೧೫೦ ಧನುಷ ಪರಿಮಾಣದ್ದು. ೧೦,೦೦,೦೦೦

ಆಯುಸ್ಸು. ಪೂರ್ವ ವರ್ಷಗಳು. (೯) ಸುವಿಧಿನಾಥನ ಶರೀರ ಪರಿಮಾಣ ೧೦೦ ಧನುಷಗಳು. ಆಯುಸ್ಸು ೨,೦೦,೦೦೦ ಪೂರ್ವ ವರ್ಷಗಳು. (೧೦) ಶೀತಲನಾಥನ ಶರೀರ ಪರಿಮಾಣ ೯೦ ಧನುಷಗಳು. ಆಯುಸ್ಸು ೧,೦೦,೦೦೦ ಪೂರ್ವ ವರ್ಷಗಳು. (೧೧) ಶ್ರೇಯಾಂಸನಾಥನ ಶರೀರ ಪರಿಮಾಣ ೮೦ ಧನುಷಗಳು. ಆಯುಸ್ಸು ೮೪,೦೦,೦೦೦ ವರ್ಷಗಳು. (೧೨) ವಾಸುಪೂಜ್ಯಸ್ವಾಮಿಯ ಶರೀರ ಪರಿಮಾಣವು ೭೦ ಧನುಷಗಳು. ಆಯುಸ್ಸು ೭೨,೦೦,೦೦೦ ವರ್ಷಗಳು. (೧೩) ವಿಮಲನಾಥನ ಶರೀರ ಪರಿಮಾಣ ೬೦ ಧನುಷಗಳು. ಆಯುಸ್ಸು ೬೦,೦೦,೦೦೦ ವರ್ಷಗಳು. (೧೪) ಅನಂತನಾಥನ ಶರೀರ ಪರಿಮಾಣ ೫೦ ಧನುಷಗಳು. ಆಯುಸ್ಸು ೩೦,೦೦,೦೦೦ ವರ್ಷಗಳು. (೧೫) ಧರ್ಮನಾಥನ ಶರೀರ ಪರಿಮಾಣ ೪೫ ಧನುಷಗಳು. ೧೦,೦೦,೦೦೦ ವರ್ಷಗಳ ಆಯುಸ್ಸು. (೧೬) ಶಾಂತಿನಾಥನ ಶರೀರ ಪರಿಮಾಣ ೪೦ ಧನುಷಗಳು. ಆಯುಸ್ಸು ೧,೦೦,೦೦೦ ವರ್ಷಗಳು. (೧೭) ಕುಂಥುನಾಥನ ಶರೀರ ಪರಿಮಾಣ ೩೫ ಧನುಷಗಳು. ಆಯುಸ್ಸು ೯೫,೦೦೦ ವರ್ಷಗಳು. (೧೮) ಅಮರನಾಥನ ಶರೀರ ಪರಿಮಾಣ ೩೦ ಧನುಷಗಳು. ಆಯುಸ್ಸು ೮೪,೦೦೦ ವರ್ಷಗಳು. (೧೯) ಮಲ್ಲಿನಾಥನ ಶರೀರ ಪರಿಮಾಣ ೨೫ ಧನುಷಗಳು. ಆಯುಸ್ಸು ೫೫,೦೦೦ ವರ್ಷಗಳು. (೨೦) ಮುನಿಸುವ್ರತನ ಶರೀರ ಪರಿಮಾಣ ೨೦ ಧನುಷಗಳು. ಆಯುಸ್ಸು ೩೦,೦೦೦ ವರ್ಷಗಳು. (೨೧) ನಮಿನಾಥನ ಶರೀರ ಪರಿಮಾಣ ೧೪ ಧನುಷಗಳು. ಆಯುಸ್ಸು ೧೦,೦೦೦ ವರ್ಷಗಳು. (೨೨) ನೇಮಿನಾಥನ ಶರೀರ ಪರಿಮಾಣ ೧೦ ಧನುಷಗಳು. ಆಯುಸ್ಸು ೧,೦೦೦ ವರ್ಷಗಳು. (೨೩) ಪಾರ್ಶ್ವನಾಥನ ಶರೀರ ಪರಿಮಾಣ ೯ ಧನುಷಗಳು. ಆಯುಸ್ಸು ೧೦೦ ವರ್ಷಗಳು. (೨೪) ಮಹಾವೀರಸ್ವಾಮಿಯ ಶರೀರ ಪರಿಮಾಣ ೭ ಕೈಗಳು. ಆಯುಸ್ಸು ೭೨ ವರ್ಷಗಳು. ಈ ಇಪ್ಪತ್ತನಾಲ್ಕು ಮಂದಿಗಳು ಜೈನಮತವನ್ನು ಸ್ಥಾಪಿಸಿದ ಆಚಾರ್ಯರೂ ಗುರುಗಳೂ ಆಗಿರುವರು. ಇವರನ್ನೇ ಜೈನರು ಪರಮೇಶ್ವರರೆಂದೂ ಇವರು ಮೋಕ್ಷಕ್ಕೆ ಹೋಗಿರುವರೆಂದೂ ನಂಬುತ್ತಾರೆ. ಇಷ್ಟು ದೊಡ್ಡ ಶರೀರಗಳೂ, ಮನುಷ್ಯ ದೇಹಕ್ಕೆ

ಇಷ್ಟು ಆಯಸ್ಸೂ ಆಗಿರುವುದೆಲ್ಲಿಯಾದರೂ ಸಂಭವವಿದೆಯೆ? ಎಂಬುದನ್ನು ಬುದ್ಧಿವಂತರೇ ಯೋಚಿಸಲಿ. ಇಂತಹ ಮನುಷ್ಯರು ಈ ಭೂಗೋಳದಲ್ಲಿ ಸ್ವಲ್ಪವೇ ಮಂದಿ ವಾಸಿಸಬಲ್ಲರು. ಈ ಜೈನರ ಬುರುಡೆಗಳನ್ನೇ ತೆಗೆದುಕೊಂಡು ಪೌರಾಣಿಕರು ಒಂದು ಲಕ್ಷ ಹತ್ತು ಸಹಸ್ರ ಮತ್ತು ಒಂದು ಸಹಸ್ರ ವರ್ಷಗಳ ಆಯಸ್ಸನ್ನು ಬರೆದುದೂ ಸಂಭವವಾಗಲಾರದೆಂದಮೇಲೆ ಜೈನರ ಹೇಳಿಕೆಯಾದರೂ ಹೇಗೆ ಸಂಭವವಾದೀತು.

ಇನ್ನೂ ಕೇಳಿರಿ. ಕಲ್ಪಭಾಷ್ಯ ಪುಟ ೪–ನಾಗಕೇತನು ಒಂದು ಗ್ರಾಮದಷ್ಟು ದೊಡ್ಡದಾದ ಶಿಲೆಯೊಂದನ್ನು ಬೆರಳಿನಿಂದ ಎತ್ತಿದನು; (!) ಕಲ್ಪಭಾಷ್ಯ ಪು. ೩೫–ಮಹಾವೀರನು ಹೆಬ್ಬೆಟ್ಟಿನಿಂದ ಪೃಥ್ವಿಯನ್ನೊತ್ತಿದನು. ಅದರಿಂದ ಶೇಷನಾಗನು ಅಲ್ಲಾಡಿದನು (!) ಕಲ್ಪಭಾಷ್ಯ ಪುಟ ೪೬–ಮಹಾವೀರನಿಗೆ ಸರ್ಪವು ಕಚ್ಚಿತು. ರಕ್ತದ ಬದಲಿಗೆ ಹಾಲು ಸುರಿಯಿತು. ಆ ಸರ್ಪವು ಎಂಟನೇ ಸ್ವರ್ಗಕ್ಕೆ ಹೋಯಿತು (!) ಕಲ್ಪಭಾಷ್ಯ ಪುಟ ೪೭–ಮಹಾವೀರನ ಪಾದದ ಮೇಲೆ ಪಾಯಸವನ್ನು ಬೇಯಿಸಿದರು. ಆದರೆ ಪಾದವು ಸುಡಲಿಲ್ಲ (!) ಕಲ್ಪಭಾಷ್ಯ ಪು. ೧೬–ಸಣ್ಣದೊಂದು ಪಾತ್ರೆಯಲ್ಲಿ ಒಂಟೆಯನ್ನು ಕರೆದು ನಿಲ್ಲಿಸಿದನು (!) ರತ್ನಸಾರ ಭಾ. ೧. ಪು. ೧೪–ದೇಹದ ಕೊಳೆಯನ್ನು ತೆಗೆಯಬಾರದು. ತುರಿಸಲೂ ಕೂಡದು. ವಿವೇಕಸಾರ ಭಾ. ೧. ಪು. ೧೫–ಜೈನರ ಒಬ್ಬ ದಮಸಾರ ಸಾಧುವು ಕೋಪಗೊಂಡು ಉದ್ವೇಗಜನಕವಾದ ಸೂತ್ರವನ್ನು ಹೇಳಿ ಊರಿನಲ್ಲಿ ಬೆಂಕಿ ಹತ್ತಿಸಿದನು. ಅವನು ಮಹಾವೀರ ತೀರ್ಥಂಕರನಿಗೆ ಅತಿಪ್ರಿಯನಾಗಿದ್ದನು. ವಿವೇಕಸಾರ ಭಾ. ೧. ಪು. ೧೨೭–ರಾಜಾಜ್ಞೆಯನ್ನು ಅವಶ್ಯ ಪಾಲಿಸಬೇಕು. ವಿವೇಕಸಾರ ಭಾ. ೧. ಪು. ೧೨೭–ಒಬ್ಬ ಕೋಶಾ ವೇಶ್ಯೆಯು ತಟ್ಟೆಯಲ್ಲಿ ಸಾಸಿವೆಗಳ ರಾಶಿ ಹಾಕಿ ಅದರ ಮೇಲೆ ಹೂವುಗಳಿಂದ ಮುಚ್ಚಲ್ಪಟ್ಟ ಸೂಜಿಯನ್ನು ನಿಲ್ಲಿಸಿ, ಅದರ ಮೇಲೆ ಚೆನ್ನಾಗಿ ನೃತ್ಯಮಾಡಿದಳು. ಆದರೆ ಸೂಜಿಯು ಕಾಲಿಗೆ ಚುಚ್ಚಲಿಲ್ಲ. ಸಾಸಿವೆ ರಾಶಿಯು ಚದರಲಿಲ್ಲ (!!!) ತತ್ವವಿವೇಕ ಪು. ೨೨೮–ಆ ಕೋಶಾವೇಶ್ಯೆಯ ಹತ್ತಿರವೇ ಒಬ್ಬ ಸ್ಥೂಲಮುನಿಯು ೧೨ ವರ್ಷಗಳ ವರೆಗೆ ಸಂಭೋಗ

ಮಾಡುತ್ತಿದ್ದು ಅನಂತರ ದೀಕ್ಷೆ ತೆಗೆದುಕೊಂಡು ಸದ್ಗತಿಯನ್ನೆಳೆದಿದನು. ಕೋಶಾವೇಶ್ಯೆಯೂ ಜೈನಧರ್ಮವನ್ನು ಪಾಲಿಸುತ್ತಾ ಸದ್ಗತಿಯನ್ನು ಹೊಂದಿದಳು. ವಿವೇಕಸಾರ ೧. ಪು. ೧೪೫—ಒಬ್ಬ ಸಂತನ ಕುತ್ತಿಗೆಯಲ್ಲಿ ಧರಿಸಿಕೊಳ್ಳುವ ಕಂಥೆಯು ಪ್ರತಿ ದಿವಸ ವೈಶ್ಯನೊಬ್ಬನಿಗೆ ೫೦೦ ನಾಣ್ಯಗಳನ್ನು ಕೊಡುತ್ತಿತ್ತು. ವಿವೇಕ. ಭಾ. ೧. ಪು. ೨೨೮ —ಬಲವಂತನಾದವನ ಆಜ್ಞೆ; ದೇವಾಜ್ಞೆ, ಘೋರ ವನದಲ್ಲಿ ಕಷ್ಟದಿಂದ ನಿರ್ವಾಹ, ಗುರು, ತಾಯಿ, ತಂದೆ, ಕುಲಾಚಾರ್ಯ, ಬಂಧುಗಳು ಮತ್ತು ಧರ್ಮೋಪದೇಶಕ—ಈ ಆರು ಮಂದಿಗಳು ತಡೆಯುವುದರಿಂದ ಧರ್ಮದಲ್ಲಿ ನ್ಯೂನತೆ ಬರುವುದರಿಂದ ಧರ್ಮಹಾನಿಯಾಗುವುದಿಲ್ಲ.

ಸಮಾಕ್ಷಕ :—ಈಗ ನೋಡಿರಿ, ಇವರ ಮಿಥ್ಯಾಮಾತುಗಳನ್ನು. ಒಬ್ಬ ಮನುಷ್ಯನು ಒಂದು ಗ್ರಾಮದಷ್ಟು ದೊಡ್ಡದಾದ ಶಿಲೆಯನ್ನು ಎಂದಾದರೂ ಬೆರಳಿನ ಮೇಲೆ ನಿಲ್ಲಿಸಬಲ್ಲನೆ? ಪೃಥ್ವಿಯ ಮೇಲಿನಿಂದ ಹೆಬ್ಬೆಟ್ಟಿನಿಂದ ಪೃಥ್ವಿಯನ್ನೊತ್ತಿದರೆ ಅದು ದಬ್ಬಿಹೋಗುವುದಿದೆಯೆ? ಶೇಷನಾಗನೆಂಬುವನೊಬ್ಬನು ಇಲ್ಲವೇ ಇಲ್ಲವೆಂದಮೇಲೆ ಅಲ್ಲಾಡುವುದಾದರೂ ಯಾರು? ಶರೀರವನ್ನು ಕೊಯ್ದರೆ ಹಾಲು ಬರುವುದನ್ನು ಯಾರೂ ನೋಡಿಲ್ಲ. ಇದು ಬರೇ ಇಂದ್ರಜಾಲದ ಮಾತಲ್ಲದೆ ಮತ್ತೇನೂ ಅಲ್ಲ. ಅವನನ್ನು ಕಡಿದ ಸರ್ಪವೂ ಸ್ವರ್ಗಕ್ಕೆ ಹೋಯಿತು. ಮಹಾತ್ಮಾ ಶ್ರೀ ಕೃಷ್ಣ ಮೊದಲಾದವರು ಮೂರನೆಯ ನರಕಕ್ಕೆ ತೆರಳಿದರು ಎಂಬುದು ಎಷ್ಟರಮಟ್ಟಿನ ಸುಳ್ಳು ಮಾತು!! ಮಹಾವೀರನ ಪಾದದ ಮೇಲೆ ಪಾಯಸವನ್ನು ಬೇಯಿಸಿದಾಗ ಪಾದವು ಸುಡಲಿಲ್ಲವೇಕೆ? ಸಣ್ಣದೊಂದು ಪಾತ್ರೆಯಲ್ಲಿ ಒಂಟೆ ಬರುವುದಾದರೂ ಇದೆಯೆ? ಶರೀರದ ಕೊಳೆಯನ್ನು ತೆಗೆಯದವರು ತುರಿಸದವರು ಎಷ್ಟರಮಟ್ಟಿನ ದುರ್ಗಂಧವೆಂಬ ನರಕವನ್ನನುಭವಿಸುತ್ತಿದ್ದಾರೋ ಏನೊ? ನಗರವನ್ನು ಸುಟ್ಟು ಬೂದಿಮಾಡಿ ಹಾಕಿದ ಆ ಸಾಧುವಿನ ದಯಾಕ್ಷಮೆಗಳೆಲ್ಲಿ ಹೋದವು? ಮಹಾವೀರನ ಸಂಗಡವಿದ್ದೂ ಸಹ ಅವನ ಆತ್ಮವು ಪವಿತ್ರವಾಗದಿದ್ದ ಮೇಲೆ ಮಹಾವೀರನು ಸತ್ತ ಅನಂತರ ಅವನನ್ನಾಶ್ರಯಿಸಿ, ಜೈನರೆಂದಿಗೂ ಪವಿತ್ರರಾಗಲಾರರು. ರಾಜನ ಆಜ್ಞೆಯನ್ನು ಪಾಲಿಸಬೇಕೆಂಬುದೇನೊ ನಿಜವೇ. ಆದರೆ ಜೈನರು

ಮಾತ್ರ ವೈಶ್ಯರಾಗಿರುವುದರಿಂದ ರಾಜನಿಂದ ಭಯಪಟ್ಟು ಈ ಮಾತನ್ನು ಬರೆದಿರಬಹುದು. ಕೋಶಾವೇಶ್ಯೆಯ ಶರೀರವು ಎಷ್ಟು ಹಗುರವಾಗಿದ್ದರೂ ಕೂಡ, ಸಾಸಿವೆರಾಶಿಯ ಮೇಲೆ ಸೂಜಿಯನ್ನು ನಿಲ್ಲಿಸಿ ಅದರ ಮೇಲೆ ಕುಣಿಯುವುದು, ಸೂಜಿಯು ಚುಚ್ಚದಿರುವುದು ಹಾಗೂ ಸಾಸಿವೆಗಳು ಚದರದಿರುವುದು ಅತೀ ಅಸತ್ಯವಲ್ಲದೆ ಮತ್ತೇನು? ಯಾವ ಸ್ಥಿತಿಯಲ್ಲಿ ಏನು ಬೇಕಾದರೂ ಆಗಲಿ ಧರ್ಮವನ್ನು ಮಾತ್ರ ಯಾರೂ ಬಿಡಬಾರದು. ಶಾಲು ಏನೋ ವಸ್ತ್ರವಾಗಿರುತ್ತೆ. ಆದು ಪ್ರತಿನಿತ್ಯ ೫೦೦ ನಾಣ್ಯಗಳನ್ನು ಹೇಗೆ ಕೊಡಬಲ್ಲುದು? ಇವರ ಇಂತಹ ಅಸಂಭವ ಕಥೆಗಳನ್ನು ಬರೆಯುವುದಾದರೆ ಜೈನರ ಆ ಪುರಾಣಗಳಂತೆಯೇ ಈ ಗ್ರಂಥವೂ ಬಹಳ ವಿಸ್ತಾರವಾದೀತು. ಆದಕಾರಣ ಇನ್ನು ಹೆಚ್ಚು ಬರೆಯುವುದಿಲ್ಲ. ಜೈನರ ಕೆಲವು ವಿಷಯಗಳನ್ನು ಬಿಟ್ಟು ಬೇರೆಲ್ಲವೂ ಮಿಥ್ಯಾಜಾಲಗಳಿಂದ ತುಂಬಿಹೋಗಿವೆ. ನೋಡಿರಿ—

ದೋಸಸಿ ದೋರವಿ ಪಢವೇ।
ದುಗುಣಾ ಲವಣಂ ಮಿಧಾಯು ಈಸಂವೇ।
ವಾರಸಸಸಿ ವಾರಸರವಿ।
ತತ್ಯಭಿ ಇಂನಿ ದಿಶ ಸಸಿರವಿಣೋ॥

[ಪ್ರಕರಣ. ಭಾ. ೪। ಸಂಗ್ರಹಣೀ-ಸೂತ್ರ ೭೭]

ಜಂಬೂದ್ವೀಪವು ಒಂದು ಲಕ್ಷ ಯೋಜನಗಳು ಅಂದರೆ ನಾಲ್ಕು ಲಕ್ಷ ಹರದಾರಿಗಳ ವಿಸ್ತಾರವುಳ್ಳದೆಂದು ಬರೆದಿದೆ. ಅವುಗಳಲ್ಲಿದು ಮೊದಲನೆಯ ದ್ವೀಪವೆನಿಸುತ್ತದೆ. ಇದರಲ್ಲಿ ಇಬ್ಬರು ಚಂದ್ರರೂ, ಇಬ್ಬರು ಸೂರ್ಯರೂ ಇದ್ದಾರೆ. ಅಂತೆಯೇ ಲವಣಸಮುದ್ರದಲ್ಲಿ ಇದಕ್ಕಿಂತಲೂ ಎರಡುಪಾಲಿನಷ್ಟು ಅಂದರೆ ನಾಲ್ಕು ಚಂದ್ರರೂ ನಾಲ್ಕು ಸೂರ್ಯರೂ ಇದ್ದಾರೆ. ಧಾತಕೀ ಖಂಡದಲ್ಲಿ ೧೨ ಚಂದ್ರರೂ ೧೨ ಸೂರ್ಯರೂ ಇರುತ್ತಾರೆ. ಇವುಗಳನ್ನು ತ್ರಿಗುಣವಾಗಿ ಮಾಡಿದರೆ ೩೬ ಆಗುತ್ತಾರೆ. ಅವರ ಜತೆಗೆ ಎರಡು ಜಂಬೂದ್ವೀಪಗಳ ಮತ್ತು ನಾಲ್ಕು ಲವಣ ಸಮುದ್ರಗಳ ಸೂರ್ಯಚಂದ್ರರು ಕೂಡಿ ೪೨ ಚಂದ್ರರು ಹಾಗೂ ೪೨ ಸೂರ್ಯರು ಕಾಲೋದಧಿ ಸಮುದ್ರದಲ್ಲಿದ್ದಾರೆ. ಇದೇ ರೀತಿ

ಮುಂದುಮುಂದಿನ ದ್ವೀಪಗಳು ಹಾಗೂ ಸಮುದ್ರದಲ್ಲಿ ಹಿಂದೆ ಹೇಳಿದ ೪೨ ಸಂಖ್ಯೆಯನ್ನು ತ್ರಿಗುಣಮಾಡಿದರೆ ೧೨೬ ಆಗುತ್ತದೆ. ಅವುಗಳಿಗೆ ಧಾತಕೀ ಖಂಡದ ೧೨, ಲವಣಸಮುದ್ರದ ೪, ಜಂಬೂದ್ವೀಪದ ಎರಡೆರಡನ್ನು ಕೂಡಿಸಿ ಒಟ್ಟಿಗೆ ೧೪೪ ಚಂದ್ರರೂ ೧೪೪ ಸೂರ್ಯರೂ ಪುಷ್ಕರದ್ವೀಪದಲ್ಲಿದ್ದಾರೆ. ಇದು ಅರ್ಧ ಮನುಷ್ಯಕ್ಷೇತ್ರದ ಗಣನೆಯಾಗಿರುತ್ತದೆ. ಆದರೆ ಮನುಷ್ಯರು ವಾಸಿಸದಿರುವಲ್ಲಿ ಎಷ್ಟೋ ಸೂರ್ಯರೂ ಚಂದ್ರರೂ ಇದ್ದಾರೆ. ಹಿಂದಿನ ಅರ್ಧ ಪುಷ್ಕರದ್ವೀಪದಲ್ಲಿರುವ ಸೂರ್ಯಚಂದ್ರರೆಲ್ಲರೂ ಸ್ಥಿರವಾಗಿದ್ದಾರೆ. ಹಿಂದೆ ಹೇಳಿದ ೧೪೪ ನ್ನು ತ್ರಿಗುಣವಾಗಿ ಮಾಡಿದರೆ ೪೩೨ ಆಗುತ್ತದೆ. ಅದರಲ್ಲಿ ಜಂಬೂದ್ವೀಪದ ಎರಡೆರಡು ಚಂದ್ರಸೂರ್ಯರನ್ನೂ, ನಾಲ್ಕು ನಾಲ್ಕು ಲವಣಸಮುದ್ರದ ಚಂದ್ರಸೂರ್ಯರನ್ನೂ, ಧಾತಕೀ ಖಂಡದ ೧೨-೧೨, ಹಾಗೂ ೪೨-೪೨ ಕಾಲೋದಧಿಯ ಚಂದ್ರಸೂರ್ಯರನ್ನೂ ಕೂಡಿಸುವುದರಿಂದ ೪೯೨ ಚಂದ್ರರೂ ೪೯೨ ಸೂರ್ಯರೂ ಪುಷ್ಕರ ಸಮುದ್ರದಲ್ಲಿದ್ದಾರೆ. ಈ ಎಲ್ಲ ವಿಷಯವನ್ನು ಶ್ರೀ ಜಿನ ಗಣೀಕ್ಷಮಾಶ್ರಮಣನು ದೊಡ್ಡ "ಸಂಘಯಣೀ" ಯಲ್ಲಿಯೂ "ಯೋತೀಸಕರಂಡಕ ಪಯನ್ನರಲ್ಲಿಯೂ, ಚಂದ್ರಪನ್ನತಿ ಮತ್ತು ಸೂರಪನ್ನತಿ ಮೊದಲಾದ ಸಿದ್ಧಾಂತ ಗ್ರಂಥಗಳಲ್ಲಿಯೂ ಇದೇ ರೀತಿ ಹೇಳಿರುತ್ತಾನೆ.

ಸವಿಾಕ್ಷಕ—ಭೂಗೋಳ ಖಗೋಳಗಳನ್ನು ಬಲ್ಲವರೆ! ಇದನ್ನೀಗ ಸ್ವಲ್ಪ ಆಲಿಸಿರಿ. ಈ ಭೂಗೋಳದಲ್ಲಿ ಒಂದು ರೀತಿಯಿಂದ ೪೯೨ ಸೂರ್ಯಚಂದ್ರರೂ, ಎರಡನೆಯ ವಿಧದಿಂದ ಅಸಂಖ್ಯ ಸೂರ್ಯ ಚಂದ್ರರೂ ಇರುವರೆಂದು ಜೈನರು ನಂಬುತ್ತಾರೆ. ವೇದಮತಾನುಸಾರವಾಗಿರುವ ಸೂರ್ಯಸಿದ್ಧಾಂತ ಮೊದಲಾದ ಜ್ಯೋತಿಷಗ್ರಂಥಗಳ ಅಧ್ಯಯನದಿಂದ ಭೂಗೋಳ ಖಗೋಳಗಳ ಯಥಾರ್ಥಜ್ಞಾನವಾದುದು ನಿಮ್ಮ ಮಹಾಭಾಗ್ಯವೆನ್ನಬೇಕು. ಎಲ್ಲಿಯಾದರೂ ಜೈನರ ಮಹಾ ಅಂಧಕಾರದಲ್ಲಿದ್ದು ಬಿಟ್ಟಿದ್ದರೆ ಜೈನರು ಈಗಿರುವಂತೆ ಜನ್ಮವಿಡೀ ಅಂಧಕಾರದಲ್ಲೇ ಇರಬೇಕಾಗುತ್ತಿತ್ತು. ಇಷ್ಟು ದೊಡ್ಡ ಪೃಥ್ವಿಗೆ ೩೦ ಗಳಿಗೆಗಳಲ್ಲಿ ಒಬ್ಬೊಬ್ಬರೇ ಸೂರ್ಯಚಂದ್ರರು ಹೇಗೆ ತಾನೇ ಬಂದುಬಿಟ್ಟಾರು? ಆದುದರಿಂದ ಜಂಬೂದ್ವೀಪದಲ್ಲಿ ಒಬ್ಬ ಸೂರ್ಯ

ನಿಂದಲೂ ಒಬ್ಬ ಚಂದ್ರನಿಂದಲೂ ಕೆಲಸ ಸಾಗಲಿಕ್ಕಿಲ್ಲವೆಂದು ಈ ಅವಿದ್ವಾಂಸರಿಗೆ ಸಂದೇಹ ಹುಟ್ಟಿತು. ಪೃಥ್ವಿಯು ಸೂರ್ಯಾದಿಗಳಿಗಿಂತಲೂ ದೊಡ್ಡದೆಂದು ಹೇಳುವುದು ಬಹಳ ತಪ್ಪು ತಿಳುವಳಿಕೆಯು.

ದೋ ಸಸಿ ದೋ ರವಿ ಪಂತೀ ಏಗಂತರಿಯಾಛ ಸತಿಸಂಖಾಯಾ।
ಮ್ಯೆರುಂ ಪಯಾಹಿಣಂತಾ । ಮಾಣುಸಖಿತ್ತೀ ರಿಅಡಂತಿ ॥

[ಪ್ರಕರಣ ಭಾ. ೪ ಸಂಗ್ರಹ. ಸೂ. ೬೯]

ಮನುಷ್ಯಲೋಕದಲ್ಲಿ ಚಂದ್ರಸೂರ್ಯರ ಪಂಕ್ತಿಸಂಖ್ಯೆಯನ್ನು ಹೇಳುತ್ತೇವೆ. ಎರಡು ಚಂದ್ರರ ಹಾಗೂ ಎರಡು ಸೂರ್ಯರ ಪಂಕ್ತಿಗಳಿವೆ. ಅವು ಒಂದೊಂದು ಲಕ್ಷ ಯೋಜನ ಅಂದರೆ ೪-೪ ಲಕ್ಷ ಯೋಜನಗಳ ಅಂತರದಲ್ಲಿ ಚಲಿಸುತ್ತಿರುತ್ತವೆ. ಉದಾ—ಸೂರ್ಯ ಪಂಕ್ತಿಯನಂತರ ಒಂದು ಚಂದ್ರಪಂಕ್ತಿಯೂ, ಆ ಚಂದ್ರ ಪಂಕ್ತಿಯ ಅನಂತರ ಒಂದು ಸೂರ್ಯ ಪಂಕ್ತಿಯೂ ಇದೆ. ಈ ರೀತಿ ನಾಲ್ಕು ಪಂಕ್ತಿಗಳಿವೆ. ಒಂದೊಂದು ಚಂದ್ರ ಪಕ್ತಿಯಲ್ಲಿ ೬೬ ಚಂದ್ರರೂ ಒಂದೊಂದು ಸೂರ್ಯ ಪಂಕ್ತಿಯಲ್ಲಿ ೬೬ ಸೂರ್ಯರೂ ಇದ್ದಾರೆ. ಆ ನಾಲ್ಕೂ ಪಂಕ್ತಿಗಳು ಜಂಬೂದ್ವೀಪದ ಮೇರುಪರ್ವತದ ಪ್ರದಕ್ಷಿಣೆಗೈಯುತ್ತಾ, ಮನುಷ್ಯಕ್ಷೇತ್ರದಲ್ಲಿ ಪರಿಭ್ರಮಣ ಮಾಡುತ್ತಿವೆ. ಅಂದರೆ ಜಂಬೂದ್ವೀಪದ ಮೇರುವಿನ ದಕ್ಷಿಣದಿಕ್ಕಿನಲ್ಲೊಬ್ಬ ಸೂರ್ಯನು ತಿರುಗಾಡುತ್ತಿರುವುದಾದರೆ ಆಗ ಇನ್ನೊಬ್ಬ ಉತ್ತರದಿಕ್ಕಿನಲ್ಲಿ ತಿರುಗುತ್ತಿರುತ್ತಾನೆ. ಅದೇ ರೀತಿ ಲವಣಸಮುದ್ರದ ಒಂದೊಂದು ಕಡೆಯಲ್ಲಿ ಇಬ್ಬಿಬ್ಬರು ಸೂರ್ಯರೂ, ಧಾತಕೀಖಂಡದ ಒಂದೊಂದು ಕಡೆಯಲ್ಲಿ ಆರಾರು ಸೂರ್ಯರೂ, ಕಾಲೋದಧಿಯ ಒಂದೊಂದು ಬದಿಯಲ್ಲಿ ೨೧-೨೧ ಸೂರ್ಯರೂ, ಪುಷ್ಕರಾರ್ಧದ ಬದಿಯಲ್ಲಿ ೩೬-೩೬ ಸೂರ್ಯರೂ, ಈ ರೀತಿ ಎಲ್ಲ ಕೂಡಿ ೬೬ ಸೂರ್ಯರು ದಕ್ಷಿಣ ದಿಕ್ಕಿನಲ್ಲಿಯೂ, ಅಷ್ಟೇ ಉತ್ತರ ದಿಕ್ಕಿನಲ್ಲಿಯೂ ತಮ್ಮ ತಮ್ಮ ಕ್ರಮಕ್ಕೊಳಪಟ್ಟು ನಡೆಯುತ್ತಿರುತ್ತಾರೆ. ಈ ಎರಡೂ ದಿಕ್ಕುಗಳ ಸೂರ್ಯರನ್ನು ಕೂಡಿಸಿದರೆ ಒಟ್ಟು ೧೩೨ ಸೂರ್ಯರಿದ್ದಾರೆ. ಅದೇ ರೀತಿ ೬೬-೬೬ ಚಂದ್ರರ ಎರಡೂ ದಿಕ್ಕುಗಳನ್ನು ಕೂಡಿಸಿದರೆ ಒಟ್ಟಿಗೆ

೧೩೨ ಚಂದ್ರರು ಮನುಷ್ಯಲೋಕದಲ್ಲಿ ತಿರುಗುತ್ತಿರುತ್ತಾರೆ. ಇದೇ ರೀತಿ ಚಂದ್ರನ ಜೊತೆಯಲ್ಲಿ ನಕ್ಷತ್ರಗಳ ಪಂಕ್ತಿಗಳೂ ಬಹಳ ಇವೆಯೆಂದು ತಿಳಿಯಬೇಕು.

ಸಮಿಾಕ್ಷಕ :—ತಮ್ಮಂದಿರಾ ! ಕೇಳಿರಿ. ಈ ಭೂಗೋಳದಲ್ಲಿ ೧೩೨ ಸೂರ್ಯರೂ, ೧೩೨ ಚಂದ್ರರೂ ಜೈನರ ಮನೆಯ ಮೇಲೆ ಉರಿಯುತ್ತಿರಬಹುದು. ಉರಿಯುತ್ತಿದ್ದು ದಾದರೆ ಅವರು ಹೇಗೆ ಜೀವಿಸಿರುತ್ತಾರೆ? ರಾತ್ರಿಯಲ್ಲಿ ಜೈನರು ಚಳಿಯಿಂದ ನಡುಗುತ್ತಿರಬಹುದು. ಇಂತಹ ಅಸಂಭವ ಮಾತುಗಳಿಗೆ ಭೂಗೋಳಖಗೋಳ ಜ್ಞಾನವಿಲ್ಲದವರು ಬಲಿಬೀಳುತ್ತಾರೆಯೇ ವಿನಹ ಬೇರಾರೂ ಬೀಳುವುದಿಲ್ಲ. ಸೂರ್ಯನು ಇಂತಹ ಎಷ್ಟೋ ಭೂಗೋಳಗಳಿಗೆ ಪ್ರಕಾಶಕೊಡುತ್ತಿರುವನೆಂದಮೇಲೆ ಈ ಸಣ್ಣ ಭೂಗೋಳದ್ದು ಏನು ದೊಡ್ಡ ಮಾತು? ಪೃಥ್ವಿಯು ತಿರುಗದಿದ್ದು ಭೂಮಿಯ ಸುತ್ತಲೂ ಸೂರ್ಯನು ತಿರುಗುವುದಾಗಿದ್ದರೆ ಎಷ್ಟೋ ವರ್ಷಗಳಿಗೊಂದು ದಿನವೂ, ರಾತ್ರಿಯೂ ಆಗಿಬಿಡುತ್ತಿತ್ತು. ಹಿಮಾಲಯದ ಹೊರತು ಮೇರು ಪರ್ವತವೆಂಬುದು ಬೇರಾವುದೂ ಇಲ್ಲ. ಆದು, ಸೂರ್ಯನ ಎದುರಿನಲ್ಲಿ, ಗಡಿಗೆಯ ಎದುರಿನಲ್ಲಿ ಸಾಸಿವೆಕಾಳು ಇದ್ದಷ್ಟೂ, ಇಲ್ಲ. ಈ ವಿಷಯಗಳನ್ನು ಜೈನರು ಆ ಮತದಲ್ಲಿರುವವರೆಗೆ ತಿಳಿಯಲಾರರು. ಸದಾ ಅಂಧಕಾರದಲ್ಲಿರುವರು.

ಸಮುತ್ತ ಚರಣ ಸಹಿಯಾ ಸವ್ವಂ ಲೋಗಂ ಫುಸೇ ನಿರವಸೇಸಂ।
ಸತ್ತಯಚ ಉದಸಭಾಯೋ ಪಂಚಯಸುಪದೇಸ ವಿರಈವಿ॥

[ಪ್ರಕರಣ ಭಾ. ೪ ಸಂಗ್ರಹಸೂ. ೧೩೫]

ಸಮ್ಯಕ್ಚಾರಿತ್ರಯುತರಾದ ಕೇವಲಿಗಳು ಕೇವಲ ಸಮುದ್ಘಾತ ಅವಸ್ಥೆಯಿಂದಲೇ ಸಕಲ ಹದಿನಾಲ್ಕು ರಾಜ್ಯಲೋಕಗಳನ್ನು ತಮ್ಮ ಆತ್ಮಪ್ರದೇಶವಾಗಿ ಮಾಡಿ ತಿರುಗುವರು.

ಸಮಿಾಕ್ಷಕ—ಜೈನರು ೧೪ ರಾಜ್ಯಗಳನ್ನು ನಂಬುತ್ತಾರೆ. ಇವುಗಳಲ್ಲಿನ ಹದಿನಾಲ್ಕನೆಯ ರಾಜ್ಯದ ಶಿಖರದ ಮೇಲಿನ ಸರ್ವಾರ್ಥ ಸಿದ್ಧಿ ವಿಮಾನದ ಧ್ವಜದ ಮೇಲೆ ಸ್ವಲ್ಪ ದೂರದಲ್ಲಿರುವ ಸಿದ್ಧ ಶಿಲೆಗೂ, ದಿವ್ಯ ಆಕಾಶಕ್ಕೂ ಶಿವಪುರವೆಂದು ಹೇಳುತ್ತಾರೆ. ಕೇವಲ ಜ್ಞಾನ,

ಸರ್ವಜ್ಞತ್ವ, ಹಾಗೂ ಪೂರ್ಣಪವಿತ್ರತೆಯನ್ನು ಪಡೆದ ಕೇವಲಿಗಳು ಆ ಲೋಕಕ್ಕೆ ಹೋಗುತ್ತಾರೆ. ಮತ್ತು ತಮ್ಮ ಆತ್ಮಪ್ರದೇಶದಿಂದ ಸರ್ವಜ್ಞರಾಗಿರುತ್ತಾರೆ.

ಯಾವನಿಗೆ ಪ್ರದೇಶವಿದೆಯೋ ಅವನು ವಿಭುವಾಗಲಾರನು. ವಿಭುವಲ್ಲದವನು ಸರ್ವಜ್ಞ ಹಾಗೂ ಕೇವಲಜ್ಞಾನಿಯೆಂದಿಗೂ ಆಗಲಾರನು. ಯಾವನ ಆತ್ಮವು ಏಕದೇಶಿಯಾಗಿದೆಯೋ ಆ ಆತ್ಮನೇ ಹೋಗುತ್ತಾ ಬರುತ್ತಾ ಇರುತ್ತದೆ. ಅದೇ ಬದ್ಧವೂ ಮುಕ್ತವೂ, ಜ್ಞಾನಿಯೂ ಅಜ್ಞಾನಿಯೂ ಆಗುತ್ತದೆ. ಆದೆಂದಿಗೂ ಸರ್ವವ್ಯಾಪಿಯಂತೆಯಾಗಲೀ ಸರ್ವಜ್ಞನಂತಾಗಲೀ ಆಗಲಾರದು. ಅಲ್ಪರೂ ಅಲ್ಪಜ್ಞರೂ ಆಗಿದ್ದ ಜೈನರ ತೀರ್ಥಂಕರರಾದ ಜೀವಾತ್ಮರು ಸರ್ವವ್ಯಾಪಕರೂ ಸರ್ವಜ್ಞರೂ ಆಗಲಾರರು. ಆದರೆ ಜೈನರು ಸರ್ವಜ್ಞಾದಿಗುಣಗಳು ಯಾಥಾತಥ್ಯವಾಗಿ ಹೊಂದಿಕೊಳ್ಳುವಂತಹ ಅನಾದ್ಯನಂತನೂ, ಸರ್ವವ್ಯಾಪಕನೂ, ಸರ್ವಜ್ಞನೂ, ಪವಿತ್ರನೂ, ಜ್ಞಾನಸ್ವರೂಪನೂ ಆದ ಪರಮಾತ್ಮನನ್ನು ನಂಬುವುದೇ ಇಲ್ಲ.

ಗಬ್ಭನರತಿ ಪಲಿಯಾಊ । ತಿಗಾಉ ಉಕ್ಕೋಸತೇ
ಜಹನ್ನೇಣಂ ।
ಮುಚ್ಛಿಮ ದುಹಾವಿ ಅಂತಮುಹು । ಅಂಗುಲ ಅಸಂಖ
ಭಾಗತಣೂ ॥

[ಪ್ರಕರಣ ಭಾ. ೪ ಸಂಗ್ರಹಸೂ. ೨೪೧]

ಗರ್ಭಜರೆಂದೂ, ಗರ್ಭದ ಹೊರತು ಹುಟ್ಟುವವರೆಂದೂ ಮನುಷ್ಯರು ಇಲ್ಲಿ ಎರಡು ವಿಧವಾಗಿದ್ದಾರೆ. ಅವರಲ್ಲಿ ಗರ್ಭಜ ಮನುಷ್ಯನ ಆಯಸ್ಸು ಉತ್ಕೃಷ್ಟ ಮೂರು ಪಲ್ಯೋಪಮಕಾಲವೆಂದೂ ಶರೀರ ಪರಿಮಾಣವು ಮೂರು ಹರದಾರಿಗಳೆಂದೂ ತಿಳಿಯುವುದು.

ಸಮೀಕ್ಷಕ—ಮೂರು ಪಲ್ಯೋಪಮಕಾಲ ಆಯಸ್ಸನ್ನೂ ಮೂರು ಹರದಾರಿಗಳ ಶರೀರವನ್ನೂ ಉಳ್ಳ ಮನುಷ್ಯರಿಲ್ಲಿ ಕೆಲವೇ ಮಂದಿಗಳು ಹಿಡಿಸಬಹುದು. ಹಿಂದೆ ಬರೆದಂತಹ ಮೂರು ಪಲ್ಯೋಮ ಕಾಲದ

ವರೆಗೆ ಜೀವಿಸಿರುವುದಾದರೆ ಅವರ ಮಕ್ಕಳೂ ಮೂರು ಮೂರು ಹರದಾರಿ ಶರೀರವುಳ್ಳವರಿರಬಹುದು. ಇಂತಹ ಮನುಷ್ಯರು ಮುಂಬಯಿಯಂತಹ ನಗರದಲ್ಲಿ ಇಬ್ಬರೂ ಕಲ್ಕತ್ತದಂತಹ ನಗರದಲ್ಲಿ ಮೂವರು ಅಥವಾ ನಾಲ್ವರೂ ನಿವಾಸ ಮಾಡಬಹುದು. ಹಾಗಿದ್ದರೆ ಜೈನರು ಒಂದು ನಗರದಲ್ಲಿ ಲಕ್ಷಗಟ್ಟಲೆ ಜನರು ನಿವಾಸಿಸುತ್ತಾರೆಂದು ಬರೆದಿರುವುದರಿಂದ ಅವರ ನಗರವೂ ಲಕ್ಷಾಂತರ ಹರದಾರಿಗಳದ್ದಿರಬೇಕಾಗುತ್ತದೆ. ಹೀಗಾದರೆ ಈ ಇಡೀ ಭೂಗೋಳದಲ್ಲಿ ಒಂದು ನಗರಿಯೂ ಆಗಲಾರದು.

ಪಣವಮಾ ಲಲರಕಯೋಯಣ । ವಿರಕಂಭಾ ಸಿದ್ಧಿಶಿಲಫಲಿಹ ವಿಮಲಾ
ತದುವರಿ ಗಜೋಯಣಂತೇ ಲೋಗಂತೋ ತಚ್ಛ ಸಿದ್ಧ ಠಿಈ ॥

[ಪ್ರಕರಣ ಭಾ. ೪ ಸಂಗ್ರ ಸೂ. ೨೫೮]

ಸರ್ವಾರ್ಥಸಿದ್ಧಿ ವಿಮಾನದ ಪತಾಕೆಯ ಮೇಲೆ ಹದಿನೆರಡು ಯೋಜನಗಳಲ್ಲಿರುವ ಸಿದ್ಧಶಿಲೆಯ ಆಗಲ, ಉದ್ದ, ದಪ್ಪ ಒಟ್ಟಿಗೆ ೪೫ ಲಕ್ಷ ಯೋಜನಗಳಷ್ಟಿದೆ. ಅದರ ಸಿದ್ಧಭೂಮಿಯು ಬಿಳಿಯಾಗಿದ್ದು, ಅರ್ಜುನ ಸುವರ್ಣಮಯವಾದ ಸ್ಫಟಿಕಕ್ಕೆ ಸಮಾನವಾಗಿ ನಿರ್ಮಲವಾಗಿದೆ. ಅದನ್ನು ಕೆಲವರು 'ಈಷತ್' ಎಂದೂ 'ಪ್ರಾಗ್ಭಾರಾ' ಎಂದೂ ಕರೆಯುತ್ತಾರೆ. ಈ ಸರ್ವಾರ್ಥಸಿದ್ಧ ಶಿಲೆಯು ವಿಮಾನದಿಂದ ೧೨ ಯೋಜನಗಳ ವರೆಗೆ ಅಲೋಕವಾಗಿರುತ್ತದೆ. ಈ ಪರಮಾರ್ಥವನ್ನು ಬರೇ ಕೇವಲೀಶ್ರುತನೇ ತಿಳಿಯುತ್ತಾನೆ. ಈ ಸಿದ್ಧಶಿಲೆಯು ಸರ್ವಾರ್ಥಮಧ್ಯಭಾಗದಲ್ಲಿ ೮ ಯೋಜನ ಸ್ಥೂಲವಾಗಿದೆ. ಅಲ್ಲಿಂದ ನಾಲ್ಕು ದಿಕ್ಕುಗಳೊಡನೆಯೂ ನಾಲ್ಕು ಉಪದಿಕ್ಕುಗಳೊಡನೆಯೂ ಹೊಂದುತ್ತಾ, ಹೊಂದುತ್ತಾ ನೊಣದ ರೆಕ್ಕೆಯಂತೆ ತೆಳುವಾಗಿದ್ದು ಮೇಲ್ಬದಿಯತ್ತ ಉತ್ತಾನಛತ್ರದ ಆಕಾರದಲ್ಲಿ ಸಿದ್ಧಶಿಲೆಯ ಸ್ಥಾಪನೆಯಾಗಿದೆ. ಆ ಶಿಲೆಯ ಮೇಲೆ ಒಂದು ಯೋಜನದ ಅಂತರದಲ್ಲಿ ಲೋಕಾಂತವಿದೆ. ಅಲ್ಲಿ ಸಿದ್ಧಪುರುಷರಿರುತ್ತಾರೆ.

ಸವಿಾಕ್ಷಕ :—ಈಗ ಯೋಚಿಸಬೇಕು. ಸರ್ವಾರ್ಥಸಿದ್ಧಿ ವಿಮಾ

ನದ ಧ್ವಜದ ಮೇಲಿರುವ ೪೫ ಲಕ್ಷ ಯೋಜನ ಪರಿಮಾಣದ ಶಿಲೆಯೇ ಜೈನರ ಮುಕ್ತಿಯ ಸ್ಥಳವು. ಬಹಳ ಒಳ್ಳೆಯದೂ, ನಿರ್ಮಲವೂ ಆಗಿದ್ದರೂ ಸಹ ಅದರಲ್ಲಿ ವಾಸಿಸುತ್ತಿರುವ ಮುಕ್ತಜೀವಾತ್ಮನು ಒಂದು ರೀತಿಯಲ್ಲಿ ಬಂಧನದಲ್ಲೇ ಇದ್ದಾರೆ. ಏಕೆಂದರೆ ಅವರು ಆ ಶಿಲೆಯಿಂದ ಹೊರಗೇ ಹೊರಟರೆ ಮುಕ್ತಿಸುಖದಿಂದ ಪತಿತರಾಗುತ್ತಾರೋ ಏನೊ ? ಅವರು ಒಳಗೇನೇ ಇರುವುದಾದರೆ ಗಾಳಿಯೂ ಅವರಿಗೆ ಸಿಗುತ್ತದೊ ಇಲ್ಲವೊ ? ಇವೆಲ್ಲ ಬರೇ ಅವಿದ್ವಾಂಸರನ್ನು ಮೋಸಪಡಿಸಲು ಕಲ್ಪಿತವಾದ ಭ್ರಮಜಾಲಗಳು.

ವಿತಿ ಚ ಉರಿಂ ದಿಸ ಸರೀರಂ । ವಾರ ಸ ಜೋಯಣಂತಿ
ಕೋಸ ವ ಉಕೋಸಂ ಜೋಯಣ ಸಹಸ ಪಣೆಂದಿಯು ।
ಉಹೇ ಬುಚ್ಛಂತಿ ವಿಸೇಸಂತು ॥

[ಪ್ರಕ. ಭಾ. ೪, ಸಂಗ್ರಹ ಸೂ. ೨೫೭]

ಸಾಧಾರಣವಾಗಿ ಏಕೇಂದ್ರಿಯವುಳ್ಳ ಪ್ರಾಣಿಯು ಶರೀರವು ಹೆಚ್ಚೆಂದರೆ ಒಂದು ಸಾವಿರ ಯೋಜನ ಪರಿಮಾಣದ್ದೆಂದು ತಿಳಿಯಬೇಕು. ಎರಡಿಂದ್ರಿಯವುಳ್ಳ ಶಂಖ ಮೊದಲಾದುವುಗಳ ಶರೀರವು ೧೨ ಯೋಜನಗಳುಳ್ಳದೆಂದು ತಿಳಿಯುವುದು. ನಾಲ್ಕು ಇಂದ್ರಿಯಗಳನ್ನುಳ್ಳ ಭ್ರಮರಾದಿಗಳ ಶರೀರವು ೪ ಕೋಶದ್ದೆಂದೂ, ಐದಿಂದ್ರಿಯಗಳುಳ್ಳ ಜೀವಿಯ ಶರೀರವು ಒಂದುಸಾವಿರ ಯೋಜನ ಅಂದರೆ ನಾಲ್ಕುಸಾವಿರ ಪರಿಮಾಣವುಳ್ಳದೆಂದೂ ತಿಳಿಯಬೇಕು.

ಸಮೀಕ್ಷಕ :—ನಾಲ್ಕು ನಾಲ್ಕು ಸಹಸ್ರ ಹರದಾರಿ ಪರಿಮಾಣವುಳ್ಳ ಶರೀರಧಾರಿಗಳಿದ್ದರೆ ಭೂಗೋಳದಲ್ಲಿ ಬಹಳ ಕಡಿಮೆ ಜನರು ಹಿಡಿಸುವರು. ಅಂದರೆ ಕೆಲವು ನೂರು ಮನುಷ್ಯರಿಂದಲೇ ಭೂಗೋಳವು ನಿಬಿಡವಾಗಿ ಬಿಡುವುದು. ಯಾರಿಗೂ ನಡೆಯಲು ಜಾಗವೇ ಇರಲಾರದು. ಅವರು ಇರಲು ಸ್ಥಾನವನ್ನು ಮಾರ್ಗವನ್ನು ಜೈನರ ಹತ್ತಿರ ಕೇಳಬೇಕಾಗುವುದು. ಇವರು ಬರೆದಿರುವ ಕಾರಣ ತಮ್ಮ ಮನೆಯಲ್ಲೇ ಅವರನ್ನಿರಿಸಿಕೊಳ್ಳಿರಿ. ನಾಲ್ಕುಸಾವಿರ ಹರದಾರಿಯ ಶರೀರದವನಿಗೆ ವಾಸಮಾಡಲು ಕಡಿಮೆಪಕ್ಷ ೩೨ ಸಾವಿರ ಹರದಾರಿಯ ಮನೆಗೆ

ಬೇಕಾಗುವುದು. ಇಂತಹ ಒಂದು ಮನೆಯನ್ನು ಕಟ್ಟಿಸುವುದಕ್ಕಾಗಿ ಜೈನರ ಎಲ್ಲಾ ಹಣವು ಖರ್ಚಾದರೂ ಕೂಡ, ಮನೆಯು ಪೂರ್ಣ ಗೊಳ್ಳಲಿಕ್ಕಿಲ್ಲ. ಇಷ್ಟು ದೊಡ್ಡ ಎಂಟು ಸಹಸ್ರ ಕೋಶಗಳ ಮಾಡನ್ನು ನಿರ್ಮಿಸುವುದಕ್ಕಾಗಿ ತೊಲೆಗಳನ್ನು ಎಲ್ಲಿಂದ ತರುವುದು? ಆ ಮನೆಯಲ್ಲಿ ಕಂಭಗಳನ್ನೂ ನಿಂದರೆ ಅವರು ಒಳಗೆ ಹೋಗುವಂತೆಯೂ ಇಲ್ಲ. ಆದ ಕಾರಣ ಇಂತಹ ಮಾತುಗಳಿಲ್ಲವೂ ಸುಳ್ಳಾಗಿರುತ್ತವೆ.

ತೇ ಥೂಲಾಹಲ್ಲೇ ವಿಹುಸಂ ಖಿಜ್ಜಾಚೇ ವಹುತಿ ಸನ್ವೇ ವಿ ।
ತೇ ಇಕ್ಕಿಕ್ಕ ಅಸಂಖೇ । ಸುಹುಮೇ ಖಮ್ಮೇ ಪಕಪ್ಪೇಹ ॥

[ಪ್ರಕ. ಭಾ. ೪ ಲಘುಕ್ಷೇತ್ರ ಸಮಾನಪ್ರಕರಣ ಸೂತ್ರ ೪]

ಹಿಂದೆ ಹೇಳಿದ ಒಂದು ಅಂಗುಲ ರೋಮದ ತುಂಡುಗಳಿಂದ ೪ ಚದರ ಹರದಾರಿ ಮತ್ತು ಅಷ್ಟೇ ಆಳವುಳ್ಳ ಭಾವಿಯನ್ನು ತುಂಬುವುದು, ಅಂಗುಲ ಅಳತೆಯ ತುಂಡುಗಳು ಒಟ್ಟಿಗೆ ಇಪ್ಪತ್ತುಲಕ್ಷ ಐವತ್ತೇಳುಸಹಸ್ರ ಒಂದು ನೂರ ಐವತ್ತೆರಡು ಆಗುತ್ತವೆ. ಅಧಿಕವೆಂದರೆ (೩೩೦,೭೬೨೧೦೪,೨೪೬೫೭೫೫,೪೨೧,೯೯೬೦,೯೭೫೩೬೦೦,೦೦೦೦೦೦) ಮೂವತ್ತಮೂರು ಕೋಟ್ಯಾನುಕೋಟಿ, ಅರವತ್ತುಲಕ್ಷ ಅರವತ್ತೆರಡು ಸಾವಿರನೂರಒಂದು ಕೋಟ್ಯಾನುಕೋಟಿ, ನಾಲ್ವತ್ತೆರಡು ಲಕ್ಷ ಹತ್ತೊಂಭತ್ತುಸಾವಿರ ಒಂಭೈನೂರ ಅರವತ್ತುಕೋಟ್ಯಾನುಕೋಟಿ ತೊಂಭತ್ತೇಳುಲಕ್ಷ ಐವತ್ತುಮೂರುಸಾವಿರ ಆರುನೂರು ಕೋಟ್ಯಾನು ಕೋಟಿಯಷ್ಟು ವಿಸ್ತಾರ ಘನಯೋಜನ ಪಲ್ಯೋಪಮವು ಸರ್ವಸ್ಥೂಲ ರೋಮಖಂಡಗಳ ಸಂಖ್ಯೆಯಷ್ಟು ಆಗುತ್ತದೆ. ಇದೂ ಸಂಖ್ಯಾತ ಕಾಲವೆನಿಸುತ್ತದೆ. ಪೂರ್ವೋಕ್ತವಾದ ಒಂದು ರೋಮದ ತುಂಡಿಗೆ ಅಸಂಖ್ಯಾತ ಖಂಡಗಳನ್ನು ಮನಸ್ಸಿನಿಂದ ಸ್ಮರಿಸುವಷ್ಟು ಮಾಡಿದರೆ ಆಗ ಅವು ಅಸಂಖ್ಯಾತ ಸೂಕ್ಷ್ಮರೋಮಾಣುಗಳಾಗುತ್ತವೆ.

ಸವಿಾಕ್ಷಕ—ಈಗ ನೋಡಿರಿ ಇವರ ಎಣಿಕೆಯ ಪ್ರಕಾರವನ್ನು! ಒಂದು ಅಂಗುಲ ಪರಿಮಾಣದ ರೋಮದ ತುಂಡುಗಳನ್ನು ಎಷ್ಟು ಮಾಡಿದೆಯೆಂಬುದು ಯಾರ ಲೆಕ್ಕದಲ್ಲಿಯಾದರೂ ಬರಬಲ್ಲುದೆ? ಅಲ್ಲದೆ ಇವರು ಮನಸ್ಸಿನಿಂದಲೂ ಅಸಂಖ್ಯ ಖಂಡಗಳನ್ನು ಕಲ್ಪಿಸುತ್ತಾರೆ.

ಮೊದಲಿನ ತುಂಡುಗಳನ್ನಿವರು ಕೈಯಿಂದ ಮಾಡಿರಬಹುದು. ಕೈಯಿಂದ ಆಗದಿರುವಾಗ ಮನಸ್ಸಿನಿಂದ ಮಾಡಿದರು ಎಂಬುದು ಇದರಿಂದ ಸಿದ್ಧವಾಗುತ್ತದೆ. ಒಂದು ಅಂಗುಲ ರೋಮಕ್ಕೆ ಅಸಂಖ್ಯ ತುಂಡು ಗಳಾದುವು ಎಂಬ ಈ ಮಾತು ಎಂದಾದರೂ ಸಂಭವವಾಗುವುದಿದೆಯೆ?

ಜಂಬೂದೀಪಪಮಾಣಂ ಗುಲಜೋಯಾಣಲರಕ ಬಟ್ಟಿವಿರ
ಕಂಭೀ।
ಲವಣಾಈಯಾಸೇಸಾ। ಬಲಯಾ ಭಾದುಗುಣದುಗುಣಾಯ॥

[ಪ್ರಕರ. ಭಾ. ೪ ಲಘುಕ್ಷೇತ್ರಸಮಾ ಸೂ. ೧೨]

ಮೊದಲಿನ ಜಂಬೂದ್ವೀಪದ ಪರಿಮಾಣವು ಒಂದು ಲಕ್ಷ ಯೋಜನವಿದೆ. ಅನಂತರದ ಲವಣಾದಿ ಸಪ್ತಸಮುದ್ರಗಳು ಹಾಗೂ ಸಪ್ತದ್ವೀಪಗಳು, ಜಂಬೂದ್ವೀಪಕ್ಕಿಂತಲೂ ಎರಡೆರಡುಪಾಲುಗಳಷ್ಟಿವೆ. ಈ ಒಂದು ಪೃಥ್ವಿಯಲ್ಲಿ ಮೊದಲು ಬರೆದಂತೆ ಜಂಬೂದ್ವೀಪಾದಿ ಸಪ್ತ ದ್ವೀಪಗಳೂ, ಸಪ್ತ ಸಮುದ್ರಗಳೂ ಇವೆ.

ಸವಿಾಕ್ಷಕ—ಜಂಬೂದ್ವೀಪಕ್ಕಿಂತ ಎರಡನೆಯ ದ್ವೀಪವು ಎರಡು ಲಕ್ಷ ಯೋಜನವೂ, ಮೂರನೆಯ ದ್ವೀಪವು ನಾಲ್ಕು ಲಕ್ಷ ಯೋಜನವೂ, ನಾಲ್ಕನೆಯ ಎಂಟು ಲಕ್ಷ ಯೋಜನವೂ, ಐದನೆಯದು ೧೬ ಲಕ್ಷ ಯೋಜನವೂ, ಆರನೆಯದು ೩೨ ಲಕ್ಷ ಯೋಜನವೂ, ಏಳನೆಯದು ೬೪ ಲಕ್ಷ ಯೋಜನವೂ ಇದೆ. ಇವೂ, ಇವುಗಳಷ್ಟೇ ಅಥವಾ ಇವುಗಳ ಗಿಂತ ಹೆಚ್ಚು ಪರಿಮಾಣವುಳ್ಳ ಸಮುದ್ರಗಳೂ ಈ ಹದಿನೈದು ಸಹಸ್ರ ಮೈಲು ಪರಿಧಿಯುಳ್ಳ ಭೂಗೋಳದಲ್ಲಿ ಹೇಗೆತಾನೇ ಇರಬಲ್ಲುವು? ಆದ್ದರಿಂದ ಶುದ್ಧ ತಪ್ಪುಮಾತಿದು.

ಕುರು ನಇಚುಲಸೀ ಸಹಸಾ। ಛಚ್ಚೇವಂತನರಈ ಉಪಇ
ವಿಜಯಂ।
ದೋ ದೋ ಮಹಾನಈಉ।ಚನುದನ ಸಹಸಾ ಉಪತ್ತೇಯ॥

[ಪ್ರಕ. ಭಾ. ೪। ಲಘುಕ್ಷೇತ್ರಸಮಾ. ಸೂ. ಸೂ. ೬೦]

ಕುರುಕ್ಷೇತ್ರದಲ್ಲಿ ೬೪ ಸಹಸ್ರ ನದಿಗಳಿವೆ.

ಸಮೀಕ್ಷಕ—ಕುರುಕ್ಷೇತ್ರವೊಂದು ಸಣ್ಣ ಪ್ರವೇಶ. ಅದನ್ನು ನೋಡದೆ ಒಂದು ಸುಳ್ಳುಮಾತು ಬರೆಯುವಾಗ ಇವರಿಗೆ ನಾಚಿಕೆಯೂ ಆಗಲಿಲ್ಲ,

ಯಾವುತ್ತರಾ ಉತಾಲು । ಇಗೇನ ಸಿಂಹಾಸಣಾಲು
ಆಇಪುಬ್ಬಂ ।
ಚಲು ಸುಡಿತಾಸ ನಿಆಸಣ ದಿಸಿಭವಜಿಣ ಮುಜ್ಜಣಂ ಹೋ ಈ ॥

[ಪ್ರಕ. ಭಾ. ೪। ಲಘುಕ್ಷೇ. ಸೂ. ೧೧೯]

ವಿಶೇಷವಾಗಿ ಆ ಶಿಲೆಯ ಉತ್ತರ ದಕ್ಷಿಣದಿಕ್ಕುಗಳಲ್ಲಿ ಒಂದೊಂದು ಸಿಂಹಾಸನವಿದೆ ಎಂಬುದನ್ನು ತಿಳಿಯಬೇಕು. ಶಿಲೆಗಳ ದಕ್ಷಿಣದಿಕ್ಕಿನ ಹೆಸರು ಅಲೆ ಪಾಂಡುಕಂಬಲಾ ಎಂದೂ, ಉತ್ತರ ದಿಕ್ಕಿನ ಹೆಸರು ಅತಿರಿಕ್ತಕಂಬಲಾಶಿಲಾ ಎಂದೂ ಇದೆ. ಆ ಶಿಲೆಗಳ ಮೇಲೆ ತೀರ್ಥಂಕರರು ಪವಡಿಸುತ್ತಾರೆ.

ಸಮೀಕ್ಷಕ :—ಇವರ ತೀರ್ಥಂಕರ ಜನ್ಮೋತ್ಸವಾದಿಗಳನ್ನು ನೆರವೇರಿಸುವ ಶಿಲೆಗಳನ್ನೀಗ ನೋಡಿರಿ ; ಇಂತಹುವೆ ಇವರ ಮುಕ್ತಿಯ ಸಿದ್ಧಶಿಲೆಯು. ಇಂತಹವೇ ಇವರ ಎಷ್ಟೋ ಅಸಂಭವವಾದ ಮಾತುಗಳಿವೆ. ಎಷ್ಟೆಂತ ಬರೆಯೋಣ? ನೀರನ್ನು ಗಾಳಿಸಿ ಕುಡಿಯುವುದು, ಸೂಕ್ಷ್ಮಜೀವಿಗಳೆ ಮೇಲೆ ಹೆಸರಿಗೆ ಮಾತ್ರ ದಯೆ ತೋರಿಸುವುದು ಮತ್ತು ರಾತ್ರೆಯಲ್ಲಿ ಊಟಮಾಡದಿರುವುದು ಜೈನರ ಈ ಮೂರು ಮಾತುಗಳು ಒಳ್ಳೆಯವು. ಇವರ ಬೇರೆಲ್ಲಾ ಮಾತುಗಳು ಅಸಂಭವಗ್ರಸ್ತವಾಗಿವೆ. ಇಷ್ಟು ಲೇಖನದಿಂದಲೇ ಬುದ್ಧಿವಂತರು ಬಹಳವಾಗಿ ತಿಳಿದುಕೊಳ್ಳುವರು. ಇದಿಷ್ಟು ದೃಷ್ಟಾಂತರೂಪವಾಗಿಯೇ ಬರೆದಿರುತ್ತೇವೆ. ಇವರ ಅಸಂಭವ ಮಾತುಗಳನ್ನೆಲ್ಲಾ ಬರೆಯುವುದಾದರೆ ಒಬ್ಬ ಮನುಷ್ಯನು ಜನ್ಮದಲ್ಲೆಲ್ಲಾ ಓದಲಾಗದಷ್ಟು ದೊಡ್ಡ ಪುಸ್ತಕವಾಗಿಬಿಟ್ಟೀತು. ಆದುದರಿಂದ ಪಾತ್ರೆಯಲ್ಲಿ ಬೇಯುತ್ತಿರುವ ಅನ್ನದ ಒಂದು ಅಗಳನ್ನು ತೆಗೆದು ಪರೀಕ್ಷಿಸುವುದರಿಂದ ಬೆಂದಿದೆಯೆ, ಇಲ್ಲವೆ ಎಂಬುದು ಗೊತ್ತಾಗುವಂತೆಯೇ ಈ ಸ್ವಲ್ಪ ಬರವಣಿಗೆಯಿಂದ ಸಜ್ಜನರು ಎಷ್ಟೋ ವಿಷಯಗಳನ್ನರಿತುಕೊಳ್ಳುವರು. ದಿಗ್ದರ್ಶನದಂತೆ ಸಂಪೂರ್ಣ ಆಶಯ

ಗಳನ್ನು ಬುದ್ಧಿವಂತರು ಮನದಟ್ಟುಮಾಡಿಕೊಳ್ಳುವರಾದ ಕಾರಣ ಅವರಿಗೆ ಹೆಚ್ಚು ಬರೆಯುವ ಅಗತ್ಯವಿಲ್ಲ.

ಇದರ ನಂತರ ಈಸಾಯಿಗಳ ಮತವಿಷಯವು ಬರೆಯಲ್ಪಡುವುದು.

ಇತಿ ಶ್ರೀಮದ್ದಯಾನಂದಸರಸ್ವತೀಸ್ವಾಮಿನಿರ್ಮಿತೇ
ಸತ್ಯಾರ್ಥಪ್ರಕಾಶೇ ಸುಭಾಷಾವಿಭೂಷಿತೇ
ನಾಸ್ತಿಕಮತಾಂತರ್ಗತಚಾರವಾಕಬೌದ್ಧಜೈನಮತಖಂಡನ
ಮಂಡನವಿಷಯೇ ದ್ವಾದಶಸಮುಲ್ಲಾಸಃ ಸಂಪೂರ್ಣಃ

ಅನುಭೂಮಿಕೆ (೩)

ಈ ಬೈಬಲಿನ ಮತವು ಕೇವಲ ಕ್ರೈಸ್ತರದೇ ಅಲ್ಲ. ಇದರಿಂದ ಯಹೂದಿ ಮೊದಲಾದ ಮತಗಳ ಗ್ರಹಣವೂ ಆಗುತ್ತದೆ. ಈ ಹದಿ ಮೂರನೆಯ ಸಮುಲ್ಲಾಸದಲ್ಲಿ ಈ ಮತವಿಷಯವಾಗಿ ಬರೆದುದರ ಅಭಿಪ್ರಾಯವಿಷ್ಟೆ. ಇಂದು ಬೈಬಲಿನ ಮತದವರಲ್ಲಿ ಕ್ರೈಸ್ತರು ಪ್ರಮುಖರಾಗುತ್ತಿದ್ದಾರೆ. ಯಹೂದಿ ಮೊದಲಾದವರು ಅಪ್ರಧಾನರು. ಮುಖ್ಯವನ್ನು ಗ್ರಹಿಸುವುದರಿಂದ ಗೌಣಪದಾರ್ಥದ ಗ್ರಹಣವೂ ಆಗುವುದರಿಂದ ಇದರಲ್ಲಿ ಯಹೂದೀ ಮತದ ಗ್ರಹಣವೂ ಆಗಿದೆಯೆಂದು ತಿಳಿಯಿರಿ. ಇಲ್ಲಿ ಬರೆದ ವಿಷಯವು, ಕ್ರೈಸ್ತರು ಯಹೂದಿಗಳು ಮೊದಲಾದವರೆಲ್ಲಾ ನಂಬುವ ಮತ್ತು ತಮ್ಮ ಧರ್ಮದ ಮೂಲಕಾರಣ ವೆಂದು ತಿಳಿಯುವ ಬೈಬಲಿನಿಂದಲೇ ಎತ್ತಿ ಬರೆದುದಾಗಿದೆ. ಈ ಪುಸ್ತಕದ ಭಾಷಾಂತರಗಳನ್ನು ಇವರ ದೊಡ್ಡ ದೊಡ್ಡ ಪಾದ್ರಿಗಳು ಮಾಡಿರುವರು. ಅವುಗಳಲ್ಲಿ ದೇವನಾಗರಿ ಅಥವಾ ಸಂಸ್ಕೃತ ಭಾಷಾಂತರವನ್ನು ನೋಡಿ ನನ್ನಲ್ಲಿ ಎಷ್ಟೋ ಸಂದೇಹಗಳುಂಟಾಗಿವೆ. ಅವುಗಳಲ್ಲಿ ಕೆಲವನ್ನು ಈ ೧೩ (ಹದಿಮೂರ) ನೇ ಸಮುಲ್ಲಾಸದಲ್ಲಿ ಎಲ್ಲರೂ ವಿಚಾರ ಮಾಡಲಿಕ್ಕಾಗಿ ಬರೆದಿದ್ದೇನೆ. ಈ ಲೇಖನವು ಕೇವಲ ಸತ್ಯದ ವೃದ್ಧಿ ಮತ್ತು ಅಸತ್ಯದ ಹ್ರಾಸಕ್ಕಾಗಿ ಬರೆಯಲ್ಪಟ್ಟಿದೆಯೇ ವಿನಹ ಯಾರಿಗಾದರೂ ದುಃಖವನ್ನುಂಟುಮಾಡಬೇಕು, ಹಾನಿಯನ್ನು ತಂದೊಡ್ಡಬೇಕು ಅಥವಾ ಮಿಥ್ಯಾದೋಷಗಳನ್ನಾರೋಪಿಸಬೇಕು, ಎಂಬುದಕ್ಕಾಗಿ ಬರೆಯಲ್ಪಟ್ಟಿಲ್ಲ. ಇದರ ಅಭಿಪ್ರಾಯವನ್ನೂ, ಆ ಪುಸ್ತಕವು ಹೇಗಿದೆ? ಇವರ ಮತವು ಹೇಗಿದೆ? ಎಂಬುದನ್ನೂ ಉತ್ತರ ಲೇಖನದಲ್ಲಿ ಎಲ್ಲರೂ ತಿಳಿದುಕೊಳ್ಳುವರು. ಈ ಲೇಖನದ ಪ್ರಯೋಜನವಿಷ್ಟೆ—ಮನುಷ್ಯ ಮಾತ್ರರಿಗೆ ನೋಡುವುದು, ಕೇಳುವುದು, ಬರೆಯುವುದು ಮೊದಲಾದುದು ಸಹಜವಾಗಿ ಆಗುವುದು. ಮತ್ತು ಪಕ್ಷಿ ಪ್ರತಿಪಕ್ಷಿಗಳಾಗಿ ವಿಮರ್ಶಿಸಿ, ಈಸಾಯಿಮತದ ಆಂದೋಳನವನ್ನು ಪ್ರತಿಯೊಬ್ಬರೂ ಮಾಡಬಹುದು. ಮನುಷ್ಯರಿಗೆ ಧರ್ಮ ವಿಷಯಕವಾದ ಜ್ಞಾನವು ಅಭಿವೃದ್ಧಿಹೊಂದಿ, ಯಥಾಯೋಗ್ಯವಾಗಿ ಸತ್ಯಾಸತ್ಯ ಮತ ಮತ್ತು ಕರ್ತವ್ಯಾಕರ್ತವ್ಯಕರ್ಮಸಂಬಂಧವಾದ ವಿಷಯವು ವಿದಿತವಾಗಿ ಸತ್ಯ ಮತ್ತು ಕರ್ತವ್ಯಕರ್ಮಗಳ ಸ್ವೀಕಾರ

ವನ್ನೂ, ಅಸತ್ಯ ಹಾಗೂ ಅಕರ್ತವ್ಯಕರ್ಮಗಳ ಪರಿತ್ಯಾಗವನ್ನೂ, ಮಾಡುವುದು ಸಹಜವಾದೀತು. ಇದೇ ಅವರಿಗಾಗುವ ಪ್ರಯೋಜನವು. ಎಲ್ಲರ ಮತವಿಷಯಕವಾದ ಪುಸ್ತಕಗಳನ್ನು ನೋಡಿ, ತಿಳಿದುಕೊಂಡು, ಏನಾದರೂ ಸಮ್ಮತಿಯನ್ನಾಗಲೀ ಅಸಮ್ಮತಿಯನ್ನಾಗಲೀ ಕೊಡುವುದು ಅಥವಾ ಬರೆಯುವುದು ಅಥವಾ ಕೇಳುವುದು ಪ್ರತಿಯೊಬ್ಬ ಮನುಷ್ಯನಿಗೂ ಉಚಿತವಾಗಿರುತ್ತದೆ. ಓದುವುದರಿಂದ ಪಂಡಿತನಾಗುವಂತೆ ಕೇಳುವುದರಿಂದ ಬಹುಶ್ರುತನೂ ಆಗುತ್ತಾನೆ. ಶ್ರೋತೃವು ಅನ್ಯರಿಗೆ ತಿಳಿಯಪಡಿಸಲಾರನಾದರೂ ಕೂಡ ತಾನೇನೋ ತಿಳಿದುಕೊಳ್ಳುತ್ತಾನಲ್ಲವೆ? ಪಕ್ಷಪಾತವೆಂಬ ವಾಹವನನ್ನೇರಿ ನೋಡುವವರಿಗೆ ತಮ್ಮ ದಾಗಲೀ ಬೇರೆಯವರದಾಗಲೀ ಗುಣದೋಷಗಳು ವಿದಿತವಾಗಲಾರವು. ಮನುಷ್ಯನ ಆತ್ಮವು ಯಥಾಯೋಗ್ಯವಾಗಿ ಸತ್ಯಾಸತ್ಯಗಳನ್ನು ನಿರ್ಣಯಮಾಡುವ ಸಾಮರ್ಥ್ಯವನ್ನುಳ್ಳದಾಗಿದೆ. ತಾನು ಓದಿದಷ್ಟರ ಅಥವಾ ಕೇಳಿದಷ್ಟರ ನಿರ್ಣಯವನ್ನವನು ಮಾಡಬಲ್ಲನು. ತನ್ನ ಮತವನ್ನು ಅನ್ಯರ ಮತವನ್ನು ಒಬ್ಬನು ತಿಳಿದಿದ್ದು ಬೇರೆಯವರು ತಿಳಿದಿಲ್ಲದಿದ್ದರೆ ಸರಿಯಾದ ರೀತಿಯಲ್ಲಿ ಸಂಭಾಷಣೆ ನಡೆಯಲಾರದು. ಮಾತ್ರವಲ್ಲ; ಅಜ್ಞಾನಿಗಳು ಯಾವುದಾದರೂ ಅಜ್ಞಾನವೆಂಬ ಬೇಲಿಯೊಳಗೆ ಸಿಲುಕಿಕೊಳ್ಳುತ್ತಾರೆ. ಹಾಗಾಗಬಾರದು ಎಂಬ ಅಭಿಪ್ರಾಯದಿಂದ ಈ ಗ್ರಂಥದಲ್ಲಿ ಪ್ರಚಲಿತವಾಗಿರುವ ಎಲ್ಲ ಮತಗಳ ವಿಷಯವನ್ನು ಸ್ವಲ್ಪ ಸ್ವಲ್ಪ ಬರೆದಿದೆ. ಇಷ್ಟರಿಂದಲೇ ಬೇರೆ ವಿಷಯಗಳಲ್ಲಿಯೂ ಅವು ನಿಜವೊ, ಸುಳ್ಳೊ? ಎಂಬುದನ್ನು ನಿಶ್ಚಯಮಾಡಿಕೊಳ್ಳಬಹುದು. ಸರ್ವಮಾನ್ಯವಾದ ಸತ್ಯ ವಿಷಯಗಳು ಎಲ್ಲಾ ಮತಗಳಲ್ಲಿ ಒಂದೇ ರೀತಿಯಿರುತ್ತವೆ. ಜಗಳ ಹುಟ್ಟುವುದು ಸುಳ್ಳು ವಿಷಯಗಳಲ್ಲಿ. ಒಂದು ನಿಜವಾಗಿದ್ದು ಇನ್ನೊಂದು ಸುಳ್ಳಾಗಿದ್ದರೂ ಸ್ವಲ್ಪ ವಿವಾದವೇಳುತ್ತದೆ. ವಾದಿಪ್ರತಿವಾದಿಗಳು ಸತ್ಯಾಸತ್ಯ ನಿರ್ಣಯವಾಕೆಬೇಕೆಂದು ವಾದ ಪ್ರತಿವಾದ ಮಾಡಿದರೆ ಅವಶ್ಯವಾಗಿ ನಿರ್ಣಯವಾಗುತ್ತದೆ. ಈಗ ನಾನು ಈ ೧೩ (ಹದಿಮೂರ) ನೇ ಸಮುಲ್ಲಾಸದಲ್ಲಿ ಕ್ರೈಸ್ತಮತ ವಿಷಯದಲ್ಲಿ ಸ್ವಲ್ಪ ಬರೆದು ಎಲ್ಲರ ಎದುರಿಗಿಡುತ್ತೇನೆ. ಹೇಗಿದೆಯೆಂಬುದನ್ನು ವಿಚಾರಮಾಡಿರಿ.

ಅಲಮತಿಲೇಖೇನ ವಿಚಕ್ಷಣವರೇಷು

॥ ಓಂ ॥

ಅಥ ತ್ರಯೋದಶ ಸಮುಲ್ಲಾಸಾರಂಭಃ

॥ ಅಥ ಕೃಶ್ಚೀನ ಮತವಿಷಯಂ ಸಮೀಕ್ಷಿಷ್ಯಾಮಃ ॥

ಇನ್ನು ಮುಂದೆ ಕ್ರೈಸ್ತಮತ ವಿಷಯವಾಗಿ ಬರೆಯುತ್ತೇವೆ. ಇವರ ಮತವು ನಿರ್ದೋಷ ಮತ್ತು ಇವರ ಬೈಬಿಲ್ ಪುಸ್ತಕವು ಈಶ್ವರ ಕೃತವಾಗಿದೆಯೊ ಇಲ್ಲವೊ ಎಂಬುದು ಇದರಿಂದ ವಿದಿತವಾಗಲಿ. ಮೊದಲು ಬೈಬಲಿನ ಆದಿಕಾಂಡದ ವಿಷಯವಾಗಿ ಬರೆಯುತ್ತೇವೆ—

೧. ಆದಿಯಲ್ಲಿ ದೇವರು ಆಕಾಶವನ್ನೂ ಭೂಮಿಯನ್ನೂ ಉಂಟುಮಾಡಿದನು. ಭೂಮಿಯು ಕ್ರಮವಿಲ್ಲದೆಯೂ ಬರಿದಾಗಿಯೂ ಇತ್ತು; ಆಳದ ಮೇಲೆ ಕತ್ತಲಿತ್ತು. ದೇವರಾತ್ಮವು ಜಲದ ಮೇಲೆ ಚಲಿಸುತ್ತಿತ್ತು. [ಆದಿಕಾಂಡ ೧, ೧-೨]

ಸಮೀಕ್ಷಕ :—ಆರಂಭವೆಂದು ಯಾವುದಕ್ಕೆ ಹೇಳುತ್ತೀರಿ.

ಕ್ರೈಸ್ತ :—ಸೃಷ್ಟಿಯ ಪ್ರಥಮೋತ್ಪತ್ತಿಗೆ.

ಸಮೀಕ್ಷಕ :—ಈ ಸೃಷ್ಟಿಯೇ ಮೊದಲಿನದೆ? ಇದರ ಹಿಂದೆ ಎಂದಾದರೂ ಆಗಿರಲಿಲ್ಲವೆ?

ಕ್ರೈಸ್ತ:—ಆಗಿತ್ತೋ ಇಲ್ಲವೋ ಎಂಬುದನ್ನು ನಾವರಿಯೆವು. ಪರಮಾತ್ಮನಿಗೆ ಗೊತ್ತು.

ಸಮೀಕ್ಷಕ :—ಅರಿವಿಲ್ಲವಾದರೆ ಸಂದೇಹವನ್ನು ನಿವಾರಿಸದಿರುವ ಈ ಪುಸ್ತಕವನ್ನೇಕೆ ನಂಬುತ್ತಿದ್ದೀರಿ? ಇದರ ಆಧಾರದ ಮೇಲೆಯೇ ಜನರಿಗುಪದೇಶಮಾಡಿ ಈ ಸಂದೇಹ ಪೂರ್ಣವಾದ ಮತದಲ್ಲಿ ಏತಕ್ಕೆ ಸಿಲುಕಿಸುತ್ತಿದ್ದೀರಿ? ನಿಃಸಂದೇಹವಾಗಿಯೂ ಸರ್ವಶಂಕಾನಿವಾರಕವಾದ ವೇದಮತವನ್ನಂಗೀಕರಿಸುವುದಿಲ್ಲವೇಕೆ? ನೀವು ಪರಮಾತ್ಮನ ಸೃಷ್ಟಿಯ ವಿಷಯವನ್ನೇ ತಿಳಿಯದ ಮೇಲೆ ಪರಮಾತ್ಮನನ್ನು ಹೇಗೆ ಬಲ್ಲಿರಿ? ಆಕಾಶವೆಂದು ಯಾವುದನ್ನು ತಿಳಿಯುತ್ತೀರಿ?

ಕ್ರೈಸ್ತ:—ಪೊಳ್ಳನ್ನೂ ಮೇಲ್ಬಾಗವನ್ನೂ ಆಕಾಶವೆನ್ನುತ್ತೇವೆ.

ಸಮಿಾಕ್ಷಕ:—ಪೊಳ್ಳಿನ ಉತ್ಪತ್ತಿ ಹೇಗಾಯಿತು? ಏಕೆಂದರೆ ಇದು ವಿಭುವಾಗಿದ್ದು ಅತಿ ಸೂಕ್ಷ್ಮವೂ, ಮೇಲೆ ಕೆಳಗೆ ಏಕಪ್ರಕಾರವಾಗಿಯೂ ಇದೆ, ಆಕಾಶವು ಸೃಷ್ಟಿಸಲ್ಪಡದಿದ್ದಾಗ ಪೊಳ್ಳೂ ಆಕಾಶವೂ ಇತ್ತೊ ಇಲ್ಲವೊ? ಇದ್ದಿಲ್ಲವಾದರೆ ಜಗತ್ಕಾರಣನಾದ ಈಶ್ವರನೂ, ಜೀವಾತ್ಮರೂ ಎಲ್ಲಿರುತ್ತಿದ್ದರು? ಆಕಾಶವಿಲ್ಲದೆ ಯಾವ ವಸ್ತುವೂ ಇರಲಾರದು. ಆದುದರಿಂದ ನಿಮ್ಮ ಬೈಬಲ್ಲಿನ ಹೇಳಿಕೆ ಸರಿಯಲ್ಲ. ಪರಮಾತ್ಮನೂ ಅವನ ಜ್ಞಾನಕರ್ಮಗಳೂ ಕ್ರಮವಿಲ್ಲದವು ಆಗಿರುತ್ತವೊ ಅಥವಾ ಎಲ್ಲವೂ ಕ್ರಮವುಳ್ಳವಾಗಿರುತ್ತವೊ?

ಕ್ರೈಸ್ತ:—ಕ್ರಮವುಳ್ಳದ್ದಾಗಿರುತ್ತದೆ.

ಸಮಿಾಕ್ಷಕ:—ಈಶ್ವರನುಂಟುಮಾಡಿದ ಸೃಷ್ಟಿಯು ಕ್ರಮವಿಲ್ಲದ್ದಾಗಿತ್ತೆಂದೇಕೆ ಇಲ್ಲಿ ಬರೆದಿದೆ?

ಕ್ರೈಸ್ತ:—ಕ್ರಮವಿಲ್ಲದ್ದುದು ಎಂಬುದಕ್ಕೆ ಏರುತಗ್ಗಾಗಿತ್ತು ಸಮತಟ್ಟಾಗಿರಲಿಲ್ಲ ಎಂಬುದು ಅರ್ಥವು.

ಸಮಿಾಕ್ಷ:—ಹಾಗಾದರೆ ನಂತರ ಸಮತಟ್ಟಾಗಿ ಯಾರು ಮಾಡಿದರು? ಈಗ ಏರು ತಗ್ಗುಗಳಿಲ್ಲವೇನು? ಆದಕಾರಣ ಈಶ್ವರನ ಕಾರ್ಯವು ಕ್ರಮವಿಲ್ಲದ್ದುದಾಗಲಾರದು. ಏಕೆಂದರೆ–ಅವನು ಸರ್ವಜ್ಞನು. ಅವನ ಕೆಲಸಗಳಲ್ಲಿ ಎಂದಿಗೂ ತಪ್ಪುಗಳಾಗಲಾರವು. ಬೈಬಲಿನಲ್ಲಿ ಈಶ್ವರನ ಸೃಷ್ಟಿಯು ಕ್ರಮವಿಲ್ಲದ್ದುದೆಂದು ಬರೆದಿರುವುದರಿಂದ ಈ ಪುಸ್ತಕವು ಈಶ್ವರನಿರ್ಮಿತವಾಗಲಾರದು. ಮೊದಲನೆಯದಾಗಿ ಈಶ್ವರನ ಆತ್ಮವೆಂತಹ ಪದಾರ್ಥವು?

ಕ್ರೈಸ್ತ—ಚೇತನ.

ಸಮಿಾಕ್ಷಕ—ಅವನು ಸಾಕಾರನೊ ಅಥವಾ ನಿರಾಕಾರನೊ? ಸರ್ವವ್ಯಾಪಕನೊ ಅಥವಾ ಏಕದೇಶಿಯೊ?

ಕ್ರೈಸ್ತ:—ನಿರಾಕಾರನೂ, ಚೇತನನೂ. ವ್ಯಾಪಕನೂ ಆಗಿರುವನು. ಆದರೆ ಯಾವುದೋ ಒಂದು ಸನಾಯೀ ಪರ್ವತ, ನಾಲ್ಕನೆಯ ಆಕಾಶ ಮೊದಲಾದ ಸ್ಥಾನಗಳಲ್ಲಿ ಅವನು ವಿಶೇಷವಾಗಿ ಇರುತ್ತಾನೆ.

ಸವಿಾಕ್ಷಕ :—ನಿರಾಕಾರನಾಗಿರುವನಾದರೆ, ಅವನನ್ನು ಯಾರು ನೋಡಿದರು? ಮತ್ತು ವ್ಯಾಪಕನಾಗಿರುವಂತಹವನು ಜಲದಮೇಲೆ ಚಲಿಸುತ್ತಿರುವುದು ಸಾಧ್ಯವಿಲ್ಲ. ಜಲದ ಮೇಲೆ ದೇವರ ಆತ್ಮವು ಚಲಿಸುತ್ತಿದ್ದಾಗ ದೇವರಿಲ್ಲಿದ್ದನು? ಇದರಿಂದ ದೇವರ ಶರೀರವು ಬೇರೆಲ್ಲಿಯಾದರೂ ಇದ್ದಿರಬೇಕು; ಅಥವಾ ತನ್ನ ಆತ್ಮದ ಒಂದು ತುಂಡನ್ನು ನೀರಮೇಲೆ ಚಲಿಸಬಿಟ್ಟಿರಬೇಕು, ಎಂದು ಸಿದ್ಧವಾಗುತ್ತದೆ. ಹೀಗಿರುವುದಾದರೆ ಸರ್ವಜ್ಞ ಹಾಗೂ ವಿಭು ಎಂದಿಗೂ ಆಗಲಾರನು. ವಿಭುವಲ್ಲದಿದ್ದರೆ, ಜಗತ್ತಿನ ರಚನೆ, ಧಾರಣೆ, ಪಾಲನೆ, ಜೀವಾತ್ಮರ ಕರ್ಮಗಳ ವ್ಯವಸ್ಥೆ ಅಥವಾ ಪ್ರಳಯವನ್ನೆಂದಿಗೂ ಮಾಡಲಾರನು. ಏಕೆಂದರೆ—ಏಕದೇಶಿಸ್ವರೂಪವುಳ್ಳ ಪದಾರ್ಥದ ಗುಣ-ಕರ್ಮ-ಸ್ವಭಾವಗಳೂ ಏಕದೇಶಿಯೇ ಆಗಿರುತ್ತವೆ. ಹೀಗಿರುವುದಾದರೆ ಅವನು ದೇವರಾಗಲಾರನು. ಏಕೆಂದರೆ, ದೇವರು ಸರ್ವ ವ್ಯಾಪಕನೂ, ಅನಂತ ಗುಣ-ಕರ್ಮ-ಸ್ವಭಾವಗಳನ್ನುಳ್ಳವನೂ, ಸಚ್ಚಿದಾನಂದಸ್ವರೂಪನೂ, ನಿತ್ಯಶುದ್ಧ ಬುದ್ಧ ಮುಕ್ತಸ್ವಭಾವ, ಅನಾದಿ, ಅನಂತ ಮೊದಲಾದ ಲಕ್ಷಣಗಳನ್ನುಳ್ಳವನೆಂದೂ ವೇದಗಳಲ್ಲಿ ಹೇಳಿದೆ. ಅವನನ್ನು ಒಪ್ಪಿರಿ; ನಿಮ್ಮ ಕಲ್ಯಾಣವಾಗುವುದು; ಅನ್ಯಥಾ ಆಗಲಾರದು.

೨. ದೇವರು—ಬೆಳಕಾಗಲಿ ಎಂದನು; ಬೆಳಕಾಗಿಹೋಯಿತು. ಮತ್ತು ದೇವರು ಆ ಬೆಳಕು ಒಳ್ಳೆಯದಾಗಿದೆ ಎಂಬುದನ್ನು ನೋಡಿದನು. [ಆದಿಕಾಂಡ ೧, ೩-೪]

ದೇವರ ಮಾತನ್ನು ಜಡವಾಗಿರುವ ಬೆಳಕು ಕೇಳಿತೆ? ಆಲಿಸಿತಾದರೆ ಈಗಲೂ ಸೂರ್ಯ, ದೀಪ ಹಾಗೂ ಅಗ್ನಿಯ ಬೆಳಕು ನಮ್ಮ ನಿಮ್ಮ ಮಾತನ್ನೇಕೆ ಕೇಳುವುದಿಲ್ಲ? ಪ್ರಕಾಶವು ಜಡವಾಗಿರುವುದರಿಂದ ಅದು ಎಂದಿಗೂ ಯಾರ ಮಾತನ್ನು ಆಲಿಸಲಾರದು. ದೇವರು ಬೆಳಕನ್ನು ನೋಡಿದಾಗಲೇ ಬೆಳಕು ಒಳ್ಳೆಯದಾಗಿದೆಯೆಂದು ತಿಳಿದನೇನು? ಮೊದಲು ತಿಳಿದಿರಲಿಲ್ಲವೆ? ತಿಳಿದಿದ್ದರೆ, ನೋಡಿ ಒಳ್ಳೆಯದಾಗಿದೆಯೆಂದು ಹೇಳುತ್ತಿದ್ದನೇಕೆ? ತಿಳಿದಿರಲಿಲ್ಲವಾದರೆ ಅವನು ದೇವರೇ ಅಲ್ಲ. ಆದುದರಿಂದ ನಿಮ್ಮ ಬೈಬಲು ಈಶ್ವರೋಕ್ತವೂ ಅಲ್ಲ. ನಿಮ್ಮ ದೇವರು ಸರ್ವಜ್ಞನೂ ಅಲ್ಲ. ॥೨॥

೩. ಮತ್ತು ದೇವರು-ಜಲಗಳ ನಡುವೆ ಆಕಾಶ ಉಂಟಾಗಲಿ; ಮತ್ತು ನೀರುಗಳನ್ನು ನೀರುಗಳಿಂದ ವಿಭಾಗಮಾಡಲಿ-ಎಂದನು. ಆಗ ದೇವರು ಆಕಾಶವನ್ನು ರಚಿಸಿದನು ಮತ್ತು ಆಕಾಶದ ಕೆಳಗಿನ ನೀರು ಗಳನ್ನು ಆಕಾಶದ ಮೇಲಿನ ನೀರುಗಳಿಂದ ವಿಂಗಡಿಸಿದನು. ಮತ್ತು ಹಾಗೆ ಆಗಿಹೋಯಿತು. ಮತ್ತು ಆಕಾಶವನ್ನು ಸ್ವರ್ಗವೆಂದು ಕರೆದನು. ಹೀಗೆ ಸಾಯಂಕಾಲವೂ ಪ್ರಾತಃಕಾಲವೂ ಆಗಿ ಎರಡನೇ ದಿವಸವಾ ಯಿತು." [ಆದಿಕಾಂಡ ೧। ೬-೮]

ಸಮಿಾಕ್ಷಕ—ಹಾಗೂ ಆಕಾಶವೂ ನೀರೂ ಕೂಡ ದೇವರ ಮಾತನ್ನು ಕೇಳಿದವೆ? ಮತ್ತು ನೀರಿನ ನಡುವೆ ಆಕಾಶವಿಲ್ಲದಿದ್ದರೆ ನೀರೆಲ್ಲಿರುತ್ತಿತ್ತು? ಮೊದಲಿನ ವಾಕ್ಯದಲ್ಲಿ ಆಕಾಶವನ್ನುಂಟುಮಾಡಿ ದ್ದನು. ಆಕಾಶವನ್ನು ಪುನಃ ಉಂಟುಮಾಡುವುದು. ವ್ಯರ್ಥವಾಯಿತು. ಆಕಾಶವನ್ನು ಸ್ವರ್ಗವೆಂದು ಕರೆದವನಾದರೆ, ಅದು ಸರ್ವವ್ಯಾಪಿಯಾಗಿ ರುವುದರಿಂದ ಸರ್ವತ್ರ ಸ್ವರ್ಗವೇ ಆಯಿತು. ಅಂದಮೇಲೆ ಸ್ವರ್ಗವು ಮೇಲೆ ಇದೆಯೆಂದು ಹೇಳುವುದು ನಿರರ್ಥಕ. ಸೂರ್ಯನು ಹುಟ್ಟಿಯೇ ಇಲ್ಲದಿದ್ದಾಗ ಹಗಲು ರಾತ್ರಿಗಳು ಎಲ್ಲಿಂದ ಆಗಿಹೋದವು? ಇಂತಹ ಅಸಂಭವ ಮಾತುಗಳು ಮುಂದಿನ ವಾಕ್ಯಗಳಲ್ಲಿ ತುಂಬಿಕೊಂಡಿವೆ. ॥೩॥

೪. ಆಗ ದೇವರು—" ನಾವು ಆದಮನನ್ನು ನಮ್ಮ ಸ್ವರೂ ಪದಲ್ಲಿ, ನಮಗೆ ಸಮಾನವಾಗಿ ಉಂಟುಮಾಡೋಣ." ಎಂದನು. ಆಗ ದೇವರು ಆದಮನನ್ನು ತನ್ನ ಸ್ವರೂಪದಲ್ಲಿ ಉಂಟುಮಾಡಿದನು. ಅವನು ದೇವರ ಸ್ವರೂಪದಲಿ ಅವನನ್ನು ಉಂಟುಮಾಡಿದನು. ಅವನು ಅವರನ್ನು ಗಂಡುಹೆಣ್ಣಾಗಿ ನಿರ್ಮಿಸಿದನು. ಮತ್ತು ದೇವರು ಅವರನ್ನು ಆಶೀರ್ವದಿಸಿದನು. [ಪರ್ವ. ೦. ೨೬-೨೭-೨೮]

ಸಮಿಾಕ್ಷಕ—ಆದಮನನ್ನು ದೇವರು ತನ್ನ ಸ್ವರೂಪದಲ್ಲಿ ಉಂಟುಮಾಡಿದನಾದರೆ, ದೇವರ ಸ್ವರೂಪವು ಪವಿತ್ರ, ಜ್ಞಾನಸ್ವ ರೂಪ, ಆನಂದಮಯ ಮೊದಲಾದ ಲಕ್ಷಣಯುಕ್ತವಾಗಿರುತ್ತದೆ! ಅವನ ಸಮಾನನಾಗಿ ಆದಮನು ಏಕಾಗಲಿಲ್ಲ? ಆಗಲಿಲ್ಲವಾದರೆ— ಅವನ ಸ್ವರೂಪದಲ್ಲಿ ಉಂಟಾಗಲಿಲ್ಲ. ಮತ್ತು ಆದಮನನ್ನು ಹುಟ್ಟಿಸಿ ದವನಾದರೆ, ದೇವರು ತನ್ನ ಸ್ವರೂಪವನ್ನೇ ಉತ್ಪತ್ತಿಯನ್ನುಳ್ಳದನ್ನಾಗಿ

ಮಾಡಿದನು. ಮತ್ತೆ ಆ ಸ್ವರೂಪವು ಅನಿತ್ಯವಲ್ಲವೇಕೆ? ಮತ್ತು ಆದಮನನ್ನು ಎಲ್ಲಿಂದ ಉಂಟುಮಾಡಿದನು.

ಕ್ರೈಸ್ತ—ಮಣ್ಣಿನಿಂದ ಉಂಟುಮಾಡಿದನು.

ಸಮಿಾಕ್ಷಕ—ಮಣ್ಣನ್ನು ಎಲ್ಲಿಂದ ಮಾಡಿದನು?

ಕ್ರೈಸ್ತ—ತನ್ನ ಪ್ರಕೃತಿ ಅಂದರೆ ಸಾಮರ್ಥ್ಯದಿಂದ.

ಸಮಿಾಕ್ಷಕ—ದೇವರ ಸಾಮರ್ಥ್ಯವು ಅನಾದಿಯಾಗಿರುತ್ತದೊ? ಅಥವಾ ನವೀನವೂ?

ಕ್ರೈಸ್ತ—ಅನಾದಿಯು.

ಸಮಿಾಕ್ಷಕ—ಅನಾದಿಯಾಗಿರುವುದಾದರೆ ಜಗತ್ತಿನ ಕಾರಣವು ಸನಾತನವಾಯಿತು. ಹಾಗಾದರೆ ಅಭಾವದಿಂದ ಭಾವವನ್ನೇಕೆ ಒಪ್ಪುತ್ತೀರಿ?

ಕ್ರೈಸ್ತ—ಸೃಷ್ಟಿಯ ಮೊದಲು ದೇವರ ಹೊರತು ಯಾವ ವಸ್ತುವೂ ಇರಲಿಲ್ಲ.

ಸಮಿಾಕ್ಷಕ—ಇದ್ದಿಲ್ಲವಾದರೆ ಈ ಜಗತ್ತು ಎಲ್ಲಿಂದ ಉಂಟಾಯಿತು? ಮತ್ತು ದೇವರ ಸಾಮರ್ಥ್ಯವು ದ್ರವ್ಯವೊ? ಅಥವಾ ಗುಣವೊ? ದ್ರವ್ಯವಾಗಿದ್ದರೆ ದೇವರಿಂದ ಭಿನ್ನವಾದ ಬೇರೆ ಪದಾರ್ಥವಿತ್ತು. ಗುಣವಾಗಿದ್ದರೆ ಗುಣದಿಂದ ಎಂದಿಗೂ ದ್ರವ್ಯ ಉಂಟಾಗಲಾರದು. ಉದಾ—ರೂಪದಿಂದ ಅಗ್ನಿಯೂ ರಸದಿಂದ ಜಲವೂ ಉಂಟಾಗಲಾರದು. ಮತ್ತು ದೇವರಿಂದ ಜಗತ್ತು ಉಂಟಾಗಿದ್ದರೆ ದೇವರದಕ್ಕೆ ಸದೃಶವಾದ ಗುಣಕರ್ಮಸ್ವಭಾವವುಳ್ಳದಾಗಿರುತ್ತಿತ್ತು. ಅವನ ಗುಣಕರ್ಮಸ್ವಭಾವಗಳಿಗೆ ಸದೃಶವಾಗಿಲ್ಲವಾದುದರಿಂದ ದೇವರಿಂದ ಉಂಟಾಗಲಿಲ್ಲ; ಆದರೆ—ಜಗತ್ತಿನ ಕಾರಣ ಅಂದರೆ ಪರಮಾಣು ಮೊದಲಾದ ಹೆಸರನ್ನುಳ್ಳ ಜಡದಿಂದ ಉಂಟಾಗಿದೆಯೆಂದೇ ನಿಶ್ಚಯವಾಗುತ್ತದೆ. ವೇದಾದಿಶಾಸ್ತ್ರಗಳಲ್ಲಿ ಹೇಳಿರುವಂತೆ ಯಾವುದರಿಂದ ಈಶ್ವರನು ಜಗತ್ತನ್ನು ಉಂಟುಮಾಡುತ್ತಾನೋ, ಅದರಿಂದ ಜಗತ್ತಿನ ಉತ್ಪತ್ತಿಯಾಯಿತೆಂದು ಒಪ್ಪಿಕೊಳ್ಳಿರಿ. ಆದಮನ ಒಳಗಿನ ಸ್ವರೂಪವು ಜೀವಾತ್ಮನದೂ ಹೊರಗಿನ ಸ್ವರೂಪವು ಮನುಷ್ಯನದರಂತೆಯೂ ಆಗಿರುವು

ದಾದರೆ ಹಾಗೆ ದೇವರ ಸ್ವರೂಪವೇಕಿಲ್ಲ? ಏಕೆಂದರೆ ಆದಮನು ದೇವರಂತೆ ಉಂಟಾದವನಾದರೆ ದೇವರು ಆದಮನಂತೆ ಅವಶ್ಯವಾಗಿ ಇರಬೇಕು. ॥೪॥

೫. ಆಗ ಪರಮೇಶ್ವರನಾದ ದೇವರು ನೆಲದ ಮಣ್ಣಿನಿಂದ ಆದಮನನ್ನು ಉಂಟುಮಾಡಿದನು. ಮತ್ತು ಅವನ ಹೊಳ್ಳೆಯಲ್ಲಿ ಜೀವನ ಶ್ವಾಸವನ್ನು ಊದಿದನು. ಮತ್ತು ಆದಮನು ಬದುಕುವ ಪ್ರಾಣಿಯಾದನು. ಮತ್ತು ಪರಮೇಶ್ವರನಾದ ದೇವರು ಈಡನ್‌ನಲ್ಲಿ ಪೂರ್ವದಕಡೆ ಒಂದು ಉದ್ಯಾನವನವನ್ನು ನಿರ್ಮಿಸಿದನು. ಮತ್ತು ತಾನು ಹುಟ್ಟಿಸಿದ್ದ ಆದಮನನ್ನು ಅದರಲ್ಲಿ ಇರಿಸಿದನು. ಮತ್ತು ಆ ಉದ್ಯಾನದ ಮಧ್ಯದಲ್ಲಿ ಜೀವದಾಯಕ ವೃಕ್ಷವನ್ನೂ, ಒಳ್ಳೆಯದರ ಕೆಟ್ಟದರ ಜ್ಞಾನದ ವೃಕ್ಷವನ್ನೂ ಬೆಳೆಯಿಸಿದನು. [ಪರ್ವ. ೨. ೭-೮-೯]

ಸಮೀಕ್ಷಕ—ದೇವರು ಈಡನ್‌ನಲ್ಲಿ ಉದ್ಯಾನವನವನ್ನು ಮಾಡಿ ಅದರಲ್ಲಿ ಆದಮನನ್ನು ಇರಿಸಿದಾಗ, ಅವನನ್ನು ಮರಳಿ ಇಲ್ಲಿಂದ ಹೊರಡಿಸಬೇಕಾಗುವುದು ಎಂದು ದೇವರಿಗೆ ಗೊತ್ತಿರಲಿಲ್ಲವೆ? ಮತ್ತು ದೇವರು ಆದಮನನ್ನು ಮಣ್ಣಿನಿಂದ ನಿರ್ಮಿಸಿದ್ದರೆ, ದೇವರ ಸ್ವರೂಪವಾಗಲಿಲ್ಲ! ಮತ್ತು ಆಗಿದ್ದರೆ ದೇವರೂ ಮಣ್ಣಿನಿಂದ ಉಂಟಾಗಿರಬೇಕು! ಅವನ ಹೊಳ್ಳೆಗಳಲ್ಲಿ ದೇವರು ಶ್ವಾಸನನ್ನು ಊದಿದಾಗ ಅದು ದೇವರ ಸ್ವರೂಪವಾಗಿತ್ತೊ? ಅಥವಾ ಬೇರೆಯೋ? ಬೇರೆ ಯಾಗಿದ್ದರೆ, ಆದಮನ ಸ್ವರೂಪದಲ್ಲಿ ದೇವರಾಗಲಿಲ್ಲ. ಒಂದಾಗಿದ್ದರೆ ಆದಮನೂ ದೇವರೂ ಒಬ್ಬರಂತಾದರು; ಒಬ್ಬರಂತೆ ಇರುವುದಾದರೆ ಆದಮನಂತೆ ಜನ್ಮ, ಮರಣ, ವೃದ್ಧಿ, ಕ್ಷಯ, ಹಸಿವು, ಬಾಯಾರಿಕೆ ಮೊದಲಾದ ದೋಷಗಳು ದೇವರಲ್ಲಿ ಬಂದವು. ಮತ್ತೆ ಅವನು ಹೇಗೆತಾನೆ ದೇವರಾಗಬಲ್ಲನು! ಆದುದರಿಂದ ಆದಿಕಾಂಡದ ಈ ಮಾತು ಸರಿಯಲ್ಲವೆಂದು ತಿಳಿಯುತ್ತದೆ; ಮತ್ತು ಈ ಪುಸ್ತಕವೂ ದೇವನಿರ್ಮಿತವಲ್ಲ.

೬. ಮತ್ತು ಪರಮೇಶ್ವರನಾದ ದೇವರು ಆ ಆದಮನನ್ನು ಗಾಢ ನಿದ್ರೆಯಲ್ಲೊರಗಿಸಿದನು ಮತ್ತು ಅವನು ಸಿದ್ದಿಹೋದನು. ಆಗ ಅವನು

ಅವನ ಪಕ್ಕೆಯ ಎಲುಬುಗಳಲ್ಲಿ ಒಂದು ಎಲುಬನ್ನು ತೆಗೆದನು. ಅದರ ಸ್ಥಳವನ್ನು ಮಾಂಸದಿಂದ ಮುಚ್ಚಿಬಿಟ್ಟನು. ಮತ್ತು ಪರಮೇಶ್ವರನಾದ ದೇವರು ಆದಮನ ಆ ಪಕ್ಕೆಲುಬಿನಿಂದ ಒಬ್ಬ ನಾರಿಯನ್ನು ಸೃಜಿಸಿದನು ಮತ್ತು ಅವಳನ್ನು ಆದಮನ ಬಳಿಗೆ ತಂದನು.

[ಆ. ೨। ೨೧–೨೨]

ಸವಿಾಕ್ಷಕ—ದೇವರು ಆದಮನನ್ನು ಮಣ್ಣಿನಿಂದ ಉಂಟುಮಾಡಿದನಾದರೆ ಅವನ ಸ್ತ್ರೀಯನ್ನು ಮಣ್ಣಿನಿಂದೇಕೆ ಉಂಟುಮಾಡಲಿಲ್ಲ. ಮತ್ತು ನಾರಿಯನ್ನು ಎಲುಬಿನಿಂದ ಉಂಟುಮಾಡಿದನಾದರೆ ಆದಮನನ್ನೇಕೆ ಎಲುಬಿನಿಂದ ಉಂಟುಮಾಡಲಿಲ್ಲ? ಮತ್ತು ನರನಿಂದ ತೆಗೆಯಲ್ಪಟ್ಟವಳಾದ್ದರಿಂದ ನಾರಿ ಎಂಬ ಹೆಸರಾಯಿತಾದರೆ ನಾರಿಯೆಂಬುದರಿಂದ ನರ ಎಂಬ ಹೆಸರೂ ಉಂಟಾಗಬೇಕು ಮತ್ತು ಅವರಲ್ಲಿ ಅನ್ಯೋನ್ಯ ಪ್ರೀತಿಯೂ ಇರಬೇಕು. ಸ್ತ್ರೀಯನ್ನು ಪುರುಷನು ಪ್ರೀತಿಸುವಂತೆ ಪುರುಷನನ್ನು ಸ್ತ್ರೀಯೂ ಪ್ರೀತಿಸಬೇಕು. ವಿದ್ವಾಂಸರೆ! ದೇವರ ಅದೆಂತಹ "ಪದಾರ್ಥವಿದ್ಯೆ" ಅಂದರೆ "ಫಿಲಾಸಫಿ" ಚಿವಚ್ಯುತ್ತಿದೆಯೆಂಬುದನ್ನು ನೋಡಿರಿ. ಆದಮನ ಒಂದು ಮೂಳೆಯನ್ನು ತೆಗೆದು ನಾರಿಯನ್ನುಂಟುಮಾಡಿದನಾದರೆ ಎಲ್ಲಾ ಮನುಷ್ಯರಲ್ಲಿಯೂ, ಒಂದು ಮೂಳೆಯು ಕಡಿಮೆ ಬರುವುದಿಲ್ಲವೇಕೆ? ಮತ್ತು ಸ್ತ್ರೀಯು ಒಂದು ಮೂಳೆಯಿಂದ ಉಂಟಾದವಳಾದುದರಿಂದ ಅವಳಲ್ಲಿ ಒಂದೇ ಮೂಳೆಯಿರಬೇಕು. ಯಾವ ಸಾಮಗ್ರಿಯಿಂದ ಇಡೀ ಜಗತ್ತನ್ನು ಉಂಟುಮಾಡಿದನೋ ಅದರಿಂದ ಸ್ತ್ರೀಯ ಶರೀರವು ಆಗಲಾರದಾಗಿತ್ತೇ? ಆದಕಾರಣ, ಬೈಬಲಿನ ಈ ಸೃಷ್ಟಿಕ್ರಮವು ಸೃಷ್ಟಿವಿದ್ಯಾವಿರುದ್ಧವಾಗಿದೆ.

೭. ಇನ್ನು ಪರಮೇಶ್ವರನಾದ ದೇವರು ಉಂಟುಮಾಡಿದ ಎಲ್ಲಾ ಭೂಜಂತುಗಳಿಗಿಂತ ಸರ್ಪವು ಧೂರ್ತವಾಗಿತ್ತು; ಮತ್ತು ಅದು ಸ್ತ್ರೀಯನ್ನು "ದೇವರು, ನೀವು ತೋಟದ ಪ್ರತಿಯೊಂದು ಮರದಿಂದಲೂ ತಿನ್ನಬಾರದು ಎಂದು ನಿಜವಾಗಿಯೂ ಹೇಳಿದ್ದಾನೆಯೇ" ಎಂದು ಕೇಳಿತು. ಮತ್ತು ಸ್ತ್ರೀಯು ಸರ್ಪಕ್ಕೆ—"ನಾವಂತೂ ಈ ತೋಟದ ಮರಗಳ ಹಣ್ಣುಗಳನ್ನು ತಿನ್ನುತ್ತೇವೆ. ಆದರೆ ತೋಟದ

ಮಧ್ಯದಲ್ಲಿರುವ ಆ ಮರದ ಫಲವನ್ನು ನೀವು ತಿನ್ನಬಾರದು; ಮುಟ್ಟಬಾರದು; ಸತ್ತುಹೋದೀರಿ" ಎಂದು ದೇವರು ಹೇಳಿದನು ಎಂದು ಹೇಳಿದಳು. ಆಗ ಸರ್ಪವು ಸ್ತ್ರೀಗೆ—ನೀವು ನಿಜವಾಗಿ ಸಾಯುವುದಿಲ್ಲ. ಏಕೆಂದರೆ, ನೀವು ಇದರ ಹಣ್ಣನ್ನು ತಿಂದ ದಿನ ನಿಮ್ಮ ಕಣ್ಣುಗಳು ತೆರೆಯುವವು: ನೀವು ಒಳಿತು-ಕೆಡಕುಗಳನ್ನು ಗುರುತಿಸುವುದರಲ್ಲಿ ದೇವರಿಗೆ ಸಮಾನರಾಗುವಿರಿ, ಎಂದು ದೇವರು ಬಲ್ಲನು, ಎಂದು ಹೇಳಿತು. ಮತ್ತು ಸ್ತ್ರೀಯು ಆ ಮರ, ತಿನ್ನುವುದಕ್ಕೆ ರುಚಿಕರವಾಗಿಯೂ, ನೋಟಕ್ಕೆ ಸುಂದರವಾಗಿಯೂ, ಬುದ್ಧಿಕೊಡಲು, ಸಮರ್ಥವಾಗಿಯೂ ಇದೆ—ಎಂಬುದನ್ನು ಕಂಡಾಗ, ಅದರ ಫಲಗಳಿಂದ ತೆಗೆದುಕೊಂಡಳು ಮತ್ತು ತಿಂದಳು. ಮತ್ತು ತನ್ನ ಗಂಡನಿಗೂ ಕೊಟ್ಟಳು ಮತ್ತು ಅವನೂ ತಿಂದನು. ಆಗ ಅವರಿಬ್ಬರ ಕಣ್ಣುಗಳು ತೆರೆದವು. ಆಗವರು ತಾವು ಬೆತ್ತಲೆಯಾಗಿದ್ದೇವೆಂದು ತಿಳಿದುಕೊಂಡರು; ಆದುದರಿಂದ ಅವರು ಅಂಜೂರದ ಎಲೆಗಳನ್ನು ಸೇರಿಸಿ ಹೊಲಿದರು ಮತ್ತು ತಮಗಾಗಿ ಹೊದಿಕೆಮಾಡಿಕೊಂಡರು. ಆಗ ಪರಮೇಶ್ವರನಾದ ದೇವರು ಸರ್ಪಕ್ಕೆ—"ನೀನು ಇದನ್ನು ಮಾಡಿದ ಕಾರಣ ನೀನು ಎಲ್ಲಾ ಪಶುಗಳಿಗಿಂತ ಮತ್ತು ಪ್ರತಿಯೊಂದು ಅಡವಿಯ ಮೃಗಕ್ಕಿಂತಲೂ ಹೆಚ್ಚು ಶಾಪಗ್ರಸ್ತನಾಗುವೆ. ನೀನು ನಿನ್ನ ಹೊಟ್ಟೆಯ ಮೇಲೆ ಸರಿಯುವೆ; ಮತ್ತು ನಿನ್ನ ಇಡೀ ಜೀವನದಲ್ಲಿ ಧೂಳು ತಿಂದುಕೊಂಡಿರುವೆ. ಮತ್ತು ನಾನು ನಿನಗೂ ಮತ್ತು ಸ್ತ್ರೀಗೂ, ನಿನ್ನ ವಂಶಕ್ಕೂ ಮತ್ತು ಅವಳ ವಂಶಕ್ಕೂ ವೈರವನ್ನು ತಂದುಹಾಕುವೆನು. ಅದು ನಿನ್ನ ತಲೆಯನ್ನು ತುಳಿಯುವುದು ಮತ್ತು ನೀನು ಅದರ ಹಿಮ್ಮಡಿಯನ್ನು ಕಚ್ಚುವೆ" ಎಂದು ಹೇಳಿದನು. ಮತ್ತು ಅವನು ಸ್ತ್ರೀಗೆ "ನಾನು ನಿನ್ನ ನೋವನ್ನೂ, ಗರ್ಭಧಾರಣೆಯನ್ನೂ ಬಹಳ ಹೆಚ್ಚಿಸುವೆನು. ನೀನು ನೋವಿನಿಂದ ಮಕ್ಕಳನ್ನು ಹೆರುವೆ. ಮತ್ತು ನಿನ್ನ ಗಂಡನ ಮೇಲೆ ನಿನಗೆ ಆಶೆಯಿರುವದು. ಮತ್ತು ಅವನು ನಿನ್ನ ಮೇಲೆ ಪ್ರಭುತ್ವ ನಡೆಯಿಸುವನು" ಎಂದು ಹೇಳಿದನು. ಮತ್ತು ಅವನು ಆದಮನಿಗೆ—"ನೀನು ನಿನ್ನ ಹೆಂಡತಿಯ ಮಾತನ್ನು ಅಂಗೀಕರಿಸಿದ್ದೀಯೆ; ಮತ್ತು ಯಾವ ಮರದಿಂದ ತಿನ್ನಬಾರದೆಂದು ನಾನು ನಿನಗೆ ನಿಷೇಧಮಾಡಿ

ದ್ದೆನೋ, ಅದರಿಂದ ತಿಂದಿದ್ದೀಯೆ. ಆದುದರಿಂದ ಭೂಮಿ ನಿನ್ನ ನಿಮಿತ್ತವಾಗಿ ಶಾಪಗ್ರಸ್ತವಾಯಿತು. ನೀನು ನಿನ್ನ ಜೀವಮಾನದಲ್ಲೆಲ್ಲಾ ಕಷ್ಟದೊಂದಿಗೇ ಅದರಿಂದ ಭುಂಜಿಸುವೆ. ಮತ್ತು ಅದು ಮುಳ್ಳುಗಳನ್ನೂ, ಕಳೆಗಳನ್ನೂ ನಿನಗಾಗಿ ಹುಟ್ಟಿಸುವುದು. ಮತ್ತು ನೀನು ಹೊಲದ ಶಾಕಪತ್ರಗಳನ್ನು ತಿನ್ನುವೆ" ಎಂದು ಹೇಳಿದನು.

[ತೌರೇತ್ ಉತ್ಪತ್ತಿಪರ್ವ ೩, ೧-೭, ೧೪-೧೯]

ಸಮೀಕ್ಷಕ:—ಕ್ರೈಸ್ತರ ದೇವರು ಸರ್ವಜ್ಞನಾಗಿದ್ದರೆ ಈ ಧೂರ್ತಸರ್ಪವನ್ನು ಆಂದರೆ ಶೈತಾನನನ್ನು ಉಂಟುಮಾಡುತ್ತಿದ್ದನೇಕೆ? ಉಂಟುಮಾಡಿರುವನಾದರೆ, ಆ ದೇವರೇ ಅಪರಾಧಕ್ಕೆ ಹೊಣೆಯಾಗಿರುವನು. ಏಕೆಂದರೆ ಅವನು ಅದನ್ನು ದುಷ್ಟನನ್ನಾಗಿ ಉಂಟುಮಾಡದಿದ್ದರೆ ಅದೇಕೆ ದುಷ್ಟತನವನ್ನು ಮಾಡುತ್ತಿತ್ತು? ಅವನು ಪೂರ್ವಜನ್ಮವನ್ನು ಒಪ್ಪುವುದಿಲ್ಲವಾದಮೇಲೆ ಅಪರಾಧವಿಲ್ಲದೆಯೇ ಅದನ್ನೇಕೆ ಪಾಪಿಯನ್ನಾಗಿಮಾಡಿದನು? ಮತ್ತು ನಿಜವಾಗಿ ಹೇಳಬೇಕಾದರೆ ಅದು ಸರ್ಪವಾಗಿರಲಿಲ್ಲ; ಆದರೆ ಮನುಷ್ಯನಾಗಿತ್ತು. ಏಕೆಂದರೆ—ಮನುಷ್ಯನಲ್ಲವಾಗಿದ್ದರೆ ಮನುಷ್ಯಭಾಷೆಯನ್ನು ಹೇಗೆ ಆಡಬಲ್ಲದಾಗುತ್ತಿತ್ತು? ಮತ್ತು ತಾನು ಸುಳ್ಳುಗಾರನಾಗಿದ್ದು, ಇತರರನ್ನು ಅಸತ್ಯದಲ್ಲಿ ನಡೆಸುವವನನ್ನು ಶೈತಾನನನ್ನಬೇಕು. ಆದರೆ ಇಲ್ಲಿ ಶೈತಾನನು ಸತ್ಯವಾದಿಯಾಗಿದ್ದನು; ಆದುದರಿಂದ ಅವನು ಸ್ತ್ರೀಯನ್ನೇನೂ ತಪ್ಪುದಾರಿಗೆಳೆದಿರಲಿಲ್ಲ; ಆದರೆ ಸತ್ಯ ಹೇಳಿದನು. ಮತ್ತು ವಸ್ತುತಃ ದೇವರು ಆದಮ ಮತ್ತು ಹವ್ವಾರಿಗೆ ಇದನ್ನು ತಿನ್ನುವುದರಿಂದ ನೀವು ಸಾಯುವಿರಿ ಎಂದು ಸುಳ್ಳು ಹೇಳಿದ್ದನು. ಆ ಮರವು ಜ್ಞಾನದಾತೃವೂ, ಅಮರತ್ವವನ್ನು ಕೊಡುವಂತಹುದೂ ಆಗಿದ್ದರೆ, ಅದರ ಹಣ್ಣನ್ನು ತಿನ್ನಬಾರದು ಎಂದು ನಿಷೇಧಪಡಿಸಿದನೇಕೆ? ನಿಷೇಧಪಡಿಸಿದನಾದರೆ, ದೇವರು ಸುಳ್ಳುಗಾರನೂ, ಮೋಸಪಡಿಸುವವನೂ ಆದನೆಂಬುದು ಖಚಿತವಾಯಿತು. ಏಕೆಂದರೆ ಆ ಮರದ ಫಲಗಳು ಮಾನವರಿಗೆ ಜ್ಞಾನ ಮತ್ತು ಸುಖವನ್ನುಂಟುಮಾಡತಕ್ಕವಾಗಿದ್ದುವು ಮತ್ತು ಅಜ್ಞಾನ—ಮೃತ್ಯುಗಳನ್ನುಂಟುಮಾಡುವಂತಹವುವಾಗಿರಲಿಲ್ಲ. ದೇವರು ಫಲವನ್ನು ತಿನ್ನಬಾರದೆಂದು ನಿಷೇಧಿಸಿದನಾದರೆ ಆ ಮರವನ್ನೇಕೆ ಉಂಟು

ಮಾಡಿದ್ದನು? ತನಗಾಗಿ ಮಾಡಿದನಾದರೆ, ಅವನೇನು ಅಜ್ಞಾನಿಯೂ, ಮೃತ್ಯುಧರ್ಮಿಯೂ ಆಗಿದ್ದನೇ? ಮತ್ತು ಅನ್ಯರಿಗಾಗಿ ಉಂಟುಮಾಡಿದ್ದನಾದರೆ ಫಲವನ್ನು ತಿನ್ನುವುವರಿಂದ ಅಪರಾಧ ಸ್ವಲ್ಪವೂ ಆಗಲಿಲ್ಲ! ಮತ್ತು ಇಂದು ಜ್ಞಾನಕಾರಕ-ಮೃತ್ಯುನಿವಾರಕವೃಕ್ಷವಾವುದೂ ಕಂಡು ಬರುವುದಿಲ್ಲ. ದೇವರು ಅದರ ಬೀಜವನ್ನೂ ನಾಶಪಡಿಸಿದನೆ? ಇಂತಹ ಎಲ್ಲ ವಿಷಯಗಳಿಂದ ಮನುಷ್ಯನು ಮೋಸಗಾರನೂ ಕಪಟಿಯೂ ಆಗುತ್ತಾನೆ; ಇನ್ನು ದೇವರೇಕೆ ಹಾಗೆ ಆಗಲಿಲ್ಲ! ಏಕೆಂದರೆ ಬೇರೆಯವರೊಂದಿಗೆ ಛಲ-ಕಪಟ ಮಾಡುವವನು, ಛಲಿಯೂ, ಕಪಟಿಯೂ ಅಲ್ಲವೇಕೆ? ಮತ್ತು ಈ ಮೂವರಿಗೂ ಶಾಪವಿತ್ತುದು ಅಪರಾಧವಿಲ್ಲದೆಯೇ! ಹೀಗೆ ಆ ದೇವರು ಅನ್ಯಾಯಕಾರಿಯೂ ಆದನು. ಮತ್ತು ಆತನು ಸುಳ್ಳಾಡಿದುದರಿಂದ ಮತ್ತು ಅವರನ್ನು ತಪ್ಪುಹಾದಿಗೆಳೆದುದರಿಂದ ಈ ಶಾಪವು ದೇವರಿಗೇ ತಗಲಬೇಕು. ಈ "ಫಿಲಾಸಫಿ" ಯನ್ನಾದರೂ ನೋಡಿರಿ. ನೋವಿಲ್ಲದೆ ಗರ್ಭಧಾರಣವೂ, ಮಗುವಿನ ಜನ್ಮವೂ ಆಗಬಲ್ಲುದಾಗಿತ್ತೆ? ಮತ್ತು ಶ್ರಮಪಡದೆ ಯಾವನಾದರೂ ತನ್ನ ಜೀವನವನ್ನು ನಿರ್ವಹಿಸಬಲ್ಲನೆ? ಮೊದಲು ಮುಳ್ಳು ಮೊದಲಾದುವುಗಳ ಮರಗಳಿಲ್ಲವೆ? ಮತ್ತು ಶಾಕ-ಪತ್ರಗಳನ್ನು ತಿನ್ನುವುದು ಮಾನವರಿಗೆ ದೇವರ ಹೇಳಿಕೆಯಿಂದ ಉಚಿತವಾಯಿತೆಂದ ಮೇಲೆ ಮುಂದೆ ಬೈಬಲಿನಲ್ಲಿ ಮಾಂಸ ತಿನ್ನಬೇಕೆಂದು ಬರೆದುದು ಸುಳ್ಳಲ್ಲವೇಕೆ? ಮತ್ತು ಅದು ನಿಜದಾದರೆ ಇದು ಸುಳ್ಳಾಯಿತು. ಆದಮನ ಅಪರಾಧವೇನೂ ಸಿದ್ಧವಾಗದ ಮೇಲೆ ಕ್ರೈಸ್ತರು ಎಲ್ಲಾ ಮನುಷ್ಯರನ್ನೂ ಆದಮನ ಅಪರಾಧದ ದೆಸೆಯಿಂದ ಅವನ ಮಕ್ಕಳಾದುದರಿಂದ ಅಪರಾಧಿಗಳೆಂದು ಏಕೆ ಹೇಳುತ್ತಾರೆ? ಅಲ್ಲ; ಇಂತಹ ಪುಸ್ತಕವೂ, ಇಂತಹ ದೇವರೂ ಬುದ್ಧಿವಂತರ ಎದುರಿನಲ್ಲಿ ಎಂದಾದರೂ ಯೋಗ್ಯರಾದಾರೆ?

೮. ಮತ್ತು ಪರಮೇಶ್ವರನಾದ ದೇವರು—"ನೋಡಿರಿ, ಆದಮನು ಒಳಿತು-ಕೆಡುಕುಗಳನ್ನರಿಯುವುದರಿಂದ ನಮ್ಮಲ್ಲಿ ಒಬ್ಬನಂತಾದನು. ಮತ್ತು ಅವನು ಕೈಚಾಚಿ, ಜೀವನ ವೃಕ್ಷದ ಫಲವನ್ನು ತೆಗೆದು ತಿಂದು ಅಮರನಾಗಿಹೋಗುವ ಪರಿಸ್ಥಿತಿ ಬಾರದಿರಲಿ"

ಎಂದನು. ಅವನು ಆದಮನನ್ನು ಓಟ್ಟಬಿಟ್ಟನು. ಜೀವನ ವೃಕ್ಷದ ದಾರಿಯನ್ನು ಕಾಯುವುದಕ್ಕೆ ಆತನು ಈಡನ್ ಉದ್ಯಾನದ ಪೂರ್ವದ ಕಡೆ ಧಗಧಗನೆ ಪ್ರಜ್ವಲಿಸುತ್ತಾ ನಾಲ್ಕೆಡೆಯೂ ಸುತ್ತುವ ಕತ್ತಿಯನ್ನು ಹಿಡಿದ ಚೆರುಬೀನರನ್ನು ನಿಲ್ಲಿಸಿದನು.

[ತೌರೇತ್ ಪರ್ವ ೩. ೨೨-೨೪]

ಸಮಿಾಕ್ಷಕ--ಆಹಾ! ಜ್ಞಾನದಲ್ಲಿ ನಮಗೆ ಸಮನಾದನೆಂಬ ಈರ್ಷ್ಯೆಯೂ, ಭ್ರಮೆಯೂ ದೇವರಿಗೇಕಾಯಿತು? ಇದೇನು ಕೆಟ್ಟ ದಾಯಿತೇ? ಯಾವನೂ, ಎಂದಿಗೂ ದೇವರ ಸರಿಸಮಾನನು ಆಗಲಾರ ನಾದಮೇಲೆ, ಈ-ಸಂದೇಹವಾದರೂ ಏಕೆ ಹುಟ್ಟಿತು? ಆದರೆ ಅವನು ದೇವರು ಆಗಿರಲಿಲ್ಲ. ಯಾವನೋ ಒಬ್ಬ ಮನುಷ್ಯನಾಗಿದ್ದನೆಂಬುದೂ ಸಹ ಈ ಬರಹದಿಂದ ಸಿದ್ಧವಾಗುತ್ತದೆ. ಬೈಬಲಿನಲ್ಲಿ ದೇವರ ವಿಷಯ ಬಂದ ಕಡೆಯಲ್ಲೆಲ್ಲಾ ಮನುಷ್ಯನ ಸದೃಶವಾಗಿಯೇ ಬರೆದು ಬಂದಿರುತ್ತದೆ. ಈಗ ನೋಡಿರಿ! ಆದಮನ ಜ್ಞಾನವೃದ್ಧಿಯಿಂದ ದೇವರು ಕಂಡು ಎಷ್ಟು ದುಃಖಿತನಾದನು! ಮತ್ತು ಅಮರ ವೃಕ್ಷದ ಫಲವನ್ನು ತಿನ್ನುವ ಬಗ್ಗೆ ಅದೆಷ್ಟು ಈರ್ಷ್ಯೆಪಟ್ಟನು! ಮತ್ತು ಮೊದಲು ಅವನನ್ನು ಉದ್ಯಾನದಲ್ಲಿ ಇಟ್ಟಾಗ ಆತನಿಗೆ ಇವನನ್ನು ಪುನಃ ಇಲ್ಲಿಂದ ಹೊರಡಿಸ ಬೇಕಾದೀತು ಎಂಬ ಭವಿಷ್ಯದ ಜ್ಞಾನವಿರಲಿಲ್ಲ. ಆದುದರಿಂದ ಕ್ರೈಸ್ತರ ದೇವರು ಸರ್ವಜ್ಞನಾಗಿರಲಿಲ್ಲ. ಮತ್ತು ಪ್ರಜ್ವಲಿಸುತ್ತಿರುವ ಕತ್ತಿಯ ಪಹರೆಯನ್ನಿಟುದೂ ಕೂಡ ಮನುಷ್ಯನ ಕಾರ್ಯ; ಈಶ್ವರನದಲ್ಲ.॥೮॥

೯. ಮತ್ತು ಎಷ್ಟೋ ದಿನಗಳ ನಂತರ ಹೀಗಾಯಿತು:--ಕಾಯಿನನು ಹೊಲದ ಫಲಗಳಿಂದ ಕೆಲವನ್ನು ದೇವರಿಗೆ ಕಾಣಿಕೆಯಾಗಿ ಸಮರ್ಪಿಸಿದನು. ಮತ್ತು ಹೇಬೆಲನೂ ತನ್ನ ಹಿಂಡಿ*ನಿಂದ ಜೊಚ್ಚಲ ಮತ್ತು ದಪ್ಪದಪ್ಪವಾದ ಕುರಿಗಳನ್ನು ಕಾಣಿಕೆಯಾಗಿ ತಂದನು. ಮತ್ತು ದೇವರು ಹೇಬೆಲನನ್ನೂ ಅವನ ಕಾಣಿಕೆಯನ್ನೂ ಆದರಿಸಿದನು. ಮತ್ತು ಕಾಯಿನನನ್ನೂ, ಅವನ ಕಾಣಿಕೆಯನ್ನೂ ಆದರಿಸಲಿಲ್ಲ. ಆದುದರಿಂದ ಕಾಯಿನನು ಬಹು ಕೋಪಗೊಂಡನು. ಅವನ ಮೂತಿಯನ್ನು ಊದಿಸಿ

* ಕುರಿಮೇಕೆಗಳ ಹಿಂಡು.

ಕೊಂಡನು. ಆಗ ದೇವರು ಅವನನ್ನು "ಏಕೆ ಕ್ರುದ್ಧನಾಗಿದ್ದೀಯೆ? ಮತ್ತು ನಿನ್ನ ಮುಖ ಏಕೆ ಊದಿಕೊಂಡಿತು? ಎಂದು ಕೇಳಿದನು.

[ತೌರೇತ್ ಳಃ ೩-೬]

ಸಮೀಕ್ಷಕ—ದೇವರು ಮಾಂಸಾಹಾರಿಯಾಗಿಲ್ಲದಿದ್ದರೆ ಕುರಿಯ ಕಾಣಿಕೆಯ ಮತ್ತು ಹೇಬೆಲನ ಸತ್ಕಾರವನ್ನೂ, ಏಕೆ ಮೆಚ್ಚಿದನು? ಕಾಯಿನನ ಹಾಗೂ ಅವನ ಕಾಣಿಕೆಯ ತಿರಸ್ಕಾರವನ್ನೂ ಏಕೆ ಮಾಡುತ್ತಿದ್ದನು? ಮತ್ತು ಹೀಗೆ ಜಗಳ ಹುಟ್ಟಿಸುವುದಕ್ಕೂ, ಹೇಬೆಲನ ಮರಣಕ್ಕೂ ಕಾರಣವೂ ಸಹ ದೇವರೇ ಆದನು. ಮತ್ತು ಮನುಷ್ಯರು ಪರಸ್ಪರ ಒಬ್ಬರೊಂದಿಗೊಬ್ಬರು ಮಾತನಾಡುವಂತೆಯೇ ಕ್ರೈಸ್ತರ ದೇವರ ಮಾತುಗಳೂ ಇರುತ್ತವೆ. ತೋಟಕ್ಕೆ ಬರುವುದೂ, ಹೋಗುವುದೂ ಆದನ್ನು ನಿರ್ಮಿಸುವುದೂ ಕೂಡ ಮನುಷ್ಯರ ಕೆಲಸವಾಗಿದೆ. ಇದರಿಂದ ಈ ಬೈಬಲ್ ಮನುಷ್ಯನಿರ್ಮಿತವು; ದೇವನಿರ್ಮಿತವಲ್ಲವೆಂಬುದು ವಿದಿತವಾಗುತ್ತದೆ. ॥೯॥

೧೦. ದೇವರು ಕಾಯಿನನನ್ನು—"ನಿನ್ನ ತಮ್ಮನಾದ ಹೇಬೆಲನು ಎಲ್ಲಿ?" ಎಂದು ಕೇಳಿದಾಗ, ಅವನು—"ನಾನರಿಯೆ, ನಾನು ನನ್ನ ತಮ್ಮನನ್ನು ಕಾಯುವವನೊ?" ಎಂದು ಹೇಳಿದಾಗ, ಆತನು "ನೀನು ಏನುಮಾಡಿದೆ? ನಿನ್ನ ತಮ್ಮನ ರಕ್ತದ ಧ್ವನಿ ಭೂಮಿಯ ಕಡೆಯಿಂದ ನನ್ನನ್ನು ಕೂಗುತ್ತದೆ, ಮತ್ತು ನೀನು ಈಗ ಪೃಥ್ವಿಯಿಂದ ಶಪ್ತನಾಗಿದ್ದೀಯೆ ಎಂದನು. [ತೌರೇತ್ ಳ। ೯-೧೦]

ಸಮೀಕ್ಷಕ—ಕಾಯಿನನನ್ನು ಕೇಳದೆ ದೇವರಿಗೆ ಹೇಬೆಲನ ಸಮಾಚಾರವು ಗೊತ್ತಿರಲಿಲ್ಲವೆ? ಮತ್ತು ರಕ್ತವು ಭೂಮಿಯ ಕಡೆಯಿಂದ ಯಾರನ್ನಾದರೂ ಕರೆಯಬಲ್ಲದೇ? ಈ ಮಾತುಗಳೆಲ್ಲಾ ಅವಿದ್ವಾಂಸರವು; ಆದುದರಿಂದಲೇ ಈ ಪುಸ್ತಕವು ದೇವನಿರ್ಮಿತವಾಗಲೀ, ವಿದ್ವಾಂಸನ ಕೃತಿಯಾಗಲೀ ಆಗಲಾರದು. ॥೧೦॥

೧೧. ಮತ್ತು ಹನೂಕ ಮತೂಸಿಲಹನು ಹುಟ್ಟಿದ ಮೇಲೆ ಮುನ್ನೂರು ವರುಷಗಳ ವರೆಗೆ ದೇವರ ಜತೆಯಲ್ಲಿಯೇ ನಡೆಯುತ್ತಾ ಇದ್ದನು. [ತೌರೇತ್ ೫। ೨೨]

ಸಮಿಾಕ್ಷಕ–ಕ್ರೈಸ್ತರ ದೇವರು ಮನುಷ್ಯನಲ್ಲವಾಗಿದ್ದರೆ ಹನೋಕನು ಅವನ ಜತೆಜತೆಗೊ ಹೇಗೆ ನಡೆಯುತ್ತಿದ್ದನು? ಇದರ ಬದಲಿಗೆ ವೇದೋಕ್ತ ನಿರಾಕಾರದೇವರನ್ನೇ ಕ್ರೈಸ್ತರು ಸ್ವೀಕರಿಸಿದರೆ, ಅವರಿಗೆ ಕಲ್ಯಾಣವಾದೀತು. ॥೧೧॥

೧೨. ಮತ್ತು ಅವರಿಂದ ಪುತ್ರಿಯರು ಉತ್ಪನ್ನರಾದರು. ಮತ್ತು ದೇವರ ಪುತ್ರರು ಆದಮನ ಪುತ್ರಿಯರು ಸುಂದರರಾಗಿರುವುದನ್ನು ನೋಡಿದರು. ಮತ್ತು ಅವರಲ್ಲಿ ತಮಗೆ ಇಷ್ಟರಾದವರನ್ನು ಮದುವೆ ಮಾಡಿಕೊಂಡರು. ಮತ್ತು ಆ ಕಾಲದಲ್ಲಿ ಪೃಥ್ವಿಯಲ್ಲಿ ದಾನವರಿದ್ದರು. ಮತ್ತು ಅದರ ನಂತರವೂ ಸಹ ದೇವರ ಮಕ್ಕಳು ಆದಮನ ಪುತ್ರಿಯರೊಂದಿಗೆ ಕೂಡಿದಾಗ, ಅವರಿಂದ ಬಲಶಾಲಿಗಳೂ, ಮೊದಲಿಗಿಂತಲೂ ಪ್ರಖ್ಯಾತರೂ ಆದ ಮಕ್ಕಳಾದರು. ಮತ್ತು ಆದಮನ ಕೆಟ್ಟತನವು ಭೂಮಿಯ ಮೇಲೆ ಹೆಚ್ಚಾದುದನ್ನೂ ಅವನ ಮನಸ್ಸಿನ ಚಿಂತನೆ ಮತ್ತು ಭಾವನೆ ಪ್ರತಿದಿನವೂ ಕೇವಲ ಕೆಟ್ಟದಾಗುತ್ತಿರುವುದನ್ನೂ ದೇವರು ನೋಡಿದನು. ಆಗ ತಾನು ಭೂಮಿಯ ಮೇಲೆ ಮನುಷ್ಯರನು ಉಂಟುಮಾಡಿದುದಕ್ಕಾಗಿ ಪರಮೇಶ್ವರನು ಪಶ್ಚಾತ್ತಾಪಪಟ್ಟನು ಮತ್ತು ಅವನಿಗೆ ಅತಿ ಶೋಕವಾಯತು. ಆಗ ದೇವರು—'' ನಾನು ಸೃಷ್ಟಿಸಿದ ಮನುಷ್ಯನನ್ನೂ, ಮನುಷ್ಯನಿಂದ ಹಿಡಿದು ಪಶುಗಳವರೆಗೂ ಮತ್ತು ತೆವಳುವ ಜೀವಿಗಳನ್ನೂ, ಆಕಾಶದ ಪಕ್ಷಿಗಳನ್ನೂ ಭೂಮಿಯ ಮೇಲಿನಿಂದ ಅಳಿಸಿಬಿಡುವೆನು. ಏಕೆಂದರೆ, ಅವುಗಳನ್ನು ರಚಿಸಿದುದರಿಂದ ನಾನು ಪಶ್ಚಾತ್ತಾಪ ಪಡುತ್ತಿದ್ದೇನೆ'' ಎಂದನು.

[ಆದಿ. ೬, ೧, ೨, ೪-೭]

ಸಮಿಾಕ್ಷಕ:—ದೇವರ ಮಕ್ಕಳಾರು? ಮತ್ತು ದೇವರ ಹೆಂಡತಿ, ಅತ್ತೆ, ಮಾವ, ಮೈದುನ ಮತ್ತು ಬೀಗರು ಯಾರು? ಎಂದು ಕ್ರೈಸ್ತರನ್ನು ಕೇಳಬೇಕು. ಏಕೆಂದರೆ ಈಗಂತೂ ಮನುಷ್ಯ ಪುತ್ರಿಯರ ಸಂಗಡ ವಿವಾಹವಾದುದರಿಂದ ದೇವರು ಅವರ ಬೀಗನಾದನು. ಅವರಿಂದ ಹುಟ್ಟುವವರು ಪೌತ್ರರೂ ಪ್ರಪೌತ್ರರೂ ಆದರು. ಇಂತಹ ವಿಷಯವು ದೇವರದು ಹಾಗೂ ದೇವರ ಪುಸ್ತಕದ್ದು ಆಗಬಲ್ಲದೇ? ಆದರೆ ಆ ಕಾಡುಮನುಷ್ಯರು ಈ ಪುಸ್ತಕವನ್ನು ನಿರ್ಮಿಸಿದ್ದಾರೆಂದು ತಿಳಿದು

ಬರುತ್ತದೆ. ಸರ್ವಜ್ಞನಲ್ಲದವನೂ, ಭವಿಷ್ಯತ್ತಿನ ಮಾತನ್ನರಿಯದವನೂ ಈಶ್ವರನೇ ಅಲ್ಲ; ಅವನು ಜೀವನು; ದುಷ್ಟರಾಗುವರೆಂದು ತಿಳಿದಿರಲಿಲ್ಲವೇ? ಪಶ್ಚಾತ್ತಾಪ ಪಡುವುದು, ಅತಿ ಶೋಕವಾಗುವುದು; ತಪ್ಪಿನಿಂದ ಕೆಲಸಮಾಡಿ ಹಿಂದಿನಿಂದ ಪಶ್ಚಾತ್ತಾಪಗೊಳ್ಳುವುದು ಮೊದಲಾದುದು ಕ್ರೈಸ್ತರ ದೇವರಿಗೆ ಅನ್ವಯಿಸಬಲ್ಲದು. ಏಕೆಂದರೆ, ಕ್ರೈಸ್ತರ ದೇವರು ಪೂರ್ಣ ವಿದ್ವಾಂಸನೂ, ಯೋಗಿಯೂ ಆಗಿರಲಿಲ್ಲ. ಇಲ್ಲದಿದ್ದರೆ ಶಾಂತಿವಿಜ್ಞಾನಗಳ ಮೂಲಕ ಅತಿ ಶೋಕಾದಿಗಳಿಂದ ದೂರವಿರಲು ಶಕ್ತನಾಗುತ್ತಿದ್ದನು. ಅಲ್ಲ; ಪಶುಪಕ್ಷಿಗಳೂ ಕೂಡ ದುಷ್ಟವಾಗಿ ಹೋದವೆ? ಆ ದೇವರು ಸರ್ವಜ್ಞನಾಗಿದ್ದರೆ ಹೀಗೆ ವಿಷಾದಯುಕ್ತನೇತಕ್ಕಾಗುತ್ತಿದ್ದನು? ಆದ್ದರಿಂದ ಇವನು ದೇವರೇ ಆಗಲಾರನು. ಈ ಪುಸ್ತಕವು ದೇವನಿರ್ಮಿತವೂ ಆಗಲಾರದು. ವೇದೋಕ್ತನಾದ ಪರಮೇಶ್ವರನು ಸರ್ವಪಾಪ-ಕ್ಲೇಶ-ದುಃಖಶೋಕಾದಿಗಳಿಂದ ರಹಿತನಾದ ಸಚ್ಚಿದಾನಂದಸ್ವರೂಪನಾಗಿರುವಂತೆ ಆತನನ್ನು ಕ್ರೈಸ್ತರು ಒಪ್ಪಿದ್ದರೆ ಅಥವಾ ಈಗಲಾಗರೂ ಒಪ್ಪಿದರೆ ತಮ್ಮ ಮನುಷ್ಯಜನ್ಮವನ್ನು ಸಫಲಗೊಳಿಸಬಲ್ಲರು. ||೧೭||

೧೩. ಆ ನಾವೆಯ ಉದ್ದವು ಮುನ್ನೂರು ಮೊಳವೂ, ಅಗಲವು ಐವತ್ತು ಮೊಳವೂ, ಎತ್ತರ ಮೂವತ್ತು ಮೊಳವೂ ಆಗಿರಲಿ. ನೀನು ನಾವೆಯನ್ನೇರು. ನೀನು, ನಿನ್ನ ಮಕ್ಕಳು, ನಿನ್ನ ಹೆಂಡತಿ, ನಿನ್ನ ಸೊಸೆಯರು ನಿನ್ನ ಜೊತೆಗೆ; ಮತ್ತು ಎಲ್ಲಾ ಯೋನಿಗಳಲ್ಲಿಯೂ ಜೀವಿತವಾದ ಎರಡೆರಡು ಪ್ರಾಣಿಗಳನ್ನು, ಅವು ನಿನ್ನೊಂದಿಗೆ ಬದುಕಿರುವಂತೆ ಮತ್ತು ಗಂಡು ಹೆಣ್ಣುಗಳಾಗುವಂತೆ ನಾವೆಯಲ್ಲಿಟ್ಟುಕೊಳ್ಳಬೇಕು; ಪಕ್ಷಿಗಳಲ್ಲಿ ಒಂದೊಂದು ಜಾತಿಯಿಂದ, ಪಶು*ಗಳಲ್ಲಿ ಒಂದೊಂದು ಜಾತಿಯಿಂದ, ಮತ್ತು ಭೂಮಿಯ ಮೇಲೆ ತೆವಳುವ ಜಂತುಗಳಲ್ಲಿ ಒಂದೊಂದು ಜಾತಿಯಿಂದ, ಎರಡೆರಡು, ಬದುಕಿರುವಂತೆ ನಿನ್ನ ಬಳಿಗೆ ಬರಲಿ ಮತ್ತು ನೀನು ನಿನ್ನ ತಿನ್ನುವಿಕೆಗಾಗಿ ಎಲ್ಲಾ ಸಾಮಗ್ರಿಗಳನ್ನೂ ನಿನ್ನ ಬಳಿ ಕೂಡಿಹಾಕಿಕೋ. ಅದು ನಿಮಗೂ,

* ಚತುಷ್ಪಾದ ಪ್ರಾಣಿಗಳು.

ಅವಕ್ಕೂ ಭೋಜನವಾಗುವುದು. ದೇವರ ಸಮಸ್ತ ಅಪ್ಪಣೆಯ ಪ್ರಕಾರ ನೋಹನು ಮಾಡಿದನು. [ತೌರೇತ್ ೬। ೧೫,೧೮-೨೨]

ಸಮಿಾಕ್ಷಕ—ಒಳೆಯದು, ಯಾವ ವಿದ್ವಾಂಸನಾದರೂ ಇಂತಹ ವಿದ್ಯಾವಿರುದ್ಧವಾದ ಅಸಂಭವ ಮಾತುಗಳನ್ನು ಹೇಳುವವನನ್ನು ದೇವರೆಂದು ಒಪ್ಪಬಲ್ಲನೆ? ಇಷ್ಟ ದೊಡ್ಡದೂ, ಆಗಲವೂ, ಎತ್ತರವೂ ಆದ ನಾವೆಯಲ್ಲಿ ಗಂಡಾನೆ, ಹೆಣ್ಣಾನೆ, ಗಂಡು ಒಂಟಿ, ಹೆಣ್ಣು ಒಂಟಿ ಮೊದಲಾದ ಕೋಟ್ಯಂತರ ಜಂತುಗಳೂ ಅವುಗಳು ತಿನ್ನುವ ಕುಡಿಯುವ ಪದಾರ್ಥಗಳೂ ಅವುಗಳ ಪರಿವಾರವೂ ಹಿಡಿಸಬಲ್ಲವೆ? ಆದಕಾರಣವೇ ಈ ಪುಸ್ತಕವು ಮನುಷ್ಯ ಕೃತವು. ಈ ಪುಸ್ತಕವನ್ನು ಬರೆದವನು ವಿದ್ವಾಂಸನೂ ಆಗಿರಲಿಲ್ಲ. ॥೧೩॥

೧೪. ಮತ್ತು ನೂಹನು ದೇವರಿಗೋಸ್ಕರ ಒಂದು ವೇದಿಯನ್ನು ಮಾಡಿದನು; ಮತ್ತು ಎಲ್ಲಾ ಪವಿತ್ರ ಪಶುಗಳಿಂದಲೂ, ಪ್ರತಿಯೊಂದು ಪವಿತ್ರ ಪಕ್ಷಿಯಿಂದಲೂ ಹೋಮದ ಆಹುತಿಯನ್ನು ಆ ವೇದಿಯಲ್ಲಿತ್ತನು. ಮತ್ತು ದೇವರು ಸುಗಂಧವನ್ನು ಮೂಸಿದನು. ಮತ್ತು ದೇವರು ತನ್ನ ಮನಸ್ಸಿನಲ್ಲಿ—" ಮನುಷ್ಯನ ಮನೋಭಾವನೆಯು ಆವನ ಬಾಲ್ಯದಿಂದಲೇ ಕೆಟ್ಟದಾಗಿರುವುದರಿಂದ, ನಾನು ಮನುಷ್ಯನ ದೆಸೆಯಿಂದ ಭೂಮಿಗೆ ಮತ್ತೆಂದೂ ಶಾಪಕೊಡುವುದಿಲ್ಲ. ಮತ್ತು ನಾನು ಎಲ್ಲಾ ಜೀವಧಾರಿಗಳನ್ನೂ ಕೊಂದಂತೆ ಮತ್ತೆಂದೂ ಕೊಲ್ಲುವುದಿಲ್ಲ " ಎಂದುಕೊಂಡನು. [ತೌರೇತ್ ೮। ೨೦-೨೧]

ಸಮಿಾಕ್ಷಕ—ವೇದಿಯನ್ನು ನಿರ್ಮಿಸುವ, ಹೋಮಮಾಡುವ ಬರಹದಿಂದ ಈ ವಿಷಯಗಳೆಲ್ಲವೂ ಬೈಬಲಿನಲ್ಲಿ ವೇದಗಳಿಂದ ಹೋಗಿವೆಯೆಂದೇ ಸಿದ್ಧವಾಗುತ್ತದೆ. ದೇವರು ಸುವಾಸನೆಯನ್ನು ತೆಗೆದುಕೊಂಡನು ಎನ್ನಲು ಅವನಿಗೆ ಮೂಗೂ ಇದೆಯೆ? ಕ್ರೈಸ್ತರ ಈ ದೇವರು ಮನುಷ್ಯರಂತೆ ಅಲ್ಪಜ್ಞನಲ್ಲವೆ? ಒಂದು ಸಲ ಶಪಿಸುತ್ತಾನೆ; ಇನ್ನೊಂದು ಸಲ ಪಶ್ಚಾತ್ತಾಪಪಡುತ್ತಾನೆ. ಒಂದು ಸಲ ಶಾಪ ಕೊಡುವುದಿಲ್ಲ ಎಂದು ಹೇಳುತ್ತಾನೆ. ಮೊದಲು ಶಾಪ ಕೊಟ್ಟದ್ದನು; ಇನ್ನು ಮೇಲೂ ಕೊಡುವನು. ಮೊದಲು ಎಲ್ಲರನ್ನು ನಾಶಗೊಳಿಸಿದನು; ಈಗ ಎಂದಿಗೂ ಕೊಲ್ಲುವುದಿಲ್ಲ ಎನ್ನುತ್ತಾನೆ. ಇವೆಲ್ಲವೂ

ಬಾಲಕರ ಮಾತುಗಳಂತಿವೆ. ದೇವರದಲ್ಲ. ವಿದ್ವಾಂಸನ ಮಾತೂ ಪ್ರತಿಜ್ಞೆಯೂ ಸ್ಥಿರವಾಗಿರುವುದರಿಂದ ಇದು ಯಾವ ವಿದ್ವಾಂಸನ ಮಾತೂ ಅಲ್ಲ. ||೧೪||

೧೫. ದೇವರು ನೊಹನನ್ನೂ ಅವನ ಮಕ್ಕಳನ್ನೂ ಆಶೀರ್ವದಿಸಿದನು. ಮತ್ತು ಅವರಿಗೆ ಜೀವಿಸುವ ಓಡಾಡುವ ಪ್ರತಿಯೊಂದು ಜಂತುವೂ ನಿಮಗೆ ಆಹಾರಕ್ಕಾಗಿರುವುದು. ನಾನು ಹಸಿರು ತರಕಾರಿಯಂತೆ ಸಮಸ್ತ ವಸ್ತುಗಳನ್ನೂ ನಿಮಗೆ ಕೊಟ್ಟಿನು. ಕೇವಲ ಮಾಂಸವನ್ನು ಅದರ ಜೀವ ಅಂದರೆ ಅದರ ರಕ್ತದೊಂದಿಗೆ ತಿನ್ನಬಾರದು.

[ತೌರೇತ್ ೯, ೧-೩-೪]

ಸಮೀಕ್ಷಕ—ಒಬ್ಬನ ಪ್ರಾಣಕ್ಕೆ ಕಷ್ಟಕೊಟ್ಟು ಇನ್ನೊಬ್ಬನಿಗೆ ಆನಂದಗೊಳಿಸುವುದರಿಂದ ಕ್ರೈಸ್ತರ ದೇವರು ದಯಾಹೀನನಲ್ಲವೆ? ತಾಯಿತಂತೆಗಳು ಒಬ್ಬ ಹುಡುಗನನ್ನು ಕೊಲ್ಲಿಸಿ ಬೇರೊಬ್ಬನಿಗೆ ತಿನ್ನಿಸಿದರೆ, ಮಹಾಪಾಪಿಗಳಾಗರೇ? ಈ ಮಾತೂ ಅದೇ ರೀತಿಯಿದೆ. ಏಕೆಂದರೆ—ದೇವರಿಗೆ ಎಲ್ಲಾ ಪ್ರಾಣಿಗಳೂ ಪುತ್ರರಂತೆಯಿವೆ. ಇವರ ದೇವರು ಹಾಗಿಲ್ಲವಾದುದರಿಂದ, ಕಟುಕನಂತೆ ಕೆಲಸಮಾಡುತ್ತಾನೆ. ಮತ್ತು ಮಾನವರೆಲ್ಲರನ್ನೂ ಇವನೇ ಹಿಂಸಕರನ್ನಾಗಿ ಮಾಡಿದ್ದಾನೆ. ಅದಕಾರಣ ಕ್ರೈಸ್ತರ ದೇವರು ನಿರ್ದಯನಾದುದರಿಂದ ಪಾಪಿಯೇ ಕಲ್ಲ? ||೧೫||

೧೬. ಸಮಸ್ತ ಪೃಥ್ವಿಯಲ್ಲಿ ಒಂದೇ ಮಾತು ಮತ್ತು ಒಂವೇ ಭಾಷೆಯಿತ್ತು. ಅವರು—"ಬನ್ನಿ. ಒಂದು ಪಟ್ಟಣವನ್ನು, ಆಕಾಶದವರೆಗೆ ಮುಟ್ಟುವ ತುದಿಯನ್ನುಳ್ಳ ಒಂದು ಗೋಪುರವನ್ನು ನಮಗಾಗಿ ಕಟ್ಟೋಣ ಮತ್ತು ಹೆಸರು ಪಡೆಯೋಣ. ನಾವು ಭೂಮಿಯ ಮೇಲೆಲ್ಲಾ ಚದರಿಹೋದಂತಾಗಲಿ" ಅಂದುಕೊಂಡರು. ಆದಮನ ಮಕ್ಕಳು ಕಟ್ಟುತ್ತಿದ್ದ ಆ ಪಟ್ಟಣವನ್ನೂ, ಆ ಗೋಪುರವನ್ನೂ ನೋಡುವುದಕ್ಕೆ ದೇವರು ಇಳಿದು ಬಂದನು. ಆಗ ದೇವರು—"ನೋಡಿರಿ! ಈ ಜನರು ಒಂದೇ ಆಗಿದ್ದಾರೆ. ಮತ್ತು ಅವರೆಲ್ಲರಿಗೂ ಒಂದೇ ಭಾಷೆಯಿದೆ. ಮತ್ತು ಅವರು ಹೀಗೆಯೇ ಏನಾದರೂ ಮಾಡ

ಹತ್ತಿದ್ದರಿ, ಅವರು ಯಾವುದರ ಮೇಲೆ ಮನವಿಡುವರೋ ಅದರಿಂದ ಪ್ರತ್ಯೇಕಿಸಲ್ಪಡಲಾರರು. ಬನ್ನಿ, ನಾವು ಇಳಿಯೋಣ; ಅಲ್ಲಿ ಒಬ್ಬರ ಮಾತು ಒಬ್ಬರಿಗೆ ತಿಳಿಯದಂತೆ ಭಾಷೆಯನ್ನು ಕದಡಿಬಿಡೋಣ" ಅಂದನು. ಆಗ ದೇವರು ಅವರನ್ನು ಅಲ್ಲಿಂದ ಭೂಲೋಕದಲ್ಲೆಲ್ಲಾ ಚದರಿಸಿದನು. ಅವರು ಆ ಪಟ್ಟಣ ಕಟ್ಟುವುದರಿಂದ ದೂರ ಉಳಿದರು.

[ತೌರೇತ್ ಪ. ೧೧। ೧, ೪–೮]

ಸಮಿಾಕ್ಷಕ—ಜಗತ್ತಿನಲ್ಲಿ ಒಂದೇ ಭಾಷೆ ಮತ್ತು ಮಾತು ಇದ್ದಾಗ ಜನರೆಲ್ಲರಿಗೂ ಪರಸ್ಪರ ಅತ್ಯಂತ ಆನಂದ ಲಭಿಸಿರಬಹುದು. ಆದರೆ ಮಾಡುವುದೇನು? ಕ್ರೈಸ್ತರ ಈರ್ಷ್ಯಾಳು ದೇವರು ಎಲ್ಲರ ಭಾಷೆಯನ್ನು ಕದಡಿಹಾಕಿ, ಸರ್ವ ನಾಶವನ್ನು ಮಾಡಿದನು. ಅವನು ಈ ಮಹಾ ಅಪರಾಧಮಾಡಿದನು. ಇದು ಸೈತಾನನ ಕೆಲಸಕ್ಕಿಂತಲೂ ಕೆಟ್ಟ ಕೆಲಸವಲ್ಲವೇ? ಮತ್ತು ಇದರಿಂದ ಕ್ರೈಸ್ತರ ದೇವರು ಸನಾಯಿ ಪರ್ವತ ಮೊದಲಾದೆಡೆ ವಾಸಿಸುತ್ತಿದ್ದನೆಂದೂ ಸಹ ತಿಳಿದುಬರುತ್ತದೆ. ಇದು ಒಬ್ಬ ಅವಿದ್ವಾಂಸನ ಮಾತಲ್ಲದೆ ದೇವರ ಮಾತೂ, ಇದು ಈಶ್ವರೋಕ್ತವಾದ ಪುಸ್ತಕವೂ ಹೇಗೆತಾನೇ ಆಗಬಲ್ಲದು? ॥೧೬॥

೧೭. ಆಗ ಅವನು ತನ್ನ ಹೆಂಡತಿಯಾದ ಸಾರಳಿಗೆ—"ನೋಡು, ನೀನು ನೋಡಲು ಸುಂದರಿಯಾದ ಸ್ತ್ರೀ ಎಂಬುದನ್ನು ನಾನು ಬಲ್ಲೆ. ಆದುದರಿಂದ ಹೀಗಾಗುವುದು:—ಈಜಿಪ್ತಿನವರು ನಿನ್ನನ್ನು ಕಂಡಾಗ ಈಕೆಯು ಇವನ ಹೆಂಡತಿಯೆಂದು, ನನ್ನನ್ನು ಕೊಂದುಹಾಕುವರು; ಆದರೆ ನಿನ್ನ ಜೀವಸಹಿತ ಉಳಿಸುವರು. ನಿನ್ನ ನಿಮಿತ್ತದಿಂದ ನನಗೆ ಒಳಿತಾಗುವಂತೆ ಮತ್ತು ನಿನ್ನ ಕಾರಣದಿಂದ ನನ್ನ ಪ್ರಾಣವು ಉಳಿದುಕೊಳ್ಳುವಂತೆ ನೀನು—"ನಾನು ಆತನ ತಂಗಿ" ಎಂದು ಹೇಳು. ಎಂದು ನುಡಿದನು.

[ಆದಿ. ೧೨, ೧೧–೧೩]

ಸಮಿಾಕ್ಷಕ—ಈಗ ನೋಡಿರಿ! ಅಬ್ರಹಾಮನು ಕ್ರೈಸ್ತರ ಹಾಗೂ ಮುಸಲ್ಮಾನರ ದೊಡ್ಡ ಪೈಗಂಬರನೆಂಬ ಕೂಗು ಕೇಳಬರುತ್ತದೆ. ಅವನ ಕಾರ್ಯಗಳು ಮಿಥ್ಯಾಭಾಷಣ ಮೊದಲಾದುವು ಕೆಟ್ಟವಾ

ಗಿರುತ್ತವೆ. ಆಯಿತು, ಯಾರ ಪೈಗಂಬರರು ಇಂತಹವರೋ, ಅವರಿಗೆ ವಿದ್ಯೆಯ ಅಥವಾ ಕಲ್ಯಾಣದ ಮಾರ್ಗವು ಸಿಕ್ಕಬಲ್ಲವಾದರೂ ಹೇಗೆ? ॥೧೭॥

೧೪. ಮತ್ತು ದೇವರು ಅಬ್ರಹಾಮನಿಗೆ ನೀನು ಮತ್ತು ನಿನ್ನನಂತರ ನಿನ್ನ ಸಂತತಿಯವರು ಅವರ ತಲಾಂತರಗಳಲ್ಲಿ ನನ್ನ ನಿಯಮವನ್ನು ಒಪ್ಪಬೇಕು. ನನ್ನ—ನಿನ್ನ ನಡುವೆ ಮತ್ತು ನಿನ್ನ ನಂತರ ನಿನ್ನ ವಂಶದ ನಡುವೆ ಇರುವ, ನೀನು ಒಪ್ಪಬೇಕಾದ ನನ್ನ ನಿಬಂಧನೆಯು ಯಾವದಂದರೆ—ನಿಮ್ಮಲ್ಲಿ ಪ್ರತಿಯೊಬ್ಬ ಗಂಡಸಿಗೂ ಸುನ್ನತಿಯಾಗಬೇಕು. ನೀವು ನಿಮ್ಮ ಶರೀರದ ಚರ್ಮವನ್ನು ಕತ್ತರಿಸಿ ಕೊಳ್ಳಬೇಕು. ಮತ್ತು ನನ್ನ-ನಿಮ್ಮ ನಡುವೆ ಆದ ಒಡಂಬಡಿಕೆಗೆ ಗುರುತಾಗಿರುವುದು, ಹಾಗೂ ನಿಮ್ಮ ಪೀಳಿಗೆಗಳಲ್ಲಿರುವುದು. ಮನೆಯಲ್ಲಿ ಜನಿಸುವವನಾಗಲಿ ಅಥವಾ ನಿನ್ನ ವಂಶದವನಲ್ಲದ, ಯಾವನಾದರೂ ವಿದೇಶೀಯನಿಂದ ರೂಪಾಯಿಗೆ ಕೊಂಡುಕೊಂಡವನಾಗಲಿ, ಎಂಟು ದಿನದ ಗಂಡಸಿಗೆ ಸುನ್ನತಿ ಮಾಡಿಸಬೇಕು. ನಿನ್ನ ಮನೆಯಲ್ಲಿ ಹುಟ್ಟಿದವನಾಗಲಿ, ಇಲ್ಲವೇ, ನಿನ್ನ ರೂಪಾಯಿನಿಂದ ಕೊಳ್ಳಲ್ಪಟ್ಟವನಾಗಲಿ, ಆವಶ್ಯವಾಗಿ ಅವನಿಗೆ ಸುನ್ನತಿಯಾಗಬೇಕು. ಮತ್ತು ನನ್ನ ನಿಯಮವು ನಿಮ್ಮ ಮಾಂಸದಲ್ಲಿ ಸರ್ವದಾ ನಿಯಮದ ಸಲುವಾಗಿ ಇರುವುದು. ಯಾವನು ಸುನ್ನತಿಹೀನನಾದ ಬಾಲಕನಾಗಿರುವನೋ, ಯಾವನು ಚರ್ಮದ ಸುನ್ನತಿಯಾಗಿರುವುದಿಲ್ಲವೋ, ಅಂತಹ ಪ್ರಾಣಿಯು ನನ್ನ ನಿಯಮವನ್ನು ಮುರಿದವನಾದುದರಿಂದ, ತನ್ನ ಜನರಿಂದ ದೂರನಾಗಬೇಕು.

[ತಾರೀತ್ ೧೭। ೯-೧೪]

ಸಮಿಾಕ್ಷಕ—ಈಗ ಈಶ್ವರನ ವಿರುದ್ಧಾಜ್ಞೆಯನ್ನು ನೋಡಿರಿ! ಇಂತಹ ಸುನ್ನತಿಮಾಡುವುದು ದೇವರಿಗೆ ಇಷ್ಟವಿದ್ದರೆ, ಆದಿಸೃಷ್ಟಿಯಲ್ಲಿ ಆ ಚರ್ಮವನ್ನು ನಿರ್ಮಿಸುತ್ತಲೇ ಇರಲಿಲ್ಲ, ಮತ್ತು ಇದು ನಿರ್ಮಿಸಲ್ಪಟ್ಟರುವುದು, ಕಣ್ಣಿನ ಮೇಲಿನ ಚರ್ಮದಂತೆ ರಕ್ಷಣೆಯ ಸಲುವಾಗಿ ಏಕೆಂದರೆ—ಆ ಗುಪ್ತ ಸ್ಥಾನವು ಅತಿ ಕೋಮಲವಾಗಿದೆ. ಅದರ ಮೇಲೆ

ಚರ್ಮವಿಲ್ಲದಿದ್ದರೆ ಒಂದು ಇರುವೆ ಕಚ್ಚಿದರೂ ಮತ್ತು ಸ್ವಲ್ಪ ಏಟು ಬಿದ್ದರೂ ಬಹಳ ದುಃಖವುಂಟಾಗುವುದು. ಮತ್ತು ಮೂತ್ರವಿಸರ್ಜನೆಯ ನಂತರ ಉಳಿದ ಮೂತ್ರಾಂಶವು ಬಟ್ಟೆಗಳಿಗೆ ತಾಗದಿರಲಿ ಈ ಮೊದಲಾದ ಉದ್ದೇಶ್ಯಗಳಿಗಾಗಿ ಅದು ಇರುತ್ತದೆ. ಆದಕಾರಣ ಇದನ್ನು ಕತ್ತರಿಸುವುದು ಕೆಟ್ಟದು. ಮತ್ತು ಈಗ ಕ್ರೈಸ್ತರು ಈ ಆಜ್ಞೆಯನ್ನು ಪಾಲಿಸುವುದಿಲ್ಲವೇಕೆ? ಈ ಆಜ್ಞೆಯು ಸದಾಕಾಲಕ್ಕಾಗಿ ಇದೆ. ಇದನ್ನು ಪಾಲಿಸದಿರುವುದರಿಂದ, ವ್ಯವಸ್ಥಾ ಪುಸ್ತಕದ ಒಂದು ಬಿಂದುವೂ ಸುಳ್ಳಲ್ಲವೆಂಬ ಯೇಸುವಿನ ಸಾಕ್ಷ್ಯವು ಸುಳ್ಳಾಗಿಹೋಯಿತು. ಕ್ರೈಸ್ತರು ಇದರ ಬಗ್ಗೆ ಸ್ವಲ್ಪವಾದರೂ ಯೋಚಿಸುವುದಿಲ್ಲ. ॥೧೪॥

೧೯. ದೇವರು ಅಬ್ರಹಾಮನ ಸಂಗಡ ಮಾತಾಡುವುದನ್ನು ಮುಗಿಸಿದಾಗ, ಮೇಲಕ್ಕೆ ಹೊರಟುಹೋದನು.

[ತೌರೇತ್ ಪ. ೧೭, ೨೨]

ಸಮಾಕ್ಷಕ :—ಮೇಲಿನಿಂದ ಕೆಳಗೂ, ಕೆಳಗಿನಿಂದ ಮೇಲೂ ಬಂದು ಹೋಗಿ ಮಾಡುತ್ತಿದ್ದ ದೇವರು ಮನುಷ್ಯ ಅಥವಾ ಪಕ್ಷಿಯಂತಿದ್ದನೆಂದು ಇದರಿಂದ ಸಿದ್ಧವಾಗುತ್ತದೆ. ಇವನು ಯಾವನೋ ಇಂದ್ರಜಾಲವನ್ನು ಮಾಡುವ ಪುರುಷನಂತೆ ಕಾಣುತ್ತಾನೆ. ॥೧೯॥

೨೦. ಮತ್ತೆ ದೇವರು ಅವನಿಗೆ ಉತ್ತ ಹೊಲದ ವೃಕ್ಷಗಳ ಮಧ್ಯೆ ಕಾಣಿಸಿಕೊಂಡನು. ಮತ್ತು ಅವನು ಹಗಲು ಬಿಸಿಲಿನ ಹೊತ್ತಿನಲ್ಲಿ ತನ್ನ ಗುಡಾರದ ದ್ವಾರದಲ್ಲಿ ಕುಳಿತಿದ್ದನು. ಮತ್ತು ಅವನು ತನ್ನ ಕಣ್ಣುಗಳನ್ನೆತ್ತಿದನು; ನೋಡಿದುದೇನೆಂದರೆ ಮೂರು ಮಂದಿ ಅವನ ಬಳಿ ನಿಂತಿದ್ದಾರೆ. ಮತ್ತು ಅವರನ್ನು ನೋಡಿ, ಅವನು ಗುಡಾರದ ದ್ವಾರದಿಂದ ಅವರ ಭೇಟಿಗಾಗಿ ಓಡಿದನು ಮತ್ತು ನೆಲಕ್ಕೊರಗಿ ದಂಡ ಪ್ರಣಾಮ ಮಾಡಿದನು. ಮತ್ತು "ಓ ನನ್ನ ಸ್ವಾಮಿ! ಈಗ ನಿಮ್ಮ ದೃಷ್ಟಿಯಲ್ಲಿ ನಾನು ಅನುಗ್ರಹ ಹೊಂದಿದ್ದರೆ ತನ್ನ ದಾಸನ ಹತ್ತಿರದಿಂದ ಹೊರಟುಹೋಗಬೇಡಿ ಎಂದು ವಿನಂತಿಮಾಡಿಕೊಳ್ಳುತ್ತೇನೆ. ಇಚ್ಛೆಯಾಗಿದ್ದರೆ, ನೀರು ತರಿಸಲಾಗುವುದು ಮತ್ತು ನಿಮ್ಮ ಕಾಲುಗಳನ್ನು ತೊಳೆದುಕೊಳ್ಳಿರಿ; ಮತ್ತು ಮರದ ನೆರಳನಲ್ಲಿ ವಿಶ್ರಮಿಸಿ

ಕೊಳ್ಳಿರಿ. ಮತ್ತು ನಾನು ಒಂದು ತುತ್ತು ಆಹಾರ ತರುತ್ತೇನೆ. ಮತ್ತು ತಾವು ತೃಪ್ತರಾಗಿರಿ. ಮೇಲೆ ನೀವು ಮುಂದಕ್ಕೆ ತೆರಳಿರಿ'' ಎಂದು ತಮ್ಮಲ್ಲಿ ವಿನಂತಿ ಮಾಡುತ್ತೇನೆ. ಏಕೆಂದರೆ ತಾವು ಇದ ಕ್ಕಾಗಿಯೇ ತಮ್ಮ ದಾಸನ ಬಳಿಗೆ ಬಂದಿದ್ದೀರಿ; ಎಂದನು. ಆಗ ಅವರು—'' ನೀನು ಹೇಳಿದಂತೆ ಮಾಡು'' ಎಂದರು. ಆಗ ಅಬ್ರಹಾ ಮನು ಗುಡಾರದಲ್ಲಿ ಸಾರಳ ಬಳಿಗೆ ಲಗುಬಗೆಯಿಂದ ಹೋದನು ಮತ್ತು ಆಕೆಗೆ '' ಬೇಗ ಹಸನಾದ ಮೂರು ಸೇರು ಹಿಟ್ಟನ್ನು ನಾದಿ ಬೇಗ ರೊಟ್ಟಿಗಳನ್ನು ಮಾಡು'' ಎಂದು ಹೇಳಿದನು. ಮತ್ತು ಅಬ್ರಹಾಮನು ಮುಂದೆಯ ಕಡೆ ಓಡಿಹೋದನು ಮತ್ತು ಒಂದು ಒಳ್ಳೆಯ ಎಳೇಕರುವನ್ನು ತೆಗೆದು ಆಳಿನ ಕೈಗೆ ಕೊಟ್ಟನು ಮತ್ತು ಅವನೂ ಸಹ ಅದನ್ನು ಬೇಯಿಸುವುದರಲ್ಲಿ ಜಾಗ್ರತೆಮಾಡಿದನು. ಮತ್ತು ಅವನು ಬೆಣ್ಣೆ, ಹಾಲು ಮತ್ತು ಬೇಯಿಸಿದ ಕರುವಿನ ಮಾಂಸ ವನ್ನು ತೆಗೆದುಕೊಂಡನು. ಮತ್ತು ಅವರ ಮುಂದೆ ಇಟ್ಟನು. ಮತ್ತು ತಾನು ಅವರ ಹತ್ತಿರ ಮರದ ಕೆಳಗೆ ನಿಂತಿದ್ದನು.

[ಆದಿ. ೧೮, ೧-೮]

ಸಮೀಕ್ಷಕ—ಸಜ್ಜನರೆ! ಈಗ ನೋಡಿರಿ, ಯಾರ ದೇವರು ಕರುವಿನ ಮಾಂಸವನ್ನು ತಿನ್ನುತ್ತಾನೋ, ಅವನ ಉಪಾಸಕರು ದನ ಕರು ಮೊದಲಾದ ಪಶುಗಳನ್ನು ಯಾಕೆ ಬಿಡುವರು? ಯಾವನಿಗೆ ಏನೂ ದಯವಿಲ್ಲವೋ, ಮತ್ತು ಮಾಂಸ ತಿನ್ನುವುದಕ್ಕೆ ಆತುರನಾಗಿರು ತ್ತಾನೋ ಅವನು ಹಿಂಸಕ ಮನುಷ್ಯನಲ್ಲದೆ ದೇವರಾಗಬಲ್ಲನೆ? ಮತ್ತು ದೇವರ ಜೊತೆಯಲ್ಲಿ ಇಬ್ಬರು ಮನುಷ್ಯರು ಯಾರಿದ್ದರೋ ಗೊತ್ತಿಲ್ಲ! ಇದರಿಂದ, ಕಾಡುಮನುಷ್ಯರ ಒಂದು ಸಮೂಹವಿತ್ತು; ಅದರ ಮುಖಂಡನ ಹೆಸರು ಬೈಬಲಿನಲ್ಲಿ ದೇವರೆಂದು ಇಟ್ಟಿರಬಹುದೆಂದು ತಿಳಿದುಬರುತ್ತದೆ. ಈ ಮಾತುಗಳಿಂದಲೇ ಬುದ್ಧಿವಂತರು ಇವರ ಪುಸ್ತಕವನ್ನು ಈಶ್ವರಕೃತವೆಂದು ಒಪ್ಪಲಾರರು. ಮತ್ತು ಇಂತಹವ ನನ್ನು ದೇವರೆಂದು ತಿಳಿಯಲಾರರು. ॥೨೦॥

೨೧. ಪರಮೇಶ್ವರನು ಅಬ್ರಾಹಾಮನನ್ನು ಕುರಿತು–" ಸಾರಳು ಮುದುಕಿಯಾದ ನಾನು ನಿಜವಾಗಿ ಮಗುವನ್ನು ಹೆರುವೆನೆ ಎಂದು ಹೇಳಿ

ಮುಗುಳ್ನಗೆ ಬೀರಿದಳೇಕೆ? ಪರಮೇಶ್ವರನಿಗೆ ಅಸಾಧ್ಯವಾದುದು ಯಾವುದಾದರೂ ಇದೆಯೋ?" ಎಂದು ಹೇಳಿದನು.

[ಆದಿ. ೧೮। ೧೩–೧೪]

ಸಮಾಕ್ಷಕ—ಈಗ ನೋಡಿರಿ! ಕೈಸ್ತದೇವರ ಲೀಲೆಯನ್ನು. ಬಾಲಕರಂತೆ ಅಥವಾ ಹೆಂಗಸರಂತೆ ರೇಗುತ್ತಾನೆ ॥೨೧॥

೨೨. ಆಗ ಪರಮೇಶ್ವರನು ಸದೂಮಮೂರಿನ ಮೇಲೆ ತನ್ನ ಕಡೆಯಿಂದ ಅಗ್ನಿಗಂಧಕಗಳನ್ನು ಸುರಿಸಿದನು; ಮತ್ತು ಆ ಪಟ್ಟಣಗಳನ್ನು, ಸುತ್ತಲಿರುವ ಬಯಲನ್ನೂ, ಊರುಗಳ ಜನರೆಲ್ಲರನ್ನೂ ಭೂಮಿಯ ಮೇಲೆ ಬೆಳೆಯುತ್ತಿದ್ದುದೆಲ್ಲವನ್ನೂ ತಲೆಕೆಳಗುಮಾಡಿದನು.

[ಆದಿ. ೧೯। ೨–೪, ೨೫]

ಸಮಾಕ್ಷಕ—ಇನ್ನು ಬೈಬಲಿನ ದೇವರ ಈ ಲೀಲೆಯನ್ನು ನೋಡಿರಿ. ಅವನಿಗೆ ಮಕ್ಕಳು ಮೊದಲಾದವರ ಮೇಲೂ ಸ್ವಲ್ಪವೂ ದಯೆ ಬರಲಿಲ್ಲ. ಎಲ್ಲರನ್ನೂ ನೆಲವನ್ನು ಕವಿಚಿ ಒತ್ತಿನಾಯಿಸಲು ಅವರೆಲ್ಲರೂ ಅಪರಾಧಿಗಳಾಗಿದ್ದರೆ? ಈ ಮಾತು ನ್ಯಾಯ–ದಯೆ–ವಿವೇಕಗಳಿಗೆ ವಿರುದ್ಧವಾಗಿದೆ. ಯಾರ ದೇವರು ಇಂತಹ ಕೆಲಸ ಮಾಡುತ್ತಾನೋ ಅವನ ಉಪಾಸಕರಾದರೂ ಏಕೆ ಮಾಡದಿರುವರು? ॥೨೨॥

೨೩. ಬನ್ನಿ; ನಾವು ತಂದೆಗೆ ದ್ರಾಕ್ಷಾರಸವನ್ನು ಕುಡಿಸೋಣ ಮತ್ತು ನಾವು ನಮ್ಮ ತಂದೆಯ ವಂಶವನ್ನು ಮುಂದುವರಿಸುವುದಕ್ಕಾಗಿ ಅವನೊಂದಿಗೆ ಮಲಗೋಣ. ಆಗ ಆ ರಾತ್ರಿ ಅವರು ತಂದೆಗೆ ದ್ರಾಕ್ಷಾರಸವನ್ನು ಕುಡಿಸಿದರು. ಮತ್ತು ಹಿರಿಯ ಮಗಳು ಹೋದಳು ಮತ್ತು ತಂದೆಯ ಸಂಗಡ ಮಲಗಿಕೊಂಡಳು. ನಾವು ಈ ರಾತ್ರಿಯೂ ಅವನಿಗೆ ದ್ರಾಕ್ಷಾರಸವನ್ನು ಕುಡಿಸೋಣ; ನೀನು ಹೋಗಿ ಮಲಗಿಕೊ. ಹೀಗೆ ಲೂತನ ಇಬ್ಬರು ಹೆಣ್ಣುಮಕ್ಕಳೂ ತಮ್ಮ ತಂದೆಯಿಂದ ಬಸುರಾದರು. [ಆದಿ. ೧೯। ೩೨-೩೪, ೩೬]

ಸಮಾಕ್ಷಕ—ನೋಡಿರಿ! ಯಾವ ಮದ್ಯಪಾನದ ಮದದಿಂದ ಪಿತೃ-ಪುತ್ರಿಯರೂ ಕೂಡ ಕುಕರ್ಮಮಾಡುವುದರಿಂದ ಪಾರಾಗಲಿ

ಲ್ಲವೋ, ಅಂತಹ ಕೆಟ್ಟ ಮದ್ಯವನ್ನು ಕುಡಿಯುವ ಕ್ರೈಸ್ತರೇ ಮೊದ ಲಾದವರ ಕೇಡಿನ ಪಾರಾವಾರವಾವುದು? ಆದುದರಿಂದಲೇ ಸಜ್ಜನರು ಮದ್ಯಕುಡಿಯುವ ಹೆಸರನ್ನೂ ಕೂಡ ಎತ್ತಬಾರದು. ॥೨೩॥

೨೪. ಪರಮೇಶ್ವರನು ತನ್ನ ಹೇಳಿಕೆಯಂತೆಯೇ ಸಾರಳ ಭೇಟಗೈದನು. ಮತ್ತು ತನ್ನ ಮಾತಿನಂತೆ ದೇವರು ಸಾರಳ ವಿಷಯ ದಲ್ಲಿ ಮಾಡಿದನು. ಮತ್ತು ಬಸುರಾದಳು.

[ಉ. ಪ. ೨೧। ೧-೨]

ಸಮಾಕ್ಷಕ-ಈಗ ಯೋಚಿಸಿರಿ. ಸಾರಳ ಭೇಟಗೈದು ಅವಳನ್ನು ಬಸುರುಮಾಡಿದನು. ಈ ಕೆಲಸವು ಹೇಗಾಯಿತು? ದೇವರ ಮತ್ತು ಸಾರಳ ಹೊರತು ಮೂರನೆಯವನು ಯಾವನಾದರೂ ಗರ್ಭಸ್ಥಾಪನೆಗೆ ಕಾರಣವಾದವನು ಕಾಣುತ್ತಾನೋ? ಸಾರಳು ದೇವರ ಕೃಪೆಯಿಂದ ಗರ್ಭವತಿಯಾದಳೆಂದು ತಿಳಿದುಬರುತ್ತದೆ. ॥೨೪॥

೨೫. ಆಗ ಅಬ್ರಹಾಮನು ಬಹಳ ಮುಂಜಾನೆ ಎದ್ದು ರೊಟ್ಟಿಯನ್ನೂ, ಒಂದು ಚರ್ಮದ ಚೀಲದಲ್ಲಿ ನೀರನ್ನೂ ತೆಗೆದು ಕೊಂಡನು; ಮತ್ತು ಹಾಜಿರಳ ಹೆಗಲ ಮೇಲೆ ಇಟ್ಟು ಬಿಟ್ಟನು. ಮತ್ತು ಮಗುವನ್ನೂ ಅವಳಿಗೊಪ್ಪಿಸಿ, ಅವಳನ್ನು ಬೀಳ್ಕೊಟ್ಟನು. ಅವಳು ಮಗುವನ್ನು ಒಂದು ಗಿಡದ ಕೆಳಗೆ ಹಾಕಿದಳು; ಮತ್ತು ಅವಳು ಅವನೆದುರಾಗಿ ಕುಳಿತು ದನಿಗೈದು ಅತ್ತಳು. ಆಗ ದೇವರು ಆ ಬಾಲಕನ ಶಬ್ದವನ್ನು ಕೇಳಿದನು.

[ಆದಿ. ೨೧। ೧೪-೧೭]

ಸಮಾಕ್ಷಕ—ಈಗ ನೋಡಿರಿ ಕ್ರೈಸ್ತರ ದೇವರ ಲೀಲೆಯನ್ನು. ಮೊದಲನೇದಾಗಿ ಸಾರಳ ಮೇಲೇ ಪಕ್ಷಪಾತ ಮಾಡಿ, ಹಾಜಿರಳನ್ನು ಅಲ್ಲಿಂದ ಓಡಿಸಿಬಿಟ್ಟನು. ಮತ್ತು ಬಿಕ್ಕಿ ಬಿಕ್ಕಿ ಅತ್ತವಳು ಹಾಜಿರಾ; ಮತ್ತು ಶಬ್ದಕೇಳಿದನು ಮಗುವಿನದನ್ನು! ಇದೆಂತಹ ಅದ್ಭುತ ವಿಷಯವು! ಇದು ಹೀಗಾಗಿರಬಹುದು—ಮಗುವೇ ಅಳುತ್ತಿದೆಯೆಂಬ ಭ್ರಮೆಯು ದೇವರಿಗಾಗಿರಬೇಕು. ಒಳ್ಳೆಯದು, ಇಂತಹವನು ಈಶ್ವರನೂ, ಈ ಪುಸ್ತಕವು ಈಶ್ವರೋಕ್ತವೂ ಎಂದಾದರೂ ಆಗಬಹುದೆ?

ಸಾಧಾರಣ ಮನುಷ್ಯನ ವಚನಗಳ ಈ ಪುಸ್ತಕದಲ್ಲಿ, ಕೆಲವು ಸತ್ಯವಾದ ಮಾತುಗಳನ್ನು ಬಿಟ್ಟು, ಎಲ್ಲವೂ ಅಸಾರವೇ ತುಂಬಿದೆ. ||೨೫||

೨೬. ಈ ಸಂಗತಿಗಳು ಆದ ಮೇಲೆ ಹೀಗೆ ನಡೆಯಿತು; ದೇವರು ಅಬ್ರಹಾಮನನ್ನು ಪರಿಶೋಧಿಸಿದನು. ಮತ್ತು "ಅಬ್ರಹಾಮನೆ! ನಿನ್ನ ಮಗನನ್ನು, ನೀನು ಪ್ರೀತಿಸುವ ನಿನ್ನ ಏಕಮಾತ್ರ ಇಸಾಕನನ್ನು ತೆಗೆದುಕೋ. ಅವನನ್ನು ಹೋಮದ ಕಾಣಿಕೆಗಾಗಿ ಅರ್ಪಿಸು" ಎಂದನು. ಅಬ್ರಹಾಮನು ತನ್ನ ಮಗನಾದ ಇಸಾಕನ ಕೈಕಾಲುಗಳನ್ನು ಬಿಗಿದು ಅವನನ್ನು ವೇದಿಯಲ್ಲಿ ಕಟ್ಟಿಗೆಗಳ ಮೇಲೆ ಇಟ್ಟನು. ಮತ್ತು ಅಬ್ರಹಾಮನು ಚೂರಿಯನ್ನು ತೆಗೆದುಕೊಂಡು ತನ್ನ ಮಗನನ್ನು ಘಾತಿಸಲು ಕೈ ಚಾಚಿದನು. ಆಗ ದೇವರ ದೂತನು ಆಕಾಶದಮೇಲಿನಿಂದ "ನಿನ್ನ ಕೈಯನ್ನು ಹುಡುಗನ ಮೇಲೆ ನೀಡಬೇಡ. ಅವನಿಗೆ ಏನೂ ಮಾಡಬೇಡ. ಏಕೆಂದರೆ ನೀನು ದೇವರಿಗೆ ಹೆದರುವೆಯೆಂಬುದನ್ನು ನಾನು ಬಲ್ಲೆ". ಎಂದು ಹೇಳಿದನು.

[ಆದಿ. ೨೨। ೧, ೨, ೯-೧೨]

ಸಮೀಕ್ಷಕ—ಬೈಬಲಿನ ಆ ದೇವರು ಅಲ್ಪಜ್ಞನು; ಸರ್ವಜ್ಞನಲ್ಲ ಎಂಬುದು ಈಗ ಸ್ಪಷ್ಟವಾಯಿತು. ಮತ್ತು ಅಬ್ರಹಾಮನೂ ಒಬ್ಬ ಸರಳ ಪ್ರಕೃತಿಯ ಮನುಷ್ಯನಾಗಿದ್ದನು. ಇಲ್ಲದಿದ್ದರೆ ಇಂತಹ ಉದ್ಯಮವನ್ನೇಕೆ ಮಾಡುತ್ತಿದ್ದನು? ಮತ್ತು ಬೈಬಲಿನ ದೇವರು ಸರ್ವಜ್ಞನಾಗಿದ್ದರೆ ಅವನ ಭವಿಷ್ಯತ್ಕಾಲದ ಶ್ರದ್ಧೆಯನ್ನು ತನ್ನ ಸರ್ವಜ್ಞತ್ವದಿಂದ ಅರಿತುಕೊಳ್ಳುತ್ತಿದ್ದನು. ಇದರಿಂದ ಕ್ರೈಸ್ತರ ದೇವರು ಸರ್ವಜ್ಞನಲ್ಲವೆಂಬುದು ನಿಶ್ಚಯವಾಗುತ್ತದೆ. ||೨೬||

೨೭. ಆದಕಾರಣ ನೀವು ನಿಮ್ಮ ಮೃತಕನನ್ನು ಹೂಳಲನುಕೂಲಿಸುವಂತೆ ನಮ್ಮ ಸಮಾಧಿಗಳಲ್ಲೊಂದನ್ನಾರಿಸಿಕೊಂಡು, ನಿಮ್ಮ ಮೃತಕನನ್ನು ಹೂಳಿರಿ. [ಆದಿ. ೨೩। ೬]

ಸಮೀಕ್ಷಕ—ಹೆಣಗಳನ್ನು ಹೂಳುವುದರಿಂದ ಜಗತ್ತಿಗೆ ಬಹಳ ಹಾನಿಯುಂಟಾಗುತ್ತದೆ. ಏಕೆಂದರೆ, ಅದು ಕೊಳೆತು, ವಾಯುವನ್ನು ದುರ್ಗಂಧಮಯವಾಗಿ ಮಾಡಿ, ರೋಗವನ್ನು ಹರಡಿಬಿಡುತ್ತದೆ.

ಪ್ರಶ್ನೆ—ನೋಡಿರಿ! ಪ್ರೀತಿಯುಳ್ಳವನನ್ನು ಸುಡುವುದುಚಿತವಲ್ಲ; ಹೂಳುವುದಾದರೋ ಮಲಗಿಸುವಂತಿರುತ್ತದೆ. ಆದುದರಿಂದ ಹೂಳುವುದು ಒಳ್ಳೆಯದು.

ಉತ್ತರ—ಸತ್ತವನನ್ನು ಪ್ರೀತಿಸುತ್ತೀರಾದರೆ, ನಿಮ್ಮ ಮನೆಯಲ್ಲಿ ಇಟ್ಟುಕೊಳ್ಳುವುದಿಲ್ಲವೇಕೆ? ಅದನ್ನು ಹೂಳುತ್ತೀರಾದರೂ ಏಕೆ? ಯಾವ ಜೀವಾತ್ಮನೊಡನೆ ಪ್ರೀತಿಯಿತ್ತೋ ಅವನು ಹೊರಟು ಹೋದನು. ಇನ್ನು ದುರ್ಗಂಧವುಳ್ಳ ಮಣ್ಣಿನ ಮೇಲೆ ಯಾವ ಪ್ರೀತಿ? ಮತ್ತು ಪ್ರೀತಿಸುತ್ತೀರಾದರೆ ಅದನ್ನು ಭೂಮಿಯಲ್ಲಿ ಹೂಳುತ್ತೀರೇಕೆ? ಏಕೆಂದರೆ ಯಾರಿಗಾದರೂ ನಿನ್ನನ್ನು ಭೂಮಿಯಲ್ಲಿ ಹೂಳುವೆವು ಎಂದು ಹೇಳಿದರೆ ಅದನ್ನು ಕೇಳಿ ಅವನೆಂದಿಗೂ ಪ್ರಸನ್ನನಾಗುವುದಿಲ್ಲ. ಅವನ ಬಾಯಿ, ಕಣ್ಣು ಮತ್ತು ಶರೀರದ ಮೇಲೆ ಮಣ್ಣು, ಕಲ್ಲು, ಇಟ್ಟಿಗೆ, ಸುಣ್ಣಗಳನ್ನು ಹಾಕುವುದು, ಎದೆಯ ಮೇಲೆ ಕಲ್ಲನ್ನಿಡುವುದು ಯಾವ ಪ್ರೀತಿಯ ಕೆಲಸ? ಮತ್ತು ಪೆಟ್ಟಿಗೆಯಲ್ಲಿಟ್ಟು ಹೂಳುವುದರಿಂದ, ಬಹು ದುರ್ಗಂಧವು ಹುಟ್ಟಿ ಭೂಮಿಯಿಂದ ಮೇಲೆ ಬಂದು, ವಾಯುವನ್ನು ಕೆಡಿಸಿ, ದಾರುಣ ರೋಗಗಳನ್ನು ಹುಟ್ಟಿಸುತ್ತದೆ. ಎರಡನೆಯದಾಗಿ ಒಂದು ಹೆಣಕ್ಕೆ ಕಡಿಮೆ ಪಕ್ಷ ಆರು ಮೊಳ ಉದ್ದ, ನಾಲ್ಕು ಮೊಳ ಅಗಲದಷ್ಟು ಭೂಮಿ ಬೇಕಾಗುತ್ತದೆ. ಇದೇ ಲೆಕ್ಕದ ಮೇರೆಗೆ ನೂರು ಸಾವಿರ ಅಥವಾ ಒಂದು ಲಕ್ಷ ಅಥವಾ ಕೋಟ್ಯಂತರ ಮನುಷ್ಯರಿಗಾಗಿ ಎಷ್ಟು ಭೂಮಿಯು ವ್ಯರ್ಥವಾಗಿ ಉಳಿದುಹೋಗುತ್ತದೆ; ಅದು ಹೊಲದ, ತೋಟದ ಅಥವಾ ನಿವಾಸದ ಕೆಲಸಕ್ಕೆ ಬರುವಂತಿಲ್ಲ. ಆದುದರಿಂದ ಎಲ್ಲಕ್ಕಿಂತಲೂ ಕೆಟ್ಟದು ಹೂಳುವುದು. ಅದಕ್ಕಿಂತಲೂ ಸ್ವಲ್ಪ ಕಡಿಮೆ ಕೆಟ್ಟದ್ದು ನೀರಿನಲ್ಲಿ ಹರಿಸುವುದು; ಏಕೆಂದರೆ ಅದನ್ನು ಜಲಜಂತುಗಳು ಆಕ್ಷಣವೇ ಸಿಗಿದು ಸೀಳಿ ತಿಂದು ಬಿಡುತ್ತವೆ. ಆದರೆ ನೀರಿನಲ್ಲಿ ಮೂಳೆ ಅಥವಾ ಮಲ ಏನುಳಿಯುವುದೋ, ಅದು ಕೊಳೆತು ಜಗತ್ತಿಗೆ ದುಃಖದಾಯಕವಾಗುವುದು. ಅದಕ್ಕಿಂತಲೂ ಸ್ವಲ್ಪ ಕಡಿಮೆ ಕೆಟ್ಟದ್ದು ಕಾಡಿನಲ್ಲಿ ಬಿಸಾಡುವುದು; ಏಕೆಂದರೆ ಅದನ್ನು ಮಾಂಸಾಹಾರಿ ಪಶುಪಕ್ಷಿಗಳು ಬಗಿದು ತಿನ್ನುವವು. ಆದರೂ ಅದರ ಎಲುಬಿನ ಮಜ್ಜಾಮಲಗಳು ಕೊಳೆತು

ಎಷ್ಟು ದುರ್ಗಂಧ ಬೀರುವುದೋ, ಅಷ್ಟು ಜಗತ್ತಿಗೆ ಅನುಪಕಾರವಾಗುವುದು. ಮತ್ತು ಸುಡುವುದು ಸರ್ವೋತ್ತಮವಾದುದು. ಆ ಪದಾರ್ಥಗಳೆಲ್ಲವೂ ಅಣುಗಳಾಗಿ ವಾಯುವಿನಲ್ಲಿ ಹಾರಿಹೋಗುವವು.

ಪ್ರಶ್ನೆ :--ಸುಡುವುದರಿಂದಲೂ ದುರ್ಗಂಧ ಹುಟ್ಟುತ್ತದೆ.

ಉತ್ತರ :--ವಿಧಿಗೆ ಪ್ರತಿಕೂಲವಾಗಿ ಸುಟ್ಟರೆ ಸ್ವಲ್ಪ ದುರ್ಗಂಧ ಹುಟ್ಟುತ್ತದೆ. ಆದರೆ ಹೂಳುವುದೇ ಮೊದಲಾದುವುಗಳಿಗಿಂತ ಬಹಳ ಕಡಿಮೆ ಹುಟ್ಟುವುದು. ಮತ್ತು ವೇದದಲ್ಲಿ ಬರೆದಿರುವಂತೆ ವಿಧಿಪೂರ್ವಕವಾಗಿ ಮೂರು ಮೊಳ ಆಳ, ಮೂರೂವರೆ ಮೊಳ ಅಗಲ ಮತ್ತು ಐದು ಮೊಳ ಉದ್ದವಾದ ಮತ್ತು ತಳದಲ್ಲಿ ಒಂದೂವರೆ ಗೇಣು ಏರುತಗ್ಗಾದ ವೇದಿಯನ್ನು ತೆಗೆದು, ಶರೀರದ ಭಾರದಷ್ಟು ತುಪ್ಪ, ಅದರಲ್ಲಿ ಒಂದು ಸೇರಿಗೆ ಒಂದು ಗುಲಗುಂಜಿ ತೂಕದಷ್ಟು ಕಸ್ತೂರಿಯನ್ನೂ, ಎಂಟು ಗುಲಗುಂಜಿ ತೂಕದಷ್ಟು ಕೇಶರವನ್ನೂ ಹಾಕಿ, ಕಡಿಮೆಪಕ್ಷ ಅರ್ಧಮಣ, ಅದಕ್ಕಿಂತ ಹೆಚ್ಚು ಬೇಕಾದಷ್ಟು ಗಂಧದ ಕಟ್ಟಿಗೆಯನ್ನು ಇಟ್ಟು, ಆಗರು ತಗರು ಕರ್ಪೂರ ಮೊದಲಾದುವನ್ನೂ ಮುತ್ತುಗ ಮೊದಲಾದುವುಗಳ ಕಟ್ಟಿಗೆಗಳನ್ನೂ ವೇದಿಯಲ್ಲಿ ಸೇರಿಸಿ, ಅದರ ಮೇಲೆ ಶವವನ್ನಿರಿಸಿ, ನಂತರ ನಾಲ್ಕೂ ಕಡೆ ವೇದಿಯ ಮೇಲ್ಮುಖದಿಂದ ಒಂದು ಗೇಣು ಎತ್ತರದ ವರೆಗೆ ಕಟ್ಟಿಗೆಯನ್ನಿರಿಸಿ, ತುಪ್ಪದ ಆಹುತಿಗಳನ್ನು ಕೊಟ್ಟು ಸುಡಬೇಕು. ಈ ರೀತಿ ದಹನ ಮಾಡಿದರೆ ಯಾವ ದುರ್ಗಂಧವೂ ಹೊರಡುವುದಿಲ್ಲ. ಆದರೆ ಇದಕ್ಕೇ ಆಂತ್ಯೇಷ್ಟಿ, ನರಮೇಧ ಅಥವಾ ಪುರುಷಮೇಧ ಯಜ್ಞವೆಂದು ಹೆಸರು. ಮತ್ತು ಬಡವನಾಗಿದ್ದರೆ ಇಪ್ಪತ್ತು ಸೇರುಗಳಿಗಿಂತ ಕಡಿಮೆ ತುಪ್ಪವನ್ನು ಚಿತೆಯಲ್ಲಿ ಹಾಕುವುದು ಬೇಡ. ಅದು ಬೇಕಾದರೆ ಅವರು ಭಿಕ್ಷೆ ಬೇಡುವುದರಿಂದ, ಜಾತಿಗಳು ಕೊಡುವುದರಿಂದ ಅಥವಾ ರಾಜ್ಯದ ಸಹಾಯದಿಂದ ಸಿಕ್ಕಲಿ, ದಹನವನ್ನೇನೋ ಅದೇ ರೀತಿ ಮಾಡಬೇಕು. ತುಪ್ಪ ಮೊದಲಾದುವು ಯಾವ ರೀತಿಯಲ್ಲಿಯೂ ಸಿಕ್ಕದಿದ್ದರೂ ಕೂಡ ಹೂಳುವದು ಮೊದಲಾದುದಕ್ಕಿಂತ ಬರೇ ಸೌದೆಯಿಂದಲೇ ಶವವನ್ನು ಸುಡುವುದುತ್ತಮ. ಏಕೆಂದರೆ ನಾಲ್ಕು ಮೊಳದಷ್ಟು ಭೂಮಿಯಲ್ಲಿ ಅಥವಾ ಒಂದು ವೇದಿಯಲ್ಲಿ ಲಕ್ಷಾಂತರ ಕೋಟಿಗಟ್ಟಲೆ ಮೃತಕರು ದಗ್ಧರಾಗಬಲ್ಲರು.

ಭೂಮಿಯೂ, ಹೂಳುವುದರಿಂದಾಗುವಂತೆ ಹೆಚ್ಚಾಗಿ ಹಾಳಾಗುವುದಿಲ್ಲ. ಮತ್ತು ಗೋರಿಗಳನ್ನು ನೋಡುವುದರಿಂದ ಭಯವೂ ಉಂಟಾಗುತ್ತದೆ. ಆದುದರಿಂದ ಹೂಳುವುದೇ ಮೊದಲಾದುದು ಸರ್ವಥಾ ನಿಷಿದ್ಧವಾಗಿದೆ. ॥೨೭॥

೨೮. ಯಾವನು ನನ್ನ ದಣಿಯನ್ನೂ ತನ್ನ ದಯೆ ಮತ್ತು ಸತ್ಯತೆಯನ್ನಿಡದೆ ಬಿಡಲಿಲ್ಲವೋ, ಆ ನನ್ನ ದಣಿಯಾದ ಅಬ್ರಹಾಮನ ದೇವರಾದ ಪರಮೇಶ್ವರನು ಧನ್ಯನು. ಮಾರ್ಗದಲ್ಲಿ ಪರಮೇಶ್ವರನು ನನ್ನ ದಣಿಯ ಸೋದರರ ಮನೆಯ ಕಡೆ ನನಗೆ ಪಥಪ್ರದರ್ಶನ ಮಾಡಿದನು. [೪ದಿ. ೨೪, ೨೭]

ಸಮಾಕ್ಷಕ :—ಅವನು ಅಬ್ರಹಾಮನಿಗೆ ಮಾತ್ರ ಈಶ್ವರನಾಗಿದ್ದನೆ? ಮತ್ತು ಈ ಕಾಲದಲ್ಲಿ ಪಥಪ್ರದರ್ಶಕರು ಅಥವಾ ದಾರಿ ತೋರಿಸುವವರು ಮುಂದೆ ಮುಂದೆ ತೆರಳಿ ದಾರಿ ತೋರಿಸುವಂತೆ ದೇವರೂ ಮಾಡಿದನಾದರೆ ಈ ದಿನಗಳಲ್ಲಿ ದಾರಿತೋರಿಸುವುದಿಲ್ಲವೇಕೆ? ಮತ್ತು ಮನುಷ್ಯರೊಂದಿಗೇಕೆ ಮಾತನಾಡುವುದಿಲ್ಲ? ಆದುದರಿಂದ ಇಂತಹ ಮಾತುಗಳು ದೇವರು ಮತ್ತು ಅವನ ಪುಸ್ತಕದವೆಂದಿಗೂ ಆಗಲಾರವು. ಆದರೆ ಕಾಡುಮನುಷ್ಯರವಾಗಿವೆ. ॥೨೮॥

೨೯. ಇಸ್ಮಾಯೇಲನ ಮಕ್ಕಳ ಹೆಸರುಗಳಿವು : ಇಸ್ಮಾಯೇಲನ ಮೊದಲನೆಮಗ ನವೀತನು; ಮತ್ತು ಕೇದಾರ್, ಅದ್ಬಯೇಲ್, ಮಿಬ್ಸಾಮ್, ಮಿಸ್ಮಾಅ, ದೂಮಾ, ಮುಸ್ಸಾ, ಹದರ್, ತೈಮಾ, ಯಿತೂರ್, ನಫೀಸ್ ಮತ್ತು ಕೆದ್ಮಾ ಎಂಬವರೇ.

ಸಮಾಕ್ಷಕ—ಈ ಇಸ್ಮಾಯೇಲನು ಅಬ್ರಹಾಮನಿಂದ ಅವನ ದಾಸಿಯಾದ ಹಾಜಿರಾಗೆ ಹುಟ್ಟಿದ್ದನು. ॥೨೯॥

೩೦. ನಾನು ನಿನ್ನ ತಂದೆಯ ರುಚಿಗನುಸಾರ ಸವಿಯಾದ ಭೋಜನವನ್ನು ಸಿದ್ಧಮಾಡುವೆನು. ಅವನು ಉಂಡು, ತಾನು ಸಾಯುವ ಮುನ್ನ ನಿನಗೆ ಆಶೀರ್ವಾದ ಕೊಡುವಂತೆ, ನೀನು ನಿನ್ನ ತಂಡೆಯ ಬಳಿಗೆ ತೆಗೆದುಕೊಂಡು ಹೋಗು. ಮತ್ತು ರಿಬೆಕ್ಕಳು ತನ್ನ ಮನೆಯಲ್ಲಿಂದ ತನ್ನ ಹಿರೀಮಗನಾದ ಏಸಾವನ ಶ್ರೇಷ್ಠವಾದ ಉಡುಪನ್ನು

ತೆಗೆದುಕೊಂಡಳು. ಮತ್ತು ಆಡಿನ ಮರಿಗಳ ಚರ್ಮಗಳನ್ನು ಅವನ ಕೈಗಳಿಗೂ, ನುಣುಪಾದ ಕೊರಳಿಗೂ ಸುತ್ತಿದಳು. ಆಗ ಯಾಕೂಬನು ತನ್ನ ತಂದೆಗೆ "ನಾನು ನಿಮ್ಮ ಹಿರೀಮಗನಾದ ಏಸಾವನು. ನಿಮ್ಮ ಅಪ್ಪಣೆಯಂತೆ ನಾನು ಮಾಡಿದ್ದೇನೆ. ಎದ್ದು ಕುಳಿತುಕೊಳ್ಳಿರಿ. ನಿಮ್ಮ ಪ್ರಾಣ ನನಗೆ ಆಶೀರ್ವಾದಕೊಡುವಂತೆ, ನನ್ನ ಬೇಟೆಯ ಮಾಂಸದಿಂದ ಭುಂಜಿಸಿರಿ" ಎಂದನು.

[ಆದಿ. ೨೭। ೯, ೧೦, ೧೫, ೧೬, ೧೯]

ಸಮಿಾಕ್ಷಕ--ನೋಡಿ! ಇಂತಹ ಸುಳ್ಳು, ಮೋಸಗಳಿಂದ ಆಶೀರ್ವಾದಪಡೆದು ಅನಂತರ ಸಿದ್ಧಪುರುಷರೂ, ಪೈಗಂಬರರೂ ಆಗಿ ಬಿಡುತ್ತಾರೆ. ಇದು ಆಶ್ಚರ್ಯದ ವಿಷಯವಲ್ಲವೆ? ಮತ್ತು ಇಂತಹವರು ಕ್ರೈಸ್ತರ ಮುಖಂಡರಾಗಿದ್ದಾರೆ. ಇನ್ನು ಅವರ ಮತದ ಅವ್ಯವಸ್ಥೆಯಲ್ಲಿ ನ್ಯೂನತೆಯಾದರೂ ಏನಿದ್ದೀತು? ॥೩೦॥

೦೧. ಮತ್ತು ಬೆಳಗ್ಗೆ ಯಾಕೋಬನು ಎದ್ದನು. ತಾನು ತಲೆದಿಂಬಿಗೆ ಇಟ್ಟುಕೊಂಡಿದ್ದ ಕಲ್ಲನ್ನು ಕಂಬವಾಗಿ ನಿಲ್ಲಿಸಿದನು; ಮತ್ತು ಅದರ ಮೇಲೆ ಎಣ್ಣೆ ಹೊಯಿದನು. ಮತ್ತು ಆ ಸ್ಥಳಕ್ಕೆ ಬೈತೇಲ್ ಎಂದು ಹೆಸರಿಟ್ಟನು. ಮತ್ತು ನಾನು ಕಂಬವಾಗಿ ನಿಲ್ಲಿಸಿರುವ ಈ ಕಲ್ಲು ದೇವರ ಮನೆಯಾಗುವುದು.

[ಆದಿ. ೨೮। ೧೮, ೧೯, ೨೨]

ಸಮಿಾಕ್ಷಕ—ಈಗ ನೋಡಿರಿ! ಕಾಡುಮನುಷ್ಯರ ಕೆಲಸವನ್ನು! ಇವರೇ ಕಲ್ಲನ್ನು ಪೂಜಿಸಿದರು. ಮತ್ತು ಪೂಜೆ ಮಾಡಿಸಿದರು. ಮತ್ತು ಇದನ್ನು ಮುಸಲ್ಮಾನರು 'ಬೈತುಲ್ ಮುಕದ್ದಸ್' ಎಂದು ಹೇಳುತ್ತಾರೆ. ಈ ಕಲ್ಲೇ ಈಶ್ವರನ ಮನೆ; ಮತ್ತು ಆ ಕಲ್ಲಿನಲ್ಲಿ ಮಾತ್ರ ದೇವರು ಇರುತ್ತಿದ್ದನೆ? ಛಲೇ ಛಲೇ! ಏನು ಹೇಳಬೇಕು!! ಕ್ರೈಸ್ತರೆ! ಮಹಾಮೂರ್ತಿಪೂಜಕರಂತೂ ನೀವೇ ಆಗಿರುವಿರಿ. ॥೩೧॥

೩೨. ಆಮೇಲೆ ದೇವರು ರಾಖೀಲಳನ್ನು ನೆನೆಸಿಕೊಂಡನು ಮತ್ತು ದೇವರು ಅವಳ ಮಾತನ್ನು ಕೇಳಿದನು; ಮತ್ತು ಅವಳ ಗರ್ಭವನ್ನು ತೆರೆದನು. ಮತ್ತು ಅವಳು ಗರ್ಭಿಣಿಯಾಗಿ ಗಂಡು

ಮಗುವನ್ನು ಹೆತ್ತಳು; ಘತ್ತು ದೇವರು ನನ್ನ ನಿಂದೆಯನ್ನು ದೂರ ಮಾಡಿದನು ಎಂದಳು. [ಆದಿ. ೩೧]

ಸಮೀಕ್ಷಕ—ಛೇಷ್ ಕ್ರೈಸ್ತರ ದೇವರೇ! ಸ್ತ್ರೀಯರ ಗರ್ಭವನ್ನು ಬಿಚ್ಚಲು ಎಂತಹ ದೊಡ್ಡ ಡಾಕ್ಟರನಾಗಿದ್ದೀಯೆ? ಬಿಚ್ಚಲು ಯಾವ ಶಸ್ತ್ರ ಮತ್ತು ಔಷಧಗಳಿದ್ದವು? ಈ ಮಾತುಗಳನ್ನೆಲ್ಲಾ ಹುಚ್ಚಾಪಟ್ಟೆ ಬರೆದಿದ್ದಾರೆ. ॥೩೨॥

೩೩. ಆದರೆ ರಾತ್ರಿಯಲ್ಲಿ ದೇವರು ಅರಾಮ್ಯನಾದ ಲಾಬಾನನ ಕನಸಿನಲ್ಲಿ ಬಂದನು; ಮತ್ತು "ಎಚ್ಚರಿಕೆ, ನೀನು ಯಾಕೋಬನಿಗೆ ಒಳ್ಳೆಯದು ಕೆಟ್ಟದು ಏನೂ ಹೇಳಬೇಡ. ಏಕೆಂದರೆ—ಅವನು ತನ್ನ ತಂದೆಯ ಮನೆಯ ಅತ್ಯಂತ ಅಭಿಲಾಷಿಯಾಗಿದ್ದಾನೆ. ನೀನು ಏಕೆ ನನ್ನ ದೇವರುಗಳನ್ನು ಕದ್ದೆ?" ಎಂದು ಕೇಳಿದನು.

[ಆದಿ ೩೧। ೨೪, ೩೦]

ಸಮೀಕ್ಷಕ—ಇದನ್ನು ನಾವು ಮಾದರಿಯಾಗಿ ಬರೆಯುತ್ತಿದ್ದೇವೆ. ಸಾವಿರಾರು ಜನರಿಗೆ ಕನಸಿನಲ್ಲಿ ಬಂದನು; ಮಾತನಾಡಿದನು; ಎಚ್ಚರವಾಗಿರುವಾಗ ಸಾಕ್ಷಾತ್ ಕಾಣಿಸಿದನು; ತಿಂದನು, ಕುಡಿದನು; ಬಂದನು, ಹೋದನು ಎಂದು ಮೊದಲಾಗಿ ಬೈಬಲಿನಲ್ಲಿ ಬರೆದಿದೆ. ಆದರೆ ಈಗ ಅವನು ಇದ್ದಾನೋ ಇಲ್ಲವೋ ಗೊತ್ತಿಲ್ಲ. ಏಕೆಂದರೆ ಈಗ ಯಾರಿಗೂ, ಸ್ವಪ್ನದಲ್ಲಿ ಮತ್ತು ಎಚ್ಚರವಿರುವಾಗಲೂ ಸಹ ಭೇಟಿಯಾಗುವುದಿಲ್ಲ. ಮತ್ತು ಈ ಕಾಡುಮನುಷ್ಯರು ಪಾಷಾಣಾದಿ ಮೂರ್ತಿಗಳನ್ನು ದೇವರೆಂದು ತಿಳಿದು ಪೂಜಿಸುತ್ತಿದ್ದರೆಂಬುದೂ ತಿಳಿಯಿತು. ಆದರೆ ಕ್ರೈಸ್ತರ ದೇವರೂ ಸಹ ಕಲ್ಲನ್ನೇ ದೇವರೆಂದು ತಿಳಿಯುತ್ತಾನೆ! ಇಲ್ಲದಿದ್ದರೆ ದೇವರುಗಳನ್ನು ಕದಿಯುವುದು ಹೇಗೆ ಸಂಘಟಿಸಿತು? ॥೩೩॥

೩೪. ಮತ್ತು ಯಾಕೋಬನು ತನ್ನ ಹಾದಿಯಲ್ಲಿ ನಡೆದನು ಮತ್ತು ದೇವದೂತರು ಬಂದು ಅವನನ್ನು ಸಂಧಿಸಿದರು. ಮತ್ತು ಯಾಕೂಬನು ಅವರನ್ನು ನೋಡಿ, "ಇದು ದೇವರ ಸೇನೆ" ಎಂದು ಹೇಳಿದನು. [ಆದಿ. ೩೨। ೧, ೨]

ಸಮೀಕ್ಷಕ—ಈಗ ಕ್ರೈಸ್ತರ ದೇವರು ಮನುಷ್ಯನೆಂಬುದರಲ್ಲಿ ಯಾವ ಸಂದಿಗ್ಧವಾದುದೇನೂ ಉಳಿಯಲಿಲ್ಲ. ಏಕೆಂದರೆ ಅವನು ಸೇನೆಯನ್ನು ಇಡುತ್ತಾನೆ. ಅಂದಮೇಲೆ ಆಯುಧಗಳೂ ಇರಬಹುದು. ಮತ್ತು ಎಲ್ಲೆಲ್ಲೋ ಮುತ್ತಿಗೆಹಾಕಿ ಯುದ್ಧವನ್ನು ಮಾಡುತ್ತಿರಬಹುದು. ಇಲ್ಲದಿದ್ದರೆ ಸೈನ್ಯವನ್ನಿಡುವ ಪ್ರಯೋಜನವಾದರೂ ಏನು? ॥೩೪॥

೩೫. ಯಾಕೋಬನು ಒಂಟಿಗನಾಗಿ ಉಳಿದುಹೋದನು. ಮತ್ತು ಇಲ್ಲಿ ಒಬ್ಬ ಪುರುಷನು ಬೆಳಗಾಗುವ ತನಕ ಅವನ ಸಂಗಡ ಮಲ್ಲಯುದ್ಧ ಮಾಡುತ್ತಿದ್ದನು. ಅವನು, ತಾನು ಅವನ ಮೇಲೆ ಪ್ರಬಲನಾಗದುದನ್ನು ಕಂಡಾಗ, ಅವನ ತೊಡೆಯನ್ನು ಒಳಗಿನಿಂದ ಮುಟ್ಟಿದನು. ಆಗ ಯಾಕೋಬನ ತೊಡೆಯ ಮಾಂಸಖಂಡವು ಅವನೊಂದಿಗೆ ಮಲ್ಲಯುದ್ಧ ಮಾಡುವಲ್ಲಿ ಎಳೆದುಕೊಂಡಿತು. ಆಗ ಅವನು—"ನನ್ನನ್ನು ಹೋಗ ಬಿಡು. ಏಕೆಂದರೆ ಬೆಳಗಾಗುತ್ತದೆ ಎಂದನು. ಮತ್ತು ಅವನು—"ನೀನು ನನ್ನನ್ನು ಆಶೀರ್ವದಿಸುವ ವರೆಗೆ ನಿನ್ನನ್ನು ಹೋಗಬಿಡುವುದಿಲ್ಲ" ಅಂದನು. ಆಗ ಅವನು ಅವನನ್ನು—"ನಿನ್ನ ಹೆಸರೇನು?" ಎಂದು ಕೇಳಿದನು. ಮತ್ತು ಅವನು—"ಯಾಕೋಬನು" ಅಂದನು. ಆಗ ಅವನು—"ಇನ್ನು ಮೇಲೆ ನಿನ್ನ ಹೆಸರು ಯಾಕೋಬನೆಂದಲ್ಲ; ಆದರೆ ಇಸ್ರಾಯೇಲನೆಂದಾಗುವುದು. ಏಕೆಂದರೆ ನೀನು ದೇವರೆದುರಿಗೆ ಮತ್ತು ಮಾನವರೆದುರಿಗೆ ರಾಜನಂತೆ ಮಲ್ಲಯುದ್ಧಮಾಡಿದೆ ಮತ್ತು ಗೆದ್ದೆ" ಎಂದು ಹೇಳಿದನು. ಆಗ ಯಾಕೋಬನು—"ನೀನು ನನ್ನ ಹೆಸರನ್ನು ಕೇಳುವಿಯೇಕೆ?" ಎಂದನು. ಮತ್ತು ಅವನು ಅವನಿಗೆ ಆಶೀರ್ವಾದ ವಿತ್ತನು. ಮತ್ತು ಯಾಕೋಬನು—"ತಾನು ದೇವರನ್ನು ಪ್ರತ್ಯಕ್ಷ ದಾಗಿ ನೋಡಿದ್ದೆನು; ಮತ್ತು ನನ್ನ ಪ್ರಾಣ ಉಳಿದಿದೆ" ಎಂದು, ಆ ಸ್ಥಳಕ್ಕೆ ಫನೂಯೇಲ್ ಎಂದು ಹೆಸರಿಟ್ಟನು. ಮತ್ತು ಅವನು ಫನೂಯೇಲನ್ನು ದಾಟಿ ನಡೆದಾಗ ಸೂರ್ಯನ ಜ್ಯೋತಿ ಅವನ ಮೇಲೆ ಬಿದ್ದಿತು. ಮತ್ತು ಅವನು ತನ್ನ ತೊಡೆಯ ನಿಮಿತ್ತ ಕುಂಟುತ್ತಿದ್ದನು. ಆದುದರಿಂದ ಇಸ್ರಾಯೇಲನ ವಂಶಜರು, ಎಳೆದು ಕೊಂಡಿದ್ದ ತೊಡೆಯ ಮಾಂಸವನ್ನು ಇಂದಿನ ವರೆಗೂ ತಿನ್ನುವುದಿಲ್ಲ;

ಏಕೆಂದರೆ ಅವನು ಯಾಕೋಬನ ಸೇದಿಗೂಂಡಿದ್ದ ಜಂಘೆಯ ಮಾಂಸವನ್ನು ಮುಟ್ಟಿದನು. [ಆದಿ. ೩೨। ೨೪-೩೨]

ಸಮಾಕ್ಷಕ—ಕ್ರೈಸ್ತರ ದೇವರು ಜಟ್ಟಿಯಾದ್ದರಿಂದಲೇ ಸಾರಳಿಗೂ, ರಾಹಲಳಿಗೂ ಪುತ್ರದಾನವನ್ನು ಮಾಡುವ ಕೃಪೆತೋರಿಸಿದನು. ಅಯ್ಯೋ! ಇವನೆಂದಿಗಾದರೂ ದೇವರಾಗಬಲ್ಲನೆ? ಮತ್ತೂ ನೋಡಿರಿ ಇವರ ಲೀಲೆಯನ್ನು! ಒಬ್ಬನು ಹೆಸರನ್ನು ಕೇಳಿದರೆ ಇನ್ನೊಬ್ಬನು ಹೆಸರನ್ನೇ ಹೇಳುವುದಿಲ್ಲ! ದೇವರು ಅವನು ತೊಡೆಯ ಮಾಂಸಖಂಡವನ್ನು ಏರಿಸಿಯೇನೋ ಬಿಟ್ಟನು ಮತ್ತು ಗೆಲ್ಲಲ್ಪಟ್ಟನು; ಆದರೆ ಅವನು ಡಾಕ್ಟರನಾಗಿದ್ದ ಪಕ್ಷದಲ್ಲಿ ಅದರ ನಾಡಿಯನ್ನು ಸರಿಯಾಗಿಯೂ ಮಾಡುತ್ತಿದ್ದನು. ಮತ್ತು ಇಂತಹ ದೇವರ ಭಕ್ತಿಯಿಂದ ಯಾಕೋಬನು ಕುಂಟುತ್ತಾ ಇದ್ದಂತೆ, ಇತರರೂ ಕುಂಟುತ್ತಿರಬಹುದು. ದೇವರನ್ನು ಪ್ರತ್ಯಕ್ಷ ಕಂಡು ಅವನೊಡನೆ ಕುಸ್ತಿಮಾಡಿದನಾದರೆ ಈ ಮಾತು ಶರೀರಧಾರಿಯ ಮೇಲಲ್ಲದೆ ಹೇಗೆ ಸಂಭವಿಸೀತು? ಇದು ಬರೇ ಮಕ್ಕಳಾಟಿಕೆಯ ಲೀಲೆ. ||೩೫||

೩೬. ಮತ್ತು ಯೆಹೂದನ ಜ್ಯೇಷ್ಠಲಮಗನಾದ ಏರನು ದೇವರ ದೃಷ್ಟಿಯಲ್ಲಿ ದುಷ್ಟನಾಗಿದ್ದನು; ಆದುದರಿಂದ ದೇವರು ಅವನನ್ನು ಸಾಯಿಸಿದನು. ಬಳಿಕ ಯೆಹೂದನು ಓನಾನಿಗೆ—"ನೀನು ನಿನ್ನ ಅತ್ತಿಗೆಯ ಬಳಿ ಹೋಗು ಮತ್ತು ಅವಳನ್ನು ಮದುವೆಮಾಡಿಕೊಂಡು ನಿನ್ನ ಅಣ್ಣನ ಸಲುವಾಗಿ ವಂಶವನ್ನು ಮುಂದುವರಿಸು, ಎಂದನು. ಮತ್ತು ಓನಾನನು ತನ್ನ ಅತ್ತಿಗೆಯ ಬಳಿ ಹೋದಾಗ, ವೀರ್ಯವನ್ನು ಭೂಮಿಯ ಮೇಲೆ ಬೀಳಿಸಿಬಿಟ್ಟನು. ಮತ್ತು ಅವನ ಆ ಕಾರ್ಯ ದೇವರ ದೃಷ್ಟಿಯಲ್ಲಿ ಕೆಟ್ಟದಾಗಿತ್ತು. ಆದುದರಿಂದ ಆತನು ಅವನನ್ನೂ ಸಾಯಿಸಿಬಿಟ್ಟನು. [ಆದಿ. ೩೮, ೭-೧೦]

ಸಮಾಕ್ಷಕ:—ಈಗ ನೋಡಿರಿ! ಇವು ಮನುಷ್ಯರ ಕೆಲಸಗಳೊ? ಅಥವಾ ದೇವರವೋ? ಅವಳೊಡನೆ ನಿಯೋಗಮಾಡಿಕೊಂಡರೆ, ಅವನನ್ನೇಕೆ ಸಾಯಿಸಿದನು? ಅವನ ಬುದ್ಧಿಯನ್ನು ಶುದ್ಧಗೊಳಿಸಲಿಲ್ಲವೇಕೆ? ಮತ್ತು ವೇದೋಕ್ತವಾದ ನಿಯೋಗವೂ ಮೊದಲು

ಎಲ್ಲಾ ಕಡೆಯೂ ನಡೆಯುತ್ತಿತ್ತು. ಇದರಿಂದ ನಿಯೋಗ ವಿಷಯವು ಎಲ್ಲಾ ಕಡೆ ಪ್ರಚಲಿತವಾಗಿತ್ತೆಂಬುದು ನಿಶ್ಚಯವಾಗುತ್ತದೆ. ॥೩೬॥

ತೌರೇತಯಾತ್ರಾಪುಸ್ತಕ

೩೭. ಮೂಸಾ ದೊಡ್ಡವನಾದಮೇಲೆ ಒಂದು ದಿವಸ ಅವನು ತನ್ನ ಸೋದರರಾದ ಇಬ್ರಿಯರೊಳಗೆ ಒಬ್ಬನನ್ನು ಐಗುಪ್ತ್ಯನೊಬ್ಬನು ಹೊಡೆಯುವುದನ್ನು ಕಂಡನು. ಆಗ ಮೂಸಾ ಅತ್ತಿತ್ತ ದೃಷ್ಟಿಹಾಕಿದನು. ಯಾರೂ ಇಲ್ಲವೆಂಬುದನ್ನು ಕಂಡನು. ಆಗ ಅವನು ಆ ಐಗುಪ್ತ್ಯನನ್ನು ಹೊಡೆದುಹಾಕಿದನು ಮತ್ತು ಅವನನ್ನು ಮರಳಿನಲ್ಲಿ ಮುಚ್ಚಿಬಿಟ್ಟನು. ಮರುದಿವಸ ಅವನು ಹೊರಗೆ ಹೋದಾಗ ಇಬ್ಬರು ಇಬ್ರಿಯರು ಪರಸ್ಪರ ಜಗಳವಾಡುತ್ತಿದ್ದುದನ್ನು ನೋಡಿದನು. ಆಗ ಅವನು ಅನ್ಯಾಯಿಯನ್ನು ಕುರಿತು—" ನೀನು ಯಾಕೆ ನಿನ್ನ ನೆರೆಯವನನ್ನು ಹೊಡೆಯುತ್ತೀಯೆ? " ಎಂದು ಕೇಳಿದನು. ಆಗ ಅವನು—" ಯಾರು ನಿನ್ನನ್ನು ನಮ್ಮ ಮೇಲಿನ ಅಧ್ಯಕ್ಷನನ್ನಾಗಿ ಅಥವಾ ನ್ಯಾಯಾಧೀಶನನ್ನಾಗಿ ಗೊತ್ತುಮಾಡಿದರು? ಆ ಐಗುಪ್ತ್ಯನನ್ನು ಕೊಂದುಹಾಕಿದಂತೆ ನನ್ನನ್ನು ಕೊಂದುಹಾಕಬೇಕೆಂದು ಇಚ್ಛಿಸುತ್ತೀಯೋ? " ಎಂದು ಕೇಳಿದನು. ಆಗ ಮೂಸಾ ಹೆದರಿದನು ಮತ್ತು ಪಲಾಯನಮಾಡಿದನು. [ಯಾತ್ರಾಪುಸ್ತಕ ೨, ೧೧-೧೫]

ಸಮೀಕ್ಷೆ:—ಈಗ ನೋಡಿರಿ! ಬೈಬಲಿನ ಮುಖ್ಯ ಸಿದ್ಧಿಕರ್ತನೂ, ಮತಾಚಾರ್ಯನೂ ಆದ ಮೋಶೆಯು ಕ್ರೋಧಾದಿದುರ್ಗುಣಗಳನ್ನುಳ್ಳ ಚರಿತ್ರವಂತನು, ಮನುಷ್ಯನ ಹತ್ಯೆಮಾಡುವವನು ಮತ್ತು ಕಳ್ಳನಂತೆ ರಾಜದಂಡದಿಂದ ತಪ್ಪಿಕೊಳ್ಳುವವನು! ಅಂದರೆ, ಮಾತನ್ನು ಮುಚ್ಚಿಡುತ್ತಿರುವಾಗ, ಸುಳ್ಳನ್ನು ಹೇಳುವವನೂ ಅವಶ್ಯವಾಗಿ ಆಗಿರಬಹುದು. ಇಂತಹವನಿಗೂ ದೇವರು ಸಿಕ್ಕಿದನು. ಅವನು ಪೈಗಂಬರನಾದನು. ಯಹೂದಿಗಳೇ ಮೊದಲಾದವರ ಮತವನ್ನು ಸ್ಥಾಪಿಸಿದನು. ಆ ಮತವೂ ಮೂಸಾನಂತೆಯೇ ಆಯಿತು. ಆದುದರಿಂದ ಕ್ರೈಸ್ತರಲ್ಲಿ ಆಗಿಹೋದ ಮೂಲಪುರುಷರೆಲ್ಲರೂ ಮೋಶೆಯಿಂದ ಮೊದಲ್ಗೊಂಡು

ಕಾಡುಮನುಷ್ಯರ ಸ್ಥಿತಿಯಲ್ಲಿದ್ದರು; ವಿದ್ಯಾವಸ್ಥೆಯಲ್ಲಿರಲಿಲ್ಲ. ಇತ್ಯಾದಿ. ॥೩೭॥

೩೮. ಒಂದು ಸೊಗಸಾದ ಮೇಕೆಯ ಮರಿಯನ್ನು ಕೊಲ್ಲಿರಿ. ಮತ್ತು ಹೆಸ್ಸೋಪ್ ಗಿಡದ ಒಂದು ಪೊರಕೆಯನ್ನು ತೆಗೆದುಕೊಳ್ಳಿರಿ, ಮತ್ತು ಬಟ್ಟಲಿನಲ್ಲಿರುವ ಆ ರಕ್ತದಲ್ಲಿ ಅದ್ದಿ, ಮೇಲಣ ಚೌಕಟ್ಟಿಗೂ, ದ್ವಾರದ ಎರಡು ಕಡೆಗಳಿಗೂ ಅದರಿಂದ ಮುದ್ರೆಯೆತ್ತಿರಿ. ಮತ್ತು ನಿಮ್ಮಲ್ಲಿಂದ ಯಾವನೂ ಸೂರ್ಯೋದಯದವರೆಗೆ ಮನೆಯ ಬಾಗಲಿಂದ ಹೊರಗೆ ಹೋಗದಿರಲಿ. ಏಕೆಂದರೆ—ದೇವರು ಐಗುಪ್ತ್ಯರ ಹತ್ಯೆಮಾಡುವುದಕ್ಕೆ ನಡುವೆ ಹಾದು ಹೋಗುವನು ಮತ್ತು ಅವನು ಮೇಲಣ ಚೌಕಟ್ಟಿನಮೇಲೆ ಮತ್ತು ಬಾಗಲಿನ ಎರಡು ಕಡೆಯೂ, ರಕ್ತವನ್ನು ನೋಡಿದಾಗ, ದ್ವಾರದಿಂದ ಮುಂದೆ ಸಾಗುವನು ಮತ್ತು ಕೊಲ್ಲಲು ನಾಶಕರನ್ನು ನಿಮ್ಮ ಮನೆಗಳಿಗೆ ಹೋಗಬಿಡುವುದಿಲ್ಲ.

[ಯಾತ್ರಾ. ೧೨। ೨೧–೨೩]

ಸವಿಾಕ್ಷಕ—ಭಲೇ! ಯಂತ್ರ-ತಂತ್ರ ಮಾಡುವವನಂತಿರುವ ಈತನು ದೇವರೂ, ಸರ್ವಜ್ಞನೂ ಎಂದಾದರೂ ಆಗಬಲ್ಲನೇ? ರಕ್ತದ ಮುದ್ರೆಯನ್ನು ನೋಡಿದಾಗಲೇ ಇಸ್ರಾಯೇಲರ ಮನೆಯೆಂದು ಅರಿಯುತ್ತಾನೆ; ಇಲ್ಲದಿದ್ದರೆ ಇಲ್ಲ! ಈ ಕೆಲಸವು ಕ್ಷುದ್ರಬುದ್ಧಿಯಾದ ಮನುಷ್ಯನದಂತಿದೆ. ಇದರಿಂದ ಈ ಮಾತುಗಳೆಲ್ಲವೂ ಯಾರೋ ಒಬ್ಬ ಕಾಡುಮನುಷ್ಯನಿಂದ ಬರೆಯಲ್ಪಟ್ಟುವೆಂದು ತಿಳಿದುಬರುತ್ತದೆ. ॥೩೮॥

೩೯. ಮತ್ತು ಹೀಗೆ ನಡೆಯಿತು; ಅರ್ಧರಾತ್ರಿಯಲ್ಲಿ ಪರಮೇಶ್ವರನು ಐಗುಪ್ತದೇಶದಲ್ಲಿ ತನ್ನ ಸಿಂಹಾಸನದಲ್ಲಿ ಕುಳಿತುಕೊಳ್ಳುತ್ತಿದ್ದ ಫರೋಹನ ಚೊಚ್ಚಲು ಮಗನು ಮೊದಲುಗೊಂಡು ಸೆರೆಯಲ್ಲಿದ್ದ ಬಂದಿವಾನನ ಚೊಚ್ಚಲು ಮಗನ ವರೆಗೂ ಐಗುಪ್ತದೇಶದಲ್ಲಿದ್ದ ಎಲ್ಲಾ ಚೊಚ್ಚಲು ಮಕ್ಕಳನ್ನೂ, ಪಶುಗಳ ಚೊಚ್ಚಲು ಮರಿಗಳ ಸಮೇತ ಸಂಹಾರ ಮಾಡಿದನು. ಆ ರಾತ್ರಿಯಲ್ಲಿ ಫರೋಹನು ಎದ್ದನು; ಅವನೂ ಮತ್ತು ಅವನ ಸೇವಕರೆಲ್ಲರೂ ಮತ್ತು ಐಗುಪ್ತ್ಯರೆಲ್ಲರೂ

ಎದ್ದರು. ಮತ್ತು ಐಗುಪ್ತದೇಶದಲ್ಲಿ ಮಹಾ ವಿಲಾಪವಿತ್ತು. ಏಕೆಂದರೆ– ಒಬ್ಬನೂ ಸಾಯದೆ ಯಾವ ಮನೆಯೂ ಇರಲಿಲ್ಲ.

[ಯಾತ್ರಾ. ೧೨। ೨೯, ೩೦]

ಸವಿಾಕ್ಷಕ—ಒಳ್ಳೇದು. ಅರ್ಧರಾತ್ರಿಯಲ್ಲಿ ದರೋಡೆಗಾರನಂತೆ ನಿರ್ದಯನಾಗಿ ಕ್ರೈಸ್ತರ ದೇವರು ಮಕ್ಕಳುಮರಿಗಳನ್ನೂ, ಮುದುಕರನ್ನೂ, ಪಶುಗಳನ್ನೂ ಕೂಡ ಅಪರಾಧವಿಲ್ಲದೆಯೇ ಸಂಹಾರಮಾಡಿದನು. ಮತ್ತೆ ದಯೆ ಸ್ವಲ್ಪವೂ ಬರಲಿಲ್ಲ. ಮತ್ತು ಐಗುಪ್ತದೇಶದಲ್ಲಿ ಮಹಾ ಗೋಳಾಟವುಂಟಾಗುತ್ತಿದ್ದರೂ ಕ್ರೈಸ್ತರ ದೇವರ ಚಿತ್ತದಿಂದ ನಿಷ್ಕರುಣತೆಯು ನಷ್ಟವಾಗಲಿಲ್ಲವೆ? ಇಂತಹ ಕೆಲಸವು ದೇವರೇನು, ಒಬ್ಬ ಸಾಧಾರಣ ಮನುಷ್ಯನೂ ಮಾಡುವಂತಹದಲ್ಲ. ಇದು ಆಶ್ಚರ್ಯವಲ್ಲ. ಏಕೆಂದರೆ—" ಮಾಂಸಾಹಾರಿಣಃ ಕುತೋದಯಾ " (ಮಾಂಸಾಹಾರಿಗಳಿಗೆ ದಯೆಯೆಲ್ಲಿಂದ?) ಎಂದು ಬರೆದಿದೆ. ಕ್ರೈಸ್ತರ ದೇವರು ಮಾಂಸಾಹಾರಿಯೆಂದಮೇಲೆ ದಯೆತೋರುವುದರಿಂದ ಅವನಿಗೆ ಆಗಬೇಕಾದುದೇನು? ||೩೯||

೪೦. ಪರಮೇಶ್ವರನು ನಿಮಗಾಗಿ ಯುದ್ಧಮಾಡುವನು. ಮುಂದಕ್ಕೆ ಹೊರಡಬೇಕೆಂದು ಇಸ್ರಾಯೇಲನ ವಂಶಜರಿಗೆ ಹೇಳಿದನು. ಆದರೆ, ನೀನು ನಿನ್ನ ಕೋಲನ್ನು ಎತ್ತು ಸಮುದ್ರದ ಮೇಲೆ ಕೈಚಾಚು; ಅದನ್ನು ಆದರಿಂದ ಎರಡುಭಾಗ ಮಾಡು. ಮತ್ತು ಇಸ್ರಾಯೇಲನ ವಂಶಜರು ಸಮುದ್ರದ ಮಧ್ಯದಲ್ಲಿ ಒಣಗಿದ ನೆಲದ ಮೇಲಿನಿಂದ ಹಾದು ಹೊರಟು ಹೋಗುವರು. [ಯಾತ್ರಾ. ೧೪। ೧೪-೧೬]

ಸವಿಾಕ್ಷಕ—ಏನು ಸ್ವಾಮಿ! ಮೊದಲಾದರೋ ದೇವರು ಕುರಿಗಳ ಹಿಂದೆ ಕುರುಬನೋಪಾದಿಯಲ್ಲಿ ಇಸ್ರಾಯೇಲನ ಕುಲದ ಹಿಂದೆ ಹಿಂದೆ ತಿರುಗಾಡುತ್ತಿದ್ದನು. ಈಗ ಎಲ್ಲಿ ಮಾಯವಾದನೋ ಗೊತ್ತಿಲ್ಲ! ಇಲ್ಲದಿದ್ದರೆ, ಸಮುದ್ರದ ನಡುವಿನಲ್ಲಿ ನಾಲ್ಕು ಕಡೆಗಳಿಗೂ ರೈಲುಮಾರ್ಗವನ್ನು ಹಾಕಿಸಿಕೊಂಡು ಬಿಡುತ್ತಿದ್ದೆವು; ಅದರಿಂದ ಸಂಪೂರ್ಣ ಜಗತ್ತಿಗೇ ಉಪಕಾರವಾಗುತ್ತಿತ್ತು. ಮತ್ತು ಜಹಜು ಮೊದಲಾದುವುಗಳನ್ನು ಕಟ್ಟುವ ಶ್ರಮ ನಿವಾರಣೆಯಾಗುತ್ತಿತ್ತು.

ಆದರೆ ಮಾಡುವುದೇನು? ಕ್ರೈಸ್ತರ ದೇವರು ಎಲ್ಲಿ ಅವಿತುಕೊಂಡಿರುವನೋ ಗೊತ್ತಿಲ್ಲ. ಈ ಮೊದಲಾದ ಎಷ್ಟೋ ಅಸಂಭವ ಲೀಲೆಗಳನ್ನು ಮೂಸಾನ ಸಂಗಡ ಬೈಬಲಿನ ದೇವರು ಮಾಡಿದ್ದಾನೆ. ಆದರೆ ಇದರಿಂದ ಕ್ರೈಸ್ತರ ದೇವರಂತೆಯೇ ಅವನ ಸೇವಕರೂ, ಅವನಿಂದ ರಚಿತವಾದ ಪುಸ್ತಕವೂ ಇರುವದೆಂಬುದು ವಿದಿತವಾಯಿತು. ಇಂತಹ ಪುಸ್ತಕವೂ ಇಂತಹ ದೇವರೂ ನಮ್ಮಿಂದ ದೂರವಿದ್ದರೇ ಒಳ್ಳೆಯದು. ॥೪೦॥

೪೧. ನಿನ್ನ ದೇವರಾದ ಪರಮೇಶ್ವರನು ನಾನು ಜ್ವಲಂತನೂ, ಸರ್ವಶಕ್ತನೂ ಆಗಿದ್ದೇನೆ. ನನ್ನನ್ನು ದ್ವೇಷಿಸುವವರ ವಿಷಯದಲ್ಲಿ ತಂದೆಗಳ ಅಪರಾಧದ ದಂಡವನ್ನು ಮಕ್ಕಳ ಮೇಲೆ ಮೂರು ನಾಲ್ಕು ತಲೆಗಳ ವರೆಗೆ ಕೊಡುವವನಾಗಿದ್ದೇನೆ. [ಯಾತ್ರಾ. ೨೦। ೫]

ಸಮಾಕ್ಷಕ—ಓಹೋ! ತಂದೆಯ ಅಪರಾಧಕ್ಕೆ ನಾಲ್ಕು ತಲೆಗಳ ವರೆಗೆ ಶಿಕ್ಷೆಯನ್ನೀಯುವುದನ್ನು ಒಳ್ಳೆಯದೆಂದು ತಿಳಿಯುವುದು ಯಾರ ಮನೆಯ ನ್ಯಾಯವು? ಒಳ್ಳೆಯ ತಂದೆಗೆ ಕೆಟ್ಟ ಮತ್ತು ಕೆಟ್ಟ ತಂದೆಗೆ ಒಳ್ಳೆಯ ಸಂತಾನವಾಗುವದಿಲ್ಲವೆ? ಹೀಗಿರುವಾಗ ನಾಲ್ಕು ತಲೆಗಳ ವರೆಗೆ ದಂಡವನ್ನು ಹೇಗೆ ವಿಧಿಸಬಲ್ಲನು? ಮತ್ತು ಐದನೆಯ ತಲೆಯ ನಂತರ ಆದ ದುಷ್ಟನಿಗೆ ದಂಡವನ್ನು ವಿಧಿಸಲಾರನು. ಅಪರಾಧವಿಲ್ಲದೆ ಯಾರನ್ನಾದರೂ ದಂಡಿಸುವುದು ಅನ್ಯಾಯಕಾರಿಯ ಕೆಲಸವಾಗಿರುತ್ತದೆ. ॥೪೧॥

೪೨. ವಿಶ್ರಾಮ ದಿನವನ್ನು ಅದನ್ನು ಪವಿತ್ರವಾಗಿಡಲು ನೆನಪಿಡು. ಆರುದಿನಗಳವರೆಗೆ ನೀನು ಪರಿಶ್ರಮಪಡು. ಮತ್ತು ಏಳನೆಯ ದಿನ ನಿನ್ನ ದೇವರಾದ ಪರಮೇಶ್ವರನಿಗೆ ವಿಶ್ರಾಂತಿಯಾಗಿದೆ. ಪರಮೇಶ್ವರನು ವಿಶ್ರಾಂತಿ ದಿನವನ್ನು ಆಶೀರ್ವದಿಸಿದನು.

[ಯಾತ್ರಾ. ೨೦। ೮-೯]

ಸಮಾಕ್ಷಕ—ಭಾನುವಾರ ಮಾತ್ರ ಪವಿತ್ರ ಮತ್ತು ಇತರ ಆರು ದಿನಗಳು ಅಪವಿತ್ರವಾಗಿರುವವೆ? ಮತ್ತು ದೇವರು ಬಳಲಿ ಏಳನೇ ದಿವಸ ನಿದ್ರಿಸಿಬಿಡಲು ಅವನು ಆರುದಿನಗಳ ವರೆಗೆ ಬಹು ಪರಿಶ್ರಮ

ಪಟ್ಟದ್ದನೇನು? ಮತ್ತು ಆದಿತ್ಯವಾರವನ್ನು ಆಶೀರ್ವದಿಸಿದನಾದರೆ ಸೋಮವಾರ ಮೊದಲಾದ ಆರು ದಿನಗಳಿಗೇನು ಕೊಟ್ಟನು? ಅಂದರೆ– ಶಾಪಕೊಟ್ಟರಬಹುದು? ಇಂತಹ ಕೆಲಸವು ವಿದ್ವಾಂಸನದೂ ಅಲ್ಲ ವೆಂದಮೇಲೆ ದೇವರದು ಹೇಗೆ ಆಗಬಲ್ಲದು? ಒಂದಕ್ಕೆ ಪವಿತ್ರವೆಂದು ವರಕೊಡಲು ಮತ್ತು ಬೇರೆಯವನ್ನು ಅಪವಿತ್ರವಾಗಿ ಮಾಡಲು ಭಾನುವಾರದಲ್ಲಿರುವ ಗುಣವಾದರೂ ಏನು? ಸೋಮವಾರ ಮೊದಲಾದುವು ತಪ್ಪೇನು ಮಾಡಿದ್ದುವು? ॥೪೩॥

೪೩. ನಿನ್ನ ನೆರೆಹೊರೆಯವನ ಮೇಲೆ ಸುಳ್ಳುಸಾಕ್ಷ್ಯ ಹೇಳಬೇಡ. ನಿನ್ನ ನೆರೆಯವನ ಹೆಂಡತಿ, ಮತ್ತು ಅವನ ದಾಸರು, ಅವನ ದಾಸಿ, ಅವನ ಎತ್ತುಗಳು ಮತ್ತು ಅವನ ಕತ್ತೆಗಳು ಮತ್ತು ನಿನ್ನ ನೆರೆಯವನಿಗೆ ಸೇರಿದ ಯಾವದೇ ವಸ್ತುವಿಗೂ ಆಶಿಸಬೇಡ.

[ಯಾತ್ರಾ ೨೦। ೧೬, ೧೭]

ಸಮಾಕ್ಷಕ—ಭಲೇ! ಆದ್ದರಿಂದಲೇ ಕ್ರೈಸ್ತರು ಬಾಯಾರಿದವನು ನೀರಿನ ಮೇಲೂ, ಹಸಿದವನು ಅನ್ನದ ಮೇಲೂ, ಬೀಳುವಂತೆ ಪರದೇಶೀಯರ ವಸ್ತುವಿನ ಮೇಲೆ ಬಾಗುತ್ತಾರೆ. ಇದು ಕೇವಲ ಅನುಕೂಲಸಿಂಧುವಿನ ಹಾಗೂ ಪಕ್ಷಪಾತದ ಮಾತಾಗಿರುವಂತೆಯೇ ಕ್ರೈಸ್ತರ ದೇವರೂ ಆವಶ್ಯವಾಗಿ ಇರಬಹುದು. "ಇಲ್ಲ ಯಾರಾದರೂ ಮನುಷ್ಯಮಾತ್ರರನ್ನು ನೆರೆಹೊರೆಯವರೆಂದು ತಿಳಿಯುತ್ತೇವೆಂದು" ಹೇಳುವುದಾದರೆ ನೆರೆಯವರಲ್ಲವೆಂದೆಣಿಸಲು ಹೆಂಡತಿ, ಮತ್ತು ದಾಸಿಯನ್ನುಳ್ಳವರು ಮನುಷ್ಯರಲ್ಲದೆ ಮತ್ತಾರಿದ್ದಾರೆ? ಆದುದರಿಂದ ಈ ಮಾತುಗಳು ಸ್ವಾರ್ಥಿಮನುಷ್ಯರವು; ದೇವರವಲ್ಲ. ॥೪೩॥

೪೪. ಆದಕಾರಣ ಈ ಬಾಲಕರಲ್ಲಿ ಪ್ರತಿಯೊಬ್ಬ ಮಗನನ್ನೂ, ಪುರುಷನೊಡನೆ ಸಮಾಗಮ ಮಾಡಿದ ಪ್ರತಿಯೊಬ್ಬಳು ಹೆಂಗಸನ್ನೂ ಕೊಲ್ಲಿರಿ. ಆದರೆ ಪುರುಷಸಂಗಮ ಮಾಡದಿರುವ ಪುತ್ರಿಯರನ್ನು ನಿಮಗೋಸ್ಕರ ಜೀವಂತವಾಗಿಟ್ಟುಕೊಳ್ಳಿರಿ. [ಸಂಖ್ಯಾ. ೩೧। ೧೭, ೧೮]

ಸಮಾಕ್ಷಕ—ಭಲೇ! ಸ್ತ್ರೀಯರು, ಬಾಲಕರು, ಮುದುಕರು ಪಶುಗಳು ಮೊದಲಾದವರನ್ನು ಕೊಲ್ಲುವುದರಿಂದಲೂ ದೂರ ಉಳಿಯದ

ನಿಮ್ಮ ಮೂಸಾ ಪೈಗಂಬರನೂ, ನಿಮ್ಮ ದೇವರೂ ಧನ್ಯರು! ಮೂಸಾ ವಿಷಯವಿಲಾಸಿಯಾಗಿದ್ದನೆಂದು ಇದರಿಂದ ಸ್ಪಷ್ಟವಾಗಿ ನಿಶ್ಚಯವಾಗುತ್ತದೆ. ಏಕೆಂದರೆ ವಿಷಯಿಯಲ್ಲದಿದ್ದರೆ, ಅಕ್ಷತಯೋನಿಗಳು ಅಂದರೆ ಪುರುಷಸಮಾಗಮ ಮಾಡದ ಕನ್ಯೆಯರನ್ನು ತನಗಾಗಿ ತರಿಸುತ್ತಿದ್ದನೇಕೆ? ಮತ್ತು ಅವರಿಗೆ ಇಂತಹ ನಿರ್ದಯವಾದ ಮತ್ತು ಕಾಮುಕತ್ವದ ಅಪ್ಪಣೆಯನ್ನೇಕೆ ಮಾಡುತ್ತಿದ್ದನು? ॥೪೪॥

೪೫. ಯಾವನಾದರೂ ಯಾವ ಮನುಷ್ಯನನ್ನಾದರೂ ಹೊಡೆದರೆ ಮತ್ತು ಅವನು ಸತ್ತುಹೋದರೆ, ಅವನು ನಿಜವಾಗಿ ಘಾತಿಸಲ್ಪಡಬೇಕು. ಮತ್ತು ಆ ಮನುಷ್ಯನು ಹತ್ಯೆಯಲ್ಲಿ ತೊಡಗಿರದಿದ್ದರೆ ಮತ್ತು ದೇವರು ಅವನ ಕೈಗೆ ಒಪ್ಪಿಸಿಬಿಟ್ಟರೆ, ಆಗ ನಾನು ನಿನಗೆ ಓಡಿಹೋಗುವ ಸ್ಥಳವನ್ನು ತೋರಿಸಿಬಿಡುವೆನು. [ಯಾತ್ರಾ. ೨೧। ೧೨-೧೩]

ಸಮಾಲೋಚಕ :—ದೇವರ ಈ ನ್ಯಾಯವು ನಿಜವಾಗಿದ್ದರೆ, ಮೂಸಾ ಒಬ್ಬ ಮನುಷ್ಯನನ್ನು ಕೊಂದು, ಹುಗಿದು ಓಡಿಹೋಗಿದ್ದನು, ಅವನಿಗೇಕೆ ಈ ಶಿಕ್ಷೆ ಆಗಲಿಲ್ಲ? ದೇವರು ಮೂಸನಿಗೆ ಅವನನ್ನು ಕೊಲ್ಲುವದಕ್ಕಾಗಿ ಒಪ್ಪಿಸಿದ್ದನೆಂದು ಹೇಳುವಿರಾದರೆ, ದೇವರು ಪಕ್ಷಪಾತಿಯಾದನು. ಏಕೆಂದರೆ ರಾಜನ ಹತ್ತಿರ ಮೂಸಾನ ನ್ಯಾಯವನ್ನೇಕೆ ಆಗಗೊಡಲಿಲ್ಲ? ॥೪೫॥

೪೬. ಎತ್ತುಗಳಿಂದ ಕುಶಲದ ಬಲಿಯನ್ನು ಪರಮಾತ್ಮನಿಗಾಗಿ ಅರ್ಪಿಸಿದನು. ಮತ್ತು ಮೂಸಾ ಅರ್ಧ ರಕ್ತವನ್ನು ತೆಗೆದುಕೊಂಡು ಬಟ್ಟಲುಗಳಲ್ಲಿ ಇಟ್ಟನು. ಅರ್ಧರಕ್ತವನ್ನು ವೇದಿಯ ಮೇಲೆ ಪ್ರೋಕ್ಷಿಸಿದನು. ಮೂಸಾ ಆ ರಕ್ತವನ್ನು ತೆಗೆದುಕೊಂಡು ಜನರ ಮೇಲೆ ಚಿಮುಕಿದನು; ಮತ್ತು "ಈ ರಕ್ತವು, ದೇವರು ಈ ವಿಷಯಗಳ ಕಾರಣದಿಂದ ನಿಮ್ಮ ಸಂಗಡ ಮಾಡಿಕೊಂಡ ನಿಯಮಕ್ಕೆ ಸೇರಿದುದು" ಎಂದನು. ಪರಮೇಶ್ವರನು ಮೂಸಾನಿಗೆ "ಪರ್ವತದ ಮೇಲೆ ನನ್ನ ಬಳಿಗೆ ಬಾ ಮತ್ತು ಅಲ್ಲಿರು. ನಿನಗೆ ಶಿಲಾಶಾಸನಗಳನ್ನೂ, ನಾನು ಬರೆದಿರುವ ವ್ಯವಸ್ಥೆ ಹಾಗೂ ಆಜ್ಞೆಯನ್ನೂ ಕೊಡುವನು" ಎಂದನು.

[ಯಾತ್ರಾ. ೨೪, ೫, ೬, ೮, ೧೨]

ಸಮಿಾಕ್ಷ:—ಈಗ ನೋಡಿರಿ! ಇವೆಲ್ಲಾ ಕಾಡುಮನುಷ್ಯರ ಮಾತುಗಳು ಹೌದೋ ಅಲ್ಲವೋ? ದೇವರು ಹೋರಿಗಳ ಬಲಿದಾನವನ್ನು ತೆಗೆದುಕೊಳ್ಳುತ್ತಾನೆ. ವೇದಿಯ ಮೇಲೆ ರಕ್ತವು ಚಿಮುಕಿಸುತ್ತಾನೆ. ಇದೆಂತಹ ಕಾಡಾಡಿತನದ ಅಸಭ್ಯತೆಯ ವಿಷಯವು? ಕ್ರೈಸ್ತರ ದೇವರೂ ಹೋರಿಗಳ ಬಲಿದಾನ ತೆಗೆದುಕೊಳ್ಳುವಾಗ, ಅವನ ಭಕ್ತರು ಗೋವಿನ ಬಲಿಯ ಪ್ರಸಾದದಿಂದ ಹೊಟ್ಟೆತುಂಬಿಸಿಕೊಳ್ಳಬಾರದೇಕೆ? ಜಗತ್ತಿಗೆ ಹಾನಿಯನ್ನು ತಂದೊಡ್ಡಬಾರದೇಕೆ? ಇಂತಹ ಎಲ್ಲಾ ದುಷ್ಟ ಮಾತುಗಳು ಬೈಬಲಿನಲ್ಲಿ ತುಂಬಿಕೊಂಡಿವೆ; ಇದರ ಕುಸಂಸ್ಕಾರಗಳಿಂದಲೇ ವೇದಗಳ ಮೇಲೂ ಇಂತಹ ಸುಳ್ಳು ಆರೋಪಣೆಯನ್ನು ಹೊರಿಸಬಯಸುತ್ತಾರೆ. ಆದರೆ ವೇದಗಳಲ್ಲಿ ಇಂತಹ ವಿಷಯಗಳ ಹೆಸರೂ ಕೂಡ ಇಲ್ಲ. ಕ್ರೈಸ್ತರ ದೇವರು ಒಬ್ಬ ಗುಡ್ಡಗಾಡಿನ ಮನುಷ್ಯನಾಗಿದ್ದನು. ಗುಡ್ಡದ ಮೇಲೆ ವಾಸಿಸುತ್ತಿದ್ದನು. ಎಂಬುದೂ ನಿಶ್ಚಯವಾಯಿತು. ದೇವರಿಗೆ ಮಸಿ, ಲೇಖನಿ ಮತ್ತು ಕಾಗದವನ್ನು ನಿರ್ಮಿಸಲು ಗೊತ್ತಿರಲಿಲ್ಲ. ಅವನಿಗೆ ಆ ಪದಾರ್ಥಗಳು ಸಿಕ್ಕಿಯೂ ಇರಲಿಲ್ಲ. ಆದುದರಿಂದಲೇ ಕಲ್ಲುಹಲಗೆಗಳ ಮೇಲೆ ಬರೆದುಕೊಡುತ್ತಿದ್ದನು. ಮತ್ತು ಇದೇ ಕಾಡುಮನುಷ್ಯರ ನಡುವೆ ದೇವರಾಗಿಯೂ ಕುಳಿತಿದ್ದನು. ||೪೬||

೪೭. ಮತ್ತು "ನೀನು ನನ್ನ ರೂಪವನ್ನು ನೋಡಲಾರೆ ಏಕೆಂದರೆ—ಯಾವ ಮನುಷ್ಯನೂ ನನ್ನನ್ನು ನೋಡಿ ಜೀವಿಸುವುದಿಲ್ಲ" ಎಂದನು. ಮತ್ತು ದೇವರು—"ನೋಡು, ನನ್ನ ಸಮಿಾಪದಲ್ಲಿ ಒಂದು ಸ್ಥಳವಿದೆ. ಮತ್ತು ನೀನು ದಿಬ್ಬದ ಮೇಲೆ ನಿಂತಿರು. ಮತ್ತು ಹೀಗೆ ಸಂಭವಿಸುವುದು:—ನನ್ನ ವಿಭವವು ಹೊಳೆದು ಹಾಯುವಾಗ, ನಾನು ಈ ಬಂಡೆಯ ಸಂದಿನಲ್ಲಿ ನಿನ್ನನ್ನು ಇಡುವೆನು ಮತ್ತು ಹಾದು ಹೋಗುವ ವರೆಗೆ, ನಿನ್ನನ್ನು ನನ್ನ ಕೈಯಿಂದ ಮುಚ್ಚುವೆನು. ಮತ್ತು ನನ್ನ ಕೈಯನ್ನು ತೆಗೆದುಕೊಳ್ಳುವೆನು; ಮತ್ತು ನೀನು ನನ್ನ ಹಿಂಭಾಗವನ್ನು ನೋಡುವೆ; ಆದರೆ ನನ್ನ ರೂಪ ನಿನಗೆ ಕಾಣಿಸುವುದಿಲ್ಲ" ಎಂದು ಹೇಳಿದನು. [ಯಾತ್ರಾ. ೩೩। ೨೧-೨೩]

ಸಮಿಾಕ್ಷಕ—ಈಗ ನೋಡಿರಿ! ಕ್ರೈಸ್ತರ ದೇವರು ಕೇವಲ

ಮನುಷ್ಯರಂತೆ ಶರೀರಧಾರಿಯಾಗಿದ್ದನು. ಮತ್ತು ಮೂಸಾನ ಸಂಗಡ ಎಂತಹ ಉಪಾಯವನ್ನು ಹೂಡಿ ತಾನು ಸ್ವತಃ ದೇವರಾಗಿಬಿಟ್ಟನು! ಹಿಂಭಾಗವನ್ನು ನೋಡುವನು; ರೂಪವನ್ನು ನೋಡುವುದಿಲ್ಲ ಎಂದ ಮೇಲೆ, ಕೈಯಿಂದ ಅವನನ್ನು ಮುಚ್ಚಿಯೂ ಇಲ್ಲದಿರಬಹುದು. ದೇವರು ತನ್ನ ಕೈಯಿಂದ ಮೂಸಾನನ್ನು ಮುಚ್ಚಿರಬಹುದಾದಾಗ ಅವನ ಕೈಯ ರೂಪವನ್ನು ಆತನು ನೋಡಿರಲಾರನೆ? ॥೪೭॥

ಲಯವ್ಯವಸ್ಥಾಪುಸ್ತಕ (Leviticus)

೪೮. ಮತ್ತು ಪರಮೇಶ್ವರನು ಮೂಸಾನನ್ನು ಕರೆದನು ಮತ್ತು ಮಂಡಲಿಯ ಗುಡಾರದೊಳಗಿಂದ ಅವನಿಗೆ ಈ ಮಾತನ್ನು ಹೇಳಿದನು:—"ನೀನು ಇಸ್ರಾಯೇಲನ ವಂಶಜರಿಗೆ ಬೋಧಿಸು ಮತ್ತು ಅವರಿಗೆ ನಿಮ್ಮಲ್ಲಿ ಯಾವನಾದರೂ ದೇವರಿಗೆ ಕಾಣಿಕೆ ಸಮರ್ಪಿಸುವುದಾದರೆ, ನೀವು ಪಶುಗಳಿಂದ ಅಂದರೆ ಹಸು-ಎತ್ತು ಮತ್ತು ನಿಮ್ಮ ಕಾಣಿಕೆ ತನ್ನಿರಿ ಎಂದು ಹೇಳು". [ಲಯ. ೧। ೧-೨]

ಸಮಿಾಕ್ಷಕ—ಈಗ ಯೋಚಿಸಿರಿ ತನಗಾಗಿ ಬಲಿಕೊಡಿಸುವ ಉಪದೇಶವನ್ನೀಯುವ ಹಸು-ಎತ್ತು ಮೊದಲಾದುವುಗಳ ಬಲಿಯನ್ನು ತೆಗೆದುಕೊಳ್ಳುವ ಕ್ರೈಸ್ತರ ದೇವರು ಹಸು-ಎತ್ತು ಮೊದಲಾದ ಪಶುಗಳ ರಕ್ತಮಾಂಸಗಳ ಬುಭುಕ್ಷು-ಪಿಪಾಸು ಹೌದೊ ಅಲ್ಲವೊ? ಇದರಿಂದಲೇ ಅವನು ಅಹಿಂಸಕರ ಮತ್ತು ಈಶ್ವರಕೋಟಿಯಲ್ಲಿ ಎಂದಿಗೂ ಎಣಿಸಲ್ಪಡಲಾರನು. ಆದರೆ ಮಾಂಸಾಹಾರಿಯಾದ ಸಾಂಸಾರಿಕ ಮನುಷ್ಯನಂತಿದ್ದಾನೆ. ॥೩೮॥

೪೯. ಮತ್ತು ಅವನು ಆ ಹೋರಿಯನ್ನು ಪರಮೇಶ್ವರನ ಎದುರಿನಲ್ಲಿ ಬಲಿಕೊಡಲಿ ಮತ್ತು ಹಾರೂನನ ವಂಶದವರಾದ ಯಾಜಕರು ರಕ್ತವನ್ನು ಬಳಿಗೊಯ್ಯಲಿ ಮತ್ತು ಮಂಡಲಿಯ ಗುಡಾರದ ಬಾಗಲಿಗೆ ಬಳಿಯಿರುವ ಯಜ್ಞವೇದಿಯ ಸುತ್ತಲೂ ಎರಚಲಿ. ಆಗ ಅವನು ಆ ಕಾಣಿಕೆಯ ಬಲಿಯ ಚರ್ಮವನ್ನು ಸುಲಿಯಲಿ ಮತ್ತು ಅದನ್ನು ತುಂಡುತುಂಡಾಗಿ ಮಾಡಲಿ. ಮತ್ತು ಹಾರೂನನ ವಂಶದವರಾದ ಯಾಜಕರು ಯಜ್ಞವೇದಿಯ ಮೇಲೆ

ಬೆಂಕಿಯನ್ನಿಡಲಿ ಮತ್ತು ಅದರ ಮೇಲೆ ಕಟ್ಟಿಗೆಯನ್ನು ಪೇರಿಸಲಿ. ಮತ್ತು ಹಾರೂನನ ವಂಶಜರಾದ ಯಾಜಕರು ಅದರ ತುಂಡುಗಳನ್ನೂ ತಲೆಯನ್ನೂ, ಕೊಬ್ಬನ್ನೂ ಯಜ್ಞವೇದಿಯ ಬೆಂಕಿಯ ಮೇಲಿರುವ ಕಟ್ಟಿಗೆಯ ಮೇಲೆ ವಿಧಿಪೂರ್ವಕವಾಗಿಯಿಡಲಿ. ಈರೀತಿ ಅಗ್ನಿಮುಖದಿಂದ ದೇವರಿಗೆ ಸುವಾಸನೆಗಾಗಿ ಅರ್ಪಿತವಾದ ಬಲಿದಾನದ ಕಾಣಿಕೆ ಸಿದ್ಧಿಸಲಿ. [ಲಯ. ೧। ೫-೯]

ಸಮಿಾಕ್ಷಕ :—ಹೋರಿಯನ್ನು ದೇವರ ಎದುರಿನಲ್ಲಿ ಅವನ ಭಕ್ತರು ಕೊಲ್ಲುವುದು. ಅವನು ಕೊಲ್ಲಿಸುವುದು, ರಕ್ತವನ್ನು ನಾಲ್ಕು ಕಡೆ ಎರಚುವುದು, ಅಗ್ನಿಯಲ್ಲಿ ಹೋಮಮಾಡುವುದು, ದೇವರು ಸುವಾಸನೆಯನ್ನು ತೆಗೆದುಕೊಳ್ಳುವುದು--ಅಯ್ಯೋ! ಇದು ಕಟುಕರ ಮನೆಗಿಂತಲೂ ಕಡಿಮೆಯಾದ ಆಟವೇ? ಸ್ವಲ್ಪ ಯೋಚಿಸಿರಿ. ಆದುದರಿಂದಲೇ ಬೈಬಲು ಈಶ್ವರಕೃತವೂ, ಕಾಡುಮನುಷ್ಯನಂತೆ ಲೀಲೆಯನ್ನು ತೋರಿಸುವವನು ದೇವರೂ ಆಗಲಾರನು. ॥೪೯॥

೫೦. ಪರಮೇಶ್ವರನು ಮೂಸಾವಿಗೆ ಇಂತೆಂದನು–" ಅಭಿಷಿಕ್ತನಾದ ಯಾಜಕನು ಜನರ ಪಾಪಕ್ಕೆ ಸಮಾನವಾದ ಪಾಪವನ್ನು ಮಾಡಿದರೆ, ಅವನು ತಾನು ಮಾಡಿದ ತನ್ನ ಪಾಪದ ಸಲುವಾಗಿ, ತನ್ನ ಪಾಪದ ಕಾಣಿಕೆಗಾಗಿ, ಕುಂದಿಲ್ಲದ ಒಂದು ಹೋರಿಯನ್ನು ಪರಮೇಶ್ವರನಿಗಾಗಿ ತರಬೇಕು. ಹೋರಿಯ ತಲೆಯ ಮೇಲೆ ಕೈಯಿಡಬೇಕು ಮತ್ತು ಪರಮೇಶ್ವರನ ಮುಂದೆ ಅವನ್ನು ಬಲಿ ಕೊಡಬೇಕು.

[ಲಯ. ೪, ೧, ೩, ೪]

ಸಮಿಾಕ್ಷಕ :—ಈಗ ನೋಡಿರಿ! ಪಾಪಗಳನ್ನು ನೀಗುವ ಪ್ರಾಯಶ್ಚಿತ್ತಗಳನ್ನು! ತಾನು ಪಾಪಮಾಡುವುದು, ಹೋರಿಯೇ ಮುಂತಾದ ಉತ್ತಮ ಪಶುಗಳನ್ನು ವಧಿಸುವುದು ಮತ್ತು ದೇವರು ವಧೆ ಮಾಡಿಸುವುದು! ಇಂತಹ ಕಾರ್ಯಗಳನ್ನು ಮಾಡುವ ಮತ್ತು ಮಾಡಿಸುವವನನ್ನು ಕೂಡ ದೇವರೆಂದು ಒಪ್ಪಿ ತಮ್ಮ ಮುಕ್ತಿ ಇತ್ಯಾದಿಗಳ ಆಸೆಯಿಟ್ಟುಕೊಂಡಿರುವ ಕ್ರೈಸ್ತರು ಧನ್ಯರು!! ॥೫೦॥

೫೧. ಯಾವನಾದರೂ ಅಧ್ಯಕ್ಷನು ಪಾಪಮಾಡಿದಾಗ, ಅವನು

ಕುಂದಿಲ್ಲದ ಎಳೆ ಹೋತನನ್ನು ಕಾಣಿಕೆಗಾಗಿ ತರಬೇಕು. ಅದನ್ನು ಪರಮೇಶ್ವರನ ಎದುರಿಗೆ ಬಲಿಕೊಡಬೇಕು. ಇದು ಪಾಪದ ಕಾಣಿಕೆ.
[ಲಯ. ೪, ೨೨-೨೪]

ಸಮೀಕ್ಷಕ :—ಭಾಪು ಭಾಪು! ಹೀಗಿರುವುದಾದರೆ ಇವರ ಅಧ್ಯಕ್ಷರು ಅಂದರೆ ನ್ಯಾಯಾಧೀಶರು ಮತ್ತು ಸೇನಾಪತಿ ಮೊದಲಾದವರು. ಪಾಪಮಾಡಲು ಏತಕ್ಕೆ ಹೆದರಿಯಾರು? ಸ್ವತಃ ನಾವು ಯಥೇಷ್ಟವಾಗಿ ಪಾಪಮಾಡುವುದು; ಮತ್ತು ಪ್ರಾಯಶ್ಚಿತ್ತದ ಬದಲಿಗೆ ಹಸು, ಹೋರಿ, ಟಗರು ಮೊದಲಾದುವುಗಳ ಪ್ರಾಣ ತೆಗೆದುಕೊಳ್ಳುವುದು! ಆದುದರಿಂದಲೇ ಕ್ರೈಸ್ತರು ಯಾವ ಪಶು ಅಥವಾ ಪಕ್ಷಿಯ ಪ್ರಾಣ ತೆಗೆಯಲೂ ಶಂಕಿತರಾಗುವುದಿಲ್ಲ! ಕೇಳಿರಿ ಕ್ರೈಸ್ತರೆ! ಇನ್ನಾದರೂ ನಿಮ್ಮ ಕಲ್ಯಾಣವಾಗುವಂತೆ ಈ ಕಾಡುಮತವನ್ನು ಬಿಟ್ಟು ಸುಸಭ್ಯವೂ, ಧರ್ಮಮಯವೂ ಆದ ವೇದಮತವನ್ನು ಸ್ವೀಕರಿಸಿರಿ॥೫೧॥

೫೨. ಕುರಿಯನ್ನು ತರುವುದಕ್ಕೆ ಅವನಿಗೆ ಬಂಡವಾಳವಿಲ್ಲವಾದರೆ ತಾನು ಮಾಡಿದ ಅಪರಾಧಕ್ಕಾಗಿ ಎರಡು ಬೆಳವಕ್ಕಿಗಳನ್ನೂ, ಎರಡು ಪಾರಿವಾಳದ ಮರಿಗಳನ್ನೂ ಪರಮೇಶ್ವರನಿಗೆ ಸಮರ್ಪಿಸಬೇಕು. ಅದರ ತಲೆಯನ್ನು ಕುತ್ತಿಗೆ ಬಳಿ ತಿರುಚಿಬಿಡಬೇಕು; ಆದರೆ ಬೇರೆ ಮಾಡಬಾರದು. ತಾನು ಮಾಡಿದ ಪಾಪಕ್ಕೆ ಪ್ರಾಯಶ್ಚಿತ್ತ ಮಾಡಿಕೊಳ್ಳಬೇಕು. ಆದರ ದೆಸೆಯಿಂದ ಕ್ಷಮಿಸಲ್ಪಡುವನು. ಮತ್ತು ಎರಡು ಬೆಳವಕ್ಕಿಗಳನ್ನೂ, ಎರಡು ಪಾರಿವಾಳದ ಮರಿಗಳನ್ನೂ ತರುವುದಕ್ಕೆ ಧನವಿಲ್ಲವಾದರೆ, ಪಾಪದ ಕಾಣಿಕೆಗಾಗಿ ಒಂದು ಸೇರು ಉತ್ತಮವಾದ ಹಿಟ್ಟಿನ ಹತ್ತನೆಯ ಒಂದು ಭಾಗವನ್ನು ತರಬೇಕು.*

---

* ಹೋರಿ, ಮೇಕೆಕುರಿಗಳ ಮರಿಗಳು, ಪಾರಿವಾಳಗಳು, ಕಡೆಗೆ ಹಿಟ್ಟನ್ನು ಸಹ ತೆಗೆದುಕೊಳ್ಳುವ ನಿಯಮವನ್ನು ಮಾಡಿಕೊಂಡ ದೇವರು ಧನ್ಯರು! ಕತ್ತು ಹಿಸುಕುವ ಪರಿಶ್ರಮವೂ ಆಗದಿರಲಿ ಎಂದು ಪಾರಿವಾಳದ ಮರಿಗಳ ಕತ್ತನ್ನು ತಿರುಚಿಸಿ ತೆಗೆದುಕೊಳ್ಳುತ್ತಿದ್ದುದು ಅದ್ಭುತವಾದ ಮಾತೇ ಸರಿ. ಈ ಎಲ್ಲಾ ವಿಷಯಗಳನ್ನು ಪರಿಶೀಲಿಸುವುದರಿಂದ, ಹೀಗೆ ತಿಳಿದು ಬರುತ್ತದೆ—ಕಾಡುಜನರಲ್ಲಿ ಯಾವನೋ ಒಬ್ಬ ಚತುರಪುರುಷನಿದ್ದನು. ಅವನು ಗುಡ್ಡದ ಮೇಲೆ ಹೋಗಿ

ಅದರ ಮೇಲೆ ಎಣ್ಣೆಯನ್ನು ಹೊಯ್ಯಕೂಡದು. ಅವನು ಕ್ಷಮಿಸಲ್ಪಡುವನು. [ಲಯ. ೫, ೭, ೮, ೧೦–೧೩]

ಸಮಿಾಕ್ಷಕ—ಕೇಳಿರಿ! ಕ್ರೈಸ್ತರಲ್ಲಿ ಧನಾಢ್ಯನೂ ದರಿದ್ರನೂ ಪಾಪಮಾಡಲು ಅಂಜದಿರಬಹುದು. ಏಕೆಂದರೆ ಇವರ ದೇವರು ಪಾಪಗಳ ಪ್ರಾಯಶ್ಚಿತ್ತ ಮಾಡುವುದನ್ನು ಸರಳವಾಗಿ ಮಾಡಿಟ್ಟಿದ್ದಾನೆ. ಪಾಪದಿಂದ ಪಾಪವು ಕಷ್ಟಪಡದೆ ತೊಲಗಿ ಹೋಗುತ್ತದೆಂಬ ಕ್ರೈಸ್ತರ ಬೈಬಲಿನ ಮಾತೊಂದು ಬಹಳ ಅದ್ಭುತವಾಗಿದೆ. ಏಕೆಂದರೆ–ಒಂದನೆಯದಾಗಿ ಪಾಪ ಮಾಡಿದನು; ಎರಡನೆಯದಾಗಿ ಜೀವರ ಹಿಂಸೆ ಮಾಡಿದನು; ಮತ್ತು ಚೆನ್ನಾಗಿ ಆನಂದದಿಂದ ಮಾಂಸ ತಿಂದನು. ಮತ್ತು ಪಾಪವೂ ಬಿಟ್ಟುಹೋಯಿತು. ಪಾಪ! ಪಾರಿವಾಳದ ಮರಿಯ ಕತ್ತನ್ನು ತಿರುಚುವಾಗ, ಅದು ಬಹಳ ಹೊತ್ತಿನವರೆಗೆ ಒದ್ದಾಡುತ್ತಿರಬಹುದು. ಆದರೂ ಕ್ರೈಸ್ತರಿಗೆ ದಯೆ ಬಾರದು. ದಯೆ ಬರುವುದಾದರೂ ಹೇಗೆ? ಇವರ ದೇವರ ಉಪದೇಶವೇ ಹಿಂಸೆಮಾಡಬೇಕೆಂಬುದು! ಮತ್ತು ಎಲ್ಲಾ ಪಾಪಗಳಿಗೂ ಇಂತಹ ಪ್ರಾಯಶ್ಚಿತ್ತ ವಿದ್ದರೆ, ಯೇಸುವಿನಮೇಲೆ ವಿಶ್ವಾಸವಿಡುವದರಿಂದ ಪಾಪವು ತೊಲಗುತ್ತದೆಂಬ ಆಡಂಬರವನ್ನೇಕೆ ರಚಿಸುತ್ತಾರೆ? ||೫೨||

೫೩. ೪ ಬಲಿದಾನದ ಚರ್ಮವು ಅದನ್ನು ಸಮರ್ಪಿಸಿದ ಯಾಜಕನದೇ ಆಗುವುದು. ಮತ್ತು ಒಲೆಯ ಮೇಲೆ, ಬಾಣಲೆಯಲ್ಲಿ ಮತ್ತು ಹಂಚಿನ ಮೇಲೆ ಬೇಯಿಸಿದ ಸಮಸ್ತ ಭೋಜನದ ಕಾಣಿಕೆಯೂ ಅದೇ ಯಾಜಕನದಾಗುವುದು. [ಲಯ ೭–೮–೯]

ಕುಳಿತನು ಮತ್ತು ತಾನು ದೇವರೆಂದು ಪ್ರಸಿದ್ಧಪಡಿಸಿದನು. ಆಜ್ಞಾನಿಗಳಾದ ಕಾಡು ಜನರು ಅವನನ್ನೇ ದೇವರೆಂದು ಸ್ವೀಕರಿಸಿ ಬಿಟ್ಟರು! ತನ್ನ ಯುಕ್ತಿಗಳಿಂದ ಅವನು ಪರ್ವತದ ಮೇಲಕ್ಕೇ ಪಲುಪಕ್ಷಿಗಳನ್ನೂ, ಅನ್ನಾದಿಗಳನ್ನೂ ತರಿಸಿಕೊಳ್ಳುತ್ತಿದ್ದನು. ಆನಂದಪಡುತ್ತಿದ್ದನು. ಅವನ ದೂತರಾದ ದೇವತೆಗಳು ಕೆಲಸ ಹೂಡುತ್ತಿದ್ದರು. ಹೋರಿ, ಆಡು, ಕುರಿಗಳ ಎರಿಗಳು, ಪಾರಿವಾಳ ಮತ್ತು "ಒಳ್ಳೆಯ" ಹಿಟ್ಟನ್ನು ತಿನ್ನುವ ಬೈಬಲ್ಲಿನ ದೇವರೆಲ್ಲಿ ಮತ್ತು ಸರ್ವವ್ಯಾಪಕ, ಸರ್ವಜ್ಞ, ಅಜನ್ಮ, ನಿರಾಕಾರ ಸರ್ವಶಕ್ತಿವಂತ ಮತ್ತು ನ್ಯಾಯಕಾರಿ ಮೊದಲಾದ ಉತ್ತಮಗುಣವುಳ್ಳ ವೇದೋಕ್ತನಾದ ಪರಮಾತ್ಮನೆಲ್ಲಿ? ಎಂಬುದನ್ನು ಸಜ್ಜನರೆಲ್ಲರೂ ವಿವೇಚಿಸಬೇಕು

ಸಮೀಕ್ಷಕ—ಇಲ್ಲಿ ದೇವಿಯ ಪುರೋಹಿತರ ಮತ್ತು ದೇವಸ್ಥಾನಗಳ ಪೂಜಾರಿಗಳ ಪೋಪಲೀಲೆ ವಿಚಿತ್ರವಾಗಿದೆಯೆಂದು ನಾವು ತಿಳಿದುಕೊಂಡಿದ್ದೆವು. ಆದರೆ ಕ್ರೈಸ್ತರ ದೇವರ ಮತ್ತು ಅವರ ಪೂಜಾರಿಗಳ ಪೋಪಲೀಲೆಯು ಅದಕ್ಕಿಂತಲೂ ಸಾವಿರ ಪಾಲು ಹೆಚ್ಚಾಗಿದೆ. ಏಕೆಂದರೆ ಚರ್ಮದ ಮೂಲ್ಯವೂ ಮತ್ತು ತಿನ್ನಲು ಊಟದ ವಸ್ತುಗಳೂ ಬರುವವು. ಎಂದ ಮೇಲೆ ಕ್ರೈಸ್ತರು ಚೆನ್ನಾಗಿ ಆನಂದಪಟ್ಟಿರಬಹುದು. ಮತ್ತು ಈಗಲೂ ಪಡುತ್ತಿರಬಹುದು. ತಿಬ್ಬ! ಯಾವನಾದರೂ ಮಾನವನು ಒಬ್ಬ ಮಗನನ್ನು ಕೊಲ್ಲಿಸುವುದು; ಅವನ ಮಾಂಸವನ್ನು ಇನ್ನೊಬ್ಬ ಮಗನಿಗೆ ತಿನ್ನಿಸುವುದು ಹೀಗೆ-ಎಂದಿಗಾದರೂ ಆಗುತ್ತದೆಯೆ! ಅದೇ ರೀತಿ ಎಲ್ಲಾ ಮನುಷ್ಯರೂ, ಪಶುಪಕ್ಷಿ ಮೊದಲಾದ ಜೀವರೂ ದೇವರ ಮಕ್ಕಳಂತಿವೆ. ದೇವರು ಇಂತಹ ಕೆಲಸವನ್ನು ಎಂದಿಗೂ ಮಾಡಲಾರನು. ಆದುದರಿಂದಲೇ ಈ ಬೈಬಲು ಈಶ್ವರ ಕೃತವೂ ಅಲ್ಲ. ಅದರಲ್ಲಿ ಬರೆಯಲ್ಪಟ್ಟವನು ದೇವರೂ, ಮತ್ತು ಇವನನ್ನು ನಂಬುವವರು ಧರ್ಮಜ್ಞರೂ ಎಂದಿಗೂ ಆಗಲಾರರು. ಇಂತಹದೇ ಎಲ್ಲಾ ಮಾತುಗಳೂ ಲಯವ್ಯವಸ್ಥೆ ಮೊದಲಾದ ಗ್ರಂಥಗಳಲ್ಲಿ ತುಂಬಿಕೊಂಡಿವೆ. ಎಲ್ಲಿಯವರೆಗೆ ಎಣಿಸೋಣ? ॥೫೩॥

ಸಂಖ್ಯಾಪುಸ್ತಕ (Numbers)

೫೩. ಆ ಹೆಣ್ಣು ಕತ್ತೆಯು, ಪರಮೇಶ್ವರ ದೂತನು ಬಿಚ್ಚುಕತ್ತಿಯನ್ನು ಕೈಯಲ್ಲಿ ಹಿಡಿದುಕೊಂಡು ದಾರಿಯಲ್ಲಿ ನಿಂತಿರುವದನ್ನು ನೋಡಿತು. ಆಗ ಕತ್ತೆಯು ದಾರಿಯಿಂದ ಬೇರೆ ಹೊಲಕ್ಕೆ ತಿರುಗಿತು. ಅದನ್ನು ದಾರಿಗೆ ತಿರುಗಿಸುವುದಕ್ಕೆ ಬಿಳಾಮನು ಅದನ್ನು ದೊಣ್ಣೆಯಿಂದ ಹೊಡೆದನು. ಪರಮೇಶ್ವರನು ಕತ್ತೆಯ ಬಾಯನ್ನು ತೆರೆದನು. ಮತ್ತು ಅದು ಬಿಳಾಮನನ್ನು—" ನೀನು ಈಗ ಮೂರುಸಾರಿ ನನ್ನನ್ನು ಹೊಡೆಯಲು ನಾನು ನಿನಗೆ ಏನು ಮಾಡಿದ್ದೇನೆ " ಎಂದು ಕೇಳಿತು.

[ಸಂಖ್ಯಾ. ೨೨। ೨೩, ೨೮]

ಸಮೀಕ್ಷಕ—ಪೂರ್ವದಲ್ಲಾದರೋ ಕತ್ತೆಗಳೂ ಕೂಡ ದೇವರ ದೂತರನ್ನು ನೋಡುತ್ತಿದ್ದುವು. ಮತ್ತು ಈ ನಡುವೆ ಬಿಷಪರು,

ಪಾದ್ರಿಗಳು ಮೊದಲಾದ ಶ್ರೇಷ್ಠ ಮತ್ತು ಶ್ರೇಷ್ಠರಲ್ಲದ ಮನುಷ್ಯರಿಗೂ ದೇವರಾಗಲಿ, ಅವನ ದೂತರಾಗಲಿ ಕಾಣಿಸುವುದಿಲ್ಲ. ಈ ಕಾಲದಲ್ಲಿ ದೇವರೂ ಅವನ ದೂತರೂ ಇದ್ದಾರೋ, ಇಲ್ಲವೋ? ಇದ್ದಾರಾದರೆ ಗಾಢನಿದ್ದೆಯಲ್ಲಿ ಒರಗಿದ್ದಾರೆಯೇ? ಅಥವಾ ಕಾಯಿಲೆಬಿದ್ದಿದ್ದಾರೆಯೇ? ಇಲ್ಲವೇ ಬೇರೆ ಭೂಗೋಳಕ್ಕೆ ಹೊರಟುಹೋದರೇ? ಅಥವಾ ಯಾವುದಾದರೂ ಬೇರೆ ಕೆಲಸದಲ್ಲಿ ನಿರತರಾಗಿಹೋದರೇ? ಇಲ್ಲವೇ ಈಗ ಕ್ರೈಸ್ತರ ಮೇಲೆ ಕೋಪಿಸಿಕೊಂಡಿರುವರೆ? ಅಥವಾ ಸತ್ತುಹೋದರೆ? ಏನಾಯಿತೆಂದು ಗೊತ್ತಾಗುವುದಿಲ್ಲ. ಈಗ ಅವರು ಇಲ್ಲ. ಮತ್ತು ಕಾಣಿಸುವುದಿಲ್ಲವಾದರೆ ಆಗಲೂ ಇದ್ದಿರಲಾರರು ಮತ್ತು ಕಾಣಿಸಿರಲಾರರು ಎಂದೇ ಊಹೆಯಾಗುತ್ತದೆ. ಆದರೆ ಇವು ಕೇವಲ ಮನಬಂದಂತೆ ಹೊಡೆದ ಬರುಡೆಗಳು! ||೫೪||

ಸಮುವೇಲನ ದ್ವಿತೀಯಪುಸ್ತಕ (II Samuel)

೫೫. ಅದೇ ರಾತ್ರಿ ಹೀಗೆ ನಡೆಯಿತು:—ಪರಮೇಶ್ವರನ ವಚನವು ನಾತಾನನಿಗೆ ಈರೀತಿ ಸೇರಿತು—"ಹೋಗು ಮತ್ತು ನನ್ನ ಸೇವಕನಾದ ದಾವೀದನಿಗೆ—"ನೀನು ನನಗೋಸ್ಕರ ಮನೆಯನ್ನು ಕಟ್ಟಬೇಕು? ಏಕೆಂದರೆ—ನಾನು ಇಸ್ರಾಯೇಲನ ವಂಶಜರನ್ನು ಐಗುಪ್ತದೇಶದಿಂದ ಹೊರಡಿಸಿ ತಂದಾಗಿನಿಂದ ನಾನು ಇಂದಿನವರೆಗೂ ಮನೆಯಲ್ಲಿ ವಾಸಮಾಡಲಿಲ್ಲ. ಆದರೆ ಗುಡಾರದಲ್ಲಿ ಮತ್ತು ಡೇರಾದಲ್ಲಿ ಸಂಚರಿಸುತ್ತಾ ಇದ್ದೆನು. ಎಂದು ದೇವರು ಹೇಳುತ್ತಾನೆ ಎಂದು ಹೇಳು." [ಸಮುವೇಲ ದ್ವಿತೀಯ ೭! ೪-೬]

ಸಮಿಾಕ್ಷಕ—ಕ್ರೈಸ್ತರ ದೇವರು, ಮನುಷ್ಯರಂತೆ ದೇಹಧಾರಿಯಲ್ಲ ಎಂಬ ಸಂದೇಹ ಈಗ ಸ್ವಲ್ಪವೂ ಉಳಿಯಲಿಲ್ಲ. ಮತ್ತು ನಾನು ಬಹಳ ಪರಿಶ್ರಮಪಟ್ಟೆನು ಅತ್ತಿತ್ತ ಸಂಚರಿಸಿದೆನು. ಈಗ ದಾವೀದನು ಮನೆಯನ್ನು ಕಟ್ಟಿಸಿ ಕೊಟ್ಟರೆ ಅದರಲ್ಲಿ ವಿಶ್ರಾಂತಿ ಪಡೆಯುವೆ" ಎಂದು ದೂರಿಡುತ್ತಾನೆ! ಕ್ರೈಸ್ತರಿಗೆ ಇಂತಹ ದೇವರನ್ನು, ಇಂತಹ ಪುಸ್ತಕವನ್ನು ನಂಬಲು ನಾಚಿಕೆಯಾಗುವುದಿಲ್ಲವೆ? ಆದರೆ ಏನು ಮಾಡಬೇಕು? ಬಡಪಾಯಿಗಳು ಸಿಲುಕಿಕೊಂಡೇ ಬಿಟ್ಟರು. ಈಗ

ಹೊರಗೆ ಬರಬೇಕಾದರೆ ಬಹಳ ಪುರುಷಾರ್ಥ ಮಾಡುವುದು ಉಚಿತವಾಗಿರುತ್ತದೆ.

೨. ಅರಸುಗಳ ಪುಸ್ತಕ (II Kings)

೫೬. ಬಾಬೆಲಿನ ಅರಸನಾದ ನೆಬೂಖದ್ನೆಜರಿನ ಆಳಿಕೆಯ ಹತ್ತೊಂಭತ್ತನೆ ವರ್ಷದ ಐದನೆಯ ತಿಂಗಳಿನ ಏಳನೆಯ ದಿವಸ ಸ್ವಂತ ಸೈನ್ಯದ ಪ್ರಧಾನ ಅಧ್ಯಕ್ಷನಾಗಿದ್ದ ಬಾಬೆಲಿರಾಜನ ಒಬ್ಬ ಸೇವಕ ನಬೂಸರದ್ದಾನನು ಯೆರೂಸಲೇಮಿಗೆ ಬಂದನು. ಅವನು ದೇವರ ದೇವಸ್ಥಾನ, ರಾಜನ ಅರಮನೆ ರಾಜನ ಮತ್ತು ಯೆರೂಸಲೇಮಿನ ಎಲ್ಲಾ ಮನೆಗಳು, ಪ್ರತಿಯೊಂದು ದೊಡ್ಡ ಮನೆಯನ್ನೂ ಸುಟ್ಟುಬಿಟ್ಟನು. ಕಸ್ಡೀಯರ ಸೈನ್ಯವೆಲ್ಲಾ ಯೆರೂಸಲೇಮಿನ ಆ ಸ್ವಂತ ಸೇನೆಯ ಅಧ್ಯಕ್ಷನ ಜೊತೆಯಲ್ಲಿದ್ದ ಗೋಡೆಗಳನ್ನು ನಾಲ್ಕೆಡೆಯಿಂದಲೂ ಕೆಡಹಿಬಿಟ್ಟಿತು. [೨ ಅರಸುಗಳು ೨೫, ೮-೧೦]

ಸಮೀಕ್ಷಕ--ಏನು ಮಾಡಲಾದೀತು? ಕ್ರೈಸ್ತರ ದೇವರಾದರೋ ತನ್ನ ವಿಶ್ರಾಂತಿಗಾಗಿ ದಾವೀದ ಮೊದಲಾದವರಿಂದ ಮನೆ ಕಟ್ಟಿಸಿಕೊಂಡಿದ್ದನು; ಅದರಲ್ಲಿ ವಿಶ್ರಾಂತಿ ಪಡೆಯುತ್ತಿದ್ದನೊ ಏನೋ ಆದರೆ ನಬೂಸರ್ ಅದ್ದಾನನು ದೇವರ ಮನೆಯನ್ನು ಮಣ್ಣುಗೂಡಿಸಿಬಿಟ್ಟನು. ದೇವರು ಹಾಗೂ ಅವನ ಸೇನೆ ಏನೂ ಮಾಡಲಾರದಾದರು. ಹಿಂದೆಯಾದರೋ ಇವರ ದೇವರು ಬಹಳ ಯುದ್ಧಗಳನ್ನು ಮಾಡುತ್ತಿದ್ದನು ಮತ್ತು ವಿಜಯಿಯಾಗುತ್ತಿದ್ದನು. ಆದರೆ ಈಗ ತನ್ನ ಮನೆಯನ್ನೇ ಸುಡಿಸಿ, ಕೆಡವಿಸಿಕೊಂಡು ಕುಳಿತನು! ಸುಮ್ಮನೆ ಏಕೆ ಕುಳಿತಿದ್ದನೋ ಗೊತ್ತಿಲ್ಲ! ಮತ್ತು ಅವನ ದೂತರು ಎಲ್ಲಿಗೆ ಓಡಿಹೋದರೋ ತಿಳಿಯದು! ಇಂತಹ ಸಂದರ್ಭದಲ್ಲಿ ಯಾವನೂ ನೆರವಾಗಲಿಲ್ಲ! ಮತ್ತು ದೇವರ ಪರಾಕ್ರಮವೂ ಎಲ್ಲಿ ಹಾರಿಹೋಗಿತ್ತೋ ಗೊತ್ತಿಲ್ಲ. ಸಮಾಚಾರವು ನಿಜವಾಗಿದ್ದರೆ, ಹಿಂದೆ ಬರೆದ ವಿಜಯ ಸಮಾಚಾರಗಳೆಲ್ಲವೂ ವ್ಯರ್ಥವಾದುವು. ಐಗುಪ್ತದೇಶದ ಹುಡುಗ ಹುಡುಗಿಯರನ್ನು ಕೊಲ್ಲುವಾಗ ಮಾತ್ರ ಗಂಡುಗಲಿಯಾಗಿದ್ದನೇ? ಈಗ ಗಂಡುಗಲಿಗಳ ಎದುರಿನಲ್ಲಿ ತೆಪ್ಪಗೆ ಕುಳಿತನೇ? ಹೀಗೆಂತೂ

ಕ್ರೈಸ್ತರ ದೇವರು ತನಗೆ ನಿಂದೆಯನ್ನೂ, ಅಗೌರವವನ್ನೂ ಉಂಟು ಮಾಡಿಸಿಕೊಂಡನು. ಈ ಪುಸ್ತಕದಲ್ಲಿ ಹೀಗೆಯೇ ಸಾವಿರಾರು ನಿಷ್ಪ್ರಯೋಜಕವಾದ ಕಥೆಗಳು ತುಂಬಿಕೊಂಡಿವೆ. ॥೫೬॥

ಜಬೂರನ ಎಡನೆಯ ಭಾಗ

ಕಾಲದ ಸಮಾಚಾರದ ಮೊದಲನೆಯ ಪುಸ್ತಕ

೫೭. ಹೀಗೆ ನನ್ನ ದೇವರಾದ ಪರಮೇಶ್ವರನು ಇಸ್ರಾಯೇಲನ ವಂಶಜರಿಗೆ ಮಾರೀಬೇನೆಯನ್ನು ಬರಮಾಡಿದನು. ಮತ್ತು ಇಸ್ರಾಯೇಲನ ವಂಶಜರಲ್ಲಿ ಎಪ್ಪತ್ತು ಸಾವಿರ ಜನರು ಬಿದ್ದುಹೋದರು.

[೧ ಪೂರ್ವಕಾಲವೃತ್ತಾಂತ ೨೧, ೧೪]

ಸಮೀಕ್ಷಕ—ಇಸ್ರಾಯೇಲನ ಕ್ರೈಸ್ತರ ದೇವರ ಲೀಲೆಯನ್ನು ನೋಡಿರಿ! ಯಾವ ಇಸ್ರಾಯೇಲನ ಕುಲಕ್ಕೆ ಬಹಳ ವರಗಳನ್ನು ಕೊಟ್ಟಿದ್ದನೋ ಮತ್ತು ಯಾರ ಪಾಲನೆಯಲ್ಲಿ ಹಗಲು ರಾತ್ರಿ ತಿರುಗಾಡುತ್ತಿದ್ದನೋ ಅವರ ಮೇಲೆಯೇ ಈಗ ಥಟ್ಟನೆ ಕ್ರುದ್ಧನಾಗಿ, ಮಾರೀ ಬೇನೆಯನ್ನು ತಂದು ಎಪ್ಪತ್ತು ಸಾವಿರ ಜನರನ್ನು ಸಾಯಿಸಿಬಿಟ್ಟನು. ಯಾವನೋ ಒಬ್ಬ ಕವಿ ಬರೆದಿರುವುದು ಸತ್ಯವಾಗಿದೆ—

ಕ್ಷಣೇ ದುಷ್ಟಃ ಕ್ಷಣೇ ತುಷ್ಟೋ ರುಷ್ಟಸ್ತುಷ್ಟಃ ಕ್ಷಣೇಕ್ಷಣೇ ।
ಅವ್ಯವಸ್ಥಿತಚಿತ್ತಸ್ಯ ಪ್ರಸಾದೋಪಿ ಭಯಂಕರಃ ।

ಕ್ಷಣದಲ್ಲಿ ಪ್ರಸನ್ನನೂ ಕ್ಷಣದಲ್ಲಿ ಅಪ್ರಸನ್ನನೂ ಆಗುವ ಅಂದರೆ ಕ್ಷಣಕ್ಷಣದಲ್ಲಿ ಪ್ರಸನ್ನನೂ ಅಪ್ರಸನ್ನನೂ ಆಗುವ ಮನುಷ್ಯನ ಪ್ರಸನ್ನತೆಯೂ ಭಯದಾಯಕವಾಗಿರುವಂತೆಯೇ, ಕ್ರೈಸ್ತರ ದೇವರ ಲೀಲೆಯೂ ಇದೆ. ॥೫೭॥

ಯೋಬನ ಪುಸ್ತಕ (The book of Jeb)

೫೮. ಒಂದುದಿನ ಹೀಗಾಯಿತು. ಈಶ್ವರನ ಮಕ್ಕಳು ಒಂದು ದಿವಸ ಪರಮೇಶ್ವರನ ಎದುರಿಗೆ ಬಂದು ನಿಂತರು. ಮತ್ತು ಸೈತಾನನೂ ಕೂಡ ಅವರ ನಡುವೆ ಬಂದು ಪರಮೇಶ್ವರನ ಎದುರಿಗೆ ನಿಂತುಕೊಂ-

ಡನು. ಮತ್ತು ಪರಮೇಶ್ವರನು—ನೀನು ಎಲ್ಲಿಂದ ಬರುತ್ತೀಯೆ?" ಎಂದು ಸೈತಾನನನ್ನು ಕೇಳಿದನು. ಆಗ ಸೈತಾನನು ಪರಮೇಶ್ವರನಿಗೆ ಉತ್ತರವಿತ್ತು—"ಭೂಲೋಕದಲ್ಲಿ ಸಂಚರಿಸುತ್ತಾ ಅಲ್ಲಲ್ಲಿ ತಿರುಗುತ್ತಾ ಬರುತ್ತಿದ್ದೇನೆ" ಎಂದನು. ಆಗ ಪರಮೇಶ್ವರನು ಸೈತಾನನಿಗೆ "ನೀನು ನನ್ನ ದಾಸನಾದ ಯೋಬನನ್ನು ಪರಿಕಿಸಿದ್ದೀಯೇನು? ಅವನಿಗೆ ಸಮಾನನು ಭೂಲೋಕದಲ್ಲಿ ಯಾವನೂ ಇಲ್ಲ. ಅವನು ಸಿದ್ಧನು ಮತ್ತು ಸಾಚಾ ಮನುಷ್ಯನು. ದೇವರಿಗಂಜುತ್ತಾನೆ. ಮತ್ತು ಪಾಪದಿಂದ ದೂರವಿರುತ್ತಾನೆ. ಮತ್ತು ಈವರೆಗೆ ತನ್ನ ಸತ್ಯತ್ವವನ್ನು ರಕ್ಷಿಸಿಕೊಂಡಿದ್ದಾನೆ. ಮತ್ತು ಅವನನ್ನು ಕಾರಣವಿಲ್ಲದೆ ನಾಶನಮಾಡುವದಕ್ಕೆ ನೀನು ನನ್ನನ್ನು ಪ್ರೇರಿಸಿದ್ದೀಯೆ" ಎಂದನು. ಆಗ ಸೈತಾನನು ಉತ್ತರವಿತ್ತು ಪರಮೇಶ್ವರನಿಗೆ "ಹೌದು ಚರ್ಮಕ್ಕೆ ಚರ್ಮ; ಮನುಷ್ಯನದನ್ನು ಅವನು ಪ್ರಾಣವನ್ನು ಉಳಿಸಿಕೊಳ್ಳುವದಕ್ಕೋಸ್ಕರ ಕೊಡುವನು. ಆದರೆ ಈಗ ನಿನ್ನ ಕೈಚಾಚು ಮತ್ತು ಅವನ ಅಸ್ಥಿ ಮಾಂಸಗಳನ್ನು ಮುಟ್ಟು. ಆಗ ಅವನು ನಿಸ್ಸಂದೇಹವಾಗಿ ನಿನ್ನ ಮುಖದೆದುರಿಗೆ ನಿನ್ನನ್ನು ತ್ಯಜಿಸುವನು" ಎಂದನು. ಆಗ ಪರಮೇಶ್ವರನು ಸೈತಾನನಿಗೆ—"ನೋಡು, ಅವನು ನಿನ್ನ ಕೈಯಲ್ಲಿದ್ದಾನೆ. ಕೇವಲ ಅವನ ಪ್ರಾಣವನ್ನಾದರೂ ಉಳಿಸು" ಎಂದು ಹೇಳಿದನು. ಆಗ ಸೈತಾನನು ಪರಮೇಶ್ವರನ ಎದುರಿನಿಂದ ಹೊರಟುಹೋದನು. ಮತ್ತು ಯೋಬನನ್ನು ತಲೆಯಿಂದ ಅಂಗಾಲಿನ ವರೆಗೆ ಕೆಟ್ಟ ಕುರುಗಳನ್ನು ಹುಟ್ಟಿಸಿ ಬಾಸಿದನು. [ಯೋಬ. ೨। ೧–೭]

ಸಮೀಕ್ಷಕ—ಈಗ ಕ್ರೈಸ್ತರ ದೇವರ ಸಾಮರ್ಥ್ಯ ನೋಡಿರಿ. ಸೈತಾನನು ಅವನ ಎದುರಿನಲ್ಲೇ ಅವನ ಭಕ್ತರಿಗೆ ದುಃಖವನ್ನೀಯುತ್ತಾನೆ. ಸೈತಾನನಿಗೆ ದಂಡವನ್ನು ಕೊಡಲಾರನು, ತನ್ನ ಭಕ್ತನನ್ನು ಕಾಪಾಡಲಾರನು. ಮತ್ತು ಅವನ ದೂತರಲ್ಲಿಯೂ ಯಾವನೂ ಅವನನ್ನು ಎದುರಿಸಲಾರನು. ಒಬ್ಬ ಸೈತಾನನು ಎಲ್ಲರನ್ನು ಹೆದರಿಸಿಟ್ಟಿದ್ದಾನೆ. ಮತ್ತು ಮತ್ತು ಕ್ರೈಸ್ತರ ದೇವರೂ ಸರ್ವಜ್ಞನಲ್ಲ. ಸರ್ವಜ್ಞನಾಗಿದ್ದರೆ ಯೋಬನ ಪರೀಕ್ಷೆಯನ್ನು ಸೈತಾನನಿಂದ ಮಾಡಿಸುತ್ತಿದ್ದನೇಕೆ? ॥೫೮॥

ಉಪದೇಶ ಪುಸ್ತಕ

೫೯. ಹೌದು. ನನ್ನ ಅಂತಃಕರಣವು ಬುದ್ಧಿಯನ್ನೂ ಜ್ಞಾನವನ್ನೂ ಬಹಳ ನೋಡಿದೆ. ಮತ್ತು ನಾನು ಬುದ್ಧಿ ಮತ್ತು ಹುಚ್ಚತನ ಹಾಗು ಮೂಢತ್ವವನ್ನು ಅರಿಯಲು ಮನಸ್ಸುಮಾಡಿದೆ. ಇದೂ ಮನಸ್ಸಿನ ಉದ್ವೇಗವೆಂದು ನಾನು ತಿಳಿದುಕೊಂಡೆನು. ಏಕೆಂದರೆ–ಅಧಿಕ ಬುದ್ಧಿಯಲ್ಲಿ ಮಹಾ ಶೋಕವಿದೆ. ಮತ್ತು ಜ್ಞಾನವೃದ್ಧಿಯನ್ನು ಹೊಂದುವವನು ದುಃಖದಲ್ಲಿಯೂ ವೃದ್ಧಿ ಹೊಂದುತ್ತಾನೆ.

[ಉಪದೇಶ. ೧। ೧೬-೧೮]

ಸಮಾಕ್ಷಕ—ನೋಡಿರಿ! ಒಂದೇ ಅರ್ಥವುಳ್ಳ ಬುದ್ಧಿ ಮತ್ತು ಜ್ಞಾನವನ್ನು ಎರಡು ಎಂದು ತಿಳಿಯುತ್ತಾರೆ. ಮತ್ತು ಬುದ್ಧಿಯ ವೃದ್ಧಿಯಲ್ಲಿ ಶೋಕವೂ ದುಃಖವೂ ಇವೆಯೆಂದು ತಿಳಿಯುವುದು–ಇಂತಹ ಲೇಖನವನ್ನು ಅವಿದ್ವಾಂಸರ ಹೊರತು ಯಾವನು ಬರೆಯಬಲ್ಲನು? ಆದುದರಿಂದ ಈ ಬೈಬಲು ಈಶ್ವರನಿರ್ಮಿತವಂತಿರಲಿ; ಯಾವನಾದರೂ ವಿದ್ವಾಂಸನು ಬರೆದುದೂ ಅಲ್ಲ. ॥೫೯॥

ಹೀಗೆ ಹಳೆಯ ಒಡಂಬಡಿಕೆಯ ವಿಷಯವಾಗಿ ಸ್ವಲ್ಪ ಬರೆದೆವು. ಇನ್ನು ಮುಂದೆ ಕ್ರೈಸ್ತರು ಬಹಳ ಪ್ರಾಮಾಣಿಕವೆಂದು ನಂಬುವ ಮತ್ತಾಯನೇ ಮೊದಲಾದವರು ಬರೆದ ಸುವಾರ್ತೆಗಳ ವಿಷಯವಾಗಿ ಬರೆಯಲ್ಪಡುವುದು. ಯಾವುದಕ್ಕೆ ಸುವಾರ್ತೆಯೆಂದು ಹೆಸರಿಟ್ಟಿದ್ದಾರೋ ಅದು ಹೇಗಿದೆಯೆಂಬ ಬಗ್ಗೆ ಅದರ ಪರೀಕ್ಷೆಯನ್ನು ಸ್ವಲ್ಪ ಬರೆಯುತ್ತೇವೆ.

ಮತ್ತಾಯನು ಬರೆದ ಸುವಾರ್ತೆ (Saint Matthew)

೬೦. ಯೇಸುಕ್ರಿಸ್ತನ ಜನನವು ಹೀಗಾಯಿತು:—ಆತನ ತಾಯಿಯಾದ ಮರಿಯಳನ್ನು ಯೋಸೇಫನಿಗೆ ನಿಶ್ಚಯಮಾಡಿದ್ದರು. ಆದರೆ ಅವರು ಕೂಡುವುದಕ್ಕಿಂತ ಮುಂಚೆಯೇ ಆಕೆಯು ಪವಿತ್ರಾತ್ಮನಿಂದ ಬಸುರಾಗಿದ್ದುದಾಗಿ ಕಂಡುಬಂದಳು. ನೋಡಿರಿ, ದೇವರ ದೂತನೊಬ್ಬನು ಅವನಿಗೆ ಕನಸಿನಲ್ಲಿ ಕಾಣಿಸಿಕೊಂಡು—ಎಲೈ ದಾವೀದನ ವಂಶಜನಾದ ಯೋಸೇಫನೇ! ನಿನ್ನ ಹೆಂಡತಿಯಾದ ಮರಿಯಳನ್ನು

ಇಲ್ಲಿಗೆ, ಕರೆತರಲು ಆಂಜಬೇಡ. ಏಕೆಂದರೆ—ಉಂಟಾಗಿರುವ ಗರ್ಭವು ಪವಿತ್ರಾತ್ಮದಿಂದ ಆದದ್ದು. [ಮತ್ತಾಯ. ೧। ೧೮, ೨೦]

ಸಮೀಕ್ಷಕ—ಪ್ರತ್ಯಕ್ಷಾದಿ ಪ್ರಮಾಣಗಳಿಗೂ, ಸೃಷ್ಟಿಕ್ರಮಕ್ಕೂ ವಿರುದ್ಧವಾದ ಈ ಮಾತುಗಳನ್ನು ಯಾವ ವಿದ್ವಾಂಸನೂ ನಂಬಲಾರನು. ಇವುಗಳನ್ನು ನಂಬುವುದು ಮೂರ್ಖ ಮನುಷ್ಯರಾದ ಕಾಡು ಜನರ ಕೆಲಸವು; ಸಭ್ಯವಿದ್ವಾಂಸರದಲ್ಲ. ಒಳ್ಳೆಯದು, ಪರಮಾತ್ಮನ ನಿಯಮವನ್ನು ಯಾವನಾದರೂ ಮುರಿಯಬಲ್ಲನೆ? ಪರಮಾತ್ಮನೂ ತನ್ನ ನಿಯಮವನ್ನು ತಿರುಗಮುರುಗ ಮಾಡಿದರೆ, ಅವನ ಆಜ್ಞೆಯನ್ನು ಯಾವನೂ ಪಾಲಿಸನು. ಮತ್ತು ಅವನೂ ಸರ್ವಜ್ಞನೂ, ನಿರ್ಭ್ರಮನೂ ಆಗಿರುವನು. ಹೀಗಂತೂ ಯಾವ ಯಾವ ಕನ್ಯೆಗೆ ಗರ್ಭ ನಿಲ್ಲುತ್ತದೋ, ಅವಳ ಬಗ್ಗೆ ಎಲ್ಲರೂ "ಇವಳಲ್ಲಿ ಗರ್ಭ ನಿಂತುದು ದೇವರ ಕಡೆಯಿಂದ" ಎಂದು ಹೇಳಬಹುದು. ಮತ್ತು ಸುಳ್ಳು ಸುಳ್ಳೇ ದೇವರ ದೂತನು ಸ್ವಪ್ನದಲ್ಲಿ ನನಗೆ "ಈ ಗರ್ಭವು ಪರಮಾತ್ಮನ ಕಡೆಯಿಂದ ನಿಂತಿದೆಯೆಂದು ಹೇಳಿದನು" ಎಂದು ಹೇಳಿಬಿಡಬಹುದು. ಈ ಅಸಂಭವ ಪ್ರಪಂಚ ರಚಿಸಿರುವಂತೆಯೇ ಸೂರ್ಯನಿಂದ ಕುಂತಿಯು ಗರ್ಭವತಿಯಾದಳೆಂದು ಅಸಂಭವವಾದುದನ್ನು ಪುರಾಣಗಳಲ್ಲಿ ಬರೆದಿದೆ. ಇಂತಹ ಎಲ್ಲ ಮಾತುಗಳನ್ನು ಕಣ್ಣಿದ್ದೂ ಕುರುಡರಾದ ಧೆಸಿಕರು ನಂಬಿ, ಭ್ರಮಜಾಲದಲ್ಲಿ ಸಿಲುಕಿಕೊಳ್ಳುತ್ತಾರೆ. ಈ ವಿಷಯ ಹೀಗಿರಬಹುದು. ಯಾವನೋ ಒಬ್ಬನ ಸಮಾಗಮದಿಂದ ಮರಿಯಳು ಗರ್ಭವತಿಯಾಗಿರಬಹುದು. ಅವನೋ ಅಥವಾ ಬೇರಾವನೋ "ಇವಳಲ್ಲಿ ಗರ್ಭ ಪರಮಾತ್ಮನ ಕಡೆಯಿಂದ ನಿಂತಿದೆ"ಯೆಂದು ಅಸಂಭವವಾದ ಸುದ್ದಿಯನ್ನು ಹುಟ್ಟಿಸಿಬಿಟ್ಟಿರಬಹುದು. ॥೬೨॥

೬೧. ಆಗ ಆತ್ಮನು ಯೇಸುವನ್ನು, ಸೈತಾನನಿಂದ ಅವನು ಪರೀಕ್ಷಿಸಲ್ಪಡಲೆಂದು ಕಾಡಿಗೆ ಕರೆದೊಯ್ದನು. ಆತನು ನಾಲ್ವತ್ತು ಹಗಲು ಮತ್ತು ನಾಲ್ವತ್ತು ರಾತ್ರಿ ಉಪವಾಸ ಮಾಡಿ, ತರುವಾಯ ಹಸಿದವನಾದನು. ಆಗ ಪರೀಕ್ಷೆ ಮಾಡುವವನು—"ನೀನು ದೇವರ ಮಗನಾಗಿದ್ದರೆ ಈ ಕಲ್ಲುಗಳು ರೊಟ್ಟಿಯಾಗಲಿ ಎಂದು ಹೇಳಿಬಿಡು" ಎಂದನು. [ಮತ್ತಾಯ ೪, ೧-೩]

ಸಮಿಾಕ್ಷಕ—ಕ್ರೈಸ್ತರ ದೇವರು ಸರ್ವಜ್ಞನಲ್ಲವೆಂಬುದು ಇದರಿಂದ ಸ್ಪಷ್ಟವಾಗಿ ಗೊತ್ತಾಗುತ್ತದೆ. ಏಕೆಂದರೆ, ಸರ್ವಜ್ಞನಾಗಿದ್ದರೆ ಅವನ ಪರೀಕ್ಷೆಯನ್ನು ಸೈತಾನನ ಮೂಲಕ ಏಕೆ ಮಾಡಿಸುತ್ತಿದ್ದನು? ಸ್ವತಃ ತಿಳಿದುಕೊಳ್ಳುತ್ತಿದ್ದನು. ಒಳ್ಳೆಯದು, ಯಾವನಾದರೂ ಕ್ರೈಸ್ತನನ್ನು ಈಗ ೪೦ ಹಗಲು ಮತ್ತು ೪೦ ರಾತ್ರಿಗಳ ವರೆಗೆ ಉಪವಾಸ ವಿಟ್ಟರೆ ಅವನು ಬದುಕಬಲ್ಲನೆ? ಇದರಿಂದ ಅವನು ದೇವರ ಮಗನೂ ಅಲ್ಲ; ಅವನಲ್ಲಿ ಯಾವೊಂದು ಚಮತ್ಕಾರವೂ ಅಂದರೆ ಸಿದ್ಧಿಯೂ ಇರಲಿಲ್ಲವೆಂಬುದು ಸಿದ್ಧವಾಗುತ್ತದೆ. ಇಲ್ಲದಿದ್ದರೆ ಸೈತಾನನ ಎದುರಿನಲ್ಲಿ ಕಲ್ಲುಗಳನ್ನು ರೊಟ್ಟಿಗಳನ್ನಾಗಿ ಏಕೆ ಮಾಡುತ್ತಿರಲಿಲ್ಲ? ಮತ್ತು ತಾನು ಹಸಿದೇಕೆ ಇರುತ್ತಿದ್ದನು? ಪರಮೇಶ್ವರನು ಕಲ್ಲಾಗಿ ಮಾಡಿದುದನ್ನು ಯಾವನೂ ರೊಟ್ಟಿಗಳಾಗಿ ಮಾಡಲಾರನು; ಪರಮಾತ್ಮನು ಸರ್ವಜ್ಞನೂ, ಅವನ ಕೆಲಸಗಳೆಲ್ಲವೂ ಕುಂದುಕೊರತೆಗಳಿಲ್ಲದವೂ ಆಗಿರುವುದರಿಂದ, ದೇವರು ಸಹ ಪೂರ್ವಕೃತ ನಿಯಮವನ್ನು ಪ್ರತೀಪಗೊಳಿಸಲಾರನು, ಎಂಬುದೇ ಸಿದ್ಧಾಂತವು ॥೬೧॥

೬೨. ಅವರಿಗೆ ಅತನು—"ನನ್ನನ್ನು ಹಿಂಬಾಲಿಸಿರಿ, ನಾನು ನಿಮ್ಮನ್ನು ಮನುಷ್ಯರನ್ನು ಹಿಡಿಯುವ ಬೆಸ್ತರಾಗಿಮಾಡುವೆನು" ಎಂದು ಹೇಳಿದನು? ಅವರು ಕೂಡಲೇ ತಮ್ಮ ಬಲೆಗಳನ್ನು ಬಿಟ್ಟು ಅತನ ಹಿಂದೆ ಹೋದರು. [ಮತ್ತಾಯ ೪, ೧೯, ೨೦-೨೧]

ಸಮಿಾಕ್ಷಕ—ಹಳೆಯ ಒಡಂಬಡಿಕೆಯಲ್ಲಿ ಹತ್ತು ಅಪ್ಪಣೆಗಳಲ್ಲಿ ಮಕ್ಕಳು ತಮ್ಮ ಆಯುಷ್ಯ ವರ್ಧಿಸುವಂತೆ, ತಮ್ಮ ತಾಯಿ ತಂದೆಗಳ ಸೇವೆಯನ್ನೂ, ಸತ್ಕಾರವನ್ನು ಮಾಡಬೇಕು" ಎಂದು ಬರೆದಿದೆ. ಇದೇ ಪಾಪದಿಂದ ಅಂದರೆ ಯೇಸುವು ತನ್ನ ತಂದೆ ತಾಯಿಗಳ ಸೇವೆಯನ್ನು ಮಾಡಲಿಲ್ಲ. ಬೇರೆಯವರನ್ನೂ ತಾಯಿ ತಂದೆಗಳ ಸೇವೆಯಿಂದ ದೂರವಿಟ್ಟನು. ಇದೇ ಅಪರಾಧದಿಂದ ಅವನು ಚಿರಂಜೀವಿಯಾಗಲಿಲ್ಲವೆಂದು ತಿಳಿದುಬರುತ್ತದೆ. ಮತ್ತು ಯೇಸುವು ಮನುಷ್ಯರನ್ನು ಸಿಲುಕಿಸುವುದಕ್ಕೆ, ಬಲೆಯಲ್ಲಿ ಮಾನುಗಳನ್ನು ಬೀಳಿಸುವಂತೆ, ಮನುಷ್ಯರನ್ನು ಸ್ವಮತದಲ್ಲಿ ಸಿಲುಕಿಸಿ ಸ್ವಪ್ರಯೋಜನವನ್ನು ಸಾಧಿಸುವುದಕ್ಕೆ ಒಂದು ಮತವನ್ನು ಸ್ಥಾಪಿಸಿದನೆಂದು ವಿದಿತ

ವಾಗುತ್ತದೆ. ಯೇಸುವೇ ಹೀಗಿದ್ದ ಮೇಲೆ, ಈಗಿನ ಕಾಲದ ಪಾದ್ರಿಗಳು ಮನುಷ್ಯರನ್ನು ತಮ್ಮ ಜಾಲಗಳಿಗೆ ಸಿಲುಕಿಸಿಕೊಂಡರೆ ಆಶ್ಚರ್ಯ ವಾದರೂ ಏನು? ಏಕೆಂದರೆ ದೊಡ್ಡ ದೊಡ್ಡದಾಗಿರುವ ಹೆಚ್ಚು ಮೀನು ಗಳನ್ನು ಬಲೆಯಲ್ಲಿ ಸಿಲುಕಿಸಿಕೊಳ್ಳುವವನಿಗೆ ಒಳ್ಳೆಯ ಗೌರವವೂ ಆ ಜೀವಿಕೆಯೂ ಸಿಕ್ಕುವಂತೆಯೇ ಹೆಚ್ಚು ಜನರನ್ನು ತಮ್ಮ ಮತ ದಲ್ಲಿ ಸಿಲುಕಿಸಿಕೊಂಡವರಿಗೆ ಹೆಚ್ಚು ಗೌರವವೂ, ಆಜೀವಿಕೆಯೂ ಸಿಕ್ಕುತ್ತವೆ. ಆದುದರಿಂದಲೇ ಈ ಜನರು ವೇದಶಾಸ್ತ್ರಗಳನ್ನೋದದ, ಕೇಳದ, ತಿಳುವಳಿಕೆಯಿಲ್ಲದ ಜನರನ್ನು ತಮ್ಮ ಜಾಲಗಳಲ್ಲಿ ಸಿಲುಕಿಸಿ ಕೊಂಡು, ಅವರನ್ನು ತಂದೆತಾಯಿಗಳು ಮತ್ತು ಕುಟುಂಬ ಮೊದಲಾದು ದರಿಂದ ಬೇರೆ ಮಾಡಿಬಿಡುತ್ತಾರೆ. ಆದುದರಿಂದ ಸ್ವತಃ ಇವರ ಭ್ರಮು ಜಾಲದಿಂದ ದೂರವುಳಿದು ತಮ್ಮ ಇತರ ತಿಳುವಳಿಕೆಯಿಲ್ಲದ ಸೋದ ರರನ್ನು ದೂರವುಳಿಸುವುದರಲ್ಲಿ ತತ್ಪರರಾಗಿರುವುದು ವಿದ್ವಾಂಸರಾದ ಆರ್ಯರಿಗೆಲ್ಲಾ ಉಚಿತವಾಗಿರುತ್ತದೆ. ॥೬೨॥

೬೩. ಆಗ ಯೇಸು ಗಲಿಲಾಯ ದೇಶದಲ್ಲಿ ಅಲ್ಲಿಯವರ ಸಭೆ ಗಳಲ್ಲಿ ಉಪದೇಶಮಾಡುತ್ತಾ, ರಾಜ್ಯದ ಸುವಾರ್ತೆಯನ್ನು ಪ್ರಸರಿ ಸುತ್ತಾ ಮತ್ತು ಜನರಲ್ಲಿ ಪ್ರತಿಯೊಂದು ರೋಗವನ್ನು ಪ್ರತಿಯೊಂದು ಬೇನೆಗಳನ್ನೂ ವಾಸಿಮಾಡುತ್ತಾ ತಿರುಗಾಡಿದನು. ನಾನಾಬಗೆಯ ರೋಗಗಳಿಂದಲೂ ಮತ್ತು ನೋವುಗಳಿಂದಲೂ ದುಃಖಿತರಾದ ಎಲ್ಲಾ ರೋಗಿಗಳನ್ನೂ, ದೆವ್ವಹಿಡಿದವರನ್ನೂ, ಮೂರ್ಛಾರೋಗಿಗಳನ್ನೂ ಮತ್ತು ಪಾರ್ಶ್ವವಾಯುವಿನವರನ್ನೂ ಆತನ ಬಳಿಗೆ ಕರತಂದರು. ಮತ್ತು ಆತನು ಸ್ವಸ್ಥಗೊಳಿಸಿದನು. [ಮತ್ತಾಯ. ೪। ೨೩–೨೪–೨೫]

ಸಮೀಕ್ಷಕ—ಈ ಕಾಲದಲ್ಲಿ ಪೋಪಲೀಲಾರಚನೆ, ಮಂತ್ರ ಪುರಶ್ಚರಣ, ಆಶೀರ್ವಾದ, ತಾಯಿತ ಮತ್ತು ಭಸ್ಮದ ಚುಟಿಕೆಯನ್ನು ಕೊಡುವುದರಿಂದ ದೆವ್ವಗಳನ್ನೋಡಿಸುವದು, ಮತ್ತು ರೋಗಗಳನ್ನು ವಾಸಿಮಾಡುವುದು ನಿಜವಾಗಿದ್ದರೆ ಸುವಾರ್ತೆಯ ಆ ಮಾತೂ ನಿಜವಾಗ ಬಹುದು. ಆದಕಾರಣ, ಅಜ್ಞೋಥಜನರನ್ನು ಭ್ರಮೆಯಲ್ಲಿ ಸಿಕ್ಕಿಸಿ ಕೊಳ್ಳುವುದಕ್ಕಾಗಿ ಈ ವಿಷಯಗಳಿವೆ. ಕ್ರೈಸ್ತರು ಯೇಸುವಿನ ಮಾತುಗಳನ್ನು ಒಪ್ಪುವುದಾದರೆ, ಇಲ್ಲಿನ ದೇವಿಯರ–ಪುರೋಹಿತರ

ಮಾತುಗಳನ್ನೇಕೆ ಒಪ್ಪುವುದಿಲ್ಲ? ಏಕೆಂದರೆ—ಆವುಗಳಂತೆಯೇ ಈ ಮಾತುಗಳೂ ಇವೆ. ॥೬೩॥

೬೪. ಮನದಲ್ಲಿ ದೀನರಾಗಿರುವವರು ಧನ್ಯರು. ಏಕೆಂದರೆ—ಸ್ವರ್ಗದ ರಾಜ್ಯವು ಅವರದೇ. ಏಕೆಂದರೆ—ನಾನು ನಿಮಗೆ ಸತ್ಯವಾಗಿ ಹೇಳುತ್ತೇನೆ—ಆಕಾಶವೂ, ಭೂಮಿಯೂ ಅಳಿದುಹೋಗದವರೆಗೆ, ವ್ಯವಸ್ಥೆಯೊಳಗಿನ ಒಂದು ಮಾತ್ರೆಯೂ ಒಂದು ಸೊನ್ನೆಯೂ ಪೂರ್ತಿಯಾಗದೇ ಇರುವುದಿಲ್ಲ. ಆದ್ದರಿಂದ ಈ ಅತಿ ಸಣ್ಣ ಆಜ್ಞೆಗಳಲ್ಲಿ ಒಂದನ್ನು ಲೋಪಗೊಳಿಸುವವನು ಮತ್ತು ಜನರಿಗೆ ಹಾಗೆಯೇ ಬೋಧಿಸುವವನು ಸ್ವರ್ಗದ ರಾಜ್ಯದಲ್ಲಿ ಎಲ್ಲರಿಗಿಂತ ಚಿಕ್ಕವನೆನ್ನಿಸಿಕೊಳ್ಳುವನು. [ಮತ್ತಾಯ ೫। ೩, ೧೮, ೧೯]

ಸಮಿಾಕ್ಷಕ–ಸ್ವರ್ಗವು ಒಂದು ಇರುವುದಾದರೆ ಅದಕ್ಕೆ ರಾಜನೂ ಒಬ್ಬನೇ ಇರಬೇಕು, ಆದುದರಿಂದ ಎಷ್ಟು ಜನ ದೀನರಿದ್ದಾರೋ, ಅವರೆಲ್ಲಾ ಸ್ವರ್ಗಕ್ಕೆ ಹೋದರೆ ಸ್ವರ್ಗದಲ್ಲಿ ರಾಜ್ಯದ ಅಧಿಕಾರ ಯಾರಿಗೆ ಸಿಕ್ಕುವುದು? ಅಂದರೆ ತಮ್ಮ ತಮ್ಮಲ್ಲಿ ಹೋರಾಡಿ ಗುದ್ದಾಡಿಕೊಳ್ಳುವರು, ಮತ್ತು ರಾಜ್ಯವ್ಯವಸ್ಥೆಯೆಲ್ಲಾ ಛಿನ್ನಭಿನ್ನವಾಗಿ ಹೋಗುವುದು. ಮತ್ತು ದೀನರೆಂದರೆ—ದರಿದ್ರರೆಂದು ಗ್ರಹಿಸುವಿರಾದರೆ ಅದೂ ಸರಿಯಲ್ಲ. ನಿರಭಿಮಾನಿಗಳೆಂದು ಗ್ರಹಿಸುವಿರಾದರೆ, ಅದೂ ಸರಿಯಲ್ಲ. ಏಕೆಂದರೆ ಬಡವ ಮತ್ತು ಅಭಿಮಾನಶಬ್ದಗಳಿಗೆ ಒಂದೇ ಅರ್ಥವಲ್ಲ. ಆದರೆ ಮನಸ್ಸಿನಲ್ಲಿ ದೀನನಾಗಿರುವವನಿಗೆ ಸಂತೋಷವೆಂದಿಗೂ ಆಗುವುದಿಲ್ಲ. ಆದುದರಿಂದ ಈ ಮಾತು ಸರಿಯಲ್ಲ. ಆಕಾಶವೂ ಭೂಮಿಯೂ ಅಳಿದು ಹೋದಾಗ ವ್ಯವಸ್ಥೆಯೂ ಅಳಿದುಹೋಗುವುದು. ಇಂತಹ ಅನಿತ್ಯ ವ್ಯವಸ್ಥೆಯು ಮನುಷ್ಯರದಾಗಿರುತ್ತದೆ; ಸರ್ವಜ್ಞನಾದ ದೇವರದಲ್ಲ. ಈ ಆಜ್ಞೆಗಳನ್ನು ಒಪ್ಪದವನು ಪರಲೋಕರಾಜ್ಯದಲ್ಲಿ ಬಹಳ ಚಿಕ್ಕವನೆಂದು ಗಣಿಸಲ್ಪಡುವನು—ಎಂದು ಇದೊಂದು ಪ್ರಲೋಭವನ್ನು ಮತ್ತು ಭಯವನ್ನು ಮಾತ್ರ ತೋರಿಸಿದ್ದಾರೆ. ॥೬೪॥

೬೫. ನಮ್ಮ ದಿನಪೂರ್ತಿಯ ಆಹಾರವನ್ನು ಈ ಹೊತ್ತು

ನಮಗೆ ಕೊಡು. ಭೂಲೋಕದಲ್ಲಿ ತಮಗಾಗಿ ಧನಸಂಚಯ ಮಾಡಬೇಡಿರಿ. [ಮತ್ತಾಯ ೬, ೧೧-೧೯]

ಸಮಿಕ್ಷಕ— ಯೇಸುಕ್ರಿಸ್ತನು ಹುಟ್ಟಿದಾಗ ಜನರು ಕಾಡಾಡಿಗಳೂ, ದರಿದ್ರರೂ ಆಗಿದ್ದರು; ಯೇಸುವೂ ಅದೇ ರೀತಿ ದರಿದ್ರನಾಗಿದ್ದನು. ಎಂದು ಇದರಿಂದ ಗೊತ್ತಾಗುತ್ತದೆ. ಆದುದರಿಂದಲೇ ಅನುದಿನದ ಆಹಾರ ಪ್ರಾಪ್ತಿಗಾಗಿ ಈಶ್ವರನನ್ನು ಪ್ರಾರ್ಥಿಸುತ್ತಾನೆ. ಮತ್ತು ಪ್ರಾರ್ಥಿಸಲು ಕಲಿಸುತ್ತಾನೆ. ಹೀಗಿರುವುದಾದರೆ, ಕ್ರೈಸ್ತರು ಧನಸಂಚಯ ಮಾಡುತ್ತಾರೇತಕ್ಕೆ? ಅವರು ಯೇಸುವಿನ ಮಾತಿಗೆ ವಿರುದ್ಧರಾಗದೆ, ಎಲ್ಲವನ್ನು ದಾನದ ಪುಣ್ಯಮಾಡಿ ಬಡವರಾಗಿಬಿಡಬೇಕು. ||೬೫||

೬೬. ನನ್ನನ್ನು "ಸ್ವಾಮಿ, ಸ್ವಾಮಿ" ಅನ್ನುವ ಪ್ರತಿಯೊಬ್ಬನೂ ಸ್ವರ್ಗದ ರಾಜ್ಯದಲ್ಲಿ ಪ್ರವೇಶಮಾಡಲಾಗುವುದಿಲ್ಲ.

[ಮತ್ತಾಯ ೭। ೨೧]

ಸಮಿಕ್ಷಕ- ಈಗ ಯೋಚಿಸಿರಿ. ದೊಡ್ಡ ದೊಡ್ಡ ಪಾದ್ರಿಗಳೂ ಬಿಷಪ್ಪರೂ ಅನ್ಯಕ್ರೈಸ್ತರೂ ಯೇಸುವಿನ ಈ ಮಾತನ್ನು ನಿಜವೆಂದು ತಿಳಿಧವರಾದರೆ, ಯೇಸುವನ್ನು ಪ್ರಭು ಅಂದರೆ ದೇವರು—ಎಂದು ಎಂದಿಗೂ ಹೇಳುವುದಿಲ್ಲ. ಈ ಮಾತನ್ನು ಒಪ್ಪದಿದ್ದರೆ ಪಾಪದಿಂದ ಎಂದಿಗೂ ದೂರವಾಗಲಾರರು ||೬೬||

೬೭. ಆ ದಿವಸದಲ್ಲಿ ಬಹು ಜನರು ನನಗೆ ಹೇಳುವರು. ಆಗ ನಾನು ಅವರಿಗೆ-" ನಾನೆಂದೂ ನಿಮ್ಮನ್ನು ತಿಳಿದಿಲ್ಲ. ಕುಕರ್ಮ ಮಾಡುವವರು ನನ್ನಿಂದ ದೂರವಾಗಿರಿ" ಎಂದು ಸ್ಪಷ್ಟನುಡಿಯಲ್ಲಿ ಹೇಳಿಬಿಡುವೆನು. [ಮತ್ತಾಯ ೭, ೨೨, ೨೩]

ಸಮಿಕ್ಷಕ—ನೋಡಿರಿ! ಯೇಸುವು ಕಾಡುಜನರಿಗೆ ವಿಶ್ವಾಸ ಹುಟ್ಟಿಸುವುದಕ್ಕಾಗಿ ಸ್ವರ್ಗದಲ್ಲಿ ನ್ಯಾಯಾಧೀಶನಾಗಬಯಸುತ್ತಿದ್ದನು. ಇದು ಕೇವಲ ಅಬೋಧ ಜನರಿಗೆ ಆಶೆ ಹುಟ್ಟಿಸುವ ಮಾತಾಗಿದೆ.||೬೭||

೬೮. ನೋಡಿರಿ! ಒಬ್ಬ ಕುಷ್ಠರೋಗಿಯು ಬಂದು ಅವನಿಗೆ ಪ್ರಣಾಮಮಾಡಿ—" ಸ್ವಾಮಿ! ನೀವು ಅಪೇಕ್ಷಿಸಿದರೆ, ನನ್ನನ್ನು

ಶುದ್ಧಮಾಡಬಲ್ಲಿರಿ" ಅಂದನು. ಯೇಸುವು ಕೈಚಾಚಿ, ಅವನನ್ನು ಮುಟ್ಟಿ—"ನಾನಂತೂ ಅಪೇಕ್ಷಿಸುತ್ತೇನೆ, ಶುದ್ಧನಾಗು" ಅಂದನು. ಅವನ ಕುಷ್ಠ ಕೂಡಲೇ ಶುದ್ಧವಾಗಿಹೋಯಿತು.

[ಮತ್ತಾಯ ೮, ೨, ೩]

ಸಮೀಕ್ಷಕ—ಇವೆಲ್ಲಾ ಅಬೋಧಜನರನ್ನು ಸಿಲುಕಿಸಿಕೊಳ್ಳುವ ಮಾತುಗಳಾಗಿವೆ. ಏಕೆಂದರೆ—ಕ್ರೈಸ್ತರು ವಿದ್ಯೆಗೂ ಸೃಷ್ಟಿಕ್ರಮಕ್ಕೂ ವಿರುದ್ಧವಾದ ಈ ಮಾತುಗಳನ್ನು ಸತ್ಯವೆಂದು ಒಪ್ಪುವರಾದರೆ ಪುರಾಣಗಳಲ್ಲಿಯೂ ಭಾರತದಲ್ಲಿಯೂ ಬರೆಯಲ್ಪಟ್ಟಿರುವ ಶುಕ್ರಾಚಾರ್ಯ, ಧನ್ವಂತರಿ, ಕಶ್ಯಪ ಮೊದಲಾದವರ ವಿಷಯಕವಾದ—ದೈತ್ಯರ ಸತ್ತ ಸೈನ್ಯವನ್ನು ಜೀವಂತಪಡಿಸಿದರು; ಬೃಹಸ್ಪತಿಯ ಮಗನಾದ ಕಚನನ್ನು ತುಂಡುತುಂಡಾಗಿ ಮಾಡಿ ಪ್ರಾಣಿಗಳಿಗೂ, ಮೀನುಗಳಿಗೂ ತಿನ್ನಿಸಿದರು; ಆದರೂ ಶುಕ್ರಾಚಾರ್ಯರು ಅವನನ್ನು ಪುನಃ ಜೀವಂತಪಡಿಸಿದರು. ಅನಂತರ ಕಚನನ್ನು ಕೊಂದು ಶುಕ್ರಾಚಾರ್ಯರಿಗೆ ತಿನ್ನಿಸಿದರು; ಆದರೂ ಅವನನ್ನು ಹೊಟ್ಟೆಯಲ್ಲಿ ಜೀವಂತಪಡಿಸಿ ಹೊರಗೆ ತೆಗೆದರು. ತಾವು ಸತ್ತರು; ಅವರನ್ನು ಕಚನು ಜೀವಂತಗೊಳಿಸಿದನು. ಕಶ್ಯಪಮಹರ್ಷಿಯು, ಮನುಷ್ಯಸಹಿತವಾದವೃಕ್ಷವು ತಕ್ಷಕನಿಂದ ಭಸ್ಮವಾದಮೇಲೆ ಪುನಃ ವೃಕ್ಷವನ್ನೂ ಮನುಷ್ಯನನ್ನೂ ಬದುಕಿಸಿದನು. ಧನ್ವಂತರಿಯು ಲಕ್ಷಾಂತರ ಶವಗಳನ್ನು ಸಜೀವಗೊಳಿಸಿದನು; ಲಕ್ಷಾಂತರ ಕುಷ್ಠರೋಗಿಗಳೇ ಮೊದಲಾದವರನ್ನು ಸ್ವಸ್ಥಗೊಳಿಸಿದನು. ಲಕ್ಷಗಟ್ಟಲೆ ಕುರುಡರಿಗೂ, ಕಿವುಡರಿಗೂ ಕಣ್ಣು ಕಿವಿಗಳನ್ನು ದಯಪಾಲಿಸಿದನು. ಈ ದೊದಲಾದ ಕತೆಗಳನ್ನು ಸುಳ್ಳೆಂದು ಯಾಕೆ ಹೇಳುತ್ತೀರಿ? ಈ ಮಾತುಗಳೆಲ್ಲ ಸುಳ್ಳಾಗಿದ್ದರೆ, ಯೇಸುವಿನ ಮಾತೂ ಸುಳ್ಳಲ್ಲವೇಕೆ? ಬೇರೆಯವರ ಮಾತನ್ನು ಸುಳ್ಳೆಂದೂ, ತಮ್ಮ ಸುಳ್ಳು ಮಾತನ್ನು ನಿಜವೆಂದೂ ಹೇಳುವಿರಾದರೆ ಹಠಮಾರಿಗಳಲ್ಲವೇಕೆ? ಆದುದರಿಂದ ಕ್ರೈಸ್ತರ ಮಾತುಗಳು ಕೇವಲ ಹಠ ಹಾಗೂ ಪುಡುಗಾಟದಂತಿವೆ. ॥೬೮॥

೬೯. ಆಗ ದೆವ್ವ ಹಿಡಿದ ಮನುಷ್ಯರು ಸ್ಮಶಾನದೊಳಗಿಂದ ಹೊರಟು ಆತನೆದುರಿಗೆ ಬಂದರು. ಇಲ್ಲಿನವರೆಗೆ ಅವರು ಬಹು

ಉಗ್ರರಾಗಿದ್ದುದರಿಂದ ಆ ದಾರಿಯಲ್ಲಿ ಯಾವನೂ ತಿರುಗಾಡಲಾರದವನಾಗಿದ್ದನು. ನೋಡಿ, ಅವರು ಗಟ್ಟಿಯಾಗಿ "ದೇವರ ಮಗ ಏಸುವೇ! ನಮಗೆ ನಮ್ಮಿಂದ ಏನು ಕೆಲಸ? ಕಾಲ ಬರುವದಕ್ಕಿಂತ ಮುಂಚೆ ನಮ್ಮನ್ನು ಕಾಡುವದಕ್ಕೆ, ಇಲ್ಲಿಗೆ ಬಂದಿದ್ದೀರಾ?" ಎಂದು ಕೂಗಿದರು. ಆಗ ಭೂತಗಳು ಅವನಲ್ಲಿ ಅರಿಕೆ ಮಾಡಿಕೊಂಡು "ನೀವು ನಮ್ಮನ್ನು ಓಡಿಸುವಿರಾದರೆ, ನಮ್ಮನ್ನು ಹಂದಿಗಳ ಹಿಂಡಿನಲ್ಲಿ ಅಡಗಲು ಬಿಡಿರಿ" ಎಂದವು. ಅವನು "ಹೋಗಿರಿ" ಎಂದನು. ಆವು ಹೊರಗೆ ಬಂದು ಹಂದಿಗಳೊಳಗೆ ಹಿಂಡಿನಲ್ಲಿ ಹೊಕ್ಕವು. ನೋಡಿರಿ, ಹಂದಿಗಳ ಆ ಗುಂಪೆಲ್ಲಾ ಕಡಿದಾದ ಸ್ಥಳದಿಂದ ಸಮುದ್ರದೊಳಗೆ ಓಡಿಹೋಯಿತು. ಮತ್ತು ನೀರಿನಲ್ಲಿ ಮುಳುಗಿ ಸತ್ತುಹೋಯಿತು.

[ಮತ್ತಾಯ ೮, ೨೮-೩೨]

ಸಮೀಕ್ಷಕ—ಸ್ವಲ್ಪ ವಿಚಾರ ಮಾಡಿದರೂ ಸಹ ಈ ಮಾತುಗಳೆಲ್ಲ ಸುಳ್ಳು. ಏಕೆಂದರೆ—ಸತ್ತವನುಷ್ಯನೆಂದಿಗೂ ಸಮಾಧಿಸ್ಥಾನದಿಂದ ಎದ್ದು ಬರಲಾರನು. ಅವು ಯಾರಮೇಲೂ ಆವೇಶವಾಗುವುದಿಲ್ಲ; ಸಂವಾದವನ್ನೂ ಮಾಡುವುದಿಲ್ಲ. ಇವೆಲ್ಲಾ ಅಜ್ಞಾನಿಗಳ ಮಾತುಗಳು. ಮಹಾಕಾಢಾಡಿಗಳಾದವರೇ ಇಂತಹ ಮಾತುಗಳ ಮೇಲೆ ನಂಬಿಕೆಯಿಡುತ್ತಾರೆ. ಮತ್ತು ಆ ಹಂದಿಗಳನ್ನು ಕೊಲ್ಲಿಸಿದನು; ಹಂದಿಗಳ ಒಡೆಯರಿಗೆ ಹಾನಿಯನ್ನು ತಂದೊಡ್ಡಿದ ಪಾಪವು ಯೇಸುವಿಗೆ ಬಂದಿರಬೇಕು. ಮತ್ತು ಯೇಸುವು ಪಾಪಗಳನ್ನು ಕ್ಷಮಿಸುವವನು ಮತ್ತು ಪವಿತ್ರಗೊಳಿಸುವವನು ಎಂದು ಕ್ರೈಸ್ತರು ನಂಬುತ್ತಾರೆ; ಹಾಗಿದ್ದರೆ—ಆ ದೆವ್ವಗಳನ್ನು ಪವಿತ್ರಗೊಳಿಸಲಾರದಾದನೇತಕ್ಕೆ? ಮತ್ತು ಹಂದಿಗಳ ಒಡೆಯರ ನಷ್ಟವನ್ನು ಏಕೆ ತುಂಬಿಕೊಡಲಿಲ್ಲ? ಈಗಿನ ಸುಶಿಕ್ಷಿತರಾದ ಕ್ರೈಸ್ತ ಆಂಗ್ಲರುಗಳು ಈ ಬುರುಡೆಗಳನ್ನೂ ಒಪ್ಪುತ್ತಿರಬಹುದೇ? ಒಪ್ಪುತ್ತಾರಾದರೆ ಭ್ರಮಜಾಲದಲ್ಲಿ ಬಿದ್ದಿದ್ದಾರೆ. ||೬೯||

೭೦. ನೋಡಿ, ಹಾಸಿಗೆಯ ಮೇಲೆ ಬಿದ್ದುಕೊಂಡಿರುವ ಒಬ್ಬ ಪಾರ್ಶ್ವವಾಯುವಿನವನನ್ನು ಆತನ ಬಳಿಗೆ ತಂದರು. ಮತ್ತು ಯೇಸು ಅವರ ನಂಬಿಕೆಯನ್ನು ನೋಡಿ, ಪಾರ್ಶ್ವವಾಯುವಿನವನಿಗೆ—"ಮಗನೆ! ಧೈರ್ಯವಾಗಿರು, ನಿನ್ನ ಪಾಪಗಳು ಕ್ಷಮಿಸಲ್ಪಟ್ಟವೆ.

ನಾನು ಧಾರ್ಮಿಕರನ್ನಲ್ಲ; ಪಾಪಿಗಳನ್ನು ಪಶ್ಚಾತ್ತಾಪಕ್ಕಾಗಿ ಕರೆಯುವುದಕ್ಕೆ ಬಂದಿದ್ದೇನೆ" ಅಂದನು. [ಮತ್ತಾಯ. ೯। ೨, ೧೩]

ಸಮೀಕ್ಷಕ—ಇದೂ ಹಿಂದೆ ಬರೆದು ಬಂದಂತೆಯೇ ಅಸಂಭವವಾದ ಮಾತು ಮತ್ತು ಪಾಪಗಳನ್ನು ಕ್ಷಮಿಸುವ ವಿಷಯವು ಕೇವಲ ಅಬೋಧ ಜನರಿಗೆ ಆಸೆತೋರಿಸಿ ಸಿಕ್ಕಿಸಿಕೊಳ್ಳುವುದು ಮಾತ್ರವಾಗಿದೆ. ಒಬ್ಬನು ಸೇವಿಸಿದ ಮದ್ಯದ ಹಾಗೂ ಭಂಗಿಯ ಮತ್ತು ತಿಂದ ಅಫೀಮಿನ ಅಮಲು ಇನ್ನೊಬ್ಬನಿಗೆ ಹೇಗೆ ಏರುವದಿಲ್ಲವೋ, ಹಾಗೆಯೇ ಯಾವನೋ ಮಾಡಿದ ಪಾಪವು ಯಾವನ ಹತ್ತಿರವೋ ಹೋಗಲಾರದು. ಆದರೆ ಮಾಡಿದವನೇ ಅದನ್ನು ಉಣ್ಣುವನು. ಇದೇ ದೇವರ ನ್ಯಾಯವು. ಒಬ್ಬನು ಮಾಡಿದ ಪಾಪಪುಣ್ಯಗಳು ಇನ್ನೊಬ್ಬನಿಗೆ ಸಿಕ್ಕುವುದಾದರೆ, ಅಥವಾ ನ್ಯಾಯಾಧೀಶನು ತನ್ನ ಮೇಲೆ ತೆಗೆದುಕೊಳ್ಳುವುದಾದರೆ, ಅಥವಾ ಮಾಡಿದವನಿಗೇ ದೇವರು ಯಥಾಯೋಗ್ಯವಾದ ಫಲವನ್ನು ಕೊಡದಿದ್ದರೆ ಅವನು ಅನ್ಯಾಯಕಾರಿಯಾಗಿ ಹೋಗುವನು. ನೋಡಿರಿ, ಧರ್ಮವೇ ಕಲ್ಯಾಣಕಾರಿಯಾಗಿದೆ; ಯೇಸು ಅಥವಾ ಬೇರೆ ಯಾರೂ ಅಲ್ಲ. ಮತ್ತು ಧರ್ಮಾತ್ಮರಿಗೆ ಯೇಸು ಮೊದಲಾದವರ ಆವಶ್ಯಕತೆಯೇ ಸ್ವಲ್ಪವೂ ಇರುವುದಿಲ್ಲ; ಮತ್ತು ಪಾಪಿಗಳಿಗೂ ಇರುವುದಿಲ್ಲ, ಏಕೆಂದರೆ ಯಾವನ ಪಾಪವೂ ತೊಲಗುವುದಿಲ್ಲ. ॥೭೦॥

೭೧. ಯೇಸುವು ತನ್ನ ಹನ್ನೆರಡು ಮಂದಿ ಶಿಷ್ಯರನ್ನು ಹತ್ತಿರಕ್ಕೆ ಕರೆದು ಅಶುದ್ಧಭೂತಗಳನ್ನು ಬಿಡಿಸುವುದಕ್ಕೂ, ಪ್ರತಿಯೊಂದು ರೋಗ ಹಾಗೂ ಪ್ರತಿಯೊಂದು ಬೇನೆಯನ್ನೂ ವಾಸಿಮಾಡುವದಕ್ಕೂ ಅವರಿಗೆ ಅಧಿಕಾರ ಕೊಟ್ಟನು. ಮಾತಾಡುವವರಂತೂ ನೀವಲ್ಲ; ಆದರೆ ನಿಮ್ಮ ತಂದೆಯ ಆತ್ಮನೇ ನಿಮ್ಮಲ್ಲಿ ಮಾತಾಡುತ್ತದೆ. ನಾನು ಭೂಲೋಕದ ಮೇಲೆ ಒಗ್ಗಟ್ಟು ಮಾಡುವುದಕ್ಕೆ ಬಂದಿದ್ದೇನೆಂದು ತಿಳಿಯಬೇಡಿರಿ; ಆದರೆ ಖಡ್ಗವನ್ನು ಬೀಸಿಸಲು ಬಂದಿದ್ದೇನೆ. ನಾನು ಮಾನವನನ್ನು ಅವನ ತಂದೆಯಿಂದಲೂ, ಮಗಳನ್ನು ಅವಳ ತಾಯಿಯಿಂದಲೂ ಮತ್ತು ಸೊಸೆಯನ್ನು ಅವಳ

ಅತ್ತೆಯಿಂದಲೂ ಬೇರೆಮಾಡಲು ಬಂದಿದ್ದೇನೆ. ಮನುಷ್ಯನ ಮನೆಯ ಜನರೇ ಅವನ ವೈರಿಗಳಾಗುವರು.

[ಮತ್ತಾಯ. ೧೦। ೧, ೨೦, ೩೪-೩೬]

ಸಮೀಕ್ಷಕ—ಯಾರಲ್ಲಿ ಒಬ್ಬನು ೩೦ ರೂಪಾಯಿಗಳ ಆಶೆಗೆ ಯೇಸುವನ್ನು ಸೆರೆಹಿಡಿಸುವನೋ ಮತ್ತು ಇತರರು ವಿಚಲಿತರಾಗಿ ಬೇರೆ ಬೇರೆ ಓಡಿಹೋಗುವರೋ, ಅವರೇ ಈ ಶಿಷ್ಯರು. ಭೂತಗಳ ಆಗಮನ ಮತ್ತು ಉಚ್ಚಾಟನ ಈ ಮಾತುಗಳು ವಿದ್ಯೆಗೇ ವಿರುದ್ಧವಾಗಿರುವಾಗ, ಔಷಧ ಅಥವಾ ಪಥ್ಯವಿಲ್ಲದೆ ರೋಗಗಳು ವಾಸಿಯಾಗುವುದು ಸೃಷ್ಟಿಕ್ರಮದಲ್ಲಿ ಅಸಂಭವವಾಗಿರುವಾಗ, ಇಂತಹ ಮಾತುಗಳನ್ನು ಒಪ್ಪುವುದು ಅಜ್ಞಾನಿಗಳ ಕೆಲಸವಾಗಿರುತ್ತದೆ. ಜೀವಾತ್ಮರು ಮಾತನಾಡುವವರಾಗಿಲ್ಲವಾದರೆ, ಪರಮಾತ್ಮನು ಮಾತನಾಡುವವನಾಗಿದ್ದರೆ, ಜೀವಾತ್ಮರೇನು ಕೆಲಸ ಮಾಡುತ್ತಾರೆ? ಮತ್ತು ಸುಳ್ಳು ಅಥವಾ ನಿಜಗಳನ್ನು ಹೇಳುವುದರ ಫಲವಾದ ಸುಖ ಅಥವಾ ದುಃಖವನ್ನು ದೇವರೇ ಅನುಭವಿಸುತ್ತಿರಬಹುದು! ಇದೂ ಒಂದು ಸುಳ್ಳು ಮಾತು. ಮತ್ತು ಯೇಸುವು ಒಡಕು ಹುಟ್ಟಿಸುವುದಕ್ಕೆ ಮತ್ತು ಜಗಳವಾಡಿಸುವುದಕ್ಕೆ ಬಂದಿದ್ದನಂತೆ! ಆ ಕಲಹವೇ ಇಂದೂ ಜನರಲ್ಲಿ ನಡೆಯುತ್ತಿದೆ. ಒಡಕು ಹುಟ್ಟಿಸುವುದರಿಂದ ಜನರಿಗೆ ಸರ್ವಥಾ ದುಃಖವುಂಟಾಗುತ್ತದೆ ಮತ್ತು ಕ್ರೈಸ್ತರು ಇದನ್ನೇ ಗುರುಮಂತ್ರವೆಂದು ತಿಳಿದಿರಬಹುದು. ಇದೆಷ್ಟು ದೊಡ್ಡ ಕೆಟ್ಟ ವಿಷಯ. ಏಕೆಂದರೆ—ಪರಸ್ಪರ ಒಡಕನ್ನು ಯೇಸುವೇ ಒಳ್ಳೆಯದೆಂದು ತಿಳಿದನೆಂದಮೇಲೆ, ಇವರೇಕೆ ಒಳ್ಳೆಯದೆಂದು ಭಾವಿಸದಿದ್ದಾರು? ಮನೆಯ ಜನರನ್ನೇ ಮನೆಯ ಜನರ ಶತ್ರುಗಳನ್ನಾಗಿ ಮಾಡುವುದು ಯೇಸುವಿನ ಕೆಲಸವೇ ಆಗಿರಬಹುದು; ಶ್ರೇಷ್ಠಪುರುಷನ ಕೆಲಸವಲ್ಲ. ॥೫೧॥

೨೨. ಆಗ ಯೇಸು—"ನಿಮ್ಮಲ್ಲಿ ಎಷ್ಟು ರೊಟ್ಟಿಗಳಿವೆ" ಎಂದು ಅವರನ್ನು ಕೇಳಿದನು. ಅವರು—"ಏಳು ಮತ್ತು ಸಣ್ಣ ಮೀನುಗಳು" ಅಂದರು. ಆಗ ಆತನು ಜನರಿಗೆ ನೆಲದ ಮೇಲೆ ಕುಳಿತುಕೊಳ್ಳಲು ಅಪ್ಪಣೆಕೊಟ್ಟನು; ಆಗ ಆತನು ಆ ಏಳು ರೊಟ್ಟಿಗಳನ್ನೂ ಮತ್ತು ಮೀನುಗಳನ್ನೂ ಧನ್ಯವೆಂದು ಭಾವಿಸಿ ಮುರಿದನು-

ಮತ್ತು ತನ್ನ ಶಿಷ್ಯರಿಗೆ ಕೊಟ್ಟನು. ಮತ್ತು ಶಿಷ್ಯರು ಜನರಿಗೆ ಕೊಟ್ಟರು. ಅದನ್ನು ಎಲ್ಲರೂ ಊಟಮಾಡಿ ತೃಪ್ತರಾದರು. ಮತ್ತು ಮಿಕ್ಕ ತುಂಡುಗಳಿಂದ ತುಂಬಿದ ಏಳು ಬುಟ್ಟಿಗಳನ್ನು ಎತ್ತಿದರು. ಊಟಮಾಡಿದವರು ಹೆಂಗಸರು ಮಕ್ಕಳನ್ನು ಬಿಟ್ಟು ನಾಲ್ಕುಸಾವಿರ ಮಂದಿ ಪುರುಷರಿದ್ದರು. [ಮತ್ತಾಯ. ೧೫! ೩೪-೩೮]

ಸಮಿಾಕ್ಷಕ—ಈಗ ನೋಡಿರಿ! ಇದು ಇಂದಿನ ಸುಳ್ಳು ಸಿದ್ಧಪುರುಷರ ಮತ್ತು ಇಂದ್ರಜಾಲಿಕರೇ ಮೊದಲಾದವರಂತೆ ಮೋಸದಮಾತಲ್ಲವೆ? ಆ ರೊಟ್ಟಿಗಳಲ್ಲಿ ಇತರ ರೊಟ್ಟಿಗಳು ಎಲ್ಲಿಂದ ಬಂದವು? ಯೇಸುವಿನಲ್ಲಿ ಇಂತಹ ಸಿದ್ಧಿಗಳಿದ್ದಿದ್ದರೆ ಅವನು ಹಸಿದು ಅತ್ತಿಯ ಹಣ್ಣುಗಳನ್ನು ತಿನ್ನುವುದಕ್ಕಾಗಿ ಅಲೆಯುತ್ತಿದ್ದನೇಕೆ? ತನಗಾಗಿ ಮಣ್ಣು, ನೀರು, ಕಲ್ಲು ಮೊದಲಾದುವುಗಳಿಂದ ಪರಮಾನ್ನವನ್ನೂ, ರೊಟ್ಟಿಯನ್ನೂ ಮಾಡಿಕೊಳ್ಳಲ್ಲಿಲ್ಲವೇಕೆ? ಈ ಎಲ್ಲಾ ಮಾತುವಳೂ ಬಾಲಕರ ಆಟದವಾಗಿದೆ. ಹೀಗೆ ಎಷ್ಟೋ ಜನ ಸಾಧು-ವೈರಾಗಿಗಳು ಇಂತಹ ಛಲದ ಮಾತುಗಳನ್ನು ಆಡಿ, ಅಬೋಧ ಜನರನ್ನು ವಂಚಿಸುತ್ತಾರೋ, ಹಾಗೆಯೇ ಇವೂ ಆಗಿವೆ. ॥೭೨॥

೭೩—ಮತ್ತು ಆಗ ಆತನು ಪ್ರತಿಯೊಬ್ಬ ಮಾನವನಿಗೂ, ಅವನ ಕಾರ್ಯಕ್ಕೆ ಅನುಸಾರ ಫಲವನ್ನು ಕೊಡುವನು.

[ಮತ್ತಾಯ. ೧೬।೨೭]

ಸಮಿಾಕ್ಷಕ—ಕರ್ಮಾನುಸಾರವಾದ ಫಲವು ಕೊಡುವುದಾದರೆ ಕ್ರೈಸ್ತರು ವಾಸವು ಕ್ಷಮೆಯಾಗುವುದೆಂದು ಉಪದೇಶಿಸುವುದು ವ್ಯರ್ಥವು. ಮತ್ತು ಅದು ನಿಜವಾದರೆ ಇದು ಸುಳ್ಳಾಗುವುದು. ಕ್ಷಮ್ಯವಾದುವುಗಳು ಕ್ಷಮಿಸಲ್ಪಡುವುವು ಮತ್ತು ಕ್ಷಮ್ಯವಲ್ಲದವು ಕ್ಷಮಿಸಲ್ಪಡುವುದಿಲ್ಲವೆಂದು ಯಾರಾದರೂ ಹೇಳುವುದಾದರೆ ಇದೂ ಸರಿಯಲ್ಲ. ಏಕೆಂದರೆ ಎಲ್ಲಾ ಕರ್ಮಗಳ ಫಲವನ್ನೂ ಯಥಾಯೋಗ್ಯವಾಗಿ ಕೊಡುವುದರಿಂದಲೇ ನ್ಯಾಯವೂ ಪೂರ್ಣದಯೆಯೂ ಸಿದ್ಧವಾಗುತ್ತದೆ. ॥೭೩॥

೭೪—ಎಲೈ ನಂಬಿಕೆಯಿಲ್ಲದ ಮತ್ತು ಹಠಮಾರಿಗಳಾದ ಜನರೇ! ನಾನು ನಿಮಗೆ ಸತ್ಯವಾಗಿ ಹೇಳುತ್ತೇನೆ ಸಾಸಿವೆಕಾಳಿನಷ್ಟು ನಂಬಿಕೆ

ನಿಮಗೆ ಇರುವದಾದರೆ ನೀವು ಈ ಬೆಟ್ಟಕ್ಕೆ–' ಇಲ್ಲಿಂದ ಅಲ್ಲಿಗೆ ಹೋಗು ' ಎಂದು ಹೇಳಿದರೆ ಅದು ಹೊರಟು ಹೋಗುವದು. ಮತ್ತು ನಿಮಗೆ ಅಸಾಧ್ಯವಾದ ಕಾರ್ಯವು ಯಾವುದೂ ಇರುವುದಿಲ್ಲ.

[ಮತ್ತಾಯ. ೧೭।೧೭, ೩೦]

ಸಮೀಕ್ಷಕ—" ಬನ್ನಿ ! ನಮ್ಮಮತದಲ್ಲಿ ಪಾಪವನ್ನು ಮನ್ನಿಸಿಕೊಳ್ಳಿರಿ ; ಮುಕ್ತಿಯನ್ನು ಪಡೆಯಿರಿ " ಎಂದು ಮೊದಲಾಗಿ ಕ್ರೈಸ್ತರು ಈಗ ಉಪದೇಶಿಸುತ್ತಾ ತಿರುಗುವುದೆಲ್ಲಾ ಸುಳ್ಳುಮಾತು. ಏಕೆಂದರೆ—ಯೇಸುವಿನಲ್ಲಿ ಪಾಪವನ್ನು ಬಿಡಿಸುವ, ವಿಶ್ವಾಸವನ್ನು ಹುಟ್ಟಿಸುವ ಮತ್ತು ಪವಿತ್ರಗೊಳಿಸುವ ಸಾಮರ್ಥ್ಯವಿದ್ದಿದ್ದರೆ, ತನ್ನ ಶಿಷ್ಯರ ಆತ್ಮಗಳನ್ನು ನಿಷ್ಪಾಪವಾಗಿಯೂ ವಿಶ್ವಾಸಿಯಾಗಿಯೂ, ಪವಿತ್ರವಾಗಿಯೂ ಏಕೆ ಮಾಡುತ್ತಿರಲಿಲ್ಲ? ಯೇಸುವು ತನ್ನ ಸಂಗಡವೇ ತಿರುಗಾಡುವವರನ್ನೇ ಶುದ್ಧರನ್ನಾಗಿಯೂ ವಿಶ್ವಾಸವುಳ್ಳವರನ್ನಾಗಿಯೂ ಮಾಡಿ, ಕಲ್ಯಾಣ ಮಾಡಲಾರದೇ ಹೋದನಂತೆ ಎಂದಮೇಲೆ, ಅವನು ಸತ್ತ ಮೇಲೆ ಎಲ್ಲಿದ್ದಾನೋ ಗೊತ್ತಿಲ್ಲ; ಈಗ ಯಾವನನ್ನೂ ಪವಿತ್ರಗೊಳಿಸಲಾರನು. ಯೇಸುವಿನ ಶಿಷ್ಯರು ಸಾಸಿವೆ ಕಾಳಿನಷ್ಟೂ ನಂಬಿಕೆಯಿಲ್ಲದವರಾಗಿದ್ದರು. ಅವರೇ ಈ ಸುಸಮಾಚಾರಗ್ರಂಥವನ್ನು ಬರೆದಿದ್ದಾರೆ ಎಂದಮೇಲೆ ಇದನ್ನು ಪ್ರಮಾಣವೆನ್ನಲಾಗುವುದಿಲ್ಲ. ಏಕೆಂದರೆ, ನಂಬಿಕೆಯಿಲ್ಲದವರೂ, ಅಪವಿತ್ರಾತ್ಮರೂ, ಅಧರ್ಮಿಗಳೂ ಆದ ಜನರ ಬರವಣಿಗೆಯ ದೇಲೆ ವಿಶ್ವಾಸವಿಡುವುದು ಕಲ್ಯಾಣದ ಇಚ್ಛೆಯುಳ್ಳ ಮಾನವರ ಕಾರ್ಯವಲ್ಲ ಮತ್ತು ಯೇಸುವಿನ ವಚನವು ನಿಜವಾಗಿದ್ದರೆ ಯಾವೊಬ್ಬ ಕ್ರೈಸ್ತನಿಗೂ ಒಂದು ಸಾಸಿವೆ ಕಾಳಿನಷ್ಟು ನಂಬಿಕೆ ಅಂದರೆ ಶ್ರದ್ಧೆಯಿಲ್ಲವೆಂಬುದೂ ಕೂಡ ಇದರಿಂದ ಸಿದ್ಧವಾಗಬಲ್ಲದು. " ಇಲ್ಲ, ನಮಗೆ ಪೂರ್ಣ ಅಥವಾ ಸ್ವಲ್ಪ ನಂಬಿಕೆಯಿದೆ " ಎಂದು ಯಾವನಾದರೂ ನುಡಿದರೆ ಅವನಿಗೆ—" ನೀವು ಈ ಪರ್ವತವನ್ನು ಈ ದಾರಿಯಿಂದ ಸರಿಸಿಬಿಡಿರಿ " ಎನ್ನಬೇಕು. ಅವರ ಸರಿಸುವಿಕೆಯಿಂದ ಸರಿದುಹೋದರೂ ಸಹ ಪೂರ್ಣವಾದ ನಂಬಿಕೆಯಿಲ್ಲ; ಆದರೆ ಒಂದು ಸಾಸಿವೆಯ ಕಾಳಿಗೆ ಸಮನಾಗಿದೆ. ಸರಿಸಲಾಗದಿದ್ದರೆ, ನಂಬಿಕೆ, ಶ್ರದ್ಧೆ ಅಂದರೆ ಧರ್ಮದ ಒಂದು ಹನಿಯೂ ಕೂಡ ಕ್ರೈಸ್ತರಲಿಲ್ಲವೆಂದು

ತಿಳಿಯಿರಿ. "ಇಲ್ಲಿ ಅಭಿಮಾನ ಮೊದಲಾದ ದೋಷಗಳ ಹೆಸರು ಪರ್ವತ" ಎಂದು ಹೇಳಿದರೆ ಅದೂ ಸರಿಯಲ್ಲ. ಏಕೆಂದರೆ, ಹಾಗಿದ್ದ ಪಕ್ಷದಲ್ಲಿ ಶವಗಳು, ಕುರುಡರು, ಕುಷ್ಠರೋಗಿಗಳು ಮತ್ತು ಭೂತ ಗ್ರಸ್ಥರು ಇವರನ್ನು ಸರಿಗೊಳಿಸಿದನು—ಎಂದರೆ ಸೋಮಾರಿಗಳೂ, ಅಜ್ಞಾನಿಗಳೂ, ವಿಷಯಿಗಳೂ, ಭ್ರಾಂತರೂ ಆದವರಿಗೆ ಜ್ಞಾನವಿತ್ತು ಅವರನ್ನು ಜಾಗ್ರತರನ್ನಾಗಿಯೂ, ಕುಶಲರನ್ನಾಗಿಯೂ ಮಾಡಿರ ಬಹುದು. ಹೀಗೆ ಒಪ್ಪಿದರೂ ಕೂಡ ಸರಿಯಲ್ಲ; ಏಕೆಂದರೆ—ಹಾಗಾದಪಕ್ಷದಲ್ಲಿ ತನ್ನ ಶಿಷ್ಯರನ್ನೇ ಹಾಗೆ ಮಾಡಲೇಕೆ ಸಾಧ್ಯವಾಗು ತ್ತಿರಲಿಲ್ಲ? ಆದುದರಿಂದ ಅಸಂಭವ ಮಾತುಗಳ ಕಥನವು ಯೇಸುವಿನ ಅಜ್ಞಾನತೆಯನ್ನು ಬೆಳಕಿಗೆ ತರುತ್ತದೆ. ಒಳ್ಳೆಯದು; ಏಸುವಿನಲ್ಲಿ ಸ್ವಲ್ಪವಾದರೂ ವಿದ್ಯೆಯಿದ್ದಿದ್ದರೆ ಇಂತಹ ಕಾಡಾಡಿತನದ ತಲೆಬುಡ ವಿಲ್ಲದ ಮಾತುಗಳನ್ನೇಕೆ ಆಡುತ್ತಿದ್ದನು? ಆದರೂ (ನಿರಸ್ತಪಾದಪೇ ದೇಶೇ ಏರಂಡೋಽಪಿ ದ್ರುಮಾಯತೇ) ವೃಕ್ಷವೇ ಇಲ್ಲದ ದೇಶದಲ್ಲಿ ಹರ ಳಿನ ಗಿಡವೇ ಎಲ್ಲಕ್ಕಿಂತ ದೊಡ್ಡದು ಮತ್ತು ಒಳ್ಳೆಯದು ಎಂದು ಎಣಿಸ ಲ್ಪಡುವಂತೆ ಮಹಾ ಕಾಡಾಡಿಗಳಾದ ಅವಿದ್ಯಾಂಸರ ದೇಶದಲ್ಲಿ ಯೇಸುವು ಇರುವುದೂ ಸರಿಯಾಗಿತ್ತು. ಆದರೆ ಈ ಕಾಲದಲ್ಲಿ ಯೇಸು ವಿನ ಗಣನೆಯಾದರೂ ಏನಿರಬಹುದು? ||೭೪||

೭೫. ನಾನು ನಿಮಗೆ ನಿಜ ಹೇಳುತ್ತೇನೆ—"ನೀವು ಮನ ವನ್ನು ತಿರುಗಿಸದಿದ್ದರೆ ಮತ್ತು ಬಾಲಕರಂತೆ ಆಗಿ ಹೋಗದಿದ್ದರೆ, ಸ್ವರ್ಗದ ರಾಜ್ಯದಲ್ಲಿ ಪ್ರವೇಶಮಾಡಲಾಗುವುದಿಲ್ಲ."

[ಮತ್ತಾಯ ೧೮, ೩]

ಸಮೀಕ್ಷೆ—ತಮ್ಮಿಚ್ಛೆಯಂತೆ ಮನಸ್ಸನ್ನು ತಿರುಗಿಸುವುದು ಸ್ವರ್ಗಕ್ಕೆ ಕಾರಣವೂ ಮತ್ತು ತಿರುಗಿಸದಿರುವುದು ನರಕಕ್ಕೆ ಕಾರಣವೂ ಆಗಿದ್ದರೆ, ಯಾವನೂ ಯಾವನ ಪಾಪಪುಣ್ಯಗಳನ್ನೂ ಎಂದಿಗೂ ತೆಗೆದುಕೊಳ್ಳಲಾರನೆಂದು ಸಿದ್ಧವಾಗುತ್ತದೆ. ಮಕ್ಕಳಂತಾಗಬೇಕೆನ್ನುವ ಲೇಖನದಿಂದ ಯೇಸುವಿನ ಮಾತುಗಳ ವಿದ್ಯೆಗೂ ಸೃಷ್ಟಿಕ್ರಮಕ್ಕೂ ಬಹಳವಾಗಿ ವಿರುದ್ಧವಾಗಿದ್ದವೆಂಬುದು ವಿದಿತವಾಗುತ್ತದೆ. ಜನರು

ನನ್ನ ಮಾತನ್ನು ಮಕ್ಕಳಂತೆ ಒಪ್ಪಿಕೊಂಡುಬಿಡಲಿ; ಸ್ವಲ್ಪವೂ ಪ್ರಶ್ನಿಸದಿರಲಿ. ಯೋಚಿಸದಿರಲಿ; ಕಣ್ಣುಮುಚ್ಚಿಕೊಂಡು ಒಪ್ಪಿಕೊಂಡುಬಿಡಲಿ—ಎಂಬುದೂ ಸಹ ಅವನ ಮನಸ್ಸಿನಲ್ಲಿತ್ತು. ಬಹು ಜನ ಕ್ರೈಸ್ತರ ಕಾರ್ಯಗಳು ಬಾಲಬುದ್ಧಿಯವರದಂತೆ ಇವೆ. ಇಲ್ಲದಿದ್ದರೆ ಇಂತಹ ಯುಕ್ತಿ ಹಾಗೂ ವಿಜ್ಞೆಗೆ ವಿರುದ್ಧವಾದ ಮಾತುಗಳನ್ನು ಏಕೆ ಒಪ್ಪುತ್ತಿದ್ದರು? ಯೇಸುವು ತಾನು ವಿದ್ಯಾಹೀನನೂ, ಬಾಲ ಬುದ್ಧಿಯೂ ಆಗಿಲ್ಲದಿದ್ದರೆ ಇತರರಿಗೆ ಬಾಲಕರಂತಾಗಲು ಉಪದೇಶಿಸುತ್ತಿದ್ದನೇಕೆ? ಎಂಬುದೂ ಸಿದ್ಧವಾಯಿತು. ಏಕೆಂದರೆ--ಯಾವನು ಯಾವ ರೀತಿಯಲ್ಲಿರುತ್ತಾನೋ ಅವನು ಬೇರೆ ಯವರನ್ನು ಅದೇ ರೀತಿಯಾಗಿ ಮಾಡಬಯಸುತ್ತಾನೆ. ॥೭೫॥

೭೬. ನಾನು ನಿನುಗೆ ಸತ್ಯವಾಗಿ ಹೇಳುತ್ತೇನೆ—ಐಶ್ವರ್ಯವಂತರಿಗೆ ಸ್ವರ್ಗರಾಜ್ಯದಲ್ಲಿ ಪ್ರವೇಶಿಸುವುದು ಕಷ್ಟವಾಗುವುದು. ಐಶ್ವರ್ಯವಂತನು ದೇವರ ರಾಜ್ಯದಲ್ಲಿ ಪ್ರವೇಶಿಸುವುದಕ್ಕಿಂತ ಒಂಟೆಯು ಸೂಜಿಯ ಕಣ್ಣಿನಲ್ಲಿ ನುಗ್ಗುವುದು ಸುಲಭವೆಂದು ನಿಮುಗೆ ಪುನಃ ಹೇಳುತ್ತೇನೆ. [ಮತ್ತಾಯ ೧೯। ೨೩-೨೪]

ಸಮಾಕ್ಷೇಪ—ಯೇಸುವು ದರಿದ್ರನಾಗಿದ್ದನೆಂದು ಇದರಿಂದ ಸಿದ್ಧವಾಗುತ್ತದೆ. ಧನವಂತರು ಅವನಿಗೆ ಗೌರವ ಕೊಡದೇ ಇದ್ದಿರಬಹುದು. ಆದುದರಿಂದ ಇದನ್ನು ಬರೆದಿರಬಹುದು. ಆದರೆ-ಈ ಮಾತು ಸತ್ಯವಲ್ಲ. ಏಕೆಂದರೆ—ಒಳ್ಳೆಯವರು, ಕೆಟ್ಟವರು, ಧನಾಢ್ಯರಲ್ಲಿಯೂ ಇರುತ್ತಾರೆ; ದರಿದ್ರರಲ್ಲಿಯೂ ಇರುತ್ತಾರೆ. ಒಳ್ಳೆಯ ಕಾರ್ಯಮಾಡುವನನು ಒಳ್ಳೆಯ ಫಲವನ್ನೂ ಕೆಟ್ಟದ್ದನ್ನು ಮಾಡುವವನು ಕೆಟ್ಟದನ್ನೂ ಪಡೆಯುತ್ತಾನೆ. ಮತ್ತು ಯೇಸುವು ದೇವರ ರಾಜ್ಯವು ಯಾವುದೋ ಒಂದು ದೇಶದಲ್ಲಿದೆ; ಸರ್ವತ್ರವಲ್ಲವೆಂದು ತಿಳಿಯುತ್ತಿದ್ದನೆಂಬುದೂ ಇದರಿಂದ ತಿಳಿದುಬರುತ್ತದೆ. ಹೀಗಿದ್ದರೆ, ಅವನು ದೇವರೇ ಅಲ್ಲ. ದೇವರಾಗಿರುವವನ ರಾಜ್ಯವು ಎಲ್ಲೆಡೆಯೂ ಇದೆ. ಎಂದ ಮೇಲೆ ಅದರಲ್ಲಿ ಪ್ರವೇಶಮಾಡುವವನು ಅಥವಾ ಮಾಡುವುದಿಲ್ಲ ಎಂದು ಹೇಳುವುದು ಕೇವಲ ಅವಿದ್ಯೆಯ ವಚನವು. ಇದರಿಂದ ಈ ಪ್ರಶ್ನೆ ಕೂಡ ಉದ್ಭವಿಸುತ್ತದೆ:—ಎಷ್ಟು ಜನ ಕ್ರೈಸ್ತರು ಧನಾಢ್ಯರಾಗಿರು

ತ್ತಾರೋ, ಅವರೆಲ್ಲಾ ನರಕಕ್ಕೇ ಹೋಗುವರೇ? ದರಿದ್ರರೆಲ್ಲರೂ ಸ್ವರ್ಗವನ್ನೇ ಪ್ರವೇಶಿಸುವರೇ? ಧನಿಕರ ಹತ್ತಿರವಿರುವಷ್ಟು ಸಾಧನಗಳು ದರಿದ್ರರ ಹತ್ತಿರ ಇರುವುದಿಲ್ಲ; ಧನಾಢ್ಯರು ವಿವೇಕದಿಂದ ಧರ್ಮಮಾರ್ಗದಲ್ಲಿ ವ್ಯಯಮಾಡಿದರೆ, ದರಿದ್ರರು ನೀಚಗತಿಯಲ್ಲೇ ಬಿದ್ದಿದ್ದಾರು; ಮತ್ತು ಧನಿಕರು ಉತ್ತಮ ಗತಿಯನ್ನು ಹೊಂದಬಲ್ಲರು ಎಂಬ ವಿಷಯವನ್ನು ಯೇಸುವು ಸ್ವಲ್ಪವಾದರೂ ಯೋಚಿಸಿದ್ದರಾಗಿತ್ತು. ॥೭೬॥

೭೭. ಯೇಸುವು ಅವರಿಗೆ—ನಿಮಗೆ ಸತ್ಯವಾಗಿ ಹೇಳುತ್ತೇನೆ-ಹೊಸ ಸೃಷ್ಟಿಯಲ್ಲಿ ಮನುಷ್ಯಕುಮಾರನು ತನ್ನ ಐಶ್ವರ್ಯದ ಸಿಂಹಾಸನದ ಮೇಲೆ ಕೂತುಕೊಳ್ಳುವಾಗ, ನನ್ನನ್ನು ಹಿಂಬಾಲಿಸಿರುವ ನೀವೂ ಸಹ ಹನ್ನೆರಡು ಸಿಂಹಾಸನಗಳ ಮೇಲೆ ಕುಳಿತುಕೊಂಡು ಇಸ್ರಯೇಲಿನ ಹನ್ನೆರಡು ಕುಲಗಳಿಗೆ ನ್ಯಾಯತೀರ್ಮಾನಮಾಡುವಿರಿ, ಮತ್ತು ಯಾವನು ನನ್ನ ಹೆಸರಿನ ನಿಮಿತ್ತವಾಗಿ ಮನೆಗಳನ್ನಾಗಲಿ, ಅಣ್ಣತಮ್ಮಂದಿರನ್ನಾಗಲಿ, ಅಕ್ಕತಂಗಿಯರನ್ನಾಗಲಿ ತ್ಯಜಿಸಿದ್ದಾನೋ, ಅವನು ನೂರುಪಾಲು ಹೊಂದುವದು. ಮತ್ತು ಅನಂತ ಜೀವನದ ಅಧಿಕಾರಿಯಾಗುವನು. [ಮತ್ತಾಯ ೧೯। ೨೮-೨೯]

ಸಮಿಾಕ್ಷಕ—ಸತ್ತಮೇಲೂ ಸಹ ಜನರು ತನ್ನ ಬಲೆಯಿಂದ ನುಣಿಚಿಕೊಳ್ಳದಿರಲಿ-ಎಂಬ ಯೇಸುವಿನ ಒಳಲೀಲೆಯನ್ನು ಈಗ ನೋಡಿರಿ. ಮತ್ತು ೩೦ ರೂಪಾಯಿಗಳ ಲೋಭದಿಂದ ತನ್ನ ಗುರುವನ್ನು ಹಿಡಿಸಿ ಕೊಲ್ಲಿಸಿದಂತಹ ಪಾಪಿಗಳೂ ಕೂಡ ಇವನ ಹತ್ತಿರ ಸಿಂಹಾಸನದಲ್ಲಿ ಮಂಡಿಸುವರು. ಮತ್ತು ಇಸ್ರಾಯೇಲನ ಕುಲದ ನ್ಯಾಯವನ್ನು ಪಕ್ಷಪಾತದ ಕಾರಣ ಮಾಡುವುದೇ ಇಲ್ಲ. ಆದರೆ ಅವರ ಎಲ್ಲಾ ಅಪರಾಧಗಳು ಕ್ಷಮಿಸಲ್ಪಡುವವು ಮತ್ತು ಇತರ ಕುಲಗಳ ನ್ಯಾಯವನ್ನು ತೀರ್ಮಾನಿಸುವರು. ಇದರಿಂದಲೇ ಕ್ರೈಸ್ತರು ಕ್ರೈಸ್ತರ ಮೇಲೆ ಬಹಳ ಪಕ್ಷಪಾತ ತೋರಿ ಯಾವನಾದರೂ ಬಿಳಿಯವನು ಕರಿಯವನನ್ನು ಕೊಂದುಬಿಟ್ಟಿದ್ದರೂ ಕೂಡ ಬಹುತೇಕವಾಗಿ ಪಕ್ಷಪಾತಮಾಡಿ ಅವನು ನಿರಪರಾಧಿಯೆಂದು ಹೇಳಿ ಬಿಟ್ಟುಬಿಡುತ್ತಾರೆ-ಎಂದು ಊಹಿಸಲಾಗುತ್ತದೆ. ಹೀಗೆಯೇ ಯೇಸುವಿನ ಸ್ವರ್ಗದ ನ್ಯಾಯವೂ ಇರಬಹುದು-

ಮತ್ತು ಇದರಿಂದ ಬಹು ದೊಡ್ಡ ದೋಷ ಹುಟ್ಟುತ್ತದೆ. ಏಕೆಂದರೆ– ಒಬ್ಬನು ಸೃಷ್ಟಿಯ ಆದಿಯಲ್ಲಿ ಸತ್ತನು; ಇನ್ನೊಬ್ಬನು ಪ್ರಳಯ ರಾತ್ರಿಯ ಹತ್ತಿರ ಸತ್ತನು. ಒಬ್ಬನಂತೂ ಮೊದಲಿನಿಂದ ಕಡೆಯವರೆಗೆ "ಯಾವಾಗ ನ್ಯಾಯವಾಗುವುದು?" ಎಂಬ ಆಶೆಯಲ್ಲೇ ಬಿದ್ದಿದ್ದನು; ಮತ್ತು ಇನ್ನೊಬ್ಬನ ನ್ಯಾಯವು ಕೂಡಲೇ ಆಗಿಬಿಟ್ಟಿತು. ಇದು ಎಷ್ಟು ದೊಡ್ಡ ಅನ್ಯಾಯವು! ಮತ್ತು ನರಕಕ್ಕೆ ಹೋಗುವವನು ಅನಂತ ಕಾಲದವರೆಗೆ ನರಕವನ್ನನುಭವಿಸುವನು ಮತ್ತು ಸ್ವರ್ಗಕ್ಕೆ ತೆರಳುವವನು ಸದಾ ಸ್ವರ್ಗವನ್ನು ಅನುಭವಿಸುವನು–ಎಂಬುದೂ ಮಹಾ ಅನ್ಯಾಯವು. ಏಕೆಂದರೆ–ಸಾಂತವಾದ ಸಾಧನಗಳ ಮತ್ತು ಕರ್ಮಗಳ ಫಲವು ಸಾಂತವಾಗಿರಬೇಕು. ಮತ್ತು ಸರಿಸಮಾನವಾದ ಪಾಪ, ಪುಣ್ಯಗಳು ಇಬ್ಬರು ಜೀವರವೂ ಇರಲಾರವಾದುದರಿಂದ, ತಾರತಮ್ಯದಿಂದ ಕಡಿಮೆ ಹೆಚ್ಚು ಸುಖದುಃಖಗಳ ಅನೇಕ ಸ್ವರ್ಗನರಕಗಳಿದ್ದಾಗಲೇ ಸುಖದುಃಖಗಳನ್ನು ಅನುಭವಿಸಬಲ್ಲರು. ಕ್ರೈಸ್ತರ ಪುಸ್ತಕದಲ್ಲಿ ಎಲ್ಲಿಯೂ ಈ ವ್ಯವಸ್ಥೆಯಿಲ್ಲದಿರುವುದರಿಂದ ಈ ಪುಸ್ತಕವು ಈಶ್ವರ ಕೃತವೂ ಯೇಸುವು ದೇವರ ಮಗನೂ ಎಂದಿಗೂ ಆಗಲಾರರು. ಮಹಾ ಅನರ್ಥದ ಮಾತು ಯಾವುದೆಂದರೆ–ಯಾರಿಗೂ ನೂರು ನೂರು ಜನ ತಂದೆತಾಯಿಗಳು ಇರಲಾರರು. ಆದರೆ ಒಬ್ಬನಿಗೆ ಒಬ್ಬಳು ತಾಯಿ ಮತ್ತು ಒಬ್ಬನೇ ತಂದೆ ಇರುತ್ತಾರೆ. ಮುಸಲ್ಮಾನರು ಸ್ವರ್ಗದಲ್ಲಿ ಒಬ್ಬೊಬ್ಬನಿಗೆ ೭೨ ಸ್ತ್ರೀಯರು ಲಭಿಸುತ್ತಾರೆಂದು ಬರೆದಿರುವುದನ್ನು ಇಲ್ಲಿಂದಲೇ ತೆಗೆದುಕೊಂಡಿರಬಹುದೆಂದು ತೋರುತ್ತದೆ. ॥೭೭॥

೭೮—ಬೆಳಿಗ್ಯೆ ಆತನು ಪಟ್ಟಣಕ್ಕೆ ತಿರುಗಿ ಹೋಗುತ್ತಿದ್ದಾಗ ಅವನಿಗೆ ಹಸಿವಾಯಿತು. ಮತ್ತು ದಾರಿಯಲ್ಲಿ ಒಂದು ಅಂಜೂರದ ಮರವನ್ನು ಕಂಡು, ಅವನು ಅದರ ಬಳಿಗೆ ಬಂದನು. ಮತ್ತು ಅದರಲ್ಲಿ ಬರೇ ಎಲೆಗಳನ್ನಲ್ಲದೆ ಮತ್ತೇನನ್ನೂ ಕಾಣಲಿಲ್ಲ. ಮತ್ತು ಅದಕ್ಕೆ– "ಇನ್ನುಮೇಲೆ ಎಂದೆಂದಿಗೂ ನಿನ್ನಲ್ಲಿ ಹಣ್ಣುಗಳು ಆಗವು" ಎಂದು ಹೇಳಿದನು. ಇದರಮೇಲೆ ಆ ಕ್ಷಣವೇ ಆ ಅಂಜೂರದ ಮರವು ಒಣಗಿ ಹೋಯಿತು. [ಮತ್ತಾಯ. ೨೧। ೧೮, ೧೯]

ಸಮಾಲೋಚಕ—ಅವನು ಬಹು ಶಾಂತನೂ, ಶಮಾನ್ವಿತನೂ,

ಮತ್ತು ಕ್ರೋಧಾದಿ ದೋಷರಹಿತನೂ ಆಗಿದ್ದನೆಂದು ಎಲ್ಲಾ ಪಾದರಿಗಳೂ, ಕ್ರೈಸ್ತರೂ ಹೇಳುತ್ತಾರೆ. ಆದರೆ ಈ ವಿಷಯವನ್ನು ನೋಡುವುದರಿಂದ ಯೇಸುವು ಕೋಪಿಷ್ಠನೂ, ಋತುಗಳ ಜ್ಞಾನವಿಲ್ಲದವನೂ ಆಗಿದ್ದನು ಮತ್ತು ಕಾಡಾಡಿತನದ ಸ್ವಭಾವಯುಕ್ತನಾಗಿ ವರ್ತಿಸುತ್ತಿದ್ದನು ಎಂದು ತಿಳಿದುಬರುತ್ತದೆ. ಛಲಾ! ಜಡಪದಾರ್ಥವಾದ ಮರಕ್ಕೆ ಶಾಪಕೊಟ್ಟನೆನ್ನಲು ಆದರ ಅಪರಾಧವಾದರೂ ಏನಿತ್ತು? ಮತ್ತು ಅದು ಒಣಗಿಹೋಯಿತು! ಇವನ ಶಾಪದಿಂದೇನೂ ಒಣಗಿರಲಾರದು; ಯಾವುದಾದರೂ ಔಷಧವನ್ನು ಹಾಕಿದುದರಿಂದ ಒಣಗಿದ್ದರೆ, ಆಶ್ಚರ್ಯವೇನೂ ಇಲ್ಲ. ॥೭೮॥

೭೯. ಆ ದಿನಗಳ ಸಂಕಟದ ತರುವಾಯ ಸೂರ್ಯನು ಕತ್ತಲಾಗಿ ಹೋಗುವನು; ಮತ್ತು ಚಂದ್ರನು ತನ್ನ ಬೆಳಕನ್ನು ಕೊಡುವುದಿಲ್ಲ. ನಕ್ಷತ್ರಗಳು ಆಕಾಶದಿಂದ ಬಿದ್ದುಹೋಗುವವು ಮತ್ತು ಆಕಾಶದಲ್ಲಿರುವ ಸೇನೆಯು ಕದಲಿಹೋಗುವುದು. [ಮತ್ತಾಯ. ೨೪। ೨೯]

ಸವಿಾಕ್ಷಕ- ಛಲೇ! ಯೇಸುವೆ! ನಕ್ಷತ್ರಗಳು ಉದುರುವುದನ್ನು ನೀನು ಯಾವ ವಿದ್ಯೆಯಿಂದ ಅರಿತುಕೊಂಡೆ? ಕದಲುವಂತಹ ಆಕಾಶದಲ್ಲಿರುವ ಸೇನೆಯಾವುದು? ಯೇಸುವು ಎಂದಾದರೂ ಸ್ವಲ್ಪವಾದರೂ ವಿದ್ಯೆಯನ್ನು ಕಲಿತಿದ್ದರೆ ಈ ನಕ್ಷತ್ರಗಳೆಲ್ಲವೂ ಲೋಕಗಳು; ಅವು ಉದುರುವುದಾದರೂ ಹೇಗೆ? ಎಂಬುದನ್ನು ಅವಶ್ಯವಾಗಿ ಅರಿತುಕೊಳ್ಳುತ್ತಿದ್ದನು. ಯೇಸುವು ಬಡಗಿಯ ಕುಲದಲ್ಲಿ ಹುಟ್ಟಿದ್ದನು; ಯಾವಾಗಲೂ ಕಟ್ಟಿಗೆ ಸೀಳುವುದು, ಸಿಗುರೆಬ್ಬಿಸುವುದು, ತುಂಡು ಮಾಡುವುದು ಮತ್ತು ಜೋಡಿಸುವುದು ಇದನ್ನು ಮಾಡುತ್ತಿರಬಹುದು ಎಂದು ಇದರಿಂದ ಗೊತ್ತಾಗುತ್ತದೆ. ನಾನೂ ಈ ಕಾಡುನಾಡಿನಲ್ಲಿ ಪೈಗಂಬರನಾಗಬಲ್ಲೆನೆಂದು ಹುಮ್ಮಸ್ಸು ಹುಟ್ಟಿದಾಗ, ಮಾತನ್ನು ಆಡತೊಡಗಿದನು. ಎಷ್ಟೋ ಮಾತುಗಳು ಅವನ ಬಾಯಿನಿಂದ ಒಳ್ಳೆಯವೂ ಹೊರಟವು; ಮತ್ತು ಬಹಳ ಕೆಟ್ಟವು ಹೊರಟವು. ಅಲ್ಲಿನ ಜನರು ಕಾಡಾಡಿಗಳಾಗಿದ್ದರು ಒಪ್ಪಿಕೊಂಡುಬಿಟ್ಟರು. ಯೂರೋಪು ದೇಶವು ಈಗ ಉನ್ನತಿಯುಕ್ತವಾಗಿರುವಂತೆ, ಹಿಂದೆಯೂ ಇದ್ದಿದ್ದರೆ ಇವನ ಸಿದ್ಧತ್ವವೇನೇನೂ ನಡೆಯುತ್ತಿದ್ದಿಲ್ಲ. ಈಗ ಸ್ವಲ್ಪ

ವಿದ್ಯಾಪ್ರಚಾರವಾದ ಮೇಲೂ ಕೂಡ ವ್ಯವಹಾರದ ತೊಡಕು ಮತ್ತು ಹಠಮಾರಿತನದಿಂದ ಈ ಪೊಳ್ಳುಮತವನ್ನು ಬಿಡದೆ, ಸರ್ವಥಾ ಸತ್ಯ ವೇದ ಮಾರ್ಗದತ್ತ ಓಲುವುದಿಲ್ಲವೆಂಬುದೇ ಇದರಲ್ಲಿನ ನ್ಯೂನತೆ.॥೭೯॥

೮೦. ಆಕಾಶವೂ ಭೂಮಿಯೂ ಕದಲಿಹೋಗುವವು. ಆದರೆ ನನ್ನ ಮಾತುಗಳು ಕದಲುವುದಿಲ್ಲ. [ಮತ್ತಾಯ ೨೪! ೩೫]

ಸವಿಾಕ್ಷಕ—ಇದೂ ಅವಿದ್ಯೆಯ ಮತ್ತು ಮೂರ್ಖತನದ ಮಾತು. ಆಕಾಶವು ಕದಲಿ ಎಲ್ಲಿಗೆ ಹೋಗುವುದು? ಆಕಾಶವು ಅತಿ ಸೂಕ್ಷ್ಮವಾಗಿರುವುದರಿಂದ ಕಣ್ಣಿಗೆ ಕಾಣಿಸದಿರುವಾಗ, ಅದು ಕದಲುವು ದನ್ನು ಯಾವನು ನೋಡಬಲ್ಲನು? ಮತ್ತು ತನ್ನ ಬಾಯಿನಿಂದ ತನ್ನನ್ನು ಹೊಗಳಿಕೊಳ್ಳುವುದು ಸತ್ಪುರುಷರ ಕಾರ್ಯವಲ್ಲ. ॥೮೦॥

೮೧. ಆ ಮೇಲೆ ಅವನ್ನು ಎಡಗಡೆಯಲ್ಲಿರುವವರಿಗೆ—" ಶಾಪ ಗ್ರಸ್ತರಾದ ಜನರೇ! ನನ್ನ ಹತ್ತಿರದಿಂದ ಸೈತಾನ ಮತ್ತು ಅವನ ದೂತರ ಸಲುವಾಗಿ ಸಿದ್ಧಮಾಡಿರುವ ಅನಂತವಾದ ಬೆಂಕಿಯೊಳಕ್ಕೆ ಹೋಗಲಿ " ಎಂದು ಹೇಳುವನು. [ಮತ್ತಾಯ ೨೫, ೪೧]

ಸವಿಾಕ್ಷಕ—ಒಳ್ಳೆಯದು! ತನ್ನ ಶಿಷ್ಯರಿಗೆ ಸ್ವರ್ಗವನ್ನು ಕೊಡು ವುದೂ, ಇತರರನ್ನು ನಿತ್ಯವಾದ ಬೆಂಕಿಯೊಳಕ್ಕೆ ನೂಕುವುದೂ ಎಷ್ಟು ದೊಡ್ಡ ಪಕ್ಷಪಾತದ ಮಾತು! ಆದರೆ ಆಕಾಶವೇ ಇಲ್ಲದಿರುವಾಗ ನಿತ್ಯ ವಾದ ಬೆಂಕಿಯೂ, ನರಕ ಸ್ವರ್ಗವೂ ಎಲ್ಲಿರುವವು? ಸೈತಾನನನ್ನೂ ಅವನ ದೂತರನ್ನೂ ದೇವರು ಹುಟ್ಟಿಸದೇ ಇರುತ್ತಿದ್ದರೆ, ನರಕದ ಇಷ್ಟು ಸಿದ್ಧತೆ ಏಕೆ ಮಾಡಬೇಕಾಗುತ್ತಿತ್ತು? ಒಬ್ಬ ಸೈತಾನನೇ ದೇವರ ಭಯದಿಂದ ಭೀತನಾಗದಿದ್ದ ಮೇಲೆ, ಅವನು ದೇವರಾದರೂ ಏನು? ಏಕೆಂದರೆ–ಅವನ ದೂತನೇ ಆಗಿದ್ದರೂ ವಿದ್ರೋಹಿಯಾದನು! ದೇವರು ಅವನನ್ನು ಮೊದಲೇ ಹಿಡಿದು ಕಾರಾಗೃಹದಲ್ಲಿಡಲಾರ ದಾದನು: ಕೊಲ್ಲಲಾರದೆಯೂ ಹೋದನು ಅವನ ದೇವತ್ವವಾದರೂ ಏನು? ಯಾವನು ಯೇಸುವಿಗೂ ನಾಲ್ಕತ್ತು ದಿನ ದುಃಖವಿತ್ತನೋ ಅವನಿಗೆ ಯೇಸವೂ ಏನೂ ಮಾಡಲಾರದೆ ಹೋದನು! ಎಂದಮೇಲೆ ದೇವರ ಮಗನಾಗಿರುವುದು ವ್ಯರ್ಥವಾಯಿತು. ಆದುದರಿಂದ ಯೇಸುವು

ದೇವರ ಮಗನೂ ಆಗಲಾರನು; ಬೈಬಲಿನ ದೇವರು ದೇವರೂ ಆಗಲಾರನು. ||೮೧||

೮೨. ಆಗ ಹನ್ನೆರಡು ಮಂದಿ ಶಿಷ್ಯರಲ್ಲಿ ಒಬ್ಬನಾದ ಇಸ್ಕರಿಯೋತ ಯಹೂದನೆಂಬ ಶಿಷ್ಯನು ಮಹಾಯಾಜಕರ ಬಳಿಗೆ ಹೋದನು ಮತ್ತು ನಾನು ಯೇಸುವನ್ನು ನಿಮ್ಮಗಳ ಕೈಗೆ ಹಿಡಿಸಿಕೊಟ್ಟರೆ, ನನಗೆ ಏನು ಕೊಡುತ್ತೀರಿ?" ಅಂದನು ಅವರು ಅವನಿಗೆ ಮೂವತ್ತು ರೂಪಾಯಿ ಕೊಡುವುದಾಗಿ ನಿರ್ಧರಿಸಿದರು.

[ಮತ್ತಾಯ ೨೬, ೧೪, ೧೫]

ಸಮೀಕ್ಷಕ—ಈಗ ನೋಡಿರಿ! ಯೇಸುವಿನ ಚಮತ್ಕಾರವೂ ದೇವತ್ವವೂ ಇಲ್ಲಿ ಬಯಲಾಯಿತು. ಏಕೆಂದರೆ—ಅವನ ಮುಖ್ಯ ಶಿಷ್ಯನೂ ಕೂಡ ಅವನ ಪ್ರತ್ಯಕ್ಷ ಸಂಪರ್ಕದಿಂದ ಪವಿತ್ರಾತ್ಮನಾಗಲಿಲ್ಲ! ಇನ್ನು ಇತರರನ್ನು ಅವನು ಸತ್ತಮೇಲೆ ಪವಿತ್ರಾತ್ಮರನ್ನಾಗಿ ಏನು ಮಾಡಬಲ್ಲನು? ಮತ್ತು ಅವನ ಮೇಲೆ ನಂಬಿಕೆಯುಳ್ಳ ಜನರು ಅವನ ಭರವಸೆಯಲ್ಲಿ ಎಷ್ಟು ನಂಬಿಸಲ್ಪಡುತ್ತಾರೆ! ಏಕೆಂದರೆ ಸಾಕ್ಷಾತ್ ಸಂಬಂಧದಲ್ಲಿ ಶಿಷ್ಯನ ಕಲ್ಯಾಣವೇನನ್ನೂ ಮಾಡದವನು ಸತ್ತಮೇಲೆ ಯಾವನಾದರೂ ಕಲ್ಯಾಣವನ್ನು ಏನು ಮಾಡಬಲ್ಲನು? ||೮೨||

೮೩. ಅವರು ಊಟಮಾಡುತ್ತಿರುವಾಗ, ಯೇಸು ರೊಟ್ಟಿಯನ್ನು ತೆಗೆದುಕೊಂಡು ಧನ್ಯವಾದವಿತ್ತನು ಮತ್ತು ಅದನ್ನು ಮುರಿದು ಶಿಷ್ಯರಿಗೆ ಕೊಟ್ಟು "ತೆಗೆದುಕೊಳ್ಳಿರಿ; ತಿನ್ನಿರಿ. ಇದು ನನ್ನ ದೇಹ" ಅಂದನು. ಮತ್ತವನು ಕುಡಿಯುವ ಪಾತ್ರೆಯನ್ನು ತೆಗೆದುಕೊಂಡು ಧನ್ಯವಾದವಿತ್ತನು. ಮತ್ತು ಅವರಿಗೆ ಕೊಟ್ಟು—"ನೀವೆಲ್ಲರೂ ಇದರಲ್ಲಿರುವುದನ್ನು ಕುಡಿಯಿರಿ. ಏಕೆಂದರೆ—ಇದು ನನ್ನ ರಕ್ತ" ಅಂದರೆ, ಹೊಸ ಒಡಂಬಡಿಕೆಯದು"—ಅಂದನು.

[ಮತ್ತಾಯ. ೨೬।೨೬-೨೭-೨೮]

ಸಮೀಕ್ಷಕ—ಓಹೋ! ಅವಿದ್ವಾಂಸರಾದ ಕಾಡು ಜನರ ಹೊರತು ಯಾವನಾದರೂ ಸಭ್ಯನು ಇಂತಹ ಮಾತನ್ನಾಡುವನೇ?

ತಿನ್ನುವ ವಸ್ತುವನ್ನು ತನ್ನ ಮಾಂಸವೆಂದೂ, ಕುಡಿಯುವ ಪದಾರ್ಥಗಳನ್ನು ರಕ್ತವೆಂದೂ ಶಿಷ್ಯರಿಗೆ (ಸಭ್ಯನು) ಹೇಳಲಾರನು. ಮತ್ತು ಈ ವಿಷಯವನ್ನೇ ಇಂದಿನ ಕ್ರೈಸ್ತರು "ಸ್ವಾಮಿಭೋಜನ" ವೆಂದು ಹೇಳುತ್ತಾರೆ. ಅಂದರೆ–ತಿನ್ನುವ ಕುಡಿಯುವ ವಸ್ತುಗಳಲ್ಲಿ ಯೇಸುವಿನ ಮಾಂಸರಕ್ತಗಳ ಭಾವನೆ ಮಾಡಿ ಸೇವಿಸುತ್ತಾರೆ. ಇದು ಎಷ್ಟು ಕೆಟ್ಟ ಮಾತು? ಯಾರು ತಮ್ಮ ಗುರುವಿನ ರಕ್ತಮಾಂಸಗಳನ್ನೂ ಕೂಡ ಸೇವಿಸುವ ಭಾವನೆಯಿಂದ ಹೊರಗಿಟ್ಟಿಲ್ಲವೋ, ಅವರು ಬೇರೆಯವನನ್ನು ಹೇಗೆ ಬಿಡಬಲ್ಲರು? ||೮೩||

೮೪—ಮತ್ತು ಅವನು ಪಿತನನ್ನೂ, ಮತ್ತು ಇಬ್ಬರು ಮಕ್ಕಳನ್ನೂ ತನ್ನ ಸಂಗಡ ಕರೆದುಕೊಂಡು ಹೋದಾಗ ಮತ್ತು ದುಃಖಿಸಲೂ, ಬಹಳ ನಿರುತ್ಸಾಹನಾಗಲೂ ಆರಂಭಿಸಿದಾಗ ಅವನು ಅವರಿಗೆ–"ನನ್ನ ಮನಸ್ಸು, ನಾನು ಸಾಯಲಿದ್ದೇನೆಂಬಷ್ಟು ದುಃಖಿತವಾಗಿದೆ, ಎಂದನು. ಮತ್ತೆ ಸ್ವಲ್ಪ ಮುಂದೆ ಹೋಗಿ ಅವನು ಮುಖ ಕೆಳಗೆ ಮಾಡಿ ಬಿದ್ದನು ಮತ್ತು–"ಓ ನನ್ನ ತಂದೆಯೆ! ಸಾಧ್ಯವಾಗಿದ್ದರೆ ಈ ಪಾತ್ರೆಯೂ ನನ್ನ ಬಳಿಯಿಂದ ದೂರವಾಗಿ ಹೋಗಲಿ." ಎಂದು ಪ್ರಾರ್ಥನೆ ಮಾಡಿದನು. [ಮತ್ತಾಯ. ೨೬।೩೭-೩೯]

ಸಮೀಕ್ಷಕ—ನೋಡಿರಿ! ಇವನು ಸಾಧಾರಣ ಮನುಷ್ಯನಾಗಿಲ್ಲದಿದ್ದರೆ, ದೇವರ ಮಗನೂ, ತ್ರಿಕಾಲದರ್ಶಿಯೂ, ವಿದ್ವಾಂಸನೂ ಆಗಿದ್ದರೆ, ಇಂತಹ ಅಯೋಗ್ಯ ಕ್ರಿಯೆಯನ್ನು ಮಾಡುತ್ತಿರಲಿಲ್ಲ. ಇದರಿಂದ, "ಯೇಸುವು ದೇವರ ಮಗನು, ಭೂತ ಭವಿಷ್ಯತ್ತುಗಳ ಜ್ಞಾನಿಯು ಮತ್ತು ಪಾಪವನ್ನು ಕ್ಷಮಿಸುವವನು" ಎಂಬ ಆಡಂಬರವನ್ನು ಯೇಸುವಾಗಲಿ, ಅವನ ಶಿಷ್ಯರಾಗಲಿ ಸುಳ್ಳು ಸುಳ್ಳೇ ನಿರ್ಮಿಸಿರುವರೆಂಬುದು ಸ್ಪಷ್ಟವಾಗಿ ತಿಳಿದು ಬರುತ್ತದೆ. ಇದರಿಂದ ಇವನು ಕೇವಲ ಸಾಧಾರಣನಾದ ಸರಳ ಪ್ರಕೃತಿಯ ನಿಜವಾದ ಅವಿದ್ವಾಂಸನಾಗಿದ್ದನು; ವಿದ್ವಾಂಸನೂ ಆಗಿರಲಿಲ್ಲ; ಯೋಗಿಯೂ ಆಗಿರಲಿಲ್ಲ; ಸಿದ್ಧನೂ ಆಗಿರಲಿಲ್ಲವೆಂದು ತಿಳಿದು ಕೊಳ್ಳಬೇಕು. ||೮೪||

೮೫—ನೋಡಿರಿ! ಅತನು ಇನ್ನೂ ಮಾತಾಡುತ್ತಿರುವಾಗಲೇ ಹನ್ನೆರಡು ಮಂದಿ ಶಿಷ್ಯರಲ್ಲಿ ಒಬ್ಬನಾದ ಯಹೂದನು ಬಂದು ಸೇರಿ

ದನು. ಮತ್ತು ಮಹಾ ಯಾಜಕರ ಕಡೆಯಿಂದಲೂ, ಜನರ ಹಿರಿಯರ ಕಡೆಯಿಂದಲೂ, ಬಹುಜನರು ಕತ್ತಿ ದೊಣ್ಣೆಗಳನ್ನು ಹಿಡುಕೊಂಡು ಅವನ ಸಂಗಡ ಬಂದರು. ಯೇಸುವನ್ನು ಹಿಡಿಸಿ ಕೊಡುವವನು ಅವರಿಗೆ–" ನಾನು ಯಾವನಿಗೆ ಮುತ್ತಿಡುತ್ತೇನೋ ಅವನನ್ನು ಹಿಡಿಯಿರಿ " ಎಂದು ಸಂಕೇತಮಾಡಿದ್ದನು. ಮತ್ತು ಅವನು ಕೂಡಲೇ ಯೇಸುವಿನ ಬಳಿಗೆ ಬಂದು–" ಗುರುವೆ, ನಮಸ್ಕಾರ " ಎಂದು ಹೇಳಿ ದನು ಮತ್ತು ಆತನಿಗೆ ಮುತ್ತಿಟ್ಟನು. ಆಗ ಅವರು ಯೇಸುವಿನ ಮೇಲೆ ಕೈಹಾಕಿ, ಆತನನ್ನು ಹಿಡಿದರು. ಆಗ ಶಿಷ್ಯರೆಲ್ಲರೂ ಅವನನ್ನು ಬಿಟ್ಟು ಓಡಿಹೋದರು. ಕಡೆಗೆ ಇಬ್ಬರು ಸುಳ್ಳುಸಾಕ್ಷಿಗಳು ಬಂದು " ಈತನು—ನಾನು ದೇವಾಲಯವನ್ನು ಕೆಡಹಬಲ್ಲೆನು ; ಮತ್ತು ಮೂರು ದಿನಗಳಲ್ಲಿ ಕಟ್ಟಬಲ್ಲೆನು ಎಂದು ಹೇಳಿದನು " ಎಂದು ನುಡಿದರು. ಆಗ ಮಹಾಯಾಜಕನು ಎದ್ದು ನಿಂತು ಯೇಸುವನ್ನು—" ನೀನೇನೂ ಉತ್ತರ ಹೇಳುವದಿಲ್ಲವೊ? ಇವರು ನಿನ್ನ ಮೇಲೆ ಹೇಳುವ ಈ ಸಾಕ್ಷಿ ಏನು " ಎಂದು ಕೇಳಿದನು. ಆದರೆ ಯೇಸು ಸುಮ್ಮನಿದ್ದನು. ಇದರ ಮೇಲೆ ಮಹಾಯಾಜಕನು–ನಿನಗೆ ಸಜೀವನಾದ ದೇವರ ಆಣೆಯನ್ನು ಇಡುತ್ತೇನೆ. ನೀನು ದೇವಕುಮಾರನಾದ ಕ್ರಿಸ್ತನು ಹೌದೋ, ಅಲ್ಲವೋ, ನಮಗೆ ಹೇಳು ಎಂದು ಕೇಳಿದನು. ಯೇಸುವು ಆವನಿಗೆ " ನೀನಂತೂ ಹೇಳಿಯೇಬಿಟ್ಟೆ"–ಎಂದನು. ಆಗ ಮಹಾಯಾಜಕನು ತನ್ನ ಬಟ್ಟೆಗಳನ್ನು ಹರಿದುಕೊಂಡು–" ಇವನು ದೇವರ ನಿಂದೆಯನ್ನು ಮಾಡಿ ಮುಗಿಸಿದ್ದಾನೆ. ಇನ್ನು ನಮಗೆ ಸಾಕ್ಷಿಗಳಿಂದೇನು ಪ್ರಯೋಜನ? ನೋಡಿ, ನೀವು ಇದೇ ತಾನೇ ಅವನ ಬಾಯಿನಿಂದ ದೇವರ ನಿಂದೆಯನ್ನು ಕೇಳಿದ್ದೀರಿ. ಈಗ ಏನು ಯೋಚಿಸುತ್ತೀರಿ? ಎಂದು ಕೇಳಿದನು. ಆಗ ಅವರು–" ಅವನು ವಧಾರ್ಹನು "–ಎಂದು ಉತ್ತರ ಕೊಟ್ಟರು. ಆಗ ಅವರು ಆತನ ಮುಖದ ಮೇಲೆ ಉಗುಳಿದರು ಮತ್ತು ಆತನನ್ನು ಗುದ್ದಿದರು. ಇನ್ನು ಕೆಲವರು ಆತನ ಕೆನ್ನೆಗೆ ಹೊಡೆದು–ಕ್ರಿಸ್ತನೆ! ನಿನ್ನನ್ನು ಹೊಡೆದವರು ಯಾರೆಂದು ನಮಗೆ ಭವಿಷ್ಯವಾಣಿಯನ್ನು ಹೇಳು ಅಂದರು. ಪೇತ್ರನು ಹೊರಗೆ ಅಂಗಳದಲ್ಲಿ ಕುಳಿತಿದ್ದನು. ಮತ್ತು ಒಬ್ಬ ದಾಸಿಯು ಅವನ ಬಳಿಗೆ ಬಂದು–" ನೀನೂ

ಸಹ ಗಲಿಲಾಯದ ಯೇಸುವಿನ ಸಂಗಡ ಇದ್ದೆ? ಎಂದಳು. ಅವನು ಎಲ್ಲರ ಮುಂದೆ ನಿರಾಕರಿಸಿ–"ನೀನು ಏನನ್ನುತ್ತೀಯೋ ನನಗೆ ಗೊತ್ತಿಲ್ಲ" ಎಂದು ಹೇಳಿದನು. ಅವನು ಹೊರಗೆ ಬಾಗಲಿನ ಕಡೆಗೆ ಹೋದಾಗ, ಮತ್ತೊಬ್ಬಳು ದಾಸಿಯು ಅವನನ್ನು ಕಂಡು, ಅಲ್ಲಿರುವವರಿಗೆ—"ಇವನೂ ಸಹ ನಜರೇತಿನ ಯೇಸುವಿನ ಸಂಗಡ ಇದ್ದನು" ಎಂದು ಹೇಳಿದಳು. ಅವನು ಆಣೆಯಿಟ್ಟು ಮತ್ತೆ "ಆ ಮನುಷ್ಯನನ್ನು ನಾನರಿಯೆನು" ಎಂದು ನಿರಾಕರಿಸಿದನು ಆಗ ಅವನು—"ಆ ಮನುಷ್ಯನನ್ನು ಅರಿಯೆನು" ಎಂದು ಹೇಳಿ ಧಿಕ್ಕರಿಸಲೂ, ಆಣೆಯಿಡಲೂ ಪ್ರಾರಂಭಿಸಿದನು.

[ಮತ್ತಾಯ ೨೬।೪೭-೫೨, ೫೩, ೬೧-೭೨, ೭೪॥]

ಸಮೀಕ್ಷಕ—ಈಗ ನೋಡಿರಿ! ತನ್ನ ಶಿಷ್ಯನನ್ನು ದೃಢವಿಶ್ವಾಸಿಯನ್ನಾಗಿ ಮಾಡುವಷ್ಟು ಸಾಮರ್ಥ್ಯ ಅಥವಾ ಪ್ರತಾಪವೂ ಸಹ ಯೇಸುವಿನಲ್ಲಿರಲಿಲ್ಲ. ಮತ್ತು ಆ ಶಿಷ್ಯರು ಪ್ರಾಣಬೇಕಾದರೂ ಹೋಗಲೊಲ್ಲದೇಕೆ, ತಮ್ಮ ಗುರುವನ್ನು ಕೃಪಣತ್ವದಿಂದ ಹಿಡಿಸಬಾರದಾಗಿತ್ತು; ನಿರಾಕರಿಸಬಾರದಾಗಿತ್ತು; ಸುಳ್ಳಾಡಲಾರದಾಗಿತ್ತು ; ಸುಳ್ಳು ಆಣೆ ಇಡಬಾರದಾಗಿತ್ತು ; ಮತ್ತು ಯೇಸುವಿನಲ್ಲಿಯೂ ಚಮತ್ಕಾರವೇನೂ ಇರಲಿಲ್ಲ. ಲೋಟನ ಮನೆಯಲ್ಲಿ ಅತಿಥಿಗಳು ಹೊಡೆಯುವುದಕ್ಕಾಗಿ ಬಹು ಜನರು ಮುತ್ತಿಗೆ ಹಾಕಿದರು; ಅಲ್ಲಿ ದೇವರದೂತರಿಬ್ಬರು ಇದ್ದರು; ಅವರು ಅವರನ್ನೆಲ್ಲಾ ಕುರುಡರಾಗಿ ಮಾಡಿಬಿಟ್ಟರು—ಎಂದು ಆದಿಕಾಂಡದಲ್ಲಿ ಬರೆದಿದೆ. ಆ ಸಂಗತಿಯೂ ಸುಳ್ಳೇ ಆದರೂ, ಯೇಸುವಿನಲ್ಲಿ ಅಷ್ಟು ಸಾಮರ್ಥ್ಯವೂ ಇರಲಿಲ್ಲ. ಮತ್ತು ಈಗಿನ ಕ್ರೈಸ್ತರು ಅವನ ಹೆಸರಿನಲ್ಲಿ ಎಷ್ಟು ಅತ್ಯುಕ್ತಿಗಳನ್ನು ಪಸರಿಸಿದ್ದಾರೆ! ಅಯ್ಯೋ! ಇಂತಹ ದುರ್ದಶೆಗೀಡಾಗಿ ಸಾಯುವುದಕ್ಕಿಂತ, ಅವನು ತಾನಾಗಿ ಹೋರಾಡಿ ಅಥವಾ ಸಮಾಧಿಹಾಕಿ ಅಥವಾ ಬೇರಾವುದಾದರೂ ರೀತಿಯಿಂದ ಪ್ರಾಣ ಬಿಟ್ಟಿದ್ದರೆ ಚೆನ್ನಾಗಿತ್ತು! ಆದರೆ ಆ ಬುದ್ಧಿ ವಿದ್ಯೆಯಿಲ್ಲದೆ ಎಲ್ಲಿಂದ ಒದಗೀತು? ಆ ಯೇಸುವು ಹೀಗೂ ಹೇಳುತ್ತಾನೆ. ॥೮೫॥

೮೬. ನಾನು ನನ್ನ ತಂದೆಯನ್ನು ಬೇಡಿಕೊಳ್ಳಲಾರೆನು;

ಮತ್ತು ಆತನು ನನ್ನ ಬಳಿಗೆ ಸ್ವರ್ಗದೂತರ ಹನ್ನೆರಡು ಸೈನ್ಯಗಳಿಗಿಂತ ಹೆಚ್ಚನ್ನು ಕಳುಹಿಸಿಕೊಡುವುದಿಲ್ಲ ಎಂದು ತಿಳಿಯುತ್ತೀಯೇನು ?

[ಮತ್ತಾಯ. ೨೬। ೫೩]

ಸಮೀಕ್ಷಕ—ಬೆದರಿಸುತ್ತಲೂ ಹೋಗುತ್ತಾನೆ. ತನ್ನ ಮತ್ತು ತನ್ನ ತಂದೆಯ ದೊಡ್ಡಸ್ತಿಕೆಯನ್ನೂ ಬಣ್ಣಿಸುತ್ತಾ ಹೋಗುತ್ತಾನೆ. ಆದರೆ ಏನೂ ಮಾಡಲಾರನು. ಆಶ್ಚರ್ಯದ ವಿಷಯವನ್ನು ನೋಡಿರಿ! ಮಹಾಯಾಜಕನು ಇವನನ್ನು—ಇವರು ನಿನ್ನ ವಿರುದ್ಧ ಸಾಕ್ಷಿ ಹೇಳುತ್ತಿದ್ದಾರೆ; ಅದಕ್ಕೆ ಉತ್ತರವನ್ನು ಕೊಡು ಎಂದು ಕೇಳಿದಾಗ, ಯೇಸುವು ಸುಮ್ಮನಿದ್ದನು; ಯೇಸುವು ಏಗೆ ಒಳ್ಳೆಯದನ್ನು ಮಾಡಲಿಲ್ಲ. ಏಕೆಂದರೆ—ನಿಜವಾದುದನ್ನು ಅಲ್ಲಿ ಅವಶ್ಯವಾಗಿಯೂ ಹೇಳಿದ್ದರೆ ಅದೂ ಜಿನ್ನಾಗಿತ್ತು. ಇಂತಹ ಬಹಳ ಗರ್ವದ ಮಾತುಗಳನ್ನಾಡುವುದು ಉಚಿತವಾಗಿರಲಿಲ್ಲ. ಮತ್ತು ಯಾರು ಯೇಸುವಿನ ಮೇಲೆ ಸುಳ್ಳು, ದೋಷಗಳನ್ನು ಹೊರಿಸಿ, ಹೊಡೆದರೋ ಅವರಿಗೂ ಅದು ಉಚಿತವಾಗಿರಲಿಲ್ಲ. ಏಕೆಂದರೆ ಯೇಸುವಿನ ಅಪರಾಧವು, ಅವರು ಆತನ ವಿಷಯದಲ್ಲಿ ವರ್ತಿಸಿದ ರೀತಿಗೆ ತಕ್ಕುದಾಗಿರಲಿಲ್ಲ. ಆದರೆ, ಅವರೂ ಕಾಡಾಡಿಗಳೇ ಆಗಿದ್ದರಲ್ಲವೆ? ನ್ಯಾಯದ ವಿಷಯವನ್ನೇನು ತಿಳಿದಾರು? ಯೇಸುವು ಸುಳ್ಳುಸುಳ್ಳೇ ದೇವರ ಮಗನಾಗಿ ಕೂಡದಿದ್ದರೆ, ಮತ್ತು ಅವರೂ ಅವನೊಂದಿಗೆ ಈ ರೀತಿಯ ದುಷ್ಟತನದಿಂದ ವರ್ತಿಸದೆ ಇರುತ್ತಿದ್ದರೆ, ಇಬ್ಬರಿಗೂ ಉತ್ತಮವಾಗಿರುತ್ತಿತ್ತು. ಆದರೆ ಅಷ್ಟು ವಿದ್ಯೆಯನ್ನೂ, ಧರ್ಮಾತ್ಮತನವನ್ನೂ, ನ್ಯಾಯಶೀಲತೆಯನ್ನೂ ಎಲ್ಲಿಂದ ತರುವುದು? ॥೬೬॥

೬೭. ಯೇಸುವು ಅಧ್ಯಕ್ಷನಮುಂದೆ ನಿಂತನು; ಮತ್ತು ಅಧ್ಯಕ್ಷನು ಅವನನ್ನು "ನೀನು ಯೆಹೂದ್ಯರ ರಾಜನೋ?" ಎಂದು ಕೇಳಿದನು. ಯೇಸುವು "ನೀವೇ ಹೇಳುತ್ತೀರಲ್ಲ" ಅಂದನು. ಮಹಾಯಾಜಕರೂ, ಹಿರಿಯರೂ ಆತನ ಮೇಲೆ ದೋಷವನ್ನು ಆರೋಪಿಸುತ್ತಿದ್ದಾಗ, ಆತನು ಏನೂ ಉತ್ತರಕೊಡಲಿಲ್ಲ. ಆಗ ಪಿಲಾತನು ಆತನನ್ನು—"ಇವರು ನಿನಗೆ ವಿರುದ್ಧವಾಗಿ ಎಷ್ಟು ಸಾಕ್ಷ್ಯ ಕೊಡುತ್ತಾರೆ ಎಂಬುದನ್ನು ನೀನು ಆಲಿಸುವುದಿಲ್ಲವೋ?" ಎಂದು ಕೇಳಿದನು.

ಆದರೆ ಆತನು ಅಧ್ಯಕ್ಷನು ಆಶ್ಚರ್ಯಪಡುವಷ್ಟರವರೆಗೂ ಒಂದು ಮಾತಿಗಾದರೂ ಅವನಿಗೆ ಉತ್ತರಕೊಡಲಿಲ್ಲ. ಆಗ ಪಿಲಾತನು— "ಕ್ರಿಸ್ತನೆನಿಸಿಕೊಳ್ಳುವ ಯೇಸುವಿಗೆ ನಾನೇನು ಮಾಡಲಿ?" ಎಂದು ಅವರನ್ನು ಕೇಳಿದನು. ಎಲ್ಲರೂ ಅವನಿಗೆ—"ಆತನು ಶಿಲುಬೆಗೇರಿಸಲ್ಪಡಲಿ" ಎಂದರು. ಮತ್ತು ಯೇಸುವಿಗೆ ಛಡಿಯಿಂದ ಥಳಿಸಿ, ಶಿಲುಬೇಯ ಮೇಲೇರಿಸಲ್ಪಡಲು ಒಪ್ಪಿಸಿದನು. ಆಮೇಲೆ ಅಧ್ಯಕ್ಷನ ಸಿಪಾಯಿಗಳು ಯೇಸುವನ್ನು ಅಧ್ಯಕ್ಷಭವನಕ್ಕೆ ಕರೆದುಕೊಂಡುಹೋಗಿ ಸೇನೆಯೆನ್ನೆಲ್ಲಾ ಆತನ ಬಳಿ ಸೇರಿಸಿದರು ಮತ್ತು ಅವರು ಆತನ ಬಟ್ಟೆಗಳನ್ನು ತೆಗೆದುಹಾಕಿ ಕೆಂಪು ಉಡುಪನ್ನು ತೊಡಿಸಿದರು. ಮತ್ತು ಮುಳ್ಳುಗಳ ಕಿರೀಟವನ್ನು ಹೆಣೆದು, ಆತನ ತಲೆಯ ಮೇಲೆ ಇಟ್ಟರು. ಮತ್ತು ಅವನ ಬಲಗೈಯಲ್ಲಿ ಜೊಂಡನ್ನು ಕೊಟ್ಟರು; ಮತ್ತು ಆತನ ಮುಂದೆ ಮೊಣಕಾಲೂರಿ—"ಯೆಹೂದ್ಯರ ಅರಸನೆ! ನಮಸ್ಕಾರ" ಎಂದು ಆತನನ್ನು ಪರಿಹಾಸ್ಯಮಾಡಿದರು. ಮತ್ತು ಆತನ ಮೇಲೆ ಉಗುಳಿದರು; ಮತ್ತು ಬೆತ್ತವನ್ನು ತೆಗೆದುಕೊಂಡು ಆತನ ತಲೆಯ ಮೇಲೆ ಹೊಡೆದರು. ಆತನನ್ನು ಪರಿಹಾಸ್ಯಮಾಡಿ ಮುಗಿಸಿದ ಮೇಲೆ ಆ ಉಡುಪನ್ನು ತೆಗೆದು, ಕರಿಯ ಬಟ್ಟೆಯನ್ನು ಉಡಿಸಿ ಆತನನ್ನು ಶಿಲುಬೆಗೆ ಹಾಕುವದಕ್ಕೆ ಕರೆದುಕೊಂಡು ಹೋದರು. ಅವರು ಗೊಲ್ಗೊಥಾ ಅಂದರೆ ಕಪಾಲಸ್ಥಳ ಎಂದೆನಿಸಿಸುವ ಸ್ಥಾನಕ್ಕೆ ಸೇರಿದಾಗ ಆತನಿಗೆ ದ್ರಾಕ್ಷಾರಸದಲ್ಲಿ ಪಿತ್ತವನ್ನು ಬೆರೆಸಿ, ಕುಡಿಯುವದಕ್ಕೆ ಕೊಟ್ಟರು. ಆದರೆ ಆತನು ರುಚಿನೋಡಿ ಕುಡಿಯಲಿಚ್ಛಿಸಲಿಲ್ಲ. ಆಗ ಅವರು ಅವನನ್ನು ಶಿಲುಬೆಗೆ ಹಾಕಿದರು. ಮತ್ತು ಅವರು ಆತನ ದೋಷಪತ್ರವನ್ನು ಆತನ ತಲೆಯಮೇಲೆ ಹಚ್ಚಿದರು. ಆಗ ಇಬ್ಬರು ದರೋಡೆಕೋರರು ಒಬ್ಬನು ಬಲಗಡೆಯೂ, ಇನ್ನೊಬ್ಬನು ಎಡಗಡೆಯೂ ಆತನ ಸಂಗಡ ಶಿಲುಬೆಗಳಿಗೆ ಹಾಕಲ್ಪಟ್ಟರು. ಆ ಕಡೆಯಿಂದ ಓಡಾಡುವ ಜನರು ತಮ್ಮ ತಲೆ ಅಲ್ಲಾಡಿಸಿ, ಮತ್ತು "ದೇವಾಲಯವನ್ನು ಕೆಡಹುವವನೇ! ನಿನ್ನನ್ನು ರಕ್ಷಿಸಿಕೊ. ದೇವರ ಮಗನಾಗಿದ್ದರೆ, ಶಿಲುಬೆಯಿಂದ ಇಳಿದು ಬಾ" ಎಂದು ಹೇಳಿ ಆತನನ್ನು ನಿಂದಿಸಿದರು. ಹಾಗೆಯೇ ಮಹಾಯಾಜಕರೂ, ಹಿರಿಯರೂ ಸಂಗ

ರಿಗರೂ ಹಾಸ್ಯಮಾಡಿ—" ಅವನು ಬೇರೆಯವರನ್ನು ರಕ್ಷಿಸಿದನು; ತನ್ನನ್ನು ರಕ್ಷಿಸಿಕೊಳ್ಳಲಾರನು. ಮತ್ತು ಅವನು ಇಸ್ರಯೇಲಿನ ಅರಸನಾದರೆ, ಈಗ ಶಿಲುಬೆಯಿಂದ ಇಳಿದು ಬರಲಿ. ಮತ್ತು ನಾವು ಅವನನ್ನು ನಂಬುವೆವು. ಅವನು ದೇವರಲ್ಲಿ ಭರವಸೆಯಿಟ್ಟ್ಟಿದ್ದಾನೆ. ದೇವರು ಅವನನ್ನು ಇಚ್ಛಿಸುತ್ತಾನಾದರೆ, ಈಗ ಅವನನ್ನು ರಕ್ಷಿಸಲಿ. ಏಕೆಂದರೆ--ತಾನು ದೇವರ ಮಗನಾಗಿದ್ದೇನೆಂದು ಅತನು ಹೇಳಿದನು" ಎಂದರು. ಅತನ ಸಂಗಡ ಏರಿಸಲ್ಪಟ್ಟಿದ್ದ ದರೋಡೆಕೋರರೂ ಸಹ ಅತನನ್ನು ಇದೇ ಪ್ರಕಾರ ನಿಂದಿಸಿದರು. ಎರಡನೆಯ ಜಾವದಿಂದ ಮೂರನೆಯ ಜಾವದವರೆಗೆ ಸಂಪೂರ್ಣ ದೇಶದಲ್ಲಿ ಕತ್ತಲಾಗಿ ಹೋಯಿತು. ಮೂರನೆಯ ಜಾವದ ಸುಮಾರಿಗೆ ಯೇಸುವು ಉಚ್ಚ ಸ್ವರದಿಂದ ಕೂಗಿ—" ಎಲೀ ಎಲೀ ಲಾಮಾ ಸಬಕ್ತಾನೀ" ಅಂದರೆ "ಓ ನನ್ನ ದೇವರೆ! ಓ ನನ್ನ ದೇವರೆ! ನೀನು ಯಾಕೆ ನನ್ನನ್ನು ಕೈಬಿಟ್ಟಿದ್ದೀಯೆ?" ಎಂದು ಹೇಳಿದನು. ಅಲ್ಲಿ ನಿಂತಿದ್ದವರಲ್ಲಿ ಎಷ್ಟೋ ಜನ ಇದನ್ನು ಕೇಳಿ—" ಇವನು ಎಲಿಯನನ್ನು ಕರೆಯುತ್ತಾನೆ" ಅಂದರು. ಅವರಲ್ಲಿ ಒಬ್ಬನು ತಕ್ಷಣ ಓಡಿಹೋಗಿ ಸ್ಪಂಜನ್ನು ತೆಗೆದು ಕೊಂಡು ಹುಳಿರಸದಲ್ಲಿ ನೆನಸಿದನು. ಮತ್ತು ಒಂದು ಕೋಲಿಗೆ ಸಿಕ್ಕಿಸಿ, ಅತನಿಗೆ ಕುಡಿಯುವದಕ್ಕೆ ಕೊಟ್ಟನು. ಆಗ ಯೇಸು ಪುನಃ ಮಹಾ ಧ್ವನಿಯಿಂದ ಕೂಗಿ, ಪ್ರಾಣಬಿಟ್ಟನು.

[ಮತ್ತಾಯ ೨೭: ೧೧-೧೪, ೨೨-೨೪, ೨೬-೩೧
೩೩-೩೪, ೩೭-೫೦]

ಸವಿಾಕ್ಷಕ—ಯೇಸುವಿನೊಂದಿಗೆ ಆ ದುಷ್ಟರು ಸರ್ವದಾ ದುಷ್ಕಾರ್ಯಮಾಡಿದರು. ಆದರೆ ಯೇಸುವಿನಲ್ಲಿ ದೋಷವೂ ಇದೆ. ಏಕೆಂದರೆ–ದೇವರಮಗನಾದವನೂ ಅಲ್ಲ; ದೇವರು ಯಾರ ತಂದೆಯೂ ಅಲ್ಲ. ಏಕೆಂದರೆ—ಅವನು ಯಾವನಿಗಾದರೂ ತಂದೆಯಾದರೆ, ಯಾವನಿಗಾದರೂ ಮಾವ, ಮೈದುನ, ಬೀಗ—ಮೊದಲಾದವರೂ ಆದಾನು! ಮತ್ತು ಅಧ್ಯಕ್ಷನು ಕೇಳಿದಾಗ, ನಿಜವಾಗಿದ್ದುದನ್ನು ಹೇಳಬೇಕಾಗಿತ್ತು. ಮತ್ತು ಮೊದಲು ಮಾಡಿದ ಆಶ್ಚರ್ಯ ಕರ್ಮಗಳೆಲ್ಲಾ ಸತ್ಯವಾಗಿದ್ದರೆ, ಈಗಲೂ ಶಿಲುಬೆಯಿಂದ ಇಳಿದು, ಎಲ್ಲರನ್ನೂ ಶಿಷ್ಯರನ್ನಾಗಿ ಮಾಡಿ

ಕೊಂಡು ಬಿಡುತ್ತಿದ್ದನೆಂಬದೇನೋ ಸರಿ. ಮತ್ತು ದೇವರ ಮಗನಾಗಿದ್ದರೆ, ದೇವರೂ ಅವನನ್ನು ರಕ್ಷಿಸಿಕೊಳ್ಳುತ್ತಿದ್ದನು. ಮತ್ತು ಅವನು ತ್ರಿಕಾಲದರ್ಶಿಯಾಗಿದ್ದರೆ, ದ್ರಾಕ್ಷಾರಸದಲ್ಲಿ ಪಿತ್ತ ಬೆರೆತುದನ್ನು ರುಚಿನೋಡಿ ಏಕೆ ವರ್ಜಿಸುತ್ತಿದ್ದನು? ಅವನು ಮೊದಲೇ ತಿಳಿದಿರುತ್ತಿದ್ದನು. ಮತ್ತು ಅತನು ಚಮತ್ಕಾರಿಯಾಗಿದ್ದರೆ, ಕೂಗಿ ಕೂಗಿ ಪ್ರಾಣವನ್ನೇಕೆ ತೊರೆಯುತ್ತಿದ್ದನು? ಇದರಿಂದ ಯಾವನಾದರೂ ಎಷ್ಟು ಚಾತುರ್ಯಬೇಕಾದರೂ ಮಾಡಲಿ; ಕೊನೆಗೆ ಸತ್ಯವು ಸತ್ಯವೇ ಆಗುವುದು; ಸುಳ್ಳು ಸುಳ್ಳೆ ಆಗುವುದು—ಎಂದು ತಿಳಿದುಕೊಳ್ಳಬೇಕು. ಇದರಿಂದ ಯೇಸುವು ಆ ಸಮಯದ ಕಾಡು ಜನರಲ್ಲಿ ಸ್ವಲ್ಪ ಉತ್ತಮನಾಗಿದ್ದನು; ಅವನು ಚಮತ್ಕಾರಿಯೂ ಆಗಿರಲಿಲ್ಲ; ದೇವರ ಮಗನೂ ಆಗಿರಲಿಲ್ಲ ಮತ್ತು ವಿದ್ವಾಂಸನೂ ಆಗಿರಲಿಲ್ಲ—ಎಂಬುದೂ ಸಿದ್ಧವಾಗುತ್ತದೆ. ಏಕೆಂದರೆ—ಹಾಗೆ ಆಗಿದ್ದ ಪಕ್ಷದಲ್ಲಿ ಅವನು ಇಂತಹ ದುಃಖವನ್ನೇಕೆ ಅನುಭವಿಸುತ್ತಿದ್ದನು. ॥೮೭॥

೮೮. ಮತ್ತು ನೋಡಿರಿ, ಆಗ ಮಹಾ ಭೂಕಂಪವಾಯಿತು. ದೇವರ ಒಬ್ಬ ದೂತನು ಇಳಿದನು. ಮತ್ತು ಬಂದು, ಸಮಾಧಿಯ ಬಾಗಲಿನಿಂದ ಕಲ್ಲನ್ನು ಉರುಳಿಸಿ, ಅದರ ಮೇಲೆ ಕುಳಿತುಕೊಂಡನು. ಆತನು ಇಲ್ಲಿ ಇಲ್ಲ. ತಾನು ಹೇಳಿದಂತೆ ಜೀವಿತನಾಗಿ ಎದ್ದಿದ್ದಾನೆ. ಆತನ ಶಿಷ್ಯರಿಗೆ ತಿಳಿಸುವದಕ್ಕೆ ಹೋದಾಗ, ಯೇಸು ಅವರಿಗೆ ಭೇಟಿಯಾದನು; "ನಿಮಗೆ ಶುಭವಾಗಲಿ" ಎಂದನು, ಮತ್ತು ಅವರು ಹತ್ತಿರಕ್ಕೆ ಬಂದು, ಆತನ ಪಾದಗಳನ್ನು ಹಿಡಿದುಕೊಂಡು ಅವನಿಗೆ ನಮಸ್ಕಾರ ಮಾಡಿದರು. ಆಗ ಯೇಸು ಅವರಿಗೆ—"ಹೆದರಬೇಡಿರಿ. ಹೋಗಿ, ನನ್ನ ಸಹೋದರರಿಗೆ ಅವರು ಗಲಿಲಾಯಕ್ಕೆ ಹೋಗಬೇಕು ಮತ್ತು ಅವರು ಅಲ್ಲಿ ನನ್ನನ್ನು ನೋಡುವರು ಎಂದು ತಿಳಿಸಿರಿ." ಎಂದು ಹೇಳಿದನು. ಹನ್ನೊಂದು ಮಂದಿ ಶಿಷ್ಯರು ಗಲಿಲಾಯಕ್ಕೆ ಹೋಗಿ ಯೇಸು ತಮಗೆ ತೋರಿಸಿದ್ದ ಬೆಟ್ಟದ ಮೇಲಕ್ಕೆ ಹೋದರು. ಅಲ್ಲಿ ಅವರು ಆತನನ್ನು ಕಂಡು, ಆತನಿಗೆ ಪ್ರಣಾಮಮಾಡಿದರು. ಆದರೆ ಎಷ್ಟೋ ಮಂದಿಗೆ ಸಂದೇಹವಾಯಿತು. ಯೇಸು ಅವರ ಹತ್ತಿರಕ್ಕೆ ಬಂದು ಅವರಿಗೆ ಪರಲೋಕದಲ್ಲಿಯೂ, ಭೂಲೋಕ

ದಲ್ಲಿಯೂ ಎಲ್ಲಾ ಅಧಿಕಾರವೂ ನನಗೆ ಕೊಡಲ್ಪಟ್ಟಿದೆ, ಮತ್ತು ನೋಡಿರಿ! ನಾನು ಜಗತ್ತಿನ ಸಮಾಪ್ತಿಯವರೆಗೆ ಎಲ್ಲಾ ದಿವಸಗಳೆಲ್ಲಿಯೂ ನಿಮ್ಮ ಸಂಗಡ ಇರುತ್ತೇನೆ" ಎಂದು ಹೇಳಿದನು.

[ಮತ್ತಾಯ. ೨೮। ೨, ೬, ೮-೧೦, ೧೬-೧೮, ೨೦]

ಸವಿಾಕ್ಷಕ—ಈ ಮಾತೂ ಸಹ ಸೃಷ್ಟಿಕ್ರಮ ಮತ್ತು ವಿದ್ಯೆಗೆ ವಿರುದ್ಧವಾದ ಕಾರಣ ಒಪ್ಪಲರ್ಹವಾಗುವದಲ್ಲ. ಮೊದಲನೆಯದಾಗಿ ದೇವರಿಗೆ ದೂತರಿರುವದು, ಅವರನ್ನು ಅತ್ತಿತ್ತ ಕಳುಹಿಸುವುದು, ಮೇಲಿನಿಂದ ಇಳಿಯುವುದು! ತಹಸೀಲ್ದಾರ ಅಥವಾ ಕಲೆಕ್ಟರರಿಗೆ ಸಮನಾಗಿ ದೇವರನ್ನು ಮಾಡಿಬಿಟ್ಟರೇನು? ಆ ಶರೀರದಿಂದಲೇ ಸ್ವರ್ಗಕ್ಕೆ ಹೋದನೆ? ಮತ್ತು ಎದ್ದು ಬಂದನೇ? ಆ ಹೆಂಗಸರು ಅವನ ಪಾದಗಳನ್ನು ಮುಟ್ಟಿ ನಮಸ್ಕಾರ ಮಾಡಿದರೆಂದರೆ, ಅದೇ ಶರೀರವಿತ್ತೇ? ಮತ್ತು ಅದು ಮೂರು ದಿನಗಳ ವರೆಗೆ ಕೊಳೆತು ಹೋಗಲಿಲ್ಲವೇಕೆ? ಮತ್ತು ತನ್ನ ಬಾಯಿಯಿಂದಲೇ ಎಲ್ಲಕ್ಕೂ ಅಧಿಕಾರಿಯಾಗುವುದು ಕೇವಲ ದಂಭದ ಮಾತು. ಶಿಷ್ಯರನ್ನು ಸಂಧಿಸುವುದು ಮತ್ತು ಅವರೊಡನೆ ಎಲ್ಲಾ ಮಾತುಗಳನ್ನೂ ಆಡುವುದು ಅಸಂಭವ. ಏಕೆಂದರೆ, ಈ ಮಾತುಗಳು ನಿಜವಾಗಿದ್ದರೆ, ಈಗಲೂ ಯಾರಾದರೂ ಜೀವಂತರಾಗುವುದಿಲ್ಲವೇಕೆ? ಮತ್ತು ಆ ಶರೀರದಿಂದಲೇ ಸ್ವರ್ಗಕ್ಕೂ ಸಹ ಏಕೆ ಹೋಗುವದಿಲ್ಲ?

ಇದು ಮತ್ತಾಯನು ಬರೆದ ಸುವಾರ್ತೆಯ ವಿಷಯವು ಮುಗಿಯಿತು. ಇನ್ನು ಮಾರ್ಕನು ಬರೆದ ಸುವಾರ್ತೆಯ ಬಗ್ಗೆ ಬರೆಯಲ್ಪಡುವುದು. ॥೮೮॥

ಮಾರ್ಕನು ಬರೆದ ಸುವಾರ್ತೆ (Saint Mark)

೮೯. ಇವನು ಬಡಗಿಯಲ್ಲವೇ? [ಮಾರ್ಕ. ೬। ೩]

ಸವಿಾಕ್ಷಕ—ವಾಸ್ತವವಾಗಿ ಯೋಸೇಫನು ಬಡಗಿಯಾಗಿದ್ದನು. ಆದುದರಿಂದ ಏಸುವೂ ಬಡಗಿಯಾಗಿದ್ದನು; ಎಷ್ಟೋ ವರ್ಷಗಳ ವರೆಗೆ ಬಡಗಿಯ ಕೆಲಸವನ್ನು ಮಾಡುತ್ತಿದ್ದನು. ಅನಂತರ ಪೈಗಂಬರ

ನಾಗುತ್ತಾ ಆಗುತ್ತಾ ದೇವಕುಮಾರನೇ ಆಗಿಬಿಟ್ಟನು. ಮತ್ತು ಕಾಡು ಜನರು ಅವನನ್ನು ಹಾಗೆಮಾಡಿದರು. ಆದಕಾರಣವೇ ಮಹಾ ಕೈಚಳಕವನ್ನು ತೋರ್ಪಡಿಸಿದನು. ಸೀಳುವುದು–ಕೊಯ್ಯುವುದು, ಕತ್ತರಿಸುವುದು. ಜೋಡಿಸುವುದೇ ಅವನ ಕೆಲಸವು. ॥೮೯॥

ಲೂಕನು ಬರೆದ ಸುವಾರ್ತೆ (Luke)

೯೦- ಯೇಸು ಅವನಿಗೆ—" ನನ್ನನ್ನು ನೀನು ಒಳ್ಳೆಯವನೆಂದು ಯಾಕೆ ಹೇಳುತ್ತೀ ! ದೇವರೊಬ್ಬನ ಹೊರತು, ಮತ್ತಾವನೂ ಒಳ್ಳೆಯವನಲ್ಲ " ಎಂದು ಹೇಳಿದನು. [ಲೂಕ ೧೮। ೧೯]

ಸಮಿಾಕ್ಷಕ—ಯೇಸುವೇ ಅದ್ವಿತೀಯನಾಗಿರುವ ಒಬ್ಬ ದೇವರ ಕಥನಮಾಡುವಾಗ ಕ್ರೈಸ್ತರು ಪವಿತ್ರಾತ್ಮ, ತಂದೆ ಮತ್ತು ಮಗ ಎಂಬ ಮೂವರನ್ನು ಎಲ್ಲಿಂದ ಸೃಜಿಸಿಕೊಂಡರು ? ॥೯೦॥

೯೧. ಆಗ ಆತನನ್ನು ಹೇರೋದನ ಬಳಿಗೆ ಕಳುಹಿಸಿದನು. ಹೇರೋದನು ಯೇಸುವನ್ನು ನೋಡಿ, ಬಹಳ ಆನಂದಿತನಾದನು. ಏಕೆಂದರೆ ಆತನ ವಿಷಯವಾಗಿ ಅನೇಕ ಸಂಗತಿಗಳನ್ನು ಕೇಳಿದ್ದರಿಂದ ಅತನನ್ನು ಕಾಣಬೇಕೆಂದು ಬಹುದಿನದಿಂದ ಅಪೇಕ್ಷಿಸುತ್ತಿದ್ದನು. ಮತ್ತು ಆತನ ಆಶ್ಚರ್ಯಕಾರ್ಯವನ್ನು ಸ್ವಲ್ಪ ನೋಡಲು ಅವನಿಗೆ ಆಸೆಯಾಯಿತು. ಅವನು ಆತನನ್ನು ಬಹಳ ವಿಷಯಗಳಲ್ಲಿ ಪ್ರಶ್ನಿಸಿದನು. ಆದರೆ ಆತನು ಅವನಿಗೆ ಏನೂ ಉತ್ತರಕೊಡಲಿಲ್ಲ.

[ಲೂಕ. ೨೩। ೭-೯]

ಸಮಿಾಕ್ಷಕ—ಈ ಮಾತು ಮತ್ತಾಯನ ರಚನೆಯಲ್ಲಿಲ್ಲವಾದುದರಿಂದ ಈ ಸಾಕ್ಷಿಗಳು ಕೆಟ್ಟುಹೋದರು. ಏಕೆಂದರೆ ಸಾಕ್ಷಿಗಳು ಯಾವಾಗಲೂ ಒಂದೇ ಬಗೆಯಾಗಿರಬೇಕು. ಮತ್ತು ಯೇಸುವು ಚತುರನೂ, ಚಮತ್ಕಾರಿಯೂ ಆಗಿದ್ದರೆ (ಹೆರೋದನಿಗೆ) ಉತ್ತರ ಕೊಡುತ್ತಿದ್ದನು. ಮತ್ತು ಚಮತ್ಕಾರವನ್ನು ತೋರಿಸುತ್ತಿದ್ದನು. ಇದರಿಂದ ಯೇಸುವಿನಲ್ಲಿ ವಿದ್ಯೆಯಾಗಲಿ, ಚಮತ್ಕಾರವಾಗಲಿ, ಏನೂ ಇರಲಿಲ್ಲವೆಂದು ತಿಳಿದುಬರುತ್ತದೆ. ॥೯೧॥

ಯೋಹಾನನು ಬರೆದ ಸುವಾರ್ತೆ (Saint John)

೯೨. ಆದಿಯಲ್ಲಿ ವಾಕ್ಯವಿತ್ತು ಮತ್ತು ವಾಕ್ಯವು ದೇವರ ಜೊತೆಯಲ್ಲಿತ್ತು. ಮತ್ತು ವಾಕ್ಯವು ದೇವರಾಗಿತ್ತು. ಅದು ಆದಿಯಲ್ಲಿ ದೇವರ ಜೊತೆಯಲ್ಲಿದ್ದಿತು. ಎಲ್ಲವೂ ಅದರ ಮೂಲಕ ಸೃಜಿಸಲ್ಪಟ್ಟಿತು. ಅವನಲ್ಲಿ ಜೀವನವಿತ್ತು. ಮತ್ತು ಆ ಜೀವನವು ಮನುಷ್ಯರಿಗೆ ಬೆಳಕಾಗಿತ್ತು. [ಪ-೧.೧ ೧-೪]

ಸಮೀಕ್ಷಕ—ಆದಿಯಲ್ಲಿ ವಕ್ತಾರನ ಹೊರತು ವಾಕ್ಯವಿರಲಾರದು. ಮತ್ತು ಆ ವಾಕ್ಯವೆಂದಿಗೂ ವೇದವಾಗಲಾರದು. ಏಕೆಂದರೆ—ಆದಿಯಲ್ಲಿ ವೇದವು ದೇವರೊಂದಿಗಿದ್ದಿದ್ದರೆ ಮೊದಲು ವಾಕ್ಯವಿದ್ದಿತೆಂದಾಗಲಿ ಅಥವಾ ದೇವರಿದ್ದನೆಂದಾಗಲಿ ಹೇಳುವುದು ಸರಿಹೋಗಲಾರದು. ಅದರ ಕಾರಣವಿಲ್ಲದವರೆಗೆ, ವಾಕ್ಯ ಮೂಲಕ ಸೃಷ್ಟಿಯು ಎಂದಿಗೂ ಆಗಲಾರದು. ಮತ್ತು ವಾಕ್ಯವಿಲ್ಲದೆಯೂ ಕರ್ತನು ಸುಮ್ಮನಿದ್ದು ಸೃಷ್ಟಿಯನ್ನುಂಟುಮಾಡಬಲ್ಲನು. ಜೀವನವು ಯಾವುದರಲ್ಲಿತ್ತು? ಅಥವಾ ಏನಾಗಿತ್ತು? ಈ ವಚನದಿಂದ ಜೀವರನ್ನು ಅನಾದಿಗಳೆಂದು ಒಪ್ಪುತ್ತೀರೋ? ಅನಾದಿಗಳಾಗಿರುವದಾದರೆ, ಆದಮನ ಹೊಳ್ಳೆಯಲ್ಲಿ ಶ್ವಾಸನನ್ನು ಊದುವುದು ಸುಳ್ಳಾಯಿತು. ಮತ್ತು ಜೀವನವು ಮನುಷ್ಯರಿಗೆ ಮಾತ್ರ ಬೆಳಕೇ? ಪಶುಮೊದಲಾದುವುಗಳಿಗಿಲ್ಲವೆ?॥೯೨॥

೯೩. ಅಷ್ಟರೊಳಗೆ ಸೈತಾನನು ಸೀಪೋನನ ಮಗನಾದ ಇಸ್ಕರಿಯೋತ ಯಹೂದನ ಮನಸ್ಸಿನಲ್ಲಿ ಯೇಸುವನ್ನು ಹಿಡಿದುಕೊಡಬೇಕೆಂಬ ಆಲೋಚನೆಯನ್ನು ಹುಟ್ಟಿಸಿದ್ದನು. [ಯೋಹಾನ. ೧೩.೨]

ಸಮೀಕ್ಷಕ—ಈ ಮಾತು ಸುಳ್ಳು; ಏಕೆಂದರೆ-ಸೈತಾನನು ಎಲ್ಲರನ್ನೂ ತಪ್ಪುದಾರಿಗೆಳೆಯುತ್ತಾನಾದರೆ ಸೈತಾನನನ್ನು ಯಾವನು ತಪ್ಪುದಾರಿಗೆಳೆಯುತ್ತಾನೆ? ಅವನು ತಾನಾಗಿ ತಪ್ಪುದಾರಿಗೆ ಹೋಗುತ್ತಾನೆ ಎನ್ನುವುದಾದರೆ ಮನುಷ್ಯರೂ ತಾವಾಗಿ ತಪ್ಪುದಾರಿಗೆ ಹೋಗಬಲ್ಲರು. ಹಾಗಿರುವಾಗ ಸೈತಾನನ ಅಗತ್ಯವಾದರೂ ಏನು? ಮತ್ತು ಸೈತಾನನನ್ನು ಉಂಟುಮಾಡುವವನೂ, ತಪ್ಪುದಾರಿಗೆಳೆಯುವವನೂ ದೇವರಾಗಿದ್ದರೆ ಕ್ರೈಸ್ತರ ದೇವರೇ ಸೈತಾನನಿಗೂ ಸೈತಾನನೆಂದು

ನಿಶ್ಚಿತನಾದನು. ದೇವರೇ ಅವನ ಮೂಲಕ ಎಲ್ಲರನ್ನೂ ತಪ್ಪುದಾರಿಗೆ ಎಳೆದನು. ಅಲ್ಲಿ ಇಂತಹ ಕೆಲಸಗಳು ದೇವರವು ಆಗಬಲ್ಲವೆ? "ಎಂದು ಯಾವನಾದರೂ ಈ ಕ್ರೈಸ್ತರನ್ನು ಕೇಳಿದರೆ? ಆದುದರಿಂದ ಕ್ರೈಸ್ತರ ಈ ಪುಸ್ತಕವನ್ನು ಬರೆದವರೂ ಯೇಸುವನ್ನು ದೇವರ ಮಗನಾಗಿ ಮಾಡಿದವರೂ ಸೈತಾನರಾಗಿದ್ದರೆ ಆಗಿರಬಹುದು; ಎಂಬುದಿಷ್ಟೇ ಸತ್ಯ. ಆದರೆ ಇದು ಈಶ್ವರಕೃತ ಪುಸ್ತಕವೂ ಆಗಲಾರದು; ಇದರಲ್ಲಿ ಹೇಳಲ್ಪಟ್ಟವನು ದೇವರೂ ಆಗಲಾರನು; ಮತ್ತು ಯೇಸುವು ದೇವರ ಮಗನೂ ಆಗಲಾರನು. ||೯೩||

೯೪. ನಿಮ್ಮ ಮನವು ಕಳವಳಗೊಳ್ಳದೆ ಇರಲಿ. ದೇವರನ್ನು ನಂಬಿರಿ ಮತ್ತು ನನ್ನ ತಂದೆಯ ಮನೆಯಲ್ಲಿ ಬಹಳ ವಾಸಸ್ಥಳಗಳಿವೆ. ಇಲ್ಲದಿದ್ದರೆ ನಾನು ನಿಮಗೆ ಹೇಳುತ್ತಿದ್ದೆನು. ನಿಮಗೆ ಸ್ಥಳವನ್ನು ಸಿದ್ಧ ಮಾಡುವದಕ್ಕೆ ಹೋಗುತ್ತೇನೆ, ನಾನು ಹೋಗಿ ನಿಮಗೆ ಸ್ಥಳವನ್ನು ಸಿದ್ಧಮಾಡಿದ ಮೇಲೆ ತಿರುಗಿ ಬಂದು, ನಾನಿರುವಲ್ಲಿ ನೀವೂ ಇರಲಾಗುವಂತೆ ನಿಮ್ಮನ್ನು ನನ್ನೆಡೆಗೆ ಕರೆದೊಯ್ಯುವೆನು. ಯೇಸುವು ಅವನಿಗೆ– "ನಾನೇ ಮಾರ್ಗವೂ, ಸತ್ಯವೂ, ಜೀವವೂ ಆಗಿದ್ದೇನೆ. ನನ್ನ ಮೂಲಕವಾಗಿಯಲ್ಲದೆ ಯಾವನೂ ತಂದೆಯ ಬಳಿಗೆ ಸೇರುವುದಿಲ್ಲ. ನೀವು ನನ್ನನ್ನು ಅರಿತಿದ್ದರೆ ನನ್ನ ತಂದೆಯನ್ನು ಅರಿತಿರುತ್ತಿದ್ದಿರಿ" ಎಂದು ಹೇಳಿದನು. [ಯೋಹಾನ ೧೪, ೧-೪, ೬, ೭]

ಸವಿಾಕ್ಷಕ—ಈಗ ನೋಡಿರಿ! ಯೇಸುವಿನ ಈ ಮಾತುಗಳು ಪೋಪಲೀಲೆಗಿಂತ ಕಡಿಮೆಯಾಗಿವೆಯೆ? ಇಂತಹ ಆಡಂಬರವನ್ನು ರಚಿಸದಿದ್ದರೆ, ಅವನ ಮತದಲ್ಲಾವನು ಸಿಲುಕಿಕೊಳ್ಳುತ್ತಿದ್ದನು? ಯೇಸುವು ತನ್ನ ತಂದೆಯನ್ನು ಗುತ್ತಿಗೆಗೆ ತೆಗೆದುಕೊಂಡಿದ್ದಾನೇನು? ಅವನು ಯೇಸುವಿಗೆ ವಶನಾಗಿದ್ದರೆ, ಪರಾಧೀನನಾದುದರಿಂದ ಅವನು ದೇವರೇ ಅಲ್ಲ; ಏಕೆಂದರೆ—ದೇವರು ಯಾವನ· ಸಿಫಾರಸನ್ನೂ ಕೇಳುವುದಿಲ್ಲ. ಯೇಸುವಿನ ಮೊದಲು ಯಾವನೂ ದೇವರನ್ನು ಪಡೆದಿರಲಾರನೇ? ಇಂತಹ ಸ್ಥಾನ ಆದಿಗಳ ಪ್ರಲೋಭನವನ್ನು ತೋರಿಸುತ್ತಿದ್ದು' ತಾನೇ ಮಾರ್ಗವೂ, ಸತ್ಯವೂ, ಜೀವನವೂ ಆಗುವವನು ಸರ್ವ

ವಿಧದಿಂದಲೂ ದಾಂಭಿಕನೆನ್ನಿಸುತ್ತಾನೆ. ಆದುದರಿಂದ ಈ ಮಾತು ಎಂದಿಗೂ ಸತ್ಯವಾಗಲಾರದು. ||೯೪||

೯೫. ನಾನು ನಿಮಗೆ ಸತ್ಯಸತ್ಯವಾಗಿ ಹೇಳುತ್ತೇನೆ—ನನ್ನನ್ನು ನಂಬುವವನು ನಾನು ಮಾಡುವ ಎಲ್ಲಾ ಕಾರ್ಯಗಳನ್ನೂ ತಾನೂ ಮಾಡುವನು ಮತ್ತು ಅವುಗಳಿಗಿಂತ ಮಹತ್ತಾದ ಕಾರ್ಯಗಳನ್ನೂ ಮಾಡುವನು. [ಯೋಹಾನ ೧೪, ೧೨]

ಸಮಿಾಕ್ಷಕ—ಈಗ ನೋಡಿರಿ! ಯೇಸುವಿನ ಮೇಲೆ ಪೂರ್ಣ ನಂಬಿಕೆಯಿಡುವ ಕ್ರೈಸ್ತರು ಹಾಗೆಯೇ ಶವಗಳನ್ನು ಬದುಕಿಸುವುದೇ ಮೊದಲಾದ ಕೆಲಸಗಳನ್ನು ಮಾಡಬಾರದೇಕೆ? ನಂಬಿಕೆಯಿಂದಲೂ ಆಶ್ಚರ್ಯಕಾರ್ಯಗಳನ್ನು ಮಾಡಲಾರರಾದರೆ, ಯೇಸುವೂ ಆಶ್ಚರ್ಯ ಕಾರ್ಯಗಳನ್ನು ಮಾಡಿರಲಿಲ್ಲವೆಂದು ನಿಶ್ಚಯವಾಗಿ ತಿಳಿಯಬೇಕು. ಏಕೆಂದರೆ ಯೇಸುವು ಸ್ವತಃ "ನೀವೂ ಆಶ್ಚರ್ಯಕಾರ್ಯಗಳನ್ನು ಮಾಡುವಿರಿ ಎಂದು ಹೇಳುತ್ತಾನೆ. ಆದರೂ ಸಹ ಕ್ರೈಸ್ತನಾವನೂ ಈಗ ಒಂದನ್ನಾದರೂ ಮಾಡಲಾರನು. ಹೀಗಿರುವಾಗ ಯೇಸುವನ್ನು, ಹೆಣಗಳನ್ನು ಬದುಕಿಸುವದೇ ಮೊದಲಾದ ಕಾರ್ಯಗಳ ಕರ್ತೃವೆಂದು ಒಪ್ಪಿಕೊಂಡು ಬಿಡಲು ಯಾವನ ಹೃದಯದ ಕಣ್ಣು ಒಡೆದು ಹೋಗಿದೆ? ||೯೫||

೯೬. ಯಾವನು ಅದ್ವೈತನೂ, ಸತ್ಯನೂ ಆದ ದೇವರೋ....
[ಯೋಹಾನ ೧೭, ೩]

ಸಮಿಾಕ್ಷಕ—ಅದ್ವೈತನಾದ ಒಬ್ಬನೇ ದೇವರು ಇರುವುದಾದರೆ, ಮೂವರೆಂಬ ಕ್ರೈಸ್ತರ ಹೇಳಿಕೆ ಸರ್ವಥಾ ಸುಳ್ಳಾದುದು. ||೯೬||

ಇದೇ ರೀತಿ ಬಹು ಕಡೆ ಸುವಾರ್ತೆಯಲ್ಲಿ ಅನ್ಯಥಾ ವಚನಗಳು ತುಂಬಿಕೊಂಡಿವೆ.

ಯೋಹಾನನ ಪ್ರಕಾಶಿತ ವಾಕ್ಯಗಳು
(The Revelation of St. John)

ಇನ್ನು ಯೋಹಾನನ ಅದ್ಭುತ ಮಾತುಗಳನ್ನು ಕೇಳಿರಿ—

೯೭. ತಮ್ಮ ತಮ್ಮ ತಲೆಗಳ ಮೇಲೆ ಚಿನ್ನದ ಕಿರೀಟಗಳನ್ನಿಟ್ಟು

ಕೊಂಡಿದ್ದರು. ಸಿಂಹಾಸನದ ಮುಂದೆ ದೇವರ ಏಳು ಆತ್ಮಗಳೂ ಆದ ಏಳು ಅಗ್ನಿದೀಪಗಳು ಉರಿಯುತ್ತಿದ್ದವು. ಸಿಂಹಾಸನದ ಮುಂದೆ ಗಾಜಿನ ಸಮುದ್ರವಿದೆ. ಸಿಂಹಾಸನದ ಸುತ್ತಮುತ್ತಲೂ ಮುಂದೆಯೂ, ಹಿಂದೆಯೂ ಕಣ್ಣುಗಳಿಂದ ತುಂಬಿಹೋಗಿರುವ ನಾಲ್ಕು ಜೀವಿಗಳವೆ.

[ಪ್ರಕಟಣೆ ೪, ೪-೬]

ಸಮಿಾಕ್ಷಕ—ಈಗ ನೋಡಿರಿ! ಒಂದು ನಗರದಂತೆ ಕ್ರೈಸ್ತರ ಸ್ವರ್ಗವಿದೆ. ಇವರ ದೇವರೂ ಕೂಡ ದೀಪದಂತಹ ಅಗ್ನಿಯಾಗಿರುವನು. ಚಿನ್ನದ ಕಿರೀಟ ಮೊದಲಾದ ಆಭರಣಗಳನ್ನು ಧರಿಸುವುದು ಮತ್ತು ಹಿಂದೆಮುಂದೆ ಕಣ್ಣುಗಳಿರುವುದು ಅಸಂಭವವಾದುದು. ಈ ಮಾತುಗಳನ್ನು ಯಾವನು ಒಪ್ಪಬಲ್ಲನು? ಅಲ್ಲಿ ಸಿಂಹ ಮುಂತಾದ ನಾಲ್ಕು ಪಶುಗಳಿವೆಯೆಂದು ಬರೆದಿದೆ. ॥೯೭॥

೯೮. ಸಿಂಹಾಸನದ ಮೇಲೆ ಕುಳಿತವನ ಬಲಗೈಯಲ್ಲಿ ಒಳಗೂ ಹಿಂಭಾಗದಲ್ಲಿಯೂ ಬರೆದಿದ್ದ ಒಂದು ಪುಸ್ತಕವನ್ನು ನೋಡಿದೆನು ಅದರ ಮೇಲೆ ಏಳು ಮುದ್ರೆಗಳಿಂದ ಮುದ್ರೆಯೊತ್ತಲ್ಪಟ್ಟಿದ್ದಿತು. ಈ ಪುಸ್ತಕವನ್ನು ಬಿಚ್ಚುವದಕ್ಕೂ ಮತ್ತು ಅದರ ಮುದ್ರೆಗಳನ್ನು ಒಡೆಯುವದಕ್ಕೂ ಯಾವನು ಯೋಗ್ಯನು? ಸ್ವರ್ಗದಲ್ಲಿಯೂ, ಪೃಥ್ವಿಯ ಮೇಲೆಯೂ; ಭೂಮಿಯಿಂದ ಕೆಳಗೂ ಯಾವನೂ ಆ ಪುಸ್ತಕವನ್ನು ಬಿಚ್ಚುವುದಕ್ಕಾಗಲಿ, ಅದನ್ನು ನೋಡುವುದಕ್ಕಾಗಲಿ, ಸಮರ್ಥನಾಗಿರಲಿಲ್ಲ. ನಾನು ಪುಸ್ತಕವನ್ನು ಬಿಚ್ಚುವುದಕ್ಕೆ, ಓದುವುದಕ್ಕೆ ಅಥವಾ ಅದನ್ನು ನೋಡುವುದಕ್ಕೆ ಯೋಗ್ಯನಾವನೂ ಸಿಕ್ಕಲಿಲ್ಲವಾದಕಾರಣ ಬಹಳ ಅಳಲಾರಂಭಿಸಿದೆನು. [ಪ್ರಕ. ೫, ೧-೪]

ಸಮಿಾಕ್ಷಕ—ನೋಡಿರಿ! ಕ್ರೈಸ್ತರ ಸ್ವರ್ಗದಲ್ಲಿ ಸಿಂಹಾಸನಗಳ ಮತ್ತು ಮನುಷ್ಯರ ವೈಭವವನ್ನು! ಪುಸ್ತಕವು ಅನೇಕ ಮುದ್ರೆಗಳಿಂದ ಮುದ್ರಿಸಲ್ಪಟ್ಟಿರುವುದು. ಅದನ್ನು ಬಿಚ್ಚುವುದೇ ಮೊದಲಾದ ಕಾರ್ಯ ಮಾಡುವವನು ಸ್ವರ್ಗದಲ್ಲಿಯೂ, ಪೃಥ್ವಿಯಮೇಲೂ ಯಾವನೂ ಸಿಕ್ಕಲಿಲ್ಲ! ಯೋಹಾನನು ರೋದನ! ಮತ್ತು ಆಮೇಲೆ ಒಬ್ಬ ಹಿರಿಯನು ಆ ಯೇಸುವೇ ಇದನ್ನು ಬಿಚ್ಚುವವನು ಎಂದು ಹೇಳಿದನು.

ತಾತ್ಪರ್ಯವಿಷ್ಟೆ—ಯಾವನ ಮದುವೆಯೋ, ಅವನದೇ ಹಾಡು! ನೋಡಿರಿ—ಯೇಸುವಿನ ಮೇಲೆಯೇ ಎಲ್ಲಾ ಮಾಹಾತ್ಮ್ಯಗಳೂ ಆರೋಪಿಸಲ್ಪಡುತ್ತವೆ. ಆದರೆ ಈ ಮಾತುಗಳೆಲ್ಲಾ ಕಥನಮಾತ್ರ ವಾಗಿರುತ್ತವೆ. ॥೯॥

೯೯. ನಾನು ದೃಷ್ಟಿಸಿದೆನು ಮತ್ತು ನೋಡಿರಿ! ಸಿಂಹಾಸನದ ನಾಲ್ಕು ಪ್ರಾಣಿಗಳ ನಡುವೆ ಮತ್ತು ಪ್ರಾಚೀನರ ನಡುವೆ, ಏಳು ಕೊಂಬುಗಳನ್ನೂ, ದೇವರಿಂದ ಸಮಸ್ತ ಪೃಥ್ವಿಯ ಮೇಲೆ ಕಳುಹಲ್ಪಟ್ಟ ದೇವರ ಏಳು ಆತ್ಮಗಳಾದ ಏಳು ಕಣ್ಣುಗಳನ್ನೂ, ಉಳ್ಳ. ವಧಿಸಲ್ಪ ಟ್ಟಿದ್ದ ಒಂದು ಮೇಕೆಯ ಮರಿ ನಿಂತಿದೆ. [ಪ್ರಕಟಣೆ ೫-೬]

ಸಮಿಾಕ್ಷಕ—ಈಗ ಯೋಹಾನನ ಸ್ವಪ್ನದ ಮನೋವ್ಯಾಪಾರ ವನ್ನು ನೋಡಿರಿ! ಆ ಸ್ವರ್ಗದ ಮಧ್ಯೆ ಎಲ್ಲಾ ಕ್ರೈಸ್ತರೂ, ನಾಲ್ಕು ಪಶುಗಳೂ ಮತ್ತು ಯೇಸುವೂ ಕೂಡ ಇದ್ದಾರೆ; ಬೇರೆ ಯಾರೂ ಇಲ್ಲ. ಇಲ್ಲಿಯಾದರೋ ಯೇಸುವಿಗೆ ಎರಡು ಕಣ್ಣುಗಳು ಮಾತ್ರ ಇದ್ದವು: ಕೊಂಬಿನ ಹೆಸರೂ ಸಹ ಇರಲಿಲ್ಲ ಮತ್ತು ಸ್ವರ್ಗಕ್ಕೆ ಹೋಗಿ ಅವನು ಏಳು ಕಣ್ಣುಳ್ಳವನೂ, ಏಳು ಕೊಂಬುಳ್ಳವನೂ ಆದನು ಎಂಬುದಿದು ಅದ್ಭುತವಾದ ಘಟನೆಯಾಯಿತು. ಮತ್ತು ದೇವರ ಆ ಏಳು ಆತ್ಮಗಳು ಯೇಸುವಿನ ಕಣ್ಣುಗಳೂ ಕೊಂಬುಗಳೂ ಆಗಿ ಹೋಗಿದ್ದುವು! ಅಯ್ಯೋ! ಇಂತಹ ಮಾತುಗಳನ್ನು ಕ್ರೈಸ್ತರು ಏಕೆ ಒಪ್ಪಿಕೊಂಡುಬಿಟ್ಟರು? ಸ್ವಲ್ಪವಾದರೂ ಬುದ್ಧಿಯನ್ನು ಉಪಯೋಗಿಸ ಬಹುದಾಗಿತ್ತು! ॥೯॥

೧೦೦—ಅವನು ಪುಸ್ತಕವನ್ನು ತೆಗೆದುಕೊಂಡಾಗ ಆ ನಾಲ್ಕು ಜೀವಿಗಳೂ, ಇಪ್ಪತ್ತನಾಲ್ಕು ಮಂದಿ ಹಿರಿಯರೂ ಆ ಮೇಕೆಯ ಮರಿಯ ಮುಂದೆ ಎರಗಿದರು. ಮತ್ತು ಪ್ರತಿಯೊಬ್ಬನ ಕೈಯಲ್ಲಿಯೂ ವೀಣೆಯೂ, ಪವಿತ್ರ ಜನರ ಪ್ರಾರ್ಥನೆಗಳಾದ ಧೂಪದಿಂದ ತುಂಬಿದ್ದ ಚಿನ್ನದ ಪಾತ್ರೆಗಳೂ ಇದ್ದವು. [ಪ್ರಕಟಣೆ. ೫।೮ ॥]

ಸಮಿಾಕ್ಷಕ—ಒಳ್ಳೆಯದು ಯೇಸುವು ಸ್ವರ್ಗದಲ್ಲಿರುವಾಗ ಧೂಪ, ದೀಪ, ನೈವೇದ್ಯ ಮತ್ತು ಧೂಪಾರತಿ ಮೊದಲಾದ ಪೂಜೆಯನ್ನಿವರು

ಯಾರಿಗೆ ಮಾಡಿದರು? ಮತ್ತು ಇಲ್ಲಿ ಪ್ರಾಟೆಸ್ಟೆಂಟ್ ಕ್ರೈಸ್ತರು ಮೂರ್ತಿಪೂಜೆಯನ್ನು ಖಂಡಿಸುತ್ತಾರೆ. ಮತ್ತು ಇವರ ಸ್ವರ್ಗ ಮೂರ್ತಿ ಪೂಜೆಯ ಮನೆಯಾಗುತ್ತಿದೆ. ॥೧೦೦॥

೧೦೧—ಮತ್ತು ಮೇಕೆಯ ಮರಿಯು ಮುದ್ರೆಗಳಲ್ಲಿ ಬಂದನ್ನು ಒಡೆಯುವಾಗ ನಾನು ದೃಷ್ಟಿಸಿದೆನು. ಮತ್ತು ಆ ನಾಲ್ಕು ಜೀವಿಗಳಲ್ಲಿ ಒಂದು ಜೀವಿಯು-" ಬಾ ಮತ್ತು ನೋಡು " ಎಂದು ಗುಡುಗಿನಂತಿದ್ದ ಸ್ವರದಿಂದ ಹೇಳುವುದನ್ನು ಕೇಳಿದೆನು. ಮತ್ತು ನಾನು ದೃಷ್ಟಿಸಿದೆನು. ಮತ್ತು ನೋಡಿರಿ! ಒಂದು ಬಿಳಿಯ ಕುದುರೆಯಿದೆ. ಮತ್ತು ಅದರ ಮೇಲೆ ಕುಳಿತಿರುವನ ಕೈಯಲ್ಲಿ ಬಿಲ್ಲುಯಿದೆ. ಮತ್ತು ಅವನಿಗೆ ಕಿರೀಟವು ಕೊಡಲ್ಪಟ್ಟಿತ್ತು. ಮತ್ತು ಆತನು ಜಯಿಸುತ್ತಾ ಮತ್ತು ಜಯಿಸುವುದ ಕ್ಕೋಸ್ಕರ ಹೊರಟನು ಮತ್ತು ಆತನು ಎರಡನೆಯ ಮುದ್ರೆಯನ್ನು ಒಡೆದಾಗ, ಕೆಂಪದಾದ ಎರಡನೆಯ ಕುದುರೆಯು ಹೊರಟುಬಂದಿತು. ಅವನಿಗೆ ಭೂಮಿಯಿಂದ ಶಾಂತಿಯನ್ನು ತೆಗೆದುಬಿಡುವ ಅಧಿಕಾರವು ಕೊಡಲ್ಪಟ್ಟಿತು. ಅವನು ಮೂರನೆ ಮುದ್ರೆಯನ್ನು ಒಡೆದಾಗ ನೋರಿ, ಒಂದು ಕರಿಯ ಕುದುರೆಯಿದೆ. ಆತನು ನಾಲ್ಕನೇ ಮುದ್ರೆ ಯನ್ನು ಒಡೆದಾಗ ಇಗೊ! ಹಳದಿಯ ಬಣ್ಣದ ಕುದುರೆಯುಯಿದೆ. ಮತ್ತು ಅದರ ಮೇಲೆ ಕುಳಿತಿದ್ದವನ ಹೆಸರು ಮೃತ್ಯುವು-ಇತ್ಯಾದಿ.

[ಪ್ರಕ. ೬।೧-೫, ೭, ೮ ॥]

ಸವಿಾಕ್ಷಕ—ಇದು ಪುರಾಣಗಳಿಗಿಂತಲೂ ಹೆಚ್ಚಾದ ಮಿಥ್ಯಾ ಲೀಲೆಯು ಹೌದೋ ಅಲ್ಲವೋ ಎಂಬುದನ್ನೀಗ ನೋಡಿರಿ. ಭಲಾ! ಪುಸ್ತಕಗಳ ಬಂಧನಗಳ ಮುದ್ರೆಗಳ ಒಳಗೆ ಕುದುರೆಯೂ ಸವಾರರೂ ಹೇಗೆ ಇರಲು ಸಾಧ್ಯವಾಗಿರಬಹುದು? ಇದು ಸ್ವಪ್ನದ ಗಳಹುವಿಕೆ, ಇದನ್ನು ಸತ್ಯವೆಂದು ಒಪ್ಪಿದವರಲ್ಲಿ ಅವಿದ್ಯೆಯು ಎಷ್ಟಿದೆಯಂದರೂ ಕಡಿಮೆಯೇ ಸರಿ. ॥೧೦೧॥

೧೦೨. ಆವರು " ಒಡೆಯನೆ! ಪರಿಶುದ್ಧನೂ, ಸತ್ಯವಂತನೂ ಆಗಿರುವಾತನೆ! ನೀನೆಲ್ಲಿಯವರೆಗೆ ನ್ಯಾಯ ತೀರ್ಮಾನಮಾಡುವುದಿಲ್ಲ ಮತ್ತು ಭೂಮಿನಿವಾಸಿಗಳಿಂದ ನಮ್ಮ ರಕ್ತಕ್ಕೆ ಮುಯ್ಯಿ ತೀರಿಸಿ ಕೊಳ್ಳುವುದಿಲ್ಲ? " ಎಂದು ಮಹಾಶಬ್ದದಿಂದ ಕೂಗಿದರು. ಮತ್ತು

ಒಬ್ಬೊಬ್ಬನಿಗೂ ಒಂದೊಂದು ಬಿಳಿಯ ಬಟ್ಟೆಯು ಕೊಡಲ್ಪಟ್ಟಿತು. ಮತ್ತು ಅವರಿಗೆ '' ನಿಮ್ಮೊಂದಿಗಿರುವ ದಾಸರೂ ಮತ್ತು ನಿಮ್ಮ ಹಾಗೆ ಕೊಲೆಯಾಗಬೇಕಾಗಿರುವ ನಿಮ್ಮ ಸಹೋದರರೂ ಪೂರ್ಣವಾಗುವ ವರೆಗೆ ಇನ್ನು ಸ್ವಲ್ಪಕಾಲ ವಿಶ್ರಮಿಸಿಕೊಳ್ಳಿರಿ '' ಎಂದು ಹೇಳಲ್ಪಟ್ಟಿತು. [ಪ್ರಕಟ. ೬। ೧೦, ೧೧]

ಸಮಿಾಕ್ಷಕ—ಯಾರಾರು ಕ್ರೈಸ್ತರಾಗುವರೋ, ವಿಚಾರಣಾಧೀನ ಬಂದಿಗಳಾಗಿ ಹೀಗೆ ನ್ಯಾಯ ತೀರ್ಮಾನಮಾಡಿಸಲು ಅಳುತ್ತಿರುವರು; ಆದರೆ ವೇದಮಾರ್ಗವನ್ನು ಗ್ರಹಣಮಾಡುವವನ ನ್ಯಾಯ ತೀರ್ಮಾನವಾಗಲು ಸ್ವಲ್ಪವೂ ವಿಳಂಬವಾಗುವುದಿಲ್ಲ. '' ದೇವರ ಕೋರ್ಟು ಈ ಸಮಯದಲ್ಲಿ ಮುಚ್ಚಿದೆಯೇ ? ಮತ್ತು ನ್ಯಾಯದ ಕೆಲಸವೂ ನಡೆಯುವುದಿಲ್ಲವೆ ? ನ್ಯಾಯಾಧೀಶರು ನಿಷ್ಕರ್ಮಿಗಳಾಗಿ ಕುಳಿತಿರುವರೇ ? '' ಎಂದು ಕ್ರೈಸ್ತರನ್ನು ಕೇಳಬೇಕು; ಆಗ ಅವರು ಸರಿಯಾಗಿ ಯಾವ ಉತ್ತರವನ್ನೂ ಕೊಡಲಾರರು. ಇವರು ಹೇಳಿಕೆಯಿಂದ ಕೂಡಲೇ ಇವರ ಶತ್ರುಗಳಿಂದ ಮುಯ್ಯನ್ನು ತೀರಿಸಿಕೊಳ್ಳಲೂ ಆರಂಭಿಸುವುದರಿಂದ ಕ್ರೈಸ್ತರ ದೇವರ ಹಾದಿ ತಪ್ಪುವುದೂ ಉಂಟು. ಸತ್ತನಂತರ ತಮ್ಮ ದ್ವೇಷವನ್ನು ಸಾಧಿಸಿಕೊಳ್ಳುವುದರಿಂದ ಕ್ರೈಸ್ತರು ಕಚ್ಚುವ ಸ್ವಭಾವವುಳ್ಳವರಾಗಿರುತ್ತಾರೆ. ಶಾಂತಿ ಸ್ವಲ್ಪವೂ ಇರುವುದಿಲ್ಲ. ಮತ್ತು ಎಲ್ಲಿ ಶಾಂತಿಯಿರುವದಿಲ್ಲವೋ ಅಲ್ಲಿ ದುಃಖದ ಪಾರಾವಾರವಾದರೂ ಏನಿದ್ದೀತು ? ॥೧೦೨॥

೧೦೩. ಮತ್ತು ಬಿರುಗಾಳಿಯಿಂದ ಅಲ್ಲಾಡಿಸಲ್ಪಟ್ಟಾಗ, ಅತ್ತಿಯ ಮರದಿಂದ ಅದರ ಅಪಕ್ವವಾದ ಕಾಯಿಗಳು ಉದುರುವಂತೆ, ಆಕಾಶದ ನಕ್ಷತ್ರಗಳು ಭೂಮಿಗೆ ಬಿದ್ದುಹೋದವು. ಮತ್ತು ಆಕಾಶವು ಸುತ್ತಿಡುವ ಕಾಗದದಂತೆ ಬೇರೆಯಾಗಿ ಹೋಯಿತು.

[ಪ್ರಕಟಣೆ ೬। ೧೩, ೧೪]

ಸಮಿಾಕ್ಷಕ—ಈಗ ನೋಡಿರಿ ! ಭವಿಷ್ಯದ್ವಕ್ತೃವಾದ ಯೋಹಾನನು ವಿದ್ಯೆಯಿಲ್ಲದಿದ್ದುದರಿಂದಲೇ ಇಂತಹ ಸಿಕ್ಕಾಪಟ್ಟೆ ಕಥೆಗಳನ್ನು ಒದರಿದನು. ಅಲ್ಲ, ನಕ್ಷತ್ರಗಳೆಲ್ಲಾ ಲೋಕಗಳಾಗಿವೆ; ಒಂದು ಭೂಮಿಯ ಮೇಲೆ ಹೇಗೆ ಬೀಳಬಲ್ಲವು ? ಸೂರ್ಯಾದಿಗಳ ಆಕರ್ಷ

ಣವು ಅವುಗಳನ್ನು ಆಚೆ ಈಚೆ ಏಕೆತಾನೆ ಬರಹೋಗಗೊಡುವುದು? ಮತ್ತು ಆಕಾಶವು ಚಾಪೆಯಂತಿದೆಯೆಂದು ತಿಳಿದುಕೊಂಡಿದ್ದಾನೋ? ಈ ಆಕಾಶವು ಯಾವನಾದರೂ ಸುತ್ತಲಾಗುವಂತಹ ಅಥವಾ ಒಟ್ಟುಗೂಡಿಸಲಾಗುವಂತಹ ಸಾಕಾರವಸ್ತುವಲ್ಲ. ಆದುದರಿಂದ ಯೋಹಾನನ ಮೊದಲಾದವರೆಲ್ಲಾ ಕಾಡಾಡಿಗಳಾಗಿದ್ದರು. ಅವರಿಗೆ ಈ ವಿಷಯಗಳ ಸುದ್ದಿಯೆತ್ತಣದು? ॥೧೦೩॥

೧೦೪. ನಾನು ಅವರ ಸಂಖ್ಯೆಯನ್ನು ಕೇಳಿದೆನು. ಇಸ್ರಾಯೇಲನ ವಂಶಜರ ಸಮಸ್ತ ಕುಲಗಳಿಂದಲೂ, ಒಂದುಲಕ್ಷ ನಾಲ್ವತ್ತು ನಾಲ್ಕು ಸಾವಿರ ಜನರ ಮೇಲೆ ಮುದ್ರೆಯೊತ್ತಲ್ಪಟ್ಟಿತು. ಯಹೋವನ ಕುಲದವರಿಂದ ಹನ್ನೆರಡುಸಾವಿರ ಜನರ ಮೇಲೆ ಮುದ್ರೆಯೊತ್ತಲ್ಪಟ್ಟಿತು. [ಪ್ರಕಟಣೆ ೭। ೪, ೫]

ಸಮಿಾಕ್ಷಕ—ಬೈಬಲಿನಲ್ಲಿ ಬರೆಯಲ್ಪಟ್ಟ ದೇವರು ಇಸ್ರಾಯೇಲ ಮೊದಲಾದ ಕುಲಗಳಿಗೆ ಸ್ವಾಮಿಯಾಗಿರುವನೋ ಅಥವಾ ಪೂರ್ಣ ಜಗತ್ತಿಗೋ? ಹಾಗಲ್ಲದಿದ್ದರೆ, ಆ ಕಾಡಾಡಿಗಳ ಸಂಗಾತಿಯೇ ಏಕಿರುತ್ತಿದ್ದನು? ಅವರಿಗೇ ಸಹಾಯವನ್ನು ಮಾಡುತ್ತಿದ್ದನು; ಮತ್ತು ಇತರರ ಹೆಸರು-ಗುರುತನ್ನೂ ಸಹ ಗ್ರಹಿಸುತ್ತಿರಲಿಲ್ಲ. ಆದುದರಿಂದ ಅವನು ದೇವರಲ್ಲ. ಇಸ್ರಾಯೇಲ ಮೊದಲಾದ ಕುಲಗಳವರಿಗೆ ಮುದ್ರೆಯನ್ನೊತ್ತುವುದು ಅಲ್ಪಜ್ಞತೆಯಾಗಿರುತ್ತದೆ. ॥೧೦೪॥

೧೦೫. ಈ ಕಾರಣದಿಂದ ಅವರು ದೇವರ ಸಿಂಹಾಸನದ ಮುಂದೆ ಇದ್ದಾರೆ; ಮತ್ತು ಆತನ ಆಲಯದಲ್ಲಿ ರಾತ್ರಿ ಹಗಲು ಅವನ ಸೇವೆಮಾಡುತ್ತಾರೆ. [ಪ್ರಕಟಣೆ ೭। ೧೫]

ಸಮಿಾಕ್ಷಕ—ಇದು ಮಹಾಮೂರ್ತಿಪೂಜೆಯಲ್ಲವೆ? ಅಥವಾ ಅವರ ದೇವರು ದೇಹಧಾರಿಯಾಗಿ, ಮನುಷ್ಯನಂತೆ ಏಕದೇಶಿಯಲ್ಲವೆ? ಮತ್ತು ಕ್ರೈಸ್ತರ ದೇವರು ರಾತ್ರಿಯಲ್ಲಿ ನಿದ್ರಿಸುವುದೂ ಇಲ್ಲ. ನಿದ್ರಿಸುವುದಾದರೆ, ರಾತ್ರಿಯಲ್ಲಿ ಪೂಜೆಯನ್ನು ಹೇಗೆ ಮಾಡುತ್ತಿದ್ದಾರು? ಮತ್ತು ಅವನ ನಿದ್ದೆಯೊ ಹಾರಿಹೋಗುತ್ತಿರಬಹುದು. ಮತ್ತು ಹಗಲೂ ರಾತ್ರಿಯೂ ಎಚ್ಚರವಾಗಿರಬಹುದಾದರೆ ಅವನು ವಿಕ್ಷಿಪ್ತನೋ, ಅತಿ ರೋಗಿಯೋ ಆಗಿರಬಹುದು. ॥೧೦೫॥

೧೦೬. ಆಮೇಲೆ ಮತ್ತೊಬ್ಬ ದೇವದೂತನು ಬಂದು ವೇದಿಯ ಎಳಯಲ್ಲಿ ನಿಂತನು. ಅವನ ಕೈಯಲ್ಲಿ ಚಿನ್ನದ ಧೂಪಾರತಿಯಿತ್ತು. ಮತ್ತು ಅವನಿಗೆ ಬಹಳ ಧೂಪ ಕೊಡಲ್ಪಟ್ಟಿತು. ಮತ್ತು ಧೂಪದ ಹೊಗೆಯು ಪವಿತ್ರ ಜನರ ಪ್ರಾರ್ಥನೆಗಳೊಂದಿಗೆ ದೇವದೂತನ ಕೈಯೊಳಗಿಂದ ದೇವರ ಮುಂದೆ ಏರಿಹೋಯಿತು. ಮತ್ತು ದೂತನು ಧೂಪಾರತಿಯನ್ನು ತೆಗೆದುಕೊಂಡು, ಅದರಲ್ಲಿ ವೇದಿಯ ಬೆಂಕಿಯನ್ನು ತುಂಬಿಸಿ, ಅದನ್ನು ಭೂಮಿಗೆ ಎಸೆದನು. ಮತ್ತು ಶಬ್ದವೂ, ಗರ್ಜನೆಯೂ, ಮಿಂಚುಗಳೂ, ಮತ್ತು ಭೂಕಂಪವೂ ಉಂಟಾದುವು.

[ಪ್ರಕಟಣೆ ೮। ೩-೫]

ಸಮಿಾಕ್ಷಕ—ಈಗ ನೋಡಿರಿ! ಸ್ವರ್ಗದಲ್ಲಿದ್ದವರಿಗೆ ವೇದಿ, ಧೂಪ, ದೀಪ, ನೈವೇದ್ಯ ಮತ್ತು ತುತೂರಿಯ ಧ್ವನಿಗಳು ಆಗುತ್ತವೆ. ಪೈರಾಗಿಗಳ ಮುಂದಿರಕ್ಕಿಂತ ಕ್ರೈಸ್ತರ ಸ್ವರ್ಗವೇನಾದರೂ ಕಡಿಮೆಯಿದೆಯೆ? ಸ್ವಲ್ಪ ಗಜಿಬಿಜಿ ಹೆಚ್ಚೇ ಇದೆ. ॥೧೦೬॥

೧೦೭. ಮೊದಲನೆಯ ದೂತನು ತುತ್ತೂರಿಯನ್ನು ಊದಿದನು; ಮತ್ತು ರಕ್ತದಿಂದ ಕೂಡಿದ್ದ ಆನೆಕಲ್ಲುಗಳೂ, ಬೆಂಕಿಯೂ ಉಂಟಾದುವು. ಮತ್ತು ಅವು ಭೂಮಿಯ ಮೇಲೆ ಹಾಕಲ್ಪಟ್ಟವು. ಮತ್ತು ಭೂಮಿಯೊಳಗೆ ಮೂರರಲ್ಲಿ ಒಂದುಭಾಗ ಸುಟ್ಟುಹೋಯಿತು.

[ಪ್ರಕಟಣೆ ೮। ೭]

ಸಮಿಾಕ್ಷಕ—ಕ್ರೈಸ್ತರ ಭವಿಷ್ಯದ್ವಕ್ತಾರರೆ! ಭಲೆ! ದೇವರು, ನೀವರ ದೂತರು, ತುತ್ತೂರಿಯ ಶಬ್ದ ಮತ್ತು ಪ್ರಳಯಲೀಲೆ ಕೇವಲ ಮಕ್ಕಳಾಟವೆಂದೇ ತೋರುತ್ತದೆ. ॥೧೦೭॥

೧೦೮. ಮತ್ತು ಐದನೆ ದೂತನು ತುತ್ತೂರಿಯನ್ನೂದಿದನು. ಮತ್ತು ನಾನು ಆಕಾಶದಿಂದ ಭೂಮಿಗೆ ಬಿದ್ದ ಒಂದು ನಕ್ಷತ್ರವನ್ನು ಕಂಡೆನು. ಮತ್ತು ಅವನಿಗೆ ಅಗಾಧಕುಂಡದ ಕೂಪದ ಬೀಗದಕೈ ಕೊಡಲ್ಪಟ್ಟಿತು. ಮತ್ತು ಅವನು ಅಗಾಧಕುಂಡದ ಕೂಪವನ್ನು ತೆರೆದನು. ಮತ್ತು ಕೂಪದಿಂದ ದೊಡ್ಡ ಕುಲುಮೆಯ ಹೊಗೆಯಂತೆ ಹೊಗೆಯೆದ್ದಿತು. ಮತ್ತು ಆ ಹೊಗೆಯೊಳಗಿನಿಂದ ಮಿಡಿತೆಗಳು

ಭೂಮಿಯ ಮೇಲಕ್ಕೆ ಹೊರಟು ಬಂದವು. ಮತ್ತು ಭೂಮಿಯ ಚೇಳುಗಳಿಗೆ ಅಧಿಕಾರವಿರುವಂತೆ, ಅವಕ್ಕೆ ಅಧಿಕಾರ ಕೊಡಲ್ಪಟ್ಟಿತು ಮತ್ತು ಹಣೆಯ ಮೇಲೆ ದೇವರ ಮುದ್ರೆಯಿಲ್ಲದವರಾದ ಮನುಷ್ಯರಿಗೆ ಐದುತಿಂಗಳುಗಳವರೆಗೂ ನೋವು ಕೊಡಲ್ಪಡಲಿ ಎಂದು ಅವುಗಳಿಗೆ ಹೇಳಲ್ಪಟ್ಟಿತು. [ಪ್ರಕಟ. ೯। ೧-೫]

ಸಮಾಕ್ಷಕ—ತುತ್ತೂರಿಯ ಶಬ್ದಕೇಳಿ, ಆ ನಕ್ಷತ್ರಗಳು ಆ ದೂತರ ಮೇಲೆಯೇ ಮತ್ತು ಆ ಸ್ವರ್ಗದಲ್ಲಿಯೇ ಬಿದ್ದಿರಬಹುದೆ? ಇಲ್ಲಂತೂ ಬೀಳಲಿಲ್ಲ! ಒಳ್ಳೆಯದು, ಆ ಭಾವಿಯನ್ನು ಆ ಮಿಡಿತೆಗಳನ್ನು ಪ್ರಳಯಕಾಲಕ್ಕಾಗಿ ದೇವರೇ ಪಾಲಿಸಿರಬೇಕು. ಮತ್ತು ಮುದ್ರೆಯನ್ನು ನೋಡಿ "ಮುದ್ರೆಯುಳ್ಳವರನ್ನು ಕಚ್ಚಬೇಡಿರಿ" ಎಂದು ಓದಿಕೊಳ್ಳುತ್ತಲೂ ಇರಬಹುದೇನೋ? ಇದು ಕೇವಲ ಅಬೋಧ ಮಾನವರನ್ನು "ನೀವು ಕ್ರೈಸ್ತರಾಗದಿದ್ದರೆ ನಿಮ್ಮನ್ನು ಮಿಡತೆಗಳು ಕಚ್ಚುವವು" ಎಂದು ಹೆದರಿಸಿ, ಕ್ರೈಸ್ತರನ್ನಾಗಿ ಮಾಡುವ ಮೋಸಕೃತ್ಯವಾಗಿದೆ. ಇಂತಹ ಮಾತುಗಳು ವಿದ್ಯಾಹೀನ ದೇಶದಲ್ಲಿ ನಡೆಯಬಹುದು; ಆರ್ಯಾವರ್ತದಲ್ಲಿ ಅಲ್ಲ; ಇದು ಪ್ರಳಯದ ಮಾತಾಗಬಲ್ಲುದೇ? ॥೧೦೮॥

೧೦೯. ಕುದುರೆಯಾಳುಗಳ ಸೈನ್ಯದ ಸಂಖ್ಯೆ ಇಪ್ಪತ್ತು ಕೋಟಿಯಿದ್ದಿತು. [ಪ್ರಕಟ. ೯। ೧೬]

ಸಮಾಕ್ಷಕ—ಭಲೇ! ಇಷ್ಟು ಕುದುರೆಗಳು ಸ್ವರ್ಗದಲ್ಲಿ ಎಲ್ಲಿ ನಿಲ್ಲುತ್ತಿದ್ದುವು? ಎಲ್ಲಿ ಮೇಯುತ್ತಿದ್ದವು? ಎಲ್ಲಿರುತ್ತಿದ್ದುವು ಮತ್ತು ಎಷ್ಟು ಲದ್ದಿ ಹಾಕಿದವು? ಮತ್ತು ಅದರ ದುರ್ಗಂಧವೂ ಸ್ವರ್ಗದಲ್ಲಿ ಎಷ್ಟಾಗಿದ್ದಿರಬಹುದು! ಸಾಕು; ಇಂತಹ ಸ್ವರ್ಗ, ಇಂತಹ ದೇವರು ಮತ್ತು ಇಂತಹ ಮತಕ್ಕೆ ಆರ್ಯರಾದ ನಾವೆಲ್ಲರೂ ತಿಲಾಂಜಲಿಯನ್ನಿತ್ತಿದ್ದೇವೆ. ಇಂತಹ ಗೊಂದಲವು ಕ್ರೈಸ್ತರ ತಲೆಯಿಂದಲೂ ಸರ್ವಶಕ್ತನಾದ ಪರಮಾತ್ಮನ ಕೃಪೆಯಿಂದ ಇಳಿದುಹೋದರೆ ಒಳ್ಳೆಯದಾದೀತು. ॥೧೦೯॥

೧೧೦. ಮತ್ತು ನಾನು ಮೇಘವನ್ನು ಹೊದೆದುಕೊಂಡಿದ್ದ ಇನ್ನೊಬ್ಬ ಪರಾಕ್ರಮಿಯಾದ ದೂತನು ಸ್ವರ್ಗದಿಂದ ಇಳಿಯು

ತ್ತಿರುವುದನ್ನು ಕಂಡೆನು. ಅವನ ತಲೆಯ ಮೇಲೆ ಕಾಮನ ಬಿಲ್ಲು ಇತ್ತು. ಅವನ ಮುಖವು ಸೂರ್ಯನಂತೆಯೂ, ಅವನ ಪಾದಗಳು ಬೆಂಕಿಯ ಕಂಬಗಳಂತೆಯೂ ಇದ್ದುವು. ಮತ್ತು ಅವನು ತನ್ನ ಬಲಗಾಲನ್ನು ಸಮುದ್ರದ ಮೇಲೆಯೂ ಎಡಗಾಲನ್ನು ಭೂಮಿಯ ಮೇಲೆಯೂ ಇಟ್ಟನು. [ಪ್ರಕಟ. ೧೦। ೧-೩]

ಸಮಾಕ್ಷಕ--ಪುರಾಣಗಳ ಅಥವಾ ಹೊಗಳುಭಟ್ಟರ ಕತೆಗಳನ್ನೂ ಮೀರಿಸಿರುವ ಈ ದೂತನ ಕಥೆಯನ್ನೀಗ ನೋಡಿರಿ.॥೧೧೦॥

೧೧೧. ತರುವಾಯ ದೋಟಿಯಂತಿದ್ದ ಒಂದು ಅಳತೆ ಕೋಲು ನನಗೆ ಕೊಡಲ್ಪಟ್ಟಿತು. ಮತ್ತು "ಏಳು. ದೇವರ ಆಲಯವನ್ನೂ ಮತ್ತು ವೇದಿಯನ್ನೂ ಮತ್ತು ಅದರಲ್ಲಿನ ಆರಾಧಕರನ್ನೂ ಅಳತೆ ಮಾಡು" ಎಂದು ಹೇಳಲ್ಪಟ್ಟಿತು. [ಪ್ರಕಟ. ೧೧। ೧]

ಸಮಾಕ್ಷಕ—ಇಲ್ಲಿ ಮಾತ್ರವೇ ಏನು? ಕ್ರೈಸ್ತರ ಸ್ವರ್ಗದಲ್ಲಿಯೂ ದೇವಾಲಯಗಳು ಕಟ್ಟಲ್ಪಡುತ್ತವೆ ಹಾಗೂ ಅಳೆಯಲ್ಪಡುತ್ತವೆ. ಒಳ್ಳೆಯದು. ಅವರ ಸ್ವರ್ಗವೆಂತಹುದೋ, ಮಾತುಗಳೂ ಹಾಗೆಯೇ ಇರುತ್ತವೆ. ಆದುದರಿಂದ ಇಲ್ಲಿ ಸ್ವಾಮಿ ಭೋಜನದಲ್ಲಿಯೇಸುವಿನ ಶರೀರ, ಅವಯವ, ಮಾಂಸ ಮತ್ತು ರಕ್ತದ ಭಾವನೆ ಮಾಡಿ ಸೇವಿಸುತ್ತಾರೆ. ಮತ್ತು ಚರ್ಚುಗಳಲ್ಲಿಯೂ, ಶಿಲುಬೆ ಮೊದಲಾದುವುಗಳ ಆಕಾರವನ್ನು ನಿರ್ಮಿಸುವುದೂ ಮೂರ್ತಿಪೂಜೆಯಾಗಿರುತ್ತದೆ. ॥೧೧೧॥

೧೧೨. ಮತ್ತು ಸ್ವರ್ಗದಲ್ಲಿ ದೇವಾಲಯವು ತೆರೆಯಲ್ಪಟ್ಟಿತು. ಆತನ ಆಲಯದಲ್ಲಿ ಆತನ ಒಡಂಬಡಿಕೆಯ ಪೆಟ್ಟಿಗೆಯು ಕಾಣಿಸಿತು.

[ಪ್ರಕಟಣೆ. ೧೧। ೧೯]

ಸಮಾಕ್ಷಕ—ಸ್ವರ್ಗದಲ್ಲಿರುವ ದೇವಾಲಯವು ಯಾವಾಗಲೂ ಮುಚ್ಚಿರಬಹುದು ಮತ್ತು ಒಂದೊಂದು ಸಲ ತೆರೆಯಲ್ಪಡಬಹುದು. ದೇವರಿಗೂ ಯಾವುದಾದರೂ ಆಲಯವಿರಬಲ್ಲುದೇ? ವೇದೋಕ್ತ ಸರ್ವವ್ಯಾಪಕ ಪರಮಾತ್ಮನ ದೇವಾಲಯವು ಯಾವುದೂ ಇರಲಾರದು. ಸಾಕಾರನಾದ ಕ್ರೈಸ್ತದೇವರದು ಸ್ವರ್ಗದಲ್ಲಿ ಬೇಕಾದರೂ ಇರ

ಬಹುದು; ಭೂಮಿಯಲ್ಲಿ ಬೇಕಾದರೂ ಇರಬಹುದು. ಇಲ್ಲಿ ಆಗುವಂತಹ "ಢಣ ಢಣ ಭೋಂ ಭೋಂ" ಲೀಲೆಯೇ ಕ್ರೈಸ್ತರ ಸ್ವರ್ಗದಲ್ಲಿಯೂ ಆಗುತ್ತದೆ. ಮತ್ತು ಒಡಂಬಡಿಕೆಯ ಪೆಟ್ಟಿಗೆಯನ್ನೂ ಒಂದೊಂದು ಸಲ ಕ್ರೈಸ್ತರು ನೋಡುತ್ತಿರಬಹುದು. ಅದರಿಂದ ಯಾವ ಪ್ರಯೋಜನ ಸಾಧಿಸುತ್ತಿರಬಹುದೋ ಗೊತ್ತಿಲ್ಲ. ಈ ಎಲ್ಲಾ ಮಾತುಗಳೂ ಮಾನವರನ್ನು ಮರುಳುಗೊಳಿಸುವಂತಹುವೆಂಬುದೇ ಸತ್ಯ. ॥೧೧೨॥

೧೧೩. ಸ್ವರ್ಗದಲ್ಲಿ ಮತ್ತೊಂದು ಮಹಾಆಶ್ಚರ್ಯವು ಕಾಣಿಸಿತು. ಅದೇನೆಂದರೆ---ಸೂರ್ಯನನ್ನು ಧರಿಸಿಕೊಂಡಿದ್ದ ಒಬ್ಬ ಸ್ತ್ರೀಯಿದ್ದಾಳೆ. ಚಂದ್ರನು ಆಕೆಯ ಕಾಲುಗಳ ಕೆಳಗೆ ಇದ್ದಾನೆ. ಆಕೆಯ ತಲೆಯ ಮೇಲೆ ಹನ್ನೆರಡು ನಕ್ಷತ್ರಗಳ ಕಿರೀಟವಿದೆ. ಆಕೆಯು ಗರ್ಭಿಣಿಯಾಗಿ ಕೂಗಿಕೊಳ್ಳುತ್ತಿದ್ದಾಳೆ; ಏಕೆಂದರೆ ಪ್ರಸವವೇದನೆ ಅವಳಿಗೆ ಹತ್ತಿದೆ. ಅವಳು ಹೆರುವುದಕ್ಕಾಗಿ ಪೀಡಿತೆಯಾಗಿದ್ದಾಳೆ. ಎರಡನೆಯ ಆಶ್ಚರ್ಯವು ಸ್ವರ್ಗದಲ್ಲಿ ಕಾಣಿಸಿತು. ನೋಡಿರಿ—ಏಳು ತಲೆಗಳು ಮತ್ತು ಹತ್ತು ಕೊಂಬುಗಳನ್ನುಳ್ಳ ಒಂದು ಕೆಂಪಾದ ಮಹಾಘಟಸರ್ಪವಿದೆ. ಅದರ ತಲೆಗಳ ಮೇಲೆ ಏಳು ರಾಜಮಕುಟಗಳಿವೆ. ಅದರ ಬಾಲವು ಆಕಾಶದ ನಕ್ಷತ್ರಗಳ ಮೂರರಲ್ಲೊಂದುಭಾಗವನ್ನು ಎಳೆದು ಅವನ್ನು ಭೂಮಿಗೆ ಹಾಕಿತು. [ಪ್ರಕ. ೧೨, ೧-೫]

ಸವಿಾಕ್ಷಕ—ಈಗ ಆವರ ಉದ್ದುದ್ದವಾದ ಬುರುಡೆಗಳನ್ನು ನೋಡಿರಿ. ಇವರ ಸ್ವರ್ಗದಲ್ಲಿಯೂ ಸಹ ಬಡಪಾಯಿನಿಯಾದ ಹೆಂಗಸು ಕೂಗುತ್ತಾಳೆ! ಅವಳ ದುಃಖವನ್ನಾನನೂ ಕೇಳುವುದಿಲ್ಲ; ಪರಿಹರಿಸುವುದೂ ಇಲ್ಲ. ನಕ್ಷತ್ರಗಳ ಮೂರರಲ್ಲೊಂದು ಭಾಗವನ್ನು ಭೂಮಿಯಮೇಲೆ ಹಾಕಿದರೆ ಆ ಘಟಸರ್ಪದ ಬಾಲವಾದರೂ ಎಷ್ಟು ದೊಡ್ಡದಾಗಿತ್ತು? ಭಲಾ! ಭೂಲೋಕವಾದರೋ ಚಿಕ್ಕದು; ನಕ್ಷತ್ರಗಳು ದೊಡ್ಡ ದೊಡ್ಡ ಲೋಕಗಳಾಗಿವೆ. ಈ ಪೃಥ್ವಿಯಲ್ಲಿ ಒಂದೂ ಸಹ ಹಿಡಿಸಲಾರದು. ಆದರೆ ಇಲ್ಲಿ ಈ ನಕ್ಷತ್ರಗಳ ಮೂರರಲ್ಲೊಂದು ಭಾಗವು ಈ ಮಾತನ್ನು ಬರೆದವನ ಮನೆಯ ಮೇಲೆ ಬಿದ್ದಿರಬಹುದು; ನಕ್ಷತ್ರಗಳ ಮೂರರಲ್ಲೊಂದು ಭಾಗವನ್ನು ಸುತ್ತಿ ಕೆಳಗೆ ಹಾಕುವಷ್ಟು

ಪೊಡ್ಡದಾದ ಬಾಲವನ್ನುಳ್ಳ ಆ ಘಟಸರ್ಪವೂ ಕೂಡ ಅವನ ಮನೆಯಲ್ಲೇ ಇರುತ್ತದೊ ಏನೊ ! ॥೧೧೩॥

೧೧೪. ಸ್ವರ್ಗದಲ್ಲಿ ಯುದ್ಧ ನಡೆಯಿತು- ಮಿಕಯೇಲನೂ ಅವನ ದೂತರೂ ಘಟಸರ್ಪದ ಮೇಲೆ ಯುದ್ಧ ಮಾಡಿದರು. ಘಟಸರ್ಪನೂ ಅವನ ದೂತರೂ ಯುದ್ಧ ಮಾಡಿದರು.

[ಪ್ರಕಟಣೆ ೭೦, ೭]

ಸಮೀಕ್ಷಕ—ಕ್ರೈಸ್ತರ ಸ್ವರ್ಗಕ್ಕೆ ಯಾವನನಾದರೂ ಹೋದರೆ ಅವನೂ ಯುದ್ಧದಲ್ಲಿ ದುಃಖವನ್ನನುಭವಿಸುತ್ತಿರಬಹುದು. ಅಂತಹ ಸ್ವರ್ಗದ ಆಶೆಯನ್ನು ಇಲ್ಲಿಂದಲೇ ತೊರೆದು ಕೈಜೋಡಿಸಿ ಕುಳಿತಿರಿ. ಶಾಂತಿಭಂಗ ಮತ್ತು ಉಪದ್ರವ ಉಂಟಾಗುತ್ತಿರುವ ಸ್ಥಾನವು ಕ್ರೈಸ್ತರಿಗೇ ಯೋಗ್ಯವಾದುದಾಗಿದೆ. ॥೧೧೪॥

೧೧೫. ಆ ಮಹಾಘಟಸರ್ಪವು ಬೀಳಿಸಲ್ಪಟ್ಟಿತು. ಹೌದು, ಪಿಶಾಚನೆಂದೂ, ಸೈತಾನನೆಂದೂ ಹೇಳಿಸಿಕೊಳ್ಳುವ ಮತ್ತು ಸಮಸ್ತ ಜಗತ್ತನ್ನೂ ಭ್ರಾಂತಿಗೊಳಿಸುವ ಆ ಪುರಾತನ ಸರ್ಪವು !

[ಪ್ರ. ೧೨, ೯]

ಸಮೀಕ್ಷಕ- ಆ ಸೈತಾನನು ಸ್ವರ್ಗದಲ್ಲಿದ್ದಾಗ ಜನರನ್ನು ಭ್ರಮೆಗೊಳಿಸುತ್ತಿರಲಿಲ್ಲವೆ ! ಮತ್ತು ಅವನನ್ನು ಪೂರ್ತಿ ಜನ್ಮದಲ್ಲಿ ಬಂಧನದಲ್ಲಿರಿಸಲಿಲ್ಲವೇಕೆ? ಅಥವಾ ಕೊಂದುಹಾಕಲಿಲ್ಲವೇಕೆ? ಅವನನ್ನು ಭೂಮಿಯ ಮೇಲೆ ಏಕೆ ಹಾಕಿದರು? ಸಮಗ್ರ ಜಗತ್ತನ್ನು ಭ್ರಮೆಗೊಳಿಸುವವನು ಸೈತಾನನಾಗಿದ್ದರೆ, ಆ ಸೈತಾನನ್ನು ಭ್ರಮೆಗೊಳಿಸುವವನು ಯಾವನು? ಸೈತಾನನು ತಾನಾಗಿ ಭ್ರಮೆಗೊಂಡಿರುವನಾದರೆ ಭ್ರಮೆಗೊಳ್ಳುವವರು ತಾವಾಗಿಯೇ ಭ್ರಮೆಗೊಳ್ಳುವರು. ಮತ್ತು ಅವನನ್ನು ಭ್ರಮೆಗೊಳಿಸುವವನು ದೇವರಾದರೆ ಅವನು ದೇವರಾಗಿಯೇ ಉಳಿಯಲಿಲ್ಲ. ಕ್ರೈಸ್ತರ ದೇವರೂ ಸಹ ಸೈತಾನನಿಗೆ ಭಯಗೊಳ್ಳುತ್ತಾನೆಂದೇ ತಿಳಿದುಬರುತ್ತದೆ. ಏಕೆಂದರೆ ಸೈತಾನನಿಗಿಂತ ಪ್ರಬಲನಾಗಿರುವುದಾದರೆ—ದೇವರು ಅವನಿಗೆ ಅಪರಾಧಮಾಡುತ್ತಿರುವಾಗಲೇ ಪಂಡವನ್ನೇಕೆ ಕೊಡಲಿಲ್ಲ? ಜಗತ್ತಿನಲ್ಲಿ ಸೈತಾನನ ರಾಜ್ಯವೆಷ್ಟಿದೆಯೋ

ಅವರ ಸಾವಿರದ ಒಂದನೆಯ ಪಾಲು ಕೂಡ ದೇವರ ರಾಜ್ಯವಿಲ್ಲ. ಆದುದರಿಂದಲೇ ಕ್ರೈಸ್ತರ ದೇವರು ಅವನನ್ನು ತೊಲಗಿಸಲು ಶಕ್ತವಾಗದೇ ಇರಬಹುದು ಈ ಕಾಲದ ರಾಜ್ಯಾಧಿಕಾರಿಗಳಾದ ಕ್ರೈಸ್ತರು ದರೋಡೆಕೋರರು-ಕಳ್ಳರು-ಮೊದಲಾದವರಿಗೆ ಬೇಗ ಶಿಕ್ಷೆವಿಧಿಸುವಂತೆಯೂ ಕ್ರೈಸ್ತರ ದೇವರು ವಿಧಿಸಲಾರನೆಂಬುದು ಸಿದ್ಧವಾಯಿತು. ಹೀಗಿರುವಾಗ ವೈದಿಕಮತವನ್ನು ಬಿಟ್ಟು ಕಪೋಲಕಲ್ಪಿತವಾದ ಕ್ರೈಸ್ತಮತವನ್ನು ಸ್ವೀಕರಿಸುವ ಬುದ್ಧಿಯಿಲ್ಲದಮನುಷ್ಯನು ಯಾವನಿರುವನು? ॥೧೧೫॥

೧೧೬. ಅಯ್ಯೋ! ಪೃಥ್ವಿಯ ಮತ್ತು ಸಮುದ್ರನಿವಾಸಿಗಳೇ; ಏಕೆಂದರೆ—ಸೈತಾನನು ನಿಮ್ಮಬಳಿಗೆ ಇಳಿದುಬಂದಿದ್ದಾನೆ.

[ಪ್ರಕಟಣೆ ೧೨, ೧೨.]

ಸಮೀಕ್ಷಕ—ಆ ದೇವರು ಅಲ್ಲಿಗೆಮಾತ್ರ ರಕ್ಷಕನೂ ಸ್ವಾಮಿಯೂ ಆಗಿರುವನೇ? ಪೃಥ್ವಿ ಮನುಷ್ಯ ಮೊದಲಾದ ಪ್ರಾಣಿಗಳ ರಕ್ಷಕನೂ ಸ್ವಾಮಿಯೂ ಆಲ್ಲವೆ? ಅವನು ಭೂಮಿಗೂ ರಾಜನಾಗಿರುವದಾದರೆ ಸೈತಾನನನ್ನು ಕೊಲ್ಲಲಾರದೆ ಹೋದನೇಕೆ? ದೇವರು ನೋಡುತ್ತಾ ಇರುತ್ತಾನೆ; ಮತ್ತು ಸೈತಾನನು ದಾರಿತಪ್ಪಿಸುತ್ತಾ ತಿರುಗುತ್ತಾನೆ. ಆದರೂ ಅವನನ್ನು ನಿಷೇಧಿಸುವುದಿಲ್ಲ. ಒಬ್ಬ ಒಳ್ಳೆಯ ದೇವರಿದ್ದಾನೆ ಮತ್ತು ಒಬ್ಬ ಸಮರ್ಥನಾದ ದುಷ್ಟನು ಎರಡನೆಯ ದೇವರಾಗುತ್ತಾ ಇದ್ದಾನೆ—ಎಂದೇ ವಿದಿತವಾಗುತ್ತದೆ. ॥೧೧೬॥

೧೧೭. ನಾಲ್ವತ್ತೆರಡು ತಿಂಗಳ ಪರ್ಯಂತ ಯುದ್ಧಮಾಡುವ ಅಧಿಕಾರವು ಅದಕ್ಕೆ ಕೊಡಲ್ಪಟ್ಟಿತು. ಅದು ದೇವರಿಗೆ ವಿರುದ್ಧವಾಗಿ ನಿಂದೆಯನ್ನು ಮಾಡಲೂ ಆತನ ನಾಮವನ್ನೂ, ಆತನ ಡೇರೆಯನ್ನೂ ಸ್ವರ್ಗದಲ್ಲಿ ವಾಸಮಾಡುವವರನ್ನೂ ದೂಷಿಸಲು ಬಾಯಿ ತೆರೆಯಿತು. ಪವಿತ್ರಜನತೆಮೇಲೆ ಯುದ್ಧ ಮಾಡುವ, ಅವರನ್ನು ಜಯಿಸುವ, ಕೆಲಸವು ಅದಕ್ಕೆ ಕೊಡಲ್ಪಟ್ಟಿತು. ಪ್ರತಿಯೊಂದು ಕುಲ, ಭಾಷೆ ಮತ್ತು ದೇಶದ ಮೇಲೂ ಅದಕ್ಕೆ ಅಧಿಕಾರ ಕೊಡಲ್ಪಟ್ಟಿತು. [ಪ್ರಕಟಣೆ ೧೩, ೫-೭]

ಸಮೀಕ್ಷಕ—ಭಲೆ! ಪೃಥ್ವಿಯ ಜನರಿಗೆ ದಾರಿತಪ್ಪಿಸುವುದಕ್ಕಾಗಿ

ಸೈತಾನನನ್ನೂ ಪಶು ಮೊದಲಾದುವನ್ನೂ ಕಳುಹಿಸುವ, ಮತ್ತು ಪವಿತ್ರರಾದ ಮನುಷ್ಯರೊಡನೆ ಯುದ್ಧ ಮಾಡಿಸುವ ಕೆಲಸವು ಡಕಾಯಿತರ ಮುಖಂಡನ ಕೆಲಸದಂತಿದೆಯೋ, ಇಲ್ಲವೋ? ಇಂತಹ ಕೆಲಸವು ದೇವರ ಭಕ್ತರದಾಗಿರಲಾರದು. ||೧೧೭||

೧೧೮. ಮತ್ತು ನಾನು ದೃಷ್ಟಿಸಿದೆನು. ಮತ್ತು ನೋಡಿರಿ! ಮೇಕೆಯ ಮರಿಯು ಸಿಯೋನ್ ಪರ್ವತದ ಮೇಲೆ ನಿಂತಿದೆ. ಮತ್ತು ಅದರ ಜೊತೆಯಲ್ಲಿ ಯಾರ ಹಣೆಯ ಮೇಲೆ ಅದರ ಮತ್ತು ಅದರ ತಂದೆಯ ಹೆಸರು ಬರೆದಿದೆಯೋ ಇಂತಹ ಒಂದು ಲಕ್ಷ ನಾಲ್ವತ್ತುನಾಲ್ಕು ಸಾವಿರ ಮಂದಿ ಇದ್ದರು. ಅವರವರ ಹಣೆಯ ಮೇಲೆ ಆತನ ಹೆಸರೂ ಆತನ ತಂದೆಯ ಹೆಸರೂ ಬರೆಯಲ್ಪಟ್ಟಿದ್ದವು. [ಪ್ರಕಟಣೆ. ೧೪।೧]

ಸವಿಾಕ್ಷಕ—ಈಗ ನೋಡಿರಿ! ಯೇಸುವಿನ ತಂದೆಯಿರುತ್ತಿದ್ದ ಆ ಸಿಯೋನ್ ಪರ್ವತದ ಮೇಲೆಯೇ, ಅವನ ಮಗನೂ ಇರುತ್ತಿದ್ದನು. ಆದರೆ ಒಂದು ಲಕ್ಷ ನಾಲ್ವತ್ತುನಾಲ್ಕು ಸಾವಿರ ಜನರ ಗಣನೆಯನ್ನು ಹೇಗೆ ಮಾಡಿದರು! ಒಂದು ಲಕ್ಷ ನಾಲ್ವತ್ತುನಾಲ್ಕು ಸಾವಿರ ಜನ ಮಾತ್ರ ಸ್ವರ್ಗದ ನಿವಾಸಿಗಳಾಗಿದ್ದರೇ? ಉಳಿದ ಕೋಟ್ಯಂತರ ಕ್ರೈಸ್ತರ ಹಣೆಯ ಮೇಲೆ ಮುದ್ರೆ ಬೀಳಲಿಲ್ಲವೇ? ಇವರೆಲ್ಲಾ ನರಕಕ್ಕೆ ಹೋದರೇ? ಸಿಯೋನ್ ಪರ್ವತಕ್ಕೆ ಹೋಗಿ ಯೇಸುವಿನ ತಂದೆಯೂ ಅವನ ಸೇನೆಯೂ ಅಲ್ಲಿದೆಯೋ ಇಲ್ಲವೊ ಎಂಬುದನ್ನು ಕ್ರೈಸ್ತರು ನೋಡಬೇಕು. ಅಲ್ಲಿ ಇದ್ದರೆ ಈ ಲೇಖನವು ಸರಿ; ಇಲ್ಲದೆ ಇದ್ದರೆ ಸುಳ್ಳು. ಎಲ್ಲಿಂದಲಾದರೂ ಅಲ್ಲಿಗೆ ಬಂದಿರುವ ನಾದರೆ ಎಲ್ಲಿಂದ ಬಂದನು? ಸ್ವರ್ಗದಿಂದ ಎನ್ನುವಿರಾದರೆ ಇಷ್ಟು ದೊಡ್ಡ ಸೇನೆಯೂ ದೇವರೂ ಮೇಲೆ ಕೆಳಗೆ ಹಾರಿಬಂದು ಹೋಗಲಿಕ್ಕೆ ಅವರೇನು ಪಕ್ಷಿಗಳೇ? ಅವನು ಬಂದು ಹೋಗುತ್ತಿದ್ದರೆ ಒಂದು ಜಿಲ್ಲೆಯ ನ್ಯಾಯಾಧೀಶನಂತಾದನು. ಹಾಗಿದ್ದರೆ ಅವರು ಒಬ್ಬರೊ ಇಬ್ಬರೊ ಮೂವರೊ ಇದ್ದರೆ ಸಾಕಾಗಲಿಕ್ಕಿಲ್ಲ. ಒಂದೊಂದು ಲೋಕದಲ್ಲಿ ಕಡಿಮೆಯೆಂದರೆ ಒಬ್ಬೊಬ್ಬ ದೇವರಾದರೂ ಇರಬೇಕಾಗುತ್ತದೆ. ಏಕೆಂದರೆ ಒಬ್ಬನು, ಇಬ್ಬರು ಅಥವಾ ಮೂವರು ಅನೇಕ ಬ್ರಹ್ಮಾಂಡ

ಗಳ ನ್ಯಾಯವನ್ನು ತೀರ್ಮಾನಿಸಲು ಮತ್ತು ಎಲ್ಲಾ ಕಡೆಯೂ ಏಕ ಕಾಲದಲ್ಲಿ ತಿರುಗಾಡಲು ಎಂದಿಗೂ ಸಮರ್ಥರಾಗಿರುವುದಿಲ್ಲ. ||೧೧೮||

೧೧೯. ಆತ್ಮನು " ಹೌದು ಅವರು ಪರಿಶ್ರಮತೀರಿ ವಿಶ್ರಾಮ ಹೊಂದುವರು; ಆದರೆ ಅವರ ಕಾರ್ಯಗಳು ಅವರೊಡನೆ ಹತ್ತಿಕೊಳ್ಳುವುವು " ಎಂದು ಹೇಳುತ್ತಾನೆ. [ಪ್ರಕಟಣೆ. ೧೪। ೧೩]

ಸಮಾಕ್ಷಕ—ನೋಡಿರಿ. ಕ್ರೈಸ್ತರ ದೇವರಾದರೋ-ಅವರ ಕರ್ಮಗಳು ಅವರೊಡನೆ ಇರುವುವು ಅಂದರೆ—ಕರ್ಮಾನುಸಾರ ಎಲ್ಲರಿಗೂ ಫಲಕೊಡಲ್ಪಡುವುದು ಎಂದು ಹೇಳುತ್ತಾರೆ. ಮತ್ತು ಈ ಜನರು—" ಯೇಸುವು ಪಾಪಗಳನ್ನು ತೆಗೆದುಕೊಂಡುಬಿಡುವನು. ಮತ್ತು ಕ್ಷಮಿಸಲ್ಪಡುವುದೂ ಉಂಟು " ಎಂದು ಹೇಳುತ್ತಾರೆ. ಇಲ್ಲಿ ದೇವರ ವಚನ ನಿಜವೋ ಅಥವಾ ಕ್ರೈಸ್ತರದೋ—ಎಂಬುದನ್ನು ಬುದ್ಧಿವಂತರೇ ಯೋಚಿಸಲಿ. ಒಂದು ವಿಷಯದಲ್ಲಿ ಇಬ್ಬರೂ ಸತ್ಯವಂತರಂತೂ ಆಗಲಾರರು. ಇವರಲ್ಲಿ ಒಬ್ಬರು ಅವಶ್ಯ ಸುಳ್ಳುಗಾರರಾಗಿರಬೇಕು. ಕ್ರೈಸ್ತರ ದೇವರು, ಬೇಕಾದರೂ ಸುಳ್ಳುಗಾರನಾಗಲಿ ಅಥವಾ ಕ್ರೈಸ್ತರೇ ಆಗಿರಲಿ ನಮಗೇನು? ||೧೧೯||

೧೨೦. ಮತ್ತು ಅದನ್ನು ದೇವರ ಕ್ರೋಧರಸದ ಮಹಾ ಕುಂಡದಲ್ಲಿ ಹಾಕಿದನು. ಮತ್ತು ರಸಕುಂಡದ ತುಳಿತವು ನಗರದ ಹೊರಗೆ ಮಾಡಲ್ಪಟ್ಟವು. ಆ ತೊಟ್ಟಿಯೊಳಗಿಂದ ರಕ್ತವು ಕುದುರೆಗಳು ಕಡಿವಾಣವನ್ನು ಮುಟ್ಟುವಷ್ಟು ಆಳವಾಗಿ ಇನ್ನೂರು ಮೈಲಿ ದೂರ ಹರಿದುಹೋಯಿತು. [ಪ್ರಕಟಣೆ ೧೪, ೧೯. ೨೦]

ಸಮಾಕ್ಷಕ—ಈಗ ನೋಡಿರಿ; ಇವರ ಬುರುಡೆಗಳು ಪುರಾಣಗಳನ್ನು ಮೀರಿವೆಯೋ ಇಲ್ಲವೂ? ಕ್ರೈಸ್ತರ ದೇವರು ಕೋಪಗೊಳ್ಳುವಾಗ ಬಹಳ ದುಃಖಿತನಾಗಿಹೋಗುತ್ತಿರಬಹುದು. ಅವನ ಕೋಪದ ತೊಟ್ಟುಗಳು ತುಂಬಲು ಅವನಕೋಪವೇನು ನೀರೇ? ಅಥವಾ ಕುಂಡಗಳು ತುಂಬಲು ಬೇರಾವುದಾದರೂ ದ್ರವಿತಪದಾರ್ಥವೇ? ಮತ್ತು ಇನ್ನೂರು ಮೈಲಿಗಳ ವರೆಗೆ ರಕ್ತವು ಹರಿಯುವುದು ಅಸಂಭವವಾಗಿದೆ. ಏಕೆಂದರೆ—ರಕ್ತವು ಗಾಳಿ ತಗಲುವುದರಿಂದ ಕೂಡಲೇ ಹೆಪ್ಪುಕಟ್ಟುತ್ತದೆ. ಮತ್ತೆ

ಹೇಗೆತಾನೆ ಹರಿಯ ಬಲ್ಲುದು? ಆದುದರಿಂದ ಇಂತಹ ಮಾತುಗಳು ಸುಳ್ಳಾಗಿರುತ್ತವೆ. ||೧೨೦||

೧೨೧. ಮತ್ತು ನೋಡಿರಿ; ಸ್ವರ್ಗದಲ್ಲಿ ಸಾಕ್ಷಿಯ ಗುಡಾರದ ದೇಗುಲ ತೆರೆಯಲ್ಪಟ್ಟಿತು. [ಪ್ರಕಟಣೆ ೧೫, ೫]

ಸಮಿಾಕ್ಷಕ—ಕ್ರೈಸ್ತರ ದೇವರು ಸರ್ವಜ್ಞನಾಗಿದ್ದರೆ ಸಾಕ್ಷಿಗಳ ಅಗತ್ಯವೇನು? ಯಾಕೆಂದರೆ ಅವನು ಸ್ವತಃ ಎಲ್ಲವನ್ನೂ ತಿಳಿದಿರುತ್ತಿದ್ದನು. ಇದರಿಂದ ಇವರ ದೇವರು ಸರ್ವಜ್ಞನಲ್ಲ ಎಂಬುದೇ ಸರ್ವಥಾ ನಿಶ್ಚಯವಾಗುತ್ತದೆ. ಏಕೆಂದರೆ—ಅವರು ಮನುಷ್ಯರಂತೆ ಅಲ್ಪಜ್ಞನಾಗಿದ್ದಾನೆ. ಅವನು ದೇವತ್ವದ ಕೆಲಸವನ್ನಾದರೂ ಏನುಮಾಡ ಬಲ್ಲನು? ಇಲ್ಲ, ಇಲ್ಲ, ಇಲ್ಲ! ಮತ್ತು ಈ ಪ್ರಕರಣದಲ್ಲಿಯೇ ದೂತರ ಎಷ್ಟೋ ದೊಡ್ಡ ದೊಡ್ಡ ಅಸಂಭವವಾದ ಮಾತುಗಳನ್ನು ಬರೆದಿದ್ದಾರೆ. ಮತ್ತು ಅವುಗಳನ್ನಾರೂ ನಿಜವೆಂದು ಒಪ್ಪಲಾರರು. ಎಲ್ಲಿಯವರೆಗೆ ಬರೆಯೋಣ? ಈ ಪ್ರಕರಣದಲ್ಲಿ ಸರ್ವಥಾ ಇಂತಹ ಮಾತುಗಳನ್ನೇ ತುಂಬಿದ್ದಾರೆ. ||೧೨೧||

೧೨೨. ಮತ್ತು ದೇವರು ಅವಳ ದುಷ್ಕರ್ಮಗಳನ್ನು ಜ್ಞಾಪಿಸಿ ಕೊಂಡಿದ್ದಾನೆ. ಅವಳು ನಿಮಗೆ ಮಾಡಿದಪ್ರಕಾರವೇ ಅವಳಿಗೆ ಮಾಡಿರಿ. ಮತ್ತು ಅವಳ ಕೃತ್ಯಗಳಿಗೆ ಸರಿಯಾಗಿ ಅವಳಿಗೆ ಎರಡರಷ್ಟು ಕೊಟ್ಟು ಬಿಡಿರಿ. [ಪ್ರಕಟಣೆ ೧೮, ೫-೬]

ಸಮಿಾಕ್ಷಕ—ನೋಡಿರಿ; ಕ್ರೈಸ್ತರ ದೇವರು ಪ್ರತ್ಯಕ್ಷವಾಗಿ ಅನ್ಯಾಯಕಾರಿಯಾಗಿರುವನು. ಏಕೆಂದರೆ ಯಾವನು ಎಂತಹ ಮತ್ತು ಎಷ್ಟು ಕರ್ಮಮಾಡುತ್ತಾನೊ ಅವನಿಗೆ ಅಂತಹುದೇ ಮತ್ತು ಅಷ್ಟೇ ಫಲವನ್ನೀಯುವುದನ್ನೇ ನ್ಯಾಯವೆನ್ನುತ್ತಾರೆ. ಅದಕ್ಕಿಂತ ಹೆಚ್ಚು-ಕಡಿಮೆ ಕೊಡುವದು ಅನ್ಯಾಯವಾಗಿರುತ್ತದೆ. ಅನ್ಯಾಯಕಾರಿಯನ್ನು ಉಪಾಸಿಸುವವರು ಅನ್ಯಾಯಕಾರಿಗಳು ಏಕಾಗದಿದ್ದಾರು? ||೧೨೨||

೧೨೩. ಏಕೆಂದರೆ—ಮೇಕೆಯಮರಿಯ ವಿವಾಹ ಸಮಿಾಪಿಸಿದೆ. ಮತ್ತು ಅದರ ವಧುವು ತನ್ನನ್ನು ಸಿದ್ಧಪಡಿಸಿಕೊಂಡಿದ್ದಾಳೆ.

[ಪ್ರಕಟಣೆ ೧೯, ೭]

ಸಮಿಾಕ್ಷಕ—ಇನ್ನು ಆಲಿಸಿರಿ? ಕ್ರೈಸರ ಸ್ವರ್ಗದಲ್ಲಿ ವಿವಾಹಗಳೂ ನಡೆಯುತ್ತವೆ. ಏಕೆಂದರೆ—ಯೇಸುವಿನ ವಿವಾಹವನ್ನು ದೇವರು ಅಲ್ಲೇ ಜರಗಿಸಿದನು. ಅವನ ಮಾವ, ಅತ್ತೆ, ಮೈದುನ ಮೊದಲಾದ ವರೂ ಯಾರು? ಮಕ್ಕಳುಮರಿಗಳು ಎಷ್ಟಾದವು? ಎಂದು ಕೇಳಬೇಕು. ವೀರ್ಯನಾಶವಾಗುವುದರಿಂದ ಬಲ,-ಬುದ್ಧಿ,-ಪರಾಕ್ರಮ-ಆಯುಸ್ಸು ಮೊದಲಾದವೂ ನ್ಯೂನವಾಗುತ್ತವೆಯಾದಕಾರಣ ಈವರೆಗೆ ಯೇಸುವು ಅಲ್ಲಿ ಶರೀರವನ್ನು ತ್ಯಜಿಸಿರಬೇಕು. ಏಕೆಂದರೆ ಸಂಯೋಗ ಜನ್ಯಪಥಾರ್ಥದ ವಿಯೋಗವು ಅವಶ್ಯವಾಗಿಯೂ ಆಗುತ್ತವೆ. ಇಷ್ಟರವರೆಗೆ ಕ್ರೈಸ್ತರು ಅವನ ನಂಬಿಕೆಯಲ್ಲಿ ಮೋಸಹೋದರು. ಮತ್ತು ಎಲ್ಲಿಯವರೆಗೆ ಮೋಸದಲ್ಲಿರುವರೆಂಬುದು ತಿಳಿಯದು. ॥೧೨೩॥

೧೨೪. ಅವನು ಪಿಶಾಚನೂ, ಸೈತಾನನೂ ಆಗಿರುವ ಸರ್ಪ ಅಂದರೆ ಪ್ರಾಚೀನ ಸರ್ಪವನ್ನು ಹಿಡಿದು ಸಾವಿರ ವರ್ಷಗಳ ವರೆಗೆ ಕಟ್ಟಿಹಾಕಿಟ್ಟನು. ಆ ಸಾವಿರ ವರುಷ ತೀರುವ ತನಕ ಸೈತಾನನು ಪುನಃ ದೇಶಗಳ ಜನಗಳನ್ನು ಮರುಳುಗೊಳಿಸದ ಹಾಗೆ ಅವನನ್ನು ಅಗಾಧ ಕುಂಡದಲ್ಲಿ ಹಾಕಿದನು. ಮತ್ತು ಮುಚ್ಚಿ ಅದಕ್ಕೆ ಮುದ್ರೆ ಹಾಕಿಬಿಟ್ಟನು. [ಪ್ರಕಟಣೆ ೨೦। ೨-೩]

ಸಮಿಾಕ್ಷಕ—ನೋಡಿರಿ! ಸತ್ತೆಸತ್ತೆಯೆಂದುಕೊಂಡು ಸೈತಾನನನ್ನು ಹಿಡಿದನು. ಮತ್ತು ಸಾವಿರ ವರ್ಷಗಳ ವರೆಗೆ ಬಂಧಿಸಲ್ಪಟ್ಟನು. ಮತ್ತೆಯೂ ಹೊರಬರುವನು. ಮತ್ತೆ ಮರುಳುಗೊಳಿಸನೆ? ಇಂತಹ ದುಷ್ಟನನ್ನಂತೂ ಬಂದೀಗೃಹದಲ್ಲಿಯೇ ಇಡಬೇಕು; ಅಥವಾ ಕೊಂದು ಹಾಕದೆ ಬಿಡಬಾರದು. ಆದರೆ ಈ ಸೈತಾನನಾಗಿರುವುದು ಕ್ರೈಸ್ತರ ಕೇವಲ ಭ್ರಮೆಯಷ್ಟೇ ಆಗಿದೆ. ನಿಜವಾಗಿ ಏನೂ ಇಲ್ಲ. ಕೇವಲ ಜನರನ್ನು ಹೆದರಿಸಿ ತಮ್ಮ ಬಲೆಯಲ್ಲಿ ಹಾಕಿಕೊಳ್ಳುವ ಉಪಾಯವನ್ನು ಮಾತ್ರ ರಚಿಸಿದ್ದಾರೆ. ಉದಾ-ಯಾವನೋ ಒಬ್ಬ ಧೂರ್ತನು ಯಾರೋ ಅಬೋಧಮನುಷ್ಯರಿಗೆ 'ನಡೆಯಿರಿ. ನಿಮಗೆ ದೇವರ ದರ್ಶನ ಮಾಡಿಸುತ್ತೇನೆ' ಎಂದನು. ಯಾವುದೋ ಏಕಾಂತ ಪ್ರದೇಶಕ್ಕೆ ಕೊಂಡುಹೋಗಿ, ಒಬ್ಬ ಮನುಷ್ಯನನ್ನು ಚತುರ್ಭುಜನನ್ನಾಗಿ ಮಾಡಿ ಒಂದು ಪೊದರಿನಲ್ಲಿ ನಿಲ್ಲಿಸಿ, "ಕಣ್ಣುಮುಚ್ಚಿಕೊಳ್ಳಿರಿ. ನಾನು ಹೇಳಿದಾಗ

ತೆರೆಯಿರಿ. ಪುನಃ ಮುಚ್ಚಲು ಹೇಳಿದಾಗ ಕೂಡಲೇ ಮುಚ್ಚಿಕೊಳ್ಳಿರಿ. ಮುಚ್ಚಿಕೊಳ್ಳದವನು ಕುರುಡನಾಗಿ ಹೋಗುವನು"—ಎಂದು ಹೇಳಿದನು. "ನಮ್ಮ ಮತವನ್ನು ಒಪ್ಪದವನು ಸೈತಾನನಿಂದ ಮರುಳುಗೊಳಿಸಲ್ಪಟ್ಟವನು" ಎಂಬ ಈ ಮತೀಯರ ಮಾತುಗಳು ಹಾಗೆಯೇ ಇವೆ. ಅವನು ಎದುರಿಗೆ ಬಂದಾಗ "ನೋಡಿರಿ" ಎಂದನು. ಮತ್ತು ಬೇಗನೇ "ಮುಚ್ಚಿಕೊಳ್ಳಿರಿ" ಎಂದನು. ಅವನು ಪುನಃ ಪೊದರಿನಲ್ಲಿ ಅವಿತುಕೊಂಡಾಗ "ಕಣ್ಣು ಬಿಟ್ಟು ನೋಡಿರಿ. ನೋಡಿ! ನಾರಾಯಣನನ್ನು ಎಲ್ಲರೂ ದರ್ಶನಮಾಡಿದರು" ಎಂದನು. ಇದೇ ರೀತಿಯ ಲೀಲೆಯು ಮತೀಯರದಾಗಿರುತ್ತದೆ. ಆದುದರಿಂದ ಇವರ ಮಾಯೆಗೆ ಯಾರೂ ಸಿಲುಕಬಾರದು. ||೧೩೪||

೧೩೫. ಆತ್ಮನೆದುರಿನಿಂದ ಭೂಮ್ಯಾಕಾಶಗಳು ಓಡಿಹೋದವು. ಮತ್ತು ಅವಕ್ಕೆ ಸ್ಥಳ ಸಿಕ್ಕಲಿಲ್ಲ. ಮತ್ತು ಚಿಕ್ಕವರೇನು, ದೊಡ್ಡವರೇನು—ಮೃತರೆಲ್ಲರೂ ದೇವರೆದುರಿಗೆ ನಿಂತಿರುವದನ್ನು ಕಂಡೆನು. ಮತ್ತು ಪುಸ್ತಕಗಳು ತೆರೆಯಲ್ಪಟ್ಟವು. ಮತ್ತು ಎರಡನೆಯ ಪುಸ್ತಕವು ಅಂದರೆ ಜೀವನದ ಪುಸ್ತಕವು ತೆರೆಯಲ್ಪಟ್ಟಿತು. ಮತ್ತು ಆ ಪುಸ್ತಕಗಳಲ್ಲಿ ಬರೆದ ಸಂಗತಿಗಳ ಮೇಲಿನಿಂದ ಅವರವರ ಕರ್ಮಗಳ ಪ್ರಕಾರ ಸತ್ತವರಿಗೆ ನ್ಯಾಯತೀರ್ಮಾನ ಮಾಡಲಾಯಿತು.

[ಪ್ರಕಟನೆ ೨೦। ೧೧-೧೨]

ಸವಿಾಕ್ಷಕ—ಈ ಮಕ್ಕಳಾಟಕೆಯ ಮಾತನ್ನು ನೋಡಿರಿ. ಒಳ್ಳೆಯದು, ಪೃಥಿವ್ಯಾಕಾಶಗಳು ಹೇಗೆ ಓಡಬಲ್ಲವು? ಮತ್ತು ಅವು ಯಾವುದರ ಮೇಲೆ ನಿಲ್ಲುವುವು? ಯಾರ ಮುಂದಿನಿಂದ ಓಡಿಹೋದವೋ ಅವರೆಲ್ಲಿ ನಿಲ್ಲುವರು? ಮತ್ತು ಅವನ ಸಿಂಹಾಸನವೂ ಅವನೂ ಎಲ್ಲಿ ನಿಂತರು? ಮತ್ತು ಶವಗಳು ದೇವರ ಎದುರಿನಲ್ಲಿ ನಿಲ್ಲಿಸಲ್ಪಟ್ಟುವಾದರೆ, ದೇವರೂ ಕುಳಿತಿರಬಹುದು ಅಥವಾ ನಿಂತಿರಬಹುದಲ್ಲವೆ? ಪುಸ್ತಕದ ಬರಹದ ಅನುಸಾರ ನಡೆಯುತ್ತದೆ ಎನ್ನಲು ದೇವರ ವ್ಯವಹಾರವು ಇಲ್ಲಿನ ಕಛೇರಿಗಳ ಮತ್ತು ಅಂಗಡಿಗಳ ಹಾಗಿರುತ್ತದೆಯೇ? ಮತ್ತು ಎಲ್ಲಾ ಜೀವರುಗಳ ಸಮಾಚಾರವನ್ನೂ ದೇವರು ಬರೆದನೊ ಅಥವಾ ಅವನ ಗುಮಾಸ್ತರೋ? ಇಂತಹ ಎಲ್ಲಾ ಮಾತುಗಳಿಂದ ಕ್ರೈಸ್ತರೇ

ಮೊದಲಾದ ಮತವಾದಿಗಳು ಅನೀಶ್ವರನನ್ನು ಈಶ್ವರನನ್ನಾಗಿಯೂ ಈಶ್ವರನನ್ನು ಅನೀಶ್ವರನನ್ನಾಗಿಯೂ ಮಾಡಿಬಿಟ್ಟರು. ॥೧೨೫॥

೧೨೬. ಆವರಲ್ಲಿ ಒಬ್ಬನು ನನ್ನ ಬಳಿ ಬಂದನು ಮತ್ತು ನನಗೆ "ಬಾ, ನಾನು ಮದುವಣಿಗಿತ್ತಿಯನ್ನು ಅಂದರೆ ಮೇಕೆಯ ಮರಿಯ ನಾರಿಯನ್ನು ನಿನಗೆ ತೋರಿಸುವೆನು" ಎಂದು ಹೇಳಿದನು.

[ಪ್ರಕಟಣೆ ೨೧, ೯]

ಸಮೀಕ್ಷಕ—ಭಲೆ! ಯೇಸುವು ಸ್ವರ್ಗದಲ್ಲಿ ಒಳ್ಳೆ ಮದುವಣಿಗಿತ್ತಿಯನ್ನು ಅಂದರೆ ಹೆಂಡತಿಯನ್ನು ಪಡೆದನು. ಆನಂದಪಡುತ್ತಿರಬಹುದು. ಅಲ್ಲಿ ಹೋಗುವ ಕ್ರೈಸ್ತರೆಲ್ಲರಿಗೂ ಸ್ತ್ರೀಯರು ಸಿಕ್ಕುತ್ತಿರಬಹುದು, ಮಕ್ಕಳು ಮರಿಗಳೂ ಆಗುತ್ತಿರಬಹುದು, ಬಹಳ ಗುಂಪು ಸೇರುವುದರಿಂದ ರೋಗಗಳುಂಟಾಗಿ ಸತ್ತೂ ಹೋಗುತ್ತಿರಬಹುದು. ಇಂತಹ ಸ್ವರ್ಗಕ್ಕೆ ದೂರದಿಂದಲೇ ಕೈ ಮುಗಿಯುವುದೇ ಒಳಿತು. ॥೧೨೬॥

೧೨೭. ಅವನು ಆ ಪಟ್ಟಣವನ್ನು, ಸಾವಿರದೈನೂರು ಮೈಲಿಯಿದೆ ಮತ್ತು ಅದರ ಉದ್ದವೂ, ಅಗಲವೂ, ಎತ್ತರವೂ ಸಮವಾಗಿವೆ ಎಂದು ಕೋಲಿನಿಂದ ಅಳೆದನು. ಅವನು ಅದರ ಗೋಡೆಯನ್ನು ಮನುಷ್ಯನ ಅಂದರೆ ದೂತನ ಪ್ರಮಾಣದಿಂದ ನೂರನಾಲ್ವತ್ತುನಾಲ್ಕು ಮೊಳವಿದೆಯೆಂದು ಅಳೆದನು. ಆ ಗೋಡೆಯ ಜೋಡಣೆ ಸೂರ್ಯಕಾಂತ ಶಿಲೆಯದಾಗಿತ್ತು. ಪಟ್ಟಣವು ಶುದ್ಧ ಗಾಜಿನಂತಿದ್ದು ಅಪ್ಪಟ ಚಿನ್ನದ್ದಾಗಿತ್ತು. ಪಟ್ಟಣದ ಪ್ರಾಕಾರದ ಅಸ್ತಿವಾರಗಳು ಪ್ರತಿಯೊಂದು ಬಗೆಯ ಬಹು ಮೂಲ್ಯ ರತ್ನಗಳಿಂದ ಅಲಂಕೃತವಾಗಿದ್ದವು. ಮೊದಲನೆಯ ಅಸ್ತಿವಾರವು ಸೂರ್ಯಕಾಂತದ್ದು; ಎರಡನೆಯದು ನೀಲಮಣಿಯದು; ಮೂರನೆಯದು ಕೆಂಪಿನದು; ನಾಲ್ಕನೆಯದು ಪದ್ಮರಾಗದ್ದು; ಐದನೆಯದು ಗೋಮೇಧಿಕದ್ದು; ಆರನೆಯದು ಮಾಣಿಕ್ಯದ್ದು; ಏಳನೆಯದು ಪೀತಮಣಿಯದ್ದು; ಎಂಟನೆಯದು ಬೆರಲ್ಲದ್ದು; ಒಂಭತ್ತನೆಯದು ಪುಷ್ಯರಾಗದ್ದು; ಹತ್ತನೆಯದು ಗರುಡಪಚ್ಚೆಯದ್ದು; ಹನ್ನೊಂದನೆಯದು ಇಂದ್ರನೀಲದ್ದು; ಹನ್ನೆರಡನೆಯದು ನೀಲಸ್ಫಟಿಕದ್ದು; ಮತ್ತು ಹನ್ನೆರಡು ಹೆಬ್ಬಾಗಿಲುಗಳು ಹನ್ನೆರಡು ಮುತ್ತುಗಳಾಗಿದ್ದುವು.

ಒಂದೊಂದು ಬಾಗಿಲು ಒಂದೊಂದು ಮುತ್ತಿನಿಂದ ಮಾಡಲ್ಪಟ್ಟಿತ್ತು. ಪಟ್ಟಣದ ಬೀದಿಯು ಸ್ವಚ್ಛ ಗಾಜಿನಂತಿದ್ದು ಅಪ್ಪಟ ಭಂಗಾರ ದ್ದಾಗಿತ್ತು. [ಪ್ರಕಟಣೆ ೨೧, ೧೬-೨೧]

ಸವಿಾಕ್ಷಕ—ಕ್ರೈಸ್ತರ ಸ್ವರ್ಗದ ವರ್ಣನೆಯನ್ನಾಲಿಸಿರಿ—ಕ್ರೈಸ್ತರು ಸಾಯುತ್ತಾ ಹುಟ್ಟುತ್ತಾ ಇರುವುದಾದರೆ ಇಷ್ಟು ವಿಸ್ತಾರವುಳ್ಳ ನಗರದಲ್ಲಿ ಹೇಗೆತಾನೆ ಹುಡಿಸಬಲ್ಲರು? ಏಕೆಂದರೆ—ಅದರಲ್ಲಿ ಜನರ ಆಗಮನವೇನೋ ಆಗುತ್ತದೆ; ಅದರಿಂದ ಹೊರಕ್ಕೆ ಹೋಗುವುದಿಲ್ಲ. ಮತ್ತು ಬಹು ಮೂಲ್ಯವಾದ ರತ್ನಗಳಿಂದ ರಚಿತವಾದ ಈ ನಗರವನ್ನೊಪ್ಪಿರುವುದು ಮತ್ತು ಅದು ಪೂರ್ಣವಾಗಿ ಚಿನ್ನದ್ದು ಎಂಬ ಮೊದಲಾದ ಬರಹವು ಕೇವಲ ಅಜ್ಞೋಧ ಜನರನ್ನು ಮರುಳುಮಾಡಿ, ಸಿಕ್ಕಿಸಿಕೊಳ್ಳುವ ಲೀಲೆಯಾಗಿರುತ್ತದೆ. ಒಳ್ಳೆಯದು; ಆ ನಗರದ ಉದ್ದ, ಅಗಲ ಬರೆದುದೇನೊ ಸರಿಹೋಗಬಹುದು; ಆದರೆ ಎತ್ತರವು ಸಾವಿರದೈನೂರು ಮೈಲಿ ಹೇಗೆ ತಾನೆ ಆಗಬಲ್ಲದು? ಇದು ಸರ್ವಥಾ ಸುಳ್ಳಾದ ಕಪೋಲಕಲ್ಪನೆಯಮಾತು. ಮತ್ತು ಇಷ್ಟುದೊಡ್ಡ ಮುತ್ತುಗಳು ಎಲ್ಲಿಂದ ಬಂದಿರಬಹುದು? ಈ ಬುರಡೆಯನ್ನು ಬರೆದವನ ಮನೆಯ ಗುಡಾಣದಿಂದಲೋ? ಈ ಬುರುಡೆಯು ಪುರಾಣಕ್ಕೂ ಅಪ್ಪನಾಗಿಬಿಟ್ಟಿದೆ. ||೧೩೬||

೧೩೮. ಮತ್ತು ಯಾವ ಅಪವಿತ್ರ ವಸ್ತುವೂ, ಅಥವಾ ತಿರಸ್ಕರಣೀಯವಾದ ಕರ್ಮವನ್ನು ಮಾಡುವವನೂ, ಅಥವಾ ಸುಳ್ಳಿನ ಮೇಲೆ ನಡೆಯುವವನೂ ಅದರಲ್ಲಿ ಯಾವ ರೀತಿಯಿಂದಲೂ ಪ್ರವೇಶಿಸುವುದಿಲ್ಲ.

[ಪ್ರಕಟಣೆ. ೨೧। ೨೭]

ಸವಿಾಕ್ಷಕ- ವಿಷಯವು ಹೀಗಿರುವುದಾದರೆ ಕ್ರೈಸ್ತರಾಗುವುದರಿಂದ ಪಾಪಿಗಳೂ ಸ್ವರ್ಗಕ್ಕೆ ಹೋಗಬಲ್ಲರೆಂದು ಕ್ರೈಸ್ತರು ಏಕೆ ಹೇಳುತ್ತಾರೆ? ಈ ಮಾತು ಸರಿಯಾದುದಲ್ಲ. ಹಾಗಿರುವುದಾದರೆ, ಸ್ವಪ್ನದ ಸುಳ್ಳು ಮಾತುಗಳನ್ನಾಡುವಂತಹ ಯೋಹಾನನು ಎಂದಿಗೂ ಸ್ವರ್ಗವನ್ನು ಪ್ರವೇಶಿಸಿರಲಾರನು. ಮತ್ತು ಯೇಸುವೂ ಸ್ವರ್ಗಕ್ಕೆ ಹೋಗಿರಲಿಕ್ಕಿಲ್ಲ. ಏಕೆಂದರೆ ಒಬ್ಬ ಪಾಪಿಯೇ ಸ್ವರ್ಗವನ್ನು ಹೊಂದು

ಲಾರನೆಂದಮೇಲೆ ಅನೇಕ ಪಾಪಿಗಳ ಪಾಪದ ಭಾರದಿಂದ ಯುಕ್ತನಾಗಿರುವವನು ಹೇಗೆ ತಾನೆ ಸ್ವರ್ಗವಾಸಿಯಾಗಬಲ್ಲನು? ||೧೨೪||

೧೨೯. ಇನ್ನು ಈಗ ಶಾಪವಾವುದೂ ಉಂಟಾಗುವುದಿಲ್ಲ ಮತ್ತು ದೇವರ ಮತ್ತು ಮೇಕೆಯ ಮರಿಯ ಸಿಂಹಾಸನವು ಅದರಲ್ಲಿರುವುದು. ಮತ್ತು ಆತನ ದಾಸರು ಆತನಿಗೆ ಸೇವೆಮಾಡುವರು. ಮತ್ತು ದೇವರ ಮುಖವನ್ನು ನೋಡುವರು. ಮತ್ತು ಅವರ ಹಣೆಗಳ ಮೇಲೆ ಆತನ ಹೆಸರಿರುವುದು. ಮತ್ತು ಅಲ್ಲಿ ರಾತ್ರಿಯಾಗುವುದಿಲ್ಲ. ಮತ್ತು ಅವರಿಗೆ ದೀಪದ ಅಥವಾ ಸೂರ್ಯನ ಬೆಳಕಿನ ಅಗತ್ಯವಿರುವುದಿಲ್ಲ. ದೇವರಾದ ಕರ್ತನೇ ಅವರಿಗೆ ಬೆಳಕನ್ನು ಕೊಡುವನು. ಅವರು ಸದಾ ಸರ್ವದಾ ರಾಜ್ಯವಾಳುವರು. [ಪ್ರಕಟಣೆ. ೨೨। ೩-೫]

ಸಮೀಕ್ಷಕ---ನೋಡಿರಿ, ಇದೇ ಕ್ರೈಸ್ತರ ಸ್ವರ್ಗವಾಸವು! ದೇವರೂ ಯೇಸುವೂ ನಿರಂತರ ಸಿಂಹಾಸನದಲ್ಲಿ ಕುಳಿತುಕೊಂಡಿರುವರೆ? ಮತ್ತು ಅವರ ದಾಸರು ಅವರ ಮುಂದೆ ಯಾವಾಗಲೂ ಅವರ ಮುಖವನ್ನು ನೋಡುತ್ತಿರುವರೇ? ನಿಮ್ಮ ದೇವರ ಮುಖವು ಯೂರೋಪಿಯನರಂತೆ ಬಿಳಿಯಾಗಿದೆಯೊ? ಆಫ್ರಿಕದವರಂತೆ ಕಪ್ಪಾಗಿದೆಯೊ ಅಥವಾ ಅನ್ಯದೇಶೀಯರ ಮುಖದಂತಿದೆಯೊ? ಎಂಬುದನ್ನಾದರೂ ಈಗ ಹೇಳಿರಿ. ನಿಮ್ಮಾ ಸ್ವರ್ಗವೂ ಬಂಧನವೇ ಆಗಿರುತ್ತದೆ; ಏಕೆಂದರೆ, ಎಲ್ಲಿ ಮೇಲುಕೀಳುಗಳಿವೆಯೋ, ಮತ್ತು ಆ ಒಂದು ನಗರದಲ್ಲೇ ಇರುವುದು ಅಗತ್ಯವಾಗಿದೆಯೋ, ಅಲ್ಲಿ ದುಃಖವೇತಕ್ಕೆ ಆಗದೇ ಇದ್ದೀತು? ಮುಖವನ್ನುಳ್ಳ ದೇವರೆಂದಿಗೂ ಸರ್ವಜ್ಞನೂ, ಸರ್ವೇಶ್ವರನೂ ಆಗಲಾರನು ||೧೨೯||

೧೩೦. ನೋಡು, ನಾನು ಬೇಗ ಬರುತ್ತೇನೆ. ಮತ್ತು ನನ್ನ ಪ್ರತಿಫಲ ನನ್ನೊಂದಿಗಿದೆ. ಆದರಿಂದ ಪ್ರತಿಯೊಬ್ಬನಿಗೂ ಅವನ ಕರ್ಮ ಹೇಗಿರುವುದೋ ಹಾಗೆ ಫಲವನ್ನು ಕೊಡುವೆನು. [ಪ್ರಕಟಣೆ ೨೨, ೧೨]

ಸಮೀಕ್ಷಕ---ಕರ್ಮಾನುಸಾರವಾಗಿ ಫಲವನ್ನು ಪಡೆಯುತ್ತಾರೆ, ಎಂಬುದೇ ಆಗಿರುವುದಾದರೆ ಪಾಪಗಳು ಎಂದಿಗೂ ಕ್ಷಮಿಸಲ್ಪಡಲಾರವು. ಮತ್ತು ಕ್ಷಮೆಯಾಗುವುದಾದರೆ, ಸುಸಮಾಚಾರದ ಈ

ಮಾತುಗಳು ಸುಳ್ಳಾದುವು. " ಇಲ್ಲ, ಕ್ಷಮಿಸುವುದನ್ನೂ ಸುಸಮಾಚಾರ ದಲ್ಲಿ ಬರೆದಿದೆ " ಎಂದು ಯಾವನಾದರೂ ಹೇಳುವುದಾದರೆ, ಪೂರ್ವಾ ಪರ ವಿರುದ್ಧ ಅಂದರೆ ಮಿಥ್ಯಾಶಪಥವಾದುದರಿಂದ ಸುಳ್ಳು. ಇದನ್ನೊ ಪ್ಪುವುದನ್ನು ಬಿಟ್ಟುಬಿಡಿರಿ. ಇನ್ನು ಎಷ್ಟೊಂದು ಬರೆಯೋಣ? ಇವರ ಬೈಬಲಿನಲ್ಲಿ ಖಂಡನಾರ್ಹವಾದ ಲಕ್ಷಾಂತರ ಮಾತುಗಳಿವೆ. ಹೀಗೆ ಕ್ರೈಸ್ತರ ಬೈಬಲ್ ಪುಸ್ತಕದ ಸ್ವಲ್ಪ ಚಿಹ್ನಮಾತ್ರವನ್ನು ತೋರಿಸಿದ್ದೇವೆ. ಇಷ್ಟರಿಂದಲೇ ಬುದ್ಧಿವಂತರು ಬಹಳ ತಿಳಿದುಕೊಳ್ಳುವರು. ಸ್ವಲ್ಪ ಮಾತುಗಳನ್ನು ಬಿಟ್ಟು, ಬೇರೆಲ್ಲವೂ ಸುಳ್ಳುತುಂಬಿಕೊಂಡಿದೆ. ಅಸತ್ಯದ ಸಂಗದಿಂದ ಸತ್ಯವೂ ಸಹ ಶುದ್ಧವಾಗಿಲ್ಲದಿರುವಂತೆಯೇ, ಬೈಬಲ್ ಪುಸ್ತಕವೂ ಮಾನನೀಯವಾಗಲಾರದು; ಆದರೆ ಆ ಸತ್ಯವಾದರೋ ವೇದಗಳ ಸ್ವೀಕಾರದಲ್ಲಿ ಗೃಹೀತವಾಗಿಯೇ ಆಗುವುದು. ॥೧೩೦॥

ಇತಿ ಶ್ರೀಮದ್ದಯಾನಂದಸರಸ್ವತೀಸ್ವಾಮಿನಿರ್ಮಿತೇ
ಸತ್ಯಾರ್ಥಪ್ರಕಾಶೇ ಸುಭಾಷಾವಿಭೂಷಿತೇ
ಕ್ರೈಸ್ತಮತ ವಿಷಯೇ ತ್ರಯೋದಶಃ
ಸಮುಲ್ಲಾಸಃ ಸಂಪೂರ್ಣಃ

ಅನುಭೂಮಿಕಾ (೪)

ಮುಸಲ್ಮಾನರು ಕುರಾನಿನ ಮೇಲೆಯೇ ಪೂರ್ಣವಿಶ್ವಾಸವಿಡುವುದರಿಂದ ಮುಸಲ್ಮಾನರ ಮತವಿಷಯವಾಗಿ ಬರೆದಿರುವ ಈ ಹದಿನಾಲ್ಕನೆಯ ಸಮುಲ್ಲಾಸವು ಕುರಾನಿನ ಅಭಿಪ್ರಾಯದ ಪ್ರಕಾರ ಇದೆಯೇ ಹೊರತು ಇತರ ಗ್ರಂಥಗಳ ಮತದಂತೆ ಅಲ್ಲ. ಪಂಗಡಗಳಿರುವುದರಿಂದ ಯಾವುದಾದರೂ ಶಬ್ದ ಅರ್ಥ ಮೊದಲಾದುದರ ವಿಷಯದಲ್ಲಿ ವಿರುದ್ಧಾಭಿಪ್ರಾಯವಿದ್ದರೂ, ಕುರಾನಿನ ವಿಷಯದಲ್ಲಿ ಸರ್ವರೂ ಏಕಮತರಾಗಿದ್ದಾರೆ. ಅರಬ್ಬೀಭಾಷೆಯಲ್ಲಿರುವ ಕುರಾನಿಗೆ ಮೌಲವಿಗಳು ಉರ್ದುವಿನಲ್ಲಿ ಅರ್ಥವನ್ನು ಬರೆದಿದ್ದಾರೆ. ಆ ಅರ್ಥಕ್ಕೆ ದೇವನಾಗರೀ ಲಿಪಿಯನ್ನೂ ಆರ್ಯ (ಹಿಂದಿ) ಭಾಷಾಂತರವನ್ನೂ ಮಾಡಿಸಿ, ಅನಂತರ ಅರಬ್ಬೀ ಭಾಷೆಯ ಮಹಾ ಮಹಾ ವಿದ್ವಾಂಸರಿಂದ ಅದನ್ನು ಶುದ್ಧ ಮಾಡಿಸಿ ಬರೆಯಲ್ಪಟ್ಟಿದೆ. ಯಾವನಾದರೂ ಈ ಅರ್ಥವು ಸರಿಯಲ್ಲವೆಂದು ಹೇಳುವುದಾದರೆ ಮೊದಲು ಅವನು ಮೌಲವೀ ಸಾಹೇಬರುಗಳ ಅನುವಾದಗಳನ್ನು ಖಂಡಿಸುವುದೂ, ಅನಂತರ ಈ ವಿಷಯದಲ್ಲಿ ಬರೆಯುವುದೂ ಉಚಿತ. ಏಕೆಂದರೆ ಮಾನವರೆಲ್ಲರ ಉನ್ನತಿ ಮತ್ತು ಸತ್ಯಾಸತ್ಯಗಳ ನಿರ್ಣಯಕ್ಕೆ, ಸರ್ವಮತಗಳ ವಿಷಯಗಳ ಜ್ಞಾನವೂ ಸ್ವಲ್ಪಸ್ವಲ್ಪ ಉಂಟಾಗಲಿ; ಇದರಿಂದ ಜನರಿಗೆ ಅನ್ಯೋನ್ಯ ವಿಚಾರ ಮಾಡಲು ಅವಕಾಶ ಸಿಕ್ಕಲಿ ಮತ್ತು ಪರಸ್ಪರ ದೋಷಗಳನ್ನು ಖಂಡಿಸಿ, ಗುಣಗಳನ್ನು ಗ್ರಹಿಸಲಿ ಎಂಬ ಉದ್ದೇಶ್ಯದಿಂದಲೇ ಈ ಲೇಖನವು ಬರೆಯಲ್ಪಟ್ಟಿದೆ. ಬೇರೆ ಇನ್ನೊಂದು ಮತದ ಮೇಲಾಗಲಿ, ಈ ಮತದ ಮೇಲಾಗಲಿ ಸುಳ್ಳುಸುಳ್ಳಾದ ಕೇಡನ್ನು ಅಥವಾ ಒಳಿತನ್ನು ಆರೋಪಿಸುವ ಉದ್ದೇಶ್ಯವಿಲ್ಲ. ಆದರೆ ಯಾವುದು ಯಾವುದು ಒಳ್ಳೆಯದೋ, ಅದೇ ಒಳ್ಳೆಯದೆಂದೂ, ಯಾವುದು ಯಾವುದು ಕೆಟ್ಟದ್ದೋ, ಅದೇ ಕೆಟ್ಟದೆಂದೂ ಎಲ್ಲರಿಗೂ ಗೊತ್ತಾಗಲಿ; ಯಾವನೂ ಯಾವನ ಮೇಲೆಯೂ ಸುಳ್ಳನ್ನು ವ್ಯವಹರಿಸದಿರಲಿ; ಮತ್ತು ಸತ್ಯವನ್ನು ತಡೆಗಟ್ಟಲಾಗದಿರಲಿ ಎಂಬುದು ಉದ್ದೇಶವಾಗಿದೆ.

ಸತ್ಯಾಸತ್ಯಗಳ ವಿಷಯವನ್ನು ಪ್ರಕಾಶಪಡಿಸಿದ ಮೇಲೂ, ಇಚ್ಛೆಯುಳ್ಳವನು ಒಪ್ಪದಿರಲಿ ಅಥವಾ ಒಪ್ಪಲಿ, ಯಾರ ಮೇಲೂ ಬಲಾತ್ಕಾರ ಮಾಡಲ್ಪಡುವುದಿಲ್ಲ. ತಮ್ಮ ಅಥವಾ ಬೇರೆಯವರ ದೋಷಗಳನ್ನು ದೋಷಗಳೆಂದೂ ಗುಣಗಳನ್ನು ಗುಣಗಳೆಂದೂ ತಿಳಿದು ಗುಣಗಳನ್ನು ಸ್ವೀಕರಿಸುವುದು ಹಾಗೂ ದೋಷಗಳನ್ನು ತ್ಯಜಿಸುವುದು, ಮತ್ತು ಹಠಮಾರಿಗಳ ಹಠವನ್ನೂ, ದುರಾಗ್ರಹವನ್ನೂ ಕಡಿಮೆ ಮಾಡುವುದು ಮತ್ತು ಮಾಡಿಸುವುದೂ ಸಜ್ಜನರ ಪರಿಪಾಟಿಯಾಗಿದೆ. ಏಕೆಂದರೆ—ಪಕ್ಷಪಾತದಿಂದ ಎಂತೆಂತಹ ಅನರ್ಥಗಳು ಜಗತ್ತಿನಲ್ಲಿ ಆಗಿಲ್ಲ? ಮತ್ತು ಆಗುವುದಿಲ್ಲ? ನಿಜವಾಗಿ ಹೇಳುವುದಾದರೆ ಈ ಅನಿಶ್ಚಿತವೂ ಕ್ಷಣಭಂಗುರವೂ ಆದ ಜೀವನದಲ್ಲಿ ಇತರರಿಗೆ ಹಾನಿಯನ್ನು ತಂದೊಡ್ಡಿ, ತಾನೂ ಸ್ವತಃ ಲಾಭರಹಿತನಾಗಿರುವುದೂ ಬೇರೆಯವರನ್ನು ಲಾಭದಿಂದ ರಹಿತರನ್ನಾಗಿಡುವುದೂ ಮನುಷ್ಯತ್ವದಿಂದ ಬಾಹಿರವಾದುದು. ಇದರಲ್ಲಿ ಏನಾದರೂ ವಿರುದ್ಧವಾಗಿ ಬರೆದು ಇದ್ದರೆ, ಸಜ್ಜನರು ಅದನ್ನು ತಿಳಿಯಪಡಿಸಬೇಕು. ಅನಂತರ ಯುಕ್ತವಾಗಿದ್ದಲ್ಲಿ ಒಪ್ಪಲಾಗುವುದು. ಏಕೆಂದರೆ ಈ ಲೇಖನವು ಹಠ, ದುರಾಗ್ರಹ, ದ್ವೇಷ, ವಾದ-ವಿವಾದ ಮತ್ತು ವಿರೋಧವನ್ನು ಕಡಿಮೆಮಾಡುವುದಕ್ಕಾಗಿ ಬರೆಯಲ್ಪಟ್ಟಿದೆ; ಇವನ್ನು ಹೆಚ್ಚಿಸುವುದಿಕ್ಕಲ್ಲ; ಏಕೆಂದರೆ—ಪರಸ್ಪರ ಹಾನಿಯನ್ನುಂಟುಮಾಡುವುದು ನಮ್ಮ ಮುಖ್ಯ ಕಾರ್ಯವಾಗಿದೆ. ಈಗ ಈ ಹದಿನಾಲ್ಕನೆಯ ಸಮುಲ್ಲಾಸದಲ್ಲಿ ಮುಸಲ್ಮಾನರ ಮತದ ವಿಷಯವನ್ನು ಎಲ್ಲಾ ಸಜ್ಜನರ ಎದುರಿನಲ್ಲಿ ನಿವೇದಿಸಿಕೊಳ್ಳುತ್ತೇನೆ. ಪರ್ಯಾಲೋಚಿಸಿ, ಇಷ್ಟವಾದುದನ್ನು ಗ್ರಹಿಸಿರಿ; ಮತ್ತು ಅನಿಷ್ಟವಾದುದನ್ನು ಪರಿತ್ಯಜಿಸಿ.

ಅಲಮತಿವಿಸ್ತರೇಣ ಬುದ್ಧಿಮದ್ವರ್ಯೇಷು.

॥ ಇತ್ಯನುಭೂಮಿಕಾ ॥



॥ ಓಂ ॥

ಅಥ ಚತುರ್ದಶ ಸಮುಲ್ಲಾಸಾರಂಭಃ

॥ ಅಥ ಯವನಮತವಿಷಯಂ ಸಮೀಕ್ಷಿಷ್ಯಾಮಹೇ ॥

ಇನ್ನು ಮುಂದೆ ಮುಸಲ್ಮಾನರ ಮತ ವಿಷಯದಲ್ಲಿ ಬರೆಯುವೆವು.

೧. ಕ್ಷಮಿಸುವವನೂ ದಯಾಳುವೂ ಆದ ಅಲ್ಲಾನ ಹೆಸರಿನೊಂದಿಗೆ ಆರಂಭವು.

[ಮಂಜಿಲ್ ೧। ಸಿದಾರಾ ೧। ಸೂರತೆಲ್ ಫಾತಿಹಾ। ೧]

ಸಮೀಕ್ಷಕ—ಈ ಕುರಾನು ದೇವರು ಹೇಳಿರುವಂತಹುದೆಂದು ಮುಸಲ್ಮಾನರು ಹೇಳುತ್ತಾರೆ. ಆದರೆ ಇದನ್ನು ಬರೆದವನು ಯಾರೋ ಬೇರೆಯವನೆಂದು ಈ ವಾಕ್ಯದಿಂದ ತಿಳಿದುಬರುತ್ತದೆ. ಏಕೆಂದರೆ ಪರಮಾತ್ಮನು ರಚಿಸಿದುದಾಗಿದ್ದರೆ—'ಅಲ್ಲಾನ ಹೆಸರಿನೊಂದಿಗೆ ಆರಂಭ" ಎಂದು ಹೇಳುತ್ತಿರಲಿಲ್ಲ; ಆದರೆ 'ಮನುಷ್ಯರಿಗೆ ಉಪದೇಶಕ್ಕಾಗಿ ಆರಂಭ' ವೆಂದು ಹೇಳುತ್ತಿದ್ದನು. "ನೀವು ಈ ರೀತಿ ಹೇಳಿರಿ" ಎಂದು ಮನುಷ್ಯರಿಗೆ ಅವನು ಉಪದೇಶಿಸುತ್ತಾನೆಂಬುದೂ ಸರಿಯಲ್ಲ. ಏಕೆಂದರೆ, ಇದರಿಂದ ಪಾಪದ ಆರಂಭವೂ ದೇವರ ಹೆಸರಿನಿಂದಾಗಿ ಅವನ ಹೆಸರೇ ದೂಷಿತವಾಗಿ ಹೋಗುವುದು. ಅವನು ಕ್ಷಮಿಸುವವನೂ, ದಯೆದೋರುವವನೂ ಆಗಿರುವುವಾದರೆ ಅವನು ತನ್ನ ಸೃಷ್ಟಿಯಲ್ಲಿ ಮನುಷ್ಯರ ಸುಖಕ್ಕೋಸ್ಕರ ಇತರ ಪ್ರಾಣಿಗಳನ್ನು ಕೊಂದು ದಾರುಣಪೀಡೆಯನ್ನು ಕೊಟ್ಟು, ಕೊಡಿಸಿ, ಕೊಲ್ಲಿಸಿ ಮಾಂಸವನ್ನು ತಿನ್ನಲು ಅಪ್ಪಣೆಯನ್ನೇಕೆ ಕೊಟ್ಟನು? ಆ ಪ್ರಾಣಿಗಳು ನಿರಪರಾಧಿಗಳೂ ದೇವರಿಂದ ಉತ್ಪನ್ನಮಾಡಲ್ಪಟ್ಟವೂ ಅಲ್ಲವೆ? ಮತ್ತು 'ಪರಮಾತ್ಮನ ಹೆಸರಲ್ಲಿ ಒಳ್ಳೆಯ ವಿಷಯಗಳ ಆರಂಭ. ಕೆಟ್ಟ ವಿಷಯಗಳದಲ್ಲ ಎಂದೂ ಕೂಡ ಹೇಳಬೇಕಾಗಿತ್ತು. ಈ ಕಥನದಲ್ಲಿ ಬಹಳ ಗೊಂದಲವಿದೆ. ಕಳ್ಳತನ, ಜಾರತನ, ಮಿಥ್ಯಾಭಾಷಣ ಮೊದಲಾದ ಅಧರ್ಮದ ಆರಂಭವೂ ದೇವರ ಹೆಸರಲ್ಲಿ ಮಾಡಬೇಕೇ? ಆದುದರಿಂ

ದಲೇ ನೋಡಿರಿ! ಕಟುಕರೇ ಮೊದಲಾದ ಮುಸಲ್ಮಾನರು ಗೋವು ಮೊದಲಾದವುಗಳ ಕುತ್ತಿಗೆ ಕೊಯ್ಯುವಾಗ "ಬಿಸ್ಮಿಲ್ಲಾಹ್" ಎಂಬ ವಾಕ್ಯವನ್ನು ಪಠಿಸುತ್ತಾರೆ. ಇದಕ್ಕೆ ಈ ಮೇಲೆ ಹೇಳಿದ ಅರ್ಥವೇ ಆಗಿದ್ದರೆ ಮುಸಲ್ಮಾನರು ಕೆಟ್ಟುದರ ಆರಂಭವನ್ನೂ ಪರಮಾತ್ಮನ ಹೆಸರಿನಲ್ಲಿ ಮಾಡುತ್ತಾರೆ. ಮುಸಲ್ಮಾನರ "ಖುದಾ" (ದೇವರು) ನ ದಯೆಯು ಆ ಪಶುಗಳ ಮೇಲೆ ಇಲ್ಲದಿರುವುದರಿಂದ ಅವನು ದಯಾಳುವೂ ಆಗಿರಲಾರನು. ಮುಸಲ್ಮಾನರಿಗೆ ಆ ವಾಕ್ಯದ ಅರ್ಥವು ಗೊತ್ತಿಲ್ಲವೆಂದು ಹೆಳುವುದಾದರೆ ಆ ವಾಕ್ಯವು ಪ್ರಕಟವಾದುದು ವ್ಯರ್ಥವಾಯಿತು. ಮುಸಲ್ಮಾನರು ಇದಕ್ಕೆ ಬೇರೆ ಅರ್ಥಮಾಡುವುದಾದರೆ ಆ ಸರಿಯಾದ ಅರ್ಥವು ಯಾವುದು? ಇತ್ಯಾದಿ ||೧||

೨. ಎಲ್ಲಾ ಸ್ತುತಿಗಳು ಸಮಸ್ತ ಜಗತ್ತನ್ನು ಪಾಲಿಸುವವನೂ, ಕ್ಷಮಾಪೂರ್ಣನೂ, ದಯಾಳುವೂ ಆದ ಪರಮಾತ್ಮನಿಗಾಗಿ ಇವೆ.

[ಮಂ. ೧। ಸಿ. ೧। ಸೂರತ್‌ಫಾತಿಹಾ। ೧, ೨]

ಸಮಿಾಕ್ಷಕ—ಕುರಾನಿನ ದೇವರು ಜಗತ್ತನ್ನು ಪಾಲಿಸುವವನೂ, ಎಲ್ಲರನ್ನು ಕ್ಷಮಿಸುವವನೂ ದಯೆದೋರುವವನೂ ಆಗಿದ್ದರೆ ಬೇರೆ ಮತದವರನ್ನೂ, ಪಶುಗಳನ್ನೂ, ಮುಸಲ್ಮಾನರ ಕೈಯಿಂದ ಕೊಲ್ಲಿಸುವ ಅಪ್ಪಣೆಕೊಡುತ್ತಿದ್ದಿಲ್ಲ. ಅವನು ಕ್ಷಮಿಸುವವನಾಗಿದ್ದರೆ ಪಾಪಿಗಳನ್ನೂ ಕ್ಷಮಿಸಿಬಿಡುವನೆ? ಹಾಗಿದ್ದರೆ ಮುಂದೆ ಬರೆಯುವ—ಕಾಫಿರರನ್ನೂ ಕುರಾನನ್ನೂ ಪೈಗಂಬರನನ್ನೂ ನಂಬದಪರನ್ನೂ ಕೊಂದುಹಾಕಿರಿ ಎಂದು ಏಕೆ ಹೇಳುತ್ತಿದ್ದನು? ಆದುದರಿಂದ ಕುರಾನು ಈಶ್ವರಕೃತ ವೆಂದು ತೋರುವುದಿಲ್ಲ. ||೨||

೩. (ನೀನು) ನ್ಯಾಯದಿನದ ಸ್ವಾಮಿಯು. ನಿನ್ನ ಭಕ್ತಿಯನ್ನೇ ನಾವು ಮಾಡುತ್ತೇವೆ. ಮತ್ತು ನಿನ್ನ ಸಹಾಯವನ್ನೇ ಕೋರುತ್ತೇವೆ. ನಮಗೆ ಸರಿಯಾದ ಮಾರ್ಗವನ್ನು ತೋರಿಸು.

[ಮಂ. ೧। ಸಿ. ೧। ಸೂ. ೧। ವಾಕ್ಯ ೩-೫]

ಸಮಿಾಕ್ಷಕ—ದೇವರು ಪ್ರತಿದಿವಸ ನ್ಯಾಯಮಾಡುತ್ತಿಲ್ಲವೆ? ಯಾವುದಾದರೊಂದು ದಿವಸ ಮಾತ್ರ ಮಾಡುವನೆ? ಇದರಲ್ಲಿ ಕಾರ್ಗ

ತ್ತಲೆ ಕಾಣಿಸುತ್ತಿದೆ. ಅವನ ಭಕ್ತಿಯನ್ನೇ ಮಾಡುವುದು ಮತ್ತು ಅವನ ಸಹಾಯವನ್ನೇ ಕೋರುವುದೇನೋ ಸರಿ. ಆದರೆ ಕೆಟ್ಟ ಕೆಲಸಕ್ಕಾಗಿಯೂ ಸಹಾಯ ಕೋರುವುದೆ? ಮುಸಲ್ಮಾನರ ಮಾರ್ಗ ಮಾತ್ರ ಸರಿಯಾಗಿರುತ್ತದೊ ಅಥವಾ ಬೇರೆಯವರದೂ ಸರಿಯಾಗಿರುತ್ತದೊ? ಸರಿಯಾದ ಮಾರ್ಗವನ್ನು ಮುಸಲ್ಮಾನರು ಸ್ವೀಕರಿಸುವುದಿಲ್ಲವೇಕೆ? ಕೆಟ್ಟವರ ಕಡೆಗಿನ ಸರಳ ಮಾರ್ಗವನ್ನೇನಾದರೂ ಕೋರುವುದಿಲ್ಲವಲ್ಲವೆ? ಎಲ್ಲರ ಒಳ್ಳೆಯದೂ ಒಂದೇ ಆಗಿರುವ ಪಕ್ಷದಲ್ಲಿ ಮುಸಲ್ಮಾನರಲ್ಲೇ ಯಾವ ವೈಶಿಷ್ಟ್ಯವೂ ಉಳಿಯಲಿಲ್ಲ. ಅನ್ಯರ ಉನ್ನತಿಯನ್ನು ಬಯಸದಿರುವುದಾದರೆ ಪಕ್ಷಪಾತಿಗಳಾಗುತ್ತಾರೆ. ॥೩॥

೪. ಯಾರ ಮೇಲೆ ದಯೆತೋರಿಸಿದೆಯೋ ಅವರ ಮಾರ್ಗವನ್ನು ತೋರಿಸು. ಯಾರ ಮೇಲೆ ನೀನು ಅತಿ ಕ್ರೋಧದೃಷ್ಟಿಯನ್ನು ಹಾಕಿದೆಯೋ ಅವರ ಹಾಗು ಪಥಭ್ರಷ್ಟರ ಮಾರ್ಗವನ್ನು ತೋರಿಸಬೇಡ. [ಮುಂ. ೧। ಸಿ. ೧। ಸೂ. ೧। ವಾಕ್ಯ ೬-೭]

ಸಮೀಕ್ಷೆ—ಮುಸಲ್ಮಾರು ಪೂರ್ವಜನ್ಮವನ್ನೂ ಪೂರ್ವಕೃತ ಪಾಪಪುಣ್ಯಗಳನ್ನೂ ನಂಬದ ಮೇಲೆ ಕೆಲವರ ಮೇಲೆ ದಯೆತೋರಿಸುವುದರಿಂದಲೂ, ಕೆಲವರ ಮೇಲೆ ದಯೆದೋರಿಸದಿರುವುದರಿಂದಲೂ ದೇವರು ಪಕ್ಷಪಾತಿಯಾಗಿಬಿಡುವನು. ಏಕೆಂದರೆ ಪಾಪಪುಣ್ಯಗಳ ಹೊರತು ಸುಖದುಃಖಗಳನ್ನಿೀಯುವುದು ಕೇವಲ ಅನ್ಯಾಯದ ಮಾತು. ಕಾರಣವಿಲ್ಲದೆ ಒಬ್ಬನ ಮೇಲೆ ದಯೆಯನ್ನೂ ಇನ್ನೊಬ್ಬನ ಮೇಲೆ ಕ್ರೋಧದೃಷ್ಟಿಯನ್ನೂ ಇಡುವುದು ಸ್ವಭಾವಕ್ಕೆ ಹೊರಗಾದುದಾಗಿದೆ. ಅವನು ದಯೆಯನ್ನಾಗಲಿ, ಕ್ರೋಧವನ್ನಾಗಲಿ ಮಾಡಲಾರನು. ಪೂರ್ವಸಂಚಿತವಾದ ಪುಣ್ಯಗಳೇ ಇಲ್ಲದಿರುವಾಗ ಕೆಲವರ ಮೇಲೆ ಕ್ರೋಧವನ್ನು ಮಾಡಲು ಸಾಧ್ಯವೇ ಇಲ್ಲ. ಈ ಸೂರತಿನ (ಅಧ್ಯಾಯದ) ಟಪ್ಪಣಿಯಲ್ಲಿರುವಂತೆ—" ಸದಾ ಈ ರೀತಿ ಹೇಳಬೇಕೆಂದು ಅಲ್ಲಾನು ಮನುಷ್ಯರ ಮುಖದಿಂದ ಈ ಅಧ್ಯಾಯವನ್ನು (ಸೂರಾ) ಹೇಳಿಸಿದನು ಎಂಬುದು ನಿಜವಾಗಿದ್ದರೆ ಅಲಿಫ್, ಬೆ, ಮೊದಲಾದ ಅಕ್ಷರಗಳನ್ನು ದೇವರೇ ಓದಿಸಿರಬೇಕು. ಅಕ್ಷರಜ್ಞಾನವಿಲ್ಲದೆ ಈ ಅಧ್ಯಾಯವನ್ನು ಹೇಗೆ ಓದಬಹುದು ಎಂದು ಹೇಳುವಿರಾದರೆ ಅದನ್ನು ಕಂಠದಿಂ

ದಲೇ ಹೇಳುತ್ತಾ ಹೇಳಿಸುತ್ತಾ ಹೋದನೇನು? ಹಾಗಿದ್ದರೆ ಇಡೀ ಕುರಾನನ್ನೇ ಬಾಯಿಂದ ಪಾಠಮಾಡಿಸಿರಬೇಕು. ಆದುದರಿಂದ ಯಾವ ಪುಸ್ತಕದಲ್ಲಿ ಪಕ್ಷಪಾತದ ಮಾತುಗಳು ಕಂಡು ಬರುತ್ತವೊ ಆ ಪುಸ್ತಕವು ಈಶ್ವರಕೃತವಾಗಲಾರದೆಂದು ತಿಳಯಬೇಕು. ಉದಾ—ಅರಬ್ಬೀಭಾಷೆಯಲ್ಲಿ ಇದನ್ನು ಇಳಿಸಿರುವುದರಿಂದ ಅರಬ್ಬೀ ಭಾಷೆಯವರಿಗೆ ಇದನ್ನೋದುವುದು ಸುಲಭವೂ, ಅನ್ಯಭಾಷಾಭಾಷಿಗಳಿಗೆ ಕಷ್ಟವೂ ಆಗುತ್ತದೆ. ಇದರಿಂದ ದೇವರಲ್ಲಿ ಪಕ್ಷಪಾತವು ಬರುತ್ತದೆ. ಪರಮಾತ್ಮನು ಸೃಷ್ಟಿಯಲ್ಲಿರುವ ಎಲ್ಲಾ ದೇಶಗಳ ಮನುಷ್ಯರ ಮೇಲಿನ ನ್ಯಾಯದೃಷ್ಟಿಯಿಂದ ಎಲ್ಲಾ ದೇಶಭಾಷೆಗಳಿಗಿಂತಲೂ ವಿಲಕ್ಷಣವಾದ, ಸಮಸ್ತ ದೇಶದವರಿಗೆ ಸಮಾನ ಪರಿಶ್ರಮದಿಂದ ವಿದಿತವಾಗುವ ಸಂಸ್ಕೃತಭಾಷೆಯಲ್ಲಿ ವೇದಗಳನ್ನು ಪ್ರಕಾಶಪಡಿಸಿರುವಂತೆ ಮಾಡಿದ್ದರೆ ಈ ದೋಷವು ತಟ್ಟುವುದಿಲ್ಲ. ॥೪॥

೫. ಈ ಪುಸ್ತುಕವು ಧಾರ್ಮಿಕರಿಗೆ ಅಂದರೆ ದೇವರ ಮೇಲೆ ವಿಶ್ವಾಸವಿಡುವವರೂ, ಪರೋಕ್ಷದ ನಮಾಜನ್ನು ಮಾಡುವವರೂ, ನಾವು ಕೊಟ್ಟ ವಸ್ತುವನ್ನು ವೆಚ್ಚಮಾಡುವವರೂ ಆದವರಿಗೆ ಮಾರ್ಗವನ್ನು ತೋರಿಸುತ್ತದೆಂಬುದರಲ್ಲಿ ಸಂದೇಹವಿಲ್ಲ. ಯಾರು ಈ ಪುಸ್ತಕದ ಮೇಲೆ ಶ್ರದ್ಧೆಯಿಡುವರೊ ಮತ್ತು ನಿನ್ನ ಅಥವಾ ನಿನ್ನಿಂದ ಮೊದಲು ಪ್ರಕಟವಾದ ಪುಸ್ತಕದ ಮೇಲೂ ಕಯಾಮತ (ಪ್ರಳಯದಿವಸ)ನ ಮೇಲೂ ನಂಬಿಕೆಯಿಡುವರೊ ಅವರಿಗೆ ನಿಸ್ಸಂದೇಹವಾಗಿ ದಾರಿತೋರಿಸುತ್ತದೆ. ಈ ಜನರು ತಮ್ಮ ಸ್ವಾಮಿಯ ಆಜ್ಞೆಯನ್ನು ಪಾಲಿಸುವವರು ಮತ್ತು ಇವರೇ ಬಿಡುಗಡೆ ಹೊಂದುವವರಾಗಿರುತ್ತಾರೆ. ನಿಜವಾಗಿ ಕಾಫಿರ ಆದವರನ್ನು ನೀನು ಹೆದರಿಸುವುದೂ ಹೆದರಿಸದಿರುವುದೂ ಒಂದೇ. ಅವರು ಶ್ರದ್ಧಾಳುಗಳಾಗುವುದಿಲ್ಲ. ಅಲ್ಲಾಹ್‌ನು ಅವರ ಹೃದಯಗಳ ಮತ್ತು ಕಿವಿಗಳ ಮೇಲೆ ಬೀಗ ಮುದ್ರೆಯನ್ನೊತ್ತಿದ್ದಾನೆ. ಅವರ ಕಣ್ಣುಗಳ ಮೇಲೆ ಪರದೆ ಬಿದ್ದಿದೆ. ಅವರಿಗಾಗಿ ಬಹಳ ವಿಪತ್ತುಗಳು ಕಾದಿವೆ. [ಮುಂ. ೧, ಸಿ. ೧, ಸೂರತ್ ೨, ೧-೬]

ಸಮೀಕ್ಷಕ—ತನ್ನ ಬಾಯಿಂದಲೇ ತನ್ನ ಪುಸ್ತಕವನ್ನು ಹೊಗಳಿಕೊಳ್ಳುವುದು ದೇವರ ಜಂಭದ ಮಾತಲ್ಲವೆ? ಧಾರ್ಮಿಕರಂತೂ

ಸನ್ಮಾರ್ಗದಲ್ಲಿ ಇದ್ದೇ ಇದ್ದಾರೆ. ದುಮಾರ್ಗದಲ್ಲಿರುವವರಿಗೆ ಈ ಕುರಾನು ಮಾರ್ಗವನ್ನೇ ತೋರಿಸಲಾರದು, ಎಂದಮೇಲೆ ಇದರ ಪ್ರಯೋಜನವಾದರೂ ಏನು? ಪಾಪ, ಪುಣ್ಯ ಮತ್ತು ಪುರುಷಾರ್ಥ ಗಳಿಲ್ಲದೆಯೇ ದೇವರು ತನ್ನ ಖಜಾನೆಯಿಂದ ಖರ್ಚಿಗಾಗಿ ಹಣ ಕೊಡು ತ್ತಾನಾದರೆ ಎಲ್ಲರಿಗೂ ಕೊಡುವುದಿಲ್ಲವೇಕೆ? ಮುಸಲ್ಮಾನರು ಪರಿ ಶ್ರಮ ಮಾಡುವುದಾದರೂ ಏತಕ್ಕೆ? ಬೈಬಲು, ಸುವಾರ್ತೆ ಮೊದ ಲಾದುವುಗಳ ಮೇಲೆ ವಿಶ್ವಾಸವಿಡುವುದು ಒಳ್ಳೆಯದಾಗಿರುವುದಾದರೆ ಮುಸಲ್ಮಾನರು ಅವುಗಳ ಮೇಲೆ ಕುರಾನಿನ ಮೇಲಿರುವಂತಹ ವಿಶ್ವಾಸ ವನ್ನೇಕೆ ಇಡುವುದಿಲ್ಲ? ಹಾಗೆ ವಿಶ್ವಾಸವಿಡುವುದಾದರೆ ಕುರಾನು* ಇರುವುದಾದರೂ ಏಕೆ? ಕುರಾನಿನಲ್ಲಿ ಹೆಚ್ಚು ವಿಷಯಗಳಿವೆಯೆನ್ನುವಿ ರಾದರೆ ದೇವರು ಮೊದಲಿನ ಪುಸ್ತಕದಲ್ಲಿ ಆ ವಿಷಯಗಳನ್ನು ಬರೆಯಲು ಮರೆತುಹೊದನೆ? ಮರೆತಿಲ್ಲವಾದರೆ ಕುರಾನನ್ನು ರಚಿಸುವುದೇ ನಿಷ್ಪ್ರ ಯೋಜಕವಾಯಿತು. ಬೈಬಲಿನ ಎಲ್ಲಿಯೋ ಕೆಲವು ಮಾತುಗಳು ಕುರಾನಿನ ಮಾತುಗಳೊಡನೆ ಹೋಲದಿರಬಹುದು, ಉಳಿದವೆಲ್ಲಾ ಒಂದೇರೀತಿಯಾಗಿರುವುದನ್ನು ನಾವು ನೋಡುತ್ತಿದ್ದೇವೆ. ವೇದದಂತೆ ದೇವರು ಒಂದೇ ಪುಸ್ತಕವನ್ನು ನಿರ್ಮಿಸಲಿಲ್ಲವೇಕೆ? ಕಯಾಮತ್ತಿನ ಮೇಲೆ ಮಾತ್ರ ವಿಶ್ವಾಸವಿಡಬೇಕೆ? ಬೇರೆ ವಿಷಯಗಳ ಮೇಲೆ ವಿಶ್ವಾಸವಿಡಬೇಕಾಗಿಲ್ಲವೇ? ಕ್ರೈಸ್ತ-ಮುಸಲ್ಮಾನರು ಮಾತ್ರ ದೇವರ ಶಿಕ್ಷಣದಲ್ಲಿರುವವರೆ? ಅವರಲ್ಲಿ ಯಾರೂ ಪಾಪಿಗಳಿಲ್ಲವೆ? ಅಧರ್ಮಿಗಳಾದ ಕ್ರೈಸ್ತ-ಮುಸಲ್ಮಾನರೂ ಬಿಡುಗಡೆ ಹೊಂದುವರೆ? ಇತರರು ಧರ್ಮಾತ್ಮರಾಗಿದ್ದರೂ ಬಿಡುಗಡೆ ಹೊಂದಲಾರರೆ? ಹಾಗೆ ಇರುವುದಾದರೆ ಮಹಾ ಅಜ್ಞಾನಾಂಧಕಾರದ ವಿಷಯವಲ್ಲವೆ? ಮುಸಲ್ಮಾನರಲ್ಲದವರನ್ನು ಮಾತ್ರ ಕಾಫಿರರೆಂದು ಹೇಳುವುದು ಏಕ ಪಕ್ಷೀಯ ನಿರ್ಣಯವಲ್ಲವೆ? ದೇವರೇ ಅವರ ಅಂತಃಕರಣ ಮತ್ತು ಕಿವಿಗಳ ಮೇಲೆ ಬೀಗಮುದ್ರೆಯನ್ನು ಒತ್ತಿದುದರಿಂದಲೇ ಅವರು ಪಾಪ

---

* ವಾಸ್ತವವಾಗಿ ಈ ಶಬ್ದವು ಕುರ್-ಆನ್ ಎಂದಿರುವುದಾದರೂ ದೇಶ ಭಾಷೆಯಲ್ಲಿ ಜನರಾಡುವಾಗ ಅದನ್ನು ಕುರಾನೆಂದು ಹೇಳುವುದರಿಂದ ಅದನ್ನೇ ಬರೆಯಲಾಗಿದೆ.

ಮಾಡುತ್ತಿರುವರಾದರೆ ಅದರಲ್ಲಿ ಆ ಮನುಷ್ಯರ ದೋಷವೇನೂ ಇಲ್ಲ. ದೋಷವೆಲ್ಲವೂ ದೇವರದಾಗಿರುತ್ತದೆ. ಅಂದಮೇಲೆ ಅವರಿಗೆ ಸುಖ-ದುಃಖಗಳಾಗಲಿ ಪಾಪ-ಪುಣ್ಯಗಳಾಗಲಿ ತಟ್ಟಲಾರವು. ಹಾಗಿದ್ದಮೇಲೆ ಅವರಿಗೆ ಶಿಕ್ಷೆಯನ್ನು ವಿಧಿಸುವುದಾದರೂ ಏತಕ್ಕೆ? ಅವರು ಪಾಪ ಪುಣ್ಯಗಳನ್ನು ಸ್ವತಂತ್ರರೀತಿಯಿಂದ ಮಾಡಿಲ್ಲವಲ್ಲವೆ?

೬. ಅವರ ಅಂತಃಕರಣಗಳಲ್ಲಿ ರೋಗವಿದೆ. ದೇವರು ಅವರ ರೋಗವನ್ನು ಹೆಚ್ಚಿಸಿದನು. [ಮಂ. ೧। ಸಿ೧। ಸೂರತ ೨। ವಾ ೧೦]

ಸಮಾಕ್ಷೇಪಕ—ನೋಡಿ! ಅಪರಾಧವಿಲ್ಲದೆಯೇ ದೇವರು ಅವರ ರೋಗವನ್ನು ಹೆಚ್ಚಿಸಿದನು! ಸ್ವಲ್ಪವೂ ದಯೆಬರಲಿಲ್ಲ. ಪಾಪ, ಆ ಬಡಪಾಯಿಗಳಿಗೆ ಬಹಳ ದುಃಖವುಂಟಾಗಿರಬೇಕು. ಇದು ಸೈತಾನನನ್ನು ಏಕಾಗಿಸಿದ ಸೈತಾನತನವಲ್ಲವೆ? ಯಾವನಾದರೊಬ್ಬನ ಮನಸ್ಸಿನ ಮೇಲೆ ಬೀಗಮುದ್ರೆಯನ್ನೊತ್ತುವುದೂ ಅಥವಾ ರೋಗವನ್ನು ಹೆಚ್ಚಿಸುವುದು ದೇವರ ಕೆಲಸವಲ್ಲ. ರೋಗವು ತನ್ನ ಪಾಪಗಳಿಂದ ಹೆಚ್ಚುತ್ತದೆ.

೭. ಅವನು ನಿಮಗಾಗಿ ಭೂಮಿಯನ್ನು ಹಾಸಿಗೆಯಾಗಿಯೂ, ಆಕಾಶವನ್ನು ಛಾವಣಿಯಾಗಿಯೂ ಮಾಡಿದ್ದಾನೆ.

[ಮಂ. ೧। ಸಿ ೧। ಸೂರತ್ ೨। ವಾಕ್ಯ ೨೨]

ಸಮಾಕ್ಷೇಪಕ—ಭಲೆ! ಆಕಾಶವು ಯಾರಿಗಾದರೂ ಛಾವಣಿಯಾಗಬಲ್ಲುದೆ? ಇದು ಅಜ್ಞಾನದ ಮಾತಾಗಿರುತ್ತದೆ. ಆಕಾಶವನ್ನು ಛಾವಣಿಯಂತಿದೆಯೆಂದು ತಿಳಿಯುವುದು ಹಾಸ್ಯಾಸ್ಪದವಾದ ವಿಚಾರ. ಯಾವುದಾದರೂ ವಿಧದಿಂದ ಭೂಮಿಯನ್ನು ಆಕಾಶವೆಂದು ತಿಳಿಯುವುದಾದರೆ ಅದು ಅವರ ಕಲ್ಪನೆಯ ಮಾತೇ ಸರಿ. ॥೭॥

೮. ನಾವು ನಮ್ಮ ಪೈಗಂಬರನ ಮೂಲಕ ಪ್ರಕಟಪಡಿಸಿರುವವಸ್ತುವಿನ ಮೇಲೆ ನಿಮಗೆ ಸಂದೇಹವಿರುವುದಾದರೆ ಅಂತಹ ಒಂದು ಸೂರತ (ಅಧ್ಯಾಯ)ನ್ನು ತನ್ನಿರಿ. ನೀವು ಸತ್ಯವಂತರಾಗಿದ್ದರೆ ಅಲ್ಲಾಹ್‌ನ ಹೊರತು ಬೇರೆ ಸಾಕ್ಷಿಗಳನ್ನು ಕರೆಯಿರಿ. ಮತ್ತು ಎಂದಿಗೂ ನೀವು ಅರೀತಿ ಮಾಡಲಾರಿರಾದರೆ ಮನುಷ್ಯನನ್ನು

ಕಟ್ಟಗೆಯಾಗಿ ಮಾಡಿಕೊಳ್ಳುವ ಆ ಬೆಂಕಿಗೆ ಹೆದರಿರಿ. ಕಾಫಿರರಿಗಾಗಿ ಕಲ್ಲುಗಳು ಸಿದ್ಧಗೊಳಿಸಲ್ಪಟ್ಟಿವೆ.

[ಮುಂ. ೧। ಸಿ.೧। ಸೂ. ೨। ಆಯತ್ ೨೩-೨೪]

ಸಮಿಾಕ್ಷಕ—ಅದಕ್ಕೆ ಸರಿಸಮಾನವಾದ ಅಧ್ಯಾಯ ಯಾವುದೂ ಆಗಲಾರದೆಂಬುದೂ ಒಂದು ಮಾತೆ? ಅಕಬರ ಬಾದಶಹನ ಕಾಲದಲ್ಲಿ ಮೌಲವಿ ಫೈಜಿ ಎಂಬ ಕವಿಯು ಚುಕ್ಕಿಗಳೇ ಇಲ್ಲದಂತಹ ಕುರಾನನ್ನು ರಚಿಸಿರಲಿಲ್ಲವೆ? ಆ ನರಕದ ಬೆಂಕಿ ಯಾವುದು? ಇಲ್ಲಿನ ಬೆಂಕಿಗೆ ಹೆದರಬಾರದೆ? ಇವರಲ್ಲಿಯೂ ಬಿದ್ದದ್ದೆಲ್ಲವೂ ಸೌದೆಯಾಗುತ್ತದಲ್ಲವೆ? ಕಾಫಿರರಿಗಾಗಿ ಕಲ್ಲುಗಳು ಸಿದ್ಧಗೊಳಿಸಲ್ಪಟ್ಟಿವೆಯೆಂದು ಬರೆದಂತೆ ಮ್ಲೇಚ್ಛರಿಗಾಗಿ ಘೋರನರಕವು ನಿರ್ಮಿಸಲ್ಪಟ್ಟಿದೆಯೆಂದು ಪುರಾಣಗಳಲ್ಲಿ ಬರೆದಿದೆ. ಈಗ ಯಾರಮಾತನ್ನು ನಿಜವೆಂದು ನಂಬೋಣ ಎಂಬುದನ್ನು ನೀವೇ ಹೇಳಿ. ತಮ್ಮ ತಮ್ಮ ಮಾತಿನಂತೆ ಇಬ್ಬರೂ ಸ್ವರ್ಗಗಾಮಿಗಳೂ, ಒಬ್ಬರು ಮತ್ತೊಬ್ಬರ ವಿಷಯದಲ್ಲಿ ಹೇಳಿರುವ ಮಾತಿನಂತೆ ಇಬ್ಬರೂ ನರಕಗಾಮಿಗಳೂ ಆಗುತ್ತಾರೆ. ಆದುದರಿಂದ ಈ ಎಲ್ಲರ ವಿವಾದಗಳು ಸುಳ್ಳಾಗಿರುತ್ತದೆ. ಎಲ್ಲಾ ಮತಗಳಲ್ಲಿ ಧಾರ್ಮಿಕರಾಗಿರುವವರು ಸುಖವನ್ನೂ, ಪಾಪಿಗಳಾಗಿರುವವರು ದುಃಖವನ್ನು ಹೊಂದುವರು. ॥೮॥

೯. ಶ್ರದ್ಧೆಯುಳ್ಳವರಿಗೂ, ಸತ್ಕರ್ಮ ಮಾಡುವವರಿಗೂ ಆನಂದದಾಯಕವಾದ ಸಂದೇಶವನ್ನೀಯಿರಿ—ಅವರಿಗಾಗಿ ಸ್ವರ್ಗವಿದೆ. ಆ ಸ್ವರ್ಗದ ಕೆಳಬದಿಯಲ್ಲಿ ಕಾಲುವೆಗಳು ಹರಿಯುತ್ತಿವೆ. ಅವುಗಳಿಂದ ಒಣಹಣ್ಣುಗಳ ಆಹಾರ ಕೊಟ್ಟಾಗ ಅವರು—ಇವು ನಮಗೆ ಮೊದಲೇ ಕೊಡಲ್ಪಟ್ಟ ವಸ್ತುಗಳು ಎಂದು ಹೇಳುವರು. ಮತ್ತು ಅವರಿಗಾಗಿ ಅಲ್ಲಿ ಪವಿತ್ರರೂ, ಸದಾಕಾಲ ಇರುವವರೂ ಆದ ಹೆಂಗಸರು ಇರುವರು. [ಮುಂ. ೧। ಸಿ. ೧। ಸೂ. ೨। ಆಯತ್ ೨೫]

ಸಮಿಾಕ್ಷಕ—ಕುರಾನಿನ ಈ ಸ್ವರ್ಗವು ಈ ಲೋಕಕ್ಕಿಂತಲೂ ಯಾವ ವಿಷಯದಲ್ಲಿ ಉತ್ತಮವಾಗಿದೆ? ಈ ಜಗತ್ತಿನಲ್ಲಿರುವ ವಸ್ತುಗಳೇ ಮುಸಲ್ಮಾನರ ಸ್ವರ್ಗದಲ್ಲಿಯೂ ಇವೆ. ಆದರೆ ಇಲ್ಲಿ ಜನರು ಹುಟ್ಟು ಸಾಯುವಂತೆ ಮತ್ತು ಬಂದು ಹೋಗುತ್ತಿರುವಂತೆ ಸ್ವರ್ಗದಲ್ಲಿರ

ಬಿರುವುದೇ ಒಂದು ವಿಶೇಷ ಸಂಗತಿ. ಇಲ್ಲಿನ ಸ್ತ್ರೀಯರು ಸದಾ ಕಾಲವೂ ಇರುವುದಿಲ್ಲ. ಅಲ್ಲಿನ ಬೀಬಿಯರು ಅಂದರೆ ಉತ್ತಮ ಸ್ತ್ರೀಯರು ಮಾತ್ರ ಸದಾ ಕಾಲವೂ ಇರುತ್ತಾರೆ. ಕಯಾಮತಿನ ರಾತ್ರಿ ಬರುವವರೆಗೂ ಆ ಬಡಪಾಯಿಗಳು ಯಾವ ರೀತಿಯಲ್ಲಿ ದಿನ ನೂಕುತ್ತಾರೊ ಏನೊ!! ದೇವರ ಆಶ್ರಯದಲ್ಲೇ ಅವರು ಸಮಯವನ್ನು ಕಳೆಯುತ್ತಿರಬಹುದು. ಏಕೆಂದರೆ, ಮುಸಲ್ಮಾನರ ಸ್ವರ್ಗವು ಗೋಕುಲದ ಗೋಸಾಯಿಗಳ ಗೋಕುಲದಂತೆಯೂ, ಮಂದಿರದಂತೆಯೂ ಕಾಣಿಸುತ್ತದೆ. ಏಕೆಂದರೆ, ಅಲ್ಲಿ ಪುರುಷರಿಗೆ ಗೌರವವಿಲ್ಲದೆ ಸ್ತ್ರೀಯರಿಗೆ ಗೌರವವಿರುವಂತೆಯೇ ದೇವರ ಮನೆಯಲ್ಲಿ ಸ್ತ್ರೀಯರಿಗೆ ಹೆಚ್ಚು ಮನ್ನಣೆಯೂ, ಅವರ ಮೇಲೆ ದೇವರ ಹೆಚ್ಚು ಪ್ರೇಮವೂ ಇರುತ್ತದೆಯೇ ಹೊರತು ಆ ಪುರುಷರ ಮೇಲೆ ಇರುವುದಿಲ್ಲ. ಏಕೆಂದರೆ ಆ ಬೀಬಿಯರನ್ನು ಸ್ವರ್ಗದಲ್ಲಿ ಸದಾಕಾಲವೂ ಇಟ್ಟಿರುವನೇ ಹೊರತು ಪುರುಷರನ್ನು ಇಟ್ಟಿಲ್ಲ. ಹೀಗಿರುವಾಗ ಆ ದೇವರ ಇಷ್ಟವಿರದೆ ಬೀಬಿಯರು ಹೇಗೆತಾನೆ ಸ್ವರ್ಗದಲ್ಲಿರಬಲ್ಲರು? ನಿಜವಾಗಿ ಈರೀತಿಯಿರುವುದಾದರೆ ದೇವರು ಸ್ತ್ರೀಯರ ಬಲೆಯಲ್ಲಿಯೇ ಸಿಕ್ಕಿಹೋಗಬಹುದು. ||೯||

೧೦. ಆದಮನಿಗೆ ಮೊದಲು ಎಲ್ಲಾ ಹೆಸರುಗಳನ್ನು ಕಲಿಸಿ, ಅನಂತರ ಫರಿಶ್ತಾಗಳ (ದೇವದೂತರ) ಎದುರಿನಲ್ಲಿ ನಿಲ್ಲಿಸಿ—ನೀನು ಸತ್ಯವಂತನಾಗಿದ್ದರೆ ನನಗೆ ಅವರ ಹೆಸರುಗಳನ್ನು ಹೇಳು ಎಂದನು. "ಆದಮನೆ! ಅವರ ಹೆಸರುಗಳನ್ನು ಹೇಳು" ಎಂದು ಅಪ್ಪಣೆಯನ್ನಿತ್ತಾಗ ಅವನು ಹೇಳಿಬಿಟ್ಟನು. ಆಗ ದೇವರು ದೇವದೂತರಿಗೆ, ಪೃಥ್ವಿ ಮತ್ತು ಆಕಾಶದಲ್ಲಿ ಅಡಗಿರುವ ವಸ್ತುಗಳನ್ನೂ ಪ್ರಕಟವಾದ ಮತ್ತು ಪ್ರಕಟವಲ್ಲದ ಕರ್ಮಗಳನ್ನೂ ನಾನು ನಿಶ್ಚಯವಾಗಿಯೂ ಬಲ್ಲೆನೆಂದು ನಿಮಗೆ ಹೇಳಿರಲಿಲ್ಲವೆ? ಎಂದು ಹೇಳಿದನು.

[ಮಂ. ೧। ಸಿ ೧। ಸೂ. ೨। ಆ. ೩೧-೩೩]

ಸವಿಾಕ್ಷಕ—ಈರೀತಿ ದೇವದೂತರನ್ನು ಮೋಸಹಡಿಸಿ ತನ್ನ ಹಿರಿಮೆಯನ್ನು ಸಾಧಿಸುವುದು ದೇವರ ಕೆಲಸವಾಗಬಲ್ಲುದೆ? ಇದಾದರೂ ಒಂದು ಆಡಂಬರವ ಮಾತು ಯಾವ ವಿದ್ವಾಂಸನೂ ಇದನ್ನು

ನಂಬಲಾರ ಮತ್ತು ಈರೀತಿ ಅಭಿಮಾನವನ್ನು ಪಡಲಾರ. ಇಂತಹ ಮಾತುಗಳಿಂದಲೇ ದೇವರು ತನ್ನ ದೇವರತನದ ಪ್ರಭಾವ ಬೀರಲು ಬಯಸುತ್ತಿರುವನೇನು? ಕಾಡುಜನಗಳಲ್ಲಿ ಒಬ್ಬನು ಎಂತಹ ಪಾಷಂಡ ತನವನ್ನಾದರೂ ಪ್ರಚಾರಪಡಿಸಬಹುದೇ ಹೊರತು ಸಭ್ಯಜನರಲ್ಲಿ ಸಾಧ್ಯವಿಲ್ಲ. ||೧೦||

೧೧. ದೇವದೂತರಿಗೆ ನಾವು-ಬಾಬಾ ಆದಮನಿಗೆ ನಮಸ್ಕಾರ ಮಾಡಿರಿ ಎಂದು ಹೇಳಲು ಅವನಿಗೆ ಎಲ್ಲರೂ ಅಡ್ಡಬಿದ್ದರು. ಆದರೆ ಸೈತಾನನು ಒಬ್ಬ ಕಾಫಿರನಾಗಿದ್ದುದರಿಂದ ಆ ಮಾತನ್ನು ನಂಬದೆ ಅಹಂಕಾರಪಟ್ಟನು. [ಮುಂ. ೧೫ ಸಿ ೧೫ ಸೂ. ೨೫ ಆ. ೩೪]

ಸಮಿಾಕ್ಷಕ—ಆದುದರಿಂದ ದೇವರು ಸರ್ವಜ್ಞನಲ್ಲ ಅಂದರೆ ಭೂತ-ಭವಿಷ್ಯತ್-ವರ್ತಮಾನ ಕಾಲಗಳ ವಿಷಯಗಳನ್ನು ಪೂರ್ಣವಾಗಿ ಅವನು ತಿಳಿದಿಲ್ಲ. ತಿಳಿದಿದ್ದರೆ ಅವನು ಸೈತಾನನನ್ನು ಹುಟ್ಟಿಸಿದ್ದಾದರೂ ಏಕೆ? ಅದಲ್ಲದೆ ದೇವರಲ್ಲಿ ತೇಜಸ್ಸೂ ಏನೂ ಇಲ್ಲ. ಏಕೆಂದರೆ, ಸೈತಾನನು ದೇವರ ಅಪ್ಪಣೆಯನ್ನೇ ಪಾಲಿಸದಿದ್ದರೂ ದೇವರು ಅವನಿಗೇನೂ ಮಾಡಲಾರದೆ ಹೋದ. ಈಗ ನೋಡಿ! ಕಾಫಿರನಾದ ಒಬ್ಬ ಸೈತಾನನೇ ದೇವರನ್ನು ಕದಲಿಸಿಬಿಟ್ಟನೆಂದಮೇಲೆ ಮುಸಲ್ಮಾನರು ಹೇಳುವಂತೆ ಕೊಟಗಟ್ಟಲೆ ಕಾಫಿರರು ಇರುವಲ್ಲಿ ಮುಸಲ್ಮಾನರ ದೇವರ ಮತ್ತು ಮುಸಲ್ಮಾನರ ಯಾವ ಆಟ ತಾನೆ ನಡೆಯಬಲ್ಲುದು? ಆಗಾಗ ದೇವರೂ ಒಬ್ಬನ ರೋಗವನ್ನು ಹೆಚ್ಚಿಸಿ ಬಿಡುತ್ತಾನೆ. ಇನ್ನೊಬ್ಬನನ್ನು ಮಾರ್ಗಭ್ರಷ್ಟನನ್ನಾಗಿ ಮಾಡುತ್ತಾನೆ. ದೇವರು ಈ ವಿಷಯಗಳನ್ನು ಸೈತಾನನಿಂದಲೂ, ಸೈತಾನನು ದೇವರಿಂದ ಕಲಿತಿರಬಹುದು. ಏಕೆಂದರೆ, ದೇವರ ಹೊರತು ಸೈತಾನನಿಗೆ ಬೇರಾವನೂ ಗುರುವಾಗಲಾರನು. ||೧೧||

೧೨. "ಆದಮನೆ! ನೀನೂ ನಿನ್ನ ಹೆಂಡತಿಯೂ ಸ್ವರ್ಗದಲ್ಲಿ ಬೇಕಾದಲ್ಲಿರಿ. ಬೇಕಾದ್ದನ್ನು ತಿನ್ನಿ. ಆದರೆ ಆ ವೃಕ್ಷದ ಸಮಿಾಪ ಹೋಗಬೇಡಿ. ಪಾಪಿಗಳಾಗುವಿರಿ" ಎಂದು ನಾವು ಹೇಳಿದೆವು. ಸೈತಾನನು ಅವರನ್ನು ಮೋಸಪಡಿಸಿ ಸ್ವರ್ಗದ ಆನಂದದಿಂದ ವಂಚಿಸಿಬಿಟ್ಟನು. ಆಗ ನಾವು—" ಕೆಳಗಿಳಿಯಿರಿ. ನಿಮ್ಮಲ್ಲಿ ಯಾರೋ

ಪರಸ್ಪರ ಶತ್ರುವಿದ್ದಾನೆ. ನಿಮ್ಮ ವಾಸಸ್ಥಳವು ಪೃಥ್ವಿಯಾಗಿರುವುದು. ಒಂದು ಸಮಯದವರೆಗೆ ಲಾಭವಿದೆ'' ಎಂದು ಹೇಳಿದೆವು. ಆವಮನು ತನ್ನ ಒಡೆಯನ ಕೆಲವು ಮಾತುಗಳನ್ನು ಕಲಿತುಕೊಂಡು ಭೂಮಿಗೆ ಬಂದನು. [ಮಂ. ೧, ಸಿ. ೧, ಸೂ. ೨, ಆ. ೩೫-೩೭]

ಸಮೀಕ್ಷಕ—ಈಗ ದೇವರ ಅಲ್ಪಜ್ಞತೆಯನ್ನಾದರೂ ನೋಡಿ. ಈಗತಾನೆ ಸ್ವರ್ಗದಲ್ಲಿರಲು ಆಶೀರ್ವಾದ ಮಾಡಿದನು. ಆದರೆ ಸ್ವಲ್ಪ ಸಮಯದಲ್ಲೇ—"ಹೊರಡು" ಅಂದನು. ಭವಿಷ್ಯದ ವಿಷಯವನ್ನು ಅವನು ತಿಳಿದಿದ್ದರೆ ವರವನ್ನಾದರೂ ಕೊಡುತ್ತಿದ್ದನೇಕೆ? ಮೋಸ ಗೊಳಿಸುವ ಸೈತಾನನನ್ನು ಶಿಕ್ಷಿಸುವುದಕ್ಕೂ ಅವನು ಅಸಮರ್ಥನೆಂದು ತೋರುತ್ತದೆ. ಆ ಮರವನ್ನು ಯಾರಿಗಾಗಿ ಸೃಷ್ಟಿಸಿದ್ದನು? ತನಗಾಗಿಯೇ ಅಥವಾ ಇತರರಿಗಾಗಿಯೊ? ಇತರರಿಗಾಗಿದ್ದರೆ ಏಕೆ ತಡೆದನು? ಆದುದರಿಂದ ಇಂತಹ ಮಾತುಗಳು ದೇವರವೂ ಆಗಲಾರವು. ಆವನು ರಚಿಸಿದ ಪುಸ್ತಕದಲ್ಲಿಯವೂ ಇರಲಾವು. ಆದಮಸಾಹೇಬರು ದೇವರಿಂದ ಎಷ್ಟು ಮಾತುಗಳನ್ನು ಕಲಿತುಕೊಂಡು ಬಂದರು? ಭೂಮಿಯ ಮೇಲೆ ಅವರು ಯಾವರೀತಿ ಬಂದರು? ಆ ಸ್ವರ್ಗವು ಬೆಟ್ಟದ ಮೇಲಿದೆಯೋ ಅಥವಾ ಆಕಾಶದ ಮೇಲೆಯೋ? ಅಲ್ಲಿಂದ ಹೇಗೆ ಇಳಿದು ಬಂದರು? ಪಕ್ಷಿಗಳಂತೆ ಹಾರಿಬಂದರೊ ಅಥವಾ ಮೇಲಿನಿಂದ ಬಂಡೆಯು ಉರುಳುವಂತೆ ಉರುಳಿ ಬಂದರೊ? ಆದಮು ಸಾಹೇಬರನ್ನು ಪೃಥಿವಿಯಿಂದ ನಿರ್ಮಾಣ ಮಾಡಿದ್ದರೆ ಸ್ವರ್ಗದಲ್ಲಿಯೂ ಮಣ್ಣಿರಬಹುದೆ? ಮತ್ತು ಅಲ್ಲಿರುವ ಇನ್ನಿತರ ಫರಿಶ್ತಾ ಮೊದಲಾದವರೂ ಆದೇ ರೀತಿ ನಿರ್ಮಿಸಲ್ಪಟ್ಟಿರಬಹುದು. ಏಕೆಂದರೆ, ಪೃಥ್ವಿಯ ಶರೀರವಿಲ್ಲದೆ ಇಂದ್ರಿಯವಿಭಾಗಗಳಿರಲಾರವು. ಪಾರ್ಥಿವ ಶರೀರವಿರುವುದೆಂದಮೇಲೆ ಸಾವೂ ಇರಲೇಬೇಕು. ಸಾವು ಸಂಭವಿಸುವುದಾದರೆ ಅವರು ಅಲ್ಲಿಂದ ಇನ್ನೆಲ್ಲಿಗೆ ತೆರಳುತ್ತಾರೆ? ಮರಣವು ಬರುವುದಿಲ್ಲವಾದರೆ ಅವರ ಜನ್ಮವೂ ಆಗಿರಲ್ಲಿಕ್ಕಿಲ್ಲ. ಜನ್ಮವಿದ್ದಮೇಲೆ ಮರಣವೂ ಅವಶ್ಯವಿದೆ. ಹಾಗಿದ್ದರೆ ಅಲ್ಲಿನ ಬೀಬಿಯರು ಸದಾಕಾಲವೂ ಸ್ವರ್ಗದಲ್ಲಿರುತ್ತಾರೆಂದು ಕುರಾನಿನಲ್ಲಿ ಬರೆದಿರುವುದು ಸುಳ್ಳಾಗಿ ಹೋಗುವುದು. ಅವರು ಅವಶ್ಯವಾಗಿ ಮರಣಕ್ಕೆ ತುತ್ತಾಗುವರು. ||೧೬||

೧೩, ಯಾವ ಜೀವನೂ ಇನ್ನೊಬ್ಬ ಜೀವನ ಮೇಲೆ ನಂಬಿಕೆಯಿಡದಿರುವ ದಿವಸಕ್ಕೆ ಹೆದರಿರಿ. ಅವನ ಸಿಫಾರಸೂ ಸ್ವೀಕರಿಸಲ್ಪಡುವುದಿಲ್ಲ. ಅವನಿಂದ ಯಾವ ಪ್ರತಿಫಲವನ್ನೂ ತೆಗೆದುಕೊಳ್ಳಲಾಗುವುದಿಲ್ಲ. ಅವರು ಸಹಾಯವನ್ನು ಪಡೆಯಲಾರರು.

[ಮಂ. ೧, ಸಿ. ೧, ಸೂ. ೨, ಆ. ೪೮]

ಸಮಾಕ್ಷಕ—ಆದೇನು, ಈಗಿನ ದಿವಸಗಳಲ್ಲಿ ಹೆದರಬೇಕಾಗಿಲ್ಲವೆ? ಕೆಟ್ಟ ಕೆಲಸವನ್ನು ಮಾಡಲು ಯಾವಾಗಲೂ ಹೆದರಬೇಕು. ಆಗ ಸಿಫಾರಸು ಸ್ವೀಕರಿಸಲ್ಪಡಲಾಗುವುದಿಲ್ಲವಾದರೆ ಪೈಗಂಬರನ ಸಾಕ್ಷಿಯಿಂದಾಗಲಿ, ಸಿಫಾರಸಿನಿಂದಾಗಲಿ ದೇವರು ಸ್ವರ್ಗವನ್ನು ದಯಪಾಲಿಸುತ್ತಾನೆಂಬ ಮಾತು ಹೇಗೆತಾನೆ ನಿಜವಾದೀತು? ದೇವರು ನರಕದವರಿಗೆ ಸಹಾಯಕನಾಗಿರದೆ ಸ್ವರ್ಗದವರಿಗೇನೇ ಸಹಾಯಕನಾಗಿರುವುದಾದರೆ ಅವನು ಪಕ್ಷಪಾತಿ. ॥೧೩॥

೧೪. ನಾವು ಮೂಸಾವಿಗೆ ಪುಸ್ತಕವನ್ನೂ, ಅದ್ಭುತ ಚಮತ್ಕಾರಗಳನ್ನೂ ಕೊಟ್ಟಿವು. ನಾವು ಅವರಿಗೆ "ನೀವು ನಿಂದೆಗೆ ಗುರಿಯಾದ ಕೋತಿಗಳಾಗಿರಿ" ಎಂದು ಹೇಳಿದೆವು. ಅವರ ಎದುರಿನಲ್ಲಿದ್ದವರಿಗೂ, ಹಿಂದಿದ್ದವರಿಗೂ ಇದೊಂದು ಭಯವನ್ನೂ, ವಿಶ್ವಾಸವುಳ್ಳವರಿಗೆ ಶಿಕ್ಷಣವನ್ನೂ ಕೊಟ್ಟಿವು. [ಮಂ ೧। ಸಿ ೧। ಸೂ ೨। ಆ ೫೩, ೬೫-೬೬]

ಸಮಾಕ್ಷಕ—ಮೂಸಾವಿಗೆ ಪುಸ್ತಕವನ್ನು ಕೊಟ್ಟಿದ್ದರೆ ಕುರಾನು ಇರುವುದೆ ವ್ಯರ್ಥವಾಯಿತು. ಅವನಿಗೆ ಅದ್ಭುತ ಶಕ್ತಿಗಳನ್ನು ಕೊಟ್ಟನೆಂದು ಬೈಬಲು ಮತ್ತು ಕುರಾನು ಎರಡರಲ್ಲಿಯೂ ಬರೆದಿದೆ. ಆ ಚಮತ್ಕಾರಶಕ್ತಿಯಿದ್ದಿದ್ದರೆ ಈಗಲೂ ಹಾಗೆ ಆಗುತ್ತಿತ್ತು. ಈಗ ಆಗುತ್ತಿಲ್ಲವಾದ್ದರಿಂದ ಮೊದಲೂ ಇದ್ದಿಲ್ಲ. ಆದುದರಿಂದ ಈ ಮಾತು ನಂಬಲರ್ಹವಾದುದಲ್ಲ. ಈಗ ಸ್ವಾರ್ಥಿಗಳೂ ಅವಿದ್ವಾಂಸರ ಹತ್ತಿರ ಹೇಗೆ ವಿದ್ವಾಂಸರಾಗಿಬಿಡುತ್ತಾರೊ ಹಾಗೆಯೇ ಆ ಸಮಯದಲ್ಲಿಯೂ ಮೋಸ ಮಾಡಿರಬೇಕು. ದೇವರೂ ಅವನ ಭಕ್ತರೂ ಈಗಲೂ ಇದ್ದಾರೆ. ಆದರೂ ಕೂಡ ಅವನು ಆ ಆಶ್ಚರ್ಯಶಕ್ತಿಯನ್ನು ಕೊಡುವುದಿಲ್ಲವೇಕೆ? ಅದ್ಭುತ ಶಕ್ತಿಗಳನ್ನು ಪ್ರದರ್ಶಿಸಲಾರರೇಕೆ? ಮೊದಲು ಮೂಸಾವಿಗೆ ಪುಸ್ತಕವನ್ನು ಕೊಟ್ಟಿದ್ದರಿ ಪುನಃ ಕುರಾನನ್ನು ಕೊಡುವ ಅಗತ್ಯವಾದರೂ

ಏನಿತ್ತು ? ಏಕೆಂದರೆ ಒಳ್ಳೆಯದು ಮಾಡುವ ಮತ್ತು ಕೇಡು ಮಾಡದಿರುವ ಉಪದೇಶವು ಎಲ್ಲಾ ಕಡೆ ಒಂದೇ ವಿಧವಾಗಿರುತ್ತದೆಂದ ಮೇಲೆ ಪುನಃ ಪುನಃ ಬೇರೆಬೇರೆ ಪುಸ್ತಕಗಳನ್ನು ರಚಿಸುವುದರಿಂದ ಪುನರುಕ್ತದೋಷವು ತಗಲುತ್ತದೆ. ಮೂಸಾ ಮೊದಲಾದವರಿಗೆಕೊಟ್ಟ ಪುಸ್ತಕಗಳಲ್ಲಿ ದೇವರು ಏನಾದರೂ ಮರೆತುಹೋಗಿದ್ದನೆ? ದೇವರು ಕೇವಲ ಭಯವನ್ನು ಹುಟ್ಟಿಸುವುದಕ್ಕಾಗಿ '' ನಿಂದಿತ ಕೋತಿಗಳಾಗಿರಿ '' ಎಂದು ಹೇಳಿದ್ದರೆ ಅವನ ಮಾತು ಸುಳ್ಳಾಯಿತು. ಅಥವಾ ಅವನು ಮೋಸಮಾಡಿದಂತಾಯಿತು. ಇಂತಹ ಮಾತುಗಳನ್ನಾಡುವನನು ದೇವರೂ ಅಲ್ಲ ಮತ್ತು ಇಂತಹ ಮಾತುಗಳಿರುವ ಪುಸ್ತಕವು ದೇವನಿರ್ಮಿತವೂ ಅಲ್ಲ. ॥೧೪॥

೧೫- ಈರೀತಿ ದೇವರು ಹೆಣಗಳನ್ನೂ, ನಿಮ್ಮನ್ನೂ ಬದುಕಿಸುತ್ತಾನೆ. ನೀವು ತಿಳಿಯಬೇಕೆಂಬ ಅಭಿಪ್ರಾಯದಿಂದ ಅವನು ತನ್ನ ಗುರುತುಗಳನ್ನು ತೋರಿಸುತ್ತಾನೆ. [ಮಂ. ೧. ಸಿ. ೧, ಸೂ. ೨, ಆ ೭೩]

ಸಮಾಕ್ಷಕ—ದೇವರು ಮೊದಲು ಶವಗಳನ್ನು ಬದುಕಿಸುತ್ತಿದ್ದರೆ ಈಗೇಕೆ ಬದುಕಿಸುತ್ತಿಲ್ಲ? ಕಯಾಮತಿನ ರಾತ್ರಿಯ ತನಕ ಅವು, ಸಮಾಧಿಯಲ್ಲೇ ಬಿದ್ದಿರುವವೆ? ಈಗ ಸೆಷನ್ನಿಗೆ ಕಮಿಟ್ಟಾಗಿ ಸೆರೆಮನೆಯಲ್ಲಿರುವರೆ? ಇವೇ ದೇವರ ಚಿಹ್ನೆಗಳೆ? ಪೃಥ್ವಿ, ಸೂರ್ಯ, ಚಂದ್ರ ಮೊದಲಾದುವು ಅವನ ಚಿಹ್ನೆಗಳಲ್ಲವೇ? ಜಗತ್ತಿನಲ್ಲಿ ಪ್ರತ್ಯಕ್ಷ ತೋರುವ ವಿವಿಧ ರಚನೆಗಳು ಅಲ್ಪವಾದ ಚಿಹ್ನೆಗಳೇ? ॥೧೫॥

೧೬. ಅವರು ಯಾವಾಗಲೂ ಸ್ವರ್ಗದಲ್ಲಿ ಅಂದರೆ ವೈಕುಂಠದಲ್ಲಿ ವಾಸಿಸುವವರಾಗಿದ್ದಾರೆ. [ಮಂ. ೧। ಸಿ ೧। ಸೂ. ೨। ಆ ೪೨]

ಸಮಾಕ್ಷಕ—ಯಾವ ಜೀವನಿಗೂ ಅನಂತ ಪುಣ್ಯಪಾಪಗಳನ್ನು ಮಾಡುವ ಸಾಮರ್ಥ್ಯವಿರುವುದಿಲ್ಲ. ಆದುದರಿಂದ ಸದಾಕಾಲ ಸ್ವರ್ಗ ನರಕಗಳಲ್ಲಿರಲಾರರು. ಹಾಗೆ ಮಾಡುವುದಾದರೆ ದೇವರು ಅನ್ಯಾಯಕಾರಿಯೂ, ಅವಿದ್ವಾಂಸನೂ ಆಗಿಬಿಡುವನು. ಕಯಾಮತಿನ ದಿವಸ ನ್ಯಾಯವಾಗುವುದಾದರೆ ಮನುಷ್ಯರ ಪಾಪಪುಣ್ಯಗಳೆರಡೂ ಸಮಾನವಾಗಿರಬೇಕಾಗುತ್ತದೆ. ಅನಂತವಲ್ಲದ ಕರ್ಮಗಳಿಗೆ ಅನಂತ ಫಲವಾದರೂ ಹೇಗೆ ದೊರತೀತು? ಏಳೆಂಟು ಸಾವಿರ ವರುಷಗಳಿಂದ ಈಚೀಚಿಗೆಯೇ ಸೃಷ್ಟಿಯಾಯಿತೆಂದು ಹೇಳುತ್ತಾರೆ. ಅದಕ್ಕಿಂತ

ಮೊದಲು ದೇವರು ಸೋಮಾರಿಯಾಗಿ ಕೂತಿದ್ದನೆ? ಕಯಾಮತ್ತಿನ ಅನಂತರವೂ ಸೋಮಾರಿಯಾಗಿರುವನೆ? ಇವೆಲ್ಲ ಮುಕ್ಕಳಾಡುವ ಮಾತುಗಳಂತಿವೆ. ಏಕೆಂದರೆ, ದೇವರ ಕಾರ್ಯಗಳು ಯಾವಾಗಲೂ ನಡೆಯುತ್ತಿರುತ್ತವೆ. ಜೀವರ ಪಾಪಪುಣ್ಯಗಳಿಗೆ ತಕ್ಕಂತೆಯೇ ಅವನು ಫಲವನ್ನೀಯುತ್ತಾನೆ. ಆದಕಾರಣ ಕುರಾನಿನ ಈಮಾತು ನಿಜವಲ್ಲ.॥೧೬॥

೧೭. ಒಬ್ಬರು ಇನ್ನೊಬ್ಬರ ರಕ್ತವನ್ನು ಹರಿಸಬಾರದೆಂದೂ, ತಮ್ಮವನನ್ನು ಮನೆಯಿಂದ ಹೊರಹೊರಡಿಸಬಾರದೆಂದೂ ನಾವು ನಿಮ್ಮಿಂದ ಪ್ರತಿಜ್ಞೆಮಾಡಿಸಿದ್ದೇವೆ. ನೀವು ಆಗ ಪ್ರತಿಜ್ಞೆಮಾಡಿದಿರಿ. ಇದಕ್ಕೆ ನೀವೇ ಸಾಕ್ಷಿಯಾಗಿರುವಿರಿ. ಆದರೂ ನೀವು ತಮ್ಮೊಳಗೆ ಒಬ್ಬರು ಮತ್ತೊಬ್ಬರನ್ನು ಕೊಂದುಹಾಕುತ್ತಿದ್ದೀರಿ. ಒಂದು ಪಂಗಡದವರನ್ನು ಅವರ ಮನೆಯಿಂದ ಹೊರಹೊರಡಿಸುತ್ತಿದ್ದೀರಿ.

[ಮಂ. ೧। ಸಿ ೧। ಸೂ ೨। ಆಳ-ಆಖ]

ಸಮಿಾಕ್ಷಕ—ಪ್ರತಿಜ್ಞೆ ಮಾಡಿಸುವುದೂ, ಮಾಡುವುದೂ ಅಲ್ಪಜ್ಞನ ಕೆಲಸವೊ ಅಥವಾ ಪರಮಾತ್ಮನದೋ? ದೇವರು ಸರ್ವಜ್ಞನಾಗಿದ್ದರೆ ಸಾಂಸಾರಿಕ ಮನುಷ್ಯನಂತೆ ಹೀಗೇಕೆ ವ್ಯವಹಾರ ಮಾಡುತ್ತಿದ್ದನು? ತನ್ನ ತಮ್ಮವರಲ್ಲಿ ನೆತ್ತರು ಸುರಿಸಬಾರದು, ತಮ್ಮ ಮತದವರನ್ನು ಮನೆಯಿಂದ ಹೊರಹೊರಡಿಸಬಾರದೆಂಬುದು ಎಂತಹ ಒಳ್ಳೇ ಮಾತು? ಅನ್ಯಮತದವರ ನೆತ್ತರು ಹರಿಸಬಹುದೆ? ಅವರನ್ನು ಮನೆಯಿಂದ ಹೊರಗೆ ಹಾಕಬಹುದೆ? ಇದು ಮಿಥ್ಯಾತ್ವ, ಮೂರ್ಖತನ ಮತ್ತು ಪಕ್ಷಪಾತದ ಮಾತು. ಇವರು ಪ್ರತಿಜ್ಞೆಗೆ ವಿರುದ್ಧವಾಗಿ ನಡೆಯುವರೆಂದು ದೇವರಿಗೆ ಮೊದಲೇ ಗೊತ್ತಿರಲಿಲ್ಲವೆ? ಮುಸಲ್ಮಾನರ ದೇವರು ಕೂಡ ಬಹುಮಟ್ಟಿಗೆ ಕ್ರೈಸ್ತರ ದೇವರನ್ನು ಹೋಲುತ್ತಾನೆ. ಕುರಾನಿನ ಸ್ವಲ್ಪ ಮಾತುಗಳನ್ನು ಬಿಟ್ಟು ಬೇರೆಲ್ಲವೂ ಬೈಬಲಿನ ಮಾತುಗಳಾಗಿರುವುದರಿಂದ ಇದೆ ಸ್ವತಂತ್ರ ಗ್ರಂಥವಾಗಲಾರದು ॥೧೭॥

೧೮. ಈ ಜನರು ಪರಲೋಕಕ್ಕೆ ಬದಲಾಗಿ ಈ ಲೋಕದ ಜೀವನವನ್ನು ಕೊಂಡುಕೊಂಡಿದ್ದಾರೆ. ಇವರ ಪಾಪವೆಂದಿಗೂ ಹಗುರ ಮಾಡಲಾಗುವುದಿಲ್ಲ. ಅವರಿಗೆ ಸಹಾಯವೂ ಕೊಡಲ್ಪಡುವುದಿಲ್ಲ.

[ಮಂ. ೧। ಸಿ. ೧। ಸೂ. ೨। ಆ. ೮೬]

ಸಮಿಾಕ್ಷಕ—ಇಂತಹ ಈರ್ಷ್ಯಾ ದ್ವೇಷಗಳಿಂದ ಕೂಡಿದ ಮಾತು ಗಳು ಪರಮಾತ್ಮನವು ಎಂದಿಗಾದರೂ ಆಗಬಲ್ಲವೆ? ಪಾಪ ಹಗುರ ಮಾಡಲ್ಪಡುವ ಮತ್ತು ಸಹಾಯ ನೀಡಲ್ಪಡುವ ಜನರು ಯಾರು? ಅವರು ಪಾಪಿಗಳಾಗಿದ್ದು ಪಾಪಕ್ಕೆ ತಕ್ಕ ಶಿಕ್ಷೆಯನ್ನೀಯದೆ ಹಗುರ ಮಾಡಿದರೆ ಅನ್ಯಾಯವಾದೀತು. ದಂಡವನ್ನಿತ್ತು ಹಗುರಮಾಡುವು ದಾದರೆ ಮೇಲಿನ ಆಯತ್‌ನಲ್ಲಿ ಹೇಳಲ್ಪಟ್ಟ ಜನರ ಪಾಪಗಳೂ ಶಿಕ್ಷೆಯನ್ನನುಭವಿಸಿದ ಮೇಲೆ ಹಗುರವಾದಾವು. ಶಿಕ್ಷೆಯನ್ನಿತ್ತು ಹಗುರಮಾಡದಿದ್ದರೂ ಅನ್ಯಾಯವೇ ಆಗುತ್ತವೆ. ಪಾಪಗಳು ಹಗುರಮಾಡಲ್ಪಡುವವು ಎಂಬುದರ ತಾತ್ಪರ್ಯವು ಧರ್ಮಾತ್ಮರ ಪಾಪಗಳು ಎಂದು ಇರುವುದಾದರೆ ಅವರ ಪಾಪಗಳಂತೂ ಮೊದಲೇ ಹಗುರವಾಗಿವೆ. ದೇವರು ಮಾಡುವುದಾದರೂ ಏನು? ಆದುದರಿಂದ ಇದು ವಿದ್ವಾಂಸನ ಬರವಣಿಗೆಯಲ್ಲ. ನಿಜವಾಗಿ ಅವರವರ ಕರ್ಮಗಳಿ ಗನುಸಾರವಾಗಿ ಧರ್ಮಾತ್ಮರಿಗೆ ಸುಖವೂ ಅಧರ್ಮಿಗಳಿಗೆ ದುಃಖವೂ ಸದಾಕಾಲವೂ ದೊರೆಯುತ್ತಿರಬೇಕು. ||೧೮||

೧೯. ನಿಜವಾಗಿ ನಾವು ಮೂಸಾವಿಗೆ ಪುಸ್ತಕವನ್ನು ಕೊಟ್ಟಿವು. ಅವನ ಅನಂತರ ನಾವು ಪೈಗಂಬರನನ್ನು ತಂದೆವು ಮತ್ತು ಮರಿಯಮಳ ಮಗನಾದ ಯೇಸುವನ್ನು ಪ್ರಕಟಗೊಳಿಸಿ ಅವನಿಗೆ ಅದ್ಭುತ ಶಕ್ತಿ ಗಳನ್ನು, ಸಾಮರ್ಥ್ಯವನ್ನು ಕೊಟ್ಟೆವು. ಆ ಶಕ್ತಿಸಮೇತನಾಗಿ *ರುಹುಲ್‌ಕುದ್ಸ್‌ನೊಡನೆ ಪೈಗಂಬರನು ನಿಮ್ಮ ಬಳಿಗೆ ಬಂದನು. ಅವನ ವಿಷಯದಲ್ಲಿ ನಿಮ್ಮ ಮನಸ್ಸು ಒಡಂಬಡಲಿಲ್ಲ. ನೀವು ಅಹಂಕಾರಪಟ್ಟಿರಿ. ಒಂದು ಮತವನ್ನು ಸುಳ್ಳುಮಾಡಿದಿರಿ. ಇನ್ನೊಂ ದನ್ನು ಸಾಯಿಸುತ್ತಿದ್ದೀರಿ. [ಮಂ. ೧। ಸಿ. ೧। ಸೂ. ೨। ಆ. ೮೭]

ಸಮಿಾಕ್ಷಕ—ಮೂಸಾವಿಗೆ ಪುಸ್ತಕವನ್ನು ಕೊಟ್ಟನೆಂದು ಕುರಾನಿ ನಲ್ಲಿ ಸಾಕ್ಷಿಯಿರುವಾಗ ಅದನ್ನು ಮುಸಲ್ಮಾನರು ನಂಬಲೇಬೇಕು. ಇದರಿಂದ ಆ ಪುಸ್ತಕದಲ್ಲಿ ದೋಷಗಳೂ ಕೂಡ ಮುಸಲ್ಮಾನರ ಮತದಲ್ಲಿ ಬಂದು ಸೇರಿದವು. ಆ ದೈವೀ ಶಕ್ತಿಯ ಮಾತು

*ಈ ಹೆಸರು ಯೇಸುವಿನ ಸಂಗಡ ಯಾವಾಗಲೂ ಇರುತ್ತಿದ್ದ ಜಬರಾ ಯಿಲನದು.

ಗಳೆಲ್ಲಾ ಅರಿಯದ ಜನರನ್ನು ಮೋಸಪಡಿಸುವುದಕ್ಕಾಗಿ ಹೇಳಿದ ಪೊಳ್ಳುಮಾತುಗಳು. ಏಕೆಂದರೆ ಸೃಷ್ಟಿಕ್ರಮಕ್ಕೂ, ವಿದ್ಯೆಗೂ ವಿರುದ್ಧವಾಗಿರುವ ಮಾತುಗಳೆಲ್ಲವೂ ಸುಳ್ಳೇ ಆಗಿರುತ್ತವೆ. ಆ ಕಾಲದಲ್ಲಿ ಆ ದೈವೀಶಕ್ತಿಗಳು ಇದ್ದಿದ್ದರೆ ಈಗೇಕಿಲ್ಲ? ಈ ಕಾಲದಲ್ಲಿಲ್ಲದಿದ್ದ ಮೇಲೆ ಆ ಕಾಲದಲ್ಲಿಯೂ ಇದ್ದಿಲ್ಲವೆಂಬುದರಲ್ಲಿ ಏನೇನೂ ಸಂದೇಹವಿಲ್ಲ. ॥೧೯॥

೨೦. ಇದರ ಮೊದಲು ಕಾಫಿರರ ಮೇಲೆ ವಿಜಯವನ್ನು ಗಳಿಸಲು ಬಯಸುತ್ತಿದ್ದರು. ಅವರು ಗುರುತಿಸಿದವರು ಅವರ ಹತ್ತಿರ ಬಂದಕೂಡಲೇ ಕಾಫಿರರಾದರು. ಕಾಫಿರರ ಮೇಲೆ ಅಲ್ಲಾಹನ ಧಿಕ್ಕಾರವಿದೆ. [ಮುಂ. ೧. ಸಿ. ೧, ಸೂ. ೨, ೪೯]

ಸಮೀಕ್ಷಕ—ನೀವು ಇತರರನ್ನು ಕಾಫಿರರೆಂದು ಕರೆಯುವಂತೆ ನಿಮ್ಮನ್ನು ಇತರರು ಕಾಫಿರರೆಂದು ಹೇಳುತ್ತಾರೆ ಮತ್ತು ಅವರ ಮತದ ದೇವರ ಕಡೆಯಿಂದ ಧಿಕ್ಕಾರವನ್ನು ಕೊಡುತ್ತಾರೆ. ಹೀಗಿರುವಾಗ ಯಾರು ಸತ್ಯವಂತರು ಮತ್ತು ಯಾರು ಸುಳ್ಳುಗಾರರು? ಯೋಚಿಸಿ ನೋಡಿದರೆ ಎಲ್ಲಾ ಮತಗಳವರಲ್ಲಿಯೂ ಸುಳ್ಳಿರುವುದು ಕಾಣಿಸುತ್ತದೆ. ಸತ್ಯವು ಎಲ್ಲರಲ್ಲಿಯೂ ಒಂದೇರೀತಿಯಿರುತ್ತದೆ. ಈ ಎಲ್ಲಾ ಜಗಳಗಳು ಮೂರ್ಖತನದವು. ॥೨೦॥

೨೧. ದೇವರಿಗೂ, ಫರಿಶ್ತಾಗಳಿಗೂ, ಪೈಗಂಬರರಿಗೂ, ಜಿಬರಾಯಿಲನಿಗೂ ಮಿಕಾಯಿಲನಿಗೂ ಶತ್ರುವಾಗಿರುವನೆಂದು ವಿಶ್ವಾಸವುಳ್ಳವರಿಗೆ ಸಂದೇಶವನ್ನಿಲ್ಲಿ ಕೊಡಿರಿ.

[ಮುಂ. ೧, ಸಿ, ೧, ಸೂ. ೨, ಆ. ೯೭–೯೮]

ಸಮೀಕ್ಷಕ—ದೇವರು ಅದ್ವಿತೀಯನೆಂದು ಮುಸಲ್ಮಾನರು ಹೇಳುತ್ತಾರೆ. ಹೀಗಿದ್ದಮೇಲೆ ಈ ಇಷ್ಟು ಸೈನ್ಯವನ್ನೇ ಎಲ್ಲಿಂದ ಸೇರಿಸಿಕೊಂಡನು? ಇತರರಿಗೆ ಶತ್ರುವಾಗಿರುವವನು ದೇವರಿಗೂ ಶತ್ರುವಾಗಿರುವನೆ? ಹಾಗಿರುವುದಾದರೆ ಇದು ಸರಿಯಲ್ಲ. ಏಕೆಂದರೆ, ದೇವರು ಯಾರಿಗೂ ಶತ್ರುವಾಗಲಾರ. ॥೨೧॥

೨೨. ನಾವು ಕ್ಷಮೆ ಬೇಡುತ್ತೇವೆಂದು ಹೇಳಿರಿ. ನಿಮ್ಮ ಪಾಪಗಳನ್ನೂ ಹೆಚ್ಚು ಶುಭಕರ್ಮಗಳನ್ನು ಮಾಡುವವರ ಪಾಪಗಳನ್ನೂ ನಾವು ಕ್ಷಮಿಸುವೆವು. [ಮುಂ. ೧, ಸಿ. ೧, ಸೂ. ೨, ಆ. ೫೮]

ಸಮಾಕ್ಷಕ---ದೇವರ ಈ ಉಪದೇಶವು ಎಲ್ಲರನ್ನು ಪಾಪಿಗಳನ್ನಾಗಿ ಮಾಡುವಂತಹುದು ಹೌದೊ ಅಲ್ಲವೊ? ಏಕೆಂದರೆ ಪಾಪಗಳು ಕ್ಷಮಿಸಲ್ಪಡುವ ಆಶ್ರಯವು ಮನುಷ್ಯರಿಗೆ ಸಿಕ್ಕಿಬಿಟ್ಟತೆಂದರೆ ಯಾರೂ ಅದನ್ನು ಮಾಡಲು ಹೆದರುವುದಿಲ್ಲ. ಆದ್ದರಿಂದ ಹೀಗೆ ಹೇಳುವವನು ದೇವರೂ, ಈ ಪುಸ್ತಕವು ದೇವನಿರ್ಮಿತವೂ ಆಗಲಾರದು. ಏಕೆಂದರೆ ದೇವರು ನ್ಯಾಯಕಾರಿ, ಅನ್ಯಾಯವೆಂದೂ ಮಾಡುವುದಿಲ್ಲ ಪಾಪಗಳನ್ನು ಕ್ಷಮಿಸುವುದರಿಂದ ಅವನು ಅನ್ಯಾಯಕಾರಿಯಾಗುವನು.॥೨೨॥

೨೩. ಮೂಸಾ ತನ್ನ ಜಾತಿಯವರಿಗಾಗಿ ನೀರು ಕೇಳಿದಾಗ ನಾವು---"ನಿನ್ನ ದೊಣ್ಣೆಯನ್ನು ಬಂಡೆಯಮೇಲೆ ಹೊಡೆ" ಎಂದು ಹೇಳಿದೆವು. ಅದರಿಂದ ಹನ್ನೆರಡು ಬುಗ್ಗೆಗಳು ಹೊರಟು ಬಂದವು.

[ಮುಂ. ೧೫ ಸಿ ೧೫ ಸೂ ೨ ಆ ೬೦]

ಸಮಾಕ್ಷಕ---ಈಗ ನೋಡಿ! ಇಂತಹ ಸುಳ್ಳುಮಾತುಗಳನ್ನು ಬೇರೆ ಯಾವನಾದರೂ ಹೇಳುವನೆ? ಒಂದು ಕಲ್ಲು ಬಂಡೆಯ ಮೇಲೆ ದೊಣ್ಣೆಯಿಂದ ಹೊಡೆಯುವುದರಿಂದ ಹನ್ನೆರಡು ಬುಗ್ಗೆಗಳು ಹೊರಡುವುದು ತೀರಾ ಅಸಂಭವ. ಆ ಬಂಡೆಯನ್ನು ಒಳಗೆ ಟೊಳ್ಳುಮಾಡಿ, ಅದರೊಳಗೆ ನೀರನ್ನು ತುಂಬಿಸಿ ಹನ್ನೆರಡು ಛಿದ್ರಗಳನ್ನು ಮಾಡಿದರೆ ಇದು ಸಂಭವವಾದೀತು. ಬೇರೆ ರೀತಿ ಸಂಭವವಿಲ್ಲ. ॥೨೩॥

೨೪. ದೇವರು ತಾನು ಬಯಸಿದವನನ್ನು ತನ್ನ ದಯೆಯೊಂದಿಗೆ ಪ್ರಮುಖನನ್ನಾಗಿ ಮಾಡುತ್ತಾನೆ.

[ಮುಂ. ೧೫ ಸಿ. ೧೫ ಸೂ. ೨೫ ಆ. ೧೦೫]

ಸಮಾಕ್ಷಕ---ಮುಖ್ಯನೂ, ದಯೆಗೆ ಪಾತ್ರನೂ ಅಲ್ಲದವನನ್ನು ಕೂಡ ಮುಖ್ಯನನ್ನಾಗಿ ಮಾಡಿ ಅವನ ಮೇಲೆ ದಯೆ ಬೀರುತ್ತಾನೊ? ಹಾಗಿದ್ದರೆ ದೇವರು ಬಹಳ ಗಡಿಬಿಡಿಯನ್ನು ಮಾಡುವವನಾಗಿದ್ದಾನೆ. ಏಕೆಂದರೆ ಆಮೇಲೆ ಒಳ್ಳೆಯ ಕೆಲಸವನ್ನಾದರೂ ಯಾರು ಮಾಡು

ವರು? ಕೆಟ್ಟಕೆಲಸಗಳನ್ನು ಯಾರು ತಾನೆ ಬಿಡುವರು? ಏಕೆಂದರೆ, ಜನರು ಕರ್ಮಫಲದ ಕಡೆಗೆ ಗಮನಕೊಡದೆ ದೇವರ ಪ್ರಸನ್ನತೆಯ ಮೇಲೆ ನಿರ್ಭರರಾಗಿರುತ್ತಾರೆ. ಇದರಿಂದ ಎಲ್ಲರಲ್ಲಿ ಅಶ್ರದ್ಧೆಹುಟ್ಟ ಕರ್ಮೋಚ್ಛೇದ ಪ್ರಸಂಗವು ತಲೆದೋರುವುದು. ॥೨೪॥

೨೫. ಹೊಟ್ಟೆಗಿಚ್ಚಿನಿಂದ ಕಾಫಿರರು ನಿಮ್ಮನ್ನು ಶ್ರದ್ಧೆಯಿಂದ ತಪ್ಪಿಸದಿರಲಿ. ಏಕೆಂದರೆ ಶ್ರದ್ಧಾಳುಗಳ ಎಷ್ಟೋ ಮಂದಿ ಸ್ನೇಹಿತರಿದ್ದಾರೆ. [ಮಂ. ೧, ಸಿ. ೧, ಸೂ. ೨, ಆ. ೧೦೯]

ಸಮೀಕ್ಷಕ—ಈಗ ನೋಡಿ! ದೇವರೇ—"ಕಾಫಿರರು ನಿಮ್ಮ ಶ್ರದ್ಧೆಯನ್ನು ಹಾಳುಮಾಡದಿರಲಿ" ಎಂದು ಹೇಳಿ ಅವರಿಗೆ ಎಚ್ಚರಿಕೆ ಕೊಡುತ್ತಿದ್ದಾನೆ. ಅವನು ಸರ್ವಜ್ಞನಲ್ಲವೇ? ಇಂತಹ ಮಾತುಗಳು ದೇವರ ಮಾತುಗಳಾಗಳಾಗಲಾರವು. ॥೨೫॥

೨೬. ನೀವು ಯಾವ ಕಡೆ ಬೇಕಾದರೂ ಮುಖ ಮಾಡಿರಿ. ಆ ಕಡೆಗೇ ದೇವರ ಮುಖವಿದೆ.

[ಮಂ. ೧. ಸಿ. ೧, ಸೂ. ೨, ಆ. ೧೧೫]

ಸಮೀಕ್ಷಕ—ಈ ಮಾತು ನಿಜವಾಗಿರುವುದಾದರೆ ಮುಸಲ್ಮಾನರು ಕಿಬಲಾ ದ ಕಡೆಗೆ ಮುಖವನ್ನೇಕೆ ತಿರುಗಿಸುತ್ತಾರೆ? ನಮಗೆ ಕಿಬಲಾ ಕಡೆಗೆ ಮುಖಮಾಡಲು ಆಜ್ಞೆಯಿದೆಯೆಂದು ಹೇಳುವುದಾದರೆ ಯಾವ ಕಡೆ ಬೇಕಾದರೂ ಮುಖ ಮಾಡಬಹುದೆಂದೂ ಬರೆದಿದೆಯಲ್ಲವೆ? ಒಂದು ಮಾತು ನಿಜವಾಗಿಯೂ, ಇನ್ನೊಂದು ಸುಳ್ಳೂ ಆಗುವುದೆ? ದೇವರಿಗೆ ಮುಖವಿದ್ದರೆ ಅದು ಎಲ್ಲಾ ಕಡೆ ಇರುವುದೇ ಸಾಧ್ಯವಿಲ್ಲ. ಒಂದು ಮುಖವು ಒಂದು ಕಡೆ ಇರಬಲ್ಲುದೇ ಹೊರತು ಎಲ್ಲಾ ಕಡೆ ಹೇಗೆ ತಾನೆ ಇರಬಲ್ಲುದು? ಆದ್ದರಿಂದ ಇದು ಸಮಂಜಸವಾದುದಲ್ಲ. ॥೨೬॥

೨೭. ಆಕಾಶವನ್ನೂ ಭೂಮಿಯನ್ನೂ ನಿರ್ಮಿಸಿದವನು ಏನಾದರೂ ಮಾಡಬಯಸಿದರೆ ಅವನು ಅದನ್ನು ಮಾಡಬೇಕಾಗಿಲ್ಲ. "ನೀನು ಆಗಿಬಿಡು" ಎಂದು ಹೇಳಿದ ಕೂಡಲೆ ಅದು ಆಗಿಬಿಡುತ್ತದೆ.

[ಮಂ. ೧, ಸಿ. ೧, ಸೂ. ೨, ಆ. ೧೧೭]

ಸಮೀಕ್ಷಕ—ದೇವರು "ಆಗಿಬಿಡು" ಎಂದು ಅಪ್ಪಣೆಯನ್ನಿತ್ತಾಗ ಅದನ್ನು ಯಾರು ಕೇಳಿದರು? ಅವನು ಹೇಳಿದ್ದು ಯಾರಿಗೆ? ಆದದ್ದು ಯಾರು? ಸೃಷ್ಟಿಯಾಗುವ ಮೊದಲು ದೇವರ ಹೊರತು ಇನ್ನಾವುದೂ ಇದ್ದಿಲ್ಲವೆಂದು ಬರೆದಿರುವಾಗ ಈ ಜಗತ್ತು ಎಲ್ಲಿಂದ ಬಂತು? ಕಾರಣದ ಹೊರತು ಕಾರ್ಯವಾಗುವುದಿಲ್ಲವೆಂದ ಮೇಲೆ ಇಷ್ಟು ದೊಡ್ಡ ಜಗತ್ತು ಕಾರಣವಿಲ್ಲದೆ ಹೇಗಾಯಿತು? ಈ ಮಾತು ಕೇವಲ ಮಕ್ಕಳಾಡುವಂತಹುದು.

ಪೂರ್ವಪಕ್ಷೀ—ಇಲ್ಲ, ಇಲ್ಲ, ದೇವರ ಇಚ್ಛೆಯಿಂದ ಆಯಿತು.

ಉತ್ತರಪಕ್ಷೀ—ದೇವರ ಇಚ್ಛೆಯಿಂದ ಈ ಇಡೀ ಜಗತ್ತು ಉಂಟಾಯಿತೆಂದು ಹೇಳುವ ನಿನ್ನ ಇಚ್ಛೆಯಿಂದ ನೊಣದ ಒಂದು ಕಾಲು ಆದರೂ ಉಂಟಾಗಬಲ್ಲುದೆ?

ಪೂರ್ವ—ದೇವರು ಸರ್ವಶಕ್ತನಾದುದರಿಂದ ಅವನು ಬೇಕಾದದ್ದನ್ನೆಲ್ಲಾ ಮಾಡಬಲ್ಲನು.

ಉತ್ತರ—ಸರ್ವಶಕ್ತ ಎಂಬುದರ ಅರ್ಥವೇನು?

ಪೂರ್ವ—ಬಯಸಿದ್ದನ್ನೆಲ್ಲವನ್ನೂ ಮಾಡಬಲ್ಲವನು ಎಂದು.

ಉತ್ತರ—ದೇವರು ಇನ್ನೊಬ್ಬ ದೇವರನ್ನು ಉಂಟುಮಾಡಬಲ್ಲನೆ? ತಾನು ಸಾಯಬಲ್ಲನೆ? ಮೂರ್ಖನಾಗಲಿ, ರೋಗಿಯಾಗಲಿ, ಅಜ್ಞಾನಿಯಾಗಲಿ ಆಗಬಲ್ಲನೆ?

ಪೂರ್ವ—ಇಲ್ಲ, ಹಾಗೆಂದಿಗೂ ಆಗಲಾರ.

ಉತ್ತರ—ಆದುದರಿಂದ ಪರಮಾತನ್ಮನು ತನ್ನ ಮತ್ತು ಬೇರೆಯವರ ಗುಣಕರ್ಮಸ್ವಭಾವಗಳಿಗೆ ವಿರುದ್ಧವಾಗಿ ಏನೂ ಮಾಡಲಾರ. ಜಗತ್ತಿನಲ್ಲಿ ಯಾವುದಾದರೊಂದು ವಸ್ತುವಿನ ನಿರ್ಮಾಣಕ್ಕೆ ಮೂರು ಪದಾರ್ಥಗಳ ಅಗತ್ಯವಿರುತ್ತದೆ–ಮೊದಲನೆಯದಾಗಿ ನಿರ್ಮಿಸುವವನು ಉದಾಹರಣೆ—ಕುಂಬಾರ. ಎರಡನೇದಾಗಿ ಗಡಿಗೆಯ ನಿರ್ಮಾಣಕ್ಕೆ ಬೇಕಾದ ಮಣ್ಣು. ಮೂರನೇದಾಗಿ ಗಡಿಗೆಯನ್ನು ನಿರ್ಮಿಸಲು ಬೇಕಾಗುವ ಸಲಕರಣೆಗಳು. ಕುಂಬಾರ, ಮಣ್ಣು ಮತ್ತು ಸಲಕರಣೆಗಳಿಂದ ಗಡಿಗೆಯುಂಟಾಗುತ್ತದೆ. ಉಂಟಾಗುವ ಗಡಿಗೆಯ ಮೊದಲು

ಕುಂಬಾರ, ಮಣ್ಣು ಮತ್ತು ಸಲಕರಣಗಳಿರುತ್ತವೆ. ಇದೇ ರೀತಿ ಜಗತ್ತು ಉಂಟಾಗುವ ಮೊದಲು ಜಗತ್ತಿನ ಕಾರಣವಾದ ಪ್ರಕೃತಿ ಮತ್ತು ದೇವರ ಗುಣಕರ್ಮಸ್ವಭಾವಗಳೂ ಅನಾದಿಯಾಗಿವೆ. ಅದ ಕಾರಣ ಕುರಾನಿನ ಈ ಮಾತು ತೀರಾ ಅಸಂಭವ. ॥೨೭॥

೨೮. ನಾವು ಜನರಿಗಾಗಿ ಕಾಬಾ ವನ್ನು ಪವಿತ್ರ ಮತ್ತು ಸುಖ ವನ್ನೀಯುವ ಸ್ಥಾನವನ್ನಾಗಿ ಮಾಡಿದ್ದೇವೆ. ಇಬ್ರಾಹೀಮನ ಸ್ಥಾನ ವನ್ನು ಆಶ್ರಯಿಸಿರಿ. [ಮಂ. ೧। ಸಿ. ೧। ಸೂ. ೨। ಆ. ೧೨೫]

ಸಮೀಕ್ಷಕ—ಕಾಬಾಗಿಂತ ಮೊದಲು ಯಾವ ಪವಿತ್ರಸ್ಥಾನ ವನ್ನೂ ದೇವರು ನಿರ್ಮಿಸಿರಲಿಲ್ಲವೆ? ನಿರ್ಮಿಸಿದ್ದರೆ ಕಾಬಾವನ್ನು ನಿರ್ಮಿಸಬೇಕಾವ ಅಗತ್ಯವೇ ಇರಲಿಲ್ಲ. ನಿರ್ಮಿಸಿರಲಿಲ್ಲವೆಂದರೆ ಪಾಪ! ಅದಕ್ಕೆ ಮೊದಲು ಹುಟ್ಟಿದವರನ್ನು ಆ ಸ್ಥಾನವಿಲ್ಲದೇನೇ ಇರಿಸಿದ್ದನೆ? ಮೊದಲು ದೇವರಿಗೆ ಪವಿತ್ರಸ್ಥಾನವನ್ನು ನಿರ್ಮಿಸಬೇಕೆಂಬ ನೆನಪಿರ ಲಿಲ್ಲವೊ ಏನೊ!! ॥೨೮॥

೨೯. ತನ್ನ ಆತ್ಮವನ್ನು ಮೂರ್ಖವಾಗಿಟ್ಟವರ ಹೊರತು ಯಾರು ತಾನೆ ಇಬ್ರಾಹೀಮನ ಧರ್ಮದಿಂದ ವಿಮುಖರಾದಾರು? ನಿಜವಾಗಿ ಜಗತ್ತಿನಲ್ಲಿ ನಾವು ಅವನನ್ನೇ ಮೆಚ್ಚಿದೆವು. ಮತ್ತು ಅವನೇ ಪರಲೋಕದಲ್ಲಿ ಸತ್ಯವಂತನಾಗಿರುವನು.

[ಮಂ. ೧। ಸಿ. ೧। ಸೂ. ೨। ಆ. ೧೩೦]

ಸಮೀಕ್ಷಕ—ಇಬ್ರಾಹೀಮನ ಧರ್ಮವನ್ನು ನಂಬದವರೆಲ್ಲರೂ ಮೂರ್ಖರೆಂಬುದು ಹೇಗೆ ಸಂಭವವಾದೀತು? ದೇವರು ಇಬ್ರಾ ಹೀಮನನ್ನೇ ಮೆಚ್ಚಲು ಕಾರಣವೇನು? ಧರ್ಮಾತ್ಮನಾಗಿರುವುದರಿಂದ ಮೆಚ್ಚಿದನೆನ್ನುವದಾದರೆ ಧರ್ಮಾತ್ಮರು ಇನ್ನು ಎಷ್ಟೋ ಮಂದಿ ಇರಬಲ್ಲರು. ಧರ್ಮಾತ್ಮನಾಗಿರದೇಯೇ ಮೆಚ್ಚಿದನಾದರೆ ಅದು ಅನ್ಯಾಯವಾಯಿತು. ಧರ್ಮಾತ್ಮನೇ ದೇವರಿಗೆ ಪ್ರಿಯನಾಗುತ್ತಾನೆಯೇ. ಹೊರತು ಅಧರ್ಮಿಯಲ್ಲವೆಂಬುದೇನೊ ನಿಜ. ॥೨೯॥

೩೦. ಆಕಾಶದಲ್ಲಿ ನಿನ್ನ ಮುಖವು ತಿರುಗುತ್ತಿರುವುದನ್ನು ನಾವು ನಿಜವಾಗಿಯೂ ನೋಡುತ್ತಿದ್ದೇವೆ. ನಿನ್ನನ್ನು ನಾವು ಅವಶ್ಯವಾಗಿ

ಆ ಕಿಬಲಾದ ಕಡೆಗೆ ತಿರುಗಿಸುವೆವು. ಏಕೆಂದರೆ ನೀನು ಅದನ್ನು ಮೆಚ್ಚಿ ನಿನ್ನ ಮುಖವನ್ನು ಅತಿ ಪವಿತ್ರವಾದ ಮಸೀದಿಯ ಕಡೆಗೆ ತಿರುಗಿಸು. ನೀವು ಎಲ್ಲಿದ್ದರೂ ನಿಮ್ಮ ಮುಖವನ್ನು ಆ ಕಡೆಗೆ ತಿರುಗಿಸಿ,

[ಮುಂ. ೧। ಸಿ. ೨। ಸೂ. ೨। ಆ. ೧೪೫]

ಸಮೀಕ್ಷಕ—ಇದೇನು ಸಣ್ಣಮೂರ್ತಿಪೂಜೆಯೇ? ಅಲ್ಲ. ಬಹಳ ದೊಡ್ಡ ಮೂರ್ತಿಪೂಜೆ.

ಪೂರ್ವ—ಮುಸಲ್ಮಾನರಾದ ನಾವು ಮೂರ್ತಿಪೂಜಕರಲ್ಲ. ನಾವು ಮೂರ್ತಿ ಭಂಜಕರು. ನಾವು ಕಿಬಲಾವನ್ನು ಪರಮಾತ್ಮನೆಂದೇನೂ ಹೇಳುವುದಿಲ್ಲ.

ಉತ್ತರ—ಯಾರನ್ನು ನೀವು ಮೂರ್ತಿಪೂಜಕರೆಂದು ಹೇಳುತ್ತೀರೊ ಅವರೂ ಸಹ ಮೂರ್ತಿಗಳನ್ನು ದೇವರೆಂದೇನೂ ಹೇಳುವುದಿಲ್ಲ. ಅವುಗಳ ಎದುರಿನಲ್ಲಿ ದೇವರ ಭಕ್ತಿಯನ್ನವರು ಮಾಡುತ್ತಾರೆ. ನೀವು ಮೂರ್ತಿಭಂಜಕರಾಗಿರುವುದಾದರೆ ದೊಡ್ಡ ಮೂರ್ತಿಯಾಗಿರುವ ಕಿಬಲಾವನ್ನು ಒಡೆಯಲಿಲ್ಲವೇಕೆ?

ಪೂರ್ವ—ನಮಗಾದರೋ ಕಿಬಲಾದ ಕಡೆಗೆ ಮುಖ ಮಾಡಬೇಕೆಂದು ಕುರಾನಿನಲ್ಲಿ ಆಜ್ಞೆಯಿದೆ. ಅವರಿಗೆ ವೇದದಲ್ಲಿ ಅಂತಹ ಆಜ್ಞೆಯೇನೂ ಇಲ್ಲ. ಹೀಗಿರುವಾಗ ಅವರು ಮೂರ್ತಿಪೂಜಕರಲ್ಲವೇಕೆ? ದೇವರ ಅಪ್ಪಣೆಯನ್ನು ಪಾಲಿಸುವುದು ನಮ್ಮ ಕರ್ತವ್ಯವಾಗಿರುವುದರಿಂದ ನಾವು ಮೂರ್ತಿಪೂಜಕರಾಗುವುದಾದರೂ ಹೇಗೆ?

ಉತ್ತರ—ನಿಮಗೆ ಕುರಾನಿನಲ್ಲಿ ಅಪ್ಪಣೆಕೊಟ್ಟಂತೆ ಅವರಿಗೆ ಪುರಾಣಗಳಲ್ಲಿ ಆಜ್ಞೆಯಿದೆ. ನೀವು ಕುರಾನನ್ನು ದೇವರ ಬರವಣಿಗೆಯೆಂದು ನಂಬುವಹಾಗೆ ಪೌರಾಣಿಕರು ಪುರಾಣಗಳನ್ನು ದೇವರ ಅವತಾರವಾದ ವ್ಯಾಸರು ಬರೆದಿರುವರೆಂದು ತಿಳಿಯುತ್ತಾರೆ. ನಿಮ್ಮಲ್ಲಿಯೂ ಅವರಲ್ಲಿಯೂ ಮೂರ್ತಿಪೂಜೆಯ ವಿಷಯದಲ್ಲಿ ಯಾವ ಭೇದಭಾವವೂ ಇಲ್ಲ. ಆದರೆ ಭೇದವೇನೆಂದರೆ, ನೀವು ದೊಡ್ಡ ಮೂರ್ತಿಪೂಜಕರು, ಅವರು ಸಣ್ಣ ಮೂರ್ತಿ ಪೂಜಕರು. ಏಕೆಂದರೆ ಯಾವನೊಬ್ಬ ಮನುಷ್ಯ ತನ್ನ ಮನೆಯನ್ನು ಹೊಕ್ಕ ಬೆಕ್ಕನ್ನು ಹೊರಹೊರ

ಡಿಸುವಷ್ಟರಲ್ಲಿ ಒಂಟಿಯೊಂದು ಒಳಹೊಕ್ಕಿತಂತೆ. ಹಾಗೆಯೇ ಮುಹಮ್ಮದಸಾಹೇಬರು ಮುಸಲ್ಮಾನರ ಮತದಿಂದ ಸಣ್ಣ ಮೂರ್ತಿಯನ್ನೇನೂ ಹೊರಓಡಿಸಿಬಿಟ್ಟರು. ಆದರೆ ದೊಡ್ಡ ಮೂರ್ತಿ ! ಬೆಟ್ಟದಂತಿರುವ ಮಕ್ಕಾದಲ್ಲಿರುವ ಮಸೀತಿಯನ್ನು ಇಡೀ ಮುಸಲ್ಮಾನರ ಮತದಲ್ಲಿ ಪ್ರವೇಶ ಮಾಡಿಸಿಬಿಟ್ಟರು. ಇದೇನು ಸಣ್ಣ ಮೂರ್ತಿಪೂಜೆಯೆ ? ಆದರೆ ವೇದಧರ್ಮದ ಅನುಯಾಯಿಗಳಾದ ನಮ್ಮಂತೆ ನೀವೂ ವೈದಿಕ ಧರ್ಮೀಯರಾದರೆ ಮೂರ್ತಿಪೂಜೆ ಮೊದಲಾದ ದೋಷಗಳಿಂದ ಪಾರಾಗಬಹುದು. ಅನ್ಯಥಾ ಸಾಧ್ಯವಿಲ್ಲ. ನಿಮ್ಮ ದೊಡ್ಡ ಮೂರ್ತಿಪೂಜೆಯನ್ನು ಓಡಿಸುವವರೆಗೆ ನಾಚಿಕೆಯಿಂದಾದರೂ ಇತರ ಸಣ್ಣ ಮೂರ್ತಿಪೂಜಕರನ್ನು ಬಿಟ್ಟು, ನೀವೇ ಮೂರ್ತಿಪೂಜೆಯಿಂದ ದೂರವಾಗಿದ್ದು ಪವಿತ್ರರಾಗಬೇಕು. ||೩೦||

೩೧. ದೇವರ ಮಾರ್ಗದಲ್ಲಿ ಕೊಲ್ಲಲ್ಪಡುವವರನ್ನು ಸತ್ತವರೆಂದು ಹೇಳಬೇಡಿ. ಅವರು ಜೀವಂತರಾಗಿರುತ್ತಾರೆ.

[ಮುಂ. ೧! ಸಿ. ೨! ಸೂತ್ರ. ೨! ಆ. ೧೫೪]

ಸಮೀಕ್ಷಕ—ದೇವರ ಮಾರ್ಗದಲ್ಲಿ ಸಾಯುವ ಮತ್ತು ಸಾಯಿಸುವ ಅಗತ್ಯವಾದರೂ ಏನಿದೆ ? ಇದು ತಮ್ಮ ಸ್ವಾರ್ಥವನ್ನು ಸಾಧಿಸಿಕೊಳ್ಳುವ ಮಾತೆಂದು ಏಕೆ ಹೇಳುವುದಿಲ್ಲ ? ಇಂತಹ ಆಶೆಯನ್ನು ತೋರಿಸಿದರೆ ಚಿನ್ನಾಗಿ ಕಾದಾಡುವರು, ನಮಗೆ ವಿಜಯವಾಗುವುದು, ಸಾಯಲು ಹೆದರಲಾರರು, ಕೊಳ್ಳೆ ಸುಲಿಗೆಗಳನ್ನು ನಡೆಸುವುದರಿಂದ ಐಶ್ವರ್ಯವು ದೊರೆಯುವುದು. ಅನಂತರ ಭೋಗಲಾಲಸೆಯನ್ನು ತೃಪ್ತಿಪಡಿಸಬಹುದು. ಈ ಮೊದಲಾದ ಸ್ವಪ್ರಯೋಜನಕ್ಕಾಗಿ ಈ ವಿಪರೀತ ವ್ಯವಹಾರವನ್ನು ರಚಿಸಿರುವರು. ||೩೧||

೩೨. ದೇವರು ಕಠೋರ ದುಃಖವನ್ನು ಕೊಡುವನು. ಸೈತಾನನನ್ನು ಅನುಸರಿಸಬೇಡಿ. ನಿಶ್ಚಯವಾಗಿ ಅವನು ನಿಮ್ಮ ಪ್ರತ್ಯಕ್ಷ ಶತ್ರು. ಕೇಡಿನ ಮತ್ತು ನಿರ್ಲಜ್ಜೆಯ ಆಜ್ಞೆಯನ್ನೀವುದರ ಹೊರತು ಅವನು ಬೇರೇನನ್ನೂ ಮಾಡುವುದಿಲ್ಲ. ಮತ್ತು ಅವನು—" ದೇವರ ವಿಷಯದಲ್ಲಿ ನಿಮಗೆ ಗೊತ್ತಿಲ್ಲದ್ದನ್ನು ಹೇಳಿರಿ " ಎಂದು ಕೇಳುವನು.

[ಮುಂ. ೧ ಸಿ. ೨! ಸೂ. ೨! ಆ. ೧೬೫-೧೬೮-೧೬೯]

ಸವಿಾಕ್ಷಕ—ಕಠೋರವಾದ ದುಃಖವನ್ನೀಯುವ ದೇವರು ಪಾಪಿಗಳ ಮತ್ತು ಧರ್ಮಾತ್ಮರ ಮೇಲೆ ದಯಾಳುವಾಗಿರುತ್ತಾನೊ ಅಥವಾ ಮುಸಲ್ಮಾನರ ಮೇಲೆ ಮಾತ್ರ ದಯಾಳುವಾಗಿದ್ದು ಇತರರ ಮೇಲೆ ದಯಾಹೀನನಾಗಿರುವನೊ? ಹಾಗಿದ್ದರೆ ಅವನು ದೇವರೇ ಆಗಿರಲಾರ. ಅವನು ಪಕ್ಷಪಾತಿಯಲ್ಲದಿದ್ದರೆ, ಮನುಷ್ಯನು ಎಲ್ಲಿ ಧರ್ಮವನ್ನಾಚರಿಸಿದರೆ ಅವನ ಮೇಲೆ ದಯಾಳುವೂ ಅಧರ್ಮವನ್ನಾಚರಿಸುವವನಿಗೆ ದಂಡದಾತನೂ ಆಗಿರುವುದಾದರೆ ಮುಹಮ್ಮದ್ ಸಾಹೇಬರನ್ನೂ, ಕುರಾನನ್ನೂ ನಂಬುವ ಅಗತ್ಯವಿಲ್ಲ. ಸೈತಾನನು ಎಲ್ಲರಿಂದಲೂ ಕೆಟ್ಟಕೆಲಸ ಮಾಡಿಸುವನನೂ, ಮನುಷ್ಯ ಮಾತ್ರನ ಶತ್ರುವೂ ಆಗಿದ್ದರೆ, ಅವನನ್ನು ದೇವರು ಹುಟ್ಟಿಸಿದ್ದಾದ್ದರೂ ಏಕೆ? ಅವನಿಗೆ ಮುಂದೆ ಹೀಗಾಗುವುದೆಂಬ ವಿಷಯ ತಿಳಿದಿರಲಿಲ್ಲವೆ? ತಿಳಿದಿದ್ದರೂ ಪರೀಕ್ಷೆಗಾಗಿ ಅವನನ್ನು ಹುಟ್ಟಿಸಿದನೆಂದು ಹೇಳುವುದಾದರೂ ಸರಿಯಲ್ಲ. ಪರೀಕ್ಷೆಮಾಡುವುದು ಅಲ್ಪಜ್ಞನ ಕೆಲಸ. ಸರ್ವಜ್ಞನಾದರೋ ಎಲ್ಲಾ ಜೀವರುಗಳ ಒಳ್ಳೇ ಮತ್ತು ಕೆಟ್ಟ ಕೆಲಸಗಳನ್ನು ಸದಾ ಕಾಲದಿಂದಲೂ ತಿಳಿಯುತ್ತಾನೆ. ಸೈತಾನನು ಎಲ್ಲರನ್ನೂ ಮರುಳುಗೊಳಿಸುತ್ತಾನಾದರೆ ಸೈತಾನನ್ನು ಯಾರು ಮರುಳುಗೊಳಿಸುತ್ತಾರೆ? ಅವನು ತಾನಾಗಿ ಮರುಳುಗೊಳ್ಳುತ್ತಾನೆನ್ನುವುದಾದರೆ ಜನರೂ ತಾವಾಗಿ ಮರುಳುಗೊಂಡಾರು. ನಡುವೆ ಸೈತಾನನ ಅಗತ್ಯವಾದರೂ ಏನು? ದೇವರೇ ಸೈತಾನನನ್ನು ಮರುಳುಗೊಳಿಸಿದನಾದರೆ ಆ ದೇವರು ಸೈತಾನನಿಗೂ ಸೈತಾನನಾದಂತಾಯಿತು. ಮರುಳುಗೊಳ್ಳುವ ಯಾವ ಮನುಷ್ಯನಾದರೂ ಕುಸಂಗ ಮತ್ತು ಅವಿದ್ಯೆಯಿಂದ ಭ್ರಾಂತನಾಗುತ್ತಾನೆ. ॥೩೨॥

೩೩. ಹೆಣಗಳೂ, ರಕ್ತವೂ, ಹಂದಿಯ ಮಾಂಸವೂ, ದೇವರ ಹೆಸರನ್ನು ಬಿಟ್ಟು ಬೇರೆ ಹೆಸರಿನಲ್ಲಿ ಮಾಡಿದ ವಸ್ತುಗಳೂ ನಿನಗೆ ನಿಷಿದ್ಧವಾಗಿವೆ. [ಮಂ. ೧। ಸಿ. ೨। ಸೂ. ೨। ಆ. ೧೭೩]

ಸವಿಾಕ್ಷಕ—ಇಲ್ಲಿ ವಿಚಾರಮಾಡಬೇಕು. ಹೆಣಗಳು, ತಾವಾಗಿ ಸಾಯಲಿ ಅಥವಾ ಇನ್ನೊಬ್ಬರು ಕೊಲ್ಲುವುದರಿಂದ ಸಾಯಲಿ ಎರಡೂ ಒಂದೇ. ಇವುಗಳಲ್ಲಿ ಸ್ವಲ್ಪ ಭೇದವಿರುವುದಾದರೂ ಸತ್ತಿರುವವೆಂಬ ವಿಷಯದಲ್ಲಿ ಯಾವ ಭೇದವೂ ಇಲ್ಲ. ಹಂದಿಯೊಂದನ್ನು ಮಾತ್ರ

ನಿಷೇಧಿಸಿರುವುದರಿಂದ ಮನುಷ್ಯನ ಮಾಂಸವನ್ನು ತಿನ್ನಬಹುದೆ? ದೇವರ ಹೆಸರಿನಲ್ಲಿ ಶತ್ರು ಮೊದಲಾದವರಿಗೆ ಅತ್ಯಂತ ಯಾತನೆಯನ್ನು ಕೊಟ್ಟು ಕೊಲ್ಲಬೇಕೆಂಬುದು ಒಳ್ಳೆಯ ಮಾತಾಗಬಲ್ಲುದೆ? ಇದರಿಂದ ದೇವರ ಹೆಸರಿಗೆ ಕಳಂಕ ಬರುತ್ತದೆ. ಆ ದೇವರು ಪೂರ್ವಜನ್ಮದ ಅಪರಾಧವಿಲ್ಲದೇ ಪ್ರಾಣಿಗಳಿಗೆ ಮುಸಲ್ಮಾನರ ಕೈಯಿಂದ ದಾರುಣ ದುಃಖವನ್ನೇಕೆ ಕೊಡಿಸಿದನು? ಅವುಗಳ ಮೇಲೆ ಅವನಿಗೆ ದಯೆಯಿಲ್ಲವೆ? ಅವುಗಳನ್ನು ತನ್ನ ಮಕ್ಕಳಂತೆ ಭಾವಿಸುವುದಿಲ್ಲವೆ? ಅತ್ಯಂತ ಉಪಕಾರಿಗಳಾದ ಗೋವು ಮೊದಲಾದುವುಗಳ ವಧೆಯನ್ನು ನಿಷೇಧಿಸದಿರುವುದರ ಅರ್ಥವು, ದೇವರು ಅವುಗಳನ್ನು ಕೊಲ್ಲಿಸಿ ಜಗತ್ತಿಗೆ ಹಾನಿಯನ್ನು ತಂದೊಡ್ಡುವವನೆಂದೂ ಮತ್ತು ಹಿಂಸೆಯೆಂಬ ಪಾಪದಿಂದ ಅತನಿಗೂ ಕಳಂಕವುಂಟಾಗುವುದೆಂದೂ ತಿಳಿಯಿರಿ. ಇಂತಹ ಮಾತುಗಳು ಎಂದಿಗೂ ದೇವರದಾಗಲಿ ದೇವರ ಪುಸ್ತಕದ್ದಾಗಲಿ ಆಗಿರಲಾರವು, ||೩೩||

೩೪—ಉಪವಾಸದ ಮಾತು ನಿನ್ನ ಬೀಬಿಯರೊಡನೆ ಮದನೋತ್ಸವವನ್ನು ನಡೆಸುವಂತೆ ನಿನಗೆ ವಿಧಾನ ಮಾಡಲ್ಪಟ್ಟಿದೆ. ಸ್ತ್ರೀಯರು ನಿನಗೆ ಪರದೆಗಳಾಗಿದ್ದಾರೆ ಮತ್ತು ನೀವು ಅವರಿಗೆ ಪರದೆಗಳಾಗಿದ್ದೀರಿ. ನೀವು ಕಳ್ಳತನ ಅಂದರೆ ವ್ಯಭಿಚಾರ ಮಾಡುತ್ತಿರುವುದು ದೇವರಿಗೆ ತಿಳಿದಿದೆ. ಅವನು ನಿನ್ನನ್ನು ಕ್ಷಮಿಸಿರುವನು. ಆ ಸ್ತ್ರೀಯರೊಡನೆ ಕೂಡಿ ದೇವರು ನಿಮಗಾಗಿ ಬರೆದುಕೊಟ್ಟಿರುವ ಸಂತತಿಯನ್ನು ಹುಡುಕಿರಿ. ಕಪ್ಪು ನೂಲಿನಿಂದ ಬಿಳಿಯ ನೂಲು ಹೊರಹೊರಡುವವರೆಗೆ—ರಾತ್ರಿಯು ಕಳೆದು ಹಗಲು ಹುಟ್ಟುವವರೆಗೆ ತಿಂದು ಕುಡಿಯುತ್ತಿರಿ. [ಮಂ. ೧। ಸಿ. ೨। ಸೂ. ೨। ಆ. ೧೮೭॥]

ಸಮೀಕ್ಷಕ—ಇದರ ನಿಜಸ್ಥಿತಿ ಹೀಗಿರಬಹುದು—ಇಸ್ಲಾಂ ಮತವು ಹುಟ್ಟುವುದಕ್ಕೆ ಮೊದಲು ಯಾರೋ ಒಬ್ಬ ಮನುಷ್ಯನು ಒಬ್ಬ ಪೌರಾಣಿಕನನ್ನು ಒಂದು ತಿಂಗಳ ವರೆಗೆ ನಡೆಯುವ ಚಾಂದ್ರಾಯಣ ವ್ರತದ ವಿಧಿ ಹೇಗೆಂದು ಕೇಳಿರಬೇಕು. ಚಂದ್ರನ ಕಲೆಗಳ ವೃದ್ಧಿ ಕ್ಷಯಗಳನ್ನನುಸರಿಸಿ ಮಧ್ಯಾಹ್ನ ಒಂದೊಂದು ತುತ್ತನ್ನು ಹೆಚ್ಚಿಸುತ್ತ ಹೋಗಿ ಬಳಿಕ ಕಡಿಮೆಮಾಡುತ್ತ ಬರಬೇಕೆಂದು ಬರೆದಿ

ರುವುದನ್ನು ಅರ್ಥಮಾಡಿಕೊಳ್ಳಲಾರದೆ ಚಂದ್ರನನ್ನು ನೋಡಿ ಊಟ ಮಾಡಬೇಕೇದು ಹೇಳಿರಬೇಕು. ಅದನ್ನು ಈ ಮುಸಲ್ಮಾನರು ಈ ರೀತಿ ಏರ್ಪಡಿಸಿಕೊಂಡರು. ಆದರೆ ಆ ವ್ರತದಲ್ಲಿ ಸ್ತ್ರೀಸಮಾಗಮವನ್ನು ಬಿಡಬೇಕೆಂದಿದೆ ದೇವರು ಮುಂದೆ "ಹೋಗಿ ಮನಬಂದಷ್ಟು ಸ್ತ್ರೀಸಂಗಮವನ್ನೂ ಮಾಡುತ್ತಿರಿ ಮತ್ತು ರಾತ್ರಿ ಅನೇಕ ಸಲ ಊಟ ಮಾಡಿ" ಎಂಬ ಒಂದು ಮಾತನ್ನು ಹೇಳಿದನು. ಬೇಷ್! ಇದೆಂಥ ವ್ರತ? ಹಗಲು ತಿನ್ನಲಿಲ್ಲ, ರಾತ್ರಿಯಲ್ಲಿ ತಿಂದರು!! ಹಗಲು ತಿನ್ನದೆ ರಾತ್ರಿ ತಿನ್ನುವುದು ಸೃಷ್ಟಿಕ್ರಮಕ್ಕೆ ವಿರುದ್ಧವಾದ್ದು. ||೩೪||

೩೫—ದೇವರ ಮಾರ್ಗದಲ್ಲಿ ನಿಮ್ಮ ಸಂಗಡ ಯುದ್ಧಮಾಡುವವರೊಡನೆ ಯುದ್ಧ ಮಾಡಿ ಅವರನ್ನು ಎಲ್ಲಿ ಸಿಕ್ಕಿದರೂ ಕೊಂದು ಹಾಕಿ. ಕೊಲ್ಲುವುದಕ್ಕಿಂತಲೂ ಕಾಫಿರತನವು ಕೆಟ್ಟದ್ದು. ಕಾಫಿರತನವು ನಾಶಹೊಂದಿ ಅಲಾಹ್‌ನ ಧರ್ಮವು ಗೆಲ್ಲುವವರೆಗೆ ಹೋರಾಡಿ. ಎಷ್ಟು ಅತ್ಯಾಚಾರಗಳನ್ನು ಅವರು ನಿಮ್ಮ ಮೇಲೆ ನಡೆಸಿದ್ದಾರೋ ಅಷ್ಟೂ ನೀವು ಅವರೊಡನೆ ನಡೆಸಿರಿ.

[ಮು. ೧। ಸಿ. ೨। ಸೂ. ೨। ಆ. ೧೯೦-೧೯೪]

ಸಮಿಾಪ್ಯಕ -ಕುರಾನಿನಲ್ಲಿ ಇಂತಹ ಮಾತುಗಳು ಇಲ್ಲದಿರುತ್ತಿದ್ದರೆ ಮುಸಲ್ಮಾನರು ಅನ್ಯ ಮತದವರ ಮೇಲೆ ಇಷ್ಟು ದೊಡ್ಡ ಅಪರಾಧವನ್ನೆಂದಿಗೂ ಮಾಡುತ್ತಿರಲಿಲ್ಲ. ನಿರಪರಾಧಿಗಳನ್ನು ಕೊಲ್ಲುವುದರಿಂದ ಅವರಿಗೆ ಬಹಳ ಪಾಪ ತಗಲುತ್ತದೆ. ಇಸ್ಲಾಂ ಮತಗ್ರಹಣ ಮಾಡದಿರುವುದೇ ಕಾಫಿರತನವಂತೆ. ಕಾಫಿರತನಕ್ಕಿಂತ ಕೊಲೆಯು ಒಳ್ಳೆದೆಂದು ಮುಸಲ್ಮಾನರು ಭಾವಿಸಿದ್ದಾರೆ. ಅಂದರೆ ನಮ್ಮ ಮತವನ್ನು ಅಂಗೀಕರಿಸದವನನ್ನು ಕೊಲ್ಲುತ್ತೇವೆಂದು ಅರ್ಥ. ಇವರು ಹಾಗೆ ಮಾಡುತ್ತಲೂ ಬಂದಿದ್ದಾರೆ. ಮತಕ್ಕಾಗಿ ಹೋರಾಡಿ ರಾಜ್ಯ ಮೊನಲಾದುವನ್ನು ಕಳಕೊಂಡರು. ಅವರ ಮತವು ಅನ್ಯಮತದವರ ಮೇಲೆ ಬಹಳ ಕಠೋರತನದಿಂದ ವರ್ತಿಸುತ್ತದೆ. ಕಳ್ಳತನದ ಬದಲಾಗಿ ಕಳ್ಳತನ ಮಾಡುವುದು ಸರಿಯೇ? ಕಳ್ಳ ಮೊದಲಾದವರು ನಮ್ಮ ವಿಷಯದಲ್ಲಿ ಅಪರಾಧ ಮಾಡಿದರೆ ನಾವೂ ಕಳ್ಳತನಮಾಡಬೇಕೆ? ಇದು ತೀರಾ ಅನ್ಯಾಯದ ಮಾತು. ಯಾರಾದರೂ ಅಜ್ಞಾ

ನಿಯು ನಮ್ಮನ್ನು ಬೈದರೆ. ನಾವೂ ಅವನನ್ನು ಬಯ್ಯುವುದೆ? ಈ ಮಾತು ದೇವರದೂ, ದೇವರ ಭಕ್ತನಾದ ವಿದ್ವಾಂಸನದೂ, ಈಶ್ವರೋಕ್ತ ಪುಸ್ತಕದ್ದೂ ಆಗಿರಲಾರದು. ಇದಾದರೊ ಬರೀ ಜ್ಞಾನವಿಲ್ಲದ ಸ್ವಾರ್ಥಿ ಮನುಷ್ಯನ ಮಾತಾಗಿರುತ್ತದೆ. ॥೩೫॥

೩೬. ಅಲ್ಲಾಹ್‌ನು ಜಗಳವನ್ನು ಮಿತ್ರನಾಗಿರಿಸುವುದಿಲ್ಲ. ಎಲೈ ಜನರೆ! ವಿಶ್ವಾಸವಿಟ್ಟವರೆಲ್ಲರೂ ಇಸ್ಲಾಂ ಮತಕ್ಕೆ ಸೇರಿರಿ.

[ಮಂ. ೧, ಸಿ. ೨, ಸೂ. ೨, ೨೦೫-೨೦೮]

ಸಮೀಕ್ಷಕ—ಜಗಳವನ್ನು ದೇವರು ಮಿತ್ರನೆಂದು ತಿಳಿಯುವುದಿಲ್ಲವಾದರೆ ತಾನಾಗಿ ಮುಸಲ್ಮಾನರನ್ನು ಜಗಳಕ್ಕಾಗಿ ಪ್ರೇರೇಪಿಸುತ್ತಿರುವುದೇಕೆ? ಜಗಳಗಂಟಿಗಳಾದ ಮುಸಲ್ಮಾನರೊಡನೆ ಸ್ನೇಹವನ್ನೇಕೆ ಬೆಳಸಿಕೊಂಡಿದ್ದಾನೆ? ಮುಸಲ್ಮಾನರ ಮತಕ್ಕೆ ಸೇರುವುದರಿಂದಲೇ ದೇವರು ಸಂತುಷ್ಟನಾಗುವುದಾದರೆ ಅವನು ಮುಸಲ್ಮಾನರ ಪಕ್ಷಪಾತಿ. ಸಕಲ ಜಗತ್ತಿನ ದೇವರು ಅವನಲ್ಲ. ಇದರಿಂದ ಸಿದ್ಧವಾಗುವುದೇನೆಂದರೆ—ಕುರಾನು ಈಶ್ವರೋಕ್ತವೂ ಅಲ್ಲ ಮತ್ತು ಅದರಲ್ಲಿ ವರ್ಣಿಸಲ್ಪಟ್ಟವನು ದೇವರೂ ಅಲ್ಲ. ॥೩೬॥

೩೭. ದೇವರು ಇಷ್ಟಬಂದವನಿಗೆ ಅನಂತ ಜೀವಿಕೆಯ ಸಾಧನಗಳನ್ನು ಕೊಡುತ್ತಾನೆ. [ಮಂ. ೧, ಸಿ. ೨, ಸೂ. ೨, ಆ. ೨೧೨]

ಸಮೀಕ್ಷಕ—ಪಾಪಪುಣ್ಯಗಳಿಲ್ಲದೆ ದೇವರು ಹೀಗೆಯೇ ಜೀವಿಕೆಯ ಸಲಕರಣಗಳನ್ನು ಕೊಡುವನೆ? ಹಾಗಾದರೆ ಪುಣ್ಯಾಚರಣೆ ಮತ್ತು ಪಾಪಾಚರಣೆಗಳು ಸರಿಸಮಾನವಾದವು. ಏಕೆಂದರೆ, ಸುಖದುಃಖಗಳು ಪ್ರಾಪ್ತವಾಗುವುದು ದೇವರ ಇಚ್ಛೆಯನ್ನವಲಂಬಿಸಿದೆ. ಆದ್ದರಿಂದ ಮುಸಲ್ಮಾನರು ಮನಬಂದಂತೆ ಮಾಡುತ್ತಾರೆ. ಕೆಲವರು ಈ ಕುರಾನಿನ ಮಾತಿನ ಮೇಲೆ ವಿಶ್ವಾಸವಿಡದೆ ಧರ್ಮಾತ್ಮರೂ ಆಗುತ್ತಾರೆ. ॥೩೭॥

೩೮. ರಜಸ್ವಲೆಯ ವಿಷಯದಲ್ಲಿ ನಿನ್ನನ್ನು ಕೇಳುತ್ತಾರೆ. ಅವಳು ಅಪವಿತ್ರಳೆಂದು ಹೇಳು. ಅವರು ಶುದ್ಧರಾಗುವವರೆಗೆ ಋತುಸಮಯದಲ್ಲಿ ಅವರ ಹತ್ತಿರ ಹೋಗಬೇಡಿ. ಅವರು ಸ್ನಾನಮಾಡಿದ ಮೇಲೆ ದೇವರು ನಿಮಗೆ ಅಪ್ಪಣೆಯಿತ್ತಕಡೆಯಿಂದ ಅವರ ಹತ್ತಿರ

ಹೋಗಿ. ನಿಮ್ಮ ಬೀಬಿಯರು ನಿಮಗೆ ಹೊಲಗಳಂತಿದ್ದಾರೆ. ಮನ ಬಂದ ರೀತಿಯಲ್ಲಿ ನಿಮ್ಮ ಹೊಲಗಳಿಗೆ ಹೋಗಿ. ದೇವರು ನಿಮ್ಮನ್ನು ವ್ಯರ್ಥವಾದ ಶಪಥಗಳಲ್ಲಿ ಕಟ್ಟಿಡುವುದಿಲ್ಲ.

[ಮಂ. ೧। ಸಿ. ೨। ಸೂ. ೨। ಆ. ೨೨೨-೨೨೩-೨೨೪]

ಸಮಿಾಕ್ಷಕ—ರಜಸ್ವಲೆಯ ಸ್ಪರ್ಶವನ್ನೂ ಸಂಗವನ್ನೂ ಮಾಡ ಬಾರದೆಂದು ಬರೆದಿರುವುದು ಒಳ್ಳೆಯ ಮಾತು. ಆದರೆ ಸ್ತ್ರೀಯರು ಹೊಲಗಳಂತೆ ಇದ್ದಾರೆಂದೂ ಮನಬಂದಂತೆ ಅವರ ಹತ್ತಿರ ಹೋಗ ಬಹುದೆಂದೂ ಬರೆದಿರುವುದು ಜನರನ್ನು ವಿಷಯಾಭಿಲಾಷಿಗಳನ್ನಾಗಿ ಮಾಡಲು ಕಾರಣವಾಗಿದೆ. ದೇವರು ವ್ಯರ್ಥವಾದ ಶಪಥಕ್ಕೆ ದಂಡ ವನ್ನು ವಿಧಿಸದಿದ್ದರೆ ಎಲ್ಲರೂ ಸುಳ್ಳನ್ನು ಹೇಳಿ, ಕೊಟ್ಟ ಭಾಷೆಗೆ ತಪ್ಪಿ ನಡೆಯುವರು. ಇದರಿಂದ ದೇವರು ಅಸತ್ಯದ ಪ್ರವರ್ತಕ ನಾಗುವನು. ||೩೮||

೩೯. ದೇವರಿಗೆ ಸಾಲವನ್ನು ಕೊಡುವವನು ಯಾರಿರುವನು? ಒಳ್ಳೆಯದು. ಸರಿ. ದೇವರು ಅದನ್ನು ಅವನಿಗೆ ಎರಡರಷ್ಟು ಮಾಡು ವನು.

ಸಮಿಾಕ್ಷಕ—ಭಲೆ! ದೇವರಿಗೆ* ಸಾಲ ಪಡೆಯುವ ಅವಶ್ಯಕತೆ ಯಾದರೂ ಏನಿದೆ? ವಿಶ್ವ ಬ್ರಹ್ಮಾಂಡವನ್ನು ನಿರ್ಮಿಸಿದವನು ಮನುಷ್ಯ ನಿಂದ ಸಾಲ ತೆಗೆದುಕೊಳ್ಳುವನೆ? ಎಂದಿಗೂ ಇಲ್ಲ. ಇದು ತಿಳಿಯದೆ ಹೇಳಬಹುದಾದ ಮಾತು. ಅವನ ಬೊಕ್ಕಸ ಖಾಲಿಯಾಗಿಹೋ ಗಿದೆಯೊ? ಅವನು ಸಾಲ ಪಡೆಯಬೇಕಾದರೆ ಹುಂಡಿ ಮೊದಲಾದ ಚಿಲ್ಲರೆ ವ್ಯಾಪಾರದಲ್ಲಿ ತೊಡಗಿದ್ದು ನಷ್ಟಕ್ಕೆ ಗುರಿಯಾಗಿದ್ದನೆ! ಒಂದಕ್ಕೆ ಎರಡು ಕೊಡುತ್ತೇವೆಂದು ಒಪ್ಪಿಕೊಳ್ಳುತ್ತಿದ್ದಾನೆ. ಇದೇನು ಸಾಹುಕಾರನ ವ್ಯವಹಾರವೆ? ಇದು ದಿವಾಳಿಯಾದವರು ಮತ್ತು ದುಂದುವೆಚ್ಚಮಾಡುತ್ತಿದ್ದು ಕಡಿಮೆ ವರಮಾನವುಳ್ಳವರು ಮಾಡುವ ಕೆಲಸವೇಹೊರತು ದೇವರದಲ್ಲ.

---

* ಈ ಆಯತಿನ ಭಾಷ್ಯದ ತಫಸೀರ್ ಹುಸೇನಿ ಹೀಗೆ ಬರೆದಿದೆ—ಒಬ್ಬನು ಮಹಮ್ಮದ ಸಾಹೇಬರ ಹತ್ತಿರ ಬಂದು 'ಪೈಗಂಬರರೆ! ದೇವರು ಸಾಲವನ್ನೇಕೆ ಕೇಳುತ್ತಾನೆ' ಎನ್ನಲು, ಅವರು—'ನಿಮ್ಮನ್ನು ಸ್ವರ್ಗಕ್ಕೆ ಕೊಂಡುಹೋಗುವುದ

೪೦. ಅವರಲ್ಲಿ ಕೆಲವರು ನಂಬಿದರು. ಕೆಲವರು ಕಾಫಿರರಾದರು. ದೇವರು ಬಯಸಿದ್ದರೆ ಅವರು ಯುದ್ಧ ಮಾಡುತ್ತಿರಲಿಲ್ಲ. ದೇವರು ತಾನು ಬಯಸಿದ್ದನ್ನು ಮಾಡುತ್ತಾನೆ.

[ಮಂ. ೧, ಸಿ. ೩, ಮಾ. ೨, ಆ. ೨೫೩]

ಸವಿಾಕ್ಷಕ—ನಡೆಯುತ್ತಿರುವ ಯುದ್ಧಗಳಷ್ಟೂ ದೇವರ ಇಚ್ಛೆಯಿಂದಲೇ ನಡೆಯುತ್ತಿವೆಯೆ? ಅವನು ಅಧರ್ಮವನ್ನು ಮಾಡಬಯಸಿದರೆ ಮಾಡಬಲ್ಲನೆ? ಹಾಗಿದ್ದರೆ ಅವನು ದೇವರೇ ಅಲ್ಲ. ಶಾಂತಿಯನ್ನು ಭಂಗಪಡಿಸಿ ಯುದ್ಧಗಳನ್ನು ಮಾಡಿಸುವುದು ಸತ್ಪುರುಷರ ಕೆಲಸವಲ್ಲ. ಆದರಿಂದ ಈ ಕುರಾನು ದೇವರು ಬರೆದುದೂ ಅಲ್ಲ ಮತ್ತು ಧರ್ಮಾತ್ಮನಾದ ವಿದ್ವಾಂಸನು ಬರೆದುದೂ ಅಲ್ಲವೆಂದು ತಿಳಿಯಬರುತ್ತದೆ. ॥೪೦॥

೪೧. ಆಕಾಶದಲ್ಲಿಯೂ, ಪೃಥ್ವಿಯ ಮೇಲೂ ಇರುವುದೆಲ್ಲಾ ಅವನಿಗಾಗಿಯೇ ಇದೆ. ಅವನ ಕುರ್ಚಿಯು ಆಕಾಶವನ್ನೂ, ಭೂಮಿಯನ್ನೂ ಆವರಿಸಿಕೊಂಡಿದೆ. [ಮಂ. ೧। ಸಿ. ೪। ಸೂ. ೨। ಆ. ೨೫೫]

ಸವಿಾಕ್ಷಕ—ಆಕಾಶದಲ್ಲಿಯೂ ಭೂಮಿಯ ಮೇಲೂ ಇರುವ ವಸ್ತುಗಳನ್ನು ದೇವರು ಜೀವರುಗಳಿಗಾಗಿ ಉಂಟುಮಾಡಿರುವನೇ ಹೊರತು ತನಗಾಗಲ್ಲ. ಆತನು ಪೂರ್ಣಕಾಮ. ಅವನಿಗೆ ಯಾವ ವಸ್ತುವಿನ ಅಪೇಕ್ಷೆಯೂ ಇಲ್ಲ. ಅವನ ಕುರ್ಚಿಯಿದ್ದರೆ ಅವನು ಏಕದೇಶಿಯಾದನು. ಏಕದೇಶಿಯಾಗಿರುವವನು ದೇವರೆನಿಸಿಕೊಳ್ಳುವುದಿಲ್ಲ. ಏಕೆಂದರೆ ದೇವರು ಸರ್ವವ್ಯಾಪಿ. ॥೪೧॥

೪೨. ದೇವರು ಸೂರ್ಯನನ್ನು ಪೂರ್ವದಿಕ್ಕಿನಿಂದ ತರುತ್ತಾನೆ. ನೀನು ಪಶ್ಚಿಮ ದಿಕ್ಕಿನಿಂದ ತಾ. ಕಾಫಿರನು ಆಗ ಆಶ್ಚರ್ಯಚಕಿತನಾಗಿದ್ದನು. ದೇವರು ಪಾಪಿಗಳಿಗೆ ನಿಶ್ಚಯವಾಗಿಯೂ ದಾರಿ ತೋರಿಸುವುದಿಲ್ಲ. [ಮಂ. ೧। ಸಿ. ೪। ಸೂ. ೨। ಆ. ೨೫೮]

ಕ್ಕಾಗಿ' ಎಂದರು. ಅವನು—' ತಾವು ಕೇವಣಾತಿ ತೆಗೆದುಕೊಳ್ಳುವುದಾದರೆ ನಾನು ಕೊಡುತ್ತೇನೆ ' ಎಂದನು. ಆಗ ಮಹಮ್ಮದ ಸಾಹೇಬರು ಅವನ ಕೇವಣಾತಿಯನ್ನು ತೆಗೆದುಕೊಂಡರು ದೇವರ ಮೇಲೆ ನಂಬಿಕೆಯುಂಟಾಗಲಿಲ್ಲ. ಅವನ ದೂತನ ಮೇಲೆ ನಂಬಿಕೆಯಾಯಿತು.

ಸಮೀಕ್ಷಕ---ಈ ಅವಿದ್ಯೆಯ ಮಾತನ್ನು ನೋಡಿ! ಸೂರ್ಯನು ಪೂರ್ವದಿಂದ ಪಶ್ಚಿಮಕ್ಕಾಗಲಿ, ಪಶ್ಚಿಮದಿಂದ ಪೂರ್ವಕ್ಕಾಗಲಿ ಹೋಗಿ ಬರುತ್ತಾ ಇರುವದಿಲ್ಲ. ಅವನು ತನ್ನ ಪರಿಧಿಯಲ್ಲಿ ತಿರುಗುತ್ತಿರುತ್ತಾನೆ. ಕುರಾನಿನ ನಿರ್ಮಾತೃವಿಗೆ ಭೂಗೋಳ ಮತ್ತು ಖಗೋಳ ವಿದ್ಯೆಯು ಗೊತ್ತಿರಲಿಲ್ಲವೆಂದು ಇದರಿಂದ ನಿಶ್ಚಯವಾಗಿಯೂ ತಿಳಿದುಬರುತ್ತದೆ. ಪಾಪಿಗಳಿಗೆ ಅವನು ದಾರಿ ತೋರಿಸುವುದಿಲ್ಲವಾದರೆ ಪುಣ್ಯಾತ್ಮರಿಗೂ ಮುಸಲ್ಮಾನರ ದೇವರ ಆವಶ್ಯಕತೆಯಿಲ್ಲ. ಏಕೆಂದರೆ, ಧರ್ಮಾತ್ಮರು ಧರ್ಮಮಾರ್ಗದಲ್ಲೇ ಇರುತ್ತಾರೆ. ಧರ್ಮವನ್ನರಿಯದ ಜನರಿಗೆ ತೋರಿಸಬೇಕಾಗುತ್ತದೆ. ಆ ಕರ್ತವ್ಯವನ್ನು ಮಾಡದಿರುವುದು ಕುರಾನನ್ನು ರಚಿಸಿದವರ ದೊಡ್ಡ ತಪ್ಪು. ॥೪೨॥

೪೩. "ಪಶುಗಳಪೈಕಿ ನಾಲ್ಕನ್ನು ತೆಗೆದುಕೊಂಡು ಅವುಗಳ ರೂಪಗಳನ್ನು ನೆನವಿನಲ್ಲಿ ಇಟ್ಟಿರು. ಪ್ರತಿಯೊಂದು ಗುಡ್ಡದ ಮೇಲೆ ಅವುಗಳ ಒಂದೊಂದು ತುಂಡನ್ನಿಡು. ಆಮೇಲೆ ಅವುಗಳನ್ನು ಕರೆದರೆ ಓಡುತ್ತಾ ನಿನ್ನ ಹತ್ತಿರ ಬರುವವು ಎಂದು ಹೇಳಿದೆವು.

[ಮುಂ. ೧, ಸಿ. ೩, ಸೂ. ೨, ಆ. ೨೬೦]

ಸಮೀಕ್ಷಕ— ಛೇಷ್! ಮುಸಲ್ಮಾನರ ದೇವರು ಹಾವಾಡಿಗರ ಆಟನನ್ನಾಡುತ್ತಿದ್ದಾನೆ! ಈಶ್ವರನ ಈಶ್ವರತ್ವವು ಇಂತಹ ವಿಷಯಗಳಿಂದಲೇ ಪ್ರಕಟವಾಗುವುದೆ? ಬುದ್ಧಿವಂತರು ಇಂತಹ ದೇವರಿಗೆ ತಿಲಾಂಜಲಿ ಬಿಟ್ಟು ದೂರವಿದ್ದು ಬಿಡುವರು. ಮೂರ್ಖರು ಸಿಕ್ಕಿ ಬೀಳುವರು. ಇದರಿಂದ ದೇವರಿಗೆ ಹಿರಿಮೆಯ ಬದಲಾಗಿ ಕೀಳ್ತನವೇ ಸಿಗುವುದು. ॥೪೩॥

೪೪. ತಾನು ಬಯಸಿದವನಿಗೆ ನೀತಿಯನ್ನು ಕೊಡುತ್ತಾನೆ.

[ಮುಂ. ೧, ಸಿ. ೩, ಸೂ. ೨, ಆ. ೨೬೯]

ಸಮೀಕ್ಷಕ—ತಾನು ಬಯಸಿದವನಿಗೆ ನೀತಿಯನ್ನು ಕೊಡುವುದಾದರೆ. ಬಯಸದಿರುವವನಿಗೆ ಅನೀತಿಯನ್ನು ಕೊಡುತ್ತಿರಬಹುದು. ಇದು ಈಶ್ವರತ್ವದ ಲಕ್ಷಣವಲ್ಲ. ಯಾವನು ಪಕ್ಷಪಾತವನ್ನು ಬಿಟ್ಟು

ಎಲ್ಲರಿಗೂ ನೀತಿಯನ್ನು ಉಪದೇಶಿಸುತ್ತಾನೊ ಅವನೇ ದೇವರೂ ಆಪ್ತನೂ ಆಗಬಲ್ಲ. ಬೇರಾರೂ ಅಲ್ಲ. ||೪೪||

೪೫. ಅವನು ಎಲ್ಲಾ ವಸ್ತುಗಳ ಮೇಲೆ ಶಕ್ತಿಯನ್ನಿಟ್ಟಿರುವುದರಿಂದ ತನ್ನಿಚ್ಛೆಬಂದವನನ್ನು ಕ್ಷಮಿಸುವನು. ತಾನು ಇಚ್ಛಿಸದವನನ್ನು ದಂಡಿಸುವನು. [ಮಂ. ೧, ಸಿ. ೩, ಸೂ. ೨, ಆ. ೨೮೪]

ಸಮೀಕ್ಷಕ—ಕ್ಷಮಾಯೋಗ್ಯನನ್ನು ಕ್ಷಮಿಸದಿರುವುದೂ, ಅಯೋಗ್ಯನನ್ನು ಕ್ಷಮಿಸುವುದೂ ಮಂಕುತಿಮ್ಮ ರಾಜನ ಕೆಲಸವಲ್ಲವೆ? ದೇವರು ತಾನು ಇಚ್ಛಿಸಿದವನನ್ನು ಪಾಪಿಯನ್ನಾಗಲಿ, ಪುಣ್ಯಾತ್ಮನನ್ನಾಗಲಿ ಮಾಡುವುದಾದರೆ ಜೀವನಿಗೆ ಪಾಪಪುಣ್ಯಗಳು ಅಂಟಬಾರದು. ದೇವರೇ ಅವನನ್ನು ಆ ರೀತಿ ಮಾಡಿರುವನಾದಕಾರಣ ಜೀವನಿಗೆ ಸುಖದುಃಖಗಳೂ ಉಂಟಾಗಬಾರದು. ಉದಾ.—ಸೇನಾಪತಿಯ ಅಪ್ಪಣೆಯ ಮೇರೆಗೆ ಒಬ್ಬ ಸೇವಕನು ಯಾರನ್ನಾದರೂ ಕೊಂದರೆ ಅಥವಾ ರಕ್ಷಿಸಿದರೆ ಅದರ ಫಲಕ್ಕೆ ಅವನು ಭಾಗಿಯಾಗದಿರುವಂತೆ ಅವರಿಗೂ ಆಗಬಾರದು. ||೪೫||

೪೬. ಧಾರ್ಮಿಕರಿಗೆ ಇದಕ್ಕಿಂತಲೂ ಹೆಚ್ಚಾದ ಇನ್ನಾವ ಸಮಾಚಾರವನ್ನು ಹೇಳಲಿ? ಅಲ್ಲಾಹ್‌ನ ಬಳಿ ಸ್ವರ್ಗಗಳಿವೆ. ಅವುಗಳಲ್ಲಿ ಕಾಲುವೆಗಳು ಹರಿಯುತ್ತಿವೆ. ಅವುಗಳಲ್ಲೇ ಸದಾಕಾಲವೂ ಇರುವ ಪವಿತ್ರ ಬೀಬಿಯರಿರುವರು. ದೇವರು ಸಂತೋಷದಿಂದ ಅವರನ್ನು ಭಕ್ತರೊಡಗೂಡಿ ನೋಡುವವನಾಗಿದ್ದಾನೆ.

[ದುಂ. ೧, ಸಿ. ೩, ಸೂ. ೩, ಆ. ೧೪]

ಸಮೀಕ್ಷಕ—ಇದು ಸ್ವರ್ಗವೊ ಅಥವಾ ವೇಶ್ಯಾವನವೊ? ಅವನನ್ನು ಈಶ್ವರನೆಂದು ಕರೆಯುವುದೊ ಅಥವಾ ಸ್ತ್ರೈಣನೆಂದೊ? ಯಾವ ಬುದ್ಧಿವಂತನಾದರೂ ಇಂತಹ ಮಾತುಗಳಿಂದ ತುಂಬಿದ ಪುಸ್ತಕವನ್ನು ಈಶ್ವರರಚಿತವೆಂದು ಭಾವಿಸಬಲ್ಲನೆ? ಇಂತಹ ಪಕ್ಷಪಾತವನ್ನೇಕೆ ಮಾಡಬೇಕು? ಸ್ವರ್ಗದಲ್ಲಿ ಸದಾಕಾಲ ಇರುವ ಆ ಬೀಬಿಯರು ಇಲ್ಲಿ ಜನ್ಮ ಪಡೆದು ಅಲ್ಲಿಗೆ ಹೋಗಿರುವರೊ ಅಥವಾ ಅಲ್ಲೇ ಜನ್ಮವೆತ್ತಿರುವರೊ? ಇಲ್ಲಿ ಜನ್ಮ ಪಡೆದಿದ್ದು ಆ ಮೇಲೆ ಅಲ್ಲಿ

ಹೋಗಿರುವುದಾದರೆ ಅಥವಾ ಕಯಾಮತಿನ ಮೊದಲೇ ಅಲ್ಲಿಗೆ ಅವರನ್ನು ಬರಮಾಡಿಕೊಂಡಿರುವುದಾದರೆ ಅವರ ಗಂಡಂದಿರನ್ನೇಕೆ ಕರೆದುಕೊಳ್ಳಲಿಲ್ಲ? ಕಯಾಮತಿನ ರಾತ್ರಿ ಎಲ್ಲರ ನ್ಯಾಯವಾಗುವುದೆಂಬ ನಿಯಮವನ್ನು ಅವನೇಕೆ ಮುರಿದನು? ಒಂದುಪಕ್ಷ ಅಲ್ಲೇ ಜನ್ಮವೆತ್ತಿರುವುದಾದರೆ ಕಯಾಮತಿನವರೆಗೆ ಅವರು ಅಲ್ಲಿ ಹೇಗೆ ನಿರ್ವಾಹ ಮಾಡುತ್ತಾರೆ? ಅವರಿಗೆ ಗಂಡಂದಿರೂ ಅಲ್ಲಿರುವುದಾದರೆ ಇಲ್ಲಿಂದ ಸ್ವರ್ಗಕ್ಕೆ ತೆರಳುವ ಮುಸಲ್ಮಾನರಿಗೆ ದೇವರು ಬೀಬಿಯರನ್ನು ಎಲ್ಲಿಂದ ಒದಗಿಸುತ್ತಾನೆ? ಸ್ವರ್ಗದಲ್ಲಿ ಬೀಬಿಯರನ್ನು ಸದಾಕಾಲ ಇರುವಂತೆ ಮಾಡಿದ ಮೇಲೆ ಅಲ್ಲಿ ಸದಾಕಾಲ ಇರುವ ಪುರುಷರನ್ನೇಕೆ ನಿರ್ಮಿಸಲಿಲ್ಲ? ಆದ್ದರಿಂದ ಮುಸಲ್ಮಾನರ ದೇವರು ಅನ್ಯಾಯಕಾರಿ ಮತ್ತು ಅಜ್ಞಾನಿಯಾಗಿದ್ದಾನೆ. ||೪೬||

೪೭. ನಿಜವಾಗಿ ಇಸ್ಲಾಮ್ ಮತವು ದೇವರ ಕಡೆಯಿಂದ ಬಂದಿರುತ್ತದೆ. [ಮುಂ. ೧, ಸಿ. ೩, ಸೂ. ೩, ಆ. ೧೯]

ಸಮಾಕ್ಷಕ—ದೇವರು ಇತರರಿಗಲ್ಲದೆ ಮುಸಲ್ಮಾನರಿಗಾಗಿ ಮಾತ್ರ ಇರುವನೆ? ಸಾವಿರದ ಮುನ್ನೂರು ವರುಷಗಳ ಮೊದಲು ಪರಮಾತ್ಮನ ಧರ್ಮವೇ ಇರಲಿಲ್ಲವೆ? ಆದುದರಿಂದ ಈ ಕುರಾನು ದೇವರು ಬರೆದಿದ್ದಂತೂ ಅಲ್ಲ. ಯಾವನೋ ಒಬ್ಬ ಪಕ್ಷಪಾತಿಯು ಬರೆದಿರಬೇಕು. ||೪೭||

೪೮. "ಪ್ರತಿಯೊಬ್ಬ ಜೀವನಿಗೆ ಅವನು ಸಂಪಾದಿಸಿದುದನ್ನು ಪೂರ್ಣವಾಗಿ ಕೊಡಲಾಗುವುದು. ಅವರ ಮೇಲೆ ಅನ್ಯಾಯಮಾಡಲಾಗುವುದಿಲ್ಲ. ಹೇ ದೇವರೆ! ನೀನೇ ದೇಶದ ಒಡೆಯ. ಇಷ್ಟಬಂದವನಿಗೆ ಕೊಡುತ್ತೀಯೆ. ಇಷ್ಟವಿಲ್ಲದವನ ಸಂಪತ್ತನ್ನು ಕಸಿದುಕೊಳ್ಳುತ್ತೀಯೆ. ಇಷ್ಟಬಂದವನಿಗೆ ಗೌರವವನ್ನೂ, ಇಷ್ಟವಿಲ್ಲದವನಿಗೆ ಅಗೌರವವನ್ನೂ ನೀಡುತ್ತೀಯೆ. ಎಲ್ಲವೂ ನಿನ್ನ ಕೈಲಿದೆ. ಪ್ರತಿಯೊಂದು ವಸ್ತುವಿನ ಮೇಲೆ ನಿನ್ನದೇ ಅಧಿಕಾರವಿದೆ. ರಾತ್ರಿಯನ್ನು ಹಗಲಾಗಿಯೂ, ಹಗಲನ್ನು ರಾತ್ರಿಯಾಗಿಯೂ ಮಾಡುವೆ. ಸತ್ತವನನ್ನು ಬದುಕಿಸುವೆ. ಬದುಕಿರುವವನನ್ನು ಸಾಯಿಸುವೆ. ನಿನ್ನಿಚ್ಛೆ ಬಂದವನಿಗೆ ಅನಂತವಾದ

ಅನ್ನವನ್ನು ಕೊಡುವೆ. ಮುಸಲ್ಮಾನರು ಮುಸಲ್ಮಾನರ ಹೊರತು ಕಾಫಿರರನ್ನು ಸ್ನೇಹಿತರನ್ನಾಗಿ ಮಾಡಿಕೊಳ್ಳಬಾರದು. ''ಹಾಗೆ ಮಾಡುವವನು ದೇವರ ಕಡೆಯವನಲ್ಲ'' ಎಂದು ಹೇಳು. ''ನೀವು ದೇವರನ್ನು ಪ್ರೀತಿಸುವುದಾದರೆ ನೀವು ನನ್ನ ಪಕ್ಷವನ್ನು ಅವಲಂಬಿಸಿರಿ. ಆವರಿಂದ ದೇವರು ನಿಮ್ಮನ್ನು ಪ್ರೀತಿಸುವನು. ನಿಮ್ಮನ್ನು, ನಿಮ್ಮ ಪಾಪಗಳನ್ನು ಕ್ಷಮಿಸುವನು. ಏಕೆಂದರೆ ಅವನು ದಿಟವಾಗಿ ಕರುಣಾಮಯನು'' ಎಂದು ಹೇಳು.

[ಮಂ. ೧, ಸಿ. ೩, ಸೂ. ೩, ಆ. ೨೪–೨೫–೨೭,೩೦]

ಸಮೀಕ್ಷಕ—ಪ್ರತಿಯೊಬ್ಬ ಜೀವನ ಕರ್ಮಗಳಿಗೆ ಪೂರ್ಣವಾಗಿ ಫಲವನ್ನು ಕೊಡುವುದಾದರೆ ಕ್ಷಮಿಸುವುದು ಸಾಧ್ಯವಿಲ್ಲ. ಕ್ಷಮಿಸುವುದಾದರೆ ಕರ್ಮಫಲವನ್ನು ಪೂರ್ಣ ಕೊಡಲಾಗುವುದಿಲ್ಲ. ಹೀಗಾದರೆ ಅನ್ಯಾಯವಾಗುವುದು. ಉತ್ತಮ ಕರ್ಮಗಳಿಲ್ಲದೇ ರಾಜ್ಯವನ್ನು ಕೊಟ್ಟರೂ ಅವನು ಅನ್ಯಾಯಕಾರಿಯಾಗುವನು. ಬದುಕಿರುವವನು ಸಾಯುವುದೂ, ಸತ್ತವನು ಬದುಕುವುದೂ ಎಂದಿಗಾದರೂ ಆಗಬಲ್ಲುದೆ? ಏಕೆಂದರೆ ದೇವರ ವ್ಯವಸ್ಥೆಯು ಅಚ್ಛೇದ್ಯ ಮತ್ತು ಅಭೇದ್ಯ. ಆದೆಂದಿಗೂ ಬದಲಾವಣೆ ಹೊಂದಲಾರದು. ಇನ್ನು ಪಕ್ಷಪಾತದ ಮಾತುಗಳನ್ನಾದರೂ ಕೇಳಿ—ಮುಸಲ್ಮಾನರ ಮತದಲ್ಲಿ ಸೇರದಿರುವವರು ಕಾಫಿರರಂತೆ. ಅವರಲ್ಲಿರುವ ಶ್ರೇಷ್ಠಪುರುಷರೊಡನೆ ಕೂಡ ಸ್ನೇಹವನ್ನು ಬೆಳೆಸಬಾರದಂತೆ. ಮುಸಲ್ಮಾನರಲ್ಲಿರುವ ದುಷ್ಟರೊಡನೆ ಕೂಡ ಸ್ನೇಹವನ್ನಿಡಬೇಕಂತೆ. ಈರೀತಿ ಉಪದೇಶ ಮಾಡುವುದು ದೇವರನ್ನು ದೇವತ್ವದಿಂದ ಹೊರದೂಡುತ್ತದೆ. ಇದರಿಂದ ಈ ಕುರಾನು ಕುರಾನಿನ ದೇವರು ಮತ್ತು ಮುಸಲ್ಮಾನರಲ್ಲಿ ಕೇವಲ ಪಕ್ಷಪಾತ ಮತ್ತು ಅವಿದ್ಯೆಯು ತುಂಬಿಹೋಗಿದೆ. ಆದ್ದರಿಂದಲೇ ಮುಸಲ್ಮಾನರು ಅಂಧಕಾರದಲ್ಲಿದ್ದಾರೆ. ಇನ್ನು ಮಹಮ್ಮದಸಾಹೇಬರ ಲೀಲೆಯನ್ನು ನೋಡಿ–''ನೀವು ನನ್ನ ಪಕ್ಷವನ್ನು ಹಿಡಿದರೆ ದೇವರು ನಿಮ್ಮ ಪಕ್ಷವನ್ನು ಹಿಡಿಯುವನು. ನೀವು ಪಕ್ಷಪಾತದಿಂದ ಪಾಪಮಾಡಿದರೆ ದೇವರು ಅದನ್ನು ಕ್ಷಮಿಸುವನು'' ಇದರಿಂದ ಮಹಮ್ಮದ ಸಾಹೇಬರ ಅಂತಃಕರಣವು ಶುದ್ಧವಾಗಿರಲಿಲ್ಲವೆಂಬುದು ವ್ಯಕ್ತವಾಗುತ್ತದೆ. ಆದುದರಿಂದ

ತಮ್ಮ ಪ್ರಯೋಜನವನ್ನು ಸಾಧಿಸಿಕೊಳ್ಳಲು ಅವರು ಕುರಾನನ್ನು ಬರೆದರು. ಅಥವಾ ಬರೆಯಿಸಿದರೆಂದು ತಿಳಿದುಬರುತ್ತದೆ. ||೪೮||

೪೯. ಆಗ ದೇವದೂತರು ಮರಿಯಮಳನ್ನು ಕುರಿತು—"ಹೇ ಮರಿಯಮ್! ದೇವರು ನಿನ್ನನ್ನು ಜಗತ್ತಿನಲ್ಲಿರುವ ಎಲ್ಲಾ ಹೆಂಗಸರಿಗಿಂತಲೂ ಹೆಚ್ಚಾಗಿ ಮೆಚ್ಚಿ ಪವಿತ್ರಗೊಳಿಸಿದನು" ಎಂದರು.

[ಮುಂ. ೧। ಸಿ. ೩। ಸೂ. ೩। ಆ. ೪೧]

ಸಮಾಕ್ಷಕ—ದೇವದೂತರೂ, ದೇವರೂ ಈ ಕಾಲದಲ್ಲಿ ಯಾರೊಡನೆಯೂ ಮಾತನಾಡಲು ಬರುವುದಿಲ್ಲವೆಂದಮೇಲೆ ಮೊದಲು ಹೇಗೆ ಬಂದಿರಬಹುದು? ಮೊದಲಿನ ಮನುಷ್ಯರು ಪುಣ್ಯಾತ್ಮರಾಗಿದ್ದರು, ಈಗಿನವರು ಪುಣ್ಯಾತ್ಮರಲ್ಲವೆಂದರೆ ಅದು ಸುಳ್ಳು. ಕ್ರೈಸ್ತ-ಮುಸಲ್ಮಾನ ಮತಗಳು ಹೊರಟಾಗ ಆ ದೇಶಗಳಲ್ಲಿ ಕಾಡುಜನರೂ, ವಿದ್ಯಾಹೀನರೂ ಹೆಚ್ಚಾಗಿದ್ದರು. ಆದ್ದರಿಂದಲೇ ಇಂತಹ ವಿದ್ಯಾವಿರುದ್ಧವಾದ ಮತಗಳು ಹರಡಿದುವು. ಈಗ ವಿದ್ವಾಂಸರು ಹೆಚ್ಚಾಗಿರುವುದರಿಂದ ಇಂತಹ ಮತಗಳು ಹರಡಲಾರವು. ಇಂತಹ ಪೊಳ್ಳುಮತಗಳೆಲ್ಲವೂ ಅಸ್ತವಾಗುತ್ತಿರುವಾಗ ಇನ್ನು ಬೆಳೆಯುವ ಮಾತೆಲ್ಲಿಯದು? ||೪೯||

೫೦. ಅದನ್ನು ಕುರಿತು ಆಗು ಎನ್ನುತ್ತಾನೆ. ಆಗ ಅದು ಆಗಿಬಿಡುತ್ತದೆ. ಕಾಫಿರರು ಮೋಸಗೊಳಿಸಿದರು. ದೇವರೂ ಮೋಸಗೊಳಿಸಿದನು. ದೇವರು ಬಹಳ ಮೋಸಗಾರ.

[ಮುಂ. ೧। ಸಿ. ೩। ಸೂ. ೩। ಆ. ೪೬-೫೩]

ಸಮಾಕ್ಷಕ—ದೇವರ ಹೊರತು ಬೇರಾವ ವಸ್ತುವನ್ನು ಮುಸಲ್ಮಾನರು ಒಪ್ಪಿಕೊಳ್ಳುವುದಿಲ್ಲ. ಅಂದಮೇಲೆ ದೇವರು ಯಾರಿಗೆ ಹೇಳಿದನು? ಅವನು ಹೇಳಿದುದರಿಂದ ಯಾವುದಾಯಿತು? ಇದಕ್ಕೆ ಉತ್ತರವನ್ನು ಮುಸಲ್ಮಾನರು ಏಳು ಜನ್ಮಗಳಲ್ಲಿಯೂ ಕೊಡಲಾರರು. ಏಕೆಂದರೆ, ಉಪಾದಾನಕಾರಣವಿಲ್ಲದೆ ಎಂದಿಗೂ ಕಾರ್ಯವಾಗುವುದಿಲ್ಲ. ಕಾರಣವಿಲ್ಲದೇ ಕಾರ್ಯವಾಯಿತೆನ್ನುವುದು 'ನನ್ನ ತಾಯಿತಂದೆಗಳಿಲ್ಲದೇನೇ ನನ್ನ ಶರೀರ ಹುಟ್ಟಿತು' ಎಂದು ಹೇಳಿದಂತಾಗುತ್ತದೆ. ಮೋಸ

ಕ್ಕೊಳಗಾಗುವವನೂ, ಕಪಟ ಮತ್ತು ಆಡಂಬರಗಳನ್ನು ಮಾಡುವವನೂ, ಎಂದಿಗೂ ದೇವರಾಗಲಾರ. ಉತ್ತಮ ಮನುಷ್ಯನೂ ಕೂಡ ಇಂತಹ ಕೆಲಸವನ್ನು ಮಾಡಲಾರನು. ॥೫೦॥

೫೧. ದೇವರು ನಿಮಗೆ ಮೂರುಸಾವಿರ ದೇವದೂತರೊಡನೆ ಸಹಾಯವನ್ನು ಕೊಟ್ಟರೆ ಸಾಲದೆ?

[ಮಂ. ೧, ಸಿ. ೪, ಸೂ. ೩, ಆ. ೧೨೩]

ಸಮಾಕ್ಷೇಪಕ—ದೇವರು ಮುಸಲ್ಮಾನರಿಗೆ ಮೂರು ಸಾವಿರ ದೇವದೂತರನ್ನೊಳಗೊಂಡ ಸಹಾಯವನ್ನು ಕೊಡುತ್ತಿದ್ದರೆ, ಮುಸಲ್ಮಾನರ ಸಾಮ್ರಾಜ್ಯದ ಬಹುಭಾಗ ನಾಶವಾಯಿತು, ಇನ್ನೂ ಆಗುತ್ತಲೇ ಇದೆ. ಆ ಸಹಾಯವನ್ನೇಕೆ ಕೊಡುತ್ತಿಲ್ಲ? ಆದ್ದರಿಂದ ಇದು ಆಶೆ ತೊಂರಿಸಿ ಮೂರ್ಖರನ್ನು ಬಲೆಗೆ ಹಾಕಿಕೊಳ್ಳುವುದಕ್ಕಾಗಿ ಆಡಿದ ಬಹಳ ಅನ್ಯಾಯದ ಮಾತಾಗಿದೆ. ॥೫೧॥

೫೨. ಕಾಫಿರರ ಮೇಲೆ ಯುದ್ಧಮಾಡಲು ನಮಗೆ ಸಹಾಯವನ್ನು ನೀಡು. ದೇವರು ನಿಮಗೆ ಉತ್ತಮ ಸಹಾಯಕೂ, ಕಾರ್ಯಸಾಧಕನೂ ಆಗಿರುವನು. ದೇವರ ಮಾರ್ಗದಲ್ಲಿ ನೀವು ಕೊಲ್ಲಲ್ಪಟ್ಟರೆ ಅಥವಾ ತಾವಾಗಿ ಸತ್ತರೆ ನಿಮ್ಮ ಮೇಲೆ ದೇವರ ದಯೆಯು ಬಹು ಚೆನ್ನಾಗಿರುತ್ತದೆ.

[ಮುಂ. ೧। ಸಿ. ೪। ಸೂ. ೩। ಜ. ೧೪೬, ೧೪೯, ೧೫೭]

ಸಮಾಕ್ಷೇಪಕ—ಈಗ ಮುಸಲ್ಮಾನರ ತಪ್ಪನ್ನು ನೋಡಿ! ತಮ್ಮ ಮತಕ್ಕಿಂತ ಬೇರೆಯಾಗಿರುವವರನ್ನು ಕೊಲ್ಲಲು ದೇವರನ್ನು ಪ್ರಾರ್ಥಿಸುತ್ತಿದ್ದಾರೆ, ಇವರ ಮಾತನ್ನು ನೆರವೇರಿಸುವುದಕ್ಕೆ ದೇವರೇನು ತಿಳುವಳಿಕೆಯಿಲ್ಲದವನೆ? ದೇವರು ಮುಸಲ್ಮಾನರ ಕಾರ್ಯಸಾಧಕನಾಗಿರುವುದಾದರೆ ಅವರ ಕಾರ್ಯಗಳೇಕೆ ನಾಶವಾಗುತ್ತವೆ? ದೇವರು ಕೂಡ ಮುಸಲ್ಮಾನರ ಮೇಲಿನ ಮೋಹದಲ್ಲಿ ಸಿಕ್ಕಿಬಿದ್ದಿರಬೇಕೆಂದು ತೋರುತ್ತದೆ. ದೇವರು ಈರೀತಿ ಪಕ್ಷಪಾತಿಯಾಗಿದ್ದರೆ ಅವನೆಂದಿಗೂ ಧರ್ಮಾತ್ಮರಿಗೆ ಉಪಾಸ್ಯನಾಗಲಾರ. ॥೫೨॥

೫೩. ದೇವರು ನಿಮ್ಮನ್ನು ಪರೋಕ್ಷಜ್ಞರನ್ನಾಗಿ ಮಾಡುವುದಿಲ್ಲ. ಆದರೆ ಅವನು ತನ್ನ ಪೈಗಂಬರರಲ್ಲಿ ತನಗೆ ಇಷ್ಟಬಂದವರನ್ನು ಮೆಚ್ಚುವನು. ದೇವರ ಮತ್ತು ದೇವರ ರಸೂಲರ ಮೇಲೆ ವಿಶ್ವಾಸವಿಡಿ.

[ಮುಂ. ೧। ಸ. ೪। ಸೂ. ೩। ಆ. ೧೭೯]

ಸಮೀಕ್ಷಕ—ಮುಸಲ್ಮಾನರು ದೇವರ ಹೊರತು ಬೇರಾರ ಮೇಲೂ ವಿಶ್ವಾಸವಿಡುವುದಿಲ್ಲ ಮತ್ತು ದೇವರಿಗೆ ಜೊತೆಗಾರನೆಂದೂ ಯಾರನ್ನೂ ಭಾವಿಸುವುದಿಲ್ಲ; ಹೀಗಿರುವಾಗ ವಿಶ್ವಾಸವಿಡುವವಿಷಯದಲ್ಲಿ ದೇವರ ಜತೆಗೆ ಪೈಗಂಬರಸಾಹೇಬರನ್ನು ಏಕೆ ಜೋಡಿಸಿಕೊಂಡರು? ಪೈಗಂಬರರನ್ನು ಸೇರಿಸಿ ವಿಶ್ವಾಸವಿಡಬೇಕೆಂದು ದೇವರು ಬರೆದಿರುವುದರಿಂದ ಪೈಗಂಬರರೂ ಜತೆಗೆ ಬಂದು ಸೇರಿದರು. ಹೀಗಿರುವಾಗ ಬೇರೊಬ್ಬನ ಜತೆಗೆ ಸೇರದವನು ಎಂದು ಪರಮಾತ್ಮನನ್ನು ಕರೆಯುವುದು ಸರಿಯಾಗಲಾರದು. ಇದರ ಅರ್ಥವನ್ನು—"ಮುಹಮ್ಮದ ಸಾಹೇಬರನ್ನು ಪೈಗಂಬರರೆಂದು ನಂಬಬೇಕು" ಎಂಬುದಾಗಿ ತಿಳಿಯುವುದಾದರೆ ಮುಹಮ್ಮದ ಸಾಹೇಬರು ಪೈಗಂಬರರಾಗಬೇಕಾದ ಅಗತ್ಯವಾದರೂ ಏನು? ಎಂಬ ಪ್ರಶ್ನೆಯು ಹುಟ್ಟುತ್ತದೆ. ದೇವರು ಅವರನ್ನು ಪೈಗಂಬರರಾಗಿ ಮಾಡದೆ ತನ್ನ ಅಭೀಷ್ಟಕಾರ್ಯಗಳನ್ನು ನೆರವೇರಿಸಲಾರನಾದರೆ ಅವನು ನಿಜವಾಗಿ ಅಸಮರ್ಥನಾದ. ||೫೩||

೫೪. ಓ ಶ್ರದ್ಧಾಳುಗಳೇ! ಸಂತೋಷಪಡಿ. ಪರಸ್ಪರ ಸಹನೆಯಿಂದಿರಿ. ಯುದ್ಧದಲ್ಲೇ ತೊಡಗಿರಿ. ದೇವರಿಗೆ ಹೆದರಿರಿ. ನೀವು ಬಂಧವಿಮುಕ್ತರಾಗುವಿರಿ.

[ಮುಂ. ೧। ಸಿ. ೪। ಸೂ. ೩। ಆ. ೩, ೨೦೦]

ಸಮೀಕ್ಷಕ—ಕುರಾನಿನ ಈ ದೇವರು ಮತ್ತು ಪೈಗಂಬರರು—ಇಬ್ಬರೂ ಹೋರಾಟಗಾರರು. ಯುದ್ಧಕ್ಕೆ ಅಪ್ಪಣೆಮಾಡುವವನು ಶಾಂತಿಭಂಗಮಾಡುವವನಾಗುತ್ತಾನೆ. ಹೆಸರಿಗೆ ಮಾತ್ರ ದೇವರಿಗೆ ಹೆದರುವುದರಿಂದ ಬಂಧಮುಕ್ತಿಯಾಗುವುದೋ ಅಥವಾ ಅಧರ್ಮಯುಕ್ತವಾದ ಯುದ್ಧ ಮೊದಲಾದುವುಗಳಿಗೆ ಹೆದರುವುದರಿಂದ ಬಂಧವಿಮೋ

ಚನೆಯಾಗುವುದೊ? ಮೊದಲನೆಯ ಪಕ್ಷದಲ್ಲಿ ಹೆದರುವುದೂ, ಹೆದರದಿರುವುದೂ ಒಂದೇ ಆಗಿದೆ. ಎರಡನೆಯ ಪಕ್ಷವಾದರೆ ಸರಿಯಾಗಿದೆ. ||೫೪||

೫೫. ಇವೆಲ್ಲಾ ದೇವರ ಮೇರೆಗಳು. ದೇವರ ಮತ್ತು ಅವನ ರಸೂಲಿನ ಮಾತನ್ನು ನಂಬುವವನು ಕಾಲುವೆಗಳು ಹರಿಯುತ್ತಿರುವ ಸ್ವರ್ಗಕ್ಕೆ ತಲಪುವನು. ಅದೇ ದೊಡ್ಡ ಪ್ರಯೋಜನ. ಅಲ್ಲಾಹ್‌ನ ಮತ್ತು ಅವನ ರಸೂಲಿನ ಆಜ್ಞೆಗಳನ್ನು ಮುರಿದು, ಅವನ ಮೇರೆಗಳನ್ನು ಮೀರಿಹೋಗುವವನು ಸದಾಕಾಲವೂ ಇರುವ ಬೆಂಕಿಯಲ್ಲಿ ಸುಡಲ್ಪಡುವನು. ಅವನಿಗಾಗಿ ಕೇಡುಮಾಡುವದುಃಖವು ಕಾದಿದೆ.

[ಮುಂ. ೧। ಸಿ. ೪। ಸೂ. ೪। ಆ. ೧೩, ೧೪]

ಸಮೀಕ್ಷಕ—ದೇವರೇ ಮಹಮ್ಮದ್ ಪೈಗಂಬರನ್ನು ತನ್ನ ಜೊತೆಗಾರರನ್ನಾಗಿ ಮಾಡಿಕೊಂಡಿದ್ದನೆಂದು ಕುರಾನಿನಲ್ಲಿಯೇ ಬರೆದಿದ್ದಾನೆ. ದೇವರು ಪೈಗಂಬರರ ಕೈಲಿ ಹೇಗೆ ಸಿಕ್ಕಿಬಿದ್ದಿದ್ದಾನೆಂಬುದನ್ನು ನೋಡಿ. ಸ್ವರ್ಗದಲ್ಲಿ ಅವರನ್ನು ಭಾಗಸ್ಥರನ್ನಾಗಿ ಮಾಡಿದ್ದಾನೆ. ಯಾವುದೊಂದು ವಿಷಯದಲ್ಲಿಯೂ ಮುಸಲ್ಮಾನರ ದೇವರು ಸ್ವತಂತ್ರನಲ್ಲದಿರುವಾಗ ಅವನನ್ನು 'ಲಾಶರೀಕ್' ಎಂದು ಕರೆಯುವುದು ವ್ಯರ್ಥ. ಇಂತಹ ಮಾತುಗಳು ಈಶ್ವರೋಕ್ತ ಪುಸ್ತಕದಲ್ಲಿರಲಾರವು. ||೫೫||

೫೬. ದೇವರು ಒಂದು ಅಣುವಿನಷ್ಟೂ ಅನ್ಯಾಯ ಮಾಡುವುದಿಲ್ಲ. ಒಳ್ಳೆಯದನ್ನು ಎರಡರಷ್ಟಾಗಿ ಮಾಡುತ್ತಾನೆ.

[ಮುಂ. ೧। ಸಿ. ೫। ಸೂ. ೪। ಆ. ೪೦]

ಸಮೀಕ್ಷಕ—ದೇವರು ಅಣುವಿನಷ್ಟೂ ಅನ್ಯಾಯ ಮಾಡದಿರುವುದಾದರೆ ಪುಣ್ಯವನ್ನೇಕೆ ಎರಡು ಪಾಲಿನಷ್ಟು ಮಾಡುತ್ತಾನೆ? ಮುಸಲ್ಮಾನರ ಮೇಲೆ ಪಕ್ಷಪಾತ ಮಾಡುತ್ತಾನೇಕೆ? ನಿಜವಾಗಿ ಕರ್ಮಗಳಿಗೆ ಎರಡರಷ್ಟಾಗಲಿ ಅಥವಾ ಕಡಿಮೆಯಾಗಲಿ ಫಲವನ್ನು ಕೊಟ್ಟರೆ ದೇವರು ಅನ್ಯಾಯಕಾರಿಯಾಗುತ್ತಾನೆ. ||೫೬||

೫೭. ನಿನ್ನ ಬಳಿಯಿಂದ ಹೊರಗೆ ಬಂದಾಗ ಜನರು ನಿನ್ನ ಹೇಳಿಕೆಗಳಿಗೆ ವಿರುದ್ಧವಾಗಿ ಯೋಚಿಸುತ್ತಾರೆ. ದೇವರು ಅವರ ಯೋಚನೆಗಳನ್ನು ಬರೆದಿಡುತ್ತಾನೆ. ಅವರು ಮಾಡುತ್ತಿರುವ ಈ ಕಾರ್ಯಗಳಿಗಾಗಿ ದೇವರು ಅವರನ್ನು ಮರುಳುಗೊಳಿಸಿದ್ದಾನೆ. ದೇವರು ಮಾರ್ಗಭ್ರಷ್ಟನನ್ನಾಗಿ ಮಾಡಿದವನನ್ನು ನೀವು ಮಾರ್ಗಕ್ಕೆ ತರಬಯಸುತ್ತೀಯೆನು? ದೇವರಿಂದ ಮಾರ್ಗಭ್ರಷ್ಟನಾದವನು ಎಂದಿಗೂ ಮಾರ್ಗವನ್ನು ಪಡೆಯಲಾರ.

[ಮಂ. ೧। ಸಿ. ೫। ಸೂ. ೪। ಆ. ೬೧, ೬೪]

ಸಮಿಾಕ್ಷಕ—ದೇವರು ವಿಷಯಗಳನ್ನು ಬರೆದು ಬಹಿಃಪ್ರಾತೆಯನ್ನಿಡುತ್ತಾ ಹೋಗುವುದಾದರೆ ಅವನು ಸರ್ವಜ್ಞನಲ್ಲ. ಸರ್ವಜ್ಞನಾಗಿದ್ದರೆ ಬರೆಯುವ ಅಗತ್ಯವಾದರೂ ಏನು? ಸೈತಾನನು ಮರಳುಗೊಳಿಸುವುದರಿಂದ ಜನರು ಪಾಪಿಗಳಾಗುತ್ತಾರೆಂದು ಮುಸಲ್ಮಾನರು ಹೇಳುತ್ತಾರೆ. ಇಲ್ಲಿ ದೇವರೇ ಜನರನ್ನು ಮಾರ್ಗಭ್ರಷ್ಟರನ್ನಾಗಿ ಮಾಡುತ್ತಾನೆಂದಮೇಲೆ ದೇವರಿಗೂ, ಸೈತಾನನಿಗೂ ಭೇದವೇನುಳಿಯಿತು? ಇಷ್ಟು ಮಾತ್ರ ಭೇದವನ್ನು ಹೇಳಬಹುದು. ದೇವರು ದೊಡ್ಡ ಸೈತಾನ ಅವನು ಸಣ್ಣ ಸೈತಾನ. ಏಕೆಂದರೆ, ಮರುಳುಗೊಳಿಸುವನನೇ ಸೈತಾನನೆಂದು ಮುಸಲ್ಮಾನರೇ ಒಪ್ಪಿಕೊಂಡಿದ್ದಾರೆ. ಈ ನಿಶ್ಚಯದಿಂದ ದೇವರನ್ನು ಸೈತಾನನನ್ನಾಗಿ ಮಾಡಿಬಿಟ್ಟರು !‖೫೭‖

೫೮. ಮತ್ತು ನಿಮ್ಮ ಕೈಗಳನ್ನು ತಡೆಯಬೇಡಿ. ಅವರನ್ನು ಹಿಡಿಯಿರಿ. ಮತ್ತು ಕೈಗೆ ಸಿಕ್ಕಿದ ಕಡೆ ಕೊಂದುಹಾಕಿ. ಮುಸಲ್ಮಾನನು ಮುಸಲ್ಮಾನನನ್ನು ಕೊಲ್ಲುವುದು ಉಚಿತವಲ್ಲ. ತಿಳಿಯದೆ ಯಾರಾದರೂ ಕೊಂದರೆ, ಕೊಂದವರ ಕಡೆಯವರು ಕೊಲ್ಲಲ್ಪಟ್ಟವನ ರಕ್ತದ ಮೂಲ್ಯವನ್ನು ಅವನ ಬಂಧುಗಳಿಗೆ ಕೊಡಬೇಕು. ಮತ್ತು ಒಬ್ಬ ಮುಸಲ್ಮಾನಗುಲಾಮನನ್ನು ಗುಲಾಮಗಿರಿಯಿಂದ ಬಿಡುಗಡೆ ಮಾಡಬೇಕು. ಕೊಲ್ಲಲ್ಪಟ್ಟವನು ಮುಸಲ್ಮಾನನಾಗಿದ್ದರೂ ಅವನ ಬಂಧುಗಳು ನಿಮ್ಮ ಶತ್ರುವರ್ಗಕ್ಕೆ ಸೇರಿದವರಾಗಿದ್ದರೆ ರಕ್ತದ ಜೆಲೆಯನ್ನು ಕೊಡಬೇಕಾದ ಅಗತ್ಯವಿಲ್ಲ. ಆ ಸ್ಥಿತಿಯಲ್ಲಿ ಪ್ರಾಯಶ್ಚಿತನಾಗಿ ಪಾನಧರ್ಮಗಳನ್ನು ಮಾಡಬೇಕು. ತಿಳಿದು ತಿಳಿದೂ ಮುಸಲ್ಮಾನ

ನನ್ನು ಕೊಂದವನು ಸದಾಕಾಲ ನರಕದಲ್ಲಿರಬೇಕಾಗುವುದು. ಅವನ ಮೇಲೆ ದೇವರ ಕೋಪ ಮತ್ತು ಧಿಕ್ಕಾರವಿದೆ.

[ಮುಂ. ಸಿ ೫, ಸೂ ೪, ಆ ೯೧, ೯೨, ೯೩]

ಸಮೀಕ್ಷಕ—ಈಗ ಇವರ ಮಹಾಪಕ್ಷಪಾತದ ಮಾತನ್ನಾದರೂ ನೋಡಿ. ಮುಸಲ್ಮಾನನಲ್ಲದವನನ್ನು ಸಿಕ್ಕಿದಕಡೆ ಕೊಂದುಹಾಕಬೇಕಂತೆ. ಮುಸಲ್ಮಾನರನ್ನು ಕೊಲ್ಲಬಾರದಂತೆ. ತಿಳಿಯದೆ ಮುಸಲ್ಮಾನನನ್ನು ಕೊಂದರೆ ಪ್ರಾಯಶ್ಚಿತ್ತ ಮಾಡಿಕೊಳ್ಳಬೇಕಂತೆ. ಇತರರನ್ನು ಕೊಂದರೆ ಸ್ವರ್ಗ ದೊರೆಯುವುದಂತೆ. ಇಂತಹ ಉಪದೇಶವನ್ನು ಹಾಳು ಬಾವಿಗೆ ಎಸೆಯಬೇಕು. ಇಂತಹ ಪುಸ್ತಕಗಳು, ಇಂತಹ ಪೈಗಂಬರರು, ಇಂತಹ ದೇವರುಗಳು ಮತ್ತು ಇಂತಹ ಮತಗಳು ಇವುಗಳಿಂದ ಕೇಡಲ್ಲದೆ ಲಾಭವೇನೂ ಇಲ್ಲ. ಇಂತಹವು ಇಲ್ಲದಿರುವುದೇ ಮೇಲು. ಬುದ್ಧಿವಂತರು ಇಂಥ ಪ್ರಮಾದದಿಂದ ಕೂಡಿದ ಮತಗಳಿಂದ ದೂರವಾಗಿದ್ದು ವೇದೋಕ್ತವಾದ ಸತ್ಯವನ್ನು ನಂಬಬೇಕು. ಏಕೆಂದರೆ ವೇದದಲ್ಲಿ ಎಳ್ಳಷ್ಟೂ ಅಸತ್ಯವಿಲ್ಲ. ಮುಸಲ್ಮಾನನನ್ನು ಕೊಂದರೆ ನರಕ ಸಿಕ್ಕುವುದಂತೆ. ಅದೇ ರೀತಿ ಮುಸಲ್ಮಾನನನ್ನು ಕೊಂದರೆ ಸ್ವರ್ಗ ಸಿಕ್ಕುವುದೆಂದು ಇತರರು ಹೇಳುತ್ತಾರೆ. ಇವರಿಬ್ಬರಲ್ಲಿ ನಾವು ಯಾರ ಮಾತನ್ನು ನಂಬೋಣ? ಯಾವುದನ್ನು ಬಿಡೋಣ? ಆದರೆ ಮೂಢರು ಕಲ್ಪಿಸಿರುವ ಇಂತಹ ಮತಗಳನ್ನು ಬಿಟ್ಟು ವೇದಮತವನ್ನು ಸ್ವೀಕರಿಸುವುದು ಎಲ್ಲರಿಗೂ ಉಚಿತವಾಗಿದೆ. ವೇದಮತದಲ್ಲಿ ಆರ್ಯಮಾರ್ಗ ಅಂದರೆ ಶ್ರೇಷ್ಠಪುರುಷರ ಮಾರ್ಗವನ್ನನುಸರಿಸಬೇಕೆಂದೂ, ದಸ್ಯುಗಳ ಅಂದರೆ ದುಷ್ಟರ ಮಾರ್ಗದಿಂದ ದೂರವಿರಬೇಕೆಂದೂ ಬರೆದಿರುವುದರಿಂದ ಅದು ಸರ್ವೋತ್ತಮವಾಗಿದೆ. ॥೫೮॥

೫೯. ಜ್ಞಾನವು ಪ್ರಕಟವಾದ ಮೇಲೆ ರಸೂಲರನ್ನು ವಿರೋಧಿಸಿ, ಮುಸಲ್ಮಾನರಿಗೆ ವಿರುದ್ಧವಾದ ಪಕ್ಷವನ್ನವಲಂಬಿಸಿದವರನ್ನು ನಾವು ಅವಶ್ಯವಾಗಿ ನರಕಕ್ಕೆ ಕಳುಹಿಸುವೆವು.

[ಮುಂ ೧।ಸಿ ೫। ಸೂ ೪। ಆ ೧೧೫]

ಸಮೀಕ್ಷಕ—ಈಗ ದೇವರ ಮತ್ತು ರಸೂಲರ ಪಕ್ಷಪಾತದ ಮಾತುಗಳನ್ನು ನೋಡಿ. ಮುಹಮ್ಮದ್ ಸಾಹೇಬರು ಮೊದಲಾದವರು—

ನಾವು ದೇವರ ಹೆಸರಿನಲ್ಲಿ ಈರೀತಿಯಾಗಿ ಬರೆದಿದ್ದರೆ ನಮ್ಮ ಮತವು ಅಭಿವೃದ್ಧಿ ಹೊಂದಲಾರದು. ಪದಾರ್ಥಗಳು ದೊರೆಯಲಾರವು. ಆನಂದೋಪಭೋಗವು ಸಾಗದು ಎಂದು ತಿಳಿದುಕೊಂಡಿದ್ದರು. ಇದರಿಂದಲೇ ಅವರು ತಮ್ಮ ಪ್ರಯೋಜನವನ್ನು ಸಾಧಿಸಿಕೊಳ್ಳಲು, ಇತರರ ಪ್ರಯೋಜನವನ್ನು ಕೆಡಿಸಲೂ ಬದ್ಧಕಂಕಣರಾಗಿದ್ದರೆಂದು ತಿಳಿದುಬರುತ್ತದೆ. ಆದ್ದರಿಂದ ಇವರು ಆಪ್ತರು ಆಗಿರಲಿಲ್ಲ. ಇವರ ಮಾತು ಆಪ್ತರಾದ ವಿದ್ವಾಂಸರ ಎದುರಿನಲ್ಲೆಂದೂ ಪ್ರಮಾಣವಾಗಲಾರದು. ॥೫೯॥

೬೦. ದೇವರು, ದೇವದೂತರು, ಪುಸ್ತಕಗಳು, ರಸೂಲರು ಮತ್ತು ಕಯಾಮತ— ಇವುಗಳ ವಿಷಯದಲ್ಲಿ ಕಾಫಿರತನದಿಂದ ನಡೆದುಕೊಳ್ಳುವವನು ನಿಜವಾಗಿ ದಾರಿತಪ್ಪಿದ್ದಾನೆ. ಇವುಗಳಲ್ಲಿ ವಿಶ್ವಾಸವಿಟ್ಟು ಮತ್ತೆ ಕಾಫಿರರಾಗುವುದು—ಈರೀತಿ ಮೇಲಿಂದ ಮೇಲೆ ಮಾಡಿ ಯಾರು ಕಾಫಿರತನವನ್ನೇ ಹೆಚ್ಚಾಗಿ ಬೆಳಸಿಕೊಳ್ಳುವರೊ ಅವರನ್ನು ದೇವರೆಂದೂ ಕ್ಷಮಿಸುವುದಿಲ್ಲ. ಅವರಿಗೆ ಮಾರ್ಗವನ್ನೂ ತೋರಿಸುವುದಿಲ್ಲ.

[ಮಂ. ೧! ಸಿ. ೫! ಸೂ. ೪! ಆ. ೧೩೬, ೧೩೭]

ಸಮಾಕ್ಷೇಪ—ಈಗಲೂ ದೇವರು ಅದ್ವಿತೀಯನಾಗಿ ಉಳಿಯಬಲ್ಲನೆ? ಕೇವಲ, ಅನನ್ಯ ಎಂದು ಹೇಳುತ್ತಾ ಹೇಳುತ್ತಾ ಅವನ ಜೊತೆಯಲ್ಲಿ ಎಷ್ಟೋ ವಸ್ತುಗಳ ಉಲ್ಲೇಖಮಾಡುತ್ತಾ ಹೋಗುವುದು ಪರಸ್ಪರ ವಿರುದ್ಧವಾದ ಮಾತುಗಳಲ್ಲವೆ? ಮೂರುಸಲ ಕ್ಷಮಿಸಿದ ಅನಂತರ ದೇವರು ಕ್ಷಮಿಸುವುದಿಲ್ಲವೆ? ಮೂರು ಕಾಫಿರತನ ಮಾಡಿದರೂ ಮಾರ್ಗತೋರಿಸುವನೆ? ಅಥವಾ ನಾಲ್ಕನೇಬಾರಿಯ ನಂತರ ತೋರಿಸುವುದಿಲ್ಲವೆ? ನಾಲ್ಕು ನಾಲ್ಕುಸಾರಿ ಕಾಫಿರತನ ಮಾಡಿದರೂ ಸಹ ಅದು ಎಷ್ಟೋ ಹೆಚ್ಚಾಗಿಬಿಡುವುದು. ॥೬೦॥

೬೧. ನಿಶ್ಚಯವಾಗಿ ದೇವರು ದುಷ್ಟರನ್ನೂ, ಕಾಫಿರರನ್ನೂ ನರಕದಲ್ಲಿ ತುಂಬಿಬಿಡುವನು. ನಿಶ್ಚಯವಾಗಿ ದುಷ್ಟರು ದೇವರಿಗೆ ಮೋಸಮಾಡುತ್ತಾರೆ. ದೇವರು ಅವರನ್ನು ಮೋಸಪಡಿಸುತ್ತಾನೆ. ಹೇ

ವಿಶ್ವಾಸವಂತರೇ! ಮುಸಲ್ಮಾನರನ್ನು ಬಿಟ್ಟು ಕಾಫಿರರನ್ನು ಸ್ನೇಹಿತರನ್ನಾಗಿ ಮಾಡಬೇಡಿರಿ.

[ಮುಂ. ೧। ಸಿ. ೫। ಸೂ. ೪। ಅ. ೧೪೦, ೧೪೨, ೧೪೪]

ಸಮೀಕ್ಷಕ—ಮುಸಲ್ಮಾನರು ಸ್ವರ್ಗಕ್ಕೂ ಇತರರು ನರಕಕ್ಕೂ ಹೋಗುತ್ತಾರೆಂಬುದಕ್ಕೆ ಪ್ರಮಾಣವೇನಿದೆ? ಭಲೇ! ದ.ಷ್ಟರ ಮೋಸಕ್ಕೊಳಗಾಗುವವನೂ ಅನ್ಯರನ್ನು ಮೋಸಪಡಿಸುವವನೂ ಆದ ಇಂತಹ ದೇವರು ನಮ್ಮಿಂದ ದೂರವಾಗಿದ್ದು ಮೋಸಗಾರರ ಹತ್ತಿರ ಹೋಗಿ ಅವರೊಡನೆ ಸ್ನೇಹ ಬೆಳೆಸಲಿ. ಮೋಸಗಾರರು ಇವರೊಡನೆ ಮೈತ್ರಿಯನ್ನು ಸಾಧಿಸಲಿ. ಏಕೆಂದರೆ—

ಯಾದೃಶೀ ಶೀತಲಾ ದೇವೀ ತಾದೃಶಃ ಖರವಾಹನಃ

ತನಗೆ ಸರಿಯಾದವನು ಸಿಕ್ಕಿದರೆ ಮಾತ್ರ ವ್ಯವಹಾರವು ನಡೆಯುತ್ತಿರುತ್ತದೆ. ದೇವರೇ ಮೋಸಗಾರನಾಗಿದ್ದ ಮೇಲೆ ಅವನ ಉಪಾಸಕರಾದರೂ ಮೋಸಗಾರರಾಗಬಾರದೇಕೆ? ದುಷ್ಟನಾಗಿರುವ ಮುಸಲ್ಮಾನನೊಡನೆ ಸ್ನೇಹವನ್ನೂ, ಸ್ನೇಷ್ಮನಾಗಿರುವ ಮುಸಲ್ಮಾನೇತರನೊಡನೆ ವೈರವನ್ನೂ ಕಟ್ಟಿಕೊಳ್ಳುವುದು ಯಾರಿಗಾದರೂ ಸರಿತೋರೀತೆ? ॥೬೧॥

೬೨. ಹೇ ಜನರೆ! ನಿಶ್ಚಯವಾಗಿ ಪರಮಾತ್ಮನ ಕಡೆಯಿಂದ ಸತ್ಯದೊಂದಿಗೆ ಪೈಗಂಬರನು ನಿಮ್ಮಹತ್ತಿರ ಬಂದಿರುವನು. ನೀವು ಅವನ ಮೇಲೆ ನಂಬಿಕೆಯನ್ನಿಡಿರಿ. ಅಲ್ಲಾಹನು ಸರ್ವಶಕ್ತನೂ, ಅದ್ವಿತೀಯನೂ ಆಗಿದ್ದಾನೆ.

[ಮುಂ. ೧। ಸಿ. ೬। ಸೂ. ೪। ಅ. ೧೭೦-೧೭೧]

ಸಮೀಕ್ಷಕ—ಪೈಗಂಬರನ ಮೇಲೆ ನಂಬಿಕೆಯನ್ನಿಡಬೇಕು ಎಂದು ಬರೆದ ಮೇಲೆ, ನಂಬಿಕೆಯವಿಷಯದಲ್ಲಿ ಪೈಗಂಬರನಲ್ಲಿಯೂ ದೇವರಲ್ಲಿಯೂ ಸಮಾನತೆಯುಂಟಾಗಲಿಲ್ಲವೇ? ದೇವರು ವ್ಯಾಪಕನಾಗಿರದೆ ಏಕದೇಶಿಯಾಗಿರುವುದರಿಂದಲೇ ತಾನೇ ಅವನ ಹತ್ತಿರದಿಂದ ಪೈಗಂಬರರು ಬಂದು ಹೋಗುತ್ತಿರುವುದು! ಅಂತಹವನು ದೇವರೂ ಆಗಿರಲಾರನು. ಒಂದೊಂದು ಕಡೆ ಸರ್ವವ್ಯಾಪಕನೆಂದೂ, ಒಂದೊಂದು ಕಡೆ ಏಕದೇಶಿಯೆಂದೂ ಬರೆಯುತ್ತಾರೆ. ಹೀಗಿರುವಾಗ ಕುರಾನನ್ನು

ಬರೆದವನು ಒಬ್ಬನಲ್ಲ ಹಲವರು ಇದನ್ನು ಬರೆದಿದ್ದಾರೆ ಎಂಬುದು ತಿಳಿದುಬರುತ್ತದೆ. ||೬೨||

೬೩. ತಾವಾಗಿ ಸತ್ತ ಪ್ರಾಣಿಗಳ ಶವಗಳು, ರಕ್ತ, ಹಂದಿಯ ಮಾಂಸ, ಪರಮಾತ್ಮನ ಹೆಸರಿತ್ತದೆ ಕೊಲ್ಲಲ್ಪಟ್ಟವು, ಕುತ್ತಿಗೆ ಹಿಸುಕಲ್ಪಟ್ಟವು, ದೊಣ್ಣೆಯಿಂದ ಹೊಡೆದು ಕೊಲ್ಲಲ್ಪಟ್ಟವುಗಳು, ಮೇಲಿಂದ ಬಿದ್ದು ಸತ್ತವುಗಳು, ಕೊಂಬಿನಿಂದ ಹೊಡೆಯಲ್ಪಟ್ಟವುಗಳು ಮತ್ತು ನೋವಿನಿಂದ ಸತ್ತವುಗಳು—ಇವೆಲ್ಲವೂ ನಿಮಗೆ ವರ್ಜ್ಯವಾಗಿವೆ.

[ಮುಂ. ೨। ಸಿ. ೬। ಸೂ. ೫। ಆ. ೩]

ಸಮೀಕ್ಷಕ—ಅದೇನು ಇಷ್ಟು ಪದಾರ್ಥಗಳು ಮಾತ್ರ ವರ್ಜ್ಯವೆ? ಇನ್ನಿತರ ಎಷ್ಟೋ ಪಶುಗಳೂ, ತಿರ್ಯಗ್ಜಂತುಗಳೂ, ಇರುವೆ ಮುಂತಾದವೂ ಮುಸಲ್ಮಾನರಿಗೆ ಗ್ರಾಹ್ಯವಾಗಿರುವವೇ? ಇದು ಮನುಷ್ಯರ ಕಲ್ಪನೆಯೇ ಹೊರತು ದೇವರದಲ್ಲ. ಆದುದರಿಂದ ಇದು ಪ್ರಾಮಾಣಿಕವಾದುದಲ್ಲ. ||೬೩||

೬೪. ದೇವರಿಗೆ ಒಳ್ಳೆಯದನ್ನು ಸಾಲಕೊಡಿರಿ. ನಾನು ನಿಮ್ಮ ಕೇಡನ್ನು ಅವಶ್ಯವಾಗಿ ದೂರೀಕರಿಸುವೆನು, ನಿಮ್ಮನ್ನು ಸ್ವರ್ಗಕ್ಕೆ ಕಳಿಸುವೆನು. [ಮುಂ. ೨। ಸಿ. ೬। ಸೂ. ೫। ಆ. ೧೭]

ಸಮೀಕ್ಷಕ--ಭೇಷ್; ಮುಸಲ್ಮಾನರ ದೇವರ ಮನೆಯಲ್ಲಿ ಸ್ವಲ್ಪವಾದರೂ ಹಣ ಉಳಿದಿರಲಿಕ್ಕಿಲ್ಲ. ಉಳಿದಿದ್ದರೆ ಸಾಲವನ್ನೇಕೆ ಕೇಳುವನು? ನಿಮ್ಮ ಕೇಡನ್ನು ದೂರಪಡಿಸಿ, ನಿಮ್ಮನ್ನು ಸ್ವರ್ಗಕ್ಕೆ ಕಳಿಸುತ್ತೇನೆಂದು ಮರುಳುಗೊಳಿಸುತ್ತಿದ್ದನೇಕೆ? ದೇವರ ಹೆಸರಿನಲ್ಲಿ ಮಹಮ್ಮದ್ ಸಾಹೇಬರು ತನ್ನ ಪ್ರಯೋಜನವನ್ನು ಸಾಧಿಸಿಕೊಡಿರುವರೆಂಬುದು ಇಲ್ಲಿ ಗೊತ್ತಾಗುತ್ತದೆ. ||೬೪||

೬೫. ಇಚ್ಛೆಬಂದವನನ್ನು ಕ್ಷಮಿಸುತ್ತಾನೆ. ಇಚ್ಛೆಬಂದವನಿಗೆ ದುಃಖವನ್ನೀಯತ್ತಾನೆ. ಬೇರಾರಿಗೂ ಕೊಡದಿರುವುದನ್ನೆಲ್ಲಾ ನಿಮಗೆ ಕೊಟ್ಟಿದ್ದಾನೆ. [ಮುಂ. ೨। ಸಿ. ೬। ಸೂ. ೫। ಆ. ೧೮, ೨೦]

ಸಮೀಕ್ಷಕ—ಸೈತಾನನು ತಾನು ಇಚ್ಛಿಸಿದವನನ್ನು ಪಾಪಿಯನ್ನಾಗಿ ಮಾಡುವಂತೆಯೇ ಮುಸಲ್ಮಾನರ ದೇವರು ಸೈತಾನನ ಕೆಲಸ

ಮಾಡುತ್ತಿದ್ದಾನೆ. ಹೀಗಿರುವುದಾದರೆ ಸ್ವರ್ಗಕ್ಕೂ ನರಕಕ್ಕೂ ದೇವರು ಹೋಗದೇಕಾಗುತ್ತದೆ. ಏಕೆಂದರೆ ಅವನೂ ಪಾಪಪುಣ್ಯಗಳನ್ನು ಮಾಡುವವನಾದನಲ್ಲವೆ? ಜೀವನು ಪರಾಧೀನನಾಗಿರುತ್ತಾನೆ. ಸೇನಾಪತಿಯ ಅಧೀನವಿದ್ದು ಸೇನೆಯು ರಕ್ಷಣೆಯನ್ನು ಮಾಡುತ್ತದೆ. ಯಾರನ್ನಾದರೂ ಕೊಂದೂ ಹಾಕುತ್ತದೆ. ಅದರ ಹಿತಾಹಿತಗಳು ಸೇನಾಪತಿಗಳಿಗೇ ದೊರೆಯುತ್ತದೆಯೇ ಹೊರತು ಸೇನೆಗೆ ದೊರೆಯುವುದಿಲ್ಲ. ॥೬೫॥

೬೬. ದೇವರ ಆಜ್ಞೆಯನ್ನು ಪಾಲಿಸಿರಿ ಮತ್ತು ರಸೂಲನ ಆಜ್ಞೆಯನ್ನು ಪಾಲಿಸಿರಿ. [ಮುಂ. ೨। ಸಿ. ೭। ಸೂ. ೫। ೯೨]

ಸವಿಾಕ್ಷಕ—ನೋಡಿರಿ! ದೇವರೊಡನೆ ಇನ್ನೊಬ್ಬರು ಸೇರುವ ಮಾತಿದು. ಹೀಗಿದ್ದೂ ದೇವರನ್ನು "ಕೇವಲನು" ಎಂದು ಹೇಳುವುದು ವ್ಯರ್ಥವಾಯಿತು.

೬೭. ಹಿಂದೆ ಆದುದನ್ನು ದೇವರು ಕ್ಷಮಿಸಿದ್ದಾನೆ. ಇನ್ನು ಮಾಡುವವನ ಮುಯ್ಯನ್ನು ತೀರಿಸುತ್ತಾನೆ.

[ಮುಂ. ೨। ಸಿ. ೭। ಸೂ. ೫। ಆ. ೯೫]

ಸವಿಾಕ್ಷಕ—ಮಾಡಿದ ಪಾಪಗಳನ್ನು ಕ್ಷಮಿಸುವುದು ಪಾಪ ಮಾಡಲು ಆಜ್ಞೆಯನ್ನಿತ್ತು ಪಾಪವನ್ನು ಹೆಚ್ಚಿದಂತೆ ಎಂದು ತಿಳಿಯಬೇಕು. ಪಾಪವನ್ನು ಕ್ಷಮಿಸುವ ಮಾತು ಯಾವ ಪುಸ್ತಕದಲ್ಲಿದೆಯೋ ಅದು ಈಶ್ವರನಿರ್ಮಿತವೂ ಅಲ್ಲ; ಯಾವನಾದರೂ ವಿದ್ವಾಂಸನು ಬರೆದುದೂ ಅಲ್ಲ. ಮಾತ್ರವಲ್ಲ ಅದು ಪಾಪವನ್ನು ಹೆಚ್ಚಿಸುವಂತಹುದಾಗಿದೆ. ಮುಂದೆ ಬರುವ ಪಾಪಗಳನ್ನು ಬಿಡಿಸುವುದಕ್ಕೋಸ್ಕರ ಯಾವನನ್ನಾದರೂ ಪ್ರಾರ್ಥಿಸುವುದೂ, ಸ್ವಯಂ ಆ ಪಾಪವನ್ನು ಬಿಡಲು ಪುರುಷಾರ್ಥವನ್ನು ಮತ್ತು ಪಶ್ಚಾತ್ತಾಪವನ್ನು ಮಾಡುವುದೂ ಉಚಿತವಿರುತ್ತದೆ. ಅದೂ ಬರೇ ಪಶ್ಚಾತ್ತಾಪಮಾಡುತ್ತಿದ್ದು ಬಿಡದೇ ಹೋದರೆ ಏನೂ ಪ್ರಯೋಜನವಿರುವುದಿಲ್ಲ. ॥೬೭॥

೬೮. ದೇವರ ದ್ಯೂಲೆ ಸುಳ್ಳು ಅಪವಾದವನ್ನು ಹೊರಿಸಿ, ನನ್ನ ಮೇಲೆ ಪುಸ್ತಕವನ್ನಿಳಿಸಿದನು, ಆದರೆ ಅವನ ಮೇಲೆ ಇಳಿಸಲಿಲ್ಲವೆಂದೂ,

ದೇವರು ಇಳಿಸುವಂತೆ ನಾನೂ ಇಳಿಸುತ್ತೇನೆ ಎಂದೂ ಹೇಳುವವನಿಗಿಂತ ಹೆಚ್ಚಾದ ಪಾಪಿಯು ಯಾರಿರುವನು ?

[ಮಂ. ೨। ಸಿ ೭। ಸೂ ೬। ಆ ೯೩]

ಸಮಾಕ್ಷಕ—ತನಗೆ ದೇವರ ಕಡೆಯಿಂದ ಆಯತುಗಳು ಹೇಳಲ್ಪಡುತ್ತಿವೆಯೆಂದು ಹೇಳುತ್ತಿದ್ದಾಗ ಇನ್ನಾರೋ ಮಹಮ್ಮದ ಸಾಹೇಬರಂತೆಯೇ ನನಗೂ ಆಯತುಗಳು ಕೊಡಲ್ಪಡುತ್ತಿವೆ, ನನ್ನನ್ನು ಪೈಗಂಬರನೆಂದು ತಿಳಿಯಿರಿ, ಎಂದು ಲೀಲೆಗೈದಿರಬೇಕು. ಆಗ ಅವನನ್ನು ಪೈಗಂಬರತನದಿಂದ ದೂರಮಾಡಿ ತನ್ನ ಗೌರವವನ್ನು ಹೆಚ್ಚಿಸಿಕೊಳ್ಳುವುದಕ್ಕಾಗಿ ಮಹಮ್ಮದ ಸಾಹೇಬರು ಈ ಉಪಾಯ ಮಾಡಿರಬಹುದೆಂದು ಸಿದ್ಧವಾಗುತ್ತದೆ. ॥೬೮॥

೬೯—ನಿಜವಾಗಿ ನಾವು ನಿಮ್ಮನ್ನು ಂಟುಮಾಡಿದ್ದೇವೆ. ಮತ್ತು ನಿಮ್ಮ ರೂಪಗಳನ್ನು ಎರಕಹೊಯ್ದಿದ್ದೇವೆ. ಆನಂತರ ನಾವು ದೇವದೂತರಿಗೆ–ಆದಮನಿಗೆ ವಂದನೆಯನ್ನು ಮಾಡಿರಿ ಎಂದು ಹೇಳಿದೆವು. ಆಗ ಅವರು ವಂದನೆ ಮಾಡಿದರು. ಆದರೆ ಸೈತಾನನು ವಂದನೆ ಮಾಡುವವರಲ್ಲಿ ಸಮ್ಮಿಳಿತನಾಗಿರಲಿಲ್ಲ. ನಾನು ನಿನಗೆ ಆಜ್ಞೆಯನ್ನಿತ್ತ ಮೇಲೂ ನಿನ್ನನ್ನು ಯಾರುತಾನೆ ತಡೆದರು ? ನೀನು ವಂದನೆಮಾಡಲಿಲ್ಲವೇಕೆ ? ಎಂದು ಕೇಳಲಾಯಿತು. ಆದಕ್ಕೆ ಸೈತಾನನು–ನಾನು ಅವನಿಗಿಂತಲೂ ಶ್ರೇಷ್ಠನಾಗಿರುವೆನು. ಏಕೆಂದರೆ ನೀನು ನನ್ನನ್ನು ಬೆಂಕಿಯಿಂದಲೂ ಆವನನ್ನು ಮಣ್ಣಿನಿಂದಲೂ ನಿರ್ಮಾಣಮಾಡಿರುವೆ. ಎಂದು ಉತ್ತರವಿತ್ತನು. (ಆಗ ದೇವರು)–ಸಾಕುಮಾಡು, ಇಲ್ಲಿಂದ ಇಳಿದುಹೋಗು. ನೀನು ಅಭಿಮಾನಪಡಲು ನಿನಗಿದು ಯೋಗ್ಯವಾದ ಸ್ಥಾನವಲ್ಲ ಎಂದನು. ಸೈತಾನನು ಆಗ–ಸಮಾಧಿಗಳಿಂದ ಜನ ಎಬ್ಬಿಸುವವರೆಗಾದರೂ ಈ ಅಪ್ಪಣೆಯನ್ನು ಸಡಿಲಿಸು ಎಂದನು. ದೇವರು–ನಿಜವಾಗಿ ನೀನು ಅಪ್ಪಣೆಯನ್ನು ಸಡಿಲಿಸಲ್ಪಟ್ಟವರಲ್ಲಿರುವೆ ಎಂದನು. ಆಗ ಸೈತಾನನು–ನನ್ನಾಣೆ ನೀನು ನನ್ನನ್ನು ಪಥಭ್ರಷ್ಟನನ್ನಾಗಿ ಮಾಡಿರುವೆ. ಆ ಜನರಿಗಾಗಿ ನಾನು ನಿನ್ನ ಸರಿಯಾದ ಮಾರ್ಗದಲ್ಲಿ ಕೂತುಬಿಡುತ್ತೇನೆ. ಆವರಿಗೆ ಧನ್ಯವಾದ ಕೊಡುವವರು ನಿನಗೆ ಸಿಕಲಾರರು ಎಂದನು. ಆಗ ದೇವರು–ನೀನಿಲ್ಲಿಂದ ದುರವಸ್ಥೆಪಟ್ಟು

ಹೊರಟುಹೋಗು. ನಿನ್ನ ಪಕ್ಷವನು ಯಾರು ಅವಲಂಬಿಸುತ್ತಾರೋ ನಿಮ್ಮೆಲ್ಲರನ್ನು ನಾನು ನರಕದಲ್ಲಿ ತುಂಬಿಸುತ್ತೇನೆ, ಎಂದನು.

[ಮಂ ೨। ಸಿ ೮। ಸೂ ೭। ಆ ೧೧-೦೮]

ಸಮೀಕ್ಷಕ—ಮನಸ್ಸಿಟ್ಟು ಆಲಿಸಬೇಕು, ಈ ಸೈತನನ ಮತ್ತು ದೇವರ ಜಗಳವನ್ನು. ಒಬ್ಬ ಆಳಿನಂತಿರುವ ದೇವದೂತನೂ ಕೂಡ ದೇವರಿಗೆ ಹೆದರಲಿಲ್ಲ. ದೇವರು ಅವನ ಆತ್ಮವನ್ನು ಪವಿತ್ರಗೊಳಿಸಲೂ ಸಮರ್ಥನಾಗಲಿಲ್ಲ. ಅನಂತರ ಜನರನ್ನೆಲ್ಲ ಪಾಪಿಗಳನ್ನಾಗಿ ಮಾಡಿ ವಿದ್ರೋಹವನ್ನೇ ಎಬ್ಬಿಸುತ್ತಿರುವ ವಿದ್ರೋಹಿಯನ್ನು ದೇವರು ಬಿಟ್ಟು ಬಿಟ್ಟನು. ದೇವರು ಮಾಡಿದ ದೊಡ್ಡ ತಪ್ಪಿದು. ಎಲ್ಲರನ್ನೂ ಮರುಳು ಗೊಳಿಸುವವನು ಸೈತಾನನಾಗಿದ್ದು ಆ ಸೈತಾನನನ್ನು ಮರುಳುಗೊಳಿ ಸುವವನು ದೇವರಾಗಿರುವುದರಿಂದ ಅವನು ಸೈತಾನನಿಗೂ ಸೈತಾನ ನಾಗಿದ್ದಾನೆ. ಏಕೆಂದರೆ ಸೈತಾನನೇ—ನೀನು ನನ್ನನ್ನು ಮೋಸಗೊಳಿ ಸಿದೆಯೆಂದು ಪ್ರತ್ಯಕ್ಷವಾಗಿ ಹೇಳುತ್ತಾನೆ. ಇದರಿಂದ ದೇವರಲ್ಲಿ ಪವಿತ್ರ ಭಾವವೂ ಕಂಡುಬರುವುದಿಲ್ಲ. ಸಕಲ ಅಹಿತಗಳ ಮೂಲಕಾರಣನು ಅವನೇ ಆಗಿಬಿಡುತ್ತಾನೆ. ಇಂತಹವನು ಮುಸಲ್ಮಾನರ ದೇವರಾಗಿರ ಬಲ್ಲನೇ ಹೊರತು ಇತರ ಶ್ರೇಷ್ಠರಾದ ವಿದ್ವಾಂಸರ ದೇವರಾಗಿರ ಲಾರನು. ದೇವದೂತರೊಡನೆ ಅವನು ಮನುಷ್ಯನೋಪಾದಿಯಲ್ಲಿ ಮಾತನಾಡುವುದರಿಂದ ಮುಸಲ್ಮಾನರ ದೇವರು ದೇಹಧಾರಿಯೂ, ಅಲ್ಪಜ್ಞನೂ, ನ್ಯಾಯರಹಿತನೂ ಆಗಿರುತ್ತಾನೆ. ಆದುದರಿಂದಲೇ ವಿದ್ವಾಂಸರು ಇಸ್ಲಾಂ ಮತವನ್ನು ಮೆಚ್ಚುವುದಿಲ್ಲ. ॥೭೯॥

೭೦. ನಿಜವಾಗಿಯೂ ದೇವರು ನಿಮ್ಮ ಸ್ವಾಮಿಯು. ಅವನು ಪೃಥ್ವಿಯನ್ನೂ ಆಕಾಶವನ್ನೂ ಆರು ದಿವಸಗಳಲ್ಲಿ ನಿರ್ಮಿಸಿದನು. ಮತ್ತು ಉಚ್ಚಾಕಾಶದಲ್ಲಿ ಕುಳಿತುಕೊಂಡನು. ದೈನ್ಯದಿಂದ ನಿಮ್ಮ ಒಡೆಯನನ್ನು ಕೂಗಿರಿ. [ಮಂ. ೨। ಸ. ೮. ಸೂ. ೭। ಆ. ೫೪-೫೫]

ಸಮೀಕ್ಷಕ—ಆರು ದಿವಸಗಳಲ್ಲಿ ಜಗತ್ತನ್ನು ನಿರ್ಮಿಸುವ ಮತ್ತು ಮೇಲಿನ ಆಕಾಶದಲ್ಲಿ ಸಿಂಹಾಸನವನ್ನಡರುವ ಇವನು ಎಂದಿಗಾದರೂ ಸರ್ವಶಕ್ತಿವಂತನೂ ವ್ಯಾಪಕನೂ ಆಗಿರಬಲ್ಲನೆ? ಈ ಗುಣಗ

ಳಲ್ಲದಿರುವುದರಿಂದ ಅವನನ್ನು ದೇವರೆಂದೂ ಹೇಳಲು ಸಾಧ್ಯವಿರುವುದಿಲ್ಲ. ಕೂಗುವುದರಿಂದಲೇ ಅವನು ಕೇಳುವುದಾದರೆ ಅವನು ಕಿವುಡನಾಗಿರುವನೆ? ಈ ಎಲ್ಲ ಮಾತುಗಳು ಅನೀಶ್ವರೀಯವಾಗಿವೆ. ಆದುದರಿಂದ ಕುರಾನು ಈಶ್ವರನಿರ್ಮಿತವಾಗಿರಲಾರದು. ಆರು ದಿವಸಗಳಲ್ಲಿ ಸೃಷ್ಟಿಯನ್ನು ನಿರ್ಮಿಸಿ ಏಳನೆಯ ದಿವಸದಲ್ಲಿ ಉಚ್ಚಾಕಾಶದಲ್ಲಿ ವಿಶ್ರಾಂತಿಗೈಯಲು ಅವನಿಗೆ ದಣಿವೂ ಆಗಿರಬಹುದೆ? ಈಗ ಅವನು ನಿದ್ರಿಸುತ್ತಿದ್ದಾನೆಯೇ? ಅಥವಾ ಎಚ್ಚರವಾಗಿರುವನೆ? ಎಚ್ಚರವಾಗಿರುವನಾದರೆ ಕೆಲಸಮಾಡುತ್ತಿದ್ದಾನೆಯೆ? ಅಥವಾ ಆಲೆಯುತ್ತಿದ್ದು ಆನಂದ ಮಾಡುತ್ತಿರುವನೆ? ||೭೦||

೭೧. ಜಗಳವಾಡುತ್ತಾ ಪೃಥ್ವಿಯ ಮೇಲೆ ತಿರುಗಾಡಬೇಡಿ.
[ಮುಂ. ೨। ಸಿ. ೮। ಸೂ. ೭। ಆ. ೭೪]

ಸಮಿಾಕ್ಷಕ—ಈ ಮಾತೇನೋ ಒಳ್ಳೆಯದೇ. ಆದರೆ ಇತರ ಕಡೆಗಳಲ್ಲಿ ಇದಕ್ಕೆ ವಿಪರೀತವಾಗಿ ಧರ್ಮಯುದ್ಧ ಮಾಡಬೇಕು, ಕಾಫಿರರನ್ನು ಸಾಯಿಸಬೇಕು ಎಂದು ಮೊದಲಾಗಿ ಬರೆದಿರುವರು. ಇದು ಪೂರ್ವಾಪರ ವಿರುದ್ಧವಹುದೇ ಅಲ್ಲವೆ? ಎಂಬುದನ್ನು ಹೇಳಿರಿ. ಮಹಮ್ಮದ್ ಸಾಹೇಬರು ನಿರ್ಬಲರಾದಾಗ ಈ ಉಪಾಯವನ್ನು ಹೂಡಿರಬಹುದೆಂದೂ, ಸಬಲರಾಗಿದ್ದಾಗ ಜಗಳ ಮಾಡುತ್ತಿದ್ದಿರಬಹುದೆಂದೂ ಇದರಿಂದ ತಿಳಿದುಬರುತ್ತದೆ. ಈ ಮಾತುಗಳು ಅನ್ಯೋನ್ಯ ವಿರುದ್ಧವಾಗಿರುವುದರಿಂದ ಎರಡೂ ಸತ್ಯವಾದುವಲ್ಲ. ||೭೧||

೭೨. ಒಂದೇ ಸಲ ಅವನು ತನ್ನ ಕೈಯಲ್ಲಿದ್ದ ದೊಣ್ಣೆಯನ್ನು ಕೆಳಗೆ ಹಾಕಿದನು ಆಗ ಅದು ಪ್ರತ್ಯಕ್ಷವಾದೊಂದು ಅಜಗರ ಸರ್ಪವಾಯಿತು. [ಮುಂ. ೨। ಸಿ. ೯। ಸೂ. ೭। ಆ. ೧೦೭]

ಸಮಿಾಕ್ಷಕ—ಇದನ್ನು ಬರೆದುದರಿಂದ ಇಂತಹ ಮಾತುಗಳನ್ನು ದೇವರೂ ಮಹಮ್ಮದ ಸಾಹೇಬರೂ ನಂಬುತ್ತಿದ್ದರೆಂದು ತಿಳಿದುಬರುತ್ತದೆ. ಹಾಗಿರುವುದಾದರೆ ಇವರಿಬ್ಬರೂ ವಿದ್ವಾಂಸರಾಗಿರಲಿಲ್ಲ. ಕಣ್ಣಿನಿಂದ ನೋಡುವುದನ್ನು ಮತ್ತು ಕಿವಿಯಿಂದ ಕೇಳುವುದನ್ನು

ಯಾರಾದರೂ ಅನ್ಯಥಾ ಮಾಡಲಾರರು. ಅದುದರಿಂದ ಇವೆಲ್ಲ ಇಂದ್ರ ಜಾಲದ ಮಾತುಗಳಾಗಿರುತ್ತವೆ. ॥೭೨॥

೭೩. ನಾವು ಅವರಲ್ಲಿಗೆ ಜಡಿಮಳೆಯನ್ನೂ, ಬಿರುಗಾಳಿಯನ್ನೂ ಮಿಡಿತೆಗಳನ್ನೂ, ಹೇನುಗಳನ್ನೂ, ಕಪ್ಪೆಗಳನ್ನೂ, ರಕ್ತವನ್ನೂ ಕಳುಹಿಸಿದೆವು. ನಾವು ಅವರ ಮುಯ್ಯನ್ನು ತೀರಿಸಲು ನದಿಯಲ್ಲಿ ಮುಳುಗಿಸಿದೆವು. ನಾವು ಇಸ್ರಾಯೇಲನಿಂದ ಹುಟ್ಟಿದವರನ್ನು ನದಿಯ ದಡಮುಟ್ಟಿಸಿದೆವು. ನಿಜವಾಗಿ ಅವರು ಯಾವುದರಲ್ಲಿರುವರೋ ಅದು ಸುಳ್ಳುಧರ್ಮವು. ಅವರ ಕೆಲಸಗಳೂ ಸುಳ್ಳಾಗಿರುತ್ತವೆ.

[ಮಂ. ೨। ಸಿ. ೯ ಸೂ. ೭। ೧೩೩, ೧೩೬, ೧೩೮, ೧೩೯]

ಸಮೀಕ್ಷಕ—ನೋಡಿರಿ! ಯಾವನಾದರೂ ಪಾಷಂಡಿಯು ನಿಮ್ಮನ್ನು ಸಾಯಿಸುವುದಕ್ಕಾಗಿ ಸರ್ಪಗಳನ್ನು ಕಳಿಸುತ್ತೇವೆ ಎಂದು ಯಾರನ್ನಾದರೂ ಹೆದರಿಸುವಂತಹ ಮಾತಿದು. ಒಂದು ಜಾತಿಯನ್ನು ದಡಕ್ಕೆ ಮುಟ್ಟಿಸಿ ಇನ್ನೊಂದನ್ನು ಮುಳುಗಿಸುವಷ್ಟು ಪಕ್ಷಪಾತಿಯಾದ ದೇವರು ಅಧರ್ಮಿಯಲ್ಲವೇಕೆ? ಸಾವಿರಾರು ಅಲ್ಲ ಕೋಟ್ಯಂತರ ಜನರು ಅನುಸರಿಸುತ್ತಿರುವ ಇತರ ಮತವು ಸುಳ್ಳೆಂದೂ ತನ್ನ ಮತವು ಸತ್ಯವೆಂದೂ ಹೇಳುವ ಮತಕ್ಕಿಂತಲೂ ಹೆಚ್ಚಾದ ಸುಳ್ಳು ಮತವು ಬೇರಾವುದಿದೆ? ಏಕೆಂದರೆ ಯಾವ ಮತದಲ್ಲಿಯೂ ಎಲ್ಲಾ ಜನರೂ ಒಳ್ಳೆಯವರೇ ಆಗಲಿ ಅಥವಾ ಕೆಟ್ಟವರೇ ಆಗಲಿ ಇರುವುದಿಲ್ಲ. ಏಕಪಕ್ಷೀಯವಾದವನ್ನು ಹಿಡಿಯುವುದು ಮಹಾ ಮೂರ್ಖರ ಕೆಲಸವಾಗಿರುತ್ತದೆ. ಅವರದಾದ ತೌರೇತ್ ಜಬೂರ್ ಮತವು ಸುಳ್ಳಾಯಿತೇನು? ಅಥವಾ ಸುಳ್ಳೆಂದು ಹೇಳಲ್ಪಟ್ಟ ಮತವು ಬೇರಾವುದಾದರೂ ಇತ್ತೊ? ಆ ಬೇರೆ ಮತವಿತ್ತಾದರೆ ಕುರಾನಿನಲ್ಲಿ ಅದಕ್ಕೆ ಯಾವ ಹೆಸರನ್ನು ಕೊಟ್ಟಿದೆಯೆಂದು ತಿಳಿಸಿರಿ. ॥೭೩॥

೭೪. ಅವನ ಸ್ವಾಮಿಯು ಪರ್ವತದ ಕಡೆಯಿಂದ ಪ್ರಕಾಶ ಪಡಿಸಿದಾಗ ಅದನ್ನು ಅಣುಅಣುವಾಗಿ ಮಾಡಿದನು. ಆಗ ಮೂಸಾ ಮೂರ್ಛೆಬಿದ್ದು ಬಿಟ್ಟನು. [ಮಂ. ೨। ಸಿ. ೯। ಸೂ. ೭। ಆ. ೧೪೩]

ಸಮೀಕ್ಷಕ—ಕಣ್ಣಿಗೆ ಕಾಣಿಸುವವನು ವ್ಯಾಪಕನಾಗಲಾರನು.

ಇಂತಹ ಚಮತ್ಕಾರಗಳನ್ನು ದೇವರು ಮಾಡುತ್ತಿದ್ದರೆ ಈಗೇಕೆ ಮಾಡುವುದಿಲ್ಲ ಈ ಮಾತು ಸರ್ವಥಾ ವಿಪರೀತವಾಗಿರುವುದರಿಂದ ನಂಬಲರ್ಹವಾದುದಲ್ಲ. ||೭೪||

೭೫. ತನ್ನ ಸ್ವಾಮಿಯನ್ನು ದೈನ್ಯದಿಂದಲೂ ಭಯದಿಂದಲೂ ಮನಸ್ಸಿನಲ್ಲಿ ಕಿರುದನಿಯಿಂದ ಸಾಯಂಪ್ರಾತಃ ಸ್ಮರಿಸಿಕೋ.

[ಮುಂ. ೨। ಸಿ. ೯। ಸೂ. ೭। ಆ. ೨೦೪]

ಸವಿಾಕ್ಷಕ—ಕುರಾನಿನಲ್ಲಿ ಕೆಲವು ಕಡೆ ಪರಮಾತ್ಮನನ್ನು ಗಟ್ಟಿಯಾದ ದನಿಯಲ್ಲಿ ಸ್ಮರಿಸಬೇಕೆಂದೂ ಕೆಲವು ಕಡೆ ಕಿರುದನಿಯಿಂದ ಸ್ಮರಿಸಬೇಕೆಂದೂ ಬರೆದಿದೆ. ಈಗ ಯಾವ ಮಾತು ಸತ್ಯ? ಯಾವುದು ಸುಳ್ಳು ಎಂಬುದನ್ನು ನೀವೇ ಹೇಳಿರಿ. ಒಂದು ಇನ್ನೊಂದನ್ನು ವಿರೋಧಿಸುವ ಮಾತು ಪ್ರಮತ್ತಗೀತದಂತಿರುತ್ತದೆ. ಭ್ರಮೆಯಿಂದ ಯಾವುದಾದರೂ ವಿರುದ್ಧವಾದ ಮಾತು ಹೊರಟರೆ ಅದನ್ನು ಒಪ್ಪಿಕೊಳ್ಳುವುದರಲ್ಲಿ ಯಾವ ಕೇಡೂ ಇರುವುದಿಲ್ಲ. ||೭೫||

೭೬. ಸೂರೆಗೊಂಡುದರ ಬಗ್ಗೆ ನಿಮ್ಮನ್ನು ಕೇಳುತ್ತಾರೆ. ಆ ವಸ್ತುಗಳು ದೇವರದೂ ರಸೂಲರದೂ ಆಗಿವೆ. ದೇವರಿಗೆ ಹೆದರಿರಿ. ಎಂದು ಹೇಳಿರಿ. [ಮುಂ. ೨! ಸಿ. ೯। ಸೂ. ೮। ಆ. ೧]

ಸವಿಾಕ್ಷಕ—ಡಕಾಯಿತರ ಕೆಲಸಮಾಡುತ್ತಾ ಮಾಡಿಸುತ್ತಾ ಇವರು ದೇವರೂ, ರಸೂಲರೂ, ವಿಶ್ವಾಸಪಾತ್ರರೂ ಆಗಿರುವುದು ಆಶ್ಚರ್ಯದ ಸಂಗತಿಯಾಗಿದೆ. ದೇವರ ಭಯತೋರಿಸಿ ಲೂಟಿಯೇ ಮೊದಲಾದ ದುಷ್ಕರ್ಮಗಳನ್ನು ಮಾಡುತ್ತಾ ನಮ್ಮ ಮತವೇ ಉತ್ತಮವಾದುದು ಎಂದು ಹೇಳಲು ಲಜ್ಜೆಯೂ ಆಗುವುದಿಲ್ಲ. ದುರಾಗ್ರಹವನ್ನು ಬಿಟ್ಟು ಸತ್ಯವಾದ ವೇದಮತವನ್ನು ಸ್ವೀಕರಿಸದಿರುವುದಕ್ಕಿಂತ ಹೆಚ್ಚಾದ ಕೆಡುಕು ಬೇರಾವುದಿದೆ? ||೭೬||

೭೭. ಕಾಫಿರರ ಬುಡವನ್ನು ಕತ್ತರಿಸಿ. ನಿಮ್ಮ ಹಿಂದೆಯೇ ಬರುತ್ತಿರುವ ಸಾವಿರ ದೇವದೂತರನ್ನೊಳಗೊಂಡ ಸಹಾಯವನ್ನು ನಾನು ನಿಮಗೆ ಕೊಡುತ್ತೇನೆ. ಕಾಫಿರರ ಮನಸ್ಸಿನಲ್ಲಿ ಅಗತ್ಯವಾಗಿ

ಭಯ ಹುಟ್ಟಿಸುವೆನು. ಹೊಡೆಯಿರಿ, ಅವರ ಕುತ್ತಿಗೆಯ ಮೇಲೆ ಮತ್ತು ಪ್ರತಿಯೊಂದು ಸಂಧಿ ಸಂಧಿಗಳ ಮೇಲೆ.

[ಮಂ ೨। ಸಿ ೯। ಸೂ ೪। ಆ ೭, ೯, ೧೨]

ಸಮಾಕ್ಷೇಪಕ—ಭೀಷ್ಮ! ದೇವರೂ ಪೈಗಂಬರರೂ ಎಂತಹ ದಯಾಹೀನರಾಗಿರುವರು? ಮುಸಲ್ಮಾನಮತದವರಿಗಿಂತ ಬೇರಾಗಿರುವ ಕಾಫಿರರ ಬುಡವನ್ನು ಕತ್ತರಿಸುವ ಮತ್ತು ಅವರ ಕುತ್ತಿಗೆಯ ಮೇಲೆ ಹೊಡೆಯಿಲು, ಕೈಕಾಲುಗಳ ಸಂಧಿಗಳನ್ನು ಮುರಿಯಲು ಆಜ್ಞೆಯನ್ನೂ ಸಹಾಯವನ್ನೂ, ಸಮ್ಮತಿಯನ್ನೂ ಕೊಡುತ್ತಿರುವ ದೇವರು ಲಂಕೇಶನಾದ ರಾವಣನಿಗಿಂತ ಸ್ವಲ್ಪವಾದರೂ ಕಡಿಮೆಯಿರುವನೆ? ಈ ಎಲ್ಲ ಮೋಸವು ಕುರಾನಿನ ಲೇಖನದೇ ಹೊರತು ದೇವರದಲ್ಲ. ದೇವರ ದಾಗಿದ್ದರೆ ಅಂತಹ ದೇವರು ನಮ್ಮಿಂದಲೂ ನಾವು ಅವನಿಂದಲೂ ದೂರವಿರಬೇಕು. ॥೭೭॥

೭೮. ಅಲ್ಲಾಹ್‌ನು ಮುಸಲ್ಮಾನರೊಂದಿಗಿದ್ದಾನೆ. ಹೇ ಜನರೆ! ನಿಮಗೆ ವಿಶ್ವಾಸವಿದ್ದರೆ ದೇವರಿಗಾಗಿಯೂ ರಸೂಲರಿಗಾಗಿಯೂ ಕರೆಯಲು ಒಪ್ಪಿಕೊಳ್ಳಿರಿ. ಹೇ ಜನರೆ! ನೀವು ವಿಶ್ವಾಸವುಳ್ಳವರಾಗಿದ್ದರೆ ದೇವರ ಮತ್ತು ರಸೂಲರ ವಸ್ತುಗಳನ್ನು ಕದಿಯಬೇಡಿರಿ. ತಮಗಾಗಿಟ್ಟ ವಸ್ತುಗಳನ್ನು ಕದಿಯಬೇಡಿರಿ. ದೇವರು ಮೋಸ ಮಾಡುತ್ತಿದ್ದನು. ಮೋಸಮಾಡುವವರಿಗೆ ದೇವರು ಹಿತವನ್ನುಂಟುಮಾಡುತ್ತಾನೆ. [ಮಂ ೨। ಸಿ ೯। ಸೂ ೮। ೧೯, ೨೪, ೨೭, ೩೦]

ಸಮಾಕ್ಷೇಪಕ—ದೇವರು ಮುಸಲ್ಮಾರ ಪಕ್ಷಪಾತಿಯಾಗಿರುವನೊ? ಹಾಗಿದ್ದರೆ ಅವನು ಅಧರ್ಮವನ್ನೆಸಗುತ್ತಿದ್ದಾನೆ. ದೇವರಾದರೊ ಸಮಸ್ತ ಜಗತ್ತಿಗೆ ಒಡೆಯನಾಗಿರುವನು. ಕರೆಯದಿದ್ದರೆ ಅವನಿಗೆ ಕೇಳಿಸುವುದಿಲ್ಲವೊ? ಅವನು ಕಿವುಡನೇನು? ಅವನೊಂದಿಗೆ ರಸೂಲನನ್ನು ಸೇರಿಸಿಬಿಡುವುದು ಬಹಳ ಅನ್ಯಾಯವಲ್ಲವೆ? ಅಲ್ಲಾಹ್‌ನ ವಸ್ತುಗಳನ್ನು ಕದಿಯಲು ಅವನು ಖಜಾನೆ ತುಂಬಿಸಿಟ್ಟಿರುವುದಾದರೂ ಎಲ್ಲಿ? ರಸೂಲನ ಮತ್ತು ತನ್ನ ಮುಡಿಪಾಗಿಟ್ಟಿರುವ ಹಣವನ್ನು ಬಿಟ್ಟು ಬೇರೆಲ್ಲರ ಹಣವನ್ನು ಕದಿಯಬಹುದೆ? ಇಂತಹ ಉಪದೇಶ

ವನ್ನು ಅವಿದ್ವಾಂಸರೂ ಅಧರ್ಮಿಗಳೂ ಆದವರು ಕೊಡಬಲ್ಲರು. ಸ್ವಯಂ ಮೋಸಮಾಡುತ್ತಿದ್ದು ಮೋಸ ಮಾಡುವವರ ಸಂಗಡಿಗನಾಗಿರುವ ದೇವರು ಕಪಟ, ಛಲವಾದಿ ಮತ್ತು ಅಧರ್ಮಿಯೇಕಲ್ಲ? ಆದುದರಿಂದ ಈ ಕುರಾನು ದೇವರು ಕೊಟ್ಟುದಲ್ಲ. ಯಾರೋ ಛಲ, ಕಪಟವುಳ್ಳವನು ಬರೆದಿರಬಹುದು. ಇಲ್ಲದಿದ್ದರೆ ಇಂತಹ ಅಸಂಗತವಾದ ಮಾತುಗಳೇಕೆ ಬರೆಯಲ್ಪಡುತ್ತಿದ್ದವು. ॥೭೮॥

೭೯. ಅಲ್ಲಾಹನಿಗಾಗಿ, ಕಾಫಿರರ ಬಲ ಉಳಿಯದವರೆಗೂ ಮತ್ತು ಎಲ್ಲರೂ ಮುಸಲ್ಮಾನರಾಗುವವರೆಗೂ ಅವರೊಂದಿಗೆ ಹೋರಾಡಿರಿ. ಯಾವ ವಸ್ತುವಿನಿಂದಾದರೂ ನೀವು ಲೂಟಿ ಮಾಡಿದುದರಲ್ಲಿ ಐದನೆಯ ಒಂದಂಶ ಅಲ್ಲಾಹನಿಗಾಗಿ ಮತ್ತು ರಸೂಲನಿಗಾಗಿ ಎಂದು ನೀವು ತಿಳಿಯಿರಿ. [ಮುಂ. ೨। ಸಿ. ೯। ಸೂ. ೮। ಆ. ೩೯, ೪೧]

ಸಮೀಕ್ಷಕ—ಮುಸಲ್ಮಾನರ ದೇವರ ಹೊರತು ಬೇರಾವನು ಈರೀತಿ ಅನ್ಯಾಯದಿಂದ ಯುದ್ಧಮಾಡಿಸಿ ಶಾಂತಿಭಂಗ ಮಾಡುವನು? ಈಗ ಇವರ ಮತವನ್ನು ನೋಡಿರಿ! ದೇವರು ಮತ್ತು ರಸೂಲರಿಗಾಗಿ ಜಗತ್ತೆಲ್ಲವನ್ನು ಸೂರೆಗೊಳ್ಳುವುದು ಮತ್ತು ಸೂರೆಗೊಳಿಸುವುದು ಡಕಾಯಿತರ ಕೆಲಸವಲ್ಲವೇನು? ಆ ಸೂರೆಗೊಂಡ ವಸ್ತುವಿನಲ್ಲಿ ದೇವರು ಪಾಲುಗಾರನಾಗುವುದು ಅವನೂ ಡಕಾಯಿತನಾಗುವಂತಿದೆ. ಇಂತಹ ಡಕಾಯಿತರ ಮೇಲೆ ಪಕ್ಷಪಾತಮಾಡಿ ದೇವರು ತನ್ನ ದೇವತ್ವಕ್ಕೆ ಕಳಂಕವನ್ನು ತಂದೊಡ್ಡುತ್ತಿದ್ದಾನೆ. ಇಂತಹ ಪುಸ್ತಕ, ಇಂತಹ ದೇವರು ಮತ್ತು ಇಂತಹ ಪೈಗಂಬರರು ಜಗತ್ತಿನಲ್ಲಿ ಜಗಳವನ್ನು ತಂದೊಡ್ಡಿ ಶಾಂತಿಭಂಗವನ್ನು ಮಾಡಿ, ಮನುಷ್ಯರಿಗೆ ದುಃಖವನ್ನುಣಿಸುವುದಕ್ಕೆ ಎಲ್ಲಿಂದ ಬಂದರು? ಎಂಬುದೇ ಆಶ್ಚರ್ಯದ ಸಂಗತಿಯಾಗಿದೆ. ಇಂತಿಂತಹ ಮತಗಳು ಜಗತ್ತಿನಲ್ಲಿ ಹರಡದಿರುತ್ತಿದ್ದರೆ ಎಲ್ಲಾ ಕಡೆಗಳಲ್ಲಿ ಆನಂದವು ತುಂಬಿತುಳುಕಾಡುತ್ತಿತ್ತು. ॥೭೯॥

೮೦. ಎಂದಾದರೂ ದೇವದೂತರು ತಮ್ಮ ಹಿಡಿತದಲ್ಲಿ ಕಾಫಿರರನ್ನು ಕರೆದುಕೊಂಡು, ಅವರ ಮುಖಗಳ ಮೇಲೆ ಮತ್ತು ಬೆನ್ನುಗಳ ಮೇಲೆಯೂ ಹೊಡೆಯುತ್ತಾ, ಬೇಯುವ ಶಿಕ್ಷೆಯ ರುಚಿಯನ್ನು ನೋಡಿರಿ—ಎಂದು ಹೇಳುತ್ತಾ ಹೋಗುವುದನ್ನು ನೀನು

ನೋಡಿದ್ದೀಯೊ? ನಾವು ಅವರ ಪಾಪಗಳಿಂದ ಅವರನ್ನು ಧ್ವಂಸಮಾಡಿದೆವು ಮತ್ತು ನಾವು ಫೆರೋವನ ರಾಷ್ಟ್ರವನ್ನು ಮುಳುಗಿಸಿದೆವು. ಮತ್ತು ಅವರಿಗೆ ವಿರುದ್ಧವಾಗಿ ನಿಮಗೆ ಸಾಧ್ಯವಾದ ಬಲವನ್ನೆಲ್ಲಾ ಸಿದ್ಧಪಡಿಸಿರಿ. [ಮಂ. ೪। ಸಿ. ೨। ಸೂ. ೪। ಆ. ೫೦-೫೪-೬೦]

ಸಮಾಕ್ಷಕ—ಏನ್ರೀ! ಈಗ ರಷ್ಯವು ರೋಮ್ ದೇಶವನ್ನು ಇಂಗ್ಲೆಂಡು ಐಗುಪ್ತದೇಶವನ್ನು ದುರ್ಬಲೆಗೀಡುಮಾಡಿದಾಗ ದೇವದೂತರು ಎಲ್ಲಿ ನಿದ್ರಿಸಿಕೊಂಡಿದ್ದರು. ತನ್ನ ಸೇವಕರು ಶತ್ರುಗಳನ್ನು ಮೊದಲಿನ ಕಾಲದಲ್ಲಿ ದೇವರು ಕೊಲ್ಲುತ್ತಿದ್ದುದು ಅಥವಾ ಮುಳುಗಿಸುತ್ತಿದ್ದುದು ನಿಜವಾಗಿದ್ದರೆ ಈಗಿನ ಕಾಲದಲ್ಲಿಯೂ ಹಾಗೆ ಮಾಡಲಿ ಈ ಕಾಲದಲ್ಲಿ ಹಾಗಾಗುತ್ತಿಲ್ಲವಾದುದರಿಂದ ಈ ಮಾತು ನಂಬಲರ್ಹವಾದುದಲ್ಲ. ಈಗ ನೋಡಿ, ನೀವು ಏನು ಮಾಡಬಲ್ಲರೊ ಆ ಎಲ್ಲ ದುಃಖದಾಯಕಕಾರ್ಯಗಳನ್ನು ಇತರ ಮತದವರ ಮೇಲೆ ಮಾಡಿರಿ ಎಂಬುದು ಎಷ್ಟೊಂದು ದುಷ್ಟ ಆಜ್ಞೆಯು? ಇದು ವಿದ್ವಾಂಸನೂ ಧಾರ್ಮಿಕನೂ ದಯಾಳುವೂ ಆಗಿರುವವನ ಆಜ್ಞೆಯಾಗಿರಲಾರದು. ಪುನಃ ದೇವರು ದಯಾಳುವೂ ನ್ಯಾಯಕಾರಿಯೂ ಆಗಿರುವನೆಂದು ಬರೆಯುತ್ತಾರೆ. ಇಂತಹ ಮಾತುಗಳಿಂದ ನ್ಯಾಯ, ದಯೆ ಮೊದಲಾದ ಸದ್ಗುಣಗಳು ಮುಸಲ್ಮಾನರ ದೇವರಿಗಿಂತ ಎಷ್ಟೋ ದೂರದಲ್ಲಿ ವಾಸಿಸುತ್ತವೆಂದು ಸಿದ್ಧವಾಗುತ್ತದೆ. ॥೬೦॥

೯೧. ಹೇ ದೇವದೂತನೇ! ನಿನಗೂ ಮತ್ತು ನಿನ್ನ ಹಿಂಬಾಲಕರಾದ ಮುಸಲ್ಮಾನರಿಗೂ ಅಲ್ಲಾಹನು ಸಾಕಾಗಿದ್ದಾನೆ. ಹೇ ದೇವದೂತನೇ! ಮುಸಲ್ಮಾನರನ್ನು ಕಾದಾಟಕ್ಕೆ ಒಪ್ಪಿಸು. ನಿಮ್ಮಲ್ಲಿ ಆತ್ಮವಿಶ್ವಾಸಿಗಳಾದ ಇಪ್ಪತ್ತು ಮಂದಿಗಳಿದ್ದಲ್ಲಿ ಅವರು ಇನ್ನೂರು ಮಂದಿಗಳನ್ನು ಸೋಲಿಸಬಲ್ಲರು. ನೀವು ಸೂರೆಮಾಡಿದುದರಲ್ಲಿ ನ್ಯಾಯವೂ, ಪವಿತ್ರವೂ ಆದುದನ್ನು ಭುಂಜಿಸಿರಿ ಮತ್ತು ದೇವರಿಗೆ ಹೆದರಿರಿ. ಅವನು ಕ್ಷಮಾಶೀಲನೂ, ದಯಾಳುವೂ ಆಗಿದ್ದಾನೆ.

[ಮಂ. ೨, ಸಿ. ೧೦, ಸೂ. ೮, ಆ. ೬೪, ೬೫, ೬೯]

ಸಮಾಕ್ಷಕ—ತನ್ನ ಪಕ್ಷವನ್ನವಲಂಬಿಸಿ ಅನ್ಯಾಯಮಾಡಿದರೂ ಸಹ ಅವನ ಪಕ್ಷವನ್ನೇ ಹಿಡಿದು ಅವನಿಗೆ ಲಾಭಹೊಂದಿಸುವುದು

ಯಾವ ನ್ಯಾಯದ, ವಿದ್ವತ್ತೆಯ ಮತ್ತು ಧರ್ಮದ ಮಾತು ? ಪ್ರಜೆಗಳ ನೆಮ್ಮದಿಯನ್ನು ಭಂಗಪಡಿಸಿ ಯುದ್ಧ ಮಾಡುವವನೂ ಮಾಡಿಸುವವನೂ ಸೂರೆಗೊಂಡ ಪದಾರ್ಥಗಳನ್ನು ಪವಿತ್ರವೆನ್ನುವವನೂ ಆಗಿರುವವನನ್ನು ಕ್ಷಮಾವಂತನೆಂದೂ ದಯಾಳುವೆಂದೂ ಬರೆಯುವುದು ದೇವರದ್ದೇನು, ಒಬ್ಬ ಒಳ್ಳೇ ಮನುಷ್ಯನ ಕಾರ್ಯವೂ ಆಗಿರಲಾರದು. ಇಂತಹ ಎಲ್ಲ ಮಾತುಗಳಿಂದ ಎಂದಿಗೂ ಕುರಾನು ಈಶ್ವರವಾಕ್ಯವೆನಿಸಲಾರದು ॥೮೧॥

೮೨. ಅವರು ಸದಾ ಅದರಲ್ಲಿಯೇ ಇರುವರು. ಅಲ್ಲಾಹನು ಅದರ ಬಳಿ ಇದ್ದಾನೆ, ಮಹಾಕಲ್ಯಾಣ. ಇಸ್ಲಾಮಿನ ಮೇಲೆ ವಿಶ್ವಾಸ ಹೊತ್ತ ಜನರೇ ! ಕಿಂವದಂತಿಗೆ ನಂಬಿಕೆಗಿಂತ ಹೆಚ್ಚು ಬೆಲೆ ಕೊಡುವ ನಿಮ್ಮ ಸಹೋದರರ ಮತ್ತು ತಂದೆಗಳ ಸಂಗಡ ಸ್ನೇಹದಿಂದಿರಬೇಡಿ. ಅನಂತರ ಅಲ್ಲಾಹನು ತನ್ನ ಪೈಗಂಬರರ ಮೇಲೂ, ಮುಸಲ್ಮಾನರಿಗೂ ಭರವಸೆಯನ್ನು ಕೊಟ್ಟನು ಮತ್ತು ಸೈನ್ಯಗಳನ್ನು ತಂದನು. ನೀವು ಅವನ್ನು ನೋಡಲಿಲ್ಲ. ಅವನು ಅವರನ್ನು ಹಿಂಸಿಸಿದನು. ಇದು ಕಾಫಿರರಿಗೆ ತಕ್ಕ ಶಾಸ್ತಿ. ಮರಳಿ ಅಲ್ಲಾಹನು ತನಗೆ ಬೇಕಾದವರ ಕಡೆ ತಿರುಗುವನು. ಮತ್ತು ನಂಬಿಕೆತಾರದವರ ಕಡೆ ಹೋರಾಡಿರಿ.

[ಮಂ. ೨, ಸಿ. ೧೦, ಸೂ. ೯, ಆ. ೨೨, ೨೩, ೨೬ ೨೭, ೨೯]

ಸಮೀಪ್ಷಕ—ಸ್ವರ್ಗಸ್ಥರಾದವರ ಸಮೀಪ ದೇವರಿರುವನಾದರೆ ಅವನು ಸರ್ವವ್ಯಾಪಕನು ಹೇಗಾಗಬಲ್ಲನು ? ಸರ್ವವ್ಯಾಪಕನಲ್ಲದವನು ಸೃಷ್ಟಿಕರ್ತನೂ, ನ್ಯಾಯಾಧೀಶನೂ ಆಗಲಾರನು. ತಂದೆ, ತಾಯಿ, ಬಂಧುಮಿತ್ರರನ್ನು ಅವನ ಹತ್ತಿರದಿಂದ ಬಿಡಿಸುವುದು ತೀರಾ ಅನ್ಯಾಯದ ಮಾತು. ಅವರು ಕೆಟ್ಟ ಉಪದೇಶ ಮಾಡಿದರೆ ನಂಬಬಾರದು. ಆದರೆ ಅವರ ಸೇವೆಯನ್ನು ಯಾವಾಗಲೂ ಮಾಡುತ್ತಿರಬೇಕು. ದೇವರು ಮೊದಲು ಮುಸಲ್ಮಾನರ ಮೇಲೆ ಸಂತುಷ್ಟನಾಗಿದ್ದು ಅವರಿಗಾಗಿ ಸೈನ್ಯವನ್ನು ಇಳಿಸುವುದು ನಿಜವಾಗಿದ್ದರೆ ಈಗ ಅವನು ಹಾಗೇಕೆ ಮಾಡುವುದಿಲ್ಲ? ಕಾಫಿರರನ್ನು ಶಿಕ್ಷಿಸುತ್ತಾ ಮುಸಲ್ಮಾನರ ಪಕ್ಷವನ್ನು ಹಿಡಿಯುತ್ತಿದ್ದನಾದರೆ ಈಗ ಎಲ್ಲಿಗೆ ಹೋದನು? ಯುದ್ಧದ ಹೊರತು ದೇವರು ವಿಶ್ವಾಸಗಳಿಸಲಾರನೆ? ಇಂತಹವನು ದೇವರೇನು ? ಅವ

ನೊಬ್ಬ ಆಟಗಾರನಾಗಿರುತ್ತಾನೆ? ಇಂತಹ ದೇವರಿಗೆ ದೂರದಿಂದಲೇ ನಮ್ಮ ನಮಸ್ಕಾರವಿರಲಿ. ॥೮೨॥

೮೩. ದೇವರು ತಾನಾಗಿಯಾಗಲಿ ನಮ್ಮ ಕೈಯಿಂದಲಾಗಲಿ ನಿಮಗೆ ಶಿಕ್ಷೆವಿಧಿಸಲಿ ಎಂಬುದಾಗಿ ನಾವು ಹಾದಿ ನೋಡುತ್ತಿದ್ದೇವೆ.

[ಮಂ. ೨, ಸಿ, ೧೦, ಸೂ. ೯, ಆ. ೫೨]

ಸಮಾಕ್ಷ—ದೇವರು ಅನ್ಯಮತದವರನ್ನು ತನ್ನ ಕೈಯಿಂದಾಗಲಿ ಮುಸಲ್ಮಾನರಿಂದಾಗಲಿ ಹಿಡಿಸಲು ಮುಸಲ್ಮಾನರ ದೇವರ ಪೋಲೀಸರಾಗಿರುವರೆ? ಇತರ ಕೋಟ್ಯಂತರ ಜನರು ದೇವರಿಗೆ ಅಪ್ರಿಯರಾಗಿರುವರೆ? ಮುಸಲ್ಮಾನರಲ್ಲಿನ ಪಾಪಿಗಳೂ ಪ್ರಿಯರೇ ಆಗಿರುವರೆ? ಹೀಗಿದ್ದರೆ ಅಂಧಕಾರನಗರಿಯ ಗವರ್ಗಂಡರಾಜನ ವ್ಯವಸ್ಥೆಯೆಂದು ತೋರುತ್ತದೆ. ಬುದ್ಧಿವಂತರಾದ ಮುಸಲ್ಮಾನರೂ ಕೂಡ ಇಂತಹ ನಿರ್ಮೂಲವೂ ಅಯುಕ್ತವೂ ಆದ ಮಾತುಗಳನ್ನು ನಂಬುತ್ತಾರೆಂಬುದೇ ಆಶ್ಚರ್ಯದ ಸಂಗತಿಯಾಗಿದೆ. ॥೮೩॥

೮೪. ನಂಬಿಕೆಯುಳ್ಳ ನರರಿಗೂ, ನಾರಿಯರಿಗೂ, ಅಲ್ಲಾಹನು, ಯಾವುದರ ಕೆಳಗೆ ನದಿಗಳು ಹರಿಯುವುವೋ, ಅಂತಹ ಸ್ವರ್ಗವನ್ನು ಕೊಡುವುದಾಗಿ ವಚನವಿತ್ತಿದ್ದಾನೆ. ಅವರು ಸದಾ ಅಲ್ಲಿರುವರು. ಮತ್ತು ಏಡನ್ನಿನ ಸ್ವರ್ಗಗಳಲ್ಲಿ ಶುದ್ಧವಾದ ಮನೆಗಳವೆ. ಅಲ್ಲಾಹನ ಸಂತೋಷ ಒಂದು ದೊಡ್ಡ ಆಶೀರ್ವಾದ. ಕಾಮನಾಪೂರೀ ಮಾಡಿಕೊಳ್ಳುವುದು ಒಂದು ಮಹಾಕಾರ್ಯ. ಮತ್ತು ಅವರು ದೇವರನ್ನು ಗೇಲಿಮಾಡುತ್ತಾರೆ. ದೇವರು ಅವರನ್ನು ಗೇಲಿಮಾಡಿದನು.

[ಮಂ. ೨, ಸಿ. ೧೦, ಸೂ. ೯, ಆ. ೭೨-೭೯]

ಸಮಾಕ್ಷಕ—ಇದು ತಮ್ಮ ಸ್ವಾರ್ಥವನ್ನು ಸಾಧಿಸುವುದಕ್ಕಾಗಿ ದೇವರ ಹೆಸರಿನಲ್ಲಿ ಸ್ತ್ರೀಪುರುಷರನ್ನು ಮೋಸಕ್ಕೀಡುಮಾಡುವುದಾಗಿದೆ. ಇಂತಹ ಆಸೆ ತೋರಿಸದೆ ಇದ್ದಿದ್ದರೆ ಯಾರೂ ಮಹಮ್ಮದ ಸಾಹೇಬರ ಬಲೆಯಲ್ಲಿ ಬೀಳುತ್ತಿರಲಿಲ್ಲ. ಅನ್ಯಮತದವರೂ ಸಹ ಇದೇ ರೀತಿ ಮಾಡುತ್ತಾರೆ. ಮನುಷ್ಯರಾದರೊ ಒಬ್ಬರ ಮೇಲೊಬ್ಬರು ತಮಾಷೆ ಮಾಡಿಯೇ ಮಾಡುತ್ತಾರೆ. ಆದರೆ ದೇವರು ಯಾರ ಮೇಲೂ ತಮಾಷೆ

ಮಾಡುವುದುಚಿತವಲ್ಲ. ಈ ಕುರಾನೆಂದರೇನು? ಒಂದು ಆಟವಷ್ಟೇ. ||೪೪||

೪೫. ರಸೂಲರೂ ಅವರ ಮೇಲೆ ವಿಶ್ವಾಸವಿಟ್ಟವರೂ ತಮ್ಮ ಪ್ರಾಣ ಮತ್ತು ಹಣವನ್ನು ತೆತ್ತು ಧರ್ಮಯುದ್ಧವನ್ನು ಮಾಡಿದರು. ಅವರಿಗೆ ಆಶೀರ್ವಾದವಿದೆ. ಅವರು ಅವರ ಅಂತಃಕರಣಗಳ ಮೇಲೆ ಮುದ್ರೆಯನ್ನೊತ್ತಿದ್ದಾನೆ. ಆದುದರಿಂದಲೇ ಅವರು ಏನನ್ನೂ ಅರಿಯರು. [ಮಂ. ೨। ಸಿ. ೧೦। ಸೂ. ೯। ಆ. ೪೪, ೪೩]

ಸಮೀಕ್ಷಕ—ಈಗ ಸ್ವಾರ್ಥಸಾಧನೆಯ ಮಾತನ್ನಾಲಿಸಿರಿ. ಮಹಮ್ಮದ ಸಾಹೇಬರ ಮೇಲೆ ವಿಶ್ವಾಸವಿಟ್ಟವರು ಒಳ್ಳೆಯವರು ವಿಶ್ವಾಸವಿಡದವರು ಕೆಟ್ಟವರೂ ಆಗಿರುವರಂತೆ. ಈ ಮಾತು ಪಕ್ಷಪಾತ ಮತ್ತು ಅವಿದ್ಯಾಪೂರ್ಣವಾಗಿವೆ? ದೇವರು ಮುದ್ರೆಯನ್ನೊತ್ತಿರುವ ನಾದರೆ ಪಾಪಮಾಡುವುದರಲ್ಲಿ ಅವರ ದೋಷವೇನೂ ಇಲ್ಲ. ಅದೆಲ್ಲವೂ ದೇವರ ಅಪರಾಧವಾಗುತ್ತದೆ. ಏಕೆಂದರೆ ಪಾಪ, ಆ ಬಡಪಾಯಿಗಳ ಅಂತಃಕರಣಗಳ ಮೇಲೆ ಮುದ್ರೆಯನ್ನೊತ್ತಿ ಹಿತಮಾಡುವುದನ್ನೇ ತಡೆದುಬಿಟ್ಟನು. ಇದೆಷ್ಟು ದೊಡ್ಡ ಅನ್ಯಾಯವು! ||೪೫||

೪೬. ಅವರ ವಸ್ತುಗಳನ್ನು ತೆಗೆದು ನೀವು ಅವರ ಬಾಹ್ಯ ರೂಪವನ್ನೂ ಆಂತರಿಕ ಪ್ರವೃತ್ತಿಗಳನ್ನೂ ಆ ವಸ್ತುಗಳನ್ನೂ ಪವಿತ್ರಗೊಳಿಸಿರಿ. ನಿಶ್ಚಯವಾಗಿಯೂ ಮುಸಲ್ಮಾನರಿಂದ ಅವರ ಪ್ರಾಣಗಳನ್ನೂ ವಸ್ತುಗಳನ್ನೂ ಸ್ವರ್ಗದ ಬದಲಾಗಿ ಕೊಂಡುಕೊಂಡಿರುವನು. ಅವರು ದೇವರ ಮಾರ್ಗದ ಮೇಲೆ ಯುದ್ಧಮಾಡುವರು ಅನ್ಯರ ಪ್ರಾಣಗಳನ್ನು ಹೀರುವರು ಮತ್ತು ತಾವು ಸಾಯುವರು.

[ಮ. ೨। ಸಿ. ೧೧। ಸೂ. ೯। ಆ. ೧೦೩, ೧೧೧]

ಸಮೀಕ್ಷಕ—ಮಹಮ್ಮದ ಸಾಹೇಬರೆ! ನೀವಾದರೋ ಗೋಕುಲೀಯ ಗುಸಾಯಿಗಳ ಸಮಾನರಾದಿರಿ. ಅವರೂ ದ್ರವ್ಯವನ್ನು ತೆಗೆದುಕೊಂಡು ಅವರನ್ನು ಪವಿತ್ರಮಾಡುತ್ತಾರಲ್ಲವೆ? ವಾಹವ್ವ! ಮುಸಲ್ಮಾನರ ದೇವರೆ! ಮುಸಲ್ಮಾನರ ಮೂಲಕ ಇತರರ ಪ್ರಾಣಗಳನ್ನು ತೆಗೆದುಕೊಳ್ಳುವುದು ಲಾಭವೆಂದು ತಿಳಿದ ನಿಮ್ಮ ವ್ಯಾಪಾರವೂ

ಒಳ್ಳೆಯದು. ಆ ಅನಾಥರನ್ನು ಕೊಲ್ಲಿಸಿ ನಿರ್ದಯಿಗಳಿಗೆ ಸ್ವರ್ಗವನ್ನೀಯುವುದರಿಂದ ಮುಸಲ್ಮಾನರ ದೇವರು ದಯಾನ್ಯಾಯಗಳನ್ನು ಸಂಪೂರ್ಣವಾಗಿ ಮರೆತುಹೋಗಿ ತನ್ನ ದೇವತ್ವಕ್ಕೇನೇ ಕಳಂಕವನ್ನು ತಂದೊಡ್ಡಿ, ಬುದ್ಧಿವಂತರೂ ಧಾರ್ಮಿಕರೂ ಆದ ಮನುಷ್ಯರಲ್ಲಿ ಘೃಣಾಸ್ಪದನಾಗಿರುವನು. ॥೮೬॥

೮೭. ಹೇ ಜನರೆ! ನೀವು ವಿಶ್ವಾಸವಂತರಾಗಿರುವುದಾದರೆ ನಿಮ್ಮ ಹತ್ತಿರವಿರುವ ಕಾಫಿರರೊಡನೆ ಯುದ್ಧಮಾಡಿರಿ. ಅವರು ನಿಮ್ಮಲ್ಲಿ ದೃಢತೆಯನ್ನು ಕಾಣುವುದು ಆವಶ್ಯಕ. ಅವರನ್ನು ವರುಷದಲ್ಲಿ ಒಂದೋ ಎರಡೋ ಸಲ ಕಷ್ಟಕ್ಕೀಡು ಮಾಡುವುದನ್ನು ನೀವು ನೋಡುತ್ತಿಲ್ಲವೆ? ಆದರೂ ಸಹ ಅವರು ದಯೆಗಾಗಿ ಪ್ರಾರ್ಥಿಸುವುದೂ ಇಲ್ಲ. ಉಪದೇಶವನ್ನು ಗ್ರಹಿಸುವುದೂ ಇಲ್ಲ.

[ಮುಂ. ೨। ಸಿ. ೧೧। ಸೂ. ೯। ಆ. ೧೨೩, ೧೨೬]

ಸಮೀಕ್ಷಕ :—ನೋಡಿರಿ! ಈ ವಿಶ್ವಾಸಘಾತುಕತನದ ಮಾತುಗಳನ್ನು ದೇವರು ಮುಸಲ್ಮಾನರಿಗೆ ಕಲಿಸುತ್ತಿದ್ದಾನೆ. ನೆರೆಕರೆಯವರಾಗಿರಲಿ, ಇನ್ನೊಬ್ಬನ ನೌಕರರಾಗಿರಲಿ ಸಂದರ್ಭ ಸಿಕ್ಕಿದಾಗ ಕೂಡಲೇ ಯುದ್ಧ ಅಥವಾ ಹಿಂಸೆ ದೂಡಿಬಡಬೇಕಂತೆ. ಈ ಕುರಾನಿನ ಬರಹವನ್ನನುಸರಿಸಿ ಮುಸಲ್ಮಾನರಿಂದ ಇಂತಹ ಎಷ್ಟೋ ವಿಷಯಗಳು ನಡೆದು ಹೋಗಿವೆ. ಈಗಲಾದರೂ ಅವರು ತಿಳಿವಳಿಕೆಯನ್ನು ಹೊಂದಿ ಕುರಾನಿನಲ್ಲಿ ಹೇಳಿದ ಕೆಡುಕನ್ನು ಬಿಟ್ಟುಬಿಟ್ಟರೆ ಬಹಳ ಒಳ್ಳೆಯದು. ॥೮೭॥

೮೮. ಅವರು ಆಕಾಶವನ್ನೂ, ಭೂಮಿಯನ್ನೂ ಆರು ದಿವಸಗಳಲ್ಲಿ ನಿರ್ಮಿಸಿ ಅನಂತರ ಆಕಾಶವನ್ನೆಡರಿದ್ದಾನೆ. ಮತ್ತು ಕಾರ್ಯಗಳ ಉಪಾಯವನ್ನು ಮಾಡುತ್ತಾನೆ. ಆ ಸೃಷ್ಟಿಕರ್ತನೇ ನಿಜವಾಗಿ ನಿಮ್ಮ ದೇವರಾಗಿರುವನು. [ಮುಂ. ೩। ಸಿ. ೧೧। ಸೂ. ೧೦। ಆ. ೩]

ಸಮೀಕ್ಷಕ :—ಆಕಾಶವು ಹುಟ್ಟಲ್ಲ. ಅದು ಅನಾದಿಯಾಗಿದೆ. ಅದನ್ನು ನಿರ್ಮಿಸಿದನು ಎಂದು ಬರೆಯುವುದರಿಂದ ಕುರಾನ ಕರ್ತೃವಿಗೆ ಪದಾರ್ಥ ವಿದ್ಯೆಯ ಜ್ಞಾನವೇನೂ ಇರಲಿಲ್ಲವೆಂಬುದು ನಿಶ್ಚಯವಾಗು

ತ್ತದೆ. ಪರಮೇಶ್ವರನಿಗೆ ಆರು ದಿನಗಳ ವರೆಗೆ ನಿರ್ಮಿಸುವ ಕೆಲಸ ಬೇಳುತ್ತದೆಯೆ? 'ನನ್ನ ಆಜ್ಞೆಯಂತೆ ಆಗು ಎಂದು ಹೇಳಿದ ಕೂಡಲೇ ಆಗಿಹೋಯಿತು' ಎಂದು ಕುರಾನಿನಲ್ಲಿ ಬರೆದಿರುವರು. ಅದಕ್ಕೇನೂ ಆರು ದಿವಸಗಳು ಹಿಡಿದಿರಲಿಕ್ಕಿಲ್ಲ. ಆರು ದಿವಸಗಳು ಹಿಡಿದವೆಂದು ಬರೆದುದು ಸುಳ್ಳಾಗಿರುತ್ತದೆ. ಅವನು ವ್ಯಾಪಕನಾಗಿರುವುದಾದರೆ ಆಕಾಶದ ಮೇಲೇಕೆ ಇರುತ್ತಿದ್ದನು. ಕಾರ್ಯ ವ್ಯವಸ್ಥೆ ಮಾಡುತ್ತಿರುವನಾದರೆ ನಿಮ್ಮ ದೇವರು ಮನುಷ್ಯನಂತೆಯೇ ಆದನು. ಸರ್ವಜ್ಞನಾಗಿರುವವನು ಕುಳಿತುಕೊಂಡು ಏನು ತಾನೆ ವ್ಯವಸ್ಥೆ ಮಾಡಿಯಾನು? ಇದರಿಂದ ದೇವರನ್ನರಿಯದ ಕಾಡು ಜನರು ಈ ಪುಸ್ತಕವನ್ನು ಬರೆದಿರುವರೆಂಬುದು ಸಿದ್ಧವಾಗುತ್ತದೆ. ॥೮೮॥

೮೯. ಉಪದೇಶವೂ ದಯೆಯೂ ಮುಸಲ್ಮಾನರಿಗಾಗಿದೆ.

[ಮಂ. ೩। ಸಿ. ೧೧। ಸೂ. ೧೧। ಆ. ೫೭]

ಸಮೀಕ್ಷಕ:—ಇತರ ಮನುಷ್ಯರನ್ನು ಬಿಟ್ಟು ಮುಸಲ್ಮಾನರಿಗೇನೇ ದಯೆತೋರಿಸುವವನು ಮುಸಲ್ಮಾನರಿಗೆ ಮಾತ್ರ ದೇವರೊ? ಬೇರೆಯವರ ದೇವರಲ್ಲವೊ? ಹಾಗಿದ್ದರೆ ಪಕ್ಷಪಾತಿಯಾಗಿರುವನು. ಮುಸಲ್ಮಾನರೆಂದು ವಿಶ್ವಾಸಪಾತ್ರರಿಗೆ ಹೇಳುತ್ತಾರೆ ಎಂದು ಹೇಳುವುದಾದರೆ ಅಂತಹವರಿಗೆ ಉಪದೇಶದ ಆಗತ್ಯವೇ ಇರುವುದಿಲ್ಲ. ಮುಸಲ್ಮಾನೇತರರಿಗೆ ಉಪದೇಶವನ್ನವನು ಮಾಡದಿದ್ದರೆ ದೇವರ ವಿದ್ಯೆಯೇ ವ್ಯರ್ಥವಾಗಿರುತ್ತದೆ. ॥೮೯॥

೯೦. ಕರ್ಮಗಳಲ್ಲಿ ನಿಮ್ಮಲ್ಲಿ ಯಾರು ಶ್ರೇಷ್ಠರಿರುವನು? ಎಂಬುದನ್ನವನು ಪರೀಕ್ಷಿಸುವನು; ಮತ್ತು ಸತ್ತ ನಂತರ ನಿಮ್ಮನ್ನು ಅವಶ್ಯವಾಗಿ ಎಬ್ಬಿಸಲಾಗುವುದು ಎನ್ನುವನು.

[ಮಂ. ೩। ಸಿ. ೧೧। ಸೂ. ೧೧। ಆ. ೭]

ಸಮೀಕ್ಷಕ—ಅವನು ಕರ್ಮಗಳನ್ನು ಪರೀಕ್ಷಿಸುವನಾದರೆ ಸರ್ವಜ್ಞನೇ ಆಗಿರುವುದಿಲ್ಲ. ಮೃತ್ಯುವಿನ ನಂತರ ಎಬ್ಬಿಸುತ್ತಾನಾದರೆ ಸೆರೆಮನೆಯಲ್ಲಿಯೇ ಇರುತ್ತಿರಬಹುದು. ಮತ್ತು ಸತ್ತವರು ಸೆರೆಮನೆಯಲ್ಲೇ ಜೀವಂತರಾಗ ಬಾರದು ಎಂಬ ನಿಯಮವನ್ನು ತಾನೇ ಮುಂದು

ವರಿಸುತ್ತಿದ್ದಾನೆ. ಈ ಕೆಲಸವು ದೇವರಿಗೆ ಕಳಂಕವನ್ನು ತಂದೊಡ್ಡುತ್ತದೆ. ॥೯೦॥

೯೧. ಮತ್ತು ದೇವರು—'ಎಲೈ ಪೃಥ್ವಿಯೇ! ತನ್ನ ನೀರನ್ನು ಹೀರಿಬಿಡು. ಎಲೈ ಆಕಾಶವೆ! ಸಾಕುಮಾಡು' ಎಂದನು ಆಗ ನೀರು ಒಣಗಿಹೋಯಿತು. ಎಲೈ ಜನಾಂಗವೆ! ನಿಮಗಾಗಿ ಈ ಹೆಣ್ಣು ಒಂಟೆಯು ದೇವರ ಕುರುಹು ಆಗಿರುತ್ತದೆ. ಅದನ್ನು ದೇವರ ಪೃಥ್ವಿಯ ನಡುವೆ ಬಿಟ್ಟುಬಿಡಿರಿ. ಮೇಯುತ್ತಾ ತಿರುಗುತ್ತಿರಲಿ.

[ದುಂ. ೩। ಸಿ. ೧೧। ಸೂ. ೧೧। ಆ. ೪೪, ೬೪]

ರೂಕ್ಷಕ—ಎಂತಹ ಮುಕ್ಕಳಾಟಿಕೆಯ ಮಾತಿದು? ಪೃಥ್ವಿ- ಆಕಾಶಗಳು ಎಂದಾದರೂ ಮಾತು ಕೇಳುವುದೇ? ವಾಹಹ್ಹ! ಹೆಣ್ಣು ಒಂಟೆಯು ದೇವರ ಹತ್ತಿರವಿರುವುದಾದರೆ ಗಂಟು ಒಂಟೆಯೂ ಇರಬಹುದಲ್ಲವೆ? ಆನೆ ಕುದುರೆ ಕತ್ತೆಗಳೂ ಇರುವುವೆ? ದೇವರು ಒಂಟೆಗೆ ಹೊಲ ಮೇಯಲು ಕೊಡುವುದು ಒಳ್ಳೆಯ ಮಾತೇನು? ಒಂಟೆಯ ಮೇಲೆ ಅವನೇ ಕೂತುಕೊಳ್ಳುವುದೂ ಉಂಟೇ? ಹೀಗೆಲ್ಲ ಇರುವುದಾದರೆ ನವಾಬಗಿರಿಯಂತಹ ಗೊಂದಲಪಂದಲಗಳು ದೇವರ ಮನೆಯಲ್ಲಿಯೂ ಇದ್ದಂತಾಯಿತು. ॥೯೧॥

೯೨. ಆಲ್ಲಿಯ ನಿವಾಸಿಗಳು ಭೂಮ್ಯಾಕಾಶಗಳಿರುವವರೆಗೂ ಇರುತ್ತಾರೆ. ಸೌಭಾಗ್ಯವಂತರಾಗಿರುವವರೂ ಸಹ ಪೃಥಿವ್ಯಾಕಾಶಗಳಿರುವ ಪರ್ಯಂತ ಸ್ವರ್ಗದಲ್ಲಿ ವಾಸಿಸುವವರಾಗುತ್ತಾರೆ.

[ಮುಂ. ೩। ಸಿ. ೧೨। ಸೂ. ೧೧। ಆ. ೧೦೮-೧೦೯]

ಸವಿಾಕ್ಷಕ—ಕಯಾಮತಿನ ನಂತರ ಎಲ್ಲರೂ ನರಕ ಅಥವಾ ಸ್ವರ್ಗಕ್ಕೆ ಹೋಗಿಬಿಡುವುದಾದರೆ ಪೃಥಿವ್ಯಾಕಾರಗಳು ಇರುವುದಾದರೂ ಏತಕ್ಕೆ? ನರಕ ಸ್ವರ್ಗಗಳು ಭೂಮ್ಯಾಕಾಶಗಳಿರುವ ಅವಧಿಯವರೆಗಿರುವವಾದರೆ ನರಕಸ್ವರ್ಗಗಳ ನಿವಾಸಿಗಳು ಸದಾಕಾಲವೂ ಇರುವರು ಎಂಬ ಮಾತು ಸುಳ್ಳಾಗುತ್ತದೆ. ಇಂತಹ ಹೇಳಿಕೆಯೆಲ್ಲವೂ ಅವಿದ್ವಾಂಸರದಾಗಿರುತ್ತದೆಯೇ ಹೊರತು ದೇವರದ್ದಾಗಲಿ ವಿದ್ವಾಂಸನದ್ದಾಗಲಿ ಆಗಿರುವುದಿಲ್ಲ. ॥೯೨॥

೯೩. ಆಗ ಯೋಸೇಫನು ತನ್ನ ತಂದೆಗೆ–ಅಪ್ಪಾ ! ನಾನೊಂದು ಸ್ವಪ್ನವನ್ನು ನೋಡಿದೆ .... ಎಂದನು.

[ಮುಂ. ೩। ಸಿ. ೧೨। ಸೂ. ೧೩। ಅ. ೪-೧೦೧]

ಸಮೀಕ್ಷಕ---ಈ ಪ್ರಕರಣದಲ್ಲಿ ಪಿತಾಪುತ್ರಸಂವಾದರೂಪವಾದ ಕಟ್ಟುಕತೆಯು ತುಂಬಿಕೊಂಡಿರುವುದರಿಂದ ಈ ಕುರಾನು ದೇವರು ಬರೆಯದೆ ಯಾವನೋ ಒಬ್ಬ ಮನುಷ್ಯನು ಜನರ ಚರಿತ್ರೆಯನ್ನು ಬರೆದಿರುವನು. ||೯೩||

೯೪. ಕಂಬಗಳಿಲ್ಲದೆ ಆಕಾಶವನ್ನು ನಿಲ್ಲಿಸಿರುವವನೂ, ನೀವು ನೋಡುತ್ತಿರುವ ಸೂರ್ಯಚಂದ್ರರನ್ನು ನಿರ್ಮಿಸಿ ತನ್ನಾಜ್ಞೆಯಂತೆ ನಡೆಸುವವನೂ, ದೇವರಾಗಿರುವನು. ಅವನೇ ಈ ಭೂಮಿಯನ್ನು ಹಾಸಿರುವನು. ಆಕಾಶದಿಂದ ನೀರನ್ನಿಳಿಸಿರುವನು. ಆದರಿಂದ ನಿರ್ಝರಗಳು ದೇವರ ಪರಿಮಾಣಕ್ಕನುಸಾರವಾಗಿ ಹರಿವುವು. ದೇವರು ತನ್ನಿಚ್ಛೆ ಬಂದವರಿಗಾಗಿ ಊಟವನ್ನು ತೆರೆದಿಡುತ್ತಾನೆ. ಕಷ್ಟಕ್ಕೆ ಗುರಿಮಾಡುತ್ತಾನೆ, [ಮುಂ. ೩। ಸಿ. ೧೩। ಸೂ. ೧೩। ಅ. ೨, ೩, ೧೭, ೨೬]

ಸಮೀಕ್ಷಕ—ಮುಸಲ್ಮಾನರ ದೇವರಿಗೆ ಪದಾರ್ಥವಿದ್ಯೆಯೇನೂ ತಿಳಿದಿರಲಿಲ್ಲ. ತಿಳಿದಿದ್ದರೆ ಗುರುತ್ವವಿಲ್ಲದ ಆಕಾಶದ ಕಂಬಗಳ ವಿಷಯಕವಾದ ಕತೆಯನ್ನೇನೂ ಬರೆಯುತ್ತಿರಲಿಲ್ಲ. ದೇವರು ಆಕಾಶದಲ್ಲೊಂದು ಕಡೆಯಲ್ಲಿ ಇರುತ್ತಾನಾದರೆ ಸರ್ವಶಕ್ತಿವಂತನೂ ಸರ್ವವ್ಯಾಪಕನೂ ಆಗಿರಲಾರನು. ದೇವರು ಮೇಘವಿದ್ಯೆಯನ್ನರಿತಿದ್ದರೆ. ಆಕಾಶದಿಂದ ನೀರಿಳಿಸುವುದನ್ನು ಬರೆದುಬಿಟ್ಟು ಪುನಃ ಭೂಮಿಯಿಂದ ನೀರನ್ನು ಮೇಲೆ ಏರಿಸಿದೆನು. ಎಂದು ಬರೆಯಲಿಲ್ಲವೇಕೆ ? ಆದಕಾರಣ ಆವನಿಗೆ ಮೇಘವಿದ್ಯೆಗೊತ್ತಿರಲಿಲ್ಲವೆಂದು ಭಾಸವಾಗುತ್ತದೆ. ಒಳ್ಳೆಯ ಅಥವಾ ಕೆಟ್ಟ ಕರ್ಮಗಳ ಹೊರತಾಗಿಯೇ ಸುಖದುಃಖಗಳನ್ನು ಕೊಡುತ್ತಾನಾದರೆ ಅದು ಪಕ್ಷಪಾತಿಯೂ, ಅನ್ಯಾಯಕಾರಿಯೂ, ನಿರಕ್ಷರಭಟ್ಟನೂ ಆಗಿರುವನು. ||೯೪||

೯೫. ನಿಶ್ಚಯವಾಗಿ ದೇವರು ತನಗಿಚ್ಛೆಬಂದವನನ್ನು ಪಥಭ್ರಷ್ಟನಾಗಿ ಮಾಡುತ್ತಾನೆ. ತನಗಿಚ್ಛೆಬಂದವನಿಗೆ ತನ್ನ ಕಡೆಗೆ ಮಾರ್ಗ

ತೋರಿಸುತ್ತಾನೆ. ಮತ್ತು ಅವನನ್ನು ನೇರವಾಗಿ ಮಾಡುತ್ತಾನೆ.

[ಮಂ. ೩। ಸಿ. ೧೩। ಸೂ. ೧೩। ಆ. ೨೭]

ಸಮೀಕ್ಷಕ :—ದೇವರು ಪಥಭ್ರಷ್ಟನಾಗಿ ಮಾಡುವುದಾದರೆ ಅವನಿಗೂ ಸೈತಾನನಿಗೂ ಭೇದವೇನುಳಿಯಿತು? ಬೇರೆಯವರನ್ನು ಪಥಭ್ರಷ್ಟರಾಗಿ ಮಾಡುವ ಸೈತಾನನನ್ನು ಕೆಟ್ಟವನೆಂದು ಹೇಳುವುದಾದರೆ ಅದೇರೀತಿಯ ಕೆಲಸಗಳನ್ನು ಮಾಡುವುದರಿಂದ ದೇವರು ಕೆಟ್ಟ ಸೈತಾನನಲ್ಲವೇಕೆ? ಮರಳುಮಾಡುವ ಪಾಪದಿಂದ ಅವನು ನರಕಕ್ಕೆ ಹೋಗಬಾರದೇಕೆ? ॥೯೫॥

೯೬. ಇದೇರೀತಿ ನಾವು ಈ ಕುರಾನನ್ನು ಅರಬೀಭಾಷೆಯಲ್ಲಿ ಇಳಿಸಿದ್ದೇವೆ. ವಿದ್ಯೆಯಿಂದ ನಿನ್ನಬಳಿಗೆ ಬಂದಮೇಲೂ ಸಹ ನೀನು ಅವರ ಇಚ್ಛೆಯನ್ನು ಇಚ್ಛಿಸುವೆಯಾದರೆ ನಿನಗೆ ಸಂದೇಶವನ್ನು ಕೊಡುವುದಷ್ಟೇ ಆಗಿದೆ. ಮೇಲೆ ಲೆಕ್ಕತೆಗೆದುಕೊಳ್ಳುವುದು ನಮ್ಮದು.

[ಮಂ. ೩। ಸಿ. ೧೩। ಸೂ. ೧೩। ಆ ೩೭, ೪೦]

ಸಮೀಕ್ಷಕ :—ಕುರಾನು ಯಾವಕಡೆಯಿಂದ ಇಳಿಯಿತು? ದೇವರು ಮೇಲಿರುತ್ತಾನೆಯೆ? ಈ ಮಾತು ನಿಜವಾಗಿದ್ದರೆ ಅವನು ಏಕದೇಶಿಯಾಗಿರುವುದರಿಂದ ದೇವರೇ ಅಲ್ಲ. ದೇವರು ಎಲ್ಲೆಲ್ಲಿಯೂ ಏಕರಸವಾಗಿ ವ್ಯಾಪಕನಾಗಿದ್ದಾನೆ. ಸಂದೇಶವನ್ನು ಮುಟ್ಟಿಸುವುದು ಸಂದೇಶವಾಹಕನ ಕೆಲಸವು. ಮನುಷ್ಯರಂತೆ ಏಕದೇಶಿಯಾಗಿರುವವನಿಗೆ ಮಾತ್ರ ಸಂದೇಶವಾಹಕನ ಆವಶ್ಯಕತೆಯಿರುತ್ತದೆ. ಲೆಕ್ಕತೆಗೆದುಕೊಳ್ಳುವುದು ಮತ್ತು ಕೊಡುವುದು ಮನುಷ್ಯನ ಕೆಲಸವೇ ಹೊರತು ದೇವರ ಕೆಲಸವಲ್ಲ. ಏಕೆಂದರೆ ಅತನು ಸರ್ವಜ್ಞನಾಗಿದ್ದಾನೆ. ಆದುದರಿಂದ ಈ ಕುರಾನನ್ನು ಯಾರೋ ಅಲ್ಪಜ್ಞನಾದ ಮನುಷ್ಯನು ಬರೆದಿರುವನೆಂಬುದು ನಿಶ್ಚಯವಾಗುತ್ತದೆ. ॥೯೬॥

೯೭. ಮತ್ತು ಯಾವಾಗಲೂ ನಡೆಯುತ್ತಿರುವ ಸೂರ್ಯಚಂದ್ರರನ್ನು ನಿರ್ಮಿಸಿದನು. ನಿಶ್ಚಯವಾಗಿ ಮನುಷ್ಯನು ಅವಶ್ಯವಾಗಿ ಅನ್ಯಾಯವನ್ನೂ ಪಾಪವನ್ನೂ ಮಾಡುತ್ತಾನೆ.

[ಮಂ. ೩। ಸಿ. ೧೩। ಸೂ. ೧೪। ಆ. ೩೩-೩೪]

ಸಮಿಾಕ್ಷಕ—ಚಂದ್ರಸೂರ್ಯರು ಸದಾ ಚಲಿಸುತ್ತಿದ್ದು ಪೃಥ್ವಿಯು ಚಲಿಸುತ್ತಿಲ್ಲವೇನು? ಭೂಮಿಯು ಚಲಿಸದಿದ್ದರೆ ಎಷ್ಟೋ ವರ್ಷಗಳವರೆಗೆ ಹಗಲು ರಾತ್ರಿಗಳಿರಬಹುದು. ಮನುಷ್ಯನು ಅವಶ್ಯವಾಗಿ ಅನ್ಯಾಯವನ್ನೂ ಪಾಪವನ್ನೂ ಮಾಡುತ್ತಾನಾದರೆ, ಪಾಪ ಮಾಡುವ ಸ್ವಭಾವವುಳ್ಳವರೆಂದಿಗೂ ಪುಣ್ಯಾತ್ಮರಾಗಲಾರರು. ಆದುದರಿಂದ ಕುರಾನಿನ ಉಪದೇಶವೇ ವ್ಯರ್ಥವಾಗಿಬಿಡುತ್ತದೆ. ಜಗತ್ತಿನಲ್ಲಿ ಪುಣ್ಯಾತ್ಮರನ್ನೂ ಪಾಪಿಗಳನ್ನೂ ನಾವು ಸದಾ ನೋಡುತ್ತಿದ್ದೇವೆ ಆದಕಾರಣ ಇಂತಹ ಮಾತು ಈಶ್ವರಕೃತ ಪುಸ್ತಕದ್ದಾಗಲಾರದು.॥೯೭॥

೯೮. ನಾನು ಅವನನ್ನು ಸರಿಮಾಡುವೆನು. ತನ್ನಿಂದ ಅವನ ಶರೀರದಲ್ಲಿ ಆತ್ಮವನ್ನೂದುವೆನು. ಅವನಿಗೆ ನಮಸ್ಕಾರ ಮಾಡುತ್ತಾ ಆಡ್ಡಬೀಳು. ದೇವರೆ! ನನ್ನ ಈ ಕಾರಣದಿಂದ ನೀನು ನನ್ನನ್ನು ಪಥಭ್ರಷ್ಟನಾಗಿ ಮಾಡಿದ್ದೀಯೆ. ಅದಕ್ಕಾಗಿ ನಾನು ಅವರಿಗೆ ಭೂಮಿಯ ಮೇಲೆ ಅವಶ್ಯವಾಗಿ ದುಷ್ಪ್ರೇರಣೆ ಕೊಡುವೆನು. ಮತ್ತು ಪಥಭ್ರಷ್ಟರನ್ನಾಗಿ ಮಾಡುವೆನು ಎಂದನು.

[ಮಂ. ೩। ಸಿ. ೧೪। ಸೂ. ೧೫। ಆ. ೨೯-೪೬]

ಸಮಿಾಕ್ಷಕ—ದೇವರು ತನ್ನಾತ್ಮವನ್ನು ಆದಮನಲ್ಲಿ ಊದಿದ್ದರೆ ಆದಮನೂ ದೇವರಾಗಿರಬೇಕು. ಅವನು ದೇವರಾಗಿಲ್ಲವಾದರೆ ನಮಸ್ಕಾರ ಮೊದಲಾದ ಭಕ್ತಿಕಾರ್ಯಗಳಲ್ಲಿ ಅವನನ್ನು ತನ್ನೊಂದಿಗೆ ವಿಕೆ ಸೇರಿಸಿಕೊಂಡನು? ಸೈತಾನನನ್ನು ಪಥಭ್ರಷ್ಟನಾಗಿ ಮಾಡುವನು ದೇವರಾಗಿದ್ದರೆ ಅವನು ಸೈತಾನನಿಗೂ ಸೈತಾನನೂ, ಅಣ್ಣನೂ ಗುರುವೂ ಆಗಿಲ್ಲವೇಕೆ? ಮರುಳುಗೊಳಿಸುವವನು ಸೈತಾನನೆಂದು ನೀವು ಹೇಳುವುದಾದರೆ ದೇವರೂ ಸೈತಾನನನ್ನು ಮರುಳುಗೊಳಿಸಿದನಲ್ಲವೆ? ಸೈತಾನನು ದೇವರ ಎದುರಿನಲ್ಲೇ—ನಾನು ಜನರನ್ನು ಮರುಳುಗೊಳಿಸುವೆನೆಂದು ಹೇಳುತ್ತಿದ್ದಾಗ ದೇವರು ಅವನನ್ನು ಸೆರೆಹಿಡಿಸಿ ಸಾಯಿಸಲಿಲ್ಲವೇಕೆ? ॥೯೮॥

೯೯. ನಿಜವಾಗಿ ನಾವು ಪ್ರತಿಯೊಂದು ಜನಾಂಗದಲ್ಲಿ ಪೈಗಂ

ಬರರನ್ನು ಕಳುಹಿಸಿದ್ದೀವೆ. ಇಚ್ಛೆ ಬಂದಾಗ ನಾವು ಅದಕ್ಕೆ 'ಆಗು' ಎಂದು ಹೇಳುತ್ತೀವೆ. ಆಗ ಅದು ಆಗಿಹೋಗುತ್ತದೆ.

[ಮಂ. ೩। ಸಿ. ೧೪। ಸೂ. ೧೬। ಅ. ೩೬, ೪೦]

ಸಮೀಕ್ಷಕ :—ಎಲ್ಲಾ ಜನಾಂಗಗಳಿಗೆ ಪೈಗಂಬರರನ್ನು ಕಳಿಸಿರುವುದಾದರೆ ಆ ಎಲ್ಲಾ ಜನಾಂಗದವರೂ ತಮ್ಮ ತಮ್ಮ ಪೈಗಂಬರರ ಆಜ್ಞೆಯಂತೆ ನಡೆಯುತ್ತಿರುವಾಗ ಕಾಫಿರರೇಕಾಗುವರು? ನಿಮ್ಮ ಪೈಗಂಬರರ ಹೊರತು ಇತರ ಪೈಗಂಬರರಿಗೆ ಗೌರವವಿಲ್ಲವೆ? ಇದು ತೀರಾ ಪಕ್ಷಪಾತವಾದುದು. ಎಲ್ಲಾ ದೇಶಗಳಲ್ಲಿ ಪೈಗಂಬರರನ್ನು ಕಳಿಸಿರುವುದಾದರೆ ಆರ್ಯಾವರ್ತಕ್ಕೆ ಯಾರನ್ನು ಕಳಿಸಿರುವನು? ಈ ಮಾತು ನಂಬಲರ್ಹವಾದುದಲ್ಲ. ದೇವರು ಬಯಸಿ ಪೃಥ್ವಿಗೆ ಆಗಿಬಿಡು ಎಂದರೆ ಜಡವಾಗಿರುವ ಆ ಪೃಥ್ವಿ ಎಂದಿಗೂ ಆಲಿಸಲಾರದು. ದೇವರ ಆಜ್ಞೆಯು ಹೇಗೆತಾನೆ ನೆರವೇರುವುದು? ದೇವರ ಹೊರತು ನೀವು ಬೇರಾವುದನ್ನೂ ನಂಬದಿರುವ ಮೇಲೆ ಮಾತುಕೇಳಿದುದು ಯಾರು? ಆಗಿಬಿಟ್ಟಿದಾವದು? ಇವೆಲ್ಲವೂ ಅವಿದ್ಯಾಪೂರ್ಣವಾದ ಮಾತುಗಳು. ಇಂತಹವುಗಳನ್ನು ಅವಿದ್ವಾಂಸರು ಮಾತ್ರ ನಂಬಿಬಿಡುತ್ತಾರೆ. ॥೯೯॥

೧೦೦. ದೇವರಿಗೋಸ್ಕರ ಹುಡುಗಿಯರನ್ನು ನೇಮಿಸುತ್ತಾರೆ. ಅವನಿಗೋಸ್ಕರ ಪವಿತ್ರತೆಯಿದೆ. ಅವರಿಗೆ ಬಯಸಿದ ವಸ್ತುಗಳೆಲ್ಲಾ ಇವೆ. ದೇವರಾಣೆ, ನಾವು ನಿಜವಾಗಿಯೂ ಪೈಗಂಬರರನ್ನು ಕಳಿಸಿದ್ದೀವೆ. [ಮಂ. ೩, ಸಿ. ೧೪, ಸೂ. ೧೬, ಅ. ೫೭, ೬೩]

ಸಮೀಕ್ಷಕ—ದೇವರು ಹುಡುಗಿಯರನ್ನೇನು ಮಾಡುವನು? ಹುಡುಗಿಯರಾದರೂ ಯಾವನಾದರೂ ಮನುಷ್ಯನಿಗೆ ಬೇಕಾಗುತ್ತವೆ. ಹುಡುಗರನ್ನು ನೇಮಿಸದೆ ಹುಡುಗಿಯರನ್ನು ನೇಮಿಸಲು ಕಾರಣ ವೇನೆಂದು ಹೇಳಿರಿ. ಆಣೆ ಇಡುವುದು ಅಸತ್ಯವಂತರ ಕೆಲಸವೇ ಹೊರತು ದೇವರ ಕೆಲಸವಲ್ಲ. ಸಾಧಾರಣವಾಗಿ ಸುಳ್ಳುಗಾರರೇ ಆಣೆಯಿಟ್ಟುಕೊಳ್ಳುವುದು ಕಂಡುಬರುತ್ತದೆ. ಸತ್ಯವಂತನು ಆಣೆಯಿಟ್ಟುಕೊಳ್ಳುವುದಾದರೂ ಏಕೆ? ॥೧೦೦॥

೧೦೧. ದೇವರು ಇವರ ಅಂತಃಕರಣಗಳ ಮೇಲೂ, ಕಿವಿ ಮತ್ತು ಕಣ್ಣುಗಳ ಮೇಲೂ ಮುದ್ರೆಯನ್ನೊತ್ತಿರುವನು. ಆದುದರಿಂದ ಇವರಿಗೆ ಯಾವಗೊಡವೆಯೂ ಇಲ್ಲ. ಜೀವಗಳು ಮಾಡಿದುದಕ್ಕೆ ಪೂರ್ಣಪ್ರತಿಫಲವನ್ನು ಕೊಡಲಾಗುವುದು. ಅವರ ಮೇಲೆ ಅನ್ಯಾಯ ಮಾಡಲ್ಪಡುವುದಿಲ್ಲ.

[ಮಂ. ೩, ಸಿ. ೧೪, ಸೂ. ೧೬, ಆ. ೧೦೪-೧೧೧]

ಸಮೀಕ್ಷಕ—ದೇವರೇ ಮುದ್ರೆಯನ್ನೊತ್ತಿರುವನೆಂದಮೇಲೆ ಆ ಬಡಪಾಯಿಗಳನ್ನು ಏನೂ ಅಪರಾಧವಿಲ್ಲದೆ ಹಾಳುಮಾಡಿದಂತಾಯಿತು. ಅವರನ್ನು ಪರಾಧೀನರಾಗಿ ಮಾಡಲಾಯಿತು. ಇದೆಷ್ಟುಮಟ್ಟಿನ ಅಪರಾಧವು!! ಯಾರು ಎಷ್ಟು ಮಾಡುತ್ತಾನೊ ಅವನಿಗೆ ಹೆಚ್ಚು ಕಡಿಮೆ ಮಾಡದೆ ಅಷ್ಟೇ ಕೊಡಲಾಗುವುದು ಎಂದು ಹೇಳುತ್ತಾರೆ. ಪಾಪ, ಅವರು ಸ್ವಾತಂತ್ರ್ಯಪೂರ್ವಕವಾಗಿ ಪಾಪಗಳನ್ನು ಮಾಡಿಲ್ಲ. ದೇವರು ಮಾಡಿಸಿದುದರಿಂದ ಮಾಡಿದರೆಂದ ಮೇಲೆ ಆದು ಅವರ ಅಪರಾಧವಾಗಲಿಲ್ಲ. ಅವರಿಗದರ ಫಲವೂ ಸಿಕ್ಕಬಾರದು. ಫಲವು ದೇವರಿಗೆ ದೊರೆಯಬೇಕು. ಪೂರ್ಣ ಫಲವನ್ನು ಕೊಡುವುದಾದರೆ ಕ್ಷಮೆಮಾಡುವುದಾದರೂ ಏನಾಯಿತು? ಪಾಪವು ಕ್ಷಮಿಸಲ್ಪಟ್ಟರೆ ನ್ಯಾಯವೇ ಹಾರಿಹೋಗುತ್ತದೆ. ಆದುದರಿಂದ ಇಂತಹ ತಿರುಗು ಮುರುಗು ವ್ಯವಸ್ಥೆಯು ನಿರ್ಬುದ್ಧಿಭಾಲಕರದೇ ಹೊರತು ಎಂದಿಗೂ ದೇವರದಾಗಿರಲಾರದು. ॥೧೦೧॥

೧೦೨. ಕಾಫಿರರನ್ನು ತುಂಬುವ ಸ್ಥಾನವಾದ ನರಕವನ್ನು ನಾವು ಉಂಟುಮಾಡಿರುತ್ತೇವೆ. ಪ್ರತಿಯೊಬ್ಬ ಮನುಷ್ಯನ ಕೊರಳಲ್ಲಿ ಆತನ ವ್ಯವಹಾರಸೂಚಿಕೆಯನ್ನು ಕಟ್ಟಿದ್ದೇವೆ. ಕಯಾಮತಿನ ದಿವಸ ನಾವು ಅವನಿಗಾಗಿ ಒಂದು ಪುಸ್ತಕವನ್ನು ತೆಗೆದು ತೆರೆಯುವುದನ್ನವನು ನೋಡುವನು. ನೂಹನ ನಂತರ ಎಷ್ಟೋ ಪೀಳಿಗೆಗಳನ್ನು ನಾವು ಸಮೂಲ ನಾಶಮಾಡಿದೆವು.

[ಮಂ. ೪। ಸಿ. ೧೫। ಸೂ. ೧೭। ಆ. ೮, ೧೩, ೧೭]

ಸಮೀಕ್ಷಕ :—ಕುರಾನು, ಪೈಗಂಬರ, ಕುರಾನೋಕ್ತ ದೇವರು, ಏಳನೇ ಆಕಾಶ ಮತ್ತು ನಮಾಜು ಮೊದಲಾದವುಗಳನ್ನು ನಂಬದವರೇ

ಕಾಫಿರರಾಗಿದ್ದು, ಅವರಿಗಾಗಿಯೇ ನರಕವಾಗಿದ್ದರೆ ಇದು ಪಕ್ಷಪಾತದ ಮಾತಾಗುತ್ತದೆ. ಕುರಾನನ್ನು ನಂಬುವವರೆಲ್ಲರೂ ಸಜ್ಜನರೂ ಇತರರೆಲ್ಲರೂ ದುರ್ಜನರೂ ಆಗಬಲ್ಲರೆ? ಎಲ್ಲರ ಕುತ್ತಿಗೆಯಲ್ಲಿ ಕರ್ಮ ಪುಸ್ತಕವು ಕಟ್ಟಲ್ಪಟ್ಟಿದೆಯೆಂಬುದು ಮಕ್ಕಳಾಟಿಕೆಯ ಮಾತು. ಯಾರೊಬ್ಬನ ಕೊರಳಲ್ಲಿಯೂ ನಮಗದು ಕಾಣಿಸುವುದಿಲ್ಲ. ಕರ್ಮ ಫಲವನ್ನೀಯುವುದೇ ಇದರ ಉದ್ದೇಶ್ಯವಾಗಿರುವುದಾದರೆ ಜನರ ಅಂತಃಕರಣ, ಕಣ್ಣು ಮೊದಲಾದುವುಗಳ ಮೇಲೆ ಮುದ್ರೆಯನ್ನೊತ್ತುವ ಮತ್ತು ಪಾಪಗಳನ್ನು ಕ್ಷಮಿಸುವ ಆಟವನ್ನೇನು ಆಡುತ್ತಿದ್ದಾರೆ? ಕಯಾಮತಿನ ರಾತ್ರಿಯಲ್ಲಿ ಪುಸ್ತಕವನ್ನು ತೆರೆಯುವನಾದರೆ ಈಗ ಆ ಪುಸ್ತಕವು ಎಲ್ಲಿದೆ? ಸಾಹುಕಾರರ ವರ್ಗ ಊಳಿಗದಂತೆ ಅದನ್ನು ಬರೆಯಲಾಗುತ್ತದೆಯೆ? ಪೂರ್ವಜನ್ಮವೇ ಇಲ್ಲದಿರುವ ಮೇಲೆ ಹುಟ್ಟುವಾಗ ಜೀವಗಳ ಕರ್ಮವೇನೂ ಇರುವುದಿಲ್ಲ. ಹೀಗಿರುವಾಗ ಅವನು ಕರ್ಮರೇಖೆಯನ್ನೇನು ಎಳೆದನು? ಕರ್ಮಗಳಿಲ್ಲದೇನೇ ಎಳೆದವನಾದರೆ ಒಳ್ಳೇ ಕೆಟ್ಟ ಕರ್ಮಗಳಿಲ್ಲದ ಮೇಲೆ ಅವರಿಗೆ ಸುಖದುಃಖಗಳನ್ನೇಕೆ ಕೊಟ್ಟನು. ಹೀಗಾಗಿ ಅವನು ಅನ್ಯಾಯಕಾರಿಯೆನಿಸುತ್ತಾನೆ. ಈ ವಿಷಯದಲ್ಲಿ "'ದೇವರ ಇಚ್ಛೆಯದು" ಎನ್ನುವುದಾದರೂ ಅನ್ಯಾಯವಾಯಿತು. ಏಕೆಂದರೆ ಒಳ್ಳೆಯ ಅಥವಾ ಕೆಟ್ಟ ಕರ್ಮಗಳಿಲ್ಲದೆ ಸುಖದುಃಖಗಳನ್ನೀಯುವುದಕ್ಕೇನೇ ಅನ್ಯಾಯವೆನ್ನುತ್ತಾರೆ. ಆ ಸಮಯದಲ್ಲಿ ದೇವರೇ ಪುಸ್ತಕವನ್ನೋದುತ್ತಾನೊ? ಅಥವಾ ಅವನ ಸರಿಶ್ತೇದಾರನು ಓದಿ ಹೇಳುತ್ತಾನೊ? ದೀರ್ಘಕಾಲಕ್ಕಾಗಿ ಜೀವರನ್ನು ದೇವರೇ ಸಾಯಿಸಿದ ಮೇಲೆ ಅವನು ಅನ್ಯಾಯಕಾರಿಯಾದನು. ಅನ್ಯಾಯಕಾರಿಯಾಗಿರುವವನು ಎಂದಿಗೂ ದೇವರಾಗಲಾರನು. ॥೧೦೨॥

೧೦೩. ನಾವು ಸಮೂದನಿಗೆ ಗುರುತಿಗಾಗಿ ಹೆಣ್ಣು ಒಂಟೆಯನ್ನು ಕೊಟ್ಟೆವು. ಯಾರನ್ನು ಮರುಳುಗೊಳಿಸಬಲ್ಲೆಯೊ ಮರುಳುಗೊಳಿಸು. ತಮ್ಮ ತಮ್ಮ ಮುಖಂಡರೊಡನೆ ನಾವು ಎಲ್ಲರನ್ನೂ ಕರೆಯುವ ದಿವಸ ಎಲ್ಲರ ಬಲಗೈಯಲ್ಲೂ ಅವನವನ ಕರ್ಮಪುಸ್ತಕವು ಕೊಡಲ್ಪಟ್ಟಿರುವುದು.

[ಮುಂ. ೪। ಸಿ. ೧೫। ಸೂ. ೧೭। ಆ. ೫೯, ೬೪, ೭೧]

ಸಮೀಕ್ಷಕ—ವಾಹವ್ವ ! ದೇವರ ಆಶ್ಚರ್ಯಯುತವಾದ ಚಿಹ್ನೆಗಳಲ್ಲಿ ಹೆಣ್ಣು ಒಂಟೆಯೂ ದೇವರ ಅಸ್ತಿತ್ವದ ವಿಷಯದಲ್ಲೊಂದು ಪ್ರಮಾಣವು ಅಥವಾ ಪರೀಕ್ಷೆಯ ಸಾಧಕವಾಗಿದೆಯಂತೆ. ದೇವರು ಸೈತಾನನಿಗೆ ಜನರನ್ನು ಮೋಸಗೊಳಿಸುವ ಆಜ್ಞೆಯನ್ನಿತ್ತಿರುವುದಾದರೆ ದೇವರೇ ಸೈತಾನನ ಮುಖಂಡನೂ ಸಮಸ್ತ ಪಾಪಗಳನ್ನು ಮಾಡಿಸುವವನೂ ಆಗುತ್ತಾನೆ. ಇಂತಹವನನ್ನು ದೇವರೆಂದು ಕರೆಯುವುದು ತಿಳುವಳಿಕೆಯಿಲ್ಲದವರ ಮಾತಾಯಿತು. ಪೈಗಂಬರರನ್ನು ಅವರ ಉಪದೇಶಗಳನ್ನನುಸರಿಸುವವರನ್ನು ದೇವರು ಕಯಾಮತಿನ ದಿವಸ ಅಂದರೆ ಪ್ರಳಯಕಾಲದಲ್ಲಿ ನ್ಯಾಯಕ್ಕಾಗಿ ಕರೆಯುವುದಾದರೆ ಆ ಪ್ರಳಯಕಾಲದವರೆಗೆ ಅವರೆಲ್ಲ ಸೆರೆಯಲ್ಲಿ ಹೋಗುತ್ತಿರಬಹುದು. ನ್ಯಾಯವಾಗುವತನಕ ಹಾಗಿರುವುದು ಎಲ್ಲರಿಗೂ ದುಃಖದಾಯಕವಾಗುತ್ತದೆ. ಆದುದರಿಂದ ಶೀಘ್ರನ್ಯಾಯವೆಸಗುವುದೇ ನ್ಯಾಯಾಧೀಶನ ಉತ್ತಮ ಕಾರ್ಯವಾಗಿರುತ್ತದೆ. ಇದಾದರೋ ಪೋಪಲೀಲೆಯ ನ್ಯಾಯವಾಯಿತು ! ಉದಾ—ಒಬ್ಬ ನ್ಯಾಯಾಧೀಶನು—ಐವತ್ತು ವರುಷದ ವಯಸ್ಸಿನ ಕಳ್ಳರೂ ಸಾಹುಕಾರರೂ ಒಟ್ಟುಗೂಡದೆ ಇರುವತನಕ ನಾನು ಶಿಕ್ಷೆ ಅಥವಾ ಗೌರವಕೊಡುವುದಿಲ್ಲವೆಂದು ಹೇಳಿದಂತಿದೆ ಈ ನ್ಯಾಯ. ಒಬ್ಬನು ಐವತ್ತು ವರುಷಗಳ ಸೆರೆಯಲ್ಲೇ ಇರುತ್ತಾನೆ. ಇನ್ನೊಬ್ಬನನ್ನು ಇಂದೇ ಹಿಡಿದಿರುತ್ತಾರೆ. ಇಂತಹ ಕೆಲಸವು ನ್ಯಾಯದ ಕೆಲಸವಾಗಿರುವುದಿಲ್ಲ. ವೇದ-ಮನುಸ್ಮೃತಿಗಳಲ್ಲಿ ನೋಡಿರಿ. ನ್ಯಾಯಮಾಡುವಾಗ ಒಂದು ಕ್ಷಣದ ವಿಳಂಬವೂ ಆಗುವುದಿಲ್ಲ. ತಮ್ಮ ತಮ್ಮ ಕರ್ಮಾನುಸಾರವಾದ ದಂಡವನ್ನಾಗಲಿ ಗೌರವವನ್ನಾಗಲಿ ಯಾವಾಗಲೂ ಪಡೆಯುತ್ತಿರುತ್ತಾರೆ. ಎರಡನೇದಾಗಿ ಪೈಗಂಬರರನ್ನು ಸಾಕ್ಷಿರೂಪವಾಗಿಡುವುದರಿಂದ ದೇವರ ಸರ್ವಜ್ಞತ್ವಕ್ಕೇ ಭಂಗಬರುತ್ತದೆ. ಇಂತಹ ಪುಸ್ತಕವು ಈಶ್ವರಕೃತ ಮತ್ತು ಇಂತಹ ಪುಸ್ತಕದ ಉಪದೇಶವನ್ನು ಮಾಡುವವನು ದೇವರಾಗಬಲ್ಲನೆ? ಎಂದಿಗೂ ಆಗಲಾರನು. ॥೧೦೩॥

೧೦೪. ಅವರಿಗಾಗಿ ಸದಾಕಾಲವೂ ಇರುವ ಉದ್ಯಾನಗಳಿವೆ. ಅವುಗಳ ಕೆಳಗಿನಿಂದ ಕಾಲುವೆಗಳು ಹರಿಯುತ್ತಿವೆ. ಚಿನ್ನದ ಬಳೆಗಳಂ

ತಿರುವ ಆಭರಣಗಳನ್ನು ಅವರಿಗೆ ತೊಡಿಸಲಾಗುವುದು. ಹಸುರು ಬಣ್ಣದ ರೇಷ್ಮೆ ಮತ್ತು ಕಿಂಕಾಬು ವಸ್ತ್ರಗಳ ಉಡುಗೆಯನ್ನು ಉಡಿಸಲಾಗುವುದು. ಅದರ ನಡುವೆ ಮುಂಚದಮೇಲೆ ಕಲಾಬತ್ತಿನ ದಿಂಬುಗಳಿಗೊರಗಿರುತ್ತಾರೆ. ಒಳ್ಳೆಯ ಪುಣ್ಯಶಾಲಿಗಳಿಗೆ ಸ್ವರ್ಗವು ಒಳ್ಳೀ ಲಾಭವಾಗಿರುತ್ತವೆ. [ಮುಂ. ೪। ಸಿ. ೧೫। ಸೂ. ೧೪। ಆ. ೩೧]

ಸಮೀಕ್ಷಕ—ವಾಹವ್ವ! ಕುರಾನಿನ ಎಂತಹ ಸ್ವರ್ಗವಿದು? ಇದರಲ್ಲಿ ಆನಂದವನ್ನುಣ್ಣಲು ಉದ್ಯಾನ, ಆಭರಣ. ವಸ್ತ್ರ, ಹಾಸಿಗೆ, ದಿಂಬು ಮುಂತಾದುವೆಲ್ಲವೂ ಇವೆಯಂತೆ. ಬುದ್ಧಿವಂತನು ವಿಚಾರಿಸಿದರೆ ಮುಸಲ್ಮಾನರ ಸ್ವರ್ಗದಲ್ಲಿ ಅನ್ಯಾಯದ ಹೊರತು ಇಲ್ಲಿಗಿಂತ ಬೇರೇನೂ ವಿಶೇಷವಿರುವುದಿಲ್ಲ, ಅನ್ಯಾಯವೇಕೆಂದರೆ ಅವರ ಕರ್ಮಗಳಾದರೋ ಸಾಂತವಾದವುಗಳು. ಆದರೆ ಅವಕ್ಕೆ ದೊರೆತಿರುವ ಫಲವಾದರೋ ಅನಂತವಾದುದು. ಸಿಹಿಯನ್ನು ಪ್ರತಿದಿವಸ ತಿಂದಲ್ಲಿ ಅದು ಸ್ವಲ್ಪವೇ ದಿವಸಗಳಲ್ಲಿ ವಿಷದಂತೆ ಕಾಣಿಸುತ್ತದೆ. ಸ್ವರ್ಗದಲ್ಲಿರುವವರು ಯಾವಾಗಲೂ ಸುಖವನ್ನೇ ಪಡೆಯುವುದಾದರೆ ಅದರ ಸುಖವೂ ದುಃಖರೂಪವಾದೀತು. ಆದಕಾರಣ ಮಹಾಕಲ್ಪದ ಪರ್ಯಂತ ಮುಕ್ತಿಸುಖವನ್ನು ಪಡೆದು ಪುನಃ ಜನ್ಮಕ್ಕೆ ಬರುವುದೇ ಸತ್ಯಸಿದ್ಧಾಂತವಾಗಿರುತ್ತದೆ. ॥೧೦೪॥

೧೦೫. ಈ ಪಟ್ಟಣದ ನಿವಾಸಿಗಳು ಅನ್ಯಾಯಮಾಡಿದಾಗ ನಾವು ಅವರನ್ನು ಕೊಂದುಹಾಕಿದೆವು. ನಾವು ಆವರನ್ನು ಕೊಲ್ಲುವ ಪ್ರತಿಜ್ಞೆಯನ್ನು ದೃಢಪಡಿಸಿದೆವು.

[ಮುಂ. ೪। ಸಿ. ೧೫। ಸೂ. ೧೪। ಆ. ೫೯]

ಸಮೀಕ್ಷಕ—ಛೆಲೇ! ಇಡೀ ಪಟ್ಟಣವೇ ಪಾಪಿಯಾಗಬಲ್ಲುದೆ? ಆ ನಂತರ ಪ್ರತಿಜ್ಞೆಮಾಡಿದುದರಿಂದ ದೇವರು ಸರ್ವಜ್ಞನೆಂಬುದು ಉಳಯಲಿಲ್ಲ. ಅವರ ಅನ್ಯಾಯವನ್ನು ನೋಡಿದ ಮೇಲೆ ಪ್ರತಿಜ್ಞೆಮಾಡಿದನು. ಮೊದಲೇ ಅವನಿಗೆ ಅದು ಗೊತ್ತಿರಲಿಲ್ಲ. ಅವನು ಇದರಿಂಆ ದಯಾಹೀನನೂ ಆಗಿಬಿಟ್ಟನು. ॥೧೦೫॥

೧೦೬. ಆ ಹುಡುಗನ ತಂದೆತಾಯಿಗಳು ವಿಶ್ವಾಸವಂತರಾಗಿದ್ದರು. ಅವನು ವಿಮುಖತೆ ಮತ್ತು ಕಾಫಿರತನದಲ್ಲಿ ಅವರನ್ನು

ಸಿಕ್ಕಿಸುತ್ತಾನೇನೋ ಎಂದು ನಾವು ಹೆದರಿದೆವು. ಸೂರ್ಯನು ಮುಳುಗುತ್ತಿರುವ ಸ್ಥಳದ ವರೆಗೂ ಹೋದನು. ಅವನು ಕೆಸರಿನ ಪ್ರವಾಹದಲ್ಲಿ ಮುಳುಗುವುದನ್ನು ನೋಡಿದನು. ಆಗ ಅವರು ಹೇಳಿದರು—ಹೇ ಜುಲ್ಕರ್‌ನೈನೆ! ಯಾಜೂಜ ಮಾಜೂಜರು ನಿಜವಾಗಿ ಭೂಮಿಯ ಮೇಲೆ ದಂಗೆ ಮಾಡುವವರಾಗಿರುವರು.

[ಮಂ. ೪। ಸಿ. ೧೬। ಸೂ. ೧೮। ಆ. ೮೦, ೮೮, ೯೪]

ಸಮೀಕ್ಷಕ :—ದೇವರ ಎಷ್ಟು ಅಜ್ಞಾನವಿದು? ಹುಡುಗನ ತಂದೆತಾಯಿಗಳು ಎಲ್ಲಿಯಾದರೂ ನನ್ನ ಮಾರ್ಗದಿಂದ ತಪ್ಪಿಸಲ್ಪಟ್ಟು ವಿರುದ್ಧವಾಗಿ ಮಾಡಲ್ಪಡುವರೋ ಎಂಬ ಸಂದೇಹದಿಂದ ಅವನು ಭಯಪಟ್ಟನಂತೆ! ಇದೆಂದಿಗೂ ದೇವರ ಮಾತಲ್ಲ. ಇನ್ನು ಮುಂದಿನ ಅವಿದ್ಯಾವಚನವನ್ನಾಲಿಸಿರಿ—ಈ ಪುಸ್ತಕವನ್ನು ಬರೆದವನು ಸೂರ್ಯನು ರಾತ್ರಿಯಲ್ಲಿ ಒಂದು ಪ್ರವಾಹದಲ್ಲಿ ಮುಳುಗಿದವನೆಂದೂ ಪುನಃ ಬೆಳಿಗ್ಗೆ ಹೊರಗೆ ಬರುತ್ತಾನೆಂದೂ ಭಾವಿಸಿದ್ದಾನೆ. ಸೂರ್ಯನಾದರೋ ಪೃಥ್ವಿಗಿಂತ ಎಹ್ಮೋ ದೊಡ್ಡವನಾಗಿದ್ದಾನೆಂದ ಮೇಲೆ ಅವನು ನದೀನದಗಳಲ್ಲೋ ಸಮುದ್ರದಲ್ಲೋ ಹೇಗೆತಾನೆ ಮುಳುಗಬಲ್ಲನು? ಕುರಾನನ್ನು ಬರೆದವನಿಗೆ ಭೂಗೋಳ ಖಗೋಳಗಳ ವಿದ್ಯೆಯ ಅರಿವಿರಲಿಲ್ಲವೆಂದು ಇದರಿಂದ ತಿಳಿದುಬರುತ್ತದೆ. ಅರಿವಿದ್ದರೆ ಇಂತಹ ವಿದ್ಯಾವಿರುದ್ಧವಾದ ವಾಕ್ಯಗಳನ್ನೇಕೆ ಬರೆಯುತ್ತಿದ್ದನು? ಈ ಪುಸ್ತಕವನ್ನು ನಂಬುವವರಿಗೆ ವಿದ್ಯೆಯಿಲ್ಲವೆನ್ನಬೇಕು. ಇರುವುದಾದರೆ ಇಂತ ಮಿಥ್ಯಾ ಮಾತುಗಳಿಂದ ಕೂಡಿದ ಪುಸ್ತಕವನ್ನೇಕೆ ನಂಬುತ್ತಿದ್ದರು? ಇನ್ನು ದೇವರ ಅನ್ಯಾಯ ನೋಡಿರಿ! ತಾನೇ ಪೃಥ್ವಿಯನ್ನುಂಟುಮಾಡುವವನೂ, ರಾಜನೂ, ನ್ಯಾಯಾಧೀಶನೂ ಆಗಿದ್ದಾರೆ. ಮತ್ತು ಯಾಜೂಜಮಾಜೂಜರನ್ನು ಭೂಮಿಯಲ್ಲಿ ದಂಗೆಯೇಳಲೂ ಬಿಡುತ್ತಾನೆ. ಈ ಕಾರ್ಯವು ದೇವತ್ವಕ್ಕೆ ವಿರುದ್ಧವಾದುದು. ಆದುದರಿಂದ ಇಂತಹ ಪುಸ್ತಕವನ್ನು ಕಾಡುಜನರು ನಂಬುವರೇ ವಿನಹ ವಿದ್ವಾಂಸರು ನಂಬುವುದಿಲ್ಲ. ॥೧೦೬॥

೧೦೭. ಪುಸ್ತಕದ ನಡುವಿನಲ್ಲಿ ಮರಿಯಳನ್ನು ನೆನಪಿಕೊಳ್ಳಿರಿ. ಅವಳು ತನ್ನ ಜನರನ್ನು ಬಿಟ್ಟು ತನ್ನ ಮನೆಯ ಪೂರ್ವಪ್ರದೇಶದಲ್ಲಿ

ಹೋಗಿ ಬಿದ್ದಳು. ಅವಳ ಈಚೆಕಡೆಯಿಂದ ಪರದೆ ಬಿದ್ದಿತು. ಆಗ ನಾವು ಆತ್ಮವನ್ನು ಆರ್ಥಾತ್ ದೇವದೂತನನ್ನು ಕಳಿಸಿದೆವು. ಅವನು ಅಲ್ಲಿ ಬಲಿಷ್ಠನಾದ ಮನುಷ್ಯನ ಆಕೃತಿಯನ್ನು ಧರಿಸಿದನು. ಆಗ ಅವಳು ನೀನು ನಿಜವಾಗಿಯು ಶ್ರೇಷ್ಠನೂ ದಯಾಳುವೂ ಆದ ದೇವರಿಗಿದ್ದರೆ ನಿನ್ನ ಶರಣುಹೋಗುತ್ತೇನೆ, ಎಂದಳು. ಅವನು ಆಗ—ನಿನಗೆ ಪವಿತ್ರನಾದ ಮಗನನ್ನು ಕೊಟ್ಟು ಹೋಗಲು ನಿನ್ನ ಸ್ವಾಮಿಯಿಂದ ಕಳುಹಿಸಲ್ಪಟ್ಟವನೇ ಹೊರತು ನಾನು ಮತ್ತೇನೂ ಅಲ್ಲ ಎನ್ನಲು ಅವಳು—ಪುರುಷನು ನನ್ನನ್ನು ಇಷ್ಟರವರೆಗೆ ಮುಟ್ಟಲ್ಲ ವಾದುದರಿಂದ ನನಗೆ ಮಗನು ಹುಟ್ಟಲ್ಲ ನಾನು ಕೆಟ್ಟಕೆಲಸ ಮಾಡು ವವಳಲ್ಲ ಅಂದಳು. ಆಗ ಅವಳು ಅವನೊಡನಿದ್ದು ಗರ್ಭವತಿಯಾದಳು, ಮತ್ತು ಅವನ ಜೊತೆಯಲ್ಲಿ ಮನೆಯಿಂದ ದೂರದಲ್ಲಿ ಅಂದರೆ ಕಾಡಿರಲ್ಲಿ ಹೋಗಿ ಬಿದ್ದಳು.

[ಮಂ. ೪, ಸಿ. ೧೬, ಸೂ. ೧೯, ಆ. ೧೬, ೨೦-೨೨]

ಸಮಾಕ್ಷಕ—ಬುದ್ಧಿವಂತರೀಗ ಯೋಚಿಸಬೇಕು. ದೇದದೂತ ರೆಲ್ಲರೂ ದೇವರ ಆತ್ಮಗಳಾಗಿದ್ದರೆ ಅವರು ಬೇರೆ ವಸ್ತುಗಳಾಗಿರ ಲಾರರು. ಎರಡನೆಯದಾಗಿ ಆ ಕುಮಾರಿಯಾದ ಮರಿಯಳಿಗೆ ಮಗ ಹುಟ್ಟುವುದು ಅನ್ಯಾಯದ ಮಾತು. ಅವಳು ಯಾರೊಂದಿಗೂ ಸಮಾ ಗಮ ಮಾಡಲಿಚ್ಛಿಸುತ್ತಿರಲಿಲ್ಲ. ಆದರೆ ದೇವರ ಅಪ್ಪಣೆಯಿಂದ ದೇವ ದೂತನು ಅಲ್ಲಿಗೆ ತೆರಳಿ ಅವಳನ್ನು ಗರ್ಭವತಿಯಾಗಿ ಮಾಡಿದುದು ನ್ಯಾಯಕ್ಕೆ ವಿರುದ್ಧವಾಗಿದೆ. ಇಲ್ಲಿ ಇನ್ನೂ ಎಷ್ಟೋ ಅಸಭ್ಯತೆಯ ಮಾತುಗಳನ್ನು ಬರೆದಿದ್ದಾರೆ ಅವುಗಳನ್ನಿಲ್ಲಿ ಬರೆಯುವುದುಚಿತವೆಂದು ನಾವು ಭಾವಿಸಲಿಲ್ಲ. ॥೧೦೭॥

೧೦೮. ನಾವು ಕಾಫಿರರ ನೇಲೆ ಸೈತಾನನನ್ನು ಕಳಿಸಿರುವು ದನ್ನು ನೀನು ನೋಡಿಲ್ಲವೆ? ಅವರು ಕಾಫಿರರನ್ನು ಹುರಿದುಂಬಿಸಿ ಪಥಭ್ರಷ್ಟರನ್ನಾಗಿ ಮಾಡುತ್ತಾರೆ.

[ಮಂ. ೪। ಸಿ. ೧೬। ಸೂ. ೧೯। ಆ. ೮೩]

ಸಮಾಕ್ಷಕ :—ದೇವರೇ ಮೋಸಗೊಳಿಸುವುದಕ್ಕಾಗಿ ಸೈತಾನ ನನ್ನು ಕಳಿಸುತ್ತಿರುವಾಗ ಮೋಸಗೊಳಿಸುವವರ ದೋಷವೇನೂ

ಇರಲಾರದು. ಅವರಿಗೂ ಸೈತಾನನಿಗೂ ದಂಡವೂ ಸಿಗಲಾರದು. ಏಕೆಂದರೆ ಎಲ್ಲವೂ ದೇವರಾಜ್ಞೆಯಿಂದ ಆಗುತ್ತಲಿದೆ. ಅದರ ಫಲವೂ ದೇವರಿಗೇನೇ ಸಿಕ್ಕಬೇಕು. ನಿಜವಾಗಿ ಅವನು ನ್ಯಾಯಕಾರಿಯಾಗಿರುವುದಾದರೆ ಅವರ ನರಕವನ್ನು ತಾನೇ ಅನುಭವಿಸಬೇಕು ನ್ಯಾಯವನ್ನು ಬಿಟ್ಟು ಅನ್ಯಾಯಮಾಡುವವನಾದರೆ ಅನ್ಯಾಯಕಾರಿಯಾದ ಅವನೇ ಪಾಪಿಯಾಗಿಬಿಡುತ್ತಾನೆ. ॥೧೦೭॥

೧೦೯. ನಾನು ಆ ಮನುಷ್ಯನ ತೋಬಾ ವಚನಕ್ಕೆಕ್ಷಮೆ ಮಾಡುವವನಾಗಿದ್ದೇನೆ. ಅವನು ಅನಂತರ ವಿಶ್ವಾಸವಂತನಾದನು ಸತ್ಕರ್ಮಗಳನ್ನು ಮಾಡಿದನು ; ಮಾರ್ಗ ಪಡೆದನು.

[ಮುಂ. ಳ। ಸಿ. ೧೬। ಸೂ. ೨೦। ಆ ೮೨]

ಸಮೀಕ್ಷಕ—ತೋಬಾ ಮಾಡುವುದರಿಂದ ಪಾಪವು ಕ್ಷಮಿಸಲ್ಪಡುವ ಮಾತು ಕುರಾನಿನಲ್ಲಿದೆ. ಇದು ಎಲ್ಲರನ್ನೂ ಪಾಪಿಗಳನ್ನಾಗಿ ಮಾಡುತ್ತದೆ. ಏಕೆಂದರೆ ಪಾಪಿಗಳಲ್ಲಿ ಇದರಿಂದ ಪಾಪ ಮಾಡುವ ಸಾಹಸವು ಹೆಚ್ಚುತ್ತದೆ. ಆದುದರಿಂದ ಈ ಪುಸ್ತಕವೂ ಇದರ ಲೇಖಕನೂ ಪಾಪ ಮಾಡಲು ಪಾಪಿಗಳ ಉತ್ಸಾಹವನ್ನು ಹೆಚ್ಚಿಸುವವರಾಗಿರುವರು. ಆದಕಾರಣ ಈ ಪುಸ್ತಕವು ಈಶ್ವರಕೃತವೂ, ಇದರಲ್ಲಿ ಹೇಳಲ್ಪಟ್ಟವನು ದೇವರೂ ಆಗಿರಲಾರರು. ॥೧೦೯॥

೧೧೦. ಭೂಮಿಯು ಅಲ್ಲಾಡದಿರಲಿ ಎಂದುಕೊಂಡು ನಾವು ಭೂಮಿಯ ನಡುವಿನಲ್ಲಿ ಪರ್ವತಗಳನ್ನುಂಟುಮಾಡಿದೆವು.

[ಮುಂ. ಳ। ಸಿ. ೧೭। ಸೂ. ೨೧। ಆ. ೩೧]।

ಸಮೀಕ್ಷಕ—ಕುರಾನಿನ ಲೇಖಕನಿಗೆ ಪೃಥಿವಿಯು ತಿರುಗುತ್ತಿದೆಯೆಂದು ಗೊತ್ತಿದ್ದರೆ ಅವನು ಪರ್ವತಗಳನ್ನಿಟ್ಟದ್ದರಿಂದ ಅದು ಅಲ್ಲಾಡುವುದಿಲ್ಲವೆಂಬ ಮಾತನ್ನು ಬರೆಯುತ್ತಿರಲಿಲ್ಲ. ಪರ್ವತಗಳಿಲ್ಲದಿದ್ದರೆ ಅಲ್ಲಾಡುತ್ತಿದ್ದಿತೆಂಬ ಶಂಶಯವು ಅವನಿಗೆ ಹುಟ್ಟಿರಬೇಕು. ಹೀಗೆ ಹೇಳಿಯೂ ಸಹ ಭೂಕಂಪ ಬರುವಾಗ ಭೂಮಿಯು ಅಲ್ಲಾಡುತ್ತಿರುವುದೇತಕ್ಕೆ ? ॥೧೧೦॥

೧೧೧. ನಾವು ಆ ಹೆಂಗಸಿಗೆ ಉಪದೇಶವನ್ನಿತ್ತೆವು. ಅವಳು

ತನ್ನ ಗುಪ್ತಾಂಗಗಳನ್ನು ರಕ್ಷಿಸಿಕೊಂಡಳು. ನಾವು ಅವಳಲ್ಲಿ ನಮ್ಮ ಆತ್ಮವನ್ನೂ ದಿದ್ದೇವೆ. [ಮುಂ. ೪। ಸಿ. ೧೭। ಸೂ. ೨೧। ಆ. ೪೮]

ಸಮೀಕ್ಷಕ—ಇಂತಹ ಅಶ್ಲೀಲ ವಚನಗಳನ್ನು ದೇವರ ಪುಸ್ತಕದಲ್ಲಿ ದೇವರೇನು ಒಬ್ಬ ಸಭ್ಯ ಮನುಷ್ಯನೂ ಬರೆಯಲಾರ. ಮನುಷ್ಯರಲ್ಲಿ ಇಂತಹ ಮಾತುಗಳನ್ನು ಬರೆಯುವುದು ಉಚಿತವೆಂದು ಭಾವಿಸಲ್ಪಡದಿರುವ ಮೇಲೆ ದೇವರ ಎದುರಿನಲ್ಲಿ ಅವೇಕೆ ಒಳ್ಳೆಯವೆಂದು ಭಾವಿಸಲ್ಪಟ್ಟಾವು? ಇಂತಹ ಮಾತುಗಳಿಂದ ಕುರಾನೇ ದೂಷಿಸಲ್ಪಡುತ್ತದೆ. ಒಳ್ಳೇ ಮಾತುಗಳಿದ್ದಿದ್ದರೆ ವೇದಗಳಂತೆಯೇ ಅದು ಚೆನ್ನಾಗಿ ಪ್ರಶಂಸಿಸಲ್ಪಡುತ್ತಿತ್ತು. ॥೧೧೧॥

೧೧೨. ಆಕಾಶ ಮತ್ತು ಭೂಮಿಯ ನಡುವಿನಲ್ಲಿರುವ ಸೂರ್ಯ ಚಂದ್ರ, ನಕ್ಷತ್ರ, ವೃಕ್ಷ ಮತ್ತು ಪ್ರಾಣಿಗಳೆಲ್ಲವೂ ದೇವರಿಗೆ ನಮಸ್ಕಾರ ಮಾಡುವುದನ್ನು ನೀನು ನೋಡುವುದಿಲ್ಲವೋ? ಅಲ್ಲಿ ಅವರಿಗೆ ಚಿನ್ನದ ಕಂಕಣಗಳೂ ಮುತ್ತುಗಳೂ ತೋಡಿಡಲ್ಪಡುವವು. ಅವರಿಗೆ ರೇಶ್ಮೆಯ ಪೋಷಾಕು ಉಡಿಸಲ್ಪಡುವುದು. ಮತ್ತು ನಾಲ್ಕೂಕಡೆ ತಿರುಗುವವರಿಗಾಗಿಯೂ, ನಿಂತಿರುವವರಿಗಾಗಿಯೂ ನನ್ನ ಮನೆಯನ್ನು ಪವಿತ್ರವಾಗಿಡಿರಿ. ತಮ್ಮ ತಮ್ಮ ಕೊಳಕನ್ನು ದೂರಪಡಿಸಿರಿ. ಕಾಣಿಕೆಯನ್ನು ಸಲ್ಲಿಸಿರಿ. ಪ್ರಾಚೀನ ಮಂದಿರದ ಪ್ರದಕ್ಷಿಣೆ ಗೈಯಿರಿ. ಮತ್ತು ದೇವರ ಹೆಸರನ್ನು ನೆನಸಿಕೊಳ್ಳಿರಿ.

[ಮುಂ. ೪, ಸಿ. ೧೭, ಸೂ. ೨೨, ಆ. ೧೮, ೨೩, ೩೬, ೨೯, ೩೪]

ಸಮೀಕ್ಷಕ—ಜಡವಸ್ತುಗಳು ಪರಮೇಶ್ವರನನ್ನೇ ತಿಳಿಯಲಾರವೆಂದದೇಲೆ ಅವನ ಭಕ್ತಿಯನ್ನಾದರೂ ಹೇಗೆ ಮಾಡಬಲ್ಲವು? ಆ ವಿಧದಿಂದ ಈ ಪುಸ್ತಕವು ದೇವರು ನಿರ್ಮಿಸಿದ್ದೆಂದೂ ಆಗಲಾರದು. ಮಾತ್ರವಲ್ಲ. ಇದನ್ನು ಯಾರೋ ಭ್ರಾಂತಿಯುತ ಮನುಷ್ಯನು ಬರೆದಿರುವಂತೆ ತೋರುತ್ತದೆ. ವಾಹವ್ವ! ಒಳ್ಳೆಯ ಸ್ವರ್ಗವಿದು! ಚಿನ್ನ ಮುತ್ತುಗಳ ಆಭರಣಗಳೂ ರೇಶ್ಮೆಯ ಬಟ್ಟೆಗಳೂ ಧರಿಸಿಕೊಳ್ಳಲು ಸಿಗುವ ಸ್ವರ್ಗವು ಇಲ್ಲಿನ ರಾಜರುಗಳ ಮನೆಗಳಿಗಿಂತ ಏನೂ ಹೆಚ್ಚಿಂದು ತೋರುವುದಿಲ್ಲ. ದೇವರಿಗೆ ಮನೆಯಿರುವುದಾದರೆ ಅವನು ಅಲ್ಲೇ ವಾಸಿಸುತ್ತಿರಬಹುದು.

ಹಾಗಿದ್ದರೆ ಅದು ಮೂರ್ತಿಪೂಜೆಯಾಗಲಿಲ್ಲವೇ? ಇವರ ಮೂರ್ತಿ ಪೂಜಕರನ್ನು ಖಂಡಿಸುವುದಾದರೂ ಏತಕ್ಕೆ? ದೇವರು ಕಾಣಿಕೆಯನ್ನು ತೆಗೆದುಕೊಳ್ಳುವುದು, ತನ್ನ ಮನೆಯ ಪ್ರದಕ್ಷಿಣೆಮಾಡಿಸುವುದು ಮತ್ತು ಪಶುಗಳನ್ನು ಕೊಲ್ಲಿಸಿ ತಿನ್ನಿಸಿಕೊಳ್ಳುವುದು ಇವುಗಳನ್ನು ಮಾಡುತ್ತಾನಾದರೆ ಈ ದೇವರು ದೇವಸ್ಥಾನಗಳಲ್ಲಿರುವ ಭೈರವ, ದುರ್ಗೆ ಮುಂತಾದವರ ಸಮಾನನಾಗುತ್ತಾನೆ. ಮೂರ್ತಿಗಳಿಗಿಂತಲೂ ಮಸೀದಿಯು ದೊಡ್ಡ ಮೂರ್ತಿಯಾಗಿರುತ್ತದೆ, ಅದುದರಿಂದ ಈ ದೇವರು ಮಹಾ ಮೂರ್ತಿಪೂಜೆಯನ್ನು ಆರಂಭಿಸುವವನಾಗುತ್ತಾನೆ. ಆದುದರಿಂದ ಈ ದೇವರು ಮತ್ತು ಮುಸಲ್ಮಾನರು ಮಹಾಮೂರ್ತಿವೂಜಕರೂ ಪೌರಾಣಿಕರು ಮತ್ತು ಜೈನರು ಸಣ್ಣಮೂರ್ತಿಪೂಜಕರೂ ಆಗಿರುತ್ತಾರೆ. ||೧೧೨||

೧೧೩. ಕಯಾಮತಿನ ದಿವಸ ನಿಶ್ಚಯವಾಗಿ ನೀವು ಎಬ್ಬಿಸಲ್ಪಡುವಿರಿ. [ಮಂ. ೪। ಸಿ. ೧೪। ಸೂ. ೨೩। ಆ. ೧೬]

ಸಮೀಕ್ಷಕ:—ಕಯಾಮತಿನವರೆಗೆ ಜೀವಗಳು ಸಮಾಧಿಯಲ್ಲೇ ಇರುತ್ತವೆಯೊ? ಅಥವಾ ಬೇರಾವುದಾದರೂ ಕಡೆಯಲ್ಲಿರುತ್ತವೆಯೊ? ಅವುಗಳಲ್ಲೇ ಇರುವದಾದರೆ ಕೊಳೆತುಹೋಗಿ ದುರ್ಗಂಧ ಹೊರಡುತ್ತಿರುವ ಶರೀರದಲ್ಲಿದ್ದು ಪುಣ್ಯಾತ್ಮರೂ ಕೂಡ ದುಃಖವನ್ನನುಭವಿಸುವರು. ಇಂತಹ ನ್ಯಾಯವು ಅನ್ಯಾಯವಾಗಿರುತ್ತದೆ. ದುರ್ಗಂಧವು ಹೆಚ್ಚಿ ರೋಗೋತ್ಪತ್ತಿಯಾಗುವುದರಿಂದ ದೇವರೂ ಮುಸಲ್ಮಾನರೂ ಪಾಪಭಾಗಿಗಳಾಗುವರು. ||೧೧೩||

೧೧೪. ಆ ದಿವಸಗಳಲ್ಲಿ ಅವರ ನಾಲಿಗೆಗಳೂ, ಕೈಕಾಲುಗಳೂ ತಾವು ಮಾಡಿದ ವಸ್ತುಗಳ ಬಗ್ಗೆ ಅವರ ಮೇಲೆ ಸಾಕ್ಷಿಹೇಳುವುವು. ದೇವರು ಆಕಾಶ ಮತ್ತು ಭೂಮಿಯ ಪ್ರಕಾಶವಾಗಿರುವನು. ಗೂಡಿನಲ್ಲಿಟ್ಟ, ಕಂದೀಲಿನೊಳಗಿನ ದೀಪದ ಪ್ರಕಾಶದಂತಿದೆ ಆ ಪ್ರಕಾಶ. ಆ ಕಂದೀಲು ಹೊಳೆಯುವ ನಕ್ಷತ್ರದಂತಿದೆ; ಪವಿತ್ರವಾದ ಆಲಿವ್ ವೃಕ್ಷದ ತೈಲದಿಂದ ಉರಿಸಲ್ಪಡುತ್ತದೆ. ಆ ಆಲಿವ್ ಮರವು ಪೂರ್ವದ್ದೂ ಅಲ್ಲ; ಪಶ್ಚಿಮದ್ದೂ ಅಲ್ಲ. ಪ್ರಕಾಶವಾಗುವುದಕ್ಕಿಂತ ಹೆಚ್ಚು ತೈಲವ

ನ್ನಪೇಕ್ಷಿಸದು. ಅಲ್ಲಾಹನು ತನಗೆ ಬೇಕಾದವನಿಗೆ ತನ್ನ ಜ್ಯೋತಿಯ ದಾರಿಯನ್ನು ತೋರಿಸುತ್ತಾನೆ.

[ಮುಂ. ಳ। ಸಿ. ೧೮। ಸೂ. ೨೪। ಆ. ೩೪-೩೫]

ಸಮೀಕ್ಷಕ—ಕೈಕಾಲು ಮುಂತಾದುವು ಜಡವಸ್ತುಗಳಾಗಿರುವುದರಿಂದ ಎಂದಿಗೂ ಸಾಕ್ಷಿಯನ್ನು ಯೇಳಲಾರವು. ಈ ಮಾತು ಸೃಷ್ಟಿಕ್ರಮಕ್ಕೆ ವಿರುದ್ಧವಾಗಿರುವುದರಿಂದ ಸುಳ್ಳಾಗಿದೆ. ಈ ರೀತಿಯ ದೃಷ್ಟಾಂತವನ್ನು ಕೊಡಲು ಅವನೇನು ಬೆಂಕಿಯೊ? ಅಥವಾ ಮಿಂಚೊ? ಇಂತಹ ದೃಷ್ಟಾಂತವು ದೇವರಲ್ಲಿ ಸರಿಹೋಗುವುದಿಲ್ಲ. ಒಂದು ಸಾಕಾರವಸ್ತುವಿನಲ್ಲಾದರೆ ಸರಿಹೋಗಬಲ್ಲದು. ॥೧೧೪॥

೧೧೫. ದೇವರು ಪ್ರತಿಯೊಂದು ಜಂತುವನ್ನೂ ನೀರಿನಿಂದ ಸೃಷ್ಟಿಸಿದ್ದಾನೆ. ಅವುಗಳಲ್ಲಿ ಕೆಲವು ಹೊಟ್ಟೆಯ ಆಧಾರದಿಂದ ಚಲಿಸುತ್ತವೆ. ಯಾರು ದೇವರ ಮತ್ತು ಅವನ ರಸೂಲರ ಆಜ್ಞೆಯನ್ನು ಪಾಲಿಸುವಿರೋ ಅಂತಹವರು. ದೇವರ ಮತ್ತು ರಸೂಲರ ಅಪ್ಪಣೆಯನ್ನು ಪಾಲಿಸಲು ಹೇಳು. ದಯೆತೋರಿಸಲ್ಪಡಲು ರಸೂಲರ ಆಜ್ಞೆಯನ್ನು ಪಾಲಿಸಿರಿ.

[ಮುಂ. ಳ। ಸಿ. ೧೪। ಸೂ. ೨೪। ಆ. ೪೫, ೫೨, ೬೦, ೬೧]

ಸಮೀಕ್ಷಕ:—ಇದೆಂತಹ ತತ್ವಜ್ಞಾನವು? ಸಮಸ್ತ ಜಂತುಗಳಲ್ಲಿ ಎಲ್ಲಾ ತತ್ವಗಳು ಕಾಣುತ್ತಿದ್ದೂ ಬರೇ ನೀರಿನಿಂದ ಅವುಗಳನ್ನು ಹುಟ್ಟಿಸಿದನಂತೆ! ಇದು ಬರೇ ಅವಿದ್ಯೆಯ ಮಾತು. ದೇವರೊಂದಿಗೆ ರಸೂಲರ ಆಜ್ಞೆಯನ್ನು ಪಾಲಿಸಬೇಕಾದರೆ ಅವರು ದೇವರೊಡನೆ ಕೂಡಿಕೊಂಡರೊ ಇಲ್ಲವೊ? ಹೀಗಿದ್ದ ಮೇಲೆ ಕುರಾನಿನಲ್ಲಿ ದೇವರಿಗೆ 'ಲಾಶರೀಕ್' ಎಂದು ಬರೆದುದೇಕೆ? ಮತ್ತು ನೀವು ಹಾಗೆ ಹೇಳುವುದಾದರೂ ಏತಕ್ಕೆ? ॥೧೧೫॥

೧೧೬. ಆ ದಿವಸ ಮೋಡಗಳ ಜೊತೆಯಲ್ಲೇ ಆಕಾಶವು ಬಿರಿಯುವುದು. ಆಗ ದೇವದೂತರನ್ನು ಇಳಿಸಲಾಗುವುದು. ಕಾಫಿರರ ಮಾತನ್ನು ನಂಬಬೇಡ. ಅವರೊಡನೆ ಘೋರವಾಗಿ ಯುದ್ಧಮಾಡಿರಿ. ಅವರ ಕೇಡುಗಳನ್ನು ದೇವರು ಹಿತಗಳಾಗಿ ಮಾರ್ಪಡಿಸುತ್ತಾನೆ

ಯಾರಾದರೂ ಪ್ರಾಯಶ್ಚಿತ್ತ ವನ್ನು ಮಾಡಿ ಒಳ್ಳೆಯ ಕರ್ಮಗಳನ್ನು ಮಾಡಿದರೆ ಅವನು ನಿಶ್ಚಯವಾಗಿ ದೇವರ ಕಡೆಗೆ ಬರುತ್ತಾನೆ.

[ಮುಂ. ೪। ಸಿ. ೧೯। ಸೂ. ೨೫। ಆ. ೨೫, ೫೨, ೭೦, ೭೧]

ಸಮಿಾಕ್ಷಕ—ಆಕಾಶವು ಮೋಡಗಳೊಂದಿಗೆ ಒಡೆದುಹೋಗುವು ದೆಂಬ ಮಾತನ್ನೆಂದಿಗೂ ನಿಜವೆಂದು ನಂಬಲಾಗುವುದಿಲ್ಲ. ಆಕಾಶವು ಸಾಕಾರ ಪದಾರ್ಥವಾಗಿದ್ದರೆ ತಾನೆ ಅದು ಒಡೆಯಬಲ್ಲುದು? ಮುಸಲ್ಮಾನರ ಈ ಕುರಾನು ಶಾಂತಿಯನ್ನು ಭಂಗಪಡಿಸಿ ವಿದ್ರೋಹ ವನ್ನೂ ಯುದ್ಧವನ್ನೂ ಎಬ್ಬಿಸಿಬಿಡುತ್ತದೆ ಆದುದರಿಂದ ಧಾರ್ಮಿಕರೂ ವಿದ್ವಾಂಸರೂ ಆಗಿರುವವರು ಇದನ್ನು ನಂಬುವುದಿಲ್ಲ. ಪಾಪಪುಣ್ಯಗಳ ಪರಿವರ್ತನೆಯೂ ಒಂದು ವಿಚಿತ್ರವಾದ ನ್ಯಾಯವಾಗಿದೆ. ಆದೇನು ಉಮ್ದು ಎಳ್ಳುಗಳನ್ನು ಬದಲಿಸಿಕೊಳ್ಳುವಂತಹ ವಿಷಯವೆ? ತೋಬಾ ಮಾಡುವುದರಿಂದ ಪಾಪಗಳು ನಾಶವಾಗಿ ದೇವರು ಸಿಕ್ಕುವುದಾರೆ ಯಾರೂ ಪಾಪಮಾಡಲು ಹೆದರರು. ಆದುದರಿಂದ ಇವೆಲ್ಲಾ ಮಾತು ಗಳು ವಿದ್ಯೆಗೆ ವಿರುದ್ಧವಾಗಿರುತ್ತವೆ. ॥೧೧೬॥

೧೧೭. ನಾವು ಮೋಶೆಯ ಕೈಗೆ ಪುಸ್ತಕವನ್ನು ಕೊಟ್ಟು— ನೀನು ರಾತ್ರಿಯಲ್ಲಿ ಇದನ್ನು ನನ್ನ ಭಕ್ತರಿಗಾಗಿ ಕೊಂಡುಹೋಗು ಅಗತ್ಯವಾಗಿ ನಿನ್ನನ್ನು ಹಿಂಬಾಲಿಸುವರು, ಎಂದು ಹೇಳಿದೆವು. ಆಗ ಫಿರಾನನು ಜನರನ್ನು ಒಟ್ಟುಗೂಡಲು ನಗರಗಳಿಗೆ ಕಳಿಸಿದನು. ನನ್ನನ್ನುಂಟುಮಾಡಿದವನೇ ನನಗೆ ದಾರಿತೋರಿಸುತ್ತಾನೆ. ಅವನೇ ನನಗೆ ತಿನ್ನಿಸುತ್ತಾನೆ. ಅವನೇ ಕುಡಿಸುತ್ತಾನೆ. ಅದೇ ಪುರುಷನು ಕಯಾಮತಿನ ದಿನ ನನಗಾಗಿ ನನ್ನ ಅಪರಾಧಗಳನ್ನೆಲ್ಲಾ ಕ್ಷಮಿಸುವ ನೆಂದು ಭರವಸೆಯಿಡುತ್ತೇನೆ.

[ಮುಂ. ೫। ಸಿ. ೧೯। ಸೂ. ೨೬। ಆ. ೫೨, ೫೪, ೭೮, ೭೯, ೮೨]

ಸಮಿಾಕ್ಷಕ—ದೇವರು ಮೋಶೆಗೆ ಪುಸ್ತಕವನ್ನು ಕಳುಹಿಸಿರುವ ಮೇಲೆ ದಾವೀದ, ಏಸು ಮತ್ತು ಮಹಮ್ಮದ ಪೈಗಂಬರರಿಗೇಕೆ ಕಳುಹಿಸಿದನು? ದೇವರ ಮಾತು ಯಾವಾಗಲೂ ತಪ್ಪಿಲ್ಲದೆ ಒಂದೇ ರೀತಿಯಾಗಿರುತ್ತದಲ್ಲವೆ? ಮೋಶೆಯ ಅನಂತರ ಕುರಾನಿನವರೆಗಿನ ಪುಸ್ತಕಗಳನ್ನು ಕಳುಹಿಸಿರುವುದರಿಂದ ಮೊದಲಿನ ಪುಸ್ತಕಗಳಲ್ಲಿ

ತಪ್ಪಿತ್ತೆಂದು ಭಾವಿಸಲಾಗುವುದು? ಮೊದಲಿನ ಮೂರು ಪುಸ್ತಕಗಳು ನಿಜವಾಗಿದ್ದರೆ ಕುರಾನು ಸುಳ್ಳಾಗಿಬಿಡುತ್ತದೆ. ಪರಸ್ಪರ ವಿರೋಧವನ್ನುಳ್ಳ ನಾಲ್ಕು ಪುಸ್ತಕಗಳು ಸರ್ವಥಾ ಸತ್ಯವಾಗಲಾರವು. ದೇವರು ಜೀವಾತ್ಮರನ್ನು ಉಂಟುಮಾಡಿದ್ದರೆ ಅವರು ಒಂದುಸಲ ಸತ್ತೂ ಹೋಗುವರು. ಅವರ ಅಭಾವವೂ ಆಗುವುದು. ದೇವರೇ ಮನುಷ್ಯಾದಿ ಪ್ರಾಣಿಗಳಿಗೆ ತಿನ್ನಿಸುವುದು ಕುಡಿಸುವುದಾದರೆ ಯಾರಿಗೂ ಖಾಯಿಲೆ ಬರಬಾರದು. ಮತ್ತು ಸಮಸ್ತರಿಗೂ ಸಮಾನವಾದ ಊಟವನ್ನು ಕೊಡಬೇಕು. ಪಕ್ಷಪಾತದಿಂದ ಒಬ್ಬನಿಗೆ ಉತ್ತಮವೂ ಇನ್ನೊಬ್ಬನಿಗೆ ನಿಕೃಷ್ಟವೂ ಆದ ಊಟ ಅಂದರೆ ರಾಜನಿಗೆ ಶ್ರೇಷ್ಠವೂ ದರಿದ್ರನಿಗೆ ನಿಕೃಷ್ಟವೂ ಆದ ಊಟವು ಸಿಗಬಾರದಿತ್ತು. ದೇವರೇ ತಿನ್ನಿಸಿ ಕುಡಿಸುವವನೂ ಪಥ್ಯಮಾಡಿಸುವವನೂ ಆಗಿರುವುದಾದರೆ ಖಾಯಿಲೆಯೇ ಬರಬಾರದು. ಆದರೆ ಇಲ್ಲಿ ಮುಸಲ್ಮಾನರಿಗೂ ಖಾಯಿಲೆ ಬರುತ್ತದೆ. ದೇವರೇ ಖಾಯಿಲೆಯನ್ನು ಗುಣಪಡಿಸಿ ಆರೋಗ್ಯವನ್ನು ಕೊಡುವವನಾಗಿರುವುದಾದರೆ ಮುಸಲ್ಮಾನರ ಶರೀರದಲ್ಲಿ ರೋಗಗಳೇ ಇರಬಾರದು. ಅವಿರುವುದಾದರೆ ಮುಸಲ್ಮಾನರ ದೇವರು ಒಳ್ಳೆಯ ವೈದ್ಯನೇ ಅಲ್ಲ. ಅವನು ಪೂರ್ಣವೈದ್ಯನಾಗಿದ್ದರೆ ಮುಸಲ್ಮಾನರ ಶರೀರದಲ್ಲಿ ರೋಗಗಳೇಕೆ ಉಳಿಯುತ್ತವೆ? ದೇವರೇ ಕೊಲ್ಲುವುದೂ ಬದುಕಿಸುವುದೂ ಆಗಿದ್ದರೆ ಪಾಪಪುಣ್ಯಗಳು ಅವನಿಗೇನೇ ಸಲ್ಲಬೇಕು. ಜನ್ಮ ಜನ್ಮಾಂತರದ ಕರ್ಮಗಳಿಗನುಸಾರವಾಗಿ ವ್ಯವಸ್ಥೆ ಮಾಡುವುದಾದರೆ ಮಾತ್ರ ಅವನಿಗೇನೂ ಅಪರಾಧ ತಟ್ಟದು. ದೇವರು ಪಾಪಗಳನ್ನು ಕ್ಷಮಿಸಿ ಕಯಾಮತಿನ ರಾತ್ರಿಯಲ್ಲಿ ನ್ಯಾಯಮಾಡುವುದಾದರೆ ಅವನು ಪಾಪಗಳನ್ನು ಹೆಚ್ಚಿಸುವವನಾಗಿ ತಾನೇ ಪಾಪಿಯಾಗುವನು. ಕ್ಷಮಿಸುವುದಿಲ್ಲವಾದರೆ ಕುರಾನಿನ ಮಾತು ಸುಳ್ಳಾಗಿರುವುದರಿಂದ ಉಳಿಯಲಾರದು. ॥೧೧೭॥

೧೧೮. ನೀನು ನಮ್ಮಂತಹ ಮನುಷ್ಯನಲ್ಲ. ನೀನು ಸತ್ಯವಂತರಲ್ಲಿಯಾಗಿದ್ದರೆ ಏನಾದರೂ ಚಿಹ್ನೆಯನ್ನು ತೋರಿಸು. ಹೇಳಿದನು— ಒಂದೇಸಲ ನೀರು ಕುಡಿಯುವ ಈ ಹೆಣ್ಣು ಒಂಟಿ ಅವನಿಗಾಗಿದೆ.

[ಮಂ. ೫, ಸಿ. ೧೯, ಸೂ. ೨೬, ಆ. ೧೫೪, ೧೫೫]

ಸಮಿಾಕ್ಷಕ—ಕಲ್ಲಿನಿಂದ ಒಂಟೆ ಹೊರಟ ಮಾತನ್ನು ಯಾರಾದರೂ ನಂಬುವರೆ? ಈ ಮಾತನ್ನು ನಂಬಿದವರು ಕಾಡುಜನರಾಗಿದ್ದರು. ಒಂಟೆಯನ್ನು ಚಿಹ್ನೆಯೆಂದು ತೋರಿಸುವುದು ದೇವರ ವ್ಯವಹಾರವಲ್ಲ ಅದು ತೀರಾ ನಿಕೃಷ್ಟವ್ಯವಹಾರವು. ಈ ಪುಸ್ತಕವು ಈಶ್ವರಕೃತವಾಗಿದ್ದರೆ ಇಂತಹ ವ್ಯರ್ಥವಚನಗಳು ಇದರಲ್ಲಿರುತ್ತಿರಲೇ ಇಲ್ಲ. ॥೧೧೪॥

೧೧೯. ಎಲೈ ಮೋಶೆಯೆ! ನಿಜವಾಗಿ ನಾನೇ ಬಲಿಷ್ಠನಾದ ದೇವರಾಗಿರುವೆನು. ತನ್ನ ಕೈಯಲ್ಲಿನ ದೊಣ್ಣೆಯನ್ನು ಕೆಳಗೆ ಬಿಟ್ಟು ಬಿಡು ಎಂದನು. ಅದನ್ನು ನೋಡಲು ಅದು ಸರ್ಪದಂತೆ ಆಲ್ಲಾಡುತ್ತಿತ್ತು. ಮೋಶೆಯೆ! ಹೆದರಬೇಡ ನನ್ನಹತ್ತಿರ ಪೈಗಂಬರರು ನಿಜವಾಗಿಯೂ ಭಯಪಡುವುದಿಲ್ಲ. ದೇವರಂತೆ ಅದ್ವೀತಿಯನು ಬೇರೆಯಿಲ್ಲ. ಅವನು ದೊಡ್ಡದಾದ ಆಕಾಶದ ಸ್ವಾಮಿಯಾಗಿರುವನು. ನನ್ನ ವಿಷಯದಲ್ಲಿ ವಿದ್ರೋಹಮಾಡಬೇಡಿ. ಮತ್ತು ಮುಸಲ್ಮಾನರಾಗಿ ನನ್ನಹತ್ತಿರ ಬನ್ನಿರಿ.

[ಮಂ. ೫, ಸಿ. ೧೯, ಸೂ. ೨೭, ೪೫, ೯, ೧೦, ೨೬, ೩೧]

ಸಮಿಾಕ್ಷ—ಇನ್ನು ನೋಡಿರಿ! ತನ್ನ ಬಾಯಿಯಿಂದ ದೇವರು ತನ್ನನ್ನೇ ದೊಡ್ಡವನೆನ್ನುತ್ತಿದ್ದಾನೆ. ತನ್ನ ಮುಖದಿಂದ ತನ್ನನ್ನು ಪ್ರಶಂಸಿಸಿಕೊಳ್ಳುವುದು ಶ್ರೇಷ್ಠಪುರುಷರ ಕರ್ತವ್ಯವೂ ಅಲ್ಲವೆಂದ ಮೇಲೆ ದೇವರ ಕಾರ್ಯವಾದರೂ ಹೇಗಾದೀತು? ಅದುದರಿಂದಲೇ ಇವನು ಇಂದ್ರಜಾಲದ ಚಾತುರ್ಯ ತೋರಿಸಿ ಕಾಡುಜನರನ್ನು ವಶಪಡಿಸಿ ತಾನು ಅವರ ದೇವರಾಗಿಬಿಟ್ಟಿದ್ದಾನೆ. ಇಂತಹ ಮಾತು ದೇವರ ಪುಸ್ತಕದಲ್ಲಿ ಎಂದಿಗೂ ಇರಲಾರದು. ಅವನು ದೊಡ್ಡ ಆಕಾಶದ ಅಂದರೆ ಏಳನೇ ಆಕಾಶದ ಒಡೆಯನಾಗಿರುವುದಾದರೆ ಏಕದೇಶಿಯಾಗಿರುವುದರಿಂದ ದೇವರಾಗಲಾರನು. ವಿದ್ರೋಹಮಾಡುವುದು ತಪ್ಪಾದರೆ ದೇವರೂ ಮಹಮ್ಮದಸಾಹೇಬರೂ ತಮ್ಮ ಸ್ತುತಿಗಳನ್ನು ಪುಸ್ತಕದಲ್ಲೇಕೆ ತುಂಬಿಟ್ಟರು? ಮಹಮ್ಮದ ಸಾಹೇಬರು ಅನೇಕರನ್ನು ಕೊಂದರು. ಇದರಿಂದ ವಿದ್ರೋಹವಾಯಿತೊ ಇಲ್ಲವೊ? ಈ ಕುರಾನು ಪುನರುಕ್ತ ಮತ್ತು ಪೂರ್ವಾಪರ ವಿರುದ್ಧವೆಂಬ ದೋಷಗಳಿಂದ ತುಂಬಿಕೊಂಡಿದೆ. ॥೧೧೯॥

೧೨೦. ನೀನು ಪರ್ವತಗಳನ್ನು ನೋಡಿದರೆ ಅವು ನಿಂತಿವೆಯೆಂದು ಅನುಮಾನಪಡುತ್ತೀಯೇ. ಅವು ಓಡಾಡುವ ಮೋಡಗಳಂತೆ ಚಲಿಸುತ್ತವೆ. ಪ್ರತಿಯೊಂದು ವಸ್ತುವನ್ನೂ ದೃಢಪಡಿಸಿದ ದೇವರ ನೈಪುಣ್ಯವನ್ನು ತೋರಿಸುತ್ತದೆ ಅವನು ನೀನು ಮಾಡುವುದರ ವಿಷಯದಲ್ಲೆಲ್ಲಾ ಸಾವಧಾನನಾಗಿದ್ದಾನೆ.

[ಮಂ. ೫, ಸಿ. ೨೦, ಸೂ. ೨೭, ಆ. ೪೪]

ಸಮೀಕ್ಷಕ :—ಮೋಡಗಳೋಪಾದಿಯಲ್ಲಿ ಪರ್ವತಗಳು ಕುರಾನನ್ನು ಬರೆದವರ ದೇಶದಲ್ಲಿ ಚಲಿಸುತ್ತಿರಬಹುದು. ಇನ್ನೆಲ್ಲಿಯೂ ಚಲಿಸುವುದಿಲ್ಲ. ದೇವರ ಸಾವಧಾನತೆಯು ಎಷ್ಟಿದೆಯೆಂಬುದು ವಿದ್ರೋಹಿಯಾದ ಸೈತಾನನನ್ನು ಹಿಡಿದು ಶಿಕ್ಷೆಯನು ಕೊಡದಿರುವುದರಿಂದಲೇ ಗೊತ್ತಾಗಿಬಿಡುತ್ತದೆ. ವಿದ್ರೋಹಿಯನ್ನು ಇಷ್ಟರವರೆಗೆ ದಂಡಿಸದೆ ಮತ್ತು ಹಿಡಿಯದೆ ಇರುವುದಕ್ಕಿಂತಲೂ ಹೆಚ್ಚಾದ ಅಸಾವಧಾನತೆ ಇನ್ನಾವುದಿದೆ? ॥೧೨೦॥

೧೨೧. ಮೋಶೆಯು ಆ ದುಷ್ಟನನ್ನು ಹೊಡೆದು ಅವನ ಜೀವನವನ್ನೇ ಕೊನೆಗಾಣಿಸಿಬಿಟ್ಟನು.—ದೇವರೆ! ನಿಜವಾಗಿ ನಾನು ಅನ್ಯಾಯಮಾಡಿದ್ದೇನೆ. ನನ್ನ ಆತ್ಮವನ್ನು ಕ್ಷಮಿಸು, ಎಂದನು. ಆಗ ಅವನನ್ನು ಕ್ಷಮಿಸಲಾಯಿತು. ನಿಶ್ಚಯವಾಗಿ ದೇವರು ಕ್ಷಮಿಸುವ ದಯಾಳುವಾಗಿರುವನು. ನಿನ್ನ ಒಡೆಯನು ಬಯಸಿದ್ದನ್ನು ಉಂಟುಮಾಡುತ್ತಾನೆ ಮತ್ತು ಮೆಚ್ಚುತ್ತಾನೆ.

[ಮಂ. ೫। ಸಿ. ೨೦। ಸೂ. ೨೮। ಆ. ೧೫, ೧೬, ೬೮]

ಸಮೀಕ್ಷಕ :—ಇನ್ನು ಕ್ರೈಸ್ತ—ಮುಸಲ್ಮಾನರ ಪೈಗಂಬರರ ಮತ್ತು ದೇವರವಿಷಯ ನೋಡಿರಿ, ಪೈಗಂಬರನಾದ ಮೋಶೆಯ ವಧೆಯನ್ನು ದೇವರು ಕ್ಷಮೆಯನ್ನು ಮಾಡಿರುವುದರಿಂದ ಇಬ್ಬರೂ ಅನ್ಯಾಯಕಾರಿಗಳಾದರಲ್ಲವೆ? ತನ್ನಿಚ್ಛೆಯಿಂದಲೇ ಅವನು ಬೇಕಾದುದನ್ನೆಲ್ಲಾ ಉಂಟುಮಾಡುತ್ತಾನೆಯೆ? ತನ್ನಿಚ್ಛೆಯಿಂದಲೇ ಒಬ್ಬನನ್ನು ರಾಜನಾಗಿಯೂ ಇನ್ನೊಬ್ಬನನ್ನು ದರಿದ್ರನಾಗಿಯೂ ಮತ್ತು ಒಬ್ಬನನ್ನು ವಿದ್ವಾಂಸನಾಗಿಯೂ ಇನ್ನೊಬ್ಬನನ್ನು ಮೂರ್ಖನಾಗಿಯೂ ಮಾಡಿರು

ವನೆ? ಹಾಗಿರುವುದಾದರೆ ಕುರಾನು ಸತ್ಯವೂ ಅಲ್ಲ, ನ್ಯಾಯಕಾರಿಯಲ್ಲದುದರಿಂದ ಇವನು ದೇವರೂ ಆಗಿರುವುದಿಲ್ಲ. ॥೧೨೧॥

೧೨೨. ತಂದೆತಾಯಿಗಳಿಗೆ ಹಿತವನ್ನುಂಟುಮಾಡಬೇಕೆಂದು ನಾವು ಮನುಷ್ಯನಿಗೆ ಆಜ್ಞೆಮಾಡಿದ್ದೇವೆ. ಆದರೆ ಅವರಿಬ್ಬರೂ ನಿನ್ನ ಜ್ಞಾನಕ್ಕೆಟಕದ ವಸ್ತುವನ್ನು ನನ್ನ ಜೊತೆಯಲ್ಲಿ ಸೇರಿಸುವುದಕ್ಕೆ ಅವರು ಜಗಳಮಾಡಿದರೆ ಅವರಿಬ್ಬರ ಮಾತನ್ನು ಕೇಳಬೇಡ. ಪುನಃ ನನ್ನ ಸೋಹನನ್ನು ನಾವು ಅವನ ಜನಾಂಗದ ಕಡೆಗೆ ಅವಶ್ಯವಾಗಿ ಕಳುಹಿಸಿದೆವು. ಆವರ ನಡುವೆ ಐವತ್ತು ವರ್ಷ ಕಡಿಮೆಯಾದ ಒಂದು ಸಾವಿರ ವರ್ಷ ಇದ್ದನು. [ಮಂ. ೫। ಸಿ. ೨೦ ಸೂ. ೨೯। ಆ. ೭, ೧೩]

ಸಮೀಕ್ಷಕ :—ಮಾತಾಪಿತರ ಸೇವೆ ಮಾಡುವುದು ಸರಿ. ದೇವರ ಸಂಗಡ ಇತರ ವಸ್ತುವಿನ ಸಮಾವೇಶಮಾಡಲು ಹೇಳಿದರೆ ಅವರ ಮಾತನ್ನು ನಂಬದಿರುವುದೂ ಒಳ್ಳೆಯದೇ. ಆದರೆ ತಂದೆತಾಯಿಗಳಿಸುಳ್ಳುಹೇಳಲು ಆಜ್ಞೆಯನ್ನಿತ್ತರೆ ಅದನ್ನು ನಂಬಬೇಕೆ? ಆದುದರಿಂದ ಈ ಮಾತು ಅರ್ಧ ಸರಿಯೂ ಅರ್ಧ ತಪ್ಪೂ ಆಗಿರುತ್ತದೆ. ನೋಹ ಮೊದಲಾದ ಪೈಗಂಬರರನ್ನು ಮಾತ್ರ ದೇವರು ಜಗತ್ತಿಗೆ ಕಳಿಸುತ್ತಾನಾದರೆ ಇತರರನ್ನು ಯಾರು ಕಳಿಸುತ್ತಾರೆ? ಎಲ್ಲರನ್ನು ಕಳಿಸುವುದು ಅವನೇ ಆದರೆ ಎಲ್ಲರೂ ಪೈಗಂಬರರಲ್ಲವೇಕೆ? ಮೊದಲು ಜನರ ಆಯಸ್ಸು ಸಾವಿರವರುಷವಾಗಿರುತ್ತಿದ್ದರೆ ಈಗೇಕೆ ಆಗುವುದಿಲ್ಲ? ಆದುದರಿಂದ ಈ ಮಾತು ಸರಿಯಲ್ಲ. ॥೨೨॥

೧೨೩. ದೇವರು ಮೊದಲನೇ ಸಾರಿ ಉತ್ಪತ್ತಿ ಮಾಡುತ್ತಾನೆ. ನಂತರ ಎರಡನೇ ಬಾರಿ ಮಾಡುವನು. ನಂತರ ಅವನ ಕಡೆಗೇನೇ ಮರಳುವೆ. ಮಳೆ ಅಂದರೆ ಕಯಾಮತ್ ಎದ್ದ ದಿವಸ ಪಾಪಿಗಳು ನಿರಾಶೆ ಹೊಂದುವರು. ವಿಶ್ವಾಸವುಳ್ಳವರಾಗಿ ಒಳ್ಳೆಯ ಕರ್ಮುಗಳನ್ನು ಮಾಡಿದವರೇ ಉದ್ಯಾನದ ನಡುವೆ ಸಿಂಗರಿಸಲ್ಪಡುವರು. ನಾವು ಒಂದು ಗಾಳಿಯನ್ನು ಕಳಿಸಿದ್ದೇ ತಡ. ನೋಡಿರಿ. ಆ ಬೆಳೆಯೆಲ್ಲವೂ ಆರಸಿನ ಬಣ್ಣದ್ದಾಯತು. ಮತ್ತು ದೇವರು ಅವರ ಅಂತಃಕರಣದ ಮೇಲಿ ಮುದ್ರೆಯೊತ್ತುತ್ತಾನೆ. ಆವರು ಅಜ್ಞಾನಿಗಳಾಗುತ್ತಾರೆ.

[ಮಂ. ೫। ಸಿ. ೨೧। ಸೂ, ೩೦। ಆ. ೧೧, ೧೨, ೧೫, ೫೧, ೫೯]

ಸಮೀಕ್ಷಕ :—ದೇವರು ಎರಡು ಸಲ ಉತ್ಪತ್ತಿ ಮಾಡಿ ಮೂರನೇ ಸಲ ಮಾಡದಿರುವುದಾದರೆ ಉತ್ಪತ್ತಿಯ ಮೊದಲೂ, ಎರಡನೇ ಸೃಷ್ಟಿಯ ಅನಂತರವೂ ನಿಷ್ಕರ್ಮಿಯಾಗಿ ಕುಳಿತುಬಿಡುವನೆ! ಒಂದೆರಡುಸಲ ಉತ್ಪತ್ತಿಮಾಡಿದ ನಂತರ ಅವನ ಸಾಮರ್ಥ್ಯವು ಕೆಲಸಕ್ಕೆ ಬಾರದೆ ವ್ಯರ್ಥವಾಗುವುದು. ನ್ಯಾಯದ ದಿವಸ ಪಾಪಿಗಳು ನಿರಾಶರಾಗುವುದಾದರೆ ಒಳ್ಳೇ ಮಾತು. ಇದು ಎಲ್ಲಿಯಾದರೂ ಮುಸಲ್ಮಾನರಲ್ಲದವರನ್ನೆಲ್ಲಾ ಪಾಪಿಗಳೆಂದು ತಿಳಿದು ಅವರನ್ನು ನಿರಾಶೆಗೊಳಿಸುವ ಉದ್ದೇಶ್ಯವಲ್ಲತಾನೆ? ಏಕೆಂದರೆ ಕುರಾನಿನ ಕೆಲವು ಸ್ಥಾನಗಳಲ್ಲಿ ಪಾಪಿಗಳೆಂದು ಹೇಳಿದ ಉದ್ದೇಶ್ಯವೇ ಬೇರೆ ಇದೆ. ಉದ್ಯಾನದಲ್ಲಿಟ್ಟು ಶೃಂಗಾರ ಮಾಡುವುದೇ ಮುಸಲ್ಮಾನರ ಸ್ವರ್ಗವಾಗಿರುವುದಾದರೆ ಅದು ಈ ಜಗತ್ತಿನಂತೆಯೇ ಆಯಿತು. ಅಲ್ಲಿ ತೋಟಗಾರರೂ ಅಕ್ಕಸಾಲಿಗರೂ ಇರಬಹುದಲ್ಲವೆ? ಅಥವಾ ದೇವರೇ ತೋಟಗಾರನೂ ಅಕ್ಕಸಾಲಿಗನೂ ಆಗಿ ಬಿಡುತ್ತಾನೆಯೇ? ಯಾರಿಗಾದರೂ ಕಡಿಮೆ ಆಭರಣ ಸಿಕ್ಕಿದರೆ ಕಳ್ಳತನವೂ ಆಗಬಹುದೇನೂ. ಆ ಕಳ್ಳತನ ಮಾಡಿದವರನ್ನು ಸ್ವರ್ಗದಿಂದ ನರಕಕ್ಕೂ ತಳ್ಳುತ್ತಿರಬಹುದು. ಹೀಗಾಗುವುದಾದರೆ ಸದಾ ಕಾಲವೂ ಸ್ವರ್ಗದಲ್ಲಿರುವರೆಂಬ ಮಾತು ಸುಳ್ಳಾಗುತ್ತವೆ. ರೈತರ ಬೆಳೆಯ ಮೇಲೂ ದೇವರ ದೃಷ್ಟಿಯಿರುವುದಾದರೆ ಆ ವಿದ್ಯೆಯು ಕೃಷಿಯ ಅಭ್ಯಾಸದಿಂದಲೇ ಬರಬೇಕು. ತನ್ನ ವಿದ್ಯೆಯಿಂದಲೇ ಎಲ್ಲವನ್ನು ದೇವರು ತಿಳಕೊಂಡನೆಂದು ನಂಬಿಕೊಂಡರೂ ಸಹ ಈ ರೀತಿ ಭಯತೋರಿಸುವುದರಿಂದ ಅವನ ಅಹಂಕಾರವು ವ್ಯಕ್ತವಾಗುತ್ತದೆ. ದೇವರು ಜೀವರುಗಳ ಅಂತಃಕರಣಗಳ ಮೇಲೆ ಮುದ್ರೆಯನ್ನೊತ್ತಿ ಪಾಪ ಮಾಡಿಸಿರುವುದಾದರೆ ಆ ಪಾಪಕ್ಕೆ ಹೊಣೆಗಾರರೂ ಆಗಲಾರರು. ದೇವರೇ ಆಗಬೇಕು. ಜಯಾಪಜಯಗಳು ಸೇನಾಪತಿಗೆ ದೊರೆಯುವಂತೆ ಈ ಎಲ್ಲ ಪಾಪಗಳೂ ದೇವರಿಗೇನೇ ತಗಲಬೇಕು, ॥೧೨೩॥

೧೨೪. ಈ ಆಯತು ಗಳು ಚಮತ್ಕಾರವುಳ್ಳವನ ಪುಸ್ತಕದಲ್ಲವೆ. ಆಕಾಶಗಳನ್ನು ಕಂಬಗಳಿಲ್ಲದೇನೇ ಅವನು ಉಂಟು ಮಾಡಿರುವುದನ್ನು ನೀವು ನೋಡುತ್ತಿದ್ದೀರಿ. ಭೂಮಿಯು ಅಲ್ಲಾಡ

ದಿರಲಿ ಎಂದು ಹೇಳಿ ನಡುವೆ ನಡುವೆ ಪರ್ವತಗಳನ್ನಿಟ್ಟನು. ದೇವರು ಹಗಲಿನ ನಡುವೆ ರಾತ್ರಿಯನ್ನೂ, ರಾತ್ರಿಯ ನಡುವೆ ಹಗಲನ್ನೂ ಪ್ರವೇಶಗೊಳಿಸುವುದನ್ನು ನೀನು ನೋಡಿಲ್ಲವೊ? ದೇವರ ಕರುಣೆಗಳೊಡನೆ ನದಿಯ ನಡುವೆ ತನ್ನ ಚಿಹ್ನೆಗಳನ್ನು ತೋರಿಸಲು ನೌಕೆಗಳನ್ನು ನಡೆಸುತ್ತಿರುವುದು ನೀನು ನೋಡಿಲ್ಲವೆ?

[ಮಂ. ೫। ಸಿ. ೨೧। ಸೂ. ೩೧। ಆ. ೨, ೧೦, ೨೯, ೩೧]

ಸಮಿಕ್ಷಕ—ವಾಹವ್ವ! ತೀರಾ ವಿದ್ಯಾವಿರುದ್ಧವಾಗಿ ಆಕಾಶದ ಉತ್ಪತ್ತಿ, ಅದಕ್ಕೆ ಕಂಬಗಳನ್ನಿಡುವ ಸಂದೇಹ, ಪೃಥ್ವಿಯನ್ನು ಸ್ಥಿರ ಪಡಿಸುವುದಕ್ಕಾಗಿ ಪರ್ವತಗಳನ್ನಿಡುವುದು, ಈ ಎಲ್ಲಾ ವಿಷಯಗಳನ್ನುಳ್ಳ ಪುಸ್ತಕವು ಅದೆಷ್ಟು ಚಮತ್ಕಾರವುಳ್ಳದ್ದಾಗಿಲ್ಲ? ಸ್ವಲ್ಪವೇ ವಿದ್ಯೆಯಿರುವವನೂ ಸಹ ಇಂತಹ ವಿಷಯಗಳನ್ನು ಬರೆಯಲಾರ ಮತ್ತು ನಂಬಲಾರ. ಚಮತ್ಕಾರವನ್ನಾದರೂ ನೋಡಿರಿ, ಹಗಲು ಇರುವಲ್ಲಿ ರಾತ್ರಿಯಿರುವುದಿಲ್ಲ. ರಾತ್ರಿಯಿರುವಲ್ಲಿ ಹಗಲಿರುವುದಿಲ್ಲ. ಒಂದು ಇನ್ನೊಂದರಲ್ಲಿ ಪ್ರವೇಶಿಸುತ್ತದೆಂದು ಬರೆಯುತ್ತಿದ್ದಾನೆ. ಇದು ಅವಿದ್ಯಾವಂತರ ಮಾತಾಗಿದೆ. ಆದುದರಿಂದ ಈ ಕುರಾನು ವಿದ್ಯೆಯ ಪುಸ್ತಕವಲ್ಲ. ನೌಕೆಯು ಮನುಷ್ಯರ ಮೂಲಕವೂ ಕ್ರಿಯಾ ಕೌಶಲಗಳ ಮೂಲಕವೂ ನಡೆಯುತ್ತದೊ ಅಥವಾ ಪರಮಾತ್ಮನ ಕೃಪೆಯಿಂದ ನಡೆಯುತ್ತಿದೆಯೋ? ಇದೂ ಒಂದು ವಿದ್ಯಾವಿರುದ್ಧವಾದ ಮಾತೇ ಆಗಿದೆ. ಉಕ್ಕಿನ ಅಥವಾ ಕಲ್ಲಿನ ನೌಕೆಯನ್ನು ಮಾಡಿ ಸಮುದ್ರವಲ್ಲಿ ಬಿಟ್ಟರಿ ದೇವರ ಚಿಹ್ನೆಯಾದ ಅದು ಮುಳುಗುವುದೊ ಇಲ್ಲವೊ? ಆದುದರಿಂದ ಈ ಪುಸ್ತಕವು ವಿದ್ವಾಂಸನು ಬರೆದುದೂ ಅಲ್ಲ, ದೇವರು ರಚಿಸಿದುದೂ ಅಲ್ಲ. ॥೧೨೪॥

೧೨೫. ಅವನು ಒಂದು ದಿವಸದೊಳಗಾಗಿ ಆಕಾಶದ ಕಡೆಯಿಂದ ಪೃಥ್ವಿಯ ಕಡೆಗಿಳಿದು ಕಾರ್ಯಗಳ ವ್ಯವಸ್ಥೆ ಮಾಡುತ್ತಾನೆ. ಅನಂತರ ಆಕಾಶಕ್ಕೆ ಹತ್ತಿ ಹೋಗುತ್ತಾನೆ. ಆವನ ಒಂದು ದಿವಸವನ್ನು ನೀವು ಒಂದು ಸಾವಿರ ವರ್ಷಗಳೆಂದು ಎಣಿಸುತ್ತೀರಿ. ದೈವಗತಿಯನ್ನು ಪ್ರತ್ಯಕ್ಷವನ್ನು ಸರ್ವಶಕ್ತನೂ, ದಯಾಳುವೂ ಆದವನು ತಿಳಿದಿರುತ್ತಾನೆ. ಪುನಃ ಅವನನ್ನು ಪುಷ್ಟಿವಂತನಾಗಿ ಮಾಡಿ ಅವನಲ್ಲಿ

ತನ್ನ ಆತ್ಮವನ್ನೂ ದಿದನು.. ನಿಮಗಾಗಿ ನೇಮಿಸಲ್ಪಟ್ಟ ಮೃತ್ಯು ದೂತನು ಬಂದು ನಿಮ್ಮನ್ನು ವಶಪಡಿಸಿಕೊಳ್ಳುವನು. ನಾವು ಇಚ್ಛಿಸಿದ್ದರೆ ಪ್ರತಿಯೊಬ್ಬ ಜೀವಿಗೆ ಉಪದೇಶವನ್ನು ಕೊಡಬಹು ದಾಗಿಗಿತ್ತು. ಆದರೆ ಭೂತಗಳನ್ನೂ ಮನುಷ್ಯರನ್ನೂ ಸಂಗಡವೇ ನರಕ ದಲ್ಲಿ ತುಂಬಿಸುತ್ತೇನೆಂಬ ನನ್ನ ಮಾತು ಪೂರ್ಣವಾಯಿತು.

[ಮಂ. ೫, ಸಿ. ೨೧, ಸೂ. ೩೨, ಆ. ೫, ೬, ೯, ೧೧, ೧೩]

ಸಮೀಕ್ಷಕ—ಮುಸಲ್ಮಾನರ ದೇವರು ವ್ಯಾಪಕನಾಗಿದ್ದರೆ ಏಕ ದೇಶದಿಂದ ವ್ಯವಸ್ಥೆಮಾಡುವುದೂ, ಹತ್ತುವುದೂ, ಇಳಿಯುವುದೂ ಸಾಧ್ಯವಿಲ್ಲ. ಅಲ್ಲದೆ ದೇವದೂತರನ್ನು ಕಳಿಸುವುದರಿಂದಲೂ ಅವನು ಏಕದೇಶಿಯೆಂಬುದು ಸಿದ್ಧವಾಗುತ್ತದೆ. ತಾನು ಆಕಾಶದಲ್ಲಿ ನೇತಾಡಿ ಕೊಂಡಿದ್ದಾನೆ. ದೇವದೂತರನ್ನು ಓಡಿಸುತ್ತಿದ್ದಾನೆ. ಆ ದೇವ ದೂತರು ಲಂಚ ತೆಗೆದುಕೊಂಡು ಯಾವುದಾದರೂ ವ್ಯವಹಾರವನ್ನು ಕೆಡಿಸಿಬಿಟ್ಟರೆ ಅಥವಾ ಒಂದು ಹೆಣವನ್ನೇ ಬಿಟ್ಟುಬಿಟ್ಟರೆ ದೇವರಿಗೇನು ಗೊತ್ತಾತೀತು? ಸರ್ವಜ್ಞನೂ ಸರ್ವವ್ಯಾಪಕನೂ ಆದವನಿಗೆ ತಿಳಿಯ ಬೇಕಲ್ಲವೆ? ಹಾಗೇನೂ ಇವನು ಇಲ್ಲವೇ ಇಲ್ಲ. ಇದ್ದಿದ್ದರೆ ದೂತ ರನ್ನು ಕಳಿಸಿ ಜನರನ್ನು ನಾನಾವಿಧವಾಗಿ ಪರೀಕ್ಷಿಸುವೆ ಅಗತ್ಯವಾದರೂ ಏನು ಬಿದ್ದಿತ್ತು? ಒಂದು ಸಾವಿರ ವರ್ಷಗಳ ಅವಧಿ ಹಿಡಿಯುವುದ ರಿಂದಲೂ ಬರುವ ಹೋಗುವ ವ್ಯವಸ್ಥೆಮಾಡುವುದರಿಂದಲೂ ಅವನು ಸರ್ವಶಕ್ತಿವಂತನೇ ಅಲ್ಲ. ಮೃತ್ಯುವಿಗೂ ದೂತನಿರುವನಾದರೆ ಆ ದೂತ ನನ್ನು ಕೊಲ್ಲಲು ಯಾವ ಮೃತ್ಯುವಿರುವನು? ಅವನು ನಿತ್ಯನಾಗಿರು ವುದಾದರೆ ಅಮರತ್ವದಲ್ಲಿ ದೇವರಿಗೆ ಸಮಾನನಾದನು. ಒಬ್ಬ ದೂತನು ಒಂದೇ ಸಮಯದಲ್ಲಿ ಆ ನರಕವನ್ನು ತುಂಬುವುದಕ್ಕೋಸ್ಕರ ಜೀವರು ಗಳಿಗೆ ಉಪದೇಶವನ್ನೀಯಲಾರನು. ಅವರನ್ನು ಪಾಪಮಾಡದಿದ್ದರೂ ಸಹ ತನ್ನಿಚ್ಛೆಯಿಂದ ನರಕಕ್ಕೆ ಕಳುಹಿಸಿ ಅವರಿಗೆ ದುಃಖವನ್ನು ಕೊಟ್ಟು ವಿನೋದ ನೋಡುತ್ತಿರುತ್ತಾನಾದರೆ ಆ ದೇವರು ಪಾಪಿಯೂ, ಅನ್ಯಾಯಕಾರಿಯೂ, ದಯಾಹೀನನೂ ಆಗುತ್ತಾನೆ. ಇಂತಹ ಮಾತು ಗಳಿರುವ ಪುಸ್ತಕವು ವಿದ್ವಾಂಸನಿಂದ ರಚಿಸಲ್ಪಟ್ಟಿದ್ದೂ ದೇವನಿರ್ಮಿ

ತವೂ ಅಲ್ಲ. ದಯಾನ್ಯಾಯಗಳಿಲ್ಲದ ಆ ದೇವರು ನಿಜವಾದ ದೇವರೂ ಅಲ್ಲ. ||೧೨೫||

೧೨೬. ಮೃತ್ಯುವಿನ್ನೂ, ವಧೆಯನ್ನೂ ನೋಡಿ ಹೋಗುವುದಾದರೆ, ಓಡಿಹೋಗುವುದರಿಂದ ನಿಮಗೆ ಲಾಭವಾಗದು ಎಂದ. ಹೇಳು ಎಲೈ ನಬಿಯ ಬೀಬಿಯರೆ! ನಿವ್ಮಲ್ಲಿ ಯಾರಾದರೂ ಪ್ರತ್ಯಕ್ಷವಾಗಿ ನಿರ್ಲಜ್ಜತೆಯಿಂದ ಬಂದರೆ ಅವಳ ದಂಡನೆ ಎರಡರಷ್ಟು ಮಾಡಲಾಗುವುದು. ಇದು ದೇವರಿಗೆ ಸುಲಭವಾಗಿದೆ.

[ಮಂ. ೫! ಸ, ೨೧। ಸೂ. ೩೩। ಆ. ೧೬, ೩೦]

ಸಮೀಕ್ಷಕ :—ಯುದ್ಧದಲ್ಲಾರೂ ಓಡಿಹೋಗಬಾರದು. ನಾವು ವಿಜಯ ಗಳಿಸಬೇಕು. ಸಾಯುವುದಕ್ಕೂ ಹೆದರಬಾರದು. ಐಶ್ವರ್ಯ ಹೆಚ್ಚಲಿ. ಮತವನ್ನು ಹೆಚ್ಚಿಸಿಕೊಳ್ಳುವ ಎಂಬ ಅಭಿಪ್ರಾಯದಿಂದ ಮಹಮ್ಮದ ಸಾಹೇಬರು ಈ ರೀತಿ ಬರೆದಿರಬೇಕು ಅಥವಾ ಬರೆಸಿರಬೇಕು. ಬೀಬಿಯರು ನಿರ್ಲಜರಾಗಿ ಬರಬಾರದಾದರೆ ಪೈಗಂಬರರು ನಿರ್ಲಜ್ಜರಾಗಿ ಬರಬೇಕೇನು? ಬೀಬಿಯರಿಗೆ ಶಿಕ್ಷೆ ಸಿಕ್ಕುತ್ತದೆ ಮತ್ತು ಪೈಗಂಬರ ಸಾಹೇಬರಿಗೆ .ಶಿಕ್ಷೆ ಸಿಕ್ಕುವುದಿಲ್ಲದೆಂಬುದು ಯಾವನ ಮನೆಯ ನ್ಯಾಯವಿದು? ||೧೨೬||

೧೨೭. ಮನೆಯ ಮಧ್ಯೆದಲ್ಲೇ ಇದ್ದುಬಿಡಿರಿ. ದೇವರ ಮತ್ತು ರಸೂಲರ ಆಜ್ಞೆಯನ್ನು ಪಾಲಿಸಿರಿ. ಇದರ ಹೊರತು ಮತ್ತೇನನ್ನು ಮಾಡಬೇಡಿರಿ. ಜೈವನು ಅವಳೊಡನೆ ತನ್ನ ವ್ಯವಹಾರಗಳನ್ನು ಪೂರೈಸಿದ ಕೂಡಲೇ ನಿನ್ನನ್ನು ಅವಳಿಗೆ ವಿವಾಹ ಮಾಡಿಕೊಟ್ಟೆನು. ಸಾಕು ಮಕ್ಕಳು. ತಮ್ಮ ಹೆಂಡಿರೊಂದಿಗೆ ವ್ಯವಹಾರಮಾಡಿಕೊಂಡ ಮೇಲೆ, ವಿಶ್ವಾಸವುಳ್ಳವರು ಹೆಂಡಿರಾಗುವುದರಲ್ಲಿ ಅಡ್ಡಿಯಾಗದಿರಲಿ ದೇವರ ಆಜ್ಞೆಯನ್ನು ಪಾಲಿಸಿದಂತಾಗುತ್ತದೆ. ಆ ವಸ್ತುವಿನ ವಿಷಯದಲ್ಲಿ ನಬಿಗೆ ಯಾವ ತೊಂದರೆಯೂ ಇಲ್ಲ. ಮಹಮ್ಮದನು ಯಾವ ಪುರುಷನ ತಂದೆಯೂ ಆಗಿರುವುದಿಲ್ಲ. ವರದಕ್ಷಿಣೆಯಿಲ್ಲದೆ ಯಾವ ಹಿತವಂತನ ವಿಶ್ವಾಸವಂತಳಾವ ಹೆಂಡತಿಯನ್ನು ಕೊಟ್ಟರೂ ಸಹ ಅವಳು ನಬಿಗೋಸ್ಕರ ಇರುವಳೆಂದು ತಿಳಿಯಿರಿ. ಯಾರಿಗಾದರೂ ನೀನ್ ಶಿಥಿಲತೆ ತೋರಿಸಬಹುದು. ಯಾರಿಗಾದರೂ ತನ್ನ ಹತ್ತಿರ

ಸ್ಥಳವನ್ನೀಯಬಹುದು. ನಿನ್ನ ಮೇಲೆ ಯಾವ ಪಾಪವೂ ಇರುವುದಿಲ್ಲ. ಎಲೈ ಜನರೆ! ನೀವು ವಿಶ್ವಾಸವುಳ್ಳವರಾಗಿದ್ದರೆ ಪೈಗಂಬರನ ಮನೆಗಳನ್ನು ಪ್ರವೇಶಿಸಬೇಡಿರಿ.

[ಮಂ. ೫। ಸಿ. ೨೨। ಸೂ. ೩೩। ಆ. ೩೩, ೩೭, ೩೮, ೪೦, ೪೭, ೪೮, ೫೦]

ಸಮೀಕ್ಷಕ:—ಸ್ತ್ರೀಯರು ಸೆರೆಯಲ್ಲಿರುವಂತೆ ಮನೆಯಲ್ಲಿರಬೇಕೆಂಬುದೂ ಪುರುಷರು ಸ್ವಚ್ಛಂದವಾಗಿರಬಹುದೆಂಬುದೂ ತೀರಾ ಅನ್ಯಾಯದ ಮಾತು. ಸ್ತ್ರೀಯರಿಗೆ ಶುದ್ಧವಾದ ಪ್ರದೇಶದಲ್ಲಿ ತಿರುಗಾಡಲೂ, ಸೃಷ್ಟಿಯ ಅನೇಕ ಪದಾರ್ಥಗಳನ್ನು ನೋಡಲೂ ಮನಸ್ಸಾಗುವುದಿಲ್ಲವೆ? ಈ ಅಪರಾಧದದೆಸೆಯಿಂದಲೇ ಮುಸಲ್ಮಾನರ ಹುಡುಗರು ಹೆಚ್ಚಾಗಿ ಬೀದಿ ಬೀದಿ ಅಲೆದಾಡುವವರೂ ವಿಷಯಲಂಪಟರೂ ಆಗುತ್ತಾರೆ. ಅಲ್ಲಾಹ್‌ನ ಮತ್ತು ರಸೂಲರ ಆಜ್ಞೆಗಳು ಅವಿರೋಧವಾಗಿ ಒಂದೇರೀತಿಯಲ್ಲಿರುತ್ತವೊ? ಅಥವಾ ಪರಸ್ಪರ ವಿರುದ್ಧವಾಗಿರುತ್ತವೊ? ಒಂದೇಯಾಗಿರುವುದಾದರೆ ಇಬ್ಬರ ಆಜ್ಞೆಗಳನ್ನು ಪಾಲಿಸಿರಿ ಎಂದು ಹೇಳುವುದು ವ್ಯರ್ಥವಾಗುತ್ತದೆ. ವಿರುದ್ಧವಾಗಿರುವುದಾದರೆ ಒಂದು ನಿಜವೂ ಒಂದು ಸುಳ್ಳೂ ಆಗಿರಬೇಕು. ಆಗ ಒಬ್ಬನು ದೇವರೂ ಇನ್ನೊಬ್ಬನು ಸೈತಾನನೂ ಆಗುತ್ತಾನೆ. ದೇವರೊಡನೆ ಅವನು ಸಮ್ಮಿಳಿತನಾದರೂ ಆಗುವನು. ಈ ಕುರಾನಿನ ದೇವರೂ ಪೈಗಂಬರರೂ, ಕುರಾನೂ ಧನ್ಯರೆನ್ನಬೇಕು! ಮಹಮ್ಮದರಿಗೆ ಇತರರ ಪ್ರಯೋಜನವನ್ನು ನಾಶಪಡಿಸಿ ತನ್ನ ಸ್ವಾರ್ಥವನ್ನು ಸಾಧಿಸಿಕೊಳ್ಳುವುದೇ ಇಷ್ಟವಾಗಿರುತ್ತದೆ. ಇಂತಹ ಲೀಲೆಯನ್ನೇ ಅವರು ರಚಿಸುತ್ತಿರುತ್ತಾರೆ. ಅದುದರಿಂದಲೂ ಮಹಮ್ಮದ ಸಾಹೇಬರು ಬಹಳ ವಿಷಯಲಂಪಟರಾಗಿದ್ದರೆಂಬುದು ತಿಳಿದುಬರುತ್ತದೆ. ಹಾಗಿಲ್ಲದೆ ಇರುತ್ತಿದ್ದರೆ ಪುತ್ರನಂತಿರುವ ತನ್ನ ಸಾಕುಮಗನ ಹೆಂಡತಿಯನ್ನು ವಿವಾಹವಾಗುತ್ತಿದ್ದರೇಕೆ? ಇಂತಹ ಕೆಲಸಮಾಡುವವನ ಪಕ್ಷವನ್ನು ದೇವರೂ ಹಿಡಿದು ಅನ್ಯಾಯವನ್ನು ನ್ಯಾಯವೆಂದು ಹೇಳಿದನು. ಕಾಡು ಮನುಷ್ಯರೂ ಸಹ ತನ್ನ ಸೊಸೆಯ ಹತ್ತಿರ ಹೋಗುವುದಿಲ್ಲ. ನಬಿಗೆ ವಿಷಯಲೀಲೆಮಾಡಲು ಯಾವ ತಡೆಯೂ ಇಲ್ಲದಿರುವುದು ಎಷ್ಟರ

ಮಟ್ಟಿನ ಅನ್ಯಾಯವಿದು? ನಬಿಯೂ ಯಾರ ತಂದೆಯೂ ಅಲ್ಲದಿದ್ದರೆ (ಸಾಕುಮಗನಾದ) ಜೈದನು ಯಾರ ಮಗನಾಗಿದ್ದನು? ಅವನನ್ನು ಮಗನೆಂದೇಕೆ ಬರೆದಿದೆ? ಇದೂ ಆ ಸ್ವಾರ್ಥದ್ದೇ ಮಹಿಮೆಯು. ಆದರಿಂದ ಮಗನ ಹೆಂಡತಿಯನ್ನು ತನ್ನ ಮನೆಯಲ್ಲಿಡದೆ ಬಿಡಲಿಲ್ಲ ವೆಂದಮೇಲೆ ಪೈಗಂಬರಸಾಹೇಬರು ಇನ್ನಾರನ್ನು ಬಿಟ್ಟಿರಬಹುದು? ಇಂತಹ ಚಾತುರ್ಯವಿದ್ದರೂ ಸಹ ವಿಷಯಗಳಿಂದ ನಿಂದೆಯೆಂದಿಗೂ ತಪ್ಪದು. ಅನ್ಯರ ಯಾವ ಸ್ತ್ರೀಯು ಪ್ರಸನ್ನಳಾಗಿ ವಿವಾಹವಾಗ ಬಯಸಿದರೂ ಅವಳು ಅನಿಷಿದ್ಧಳಾಗಿರುವಳೆ? ನಬಿಯು ಯಾವಳನ್ನು ಬಿಟ್ಟು ಬಿಡಬೇಕಾದರೂ ಬಿಡಬಹುದೆಂಬುದೂ ಮಹಮ್ಮದ ಸಾಹೇಬರು ತಪ್ಪು ಮಾಡಿದರೂ ಸಹ ಯಾವಳೂ ಅವರನ್ನು ಬಿಡಲಾರಳೆಂಬುದೂ ಮಹಾ ಅನ್ಯಾಯದ ವಿಷಯವಾಗಿರುತ್ತದೆ. ಪೈಗಂಬರರ ಮನೆಯನ್ನು ಇತರರು ಯಾರೂ ವ್ಯಭಿಚಾರ ದೃಷ್ಟಿಯಿಂದ ಹೇಗೆ ಪ್ರವೇಶಿಸ ಬಾರದೋ ಅದೇರೀತಿ ವೈಗಂಬರ ಸಾಹೇಬರೂ ಇತರರ ಮನೆಯನ್ನು ಪ್ರವೇಶಿಸಬಾರದು. ನಬಿಯು ಯಾರ ಮನೆಯನ್ನು ನಿಃಶಂಕರಾಗಿ ಹೊಕ್ಕೂ ಸಹ ಮಾನನೀಯರಾಗಿರಬೇಕೆ? ಈ ಕುರಾನನ್ನು ಈಶ್ವರ ಕೃತವೆಂದೂ ಮಹಮ್ಮದ ಸಾಹೇಬರನ್ನು ಪೈಗಂಬರರೆಂದೂ, ಕುರಾ ನೋಕ್ತ ಅಲ್ಲಾಹ್‌ನನ್ನು ದೇವರೆಂದೂ ಯಾವ ಬುದ್ಧಿ ಕುರುಡತಾನೆ ನಂಬಬಲ್ಲನು? ಇಂತಹ ಯುಕ್ತಿಶೂನ್ಯವೂ ಧರ್ಮವಿರುದ್ಧವೂ ಆದ ವಿಷಯಗಳನ್ನುಳ್ಳ ಈ ಮತವನ್ನು ಅರಬ್ಬೀ ದೇಶದ ನಿವಾಸಿಗಳೇ ಮುಂತಾದ ಮನುಷ್ಯರು ಅನುಸರಿಸಿದರೆಂಬುದು ಮಹಾ ಆಶ್ಚರ್ಯ ಕರವಾದ ಸಂಗತಿಯಾಗಿದೆ. ॥೧೨೭॥

೧೨೮. ರಸೂಲನಿಗೆ ದುಃಖವನ್ನೀಯುವುದೂ, ಅವನ ನಂತರ ಅವನ ಬೀಬಿಯರನ್ನು ವಿವಾಹವಾಗುವ ನಿಶ್ಚಯಮಾಡುವುದೂ ನಿಮಗೆ ಉಚಿತವಲ್ಲ. ಅದು ದೇವರ ಎದುರಿದಲ್ಲಿ ನಿಜವಾಗಿ ಮಹಾ ಪಾಪವಾಗಿರುತ್ತದೆ. ದೇವರಿಗೂ ಅವನ ರಸೂಲನಿಗೂ ದುಃಖವ ನ್ನೀಯುವವರನ್ನು ದೇವರು ಧಿಕ್ಕರಿಸಿದ್ದಾನೆ. ಅಪರಾಧವಿಲ್ಲದೇ ಮುಸಲ್ಮಾನರಿಗೂ ಅವರ ಹೆಂಗಸರಿಗೂ ದುಃಖವನ್ನುಂಟುಮಾಡು ವವರು ನಿಶ್ಚಯವಾಗಿ ಸುಳ್ಳನ್ನೂ ಪ್ರತ್ಯಕ್ಷವಾದ ಪಾಪವನ್ನು ಹೊತ್ತಿ

ರುವರು. ಧಿಕ್ಕರಿಸಲ್ಪಟ್ಟ ಜನರು ಸಿಕ್ಕಸಿಕ್ಕಲ್ಲಿ ಸೆರೆಹಿಡಿಯಲ್ಪಡಬೇಕು. ಸರಿಯಾಗಿ ಹೊಡೆಯಲ್ಪಡಬೇಕು. ಮತ್ತು ಅವರನ್ನು ಕೊಂದುಹಾಕಬೇಕು. ದೇವರೆ! ನಮಗಿಂತಲೂ ಎರಡರಷ್ಟು ಪಾಪವನ್ನವರಿಗೆ ಕೊಡು ಮತ್ತು ನಮಗಿಂತಲೂ ಹೆಚ್ಚಾದ ಧಿಕ್ಕಾರವನ್ನು ಮಾಡು.

[ಮುಂ. ೫। ಸಿ. ೨೨। ಸೂ. ೩೩। ೫೩, ೫೭, ೫೮, ೬೧, ೬೮]

ಸಮೀಕ್ಷಕ—ವಾಹವ್ವ! ಧರ್ಮದ ವಿಷಯದಲ್ಲಿ ದೇವರು ತನ್ನ ದೇವತ್ವವನ್ನು ಯಾವರೀತಿ ತೋರಿಸುತ್ತಿದ್ದಾನೆ? ರಸೂಲನಿಗೆ ದುಃಖವನ್ನು ಕೊಡಬಾರದೆನ್ನುವುದು ಸರಿ. ಆದರೆ ಇತರರಿಗೆ ದುಃಖವನ್ನೀಯಬಾರದೆಂದು ರಸೂಲನನ್ನೂ ತಡೆಯಲಿಲ್ಲವೇಕೆ? ಒಬ್ಬನಿಗೆ ದುಃಖವನ್ನು ಕೊಡುವುದರಿಂದ ದೇವರೂ ದುಃಖಿಯಾಗುವನೊ? ಹಾಗಾದರೆ ಅವನು ದೇವರೇ ಅಲ್ಲ. ದೇವರಿಗೂ ರಸೂಲನಿಗೂ ದುಃಖ ಕೊಡಬಾರದು ಎಂದು ಹೇಳಿದುದರಿಂದ ದೇವರು ಮತ್ತು ರಸೂಲನು ಯಾರನ್ನು ಬೇಕಾದರೂ ದುಃಖಕ್ಕೀಡುಮಾಡಬಹುದೆಂಬುದು ಸಿದ್ಧವಾಗುತ್ತದಲ್ಲವೆ? ಹಾಗೆ ಎಲ್ಲರಿಗೂ ದುಃಖವನ್ನೀಯಬಹುದೆ? ಮುಸಲ್ಮಾನರನ್ನು ದುಃಖಕ್ಕೀಡುಮಾಡುವುದು ಹೇಗೆ ಪಾಪವೊ, ಹಾಗೆಯೇ ಇವರಿಂದ ಇತರರ ಜನರಿಗೆ ದುಃಖಕೊಡುವುದೂ ಪಾಪವೇ ಆಗಿರುವುದೆಂದು ನಂಬದಿದ್ದರೆ ಅವನ ಮಾತು ಪಕ್ಷಪಾತಪೂರ್ಣವಾಗುತ್ತದೆ. ವಾಹವ್ವ! ವಿದ್ರೋಹಮಾಡುವ ದೇವರೆ! ಮತ್ತು ನಬಿಗಳೆ! ನಿಮ್ಮಂತಹ ಪಕ್ಷಪಾತಿಗಳು ಬಹಳ ಸ್ವಲ್ಪ ಜನರೇ ಇರಬಹುದು! ಇತರರನ್ನು ಸಿಕ್ಕ ಸಿಕ್ಕಲ್ಲಿ ಕೊಂದುಹಾಕಬೇಕು. ಸೆರೆಹಿಡಿಯಬೇಕು. ಎಂದು ಇಲ್ಲಿ ಬರೆದಂತೆಯೇ ಮುಸಲ್ಮಾನರ ಮೇಲೂ ಯಾರಾದರೂ ಇದೇರೀತಿಯ ಆಜ್ಞೆಯನ್ನಿತ್ತರೆ ಅವರಿಗೆ ಕೆಡುಕಾಗಿ ತೋರಲಾರದೆ? ಛಲೆ! ಪೈಗಂಬರ ಮುಂತಾದವರು ಎಷ್ಟು ಹಿಂಸಕರಾಗಿರುವರು! ಇತರರಿಗೆ ತಮಗಿಂತ ಎರಡುಪಾಲು ದುಃಖವನ್ನೀಯಲು ದೇವರೊಡನೆ ಪ್ರಾರ್ಥನೆಮಾಡಬೇಕೆಂದು ಬರೆದಿದ್ದಾರೆ. ಇದೂ ಪಕ್ಷಪಾತ, ಸ್ವಾರ್ಥಸಾಧನೆ ಮತ್ತು ಮಹಾ ಅಧರ್ಮದ ವಿಷಯವಾಗಿದೆ. ಆದುದರಿಂದಲೇ ಈಗಲೂ ಮುಸಲ್ಮಾನರಲ್ಲಿ ಎಷ್ಟೋ ದುಷ್ಟರು ಇಂತಹ ಕಾರ್ಯಗಳನ್ನು ಮಾಡಲು ಹೇಸುವುದೇ ಇಲ್ಲ. ವಿದ್ಯೆಯ ಹೊರತು ಮನು

ಷ್ಯನು ಪಶುವಿನಂತೆ ಆಗುತ್ತಾನೆಂದು ಹೇಳಿದುದು ನಿಜವೇ ಆಗಿರುತ್ತದೆ. ||೧೨೪||

೧೨೯. ದೇವರು ಗಾಳಿಗಳನ್ನು ಕಳುಹಿಸುತ್ತಾನೆ. ಅವು ಮೋಡಗಳನ್ನೆಬ್ಬಿಸುತ್ತವೆ. ನಂತರ ಅದನ್ನು ನಾವು ಶವಗಳ ಗುಂಪಿನತ್ತ ತರುತ್ತೇವೆ. ಅವನನ್ನು ಮೃತ್ಯುವಿನ ನಂತರ ನಾವು ಭೂಮಿಸಹಿತ ಜೀವಂತಪಡಿಸಬೇಕು. ಮತ್ತು ಅದೇ ರೀತಿ ಸಮಾಧಿಗಳಿಂದ ಹೊರಡಬೇಕು. ಅವನು ನಮ್ಮನ್ನು ಸದಾಕಾಲವೂ ಇರುವ ಮನೆಯಲ್ಲಿ ದಯೆದೋರಿ ಇರಿಸಿದ್ದಾನೆ. ಅಲ್ಲಿ ನಮಗೆ ಪರಿಶ್ರಮವಾಗುವುದೂ ಇಲ್ಲ. ದಣಿವಾಗುವುದೂ ಇಲ್ಲ.

[ಮುಂ. ಋ। ಸಿ. ೨೨। ಸೂ. ೩೫। ಆ. ೯, ೩೫]

ಸನಿಾಕ್ಷಕ—ವಾಹವ್ವ ! ದೇವರ ತತ್ವಜ್ಞಾನವಾದರೂ ಎಂತಹುದು? ಅವನು ವಾಯುವನ್ನು ಕಳಿಸುತ್ತಾನಂತೆ. ಅದು ಮೇಘಗಳನ್ನು ಎಬ್ಬಿಸುತ್ತದಂತೆ. ದೇವರು ಅದರಿಂದ ಹೆಣಗಳನ್ನು ಬದುಕಿಸುತ್ತಾ ಹೋಗುತ್ತಾನೆ. ಇದು ದೇವರ ಮಾತಾಗಿರಲಾರದು. ದೇವರ ಕೆಲಸವು ಯಾವಾಗಲೂ ಒಂದೇರೀತಿಯಾಗಿರುತ್ತದೆ. ಮನೆಗಳಿದ್ದರೆ ಅವು ನಿರ್ಮಿಸದೆ ಎಂದಿಗೂ ಆಗಿರಲಾರವು. ನಿರ್ಮಾಣಮಾಡಲ್ಪಟ್ಟದ್ದು ಎಂದಿಗೂ ನಿತ್ಯವಾಗದು. 'ಶರೀರವುಳ್ಳವನ್ನು ಪರಿಶ್ರಮ ಮಾಡದಿದ್ದರೆ ಅವಶ್ಯವಾಗಿ ದುಃಖ ಹೊಂದುತ್ತಾನೆ. ಅವನು ಖಾಯಿಲೆ ಬೀಳದೆ ಎಂದಿಗೂ ಇರಲಾರ. ಒಬ್ಬ ಸ್ತ್ರೀಯನ್ನು ಕೂಡುವವನೇ ಖಾಯಿಲೆ ಬೀಳುತ್ತಿರುವಾಗ ಅನೇಕ ಸ್ತ್ರೀಯರೊಡನೆ ವಿಷಯಭೋಗಮಾಡುವವನ ದುರ್ದಶೆಯೆಷ್ಟಾಗಲಿಕ್ಕಿಲ್ಲ? ಆದುದರಿಂದ ಮುಸಲ್ಮಾನರು ಸ್ವರ್ಗದಲ್ಲಿರುವುದೂ ಸಹ ಸದಾ ಸುಖದಾಯಕವಾದುದಲ್ಲ. ||೧೨೯||

೧೩೦. ದೃಢವಾದ ಕುರಾನಿನ ಆಣೆಗೂ ನೀನು ಕಳುಹಿಸಲ್ಪಟ್ಟವರ ಪೈಕಿಯವನಾಗಿರುವೆ. ನೇರವಾದ ಮಾರ್ಗದಲ್ಲಿ ಸರ್ವಶಕ್ತನೂ ದಯಾವಂತನೂ ಆದ ಅವನು ಇರಿಸಿರುವನು.

[ಮುಂ. ಋ। ಸಿ. ೨೩। ಸೂ. ೩೬। ಆ. ೨, ೩, ೪, ೫]

ಸಮೀಕ್ಷಕ :—ಈಗ ನೋಡಿರಿ! ಈ ಕುರಾನನ್ನು ದೇವರು ಬರೆದಿದ್ದರೆ ಅವನು ಇದರ ಆಣೆಯಿಡುತ್ತಿದ್ದನೆ? ನಬಿಯನ್ನು ದೇವರು ಕಳಸಿದರೆ ಅವನು ತನ್ನ ಸಾಕುಮಗನ ಹೆಂಡತಿಯ ಮೇಲೆ ಮೋಹಿತನಾದನೇಕೆ? ಕುರಾನನ್ನು ನಂಬುವವರು ನೇರಾದ ಮಾರ್ಗದಲ್ಲಿರುವರೆಂಬುದು ಕಥನ ಮಾತ್ರವೇ ಆಗಿದೆ. ಸತ್ಯವನ್ನೊಪ್ಪಿಕೊಳ್ಳುವುದು, ಪಕ್ಷಪಾತವನ್ನು ಬಿಟ್ಟು ನ್ಯಾಯಧರ್ಮ ಮೊದಲಾದುವನ್ನಾಚರಿಸುವುದೂ ಇವಕ್ಕೆ ವಿಪರೀತವಾದುದನ್ನು ತ್ಯಾಗಮಾಡುವುದೂ ಸರಳ ಮಾರ್ಗವೆನಿಸುತ್ತದೆ. ಕುರಾನಿನಲ್ಲಾಗಲಿ, ಮುಸಲ್ಮಾನರಲ್ಲಾಗಲಿ, ಇವರ ದೇವರಲ್ಲಾಗಲಿ ಇಂತಹ ಸ್ವಭಾವವೇ ಇಲ್ಲ. ಮಹಮ್ಮದ ಸಾಹೇಬರು ಎಲ್ಲರಲ್ಲಿಯೂ ಪ್ರಬಲರಾಗಿದ್ದರೆ ಎಲ್ಲರಿಗಿಂತ ಹೆಚ್ಚು ವಿದ್ಯಾವಂತರೂ, ಶುಭ ಗುಣಯುಕ್ತರೂ ಏಕಾಗಲಿಲ್ಲ? ಆದುದರಿಂದ ತನ್ನ ಯಲಚಿ ಹಣ್ಣುಗಳನ್ನು ಮಾರುವ, ಹುಳಿಯಾಗಿವೆಯೆಂದು ಹೇಳದ ಅಜ್ಜಮ್ಮನ ಮಾತಿನಂತೆಯೇ ಇದೆ ಈ ಮಾತು. ॥೧೩೦॥

೧೩೧. ಆಗ ತುತೂರಿ ಊದಲ್ಪಡುವುದು. ಅಕಸ್ಮಾತ್ ತಮ್ಮ ಸಮಾಧಿಗಳಿಂದ ಹೆಣಗಳು ಪಾಲಕನತ್ತ ಓಡಿಬರುವವು. ತಾವು ಗಳಸುತ್ತಿದ್ದ ವಿಷಯದಲ್ಲಿ ಅವರ ಕಾಲುಗಳು ಸಾಕ್ಷಿ ಹೇಳುವವು. ತನಗೆ ಮನಸ್ಸು ಬಂದಂತೆ ಮಾಡಲು ಮಾತ್ರ ಆಜ್ಞೆ ಮಾಡುವುದಲ್ಲದೆ ಅವನು ಬೇರಾವ ಆಜ್ಞೆಯನ್ನು ಕೊಡುವುದಿಲ್ಲ. ಯಾವುದಾದರೂ ವಸ್ತುವನ್ನು ಕುರಿತು ಆಗು ಎನ್ನಲು ಅದು ಆಗಿಹೋಗುತ್ತದೆ.

[ಮುಂ. ೫। ಸಿ. ೨೩। ಸೂ. ೩೬। ಆ. ೫೧, ೬೫, ೮೨]

ಸಮೀಕ್ಷಕ—ಈಗ ತಲೆಬುಡವಿಲ್ಲದ ಮಾತುಗಳನ್ನು ಆಲಿಸಿರಿ. ಕಾಲುಗಳು ಎಂದಾದರೂ ಸಾಕ್ಷಿಯನ್ನೀಯಬಲ್ಲವೆ? ದೇವರ ಹೊರತು ಆ ಸಮಯದಲ್ಲಿ ಆಜ್ಞೆಕೊಡಲ್ಪಡಲು ಏನಿದ್ದಿತು? ಯಾರು ಕೇಳಿದರು? ಆದುದಾದರೂ ಯಾರು? ವಸ್ತುವಿಲ್ಲದಿದ್ದರೆ ಈ ಮಾತು ಸುಳ್ಳಾಗುತ್ತದೆ. ಇದ್ದಿದ್ದರೆ ದೇವರ ಹೊರತು ಮತ್ತಾವ ವಸ್ತುವೂ ಇರಲಿಲ್ಲ. ದೇವರು ಎಲ್ಲವನ್ನೂ ಉಂಟುಮಾಡಿದನು ಎಂಬ ಮಾತುಗಳು ಸುಳ್ಳಾಗುತ್ತವೆ. ॥೧೩೧॥

೧೩೨. ಅದರಲ್ಲಿ ಶುದ್ಧವಾದ ಹೆಂಡದ ಪಾತ್ರೆಗಳು ಓಡಿಸಲ್ಪ

ಡುವವು. ಆ ಹೆಂಡವು ಬಿಳಿಯಾಗಿದ್ದು ಕುಡಿಯುವವರಿಗೆ ಆನಂದವನ್ನೀ ಯುವುದು. ಅವರ ಸಖಿಾಪದಲ್ಲಿ ಸುನಯನೆಯರು ಅಥೋ೯ದೃಷ್ಟಿಯು-ರಾಗಿ ಕುಳಿತುಕೊಳ್ಳುವರು. ಆ ಕಣ್ಣುಗಳು ಅಡಗಿಸಿಟ್ಟ ವೊಟ್ಟಿಗಳಂತಿವೆ. ನಾವೇನೂ ಸಾಯಲಾರೆವಷ್ಟೆ? ಲೂತನು ನಿಜವಾಗಿಯೂ ಪೈಗಂಬರರಲ್ಲೊಬ್ಬನಾಗಿದ್ದನು. ಆದುದರಿಂದಲೇ ನಾವು ಅವನಿಗೂ ಅವನ ಜನರಿಗೂ ಮುಕ್ತಿಯನ್ನು ಕೊಟ್ಟಿವು. ಆದರೆ ಮುದುಕಿಯೊಬ್ಬಳು ಹಿಂದುಳಿಯುವವರಲ್ಲಿದ್ದಾಳೆ. ನಂತರ ನಾವು ಇತರರನ್ನು ಕೊಂದು ಹಾಕಿದೆವು.

[ಮಂ. ೬। ಸಿ. ೨೩। ಸೂ. ೩೭। ಆ. ೪೫, ೪೬, ೪೮, ೪೯, ೫೮, ೧೧೩, ೧೩೪, ೧೩೫, ೧೩೬]

ಸಮಿಾಕ್ಷಕ—ಏನ್ರೀ! ಇಲ್ಲಿ ಮುಸಲ್ಮಾನರು ಹೆಂಡವು ಕೆಟ್ಟದ್ದು ಅನ್ನುತ್ತಾರೆ. ಇವರ ಸ್ವರ್ಗದಲ್ಲಿ ಹೆಂಡದ ನದಿಗಳೇ ಹರಿಯುತ್ತಿವೆ!! ಇಲ್ಲಿ ಹೆಂಡಕುಡಿಯುವುದನ್ನು ಬಿಡಿಸಿದುದು ಒಳ್ಳೆಯದು. ಆದರೆ ಇಲ್ಲಿನ ಬದಲಾಗಿ ಇವರ ಸ್ವರ್ಗದಲ್ಲಿ ಬಹಳ ಕೆಡುಕಿದೆ. ಹೆಂಗಸರ ಕಾರಣದಿಂದ ಅಲ್ಲಿ ಯಾರ ಚಿತ್ತವೂ ಸ್ಥಿರವೇ ಇರಲಾರದು. ಮಹಾ ಮಹಾ ರೋಗಗಳೂ ಆಗಬಹುದೇನೊ. ಅಲ್ಲಿರುವವರು ಶರೀರವಂತರಾಗಿರುವುದಾದರೆ ಅವಶ್ಯವಾಗಿಯೂ ಸಾಯುವರು. ಶರೀರರಹಿತರಾಗಿದ್ದರೆ ಭೋಗ ವಿಲಾಸಗಳನ್ನೇ ಮಾಡಲಾರರು. ಹೀಗಿರುವಾಗ ಅವರು ಸ್ವರ್ಗಕ್ಕೆ ಹೋಗುವುದೇ ವ್ಯರ್ಥವಾಯಿತು. ಲೂತನನ್ನು ಪೈಗಂಬರನೆಂದು ನಂಬುವಿರಾದರೆ ಅವನ ಇಬ್ಬರು ಹುಡುಗಿಯರು ಅವನೊಡನೆ ಸಮಾಗಮದಿಂದ ಸಂತತಿಯನ್ನು ಪಡೆದರೆಂದು ಬೈಬಲಿನಲ್ಲಿ ಬರೆದು ದನ್ನು ನಂಬುತ್ತೀರೊ ಇಲ್ಲವೊ? ನಂಬುತ್ತೀರಾದರೆ ಇಂತಹ ವರನ್ನು ಪೈಗಂಬರರೆಂದು ನಂಬುವುದೇ ನಿರರ್ಥಕವಾಗಿದೆ. ಇಂತಹ ವರಿಗೂ ಮುಕ್ತಿಯನ್ನು ದೇವರು ಕೊಡುವುದಾದರೆ ಆ ದೇವರೂ ಇಂತಹವನೇ ಆಗಿರಬಹುದು. ಏಕೆಂದರೆ ಮುದುಕಿಯ ಕಥೆಯನ್ನು ಹೇಳುವವನೂ ಪಕ್ಷಪಾತದಿಂದ ಇತರರನ್ನು ನಾಶಪಡಿಸುವವನೂ ಕದಾಪಿ ದೇವರಾಗಲಾರನು, ಇಂತಹ ದೇವರು ಮುಸಲ್ಮಾನರ ಮನೆಯಲ್ಲಿರಬಲ್ಲನೇ ಹೊರತು ಬೇರೆಲ್ಲಿಯೂ ಇರಲಾರ. ॥೧೩೨॥

೧೩೩. ಸ್ವರ್ಗವು ಯಾವಾಗಲೂ ತೆರೆದಿರುವುದು. ಅವರಿಗಾಗಿ ಅದರ ಬಾಗಿಲುಗಳು ತೆರೆದಿರುವವು. ದಿಂಬುಗಳು ಇಡಲ್ಪಟ್ಟವೆ. ಅದರಲ್ಲಿ ನಾನಾವಿಧವಾದ ಫಲಗಳನ್ನೂ ಪಾನೀಯಗಳನ್ನೂ ತರಿಸಲಾಗುವುದು. ಸಮೀಪದಲ್ಲಿ ಅಧೋದೃಷ್ಟಿಯುಳ್ಳ ಮತ್ತು ಸಮಾನ ವಯಸ್ಕರಾದ ಸ್ತ್ರೀಯರಿರುವರು. ದೇವದೂತರೆಲ್ಲರೂ ನಮಸ್ಕಾರ ಮಾಡಿದರು. ಆದರೆ ಸೈತಾನನು ಒಪ್ಪಲಿಲ್ಲ. ಅಭಿಮಾನಪಟ್ಟನು. ಅವನು ಕಾಫಿರರ ಪೈಕಿಯವನಾಗಿದ್ದನು. ಸೈತಾನನೆ! ನನ್ನ ಎರಡೂ ಕೈಗಳಿಂದ ನಿರ್ಮಿಸಿದ ಪದಾರ್ಥಕ್ಕೆ ನಮಸ್ಕಾರ ಮಾಡಬಾರದೆಂದು ನಿನಗಾರು ತಡೆದರು? ನೀನೇಕೆ ಅಭಿಮಾನಪಟ್ಟೆ. ನೀನೇನಾದರೂ ದೊಡ್ಡ ಅಧಿಕಾರವುಳ್ಳವರ ಪೈಕಿಯವನೊ? ಅಂದನು. ನೀನು ಉಂಟುಮಾಡಿದವಸ್ತುವಿಗಿಂತ ನಾನು ಶ್ರೇಷ್ಠನಾಗಿರುವೆನು. ಏಕೆಂದರೆ ನೀನು ನನ್ನನ್ನು ಅಗ್ನಿಯಿಂದಲೂ ಆ ವಸ್ತುವನ್ನು ಮಣ್ಣಿನಿಂದಲೂ ಉಂಟುಮಾಡಿದ್ದೀಯೇ ಅಂದನು. ಸರಿ, ನಡೆ ಈ ಆಕಾರಗಳಿಂದ ನಿಜವಾಗಿ ನೀನು ಹೊರದೂಡಲ್ಪಟ್ಟಿದ್ದೀಯೇ. ಖಂಡಿತವಾಗಿ ನನ್ನ ನ್ಯಾಯರಾತ್ರಿಯವರೆಗೆ ನಿನಗೆ ಧಿಕ್ಕಾರವಿದೆ. ಎಂದು ಹೇಳಿದನು. ನನ್ನ ಸ್ವಾಮಿಯೆ! ಹೆಣಗಳು ಎಬ್ಬಿಸಲ್ಪಡುವ ದಿನದವರೆಗೆ ಸಡಿಲಿಸು ಎಂದು ಹೇಳಿದನು. ಖಂಡಿತವಾಗಿ ನೀನು ಸಡಿಲ್ಪಟ್ಟವರ ಪೈಕಿಯವನು ಅಜ್ಞಾತದಿವಸದ ವರೆಗೆ ಎಂದನು. ನಿನ್ನ ಸೌರವದ ಆಣೆ ಖಂಡಿತವಾಗಿಯೂ ಅವರನ್ನೆಲ್ಲಾ ಒಟ್ಟಿಗೇ ಮೋಸಪಡಿಸುವೆನು ಎಂದು ಹೇಳಿದನು.

[ಮುಂ. ೬। ಸಿ. ೨೩। ಸೂ. ೩೮, ೪೩-೪೫, ೬೩-೭೨]

ಸಮೀಕ್ಷೆ—ಕುರಾನಿನಲ್ಲಿ ಬರೆಯಲ್ಪಟ್ಟಂತೆ ಸ್ವರ್ಗದಲ್ಲಿ ಉದ್ಯಾನಗಳೂ, ಕಾಲುವೆಗಳೂ, ಕಟ್ಟಡ ಮೊದಲಾದುವುಗಳೂ ಇರುವುದಾದರೆ ಅವು ಸದಾಕಾಲದಿಂದ ಇರುತ್ತಿಲ್ಲ. ಮತ್ತು ಇನ್ನು ಮುಂದೆಯೂ ಇರಲಾರವು. ಸಂಯೋಗದಿಂದ ಉಂಟಾದ ವಸ್ತುವು ಸಂಯೋಗವಾಗುವ ಮೊದಲು ಇರುವುದಿಲ್ಲ. ಭವಿಷ್ಯತ್ತಿನಲ್ಲಿ ವಿಯೋಗವಾದ ನಂತರ ಖಂಡಿತವಾಗಿಯೂ ಇರುವುದಿಲ್ಲ. ಆ ಸ್ವರ್ಗವೇ ಇಲ್ಲದಿರುವ ಮೇಲೆ ಅದರಲ್ಲಿನ ನಿವಾಸಿಗಳು ಹೇಗೆ ಹೋಗಿರಬಲ್ಲರು?

ಸುಪ್ಪತ್ತಿಗೆಗಳೂ, ದಿಂಬುಗಳೂ, ಫಲಪಾಸೀಯಗಳೂ ಅಲ್ಲಿ ಸಿಗುವ ವೆಂದು ಬರೆದುದರಿಂದ ಮುಸಲ್ಮಾನಮತವು ಹರಡಿದವೇಳೆಯಲ್ಲಿ ಅರಬ್ಬೀ ದೇಶವು ವಿಶೇಷವಾಗಿ ಸಮೃದ್ಧವಾಗಿರಲಿಲ್ಲ. ಆದುದರಿಂದ ಮಹಮ್ಮದ ಸಾಹೇಬರು ದಿಂಬು ಮೊದಲಾದುವುಗಳ ವಿಷಯವನ್ನು ಹೇಳಿ ಬಡವರನ್ನು ತನ್ನ ಮತದಲ್ಲಿ ಸಿಲುಕಿಸಿಕೊಂಡರು ಎಂಬುದು ಸಿದ್ಧವಾಗುತ್ತದೆ. ಹೆಂಗಸರಿರುವಲ್ಲಿ ನಿರಂತರವಾದ ಸುಖವಾದರೂ ಹೇಗಿದ್ದೀತು? ಆ ಸ್ತ್ರೀಯರು ಅಲ್ಲಿಗೆ ಎಲ್ಲಿಂದಲಾದರೂ ಬಂದರೊ ಅಥವಾ ಸ್ವರ್ಗದಲ್ಲಿ ವಾಸವಾಗಿದ್ದವರೊ? ಎಲ್ಲಿಂದಲಾದರೂ ಬಂದವರಾಗಿದ್ದರೆ ಅವರು ಪುನಃ ಹೊರಟುಹೋಗುವರು. ಅಲ್ಲಿಯ ನಿವಾಸಿಗಳಾಗಿದ್ದರೆ ಕಯಾಮತಿನವರೆಗೆ ಏನುಮಾಡುವರು. ವ್ಯರ್ಥವಾಗಿ ತಮ್ಮ ಆಯಸ್ಸನ್ನು ಕಳೆಯುವರೆ? ಈಗ ದೇವರ ತೇಜಸ್ಸನ್ನಾದರೂ ನೋಡಿರಿ. ಎಲ್ಲ ದೂತರೂ ಅವನ ಆಜ್ಞೆಯನ್ನು ಪಾಲಿಸಿ ಆದಮನಿಗೆ ನಮಸ್ಕರಿಸಿದರಂತೆ. ಆದರೆ ಸೈತಾನನು ಒಪ್ಪಲಿಲ್ಲವಂತೆ. ಆಗ ದೇವರು ಸೈತಾನನಿಗೆ ನಾನು ಅವನನ್ನು ನನ್ನ ಎರಡೂ ಕೈಗಳಿಂದ ನಿರ್ಮಿಸಿದ್ದೇನೆ ನೀನು ಅಭಿಮಾನಪಡಬೇಡ ಎಂದನಂತೆ. ಇದರಿಂದ ಕುರಾನಿನದೇವರು ಎರಡು ಕೈಗಳನ್ನುಳ್ಳ ಮನುಷ್ಯನಾಗಿದ್ದನೆಂದು ತಿಳಿದುಬರುತ್ತದೆ. ಅಂತಹವನು ವ್ಯಾಪಕನಾಗಲಿ, ಸರ್ವಶಕ್ತಿವಂತನಾಗಲಿ ಆಗಿರಲಾರನು. ತಾನು ಆದಮನಿಗಿಂತ ಶ್ರೇಷ್ಠನಾಗಿರುವೆನೆಂದು ಸೈತಾನನು ನಿಜವನ್ನೇ ಹೇಳಿದ್ದನು. ಹೀಗಿರುವಾಗ ಅವನ ಮೇಲೆ ದೇವರು ಕೋಪಿಸಿದುದೇಕೆ? ದೇವರ ಮನೆಯು ಆಕಾಶದಲ್ಲಿ ಮಾತ್ರವೇ ಇದೆಯೆ? ಭೂಮಿಯ ಮೇಲಿಲ್ಲವೆ? ಹಾಗಾದರೆ ಕಾಬಾವು ದೇವರ ಮನೆಯೆಂದು ಮೊವಲು ಏಕೆ ಬರೆದನು? ದೇವರು ತನ್ನಿಂದ ಅಥವಾ ಸೃಷ್ಟಿಯಿಂದ ಹೊರಗೆ ಹೇಗೆತಾನೆ ದೂಡಬಲ್ಲನು? ಎಲ್ಲ ಸೃಷ್ಟಿಯೂ ದೇವರದೇ ಆಗಿದೆ. ಇದರಿಂದ ದೇವರು ಬರೇ ಸ್ವರ್ಗಕ್ಕೆ ಒಡೆಯನಾಗಿದ್ದಾನೆಂದು ತಿಳಿದುಬರುತ್ತದೆ. ದೇವರು ಅವನನ್ನು ಧಿಕ್ಕರಿಸಿ ಸೆರೆಹಿಡಿದನು. ಆಗ ಸೈತಾನನು—ಸ್ವಾಮಿಾ! ನನ್ನನ್ನು ಕಯಾಮತಿನ ವರೆಗೆ ಬಿಟ್ಟುಬಿಡು ಅಂದನು. ದೇವರು ಆಗ ಅವನ 'ಹೊಗಳಿಕೆಯನ್ನು ಮೆಚ್ಚಿ ಕಯಾಮತ್‌ದಿನದ ವರೆಗೆ ಬಿಟ್ಟುಬಿಟ್ಟನು. ಸೈತಾನನು ಬಿಡುಗಡೆ ಹೊಂದಿದ

ಕೂಡಲೇ ದೇವರನ್ನು ಕುರಿತು—ಈಗ ನಾನು ಚೆನ್ನಾಗಿ ವೋಸಗೊಳಿಸುವೆನು. ಮತ್ತು ವಿದ್ರೋಹವನ್ನುಂಟುಮಾಡುವೆನು ಎಂದನು. ಆಗ ದೇವರು ಹೇಳುತ್ತಾನೆ. ಎಷ್ಟನ್ನು ನೀನು ಮರುಳುಗೊಳಿಸುವೆಯೊ ಅವರೆಲ್ಲರನ್ನೂ ನಿನ್ನನ್ನೂ ನಾನು ನರಕಕ್ಕೆ ಕಳುಹಿಸುವೆನು. ಸಜ್ಜನರೆ! ಈಗ ಯೋಚಿಸಿರಿ. ಸೈತಾನನು ತಾನಾಗಿ ಮರುಳಾದನೊ? ಅಥವಾ ದೇವರು ಅವನನ್ನು ಮರುಳುಗೊಳಿಸಿದನೊ? ದೇವರು ಮರುಳುಗೊಳಿಸಿದನಾದರೆ ಅವನು ಸೈತಾನನಿಗೂ ಸೈತಾನನಾದನು. ಸೈತಾನನು ತಾನಾಗಿ ಮರುಳಾದನಾದರೆ ಇತರ ಜೀವಿಗಳೂ ತಾವಾಗಿ ಮರುಳಾಗುವರು. ಸೈತಾನನ ಆವಶ್ಯಕತೆಯಿರುವುದಿಲ್ಲ. ದೇವರು ವಿದ್ರೋಹಿಯಾದ ಸೈತಾನನನ್ನು ಪೂರ್ಣವಾಗಿ ಬಿಟ್ಟುಬಿಟ್ಟನು. ಇದರಿಂದ ಅವನೂ ಅಧರ್ಮಮಾಡಲು ಸೈತಾನನೊಡನೆ ಸಮ್ಮಿಳಿತನಾದಂತಾಯಿತು. ತಾನಾಗಿ ಕಳ್ಳತನ ಮಾಡಿಸಿ ಶಿಕ್ಷೆಯನ್ನು ವಿಧಿಸುವುದಾದರೆ ಅಂತಹವನ ಅನ್ಯಾಯಕ್ಕೆ ಪಾರಾವಾರವೇ ಇಲ್ಲ. ॥೧೩೩॥

೧೩೪. ದೇವರು ಎಲ್ಲಾ ಪಾಪಗಳನ್ನೂ ಕ್ಷಮಿಸುತ್ತಾನೆ ಖಂಡಿತವಾಗಿ ಅವನು ಕ್ಷಮಿಸುವವನೂ ದಯಾಳುವೂ ಆಗಿರುವನು. ಭೂಮಿಯು ಅವನ ಅಧೀನತೆಯಲ್ಲಿದೆ. ಕಯಾಮತ್ ದಿವಸವನ್ನೂ ಆಕಾಶವನ್ನೂ ಅವನು ತನ್ನ ಬಲಗೈಯಿಂದ ಹಿಡಿದಿದ್ದಾನೆ. ಪೃಥ್ವಿಯು ತನ್ನ ಪಾಲಕನ ಪ್ರಕಾಶದಿಂದ ಪ್ರಕಾಶವಾಗುವುದು. ಕರ್ಮಪತ್ರಗಳು ಇಡಲ್ಪಡುವವು. ಪೈಗಂಬರರನ್ನು, ಸಾಕ್ಷಿಗಳನ್ನು ತರಲಾಗುವದು. ಮತ್ತು ತೀರ್ಪುಕೊಡಲಾಗುವದು.

[ಮಂ. ೬। ಸಿ. ೨೪। ಸೂ. ೩೯। ಆ. ೫೫, ೬೭, ೬೯]

ಸಮೀಕ್ಷಕ:—ದೇವರು ಸಮಗ್ರ ಪಾಪಗಳನ್ನು ಸಹ ಕ್ಷಮಿಸುವುದಾದರೆ ಅವನು ಇಡೀ ಜಗತ್ತನ್ನೇ ಪಾಪಿಯಾಗಿ ಮಾಡುತ್ತಾನೆಂದು ತಿಳಿಯಬೇಕು. ಒಬ್ಬನಿಗೆ ದಯೆದೋರಿ ಅವನನ್ನು ಕ್ಷಮಿಸಿದರೆ ಆ ದುಷ್ಟನು ಇನ್ನಷ್ಟು ದುಷ್ಟತನಮಾಡಿ ಎಷ್ಟೋ ಧರ್ಮಾತ್ಮರಿಗೆ ದುಃಖವನ್ನುಂಟುಮಾಡುವನು. ಸ್ವಲ್ಪ ಅಪರಾಧವನ್ನು ಕ್ಷಮಿಸಿದರೂ ಸಹ ಜಗತ್ತಿನಲ್ಲಿ ಅಪರಾಧವೇ ಅಪರಾಧವಾಗಿಬಿಡುವುದು. ಇದರಿಂದ ದೇವರೂ ದಯಾಹೀನನೆನಿಸುವನು. ದೇವರು ಬೆಂಕಿಯಂತೆ ಪ್ರಕಾಶ

ವಂತನೆ? ಕರ್ಮಪತ್ರಗಳನ್ನವನು ಎಲ್ಲಿ ಶೇಖರಿಸಿ ಇಡುತ್ತಾನೆ? ಅವುಗಳನ್ನು ಬರೆಯುವುದು ಯಾರು? ಪೈಗಂಬರರ ಮತ್ತು ಸಾಕ್ಷಿಗಳ ಆಧಾರದಿಂದ ದೇವರು ನ್ಯಾಯವಾಡುವುದಾದರೆ ಅವನು ಅಸರ್ವಜ್ಞನೂ ಅಸಮರ್ಥನೂ ಆಗಿಬಿಡುತ್ತಾನೆ. ಅವನು ಅನ್ಯಾಯ ಮಾಡದೆ ನ್ಯಾಯವನ್ನೇ ಮಾಡುವುದಾದರೆ ಕರ್ಮಗಳಿಗನುಸಾರವಾಗಿ ಮಾಡುತ್ತಿರಬಹುದು. ಆ ಕರ್ಮಗಳಾದರೂ ಪೂರ್ವಪರ ಜನ್ಮಗಳಿಗೆ ಸಂಬಂಧಪಟ್ಟವಾಗಿರಬಹುದಾದುದರಿಂದ ಕ್ಷಮಿಸುವುದು, ಬುದ್ಧಿಗೆ ಬೀಗಹಾಕುವುದು, ಉಪದೇಶಮಾಡದಿರುವುದು, ಸೈತಾನನಿಂದ ದುರ್ಮಾರ್ಗಕ್ಕೆಳೆಯುವುದು ಮತ್ತು ಸೆರೆಮನೆಯಲ್ಲಿ ಇಡುವುದು ಇವೆಲ್ಲಾ ತೀರಾ ಅನ್ಯಾಯಕರ್ಮಗಳಾಗಿವೆ. ॥೧೩೪॥

೧೩೫. ಪುಸ್ತಕವು ಸರ್ವಶಕ್ತನೂ, ಜ್ಞಾನಿಯೂ ಅದವನ ಕಡೆಯಿಂದ ಕೊಡಲ್ಪಡುತ್ತದೆ. ಅವನು ಪಾಪಗಳನ್ನು ಕ್ಷಮಿಸುವವನೂ ತೋಬಾ ವನ್ನು ಸ್ವೀಕರಿಸುವವನೂ ಆಗಿದ್ದಾನೆ.

[ಮಂ. ೬। ಸಿ. ೨೪। ಸೂ. ೪೦। ಆ. ೨, ೩]

ಸಮೀಕ್ಷಕ:—ಅಬೋಧ ಮನುಷ್ಯನು ದೇವರ ಹೆಸರಿನಲ್ಲಿ ಈ ಪುಸ್ತಕವನ್ನು ನಂಬಿಬಿಡಲಿ ಎಂಬ ಉದ್ದೇಶ್ಯಕ್ಕಾಗಿ ಈ ಮಾತು ಇದೆ. ಈ ಪುಸ್ತಕದಲ್ಲಿ ಸ್ವಲ್ಪ ಸತ್ಯವನ್ನು ಬಿಟ್ಟು ಉಳಿದುದೆಲ್ಲವೂ ಅಸತ್ಯ ತುಂಬಿಕೊಂಡಿದೆ. ಆ ಸತ್ಯವೂ ಕೂಡ ಸುಳ್ಳಿನ ಜೊತೆಯಲ್ಲಿ ಸೇರಿ ಕೆಟ್ಟುಹೋದಂತಿದೆ. ಆದುದರಿಂದಲೇ ಕುರಾನೂ ಅದರ ದೇವರೂ ಮತ್ತು ಅದನ್ನು ನಂಬುವವರೂ ಪಾಪವನ್ನು ಮಾಡಿ ಆಥವಾ ಮಾಡಿಸಿ ಅದನ್ನು ಹೆಚ್ಚಿಸುವವರಾಗಿದ್ದಾರೆ. ಪಾಪವನ್ನು ಕ್ಷಮಿಸುವುದು ಅತ್ಯಂತವಾದ ಅಧರ್ಮವು. ಆದಕಾರಣದಿಂದಲೇ ಮುಸಲ್ಮಾನರು ಪಾಪ ಮಾಡಲೂ ಉಪದ್ರವನ್ನಿಯಲೂ ಕಡಿಮೆ ಹೆದರುತ್ತಾರೆ. ॥೧೩೫॥

೧೩೬. ಎರಡು ದಿವಸಗಳಲ್ಲಿ ಏಳು ಆಕಾಶಗಳನ್ನು ನಿರ್ಮಿಸಿ ಅವುಗಳ ಕೆಲಸಗಳನ್ನು ಅವುಗಳಲ್ಲೇ ಹಾಕಿದನು. ಅಲ್ಲಿಗೆ ಹೋದಾಗ ಜನರ ಕಣ್ಣು ಕಿವಿ ಚರ್ಮಗಳೂ ಅವರ ಕರ್ಮಗಳ ಸಾಕ್ಷಿಯನ್ನು ದೇವರ ಮುಂದೆ ನುಡಿಯುವವು. ಆಗ ಜನರು ತಮ್ಮ ಚರ್ಮವನ್ನು ಕುರಿತು—ನೀವು ನಮ್ಮ ಮೇಲೆ ಏಕೆ ಸಾಕ್ಷಿಯನ್ನಿತ್ತಿರಿ? ಎಂದು ಕೇಳು

ವರು. ಚರ್ಮಗಳು ಎಲ್ಲವನ್ನೂ ಕರೆದ ದೇವರು ನಮ್ಮನ್ನು ಕರೆದಿದ್ದಾನೆ ಎಂದು ಹೇಳುವವು. ನಿಜವಾಗಿ ದೇವರು ಹೆಣಗಳನ್ನು ಬದುಕಿಸುವವನಾಗಿದ್ದಾನೆ.

[ಮಂ. ೬। ಸಿ. ೨೪। ಸೂ. ೪೧। ಆ. ೧೨, ೨೦, ೨೧, ೩೯].

ಸಮಾಕ್ಷೇಪಕ—ವಾಹವ್ವ ಮುಸಲ್ಮಾನರೆ! ನೀವು ಸರ್ವಶಕ್ತನೆಂದು ಹೇಳುವ ದೇವರು ಏಳು ಆಕಾಶಗಳನ್ನು ಎರಡು ದಿನಗಳಲ್ಲಿ ಉಂಟು ಮಾಡಲು ಸಮರ್ಥನಾದನೆ? ನಿಜವಾಗಿ ಸರ್ವಶಕ್ತಿವಂತನು ನಿಮಿಷ ಮಾತ್ರದಲ್ಲಿ ಎಲ್ಲವನ್ನೂ ನಿರ್ಮಿಸಬಲ್ಲನು. ದೇವರು ಕಣ್ಣು, ಕಿವಿ, ಚರ್ಮಗಳನ್ನು ಜಡವಾಗಿ ಮಾಡಿದ್ದಾನೆ. ಅವು ಹೇಗೆ ತಾನೆ ಸಾಕ್ಷಿ ಹೇಳಬಲ್ಲುವು? ದೇವರು ಸಾಕ್ಷಿ ಕೊಡಿಸಿದನಾದರೆ ಅವನು ಅವನ್ನು ಮೊದಲು ಜಡವಾಗಿ ನಿರ್ಮಿಸಿದನೇಕೆ? ತನ್ನ ಪೂರ್ವಾಪರನಿಯಮಗಳಲ್ಲಿ ಪರಸ್ಪರ ವಿರೋಧವನ್ನೇಕೆ ತಂದೊಡ್ಡಿದನು? ಇದನ್ನೂ ಮೀರಿಸಿರುವ ಸುಳ್ಳು ಮಾತು ಯಾವುದೆಂದರೆ ಜೀವರುಗಳ ಮೇಲೆ ಸಾಕ್ಷಿ ಹೇಳಿದ ನಂತರ ಜೀವರುಗಳು ಚರ್ಮವನ್ನು—ನೀನು ನಮ್ಮ ಮೇಲೆ ಸಾಕ್ಷಿಯನ್ನು ಏಕೆ ಹೇಳಿದೆ ಎಂದು ಕೇಳಿದರು. ಆಗ ಚರ್ಮವು ನಾನೇನು ಮಾಡಲಿ ದೇವರು ಹಾಗೆ ಕೊಡಿಸಿದನು ಎಂದು ಹೇಳುತ್ತದೆ. ಈ ಮಾತು ಎಂದಾದರೂ ಸಂಭವವಾಗಬಲ್ಲುದೆ? ಉದಾ—ಬಂಜೆಯ ಮಗನ ಮೋರೆಯನ್ನು ನಾನು ನೋಡಿದೆನು ಎಂದು ಯಾರೋ ಹೇಳಿದರಂತೆ. ಮಗನಿರುವುದಾದರೆ ಅವಳು ಬಂಜೆ ಹೇಗಾದಳು. ಬಂಜೆಯಾಗಿರುವಳಾದರೆ ಅವಳಿಗೆ ಮಗನು ಹುಟ್ಟುವುದೇ ಅಸಂಭವವಾಗಿದೆ. ಮೇಲಿನ ಮಾತು ಇದೇ ರೀತಿ ಸುಳ್ಳಾಗಿರುತ್ತದೆ. ಅವನು ಹೆಣಗಳನ್ನು ಬದುಕಿಸುವುದಾದರೆ ಮೊದಲು ಕೊಂದದ್ದಾದರೂ ಏಕೆ? ನಿಮ್ಮ ದೇವರೂ ಹೆಣವಾಗಬಲ್ಲನೊ ಆಗಲಾರನೆ? ಆಗಲಾರನಾದರೆ ಶವವಾಗಿರುವುದು ಕೆಟ್ಟದ್ದೆಂದು ಏಕೆ ಭಾವಿಸುತ್ತಾನೊ? ಕಯಾಮತ್ ರಾತ್ರಿಯವರೆಗೆ ಮೃತಜೀವಿಗಳು ಯಾವ ಮುಸಲ್ಮಾನನ ಮನೆಯಲ್ಲಿರುವವು? ಆಪರಾಧವಿಲ್ಲದೆ ಅವರನ್ನು ದೇವರು ಸೆರೆಮನೆಯಲ್ಲಿ ಏಕಿಟ್ಟನು? ಬೇಗನೇ ನ್ಯಾಯವನ್ನೇಕೆ ಮಾಡಲಿಲ್ಲ. ಇಂತಹ ಎಲ್ಲ ಮಾತುಗಳಿಂದ ದೇವರ ದೇವತ್ವಕ್ಕೇನೇ ಕಳಂಕ ಬರುತ್ತದೆ. ॥೧೩೬॥

೧೩೭. ಅವನಿಗಾಗಿ ಆಕಾಶದ ಬೀಗದಕೈಗಳಿವೆ. ಅವನು ಪೃಥ್ವಿಯನ್ನು ತೆರೆಯುತ್ತಾನೆ. ದೇವರು ಬಯಸಿದವರಿಗೆ ಭೋಜನ ಸಾಮಗ್ರಿಗಳಿವೆ. ಮತ್ತು ತೊಂದರೆಗೀಡುಮಾಡುತ್ತಾನೆ. ತಾನಿಚ್ಛಿಸಿದ್ದನ್ನು ಅವನು ಉಂಟುಮಾಡುತ್ತಾನೆ. ಬೇಕಾದವರಿಗೆ ಹುಡುಗಿಯರನ್ನು ಕೊಡುತ್ತಾನೆ. ಬೇಕಾದವರಿಗೆ ಹುಡುಗರನ್ನು ಕೊಡುತ್ತಾನೆ. ಅಥವಾ ಅವರಿಗೆ ಹುಡುಗರನ್ನೂ ಹುಡುಗಿಯರನ್ನೂ ದೊರಕಿಸಿಕೊಡುತ್ತಾನೆ. ಇಚ್ಛೆ ಬಂದವಳನ್ನು ಬಂಜೆಯಾಗಿ ಮಾಡುತ್ತಾನೆ. ಯಾವನಿಗೂ ದೇವರೊಡನೆ ಮಾತನಾಡುವ ಸಾಮರ್ಥ್ಯವಿಲ್ಲ. ದೇವರು ಸನ್ನೆಯಿಂದಾಗಲಿ. *ಪರದೆಯ ಒಳಗಿನಿಂದಾಗಲಿ, ಸಂದೇಶವನ್ನು ತರುವ ದೂತನಿಗಾಗಲಿ ಕಾಣಿಸಬಲ್ಲನು.

[ಮಂ. ೬। ಸಿ. ೨೫। ಸೂ. ೪೨। ಆ. ೧೨, ೪೯, ೫೦, ೫೧]

ಸಮಿಕ್ಷೆ—ದೇವರ ಬಳಿ ಬೀಗದಕೈಗಳ ರಾಶಿಯೇ ಬಿದ್ದಿರಬಹುದು. ಎಲ್ಲಾ ಸ್ಥಳಗಳ ಬೀಗಗಳನ್ನು ತೆರೆಯಬೇಕಾಗುತ್ತದಲ್ಲವೆ! ಇದು ಹುಡುಗಾಟಿಕೆಯ ಮಾತು. ತಾನಿಚ್ಛಿಸಿದವನಿಗೆ ಪುಣ್ಯಕರ್ಮಗಳ ಹೊರತಾಗಿಯೆ ಐಶ್ವರ್ಯವನ್ನು ಕೊಡುವನೊ? ತೊಂದರೆಪಡಿಸುವನೊ? ಹಾಗಾದರೆ ಅವನು ಬಹಳ ಅನ್ಯಾಯಕಾರಿಯಾಗಿರುವನು.

---

* ಈ ಆಯತಿನ ಭಾಷ್ಯವನ್ನು "ತಫ್‌ಸೀರ್ ಹುಸೇನೀ" ಎಂಬ ಪುಸ್ತಕದಲ್ಲಿ ಹೀಗೆ ಬರೆದಿದೆ—"ಮಹಮ್ಮದಸಾಹೇಬರು ಎರಡು ಪರದೆಗಳಲ್ಲಿದ್ದು ದೇವರ ಧ್ವನಿಯನ್ನಾಲಿಸಿದರು. ಒಂದು ಪರದೆಯು ಜರತಾರಿಯಿಂದಲೂ ಇನ್ನೊಂದು ಬಿಳೇ ಮುತ್ತುಗಳಿಂದಲೂ ಮಾಡಲ್ಪಟ್ಟಿದ್ದವು. ಎರಡೂ ಪರದೆಗಳ ಮಧ್ಯದಲ್ಲಿ ಎಪ್ಪತ್ತು ವರ್ಷಗಳ ವರೆಗೆ ನಡೆಯಬಹುದಾದ ಮಾರ್ಗವಿತ್ತು." ಬುದ್ಧಿವಂತರು ವಿಚಾರ ಮಾಡಬೇಕು. ಅವನು ದೇವರೊ? ಅಥವಾ ಪರದೆಯ ಒಳಗಿನಿಂದ ಮಾತನಾಡುವ ಹೆಂಗಸೊ? ಈ ಜನರು ಈಶ್ವರನನ್ನೇ ದುರವಸ್ಥೆಗೀಡುಮಾಡಿದ್ದಾರೆ. ವೇದ ಮತ್ತು ಉಪನಿಷದಾದಿ ಸದ್ಗ್ರಂಥಗಳಲ್ಲಿ ಪ್ರತಿಪಾದಿಸಲ್ಪಟ್ಟ ಶುದ್ಧಸ್ವರೂಪನಾದ ಪರಮಾತ್ಮನೆಲ್ಲಿ? ಕುರಾನಿನಲ್ಲಿ ಹೇಳಲ್ಪಟ್ಟ ಪರದೆಯ ಒಳಗಿನಿಂದ ಮಾತನಾಡುವ "ಖುದಾ" ಎಲ್ಲಿ? ನಿಜವಾಗಿ ಹೇಳಬೇಕಾದರೆ ಅರಬ್ಬೀ ದೇಶದ ಜನರು ಅವಿದ್ಯಾವಂತರಾಗಿದ್ದರು. ಶ್ರೇಷ್ಠವಾದ ಮಾತುಗಳನ್ನು ಅವರು ಯಾರ ಮನೆಯಿಂದ ತಾನೆ ತರಬಲ್ಲರು?

ಈಗ ಕುರಾನನ್ನು ಬರೆದವನ ಸ್ತ್ರೀಯರೂ ಮೋಹಿತರಾಗಿ ಸಿಲುಕಿ ಕೊಳ್ಳಬಹುದಾದ ಚಾತುರ್ಯವನ್ನಾದರೂ ನೋಡಿರಿ! ತಾನು ಇಚ್ಛಿಸಿದ್ದನ್ನೆಲ್ಲಾ ಉಂಟುಮಾಡುವನಾದರೆ ಇನ್ನೊಬ್ಬ ದೇವರನ್ನು ಹುಟ್ಟಿಸ ಬಲ್ಲನೊ? ಹುಟ್ಟಿಸಲಾರನಾದರೆ ಅವನ ಸರ್ವಶಕ್ತತೆಯು ಇಲ್ಲೇ ತಡೆದಂತಾಯಿತು. ಮನುಷ್ಯರಿಗಾದರೋ ದೇವರು ಹೆಚ್ಚು ಬಾಲಕ ಬಾಲಿಕೆಯರನ್ನು ಕೊಡುತ್ತಾನೆ. ಆದರೆ ಹೆಚ್ಚು ಮಕ್ಕಳಿರುವ ಕೋಳಿ, ಮೀನು, ಹಂದಿ ಮುಂತಾದವುಗಳಿಗೆ ಯಾರು ಅಷ್ಟು ಸಂತತಿಯನ್ನು ಕೊಡುತ್ತಾನೆ? ದೇವರು ಸ್ತ್ರೀಪುರುಷ ಸಮಾಗಮದ ಹೊರತು ಮಕ್ಕಳನ್ನು ಕೊಡುವುದಿಲ್ಲವೇಕೆ? ಒಬ್ಬೊಬ್ಬಳನ್ನು ತನ್ನಿಚ್ಛೆಯಿಂದ ಬಂಜೆಯಾಗಿಟ್ಟು ದುಃಖವನ್ನು ಕೊಡುವುದೇತಕ್ಕೆ? ದೇವರ ಎದುರಿನಲ್ಲಿ ಯಾರೂ ಮಾತನಾಡಲಾರರಂತೆ ಎಂತಹ ತೇಜಸ್ವಿಯಾಗಿದ್ದಾನೆ? ಪರದೆ ಹಾಕಿ ಮಾತನಾಡಬಹುದು. ದೂತರಾಗುವ ಪೈಗಂಬರರಾಗಲಿ ಅವನೊಡನೆ ಮಾತನಾಡುತ್ತಾರೆ ಎಂದು ಮೊದಲು ಬರೆದಿದೆ. ಈ ಮಾತು ನಿಜವಾಗಿದ್ದರೆ ದೂತರೂ ಪೈಗಂಬರರೂ ಚೆನ್ನಾಗಿ ತಮ್ಮ ಸ್ವಾರ್ಥವನ್ನು ಸಾಧಿಸಿಕೊಳ್ಳುತ್ತಿರಬಹುದು. ದೇವರು ಸರ್ವಜ್ಞನೂ, ಸರ್ವ ವ್ಯಾಪಕನೂ ಆಗಿರುವುದಾದರೆ ಪರದೆಯೊಳಗಿಂದ ಮಾತನಾಡುವುದೂ ಟಪಾಲಿನಂತೆ ಸಮಾಚಾರವನ್ನು ತರಿಸಿ ತಿಳಕೊಳ್ಳುವುದೂ, ಬರೆಯುವುದೂ ವ್ಯರ್ಥವಾಗುತ್ತದೆ. ಹಾಗೆ ಮಾಡುವವನು ದೇವರೇ ಅಲ್ಲ. ಅವನು ಯಾವನಾದರೊಬ್ಬ ಚತುರ ಮನುಷ್ಯನಿರಬೇಕು. ಆದುದರಿಂದ ಈ ಕುರಾನು ಎಂದಿಗೂ ಈಶ್ವರೋಕ್ತವಾಗಲಾರದು ಎಂದು ಯಾರಾದರೂ ಅವರಿಗೆ ಹೇಳಬೇಕು. ॥೧೩೭॥

೧೩೮. ಆಗ ಯೇಸುವು ಪ್ರತ್ಯಕ್ಷಪ್ರಮಾಣದಲ್ಲಿ ಅಲ್ಲಿಗೆ ಬಂದನು. [ಮಂ. ೬। ಸಿ. ೨೫। ಸೂ. ೪೩। ಆ. ೬೨]

ಸಮೀಕ್ಷಕ—ಯೇಸುವೂ ದೇವರಿಂದ ಕಳುಹಿಸಲ್ಪಟ್ಟವನಾಗಿದ್ದರೆ ಅವನ ಉಪದೇಶಗಳಿಗೆ ವಿರುದ್ಧವಾಗಿ ದೇವರು ಕುರಾನನ್ನೇಕೆ ನಿರ್ಮಿಸಿದನು? ಮತ್ತು ಕುರಾನಿಗೆ ವಿರುದ್ಧವಾಗಿ ಸುಸಮಾಚಾರಗಳಿವೆಯಾದುದರಿಂದ ಈ ಪುಸ್ತಕಗಳು ಈಶ್ವರಕೃತವಾದುವಲ್ಲ.॥೧೩೮॥

೧೩೯. ಅವನನ್ನು ಹಿಡಿಯಿರಿ ಮತ್ತು ನರಕದ ಮಧ್ಯದಲ್ಲೆಲ್ಲಾ ಎಳೆದುಕೊಂಡು ಹೋಗಿರಿ. ಅವರು ಇದೇ ರೀತಿ ಇರುವರು. ಮತ್ತು ಸುನಯನೆಯರಾದ ಬಿಳೇ ಹೆಂಗಸರೊಡನೆ ಅವರ ಮದುವೆ ಮಾಡುವೆವು. [ಮುಂ. ೬। ಸಿ. ೨೫। ಸೂ. ೪೪। ಆ. ೪೭, ೫೪]

ಸಮಾಕ್ಷೇಪ—ದೇವರು ನ್ಯಾಯಕಾರಿಯಾಗಿದ್ದು ಪ್ರಾಣಿಗಳನ್ನು ಹಿಡಿಸಿ ಎಳೆಸುತ್ತಾನೊ ? ಮುಸಲ್ಮಾನರ ದೇವರೇ ಇಂತಹವನಾಗಿರುವಾಗ ಅವನ ಉಪಾಸಕರಾದ ಇವರು ಅನಾಥರನ್ನೂ ನಿರ್ಬಲರನ್ನೂ ಹಿಡಿದು ಎಳೆಯುವುದರಲ್ಲಿ ಆಶ್ಚರ್ಯವೇನಿದೆ? ಅವನು ಪ್ರಾಪಂಚಿಕ ಮನುಷ್ಯನಂತೆ ಮದುವೆಯನ್ನು ಮಾಡಿಸುತ್ತಾನಂತೆ. ಮುಸಲ್ಮಾನರ ಪುರೋಹಿತನೆಂದೇ ಭಾವಿಸಬಹುದು. ॥೧೩೯॥

೧೪೦. ಕಾಫಿರರು ನಿಮಗೆ ಸಿಕ್ಕಿದಾಗ ಅವರ ರುಂಡವನ್ನು ಚೂರು ಚೂರಾಗುವಂತೆ ಹೊಡೆಯಿರಿ. ಅವರನ್ನು ಸೆರೆಹಿಡಿಯುವುದನ್ನು ದೃಢಪಡಿಸಿರಿ. ನಿನ್ನ ನಗರಕ್ಕಿಂತ ಎಷ್ಟೋ ಶಕ್ತಿಶಾಲಿಗಳಾದ ನಗರಗಳು ಅಲ್ಲಿದ್ದವು. ಆದ್ದರಿಂದ ನಿನ್ನನ್ನು ಅಲ್ಲಿಂದ ತೆಗೆದು ಅವರನ್ನೆಲ್ಲ ಕೊಂದುಹಾಕಿದೆವು. ಅವರಿಗೆ ಸಹಾಯನೀಡುವವನಾರೂ ಬರಲಿಲ್ಲ. ಸ್ವರ್ಗಪ್ರಶಂಸೆಯಿದೇ—ಅದು ಶ್ರೇಷ್ಠರಿಗೆ ವಾಗ್ದಾನಮಾಡಲ್ಪಟ್ಟವೆ. ಅದರ ಮಧ್ಯದಲ್ಲಿ ಕೆಡದಿರುವ ನೀರಿನ ಮತ್ತು ಹಾಲಿನ ಕಾಲುವೆಗಳಿದೆ. ಅವುಗಳ ಸವಿಯು ಕೆಟ್ಟಿಲ್ಲ. ಕುಡಿಯುವವರಿಗಾಗಿ ಆನಂದವನ್ನೀಯುವ ಹೆಂಡದ ಮತ್ತು ಶೋಧಿಸಲ್ಪಟ್ಟ ಜೇನಿನ ಕಾಲುವೆಗಳವೆ. ಮತ್ತು ಅವರಿಗಾಗಿ ಅಲ್ಲಿ ಫಲಗಳೂ ಒಡೆಯನ ಪ್ರತಿಯೊಂದು ವಿಧವಾದ ದಾನಗಳೂ ಇವೆ.

[ಮುಂ. ೬। ಸಿ. ೨೬। ಸೂ. ೪೭। ಆ. ೪, ೧೩, ೧೫]

ಸಮಾಕ್ಷೇಪಕ—ಆದುದರಿಂದಲೇ ಈ ಕುರಾನು, ಕುರಾನಿನ ದೇವರು ಮತ್ತು ಮುಸಲ್ಮಾನರು ಎಲ್ಲರೂ ವಿದ್ರೋಹವನ್ನು ಎಬ್ಬಿಸಿ, ಎಲ್ಲರನ್ನೂ ದುಃಖಕ್ಕೀಡುಮಾಡಿ ತಮ್ಮ ಪ್ರಯೋಜನಗಳನ್ನು ಸಾಧಿಸುವ ದಯಾಹೀನರಾಗಿರುವರು. ಇಲ್ಲಿ ಬರೆದಿರುವಂತೆಯೇ ಅನ್ಯಮತದವನೊಬ್ಬನು ಮುಸಲ್ಮಾನರ ವಿಷಯದಲ್ಲಿ ಮಾಡಿದರೆ ಇತರರಿಗಾಗುವಂತಹ ದುಃಖವು ಇವರಿಗೂ ಆಗುತ್ತದೊ ಇಲ್ಲವೊ? ಮಹಮ್ಮದ

ಸಾಹೇಬರನ್ನು ಅಲ್ಲಿಂದ ತೆಗೆದು ಬೇರೆಲ್ಲರನ್ನು ಕೊಂದ ದೇವರು ಬಹಳ ಪಕ್ಷಪಾತಿಯಾಗಿದ್ದಾನೆ. ಭೆಲೆ! ತಿಳಿಯಾದ ನೀರು, ಹಾಲು, ಹೆಂಡ ಮತ್ತು ಜೇನಿನ ಕಾಲುವೆಗಳಿರುವ ಸ್ವರ್ಗವು ಈ ಜಗತ್ತಿಗಿಂತಲೂ ಅಧಿಕವಾಗಬಲ್ಲುದೇನು? ಹಾಲು ಸ್ವಲ್ಪವೇ ಸಮಯದಲ್ಲಿ ಕೆಟ್ಟು ಹೋಗುವುದರಿಂದ ಅದರ ಕಾಲುವೆಗಳಾದರೂ ಇರಬಲ್ಲವೇ? ಆಮದ ರಿಂದಲೇ ಬುದ್ಧಿವಂತರು ಕುರಾನಿನ ಮತವನ್ನೊಪ್ಪಿಕೊಳ್ಳುವುದಿಲ್ಲ. ||೧೪೦||

೧೪೧. ಆ ಸಮಯದಲ್ಲಿ ಭೂಮಿಯು ಚೆನ್ನಾಗಿ ಅಲ್ಲಾಡಿಸ ಲ್ಪಡುವದು. ಪರ್ವತಗಳು ಒಡೆದುಹೋಗಿ ಗಾಳಿಪಟದಂತೆ ಗಾಳಿಯಲ್ಲಿ ಹಾರುತ್ತಿರುವವು ಮತ್ತು ಬಲಬದಿಯ ಸಾಹೇಬರು ಎಲ್ಲಿದ್ದಾರೆ? ಬಲಬದಿಯಲ್ಲೇ ಇದ್ದಾರೆ. ಎಡಗಡೆಯವರು ಎಲ್ಲಿದ್ದಾರೆ? ಎಡಗಡೆ ಯಲ್ಲೇ ಇದ್ದಾರೆ. ಮೇಲೆ ಪಲ್ಲಂಗಗಳು ಚಿನ್ನದ ದಾರಗಳಿಂದ ಹೆಣೆಯಲ್ಪಟ್ಟಿವೆ. ಅವುಗಳ ಮೇಲೆ ಎದುರುಬದುರಾಗಿ ದಿಂಬುಗಳು ಇಡಲ್ಪಟ್ಟಿವೆ ಅವುಗಳ ಮೇಲೆ ಯಾವಾಗಲೂ ಇರುವ ಬಾಲಕರು ಸ್ವಚ್ಛವಾದ ನೀರಿನ ಕಲಶಗಳನ್ನೂ ಶುದ್ಧವಾದ ಹೆಂಡದ ಪಾತ್ರೆಗಳನ್ನೂ ಹಿಡಿದು ತಿರುಗಾಡುವರು. ಅವುಗಳಿಂದ ತಲೆನೋವು ಉಂಟಾಗುವುದಿಲ್ಲ ವಿಪರೀತವಾಗಿ ಮಾತನಾಡಲಾರರು. ಹಣ್ಣು ಹಂಪಲುಗಳು ರುಚಿಸು ವಂತಹ ರೀತಿಯವಿವೆ. ಮೃಗಪಕ್ಷಿಗಳ ಮಾಂಸವೂ ಮೆಚ್ಚುವರೀತಿಯ ಲ್ಲಿದೆ. ಅವರಿಗಾಗಿ ಒಳ್ಳೆಯ ಅಡಗಿಸಿಟ್ಟ ಮುತ್ತಿನಂತಹ ಕಣ್ಣುಗಳನ್ನುಳ್ಳ ಹೆಂಗಸರಿದ್ದಾರೆ. ದೊಡ್ಡ ದೊಡ್ಡ ಹಾಸಿಗೆಗಳಿವೆ. ಒಂದು ವಿಚಿತ್ರ ರಚನಾಕ್ರಮದಿಂದ ನಾವು ಸ್ತ್ರೀಯರನ್ನು ಹುಟ್ಟಿಸಿದ್ದೇವೆ. ನಾವವರನ್ನು ಕುಮಾರಿಯರನ್ನಾಗಿಯೂ ಸುಮಂಗಲಿಯರನ್ನಾಗಿಯೂ ಸಮಾನ ವಯಸ್ಕರನ್ನಾಗಿಯೂ ಮಾಡಿದ್ದೇವೆ. ಅಲ್ಲಿ ಹೊಟ್ಟೆಯನ್ನು ತುಂಬಿಸಿ ಕೊಳ್ಳಿರಿ. ನಕ್ಷತ್ರಗಳು ಬೀಳುವ ಆಣೆಯಿಟ್ಟು ನಾನದನ್ನು ಹೇಳುತ್ತೇನೆ.

[ಮುಂ. ೭। ಸಿ. ೨೭। ಸೊ. ೫೬। ಆ. ೪, ೫, ೬, ೮, ೯, ೧೫–
–೨೫, ೩೫, ೩೬, ೩೭, ೫೩, ೭೫]

ಸವಿಾಕ್ಷಕ :—ಈಗ ಈ ಕುರಾನು ಬರೆದವನ ಲೀಲೆ ನೋಡಿರಿ! ಪೃಥ್ವಿಯಾದರೋ ಅಲ್ಲಾಡುತ್ತಲೇ ಇರುತ್ತದೆ. ಆ ಸಮಯದಲ್ಲಿಯೂ

ಅಲ್ಲಾಡುತ್ತಿರುವುದು. ಕುರಾನು ಬರೆದವನು ಪೃಥ್ವಿಯು ಚಲಿಸದೆ ಸ್ಥಿರವಾಗಿದೆಯೆಂದು ತಿಳಿಯುತ್ತಿದ್ದನೆಂಬುದು ಇದರಿಂದ ಗೊತ್ತಾಗುತ್ತದೆ. ಪರ್ವತಗಳನ್ನು ಪಕ್ಷಿಗಳಂತೆ ಹಾರಿಸಿ ಬಿಡುವನೆ? ಪತಂಗದ ಹುಳುಗಳಾದರೂ ಸೂಕ್ಷ್ಮದೇಹಧಾರಿಗಳಾಗಿಯೇ ಇರುವುರು. ಹೀಗಿರುವಾಗ ಅವರಿಗೆ ಎರಡನೇ ಜನ್ಮವೇಕಲ್ಲ? ಭಲೆ! ದೇವರು ಶರೀರಧಾರಿಯಲ್ಲದಿದ್ದರೆ ಅವನ ಎಡಬಲ ಬದಿಗಳಲ್ಲಿ ಹೇಗೆತಾನೆ ನಿಲ್ಲುವರು? ಅಲ್ಲಿ ಪಲ್ಲಂಗಗಳು ಚಿನ್ನದ ಸರಿಗೆಗಳಿಂದ ಹೆಣೆಯಲ್ಪಟ್ಟಿರುವವಾದರೆ ಬಡಗಿ ಆಕ್ಕಸಾಲಿಗರೂ ಅಲ್ಲಿರಬಹುದಲ್ಲವೆ? ತಿಗಣೆಗಳು ಕಚ್ಚಿ ಅವರನ್ನು ಮಲಗಬಿಡುತ್ತಾರೊ ಇಲ್ಲವೊ? ದಿಂಬುಗಳನ್ನು ಹಾಕಿಕೊಂಡು ಅವರು ವ್ಯರ್ಥವಾಗಿ ಕುಳಿತುಕೊಂಡಿರುವರೊ? ಅಥವಾ ಏನಾದರೂ ಕೆಲಸಮಾಡುವರೊ? ಸುಮ್ಮನೆ ಕುಳಿತುಕೊಂಡಿರುವರಾದರೆ ಅವರಿಗೆ ತಿಂದ ಅನ್ನವು ಕರಗದೆ ಬಾಯಿಲೆ ಬಂದು ಬೇಗನೆ ಸತ್ತುಹೋಗಲೂ ಬಹುದೆ? ಕೆಲಸ ಮಾಡುವರಾದರೆ ಇಲ್ಲಿ ಕೂಲಿಗೆಲಸ ಮಾಡಿ ನಿರ್ವಾಹ ಮಾಡುವಂತೆ ಅಲ್ಲಿಯೂ ಮಾಡುತ್ತಿರಬಹುದು. ಹೀಗಿರುವಾಗ ಇಲ್ಲಿಗಿಂತ ಸ್ವರ್ಗದಲ್ಲಿ ವೈಶಿಷ್ಟ್ಯವೇನುಳಿಯಿತು? ಏನೂ ಇಲ್ಲ. ಬಾಲಕರು ಅಲ್ಲಿ ಯಾವಾಗಲೂ ಇರುವರಾದರೆ ಅವರ ತಾಯಿ ತಂದೆಗಳೂ ವಾಸವಾಗಿರಬಹುದು. ಅತ್ತೆಮಾವಂದಿರೂ ಇರಬಹುದೇನೊ. ಆಗ ಅಲ್ಲಿ ಬಹಳ ದೊಡ್ಡ ನಗರವಾಗಿ ಪರಿಣಮಿಸಿ ಮಲಮೂತ್ರಾದಿಗಳು ಹೆಚ್ಚಿ ರೋಗಗಳೂ ಹುಟ್ಟಬಹುದು. ಏಕೆಂದರೆ ಅವರು ಹಣ್ಣುಹಂಪಲಗಳನ್ನು ತಿನ್ನುತ್ತಾರೆ. ಲೋಟಾಗಳಲ್ಲಿನ ನೀರನ್ನೂ, ಹೆಂಡವನ್ನು ಕುಡಿಯುತ್ತಾರೆ. ಯಾರ ತಲೆಯೂ ನೋಯಲಿಕ್ಕಿಲ್ಲ. ಯಾರೂ ಬುದ್ಧಿಕೆಟ್ಟು ಮಾತನಾಡರು. ಯಥೇಷ್ಟವಾಗಿ ಫಲಗಳನ್ನೂ, ಮೃಗಪಕ್ಷಿಗಳ ಮಾಂಸವನ್ನೂ ತಿನ್ನುವರು. ಹೀಗಿದ್ದರೆ ಅನೇಕ ವಿಧವಾದ ದುಃಖಗಳೂ, ಮೃಗಪಕ್ಷಿಗಳೂ ಅಲ್ಲಿರುವವು. ಮೃಗಪಕ್ಷಿಗಳೂ ಅಲ್ಲಿರುವವು. ಮೃಗಪಕ್ಷಿಗಳನ್ನು ಕೊಲ್ಲುವರು, ಮೂಳೆಗಳು ಸಿಕ್ಕಸಿಕ್ಕಲ್ಲಿ ಚದರಿರುವವು. ಕಟುಕರ ಅಂಗಡಿಗಳೂ ಇರುವವು. ಏನು ಮಾಡಬೇಕು ಇವರ ಸ್ವರ್ಗದ ಪ್ರಶಂಸೆಯನ್ನು! ಆ ಸ್ವರ್ಗವು ಅರಬೀ ದೇಶವನ್ನು ಮಿಾರಿರುವಂತೆ ತೋರುತ್ತದೆ. ಅಲ್ಲಿ ಮದ್ಯಮಾಂಸ

ಗಳನ್ನು ತಿಂದು ಅಮಲೇರಿದವರಿಗೆ ಒಳ್ಳೇ ಒಳ್ಳೇ ಹೆಂಗಸರೂ ಏಟು ಹುಡುಗರೂ ಅಲ್ಲಿರಬೇಕು. ಇಲ್ಲದಿದ್ದರೆ ಈ ಮದ್ಯಪಾಯಿಗಳ ತಲೆಯಲ್ಲಿ ಉಷ್ಣವೇರಿ ಹುಚ್ಚರಾಗಿಬಿಟ್ಟಾರು. ದೇವರು ಸ್ವರ್ಗದಲ್ಲಿ ಕನ್ಯೆಯರನ್ನು ಹುಡುಗರನ್ನೂ ಹುಟ್ಟಿಸುವನಾದ ಕಾರಣ ಹೆಚ್ಚು ಮಂದಿ ಸ್ತ್ರೀಪುರುಷರು ಕೂತುಕೊಳ್ಳುವುದಕ್ಕೂ ಮಲಗುವುದಕ್ಕೂ ದೊಡ್ಡ ದೊಡ್ಡ ಹಾಸಿಗೆಗಳು ಅವಶ್ಯವಾಗಿಯೂ ಇರಬೇಕು. ಭಲೆ! ಕುಮಾರಿಯರ ವಿವಾಹವಾದರೋ ಇಲ್ಲಿಂದ ಉಮೇದುವಾರರಾಗಿ ಹೋದವರೊಡನೆ ಆಗುತ್ತದೆಂದು ದೇವರು ಬರೆದುಬಿಟ್ಟ. ಆದರೆ ಯಾವಾಗಲೂ ಇರುವ ಹುಡುಗರ ವಿವಾಹವು ಯಾವ ಕುಮಾರಿಯರೊಡನೆ ಆಗುತ್ತದೆಂದು ಬರೆಯಲೇ ಇಲ್ಲ. ಅವರನ್ನು ಉಮೇದುವಾರರಿಗೆ ಕನ್ಯೆಯರಂತೆಯೇ ಕೊಡಲಾಗುವುದೆ? ಈ ವ್ಯವಸ್ಥೆಯನ್ನೇನೂ ಬರೆಯದೆ ದೇವರು ಇಂತಹ ತಪ್ಪನ್ನೇಕೆ ಮಾಡಿದನು? ಸ್ವರ್ಗದಲ್ಲಿ ಸಮಾನ ವಯಸ್ಸಿನ ಸುಮಂಗಲಿಯರು ಪತಿಗಳನ್ನು ಹೊಂದಿ ಸ್ವರ್ಗದಲ್ಲಿರುವುದು ಸರಿಯಲ್ಲ. ಏಕೆಂದರೆ ಸ್ತ್ರೀಯರಿಗಿಂತ ಪುರುಷರ ವಯಸ್ಸು ಎರಡರಷ್ಟಾಗಲಿ ಎರಡೂವರೆಯಷ್ಟಾಗಲಿ ಇರಬೇಕು. ಇದಿಷ್ಟು ಸ್ವರ್ಗದ ಮಾತಾಯಿತು. ಇನ್ನು ನರಕದವರು ಮುಳ್ಳುಹಣ್ಣುಗಳನ್ನು ತಿಂದು ಜೀವಿಸುವರಾದರೆ ಮುಳ್ಳಿನ ಮರಗಳೂ ನರಕದಲ್ಲಿರಬಹುದೆ? ಇದ್ದರೆ ಮುಳ್ಳುಗಳು ತಾಗುತ್ತಿರಬಹುದು. ಬಿಸಿನೀರು ಕುಡಿಯುವರು ಇತ್ಯಾದಿ ದುಃಖಗಳನ್ನು ನರಕದವರು ಅನುಭವಿಸುತ್ತಿರಬಹುದು. ಆಣೆ ಹಾಕುವುದು ಸಾಧಾರಣವಾಗಿ ಅಸತ್ಯವಂತರ ಕೆಲಸವೇ ಹೊರತು ಸತ್ಯವಂತರ ಕೆಲಸವಲ್ಲ. ದೇವರೇ ಆಣೆಯಿಡುತ್ತಾನೆಂದ ಮೇಲೆ ಅವನು ಸುಳ್ಳಿನಿಂದ ಪಾರಾಗಲಾರನು. ॥೧೪೧॥

೧೪೨. ದೇವರು ತನ್ನ ಮಾರ್ಗದಲ್ಲಿ ಯುದ್ಧ ಮಾಡುವವರನ್ನು ಖಂಡಿತವಾಗಿ ಮಿತ್ರರಾಗಿರಿಸುತ್ತಾನೆ.

[ಮಂ. ೭। ಸಿ. ೨೮। ಸೂ. ೫೯। ಆ. ೪]

ಸಮೀಕ್ಷಕ—ಭಲೆ! ಚೆನ್ನಾಗಿದೆ. ಇಂತಹ ಮಾತುಗಳನ್ನು ಉಪದೇಶಿಸಿಯೇ ಆ ಬಡಪಾಯಿಗಳಾದ ಅರಬೀದೇಶನಿವಾಸಿಗಳನ್ನು ಎಲ್ಲರೊಡನೆ ಯುದ್ಧ ಮಾಡಿಸಿ ಶತ್ರುಗಳೆನ್ನಾಗಿ ಮಾಡಿ ಸರಿಯಾಗಿ

ದುಃಖವನ್ನುಣ್ಣಿಸಿದನು. ಸಂಪ್ರದಾಯದ ಧ್ವಜವನ್ನು ಎತ್ತಿ ಹಿಡಿದು ಜಗಳ ಹಾಕುವವನನ್ನು ಬುದ್ಧಿವಂತರಾರೂ ದೇವರೆಂದು ನಂಬಲಾರರು. ಜನಾಂಗಗಳಲ್ಲಿ ವಿರೋಧವನ್ನು ಹಾಕುವವನೇ ಎಲ್ಲರಿಗೂ ದುಃಖದಾಯಕನಾಗುತ್ತಾನೆ. ॥೧೪೨॥

೧೪೩. ಎಲೈ ನಬಿಯೆ! ದೇವರು ನಿನಗೆ ಗ್ರಾಹ್ಯವಾಗಿ ಮಾಡಿದ ವಸ್ತುವನ್ನು ನೀನು ನಿಷಿದ್ಧಪಡಿಸುತ್ತಿರುವುದೇತಕ್ಕೆ? ನೀನು ನಿನ್ನ ಬೀಬಿಯರ ಪ್ರಸನ್ನತೆಯನ್ನು ಕೋರುತ್ತಿರುವೆ. ದೇವರು ಕ್ಷಮಿಸುವವನೂ ದಯಾಳುವೂ ಆಗಿರುವನು. ಅವಳು ನಿನ್ನನ್ನು ಬಿಟ್ಟು ಬಿಟ್ಟರೆ ನಿನ್ನ ಒಡೆಯನು ನಿನಗೆ ಬೇಗನೇ ಅವಳ ಬದಲಾಗಿ ಒಳ್ಳೇ ಮುಸಲ್ಮಾನರೂ, ವಿಶ್ವಾಸವತಿಯರೂ, ಸೇವೆಮಾಡುವವರೂ, ತೋಬಾ ಮಾಡುವವರೂ, ಭಕ್ತಿಮಾಡುವವರೂ, ಉಪವಾಸ ವ್ರತವನ್ನಾಚರಿಸುವವರೂ, ಪುರುಷರನ್ನು ನೋಡಿರುವವರೂ, ನೋಡದಿರುವವರೂ ಆದ ಬೀಬಿಯರನ್ನು ಕೊಡುವನು.

[ಮಂ ೭। ಸಿ ೨೮। ಸೂ ೬೩। ಆ ೧, ೫]

ಸಮೀಕ್ಷಕ—ಮನಸ್ಸುಗೊಟ್ಟು ನೋಡಬೇಕು. ದೇವರೇನು ಮಹಮ್ಮದ ಸಾಹೇಬರ ಮನೆಯ ಒಳ ಹೊರಗಣ ವ್ಯವಸ್ಥೆಯನ್ನು ಮಾಡುವ ಆಳಾದನು!! ಮೊದಲಿನ ಆಯತ್‌ನಲ್ಲಿ ಎರಡು ಕತೆಗಳಿವೆ. ಮೊದಲನೆಯದು—ಮಹಮ್ಮದ ಸಾಹೇಬರಿಗೆ ಜೇನಿನ ಶರ್ಬತ್ತು ಬಹಳ ಪ್ರಿಯವಾಗಿದ್ದಿತು. ಅವರಿಗೆ ಹಲವು ಬೀಬಿಯರಿದ್ದರು. ಒಬ್ಬಳ ಮನೆಯಲ್ಲಿ ಕುಡಿಯುತ್ತಿದ್ದಾಗ ಸ್ವಲ್ಪ ತಡವಾಯಿತು. ಆಗ ಇತರರಿಗೆ ಅದು ಅಸಹ್ಯವಾಗಿ ಕಂಡುಬಂತು. ಅವರು ಸ್ವಲ್ಪ ಇವರ ಮೇಲೆ ಮುನಿದ ಕೂಡಲೇ ಇವರು—ನಾವು ಕುಡಿಯುವದಿಲ್ಲವೆಂದು ಪ್ರತಿಜ್ಞೆಮಾಡಿದರು, ಎರಡನೆಯದು—ಅವರ ಹಲವು ಬೀಬಿಯರ ಪೈಕಿ ಆ ದಿವಸ ಒಬ್ಬಳ ಸರದಿಯಾಗಿತ್ತು. ರಾತ್ರಿಯಲ್ಲಿ ಅವಳ ಮನೆಗೆ ಇವರು ಹೋದಾಗ ಅವಳು ಅಲ್ಲಿರದೆ ತನ್ನ ತಂದೆಯ ಮನೆಗೆ ಹೊರಟುಹೋಗಿದ್ದಳು. ಮಹಮ್ಮದ ಸಾಹೇಬರು ಒಬ್ಬ ದಾಸಿಯನ್ನು ಹತ್ತಿರ ಕರೆದು ಅವಳನ್ನು ಪವಿತ್ರಳನ್ನಾಗಿ ಮಾಡಿದರು. ಬೀಬಿಗೆ ಇದರ ಸಮಾಚಾರ ತಿಳಿದ ಕೂಡಲೇ ಅವಳು ಬಹಳ ಅಪ್ರಸನ್ನಳಾದಳು.

ಆಗ ಮಹಮ್ಮದ ಸಾಹೇಬರು ತಾನು ಇನ್ನು ಹಾಗೆ ಮಾಡುವುದಿಲ್ಲ ವೆಂದು ಪ್ರತಿಜ್ಞೆಮಾಡಿ, ನೀನು ಇದನ್ನು ಯಾರೊಡನೆಯೂ ಹೇಳ ಬಾರದೆಂದು ಬೀಬಿಗೆ ನುಡಿದರು. ಬೀಬಿಯು ಯಾರೊಡನೆಯೂ ಹೇಳುವುದಿಲ್ಲವೆಂದು ಒಪ್ಪಿಕೊಂಡಳು. ಮತ್ತೆ ಅವರು ಇನ್ನೊಬ್ಬಳಿಗೆ ಹೋಗಿ ಹೇಳಿದರು. ಆಗ ದೇವರು ಈ ಆಯತನ್ನು ಇಳಿಸಿದನು.— " ನಾವು ನಿನಗೆ ಗ್ರಾಹ್ಯವಾಗಿ ಮಾಡಿದ ವಸ್ತುವನ್ನು ನೀವೇಕೆ ನಿಷಿದ್ಧ ಪಡಿಸುತ್ತೀಯೇ " ಬುದ್ಧಿವಂತರೇ ಯೋಚಿಸಬೇಕು. ದೇವರು ಎಲ್ಲೆ ಯಾದರೂ ಒಬ್ಬನ ಮನೆಯ ನ್ಯಾಯತೀರ್ಪನ್ನು ಮಾಡುತ್ತಿರುತ್ತಾ ನೆಯೆ? ಮಹಮ್ಮದ ಸಾಹೇಬರ ಆಚರಣೆಯು ಇದರಿಂದ ಚೆನ್ನಾಗಿ ವ್ಯಕ್ತವಾಗುತ್ತದೆ. ಏಕೆಂದರೆ ಅನೇಕ ಸ್ತ್ರೀಯರನ್ನು ಕಟ್ಟಿಕೊಂಡಿರುವವನು ದೇವರ ಭಕ್ತನಾಗಲಿ, ಪೈಗಂಬರನಾಗಲಿ ಹೇಗಾಗಬಲ್ಲನು? ಒಬ್ಬ ಸ್ತ್ರೀಯನ್ನು ಪಕ್ಷಪಾತದಿಂದ ಅವಮಾನಪಡಿಸುವವನೂ ಇನ್ನೊಬ್ಬಳಿಗೆ ಗೌರವ ತೋರಿಸುವವನೂ ಪಕ್ಷಪಾತಿಯಾದುದರಿಂದ ಅಧರ್ಮಿಯಲ್ಲವೆ? ಅನೇಕ ಹೆಂಗಸರಿಂದ ಸಂತುಷ್ಟನಾಗದಿದ್ದು ದಾಸಿಯರ ಬಲೆಗೂ ಬೀಳುವವನ ಲಜ್ಜಾ-ಭಯ-ಧರ್ಮಗಳು ಎಲ್ಲುಳಿಯಬೇಕು? ಒಬ್ಬರು ಹೀಗೆ ಹೇಳಿದ್ದಾರೆ:—

ಕಾಮಾತುರಾಣಾಂ ನ ಭಯಂ ನ ಲಜ್ಜಾ ॥

ಕಾಮುಕರಿಗೆ ಅಧರ್ಮದ ಭಯವೂ ಲಜ್ಜೆಯೂ ಇರುವುದಿಲ್ಲ. ಇವರ ದೇವರೂ ಸಹ ಮಹಮ್ಮದ ಸಾಹೇಬರ ಮತ್ತು ಅವರ ಸ್ತ್ರೀಯರೊಳಗಿನ ಜಗಳವನ್ನು ತೀರಿಸುವುದಕ್ಕೆ ನ್ಯಾಯಾಧೀಶನಾಗಿಬಿಟ್ಟಿದ್ದಾನೆ. ಈಗ ಕುರಾನನ್ನು ದೇವರಾಗಲಿ ವಿದ್ವಾಂಸನಾಗಲಿ ಬರೆದಿರುವನೊ ಎಂಬುದನ್ನು ಬುದ್ಧಿವಂತರೇ ಯೋಚಿಸಲಿ. ಅವರಿಗೆ ಸ್ಪಷ್ಟವಾಗಿ ವಿದಿತವಾಗುವುದು. ಎರಡನೇ ಆಯತಿನಿಂದ ತಿಳಿದುಬರುವುದೇನೆಂದರೆ ಮಹಮ್ಮದ ಸಾಹೇಬರ ಯಾವಳೊ ಒಬ್ಬ ಬೀಬಿಯು ಅಪ್ರಸನ್ನಳಾಗಿರಬೇಕು. ಆಗ ದೇವರು ಈ ಆಯತನ್ನು ತಿಳಿಸಿ ಅವಳನ್ನು ನೀನೇನಾದರೂ ಅವ್ಯವಸ್ಥೆ ತಂದೊಡ್ಡಿದಲ್ಲಿ ಮಹಮ್ಮದ ಸಾಹೇಬರು ಬಿಟ್ಟುಬಿಡುವರು. ಆಗ ಅವರಿಗೆ ಅವರ ದೇವರು ನಿನಗಿಂತಲೂ ಒಳ್ಳೆಯವರಾದ ಮತ್ತು ಪುರುಷಸಂಪರ್ಕವನ್ನು ಹೊಂದದ ಬೀಬಿಯರನ್ನು

ಕೊಡುವನು. ಎಂದು ಹೇಳಿ ಹೆದರಿಸಿರಬೇಕು. ಸ್ವಲ್ಪವೇ ಬುದ್ಧಿ ಯಿರುವ ಮನುಷ್ಯನೂ ಸಹ ಇವೆಲ್ಲ ದೇವರ ಕೆಲಸಗಳೊ ಅಥವಾ ತನ್ನ ಸ್ವಾರ್ಥಸಾಧನೆಯ ಉಪಾಯಗಳೊ? ಎಂಬುದನ್ನು ಚೆನ್ನಾಗಿ ತಿಳಿದುಕೊಳ್ಳಬಲ್ಲನು. ಈ ಎಲ್ಲ ವಿಷಯಗಳನ್ನು ನೋಡುವುದರಿಂದ ದೇವರೇನೂ ಹೇಳುತ್ತಿರಲಿಲ್ಲ, ದೇಶಕಾಲ ಪರಿಸ್ಥಿತಿಗಳನ್ನು ನೋಡಿ, ತನ್ನ ಸ್ವಾರ್ಥಸಾಧನೆಗಾಗಿ ದೇವರ ಕಡೆಯಿಂದ ಮಹಮ್ಮದ ಸಾಹೇಬರೇ ಹೇಳಿಬಿಡುತ್ತಿದ್ದರು. ದೇವರೇ ಇದನ್ನು ಬರೆದನೆಂದು ಹೇಳುವವರಿಗೆ ನಾವೇನು? ಎಲ್ಲ ಬುದ್ಧಿವಂತರೂ ಸಹ ಇವನು ದೇವರೇನಾದನು? ಮಹಮ್ಮದ ಸಾಹೇಬರಿಗಾಗಿ ಬೀಬಿಯರನ್ನು ತರುವ ನಾಯಿಂದನಾದನೆಂದು ಹೇಳುವರು. ॥೧೪೩॥

೧೪೪. ಎಲೈ ನಬಿಯೆ! ಕಾಫಿರರೊಂದಿಗೂ, ಗುಪ್ತಶತ್ರುಗಳೊಂದಿಗೂ ಜಗಳವಾಡು. ಅವರಿಗೆ ಚೆನ್ನಾಗಿ ಯಾತನೆಯನ್ನು ನೀಡು.

[ಮಂ. ೭। ಸಿ. ೨೮। ಸೂ. ೬೬। ಆ. ೯]

ಸವಿಾಕ್ಷಕ :—ಮುಸಲ್ಮಾರ ದೇವರ ಲೀಲೆ ನೋಡಿರಿ! ಅನ್ಯ ಮತೀಯರೊಡನೆ ಜಗಳವಾಡುವುದಕ್ಕೆ ಪೈಗಂಬರರನ್ನು ಮುಸಲ್ಮಾನರನ್ನು ಎತ್ತಿಕಟ್ಟುತ್ತಿದ್ದಾನೆ. ಆದಕಾರಣದಿಂದಲೇ ಮುಸಲ್ಮಾನರು ಉಪದ್ರವ ಮಾಡುತ್ತಿರುತ್ತಾರೆ. ಇವರು ಉಪದ್ರವ ಮಾಡುವುದನ್ನು ಬಿಟ್ಟು ಎಲ್ಲರೊಡನೆ ಮಿತ್ರಭಾವದಿಂದ ವ್ಯವಹರಿಸುವಂತೆ ದೇವರು ಮುಸಲ್ಮಾನರ ಮೇಲೆ ಕೃಪಾದೃಷ್ಟಿ ಬೀರಲಿ. ॥೧೪೪॥

೧೪೫. ಆಕಾಶವು ಹರಿದು ಹೋಗುವುದು. ಆ ದಿವಸ ಅವನು ಸೋಮಾರಿಯಾಗಿರುವನು. ಅದರ ಬದಿಗಳಲ್ಲಿ ದೇವದೂತರಿರುವರು. ನಿನ್ನೊಡೆಯನ ಮಂಚವನ್ನು ಎಂಟು ಜನರು ಹೊರುವರು. ಆ ದಿವಸ ನೀನು ಎದುರಿಗೆ ತರಲ್ಪಡುವೆ. ಯಾವೊಂದು ರಹಸ್ಯದ ಮಾತೂ ಅಡಗಿ ಗುಪ್ತವಾಗಿರದು. ನಿನ್ನ ಬಲಗೈಗೊಂದು ಕರ್ಮಪತ್ರವನ್ನು ಕೊಟ್ಟು ಇದನ್ನು 'ಓದು' ಎನ್ನಲಾಗುವುದು. ಆದೇ ಎಡಗೈಯಲ್ಲಿಯೂ ಒಂದು ಕರ್ಮಪತ್ರವು ಕೊಡಲಾಗುವುದು. ಆಗ ನೀನು ಅಯ್ಯೋ! ಈ ಕರ್ಮಪತ್ರವನ್ನು ಕೊಡದೆ ಇರುತ್ತಿದ್ದರೆ ಚೆನ್ನಾಗಿತ್ತು ಅನ್ನುವೆ.

[ಮಂ. ೭। ಸಿ. ೨೯। ಸೂ. ೬೯। ಆ. ೧೬–೨೫]

ಸಮೀಕ್ಷಕ—ಎಂತಹ ತತ್ವಜ್ಞಾನಪೂರ್ಣವಾದ ಮತ್ತು ನ್ಯಾಯಬದ್ಧವಾದ ಮಾತಿದು !! ಆಕಾಶವೆಂದಿಗಾದರೂ ಹರಿಯುವುದಿದೆಯೆ ? ಅದೇನು ಹರಿದುಹೋಗಲು ವಸ್ತ್ರದೋಪಾದಿಯಲ್ಲಿದೆಯೆ ? ಮೇಲಿನ ಲೋಕವನ್ನು ಆಕಾಶವೆನ್ನುವುದಾದರೆ ಈ ಮಾತು ವಿದ್ಯೆಗೆ ವಿರುದ್ಧವಾಗಿದೆ. ಮಂಚದ ಮೇಲೆ ಕೂಡುವುದೂ ಎಂಟುಜನ ಬೋಯಿಗಳಿಂದ ಅದನ್ನು ಹೊರಿಸುವುದೂ ಸಾಕಾರನ ಹೊರತು ನಿರಾಕಾರನಿಂದಾಗದು. ಅದುದರಿಂದ ಕುರಾನಿನ ದೇವರು ಶರೀರಧಾರಿಯೆಂಬುದರಲ್ಲಿ ಯಾವ ಸಂದೇಹವೂ ಉಳಿಯಲಿಲ್ಲ. ಎದುರುಗಡೆ ಅಥವಾ ಹಿಂದುಗಡೆ ಬರುವುದು ಹೋಗುವುದೂ ಸಾಕಾರ ಪದಾರ್ಥಕ್ಕೇನೇ ಅನ್ವಯಿಸುತ್ತದೆ. ಅವನು ಸಾಕಾರನೆಂದಮೇಲೆ ಏಕದೇಶಿಯಾದುದರಿಂದ ಸರ್ವವ್ಯಾಪಕನೂ ಸರ್ವಜ್ಞನೂ ಸರ್ವಶಕ್ತನೂ ಆಗಲಾರನು. ಎಲ್ಲಾ ಜೀವಾತ್ಮರ ಸಮಸ್ತ ಕರ್ಮಗಳನ್ನು ಎಂದಿಗೂ ತಿಳಿದುಕೊಳ್ಳಲಾರನು. ಪುಣ್ಯಾತ್ಮರ ಬಲಗೈಯಲ್ಲಿ ಕರ್ಮಪತ್ರಕೊಟ್ಟು ಅವರನ್ನುಳಿಸಿ ಸ್ವರ್ಗಕ್ಕೆ ಕಳಿಸುವುದೂ, ಪಾಪಿಗಳ ಎಡಗೈಯಲ್ಲಿ ಕರ್ಮಪತ್ರಕೊಟ್ಟು ನರಕಕ್ಕೆ ಕಳಿಸುವುದೂ ಆಶ್ಚರ್ಯದ ಸಂಗತಿಯಾಗಿದೆ. ಕರ್ಮಪತ್ರಗಳನ್ನೋದಿ ನ್ಯಾಯಮಾಡುವುದು ಸರ್ವಜ್ಞನ ವ್ಯವಹಾರವೆಂದಿಗೂ ಆಗಿರಲಾರದು. ಇದೆಲ್ಲ ಮುಕ್ಕಳಾಟಿಕೆಯ ಲೀಲೆಯಾಗಿರುತ್ತದೆ. ||೧೪೫||

೧೪೬. ದೇವದೂತರೂ ಜೀವರುಗಳೂ ಅವನ ಕಡೆಗೆ ಏರಿ ಹೋಗುವರು. ಆ ದಿನ ದಂಡನೆ ಸಿಕ್ಕುವುದು. ಆ ದಿವಸದ ಪರಿಮಾಣವು ಐವತ್ತು ಸಾವಿರವರ್ಷಗಳು. ಆ ದಿವಸ ಸಮಾಧಿಗಳಿಂದ ಬೇಗ ಬೇಗನೇ ವಿಗ್ರಹಗಳ ಮನೆಗಳ ಕಡೆಗೆ ಓಡುವವರಂತೆ ಏಳುವರು.

[ಮುಂ. ೭। ಸಿ. ೨೯। ಸೂ. ೭೦। ಆ. ೪, ೪೩]

ಸಮೀಕ್ಷಕ—ಐವತ್ತು ಸಾವಿರ ವರ್ಷಗಳು ದಿವಸದ ಪರಿಮಾಣವಾದರೆ ಅಷ್ಟೇ ಪರಿಮಾಣದ ರಾತ್ರಿಯೇಕಿಲ್ಲ ? ಅಷ್ಟು ದೊಡ್ಡ ರಾತ್ರಿಯಿಲ್ಲದಿದ್ದರೆ ಅಷ್ಟು ದೊಡ್ಡ ದಿವಸವೂ ಇರಲಾರದು. ಐವತ್ತು ಸಾವಿರ ವರ್ಷಗಳವರೆಗೆ ದೇವರು, ದೂತರು ಮತ್ತು ಕರ್ಮಪತ್ರ ಹಿಡಿದುಕೊಂಡವರು ನಿಂತುಕೊಂಡು ಅಥವಾ ಕುಳಿತುಕೊಂಡು ಅಥವಾ ಎಚ್ಚರವಾಗಿಯೇ ಇರುವರೊ ? ಹಾಗಿರುವುದಾದರೆ ಎಲ್ಲರೂ ಖಾಯಿಲೆ

ಬಿದ್ದು ಪುನಃ ಸತ್ತೇ ಸಾಯುವರು. ಜೀವರುಗಳು ಸಮಾಧಿಗಳಿಂದೆದ್ದು ದೇವರ ಕೋರ್ಟಿನ ಕಡೆಗೆ ಓಡಿಹೋಗುವರೊ? ಅವರ ಹತ್ತಿರ ಸಮಾಧಿಯಲ್ಲಿ ಹೇಗೆ ಸಮ್ಮನುಗಳು ತಲಪುವವು? ಪುಣ್ಯಾತ್ಮರೂ ಪಾಪಿಗಳೂ ಆದ ಆ ಬಡಪಾಯಿಗಳಿಗೆ ಇಷ್ಟು ದಿವಸಗಳಿಗೆ ಸುಮ್ಮನೆ ಸೆರೆಹಿಡಿದು ಏಕೆ ಇಟ್ಟನು? ಈ ಸಮಯದಲ್ಲಿ ದೇವರ ಕೋರ್ಟಿಗೆ ರಜಾ ಇದೆಯೊ? ದೇವರೂ ದೂತರೂ ಸುಮ್ಮಗೆ ಕೂತಿರಬಹುದೊ? ಅಥವಾ ಬೇರಾವುದಾದರೂ ಕೆಲಸಮಾಡುತ್ತಿರುವರೊ? ತಮ್ಮ ತಮ್ಮ ಸ್ಥಳಗಳಲ್ಲಿದ್ದುಕೊಂಡು, ಅತ್ತಿತ್ತ ತಿರುಗಾಡುತ್ತಾ, ಮಲಗುತ್ತಾ, ವಿವಿಧ ವಿನೋದಾವಳಿಗಳನ್ನು ನೋಡುತ್ತಾ ವಿಶ್ರಾಂತಿಸುಖವನ್ನು ಅನುಭವಿಸುತ್ತಿರಬಹುದು. ಇಂತಹ ಅವ್ಯವಸ್ಥೆಯು ಬೇರಾವ ರಾಜ್ಯದಲ್ಲಿಯೂ ಇರಲಿಕ್ಕಿಲ್ಲ. ಇಂತಹ ಮಾತುಗಳನ್ನು ಕಾಡುಜನರ ಹೊರತು ಇನ್ನಾರು ನಂಬಬಲ್ಲರು? ‖೧೪೬‖

೧೪೭. ನಿಶ್ಚಯವಾಗಿ ನಿಮ್ಮನ್ನು ಹಲವು ವಿಧವಾಗಿ ಉಂಟುಮಾಡಿದ್ದಾನೆ. ಮೇಲ್ಬದಿಯಲ್ಲಿ ಏಳು ಆಕಾಶಗಳನ್ನು ದೇವರು ಯಾವ ರೀತಿಯಲ್ಲಿ ಉಂಟುಮಾಡಿದ್ದಾನೆಂಬುದನ್ನು ನೀನು ನೋಡಿಲ್ಲವೆ? ಮತ್ತು ಅವುಗಳ ನಡುವಿನಲ್ಲಿ ಪ್ರಕಾಶಕನಾದ ಚಂದ್ರನನ್ನೂ ದೀಪವಾಗಿರುವ ಸೂರ್ಯನನ್ನೂ ಉಂಟುಮಾಡಿದನು.

[ಮಂ. ೭। ಸಿ. ೨೯। ಸೂ. ೭೧। ಅ. ೧೪-೧೬]

ಸಮೀಕ್ಷಕ—ಜೀವರುಗಳನ್ನು ದೇವರು ಉಂಟುಮಾಡಿದನಾದರೆ ಅವರು ನಿತ್ಯರೂ ಅಮರರೂ ಆಗಲಾರರು. ಸ್ವರ್ಗದಲ್ಲಿ ಹೇಗೆತಾನೆ ಯಾವಾಗಲೂ ಇರಬಲ್ಲರು? ಉತ್ಪನ್ನವಾದ ವಸ್ತುವಿನ ನಾಶವೂ ಆಗುತ್ತದೆ. ಆಕಾಶವನ್ನು ಮೇಲ್ಬದಿಯಲ್ಲಿ ಹೇಗೆ ನಿರ್ಮಿಸಬಲ್ಲನು? ಅದು ನಿರಾಕಾರವೂ ವಿಭುವೂ ಆಗಿರುವುದಲ್ಲವೆ? ಬೇರಾವುದಾದರೂ ವಸ್ತುವಿನ ಹೆಸರನ್ನು ನೀವು ಆಕಾಶವೆಂದು ಇಡುವುದಾದರೆ ಅದೂ ವ್ಯರ್ಥವೇ ಸರಿ. ಮೇಲ್ಬದಿಯಲ್ಲಿ ಆಕಾಶಗಳನ್ನು ನಿರ್ಮಿಸಿರುವುದಾದರೆ ಅವುಗಳ ಮಧ್ಯದಲ್ಲಿ ಚಂದ್ರ ಸೂರ್ಯರೆಂದಿಗೂ ಇರಲಾರರು. ಹಾಗೆ ಮಧ್ಯದಲ್ಲಿ ಪ್ಟುರೆ ಅವುಗಳ ಹತ್ತಿರವಿರುವ ಮೇಲು ಮತ್ತು ಕೆಳಭಾಗದ ಎರಡು ಆಕಾಶಗಳಿಗೆ ಮಾತ್ರ ಪ್ರಕಾಶವು ದೊರೆತು ಬೇರೆಲ್ಲವೂ ಅಂಧಕಾರ

ಮಯವಾಗಿ ಹೋದಾವು. ಹಾಗಿರುವುದು ಕಾಣಿಸುತ್ತಿಲ್ಲವಾದುದರಿಂದ ಈ ಮಾತು ತೀರಾ ಸುಳ್ಳಾಗಿರುತ್ತದೆ. ॥೧೪೭॥

೧೪೮. ಮಸೀದಿಗಳು ದೇವರಿಗಾಗಿವೆ. ದೇವರೊಡನೆ ಇನ್ನಾರನ್ನೂ ಪ್ರಾರ್ಥಿಸಬೇಡಿರಿ.

[ಮಂ. ೭। ಸಿ. ೨೯। ಸೂ. ೭೨। ಆ. ೧೪]

ಸಮೀಕ್ಷಕ—ಈ ಮಾತು ನಿಜವಾಗಿದ್ದರೆ ಮುಸಲ್ಮಾನರು "ಲಾ ಇಲಾಹ್ ಇಲ್ಲಲ್ಲಾಹ್ ಮಹಮ್ಮದರ್ರಸೂಲಲ್ಲಾಹ್" ಎಂಬ ಕಲಮಾ ವಾಕ್ಯದಲ್ಲಿ ದೇವರೊಡನೆಯೇ ಮಹಮ್ಮದರನ್ನೇಕೆ ಕರೆಯುತ್ತಾರೆ? ಈ ಮಾತು ಕುರಾನಿಗ ವಿರುದ್ಧವಾಗಿರುತ್ತದೆ. ವಿರುದ್ಧವಾಗಿಲ್ಲವಾದರೆ ಕುರಾನಿನ ಮಾತನ್ನು ಸುಳ್ಳುಮಾಡುತ್ತಿದ್ದಾರೆ. ಮಸೀದಿಗಳು ದೇವರ ಮನೆಗಳಾಗಿರುವವಾದರೆ ಮುಸಲ್ಮಾನರು ಮಹಾಮೂರ್ತಿಪೂಜಕರಾಗಿಬಿಡುತ್ತಾರೆ. ಏಕೆಂದರೆ ಪೌರಾಣಿಕರೂ ಜೈನರೂ ಸಣ್ಣದಾದೊಂದು ಮೂರ್ತಿಯನ್ನು ದೇವರ ಮನೆಯೆಂದು ಹೇಳಿದ ಕೂಡಲೇ ಅವರು ಮೂರ್ತಿಪೂಜಕರಾಗಿಬಿಡುವಾಗ ಇವರೂ ಮೂರ್ತಿಪೂಜಕರಲ್ಲವೇಕೆ? ॥೧೪೮॥

೧೪೯. ಸೂರ್ಯನನ್ನೂ, ಚಂದ್ರನನ್ನೂ ಒಂದೇ ಕಡೆಯಲ್ಲಿ ಸೇರಿಸಲಾಗುವುದು. [ಮಂ. ೭। ಸಿ. ೨೯। ಸೂ. ೭೫। ಆ. ೯]

ಸಮೀಕ್ಷಕ—ಭಲೆ! ಸೂರ್ಯಚಂದ್ರರೆಂದಿಗಾದರೂ ಒಂದೇಕಡೆ ಸೇರಬಲ್ಲರೆ? ಇದು ಎಷ್ಟರಮಟ್ಟಿನ ಅಜ್ಞಾನದ ಮಾತೆಂಬುದನ್ನು ನೋಡಿರಿ! ಸೂರ್ಯಚಂದ್ರರನ್ನು ಒಂದು ಕಡೆ ಸೇರಿಸುವ ಉದ್ದೇಶ್ಯವಾದರೂ ಏನಿತ್ತು? ಬೇರೆಲ್ಲರನ್ನೂ ಒಂದುಕಡೆ ಸೇರಿಸದಿರುವುದಕ್ಕೆ ಪ್ರಮಾಣವೇನಿದೆ? ಇಂತಹವೆಲ್ಲ ದೇವರ ಮಾತುಗಳಾಗಬಲ್ಲುವೆ? ಇವು ಅವಿದ್ಯಾವಂತರವೇ ಹೊರತು ವಿದ್ವಾಂಸರ ಮಾತುಗಳೂ ಅಲ್ಲ. ॥೧೪೯॥

೧೫೦. ಅವುಗಳ ಮೇಲೆ ಯಾವಾಗಲೂ ಇರುವ ಬಾಲಕರು ತಿರುಗಾಡುವರು. ಅವರನ್ನು ನೋಡಿದರೆ ನೀನು ಮುತ್ತುಗಳು ಚೆಲ್ಲಲ್ಪಟ್ಟವೆಯೆಂದು ಭಾವಿಸುವೆ. ಮತ್ತು ಬೆಳ್ಳಿಯ ಕಂಕಣಗಳು ತೊಡಿಸ

ಲ್ಪಡುವವು. ಮತ್ತು ದೇವರು ಅವರಿಗೆ ಪವಿತ್ರವಾದ ಹೆಂಡವನ್ನು ಕುಡಿಸುವನು. [ಮಂ. ೭। ಸಿ. ೨೯। ಸೂ. ೭೬। ಅ. ೧೯। ೨೧]

ಸಮಾಕ್ಷ—ಏನು ಸ್ವಾಮೀ! ಮುತ್ತಿನ ಬಣ್ಣದ ಬಾಲಕರನ್ನು ಅಲ್ಲಿ ಏಕೆ ಇಡಲಾಗುವುದು? ಯುವಕರು ಅವರಿಗೆ ಸೇವೆಯನ್ನೂ ಸ್ತ್ರೀಯರು ತೃಪ್ತಿಯನ್ನು ಕೊಡಲಾರರೆ? ದುಷ್ಟರು ಮಾಡುವ ಈ ಮಹಾನೀಚಕಾರ್ಯಕ್ಕೆ ಆಧಾರವು ಈ ಕುರಾನು ಗ್ರಂಥವೇ ಆಗಿರುವುದಾದರೂ ಆಶ್ಚರ್ಯವೇನಿದೆ? ಸ್ವರ್ಗದಲ್ಲಿಯೂ ಸ್ವಾಮಿಸೇವಕಭಾವ ವಿರುವುದರಿಂದ ಒಡೆಯನಿಗೆ ಆನಂದವೂ ಸೇವಕನಿಗೆ ಪರಿಶ್ರಮವೂ ದುಃಖವೂ ಆಗುತ್ತಿರುತ್ತದೆ. ಈ ಪಕ್ಷಪಾತವು ಸ್ವರ್ಗದಲ್ಲಿ ಏಕೆ ಇದೆ? ದೇವರೇ ಅಲ್ಲಿ ಹೆಂಡ ಕುಡಿಸುವನಾದರೆ ಅವನೂ ಒಬ್ಬ ಆಳಿನಂತಾದನು. ಹಾಗಿರುವಾಗ ಅವನ ಹಿರಿಮೆಯಾದರೂ ಎಲ್ಲುಳಿಯುವುದು? ಸ್ವರ್ಗದಲ್ಲಿ ಸ್ತ್ರೀಪುರುಷರ ಸಮಾಗಮವಾದನಂತರ ಗರ್ಭವು ನಿಂತು ಮಕ್ಕಳುಮರಿಗಳು ಹುಟ್ಟುತ್ತಾರೊ ಇಲ್ಲವೊ? ಆಗುವುದಿಲ್ಲವಾದರೆ ಅವರ ವಿಷಯ ಸೇವನೆಯು ವ್ಯರ್ಥವಾಗುತ್ತದೆ. ಹುಟ್ಟುತ್ತಾರಾದರೆ ಆ ಜೀವಾತ್ಮರು ಎಲ್ಲಿಂದ ಬರುತ್ತಾರೆ? ದೇವರ ಸೇವೆಗೈಯದೆ ಅವರು ಸ್ವರ್ಗದಲ್ಲಿ ಹೇಗೆ ಹುಟ್ಟುತ್ತಾರೆ? ವಿಶ್ವಾಸವಿಡದೆಯೂ, ದೇವರ ಭಕ್ತಿಯನ್ನು ನೆರವೇರಿಸದೆಯೂ ಅವರಿಗೆ ಸ್ವರ್ಗವು ಧರ್ಮಾರ್ಥವಾಗಿ ಸಿಕ್ಕಿಬಿಟ್ಟಿತೊ? ಕೆಲವು ಬಡಪಾಯಿಗಳಿಗೆ ವಿಶ್ವಾಸವಿಡುವುದರಿಂದಲೂ ಕೆಲವರಿಗೆ ಧರ್ಮಾಚರಣೆಯಿಲ್ಲದೆಯೂ ಸುಖವು ಸಿಗುವುದಾದರೆ ಇದಕ್ಕಿಂತಲೂ ಹೆಚ್ಚಾದ ಅನ್ಯಾಯವು ಬೇರಾವುದಿದೆ? ॥೧೫೦॥

೧೫೧—ಕರ್ಮಕ್ಕನುಸಾರವಾದ ಫಲವು ಕೊಡಲ್ಪಡುವುದು. ತುಂಬಿದ ಬಟ್ಟಲುಗಳಿವೆ. ಆ ದಿವಸ ರೂಹನೂ, ದೇವದೂತರೂ ಸಾಲುಗಟ್ಟಿ ನಿಲ್ಲುವರು.

[ಮಂ. ೭। ಸಿ. ೩೦। ಸೂ. ೭೮। ಅ. ೨೬, ೩೪, ೩೮]

ಸಮಾಕ್ಷಕ—ಕರ್ಮಾನುಸಾರವಾಗಿ ಫಲವು ಸಿಗುವುದಾದರೆ ಸ್ವರ್ಗದಲ್ಲಿರುವ ಅಪ್ಸರೆಯರಿಗೂ, ದೇವದೂತರಿಗೂ ಮುತ್ತಿನ ಸಮಾನವಾಗಿರುವ ಹುಡುಗರಿಗೂ ಯಾವ ಕರ್ಮಗಳ ಫಲವಾಗಿ

ಸ್ವರ್ಗ ಸಿಕ್ಕಿರುತ್ತದೆ. ಬಟ್ಟಲುಗಳನ್ನು ತುಂಬಿ ತುಂಬಿ ಹೆಂಡ ಕುಡಿಯುವರೆಂದಮೇಲೆ ಅಮಲೇರಿ ಜಗಳವನ್ನೇಕೆ ಆಡಲಾರರು? ರೂಹ ಎಂಬುದು ಎಲ್ಲಾ ದೇವದೂತರಿಗೆ ಮುಖಂಡನಾಗಿರುವ ಒಬ್ಬನ ಹೆಸರು. ದೇವರು ರೂಹನನ್ನೂ ಇತರ ದೇವದೂತರನ್ನೂ ಸಾಲುಗಟ್ಟಿ ನಿಲ್ಲಿಸಿ ಸೈನ್ಯಕಟ್ಟಿ ಅದರ ಮೂಲಕ ಎಲ್ಲಾ ಜೀವರುಗಳಿಗೆ ಶಿಕ್ಷೆಯನ್ನು ವಿಧಿಸುವನೊ? ದೇವರು ಆಗ ನಿಂತಿರುವನೊ ಅಥವಾ ಕೂತಿರುವನೊ? ಕಯಾಮತಿನ ಒಳಗೆ ದೇವರು ತನ್ನ ಎಲ್ಲಾ ಸೈನ್ಯವನ್ನು ಒಟ್ಟು ಗೂಡಿಸಿಬಿಟ್ಟು ಆ ಸೈತಾನನ್ನು ಸೆರೆಹಿಡಿದುಬಿಟ್ಟಲ್ಲಿ ಅವನ ರಾಜ್ಯವು ನಿಷ್ಕಂಟಕವಾಗಿರಬಲ್ಲುದು. ಇದಕ್ಕೇನೇ ಹೇಳುತ್ತಾರೆ ದೇವತ್ವವೆಂದು !! ||೧೫೧||

೧೫೨. ಆಗ ಸೂರ್ಯನನ್ನು ಮಡಚಲಾಗುವುದು. ನಕ್ಷತ್ರಗಳು ಕೊಳಕಾಗುವವು. ಪರ್ವತಗಳು ಚಲಿಸಲ್ಪಡುವವು. ಆಕಾಶದ ಚರ್ಮವು ಸುಲಿಯಲ್ಪಡುವುದು.

[ಮಂ. ೭। ಸಿ. ೩೦। ಸೂ. ೮೧। ಆ. ೧-೩, ೧೧]

ಸಮೀಕ್ಷಕ—ಗೋಳವಾಗಿರುವ ಸೂರ್ಯಲೋಕವನ್ನು ಮಡಚಲಾಗುವುದೆಂಬುದು ತೀರಾ ಅಜ್ಞಾನದ ಮಾತು. ನಕ್ಷತ್ರಗಳು ಹೇಗೆ ತಾನೆ ಕೊಳಕಾಗುವವು? ಜಡವಾಗಿರುವ ಪರ್ವತಗಳು ಹೇಗೆ ಚಲಿಸುವವು? ಆಕಾಶದ ಚರ್ಮ ಸುಲಿಯುವುದಕ್ಕೆ ಅದೇನು ಮೃಗವೊ? ಇದು ತೀರಾ ತಿಳುವಳಿಕೆಯಿಲ್ಲದ ಮತ್ತು ಕಾಡಾಡಿತನದ ಮಾತಾಗಿರುತ್ತದೆ. ||೧೫೨||

೧೫೩. ಮತ್ತು ಆಕಾಶವು ಹರಿದುಹೋಗುವುವು. ನಕ್ಷತ್ರಗಳು ಉದುರುವವು. ನದಿಗಳು ಸೀಳಲಾಗುವವು. ಮತ್ತು ಸಮಾಧಿಗಳನ್ನು ಬದುಕಿಸಿ ಎಬ್ಬಿಸಲಾಗುವುದು.

[ಮಂ. ೭। ಸಿ. ೩೦। ಸೂ. ೮೨। ಆ. ೧, ೨೧-೨೨]

ಸಮೀಕ್ಷಕ—ಕುರಾನನ್ನು ಬರೆದ ತತ್ವಜ್ಞಾನಿಯೆ! ಆಕಾಶವನ್ನು ಹೇಗೆ ಹರಿದುಹಾಕುವನು? ನಕ್ಷತ್ರಗಳನ್ನು ಹೇಗೆ ಉದುರಿಸುವನು? ನದಿಯನ್ನು ಸೀಳುವುದಕ್ಕೆ ಅದೇನು ಕಟ್ಟಿಗೆಯೊ? ಸಮಾಧಿ

ಗಳನ್ನು ಬದುಕಿಸಲು ಅವೇನು ಹೆಣಗಳೊ? ಇವೆಲ್ಲ ಮಕ್ಕಳಾಟಕೆ ಯಂತಹ ಮಾತುಗಳಾಗಿರುತ್ತವೆ. ॥೧೫೩॥

೧೫೪. ಗೋಪುರಗಳನ್ನುಳ್ಳ ಆಕಾಶದ ಆಣೆಯಿದೆ. ಹಿರಿದಾದ ಈ ಕುರಾನು ಕಬ್ಬಿಣದ ರಕ್ಷಣೆಯ ಮಧ್ಯೆದಲ್ಲಿದೆ.

[ಮುಂ. ೭। ಸಿ. ೩೦। ಸೂ. ೮೫। ಆ. ೧, ೨೧-೨೨]

ಸಮೀಕ್ಷಕ—ಈ ಕುರಾನಿನ ಲೇಖಕನು ಭೂಗೋಳವನ್ನೇನೂ ಓದಿರಲಿಲ್ಲ. ಓದಿದ್ದರೆ ಆಕಾಶವು ಗೋಪುರಗಳನ್ನುಳ್ಳದ್ದೆಂದು ಬರೆದ ನೇಕೆ? ಮೇಷಾದಿ ರಾಶಿಗಳನ್ನು ಗೋಪುರಗಳೆಂದು ಕರೆಯುವು ದಾದರೆ ಇತರ ನಕ್ಷತ್ರಗಳೇಕೆ ಗೋಪುರಗಳಲ್ಲ? ಇವು ಗೋಪುರ ಗಳೇನೂ ಅಲ್ಲ. ಎಲ್ಲಾ ನಕ್ಷತ್ರಗಳೂ ಬೇರೆ ಬೇರೆ ಲೋಕಗಳಾಗಿರು ತ್ತವೆ. ಕುರಾನು ಅವನ ಹತ್ತಿರವಿರುತ್ತದೆಯೆ? ಕುರಾನನ್ನು ದೇವರು ನಿರ್ಮಿಸಿದುದಾದರೆ ಆ ದೇವರೂ ವಿದ್ಯಾದಿಯುಕ್ತಿಗಳಿಗೆ ವಿರುದ್ಧವಾದ ಅವಿದ್ಯೆಗೆ ತವರೂರಾಗಿರಬಹುದು. ॥೧೫೪॥

೧೫೫. ನಿಶ್ಚಯವಾಗಿ ಅವನೊಂದು ವಂಚನೆ ಮಾಡುತ್ತಾನೆ, ವಂಚನೆ. ನಾನೂ ಒಂದು ವಂಚನೆ ಮಾಡುತ್ತೇನೆ ವಂಚನೆ.

[ಮುಂ. ೭। ಸಿ. ೩೦। ಸೂ. ೮೬। ಆ. ೧೫, ೧೬]

ಸಮೀಕ್ಷಕ—ಮಕ್ಕರ್ ಎಂದು ಹೇಳುತ್ತಾರೆ ಮೋಸಕ್ಕೆ. ದೇವರೂ ಮೋಸಗಾರನಾಗಿರುತ್ತಾನೊ? ಕಳ್ಳತನಕ್ಕೆ ಕಳ್ಳತನವೂ ಸುಳ್ಳಿಗೆ ಸುಳ್ಳೂ ಪ್ರತ್ಯುತ್ತರವಾಗಿದೆಯೆ? ಕಳ್ಳನೊಬ್ಬನು ಸತ್ಪುರುಷನ ಮನೆಯಲ್ಲಿ ಕಳ್ಳತನ ಮಾಡಿದರೆ ಆ ಸತ್ಪುರುಷನೂ ಕಳ್ಳನ ಮನೆಗೆ ಹೋಗಿ ಕದಿಯಬೇಕೆ? ಕುರಾನಿನ ಲೇಖಕರೆ! ಭೇಷ್, ಬಹಳ ಚೆನ್ನಾಗಿದೆ!!! ॥೧೫೫॥

೧೫೬. ಯಾವಾಗ ನಿನ್ನ ಸ್ವಾಮಿಯು ಬರುವನೊ, ದೇವ ದೂತರು ಸಾಲುಗಟ್ಟಿ ನಿಲ್ಲುವರೊ ಆ ದಿವಸ ನರಕವನ್ನು ತರಲಾ ಗುವುದು. [ಮುಂ. ೭। ಸಿ. ೩೦। ಸೂ. ೮೯। ಆ. ೨೨, ೨೩]

ಸಮೀಕ್ಷಕ—ದುರ್ಗರಕ್ಷಕನಾದ ಸೇನಾಧ್ಯಕ್ಷನು ತನ್ನ ಸೈನ್ಯ ವನ್ನು ಸಾಲುಗಟ್ಟಿ ನಿಲ್ಲಿಸಿ ತಿರುಗಾಡುವಂತೆ ಇವರ ದೇವರೂ ತಿರುಗು

ವನೊ? ನರಕವನ್ನು ಬೇಕಾದಲ್ಲಿಗೆ ಎತ್ತಿಕೊಂಡು ಹೋಗಲು ಅದೇನು ಗಡಿಗೆಯೊ? ಅದು ಇಷ್ಟು ಸಣ್ಣದಾಗಿರುವುದಾದರೆ ಅಸಂಖ್ಯ ಖೈದಿಗಳು ಅದರಲ್ಲಿ ಹೇಗೆತಾನೆ ತುಂಬುವರು? ॥೧೫೬॥

೧೫೬. ದೇವರ ಹೆಣ್ಣು ಒಂಟೆಯನ್ನು ಪಾಲಿಸಿರಿ. ಅದಕ್ಕೆ ನೀರು ಕುಡಿಸಿರಿ ಎಂದು ದೇವರ ಪೈಗಂಬರರು ಅವರಿಗೆ ಹೆಳಿದ್ದರು. ಆದರೆ ಅವರು ನೀರು ಕುಡಿಸುವ ಸರದಿಯನ್ನು ಸುಳ್ಳುಮಾಡಿದರು. ದೇವರು ಅವರ ಕಾಲುಗಳನ್ನು ಕಡಿದನು. ಮತ್ತು ಅವರ ಮೇಲೆ ಮಾರಿಕಾ ರೋಗವನ್ನು ಬರಮಾಡಿದನು.

ಸಮಿಾಕ್ಷಕ—ದೇವರೂ ಹೆಣ್ಣು ಒಂಟೆಯನ್ನು ಹತ್ತಿ ತಿರುಗಾಡುತ್ತಿರುತ್ತಾನೊ? ಇಲ್ಲದಿದ್ದರೆ ಅದನ್ನೇಕೆ ಇಟ್ಟನು? ಕಯಾಮತಿನ ತನ್ನ ನಿಯಮವನ್ನು ಮುರಿದು ಅವರ ಮೇಲೆ ಮಾರಿಕಾರೋಗವನ್ನು ಯಾಕೆ ಬರಮಾಡಿದನು? ಹಾಗೆ ಬರಮಾಡಿದ್ದ ಕಾರಣ ಅವರಿಗೆ ಶಿಕ್ಷೆ ವಿಧಿಸಿದಂತಾಯಿತು. ಕಯಾಮತಿನ ರಾತ್ರಿಯಲ್ಲಿ ನ್ಯಾಯವೂ ಆ ರಾತ್ರಿಯೂ ಇರುವುದು ಸುಳ್ಳೆಂದು ಭಾವಿಸಲೆ? ಅರಬ್ಬೀದೇಶದಲ್ಲಿ ಒಂಟೆಗಳ ಹೊರತು ಬೇರಾವ ವಾಹನವಿರುವುದೂ ಬಹಳ ಕಡಿಮೆ. ಆದುದರಿಂದ ಯಾವನೋ ಒಬ್ಬ ಅರಬ್ಬೀದೇಶೀಯನು ಈ ಕುರಾರನ್ನು ನಿರ್ಮಿಸಿದ್ದಾನೆಂಬುದು ಈ ಒಂಟೆಯ ಕತೆಯಿಂದ ತಿಳಿದುಬರುತ್ತದೆ. ॥೧೫೬॥

೧೫೮. ಅವನು ಹೀಗೆ ಸುಮ್ಮನಿರದಿದ್ದರೆ ನಾವು ಅವನ ಪುಸ್ತಕವನ್ನೂ ಜುಟ್ಟನ್ನೂ ಹಿಡಿದೆಳೆಯುವೆವು. ಆ ಪುಸ್ತಕವು ಸುಳ್ಳು ಹೇಳುವವೂ ಅಪರಾಧಿಯೂ ಆಗಿರುವುದು ನಾವು ನರಕದ ದೂತರನ್ನು ಕರೆಯುವೆವು.

[ಮಂ. ೭। ಸಿ. ೩೦। ಸೂ. ೯೬। ಆ. ೧೫, ೧೬, ೧೮]

ಸಮಿಾಕ್ಷಕ—ಜುಟ್ಟನ್ನು ಹಿಡಿದೆಳೆಯುವಂತಹ ಈ ನೀಚಕರ್ಮದಿಂದಲೂ ದೇವರು ಬೇರಾಗಲಿಲ್ಲ. ಜೀವಾತ್ಮನ ಹೊರತು ಪುಸ್ತಕವು ಎಂದಿಗಾದರೂ ಅಸತ್ಯಭಾಷಿಯೂ ಅಪರಾಧಿಯೂ ಆಗಬಲ್ಲುದೆ? ಜೇಲಿನ ಆಡಳಿತೆಗಾರರನ್ನು ಕರೆಯುವಂತೆ ದೂತರನ್ನು ಕರೆಯುವವನು ಎಂದಿಗಾದರೂ ದೇವರಾಗಬಲ್ಲನೆ? ॥೧೫೮॥

೧೫೯. ನಿಜವಾಗಿ ನಾವು ಈ ಕುರಾನನ್ನು ಬೇಡಿಕೆಯ ರಾತ್ರಿಯಲ್ಲಿಳಿಸಿದ್ದೇವೆ. ಬೇಡಿಕೆಯ ರಾತ್ರಿಯೇನೆಂದು ನಿನಗೇನು ಗೊತ್ತು? ಎಲ್ಲಾ ಕೆಲಸಗಳಿಗಾಗಿ ಒಡೆಯನ ಆಜ್ಞೆಯನ್ನು ಹೊಂದಿ ದೇವ ದೂತರೂ ಪವಿತ್ರಾತ್ಮರೂ ಆ ರಾತ್ರಿಯಲ್ಲಿಳಿಯುವರು.

[ಮುಂ. ೭। ಸಿ. ೩೦। ಸೂ. ೯೭। ಆ. ೧, ೨, ೪]

ಸಮೀಕ್ಷಕ :—ದೇವರು ಒಂದೇ ರಾತ್ರಿಯಲ್ಲಿ ಕುರಾನನ್ನು ಇಳಿಸಿದವನಾದರೆ "ಇಂತಹ ಆಯತು ಇಂತಹ ಸಮಯದಲ್ಲೇ ಇಳಿಯಿತು. ಒಂದೊಂದೇ ಸಲ ಇಳಿಯಿತು" ಎಂಬ ಮಾತು ಹೇಗೆ ತಾನೆ ನಿಜವಾಗಬಲ್ಲುದು? ರಾತ್ರಿಯೇನೆಂದು ಕೇಳುತ್ತಿರುವು ದೇತಕ್ಕೆ ಅದಾದರೂ ಅಂಧಕಾರ ಪೂರ್ಣವಾಗಿರುತ್ತದೆ. ಮೇಲೆ ಕೆಳಗೆ ಏನೂ ಇರಲಾರದು ಎಂಬುದಾಗಿ ನಾವು ಹಿಂದೆಯೇ ಬರೆದಿದ್ದೇವೆ. ಇಲ್ಲಿ ದೇವರ ಆಪ್ಪಣೆಯಿಂದ ಜಗತ್ತಿನ ವ್ಯವಸ್ಥೆಯನ್ನು ಸರಿಪಡಿಸುವುದ ಕ್ಕಾಗಿ ದೇವದೂತರೂ ಪವಿತ್ರಾತ್ಮರೂ ಇಳಿದು ಬರುತ್ತಾರೆಂದು ಬರೆದಿದೆ. ಇದರಿಂದ ಇವರ ದೇವರು ಮನುಷ್ಯರಂತೆ ಏಕದೇಶಿಯಾಗಿ ರುವನೆಂಬುದು ಸಿದ್ಧವಾಗುತ್ತದೆ. ಇದುವರೆಗೆ ದೇವರು, ದೇವದೂತರು ಮತ್ತು ಪೈಗಂಬರರು—ಈ ಮೂವರ ಉಲ್ಲೇಖವನ್ನೇನೊ ನೋಡಿ ದ್ದೆವು. ಆದರೆ ಈಗ ಪವಿತ್ರಾತ್ಮನೆಂಬ ನಾಲ್ಕನೆಯವನೊಬ್ಬನು ಇಳಿದು ಬಂದಿದ್ದಾನೆ! ಈ ಪವಿತ್ರಾತ್ಮನಾರೆಂದು ಏನುಗೊತ್ತು? ಕ್ರೈಸ್ತಮತ ದಲ್ಲಿನ ಪಿತಾ, ಪುತ್ರ, ಪವಿತ್ರಾತ್ಮರನ್ನು ನಂಬಲು ಹೋದಾಗ ಈ ನಾಲ್ಕನೆಯವನೊಬ್ಬನು ಗಂಟುಬಿದ್ದಿದ್ದಾನೆ. ನಾವು ಈ ಮೂವರನ್ನು ದೇವರೆಂಬುದಾಗಿ ನಂಬುವುದಿಲ್ಲವೆಂದು ಯಾರಾದರೂ ಹೇಳಿದರೆ, ಸರಿ. ಹಾಗೆಯೇ ನಂಬೋಣ. ಪವಿತ್ರಾತ್ಮನೊಬ್ಬನು ಬೇರೆಯಿರುವನಾದರೆ ದೇವರು, ದೇವದೂತರು ಮತ್ತು ಪೈಗಂಬರರನ್ನು ಪವಿತ್ರಾತ್ಮರೆಂದು ನಂಬಬೇಕೊ, ಬೇಡವೊ? ಅವರೂ ಪವಿತ್ರಾತ್ಮರಾಗಿರುವುದಾದರೆ ಒಬ್ಬನಿಗೆ ಮಾತ್ರ ಪವಿತ್ರಾತ್ಮನೆಂಬ ಹೆಸರೇಕಿರಬೇಕು? ದೇವರು ಕುದುರೆ ಮೊದಲಾದ ಪ್ರಾಣಿಗಳ, ಹಗಲು, ರಾತ್ರಿಗಳ ಮತ್ತು ಕುರಾನಿನ ಮೇಲೆ ಆಣೆಯಿಡುತ್ತಾನೆ. ಆಣೆಯಿಡುವುದು ಸತ್ಪುರುಷರ ಲಕ್ಷಣವಲ್ಲ. ‖೧೫೯‖

ಇನ್ನು ಈ ಕುರಾನಿನ ವಿಷಯವಾಗಿ ಬರೆದು ಈ ಪುಸ್ತಕವು ಯಾವ ರೀತಿಯಿದೆಯೆಂಬುದನ್ನು ಬುದ್ಧಿವಂತರ ಎದುರಿಗಿಡುತ್ತೇನೆ. ನನ್ನನ್ನು ಕೇಳುವುದಾದರೆ ಈ ಪುಸ್ತಕವನ್ನು ಬರೆದವನು ದೇವರೂ ಅಲ್ಲ. ಒಬ್ಬ ವಿದ್ವಾಂಸರೂ ಅಲ್ಲ. ಇದು ವಿದ್ಯೆಯ ಪುಸ್ತಕವೂ ಅಲ್ಲ ವೆಂದು ಹೇಳುವೆನು. ಜನರು ಮೋಸಹೋಗಿ ತಮ್ಮ ಜನ್ಮವನ್ನು ವ್ಯರ್ಥವಾಗಿ ಹಾಳುಮಾಡದಿರಲಿ ಎಂಬ ಉದ್ದೇಶ್ಯದಿಂದ ಇಷ್ಟರ ವರೆಗೆ ಸ್ವಲ್ಪ ದೋಷಗಳನ್ನು ಪ್ರಕಟಪಡಿಸಿದ್ದೇವೆ. ಈ ಪುಸ್ತಕದಲ್ಲಿರುವ ಸ್ವಲ್ಪ ಸತ್ಯವು ವೇದಾದಿ ವಿದ್ಯಾಪುಸ್ತಕಗಳಿಗೆ ಅನುಕೂಲವಾಗಿರುವುದ ರಿಂದ ನನಗೆ ಗ್ರಾಹ್ಯವಾಗಿರುವಂತೆ ದುರಾಗ್ರಹವನ್ನು ಪಕ್ಷಪಾತವನ್ನು ತೊರೆದ ಇತರ ಮತಗಳ ವಿದ್ವಾಂಸರಿಗೂ ಗ್ರಾಹ್ಯವಾಗಿರುತ್ತದೆ. ಇದರ ಹೊರತು ಉಳಿದುದೆಲ್ಲವೂ ಅವಿದ್ಯೆ ಮತ್ತು ಭ್ರಮಜಾಲಯುಕ್ತ ವಾಗಿದ್ದು ಮನುಷ್ಯನ ಆತ್ಮವನ್ನು ಪಶುವಂತೆ ಮಾಡಿ ಶಾಂತಿಯನ್ನು ಭಂಗಪಡಿಸಿ, ಉಪದ್ರವವನ್ನು ಹೆಚ್ಚಿಸಿ ಜನರಲ್ಲಿ ವಿದ್ರೋಹವನ್ನೆಬ್ಬಿಸಿ ಅನ್ಯೋನ್ಯ ದುಃಖವನ್ನು ಹೆಚ್ಚಿಸುವಂತಹದಾಗಿರುತ್ತದೆ. ಕುರಾನು ಪುನರುಕ್ತದೋಷದ ಭಂಡಾರವೇ ಆಗಿದೆ. ಜನರು ಎಲ್ಲರೊಡನೆ ಪ್ರೀತಿಯಿಂದಲೂ ಐಕ್ಯದಿಂದಲೂ ಇದ್ದು ಪರಸ್ಪರ ಸುಖವನ್ನು ಹೆಚ್ಚಿಸಲು ತತ್ಪರರಾಗುವಂತೆ ದೇವರು ಎಲ್ಲರ ಮೇಲೆ ಕೃಪಾದೃಷ್ಟಿಯನ್ನು ಬೀರಲಿ. ನಾನು ನನ್ನ ಅಥವಾ ಇತರ ಮತಾಂತರಗಳ ದೋಷ ವನ್ನು ಪಕ್ಷಪಾತವನ್ನಿಡದೆ ಪ್ರಕಟಪಡಿಸುವಂತೆ ಇತರ ಎಲ್ಲಾ ವಿದ್ವಾಂಸರೂ ಮಾಡಿದರೆ ಜನರ ಅನ್ಯೋನ್ಯ ವಿರೋಧವು ಕಡಿಮೆ ಯಾಗಿ ಸಂಘಟತರಾಗಿ ಆನಂದದಲ್ಲಿದ್ದು ಏಕಮತದ ಅನುಯಾಯಿ ಗಳಾಗಿ ಸತ್ಯವನ್ನು ಸಾಧಿಸುವುದಕ್ಕೆ ತೊಂದರೆಯಾದರೂ ಯಾವುದಿದೆ ? ಕುರಾನಿನ ವಿಷಯದಲ್ಲಿ ಈ ರೀತಿ ಸ್ವಲ್ಪ ಬರೆದೆವು. ಬುದ್ಧಿವಂತರಾದ ಧಾರ್ಮಿಕಜನರು ಗ್ರಂಥಕಾರನ ಅಭಿಪ್ರಾಯವನ್ನು ತಿಳಿದುಕೊಂಡು ಇದರಿಂದ ಲಾಭಹೊಂದಬೇಕು. ಭ್ರಾಂತಿಯಿಂದ ಎಲ್ಲಿಯಾದರೂ ವಿಪ ರೀತವಾಗಿ ಬರೆದುದಿದ್ದರೆ ಅದನ್ನು ಸರಿಪಡಿಸಿಕೊಳ್ಳಬೇಕು.

ಇನ್ನು ಒಂದು ಮಾತು. ಎಷ್ಟೋ ಮುಸಲ್ಮಾನರು ನಮ್ಮ ಮತದ ವಿಷಯವು ಅಥರ್ವವೇದದಲ್ಲಿದೆಯೆಂದು ಹೇಳುತ್ತಾರೆ, ಬರೆಯು

ತ್ತಾರೆ ಅಥವಾ ಮುದ್ರಿಸುತ್ತಾರೆ. ಅಥರ್ವವೇದದಲ್ಲಿ ಈ ಮತದ ಹೆಸರೂ ಬಂದಿರುವುದಿಲ್ಲ.

ಪ್ರಶ್ನೆ—ನೀವು ಸಂಪೂರ್ಣ ಅಥರ್ವವೇದವನ್ನು ನೋಡಿರುವಿರೇನು? ನೋಡಿದ್ದರೆ ಅಲ್ಲೋಪನಿಷತ್ತನ್ನು ನೋಡಿರಿ. ಇದು ಅದರಲ್ಲೇ ಇದೆ. ಹೀಗಿರುವಾಗ ಅಥರ್ವವೇದದಲ್ಲಿ ಮುಸಲ್ಮಾನರ ಹೆಸರೂ ಇಲ್ಲವೆಂದು ಏಕೆ ಹೇಳುತ್ತೀರಿ?

ಅಥಾಲ್ಲೋಪನಿಷದಂ ವ್ಯಾಖ್ಯಾಸ್ಯಾಮಃ

ಅಸ್ಮಾಲ್ಲಾಂ ಇಲ್ಲೇ ಮಿತ್ರಾವರುಣಾ ದಿವ್ಯಾನಿಧತ್ತೇ । ಇಲ್ಲಲ್ಲೇ ವರುಣೋ ರಾಜಾ ಪುನರ್ದ್ದದುಃ । ಹಯಾಮಿತ್ರೋ ಇಲ್ಲಾಂ ಇಲ್ಲಲ್ಲೇ ಇಲ್ಲಾಂ ವರುಣೋ ಮಿತ್ರಸ್ತೇಜಸ್ಯಾಮಃ॥೧॥ ಹೋತಾರ ಮಿಂದ್ರೋ ಹೋತಾರಮಿಂದ್ರ ಮಹಾಸುರಿಂದ್ರಾಃ । ಅಲ್ಲೋ ಜ್ಯೇಷ್ಠಂ ಶ್ರೇಷ್ಠಂ ಪರಮಂ ಪೂರ್ಣಂ ಬ್ರಹ್ಮಾಣಂ ಅಲ್ಲಾವ್ ॥೨॥ ಅಲ್ಲೋ ರಸೂಲಮಹಾಮದರಕಬರಸ್ಯ ಅಲ್ಲೋ ಅಲ್ಲಾವ್ ॥೩॥ ಆದಲ್ಲಾಬೂಕನೇಕಕಂ । ಅಲ್ಲಾಬೂಕನಿಖಾತಕಂ ॥೪॥ ಅಲ್ಲೋಯಜ್ಞೇನ ಹುತಹುತ್ವಾ । ಅಲ್ಲಾ ಸೂರ್ಯಚಂದ್ರಸರ್ವನಕ್ಷತ್ರಾಃ॥೫॥ ಅಲ್ಲಾಋಷೀಣಾಂ ಸರ್ವದಿವ್ಯಾಂ ಇಂದ್ರಾಯಪೂರ್ವಂ ಮಾಯಾ ಪರಮಂತರಿಕ್ಷಾಃ ॥೬॥ ಅಲ್ಲಃ ಪೃಥಿವ್ಯಾ ಅಂತರಿಕ್ಷಂ ವಿಶ್ವರೂಪಮ್ ॥೭॥ ಇಲ್ಲಾಂ ಕಬರ ಇಲ್ಲಾಂ ಕಬರ ಇಲ್ಲಾಂ ಇಲ್ಲಲ್ಲೇತಿ ಇಲ್ಲಲ್ಲಾಃ ॥೮॥ ಓಂ ಅಲ್ಲಾ ಇಲ್ಲಲ್ಲಾ ಅನಾದಿಸ್ವರೂಪಾಯ ಅಥರ್ವಣಾ ಶಾಮಾ ಹುಂ ಹ್ರೀಂ ಜನಾನಪಶು ನಸಿದ್ಧಾನ್ ಜಲ ಚರಾನ್ ಅದೃಷ್ಟಂ ಕುರು ಕುರು ಫಟ್ ॥೯॥ ಅಸುರ ಸಂಹಾರಿಣೇ ಹುಂ ಹ್ರೀಂ ಅಲ್ಲೊ ರಸೂಲ ಮಹಮುದರಕಬರಸ್ಯ ಅಲ್ಲೋ: ಅಲ್ಲಾಂ ಇಲ್ಲಲ್ಲೇತಿ ಇಲ್ಲಲ್ಲಾಃ ॥೧೦॥

॥ ಇತ್ಯಲ್ಲೋಪನಿಷತ್ಸಮಾಪ್ತಾ ॥

ಇದರಲ್ಲಿ ಮಹಮ್ಮದ ಸಾಹೇಬರು ರಸೂಲರೆಂದು ಸ್ಪಷ್ಟವಾಗಿ ಬರೆದಿರುವುದರಿಂದ ಮುಸಲ್ಮಾನರ ಮತವು ವೇದಮೂಲಕವೆಂಬುದು ಸಿದ್ಧವಾಗುತ್ತದೆ.

ಉತ್ತರ—ನೀವು ಅಥರ್ವವೇದವನ್ನು ನೋಡಿಲ್ಲವಾದರೆ ನಮ್ಮ ಹತ್ತಿರ ಬನ್ನಿರಿ. ಆದಿಯಿಂದ ಅಂತ್ಯಪರ್ಯಂತ ನೋಡಿರಿ. ಅಥವಾ ಯಾವನಾದರೂ ಒಬ್ಬ ಅಥರ್ವವೇದಿಯ ಬಳಿ ತೆರಳಿ ಇಪ್ಪತ್ತು ಕಾಂಡಗಳನ್ನುಳ್ಳ ಅಥರ್ವವೇದವನ್ನು ನೋಡಿ. ಎಲ್ಲಿಯೂ ನಿಮಗೆ ಪೈಗಂಬರರ ಹೆಸರಾಗಲಿ ಮತವಾಗಲಿ ಕಂಡುಬರಲಾರದು. ಈ ಅಲ್ಲೋಪನಿಷತ್ತು ಅಥರ್ವವೇದದಲ್ಲಾಗಲಿ ಗೋಪಥಬ್ರಾಹ್ಮಣದಲ್ಲಾಗಲಿ ಯಾವುದಾದರೊಂದು ಶಾಖೆಯಲ್ಲಾಗಲಿ ಇರುವುದಿಲ್ಲ. ಅಕಬರ ಬಾದಶಹನ ಕಾಲದಲ್ಲಿ ಇದನ್ನು ಯಾರಾದರೂ ಸ್ವಲ್ಪ ಸಂಸ್ಕೃತವನ್ನೂ ಸ್ವಲ್ಪ ಅರಬ್ಬೀ ಭಾಷೆಯನ್ನೂ ಬಲ್ಲವನು ಬರೆದಿರಬಹುದೆಂದು ತೋರುತ್ತದೆ. ಇದರಲ್ಲಿ ಅರಬ್ಬೀ ಮತ್ತು ಸಂಸ್ಕೃತ ಎರಡೂ ಭಾಷೆಗಳ ಪದಗಳು ಕಾಣಬರುತ್ತಿವೆ. ನೋಡಿರಿ (ಅಸ್ಮಾಲ್ಲಾಂ ಇಲ್ಲೇ ಮಿತ್ರಾ ವರುಣಾ ದಿವ್ಯಾನಿಧತ್ತೇ ಮೊದಲಾದುವು) ದಶಾಂಕದಲ್ಲಿ ಬರೆದಿರುವರು. ಉದಾ—ಇದರಲ್ಲಿ (ಅಸ್ಮಾಲ್ಲಾಂ ಮತ್ತು ಇಲ್ಲೇ) ಎಂಬುದು ಅರಬ್ಬೀ ಮತ್ತು (ಮಿತ್ರಾವರುಣಾ ದಿವ್ಯಾನಿಧಿತ್ತೇ) ಎಂಬುದು ಸಂಸ್ಕೃತ ಭಾಷೆಯ ಪದಗಳಾಗಿರುತ್ತವೆ. ಇದೇ ರೀತಿ ಎಲ್ಲಾ ಕಡೆ ಕಂಡುಬರುವುದರಿಂದ ಇವನ್ನು ಬರೆದವನು ಯಾರೋ ಸ್ವಲ್ಪ ಅರಬ್ಬೀಭಾಷೆಯನ್ನೂ ಸ್ವಲ್ಪ ಸಂಸ್ಕೃತಭಾಷೆಯನ್ನೂ ಬಲ್ಲವನಿರಬೇಕೆಂದು ಅನುಮಾನವಾಗುತ್ತದೆ. ಇದರ ಅರ್ಥವನ್ನು ನೋಡುವುದಾದರೆ ಅದು ಕೃತ್ರಿಮವೂ, ಅಯುಕ್ತವೂ, ವೇದ ಮತ್ತು ವ್ಯಾಕರಣಕ್ಕೆ ವಿರುದ್ಧವಾಗಿಯೂ ಇದೆ. ಈ ಉಪನಿಷತ್ತಿನಂತೆಯೇ ಮತಮತಾಂತರದ ಪಕ್ಷಪಾತಿಗಳು ಸ್ವರೋಪನಿಷತ, ನೃಸಿಂಹತಾಪನೀ, ರಾಮತಾಪನೀ, ಗೋಪಾಲತಾಪನೀ ಮೊದಲಾದ ಅನೇಕ ಉಪನಿಷತ್ತುಗಳನ್ನು ಬರೆದಿದ್ದಾರೆ.

ಪ್ರಶ್ನೆ—ಇದುವರೆಗೆ ಯಾರೂ ಈ ರೀತಿ ಹೇಳಿಲ್ಲ. ಈಗ ನೀವು ಹೇಳಿದರೆ ನಿಮ್ಮ ಮಾತುಗಳನ್ನು ನಾವು ಯಾಕೆ ನಂಬಬೇಕು?

ಉತ್ತಳ—ನೀವು ನಂಬುವುದರಿಂದಾಗಲಿ ನಂಬದಿರುವುದರಿಂದಾಗಲಿ ನಮ್ಮ ಮಾತು ಸುಳ್ಳಾಗಲಾರದು. ನಾನಿದನ್ನು ಅಸಂಗತವೆಂದು ಸಾಧಿಸಿದ್ದೇನೆ. ನೀವು ಅಥರ್ವವೇದದಿಂದಾಗಲಿ, ಗೋಪಥದಿಂದಾಗಲಿ ಇತರ ಶಾಖೆಗಳಿಂದಾಗಲಿ ಪ್ರಾಚೀನ ಹಸ್ತಲಿಖಿತ ಪುಸ್ತಕಗಳಿಂದಾಗಲಿ ಈ ಉಪನಿಷತ್ತನ್ನು ಯಥಾವತ್ತಾಗಿ ತೋರಿಸಿ, ಅರ್ಥಸಂಗತಿಯನ್ನು ತಿದ್ದಿ ಸರಿಪಡಿಸಿಕೊಟ್ಟರೆ ಅದು ಪ್ರಮಾಣಕೋಟಿಯನ್ನು ಪ್ರವೇಶಿಸಬಲ್ಲುದು.

ಪ್ರಶ್ನೆ—ನೋಡಿ! ನಮ್ಮ ಮತದಲ್ಲಿ ಎಲ್ಲಾ ರೀತಿಯ ಸುಖವೂ ಸಿಕ್ಕುತ್ತದೆ. ಕಡೆಗೆ ಮೋಕ್ಷವೂ ದೊರೆಯುತ್ತದೆ. ಎಷ್ಟು ಒಳ್ಳೇದಾದ ಮತವಿದು?

ಉತ್ತರ—ಇದೇ ರೀತಿ ಎಲ್ಲಾ ಮತದವರೂ ಸಹ ನಮ್ಮ ಮತವೇ ಸರ್ವೋತ್ತಮವಾದುದು. ಬೇರೆಲ್ಲಾ ಮತಗಳು ನಿಕೃಷ್ಟವಾಗಿರುತ್ತವೆ. ನಮ್ಮ ಮತದ ಹೊರತು ಇನ್ನಾವ ಮತದಲ್ಲಿಯೂ ಮುಕ್ತಿ ದೊರೆಯಲಾರದು—ಎಂದು ಹೇಳುತ್ತಾರೆ. ನಾವು ನಿಮ್ಮ ಮಾತನ್ನು ನಿಜವೆನ್ನಬೇಕೊ ಅಥವಾ ಅವರ ಅಂಬೋಣವನ್ನು ಒಪ್ಪಬೇಕೋ? ಎಲ್ಲಾ ಮತಗಳಲ್ಲಿರುವ ಸತ್ಯಭಾಷಣ ಅಹಿಂಸೆ, ದಯೆ ಮೊದಲಾದ ಶುಭಗುಣಗಳು ಒಳ್ಳೆಯವೂ ಇತರ ವಾದವಿವಾದ, ಈರ್ಷ್ಯಾದ್ವೇಷ, ಮಿಥ್ಯಾಭಾಷಣ ಮೊದಲಾದ ಕಾರ್ಯಗಳು ಕೆಟ್ಟವೂ ಆಗಿರುತ್ತವೆಂಬುದನ್ನು ನಾವು ನಂಬುತ್ತೇವೆ. ಸತ್ಯಮತವನ್ನು ಗ್ರಹಿಸುವ ಇಚ್ಛೆಯು ನಿಮಗಿರುವುದಾದರೆ ವೇದಮತವನ್ನನ್ನು ಸಸಿರಿ.

ಇನ್ನು ಮುಂದೆ ಸಂಕ್ಷೇಪವಾಗಿ ಸ್ವಮಂತವ್ಯ-ಅಮಂತವ್ಯಗಳು ಬರೆಯಲ್ಪಡುವುವು.

ಇತಿ ಶ್ರೀಮದ್ದಯಾನಂದಸರಸ್ವತೀಸ್ವಾಮಿಕೃತೇ
ಸತ್ಯಾರ್ಥಪ್ರಕಾಶೇ ಸುಭಾಷಾವಿಭೂಷಿತೇ
ಯವನಮತವಿಷಯೇ ಚತುರ್ದಶ
ಸಮುಲ್ಲಾಸಃ ಸಂಪೂರ್ಣಃ

॥ ಓಂ ॥

ಸ್ವಮಂತವ್ಯಾಮಂತವ್ಯ ಪ್ರಕಾಶಃ

ಸನಾತನ ಕಾಲದಿಂದ ಸಮಸ್ತರೂ ನಂಬಿಬಂದ ಈಗ ನಂಬುತ್ತಿರುವ ಮತ್ತು ಮುಂದೆ ನಂಬುವ, ವಿರೋಧವಿರಹಿತವಾದ ಸಾರ್ವಭೌಮಿಕವೂ ಸರ್ವತಂತ್ರವೂ ಆದ ಸಿದ್ಧಾಂತಗಳನ್ನೇ ಸನಾತನ ಮತ್ತು ನಿತ್ಯಧರ್ಮವೆಂದು ಕರೆಯುತ್ತಾರೆ. ಅವಿದ್ಯಾಯುತರಾದ ಅಥವಾ ಸಂಪ್ರದಾಯವಿಶೇಷಗಳಿಂದ ಭ್ರಾಂತಿಗೊಳಿಸಲ್ಪಟ್ಟ ಜನರು ವಿಪರೀತವಾಗಿ ತಿಳಿದುದನ್ನೂ ನಂಬಿರುವುದನ್ನು ಬುದ್ಧಿವಂತರು ಧರ್ಮವೆಂದು ಅಂಗೀಕರಿಸುವುದಿಲ್ಲ. ಆಪ್ತರು ಅಂದರೆ ಸತ್ಯವನ್ನು ಸ್ವೀಕರಿಸುವವರೂ, ಸತ್ಯವಾದಿಗಳೂ, ಸತ್ಯಕಾರಿಗಳೂ, ಪಕ್ಷಪಾತವಿರಹಿತರೂ ಪರೋಪಕಾರಿಗಳೂ ಆದ ವಿದ್ವಾಂಸರು ಯಾವುದನ್ನಂಗೀಕರಿಸುತ್ತಾರೋ ಅದು ಸರ್ವರಿಗೂ ಮಂತವ್ಯವಾಗಿದೆ. ಯಾವುದನ್ನು ಅಂಗೀಕರಿಸುವುದಿಲ್ಲವೋ ಅದು ಅಮಂತವ್ಯವಾಗಿರುವುದರಿಂದ ಪ್ರಾಮಾಣಿಕವಾಗಿರುವುದಿಲ್ಲ. ವೇದಾದಿ ಸತ್ಯಶಾಸ್ತ್ರಗಳಿಂದಲೂ ಬ್ರಹ್ಮನಿಂದ ಹಿಡಿದು ಜೈಮಿನಿಯವರೆಗಿನ ಎಲ್ಲಾ ಮುನಿಗಳಿಂದಲೂ ಅಂಗೀಕರಿಸಲ್ಪಟ್ಟ ಮತ್ತು ನಾನೂ ಅಂಗೀಕರಿಸಿರುವ ಈಶ್ವರ ಮೊದಲಾದ ಪದಾರ್ಥಗಳನ್ನು ಸರ್ವಸಜ್ಜನರ ಮತ್ತು ಮಹಾಶಯರ ಮುಂದೆ ಪ್ರಕಟಗೊಳಿಸುತ್ತೇನೆ. ಮೂರೂ ಕಾಲಗಳಲ್ಲಿ ಎಲ್ಲರಿಗೂ ಸಮಾನರೀತಿಯಲ್ಲಿ ಒಪ್ಪಿಕೊಳ್ಳಲು ಯೋಗ್ಯವಾದುದನ್ನೇ ನಾನು ಸ್ವಮಂತವ್ಯವೆಂಬುದಾಗಿ ನಂಬುತ್ತೇನೆ. ನವೀನ ಕಲ್ಪನೆಯಾಗಲಿ ಮತಮತಾಂತರಗಳನ್ನು ಸ್ಥಾಪಿಸಬೇಕೆಂಬ ಆಕಾಂಕ್ಷೆಯಾಗಲಿ ನನ್ನಲ್ಲಿ ಲೇಶಮಾತ್ರವೂ ಇಲ್ಲ. ಸತ್ಯವಾದುದನ್ನು ಒಪ್ಪುವುದು ಮತ್ತು ಒಪ್ಪಿಸುವುದೂ ಅಸತ್ಯವಾದುದನ್ನು ಬಿಡುವುದು ಮತ್ತು ಬಿಡಿಸುವುದೂ ನನಗೆ ಅಭೀಷ್ಟವಾಗಿರುತ್ತದೆ. ನಾನು ಪಕ್ಷಪಾತಮಾಡುತಿದ್ದಲ್ಲಿ ಆರ್ಯಾವರ್ತದಲ್ಲಿ ಹಬ್ಬಿರುವ ಯಾವುದಾದರೊಂದು ಮತದಲ್ಲಿ ಆಸಕ್ತಿಯನ್ನು ವಹಿಸಬೇಕಾಗಿತ್ತು. ಆದರೆ ಆರ್ಯಾವರ್ತದಲ್ಲಾಗಲಿ, ಇತರ ದೇಶಗಳಲ್ಲಾಗಲಿ ಇರುವ

ಅಧರ್ಮವ್ಯವಹಾರಗಳನ್ನು ಸ್ವೀಕರಿಸಿ ಧರ್ಮಯುತ ವ್ಯವಹಾರಗಳನ್ನು ನಾನು ತ್ಯಜಿಸುವುದೂ ಇಲ್ಲ. ತ್ಯಜಿಸಲಿಚ್ಛಿಸುವುದೂ ಇಲ್ಲ. ಏಕೆಂದರೆ ಹಾಗೆ ಮಾಡುವುದು ಮನುಷ್ಯಧರ್ಮದಿಂದ ಹೊರಗಿನದು. ಮನನ ಶೀಲನಾಗಿ ತನ್ನಂತೆಯೇ ಇತರರ ಸುಖದುಃಖಗಳನ್ನೂ ಹಾನಿಲಾಭ ಗಳನ್ನೂ ತಿಳಿಯುವವನನ್ನೇ ಮನುಷ್ಯನೆನ್ನಬೇಕು. ಅನ್ಯಾಯಕಾರಿಯು ಬಲಿಷ್ಠನಾಗಿದ್ದರೂ ಸಹ ಅವನಿಗೆ ಹೆದರಬಾರದು. ಧರ್ಮಾತ್ಮನು ನಿರ್ಬಲನಾಗಿದ್ದರೂ ಅವನಿಗೆ ಹೆದರುತ್ತಿರಬೇಕು. ಅಷ್ಟು ಮಾತ್ರವೇ ಅಲ್ಲ. ಧರ್ಮಾತ್ಮರು ತೀರಾ ಅನಾಥರೂ ದುರ್ಬಲರೂ ಮತ್ತು ಗುಣ ರಹಿತರಾಗಿದ್ದರೂ ಸಹ ತನ್ನ ಸರ್ವಸಾಮರ್ಥ್ಯದಿಂದ ಅವರ ರಕ್ಷಣೆ ಯನ್ನೂ ಉನ್ನತಿಯನ್ನೂ ಮಾಡಿ ಅವರಿಗೆ ಪ್ರಿಯವಾದ ವ್ಯವಹಾರ ಗಳನ್ನು ಮಾಡಬೇಕು. ಅಧರ್ಮಿಯು ಚಕ್ರವರ್ತಿ, ಸನಾಥ, ಮಹಾ ಬಲಿಷ್ಠ ಮತ್ತು ಗುಣವಂತನಾಗಿದ್ದರೂ ಸದಾ ಅವನ ನಾಶವನ್ನು ಅವನತಿಯನ್ನು ಅಪ್ರಿಯಾಚರಣವನ್ನು ಮಾಡಬೇಕು. ತಾತ್ಪರ್ಯ ವಿಷ್ಟೆ. ಸಾಧ್ಯವಿದ್ದಷ್ಟರಮಟ್ಟಿಗೆ ಅನ್ಯಾಯಕಾರಿಗಳ ಬಲದ ವಿನಾಶ ವನ್ನೂ, ನ್ಯಾಯಕಾರಿಗಳ ಬಲದ ಸರ್ವಥಾ ಅಭಿವೃದ್ಧಿಯನ್ನು ಗೈಯು ತ್ತಿರಬೇಕು. ಈ ಕಾರ್ಯದಲ್ಲಿ ಅವನಿಗೆ ಎಷ್ಟು ದಾರುಣದುಃಖಬೇಕಾ ದರೂ ಪ್ರಾಪ್ತವಾಗಲಿ, ಪ್ರಾಣವೇ ಬೇಕಾದರೂ ಹೊರಟು ಹೋಗಲಿ, ಈ ಮನುಷ್ಯತ್ವವೆಂಬ ಧರ್ಮದಿಂದ ಎಂದಿಗೂ ವಿಮುಖನಾಗಬಾರದು. ಈ ವಿಷಯವಾಗಿ ಶ್ರೀಮಾನ್ ಭರ್ತೃಹರಿ ಮಹಾರಾಜರೇ ಮೊದಲಾ ದವರು ಬರೆದ ಶ್ಲೋಕಗಳನ್ನು ಬರೆಯುವುದು ಉಪಯುಕ್ತವೆಂದು ತಿಳಿದು ಇಲ್ಲಿ ಬರೆಯುತ್ತಿದ್ದೇವೆ—

ನಿಂದಂತು ನೀತಿನಿಪುಣಾ ಯದಿ ವಾ ಸ್ತುವಂತು
ಲಕ್ಷ್ಮೀಃ ಸಮಾವಿಶತು ಗಚ್ಛತು ವಾ ಯಥೇಷ್ಟಂ ।
ಅದ್ಯೈವ ವಾ ಮರಣಮಸ್ತು ಯುಗಾಂತರೇ ವಾ
ನ್ಯಾಯ್ಯಾತ್ಪಥಃ ಪ್ರವಿಚಲಂತಿ ಪದಂ ನ ಧೀರಾಃ ॥೧॥

[ಭರ್ತೃಹರಿ]

ನ ಜಾತು ಕಾಮಾನ್ನ ಭಯಾನ್ನ ಲೋಭಾ-
ದ್ಧರ್ಮಂ ತ್ಯಜೇಜ್ಜೀವಿತಸ್ಯಾಪಿ ಹೇತೋಃ ।
ಧರ್ಮೋ ನಿತ್ಯಃ ಸುಖದುಃಖೇತ್ವನಿತ್ಯೇ
ಜೀವೋ ನಿತ್ಯೋ ಹೇತುರಸ್ಯ ತ್ವನಿತ್ಯಃ ॥೨॥

[ಮಹಾಭಾರತ।]

ಏಕ ಏವ ಸುಹೃದ್ಧರ್ಮೋ ನಿಧನೇಽಪ್ಯನುಯಾತಿ ಯಃ ।
ಶರೀರೇಣ ಸಮಂ ನಾಶಂ ಸರ್ವಮನ್ಯದ್ಧಿ ಗಚ್ಛತಿ ॥೩॥

{ಮನು}

ಸತ್ಯಮೇವ ಜಯತೇ ನಾನೃತಂ
ಸತ್ಯೇನ ಪಂಥಾ ವಿತತೋ ದೇವಯಾನಃ ।
ಯೇ ನಾಕ್ರಮಂ ತ್ಯೃಷಯೋ ಹ್ಯಾಪ್ತಕಾಮಾ
ಯತ್ರ ತತ್ಸತ್ಯಸ್ಯ ಪರಮಂ ನಿಧಾನಮ್ ॥೪॥

ನ ಹಿ ಸತ್ಯಾತ್ಪರೋ ಧರ್ಮೋ ನಾನೃತಾ ತ್ಪಾತಕಂ ಪರಂ ।
ನ ಹಿ ಸತ್ಯಾತ್ಪರಂ ಜ್ಞಾನಂ ತಸ್ಮಾತ್ಸತ್ಯಂ ಸಮಾಚರೇತ್ ॥೫॥

{ಉಪನಿಷತ್}

ಈ ಮಹಾಶಯರ ಶ್ಲೋಕಗಳ ಅಭಿಪ್ರಾಯಗಳಿಗನುಕೂಲ ಎಲ್ಲರೂ ನಿರ್ಣಯಿಸಿಕೊಳ್ಳುವುದು ಯೋಗ್ಯ.

ಇನ್ನು ಯಾವ ಯಾವ ವಸ್ತುಗಳನ್ನು ನಾನು ಯಾವ ಯಾವ ವಿಧವಾಗಿನಂಬುತ್ತೇನೆಂಬುದನ್ನಿಲ್ಲಿ ಸಂಕ್ಷೇಪವಾಗಿ ವರ್ಣಿಸುವೆನು. ಇವುಗಳ ಹೆಚ್ಚಾದ ವಿವರಣೆಯನ್ನು ಈ ಗ್ರಂಥದ ಆಯಾ ಪ್ರಕರಣದಲ್ಲಿ ಕೊಟ್ಟಿರುತ್ತದೆ—

೧. ಈಶ್ವರ–ಬ್ರಹ್ಮ, ಪರಮಾತ್ಮಮುಂತಾದ ಹೆಸರುಗಳನುಳ್ಳವನು, ಸಚ್ಚಿದಾನಂದಾದಿ ಲಕ್ಷಣಯುಕ್ತನು, ಪವಿತ್ರವಾದ ಗುಣಕರ್ಮ ಸ್ವಭಾವಗಳುಳ್ಳವನು, ಸರ್ವಜ್ಞ, ನಿರಾಕಾರ, ಸರ್ವವ್ಯಾಪಕ, ಅಜನ್ಮ, ಅನಂತ, ಸರ್ವಶಕ್ತಿಮಾನ್, ದಯಾಳು, ನ್ಯಾಯಕಾರೀ, ಸಮಸ್ತ

ಸೃಷ್ಟಿಯಕರ್ತನೂ-ಧರ್ತನೂ-ಸಂಹರ್ತನೂ ಆಗಿರುವವನು. ಸಮಸ್ತ ಜೀವರುಗಳಿಗೆ ಕರ್ಮಾನುಸಾರವಾಗಿ ಸತ್ಯನ್ಯಾಯಗಳ ಮೂಲಕ ಫಲವನ್ನು ಕೊಡುವವನು ಇತ್ಯಾದಿ ಲಕ್ಷಣಗಳನುಳ್ಳವನನ್ನೇ ಪರಮೇಶ್ವರನೆಂದು ಒಪ್ಪುತ್ತೇನೆ.

೨. ನಾಲ್ಕೂವೇದ (ವಿದ್ಯಾಧರ್ಮಯುಕ್ತವೂ ಈಶ್ವರಪ್ರಣೀತವೂ ಆದ ಸಂಹಿತಾಮಂತ್ರಭಾಗ) ಗಳನ್ನು ನಿರ್ಭ್ರಾಂತ ಸ್ವತಃ ಪ್ರಮಾಣಗಳೆಂದು ನಂಬುತ್ತೇನೆ. ಅವುಗಳ ಪ್ರಾಮಾಣ್ಯವನ್ನು ಕಂಡುಹಿಡಿಯಲು ಬೇರೆ ಪ್ರಮಾಣಗಳು ಬೇಕಾಗಿಲ್ಲ. ಅವು ಸ್ವಯಂ ಪ್ರಮಾಣಗಳಾಗಿವೆ. ಉದಾ–ಸೂರ್ಯ ಅಥವಾ ದೀಪವು ತನ್ನ ಸ್ವರೂಪವನ್ನು ಸ್ವತಃ ಪ್ರಕಾಶಪಡಿಸುತ್ತದೆ. ಮತ್ತು ಪೃಥಿವ್ಯಾದಿಗಳನ್ನು ಪ್ರಕಾಶಪಡಿಸುತ್ತದೆ. ಇದೇ ರೀತಿ ವೇದಗಳೂ ಸ್ವತಃ ಪ್ರಮಾಣಗಳಾಗಿವೆ. ಮತ್ತು ವೇದವ್ಯಾಖ್ಯಾನ ರೂಪವೂ ಬ್ರಹ್ಮಾದಿ ಮಹರ್ಷಿರಚಿತವೂ ಆದ ನಾಲ್ಕೂವೇದಗಳ ನಾಲ್ಕು ಬ್ರಾಹ್ಮಣಗಳು, ಆರು ಅಂಗಗಳು, ಆರು ಉಪಾಂಗಗಳು, ನಾಲ್ಕು ಉಪವೇದಗಳು—ಇವುಗಳನ್ನು ಪರತಃ ಪ್ರಮಾಣ ಅಂದರೆ ವೇದಗಳಿಗನುಕೂಲವಾಗಿರುವುದನ್ನು ಪ್ರಮಾಣವೆಂದೂ ವೇದಗಳಿಗೆ ವಿರುದ್ಧವಾಗಿರುವ ವಚನಗಳನ್ನು ಅಪ್ರಮಾಣವೆಂದೂ ಹೇಳುತ್ತೇನೆ.

೩. ಪಕ್ಷಪಾತರಹಿತವೂ ನ್ಯಾಯಾಚರಣ ಸತ್ಯಭಾಷಣಾದಿಯುಕ್ತವೂ ಈಶ್ವರಾಜ್ಞೆ ಮತ್ತು ವೇದಗಳಿಗೆ ಅವಿರುದ್ಧವೂ ಆಗಿರುವುದನ್ನು "ಧರ್ಮ"ವೆಂದೂ ಪಕ್ಷಪಾತಸಹಿತವಾದ, ಅನ್ಯಾಯಾಚರಣ-ಮಿಥ್ಯಾಭಾಷಣ ಮೊದಲಾದ ಈಶ್ವರಾಜ್ಞಾಭಂಗರೂಪವಾದ ವೇದವಿರುದ್ಧವಾದ ಕಾರ್ಯಗಳನ್ನು "ಅಧರ್ಮ"ವೆಂದೂ ನಂಬುತ್ತೇನೆ.

೪. ಇಚ್ಛಾ–ದ್ವೇಷ–ಸುಖ–ದುಃಖ–ಜ್ಞಾನಾದಿಗುಣಯುಕ್ತನೂ ಅಲ್ಪಜ್ಞನೂ, ನಿತ್ಯನೂ ಆಗಿರುವವನನ್ನೇ "ಜೀವ"ನೆಂದು ನಂಬುತ್ತೇನೆ.

೫. ಜೀವ ಮತ್ತು ಈಶ್ವರ, ಸ್ವರೂಪದಿಂದಲೂ ವೈಧರ್ಮದಿಂದಲೂ ಭಿನ್ನಭಿನ್ನರಾಗಿದ್ದಾರೆ. ಮತ್ತು ವ್ಯಾಪ್ಯವ್ಯಾಪಕತ್ವದಿಂದಲೂ,

ಸಾಧರ್ಮ್ಯದಿಂದಲೂ ಅಭಿನ್ನರಾಗಿರುವರು. ಅಂದರೆ, ಯಾವ ರೀತಿ ಮೂರ್ತಿಮಂತವಾದ ದ್ರವ್ಯವು ಆಕಾಶದಿಂದ ಬೇರಾಗಿರಲಿಲ್ಲವೋ, ಈಗ ಇಲ್ಲವೊ ಮುಂದೆ ಇರಲಾರದೊ ಅದೇ ರೀತಿ ಪರಮೇಶ್ವರನನ್ನು ಮತ್ತು ಜೀವನನ್ನು ನಾನು ವ್ಯಾಪ್ಯವ್ಯಾಪಕ, ಉಪಾಸ್ಯ-ಉಪಾಸಕ ಮತ್ತು ಪಿತಾ-ಪುತ್ರ ಮುಂತಾದ ಸಂಬಂಧಗಳನ್ನುಳ್ಳವರೆಂದು ನಂಬುತ್ತೇನೆ.

೬. ಅನಾದಿಪದಾರ್ಥಗಳು ಮೂರು ಇವೆ. ಮೊದಲನೆಯದು ಪರಮಾತ್ಮನು, ಎರಡನೆಯದು ಜೀವನು, ಮೂರನೆಯದು ಪ್ರಕೃತಿ ಅರ್ಥಾತ್ ಜಗತ್ತಿನ ಕಾರಣವು. ಇವುಗಳನ್ನೇ ನಿತ್ಯವೆನ್ನುತ್ತಾರೆ.

೭. ಪ್ರವಾಹದಿಂದ ಅನಾದಿ-ಸಂಯೋಗದಿಂದ ಹುಟ್ಟುವ ದ್ರವ್ಯ-ಗುಣ-ಕರ್ಮಗಳು ವಿಯೋಗದನಂತರ ಇರುವುದಿಲ್ಲ. ಆದರೆ ಪ್ರಥಮ ಸಂಯೋಗವು ಯಾವುದರಿಂದ ಆಗುತ್ತದೊ ಆ ಸಾಮರ್ಥ್ಯವು ಮಾತ್ರ ಅವುಗಳಲ್ಲಿ ಅನಾದಿಯಾಗಿದೆ. ಅದರಿಂದ ಪುನಃ ಸಂಯೋಗವೂ ಆಗುವುದು. ವಿಯೋಗವೂ ಆಗುವುದು. ಇವು ಮೂರನ್ನೂ ಪ್ರವಾಹದಿಂದ ಅನಾದಿಯೆಂದು ನಂಬುತ್ತೇನೆ.

೮. ಬೇರೆ ಬೇರೆಯಾಗಿರುವ ದ್ರವ್ಯಗಳು ಜ್ಞಾನ ಮತ್ತು ಯುಕ್ತಿಪೂರ್ವಕವಾಗಿ ಸಂಯುಕ್ತವಾಗಿ ನಾನಾರೂಪವಾಗಿ ಮಾಡುವುದಕ್ಕೆ ಸೃಷ್ಟಿಯೆಂದು ಹೇಳುತ್ತಾರೆ.

೯. ಸೃಷ್ಟಿನಿಮಿತ್ತಗಳಾದ ಈಶ್ವರನ ಗುಣ-ಕರ್ಮ-ಸ್ವಭಾವಗಳ ಸಾಫಲ್ಯವಾಗುವುದೇ "ಸೃಷ್ಟಿಯ ಪ್ರಯೋಜನ" ವಾಗಿರುತ್ತದೆ. ಉದಾ.—ಒಬ್ಬನು ಇನ್ನೊಬ್ಬನನ್ನು ಕಣ್ಣುಗಳೇಕಿವೆ? ಎಂದು ವಿಚಾರಿಸಿದಾಗ ಅವನು—ನೋಡುವುದಕ್ಕಾಗಿ ಎಂದು ಹೇಳುವಂತೆಯೇ ದೇವರ ಸೃಷ್ಟಿನಿರ್ಮಾಣ, ಸಾಮರ್ಥ್ಯದ ಸಫಲತೆಯೂ ಜೀವರುಗಳ ಕರ್ಮದ ಯಥಾವತ್ತಾದ ಫಲಾನುಭವವೂ ಸೃಷ್ಟಿ ಉತ್ಪತ್ತಿಯ ಪ್ರಯೋಜನಗಳಾಗಿರುತ್ತವೆ.

೧೦. ಸೃಷ್ಟಿಯ ರಚನೆಯನ್ನು ನೋಡುವುದರಿಂದಲೂ, ಜಡ ಪದಾರ್ಥಳಲ್ಲಿ ತಾನಾಗಿ ಬೀಜಾದಿಗಳ ಸ್ವರೂಪನಿರ್ಮಾಣವಾಗುವ

ಸಾಮರ್ಥ್ಯವಿಲ್ಲದುದರಿಂದಲೂ ಸೃಷ್ಟಿಯು ಅವಶ್ಯವಾಗಿ ' ಸಕರ್ತೃಕ ' ವಾಗಿದೆ. ಮತ್ತು ದೇವರೇ ಅದರ ಕರ್ತನಾಗಿರುವನು.

೧೧. " ಬಂಧ "ವು ಸನಿಮಿತ್ತಕ ಅಂಥರೆ ಅವಿದ್ಯಾನಿಮಿತ್ತಕ ವಾಗಿದೆ. ಪಾಪಕರ್ಮಗಳು, ಈಶ್ವರನಿಂದ ಭಿನ್ನರಾದವರ ಉಪಾಸನೆ ಮತ್ತು ಅಜ್ಞಾನ ಮೊದಲಾದುವುಗಳೆಲ್ಲಾ ದುಃಖಫಲವನ್ನುಂಟುಮಾಡು ತ್ತವೆ. ಆದುದರಿಂದಲೇ ಈ " ಬಂಧ "ವಿರುತ್ತದೆ. ಇಚ್ಛೆಯಿಲ್ಲದಿದ್ದರೂ ಸಹ ಇದನ್ನು ಅನುಭವಿಸಲೇಬೇಕಾಗುತ್ತದೆ.

೧೨. ಸಮಸ್ತ ದುಃಖಗಳಿಂದ ವಿಮುಕ್ತನಾಗಿ ಬಂಧನರಹಿತ ನಾಗಿ ಸರ್ವವ್ಯಾಪಕನಾದ ಈಶ್ವರನಲ್ಲಿಯೂ ಅವನ ಸೃಷ್ಟಿಯಲ್ಲಿಯೂ ಸ್ವೇಚ್ಛೆಯಿಂದ ವಿಚರಣೆಮಾಡುವುದೇ " ಮುಕ್ತಿ "ಯು. ನಿಯಮಿತ ಸಮಯದವರೆಗೆ ಮುಕ್ತಿಯನ್ನನುಭವಿಸಿ ಮರಳಿ ಜಗತ್ತಿಗೆ ಬರಬೇಕಾ ಗುತ್ತದೆ.

೧೩. ಈಶ್ವರೋಪಾಸನೆ ಅಂದರೆ ಯೋಗಾಭ್ಯಾಸ, ಧರ್ಮಾ ನುಷ್ಠಾನ, ಬ್ರಹ್ಮಚರ್ಯದಿಂದ ವಿದ್ಯಾಪ್ರಾಪ್ತಿ, ಆಪ್ತವಿದ್ವಾಂಸರ ಸಂಸರ್ಗ, ಸತ್ಯವಿದ್ಯೆ, ಸುವಿಚಾರ ಮತ್ತು ಪುರುಷಾರ್ಥ ಮೊದ ಲಾದುವು " ಮುಕ್ತಿಯ ಸಾಧನಗಳಾರುತ್ತದೆ."

೧೪. ಧರ್ಮದಿಂದ ಗಳಿಸಿದುದೇ " ಅರ್ಥ "ವಾಗಿರುತ್ತದೆ. ಅಧರ್ಮದಿಂದ ಗಳಿಸಿದುದಕ್ಕೆ ಅನರ್ಥವೆನ್ನುತ್ತಾರೆ.

೧೫. ಧರ್ಮಾರ್ಥಗಳಿಂದ ಪ್ರಾಪ್ತಮಾಡಿರುವುದೇ " ಕಾಮ "ವು.

೧೬. " ವರ್ಣಾಶ್ರಮ " ಗಳನ್ನು ಗುಣಕರ್ಮಗಳ ಯೋಗ್ಯ ತಾನುಸಾರವಾಗಿ ನಂಬುತ್ತೇನೆ.

೧೭. ಶುಭವಾದ ಗುಣ-ಕರ್ಮ-ಸ್ವಭಾವಗಳಿಂದ ಪ್ರಕಾಶ ಮಾನನೂ, ಪಕ್ಷಪಾತವನ್ನು ಬಿಟ್ಟು ನ್ಯಾಯಧರ್ಮಗಳನ್ನು ಸೇವಿಸು ವವನೂ, ಪ್ರಜೆಗಳಲ್ಲಿ ತಂದೆಯಂತೆ ವರ್ತಿಸುವವನೂ, ಅವರನ್ನು ಮಕ್ಕಳಂತೆ ಭಾವಿಸಿ ಅವರ ಉನ್ನತಿಯನ್ನು ಹೆಚ್ಚಿಸುವುದಕ್ಕೆ ಸದಾ ಪ್ರಯತ್ನ ಗೈಯುವವನೇ " ರಾಜ " ನು.

೧೪. ಪವಿತ್ರವಾದ ಗುಣ-ಕರ್ಮ-ಸ್ವಭಾವಗಳನ್ನು ಧರಿಸಿ ಪಕ್ಷಪಾತರಹಿತವಾಗಿ ನ್ಯಾಯಧರ್ಮಗಳನ್ನು ಸೇವಿಸಿ ರಾಜ-ಪ್ರಜೆ ಇವರಿಬ್ಬರ ಉನ್ನತಿಯನ್ನು ಬಯಸುತ್ತಾ ರಾಜವಿದ್ರೋಹಗೈಯದೆ ಅವನೊಡನೆ ಮಕ್ಕಳಂತೆ ವರ್ತಿಸುವವರೇ " ಪ್ರಜೆ " ಗಳು.

೧೫. ಸದಾ ವಿಚಾರವಂತನಾಗಿ ಅಸತ್ಯವನ್ನು ಬಿಟ್ಟು ಸತ್ಯವನ್ನು ಗ್ರಹಿಸುವವನೂ, ಅನ್ಯಾಯಕಾರಿಗಳನ್ನು ದೂರಗೊಳಿಸಿ ನ್ಯಾಯಕಾರಿಗಳನ್ನು ಬಲಪಡಿಸುವವನೂ ತನ್ನಂತೆಯೇ ಎಲ್ಲರಿಗೂ ಸುಖವಿರಬೇಕೆಂದು ಬಯಸುವವನೂ " ನ್ಯಾಯಕಾರಿ " ಯೆನಿಸುತ್ತಾನೆ. ನಾನೂ ಹಾಗೆಯೇ ನಂಬುತ್ತೇನೆ.

೧೦. ವಿದ್ವಾಂಸರನ್ನು " ದೇವ " ರೆಂದೂ, ಅವಿದ್ವಾಂಸರನ್ನು " ಅಸುರ " ರೆಂದೂ, ಪಾಪಿಗಳನ್ನು " ರಾಕ್ಷಸ " ರೆಂದೂ, ಅನಾಚಾರಿಗಳನ್ನು " ಪಿಶಾಚ " ಗಳೆಂದೂ ನಂಬುತ್ತೇನೆ.

೧೧. ಆ ವಿದ್ವಾಂಸರು, ತಾಯಿ, ತಂದೆ, ಆಚಾರ್ಯ, ಅತಿಥಿ, ನ್ಯಾಯಾಕಾರಿಯಾದ ರಾಜ ಮತ್ತು ಧರ್ಮಾತ್ಮರು, ಪತಿವ್ರತಾಸ್ತ್ರೀ, ಮತ್ತು ಸ್ತ್ರೀವ್ರತ ಪತಿ ಇವರ ಸತ್ಕಾರ ಮಾಡುವುದೇ " ದೇವರಪೂಜೆ " ಯೆನಿಸುತ್ತದೆ. ಇದಕ್ಕೆ ವಿಪರೀತವಾದುದು ಅದೇ ವಪೂಜೆಯಾಗಿರುತ್ತದೆ. ಇವರ ಮೂರ್ತಿಗಳನ್ನು ಪೂಜ್ಯವೆಂಬೂ, ಇತರ ಪಾಷಾಣಾದಿ ಜಡಮೂರ್ತಿಗಳನ್ನು ಸರ್ವಥಾ ಅಪೂಜ್ಯವಾದುವೆಂದೂ ತಿಳಿಯುತ್ತೇನೆ.

೧೨. ವಿದ್ಯೆ, ಸಭ್ಯತೆ, ಧರ್ಮಾತ್ಮತೆ, ಜಿತೇಂದ್ರಿಯತ್ವ ಮುಂತಾದುವು ಯಾವುದರಿಂದ ಹೆಚ್ಚುತ್ತವೋ ಮತ್ತು ಅವಿದ್ಯಾದಿ ದೋಷಗಳು ಕಡಿಮೆಯಾಗುತ್ತವೋ ಅದಕ್ಕೆ " ಶಿಕ್ಷಣ " ವೆನ್ನುತ್ತಾರೆ.

೧೩. ಬ್ರಹ್ಮಾದಿಗಳು ರಚಿಸಿದ ಐತರೇಯಾದಿ ಬ್ರಾಹ್ಮಣ ಪುಸ್ತಕಗಳಿಗೇನೇ " ಪುರಾಣ ", ಇತಿಹಾಸ, ಕಲ್ಪ, ಗಾಥಾ ಮತ್ತು ನಾರಾಶಂಸಿ ಈ ಹೆಸರುಗಳಿವೆಯೆಂದು ನಂಬುತ್ತೇನೆಯೇ ವಿನಹ ಅನ್ಯಭಾಗವತ ಮೊದಲಾದುವುಗಳನ್ನಲ್ಲ.

೨೪. ದುಃಖಸಾಗರವನ್ನು ಯಾವುದರ ಮೂಲಕ ದಾಟ ಬಹುದೊ ಅದೇ "ತೀರ್ಥ" ವು. ಸತ್ಯಭಾಷಣ, ವಿದ್ಯೆ, ಸತ್ಸಂಗ, ಯಮಾದಿಗಳು, ಯೋಗಾಭ್ಯಾಸ, ಪುರುಷಾರ್ಥ, ವಿದ್ಯಾದಾನ ಮೊದ ಲಾದ ಶುಭಕರ್ಮಗಳನ್ನೇ ತೀರ್ಥಗಳೆಂದು ತಿಳಿಯುತ್ತೇನೆಯೇ ಹೊರತು ಜಲಸ್ಥಳಾದಿಗಳನ್ನಲ್ಲ.

೨೫. ಪುರುಷಾರ್ಥದಿಂದಲೇ ಸಂಚಿತಪ್ರಾರಬ್ಧಗಳಾಗುತ್ತವೆ. ಪುರುಷಾರ್ಥವು ಸರಿಯಾಗುವುದರಿಂದ ಎಲ್ಲವೂ ಸರಿಯಾಗುವುದು. ಅದು ಕೆಡುವುದರಿಂದ ಎಲ್ಲವೂ ಕೆಡುವುದು ಆದುದರಿಂದಲೇ "ಪ್ರಾರಬ್ಧ ಕ್ಕಿಂತ ಪುರುಷಾರ್ಥವು ಮೇಲಾಗಿರುತ್ತದೆ."

೨೬. ಎಲ್ಲರೊಂದಿಗೆ ಸುಖದುಃಖಗಳಲ್ಲಿಯೂ ಹಾನಿಲಾಭಗಳ ಲ್ಲಿಯೂ ಯಥಾಯೋಗ್ಯವಾಗಿ ತನ್ನಾತ್ಮದಂತೆ ವರ್ತಿಸುವುದೇ "ಮನು ಷ್ಯನಿಗೆ ಶ್ರೇಷ್ಠ" ವೆಂದೂ, ವಿಪರೀತವಾಗಿ ವರ್ತಿಸುವುದು ಕೆಟ್ಟದ್ದೆಂದೂ ಭಾವಿಸುತ್ತೇನೆ.

೨೭. ಶರೀರ, ಆತ್ಮ, ಮನಸ್ಸು—ಇವು ಯಾವುದರಿಂದ ಉತ್ತಮಗೊಳ್ಳುತ್ತವೊ ಅದನ್ನು "ಸಂಸ್ಕಾರ" ವೆನ್ನುತ್ತಾರೆ. ಅದು ನಿಷೇಕ ಮೊದಲುಗೊಂಡು ಅಂತ್ಯೇಷ್ಟಿಯವರೆಗೆ ಹದಿನಾರು ವಿಧವಾಗಿದೆ. ಅದು ಕರ್ತವ್ಯವೆಂದು ತಿಳಿಯುತ್ತೇನೆ. ದಾಹಸಂಸ್ಕಾರದ ನಂತರ ಮೃತಕನಿಗಾಗಿ ಏನೂ ಮಾಡಬಾರದು.

೨೮. ವಿದ್ವಾಂಸರಿಗೆ ಯಥಾಯೋಗ್ಯವಾದ ಸತ್ಕಾರವೂ, ಶಿಲ್ಪ ವಿದ್ಯೆ ಮತ್ತು ಪದಾರ್ಥವಿದ್ಯೆಯೆನಿಸುವ ರಸಾಯನಶಾಸ್ತ್ರ–ಇವುಗಳ ಉಪಯೋಗವೂ, ವಿದ್ಯಾದಿಶುಭಗುಣಗಳ ದಾನವೂ, ವಾಯುವೃಷ್ಟಿ–ಜಲ–ಓಷಧಿಗಳನ್ನು ಪವಿತ್ರಗೊಳಿಸುವ ಅಗ್ನಿಹೋತ್ರಾದಿಗಳನ್ನು ಮಾಡಿ ಎಲ್ಲಾ ಜೀವರುಗಳಿಗೆ ಸುಖವನ್ನುಂಟುಮಾಡುವುದೂ ಯಜ್ಞವೆನಿಸು ತ್ತದೆ. ಇದನ್ನು ಉತ್ತಮವೆಂದು ಭಾವಿಸುತ್ತೇನೆ.

೨೯. ಶ್ರೇಷ್ಠರನ್ನು "ಆರ್ಯ" ರೆಂದೂ ದುಷ್ಟರನ್ನು "ದಸ್ಯು" ಗಳೆಂದೂ ಇತರರು ಹೇಳುವಂತೆ ನಾನೂ ನಂಬುತ್ತೇನೆ.

೩೦. ಈ ದೇಶದಲ್ಲಿ ಆದಿಸೃಷ್ಟಿಯಿಂದಲೂ ಆರ್ಯರು ವಾಸಿಸುತ್ತಾ ಬಂದಿರುವವರಾದಕಾರಣ ಇದಕ್ಕೆ "ಆರ್ಯಾವರ್ತ" ವೆಂದು ಹೆಸರು. ಉತ್ತರದಲ್ಲಿ ಹಿಮಾಲಯವೂ, ದಕ್ಷಿಣದಲ್ಲಿ ವಿಂಧ್ಯಾಚಲವೂ, ಪಶ್ಚಿಮದಲ್ಲಿ ಸಿಂಧೂನದಿಯೂ ಪೂರ್ವದಲ್ಲಿ ಬ್ರಹ್ಮಪುತ್ರಾನದಿಯೂ ಈದೇಶದ ಸೀಮೆಗಳಾಗಿವೆ. ಈ ನಾಲ್ಕರ ಮಧ್ಯದಲ್ಲಿರುವ ದೇಶವೆಲ್ಲವೂ "ಆರ್ಯಾವರ್ತ" ವೆನಿಸುತ್ತದೆ. ಮತ್ತು ಇದರಲ್ಲಿ ಸದಾಕಾಲದಿಂದಲೂ ವಾಸಿಸುತ್ತಿರುವ ಜನರಿಗೆ "ಆರ್ಯ" ರೆಂದು ಹೇಳುತ್ತಾರೆ.

೩೧. ಸಾಂಗೋಪಾಂಗವಾಗಿ ವೇದವಿದ್ಯೆಗಳನ್ನೋದಿಸುವವನೂ ಮತ್ತು ಸದಾಚಾರವನ್ನು ಗ್ರಹಣಮಾಡಿಸಿ ಮಿಥ್ಯಾಚಾರವನ್ನು ತ್ಯಾಗ ಮಾಡಿಸುವವನೂ "ಆಚಾರ್ಯ" ನೆನಿಸುತ್ತಾನೆ.

೩೨. ಸತ್ಯಶಿಕ್ಷಣ ಮತ್ತು ವಿದ್ಯೆಯನ್ನು ಗ್ರಹಣಮಾಡಲು ಯೋಗ್ಯನೂ, ಧರ್ಮಾತ್ಮನೂ, ವಿದ್ಯಾಪ್ರಾಪ್ತಿಯ ಇಚ್ಛೆಯನ್ನಿಟ್ಟು ಆಚಾರ್ಯನಿಗೆ ಪ್ರಿಯವಾದುದನ್ನೇ ಮಾಡುವವನೂ "ಶಿಷ್ಯ" ನೆನಿಸುತ್ತಾನೆ.

೩೩. ತಂದೆತಾಯಿಗಳೂ, ಸತ್ಯವನ್ನು ಸ್ವೀಕಾರಮಾಡಿಸಿ ಅಸತ್ಯವನ್ನು ಬಿಡಿಸುವವರೂ "ಗುರು" ಗಳೆನಿಸುತ್ತಾರೆ.

೩೪. ಯಜಮಾನನ ಹಿತಕಾರಿಯಾಗಿದ್ದು ಸತ್ಯೋಪದೇಶವನ್ನು ಮಾಡುವವನು "ಪುರೋಹಿತ" ನು.

೩೫. ವೇದಗಳ ಏಕದೇಶವನ್ನಾಗಲಿ ಅಂಗಗಳನ್ನಾಗಲಿ ಓದಿಸುವವನು "ಉಪಾಧ್ಯಾಯ" ನು.

೩೬. ಧರ್ಮಾಚರಣಪೂರ್ವಕವಾಗಿ ಬ್ರಹ್ಮಚರ್ಯದಿಂದ ವಿದ್ಯಾಗ್ರಹಣಮಾಡಿ ಪ್ರತ್ಯಕ್ಷಾದಿಪ್ರಮಾಣಗಳಿಂದ ಸತ್ಯಾಸತ್ಯ ನಿರ್ಣಯವನ್ನು ಮಾಡಿ ಸತ್ಯದ ಗ್ರಹಣವನ್ನೂ, ಅಸತ್ಯದ ಪರಿತ್ಯಾಗವನ್ನು ಮಾಡುವುದೇ "ಶಿಷ್ಟಾಚಾರ" ವು. ಇದನ್ನು ಮಾಡುವವನೇ ಶಿಷ್ಟನೆನಿಸುತ್ತಾನೆ.

೩೭. ಪ್ರತ್ಯಕ್ಷಾದಿ ಎಂಟು ಪ್ರಮಾಣಗಳನ್ನು ನಂಬುತ್ತೇನೆ.

೩೮. ಯಥಾರ್ಥ ವಕ್ತೃವೂ, ಧರ್ಮಾತ್ಮನೂ, ಸಮಸ್ತರ ಸುಖಕ್ಕಾಗಿ ಪ್ರಯತ್ನಪಡುವವನೂ ಆದವನನ್ನು " ಆಪ್ತ " ಎಂದು ಹೇಳುತ್ತೇನೆ.

೩೯. " ಪರೀಕ್ಷೆ "ಯು ಐದು ವಿಧವಾಗಿದೆ. ಮೊದಲನೆಯದು ದೇವರು, ಅವನ ಗುಣಕರ್ಮಸ್ವಭಾವಗಳು ಮತ್ತು ವೇದವಿದ್ಯೆ, ಎರಡನೆಯದು–ಪ್ರತ್ಯಕ್ಷ ಮೊದಲಾದ ಎಂಟು ಪ್ರಮಾಣಗಳು. ಮೂರನೆಯದು–ಸೃಷ್ಟಿಕ್ರಮ, ನಾಲ್ಕನೇದು–ಆಪ್ತವ್ಯವಹಾರ ಮತ್ತು ಐದನೇದು–ತನ್ನ ಆತ್ಮದ ಪವಿತ್ರತೆ ಮತ್ತು ವಿದ್ಯೆ. ಈ ಐದು ಪರೀಕ್ಷೆಗಳಿಂಡ ಸತ್ಯಾಸತ್ಯಗಳ ನಿರ್ಣಯಮಾಡಿ ಸತ್ಯವನ್ನು ಗ್ರಹಿಸಬೇಕು ಮತ್ತು ಅಸತ್ಯವನ್ನು ತ್ಯಜಿಸಬೇಕು.

೪೦. ಎಲ್ಲಾ ಮನುಷ್ಯರ ದುರಾಚಾರಗಳೂ ದುಃಖವೂ ಕಡಿಮೆಯಾಗಿ ಸದಾಚಾರವೂ ಸುಖವೂ ಹೆಚ್ಚಿಸುವಂತಹ ಕಾರ್ಯ ಮಾಡುವುದೇ '' ಪರೋಪಕಾರ ''ವು.

೪೧. '' ಸ್ವತಂತ್ರ '' '' ಪರತಂತ್ರರು ''—ಜೀವಾತ್ಮನು ತನ್ನ ಕೆಲಸಮಾಡಲು ಸ್ವತಂತ್ರನೂ, ಕರ್ಮಫಲಭೋಗದ ಈಶ್ವರವ್ಯವಸ್ಥೆಯ ವಿಷಯದಲ್ಲಿ ಪರತಂತ್ರನೂ ಆಗಿರುವನು. ಪರಮಾತ್ಮನೂ ಸಹ ತನ್ನ ಸತ್ಯಾಚರಣ ಮೊದಲಾದ ಕಾರ್ಯಗಳಲ್ಲಿ ಸ್ವತಂತ್ರನಾಗಿರುವನು.

೪೨. ವಿಶಿಷ್ಟ ಸುಖವನ್ನನುಭವಿಸುವುದೂ ಅದರ ಸಾಧನಗಳ ಪ್ರಾಪ್ತಿಯೂ '' ಸ್ವರ್ಗ ''ವೆನಿಸುತ್ತದೆ.

೪೩. ವಿಶಿಷ್ಟ ದುಃಖವನ್ನನುಭವಿಸುವುದೂ ಅದರ ಸಾಧನಗಳನ್ನು ಕೂಡಿಹಾಕುವುದೂ '' ನರಕ ''ವೆನಿಸುತ್ತದೆ.

೪೪. ಶರೀರವನ್ನೆತ್ತಿ ಪ್ರಕಟವಾಗುವುದಕ್ಕೆ " ಜನ್ಮ "ವೆನ್ನುತ್ತಾರೆ. ಅದು ಪೂರ್ವ, ಪರ ಮತ್ತು ಮಧ್ಯಭೇದದಿಂದ ಮೂರು ಬಗೆಯಾಗಿ ಒಪ್ಪುತ್ತೇನೆ.

೪೫. ಶರೀರಸಂಯೋಗಕ್ಕೆ " ಜನ್ಮ "ವೆಂದೂ ವಿಯೋಗ ಮಾತ್ರಕ್ಕೆ " ಮೃತ್ಯು "ವೆಂದೂ ಹೇಳುತ್ತಾರೆ.

೪೬. ನಿಯಮಪೂರ್ವಕ ತಮ್ಮಿಚ್ಛೆಯಿಂದ ಪ್ರಸಿದ್ಧಿಪೂರ್ವಕವಾಗಿ ಪಾಣಿಗ್ರಹಣಮಾಡಿಕೊಳ್ಳುವುದು "ವಿವಾಹ"ವೆನಿಸುತ್ತದೆ.

೪೭. ವಿವಾಹವಾದನಂತರ ಪತಿಯ ಮರಣಹೊಂದುವುದೇ ಮೊದಲಾದ ವಿಯೋಗವಾದಲ್ಲಿ ಅಥವಾ ನಪುಂಸಕತ್ವ ಮೊದಲಾದ ಶಾಶ್ವತವಾದ ರೋಗಗಳ ಸ್ಥಿತಿಯಲ್ಲಿ, ಸ್ತ್ರೀಯಾಗಲಿ ಪುರುಷನಾಗಲಿ ಆಪತ್ಕಾಲದಲ್ಲಿ ಸ್ವವರ್ಣದ ಅಥವಾ ಉತ್ತಮ ವರ್ಣಸ್ಥರಾದ ಸ್ತ್ರೀ ಪುರುಷರೊಡನೆಕೂಡಿ ಸಂತಾನೋತ್ಪತ್ತಿಮಾಡುವುದು "ನಿಯೋಗ"ವು.

೪೮. ಗುಣಕೀರ್ತನ, ಶ್ರವಣ ಮತ್ತು ಜ್ಞಾನವಿರುವುದು "ಸ್ತುತಿ"ಯು. ಪ್ರೀತಿ ಮೊದಲಾದುವೇ ಇದರ ಫಲಗಳಾಗಿರುತ್ತವೆ.

೪೯. ತನ್ನ ಸಾಮರ್ಥ್ಯದ ನಂತರ ಪರಮಾತ್ಮನ ಸಂಬಂಧದಿಂದ ಪ್ರಾಪ್ತವಾಗುವ ವಿಜ್ಞಾನ ಮೊದಲಾದುವುಗಳಿಗಾಗಿ ದೇವರನ್ನು ಯಾಚಿಸುವುದೇ "ಪ್ರಾರ್ಥನೆ"ಯು. ನಿರಭಿಮಾನ ಮೊದಲಾದುವೇ ಇದರ ಫಲಗಳು.

೫೦. ಪರಮಾತ್ಮನ ಗುಣಕರ್ಮಸ್ವಭಾವಗಳು ಪವಿತ್ರವಾಗಿರುವಂತೆ ನಮ್ಮ ಗುಣಕರ್ಮಸ್ವಭಾವಗಳನ್ನು ಪವಿತ್ರಮಾಡಿಕೊಳ್ಳುವುದು. ದೇವರು ಸರ್ವವ್ಯಾಪಕನೆಂದೂ, ತಾನು ವ್ಯಾಪ್ಯನೆಂದೂ ತಿಳಿದು ದೇವರ ಸಮೀಪ ನಾವಿರುವೆವೆಂಬುದನ್ನು ನಮ್ಮ ಬಳಿ ದೇವರಿರುವನೆಂಬುದನ್ನು ಯೋಗಾಭ್ಯಾಸದಿಂದ ಸಾಕ್ಷಾತ್ಕರಿಸುವುದು "ಉಪಾಸನೆ" ಯೆನಿಸುತ್ತದೆ. ಜ್ಞಾನೋನ್ನತಿ ಮೊದಲಾದುದೇ ಇದರ ಫಲವು.

೫೧. ಪರಮಾತ್ಮನಲ್ಲಿರುವ ಗುಣಗಳಿಂದ ಅವನು ಯುಕ್ತನಾಗಿರುವನೆಂದೂ ಇಲ್ಲದಿರುವ ಗುಣಗಳಿಂದ ಬೇರಾಗಿರುವನೆಂದೂ ತಿಳಿದು ಪ್ರಶಂಸಿಸುವುದು ಸಗುಣನಿರ್ಗುಣಸ್ತುತಿಯಾಗಿರುತ್ತದೆ. ಶುಭಗುಣಗಳ ಗ್ರಹಣೇಚ್ಛೆಯನ್ನೂ, ದೋಷಗಳನ್ನು ದೂರಪಡಿಸಲು ಪರಮಾತ್ಮನ ಸಹಾಯದ ಇಚ್ಛೆಯನ್ನೂ ಮಾಡುವುದು ಸಗುಣ ನಿರ್ಗುಣಪ್ರಾರ್ಥನೆಯಾಗಿದೆ. ಮತ್ತು ದೇವರು ಸರ್ವಗುಣಪರಿಪೂರ್ಣನೂ, ಸರ್ವದೋಷವಿಮುಕ್ತನೂ ಆಗಿರುವನೆಂದು ತಿಳಿದು ತನ್ನಾತ್ಮವನ್ನು ಅವನ ಮತ್ತು ಅವನಾಜ್ಞೆಗರ್ಪಿಸುವುದೇ "ಸಗುಣನಿರ್ಗುಣೋಪಾಸನೆಯಾಗಿರುತ್ತದೆ."

ಸಂಕ್ಷೇಪವಾಗಿ ನನ್ನ ಸಿದ್ಧಾಂತಗಳನ್ನು ತೋರಿಸಿಕೊಟ್ಟಿದ್ದೇನೆ. ಇದರ ವಿಶೇಷ ವಿವರಣೆಯನ್ನು ಇದೇ ಸತ್ಯಾರ್ಥಪ್ರಕಾಶದ ಭಿನ್ನಭಿನ್ನ ಪ್ರಕರಣಗಳಲ್ಲಿ ಕೊಟ್ಟಿದೆ. ಮತ್ತು ಋಗ್ವೇದಾಧಿ ಭಾಷ್ಯ ಭೂಮಿಕೆ ಮೊದಲಾದ ಗ್ರಂಥಗಳಲ್ಲಿಯೂ ಬರೆದಿದೆ. ಯಾವ ಮಾತುಗಳು ಎಲ್ಲರ ಮುಂದೆ ಗ್ರಾಹ್ಯವಾಗಿರುವವೋ ಅವನ್ನು ನಂಬುತ್ತೇನೆ. ಉದಾ.— ಸತ್ಯವನ್ನಾಡುವುದು ಎಲ್ಲರ ಎದುರಿನಲ್ಲಿ ಒಳ್ಳೆಯದೂ ಸುಳ್ಳಾಡುವುದು ಕೆಟ್ಟದ್ದೂ ಆಗಿರುತ್ತದೆ. ಇಂತಹ ಸಿದ್ಧಾಂತಗಳನ್ನು ನಾನು ಸ್ವೀಕಾರ ಮಾಡುತ್ತೇನೆ. ಮತ್ತು ಮತಮತಾಂತರಗಳಲ್ಲಿ ಪರಸ್ಪರ ವಿರುದ್ಧವಾದ ಜಗಳಗಳನ್ನು ನಾನೆಂದಿಗೂ ಮೆಚ್ಚುವುದಿಲ್ಲ. ಈ ಮತವಾದಿಗಳೇ ತದ್ಮು ತಮ್ಮ ಮತವನ್ನು ಪ್ರಚಾರಗೊಳಿಸಿ ಜನರನ್ನು ಮೋಸಗೊಳಿಸಿ ಪರಸ್ಪರ ಶತ್ರುಗಳನ್ನಾಗಿ ಮಾಡಿದ್ದಾರೆ. ಇಂತಹ ಮಾತುಗಳನ್ನು ಛಿನ್ನಭಿನ್ನವಾಗಿ ಮಾಡಿ ಸರ್ವಪ್ರಕಾರದ ಸತ್ಯವನ್ನು ಪ್ರಚಾರಗೊಳಿಸಿ, ಎಲ್ಲರಲ್ಲಿಯೂ ಐಕ್ಯಮತ್ಯವು ನೆಲೆಯೂರುವಂತೆ ಮಾಡಿ ದ್ವೇಷವನ್ನು ಹರಿದೊಗೆದು ಒಬ್ಬರಮೇಲೊಬ್ಬರು ದೃಢವಾದ ಪ್ರೀತಿಯುಳ್ಳವರಾಗಿದ್ದು ಎಲ್ಲರಿಗೂ ಸುಖವು ದೊರೆಯುವಂತಾಗಲೆಂಬುದಕ್ಕಾಗಿಯೇ ನನ್ನೀಪ್ರಯತ್ನಗಳ ಅಭಿಪ್ರಾಯವಾಗಿರುತ್ತದೆ. ಸರ್ವಶಕ್ತಿವಂತನಾದ ಪರಮಾತ್ಮನ ಕೃಪೆ ಮತ್ತು ಸಹಾಯದಿಂದಲೂ, ಆಪ್ತರ ಸಹಾನುಭೂತಿಯಿಂದಲೂ " ಈ ಸಿದ್ಧಾಂತವು ಬೇಗನೇ ಇಡೀ ಭೂಗೋಳದಲ್ಲಿ ಹರಡಲಿ." ಅದರಿಂದ ಎಲ್ಲರೂ ಸುಲಭವಾಗಿ ಧರ್ಮಾರ್ಥಕಾಮಮೋಕ್ಷಗಳನ್ನು ಸಾಧಿಸಿ ಸದಾ ಕಾಲವೂ ಉನ್ನತಿವಂತರೂ, ಆನಂದಿತರೂ ಆಗುತ್ತಿರಲೆಂಬುದೇ ನನ್ನ ಮುಖ್ಯ ಉದ್ದೇಶ್ಯವಾಗಿರುತ್ತದೆ.


ಅಲಮತಿವಿಸ್ತರೇಣ ಬುದ್ಧಿಮದ್ವರ್ಯೇಷು

ಓಂ ಶನ್ನೋ ಮಿತ್ರಃ ಶಂ ವರುಣಃ ಶನ್ನೋ ಭವತ್ವರ್ಯಮಾ । ಶನ್ನ ಇಂದ್ರೋ ಬೃಹಸ್ಪತಿಃ ಶನ್ನೋ ವಿಷ್ಣುರುರುಕ್ರಮಃ । ನಮೋ ಬ್ರಹ್ಮಣೇ ನಮಸ್ತೇ ವಾಯೋ ತ್ವಮೇವ ಪ್ರತ್ಯಕ್ಷಂ ಬ್ರಹ್ಮಾಸಿ ತ್ವಾಮೇವ ಪ್ರತ್ಯಕ್ಷಂ ಬ್ರಹ್ಮಾವಾದಿಷಮ್ ।

ಋತವದಿಷಮ್ ಸತ್ಯವದಿಷಮ್ । ತನ್ಮಾಮವೀತ್ । ತದ್ವಕ್ತಾರಮವೀತ್ । ಅವೀನ್ಮಾಮ್ । ಅವೀದ್ವಕ್ತಾರಮ್ ॥

॥ ಓಂ ಶಾಂತಿಃ ಶಾಂತಿಃ ಶಾಂತಿಃ ॥

ಇತಿ ಶ್ರೀಮತ್ಪರಮಹಂಸಪರಿವ್ರಾಜಕಾಚಾರ್ಯಾಣಾಂ
ಪರಮವಿದುಷಾಂ ಶ್ರೀವಿರಜಾನಂದಸ್ವಾಮಿನಾಂ ಶಿಷ್ಯೇಣ
ಶ್ರೀಮದ್ದಯಾನಂದಸರಸ್ವತೀಸ್ವಾಮಿನಾ ವಿರಚಿತಃ
ಸ್ವಮಂತವ್ಯಾಮಂತವ್ಯಸಿದ್ಧಾಂತ ಸಮನ್ವಿತಃ
ಸುಪ್ರಮಾಣಯುಕ್ತಃ
ಸುಭಾಷಾವಿಭೂಷಿತಃ ಸತ್ಯಾರ್ಥಪ್ರಕಾಶೋಽಯಂಗ್ರಂಥಃ
ಸಂಪೂರ್ತಿಮಗಮತ್ ॥



ನಾನು ಹದಿನೆಂಟು ಸಾರಿ ಸತ್ಯಾರ್ಥ ಪ್ರಕಾಶವನ್ನು ಓದಿದ್ದೇನೆ. ಆದರೂ ಎಷ್ಟುಸಾರಿ ಓದಿದರೂ, ಪ್ರತಿಸಲವೂ ಹೊಸ ಹೊಸ ವಿಚಾರಗಳು ಕಂಡು ಬಂದವು.

ಪಂ॥ ಗುರುದತ್ತವಿದ್ಯಾರ್ಥಿ, ಎಂ.ಎ.,

ಲಾಹೋರ್.

ಆರ್ಯಸಮಾಜದ ನಿಯಮಗಳು

೧. ಸಮಸ್ತ ಸತ್ಯವಿದ್ಯೆಯೂ ಈ ವಿದ್ಯೆಯಿಂದ ತಿಳಿಯಲ್ಪಡತಕ್ಕ ವಸ್ತುಗಳು ಇವುಗಳೆಲ್ಲಕ್ಕೂ ಆದಿಮೂಲನೆನಿಸುವವನು ಪರಮೇಶ್ವರನು.

೨. ಈಶ್ವರನು—ಸಚ್ಚಿದಾನಂದಸ್ವರೂಪನೂ, ನಿರ್ವಿಕಾರನೂ, ಸರ್ವೇಶ್ವರನೂ, ಸರ್ವವ್ಯಾಪಕನೂ, ಸರ್ವಾಂತರ್ಯಾಮಿಯೂ, ಸೃಷ್ಟಿಕರ್ತನೂ, ಅನಂತನೂ, ಅಜನ್ಮನೂ, ಅನಾದಿಯೂ ಅನುಪಮನೂ, ಅಜರನೂ, ಅಭಯನೂ, ನ್ಯಾಯಕಾರಿಯೂ, ನಿತ್ಯನೂ, ನಿರಾಕಾರನೂ ಪವಿತ್ರನೂ, ಕೃಪಾಪೂರ್ಣನೂ ಆಗಿರುವುದರಿಂದ ಆತನನ್ನೇ ಉಪಾಸಿಸುವುದು ಯುಕ್ತವು.

೩. ವೇದವೆಂಬುದು ಸಮಸ್ತ ಸತ್ಯವಿದ್ಯೆಗಳ ಪುಸ್ತಕವಾಗಿರುವುದು. ಇದನ್ನು ಓದುವುದು, ಓದಿಸುವುದು ಕೇಳುವುದು, ಕೇಳಿಸುವುದು ಆರ್ಯರಿಗೆಲ್ಲಾ ಪರಮ ಧರ್ಮವಾಗಿರುವುದು.

೪. ಸತ್ಯವನ್ನು ಗ್ರಹಿಸುವುದರಲ್ಲಿಯೂ, ಅಸತ್ಯವನ್ನು ಬಿಡುವುದರಲ್ಲಿಯೂ ಸರ್ವರೂ ಸದಾ ಉದ್ಯತರಾಗಿರತಕ್ಕದ್ದು.

೫. ಎಲ್ಲಾ ಕಾರ್ಯಗಳನ್ನು ಧರ್ಮಾನುಸಾರವಾಗಿ ಅಂದರೆ ಸತ್ಯಾಸತ್ಯ ವಿಮರ್ಶೆಯಿಂದ ಮಾಡತಕ್ಕದ್ದು.

೬. ಲೋಕಕ್ಕೆ ಉಪಕಾರವನ್ನು ಮಾಡುವುದು ಅಂದರೆ—ಶಾರೀರಿಕಾತ್ಮಿಕ ಸಾಮಾಜಿಕ ಉನ್ನತಿಯನ್ನೆಸಗುವುದೇ ಈ ಸಮಾಜದ ಮುಖ್ಯೋದ್ದೇಶವು.

೭. ಎಲ್ಲರಲ್ಲಿಯೂ ಪ್ರೀತಿಪೂರ್ವಕವಾಗಿಯೂ, ಧರ್ಮಾನುಸಾರವಾಗಿಯೂ, ಯಥಾಯೋಗ್ಯವಾಗಿಯೂ ವರ್ತಿಸತಕ್ಕದ್ದು.

೮. ಅವಿದ್ಯೆಯನ್ನಳಿಸಿ ವಿದ್ಯೆಯನ್ನು ಬೆಳೆಯಿಸತಕ್ಕದ್ದು.

೯. ಪ್ರತಿಯೊಬ್ಬರೂ ತಮ್ಮ ಅಭ್ಯುದಯದಿಂದ ಮಾತ್ರವೇ ಸಂತುಷ್ಟರಾಗದೇ ಎಲ್ಲರ ಅಭ್ಯುದಯದೊಂದಿಗೆ ತಮ್ಮ ಅಭ್ಯುದಯವನ್ನು ಬಯಸುತ್ತಿರತಕ್ಕದ್ದು.

೧೦. ಎಲ್ಲರೂ ಸರ್ವಹಿತಗಳೆಂದೆನಿಸಿರುವ ಸಾಮಾಜಿಕ ನಿಯಮಗಳನ್ನು ಪಾಲಿಸುವುದರಲ್ಲಿ ಪರತಂತ್ರರಾಗಿಯೂ, ತಮತಮಗೆ ವಿಹಿತಗಳೆನಿಸಿರುವ ನಿಯಮಗಳನ್ನು ಪಾಲಿಸುವುದರಲ್ಲಿ ಸ್ವತಂತ್ರರಾಗಿಯೂ ಇರತಕ್ಕದ್ದು.